Regd No. M. 3618. SILVER JUBILEE YEAR ರಜತೋತ್ಸವ ವರ್ಷ Estd. 1921 ಸ್ಥಾಪಿತ

ನವಯುಗ
NAVAYUGA

ವರ್ಷ ೨೫ ವಾರ ೩೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder. SRI A. B. SHETTY. M L A [Vol. 25 No. 35

ಉಡುಪಿ • 2-5-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

REGD.

ಅಮೃತಾಂಜನ, ತಲೆನೋವು, ಶೀತ, ನೆಗಡಿ, ಉಳುಕು, ಕತ್ತಿಗೆ, ಕುಣ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಣ್ಣು ಮಾತ್ರ ಹೊರತು ಮೊದಲಾದ ಎಲ್ಲಾ ರೋಗಗಳಿಗೋಸ್ಕರ, ಸಕಲ ಉಳಿತಕ್ಕೆ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

THE PROTECTION

If a mother was left unprovided for and if the children were too young to earn a livlihood and maintain the family; how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,
Head Office.- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ — ಪರಪುರುಷ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಖರ್ಚು ೧೨ಆಣೆ.

ಮಾಲಕರು:— ಬಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು: ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ — ಸುಂದರವಾಡಿ ಸ್ಟೋರ್. ದಾವಣಗೇರಿ.— ದಾವಣಗೇರಿ ಪ್ರೆಸ್. ಆರ್. ಎಲ್. ಕನ್ನಲವಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State.

New Business in 1945 in our area.— **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸಬೇಕಾದ ಉತ್ಕೃಷ್ಟ ಔಷಧಿ.

ದೊಡ್ಡವರಿಗೆ 4ರಿಂದ 6 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು — ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಶೆಟ್ಟಿ, L. I. M.; ಡಾ. ವೆಂಕಟರಾವ್, ಕೊಡವೂರು, ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತ ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಾರೈಸ್ವೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office —**MANGALORE**

Branches : Byndoor, Coondapoor, Brahmavar, Udipi Kaup Karkal, City-Mangalore, Kasaragod Kanhangad, Puttur, Mercara & Bombay

ಪ್ರಕಾಶಂ ಚುನಾವಣೆಯ ಮೇಲೊಂದು ಬೆಳಕು

ಇದನ್ನು ಬರೆಯುವಾಗ ಶ್ರೀ. ಟಿ. ಪ್ರಕಾಶಮರು ಮದ್ರಾಸಿನ ನಾಯಕರು; [illegible] ಮದ್ರಾಸಿನ ಪ್ರಧಾನಿಗಳು.

ಪ್ರಕಾಶಮರನ್ನೇ ಮುಂದೆ ಬಂದುದಲ್ಲ; ಮದ್ರಾಸ್ ರಾಜಕೀಯದ ಮೇಲೆ ಪ್ರಕಾಶವೂ ಬಿದ್ದಿದೆ. ರಾಜಾಜೀ ನಾಯಕನಾಗಿ ಪ್ರಾಂತ್ಯದ ಒಳಗಡೆಗೆ ಇಂತಹ [illegible] ಪ್ರಕಾಶಮರು ಪಟ್ಟ [illegible] ಎಲ್ಲವೂ ಒಮ್ಮೆ 'ಘಾಗ್' ಆಗಿ ಮದ್ರಾಸ್ [illegible] ಯಾವ ಯಾವ ಭಾಗಗಳಲ್ಲಿ ಏನೇನಿದೆ ಎಂಬುದೆಲ್ಲಾ ಎಲ್ಲರಿಗೂ ಕಾಣಿಸಿತು.

ಪ್ರಕಾಶಮ್ ನಾಯಕತ್ವದ ಸರಿಗೇ ನೋವು ಮದ್ರಾಸ್ ಪ್ರಾಂತ್ಯಕ್ಕೆ ಬಹಳ [illegible]. ಏಪ್ರಿಲ್ ತಾ 1ರಿಂದ ತಾ. [illegible] ದಿನಗಳಲ್ಲಿ ದಿನಕ್ಕೊಮ್ಮೆ ಮಾತ್ರ ಕಾಂಗ್ರೆಸ್ ಪಕ್ಷೀಯರ [illegible] ಸೇರಿದ್ದವು. ಆ ಸ್ಪರ್ಧೆ [illegible] ಒಂದು ಬಿಟ್ಟು ಒಂದು [illegible] ಮತ್ತು ಮೌನ ಸಭೆಗಳಾಗಿದ್ದವು. ನೇರಿದಂತೆಯೇ ಮುಂದುವರಿದ ಸಭೆಗಳು ಎರಡು; ತೀವ್ರ ಚರ್ಚೆ ನಡೆದಿದ್ದ ಸಭೆಗಳು ಮೂರು. ಮೌನವಾಗಿ ಮುಂದುವರಿಯಲು ಕಾರಣ-ಮೌಲಾನಾ ಅಜಾದರ ಎರಡು ಉತ್ತರಗಳೂ ಒಂದೊಂದು ದಿನ ತಡವಾಗಿ ಬಂದುದೇ.

ಮೌಲಾನಾ ಅಜಾದರ ಅಥವಾ ಕಾಂಗ್ರೆಸ್ ಮುಖ್ಯಾಧಿಪತಿಗಳ ಮಾತು ಈವು ಟ್ಟಿಗೇನೂ ನಡೆಯಲಿಲ್ಲ. ಅದಕ್ಕಾಗಿ ಅವರು ತಮ್ಮ ಮನಸ್ಸನ್ನು ತಾವೇ ಸಂತೈಸಿಕೊಳ್ಳಬೇಕಾಗಿದೆ.

ಪ್ರಥಮತಃ ರಾಜಾಜಿಯನ್ನೇ ನಾಯಕನಾಗಿ ಆರಿಸಿಕೊಳ್ಳಬೇಕೆಂದು ಒತ್ತಾಯದ ಸಲಹೆಯನ್ನು ಕಾಂಗ್ರೆಸ್ ಅಧಿಪತಿಗಳು ಕೊಟ್ಟಿದ್ದರು; ಅದರಿದು ತಮ್ಮ ಸಲಹೆ ಮಾತ್ರವೆಂದೂ ಸೂಚಿಸಿದ್ದರು. ಅದು [illegible] 116 ವಿರುದ್ಧ ಮತಗಳಿಂದ ಬಿದ್ದು ಹೋಯಿತು.

ಆ ಮೇಲೆ ಒಂದಕ್ಕಿಂತ ಹೆಚ್ಚು ಹೆಸರುಳ್ಳ ಪಟ್ಟಿಯೊಂದನ್ನು ತನಗೆ ಕಳುಹಬೇಕು ಅದರಲ್ಲೊಂದನ್ನು ಆರಿಸುವೆನೆಂದೂ ಮೌಲಾನರು ಕೇಳಿದರು. 'ಹಾಗೆಂದರೇನು?' ಎಂದು ಕಾಂಗ್ರೆಸ್ ಪಕ್ಷೀಯರು ಮೌಲಾನರಿಂದ ಅರ್ಥ ಕೇಳಿದರು.

ಹಾಗೆಂದರೆ 'ನಿಮ್ಮ ಇಚ್ಛೆಯಂತೆ ಮಾಡಬಹುದೆಂದೇ ಅರ್ಥ' ಎಂದು ಮೌಲಾನರ ಉತ್ತರ ಬಂತು.

ಕಾಂಗ್ರೆಸ್ ಪಕ್ಷೀಯರ ಇಚ್ಛೆಯಿದ್ದುದು ತಮಗೊಬ್ಬ ನಾಯಕನನ್ನು ತಾವಾರಿಸಿಬಿಡಬೇಕೆಂದೇ.

ಶ್ರೀ. ಟಿ ಪ್ರಕಾಶಮ್ ಮತ್ತು ಶ್ರೀ. ಸಿ. ಎನ್. ಮುತ್ತುರಂಗ ಮುದಲಿಯಾರರ ಹೆಸರುಗಳು ಮುಂದೆ ಬಂದುವು.

ಪ್ರಕಾಶಮರಿಗೆ 82 ಮುದಲಿಯಾರರಿಗೆ 69 ಮತಗಳು ದೊರೆತು ನೊಡಲನೆಯವರೇ ನಾಯಕರಾದರು.

ಕಾಂಗ್ರೆಸ್ ಹ್ಯಾಕಮಾಂಡ್ ಕೈ ಹಾಕಿದ್ದೇಕೆ?

ಬಲವಾದ ಕಾರಣವಿರಬೇಕು ರಾಜಾಜೀ ನಾಯಕತ್ವ ಮದ್ರಾಸ್ ಪ್ರಾಂತ್ಯಕ್ಕೆ ಬೇಕಾಗಿದ್ದರೂ ಗಾಂಧಿ-ಆಜಾದ್-ಪಟೇಲರಿಗೆ ಬೇಕೆನ್ನಿಸಿತು. ಕಾರಣವೂ ತಪ್ಪಲ್ಲ. ರಾಜಾಜಿ ಈ ಮೊದಲಿನ ಅಪರಾಧಿಯಾಗಿದ್ದರೆ ಅದಕ್ಕೂ ಮೊದಲಿನ ದೇಶಭಕ್ತ; ಇಂದು ಮತ್ತೊಮ್ಮೆ ಆದಿಯಸ್ಥಾನಕ್ಕೇರಲು ತಯಾರಿದ್ದಾರೆ ನಿಸ್ಸೀಮ ಕಾಂಗ್ರೆಸಿಗನಾಗಿ

ಶ್ರೀ. ಟಿ. ಪ್ರಕಾಶಂ.

ಇರದವನು ಕೂಡಾ ಇಂದು ಕಾಂಗ್ರೆಸಿಗನಾಗಬಲ್ಲನು. ರಾಜಾಜಿಯೊಬ್ಬರಿಗೆ ಆಗ ಕೂಡದೆಂದು ಅವರನ್ನು ದೂರವಿಟ್ಟರೆ ಮತ್ತು ಏಳುವ ಮದ್ರಾಸ್ ಪ್ರಮುಖರಲ್ಲಿ ಸಮಬಲರು ಹಲವರಾಗುತ್ತಾರೆ. ಅಂತಹ ಸಂದರ್ಭದಲ್ಲಿ ಪ್ರಾಂತ್ಯಾಭಿಮಾನ, ಜಾತ್ಯಭಿಮಾನ, ಸ್ನೇಹಾಭಿಮಾನ, ಸಂಬಂಧಾಭಿಮಾನ– ಇತ್ಯಾದಿಗಳು ಮುಂದೆ ಬರುತ್ತವೆ [illegible] ಬದ ಶಕ್ತಿಪೂರ್ಣ ಕೆಲಸಕ್ಕೆ ತೊಂದರೆಯೊದಗುತ್ತದೆ. ರಾಜಾಜಿಯೋ? ಇವೆಲ್ಲಕ್ಕಿಂತ ದೂರವಿದ್ದು, ಎಲ್ಲರನ್ನೂ ತನ್ನ ಸನ್ನೆ ಮುಷ್ಟಿಯೊಳಗಿಟ್ಟುಕೊಳ್ಳಬಲ್ಲ ಅತಿಜಾಣರು, ಮಹಾಸಮರ್ಥರು. ಮದ್ರಾಸ್ ಪಕ್ಷದಲ್ಲಿ ಅವರು ಇಷ್ಟೊಂದು ಅಪ್ರಿಯರಾದುದು–ಮನೆಯಾಳಬೇಕೆಂದೇ ನಿಷ್ಠುರ ಬುದ್ಧಿವಹಿಸಿದ ಯಜಮಾನನಾದರೂ ಮನೆಮಂದಿಗಪ್ರಿಯನಾಗುವಂತೆಯೇ. ಆದ್ದರಿಂದ ರಾಜಾಜಿಯನ್ನೇ ಮತ್ತೊಮ್ಮೆ ತರುವದು ಕ್ಷೇಮಕರವೆಂದು ಕಾಂಗ್ರೆಸ್ ಅಧಿಪತಿಗಳಿಗೆ ತೋರಿತು. ಮದ್ರಾಸ್ ಕಾಂಗ್ರೆಸಿಗರಿಗೆ ಹಾಗನ್ನಿಸಲಿಲ್ಲ. ಕಾರಣ, ರಾಜಾಜೀ ಮಾಡಿದ್ದ ಅಪರಾಧಗಳ ಪೈಕಿ ಈ ಎಂ. ಎಲ್. ಎ.,ಗಳಿಗೆಲ್ಲಾ ಅತಿದೊಡ್ಡದಾಗಿ ಕಾಣುತ್ತಿದ್ದುದೆಂದರೆ ತಮ್ಮ ವ್ಯಕ್ತಿ ಸ್ವಾತಂತ್ರ್ಯನಾವ.ಧಾರೀ ಸ್ವೇಚ್ಛಾ ಪರ್ತನಗ ಅವರ ನಾಯಕತ್ವದಲ್ಲಿ ಆವಕಾಶವಿಲ್ಲದುದೊಂದೇ. ಜನತೆಗ, ರಾಷ್ಟ್ರಪತಿ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ರಾಜಾಜಿಯಲ್ಲಿ ಕಂಡು ಬಂದಿದ್ದ ದೋಷವೆಂದರೆ ಪಾಕಿಸ್ತಾನ್ ಮತ್ತು ಆಗೋಸ್ಟು ಠರಾವಿನ ಸಂಬಂಧದ ಅವರ ಘೋಷಣೆ. ಮೊದಲನೆದರ ಮಟ್ಟಿಗೆ ರಾಜಾಜಿಯ ಪಂಗ್ತಿಗೆ ಗಾಂಧಿಜೀಯೂ ಬಂದಿದ್ದಾರೆ ಎರಡನೆ ದುಕಾಯ.[illegible] ಈಗ ಅಸ್ತಿತ್ವದಲ್ಲಿಲ್ಲ ಹೀಗೆ ಅವೆರಡೂ ಮರೆಯಾದ್ದರಿಂದ ರಾಜಾಜಿಯ ಅಮೂಲ್ಯತೆಯೊಂದೇ ಕಾಂಗ್ರೆಸ್ ಅಧಿಪತಿಗಳಿಗೆ ಕಾಣುತ್ತಿದೆ; ಜನತೆಯ ಕಣ್ಣ ಮುಂದೆ ಮಾತ್ರ ಅಂದಿನ ಕಾಂಗ್ರೆಸ್ ದ್ರೋಹಿ ರಾಜಾಜಿಯೇ ಇದ್ದಾರೆ. ಆದರೆ ಕಾಂಗ್ರೆಸ್ ಎಂ. ಎಲ್. ಎ.ಗಳ ದೃಷ್ಟಿಗೆ ಇವಾವುದೂ ಮುಖ್ಯವಾಗಿ ಬೀಳದೆ ಅಂಕುಶಧಾರೀ ನಾಯಕನ ಭೀಕರಾಕಾರದಲ್ಲೇ ರಾಜಾಜಿ ಕಾಣುತ್ತಿದ್ದುದರಿಂದ ಕಾಂಗ್ರೆಸ್ ಹ್ಯಾಕಮಾಂಡಿನ ಸರ್ಟಿಫಿಕೇಟು ದೊರೆತರೂ ರಾಜಾಜಿ ಸೋಲಬೇಕಾಯಿತು.

ಪ್ರಕಾಶಮರ ಮೇಲೇನು?

ಕಾಂಗ್ರೆಸ್ ಅಧ್ಯಕ್ಷರ ಪ್ರಥಮ ಸಲಹೆಗ, ಮತ್ತದರ ಸೋಲಿಗ ಕಾರಣ ಹೀಗಿದ್ದರೆ, ಅವರ ಎರಡನೇ ಒಯಕೆಯ [illegible] ನಂಬುದ. ಪಕ್ಷನೇ ಯೋಗ್ಯವಂತಹದಲ್ಲ 'ಒಂದಕ್ಕಿಂತ ಹೆಚ್ಚು ಹೆಸರನ್ನು ಕಳುಹಿದರೆ ನ ನವುಗಳಲ್ಲೊಂದನ್ನು ಚುನಾಯಿಸುವೆ' ಎನ್ನುವ ವರೆಗೂ ಮೌಲಾನಾ ಆಜಾದರು ಅಧಿಕಾರ ದರ್ಪದ ಪ್ರತಿಮೂರ್ತಿಯಾಗಿ ಮದ್ರಾಸ್ ಕಾಂಗ್ರೆಸಿಗರಿಗೆ ಕಂಡಿರಬೇಕು ನಿಜಕ್ಕೂ ಕಾಂಗ್ರೆಸ್ ಹ್ಯಾಕಮಾಂಡ್ ಪ್ರಥಮ ಭಾಗದಲ್ಲಿ ಪ್ರದರ್ಶನ ಗಾಂಭೀರ್ಯವನ್ನು ಉದ್ದೇಶ ಪೂರ್ವಕ ತೋರಿಸಿದ್ದಿತು. ಇದೊಂದು ಬುದ್ಧಿವಂತಿಕೆ. ವಿಚಾರ ಬುದ್ಧಿ ಮಾತ್ರವಲ್ಲ, ಹೆದರಿಕೆಯೂ ಹುಟ್ಟಿ ಮದ್ರಾಸಿಗರು ರಾಜಾಜಿಯನ್ನು ಆರಿಸುವಂತಾಗಬೇಕು, ಆದಾಗದೆ ಹೋದರೆ ಪ್ರಕಾಶಮರನ್ನು ಆರಿಸದಂತಾದರೂ ಆಗಬೇಕು ಎಂಬ ಉತ್ಕಟೇಚ್ಛೆ ಕಾಂಗ್ರೆಸ್ ಶಿರಸ್ಸಿನಲ್ಲಿ ಮೂಡಿರಬೇಕು. ತೋರುವಿಕೆಯ ಮಟ್ಟಿಗೆ ಮೊದಲನೇ ಸಲಹೆ ರಾಜಾಜಿಯ ಮೇಲಿರುವ ಪ್ರೇಮವೂ ಎರಡನೆಯ ಸೂಚನೆಗೆ ತಮ್ಮ ಸ್ಥಾನಮಾನ ಉಳಿಸಿಕೊಳ್ಳಬೇಕೆಂಬ ಸ್ವಾಭಿಮಾನವೂ ಕಾಂಗ್ರೆಸ್ ಅಧಿನಾಯಕರಲ್ಲಿ ಹುಟ್ಟಿದಂತಿದೆ. ಆದರೆ ಇಷ್ಟೇ ಕಾರಣವಲ್ಲ. ರಾಜಾಜಿಯನ್ನು ಸಮರ್ಥಿಸಿದುದರ ಗುಟ್ಟು ಮೇಲ್ಗಡೆಯಲ್ಲಿ ಬಂದಿದೆ. ಒಂದಕ್ಕಿಂತ ಹೆಚ್ಚು ಹೆಸರನ್ನು ಅಪೇಕ್ಷಿಸಿದುದರಲ್ಲಿ ಬಾಯಿಬಿಡಬಾರದ ಮಹತ್ತಾದ ಕಾರಣಗಳಿದ್ದೇ ಇರಬೇಕು. ನಾವು ನಾಯಕರ ಮಾತು ಕೃತಿಗಳಮೇಲೆ ಮಾತ್ರವಲ್ಲ; ಒಮ್ಮೊಮ್ಮೆ ಮನಸ್ಸಾಕ್ಷಿಯಮೇಲೆಯೇ ವಿಶ್ವಾಸವಿಡಬೇಕಾಗುತ್ತದೆ. ಮದ್ರಾಸ್ ನಾಯಕತ್ವದ ಪ್ರಶ್ನೆ ಯೆದ್ದಾಗಲೇ ಅದು ಶ್ರೀ. ಟಿ. ಪ್ರಕಾಶಮರದಾಗಲಿದೆ ಎಂದು ಕಾಂಗ್ರೆಸ್ ಅಧಿಕಾರಿಗಳಿಗೆ ಗೊತ್ತು. ಅವರು ಮಾತ್ರವೇನು? ಎಲ್ಲರ ನಿರೀಕ್ಷೆಯಿದ್ದುದೂ ಅದೇ. ಆದರೆ ಮದ್ರಾಸಿನಂತಹ ಒಂದು ಉಪರಾಷ್ಟ್ರದ ಹೊರೆಯನ್ನು ಆ ಮುದಿತಲೆಗೆ ಹೇರಬಾರದೆಂದೇ ಗಾಂಧಿ-ಆಜಾದ್-ಪಟೇಲರು ನಿರ್ಧರಿಸಿದ್ದರು. ಆದರೆ ಹಾಗೆಲ್ಲಾ ತೋರಿಸುವದು ನ್ಯಾಯವೆ? 'ಅವರೊಬ್ಬರನ್ನು ಬಿಡಿ' ಎನ್ನುವ ಬದಲಿಗೆ 'ಒಂದಕ್ಕಿಂತ ಹೆಚ್ಚು [illegible]' [illegible] ಕೇಳಿದರು. ಇದು ಕಾಂಗ್ರೆಸ್ ಎಂ. ಎಲ್ ಎ.ಗಳಿಗೆ ಅರ್ಥವಾಗಿರಬಹುದಾದರೂ ಪಥ್ಯವಾಗಲಿಲ್ಲ. 'ಪ್ರಕಾಶಂ ಒಬ್ಬರನ್ನು ಬಿಟ್ಟು ಬೇರಾರು ಬಂದರೂ ಪರವಾ ಇಲ್ಲ' ಎಂಬು ಕಾಂಗ್ರೆಸ್ ಪ್ರಮುಖರಭಿಪ್ರಾಯವಿತ್ತೆಂದು ಸಾಧಾರ ವಾರ್ತೆಯಿದೆ. ಅದೇಕೆ ಹಾಗೆ? ಪ್ರಕಾಶಮರು ಕಾಂಗ್ರೆಸ್ ದ್ರೋಹಿಯೆಂದೇ? ಅಥವಾ ಆ ಹುದ್ದೆಗೆ ಅವರ ತೂಕ ಸಾಲದೆಂದೆ? ಯಾವುದೂ ಅಲ್ಲ. ಗುಟ್ಟೆಂದರೆ ಶ್ರೀ ಪ್ರಕಾಶಂ ದೇವಳದ ರಥದಂತಿರುವ ಮನುಷ್ಯ. 76ರ ಇಂದಿನ ವಯಸ್ಸಿನಲ್ಲಿ ಅದನ್ನು ಶೃಂಗರಿಸಿ ಎಳೆಯುತಕ್ಕವರು ಬೇರಿರಲೇಬೇಕು. ಮೇಲಾಗಿ ಕೋರ ಬುದ್ಧಿಯ 'ಅಂದಾದಬ್ಬಾರ್'ನ ದೊಡ್ಡ ಜಮೀನ್ದಾರ. ತನ್ನ ಸಂಪತ್ತನ್ನೆಲ್ಲಾ ಊರಿಗೆ ಬಿಟ್ಟು ಸದ್ಯ ಬಹುತೇಕವಾಗಿ ಖಾಲಿಯಾಗಿರುವವರು. ಈಗೀಗ ಅವರ ನೆನಪು ಶಕ್ತಿಯೂ ಕುಗ್ಗಿದೆ ಎಂಬ ವಾರ್ತೆಯಿದೆ. ಕಾಂಗ್ರೆಸ್ ಅಧಿಕಾರವಹಿಸುವದು ಹೊಸ ನಿರ್ಮಾಣ ಮಾಡುವದಕ್ಕೆ; ಇದ್ದ ಯಂತ್ರವನ್ನೇ ಚಾಲುಮಾಡುವದಕ್ಕೆಂದಾದರೆ ಟಿ ಪ್ರಕಾಶಮರು ಧಾರಾಳವಾಯಿತು. ಆದರೆ

(೬ನೇ ಪುಟ ನೋಡಿರಿ)

CANARA BANK LIMITED

Estd: 1906

(Incorporated in British India, liability of Members limited)

SEASON DEPOSITS.

of Rs. 10000 - and over in multiples of Rs. 1000/- and maturing within 30th September 1946 are now accepted at the following rates: —

3 months	....	2¼%
1 to 5 months	....	2½%
6 to 9 months	....	2¾%

Rates for Season Deposits of less than Rs 10000/ with a minimum of Rs 1000/- and in multiples of Rs. 500/- may be ascertained on application to our nearest branch.

ಢಿಲ್ಲಿ ನಿರ್ಮಿಸಿರುವ ತಲೆಸಿಡಿತ!

ಬ್ರಿಟಿಷ್ ನಿಯೋಗ ಸಮಿತಿಯವರು ಹಿಂದುಸ್ಥಾನದಲ್ಲಿ ಕಾಲಿಟ್ಟು ಎರಡು ತಿಂಗಳುಗಳಾಗುತ್ತ ಬಂದುವು. ಏಪ್ರಿಲ್ ಅಂತ್ಯದ ದಿನದ ವರೆಗೂ ಹಿಂದೀ ರಾಜಕೀಯ ಪರಿಸ್ಥಿತಿ ಅವರು ಬರುವ ಮೊದಲು ಹೇಗಿತ್ತೋ ಹಾಗೆಯೇ ಇತ್ತೆಂಬುದು ನಿಜಕ್ಕೂ ಆಶ್ಚರ್ಯಕರ. ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪನೆ-ನವರಾಜ್ಯಾಂಗ ರಚನಾ ಸಭೆ-ಪಾಕಿಸ್ತಾನ ಪ್ರಶ್ನೆ, ಇವೆಲ್ಲವೂ ಆ ಮೊದಲಿನಷ್ಟು ದೂರದಲ್ಲಿದ್ದುವೋ ಅದಕ್ಕಿಂತ ಒಂದೇ ಒಂದಿಂಚು ಸಮೀಪಿಸಲಿಲ್ಲ. ಕಾರಣವೆಂದರೆ ಕಾಂಗ್ರೆಸ್-ಲೀಗುಗಳೊಳಗೊಂದು ಒಪ್ಪಂದ ಮಾಡಿಸಬೇಕೆಂಬ ಪ್ರಯತ್ನದಲ್ಲಿ ನಿಯೋಗ ಸಮಿತಿಗೆ ಎಳ್ಳಷ್ಟು ಸಾರ್ಥಕತೆ ದೊರೆಯದುದೇ. ಇನ್ನು ಮುಂದೆ ಕೂಡಾ ಆ ಆಶೆಯಿಲ್ಲ. ಸಿಮ್ಲಾದ ತಂಪು ಹವೆ ನವಢಿಲ್ಲಿಗೆ ವರ್ಗಾಯಿಸಲ್ಪಡಬಹುದೆಂದು ಆಶಿಸುವದು ಎಷ್ಟು ಸಮಂಜಸವೋ ಪಾಕಿಸ್ತಾನ ಸಂಬಂಧದ ವಿವಾದಕ್ಕೊಂದು ತೀರ್ಮಾನ ಹೊಂದಬಹುದೆಂದು ಆಶಿಸುವದೂ ಅಷ್ಟೇ ಸಮಂಜಸ.

ಕಾರಣವಿಷ್ಟೇ: ಮಿ. ಜಿನ್ನಾರು ತನ್ನ ಬೇಡಿಕೆಯಲ್ಲಿ ಒಂದು (,) ವ (!) ಗುರುತವನ್ನು ಯಾವ ಕಾರಣಕ್ಕಾಗಿಯಾದರೂ ಕಡಿಮೆಮಾಡಿಕೊಳ್ಳಲೊಪ್ಪಲಾರರು. ಬ್ರಿಟಿಷ್ ಸಮಿತಿಯವರಿಗೆ ಇದು ಪ್ರಾರಂಭದಲ್ಲೇ ಮನದಟ್ಟಾಗಿರಬೇಕು. ಒಂದೊಮ್ಮೆಗೆ ಬಂದವರಿಗಾಗದಿದ್ದರೂ ತಮ್ಮ ನಾಲ್ಕನೇ ಸದಸ್ಯನೆಂದು ಅವರು ಕಟ್ಟಿಕೊಂಡಿರುವ ಲೋರ್ಡ ವೇವೆಲರಿಗೆ ಸಿಮ್ಲಾದ ಅನುಭವ ಮರೆತು ಹೋಗಿರಲಾರದಾದ್ದರಿಂದ ಅವರಿಂದೇ ಇದನ್ನು ಮನದಟ್ಟು ಮಾಡಿಸಿರಬೇಕು. ಆದರೂ ಆ ವಿಷಯದ ಸಂಧಾನ ಮಾತುಕತೆಗಳಲ್ಲೇ ಬ್ರಿಟಿಷ್ ಸಮಿತಿ ಕಾಲಹರಣ ಮಾಡುತ್ತಿರುವದೇಕೆಂಬುದೇ ಅರ್ಥವಾಗುವದಿಲ್ಲ. ಕೆಲವರು ಇದಕ್ಕಾಗಿ ಸಮಿತಿಯವರ ಸಹನಾಗುಣವನ್ನು ಹೊಗಳುತ್ತಿದ್ದಾರೆ. ಆದರೆ ಇದೂ ಶ್ಲಾಘನೀಯ ಸಹನೆಯೇ? ಸತ್ತು ಹೋಗಿರುವ ನೆಂಟ ಸಾಧಾರ ವಾರ್ತೆ ಬಾರದವನೊಬ್ಬನ ಸ್ವಾಗತಕ್ಕಾಗಿ ರಾತ್ರಿ ಹಗಲು ಕಾಯುತ್ತಾ ನಿಲ್ಲುವದನ್ನೂ ಸಹನೆ, ಅಥವಾ ಸಾಹಸವೆನ್ನಬೇಕೆ? ಹುಚ್ಚು ಎನ್ನಲಾಗದೆ?

ಬ್ರಿಟಿಷ್ ಮಂತ್ರಿಗಳು ನಿಜಕ್ಕೂ ಹುಚ್ಚರಲ್ಲ. ಒಂದೂ ರಾಜಕೀಯ ಎವರೆಸ್ಟ್ ಶಿಖರ ಮುಟ್ಟಿದ, ಒಂದು ದಾಖಲೆ ನಿರ್ಮಿಸಿ ಲೋಕವನ್ನು ದಂಗು ಬಡಿಸಬೇಕೆಂಬ ಹಬ್ಬಯಿಕೆ ಅವರಿಗಿರಬೇಕು. ಅಥವಾ ಅದಿಲ್ಲದಿದ್ದರೂ ತಾವು ಪ್ರಾಮಾಣಿಕ ಪ್ರಯತ್ನ ಮಾಡಿದೆವೆಂಬುದನ್ನು ಲೋಕಕ್ಕೆ ಪ್ರದರ್ಶಿಸಿ ತಾವು ಸಂಭಾವಿತರು—ಹಿಂದೀಯರು ಮಾತ್ರ ಎಂದೂ ಒಂದು ಒಪ್ಪಂದಕ್ಕೆ ಬಾರದ ಹಟಮಾರಿಗಳು ಎಂದು ಸಂಭವದ ಹೊಣೆಯನ್ನೆಲ್ಲಾ ಬೇರೆಯವರ ತಲೆಯ ಮೇಲೆ ಹೇರಿ ಹೋಗಿಬಿಡುವ ಯೋಜನೆಯಿರಬೇಕು. ಅಥವಾ ಇಂದು ಸಂಧಾನಕ್ಕೆ ಒಪ್ಪದ ಪಕ್ಷವನ್ನು ಬಿಟ್ಟೇ ತಮ್ಮ ಕರ್ತವ್ಯದಂತೆ ಸ್ವಾತಂತ್ರ್ಯದಾನವಮಾಡಿ ಹೋದ ಮೇಲೆ, ಗಾಣದಲ್ಲಿ ಸಿಕ್ಕಿದಂತೆ ನುಜ್ಜುಗುಜ್ಜಾಗಲಿರುವ ಆ ವಿರೋಧಿ ಪಕ್ಷವು ಮತ್ತೆ ತಮ್ಮನ್ನು ದೂರದಂತೆ ಅನುವಾದ ಸಾಧಿಸಿಕೊಳ್ಳುವದಕ್ಕಾಗಿ ಶತಪ್ರಯತ್ನವನ್ನು ಮಾಡುತ್ತಿರಬೇಕು. ಅಂತೂ ಈ ಮೂಲಕ ಮುಸ್ಲಿಂ ಲೀಗನ್ನು ಒಲಿಸಿಕೊಳ್ಳಬಹುದೆಂಬ ಆಶೆಯು ನಿಜಕ್ಕೂ ಇಲ್ಲ; ಬ್ರಿಟಿಷರಲ್ಲಿದ್ದರೂ ಮಿಕ್ಕವರಲ್ಲಿಲ್ಲ.

ಇಂತಹ ಅನಗತ್ಯ ವಿಳಂಬದಿಂದಾಗಿ ಹಿಂದೀ ಜನಸಾಮಾನ್ಯರಲ್ಲಿ ಜಿಗುಪ್ಸೆ ಪ್ರಬಲಿಸಹತ್ತಿದೆ. ನವಢಿಲ್ಲಿಯಲ್ಲಿ ಸೇರಿರುವ ಕಾಂಗ್ರೆಸ್ ಪ್ರಮುಖರೂ ಬೇಸರಗೊಂಡಿದ್ದಾರೆ. ಈ ಕುರಿತು ನಿಷೇಧ ಸೂಚಿಸುವದಕ್ಕೂ ಅವರೀಗ ತಯಾರಾದಂತಿದೆ. ಗಾಂಧೀಜೀ ಅಲ್ಲಿಂದ ಹೊರಡಬೇಕೆಂದು ಎರಡು ಬಾರಿ ನಿಶ್ಚಯಿಸಿದ್ದ ದಿನಗಳನ್ನು ನಿಯೋಗ ಮಂಡಲಿ ಸದಸ್ಯರ ಒತ್ತಾಯಕ್ಕೊಳಗಾಗಿ ರದ್ದುಪಡಿಸಿಕೊಳ್ಳಬೇಕಾಯಿತು. ವಿಳಂಬದಿಂದ ಜಿಗುಪ್ಸೆಗೊಂಡವರ ಪಂಕ್ತಿಯಲ್ಲಿ ಹಿಂದೀ ಜನತೆ ಮತ್ತು ಕಾಂಗ್ರೆಸ್ ನಾಯಕರಿದ್ದರೆ ಸಂತೋಷಗೊಂಡವರ ಸಾಲಲ್ಲಿ ಸಿವಿಲ್ ಸರ್ವಿಸಿನವರು ಮತ್ತು ಮುಸ್ಲಿಂ ಲೀಗಿನವರಿದ್ದಾರೆ. ಸಂಧಾನ ಸಾಧ್ಯತೆಯನ್ನು ವಿಫಲಗೊಳಿಸುವದರಲ್ಲೂ, ಸಂಗ್ರಾಮ ಸಿದ್ಧತೆಯನ್ನು ಮಾಡುವದರಲ್ಲೂ ಮೇಲಧಿಕಾರಿಗಳು ಒಳಗಿಂದೊಳಗೆ ಎಷ್ಟೊಂದು ಸಾಹಸಪಡುತ್ತಿದ್ದಾರೆಂಬುದಕ್ಕೀಗ ರೋಮಾಂಚಕಾರೀ ನಿದರ್ಶನಗಳು ದೊರೆತಿವೆ. ಮುಸ್ಲಿಂ ಲೀಗಂತೂ 'ಕೊಟ್ಟು ಮುಂದೆ ಹೆಜ್ಜೆಯಿಡು.' ಎಂದು ತೋಳು ಹಿಡಿದು ನಿಲ್ಲಿಸಿದ ಹೆಗ್ಗಳಿಕೆ ತನ್ನದೆಂದು ಈ ವಿಳಂಬವನ್ನು ಎತ್ತಿ ಸಾರುವದರೊಡನೆ ಕಾಣುತ್ತಿದೆ.

○○ ○○ ○○

ಕಾಶ್ಮೀರಕ್ಕೆ ಬ್ರಿಟಿಷ್ ಮಂತ್ರಿಗಳು ಹೋದುದು ವಿಶ್ರಾಂತಿಗಾಗಿ ಅಲ್ಲ; ಗಲಭೆಯಿಂದ ದೂರವಾಗಿ, ತಲೆಯನ್ನು ತಂಪಾಗಿರಿಸಿಕೊಂಡು ಒಂದು ತೀರ್ಮಾನವನ್ನು ಬರೆಯಲಿಕ್ಕಾಗಿ ಎಂದು ಹೆಚ್ಚಿನವರ ನಿರೀಕ್ಷೆಯಿತ್ತು. ಅಂತೆಯೇ ನಿರ್ಧಾರದದೊಂದು ಕರಡು ಪ್ರತಿಯನ್ನು ಅವರು ಅಲ್ಲಿ ತಯಾರಿಸಿರಬಹುದು. ಆದರೆ ಅದನ್ನು ಜೇಬಿನಿಂದ ತೆಗೆಯುವ ಕಾಲ ಇನ್ನೂ ಒದಗಿಲ್ಲ. ಕಾಶ್ಮೀರದಿಂದ ಮರಳಿದವರು ಪ್ರಸ್ತುತ ಕಾಂಗ್ರೆಸ್-ಲೀಗ್ ಪ್ರಮುಖರೊಡನೆ ಉದ್ದುದ್ದ ಮಾತಾಡಲು ಪ್ರಾರಂಭಿಸಿದ್ದಾರೆ. ಆದರೆ ಕ್ರಿಪ್ಸರು ಎರಡನೇ ಸಲ ಲೋರ್ಡ ವೇವೆಲರೊಡನೆ ಎರಡು ದಿನ ದೀರ್ಘ ಸಂಭಾಷಣೆ ನಡೆಸಿದುದೂ, ಆ ಮೇಲೆಯೇ ಆಜಾದ್, ಜಿನ್ನಾ, ಗಾಂಧಿ, ನೆಹರುಗಳೊಡನೆ ಮಾತನಾಡಿದುದೂ ಸಂದೇಹವನ್ನು ಉಂಟುಮಾಡುತ್ತದೆ. ಕಾಶ್ಮೀರದಲ್ಲಿ ಒಂದು ತೀರ್ಮಾನಪತ್ರವನ್ನು ಹೊಂದಿರಬೇಕು. ಅದನ್ನು ವೈಸರಾಯರಿಗೆ ತಿಳಿಸಿದಾಗ ಸಿಮ್ಲಾದಲ್ಲಿ ಜಿನ್ನಾರಿಗೆ ಹೆದರಿ ಹೋಗಿದ್ದ ಲೋರ್ಡ ವೇವೆಲರು ಕೆಲವು ತಿದ್ದುಪಡಿಗಳನ್ನು ಸೂಚಿಸಿರಬೇಕು. ಅದರಿಂದಾಗಿ ಪ್ರಸ್ತುತ ಪಕ್ಷ ಧುರೀಣರ ಅಭಿಪ್ರಾಯ ಪಡೆಯುವ ಆವಶ್ಯಕತೆ ಅವರಿಗುಂಟಾಗಿರಬೇಕು. ಕಾಂಗ್ರೆಸ್ ಮತ್ತು ಲೀಗಿನ ಕಾರ್ಯಕಾರಿಮಂಡಲಿಗಳು ತಲಾ ಮೂವರಂತೆ ಪ್ರತಿನಿಧಿಗಳನ್ನು ಆರಿಸಿ, ಜತೆ ಮಾತುಕತೆಗಾಗಿ ತಮ್ಮನ್ನು ಸಂಧಿಸಬೇಕೆಂದು ಈಗ ಬ್ರಿಟಿಷ್ ನಿಯೋಗ ತ್ರಯರು ಕಾಂಗ್ರೆಸ್ ಮತ್ತು ಲೀಗ್ ಅಧ್ಯಕ್ಷರಿಗೆ ತಿಳಿಸಿದ್ದಾರೆ. ಅಲ್ಲಿ ಅವರ ತಮ್ಮ ಸೂಚನೆಗಳನ್ನಿಟ್ಟು, ಇಕ್ಕಡೆಯವರನ್ನೂ ಸಮಜಾಯಿಸಲು ನೋಡಬಹುದು. ಅಂತೂ ಇಷ್ಟು ಉದ್ದವಾದ ಮಾತುಕತೆಗಳಲ್ಲಿ ಕಾಂಗ್ರೆಸ್-ಲೀಗ್-ಸರಕಾರದ ಪ್ರತಿನಿಧಿಗಳು ಒಟ್ಟಿಗೆ ಒಂದೆಡೆ ಕಲೆಯುವದು ಇದೇ ಮೊದಲ ಬಾರಿ. ಆ ಜತೆಗೂಟದೊಡನೆ ಮಾತುಕತೆಗಳ ಅಂಕವು ಮುಗಿಯಲಿದೆ. ಆ ಮೇಲೆಯೇ ಸಂಗತಿ ಕೊನೆಗಾಣಿದೆ ಎಂಬುದು ಸರ್ವಜನರಿಗೂ ಗೊತ್ತಾಗಲಿದೆ.

ಇದು ವರೆಗಿನ ಅಂದಾಜಿನಂತೆ ಈ ಬಾರಿ ಸಿಮ್ಲಾದ ಪುನರಾವರ್ತನೆಯಾಗುವಂತಿಲ್ಲ—ಅಂದರೆ ವಿಧಾನದ ಪುಷ್ಟಿಗೆ ಮಾತ್ರ ರಾಷ್ಟ್ರೀಯ ತಾತ್ಕಾಲಿಕ ಕೇಂದ್ರ ಸರಕಾರದ ಸ್ಥಾಪನೆಯ ಕುರಿತ ಮುಸ್ಲಿಂ ಲೀಗಿನ ಆಕ್ಷೇಪದ ಅಡ್ಡ ಬೇಲಿಯಿದಿರು ಕೊನೆಯ ಭಾಗದಲ್ಲಿ ಲೋರ್ಡ ವೇವೆಲರು ತಲೆಗೆ ಕೈಯಿಟ್ಟು ಕುಳಿತ ಸಿಮ್ಲಾದ ಆಂದಿನ ದೃಶ್ಯವು ಅತೀ ಕರುಣೆಯದಾಗಿತ್ತು. ಅಲ್ಲಿ ವೈಸರಾಯರು ತಮ್ಮ ಆಶ್ವಾಸನೆಯನ್ನು ತಾವೇ ಮುರಿದುಕೊಂಡು ಒಂದು ತೀರ್ಮಾನವನ್ನು ಕೊಡದೆ, ಶುದ್ಧ ನಪುಂಸಕತನ ಪ್ರದರ್ಶಿಸಿದ್ದರು. ಸಿಮ್ಲಾ ಸಮ್ಮೇಳನವೆಂಬ ಗೊಂಬೆಯನ್ನು ನಿರ್ಮಿಸಹತ್ತಿದ ಮೇಲೆ ಸುರೂಪ ಕುರೂಪದ ಮಾತ ಹಾಗಿರಲಿ, ಅದನ್ನು ಪೂರ್ಣಗೊಳಿಸುವ ಕೆಲಸವನ್ನು ಕೂಡಾ ಲೋರ್ಡ ವೇವೆಲ್ ಮಾಡಲಿಲ್ಲ; ಆ ಮುಂಡಕ್ಕೊಂದು ರುಂಡವನ್ನೇ ಜೋಡಿಸದೆ ತಲೆಗೇ ಕೈಯಿಟ್ಟುಕೊಂಡು ಸಿಮ್ಲಾದ ತಪ್ಪಲಿನ್ನಿಳಿದಿದ್ದರು. ಈ ಬಾರಿ ಹಾಗಾಗುವಂತಿಲ್ಲ. ತಾತ್ಕಾಲಿಕ ಸರಕಾರ ಸ್ಥಾಪನೆಯ ಒಂದು ತೀರ್ಮಾನವನ್ನು ಇನ್ನು ಒಂದೆರಡು ದಿನಗಳಲ್ಲೇ ಪೆಥಿಕ್ ಲಾರೆನ್ಸ್—ಕ್ರಿಪ್ಸ್—ಅಲೆಕ್ಸಾಂಡರರು ಕೊಡುವದು ಖಂಡಿತ. ಶಾಶ್ವತ ವ್ಯವಸ್ಥೆ ಅಥವಾ ರಾಜ್ಯಾಂಗ ರಚನಾ ಸಭೆಯ ಕುರಿತು ಇಷ್ಟೇ ಖಂಡಿತವಾಗಿ ಏನನ್ನು ಹೇಳುವದಕ್ಕೂ ಸಾಧ್ಯವಿಲ್ಲ; ಹೇಳದಿರಲಿಕ್ಕೂ ಇಲ್ಲ! ಯಾಕೆಂದರೆ ತಾತ್ಕಾಲಿಕ ಸರಕಾರ ಸ್ಥಾಪನೆಯಾಗಬೇಕಾದರೂ ಜಿನ್ನಾರಿಗೇನು ಎಂಬುದು ನಿಶ್ಚಯವಾಗಿಕೊಳ್ಳಬೇಕು. ಶತಪ್ರಯತ್ನ ಮಾಡಿಯಾದರೂ ಜಿನ್ನಾರನ್ನು ಕೂಡಿಕೊಂಡು, ಅಸಾಧ್ಯವೇ ಆದಲ್ಲಿ ಬಿಟ್ಟಾದರೂ ವೈಸರಾಯೀ ಕೌನ್ಸಿಲನ್ನು ಈ ಬಾರಿ ಬದಲಾಯಿಸುವ ಲಕ್ಷಣ ಕಾಣುತ್ತದೆ.

ಹೀಗೆ ಪತ್ರಿಸ್ಪತ್ರ ನವ ಯಾನೆಯ ವೇಳಾಪಟ್ಟಿಗ ಬ್ರಿಟಿಷ್ ಸಮಿತಿಯು ತಲೆಯಲ್ಲಿ ಸುತ್ತುತ್ತಿದೆ ತಾತ್ಕಾಲಿಕ ಕಾರ್ಯಕಾರೀ ಸಮಿತಿ ಸ್ಥಾಪನೆಯ ಕುರಿತು ಕೆಲವು; ಶಾಶ್ವತ ಸರಕಾರೀ ವಿಧಾನ ನಿ

THE
UNITED KARNATAK INSURANCE Co., Ltd.
H. O. DHARWAR. ESTD 1929.
GLAD TO ANNOUNCE A BUSINESS
INCREASE OF 400%
OVER LAST YEARS FIGURE
We invite applications from young energetic and ambitious persons for the post of Organisers, Inspectors and Branch Managers etc
DHARWAR
5-7-946
A. S. KINI
Managing Director

BANK WITH THE LARGEST CONNECTIONS ON THE WEST COAST.
OFFERS:-
EFFICIENT, PROMPT & COURTEOUS
SERVICE OF EVERY TYPE
OPEN AN ACCOUNT
with
The Canara Industrial & Banking Syndicate Ltd
ESTD 1925

ಈ ಮಾತು ಮಂಥನದಿಂದ ಯಾವುದು ಹುಟ್ಟಬಹುದು—

ವಿಷವೋ ಅಮೃತವೋ?

ವರ್ಗಾ ದ ಕುರಿತು ಕೆಲವು ತಾತ್ವಿಕ ಕೇಂದ್ರಕ್ಕೆ ಪ್ರತಿಯೊಂದು ಆಸಾಯಿತ ಪ್ರಾಂತಿಕ ಸರಕಾರವೂ ಒಪ್ಪಬೇಕೆನ್ನು ಕಳುಹಿಸಿದ 11 ಮಂದಿ. ಅವರೊಂದಿಗೆ ಅಲ್ಪ ಸಂಖ್ಯಾತರ ಪರವಾಗಿ ಸ್ವೀಕರಿಸ ಲಾಗಿಸಿದ ೯ ಮಂದಿಯನ್ನು ಸೇರಿಸುವುದೆಂಬ ಒಂದು ವಿಧಾನ ಮುಂದಿದೆ. ಲೀಗ್ ಅಲ್ಪ ಸಂಖ್ಯಾತರಾಗುವುದೆಂಬ ಕಾರಣದಿಂದ ಇದಕ್ಕೆಂದೂ ಜಿನ್ನರೊಪ್ಪುವಂತಿಲ್ಲವಾದ್ದರಿಂದ ಪ್ರಜಾಪ್ರಭುತ್ವನ್ಯಾಯಕ್ಕೊಗ್ಗುವ ಇಂತಹ ಪರಿಣಾಮಬೀಳಗೆ ಸಮಿತಿ ಕೂಡಾ ಆಶೆ ಕೊಡುವಂತಿಲ್ಲ. ಒದಲಿಗೆ ಜಿನ್ನರ ಮನವೊಲಿಸಲು ಲೀಗಿಗೂ ಕಾಂಗ್ರೆಸಿನೊಡನೆ ಸಮಪ್ರಾತಿನಿಧ್ಯ. ಇಲ್ಲವೇ ಅವರು ಕೇಳುವಷ್ಟು ಇತರ ರಿಯಾಯತಿ ಕೊಡಲು ನಿಯೋಗ ಮುಂದಾಗಿ ಮನಮಾಡಿದಂತೆ ಈ ಭಾಗದಲ್ಲಿ ಕಾಂಗ್ರೆಸ್ ಕಡು ವಿರೋಧ ಪ್ರದರ್ಶಿಸಲಾರದು; ಅಂತಹ ಜಾಗ್ರತೆಯೂ ಇಲ್ಲ. ಯಾಕೆಂದರೆ—ಹಿಂದಿನ ಸಮಿತಿಯಲ್ಲಿ ಲೀಗಿನ ಪ್ರತಿನಿಧಿಗಳು ಸಮಸಂಖ್ಯೆಯಲ್ಲಿದ್ದರೂ—ಈಗಲೂ ಒಪ್ಪುವರೆಂಬ ಊಹೆಯಿದ್ದರೂ—ಪಾಕಿಸ್ತಾನಕ್ಕೆ ಪೂರ್ವ ಸಮ್ಮತಿ ದೊರೆಯದೆ ಕೇಂದ್ರದ ಬದಲಾವಣೆಯಲ್ಲಿ ಸೇರಿಕೊಳ್ಳಲು ಮಿ. ಜಿನ್ನರೇ ಒಪ್ಪುವದಿಲ್ಲ. ಪಾಕಿಸ್ತಾನ್ ಪ್ರಶ್ನೆಯು ಕುರಿತು, ಪಾಕಿಸ್ತಾನ್, ಹಿಂದುಸ್ತಾನ್ ಫೆಡರೇಶನುಗಳೆರಡನ್ನು ಸ್ಥಾಪಿಸುವದು; ಅವೆರಡು ನಡುವೆ ಮಿತಾಧಿಕಾರವುಳ್ಳ ಒಂದು ಕೇಂದ್ರವನ್ನು ಜೋಡಿಸುವದು ಎಂಬ ಒಂದು ಸೂಚನೆ ಮುಂದೆ ಒಂದಿದೆ. ಜಿನ್ನರು ಕೇಳುವ ಆರು ಪ್ರಾಂತ್ಯಗಳನ್ನಲ್ಲ, ಆ ಪ್ರಾಂತ್ಯಗಳ ಮುಸ್ಲಿಂ ಬಹುಸಂಖ್ಯೆಯುಳ್ಳ ಭಾಗಗಳನ್ನಷ್ಟೇ ಪಾಕಿಸ್ತಾನವಾಗಿ ಸ್ವತಂತ್ರಗೊಳಿಸುವದು. ಎಂಬುದಿನ್ನೊಂದು—ಇಂತಹ ಹಲವು ಯೋಜನೆಗಳನ್ನು ಕಳಿವ ನಿಯುಕ್ತವಾದ ಬ್ರಿಟಿಷ್ ಸಮಿತಿ. ಆದರೆ ಜಿನ್ನರು ತಲೆಯಾಡಿಸಬಲ್ಲ ಒಂದು ಸ್ಪಷ್ಟ ಸೂತ್ರ ಈ ಸಮಿತಿಗೆ ಬದ್ದಿಲ್ಲ. ಅದ್ದರಿಂದ ಎಲ್ಲವೂ ಮೊದಲು ನೇಗಿಕ್ಕೊಳ್ಳಿ ಹಾಗೆಯೇ ಇವೆ. ಹೆಚ್ಚೆಂದರೆ ಮೊದಲಿಗಿಂತ ಕಡಿಮೆ ಈಗಿನ ಈ ಮಾತುಕತೆಗಳಲ್ಲಿ ಹೆಚ್ಚಿನ ಮಿತ್ರತ್ವ ಪಕ್ಷಪಾತವಿದೆ. ಸರ್. ಕ್ರಿಪ್ಸರು ಅವರು 1942ರ ಕ್ರಿಪ್ಸ್ ಆಫರ್ ನಲ್ಲಿ ಯಾವ ಕಡೆಗೂ ಒಪ್ಪಿಗೆಯಿಲ್ಲದ ಅಂದಾಜನ್ನೇ ನೀಡಿದರೂ ಬಳುವಳಿಯೋ—ಎಂಬ ಸಂದೇಹವಿದ್ದೀತು.

○ ○ ○

ಡೆಲ್ಲಿಯ ಸಂಧಾನದ ಕೆಲವು ವೈಶಿಷ್ಟ್ಯಗಳು ಜನತೆಗೆ ಆರುವ ಮುಖ್ಯವಾಗಿ ಬ್ರಿಟಿಷ್ ಮಂತ್ರಿ ಸ್ವಯಂ ಒಮ್ಮೆ ನಿಶ್ಚಯಿಸಿಕೊಳ್ಳಬೇಕು ಪವಿತ್ರ ಕ್ಷೇತ್ರ ಇದು. ಇಲ್ಲಿ ನಡೆದ ಮಾತುಕತೆಗಳಲ್ಲಿ ಪ್ರತಿಯೊಂದಕ್ಕೂ ಭಾರತೀಯರ ಅಭಿಪ್ರಾಯವನ್ನು ಕೇಳಿ ಮಾಡುವುದಾದರೆ ಒಂದು ಪುಟಗಳು ಒಂದು ಪತ್ರಿಕೆಗೆ ಎಂತಾ ಸಾಲುವದಿಲ್ಲ. ಇಷ್ಟು ಮಾತಾಡಿದವರು ಯಾರು ಯಾರ ಕಡೆಯವರನ್ನಾದರೂ ಒಪ್ಪಿಸಿ ಸಮಾಧಾನ ಮಾಡುವ ಒಂದು ಸೂತ್ರ ಬೇಡವೇ? ಒಂದೊಮ್ಮೆಗೆ ಸಿಂಧೂ ನದಿಯ ಪರಿಹಾರ ತಮ್ಮ ಬಾಯಿಯಿಂದ ಬಾರದಂತೆ ನೋಡಲು ಅಭ್ಯಾಸಗಳಿಂದ ಸುಖ್ಯ

ವಾಗಬಹುದು. ಆದರೆ ವಿರುದ್ಧ ಪಕ್ಷಗಳೆರಡೂ ಆಶೆಕಟ್ಟಿಕೊಳ್ಳುವಂತೆ ಮಾಡಬಲ್ಲ ಪ್ರತಿಭೆಯೇನು ಸಾಮಾನ್ಯವೇ? ಇಂದಿನವರೆಗೂ ಇತ್ತ ಕಾಂಗ್ರೆಸ್ ಅತ್ತ ಮುಸ್ಲಿಂ ಲೀಗ್ ತಂತಮ್ಮ ಬಯಕೆಯೇ ಈಡೇರುವದೆಂಬ ಭರವಸೆಯಿಂದಿರುವಂತೆ ಮಾತುಕತೆ ಸಾಗಿಸಿದ್ದಾರೆ ಮಂತ್ರಿತ್ರಯರು ಹೀಗೆ ಸಮಾನ ಸಂತೋಷಪಡುತ್ತಿರುವ ಇವೆರಡು ಪಕ್ಷಗಳು ಪರಸ್ಪರ ನೋಡಿಕೊಂಡದ್ದೇ ಆದರೆ ಆ ಕಡೆಯವರ ಸಂತೋಷಕ್ಕೇನು ಕಾರಣ ಎಂಬ ಸಂದೇಹ ಬಂದು ಇಕ್ಕಡೆಯವರ ಆಶೆಗೂ ಅಂಕುಶ ಬೀಳಲಾರದೆ?

ಮತ್ತೊಬ್ಬ ಬುದ್ಧಿವಂತನೆಂದರೆ ಮೌಲಾನಾ ಆಜಾದರು; ಅಂತೆಯೇ ಈ ಬಾರಿ ಆಶ್ರಿತರಾಜರೂ ಜಾಣರ ವರ್ಗಕ್ಕೆ ಸೇರುತ್ತಾರೆ. ಮೌಲಾನಾ ಆಜಾದರು ಪಾಕಿಸ್ತಾನದ ಪ್ರಶ್ನೆ ಪರಮಾವಧಿಗೆ ಮುಟ್ಟಿದ ಸಂದರ್ಭ ನೋಡಿ ಕೊಟ್ಟ ಒಂದು ಹೇಳಿಕೆಯು ಲೀಗ್ ವಾಗ್ಬಾಣಗಳನ್ನು ಮೆಟ್ಟಿ ನಿಂತು ಶಾಂತಿಸಿಕೊಂಡಿದೆ. ಅವರು ಮುಸಲ್ಮಾನರಿಗೆ ಪಾಕಿಸ್ತಾನದಲ್ಲೇತಕೆ ಅಪಾಯವಿದೆ ಮತ್ತು ಕಾಂಗ್ರೆಸ್ ಯೋಜನೆಗಳಲ್ಲಿ ಎಂತಹ ಉಪಾಯವಿದೆ ಎಂಬುದನ್ನು ಜಾತಿಪ್ರೇಮಿ ಮೌಲಾನರಾಗಿಯೇ ನುಡಿದಿದ್ದಾರೆ. ಅವರ ಸಕಾರಣ ವಾದದಿಂದ ಲೀಗ್ ಕಕ್ಷಿಗಳಿನ ಒಡಾಯಿಗಳೆಲ್ಲಾ ನಗಾರಿ ಸ್ವರಗಳಂತೆ ಸದ್ದು ಮಾತ್ರಗಳೆಂಬುದು ಸ್ಪಷ್ಟವಾಯಿತು. ಇನ್ನು, ಹಿಂದೀ ಸಮಸ್ಯಾ ನಿವಾರಣೆಗೆ ದೊಡ್ಡ ಕಂಟಕವಾಗಿ ಈ ಮೊದಲು ವರ್ತಿಸುತ್ತಿದ್ದ ನರೇಂದ್ರರು ಈ ಬಾರಿ ಸ್ವರಾಜ್ಯ ರಚನೆಗೆ ಸಂತೋಷದಿಂದ ಸಿದ್ಧರಿದ್ದಾರೆ. ತಾತ್ಕಾಲಿಕ ಸರಕಾರದಲ್ಲಿ ತಾವು ಸೇರುವದಿಲ್ಲ; ಆದರೆ ಸಹಕರಿಸುತ್ತೇವೆ. ಮುಂದಿನ ರಾಜ್ಯಾಂಗ ರಚನಾಸೂತ್ರಗಳು ಸ್ಪಷ್ಟವಾಗಿ ಮುಂದೆ ಬಾರದೆ ಯಾವ ಆಕ್ಷೇಪವನ್ನೂ ಒಡ್ಡುವದಿಲ್ಲ ಎಂದವರು ನಿರ್ಧರಿಸಿ, ಪಂಡಿತ ಭೋಗೋಳಿಕ ಜಾಣ್ಮೆ ಪ್ರದರ್ಶಿಸಿದ್ದಾರೆ. ಮಾತ್ರವಲ್ಲ, ಪಂಡಿತ ನೆಹರುಗಳ ಪ್ರೇರಣೆಯಂತೆ, ಸಂಸ್ಥಾನಗಳ ಸಂಬಂಧದ ಯುರೋಪಿಯನ್ ರಾಜಕೀಯ ಸಲಹೆಗಾರರ ಒದಲಿಗೆ ಹಿಂದೀ ಸಲಹೆಗಾರರನ್ನು ನೇಮಿಸತಕ್ಕದ್ದೆಂದು ಬ್ರಿಟಿಷ್ ಸರಕಾರವನ್ನು ಕೇಳಿಕೊಂಡಿದ್ದಾರೆ. ಆಶ್ರಿತ ರಾಜರು ಇಂತಹ ಸಾಧು ಹುಡುಗರಾಗಲು ಕಾರಣವಿದೆ. ಮೊದಲನೆಯದಾಗಿ ಆಶ್ರಿತ ರಾಜ್ಯಗಳ ಪ್ರಜಾಪ್ರಭುತ್ವದ ಕುರಿತು ಪಂಡಿತ ನೆಹರುಗಳಂಥವರು ಕೂಡಾ ಬ್ರಿಟಿಷ್ ಸಮಿತಿಯೆದುರು ಆಗ್ರಹ ಪೂರ್ವಕ ವಾದಿಸಲಿಲ್ಲ. ಎರಡನೆಯದಾಗಿ, ನರೇಂದ್ರ ಸಂಸ್ಥೆಯ ಅಧ್ಯಕ್ಷ ಭೋಪಾಲದ ನವಾಬರು ಒಳಗಿಂದೊಳಗೆ ಪಾಕಿಸ್ತಾನಕ್ಕೆ ಅನುಕೂಲವಿದ್ದರೂ, ಪಾಕಿಸ್ತಾನದ ಬದ್ಧ ವಿರೋಧಿಗಳಾದ ಸರ್. ಸಿ. ಪಿ. ಯಂಥವರ ಕೈವಾಡಕ್ಕೇನೇ ಹೆಚ್ಚಿನ ಆಶ್ರಿತ ರಾಜರು ಕಟ್ಟು ಬಿದ್ದಿದ್ದಾರೆ. ಅದ್ದರಿಂದ ಹಿಂದೀ ರಾಜರು ಭಾರತಾಭ್ಯುದಯ ಪಥದ ಕಂಟಕ ಸ್ಥಾನವನ್ನು ಈ ಬಾರಿ ಲೀಗಿಗೇನೇ ಸಂಪೂರ್ಣವಾಗಿ ಬಿಟ್ಟುಕೊಟ್ಟಿದ್ದಾರೆ.

ಮತ್ತೊಂದು ವಿಶೇಷವೆಂದರೆ ಲೀಗಿಗೆ ಅನ್ಯಾಯಕ್ಕಾಗಿ ಲಭ ಸಿಗಬಾರದು—ಅದು ಇದಿರಲ್ಲಿ ಅಭಿಮಾನವನ್ನೂ ಪಡಬಾರದು. ಎಂದು ಕಾಂಗ್ರೆಸ್ ಪ್ರಮುಖರಲ್ಲಿ ಹುಟ್ಟಿದ ಛಲ. ಓರ್ವ ಮುಸಲ್ಮಾನನೇ ಕಾಂಗ್ರೆಸ್ ಪ್ರತಿನಿಧಿಯಾಗಿ ತಮ್ಮೊಡನೆ ಮಾತನಾಡಲು ಬರಕೂಡದು; ಒಂದಸಿನ ದುಂದು ಮೇಜಿಗೆ ತನ್ನ ಅಧ್ಯಕ್ಷರಾಗಿರದಿದ್ದರೆ ಪ್ರತಿನಿಧಿಯನ್ನು ಕಾಂಗ್ರೆಸ್ ತನ್ನ ಪ್ರತಿನಿಧಿಯಾಗಿ ಆರಿಸಿದಂತೆ ಈ ಬಾರಿಯೂ ಆರಿಸಿಕಳುಹಿದಲ್ಲಿ ತಾವು ಸಂಧಾನ ಮಾತುಕತೆಗಳು ತಯಾರೆಂದು ಸ್ವತಃ ಜಿನ್ನರು ಸೂಚಿಸಿದರೆಂದೂ, ಕೆಲವು ಲೀಗ್ ಪ್ರಮುಖರಿಂದಲೂ ಆ ಕುರಿತು ಆತುರಗೊಂಡಿದ್ದರೆಂದೂ ತಿಳಿದು ಬಂದಿದೆ. ಮೌಲಾನಾ ಆಜಾದರೂ 'ಹೋಗಿ ಬರುವದಾದರೆ ಬನ್ನಿ' ಎಂದು ಗಾಂಧಿಜೀಗೆ ಪ್ರೇರಣೆ ಕೊಟ್ಟರಂತೆ. ಆದರೆ ಸರ್ದಾರ್ ಪಟೇಲರದನ್ನು ಆಕ್ಷೇಪಿಸಿ ನಿಲ್ಲಿಸಿದರೆಂದೂ ಲೀಗಿನ ಈ ಬೇಡಿಕೆಯನ್ನು ಕಾಂಗ್ರೆಸ್ ನಿರಾಕರಿಸಿತೆಂದೂ ತಿಳಿದು ಬರುತ್ತದೆ ಮಾತ್ರವಲ್ಲ, ಜಿನ್ನರ ಮೇಲಿನ ಹಠದಿಂದೆಂಬಂತೆ, ನಿಯೋಗ ಸಮಿತಿಯಿಂದಾವ ಆತ್ರಿಸಲ್ಪಟ್ಟಿರುವ ತ್ರಿಪಕ್ಷೀಯ ಸಭೆಗೆ ಮೌಲಾನರ ಜತೆಗೆ ಖಾನ್. ಅಬ್ದುಲ್ ಗಫರ್ ಖಾನರನ್ನೂ ಸೇರಿಸಿ, ಒಬ್ಬನಬದಲಿಗೆ ಇಬ್ಬರು ಮುಸಲ್ಮಾನರನ್ನು ಕಳುಹಲಿದ್ದಾರೆ. ಈ ಕುರಿತು ಬಾಯಿಬಿಡುವ ಸಂದರ್ಭ ಬಂದಾಗ ಮಿ. ಜಿನ್ನರ ಜೈಗಳ ಜಡಿಸುಳಿಯಲ್ಲಿ ಕಾಂಗ್ರೆಸಿಗರು ಒದ್ದೆಯಾಗುವದನ್ನು ನಿರೀಕ್ಷಿಸಬೇಕು. ಮೌಲಾನಾ ಆಜಾದರು ಈ ಪದುಪದ ಕಾಂಗ್ರೆಸಿನ ಆಧ್ಯಕ್ಷತೆಗೆ ಪಂಡಿತ ನೆಹರುಗಳನ್ನು ಸೂಚಿಸಿದುದು ಲೀಗಿನ ಈ ವಾದಕ್ಕನುಸಾರವಾಗಿ ಎಂದು ಬ್ರಿಟಿಷ್ ಆಕಾಶವಾಣಿ ಕಾಲಸ್ಥಿತಿಗೊಗ್ಗದ ವಿಚಿತ್ರ ಶೋಧವೊಂದನ್ನು ಘೋಷಿಸಿದೆ. ಆಚಾರ್ಯ ಕೃಪಲಾನಿಯವರದನ್ನು ಅಲ್ಲಗಳೆದಿದ್ದಾರೆ.

ಇನ್ನು ವಾತಾವರಣವೂ ಪೂರಾ ಬಿಸಿಯೇರಿಬಿಟ್ಟಿದೆ! ಪಾಕಿಸ್ತಾನವಾದದಲ್ಲಿ ತನ್ನವಾಲಿಗೆ ಹಿಮಾಲಯದೊಳಗಿನ ಕಾಶ್ಮೀರ ಭಾಗದಲ್ಲೂ ಒಂದು ಅವಕಾಶವಿಲ್ಲವೇ; ಇಂತಾರೋ ನಿರ್ಮಾಣಗೊಂಡಂತಹ ಅಧಿವಾಸ ಲಾಭವಾದರೂ, ತಾನು ಮುಂದೆ ಕೇವಲ ಹಿಂದೂ ರಾಜ್ಯದ ಪ್ರಜೆಯಾಗುವೆನೆಂದೂ, ಆ ಮೂಲೆಯ ಪಾಕಿಸ್ತಾನವು ಈ ಮೂಲೆಯ ತನಗೇಕೊಡುವ ರಕ್ಷಣೆಯು ಕೇವಲ ಕೃತಕವೆಂದೂ ತಿಳಿಯದ ಊಹಿಸುವ ಮುಸಲ್ಮಾನನೂ ತಲೆತುಂಬಾ ಪಾಕಿಸ್ತಾನ್ ಸ್ವಾರ್ಥಿಯನ್ನೇ ತುಂಬಿಕೊಂಡು ಕುದಿಯುವ ಸ್ಥಿತಿಯೊದಗಿದೆ. ವಾತಾವರಣವಂತಹದ! ಡೆಲ್ಲಿಯ ಬ್ಲಿಂತೂ ಈಗಲೇ ಮುಸ್ಲಿಂ ಕಡೆಯಿಂದ ಶಸ್ತ್ರ, ದೊಣ್ಣೆ, ಚೂರಿಗಳ ಸಂಗ್ರಹವಾಗುತ್ತಿದೆಯಂತೆ. ಬಳಗಿ ನಗರ ಹಂತ ಇಂತಹ ಸಿದ್ಧತೆಯೇ ನಡೆದಿದ್ದು, ಅಲ್ಲಲ್ಲಿ ಘರ್ಷಣೆಂದು ಕಟ ಹೊಗೆಯೂ ಏರುತ್ತಿದೆ. ಡೆಲ್ಲಿಯ ಲ್ಲೀಗ 144ನೇ ಸೆಕ್ಷನು ಜಾರಿಯಲ್ಲಿದೆ. ಒತ್ತಿಗೆಗೆ ಒಟ್ಟ ಹಿಂದುವು ಅಲ್ಲಿ ಬಾರಿಯಿಂದ ತಿಪ್ಪೆಯಲ್ಲಿಟ್ಟ ಇಹಯಾತ್ರೆ ಮುಗಿಸಿದ. ಅಲಿಘರ್ ದುರಂತವಿನ್ನೂ ಕಣ್ಮುಂದಿನಿಂದ ಮಾಸಿಲ್ಲ ಮುಸಲ್ಮಾನರೀಗ ನಿಜಕ್ಕೂ ಕೆರಳಿದ್ದಾರೆ ಜಾತೀ ಗಲಭೆಯಿಂದ ಕೆರಳುವದು ಖಚಿತವೆಂದು ಇದುವರೆಗೆ ಭಾಸಿಸಿದ್ದ ವಿಶ್ವವರನ್ನು ಕೆರಳಿ ಹತ್ತಿದ್ದಾರೆ ಮುಕ್ತ ತಿಂಡಕಗಳೊಡನೆ ಈ ಬಿರಿಯವನ್ನೂ ಗಣಿಸಿದರೆ, ಡೆಲ್ಲಿಯಲ್ಲಿರುವ ಜನಪ್ರಮುಖರು ಮುಖ್ಯಮೇಲೆ ನಿಂತಂತಿರುವ ಆತುರದಾಯೀ ದೃಶ್ಯವೇ ಕಾಣುತ್ತಿದೆ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ತಿನಸುಗಳ ತಯಾರಿಕೆಗಳು—ವಿದ್ಯುದ್ದೀಪ, ಕೆರೆಯೊಳಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ನವಯುಗದ

ಚಂದಾ ಹಣ ಬಾಕಿ ಇರುವವರಿಗೆ ಕಳುಹಿಸುವ್ ವಿ. ಪಿ. ಯನ್ನು ಅವರು ದಯಮಾಡಿ ಸ್ವೀಕರಿಸುವಂತೆ ವಿನಂತಿ.

ಮೆನೇಜರ್.

The Canara Banking Corporation Limited.

(Incorporated in British India, with limited Liability)

Estd 1906

Head Office: UDIPI, South Kanara

ANNOUNCEMENT.

A Branch of the Bank has been opened at SALEM TOWN on 11-4-1946.

A Branch of the Bank will shortly be opened at BYADGI.

ಉಡುಪಿ, ಗುರುವಾರ, ೨-೫-'೪೬

ಮದ್ರಾಸ್ ಮಂತ್ರಿಮಂಡಲ

ಮದ್ರಾಸ್ ಪ್ರಾಂತ್ಯವಿಂದು ಕಾಂಗ್ರೆಸ್ ಸರಕಾರದ ಕೈಯಲ್ಲಿದೆ. ಪೂರ್ವ ನಿಶ್ಚಯದಂತೆ ಶ್ರೀ. ಟಿ ಪ್ರಕಾಶಮರು ಏಪ್ರಿಲ್ ತಾ. 29ರಲ್ಲಿ ೧೧ ಮಂದಿ ಮಂತ್ರಿಗಳ ಹೆಸರನ್ನು ಗವರ್ನರರಿಗೊಪ್ಪಿಸಿದರು; ತಾ. 30ರಲ್ಲಿ ಮಂತ್ರಿಗಳು ಪ್ರತಿಜ್ಞಾವಿಧಿ ಮುಗಿಸಿ ಅಧಿಕಾರ ಸ್ವೀಕರಿಸಿದರು. ಸುಮಾರು ಏಳು ವರುಷಗಳಿಂದ ಮದ್ರಾಸನ್ನು ಅಂಕುಶವಾಗಿ ಆಳುತಿದ್ದ 93ನೇ ಸೆಕ್ಷನು ಅಂದೇ ಹಿಂದೆಗೆಯಲ್ಪಟ್ಟಿದೆ. ಪ್ರಕೃತ ಹನ್ನೊಂದೇ ಮಂತ್ರಿಗಳ ನೇಮಕವಾಗಿರುವದಾದರೂ ಇನ್ನಿಬ್ಬರು ಹೊಸತಾಗಿ ಸೇರಲಿದ್ದಾರೆ.

ಮದ್ರಾಸ್ ಪ್ರಾಂತ್ಯಕ್ಕೆ ಇದೀಗ ಎರಡನೇ ಬಾರಿ ಕಾಂಗ್ರೆಸ್ ಸರಕಾರ ಬಂದಿದೆ. ಕನಸಾಗಿ ಕಂಡುದನ್ನೆಲ್ಲಾ ಕಾರ್ಯರೂಪಕ್ಕಿಳಿಸಲಾಗುವದಸಾಧ್ಯ. ಆದರೆ ಮದ್ರಾಸ್ ಪ್ರಾಂತ್ಯವು ಒಮ್ಮೆ ನಿಂತು ಯುಸಿರಾಡಿಸುವಂತಾಗಿದೆ. ನಿರಂಕುಶಾಧಿಕಾರದ ಬದಲಿಗೆ, ಪ್ರಜಾ ಜವಾಬ್ದಾರಿ ಪ್ರಭುತ್ವ ಬಂತೆಂಬ ಆನಂದವನ್ನು ಯಾವ ಕಾರಣದಿಂದಾದರೂ ಅನುಭವಿಸದಿರಲಾಗುವದಿಲ್ಲ.

ಪ್ರಕಾಶಮ್ ಮಂತ್ರಿಮಂಡಲವು ಒಂದು ಮಂಥನಾನಂತರ ಹುಟ್ಟಿದೆ; ಕಾಂಗ್ರೆಸ್ ವರಿಷ್ಠರ ಕಡಗೋಲನ್ನು ಸ್ವೀಕರಿಸದೆ, ಮದ್ರಾಸ್ ಕಾಂಗ್ರೆಸ್ ಪಕ್ಷೀಯರು ಸ್ವತಃ ಕಡೆದು ಇದನ್ನು ನಿರ್ಮಿಸಿದ್ದಾರೆ. ಅದ್ದರಿಂದ ಜನತೆಯಲ್ಲಿ ಆಕ್ಷೇಪ, ಅನುಮಾನಗಳು ಉಳಿದಿವೆ ಎಂಬುದನ್ನು ಮರೆಯಲಾಗದು. ಇಂತಹ ವಾತಾವರಣದಲ್ಲಿ ಹೊಸ ಸರಕಾರವೆಷ್ಟೇ ಎಚ್ಚರಿಕೆಯಿಂದಿದ್ದರೂ ಸಾಲದು. ಆಹಾರದ ಅಭಾವ, ಆರ್ಥಿಕ ಸಾಮಾಜಿಕ ಕ್ಷೇತ್ರದಲ್ಲಿ ಕ್ರಾಂತಿಕಾರೀ ಸುಧಾರಣೆಗಳ ಅವಶ್ಯಕತೆಯಿರುವ ಈ ಕಾಲದಲ್ಲಿ ಆ ಮುದಿತಲೆಗೇರಿದುದು ಮುಳ್ಳಿನ ಕಿರೀಟ! ಹೆಚ್ಚಾಗಿ ಹೊಸಬರೇ ಇರುವ ಆ ಮಂಡಲವು ಅಧಿಕಾರ ಪೀಠವನ್ನೇರುವಾಗ ಹಿರಿಯರ ಆಶೀರ್ವಾದ ದೊರೆತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮದ್ರಾಸ್ ಮಂತ್ರಿಮಂಡಲದ ಜವಾಬ್ದಾರಿ ಮುಮ್ಮಡಿಯೇರಿದೆ. ಈ ಪರೀಕ್ಷೆಯಲ್ಲಿ ಗೆಲ್ಲಲು, ಮದ್ರಾಸ್ ಮಂತ್ರಿಗಳಲ್ಲಿ ಆತ್ಮವಿಶ್ವಾಸ, ಸೇವಾಕಾಂಕ್ಷೆ, ನಿಯಮನಿಷ್ಠೆ, ಸದಾ ಜಾಗೃತಿ, ಮತ್ತು ಪ್ರಗತಿಶೀಲ ಮನೋವೃತ್ತಿಯಿರುವದು ಅತ್ಯಗತ್ಯ. ಜನತೆಯ ಬೆಂಬಲದಿಂದಲೇ ವಿಜಯಿಯಾಗುವ ದೃಢನಿರ್ಧಾರದಿಂದ ಹೊಸ ಸರಕಾರ ಮುಂದೊತ್ತುವದೆಂದೂ, ಇಡೀ ಪ್ರಾಂತ್ಯವು ಒಮ್ಮತದಿಂದ ಅವರನ್ನು ಪ್ರೋತ್ಸಾಹಿಸಿ ಮದ್ರಾಸಿನಲ್ಲಿ ನವರಚನೆಯಾಗುವದೆಂದೂ ಹಾರೈಸುತ್ತೇವೆ.

ಮಂತ್ರಿ ಸ್ಥಾನಗಳಿಗೆ ನೇಮಕಗೊಂಡವರ ಕುರಿತು ಚರ್ಚೆ ಅನಗತ್ಯ. ನಾಯಕ ಚುನಾವಣೆಯೊಂದಿಗೇನೇ ಮುಖ್ಯ ನೇಮಕಗಳ ಸಂಬಂಧದ ಆತುರ ಮುಗಿಯುತಕ್ಕಂತಹದಿದೆ. ಹೊಸ ನಾಯಕನು ತನ್ನೆಲ್ಲಾ ಕಾರ್ಯಕಲಾಪಗಳಲ್ಲಿ ಭುಜಕ್ಕೆ ಭುಜ ಕೊಟ್ಟು ಮುಂದೊತ್ತಬಲ್ಲವರನ್ನೇ ಅನುಯಾಯಿಗಳನ್ನಾಗಿ ಆರಿಸಿಕೊಳ್ಳಲು ಬದ್ಧನಿದ್ದಾನೆ. ಶ್ರೀ. ಪ್ರಕಾಶಮರನ್ನು ಆರಿಸಿಕೊಂಡುದೆಂದರೆ ಆ ಜವಾಬ್ದಾರಿಯನ್ನು ಅವರಿಗೊಪ್ಪಿಸಿದ್ದೆಂದೇ ಅರ್ಥ. ಅದ್ದರಿಂದ ಈ ನೇಮಕಗಳ ಕುರಿತು ಆಕ್ಷೇಪಿಸತಕ್ಕವರು ವ್ಯಕ್ತಿಗತ ವಿಷಯದಲ್ಲಿ ಕೈಹಾಕುವ ಅಧಿಕ ಪ್ರಸಂಗಿಗಳಾಗುವರು. ಹೊಸ ಮಂತ್ರಿಗಳನ್ನು ಆದರಿಲ್ಲೂ ಮಂತ್ರಿಗಳಲ್ಲೊಬ್ಬರಾದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ. ಕೆ. ಆರ್. ಕಾರಂತರನ್ನು ಅಭಿನಂದಿಸುತ್ತೇವೆ. ಶ್ರೀ. ಕಾರಂತರನ್ನು ಕಳುಹಿಕೊಟ್ಟ ಜಿಲ್ಲೆಗೆ ಪ್ರಥಮ ವರ್ಗದ ಯೋಧ ಸಹಾಯನಿತ್ತ ಹೆಗ್ಗಳಿಕೆಯಿದೆ ಎಂಬುದನ್ನು ನಾಯಕ ಚುನಾವಣೆಯ ಹೋರಾಟವು ಸಿದ್ಧಪಡಿಸಿದೆ. ಇನ್ನೂ ಹೆಚ್ಚಿನ ಯಶಸ್ಸನ್ನು ಜಿಲ್ಲೆಯು ಅವರಿಂದ ನಿರೀಕ್ಷಿಸುತ್ತದೆ.

ವಾತಾವರಣವಿನ್ನೂ ತಿಳಿಯಾಗಿಲ್ಲವೆಂಬುದು ಶೋಚನೀಯ. ಕಾರಣವಿರಲಿ, ಇಲ್ಲದಿರಲಿ, ಹೊಸ ಮಂಡಲಿಯ ಭವಿಷ್ಯದ ಕುರಿತು ಭರವಸೆ ಪಡದಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಅದನ್ನು ಸಮರ್ಥಿಸಿದ ಹೊಣೆ ಶ್ರೀ. ಟಿ. ಪ್ರಕಾಶಮರ ಮೇಲಿಲ್ಲದಿರಬಹುದು; ಆದರೆ ಅದನ್ನು ಅನುಭವಿಸುವ ಜವಾಬ್ದಾರಿಯಿಂದ ಅವರು ತಪ್ಪಿಸಿಕೊಳ್ಳಲಾರರು. ಇಂದಿನ ನಾಯಕತ್ವದ ಕುರಿತು ರಾಗ, ದ್ವೇಷಗಳಿಗೊಳಗಾದವರು ಕೆಲವರಾದರೆ ತಪ್ಪಭಿಪ್ರಾಯ ಕಟ್ಟಿಕೊಂಡವರು ಹಲವರು. ರಾಜಕೀಯದಲ್ಲಿ ಸ್ಪರ್ಧೆ, ಮಾಟ ನಡೆಯುವುದು ಮದ್ರಾಸಿನಲ್ಲಿ ಮಾತ್ರವಲ್ಲ; ಪ್ರಪಂಚದ ಪ್ರತಿಯೊಂದು ರಾಷ್ಟ್ರದ ರಂಗದಲ್ಲೂ ಇಂತಹ ನಾಟಕಗಳು ನಡೆದೇ ಇವೆ. ಪ್ರಪಂಚವೇ ಅದನ್ನೊಂದು ಕಲೆಯಾಗಿ ಅಂಗೀಕರಿಸಿಕೊಂಡಿದೆ. ಆದರೆ ದೀರ್ಘಾವಧಿಯ ದಾಸ್ಯ, ಶಿಕ್ಷಣ ಮತ್ತು ರಾಜಕೀಯಜ್ಞಾನದ ಅಭಾವದಿಂದಾಗಿ ಇಲ್ಲಿರುವಷ್ಟು ಅಜ್ಞಾನವು ಆ ಭಾಗದಲ್ಲಿ ಮುಂದುವರಿದ ಕೆಲವು ರಾಷ್ಟ್ರಗಳಲ್ಲಿಲ್ಲದಿರಬಹುದು. ನಿದರ್ಶನಕ್ಕಾಗಿ ಕಾಂಗ್ರೆಸ್ ವರಿಷ್ಠರೊಡನೆ ಮದ್ರಾಸ್ ಕಾಂಗ್ರೆಸ್ ಪಕ್ಷವು ನಡಿಸಿದ ಘರ್ಷಣೆಯ ಪರಿಣಾಮದ ಕುರಿತು ಹಲವರು ಭೀಕರಸ್ವಪ್ನಗಳನ್ನು ಕಾಣುತಿದ್ದಾರೆ. ಶ್ರೀ. ಪ್ರಕಾಶಮ್ ಮತ್ತವರ ಅನುಯಾಯಿಗಳ ಕಣ್ಣ ಮುಂದೆಕೂಡಾ ಇರದ ಭೀತಿ ಕೆಲವರ ಕರುಳಿಗಂಟಿಕೊಂಡಿದೆ. ಇಂತಹ ಭಯಸಂದೇಹಗಳಿಗೆ ಹಲವರಮಟ್ಟಿಗೆ ಪರಿಸ್ಥಿತಿಯ ಅಜ್ಞಾನವೂ ಇನ್ನು ಕೆಲವರಮಟ್ಟಿಗೆ ಬಿನ್ನ ಅಭಿರುಚಿಯೂ ಕಾರಣವಲ್ಲದೆ ವಸ್ತುಸ್ಥಿತಿಯಲ್ಲ. ಅದ್ದರಿಂದ ಈ ಕುರಿತು ಸ್ಪಷ್ಟೀಕರಣ ಅಗತ್ಯವಿದೆ.

ನಾಯಕನನ್ನಾರಿಸಿಕೊಳ್ಳುವ ಅಧಿಕಾರವು ಮದ್ರಾಸ್ ಕಾಂಗ್ರೆಸ್ ಎಂ. ಎಲ್. ಎ.ಗಳಿಗಲ್ಲದೇ ಹೊರತು ಅದು ಕಾಂಗ್ರೆಸ್ ಅಧ್ಯಕ್ಷರಿಗೂ ಇರಲಿಲ್ಲ, ಕಾರ್ಯಕಾರಿ ಸಮಿತಿ ಅಥವಾ ಕೇಂದ್ರ ಪಾರ್ಲಿಮೆಂಟರೀ ಬೋರ್ಡಿಗೂ ಇರಲಿಲ್ಲ. ಅದ್ದರಿಂದಲೇ ಕಾಂಗ್ರೆಸ್ ವರಿಷ್ಠರು ಪ್ರಕಾಶಮ್ ಅಥವಾ ಕಾರಂತರನ್ನು ಎಸೆಂಬ್ಲಿ ಉಮೇದ್ವಾರಿಕೆಗೆ ನಿಲ್ಲಿಸಿದಂತೆ ರಾಜಾಜಿಯನ್ನು ಕಾಂಗ್ರೆಸ್ ನಾಯಕತ್ವಕ್ಕೆ ನಿಲ್ಲಿಸಲಿಲ್ಲ. 'ನೀವು ರಾಜಾಜಿಯನ್ನಾರಿಸಿಕೊಳ್ಳಿ' ಎಂಬ ಸಲಹೆಮಾತ್ರ ಕೊಟ್ಟಿದ್ದರಲ್ಲದೆ 'ನಾವು ರಾಜಾಜಿಯನ್ನಾರಿಸಿದ್ದೇವೆ' ಎಂಬ ಆಜ್ಞೆ ಅಲ್ಲಿಂದ ಬಂದಿಲ್ಲ. ಇಷ್ಟನ್ನು ಕಂಡವರ ಕಣ್ಣಿಗೆ ಮತ್ತೆ ಕಾಂಗ್ರೆಸ್ ಅಧಿಪತಿಗಳಲ್ಲಿ ಸರ್ವಾಧಿಕಾರೀ ಮನೋವೃತ್ತಿಯನ್ನಾಗಲೀ, ಮದ್ರಾಸ್ ಕಾಂಗ್ರೆಸ್ ಪಕ್ಷೀಯರಲ್ಲಿ ಸ್ವೇಚ್ಛಾಮನೋವೃತ್ತಿಯನ್ನಾಗಲೀ ಕಾಣಲಾರದು. ಕಾಂಗ್ರೆಸ್ ವರಿಷ್ಠರ ಅಭಿಪ್ರಾಯಕ್ಕಿಂತ ಪೂರ್ತಿ ಭಿನ್ನಾಭಿಪ್ರಾಯವು ಮದ್ರಾಸ್ ಪಕ್ಷೀಯರದಾಗಿತ್ತೆಂಬುದು ಮತದಾನದಿಂದ ಸ್ಪಷ್ಟವಾಗಿರುವಾಗ, ಈ ಜನಾಭಿಪ್ರಾಯದ ವಿರುದ್ಧವಾಗಿ ಯಜಮಾನರ ಅಭಿಪ್ರಾಯವನ್ನು ಅಂಗೀಕರಿಸಿಕೊಳ್ಳುತ್ತಿದ್ದರೆ ನಿಜಕ್ಕೂ ಮದ್ರಾಸ್ ಪಕ್ಷವು ಸಂಕಟದ ಬೀಡಾಗುತಿತ್ತು. ಈಗಿನ ಸಂದೇಹಕ್ಕಿಂತ ಆ ಸಂಕಟವು ಅಸಹ್ಯವಲ್ಲವೇ? ತಮ್ಮ ಮನಸ್ಸಿಗೊಪ್ಪದವನ ನಾಯಕತ್ವದಲ್ಲಿ ದುಡಿಯಬೇಕಾಗಿ ಬಂದು, 93ನೇ ಸೆಕ್ಷನಿನಾಳ್ವಿಕೆಯು ಪ್ರಾಂತ್ಯದಿಂದ ಜಾರಿದರೂ ಕಾಂಗ್ರೆಸ್ ಪಾಳಯದಲ್ಲಿ ಉಳಿದಂತಾಗುತಿತ್ತು! ಇಂತಹ ಪರಿಣಾಮವನ್ನು ಕಾಂಗ್ರೆಸ್‌ವರಿಷ್ಠರೂ ಬಯಸಿರಲಿಲ್ಲ. ಅವರ ಸಲಹೆಗೆ ಮದ್ರಾಸಿನ ಅನುಭವ ಸಾಕಷ್ಟಿಲ್ಲದುದೇ ಕಾರಣ. ಆ ಮೇಲೆ ಮಂತ್ರಿಮಂಡಲ ರಚನೆಯ ಕುರಿತು ಶ್ರೀ ಟಿ. ಪ್ರಕಾಶಮರು ಕೇವಲ ಸಂಪ್ರದಾಯ ಪಾಲನೆಗಾಗಿಯಾದರೂ ಕಾಂಗ್ರೆಸ್ ಅಧಿಪತಿಗಳ ಸಲಹೆ ಕೇಳಬಾರದಿತ್ತು. ಯಾವುದರ ಸಂಬಂಧವಾಗಿ ನಾಯಕರು ಸೂಚನೆ ಕೊಟ್ಟಿದ್ದರೋ, ಅದರ ಸಂಬಂಧವಾಗಿಯೇ, ಆ ಸೂಚನೆಯನ್ನು ಅಲ್ಲಗಳೆದವರೇ ಮತ್ತೊಂದು ಸೂಚನೆ ಯಾಚಿಸುವದೆಂದರೆ, ಅದಕ್ಕೆ ನಾಯಕರನ್ನು ಅವಜ್ಞಿಸುವ ಅಥವಾ ಅಣಕಿಸುವ ಅರ್ಥವಾಗಬಹುದು. ಆ ಕುರಿತು ತಮ್ಮಲ್ಲಿದ್ದ ಏಕಮಾತ್ರ ಸಲಹೆಯನ್ನು ಅವಮಾನಿಸಿ ಮುಗಿಸಿದ್ದ ಕಾಂಗ್ರೆಸ್ ಅಧಿಪತಿಗಳು ಇನ್ನು ತಾವು ಕೊಡತಕ್ಕ ಸಲಹೆಯಿಲ್ಲವೆಂಬುದು ಸಂಪೂರ್ಣ ಸರಿ. ಶ್ರೀ. ಪ್ರಕಾಶಮರು ತನ್ನಿಚ್ಛೆಯ ಮಂತ್ರಿ ಮಂಡಲ ರಚಿಸಿಕೊಂಡುದೂ ಕ್ರಮಬದ್ಧವೇ ಇದೆ. ಈ ರಚನೆಯಲ್ಲಿ ಕೂಡಾ 'ಸಾಧ್ಯವಿದ್ದಷ್ಟು ಹಿಂದಿನವರನ್ನೇ ಆರಿಸಬೇಕು' ಎಂಬ ಕಾ. ವರಿಷ್ಠರ ಅಭಿಪ್ರಾಯಕ್ಕೆ ಮಾನ್ಯತೆ ದೊರೆತಿಲ್ಲವೆಂಬುದು ಒಡೆದು ಕಾಣುತ್ತಿದೆ. ಶ್ರೀ. ಪ್ರಕಾಶಮ್ ಮತ್ತು ಶ್ರೀ. ವಿ. ವಿ. ಗಿರಿಯವರ ಹೊರತು ಮಿಕ್ಕವರೆಲ್ಲರೂ ಹೊಸಬರೇ. ಆದರೆ ಇದಕ್ಕೆ ಹೊಸ ನಾಯಕನ ಉದ್ಧಟ ಮನೋವೃತ್ತಿಯೇ ಕಾರಣವಾಗಿರಲಾರದು. ಡಾ! ಎಸ್. ಎಸ್. ರಾಜನ್‌ರಂತಹ ರಾಜಾಜಿ ಭಕ್ತ ಹಳೇ ಮಂತ್ರಿಗಳು ಪ್ರಕಾಶಮರನ್ನು ಕೂಡಿಕೊಳ್ಳಲು ಬಯಸದಿರಬಹುದು. ಒಬ್ಬಿಬ್ಬರು ಹಳಬರು ಈ ಬಾರಿ ಆರಿಸಲ್ಪಟ್ಟಿಲ್ಲ. ಹೇಗಿದ್ದರೂ ಕಾರ್ಯರಥವು ಸುಗಮವಾಗಿ ಮುಂದೊತ್ತಬೇಕಾದರೆ ನಾಯಕನು ತನಗೆ ಒಗ್ಗುವವರನ್ನೇ ಕೂಡಿಕೊಳ್ಳುವದು ಸಮಂಜಸ. ಇವೆಲ್ಲಾ ವಿದ್ಯಮಾನಗಳು ಯಾರೂ ಯಾವ ತಪ್ಪನ್ನೂ ಮಾಡಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ. ಕಾಂಗ್ರೆಸ್ ನಾಯಕರು ಮದ್ರಾಸ್ ಮಂತ್ರಿಮಂಡಲದೊಡನೆ ಮುಷ್ಕರ ಹೂಡುವಂತಿಲ್ಲ; ನಾಯಕನನ್ನಾರಿಸಿಕೊಳ್ಳುವ ತಮ್ಮ ಅಧಿಕಾರ ಕ್ಷೇತ್ರದಲ್ಲಿ ಒಂದಿಂಚು ಸ್ಥಳವನ್ನೂ ಮದ್ರಾಸ್ ಪಕ್ಷವು ಬಿಡಲೊಪ್ಪದಿದ್ದಂತೆ, ಕಾಂಗ್ರೆಸ್ ನಿಯಮನಿಷ್ಠೆ ಮತ್ತು ಕಾರ್ಯಕಲಾಪಗಳ ಸೂತ್ರಧಾರಿತ್ವ ಮತ್ತು ಮೇಲ್ನೋಟ ನೋಡುವ ತಮ್ಮ ಅಧಿಕಾರವನ್ನೂ ಕಾಂಗ್ರೆಸ್ ಅಧಿಪತಿಗಳು ಚಾಚೂ ತಪ್ಪದೆ ಪಾಲಿಸಲಿರುವದು ಖಂಡಿತ. ಇವೆರಡು ಪಕ್ಷಗಳಲ್ಲಿ ಇಂದು ಮೂಡಿರುವ ಇವೆರಡು ನಿಷ್ಠೆಗಳೂ ಸಾರ್ವಜನಿಕರ ದೃಷ್ಟಿಯಿಂದ ಒಳ್ಳೇದೇ ಹೊರತು ಕೆಟ್ಟದಲ್ಲ. ಈ ಬಾರಿ ಮದ್ರಾಸ್ ಪಕ್ಷವು ಕಾಂಗ್ರೆಸ್ ನಾಯಕರನ್ನು ಪರೀಕ್ಷಿಸಿತು; ಇನ್ನು ಮುಂದೆ ಸದಾಕಾಲ ಆ ನಾಯಕರಿಂದ ಇವರೇ ಪರೀಕ್ಷೆ ಕೊಡಬೇಕಾಗಿದೆ. ಜನತೆ ಆ ನಾಯಕರ ಹಿಂದಿದೆ. ಅದ್ದರಿಂದ ಹೊಸ ಮಂತ್ರಿ ಮಂಡಲವು ತನ್ನಲ್ಲಿರಬಹುದಾದ ಸ್ವಪ್ರತಿಷ್ಠೆಯ ಅನಗತ್ಯ ಭಾಗವನ್ನು ತ್ಯಜಿಸಿಕೊಂಡು, ಕಾಂಗ್ರೆಸ್ ಶಿಸ್ತು ಮತ್ತು ಘನತೆಯನ್ನುಳಿಸಿ, ಕಾರ್ಯಕಲಾಪಗಳನ್ನು ಶೀಘ್ರಗತಿಯಿಂದ ಸಾಗಿಸಿ, ಮದ್ರಾಸ್ ಪ್ರಾಂತ್ಯದ ಮಟ್ಟವನ್ನೇರಿಸಲೆಂದು ಹಾರೈಸುತ್ತೇವೆ.

ಕೃಷಿಕರ ಸಭೆ-ತಾ.28-4-46ನೇ ಆದಿತ್ಯವಾರ ಸಾಯಂಕಾಲ ಸಗ್ರಿ ಮೈದಾನದಲ್ಲಿ ಶ್ರೀ ವಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಶಿವಳ್ಳಿ, [illegible], ಕುಂಜಿಬೆಟ್ಟು, ಗುಂಡಿಬೈಲ್ ಈ ಕಡೆಯ ಕೃಷಿಕರ ಮಹಾ ಸಭೆ ಸೇರಿ ಈಗ ಬಂದಿರುವ ಆಹಾರದ ಅಭಾವದ ನಿವಾರಣೆ [illegible] ಗದ್ದೆಗಳಿಗೆ [illegible] ಆಹಾರ [illegible] ಕುರಿತು ಅಧ್ಯಕ್ಷರು ಭಾಷಣವಿತ್ತರು. 12 ಜನರಿಂದ ಕೂಡಿದ [illegible] ಸಮಿತಿಯನ್ನು ಸ್ಥಾಪಿಸಿ [illegible] ಅಧ್ಯಕ್ಷರನ್ನಾಗಿ [illegible] ಆರಿಸಲಾಯಿತು. [illegible] ಕೃಷಿ [illegible] ಉಪಕರಣಗಳನ್ನು ಒದಗಿಸುವಂತೆ ಸರಕಾರವನ್ನು ಕೇಳುವಂತೆ [illegible] ಕಾರ್ಯದರ್ಶಿಯ ಧನ್ಯವಾದಗಳೊಂದಿಗೆ ಸಭೆ ಮುಗಿಯಿತು.

ಮದ್ರಾಸ್ ಕಾಂಗ್ರೆಸ್ ಮಂತ್ರಿಮಂಡಲ.

ಶ್ರೀ ಟಿ ಪ್ರಕಾಶಮ್ ಪ್ರಧಾನ ಮಂತ್ರಿಯಾಗಿ ತಾ 29ರಲ್ಲಿ ಗವರ್ನರರನ್ನು ಭೇಟಿಯಾಗಿ ಮಂತ್ರಿಗಳ ಹೆಸರು ಯಾದಿಯನ್ನೊಪ್ಪಿಸಿದರು. ಆ ಪಟ್ಟಿಯಲ್ಲಿ ಹನ್ನೊಂದು ಮಂದಿಯ ಹೆಸರಿದ್ದು ಇನ್ನಿಬ್ಬರ ಹೆಸರನ್ನು ಮುಂದೆ ಕೊಡಲಾಗುವುದು.

ಶ್ರೀ. ಟಿ. ಪ್ರಕಾಶಮ್, ಬ್ಯಾರಿಸ್ಟರ್–ಎಟ್–ಲಾ.

ಶ್ರೀ. ವಿ ವಿ ಗಿರಿ, ಬ್ಯಾರಿಸ್ಟರ್–ಎಟ್–ಲಾ

ಶ್ರೀ ಎಮ್. ಭಕ್ತವತ್ಸಲಮ್, ಬಿ. ಎ. ಬಿ. ಎಲ್.

ಶ್ರೀ. ಎಸ್ ಅವಿನಾಶಿ ಲಿಂಗಮ್ ಬಿ. ಎ. ಎಲ್. ಎಲ್

ಶ್ರೀ ಕೆ. ಭಾಷ್ಯಮ್, ಬಿ. ಎ. ಬಿ. ಎಲ್.

ಶ್ರೀ. ವಿ. ಎಸ್. ರಾಮಾರಸಾಮಿ ರಾಜಾ.

ಶ್ರೀ ಡ್ಯಾನಿಯೇಲ್ ಥೋಮಸ್, ಬಿ. ಎ. ಬಿ. ಎಲ್.

ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ, ಬಿ ಎ.

ಶ್ರೀ. ಕೆ. ಆರ್. ಕಾರಂತ, ಬಿ ಎ ಎಲ್. ಎಲ್. ಬಿ

ಶ್ರೀ. ಬೆ ಕೋಟಿರೆಡ್ಡಿ, ಬ್ಯಾರಿಸ್ಟರ್–ಎಟ್–ಲಾ.

ಶ್ರೀ ವೇಮಲ ಕೂರ್ಮಯ್ಯ, ಬಿ ಎ. ಎಲ್ ಎಲ್. ಬಿ.

ಉಳಿದಿಬ್ಬರನ್ನು ಆಂಧ್ರದಿಂದೊಬ್ಬ ಮತ್ತು ಕೇರಳದಿಂದೊಬ್ಬನನ್ನು ಆರಿಸಿಕೊಳ್ಳಲಾಗುವದು ಸದ್ಯಸ್ಥಿತಿಯಲ್ಲಿ ಓರ್ವ ಮುಸ್ಲಿಂ ಮಂತ್ರಿಯನ್ನು ನೇಮಿಸಿಕೊಳ್ಳುವದಸಾಧ್ಯವೆಂದು ಶ್ರೀ. ಟಿ. ಪ್ರಕಾಶಮರಂದಿದ್ದಾರೆ. ಗವರ್ನರರೂ ಸ್ವೀಕೃತ ಮಂತ್ರಿಗಳೆಲ್ಲರೂ ಈ ನೇಮಕಗಳಿಗೊಪ್ಪಿಗೆ ಕೊಟ್ಟಿದ್ದಾರೆ ಎಪ್ರಿಲ್ ತಾ 30ನೇ ಅಪರಾಹ್ನ 2ಘಂಟೆಗ ಮಂತ್ರಿಗಳೆಲ್ಲಾ ಪ್ರತಿಜ್ಞಾ ಧಾರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅಂದೇ 93ನೇ ಸೆಕ್ಷನನ್ನು ಬರ್ಖಾಸ್ತು ಪಡಿಸುವ ಸರಕಾರಿ ಪ್ರಕಟಣೆ ಹೊರಟಿದೆ

ಮುಂದಿನ ವ್ಯವಸ್ಥೆ

ಮಂತ್ರಿಗಳಲ್ಲಿ ಯಾರಾರಿಗೆ ಯಾವ ಯಾವ ಖಾತೆಗಳೆಂಬುದು ತಾ. 30ರಲ್ಲೇ ಹಂಚಿ ಹಾಕಲ್ಪಟ್ಟಿವೆ ಶ್ರೀ. ಕೆ. ಆರ್ ಕಾರಂತರ ಕೈಗೆ 'ಕಾನೂನು ಮತ್ತು ವ್ಯವಸ್ಥೆ'ಯು ಒಂಟಿಂಬ ನಾಹೇಯಿದೆ. ಎಸೆಂಬ್ಲಿ ಮತ್ತು ಕೌನ್ಸಿಲಿನ ಅಧ್ಯಕ್ಷಸ್ಥಾನಗಳ ಉಮೇದ್ವಾರಿಗಳ ನೇಮಕವು ಕಾಂಗ್ರೆಸ್ ಪಕ್ಷದ ಸಭೆಯಲ್ಲಾಗಲಿದೆ ಜನ್ನು ಎರಡೇ ವಾರಗಳೊಳಗೆ ಮದ್ರಾಸ್ ಎಸೆಂಬ್ಲಿ ಅಧಿವೇಶನ ನೆರೆಯುವದು. ಪಾರ್ಲಿಮೆಂಟರೀ ಕಾರ್ಯದರ್ಶಿಗಳ ನೇಮಕವೂ ಆಗಿದೆ. ವಿವರ ಬಂದಿಲ್ಲ.

ಇದು ವರೆಗೆ ಗವರ್ನರ್ ಸಲಹೆಗಾರರಾಗಿದ್ದು ಮಂತ್ರಿಗಳ 'ಅಧಿಕಾರ ನಿರ್ವಹಿಸುತಿದ್ದವರೆಲ್ಲಾ ಪದಚ್ಯುತಿ ಹೊಂದಿದ್ದಾರೆ. ಆ ಪೈಕಿ ಸರ್. ಎಸ್. ರಾಮಮೂರ್ತಿಯವರು ನವಸರಕಾರದಡಿಯಲ್ಲಿ ಮದ್ರಾಸ್ ಸರಕಾರದ ಚೀಫ್ ಸೆಕ್ರೆಟರಿಯಾಗಿ ನಿಲ್ಲಲೊಪ್ಪಿದ್ದಾರೆಂದೂ, ತಾನು ಬರೆದಿದ್ದ ರಜೆ ಅರ್ಜಿಯನ್ನು ಹಿಂತೆಗೆದುಕೊಂಡಿರುವರೆಂದೂ ತಿಳಿದು ಬರುತ್ತದೆ, ಮೊದಲನೆ ಸಲಹೆಗಾರ ಸರ್. ನೋರ್ಮನ್ ಸ್ಟ್ರಾಥೆಯವರು ನಿವೃತ್ತಿಯ ಮೊದಲರಜೆ ಪಡಕೊಂಡಿದ್ದಾರೆ. ಮಿ. ಗೋನ್ ಮತ್ತು ಮಿ. ಮಾಸ್ಟರ್ ಮೇನರು ರೆವಿನ್ಯೂಬೋರ್ಡಿನ ಮೊದಲ ಸ್ಥಾನಕ್ಕೇನೇ ಹಾಕಲ್ಪಟ್ಟಿದ್ದಾರೆ. ಮಿ. ಬ್ರೌನರು ಗವರ್ನರರ ಕಾರ್ಯದರ್ಶಿಯಾದರು.

"ಪ್ರಾಂತ್ಯದ ಜನತೆಯ ರಕ್ಷಣೆಗಗತ್ಯವಿರುವ ಮುಖ್ಯವಾಗಿ ಆಹಾರ ಸಬಂಧದ–ಕಾರ್ಯವನ್ನೆಲ್ಲಾ ಕೂಡಲೇ ಕೈಕೊಳ್ಳುವ ಆಶೆಯಿದೆ. ನಮ್ಮ ಜವಾಬ್ದಾರಿ ಬಹಳ ದೊಡ್ಡದು ನಮ್ಮ ಘೋಷಣೆ ಮತ್ತು ಕಾರ್ಯಕಲಾಪಗಳನ್ನು ಸದ್ಯದಲ್ಲೇ ಜಾಹೀರು ಮಾಡುವೆವು" ಎಂದು ಪ್ರಧಾನ ಮಂತ್ರಿ ಪ್ರಕಾಶಮರಂದಿದ್ದಾರೆ

'ಕಾಂಗ್ರೆಸ್ ಅಧಿನಾಯಕರಿಗೆ ತಿಳಿಸಿದಿರಾ?' ಎಂದು ಪ್ರಶ್ನಿಸಲ್ಪಟ್ಟಾಗ "ಕಾಂಗ್ರೆಸ್ ಅಧಿನಾಯಕರವೇಲೆ ನಿಮಗೇಕೆ ಸಂದೇಹವೇಕೆ? ಅವರಿಗೆ ಈ ಸುದ್ದಿ ವರ್ತಮಾನ ಪತ್ರಿಕೆಗಳ ಮೂಲಕ ಮುಂದಾಗಿ ತಿಳಿಯಬಹುದು" ಎಂದು ಪ್ರಧಾನ ಮಂತ್ರಿಯಂದಿದ್ದಾರೆ.

ಉಡುಪಿ ನಗರಸಭೆಯ- ಅಧಿಕಾರಿಗಳು ತಮ್ಮ ಸುಪರ್ದಿಗೊಳಪಟ್ಟಿರುವ ಕಿನ್ನಿಮೂಲ್ಕಿ ರಸ್ತೆಯನ್ನು ಇತ್ತೀಚೆಗೆ ಒಮ್ಮೆಯಾದರೂ ನೋಡಿರುವರೇ? ದುರಸ್ತಿಗಾಗಿ ಹಾಕಿದ ಜಲ್ಲೀಕಲ್ಲಿನಮೇಲಿನ ಮಣ್ಣೆಲ್ಲಾ ಹಾರಿಹೋಗಿ ಈಗ ಆ ಇಡೀರಸ್ತೆಯ ಕಲ್ಲುಗಳು ವ್ಯಾಘ್ರದಂತಗಳಂತೆ ಪಥಿಕರ ಕಾಲನ್ನು ಕಚ್ಚುತ್ತಿವೆ. ಮ್ಯುನಿಸಿಪಲ್ ನೀರಿನ ಲೋರಿಯೂ ಅಧಿಕಾರಿಗಳ ಮರ್ಜಿಯನ್ನೇ ವಹಿಸಿ ಅತ್ತ ಆಗಮಿಸುವ ಸಂಪ್ರದಾಯವನ್ನೇ ಮರೆತಂತಿದೆ. ಬಿಬಸ್ಸು ಬಂದಿರುವಾಗ ಪ್ರಯಾಣಿಕರು ರಸ್ತೆಯಲ್ಲಿ ಕಾಲಿಡುವದೇ ಅಪರಾಧವೆಂಬ ಪರಿಂದ ನಗರ ಸಭೆಯು, ಪಾದಸಂಚಾರಿಗಳಿಗೆ ಈ ಶಿಕ್ಷೆಯನ್ನು ವಿಧಿಸಿರಬಹುದೇ? ಎಂದೊಂದು ವಾತ್ರಿಬಂದಿದೆ.

ಶಾಲಾವರ್ಧಂತಿ- ಶ್ರೀ ಅನಂತೇಶ್ವರ ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಕಳೆದ ಶುಕ್ರವಾರಸಂಜೆ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ ಮಾಸ್ಟರ್ ಮತ್ತು ಮೆನೇಜರರಾದ ಶ್ರೀ ಬಿ. ಜನಾರ್ಧನಯ್ಯನವರು ಶಾಲಾ ವರದಿಯನ್ನೋದಿದರು. ಬಹುಮಾನ ವಿತರಣೆ,ಅಧ್ಯಕ್ಷರ ಚುಟುಕು ಭಾಷಣಗಳಾದನಂತರ ಸುಕ್ಕಳ ವಿವಿಧ ಚಟುವಟಿಕೆಗಳ ವೇಷಾವೆ ನಡೆಯಿತು ಭಾರತ ಮಾತೆಯ ಪ್ರದರ್ಶನವು ಮಾತ್ರ ಅಸ್ವಾಭಾವಿಕವಾಗಿತ್ತು.

ಬೊಂಬಾಯಿ- ಉಡುಪಿ ಯಕ್ಷಗಾನ ಕಲಾಮಂಡಲದವರು ಅಪನ್ಮೂರ್ ಮೊನ್ನೆ ನಲ್ಲಿ ಬೊಂಬಾಯಿಯ ಕಲೋಪಾಸಕರ ಕೂಡುವಿಕೆಯಿಂದ 'ರಾಜಸೂಯ ಯಾಗ' ತಾಳಮದ್ದಳೆಯನ್ನು ವಿಜೃಂಭಣೆಯಿಂದ ಜರಗಿಸಿದ್ದರು. ಕಳದ ತಾ. 19ರಲ್ಲಿ ಬೊಂಬಾಯಿ ಕರ್ನಾಟಕ ಸಂಘದವರು ಕಾಂಗ್ರೆಸ್ ಭವನದ ಜಿನ್ನಾಹಾಲಿನಲ್ಲಿ, ಕಾಂಗ್ರೆಸ್ ಮಂತ್ರಿ ಶ್ರೀ. ಎಂ. ಪಿ. ಪಾಟೀಲರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ವಸಂತೋತ್ಸವದಲ್ಲಂತೂ ಉಡುಪಿ ಯಕ್ಷಗಾನ ಕಲಾಮಂಡಲದವರ 'ಕೃಷ್ಣ ಸಂಧಾನ' ತಾಳಮದ್ದಳೆಯು ಎಲ್ಲರ ಮನಸನ್ನಾಕರ್ಷಿಸಿತು

ನೋಟೀಸು

ಉಡುಪಿ. ಡಿ. ಮು. ಕೋರ್ಟಿನಲ್ಲಿ.

ಕ್ರಮಸಂಖ್ಯೆ 21/1946

ಜನಾರ್ಧನಶೆಣೈ. ಪವರ್ ಆಫ್ ಎಟೋರ್ನಿ ಹೋಲ್ಡರ್, ಕೆ. ಕೃಷ್ಣಯ್ಯ. ವಾದಿ

ಮತ್ತು

1. ಕೃತಪ್ಪ ಬಾಲಪ್ಪಾಜಾರಿ ಮಗ, ಉಡುಪಿತಾಲ್ಲೂಕು ಉದ್ಯಾವರ ಗ್ರಾಮ, 2. ರಾಮಪ್ಪಯ್ಯ, ವ, ಸಾವುಲು, ವಿ ಸೋಜ,

ಪ್ರತಿವಾದಿಗಳು

ಇವರೊಳಗೆ

1-2ನೇ ಪ್ರತಿವಾದಿಯು ತಾರೀಕು 23 10-1940ರಲ್ಲಿ ರಿಜಿಸ್ಟರ್ ಮಾಡಿಕೊಂಡ ಮೂಲಗೇಣಿಚೀಟು ಚಿಕ್ಕ ಮೇರೆಗೆ 1ನೇ ಪ್ರತಿವಾದಿಯು ಮೂಲಗೇಣಿಗೆ ಅನುಸರಿಸಿ ಬರುವ ವಾಪಾ ಅಸ್ತಿಗಳಿಗಾಗಿ ... ಸ್ಥಳ ... ಸಂಸ್ಕೃತ ... ವೀಲೆಯಲ್ಲಿ ... 3ನೇ ... ಗೇಣಿ ಮತ್ತು ಕಾರಣ ... ಗೇಣಿಯಲ್ಲಿ ವಾದಿಯು ಆಧಾರದ ಗೇಣಿ ... ಮೇಲೆ ... 241 3 4ನ ... ಬಡ್ಡಿ ಮತ್ತು ಕೋರ್ಟು ... ಖರ್ಚುಗಳನ್ನು 1ನೇ ಪ್ರತಿವಾದಿಯು ... ಮೂಲಗೇಣಿ ... ಅಸ್ತಿಗಳ ... ಬರತಕ್ಕ ... ವಾದಿಯು ಮಾಡಿರುವ ಈ ದಾವೆಯು ತಾ. 19-6 1946ಕ್ಕೆ ... ನೇ ಪ್ರತಿವಾದಿಗೆ ಅಧ್ಯಕ್ಷ ನೋಟೀಸು ... ಬಿಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ ... 1ನೇ ಪ್ರತಿವಾದಿಯು ಸ್ವತಹಾ ವ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗುವದಕ್ಕೆ ತಪ್ಪಿದ್ದಲ್ಲಿ ಮೇಲ್ಕಂಡ ದಾವೆಯನ್ನು ಆತನ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬದಾಗಿ ಈ ಮೂಲಕ ತಿಳಿಸಲಾಗಿದೆ

V. R Kidiyur

Advocate for Plaintiff.

ಉಡುಪಿ

ತಾ 24.4.46

AUCTION NOTICE.

1. 15 boxes 5/16" English rivets, pledged to the Bank Under Key Loan dated 30-11-1943 by Ch. M. N Shenoy, Partner, Southern India Trading Co, and Merchant, Karkala, S. K.

2. 196 gross gold flame match boxes pledged to the Bank under Key Loan dated 1-5-1944 by K. Srinivasa Puranik, son of K Venkappa Puranik, Partner, Southern India Trading Co, and Merchant, Karkala, S.K

The above mentioned goods belonging to the respective parties will be sold by public auction at the Bank premises Lighthouse Hill Road, Mangalore on Wednesday the 15th May 1946 at 3 P. M.

The Catholic Bank Ltd., MANGALORE, 22 4 1946. — **P. Monteiro.** Secretary.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ

ನಡೆಯುವಚಿತ್ರ ರಾಜಕಮಲದವರ

ಪರಬತ್-ಪೇ-ಅಪ್ನಾ-ಡೇರಾ

ತಾರೀಕು 10 –5– 46ರಿಂದ

ಕಿಶೋರ್ ಸಾಹು ಮತ್ತು ಕೋಭನಾಸಿವ ರ್ಥ ನಟಿಸಿರುವ

ಇನ್‌ಸಾನ್

ಮುಂದಿನ ಚಿತ್ರ—

ಹಂಟರ್ ವಾಲಿ-ಕಿ-ಬೇಟಿ.

ನಿಮ್ಮ ಭವಿಷ್ಯ

ಅರುವತ್ತನೇ ವಯಸ್ಸಿನಲ್ಲಿ ನೀವೂ ನಿವೃತ್ತರಾಗಿ ಕಾಪತ್ರಯವಿಲ್ಲದ ವಿಶ್ರಾಂತಿ ಪಡೆಯಲು ಬಯಸುತ್ತೀರಿ. ಇದಕ್ಕಾಗಿ ಮುಂಜಾಗ್ರತೆಯ ಯೋಜನೆಯು ಅವಶ್ಯಕತೆ ಇದೆ. ಆ ಕುರಿತು ನಿಮಗೆ ಸಹಾಯಮಾಡಲು ನಮಗೆ ಬರೆಯಿರಿ:

ಭೂಷಣ್ ಕುಮಾರ್

ಕೊಳ್ಳೂರ್‌ಕರ್ ಎಂಡ್ ಕೋ.

ದೇವಕರನ್ ನಾನ್‌ಜೀ

ಇನ್ ಶ್ಯೂರೆನ್ಸ್ ಕೋ., ಲಿಮಿಟೆಡ್.

ಇವರ ಜೀವವಿಮಾ ವಿಭಾಗದ

ಡಿಸ್ಟ್ರಿಕ್ಟ್ ಏಜೆಂಟರು,

ಮಣ್ಣಗುಡ್ಡೆ ಮೈನ್ ರೋಡ್,

ಮಂಗಳೂರು, ದಕ್ಷಿಣ ಕನ್ನಡ.

ಹೆಡ್ ಆಫೀಸು:

ದೇವಕರಣ ನಾನ್‌ಜೀ

ಬಿಲ್ಡಿಂಗ್ಸ್, ಬೊಂಬಾಯಿ 1.

ದಕ್ಷಿಣ ಕನ್ನಡ

ಮಂಗಳೂರು

ಓಯರ್ನ್ಲಲಿಸ್ಟ್–ಗೇರುಬೀಜ ಕಾರ್ಖಾನೆಯ ಮಾಲಕರು ಮಜೂರಿಯಲ್ಲಿ ಕಡಿತ ಮಾಡುವುದಿಲ್ಲವೆಂದು ಭರವಸೆಕೊಟ್ಟದ್ದರಿಂದ ಮಜೂರರು ಮುಷ್ಕರ ಹೂಡುವುದನ್ನು ನಿಲ್ಲಿಸಿರುವರು.

ಕಮ್ಯೂನಿಸ್ಟ್ ಮೆಂಬರರ ಆಗಮನ– ಮುಂಬಯಿ ನ್ಯಾಯ ವಿಧಾಯಕ ಸಭೆಯ ಕಮ್ಯೂನಿಸ್ಟ್ ಮೆಂಬರರೂ ಸೌತ್ ಇಂಡಿಯನ್ ರೈಲ್ವೇ ಲೇಬರ್ ಯೂನಿಯನ್ ಕಾರ್ಯದರ್ಶಿಯರೂ ಆದ ಶ್ರೀ ಕೆ ಆನಂದ ನಂಬಿಯಾರರು ತಾ 22ರಲ್ಲಿ ಮಂಗಳೂರಿಗೆ ಆಗಮಿಸಿದರು. ಶ್ರೀ ಎಸ್ ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ನಂಬಿಯಾರರು ಕಮ್ಯೂನಿಸ್ಟ್ ಪಕ್ಷದ ಧೋರಣೆಗಳನ್ನು ವಿವರಿಸಿ ಭಾಷಣಮಾಡಿದರು. ಈಗಿನ ಆಹಾರ ಪರಿಸ್ಥಿತಿಯ ಕುರಿತು ಮಾತನಾಡುತ್ತಾ, ಜನರಿಗೆ ರೇಶನ್ ಹೆಚ್ಚಿಗೆ ಸಿಗುವುದಕ್ಕಾಗಿ ಪ್ರತಿಯೊಬ್ಬನೂ ಒಮ್ಮತದಿಂದ ಹೋರಾಡಬೇಕೆಂದು ಸೂಚಿಸಿದರು. ರೈಲ್ವೇ ಮಜೂರರ ಸಭೆಯಲ್ಲಿ ಶ್ರೀ ನಂಬಿಯಾರರು ಮುಂಬರುವ ಮುಷ್ಕರದ ಕುರಿತು ಮಾತನಾಡಿದರು.

ಪೋಲಿಸ್ ಅಧಿಕಾರರಮೇಲೆ ಮೊಕದ್ದಮೆ–ನ್ಯೂ ಚಿತ್ರಾಟಾಕೀಸಿನ ಮ್ಯಾನೇಜರಾದ ಶ್ರೀ ಕೆ ವಿಠಲದಾಸ ಪೈಗಳವರು ಪೋಲಿಸ್ ಸಬ್ ಇನ್ಸ್ಪೆಕ್ಟರ್ ಮಿ ಮಹಮ್ಮದ್ ಕುಂಞಯವರು ತನ್ನನ್ನು ಅನ್ಯಾಯವಾಗಿ ದಸ್ತಗಿರಿ ಮಾಡಿದರು ವೊದಲಾದ ಅಪಾದನೆಗಳಮೇಲೆ ಅವರ ಮೇಲೆ ಮೊಕದ್ದಮೆ ಹೂಡಿರುವರಾಗಿ ತಿಳಿದು ಬರುತ್ತದೆ

ಪುತ್ತೂರು–ತಾ 25ರಲ್ಲು ಸಂಜೆ ಕೋರ್ಟು ಗುಡ್ಡೆಯಲ್ಲಿ ವಕೀಲರಾದ ಶ್ರೀ ಎನ್. ಎಮ್ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಬೆಳ್ಳಾರೆಯಲ್ಲಿ ಸಾರ್ವಜನಿಕ ಸಭೆಜರಗಿತು. ಪುತ್ತೂರು ಡಿವಿಜನಿನ ಡಿಸ್ಟ್ರಿಕ್ಟಬೋರ್ಡ್ ಕಲೆಕ್ಟರರೂ ತಹಶಿಲ್ದಾರರೂ ಸಭೆಗೆ ಬಂದಿದ್ದರು ಆಹಾರ ವರ್ತಕರ ಪ್ರತಿನಿಧಿಗಳಾಗಿ ಶ್ರೀಗಳಾದ ಬಿ ವೆಂಕಪ್ಪಗೌಡ, ಪಿ. ಎಸ್. ತಿಮ್ಮಪ್ಪಸೆಟ್ಟಿ ಮೊದಲಾದವರು ಸಮಯೋಚಿತ ಭಾಷಣಗಳನ್ನು ಮಾಡಿದರು. ಆಹಾರ ಸಮಸ್ಯೆಯನ್ನು ಬಗೆಹರಿಸುವರೆ ಪ್ರತಿ [illegible] ಅಗತ್ಯವಾಗಿದೆ ಎಂದು ಅಧ್ಯಕ್ಷರು ಭಾಷಣವಿತ್ತರು. ಅತಿಥಿಗಳಿಗೆ ಶ್ರೀ ಬಿ ನಾರಾಯಣ ಶೇಕರು ಡಿನ್ನರ್ ಪಾರ್ಟಿಯನ್ನಿತ್ತರು

ಪುತ್ತೂರು ಬೋ. ಹೈಸ್ಕೂಲಿನ ರಜತೋತ್ಸವ ಸಮಾರಂಭ- ತಾ. 12 ರಂದು ಮಾನ್ಯ ಡಾ. ಎಸ್ ಆರ್ ಯಸಪ್ಪರು, ಎಂ ಎ ಡಿ ಎಸ್ ಸಿ ಡಿ ಪಿ ಎ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ನಿಮಿತ್ತ ತಾ ೧೧ರಂದು ವಿವಿಧ ಸ್ಪರ್ಧೆಗಳಿದ್ದುವು. ಸಾಯಂಕಾಲ ವಕೀಲ್ ಶ್ರೀ ಬಿ. ರಾಮಚಂದ್ರ ರಾವ್ ಇವರ ಅಧ್ಯಕ್ಷತೆಯಲ್ಲಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿ ಸ್ಕೌಟು ದಳದವರ ಶಿಬಿರಾಗ್ನಿಯು ಇದ್ದಿತ್ತು. ತಾ ೧೨ರಂದು ಮುಂಜಾನೆ ವಿದ್ಯಾರ್ಥಿಗಳ ಮೆರವಣಿಗೆ, ಶ್ರೀ ಡಾ। ಸಪ್ಪರವರಿಂದ ಹೊಸ ಶಾಲಾ ಕಟ್ಟೋಣದ ಪ್ರವೇಶ, ಸಾಯಂಕಾಲ ವರದಿ ವಾಚನ, ಬಹುಮಾನ ವಿತರಣ, ಅಧ್ಯಕ್ಷರ ಭಾಷಣ, ಸ್ವಸ್ತಿವಾಚನ ಮತ್ತು ನಾಟಕಾದಿ ವಿವಿಧ ವಿನೋದಾವಳಿಗಳು ಸಹ ಇದ್ದುವು. ದೊಡ್ಡ ಸಭೆಯು ಸೇರಿತ್ತು.

ಮುಲ್ಕಿ–ಇದೇ ತಾ 25-4-46ರಲ್ಲಿ ಸ್ಥಳೀಯ ಪ್ರಭಜನಸದಸ್ಯರು ಸ್ಥಳೀಯ ಹೈಸ್ಕೂಲಿನ ಮಂದಿರದಲ್ಲಿ ಶ್ರೀ. ಸದಾಶಿವರಾವ್ B. A (Hons) L. T ಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಅಯೋಧ್ಯೆಯ ಶ್ರೀ. ಸಂಸ್ಕೃತಕಾರ್ಯಾಲಯದ ವಿದ್ವತ್ಸಂಘದವರಿಂದ ಶ್ರೀ ಪಂಡಿತ್ ಎಲ್. ಶಿವರಾವ್ ಇವರು "ಆಯುರ್ವೇದ ಭೂಷಣ" ಎಂಬ ಬಿರುದನ್ನು ಪಡೆದಿದ್ದು, ಮತ್ತು ಗೋವಿಂದರಾವ್ ಇವರು "ಸಾಹಿತ್ಯ ಭೂಷಣ" ಎಂಬ ಬಿರುದನ್ನು ಪಡೆದ ಸಂತೋಷಾರ್ಥವಾಗಿ ಉಭಯತರಿಗೂ ಉಪಾಹಾರವನ್ನಿತ್ತು ಸನ್ಮಾನಿಸಿದರು. ಬ್ರಹ್ಮಶ್ರೀ ವೇದಮೂರ್ತಿ ವೈಟಿ. ಸೀತಾರಾಮ ಶಾಸ್ತ್ರಿಗಳೇ ಮೊದಲಾದ ಮಹನೀಯರು ಸನ್ಮಾನಿತರ ಗುಣಕಥನಮಾಡಿದರು.

ಕುಂದಾಪುರ– ತಾ 14-4-46ರಲ್ಲಿ ವಿದ್ಯಾರ್ಥಿ ಸಂಘದ ವರ್ಷಾಂತಿಕೋತ್ಸವವು ಶ್ರೀ. ಯು. ನಾರಾಯಣ ರಾಯರು, ಬಾರ್ ಎಟ್-ಲೋ ಇವರಅಧ್ಯಕ್ಷತೆಯಲ್ಲಿ ಜರಗಿತು. ಶ್ರೀK. L. Karantha, B. A. L. T. ಇವರು. ವಿದ್ಯಾರ್ಥಿಗಳಿಗೆ ಕೆಲವು ಸೂಚನೆಗಳನ್ನಿತ್ತರು,

ಮಾಬುಕಳ–ತಾ 20-4-46ರಲ್ಲಿ ಶ್ರೀ ಡಾ, ನಾರಾಯಣಶೆಟ್ಟಿ ಮಮ್ಮಾನ ಅಧ್ಯಕ್ಷತೆಯಲ್ಲಿ ಹೊಸತಾಗಿ ಏರ್ಪಡಿಸಿದ ನೇತಾಜೀ ಶ್ರೀ ಸುಭಾಸ್ ಚಂದ್ರ ವಾಚನಾಲಯದ ಉದ್ಘಾಟನಾ ಸಮಾರಂಭವು ನೆರವೇರಿತು. ಅಧ್ಯಕ್ಷರು, ಹಾಗೂ, ನೆರೆದ ಸದ್ಗೃಹಸ್ಥರು, ವಾಚನಾ ಮಂದಿರದ ಆವಶ್ಯಕತೆ, ವರ್ತನೆ, ಸಮಯದ ಸದ್ವಿನಿಯೋಗ, ವಾರ್ತಾ ಪ್ರಪಂಚದ ಅರಿವು, ಐಕ್ಯತೆ ಎಂಬಿತ್ಯಾದಿ ವಿಷಯಗಳ ಕುರಿತು ವಿವರಿಸಿದರು

ಕಲ್ಯಾಣಪುರ–ಕೋಪರೇಟಿವ್ ಸೊಸೈಟಿಗಳ ಪಂಚಾಯತರ ಟ್ರೈನಿಂಗ್ ಕ್ಲಾಸುಗಳು ತಾ 25ರಲ್ಲಿ ಆರಂಭವಾಗಿವೆ. ಡೆಪ್ಯುಟಿ ರಿಜಿಸ್ಟ್ರಾರರು ಈ ಕ್ಲಾಸುಗಳ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಕೊಯಮುತ್ತೂರಿನ ಶ್ರೀ ಮೆನೋನರೂ ಸ್ಥಳೀಯ ಫುಡ್ ಇನ್ಸ್ಪೆಕ್ಟರ್ ಶ್ರೀ. ಕೆ. ಆರ್ ಶೆಣೈಯವರೂ ತರಗತಿಗಳನ್ನು ನಡಿಸುತ್ತಿರುವರು

ಕಾರ್ಕಳ-ತಾ. 27-4 1946ರಲ್ಲಿ ಬಡಗಬೆಟ್ಟು ಬೋರ್ಡ್ ಎಲಿಮೆಂಟರೀ ಶಾಲೆಯ ಕಟ್ಟಡದಲ್ಲಿ, ಇದೇ ಶಾಲೆಯಲ್ಲಿ ಕಳೆದ 33 ವರ್ಷಗಳಿಂದ ಅವಿಚ್ಛಿನ್ನವಾಗಿ ದುಡಿದ ಅಧ್ಯಾಪಕ ಶ್ರೀ. ಪಾವ್ಲು ಅರಾಹ ಇವರು ತನ್ನ ಅಧ್ಯಾಪಕವೃತ್ತಿಯಿಂದ ನಿವೃತ್ತಿ ಹೊಂದಿದ ಬಗ್ಗೆ ಸದ್ರಿಯವರನ್ನು ಬೀಳ್ಕೊಡುವ ಸಮಾರಂಭವು ಶ್ರೀಯುತ ಬಡಗಬೆಟ್ಟು ರಾಮ ಹೆಗ್ಡೇರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿ [illegible] ಸನ್ಮಾನಪತ್ರ [illegible] ವಿದ್ಯಾರ್ಥಿ [illegible] ಆರೋಪಣ ಗುಣಕಥನಮಾಡಿ [illegible] ಶ್ರೀ. ತ್ರಿ [illegible] ಕಪ್ಪೆಗೊಡ [illegible] ಶ್ರೀಗಳಾದ K ಅನಂದಹೆಗ್ಡೆ, S. ಭವಾನಿ ಶಂಕರ ಹೆಗ್ಡೆ ಅಮೋಘರ ಆಗಲುನಿಕೆಯಿಂದುಂಟಾಗುವ ದುಃಖದ ವಿಷಯಗಳನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದೊಂದಿಗೆ ಶ್ರೀಯುತರಿಗೆ ಯಥೋಚಿತ ಹಣದ ಸಂಭಾವನೆ ಮಾಡಿದ ತರುವಾಯ ಶ್ರೀಯುತ ಬಿ ಸದಾಶಿವ ಹೆಗ್ಡೇರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು

ಉಡುಪಿ.

ಉಡುಪಿ ಮಕ್ಕಳಕೂಟದ ಸಮ್ಮೇಲನ–ಇದೇ ಮೇ ತಿಂಗಳ ಮಧ್ಯಕಾಲದಲ್ಲಿ ಉಡುಪಿಯಲ್ಲಿ ಮಕ್ಕಳ ಕೂಟದ ಪ್ರಥಮ ಸಮ್ಮೇಲನವು ಜರಗಲಿರುವುದು. ಆಧುನಿಕ ಪದ್ಧತಿಯ ಭಾಷಣ, ಲೇಖನ, ವಾಚನ ಇತ್ಯಾದಿ ವಿದ್ವತ್ತಿನ ಚತುರತೆಯ ಸ್ಪರ್ಧೆಗಳ ಸ್ಪರ್ಧೆಗಳೂ ಮತ್ತು ಕಲೆ, ಕೈಗಾರಿಕೆ, ಸಾಹಿತ್ಯ ಇವುಗಳ ಪ್ರದರ್ಶನವೂ ಆಗಲಿರುವುದರಿಂದ ಎಲ್ಲಾ ಹೈಸ್ಕೂಲ್, ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳು ಈ ಸಮ್ಮೇಲನದಲ್ಲಿ ಭಾಗವಹಿಸಿ ತಮ್ಮ ಕಲಾ ಕೌಶಲ್ಯ ತೋರ್ಪಡಿಸಿ ಮುಂದಿನ ಜನಾಂಗವಾದ ಇಂದಿನ ಮಕ್ಕಳ ಸಾಹಸ, ಜ್ಞಾನ, ಗುಣಗಳನ್ನು ಗಳಿಸುವರೆ ಇಚ್ಛಿಸುವವರು ವಿವರಗಳಿಗಾಗಿ ಹೆಸರು ವಿಳಾಸಸಹಿತ ಪತ್ರ [illegible] ಕೂಟದ ಕಾರ್ಯಾಲಯಕ್ಕೆ ತಾ. 15-5-46ರ ಒಳಗಾಗಿ ತಿಳಿಸಬೇಕಾಗಿ ಸವಿನಯ [illegible], ಹೆಚ್ಚಿನ ಮಾಹಿತಿಗೆ ಬರೆಯಿರಿ. ಬಿ ಅಂತಯ್ಯಸೆಟ್ಟಿ ಅಧ್ಯಕ್ಷ. "ಮಕ್ಕಳಕೂಟ" [illegible] ದ. ಕ, ಕೋರ್ಟು ರೋಡ್ ಉಡುಪಿ

ರಾಜಿಸಭೆ–ಕೊಡವೂರು ಪಕೀರ ದೇವತೆಗರಿಗೂ ಉಡುಪಿಯ ಕೆಲವುದೇವಡಿಗರಿಗೂ ಎರಳ ಸಮಯದಿಂದ ಇದ್ದ ಕಲಹವು ಕಳೆದ ತಾ 21ರಲ್ಲು ಚಿಟ್ಪಾಡಿಶಾಲೆಯಲ್ಲಿ ಜರಗಿದ ಸಭೆಯಲ್ಲಿ ಮಂಗಳೂರು ಕೋಟ್ಯಪ್ಪ ದೇವಡಿಗರಿಗಾಗೂ ಎಲ್ಲೂರು ಮಾಸ್ತರ್ ತೋನ್ನು ದೇವಡಿಗರ ಮತ್ತು ಸಂತಪ್ಪ ದೇವಡಿಗರ ಪ್ರಯತ್ನದಲ್ಲಿ ಸಭಿಕರ ಒಪ್ಪಿಗೆಯಂತೆ ತೀರ್ಮಾನ ಹೊಂದಿ ರಾಜಿಯಾಯಿತು.

ಟೌನ್ ಸಬ್ ಪೋಸ್ಟಾಫೀಸು–ನಗರ ಕ್ಷೇತ್ರದ ಕಲ್ಪಂಕ ಅತ್ತ ಕಡೆಯ. ನಾಗರಿಕರ ಸೌಕರ್ಯದ ಸಲುವಾಗಿ ಕಳೆದ ಗುರುವಾರ ಉಷ್ಟಿ ರೋಡಿನ ಪೋಸ್ಟಲ್ ಇನ್ಸ್ಪೆಕ್ಟರ್ ಶ್ರೀ ಕೆ ನಾರಾಯಣ ಪ್ರಭುಗಳವರು ಕೊರ್ಪಾರೇಶನ್ ಬ್ಯಾಂಕಿನ ಮಹಡಿಯಲ್ಲಿ ಟೌನ್ ಸಬ್ ಪೋಸ್ಟಾಫೀಸನ್ನು ತೆರೆದರು. ಟೆಲಿಗ್ರಾಮ್ ಮತ್ತು ಕಾಗದ ಬಟ್ವಾಡೆ ವಿನಹ ಇತರ ಎಲ್ಲಾ ಟಪ್ಪಾಲು ವ್ಯವಹಾರಗಳು ಸ್ವೀಕರಿಸಲ್ಪಡುವವು. ಶ್ರೀ ಜಿ. ಶ್ರೀನಿವಾಸರಾಯರು ಸಬ್ ಪೋಸ್ಟ ಮಾಸ್ತರರಾಗಿ ನೇಮಕ ಹೊಂದಿರುವರು. ದಿನೇದಿನೇ ಅಭಿವೃದ್ಧಿಯೊಂದುತ್ತಲಿರುವ ಉಡುಪಿಗೆ ಬ್ರಹ್ಮಗಿರಿ ಹಾಗೂ ಚಿನ್ನಿಮೂಲ್ಕಿ ಕೇಂದ್ರಗಳಲ್ಲಿ ಸಬ್ ಪೋಸ್ಟಾಫೀಸುಗಳ ಆವಶ್ಯಕತೆಯಿದೆ. ಮಹಾಜನರೂ ಇಲಾಖೆ ಅಧಿಕಾರರೂ ಯೋಜನೆಯನ್ನು [illegible] ಗಮನ ಕೊಡಬೇಕೆಂದು [illegible]

ನಗರಸಭೆಯು–ತಾ. 27ರಲ್ಲು ಸಭೆಯು ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಕ್ಷೇತ್ರದಲ್ಲಿ ಹಸು ಆಸ್ಪತ್ರೆಯೊಂದನ್ನು ಸ್ಥಾಪಿಸುವರೆ ಸರಕಾರವನ್ನು ವಿನಂತಿಸಲಾಯಿತು. ಈ ಸಂಬಂಧ ತಗಲಬಹುದಾದ ಖರ್ಚಿನಲ್ಲಿ ಸೇಕಡಾ 30ರಷ್ಟು ಮುನಿಸಿಪಾಲಿಟಿಯು ವಹಿಸಬೇಕೆಂದಾಯಿತು.

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಿಂದ ಪ್ರಕಟನೆ

ಇದೇ ಬರುವ 1946ನೇ ಇಸವಿಯ ಜೂನ್ ತಾರೀಕು 9ರಲ್ಲು ಶ್ರೀ ಮೂಕಾಂಬಿಕಾ ದೇವೀ ಸಂನಿಧಿಯಲ್ಲಿ ಅಷ್ಟಬಂಧ ಕಲಶ ಮಹೋತ್ಸವವನ್ನು ನೆರವೇರಿಸುವದೆಂತ ಶ್ರೀ ದೇವಳ ಮೊಕ್ತೇಸರರು ನಿಶ್ಚಯಿಸಿದ ಪ್ರಯುಕ್ತ ಸದ್ರಿ ಕೆಲಸಕ್ಕೆ ಹೇರಳ ಹಣ ಬೇಕಾದ್ದರಿಂದ ಮೊಕ್ತೇಸರರ ಪರವಾಗಿ ಎಕ್ಸಿಕ್ಯುಟಿವ್ ಆಫೀಸರನಾದ ನಾನು ಈ ಮೂಲಕ ಸರ್ವ ಭಕ್ತಾದಿಗಳಿಗೂ ತಮ್ಮ ಯಥಾನುಶಕ್ತಿ ಹಣ ಸಹಾಯಮಾಡಬೇಕಾಗಿ [illegible] ಹಣವನ್ನು [illegible] ದೇವಳ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ. ಎಡ್ತರೆ ಮಂಜಯ್ಯಶೆಟ್ರು, ಎಡ್ವೊಕೆಟ್, ಕುಂದಾಪುರ, ಕಲಕ್ಟರ ತಿಯ ಕೋಶಾಧಿಕಾರಿಯಾದ [illegible] ಹಣವನ್ನು ಕಳುಹಿಸಬಹುದು. ಅಥವಾ ಶ್ರೀ ದೇವಳ ಎಕ್ಸಿಕ್ಯುಟಿವ್ ಆಫೀಸರ್ ಓ ಎಚ್ ಶೆಟ್ಟಿ ಇವರಿಗೆ ಕಳುಹಿಸಬಹುದೆಂಬ ಸಂಗ್ತಿ ಸರ್ವ ಭಕ್ತಾದಿಗಳಿಗೂ ಈ ಮೂಲಕ ತಿಳಿಸಿರುತ್ತೆ.

C. H. SHETTY, E. O.

FOR LIFE ASSURANCE

CONSULT

The New Gaurdian of India Life Insrce. Co., Ltd.

(Chairman The Hon'ble Mr. M. CT. M. Chidambaram Chettiar)

A policy in this progressive Life Office is a good investment; its Agency is a valuable business connection

LOCAL OFFICES IN SOUTH KANARA: MANGALORE & KARKALA

HEAD OFFICE: "United India Life Bldg" Esplanade, Post Box No 14.. MADRAS.

ಬಾಣಂತಿಯರ ಸಲುವಾಗಿಯೇ ಮೇರ ಮತ್ತು ಪ್ರಖ್ಯಾತದ ದೇಹಸ್ಥಿತಿಯನ್ನು ಪರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವಮಾತು ಎಂಬ ಸೂತಿಕಾ ರಸಾಯನ

(ಇದು [illegible])

ಈ ಔಷಧಿಯನ್ನು [illegible] ಬರುವವು. [illegible] ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ಪಿ.ಶಾಸ್ತ್ರಿ. ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಪ್ರತಿನಿಧಿಗಳು- ಡಾ| ಎ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

[illegible]



ಪ್ರಮುಖ ಅಳಿಯ ಸಂತಾನ ಮನೆತನದ ವ ಕೀಲರೊಬ್ಬರ ಗುರುತಿನವರಾದ ಕಳೆದ 20 ವ ರ್ಷಗಳಿಂದ ಇದ್ದು [illegible] ಒಬ್ಬ ಮೆಂಬರನಾಗಿ ಕಟ್ಟಿ ಕಟ್ಟಿನವನೊಂದ ಬಿನ್ನಹಕ್ಕೆ ಕೋರ್ಟು ಜಗುಲಿಯನ್ನು ಕಾಯು ವ ನನ್ನ ವರ್ಗದವರ ಗೋಳನ್ನು ನೋಡಿ ನೋಡಿ, ನೊಂದ ಅನುಭವ ಒಂದಿಂದ ನಾನೀ ಮಾತುಗಳನ್ನು ಬರೆಯುತ್ತಿದ್ದೇನೆ.

ಅಳಿಯ ಸಂತಾನದ ಕಟ್ಟು ಎಂದೋ ಭೂತಾಳ ಪಾಂಡ್ಯ ಎಂಬ ತುಂಡರಸನ ಕಾಲ ದಲ್ಲಿ ಆತನು ತನ್ನ ಸಹೋದರಿಯ ಮೋಲು ಸುಸುತೆಯಿಂದ ಪಡೆದು ಪರಿಂದ ಅದು ಆ ಕಾಲಕ್ಕೆ ಸರಿಯಾಗಿರಬೇಕು. ಅಂದಿನ ಪರಿಸ್ಥಿ ತಿಗೂ ಇಂದಿನ ಸುಧಾರಣಾಯುಗಕ್ಕೂ ಸಾ ಕಷ್ಟ ವಿನಯ ಅಂಟವನ್ನು ನಾವು ಪರಿ ಶೀಲಿಸಬೇಕು. ಅಳಿಯಸಂತಾನದ ಆಚೆ ಮೆಂಬರರು ಮಾನವರಲ್ಲವೇ? ಅವರಿಗೆ ತ ಮ್ಮ ಹೆಂಡಿರುಮಕ್ಕಳ ಮೇಲೆ ಮಮತೆ ಬೇಡವೇ? ಮೃಗಪಕ್ಷಿಗಳು ಕೂಡಾ ತಮ್ಮ ಮರಿಗಳಿಗಾಗಿ ತಮ್ಮ ಪ್ರಾಣವನ್ನು ಕಳಕೊಂ ಡು ತನ್ನ ಮಕ್ಕಳ ಏಳಿಗೆಯನ್ನು ಬಯಸು [illegible] ಅಳಿಯಕಟ್ಟಿನ [illegible] ಅಳಿಯ ಸಂತಾನದ [illegible] ಗೂತ್ತಿಲ್ಲದವರು ಆ ಟ್ಟಿನಲ್ಲಿದ್ದಾರೆಯೇ? ಈ ಜಿಲ್ಲೆಯಲ್ಲಿ ಬಂಟ ರ [illegible] ಸಮಾಜದವರು ಮಾತ್ರ ಇರುವುದಿಲ್ಲ. ಬಿಲ್ಲವ, ದೇವಾಡಿಗ, ಮೊಗವೀರ ರ, ಇನ್ನು ಅನೇಕರು ಆ ಕಟ್ಟನ್ನು ಆಚರಿಸು ವವರು ಇಲ್ಲವೆ? ಅವರಿಗೆಲ್ಲಾ ನವಸುಧಾರಣೆ ಬೇಡವೆಂದು ಯಾರಾದರೂ ಹೇಳಬಲ್ಲರೇ?

ಬೇರಾಯ ವ್ಯಕ್ತಿಯೇ ಮುಖ್ಯ ವ್ಯಕ್ತಿಯಾ ಗಿ ಅನುಸರಿಸಿ ಬರುವ ಈ ಅಳಿಯ ಕಟ್ಟಿನ ಸಮಾಜದಲ್ಲಿ ಆಕ್ಷಿದಲ್ಲಿ ಬರುವಂತೆ ಆದರಾರ್ಥ ವ್ಯವಹರಣೆ ಸಂಬಂಧಗಳು ಸದಾ ಬರಿದೆಯೆಂ ಬುದು ನಮ್ಮ ಮುಖಂಡರ ಗಣನೆಗೆ ಬಂದಿ ರಲಿಕ್ಕಿಲ್ಲ. ಈಗ ಎಷ್ಟು ಮನೆಗಳ ಆಡಳಿತೆ ಅಳಿಯಸಂತಾನದ ಯಜಮಾನರ ಕೈಯಲ್ಲೇ ಇದೆ? ಕೋರ್ಟು ಎಸೀವರರ ಸ್ವಾಧೀನ ದ ಲ್ಲಿರುವವುಗಳೆಷ್ಟು? [illegible] ಅವಗಾಹನೆಗೆ ತಂದುಕೊಳ್ಳಲಿ. [illegible] ಯಾವ ರೀತಿಯಿಂದ ಆಡಳಿತೆ ನ ಡೆಸುತ್ತಾರೆ? [illegible] ತಮ್ಮ [illegible] ಆಸ್ತಿಯ [illegible] ಆ ಅವಸ್ಥೆ [illegible] ಯಜಮಾ [illegible] ಅವನ್ನು [illegible] ಮೆಂಬರರಿಗೆ [illegible] ಒಂದು [illegible] ಸುಧಾರಣೆಗಳು ಈ ಸಮಾಜದಲ್ಲಿ ಕಾಣಸಲ್ಪಟ್ಟಿರುವುದು [illegible] ಕೋರ್ಟು [illegible] ಕೋರ್ಟಿಗೆ [illegible] ಅಳಿಯ ಸಂತಾನ [illegible] ನವಸುಧಾರಣೆ ಕಾಲ [illegible] ಮಕ್ಕಳ ಕಟ್ಟಿನಲ್ಲಿಯೂ [illegible]



Approved firm by the Govt. of Mysore Certified by the Agent of the Govt. of Ceylone Indians.

ಅಡಿಗಲ್ಲಿಲ್ಲದ ಅಳಿಯಕಟ್ಟು ಅಳಿಯಬೇಕೊ? ಉಳಿಯಬೇಕೊ?

ಲೇ:- ಶ್ರೀ. ವಿ ಎ. ಶೆಟ್ಟಿ, ಕುಂದಾಪುರ.

ಬೇಗನೆ [illegible] ಅದನ್ನು ಸುಧಾರಿಸಿ ಆದ ಕ್ಷಣತೇಊ ನಾವು ಒಂದು ಹೆಜ್ಜೆ ಮುಂದ ಹೋಗುವದೇನ್ಯಾಯವಲ್ಲದೆ ಎಂದೋ ಕಾಲ ಬಾಧೆಗೊಳಗಾಗಿರುವ ಅಳಿಯ ಕಟ್ಟಿನಲ್ಲಿ ನಾ ವು ಮಾತ್ರ ಸುಧಾರಣೆಮಾಡಿ ತೃಪ್ತಿಪಡುವದ ರಿಂದ ಏನೊಂದು ಪ್ರಯೋಜನವೂ ಇಲ್ಲ.

ಅಳಿಯ ಸಂತಾನ ಬೇಡ ಯ್ಯಾಕೆ?

ಯಜಮಾನನ ಸ್ವಯಂ ಪ್ರಭುತ್ವವು ನ್ಯಾ ಯಕ್ಕೆ ಮಾತ್ರವಲ್ಲ, ಮನುಷ್ಯ ಮಾತ್ರರಿಗೆ ಸ ಹನವಾಗದಷ್ಟಿದೆ. ಯಜಮಾನಿಕೆ ಬಂದ ಒಡ ನೆಯೇ ಮಾನುಷತ್ವ ಬದಲಾಗುತ್ತೆ. ಕುಟುಂ ಬದ ಆಸ್ತಿ ತನ್ನ ಸ್ವಂತ ಅಪ್ಪನ ಅಧಿಕಾರದ್ದೇ ಎಂದು ಭಾವಿಸಿಕೊಂಡು, ತೋರಿಸಿಕೊಂಡು ಇತರ ಮೆಂಬರರಿಗೆ ತನ್ನಲ್ಲಿ ಜಿಗುಪ್ಸೆ ಹುಟ್ಟು ವಂತೆ ವರ್ತಿಸುತ್ತಾನೆ. ಸಾವಿರಗಟ್ಲೆ ವರ ದಕ್ಷಿಣೆ ಕೊಟ್ಟು ಆ ಗಂಡನನ್ನು ಕೊಂಡು ಕೊಂಡವಳ ಗಂಡ ಅಡಂಬರ, ಬವರ ಮಕ್ಕ ಳಿಗೆ ವಿದ್ಯಾಭ್ಯಾಸ. ಹೆಣ್ಣು ಮಕ್ಕಳಿಗೆ ಯೋ ಗ್ಯ ವರನ ಆರಿಸುವಿಕೆ, ಆ ಬಗ್ಗೆ ಹತ್ತು ಜನ ರ ಆಸ್ತಿಯಮುಂದು ವೆಚ್ಚ-ಇವನ್ನೆಲ್ಲಾ ಯಾ ವ ಅಳಿಯ ಸಂತಾನದ ಕಿರಿ ಮೆಂಬರನು ಸಹಿ ಯಾನು? ಈಗಿನ ವಿದ್ಯಾವಂತರಾದವರು ಆ ದೆಷ್ಟು ಜನ ಸ್ವಲ್ಪ ಮಟ್ಟಿಗಾದರೂ ಅಳಿ ಯ ಕಟ್ಟನ್ನು ಆಚರಿಸುತ್ತಾರೆ? ಎಷ್ಟು ಜನ ಶ್ರೀಮಂತರು, ಪದವೀಧರರು ತಮ್ಮ ಅಳಿಯ ಂದಿರಿಗೆ ಸರ್ಟಿಗೆ ಕೊಟ್ಟು ತಮ್ಮ ಮಕ್ಕಳಿಂ ತೆ ಪದವೀಧರರನ್ನಾಗಿ ಮಾಡಿದ್ದಾರೆ? ಯಜ ಮಾನರ ಹೆಣ್ಮಕ್ಕಳಿಗೆ ಸಿಕ್ಕುವ ಸಮಾನ ಸಾಮ ರ್ಥ್ಯ ಸಂಪತ್ತಿ ಅದೇ ಕುಟುಂಬದ ಇ ತರ ಮೆಂಬರರಿಗೆ ಸಿಕ್ಕುವುದೇ? ಬಿಕ್ಕತೆಗೆ ವರ ಸೇರಾಡಾ 10 ರಷ್ಟು ವರಾ ಸಿಗಬಹುದೇ? ಅಳಿಯ ಕಟ್ಟಿನ ಕಿರೇಮೆಂಬರರು ಯಜಮಾ ನರು ಪ್ರೀತಿಯಿಂದ ಸಲಹುವ ಪ್ರಾಣಿಗಳಂ ತಲ್ಲ ಕನಿಷ್ಠವಾಗಿ ಈಗ ಜೀವನ ಸಾಗಿಸು ತ್ತಿದ್ದಾರೆ. ದೊಡ್ಡ ಮನೆತನದಲ್ಲಿ ಗಂಡಸಾಗಿ ಹುಟ್ಟಿ ಅದೆಷ್ಟು ಜನರು, ಮಕ್ಕಳ ಸಂತಾನದ ವಿಷಯದಿಂದ ಜೀವನಾಂಶವನ್ನು ಕೋರ್ಟು ಮುಖಾಂತರ ಪಡೆದು ಜೀವಿಸಿ ಬರುತ್ತಿಲ್ಲ?

ಈ ಕಟ್ಟಿನ ಸುಧಾರಣೆಯನ್ನು, ಈಗಿನ ಜ ಗತ್ತಿನಲ್ಲಿ ಶಾಂತಿ ಸ್ಥಾಪಿಸುವದೆಂದು ಜಂಭ ಮಾಡುತ್ತಿರುವ ಮಹಾರಾಷ್ಟ್ರಗಳ ಅಧಿಕಾರಿಗ ಳಂತೆ ಕೇವಲ ಯಜಮಾನರು ಮಾತ್ರ ಕುಳಿ ತು ಮಾಡುವದಲ್ಲ. ಆ ಕಟ್ಟನ್ನು ಆಚರಿಸುವ ಎಲ್ಲಾ ಮೆಂಬರರ ಅಭಿಪ್ರಾಯವನ್ನು ಪಡೆ ದು ಬಹುಮತದಂತೆ ಸುಧಾರಣೆ ಮಾಡುವು ದೇ ವಿಹಿತ. ಮನಃಪೂರ್ವಕವಾಗಿ ಆಚರಿಸದ ಆ ಕಟ್ಟಿನಿಂದೇನು ಪ್ರಯೋಜನ? ಮಕ್ಕಳ ಸಂ ತಾನವನ್ನು ಆಚರಿಸುವುದರಿಂದ ನಮ್ಮ ಸಮಾ ಜದ ಆರ್ಥಿಕ ಪರಿಸ್ಥಿತಿಯು ಕೆಡುವುದೆಂಬ ಭಾವನೆಯು ಕೆಲವರಿಗೆ ಇರುವುದಾದರೆ ಕೆಲ ವು ಶತಮಾನಗಳಿಂದ ಅಳಿಯಸಂತಾನ ಕಟ್ಟ ನ್ನೇ ಆಚರಿಸುತ್ತಾ ಬಂದ ನಾವು ಯಾವ ಆರ್ಥಿ ಕ ಸ್ಥಿತಿಯನ್ನು ವೃದ್ಧಿಗೊಳಿಸಿ ಸಮಾಜದ ಉನ್ನತಿಯನ್ನು ಮಾಡಿದ್ದೇವೆ? ಎಷ್ಟು ಕಾಲೇ ಜುಗಳು, ಹೈಸ್ಕೂಲುಗಳು, ಉನ್ನತಿಯ ಬ್ಯಾಂಕುಗಳು, ಪಬ್ಲಿಕ್ ಸಂಸ್ಥೆಗಳು, ಅನಾ ಥಾಲಯಗಳು, ಬಡವಿದ್ಯಾರ್ಥಿಗಳಿಗೆ ಸಹಾ ಯ ಮಾಡುವ ಸಂಸ್ಥೆಗಳು ಅಥವಾ ಧಾರ್ಮಿ ಕ ದೃಷ್ಟಿಯಿಂದ ಎಷ್ಟು ದೇವಸ್ಥಾನಗಳನ್ನು ನಾವು ನಿರ್ಮಿಸಿದ್ದೇವೆ? ಮಕ್ಕಳ ಸಂತಾನ ಕಟ್ಟನ್ನು ಆಚರಿಸುವ ಇತರ ಸಮಾಜದವ ರು ಈ ವಿಷಯದಲ್ಲಿ ಮುಂದುವರಿದಷ್ಟು ನಾ ವು ಮುಂದುವರಿದಿರುವೆವೆ? ಮಕ್ಕಳ ಸಂತಾ ನದ ಶ್ರೀಮಂತರ ಮನೆಯಲ್ಲಿ ಎಲ್ಲಾ ಮೆಂ ಬರರ ಜೀವನ ಮತ್ತು ವಿದ್ಯಾಭ್ಯಾಸವು ಒಂ ದೇ ರೀತಿಯ ವ್ಯವಸ್ಥೆಯಿಂದ ಸಾಗುತ್ತಿಲ್ಲ ವೇ? ಅಳಿಯಸಂತಾನದ ಶ್ರೀಮಂತ ಯಜ ಮಾನರು ಕುಟುಂಬದ ಆಸ್ತಿಯ ಉತ್ಪತ್ತಿ ಯಲ್ಲಿ ಅದೆಷ್ಟು ಹಣವನ್ನು ಅಳಿಯಂದಿರ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಿದ್ದಾರೆ?

ಈಗ ನಮ್ಮ ಸಮಾಜದಲ್ಲಿ ಪದವೀಧರರ ಸಂಖ್ಯೆ ಬಹಳ ಕಡಿಮೆ. ಅವರಲ್ಲಿ ಅದೆ ಷ್ಟು ಮಂದಿಯು [illegible] ಅವರ [illegible] ಕುಟುಂಬದ ಸಂಪಾದಿಸಿದ ಕೊಟ್ಟಿದ್ದಾ ರಂತೆ ಹಣವನ್ನು ಯಾರಾದರೂ ಬಿಸನೆತ್ತಿ ತಿಳಿಸಿ ದ್ದರೆ ತುಂಬಾ ಉಪಕಾರವಾಗುತಿತ್ತು. ಹಾಗೆ ಯೇ ಸೊಸೆಯಂದಿರಿಗೆ ವರದಕ್ಷಿಣೆ ಕೊಟ್ಟ

ವರೆಷ್ಟು ಎಂಬುವದನ್ನೂ ಗಣಿಸಲಿ. ಇವೆಲ್ಲಾ ದೋಷಗಳ ಕಾರಣಗಳನ್ನು ಸಾಮಾನ್ಯ ದೃ ಷ್ಟಿಯಿಂದಲೂ, ಶಾಂತ ಚಿತ್ತದಿಂದಲೂ ಪ ರಾಮರ್ಶಿಸುವುದಾದರೆ ಈ ನವಸುಧಾರಣೆ ಯ ಕಾಲದಲ್ಲಿ ಸಮಾಜಕ್ಕೆ ಅಹಿತವನ್ನುಂಟು ಮಾಡುವ ಅಡಿಗಲ್ಲಿಲ್ಲದ ಈ ಅಳಿಯಸಂತಾನ ಕಟ್ಟು ಹೋಗಿ-ಮಕ್ಕಳಕಟ್ಟು ಬರುವಂತೆ ಚಳವಳಿಸುವುದು ಅತೀ ಅಗತ್ಯವಲ್ಲವೇ? ಈ ಸಲವಾದರೂ ವ್ಯಕ್ತಿಗತ ಜಗಳಗಳು ಆ ಡಂಬರ, ಲೋಕದ ಕಣ್ಣಿಗೆ ಮಣ್ಣೆರಚಿ ಆತ್ಮ ಸಾಕ್ಷಿಗೆ ವಿರೋಧವಾಗಿ ನಡೆಯುವದನ್ನು ಬಿಟ್ಟು ಸರಿಯಾದ ದಾರಿಯನ್ನು ವಿದ್ಯಾವಂತ ರಾದ ನಮ್ಮ ಮುಖಂಡರು ತೋರಿಸಲಾರರೇ?

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಸುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಗ್ಗೆ ಒಂದೇ ಸಾರೆ ೬ ದಿವಸ ಸೇವಿಸ ಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್, ಶಕ್ಕ್ರಮ್ಮ ಎಡಾಪ ವಾಡಕಳ್ಳ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟ ವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದ ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ-

ಬಾಲಚಂದ್ರ ಆಫೀಸು, ಉಡುಪಿ



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ನೇರ. ಅದು ನಮ್ಮನ್ನು ಬರೇ ದುರ್ಮುಖ ಇದ್ದ ಅದನ್ನು ಬೇರುಸಹಿತ ಕಿತ್ತು ಹಿಗಯು ವುದು. ಈ ಔಷಧ ಶುರುವು ಮಾಡಿದಾಗಲೇ ಕೆಮ್ಮು ತೀರಾ ನಿಲ್ಲುವವು; ಹೊಟ್ಟೆ ದಣ ನಾಗುವದು; ಪಚನಕ್ರಿಯೆಯು ತಿದ್ದುವದು; ಫುಪ್ಪುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೆಮ್ಮು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ನಿಕಾ ರಕ್ಕೆ ಪುರೋಹಿತ ಶ್ವಾಸಹಾರೀ ಸ್ಪೇಷ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನ ವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮ ವಾಗಿ ರೂ.೩-೬-೦; ೫-೧೪-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪಾಪ್ಯುಲರ್ ಸ್ಟೋರ್ಸ್, ಮಂಗ ಳೂರು; ಟಿ.ಸಿ ನಟರಾಜನ್ ಕಂಪೆನಿ ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.



(೩ನೇ ಪುಟದಿಂದ)

ನವ ನಿರ್ಮಾಣಗೊಳ್ಳಬೇಕಾದವುಗಳ ಪಟ್ಟಿಯಲ್ಲಿ ಈ ಮನುಷ್ಯನ ದೃಷ್ಟಿಬುದ್ಧಿಯೂ ಸೇರುವಾಗ ಇಂಥವರಿಂದ ಬೇರೊಂದು ಹೊಸ ರಚನೆಯನ್ನು ನಿರೀಕ್ಷಿಸುವದು ಕಷ್ಟ. ಅವರನ್ನು ಒಂದೋ ಪಕ್ಷದ ಕೆಲವರು ಆಡಿಸುತ್ತಿರಬೇಕು; ಇಲ್ಲವೇ ನಾಳೆಯೂ ಹೈಕಮಾಂಡೇ ಅವರಿಗೆ ಕಲಿಸುತ್ತಾ ಇರಬೇಕು. ಇವೆರಡೂ ತಪ್ಪುವದು ಕಾಂಗ್ರೆಸ್ ಅಧಿಪತಿಗಳಿಗೆ ಬೇಕಾಗಿತ್ತು. ಜರ್ಝರಿತ ನೆಲೆಯೊಂದರಮೇಲೆ ಭಾರ ಹೇರುವದರಿಂದಾಗುವ ಅಪಘಾತ ನಿರೀಕ್ಷೆಯೊಂದೇ ಪ್ರಕಾಶಮ್ ನಾಯಕತ್ವದ ಕುರಿತು ಧುರೀಣರಿಗಿದ್ದ ಭೀತಿಗೆ ಕಾರಣವಲ್ಲದೆ ಬೇರಾವುದೂ ಅಲ್ಲ. ಈ ಕುರಿತು ಗಾಂಧಿಜೀ ಪ್ರಕಾಶಮರಿಗೆ ಬರೆದಿದ್ದ ಪತ್ರ ಬೆಳಕಿಗೆ ಬೀಳುತ್ತಿದ್ದಂತಾಗುತ್ತಿತ್ತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ಇಂತಹ ಗಾಢವಿಚಾರ ಮಾಡಿ ಹಿಂದೆಗೆದರೆ, ಮದ್ರಾಸ್ ಎಂ.ಎಲ್.ಎ.ಗಳು ಲೋಕರೂಢಿಯಂತೆ ಸ್ಥೂಲಮನೋವೃತ್ತಿಗೇನೇ ಒಲಿದರು. ಈ ಘಟನೆಯಿಂದ ಕಾಂಗ್ರೆಸ್ ನಾಯಕರು ನಿಜಕ್ಕೂ ಮಾನನೊಂದಿರಬಹುದು. ತಾವು ಆಗಬಾರದೆಂದು ಬಯಸಿದ ಪ್ರತಿಫಲವನ್ನೇ ಕೊಟ್ಟ ಈ ಕಾರ್ಯದಲ್ಲಿ ತಾವು ಕೈ ಹಾಕಿದುದೇ ಆಗಲಿಲ್ಲವೆಂದು ಈಗ ಅವರು ನೆನಸಿರಬಹುದು. ಯಾಕೆ? ತನ್ನ ಅಭಿಪ್ರಾಯವು ಮಾನ್ಯವಾಗುವಂತಿಲ್ಲ, ಎಂಬ ಕುರುಹು ದೊರೆತೊಡನೇ ಮೌಲಾನರು 'ನನ್ನದೇನೂ ಇಲ್ಲ' ಎಂದು ಹಿಂದೆಗೆದಿದ್ದರು. ಕೊನೆಯಲ್ಲಿ ಮದ್ರಾಸ್ ಎಂ.ಎಲ್.ಎ.ಗಳೂ ರಾಷ್ಟ್ರಪತಿಯ ಮೇಲೆ ಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಲು ಮರೆಯಲಿಲ್ಲ. ಅದರಮು ಮನೆಯೊಳಗೆ ಪ್ರವೇಶಿಸಲು ಬಿಡದೆ, ದೂರಕ್ಕೊಯ್ದು ನಿಲ್ಲಿಸಿ ಹಾರ ಹಾಕಿದಂತಾಗಿದೆ. ಈ ಸತ್ಕಾರಕ್ಕಿಂತ ಹೆಚ್ಚಾಗಿ ಈ ಧಿಕ್ಕಾರವೇ ರಾಷ್ಟ್ರಪತಿಗಳ ಸ್ಮರಣೆಯಲ್ಲಿ ನಿಲ್ಲಬಹುದು.

ನಮ್ಮ ಎಂ. ಎಲ್. ಎ.ಗಳು

'ನಮಾ ...' ಎಂದು ರಾಷ್ಟ್ರಪತಿಯ ಎದುರು ಎದೆತಟ್ಟಿಕೊಂಡ ನಮ್ಮ ಕಾಂಗ್ರೆಸ್ ಎಂ. ಎಲ್. ಎ.ಗಳ ಕುರಿತು ನಾವು, ಮದ್ರಾಸಿಗರು, ಹೆಗ್ಗಳಿಕೆ ಪಡುವದು ಬೇಡವೆ? ಈ ಸ್ವಾಭಿಮಾನದ ಹಿಂದೆ ದುರಭಿಮಾನಗಳಾವುವೂ ಇಲ್ಲದಿರುತ್ತಿದ್ದರೆ ನಿಜಕ್ಕೂ ನಾವು ನಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳಬಹುದಿತ್ತು. ಆದರೆ? ನಾಯಕ ಚುನಾವಣೆಯ ಆ ದೃಶ್ಯವನ್ನೇ ನೋಡೋಣ. ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಒಟ್ಟಿಗೆ 196 ಮಂದಿ ಕಾಂಗ್ರೆಸ್ ಸದಸ್ಯರಿದ್ದಾರೆ. ಅವರಲ್ಲಿ ತಮಿಳುನಾಡಿನವರು 101, ಆಂಧ್ರ 77, ಕೇರಳ ಮತ್ತು ಕನ್ನಡಿಗರು 18. ಆಂಧ್ರರು (ಕನ್ನಡಿಗರ ಮಾತು ಬಿಡಿ) ಪ್ರತ್ಯೇಕ ಪ್ರಾಂತ್ಯ ಕೇಳುವ ಒಂದು ಕಾರಣ—ಹೀಗನ್ನಬಹುದಾದರೆ ಜಿನ್ನರು ಪಾಕಿಸ್ತಾನ ಕೇಳುವಂತಹದೇ ಆದ ಒಂದು ಕಾರಣ—ಇಲ್ಲಿದೆ. ಏನೇ ಮಾಡಿದರೂ ಮದ್ರಾಸ್ ಪ್ರಾಂತ್ಯದ ಅಧಿಕಾರ ಸೂತ್ರವನ್ನು ಸಂಖ್ಯಾಬಲವಿರುವ ತಮಿಳುನಾಡಿನವರ ಕೈಯಿಂದ ತಪ್ಪಿಸುವದು ಅಸಾಧ್ಯ. ಅಂದಿನಿಂದಿದುವರೆಗೂ ಮದ್ರಾಸಿನ ಮುಖ್ಯಮಂತ್ರಿಯಾಗಿದ್ದುದು ತಮಿಳುನಾಡಿನವರೇ. ಈ ಬಾರಿಯ ನಾಯಕ ಚುನಾವಣೆಯಲ್ಲಿ 180 ಮಂದಿ ಹಾಜರಿದ್ದರು. ಆ ಪೈಕಿ ರಾಜಾಜಿಯ ಅನುಯಾಯಿಗಳಾದ ಡಾ। ಟಿ.ಎಸ್. ಎಸ್. ರಾಜನ್., ಡಾ। ಯು. ರಾಮರಾವ್, ಶ್ರೀ. ವೈದ್ಯನಾಥ ಅಯ್ಯರ್ ಮತ್ತು ಬೇರೆ 20ಮಂದಿ ಮತದಾನವನ್ನೇ ಮಾಡಲಿಲ್ಲ. ಕಾರಣವೇನು? ಇವರೆಲ್ಲಾ ನ್ಯಾಯವಿಧಾಯಕ ಸಭೆಗಳಿಗೆ ಬಂದುದು ಕೇವಲ ರಾಜಾಜಿಗಾಗಿಯೆ? ರಾಜಾಜಿ ಹೊರತು ಮಿಕ್ಕ ನಾಯಕನ ಕೈಕೆಳಗೆ ನಾವಿರಲಾರೆವೆನ್ನಲು ಇವರಿಗೆ ಅಧಿಕಾರವಿಲ್ಲ; ರಾಜಾಜಿಗೆ ಹೊರತು ಮಿಕ್ಕವರಿಗೆ ಮತಕೊಡಲಾರೆವೆಂದು ಕುಳಿತು ಕೊಳ್ಳುವದು ಸರಿಯೆ? ಅಥವಾ, ಶ್ರೀ. ಟಿ. ಪ್ರಕಾಶಮರು ಬ್ರಾಹ್ಮಣರು ಆದರೆ ಆಂಧ್ರರು—ಶ್ರೀ. ಮುತ್ತುರಂಗ ಮುದಲಿಯಾರರು ತಮಿಳರು, ಆದರೆ ಅಬ್ರಾಹ್ಮಣರು—ಎಂಬುದರಿಂದ ತಕ್ಕಡಿ ಸರೀ ನಿಂತು ಇವರು ದೂರನಿಂತರೆ? ಎಲ್ಲಕ್ಕಿಂತ ಮೊದಲು, 'ರಾಜಾಜಿಯನಂತರ ಶ್ರೀ ಪ್ರಕಾಶಮರೇ' ಎಂಬುದು ಮದ್ರಾಸಿನ ಮಟ್ಟಿಗೆ ಸರ್ವಮಾನ್ಯವಾದ ವಿಷಯ. ಶ್ರೀ ಕಾಮರಾಜನಾದರರು ಶ್ರೀ. ಮುತ್ತುರಂಗ ಮುದಲಿಯಾರರನ್ನು ಒತ್ತಾಯಿಸಿ ಉಮೇದ್ವಾರಿಕೆಗೆ ನಿಲ್ಲಿಸಿದುದೇಕೆ? ಮುದಲಿಯಾರರು ತಮಿಳು ನಾಡಿನವರು ಮತ್ತು ಅಬ್ರಾಹ್ಮಣರೆಂದಲ್ಲವೆ? ಇವೆಲ್ಲಾ ನಮ್ಮ ಎಂ. ಎಲ್. ಎ ಗಳ ಸ್ವಾಭಿಮಾನದ ಹಿಂಗಡೆಯಿಂದಿಣುಕುತ್ತಿರುವ ದುರಭಿಮಾನಗಳು.

ಒಬ್ಬ ಸದಸ್ಯರು ವೋಟಿನ ಗುರುತ ಹಾಕದೇನೇ ಮತಪತ್ರಿಕೆಯನ್ನು ಖಾಲಿಯಾಗಿಯೇ ಪೆಟ್ಟಿಗೆಯೊಳಗೆ ಹಾಕಿದ್ದರಂತೆ. ವೋಟು ಹಾಕುವದರಲ್ಲಿ ಗೀಟು ಹಾಕುವದೂ ಬರುತ್ತದೆ ಎಂದವರಿಗೆ ಗೊತ್ತಿರಲಿಲ್ಲವೇನೋ! ಇನ್ನು ಆ ಇಡೀ ವಾರದಲ್ಲಿ ವೋಟು ಹಾಕುವ ಶಿಕ್ಷಣ ಪಡೆದ ಸದಸ್ಯರೂ ಇದ್ದಿರಬಹುದು. ಬೇರೆ ವಿಧದ ಯೋಗ್ಯತೆಗಳೂ ಆ ಸಭೆಯಲ್ಲಿ ಪ್ರದರ್ಶಿಸಲ್ಪಟ್ಟವೆ. ಕೇರಳ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಮಾಧವ ಮೆನೊನರು ಶ್ರೀ. ಮುತ್ತುರಂಗಮುದಲಿಯಾರರ ಉಮೇದ್ವಾರಿಕೆಯನ್ನು ಅನುಮೋದಿಸಿದವರು. ಪ್ರಕಾಶಮರು ಗೆದ್ದೊಡನೆ ಶ್ರೀ. ಮೆನನರು ಅವರೊಡನೆ ಬೇಡಿಕೊಂಡರು. "ಶ್ರೀ. ಮುತ್ತುರಂಗ ಮುದಲಿಯಾರರನ್ನು ಅನುಮೋದಿಸುವಾಗ ನನಗೆ ಬಹಳ ಸಂಕಟವಾಗಿತ್ತು. ನಾನು 1921ರಿಂದಲೂ ಪ್ರಕಾಶಮರ ಅನುಯಾಯಿಯಾಗಿದ್ದು ಕೆಲಸಮಾಡಿದ್ದೇನೆಂಬುದು ಅವರಿಗೆ ಗೊತ್ತಿದೆ. ಈ ದಿನ ನಾನೆಂತಹ ಪರಿಸ್ಥಿತಿಗೊಳಗಾಗಿ ಹೀಗೆ ಮಾಡಿದೆನೆಂಬುದನ್ನೂ ಅವರು ಬಲ್ಲರು. (ಪ್ರಕಾಶಮರ ಮುಖ ನೋಡಿ) ಸ್ವಾಮೀ, ನಾನು ಹಿಂದಿನಂತೆಯೇ ನಿಮ್ಮ ವಿನೀತ ಅನುಯಾಯಿಯಾಗಿ ಮುಂದಕ್ಕೂ ಬಾಳುತ್ತೇನೆ". ಪಾಪ! ಅವರಿಗೆ ಮಂತ್ರಿಪದವಿಯ ಆಸೆಯಿದ್ದಿರಬೇಕು. ಇಷ್ಟು ಪ್ರಾರ್ಥಿಸಿಕೊಂಡವರ ಕೈಬಿಡುವವರು ಪ್ರಕಾಶಮರಲ್ಲ, ಇನ್ನು ಹೆಂಗು, ದಾಕ್ಷಿಣ್ಯ, ಸ್ವಾರ್ಥಮಯ ದೂರದೃಷ್ಟಿಗೊಳಗಾದವರೆಷ್ಟು ಮಂದಿಯೊ? ರಾಜಾಜೀ ನಾಯಕತ್ವ ಸಂಬಂಧದ ಕಾಂಗ್ರೆಸ್ ವರಿಷ್ಠರ ಸಲಹೆಯಮೇಲೆ ಮೆಂಬರರು ಬಹಿರಂಗ ಮತದಾನ ಮಾಡಬೇಕಾಗಿತ್ತು. ಆದ್ದರಿಂದ ಗಾಳಿಬೀಸಿದತ್ತ ತೇಲಿಹೋಗದೆ ಕೆಲವರಿಗೆ ನಿರ್ವಾಹವಿರಲಿಲ್ಲ. ಪ್ರಕಾಶಮ್-ಮುದಲಿಯಾರ್ ಚುನಾವಣೆ ಗುಪ್ತ ಮತದಾನದ ಮೂಲಕ ನಡೆಯಿತು. ಆದ್ದರಿಂದ ಗೆದ್ದವರಿಗೇನೇ ಮತಕೊಟ್ಟಿದ್ದೆವೆನ್ನಲು ಕೆಲವರಿಗನುಕೂಲವೂ ದೊರೆಯಿತು.

ಮಂತ್ರಿ ಮಂಡಲ ರಚನೆಯ ಕುರಿತು ಶ್ರೀ ಪ್ರಕಾಶಮರು ಕಾಂಗ್ರೆಸ್ ವರಿಷ್ಠರಿಂದ ಸಲಹೆ ಕೇಳಿದ್ದಕ್ಕೆ 'ನಾಯಕ ಚುನಾವಣೆಯ ಕುರಿತು ನಾವು ಕೊಟ್ಟ ಸಲಹೆಗೆ ಬೆಲೆಬಾರದ್ದರಿಂದ ಇನ್ನು ನಿಮಗೆಕೊಡುವ ಸಲಹೆ ನಮ್ಮಲ್ಲಿಲ್ಲ' ಎಂಬ ಉತ್ತರ ಬಂದಿದೆ. ಶ್ರೀ. ಪ್ರಕಾಶಮರು ಕೇಳಿದ್ದೇ ತಪ್ಪು (ಅಥವಾ ಕೇವಲ ಉಪಚಾರಕ್ಕೆಮಾತ್ರ) ಹೊರತು ಅವರು ಹಾಗೆ ಹೇಳಿದ್ದು ತಪ್ಪಲ್ಲ. ರಾಜಾಜಿಯ ಸಮರ್ಥಕರು ಪ್ರಕಾಶಮ್ರ ಮಂತ್ರಿ ಮಂಡಲದಲ್ಲಿ ಸೇರಲು ನಿರಾಕರಿಸಿದ್ದಾರೆ; ಮಿಕ್ಕವರಲ್ಲಿ ಕೆಲವರು ಪದವಿಯಾಸೆಯಿಂದ ಬಾಯಿ ನೀರೂರಿಸುತ್ತಿರಬಹುದು. ಕಾಂಗ್ರೆಸ್ ಅಧಿಪತಿಗಳ ಅಸಹಕಾರದಿಂದಾಗಿ ತಮಿಳುನಾಡಿನ ಕಾಂಗ್ರೆಸ್ ಎಂ. ಎಲ್. ಎ, ಗಳೆಲ್ಲಾ ಪ್ರಕಾಶಮ್ ಮನೋವೃತ್ತಿಗಿಂತ ದೂರ ಹೋಗಹತ್ತಿದ್ದಾರೆ. ಏನೇಆದರೂ ಮದ್ರಾಸನ್ನು ಕಾಂಗ್ರೆಸ್ ಸರಕಾರವು ಆಳಲಿದೆ. ಆ ಸರಕಾರವೂ, ಕಾಂಗ್ರೆಸ್ ಅಧಿಪತಿಗಳೂ, ಜನತೆಯೂ ಮದ್ರಾಸ್ ಗೊಂದಲಗಳಿಂದ ಕಲಿಯಲೇ ಬೇಕಾದ ಒಂದು ಮುಖ್ಯ ಪಾಠವೆಂದರೆ 'ಭಾಷಾವಾರು ಪ್ರಾಂತ್ಯ ರಚನೆಯಾಗಲೇಬೇಕು'.

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾರ್ಯ,
ರಥಬೀದಿ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-1-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ನಂಗ್ರಿ ಬರದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲ್ಪಡುವದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ಪರೇಲ್ ಸ್ಟೇಷನ್ ಎದುರುಗಡೆ, ಪರೇಲ್. (3) ಜನತ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟಿರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ಕೊಟ್ಟು ಚಂದಾದಾರಾಗಿ ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,
ನವಯುಗ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಹಕರ(?) ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಅಡಿಗಲ್ಲಿಲ್ಲದ ಅಳಿಯಕಟ್ಟು ಅಳಿಯಬೇಕೊ? ಉಳಿಯಬೇಕೊ?

ಲೇ:- ಶ್ರೀ. ವಿ. ಎ. ಶೆಟ್ಟಿ, ಕುಂದಾಪುರ.

[illegible]

ಅಳಿಯ ಸಂತಾನದ ಕಟ್ಟು [illegible] ಅದು ಅ [illegible] ಆದರ ಪರಿಸ್ಥಿತಿಗೂ [illegible] ಅಳಿಯಸಂತಾನದ [illegible] ಅವರಿಗೆ ತಮ್ಮ [illegible] ಮೇಲೆ ನುಹುತೆ [illegible] ತಮ್ಮ [illegible] ತಮ್ಮ ಮಕ್ಕಳ [illegible] ಅಳಿಯಕಟ್ಟಿನ [illegible] ಅಳಿಯ ಸಂತಾನದ [illegible] ಗೋತ್ರ [illegible] ಕಟ್ಟಿನಲ್ಲಿದ್ದಾರೆಯೋ? ಈ ಜಿಲ್ಲೆಯಲ್ಲಿ [illegible] ಸಮಾಜದವರು ಮಾತ್ರ ಇರುವುದಲ್ಲ, ಬಿಲ್ಲವ, ದೇವಾಡಿಗ, ಮೊಗವೀರ, ಇನ್ನು ಅನೇಕರು ಆ ಕಟ್ಟನ್ನು ಆಚರಿಸುವವರು ಇಲ್ಲವೆ? ಅವರಿಗೆಲ್ಲಾ ನವಸುಧಾರಣೆ ಬೇಡವೆಂದು ಯಾರಾದರೂ ಹೇಳಬಲ್ಲರೆ?

ಬೇಸಾಯ ವೃತ್ತಿಯೇ ಮುಖ್ಯ ವೃತ್ತಿಯಾಗಿ ಅನುಸರಿಸಿ ಬರುವ ಈ ಅಳಿಯ ಕಟ್ಟಿನ ಸಮಾಜದಲ್ಲಿ ಒಕ್ಕಲ [illegible] ಅಳಿಯಸಂತಾನದ ಯಜಮಾನನ [illegible]

ಚೆನ್ನಾಗಿ ಶೋಧಿಸಿ ಅದನ್ನು ಸುಧಾರಿಸಿ ಅದಕ್ಕಿಂತಲೂ ನಾವು ಒಂದು ಹೆಜ್ಜೆ ಮುಂದೆ ಹೋಗುವದೇನ್ಯಾಯವಲ್ಲದೆ ಎಂದೋ ಕಾಲ ಬಾಧಿಗೊಳಗಾಗಿರುವ ಅಳಿಯ ಕಟ್ಟಿನಲ್ಲಿ ನಾವು ಮಾತ್ರ ಸುಧಾರಣೆಮಾಡಿ ತೃಪ್ತಿಪಡುವದರಿಂದ ಏನೊಂದು ಪ್ರಯೋಜನವೂ ಇಲ್ಲ.

ಅಳಿಯ ಸಂತಾನ ಬೇಡ ಯಾಕೆ?

ಯಜಮಾನನ ಸ್ವಯಂ ಪ್ರಭುತ್ವವು ನ್ಯಾಯಕ್ಕೆ ಮಾತ್ರವಲ್ಲ, ಮನುಷ್ಯ ಮಾತ್ರರಿಗೆ ಸಹನವಾಗದಷ್ಟಿದೆ. ಯಜಮಾನಿಕೆ ಬಂದ ಒಡನೆಯೇ ಮಾನುಷತ್ವ ಬದಲಾಗುತ್ತೆ. ಕುಟುಂಬದ ಆಸ್ತಿ ತನ್ನ ಸ್ವಂತ ಅಪ್ಪನ ಅಧಿಕಾರದ್ದೇ ಎಂದು ಭಾವಿಸಿಕೊಂಡು, ತೋರಿಸಿಕೊಂಡು ಕಿರಿ ಮೆಂಬರರಿಗೆ ತನ್ನಲ್ಲಿ ಜಿಗುಪ್ಸೆ ಹುಟ್ಟುವಂತೆ ವರ್ತಿಸುತ್ತಾನೆ. [illegible] ಕೊಟ್ಟು ಆ ಗಂಡನನ್ನು ಕೊಂದು ಕೊಂಡವಳ [illegible] ಮಕ್ಕಳಿಗೆ ವಿದ್ಯಾಭ್ಯಾಸ. ಹೆಣ್ಣು ಮಕ್ಕಳಿಗೆ ಯೋಗ್ಯ ವರನ ಆರಿಸುವಿಕೆ, ಅ ಬಗ್ಗೆ ಹತ್ತು ಜನರ ಆಸ್ತಿಯು [illegible] ಯಾವ ಅಳಿಯ ಸಂತಾನದ ಕಿರಿ ಮೆಂಬರನು ಸಹಿಯಾನು? ಈಗಿನ ವಿದ್ಯಾವಂತರಾದವರು ಆದಷ್ಟು ಜನ ಸ್ವಲ್ಪ ಮಟ್ಟಿಗಾದರೂ ಅಳಿಯ ಕಟ್ಟನ್ನು ಆಚರಿಸುತ್ತಾರೆ? ಎಷ್ಟು ಜನ ಶ್ರೀಮಂತರು, ಪದವೀಧರರು ತಮ್ಮ ಅಳಿಯ [illegible] ಕೊಟ್ಟು ತಮ್ಮ ಮಕ್ಕಳಿಗೆ [illegible] ಯಜಮಾನರ [illegible] ಕುಟುಂಬದ [illegible] 10 [illegible] ಅಳಿಯ ಕಟ್ಟಿನ [illegible] ಯಜಮಾನರು [illegible] ಮನೆತನದಲ್ಲಿ [illegible] ಅನೇಕ ಜನರು, ಮಕ್ಕಳ ಸಂತಾನದ [illegible] ಜೀವಿಸಬರುತ್ತಿಲ್ಲ?

ಈ ಕಟ್ಟಿನ ಸುಧಾರಣೆಯನ್ನು, ಈಗಿನ ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವೆನೆಂದು ಜಂಭ ಮಾಡುತ್ತಿರುವ ಮಹಾರಾಷ್ಟ್ರಗಳ ಅಧಿಕಾರಿಗಳಂತೆ ಕೇವಲ ಯಜಮಾನರು ಮಾತ್ರ ಕುಳಿತು ಮಾಡುವದಲ್ಲ. ಆ ಕಟ್ಟನ್ನು ಆಚರಿಸುವ ಎಲ್ಲಾ ಮೆಂಬರರ ಅಭಿಪ್ರಾಯವನ್ನು ಪಡೆದು ಬಹುಮತದಂತೆ ಸುಧಾರಣೆ ಮಾಡುವುದೇ ಹಿತ. ಮನಃಪೂರ್ವಕವಾಗಿ ಆಚರಿಸದ ಆ ಕಟ್ಟಿನಿಂದೇನು ಪ್ರಯೋಜನ? ಮಕ್ಕಳ ಸಂತಾನವನ್ನು ಆಚರಿಸುವುದರಿಂದ ನಮ್ಮ ಸಮಾಜದ ಆರ್ಥಿಕ ಪರಿಸ್ಥಿತಿಯು ಕೆಡುವುದೆಂಬ ಭಾವನೆಯು ಕೆಲವರಿಗೆ ಇರುವುದಾದರೆ ಕೆಲವು ಶತಮಾನಗಳಿಂದ ಅಳಿಯಸಂತಾನ ಕಟ್ಟನ್ನೇ ಆಚರಿಸುತ್ತಾ ಬಂದ ನಾವು ಯಾವ ಆರ್ಥಿಕ ಸ್ಥಿತಿಯನ್ನು ವೃದ್ಧಿಗೊಳಿಸಿ ಸಮಾಜದ ಉನ್ನತಿಯನ್ನು ಮಾಡಿದ್ದೇವೆ? ಎಷ್ಟು ಕೋಲೇಜುಗಳು, ಹ್ಯಾಸ್ಕೂಲುಗಳು, ಉನ್ನತಿಯ ಬೇಂಕುಗಳು, ಪಬ್ಲಿಕ್ ಸಂಸ್ಥೆಗಳು, ಅನಾಥಾಲಯಗಳು, ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಸಂಸ್ಥೆಗಳು ಅಥವಾ ಧಾರ್ಮಿಕ ದೃಷ್ಟಿಯಿಂದ ಎಷ್ಟು ದೇವಸ್ಥಾನಗಳನ್ನು ನಾವು ನಿರ್ಮಿಸಿದ್ದೇವೆ? ಮಕ್ಕಳ ಸಂತಾನ ಕಟ್ಟನ್ನು ಆಚರಿಸುವ ಇತರ ಸಮಾಜದವರು ಈ ವಿಷಯದಲ್ಲಿ ಮುಂದುವರಿದಷ್ಟು ನಾವು ಮುಂದುವರಿದಿರುವೆವೆ? ಮಕ್ಕಳಸಂತಾನದ ಶ್ರೀಮಂತರ ಮನೆಯಲ್ಲಿ ಎಲ್ಲಾ ಮೆಂಬರರ ಜೀವನ ಮತ್ತು ವಿದ್ಯಾಭ್ಯಾಸವು ಒಂದೇ ರೀತಿಯ ವ್ಯವಸ್ಥೆಯಿಂದ ಸಾಗುತ್ತಿಲ್ಲವೇ? ಅಳಿಯಸಂತಾನದ ಶ್ರೀಮಂತ ಯಜಮಾನರು ಕುಟುಂಬದ ಆಸ್ತಿಯ ಉತ್ಪತ್ತಿಯಲ್ಲಿ ಎಷ್ಟು ಪಾಲನ್ನು ಅಳಿಯಂದಿರ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಿದ್ದಾರೆ?

ಈಗ ನಮ್ಮ ಸಮಾಜದಲ್ಲಿ ಪದವೀಧರರು [illegible] ಆದವರು [illegible] ಕುಟುಂಬದ [illegible] ಯಾರಾದರೂ ಹೆಸರಿಗೆ ತಿಳಿಸಿದರೆ [illegible] ಉಪಕಾರವಾಗುತ್ತಿತ್ತು. ಹಾಗೆಯೇ [illegible] ಕೊಟ್ಟು

ವರೆಷ್ಟು ಎಂಬುದನ್ನೂ ಗಣಿಸಲಿ. ಇವೆಲ್ಲಾ ದೋಷಗಳ ಕಾರಣಗಳನ್ನು ಸಾಮಾನ್ಯ ದೃಷ್ಟಿಯಿಂದಲೂ, ಶಾಂತ ಚಿತ್ತದಿಂದಲೂ ಪರಾಮರ್ಶಿಸುವುದಾದರೆ ಈ ನವಸುಧಾರಣೆಯ ಕಾಲದಲ್ಲಿ ಸಮಾಜಕ್ಕೆ ಅಹಿತವನ್ನುಂಟುಮಾಡುವ ಅಡಿಗಲ್ಲಿಲ್ಲದ ಈ ಅಳಿಯಸಂತಾನ ಕಟ್ಟು ಹೋಗಿ-ಮಕ್ಕಳಕಟ್ಟು ಬರುವಂತೆ ಚಳವಳಿಸುವುದು ಅತೀ ಅಗತ್ಯವಲ್ಲವೇ? ಈ ಸಲವಾದರೂ ವ್ಯಕ್ತಿಗತ ಜಗಳಗಳನ್ನು ದೂರಬಿಟ್ಟು, ಲೋಕದ ಕಣ್ಣಿಗೆ ಮಣ್ಣೆರಚಿ ಆತ್ಮಸಾಕ್ಷಿಗೆ ವಿರೋಧವಾಗಿ ನಡೆಯುವದನ್ನು ಬಿಟ್ಟು ಸರಿಯಾದ ದಾರಿಯನ್ನು ವಿದ್ಯಾವಂತರಾದ ನಮ್ಮ ಮುಖಂಡರು ತೋರಿಸಲಾರರೇ?



Approved firm by the Govt. of Mysore
Certified by the Agent of the Govt. of Cylone Indian.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ವಸ್ಲು.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ--

ಬಾಲಚಂದ್ರ ಆಫೀಸು, ಉಡುಪಿ



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ [illegible] ದಮ್ಮನ್ನು ಬರೇ ಮಡುಗಿ [illegible] ಅದನ್ನು ಬೇರುಸಹಿತ ಕಿತ್ತು ಒಗೆಯುವುದು ಈ ಔಷಧ ಸೇವನೆ ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಶಕ್ತಿಯೂ ತಿದ್ದುವದು; ಶ್ವಾಸನಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೇಸ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಡೋಸ್, ೬ ಡೋಸ್, ೧೨ ಡೋಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫-೧೪-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪ್ರೊಪ್ರೈಟರ್ ಸ್ಟೋರ್ಸ್, ಮಂಗಳೂರು [illegible] ಸಿ ನಟರಾಜನ್, ಕೊಪ್ಪೆ, ಮೈಸೂರು.

ಮುಂಬಯಿ ಸೋಲ ಏಜಂಟರು:-

ನವಜನಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨.

PUROHIT SHWAS-HARI

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಬಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉರುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಹಕ್ಕ್ರವ್ಯ ವಿಚಾರ ಮಾಡತಕ್ಕ ಮಾಲೀಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ, ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG.

(೨ನೇ ಪುಟದಿಂದ)

ನವ ನಿರ್ಮಾಣಗೊಳ್ಳಬೇಕಾದವುಗಳ ಪಟ್ಟಿಯಲ್ಲಿ ಈ ಮನುಷ್ಯನದಷ್ಟು ಬುದ್ಧಿಯೂ ಸೇರುವಾಗ ಇಂಥವರಿಂದ ಬೇರೊಂದು ಹೊಸ ರಚನೆಯನ್ನು ನಿರೀಕ್ಷಿಸುವದು ಕಷ್ಟ. ಅವರನ್ನು ಒಂದೋ ಪಕ್ಷದ ಕೆಲವರು ಆಡಿಸುತ್ತಿರಬೇಕು; ಇಲ್ಲವೇ ನಾಳೆಯೂ ಹ್ಯಾಕೂಮಂಡೀ ಅವರಿಗೆ ಕಲಿಸುತ್ತಾ ಇರಬೇಕು. ಇವೆರಡೂ ತಪ್ಪುವದು ಕಾಂಗ್ರೆಸ್ ಅಧಿಪತಿಗಳಿಗೆ ಬೇಕಾಗಿತ್ತು. ಜಯ್ಯುರಿತ ನೆಲೆಯೊಂದರಮೇಲೆ ಭಾರ ಹೇರುವದರಿಂದಾಗುವ ಅಪಘಾತ ನಿರೀಕ್ಷೆಯೊಂದೇ ಪ್ರಕಾಶಮ್ ನಾಯಕತ್ವದಕುರಿತು ಧುರೀಣರಿಗಿದ್ದ ಭೀತಿಗೆ ಕಾರಣವಲ್ಲದೆ ಬೇರಾವುದೂ ಅಲ್ಲ. ಈ ಕುರಿತು ಗಾಂಧೀಜೀ ಪ್ರಕಾಶಮರಿಗೆ ಬರೆದಿದ್ದ ಪತ್ರ ಬೆಳಕಿಗೆ ಬೀಳುತ್ತಿದ್ದಾಗುತಿತ್ತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ಇಂತಹ ಗಾಢವಿಚಾರ ಮಾಡಿ ಹಿಂಡಿಗೆದರೆ, ಮದ್ರಾಸ್ ಎಂ.ಎಲ್ ಎ.ಗಳು ಲೋಕರೂಢಿಯಂತೆ ಸ್ಥೂಲಮನೋವೃತ್ತಿಗೇನೇ ಒಲಿದರು. ಈ ಘಟನೆಯಿಂದ ಕಾಂಗ್ರೆಸ್ ನಾಯಕರು ನಿಜಕ್ಕೂ ಮನನೊಂದಿರಬಹುದು. ತಾವು ಆಗಬಾರದೆಂದು ಬಯಸಿದ ಪ್ರತಿಫಲವನ್ನೇ ಕೊಟ್ಟ ಈ ಕಾರ್ಯದಲ್ಲಿ ತಾವು ಕೈ ಹಾಕಿದುದೇ ಆಗಲಿಲ್ಲವೆಂದು ಈಗ ಅವರು ನೆನಸಿರಬಹುದು. ಯಾಕೆ? ತನ್ನ ಅಭಿಪ್ರಾಯವು ಮಾನ್ಯವಾಗುವಂತಿಲ್ಲ, ಎಂಬ ಕುರುಹು ದೊರೆತೊಡನೇ ಮೌಲಾನರು 'ನನ್ನದೇನೂ ಇಲ್ಲ' ಎಂದು ಹಿಂದೆಗೆದಿದ್ದರು. ಕೊನೆಯಲ್ಲಿ ಮದ್ರಾಸ್ ಎಂ.ಎಲ್.ಎ.ಗಳೂ ರಾಷ್ಟ್ರಪತಿಯ ಮೇಲೆ ಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಲು ಮರೆಯಲಿಲ್ಲ. ಆದರದು ಮನೆಯೊಳಗೆ ಪ್ರವೇಶಿಸಲು ಬಿಡದೆ, ದಾರಕ್ಕೆಯುದ್ದ ನಿಲ್ಲಿಸಿ ಹಾರ ಹಾಕಿದಂತಾಗಿದೆ. ಈ ಸತ್ಕಾರಕ್ಕಿಂತ ಹೆಚ್ಚಾಗಿ ಆ ಧಿಕ್ಕಾರವೇ ರಾಷ್ಟ್ರಪತಿಗಳ ಸ್ಮರಣೆಯಲ್ಲಿ ನಿಲ್ಲಬಹುದು.

ನಮ್ಮ ಎಂ. ಎಲ್ ಎ.ಗಳು

'ನಮಗೆ ಗಾವೇ' ಎಂದು ರಾಷ್ಟ್ರಪತಿಯೆದಿರು ಎದೆತಟ್ಟಿಕೊ... ... ಕಾಂಗ್ರೆಸ್ ಎಂ. ಎಲ್. ಎ.ಗಳ ಕುರಿತು ನಾವು, ಮದ್ರಾಸಿಗರು, ಹೆಗ್ಗಳಿಕೆ ಪಡುವದು ಬೇಡವೆ? ಈ ಸ್ವಾಭಿಮಾನದ ಹಿಂದೆ ದುರಭಿಮಾನಗಳಾವುವೂ ಇಲ್ಲದಿರುತ್ತಿದ್ದರೆ ನಿಜಕ್ಕೂ ನಾವು ನಮ್ಮ ಬೆನ್ನನ್ನು ಚಪ್ಪರಿಸಿಕೊಳ್ಳಬಹುದಿತ್ತು. ಆದರೆ? ನಾಯಕ ಚುನಾವಣೆಯ ಆ ದೃಶ್ಯವನ್ನೇ ನೋಡೋಣ. ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಒಟ್ಟಿಗೆ 196 ಮಂದಿ ಕಾಂಗ್ರೆಸ್ ಸದಸ್ಯರಿದ್ದಾರೆ. ಅವರಲ್ಲಿ ತಮಿಳುನಾಡಿನವರು 101, ಆಂಧ್ರ 77, ಕೇರಳ ಮತ್ತು ಕನ್ನಡಿಗರು 18 ಆಂಧ್ರರು (ಕನ್ನಡಿಗರು ಮಾತ್ರ ಬಿಡಿ) ಪ್ರತ್ಯೇಕ ಪ್ರಾಂತ್ಯ ಕೇಳುವ ಒಂದು ಕಾರಣ—ಹೀಗನ್ನಬಹುದು. ದರೆ ಜನ್ನರು ಪಾಕಿಸ್ಥಾನ ಕೇಳುವಂತಹದೇ ಅದ ಒಂದ. ಕಾರಣ-ಇಲ್ಲಿದೆ. ಏನೇ ಮಾಡಿದರೂ ಮದ್ರಾಸ್ ಪ್ರಾಂತ್ಯದ ಅಧಿಕಾರ ಸೂತ್ರವನ್ನು ಸಂಖ್ಯಾಬಲವಿರುವ ತಮಿಳುನಾಡಿನವರ ಕೈಯಿಂದ ತಪ್ಪಿಸುವದು ಅಸಾಧ್ಯ. ಅಂದಿನಿಂದಿದುವರೆಗೂ ಮದ್ರಾಸಿನ ಮುಖ್ಯಮಂತ್ರಿಯಾಗಿದ್ದುದು ತಮಿಳುನಾಡಿನವರೇ. ಈ ಬಾರಿಯ ನಾಯಕ ಚುನಾವಣೆಯಲ್ಲಿ 180 ಮಂದಿ ಹಾಜರಿದ್ದರು. ಅ ಪೈಕಿ ರಾಜಾಜಿಯ ಅನುಯಾಯಿಗಳಾದ ಡಾ। ಟಿ.ಎಸ್ ಎಸ್. ರಾಜನ್., ಡಾ। ಯು. ರಾಮರಾವ್, ಶ್ರೀ. ವೈದ್ಯನಾಥ ಅಯ್ಯರ್ ಮತ್ತು ಬೇರೆ 26ಮಂದಿ ಮತದಾನವನ್ನೇ ಮಾಡಲಿಲ್ಲ. ಕಾರಣವೇನು? ಇವರೆಲ್ಲಾ ನ್ಯಾಯವಿಧಾಯಕ ಸಭೆಗಳಿಗೆ ಬಂದುದು ಕೇವಲ ರಾಜಾಜಿಗಾಗಿಯೆ? ರಾಜಾಜಿ ಹೊರತು ಮಿಕ್ಕ ನಾಯಕನ ಕೈಕೆಳಗೆ ನಾವಿರಲಾರೆವೆನ್ನಲು ಇವರಿಗೆ ಅಧಿಕಾರವಿಲ್ಲ; ರಾಜಾಜಿಗೆ ಹೊರತು ಮಿಕ್ಕವರಿಗೆ ಮತಕೊಡಲಾರೆವೆಂದು ಕುಳಿತು ಕೊಳ್ಳುವದು ಸರಿಯೆ? ಅಥವಾ, ಶ್ರೀ. ಟ ಪ್ರಕಾಶಮರು ಬ್ರಾಹ್ಮಣರು ಆದರೆ ಆಂಧ್ರರು—ಶ್ರೀ. ಮುತ್ತುರಂಗ ಮುದಲಿಯಾರರು ತಮಿಳರು, ಆದರೆ ಅಬ್ರಾಹ್ಮಣರು-ಎಂಬುದರಿಂದ ತಕ್ಕಡಿ ಸರೀ ನಿಂತು ಇವರು ದೂರನಿಂತರೆ?ಎಲ್ಲಕಿಂತ ಮೊದಲು, 'ರಾಜಾಜಿಯನಂತರ ಶ್ರೀ ಪ್ರಕಾಶಮರೇ' ಎಂಬುದು ಮದ್ರಾಸಿನ ಮಟ್ಟಿಗೆ ಸರ್ವಮಾನ್ಯವಾದ ವಿಷಯ. ಶ್ರೀ ಕಾಮರಾಜನಾದರರು ಶ್ರೀ. ಮುತ್ತುರಂಗ ಮುದಲಿಯಾರರನ್ನು ಒತ್ತಾಯಿಸಿ ಉಮೇದ್ವಾರಿಕೆಗೆ ನಿಲ್ಲಿಸಿದುದೇಕೆ? ಮುದಲಿಯಾರರು ತಮಿಳುನಾಡಿನವರು ಮತ್ತು ಅಬ್ರಾಹ್ಮಣರೆಂದಲ್ಲವೆ? ಇವೆಲ್ಲಾ ನಮ್ಮ ಎಂ. ಎಲ್ ಎ ಗಳ ಸ್ವಾಭಿಮಾನದ ಹಿಂಗಡೆಯಿಂದಿಣುಕುತ್ತಿರುವ ದುರಭಿಮಾನಗಳು.

ಒಬ್ಬ ಸದಸ್ಯರು ವೋಟಿನ ಗುರುತು ಹಾಕದೇನೇ ಮತಪತ್ರಿಕೆಯನ್ನು ಖಾಲಿಯಾಗಿಯೇ ಪೆಟ್ಟಿಗೆಯೊಳಗೆ ಹಾಕಿದ್ದರಂತೆ. ವೋಟು ಹಾಕುವದರಲ್ಲಿ ಗೀಟು ಹಾಕುವದೂ ಬರುತ್ತದೆ ಎಂದವರಿಗೆ ಗೊತ್ತಿರಲಿಲ್ಲವೇನೋ! ಇನ್ನು ಆ ಇಡೀ ವಾರದಲ್ಲಿ ವೋಟು ಹಾಕುವ ಶಿಕ್ಷಣ ಪಡೆದ ಸದಸ್ಯರೂ ಇದ್ದಿರಬಹುದು. ಬೇರೆ ವಿಧದ ಯೋಗ್ಯತೆಗಳೂ ಆ ಸಭೆಯಲ್ಲಿ ಪ್ರದರ್ಶಿಸಲ್ಪಟ್ಟಿವೆ ಕೇರಳ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಮಾಧವ ಮೆನೊನರು ಶ್ರೀ. ಮುತ್ತುರಂಗಮುದಲಿಯಾರರ ಉಮೇದ್ವಾರಿಕೆಯನ್ನು ಅನುಮೋದಿಸಿದವರು. ಪ್ರಕಾಶಮರು ಗೆದ್ದೊಡನೆ ಶ್ರೀ. ಮೆನನರು ಅವರೊಡನೈಬೇಡಿಕೊಂಡರು. "ಶ್ರೀ. ಮುತ್ತುರಂಗ ಮುದಲಿಯಾರರನ್ನು ಅನುಮೋದಿಸುವಾಗ ನನಗೆ ಬಹಳ ಸಂಕಟವಾಗಿತ್ತು. ನಾನು 1921ರಿಂದಲೂ ಪ್ರಕಾಶಮರ ಅನುಯಾಯಿಯಾಗಿದ್ದು ಕೆಲಸಮಾಡಿದ್ದೇನೆಂಬುದು ಅವರಿಗೆ ಗೊತ್ತಿದೆ. ಈ ದಿನ ನಾನೆಂತಹ ಪರಿಸ್ಥಿತಿಗೊಳಗಾಗಿ ಹೀಗೆ ಮಾಡಿದೆನೆಂಬುದನ್ನೂ ಅವರು ಬಲ್ಲರು. (ಪ್ರಕಾಶಮರ ಮುಖ ನೋಡಿ) ಸ್ವಾಮೀ, ನಾನು ಹಿಂದಿನಂತೆಯೇ ನಿಮ್ಮ ವಿನೀತ ಅನುಯಾಯಿಯಾಗಿ ಮುಂದಕ್ಕೂ ಬಾಳುತ್ತೇನೆ". ಪಾಪ! ಅವರಿಗೆ ಮಂತ್ರಿಪದವಿಯ ಆಸೆಯಿದ್ದಿರಬೇಕು. ಇಷ್ಟುಪ್ರಾರ್ಥಿಸಿಕೊಂಡವರ ಕೈಬಿಡುವವರು ಪ್ರಕಾಶಮರಲ್ಲ. ಇನ್ನು ಹಂಗು, ದಾಕ್ಷಿಣ್ಯ, ಸ್ವಾರ್ಥಮಯ್ಯ ದೂರದೃಷ್ಟಿಗೊಳಗಾದವರೆಷ್ಟು ಮಂದಿಯೊ? ರಾಜಾಜೀ ನಾಯಕತ್ವ ಸಂಬಂಧದ ಕಾಂಗ್ರೆಸ್ ವರಿಷ್ಠರ ಸಲಹೆಯಮೇಲೆ ಮೆಂಬರರು ಬಹಿರಂಗ ಮತದಾನ ಮಾಡಬೇಕಾಗಿತ್ತು. ಆದ್ದರಿಂದ ಗಾಳಿಬೀಸಿದತ್ತ ತೇಲಿಹೋಗದೆ ಕೆಲವರಿಗೆ ನಿರ್ವಾಹವಿರಲಿಲ್ಲ. ಪ್ರಕಾಶಮ್-ಮುದಲಿಯಾರ್ ಚುನಾವಣೆ ಗುಪ್ತ ಮತದಾನದ ಮೂಲಕ ನಡೆಯಿತು. ಆದ್ದರಿಂದ ಗೆದ್ದವರಿಗೇನೇ ಮತಕೊಟ್ಟಿದ್ದೆವೆನ್ನಲು ಕೆಲವರಿಗನುಕೂಲವೂ ದೊರೆಯಿತು.

ಮಂತ್ರಿ ಮಂಡಲ ರಚನೆಯಕುರಿತು ಶ್ರೀ ಪ್ರಕಾಶಮರು ಕಾಂಗ್ರೆಸ್ ವರಿಷ್ಠರಿಂದ ಸಲಹೆ ಕೇಳಿದ್ದಕ್ಕೆ 'ನಾಯಕ ಚುನಾವಣೆಯ ಕುರಿತು ನಾವು ಕೊಟ್ಟ ಸಲಹೆಗೆ ಬೆಲೆಬಾರದ್ದರಿಂದ ಇನ್ನು ನಿಮಗೆಕೊಡುವ ಸಲಹೆ ನಮ್ಮಲ್ಲಿಲ್ಲ' ಎಂಬಉತ್ತರಬಂದಿದೆ. ಶ್ರೀ. ಪ್ರಕಾಶಮರು ಕೇಳಿದ್ದೇ ತಪ್ಪು (ಅಥವಾ ಕೇವಲ ಉಪಚಾರಕ್ಕೆಮಾತ್ರ) ಹೊರತು ಅವರು ಹಾಗೆ ಹೇಳಿದ್ದು ತಪ್ಪಲ್ಲ. ರಾಜಾಜಿಯ ಸಮರ್ಥಕರು ಪ್ರಕಾಶಮ್ ಮಂತ್ರಿ ಮಂಡಲದಲ್ಲಿ ಸೇರಲು ನಿರಾಕರಿಸಿದ್ದಾರೆ; ಮಿಕ್ಕವರಲ್ಲಿ ಕೆಲವರು ಪದವಿಯಾಸೆಯಿಂದ ಬಾಯಿ ನೀರೂರಿಸುತ್ತಿರಬಹುದು. ಕಾಂಗ್ರೆಸ್ ಅಧಿಪತಿಗಳ ಅಸಹಕಾರದಿಂದಾಗಿ ತಮಿಳುನಾಡಿನ ಕಾಂಗ್ರೆಸ್ ಎಂ. ಎಲ್. ಎ, ಗಳೆಲ್ಲಾ ಪ್ರಕಾಶಮ್ ಮನೋವೃತ್ತಿಗಿಂತ ದೂರ ಹೋಗಹತ್ತಿದ್ದಾರೆ. ಏನೇಆದರೂ ಮದ್ರಾಸನ್ನು ಕಾಂಗ್ರೆಸ್ ಸರಕಾರವು ಆಳಲಿದೆ. ಆ ಸರಕಾರವೂ, ಕಾಂಗ್ರೆಸ್ ಅಧಿಪತಿಗಳೂ, ಜನತೆಯೂ ಮದ್ರಾಸ್ ಗೊಂದಲಗಳಿಂದ ಕಲಿಯಲೇ ಬೇಕಾದ ಒಂದು ಮುಖ್ಯ ಪಾಠವೆಂದರೆ 'ಭಾಷಾವಾರು ಪ್ರಾಂತ್ಯ ರಚನೆಯಾಗಲೇಬೇಕು'.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನು ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲಿ ಸಂಗ್ರಿ ಬರದಲ್ಲಿ ರೋಗಗಳಿಗೆ ತಕ್ಕ ಔಷಧ ರವಾನಿಸಬಹುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರಾಗಿ ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,

ನವಯುಗ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣ ವ್ಯಾಪಾರಾಲಯ,

ರಥಬೀದಿ, ಉಡುಪಿ.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.

THE BHARATH MILLS, Ltd.

With

Dr. T. M. A. Pai, M. B., B. S.
Koohikar Panduranga Pai, Esq.
A. L. N. Rao, Esq., B. A., B. L.
Dr. K. L. Aithala, M. B., B. S.
T. N. Kelu Nambiar Esq.
Dr. V. K. Ballal, L. I. M.
T. Ramesh U. Pai, Esq

Upendra Ananth Pai, Esq.
Dr. K. L. Aithala, M. B., B. S.
A. L. N. Rao, Esq., B. A., B. L.
Koobikar Manjunath Pai, Esq.
Kalsank Venkatraya Pai, Esq.
B. Padmanabha Pai, Esq.
T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. U. Shetty at the Navayuga Press, Udipi, S. India.

Regd No. M. 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪಿತ

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ವರ್ಷ ೨೫ ವಾರ ೩೬] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder. SRI A. B. SHETTY. M. L. A. [Vol. 25 No. 36

ಉಡುಪಿ • 9-5-1946 • ಮಂಗಳೂರು.

ಅಮೃತಾಂಜನ, ಶರೀರದಲ್ಲಿ, ತಲೆ, ತೊರದ, ಉಳುಕು, ಕತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು. ...

ಅಮೃತಾಂಜನ ಲಿಮಿಟೆಡ್.

ಮದರಾಸು.

ಕೊಂಬಾಯಿ ಮತ್ತು ಕಲ್ಕತ್ತಾ.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ.

ಮಾಲಕರು:— **ಹಾಲಪ್ಪ ಫಕೀರಪ್ಪ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ:— ಕುಂಟಬಸಪ್ಪ ಸ್ಟೋರ್. ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಾಡದಾಳ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

THE

Bombay Life Assurance Company Ltd.

(*ESTD.* 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including

Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at.—

MADRAS * BANGALORE * MADURA * CALICUT TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ಪಾಯಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಯ, ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L I M; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಆರಂಭಗೊಂಡ ಆರನೆ ಹುಟ್ಟುಹಬ್ಬದ ಶುಭಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಹನ್ನೊಂದು ಬಹಿರಂಗ ಪತ್ರಗಳು

'ಹೆಪ್ಪಿ'ಯಿಂದ

ಶ್ರೀ. ಟಿ. ಪ್ರಕಾಶಮರಿಗೆ

ಬಹುಮಾನಪಟ್ಟ ಪ್ರಧಾನ, ಸಾರ್ವಜನಿಕ, ಪೋಲೀಸ್, ಆಹಾರ, ಮತ್ತು ಅರ್ಥ ಖಾತೆಗಳ ಮಂತ್ರಿಗಳೇ—

ಸ್ವಾಮಿ! ಬೇರೆ ಹನ್ನೆರಡು ಮಂದಿಯನ್ನು ಕಟ್ಟಿಕೊಂಡೂ ಈ ಪ್ರಾಯದಲ್ಲಿ ಒಬ್ಬರೇ ಇಷ್ಟು ಖಾತೆಗಳ ಕೆಲಸವಾದ ಬೇಕಾಗಿ ಬಂತೆ? ಸ್ವಾನುಭವವಿಲ್ಲದಿದ್ದರೂ ತಾವು ತುಸು ಮುಂಗೋಪಿಯೆಂದು ಕೇಳಿ ಬಲ್ಲೆ. ಮುದುಕರ ಮುಂಗೋಪವನ್ನೂ ತಜ್ಞ ಡಾಕ್ಟರರು ರೋಗಗಳ ವರ್ಗಕ್ಕೆ ಸೇರಿಸುತ್ತಾರೆ ಆದರೆ ಆರೋಗ್ಯ ಖಾತೆ ತಮ್ಮ ಕೈಯಲ್ಲಿಲ್ಲದಿದ್ದರೂ ಪೋಲಿಸ್ ಖಾತೆಯಿದೆ. ಮುಖ್ಯತಃ ಆಹಾರ ಖಾತೆಯನ್ನು ನೀವೇ ಹಿಡಿದುಕೊಂಡಿದ್ದೀರಿ. ಆಹಾರಾಭಾವದ ಈ ಕಾಲದಲ್ಲಿ ಜನರಲ್ಲೂ ಮುಂಗೋಪ ಜಾಸ್ತಿ. ನೀವು ನಿಮ್ಮ ಸಿಟ್ಟನ್ನು ನುಂಗಿಕೊಂಡು, ನಿಮ್ಮ ಪ್ರಜೆಗಳೆಲ್ಲಾ ಇತರರ ಸಿಟ್ಟನ್ನು ಅವರವರೇ ನುಂಗಿಕೊಳ್ಳುವಂತೆ ಮಾಡಿ, ಸದ್ಯದ ಅಭಾವ ನಿವಾರಣೆಯಾಗುವಂತೆ ನೋಡಿರಿ. ಬೇರೇನು ಸಮಾಚಾರವಿಲ್ಲವಷ್ಟೆ? ತ್ಯಾಕವಾಂನಿಂದ ಆ ಮೇಲೇನಾದರೂ ತಂತಿ, ಪತ್ರಗಳು ಬಂದಿದ್ದರೆ ದಯವಿಟ್ಟು ತಿಳಿಸೋಣಾಗಲಿ ದಕ್ಷಿಣಕನ್ನಡ ಜಿಲ್ಲೆಯ ಪರಿಚಯ ತಮಗಿದೆಯೇ? ಶ್ರೀಕಾರಂತರನ್ನು ಪಡೆದ ಜಿಲ್ಲೆ, ಬೇರೇನೂ ವಿಶೇಷವಿಲ್ಲ.

ವಿ. ಸೂ—ಇನ್ನಿಬ್ಬರು ಹೊಸ ಮಂತ್ರಿಗಳನ್ನು ನೇಮಿಸಿಕೊಳ್ಳಲಿರುವಿರಷ್ಟೆ? ಅಂತೆಯೇ, ಅವರಲ್ಲೊಬ್ಬನಿಗಾಗಿ 'ಶಿಸ್ತು ಸಂಬಂಧ ಖಾತೆ'ಯೊಂದನ್ನು ಹೊಸತಾಗಿ ನಿರ್ಮಿಸಿಕೊಂಡರಾಗದೇ? ಸದ್ಯಸ್ಥಿತಿಯಲ್ಲಿ ಅದು ಅಗತ್ಯ. ಇನ್ನು ತಮ್ಮ ಚಿತ್ತ

ಇತಿ ತಮ್ಮ, ಆರೋಗ್ಯಾಕಾಂಕ್ಷಿ

—ಹೆಪ್ಪಿ

— ೨ —

ಶ್ರೀ ವಿ. ವಿ ಗಿರಿ, ಇವರಿಗೆ

ಬಹುಮಾನಪಟ್ಟ, ಕೈಗಾರಿಕೆ, ಕೆಲಸ, ವಿದ್ಯುತ್ ಶಕ್ತಿ, ಸಹಕಾರ, ಯೋಜನೆ, ಜಂಗ್ಲಿ ಸಿಂಕೋನ ಖಾತೆಗಳ ಮಂತ್ರಿಗಳೇ,

ಹೆಸರುವಟ್ಟಿಯೊಪ್ಪಿಸಲು ಪ್ರಧಾನ ಮಂತ್ರಿಯೊಂದಿಗೆ ತಾವೂ ಗವರ್ನರರಲ್ಲಿಗೆ ಹೋಗಿದ್ದಿರೆಂದು ಕೇಳಿದೆ. ಹಾಗೆಯೇ ಕೊನೆಯವರೆಗೂ ಅವರೊಂದಿಗೇನೇ ಇದ್ದು ಬಿಡಿ. ಯಜಮಾನರು ಉರುಗೋಲಿಲ್ಲದೆ ನಡೆಯಲಾಗುವ ಪ್ರಾಯದಲ್ಲಿಲ್ಲ. ಇರಲಿ; ಸದ್ಯ ಪಕ್ಷದ ನಾಯಕತ್ವವು ಶ್ರೀ. ಪ್ರಕಾಶರ ಬಳಿಯದ್ದರೂ, ಇನ್ನು ಮುಂದಕ್ಕೆ ನಡೆಯುವ ಕಾಂಗ್ರೆಸ್ ಪಕ್ಷದ ಸಭೆಗೂ ತಾವೇ ಅಧ್ಯಕ್ಷನಾಗಬೇಕೆಂದು ಈ ಮೂಲಕ ಸೂಚಿಸುತ್ತೇನೆ. ಶ್ರೀ ಕುಮಾರ ರಾಜರು ನಿಮ್ಮನ್ನು ಅನುಮೋದಿಸುವರೆಂದು ನಂಬುತ್ತೇನೆ. ಶ್ರೀ ಕಾರಂತರ ಸಹಕಾರ ಪಡೆದು ಪಶ್ಚಿಮ ಘಟ್ಟದ ಸಿಂಧುವನಗಳನ್ನು ಇದಕ್ಕನ ಗುಣವಾಗಿ ತಿದ್ದುಪಡಿ ಮಾಡಿಸಿಕೊಳ್ಳಿ. ಅದಿರಲಿ, ತಮ್ಮ ಹಸ್ತಕ್ಕೆ ಜಂಗ್ಲೀಖಾತೆಯೂ ಬಂದಿದೆ ತಾನೆ? ಆ ಸುದ್ದಿ ಪತ್ರಿಕೆಯಲ್ಲಿ ಬಂದ ದಿನ ಅದನ್ನೋದಿದ ನನ್ನ ಮಿತ್ರರೊಬ್ಬರು ತಲೆಯಾಡಿಸಿ 'ತಾ, ಅಯ್ಯೊಲ್ಲಿಗ ಕಾಡು ಗಿರಿಯಲ್ಲಾಯಿತು' ಎಂದು ನಿಟ್ಟುಸಿರುಬಿಟ್ಟರು. ಸೊಪ್ಪು ತರಲಿಕ್ಕಾಗದಷ್ಟು ದೂರದ ಗಿರಿಯಲ್ಲಿ ಕಾಡಿದ್ದುದನ್ನು ಕಂಡ ರೈತನಂತ ಆಡಿಬಿಟ್ಟರವರು. ರೈತನ್ನಾರೀ ಸಂಬಂಧದ ಅಧಿಕಾರವಿದ್ದವರಿಗೇನೇ ಅರಣ್ಯಖಾತೆಯೂ ಸೇರಬೇಕಿತ್ತು ಎಂದವರ ಅಭಿಪ್ರಾಯ

ವಿ. ಸೂ —ದಯವಿಟ್ಟು ಪ್ರಕಾಶಮರ ಮತ್ತು ತಮ್ಮ ಹೆಗಲುಗಳ ಉದ್ದ ಅಗಲವೆಷ್ಟೆಂಬುದನ್ನು ಮದ್ರಾಸಿನ ತಜ್ಞ ದರ್ಜಿಯೊಬ್ಬನಿಂದ ಅಳತೆಮಾಡಿ ತಿಳಿಸಬಹುದೆ? ಇದ್ದ ಖಾತೆಗಳಲ್ಲಿ ಹೆಚ್ಚಿನವು 11 ಖಾತೆಗಳು ನಿಮ್ಮಿಬ್ಬರ ಹೆಗಲ ಮೇಲೇರಿರುವದರಿಂದ ಆ ಕತೆ ಬೇಕಾಯಿತು. ಬೇಸರಿಸಬೇಡಿ. ಮತ್ತೊಂದು ವಿಚಾರ ಜಂಗ್ಲಿ ಖಾತೆ ತಮ್ಮ ಕೈಗೆ ಬಂತಷ್ಟೇ ಇದು ವರೆಗಿದ್ದ 'ಜಂಗ್ಲೀ ಕಾನೂನು' ತಮ್ಮ ಪೈಕಿ ಯಾರ ಕೈಗೂ ಬರಲಿಲ್ಲ ತಾನೆ

ಇತಿ ತಮ್ಮ ಸುಖಾಭಿಲಾಷಿ,

—ಹೆಪ್ಪಿ.

— ೩ —

ಶ್ರೀ. ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯವರಿಗೆ

ಬಹುಮಾನಪಟ್ಟ ವಿದ್ಯಾಮಂತ್ರಿಗಳೇ,

ಪರಿತರುವಾಯ ತಮ್ಮವರದ ಅಧ್ಯಾಪಕರುಗಳನ್ನು ಕಳೆದ ಮೂರು ನಾಲ್ಕು ವರುಷಗಳಿಂದ ಪೀಡಿಸುತ್ತಿರುವ ಕಾಯಿಲೆ ಇನ್ನೂ ಗುಣವಾಗುವ ಲಕ್ಷಣ ಕಾಣುವದಿಲ್ಲ ಬೊಂಬಾಯಿ ಕಾಂಗ್ರೆಸ್ ಮಂತ್ರಿಗಳು ಮಾಡಿದಂತೆ ತಾವೂ ಮಾಡುವಿರೆಂಬೊಂದು ಆಶೆಯಿಂದ ಅವರಿದುವರಗೂ ಜೀವದಿಂದಿರಲೊಪ್ಪಿದ್ದರೆ, ಇನ್ನು ತಮ್ಮ ಕೈಯಲ್ಲಿ ಪ್ರಾಣ ಬಿಡಲಾರರಷ್ಟೆ' ಮುಕ್ತ ವಿಚಾರ ಹಿಂದಿನಿಂದ

ವಿ. ಸೂ.—ಗಣೇಶಾಭ್ಯಾಸ ಮಾಡಿಸಿದ್ದ ಶಿಷ್ಯಗೆ ಕಾಂಗ್ರೆಸ್ ಮಂತ್ರಿಗಳಾದರೂ ತಮಗೆ ಗ್ರಾಂಟು ಮಂಜೂರು ಮಾಡುವರೆಂದು ನಮ್ಮ ತಾಳಿದಯ ಪಟ್ಟಣವಾಲರ ನಿರೀಕ್ಷೆಯಿದೆ ಜನ ಪ್ರತಿನಿಧಿಗಳಾದ ತಾವು ಬಹು ಸಂಖ್ಯಾಕ ಜನತೆಯನ್ನು ನಿರಾಶೆಗೊಳಿಸಲಾರಿರೆಂದು ನಂಬಿದ್ದೇನೆ

ಇತಿ ತಮ್ಮ ಆಶೀರ್ವಾದಾಕಾಂಕ್ಷಿ,

—ಹೆಪ್ಪಿ.

೪

ಶ್ರೀ ಪಿ. ಎಸ್. ಕುಮಾರ ಸ್ವಾಮಿ ರಾಜರಿಗೆ

ಬಹುಮಾನಪಟ್ಟ ಡೆವಲಪ್‌ಮೆಂಟ್ ಮಂತ್ರಿಗಳೇ—

ಹೊಸದಾಗಿ ತಮ್ಮ ಪರಿಚಯಮಾಡಿಕೊಳ್ಳಲು ಆನಂದ ಪಡುತ್ತೇನೆ ತಮ್ಮಗಳ ಹೆಸರ ಮುಂದೆ 'ರಾಜಾ' ಎಂದಿದ್ದರೂ ತಾವೀಗ ಮದ್ರಾಸ್ ಮಂತ್ರಿಯಾದ್ದರಿಂದ ಡೆವಲಪ್ (ಅಭಿವೃದ್ಧಿ) ಆದುದು ನಿಜ ಮಹಾತ್ಮಾ ಗಾಂಧಿಯ ಸೂಚನೆ ತಿರಸ್ಕರಿಸಿದರೂ, ಮಹಾತ್ಮ ಕ್ರಿಸ್ತರ ಸೂತ್ರವಾದ 'ನಿನ್ನಂತೆ ಪರರನ್ನು ನೋಡು' ಎಂಬೊಂದನ್ನಾದರೂ ಸ್ವೀಕರಿಸಿ, ತಮ್ಮಂತೆಯೇ ನಮ್ಮನ್ನೂ ಅಭಿವೃದ್ಧಿ ಪಡಿಸಿಬಿಡಿ.

ವಿ. ಸೂ.—ತಾವೆಷ್ಟು ತೀರ್ವ ಕತ್ತು 'ರಾಜ'ರಾದವರು ನಮ್ಮಲ್ಲಿ ೨ ಮುಡಿ ಹಟ್ಟುವಳ್ಳಿಯಿರುವವನು ಕೂಡಾ 'ಜಮೀನ್ದಾರ್' ಎಂಬ ವಿಳಾಸವಿರದ 'ಚೆಕ್' ಒಂದರೂ ಅಂಗೀಕರಿಸಲೊಪ್ಪುವದಿಲ್ಲ. ಇದನ್ನೇನಾದರೂ ತಿದ್ದುವ ಉಪಾಯವಿದೆಯೇ? ಪರಿಶೀಲಿಸೋಣಾಗಲಿ

ಇತಿ ತಮ್ಮ ಚಿರೈಶ್ವರ್ಯಾಕಾಂಕ್ಷಿ,

ಹೆಪ್ಪಿ

— ೫ —

ಶ್ರೀ ಕೆ ಭಾಷ್ಯಂ ಅವರಿಗೆ,

ಬಹುಮಾನಪಟ್ಟ ಮಾನ್ಯ ಕಾನೂನು ಮಂತ್ರಿಗಳೇ—

ಕೋರ್ಟು ಮತ್ತು ಜೈಲುಗಳ ಬೀಗದ ಕೈ ನಿಮ್ಮ ಕೈಗೆ ಬಂದದ್ದನ್ನು ನೋಡಿ, ಹೇಗೆ ಬರೆದರೂ ಅಪಾಯವಿಲ್ಲವೆಂಬ ಧೈರ್ಯದಿಂದಿದನ್ನು ಬರೆಯುತ್ತಿದ್ದೇನೆ. ಸುಭಾಸ್ ಸೇನಾ ಸೈನಿಕರಿಗಾಗಿ ನವದಿಲ್ಲಿಯಲ್ಲಿ ಚರಿತ್ರಾರ್ಹವಾದ ಹೊಡೆದ್ದ ಶ್ರೀಮಾನ್ ಭುಲಾಭಾಯಿಗಳು 'ಸಿನ್ನೆಯೋ—ಇಂದೋ' ಎಂಬಷ್ಟು ಕಠಿಣ ಕಾಹಿಲೆಯಲ್ಲಿರುವುದನ್ನು ಕಂಡ ಕೆಲವು ವಕೀಲರುಗಳು ಐ. ಎನ್. ಎ, ಕೇಸುಗಳನ್ನು ಸ್ವೀಕರಿಸಲಿಕ್ಕೇನೇ ಒಪ್ಪುವುದಿಲ್ಲವಂತೆ ಆದರೆ ಅದೇ ಕೆಲಸಕ್ಕಾಗಿ ಮಲಯದತ್ತ ಹೋಗಿ ಬಂದ ತಾವು ಮಂತ್ರಿಗಳಾದ್ದರಿಂದ, ವಿಚಾರಣೆ ಬಾಕಿಯಿರುವ ಸುಭಾಸ್ ಸೈನಿಕರಿಗೆಲ್ಲಾ ಆನಂದವಾಗಿದೆಯಂತೆ ಅದು ಹಾಗಿರಲಿ; ತಮ್ಮ ಕಾರ್ಯಭಾರವನ್ನು ವಿಮರ್ಶಿಸಬೇಕಾದರೆ ಕೋರ್ಟು ಮತ್ತು ಜೈಲಿಗೆ ಹೋಗಿ ನೋಡಿಕೊಳ್ಳಬೇಕೋ? ಅಥವಾ ವಿಮರ್ಶಿಸಿದ ನಂತರ ಹೋದರೆ ಸಾಕೋ

ವಿ. ಸೂ.—ಒಮ್ಮೆ ಕನ್ನಾನೂರಿಗೆ ಹೋಗಿ ಬರುವಿರಾ?

ಇತಿ ತಮ್ಮ, ಆಶ್ರಯಾಭಿಲಾಷಿ,

ಹೆಪ್ಪಿ



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಔಷಧ ದಮ್ಮನ್ನು ಒಡನೇ ಮರುಕಳಿಸದಂತೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ಕ್ಷೀಣ ನಿಲ್ಲುವದು, ಹೊಟ್ಟೆ, ಪಚನಶಕ್ತಿಯೂ ತಿದ್ದುವದು, ಶ್ವಾಸನಗಳು ಗಟ್ಟಿಯಾಗುವುವು ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ಕ್ಷಯ, ಬೆನ್ನು ನೋವು ಗಂಟಲು ಒರೆಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಬಿಳಿ ಪ್ಯಾಕಿಂಗ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿ ಕ್ರಮವಾಗಿ ರೂ ೩-೪-೦, ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು, ಟಿ ಸ್ವಿನಿವಾಸನ್ & ಕೊ ಮೈಸೂರು.

ಮುಂಬಯಿ ಸೋಲ ಏಜಂಟರು—

ವನಮಾಲೀ ಭಟ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್,

ಮುಂಬಯಿ ೨.

PUROHIT SHWAS-HARI

CANARA BANK LIMITED

Estd 1906

(Incorporated in British India, liability of Members Limited)

SEASON DEPOSITS.

of Rs 10000 - and over in multiples of Rs. 1000/- and maturing within 30th September 1946 are now accepted at the following rates:—

3 months	...	2¼%
4 to 5 months	...	2½%
6 to 9 months	.	2¾%

Rates for Season Deposits of less than Rs 10000/- with a minimum of Rs 1000/- and in multiples of Rs 500/- may be ascertained on application to our nearest branch

— ೬ —

ಶ್ರೀ ಎಮ್. ಭಕ್ತವತ್ಸಲಮ್‌ರಿಗೆ

ಬಹುಮಾನಪಟ್ಟ ಸಾರ್ವಜನಿಕ ಕಾರ್ಯ ಖಾತೆಯ ಮಂತ್ರಿಗಳೇ—

ನೀರಾವರಿ ಮತ್ತು ರಸ್ತೆಗಳ ಅಧಿಕಾರ ವಹಿಸಿರುವ ತಮ್ಮ ಜವಾಬ್ದಾರಿಯು ತಾವು ಊಹಿಸಿರುವದಕ್ಕಿಂತಲೂ ದೊಡ್ಡದೆಂದು ನಾನು ನಿವೇದಿಸಿಕೊಂಡರೆ ನಂಬುವಿರಾ? ಸದ್ಯ ಹೆಚ್ಚಿನವರ ಚಿಂತನೆಯಲ್ಲಿರುವದು ತಮ್ಮ ಖಾತೆಯೊಂದೇ-ಕಾರು, ಲೋರಿ, ಬಸ್ಸುಗಳಡಿಗೆಬಿದ್ದು ಸಾಯಲೋ, ನೀರಿಗೆ ಬಿದ್ದು ಸಾಯಲೋ ಎಂಬುದೇ. ರೇಶನ್ ಅಕ್ಕಿಗಿಂತ ಹೆಚ್ಚಿಗೆ ಧೂಳಿಟ್ಟನ್ನು ತಿನ್ನುವ ನಮ್ಮ ಮುನಿಸಿಪಾಲಿಟಿಯು ಜನರಿಗಂತೂ ರಸ್ತೆ ಮತ್ತು ನೀರು ಒಂದೇ ಖಾತೆಗೆ ಸೇರಿದುದನ್ನು ಕಂಡು ಆಶೆ ಮೊಳೆತಿದೆ. ಅಭ್ಯಾಸಬಲದಿಂದ 'ತಮ ರಸ್ತೆಯಲ್ಲಿ ಬೀಳುವ ಬುದ್ಧಿ'ಎಂದು ಬೈದರೆ ಮಾನ್ಯರಾದ ತಮಗಡುಮುಟ್ಟುವದೆಂದು ನಾನು ಇತ್ತರಲ್ಲೀ ಹಲವರನ್ನು ಎಚ್ಚರಿಸಿದ್ದೇನೆ; ಪ್ರೀತಿಯಿರಲಿ.

ವಿ. ಸೂ.—ಆಗುಂಬೆಘಾಟಿ ಮಾರ್ಗವಾಗಿ ಕೆಲವು ಕೆರೆ, ಕಟ್ಟೆ, ಕಾಲುವೆಗಳನ್ನುನೋಡುತ್ತಾ ಕಿನ್ನಿಮೂಲ್ಕಿ ರಸ್ತೆಯಿಂದ ಈ ಕಡೆಗೊಮ್ಮೆ ದಯಮಾಡಿಸುವಿರಾ?

ಇತಿ ತಮ್ಮ ಶುಭಾನುಯಾಯಿ,

—ಹೆವ್ವಿ

— ೭ —

ಮಿ. ಡೇನಿಯಲ್ ಥೋಮಸರಿಗೆ

ಬಹುಮಾನಪಟ್ಟ ಸ್ಥಳೀಕ ಸಂಸ್ಥೆಗಳ ಮಂತ್ರಿಗಳೇ—

ನನ್ನಲ್ಲೊಂದು ಅಶುಭ ಊಹೆಯಿದ್ದಿದೆ. ತಾವುಗಳೆಲ್ಲಾ ಕಾಂಗ್ರೆಸ್ ಹೈಕಮಾಂಡಿನ ಸೂಚನೆಯನ್ನು 'ಸ್ಥಳೀಯ ಸ್ಥಿತಿಗತಿಗಳಲ್ಲಿ ಮೇಲಧಿಕಾರಿಗಳು ಕೈ ಹಾಕುವದು ಅಧಿಕ ಪ್ರಸಂಗ' ಎಂದು ತಿರಸ್ಕರಿಸಿದ್ದಿರಷ್ಟೆ? ಪೇಪರುಗಳನ್ನಲ್ಲದೆ ಊರನ್ನ . . . ಅಭ್ಯಾಸವೇ ಇರದ ನಮ್ಮ ಸ್ಥಳೀಯ ಸಂಸ್ಥೆಗಳ ಅಧಿಕಾರಗಳೆಲ್ಲಾ ಈ ವಾರ್ತೆಯನ್ನು ಊದಿಕೊಂಡದ್ದರಿಂದ ಇದೇ ಸ್ಫೂರ್ತಿ ಅವರೊಳಗಡೆಗೆ ಸೇರಿ ಹೋಗಿದೆಯಂತೆ. ಅಲ್ಲಿಂದ ತಾವು ಕೈ ಹಾಕುವದು ಅವರಿಗೂ ಅಸಹ್ಯವಾಗಿದೆಯಂತೆ. ತಮ್ಮ ಅವಗಾಹನೆಗೆ ತರಬೇಕೆಂದನ್ನಿಸಿತು; ಅಷ್ಟೆ.

ವಿ. ಸೂ.—ನಮ್ಮ ಜಿಲ್ಲಾ ಬೋರ್ಡ್ ಮತ್ತುಮುನ್ಸಿಪಾಲಿಟಿಗಳ ಮರುಚುನಾವಣೆಯಿದ್ದರೆ ಹನ್ನೆರಡು ಘಂಟೆಗಳಿಗೆ ಮುಂಚಿತವಾಗಿ ತಿಳಿಸಿದರೂ ಸಾಕು.

ಇತಿ ತಮ್ಮಸ್ಥಳಾಭಿಮಾನಿ.

ಹೆವ್ವಿ.

— ೮ —

ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರಿಗೆ.

ಬಹುಮಾನಪಟ್ಟ ಆರೋಗ್ಯ ಖಾತೆಯ ಮಂತ್ರಿಗಳೇ

ದಯವಿಟ್ಟು ತಮ್ಮ ಸಹವ್ಯವಸಾಯೀ ಮಂತ್ರಿಗಳೆಲ್ಲರ ಕಡೆಗೂ ಲಕ್ಷ್ಯವಿರಲಿ; ಮದ್ರಾಸಿನ ರಾಜಕೀಯವೇ ಅನಾರೋಗ್ಯ ಸ್ಥಿತಿಗಿಳಿದಿದೆ ಎಂದು ಕೆಲವರನ್ನುತ್ತಾರೆ. ಮತ್ತೊಂದು ಮಾತಿದೆ ಅಮ್ಮಾ, ಏನೇ ಮಾಡಿದರೂ ಈ ವರುಷ ಆಹಾರ ಧಾನ್ಯವು ಸಾಕಷ್ಟು ದೊರೆಯಲಾರದಾದ್ದರಿಂದ ಹಸಿವಿಗೇನಾದರೂ ಔಷಧವೇ ಬೇಕಾಗಿದೆ. ಆಯುರ್ವೇದಕ್ಕಾಗಿ ಬೇರು ಎಲೆಗಳನ್ನು ಹುಡುಕುವಾಗ ಅಂತಹದೇನಾದರೂ ದೊರೆತರೆ ಅಧಿಕೃತ ಪ್ರಕಟಣೆ ಕೊಟ್ಟುಬಿಡಿ.

ವಿ. ಸೂ.—ತಾವೀ ಬಾರಿ ಆಯುರ್ವೇದ ಕಾಂಗ್ರೆಸ್ಸಿಗಾಗಿ ಮಣಿಪಾಲಕ್ಕೆ ಬಂದುದು ನೆನಪಿದೆಯೆ? ಇಲ್ಲಿಯ ಹವೆಯಲ್ಲಿ 'ಮಂತ್ರೀ ಯೋಗ್ಯತೆ ಬರಿಸುವ ವಿಶೇಷ ಗುಣವಿದೆ' ಎಂದು ಜಾಹೀರುಪಡಿಸಲು ಅನುಮತಿ ಕೊಡುವಿರಾ?

ಇತಿ ತಮ್ಮ

ಅಪುನರ್ಭವಾನುಗ್ರಹಾಕಾಂಕ್ಷಿ.

ಹೆವ್ವಿ

— ೯ —

ಶ್ರೀ. ಕೋಟಿ ರೆಡ್ಡಿಯವರಿಗೆ

ಬಹುಮಾನಪಟ್ಟ ಎಂಡೋಮೆಂಟ್ ಮತ್ತು ಭೂಕಂದಾಯವಿರಹಿತ ಇತರ ಕಂದಾಯ, ತೆರಿಗೆ ಮಂತ್ರಿಗಳೇ,

ಮೂವತ್ತಮೂರು ಕೋಟಿ ದೇವತೆಗಳಿರುವ ಹಿಂದುಗಳ ದೇವಾಲಯಗಳ ಆಡಳಿತೆಗೆ ಕೋಟಿ ರೆಡ್ಡಿಗಳು ಬಂದುದರಿಂದ ಸುವ್ಯವಸ್ಥೆಯೊದೀತೆಂದು ಹೆಚ್ಚಿನವರ ನಿರೀಕ್ಷೆಯಿದೆ. ರೆಡ್ಡಿಯವರು ಬರುವ ಮೊದಲೇ ರೆಡಿಯಾಗಿದ್ದ ಮಠಗಳನ್ನು ಎಂಡೋಮೆಂಟಿಗೆ ಸೇರಿಸುವ ಶಾಸನವನ್ನು ರದ್ದು ಪಡಿಸಬೇಕೆಂದು ತಮಗೆ ಬಿನ್ನವತ್ತಳೆಗಳು ಬರಬಹುದು ಸದ್ಯ ತಮಗೆ ಮಾವಲ್ಲಂ; ತಮ್ಮ ಇಡೀ ಮಂತ್ರಿ ಮಂಡಲಕ್ಕೇನೇ ನಮ್ಮೆಲ್ಲಾ ದೇವರುಗಳ ದಯವೂ ಅಗತ್ಯವಿದೆ. ನಿಮ್ಮ ಮೇಲೆ ದೇವರು ದಯೆಯಿಡಬೇಕು, ದೇವರುಗಳ ಮಠ ದೇವಾಲಯಗಳ ಮೇಲೆ ನೀವು ದಯೆಯಿಡಬೇಕು- ವ್ಯಾಪಾರ ವಹಿವಾಟುಗಳ ಖಾತೆಯು ದೇರಿಲ್ಲವಾದ್ದರಿಂದ ಈ 'ಎಕ್ಸ್‌ಚೇಂಜ್' ವ್ಯವಹಾರವನ್ನು ತಾವು ಕೈಕೊಳ್ಳುವಿರೆಂದು ನಂಬುತ್ತೇನೆ

ವಿ. ಸೂ.—ಎಂಡೋಮೆಂಟಿಗೆ ಮಠಗಳನ್ನು ಸೇರಿಸಿಕೊಳ್ಳುವ ಶಾಸನವು ಮಠಗಳಂತಹ ಮನೆಗಳಿಗೆ–ಕೊನೆಯಪಕ್ಷ ಮಠಗಳಿಂದಲೇ ಆಗಿರುವ ಮನೆಗಳಿಗೆ–ಲಗಾವಾಗುವುದೇ ಎಂಬ ಕುರಿತು ಒಂದು ಅಧಿಕೃತ ಪ್ರಕಟಣೆ ಹೊರಡಿಸುವಿರಾ?

ಇತಿ ತಮ್ಮ ಪ್ರಸಾದಾಕಾಂಕ್ಷಿ,

ಹೆವ್ವಿ.

— ೧೦ —

ಶ್ರೀ. ವೆಮಲು ಕೂರ್ಮಯ್ಯನವರಿಗೆ-

ಬಹುಮಾನಪಟ್ಟ ಸಾರ್ವಜನಿಕ ವಾರ್ತಾ ಮಂತ್ರಿಗಳೇ—

ತಮ್ಮ ಖಾತೆಯೊಳಗೆ ಹಿಡಿಸಲಾರದಷ್ಟು ಸುದ್ದಿ ಊರು ತುಂಬಾ ಹಬ್ಬಿ ಹೋಗಿವೆ ಸ್ವಾಮೀ. ಆದ್ದರಿಂದ ತಮ್ಮಗಳ ಮಂತ್ರಿ ಮಂಡಲದ ಜಾತಕವನ್ನೊಮ್ಮೆ ಸ್ಪುಟವಮಾಡಿಸಿ,ಸರಿಯಾದ ಸುದ್ದಿ ಕೊಡುವಿರಾ? ಸದ್ಯ ಬೇರೇನು ಕೆಲಸಮಾಡುವಿರಿ? ನಮ್ಮಲ್ಲಿ, ಅಚಿಮನೆ ಈಚೀಮನೆ ವಾರ್ತೆಗಳ ಖಾತೆಗಳು, ಕತೆಗಳು, ಕಸ್ತೆಗಳು, ಕಂತೆಗಳು ಬೇಕಾದಷ್ಟಿವೆ. ಇವುಗಳಿಗೆಲ್ಲಾ ಮಂಜೂರಾತಿ ಕೊಡಬಹುದೆ?

ವಿ. ಸೂ.—ಇನ್ನೊಂದು ಶತಮಾನದಲ್ಲಾಗದಂತಹ ಸುದ್ದಿಗಳನ್ನು ಇಂದೇ ಹುಟ್ಟಿಸಬಲ್ಲ—ರಾತ್ರಿಯನ್ನು ಹಗಲು ಮಾಡಬಲ್ಲ-ಏಕ ವಾಕ್ಯದಿಂದ ನಾಲ್ಕು ಮನೆ ಮಾಡಬಲ್ಲ—ವಿಶೇಷ ಸುದ್ದಿತಜ್ಞರು ಕೆಲವರು ನಮ್ಮಲ್ಲಿದ್ದಾರೆ. ತಮ್ಮ ಕಾರ್ಯಾಲಯಕ್ಕೇನಾದರೂ ಸಹಾಯಕಿಯುಂಟೆ?

ಇತಿ ತಮ್ಮ ಸುವಾರ್ತಾಕಾಂಕ್ಷಿ,

ಹೆವ್ವಿ.

(೧೧ನೇ ಪುಟ ನೋಡಿರಿ)

'ಕಿರಿಯರ ಪ್ರಪಂಚ'ದ ಮೂರು ಪ್ರಕಟಣೆಗಳು.



ಆಧುನಿಕ ಕನ್ನಡ ಕವಿಗಳೂ ಉತ್ತಮ ಕತೆಗಾರರೂ ಆದ ಶ್ರೀ ಎಸ್. ವೆಂಕಟರಾಜರ ೨೦ ಕತೆಗಳ ಸಂಗ್ರಹ.

ಆಕಾಶಗಂಗೆ

ಹೃದಯವನ್ನು ಕುಲುಕಿಸುವ-ಕನ್ನಡ ವಾಙ್ಮಯಕ್ಷೇತ್ರವನ್ನೇ ಫಲಭರಿತವಾಡಲು ಪ್ರವಹಿಸಿದ ನೂತನ ಪ್ರವಾಹ ಬೆಲೆ ರೂ. ೧—೪—೦

ದಿನಕ್ಕೊಂದು ನಗೆ! ಆರೋಗ್ಯದ ಬಗೆ!!

ನಗುವಿನೊಂದಿಗೆ ವಿಚಾರದ ಕಿಡಿಯೂ ಬೆಳಗಬೇಕೆ? ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ ದಶಾವತಾರಗಳು

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ಣಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಎಂ ವಿ ಹೆಗ್ಡೆಯವರ ಕೃತಿ. ಬೆಲೆ 0—12—0.

ಭಾರತದಲ್ಲಿ ಜಾತಿಭೇದ

(ಆಚಾರ್ಯ ಕ್ಷಿತಿಮೋಹನ ಸೇನ್ ಶಾಸ್ತ್ರಿ, ಎಂ. ಎ., ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.)

ಜಾತಿಭೇದವು ಹೇಗುಂಟಾಯಿತು? ಅದರ ಇತಿಹಾಸವೇನು? ಎಂಬುವನ್ನೆಲ್ಲಾ ಸಮೂಲಾಗ್ರವಾಗಿ, ವೈಜ್ಞಾನಿಕವಾಗಿ ವಿಮರ್ಶಿಸುವ ಗ್ರಂಥ.

ಅನುವಾದಕರು—ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ. ಬೆಲೆ ರೂ. 1—0—0 ಮಾತ್ರ

ಪ್ರತಿಗಳು ಸಿಗುವ ಸ್ಥಳಗಳು:—1 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು 2 ವಿದ್ಯಾರ್ಥಿ ಬುಕ್ ಡಿಪೋ, ಉಡುಪಿ. 3 ಎ. ಎಸ್. ಸುಬ್ಬಣ್ಣ, ಪುತ್ತೂರು 4 ಸತ್ಯಶೋಧನ ಪುಸ್ತಕ ಭಂಡಾರ. ಬೆಂಗಳೂರು. 5 ಜೀವನ ಪುಸ್ತಕಾಲಯ, ಧಾರವಾಡ 6 ಸ್ವತಂತ್ರ ಭಾರತ ಬುಕ್ ಡಿಪೋ, ಬೊಂಬಾಯಿ. 7 ಚಿತ್ತರಂಜನ ಭವನ, ಉಡುಪಿ. 8. ಕೆ. ವಾಸುದೇವ ಪೈ. ಕುಂದಾಪುರ 9. ಸಾಹಿತ್ಯ ಭಂಡಾರ, ಹುಬ್ಬಳ್ಳಿ. 10. ವೆಂಕಟೇಶಯ್ಯ ಬ್ರದರ್ಸ್, ಶಿವಮೊಗ್ಗ. 11. ನ್ಯೂ ಸ್ಟೂಡೆಂಟ್ಸ್ ಸ್ಟೋರ್ಸ್, ಕುಮಟಾ. 12. ಭಕ್ತ ಬ್ರದರ್ಸ್, ಕಾಸರಗೋಡು 13. ಶ್ರೀ ಬಸವೇಶ್ವರ ಬುಕ್ ಡಿಪೋ, ದಾವಣಗೆರೆ.

ಅಲಿಘಾರಿನಲ್ಲಿ ಆದುದೇನು?

ಮುಸ್ಲಿಂ ಪುಂಡರ ಅಮಾನುಷ್ಯ ಅತ್ಯಾಚಾರ!

ಭಾರತೀಯ ಮುಸಲ್ಮಾನರ ಮನೋವೃತ್ತಿ ಹೇಗಿದೆಯೆಂಬುದನ್ನು ಕಾಲಾನುಗುಣವಾಗಿ ಪ್ರದರ್ಶಿಸುತ್ತಿರುವ ಛಾಯಾಯಂತ್ರದಂತಿದೆ, ಅಲಿಘಾರಿನ ಮುಸ್ಲಿಂ ವಿಶ್ವವಿದ್ಯಾನಿಲಯ. 1920ರ ಅಸಹಕಾರದ ಕಾಲದಲ್ಲಿ—ಗಾಂಧೀಜೀಯ ಎಡಬಲ ಭುಜಗಳಾಗಿ ಶೌಕತ್ ಅಲಿ, ಮಹಮ್ಮದಾಲಿಗಳಿದ್ದ ಆ ಸಮಯದಲ್ಲಿ-ಅಲಿಘಾರ್ ವಿಶ್ವವಿದ್ಯಾಲಯವು ರಾಷ್ಟ್ರೀಯ ಸ್ಫೂರ್ತಿಯ ಕೇಂದ್ರವಾಗಿತ್ತು, ಭಾರತದ ಮೂಲೆಮೂಲೆಗಳ ರಾಷ್ಟ್ರಾಭಿಮಾನೀ ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದಿತು. ಇಂದು ಅಲ್ಲಿಯ ವಿದ್ಯಾರ್ಥಿಗಳೆಲ್ಲಾ ಮುಸ್ಲಿಂ ಲೀಗಿನ ಜಾತೀಯ ಉದ್ರೇಕದ ಪ್ರತಿಮೂರ್ತಿಗಳೇ ಆಗಿದ್ದಾರೆ. ಕಳೆದ ಮಾರ್ಚಿ 29ರಲ್ಲಿ ಅಲೀಘಾರಿನ ಮುಸ್ಲಿಂ ವಿದ್ಯಾರ್ಥಿಗಳೂ ಮುಸ್ಲಿಂ ಪುಂಡರೂ ಸೇರಿ ರುದ್ರ ನರರಾಕ್ಷಸರಂತೆ ವರ್ತಿಸಿದ್ದರು. ಹಿಂದುಗಳನ್ನು ಜೀವಂತದಹನ ಮಾಡಿದ್ದರು. ಹಿಂದುಗಳ ಅಂಗಡಿಗಳನ್ನು ಲೂಟಿಮಾಡಿ ಬೆಂಕಿ ಹಚ್ಚಿ ಲಕ್ಷಾವಧಿ ರೂಪಾಯಿಗಳ ನಷ್ಟವೊಡ್ಡಿದರು. ಈ ಘಟನೆಯು ಇಡೀ ರಾಷ್ಟ್ರದ ನ್ಯಾಯ ಪ್ರೇಮಿಗಳಲ್ಲಿ ಕಳವಳವನ್ನೂ ಹಿಂದುಗಳಲ್ಲಿ ಉದ್ರೇಕವನ್ನೂ ನಿರ್ಮಿಸಿತ್ತು. ಆದರೆ ಮುಸ್ಲಿಂ ಲೀಗ್ ನಾಯಕರಲ್ಲಿ ಗುಪ್ತ ಹೆಗ್ಗಳಿಕೆಯನ್ನು ನಿರ್ಮಿಸಿರಬೇಕೆಂಬುದಕ್ಕೆ ದೃಷ್ಟಾಂತಗಳು ದೊರೆತಿವೆ. ಈ ದುರಂತ ನಡೆದ ಬಳಿಕ ನವದಿಲ್ಲಿಯಲ್ಲಿ ಸೇರಿದ್ದ ಲೀಗ್ ಕನ್ವೆನ್ಷನಿನಲ್ಲಿ ಪ್ರತಿಯೊಬ್ಬ ಲೀಗ್ ಪ್ರಮುಖನೂ ಅಲಿಘಾರ್ ವಿದ್ಯಾರ್ಥಿಯ ಸ್ಫೂರ್ತಿಯಿಂದಲೇ ಮಾತನಾಡಿದ್ದಾನೆ. ಸರ್. ಖಾನ್‌ನೂನರಂತಹ ಜವಾಬ್ದಾರಿ ಸ್ಥಾನದಲ್ಲಿದ್ದ ಸಾಹೇಬನೂ ಜಂಘಿಸ್ ಖಾನನ ರುದ್ರ ನಾಟಕವನ್ನಾಡುವ ಭಯ ಬೀರಿದ್ದಾರೆ. ಅತ್ಯಾಚಾರದೊಂದು ಅಸಾಮಾನ್ಯ ಮಾದರಿಯಾದ ಅಲೀಘಾರ್ ದುರಂತದ ಕುರಿತು ವಿಚಾರಣೆ ನಡೆಸಲು ಸರಕಾರದಿಂದ ನೇಮಕಗೊಂಡಿದ್ದ ಇಬ್ಬರು ಪ್ರಮುಖಾಧಿಕಾರಿಗಳ ವರದಿಯನ್ನು ಆಧರಿಸಿ, ಆ ಸಂಬಂಧದ ಕೆಲವು ವಾರ್ತೆಗಳನ್ನಿಲ್ಲಿ ಕೊಡಲಾಗಿದೆ.

ಅಲೀಘಾರ್ ವಿಶ್ವವಿದ್ಯಾಲಯ

ಅಲಿಘಾರ್ ಸಂಯುಕ್ತ ಪ್ರಾಂತ್ಯದಲ್ಲಿದೆ. ಅಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರಕ್ಕೆ ಬಂದಾಗ ಪ್ರಥಮತಃ ಅದರ ಕೈಗೆ ಬಂದುದು ಈ ಅತ್ಯಾಚಾರದ ವರದಿಯೇ. ಇದರ ನಷ್ಟ ಭರ್ತಿಗಾಗಿ, ಗಲಬೆಗೆ ಹೊಣೆಗಾರರಾದ ಆ ಕ್ಷೇತ್ರ ವಾಸಿಗಳ ಮೇಲೆ ಪುಂಡಗಂದಾಯ ಹೇರಲು ಕಾಂಗ್ರೆಸ್ ಸರಕಾರ ನಿರ್ಧರಿಸಿದೆ. ಆದರೆ ಅದು ಹಿಂದೂ ಮುಸ್ಲಿಂ ಗಲಭೆಯಾಗಿರಲಿಲ್ಲ; ಕೇವಲ ಮುಸ್ಲಿಂ ಕ್ರೌರ್ಯವಾಗಿತ್ತು; ಹಿಂದುಗಳದಕ್ಕೆ ಬಲಿ ಬಿದ್ದಿದ್ದರು. ವಿದ್ಯಾರ್ಥಿಗಳು ಮತ್ತು ಇತರ ಮುಸ್ಲಿಂ ಪುಂಡರೇ ಈ ಅನಾಚಾರಕ್ಕೆ ಕಾರಣರಾದ್ದರಿಂದ ಕ್ರೌರ್ಯಭಾಗಿಗಳಾಗದವರ ಮೇಲೆ ಪುಂಡು ತೆರಿಗೆ ಹಾಕ ಕೂಡದೆಂದು ಕಾಂಗ್ರೆಸ್ ಸರಕಾರವು ವಿಶೇಷ ಜಾಗರೂಕತೆ ವಹಿಸಿದೆ. ಅಲಿಘಾರ್ ಯುನಿವರ್ಸಿಟಿಯು ಕೇವಲ ಮುಸಲ್ಮಾನರದು, ಹೈದರಾಬಾದಿನ ನೈಜಾಮರೇ ಅದರ ಚಾನ್ಸೆಲರರು. ಅಲ್ಲಿಯ ವಿದ್ಯಾರ್ಥಿಗಳಲ್ಲಿರುವ ಒಗ್ಗಟ್ಟು ಮತ್ತು ಜಾತೀಯ ಸ್ಫೂರ್ತಿ ಅಪೂರ್ವವಾದುದು; ಅದ್ಭುತವಾದುದು. ತಪ್ಪು ಮಾಡಿದ ವಿದ್ಯಾರ್ಥಿಗಳನ್ನು ಹಿಂಗಡಿಸಿ ಶಿಕ್ಷಿಸಲು ಯುನಿವರ್ಸಿಟಿಯ 'ಪ್ರೊಕ್ಟರ' ರಿಗಲ್ಲದೆ ಹೊರಗಿನವರಿಗೆ ಅಸಾಧ್ಯ. ವಿದ್ಯಾರ್ಥಿಗಳು ಗೊಂದಲಕ್ಕೆದ್ದರೆ ಅದನ್ನು ದಮನಿಸುವದು ಸುಲಭವಲ್ಲ; ಗುಂಡು ಹಾರಿಸಿದರೆ, ನೂರಿನ್ನೂರು ವಿದ್ಯಾರ್ಥಿಗಳನ್ನಾದರೂ ಕೊಲ್ಲಬೇಕಾದೀತು, ಎಂದು ಅಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರ ರಿಪೋರ್ಟಿನಲ್ಲಿದೆ. ಅಂತಹ ಮುಸ್ಲಿಂ ಜಾತ್ಯಂಧ ಸೇನೆಯಾಗಿ ಹೋಗಿದೆ, ಅಲಿಘಾರ ವಿದ್ಯಾರ್ಥಿ ತಂಡ.

ಆ ಪ್ರಳಯ ಕೃತ್ಯಕ್ಕೇನು ಕಾರಣ?

ಅಲಿಘಾರ್ ವಿಶ್ವವಿದ್ಯಾಲಯವು ಊರಿಗಿಂತ ಪ್ರತ್ಯೇಕವಾಗಿ, ವಿದ್ಯಾರ್ಥಿಗಳ ಮನೋವೃತ್ತಿಗನುಗುಣವಾಗಿ ಒಂದು ಕೋಟೆಯಂತೆಯೇ ಇದೆ. ಮಾರ್ಚ ತಾ.29ನೇ ಮಧ್ಯಾಹ್ನ ಇಬ್ಬರು ವಿದ್ಯಾರ್ಥಿಗಳು ಹೊರಗೆ ಮಾರ್ಕೆಟಿಗೆ ಬಂದು ಕೃಷ್ಣ ಬಿಹಾರಿಲಾಲ್ ಎಂಬ ಹಿಂದೂ ವಸ್ತ್ರ ವ್ಯಾಪಾರಿಯೊಬ್ಬನಿಂದ ವಸ್ತ್ರ ಕೇಳಿದರು. ರೇಶನ್ ಕಾರ್ಡಿದ್ದವರಿಗಲ್ಲದೆ ಬೇರೆಯವರಿಗೆ ಮಾರಾಟ ಮಾಡುವ ಹಕ್ಕು ತನಗಿಲ್ಲ; ಮೇಲಾಗಿ ತನ್ನ ಅಂಗಡಿಯಿರುವದು ಹಳ್ಳಿಗರಿಗೆ ವಸ್ತ್ರ ಮಾರಾಟ ಮಾಡುವದಕ್ಕೆ ಮಾತ್ರ ಎಂದು ಬಿಹಾರಿಲಾಲ್ ಹೇಳಿದ. ಮುಸ್ಲಿಂ ವಿದ್ಯಾರ್ಥಿಗಳು ರೇಗಿ ಬಯ್ಯಲಾರಂಭಿಸಿದರು. ವಸ್ತ್ರಗಳ ರೇಶನಿಂಗ್ ಇನ್ಸ್ಪೆಕ್ಟರ್ ಕಾಶ್ಮೀರೀಲಾಲರು ಅಲ್ಲಿಗೆ ಬಂದು, ವಸ್ತ್ರ ಮಾರಾಟಮಾಡಲಾಗದ ಕಾರಣವನ್ನು ವಿವರಿಸಿದಾಗ ಅವರನ್ನೂ ಈ ವಿದ್ಯಾರ್ಥಿಗಳು ಬೈದರು. ಈ ಜಟಾಪಟಿಯಿಂದಾಗಿ ಅಲ್ಲೊಂದು ಗುಂಪು ಕೂಡಿತು. ಅಲ್ಲಿಯೇ ಗೇಟಿನಲ್ಲಿ ಪಹರೆಗಿದ್ದ ಮುಸ್ಲಿಂ ಪೋಲಿಸ್ ಅಧಿಕಾರಿಯು ತನ್ನ ಸಂಬಂಧಿಕನಾದುದರಿಂದ ಓರ್ವ ವಿದ್ಯಾರ್ಥಿ ಅವನಿದ್ದಲ್ಲಿಗೆ ಹೋಗಿ ಮಾತಾಡಿದ. ಆ ಪೋಲಿಸನು ಅಲ್ಲಿಗೆ ಬಂದನಾದರೂ ಮರು ಮಾತಾಡದೆ ಹಿಂದೆ ಹೋದ. ವಿದ್ಯಾರ್ಥಿಗಳೂ ಅಲ್ಲಿಂದ ಹೊರಟು ಹೋದರು. ಈ ಗಲಾಟೆಯ ಸುದ್ದಿಯನ್ನು ಮತ್ತೊಂದು ಬೀದಿಯಲ್ಲಿದ್ದ ಜವಳಿ ಸಾಹುಕಾರ್ ಮಹೇಂದ್ರ ಪಾಲ್‌ಸಿಂಗ್ ಎಂಬವನು ಕೇಳಿ ಈ ತಂಟೆಯೇ ಬೇಡವೆಂದು ತನ್ನ ಅಂಗಡಿಗೆ ಬಾಗಿಲು ಹಾಕಲಾರಂಭಿಸಿದ. ಕೆಲವು ವಿದ್ಯಾರ್ಥಿಗಳ ಸಮೇತ ಮುಸಲ್ಮಾನರ ತಂಡವೊಂದು ಕೂಡಿ ಅವನ ಅಂಗಡಿಯ ಬಾಗಿಲೊಡೆದು ಮಹೇಂದ್ರಪಾಲನನ್ನು ಸರಿಯಾಗಿ ಥಳಿಸಿದರು. ಇದ್ದ ಸಾಮಾನುಗಳನ್ನೆಲ್ಲಾ ತೆಗೆತೆಗೆದು ರಸ್ತೆಗೆ ಬಿಸಾಡ ಹತ್ತಿದರು. ಮಹೇಂದ್ರಪಾಲ ಕೋವಿ ಲೈಸನ್ಸಿದ್ದವ. ಹೆದರಿಸುವದಕ್ಕಾಗಿ ತನ್ನ ಕೋವಿಯನ್ನು ಎರಡು ಬಾರಿ ಆಕಾಶಕ್ಕೆ ಹಾರಿಸಿದ ಕೂಡಲೇ ಅವನ ಕೈಯಿಂದ ಕೋವಿಯನ್ನು ಕಸಗೊಂಡು ಇನ್ನಷ್ಟು ಹೊಡೆದು ಇದ್ದ ಸಾಮಾನನ್ನೆಲ್ಲಾ ರಸ್ತೆಗೆ ಚೆಲ್ಲಿಬಿಟ್ಟರು.

ಭೀಕರ ಅತ್ಯಾಚಾರ

ಇತ್ತ ಕೃಷ್ಣ ಬಿಹಾರಿಲಾಲನೊಡನೆ ಜಗಳ ಮಾಡಿ ಹೋಗಿದ್ದ ಇಬ್ಬರು ವಿದ್ಯಾರ್ಥಿಗಳು ಅರ್ಧ ಘಂಟೆಯೊಳಗೆ ಸುಮಾರು 50 ಮಂದಿ ವಿದ್ಯಾರ್ಥಿಗಳೊಂದಿಗೆ ಮರಳಿ ಬಂದರು. ಅವರೊಂದಿಗೆ ಊರ ಮುಸಲ್ಮಾನರೂ ಇದ್ದರು. ಎಲ್ಲರ ಕೈಯಲ್ಲೂ ಲಾಠಿ ಮತ್ತು ಹಾಕಿ ಕೋಲುಗಳಿದ್ದುವು. ಅವರು ಕೃಷ್ಣ ಬಿಹಾರಿಗೂ ಆಸುಪಾಸಿನ ಹಿಂದೂ ಸಾಹುಕಾರರಿಗೂ ಮನಸೇಚ್ಛೆ ಹೊಡೆದು ಅಂಗಡಿಗಳನ್ನೆಲ್ಲಾ ಲೂಟಿ ಮಾಡ ಹತ್ತಿದರು. ಕೆಲವು ಅಂಗಡಿಗಳ ಬಾಗಿಲೊಡೆಯಲು ಅವರಿಂದಾಗಲಿಲ್ಲ. ಅಲ್ಲಿದ್ದ ಹುಲ್ಲುಮಾಡಿನ ಮನೆಗಳಿಗೆಲ್ಲಾ ಬೆಂಕಿ ಕಡ್ಡಿ ಹಚ್ಚಿಯೂ, ಸ್ಫೋಟಕ ದ್ರವ ಚೆಲ್ಲಿಯೂ ಬೆಂಕಿ ಕೊಡಲಾಯಿತು. ಬಾಗಿಲು ಹಾಕಿ ಒಳಗೆ ಕುಳಿತಿದ್ದ ಇಬ್ಬರು ಜೀವಂತ ಸುಟ್ಟು ಹೋದರು. ಕೆಲಮಂದಿ ಪೋಲಿಸರಲ್ಲಿ ನೆರೆದರೂ ಗಲಭೆ ನಿಲ್ಲಿಸಲು ಅವರಿಂದಾಗಲಿಲ್ಲ. ಇಷ್ಟರಲ್ಲಿ ಇಬ್ಬರು ವಿದ್ಯಾರ್ಥಿಗಳು ಗುಂಡಿನಿಂದ ಕೊಲ್ಲಲ್ಪಟ್ಟರು ಎಂದು ವಿಶ್ವವಿದ್ಯಾಲಯಕ್ಕೆ ಗಾಳಿ ಸುದ್ದಿ ಮುಟ್ಟಿತು.

ವಿಶ್ವವಿದ್ಯಾಲಯದ ಪ್ರೊಕ್ಟರ್, ಸಹಾಯಕ ಪ್ರೊಕ್ಟರ್, ಓರ್ವ ಮುಸ್ಲಿಂ ವಕೀಲ್ ಮೊದಲಾದವರು ಆ ವೇಳೆಯೇ ಗಲಭೆಯ ಸ್ಥಳಕ್ಕೆ ಬರದು ಸಂಗತಿ ವಿಚಾರಿಸಿಕೊಂಡರು. ನಗರ ಬಿಟ್ಟು ಹೊರಡುವಂತೆ ವಿದ್ಯಾರ್ಥಿಗಳನ್ನು ಸಮಜಾಯಿಸಹತ್ತಿದರು ಇಷ್ಟರಲ್ಲೇ ಜಿಲ್ಲಾಮೆಜಿಸ್ಟ್ರೇಟರು, ಪೋಲಿಸ್ ಸುಪರಿಂಟೆಂಡೆಂಟ್ ಮೊದಲಾದ ಅಧಿಕಾರಿಗಳೂ ಅಲ್ಲಿಗೆ ಬಂದರು. ಎಲ್ಲರೂ ಸೇರಿ ಮುಸ್ಲಿಂ ವಿದ್ಯಾರ್ಥಿಗೂಂಡಾಗಳನ್ನು ಸಮಜಾಯಿಸಿ ಹಿಂದಿರುಗಿಸಲು ಪ್ರಯತ್ನಿಸಿದರೇ ಹೊರತು ಬೇರೇನೂ ಮಾಡಲಿಲ್ಲ. ಜಿಲ್ಲಾ ಮೆಜಿಸ್ಟ್ರೇಟರು ನೋಡುತ್ತಿದ್ದಂತೆಯೇ ಒಬ್ಬನು ಕಡ್ಡಿ ಕೀರಿ ಮಾಡಿಗೆ ಬೆಂಕಿ ಕೊಟ್ಟಿದ್ದ. ಮಾಡುಗಳಿಗೆ ಹಿಡಿದ ಬೆಂಕಿಯನ್ನು ನಂದಿಸದಂತೆ ಪೋಲಿಸರು ಆತಂಕಿಸುತ್ತಿದ್ದಾರೆ ಎಂದು ಅವರಿದ್ದಲ್ಲಿಗೆ ಜನರ ದೂರು ಬಂತು. ಆ ಮೇಲೆ ಬೆಂಕಿ ನಂದಿಸುವವರನ್ನು ಬಿಡತಕ್ಕದ್ದೆಂದು ಜಿಲ್ಲಾಧಿಕಾರಿಗಳ ಅಜ್ಞೆಯಾಯಿತು.

ಹಿಂದುಗಳ ಸರ್ವಸ್ವನಾಶ

ಅಲ್ಲಿಯ ಬಜಾರುಗಳ ಮನೇ ಸಾಲುಗಳು ಅಗ್ನಿನಾರಾಯಣನಿಗಾಹುತಿಯಾದುವು. ಹಿಂದುಗಳೆಲ್ಲಾ ಪ್ರಾಣದಾಸೆಯಿಂದ ಓಡಿ ಹೋಗಿದ್ದರು. ಕೊನೆಗೆ ಪೋಲಿಸ್ ಅಧಿಕಾರಿಗಳೂ ಯುನಿವರ್ಸಿಟಿ ಅಧಿಕಾರಿಗಳೂ ಕೂಡಿ ಹೇಗೂ ಎಲ್ಲಾ ವಿದ್ಯಾರ್ಥಿಗಳನ್ನೂ ನಗರ ಬಿಡಿಸಿ ಯುನಿವರ್ಸಿಟಿಯ ಹಾದಿ ಹಿಡಿಸಿದ್ದರು. ಅವರೆಲ್ಲಾ ಮರಳುವಾಗ ಯುನಿವರ್ಸಿಟಿಯ ಸುಮಾರು 1500 ವಿದ್ಯಾರ್ಥಿಗಳು ಅಲ್ಲಿಯ ರೈಲ್ವೇ ಮೇಲ್ಗಡೆಯ ಸೇತುವೆಯ ವರೆಗೂ ಧಾವಿಸಿ ಬಂದಿದ್ದುದನ್ನೂ, ಅಲ್ಲಿ ವಿಶ್ವವಿದ್ಯಾಲಯಾಧಿಕಾರಿಗಳೂ ಪೋಲೀಸರೂ ಅವರನ್ನು ಹಿಂದಿರುಗಿಸಲು ಸಮಜಾಯಿಸುತ್ತಿರುವುದನ್ನೂ ಕಂಡರು. ಗಲಭೆಮಾಡಲು ಸುಮಾರು 1000 ಮಂದಿ ಕೂಡಿದ್ದು ಅವರಲ್ಲಿ ಅರೆವಾಸಿ ವಿದ್ಯಾರ್ಥಿಗಳೆಂದೂ ಮಿಕ್ಕರ್ಧ ಊರ ಮುಸಲ್ಮಾನರೆಂದೂ ತಿಳಿದು ಬಂದಿದೆ. ಅಧಿಕೃತ ಲೆಕ್ಕ ದೊರೆತ ಪ್ರಕಾರ 22 ಮಂದಿಗೆ ಸಾಮಾನ್ಯ ಘಾಯಗಳೂ 17 ಮಂದಿಗೆ ತೀವ್ರಜಖಮುಗಳೂ ಆಗಿದ್ದುವು. ಇಬ್ಬರು ಆಸ್ಪತ್ರೆಯಲ್ಲೂ ಒಬ್ಬನು ಅರೆಬೇಯಲ್ಪಟ್ಟು ಆಸ್ಪತ್ರೆಗೆ ಹೋಗುವ ಹಾದಿಯಲ್ಲೂ ಮಡಿದಿದ್ದರು. ಬಾಗಿಲು ಹಾಕಲ್ಪಟ್ಟದ್ದಲ್ಲಿ ಬೆಂಕಿಯಿಂದ ಬೆಂದು ಇಬ್ಬರು ಜೀವಂತ ಸುಟ್ಟುಹೋಗಿದ್ದರು. ಬೆಂಕಿಯಿಂದ ಭಸ್ಮವಾದ ಮನೆಗಳು 57. ಈಗ 46 ಮಂದಿಯ ಮೇಲೆ ಮೊಕದ್ದಮೆ ನಡೆಯುತ್ತಿದೆ. ಇದು ಕೆಲವರ ಆರೋಪವಿರುವಂತೆ ಪೂರ್ವ ಸಿದ್ಧತೆಯ ಗೊಂದಲವಲ್ಲವೆಂದೂ, ಸ್ಫೋಟಕ ದ್ರವ್ಯಗಳನ್ನು ವಿದ್ಯಾರ್ಥಿಗಳು ಉಪಯೋಗಿಸಿದ್ದು ಸುಳ್ಳೆಂದೂ ವಿಚಾರಣಾ ಅಧಿಕಾರ ವರದಿಯಲ್ಲಿದೆ.

The Canara Industrial & Banking Syndicate, Limited.

(Incorporated in British India. Liability of Share-holders Limited)

HEAD OFFICE

NOTICE

Is hereby given that One 'A' Class Ordinary Share No. 303 of Rs. 100/- (Rs 30/-paid) and 100 five % cumulative preference shares No- PC74026 to PC 74125 of Rs 10/- each (fully paid) in the Syndicate will be sold by public auction at the Registered Office of the Syndicate, "Mukund Nivas", Udipi, on Friday the 17th May, 1946 at 2-30 P. M. in order to recover the debts due by the concerned shareholders. Intending bidders are requested to be present at the time of auction

"Mukund Nivas"
UDIPI
6th May 1946.

K. V. Shenoy,
SECRETARY.

ಸಿಮ್ಲಾದ ತ್ರಿಪಕ್ಷೀಯ ಸಮ್ಮೇಲನ

- ಪರಾಭವಕ್ಕೆ ಹೆಸರಾದ ಸ್ಥಳ
- ಪಂಥ ಬಿಡಲೊಪ್ಪದ ಜನ
- ಪಥ ತೋರದ ಕಾರ್ಯಕ್ರಮ

ಅನುಮಾನ ಮತ್ತು ಅಪಶಕುನ!

ಇದೇ ತಾ. ೫ನೇ ಆದಿತ್ಯವಾರ ಪ್ರಾತಃ ಘಂಟೆ 10ಕ್ಕೆ ಸಿಮ್ಲಾದ ವೈಸರಾಯಿ ಭವನದಲ್ಲಿ ಆರಂಭವಾಗಿರುವ ಚರಿತ್ರಾರ್ಹ ತ್ರಿಪಕ್ಷೀಯ ಸಮ್ಮೇಲನವೀಗ ದಿನಂಪ್ರತಿ ಜರಗುತ್ತಾ ಇದೆ. ಸದ್ಯಕ್ಕೆ ಈ ಸಮ್ಮೇಲನದ ಪರಿಣಾಮದ ಕುರಿತು ಆಶಾ-ನಿರಾ-ಶೆಗಳ ತಕ್ಕಡಿ ಸಮ ಮಟ್ಟದಲ್ಲಿ ನಿಂತಂತೆ ಕಾಣುತ್ತಿದೆಯಾದರೂ ಇನ್ನು ಒಂದೆರಡು ದಿನಗಳೊಳಗೆ ನಾವು ಅದು ನಿರ್ಧಾರಕವಾದ ಸುದ್ದಿ ಕೇಳಿದರೆ ಸೋಜಿಗವಾಗದು. ಸಮ್ಮೇಲನ ಭಾಗಿಗಳಾಗಿರುವ ಎರಡೂ ಪಕ್ಷಗಳು ಮುಕ್ಕಾಲಂಶ ನಿರಾಶೆ, ಕಾಲಂಶ ಆಶೆ ಕಟ್ಟಿಕೊಂಡೇ ಸಿಮ್ಲಾದ ತಪ್ಪಲೇರಿರುವವೆಂಬುದು ಖಂಡಿತ.

ಅದೇ ಸಿಮ್ಲಾ!

ಕಳೆದ ವರುಷ ವೈಸರಾಯರ ಸಿಮ್ಲಾ ಸಮ್ಮೇಲನ ಪರಾಭವಗೊಂಡಿದ್ದ ಸಿಮ್ಲಾದಲ್ಲೇ ಈ ವರುಷ ಭಾರತ ಕಾರ್ಯದರ್ಶಿಯೂ ಸಭೆಯನ್ನು ಕರೆದಿದ್ದಾರೆ. ಒಮ್ಮೆ ಕಾಲು ಜಾರಿದ ಕಡೆಗೆ ಮತ್ತೆ ಆನೆ ಕೂಡಾ ಕಾಲಿಡುವದಿಲ್ಲ. ಆದರೆ ಬ್ರಿಟಿಷರು ಪ್ರಾಣಿ ವರ್ಗವೂ ಅಲ್ಲ; ಸ್ಥಳ, ಕಾಲ ಶಕುನಗಳಿಗೆ ಹಿಂದೀಯರಷ್ಟು ಬೆಲೆ ಕೊಡುವವರೂ ಅಲ್ಲ. ದಿಲ್ಲಿಯ ಸೆಖೆ ಅಸಹನೀಯವಾಯಿತು; ತಂಪು ಹವೆಗೆ ಹೆಸರಾದ ಸಿಮ್ಲಾ ಹತ್ತಿದರು. ಅದೇ ವೈಸರಾಯಿ ಭವನದಲ್ಲಿ ಸಭೆ ಸೇರಿದೆ. ಆದರೆ ಕೋಣೆ ಮಾತ್ರ ಬೇರೆ. ಈ ಬಾರಿ ಹನ್ನೆರಡೇ ಮಂದಿಯನ್ನು ಹಿಡಿಸುವ ಸಣ್ಣ ಕೋಣೆಯನ್ನು ಸಭಾಗೃಹವಾಗಿ ಆರಿಸಿದ್ದಾರೆ. ಭಾರತೀಯ ತೀರ್ಮಾನವೊಂದನ್ನು ನುಂಗುವ ಭೂತ ಯಾವುದೂ ಸಿಮ್ಲಾದ ಗುಡ್ಡಗಾಡುಗಳಲ್ಲಿರಲಿಕ್ಕಿಲ್ಲ. ಆದರೆ ಯುದ್ಧಾವಧಿಯಲ್ಲಿ ಒಕ್ಕಲಿಲ್ಲದಿದ್ದ ಸ್ಥಳ; ಹಡಿಲು ಬಿದ್ದಿದ್ದ ಜಾಗ; ಅದು ಫಲಬಿಡುವ ಕಾಲವಿನ್ನೂ ಬರಲಿಲ್ಲವೇನೋ! ಕಳೆದ ಬಾರಿ ಅಲ್ಲಿ ನೆರೆದಿದ್ದ ಸಮ್ಮೇಲನ ವಿಫಲವಾಯಿತು; ಈ ಬಾರಿಯೂ ಅಲ್ಲಿಯೇ ಕೂಡಬೇಕೆಂದೇನು? ಎನ್ನುವವರಿದ್ದಾರೆ. ಯಾವುದೊಂದು ಶಕುನ ಶ್ರದ್ಧೆಯಿಲ್ಲದಿದ್ದರೂ, ಪಂಚಾಯಿತಿಕೆಗಳು ಫಲಿಸದ ಪ್ರತಿಯೊಂದು ಸಂದರ್ಭದಲ್ಲಿ 'ಸಿಮ್ಲಾ ಸಮ್ಮೇಲನವಾಯಿತು' ಎಂದು ನಾವು ಅದನ್ನು ಉಪಮೆಯಾಗಿ ಉಪಯೋಗಿಸುತ್ತಾ ಬಂದಿದ್ದೇವೆ. ಹೀಗಾಗಿ ಅದಕ್ಕೆ ಅಪಜಯಗಿರಿಯೆಂಬ ಹೆಸರು ಬಿದ್ದಾಗಿದೆ ಆದ್ದರಿಂದ, ಅದೇಕೋ, ಈ ಬಾರಿಯೂ ಸಿಮ್ಲಾ ಸಮ್ಮೇಲನವೆಂದೊಡನೆ ಎಲ್ಲರೂ ಒಂದಿಂಚು ಕುಗ್ಗಿದ್ದಾರೆ.

ಆ ಪ್ರತಿನಿಧಿಗಳು

ಇರಲಿ; ಇನ್ನು ಒಂದೇ ರೀತಿಯಲ್ಲಿ ನೆರೆದಿರುವ ಆ ದ್ವಾದಶಗ್ರಹಗಳ ಪರಿಚಯವನ್ನೊಂದಿಷ್ಟು ಮಾಡಿಕೊಳ್ಳೋಣ. ಬ್ರಿಟಿಷ್ ಸರಕಾರದ ಪ್ರತಿನಿಧಿಗಳಾಗಿ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸ್, ಸರ್. ಕ್ರಿಪ್ಸ್; ಮಿ. ಅಲೆಕ್ಸಾಂಡರರು. ಮಂತ್ರಿವರು ತಮ್ಮ ನಾಲ್ಕನೇ ಸದಸ್ಯನೆಂದು ಕಟ್ಟಿಕೊಂಡಿರುವ ಲೋರ್ಡ್ ವೇವೆಲರು. ಸಮ್ಮೇಲನದ ಕಾಂಗ್ರೆಸ್-ಲೀಗ್ ಅಷ್ಟ ದಿಗ್ಗಜಗಳೆದಿರು ನಾಲ್ಕೆಡೆ ಮಂಡಿಸುವ ಬ್ರಿಟಿಷ್ ಸಾಮ್ರಾಜ್ಯ ಬ್ರಹ್ಮನ ಚತುರ್ಮುಖಗಳಿವು. ಕಾಂಗ್ರೆಸ್ ಪ್ರತಿನಿಧಿಗಳೆಂದರೆ ಅಧ್ಯಕ್ಷ ಮೌಲಾನಾ ಆಜಾದ್, ಪಂಡಿತ ನೆಹರು, ಸರ್ದಾರ್ ಪಟೇಲ್, ಖಾನ್ ಅಬ್ದುಲ್ ಗಫರ್ ಖಾನ್. ಲೀಗ್ ಪ್ರತಿನಿಧಿಗಳೆಂದರೆ ಅಧ್ಯಕ್ಷ ಮಿ. ಜಿನ್ನ, ನವಾಬ್‌ಝಾದಾ ಲಿಯಾಕತ್ ಅಲೀ ಖಾನ್, ನವಾಬ್ ಮಹಮ್ಮದ್ ಇಸ್ಮಾಯಿಲ್, ಅಬ್ದುಲ್‌ರಾಬ್‌ನಿಸ್ತಾರ್ ನಮ್ಮದಿದು ಜಾತಿವಾರು ಪ್ರಾತಿನಿಧ್ಯವಿರುವ ರಾಷ್ಟ್ರ ತಾನೆ! ಆ ಚಿಕ್ಕ ಸಭಾಮಂದಿರದ ಕಿಟಕಿಯಿಂದಿಣಿಕಿದರೆ ಕಾಣುವದು ನಾಲ್ವರು ಯುರೋಪಿಯನರು. ಆರುಮಂದಿ ಮುಸ್ಲಿಮರು ಮತ್ತು ಇಬ್ಬರು ಹಿಂದುಗಳ ಮುಖಗಳು. ಆರು ಮಂದಿ ಮುಸಲ್ಮಾನರಲ್ಲಿ ನಾಲ್ವರು ಪಾಕಿಸ್ತಾನ ಬೇಕೆನ್ನುವವರು; ಇಬ್ಬರು ಅಖಂಡ ಭಾರತವನ್ನಪೇಕ್ಷಿಸುವವರು. ಗುಟ್ಟಿನೊಳಗಡೆಯ ಗುಟ್ಟೆಂದರೆ ಮಿಕ್ಕವರೆಲ್ಲಾ ಆ ಮುಸ್ಲಿಂ ಸದಸ್ಯರ ಮನೋಭಾವವೊಂದನ್ನೇ ನೋಡಿ ಮಾತಾಡುವವರು.

ಬ್ರಿಟಿಷ್ ಸದಸ್ಯರ ಯೋಗ್ಯತೆ

ಈ ಸಮ್ಮೇಲನದ ವಿಜಯವನ್ನು ಹಾರೈಸುವವರು ಸದಸ್ಯರ ಬೇರಾವ ಯೋಗ್ಯತೆಯನ್ನು ಗಣಿಸುವದೂ ವ್ಯರ್ಥ. ಅವರಲ್ಲಿ ಸಂಧಾನ ಸಾಧಿಸುವ ಯೋಗ್ಯತೆಗಳೆಷ್ಟಿವೆ, ಎಂಬುದೊಂದನ್ನೇ ನೋಡಬೇಕಾದುದು ಮುಖ್ಯ. ಲೋಕ ಪ್ರಸಿದ್ಧರಾದ ಈ 12 ಮಂದಿಯಲ್ಲಿರುವ ಅಂತಹ ಯೋಗ್ಯತೆಯು ಸಾಮಾನ್ಯರಾದ 12 ಮಂದಿಗಿಂತ ನಿಜಕ್ಕೂ ಹೆಚ್ಚಿಗಿಲ್ಲ. ಮುಖ್ಯವಾಗಿ ನಿರಾಶೆ ಪಡಬೇಕಾದು ಈ ವ್ಯಕ್ತಿ ಯೋಗ್ಯತೆಯನ್ನು ಕಂಡು! ಯಾರಿಂದ ಕೆಲಸವಾಗುವದೆಂದು ಹಾರೈಸಲಿ? ವಿಶೇಷ ಆಶೆ ಕಟ್ಟಿಕೊಳ್ಳಬೇಕಾದುದು ಸರ್. ಕ್ರಿಪ್ಸರ ಮೇಲೆ. ಕಾಂಗ್ರೆಸ್-ಲೀಗ್ ಸಂಧಾನಕ್ಕಾಗಿ ಎಲ್ಲರಿಗಿಂತ ಹೆಚ್ಚಾಗಿ ಓಡಾಡಿದವರು ಅವರೇ. ಆದರೆ ಅವರ ಸ್ವಭಾವದ ಸೂಕ್ಷ್ಮ ನಿರೀಕ್ಷಣೆ ಮಾಡಿದವರು ಈ ಭಾಗದಲ್ಲಿ ನಿರಾಶೆ ಪಡದಿರಲಾರರು. ಅವರು ವ್ಯಕ್ತಿ ಘನಸ್ತಿಕೆಯುಳ್ಳ ಮನುಷ್ಯನಲ್ಲ; ಓರ್ವ ಸೇಡಿ ಹೋಗುವಲ್ಲಿಗೆ ತಾನೂ ಹೋಗಬಲ್ಲರು. ಆದರೆ ಸತ್ಯಕ್ಕೂ ಸಮತೋಲನಾ ಬುದ್ಧಿಯವರಲ್ಲ; ಭಾವ ಪ್ರಾಧಾನ್ಯವುಳ್ಳ ಮನುಷ್ಯ; ತುಸು ಅಸಹಿಷ್ಣು. ಒಂದು ಪ್ರಶ್ನೆಯನ್ನು ಪ್ರತ್ಯಕ್ಷ ಸಮೀಪಿಸುವ ವರೆಗಿನ ನಿರಾತಂಕವಾದ ಓಡಾಟವನ್ನೇ ಸ್ವಭಾವ ಬಲ್ಲರು. ಆದರೆ ಆ ಪ್ರಶ್ನೆಯ ಮರ್ಮ ಭೇದಿಸಿ ಒಳನುಗ್ಗುವ 'ಗಟ್ಟಿಗತನ', ಬಿಗುಹು ಅವರಲ್ಲಿಲ್ಲ. ಮಿಕ್ಕ ಇಬ್ಬರು ಬ್ರಿಟಿಷ್ ಮಂತ್ರಿಗಳಂತೂ ಈ ಮಟ್ಟಿಗೆ ಬಹುತೇಕವಾಗಿ ತಟಸ್ಥರು. ತ್ರಿಪಕ್ಷೀಯ ಸಮ್ಮೇಲನದ ಕೊನೆಯ ಭಾಗಕ್ಕೆ ಸರ್. ಕ್ರಿಪ್ಸರೊಬ್ಬರನ್ನೇ ಬಿಟ್ಟು ಇವರಿಬ್ಬರೂ ಹಿಂದಕ್ಕೆ ಇಂಗ್ಲಾಂಡಿಗೆ ತೆರಳುವರೆಂಬ ವಾರ್ತೆಯೂ ಇದೆ. ಮತ್ತಾರು ಲೋರ್ಡ್ ವೇವೆಲರೆ? ಅವರನ್ನು ಸತ್ಯವಂತರೆನ್ನಿ, ಯೋಗ್ಯನೆನ್ನಿ, ಉದಾರಿಯೆನ್ನಿ, ಆದರೆ ಮುಂದಾಳುತನದವರೆಂದು ಎಷ್ಟರೂ ಹೇಳಬೇಡಿ. ಕಳೆದ ವರುಷದ ಸಿಮ್ಲಾ ಸಮ್ಮೇಲನದಲ್ಲಿ ಅವರ ಚಿತ್ರ ಕಳೆಯೆಲ್ಲಾ ಹೊರಬಿದ್ದಿದೆ.

ಕಾಂಗ್ರೆಸ್ ಪ್ರತಿನಿಧಿಗಳ ಯೋಗ್ಯತೆ

ಅತ್ತ ಯಾಕೆ ಪಡಬೇಕು? ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ಪ್ರತಿನಿಧಿಯಾಗಿ ಆರಿಸಿದ ನಾಲ್ವರನ್ನು ಕಂಡು! ಪ್ರತಿಯೊಬ್ಬ ಹಿಂದೀಯನ ಹೃದಯ ಚಾಕರ

(೭ನೇ ಪುಟ ನೋಡಿರಿ)

WANTED

Three Organisers for the District of South Kanara on a salary ranging from Rs. 75/- to Rs. 225/-p.m on a nominal guarantee of business. For further particulars, please apply to the **Secretary** who is now camping in Udipi.

THE
UNITED KARNATAK INSURANCE Co., Ltd.
UDIPI.
H. O. **DHARWAR.** ESTD 1929.



Approved firm by the Govt. of Mysore
Certified by the Agent of the Govt. of Cylone Indian.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಉಪಾಧ್ಯಾಯರು ಬೇಕಾಗಿದ್ದಾರೆ.

ಉಡುಪಿ ತಾಲೂಕು ಎಲ್ಲೂರು ಕಸ್ಬಾ ಹಾಯರ್ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಆದ ಇಬ್ಬರು ಉಪಾಧ್ಯಾಯರೂ, ಹಾಯರ್ ಗ್ರೇಡ್ ಟ್ರೈನ್ಡ್ ಆದ ಒಬ್ಬ ಉಪಾಧ್ಯಾಯರೂ ಬೇಕಾಗಿದ್ದಾರೆ. ಸೆಕೆಂಡರಿ ಗ್ರೇಡ್ ಟ್ರೈನ್ಡ್‌ಗೆ ಮಟ್ಟಿಕ್ಕೆ ಸೇರಿ ರೂ 50 ಸಂಬಳ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಬರೆಯುವುದು.

ಕೆ. ವಿಶ್ವೇಶ್ವರ ರಾವ್,
ಕರಸ್ಪೊಂಡೆಂಟ್, ಎಲ್ಲೂರು ಕಸ್ಬಾ
ಹಾ. ಎ. ಶಾಲೆ, ಎಲ್ಲೂರು. 6-5-46

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, South Kanara.

ANNOUNCEMENT.

A Branch of the Bank has been opened **at SALEM TOWN on 11—4—1946.**

A Branch of the Bank will shortly be **opened at BYADGI.**

ಉಡುಪಿ, ಗುರುವಾರ, ೯-೫-'೪೬

ದಿವಂಗತ ದೇಸಾಯಿ

ಸ್ವಾತಂತ್ರ್ಯ, ಶಾಂತಿ, ವ್ಯವಸ್ಥೆಗಾಗಿ ಚಡಪಡಿಸುತ್ತಿರುವ ಭಾರತದಂತಹ ದೊಡ್ಡ ರಾಷ್ಟ್ರಕ್ಕೆ ಮೃತ್ಯು ಹಸ್ತದ ಸಹಜ ಆಘಾತವು ಅನೈತ ಆಘಾತವನ್ನುಂಟು ಮಾಡಬಲ್ಲುದು ಶ್ರೀ. ಭುಲಾಭಾಯಿ ದೇಸಾಯಿಗಳು ಇದೇ ತಾ. ೬ನೇ ಸೋಮವಾರ ಮುಂಜಾನೆ ಘಂಟೆ 1-5ಕ್ಕೆ ಬೊಂಬಾಯಿಯಲ್ಲಿ ತಮ್ಮ ಇಹಯಾತ್ರೆ ಮುಗಿಸಿಕೊಂಡು ಅಖಿಲ ಭಾರತವನ್ನು ಇಂತಹ ದುಃಖತ ನೀರನೆನೆಗೀಡುಮಾಡಿದ್ದಾರೆ ದೇಸಾಯಿಗಳ ಪ್ರಾಯ 69 ಭಾರತದಲ್ಲಿ ಈ ಪ್ರಾಯದ ಸಾವು ಅಕಾಲ ನಿಧನವೆಂದು ಗಣಿಸಲ್ಪಡುವುದಿಲ್ಲ. ಆದರೆ ಭುಲಾಭಾಯಿಗಳು ಅಜಾದ್ ಹಿಂದ್ ಸೇನಾಪತಿಗಳಂಥವರಿಗೆ ಜೀವದಾನಮಾಡಿಸಿದವರು, ತಮ್ಮ ಆಯುಷ್ಯದ ಕೊನೆಯ ಭಾಗವನ್ನು ರಾಷ್ಟ್ರ ಸೇವೆಯಲ್ಲಿ ವ್ಯಯಿಸಿದವರು. ಇಂದಿನ ರಾಷ್ಟ್ರೀಯ ಕರ್ಮಗಳಲ್ಲಿ ಶ್ರೀ. ಭುಲಾಭಾಯಿಗಳಿಂದಾಗಬೇಕಾಗಿದ್ದ—ಅವರಿಂದಲೇ ಆಗತಕ್ಕ ತುಂಬಿದ್ದ ಕಾರ್ಯಗಳು ಕಾದಿವೆ. ಇಂತಹ ಕಾಲದಲ್ಲೇ ಶ್ರೀ. ಭುಲಾಭಾಯಿಗಳಿಗಾದುದು ಅಕಾಲ ನಿಧನ; ಇದು ರಾಷ್ಟ್ರೀಯ ಆಪತ್ತು.

ದೇಸಾಯಿಗಳಲ್ಲಿದ್ದ ರಾಷ್ಟ್ರಪ್ರೇಮ—ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗ ವಹಿಸಿ ಅವರು ಅನುಭವಿಸಿದ್ದ ಕಷ್ಟನಷ್ಟ—ಅವರ ತ್ಯಾಗ ಬುದ್ಧಿ, ಉದಾರ ಧೋರಣೆ ಇವೆಲ್ಲವನ್ನೂ ರಾಷ್ಟ್ರವು ಕೃತಜ್ಞತೆಯಿಂದ ಸ್ಮರಿಸುತ್ತಿದೆ. ತಾ. ೮ರಲ್ಲಿ ಆ ಕೆಲ್ಲೆಂಬರಿಂದ ಹೊರಟು ರೆಂಗೂನ್ ನಿಂದ ಬಂದ ಅಜಾದ್ ಹಿಂದ್ ಯೋಧರು ಸೆಲ್ಯೂಟ್ ಸಲ್ಲಿಸಿದಂತೆ, ಸದಾಕಾಲ ದೇಸಾಯಿ ಸ್ಮೃತಿಯ ಮುಂದೆ ಹಿಂದೀಯರು ತಲೆಬಾಗಲಿದ್ದಾರೆ. ಆದರೆ ಭುಲಾಭಾಯಿಗಳು ಇಂತಹ ಕೃತಜ್ಞತಾ ಬಾವವೊಂದನ್ನೇ ನಿರ್ಮಿಸಿ ಹೋಗಿಲ್ಲ; ಅವರ ನಿಧನದಿಂದಾಗಿ ತುಂಬಿ ಬರಲಾಗದ ಒಂದು ಅಭಾವವು ರಾಷ್ಟ್ರಕ್ಕುಂಟಾಗಿದೆ. ಶ್ರೀ ದೇಸಾಯಿಗಳು ಕಾಂಗ್ರೆಸ್ ವಕೀಲರಾಗಿದ್ದರು; ರಾಷ್ಟ್ರದ ವಾದ ಶಕ್ತಿಯಾಗಿದ್ದರು. ಬಾರ್ಡೋಲಿ ರೈತರ ಕರ ನಿರಾಕರಣಾ ಚಳವಳಿ ತೀರ್ಮಾನದ ನ್ಯಾಯ-ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕನಾಗಿ-ಎಲ್ಲಕ್ಕಿಂತ ಹೆಚ್ಚಾಗಿ ಅಜಾದ್ ಹಿಂದ್ ತ್ರಿನಾಯಕರ ವಿಚಾರಣೆಯಲ್ಲಿ ಭುಲಾಭಾಯಿಗಳ ಬಾಯಿಯಿಂದ ರಾಷ್ಟ್ರವು ಮಾತಾಡಿತ್ತು. ರಾಷ್ಟ್ರಪಕ್ಷೀಯ ಸ್ಥಾನಮಾನಕ್ಕೊಗ್ಗುವ ಘನತೆ, ಕಾನೂನು ಮತ್ತು ತರ್ಕ ಪ್ರೌಢಿಮೆ, ವಾಗ್ಮಿತೆ, ವಾದ ಚಾತುರ್ಯ, ಇವೆಲ್ಲವಿದ್ದುದು ಶ್ರೀ ದೇಸಾಯಿಗಳೊಬ್ಬರಲ್ಲೇ. ಇಂದು ಆ ಸ್ಥಾನ ಖಾಲಿ ಬಿಟ್ಟಿದೆ; ಆ ಭಂಗದಲ್ಲೊಮ್ಮೆ ಮೌನ ಆವರಿಸಿದೆ. ಬಾರ್ಡೋಲಿ ರೈತರಿಂದು ಕರ ನಿರಾಕರಣಾ ಹೋರಾಟ ಹೂಡಿಸಲು ಸರ್ದಾರ್ ಸರೋಜರಿದ್ದರೆ ಅವಕ್ಕೆ ನ್ಯಾಯಸ್ಥಾನದಲ್ಲಿ ವಿಜಯಸಾಧಿಸಿಕೊಡಲು ಶ್ರೀ ಭುಲಾಭಾಯಿಗಳು ಬೇಕಾಯಿತು, ಪಂಡಿತ ಮೋತೀಲಾಲರಂತಹ ದೈತ್ಯನ ಹೆಗಲ ಮೇಲಿದ್ದ ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವದ ಭಾರ ಹೊರಲು ಅಂತಹ ಪುತ್ತೊಬ್ಬ ಶಕ್ತಿವಂತ ಭುಲಾಭಾಯಿಯಿದ್ದರು; ಅಜಾದ್ ಹಿಂದ್ ಸೇನೆ ಕಟ್ಟಲು ನೇತಾಜೀ ಬೋಸರಿದ್ದರೆ, ಅವರನ್ನು ಬಿಡಿಸಲು ಭುಲಾಭಾಯಿಗಳಿದ್ದರು. ಇಂದು ಆ ಭುಲಾಭಾಯಿಗಳೇ ಇಲ್ಲ! ಅವರ ಬದಲಿಗೆ, ಇನ್ನೊಬ್ಬ ಕಾಣುವುದಿಲ್ಲ!

ಇನ್ನು ದಿವಂಗತ ದೇಸಾಯಿಗಳ ಆತ್ಮವೇ ಬೆಳಕಾಗಿ ಭಾರತೀಯರನ್ನು ಸ್ವಾತಂತ್ರ್ಯಪಥದಲ್ಲಿ ಮುಂದೆ ಸಾಗಿಸಲಿ!

ಉಡುಪಿ.

ಶಿಕ್ಷಕಶಿಬಿರ—ಸ ಕ ಸಂಸ್ಕೃತ ಮಹಾಸಭೆಯು ಸೀಕೃಷ್ಣ ಮಠದಲ್ಲಿ ಉಡುಪಿಯ ಕಲಾಸ್ಕಂ ದದಲ್ಲಿ ತಾ. ೧೮ರಂದ ಸಂಸ್ಕೃತ ಶಿಕ್ಷಕಶಿಬಿರವು ಪ್ರಾರಂಭವಾಗಿದೆ. ಜಿಲ್ಲೆಯ ಹಲವು ಭಾಗಗಳಿಂದ ಶಿಕ್ಷಣಾರ್ಥಿಗಳು ಬಂದಿರುವರು. ಪ್ರತಿದಿನವೂ ವಿದ್ವಾಂಸರಿಂದ ಶಿಕ್ಷಣ ಭಾಷಣಗಳಾಗುತ್ತಿವೆ.

ಆದಿಉಡುಪಿ—ದಾ [illegible] ಶಾಲೆಯ ವಾರ್ಷಿಕ ಸಮಾರಂಭವು ತಾ 5ರಲ್ಲು ಶಾಲಾ ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ವಿನ, ಸಭಿಕರ ಭಾಷಣ ಕಾರ್ಯಕ್ರಮಗಳ ನಂತರ ರಾಲು ಮಕ್ಕಳಿಂದ 'ಪ್ರತೀಕಾರ' ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು ಶಾಲಾ ಮೆನೇಜರು ಶ್ರೀ ಸೀತಾರಾಮಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಅಳಿಯಸಂತಾನ—ಸು ಧಾ ರ ಕಾ ರು ಸೂಡೆಯ ಕಲಿತ ಜನರುತ ಏಪ್ರಿಲು ಆ ಸಿರ್ವದಿನಲ್ಲಿನ್ನು ಕವಿವಿಯವರು ಇದೇ ತಾ 22ರಂದ ಜಿಲ್ಲಾ ಸಂಚಾರವನ್ನು ಕೈಕೊಳ್ಳುತಿರುವರೆಂದು ತಿಳಿದುಬರುತ್ತದೆ ಪ್ರಥಮಸಭೆಯು ಇಲ್ಲಿಯ ಶ್ರೀ ರಾಮ ಕೃಷ್ಣ ವ್ಯಾಯಾಮ ಶಾಲೆಯಲ್ಲಿ ತಾ 22ರಲ್ಲು ಜರಗಲಿರುವುದೆಂದು ತಿಳಿದುಬರುತ್ತದೆ.

ಭುಲಾಭಾಯಿ ಜೀವನ್‌ಜೀ ದೇಸಾಯಿ

ಗುಜರಾಥಿನ ಸೂರತ್ ಜಿಲ್ಲೆಯ ಬುಲ್ಸಾರ್ ಎಂಬಲ್ಲಿ 1877ನೇ ಒಕ್ಟೋಬರ್ 13ರಲ್ಲಿ ಶ್ರೀ ಭುಲಾಭಾಯಿ ಜೀವನ್‌ಜೀ ದೇಸಾಯಿಗಳ ಜನನ. ಅವರ ತಂದೆ ಸರಕಾರೀ ವಕೀಲರಿದ್ದರು. ಬೊಂಬಾಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಕಲಿತ ಮೇಲೆ ಐ. ಸಿ. ಎಸ್. ಕಲಿಯಲು ಸ್ಕೋಲರ್ ಶಿಪ್ ಕೊಡಲು ಹಿಂದೀ ಸರಕಾರವು ನಿರ್ಧರಿಸಿತು. ಆದರೆ ಭುಲಾಭಾಯಿ ಇಂಗ್ಲಾಂಡಿಗೆ ಹೋಗದೆ ಎಂ. ಎ ಕಲಿತು ಗುಜರಾತಿನ ಕಾಲೇಜಿನಲ್ಲಿ ಪ್ರೊಫೆಸರಾದರು. ಆ ಮೇಲೆ ಎಲ್. ಎಲ್ ಬಿ. ಆಗಿ ಬೊಂಬಾಯಿಯಲ್ಲಿ ಅಗ್ರಗಣ್ಯ ವಕೀಲರಾದರು. 1926ರಲ್ಲಿ ಬೊಂಬಾಯಿ ಸರಕಾರದ ಎಡ್ವೊಕೇಟ್ ಜನರಲ್ ಆದರು. ಸರಕಾರವು ದೊಡ್ಡ ದೊಡ್ಡ ಹುದ್ದೆಗಳನ್ನು ಅವರ ಮುಂದೆ ಮಾಡಿತು. ಹೈಕೋರ್ಟು ಜಡ್ಜ್, ಎಕ್ಸಿಕ್ಯೂಟಿವ್ ಕೌನ್ಸಿಲರ್ ಸ್ಥಾನಗಳ ಕೊಡುಗೆಬಂತು. ಆದರೆ ದೇಸಾಯಿಗಳೆಲ್ಲವನ್ನೂ ಧಿಕ್ಕರಿಸಿ ಬಿಟ್ಟರು.

1928ರ ಚರಿತ್ರಾರ್ಹ ಬಾರ್ಡೋಲಿ ಸತ್ಯಾಗ್ರಹದಲ್ಲಿ ರೈತರ ಪರವಾಗಿ ವಕಾಲತ್ ವಹಿಸಿ ಬ್ರೂಮ್‌ಫೀಲ್ಡ್ ಕಮಿಟಿಯ ಮುಂದೆ ವಾದಿಸಿ ಗೆದ್ದವರು ಭುಲಾಭಾಯಿಗಳೇ. ಅವರು ಪ್ರತ್ಯಕ್ಷವಾಗಿ ಕಾಂಗ್ರೆಸಿಗೆ ಸೇರಿದುದು 1930ರಲ್ಲಿ. 1932ರ ಕಾಯಿದೆಭಂಗ ಚಳವಳಿಯಲ್ಲಿ ಸೆರೆ 1 ವರ್ಷ ಕಠಿಣಸಜೆ ಮತ್ತು ರೂ. 10,000 ಜುಲ್ಮಾನೆಗೊಳಗಾದರು. ಆದರೆ ಅನಾರೋಗ್ಯದ ನಿಮಿತ್ತ ಮಧ್ಯದಲ್ಲೇ ಬಿಡುಗಡೆಹೊಂದಿ ಚಿಕಿತ್ಸೆಗಾಗಿ ಯುರೋಪಿಗೆ ಹೋಗಬೇಕಾಯಿತು ಆಮೇಲೆ ಕಾಂಗ್ರೆಸ್ ಟಿಕೇಟಿನಿಂದ ಕೇಂದ್ರ ಎಸೆಂಬ್ಲಿಗಾರಿಸಲ್ಪಟ್ಟು ಕಾಂಗ್ರೆಸ್ ಪಕ್ಷದ ನಾಯಕನಾಗಿ ಆ ಮೊದಲು ನಾಯಕನಾಗಿದ್ದ ಪಂಡಿತ ಮೋತೀಲಾಲರನ್ನೂ ನಾಗ್ಮಿತೆಯಲ್ಲಿ ಮೀರಿದರು. 10ವರುಷ ನಾಯಕಸ್ಥಾನದಲ್ಲಿದ್ದ ಅವರ ಕೆಲವು ಎಸೆಂಬ್ಲಿ ಭಾಷಣಗಳು ದೇಶಪ್ರೇಮ,ವಾದ ಶಕ್ತಿ ಮತ್ತು ಅಸಾಮಾನ್ಯ ಪ್ರತಿಭೆಯ ರಾಷ್ಟ್ರ ದಾಖಲೆಗಳಾಗಿವೆ 1942ರವರೆಗಿನ ಕೆಲವು ವರುಷಗಳತನಕ ಅವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗಿದ್ದರು. 1940ರ ವ್ಯಕ್ತಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ಥಾನಬದ್ಧ ಕೈದಿಯಾದವರು ಈ ಬಾರಿಯೂ ರಾಜಿಲೆಯ ನಿಮಿತ್ತ ಬಿಡುಗಡೆಗೊಂಡರು.

ಕಳೆದ ವರುಷದ ಸಿಮ್ಲಾ ಸಮ್ಮೇಳನಕ್ಕೆ ಅಸ್ತಿವಾರವಾದ ಭುಲಾಭಾಯಿ-ಲಿಯಾಖತ್ ಒಪ್ಪಂದದ ಮೂಲಕರ್ತರು ದೇಸಾಯಿಗಳೇ. ಆ ಬಾರಿ ಸಿಂಧ್ ಮಾಜೀ ಮಂತ್ರಿ ಖುರ್ರೋರ ಕಡೆಯಿಂದ ಬಂದಿದ್ದ 75 ಸಾವಿರ ರೂ. ರುಸುಮಿನ ವಕಾಲತ್ತುಬಿಟ್ಟು ಅವರು ಸಿಮ್ಲಾಕ್ಕೆಹೋಗಿದ್ದರು.

ಅಂತ್ಯಕಾಲದಲ್ಲಿ ಅವರ ಕೀರ್ತಿ ಲೋಕವ್ಯಾಪಿಯಾದುದು ಶಾನವಾಜ್-ಸೆಹಾಲ್-ಧಿಲ್ಲೋನರ ಖಟಲೆಯ ಕಾಲಾವಧಿಯಲ್ಲಿ ತೋರಿದ ಅಸಾಮಾನ್ಯ ಪ್ರತಿಭೆಯಿಂದ. ಆ ಕೆಂಪುಕೋಟೆ ವಿಚಾರಣೆ ಕೊನೆಯ ಶ್ರೀ. ಭುಲಾಭಾಯಿಗಳ ವಾದ ಧಾರೆಯು, ಲೋಕದ ಅಗ್ರಗಣ್ಯ ಕಾನೂನು, ವಾದ ತಜ್ಞರ ತಲೆದೂಗಿಸುವಷ್ಟು ಅಮೋಘವಿದ್ದಿತು. ಆ ವಿಚಾರಣೆ ಮುಗಿದಂದಿನಿಂದಲೂ ಅವರು ಅನಾರೋಗ್ಯದಿಂದಾಗಿ ಹಾಸಿಗೆ ಹಿಡಿದಿದ್ದರು. ಅವರಿಗಿರುವುದು ಶ್ರೀ. ಧಿರುಭಾಯಿ ದೇಸಾಯಿಯೆಂಬ ಏಕಮೇವ ಮಗ.

ತಾ ೬ರಲ್ಲಿ ಅವರ ಶವ ಯಾತ್ರೆಗೆ ಲಕ್ಷಾವಧಿ ಜನ ನೆರೆದು ದುಃಖಾರ್ತ್ರು, ಹಾರತುರಾಯಿಗಳನ್ನರ್ಪಿಸಿದರು. ಬೊಂಬಾಯಿಯ ಕಾಂಗ್ರೆಸ್ ಮಂತ್ರಿಗಳೆಲ್ಲಾ ಹಾಜರಿದ್ದರು. ಶಾನವಾಜ್ ಮೊದಲಾದ ಸುಭಾಸ್ ಸೈನಿಕರು ಸೆಲ್ಯೂಟ್ ಸಲ್ಲಿಸಿದ್ದರು. ಎಲ್ಲಾ ಪ್ರಮುಖರೂ ಭುಲಾಭಾಯಿ ನಿಧನಕ್ಕಾಗಿ ದುಃಖಾರ್ತ್ರರಾಗಿದ್ದಾರೆ.

WANTED

A Secondary Grade Trained teacher for the Higher Elementary School, Adi-Udipi.

Apply sharp to the Manager

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **10—5—46**ರಿಂದ

ಕಿಶೋರ್ ಸಾಹು ಮತ್ತು ಶೋಭನಾಸಮರ್ಥ್ ನಟಿಸಿರುವ

ಇನ್ ಸಾನ್

ಮುಂದಿನ ಚಿತ್ರ—

ಹಂಟರ್ ವಾಲಿ-ಕಿ-ಬೇಟಿ.

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142.
MADRAS.

ನಾಲ್ಕು ಮೂಲೆಗಳಂತಿರುವ ಈ ಧೀಮಂತರು ಯೋಗ್ಯರಲ್ಲವೆನ್ನುವದು ಅಂಗರ್ವದ ಮಾತನ್ನಷ್ಟೆ ಸಬಹುದು. ಅವರೆ ಮೌ. ಅಜಾದರನ್ನು ಬಿಟ್ಟರೆ ಬಾಕಿ ಮೂವರೂ ಸಂಧಾನ ಮಾತುಕತೆಗಳಿಗೆ ಹೇಳಿಸಿದ ಜನರಲ್ಲ. ನೆಹರುಗಳ ಮನೋವೃತ್ತಿಯು ಸಂದರ್ಭಾನುಸಾರವಾಗಿ ಒಪ್ಪಿಸಿಮ್ಲದ ಕಲ್ಲುಗಳನ್ನು ಕಠಿಣವಾದರೆ ಮತ್ತೊಮ್ಮೆ ಅಲ್ಲಿ ಬೀಳುವ ಹಿಮದಷ್ಟು ಮೃದುವಾಗಬಲ್ಲದು. ಆದರೆ ಯಾವ ಸಂದರ್ಭದಲ್ಲೂ ಸಂಧಾನ ಯೋಗ್ಯತೆಯು ಮೆತ್ತನೆಗೆಬಾರದು. ಸರ್ದಾರರ ಮಾತು ಮನಸ್ಸು ಸದಾಕಾಲ ಖಡ್ಗಧಾರಿಯಷ್ಟು ಹರಿತವಿರುವಾಗ ಮಾತುಕತೆಯಂತಹ ತರಕಾರಿ ಹೆಚ್ಚುವ ಕಾರ್ಯಕ್ಕದು ಹೇಳಿಸಿದ್ದೇ ಅಲ್ಲ. ಇನ್ನು ಗಡಿನಾಡಿನ ಗಾಂಧಿಯವರೋ? ಯುಕ್ತಿ ಚಾತುರ್ಯಗಳನ್ನು ತೆಗೆದಿಟ್ಟರೆ ಮತ್ತುಳಿಯುವ ಗಾಂಧಿಯೇ ಅಬ್ದುಲ್ ಗಫಾರ್ ಖಾನ್! ಸತ್ಯಾಹಿಂಸೆ, ಜನಸೇವೆಗನಗತ್ಯವಾದ ಒಂದೇ ಒಂದು ಶಬ್ದ ಹೊರಟರೆ ಅದವರಿಗೆ ಸಹನವಾಗುವದಿಲ್ಲ. ಅಂತಹ ಅಧಿಕ ಪ್ರಸಂಗಗಳಿಗೆ ಅವರ ಬಹಿಷ್ಕಾರ ಹೊರತು, ಅವುಗಳೊಡನೆ ವಾದಿಸಿ ಗೆಲ್ಲುವ ಕಲೆಯನ್ನೇ ಅವರು ಕಲಿತಿಲ್ಲ. ನಿಜಕ್ಕೂ ಆ ನೈಕ ಮೌಲಾನಾ ಆಜಾದರೊಬ್ಬರೇ ಘನತೆ, ದೃಢತೆ ಮತ್ತು ಚತುರತೆಯಿಂದ ವ್ಯವಹರಿಸಬಲ್ಲ ಮನುಷ್ಯ. ಅವರೊಂದಿಗೆ ಬಾಬುರಾಜೇಂದ್ರ ಪ್ರಸಾದ್, ರಾಜಾಜಿ ಮತ್ತು ಪಟ್ಟಾಭಿ ಹೋಗುತಿದ್ದರೆ ವಾದದ ಪಟ್ಟಿಗೆ ಕೊರತೆ ಬರುತ್ತಿರಲಿಲ್ಲ. ವಿಷಯವು ವಾದಿಸಿ ಗೆಲ್ಲಬೇಕಾದಲ್ಲಿಗೆ ಬಂದಿರುವಾಗ ಇಂಥವರೇ ಬೇಕಲ್ಲವೆ?

ಲೀಗ್, ಪ್ರತಿನಿಧಿಗಳ ಯೋಗ್ಯತೆ

ಆ ಕಡೆಯಲ್ಲಿಯೂ ಹೇಳಿಸಿದ ಜನವಿರುವದು ನವಾಬಜಾದಾ ಲಿಯಾಖತ್ ಅಲೀಖಾನರೊಬ್ಬರೇ. ಅಲೀಖಾನರು ವ್ಯವಹಾರಜ್ಞ ಮತ್ತು ಪಕ್ವ ಬುದ್ಧಿಯವರು. ಮಿ. ಜಿನ್ನರೊಡನೆ ಮಾತಾಡಲು [illegible] ತಲೆಯಲ್ಲಿ ಉಕ್ಕಿನ ಶಿರಸ್ತ್ರಾಣವೇ ಇರಬೇಕು! ಯಾಕೆಂದರೆ ಲೀಗ್ ನಾಯಕರ ಮಿದುಳಲ್ಲಿರುವದು ಸರ್ವಾಧಿಕಾರೀ ಗುಣವೊಂದೇ. ಸಾಮಾನ್ಯ ತಿಳುವಳಿಕೆ, ಅಥವಾ ಸಮಾನ ವ್ಯವಹಾರದ ಮಟ್ಟವೆಂತ ಅದೆಷ್ಟೋ ಮೇಲ್ಗಡೆಯಲ್ಲಿದೆ. ಕ್ರಿಪ್ಸರ ಬುದ್ಧಿಗೂ ಅದು ಎಟುಕುವಂತಹದಲ್ಲ. ಉಳಿದಿಬ್ಬರು ಲೀಗ್ ಪ್ರತಿನಿಧಿಗಳನ್ನು ಕೇಳಬಲ್ಲ ಜನರೂ ಕೂಡಾ ಮುಸಲ್ಮಾನರಿಗಿರಲಾರರು. ಆದ್ದರಿಂದ ಅವರೆಂಥವರೋ ಗೊತ್ತಿಲ್ಲ. ಆದರೆ ಒಂದು ಮಾತು ನಿಜ. ಕಾಂಗ್ರೆಸ್ ಮತ್ತು ಲೀಗುಗಳು ತಮ್ಮ ಪ್ರತಿನಿಧಿಗಳ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಸಗಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ, ಕಡಿಯಾಳಿ, ಉಡುಪಿ.

ಸಿಮ್ಲಾ ಸಮ್ಮೇಲನ ಫಲಿಸುವಂತಿದೆಯೆ?

([illegible]ನೇ ಪುಟದಿಂದ ಮುಂದುವರಿದುದು)

ಸ್ವೀಕರಿಸಿಕೊಂಡಾದರಲ್ಲಿಯೂ ಇಕ್ಕಡೆಯವರ ಹಠಮಾರಿತನ ಕಂಡುಬರುತ್ತಿದೆ ಹೊರತು ಸಂಧಾನಾತುರತೆ ಕಾಣುವದಿಲ್ಲ. ಕಾಂಗ್ರೆಸ್ ಪರವಾಗಿ ಮೌಲಾನಾ ಅಜಾದರು ಬಂದ ಸ್ಥಳಕ್ಕೇನೇ ತಾನು ಸಂಧಾನಕ್ಕೆ ಬರಲಾರೆನೆಂದೇ ಜಿನ್ನರ ಹಠ. ಮುಸಲ್ಮಾನರ ಕಡೆಯಿಂದ ತಾನಿರುವಾಗ ಇನ್ನೊಬ್ಬ ಮುಸಲ್ಮಾನನು ತನಗಿದಿರಾಗಿ ಬರುವದೆಂದರೆ ಜಿನ್ನರಿಗಷ್ಟು ಮೈಯ್ಯುರಿ. ಇದನ್ನು ತಿಳಿದು, ಉದ್ದೇಶಪೂರ್ವಕ ಕಾಂಗ್ರೆಸು ತನ್ನ ಕಡೆಯಿಂದ ಇಬ್ಬರು ಮುಸಲ್ಮಾನರನ್ನಾರಿಸಿದೆ. ಖಾನ್ ಗಫರ್ ಖಾನರನ್ನು ಆರಿಸಿದುದರಲ್ಲಿ ಮತ್ತೊಂದು ಉದ್ದೇಶವೂ ಇದೆ. ಕಳೆದ ವರುಷದ ಸಿಮ್ಲಾ ಸಮ್ಮೇಲನದಲ್ಲಿ ಮುಸಲ್ಮಾನರಿಗಾಗಿ ಜಿನ್ನರು ಪಾಕಿಸ್ತಾನ ಯಾಚಿಸಿದಾಗ, ಅವರಿಗೆ ಕೆನ್ನೆಗೇಟಾಡನದಂತಹ ಉತ್ತರ ಕೊಟ್ಟವರು ಓರ್ವ ಮುಸಲ್ಮಾನನೇ ಆದ ಡಾ। ಖಾನ್ ಸಾಹೇಬರು. ಮುಸ್ಲಿಂ ಪ್ರಾಂತ್ಯವಾದ ಗಡಿನಾಡಿಗೆ ಪಾಕಿಸ್ತಾನ ಬೇಡವೆಂಬುದನ್ನು ಅಲ್ಲಿಯ ಅನಭಿಷಿಕ್ತ ಮುಸ್ಲಿಂ ರಾಜನ ಬಾಯಿಯಿಂದ ಹೇಳಿಸಬೇಕೆಂದೇ ಈ ಬಾರಿ ಅಬ್ದುಲ್ ಗಫರ್ ಖಾನರನ್ನು ಆರಿಸಲಾಗಿದೆ. ಕಾಂಗ್ರೆಸ್ ಇವರನ್ನು ಆರಿಸಿದ್ದನ್ನು ಕಂಡು, ಇವರಿಗುತ್ತರ ಕೊಡುವವರು ಬೇಕೆಂಬುದಕ್ಕಾಗಿಯೇ, ಗಡಿನಾಡಿನ ಲೀಗ್ ನಾಯಕ ಅಬ್ದುಲ್ ರಾಬ್ ನಿಸ್ತಾರರನ್ನು ಜಿನ್ನರು ಆರಿಸಿಕೊಂಡರು. ಹೀಗೆ ಪ್ರತಿನಿಧಿ ನೇಮಕಗಳಲ್ಲೂ ಇಕ್ಕಡೆಯವರೂ ಪೈಪೋಟಿ ನಡಿಸಿದ್ದಾರೆ- ಸಂಗ್ರಾಮಕ್ಕಾಗುವವರನ್ನೇ ಆರಿಸಿಕೊಂಡಿದ್ದಾರೆ ಹೊರತು ಸಂಧಾನಕ್ಕಾಗುವವರನ್ನಲ್ಲ

ಆ ಕಾರ್ಯಕ್ರಮ

ಸಿಮ್ಲಾ ಸಮ್ಮೇಲನದ ಪ್ರತಿನಿಧಿಗಳ ಸ್ವರೂಪ ಹೀಗಿದ್ದರೆ ಅವರ ಮುಂದಿರುವ ಕಾರ್ಯಸೂಚಿಯು ಏನೂ ಅರ್ಥವಾಗದಂತಹದು, ಅಥವಾ ನೂರಾರು ಅರ್ಥ ಕೊಡುವಂತಹದಿದೆ! ಬ್ರಿಟಿಷ್ ಸಮಿತಿ ಬರುವ ಮೊದಲು ಹಿಂದೀ ಪ್ರಶ್ನೆ ಯಾವ ರೂಪದಲ್ಲಿತ್ತೋ ಅದೇ ರೂಪದಲ್ಲಿ ಇಂದೂ ಇದೆ ಎಂಬುದೊಂದನ್ನೇ ಈ ಕಾರ್ಯಕ್ರಮವು ಸೂಚಿಸುತ್ತದೆ. ಕಾಂಗ್ರೆಸ್, ಲೀಗ್ ಅಧ್ಯಕ್ಷರಿಗೆ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲೋರೆನ್ಸರಿಂದ ಬಂದ ಆಮಂತ್ರಣ ಪತ್ರದಲ್ಲಿ ನಮೂದಿಸಲ್ಪಟ್ಟಿದ್ದ ಕಾರ್ಯಕ್ರಮಗಳು ಇಂತು: (1) ರಕ್ಷಣೆ, ವಿದೇಶ ಸಂಬಂಧ ಮತ್ತು ಸಂಚಾರ ವಾಹಿವಾಟುಗಳ ಅಧಿಕಾರವಿರುವ ಒಂದು ಭಾರತೀಯ ಯೂನಿಯನ್ ನಿರ್ಮಾಣವಾಗಬೇಕು (2) ಕ್ಷೇತ್ರಾಧಿಕಾರ ಸಮೇತ ಮಿಕ್ಕೆಲ್ಲಾ ಅಧಿಕಾರಗಳೂ ಪ್ರಾಂತ್ಯಗಳಿಗಿರತಕ್ಕದ್ದು. ಅತ್ಯಧಿಕ ಜನಸಂಖ್ಯೆಯನ್ನಾಧರಿಸಿ ಮುಸ್ಲಿಂ ಕ್ಷೇತ್ರ ಮತ್ತು ಮುಸ್ಲಿಮೇತರ ಕ್ಷೇತ್ರವಾಗಿ ಪ್ರಾಂತ್ಯಗಳು ಪುನರ್ಘಟನೆಗೊಂಡು ತಮ್ಮ ಹಿತಸಂಬಂಧ ರಚಿಸಿಕೊಳ್ಳುವ ಸ್ವಾತಂತ್ರ್ಯ ಪಡೆಯುತ್ತವೆ (3) ಹಿಂದೀ ಸಂಸ್ಥಾನಗಳು ಯೂನಿಯನ್ ಸರಕಾರದೊಡನೆ ಒಂದು ಮೂಲಭೂತ ಒಪ್ಪಂದ ಮಾಡಿಕೊಂಡು ಹಿಂದೀ ಯೂನಿಯನ್ನೊಡನೆ ಕಟ್ಟಳೆಗೆ ಸೇರಿಕೊಳ್ಳಬೇಕು. ತಮಗೆ ಪ್ರತ್ಯೇಕ ರಾಷ್ಟ್ರವಾಗಬೇಕೆಂಬ ಮುಸ್ಲಿಂ ಲೀಗಿನ ಹಠ, ಮತ್ತು ಅಖಿಲ ರಾಷ್ಟ್ರಕ್ಕೊಂದು ಕೇಂದ್ರಾಡಳಿತೆ ಬೇಕೆಂಬ ಕಾಂಗ್ರೆಸಿನ ಛಲ ಆ ತುದಿ, ಈ ತುದಿಯಾದರೆ ಬ್ರಿಟಿಷ್ ರಾಯಬಾರಿಗಳು ಮಧ್ಯ ದಾರಿಯಲ್ಲಿ ನಿಂತಿದ್ದಾರೆಂಬುದನ್ನು ಈ ಕಾರ್ಯಕ್ರಮ ಸೂಚಿಸುತ್ತದೆ. ಮಾತ್ರವಲ್ಲ, ಈ ಸೂತ್ರಗಳ ಭಾವ, ಅರ್ಥ ಮತ್ತು ಪದಗಳಲ್ಲಿ ಕೂಡಾ ಸ್ಪಷ್ಟತೆಯಿಲ್ಲ. ಹಿಂದೀ ಯೂನಿಯನ್ ಎಂದರೆ? ಅದು ಜಾಗತಿಕ ಸಂಘದಂತೆ ಮುಸ್ಲಿಂ ಮತ್ತು ಮುಸಲ್ಮಾನೇತರ ಸರಕಾರಗಳ ಪ್ರತಿನಿಧಿಗಳ ನಾಮ ಮಾತ್ರ ಕೂಟವೆಂದಾದರೆ? ಅದಕ್ಕೊಂದು ನ್ಯಾಯವಿಧಾಯಕ ಸಭೆ ಮತ್ತು ಹಣಕಾಸಿನ ಅಧಿಕಾರ ದೊರೆಯದಿದ್ದರೆ? ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯಗಳೆಂದರೆ? ಮುಸ್ಲಿಂ ಬಹುಸಂಖ್ಯೆಯಿರುವ ಗಡಿನಾಡು ಮುಸ್ಲಿಂ ಕ್ಷೇತ್ರದೊಳಗೆ ಸೇರಲೊಪ್ಪದಿದ್ದರೆ? ಪಂಜಾಬು, ಬಂಗಾಳಗಳಂತಹ ಪ್ರಾಂತ್ಯಗಳ ಎಲ್ಲಾ ಭಾಗಗಳಲ್ಲೂ ಮುಸ್ಲಿಂ ಬಹುಸಂಖ್ಯೆಯಿಲ್ಲದಿರುವಾಗ ಅವುಗಳನ್ನೂ ಮುಸ್ಲಿಂ ಕ್ಷೇತ್ರದೊಳಗೆ ಸೇರಿಸಿಕೊಂಡರೆ? ಇತ್ಯಾದಿ ಹತ್ತು ಹಲವು ರೆ, ರೆ, ರೆ, ರೆ, ಗಳೇಳುತ್ತವೆ. ಈ ಆಕ್ಷೇಪಗಳನ್ನೆಲ್ಲಾ ಮೌಲಾನಾ ಆಜಾದರು ಪತ್ರ ಮೂಲಕ ಬ್ರಿಟಿಷ್ ಸಮಿತಿಗೆ ತಿಳಿಸಿದ್ದರು

ಲೀಗ್ ಪಕ್ಷಪಾತವೆ?

ಕಾಂಗ್ರೆಸ್ ಭಾಗಿಯಾದುದಕ್ಕಿಂತಲೂ ಹೆಚ್ಚಿನ ಆಶ್ಚರ್ಯದ ವಿಷಯವೆಂದರೆ ಲೀಗ್ ಭಾಗಿಯಾದುದು. ಪಾಕಿಸ್ತಾನಕ್ಕೆ ಪೂರ್ವ ಸಮ್ಮತಿಯಿಲ್ಲದ ಯಾವ ವ್ಯವಸ್ಥೆಯಲ್ಲೂ ತಾವು ಭಾಗವಹಿಸುವಂತಿಲ್ಲ; ಓರ್ವ ಮುಸಲ್ಮಾನನೇ ಕಾಂಗ್ರೆಸ್ ಪ್ರತಿನಿಧಿಯಾಗಿ ಬರುವ ಸಂಧಾನ ಮಾತುಕತೆಗಳಿಗೆ ತಾವು ಹೋಗುವಂತಿಲ್ಲ, ಎಂಬುದು ಮಿ. ಜಿನ್ನರ ಎರಡು ಶರ್ತಗಳು. ಈ ಬಾರಿ ಎರಡಕ್ಕೂ ಭಂಗಬಂದಂತೆ ಕಾಣುತ್ತದೆ. ಅವರೆ ತಮ್ಮ ಸೂತ್ರಗಳನ್ನು ಲೀಗಿಗನುಕೂಲವಾಗಿ 'ಎಳೆಯಲಾಗುವದೆಂಬ ಆಶ್ವಾಸನೆ ಬ್ರಿಟಿಷ್ ಪ್ರತಿನಿಧಿಗಳಿಂದ ಮಿ. ಜಿನ್ನರಿಗೆ ದೊರೆತಿರಬೇಕು ಎಂಬ ಸಾಧಾರ ಊಹೆಯಿದೆ. ಪೆಥಿಕ್ ಲೋರೆನ್ಸರ ಆಮಂತ್ರಣ ಪತ್ರ ಬರುವ ವರೆಗೂ ಕಾರ್ಯಕ್ರಮಗಳೇನೆಂಬುದು ಕಾಂಗ್ರೆಸಿನವರಿಗೆ ತಿಳಿದಿರಲಿಲ್ಲ. ಆದರೆ ಲೀಗ್ ಪಾಳಯದಲ್ಲಿ ಈ ಕುರಿತ ಆ ಮೊದಲೇ ಚರ್ಚೆ ನಡೆದಿತ್ತು. ಮಿ. ಜಿನ್ನರ ಒಪ್ಪಿಗೆ ಪಡೆದು, ಆದರೆ ಕಾಂಗ್ರೆಸ್ ಪ್ರಮುಖರನ್ನು ವಿಚಾರಿಸುವ ಆಗತ್ಯ ಕಾಣದೆ, ಬ್ರಿಟಿಷ್ ರಾಯಭಾರಿಗಳು ಕಾರ್ಯಕ್ರಮವನ್ನು ತಯಾರಿಸಿದ್ದರು. ಅದಕ್ಕನುಗುಣವಾಗಿ ಕೇಂದ್ರಾಧಿಕಾರಕ್ಕೆ 'ಫೆಡರೇಶನ್' ಅಥವಾ 'ಕನ್ಫೆಡರೇಶನ್' (ಈ ಶಬ್ದಕ್ಕೆ ಕಾಂಗ್ರೆಸ್ ಬದ್ಧ ವಿರೋಧಿ) ಎಂಬ ಹೆಸರಿಡದೆ 'ಇಂಡಿಯನ್ ಯೂನಿಯನ್' ಎಂಬ ನಾಮಕರಣ ಮಾಡಿದ್ದಾರೆ. ಈ ಯೂನಿಯನು ಶಾಸನ ಸಭೆಯಾಗಲೀ, ಹಣಕಾಸಿನ ಅಧಿಕಾರವಾಗಲೀ ಇಲ್ಲದೆ ಟೊಳ್ಳಾಗಿ ಹೇಳದರೆ-ವತ್ತ ಮುಸಲ್ಮಾನ್ ಮತ್ತು ಮುಸಲ್ಮಾನೇತರ ಕ್ಷೇತ್ರಗಳಾಗಿ ವಿಂಗಡಿಸಲ್ಪಟ್ಟ ಭಾಗಗಳೇ ಪೂರ್ಣಾಧಿಕಾರ ದೊರೆ[illegible]ವು; ಮಿ. ಜಿನ್ನರ ಬೇಡಿಕೆ ಸಂಪೂರ್ಣ [illegible] ಲಿಸದಂತಾಗುವದು. ದೂರದೃಷ್ಟಿಯಿಂದ ಪರಿಶೀಲಿಸಿದರೆ ಈ ಬಾರಿ ತೀರ್ಮಾನಕ್ಕೆ [illegible]ದ ಹೊಣೆ ಕಾಂಗ್ರೆಸಿಗರಮೇಲೆ ಬೀಳುವ ಸಂಭವವಿದೆ. 'ಮುಸ್ಲಿಮರಿಗೆ ವಿಶೇಷ ಪ್ರಾಯಾತಿಯುಳ್ಳ ತಾತ್ಕಾಲಿಕ ಸರಕಾರವೊಂದನ್ನು ಕೂಡಲೇ ಸ್ಥಾಪಿಸಿ ಮುಂದಿನ ಶಾಶ್ವತ ರಾಜ್ಯವ್ಯವಸ್ಥೆಯ ಹೊಣೆಯನ್ನು ಅದರ ಪಾಲಿಗೊಪ್ಪಿಸಿ ಬ್ರಿಟಿಷರು ಹೊರಟು ಹೋಗಲಿ' ಎಂಬುದೇ ಕಾಂಗ್ರೆಸಿನ ಬೇಡಿಕೆ. ಆದರೆ ತಾತ್ಕಾಲಿಕ ಸರಕಾರದ ಪ್ರಸ್ತಾಪವೇ ಸಿಮ್ಲಾ ಕಾರ್ಯಕ್ರಮ ಪಟ್ಟಿಯಲ್ಲಿಲ್ಲ. ಆದ್ದರಿಂದ ಸಿಮ್ಲಾ [illegible] ಬೇಂದರಕ್ಕಿಷ್ಟೆ, ಬೇರಾವಾಗಲೂ ಮನಸ್ಸನ್ನು ಕೊಡದೆ ಸಿಮ್ಲಾ ಸಮ್ಮೇಲನ ಬಿರಿದರೆ ಆಶ್ಚರ್ಯವಾಗದು!

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ಕಳೆದ ವರ್ಷ ಪಾಲುದಾರರಿಗೆ ಸೇಕಡಾ 6½ ರಂತೆ ಲಾಭಾಂಶ ಹಂಚಿದ ಪ್ರಗತಿಪರ ಸಂಸ್ಥೆ.

ತಾ. 12—5—'46ರಲ್ಲಿ ನಡೆದ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಭಂಡವಾಳವು ರೂಪಾಯಿ ಒಂದು ಲಕ್ಷಕ್ಕೆ ಏರಿಸಲ್ಪಡಲಿದೆ.

ಡೈರೆಕ್ಟರರು.

ಶ್ರೀ. ಕೆ. ಜಿ. ಬಲ್ಲಾಳ್, ಬಿ. ಎ., ಎಲ್.ಎಲ್. ಬಿ., ವಕೀಲ್, ಉಡುಪಿ. (ಚೆಯರ್ ಮನ್.)

ಶ್ರೀ ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಡೆ, ಮಾಜಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್.

ಶ್ರೀ. ಎಂ. ಎಸ್. ಪೆಜತ್ತಾಯ, ಏಜಂಟ್, ಫಲಿಮಾರು ಮಠ, ಉಡುಪಿ

ಶ್ರೀ. ಕೆ. ಹೊನ್ನಯ ಶೆಟ್ಟಿ, (ಮೆನೇಜಿಂಗ್ ಡೈರೆಕ್ಟರ್)

ಉಡುಪಿ

ಕೆನರಾ ಶಿಟಿಜನ್ ಶಿಫ್ ಕೊಲೇಜು ಮಣಿಪಾಲ– ದ. ಕ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಇನೇ ತಾ 15ರಿಂದ ಮಣಿಪಾಲದಲ್ಲಿ ಒಟ್ಟು 15 ದಿನಗಳಿಗಾಗಿ ಸ್ವತಂತ್ರ ರಾಷ್ಟ್ರದ ನಾಗರಿಕತ್ವಕ್ಕೆ ತರಬೇತುಗೊಳಿಸುವ ಶಿಕ್ಷಣ ಶಿಬಿರವು ತೆರೆಯಲ್ಪಡುವುದು. ಸಮಗ್ರ ಗ್ರಾಮಸೇವೆ, ಸಹಕಾರಪ್ರಚಾರ, ರಾಷ್ಟ್ರ ಸೇವಾದಳ ಶಿಕ್ಷಣ, ಜಪಾನೀ ಹಿಂದುಸ್ಥಾನೀ ಪ್ರಥಮ ಚಿಕಿತ್ಸೆ, ಮುಂತಾದ ಕಾರ್ಯಕ್ರಮಗಳಿವೆ. ಪ್ರವೇಶ ನಾಕಲು ರೂ 10 ಸೇರಬಯಸುವ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಸಂಘದ ಕಡೆಯಿಂದ ಅಥವಾ ಸ್ಥಳೀಯ ಕಾಂಗ್ರೆಸ್ ಕಮಿಟಿಯಿಂದ ಯೋಗ್ಯತಾ ಪತ್ರಗಳನ್ನು ಮೇ ತಾ 10ರೊಳಗೆ ದಾಖಲು ಮಾಡಬೇಕು. ಮಾಹಿತಿಗೆ ಬರೆಯಬೇಕಾದ್ದು ದ. ಕ. ವಿದ್ಯಾರ್ಥಿ ಕಾಂಗ್ರೆಸ್ಸು ಆಫೀಸು ಹೋಸ್ಟೆಲ್ ರೋಡ್ ಉಡುಪಿ.

ಮಕ್ಕಳ ಕೂಟ ದ ಕ ಜಿಲ್ಲಾ ತಾ 25 ರಲ್ಲಿ ಮೋಡರ್ನ್ ಹಾ ಶಾಲೆಯಲ್ಲಿನ ಇವೇ ಮೇ ತಿಂಗಳ ತಾ 27 28 29ರಲ್ಲಿ ಮೋಡರ್ನ್ ಶಾಲೆಯಲ್ಲೇ ಮಕ್ಕಳ ಸಮ್ಮೇಳನ ನಡಿಸುವ ನಿರ್ಧಾರವಾಗಿ ಕಾರ್ಯಕ್ರಮಗಳನ್ನು ಹಾಕಿದೆ. ಮೂರು ದಿನಗಳಲ್ಲಿ ಮಕ್ಕಳ ವಿವಿಧ ಕಲಾಸ್ಪರ್ಧೆಗಳು, ಹಿರಿಯರ ಉಪನ್ಯಾಸಗಳು, ಪ್ರದರ್ಶನ ಇತ್ಯಾದಿ ನಡೆಯುವವು.

ಮೇ ದಿನಾಚರಣೆ– ... ಸಂಬಂಧವಾಗಿ ... ತಾ 1ರಲ್ಲಿ ಉಡುಪಿಯ ... ಕಾರ್ಮಿಕ ಸಂಘಗಳ ವತಿಯಿಂದ ... ಪ್ರಭಾತಫೇರಿ. ಅಪರಾಹ್ನ ಮೆರವಣಿಗೆ ಗಾಂಧಿ ಮೈದಾನದಲ್ಲಿ ... ಜನಿಕ ಸಭೆಯು ಶ್ರೀ ಕೆ. ಕೇಶವ ... ರ ಅಧ್ಯಕ್ಷತೆಯಲ್ಲಿ ನೆರೆದಿ ಶ್ರೀ ಕೆ. ರಾ... ಮೊದಲಾದವರ ಭಾಷಣಗಳಾದುವು.

ಉದ್ಯಾವರ– ತಾ. 6-5 46ರಲ್ಲಿ ಬಾಸೆಲ್ ಮಿಶ್ಯನ್ ಹಾ. ಪ್ರಾ. ಶಾಲೆಯ ವಾರ್ಷಿಕೋತ್ಸವವು ಡಾಕ್ಟರ್ T. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪೈಗಳು ಶಾಲಾಭಿವೃದ್ಧಿಯ ಕುರಿತು ಮಾತಾಡಿ ಶ್ರೀ ... ನಾಟಕವು ... ಕೊನೆಗೆ ... ಹೋದರು. ... ಮಾತಾಡಲಿಲ್ಲ. ... ಶಾಲೆಯ ಅಭಿವೃದ್ಧಿ ಹೊಂದುವ ... ಕಂಡುಬರುತ್ತದೆ. ... ಶಾಲೆಯ ... [illegible]

ದ ಕ ಜಿಲ್ಲೆಯಲ್ಲಿ ಗೇರುಬೀಜ ಸುಲಿಯುವ ಸುಧಾರಿತ ಕ್ರಮದ ಪ್ರದರ್ಶನ– ಕಲ್ಲಿಕೋಟೆಯ ಇಂಡಸ್ಟ್ರೀಸ್ ಆಫೀಸರರು ಪ್ರಕಟಣೆಯೊಂದನ್ನು ಹೊರಡಿಸುತ್ತ ಗೇರುಬೀಜ ಸುಲಿಯುವ ಸುಧಾರಿತ ಕ್ರಮಗಳನ್ನು ದ ಕ ಜಿಲ್ಲೆಯಲ್ಲಿ ಈ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಪ್ರದರ್ಶಿಸಲಿರುವರು. ಹೆಚ್ಚಿನ ಮಾಹಿತಿಯನ್ನು ಆಯಾಯ ತಾಲೂಕು ಕೃಷಿ ಡೆಮಾನ್‌ಸ್ಟ್ರೇಟರರಿಂದ ಪಡೆಯಬಹುದು. ಜೂನ್ ತಾ 3ರಿಂದ 9ರ ತನಕ ಸುಳ್ಯ; 10ರಿಂದ 17ರ ತನಕ ಮಂಗಳೂರು, 18ರಿಂದ 24ರ ತನಕ ಉಡುಪಿ, 25ರಿಂದ ಜುಲಾಯ್ 1ರ ತನಕ ಕಾರ್ಕಳ ಮತ್ತು 2ರಿಂದ 8ರ ತನಕ ಮೂಡಬಿದ್ರೆ.

ಕಟಪಾಡಿ– ಈ ಮೊದಲು 33 ವರುಷ ಪ್ರಥಾಕರ ... ಸಂಗಿತದಲ್ಲಿ ... ಆಚಾರಕ್ಕೆ ಸಮಾನದ ಭಟ್ಟರ ... ದೇವಸ್ಥಾನದಲ್ಲಿ ಕಟಪಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಳೆದ ಮಾಘ ಶುದ್ಧ ... ಮೊದಲ್ಗೊಂಡು ಮಧ್ಯನಪನ ಪರಿಯಂತರ ಅಗಸೋಕ್ತ ಶ್ರೀಮನ್ ಮಹಾರಥೋತ್ಸವ ಯಜ್ಞ, ಯಾಗ, ಜಪತಪ ಇತ್ಯಾದಿಗಳು ಭಕ್ತ ಶಿರೋಮಣಿಗಳ ಸಹಕಾರದಿಂದಲೂ ಕೃಷ್ಣಾಪುರ ... ಶ್ರೀ ... ಅಣ್ಣಪ್ಪ ನಾಯಕ ಮೊದಲಾದವರ ಪ್ರೋತ್ಸಾಹದಿಂದಲೂ ಬಹು ವಿಜೃಂಭಣೆಯಿಂದ ಜರಗಿದುವು.

ಸಿಟಿಜನ್ ಶಿಫ್ ಕಾಲೇಜು, ಬೆಳಗಾಂ– ಅಖಿಲ ಕರ್ನಾಟಕ ಸ್ಟೂಡೆಂಟ್ಸ್ ಕಾಂಗ್ರೆಸಿನ ವತಿಯಿಂದ ಮೇಲ್ಕಂಡ ಕಾಲೇಜು ಸ್ಥಾಪಿತವಾಗಿರುವುದು. ಈಗಿನ ಶಿಕ್ಷಣದ ರೀತಿಯ ಗುಣದೋಷಗಳನ್ನು ವಿಮರ್ಶಿಸಿ ಇಂದಿನ ತರುಣರು ಸ್ವತಂತ್ರ ವಾತಾವರಣಕ್ಕನುಚಿತವಾದ ಶಿಕ್ಷಣ ಪಡೆಯುವ ಸಲುವಾಗಿಯೇ ಈ ಸಂಸ್ಥೆಯು ಏರ್ಪಟ್ಟಿದ್ದಾಗಿದೆ. ಈ ತಿಂಗಳ 25ನೆ ತಾರೀಕಿಗೆ ಕ್ಲಾಸು ಆರಂಭವಾಗಿ 15 ದಿವಸಗಳ ತನಕ ಜರಗಲಿರುವುದು. ಒಂದು ನೂರು ಮಂದಿಗೆ ಮಾತ್ರವೇ ಶಿಕ್ಷಣದ ವ್ಯವಸ್ಥೆ ಮಾಡಲಾಗಿಯದೆ. ಉಮೇದ್ವಾರಿಗಳು ಸ್ಥಳೀಯ ಸ್ಟೂಡೆಂಟ್ಸ್ ಯೂನಿಯನ್ ಮೂಲಕ ತಮ್ಮ ಅರ್ಜಿಗಳನ್ನು ರೂ. 15/- ಸಮೇತ ತಾ. 18ರೊಳಗಾಗಿ ಕಳುಹಿಸಬೇಕು. ಊಟವಸತಿಯ ವ್ಯವಸ್ಥೆ ಮಾಡಲಾಗುವುದು. ವಿದ್ಯಾರ್ಥಿನಿಯರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಅಪೇಕ್ಷಿಸುವವರು– ಜನರಲ್ ಸೆಕ್ರೆಟರಿ, ಅಖಿಲ ಕರ್ನಾಟಕ ಸ್ಟೂಡೆಂಟ್ಸ್ ಕಾಂಗ್ರೆಸ್, ಲಾ ಕಾಲೇಜು, ಹಾಸ್ಟೆಲ್, ತಿಲಕ್‌ವಾಡಿ, ಬೆಳಗಾಂ ಅವರಿಗೆ ಬರೆಯಬೇಕು.

ಬಂಟರ ಯಾನೆ ನಾಡವರ ಸ್ವಜಾತಿ ಬಂಧುಗಳಲ್ಲಿ ವಿನಂತಿ.

ಕೆಲವು ಸಮಯದಿಂದ ನಮ್ಮ ಜಾತಿಯ ಅನೇಕ ಮದುವೆಗಳು ಆಗುತ್ತಾ ಇನ್ನು ಕೂಡಾ ಆಗಲಿಕ್ಕಿದೆ. ಸದ್ರಿ ಮದುವೆಗಳಲ್ಲಿ ಬಂದ ಅತಿಥಿಯವರಿಗೆ ಹೋಟೆಲುಗಳಿಂದ ಕಾಫಿ ಫಲಹಾರವನ್ನು ಒದಗಿಸಿ ಉಪಚರಿಸುವ ಕ್ರಮವು ಈಗ ರೂಢಿಯಲ್ಲಿದೆ. ಬರಗಾಲದ ಈ ಸಮಯದಲ್ಲಿ ನಾವು ಅನೇಕ ದೂರದ ಹಳ್ಳಿಗಳಿಂದ ಬಂದು ಪೇಟೆಗಳಲ್ಲಿ ಅನಾವಶ್ಯಕವಾದ ಅಳಿಯಸಂತಾನ ರೀತಿಯನ್ನು ಪ್ರದರ್ಶಿಸುವ ಪ್ರಯತ್ನವು ಎಷ್ಟರ ಮಟ್ಟಿನ ನ್ಯಾಯವಿರುವುದೆಂದು ನೀವೇ ಊಹಿಸಿರಿ. ಇನ್ನು ಮುಂದಿನ ವಿಭಾಗಗಳಲ್ಲಿಯಾದರೂ ಅದನ್ನು ನಿಲ್ಲಿಸಿ ... ಅಲಂಕಾರಗಳನ್ನೂ ವೈಭವದ ತಿಂಡಿ ... ಗಳನ್ನೂ ಹೆಗ್ಗಳಿಕೆಗಳನ್ನೂ ಮೂಲೆಗೊತ್ತಿ, ನಿಮ್ಮ ... ಸರಬತ್ ಫಲಾದಿ ಸತ್ಕಾರಗಳಿಂದ ಉಪಚರಿಸುವ ರೀತಿಯನ್ನು ... ತವಾಗುವಂತೆ ಪ್ರೋತ್ಸಾಹಿಸಿ ಅಲ್ಲಲ್ಲಿಯ ಪೇಟೆಗಳಲ್ಲಿಯೇ ವಿವಾಹಾದಿ ಶುಭ ಕಾರ್ಯಗಳನ್ನು ನಾವು ಇಕೆ ನೆರವೇರಿಸಬಾರದಾಗಿ ಸರ್ವರೂ ಆಲೋಚಿಸುವಂತೆ ವಿನಂತಿಸುತ್ತೇವೆ ಸಹಿ: ವೈ. ಮಂಜಯ್ಯ ಶೆಟ್ಟಿ, ಬಿ. ಎ. ಎಲ್ ಎಲ್. ಬಿ, ಎಡ್ವೊಕೇಟ್, ಕುಂದಾಪುರ, ಪಿ ಜಯರಾಮ ಶೆಟ್ಟಿ. ಎಮ್. ಎ. ಬಿ. ಎಲ್ ಮೇನೆಜರ್, ದಿ. ವಿಜಯಾಬ್ಯಾಂಕ್. ಮಂಗಳೂರು. ಎಮ್. ಆರ್. ವಿ. ಪೂಂಜ. ಏಜಂಟ್ ಮಾರ್ಕೆಟಿಂಗ್ ಕಂಪೆನಿ ಓಫ್ ಇಂಡಿಯಾ, ಮಂದಾರು ರಾಮಣ್ಣ ಹೆಗ್ಡೆ. ಬಿ. ಎ. ಮಂದಾರು ಗ್ರಾಮ. ಉಡ್ಪಿ.

ಮಂಗಳೂರಲ್ಲಿ ಹರತಾಳ್– ತಾ 7ರ ... ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ವಿನಂತಿಯ ಮೇರೆಗೆ ಮಂಗಳೂರು ಪಟ್ಟಣದಲ್ಲಿ ... ನೇತಾಜಿಯವರ ... ಸಲುವಾಗಿ ಹರತಾಳ ಆಚರಿಸಲ್ಪಟ್ಟಿತು. ಸಂಜೆ ಮೈದಾನಿನಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು.

BANK WITH THE LARGEST CONNECTIONS ON THE WEST COAST.

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD: 1925

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



... ಬಾಣಂತಿಯರಿಗೆ ಬರುವ ... ಕೇವಲ ... ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ... ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು. ದ.ಕ.**

ಸ್ಟಾಕಿಸ್ಟರು ಡಾ. ಪಿ. ಕೆ. ಶಿವರಾವ್ ರಾವ್, ಕುಂಜಿಬೆಟ್ಟು, ಉಡುಪಿ

ಕುಟುಂಬದೊಳಗಿನ ಚಿಲ್ಲರೆ ಬೇನೆ

[illegible]

ಅಮೃತಾಂಜನ ಲಿಮಿಟೆಡ್ ... ಮುಂಬಯಿ

ENGLISH MADE EASY
(SELF ENGLISH STUDY)

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊಂಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0

1—8—0ನ್ನು ಮನಿಯೊರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

ದಕ್ಷಿಣ ಕನ್ನಡ

ಮಂಗಳೂರು.

ಜಿಲ್ಲೆಯಲ್ಲಿ ನೂಲಿನ ಕೊರತೆ— ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ನೂಲಿನ ಕೊರತೆ ಭೀಕರವಾಗಿರುತ್ತದೆ. ನೇಕಾರರಿಗೆ ತಿಂಗಳಲ್ಲಿ ೧೦-೧೫ ದಿನಗಳ ಕೆಲಸ ಮಾತ್ರ ಮಾಡಲು ನೂಲು ಸಿಗುವುದು. ಇಂದಿಗೆ ಜಿಲ್ಲೆಯಲ್ಲಿ, ನೂರುಗಟ್ಟಲೆ ನೇಕಾರರು ನಿರುದ್ಯೋಗಿಗಳಾಗಿದ್ದಾರೆ. ನೂಲಿನ ಮಿಲ್ಲುಗಳಿಂದಲೇ ಸೀದಾ ನೂಲು ಕೊಡುವ ನೇಯ್ಗೆ ಕಾರ್ಖಾನೆಗಳಲ್ಲಿ ಇನ್ನೂ ಕೆಲವು ತಿಂಗಳುಗಳಿಗೆ ಬೇಕಾದ ದಾಸ್ತಾನಿದ್ದರೂ, ಇತರ ಕಾರ್ಖಾನೆಗಳು ತುಂಬಾ ತೊಂದರೆಪಡುತ್ತಿವೆ. ನೂಲಿನ ಕೋಟ ತಕ್ಕಷ್ಟಿಲ್ಲ, ಇರುವ ನೂಲು ಸರಿಯಾಗಿ ವಿತರಣೆಯಾಗುವುದಿಲ್ಲ. ಈ ವಿಷಯದಲ್ಲಿ ಇದೇ ತಾ. ೨೭ರಂದು ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಪ್ರತಿನಿಧಿಗಳಾದ ಶ್ರೀ। ಎ ಶಾಂತಾರಾಮ ಪೈ ಅವರು ಮದ್ರಾಸ್ ಪ್ರಾಂತಿಕ ಟೆಕ್ಸ್‌ಟಾಯಿಲ್ ಕಮಿಶನರನ್ನು ಕಲ್ಲಿಕೋಟೆಯಲ್ಲಿ ಭೇಟಿಮಾಡಿ, ಚರ್ಚಿಸಿ, ಒಂದು ಮನವಿಯನ್ನು ಅವರಿಗೆ ಕೊಟ್ಟಿರುತ್ತಾರೆ. ಆ ಮನವಿಯಲ್ಲಿ, ನೂಲಿನ ಕೋಟ ಹೆಚ್ಚಿಸಬೇಕು, ವಿತರಣಾ ಸಮಿತಿಯಲ್ಲಿ ಮಜೂರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು, ದಾಸ್ತಾನಿರುವ ನೂಲನ್ನು ಇತರ ಕಾರ್ಖಾನೆಗಳ ಉಪಯೋಗಕ್ಕೆ ಒದಗಿಸಬೇಕು, ಪರಿಸ್ಥಿತಿಯನ್ನು ಕೂಡಲೇ ಸುಧಾರಿಸುವುದಕ್ಕಾಗಿ ೧೦೦೦ ೧೫೦೦ ಬೇಲ್ಸ್ ನೂಲನ್ನು ಜಿಲ್ಲೆಗೆ ಕಳುಹಿಸಬೇಕು— ಎಂಬ ಕೇಳಿಕೆಗಳು ಅಡಕವಾಗಿವೆ. ಟೆಕ್ಸ್‌ಟೈಲ್ ಕಮಿಶನರರು ಎಲ್ಲವನ್ನೂ ಶಾಂತ ರೀತಿಯಿಂದ ಕೇಳಿ, ಈ ಕುರಿತು ಅನುಕೂಲವಾಗಿ ವಿಚಾರಿಸಿ ತಿಳಿಸುತ್ತೇನೆಂದು ಭರವಸೆಯನ್ನಿತ್ತಿರುವರು.

ಶ್ರೀ। ಎಂ. ಕೆ ವೈದ್ಯರು- ಕಳೆದ ತಾ ೩ ರಂದು ನಗರದ ಸುಪ್ರಸಿದ್ಧ ದೇಶಿಯ ವೈದ್ಯರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಜನಪ್ರೀತರೂ, ಉದಾರಿಗಳೂ ಆಗಿದ್ದರು.

ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ- ನೆಯ ವಾರ್ಷಿಕ ಮಹಾಸಭೆಯು ತಾ ೨೮-೪ ೪೬ರಂದು ಮಂಗೂರಿನ ರಘುನಾಥಯ್ಯ ಸ್ಮಾರಕ ಭವನದಲ್ಲಿ ಶ್ರೀ। ಕೆ. ಕೃಷ್ಣರಾವ್ ಬಿ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣ, ಸಂಘದ ಕಾರ್ಯದರ್ಶಿಗಳಿಂದ ವರದಿ ವಾಚನದ ಬಳಿಕ, ಸಂಘದ ಅಧ್ಯಕ್ಷರಾದ ಶ್ರೀ। ಕೆ ಕೆ ಶೆಟ್ಟಿ, ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತರಾದ ಶ್ರೀ। ಶಾಂತರಾಮ ಪೈ ಮತ್ತು ದ ಕ. ಟ್ರೇಡ್ ಯೂನಿಯನ್ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ। ಎಸ್ ಎನ್. ಹೊಳ್ಳ ಇವರ ಭಾಷಣಗಳಾದವು. ಅನಂತರ ಚಾಲ್ತಿ ವರ್ಷದ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆದು ಶ್ರೀ। ಎಸ್. ಎನ್ ಹೊಳ್ಳರೂ ಶ್ರೀ। ಕೆ. ಕೆ ಶೆಟ್ಟರೂ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲ್ಪಟ್ಟು ಶ್ರೀ। ಹೊಳ್ಳರೇ ಬಹುಮತದಿಂದ ಆರಿಸಲ್ಪಟ್ಟರು. ಶ್ರೀ। ಎ ವಾಸು ಅವರು ಉಪಾಧ್ಯಕ್ಷರಾಗಿಯೂ, ಶ್ರೀ। ಮೋಹನ್ ಪಾಲ್ ಅವರು ಕೋಶಾಧಿಕಾರಿಗಳಾಗಿಯೂ, ಶ್ರೀ। ರಾಘವೇಂದ್ರ ಆಚಾರ್ಯ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಜಿಲ್ಲಾ ಬೋರ್ಡ್- ಸಭೆಯು ಇತ್ತೀಚೆಗೆ ಸೇರಿದಾಗ, ಈ ಜಿಲ್ಲೆಯ ೨೫ ಕೇಂದ್ರಗಳಲ್ಲಿ (ಈಗಿರುವ ಕೇಂದ್ರಗಳ ಹೊರತು) ಎಂದರೆ ೩೭ ಹಳ್ಳಿಗಳಲ್ಲಿ ಧರ್ಮಾರ್ಥ ಕಷ್ಟಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ಕುರಿತು ನಿರ್ಧಾರವಾಯಿತು. ಹೊಸತಾಗಿ ಆರಿಸಲ್ಪಟ್ಟ ಕೇಂದ್ರಗಳಿವು: ಬೈಂದೂರು, ಗಂಗೊಳ್ಳಿ, ಕೋಟೇಶ್ವರ, ಕಲ್ಯಾಣಪುರ, ಪಡುಬಿದ್ರಿ, ಫಲಿಮಾರು, ಬೈಲೂರು, ಸಾಣೂರು, ನಿಟ್ಟೆ, ಹೆಜಮಾಡಿ, ಮೂಲ್ಕಿ, ಬಂಟ್ವಾಳ, ಬೆಳ್ತಂಗಡಿ, ಪುಳ್ಳ, ವಿಟ್ಲ (ಕೇಪು), ಮಂಜೇಶ್ವರ ಹೊಸದುರ್ಗ.

ವೈಶ್ಯಶಿಕ್ಷಣ ಸಮಿತಿಯ- ಹೊಸ ಕಟ್ಟಡದ ಆರಂಭೋತ್ಸವವು ತಾ ೩೦ರಂದು ಜರಗಿತು. ಪೂನೆಯಲ್ಲಿ ಪ್ರೊಫೆಸರರಾಗಿರುವ ಕೆ ಎಂ ಖಾಡೆ ಅವರು ಸಮಾರಂಭದ ಅಧ್ಯಕ್ಷರಾಗಿದ್ದರು. ಜಿಲ್ಲಾ ಕಲೆಕ್ಟರರಾದ ಶ್ರೀ। ರಾಮವರ್ಮರಾಜರು ಹೊಸ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸುತ್ತಾ, ಈ ಕಟ್ಟಡವನ್ನು ಸುಮಾರು ೧೫ಸಾವಿರ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿ ಅದನ್ನು ಸಮಿತಿಯ ಹಾಗೂ ವೈಶ ಸಮಾಜದ ಉಪಯೋಗಕ್ಕಾಗಿ ದಾನವಾಗಿ ಕೊಟ್ಟ, ಸಮಿತಿಯ ದಾತೃಗಳಾದ ಶ್ರೀ. ಮುತ್ತು ವೈಕುಂಠ ಸೇಟರ ಔದಾರ್ಯವನ್ನು ಕೊಂಡಾಡಿದರು. ಕೊನೆಗೆ ಶ್ರೀ। ಮುತ್ತು ವೈಕುಂಠ ಸೇಟರ ತೈಲ ಚಿತ್ರದ ಅನಾವರಣವನ್ನು ಡಾ।ಟಿ ಮಾಧವ ಪೈಗಳವರು ನೆರವೇರಿಸಿದರು. ಮರುದಿನ, ವೈಶ್ಯವಿದ್ಯಾರ್ಥಿ ಸಂಘದ [ರಜತೋತ್ಸವವು ಪ್ರೊ। ಖಾಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಡೆಕಾರು- ಕಡೆಕಾರು ಶ್ರೀ ಮಹಾಗಣಪತಿ ಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವವು ತಾ 2-5 46ರಲ್ಲಿ ಶ್ರೀ ಎಸ್. ರಾಜಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಈ ಶಾಲೆಯ ಅಧ್ಯಾಪಕಿನಿಯರಲ್ಲೊಬ್ಬರಾದ ಕೆ ಗುಲಾಬಿಯವರಿಂದ ಶಾಲಾ ವರದಿವಾಚನವು ನಡೆದ ಬಳಿಕ ಮಕ್ಕಳ ಚಟುವಟಿಕೆಗಳಾದುವು. ಡಾಕ್ಟರ್ ಟಿ. ಮಾಧವ ಪೈಗಳವರು ಶಾಲಾಭಿವೃದ್ಧಿಯನ್ನು ಕೋರಿ ಊರಿನವರು ಶಾಲೆಗೆ ಕೊಡತಕ್ಕ ಪ್ರೋತ್ಸಾಹದ ಕುರಿತು ಮಾತನಾಡಿದರು. ಶ್ರೀಗಳಾದ ವಿ. ಆರ್ ಕಿದಿಯೂರ್ ಪಿ. ಸೀನಪ್ಪಸೆಟ್ರು ಸಂದರ್ಭೋಚಿತ ಭಾಷಣವಿತ್ತರು. ಶ್ರೀ ಪದ್ಮನಾಭ ಭಟ್ರಿಂದ 'ಸತ್ಯವಾನ್ ಸಾವಿತ್ರಿ' ಎಂಬ ಹರಿಕಥೆ ನಡೆಯಿತು.

ಶಿರ್ವ ಹೈಸ್ಕೂಲಿಗೆ ಅನುಮತಿ- ಶಿರ್ವದ ಬಿ. ಎಸ್. ವಿದ್ಯಾವರ್ಧಕ ಸಂಘದವರು ತಾವು ನಡಿಸುತ್ತಿರುವ ಶಾಲೆಯನ್ನು ಹೈಸ್ಕೂಲು ಮಾಡುವರೆ ಈ ಮೊದಲೇ ಮಾಡಿಕೊಂಡಿದ್ದ ಮನವಿಯನ್ನು ವಿದ್ಯಾ ಇಲಾಖೆಯ ಡೈರೆಕ್ಟರರು ಮನ್ನಿಸಿ ತಾ 3 6-19 46ರಿಂದ I, II ಮತ್ತು III ನೇ ಫೋರ್ಮು ಗಳನ್ನು ಪ್ರಾರಂಭಿಸುವರೆ ಅನುಮತಿಯಿತ್ತಿರುವದು ಸಂತೋಷಕರವಿದೆ. ಸ್ವಲ್ಪ ಸಮಯಕ್ಕೆ ಮೊದಲು ಡೈರೆಕ್ಟರರು ಸ್ವತಃ ಸ್ಥಳ ಸಂದರ್ಶನ ನಡಿಸಿ ವಿದ್ಯಾ ವರ್ಧಕ ಸಂಘದವರ ಸತ್ಕಾರ್ಯ ಕಲಾಪಗಳನ್ನು ಕಂಡು ಸಂತೋಷ ಸೂಚಿಸಿ ಹೋಗಿದ್ದರು. ಗ್ರಾಮಾಭ್ಯುದಯದ ನಿಕಮಾತ್ರ ಸದುದ್ದೇಶದಿಂದ ಸ್ಥಾಪಿಸಲ್ಪಟ್ಟು ಉಜ್ವಲ ಭವಿಷ್ಯವಿರುವ ಈ ವಿದ್ಯಾ ಸಂಸ್ಥೆಯನ್ನು ಸರ್ವರೂ ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ಮೂಲ್ಕಿ ಗ್ರಾಮಾಭಿವೃದ್ಧಿ- ಪರಿಷದ 30ನೇ ಸಭೆಯು ತಾ 28 4 46ಕ್ಕೆ ಜರಗಲಿಕ್ಕಿದ್ದುದು ಅನಿವಾರ್ಯ ಕಾರಣಗಳಿಂದಾಗಿ ತಾ 12 5 46ನೇ ಆದಿತ್ಯವಾರಕ್ಕೆ ಮುಂದುವರಿಸಲ್ಪಟ್ಟಿದೆ. ಈ ಸಮಯ ಸಪ್ತಾಹದ ದಿನಾಚರಣೆ ಮತ್ತು ಪಶುಂಬರ ತಿಂಗಳಲ್ಲಿ ಮೂಲ್ಕಿಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿರುವ ಪ್ರದರ್ಶನದ ಕುರಿತಾದ ವಿಚಾರಗಳು ಇತ್ಯರ್ಥಿಸಲ್ಪಡುವವು.

31 ನೇ ಸಭೆ ಕಟೀಲಲ್ಲಿ ತಾ 26 5-46ನೇ ಆದಿತ್ಯವಾರ ಜರಗುವುದು. ಎರಡೂ ಸಭೆಗಳಲ್ಲಿ ವಾಚನಾಲಯ ಏರ್ಪಾಡು ಇದೆ. ಎಂದು ಕಾರ್ಯದರ್ಶಿ ಶ್ರೀ. ಎಂ. ಆರ್. ಪೂಂಜರು ತಿಳಿಸುತ್ತಾರೆ.

ಸುಬ್ರಹ್ಮಣ್ಯ- ಶ್ರೀ ಸಂಪುಟ ನರಸಿಂಹ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ಜರಗುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಶ್ರೀ ಮಠದಲ್ಲಿ ಇದೇ ತಾ 15ನೇ ಬುಧವಾರ ಆರಂಭವಾಗಿ ತಾ 17ನೇ ಶುಕ್ರವಾರ ತನಕ ಜರಗಲಿರುವುದು. ಭಕ್ತಮಂಡಳಿಗೆ ಸುಸ್ವಾಗತವಿದೆ.

ಕುಂದಾಪುರ- ಗಂಗೊಳ್ಳಿ ಕಡವಿನ ಜಂಗಲು ನಾದುರುಸ್ತಿಯಾಗಿದ್ದು ಕೆಲವು ತಿಂಗಳುಗಳಿಂದ ಅನುಪಯೋಗಾವಸ್ಥೆಯಲ್ಲಿದೆ. ವಾಹನಗಳನ್ನು ಆಚೆ ಈಚೆ ಒಯ್ಯುವುದು ಜಂಗಲಿಲ್ಲದೆ ತೀರಾ ಕಷ್ಟವಾಗಿದೆ. ಸಂಬಂಧಪಟ್ಟ ಇಂಜಿನಿಯರರು ಈ ಕುರಿತು ವಿಚಾರಿಸಿಕೊಂಡು ಹೋದರೂ ಏನಾದರೊಂದು ಸುವ್ಯವಸ್ಥೆಯಾದಂತೆ ಕಂಡುಬರುವುದಿಲ್ಲ. ಇನ್ನಾದರೂ ಸಂಬಂಧಪಟ್ಟವರು ಈ ಕಡೆ ನಿಗಾ ಕೊಡುವರೇ?

ಹಾವಂಜೆ- ಇಲ್ಲಿ ಯೋಗ್ಯ ಜಾಗಲು ಇದ್ದಾಗ್ಯೂ ಕಾರುಗಳನ್ನು ಕಾಲವಿಳಂಬವಿಲ್ಲದೆ ಒಯ್ಯುವುದಿಲ್ಲವಾಗಿ ಪಿರ್ಯಾದು ಸದ್ಯ ಪಸ್ಕರಮಾರು. ಸಂಬಂಧಪಟ್ಟವರು ಕಂಟ್ರಾಕ್ಟರರಿಗೆ ಎಚ್ಚರಿಸಬೇಕಾಗಿದೆ.

NOTIFICATION

In the Court of the Munsif of Mangalore

S. C. No 81/1946

Between-

Jacob H. Soans --Plaintiff

and

John Antony Saldhana S/O Peter Julian Saldhana --Defdt

Whereas the above named plaintiff has filed a suit in the Court against the Defendent for Rs. 104-15-0 being the arrears of rental etc. and the same is posted to 5th June, 1946 for appearance of the Defendent and whereas notice is hereby given to the Defendent to appear before this Court on that day at 10 30 A. M. either personally or by a Pleader failing which the suit will be decreed exparte.

By Order of the Court

K. K. Rai

Advocate for the Plaintiff.

Mangalore
1-5-'46

ದೇವಕರಣ ನಾನ್‌ಜೀ ಇನ್ಶೂರೆನ್ಸ್ ಕೋ, ಲಿಮಿಟೆಡ್.

ಅಧಿಕೃತ ಮೂಲಧನ	ರೂ 20,00,000
ಶೇಕರಿಸಲ್ಪಟ್ಟ ಮೊತ್ತ	ರೂ 10,00 000
ಈಗಾಗಲೇ ವ್ಯವಹಾರ ಮಾಡಿದ ವಹಿವಾಟು	ರೂ. 75,00,000
ಜೀವ ವಿಮಾ ನಿಧಿ	ರೂ 5 00,000

ಹೆಡ್ ಆಫೀಸು

ದೇವಕರನ್ ನಾನ್‌ಜೀ ಬಿಲ್ಡಿಂಗ್ಸ್ ಎಲ್‌ಫಿನ್‌ಸ್ಟನ್ ಸರ್ಕಲ್, ಫೋರ್ಟ ಬೊಂಬಾಯಿ.

ಜೀವ ವಿಮಾ ವಿಭಾಗದ ಪ್ರಾಮುಖ್ಯ ಏಜೆಂಟರು

ಭೂಷಣ್‌ಕುಮಾರ್ ಕೂಳೂರ್‌ಕರ್ ಎಂಡ್ ಕೊ., ಮಣ್ಣಗುಡ್ಡೆ ಮೈನ್ ರೋಡ್ ಮಂಗಳೂರು, ದ, ಕ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, . ಚಟ್ಟ ಬದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಚ್ಚುಚ್ಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:— ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ —ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

CHAMPAE'S

Snow & Castrex

(Sole Distributers for (India.)

Prop: K. G. NAYAK,

Santhekatte, UDIPI, S. K.

ಅಳಿಯಸಂತಾನ ಮಸೂದೆ ಮತ್ತದರ ಮೇಲೊಂದು ಅಭಿಪ್ರಾಯ.

ಲೇಖಕ:— ಶ್ರೀ. ರಾಮಣ್ಣ ಶೆಟ್ಟಿ, ಕೊಳ್ಳಿಬೈಲು.

ಈ ಹಿಂದಿನ ತಮ್ಮ 'ನವಯುಗ' ಸಂಚಿಕೆಯೊಂದರಲ್ಲಿ 'ಅಳಿಯ ಸಂತಾನ ಮಸೂದೆಗೊಂದು ತಿದ್ದುಪಡಿ' ಎಂಬ ಶಿರೋನಾಮೆಯ ಲೇಖನವೊಂದು ಪ್ರಕಟವಾಗಿತ್ತು. ಲೇಖಕರಾದ ಶ್ರೀ. ಕೊಳ್ಳಿಬೈಲು ಮಹಾಬಲ ಶೆಟ್ಟಿ ಸಾಕಷ್ಟು ಶ್ರಮ ವಹಿಸಿ ಕೇವಲ ಒಂದು ಪಕ್ಷದ ಹಿತಮಾತ್ರ ಎಣಿಸಿ ಅಂಕೆ, ಸಂಖ್ಯೆ, ಹೋಲಿಕೆಗಳಿಂದ ಕಡಿಮೆ ಜನರಿರುವ ಕವರನ್ನು ಜನ್ಯಾಪಕ್ಷವೆಂದು ಆವ ಹೇಳಿಕೆ ಕ್ಕೇದು ಮಾಡಿದ್ದಾರೆ. ನಾನು ನನ್ನೀ ಲೇಖನದಲ್ಲಿ ಅವರ ಹೇಳಿಕೆ ಯಾ ಕೇಳಿಕೆಗೆ ಉತ್ತರಿಸಲು ಪ್ರಯತ್ನಿಸಿದ್ದೇನೆ. ಇವರಲ್ಲಿ ನನ್ನ ಉದ್ದೇಶವಿಷ್ಟೇ—ಇಂದೇ ಅಳಿಯ ಸಂತಾನ ಕುಟುಂಬದಲ್ಲೊಂದು ಸುಧಾರಣೆಯಾಗಬೇಕು; ಇಲ್ಲವೆ ಬುಡ ಮೇಲು ಬದಲಾವಣೆಯು ಕ್ರಾಂತಿಯಾಗಬೇಕು. ಬದಲು ಶ್ರೀ. ಶೆಟ್ರು ಬರೀ ಅರ್ಥಮಾರ್ಥ ಕ್ರಾಂತಿ ಬೇಡವೇ ಬೇಡ.

ಅಳಿಯ ಸಂತಾನದ ನಿಜರೂಪ

ಇಂದಿನ ನಾವು ಎಷ್ಟೇ ವೈಷಮ್ಯ, ವೈಮನಸ್ಸಿನಿಂದ ಬಂಧು ಭಗಿನಿಯರ ತಲೆಯೊಡೆಯಲು ಹೊರಟರೂ ನಮ್ಮ ಹಿರಿಯರು ಅಳಿಯ ಸಂತಾನವೆಂಬ ಬಂಧುತ್ವದ ಭವ್ಯ ಮಂದಿರವನ್ನು ಪ್ರೀತಿ, ವಿಶ್ವಾಸದ ನೆಲಗಟ್ಟಿನಲ್ಲಿ ಕಟ್ಟಿ ಹರಿಸಿದ್ದಾರೆ. ಇದು ಊಳಿದೆಲ್ಲಾ ಸಮಾಜದ ಕಟ್ಟುಗಳ ರೀತಿ ನೀತಿಗಳಿಂದ ವ್ಯತಿರಿಕ್ತವಾದ ನಿರಿಷ್ಟವಾದ ಕಟ್ಟುಕಟ್ಟಳೆಯನ್ನೊಳಗೊಂಡಿದೆ. ಕಾರಣ ಇದರಲ್ಲಿ ಹೆಂಗಸಿಗೆ ಸ್ವಾತಂತ್ರ್ಯತೆ ಹೆಚ್ಚು ಗಂಡಸಿಗೆ,(ಕಾನೂನು ಭಾಗ ಬಿಟ್ಟು ಹೇಳುವುದಿದ್ದರೆ) ಅಂಟಿನ ನಮ್ಮ ಹಿರಿಯರು ತಿಳಿದುಕೊಂಡಂತೆ,ಹೊರಗಿನಿಂದ ದುಡಿದು ಕಷ್ಟಮಾಡಿಯೇ ಜೀವಿಸಬೇಕಲ್ಲದೆ ಯಾರೋ ಮಾಡಿಟ್ಟ ಅನ್ನಕ್ಕೆ ಸೋಮಾರಿಗಳಾಗಿ ಮನೆಯಲ್ಲಿ ಬಿದ್ದು ಬಾಯ್ಬಿಡಬಾರದು ಎನ್ನುವುದರಿಂದ ಒಂದೊಮ್ಮೆಗೆ, ಇಂದಿನ ಈ ಸಮಾಜದೊಳು ತಿದ್ದುಪಡಿಯ ಚಳವಳವು ಹೆಂಗಸರ ವಿರೋಧಿ ಕೆಲವೇ ಗಂಡಸರು ಹೂಡಿದ್ದೆನ್ನಬಹುದು. ಇದಕ್ಕೆ ಶ್ರೀ. ಶೆಟ್ಟರ ಲೇಖನದಲ್ಲೇ ನಿದರ್ಶನಗಳು ದೊರೆಯುತ್ತವೆ. ಉದಾಹರಣೆಯಾಗಿ ಅವರು ತಮ್ಮ ಲೇಖನದ ಒಂದು ಕಡೆಯಲ್ಲಿ 'ಅಳಿಯ ಸಂತಾನ ಕುಟುಂಬದಲ್ಲಿ ಅವರವರಮಟ್ಟಿಗೆ ಅವರವರಲ್ಲದೆ ಕವರನ್ನು ಅವಲಂಬಿಸಿಕೊಂಡು ಯಾರೂ ಇಲ್ಲ' ಎಂಬ ಒಂದೇ ವಾಕ್ಯದಿಂದ ಹೆಂಗಸಿನ ನಿಜವಾದ ಹಕ್ಕು-ಸಂಬಂಧವನ್ನು ಕಡೆಗಣಿಸಿ ಅಳಿಯಕಟ್ಟಿನ ಬುಡಕ್ಕೇ ಕೊಡಲಿಯಿಟ್ಟಿದ್ದಾರೆ. [illegible] ಕಾರಣಕ್ಕೆ ಪರಿಸ್ಥಿತಿ ಹೆಂಗಸಿನದ [illegible] ಗಂಡಸಿನಂತಿಲ್ಲ [illegible] ಅಳಿಯ ಸಂತಾನವೆಂಬುದು [illegible] ಮಕ್ಕಳಿಗಲ್ಲವೆನ್ನುವ [illegible] ಕುಟುಂಬದ ಆದಕ್ಕೆ ವಿಚಾರ ಮೊದಲಾದುದನ್ನು ಅವರ ಕುಟುಂಬದ ಮತ್ತು ಕಾ [illegible] ಪಾಲಿಗೆ ಬಿಟ್ಟು ಆಸ್ತಿವಿಭಾಗ ಪ್ರಶ್ನೆ ವಿಚಾರಿಸುವ.

ಆಸ್ತಿ ವಿಭಾಗ

ಈ [illegible] ಶ್ರೀ. ಶೆಟ್ರು ಜನಸರ್ತಿಯಲ್ಲಿ ಪಾಲು ಹಾಕುವುದು ಪ್ರತಿಪಾದಿಸಿದ [illegible] ಮತ್ತು ಕಾನೂನು ಮತ್ತು ಕ್ರಮ [illegible] ಅಲ್ಪಸಂಖ್ಯಾಕರ [illegible] ಬಹುಪಕ್ಷೀಯರ ಕವರಿಗೆ [illegible] ಅನ್ಯಾಯವೇ ಸರಿ [illegible] ಜನರಿರುವ ಕವರನ್ನು ಗಣನೆಗೆ [illegible] ಎಂದೂ ಮೊದಲಾಗಿ [illegible] ಅಧ್ಯಾಯವನ್ನೇ ತೆರೆದು ಪ್ರತಿ [illegible] ಇಲ್ಲಿ ಯಾರು ಯಾರನ್ನು ಕೊ [illegible]? ನಾನು ಹೇಳುವುದಿದ್ದರೆ ಜನಸರ್ತಿಯಲ್ಲಿ ಪಾಲಾಗುವುದು ಹಾನಿಕರವೆನ್ನುತ್ತೇನೆ, ಇನ್ನೊಮ್ಮೆ ಇದು ಬಹುಸಂಖ್ಯಾಕ ಕವರಿನವರು ಅಲ್ಪಸಂಖ್ಯಾಕ ಕವರಿನವರನ್ನು ಸುಲಿದು, ಸೂರೆಮಾಡಲು ಹೂಡಿದ ಬಂದು ಎಂದು ನಾನು ತಿಳಿಯುತ್ತೇನೆ. ತಲೆ ನಾರು ಪಾಲಿನಿಂದಾಗಿ ಬಂಧು ಭಾವನೆ ನಿರ್ನಾಮವಾಗುತ್ತದೆ. ಇಂದು ಬಂಧುಭಗಿನಿ

ಯರೆಂದು ಹುಟ್ಟಿ, ಒಂದಾಗಿ ಬೆಳೆದು ಒಮ್ಮನಸ್ಸಿನಿಂದ ಪ್ರೀತಿವಿಶ್ವಾಸದಿಂದಿದ್ದು ನಾಳೆ ಬರೇ ಆಸ್ತಿಯ ಪಾಲಿಗಾಗಿ ಹಿಂದಿನ ತಮ್ಮ ಎಲ್ಲಾ ಬಂಧುತ್ವ ಸಂಬಂಧವನ್ನೇ ಮರೆತು ನಾವೆ ಹೆಚ್ಚಿನ ಹಕ್ಕುದಾರರೆಂದು ಹೊಯ್ದಾಡುವುದು ಅಕ್ಷಮ್ಯ ಅಪರಾಧವಿರುತ್ತದೆ. ಅಂತ್ಯಕ್ಕೆ ಅಮರವಾಗಿ ಉಳಿಯುವುದು ಆಸ್ತಿಯಲ್ಲ, ನಮ್ಮ ಯಾವ ತೆರದ ಜಗಳಗಳಲ್ಲ,ಆದು ಪ್ರೇಮ, ನಿಷ್ಕಲ್ಮ ಪ್ರೇಮ ಮಾತ್ರ. ಇಲ್ಲಿ ನಾನು ತತ್ವಜ್ಞನಾಗಿ ಹೇಳುತ್ತಿಲ್ಲ. ಇಂದು ಮಹಾತ್ಮರು ಲೋಕವನ್ನು ಯಾವ ತಳಹದಿಯಲ್ಲಿ ಕಟ್ಟುತ್ತಿದ್ದಾರೆಂಬುದನ್ನು ಆಧಾರವಾಗಿಟ್ಟೇ ಉಸುರಿದೆ

ನಿಜವಾದ ಆಸ್ತಿಯಾವುದು?

ಹೆಚ್ಚಿನ ಜನರೊಟ್ಟಿಗಿರುವುದೇ ಒಂದು ದೊಡ್ಡ ಆಸ್ತಿ. ಆ ಕುಟುಂಬದ ಸಂಸಾರ ನೌಕ ಸರಾಗವಾಗಿ ಸುಖದಲ್ಲಿ ಸಾಗಬಲ್ಲುದು ನಮ್ಮ ಮುಂದಿರುವ ಕಾಲ ದುಡಿದು ಜೀವಿಸುವ ಕಾಲ. ಒದಲು ಯಾರೋ ಮಾಡಿಟ್ಟ ಆಸ್ತಿಯಲ್ಲೇ ತನಗೂ ಒಂದು ಸರಿಸಮಾನ ಪಾಲು ಬೇಕೆಂದು ಕೇಳುವ ಜನ ನಿಜಕ್ಕೂ ಕೈಲಾಗದ ಹೇಡಿ ಎನ್ನಬಹುದು. ವಸ್ತುತಃ ಇಂದಿನ ಯಾವದೇ ಬಂಟ ಕುಟುಂಬದ ಆಸ್ತಿಯನ್ನು ತಲೆವಾರು ಚೂರುಮಾಡಿದರೆ ಎಷ್ಟೆಷ್ಟು ಬರುವುದೆಂಬುದು ಎಲ್ಲರಿಗೂ ತಿಳಿದದ್ದೆ. ನಮ್ಮ ಸಮಾಜ ಇಷ್ಟೊಂದು ದುರ್ದಶೆಗೆ ಇಳಿದುದಿದ್ದರೆ ಹಿರಿಯರು ಮಾಡಿಟ್ಟ ಆಸ್ತಿಯನ್ನು ಅವಲಂಬಿಸಿ ಯಾವೊಂದು ಉದ್ಯೋಗವಿಲ್ಲದೆ

ನಿದ್ರಿಸಿದ್ದರಿಂದಲೇ. ಸದ್ಯ ವಾದದ ಪ್ರಶ್ನೆಯೆಂದರೆ ತಲೆವಾರು ಪಾಲಾಗಬೇಕೇ, ಕವರುವಾರೇ ಎಂಬುದೊಂದೇ ಹೊರತು ಇಕ್ಕಡೆಯವರೂ ಬೇರಾವ ವಾದವನ್ನೂ ಹೂಡುವದಿಲ್ಲ. ನಿಜಕ್ಕೂ ಸಮಾಜ ಹಿತೈಷಿಗಳು ಸುಧಾರಣೆ ಬೇಕು,ಯಾರಿಗೂ ಅನ್ಯಾಯವಾಗದೆ ನಿಷ್ಪಕ್ಷಪಾತ ಬುದ್ಧಿಯಿಂದ ತೀರಿಸಬೇಕು ಎಂದು ಎಣಿಸುವುದಿದ್ದರೆ ಕೈಲಂದ ಜನಸರ್ತಿ ಕವರ್ಸರ್ತಿ ಆಗಲೇಬೇಕು. ಇದು ನ್ಯಾಯ-ಸತ್ಯ ಮತ್ತು ಧರ್ಮ ಸಮ್ಮತವಾದುದು. ಇದಕ್ಕೆ ವ್ಯತಿರಿಕ್ತವಾದರೆ ಯಾವುದಾದರೊಂದು ಪಕ್ಷಕ್ಕೆ ಅನ್ಯಾಯ ಮಾಡಿದಂತಾಗುವದು. ಸುಕ್ಕಳಕಟ್ಟು ಆಚರಿಸುವವರು ತಲೆಸರ್ತಿ ಪಾಲು ಮಾಡಿಕೊಳ್ಳುವರೆ ಏನೆಂಬುದು ಎಲ್ಲರಿಗೂ ತಿಳಿದದ್ದು. ಇವೆಲ್ಲಾ ಇಂದಿನ ಬ್ರಿಟಿಷರ ನ್ಯಾಯಸ್ಥಾನದ ಮುಂದಿಟ್ಟು ಪ್ರತಿಯೊಬ್ಬನಿಗೂ ಸರಿಸಮಾನ ಪಕ್ಕೆಂದು ನಿರ್ಣಯಿಸುವ ವಿಷಯಗಳಲ್ಲ. ಇದು ಬರೀ ಗ್ರಾಮ ಪಂಚಾಯಿತಿಯಲ್ಲಿ ಬಂಟ ಸಮಾಜದ ರೀತಿನೀತಿಗಳನುಗುಣವಾಗಿ, ಅಳಿಯಸಂತಾನದ ಕಟ್ಟುಕಟ್ಟಳೆಯನುಸರಿಸಿಯೇ ತೀರಿಸಬೇಕಾದ ವಿಷಯ. ಉದಾಹರಣೆಗಾಗಿ ಇಂದಿನ ನ್ಯಾಯಸ್ಥಾನದಲ್ಲಿ ತೀರ್ಮಾನಿಸುವುದಿದ್ದರೆ ಧರ್ಮರಾಯನಿಗೆ ತನ್ನ ತಮ್ಮಂದಿರನ್ನಾಗಲೀ, ಪತ್ನಿಯನ್ನಾಗಲೀ ಜಗತೆಯಾಟದಲ್ಲಿ ಪಣವಾಗಿಡಲು ಯಾವ ಹಕ್ಕಿದೆ? ಹರಿಶ್ಚಂದ್ರನಿಗೆ, ಅಪ್ರಾಯಸ್ಥ ಮಗನಿರುವಾಗ ರಾಜ್ಯಕೋಶವನ್ನೆಲ್ಲ ಧಾರೆಯೆರೆಯಲು ಯಾವ ಅಧಿಕಾರವಿದೆ? ರೋಟಿ

ತಾಳ್ವೆ 'ನ್ಯೆನಲ್'ವ್ಯಾಖ್ಯೆಮಾಡಿದರೆ ಇಂದಿನ ನ್ಯಾಯಶಾಸ್ತ್ರದಲ್ಲಿ ಯಾವತೆರನ ನ್ಯಾಯದೊರಕಲಿಕ್ಕಿಲ್ಲ.? ಆದರೂ ಆದನ್ನೆಲ್ಲ ಸರಿ, ಸತ್ಯ, ಧರ್ಮವೆಂದು ಇಂದಿಗೂ ಕೊಂಡಾಡುವುದಿಲ್ಲವೆ?

ಶ್ರೀ ಶೆಟ್ಟರು ಕೊಟ್ಟ 60 ಜನದಸ್ಕೀಕಿ 3 ಜನರ ಒಂದು ಕವರಿನಬದಲು 12 ಜನರ ಒಂದು ಕವರು, ಉಳಿದ 48 ಜನರ ಒಂದು ಕವರಿದೆ ಎಂದು ತಿಳಿಯಿರಿ. 12 ಜನರಿರುವ ಕವರಿನಲ್ಲಿ 10 ಜನ ಹೆಂಗಸರಿದ್ದು 48 ಜನರ ಕವರಿನಲ್ಲಿ ಒಟ್ಟಿಗೆ 16 ಜನ ಹೆಂಗುಸರಿದ್ದರೆ ಜನಸರ್ತಿ ಪಾಲುಪಡೆವ 10 ಜನ ಹೆಂಗುಸರಿರುವ 12 ಜನರ ಕವರು ಸ್ವಲ್ಪ ವರ್ಷಗಳಲ್ಲಿ ಆ ಹತ್ತು ಜನರೂ ಹೆತ್ತು ಮಕ್ಕಳು ಮರಿಗಳಾದ ಮೇಲೆ ಆಷ್ಟುಸಣ್ಣ ಪಾಲುಪಡೆದ ಕವರು ಯಾವಮಟ್ಟಕ್ಕೆ ಸೇರುತ್ತದೆಂಬುದನ್ನು ಬರಿಯುವುದರಬದಲು ಊಹಿಸುವುದೇ ಮೇಲು. ಶ್ರೀ ಸೆಟ್ರ ಹೇಳಿಕೆಯನ್ನೆ ಇನ್ನೂ ಕೂಲಂಕುಶ ವಿಚಾರಿಸಿನೋಡುವ. 1000 ಮುಡಿ ಹುಟ್ಟುವಳಿಯ ಮನೆಯಲ್ಲಿ ಹುಟ್ಟಿಬೆಳೆದ 3 ಮಂದಿಯ ಕವರು, ಶ್ರೀ ಸೆಟ್ರಲೆಕ್ಕದಂತೆ 16 ರಂತೆ 50 ಮುಡಿಯ ಪಾಲುಪಡೆದು ಬೇರ್ಪಟ್ಟು, 57 ಮಂದಿಯ ಕವರು 950 ಮುಡಿಯ ವಾರಿಸಿಂದ ಮೆರೆಯಬೇಕು. 1000 ಮುಡಿಯ ಮನೆಯಲ್ಲಿ ಹುಟ್ಟಿ ಬೆಳೆದವಳು 50 ಮುಡಿಯ ಪಾಲುಪಡೆದು ಸಂಸಾರ ಸಾಗಿಸಬೇಕೆ? ಆ ಸಂಸಾರದ ಚಿತ್ರವನ್ನು ನಿಮ್ಮ ಮನದ ಪಟಲದಮೇಲೆ ಚಿತ್ರಿಸಿನೋಡಿ. ಹೋಲಿಸಿನೋಡಿ. ಎಲ್ಲಿಂದೆಲ್ಲಿಗೆ! ಇದಕ್ಕೇನೇ ಕರುಣೆ ಕಲ್ಲಾಯಿತೆನ್ನುವುದು'

ಶ್ರೀ. ಶೆಟ್ರು ಕೊನೆಯಲ್ಲಿ ತಮ್ಮ ರಾಜಕೀಯಸಾಮಾಜಿಕ ಧೋರಣೆಯನ್ನೆಲ್ಲ ವ್ಯಕ್ತಪಡಿಸಿದ್ದಾರೆ ಅಲ್ಪಸಂಖ್ಯಾಕ ಕವರಿನ ಕೇಳಿಕೆಯನ್ನು ಜಿನ್ನರ ಪಾಕಿಸ್ಥಾನಕ್ಕೆ ಹೋಲಿಸಿ ತಾನುಹಿಂದೂ ಮಹಾಸಭೆಯ ಸದಸ್ಯನೆಂಬುದನ್ನು ಪ್ರಮಾಣಿಸಿದ್ದಾರೆ. ಬಂಟ ಸಮಾಜದ ಆಸ್ತಿಪಾಲಿನ ಪ್ರಶ್ನೆಯಲ್ಲಿ ಪಾಕಿಸ್ಥಾನದಂಥ ರಾಜಕೀಯ ಪ್ರಶ್ನೆಯನ್ನು ತಂದೊಡ್ಡಿದುದು ಕೆಲವರನ್ನು ತಪ್ಪಿದ್ದಾಗಿ ಮಾಡಿದೆ. ನನಗಂತೂ ಇವೆರಡರೊಳಗೆ ಏನೊಂದು ಹೋಲಿಕೆ ತೋರಿಬರುವುದಿಲ್ಲ. ಅಲ್ಪಸಂಖ್ಯಾಕ ಕವರಿನ ಹೇಳಿಕೆಗೂ, ಪಾಕಿಸ್ಥಾನದ ಕೇಳಿಕೆಗೂ ಎಲ್ಲಿನಸಂಬಂಧ? ಮೇಲಾಗಿ ಇಲ್ಲಿ ಅಲ್ಪಸಂಖ್ಯಾಕ ಕವರಿನವರೆ ಬಹುಸಂಖ್ಯಾಕ ಕವರಿಗಿಂತ ಪ್ರಬಲಪಕ್ಷದಲ್ಲಿರುವವರು. ಕಾರಣ ಸಣ್ಣ ಸಣ್ಣ ಕವರಿನ ತಂಡವೇ ದೊಡ್ಡದಾಗುತ್ತದೆ. ಇನ್ನು ಕಮ್ಮಿಜನರಿರುವ ಕ[illegible] ಸಾಹೇಬರಪಕ್ಷ ಮೊದಲಾದ ಅಲ್ಪಪಕ್ಷೀಯರಿಗೆ ಹೋಲಿಸುವುದಿದ್ದರೂ, ಇಂದು ದೇಶದ ಮುಂದಾಳುಗಳು ಅವರ ಕೇಳಿಕೆಯಲ್ಲಿ ಶೇಕಡಾ 95 ರಷ್ಟು ಪೂರೈಸಲು ಸಿದ್ಧರಿರುವರೆಂಬುವನ್ನು ಇಂದಿನ ರಾಜಕೀಯ ಸ್ವಲ್ಪ ತಿಳಿದವನಿಗೆಗೊತ್ತು. ಅಂತೆಯೆ ಬಹುಸಂಖ್ಯಾಕ ಕವರನ್ನು ಹಿಂದೂ ಮಹಾಸಭೆಗೆ ಹೋಲಿಸಬಹುದು ಲೇಖಕರು ಪ್ರಜಾಸತ್ತೆ, ಸಮತಾವಾದ ಎಂದು ಬಹುಶಃ-ಸಂಭ್ರಮದ ಕನಸುಕಂಡಿದ್ದಾರೆ. ಅದು ಯಾವರೂಪ ರೇಖೆಯುಳ್ಳ ಸಮತಾವಾದವೋ ತಿಳಿಯದು. ಫಿರೋಜಖಾನ್‌ನೂನ್‌ಸಾಹೇಬರಂಥಾ ದೊಡ್ಡ ಜವಾನ್ನಾರರು 'ಕಮ್ಯುನಿಸಂ' ಮಾತಾಡುತ್ತಿದೆ! ಅಚ್ಛಂಧಾನುಕರಣೆಯು ಸನಾತನಿಯೊಬ್ಬ ಸಮಾಜವಾದ್ಯಾರವೆಂದು ಘೋಷಿಸಿದಂತಿದೆ. ಯಾವ'ವಾದ' ಮಾಡುವದಕ್ಕೂ ಮೊದಲು ನಮ್ಮಲ್ಲಿನ ಹೊಲಿ, ಕಡಧಾರಣೆ ಪದ್ಧತಿ, ಅನುದಿನ ವಕ್ಕಲುಗಳ ಬಿಟ್ಟಿಕೆಲಸ ವ ಪದ್ಧತಿ ಹೋಗಲಿ. ಆಮೇಲೆ ಒಂದೊಂದನ್ನೇ ಉರುಳಿಸಿ ಮುಂದೆಸಾಗುವ. ಅಂತೂ ½ ಕವರುಸರ್ತಿ ½ ಜನಸರ್ತಿ ಪಾಲುಮಾಡಿ ಕಿರಿಕವರುಗಳನ್ನು ಗಂಡಾಂತರದಿಂದ ತಪ್ಪಿಸಿ ಸುಧಾರಕರು ನಿಜವಾದ ನ್ಯಾಯದಾನ ಮಾಡುವರೆಂದು ನನ್ನ ದೃಢನಂಬಿಕೆ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತ್ಲ 1ರ 10-0-0, ½ ರಾತ್ತ್ಲ 5-4-0, ¼ ರಾತ್ತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್,ರಥಬೀದಿ ಸಂಖ್ಯೆ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಸಂಗ್ತಿ ಅದಕ್ಕೆ ರೋಗಿಗಳಿಗೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜೆಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುರಾಜಿಬಾಗ್ ರೋಡ್, ಜಿ. ಐ. ಪಿ. ರೈಲ್. ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

(೬ನೇ ಪುಟದಿಂದ)

ಶ್ರೀ ಕೆ. ಆರ್. ಕಾರಂತರಿಗೆ

ಬಹುಮಾನಪಟ್ಟ ಕಂದಾಯ ಮಂತ್ರಿಗಳೇ —

ಕ್ಷೇಮ, ಪರಿಶರುವಾಯ ಪಕ್ಷದ ಸಭೆಯು ದ್ದಾಗಲೆಲ್ಲಾ (ಪತ್ರಿಕೆಗಳಲ್ಲಿ ಸುದ್ದಿ ಬಂದಿದ್ದಾಗ) ತಮ್ಮ ಯೋಗಕ್ಷೇಮದ ಕುರಿತು ತಿಳಿಸುತ್ತಾ ಇರಬೇಕಾಗಿ ಅಪೇಕ್ಷಿಸುತ್ತೇನೆ.

ಪರಿಶರ ವಾಯು ತಾವು ತವರೂರಿಗೆ ಬರುವ ದಿನವನ್ನು ಇಲ್ಲಿ ಎಲ್ಲರೂ ಅತ್ಯಾತುರದಿಂದ ಕಾಯುತಿದ್ದಾರೆ ಇದುವರೆವಿಗೆ ಮಳೆ ಸುತುವಾಗಿರುವುದರಿಂದ ಬೇಂಡು, ವಾಲಗ, ಆನೆ, ಇತ್ಯಾದಿಗಳಿಗೆ ಬಾಯಿಸಿ ಬಹಳ ಹಿರಿವದರಿಂದಲೂ, ಬಾಕೋರಿನ ಅರಸರ ವಿಜಯಭೇರಿಗಳೇಗ ಒಂದೂ ಇಲ್ಲದಿರುವುದರಿಂದಲೂ ಕೊನೆಯಪಕ್ಷ ಹದಿನೈದು ದಿನಗಳಿಗೆ ಮುಂದಾಪರೂ ತಮ್ಮ ಆಗಮನದ ಸ್ವಾಗತ ಸಿದ್ಧತೆಗಾಗಿ ಸುದ್ದಿ ತಿಳಿಸಬೇಕೆಂಬೇ ಮಾನ್ಯ ಮಂತ್ರಿಗಳಲ್ಲಿ ನಮ್ಮ ಪ್ರಥಮ ಬೇಡಿಕೆ ಅಂತೆಯೇ ತಮ್ಮ ಸನ್ನಿಧಾನದಲ್ಲಿ ಇಲ್ಲಿಯವರ ಮೊದಲ ಅರ್ಜಿಯೆಂದರೆ ತಾವು ತಮ್ಮ ಹೆಸರನ್ನು ಎಸ್. ಕೆ. (South Kanara) ಆರ್. ಕಾರಂತ್ ಎಂದು ಸಮೂದಿಸಲಿಲ್ಲವೇಕೆಂಬುದೇ. ಕಳೆದ ಬಾರಿ ಮದ್ರಾಸಿಗಾಗಿ ತಾವು ಮಂಗಳೂರಲ್ಲಿ ಮಾಡಿದ್ದ ಟಿಕೇಟಿನ ತುಂಡು ಉಳಿದಿದ್ದರೆ ಅದರ ನಂಬ್ರವೆಷ್ಟೆಂಬುದನ್ನು ತಿಳಿಯುವುದಕ್ಕಾಗಿ ಇಲ್ಲಿಯವರೆಲ್ಲಾ ಅತ್ಯಾತುರದಿಂದಿದ್ದಾರೆ. ಆ ನಂಬ್ರವೊಂದನ್ನು ತಿಳಿಸುವ ಕೃಪೆಮಾಡಿದರೆ ರಾತ್ರಿ ಬೆಳಗಾಗುವದರೊಳಗೆ ಮನೆಯುಳಿಸಿದ ಪುಣ್ಯವನ್ನೂ ಸಾಲಸಿವಾರಣಾ ಮಸೂದೆಗೂ ಮಿಕ್ಕಿದ ಆಕಸ್ಮಿಕ ಲಾಭವನ್ನು ತಂದೊಡ್ಡಿ ರಾಜಾಜಿಯನ್ನು ಸೋಲಿಸಿದ ಮತ್ತೊಂದು ವಿಜಯವನ್ನೂ ತಾವು ಸಂಪಾದಿಸಿದಂತಾಗುವದೆಂದು ಇಲ್ಲಿಯ ಹಲವರನ್ನುತ್ತಿದ್ದಾರೆ. ಆ ಟಿಕೇಟು ತುಂಡನ್ನು ಹುಡುಕಿಸಿ ಬಂದೋಬಸ್ತಿನಿಂದ ಕಳುಹಿಸಿ ಕೊಡಬೇಕಾಗಲಿ.

ಬಹುಮಾನಪಟ್ಟ ಮಂತ್ರಿಗಳೇ, ತಾವು ರೆವಿನ್ಯೂ ಮಂತ್ರಿಗಳಾದ ದಿನದಿಂದ ನಮ್ಮಲ್ಲಿ ತಲೆ ಸಿಡಿತದ ಮುಲಾಮುಗಳ ಅಭಾವವುಂಟಾಗಿದೆ. ಇಲ್ಲಿಯ ರೆವಿನ್ಯೂ ಇಲಾಖೆಯ ನೌಕರರೇ ಅವೆಲ್ಲವನ್ನೂ ಖಾಯಿಸಿ ಮಾಡಿದ್ದರಿಂದು ತಿಳಿದು ಬಂತು. ಕಾರಣವೆಂದರೆ ತಮ್ಮ ಪರಿಚಯ ಅವರಿಗಿದ್ದುದಲ್ಲ-ಅವರ ಪರಿಚಯ ತಮಗಿದ್ದುದೇ!

ಇರಲಿ; ತಾವು ಕೆಲವು ವರುಷಗಳಿಗೆ ಮೊದಲು ದ. ಕ. ರೈತರ ಸಂಘದ ಕಾರ್ಯದರ್ಶಿಯಾಗಿದ್ದು ಜಿಲ್ಲೆಯಲ್ಲೆಲ್ಲಾ ತಿರುಗಿ ಕೆಲಸ ಮಾಡಿದ್ದುದರ ನೆನಪನ್ನು, ಈಗ ಹ್ಯಾಕವಾಂಡಿಸವರ ನೆಲಿನ ಸಿಟ್ಟು ಅಡಿಗೊತ್ತಿ ಕುಳಿತಿಲ್ಲವಷ್ಟೆ? ಇಲ್ಲಿಯ ರೈತರ ಪರವಾಗಿ ಬೇಡಿಕೊಳ್ಳುವದಕ್ಕಾಗಿ ನಾವು ಅಂದಿನ ಕಾರಂತರನ್ನೇ ಇಂದಿನ ರೆವಿನ್ಯೂ ಮಂತ್ರಿಗಳ ಸನ್ನಿಧಿಗೆ ಕಳುಹಿಕೊಡುತಿದ್ದೇವೆ ಅಂತೆಯೇ ಮಜೂರವರ್ಗದ ಪ್ರತಿನಿಧಿಯಾಗಿ ತಮ್ಮೊಡನೆ ವ್ಯವಹರಿಸಲು ಬೆಂಗಳೂರ ಮಜೂರ ಸಮ್ಮೇಲನದಲ್ಲಿ ಭಾಷಣಮಾಡಿದ್ದ ಕಾರಂತರನ್ನು ಆರಿಸಿದ್ದೇವೆ ಎಲ್ಲಾ ವಿಷಯಗಳನ್ನೂ ಅವರಿಂದಲೇ ತಿಳಿಯಿರಿ. ನೀವು ತಾವೇ ಚರ್ಚಿಸಿಕೊಳ್ಳಿ, ಆಷ್ಟೆ.

ಪಿ. ಸೂ. — ತಮಿಳುನಾಡಿನ ರೈತನು ಭಾಗರುಗಳು ರಾಜಿ ಕೊಡದೆ ಸಹಕರಿಸಬೇಕೆಂದು ತಾವು ಮಾಡಿಕೊಂಡ ವಿನಂತಿಯನ್ನು ಓದಿದೆ. ಮಿ. ಗೋನ್ ಸಾಹೇಬರು ಇದನ್ನೇ ತನಗೂ ಅನ್ವಯಿಸಿಕೊಳ್ಳುವರೆಂದು ಆಶಿಸುತ್ತೇನೆ.

ಇತಿ ತಮ್ಮವನೇ ಆದ,

ಹವ್ವಿ.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರಾಗಿ ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸಲಾಗುತ್ತದೆ.

ಮುನೇಜರ್,

ನವಯುಗ.

ನಮ್ಮಲ್ಲಿ ಸಿಗುವ ಕೆಲವು ಅಮೂಲ್ಯ ಪುಸ್ತಕಗಳು

ನಾಟಕಗಳು

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	8	0
ಕುಶಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ಸಭೆ!	0	4	0
ದೇವಪಕ್ಷ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	0	14	0
ಆರೋಗ್ಯ ಪ್ರತಾಪ	0	12	0
ಧರ್ಮಸಂಕಟ	0	5	0
ಸಂಚಾರಿಣಿ	0	6	0
ಪ್ರತೀಕಾರ	0	6	0
ಬಿಗ್ಗದ ಬೀಸಣಿಗೆ	1	4	0
ಕಂಟಕ ಸಭೆ	0	2	0
ಮಿತ್ರದ್ರೋಹಿ	0	10	0
ಸರಸ್ವತಿ	0	12	0

ಕತೆಗಳು

ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ಸಂಪಾದೀಸ	0	10	0
ಸಾಂತ್ವನ	0	14	0
ಭಾರತೀಯ ಕತೆಗಳು	0	14	0
ನಗೆ ನೋಟಗಳು	0	14	0
ಅನ್ನದೇವರು ಮತ್ತು ಇತರ ಕತೆಗಳು	1	6	0
ವಿಶ್ವದ ಮಹಾಪುರುಷನಗಳು	0	12	0
ಆಕಾಶಗಂಗೆ	1	12	0
ಪ್ರೇಮಬಂಧ	0	5	0
ಪ್ರತಿಧ್ವನಿ	1	0	0
ಕಂಡೂ ಕಾಣದ ನೋಟಗಳು	0	8	0
ಆನಂತಿ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರಸಾದ	0	8	0
ಚಿಗುರು	0	6	0

ಕವಿತೆಗಳು

ಕಾವ್ಯ ಸಾಮ್ರಾಜ್ಯ	1	0	0
ತ್ರಿವೇಣಿ	1	0	0
ಮುಗುಳು	0	3	0
ಪರಾಗ	0	9	0
ಭಾರತ ಗೀತಾಂಜಲಿ	0	3	0
ಬೆಳ್ಳಕ್ಕಿ ಪದ್ಯಾವಳಿ	0	3	0

ಕಾದಂಬರಿಗಳು

ಸುಶೀಲೆ	1	0	0
ಲಾವಣ್ಯವತಿ	0	12	0
ಸನ್ಯಾಸಿಯ ಸೋಗಿನಲ್ಲಿ	0	8	0
ಚೋಪಾನ ಮನೆ	0	6	0
ನೀಲಭೂಮಿ	0	2	0

ಇತರ

ಸಾಮಾಜಿಕ ರಂಗ	0	8	0
ಪ್ರಬಂಧಮಾಲೆ + ಕತೆ (೨ ಭಾಗ ಒಟ್ಟಿಗೆ ಸೇರಿದ್ದು)	1	8	0
ಸ್ವರಾಜ್ಯ ರಾಮಾಯಣ	0	1	0
ಸೌಜನ್ಯ	1	4	0
ಸೌಂದರ್ಯ ಲಹರಿ	1	0	0
ಪರಪಕ್ಷಿ	0	8	0
ಅಮರ	1	0	0
ಕನ್ನಡಿ ಮನೆ	0	5	0
ಮೆಚ್ಚಿನ ಕೊಡಗು	0	5	0
ಧನಸಾಮ್ರಾಜ್ಯ	1	8	0
ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಹಾಲು ಸಾಮ್ರಾಜ್ಯ	0	3	0
ಆರೋಗ್ಯ ಸಾಧನ	1	0	0
ರಾಷ್ಟ್ರ ಸಭೆಯ ಇತಿಹಾಸ	2	8	0
ನೀತಿಪುರಾಣ	3	0	0
ಹೇಮಸುತೆ	0	8	0
ಬೇಸಾಯ ವ್ಯವಸಾಯ	1	0	0
ಬಾಲ ವಿನೋದ	0	4	0
ಪ್ರಕಾಶಿಕ (8 ಭಾಗಗಳು ಪ್ರತಿ 1ಕ್ಕೆ)	0	4	0

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಕಟಣೆ

ಮಂಗಳೂರು ಡಿ. ಮು. ಕೋರ್ಟಿನಲ್ಲಿ

O. S. 101/46 R. I. A. 458/46.

ಅಂಜೆಲಿನ್ ಸೊರೊಂಜ ಕೂಡಾ ವಾದಿರು.

ಮತ್ತು

ರಿ ಮದರ್ ಮರಾರ್ ಪ್ರತಿವಾದಿ.

ಮಂಗಳೂರು ತಾಲ್ಲೂಕು ಕಸ್ಬಾ ಗ್ರಾಮದ ಸಾರ್ವಜನಿಕ ... ಮಾಡಿದ ... ಪಕ್ಕದಲ್ಲೂ ಆದರ ಮೇಲ್ಗಡೆಯಲ್ಲೂ ಕಟ್ಟಡಗಳನ್ನು ಕಟ್ಟಿ ಸದ್ರಿ ... ಪ್ರತಿವಾದಿ ಆಕ್ರಮಿಸಿರುವುದರಿಂದ ಸದ್ರಿ ಆಕ್ರಮವನ್ನು ತೆಗೆದು ಸದ್ರಿ ... ಪೂರ್ವಸ್ಥಿತಿಯಲ್ಲಿ ಬದಗೊಡಿಸುವಂತೆ ... ಇಂಜಂಕ್ಷನ್ ಪ್ರತಿವಾದಿ ಮೇಲೆ ಕೊಡಬೇಕೆಂತ ಮತ್ತೆ ... ವಾದಿಯು ... ವಾದೆಯನ್ನು ದಾಖಲು ಮಾಡಿರುತ್ತಾರೆ. ಮತ್ತು ಸಾರ್ವಜನಿಕರ ಕಡೆಯಿಂದ ಸದ್ರಿ ವಾದೆಯನ್ನು ಜರಗಿಸುವದಕ್ಕೆ ತನಗೆ ಅನುಮತಿ ಕೊಡಬೇಕೆಂತಲೂ ಸದ್ರಿ ವಾದಿಯು R. I. A. 458/46ನೇ ಅರ್ಜಿಯನ್ನು ದಾಖಲು ಮಾಡಿರುವರು. ಸದ್ರಿ ವಾದೆ ಮತ್ತು ಅರ್ಜಿಯು ತಾ 7 6 46ಕ್ಕೆ ತನಿಖೆಗೆ ಇರಿಸಲ್ಪಟ್ಟಿವೆ. ಸಂಬಂಧಪಟ್ಟವರು ತಮ್ಮ ... ಗಳನ್ನು ಸದ್ರಿ ದಿನ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಕೋರ್ಟಿನ ಮುಖಾಂತರ ಪ್ರಕಾರ ತಿಳಿಸಲಾಗುತ್ತದೆ.

ಕೆ. ಸೂರ್ಯನಾರಾಯಣ ಅಡಿಗ

ವಾದಿರ ಕಡೆ ವಕೀಲ್.

ಮಂಗಳೂರು }
ತಾ30-4-46 }

ಮಂಗಳೂರು.

ಜಿಲ್ಲಾ ಆಹಾರ ಸಮಿತಿಯ ಸಭೆಯು ತಾ. ೨೯-೪-೪೬ರಂದು ಜಿಲ್ಲಾ ಕಲೆಕ್ಟರ್ ರಾಮವರ್ಮ ರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಅಕ್ಕಿಯ ಪರಿಸ್ಥಿತಿಯನ್ನು ಕಲೆಕ್ಟರರು ವಿವರಿಸುತ್ತ, ಕಳೆದ ಒಂದು ತಿಂಗಳಲ್ಲಿ ಆಗಲೇ ಟನ್ ಅಕ್ಕಿಯನ್ನು ಸಂಗ್ರಹಿಸಲಾಯಿತೆಂದೂ ಇನ್ನೂ ೩೦೦೦ ಟನ್ನಿನಷ್ಟು ಅಕ್ಕಿಯನ್ನು ಸಂಗ್ರಹಿಸಬಹುದೆಂದೂ ತಿಳಿಸಿದರು; ಪಟ್ಟಣಗಳಲ್ಲಿಯೂ ಬೇಸಾಯಗಾರರಿಗೆ, ಅಕ್ಕಿಗೆ ಗೋಧಿಯನ್ನು ಬದಲಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗುವುದೆಂದರು; ಕಾರ್ಕಳ, ಪುತ್ತೂರು, ಕುಂದಾಪುರ ತಾಲೂಕುಗಳ ಘಟ್ಟದ ಸರಹದ್ದು ಪ್ರದೇಶಗಳ ಎರಡನೆಯ ಬೆಳೆಯ ಅಕ್ಕಿಯನ್ನು ಸ್ವೀಕರಿಗೊಪ್ಪಿಸುವ ವಾಯಿದೆಯನ್ನು ಮೇ ತಾ. ೧೫ಕ್ಕೆ ಮುಂದುವರಿಸಲಾಯಿತು.

ತೆಂಗಿನಕಾಯಿಯ ಬೆಲೆಯು ಮಿತಿಮೀರಿ ಏರುವುದರಿಂದ ಅದರ ಬೆಲೆಯನ್ನು ನಿಯಂತ್ರಿಸಬೇಕೆಂಬ ಅಭಿಪ್ರಾಯವನ್ನು ಸಭೆಯು ಸೂಚಿಸಿತು, ಗಟ್ಟಿ ಉಗಳ ಹಾವಳಿಯು ಮಿತಿಮೀರಿದೆ, ತೆಂಗಿನಕಾಯಿ ಹಾಗೂ ಹಣ್ಣು ಹಂಪಲುಗಳನ್ನು ಅವು ನಾಶಮಾಡುತ್ತಿವೆ. ಈ ಗಟ್ಟಿ ಉಗಳನ್ನು ನಾಶಮಾಡಬೇಕೆಂಬ ಅಭಿಪ್ರಾಯವು ಸೂಚಿಸಲ್ಪಟ್ಟಿತು. ಕೊಳೆ ಅಕ್ಕಿ ಬೆಲೆಯನ್ನು ೧೦॥ ಯಿಂದ ರೂ. ೧೧ಕ್ಕೆ ಏರಿಸಬೇಕೆಂದು ಕೆಲವರು ಸೂಚಿಸಿದರು. ಆದರೆ ಹೆಚ್ಚಿನವರು ಅದನ್ನು ವಿರೋಧಿಸಿದುದರಿಂದ ಸೂಚನೆ ಬಿದ್ದುಹೋಯಿತು ಜಿಲ್ಲೆಯಲ್ಲಿ ಜಾನುವಾರಿನ ಕ್ಷಾಮವಿದೆ. ಮೈಸೂರಿನಿಂದ ಇಲ್ಲಿಗೆ ಹೆಚ್ಚು ಜಾನುವಾರು ಬರುವಂತಾಗಬೇಕು. ಎಂದೂ ಹೆಚ್ಚಿನವರು ಅಭಿಪ್ರಾಯಪಟ್ಟರು. ಶಾಲೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಹೊಸ ಆಜ್ಞೆಯನ್ನು ಜಾರಿಗೆ ತರುವಾಗ ಜಾನುವಾರುಗಳಿಗೆ ಬೇಕಾದುದನ್ನು ಬಿಟ್ಟು ಉಳಿದುದನ್ನು ಮಾತ್ರ ಸ್ವಾಧೀನ ಪಡಿಸಿಕೊಳ್ಳಬೇಕೆಂದಾಯಿತು

ಜಿಲ್ಲೆಯ ಔಷಧಾಲಯ ಹಸುಗ ಹರಡಿದ ಪ್ರದೇಶದಿಂದ ಕ್ರಮ ಬದ್ಧ ಹಸುಗೆ ಹರಡಿದ ಸ್ಥಳಕ್ಕೆ ಬಂದು ಕೆಲವೇ ದಿನ ವಾಸಿಸುವವನಿದ್ದರೆ, ಆತನಿಗೆ ತಾತ್ಕಾಲಿಕ ಕಾರ್ಡು ಸಿಗುವುದಿಲ್ಲ' ಅಕ್ಕಿ ದೊರೆಯುವುದು ಅಸಾಧ್ಯವಾಗಿದೆ ಈ ಕುರಿತು ಸಪ್ಲೈ ಆಫೀಸರರು ವಿಚಾರ ನಡೆಸಬೇಕು-ಎಂದು ಕೆಲವರು ಸೂಚಿಸಿದರು. ಡಿ-ಹೈಡ್ರೇಟೆಡ್ ಗೆಣಸನ್ನು ಆಹಾರವಾಗಿ ಉಪಯೋಗಿಸುವ ವಿಚಾರವು ಸಭೆಯಲ್ಲಿ ಬಿಲ್ಲಿಸಲ್ಪಟ್ಟಿತು.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ನವಯುಗದ

ಚಂದಾ ಹಣ ಬಾಕಿ ಇರುವವರಿಗೆ ಕಳುಹಿಸುವ ವಿ ಪಿ ಯನ್ನು ಅವರು ದಯಮಾಡಿ ಸ್ವೀಕರಿಸುವಂತೆ ವಿನಂತಿ.

ಮೆನೇಜರ್.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd. | **THE BHARATH MILLS, Ltd.**

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S.	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq.	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪಿತ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

NAVAYUGA ನವಯುಗ

ವರ್ಷ ೨೫ ವಾರ ೩೭ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Founder SRI A. B. SHETTY, M L A | Vol 25 No. 37

ಉಡುಪಿ ● 16—5—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.



ಅಮೃತಾಂಜನ ತಲೆವೇದನೆ, ಶೀತ, ಜ್ವರ, ..., ಕೀಲು, ಧುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾವು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಜಳ್ಳದಾಳ ತೊಂದರೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಸಧ್ಯ ಮುಳುಕಲ್ಲಿ ಮಧ್ಯೆ ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE PROTECTION

If a mother was left unprovided for and if the children were too young to earn a livelihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ —ಹುಳಿ ಖಾರ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ಆಣೆ

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು.—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ, ದಾವಣಗೇರಿ —ದಾವಣಗೇರಿ ಪ್ರೆಸ್ಸ್ ... ಎಲ್. ... ಕೆಮಿಸ್ಟ, ಹಾವೇರಿ ...

Ayurveda Oushadalaya, GADAG CITY

THE

Bombay Life Assurance Company Ltd.

(ESTD 1908)

A PREMIER INSURANCE COMPANY

New Business in 1945 - - 2,77,23,100

KOCHIKAR BROTHERS, LTD.

(ESTD 1910)

Chief Agents for South India including Travancore, Cochin and Mysore State

Business in 1945 in our area – **Over 5 Millions**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea Stomachache Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ

ಉಡುಪಿ ಸ್ಟಾಕಿಸ್ಟರು - ಡಾ॥ ವಾಯಕ್ ... ಫಾರ್ಮಸಿ, ಶ್ರೀ ... ಫಾರ್ಮಸಿ, ಡಾ॥ ... ಎಲ್. ಐ. ಎಮ್., ಡಾ॥ ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೋ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಇದಕ್ಕಿಂತಲೂ ದ್ವಿಗುಣಿತ ವಾ.. ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಂಬಿದ್ದೇನೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್

For prompt and efficient Banking Service

Bank with

THE VIJAYA BANK LIMITED.

Head Office.—**MANGALORE**

Branches **Byndoor, Coondapoor, Brahmavar, Udipi Kaup, Karkal, City-Mangalore, Kasaragod, Kanhangad, Puttur, Mercara & Bombay**

ಸಿಮ್ಲಾ ಸಮ್ಮೇಲನದೊಂದು ಹುಚ್ಚು ವರದಿ.

'ಹುಚ್ಚ'ನಿಂದ.

ಶಿಖರ ಪ್ರಸಂಗದ ಪ್ರತಿಯೊಂದು ದೇವಾಲಯದ ಘಂಟೆಯೂ ಬಾರಿಸಲ್ಪಡುವ ಹೊತ್ತು. ಮೇ ತಾ. ೫ನೇ ಆದಿತ್ಯವಾರ ಪ್ರಾತಃ ಘಂಟೆ 10-15. ಸಿಮ್ಲಾದ ವೈಸರಾಯೀ ಭವನದ 'ಮೋರ್ನಿಂಗ್ ರೂಮ್' ಅಥವಾ 'ರೆಡ್ ರೂಮ್' ಎಂದು ಹೆಸರಾದ ಸಣ್ಣ ಕೋಣೆ ಸಾಲಂಕೃತವಾಗಿದೆ. ಆ ಕೋಣೆ ಮನುಷ್ಯರಾದರೆ ಹನ್ನೆರಡೇ ಮಂದಿ ಹಿಡಿಯುವಷ್ಟು ಸಣ್ಣದು—ವಿಷಯವಾದರೆ 40 ಕೋಟಿ ಜನರಿಗಾಗುವಷ್ಟನ್ನೂ ತುಂಬಿಸಿಕೊಳ್ಳುವಷ್ಟು ದೊಡ್ಡದು. ನಡುವಿನಲ್ಲಿ ಅಂಡಾಕೃತಿಯ ಮೇಜು, ಒಂದು ದೊಡ್ಡ ಸೊನ್ನೆಯಂತೆ ಎಲ್ಲರಿಗಿಂತ ಮುಂದಾಗಿ ಬಂದು ಅಲ್ಲಿ ನಿಂತಿದ್ದಿತು. ಅದರ ಒಂದು ಬದಿಯಲ್ಲಿ ಅನುಕ್ರಮವಾಗಿ ಮಿ. ಅಲೆಕ್ಸಾಂಡರ್, ಲೋರ್ಡ್ ವೇವೆಲ್, ಲೋರ್ಡ್ ಪೆಥಿಕ್ ಲಾರೆನ್ಸ್, ಸರ್. ಸ್ಟಾಫೋರ್ಡ್ ಕ್ರಿಪ್ಸರು ಮಂಡಿಸಿದ್ದರು. ಇದಿರ ಸಾಲಾಗಿ ಈ ಬದಿಯಲ್ಲಿ ಖಾನ್ ಅಬ್ದುಲ್ ಗಫರ್‌ಖಾನ್, ಸರದಾರ್ ಪಟೇಲ್, ಮೌಲಾನಾ ಆಜಾದ್, ಪಂಡಿತ ನೆಹರು—ನವಾಬ ಝಾದಾ ಲಿಯಾಖತ್ ಅಲಿಖಾನ್, ಮಿ. ಜಿನ್ನಾ, ನವಾಬ್ ಮಹಮ್ಮದ್ ಇಸ್ಮಾಯಿಲ್, [illegible]. ಅಬ್ದುಲ್‌ರಬ್ ನಿಸ್ತಾರ್ ಕುಳಿತಿ[illegible]ರಿ. ಆ ಮೇಜು ಮತ್ತು ಅದರ ಸುತ್ತಲಿನ ಈ ಸಾಲನ್ನು ನೇರಾಗಿ ಒರಗಿಸಿಟ್ಟು ನೋಡಿದರೆ ಒಂದು ದೊಡ್ಡ ಸೊನ್ನೆಯಾಕಾರದ ಕನ್ನಡಿಗೆ ಚೌಕಟ್ಟು ಹಾಕಿಟ್ಟಂತೆ [illegible] ಕೋಟಿ ಭಾರತೀಯರಿಗೆ ತಮ್ಮನ್ನು [illegible] ಅದರಲ್ಲಿ ನೋಡಿಕೊಳ್ಳಬೇಕೆಂಬ [illegible] ಯಬಹುದು.

ಗಡಿನಾಡಿನವರೇ ಆದ ಖಾನ್ ಅಬ್ದುಲ್ ಗಫರ್‌ಖಾನ್ ಮತ್ತು ಅಬ್ದುಲ್ ರಬ್ ನಿಸ್ತಾರರ ನಡುವೆ ಉಳಿದ ಆರು ಮಂದಿ ಕುಳಿತಿದ್ದರು. ಕಾಂಗ್ರೆಸ್-ಲೀಗ್ ಅ[illegible] ಮೌಲಾನಾ ಆಜಾದ್ ಮತ್ತು [illegible] ಜಿನ್ನರ ನಡುವೆ ಪಂಡಿತ ನೆಹರು ಮತ್ತು ನವಾಬಝಾದಾ ಲಿಯಾಖತ್ ಅಲಿಖಾನರಿದ್ದರು. ಆದ್ದರಿಂದ [illegible] ಪತ್ತಿಯಂತೆ ಮಾಡಲ್ಪಟ್ಟಿದ್ದ ಸಮ್ಮೇಲನದ ಸ್ಥಾನ ವ್ಯವಸ್ಥೆ ಸರ್ವರಿಂದ [illegible].

ಮೇಜಿನ ಮೇಲೆ ಪೆಥಿಕ್ ಲಾರೆನ್ಸರ, [illegible] ಸಮ್ಮುಖದಲ್ಲಿ [illegible] ಗುದ್ದೆ ಗುದ್ದಿ [illegible] ಒಂದು ಕಡೆ [illegible] ಕ್ರಿಪ್ಸರು, [illegible]

ಲಿಯಾಖತ್ ಅಲೀಖಾನರು, ಬೇರೊಂದು ಪಕ್ಷದಿಂದ ಪಂಡಿತ ನೆಹರುಗಳು ಕಣ್ಣಿಟ್ಟಿದ್ದುದು ಕಂಡು ಬಂತು.

ಹಿಂದುಸ್ಥಾನದ ದೊಡ್ಡ ನಕಾಶೆಯೊಂದು ಮೇಜಿನ ಮಧ್ಯ ಬಿಡಿಸಿ ಹಾಕಲ್ಪಟ್ಟಿದ್ದಿತು. ಮಾತಿನ ರಭಸದಲ್ಲಿ ಮಿ. ಜಿನ್ನರು ತನ್ನ ಉದ್ದ ಬೆರಳುಗಳಿಂದ ಆ ನಕಾಶೆಯ ಮೇಲೆ ಆಗಾಗ ಗೆರೆಯೆಳೆಯುತ್ತಿದ್ದರೂ ಆ ಬೆರಳುಗಳಲ್ಲಿ ಸಾಕಷ್ಟುದ್ದದ ಉಗುರುಗಳಿರಲಿಲ್ಲವಾದ್ದರಿಂದ ಅದು ಹರಿಯಲ್ಪಡಲಿಲ್ಲ ಆದರೆ ಬೆವರಿನ ಕಲೆ ನೋಂಕಿದ್ದಿತಾದರೂ ಮೌಲಾನಾ ಆಜಾದರ ಗಡ್ಡ ತಾಗಿ ಬ್ರಶ್ಶು ಬಿದ್ದಂತಾಗಿ ಅದೂ ಝಾಡಿಸಲ್ಪಟ್ಟದ್ದಿತು.

ಮುಂಜಾನೆಯ ಅಧಿವೇಶನವು ಜೋರಾದ ಅವಘಡವೂ ಇಲ್ಲದೆ ಸಸೂತ್ರವಾಗಿ ಮುಗಿಯಿತು.

ಅಂದು ಸಾಯಂಕಾಲ ಲೀಗ್ ಪ್ರತಿನಿಧಿಗಳನ್ನು ಹೊತ್ತಿದ್ದ ಮಿಲಿಟರಿ ಸ್ಟಾಫ್ ಕಾರು ತೀವ್ರಗತಿಯಿಂದ ಸಭಾ ಭವನದತ್ತ ಧಾವಿಸುತ್ತಿತ್ತು. ಸುಮಾರು ನೂರರಷ್ಟು ಪತ್ರಿಕಾ ಬಾತ್ಮೀದಾರರು (ಸೇ. 50 ರಷ್ಟು ಮುಸ್ಲೀಮರಿಲ್ಲದ) ಸಿಮ್ಲಾದಲ್ಲಿ ನೆರೆದುದು ಹೆಚ್ಚಾಯಿತೆಂಬ ಭಾವನೆ ಲೀಗ್ ಪಾಳಯದಲ್ಲಿ ಮೂಡಿದ್ದಿತೆಂದು ಎಲ್ಲರಿಗೂ ಗೊತ್ತಿತ್ತು. ಈ ಸಂಖ್ಯಾಧಿಕ್ಯವನ್ನೂ ಪ್ರತಿನಿಧಿಗಳು ಸಮ್ಮೇಲನಕ್ಕೆ ಹೋಗುವಾಗ ಹಾದಿಯಲ್ಲಿ ನಿಲ್ಲುವ ಅವರ ಅಭ್ಯಾಸವನ್ನೂ ನಿವಾರಿಸಿಬಿಡಬೇಕೆಂಬ ಉದ್ದೇಶದಿಂದಲೇ ಈ ತೀವ್ರಗತಿಯೆಂದು ಪಕ್ಕನೊಮ್ಮೆ ಹೊಳೆದರೂ ಕೊನೆಗೆ ನಿಜಸ್ಥಿತಿ ತಿಳಿಯಿತು. ಮುಂಜಾನೆಯ ಸಮ್ಮೇಲನಕ್ಕೆ ಪ್ರಥಮತಃ ಗೃಹಪ್ರವೇಶಮಾಡಿದ ಮರ್ಯಾದೆಯನ್ನು ಮೌಲಾನಾ ಆಜಾದರು ಕೊಡೆದಿದ್ದರು;'ನಾನೇ ಮೊದಲಿಗ' ಎಂದು ಇಂಗ್ಲಿಷಿನಲ್ಲಿ ಹೇಳಿದ್ದರಿಂದ ಲೀಗಿನವರಿಗದು ಸರಿಯಾಗಿ ಅರ್ಥವಾಗಿತ್ತು. ಅಪರಾಹ್ನದಲ್ಲಾದರೂ ಆ ಮಾನ ತಮ್ಮದಾಗಬೇಕೆಂಬ ಆತುರದಿಂದಲೇ ಲೀಗ್ ಪ್ರತಿನಿಧಿಗಳು ಈ ರೀತಿ ಅವಸರದಿಂದ ಧಾವಿಸಿದ್ದರಂತೆ.

ಅಪರಾಹ್ನದ ಸಭೆಯಲ್ಲಿ ಕಾರ್ಯಕ್ರಮದ ಪಟ್ಟಿಯ ಮೇಲೆಲ್ಲಾ ಆಜಾದ್ ನೆಹರುಗಳ ಕೈಯಿಂದ ಚಿತ್ತುಗಳು ಬಿದ್ದವಂತೆ. ಕಾಂಗ್ರೆಸಿಗರಿಗೆ 'ಮ್ಯಾನರ್ಸ್' ಗೊತ್ತಿಲ್ಲವೆಂಬುದು ಈಗಲಾದರೂ ತಿಳಿಯಿತೇ ಎಂಬ ಅರ್ಥದಲ್ಲಿ ಮಿ. ಜಿನ್ನರು ಹಲವು ಬಾರಿ ಬ್ರಿಟಿಷ್ ಪ್ರತಿನಿಧಿಗಳಮುಖ ನೋಡಿದರಂತೆ. ಅಬ್ದುಲ್ ರಬ್ ನಿಸ್ತಾರರು ಒಂದೆರಡು ಬಾರಿ ಕುರ್ಚಿಯಿಂದೆದ್ದರೆಂದೂ, ಹಾಗೆ ಎದ್ದು ನೋಡುವಾಗ ಖಾನ್ ಅಬ್ದುಲ್ ಗಫರ್‌ಖಾನರು ಕುಳಿತಲ್ಲಿಯೇ ತನಗಿಂತ ಎತ್ತರವಿದ್ದುದನ್ನು ಕಂಡು ನಿಟ್ಟುಸಿರು ಬಿಡುತ್ತಾ ಕುಳಿತುಕೊಂಡರೆಂದೂ ತಿಳಿದುಬರುತ್ತದೆ.

೦೦ ೦೦ ೦೦

ತಾ 6 ನೇ ಸೋಮವಾರ ಮುಂಜಾನೆ ಮತ್ತು ಅಪರಾಹ್ನದ ಸಭೆಗಳಿಗೆ, ಬಂದು ಹೋಗುವ ಮರ್ಯಾದೆಯು ವಿರುದ್ಧ ಮಾರ್ಗ ಹಿಡಿದಿದ್ದಿತು. ನಾ ಮುಂದೆ, ತಾ ಮುಂದೆ ಎನ್ನುವ ಬದಲಿಗೆ ನಾ ಹಿಂದೆ ತಾ ಹಿಂದೆ ಎಂದೇ ಕಾಂಗ್ರೆಸ್ ಮತ್ತು ಲೀಗ್ ಪ್ರತಿನಿಧಿಗಳು ಸ್ಪರ್ಧಿಸಿದ್ದರು. ಈ ಸಭೆಗೆ ಉಮೇದಿನಿಂದ ಮುಂದಾಗಿ ಹೋದವರು ಕಾಂಗ್ರೆಸಿಗರೇ ಎಂದಾಗಲಿ ಎಂದು ಲೀಗಿನವರೂ, ಆ ಅಪಮಾನ ಲೀಗಿಗೆ ಸೇರಲಿ ಎಂದು ಕಾಂಗ್ರೆಸಿನವರೂ ನೋಡಿದ್ದರು; ಆದರೆ ಕಾರಿನಲ್ಲಿ ಹೋಗುತ್ತಿದ್ದ ಲೀಗಿನವರಿಗೆ ಕಾಲಿನಲ್ಲಿ ಹೋಗುತ್ತಿದ್ದ ಕಾಂಗ್ರೆಸಿಗರನ್ನು ಹಿಂದೆ ಹಾಕಲಾಗುತಿದ್ದಂತೆ ಮುಂದೆ ಹಾಕಲಾಗಲಿಲ್ಲ. ಲೀಗಿನವರನ್ನು ಬೇಗ ಬೇಗ ಓಡಿಸಿದ ಪುಣ್ಯದಲ್ಲಿ ಹೆಚ್ಚಿನಂಶ ಪತ್ರಿಕಾ ಪ್ರತಿನಿಧಿಗಳಿಗೆ ಸಲ್ಲುತ್ತದೆ.

ಆ ಇಡೀ ದಿನ ಲೀಗ್ ಪ್ರತಿನಿಧಿಗಳೆಲ್ಲಾ ತಪ್ಪುಮಾಡದ ಹುಡುಗರಂತೆ ಗೆಲವಿನ ಮುಖ ಮುದ್ರೆಯಿಂದಲೇ ಕ್ಲಾಸಿನಲ್ಲಿ ಕುಳಿತಿದ್ದರು. ಕಾರ್ಯಕ್ರಮಪಟ್ಟಿಯನ್ನು ಚಿತ್ತುಮಾಡಿ ಹಾಕಿದ್ದಕ್ಕಾಗಿ ಬ್ರಿಟಿಷ್ ಮಾಸ್ತರರು ಕಾಂಗ್ರೆಸ್ ಮಕ್ಕಳ ಕಿವಿಹಿಂಡುವರೆಂದು ಅವರು ನೆನಸಿದ್ದರು. ಇಡೀ ದಿನವೂ ಮೇಜಿನ ಮೇಲೆ ಅದೇ ಕಾರ್ಯಕ್ರಮ ಪಟ್ಟಿಯಿತ್ತು. ಸಂಜೆಯಾಗುತ್ತಾ ಬಂದಂತೆ ಆ ಚಂದ್ರಮನಿಗೆ ಪೂರ್ಣಗ್ರಹಣ ಹಿಡಿಯಿತು. ಕಾರ್ಯಕ್ರಮ ಕಾಗದ ತುಂಬಾ ಮಸಿ ಹೊರತು ಅಕ್ಷರ ಕಾಣುತ್ತಿರಲಿಲ್ಲ. ಕಾಂಗ್ರೆಸ್ ಪ್ರತಿನಿಧಿಗಳು ಅಂದು ಮತ್ತಷ್ಟು ಗೀಚಿ ಗೀಚಿ ಅದನ್ನು ಪೂರ್ತಿ ಹಾಳು ಮಾಡಿದ್ದರು.

ತಾವು ಹಾಳುಮಾಡಿದ ಪಟ್ಟಿಗೆ ಬದಲಾಗಿ ಮತ್ತೊಂದು ಪಟ್ಟಿಯನ್ನು ಕೊಡುವೆವೆಂದು ಮೌಲಾನಾ ಆಜಾದರು ತನ್ನ ಉದ್ದಂಗಿಯ ಜೋಳಿಗೆಯಿಂದೊಂದು ದೀರ್ಘಕವರನ್ನು ತೆಗೆದರೆಂದೂ ಅದಕ್ಕೆ ಮಸಿ ತಾಗಿಸಲು ಅಷ್ಟರಲ್ಲೇ ಮಿ. ಜಿನ್ನರ ಜಲ್ಲದಂತಹ ಕೈಮುಂದೆ ಬಂದಿತ್ತೆಂದೂ ತಿಳಿದುಬರುತ್ತದೆ. ನಾವೇ ಇನ್ನೊಂದು ಕಾರ್ಯಕ್ರಮ ಕಾಗದ ಕೊಡುವೆವು; ಅದಕ್ಕಾಗಿ ಎರಡು ದಿನಗಳ ಅವಧಿಬೇಕೆಂದು ಬ್ರಿಟಿಷ್ ಪ್ರತಿನಿಧಿಗಳು ಸಮಾಧಾನ ಪಡಿಸಿ ಸಭೆಯನ್ನು ಮುಂದುವರಿಸಿಟ್ಟರು.

ಅಂದು ಹೊರಡಲೇಳುವಾಗ ಮಿ. ಜಿನ್ನರು ಕೈಯನ್ನು ಮೇಜಿಗೂರಿದ್ದರಲ್ಲದೆ ಸಲಾಂ ಕೊಡಲು ಮರೆತಿದ್ದುದರಿಂದ ವಿಶೇಷತಃ ಮಿ. ಅಲೆಕ್ಸಾಂಡರರಿಗೆ ಬೇಸರವಿದೆಯಂತೆ.

ಅಂದು ವೈಸರಾಯ ಭವನದಿದಿರ ಅಂಗಣದಲ್ಲಿ ತುಂಬಾ ಜನ ನೆರೆದು, ಒಂದು ಚೌಕಾಕಾರದಲ್ಲಿ ಕೆಂಧೂಳು ಹಾಸುವ ಮಾತುಕತೆಯಾಡುತಿದ್ದರು—ವಿಷಯವು ಕಾಂಗ್ರೆಸ್-ಲೀಗುಗಳೊಳಗೆ ಮಲ್ಲಯುದ್ಧದಿಂದಲೇ ತೀರ್ಮಾನಿಸಲ್ಪಡಬೇಕಾದ ಸ್ಥಿತಿಗೆ ಬಂತೆಂಬ ಆಶೆಯಿಂದ, ಆದರೆ ಇಕ್ಕಡೆಯವರೂ ತಂತಮ್ಮ ಕೈಗಳನ್ನು ಜೇಬಿನೊಳಗಿಟ್ಟುಕೊಂಡು ಹೊರಟುಹೋದುದನ್ನು ಕಂಡು ಎಲ್ಲರಿಗೂ ನಿರಾಶೆಯಾಯಿತು.

ಮರುದಿನ ಮುಂಜಾನೆ ಪರಕಾಯ ಪ್ರವೇಶ ವಿದ್ಯೆಯನ್ನೂ ತುಸು ಕಲಿತಿದ್ದ [illegible] ಬಾತ್ಮೀದಾರನು ನವಾಬ್ ಮಹಮ್ಮದ್ ಇಸ್ಮಾಯಿಲರ ವೇಷ ಹಾಕಿಕೊಂಡು ಪೆಥಿಕ್ ಲಾರೆನ್ಸರ ಬಾಯಿ ಬಿಡಿಸಲು ಪ್ರಯತ್ನಿಸಿದನೆಂದೂ, ಆದರೆ ಅಲ್ಲಿಯೇ ಇದ್ದ ಕ್ರಿಪ್ಸರು ಮುದಿ ಲಾರೆನ್ಸರ ಕಣ್ಣಿಗೆ ಅಂಜನ ಹಾಕಿ ಆ ಪ್ರಮಾದವನ್ನು ತಪ್ಪಿಸಿದರೆಂದೂ ಸುದ್ದಿಯಿದೆ.

(೧೧ನೇ ಪುಟ ನೋಡಿರಿ)

ವಿವಿಧ ಪಾತ್ರೆಗಳು



[illegible] ಹಿತ್ತಾಳೆ, ಕಂಚು, [illegible] ವಿವಿಧ ಪಾತ್ರೆಗಳೂ [illegible] ದೊರೆಯುತ್ತವೆ.

ಶ್ರೀನಿವಾಸ ವ್ಯಾಪಾರಸ್ಥರ್, [illegible], ಉಡುಪಿ.

CANARA BANK LIMITED

Estd: 1906

(Incorporated in British India, liability of Members Limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
1 to 5 months	....	2½%
6 to 9 months	...	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ನಿಯೋಜಿತ ರಾಷ್ಟ್ರಪತಿ ನೆಹರು

ಪಂಡಿತ ಜವಾಹಿರಲಾಲ ನೆಹರುಗಳು ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಿ ಸರ್ವ ಸಮ್ಮತಿಯಿಂದಾರಿಸಲ್ಪಟ್ಟಿದ್ದಾರೆ. ಕಾಂಗ್ರೆಸ್ ಮಕುಟವು ನೆಹರುಗಳ ತಲೆಗೇರಿದುದು ಇದೀಗ ನಾಲ್ಕನೇ ಬಾರಿ. ಕಳೆದ ಮೂರು ಬಾರಿಯೂ ಯುವಕ ಮುಂದಾಳು ನೆಹರುಗಳ ತಲೆಯು ಮೇಲದು ಕಳತಿತ್ತು; ಈ ಬಾರಿ ಪಂಡಿತರ ನರೆತ ಕೂದಲ ಮೇಲದು ಪ್ರಕಾಶಿಸಲಿದೆ.

ಮುಂದಿನ ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಪಂಡಿತ ನೆಹರುಗಳೇರಬಹುದೆಂಬುದನ್ನು ಒಂದೆರಡು ತಿಂಗಳ ಮೊದಲು ಯಾರೂ ಊಹಿಸಿರಲಿಲ್ಲ ಮಹಾತ್ಮಾ ಗಾಂಧಿಯವರು ಆಂಧ್ರ ನಾಯಕ ಡಾ। ಪಟ್ಟಾಭಿಯವರ ಮೇಲೆ ಅನುಗ್ರಹವಿಟ್ಟಿದ್ದರೆಂಬ ವಾರ್ತೆಯಿತ್ತು. ಅದಕ್ಕೆ ಕಾರಣವೂ ಇದೆ. ಮೌಲಾನಾ ಅಜಾದರ ಮೊದಲು ಕ್ರಮಬದ್ಧ ಚುನಾವಣೆಗೊಂಡಿದ್ದ ಅಧ್ಯಕ್ಷರು ರಾಷ್ಟ್ರ ಗೌರವ ಸುಭಾಸ್‌ಚಂದ್ರ ಬೋಸರು. ಸುಭಾಸರು ಆ ಸಲ ಸತತ ಬಿಡದೆ ಎರಡು ವರುಷವೂ ರಾಷ್ಟ್ರಪತಿಯಾಗಿ ಆರಿಸಲ್ಪಟ್ಟಿದ್ದರು. ಮೊದಲ ವರುಷ ಸರ್ವಸಮ್ಮತಿಯಿಂದ; ಎರಡನೇ ವರುಷ ಗಾಂಧೀವಾದಿ ಪ್ರಮುಖರ ಇಚ್ಛೆಗೆ ವಿರುದ್ಧವಾಗಿ ರಾಷ್ಟ್ರದ ಬೆಂಬಲದಿಂದ. ಆ ಎರಡನೇ ಬಾರಿ, ಗಾಂಧಿಜೀಯ ಸಮೇತ ಎಲ್ಲಾ ಬಲಪಕ್ಷೀಯ ಪ್ರಮುಖರ ಶಿಫಾರಸು ಪಡೆದು ಸುಭಾಸರನ್ನು ಸ್ಪರ್ಧಿಸಿದವರೆಂದರೆ ಡಾ। ಪಟ್ಟಾಭಿಯವರು. ಆದರೆ ದಕ್ಷಿಣ ಭಾರತದಲ್ಲಿ ಕೂಡಾ ಪಟ್ಟಾಭಿಗಳ ವಿರುದ್ಧ ಸುಭಾಸ್ಚಂದ್ರರಿಗೇನೇ ಪ್ರಬಲ ಬಹುಮತದೊರೆತಿದ್ದಿತು. ಆ ಮೇಲೆ ಹಿರಿಯ ಪ್ರಮುಖರು ಹೂಡಿದ ಪುರಸ್ಕರದಿಂದಾಗಿ ನೇತಾಜೀ ಬೋಸರು ರಾಜೀನಾಮೆ ಕೊಡಬೇಕಾಗಿ ಬಂದರೂ ಬದಲಿ ಅಧ್ಯಕ್ಷತೆ ಬಾಬು ರಾಜೇಂದ್ರ ಪ್ರಸಾದರಿಗೆ ಹೋಯಿತು ಹೊರತು ಪಟ್ಟಾಭಿಗೆ ದೊರೆಯಲಿಲ್ಲ. ಆ ಮೇಲಂತೂ ಸರ್ವ ಮಾನ್ಯ ಅಧ್ಯಕ್ಷರೇ ಬಂದರು; ಮೌಲಾನಾ ಅಜಾದರು ರಾಷ್ಟ್ರಪತಿಯಾದರು. ಅತ್ಯಂತ ಬಿಕ್ಕಟ್ಟಿನ 10 ವರುಷಗಳಲ್ಲ-ಆ ನೊದಲಾರೂ ಆ ಜವಾಬ್ದಾರಿಯನ್ನು ಹೊತ್ತಿರದಷ್ಟು ದೀರ್ಘಾವಧಿ-ಮೌಲಾನರು ಕಾಂಗ್ರೆಸ್ ಅಧ್ಯಕ್ಷ ಹೊಣೆಯನ್ನು ನಿರ್ವಹಿಸಿದ್ದರು. ಇನ್ನೊಂದು ವರುಷವೂ ಅವರೇ ಕಿರೀಟ ಹೊತ್ತುಕೊಳ್ಳುತಿದ್ದರೆ ಎಲ್ಲರಿಗೂ ಸಂತೋಷವಾಗುತಿತ್ತು. ಆದರೆ ದಣಿದ ಮೌಲಾನರು ಈ ಬಾರಿ ಒಪ್ಪಲಿಲ್ಲ. ತಾನೇ ಪಂಡಿತ ನೆಹರುಗಳ ಹೆಸರನ್ನು ಸೂಚಿಸಿದರು. ಸರ್ದಾರ್ ವಲ್ಲಭಾಯಿ, ಮತ್ತು ಆಚಾರ್ಯ ಕೃಪಾಲನಿಯವರ ಹೆಸರುಗಳೂ ಸೂಚಿಸಲ್ಪಟ್ಟಿದ್ದರೂ ಅವರಿಬ್ಬರೂ ಹಿಂದೆಗೆದುಕೊಂಡುದರಿಂದ ಪಂಡಿತ ಜವಾಹಿರಲಾಲರು ಸರ್ವ ಸಮ್ಮತಿಯಿಂದಾರಿಸಲ್ಪಟ್ಟಿದ್ದಾರೆ. ಮುಂದಿನ ಮಹಾಧಿವೇಶನ ನಡೆದ ನಂತರ-ಪ್ರಾಯಶಃ ನವಂಬರಿನ ಬಳಿಕವೇ ನೆಹರುಗಳು ರಾಷ್ಟ್ರಪತಿ.

ರಾಷ್ಟ್ರಪತಿಯಾಗಿ ನೆಹರುಗಳು ಬಂದುದರಿಂದ ಇಡೀ ರಾಷ್ಟ್ರವಾನಂದಗೊಂಡಿದೆ. ರಾಷ್ಟ್ರ ಹಿತದೃಷ್ಟಿಯಿಂದ ಯಾರ ಸಂತೃಪ್ತಿ ಅತ್ಯಗತ್ಯವೋ ಅವರೆಲ್ಲಾ ಈ ಚುನಾವಣೆಯಿಂದ ಪೂರ್ತಿ ಸಮಾಧಾನಗೊಂಡಿದ್ದಾರೆ. ಕೆಲಸಗಾರರು-ವಿವಿಧ ವರ್ಗಗಳ ಸಮತಾವಾದಿಗಳು-ನ್ಯಾಯಾಕಾಂಕ್ಷಿಗಳು-ಪಕ್ಷಪಾತ ಪೀಡೆಗೊಳಗಾದ ರಾಜಕಾರಣಿಗಳು-ಅಂತೂ ಸರ್ವ ಭಾರತೀಯರು ಸಮಾಧಾನ ಪ್ರದರ್ಶಿಸಿದ್ದಾರೆ, ನೆಹರುಗಳ ಆಡಳಿತೆಯಲ್ಲಿ ರಾಷ್ಟ್ರದ ಉಜ್ವಲ ಭವಿಷ್ಯವನ್ನು ನಿರೀಕ್ಷಿಸುತಿದ್ದಾರೆ. ಯಾವ ದಿಕ್ಕಿನಿಂದ ಬೆಳಕು ಚೆಲ್ಲಿದರೂ ಕಲ್ಮಷ ಕಾಣದ ಓರ್ವ ನಾಯಕನೆಂದರೆ ನೆಹರು. ಅವರ ಕೈ ಸೇರಿ ರಾಷ್ಟ್ರಪತಿ ಹುದ್ದೆ ಸಾರ್ಥಕತೆ ಪಡೆಯಿತು.

ಪ್ಯಾರಿಸ್ ಪರಿಷತ್ತು

ಮುಖ್ಯ ಚತುರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಳನವು ಕೆಲವು ವಾರಗಳಿಂದ ಪ್ಯಾರಿಸಿನಲ್ಲಿ ಜರಗುತ್ತಿದೆ. ಯುರೋಪು ವ್ಯವಸ್ಥೆಯ ಸಂಬಂಧದಲ್ಲಿ ರಷ್ಯಾ ಮತ್ತು ಆಂಗ್ಲೋ ಅಮೇರಿಕಾನರ ನಡುವೆ ತೀವ್ರ ಭಿನ್ನಾಭಿಪ್ರಾಯಗಳು ಬಂದಿದ್ದವು. ಮುಖ್ಯವಾಗಿ ಇಟಲಿಯ ವಸಾಹತುಗಳ ಮೇಲಿನ ಆಡಳಿತಾಧಿಕಾರದ ಕುರಿತು ರಶ್ಯಕ್ಕೂ ಇಂಗ್ಲಾಂಡಿಗೂ ಪ್ರಬಲ ಸ್ಪರ್ಧೆಯೆದ್ದು ಪರಿಷತ್ತೇ ಪರಾಭವಗೊಳ್ಳುವ ಸಿಂಹಕೆ ಕವಿದಿತ್ತು. ಆದರೆ ಈಗ ಆ ಬಿರುಕಿಗೊಂದು ಪತ್ತೆ ಹಚ್ಚಲ್ಪಟ್ಟಿತೆಂದು ತಿಳಿದುಬರುತ್ತದೆ. ಬುದ್ಧಿವಂತರ ಕೆಲಸವೇ ಹಾಗೆ!

ಪೆಲೆಸ್ಟೈನ್ ತೀರ್ಮಾನ

ಅರಬರ ಇಚ್ಛೆಗೆ ವಿರೋಧವಾಗಿ ಪೆಲೆಸ್ಟೈನಿನಲ್ಲಿ ಯೆಹೂದಿಗಳಿಗೊಂದು ಸ್ಥಾನ ದೊರಕಿಸಿ ಕೊಡುವ ಆಂಗ್ಲೋ-ಅಮೇರಿಕಾನರ ಹಂಚಿಕೆಯು ಯುದ್ಧ ಪೂರ್ವದ್ದು. ಯುದ್ಧಾನಂತರ ಆಂಗ್ಲೋ-ಅಮೆರಿಕಾನರ ಒಂದು ಜತೆ ಕಮಿಶನ್ ನಿರ್ಮಿಸಲ್ಪಟ್ಟು ಪೆಲಸ್ಟೈನಿನ ಕುರಿತೊಂದು ತೀರ್ಮಾನವನ್ನಿತ್ತಿದೆ. ಅದರಲ್ಲಿ ನಿರೀಕ್ಷೆಯಿದ್ದಂತೆ ಯೆಹೂದ್ಯ ಸ್ಥಾನ-ಅರಬಸ್ಥಾನ ನಿರ್ಮಾಣಮಾಡುವ ಪ್ರಸ್ತಾಪವಿಲ್ಲದಿದ್ದರೂ ಅರಬರ ಆಕಾಂಕ್ಷೆಗೆ ವಿರುದ್ಧವಾಗಿ ಯೆಹೂದ್ಯರನ್ನಲ್ಲಿಗೆ ಹೊಗಿಸುವ ಸೂಚನೆಗಳಿವೆ. ಅರಬರು ಇದರಿಂದ ರೇಗಿಬಿದ್ದು ಕಂಡೋರ್ಕ್ಯ ನಿಷೇಧ ಸೂಚಿಸಿ, ಇದನ್ನು ಕೊನೆ ತನಕ ಪ್ರತಿಭಟಿಸುವೆವೆಂದು ಘೋಷಿಸಿದ್ದಾರೆ ಮಧ್ಯ ಪೂರ್ವದ ಮುಸಲ್ಮಾನ್ ರಾಷ್ಟ್ರಗಳೆಲ್ಲಾ ಅರಬರ ಬೆಂಬಲಕ್ಕಿವೆ ಅವರು ರಷ್ಯದ ಸಹಾಯ ಯಾಚಿಸಿದ್ದಾರೆ ಭಾರತ ಮೊದಲಾದ ರಾಷ್ಟ್ರಗಳ ಬೆಂಬಲ ಪಡೆಯುವ ವ್ಯವಸ್ಥೆ ಮಾಡಿದ್ದಾರೆ. ಪೆಲೆಸ್ಟೈನ್ ಅರ

ವಿಶೇಷ ವಿದ್ಯಮಾನಗಳು

ಬರ ರಾಷ್ಟ್ರೀಯ ಸ್ಫೂರ್ತಿಯನ್ನು ಲೀಗ್ ಮುಸಲ್ಮಾನರೂ ಅಮುದು ಪಡಿಸಿಕೊಂಡರಾಗುತಿತ್ತು!

ಇಜಿಪ್ಟಿನಿಂದ ವಾಪಾಸು

ಬ್ರಿಟನಿನ ಸಾಮ್ರಾಜ್ಯಾಂತರ್ಗತ ರಾಷ್ಟ್ರವಾಗಿರುವ ಇಜಿಪ್ಟಿನಿಂದ ತಮ್ಮ ಸೇನೆಗಳನ್ನು ಹಿಂದೆಗೆದುಕೊಳ್ಳಲು ಈಗ ಬ್ರಿಟಿಷ್ ಸರಕಾರವು ನಿರ್ಧರಿಸಿದೆ ಇದು ಬ್ರಿಟಿಷರಲ್ಲಿ ಆತ್ಮಪೂರ್ವವಾಗಿ ತೋರಿಬರುವ ಸದ್ಗುಣ. ಹಿಡಿತದ ಬದಲಿಗೆ ಈಜಿಪ್ಟಿಗೆ ಹಸ್ತಲಾಘವಕೊಟ್ಟು ಸ್ನೇಹ ಕರಾರು ಮಾಡಿಕೊಳ್ಳಲು ಅಟ್ಲೆ ಸರಕಾರ ನಿರ್ಧರಿಸಿದೆ. ಮಿ. ಚರ್ಚಿಲ್ಲರಂತಹ ಸಾಮ್ರಾಜ್ಯಪ್ರೇಮಿಗಳು ಈ ಘೋಷಣೆಯನ್ನು ಕಟುವಾಗಿ ಟೀಕಿಸಿದ್ದಾರೆ. 'ಇದೇ ಮಾದರಿಯನ್ನು ಹಿಂದುಸ್ಥಾನದ ಮಟ್ಟಿಗೂ ಅಂಗೀಕರಿಸಲಿ' ಎಂದು ನೆಹರು. ಅಜಾದ್ ಮೊದಲಾದವರ ಹಿತಬೋಧೆಯಿದೆ ಆದರೆ ಹಿಂದೂ-ಮುಸಲ್ಮಾನರು ಹೊಡೆದಾಡಿಕೊಳ್ಳುವಾಗ ಬ್ರಿಟಿಷ್ ಸೇನೆಯಿರುವದು ಬೇಡವೇ, ಎಂದು ಇತ್ತ ಪಾರ್ಲಿಮೆಂಟ್ ಸಭೆಯು ನೆಹರುಗಳನ್ನು ಪ್ರಶ್ನಿಸಬಹುದು!

ಬ್ರಿಟನಿಗೆ ಅಮೇರಿಕದ ಸಾಲ

ಇಂಗ್ಲಾಂಡಿಗೆ 375೦ ಮಿಲಿಯ ಡಾಲರುಗಳನ್ನು ಸಾಲಕೊಡುವ ಸೂಚನೆಯನ್ನು ಅಮೇರಿಕದ ಸೆನೆಟ್ ಸಭೆಯು ಮಾನ್ಯ ಮಾಡಿವೆ. ಇಂತಹ ದೊಡ್ಡ ಸಾಲವನ್ನು ಕೊಡುವ ಕುರಿತು ಅಮೇರಿಕದ ಕೆಲವು ಮಹನೀಯರ ಆಕ್ಷೇಪವಿದ್ದರೂ, ಅಲ್ಲಿಯ ಪ್ರಬಲ ಜನಮತವು ಇದಕ್ಕನುಕೂಲವಾಗಿಯೇ ಇದ್ದಿತು. ಕಾರಣವೆಂದರೆ ಇದರಿಂದ ಅಮೇರಿಕದ ವ್ಯಾಪಾರ ಸೌಕರ್ಯ ಹೆಚ್ಚುವದು. ಯುದ್ಧ ಹಾವಳಿಯಿಂದ ಮುಗ್ಗರಿಸಿರುವ ಬ್ರಿಟನಿನ ಕೈಗಾರಿಕೆಗಳು ಚೇತನಗೊಂಡು ಅದು ಯುದ್ಧಕಾಲದಲ್ಲಿ ಮಾಡಿದ್ದ ಋಣವನ್ನು ಸಂದಾಯಿಸಲನುಕೂಲವಾಗುವದು. ಇದರಿಂದ ಮುಖ್ಯತಃ ಲಾಭಹೊಂದಲಿರುವದು ಅಮೇರಿಕವೇ. ಸ್ವಾತಂತ್ರ್ಯ ದೊರೆತ ಮೇಲೆ ಭಾರತಕ್ಕೂ ಇಂತಹ ಸಾಲ ಪಡೆಯುವ ಸೌಕರ್ಯ ಮೊದಗಬಹುದು!

ಇಟಲಿ ರಾಜರ ಸಿಂಹಾಸನ ತ್ಯಾಗ

ಮುಸಲಿನಿ ಕಾಲದ ಲೋಕ ಪ್ರಸಿದ್ಧಿಯ ಇಟಲಿಯ ರಾಜಾ ಇಮಾನ್ಯುಯೇಲರು ಸಿಂಹಾಸನ ತ್ಯಾಗಮಾಡಿ, ಪದ್ಧತಿಯಂತೆ ರಾಣಿ ಮತ್ತೈವರು ಪುತ್ರರೊಂದಿಗೆ ಇಜಿಪ್ಟಿಗೆ ಪಲಾಯನ ಮಾಡಿದ್ದಾರೆ. ಯುವರಾಜಾ ರಾಜಕುಮಾರ ಎಂಬರ್ಟೋ 'ರಾಜ' ಎಂಬ ಬಿರುದಿಲ್ಲದೇನೇ ಸಿಂಹಾಸನವೇರಿದ್ದಾರೆ. ಇಂದಿನ ಹಂಧೀನ, ನಿಶ್ಶೇಜ ಇಟಲಿಯ ರಾಜಕಾರಣದಲ್ಲಿ ಇದರಿಂದಾಗಿ ವಿಶೇಷ ಬದಲಾವಣೆಯಾಗುವಂತಿಲ್ಲ ಆದರೆ ಕಿರೀಟಗಳೇ ಕೇಟಗಳೆಂದಾಗಿರುವ ಕಾಲವಿದು ಎಂಬುದಕ್ಕೆ ಮತ್ತೊಂದು ನಿದರ್ಶನವಿದು.

ಯಸ್. ವಿ. ಯಚ್. ಹೈಸ್ಕೂಲ್

ಕರ್ನಾಟಕ ಪ್ರಾಂತದಲ್ಲಿಯ ಏಕಮಾತ್ರ ಗುರುಕುಲ ಹೈಸ್ಕೂಲ್

ವಿಶ್ವೇಂದ್ರ ನಗರ, ಇನ್ನಂಜೆ ಪೋಸ್ಟು, ದಕ್ಷಿಣ ಕನ್ನಡ.

ಸ್ಥಾಪಕರು. — ಶ್ರೀ ಸೋದೆ ವಾದಿರಾಜ ಮಠದ ದಿವಂಗತ ಪೂಜ್ಯ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು.

ತಾ. 3—6—1946 ನೇ ದಿವಸ ಶಾಲಾರಂಭ.

S. S. L. C. ವರೆಗೆ ಶಿಕ್ಷಣ—ಇಂಗ್ಲೀಷ್ ಮತ್ತು ಕನ್ನಡಗಳಲ್ಲಿ ಕಲಿಸುವಿಕೆ ಯೋಗ್ಯ ತರಬೇತಿ ಹೊಂದಿದ, ನಿವಾಸಿ ಉಪಾಧ್ಯಾಯ ವರ್ಗ—ಸಂಸ್ಕೃತಕ್ಕೆ ಪ್ರಾಧಾನ್ಯ—ಬಯಲುಗಳ ನಡುವೆ ಇರುವ ಗುಡ್ಡೆಯ ಮೇಲೆ ಉತ್ತಮ ವಾಯು ಸಂಚಾರವಿರುವ ಶಾಲಾ ಕಟ್ಟೋಣಗಳು ಪಾಠೇತರ ಚಟುವಟಿಕೆಗಳಿಗೆ ವಿಶೇಷಗಮನ ವಿಶಾಲ ಆಟಂಗಳ—ಉಪಾಧ್ಯಾಯರ ಮೇಲ್ವಿಚಾರ ಮತ್ತು ಕಲಿಯುವಿಕೆಯಿಂದ ಆಟ

ಶ್ರೀ ವಾದಿರಾಜ ಗುರುಕುಲ (ಹೋಸ್ಟೆಲ್)

ಯೋಗ್ಯ ಮೇಲ್ವಿಚಾರದಿಂದ ಬಾಲಕ ಬಾಲಿಕೆಯರ ಬೇರೆ ಬೇರೆ ವಾಸಗಳು—ಆರೋಗ್ಯ ಮತ್ತು ರುಚಿಕರ ಸಸ್ಯಾಹಾರ ಬ್ರಾಹ್ಮಣರ ಅಡಿಗೆ—ಊಟದ ದರ ಅತೀ ಕನಿಷ್ಠ ಶ್ರೀಮಂತರಿಗೆ ಪ್ರತ್ಯೇಕ ಏರ್ಪಾಡು ಅನಾಸಯುಕ್ತ ರಾತ್ರದ ಗಮನ—ಉಳಕೊಳ್ಳಲು ವಿಶಾಲವಾದ ಗಾಳಿ ಬೆಳಕುಳ್ಳ ಉಪಕರಣಗಳಿಂದ ಸಹಿತವಾದ ಕೋಣೆಗಳು ಕಾವಳಿಯ ಆರೋಗ್ಯ ಸಮೆ ಬಂಜರ ಪ್ರತ್ಯೇಕ ವಾಸ

ವಿಶೇಷ ಮಾಹಿತಿಗೆ ಮುಖ್ಯೋಪಾಧ್ಯಾಯರಿಗೆ ಬರೆಯಿರಿ

ಶ್ರೀನಿವಾಸ ವಿಶ್ವಂತಾಯ,
ಮೆನೇಜರ್.

CHAMPAE'S
Snow & Castrex
(Sole Distributers for(India.)
Prop: K. G. NAYAK,
Santhekatte, UDIPI, S. K.

★ ಪರಾಭವಗೊಂಡ ಸಿಮ್ಲಾ ಸಮ್ಮೇಲನ ★

ಅದರಲ್ಲಿದ್ದ ಅಂತಸ್ಸುಗಳು— ಅದು ಚೆಲ್ಲಿದ ಕಿರಣಗಳು—

ಮೇ ತಾ. ೫ನೇ ಆದಿತ್ಯವಾರ ಸಮ್ಮೇಲನದ ಆರಂಭ. ಆ ದಿನ ಅಪರಾಹ್ನವೇ ಕಾರ್ಯಕ್ರಮ ಚರ್ಚೆಗಳ ಪ್ರಾರಂಭ. ಪ್ರಾಂತಿಕ ಸರಕಾರ, ಆ ಮೇಲೆ ಪ್ರಾಂತ್ಯಗಳನ್ನು ಮುಸ್ಲಿಂ ಸಂಗಡ, ಹಿಂದೂ ಸಂಗಡವಾಗಿ ವಿಂಗಡಿಸಿ ಆ ಸಂಗಡಗಳಲ್ಲಿ ಅವರವರಂತೆ ಫೆಡರೇಶನ್ ಸ್ಥಾಪನೆ ಆ ಮೇಲೆ ಆ ಸಂಗಡಗಳ ಫೆಡರೇಶನುಗಳನ್ನು ಆಶ್ರಿತ ರಾಜರನ್ನು ಜೋಡಿಸುವ ಯೂನಿಯನ್ ಸ್ಥಾಪನೆ ಎಂಬುದು ಮೊದಲ ಕಾರ್ಯಕ್ರಮ.

ಸೋಮವಾರ ಈ ಕಾರ್ಯಕ್ರಮಕ್ಕೆ ಕಾಂಗ್ರೆಸಿನ ವಿರೋಧ ಸ್ಪಷ್ಟವಾಯಿತು. "ಹಿಂದೀ ಯೂನಿಯನ್"ಗೆ ಪೂರ್ತಿ ಜವಾಬ್ದಾರಿಯ ಕೇಂದ್ರಾಧಿಕಾರವಿರಬೇಕು ಮತ್ತು ಪ್ರಾಂತ್ಯಗಳನ್ನು ಎರಡು ಸಂಗಡ ಮಾಡುವಾಗ ಪ್ರತಿಯೊಂದು ಭಾಗಗಳ ಜನರ ಅಭಿಪ್ರಾಯ ನಡೆಯಬೇಕು, ಎಂಬುದೇ ಮುಖ್ಯ ಕಾರಣ. ತಿಪ್ಪಣಿ ಸಭೆ ಬುಧವಾರಕ್ಕೆ ಮುಂದುವರಿಯಿತು.

ಈ ನಡುವೆ ಗಾಂಧಿಜೀಯೊಡನೆ ಬ್ರಿಟಿಷ್ ಸಮಿತಿ ಸದಸ್ಯರು ಪ್ರಾಮುಖ್ಯ ಮಾತುಕತೆ ನಡಿಸಿದ್ದು ಆ ಮೇಲಿನ ಕಾರ್ಯಕಲಾಪಗಳಲ್ಲಿ ಗಾಂಧೀ ಸೂಚನೆಗಳೇ ಮುಖ್ಯತಃ ಅಂತರ್ಗತವಾಗಿದ್ದುವು. ಜಿನ್ನರೊಡನೆಯೂ ಪ್ರಾಮುಖ್ಯ ಮಾತುಕತೆ ನಡೆದಿತ್ತು. ಬ್ರಿಟಿಷ್ ಪ್ರತಿನಿಧಿಗಳು ಬ್ರಿಟಿಷ್ ಪ್ರಧಾನಿ ಮತ್ತು ಮಂತ್ರಿಮಂಡಲಕ್ಕೂ ತಿಳಿಸಿ ಸಲಹೆ ಪಡೆದು ಕಾಂಗ್ರೆಸ್, ಲೀಗ್ ನಾಯಕರು, ಇತ್ಯಂಡದವರೊಡನೆ ಪ್ರತ್ಯೇಕವಾಗಿ ಬ್ರಿಟಿಷ್ ಪ್ರತಿನಿಧಿಗಳೂ ಗುಪ್ತಾಲೋಚನೆ ನಡಿಸಿದ್ದರು.

ಬುಧವಾರ ಸಭೆ ಸೇರದೆ ಗುರುವಾರ ಅಪರಾಹ್ನ ಸೇರಿತು. ಈ ಸಭೆಯಲ್ಲಿ ನೆಹರೂಗಳೊಡನೆ ಮಾತಾಡುವ ಬಯಕೆಯನ್ನು ಮಿ. ಜಿನ್ನರು ಪ್ರದರ್ಶಿದ್ದರಿಂದ ಅವರಿಬ್ಬರನ್ನೇ ಬಿಟ್ಟು ಉಳಿದ ಸದಸ್ಯರೆಲ್ಲರೂ 20 ಮಿನಿಟು ಹೊರಬಂದರು. ಆ ಮೇಲೆ ಸಭೆ ಸೇರಿ ಶನಿವಾರಕ್ಕೆ ಮುಂದುವರಿಯಿತು.

ಶುಕ್ರವಾರ ನೆಹರೂ-ಜಿನ್ನರೊಳಗೆ ಪ್ರಾಮುಖ್ಯ ಪತ್ರವ್ಯವಹಾರಗಳು ನಡೆದುವು. ಶನಿವಾರ ಮುಂಜಾನೆ ಜಿನ್ನಾರ ಬಂಗಲೆಗೆ ಹೋಗಿ ನೆಹರೂಗಳು 3½ ಘಂಟೆ ಮಾತಾಡಿ ಬಂದರು. ಇವರಿಬ್ಬರ ಸಂಭಾಷಣೆಗೆ ಉತ್ತರ ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯೂ, ಇತ್ತ ಗಾಂಧಿಜೀ ಮತ್ತು ಸಮ್ಮೇಲನದ ಕಾಂಗ್ರೆಸ್ ಪ್ರತಿನಿಧಿಗಳೂ ಹಿಂಭಾಗದಿಂದ ಆಲೋಚನೆ ಕೊಟ್ಟಿದ್ದರು.

ಶನಿವಾರ ಅಪರಾಹ್ನದ ಸಮ್ಮೇಲನದಲ್ಲಿ ಜಿನ್ನಾ ನೆಹರೂಗಳಿಬ್ಬರೂ ತಮ್ಮ ಮಾತುಕತೆಯ ಫಲಿತಾಂಶಗಳನ್ನು ಪ್ರತ್ಯಪ್ರತ್ಯೇಕವಾಗಿ ಸಮ್ಮೇಲನಕ್ಕೊಪ್ಪಿಸಿದರು. ಕಾಂಗ್ರೆಸ್-ಲೀಗ್ ಸಂಧಾನ ಅಸಾಧ್ಯವೆಂಬುದು ಅಂದೇ ಸ್ಪಷ್ಟವಾಯಿತು. ಮುಸ್ಲಿಂ ಲೀಗಿನವರು ಹೊಸ ಸೂಚನೆಗಳನ್ನು ಮುಂದಿಟ್ಟರು.

ತಾ. 12ನೇ ಆದಿತ್ಯವಾರ ಸಮ್ಮೇಲನ ಸೇರಿದಾಗ ಕಾಂಗ್ರೆಸ್-ಲೀಗ್ ಸಂಧಾನ ಅಸಾಧ್ಯವೆಂದು ತೀರ್ಮಾನಿಸಿ, ಬ್ರಿಟಿಷ್ ಪ್ರತಿನಿಧಿಗಳು ಸಮ್ಮೇಲನವನ್ನು ಬರ್ಖಾಸ್ತುಗೊಳಿಸಿ ಸಿಮ್ಲಾದಿಂದ ಹೊರಟರು. ಈ ಪರಾಭವಕ್ಕೆ ಕೇಂದ್ರಾಧಿಕಾರವಾದ 'ಹಿಂದೀ ಯೂನಿಯನ್'ಗೆ ಶಾಸನ ಸಭೆ, ಹಣಕಾಸಿನ ಅಧಿಕಾರ ಇತ್ಯಾದಿಗಳನ್ನು ಕೊಡಲು ಜಿನ್ನರೊಪ್ಪದುದೇ ಕಾರಣ.

ತಾವಿನ್ನೂ ಮಾತುಕತೆಗಳನ್ನು ಮುಂದುವರಿಸಲಿದ್ದೇವೆಂದೂ, ಬ್ರಿಟಿಷ್ ಸರಕಾರದ ಸಲಹೆ ಪಡೆದು ತಮ್ಮ ಮುಂದಿನ ಧೋರಣೆಯ ಕುರಿತು ಸದ್ಯದಲ್ಲಿಯೇ ಪ್ರಕಟಣೆ ಹೊರಡಿಸುವೆನೆಂದೂ ಬ್ರಿಟಿಷ್ ಪ್ರತಿನಿಧಿಗಳಂದಿದ್ದಾರೆ.

ಈ ನಡುವೆ ಭಾರತ ಸೇನಾನಿ ಸಮೇತ ವೈಸರಾಯಿ ಕೌನ್ಸಿಲ್ ಸದಸ್ಯರು ವೈಸರಾಯರಿಗೆ ರಾಜಿನಾಮೆಯೊಪ್ಪಿಸಿ, ರಾಷ್ಟ್ರೀಯ ಮಂಡಲಿ ರಚನೆಯಾಗುವ ವರೆಗೆ ಕಾರ್ಯನಿರ್ವಹಿಸಲೊಪ್ಪಿದ್ದರು. ಸಮ್ಮೇಲನದ ಕೊನೆಯ ಭಾಗದಲ್ಲಿ ಭೋಪಾಲದ ನವಾಬ್, ಸರ್. ಸಿ. ಪಿ ಮೊದಲಾದ ಆಶ್ರಿತರಾಜರ ಪ್ರತಿನಿಧಿಗಳೂ ಸಿಮ್ಲಾಕ್ಕೆ ಬಂದು ಮಾತುಕತೆ ನಡೆಸಿದ್ದರು.

ನವಯುಗ
ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.
ವಾರ್ಷಿಕ ಚಂದಾ ರೂ 4-8-0
ಅರ್ಧ ವರ್ಷಕ್ಕೆ ರೂ 2-8-0
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್ ನವಯುಗ, ಉಡುಪಿ.

ಈ ಬಾರಿ ಕಾಂಗ್ರೆಸ್ ಮತ್ತು ಲೀಗುಗಳಲ್ಲೊಂದು ಒಪ್ಪಂದ ಮಾಡಿಸಬೇಕೆಂಬ ಯಥಾರ್ಥ ಇಚ್ಛೆ ಬ್ರಿಟಿಷರಿಗಿತ್ತೆಂಬುದು ಸ್ಪಷ್ಟವಾಗಿದೆ. ಭಾರತೀಯರಿಗೆ ಅಧಿಕಾರ ಬಿಟ್ಟು ಕೊಡಲು ಅವರು ನಿಜಕ್ಕೂ ತಯಾರಿರುವರೇ ಇದಕ್ಕೆ ಕಾರಣ. ಕಾಂಗ್ರೆಸ್-ಲೀಗ್ ಎರಡಕ್ಕೂ ಸಮಾಧಾನಕರವಾದ ವ್ಯವಸ್ಥೆಯಾಗದಿದ್ದಲ್ಲಿ ಭಾರತದಲ್ಲಿ ರಕ್ತಪಾತವಾಗುವದೆಂದು ಬ್ರಿಟಿಷರಿಗೆ ಭೀತಿ ಹಿಡಿದಿದೆ. ತಾವು ಕೃತಕ ಪಕ್ಷದ್ವೇಷವನ್ನು ಇಷ್ಟೊಂದು ಪ್ರಜ್ವಲಿಗೊಳಿಸಿದ ಮೇಲೆ ಅದಕ್ಕೊಂದು ತೀರ್ಮಾನ ಮಾಡದೆ ಬಿಟ್ಟರೆ ಆ ಮೇಲಿನ ಗಂಡಾಂತರಗಳ ಹೊಣೆ ತಮ್ಮ ಮೇಲೆ ಬೀಳುವದೆಂಬ ಭೀತಿಯೇ ಕೊನೆಯ ಭಾಗದ ಸಂಧಾನ ಒದ್ದಾಟಕ್ಕೆ ಕಾರಣ.

ಮುಸ್ಲಿಂ ಲೀಗ್ ಸಂಧಾನಸಾಧನೆಗಲ್ಲದೆ ಸಂಧಾನ ಸಾಧನೆಗೆ ತಯಾರಿರುವ ಪಕ್ಷವೇ ಅಲ್ಲವೆಂಬುದು ಈ ಬಾರಿ ಸ್ಪಷ್ಟವಾಗಿದೆ ಇಷ್ಟೊಂದಾದರೂ ಸಂಧಾನದ ಪ್ರಸ್ತಾಪವೆತ್ತುವವರು ಹುಚ್ಚರನ್ನಿಸುವಷ್ಟು ಅದು ಕೊನೆಯ ಬಾರಿಯ ನಿರ್ಧಾರ ಪಡೆದಿದೆ.

ಸಮ್ಮೇಲನ ಪೂರ್ವಾರ್ಧದಲ್ಲಿ ಬ್ರಿಟಿಷ್ ಮಂತ್ರಿತ್ರಯರು ಲೀಗಿನ ಕಡೆಗೆ ವಾಲಿದಂತಿದ್ದರು. ಉತ್ತರಾರ್ಧದಲ್ಲಿ ಕಾಂಗ್ರೆಸಿನ ಕಡೆಗೆ ವಾಲಿದಂತಾದರು. ಅದರೆ ಈ ಒಲೆದಾಟಕ್ಕೆ, ಒಪ್ಪದವರನ್ನು ಒಲಿಸಿಕೊಳ್ಳಬೇಕೆಂಬ ಆತುರವೊಂದೇ ಕಾರಣವಲ್ಲದೆ ಪಕ್ಷಪಾತತನವಲ್ಲ.

ಸಿಮ್ಲಾ ಸಮ್ಮೇಲನದ ಪರಾಭವಕ್ಕಾಗಿ ಬ್ರಿಟಿಷ್ ಪ್ರತಿನಿಧಿಗಳನ್ನು ದೂರಲಿಕ್ಕಿಲ್ಲ ಭಾರತದ ಪಕ್ಷಗಳೊಳಗೆ ಎಂದೂ ಒಮ್ಮತಕ್ಕೆ ಬಾರದಷ್ಟು ಭಿನ್ನಾಭಿಪ್ರಾಯಗಳಿವೆ ಎಂಬ ಸತ್ಯಸ್ಥಿತಿ ಲೋಕಕ್ಕೆಲ್ಲಾ ಅರುಹು ವ್ಯಾಪಾರಕ್ಕೆ ಒಂತು ಆದರಿದ. ಪ್ರತಿಯೊಂದು ರಾಷ್ಟ್ರದ ಪಕ್ಷಗಳೊಳಗೂ ಇದ್ದೇ ಇರುವಂತಹ ತಾರತಮ್ಯವಾದ್ದರಿಂದ ಹಿಂದೀ ಸ್ವಾತಂತ್ರ್ಯ ವಿರೋಧಿಗಳಲ್ಲದೆ ಬೇರಾರೂ ಇದನ್ನು ಅಸ್ವಾಭಾವಿಕ, ಅತಿರೇಕವೆನ್ನಲಾರರು.

ಬ್ರಿಟಿಷರು ಮುಂದೇನುಮಾಡುವರೆಂಬುದೊಂದನ್ನಾಧರಿಸಿಯೇ ಅವರ ಹೃದಯ ಪರೀಕ್ಷೆ ನಡೆಯಬೇಕು. ಅವರು ಪಕ್ಷಗಳೊಳಗೆ ರಾಜಿಮಾಡಿಸುವ ಏಕೋದ್ದೇಶದಿಂದ ಬಂದವರಲ್ಲ; ಅದು ಅವರ ಪಾಲಿನ ಕರ್ತವ್ಯವೂ ಅಲ್ಲ. ಭಾರತೀಯರಿಗೆ ಅಧಿಕಾರ ದಾನಮಾಡುವ ವ್ಯವಸ್ಥೆ ಮಾಡಲು ಬಂದವರು. ಆ ವ್ಯವಸ್ಥೆಯ ಒಂದು ವಿಧಾನವಾದ ಕಾಂಗ್ರೆಸ್-ಲೀಗ್ ಒಪ್ಪಂದ ಮಾಡಿಸುವ ಕಾರ್ಯದಲ್ಲಿ ಅವರು ಸೋತರೂ ಬೇರೆ ಹಾದಿಹಿಡಿದು ಅಧಿಕಾರವನ್ನು ಹಿಂದಿಯರ ಕೈಗೊಪ್ಪಿಸಿ ಅವರು ಹೋಗಲೇಬೇಕು.

ಹೇಗೆ ಅಧಿಕಾರ ದಾನಮಾಡುವರೆಂಬುದು ವಿಧಾನವು ಅವರ ಕಣ್ಣಮುಂದೆ ಸ್ಪಷ್ಟರೂಪದಲ್ಲಿದೆ. ತಾತ್ಕಾಲಿಕ ಹಿಂದೀಯ ಸರಕಾರ ಸ್ಥಾಪಿಸಿ-ಕೇಂದ್ರ ಕಾರ್ಯಕಾರೀ ಸಮಿತಿಯ ರಾಷ್ಟ್ರೀಕರಣಮಾಡಿ-ಶಾಶ್ವತ ರಾಜ್ಯಭಾರಕ್ರಮ ತಯಾರಿಸುವ ಹೊಣೆಯನ್ನು ಅದಕ್ಕೆ ಬಿಟ್ಟುಕೊಟ್ಟು ಬ್ರಿಟಿಷರು ಹೊರಟು ಹೋಗಬೇಕಾಗಿದೆ. ಅದ್ದರಿಂದ ವೈಸರಾಯಿ ಕೌನ್ಸಿಲ್ ಸದಸ್ಯರು-ಭಾರತದ ಕಮಾಂಡರ್-ಇನ್-ಚೀಫ್ ಸಮೇತ ರಾಜೀನಾಮೆಯೊಪ್ಪಿಸಿದುದು ನಿಜಕ್ಕೂ ಶುಭಶಕುನ.

ಈ ತಾತ್ಕಾಲಿಕ ಸರಕಾರದಲ್ಲಿ ಮುಸ್ಲಿಮರು ಮತ್ತಿತರ ಅಲ್ಪಸಂಖ್ಯಾಕರ ಭೀತಿಗವಕಾಶವಿರದಂತೆ ಅವರಿಗೆ ವಿಶೇಷ ರಿಯಾಯಿತಿಯನ್ನೊಳಗೊಂಡ ಪ್ರಜಾಪ್ರಭುತ್ವ ಸೂತ್ರಾನುಸಾರವಾಗಿಯೇ ಕೇಂದ್ರ ಸರಕಾರದ ರಚನೆಮಾಡಬೇಕು.

ಇಷ್ಟನ್ನು ಮಾಡಿ ತೋರದರೆ ಬ್ರಿಟಿಷರಲ್ಲಿ ಯಥಾರ್ಥತೆಯಿದೆಯೆಂದಾಗುವದು. ಇಲ್ಲವಾದರೆ ಕೇವಲ ಕಪಟ ನಾಟಕವಾಡಲು ಬಂದವರೆಂಬುದು ಸ್ಪಷ್ಟವಾಗುವದು. ತಾತ್ಕಾಲಿಕ ರಾಷ್ಟ್ರೀಯ ಸರಕಾರ ಬಂದಲ್ಲಿ ಗಣ್ಯ ಅಂತಃಕಲಹಗಳೂ ನಡೆಯದೆ ಅಲ್ಪಾವಧಿಯಲ್ಲೇ ಚಿರಸ್ಥಾಯೀ ಸರಕಾರೀ ಪದ್ಧತಿ ನಿರ್ಮಾಣವಾಗುವದು ಖಂಡಿತ.

WANTED

Three Organisers for the District of South Kanara on a salary ranging from Rs. 75/- to Rs. 225/- p. m on a nominal guarantee of business. For further particulars, please apply to the **Secretary** who is now camping in Udipi.

THE
UNITED KARNATAK INSURANCE Co., Ltd.
UDIPI
H. O. **DHARWAR.** ESTD. 1929.



Approved firm by the Govt. of Mysore
Certified by the Agent of the Govt. of Cylone Indian.

ಸಿಮ್ಲಾ ಚಟುವಟಿಕೆಗಳು

ಯುದ್ಧಾವಧಿಯಲ್ಲಿ ನಾಗರಿಕತೆಯ ಸಂಬಂಧವನ್ನು ಪೂರ್ತಿ ಕಡಿದುಕೊಂಡಿದ್ದ ಸಿಮ್ಲಾವು, ಈಗಿನ ಎರಡು ವರುಷಗಳಲ್ಲಿ ತೊಂದಿದ ಹೆಸರಿಗಾಗಿ ಪ್ರಪಂಚದ ಬೇರೆ ಎಲ್ಲಾ ಪ್ರಸಿದ್ಧ ಸ್ಥಳಗಳೂ ಮತ್ಸರಪಡಬೇಕು. ಕಳೆದ ಬಾರಿ ವೈಸರಾಯಿ ವೇವೆಲರು ಇಲ್ಲಿ ಭಾರತದ ಸರ್ವಪಕ್ಷೀಯ ಪ್ರಮುಖರ ಸಮ್ಮೇಲನ ಕರೆದಿದ್ದರು. ಈ ಬಾರಿ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರು ತ್ರಿಪಕ್ಷೀಯ--ಸರಕಾರ, ಕಾಂಗ್ರೆಸ್, ಲೀಗ್--ಸಮ್ಮೇಲನ ಕರೆದರು. ಎರಡು ಬಾರಿಯೂ ಎಲ್ಲರಲ್ಲೂ ಸಿಮ್ಲಾನ ತಪ್ಪಲನ್ನೇರುವಾಗ ಉತ್ಸಾಹವೇರಿದ್ದಿತು; ಇಳಿಯುವಾಗ ಹುರುಪಿಳಿದಿದ್ದಿತು!

ಈ ಬಾರಿಯ ಸಿಮ್ಲಾ ಸಮ್ಮೇಲನ ಒಂದು ಆದಿತ್ಯವಾರದಿಂದ ಮತ್ತೊಂದು ಆದಿತ್ಯವಾರದ ವರೆಗೆ--ತಾ. ೫ರಿಂದ ತಾ. ೧೨ರ ವರೆಗೆ--ನಡೆಯಿತು. ಇಡೀ ಪ್ರಪಂಚದಲ್ಲೇ ಅದರ ಸಾಮುಖ್ಯತೆಯಾಗುತಿತ್ತು. ಅದರದು 'ಸಂಭವದನೆಲೆ' ಎಂದು ಕಳೆದ ವರುಷ ಸೂಚಿಸಲ್ಪಟ್ಟು ಈ ವರುಷ ಅನುಮೋದನೆ ಪಡೆಯಿತು.

ಕಳೆದ ಬಾರಿಯ ಸಮ್ಮೇಲನದಲ್ಲಿ ಅಲ್ಲಿಯ ಹಲವು ಕಟ್ಟಡಗಳು ಪ್ರಸಿದ್ಧಿ ಪಡೆದಿದ್ದುವು. ಮುಖ್ಯವಾದುದು ಸಿಸಿಲ್ ಹೋಟೆಲ್. ಆ ಬಾರಿ ಸರ್ವಪಕ್ಷಗಳ ಪ್ರಮುಖರು ಸೇರಿದ್ದು, ಹೆಚ್ಚಿನವರಿಗೆ ಸರಕಾರವು ಸಿಸಿಲಿ ಹೋಟೆಲಿನಲ್ಲಿಯೇ ವ್ಯವಸ್ಥೆ ಮಾಡಿಸಿದ್ದುದರಿಂದ ಹೀಗಾಯಿತು. ಗಾಂಧಿಜೀ ಮತ್ತು ಮೌ. ಅಜಾದರ ಹೊರತು ಮಿ. ಜಿನ್ನರೇ ಆದಿಯಾಗಿ ಎಲ್ಲರೂ ಸಿಸಿಲಿ ಹೋಟೆಲಿನಲ್ಲೇ ಇದ್ದರು. ಈ ಬಾರಿ ಅಲ್ಲಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಜನ ಪ್ರಮುಖರೆಂದರೆ ಕಾಂಗ್ರೆಸಿನ ನಾಲ್ವರು ಮತ್ತು ಲೀಗಿನ ನಾಲ್ವರು ಮಾತ್ರ, ಗಾಂಧಿಜೀ ಸರೋಜಿನಿ ದೇವಿ ಮತ್ತಿತರರು, ಭೋಪಾಲದ ನವಾಬರೇ ಮೊದಲಾದವರು, ಲೀಗ್ ಕಾರ್ಯಕಾರೀ ಮಂಡಲಿಯ ಸದಸ್ಯರು ನೆರೆದು--ಕೊನೆಯ ಭಾಗದಲ್ಲಿ ಸಿಮ್ಲಾದ ಸಂಭ್ರಮವೇರಿದ್ದಿತು

ಈ ಬಾರಿ ಹೆಸರು ಪಡೆದ ಕಟ್ಟಡಗ[illegible] ಸ್ಥಳವಾದ ವೈಸರಾಯ ಭವನವನ್ನು ಬಿಟ್ಟರೆ ಮಹಾತ್ಮಾ ಗಾಂಧಿ, ಸರ್ದಾರ್, ಪಟೇಲ್, ಅಬ್ದುಲ್ ಗಫಾರ್ ಖಾನ್ ಮೊದಲಾದವರು ವಾಸಿಸುತ್ತಿದ್ದ 'ಚಾಡ್ವಿಕ' ಮಿ. ಜಿನ್ನರು ಮತ್ತು ಇತರ ಲೀಗ್ ನಾಯಕರ ವಾಸಸ್ಥಳ 'ಯರ್ರೋಸ್'; ಮೌಲಾನಾ ಆಜಾದ್, ನೆಹರು, ಕೃಪಲಾನಿ ಮೊದಲಾದವರು ಉಳಿದಿದ್ದ ಬಂಗಲೆ 'ರಿಟ್ರೀಟ್'.

ಸಿಮ್ಲಾದಲ್ಲಿ ವೈಸರಾಯರ ಕಾರು ಹೊರತು ಇತರ ಕಾರುಗಳು ಸಂಚರಿಸುವ ಸಂಪ್ರದಾಯವಿದ್ದಿಲ್ಲ. ಎರಡು ಸಮ್ಮೇಲನಗಳೂ ಆ ಪದ್ಧತಿಯನ್ನು ಮುರಿದಿವೆ. ಮನುಷ್ಯ ಎಳೆಯುವ 'ರಿಕ್ಷ'ಗಳ ಸಂಚಾರ ಬಹಳ. ಲೀಗ್ ಪ್ರತಿನಿಧಿಗಳು ಪ್ರತಿ ಸಲವೂ ಸಮ್ಮೇಲನಕ್ಕೆ ಮಿಲಿಟರಿ ಸ್ಟಾಫ್ ಕಾರಿನಲ್ಲೇ ಬಂದು ಹೋಗುತಿದ್ದರು. ಮೌಲಾನಾ ಆಜಾದರ ಆಗಮನ ನಿರ್ಗಮನ ರಿಕ್ಷದಲ್ಲೇ. ಪಟೇಲ್, ನೆಹರುಗಳು ಪ್ರಥಮ ಬಾರಿ ನಡೆದು ಹೋಗಿದ್ದರೂ ಆ ಮೇಲೆ ಮುದಿ ಸರ್ದಾರರೂ ರಿಕ್ಷದಲ್ಲೇ ಹೋಗಿದ್ದರು, ಪಂಡಿತ ನೆಹರುಗಳು ಕುದುರೆ ಹತ್ತಿ ಹೋಗಿ ಬರುತ್ತಿದ್ದದು. ಒಮ್ಮೊಮ್ಮೆ ರಾಷ್ಟ್ರಪತಿ ಆಜಾದರ ರಿಕ್ಷದ ಹಿಂದೆ ಕುದುರೆ ಸವಾರಿ ನೆಹರುಗಳು ಹೋಗುತ್ತಿದ್ದ ದೃಶ್ಯವು ಆಕರ್ಷಣೀಯ ಮತ್ತು ಅರ್ಥ ಗರ್ಭಿತವಿದ್ದಿತು. ಆದರೆ ಪ್ರತಿಬಾರಿಯೂ ಕಾಲು ನಡೆಯಿಂದಲೇ ಹೋಗಿ ಬರುತಿದ್ದವರೆಂದರೆ ಖಾನ್ ಅಬ್ದುಲ್ ಗಫಾರ್ ಖಾನರೊಬ್ಬರೇ. ಕಳೆದ ವರುಷದ ಸಿಮ್ಲಾ ಸಮ್ಮೇಲನದ ಪ್ರತಿನಿಧಿಯಾಗಿ ಬಂದಿದ್ದ ಇವರ ಸಹೋದರ ಡಾ। ಖಾನ್ ಸಾಹೇಬರೂ 'ಛೆ! ನನ್ನಂತಹ ಮನುಷ್ಯನೇ ಎಳೆಯುವ ವಾಹನವನ್ನು ನಾನು ಹತ್ತಲಾರೆ' ಎಂದು ಕಾಲ್ನಡಿಗೆಯನ್ನೇ ಅವಲಂಬಿಸಿದ್ದರು.

ಹಿಂದೀ ಪ್ರತಿನಿಧಿಗಳ ಮಟ್ಟಿಗೆ ಪೋಷಾಕಿನಲ್ಲಿ ಪ್ರಥಮ ಸ್ಥಾನ ಮಿ. ಜಿನ್ನರಿಗೆ. ಬ್ಯಾರಿಸ್ಟರ್ ಶ್ರೀಮಂತ ಜಿನ್ನರಲ್ಲಿ 500 ಜತೆ ಪೋಷಾಕುಗಳಿವೆ ಎಂದು ಪ್ರತೀತಿ. ಪೋಷಾಕಿನ ಮಟ್ಟಿಗೆ ಇಡೀ ಭಾರತದಲ್ಲೇ ನಾಜೂಕಿನ ಮನುಷ್ಯನೆಂದು ಯುರೋಪಿಯನರಿಂದ ಸರ್ಟಿಫಿಕೇಟು ಪಡೆದಿದ್ದಾರೆ ಜಿನ್ನಾ ಸಾಹೇಬರು. ಸಡಿಲು ಚಲ್ಲಣ, ಉದ್ದ ಸಡಿಲು ನಿಲುವಂಗಿ, ಕಪ್ಪು ಟೋಪಿಯ ಮೌಲಾನಾ ಆಜಾದರದ್ದು ನೋಡತಕ್ಕಂತಹ ದೃಶ್ಯವಾಗಿತ್ತು. ಪಂಡಿತ ನೆಹರುಗಳದು, ಮೌಲಾನರಷ್ಟು ಸಡಿಲಾಗಿರದಿದ್ದರೂ ಅದೇ ಮಾದರಿಯ ಪೋಷಾಕು. ಟೋಪಿ ಮಾತ್ರ ಬಿಳಿ. ಸಿಮ್ಲಾದಲ್ಲಿರುವಾಗ ಅವರು ಕೈಚೀಲ ಬಿಟ್ಟದ್ದೇ ಕಡಿಮೆ. ಕಾಂಗ್ರೆಸ್-ಲೀಗ್ ಪ್ರತಿನಿಧಿಗಳ ವಾಹನ ಮತ್ತು ಪೋಷಾಕುಗಳೂ ಮನೋವೃತ್ತಿ ಸೂಚಕಗಳಿದ್ದುವು.

೦೦　　೦೦　　೦೦

ಎಂಟು ದಿನಗಳಲ್ಲಿ ಸಿಮ್ಲಾದಲ್ಲಿ ನಡೆದಿದ್ದ ನೂರಾರು ಖಾಸಗೀ ಸಂಭಾಷಣೆಗಳ ಪೈಕಿ ಮುಖ್ಯವಾದುವೆಂದರೆ ಗಾಂಧಿ-ಕ್ರಿಪ್ಸ ಭೇಟಿ; ಮತ್ತು ಜಿನ್ನಾ-ನೆಹರು ಭೇಟಿ. ಕೇಂದ್ರ ಯೂನಿಯನಿಗೆ ಶಾಸನಸಭೆ, ಹಣಕಾಸಿನ ಅಧಿಕಾರ, ಇತ್ಯಾದಿಗಳನ್ನು ಕೊಡದೆ ಮಿ. ಜಿನ್ನರ ಬಯಕೆಯಂತೆ ಅದನ್ನು ಟೊಳ್ಳಾಗಿಡುವ ಪ್ರಥಮ ಬಾರಿಯ ಯೋಜನೆಗೆ ಕಾಂಗ್ರೆಸ್ ಪ್ರತಿನಿಧಿಗಳೊಪ್ಪದೆ ಸಮ್ಮೇಲನ ನೆರೆದ ಮರುದಿನವೇ ಮುರಿದು ಬೀಳಲಿಕ್ಕಿತ್ತು. ಆದರೆ ಗಾಂಧಿಜೀ, ಬ್ರಿಟಿಷರು ತಮ್ಮ ಮುಂದಿನ ಹೆಜ್ಜೆಯೇನೆಂಬುದನ್ನು ಸ್ಪಷ್ಟ ಪಡಿಸಬೇಕೆಂದು ಒತ್ತಿ ಕೇಳಿ, ಅಟ್ಲೀ ಆಶ್ವಾಸನೆಯ ನೆನಪು ಮಾಡಿಕೊಟ್ಟು, ವ್ಯಾವಹಾರಿಕ ಸೂಚನೆಗಳನ್ನು ಕ್ರಿಪ್ಸರ ಮುಂದಿಟ್ಟ ನಂತರವೇ ಸಮ್ಮೇಲನ ಮತ್ತೊಂದು ಹಾದಿ ಹಿಡಿಯಿತು, ಮತ್ತು ನಾಲ್ಕೈದು ದಿನ ಬಾಳಿತು.

ಮಿ. ಜಿನ್ನರೊಡನೆ ನೆಹರುಗಳೊಂದು ಸಂಧಾನಕ್ಕೆ ಹೋದುದು ಏಳು ವರುಷಗಳ ನಂತರ ಇದೇ ಮೊದಲ ಬಾರಿ. ಕಳೆದ ವರುಷದ ಸಮ್ಮೇಲನದಲ್ಲೂ ಮಿ. ಜಿನ್ನರಿಗೆ ಇಂತಹ ಆಸೆಯೇ ಒಮ್ಮೆ ಮೊಳೆತಿದ್ದು ಅವರು ಪಂಡಿತ ಗೋವಿಂದ ವಲ್ಲಭ ಪಂತರನ್ನು ಸಂಧಾನಕ್ಕೆ ಕರೆದಿದ್ದರು. ಈ ಬಾರಿ ನೆಹರುಗಳು ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷರೆಂದಾದೊಡನೆ ನೆಹರು ಸಂಭಾಷಣೆಯನ್ನು ಸಾಹೇಬರೇ ಅಪೇಕ್ಷಿಸಿದ್ದರು. "ನೆಹರುಗಳ ಅಭಿಪ್ರಾಯಗಳಲ್ಲವಾದರೂ ಅವರ ವ್ಯಕ್ತಿತ್ವ ನನ್ನನ್ನು ಮೋಹಿಸಿದೆ" ಎಂದು ಏಳು ವರುಷಗಳ ಮೊದಲು ಸಂಭಾಷಣೆಯ ಕುರಿತು ಜಿನ್ನರಂದಿದ್ದರು. ಈ ಬಾರಿ ಜಿನ್ನರ ದೃಷ್ಟಿಯಲ್ಲಿ ಆ ವ್ಯಕ್ತಿಗತ ಮೋಹಕತ್ವವನ್ನು ನೆಹರುಗಳು ಕಳೆದುಕೊಂಡಿರಬಹುದೋ ಎಂಬ ಅನುಮಾನ! ಕಾರಣವೆಂದರೆ ಇತ್ತೀಚೆಗೆ ಮಿ. ಜಿನ್ನರಲ್ಲುಂಟಾಗಿರುವ ದೃಷ್ಟಿಮಾಂದ್ಯತೆಯಿಂದಾಗಿ ಯಾರ್ಯಾರಿಗೂ ಮುಂದಿನ ಹಾದಿ ತೋರದಂತಾಗಿದೆ!

THE VIJAYA BANK. LIMITED.

To the Share-holders,

("Consent of the Central Government has been obtained to this issue under Defence of India Rule 94-A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statements made or opinions expressed therein").

It has been resolved to issue 2000 new shares of the Bank of the nominal value of Rs. 50 - per share at a premium of Rs. 5/- per share and an admission fee of Re. 1/- per share. A sum of Rs. 16/- per share (Rs. 10 - towards share capital deposit, Rs. 5 - towards premium and Re. 1 - towards admission fee) is payable on application and a sum of Rs 15 - on allotment. The new shares will rank for dividend from the date of allotment. The issue is confined in the first instance to the existing share-holders who hold 5 shares or more in the proportion of 1 share to every 5 shares held by them. If acceptance to this offer is not received by the Head office or any of its branches along with the necessary amount, on or before 5-6-1946, it will be deemed to have been declined.

The terms of issue and other particulars along with application form have been posted separately to the Share-holders, who hold 5 or more shares.

Applications for additional shares from the Share-holders who hold 5 or more shares and applications for shares from any of the existing share-holders or other persons belonging to the Bunt alias Nadava Community, may be made, along with the necessary amount, on or before 8-6-46, but such applications will be considered only subject to shares being available and the allotment of such shares shall be at the absolute discretion of the Directors. Application forms can be had at any of the offices of the Bank.

The Subscription to the shares may be closed at any time earlier than 8-6-46, as soon as it is estimated the capital offerred is taken up, except to the existing share-holders, who hold 5 or more shares, to the extent of the shares they are entitled.

Head office,
Manglaore,
Date 10-6-1946

B. Mahabala Shetty.
Secretary.

WANTED

A travelling Salesman (1) for mysore state & (2) for south india.

with business qualifications and previous experience in the line. Pay and commission according to merit.

Apply to.

T. L. S. UPADHYAYA
Manufacturer of
AGARBATTIES & OTHER
PERFUMES, MYSORE.

The Canara Banking Corporation Limited.

(Incorporated in British India, with limited Liability)

Estd 1906.

Head Office: UDIPI, South Kanara.

CAPITAL

Authorised	...	Rs. 25,00,000
Issued & Subscribed	...	„ 16,00,000
Paid up	...	„ 15,60,120
Reserves	...	„ 4,60,000

ANNOUNCEMENT.

A Branch will be opened at BYADGI (Dharwar Dt.) **on 22nd May 1946.**

All kinds of banking business transacted.

ಉಡುಪಿ, ಗುರುವಾರ, ೧೬-೫-'೪೬

ಸಿಮ್ಲಾದ ಸೋಲು

ಸಿಮ್ಲಾದ ತ್ರಿಪಕ್ಷೀಯ ಸಮ್ಮೇಲನ ... ಹೀಗಾಗಬಾರದೆಂದು ಬ ... ದವರಿದ್ದರೆ ಅದರ ಹೀಗಾಗಲಾರ ... ಪರೀಕ್ಷಿಸಿದವರಿಲ್ಲ. ಅದರಿಂದ ಆ... ಯಾವೇನೂ ನಿವಾರಣವಾಗಿಲ್ಲ.

... ಸನಕ್ಕೂ ಅಸ್ಪದವಿಲ್ಲ. ಸಿಮ್ಲಾ ಸ ... ಲನವನ್ನು ವಿಜಯದ ಕಡೆಗೊಯ್ಯುವ ... ಎಂದಾದರೆ ಮುಸ್ಲಿಂ ಲೀಗಿನ ... ರಿಕೆಯನ್ನು ಮನ್ನಿಸುವದೊಂದೇ. ಈ ... ಒಂದು ವಿಜಯಕ್ಕಾಗಿ ನ್ಯಾಯವನ್ನೂ ... ರತದ ಭವಿಷ್ಯವನ್ನೂ ಬಲಿಕೊಡಬೇ ... ಗುತ್ತಿತ್ತು. ಅದು ಮಿ. ಜಿನ್ನರಿಗೆ ಕೊ ... ಲಂಚವಾಗುತ್ತಿತ್ತು, ಹೊರತು ಯಾವ ... ಜಕೀಯ ನೀತಿಗೂ ಸಲ್ಲಿಸಿದ ನ್ಯಾಯ ... ವ್ವ ತುಷ್ಟಿಫಲವಾಗುತ್ತಿರಲಿಲ್ಲ. ನಿಜ ... ಾದ ಸಂತಾಪವೆಂದರೆ ಇಂತಹದೇ ಹೊರ ... ಇಂದು ಸಿಮ್ಲಾ ಸಮ್ಮೇಲನಕ್ಕೊದಗಿದ ... ದುಸ್ಥಿತಿ ಇಪ್ಪರಿಂದ ಸಮ್ಮೇಲನ ... ಜರುಗಿದ

... ಈ ನಾಟಕನಗತ್ಯವಿತ್ತೇ ... ಪ್ರಶ್ನೆಯಿದೆ. ಇದನ್ನು ಉತ್ತರಿಸ ... ವರು ಬ್ರಿಟಿಷ್ ಪ್ರತಿನಿಧಿಗಳೇ. ... ಸಾಧಿಸಬಹುದೆಂಬ ಅವಾಮಾ ... ವಿಶ್ವಾಸ ಅವರಲ್ಲಿದ್ದಿತು; ಹಿಂದೀಯ ... ರನ್ನು ಇನ್ನೂ ಆಳಬಹುದೆಂಬ ಬಯಲಾ ... ಇಂತಹ ವ್ಯಕ್ತಿಯೊಂದು ಅತಿಯಿದು! ... ಯೋಗ್ಯತೆಯ ಕುರಿತು ಬ್ರಿಟಿಷರ ... ಲಕನ ಒಂದು ಹೆಮ್ಮೆಯಿದೆಯೆಂಬುದಕ್ಕೆ ... ನಿದರ್ಶನವಿದು. ಅವರ ... ಕಟ್ಟಿದಿತ್ತೆಂಬ ಅರ್ಥವನ್ನು ... ತಿಗಿಂತ ಹೆಚ್ಚಾಗಿ ತಮ್ಮ ಯೋ ... ಗ್ಯತೆಯ ಮೇಲೆ ಭರವಸೆಯಿಟ್ಟ ಬ್ರಿಟಿಷ್ ಪ್ರತಿನಿಧಿಗಳು ಸಿಮ್ಲಾ ಪ್ರದರ್ಶನ ನಡೆಸಿದ್ದ ... ದಿ ಬೇರಿಲ್ಲ.

ಈ ಪರಾಭವದಿಂದಾಗಿ ಬ್ರಿಟಿಷ್ ಪ್ರತಿನಿಧಿಗಳ ವಿಶ್ವಾಸಭಂಗವಾಯಿತು; ಮುಸ್ಲಿಂ ಲೀಗಿನ ಆಶೆ ಬಯಲಾಯಿತು. ಆದ ... ಕಾಂಗ್ರೆಸಿನ ವಾದ ಮಾತ್ರ ಇನ್ನೂ ... ಉಳಿದಿದೆ. ಕಾಂಗ್ರೆಸ್-ಲೀಗ್ ಸ ... ವ್ವತಿಯ ಒಂದು ವ್ಯವಸ್ಥೆಯೇ ಸುಖಕರ ವ್ಯವಸ್ಥೆಯೆಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ ಅಷ್ಟೇ ಯಾಕೆ? ಕಾಂಗ್ರೆಸ್-ಲೀಗ್‌ಗಳು ಬೇರೆ ಬೇರೆ ಪಕ್ಷಗಳಾಗಿ ಇಲ್ಲದಿರುತ್ತಿದ್ದರೆ ವ್ಯವಸ್ಥೆ ಇನ್ನಷ್ಟು ಸುಗಮವಾಗುತ್ತಿತ್ತು. ಆದರೆ ಇಂತಹ 'ರೆ' ಗಳನ್ನು ಅವಲಂಬಿಸಿ, ಸಿಮ್ಲಾ ಸಮ್ಮೇಲನ ದಂತಹ ನಿರರ್ಥಕ ಕಾರ್ಯ ಕೈಕೊಳ್ಳುವ ದರಲ್ಲಿ ಸೌಜನ್ಯವಿರಬಹುದಾದರೂ ಜಾಣತನವಿಲ್ಲ. ಅದರಲ್ಲಿ ತಾವು ಹೆದ್ದರನ್ನಿಸಿ ದರೂ ಹೆಚ್ಚಲ್ಲ—ಸದ್ಭಾವದ ಮೂಲಕ ಸಾಧ್ಯವಿದ್ದಷ್ಟು ಪ್ರಯತ್ನಿಸಿದೆವೆಂಬ ತೀ ರ್ತಿಯೊಂದಿದ್ದರೆ ಸಾಕು, ಎಂದು ಬ್ರಿಟಿಷರ ಭಾವನೆಯಿದ್ದರೆ, ನಿಜಕ್ಕೂ ಆ ಕೀರ್ತಿ ಅವರಿಗೆ ಸಲಬೇಕು. ಸಿಮ್ಲಾದಲ್ಲಿ ಅವರು ಈ ಕುರಿತು ಠಕ್ಕಿನಿಂದ ನಡೆಸಿದಪ್ರಯತ್ನ ವನ್ನು ಶ್ಲಾಘಿಸಬೇಕು. ಕರ್ತವ್ಯವೊಂದ ನ್ನು ಮಾಡಿ ಮುಗಿಸಿದ ಆತ್ಮತೃಪ್ತಿಯನ್ನು ಬ್ರಿಟಿಷರಿಗೊದಗಿಸಿದ್ದಕ್ಕಾಗಿ ಸಿಮ್ಲಾ ಸ ಮ್ಮೇಲನಕ್ಕೂ ಕೈಗಿಟ್ಟಬೇಕು.

ಸರಿ; ನಾಟಕದಲ್ಲಿ ದುಃಖಾಂತವಾದ ಮೊದಲನೇ ಅಂಕ ಮುಗಿಯಿತು. ಆದರೆ ಇಡೀ ನಾಟಕವು ಹೀಗಾಗಬಾರದು; ಅದು ಸುಖ ಪರ್ಯವಸಾಯಿಯಾಗಬೇಕು. ಭಾರತದ ಹೊಸ ರಾಜ್ಯಾಂಗರಚನಾ ಕಾರ್ಯ ಕೈಕೊಳ್ಳಲು ಕಾಂಗ್ರೆಸ್ ಮತ್ತು ಲೀಗುಗಳಿಗೊಪ್ಪಿಗೆಯಾಗುವ ಒಂದು ಯೋಜನೆ ತಯಾರಿಸುವದರಲ್ಲಿ ಸಿಮ್ಲಾ ಚರ್ಚೆಗಳು ಫಲಕಾರಿಯಾಗದುದಕ್ಕಾಗಿ ಬ್ರಿಟಿಷ್ ಮಂತ್ರಿ ಸಮಿತಿಯ ಪ್ರತಿನಿಧಿಗಳೂ ವೈಸರಾಯರೂ ಅತ್ಯಂತ ಪಶ್ಚಾತ್ತಾಪ ಪಡುತ್ತಾರೆ ಬದಲೆ ಸಾಮ್ರಾಜ್ಯ ಸರಕಾರ ಮತ್ತು ಬ್ರಿಟಿಷ್ ಜನತೆಯು ಈ ಸಮಿತಿಯ ಮೇಲೆ ಹೇರಿರುವ ಕಾರ್ಯಭಾರವು ಇಷ್ಟರಿಂದಲೇ ಮುಗಿಯಲಿಲ್ಲವೆಂಬುದನ್ನು ನಾವು ಸ್ಪಷ್ಟೀಕರಿಸಲಿಚ್ಛಿಸುತ್ತೇವೆ'—ಎಂದು ಬ್ರಿಟಿಷ್ ಸಮಿತಿಯು ಮುಂದಿನ ಅಂಕದ ಪರದೆಯನ್ನೆತ್ತಿದೆ. ಅಧಿಕಾರ ದಾನವೇ "ಕಥಾವಸ್ತು"ವಾಗಿರುವ ಈ ನಾಟಕದಲ್ಲಿ ಸಹಜಾಭಿನಯ ಕಂಡು ಬರಲಿ, ಅದು ಸುಖಾಂತಗೊಳ್ಳಲಿ!

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ತಾ. 12-5-46ರಲ್ಲಿ ಸೇರಿದ ಮೇಲಿನ ಸಂಸ್ಥೆಯ ವಿಶೇಷ ಮಹಾ ಸಭೆಯು ತನ್ನ ಪಾಲುಬಂಡವಾಳವನ್ನು ರೂ. 100000 ಕ್ಕೇರಿಸುವ ಕಾಲೋಚಿತ ನಿರ್ಧಾರ ಮಾಡಿದೆ. ತಾನು ನಡೆಸುತ್ತಿರುವ ಜನಪ್ರಿಯ ಛಾಪಖಾನೆ 'ನವಯುಗ ಪ್ರೆಸ್ಸು' ತನ್ನ ಹೆಸರಿಗೆ ತಕ್ಕಂತೆ ಆಧುನಿಕ ಯಾಂತ್ರಿಕೋಪಕರಣಗಳು, ಕಲಾಪೂರ್ಣ ಉದ್ಯಮ, ಮತ್ತಿತರ ಆವಶ್ಯಕತೆಗಳ ಪೂರೈಕೆಯಿಂದ ಒಂದು ಮಾದರಿ ಕಾರ್ಯಾಲಯವಾಗಬೇಕು. ಆ ಮೂಲಕ ಸಾರ್ವಜನಿಕರ ಮತ್ತು ಗಿರಾಕಿಗಳ ಸೇವೆಯನ್ನೂ ಪಾಲುದಾರರ ಹಿತವನ್ನೂ ಮತ್ತಷ್ಟು ಉತ್ತಮ ರೀತಿಯಿಂದ ಸಾಧಿಸಿ ಯುದ್ಧೋತ್ತರ ಕಾಲದ ಕಾಠಿಣ್ಯ, ಮೇಲಾಟಗಳನ್ನು ಸಹಿಸಿ, ಪ್ರಗತಿ ಪಥದಲ್ಲಿ ಮುಂದೊತ್ತಬೇಕೆಂಬುದೇ ಅದರ ಮುಖ್ಯೋದ್ದೇಶ. ಈ ಜನಸೇವಾನಿರತ ಸಂಸ್ಥೆಯು ಹುಟ್ಟಿ ಬೆಳೆದು ಬಂದ ಇದು ವರೆಗಿನ ಐದು ವರುಷಗಳೆಂದರೆ, ಯುದ್ಧಾವಧಿಯ (ಅಸಹ್ಯ ತೊಂದರೆಗಳಿದ್ದ ಕಾಲ. ಆದರೊಡನಿದ್ದ ಸಾರ್ವಜನಿಕ ಸಂಬಂಧ, ಮತ್ತದು ವಹಿಸಿದ ಧೋರಣೆ, ಕಾರ್ಯನಿಷ್ಠೆ, ಚಾತುರ್ಯ, ಕಲಾಸೇವೆಗಳಿಂದಾಗಿ ಸಂಸ್ಥೆಯು ಆ ಬಿಕ್ಕಟ್ಟಿನ ಕಾಲದಲ್ಲೂ ಶ್ಲಾಘನೀಯ ಅಭಿವೃದ್ಧಿ ಪಡೆಯುತ್ತಾ ಬಂದಿದೆ, ತನ್ನ ಪಾಲುದಾರರಿಗೆ ನೇಕಡಾ 6½ರಷ್ಟು ಲಾಭಾಂಶ ಹಂಚಿ ದೈನಂದಿನ ಮಾಸಗಳಲ್ಲೇ ಅಪೂರ್ವವಾಗಿ ಒದಗುವಪರೀಕ್ಷಾಕಾಲವನ್ನ ಬಹುದಾದ ಕಳೆದ ೫ ವರುಷಗಳ ಅನುಭವಬಲದಿಂದ ಆದೀಗ ಪ್ರಾಥಮಿಕತೆಗೆ ಬಂದು, ಪಾಲು ಬಂಡವಾಳವನ್ನು ಹೆಚ್ಚಿಸಿ ತನ್ನ ಸೇವೆಯ ಕ್ಷೇತ್ರವನ್ನು ವಿಸ್ತರಿಸಲು ಸಂಕಲ್ಪಿಸಿದೆ. ಪಾಲೊಂದಕ್ಕೆ ನಾಲ್ಕರಂತೆ ತನ್ನ ಪಾಲುಗಾರರಿಗೇನೇ ಕೊಡಲು 8000 ಹೊಸ ಪಾಲುಗಳನ್ನು ಆದೀಗ ಹೊರಡಿಸಿದೆ. 'ನವಯುಗ ಎಂಟರ್‌ಪ್ರೈಸ್'ನ ಪಾಲುಗಾರರು ಈ ಸುವರ್ಣ ಸಂಧಿಯನ್ನು ಕಳಕೊಳ್ಳದೆ, ತಮ್ಮದೇ ಆದ ಸಂಸ್ಥೆಯ ಅಭಿವೃದ್ಧಿಗೆ ಈ ಮೂಲಕ ನೆರವಾಗಿ ಸ್ವಹಿತ ಸಾಧಿಸಿಕೊಳ್ಳಬೇಕಾಗಿ ವಿಜ್ಞಾಪಿಸುತ್ತೇವೆ

ಉಡುಪಿ.

ಎಳಿದೆಮಿ ಆಫ್ ಜನರಲ್ ಎಜ್ಯುಕೇಶನಿನ—ವತಿಯಿಂದ ತಾ. 12ರಲ್ಲಿ ಮುಕುಂದನಿವಾಸದಲ್ಲಿ ಶ್ರೀ. ವಕೀಲ್ ಪಿ. ಪಿ. ಆಚಾರರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬರು ಮದ್ರಾಸ್ ಎಸೆಂಬ್ಲಿಯಲ್ಲಿ ತರಲಿರುವ ಹೊಸ ವಿದ್ಯಾಯೋಜನೆಯ ಬಿಲ್ಲಿನ ಬಗ್ಗೆ ಕುರಿತು ಸುದೀರ್ಘ ಚರ್ಚೆ ನಡೆಯಿತು. ಈಗಿನ ವಿದ್ಯಾಕ್ರಮದಲ್ಲಿರುವ ಕುಂದು ಕೊರತೆಗಳನ್ನು ನಿವಾರಿಸಿ ಈಗಿನ ನೆಚ್ಚದಲ್ಲಿಯೂ ಪ್ರತಿಹಳ್ಳಿಗನೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೇಗೆ ಹೊಂದಬಹುದೆಂಬುದೂ ಪ್ರತಿ ಹಳ್ಳಿಯೂ ಹೇಗೆ ಸುಧಾರಣೆ ಹೊಂದುವುದೆಂಬುದೂ ಈ ಬಿಲ್ಲಿನಲ್ಲಿ ಅಡಕವಾಗಿರುವುದು. ಆರಂಭದಲ್ಲಿ ಡಾ। ಮಾಧವ ಪೈಗಳು ಈಡ್ರಾಫ್ಟು ಬಿಲ್ಲನ್ನು ವಿವರಿಸಿದರು. ಶ್ರೀಗಳಾದ ಸಂಜೀವ ಭಟ್, ಎಂ. ಎ. ಎಲ್. ಟಿ. ಕೊರಡ್ಕಲ್ ಶ್ರೀನಿವಾಸರಾವ್, ಪುಂಡಲೀಕ ಶೆಣೈ ಬಿ. ಎ., ಎಲ್. ಟಿ. ಮೊದಲಾದವರು ಕೆಲವೊಂದು ಸೂಚನೆಗಳನ್ನಿತ್ತರು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್—ಸಂಸ್ಥೆಯ ವಾರ್ಷಿಕ ಮಹಾಸಭೆಯು ತಾ 12ರಲ್ಲಿ ಅಧ್ಯಕ್ಷ ಶ್ರೀ. ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ 31 12 45 ಕ್ಕೆ ಅಂತ್ಯವಾಗುವ ಬೆಲೆನ್ಸ್ ಶೀಟನ್ನು ಮಂಜೂರು ಮಾಡಲಾಯಿತು. ವ್ಯವಸ್ಥಾಪಕರು ಶಿಫಾರಸು ಮಾಡಿದಂತೆ ಈ ವರ್ಷಕ್ಕೆ ಪಾಲುದಾರರಿಗೆ ನೇಕಡಾ 6½ರಂತೆ ಡಿವಿಡೆಂಡ್ ಹಂಚಬೇಕೆಂದು ನಿರ್ಧರಿಸಲಾಯಿತು. 19... ... ಶ್ರೀ. ಎ. ಯಂ. ಹೆಗ್ಡೆ G. D A. R. A. ಇವರನ್ನು ಕಂಪೆನಿಯ ಲೆಕ್ಕ ಪರಿಶೋಧಕರನ್ನಾಗಿ ಆರಿಸಲಾಯಿತು.

ಅನಂತರ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿದ ವಿಶೇಷ ಮಹಾ ಸಭೆಯೊಂದರಲ್ಲಿ ಕಂಪೆನಿಯ ಈಗಿರುವ ಪಾಲು ಬಂಡವಾಳ ರೂ. 20,000ವನ್ನು ರೂ. 100,000ಕ್ಕೆ (ಒಂದುಲಕ್ಷ) ಏರಿಸಬೇಕೆಂದು ನಿರ್ಣಯಿಸಲಾಯಿತು. ಕೂಡಲೆ ರೂ 10'ರ (ರೂ. 1ಪ್ರವೇಶ ಧನಸಹಿತ ರೂ 11) 8000 ಹೊಸ ಪಾಲುಗಳನ್ನು ಹೊರಡಿಸಲಾಗಿದೆ. ಈ ಪಾಲುಗಳು ಪ್ರಥಮವಾಗಿ ಈಗಿರುವ ಪಾಲುದಾರರಿಗೆ ಒಂದಕ್ಕೆ ನಾಲ್ಕರಂತೆ ಕೊಡಲ್ಪಡುವವು. ನಿರ್ದಿಷ್ಟ ಅವಧಿಯೊಳಗೆ ಈಗಿರುವ ಪಾಲುದಾರರು ತಮ್ಮ ಹಕ್ಕಿನ ಈ ಹೊಸ ಪಾಲುಗಳನ್ನು ಪಡೆಯದಿದ್ದರೆ ಮಾತ್ರವೇ ಅವುಗಳು ಇತರರಿಗೆ ಕೊಡಲ್ಪಡುವವು.

ಹೆಬ್ರಿ—ಇಲ್ಲಿಯ ಓರ್ವ ತರುಣನಿಗೂ ಕಾಫಿ ಹೋಟೆಲಿನವನಿಗೂ ಚಿಲ್ಲರೆ ಹಣಕ್ಕಾಗಿ ಜಗಳ ಪ್ರಾರಂಭವಾಯಿತೆಂದೂ ಅನಂತರ ಪೋಲಿಸರು ಆತರುಣನನ್ನು ಸ್ಟೇಶನಿನಲ್ಲಿಟ್ಟಿದ್ದರೆಂದೂ ಮರುದಿನ ಕೋಕಲಾಗಿ ಆ ತರುಣನ ... ಈ ಕುರಿತು ಸಂಬಂಧಪಟ್ಟವರಿಂದ ತನಿಖೆ ನಡೆಯುತ್ತಿದೆಯೆಂದೂ ತಿಳಿದುಬರುತ್ತದೆ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ತಾ. 12—5—'1946ರಲ್ಲಿ ಜರಗಿದ **ಪಾಲುದಾರರ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಪಾಲು ಬಂಡವಾಳವನ್ನು** 1,00,000 **ರೂಪಾಯಿಗೆ ಹೆಚ್ಚಿಸುವ ನಿರ್ಣಯ ಮಾಡಲ್ಪಟ್ಟಿರುವುದು. ಆ ಸಂಬಂಧ ರೂ 10ರ 8000 ಹೊಸ ಪಾಲುಗಳನ್ನು ಹೊರಡಿಸಲಾಗಿದೆ. (ಪ್ರತಿ ಪಾಲಿಗೂ ರೂ 1/ ಪ್ರವೇಶ ಧನ ಪ್ರತ್ಯೇಕ) ಈ ಹೊಸ ಪಾಲುಗಳು ಈಗಿನ ಪಾಲುದಾರರಿಗೆ ಮಾತ್ರವೇ ಅವರವರಿಗೆ ಈಗಿರುವ ಪಾಲುಗಳಿಗೆ 1ಕ್ಕೆ 4ರಂತೆ ಕೊಡಲ್ಪಡುವವು. ಪ್ರತಿ ಪಾಲುದಾರರಿಗೂ ಪಾಲು ಅರ್ಜಿಗಳು ಕಳಿಸಲ್ಪಟ್ಟಿವೆ. ಅವರೆಲ್ಲರೂ ಆ ಪಾಲು ಅರ್ಜಿಯನ್ನು ಬರೆದು ತಕ್ಕ ಹಣದೊಂದಿಗೆ ತಾ 30-6-46ರ ಒಳಗಾಗಿ ಆದಷ್ಟು ಬೇಗನೆ ಕಳಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ.**

ಕೆ. ಎಚ್. ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್.

ಕೆ. ಜೆ. ಬಲ್ಲಾಳ್, ವಕೀಲ್, ಚೆಯರ್‌ಮೆನ್.

ರೈಲ್ವೇ ಮುಷ್ಕರವೆ?

ಅ. ಭಾ. ರೈಲ್ವೇ ಕೆಲಸಗಾರರ ಫೆಡರೇಶನಿನ ಮಹಾ ಸಭೆ ಈ ತಿಂಗಳಾದಿಯಲ್ಲಿ ಬೊಂಬಾಯಿಯಲ್ಲಿ ಸೇರಿದ್ದಿತು. ಅದರ ಅಧ್ಯಕ್ಷರಾಗಿದ್ದ ಶ್ರೀ. ವಿ. ವಿ. ಗಿರಿಯವರು ಮಂತ್ರಿಯಾದುದರಿಂದ ಕೊಟ್ಟ ರಾಜೀನಾಮೆಯು ಅಂಗೀಕರಿಸಲ್ಪಟ್ಟು ಶ್ರೀ. ಆರ್. ಎ. ಕೆದ್ಗಿಕರರು ಅಧ್ಯಕ್ಷರಾದರು. ತಮ್ಮ ಬೇಡಿಕೆಗಳು ಮಾನ್ಯವಾಗದಿದ್ದಲ್ಲಿ ಅಖಿಲ ಭಾರತ ಮುಷ್ಕರ ಹೂಡುವ ಕುರಿತು ಗುಪ್ತಮತದಾನದ ಮೂಲಕ ಅಖಿಲ ರಾಷ್ಟ್ರದ ಕೆಲಸಗಾರರ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಸೇ. ೮೫ಕ್ಕೂ ಮಿಕ್ಕಿದವರು ಮುಷ್ಕರಪಕ್ಷಾನುಕೂಲ ಮತವಿತ್ತಿದ್ದರು. ಇದಕ್ಕನುಗುಣವಾಗಿ ಫೆಡರೇಶನಿನ ಜನರಲ್ ಕೌನ್ಸಿಲು ಮುಷ್ಕರದ ನೋಟೀಸು ಕೊಡುವ ಪ್ರಾಮುಖ್ಯ ನಿರ್ಧಾರವಮಾಡಿದೆ. ತಮ್ಮ ಬೇಡಿಕೆಗಳು ಆ ತಾರೀಕಿನೊಳಗೆ ಮಾನ್ಯವಾಗದಿದ್ದರೆ ಇದೇ ಜೂನ್ ತಾ. 27ರಿಂದ ಅಖಿಲ ಭಾರತದ-ಅಧಿಕೃತ ರಾಜ್ಯಗಳ ರೈಲ್ವೇ ಸಮೇತ-ರೈಲ್ವೇ ಕೆಲಸಗಾರರೆಲ್ಲ ಮುಷ್ಕರ ಹೂಡತಕ್ಕದ್ದು. ಜೂನ್ ತಾ. 1ಕ್ಕೆ ಹಿಂದೀ ಸರಕಾರಕ್ಕೆ ಮುಷ್ಕರದ ನೋಟೀಸು ಕೊಡಬೇಕೆಂಬ ನಿರ್ಧಾರವಾಗಿದೆ ಅವರ ಮುಖ್ಯ ಬೇಡಿಕೆಗಳಿವು:— (1) ಕೆಲಸಗಾರರನ್ನು ತೆಗೆಯಬಾರದು (2) ಸಂಬಳದ ಮಟ್ಟವನ್ನೇರಿಸಬೇಕು (ತರಗತಿವಾರಾಗಿ ಆ ಧಾರಣೆಯನ್ನು ತಿಳಿಸಲಾಗಿದೆ) (3) ರಾವ್ ಕಮಿಟಿಯ ಶಿಫಾರಸಿನಂತೆ ತುಟ್ಟಿ ಭತ್ತೆಯನ್ನು ಏರಿಸಿಕೊಡಬೇಕು (4) ಮೂರು ತಿಂಗಳ ಸಂಬಳವನ್ನು ಬೋನಸ್ ಆಗಿ ಎಲ್ಲರಿಗೂ ಕೊಡಬೇಕು.

ಈ ಮುಷ್ಕರದ ಪರಿಣಾಮವು ಅತಿ ಭೀಕರವಾಗಬಹುದು. ಅಖಿಲ ಭಾರತದಲ್ಲಿ ಸುಮಾರು 10 ಲಕ್ಷ ರೈಲ್ವೇ ಕೆಲಸಗಾರರಿದ್ದು, ಅವರೆಲ್ಲರೂ ಈ ಫೆಡರೇಶನಿನ ಅಂಕೆಯಲ್ಲಿದ್ದಾರೆ. ಮುಷ್ಕರದ ವಿಧಾನ ನಿರ್ಮಾಣಕ್ಕಾಗಿ 16 ಮಂದಿಯುಳ್ಳ 'ಕಾರ್ಯಾಚರಣಾ ಸಮಿತಿ' ರಚನೆಗೊಂಡಿದೆ. ಮೌಲಾನಾ ಆಜಾದರೂ, ಶ್ರೀ. ವಿ. ವಿ. ಗಿರಿಗಳೂ ಕೂಡಲೇ ವಿವಾದವನ್ನು ನಿಷ್ಪಕ್ಷಪಾತಿ ನ್ಯಾಯಾಧೀಶರ ತೀರ್ಮಾನಕ್ಕೊಪ್ಪಿಸಬೇಕೆಂದು ವೈಸರಾಯರನ್ನು ಆಗ್ರಹ ಮೂಲಕ ಕೇಳಿಕೊಂಡಿದ್ದಾರೆ ಮುಷ್ಕರ ಹೂಡಬಾರದೆಂದೂ ರಾಷ್ಟ್ರಪತಿ ಆಜಾದರ ವಿನಂತಿಯಿದೆ.'

ಸರಕಾರದ ನಕಾರ

ರೈಲು ಕೆಲಸಗಾರರ ಬೇಡಿಕೆಗಳನ್ನು ಅಮಾನ್ಯ ಮಾಡಿ ರೈಲ್ವೇ ಬೋರ್ಡಿನ ಪ್ರಕಟಣೆ ಹೊರಟಿದೆ. ಸಂಬಳ ತುಟ್ಟಿಭತ್ತೆಗಳನ್ನು ಏರಿಸುವ ಪುನರಾಲೋಚನೆಗಾಗಿ ಕಮಿಟಿಯೊಂದು ನೇಮಕವಾಗಿದೆಯೆಂದು ತಿಳಿಸಿ, ಕೆಲಸಗಾರರಿಗದು ಒದಗಿಸಿರುವ ವಿಶೇಷ ಜೀವನ ಸೌಕರ್ಯಗಳನ್ನು ವರ್ಣಿಸಿ ಬೋನಸ್ ಇತ್ಯಾದಿ ಬೇಡಿಕೆಗಳನ್ನು ಪಂಚಾಯತಿಕೆಗೊಪ್ಪಿಸುವದಸಾಧ್ಯವೆಂದು ತಿಳಿಸಿದೆ. ಕೆಲಸಗಾರರ ಬೇಡಿಕೆಯ ಸಂಬಳ ಮತ್ತು ತುಟ್ಟೀ ಭತ್ತೆಯ ಹೆಚ್ಚಳದಿಂದಾಗಿ ವರುಷಕ್ಕೆ 78 ಕೋಟಿ ಹೆಚ್ಚಿಗೆಬೇಕಾಗುವದೆಂದೂ, ಇದಕ್ಕಾಗಿ ರೈಲ್ವೆಯ ಟಿಕೇಟು ಮತ್ತು ಬಾಡಿಗೇ ದರವನ್ನು ನೇಕಡಾ 40ರಷ್ಟು ಹೆಚ್ಚಿಸಬೇಕಾಗುವದೆಂದೂ ರೈಲ್ವೇ ಬೋರ್ಡಿನ ಅಂಬೋಣ. "ಬೇಡಿಕೆಗಳು ಅವ್ಯವಹಾರ್ಯವೆಂದೂ, ಸದ್ಯದ ಆಹಾರ ಬಿಕ್ಕಟ್ಟಿನ ಈ ದುಷ್ಕಾಲದಲ್ಲಿ ಹಾಗೂ ಭಾರತವು ರಾಜಕೀಯ, ಆರ್ಥಿಕ ಸ್ಥಿತಿಪರ್ಯಟನ ಹೊಂದುತ್ತಿರುವ ಈ ಸಮಯದಲ್ಲಿ ಮುಷ್ಕರದ ಬೆದರಿಕೆ ಹಾಕಿದುದು ಬೇಜವಾಬ್ದಾರಿಯದೆಂದೂ ಸರಕಾರವು ಭಾವಿಸಿದೆ" ಎಂದು ಆ ಪ್ರಕಟಣೆಯನ್ನುತ್ತಿದೆ ಈ ಮಹಾ ಮುಷ್ಕರದಾರಂಭವಾದಲ್ಲಿ ಅದರ ಪರಿಣಾಮವು ಭಾರತದ ಜನಜೀವನದ ಮೇಲೆ ಅಗದಿರದು.

ಸಿಮ್ಲಾ ಸಮ್ಮೇಲನ ಸೊನ್ನೆ ಸುತ್ತಿತು

ತಾ 12ನೇ ಆದಿತ್ಯವಾರ ಸಿಮ್ಲದ ತ್ರಿಪಕ್ಷೀಯ ಸಮ್ಮೇಲನದ ಕೊನೆಯ ಸಭೆ ಸೇರಿ ಮಂಗಳ ಗೀತೆ ಹಾಡಿ ಚದರಿದೆ. ಆ ದಿನ ಪುನಃ ಜಿನ್ನಾ-ನೆಹರು ಪತ್ರ ವ್ಯವಹಾರ ನಡೆಯಿತು. ಜಿನ್ನರ ಕೊನೆಯ ಪಾಕಿಸ್ತಾನ್ ಪತ್ರಕ್ಕೆ, ಕಾಂಗ್ರೆಸಿಗರ ತೀಕ್ಷ್ಣಾಭಿಪ್ರಾಯದ ಉತ್ತರ ಹೋಯಿತು. ಅಪರಾಹ್ನ 6ಕ್ಕೆ ಸಮ್ಮೇಲನ ಸೇರಿ ಇಪ್ಪತ್ತೇ ಮಿನಿಟಿನೊಳಗೆ ಇನ್ನು ಮಾತಾಡಿ ಫಲವಿಲ್ಲವೆಂದು ನಿರ್ಧರಿಸಿ ಚದರಿತು. ಮಂಗಳವಾರ ಬ್ರಿಟಿಷ್ ಪ್ರತಿನಿಧಿಗಳು, ವೈಸರಾಯರು ಮತ್ತು ಕಾಂಗ್ರೆಸ್ ಲೀಗ್ ಪ್ರತಿನಿಧಿಗಳು ಸಿಮ್ಲದಿಂದ ನವದಿಲ್ಲಿಗೆ ಮರಳಿದ್ದಾರೆ ಗಾಂಧೀಜೀ ಬುಧವಾರ ದಿಲ್ಲಿಗೆ ಬಂದಿದ್ದಾರೆ. ಬ್ರಿಟಿಷ್ ಮಂತ್ರಿತ್ರಯರು ಲಂಡನಿನ ಬ್ರಿಟಿಷ್ ಮಂತ್ರಿಮಂಡಲದ ಸಲಹೆ ಪಡೆದು ಇನ್ನು ಒಂದೆರಡು ದಿನಗಳೊಳಗೆ ತಮ್ಮ ಮುಂದಿನ ಹೆಜ್ಜೆಯೇನೆಂಬುದನ್ನು ಪ್ರಕಟಿಸಲಿರುವರು. ಇದೇ ಗುರುವಾರ ಅಥವಾ ಶುಕ್ರವಾರ ಪತ್ರಿಕಾ ಪರಿಷತ್ತಿನ ಮುಂದೆ ಎಲ್ಲವೂ ಇಡಲ್ಪಡುವದೆಂದು ತಿಳಿದುಬರುತ್ತದೆ. ಅದುವರೆಗೆ ಸಿಮ್ಲಾ ವಿವರಗಳನ್ನು ಯಾರೂ ಪ್ರಕಟಿಸಕೂಡದೆಂಬ ಬ್ರಿಟಿಷ್ ರಾಯಭಾರಿಗಳ ಆಕಾಂಕ್ಷೆಗೆ ಮಿಕ್ಕವರೂ ಒಪ್ಪಿಕೊಂಡಿದ್ದಾರೆ

ಕಾಂಗ್ರೆಸ್-ಲೀಗ್ ಸಂಧಾನ ಘಟಿಸದಿದ್ದರೂ ಬ್ರಿಟಿಷ್ ಮಂತ್ರಿತ್ರಯರು ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪನೆಗೆ ಕಟಿ ಬಗಿದಿರುವರೆಂದು ನಂಬಲಾಗಿದೆ. ವೈಸರಾಯರು ಸಿಮ್ಲದಲ್ಲೇ ಆ ಕುರಿತು ಸ್ಪಷ್ಟ ಮಾತುಕತೆಗಳನ್ನು ನಡಿಸಿದ್ದರಂತೆ. ಅದೇ ರೀತಿ ಶಾಶ್ವತ ರಾಜ್ಯಾಂಗ ರಚನೆಯ ವಿಧಾನವೊಂದನ್ನೂ ಅವರು ತಮ್ಮ ಸ್ವಾಭಿಪ್ರಾಯದಂತೆ ಸೂಚಿಸಲಿರುವರು. ಗಾಂಧಿಜೀ ಸಿಮ್ಲದಿಂದ ದಿಲ್ಲಿಗೆ ಮರಳುವ ಹೊತ್ತಿಗೆ ಲಂಡನಿನ ಸಲಹೆ ಪಡೆದು ಭಾವೀ ಕಾರ್ಯ ಯೋಜನೆಯನ್ನು ತಯಾರಿಸಿ ಬ್ರಿಟಿಷ್ ಪ್ರತಿನಿಧಿಗಳು ಅವರಿಗೆ ತೋರಿಸಿ ಜಾಹೀರು ಮಾಡಲಿರುವರಂತೆ. ಸಿಮ್ಲದಲ್ಲೇ ಅದರ ಸ್ಥೂಲ ರೂಪರೇಷೆಗಳನ್ನು ಇತ್ತಂಡದವ[illegible] ವೈಸರಾಯರು ತೋರಿಸಿರುವರಂತೆ. [illegible]ವ ರೀತಿಯಿಂದಾದರೂ ಈ ಬಾರಿ [illegible] ರಾಯೀ ಕೌನ್ಸಿಲಿನ ರಾಷ್ಟ್ರೀಕರಣ ಪ[illegible]ಲು ಸರಕಾರವು ಮುಂದಾದಂತಿದೆ. 'ಸಿಮ್ಲಾ ಸಮ್ಮೇಲನಾಂತ್ಯವು ಬ್ರಿಟಿಷ್ ಮಂತ್ರಿ ಸಮಿತಿಯ ಕಾರ್ಯಾಂತ್ಯವಲ್ಲ, ಇದು ಭಾರತೀಯರಿಗೆ ಅಧಿಕಾರದಾನ ಮಾಡುವ ಹೊಸ ಅಂಕದ ಪ್ರಾರಂಭ ಮಾತ್ರ. ಮುಂದಿನ ಏಳು ದಿನಗಳು ಭಾರತದ ಚರಿತ್ರೆಯಲ್ಲಿ ನಿರ್ಣಯಾತ್ಮಕ ದಿವಸಗಳು. ಗೊಂದಲಗೊಳ್ಳಲು ಕಾರಣವಿಲ್ಲ" ಎಂದು ಗಾಂಧಿಜಿಯೆಂದಿದ್ದಾರೆ. ಅಗತ್ಯಬಿದ್ದರೆ ಶ್ರೀ. ಕ್ರಿಪ್ಸರನ್ನು ಸಲಹೆಗಾಗಿ ಇಲ್ಲಿ ಬಿಟ್ಟು, ಮುಂದಿನ ಕಾರ್ಯ ಸಾಗಿಸುವ ಹೊಣೆಯನ್ನು ವೈಸರಾಯರ ಹೆಗಲ ಮೇಲೆ ಹಾಕಿ ಬ್ರಿಟಿಷ್ ಮಂತ್ರಿ ಸಮಿತಿಯ ಮಿಕ್ಕವರೆಲ್ಲಾ ಇದೇ ತಾ. 21ಕ್ಕೆ ಲಂಡನಿಗೆ ಹೊರಡಲಿರುವರಂತೆ. ದಾಖಲೆ ಬರೆಯುವ ಮೇಜು ಸಿಮ್ಲದಿಂದ ಪುನಃ ದಿಲ್ಲಿಗೆ ಸ್ಥಳಾಂತರಿಸಲ್ಪಟ್ಟು, ಸರ್ವರ ಲಕ್ಷ್ಯವೂ ಅಲ್ಲಿಂದಿಲ್ಲಿಗೆ ವರ್ಗಹೊಂದಿದೆ.

ಉಡುಪಿ

ದಿ ಎಲ್ಲಾಯಿಡ್ ವಿಕ್ಟರಿ ಕ್ಲಬ್ ಬ್ಯಾಡ್ಮಿಂಟನ್ ಟೂರ್ನಮೆಂಟಿನಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚುವ ಸಮಾರಂಭವು ಕಳೆದ ಆದಿತ್ಯವಾರ ಡಾ|| ಶ್ರೀ ಪಿ. ಶೀನಪ್ಪ ಹೆಗ್ಡೆ, ಬಿ. ಎ. ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ಜರಗಿತು.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಾರರೂ ಅವರೊಡನೆ ಹಣ ತೆತ್ತು ಹೊಸ ಪಾಲುಗಳನ್ನು ಪಡಕೊಳ್ಳಬೇಕಾಗಿಯೂ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,

ತಾರೀಕು 17—5—46ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ನಲ್ಲಿ
ಮುರಲೀ ಚಿತ್ರ
ಕೃಷ್ಣಾರ್ಜುನ ಯುದ್ಧ
ಪೃಥ್ವಿರಾಜ್, ಸಾಹು ಮೋಡಕ್, ಶೋಭನಾ ಸಮರ್ಥ್
ಮೊದಲಾದವರು.
ನಂತರ— ಈಸ್ಟರ್ನ್ ಪಿಕ್ಚರ್ಸ್.
ದಾವತ್

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

BANK WITH THE LARGEST CONNECTIONS ON THE WEST COAS
OFFERS:-
EFFICIENT, PROMPT & COURTEOUS
SERVICE OF EVERY TYPE
OPEN AN ACCOUNT
with
The Canara Industrial & Banking Syndicate Ltd
ESTD 1925

ಮಂಗಳೂರು.

ಭುಲಾಭಾಯಿ ದೇಸಾಯಿ-ಅವರ ನಿಧನಕ್ಕಾಗಿ ತಾ.೭ರಲ್ಲು ನಗರದ ಹೆಚ್ಚಿನ ಅಂಗಡಿಗಳೂ ಕಾರ್ಖಾನೆಗಳೂ ಖಾಸಗಿ ಸಂಸ್ಥೆಗಳೂ ಹರತಾಳ ಆಚರಿಸಿದವು. ಸಂಜೆ ಆರು ಗಂಟೆಗೆ ಕೇಂದ್ರ ಮೈದಾನದಲ್ಲಿ ಕೇಂದ್ರ ಅಸೆಂಬ್ಲಿಯ ಮಾಜಿ ಸದಸ್ಯರಾದ ಶ್ರೀ ಬೆನಗಲ್ ಶಿವರಾವ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ರಾಷ್ಟ್ರಸೇವಾದಳದ ಸ್ವಯಂಸೇವಕರು ರಾಷ್ಟ್ರಗೀತೆ ಹಾಡಿದ ಬಳಿಕ ಡಾ. ಯು. ಪಿ. ಮಲ್ಯರು ದೇಸಾಯಿಯರ ಗುಣ ಕಥನ ಮಾಡಿದರು. ಮೌನ ಸೂಚಕ ಠರಾವು ಮಾನ್ಯವಾಯಿತು.

ಇದೇ ಸಂದರ್ಭದಲ್ಲಿ [illegible] ಕಾಲದಲ್ಲಿ ಮಂಗಳೂರಿನ ಕೋರ್ಟ್ [illegible] ಟಿಂಗ್ ನಡೆಸಿ [illegible] ಶಿಕ್ಷೆಗೊಳಗಾಗಿದ್ದ [illegible] ಕೃಷ್ಣ [illegible] ಶ್ರೀ [illegible] ಕಪ್ಪಗಟ್ಟೆ ಎಂಬವರು [illegible] ಬಗ್ಗೆಯೂ ಸಂತಾಪ ಸೂಚಕ ಠರಾವು ಮಾನ್ಯವಾಯಿತು.

ಉದ್ದು, ತೊಗರಿ, ಹೆಸರು, ಕಡಲೆ ಈ ಬೇಳೆ ಧಾನ್ಯಗಳು ಗಳಸೇರಿಗಿಂತ ಜಾಸ್ತಿ ಸಂಗ್ರಹಿಸಿಟ್ಟುಕೊಂಡಿರುವ ವ್ಯಾಪಾರಿಯಾಗಲಿ, ಅಕ್ಕರರಾಗಲಿ ತಮ್ಮ ಬಳಿ ಇರುವ ಸಂಗ್ರಹದ ಕುರಿತು ವ್ಯಕ್ತಪತ್ರಿಕೆಯೊಂದನ್ನು ಆಯಾ ತಾಲೂಕಿನ ತಹಸಿಲ್ದಾರರಿಗೆ ತಾ. [illegible] [illegible] ಒಳಗೆ ಒಪ್ಪಿಸತಕ್ಕದ್ದು.

ಜಿಲ್ಲೆಯಲ್ಲಿ ನೀರಾವರಿ- ನೀರಾವರಿ ವಿಸ್ತರಿಸುವುದಕ್ಕಾಗಿ ಜಿಲ್ಲೆಯಲ್ಲೆ ಮೂವರು ಸ್ಪೆಶಲ್ ಡಿ. ತಹಸಿಲ್ದಾರರ ನೇಮಕವಾಗಿದೆ. [illegible] ಕೆಲವೊಂದು ರೆವಿನ್ಯೂ ಇನ್ಸ್‌ಪೆಕ್ಟರುಗಳೂ ಇರುವರು. ಹೊಸ ಜಾಲಿ ತೋಡಿ [illegible] ಉತ್ತಮಪಡಿಸುವ ಇತ್ಯಾದಿ ಕಾರ್ಯಗಳಿಗೆ ಸರಕಾರದ ಧನಸಹಾಯವನ್ನು ಅಪೇಕ್ಷಿಸುವವರು ಇವರಿಗೆ ಬರೆಯಬಹುದು.

ಮಜೂರರ ಹಾಗೂ ಕೃಷಿಕರ- ಸಂಘಟನೆಯನ್ನು ಕಾಂಗ್ರೆಸ್ ಧ್ಯೇಯ ಮತ್ತು ತತ್ವಗಳಿಗನುಗುಣವಾಗಿ ಸಂಘಟಿಸುವ ಉದ್ದೇಶದಿಂದ ತರುಣರ ಸಭೆಯೊಂದು ಡಾ. ಎಫ್. ಎಚ್. [illegible] ಅವರ ಅಧ್ಯಕ್ಷತೆಯಲ್ಲಿ ತಾ.೬ರಂದು ಕೆನರಾ ಹೈಸ್ಕೂಲಿನ ಕಸ್ತೂರಿಬಾ ಭವನದಲ್ಲಿ ಜರಗಿತು. ಶ್ರೀ ಕೆ.ಕೆ. ಶೆಟ್ಟರು ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ, ರಾಷ್ಟ್ರೀಯ ಯುವಕ ಸಂಘ ಎಂಬುದನ್ನು ಸ್ಥಾಪಿಸುವ ನಿರ್ಧಾರವಾಯಿತು. ಈ ಸಂಘದ ಸ[illegible] ಟನಾವಳಿಯ ನಿರ್ಮಾಣಕ್ಕಾಗಿ ಸಮಿತಿಯೊಂದರ ನೇಮಕವೂ ಆಯಿತು.

ಈ ಸಂಘದ ಘಟನೆ ಮತ್ತು ನಿಯಮಾವಳಿಗಳನ್ನು ಎಂ.ಜಿ.ಆರ್. ಮಾಡಲು ಮಹಾ ಸ[illegible]

ಭೆಯೊಂದು ತಾ.೧೨ರಂದು ಸಂಜೆ ಘಂಟೆ [illegible] ಕ್ಕೆ ಕೊಡಿಯಾಲ್ ಬೈಲಿನಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ನಡೆಯಲಿರುವುದು. ಈ ಸಂಘದ ಸ್ಥಾಪನೆಯಲ್ಲಿ ಆಸಕ್ತರಿರುವ ಕಾಂಗ್ರೆಸ್ ವಾದಿ ಯುವಕರೆಲ್ಲ ಸ್ವಾಗತವಿದೆ, ಎಂದು ಕನ್ವೀನರರು ತಿಳಿಸುತ್ತಾರೆ.

ನಮ್ಮ ಜಿಲ್ಲೆಯ ಕಲೆಕ್ಟರ್-ಈಗ ಮದ್ರಾಸ್ ರಾಜಧಾನಿ ತಿರುಚಿನಾಪಳ್ಳಿಗೆ ವರ್ಗಾಯಿಸಲ್ಪಟ್ಟ ಶ್ರೀ ಭೂತಲಿಂಗಂ ಅವರು ಇದೇ ತಾ. ೧೫ ರೊಳಗೆ ಇಲ್ಲಿಯ ಕಲೆಕ್ಟರಾಗಿ ಬಂದಿರುವರು.

ಮಾನ್ಯ ಕಾರಂತರ ಆಗಮನ-ಮದರಾಸು ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ. ಕೆ. ರಾಮಕೃಷ್ಣ ಕಾರಂತರು ತಾ. 11ರಲ್ಲಿ ಮಂಗಳೂರಿಗೆ ಆಗಮಿಸಿದರು. ಅವರಿಗೆ ಸ್ಟೇಶನ್ನಿನಲ್ಲಿ ಜಿಲ್ಲಾ ಅಧಿಕಾರಿ ಮತ್ತು ಅನಧಿಕಾರಿ ನಾಗರಿಕರು ಸ್ವಾಗತವಿತ್ತರು. ಸಾಯಂಕಾಲ ಸ್ಥಳೀಯ ನಗರಸಭೆಯವರು ಅವರನ್ನು ಆಮಂತ್ರಿಸಿ ಮಂಗಳೂರು ಪಟ್ಟಣದಲ್ಲಿನ ನೀರಿನ ಅಭಾವ, ಒಳ್ಳೆನೀರಿನ ವ್ಯವಸ್ಥೆ, [illegible] ಸರಬರಾಯಿ, ಟಿಪ್ಪೆ [illegible] ಕೋರ್ಟಿಗೆ ಲೈಸೆನ್ಸ್ ಕೊಟ್ಟ [illegible] ಮೊದಲಾದ ವಿಷಯಗಳನ್ನೊಳಗೊಂಡ ಮನವಿಯೊಂದನ್ನು ಒಪ್ಪಿಸಿದರು. ಮಂತ್ರಿಗಳು ಅದಕ್ಕುತ್ತರವಿತ್ತರು. ಮರುದಿನ ಬೆಳಗ್ಗೆ ಜಿಲ್ಲಾ ಕಲೆಕ್ಟರರು ಕರೆದಿದ್ದ ಅಧಿಕಾರಿ ಮತ್ತು ಇತರ ಮಹಾಜನರ ಸಭೆಯಲ್ಲಿ ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಮಾತನಾಡಿ ಸಭೆಯಲ್ಲಿ ಚರ್ಚಿಸತಕ್ಕ ಮುಖ್ಯ ವಿಷಯಗಳೇನೆಂಬುದನ್ನು ಒಪ್ಪಿಸಿದರು. ಆಹಾರ ಸಂಗ್ರಹ ಮತ್ತು ವಿತರಣೆಯ ಕುರಿತು ಮುಖ್ಯವಾಗಿ ಹಳ್ಳಿಗರಿಗಾಗುವ ಅನ್ಯಾಯಗಳನ್ನು ಪರಿಹರಿಸಲು ಹೇಗೆ ಸಾಧ್ಯ ಎಂಬ ಕುರಿತು ಚರ್ಚೆ ನಡೆಯಿತು. ತೆಂಗಿನಕಾಯಿ, ಮತ್ತು ತೆಂಗಿನೆಣ್ಣೆಯ ಮೇಲೆ ಕಂಟ್ರೋಲ್ ಹಾಕಬೇಕೆನ್ನುವ, ಕೈಮಗ್ಗ ವಸ್ತ್ರದ ಮೇಲೆ ಕಂಟ್ರೋಲ್ ಹಾಕಿ ಅವು ಸ್ಟಾಂಡರ್ಡ್ ಬಟ್ಟೆ ತಯಾರಿಸುವಂತಾಗ ಬೇಕೆನ್ನುವ, ಸಿವಿಲ್ ಸಪ್ಲೈಯ ಸಬ್ ಡಿಪೋಗಳನ್ನು ನಡೆಸುವ ಕಾರ್ಯಕರ್ತರಿಗೆ ಹೆಚ್ಚಿನ ವೇತನವನ್ನು ಕೊಡಬೇಕೆನ್ನುವ [illegible] ಕಮಿಶನನ್ನು ಮುಲ್ಲಿಗೆ ಕೊಡದೆ ಕೈಯಿಂದ ಕೈಗೆ ವಿತರಣೆಯಾಗುವಂತೆ ವ್ಯವಸ್ಥೆ ಮಾಡಬೇಕೆನ್ನುವ ಹಲವಾರು ಸೂಚನೆಗಳು ಸಭಿಕರಿಂದ ಬಂದವು. ಮಂತ್ರಿಗಳು ಜಿಲ್ಲೆಯಲ್ಲಿ ನೀರಾವರಿ ಯೋಜನೆಯನ್ನು ಆದಷ್ಟು ಬೇಗನೆ ಕೈಕೊಳ್ಳಲಾಗುವುದೆಂದರು. ಸುಮಾರು 12ಗಂಟೆ ತನಕ ಚರ್ಚೆನಡೆದ ನಂತರ ಮಂತ್ರಿಗಳು ಅಭಾರಮನ್ನಿಸಿ ಸಭೆಯನ್ನು ಮುಗಿಸಿದರು. ಮರುದಿನ ಮಂತ್ರಿಗಳು ಮದ್ರಾಸಿಗೆ ಹೊರಟುಹೋದರು.

ಉಟ್ಟಿಲ ಶ್ರೀ ಸರಸ್ವತೀ ಮಂದಿರ ಶಾಲಾ ವರ್ಧಂತಿಯು-"ತಾ 6-5-46ರಲ್ಲಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಮುಖ್ಯ ಉಪಾಧ್ಯಾಯರು ಶಾಲೆಯ ವರದಿಯನ್ನು ಓದಿದರು. ಪಾರಿತೋಷ ವಿತರಣೆಯನಂತರ ಕೆಲವು ಮಹನೀಯರುಗಳು ಭಾಷಣಕೊಟ್ಟರು. ಶಾಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಕೊಂಡಾಡಿ ಶಾಲೆಯ ಜನಾದರಣೀಯತೆಯನ್ನು ಪ್ರಶಂಸಿಸಿ ಅಧ್ಯಕ್ಷರು ಭಾಷಣವಿತ್ತರು. ವಿವಿಧ ವಿನೋದಾವಳಿ ಹಾಗೂ "ವಿದ್ಯೆಪಡಾದಿ" ಎಂಬ ತುಳು ನಾಟಕವೂ ಮತ್ತು 'ಭಕ್ತಧ್ರುವ' ಎಂಬ ಸಂಗೀತನಾಟಕವೂ ಅಭಿನಯಿಸಲ್ಪಟ್ಟಿತು. ಪೆತ್ರವರ ಸಂಘದ ಅಧ್ಯಕ್ಷರಾದ ಶ್ರೀ ನ್ಯಾ. ಮುದ್ದು ಶೆಟ್ರಿಂದ ಕಳುಹಿಸಲ್ಪಟ್ಟ ಬೆಳ್ಳಿಯ ಪದಕಗಳು2 ಮತ್ತು ಇತರ ವಸ್ತುಗಳನ್ನು ನಾಟಕದಲ್ಲಿ ಭಾಗವಹಿಸಿದ ಮಕ್ಕಳಿಗೆ ಕೊಟ್ಟನಂತ್ರ ಧನ್ಯವಾದಾರ್ಪಣೆಯೊಂದಿಗೆ ವರ್ಧಂತಿಯು ಮುಕ್ತಾಯವಾಯ್ತು".

ಕಟ್ಟಿಂಗೆರೆ-ಕೈ. ವಾ. ಬೆಳ್ಳೆ ಸುಬ್ಬಯ್ಯ ಶೆಟ್ಟಿ ತಮ್ಮ ಸೂರ ಶೆಟ್ರು ತಾ.7-5 46ರಲ್ಲಿ ವಿಷಮಗತರಾದುದು ವಿಷಾದಕರ. ಇವರು ಕಟ್ಟಿಂಗೆರೆಯಲ್ಲಿ ವ್ಯಾಪಾರ ವಹಿವಾಟುಗಳನ್ನು ಮಾಡುತ್ತಾ ಬಡಜನರಿಗೆ ತುಂಬಾ ಸಹಾಯವನ್ನು ಮಾಡುತ್ತಿದ್ದರು.

ಕಡಂದಲೆ-ತಾ 6 5-46ರಲ್ಲಿ ಕಡಂದಲೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ●ೀ ಡಾಕ್ಟರ್ ಸದಾಶಿವ ಶೆಟ್ರ ಹಸ್ತದಿಂದ "ಸರಸ್ವತಿ ವಾಚನಾಲಯ" ಎಂಬ ವಾಚನಾಲಯವೊಂದು ತೆರೆಯಲ್ಪಟ್ಟಿತು.

ಹರಿಜನರಿಗೆ ಕಡ್ಡಾಯ ಶಿಕ್ಷಣ ಬೇಕು-ಮದ್ರಾಸು ಸರಕಾರವು ಹರಿಜನರು ವಿದ್ಯೆಯಲ್ಲಿ ಮುಂದೆ ಬರಬೇಕೆಂದು 10 20 ವರ್ಷದಿಂದ, ಲೇಬರ್ ಡಿಪಾರ್ಟ್‌ಮೆಂಟನ್ನು ತೆರೆದು ವಿದ್ಯೆ ಕೊಡುತ್ತಿದ್ದರೂ ಸೇಕಡಾ 5ರಷ್ಟು ಮಂದಿ ಕೂಡಾ ವಿದ್ಯೆಹೊಂದಿಲ್ಲ. 7ಕೋಟಿ ಹರಿಜನರು ವಿದ್ಯೆಯನ್ನು ಹೊಂದಬೇಕಾದರೆ ಕಡ್ಡಾಯ ವಿದ್ಯೆಯೊಂದಲ್ಲದೆ ಎಷ್ಟು ಪ್ರಯತ್ನಪಟ್ಟರೂ ಹರಿಜನರು ವಿದ್ಯಾಭ್ಯಾಸಗಳಲ್ಲಿ ಮುಂದೆ ಬರಲಾರರು. ಅದ್ದರಿಂದ ಕನಿಷ್ಠಪಕ್ಷ ಲೇಬರ್ ಶಾಲೆಗಳಿರುವ ಸಂಸ್ಥೆಗಳಲ್ಲಿಯಾದರೂ ಕಡ್ಡಾಯ ವಿದ್ಯಾಭ್ಯಾಸಗಳನ್ನು ಜಾರಿಗೆ ತರಬೇಕಾಗಿ ಹರಿಜನ ಹಿತ [illegible] ಕೋಟೆ [illegible] ಅಧ್ಯಕ್ಷ [illegible] ವಿನಂತಿ [illegible].

ಅಳಿಯಸಂತಾನ ಸುಧಾರಣಾ ಮಸೂದೆಯ ಸಂಬಂಧಪಟ್ಟ ಕಮಿಟಿಯವರ ಸಂಚಾರ ಕಾರ್ಯಕ್ರಮ

ಅಳಿಯಸಂತಾನ ಮಸೂದೆಯ ಕುರಿತು ಜನಾಭಿಪ್ರಾಯವನ್ನು ಸಂಗ್ರಹಿಸುವರೆ ನೇಮಿಸಲ್ಪಟ್ಟ ಬಂಟತ್ಯಯಾನೆ ನಾಡವರ ಸಮಾಜ ಕಮಿಟಿಯವರು ಶ್ರೀ. ಎ. ಜೆ. ಶೆಟ್ಟಿ, [illegible] ಎ. ಆವರೂ ಈ ಕೆಳಗಿನ ಸ್ಥಳಗಳನ್ನು ಸಂದರ್ಶಿಸಲಿರುವರು. ಮಸೂದೆಗ ಸಂಬಂಧಪಟ್ಟವರೆಲ್ಲರೂ ಸಹಕರಿಸಬೇಕಾಗಿ ಕಮಿಟಿಯ ಗೌರವ ಕಾರ್ಯದರ್ಶಿ ಶ್ರೀ ಕೆ. ಎಸ್. ಹೆಗ್ಡೆ, ಎಡ್ವೊಕೇಟ್, ಮಂಗಳೂರು, ಅವರ ವಿನಂತಿಯಿದೆ.

ತಾ 28 5-46, 29-5 46, ಉಡುಪಿ. 29-5 46ರಲ್ಲಿ ಉಡುಪಿ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4ಗಂಟೆಗೆ ಸಾರ್ವಜನಿಕ ಸಭೆ.

ತಾ 30-5-46, 31-5-46, ಕುಂದಾಪುರ. 31-5-46 ಕುಂದಾಪುರ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4ಗಂಟೆಗೆ ಸಾರ್ವಜನಿಕ ಸಭೆ.

ತಾ 1-6-46, 2-6-46, ಕಾರ್ಕಳ. 2-6-46 ರಲ್ಲಿ ಕಾರ್ಕಳ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4ಗಂಟೆಗೆ ಸಾರ್ವಜನಿಕ ಸಭೆ.

ಕೇರಳ ಸೋಪು ಇನ್ಸ್ಟಿಟ್ಯೂಟ್

ಕಲ್ಲಿಕೋಟೆ.

ಕೇರಳ ಸೋಪುಗಳನ್ನು ವಿಕ್ರಯಿಸಲು ನಮ್ಮ ಅಧಿಕೃತ ಏಜಂಟರ ಹೆಸರುಗಳನ್ನೂ ಅವರ ವ್ಯವಹಾರ ಕ್ಷೇತ್ರಗಳನ್ನೂ ಈ ಕೆಳಗೆ ನಮೂದಿಸಲಾಗಿದೆ.

1. ಮೆಸರ್ಸ್ ಮದ್ರಾಸ್ ಕಮರ್ಶಿಯಲ್ ಕೊರ್ಪೊರೇಶನ್ ಲಿಮಿಟೆಡ್, 18-19 ವರ್ಮೊಂಟ್ ರೋಡು, ಮದ್ರಾಸ್—ವಿಶಾಖಪಟ್ಣ ಮತ್ತು ಪೂರ್ವ ಗೋದಾವರಿ.
2. ಮೇಲಿನ ಕಂಪೆನಿಯ ಪ್ರತಿನಿಧಿಗಳಾದ ಮೆಸರ್ಸ್ ಎ. ಕೆ. ಪಿಳ್ಳೆ ಎಂಡ್ ಸನ್ಸ್, ಟ್ರಿವೇಂಡ್ರಮ್—ತ್ರಿವಾಂಕೂರು ಸಂಸ್ಥಾನ.
3. ಮೆಸರ್ಸ್ ಎಸ್. ಸಿ. ಎಚ್. ಮಲ್ಲಪ್ಪರಾಜು, ಮೆನ್ಯುಫೆಕ್ಚರರ್ಸ್ ಪ್ರತಿನಿಧಿಗಳು, ಬೆಜವಾಡ—ಪಶ್ಚಿಮ ಗೋದಾವರಿ ಮತ್ತು ಕೃಷ್ಣಾ.
4. „ ಆರ್. ಪಿ. ನಾಯಿಡು ಎಂಡ್ ಕೊ., 242, ನಾರಾಯಣ ಪೇಟೆ, ನೆಲ್ಲೂರು—ನೆಲ್ಲೂರು ಮತ್ತು ಗುಂಟೂರು.
5. „ ರಹಮತುಲ್ಲಾ ಜಾಂಡಿ ಜನ್ರಲ್ ಮರ್ಚೆಂಟ್ಸ್ ಹೌಸ್, ನಂದ್ಯಾಲ್—ನಂದ್ಯಾಲ್ ಮತ್ತು ಕಡಪಾ.
6. „ ಗುಪ್ತಾ ಬ್ರದರ್ಸ್, ಆದೋನಿ—ಬೆಳ್ಳಾರಿ ಮತ್ತು ಅನಂತಪುರ.
7. „ ಕಸಮಲ್ಲಿ ಎಂಡ್ ಕೊ, ಒಂದರ್ ಸ್ಟ್ರೀಟ್, ಮದ್ರಾಸ—ಮದ್ರಾಸು ಮತ್ತು ಚೆಂಗಲ್ಪಟ್ಟು.
8. „ ಸಿ. ದಾನಮಾಲ್ ಚೆಟ್ಟಿ ಎಂಡ್ ಕೊ., 72, ಲಾಂಗ್ ಬಜಾರ್, ವೆಲ್ಲೂರು—ಉತ್ತರ ಅರ್ಕಾಟು ಮತ್ತು ಚಿತ್ತೂರು.
9. ಶ್ರೀ. ಕೆ. ರಾಘವೇಂದ್ರ ರಾವ್, ಚಂದ್ರ ವಿಲಾಸ, ಕುಂಭಕೋಣಂ—ತಂಜಾವೂರು ಮತ್ತು ದಕ್ಷಿಣ ಅರ್ಕಾಟು.
10. ಶ್ರೀ. ಪಲನಿಯಪ್ಪ ಮುದಲಿಯಾರ್, ವೆಸ್ಟ್ ಮಸ್ಸಿ ಸ್ಟ್ರೀಟ್, ಮಧುರಾ—ಮಧುರಾ, ಟ್ರಿಚಿ ಮತ್ತು ಪುದುಕೋಟೆ ಸ್ಟೇಟ್.
11. ಶ್ರೀ. ಎಸ್. ಸೂರ್ಯನಾರಾಯಣನ್, 60, ವೆಸ್ಟ್ ಗ್ರೇಟ್ ಕೋಟನ್ ರೋಡ್, ಟ್ಯುಟಿಕೋರಿನ್—ರಾಮನಾಡು ಮತ್ತು ತಿನ್ನವೆಲ್ಲಿ.
12. ಮೆಸರ್ಸ್ ವೀನಸ್ ಮೆನ್ಯುಫೆಕ್ಚರಿಂಗ್ ಎಂಡ್ ಟ್ರೇಡಿಂಗ್ ಕೊ., 131, ಲಾಂಗ್ ಬಜಾರ್, ವೆಲ್ಲೂರು—ಸೇಲಂ.
13. ಮೆಸರ್ಸ್ ನಾಪಾ ಎಂಡ್ ಬ್ರದರ್ಸ್, ಕಲ್ಲಿಕೋಟೆ—ದ. ಕನ್ನಡ, ಕೊಯಂಬತ್ತೂರು ಮತ್ತು ನೀಲಗಿರಿ.
14. ತ್ರಿನಿಟಿ ಟ್ರೇಡಿಂಗ್ ಕೊ, ಕಲ್ಲಿಕೋಟೆ—ಕೊಚ್ಚಿ ಸಂಸ್ಥಾನ.
15. ಆರ್. ಸಿ. ದಲಾಲ್, ಎಕ್ಸ್‌ಪ್ರೆಯರ್, ಕಲ್ಲಿಕೋಟೆ—ಮಲಬಾರ್.
16. ಮೆಸರ್ಸ್ ದಿ ಕೊಂಟಿನೆಂಟಲ್ ಏಜೆನ್ಸೀಸ್, ಗಾಂಧಿನಗರ, ಬೆಂಗಳೂರು ಸಿಟಿ—ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳು.
17. ಮೆಸರ್ಸ್ ದೇವಾನ್ ಎಂಡ್ ಕೊ., 106-108 ವಾಲ್ಫೆಂಡಲ್ ಸ್ಟ್ರೀಟ್, ಕೊಲಂಬೊ—ಸಿಲೋನ್.

ಮೇಲೆ ಸೂಚಿಸಿದ ಸ್ಥಳಗಳ ವ್ಯಾಪಾರಿಗಳು ತಮಗೆ ಬೇಕಾಗುವ ಸೋಪುಗಳ ಆರ್ಡರುಗಳನ್ನು ಆಯಾಯ ಏಜಂಟರೊಡನೆ ಕೊಡಬೇಕು. ಸಾಕಷ್ಟು ಪ್ರಮಾಣದಲ್ಲಿ ಪಡೆಯಲು ಅಸಾಧ್ಯವಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ದಿ ಬಿಸಿನೆಸ್ ಮೆನೇಜರ್,

ಕೇರಳ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.

NOTICE

In the matter of the Canara Forest and Farms Ltd, Udipi

To intending bidders:-

Please take notice that the decrees obtained by the Liquidator of the above Company against various contributories in O. P. 38 1942 on the file of the District Court, South Kanara will be publicly auctioned and transferred to the highest bidder on Sunday the 2nd June 1946 at the Office of the Liquidator at Karkal. The necessary information regarding the above sale can be got from the Liquidator.

N. M. Adyanthaya
Liquidator.

Karkal }
7-5-'46 }

ದಕ್ಷಿಣ ಕನ್ನಡ.

ಬಣಗುಡ್ಡೆ—ತಾ 6-5-46ರಲ್ಲಿ ಶ್ರೀ ಮಂಗಳಾ ಪರಮೇಶ್ವರಿ ಪ್ರಾಥಮಿಕ ಶಾಲೆಯ ವರ್ಷಾಂತ್ಯೋತ್ಸವವು ಉಡುಪಿ ರೇಂಜ್ ಶಾಲೆಗಳ ಜೂನಿಯರ್ ಡೆಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ಎಸ್. ಸುಂದರರಾಯರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯ ಅಧ್ಯಾಪಕರಿಂದ ವರದಿ ವಾಚನವೂ, ಶ್ರೀ. ಕೆ ಸದಾಶಿವ ಸೆಟ್ರಿಂದ ಸ್ವಸ್ತಿವಚನವೂ, ಅಧ್ಯಕ್ಷ ಹಸ್ತದಿಂದ ಬಹುಮಾನ ವಿತರಣವೂ ನಡೆಯಿತು. ಡ್ರಿಲ್ಸ್, ಕೋಲಾಟ ಇತ್ಯಾದಿ ವಿವಿಧ ವಿನೋದಾವಳಿಗಳೂ, ಸಭಿಕರ ಮತ್ತು ಅಧ್ಯಕ್ಷರ ಭಾಷಣ ಕಾರ್ಯಕ್ರಮಗಳೂ ನೆರವೇರಿದವು. ನಂತರ ಶ್ರೀ. ಯಂ. ವಿ. ಹೆಗ್ಡೆ ಇವರಿಂದ "ಪುಣ್ಯಸಭೂತದ ವೀರ" ಎಂಬ ಕೋಲಾಟವೂ, ಶ್ರೀ ಶಾಂತಿಯವರಿಂದ ಬರೆಯಲ್ಪಟ್ಟ "ಮುತ್ತಿನ ಸತ್ತ್ವ" ಎಂಬ ನಾಟಕವೂ ಶಾಲಾ ಬಾಲಕ ಬಾಲಕಿಯರಿಂದ ಪ್ರೇಕ್ಷಣೀಯವಾಗಿ ಪ್ರದರ್ಶಿಸಲ್ಪಟ್ಟಿತು. ಶಾಲಾ ವ್ಯವಸ್ಥಾಪಕರು ಧನ್ಯವಾದಗಳನ್ನರ್ಪಿಸಿದರು. ಉತ್ಸವಾರಂಭದಲ್ಲಿ ಇನ್ನಂಜೆ ಹೈಸ್ಕೂಲಿನ ಡ್ರಿಲ್ ಅಧ್ಯಾಪಕ ಶ್ರೀ. ಪಿ. ಶ್ರೀನಿವಾಸ ಭಟ್ರವರು ಮಕ್ಕಳಿಗೆ ತಿಂಡಿಯಂಚಿ ಪ್ರೋತ್ಸಾಹಿಸಿದರು.

ಕಾರ್ಕಳ—ಸ್ಥಳೀಯ ಬೇಡ್ಮಿಂಟನ್ ಕಮಿಟಿಯವರ ಸಂಚಾಲಕತ್ವದಲ್ಲಿ ನೆರವೇರಿಸಲ್ಪಟ್ಟ ಬೇಡ್ಮಿಂಟನ್ ಟೂರ್ನಮೆಂಟಿನಲ್ಲಿ ಭಾಗವಹಿಸಿ ಜಯಶೀಲರಾದ ಆಟಗಾರರಿಗೆ ಬಹುಮಾನ ವಿತರಣಮಾಡುವ ಸಮಾರಂಭವು ತಾ. 11 5 46ರಲ್ಲಿ ಬಂಗಳೂರಿನ ಪ್ರಸಿದ್ಧ ಆಟಗಾರರಲ್ಲೊಬ್ಬರಾದ ಶ್ರೀ. ಗೋಪಾಲ ಅಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಕನ್ನಾನೂರು ಫೈನಲ್ಸ್ ಮತ್ತು ಕನ್ನಾನೂರು ಡಬ್ಬಲ್ಸ್ ಆಟಗಾರರಿಗೆ ಕ್ರಮವಾಗಿ ರಜತ ಕಪ್ಪುಗಳನ್ನೂ, Snigles ನಲ್ಲಿ ಗೆದ್ದ ಶಂಕರ್ ನಾಯಕರವರಿಗೆ ಸುವರ್ಣ ಪದಕವನ್ನೂ ಫೈನಲ್ಸ್ ಮತ್ತು ಡಬ್ಬಲ್ಸ್‌ನಲ್ಲಿ ರನ್ನರ್ಸ್ ಅಪ್ ಹೊಂದಿದ ಅರುಣಾ ಫೈನಲ್ಸ್ ನೇತಾಜಿ ಡಬ್ಬಲ್ಸ್‌ರವರಿಗೂ ಸಿಂಗಲ್ಸ್‌ನಲ್ಲಿ ರನ್ನರ್ಸ್ ಅಪ್ ಹೊಂದಿದ ಕಾರ್ಕಳ ಸುಂದರ ಸೆಟ್ರವರಿಗೂ ಅಧ್ಯಕ್ಷ ಅಯ್ಯಂಗಾರರವರ ಹಸ್ತದಿಂದ ಬಹುಮಾನ ವಿತರಣೆಮಾಡಿದ ಮೇಲೆ, ಅಧ್ಯಕ್ಷರ, ಶ್ರೀ. ಕೆ. ಆರ್. ಶೆಣೈ ಮೊದಲಾದ ಸಭಿಕರ ಭಾಷಣದೊಂದಿಗೆ ಸಮಾರಂಭವು ಕೊನೆಗೊಂಡಿತು.

ಹಿ. ಪಾ ಪರ—1 5 46ರಲ್ಲಿ ಸ್ಥಳೀಯ ... ಬೇಸಿಕ ಸ್ಕೂಲ್ ಶ್ರೀ. ಕೆ ನರ... ಸೆಟ್ರು ಉಡುಪಿ ... ನಗರ ... ಅವರನ್ನು ಜಿಲ್ಲಾ ... ಸಮಾರಂಭವು ... ಮಿಂಟ



ಕುಟುಂಬ ದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವದಿಲ್ಲ

ಜನೇರಿಯನ್ ಜೀವನ ಮಿಕ್ಶ್ಚರ

ಜನೇರಿಯನ ಮದ್ದಿನ ... ಮಿಂಟು ...

ಸ್ಟ್ರೀನಿನವರ ಆಶ್ರಯದಲ್ಲಿ ಶ್ರೀ. H. D. P. ಕೆದಿಲ್ಲಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಭಿಕರಲ್ಲಿ ಶ್ರೀ. ವಿ ವಿ. ಸೆಟ್ರು, ಶ್ರೀ. B R ಜೋಶಿಯವರೂ ಮತ್ತು ಶ್ರೀ.M.M. ಭಟ್ರು ಶ್ರೀ ಶೆಟ್ರು ಗುಣಕಥನ ಮಾಡಿದರು. ಅಧ್ಯಕ್ಷರ ಯಥೋಚಿತ ಭಾಷಣವಾದ ಮೇಲೆ ಕಾರ್ಯದರ್ಶಿ ಶ್ರೀ.H. ರಾಜೀವ ಸೆಟ್ರ ಧನ್ಯವಾದ ಮತ್ತು ಲಘೂಪಹಾರದೊಡನೆ ಸಭಾಂತ್ಯವಾಯಿತು.

ಶಂಕರನಾರಾಯಣ—ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವರ್ಷಾಂತ್ಯೋತ್ಸವವು ತಾ. 30-4-46ರಲ್ಲಿ ಶ್ರೀ ಅಡೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀ ... ಕೃಷ್ಣರಾಯ ಕೊಡ್ಗಿಯವರು ಉಪಹಾರ ಕೂಟವನ್ನು ಏರ್ಪಡಿಸಿದರಲ್ಲದೆ ನಾರಾಯಣ ವಿಲಾಸ ಕಾಫಿ ಕ್ಲಬ್ಬಿನವರು ಲಾಡು ಮಿಠಾಯಿ ಮಕ್ಕಳಿಗೆ ಹಂಚಿದರು ಶ್ರೀ. ... ಕೃಷ್ಣರಾಯರು ಭಾಷಣವಾದ ಬಳಿಕ ಮಕ್ಕಳು ವಿವಿಧ ವಿನೋದಗಳನ್ನು ತೋರಿಸಿ ರಾತ್ರಿ 'ಸಿದ್ಧಾರ್ಥ' ಎಂಬ ಸಂಗೀತ ನಾಟಕವನ್ನು ಸಭಿಕರ ಕಣ್ಮನಗಳಿಗೆ ಆನಂದವಾಗುವಂತೆ ಆಡಿ ತೋರಿಸಿದರು. ಸಟ್ರಿ ಶಾಲಾ ಹಿರೇ ವಿದ್ಯಾರ್ಥಿಗಳ ದಿನಾಚರಣೆಯು ತಹಸೀಲ್ದಾರ್ ಶ್ರೀ. ಬಿ.ಗಣೇಶರಾಯರ ಅಧ್ಯಕ್ಷತೆಯಲ್ಲಿ ತಾ. 1-5 1946 ರಲ್ಲಿ ನಡೆಯಿತು. ಕಾರ್ಯದರ್ಶಿಗಳಾದ ಪಟೇಲ್ ಶ್ರೀ. ನರಸಿಂಹ ಆಚಾರ್ಯರು ಉಪಹಾರ ಕೂಟವನ್ನು ಏರ್ಪಡಿಸಿದರು. ಹಿರೇ ವಿದ್ಯಾರ್ಥಿಗಳು ರಾತ್ರಿ 'ಪನ್ನಾದಾಸಿ' ಎಂಬ ಸಂಗೀತ ನಾಟಕವನ್ನು ಚಲೋ ರೀತಿಯಲ್ಲಿ ಆಡಿ ತೋರಿಸಿದರು.

ದ. ಕ. ಜಿಲ್ಲಾ ಮಕ್ಕಳಕೂಟದ ಪ್ರಥಮ ಸಮ್ಮೇಲನವು—ಇದೇ ಮೇತಿಂಗಳ ತಾ. 27-28-29, ಈ ಮೂರು ದಿನಗಳಲ್ಲಿ ಉಡುಪಿಯ ಕಾಡುಬೆಟ್ಟಿನಲ್ಲಿರುವ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಸಭಾಂಗಣದಲ್ಲಿ ಜರಗಲಿದೆ. ಜಿಲ್ಲೆಯ ಎಲ್ಲಾ ಹೈಸ್ಕೂಲು, ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳು "ಮಕ್ಕಳಕೂಟಕ್ಕೆ" ಸೇರಿ ಸಮ್ಮೇಳನದ ಸ್ಪರ್ಧೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ವಿಜ್ಞಾಪನೆ. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಉಚಿತ ಬಹುಮಾನಗಳು ಕೊಡಲ್ಪಡುವುವು. ಹೆಸರುಗಳು ಪ್ರಕಟಿಸಲ್ಪಡುವುವು. ಇತರ ತಾಲೂಕುಗಳಿಂದ ಬಂದವರಿಗೆ ಯೋಗ್ಯ ಸ್ಥಳದ ವ್ಯವಸ್ಥೆ ಮಾಡಲಾಗುವುದು. ಭಾಷಣ ಸ್ಪರ್ಧೆಗೆ: ಕುಚೇಷ್ಟೆ (ಹಾಸ್ಯಮಯ), ಅಕ್ಕಿಯ ರೇಶನ್ ಆಗದೆ ಇದ್ದಿದ್ದರೆ ಉಂಟಾಗುತ್ತಿದ್ದ ಅನರ್ಥಗಳು, ಮಹಾತ್ಮಾ ಗಾಂಧೀಜಿಯ ವ್ಯಕ್ತಿತ್ವ ಎಂಬ ಮೂರು ವಿಷಯಗಳೂ ಪ್ರಬಂಧಸ್ಪರ್ಧೆಗೆ. ಶಾಲೆಗಳಲ್ಲಿ ದಂಡನೆಗಳು ಇರುವದು ಅವಶ್ಯವೇ? ನಿನಗೆ ಹತ್ತು ಸಾವಿರ ರೂಪಾಯಿ ಸಿಕ್ಕಿದರೆ ಏನೆಲ್ಲಾ ಮಾಡುವಿ? ನೀನು ಓದಿದ ಒಂದು ಒಳ್ಳೆಯ ಕನ್ನಡ ಪುಸ್ತಕದ ವಿಷಯ ವಿಸ್ತಾರವಿವರಣೆ ಎಂಬ ಮೂರು ವಿಷಯಗಳೂ ಇಡಲ್ಪಟ್ಟಿವೆ. ವಾಚನಸ್ಪರ್ಧೆಗೆ:- ಕುಮಾರಿ ನಾಯಿ, ಬೆಕ್ಕು ಹಾಡುತಿದೆ ನೋಡಿದಿರಾ? (೩ ಪದ್ಯ) ಮನೆ, ಮನೆ, ಮುದ್ದು ಮನೆ. ಮೂವತ್ತಮೂರು ಕೋಟಿ (8 ಪದ್ಯ)ಗಳು. ಈ ಸ್ಪರ್ಧೆಗಳಲ್ಲಿ ಭಾಗವಹಿಸುವವರು ತಾ. 25-5-46ರ ಒಳಗೆ ಕೂಟದ ಕಾರ್ಯಾಲಯಕ್ಕೆ ತಮ್ಮ ಹೆಸರು ವಿಳಾಸಗಳನ್ನು ಕಳುಹಿಸಬೇಕು, ಎಂದು ಶ್ರೀ- ಬಿ. ಅಂತಯ್ಯ ಸೆಟ್ಟಿ. ಅಧ್ಯಕ್ಷ "ಮಕ್ಕಳ ಕೂಟ" ಉಡುಪಿ, ಇವರು ತಿಳಿಸುತ್ತಾರೆ.

ಅಜೆಕಾರು—ಆಹಾರ ಪ್ರಚಾರದ ವಾಹನವು ಇಲ್ಲಿಗೆ ಬಂದಿದ್ದು, ಸ್ಥಳೀಯ, ರೆವಿನ್ಯೂ ಇನ್ಸ್‌ಪೆಕ್ಟರರಾದ ಶ್ರೀ ಕೆ. ವಾಸುದೇವ ನಾಯಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಈಗ ನಮ್ಮ ಮುಂದಿರುವ ಆಹಾರದ ಪ್ರಶ್ನೆ, ಗೋಧಿಯ ಬಳಕೆ ಮತ್ತು ಸಾರ್ವಜನಿಕರ ಕರ್ತವ್ಯದ ಕುರಿತು ಜಿಲ್ಲಾ ಭಾಷಣಕಾರರಾದ ಶ್ರೀ. ನಾರಾಯಣ ಭಟ್ಟರು ಮುಂದಟ್ಟು ಮಾಡಿದರು.

ANNOUNCEMENT.

Your presence is cordially welcome for the opening ceremony of the

SHIRVA HINDU HIGH SCHOOL

on Sunday, the 2nd June 1946 at 10-45 A. M.

K. Muddu Shetty,
President.

With best compliments from the Executive Council of the B. N. Vidyavardhaka Sangha.

ಪ್ರಕಟಣೆ.

ತಾ. 2-6 1946ನೇ ಆದಿತ್ಯವಾರ ಪೂರ್ವಾಹ್ನ 10-45 ಗಂಟೆಗೆ

ಶಿರ್ವ ಹಿಂದೂ ಹೈಸ್ಕೂಲಿನ

ಪ್ರಾರಂಭೋತ್ಸವವು ಜರಗಲಿರುವುದು.
ವಿದ್ಯಾಭಿಮಾನಿಗಳೆಲ್ಲರಿಗೂ ಸುಸ್ವಾಗತ

ಕೆ. ಮುದ್ದು ಶೆಟ್ಟಿ, ಪ್ರೆಸಿಡೆಂಟ್.

— ಬಿ. ಎನ್. ವಿದ್ಯಾವರ್ಧಕ ಸಂಘದ ಕಾರ್ಯಕಾರೀ ಸಮಿತಿಯ ಅಭಿನಂದನೆ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಬಟ್ಟೆ ಬದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಸತ್ರ್ವ ವಿಚಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ಅಷ್ಟಬಂಧ ಕಲಶಕ್ಕೆ ತಾ16-4-46ರಿಂದ 4-5-46ರ ವರೇಗೆ ಹಣ ಕೊಟ್ಟವರ ಹೆಸರು

ಕೋಟದ ಮನೆ ಮುತ್ತಯ್ಯ ಶೆಟ್ರು ರೂ 5, ನಾಯಕರ ಮನೆ ಗೋವಿಂದ ಶೆಟ್ರು ರೂ 5. ಕಾಕತೋಟದ ಅಣ್ಣಪ್ಪ ಶೆಟ್ರು ರೂ. 10, ಚಪ್ಪರ ಮಕ್ಕಿ ಮಹಾಬಲ ಶೆಟ್ರು ರೂ. 10, ಮುಳ್ಳುಗುಡ್ಡೆ ನಾಗಯ್ಯ ಶೆಟ್ರು ರೂ. 10, ಕವ್ವಳ್ಳಿ ಕಾಟಿನವಳಿಯವರು ... ಟ್ರು ರೂ. 25, ಯೊಸೂರು ವಿಟ್ಠಲ ಭಟ್ರು ರೂ. 15, ಶಿವರಾಮ ಮಂಜರು ರೂ. 15, ಹಿಂಡಲ್ಪಿನ ರಾಮಯ್ಯ ಶೆಟ್ರು ರೂ 10, ಮುಕ್ಕಾಡಿ ನಂದ್ಯಪ್ಪ ಶೆಟ್ರು ರೂ. 5, ಚದ್ದೂರು ಗ್ರಾಮದ ಚಿಲ್ರೆ ವಸೂಲಿ ರೂ. 27, ಹಳ್ಳಿ ಕೆಳಮನೆ ಮುತ್ತ್ಯಯ್ಯ ಶೆಟ್ರು ರೂ. 5, ಹಳ್ಳಿ ನಾಗಪ್ಪ ಶೆಟ್ರು ರೂ, 5, ಮಕ್ಕಿ ಮನೆ ಸುಬ್ಬಯ್ಯ ಸೆಟ್ರು, ರೂ. 5, ಮುಡಕಟ್ಟೆ ಮನೆ ಹೆರಿಯಣ್ಣ ಶೆಟ್ರು ರೂ. 5. ಸಾಲಿಗದ್ದೆ ಮೂಕಮ್ಮ ಶೆಡ್ತಿ ರೂ. 5 ತ್ರಾಸಿ ಮತ್ತು ಹೊಸಾಡು ಗ್ರಾಮದ ಚಿಲ್ರೆ ವಸೂಲಿ ಜುಮುಲಾ ರೂ. 17. ಮುಳ್ಳುಗುಡ್ಡೆ ಗೋವಿಂದ ಶೆಟ್ರು ರೂ. 5, ಕಡ್ಲೆ ವೆಂಕಪ್ಪ ಶೆಟ್ರು ರೂ 5, ಮಕ್ಕಿ ಮನೆ ಕಾಳಪ್ಪ ಶೆಟ್ರು ರೂ 5, ಕಲ್ಲುಗುಡ್ಡೆ ಮಂಜೈಯ್ಯ ಶೆಟ್ರು ರೂ 5 ತ್ರಾಸಿ ಪಟೇಲ್ ಸುಬ್ಬಣ್ಣ ಶೆಟ್ರು ರೂ 5 ಕೊಪ್ಪರಿಗೆ ನಾಗೈಯ್ಯ ಶೆಟ್ರು ರೂ. 5, ... ದ್ದಾಡಿ ಮಂಜೈಯ್ಯ ಶೆಟ್ರು ರೂ. 5, ಗುದ್ದಂ ಮ್ಯಾಡಿ ಸುಬ್ಬಣ್ಣ ಶೆಟ್ರು ರೂ 5, ಹಳ್ನಾಡು ಸದಾಶಿವನಯ್ಯನವರು ರೂ. 25, ಹೋರಿ ಹಟ್ಟಿ ತೇಜಪ್ಪ ಶೆಟ್ರು ರೂ 5, ಯಳೂರು ಕೊರಗಯ್ಯ ಶೆಟ್ರು ರೂ. 5, ಹಕ್ಲಾಡಿ ಗ್ರಾಮದ ಚಿಲ್ರೆ ವಸೂಲಿ ಜುಮ್ಲಾ ರೂ. 25, ಅಂಗಡಿ ಸುಬ್ಬಯ್ಯ ರೂ. 5, ನೂಜಾಡಿ ಲಿಂಗೈಯ್ಯ ಶೆಟ್ರು ರೂ. 5, ಇನ್ನಿತರ ಚಿಲ್ರೆ ವಸೂಲಾದ್ದು ರೂ. 5, ಬಾರಂದಾಡಿ ಸುಬ್ಬಯ್ಯ ಶೆಟ್ರು ರೂ. 25, ಆನಂದಾರಿ ಶ್ರೀಧರ ವ್ಯಾಸ ಭಾಗವತ ರೂ. 5, ಕುಕ್ಕುಡೆ ನಾರಪ್ಪ ಶೆಟ್ರು, ರೂ. 5, ಕೊಳ್ತಾಸ ಮಾದೈಯ್ಯ ಶೆಟ್ರು ರೂ. 5. ಜನ್ನಾಲು ಕೊಗ್ಗ ವ್ಯಾಸಭಾಗವತ ರೂ 5. ಜನ್ನಾಲು ಕುಕ್ಕುಡೆ ಗ್ರಾಮದ ಚಿಲ್ರೆ ವಸೂಲು ರೂ. 17, ಇಡೂರು ಪಟೇಲ್ ಸುಬ್ಬಣ್ಣ ಶೆಟ್ರು ರೂ. 25, ಅನಾಡು ಲಕ್ಷ್ಮೀನಾರಾಯಣ ಜೋಯಿಸರು ರೂ. 15, ಗುಜ್ಜೆಮನೆ ಗೋವಿಂದ ಶೆಟ್ರು ರೂ. 5. ಹಳ್ಳಿ ಮಾದಯ್ಯ ಶೆಟ್ರು ರೂ. 5, ಹಳ್ಳಿ ವೆಂಕಟಯ್ಯ ಶೆಟ್ರು ರೂ. 5, ಕೆರೆಕೊಡ್ಲು ಗೋವಿಂದ ಶೆಟ್ರು ರೂ. 5, ನೂಜಾಡಿ ಹೆರಿಯಣ್ಣ ಶೆಟ್ರು ರೂ. 5, ಅನಾಡು ಗ್ರಾಮದ ಚಿಲ್ರೆ ವಸೂಲಿ ರೂ. 7, ಹಕ್ಲೂರು ಗ್ರಾಮದ ಚಿಲ್ರೆ ವಸೂಲಿ ರೂ 4-ಜುಮಾಲಾ ರೂ. 435.

C. H. Shetty. L. O.

ಮಂಗಳೂರು.

ಭೂಲಾಭಾಯಿ ದೇಸಾಯಿ-ಅವರ ನಿಧನಕ್ಕಾಗಿ ತಾ. ೮ರಲ್ಲಿ ನಗರದ ಹೆಚ್ಚಿನ ಅಂಗಡಿಗಳೂ ಕಾರ್ಖಾನೆಗಳೂ ಖಾಸಗಿ ಸಂಸ್ಥೆಗಳೂ ಹರತಾಳ ಆಚರಿಸಿದವು. ಸಂಜೆ ಆರು ಗಂಟೆಗೆ ಕೇಂದ್ರ ಮೈದಾನದಲ್ಲಿ, ಕೇಂದ್ರ ಜಿಲ್ಲಾ ಮಹಾಸಭಾ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಸಂಜೀವ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ರಾಷ್ಟ್ರಸೇವಾದಳದ ಸ್ವಯಂಸೇವಕರು ರಾಷ್ಟ್ರಗೀತೆ ಹಾಡಿದ ಬಳಿಕ ಡಾ। ಯು. ಪಿ. ಮಲ್ಯರು ದೇಸಾಯಿಯವರ ಗುಣ ಕಥನ ಮಾಡಿದರು. ಮೌನಸೂಚಕ ಪ್ರಾರ್ಥನೆ ಮಾಡಿದ ನಂತರ ಸಭೆ ವಿಸರ್ಜನೆಯಾಯಿತು.

ಇದೇ ಸಂದರ್ಭದಲ್ಲಿ ಗಣಪತಿಯ ಗಲಭೆ ಕಾಲದಲ್ಲಿ ಮಂಗಳೂರಿನ ಕೋರ್ಟಿನ ಪಿಕೆಟಿಂಗ್ ನಡೆಸಿ ಎಂಟು ತಿಂಗಳ ಶಿಕ್ಷೆಗೊಳಗಾಗಿದ್ದು ಇದೇ ತಾ. ೬ರಂದು ಕ್ಷಯ ರೋಗದಿಂದ ಶ್ರೀ ಕೆ. ಕಪ್ಪಗಟ್ಟೆ ಎಂಬವರು ತೀರಿಕೊಂಡ ಬಗ್ಗೆಯೂ ಸಂತಾಪ ಸೂಚಕ ಠರಾವು ಮಾಡಲಾಯಿತು.

ಉದ್ದು, ತೊಗರಿ. ಹೆಸರು. ಕಡಲೆ ಈ ನಾಲ್ಕು ಧಾನ್ಯಗಳು ಗಳಸೇರಿಗಿಂತ ಜಾಸ್ತಿ ಸಂಗ್ರಹಿಸಿಟ್ಟುಕೊಂಡಿರುವ ವ್ಯಾಪಾರಿಯಾಗಲಿ, ಇತರರಾಗಲಿ ತಮ್ಮ ಬಳಿ ಇರುವ ಸಂಗ್ರಹದ ಕುರಿತು ವ್ಯವಹಾರ ಹೇಳಿಕೆಯೊಂದನ್ನು ಆಯಾ ತಾಲೂಕಿನ ತಹಸಿಲ್ದಾರರಿಗೆ ತಾ. ೧೬ ನೇ ಜುಲೈ ಒಳಗೆ ಒಪ್ಪಿಸತಕ್ಕದ್ದು.

ಜಿಲ್ಲೆಯಲ್ಲಿ ನೀರಾವರಿ- ಕೆರೆ ಕಟ್ಟುಗಳನ್ನು ದುರಸ್ತಿಗೊಳಿಸುವುದಕ್ಕಾಗಿ ಇಷ್ಟರಲ್ಲೇ ಮದ್ರಾಸು ಸ್ಪೆಶಲ್ ಡಿ. ತಹಸಿಲ್ದಾರರ ನೇಮಕವಾಗಿದೆ. ಕೈಕೆಳಗೆ ಕೆಲವು ಸಿಬ್ಬಂದಿ ವರ್ಗ ನೇಮಕ ಮಾಡುವರು. ಹೊಸದಾಗಿ ತೋಡಿಸುವ, ಇದ್ದುದನ್ನು ದುರಸ್ತಿಗೊಳಿಸುವ ಇತ್ಯಾದಿ ಕಾರ್ಯಗಳಿಗೆ ಸರಕಾರದ ಧನಸಹಾಯವನ್ನಪೇಕ್ಷಿಸುವವರು ಇವರಿಗೆ ಬರೆಯಬಹುದು.

ಮಜೂರರ ಹಾಗೂ ಕೃಷಿಕರ-ಸಂಘಟನೆಯನ್ನು ಕಾಂಗ್ರೆಸ್ ಧ್ಯೇಯ ಮತ್ತು ತತ್ವಗಳಿಗನುಗುಣವಾಗಿ ಸಂಘಟಿಸುವ ಉದ್ದೇಶದಿಂದ ತರುಣರ ಸಭೆಯೊಂದು ಡಾ। ಎಚ್. ಎಚ್. ಒಡೆಯರ ಅಧ್ಯಕ್ಷತೆಯಲ್ಲಿ ತಾ. ೬ರಂದು ಕೆನರಾ ಹೈಸ್ಕೂಲಿನ ಕಸ್ತೂರಿ ಬಾ ಭವನದಲ್ಲಿ ಜರಗಿತು. ಶ್ರೀ ಕೆ.ಕೆ. ಶೆಟ್ಟರು ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ, ರಾಷ್ಟ್ರೀಯ ಯುವಕ ಸಂಘ ಎಂಬುದನ್ನು ಸ್ಥಾಪಿಸುವ ನಿರ್ಧಾರವಾಯಿತು. ಈ ಸಂಘದ ಘಟನಾವಳಿಯ ನಿರ್ಮಾಣಕ್ಕಾಗಿ ಸಮಿತಿಯೊಂದರ ನೇಮಕವೂ ಆಯಿತು.

ಈ ಸಂಘದ ಘಟನೆ ಮತ್ತು ನಿಯಮಾವಳಿಗಳನ್ನು ಮಂಜೂರು ಮಾಡಲು ಮಹಾಸ...ಭೆಯೊಂದು ತಾ. ೧೨ರಂದು ಸಂಜೆ ನಾಲ್ಕು ಗಂಟೆ ... ಲಕ್ಕೆ ಕೊಡಿಯಾಲ್ ಬೈಲಿನಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ನಡೆಯಲಿರುವುದು. ಈ ಸಂಘದ ಸ್ಥಾಪನೆಯಲ್ಲಿ ಆಸಕ್ತರಿರುವ ಕಾಂಗ್ರೆಸ್ ವಾದಿ ಯುವಕರಿಗೆಲ್ಲ ಸ್ವಾಗತವಿದೆ, ಎಂದು ಕನ್ವೀನರರು ತಿಳಿಸುತ್ತಾರೆ.

ನಮ್ಮ ಜಿಲ್ಲೆಯ ಕಲೆಕ್ಟರ್-ರಾವ್ ಬಹದ್ದೂರ್ ರಾಜರು ತಿರುಚನಾಪಳ್ಳಿಗೆ ವರ್ಗಾಯಿಸಲ್ಪಟ್ಟು ಶ್ರೀ ಭೂತಲಿಂಗಂ ಅವರು ಇದೇ ತಾ. ೧೫ ರೊಳಗೆ ಇಲ್ಲಿಯ ಕಲೆಕ್ಟರಾಗಿ ಬಂದಿರುವರು.

ಮದ್ರಾಸ್ ಕಾರಂತರ ಆಗಮನ-ಮದ್ರಾಸು ಸರಕಾರದ ಕೃಷಿ ಮಂತ್ರಿಗಳಾದ ಶ್ರೀ ಕೆ. ರಾಮಕೃಷ್ಣ ಕಾರಂತರು ತಾ. 11ರಲ್ಲಿ ಮಂಗಳೂರಿಗೆ ಆಗಮಿಸಿದರು. ಅವರಿಗೆ ರೈಲ್ವೆ ಸ್ಟೇಶನ್‌ನಲ್ಲಿ ಅಧಿಕಾರಿ ಮತ್ತು ಅನಧಿಕಾರಿ ಮಹಾ ಜನರು ಸ್ವಾಗತವಿತ್ತರು. ಸಾಯಂಕಾಲ ಸ್ಥಳೀಯ ನಗರಸಭೆಯವರು ಅವರನ್ನು ಆಮಂತ್ರಿಸಿ ಮಂಗಳೂರು ಪಟ್ಟಣದಲ್ಲಿನ ಜನರ ಅಭಾವ, ನೀರಿನ ವ್ಯವಸ್ಥೆ, ಸಿಮೆಂಟ್ ಸರಬರಾಯಿ, ಟಿಪ್ ಟೋಪ್ ಕೋಣೆ ಲೈಸೆನ್ಸ್ ಕೊಟ್ಟು ಪಡಿತರ ಮೊದಲಾದ ವಿಷಯಗಳನ್ನೊಳಗೊಂಡ ಮನವಿಯೊಂದನ್ನು ಸ್ವೀಕರಿಸಿದರು. ಮಂತ್ರಿಗಳು ಅದಕ್ಕುತ್ತರವಿತ್ತರು. ಮರುದಿನ ಬೆಳಗ್ಗೆ ಜಿಲ್ಲಾ ಕಲೆಕ್ಟರರು ಕರೆದಿದ್ದ ಅಧಿಕಾರಿ ಮತ್ತು ಇತರ ಮಹಾಜನರ ಸಭೆಯಲ್ಲಿ ಮದ್ರಾಸ್ ಮಂತ್ರಿಗಳು ಕನ್ನಡದಲ್ಲಿ ಸಾತನಾಡಿ ಸಭೆಯಲ್ಲಿ ಚರ್ಚಿಸತಕ್ಕ ಮುಖ್ಯ ವಿಷಯಗಳೇನೆಂಬುದನ್ನು ಒಪ್ಪಿಸಿದರು. ಆಹಾರ ಸಂಗ್ರಹ ಮತ್ತು ವಿತರಣೆಯ ಕುರಿತು ಮುಖ್ಯವಾಗಿ ಹಳ್ಳಿಗರಿಗಾಗುವ ಅನ್ಯಾಯಗಳನ್ನು ಹೋಗಲಾಡಿಸಲು ಹೇಗೆ ಸಾಧ್ಯ ಎಂಬ ಕುರಿತು ಚರ್ಚೆ ನಡೆಯಿತು. ತೆಂಗಿನಕಾಯಿ, ಮತ್ತು ತೆಂಗಿನೆಣ್ಣೆಯ ಮೇಲೆ ಕಂಟ್ರೋಲ್ ಹಾಕಬೇಕೆನ್ನುವ, ಕೈಮಗ್ಗ ವಸ್ತ್ರದ ಮೇಲೆ ಕಂಟ್ರೋಲ್ ಹಾಕಿ ಅವು ಸ್ಟ್ಯಾಂಡರ್ಡ್ ಬಟ್ಟೆ ತಯಾರಿಸುವಂತಾಗ ಬೇಕೆನ್ನುವ, ಮಿಲ್ ಬಟ್ಟೆಯ ಸಮ ರೇಶನ್ ಕಾರ್ಡ್ ಪ್ರಕಾರ ಹಂಚಬೇಕೆನ್ನುವ ಭತ್ತವನ್ನು ಹುಲ್ಲಿಗೆ ಕೊಡದೆ ಕೈಯಿಂದ ಕುಟ್ಟಿಯೇ ಅಕ್ಕಿ ತಯಾರಿಸಬೇಕೆನ್ನುವ ಹಲವಾರು ಸೂಚನೆಗಳು ಸಭಿಕರಿಂದ ಬಂದುವು. ಮಂತ್ರಿಗಳು ಜಿಲ್ಲೆಯಲ್ಲಿ ನೀರಾವರಿ ಯೋಜನೆಯನ್ನು ಆದಷ್ಟು ಬೇಗನೆ ಕೈಕೊಳ್ಳಲಾಗುವುದೆಂದರು. ಸುಮಾರು 12ಗಂಟೆ ತನಕ ಚರ್ಚೆ ನಡೆದ ನಂತರ ಮಂತ್ರಿಗಳು ಅಭಾರಸ್ತುತಿ ಸಭೆಯನ್ನು ಮುಗಿಸಿದರು; ಮರುದಿನ ಮಂತ್ರಿಗಳು ಮದ್ರಾಸಿಗೆ ಹೊರಟುಹೋದರು.

ಕೇರಳ ಸೋಪು ಇನ್ಸ್ಟಿಟ್ಯೂಟ್

ಕಲ್ಲಿಕೋಟೆ.

ಕೇರಳ ಸೋಪುಗಳನ್ನು ವಿಕ್ರಯಿಸಲು ನಮ್ಮ ಅಧಿಕೃತ ಏಜಂಟರ ಹೆಸರುಗಳನ್ನೂ ಅವರ ವ್ಯವಹಾರ ಕ್ಷೇತ್ರಗಳನ್ನೂ ಈ ಕೆಳಗೆ ನಮೂದಿಸಲಾಗಿದೆ.

1. ಮೆಸರ್ಸ್ ಮದ್ರಾಸ್ ಕಮರ್ಶಿಯಲ್ ಕೋರ್ಪೊರೇಶನ್ ಲಿಮಿಟೆಡ್, 18-19 ಮೌಂಟ್ ರೋಡು, ಮದ್ರಾಸ್—ವಿಶಾಖಪಟ್ನ ಮತ್ತು ಪೂರ್ವ ಗೋದಾವರಿ.
2. ಮೇಲಿನ ಕಂಪೆನಿಯ ಪ್ರತಿನಿಧಿಗಳಾದ ಮೆಸರ್ಸ್ ಎ. ಕೆ. ಪಿಳ್ಳೆ ಎಂಡ್ ಸನ್ಸ್, ಟ್ರಿವೇಂಡ್ರಮ್—ತ್ರಿವಾಂಕೂರು ಸಂಸ್ಥಾನ.
3. ಮೆಸರ್ಸ್ ಎಸ್. ಸಿ.ಎಚ್. ಮಲ್ಲಿಕಾರ್ಜುನರಾಜು, ಮೆನ್ಯೂಫೆಕ್ಚರರ್ಸ್ ಪ್ರತಿನಿಧಿಗಳು, ಬೆಜವಾಡ—ಪಶ್ಚಿಮ ಗೋದಾವರಿ ಮತ್ತು ಕೃಷ್ಣಾ.
4. „ ಆರ್. ವಿ. ನಾಯುಡು ಎಂಡ್ ಕೊ., 212, ನಾರಾಯಣ ಪೇಟೆ, ನೆಲ್ಲೂರು—ನೆಲ್ಲೂರು ಮತ್ತು ಗುಂಟೂರು.
5. „ ರಹಮತುಲ್ಲಾ ಸಾಹಿಬ್ ಸಪ್ಲೈಯರ್ ಹೌಸ್, ನಂದ್ಯಾಲ್—ನಂದ್ಯಾಲ್ ಮತ್ತು ಕಡಪಾ.
6. „ ಗುಪ್ತಾ ಬ್ರದರ್ಸ್, ಅದೋನಿ—ಬಳ್ಳಾರಿ ಮತ್ತು ಅನಂತಪುರ.
7. „ ಕಪಮಲ್ಲಿ ಎಂಡ್ ಕೊ., ಒಂಡರ್ ಸ್ಟ್ರೀಟ್, ಮದ್ರಾಸ್, ಮದ್ರಾಸು ಮತ್ತು ಚೆಂಗಲ್ಪಟ್ಟು.
8. „ ವಿ. ದಾನಪಾಲ್ ಚೆಟ್ಟಿ ಎಂಡ್ ಕೊ., 72, ಬೇಗಂ ಬಜಾರ್, ವೆಲ್ಲೂರು—ಉತ್ತರ ಆರ್ಕಾಟು ಮತ್ತು ಚಿತ್ತೂರು.
9. ಶ್ರೀ. ಕೆ. ರಾಘವೇಂದ್ರ ರಾವ್, ಚಂದ್ರ ವಿಲಾಸ, ಕುಂಭಕೋಣಂ—ತಂಜಾವೂರು ಮತ್ತು ದಕ್ಷಿಣ ಆರ್ಕಾಟು
10. ಶ್ರೀ. ಪಲನಿಯಪ್ಪ ಮುದಲಿಯಾರ್, ವೆಸ್ಟ್ ಮಾಸಿ ಸ್ಟ್ರೀಟ್, ಮಧುರಾ—ಮಧುರಾ, ಟ್ರಿಚಿ ಮತ್ತು ಪುದುಕೋಟೆ ಸ್ಟೇಟ್
11. ಶ್ರೀ. ಎಸ್. ಸೂರ್ಯನಾರಾಯಣನ್, 60, ವೆಸ್ಟ್ ಗ್ರೇಟ್ ಕೋಟನ್ ರೋಡ್, ಟ್ಯೂಟಿಕೋರಿನ್—ರಾಮನಾಡು ಮತ್ತು ತಿನ್ನವೆಲ್ಲಿ.
12. ಮೆಸರ್ಸ್ ವೀನಸ್ ಮೆನ್ಯೂಫೆಕ್ಚರಿಂಗ್ ಎಂಡ್ ಟ್ರೇಡಿಂಗ್ ಕೊ., 131, ಲೋಂಗ್ ಬಜಾರ್, ವೆಲ್ಲೂರು—ಸೇಲಂ.
13. ಮೆಸರ್ಸ್ ಸಾಮಿ ಎಂಡ್ ಬ್ರದರ್ಸ್, ಕಲ್ಲಿಕೋಟೆ—ದ. ಕನ್ನಡ, ಕೊಯಂಬತ್ತೂರು ಮತ್ತು ನೀಲಗಿರಿ.
14. ತ್ರಿನಿಟಿ ಟ್ರೇಡಿಂಗ್ ಕೊ, ಕಲ್ಲಿಕೋಟೆ—ಕೊಚ್ಚಿ ಸಂಸ್ಥಾನ.
15. ಆರ್. ಸಿ. ದಲಾಲ್, ಎಸ್ಕ್ವೈಯರ್, ಕಲ್ಲಿಕೋಟೆ—ಮಲಬಾರ್.
16. ಮೆಸರ್ಸ್ ದಿ ಕೊಂಟಿನೆಂಟಲ್ ಏಜೆನ್ಸೀಸ್, ಗಾಂಧಿನಗರ, ಬೆಂಗಳೂರು ಸಿಟಿ—ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳು.
17. ಮೆಸರ್ಸ್ ದೇವಾನ್ ಎಂಡ್ ಕೊ., 106-108 ಹಾಲ್ಟೆಂಡಲ್ ಸ್ಟ್ರೀಟ್, ಕೊಲಂಬೋ—ಸಿಲೋನ್.

ಮೇಲೆ ಸೂಚಿಸಿದ ಸ್ಥಳಗಳ ವ್ಯಾಪಾರಿಗಳು ತಮಗೆ ಬೇಕಾಗುವ ಸೋಪುಗಳ ಆರ್ಡರುಗಳನ್ನು ಆಯಾಯ ಏಜಂಟರೊಡನೆ ಕೊಡಬೇಕು. ಸಾಕಷ್ಟು ಪ್ರಮಾಣದಲ್ಲಿ ಪಡೆಯಲು ಅಸಾಧ್ಯವಾದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ದಿ ಬಿಸಿನೆಸ್ ಮೆನೇಜರ್,

ಕೇರಳ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.

NOTICE

In the matter of the Canara Forest and Farms Ltd, Udipi

To intending bidders:-

Please take notice that the decrees obtained by the Liquidator of the above Company against various contributories in O. P. 38/1942 on the file of the District Court, South Kanara will be publicly auctioned and transferred to the highest bidder on Sunday the 2nd June 1946 at the Office of the Liquidator at Karkal. The necessary information regarding the above sale can be got from the Liquidator.

N. M. Adyanthaya
Liquidator.

Karkal
7-5-'46

ಉಚ್ಚಿಲ ಶ್ರೀ ಸರಸ್ವತೀ ಮಂದಿರ ಶಾಲಾ ವರ್ಧಂತಿಯು-"ತಾ 6-5-46ರಲ್ಲಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಮುಖ್ಯ ಉಪಾಧ್ಯಾಯರು ಶಾಲೆಯ ವರದಿಯನ್ನು ಓದಿದರು. ಬಹುಮಾನ ವಿತರಣೆಯನಂತರ ಕೆಲವು ಮಹನೀಯರುಗಳು ಭಾಷಣಕೊಟ್ಟರು. ಶಾಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಕೊಂಡಾಡಿ ಶಾಲೆಯ ಜನಾದರಣೀಯತೆಯನ್ನು ಪ್ರಶಂಸಿ ಅಧ್ಯಕ್ಷರು ಭಾಷಣವಿತ್ತರು. ವಿವಿಧ ವಿನೋದಾವಳಿ ಹಾಗೂ 'ವಿದ್ಯೆ ಪಾಡ್'' ಎಂಬ ತುಳು ನಾಟಕವೂ ಮತ್ತು 'ಭಕ್ತಧ್ರುವ' ಎಂಬ ಸಂಗೀತನಾಟಕವೂ ಅಭಿನಯಿಸಲ್ಪಟ್ಟಿತು. ಪೆತ್ತಪರ ಸಂಘದ ಅಧ್ಯಕ್ಷರಾದ ಶ್ರೀ ವಾ. ಮುದ್ದು ಶೆಟ್ರಿಂದ ಕಳುಹಿಸಲ್ಪಟ್ಟ ಬೆಳ್ಳಿಯ ಪದಕಗಳು 2 ಮತ್ತು ಇತರ ಪಸ್ತುಗಳನ್ನು ನಾಟಕದಲ್ಲಿ ಭಾಗವಹಿಸಿದ ಮಕ್ಕಳಿಗೆ ಕೊಟ್ಟನಂತರ ಧನ್ಯವಾದಾರ್ಪಣೆಯೊಂದಿಗೆ ವರ್ಧಂತಿಯು ಮುಕ್ತಾಯವಾಯ್ತು".

ಕಟ್ಪಾಡಿ-ಕ್ಯಾ. ಪಾ. ಬೆಳ್ಳೆ ಸುಬ್ಬಯ್ಯ ಶೆಟ್ರ ತಮ್ಮ ಸೂರ ಶೆಟ್ರು ತಾ.7-5-46ರಲ್ಲಿ ನಿಧನಗತರಾದುದು ವಿಷಾದಕರ. ಇವರು ಕಟ್ಪಾಡಿಯಲ್ಲಿ ವ್ಯಾಪಾರ ನಡಿಸಾಟಗಳನ್ನು ಮಾಡುತ್ತಾ ಬಡಜನರಿಗೆ ತುಂಬಾ ಸಹಾಯವನ್ನು ಮಾಡಿದ್ದರು.

ಕಡಂದಲೆ- ತಾ 6-5-46ರಲ್ಲಿ ಕಡಂದಲೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಶ್ರೀ ಡಾಕ್ಟರ್ ಸದಾಶಿವ ಶೆಟ್ರ ಹಸ್ತದಿಂದ "ಸರಸ್ವತಿ ವಾಚನಾಲಯ" ಎಂಬ ವಾಚನಾಲಯವೊಂದು ತೆರೆಯಲ್ಪಟ್ಟಿತು.

ಹರಿಜನರಿಗೆ ಕಡ್ಡಾಯ ಶಿಕ್ಷಣ ಬೇಕು- ಮದ್ರಾಸ್ ಸರಕಾರವು ಹರಿಜನರು ವಿದ್ಯೆಯಲ್ಲಿ ಮುಂದೆ ಬರಬೇಕೆಂದು 10 20 ವರ್ಷದಿಂದ, ಲೇಬರ್ ಡಿಪಾರ್ಟ್ಮೆಂಟನ್ನು ತೆರೆದು ಏನ್ನೇ ಕೆಲಸ ಮಾಡುತ್ತಿದ್ದರೂ ನೇರದಾರಿಯನ್ನು ಮುಂದೆ ಕೂಡಾ ಹಿಡಿಯಲಿಲ್ಲ. 7 ಕೋಟಿ ಹರಿಜನರು ವಿದ್ಯೆಯನ್ನು ಹೊಂದಬೇಕಾದರೆ ಕಡ್ಡಾಯ ವಿದ್ಯೆಯೊಂದಿಲ್ಲದೆ ಎಷ್ಟು ಪ್ರಯತ್ನಪಟ್ಟರೂ ಹರಿಜನರು ವಿದ್ಯಾಭ್ಯಾಸಗಳಲ್ಲಿ ಮುಂದೆ ಬರಲಾರರು. ಅದ್ದರಿಂದ ಕನಿಷ್ಠಪಕ್ಷ ಲೇಬರ್ ಶಾಲೆಯಿರುವ ಸಂಸ್ಥೆಗಳಲ್ಲಿಯಾದರೂ, ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕಾಗಿ ಹರಿಜನ ಹಿತ ಚಿಂತಕ ಶ್ರೀ. ಎಚ್. ಸೋಮಪ್ಪ, ಕೋಟೆಬಾಗಿಲು, ಬರ್ ಶಾಲಾ ಕಮಿಟಿ ಅಧ್ಯಕ್ಷ, ಇವರ ವಿನಂತಿಯಿದೆ.

ಅಳಿಯಸಂತಾನ ಸುಧಾರಣಾ ಮಸೂದೆಯ ಸಂಬಂಧಪಟ್ಟ ಕಮಿಟಿಯವರ ಸಂಚಾರ ಕಾರ್ಯಕ್ರಮ

ಅಳಿಯಸಂತಾನ ಮಸೂದೆಯ ಕುರಿತು ಅಭಿಪ್ರಾಯವನ್ನು ಸಂಗ್ರಹಿಸುವರೆ ನೇಮಿಸಲ್ಪಟ್ಟ ಬಂಟರ ಯೂನಿಯನ್ ನಾತನವರ ಸಂಘದ ಕಮಿಟಿಯವರು ಶ್ರೀ. ಎ. ಬಿ. ಶೆಟ್ಟಿ, ಎಮ್. ಎಲ್. ಎ. ಅವರೊಡನೆ ಈ ಕೆಳಗಿನ ಸ್ಥಳಗಳನ್ನು ಸಂದರ್ಶಿಸಲಿರುವರು. ಮಸೂದೆಗೆ ಸಂಬಂಧಪಟ್ಟವರೆಲ್ಲರೂ ಸಹಕರಿಸಬೇಕಾಗಿ ಕಮಿಟಿಯ ಗೌರವ ಕಾರ್ಯದರ್ಶಿ ಶ್ರೀ ಕೆ. ಎಸ್. ಹೆಗ್ಡೆ, ಎಡ್ವೊಕೇಟ್, ಮಂಗಳೂರು, ಅವರ ವಿನಂತಿಯಿದೆ.

ತಾ 28 5-46, 29-5 46, ಉಡುಪಿ. 29-5-46ರಲ್ಲಿ ಉಡುಪಿ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4 ಗಂಟೆಗೆ ಸಾರ್ವಜನಿಕ ಸಭೆ.

ತಾ 30 6 46, 31-5-46, ಕುಂದಾಪುರ. 31-5-46 ಕುಂದಾಪುರ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4 ಗಂಟೆಗೆ ಸಾರ್ವಜನಿಕ ಸಭೆ.

ತಾ 1-6-46, 2-6-46, ಕಾರ್ಕಳ. 2-6-46 ರಲ್ಲಿ ಕಾರ್ಕಳ ಎಸ್. ಆರ್. ಎಸ್. ಹೋಮಿನಲ್ಲಿ ಸಂಜೆ 4 ಗಂಟೆಗೆ ಸಾರ್ವಜನಿಕ ಸಭೆ.

ದಕ್ಷಿಣ ಕನ್ನಡ.

ಏಣಗುಡ್ಡೆ—ತಾ 6-5-46ರಲ್ಲಿ ಶ್ರೀ ದುರ್ಗಾ ಪರಮೇಶ್ವರಿ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ಉಡುಪಿ ರೇಂಜ್ ಶಾಲೆಗಳ ಜೂನಿಯರ್ ಡೆಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ಎಸ್. ಸುಂದರರಾಯರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯ ಅಧ್ಯಾಪಕರಿಂದ ವರದಿ ವಾಚನವೂ, ಶ್ರೀ. ಕೆ ಸದಾಶಿವ ಶೆಟ್ಟರಿಂದ ಸ್ವಸ್ತಿವಚನವೂ, ಅಧ್ಯಕ್ಷ ಹಸ್ತದಿಂದ ಬಹುಮಾನ ವಿತರಣವೂ ನಡೆಯಿತು. ಡ್ರಿಲ್ಲು, ಕೋಲಾಟ ಇತ್ಯಾದಿ ವಿವಿಧ ವಿನೋದಾವಳಿಗಳೂ, ಸಭಿಕರ ಮತ್ತು ಅಧ್ಯಕ್ಷರ ಭಾಷಣ ಕಾರ್ಯಕ್ರಮಗಳೂ ನೆರವೇರಿದವು. ನಂತರ ಶ್ರೀ. ಯಂ. ವಿ. ಹೆಗ್ಡೆ ವಿರಚಿತ "ಭೂಸಭೂಪತಿ ವೀರ" ಎಂಬ ಕೋಲವು, ಶ್ರೀ ವಾಂತಿಯವರಿಂದ ಬರಯಲ್ಪಟ್ಟ "ಮುತ್ತಿನ ನತ್ತು" ಎಂಬ ನಾಟಕವೂ ಶಾಲಾ ಬಾಲಕ ಬಾಲಕಿಯರಿಂದ ಪ್ರೇಕ್ಷಣೀಯವಾಗಿ ಪ್ರದರ್ಶಿಸಲ್ಪಟ್ಟಿತು. ಶಾಲಾ ವ್ಯವಸ್ಥಾಪಕರು ಧನ್ಯವಾದಗಳನ್ನರ್ಪಿಸಿದರು. ಉತ್ಸವಾರಂಭದಲ್ಲಿ ಇನ್ನಂಜೆ ಹೈಸ್ಕೂಲಿನ ಡ್ರಿಲ್ ಅಧ್ಯಾಪಕ ಶ್ರೀ. ವೈ ಶ್ರೀನಿವಾಸ ಭಟ್ಟರವರು ಮಕ್ಕಳಿಗೆ ತಿಂಡಿಪಂಡಿ ಪ್ರೋತ್ಸಾಹಿಸಿದರು.

ಕಾರ್ಕಳ—ಸ್ಥಳೀಯ ಬೇಡ್ಮಿಂಟನ್ ಕಮಿಟಿಯವರ ಸಂಚಾಲಕತ್ವದಲ್ಲಿ ನೆರವೇರಿಸಲ್ಪಟ್ಟ ಬೇಡ್ಮಿಂಟನ್ ಟೂರ್ನಮೆಂಟಿನಲ್ಲಿ ಭಾಗವಹಿಸಿ ಜಯಶೀಲರಾದ ಆಟಗಾರರಿಗೆ ಬಹುಮಾನ ವಿತರಣಮಾಡುವ ಸಮಾರಂಭವು ತಾ. 11-5-46ರಲ್ಲು ಬಂಗಳೂರಿನ ಪ್ರಸಿದ್ಧ ಆಟಗಾರರಲ್ಲೊಬ್ಬರಾದ ಶ್ರೀ. ಗೋಪಾಲ ಅಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಕನ್ನಾನೂರು ಫೈವ್ಸ್ ಮತ್ತು ಕನ್ನಾನೂರು ಡಬ್ಬಲ್ಸ್ ಆಟಗಾರರಿಗೆ ಕ್ರಮವಾಗಿ ರಜತ ಕಪ್ಪುಗಳನ್ನೂ, Snigles ನಲ್ಲಿ ಗೆದ್ದ ಶಂಕರ್ ನಾಯರರವರಿಗೆ ಸುವರ್ಣ ಪದಕವನ್ನೂ, ಫೈವ್ಸ್ ಮತ್ತು ಡಬ್ಬಲ್ಸ್‌ನಲ್ಲಿ ರನ್ನರ್ಸ್ ಅಪ್ ಹೊಂದಿದ ಉಡುಪಿ ಫೈವ್ಸ್ ನೇತಾಜಿ ಡಬ್ಬಲ್ಸ್‌ರವರಿಗೂ ಸಿಂಗಲ್ಸ್‌ನಲ್ಲಿ ರನ್ನರ್ಸ್ ಅಪ್ ಹೊಂದಿದ ಕಾರ್ಕಳ ಸುಂದರ ಶೆಟ್ಟರವರಿಗೂ ಅಧ್ಯಕ್ಷ ಅಯ್ಯಂಗಾರರವರ ಹಸ್ತದಿಂದ ಬಹುಮಾನ ವಿತರಣಮಾಡಿದ ಮೇಲೆ, ಅಧ್ಯಕ್ಷರು, ಶ್ರೀ. ಕೆ. ಆರ್. ಶೆಣೈ ಮೊದಲಾದ ಸಭಿಕರ ಭಾಷಣದೊಂದಿಗೆ ಸಮಾರಂಭವು ಕೊನೆಗೊಂಡಿತು.

ಗುಡ್ಡೆಹಿತ್ಲು ನೆರೆ—1-5-46ರಲ್ಲಿ ಸ್ಥಳೀಯ [illegible] ಬೋರ್ಡಿನ ಸಜೆಂಟ್ ಶ್ರೀ. ಕೆ ಸದಾಶಿವ ಶೆಟ್ಟ ಉಡುಪಿ ಪ್ರಾಂತೀಯ ನರ್ಸರಿ ... ಸಲ್ಪಟ್ಟವರಿಂದ ಆವರನ್ನು ಬೀಳ್ಕೊಳ್ಳುವ ಸಮಾರಂಭವು ಪ್ರಭಾವಾತರ ಪಡಿ ಮಿಂಚಿ...

...ನ್ ಟೇಮಿನವರ ಆಶ್ರಯದಲ್ಲಿ ಶ್ರೀ. H. D. P. ಕೆದ್ಲಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಭಿಕರಲ್ಲಿ ಶ್ರೀ. ಬಿ. ವಿ. ಸೆಟ್ಟಿ, ಶ್ರೀ. B. R. ಜೋಶಿಯವರೂ ಮತ್ತು ಶ್ರೀ M. M. ಭಟ್ಟ, ಶ್ರೀ. ಶೆಟ್ಟಿ ಗುಣಕಥನ ಮಾಡಿದರು. ಅಧ್ಯಕ್ಷರ ಯಥೋಚಿತ ಭಾಷಣವಾದ ಮೇಲೆ ಕಾರ್ಯದರ್ಶಿ ಶ್ರೀ. H. ರಾಜೀವ ಶೆಟ್ಟಿ ಧನ್ಯವಾದ ಮತ್ತು ಲಘೂಪಹಾರದೊಡನೆ ಸಭಾಂತ್ಯವಾಯಿತು.

ಶಂಕರನಾರಾಯಣ—ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿ ಉತ್ಸವವು ತಾ. 30-4-46ರಲ್ಲಿ ಶ್ರೀ ಅಡೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀ. ಎ. ಕೃಷ್ಣರಾಯ ಕೊಡ್ಗಿಯವರು ಉಪಹಾರ ಕೊಟ್ಟವನ್ನು ಏರ್ಪಡಿಸಿದರಲ್ಲದೆ ನಾರಾಯಣ ವಿಲಾಸ ಕಾಫಿ ಕ್ಲಬ್ಬಿನವರು ಆಡುವವರಿಗೆ ಸುಕಗಳಿಗೆ ಹಂಚಿದರು. ಶ್ರೀ. ಎಗ್ರಾಣ ಕೃಷ್ಣರಾಯರು ಭಾಷಣವಾದ ಬಳಿಕ ಮಕ್ಕಳು ವಿವಿಧ ವಿನೋದಗಳನ್ನು ತೋರಿಸಿ ರಾತ್ರಿ 'ಸಿದ್ಧಾರ್ಥ' ಎಂಬ ಸಂಗೀತ ನಾಟಕವನ್ನು ಸಭಿಕರ ಕಣ್ಮನಗಳಿಗೆ ಆನಂದವಾಗುವಂತೆ ಆಡಿ ತೋರಿಸಿದರು. ಶಕ್ತಿಶಾಲಾ ಹಿರೇ ವಿದ್ಯಾರ್ಥಿಗಳ ವಿನಾಚರಣೆಯು ತಹಸಿಲ್ದಾರ್ ಶ್ರೀ. ಬಿ. ಗಣೇಶರಾಯರ ಅಧ್ಯಕ್ಷತೆಯಲ್ಲಿ ತಾ. 1-5-1946 ರಲ್ಲಿ ನಡೆಯಿತು. ಕಾರ್ಯದರ್ಶಿಗಳಾದ ಪಟೇಲ್ ಶ್ರೀ. ನರಸಿಂಹ ಆಚಾರ್ಯರು ಉಪಹಾರ ಕೊಟ್ಟವನ್ನು ಏರ್ಪಡಿಸಿದರು. ಹಿರೇ ವಿದ್ಯಾರ್ಥಿಗಳು ರಾತ್ರಿ 'ಪನ್ನಾದಾಸಿ' ಎಂಬ ಸಂಗೀತ ನಾಟಕವನ್ನು ಚಲೋ ರೀತಿಯಲ್ಲಿ ಆಡಿ ತೋರಿಸಿದರು.

ದ. ಕ. ಜಿಲ್ಲಾ ಮಕ್ಕಳಕೂಟದ ಪ್ರಥಮ ಸಮ್ಮೇಲನವು—ಇದೇ ಮೇತಿಂಗಳ ತಾ. 27-28-29, ಈ ಮೂರು ದಿನಗಳಲ್ಲಿ ಉಡುಪಿಯ ಕಾಡುಬೆಟ್ಟಿನಲ್ಲಿರುವ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಸಭಾಂಗಣದಲ್ಲಿ ಜರಗಲಿದೆ. ಜಿಲ್ಲೆಯ ಎಲ್ಲಾ ಹೈಸ್ಕೂಲು, ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳು "ಮಕ್ಕಳಕೂಟಕ್ಕೆ" ಸೇರಿ ಸಮ್ಮೇಲನದ ಸ್ಪರ್ಧೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ವಿಜ್ಞಾಪನೆ. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಉತ್ತಮ ಬಹುಮಾನಗಳು ಕೊಡಲ್ಪಡುವುವು. ಹೆಸರುಗಳು ಪ್ರಕಟಿಸಲ್ಪಡುವುವು. ಇತರ ತಾಲೂಕುಗಳಿಂದ ಬಂದವರಿಗೆ ಯೋಗ್ಯ ಸ್ಥಳದ ವ್ಯವಸ್ಥೆ ಮಾಡಲಾಗಿರುವುದು. ಚೀಟಿನ ಸ್ಪರ್ಧೆಗಳು: ಉಪನ್ಯಾಸ (ಹಾಸ್ಯಮಯ), ಆಕ್ಷಯ ರೇಶನ್ ಆಗದೆ ಇದ್ದಿದ್ದರೆ ಉಂಟಾಗುತ್ತಿದ್ದ ಅನರ್ಥಗಳು, ಮಹಾತ್ಮಾ ಗಾಂಧೀಜಿಯ ವ್ಯಕ್ತಿತ್ವ. ಎಂಬ ಮೂರು ವಿಷಯಗಳೂ ಭಾಷಣಸ್ಪರ್ಧೆಗೆ. ಶಾಲೆಗಳಲ್ಲಿ ದಂಡನೆಗಳು ಇರುವುದು ಅವಶ್ಯವೇ? ನಿನಗೆ ಹಣ್ಣು ಸಿಕ್ಕಿದರೆ ಹಾಫ್ ಸಿಕ್ಕಿದರೆ ಏನೆಲ್ಲಾ ಮಾಡುವಿ? ನೀನು ಓದಿದ ಒಂದು ಒಳ್ಳೆಯ ಕನ್ನಡ ಪುಸ್ತಕದ ವಿಷಯ ನಿನ್ನ ಅಭಿಪ್ರಾಯ ಎಂಬ ಮೂರು ವಿಷಯಗಳೂ ಇಡಲ್ಪಟ್ಟಿವೆ. ವಾಚನಸ್ಪರ್ಧೆಗೆ: ಕುವೆಂಪು, ಬೆಕ್ಕು ಹಾರುತಿದೆ ನೋಡಿದಿರಾ? (೪ ಪದ್ಯ) ಮನೆ ಮನೆ, ಮುದ್ದು ಮನೆ. ಸೂರ್ಯ ಮೂರು ಕೋಟೆ (8 ಪದ್ಯ)ಗಳು. ಈ ಸ್ಪರ್ಧೆಗಳಲ್ಲಿ ಭಾಗವಹಿಸುವವರು ತಾ. 25-5-46ರ ಒಳಗೆ ಕೂಟದ ಕಾರ್ಯಾಲಯಕ್ಕೆ ತಮ್ಮ ಹೆಸರು ವಿಳಾಸಗಳನ್ನು ಕಳುಹಿಸಬೇಕು, ಎಂದು ಶ್ರೀ-ಬಿ. ಅಂತಯ್ಯ ಶೆಟ್ಟಿ, ಅಧ್ಯಕ್ಷ "ಮಕ್ಕಳಕೂಟ" ಉಡುಪಿ, ಇವರು ತಿಳಿಸುತ್ತಾರೆ.

ಅಜೆಕಾರು—ಆಹಾರಪ್ರಚಾರದ ವಾಹನವು ಇಲ್ಲಿಗೆ ಬಂದಿದ್ದು, ಸ್ಥಳೀಯ, ರೆವಿನ್ಯೂ ಇನ್ಸ್ಪೆಕ್ಟರರಾದ ಶ್ರೀ ಕೆ. ವಾಸುದೇವ ನಾವಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಈಗ ನಮ್ಮ ಮುಂದಿರುವ ಆಹಾರದ ಪ್ರಶ್ನೆ, ಗೋಧಿಯ ಬಳಕೆ ಮತ್ತು ಸಾರ್ವಜನಿಕರ ಕರ್ತವ್ಯದ ಕುರಿತು ಜಿಲ್ಲಾ ಭಾಷಣಕಾರರಾದ ಶ್ರೀ. ನಾರಾಯಣ ಭಟ್ಟರು ಮಂಡಿಸಿ ಮಾತಾಡಿದರು.

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ಅಷ್ಟಬಂಧ ಕಲಶಕ್ಕೆ ತಾ16-4-46ರಿಂದ 4-5-46ರ ವರೇಗೆ ಹಣ ಕೊಟ್ಟವರ ಹೆಸರು

ಕೋಟೆರ ಮನೆ ಮುತ್ತಯ್ಯ ಶೆಟ್ಟಿ ರೂ 5, ನಾಯಕರ ಮನೆ ಗೋವಿಂದ ಶೆಟ್ಟಿ ರೂ 5, ಕಾಳಕೋಟೆದ ಅಂಣಪ್ಪ ಶೆಟ್ಟಿ ರೂ. 10, ಚಪ್ಪರ ಮಕ್ಕಿ ಮಹಾಬಲ ಶೆಟ್ಟಿ ರೂ. 10, ಮುಳ್ಳುಗುಡ್ಡೆ ನಾಗಯ್ಯ ಶೆಟ್ಟರು ರೂ. 10, ಕಡ್ಸಳ್ಳಿ ಕಾಶಿನವಲಿಯವರು ... ಟ್ಟಿ ರೂ. 25, ಹೊಸೂರು ವಿಟ್ಠಲ ಭಟ್ಟರು ರೂ. 15, ಶಿವರಾಮ ಮುಂಜರು ರೂ. 15, ಓಂಕಪ್ಪನ ರಾಮಯ್ಯ ಶೆಟ್ಟಿ ರೂ. 10, ಮಳ್ವಾಡಿ ನಂದ್ಯಪ್ಪ ಶೆಟ್ಟಿ ರೂ. 5, ಚಿತ್ತೂರು ಗ್ರಾಮದ ಚಿಕ್ಕೆ ವಸೂಲಿ ರೂ. 27, ಹಳ್ಳಿ ಕೆಳಮನೆ ಮುತ್ತಯ್ಯ ಶೆಟ್ಟಿ ರೂ. 5, ಹಳ್ಳಿ ನಾಗಪ್ಪ ಶೆಟ್ಟಿ ರೂ. 5, ಮಕ್ಕಿ ಮನೆ ಸುಬ್ಬಯ್ಯ ಶೆಟ್ಟಿ, ರೂ. 5, ಮೂಡಕಟ್ಟೆ ಮನೆ ಹೆರಿಯಂಣ ಶೆಟ್ಟಿ ರೂ. 5. ಸಾಲಗದ್ದೆ ಮೂಕಂಮ್ಮ ಶೆಡ್ತಿ ರೂ. 5 ತ್ರಾಸಿ ಮತ್ತು ಹೊಸಾಡು ಗ್ರಾಮದ ಚಿಕ್ಕೆ ವಸೂಲಿ ಜುಮಲಾ ರೂ. 17, ಮುಳ್ಳುಗುಡ್ಡೆ ಗೋವಿಂದ ಶೆಟ್ಟಿ, ರೂ. 5, ಕಣ್ಣೆ ಸಂಕಪ್ಪ ಶೆಟ್ಟಿ ರೂ 5, ಮಕ್ಕಿ ಮನೆ ಕಾಳಪ್ಪ ಶೆಟ್ಟಿ ರೂ 5, ಕಲ್ಲಂಗುಡ್ಡೆ ಮಂಜಯ್ಯ ಶೆಟ್ಟಿ ರೂ. 5 ತ್ರಾಸಿ ಪಟೇಲ್ ಸುಬ್ಬಂಣ ಶೆಟ್ಟಿ ರೂ 5 ಕೊಪ್ಪರಿಗೆ ನಾಗಯ್ಯ ಶೆಟ್ಟಿ ರೂ 5 ... ಡಾಡಿ ಮಂಜಯ್ಯ ಶೆಟ್ಟಿ ರೂ. 5, ಗುಡ್ಡಂವ್ವಾಡಿ ಸುಬ್ಬಂಣ ಶೆಟ್ಟಿ ರೂ. 5. ಬಿಲ್ಲವರು ಸಾರಾಶಿವರಾಯ ಶ... ರೂ 25, ಹೋಲಿ ಪಟ್ಟಿ ಕೇಶಪ್ಪ ಶೆಟ್ಟಿ ರೂ 5, ಯಳ್ಳೂರು ಕಾಗಯ್ಯ ಶೆಟ್ಟಿ ರೂ. 5, ಹಕ್ಲಾಡಿ ಗ್ರಾಮದ ಚಿಕ್ಕೆ ವಸೂಲಿ ಜುಮ್ಲಾ ರೂ 23, ಅಂಗಡಿ ಸುಬ್ಬಯ್ಯ ರೂ. 5. ನಾಜಾಡಿ ಲಿಂಗಯ್ಯ ಶೆಟ್ಟಿ ರೂ. 5. ಇನ್ನಿಕರ ಚಿಕ್ಕೆ ವಸೂಲಾತು ರೂ. 5, ಚಾರಂಜಾಡಿ ಸುಬ್ಬಯ್ಯ ಶೆಟ್ಟಿ ರೂ. 25, ಅನುಲಾಡಿ ಶ್ರೀಧರ ಜ್ಯನು ಭಾಗರು ರೂ. 5, ಕುಕ್ಕಡೆ ವಾರಪ್ಪ ಶೆಟ್ಟಿ, ರೂ. 5, ಕೊಳ್ಳನ ಮಹದ್ಯಯ್ಯ ಶೆಟ್ಟಿ ರೂ. 5. ಜನ್ನಾಲು ಕೊಗ್ಗ ಜ್ಯಾನುಭಾಗರು ರೂ 5, ಜನ್ನಾಲು ಕುಕ್ಕುದೆ ಗ್ರಾಮದ ಚಿಕ್ಕೆ ವಸೂಲು ರೂ. 17, ಇಡೂರು ಪಟೇಲ್ ಸುಬ್ಬಂಣ ಶೆಟ್ಟಿ ರೂ. 25. ಅವಾರು ಲಕ್ಷ್ಮೀನಾರಾಯಣ ಜ್ಯೋಶಿರು ರೂ. 15, ಗುತ್ತಿ ಮನೆ ಗೋವಿಂದ ಶೆಟ್ಟಿ ರೂ. 5. ಹಳ್ಳಿ ನಾಗಪ್ಪಯ್ಯ ಶೆಟ್ಟಿ ರೂ. 5, ವಳ್ಳಿ ವೆಂಕಟಯ್ಯ ಶೆಟ್ಟಿ ರೂ. 5, ಕೆರೆಕೊಡು ಗೋವಿಂದ ಶೆಟ್ಟಿ ರೂ. 5, ನಾಜಾಡಿ ಹೆರಿಯಂಣ ಶೆಟ್ಟಿ ರೂ. 5, ಆವಾರು ಗ್ರಾಮದ ಚಿಕ್ಕೆ ವಸೂಲಿ ರೂ. 7, ಹಕ್ಲೂರು ಗ್ರಾಮದ ಚಿಕ್ಕೆ ವಸೂಲಿ ರೂ 4 -ಜುಮಲಾ ರೂ. 435.

C. H. Shetty, L. O.

ANNOUNCEMENT.

Your presence is cordially welcome for the opening ceremony of the

SHIRVA HINDU HIGH SCHOOL

on Sunday, the 2nd June 1946 at 10-15 A. M.

K. Muddu Shetty, President.

With best compliments from the Executive Council of the B. N. Vidyavardhaka Sangha.

ಪ್ರಕಟಣೆ.

ತಾ. 2-6-1946ನೇ ಆದಿತ್ಯವಾರ ಪೂರ್ವಾಹ್ನ 10-45 ಗಂಟೆಗೆ

ಶಿರ್ವ ಹಿಂದೂ ಹೈಸ್ಕೂಲಿನ

ಪ್ರಾರಂಭೋತ್ಸವವು ಜರಗಲಿರುವುದು.

ವಿದ್ಯಾಭಿಮಾನಿಗಳೆಲ್ಲರಿಗೂ ಸುಸ್ವಾಗತ

ಕೆ. ಮುದ್ದು ಶೆಟ್ಟಿ, ಪ್ರೆಸಿಡೆಂಟ್

ಬಿ. ಎನ್. ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಯ ವತಿಯಿಂದ ಅಭಿನಂದನೆಗಳು.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಳುಕು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿಗೆ ೩ ರೂ   ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.



ಕುಟುಂಬದೊಳಗಿನ ಚಿಲ್ಲರೆ ಬೇನೆ

ನಿವಾರಣೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮಾತ್ರೆ ... ಸ್ತ್ರೀಯರ ಕಡೆಗೆ ಪ್ರತಿ ... ಮತ್ತು ... ಜನೇರಿಯನ್ ಜೀವನ ಮಿಕ್ಸ್ಚರ್ ... ಸೇವಿಸುವರು ...

... ಜನೇರಿಯನ್ ... ಮುದ್ರಿತ ...

ನಮ್ಮ ಜಿಲ್ಲೆಯ ಭಾವೀ ಪ್ರಗತಿಯ ಬಗೆ ಹೇಗೆ?

ಒಕ್ಕಲುಗಳ ಕಡೆಗೆ ದಯೆ ಇರಬೇಕು, ಶ್ರಮಜೀವಿಗಳಿಗೆ ತಮ್ಮದಾದ ಸ್ಥಳಬೇಕು, ನಿರುದ್ಯೋಗಿಗಳಿಗೆ ಕೆಲಸ ಕಲ್ಪಿಸಿ ಕೊಡಬೇಕು, ಒಕ್ಕಲುತನ ಮಸೂದೆ ಜ್ಯಾರಿಗೆ ಬರಬೇಕು.

ಲೇ:— ಶ್ರೀ ಎಂ. ಬಿ. ನರಸಪ್ಪ, ಪುತ್ತೂರು.

ಶ್ರೀಮಂತಿಕೆಯ ಕಾಲದಲ್ಲಿ, ಅಂದರೆ ಸುಮಾರು ನಾಲ್ಕು ವರ್ಷಗಳ ಕೆಳಗೆ ಹಾಗೂ ಈಗಲೂ ಇದ್ದವರು ಇಲ್ಲದವರು (Haves and Havenots) ಎಂಬ ಭೇದವನ್ನು ಇಟ್ಟಿದೆ. ಅನುಕೂಲ ಇದ್ದವರಿಗೆ ಮಾತ್ರ ಈಗಲೂ ನವೀನ ರೀತಿಯ ವಿದ್ಯಾಭ್ಯಾಸ, ಉಡುಗೆ ತೊಡಿಗೆ, ದೊಡ್ಡದೊಡ್ಡ ಇಮಾರತುಗಳಂತಹ ಕಟ್ಟಡಗಳ ಸೌಕರ್ಯ, ಆಡಂಬರತನದ ಆಹಾರ ತಿನಿಸುಗಳು, ರೇಡಿಯೋ, ಗ್ರಾಮಫೋನು, ಟೆಲಿವಿಜನ್, ಬಂಗಾರ, ವಜ್ರ, ವೈಡೂರ್ಯ, ತಿರುಗಾಡಲು ನವೀನ ತರದ ಕಾರು ವಾಹನಗಳು ಇವುಗಳೂ, ಅಧಿಕಾರ, ಹಣದ ದರ್ಪ, ಮೊದಲಾದ ಸ್ವಯಂ ಪ್ರಭುತ್ವವೂ ಇರುತ್ತವೆ. ಅಂತೆಯೇ ಹಿಂದೆ ಇದ್ದ ಬಡತನ ... ಗಾಢತನ ಪಾಲಿಗೆ ... ಅದೇ ಮುರುಕು ಗುಡಿಸಲು, ... ಬಟ್ಟೆಗಳು, ... ಬಡತನ, ... ವಿದ್ಯಾವಿಹೀನತೆಯ ಜೀವನ, ... ಬೆಳಗ್ಗಿನಿಂದ ರಾತ್ರಿ ವರೆಗಿನ ದುಡಿತ, ಮೇಲಾಗಿ ... ಸಟ್ಟುಗಳ ...

ಕಂಟ್ರೋಲಿನ ನಿಯಮಿತ ಸಂಗ್ರಹದ ವಸ್ತ್ರ, ಆಹಾರ ಸಾಮಗ್ರಿಗಳು ಬಂದ ಸಮಯಕ್ಕೆ ದೊರಕುವುದು ಶ್ರೀಮಂತರಿಗೆ, ಸೆಂಟಿಂಟ್ಸರಿಗೆ, ಅಧಿಕಾರಿಗಳಿಗೆ ಅವರ ... ಮಿತ್ರರಿಗೆ. ಮುಗ್ಗದ ವಸ್ತ್ರ, ಹೆಚ್ಚು ಬೆಲೆಯ ... ವಸ್ತ್ರ, ಹುಳುಕು ಬಿದ್ದ ಇನ್ನಿತರ ವಸ್ತು ಸಂಗ್ರಹಗಳು ಇವು ದುಬಾರಿ ಬೆಲೆಗೆ ಅದು ಕೂಡಾ ಸಾಕಷ್ಟಿಲ್ಲದ್ದು ಸಾಮಾನ್ಯರ ಪಾಲಿಗೆ. ಯಾವ ರೀತಿಯಲ್ಲಿಯೂ ಬಡವನು ಮುನ್ನ ಬಡವನಾಗಿಯೇ ಇರುವನು. ಶ್ರೀಮಂತರು ಯಾವ ದೂಸದಲ್ಲಿಯೂ, ... , ಬ್ಯಾಂಕುಗಳಲ್ಲಿ, ಅನೇಕ ಲಿಮಿಟೆಡ್ ಕಂಪನಿಗಳ ಪಾಲುಗಳಲ್ಲಿ ತಮ್ಮ ಸಂಪತ್ತನ್ನು ಬೆಳೆಸುತ್ತಲೇ ಇರುವರು. ಸುಧಾರಣೆಯೂ, ಬದಲಾವಣೆಯೂ ಆಗುವುದೇ ಇಲ್ಲ. ಬಡಬಗ್ಗರ, ಕಟವಾರಿತನ, ಅಧಿಕಾರ ದರ್ಪ ಇನ್ನು ಒಂದೇ ಸಮನೆ ಸಾಗುತ್ತಲೇ ಇವೆ. ಇವಕ್ಕೆ ಅಂತ್ಯ ಕಾಲ ಬರುತ್ತದೆ, ಬರಲಿದೆ, ಬಂದಿದೆ ಎಂದು ಕತ್ತೆತ್ತಿ ನೋಡಿ, ನೋಡಿ ... ಹೋಗಿದೆ ಬಡ ಸಮಾಜ. ಇದು ಮುಂದಕ್ಕೂ ಇದೇ ರೀತಿಯಲ್ಲಿಯೇ ಇರಬೇಕೆಂಬ ದೈವ ಸಂಕಲ್ಪವೆ? ಯಾ ಸ್ವಾರ್ಥಿಗಳ ಮಹತ್ವಾಕಾಂಕ್ಷೆಯ ಪರಮಾವಧಿಯೇ?

ಒಕ್ಕಲುತನ ಮಸೂದೆ ಬರಬೇಕು

ಈ ವರೆಗಿನ ಜಮೀನುಗಳ ವಿತರಣೆಯು ... ದೃಷ್ಟಿಯಲ್ಲಿತ್ತು. ಅಂಗ್ಲಾಳ್ವಿಕೆಯು ಅದಕ್ಕೆ ಪ್ರೋತ್ಸಾಹ ಕೊಡುತ್ತಿತ್ತು. ಕಾರಣ, ಒಕ್ಕಲಿಗೇ ವ್ಯಾಪಾರಕ್ಕೆ ಬಂದಿದ್ದ ಬ್ರಿಟಿಷರು ಪ್ರಜಾಪ್ರಭುತ್ವಕ್ಕೆ ಎಡೆ ಕೊಡಲಿಲ್ಲ. ... ಅಳಿಕೊಂಡು ನ್ಯಾಯವನ್ನು ... ದೇ ಸವನೆ ... ವರ್ಗ ಸಂಘರ್ಷ ಆಗುತ್ತದೆ ಎಂಬುದನ್ನು ಅವರು ತಿಳಿಯಲಿಲ್ಲ. ಆದರೆ ಕಾಲ ಚಕ್ರವು ಬದಲಾಗಬೇಕಷ್ಟೆ. ಅಂತೆಯೇ ಈಗಿನ ಶ್ರಮ ಜೀವಿಗಳ ... ಬರಲಿರುವ ಕಾಲವೆಂದು ... ವಿಜಯದಿಂದ ಅವರು ತಿಳಿದುಕೊಂಡರು. ಅದುವರೆಂದಲೇ ... ತಮ್ಮ ಒಕ್ಕಲಿ ವ್ಯಾಪಾರವನ್ನು ಸಂಸ್ಥಾನಕ್ಕೆ ತಿರುಗಿಸಿರುವರು. ಅದನ್ನು ನಾವು ತಿಳಿದಿದ್ದೇವೆ. ... ನಮ್ಮ ... ದಿನ ಕರ್ತವ್ಯಕ್ಕಾಗಿ ಸಿದ್ಧರಾಗಕೂಡದೇಕೆ?

ಜಮೀನುಗಳಲ್ಲಿ ಅನೇಕವುಗಳು ನೋಟ ... ಹಣದ ... ಮೇಲಾಗಿ ... ದಿಂದ ಹೊಂದಿಕೊಂಡು ಈ ವರೆಗೆ ... ಯಾರ ಪಾಲಿಗೆ ಜಮೀನುಗಳು ಸೇರಬೇಕಿತ್ತೋ ಅವರಲ್ಲಿ ಈ ... ಜಮೀನುಗಳಿರುವುದಿಲ್ಲ. ... ಅವರಲ್ಲಿ ಯಾರು ಸೇಟಿಗ ... ಮಾಲೀಗ ... ಗಳಲ್ಲಿದ್ದುಕೊಂಡು ... ಪಾಲನೆ ಮಾಡುತ್ತಾರೋ ಅವರುಗಳ ... ಜಮೀನುಗಳಿವೆ. ಭೂಮಿಗೆ ... ದುಡಿಯುವವರು ಅದರ ಭಾಗವೇ ಆಗಿರುತ್ತಾರೆ. ಅದು ಈಗ ಅವರ ಪಾಲಿಗೆ ಸೇರಲೇ ಬೇಕಾದ ಸಂದರ್ಭ ಬಂದಿದೆ. ಅದು ಸೇರುವುದು ಎಲ್ಲರ ಹಿತ ದೃಷ್ಟಿಯಲ್ಲೂ ಅಗತ್ಯವಿದೆ. ಒಕ್ಕಲುಗಳು ಈ ವರೆಗೆ ಬೇಸಾಯ ಮಾಡಿ ಭತ್ತ ಬೆಳೆಸಿ ತನ್ನವ, ವರ್ಗದಾರರ ಜೀವನಕ್ಕೆ ಒದಗಿಸಿ ಕೊಡುತ್ತಿದ್ದರು, ಹಣದ ರೂಪದಲ್ಲಿ ಗೇಣಿ ಸಂದಾಯ ಮಾಡುತ್ತಿದ್ದರು. ಆದರೆ ಈಗಿನ ಪರಿಸ್ಥಿತಿಯಲ್ಲಿ ಹಾಗೆ ಇಲ್ಲ. ಗೇಣಿಯನ್ನು ಅಕ್ಕಿ ರೂಪದಲ್ಲಿ ಪಡೆಕೊಳ್ಳುತ್ತಿರುವುದರಿಂದ ಒಕ್ಕಲುಗಳು ಗೇಣಿ ಸಂದಾಯ ಮಾಡಿ ವರ್ಷದ ಹೆಚ್ಚಿನ ಸಮಯದ ಜೀವನಕ್ಕಾಗಿ ಪರಾವಲಂಬತನ ಹೊಂದಬೇಕು. ಅಂದರೆ ಬೇರೆ ಕಡೆ ಬೆವರಿಳಿಸಿ ದುಡಿದು ಇಲ್ಲವೆ ಸಾಲಗಳನ್ನು ಪತ್ತಿ ಅಲ್ಲಿ ದುಡಿಯಬೇಕು. ತನ್ನದೆಂಬ ಸ್ಥಳ ಇಲ್ಲದೆ ಕಷ್ಟ ಪಡುತ್ತಿರುವರು. ಮೇಲಾಗಿ ಈಗಿನ ಸರಕಾರವು ಒಕ್ಕಲುಗಳ ಗೇಣಿಯನ್ನು ತಪ್ಪದೆ ಕೊಡಿಸುವ ಪದ್ಧತಿಯನ್ನು ತೆಗೆದುಕೊಂಡಿದೆ.

ಒಳ್ಳೇ ಬೆಳೆ ಬರುವ ನಂಜ ಸ್ಥಳದ ಒಂದು ಎಕ್ರೆ ಭೂಮಿಗೆ ವರ್ಗದಾರನು ಇಲ್ಲವೇ ಜಮೀನ್ದಾರನು ಸರಕಾರಕ್ಕೆ ರೂ 7-8-0ನ್ನು ತೀರ್ವೆ ಕೊಡುತ್ತಾನೆ. ಆದರೆ ಒಕ್ಕಲು ಅವನಿಗೆ 12 ಮುಡಿ ಒಳ್ಳೇ ಅಕ್ಕಿಯನ್ನು ಕೊಡಬೇಕು. ಇನ್ನು ಸೊಪ್ಪು, ಕಾಡಿ, ಪಟ್ಟ, ಚಾಕರಿ ಇನ್ನು ಬೇರೆಯೇ ಸಲಬೇಕು. ಹೀಗಾದರೆ ಒಕ್ಕಲುಗಳ ರಕ್ತವನ್ನೇ ಹೀರಿದಂತಾಗಲಿಲ್ಲವೇ! ಇದರಿಂದಾಗಿ ಜಮೀನ್ದಾರನ, ಇಲ್ಲವೇ ವರ್ಗದಾರರ ... ಹೋಗಿ ಮಾಳಿಗೆ ಆಗುತ್ತದೆ. ಮೆರೆದಾಡುತ್ತಾನೆ, ಮೇಲೆ ಸೂಚಿಸಿದ ಎಲ್ಲಾ ಸುಖವನ್ನು ಅನುಭವಿಸುತ್ತಾನೆ. ದುಡಿಯುವವನ ಪಾಲಿಗೆ ಕಷ್ಟ-ತೊಂದರೆಗಳ ರಾಶಿ. ಇವುಗಳು ಮುಂದಕ್ಕೆ ತಪ್ಪಬೇಕು. ಜಮೀನುಗಳು ಒಕ್ಕಲುಗಳದ್ದಾಗಬೇಕು. ಧನಿಯು ತೀರ್ವೆ ಕೊಡುವ ದುಬಾರಿ ... ವನ್ನು ಮಾತ್ರ ಇಲ್ಲವೇ ಅದಕ್ಕಾಗುವ ಅಕ್ಕಿಯನ್ನು ಮಾತ್ರ ... ಸುವಂತಾಗಬೇಕು. ... ಗಾದರೆ ದುಡಿಯುವವನು ತನ್ನ ಜೀವಿತದಲ್ಲಿ ಸುಧಾರಣೆ ಹೊಂದಬಹುದು. ಅಗತನ್ನು ಸ್ವಾಧೀನದಲ್ಲಿದ್ದ ಸ್ಥಳಗಳನ್ನು ಕೃಷಿ ವಿಧಾನಗಳಿಂದ ಅಭಿವೃದ್ಧಿಪಡಿಸಿ, ಜೀವನಾವಶ್ಯಕ ವಸ್ತುಗಳನ್ನು ವಿಶೇಷವಾಗಿ ಬೆಳೆಸಲು ಸಮರ್ಥರಾಗುವರು. ತನ್ನದೆಂಬ ಅಭಿಮಾನ ಬರುತ್ತದೆ, ಮೇಲಾಗಿ ಘಾಟಿ ಹತ್ತುವ ಪ್ರಸಂಗನಾಗಲಿ, ಇನ್ನಿತರ ದುರ್ದಶೆಗಳಿಗೆ ಪ್ರವೇಶಿಸುವ ಸಂದರ್ಭಗಳಾಗಲೀ ಬರಲಾರವು. ಇದರಿಂದ ವರ್ಗದಾರರಿಗಾಗಲಿ, ಜಮೀನ್ದಾರರಿಗಾಗಲೀ ಒಳಿತೇ ಆಗುವುದು. ಒಕ್ಕಲುಗಳು ಸುಖ ಹೊಂದಿ ದೇಹ ದಾರ್ಢ್ಯದಿಂದ ಇನ್ನಷ್ಟು ದುಡಿತ ಹೆಚ್ಚಿಸುವ ಸಂದರ್ಭವೂ ಬರುತ್ತದೆ. ತನಗೆ ಬೇಕಾದ ಉಪಯುಕ್ತ ವಸ್ತುಗಳನ್ನು ನಿಯಮಿತದರ ಕೊಟ್ಟಾದರೂ ಪಡೆಕೊಳ್ಳುವ ಸಂದರ್ಭ ಬರುತ್ತದೆ. ಅದರೊಂದಿಗೆ ಪೋಷಕರ ಶಕ್ತಿ ಗುಣಗಳೂ ನ್ಯಾಯವಾಗಿ ಧನಿಯು ಶಿಷ್ಟ ಸಾಂಪ್ರದಾಯಿಯಾಗುತ್ತಾನೆ.

ಕೆಲಸ ಕಲ್ಪಿಸಿ ಕೊಡಬೇಕು

ನಿರುದ್ಯೋಗಿಗಳು ನಮ್ಮ ಜಿಲ್ಲೆಯಲ್ಲಿ (ಇನ್ನಿತರ ಕಡೆಗಳಂತೆ) ಬೇಕಷ್ಟು ಇದ್ದಾರೆ. ಹಲವಾರು ಜನರು ಯುದ್ಧಕ್ಕೆ ತೆರಳಿದವರೂ ಬರಲಿರುವರು. ವಿವಿಧ ಸಲಕರಣೆಗಳ ಪರಿಜ್ಞಾನವೂ ಅವರಲ್ಲಿರಬಹುದು. ಬಂಜರು ಬಿದ್ದಿರುವ ಸ್ಥಳಗಳೂ, ಅವನ್ನು ಉಪಯೋಗಿಸದೆ ಪರಜಿಲ್ಲೆಗೆ ಹೋಗಿರುವ ದುಡಿಯುವವರೂ ಬೇಕಷ್ಟಿರುವರು. ಅವರಿಗೆ ಬೇಕಾದ ಭರವಸೆ, ಆಹಾರ ಬಟ್ಟೆ ಒದಗಿಸುವ ವಿಧಾನ, ಕ್ರಮಪ್ರಕಾರದ ದುಡಿತ ತೆಗೆದುಕೊಳ್ಳುವ ವ್ಯವಸ್ಥೆ ಇವುಗಳು ನಡೆದರೆ ಉತ್ಪಾದನೆ ಕೊರತೆ ಎಲ್ಲುಂಟು? ಹೇಳ ಹೆಸರಿಲ್ಲದೆ ಮಾಯವಾಗಬಹುದು. ಜಿಲ್ಲೆಯಲ್ಲಿ ಜಿಲ್ಲೆಯವರ ಮೇಲ್ಮೆಗಾಗಿ ಬೇಕಾದ ಹಣ ಸಂಗ್ರಹವೂ ಇದೆ. ಬೇಕಾದ ಸಲಕರಣೆಗಳೂ ಇವೆ. ಆದರೆ ಸರಿಯಾದ ರೀತಿಯಲ್ಲಿ ಅದು ವಿನಿಯೋಗ ಆಗಬೇಕು.

ಅಳಿಯಸಂತಾನದ ವಿಧಾನ ಬದಲಾಗಬೇಕು

ಆಹಾರ ಸಮಸ್ಯೆಯ ದೃಷ್ಟಿಯಲ್ಲಿ ಅವಲೋಕಿಸಿದರೆ ಅಳಿಯಸಂತಾನ ಆಚರಿಸುವವರ ಆಸ್ತಿಗಳು ಅನೇಕ ರೀತಿಯಲ್ಲಿ ಅವ್ಯವಸ್ಥೆಯಲ್ಲಿದ್ದು ವ್ಯವಸಾಯ ... ಲಕ್ಷ್ಯ ಇಲ್ಲದೆ. ತಮ್ಮದಾದ ಸ್ವಂತತೆ ಇಲ್ಲದೆ ... ಬಂದು ... ಅತ್ಯಂತ ... ದೇಹದಾರ್ಢ್ಯವನ್ನು ಕಳಕೊಂಡಿರುವರು, ಆಡಂಬರದ ಜೀವನಕ್ಕಾಗಿ ಒಂಬಂತೆ ಹಳ್ಳಿಗಳನ್ನು ಬಿಟ್ಟು ಪೇಟೆಗಳನ್ನು ಸೇರುವರು.

ಯಜಮಾನಿಕೆಯು ಸ್ವಯಂಪ್ರಭುತ್ವದಂತಿರುವುದರಿಂದ ಅಮುಷ್ಯನ ಖರ್ಚಿಗಾಗಿ ಒಕ್ಕಲುಗಳು ಗೇಣಿರೂಪದಲ್ಲಿ ಕೊಟ್ಟೇ ಕೊಡುವುದರಿಂದ ಆಸ್ತಿಯನ್ನು ವೃದ್ಧಿಪಡಿಸುವ ಗೋಜಿಗೆ ಯಜಮಾನನು ಹೋಗುವುದಿಲ್ಲ. ಮೇಲಾಗಿ ಮಹತ್ವಾಕಾಂಕ್ಷೆಯಿಂದ ಆಸ್ತಿಗಳನ್ನು ಕೂಡಾ ಹಾಗುತ್ತಾರೆಯೇ ಹೊರತು ಇದ್ದುದನ್ನು ಹಸನಾಗಿ ಮಾಡಿ ಆ ಮೂಲಕ ಹುಟ್ಟುವಳಿಯನ್ನು ಜಾಸ್ತಿ ಮಾಡಲು ಹೋಗುವುದಿಲ್ಲ. ಕಾರಣ ತನ್ನ ನಂತರ ಆದರ ಫಲವು ತನ್ನ ಮಕ್ಕಳಿಗೆ ದೊರಕುವುದಿಲ್ಲವೆಂಬುದೇ ಆಗಿದೆ. ತನಗೆ ಮತ್ತು ಮಕ್ಕಳಿಗಾಗಿ ಹೆಚ್ಚಿನ ಆಸ್ತಿಗಳು ಮಾತ್ರ ಅವರಿಗೆ ಆಗುತ್ತವೆ ಅದರ ಹುಟ್ಟುವಳಿ ಮಾತ್ರ ಶೂನ್ಯ.

ಉದಾಹರಣೆಗಾಗಿ ಒಬ್ಬ ಕ್ರೈಸ್ತನು ತನ್ನ ಸ್ವಂತದ್ದಾದ ಒಂದು ಎಕ್ರೆ ಸ್ಥಳದಲ್ಲಿ ವರ್ಷವಿಡೀ ದುಡಿದು ಬೇಕಾದ ಕೃಷಿ, ವ್ಯವಸಾಯಗಳನ್ನು ನಾಜೂಕುತನದಲ್ಲಿ ಮಾಡಿ ವರ್ಷಂಪ್ರತಿ ರೂ 500/ ಕ್ಕೂ ಮಿಕ್ಕಿದ ಹುಟ್ಟುವಳಿ ಗಳಿಸುತ್ತಾನೆ. ಮಂದಿಗಳಿಗೆ ಬೇಕಾದ ಜೀವನಾವಶ್ಯಕ ವಸ್ತುಗಳನ್ನು ಬೆಳಸಿ ಯೋಗ್ಯ ಹಣವನ್ನು ಗಳಿಸಿ ಆ ಮೂಲಕ ಮಂದಿಗಳಿಗೂ, ತನಗೂ ಸುಖವನ್ನುಂಟುಮಾಡುತ್ತಾನೆ. ಮೂರುನಾಲ್ಕು ವರ್ಷಗಳಲ್ಲೇ ಹಂಚಿನ ಹಾಗೂ ಸಿಮೆಂಟುಹಾಕಿದ ಚೊಕ್ಕದಾದ ಸಣ್ಣ ಮನೆಯನ್ನು ಕಟ್ಟಿಸಿಕೊಂಡು ಮಕ್ಕಳು ಮರಿಗಳೊಡನೆ ಸಂತೋಷ ಪಡುತ್ತಿರುತ್ತಾನೆ. ಎಕ್ರೆ ಸ್ಥಳವು ಊನಾಗಲೂ, ಪಚ್ಚೆಪೈರುಗಳಿಂದ ಶೋಭಾಯಮಾನವಾಗಿ ತೋರುತ್ತಿರುತ್ತದೆ. ಹಣ್ಣು ಹಂಪಲುಗಳು, ಕಾಯಿಪಲ್ಯ, ಗೆಡ್ಡೆಗೆಣಸು, ಹೂವು, ಪತ್ರೆ ಇವನ್ನೆಲ್ಲಾ ಬೆಳಸಿ ಆಹಾರ ಬಳವಣಿಗೆಗೆ ಜಾಸ್ತಿ ಮಾಡುತ್ತಾನೆ.

ಅಳಿಯ ಸಂತಾನದವನೊಬ್ಬನಲ್ಲಿರುವ ಒಂದು ಎಕ್ರೆ ಭೂಮಿಯಲ್ಲಿ ವರ್ಷಕ್ಕೆ ರೂ 50 ರಷ್ಟಾದರೂ ಪ್ರಯೋಜನ ದೊರಕುವುದಿಲ್ಲ. ಒಂದು ಮುಡಿ ಬೀಜ ಬಿತ್ತಿ 6 ಮುಡಿ ಭತ್ತ ದೊರಕಿಸಿಕೊಳ್ಳುವುದೇ ಪ್ರಯಾಸವಾಗಿದೆ. ತನ್ನ ಖರ್ಚಿಗೆ, ಕೋರ್ಟು ವ್ಯವಹಾರದ ಖರ್ಚಿಗೆ ವಕೀಲರುಗಳಿಗೆ ಕೊಡಲು ಒಕ್ಕಲುಗಳನ್ನು ಶೋಷಣೆ ಮಾಡುತ್ತಾನೆ. ಕುಟುಂಬಕ್ಕೆ ಕೊಡಬೇಕಾದುದನ್ನು ಕೊಡುವುದಿಲ್ಲ. ಮನೆ ಕಡೆ ಗಮನ ಕೊಡದೆ ಬೇಸಾಯ ಮಾಡುವುದನ್ನು ನಿಲ್ಲಿಸಿದ್ದೂ ಉಂಟು. ಮನೆಯ ಮಾಳಿಗೆ ... ಯನ್ನು ವರ್ಷಕ್ಕೊಂದಾವರ್ತಿ ನೋಡಿದ್ದೂ ಇಲ್ಲದಿರಬಹುದು. ಹೀಗೆ 50, 100, 1000 ಮುಡಿ ಆಸ್ತಿವಂತರಿರಬಹುದು. ಮನೆಗೆ ನೆಂಟರು ಬಂದರೆ ಒಕ್ಕಲುಗಳ ಮನೆ ಅಂಗಳಕ್ಕೆ ಹೋಗಿ ಕಾಯಿಪಲ್ಯ ತರಬೇಕು ಹಣ್ಣು ಹಂಪಲನ್ನು ಕ್ರಯಕ್ಕೆ ಪಡಕೊಳ್ಳಬೇಕು. ಈ ರೀತಿಯ ಅವ್ಯವಸ್ಥೆ ಇರುವ ಅಳಿಯ ಸಂತಾನ ಆಚರಿಸುವವರ ಸ್ಥಿತಿಯು ಶೋಚನೀಯವಾಗಿದೆ.

ಈ ರೀತಿಯ ಒಂದು ವಿಧಾನವು ನಮ್ಮಲ್ಲಿಗೆ ಅಂಟಿಕೊಂಡಿರುವ ಒಂದು ಸೂತಕವೆಂದು ಹೇಳಿದರೆ ಅದು ತಪ್ಪಾಗಲಾರದು. ಹಲವು ಸೂಕ್ತ ಕುಟುಂಬಗಳೂ, ಸೂಕ್ತ ಯಜಮಾನರುಗಳೂ ಬೆರಳೆಣಿಕೆ ತೋರಿಸುವಷ್ಟುಗಳು ಅಲ್ಲಲ್ಲಿ ಒಂದೊಂದು ಇರಬಹುದು ಆದರೆ ನೇಕಡಾ 90 ಅವ್ಯವಸ್ಥೆಯಿಂದ ತುಂಬಿದವುಗಳೆಂದು ಹೇಳಬಹುದು.

ವಿದ್ಯಾವಿಹೀನರಾದರೂ ಅಳಿಯ ಸಂತಾನ ಆಚರಿಸುವವರಲ್ಲಿ ದೇಹ ಶಕ್ತಿ ಇದೆ. ಇದರಿಂದ ದುಡಿತವು ಜಾಸ್ತಿಯಾಗುವುದು. ಅದ ... ದುಡಿತದ ಕೃತವೇ ಬಂಡವಾಳಗಾರರ ಸಂಪತ್ತು ಎಂಬುದನ್ನು ಒಪ್ಪಬೇಕಾಗಿದೆ.

ಇಂದು ಹರಿಜನರನ್ನು ಕಳಕೊಂಡ ಅಧೋಗತಿಯು ಹಿಂದೂ ಸಮಾಜದ ಶಕ್ತಿಯನ್ನು ಕುಂದಿಸಿದೆ. ಹರಿಜನ ಸಮಸ್ಯೆಯೂ ಬಗೆಹರಿಯಲೇಬೇಕು ಎಂಬುದು ನಿರ್ವಿವಾದ. ಅದರಂತೆಯೇ ಅಳಿಯ ಸಂತಾನ ಆಚರಿಸುವವರು ಈ ವರೆಗೆ ಪಡೆದ ಅಧೋಗತಿ ಸಾಕು. ಅವರನ್ನು ಹತ್ತಿರಕ್ಕೆ ತೆಗೆದುಕೊಂಡು ಅವರನ್ನು ಪ್ರಗತಿಗೆ ತರುವಂಥದ್ದು, ಅವರನ್ನು ಮಕ್ಕಳು ಸಂತಾನದ ಸುಖದ ದಾರಿಗೆ ತರುವಂಥದ್ದು ಶ್ರೇಷ್ಠರೆಂದೆನಿಸಿದವರ ಕರ್ತವ್ಯವಾಗಿದೆ. ಅಂತಹ ಅತ್ಯಗತ್ಯದ ಪರಿಸ್ಥಿತಿಯು ನಮ್ಮ ಮುಂದಿದೆ. ಆದುದರಿಂದ ಆ ಬಗ್ಗೆ ಬೇಗನೇ ಕರ್ತವ್ಯವಾಗಬೇಕಾಗಿದೆ. ಮೂಲಕವೇ ಜಿಲ್ಲೆಯ ಪ್ರಗತಿ ಹೊಂದಲಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಟನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ಆರಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ... ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

(೩ನೇ ಪುಟದಿಂದ ಮುಂದುವರಿದುದು)

ಬುಧವಾರದ್ಕೆಂದು ಮುಂದುವರಿಸಲ್ಪಟ್ಟ ಸಭೆ ಆ ದಿನ ಸೇರದೆ ತಾ. ೯ನೇ ಗುರುವಾರ ಸೇರಿತು. ಈ ದಿನವಿಡೀ ಕ್ರಿಪ್ಸ್ ಮತ್ತು ವೇವೆಲರೊಡನೆ ಮಿ. ಜಿನ್ನರ ಸಂಗ್ವಾದವೊಂದೇ ನಡೆಯಿತೆಂದು ತಿಳಿದು ಬರುತ್ತದೆ. ಆ ಮೇಲೆ ಐದನೇ ದಿನ ಮೂರಂತಸ್ತಿನ ಒಂದು ಏಣಿಯು ಸಮ್ಮೇಳನ ಗೃಹದೊಳಗೆ ಹೋದುದು, ಹೊರಗೆ ಗುಂಪು ಕೂಡಿದ್ದ ಪತ್ರಿಕಾ ಪ್ರತಿನಿಧಿಗಳ ದೃಷ್ಟಿಗೆಬಿತ್ತು. ಆಗಲೇ ಅವರೆಲ್ಲರ ಕಣ್ಣುಗಳಲ್ಲೂ ಕೆಮರಾ ಪ್ರಕಾಶ ಹೊಳೆಯಿತು. ೩ವರು ತಮ್ಮೊಳಗೆಗಾಢಯೋಚನೆ ನಡಿಸಿ ಬರೆದುಕೊಂಡರು-'ಸಭಾ ಗೃಹದ ಬಾಗಿಲ ಬಳಿಯಲ್ಲಿ ಕುಳಿತಿದ್ದ ಉದ್ದ, ವೃಷ್ಟಕಾಯದ ಖಾನ್ ಅಬ್ದುಲ್ ಗಫರ್‌ಖಾನರು ಈ ನಿನ ಬಾಗಿಲನ್ನೊತ್ತಿ ಗಟ್ಟ ಕುಳಿತು ಬಿಟ್ಟರೆಂದೂ, 'ನಿಮ್ಮೊಳಗಿನ ಜಗಳದ ತೀರ್ಮಾನವನ್ನು ನಿಮ್ಮ ಪಾಲಿಗೇನೇ ಬಿಟ್ಟು ನಾವು ಕೂಡಲೇ ಹೊರಟು ಹೋಗುವೆನೆಂದು ನೀವೀಗ ಆಶ್ವಾಸನೆಕೊಡದಿದ್ದರೆ ಈ ದಿನ ಹೊರಗೆ ಹೋಗಬಿಡದ ಪ್ರತಿಬಂಧ ಸತ್ಯಾಗ್ರಹ ಹೂಡುವೆ'ನೆಂದು ಬ್ರಿಟಿಷ್ ಪ್ರತಿನಿಧಿಗಳಿಗೆ ಹೇಳಿದರೆಂದೂ ನಂಬಲಾಗಿದೆ. ಆದ್ದರಿಂದ ಬ್ರಿಟಿಷ್ ಪ್ರತಿನಿಧಿಗಳು ಮಾಡಿನ ಮೂಲಕ ಹೊರಬೀಳುವದಕ್ಕಾಗಿ ಸಭಾಗೃಹದೊಳಗೊಂದು ಏಣಿಯನ್ನು ತರಿಸಿದ್ದರು. ಆ ಏಣಿಯಲ್ಲಿ ಮೂರಂತಸ್ತುಗಳಿದ್ದು ಬೂಟುಗಳು ಜಾರದಂತೆ ಅಲ್ಲಲ್ಲಿ ಕಚ್ಚುಗಳನ್ನು ಮಾಡಿದ್ದಿತಲ್ಲದೆ.........".

ರಿಪೋರ್ಟರ್ ಬರೆದು ಮುಗಿಯುವ ಮೊದಲೇ ಮುರಿದ ಏಣಿಯಷ್ಟು ಹಿಡಿಸಿಕೊಂಡು ಗಂಭೀರ ಮುಖ ಮುದ್ರೆಯಿಂದ ಅನುಕ್ರಮವಾಗಿ ಕ್ರಿಪ್ಸ್, ಲಾರೆನ್ಸ್, ಅಲೆಕ್ಸಾಂಡರ್, ವೇವೆಲರು ಪತ್ರಿಕಾ ಪ್ರತಿನಿಧಿ ತಂಡವನ್ನು ಹಾದು ಹೋಗುತಿದ್ದರು. ಸರ್ದಾರ್ ವಲ್ಲಭಾಯಿಗಳು ಆ ಏಣಿಯನ್ನೂ ಮುರಿದು, ಬ್ರಿಟಿಷ್ ಅಧಿಕಾರಿಗಳನ್ನು ಕ್ರಮಬದ್ಧ ಬಾಗಿಲಿಂದಲೇ ಕಂರ ಹಿಡಿದು ದಬ್ಬಿರಬಹುದೇ ಎಂಬ ಅನುಮಾನವು ಮುದುಡಿದ ಮುಖ ಮತ್ತು ಮುರಿದ ಏಣಿಯಿಂದಾಗಿ ಮೂಡಿತು. ಪತ್ರಿಕಾಪ್ರತಿನಿಧಿಗಳವರನ್ನು ಸುತ್ತುಗಟ್ಟಿದರು.

"ಅದುದೇನು, ಏಣಿಯೇ ದುರ್ಬಲವಿತ್ತೇ? ಅಥವಾ ಯಾರಾದರೂ ಅದನ್ನು ಮುರಿದು ಹಾಕಿದರೆ?"-ಮೊದಲ ಪ್ರಶ್ನೆ.

'ಸೀದಾ ಊರಿಗೆ ಹೋಗಿ ನಿಮ್ಮೂರಿನ ಜೋಯಿಸರುಗಳಿಂದ ತಿಳಿದುಕೊಳ್ಳಿ"-ತಲೆಯಡಿಗಿಟ್ಟುಕೊಂಡೇ ಸರ್. ಕ್ರಿಪ್ಸರ ಉತ್ತರ.

ಬಾತ್ಮೀದಾರರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು; ಎಲ್ಲರ ಹಣೆಗಳಲ್ಲೂ ಮೂರು ಮೂರು ನೆಂಗಗಳು ಬಿದ್ದಿದ್ದುವು.

"ದಯವಿಟ್ಟು ವಿವರ ಕೊಟ್ಟು ಮುಂದೆ ಹೋಗಿ"-ಸಮ್ಮೇಲನದಲ್ಲಿ ಹೀಗೆಯೇ ಇವರನ್ನು ತಡೆದು ನಿಲ್ಲಿಸಿದ್ದರೆಂದೇ ನಂಬಿದ್ದ ಬಾತ್ಮೀದಾರರು ತಾವೂ ಹಾಗೆ ಮಾಡುವದು ತಪ್ಪಾಗುವದಿಲ್ಲವೆಂಬ ವಿಶ್ವಾಸದಿಂದ ಕೋಟೆಗಟ್ಟಿ ನಿಂತುಬಿಟ್ಟರು.

ಕ್ರಿಪ್ಸರು ಕ್ಷೀಣ ಸ್ವರದಿಂದ ನಿಧಾನವಾಗಿ ಹೇಳಿದರು. "ಹೆಚ್ಚಿನ ಸ್ವಾತಂತ್ರ್ಯವುಳ್ಳ ಪ್ರಾಂತಿಕ ಸರಕಾರಗಳನ್ನು ರಚಿಸುವದು. ಆ ಮೇಲೆ ಹಿಂದೂ ಪ್ರಾಂತ್ಯಗಳು ಮತ್ತು ಮುಸಲ್ಮಾನ್ ಪ್ರಾಂತ್ಯಗಳನ್ನು ಪ್ರತ್ಯಪ್ರತ್ಯೇಕ ಪಂಗಡಗಳಾಗಿ ಮಾಡಿ, ಒಂದು ಪಂಗಡಕ್ಕೊಂದರಂತೆ ಫೇಡರೇಶನ್ ಸ್ಥಾಪಿಸುವದು. ಆ ಮೇಲೆ ಇವೆರಡರ ಫೆಡರೇಶನುಗಳನ್ನೂ, ಆಶ್ರಿತ ರಾಜ್ಯಗಳನ್ನೂ ಏಕೀಕರಿಸುವ ಹಿಂದೀ ಯೂನಿಯನ್ ಒಂದನ್ನು ಸ್ಥಾಪಿಸುವದು-ಈಮೂರಂತಸ್ತಿನ ಯೋಜನೆಯನ್ನೆ ನಾವು ಮುಂದಿಟ್ಟಿದ್ದೆವು. ಅದನ್ನು ನಿದರ್ಶನ ಮೂಲಕ ಸ್ಪಷ್ಟೀಕರಿಸಿ ತಿಳಿಸುವದಕ್ಕಾಗಿ ಈಮೂರಂತಸ್ತಿನ ಏಣಿಯನ್ನು ತರಿಸಿದ್ದೆವು. ಆದರೆ ಚರ್ಚೆಯ ನಡುವೆ ಅದರ ಮೇಲಂತಸ್ತನ್ನು ಮಿ ಜಿನ್ನರು ಮುರಿದರು; ಮಧ್ಯದ ಅಂತಸ್ತನ್ನು ಮೌಲಾನಾ ಅಜಾದರು ಮುರಿದರು. ಕೆಳಗಿನ ಅಂತಸ್ತು ಈ ಎಳೆದಾಟದಲ್ಲಿ ತಾನಾಗಿ ಜಾರಿ ಹೋಯಿತು. ನಾವೀಗ ಹೊರಟವರು. ಸರಿಯಾದ ವಿವರಕ್ಕೆ ಸರಕಾರೀ ಪ್ರಕಟಣೆ ಈಗ ತಾನೇ ಹೊರಡಲಿದೆ".

"ಇರಲಿ; ಈ ಸಂಭವದ ಹೊಣೆ ಯಾರ ಮೇಲೆ?" ಎಲ್ಲಾ ಕಂಠಗಳೂ ಒಂದೇ ಬಾರಿ ಕೇಳಿದುವು.

"ನಾವಾ ಕುರಿತು ಕೊನೆಯ ಭಂಗದಲ್ಲಿ ತೀವ್ರ ಚರ್ಚೆ ನಡಿಸಿ, ಈ ಮಟ್ಟಿಗೆ ಒಂದು ಸರ್ವ ಸಮ್ಮತ ಸಿದ್ಧಾಂತಕ್ಕೆ ಬಂದಿದ್ದೇವೆ. ಅಪಜಯಕ್ಕೆ ಯಾವ ಪಕ್ಷವೂ ಕಾರಣವಾಗಿರದೆ ಅವಲಕ್ಷಣವೊಂದೇ ಕಾರಣ 'ಮೂರು' ಎಂಬ ಅಂಕೆಯು ಹಿಂದೂ ಮುಸ್ಲಿಂ ಭೇದವಿಲ್ಲದೆ ಎಲ್ಲರಿಗೂ ಅಪಶಕುನದ್ದೆಂದು ಈಗ ತಿಳಿದೆವು. ನಾವು ಮೂವರು ಲಂಡನಿನಿಂದ ಹೊರಟದ್ದಾಗಲಿಲ್ಲ. ಮೂರು ಪಕ್ಷಗಳ ಸಮ್ಮೇಲನ ಕರೆದದ್ದಾಗಲಿಲ್ಲ. ಮೂರಂತಸ್ತಿನ ಕಾರ್ಯಕ್ರಮತಯಾರಿಸಿದ್ದಾಗಲಿಲ್ಲ ನೂರು ಇದ್ದುದರಿಂದ ಆಗಲಿಲ್ಲ' ಎನ್ನುತ್ತಾ ಅವರೆಲ್ಲಾ ಕಾರು ಹತ್ತಿದರು. ಕಾರು ವಿಮಾನ ನಿಲ್ದಾಣದತ್ತ ಧಾವಿಸಿತು.

ಇವರು ಅದನ್ನೇ ಬರೆದುಕೊಂಡರು— 'ಮೂರಿದ್ದುದರಿಂದ—(1) ಹಿಂದೂ, (2) ಮುಸಲ್ಮಾನರ ನಡುವೆ (3) ಬ್ರಿಟಿಷರಿದ್ದುದರಿಂದ—ಆಗಲಿಲ್ಲ.'

ಕ್ಷಣಿಕ ಗುಣಕೊಡುವ ಔಷಧದ
ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ...ರಿ. ಅದು ದಮ್ಮನ್ನು ಬರೀ ಸುಮುಕಿ ...ಪಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ...ತ್ತು; ಹೊಟ್ಟೆ ಹಸಿಯುವದು; ಪಚನಕ್ರಿಯೆಯು ತಿದ್ದುವದು; ...ಸ್ನಾಯುಗಳು ಗಟ್ಟಿಯಾಗುವುವು. ಆ ಮೇಲೆ ...ರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ...ರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಸ್ಪೇನ (ನೀಲೀ ...ಬಣ್ಣದ) ತೆಗೆದುಕೊಳ್ಳಬೇಕು. ಅಜೀರ್ಣ ...ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನ ...ರು ಶ್ವಾಸಹಾರೀ ಕಂಪೌಂಡ (ಕೆಂಪು ...ಬಣ್ಣದ) ತೆಗೆದುಕೊಳ್ಳಬೇಕು.

...ಔನ್ಸ್ ೩ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮ...ಗಿ ರೂ. ೩-೬-೦; ೫ ೧೨ ೦ ಮತ್ತು ೧೦-೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

...ಸ್ಟ್ರಸು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಕೊ., ಮೈಸೂರು ಮುಂಬಯಿ ಹೋಲ ಏಜಂಟರು.-



FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman - The Hon'ble Mr. M. CT. M. Chidambaram Chettyar.)

A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA — MANGALORE & KARKALA.

HEAD OFFICE — "United India Life Bldg" Esplanade, Post Box No. 142, MADRAS.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ಗೆ ಬರೆದಲ್ಲಿ ರೋಗಗಳಿಗೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕಾಮತ್ಸ್ 183. ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಂಪ್ಸ್, ಜಿ. ಐ. ಪಿ. ಮಾಟುಂಗಾ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E.) Tollygunge, Calcutta.

ಸ್ಟಾಕಿಸ್ಟ್: ... ಕಂಪೆನಿ, ಮಂಗಳೂರು

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ -

ಬಾಲಚಂದ್ರ ಆಫೀಸು, ಉಡುಪಿ

The General Investment & Commercial Corporation, Limited,

UDIPI. S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd. | **THE BHARATH MILLS. Ltd.**

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S.	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq.	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪಿತ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫ | ವಾರ ೩೮ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol. 25 No. 38
Founder SRI A. B. SHETTY. M. L. A.

ಉಡುಪಿ • 23—5—1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು ಕೆಮ್ಮು, ಛಳಿ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ಮುಂತಾದ ಜೀವಿ ಕಚ್ಚುವಿಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ.

REGD.

ಪದ, ಗುಣ ಶಕ್ತಿ ಮತ್ತು ಜನ ನಮ್ಮಿಕೆ ಹೆಚ್ಚುತ್ತಿದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

THE PROTECTION

If a mother was left unprovided for and if the children were too young to earn a livlihood and maintain the family, how much would not anyone feel for their plight?

What would not one give to forestall a similar fate overcoming one's wife and children?

But how to keep the devil away from one's family's door? Life Insurance is the answer.

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:— ಕುಂಟರಮಾತಿ ಸ್ಟೋರ್ಸ. ದಾವಣಗೇರಿ,— ದಾವಣಗೇರಿ ಪ್ರೆಸ್, ಆರ್, ಎಲ್, ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including
Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ। ಕೆ. ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊಡವೂರು; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತ ವಾಗಿ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಾರೈಕೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್

For prompt and efficient Banking Service

Bank with

THE VIJAYA BANK LIMITED.

Head Office:— **MANGALORE**

Branches. **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಠಾಗೋರರ ಕಲಾದೃಷ್ಟಿ

[ವಿಶ್ವಕವಿ ರವೀಂದ್ರರ ಜನ್ಮ ದಿನಾಚರಣೆಯು ಇದೇ ತಾರಲ್ಲಿ ಪ್ರಪಂಚದ ಹಲವೆಡೆಗಳಲ್ಲಿ ನಡೆದಿತ್ತು. ಲೋಕಕ್ಕೆ ಭಾರತವಿತ್ತ ಅಮೋಘ ಕಾಣಿಕೆಗಳಲ್ಲಿ—ವಿಶ್ವದ ಲಕ್ಷ್ಯವನ್ನು ಭಾರತದ ಕಡೆಗೆಳೆದ ಪ್ರಕಾಶಮಯೀ ರತ್ನಗಳಲ್ಲಿ—ರವೀಂದ್ರನಾಥ ಠಾಗೋರರೊಬ್ಬರು. ಕವಿಯ ಸ್ಮರಣೆಗಾಗಿ ಈ ಬರೆಹವನ್ನು ಪ್ರಕಟಿಸಲಾಗಿದೆ.]

ಅನುವಾದಕ: — ಶ್ರೀ ಎನ್. ಗಣೇಶ, ಚಿಪಳೂಣಕರ, ಹೆಬ್ರಿ.

ರವೀಂದ್ರನಾಥ ಠಾಗೋರರ ಕಾವ್ಯಗಳನ್ನು ತಿಳಿದುಕೊಳ್ಳಬೇಕಾದರೆ ಅವರ ವ್ಯಕ್ತಿ ಮಹತ್ವದ ಕಲ್ಪನೆಯನ್ನು ನಾವು ಯಥಾರ್ಥತ್ವದಿಂದ ತಿಳಿದುಕೊಳ್ಳಬೇಕು. ಅವರ ಕಾವ್ಯಗಳಲ್ಲಿ ಕವಿಗಳ ಮತ್ತು ಚರಿತ್ರೆಯ ಏನೇನೂ ಸಂಬಂಧ ಇರುವುದಿಲ್ಲ. ಕವಿಯಂತೆ ಕಲಾಭಿಜ್ಞರ ನಡತೆ ಮತ್ತು ಅವರ ಕಲೆಯಲ್ಲಿಯ ಸಂಬಂಧ ಬಹು ವೇಳೆ ಸರಿ ಬರುವುದಿಲ್ಲ. ಹೆಚ್ಚಾಗಿ ಚಿತ್ರಕಾರರು ತಮ್ಮ ಕಲಾಕೃತಿಯನ್ನು ನಿರ್ಮಿಸುವಾಗ ಪ್ರಮಾಣ ಬದ್ಧ ರೂಪರೇಖೆಗಳನ್ನು ಒಳ್ಳೇ ಜಾಗ್ರತೆಯಿಂದ ಕಾಪಾಡುತ್ತಾರೆ ಆದರೆ ಅವರ ನಿತ್ಯ ಜೀವನದ ಅನುಭವವನ್ನು ತುಲನೆ ಮಾಡಿ ನೋಡಿದರೆ ಅಲ್ಲಿ ಏನೂ ಕಾಣ ಸಿಗಲಾರದು. ವ್ಯವಹಾರ ಜೀವನದಲ್ಲಿ ಎಂತಹ ಕಷ್ಟ-ಸುಖಗಳು ಇದೆಯೆಂಬುದನ್ನು ಅಂಥವರು ನಿಲುಕಿಸುವುದಿಲ್ಲ. ಸಂಗೀತಗಾರರು 'ಬೇತಾಳ'ರಾಗಿ ಜೀವನ ಸಾಗಿಸಿದರೂ ಅವರ ಸಂಗೀತ ಕಛೇರಿಯಲ್ಲಿ ಮಾತ್ರ 'ತಾಳ' ಸಹ ತಪ್ಪಿಸಲು ಬರುವುದಿಲ್ಲ! ರವೀಂದ್ರರು ಇಂತಹ ತರಗತಿಗೆ ಸೇರಿದವರಲ್ಲ. ಬರಹಗಳಲ್ಲಿ ಹೇಗೆ ಹೇಳುತ್ತಿದ್ದರೋ ಹಾಗೇ ನಡತೆಯಲ್ಲಿಯೂ ಅವರ ದಾರಿ ಒಂದೇ ಆಗಿದ್ದಿತು.

ವಂಗ ಭೂಮಿಯ ಭವ್ಯ ಮತ್ತು ಉದಾತ್ತ ಸ್ವರೂಪ

ಬಾಬು ರವೀಂದ್ರರು ವಂಗ ಭೂಮಿಯಲ್ಲಿ ಜನ್ಮಿಸಿದರು. ಈ ವಂಗ ಭೂಮಿಯೊಳಗಿನ ನಿಸರ್ಗ ದೇವತೆಯ ಸ್ವರೂಪವು ಅತೀ ಭವ್ಯ ಮತ್ತು ಉದಾತ್ತವಿದೆ. ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳ ವಿಶಾಲ ಸಂಗಮ ಪ್ರವಾಹವು ಈ ಜಗತ್ತಿನಲ್ಲಿ ಅನ್ಯತ್ರ ಕ್ವಚಿತವೇ ಸರಿ. ತಮ್ಮ ರಾಷ್ಟ್ರಗೀತೆಯಲ್ಲಿ ಅವರು ಮಾತೃಭೂಮಿಯ ವರ್ಣನೆ ಮಾಡಿದ್ದಾರೆ; ಅದು ವಂಗಭೂಮಿಯದೇ ವರ್ಣನೆಯಾಗಿದೆ. "ಸುಜಲಾಂ ಸುಫಲಾಂ" ಈ ವರ್ಣನೆಯು ಅತ್ಯುಕ್ತಿಯದಾಗಿ ಅದರಲ್ಲಿ ಭಾಸವಾಗಲಾರದು. ರೈಲಿನಲ್ಲಿ ಪ್ರವಾಸ ಮಾಡುವಾಗ ನಮಗೆ ಇದರ ಅನುಭವ ತಿಳಿಯುತ್ತದೆ. ಮತ್ತು ಭವ್ಯವಾದ ವನ ಸೌಂದರ್ಯದ ಸೊಗಸು ನಮಗೆ ಕಾಣಬರುತ್ತದೆ. ದೊಡ್ಡ ದೊಡ್ಡ ಮರಗಳು ಮತ್ತು ವಿಸ್ತೃತವಾದ ಜಲಾಶಯಗಳು ಮೇಲಿನಂತೆಯೇ ದೃಗ್ಗೋಚರಿಸುತ್ತವೆ; ಅದೇ ಪ್ರಮಾಣದಲ್ಲಿ ಭತ್ತದ ಪೈರಿನ ಹೊಲಗಳು ಮೈಲು ಮೈಲುಗಳ ಉದ್ದಕ್ಕೂ ಕಾಣಿಸುತ್ತವೆ. ಸ್ವಲ್ಪ ದರದಲ್ಲಿ ಹೇಳುವುದಾದರೆ ಸರ್ವತ್ರ ಸಮೃದ್ಧಿ ಮತ್ತು ವಿಶಾಲತ್ವ ನಮ್ಮ ಪ್ರತ್ಯಕ್ಷಕ್ಕೆ ಬರುವುದು. ಹೀಗೆ ಭವ್ಯ ಮತ್ತು ಉದಾತ್ತ ನೈಸರ್ಗಿಕ ವಾತಾವರಣದಲ್ಲಿ ಹುಟ್ಟಿ ಬೆಳೆದವನ ವಿಚಾರ ಮತ್ತು ಮನಸ್ಸು ಭವ್ಯ ಮತ್ತು ಉದಾತ್ತವಾಗಿ ಪರಿಣಮಿಸದೆ ಹೇಗೆ ಇದ್ದೀತು?

ನವರತ್ನ 'ವಿಶ್ವಕವಿ'

ಇಂತಹ ಈ ನಿಸರ್ಗ ಸೌಂದರ್ಯ ಭೂಮಿಯಲ್ಲಿ ಮೇಧಾವೀ ಬುದ್ಧಿಯ ಹಲವು ಮಂದಿ ಪುರುಷರು ಒಬ್ಬರ ಹಿಂದೆ ಒಬ್ಬರು ಉತ್ಪನ್ನವಾಗಿದ್ದಾರೆ. ಗೌರಾಂಗ ಚೈತನ್ಯ ಸ್ವಾಮಿಗಳಿಂದ ಹಿಡಿದು ರಾಮಕೃಷ್ಣ ವಿವೇಕಾನಂದರ ವರೆಗಿನ ದೊಡ್ಡ ದೊಡ್ಡ ಸಾಧು ಪುರುಷರ ಪರಂಪರೆಯು ಹೇಗೆ ಬೆಳೆದು ಬಂದಿದೆಯೋ ಅಂತೆಯೇ ರಾಜಾ ರಾಮ ಮೋಹನ ರಾಯರಂತಹ ಸಾಮಾಜಿಕ ಕಾರ್ಯಕರ್ತರೂ ಕಾಣುತ್ತಾರೆ. ಬಂಕಿಮ ಚಂದ್ರರಂತಹ ಕಾದಂಬರಿಗಾರರು, ಸುರೇಂದ್ರನಾಥ-ಚಿತ್ತರಂಜನ ದಾಸರಂತಹ ದೇಶಭಕ್ತರು, ಜಗದೀಶ ಚಂದ್ರರಂತಹ ಶಾಸ್ತ್ರಜ್ಞ, ಯದುನಾಥ ಸರಕಾರರಂತಹ ಇತಿಹಾಸಕಾರರು, ವಂಗಭೂಮಿಯಲ್ಲಿ ಒಂದೇ ಸ್ಥಳದಲ್ಲಿ ಜನಿಸಲಿಲ್ಲ ಅವರ ಧೈರ್ಯ ಮತ್ತು ತ್ಯಾಗದ ಪರಿಸೀಮೆಯನ್ನು ಜಗತ್ತಿಗೆ ತೋರಿಸಿಕೊಟ್ಟು ಭಾರತದ ಗೌರವವನ್ನು ಅದಷ್ಟು ರೀತಿಯಿಂದ ಕಾಯ್ದವರು ವಂಗಭೂಪುತ್ರರು' ವಂಗ ಭೂಮಿಯು ಧನ—ಧಾನ್ಯಗಳಲ್ಲಿ ಎಷ್ಟು ಸಮೃದ್ಧವೋ ಅಷ್ಟೇ ಪುರುಷರತ್ನಗಳ ಸಮೃದ್ಧವಿದೆ. ಹೀಗೆ ಜಗತ್ತಿನ ದೃಷ್ಟಿಯಕ್ಕೆ ಬಂದಿರುತ್ತದೆ

ರವೀಂದ್ರನಾಥರು ಸಹ ದೊಡ್ಡ ಮನೆತನದಲ್ಲಿ ಜನ್ಮವಿತ್ತವರು ಅವರ ಮನೆತನವು ಪ್ರಾಚೀನ ಮತ್ತು ಆಧುನಿಕ ವಿದ್ಯೆಗಳ ಸಂಗಮಸ್ಥಾನ ಅವರ ಹಿರಿಯರು ದೊಡ್ಡ ವಿದ್ವಾಂಸರು ಮತ್ತು ದಯಾ ಶೀಲರು. ಅಂತೆಯೇ ಅವರು ಆಚಾರಶೀಲ ವೇದಾಂತಿಯೂ ಆಗಿದ್ದರು. ಆಗಾಗ ಅವರ ಆಯುಷ್ಯವು ಬ್ರಹ್ಮ ಚಿಂತನದಲ್ಲಿ ಕಳೆಯುತ್ತಿದ್ದುದರಿಂದ ಅವರಿಗೆ 'ಮಹರ್ಷಿ' ಪದವಿಯು ಪ್ರಾಪ್ತವಾಯಿತು.

ಬುದ್ಧಿಮಾನ್, ಶ್ರೀಮಂತ, ವೈರಾಗ್ಯಶೀಲತೆಗಳು ತುಂಬಿರುವ ಕುಲದಲ್ಲಿ ಠಾಗೋರರ ಜನನವಾಯಿತು. ನಿಸರ್ಗತೆಯಾಗಿ ಅವರಿಗೆ ಉತ್ಕೃಷ್ಟ ಬುದ್ಧಿಯು, ಪ್ರತಿಭೆಯು, ಮನನಶೀಲ ವೃತ್ತಿಯು ಮತ್ತು ಕಲಾದೃಷ್ಟಿಯು ಲಾಭವಿದೆ ಉದ್ದವಾದ ಶರೀರಯಷ್ಟಿ, ಭವ್ಯ ಭಾಲಪ್ರದೇಶ ಮತ್ತು ಅವರ ಅಸಾಮಾನ್ಯ ಬುದ್ಧಿಮತ್ತೆಯನ್ನು ನೋಡಿದರೆ 'ಆಕಾರ ಸದೃಶಪ್ರಜ್ಞ' ಎಂಬ ಈ ಕವಿವಚನವು ನೆನಪಿಗೆ ಬರುತ್ತದೆ. ವಿಚಾರಗಳ, ಲಲಿತಾಂಶಗಳು ಅವರ ನೇತ್ರಗಳಲ್ಲಿ ಸದಾ ನಲಿಯುತ್ತಿರುತ್ತವೆ

ಅವರ ವೃತ್ತಿಯಲ್ಲಿ—ಅಂದರೆ ದೃಷ್ಟಿಯಲ್ಲಿ ದುಷ್ಟತನ, ಸ್ವಾರ್ಥಗಳ ಕೃತ್ಯಗಳು ಮೊದಲಾದುವುಗಳಿಗೆ ಎಂದಿಗೂ ಸ್ಥಾನವಿಲ್ಲ. ಅಂತಹುಗಳ ವಿಚಾರಗಳನ್ನು ಅವರು ತಮ್ಮ ಬರಹಗಳಲ್ಲಿ ನೈರಾಶ್ಯ ಜನ್ಯವಾಗಿ ಹೊರಗೆಡಹುವರು. ಅವರ ಕಾಲದ ಶಾಲೆಗಳಲ್ಲಿ ಅವರಿಗೆ ತುಂಬಾ ಬೇಸರ. ಬೆತ್ತವನ್ನು ಕೈಯಲ್ಲಿ ತೆಗೆದುಕೊಂಡು ಗೋಣ ಗುಟ್ಟುವ ಉಪಾಧ್ಯಾಯರು ಅವರಿಗೆ ಯಮದೂತರಂತೆ ಕಾಣುತ್ತಿದ್ದರು! ಶಾಲೆಯ ದೊಡ್ಡ ಕಟ್ಟೋಣವು ಬಂದಿಖಾನೆಯಂತೆ ಅವರಿಗೆ ಎನಿಸುತಿತ್ತು. ಮತ್ತು ಶಿಕ್ಷಣವು ತಕ್ಕಜ್ಞಾನವ್ಯತವಿಲ್ಲದೆಮಾನವೀ ಉನ್ನತಿಯ ವಿಷ ಬೀಜದಂತೆ ಕಾಣುತ್ತಿತ್ತು. ಆದರಿಂದಲೇ ಅವರು ಶಾಲೆಗೆ ಹೋಗದೆ ಮನೆಯಲ್ಲಿಯೇ ಸ್ವತಂತ್ರವಾಗಿ ಜ್ಞಾನಾರ್ಜನೆಯನ್ನು ಕಲಿಯುವ ಮಾರ್ಗ ಅವಲಂಬಿಸಿದರು. ಶಾಲೆಬಿಟ್ಟದ್ದರಿಂದ ಅವರು ಏನೂ 'ಪೋಕ್ರಿ' ಯಾಗಲಿಲ್ಲ, ಬದಲು ಹೆಚ್ಚೆಚ್ಚು ಜ್ಞಾನಾರ್ಜನೆಯ ಸಂಗ್ರಹಗಳನ್ನು ಹುಡುಕತೊಡಗಿದರು. ಇದರಿಂದ ಜನರಿಗೆ ತುಂಬಾ ಆಶ್ಚರ್ಯವಾಗತೊಡಗಿತು. ಆದರಿಂದಲೇ ಅವರಿಗೆ ಇಂಗ್ಲಂಡಿಗೆ ಸ್ವತಂತ್ರ ಶಿಕ್ಷಣಕ್ಕೆ ಹೋಗುವ ಸುಯೋಗ ಪ್ರಾಪ್ತವಾಗಿತು. ಸಾಧ್ಯವಾದರೆ 'ಬ್ಯಾರಿಸ್ಟರ್' ಪರೀಕ್ಷೆ ಕೊಡುವ ಅನುಕೂಲತೆಯೂ ಅವರಿಗಿತ್ತು, ಆದರೆ ಅವರ ಸೆಳೆತ ಕಾವ್ಯಕಲೆಯ ಮೇಲೆಯೇ ಇದ್ದುದರಿಂದ ಕಾಯಿದೆ ಪಂಡಿತರಾಗಲು ಶಕ್ಯವಾಗಲಿಲ್ಲ.

ಸೇವಾವೃತ್ತಿಯ ರಾಷ್ಟ್ರ ಸಂಜೀವನಿ

ಇಂಗ್ಲೆಂಡಿಗೆ ತೆರಳಿದರೂ ರವೀಂದ್ರರು ಅಲ್ಲಿ ಸುಖ ಲೋಲುಪ್ತರಾಗಲಿಲ್ಲ. ಅವರು ಪಾಶ್ಚಾತ್ಯ ಸಂಸ್ಕೃತಿಯ ಅಂಧ ಉಪಾಸಕರೆನಿಸಲಿಲ್ಲ. ಅಲ್ಲಿಯ ಜನರ ನಡತೆಯ ಮೇಲೆ ಅವರಿಗೆ ತಿರಸ್ಕಾರ ಹುಟ್ಟಿತು. ಭೋಗ ಲಾಲಸೆಯನ್ನು ವೃದ್ಧಿಗೊಳಿಸುತ್ತಿರುವ ಅವರ ಪ್ರವೃತ್ತಿಯನ್ನು ಕಂಡು ಅವರಿಗೆ ಖೇದವಾಗತೊಡಗಿತು; ಪರಂತು ಎಲುಬು ಮಾಂಸಗಳಿಗೆ ಅಂಟಿಹೋಗಿರುವ ಈ ಪಾಶ್ಚಾತ್ಯ ಸಂಸ್ಕೃತಿಯನ್ನು ನಮ್ಮ ಜನರು 'ಸೇವಾ ವೃತ್ತಿಯ ರಾಷ್ಟ್ರ ಸಂಜೀವನಿ' ಯೆಂದು ಅರಿತಿಲ್ಲವೆಂದು ಅವರು ತಿಳಿದು ಹಿಂದೂಸ್ಥಾನಕ್ಕೆ ಮರಳಿದರು.

ತಾರುಣ್ಯದಲ್ಲೇ ಅವರ ಪ್ರಿಯ ಪತ್ನಿ ಮತ್ತು ಕುಟುಂಬಸ್ಥರು ಒಬ್ಬರ ಹಿಂದೆ ಒಬ್ಬರು ತೀರಿ ಹೋದರು. ಇದರಿಂದ ಅವರು ಸ್ವಲ್ಪ ಕಾಲ ಖಿನ್ನ ಮನಸ್ಕರಾದರು; ಆದರೆ ಅಚಲವಾದ ದುಃಖದಲ್ಲಿ ಮುಳುಗಲಿಲ್ಲ. ಮೃತ್ಯು ವಿಷಯದಲ್ಲಿ ತಿರಸ್ಕರಣೀಯ ಮತ್ತು ಭೀಷಣ ಕಲ್ಪನೆಯು ಹಲವರಿಗಿರುತ್ತದೆ—ಅಂತಹ ಕಲ್ಪನೆಗೆ ರವೀಂದ್ರರು ಸ್ಥಳಕೊಡದೆ ಜೀವನದೊಳಗಿನ ಅಖಂಡತೆಯಿಂದ ಆಪ್ತೇಷ್ಟರ ಮರಣ ಪ್ರತ್ಯಯಕ್ಕೆ ತಾನು ಮುಟ್ಟಿದೆನೆಂದು ಅವರು ಅನ್ನುತ್ತಿದ್ದರು. ಆಪ್ತೇಷ್ಟರ ವಿಯೋಗದ ನಂತರ ಅವರು ತಮ್ಮ ಜಹಗಿಯಲ್ಲಿ ಹೋಗಿ ಇರಬೇಕಾಯಿತು. ಆದರ ಕೆಲಸ ಅವರ ಮೇಲೆಯೇ ಬಿದ್ದಿತು. ಜಮೀನದಾರಿ ಕೆಲಸಕ್ಕೆ ಕೈಯೊಡ್ಡಿದಾಗ ಅದರೊಳಗಿನ ಬಡ ರೈತರ ಜೀವನದ ಆಳಲು ಅವರ ಹೃದಯದ ಕದವನ್ನು ತಟ್ಟಿತು! ವಿಜ್ಞಾನಿಗಳು ತಿರಸ್ಕಾರಣೀಯ ಮಣ್ಣಿನಿಂದ ಸಕ್ಕರೆಯಂತಹ ಪದಾರ್ಥಗಳನ್ನು ಹೇಗೆ ಬೇರ್ಪಡಿಸುತ್ತಾರೆಯೋ, ಹಾಗೆಯೇ ಜಮೀನುದಾರೀ ಪದ್ಧತಿಯಲ್ಲಿ ಬಡಜನರು ಕ್ಷುದ್ರ, ಅಸ್ಪೃಶ್ಯತೆ, ದರಿದ್ರ ಜೀವನದಲ್ಲಿ ಸ್ವರ್ಗೀಯ ಪ್ರೇಮವನ್ನು ಹೇಗೆ ಕಂಡುಕೊಂಡಿದ್ದಾರೋ, ಅಂತೆಯೇ ಅನಾಥರನಾಥರಾಗಿ ರವೀಂದ್ರರು ಕಂಡುಕೊಂಡಿದ್ದಾರೆ. ಹರಕು ಬಟ್ಟೆಗಳನ್ನು ಧರಿಸಿಕೊಂಡು ಬಡರೈತರೊಡನೆ ನೇಗಿಲು ಹಿಡಿದುಕೊಂಡು ತಿರುಗಾಡಿದಾಗಲೇ ಕವಿಗಳಿಗೆ ಇದು ತಿಳಿಯಿತು; ಅಪ್ರಸಂಗಗಳನ್ನು ಅವರು ತಮ್ಮ ಕಾವ್ಯ ನಾಟಕಗಳಲ್ಲಿ ಚಿತ್ರಿಸಿದ್ದಾರೆ.

ಕಾವ್ಯ ಕಲ್ಪನೆಯನ್ನು ಕೃತಿಯಲ್ಲಿ ತಂದ ಕವಿ!

ತಮ್ಮ ಸಂವೇದನೆಯ ಚಿತ್ರೀಕರಣದಿಂದ ಮಾತ್ರ ತೃಪ್ತಿ ಹೊಂದುವವನ್ನು ಸಹನೆಯವರು ರವೀಂದ್ರರಲ್ಲ! ಕವಿ ರವೀಂದ್ರರು ತಮ್ಮ ಸಂವೇದನವನ್ನು ಶಬ್ದಗಳಿಂದ ಬಣ್ಣಿಸಿ ತನ್ನ ಜೀವನವಿಡೀ ಅವರ ತತ್ವಗ್ರಾಹ್ಯತೆಗಾಗಿ ಹಂಬಲಿಸಿದರು. ಹಳ್ಳಿಗಳ ಶಿಕ್ಷಣಾರ್ಥವಾಗಿ ಉಪಹಾಸಕ ಕತೆಯೊಂದನ್ನು ಬರೆದು ಕೃತಜ್ಞತೆಯನ್ನು ಸೂಚಿಸದೆ ಅವರು 'ಶಾಂತಿ ನಿಕೇತನ'ದಲ್ಲಿ ಒಂದು ಚಿಕ್ಕ ಬಾಲಕರ ಶಾಲೆಯನ್ನು ಹಲವು ವರ್ಷ ಯಾಕೆ ನಡೆಸುತ್ತಿದ್ದರು? ಬಡಜನರ ದುಃಖವನ್ನು ತನ್ನ ಕಾವ್ಯರಸದಲ್ಲಿ ಮಾತ್ರ ತೋರಿಸುತ್ತಿದ್ದರೆ ಅವರು ಜಹಗೀರಿಯ ಒಡೆತನ ನಡೆಸಿದುದರ ಫಲವೇನು ಬರುತ್ತಿತ್ತು! ಕೃತಿಯಲ್ಲಿ ಅತಿ

(೧೧ನೇ ಪುಟ ನೋಡಿರಿ)

CANARA BANK LIMITED

Estd: 1906

(Incorporated in British India. liability of Members Limited.)

SEASON DEPOSITS.

of Rs. 10000/- and over in multiples of Rs. 1000/- and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¾%

Rates for Season Deposits of less than Rs 10000/- with a minimum of Rs. 1000/- and in multiples of Rs. 500/- may be ascertained on application to our nearest branch.

ಬ್ರಿಟಿಷ್ ಮಂತ್ರಿಸಮಿತಿಯ ಭಾರತ ಯೋಜನೆ

ಶಾಶ್ವತ ಸ್ವರಾಜ್ಯ ವಿಧಾನ ರಚನೆಗೆ ರಾಜ್ಯಾಂಗರಚನಾ ಸಭೆ

ಕೂಡಲೇ ನಡುಗಾಲ ಸರಕಾರ

ಮೇ ತಾ 16ನೇ ರಾತ್ರಿ 8 ಘಂಟೆಗೆ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಪ್ರಧಾನಿ 'ಮಿ. ಅಟ್ಲಿಯವರೂ, ನವದಿಲ್ಲಿಯಿಂದ ಬ್ರಿಟಿಷ್ ಮಂತ್ರಿ ಸಮಿತಿ ಸದಸ್ಯರು ಹಾಗೂ ವೈಸರಾಯರೂ ಜಾಹೀರು ಮಾಡಿದ ಭಾರತ ಯೋಜನೆ —

● ಯುದ್ಧ ಮಂತ್ರಿಸ್ಥಾನ ಸಮೇತ ಎಲ್ಲಾ ಖಾತೆಗಳಲ್ಲೂ ಹಿಂದೀ ಜನತೆಯ ವಿಶ್ವಾಸ ಪಾತ್ರರಾದ ಹಿಂದೀ ಧುರೀಣರೇ ಇರುವ ನಡುಗಾಲದ ರಾಷ್ಟ್ರೀಯ ಸರಕಾರವನ್ನು ಕೂಡಲೇ ಸ್ಥಾಪಿಸುವದು

● ಭಾರತದ ಶಾಶ್ವತ ರಾಜ್ಯಭಾರ ಪದ್ಧತಿ ನಿರ್ಮಿಸಲು ಸಮಾಜಾಂತರಗತ ಜನವಾರು ಪ್ರಾತಿನಿಧ್ಯವುಳ್ಳ 'ರಾಜ್ಯಾಂಗ ರಚನಾ ಸಭೆ'ಯೊಂದರ ಸ್ಥಾಪನೆ. ಕೂಡಲೇ ಅದರ ಕಾರ್ಯಾರಂಭವಾಗುವದು ಈ ಸಭೆಯ ಅಸ್ತಿವಾರದ ನಮೂನೆ ಹೀಗಿದೆ.—

1 ಬ್ರಿಟಿಷ್ ಭಾರತ ಮತ್ತು ಆಶ್ರಿತ ರಾಜ್ಯಗಳನ್ನೊಳಗೊಂಡ ಒಂದು ಕೇಂದ್ರ ಚಾಗಿ 'ಭಾರತ ಯೂನಿಯನ್' ಇರಬೇಕು ಈ ಕೇಂದ್ರಕ್ಕೆ ವಿದೇಶ ಸಂಬಂಧ, ರಕ್ಷಣೆ ಮತ್ತು ಸಂಚಾರ ಸಾಧನಾಟುಗಳು ಮತ್ತಿವಕ್ಕೆ ಬೇಕಾಗುವಷ್ಟೇ ಹಣಕಾಸಿನ ಅಧಿಕಾರವಿರಬೇಕು

2. ಬ್ರಿಟಿಷ್ ಭಾರತ ಮತ್ತು ಆಶ್ರಿತ ರಾಜ್ಯಗಳ ಪ್ರತಿನಿಧಿಗಳಿಂದ ಕೂಡಿದ ಈ ಭಾರತ ಯೂನಿಯನ್‌ಗೆ ಕಾರ್ಯಕಾರೀ ಸಮಿತಿ ಮತ್ತು ನ್ಯಾಯವಿಧಾಯಕ ಸಭೆ 'ಗಟೀಕ ಸಾಮುದಾಯಿಕ ಜಾತೀಯ ಪ್ರಶ್ನೆಯೊಂದರ ಕುರಿತು ಮೇಲಿನ ಶಾಸನ ಸಭೆಯು ಯಾವುದಾದರೊಂದು ನಿರ್ಧಾರ ಮಾಡಬೇಕಾದರೆ ಹಾಜರಿದ್ದ ಸದಸ್ಯರಲ್ಲಿ ಮುಖ್ಯ ಎರಡು ಸಮಾಜಗಳಲ್ಲಿ ಪ್ರತಿಯೊಂದು ಸಮಾಜದ ಬಹುಸಂಖ್ಯಾತ ಸದಸ್ಯರ ಸಮ್ಮತಿಯೂ, ಅಂತೆಯೇ ಇಡೀ ಸಭೆಯ ಬಹುಸಂಖ್ಯಾತ ಸಮ್ಮತಿಯೂ ದೊರೆಯಬೇಕು

3 ಕೇಂದ್ರ ಯೂನಿಯನಿಗೆ ಸೇರದ ಎಲ್ಲಾ ವಿಭಾಗಗಳೂ ಮತ್ತೆಲ್ಲಾ ಶೇಷಾಧಿಕಾರಗಳೂ ಪ್ರಾಂತಿಕ ಸರಕಾರಗಳದ್ದಾಗಿರಬೇಕು

4 ಕೇಂದ್ರ 'ಯೂನಿಯನಿಗೊಪ್ಪಿಸಿಕೊಡದ ಇತರ ಎಲ್ಲಾ ಅಧಿಕಾರಗಳು ಆಶ್ರಿತ ರಾಜ್ಯಗಳ ಪಾಲಿಗೆ ಉಳಿಯತಕ್ಕದ್ದು

5. ತಮ್ಮ ಇಚ್ಛೆ ಯೊಂದು ಸಂಗಡವಾಗಿ ಪ್ರತ್ಯೇಕ ಕೂಟವಾಗಿರಲು ಪ್ರಾಂತ್ಯಗಳು ಸ್ವತಂತ್ರವಿವೆ ಈ ಸಂಗಡಗಳು ಸ್ವಂತ ಕಾರ್ಯಕಾರೀ ಸಮಿತಿ ಮತ್ತು ಶಾಸನ ಸಭೆಗಳನ್ನು ರಚಿಸಿಕೊಂಡು ತಮ್ಮೊಳಗಿನ ಪ್ರಾಂತಿಕ ವಿಷಯಗಳಲ್ಲಿ ಸಮಾನ ಧೋರಣೆ ನಿರ್ಧರಿಸಿಕೊಳ್ಳಲು ಬದ್ಧವಿವೆ. ಅಂತೆಯೇ ಬಂಗಾಳ, ಅಸ್ಸಾಮುಗಳು ಒಂದು ತಂಡ, ಪಂಜಾಬು, ಸಿಂಧ್, ಗಡಿನಾಡು ಮತ್ತು ಬಲೂಚಿಸ್ಥಾನಗಳು ಬೇರೊಂದು ತಂಡವಾಗಿಯೂ ಉಳಿದೆಲ್ಲಾ ಪ್ರಾಂತ್ಯಗಳು ಮತ್ತೊಂದು ಗುಂಪಾಗಿಯೂ ಇರತಕ್ಕದ್ದು

6 ಪ್ರಾರಂಭವಾಗಿ 10 ವರುಷಗಳಾದ ಮೇಲೆ, ಅಂತೆಯೇ ಮುಂದಿನ ಹತ್ತು ವರುಷ ಕ್ಕೊಂದಾವರ್ತಿ ಯಾವುದಾದರೊಂದು ಪ್ರಾಂತ್ಯಕ್ಕೆ ತಾನು ಆ ಸಂಗಡದಲ್ಲಿ ಸೇರಿಕೊಳ್ಳುವ ಅಥವಾ ಬಿಡುವ ನಿರ್ಧಾರವನ್ನು ತನ್ನ ಎಸೆಂಬ್ಲಿಯಲ್ಲಿ ಬಹುಮತದಿಂದ ಬದಲಾಯಿಸಿಕೊಳ್ಳಲು ಹಕ್ಕಿದೆ

ರಾಜ್ಯಾಂಗ ರಚನಾ ಸಭೆಯ ನಿರ್ಮಾಣ ವಿಧಾನ

× ಪ್ರಾಯಸ್ಥರಿಗೆಲ್ಲಾ ಮತದಾನದ ಹಕ್ಕನ್ನು ಕೊಟ್ಟು ಅದರಿಂದಾರಿಸಲ್ಪಟ್ಟವರಿಂದಲೇ ಈ ಸಭೆ ನಿರ್ಮಾಣಗೊಳ್ಳುವದು ನ್ಯಾಯವಿದ್ದ ಆದರದಕ್ಕೆ ಬಹಳ ಕಾಲ ಬೇಕಾಗುತ್ತದೆ ಆದ್ದರಿಂದ ಇತ್ತೀಚೆಗೆ ಚುನಾವಣೆಗೊಂಡ ಪ್ರಾಂತಿಕ ಎಸೆಂಬ್ಲಿಗಳನ್ನೇ ಚುನಾವಣಾ ಸಂಸ್ಥೆಗಳಾಗಿ ಗಣಿಸತಕ್ಕದ್ದು

× ಜನಸಂಖ್ಯೆಯ ಒಂದು ಮಿಲಿಯ ಪ್ರಾಯಸ್ಥರಿಗೊಬ್ಬನಂತೆ ಪ್ರತಿನಿಧಿಯನ್ನು ಆಯಾಯ ಪ್ರಾಂತಿಕ ಎಸೆಂಬ್ಲಿ ಸದಸ್ಯರಿಂದಲೇ ಆರಿಸಿಕೊಳ್ಳಬೇಕು

× ಮಿಲಿಯಕ್ಕೊಂದು ಪ್ರಾತಿನಿಧ್ಯ ವಿಂಗಡಿಸುವಾಗ ಸಾಮಾನ್ಯ, ಮುಸಲ್ಮಾನ, ಸಿಖ್, ಎಂಬ ಮೂರು ಸಂಗಡಗಳಾಗಿ ವಿಂಗಡಿಸಬೇಕು. ಮುಸ್ಲಿಂ ಮತ್ತು ಸಿಖ್ಖರನ್ನು ಬಿಟ್ಟು ಉಳಿದವರೆಲ್ಲರೂ 'ಸಾಮಾನ್ಯ' ವರ್ಗಕ್ಕೆ ಸೇರುತ್ತಾರೆ ಆಯಾಯಾ ಸಮಾಜದ ಮಿಲಿಯಕ್ಕೊಬ್ಬನಂತೆ, ಆಯಾ ಸಮಾಜದವನನ್ನೇ ಎಸೆಂಬ್ಲಿಯಿಂದಾರಿಸತಕ್ಕದ್ದು

× ಈ ರಾಜ್ಯಾಂಗ ರಚನಾ ಸಭೆಯೊಡನೆ ಆಶ್ರಿತ ರಾಜ್ಯಗಳು ಒಂದು ಸ್ಪಷ್ಟ ಒಪ್ಪಂದಕ್ಕೆ ಬರುವನಕ ಪ್ರಥಮ ಭಾಗದಲ್ಲಿ ಆಶ್ರಿತರಾಜ್ಯಗಳು ಒಂದು 'ಸಂಧಾನ ಸಮಿತಿ'ಯ ಮೂಲಕ ವ್ಯವಹರಿಸತಕ್ಕದ್ದು ಕೊನೆಯ ಭಾಗದಲ್ಲಿ ಈ ರಾಜ್ಯಾಂಗ ರಚನಾಸಭೆಯಲ್ಲಿ ಸಂಸ್ಥಾನಗಳಿಗೆ 93ಕ್ಕೆ ಮಿಕ್ಕದಷ್ಟು ಪ್ರಾತಿನಿಧ್ಯವಿರತಕ್ಕದ್ದು.

× 'ಸಾಮಾನ್ಯ' ವಿಭಾಗದಲ್ಲಿ ಸೇರಿಹೋಗಿರುವ ಅಲ್ಪ ಸಂಖ್ಯಾತ ಸಮಾಜಗಳಿಗೆ ಸಂಖ್ಯೆಗೆ ಸರಿಯಾದ ಪ್ರಾತಿನಿಧ್ಯ ದೊರೆಯುವಂತೆ ನೋಡುವದಕ್ಕೂ, ನಾಗರಿಕ ಹಕ್ಕುಬಾಧ್ಯತೆಗಳು, ಗುಡ್ಡಗಾಡು ಮತ್ತು ಹೊಂತು ಪಡಿಸಿದ ಕ್ಷೇತ್ರಗಳ ನಿವಾಸಿಗಳ ನ್ಯಾಯ ಸಾಧಿಸಲಿಕ್ಕೂ ಒಂದು ಸಲಹೆಗಾರ ಸಮಿತಿ ರಚಿಸಲ್ಪಡುವದು. ಇವುಗಳಲ್ಲಿ ಯಾವುದನ್ನು ಹೇಗೆ ಕೇಂದ್ರ ಯೂನಿಯನ್ ಅಥವಾ ಪ್ರಾಂತಿಕ ಸಂಗಡಗಳ ಸರಕಾರಗಳಿಗೊಪ್ಪಿಸಬೇಕೆಂಬ ಕುರಿತು 'ರಾಜ್ಯಾಂಗ ರಚನಾ ಸಭೆ'ಯು ಈ ಸಮಿತಿಯ ಸಲಹೆ ಪಡೆಯತಕ್ಕದ್ದು ಚೀಫ್ ಕಮಿಶನರರುಗಳ ಆಳ್ವಿಕೆಯಲ್ಲಿರುವ ಪ್ರಾಂತ್ಯಗಳ ಪರವಾಗಿಯೂ ಈ ಸಭೆಗೆ ಪ್ರತಿನಿಧಿಗಳನ್ನು ನೇಮಿಸಲಾಗುವದು.

× ಮೇಲಿನ ವಿಧಾನಾನುಸಾರವಾಗಿ ಸಭೆಗೆ ಪ್ರತಿನಿಧಿಗಳನ್ನಾರಿಸಿ ಕಳುಹಿಸುವಂತೆ ವೈಸರಾಯರು ಪ್ರಾಂತಿಕ ಎಸೆಂಬ್ಲಿಗಳನ್ನು ಕೇಳಿಕೊಂಡಿದ್ದು ಪ್ರಥಮ 'ರಾಜ್ಯಾಂಗ ರಚನಾ ಸಭೆ'ಯು ಸಧ್ಯದಲ್ಲೇ ದಿಲ್ಲಿಯಲ್ಲಿ ಸೇರಲಿದೆ ಪ್ರಥಮತಃ ಅಧ್ಯಕ್ಷ ಮತ್ತಿತರ ಅಧಿಕಾರಿಗಳ ಚುನಾವಣೆಯಾಗುವದು ಆ ಮೇಲೆ ಅಲ್ಪ ಸಂಖ್ಯಾತ ಹಿತರಕ್ಷಣೆಯ ಸಲಹೆಗಾರ ಸಮಿತಿ ನಿರ್ಮಾಣಗೊಳ್ಳುವದು. ತದನಂತರ ಪೂರ್ವ ನಿಶ್ಚಯದಂತೆ A.B.C. ಪ್ರಾಂತಿಕ ಕೂಟಗಳು ಪ್ರತ್ಯ ಪ್ರತ್ಯೇಕ ಸಭೆ ಸೇರಿ ಸಂಗಡದೊಳಗಿನ ರೂಪರೇಷೆ ನಿರ್ಧರಿಸಿಕೊಳ್ಳುವವು ಬಳಿಕ ಬ್ರಿಟಿಷ್ ಭಾರತದ ರಾಜ್ಯಾಂಗ ರಚನಾ ಸಭೆ ಮತ್ತು ಆಶ್ರಿತ ರಾಜರ 'ಸಂಧಾನ ಸಮಿತಿ'ಯೊಳಗೆ ನಿರ್ಧಾರವಾಗಿ ಇಡೀ ರಾಜ್ಯಾಂಗ ರಚನಾ ಸಭೆಯು ಎಲ್ಲಾ ಕಾರ್ಯ ವಿಧಾನಗಳನ್ನೂ ನಿರ್ಧರಿಸಿ ಕಟ್ಟಳೆ ಪೂರ್ಣತೆಗೊಳ್ಳಬೇಕು

ನಿರ್ಧರಿಸಲ್ಪಟ್ಟ ಪ್ರಾಂತಿಕ ಸಂಗಡಗಳು

× ಅಖಿಲ ಭಾರತದ ಹನ್ನೊಂದು ಪ್ರಾಂತ್ಯಗಳನ್ನು ಎ. ಬಿ. ಸಿ. ಎಂದು ಮೂರು ಸೆಕ್ಷನುಗಳಾಗಿ ವಿಂಗಡಿಸಲಾಗಿದೆ.

× ಎ. ಸೆಕ್ಷನಿನಲ್ಲಿ– ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯ ಪ್ರಾಂತ್ಯ, ಒರಿಸ್ಸಾ.

× ಬಿ. ಸೆಕ್ಷನಿನಲ್ಲಿ ಪಂಜಾಬು, ಗಡಿನಾಡು, ಸಿಂಧ್, ಮತ್ತಿವುಗಳೊಡನೆ ಬ್ರಿಟಿಷ್ ಬಲೂಚಿಸ್ಥಾನವೂ ಸೇರಿದೆ.

× ಸಿ. ಸೆಕ್ಷನಿನಲ್ಲಿ ಬಂಗಾಳ ಮತ್ತು ಅಸ್ಸಾಮ್.

× ರಾಜ್ಯಾಂಗ ರಚನಾ ಸಭೆಗೆ ಜನಸಂಖ್ಯೆಯ ಮಿಲಿಯಕ್ಕೊಬ್ಬ ಪ್ರತಿನಿಧಿಯೆಂಬ ನಿಯಮಾನುಸಾರವಾಗಿ ಎ ಸೆಕ್ಷನಿನ ಮದ್ರಾಸಿಗೆ 49 (45 ಸಾಮಾನ್ಯ 4 ಮುಸ್ಲಿಂ) ಬೊಂಬಾಯಿಗೆ 21 (19 ಸಾಮಾನ್ಯ, 2 ಮುಸ್ಲಿಂ), ಸಂಯುಕ್ತ ಪ್ರಾಂತಕ್ಕೆ 55 (47 ಸಾ 8 ಮು) ಬಿಹಾರ್ 36 (31 ಸಾ 5 ಮು) ಮಧ್ಯ ಪ್ರಾಂತ್ಯ 17 (16 ಸಾ 1 ಮು) ಒರಿಸ್ಸಾ 9 (ಸಾಮಾನ್ಯ ಮಾತ್ರ) ಸ್ಥಾನಗಳು ದೊರೆಯುವವು ಒಟ್ಟಿಗೆ 187 ಸ್ಥಾನಗಳು.

× ಬಿ ಸೆಕ್ಷನಿನ ಪಂಜಾಬಿಗೆ 28, (8 ಸಾಮಾನ್ಯ, 16 ಮುಸ್ಲಿಂ, 4 ಸಿಖ್) ಗಡಿನಾಡು ಪ್ರಾಂತ್ಯಕ್ಕೆ 3 (ಮುಸ್ಲಿಂ ಮಾತ್ರ) ಸಿಂಧ್ ಪ್ರಾಂತ್ಯಕ್ಕೆ 4 (1 ಸಾ 3 ಮು.) ಒಟ್ಟಿಗೆ 35 ಸ್ಥಾನಗಳು.

× ಸಿ ಸೆಕ್ಷನಿನ ಬಂಗಾಳಕ್ಕೆ 60 (27 ಸಾ 33 ಮು) ಅಸ್ಸಾಮು ಪ್ರಾಂತ್ಯಕ್ಕೆ 10 (7 ಸಾ 3 ಮು.) ಜುಮ್ಲಾ 70 ಸ್ಥಾನಗಳು

× ಹೀಗೆ ಬ್ರಿಟಿಷ್ ಭಾರತದ ಮೂರು ಸೆಕ್ಷನುಗಳ ಸದಸ್ಯರ ಒಟ್ಟು ಸಂಖ್ಯೆ 292 ಅದಕ್ಕೆ ಆಶ್ರಿತ ರಾಜ್ಯಗಳ 93 ಮಂದಿ ಪ್ರತಿನಿಧಿಗಳು ಸೇರಿ 'ರಾಜ್ಯಾಂಗ ರಚನಾ ಸಭೆ'ಯು 385 ಸದಸ್ಯರುಳ್ಳದ್ದಾಗುವದು.

× ಈ ಹೊಸ ಘಟನೆಗನುಸಾರವಾಗಿ ಪ್ರಾಂತಿಕ ಚುನಾವಣೆಗಳು ನಡೆದ ಮೇಲೆ ಸೇರುವ ಯಾವುದೇ ಪ್ರಾಂತ್ಯದ ಎಸೆಂಬ್ಲಿಯಲ್ಲಿ ಬಹುಮತದಿಂದ ಹಾಗೆ ನಿರ್ಧಾರವಾದರೆ ಆ ಪ್ರಾಂತ್ಯವು ಆ ಸಂಗಡದಿಂದ ಪ್ರತ್ಯೇಕವಾಗುವ ಸ್ವಾತಂತ್ರ್ಯವಿದೆ. ಅಂತೆಯೇ ಪ್ರತಿಯೊಂದು ಪ್ರಾಂತಿಕ ಎಸೆಂಬ್ಲಿಗೆ ಬಹುಮತಾನುಸಾರವಾಗಿ ಪ್ರತಿ 10 ವರುಷಗಳಿಗೊಮ್ಮೆ ಈ ಸಂಬಂಧವನ್ನು ಬದಲಾಯಿಸಿಕೊಳ್ಳುವ ಹಕ್ಕಿದೆ

× ಎಲ್ಲಾ ವಿಷಯಗಳನ್ನು ಬೇಕಾದಂತೆ ರೂಪಿಸಿಕೊಳ್ಳುವ, ತಿದ್ದಿಕೊಳ್ಳುವ, ಹೊಂದಿಸಿಕೊಳ್ಳುವ ಪೂರ್ಣಾಧಿಕಾರ ರಾಜ್ಯಾಂಗರಚನಾ ಸಭೆಗಿದೆ

ANNOUNCEMENT.

Your presence is cordially welcome for the opening ceremony of the

SHIRVA HINDU HIGH SCHOOL

on Sunday, the 2nd June 1946 at 10-45 A. M.

K Muddu Shetty,
President

With best compliments from the Executive Council of the B N Vidyavardhaka Sangha

ಪ್ರಕಟಣೆ

ತಾ 2-6-1946ನೇ ಆದಿತ್ಯವಾರ ಪೂರ್ವಾಹ್ನ 10 45 ಗಂಟೆಗೆ

ಶಿರ್ವ ಹಿಂದೂ ಹೈಸ್ಕೂಲಿನ

ಪ್ರಾರಂಭೋತ್ಸವ ಜರಗಲಿರುವುದು

ವಿದ್ಯಾಭಿಮಾನಿಗಳೆಲ್ಲರಿಗೂ ಸುಸ್ವಾಗತ

ಕೆ. ಮುದ್ದು ಶೆಟ್ಟಿ, ಪ್ರೆಸಿಡೆಂಟ್

ಬಿ ಎನ್. ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಳಿಯ ಸವಿನಯ ಆಮಂತ್ರಣ

ಬ್ರಿಟಿಷ್ ಮಂತ್ರಿ ಸಮಿತಿಯು ಭಾರತ ಯೋಜನೆ.

ಪಾಕಿಸ್ತಾನ ಅವ್ಯವಹಾರ್ಯ, ಅಪಾಯಕರ, ಅಸಾಧ್ಯ!

ಕಾಂಗ್ರೆಸ್ ವಾದವೂ ಸರಿಯಲ್ಲ, ಆಶ್ರಿತರಾಜರಿಗೆ ಬ್ರಿಟಿಷ್ ಸಿಂಹಾಸನ ಸಂಬಂಧವಿಲ್ಲ.

ಬ್ರಿಟಿಷರು ಹಿಂದುಸ್ಥಾನವನ್ನು ಹಿಡಿದಿದ್ದ ಸುಮಾರು 200 ವರುಷಗಳ ಅವಧಿಯಲ್ಲಿ ಇದೀಗ ಮೊದಲ ಬಾರಿ ಒಂದು ನ್ಯಾಯಬದ್ಧ-ಶ್ಲಾಘನೀಯ-ಸದ್ಭಾವ ಪ್ರೇರಿತ ನಿರ್ಧಾರವನ್ನು ಸಾರಿದ್ದಾರೆ. ಮೇ ತಾ. 16ರಲ್ಲಿ ಲಂಡನ್ ಮತ್ತು ನವದಿಲ್ಲಿಯಲ್ಲಿ ಏಕಕಾಲಕ್ಕೆ ಘೋಷಣೆಗೊಂಡ ಬ್ರಿಟಿಷ್ ಮಂತ್ರಿಮಂಡಲಿಯವರ ಜಾಹೀರುನಾಮೆಯು ಸುದೀರ್ಘವಾಗಿದೆ. ಆ ಜಾಹೀರುನಾಮೆಯಲ್ಲಿ ಭಾವೀ ಭಾರತ ವ್ಯವಸ್ಥೆಯ ರೂಪರೇಷೆಗಳು (ಈ ಸಂಚಿಕೆಯ ೬ನೇ ಪುಟದಲ್ಲಿ ಬಂದಿವೆ) ಮಾತ್ರವಲ್ಲ; ಮುಖ್ಯ ಸಮಸ್ಯೆಯಾಗಿದ್ದ ಪಾಕಿಸ್ತಾನದ ಕುರಿತೂ ಸರಿಯಾದ ವಿಮರ್ಶೆ ಒಂದಿದೆ. ಆ ಕುರಿತು ನ್ಯಾಯವಾದಿಗಳೆಲ್ಲರೂ 'ಸೈಸೈ' ಎನ್ನುವಂತಹ ತೀರ್ಮಾನವನ್ನು ಅವರಿತ್ತಿದ್ದಾರೆ. ದೋಷಗಳಿದ್ದರೂ ಭಾರತದ ಭಾವೀ ಚರಿತ್ರೆಯ ದಪ್ತರಗಳ ಮುನ್ನುಡಿ-ಭಾರತೀಯ ಭವ್ಯ ನವ ಕಟ್ಟಡದ ತಳಹದಿ-ಹಿಂದೀಯರ ಅದೃಷ್ಟ ಲೇಖನಕ್ಕಿಳಿದ ಮೂಲ ಗೆರೆ, ಎನ್ನಬಹುದಾದ ಆ ಜಾಹೀರುನಾಮೆಯ ಮುಖ್ಯ ಹೇಳಿಕೆಗಳನ್ನಿಲ್ಲಿ ಉದ್ಧರಿಸಲಾಗಿದೆ.

'ಪಾಕಿಸ್ತಾನ್' ಬೇಡಿಕೆ

ಬ್ರಿಟಿಷ್ ಮಂತ್ರಿನಿಯೋಗದವರು ಪ್ರಧಾನಿ ಅಟ್ಲಿಯವರ ಭಾಷಣದ ಮೂಲ ವಾಕ್ಯಗಳನ್ನೆತ್ತಿ-ಅದಕ್ಕನುಸಾರವಾಗಿ ಮುಖ್ಯ ಹಿಂದೀ ಪಕ್ಷಗಳೆರಡನ್ನು ಒಂದುಗೂಡಿಸಲು ಕಳೆದೆರಡು ತಿಂಗಳುಗಳಲ್ಲಿ ತಾವು ಭಾರತದಲ್ಲಿ ಮಾಡಿದ ಶತ ಪ್ರಯತ್ನಗಳನ್ನೂ ಸಿಮ್ಲಾ ಸಮ್ಮೇಲನದ ಪರಾಭವವನ್ನೂ ನಮೂದಿಸಿ, ಪಾಕಿಸ್ತಾನದ ಕುರಿತು ಬರೆದ ತೀರ್ಮಾನ ಹೀಗೆ: "ನಾವು ಪಡೆದ ಅತಿ ಹೆಚ್ಚಿನ ಸಾಕ್ಷ್ಯಗಳನ್ನು ಇಲ್ಲಿ ಪ್ರಸ್ತಾಪಿಸುವದು ಅನಪೇಕ್ಷಿತ. ಆದರೆ ನಿಜಕ್ಕೂ ಒಂದು ವಿಷಯವನ್ನು ಇಲ್ಲಿ ನಮೂದಿಸಬೇಕಾಗಿದೆ- ಮುಸ್ಲಿಂ ಲೀಗಿನ ಹಿಂಬಾಲಕರನ್ನು ಬಿಟ್ಟರೆ ಸಾಮಾನ್ಯತಃ ಮಿಕ್ಕೆಲ್ಲರೂ ಪ್ರದರ್ಶಿಸಿದುದು ಹಿಂದುಸ್ಥಾನದ ಐಕ್ಯತೆಯ ಬಯಕೆಯೊಂದನ್ನೇ. ಆದರೆ ಇಷ್ಟರಿಂದಲೇ ಪಾಕಿಸ್ತಾನದ ಸಾಧ್ಯತೆಯನ್ನು ಸೂಕ್ಷ್ಮವಾಗಿ ಮತ್ತು ನಿಷ್ಪಕ್ಷಪಾತವಾಗಿ ನಾವು ವಿಚಾರಿಸದಿರಲಿಲ್ಲ. ಯಾಕೆಂದರೆ, ನಾವು ಹಿಂದೂ ಬಹುಸಂಖ್ಯಾತರ ಆಳ್ವಿಕೆಗೊಳಗಾಗಬಾರದೆಂದು ಮುಸ್ಲಿಮರಲ್ಲಿದ್ದ ಯಥಾರ್ಥ ಹಾಗೂ ಅತ್ಯಾಳದ ಆತುರವು ನಮ್ಮ ಮನಸ್ಸಿಗೆ ನಾಟಿದ್ದಿತು. ಆಭಾವನೆ ಯೆಷ್ಟು ಬಲವಾಗಿ ಮತ್ತು ಸರ್ವ ವ್ಯಾಪಿಯಾಗಿದೆಯೆಂದರೆ ಕೇವಲ ಬರವಣಿಗೆಯ ಭದ್ರತೆಯಿಂದದನ್ನು ಸಂತೈಸಲು ಸಾಧ್ಯವಿಲ್ಲ. ಭಾರತದೊಳಗೆ ಆಂತರಿಕ ಶಾಂತಿಯುಳಿಯಬೇಕಾದರೆ ಮುಸ್ಲಿಮರ ಸಂಸ್ಕೃತಿ, ಧರ್ಮ, ಆರ್ಥಿಕಸ್ಥಿತಿ ಮತ್ತಿತರ ಮುಖ್ಯ ವಿಷಯಗಳ ರಕ್ಷಣೆಯ ಹಂಚಿಕೆಗಳು ಅವರಪಾಲಿಗೆ ಸಿಗಲೇ ಬೇಕು. ಇದನ್ನು ಮನಗಂಡ ನಾವು ಪ್ರಥಮತಃ ಮುಸ್ಲಿಂ ಲೀಗ್ ಕೇಳುವ ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ಪಾಕಿಸ್ತಾನವನ್ನೇ ಪರೀಕ್ಷೆಗೆತ್ತಿಕೊಂಡೆವು. ಇಂತಹ ಪಾಕಿಸ್ತಾನದಲ್ಲಿ ಎರಡು ಕ್ಷೇತ್ರಗಳಿರುತ್ತವೆ. ಒಂದು ಪಂಜಾಬು, ಸಿಂಧ್, ಗಡಿನಾಡು ಪ್ರಾಂತ್ಯಗಳನ್ನೂ, ಬ್ರಿಟಿಷ್ ಬಲೂಚಿಸ್ಥಾನವನ್ನೂ ಒಳಗೊಂಡ ವಾಯುವ್ಯತುಂಡು; ಮತ್ತೊಂದು ಬಂಗಾಳ ಮತ್ತು ಅಸ್ಸಾಮು ಪ್ರಾಂತ್ಯಗಳಿರುವ ಈಶಾನ್ಯ ತುಂಡು. ಈ ಪಾಕಿಸ್ತಾನದ ಬೇಡಿಕೆಯು ಎರಡು ವಾದಗಳನ್ನಾಧರಿಸಿದ್ದಿತು. ಮುಸ್ಲಿಂ ಬಹುಸಂಖ್ಯಾಕರಿರುವಲ್ಲಿ ಅವರ ಬಯಕೆಯ ಸರಕಾರವಿರಬೇಕೆಂಬುದೊಂದು; ಪಾಕಿಸ್ತಾನದ ಆಡಳಿತೆ ಮತ್ತು ಆರ್ಥಿಕ ಸ್ಥಿತಿಯಲ್ಲಿ ವ್ಯವಹಾರ ಯೋಗ್ಯ ಭದ್ರತೆಯಿರುವದಕ್ಕಾಗಿ ಮುಸಲ್ಮಾನರು ಅಲ್ಪ ಸಂಖ್ಯಾಕರಾಗಿರುವ ಒತ್ತು ಭಾಗಗಳನ್ನೂ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂಬುದಿನ್ನೊಂದು.

ಪಾಕಿಸ್ತಾನ್ ಮತ್ತು ಮುಸಲ್ಮಾನ್ ಸಂಖ್ಯೆ

ಪಾಕಿಸ್ತಾನದ ವಾಯುವ್ಯ ಕ್ಷೇತ್ರದೊಳಗಿನ ಪಂಜಾಬಿನಲ್ಲಿ 16,217,242 ಮುಸಲ್ಮಾನರಿದ್ದರೆ 12,201,577 ಮುಸಲ್ಮಾನೇತರರಿದ್ದಾರೆ. ಸಿಂಧಿನಲ್ಲಿ ಮುಸಲ್ಮಾನರು 3,208,325, ಇತರರು, 1,326,683 ಗಡಿನಾಡು ಪ್ರಾಂತ್ಯದಲ್ಲಿ ಮುಸಲ್ಮಾನರು 2,788,797, ಇತರರು 249,270. ಬಲೂಚಿಸ್ಥಾನದಲ್ಲಿ ಮುಸ್ಲಿಂ 438,930, ಇತರರು 62,701. ಆ ಕ್ಷೇತ್ರದಲ್ಲಿ ಒಟ್ಟು 22653294 ಮುಸಲ್ಮಾನರಿದ್ದರೆ 13,840,231 ಮುಸಲ್ಮಾನೇತರರಿದ್ದಾರೆ. ಅರ್ಥಾತ್ ಜನ ಸಂಖ್ಯೆಯು ಸೇ. 62-07 ಮುಸ್ಲಿಮರಾದರೆ ಸೇ. 37-93ರಷ್ಟು ಬೇರೆಯವರು. ಇನ್ನೊಂದು ಕ್ಷೇತ್ರವಾದ ಈಶಾನ್ಯ ತುಂಡಿನ ಬಂಗಾಳದಲ್ಲಿ ಮುಸಲ್ಮಾನರು 33,005,434. ಇತರರು 27,301,091, ಅಸ್ಸಾಮಿನಲ್ಲಿ, 3,442,479 ಮುಸ್ಲಿಮರು; 6,762,254, ಬೇರೆಯವರು. ಈ ತುಂಡಿನಲ್ಲಿ ಒಟ್ಟಿಗೆ 36,447,913 ಮುಸ್ಲಿಮರೂ, 34,063,345 ಮುಸಲ್ಮಾನೇತರರೂ ಇದ್ದಾರೆ. ಅರ್ಥಾತ್ ಸೇಕಡಾ 51-69ರಷ್ಟು ಮುಸ್ಲಿಮರಿದ್ದರೆ ಸೇ 18-31 ರಷ್ಟು ಇತರರಿದ್ದಾರೆ. ಬ್ರಿಟಿಷ್ ಹಿಂದುಸ್ಥಾನದ ಉಳಿದ ಎಲ್ಲಾ ಭಾಗದಲ್ಲಿ ಸುಮಾರು 20 ಮಿಲಿಯ ಮುಸಲ್ಮಾನರು ಸುಮಾರು 188ಮಿಲಿಯ ಮುಸಲ್ಮಾನೇತರರ ನಡುವೆ ಹರಡಿ ಬಿದ್ದಿದ್ದಾರೆ. ಪಾಕಿಸ್ತಾನವನ್ನು ನಿರ್ಮಿಸಿದ ಮಾತ್ರಕ್ಕೆ ಜಾತೀಯ ಅಲ್ಪ ಸಂಖ್ಯಾಕ ಪ್ರಶ್ನೆಯು ತೀರ್ಮಾನಗೊಳ್ಳುವಂತಿಲ್ಲವೆಂಬುದನ್ನು ಮೇಲಿನ ಅಂಕೆ ಸಂಖ್ಯೆಗಳು ತೋರಿಸುತ್ತವೆ ಮಾತ್ರವಲ್ಲ, ಮುಸಲ್ಮಾನರಲ್ಲದವರೇ ಅತ್ಯಧಿಕ ಸಂಖ್ಯೆಯಲ್ಲಿರುವ ಪಂಜಾಬು, ಬಂಗಾಳ ಮತ್ತು ಅಸ್ಸಾಮಿನ ಜಿಲ್ಲೆಗಳನ್ನು ಸ್ವತಂತ್ರ ರಾಷ್ಟ್ರ ಪಾಕಿಸ್ತಾನದೊಳಗೆ ಸೇರಿಸುವದಕ್ಕೂ ನ್ಯಾಯವಿಲ್ಲ. ನಮ್ಮ ಅಭಿಪ್ರಾಯವೆಂದರೆ, ಪಾಕಿಸ್ತಾನದ ಪರವಾಗಿ ಮುಂದೊಡ್ಡುವ ಪ್ರತಿಯೊಂದು ವಾದವನ್ನೂ, ಪಾಕಿಸ್ತಾನದಿಂದ ಮುಸಲ್ಮಾನೇತರ ಭಾಗಗಳನ್ನು ಪ್ರತ್ಯೇಕಿಸುವ ಕುರಿತೂ ಮುಂದೆ ಮಾಡಬಹುದು. ಈ ವಾದವು ಸಿಖ್ಖರ ಮಟ್ಟಿಗೆ ವಿಶೇಷತಃ ಲಾಗೂವಾಗುತ್ತದೆ.

ಸಣ್ಣ ಪಾಕಿಸ್ತಾನವಾದರೂ ಸಾಧ್ಯವೆ?

ಲೀಗ್ ಬೇಡಿಕೆಯ ಪಾಕಿಸ್ತಾನದ ನಿರ್ಮತಿಯು ಇಷ್ಟನ್ನು ಸ್ಪಷ್ಟಪಡಿಸಿದ ಮೇಲೆ, ಮುಸಲ್ಮಾನರು ಬಹುಸಂಖ್ಯೆಯಲ್ಲಿರುವ ಭಾಗಗಳನ್ನು ಮಾತ್ರ ಪಾಕಿಸ್ತಾನವಾಗಿ ವಿಂಗಡಿಸಿದರಾದೀತೇ ಎಂದು ನಾವು ಪರ್ಯಾಲೋಚಿಸಿದೆವು. ತೀರಾ ಅವ್ಯವಹಾರ್ಯವೆಂಬುದರಿಂದ ಇದಕ್ಕೆ ಮುಸ್ಲಿಂ ಲೀಗೇ ಒಪ್ಪಲಿಲ್ಲ. ಯಾಕೆಂದರೆ, ಹೀಗೆ ಮಾಡಿದಲ್ಲಿ ಪಂಜಾಬಿನ ಅಂಬಾಲಾ ಮತ್ತು ಜಲಂಧರು ಡಿವಿಜನುಗಳೂ, ಸಿಲ್ಹೆಟ್ ಜಿಲ್ಲೆಯೊಂದನ್ನು ಬಿಟ್ಟು ಉಳಿದ ಇಡೀ ಅಸ್ಸಾಮು ಪ್ರಾಂತ್ಯವೂ, ಜನ ಸಂಖ್ಯೆಯಲ್ಲಿ ಕೇವಲ ಸೇ.23-6ರಷ್ಟು ಮುಸಲ್ಮಾನರಿರುವ ಕಲ್ಕತ್ತಾ ನಗರ ಸಮೇತ ಪಶ್ಚಿಮ ಬಂಗಾಳದ ದೊಡ್ಡ ಭಾಗವೂ ಪಾಕಿಸ್ತಾನದಿಂದ ಹೊರಗಾಗುತ್ತವೆ. ಮಾತ್ರವಲ್ಲ; ಪಂಜಾಬು, ಬಂಗಾಳ ಪ್ರಾಂತ್ಯಗಳನ್ನು ತುಂಡರಿಸುವದು ಅವುಗಳ ಅಧಿಕ ಸಂಖ್ಯಾಕ ಜನತೆಯ ಹಿತಸಂಬಂಧ ಹಾಗೂ ಅಭಿಪ್ರಾಯಗಳಿಗೆ ಬದ್ಧ ವಿರೋಧವೆಂಬುದೂ ನಮಗೆ ಕಂಡಬಂದಿತು. ಇಡೀ ಬಂಗಾಳ ಮತ್ತು ಪಂಜಾಬುಗಳು ಸ್ವಂತ ಭಾಷೆ, ಪುರಾತನ ಚರಿತ್ರೆ ಹಾಗೂ ಪರಂಪರಾಗತ ರೂಢಿಗಳಿರುವ ಏಕರೂಪೀ ಪ್ರಾಂತ್ಯಗಳು. ಅಷ್ಟು ಮಾತ್ರವೆ? ಪಂಜಾಬನ್ನು ವಿಭಾಗಿಸಿದಲ್ಲಿ ಎರಡು ಭಾಗಗಳಲ್ಲೂ ಸಿಖ್ಖರು ವಿಶೇಷ ಸಂಖ್ಯೆಯಲ್ಲಿ ವಿಂಗಡಿಸಲ್ಪ

S. V. H. HIGH SCHOOL

the only Residential High School in Karnatak area

VISWENDRANAGAR, INNANJE P. O., S. Kanara.

FOUNDER:—

Late Viswendra Thirtha Swamiar of Sode Vadiraja Mutt Udipi.

Reopens on 3rd JUNE, 1946.

Conducts classes up to S. S. L. C.—Medium of instruction, Kannada and English—Efficient, Qualified, Resident staff—Special attention to Sanskrit—Well ventilated, up to date equipped school buildings in a hillock area amidst complete rural surroundings—Special attention to extra-curricular activities-Extensive playground—Playing games under supervision and guidance of teachers.

SRI VADIRAJA GURUKLA (Hostel)

Separate accommodation for boys and girls under expert supervision—Vegitarian diet—Brahmin cooking—Healthy and wholesome food—Hostel expenses extremely moderate—Extra arrangements for the rich—Resident qualified medical attendance—Well ventilated, equipped rooms for lodging—Healthy coastal climate—Separate Bunts' Section.

Apply to the Headmaster for further details—

INNANJE, 5—5—1946

Srinivasa Mithanthaya,
MANAGER.

ಮುಟ್ಟಾಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಅಸ್ವಸ್ಥ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— ಕುಮಾರಿ ಮಾತ್ರೆಗಳು ನಿಶ್ಚಿತ ಪರಿಣಾಮ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲಿಷ್ಟ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

P. O. S. (A. K) Tollygunge. Calcutta.

ಸ್ಟಾಕಿಸ್ಟ್: ... ಕಂಪೆನಿ, ಬೆಂಗಳೂರು

ಬ್ರಿಟಿಷ್ ಪ್ರತಿನಿಧಿಗಳೊಡನೆ ರಾಷ್ಟ್ರಪತಿ

ಎಡದಿಂದ ಬಲಕ್ಕೆ— ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸ್, ರಾಷ್ಟ್ರಪತಿ ಮೌ ಆಜಾದ್ ಮಿ ಅಸಫ ಅಲಿ, ಮಿ ಎ ವಿ ಅಲೆಕ್ಸಾಂಡರ್ (ಕ್ರಿಪ್ಸರ ಬಲಭಾಗ ಅರ್ಧ ಮರೆಯಲ್ಲಿ), ಸರ್ ಸ್ಟಾಫೋರ್ಡ್ ಕ್ರಿಪ್ಸ್

ಟ್ಟು ಬೇರೆ ಬೇರೆಯಾಗಬೇಕಾಗುತ್ತದೆ ಈ ಕಾರಣಗಳಿಂದಾಗಿ, ಜಾತೀಯ ಸಮಸ್ಯೆಗೊಂದು ತೀರ್ಮಾನವಾಗಿ ದೊಡ್ಡದಾದ ಅಥವಾ ಸಣ್ಣ ಆಕಾರದ ಸ್ವತಂತ್ರ ಪಾಕಿಸ್ತಾನವಾವುದನ್ನೂ ನಿರ್ಮಿಸಲಾಗುವದಿಲ್ಲವೆಂಬ ನಿರ್ಧಾರಕ್ಕೆ ನಾವು ಬರಬೇಕಾಯಿತು

ಇತರ ತೊಡಕುಗಳು

ಮೇಲಿನ ಸಮರ್ಥನಗಳಷ್ಟೇ ಅಲ್ಲ, ಆಡಳಿತೆ, ಆರ್ಥಿಕಸ್ಥಿತಿ ಮತ್ತು ಸೇನಾ ಸಂಬಂಧವಾದ ಇತರ ಬೇರೆ ವಿಷಯಗಳನ್ನೂ ಪರ್ಯಾಲೋಚಿಸಬೇಕಾಗಿದೆ, ಇಡೀ ಭಾರತದ ಸಂಚಾರ ಸಾಗಣೆ ವ್ಯವಸ್ಥೆಗಳು, ಟಪ್ಪಾಲು ತಂತೀ ಪದ್ಧತಿಗಳು ಅಖಿಲ ರಾಷ್ಟ್ರೀಯ ಅಸ್ತಿವಾರವನ್ನಾಧರಿಸಿವೆ ಇವುಗಳನ್ನು ಇಬ್ಭಾಗಿಸಿದಲ್ಲಿ ಹಿಂದೂಸ್ಥಾನದ ಎರಡು ಭಾಗಗಳಿಗೂ ವಿಶೇಷ ಹಾನಿಯಿದೆ

ಅಖಿಲ ಭಾರತೀಯ ರಕ್ಷಣೆಯ ಪ್ರಶ್ನೆಯಂತೂ ಮತ್ತಷ್ಟು ಬಲವಾದುದು ಹಿಂದೀ ಸೇನೆಗಳು ಏಕರಾಷ್ಟ್ರೀಯ ರಕ್ಷಣೆಯ ದೃಷ್ಟಿಯಿಂದ ಏಕರೂಪೀ ನಿರ್ಮಾಣಗೊಂಡಂಥವುಗಳು ಅವುಗಳನ್ನು ಇಬ್ಭಾಗ ಮಾಡಿಬಿಟ್ಟಲ್ಲಿ ಅವುಗಳ ಶಕ್ತಿಯ ಮೇಲ್ಮಟ್ಟವೇ ಕುಸಿದು ಬೀಳಬಹುದು, ಮತ್ತು ಮಹತ್ವಾದ ಅಪಾಯಕ್ಕೆ ಹೇತುವಾಗಬಹುದು ಹಿಂದೀ ನೌಕೆ ಮತ್ತು ಆಕಾಶ ಬಲಗಳ ಚೇತನವೂ ತೀರ ಕುಗ್ಗಿ ಹೋಗಬಹುದು. ಮಾತ್ರವಲ್ಲ, ಆಂತಹ ಪಾಕಿಸ್ತಾನದ ಎರಡು ತಂಡಗಳೆಂದಾಗಿ ಹಿಂದುಸ್ಥಾನದೊಳಗಡೆಯಲ್ಲಿ ಎರಡು ಅತಿದೊಡ್ಡ ಗಡಿಗಳು ನಿರ್ಮಾಣಗೊಂಡು. ಪಾಕಿಸ್ತಾನ್ ಕ್ಷೇತ್ರದ ವಿಸ್ತಾರವು ಅವುಗಳ ರಕ್ಷಣಾ ವ್ಯವಸ್ಥೆಗೇನೇನೂ ಸಹಕಾರಿಯಾಗುವಂತಿಲ್ಲ ಇನ್ನೊಂದು ತೊಡಕೆಂದರೆ ಆಶ್ರಿತ ರಾಜ್ಯಗಳು ಭಾರತದ ಇವೆರಡು ವಿಭಾಗಗಳಲ್ಲಿ ಯಾವದಾಲಿಗೆ ಸೇರಬೇಕೆಂಬ ಕುರಿತು ಏಳುವ ಸಮಸ್ಯೆ. ಕೊನೆಯದಾಗಿ ಭೌಗೋಲಿಕ ತೊಡಕೊಂದು ಪ್ರತ್ಯೇಕವಿದೆ ಅಪೇಕ್ಷಿತ ಪಾಕಿಸ್ತಾನದ ಎರಡು ದಳಗಳನ್ನು ನಡುವಿನ ಸುಮಾರು 700ಮೈಲು ದೂರವು ವಿಂಗಡಿಸಿ ಹಾಕಿದೆ, ಯುದ್ಧಕಾಲದಲ್ಲಾಗಲೀ ಶಾಂತಿ ಕಾಲದಲ್ಲಾಗಲೀ ಆ ಎರಡರ ನಡುವೆ ಸಂಚಾರ ವ್ಯವಹಾರ ಸಂಬಂಧ ವಿರಬೇಕಾದರೆ ಮಧ್ಯದಲ್ಲಿರುವ ಹಿಂದುಸ್ಥಾನದ ಔದಾರ್ಯವನ್ನೇ ಅವಲಂಬಿಸಬೇಕು ಇವೆಲ್ಲಾ ಕಾರಣಗಳಿಂದಾಗಿ ಬ್ರಿಟಿಷ್ ಸರಕಾರವು ತನ್ನ ಕೈಯಲ್ಲಿರುವ ಅಧಿಕಾರವನ್ನು ಹಿಂದು ಸ್ಥಾನದ ಸಂಪೂರ್ಣ ಸ್ವತಂತ್ರವಾದ ಎರಡು ಪ್ರತ್ಯೇಕ ಭಾಗಗಳಿಗೆ ಒಪ್ಪಿಸತಕ್ಕದ್ದೆಂದು ಬ್ರಿಟಿಷ್ ಸರಕಾರಕ್ಕೆ ನಾವು ಶಿಫಾರಸು ಮಾಡುವಂತಿಲ್ಲ

ಕಾಂಗ್ರೆಸ್ ಯೋಜನೆ ಅನ್ವಯಾರ್ಹ

ಆದರೆ ಸಂಯುಕ್ತವಾಗುವ ಭಾರತದಲ್ಲಿ ಬಹು ಸಂಖ್ಯಾಕರಾಗುವ ಹಿಂದುಗಳ ಅಳ್ವಿಕೆಗೊಳಗಾಗಿ ತಮ್ಮ ಸಂಸ್ಕೃತಿ, ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳು ನಜ್ಜುಗುಜ್ಜಾಗುವವೆಂಬ ಮುಸಲ್ಮಾನರ ಸಹಜ ಹೆದರಿಕೆಯ ಕಡೆಗೆ ನಾವು ಗಮನ ಕೊಟ್ಟಿರುವೆವು ಈ ಭಯ ನಿವಾರಣೆಗಾಗಿ ಕಾಂಗ್ರೆಸ್ ಮುಂದಿಟ್ಟ ಯೋಜನೆಯಂತೆ, ವಿದೇಶ ಸಂಬಂಧ ರಕ್ಷಣೆ ಸಂಚಾರ ವ್ಯವಹಾರ ಇತ್ಯಾದಿ ಕಲವೇ ಕೇಂದ್ರಾಧಿಕಾರಗಳನ್ನು ಬಿಟ್ಟು ಉಳಿದುವೆಲ್ಲಾ ಪ್ರಾಂತ್ಯಾಧಿಕಾರಕ್ಕೆ ಸೇರಬೇಕು, ಆರ್ಥಿಕ ಹಾಗೂ ಆಡಳಿತೆಯ ಪಕ್ಷಿಗೂ ವಿಶಾಲ ಕ್ಷೇತ್ರವಿರಬೇಕೆಂದಿಚ್ಛಿಸುವ ಪ್ರಾಂತ್ಯಗಳು, ಮೇಲಿನ ಕಡ್ಡಾಯ ಪಾದ ವಿಭಾಗಗಳಂತೆಯೇ ಬೇರೆ ವಿಭಾಗಗಳನ್ನೂ ಐಚ್ಛಿಕ ವಿಷಯಗಳಾಗಿ ಕೇಂದ್ರಕ್ಕೊಪ್ಪಿಸಬಹುದು ಎಂದಿದೆ ಈ ಯೋಜನೆಯಿಂದ ವಿಶೇಷ ರೀತಿಯ ವಿಧಾಯಕ ಗೊಂದಲಗಳೂ ತಿಕ್ಕಾಟಗಳೂ ಏಳಬಹುದೆಂದ ನಮ್ಮ ಅಭಿಪ್ರಾಯ ಕೇಂದ್ರದಲ್ಲಿ ಕಲವು ಮಂತ್ರಿಗಳು ಕಡ್ಡಾಯ ವಿಷಯಗಳನ್ನೂ, ಇನ್ನು ಕಲವರು ಕಲವು ಪ್ರಾಂತ್ಯಗಳ ಮಟ್ಟಿಗೆ ಮಾತ್ರ ಐಚ್ಛಿಕ ವಿಷಯಗಳನ್ನೂ ನಿರ್ವಹಿಸಬೇಕಾಗುವದು ಕೇಂದ್ರ ಎಸೆಂಬ್ಲಿಯಲ್ಲಿ ಕೂಡಾ ತಮ್ಮ ಪ್ರಾಂತ್ಯಕ್ಕೆ ಸಂಬಂಧಪಡದ ವಿಷಯಗಳು ಚರ್ಚೆಗೆ ಬರುವಾಗ ... ಸದಸ್ಯರು ... ಬೇ... ಇಂತಹ ... ದ ... ಕಲವ ... ವಿಷಯಗಳ ...

ಪರಿಕ್ಕನಾದ ಪ್ರಾಂತ್ಯಗಳು ತಮ್ಮೊಳಗೇನೇ ಒಂದು ಪಂಗಡ ಮಾಡಿ ಅದಕ್ಕೊಪ್ಪಿಸಿಕೊಡಲು ಬಯಸಿದರೆ, ಆ ಹಕ್ಕನ್ನು ಕೊಡುವದು ನ್ಯಾಯವಿದೆ ಇದರಿಂದ ಆ ಪ್ರಾಂತ್ಯಗಳು ತಮ್ಮದೇ ಆದ ಅಧಿಕಾರವನ್ನು ಒಂದು ವಿಶಿಷ್ಟ ವಿಧಾನದಿಂದ ಉಪಯೋಗಿಸಿದಂತಾಯಿತೇ ಹೊರತು ಬೇರೇನೂ ಇಲ್ಲ.

ಸಂಸ್ಥಾನಗಳ ಸ್ಥಾನ

ಕೊನೆಯದಾಗಿ ಆಶ್ರಿತ ರಾಜ್ಯಗಳು ಮತ್ತು ಬ್ರಿಟಿಷ್ ಭಾರತದೊಳಗಿನ ಸಂಬಂಧದ ಕುರಿತು ಒಂದು ಸ್ಪಷ್ಟೀಕರಣವಿದೆ ... ಕಾಮನ್ ವೆಲ್ತಿನೊಳಗಿರಲಿ, ... ಬ್ರಿಟಿಷ್ ಭಾರತವು ಸ್ವತಂತ್ರ ... ಆಶ್ರಿತ ರಾಜ್ಯಗಳಿಗೂ ... ಸಿಂಹಾಸನಕ್ಕೂ ಇರುವದೆಗಿದ್ದ ... ದವನ್ನು ಇಟ್ಟುಕೊಳ್ಳುವದಾಗಲೀ ... ರವನ್ನು ಬ್ರಿಟಿಷ್ ಸಿಂಹಾಸನವಿಟ್ಟುಕೊಳ್ಳುವಂತೆಯೂ ಇಲ್ಲ, ಅದನ್ನು ಭಾರತದ ಹೊಸ ಸರಕಾರಕ್ಕೆ ವ

(೬ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್
ಗ್ರಾಹಕರ ನಡುವೆ ಸ್ಥಾಪಿತವಾಗಿ 1೦ ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S K.

WANTED
Three Organisers for the District of South Kanara on a salary ranging from Rs. 75/-to Rs. 225/-p m on a nominal guarantee of business. For further particulars, please apply to the **Secretary** who is now camping in Udipi.
THE
UNITED KARNATAK INSURANCE Co., Ltd.
UDIPI
H O DHARWAR. Estd 1929

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

CAPITAL

Authorised	... ...	Rs 25,00,000
Issued & Subscribed	... ...	,, 16,00,000
Paid up	... ...	,, 15,60,120
Reserves	... ...	,, 4,60,000

ANNOUNCEMENT.

A Branch will be opened at BYADGI (Dharwar Dt.) **on 22nd May 1946.**

All kinds of banking business transacted

ನವಯುಗ

ಉಡುಪಿ, ಗುರುವಾರ, ೨೩-೫-'೪೬

ಬ್ರಿಟಿಷ್ ತೀರ್ಮಾನ

ಭಾರತದ ಭಾವೀ ರಾಜ್ಯಭಾರದ ರೀತಿ ನೀತಿ ಶೋಧಿಸಲು ಇಲ್ಲಿಗಾಗಮಿಸಿದ್ದ ಬ್ರಿಟಿಷ್ ಸಚಿವ ಸಮಿತಿಯು ಕೊನೆಗಿತ್ತ ತೀರ್ಮಾನವು ರಾಷ್ಟ್ರದ ಮುಂದಿದೆ. ಅದು ಪ್ರಕಟಗೊಂಡ ತಾ. 16ನೇ ರಾತ್ರಿಯಿಂದಿದು ವರೆಗೆ ಇಡೀ ದೇಶವೇ ವಿಚಾರವೇದಿಕೆಯಾಗಿ ಮಾರ್ಪಟ್ಟಿದೆ. ಅದು ವರೆಗೆ ಡೆಲ್ಲಿ, ಸಿಮ್ಲಾದಲ್ಲಿ ನಡೆಯುತ್ತಿದ್ದ ವಿಚಾರ ಮಂಥನಕ್ಕೆ ಈಗ ಅಖಿಲ ಭಾರತವೇ ಕಳಶಾಗಿ ಹೋಗಿದೆ. ಈ ಕುರಿತು ಅಭಿಪ್ರಾಯ ವ್ಯಕ್ತಮಾಡಲು ಕಾಂಗ್ರೆಸಿಗಾಗಲೀ, ಮುಸ್ಲಿಂ ಲೀಗಿಗಾಗಲೀ, ಈ ತನಕ ಸಾಧ್ಯವಾಗಿಲ್ಲವೆಂಬುದರಿಂದ ವಿಷಯವೆಷ್ಟು ಅಗಾಧವಿದೆ ಎಂಬುದನ್ನೂಹಿಸಬಹುದು. ರಾಷ್ಟ್ರದ ಭವಿಷ್ಯಕ್ಕೆ ಹಾಕಿದ ಅಸ್ತಿವಾರವಿದು; ಈ ತೀರ್ಪಿನ ಪ್ರತಿಯೊಂದು ಭಾಗ, ವಾಕ್ಯ, ಶಬ್ದ ಕೂಡಾ ಶಾಶ್ವತ ಪರಿಣಾಮವನ್ನುಂಟು ಮಾಡುವಂತಹದು; ಆದ್ದರಿಂದ ಆಳವಾಗಿ ವಿಚಾರಿಸದೆ ಈ ಕುರಿತು ಅಭಿಪ್ರಾಯ ವ್ಯಕ್ತಮಾಡುವದು ಅವಿವೇಕವಾಗುವದು.

ಆದರೆ ವಿಮರ್ಶೆಗೂ ಒಂದು ಮಿತಿಬೇಕು. ಪ್ರಾಮುಖ್ಯ ವಿಷಯವೆಂಬುದರಿಂದ, ಅದರ ಅಣುಅಣುವನ್ನೂ ತಿಕ್ಕಿತಿಕ್ಕಿ ನೋಡಿದಲ್ಲಿ ಅದರಲ್ಲಿ ಸಹಜವಾಗಿ ಸೇರಿರುವ ದುರ್ವಾಸನೆ ಈ ತಿಕ್ಕಾಟದ ಫಲವಾಗಿ ಹುಟ್ಟಬಹುದು; ಎಂತಹ ಸಂದರ್ಭದಲ್ಲೇ ಆದರೂ ಮಿತಿಮೀರಿದ ಸೂಕ್ಷ್ಮ ವಿಮರ್ಶೆಯು ಸಂದೇಹ, ಭೀತಿಗಳನ್ನು ಹುಟ್ಟಿಸುತ್ತದೆ. ವಿಮರ್ಶೆಯ ಹೆಸರಿನಿಂದ ಚಂಚಲ ಮನೋವೃತ್ತಿಯೇಳುತ್ತದೆ. ಆದ್ದರಿಂದ ಬ್ರಿಟಿಷ್ ಯೋಜನೆಯ ವಿಮರ್ಶೆಯಲ್ಲಿ ಯಾರೂ ತೂಕ ತಪ್ಪಬಾರದು; ಅದರ ನಿರ್ಮಾಪಕರು ಊಹಿಸದಿದ್ದ ಅರ್ಥವನ್ನು ಕಟ್ಟಬಾರದು.

ಒಂದು ಮಾತು ನಿಜ. ಈ ಬಾರಿ ಬ್ರಿಟಿಷರು ತಮ್ಮ ಪಾಲಿನ ಅಪವಾದವನ್ನು ಅನ್ಯರ ತಲೆಯ ಮೇಲೆ ಹಾಕಿ ತಪ್ಪಿಸಿಕೊಂಡಿಲ್ಲ. ನಿಜಕ್ಕೂ ದೋಷಮುಕ್ತರಾಗಿದ್ದಾರೆ. ಬ್ರಿಟಿಷ್ ಯೋಜನೆ ನಿರ್ದೋಷವಾಗಿದೆ ಎಂಬರ್ಥವಲ್ಲ; ಅದರ ರಾಜ್ಯಾಂಗ ರಚನಾ ವಿಭಾಗವಂತೂ ಕನಸಿನ ಗಂಟಿನಂತೆ ಕೈಗೆಟಕದೆ ಹೋಗುವದು ಸಂಭವನೀಯ; ಅದರ ಕೆಲವು ಭಾಗಗಳಲ್ಲಿ ಅಂತಹ ಅಸ್ಪಷ್ಟತೆಯಿದೆ, ಹೇಗೆ ಮಾಡಿದರೂ ಒಂದು ತೀರ್ಮಾನಕ್ಕೆ ಒಲಿಯಾಗದ ಹಲವು ವಿಷಯಗಳು ಅದರಲ್ಲಿ ಸೇರಿಹೋಗಿವೆ. ಆದರೆ ಇವಕ್ಕಾಗಿ ಬ್ರಿಟಿಷರನ್ನು ದೂರಲು ನಮ್ಮ ಮನಸ್ಸೊಪ್ಪುವದಿಲ್ಲ. ಎಷ್ಟೆಂದರೂ ಬ್ರಿಟಿಷರು ನಮ್ಮವರಲ್ಲ; ಮೂರನೆಯವರು. ಇಲ್ಲಿಂದ ತಮ್ಮ ಗಂಟು ಮೂಟೆ ಕಟ್ಟುವ ಒಂದೇ ಕೆಲಸವು ಅವರ ಪಾಲಿಗುಳಿಯುವಂತೆ ಮಾಡುವ ಯೋಗ್ಯತೆಯು ಹಿಂದೀಯರಲ್ಲಿರಬೇಕಿತ್ತು, ಅದಿರಲಿಲ್ಲವಾದ್ದರಿಂದ ಇಲ್ಲಿಯ ಭಾವೀ ವ್ಯವಸ್ಥೆಯನ್ನೂ ಸೂಚಿಸಿಹೋಗುವ ಕೆಲಸ ಅವರದಾಯಿತು. ಅವರ ಅಧಿಕಾರವು ಜೇಡನನ್ನಿನ ಸ್ಥಿತಿಗೆ ನಾಸೇರಿದರೂ, ಅವರ ತೀರ್ಮಾನವು ಅನಗತ್ಯವೆನ್ನುವ ಘನಸ್ಥಿತಿ ನಮ್ಮಲ್ಲಿರಲಿಲ್ಲ. ಆದ್ದರಿಂದಲೇ ಕೊನೆಯ ಭಾಗದಲ್ಲಿ ಬ್ರಿಟಿಷರು ಕಲೆಕ್ಟರ್ ಸ್ಥಾನದಿಂದ ತಪ್ಪಿದರೂ ಜಡ್ಜ್ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟರು. ಇದಕ್ಕಾಗಿ ನಾವು ಲಜ್ಜೆ ಪಡಬೇಕು. ಹೀಗೆ ಸ್ಥಾನಾಂತರ ಹೊಂದುವಾಗ ಅವರಾವ ವಂಚನೆಯನ್ನೂ ಮಾಡಿಲ್ಲ. ತಮ್ಮ ಅಧಿಕಾರವನ್ನು ಭಾರತಕ್ಕೊಪ್ಪಿಸಿಕೊಡುವ ವಿಧಾನವನ್ನು ಈ ಬಾರಿ ಸ್ಪಷ್ಟವಾಗಿ ತಿಳಿಸಿದ್ದಾರೆ. "ನೀವಪೇಕ್ಷಿಸುವ ಮಾದರಿಯ ಸ್ವಾತಂತ್ರ್ಯವು (ಬ್ರಿಟಿಷ್ ಕಾಮನ್‌ವೆಲ್ತಿನೊಳಗಿರುವದಾಗಲೀ ಇಲ್ಲದಿರುವದಾಗಲೀ ನಿಮ್ಮಿಷ್ಟ) ನಿಮ್ಮದಾಗಿರಲಿ—ಅದನ್ನು ರೂಪಿಸಿಕೊಳ್ಳುವದರಲ್ಲಿ ನೇರವಾಗಿ ಒಂದು ಒಮ್ಮತಕ್ಕೆ ಬರಲೊಪ್ಪುವದಿಲ್ಲ ತಾನೆ? ಹಾಗಾದರೆ ಆ ವಿಧಾನವನ್ನೂ ನಾವೇ ಸೂಚಿಸುತ್ತೇವೆ—ಇಗೊಳ್ಳಿ, ಹೀಗೆ ಮಾಡಿ...." ಎಂದು ಬ್ರಿಟಿಷರೀಸಲ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದ್ದಾರೆ; ತಮ್ಮ ಪೈ ಹೇಳಿದ್ದುದನ್ನು ನಿಜಕ್ಕೂ ರೂಪಿಸಿಕೊಂಡಿದ್ದಾರೆ. ಇನ್ನು ನಾವವರನ್ನು ದೂರುವದ ವರೆ, ಅದಕ್ಕೆರಡೇ ಕಾರಣವಿರಬೇಕು. ನಮ್ಮಿಂದ ದೂರಸ್ಥರಿದ್ದ ಬೇರಾವುದನ್ನೂ ಪಡೆಯಲಾಗದ ರೀತಿಯಲ್ಲಿಯೇ ಬ್ರಿಟಿಷರಿದುವರೆಗೆ ವರ್ತಿಸಿದವರಾದ್ದರಿಂದ ಜನರಿಲ್ಲಿನ ಆ ಭಾವನೆಯನ್ನು ಪಕ್ಕನೇ ಬದಲಾಯಿಸಲಾಗದುದು ಒಂದನೇ ಕಾರಣ; ಬ್ರಿಟಿಷ್ ಸೂಚನೆಗಳಲ್ಲಿ ನಾವು ದೋಷಗಳನ್ನು ಕಾಣುತ್ತಿರುವದು ಎರಡನೇ ಕಾರಣ. ಮೊದಲನೆಯದು ಅರ್ಥಶೂನ್ಯವಾದುದು. ಯಾವುದೂ ಶಾಶ್ವತವಾಗಿರದ ಈ ಪ್ರಪಂಚದಲ್ಲಿ ಬ್ರಿಟಿಷ್ ಸ್ವಾರ್ಥ ಮತ್ತು ವಂಚನೆ ಮಾತ್ರ ಶಾಶ್ವತವೆಂದಿಟ್ಟುಕೊಂಡರೂ ಬ್ರಿಟಿಷರ ಸ್ವಂತಹಿತಕ್ಕಾಗಿಯೇ ಭಾರತಕ್ಕೆ ಅಧಿಕಾರದಾನ ಮಾಡುವ ಅವಶ್ಯಕತೆಯೀಗ ಬಂದಿದೆ ಎಂದೇಕೆ ನೆನೆಸಬಾರದು? ಎರಡನೆಯ ಕಾರಣವು ನಿರಾಧಾರವಾದುದೆಂದು ಯಾರೂ ಹೇಳುವದಿಲ್ಲ. ಅವರ ತೀರ್ಮಾನದಲ್ಲಿ ತಪ್ಪುಗಳು ಸೇರಿ ಹೋಗಿವೆ; ಅನ್ಯಾಯಗಳಾಗಿವೆ. ಕಾಂಗ್ರೆಸ್ ಬದಿಯಲ್ಲಿ ನಿಂತು ನೋಡಿದಾಗ ಪ್ರಾಂತಿಕ ಪಂಗಡಗಳು—ಲೀಗ್ ಕಡೆಯಿಂದ ನೋಡುವಾಗ ಕೇಂದ್ರಸರಕಾರ—ಸಿಖ್ಖರ ಬದಿಯಿಂದ ನೋಡುವಾಗ, B ಪ್ರಾಂತಿಕ ಪಂಗಡ—ಅಂತೆಯೇ ಇತರ ಸಮಾಜ, ಪಂಗಡಗಳ ದೃಷ್ಟಿಯಿಂದ ನೋಡಿದರೆ ಅದರ ಇತರ ಅಂಗಾಂಗಗಳು ಕಲ್ಮಷದ ಮುದ್ದೆಯೇ ಆಗಿರುವಂತೆ ಕಾಣಬಹುದು. ಪಾಕಿಸ್ತಾನದ ವಿರುದ್ಧವಾಗಿ ಸುದೀರ್ಘ ತೀರ್ಪನ್ನು ಬರೆದವರು, ವಿಸ್ತಾರದ ಮಟ್ಟಿಗೆ ಸಂಪೂರ್ಣವಾಗಿಯೂ, ಅಧಿಕಾರದ ಮಟ್ಟಿಗೆ ಅರೆವಾಸಿಯನ್ನೂ ಮಿ. ಜಿನ್ನರ ಪಾಕಿಸ್ತಾನ್ ಬೇಡಿಕೆಯನ್ನು ಕಾರ್ಯತಃ ಸಲ್ಲಿಸಿದ್ದಾರೆ ಎಂಬುದು ಒಡೆದು ಕಾಣುತ್ತಿದೆ. ಲೀಗ್ ಬೇಡಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದಂತೆ ಅಡ್ಡ ಬರುವ ವಸ್ತುಸ್ಥಿತಿಯನ್ನು ಅಂತರ್ಯತಃ ಶಪಿಸುವಷ್ಟು ಲೀಗಿನ ಮೇಲಿನ ಸಹಾನುಭೂತಿ ಬ್ರಿಟಿಷ್ ರಾಜ್ಯಭಾರಿಗಳಿಗಿತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಸಹಾನುಭೂತಿಯೂ ನ್ಯಾಯವನ್ನಿಸುತ್ತದೆ. ಬ್ರಿಟಿಷರು ತಮ್ಮ ಸೂಚನೆಗಳಲ್ಲಿ ಮುಸ್ಲಿಮರಿಗಿತ್ತಿರುವ ರಿಯಾಯತಿಗಳನ್ನು ಮಿ. ಜಿನ್ನರು ಅಂಗೀಕರಿಸಿಕೊಳ್ಳುವಂತಿದ್ದರೆ ಸಂಧಾನ ಸಾಧ್ಯತೆಗಾಗಿ ಕಾಂಗ್ರೆಸ್ ಪ್ರಮುಖರೇ ಕಟ್ಟಕಡೆಗೆ ಒಪ್ಪಿಕೊಳ್ಳುತ್ತಿದ್ದರೇನೋ ಎಂದು ನಮಗನ್ನಿಸುತ್ತದೆ. ಕೇಂದ್ರಕ್ಕೆ ಕರೆನ್ಸಿಯ ಅಧಿಕಾರ—ಪ್ರತಿಯೊಂದು ಪ್ರಾಂತ್ಯಕ್ಕೆ ಪ್ರಾಂತಿಕ ಪಂಗಡದಲ್ಲಿ ಸೇರುವ ಯಾ ಸೇರದಿರುವ ಪೂರ್ಣಾಧಿಕಾರ ಅಥವಾ ಪ್ರಾಂತಿಕ ಶಾಸನ ಸಭೆಗಳ ಮೇಲೆ ಪಂಗಡವಾರು ಶಾಸನಸಭೆಯ ಅಧಿಕಾರವಿಲ್ಲದಿರುವುದು—ರಾಜ್ಯಾಂಗ ರಚನಾ ಸಭೆಯಲ್ಲಿ ಲೀಗ್ ಸೇರಲೊಪ್ಪದಿದ್ದರೂ ಶಂಕಿಸದೆ ಮುಂದೊತ್ತುವ ಭರವಸೆ—ಇತ್ಯಾದಿಗಳನ್ನು ಸ್ಪಷ್ಟ ಮಾಡಿಕೊಂಡೇ ಹೆಜ್ಜೆ ಮುಂದಿಡಬೇಕಾಗಿದೆ. ಈ ನ್ಯಾಯಬದ್ಧ ಅಧಿಕಾರಗಳಿಗೆ ವಿರುದ್ಧ ತೀರ್ಮಾನ ದೊರೆಯಿತೆಂದೇ ವಾದಕ್ಕಾಗಿ ಭಾವಿಸಿಕೊಂಡರೂ ಮೂರನೆಯವರಾದ ಬ್ರಿಟಿಷರು ನ್ಯಾಯಾಧೀಶರಂತೆ ವರ್ತಿಸಿದ್ದಾರೆಂಬುದನ್ನು ಒಪ್ಪಬೇಕು. ಪ್ರಾಂತಿಕ ಪಂಗಡ ವಿಭಾಗಗಳ ಅಡ್ಡ ಗೋಡೆಗಳು ಒಳಗಡೆಯಲ್ಲಿ ಹೊಸತಾಗಿ ಎದ್ದರೂ, ಇದುವರೆಗೆ ಬೇರೆಯಾಗಿದ್ದ ಆಶ್ರಿತ ರಾಜ್ಯಗಳೆಂಬ ಕೋಠಡಿಗಳು ಕೇಂದ್ರಕ್ಕೆ ಜೋಡಣೆಗೊಳ್ಳಲಿವೆ; ಇವೆಲ್ಲವುಗಳು ಕೇಂದ್ರ ಯೂನಿಯನ್ನಿನ ಒಂದೇ ಮಾಡಿನೊಳಗೆ ಬಂದು ಅಖಂಡ ಭಾರತದ ಭವ್ಯ ನಕಾಶೆಯೆದ್ದಿದೆ. ಈ ಕಟ್ಟಡ ಪೂರ್ಣಗೊಳ್ಳುವವರೆಗೆ ನಡುಗಾಲ ರಾಷ್ಟ್ರೀಯ ಸರಕಾರವಾಗಲಿದೆ, ಆದ್ದರಿಂದ ಒಟ್ಟಿನ ಮೇಲೆ ಈ ವ್ಯವಸ್ಥೆಗಾಗಿ ಸಮಾಧಾನಪಡಬೇಕು. ತಾತ್ಕಾಲಿಕ ಸರಕಾರ ಮತ್ತು ಶಾಶ್ವತ ರಾಜ್ಯಾಂಗ ರಚನೆಗೆ ದೊರೆಯುವ ಸಮ್ಮತಿಯಾನೆ ಅಸಮ್ಮತಿಯೆಷ್ಟೆಂಬುದನ್ನು ಗಣಿಸುತ್ತಾ ನಿಲ್ಲದೆ, ಇದೊಂದು ಅನಿವಾರ್ಯ ಹಂಚಿಕೆಯೆಂಬ ದೃಢ ನಿರ್ಧಾರದಿಂದ ಕಾರ್ಯವನ್ನು ಮುಂದೊತ್ತುವದು ಬಾಕಿಯಿದ್ದರೂ, ಪ್ರಕೃತ, ಈ ಕರಡು ವ್ಯವಸ್ಥೆಗಾಗಿ ಬ್ರಿಟಿಷರನ್ನು ಅಭಿನಂದಿಸಬಹುದು.

ಉಡುಪಿ

ಕೆಲಸಗಾರರ ಸಾರ್ವಜನಿಕ ಸಭೆಗಳು—ಬೀಡಿ ಮಾಲಕ ಸಂಘದೊಂದು ನಿರ್ಧಾರದ ನಿಷೇಧಾರ್ಥ ತಾ. 15ರಲ್ಲಿ ರಥಬೀದಿಯಲ್ಲಿಯೂ, ಮಗ್ಗ ಮಜೂರನೊಬ್ಬನಿಗೆ ಪೋಲೀಸ್ ಸ್ಟೇಶನಿನಲ್ಲಿ ಹೊಡೆದುದರ ನಿಷೇಧಾರ್ಥವಾಗಿ ತಾ 17 ಮತ್ತು 18ರಲ್ಲಿ ಗಾಂಧೀ ಮೈದಾನಿನಲ್ಲಿಯೂ ಉಡುಪಿಯ ಬೀಡಿ ಮತ್ತು ನೇಯಿಗೆ ಕೆಲಸಗಾರ ಸಂಘಗಳ ಪತಿಯಿಂದ ಸಾರ್ವಜನಿಕ ಸಭೆಗಳು ಸೇರಿದ್ದುವು. ಶ್ರೀಗಳಾದ ಕೆ. ಕೇಶವ ಕಾಮತ್, ಎಸ್. ಎಸ್. ಹೊಳ್ಳರು ಭಾಷಣಗಳನ್ನಿತ್ತಿದ್ದರು.

Navayuga Enterprise Ltd. Udipi

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,

ಉಡುಪಿ.

ತಾ. 12—5—'1946ರಲ್ಲಿ ಜರಗಿದ ಪಾಲುದಾರರ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಪಾಲು ಭಂಡವಾಳವನ್ನು 1,00,000 ರೂಪಾಯಿಗೆ ಹೆಚ್ಚಿಸುವ ನಿರ್ಣಯ ಮಾಡಲ್ಪಟ್ಟಿರುವುದು. ಆ ಸಂಬಂಧ ರೂ 10ರ 5000 ಹೊಸ ಪಾಲುಗಳನ್ನು ಹೊರಡಿಸಲಾಗಿದೆ. (ಪ್ರತಿ ಪಾಲಿಗೂ ರೂ 1/ ಪ್ರವೇಶ ಧನ ಪ್ರತ್ಯೇಕ) ಈ ಹೊಸ ಪಾಲುಗಳು ಈಗಿನ ಪಾಲುದಾರರಿಗೆ ಮಾತ್ರವೇ ಅವರವರಿಗೆ ಈಗಿರುವ ಪಾಲುಗಳಿಗೆ 1ಕ್ಕೆ 4ರಂತೆ ಕೊಡಲ್ಪಡುವವು. ಪ್ರತಿ ಪಾಲುದಾರರಿಗೂ ಪಾಲು ಅರ್ಜಿಗಳು ಕಳಿಸಲ್ಪಟ್ಟಿವೆ. ಅವರೆಲ್ಲರೂ ಆ ಪಾಲು ಅರ್ಜಿಯನ್ನು ಬರೆದು ತಕ್ಕ ಹಣದೊಂದಿಗೆ ತಾ 30-6-46ರ ಒಳಗಾಗಿ ಆದಷ್ಟು ಬೇಗನೆ ಕಳಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ. ತಾ 30-6-46ರ ಅವಧಿಯೊಳಗಾಗಿ ಅರ್ಜಿ ಹಾಗೂ ಹಣವು ಪಾವತಿಯಾಗದಿದ್ದರೆ ಹೊಸ ಪಾಲುಗಳು ಬೇಡವೆಂದೆಣಿಸಲ್ಪಟ್ಟು ಅವು ಇತರರಿಗೆ ಕೊಡಲ್ಪಡುವವು.

ಕೆ. ಎಚ್. ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್.

ಕೆ. ಜೆ. ಬಲ್ಲಾಳ್, ವಕೀಲ್, ಚೆಯರ್‌ಮೇನ್.

ಬ್ರಿಟಿಷ್ ಜಾಹೀರುನಾಮೆಯ ನಂತರ—

ಇದೇ ಮೇ ತಾ. 16ನೇ ರಾತ್ರಿ 8 ಘಂಟೆಗೆ ಬ್ರಿಟಿಷ್ ಜಾಹೀರುನಾಮೆಯನ್ನು ಭಾರತ ಕಾರ್ಯದರ್ಶಿ ಲೋರ್ಡ್ ಫೆಥಿಕ್ ಲಾರೆನ್ಸರು ನವದಿಲ್ಲಿಯಿಂದ ಆಕಾಶವಾಣಿ ಮೂಲಕ ಘೋಷಿಸಿದರು. ಅದರ ಬೆನ್ನಲ್ಲೇ ಪತ್ರಿಕಾಪ್ರತಿನಿಧಿಗಳ ಸಭೆಯಲ್ಲಿ ಸರ್. ಸ್ಟಾಫೋರ್ಡ್ ಕ್ರಿಪ್ಸರು ಅದನ್ನು ವರ್ಣಿಸಿದರು. ಇದೇ ಸಮಯದಲ್ಲಿ ಲಂಡನಿನ ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಅಟ್ಲಿಯವರು ಅದನ್ನು ಜಾಹೀರು ಮಾಡಿದರು. ಮಿ. ಚರ್ಚಿಲ್ಲರದನ್ನು ವಿರೋಧಿಸಿ ಭಾಷಣವಿತ್ತರಲ್ಲದೆ ಇತರ ಸದಸ್ಯರೂ ತಂತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮಂತ್ರಿತ್ರಯರ ಪ್ರಯತ್ನವು ಸರ್ವರಿಂದಲೂ ಶ್ಲಾಘನೆ ಪಡೆಯಿತು.

ತಾ. 17ನೇ ರಾತ್ರಿ ನವದಿಲ್ಲಿಯಿಂದ ವೈಸರಾಯಿ ವೇವೆಲರು ಆಕಾಶವಾಣೀ ಭಾಷಣವೀಯುತ್ತಾ ಕೇಂದ್ರದಲ್ಲಿ ನಡುಗಾಲ ರಾಷ್ಟ್ರೀಯ ಸರಕಾರ ಸ್ಥಾಪಿಸುವ ತಮ್ಮ ದೃಢ ನಿರ್ಧಾರವನ್ನು ತಿಳಿಸಿ ಹೃತ್ಪೂರ್ವಕ ಎಲ್ಲರ ಸಹಕಾರ ಸಹಾನುಭೂತಿಯನ್ನು ಕೋರಿದರು. ಅದರ ಶಿರಸ್ಸಾಗಿರುವ ತನ್ನ ಜೊತೆ, ಯುದ್ಧ ಸದಸ್ಯರ ಸಮೇತ ಎಲ್ಲರೂ ಹಿಂದೀಯರೇ ಆಗುವರೆಂದೂ, ಜನ ಬೆಂಬಲವುಳ್ಳ ಪ್ರಮುಖರನ್ನೇ ಆರಿಸಿಕೊಳ್ಳಲಾಗುವದೆಂದೂ ವೈಸರಾಯರು ಸ್ಪಷ್ಟಪಡಿಸಿದರು. ಅಂದೇ ರಾತ್ರಿ ಭಾರತದ ಸರ್ವ ಸೇನಾನಿ ಜನರಲ್ ಆಚಿನ್ ಲೆಕರು ನವದಿಲ್ಲಿಯಿಂದ ಹಿಂದೀ ಸೇನೆಗೆ ಆಕಾಶವಾಣಿ ಮೂಲಕ ಹಿಂದಿಯಲ್ಲೇ ಭಾಷಣವಿತ್ತರು. ಇದು ವರೆಗೆ ತನ್ನದಾಗಿದ್ದ ಯುದ್ಧ ಮಂತ್ರಿ ಸ್ಥಾನವು ಹಿಂದೀ ನಾಗರಿಕಾಧಿಕಾರಿಗೆ ಹೋಗಲಿದೆಯೆಂದೂ, ತಾನಿನ್ನು ಆ ಮಂತ್ರಿಯ ಕೈಕೆಳಗೆ, ಬ್ರಿಟಿಷ್ ಮಂತ್ರಿಯಡಿಯಲ್ಲಿ ಕೆಲಸಮಾಡುವ ಬ್ರಿಟಿಷ್ ಸೇನಾನಿಯಂತೆಯೇ ಇರುವೆನೆಂದೂ ಸೌಹಾರ್ದಪೂರ್ಣ ಮಾತುಗಳನ್ನಾಡಿದರು.

ಬ್ರಿಟಿಷ್ ಯೋಜನೆಗಳ ಕುರಿತು ಪತ್ರಿಕಾಪ್ರತಿನಿಧಿಗಳ ಸೂಕ್ಷ್ಮ ಶೋಧನಾತ್ಮಕ ಪ್ರಶ್ನೆಗಳಿಗೆ ಲೋರ್ಡ್ ಫೆಥಿಕ್ ಲಾರೆನ್ಸರೂ ಸರ್. ಸ್ಟಾಫೋರ್ಡ್ ಕ್ರಿಪ್ಸರೂ ಉತ್ತರಗಳನ್ನಿತ್ತರು. ಗಾಂಧಿಜೀ ಮತ್ತು ಮೌಲಾನಾ ಆಜಾದರೂ ಫೆಥಿಕ್ ಲಾರೆನ್ಸ್ ಮತ್ತು ಕ್ರಿಪ್ಸರೊಡನೆ ದೀರ್ಘ ಸಂಭಾಷಣೆ ನಡೆಸಿದ್ದರು.

ಕಾಂಗ್ರೆಸಿನ ಅಂಗೀಕಾರ, ಲೀಗಿನ ಧಿಕ್ಕಾರದ ನಿರೀಕ್ಷೆ.

ಲೀಗಿಗೆ ಮಿ. ಜಿನ್ನರ ರಾಜಿನಾಮೆಯೆ?

ಪ್ರಾಮುಖ್ಯ ತಿದ್ದುಪಡಿ, ಸುಧಾರಣೆಗಳು ಅತ್ಯಾವಶ್ಯ ವಿಷಯೆಂಬುದನ್ನು ಸೂಚಿಸಿದರೂ ಒಪ್ಪಿನಮೇಲೆ ಮಹಾತ್ಮಗಾಂಧಿ ಸಮಾಧಾನ ಸೂಚಿಸಿದರು. "ಈ ದುಃಖಮಯ ಭೂಮಿಯನ್ನು ಆನಂದಮಯವಾಗಿ ಮಾರ್ಪಡಿಸುವ ಮೂಲ ಬೀಜಗಳು ಈ ಸೂಚನೆಗಳಲ್ಲಿ ಅಡಗಿವೆ. ಬ್ರಿಟಿಷ್ ಸಮಿತಿಯು ತಾನು ಮುಂದಿಟ್ಟ ಈ ಸೂಚನೆಗಳಿಗಾಗಿ ಶ್ಲಾಘನಾರ್ಹವಾದ ಹೆಗ್ಗಳಿಕೆ ಪಡೆಬಹುದು" ಎಂದು ನವದಿಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀ ಶ್ಲಾಘನೆ ಸಲ್ಲಿಸಿದರು. ಸರ್ ಪಕ್ಷಗಳಂತೂ ಘೋಷಣೆ ಕೇಳಿದೊಡನೆ ಭಾರತ ಕಾರ್ಯದರ್ಶಿ, ವೈಸರಾಯಿ, ಗಾಂಧಿಜೀಗೆ ಧನ್ಯವಾದಗಳ ತಂತಿಕೊಟ್ಟು ಇದನ್ನಂಗೀಕರಿಸುವಂತೆ ಕಾಂಗ್ರೆಸ್ ಪ್ರಮುಖರನ್ನು ಕೇಳಿಕೊಂಡಿದ್ದಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಾ|18ರಿಂದ ನವದಿಲ್ಲಿಯಲ್ಲಿ ಸೇರಿ ಗಾಢ ವಿಮರ್ಶೆ ನಡಿಸುತ್ತಿದೆ. ಕೇಂದ್ರಕ್ಕೆ ಕಡಿಮೆ ಅಧಿಕಾರ, ಇಷ್ಟಬಂದ ಪ್ರಾಂತ್ಯಕ್ಕೆ ಪ್ರಾಂತಿಕ ಸಂಗಡದಲ್ಲಿ ಸೇರದಿರುವ ಅಧಿಕಾರ, ಇತ್ಯಾದಿ ಆವಶ್ಯಕ ವಿದ್ಯಮಾನಗಳ ಕುರಿತು ಸ್ಪಷ್ಟೀಕರಣವನ್ನದು ಕೇಳಿದೆ ಎಂದು ತಿಳಿದು ಬರುತ್ತದೆ.

ಮಿ. ಜಿನ್ನರು ಸಮ್ಮೇಲನಕ್ಕಾಗಿ ಹೋದವರು ಇನ್ನೂ ಸಿಮ್ಲಾದಲ್ಲೇ ಇದ್ದಾರೆ. ಬ್ರಿಟಿಷ್ ತೀರ್ಮಾನದ ಕುರಿತು ಯಾವ ಅಭಿಪ್ರಾಯವನ್ನೂ ಪ್ರಕಟಿಸಲಿದುವರೆಗೆ ಒಪ್ಪಿಲ್ಲ. ಇನ್ನು ಒಂದೆರಡು ದಿನಗಳೊಳಗೆ ತನ್ನ ಅಭಿಪ್ರಾಯವನ್ನವರು ಹೊರಗೆಡಹುವರಂತೆ. ಲೀಗ್ ಕಾರ್ಯಕಾರೀ ಸಮಿತಿಯು ಜೂನ್ 3ಕ್ಕೆ ನವದಿಲ್ಲಿಯಲ್ಲಿ ಸೇರುವ ವ್ಯವಸ್ಥೆಯಾಗಿದೆ. ಸಿಮ್ಲಾ ಸಮ್ಮೇಲನದಲ್ಲಿ ಲೀಗ್ ಪ್ರತಿನಿಧಿಗಳಾಗಿದ್ದ ಉಳಿದ ಮೂವರೂ ತಮ್ಮೊಳಗೆ ಗಾಢ ಯೋಚನೆ ನಡಿಸಿ ಮಿ. ಜಿನ್ನರ ಸಲಹೆ ಪಡೆಯಲು ಸಿಮ್ಲಾಕ್ಕೆ ಹೋಗಿದ್ದಾರೆ. ಲೀಗ್ ವಲಯಗಳಲ್ಲೆಲ್ಲಾ ಒಳಗಿಂದೊಳಗೆ ಗಾಢ ವಿಚಾರ ಮಂಥನ ನಡೆದಿದೆ.

ಮುಸ್ಲಿಂ ಪ್ರಾಂತಿಕ ಸಂಗಡದೊಳಗೆ ತಮ್ಮನ್ನು ಸೇರಿಸಿದ್ದಕ್ಕಾಗಿ ಸಿಖ್ಖರಿಲ್ಲಾ ರೇಗಿ ಬಿದ್ದಿದ್ದಾರೆ. ಅವರು ನಿಷೇಧದಿನವಾಚರಿಸಲಿದ್ದಾರೆ. ಡಾ| ಅಂಬೇಡ್ಕರರೂ ದಲಿತ ವರ್ಗಕ್ಕನ್ಯಾಯವಾಗಿದೆ ಎಂದು ಸಿಟ್ಟಾಗಿದ್ದಾರೆ.

ಆಶ್ರಿತ ರಾಜರ ಕೂಟದ ಸ್ಥಾಯೀ ಸಮಿತಿಯು ಜೂನ್ 1ಕ್ಕೆ ಬೊಂಬಾಯಿಯಲ್ಲಿ ಸೇರಿ ಬ್ರಿಟಿಷ್ ಸೂಚನೆಗಳನ್ನು ಪರ್ಯಾಲೋಚಿಸಲಿದೆ.

ಬ್ರಿಟಿಷ್ ಪ್ರತಿನಿಧಿಗಳೊಡನೆ ಕಾಂಗ್ರೆಸ್ ಮತ್ತು ಲೀಗ್ ಅಧ್ಯಕ್ಷರು ನವದಿಲ್ಲಿಯಲ್ಲೂ ಸಿಮ್ಲಾದಲ್ಲೂ ನಡಿಸಿದ್ದ ಪತ್ರವ್ಯವಹಾರಗಳು-ಇತರ ಪ್ರಾಮುಖ್ಯ ದಾಖಲೆಗಳು-ಈಗ ಪ್ರಕಟಗೊಂಡಿವೆ. ಮಿ. ಜಿನ್ನರು ಮುಸ್ಲಿಂಲೀಗ್ ಅಧ್ಯಕ್ಷತೆಗೆ ರಾಜೀನಾಮೆ ಕೊಡುವರೆಂಬ ದಟ್ಟ ವದಂತಿ ಲೀಗ್ ವಲಯದಲ್ಲಿ ಹಬ್ಬಿದೆ.

ಮಂಗಳೂರು.

ವಿವಾಹ ಸಮಾರಂಭ- ಶ್ರೀ ಎ. ಬಿ. ಶೆಟ್ಟಿ, ಎಮ್. ಎಲ್. ಎ.ರವರ ಪುತ್ರ ಶ್ರೀ ದಯಾನಂದ ಶೆಟ್ಟರು ಶ್ರೀ ಎ. ವಿಠಲ ಪೂಂಜರ ಪುತ್ರಿ ಸೌ| ಇಂದಿರೆಯನ್ನೂ, ಕುಂದಾಪುರ ವಕೀಲ್ ಶ್ರೀ ಕೆ. ವೆಂಕಪ್ಪ ಶೆಟ್ಟರ ಪುತ್ರ ಶ್ರೀ ಸೀತಾರಾಮ ಶೆಟ್ಟರು ಶ್ರೀ ಎ. ಬಿ. ಶೆಟ್ಟರ ಪುತ್ರಿ ಸೌ| ಮಾಲತಿಯನ್ನೂ ಇದೇ ತಾ 19ರಲ್ಲಿ ಸಂಜೆ ವಿವಾಹವಾದರು. ವಿವಾಹ ಸಮಾರಂಭವು ಎಸ್. ಆರ್. ಎಸ್. ಮೋಹಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಇದೇ ಜಿಲ್ಲೆಯ ಎಲ್ಲ ತಾಲೂಕುಗಳಿಂದಲೂ ದೂರ ಪ್ರದೇಶಗಳಿಂದಲೂ ಆಮಂತ್ರಿತರೆಲ್ಲಾ ಬಹು ಸಂಖ್ಯೆಯಿಂದ ಬಂದಿದ್ದರು. ಆರಂಭದಲ್ಲಿ ಕಾರ್ಯಕ್ರಮವನ್ನು ಶ್ರೀ ಎಮ್. ಎಸ್. ಶೆಟ್ಟಿಯವರು ಧ್ವನಿವರ್ಧಕ ಯಂತ್ರದ ಮೂಲಕ ಜಾಹೀರು ಮಾಡಿದರು. ಧಾರಾ ಶೇಷವಾದನಂತರ ಶ್ರೀ ನಿಡ್ಯೋಡಿ ಅನಂತ ಉಪಾಧ್ಯಾಯರು ಹಿಂದೂ ವಿವಾಹದ ಕುರಿತು ಭಾಷಣಮಾಡಿ ವಧೂವರರನ್ನು ಆಶೀರ್ವದಿಸಿದರು. ನಂತರ ಶ್ರೀ ಎನ್. ಎಮ್. ಅಡ್ಯಂತಾಯ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಇವರ ಸುಶ್ರಾವ್ಯ ಗಾಯನ ನಡೆಯಿತು. ಉಪಾಹಾರ ಸತ್ಕಾರದೊಂದಿಗೆ ವಿವಾಹ ಸಮಾರಂಭವು ಸಮಾಪ್ತಿಯಾಯಿತು.

ಉಡುಪಿ.

ಸಹಾಯಾರ್ಥ ನಾಟಕ ಪ್ರದರ್ಶನ- ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಸಹಾಯಾರ್ಥವಾಗಿ ಕಳೆದ ಶನಿವಾರ ರಾತ್ರಿ ಆ ಶಾಲೆಯ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಕೂಡಿ ಮೂರು ನಾಟಕಗಳನ್ನು ಅಭಿನಯಿಸಿದರು. ಸಾಧಾರಣ ಒಂದು ಸಾವಿರಕ್ಕೆ ಕಡಿಮೆಯಾಗದಷ್ಟು ಉತ್ಪತ್ತಿ ಶಾಲಾನಿಧಿಗೆ ಸಿಗಬಹುದೆಂದು ವರ್ತಮಾನ.

ಪ್ರಕಾಶಿನಿ

ಕನ್ನಡ ಮಾಸಪತ್ರಿಕೆ.

ಶ್ರೀ. ಎಂ. ವಿ. ಹೆಗ್ಡೆಯವರ ಸಂಪಾದಕತ್ವ ಮತ್ತು ವ್ಯವಸ್ಥಾಪಕತ್ವದಲ್ಲಿ ನವೀನ ರೀತಿಯಿಂದ ಹೊರಡಲಿದೆ.

ಮಾದರಿಗಾಗಿ ಜೂನ್ ತಿಂಗಳ ಸಂಚಿಕೆಯನ್ನು ನಿರೀಕ್ಷಿಸಿರಿ.

ವಾರ್ಷಿಕ ಚಂದಾ ರೂ. 3-0-0. **ಬಿಡಿ ಸಂಚಿಕೆ 0-4-0.**

ಜಾಹೀರಾತು ಕೊಡಲಿಚ್ಛಿಸುವವರು—ಚಂದಾದಾರರಾಗಲು ಬಯಸುವವರು—ಏಜಂಟರಾಗಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ—

ವ್ಯವಸ್ಥಾಪಕ,
'ಪ್ರಕಾಶಿನಿ',
ನವಯುಗ ಪ್ರೆಸ್, ಉಡುಪಿ, ದ. ಕ.

FOR LIFE ASSURANCE

CONSULT

The New Gaurdian of India Life Insrce Co., Ltd,

(Chairman The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA

HEAD OFFICE
"United India Life Bldg"
Esplanade. Post Box No 142.
MADRAS.

ತಾರೀಕು **24—5—46**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ಈಸ್ಟರ್ನ್ ಪಿಕ್ಚರ್ಸ್

ಮಾಯಾ ಬೆನರ್ಜಿ, ಜಯಂತ್, ಆಗಾ ಮೊದಲಾದವರು ನಟಿಸಿದ

★ ದಾವತ್ ★

ನಂತರ---

ಪ್ರೆಸ್ಟೀಜ್ ಕಿ ಡ್

WANTED

A travelling Salesman (1) for mysore state & (2) for south india.

with business qualifications and previous experience in the line Pay and commission according to merit

Aplly to:
T. L. S. UPADHYAYA
Manufacturer of
AGARBATTIES & OTHER PERFUMES, MYSORE

(೨ನೇ ಪುಟದಿಂದ)

ಗರ್ಗಾಯಿಸುವಂತೆಯೂ ಇಲ್ಲ. ಹೊಸ ಸರಕಾರ ಮತ್ತು ಆಶ್ರಿತ ರಾಜ್ಯಗಳೊಳಗೆ ಎಂತಹ ಸಂಬಂಧವಿರಬೇಕೆಂಬುದು, ಹೊಸ ರಾಜ್ಯಾಂಗ ರಚನೆಯ ವೇಳೆ ಸಂಧಾನ ಮೂಲಕ ನಿರ್ಧರಿಸಲ್ಪಡಬೇಕಾದ ವಿಷಯ. ಆದ್ದರಿಂದ ಆ ಕುರಿತು ನಾವು ಸ್ಪಷ್ಟ ವರ್ಣನೆಗೆ ಹೋಗುವದಿಲ್ಲ. ಭಾರತದ ಭಾವೀ ರಾಜ್ಯಭಾರದೊಡನೆ ಸಹಕರಿಸಲು ಆಶ್ರಿತ ರಾಜರು ಸಿದ್ಧರಿದ್ದಾರೆಂಬುದು ನಾವು ನಡಿಸಿದ ಮಾತುಕತೆಗಳಿಂದ ಸ್ಪಷ್ಟವಾಗಿದೆ.

ಅಧಿಕಾರ ಬದಲಾವಣೆಯ ಕಾಲದಲ್ಲಿ ಸಹಜವಾಗಿ ಏಳುವ ಕೆಲವು ಸಂಗತಿಗಳು ಹಿಂದೀ ಯೂನಿಯನ್ ರಾಜ್ಯಾಂಗ ರಚನಾಸಭೆ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳೊಳಗಿನ ಒಪ್ಪಂದ ಮೂಲಕ ತೀರ್ಮಾನಹೊಂದಲಿವೆ.

ರಾಷ್ಟ್ರದ ರಾಜ್ಯಾಂಗ ರಚನೆಯಾಗುವವರೆಗೆ ಈ ಕಾಲದಲ್ಲಿ ಅತಿಪ್ರಾಮುಖ್ಯವಾಗಿರುವ ದೈನಿಕ ಕಾರ್ಯಕ್ರಮಗಳನ್ನು ಸಾಗಿಸಲು ನಡುಗಾಲ ರಾಷ್ಟ್ರೀಯ ಸರಕಾರವು ಅತ್ಯಗತ್ಯ. ಅದು ಕೂಡಲೇ ಸ್ಥಾಪಿಸಲ್ಪಡುವದು ಅದರ ಎಲ್ಲಾ ಹೊಣೆಗಾರಿಕೆಗೆ ಅವಶ್ಯವಾಗಿರುವದು.

ಈ ಸೂಚನೆಗಳು ಅಂಗೀಕಾರವಾಗದಿದ್ದಲ್ಲಿ ಪರಿಣಾಮವೇನಾಗಬಹುದೆಂಬುದನ್ನು ಪರ್ಯಾಲೋಚಿಸಿರೆಂದು ಕೇಳಿಕೊಳ್ಳುತ್ತೇವೆ. ಹಿಂಸೆ, ಅರಾಜಕತೆ, ಮಾತ್ರವಲ್ಲ ಅಂತರ್ಯುದ್ಧದ ಮಹತ್ಪಾದ ಅನಾಹುತಗಳೇಳಬಹುದು; ಇಂತಹ ಗೊಂದಲದ ಪರಿಣಾಮವೇನು, ಅವಧಿಯೆಷ್ಟೆಂಬುದನ್ನು ಊಹಿಸುವದಸಾಧ್ಯ. ಆದರೆ ಅದು ಅತ್ಯುಗ್ರವಾಗಿ ಮಿಲಿಯಾವಧಿ ಗಂಡಸರು,ಹೆಂಗಸರು, ಮಕ್ಕಳನ್ನಾಹುತಿಗೊಳ್ಳಬಹುದೆಂಬುದು ಖಂಡಿತ. ಆದ್ದರಿಂದ ಈ ಸೂಚನೆಗಳು ಎಂತಹ ಸದ್ಭಾವನೆಯಿಂದ ಹುಟ್ಟಿ ಬಂದಿರುವವೋ ಅಂತಹ ಸದ್ಭಾವದಿಂದಲೇ ಅಂಗೀಕಾರ ಹೊಂದವವೆಂದು ನಮ್ಮಾಸೆ. ಸ್ವತಂತ್ರ ಭಾರತವು ಬ್ರಿಟಿಷ್ ಕಾಮನ್‌ವೆಲ್ತಿನ ಸದಸ್ಯನಾಗಿರುವದೆಂದು ನಾವು ಆಶಿಸುತ್ತೇವೆ. ಹೇಗೇನೇ ಆದರೂ ನೀವು ನಮ್ಮ ಜನತೆಯೊಡನೆ ನಿಕಟವಾದ ಮೈತ್ರೀ ಸಂಬಂಧ ಇಟ್ಟುಕೊಳ್ಳುವಿರೆಂದು ನಮ್ಮ ನಂಬಿಕೆಯಿದೆ. ಆದರೆ ಇಯೆಲ್ಲವೂ ನಿಮ್ಮ ಸ್ವತಂತ್ರ ತೀರ್ಮಾನಕ್ಕೇನೇ ಒಳಪಟ್ಟಿರುವ ವಿಷಯಗಳು. ನೀವು ಯಾವ ವಿಧಾನವನ್ನೇ ಆರಿಸಿಕೊಂಡರೂ ನಾವು ನಿಮ್ಮ ಸದಾಭಿವೃದ್ಧಿಯನ್ನು ಕೋರುತ್ತೇವೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಹುಬ್ಬಳ್ಳಿ-ತಾ ೧೬-೫ ೪೬ನೇ ದಿವಸ ಶ್ರೀ ಪಾಟೀಲ ಪುಟ್ಟಪ್ಪನ ಗೌಡರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯ ಪ್ರಾ. ಕಾ. ಕಮಿಟಿಯ ಕಚೇರಿಯಲ್ಲಿ, ಪ್ರಾ. ಕಾ. ಕ ಯ ಕಾರ್ಯಕಾರೀ ಮಂಡಲದ ಸಭೆಯು ಸೇರಿತ್ತು. ಹಿಂದಿನ ಸಭೆಗಳ ಕಾರ್ಯಕಲಾಪಗಳು, ವರದಿ ಹಾಗು ಲೆಕ್ಕಪತ್ರಗಳು ಓದಿ ಸ್ವೀಕರಿಸಲ್ಪಟ್ಟ ನಂತರ, ಈ ಕೆಳಗಿನ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು. ಕರ್ನಾಟಕ ಪ್ರಾಂತಿಕ ಪಾರ್ಲಿಮೆಂಟರೀ ಬೋರ್ಡಿನ ಗೌರವ ಕಾರ್ಯದರ್ಶಿಗಳು ಸಾದರಪಡಿಸಿದ ವರದಿ ಹಾಗೂ ಲೆಕ್ಕಪತ್ರಗಳಿಂದ ತಪಾಸು ಮಾಡಲಾದ ಮತ್ತು ಬೋರ್ಡಿನವರು ಸ್ವೀಕರಿಸಿದ ಲೆಕ್ಕಪತ್ರದ ಪತ್ರಿಕೆ ಇವುಗಳನ್ನು ಈ ಸಭೆಯು ಸ್ವೀಕರಿಸುತ್ತದೆ. ಶ್ರೀ ಶ್ರೀನಿವಾಸ ಮಲ್ಲಾರ ಅಧ್ಯಕ್ಷತೆಯಲ್ಲಿ ಹಾಗು ಶ್ರೀ ದಿವಾಕರ ರಂಗರಾಯರ ಪರೀಕ್ಷೆಯಲ್ಲಿ ಯಶಸ್ಸು ಸಂಪಾದಿಸಿದ್ದಕ್ಕಾಗಿ ಅವರನ್ನು ಈ ಸಭೆಯು ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತದೆ. ತಾ. ೧೬ ೪೬ನೇ ದಿವಸ ಪಾರ್ಲಿಮೆಂಟರೀ ಬೋರ್ಡಿನ ಸಭೆಯಲ್ಲಿ ಸಭಾಸದರಲ್ಲವರು ಹಲವರು ಬಂದು ಮಾಡಿದ ವರ್ತನೆಯು ಅಸಭ್ಯ ವರ್ತನೆಯಾಗಿ ಕಂಡು ಬರುತ್ತದೆಂಬ ಬಗ್ಗೆ ಶಿಸ್ತು ಕ್ರಮ ಯಾಕೆ ತೆಗೆದುಕೊಳ್ಳಬಾರದೆಂಬ ಬಗ್ಗೆ ತಾ ೧೭ ೪ ೪೬ಕ್ಕೆ ಕರ್ನಾಟಕದ ಪ್ರಾ. ಕಾ. ಕ ಯ ಅಧ್ಯಕ್ಷರಾದ ಶ್ರೀ. ಪಾಟೀಲ ಪುಟ್ಟಪ್ಪನ ಗೌಡರು ಕೊಟ್ಟ ನೋಟೀಸನ್ನು ಮತ್ತು ಅದಕ್ಕೆ ಅವರಿಂದ ಬಂದ ಉತ್ತರಗಳನ್ನು ಈ ಸಭೆಯು ಓದಿದೆ. ಆ ಉತ್ತರಗಳು ಅತೃಪ್ತಿಕಾರಕ ಹಾಗು ವಿಸಂಗತ ವಿಧಾನಗಳಿಂದ ಕೂಡಿದವಿರುವವು. ಈ ತರದ ಕೃತಿಗಳು ನಿಷೇಧಾರ್ಹವೆಂದು ಈ ಸಭೆಗೆ ಅನಿಸುತ್ತದೆ. ಆದರೆ ಇನ್ನೊಮ್ಮೆ ಈ ಬಗ್ಗೆ ವಿವರವಾದ ವಿಚಾರಣೆ ನಡಿಸಿ ತಕ್ಕ ಕ್ರಮ ತೆಗೆದುಕೊಳ್ಳುವದು ಸೂಕ್ತವೆಂದು ಈ ಸಭೆಗೆ ಎನಿಸಿದ್ದರಿಂದ ಮುಂದಿನ ಕಾರ್ಯಕಾರೀ ಮಂಡಲದ ಸಭೆಯಲ್ಲಿ ಈ ವಿಷಯವನ್ನು ನಿಶ್ಚಯಿಸಬೇಕೆಂದು ಈ ಸಭೆಯು ಗೊತ್ತು ಮಾಡುತ್ತದೆ.

ಕಾರ್ಕಳ-ನಾಲ್ಕು ಮಂದಿ ಸಟ್ಟಾ ಆಡುತ್ತಿರುವವರನ್ನು ಪೋಲೀಸರು ಕೈದುಮಾಡಿ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಗುಂಪಡಿಸಿದರು ಅವರೊಡನಿದ್ದ ಕಲೆಕ್ಷನ್ ಸಾಧಾರಣ ರೂಪಾಯಿ ಇನ್ನೂರು ಜಪ್ತಾದುದು ಮಾತ್ರವಲ್ಲದೆ ತಲಾ ಒಂದರ ರೂಪಾಯಿ 50/ ರಂತೆ ಇಬ್ಬರಿಗೂ ರೂಪಾಯಿ 40/ ರಂತೆ ಇನ್ನಿಬ್ಬರಿಗೂ ಜಂಡನೆ ವಿಧಿಸಲಾಯಿತೆಂದು ವರ್ತಮಾನ.

ನಮಗೆಬಂದ ವಾರ್ತೆಗಳು—ತಾ 11 5 46ರಲ್ಲಿ ಉಡುಪಿಯಿಂದ ಪೆರ್ಡೂರಿಗೆ ಹೋಗುವ ಸಾಯಂಕಾಲ 5ಗಂಟೆಯ ಬಸ್ಸಿನಲ್ಲಿ ಮುಸಾಫರರೊಬ್ಬರು ಟಿಕೇಟುಪಡೆದು ಕುಳಿತಿದ್ದರೆಂದೂ ಅವರೆ ಆ ಬಸ್ಸಿನ ಡ್ರೈವರು ಅವರನ್ನು ಕೊಂಡುಹೋಗದೆ ಕೆಳಗಿಳಿಸಿದರೆಂದೂ ಈ ಕುರಿತು ತಕ್ಕ ತನಿಖೆ ನಡಿಸಬೇಕೆಂದೂ ಆ ಮುಸಾಫರರು ಬರೆಯುತ್ತಾರೆ.

ಉಡುಪಿಯಲ್ಲಿ ಇತ್ತೀಚೆಗೆ ಪ್ರಾರಂಭವಾದ ಸಿಟಿ ಬಸ್ಸುಗಳು ಸಕಾಲದಲ್ಲಿ ಹೊರಡುವುದಿಲ್ಲವೆಂದೂ ಕೆಲವೊಮ್ಮೆ ಬಸ್ಸು ಸರ್ವಿಸುಗಳೇ ಇರುವುದಿಲ್ಲವೆಂದೂ ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆಯೆಂದೂ ಇನ್ನೊಬ್ಬ ಮುಸಾಫರರು ಬರೆಯುತ್ತಾರೆ.

ಈಗ ಎರಡು ತಿಂಗಳುಗಳಿಂದ ನಗರಕ್ಷೇತ್ರದಲ್ಲಿ ಬೊಂಬಾಯಿ ಸಜ್ಜಿಗೆ ಮತ್ತು ಗೋದಿಹಿಟ್ಟು ಜನತೆಗೆ ದೊರೆಯುವುದಿಲ್ಲವೆಂದೂ ಕೆಲ ಸಾಹುಕಾರರಲ್ಲಿ ಇದ್ದುದು ಮೊಹರು ಮಾಡಲಾಗಿದೆಯೆಂದೂ ಬೇಗನೆ ಅದು ವಿತರಣೆಯಾಗಬೇಕೆಂದೂ ಮಗದೊಬ್ಬ ಮುಸಾಫರರು ಬರೆಯುತ್ತಾರೆ.

BANK WITH THE LARGEST CONNECTIONS ON THE WEST COAST

OFFERS:-

EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd

ETD 1925

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ವಾರ್ಷಿಕ ಚಂದಾರೂ. 4-8-0

ಅರ್ಧ ವರ್ಷಕ್ಕೆ ರೂ.-2-8-0

ಮಾದರಿ ಸಂಚಿಕೆಗೆ ಬರೆಯಿರಿ.

ಮೆನೇಜರ್ ನವಯುಗ, ಉಡುಪಿ.

The Karnataka Bank Ltd, Udipi
ದಿ ಕರ್ನಾಟಕ ಬೇಂಕ್ ಲಿಮಿಟೆಡ್ ಉಡುಪಿ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮಗೆ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವದರಿಂದ ನಮೂದಿಸಿದವರಿಗೆ ಕ್ರಮದಂತೆ ರಿಜಿಸ್ಟರ್ ನೋಟೀಸುಗಳನ್ನು ಕೊಟ್ಟಾಗ್ಯೂ ಕೂಡಾ ಪಾವತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸ್ಲು ಬಡ್ಡಿ ಖರ್ಚು ಮುಂತಾದುವುಗಳನ್ನು ಮತ್ತು ಏಲಂ ಖರ್ಚು ವಗೈರೆಯನ್ನು ಇದೇ 30-5-'46ನೇ ಗುರುವಾರದೊಳಗೆ ಬೇಂಕಿಗೆ ಪಾವತಿ ಮಾಡಿ ಈಡಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗುವದು ತಪ್ಪಿದಲ್ಲಿ ಸದರೀ ಆಭರಣಗಳನ್ನು ಇದೇ ಬರುವ ತಾ 7-6-'46ನೇ ಶುಕ್ರವಾರ ದಿವ್ಸ ಅಪರಾಹ್ನ ಗಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಅಗತ್ಯ ಬಿದ್ದಲ್ಲಿ ಏಲಂನ ತಾರೀಕನ್ನು ಮುಂದುವರಿಸುವ ಹಕ್ಕು ಬೇಂಕಿಗೆ ಇದೆ, ತಿಳಿದಿರುವುದು

ಜಾಬ್ತಾ ನಂಬ್ರ	ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
1.	153 43	ಬಿ. ಕೃಷ್ಣರಾವ್, ಶಂಕ್ರನಾರಾಯಣರಾಯರ ಮಗ, ಶ್ಯಾನುಭಾಗ, ಬಡಾನಿಡಿಯೂರು ಗ್ರಾಮ, ಕಿದ್ಯಾಡ್ಕ ಪೋಸ್ಟ್, ದ ಕ.	ಅಸ್ಲು ರೂ. 250/ ಮತ್ತು ಇದರ ಮೇಲೆ ತಾ 25 5 45ರಿಂದ ಸೇಕಡಾ 7ರ ಸಲೆಯಲ್ಲಿ ವಸೂಲು ಆಗೀನ ಬಡ್ಡಿ
2.	334/44	ವೆಂಕಟೇಶ ಶೆಟ್, ಮಂಜುನಾಥ ಶೆಟ್ಟರ ಮಗ, ಕೋರ್ಟ ಪೇಟೆ, ಉಡುಪಿ, ದ ಕ	ಅಸ್ಲು ರೂ 10/ ಮತ್ತು ಇದರ ಮೇಲೆ ತಾ. 17 11 44ರಿಂದ ಸೇಕಡಾ 8ರ ಸಲೆಯಲ್ಲಿ ವಸೂಲು ಆಗೀನ ಬಡ್ಡಿ.

ಬೇಂಕಿನ ಆಫೀಸು
ವೆಂಕಟಪೇಟೆ, ಉಡುಪಿ, ದ. ಕ.
ತಾ. 18-5-1946

B Venkat Rao,
Agent

ಕ. ಆ. ವಿ. ಪಿ. ಕಣ್ಣಿನ ಹಾಸ್ಪಿಟಲ್

ಖಾಸಬಾಗ, ಬೆಳಗಾವ

ಇಲ್ಲಿಯ ತಜ್ಞ ಸರ್ಜನರಾದ **ಡಾ. ಎಮ್. ಸಿ ಮೋದಿಯವರು** ಉತ್ತರ ಹಿಂದುಸ್ತಾನ, ಪಂಜಾಬ್, ಮತ್ತು ರಾಜಪುತಾನಾದಲ್ಲಿ ಕಣ್ಣಿನ ಎಷ್ಟೋ ಆಪರೇಶನಗಳನ್ನು ಮಾಡಿ ವಿಶೇಷ ಜ್ಞಾನವನ್ನು ಸಂಪಾದಿಸಿ ತಿರುಗಿ ಬೆಳಗಾವಿಗೆ ಬಂದು ತಮ್ಮ ಕೆಲಸದ ಮೇಲೆ ಹಾಜರಾಗಿದ್ದಾರೆ ಆದ್ದರಿಂದ ಎಲ್ಲ ಕಣ್ಣಿನ ರೋಗಿಗಳು ಅವರ ಜ್ಞಾನದ ಲಾಭವನ್ನು ಹೊಂದಬಹುದು

ಸೆಕ್ರೆಟರಿ,
ಕ ಆ ವಿ. ಪಿ. ಖಾಸಬಾಗ,
ಬೆಳಗಾವ

ಜೀವಾಮೃತ ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅನೋಘವಾದ ಮಧುರದ್ರವ್ಯ ರಸಾಯನ. ಅಲ್ಪ ಮೌಲ್ಯದಿಂದ** ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಆ ಔಷಧದ ಉಪಯೋಗಗಳು ಹೆಚ್ಚು ಕೆಡದೆ ಆರೋಗ್ಯವಿರುವುದು ... ಬಾಣಂತಿತನಕ್ಕೆ ಸಂಬಂಧಿಸಿದ ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೭ ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು-ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದಕ್ಷಿಣ ಕನ್ನಡ.

ಮಂಗಳೂರು.

ಬ್ರೆಡ್ ರೇಶನಿಂಗ್—ಈ ಸಂಬಂಧವಾದ ಪ್ರಕಟಣೆಯಲ್ಲಿ ರೇಶನಿಂಗ್ ಆಫೀಸರರು,—"ಒಬ್ಬನಿಗೆ ಅರ್ಧ ರಾತ್ಲ ಬ್ರೆಡ್ಡಿನಂತೆ ರೇಶನ್ ಮಾಡಲಾಗಿದೆ. ತಮಗೆ ಸಿಗುವ 1/3 ಔನ್ಸಿನ ಒಂದು ಯೂನಿಟ್‌ದಿಂದಲೇ ಬೇಕಾದವರು ಅಕ್ಕಿ ಕಡಿಮೆ ಮಾಡಿ ಬ್ರೆಡ್ ಪಡೆಯಬಹುದು. ಬ್ರೆಡ್ಡನ್ನು ಪಡೆಯುವುದು ಐಚ್ಛಿಕವಾಗಿರುವುದರಿಂದ ಬ್ರೆಡ್ ತಯಾರಿಸುವ ಕಡೆಗಳಲ್ಲಿ ಹೆಚ್ಚಿಗೆ ಉಳಿದು ಹಾಳಾಗದಂತೆಯೂ ನೋಡಿಕೊಳ್ಳುವುದಕ್ಕಾಗಿ ಪರ್ಮಿಟ್‌ದಾರರು ತಮ್ಮ ಕಾರ್ಡನ್ನಾಗಲಿ ಪರ್ಮಿಟನ್ನಾಗಲಿ ರಿಜಿಸ್ಟ್ರಿ ಮಾಡಿಸಿಕೊಳ್ಳಬೇಕು. ಬ್ರೆಡ್ಡಿನ ಟಿಕೇಟು ಪುಸ್ತಕಗಳನ್ನು ಪಡೆದು ಎಡೆಬಿಡದೆ ಬ್ರೆಡ್ ಸಿಗುವಂತೆ ಮಾಡಿಕೊಳ್ಳಲೂಬಹುದು" ಎನ್ನುತ್ತಾರೆ.

ಜೋಳ ಬರಲಿದೆ—ನಮ್ಮ ಜಿಲ್ಲೆಗೆ ಸದ್ಯದಲ್ಲೇ ೩೦೦೦ ಟನ್ ಜೋಳ ಬರಲಿದೆಯೆಂದು ಕೇಳಿಬರುತ್ತದೆ.

ಚತುರಚೋರ—ತಾ. ೯ನೇ ರಾತ್ರೆ ಸುಮಾರು ೧೦ ಘಂಟೆಗೆ ಉಡುಪಿಯಿಂದ ಬಂದ ದಿಂಡಾಲ ಒಬ್ಬನು (ಬಂಗಾರ ಶುದ್ಧಗೊಳಿಸುವ ಕೆಲಸದವನಂತೆ) ಮಂಗಳೂರಿನ ಪುತ್ತೂರಪ್ರಭು ಓಣಿಯ ಕೊನೆಯಲ್ಲಿರುವ ಪತ್ರಲಿನಿಂದ ಹಿಡಿದು ಶೋಂಗರಕೇರಿ ಶ್ರೀ ಕೆ. ಸುಬ್ರಾಯಕಾಮತರ ಮನೆಯ ಪಡಗಿನವರಾದ ಪತ್ತಲಾಗನ ಗೋಡೆಗಳನ್ನು ಹಾರಿ, ಎಲ್ಲರನ್ನು ಬೆನ್ನಟ್ಟಿದವರೆಲ್ಲರನ್ನೂ ತಪ್ಪಿಸಿಕೊಂಡನು. ಕಥೆ ಈ ರೀತಿ ಕೇಳಿಬರುತ್ತದೆ: ಅವನು ಉಡುಪಿಯಲ್ಲೊಬ್ಬರಿಂದ ಸುಮಾರು ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಬಂಗಾರವನ್ನು ಶುದ್ಧಪಡಿಸಲು ಕೊಂಡು ಕೊಂಡು, ಬಂಗಾರ ಸಮೇತ ಮಂಗಳೂರಿಗೆ ಓಡಿಬಂದನಂತೆ. ಬಂಗಾರ ಕೊಟ್ಟವರು ಮಂಗಳೂರಿಗೆ ಬಂದು ಅವನನ್ನು ಪತ್ತೆ ಹಚ್ಚಿದಾಗ, ತನ್ನ ಕೊರಡಿ ಇಲ್ಲೇ ಇರುವುದೆನ್ನುತ್ತ, ತನ್ನನ್ನು ಹಿಡಿಯ ಬಂದವರನ್ನು ಮಲ್ಲಾಪುರ ಕಂಪೆನಿ ಬಳಿ ನಿಲ್ಲಿಸಿ ಪತ್ರಲಿನೊಳಗೆ ನುಗ್ಗಿ ಕಾಣೆಯಾದನು. ಪ್ರತಿಯೊಂದು ಪತ್ತಲಿನವರೂ, ಹೇಟ್-ಬೂಟ್ ಭೂಷಿತನಾದ ಈ ವಿಚಿತ್ರ ವ್ಯಕ್ತಿಯ ವಿಚಿತ್ರ ಪ್ರವೇಶದಿಂದ ಕಂಗಾಲಾಗಿ ಗುಲ್ಲೆಬ್ಬಿಸಲು, ಪಾರಿಗಾಣದೆ ಒಂದೇ ಸಮನೆ ಗೋಡೆ ಹಾರುತ್ತ ನಡೆದನು. ಶೋಂಗರಕೇರಿಯಲ್ಲೊಂದೆಡೆಯ ತೋಟದಲ್ಲಿ, ಅಲ್ಲಿ ಅವನು ಹೇಟ್ ಬೂಟ್‌ಗಳನ್ನು ಒಂದೆಡೆ ಕಳಚಿಟ್ಟು ಸಾಧ್ಯ ಮುಂದಾದ ಮತ್ತು ಬೈರಾಸಿನಲ್ಲಿ ಪರಾರಿಯಾಗಿದ್ದರಬೇಕೆಂದು ಹೇಳುತ್ತಿದ್ದಾರೆ. ಕೆಸರಿನ ದೊಡ್ಡ ಚರಂಡಿಯಿಂದ ಪಾರಾಗಿದ್ದನಂತೆ. ಅವನ ಹಾರಾಟದ ಸಾಹಸ ನೋಡಿದವರೆಲ್ಲ ಬೆರಗಾಗಿರುವರು. ಇನ್ನೂ ಪತ್ತೆ ದೊರೆತಿಲ್ಲ.

ಮಹಾಸಭೆ—ಇತ್ತೀಚೆಗೆ ಮಂಗಳೂರಲ್ಲಿ ಸ್ಥಾಪಿತವಾದ 'ರಾಷ್ಟ್ರೀಯ ಯುವಕ ಸಂಘ'ದ ಮಹಾ ಸಭೆಯು ಕೊಂಗ್ರೆಸ್ ಕಚೇರಿಯಲ್ಲಿ ಶ್ರೀ ಕೆ. ಕೆ. ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿ, ಸಂಘದ ಘಟನೆ ಮತ್ತು ನಿಯಮಾವಳಿಗಳನ್ನು ಮಂಜೂರು ಮಾಡಲಾಯಿತು. ಆ ಸಂಭದಲ್ಲಿ, 'ರಾಷ್ಟ್ರೀಯ ಯುವಕ ಸಂಘ' ಎಂಬ ಹೆಸರನ್ನು ಬದಲಾಯಿಸಿ, 'ದ. ಕ. ಜಿಲ್ಲಾ ಯುವಜನ ಕಾಂಗ್ರೆಸ್' ಎಂದು ಹೆಸರಿಡಲಾಯಿತು.

ಕಡಂದಲೆ—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡವನ್ನು ವಿಸ್ತರಿಸಿ, ಪ್ರಕೃತದಲ್ಲಿ ಕಾಣುವ ನ್ಯೂನತೆಯನ್ನು ಹೋಗಲಾಡಿಸುವ ಬಗ್ಗೆ ತಾ. 12 5 46ರಲ್ಲಿ ಶ್ರೀ ಕಡಂದಲೆ ಗುತ್ತು ಪರೀಲ ದೇಜು ಶೆಟ್ರ ಅಧ್ಯಕ್ಷತೆಯಲ್ಲಿ ಒಂದು ಕಟ್ಟಡದ ವಿಸ್ತರಣ ಸಮಿತಿಯು ರಚಿಸಲ್ಪಟ್ಟಿದೆ.

ಮಾನ್ಯ ರೆವೆನ್ಯೂ ಮಂತ್ರಿಗಳಲ್ಲಿ

(ದ. ಕ. ಶಾನುಭೋಗರ ಪರವಾಗಿ)

(1) ಶಾನುಭೋಗರಿಗೆ ಈಗಿರುವ ಸಂಬಳದ ಮುಮ್ಮಡಿ ಪಗಾರ ಸಿಗಬೇಕು. (2) ಎಲ್ಲಾ ಆಫೀಸರರಿಗೂ ಸಿಗುವಂತೆ ತುಟ್ಟಿಭತ್ತೆ ಸಿಗಬೇಕು, ತುಟ್ಟಿಭತ್ತೆಯು ಯಾವ ತಾರೀಕಿನಿಂದ ಬೇರೆ ಆಫೀಸರರಿಗೆ ಸಿಕ್ಕಿಯದೋ ಆ ತಾರೀಕಿನಿಂದಲೇ ಸಿಗುವಂತಾಗಬೇಕು. (3) ಪ್ರತಿಯೊಂದು ಕಾರ್ಯದ ಬಗ್ಗೂ ಡಿಪಾರ್ಟ್‌ಮೆಂಟು ಹೆಚ್ಚಿದೆ. ಆ ಡಿಪಾರ್ಟಮೆಂಟಿನ ಸಮ್ಬಂಧಪಟ್ಟ ಕೆಲಸವು ಶ್ಯಾನುಭೋಗರಿಂದಲೇ ಮಾಡಿಸುತ್ತಾರೆ. ಇದು ಕಷ್ಟಸಾಧ್ಯ—ಇದಕ್ಕೆ ಅಸಿಸ್ಟೆಂಟು ಕರ್ನಮು ಒಬ್ಬ ಅಗತ್ಯ ಬೇಕೇಬೇಕು. (4) ಶಾನುಭೋಗರಿಗೆ "ಯುನಿಫಾರ್ಮ್" ಡ್ರೆಸ್ಸು ಅಗತ್ಯ. ಇದನ್ನು ಸರಕಾರದವರು ಒದಗಿಸಿಕೊಡಬೇಕು. (5) ಶಾನುಭೋಗರನ್ನು ಪದೇಪದೇ ಹೆಡ್ ಕ್ವಾರ್ಟರಿಗೆ ಕರೆಯಿಸಕೂಡದು. ಹಾಗೆ ಕರೆಯಿಸುವಲ್ಲಿ 5 ಮೈಲು ಮೀರಿ ಮಿಕ್ಕಿದ ಶಾನುಭೋಗರಿಗೆ ಯೋಗ್ಯ ಬತ್ತೆ ಕೊಡಬೇಕು. (6) ಶಾನುಭೋಗರು ಕೂಡಾ ಒಬ್ಬ ನೌಕರರೆಂದು ಮೇಲಾಫೀಸರರು ಭಾವಿಸಿ—ಅವರಿಗೆ ಮರ್ಯಾದೆಗೆ ಕುಂದು ಬರುವ ಶಬ್ದಗಳನ್ನಾಗಲೀ ಸಂಗತಿಗಳನ್ನಾಗಲೀ ಉಪಯೋಗಿಸಬಾರದು.

ಮೇಲಿನ ವಿನಂತಿಯನ್ನು ವಿಮರ್ಶಿಸಿ ನ್ಯಾಯ ಕಾಪಾಡಬೇಕಾಗಿ ಬೇಡಿಕೊಳ್ಳುತ್ತೇವೆ.

ತಮ್ಮ ವಿಧೇಯ,
ಎನ್. ಎಸ್. ಬೇಳೂರ.

THE VIJAYA BANK. LIMITED.

To the Share-holders,

("Consent of the Central Government has been obtained to this issue under Defence of India Rule 94-A It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statements made or opinions expressed therein").

It has been resolved to issue 2000 new shares of the Bank of the nominal value of Rs 50/- per share, at a premium of Rs. 5/- per share and an admission fee of Re. 1/- per share. A sum of Rs. 16/- per share(Rs. 10/- towards share capital deposit, Rs. 5 - towards premium and Re. 1/- towards admission fee) is payable on application and a sum of Rs 15/- on allotment. The new shares will rank for dividend from the date of allotment. The issue is confined in the first instance to the existing share-holders who hold 5 shares or more in the proportion of 1 share to every 5 shares held by them If acceptance to this offer is not received by the Head office or any of its branches along with the necessary amount, on or before 8-6-1946, it will be deemed to have been declined.

The terms of issue and other particulars along with application form have been posted separately to the Share-holders who hold 5 or more shares.

Applications for additional shares from the Share-holders who hold 5 or more shares and applications for shares from any of the existing share-holders or other persons belonging to the Bant alias Nadava Community, may be made, along with the necessary amount, on or before 8-6-46, but such applications will be considered only subject to shares being available and the allotment of such shares shall be at the absolute discretion of the Directors. Application forms can be had at any of the offices of the Bank.

The Subscription to the shares may be closed at any time earlier than 8-6-46, as soon as it is estimated the capital offerred is taken up, except to the existing share-holders, who hold 5 or more shares to the extent of the shares they are entitled.

Head office,
Manglaore,
Date 10—5—1946

B. Mahabala Shetty,
Secretary.

ದಮ್ಮಗ್ಗಾ ಕೇಳೋ ಕೇಳು

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ನಿಮಿಷಕ್ಕೆ ತಡೆದೆ ಅದನ್ನು ಬೇರುಸಹಿತ ಕಿತ್ತು ತೆಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ಶಾಂತವಾಗುವದು; ಹೊಟ್ಟೆ ಹಸಿವಾಗುವದು; ಪಚನಶಕ್ತಿಯು ಹೆಚ್ಚುವದು, ಫುಪ್ಫುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೆಮ್ಮು, ಬೆನ್ನುನೋವು, ಗಂಟಲು ಉರಿಯುವಿಕೆ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲಿ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬರುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೬ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೩-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು: ಪ್ರೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ವಿ. ನಟರಾಜನ್ ಆ್ಯಂಡ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು.

ನವಮಾಲೀ ಭೀಕಾ
ಎಂಡ್ ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಾರರೂ ಅವರೊಡನೆ ಹಣ ತೆತ್ತು ಹೊಸ ಪಾಲುಗಳನ್ನು ಪಡಕೊಳ್ಳಬೇಕಾಗಿಯೂ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಕಳೆಗಟ್ಟಲು ಸುಲಭವಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ ಮತ್ತು ಅದರ ಅವಶ್ಯಕತೆಯೂ ಇರುವುದಿಲ್ಲ.

ಜವೇರಿಯನ್ ಜೀವನ ಮಿಕ್ಶ್ಚರ್

ಜವೇರಿಯನ ...

ಅಳಿಯಕಟ್ಟಿನ ಸುಧಾರಣೆ

ಲೇ:- ವೈ. ಬಿ. ಹೆಗ್ಡೆ, ಎನರ್ನಾಕುಳಂ.

ಅಪ್ಪರಿಂದ ಬಿದ್ದ ಕಟ್ಟನ್ನೇ ಅತಿ ವಿಶಾಲ ದೃಷ್ಟಿಯಿಂದ ತಿದ್ದುವದು ಉತ್ತಮ. ಇದಕ್ಕೆ ಸಮಾಜದ [ಭಿನ್ನ ಜಾತಿಗಳ] ಪ್ರಮುಖರು ಒಮ್ಮನಸ್ಸಿನಿಂದ ಒಂದುಗೂಡಿ ಪ್ರತಿ ಕೇವಿ ನ್ಯೂಗಳಲ್ಲಿ ಜನಾಭಿಪ್ರಾಯವನ್ನು ಸುಘಟನಾ ಮುಖೇನ ತಿಳಿದು ಮತ ಮುಖೇನ ಸುಧಾರಣೆ ಸಾಧಿಸಬೇಕು. ಹೊರತು ಪತ್ರಿಕೆಗಳ ಮುಖ ಕಾಣದ ಸಾವಿರಾರು ಹಳ್ಳಿಗರು ಈ ಸಮಾಜದಲ್ಲಿರುವಾಗ ಪತ್ರಿಕೆಗಳ ಮೂಲಕ ಮಾತ್ರ ಪ್ರಯತ್ನ ಕೈಗೊಂಡರೆ-ಮುಖಂಡರೆನ್ನಿಸುವ ಕೇವಲ ಕೆಲವುಂದಿ ವಿದ್ಯಾವಂತರ ವಾದಪ್ರವಾದದಲ್ಲಿ ಅವಿದ್ಯಾವಂತಬಡಸಮಾಜ ಜನತೆಯು ಅಂತರಾಳವು ರೇಲಿಯೋಗಬಹುದು. ಪ್ರಥಮತಃ ಸಂಘಟಿತ ರೀತಿಯಲ್ಲಿ,ಜನಮತ ಪಡೆಯುವದು ಅಗತ್ಯ.

ಇಂದು ಸಾಮಾನ್ಯವಾಗಿ ನಮ್ಮ ಸಮಾಜದ ಹಿರಿ ಸಂಬಂಧರುಗಳಿಗೆ ಕಾನೂನು ಮುಖೇನ ಸರ್ವಾಧಿಕಾರಕ್ಕೆ ಎಡೆಯಿರುವುದರಿಂದ ಮತ್ತು ಕಿರಿಯರ ಹಕ್ಕುಗಳಿಗೆ ಆತಂಕಗಳಿರುವದರಿಂದ ಸಮಾಜವು ಕೋರ್ಟು ಕಚೇರಿಗಳ ಮರೆಹೊಗಬೇಕಾಗಿದೆ. ಇದಕ್ಕೆ ಮುಖ್ಯ ಕಾರಣನೆಂದರೆ ಮನೋವೃತ್ತಿಯ ದೋಷ. ಇದಕ್ಕಾಗಿ 'ಕಟ್ಟನ್ನು' ದೂಷಿಸುವುದು ಮೂರ್ಖತನ. ಕುಟುಂಬ ವಿಭಕ್ತತೆ ಹಾಗೂ ಆಸ್ತಿ ವಿಭಾಗಗಳು ಕಿರಿಯರು, ಹಿರಿಯರು ಎಂಬ ಭೇದವಿಲ್ಲದೆ ಸುಲಭವಾಗಿ ನಡೆವಂತೆ ನೋಡಿದರಾಯಿತು. ಇವಕ್ಕೆಲ್ಲಾ ಈಗ ಸೂಚಿಸಲ್ಪಟ್ಟಿರುವ ಮಸೂದೆಯನ್ನೇ ವಿಸ್ತರಿಸಿಕೊಳ್ಳುವುದುಯೋಗ್ಯವಿದೆ.

ಈಗಿನ ಮಸೂದೆಯಲ್ಲಿ ತಿದ್ದಬೇಕಿದ್ದ ಒಂದು ಅಂಶವೆಂದರೆ ಮದುವೆ ಮತ್ತು ವರ ಸಂಧಾನ. ಈ ವಿಷಯದಲ್ಲಿ ಈಗಾಗಲೇ ಮಿಕ್ಕ ಹಿಂದೂ ಸ್ತ್ರೀಯರು ಸ್ವಾತಂತ್ರ್ಯ ಪಡೆದಿರುವಲ್ಲಿ ನಮ್ಮ ಸಮಾಜಕ್ಕೂ ಅಂತೆಯೇ ಎಡೆಸಿಗುವದು ನ್ಯಾಯವೇ. ವಿವಾಹಕ್ಕೆ ವರ ವಧುಗಳ ಒಪ್ಪಿಗೆಯಿದ್ದರೆ ಮಾತ್ರ ಆ ಮದುವೆಯು ಸಿಂಧುವಾಗತಕ್ಕದ್ದು ಹೊರತು ಸಮಾಜದ ಪ್ರತಿಬಂಧವಾವುದೂ ಇರಲೇಕೂಡದು.

ಆದ್ದರಿಂದ ಸುಧಾರಿತ ಸಮಾಜಿಕರು ಈ ಕಡೆಗೆ ಲಕ್ಷವಿಟ್ಟು ಕೇವಲ ಕಟ್ಟಿನಿಂದ ಕಟ್ಟಿಗೆ ಹಾರುವ ಆಲೋಚನೆಯನ್ನು ಪ್ರಕೃತ ಒಮ್ಮೆಲೇ ಕೈಕೊಳ್ಳದೆ ಹಳ್ಳಿಗಳ ಕಡೆ ಲಕ್ಷವಿಟ್ಟು ಹಾಗೂ ಸ್ತ್ರೀಯರಿಗೆ ಪ್ರಾಮುಖ್ಯತೆಯಿತ್ತು ಪ್ರತಿ ಪ್ರಾಯಸ್ಥ ವ್ಯಕ್ತಿಯ ಮತದಿಂದ ಸಮಾಜ ಕಟ್ಟಳೆ ಸುಧಾರಿಸಬೇಕು.

ಶೇಷವಾದ ಹಿಂದಿನಾದ ಎರೋ ಒಂದು ಕಾರಣದಿಂದ ಹೊಸ ರೀತಿಯಲ್ಲಿ ನಮಯು ಸ್ತ್ರೀಯದ ಅಳಿಯ ಸಂತಾನಕಟ್ಟಿನಯಲ್ಲಿ ನ್ಯೂನತೆಯುಲ್ಲದಿರಲಿಕ್ಕಿಲ್ಲ, ಆದ ಮಾತ್ರಕ್ಕೆ ಆ ಕಟ್ಟನ್ನೇ ತಳ್ಳಬೇಕೆಂದಿಲ್ಲ. ಬದಲು ಬಲ್ಲವರು ತಿದ್ದುತ್ತ ತಿದ್ದುತ್ತಾ ಕಾಲಗತಿಗೆ ಹೊಂದಿಸಬೇಕು ಹೊರತು ಬಿಂದಿ ಹಾಗಿಲ್ಲವೆಂದೂ ಹಿಸಿ ಯಾಕೆ ಹಾಗಿಲ್ಲನೆಂದು ಆಲೋಚಿಸದೆ ರಕ್ತ ಮಾರಿ ಓಡಿಸಿ ಧಿಕ್ಕರಿಸುವುದಲ್ಲ. ಒಮ್ಮೆಗೇ ಕ್ರಾಂತಿಯನ್ನು ಅಪೇಕ್ಷಿಸುವ ಕಟ್ಟುಗ್ರವಾದಿಗಳು ಇದನ್ನು ತಿಳಿಯಬೇಕು. ಇನ್ನು ಇದ್ದುದನ್ನೇ ತಿದ್ದುವ ವಿಷಯವೊಂದಿದೆ. ಈ ಕುರಿತು ನಿರ್ಧರಿಸುವಾಗ ಯಾವ 'ಕಟ್ಟೇ' ಆಗಲಿ, ಯಾತಕ್ಕೆ? ಯಾರಿಗಾಗಿ? ಎಂಬ ಪ್ರಶ್ನೆ ಏಳಬೇಕಾಗಿದೆ.

ಯಾವ ಕಟ್ಟೇ ಆಗಲಿ ಸ್ವಾರ್ಥ ಹಿಲ್ಲದ ಹಾಗೂ ಅರಿತ [ಪರಿಪಕ್ವ ಬುದ್ಧಿಗಳ] ಗಳ ರಕ್ಷಣೆ ಪರ ಸುಧಾರಣೆ ಇದೆ ಎಂಬುದನ್ನು ಮರೆಯಕೂಡದು. ಸ್ವಾರ್ಥಿಗಳು ಇದನ್ನೆಲ್ಲಾ ಹೆಚ್ಚಾಗಿ ಅವಲಂಬಿಸಬೇಕೆಂದಿಲ್ಲ.

ಈ ದೃಷ್ಟಿಯಿಂದ ಅಳಿಯಸಂತಾನವನ್ನು ಅವಲಂಬಿಸಿರುವ ಬಂಟರು, ಬಿಲ್ಲವರು, ನಾಡವರು, ಬಿಲ್ಲವರು, ಮೊಗವೀರರು ದೇವಾಡಿಗರ ಇತ್ಯಾದಿ ವರ್ಗಗಳನ್ನು ನಿರುಕಿಸಿದರೆ ನ್ಯಾಯವರು, ಬಂಟರು ಎಂದು ವರ್ಗಕ್ಕೂ ಬಿಲ್ಲವರು ಮೊಗವೀರರು ವರ್ಗಕ್ಕೂ ಸೇರಿದವರು. ಮೊದಲನವರು ಹೆಚ್ಚಾಗಿ ಪರಾವಲಂಬಿಗಳು ಆಸ್ತಿವಂತರೂ ಇರುವರು. ಎರಡನೆಯವರು ಹೆಚ್ಚಾಗಿ ಆಸ್ತಿವಂತರಲ್ಲವಾದರೂ ಕಾರ್ಮಿಕರಾಗಿ ಸ್ವಾವಲಂಬಿಗಳಾಗಿರುವರು. ಆದ್ದರಿಂದ ಇವರು 'ಕಟ್ಟು' ಯಾವ ರೂಪಾಂತರ ಹೊಂದಿದರೂ ಹೆಚ್ಚಿನ ವ್ಯತ್ಯಾಸದ ನೋವೇನೂ ಇಲ್ಲ. ಆದರೆ ಮೊದಲಿನವರು ಅಳಿಯ ಕಟ್ಟಿನಿಂದ ಮಕ್ಕಳ ಕಟ್ಟಿಗೆ ಹಾರಿದರೆ 100ಕ್ಕೆ ಕನಿಷ್ಠ 50 ಮಂದಿಯಾದರೂ ಅಧೋಗತಿಗೆ ಇಳಿಯುವದರಲ್ಲಿ ಅಡ್ಡಿಯಿಲ್ಲ.

ಶಿರ್ವ ಹಿಂದೂಶಾಲೆಯ ವರ್ಧಂತಿ ಉತ್ಸವ, ಮತ್ತು ಹೊಸ ಕಟ್ಟಡದ ಪ್ರವೇಶ — ಇದೇ ತಾ 16-5 46ರಲ್ಲಿ, ಸಾಯಂಕಾಲ ಗಂಟೆ 5.30ಕ್ಕೆ ಸರಿಯಾಗಿ, ಉಡುಪಿ ರೇಂಜಿನ ಡೆಪ್ಯೂಟಿ ಇನ್‌ಸ್ಪೆಕ್ಟರ್ ಶ್ರೀ ಕೆ. ಸಂಜೀವ ಭಟ್, M.A.L.T. ಯವರ ಹಸ್ತದಿಂದ ಬಹು ವಿಜೃಂಭಣೆಯಲ್ಲಿ ಜರಗಿತು ಶಿರ್ವ ಪಂಚಾಯತಿಯೂ, ಶಾಲೆ, ಮತ್ತು ಶಾಲಾ ಪರಿಸರವು ತಳಿರುತೋರಣದಿಂದಲೂ, ಧ್ವಜ ಪತಾಕೆಯಿಂದಲೂ ಅಲಂಕರಿಸಲ್ಪಟ್ಟಿತ್ತು. ಗಂಟೆ 4.45ಕ್ಕೆ, ಅಧ್ಯಕ್ಷರ ಮೆರವಣಿಗೆಯು ಶ್ರೀ. B. N. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ. ಮುದ್ದು ಶೆಟ್ಟರ ಆಫೀಸಿನಿಂದ ಹೊರಟಿತು. ಹಿಂದೂ ಶಾಲಾ ಪರಿಸರದಲ್ಲಿ ಅಧ್ಯಕ್ಷರಿಗೆ, ಹಲವರ ಹೂವಿನ ಹಾರಗಳು ಅರ್ಪಿಸಲ್ಪಟ್ಟವು. ಶಾಲಾ ಕಟ್ಟಡದ ಉದ್ಘಾಟನೆಯಾದ ಬಳಿಕ, ಶಾಲಾ ವರದಿಯನ್ನು ಹೆಡ್ ಮಾಸ್ತರ್ ಶ್ರೀ. ಎಚ್. ದೇಜಪ್ಪ ಶೆಟ್ಟರು ಓದಿದರು. ವಿ. ಎನ್ ಸಂಘದ ಅಧ್ಯಕ್ಷ ಶ್ರೀ. ಕೆ. ಮುದ್ದು ಶೆಟ್ಟರು 2-6 46ರಲ್ಲಿ, ತೆರೆಯಲಿರುವ ಹಿಂದೂ ಹೈಸ್ಕೂಲಿನ ಪರಿಚಯವನ್ನೂ, ಸಂಘದ ಕಾರ್ಯದರ್ಶಿ ಶ್ರೀ. ಎಸ್. ಎಸ್. ಶಾಸ್ತ್ರಿಯವರು ಸಮಾರಂಭಕ್ಕೆ ಬಂದ ಸಂದೇಶ ವಾಚನವನ್ನೂ, ಶ್ರೀ.ಕೆ ಮಹಾಬಲ ಶೆಟ್ಟರು, ಶಾಲಾಭಿನಂದನೆಯನ್ನೂ, ಶ್ರೀ. ಎಸ್. ಮುಗ್ಗಪ್ಪ ಹೆಗ್ಗಡೆಯವರು ಶಾಲಾ ಪೂರ್ವೇತಿಹಾಸವನ್ನೂ ಮಾಡಿಕೊಟ್ಟ ಬಳಿಕ ಸಭಿಕರಲ್ಲಿ ಹಲವರು ಸಂದರ್ಭೋಚಿತ ಮಾತನಾಡಿದರು. ಕಟ್ಟಡದ 'ಹಾಲ್'ಗೆ ಶ್ರೀ 'ಸದ್ಗುರು ನಿತ್ಯಾನಂದ ಸದನ' ಎಂದು ನಾಮಕರಣವಾಯಿತು. ಕೊನೆಗೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಶಿರ್ವ ಹಾಯರ್ ಹಿಂದೂ ಶಾಲೆಯು ಕಳೆದ ಒಂದು ವರುಷದಲ್ಲಿ ಮಾಡಿದ ಅಭಿವೃದ್ಧಿಯು ಬಹಳ ಶ್ರೇಯಸ್ಕರವೆಂದೂ, ಸರ್ವರೂ ಸಹಕರಿಸಿ ಹೊಸತಾಗಿ ತೆರೆಯಲಿರುವ "ಹಿಂದೂ ಹೈಸ್ಕೂಲನ್ನು" ಅಭಿವೃದ್ಧಿಗೊಳಿಸಬೇಕೆಂದೂ ಕೇಳಿಕೊಂಡರು. ಹೈಸ್ಕೂಲಿಗೆ ಹೆಡ್ ಮಾಸ್ತರರಾಗಿ ಶ್ರೀ. ಶಿವರಾಮ ಪಂತರ ಅನುಭವಸ್ಥರು ದೊರೆತುದಕ್ಕಾಗಿ ಆನಂದವನ್ನು ವ್ಯಕ್ತಪಡಿಸಿದರು. ಅಂತೆಯೇ ಹೈಸ್ಕೂಲು ಕಟ್ಟಡಕ್ಕಾಗಿ ಶಿರ್ವ ಚರ್ಚಿನವರು ಎಕ್ರೆ ಜಾಗವನ್ನು ಉಚಿತವಾಗಿ ಕೊಟ್ಟುದಕ್ಕಾಗಿ ಅಧ್ಯಕ್ಷರು ಅಭಿನಂದಿಸಿದರು. ತುಳು ಪ್ರಹಸನವೊಂದನ್ನು ಶಾಲಾ ಹುಡುಗರೂ "ಧ್ರುವಾಭ್ಯುದಯ" ವೆಂಬ, ಕನ್ನಡಸಂಗೀತ ನಾಟಕವನ್ನು ಶಾಲಾ ಬಾಲಕಿಯರೂ ಮನೋರಂಜಕವಾಗಿ ಆಡಿ ತೋರಿಸಿ ಸಭೆಯು ವಂದನೆ ಗೀತೆಯೊಂದಿಗೆ ಮುಕ್ತಾಯವಾಯಿತು.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶೀಲರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆಕುಟಿ ಗರ್ಭಿಯಿಂದ ಗರ್ಭಕೋಶ ನಾಶಕೊಂಡಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ನ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿಗೆ ೧ ರೂ. **ಪೋಸ್ಟ ಖರ್ಚ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಶಕ್ತ್ಯನುಸಾರ ಪ್ರಚಾರಕರು.

ಲೀಲಾಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. 77/46.

ಅರ್ಜಿದಾರ— ಶಿವರಾಮ ಹೆಗ್ಡೆ ನಡುಬೆಟ್ಟು ಅಂಕಯ್ಯ ಹೆಗ್ಡೇರ ಮಗ, ಉಡುಪಿ ತಾಲ್ಲೂ ಜಾಳ್ಗುದ್ದು ಗ್ರಾಮ.

ಎದುರು—ಮುಕಾಂಬಿಕೆ ಹೆಗ್ಗಡ್ತಿ. ನಡುಬೆಟ್ಟು ಅಂತಯ್ಯ ಹೆಗ್ಡೇರ ತಂಗಿ, ನಡುಬೆಟ್ಟು ಸಂಕಯ್ಯ ಹೆಗ್ಡೇರ ಹೆಂಡ್ತಿ. ಉಡುಪಿ ತಾಲ್ಲೂ ಹೆಗ್ಗುಂಜೆ ಗ್ರಾಮ.

ಈ ಮೇಲ್ಕಂಡ ಎದುರು ಜನರಿಗೆ ತಿಳಿಯಪಡಿಸುವದೇನೆಂದ್ರೆ.

ಅರ್ಜಿದಾರನ ತಂದೆ ಹೆಗ್ಗುಂಜೆ ನಡುಬೆಟ್ಟು ಅಂತಯ್ಯ ಹೆಗ್ಡೇರಿಗೆ ತಾರೀಕು 29-3-38ರಲ್ಲಿ ಬಾರ್ಕೂರು ಸಬ್‌ರಿಜಿಸ್ಟ್ರಾರ ರವರ ಮೂಲಕ ರಿಜಿಸ್ಟರಾದ ದಾನಪತ್ರ 1000 ರೂಪಾಯಿ ಬೆಲೆ ಬರತಕ್ಕದ್ದು ಈ ದಾನಪತ್ರದ ಪ್ರಕಾರ ಸದ್ರಿಯವನಿಗೆ ಬರತಕ್ಕ ಆಸ್ತಿ ಮತ್ತು ಹಣಗಳನ್ನು ವಸೂಲು ಮಾಡುವ ಹಕ್ಕನ್ನು ಅರ್ಜಿದಾರನಿಗೆ ಕೊಟ್ಟು ತಾರೀಕು 21-1-46ರ ರಿಜಿಸ್ಟ್ರಿ ಸಹಿ ಅರ್ಜಿದಾರನ ಹೆಸರಿಗೆ ಮರಣಶಾಸನ ಬರೆದಿಟ್ಟು ತಾ 29-1-46ರಲ್ಲಿ ಉಡುಪಿ ತಾಲ್ಲೂ ಹೆಗ್ಗುಂಜೆ ಗ್ರಾಮದಲ್ಲಿ ಮೃತಪಟ್ಟಿರುವುದರಿಂದ ಸದ್ರಿ ಹಣಗಳನ್ನು ವಸೂಲು ಮಾಡುವದಕ್ಕೆ ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂತ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಹಾಕ್ಕೊಂಡಿರುತ್ತಾನೆ. ಆ ಕುರಿತು ಯೇನಾದ್ರು ಆಕ್ಷೇಪ ಇದ್ದವರು ತಾ 5-6-46ನೇ ದಿವಸ ಸದ್ರಿ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸಿವ್ವಗ್ಗೆರು ಹಾಜರಿಯಿಂದ ತೀರ್ಮಾನಿಸಲಾಗುವದು ಎಂಬ ಸಂಗ್ತಿ ಈ ಮೂಲಕ ತಿಳಿಯುವದು.

K. Soorappa Shetty

Advocate, Kundapur.

29-4-46 ಸೊಕ್ಕಾರ, ಕುಂದಾಪುರ.

NOTICE

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. S. 328/44 R. E. P. 559/1945.

ವಾದಿರು— 1. ಪದ್ಮನಾಭ ಭಟ್ಟ 2. ಕೃಷ್ಣ ಭಟ್ಟ.

ಪ್ರತಿವಾದಿರು. -1. ವಿಷ್ಣುಮೂರ್ತಿ ಜಾತ್ರ, 2. ಲಲಿತಾ ಬಾಯಿ 3. ಮಂಜುನಾಥ ಜೆಟ್ಟಾರ.

ಬಿಳ್ಳಾಡಿ ಗ್ರಾಮದ ಪಿಜ್ಜಾಡಿ ಅಗ್ರಹಾರದಲ್ಲಿರುವ ವೆಂಕಟ್ರಮಣ ಜಾತ್ರರ ಮಗ, 1 ನೇ ಪ್ರತಿವಾದಿ ವಿಷ್ಣುಮೂರ್ತಿ ಜಾತ್ರ 1, 1 ನೇ ಪ್ರತಿವಾದಿಯ ಹೆಂಡ್ತಿ 2ನೇ ಪ್ರತಿವಾದಿ ಲಲಿತಾ ಬಾಯಿ 1 ಕೂಡಾ 2 ಅವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲ್ಕಂಡ ಅಸಲ್ಲಾರಿಯಲ್ಲಿ 1-2ನೇ ಪ್ರತಿವಾದಿರ ಹಕ್ಕಿನ ಸ್ಥಿರಾಸ್ತಿಯನ್ನು ಜಪ್ತಿ ಮಾಡ್ಸಿ ಯೇಲಂ ಮಾಡಿಸುವರೆ ಅರ್ಜಿದಾರರು ಹಾಕ್ಕೊಂಡಿರುವ ನೋಟಿಸ ಅಸಲ್ಲಾರಿಯು ತಾ. 7-6-1946ಕ್ಕೆ ಮೇಲಿನ ಕೋರ್ಟಿನಲ್ಲಿ ತಮ್ಮಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಹ್ಯಾಪೇಟು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

Sd/ **N. S. Parameshwariah**

Advocate for Petitioner.

Kundapur }
Date 19-4-46 }

(೨ನೇ ಪುಟದಿಂದ ಮುಂದುವರಿದುದು)

ಬಡತನ ಬಂದಾಗ ಅವರು ಮುಕ್ತಹಸ್ತದಿಂದ ಸಹಾಯಮಾಡುತ್ತಿದ್ದರು. ಅವರು ಸಮತಾವಾದದ ಗುಟ್ಟನ್ನು ಅರಿತುಕೊಂಡಿದ್ದರು. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಸ್ವತಂತ್ರತೆಯ ಮತ್ತು ಸಮತೆಯ ಗೀತೆಗಳನ್ನು ಅವರು ಲೇಖಿಸುತ್ತಿದ್ದರು. ಪರಂತು ರಾಜಕೀಯ ಕ್ಷೇತ್ರದಲ್ಲಿ ಕಾಲಿರಿಸುವಾಗ ಸ್ವಾತಂತ್ರ್ಯದ ಬಗ್ಗೆ ತುಂಬಾ ವಿವೇಚಿಸುತ್ತಿದ್ದರು. ಆದರೆ ರವಿಬಾಬುಗಳ ನಿರ್ಭಯದಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. ಮುಂದೆ ಪ್ರಸಂಗಾವಧಾನವಾಗಿ ಅವರ ದೇಶಾಭಿಮಾನ ಮತ್ತು ಸ್ವಾತಂತ್ರ್ಯಲಾಲಸೆಯು ಉತ್ಕೃಷ್ಟ ತೇಜದಿಂದ ಅವರ ವೃದ್ಧಾಪ್ಯದಲ್ಲಿ ಕೂಡ ಬೆಳಗುತ್ತಿತ್ತು. ತಮ್ಮ ಹಿಂದೀ ಜನಾಂಗದ ಮೇಲೆ ಅತ್ಯಾಚಾರ ಮಾಡುತ್ತಿರುವ ಸರಕಾರದ ಪದವಿಯನ್ನು ಅವರು ತಿರಸ್ಕಾರ ಪೂರ್ವಕವಾಗಿ ತ್ಯಜಿಸಿ ಬಿಟ್ಟರು. ಮತ್ತು ಮೊನ್ನೆ ಮೊನ್ನೆ ಎಂದಂತೆ ಅವರು ಯುರೋಪಿನ ರಾಜಕೀಯ ಜನರ ಸುಳ್ಳು ಆಕ್ಷೇಪಗಳಿಗೆ ಸರಿಯಾದ ಪ್ರತ್ಯುತ್ತರಗಳನ್ನು ಕೊಟ್ಟಿದ್ದರು.

ಮಾನವೀ ಉನ್ನತಿಯ ಭಾಗದಲ್ಲಿ ಉದ್ಯೋಗ ಜೀವನವೆಂಬುದೊಂದು. ಇದನ್ನರಿತು ಅವರು 'ಶ್ರೀನಿಕೇತನ'ದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಉದ್ಯೋಗಗಳನ್ನು ಕಲಿಸುವ ವ್ಯವಸ್ಥೆಯನ್ನು ಮಾಡಿರುತ್ತಾರೆ. 'ಶಾಂತಿನಿಕೇತನ' ಮತ್ತು ಶ್ರೀನಿಕೇತನ'ಗಳನ್ನು ಕಂಡಲ್ಲಿ ರವೀಂದ್ರರ ವ್ಯಾಪಕ ವಿಚಾರಗಳ ಪ್ರತ್ಯಕ್ಷ ಸ್ವರೂಪ ಕಂಡು ಬರುತ್ತದೆ ಈ ಕವಿ ಸುಮ್ಮನೆ ಕಲ್ಪನಾಮಯ ಜೀವನದಲ್ಲಿ ಈಜಾಡುತ್ತಿರುವವರಲ್ಲ! ಅವರು ಕಾವ್ಯಕಲ್ಪನೆಯ ಸುಖದ ಪ್ರತಿಭೆಯ ಆಕಾಶದಲ್ಲಿ ಎಷ್ಟು ಮೇಲೇರಿ ಹೋಗಬಲ್ಲರೋ, ಅಷ್ಟೇ ಸಹಜತೆಯಿಂದ ಮಾನವೀ ಜೀವನದ ಭೌತಿಕ ಭಾಗದಲ್ಲಿಯೂ ಅವರು ಮಾರ್ಗಾಕ್ರಮಣ ಮಾಡುತ್ತಿದ್ದರು. ಶಾಂತಿನಿಕೇತನ ಠಾಗೋರರಲ್ಲಿ ವಿಚಾರ ಮತ್ತು ಆಚಾರಗಳು ಗಂಗಾ ಯಮುನೆಯರ ಪವಿತ್ರ ಸಂಗಮದಂತೆ ತೋರುತ್ತಿದ್ದಲ್ಲಿ ಆಶ್ಚರ್ಯವೇನು? ಪ್ರಯಾಗ ರಾಜ್ಯದ ಪವಿತ್ರ ಸಂಗಮವು ಲೋಕದಲ್ಲಿ ಹೇಗೆ ದುರ್ಲಭವೋ ಅಂತೆಯೇ ಬಾಬುಗಳಂತೆ ಆಚಾರ-ಉಚ್ಚಾರಗಳ ಸಂಕೇತನ ಸ್ಥಾನವೂ ಅತಿ ವಿರಳ!

ಶಾಂತಿನಿಕೇತನದ ಅನಲಂಕೃತ ಸೌಂದರ್ಯ

ಠಾಗೋರರ ಅಸಾಧಾರಣ ವ್ಯಕ್ತಿತ್ವದಲ್ಲಿ ಏನಿದೆಯೆಂಬುದನ್ನು ನಾವೀಗ ವಿವೇಚಿಸಿದೆವು. ಇನ್ನು ಅವರ ಕಲಾದೃಷ್ಟಿಯ ವಿಚಾರ ಮಾಡುವ. ನಾವು ವಿಚಾರ ಮಾಡುತ್ತಿರುವಾಗ ಸರ್ವಸಾಮಾನ್ಯ ಕಲಾಗಾರರಲ್ಲಿ ಮತ್ತು ರವೀಂದ್ರರಲ್ಲಿರುವ ಮಹದಂತರವು ತಿಳಿದುಬರುತ್ತದೆ. ಅವರ ಅತ್ಯಂತ ಪ್ರೀತಿಯ ಸ್ಥಳವೆಂದರೆ 'ಶಾಂತಿನಿಕೇತನ' ಅಲ್ಲಿ ನಾವು ಪ್ರಥಮದಲ್ಲಿ ಹೋದಾಗ (ಶಾಂತಿನಿಕೇತನವನ್ನು ನೋಡುವ ಬಗ್ಗೆ) ನಮಗೆ ಹೀಗೆ ಹೊಳೆಯಿತು:-"ನಮಗೆ ಅಲ್ಲಿ ಸುಂದರ ತೋಟಗಳು ಕಾಣಸಿಕ್ಕಬಹುದು ಹುಲ್ಲನ್ನು ಯಂತ್ರಗಳಿಂದ ಕತ್ತರಿಸಿ, ವೈವಿಧ್ಯಗಳಿಗೆ ಹಚ್ಚಿ ಅಲ್ಲಲ್ಲಿ ಚಲವಾದ ಹೂ ಗಿಡಗಳನ್ನು ನಟ್ಟಿರಬಹುದು; ಮನೋಹರವಾದ ರಸ್ತೆಗಳ ಇಕ್ಕಡೆಗಳಲ್ಲಿ ಹಲಸು- ಮಾವುಗಳ ಮರಗಳನ್ನು ಹಚ್ಚಿರಬಹುದು. ಅಲ್ಲಲ್ಲಿ ಲತಾಕುಂಜಗಳನ್ನು ರಚಿಸಿ ಪಕ್ಷಿಗಳಿಗಾಗಿ ಪಕ್ಷಿಗೃಹಗಳನ್ನು ಅವುಗಳಲ್ಲಿ ಮಾಡಿಟ್ಟಿರಬಹುದು. ರವೀಂದ್ರ ಬಾಬುಗಳ ಸ್ವಂತಗೃಹವು ಆರಾಮ ವಸ್ತುಗಳ ತಾಯ್ಮನೆಯಾಗಿರಬಹುದು; ಅವರು ಆರೂಢವಾಗುವ ಕುರ್ಚಿಯು ಮಖಮಲ್ಲಿನ ಬಟ್ಟೆಯಿಂದ ರಚಿತವಾಗಿರಬಹುದು; ಜರತಾರೀ ಮತ್ತು ರೇಶ್ಮೆ ಪರದೆಗಳಿಂದ ಕುಟೀರಗಳು ತುಂಬಿರಬಹುದು! ಆದರೆ ನಮಗೆ ಅಲ್ಲಿ ಇದೊಂದೂ ಗೋಚರಿಸಲಿಲ್ಲ. ಅಲ್ಲಿಯ ಇಮಾರತಿಗಳನ್ನು ನೋಡಿಯೇ ನಮಗೆ ಮೊದಲು ಮಂದಟ್ಟಾಯಿತು. ಕೆಲವು ಗಗನ ಚುಂಬಿತ ವೃದ್ಧವೃಕ್ಷಗಳು ಮಾತ್ರ ಅಲ್ಲಲ್ಲಿ ಕಾಣಿಸುತ್ತಿದ್ದವು ಅವುಗಳ ಕೆಳಗೆ ಉದುರಿದ ತರಗೆಲೆಗಳನ್ನು ಸಹ ತೆಗೆದು ಹಾಕಿದ್ದಿರಲಿಲ್ಲ! ರವೀಂದ್ರರ 'ಸ್ವಂತದ ಮನೆ'ಯು ಮೂರು ನಾಲ್ಕು ಕೋಣೆಗಳಿಂದ ಕೂಡಿದ್ದು ಮಣ್ಣಿನಗೋಡೆಗಳಿಂದ ತಯಾರಿಸಲಾಗಿದ್ದಿತು ಅದು ಸಹ ಆಧುನಿಕ ಸಾಮಗ್ರಿಗಳಿಂದ ಕೂಡಿದ್ದಾಗಿರಲಿಲ್ಲ, ಅದು ಸಾಮಾನ್ಯ ಉತ್ಪನ್ನವುಳ್ಳ ಒಬ್ಬ ಗೃಹಸ್ಥನ ಮನೆಯಂತೆ ನಮಗೆ ಕಂಡಿತು-- ಅಲ್ಲಿ ರೇಡಿಯೋ, ಹಾರ್ಮೋನಿಯಂ ಇತ್ಯಾದಿಗಳು ಕೂಡಾ ಇರಲಿಲ್ಲ! ಇದನೆಲ್ಲ ನೋಡಿ ನಾವು ಆಶ್ಚರ್ಯ ಚಕಿತರಾದೆವು.

ಬಾಲಕನ ದೃಷ್ಟಿ

ರವೀಂದ್ರರು ಸೃಷ್ಟಿಯನ್ನು ಬಾಲಕನಂತೆ ಕಾಣುತ್ತಾರೆ. ಸೃಷ್ಟಿಯ ಸೌಂದರ್ಯ ಮತ್ತು ಪದಾರ್ಥಗಳು ಭೋಗಿಸಲಿಕ್ಕೆಯೇ ಇರುತ್ತವೆ. ಆದರೆ ಈ ಕಲ್ಪನೆ ಅದರದ್ದಾಗಿಲ್ಲ. ತಾಯಿಯ ತೊಡೆಗಳ ಮೇಲೆ ಮಲಗಿಕೊಂಡು ಹಾಲು ಕುಡಿಯುವ ಶಿಶುವಿನಲ್ಲಿ ಕೇವಲ ಭೋಗ ಲಾಲಸೆಯಿರುವುದಿಲ್ಲ. ಮಗುವಿನ ಮಾತೆಯು ಕೊಡುತ್ತಿರುವ ಹಾಲು ಎಷ್ಟು ಶುಭ್ರವಾಗಿರುತ್ತದೋ ಅಂತೆಯೇ ಆ ಮಗುವಿನ ಮಧುರಾನಂದವೂ ಆಗಿರುತ್ತದೆ. ರವಿಬಾಬುಗಳು ಸೃಷ್ಟಿಯ ಸೌಂದರ್ಯದ ಕಡೆಗೆ ನೋಡುವಾಗ, ತಾನು ತಾಯಿಯ ತೊಡೆಗಳ ಮೇಲೆ ಮಲಗಿಕೊಂಡಿರುವಂತೆ ಅವರಿಗೆ ಭಾಸವಾಗುತ್ತಿತ್ತು. ಹಾಗಾಗಿ ಒಮ್ಮೆ ಒಂದು ಗಿಡದ ಎಲೆಯೊಂದು ಹಣ್ಣಾಗಿದ್ದಾಗ ಅದನ್ನು ಕಿತ್ತು ಬಿಸುಡಲು ಕೂಡ ಅವರಿಂದಾಗಲಿಲ್ಲ! ಅವರು ಗಿಡಗಳಲ್ಲಿನ ಹಣ್ಣೆಲೆಗಳನ್ನು ಎಂದೂ ಕಿತ್ತು ಬಿಸುಟು, ಹಸುರೆಲೆಗಳನ್ನು ಮತ್ತು ಹೂ-ಎಲೆಗಳನ್ನು ಮಾತ್ರ ಬಿಡುತ್ತಿರಲಿಲ್ಲ. ಕಾರಣ ಸಮಾಜದಲ್ಲಿ ಬಾಲ-ವೃದ್ಧ-ತರುಣರು ಹೇಗೆ ತುಂಬಿರುತ್ತಾರೋ ಅಂತೆಯೇ ಅಲ್ಲವೆ ಮೇಲಿನದರ ಅರ್ಥ?

ಶಾಂತಿನಿಕೇತನದಲ್ಲಿ ಆಧುನಿಕ ಕಾಲದ ಬಿನ್ನ ಭಿನ್ನ ಶಿಕ್ಷಣದ ಪ್ರತಿನಿಧಿ ಸ್ಥಳಗಳಾಗಿ ಅಲ್ಲಲ್ಲಿ ಸಣ್ಣ ಸಣ್ಣ ಕಟ್ಟಡಗಳನ್ನು ಕಟ್ಟಲಾಗಿದೆ. ಇವುಗಳ ಕಡೆಗೆ ಆಯಾಯ ಸಂಸ್ಕೃತಿಗಳ ದೃಷ್ಟಿಯಲ್ಲಿ ಕಂಡರೆ ಮಾತ್ರ ಸೃಷ್ಟಿ ಸೌಂದರ್ಯದ ಅನುಭವ ಲಭಿಸುತ್ತದೆ. ಅವರು ರಚಿಸಿದ ಸಣ್ಣ ಸಣ್ಣ ಕೃತಿಗಳಲ್ಲಿ ಸಹಾ ಪರಮೇಶ್ವರನ ಅನುಪಮ ಗುಣಗಳನ್ನು ನಾವು ಕಾಣಬಹುದು ಹುರಿದ ಪದಾರ್ಥಗಳನ್ನು ತಿಂದು ಅಭ್ಯಾಸವುಳ್ಳವರಿಗೆ ಅನ್ನ-ಮೊಸರಿನಲ್ಲಿ ಹೇಗೆ ಸೇರುವಿಕೆಯಿಲ್ಲವೋ ಅಂತೆಯೇ ಆಧುನಿಕ ಕೃತ್ರಿಮ ಕತೆಗಳನ್ನು ಓದಿ ಅಭ್ಯಾಸವಿದ್ದವರಿಗೆ ಒಮ್ಮೆಯೇ ರವೀಂದ್ರರ ಕೃತಿಗಳು ಹೇಗೆ ಅಭಿರುಚಿಸಬಲ್ಲವು?

ಒಬ್ಬ ಮಹಾತ್ಮರಿಂದ ಇನ್ನೊಬ್ಬ ಮಹಾತ್ಮರಿಗೆ ಕೊಡುಗೆ

ಈ "ಶಾಂತಿನಿಕೇತನ"ದಲ್ಲಿಯ ರವೀಂದ್ರರ ಗುಡಿಸಲು ಮನೆಯನ್ನು ಮೂರು ವರ್ಷಗಳ ಹಿಂದೆ ಮಹಾತ್ಮ ಗಾಂಧಿಜಿಯವರಿಗೆ ಕೊಡುಗೆಯೆಂದು ಭಕ್ತಿ ಭಾವನೆಯಿಂದ ಅವರು ಕೊಟ್ಟಿರುತ್ತಾರೆ. ನಮ್ಮ ಮನೆಗಳಲ್ಲಿ ದೊಡ್ಡ ಮನುಷ್ಯರು ಬಂದಲ್ಲಿ ನಾವು ಅವರನ್ನು ಬಹಳ ಸಂಭ್ರಮದಿಂದ ಸ್ವಾಗತಿಸಿ, ನಮ್ಮಲ್ಲಿ ಇಲ್ಲವಾದರೆ ಸಾಮಾಗ್ರಿಗಳನ್ನು ಎರವಾದರೂ ತಂದು ನಾವು ಅವರನ್ನು ಸತ್ಕರಿಸುತ್ತೇವೆ. ಆದರೆ ಮೂರು ವರ್ಷಗಳ ಹಿಂದೆ ಬಾಪೂಜಿಯವರನ್ನು ರವೀಂದ್ರರು ಸ್ವಾಗತಿಸಿದ ರೀತಿಯು, ನೋಡುವಂತಿದ್ದಿತು. ಎರಡು ದೊಡ್ಡ ಮರಗಳ ಅಡಿಯಲ್ಲಿ ಕಸವನ್ನು ಗುಡಿಸಿ, ೬ ಇಂಚು ಎತ್ತರದ ಎರಡು ಮಣ್ಣಿನ ದಿನ್ನೆಗಳನ್ನು ಕಟ್ಟಿಸಿ, ಅವುಗಳನ್ನು ಸೆಗಣಿಯಿಂದ ಸಾರಿಸಲಾಗಿತ್ತು. ಮಹಾತ್ಮಾ ಗಾಂಧಿಜಿಯವರು ಆಗಮಿಸಿದೊಡನೆ ಅವರನ್ನು ಸ್ವಾಗತಿಸಿ, ಅವರ ಕೈಗಳನ್ನು ಹಿಡಿದು ದಿನ್ನೆಯ ಮೇಲೆ ಕೂರಿಸಿ ನಂತರ ತಾವು ಕುಶಲ ಪ್ರಶ್ನೆಯಾದ ನಂತರ ಕುಳಿತರು ಶಾಂತಿನಿಕೇತನದ ಚಿಕ್ಕ ದೊಡ್ಡ ವಿದ್ಯಾರ್ಥಿಗಳು ಅವರ ಎದುರಿನಲ್ಲಿ ಕುಳಿತಿದ್ದರು, ಇದೊಂದು ಸುಪ್ತ ಸೌಂದರ್ಯದಿಂದ ಕೂಡಿದ ಮೌನ ಸ್ವಾಗತ. ಆದಕ್ಕೆ ಬ್ಯಾಂಡು, ಪತಾಕೆ, ಧ್ವಜಗಳಾಗಲೀ, ಹಾರತುರಾಯಿ, ಮಾನಪತ್ರ ಸಮರ್ಪಣೆಯಂತಹ ಗೌರವ ಕಾರ್ಯಕ್ರಮಗಳಾಗಲೀ ಇರಲಿಲ್ಲ! ಇವರಿಂದ ರವೀಂದ್ರರ ಕಲಾ ದೃಷ್ಟಿಯ ಮೂಲ ಅರ್ಥವಾಗಬಲ್ಲುದು!

ರವೀಂದ್ರರ ಅನಲಂಕೃತ ಗೃಹವನ್ನು ನೋಡಿ, ನಾವು ಅವರ ನಾಟ್ಯ ಶಾಲೆಯ ಕಡೆಗೆ ಹೊರಟೆವು ಬೊಂಬಾಯಿಯ ಪ್ರಥಮ ದರ್ಜೆಯ ನಾಟ್ಯಗೃಹದಂತೆ ಅದಿರಬಹುದೆಂದು ನಾವು ಎಣಿಸಿದ್ದೆವು. ಆದರೆ ನಮಗೆ ಅಲ್ಲಿ ಕಂಡುದೇನು? ಒಂದು ಸರಳವಾದ ರಂಗಭೂಮಿ ಮತ್ತು ಅದರಲ್ಲಿ ಒಂದು ಹಳೆಯದಾದ ಪರದೆ. ಮನೆಗಳಲ್ಲಿ ನಾಟ್ಯ ಶಿಕ್ಷಣಕ್ಕೆ ತಯಾರಿಸುವಂತಹ ಅಕೃತ್ರಿಮ ನಾಟ್ಯ ಮಂದಿರವೇ ಅದು ಆಗಿತ್ತು! ಅದರಲ್ಲಿ ಪಾತ್ರಗಳು ಸಹ ವೇಷಗಳಿಂದಲೇ ಕೆಲಸಮಾಡುತ್ತಾರೆ.

(ಪಿ. ಎಸ್. ಆಪಟೆಯವರಿಂದ)

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕ್ಷಯ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0, ½ ಪೌಂಡು ರೂ. 3—0—0

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ನೋವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಕ್ಯಾಟೆಲಾಗ್ ಬರದಕ್ಕೆ ರೋಗಗಳ್ಗೆ ಪತ್ರದ್ವಾರ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರ :- ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು - ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಹಿರಾಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಜೆಲ್ಟಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಹಾಗೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಯ್ಯ,

ರಥಬೀದಿ, ಉಡುಪಿ.

The General Investment & Commercial Corporation, Limited,

UDIPI, S. India.

Announce with pleasure the incorporation under their management,

OF

THE KANARA MEDICAL & SURGICAL INSTITUTE, Ltd.	THE BHARATH MILLS, Ltd.

With

Dr. T. M. A. Pai, M. B., B. S.	Upendra Ananth Pai, Esq.
Kochikar Panduranga Pai, Esq.	Dr. K. L. Aithala, M. B., B. S.
A. L. N. Rao, Esq., B. A., B. L.	A. L. N. Rao, Esq., B. A., B. L.
Dr. K. L. Aithala, M. B., B. S	Kochikar Manjunath Pai, Esq.
T. N. Kelu Nambiar Esq.	Kalsank Venkatraya Pai, Esq.
Dr. V. K. Ballal, L. I. M.	B. Padmanabha Pai, Esq.
T. Ramesh U. Pai, Esq.	T. Ramesh U. Pai, Esq.

as DIRECTORS,

to give better and efficient service to the public.

While thanking all the customers and well-wishers for their past co-operation and patronage, they feel assured of continued erstwhile co-operation and good-will in future.

Edited, Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೫ ವಾರ ೩೯] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ Founder SRI A. B. SHETTY, M. L. A. [Vol. 25 No. 39

ಉಡುಪಿ ● 30—5—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ ತಲೆನೋವು, ಶೀತ, ನೆಗಡಿ, ಉಳುಕು, ಶುಂಠಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಚಾಕು ಕೊಯ್ತವು, ಚೇಳು ವಿಷ ಮುಂತಾದ ಬೇನೆ ಶಕ್ತಿ ಜಾಸ್ತಿ ನೋಡಿವೆ. ಬೆಂದಲಾದ ಎಲ್ಲ ರೋಗಗಳಿಗೂ ಶಿವ್ ಸಕಲ ಹಾಕಿಕೊಳ್ಳಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THOUGH DEAD MEN DO NOT TELL TALES THEIR WIDOWS SOMETIMES DO.

The tale "HE DIDN'T INSURE" speaks volumes of the painful life that the bereaved family has to lead.

Wise men never give room for such tales to go round after them.

THE CANARA MUTUAL ASSURANCE COMPANY, LTD.,

Head Office - **UDIPI, (S. India.)**

Chief Agents for the Bombay and Madras Presidencies including States and the States of Mysore and Hyderbad —

The Commercial Corporation of India, Ltd.,

UDIPI, S. India.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು —ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ.—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕನಾಳದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State

Business in 1945 in our area.— **Over 5 Millions**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು —ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ. ಜಿ ಆಚಾರ್ಯ ಫಾರ್ಮಸಿ, ಡಾ। ಕೆ। ಶೇಷಗಿರಿ ಪೈ, L I M, ಡಾ। ವೆಂಕಟರಾವ್, ಕೊರಕ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ನನ್ನಿವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್ ನರಸಿಂಗ ರಾವ್,

ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office.—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay**

★ ಸೂಸಿ ★

ಬರೆದುದು:— 'ಗುಣ', ಉದ್ಯಾವರ.

ರಭಸದಿಂದ ಓಡುತ್ತಿದ್ದ ಟ್ರಾಮು ಒಂದರಲ್ಲಿ ನಾನು ಕಿತ್ತಳೆ ಬಣ್ಣದ ಉಡುಪಿನ ಅತ್ಯಂತ ಸುಂದರಿ ಯುವತಿಯ. ಅದಷ್ಟು ಸಮೀಪ ಕುಳಿತುಕೊಂಡು ಆಕೆಯ ಸೌಂದರ್ಯ ರೂಪಲಾವಣ್ಯಗಳನ್ನು ಮನಸ್ಸಿನಲ್ಲೇ ಸವಿಯುತ್ತಿದ್ದೆ.

ಆಕೆಯು ತನ್ನೊಡನಿದ್ದ ಒಂದು ಪುಸ್ತಕವನ್ನೇ ನೋಡುತಿದ್ದಳಲ್ಲದೆ ನಾನೆಷ್ಟು ಗಟ್ಟಿಯಾಗಿ ಕೆಮ್ಮಿದರೂ ನನ್ನನ್ನು ಮುಖವೆತ್ತಿ ನೋಡಲಿಲ್ಲ.

ಟ್ರಾಂ ರಭಸದಿಂದ ಓಡುತಿತ್ತು. ಈ ಓಟಕ್ಕೆ ಸರಿಯಾಗಿ ನನ್ನ ತಲೆಯಲ್ಲಿ ಅನೇಕ ಆಲೋಚನೆಗಳು ಬರಲಾರಂಭಿಸಿದವು. ಕೂಡಲೇ ಟ್ರಾಂ ಫಕ್ಕನೆ ನಿಂತುಬಿಟ್ಟಿತು. ಪ್ರಯಾಣಿಕರು ಒಬ್ಬರ ಮೈಮೇಲೊಬ್ಬರು ಬಿದ್ದರು. ಒಳಗಡೆ ಬೆದರಿ ಹೋದ ಹೆಂಗಸರ ಮತ್ತು ಗಂಡಸರ ಚೀರಾಟ ಒದ್ದಾಟಗಳಿಂದ ದೊಡ್ಡ ಗಲಭೆಯಾಯಿತು. ಎರಡು ತುಂಟ ಹುಡುಗರು ಓಡುತ್ತಿರುವ ಟ್ರಾಮಿನ ಎದುರುಗಡೆಯಲ್ಲಿ ಅಡ್ಡ ಹಾದುಹೋದದ್ದೇ ಇದಕ್ಕೆ ಕಾರಣ. ಹುಡುಗರು ಅಡಿಗೆ ಬೀಳದೆ ಪಾರಾಗಿದ್ದರು.

'ನನ್ನ ತಲೆಯು ನಿಮ್ಮ ತಲೆಗೆ ತಾಗಿದುದಕ್ಕೋಸ್ಕರ ಪಶ್ಚಾತ್ತಾಪ ಪಡುತ್ತೇನೆ'ಎಂದು ನನ್ನ ಹಣೆಯನ್ನು ತಿಕ್ಕುತ್ತಾ ಆ ಕಿತ್ತಳೆ ಬಣ್ಣದ ಉಡುಪಿನ ಯುವತಿಯೊಡನೆ ಕ್ಷಮೆ ಯಾಚಿಸಿದೆ 'ಚಿಂತಿಲ್ಲ' ಎಂದು ಅರೆ ಮನಸ್ಸಿನಿಂದ ಆಕೆ ಹೇಳಿದಳು. ನನ್ನ ಮುಖದಲ್ಲೊಮ್ಮೆ ಮುಗುಳ್ನಗೆ ಮೂಡಿತು.

'ಎಂತಹ ಅಸಡ್ಡೆಯ ಹುಡುಗರು! ಓಡುತ್ತಿರುವ ಟ್ರಾಮಿಗೆ ಅಡ್ಡ ಬರುವುದೆಂದರೆ!' ಎನ್ನುತ್ತಾ ನನ್ನ ಜೊತೆ ಪ್ರಯಾಣಿಕಳಾದ ಆಕೆಯ ಉತ್ತರವನ್ನು ನಿರೀಕ್ಷಿಸಿದೆ. ಆದರೆ ಆಕೆ ನನ್ನನ್ನೊಮ್ಮೆ ನೋಡಿ ತಿರುಗಿ ಕೂತು ಪುಸ್ತಕದ ಮತ್ತೊಂದು ಪಾನನ್ನು ತೆರೆದಳು. ಅಲ್ಲಿ ಆಕೆಯ ಟಿಕೇಟಿನ ತುಂಡು ಇತ್ತು. ಆ ಸಮಯದಲ್ಲೊಮ್ಮೆ ಟ್ರಾಂ ನಿಂತಿತು. ಟ್ರಾಂ ತಿರುಗಿ ಓಡಲಾರಂಭಿಸಿದಾಗ ನನ್ನ ಆಲೋಚನೆಗಳು ಅಂತೆಯೇ ಓಡಲಾರಂಭಿಸಿದವು. ನಾವು ಮುಂದರಿಯುತ್ತಿದ್ದಂತೆ ಪ್ರಯಾಣಿಕರ ಸಂಖ್ಯೆಯೂ ಕಡಿಮೆಯಾಗಲಾರಂಭಿಸಿತು. ನಾವು ಇಳಿಯುವಾಗ ಬರೇ ಕೈಬೆರಳುಗಳಲ್ಲಿ ಲೆಕ್ಕಮಾಡುವಷ್ಟು ಜನರು ಮಾತ್ರ ಇದ್ದರು ಪ್ರತಿ ಒಬ್ಬರೂ ತಮ್ಮ ತಮ್ಮ ಹಸ್ತಗಳನ್ನು ಹಿಡಿದರು. ನಾನು ಆ ನನ್ನ ಜತೆಗಾತಿಯ ಹಿಂದೆ ಹೋದೆ. ಆಕೆ ಒಂದು ಕತ್ತಲೆಯ ಓಣಿಗೆ ತಿರುಗಿದಳು. ನಾನು ಅತಿ ರಭಸದಿಂದ ಆಕೆಯ ಬೆನ್ನ ಹಿಂದೆಯೇ ಹೋದೆ.

ಕಟ್ಟ ಕಡೆಗೆ ನಾನು ಧೈರ್ಯ ತಂದುಕೊಂಡು "ಕ್ಷಮಿಸಿ,ನೀವು ಠಿ. ಫಾ ...ಅವರ ಪುತ್ರಿಯೋ?" ಎಂದೆ. "ಅಲ್ಲ. ನಾನಲ್ಲ" ಎಂದು ಆಕೆಯು ಸಟಕ್ಕನೆ ಹೇಳಿ ಬಿಟ್ಟಳು. "ಕ್ಷಮಿಸಿ; ನಾನು ತಪ್ಪಿರಬಹುದು. ಇರಲಿ; ಈ ಕತ್ತಲೆಯಲ್ಲಿ ಜತೆಗೆ ಯಾರೂ ಇಲ್ಲದೆ ಹೋಗಲು ನಿಮಗೆ ಹೆದರಿಕೆ ಯಾಗುವುದಿಲ್ಲವೇ?" ಎಂದೆ,

'ಇಲ್ಲ ನಾನು ಒಬ್ಬಳೆ ಹೋಗುವುದಿಲ್ಲ. ನೀವು ಕೂಡ ನನ್ನೊಟ್ಟಿಗಿರುವುದು ನಿಮಗೆ ತಿಳಿದಿಲ್ಲವೇ?" ಎಂದು ಮುಂಚಿಗಿಂತಲೂ ತುಸು ರಭಸದಿಂದಲೇ ಉತ್ತರವಿತ್ತಳು.

'ನೀವು ಎಲ್ಲಿ ವಾಸವಾಗಿರುವುದು'?

'ಬಹಳ ದೂರವೂ ಅಲ್ಲ. ಹತ್ತಿರವೂ ಅಲ್ಲ ನೋಡಿ, ಅಲ್ಲಿ ಕಾಣುವ ಇಗರ್ಜಿಯ ಸ್ಮಶಾನದ ಹತ್ತಿರ ಹಾದು ಹೋಗುವಾಗ ನನಗೆ ಹೆದರಿಕೆಯಾಗುತ್ತದೆ. ನಾನು ಈ ವರೆಗೆ ಒಬ್ಬಳೇ ಆ ದಾರಿಯಾಗಿ ಹೋದದ್ದಿಲ್ಲ. ನೀವು ಕೂಡ ನನ್ನೊಟ್ಟಿಗೆ ಅಲ್ಲಿವರೆಗೆ ಇದ್ದೀರೆಂದು ತೋರುತ್ತದೆ" ಎನ್ನುವಾಗ ಆಕೆಯ ಮುಖದಲ್ಲಾದ ಭಾವವಿದ ಎಂಬುದನ್ನು ಆ ಕತ್ತಲೆಯಲ್ಲಿ ನೋಡಲಾಗಲಿಲ್ಲ

'ಹೌದು. ನಾನು ನಿಮ್ಮೊಟ್ಟಿಗೇ ಇದ್ದೇನೆ. ನಾನಿರುವ ತನಕ ನಿಮಗೆ ಯಾವ ಭಯವೂ ಇಲ್ಲ'ವೆಂದು ಸೈಂಟ್ ಜೋರ್ಜ್ ಡ್ರೇಗನ್ನನ್ನು ಇದಿರಿಸಲು ಹೋಗುವ ಹಾಗೆ ಹೇಳಿಬಿಟ್ಟೆ. ಮತ್ತು 'ನನ್ನ ರಕ್ತವು ನಿಮ್ಮ ಪಾದಗಳನ್ನು ತೋಯಿಸುವ ತನಕ ಯಾರಿಂದಲೂ ನಿಮಗೆ ಹಾನಿಯಾಗಲಾರದೆಂದು ಖಂಡಿತವಾಗಿ ಹೇಳಬಲ್ಲೆ. ಇದು ಒಬ್ಬ ಗಂಡಸಿನ ಲಕ್ಷಣ" ಎಂದೆ.

'ನೀವೆಷ್ಟು ಶೂರರು, ಮತ್ತು ಕರುಣಾಳು!'

'ನನ್ನನ್ನು ತಿರುಗೊಮ್ಮೆ ಕ್ಷಮಿಸಿ; ನಿಮ್ಮ ಹೆಸರೇನು?'

'ಸೂಸಿ ಎಂದು ಮನೆಯಲ್ಲಿ ಕರೆಯುತ್ತಾರೆ'

'ಚಲೋ ಹೆಸರು! ಹೆಸರಿಗೆ ತಕ್ಕಂತೆ ನಿಮ್ಮ ಸೌಂದರ್ಯ!'

'ನೋಡಿ; ಓ ಅದೇ ನನ್ನ ಮನೆ-ಹಸುರು ಕನ್ನಡಿಯ ಕಿಟಕಿಯಿಂದ ದೀಪಗಳು ಕಾಣುತ್ತವಲ್ಲಾ' ಎಂದು ತನ್ನ ಕೈಯನ್ನು ಬೀಸಿ ಹೇಳಿದಳು.

'ನೀವು ಯಾರೆಲ್ಲಾ ಮನೆಯಲ್ಲಿದ್ದೀರಿ? ಸೂ- ಹಾ! ನೀನು ನಿನ್ನ ಸಂಪೂರ್ಣ ಹೆಸರು ತಿಳಿಸಲಿಲ್ಲ. ನಾನು ನಿನ್ನನ್ನು ಹೇಗೆ ಕರಿಯಬೇಕು?"

'ತಂದೆ ಅಮ್ಮ- ಮತ್ತು ನನ್ನ ಅಣ್ಣ ತಮ್ಮಂದಿರು. ನನ್ನ ತಂದೆಯವರು ಮುಷ್ಟಿಯುದ್ಧದವರು. ಅಲ್ಲದೆ ನನ್ನ ಅಣ್ಣ ತಮ್ಮಂದಿರಿಗೂ ಅವರು ಅದೇ ವಿದ್ಯೆಯನ್ನು ಕಲಿಸಿದ್ದಾರೆ. ಹಲ್ಲು ಕೀಳುವ ಡಾಕ್ಟರರಿಗಿಂತಲೂ ಹೆಚ್ಚಾಗಿ ನನ್ನ ತಂದೆಯವರು ಅನೇಕರ ಹಲ್ಲುಗಳನ್ನು ಉದುರಿಸಿದ್ದಾರೆ. ಅಲ್ಲದೆ ಅವರು ಹುಚ್ಚರ ತಲೆಯನ್ನು ಪುಡಿಮಾಡಿ ಬಿಡುತ್ತಾರೆ; ಅದರ ಮುಖ ಮೂಗುಗಳನ್ನು ವಿಪರೀತಮಾಡಿ ಬಿಡುತ್ತಾರೆ. ನೀವು ಈ ವರೆಗೆ ಅಂಥವರೊಬ್ಬರೊಡನೆ ಭೆಟ್ಟಿಯಾದ್ದದ್ದುಂಟೆ?" ಎಂದಳಾಕೆ.

ನನ್ನ ಹೃದಯವು ತಲ್ಲಣಿಸತೊಡಗಿತು. ನನಗೆ ಅಂತಹ ಮೂರ್ತಿಗಳನ್ನು ಭೆಟ್ಟಿಯಾಗುವ ಇಚ್ಛೆಯಿರಲಿಲ್ಲ. ಅಲ್ಲದೆ ಅಲ್ಲಿಂದ ಜಾರಿಹೋಗಬೇಕೆಂದು ಹೊಳೆಯಿತು. ಆಗಲೇ ನಾವು ಸೂಸಿಯ ಮನೆಯ ಎದುರಿಗೆ ಬಂದಿದ್ದೆವು.

'ನೀವು ನನ್ನೊಟ್ಟಿಗೆ ಇಲ್ಲಿ ವರೆಗೆ ಬಂದದಕ್ಕೆ ನಿಮ್ಮ ಉಪಕಾರ ಬಹಳವಾಯಿತು. ಅಲ್ಲದೆ ನೀವೊಬ್ಬರೇ ಹಿಂದೆ ಹೋಗಬೇಕಾದುದಕ್ಕೆ ಪಶ್ಚಾತ್ತಾಪ ಪಡುತ್ತೇನೆ". ಎನ್ನುತ್ತಾ ಆಕೆ ತನ್ನ ಮನೆಯೊಳಗೆ ನುಗ್ಗಿ ಬಿಟ್ಟಳು.

'ಸೂಸಿ; ಯಾಕೆ ನನ್ನೊಬ್ಬನನ್ನೇ ಛಳಿಯಲ್ಲಿ ಬಿಟ್ಟು ಹೋದೆ? ಒಂದು ಮುತ್ತನ್ನಾದರೂ ಕೊಡು! ಇನ್ನು ಯಾವಾಗ ಸಿಕ್ಕುತ್ತೀ?' ಎಂದು ಬೊಬ್ಬಿಟ್ಟೆ.

ಇದಕ್ಕೆ ಉತ್ತರವಾಗಿ ಆಕೆ ಮೆಟ್ಟಲು ಹತ್ತುವ ಶಬ್ದವನ್ನು ಮಾತ್ರ ಕೇಳಿದೆ.

ಆದರೆ ನಾನು ನಿರಾಶನಾಗದೆ ಆ ಛಳಿಯಲ್ಲಾ ಸ್ವಲ್ಪ ಹೊತ್ತು ಅಲ್ಲೇ ನಿಂತುಕೊಂಡೆ. ಮನೆಯಲ್ಲಿ ಸುಮಾರು ಅರ್ಧ ಡಜನ್ ಗಂಡಸರು ಗಟ್ಟಿಯಾಗಿ ಬೇರೆ ಬೇರೆ ವಿಷಯಗಳನ್ನೆತ್ತಿ ಒಂದೇ ಸಲ ಮಾತಾಡುತ್ತಿರುವುದು ಕೇಳಿಸಿತು. ಅದೇನೆಂದು ನನಗೆ ತಿಳಿಯಲಿಲ್ಲ.

"ಅಮ್ಮಾ, ನಮ್ಮ ದರ್ಜಿಗೆ ಬಹಳ ಕೆಲಸವಿದ್ದುದರಿಂದ ನಾನು ಇಷ್ಟರ ತನಕ ಅಲ್ಲಿ ಕಾಯಬೇಕಾಯಿತು.ನಾನು ಟ್ರಾಂ ಹತ್ತುವಾಗಲೇ ತಡವಾಗಿತ್ತು. ಯಾರೋ ಒಬ್ಬ ನಾಚಿಗೆಗೆಟ್ಟವ ಟ್ರಾಮಿನಲ್ಲಿದ್ದ. ಅವ ನನ್ನೊಂದಿಗೇ ಬಂದು, ನಾನು ಇಳಿದಲ್ಲೇ ಇಳಿದ. ನನ್ನೊಡನೆ ದಾರಿಯುದ್ದಕ್ಕೂ ಮಾತಾಡಿದ. ನನಗೆ ಚರ್ಚಿನ ಸ್ಮಶಾನವನ್ನು ದಾಟುವುದೇ ಹೆದರಿಕೆಯಾಗಿತ್ತು; ಅಲ್ಲದೆ ಆತನೇನು ಮಾಡುವನೋ ಎಂದು ಹೆದರಿದ್ದೆ. ನಾನು ಬಹಳ ಸಂತೋಷದಿಂದ ಇದ್ದವಳಂತೆ ವರ್ತಿಸಿದ್ದು ಅವನಿಗೆ ಉತ್ತೇಜನವನ್ನು ಕೊಟ್ಟಿತು. ಅವ ನಮ್ಮ ಮನೆ ಬಾಗಿಲವರೆಗೂ ಬಂದ. ಅಮ್ಮಾ, ಅಲ್ಲದೆ ತನ್ನನ್ನು ಮುತ್ತಿಡಬೇಕಾಗಿ ಆತ ಅಲ್ಲಿ ನಿಂತುಕೊಂಡು ಬೊಬ್ಬಿಟ್ಟ. ಅವನಿಗೆ ಸಾಯುವ ವರೆಗೂ ಮರೆತು ಹೋಗದಂತಹ ಪಾಠ ಕಲಿಸಿಬಿಡಬೇಕು"-ಸೂಸಿಯ ಸ್ವರ!

ನಾನೊಂದು ಎರಡು ನಿಮಿಷಗಳ ವರೆಗೆ ಅಲ್ಲೇ ನಿಂತೆ. ಕೂಡಲೇ ಆರು ತಲೆಗಳು ಕಿಟಕಿಗಳಿಂದ ಹೊರಗೆ ಮೂಡಲ್ಪಟ್ಟಂತೆ ಕಂಡಿತು. ಮತ್ತೊಂದು ತಲೆಯು "ಆ ಅಧಮನು ಎಲ್ಲಿದ್ದಾನೆ" ಎಂದು ಬೊಬ್ಬಿಟ್ಟಿತು. ತಲೆಯ ಮೇಲ್ಭಾಗದ ಮರದ ...ಲ್ಲಿಂದಲ್ಲಿ ಒಂದು ಕರ್ಕಶಶಬ್ದ ಕೇಳಿಸಿತು, ಕಲ್ಲು ಹಾಸಿದ ನೆಲಕ್ಕೆ ಏನೋ ಬಂದು ಬಡಿದು ನನ್ನ ಮೂಗಿನ ಹತ್ತಿರದಿಂದ ಹಾರಿ ಹೋಯಿತು. ಆ ಆರು ತಲೆಗಳೂ ಬೀರಿನ ಬಾಟ್ಲಿಗಳಾಗಿರಬೇಕೆಂದು ಈಗ ನನ್ನ ಊಹನೆ. ಆಗ ನನಗೆ ಆ ಮುಷ್ಟಿ ಯುದ್ಧದವರ ನೆನಪು ಬಂದು ಹೆದರಿಬಿಟ್ಟಿದ್ದೆ; ಏನೊಂದೂ ಅಪಾಯವಿಲ್ಲದೆ ಹೇಗೋ ಪಾರಾಗಿ ಬಂದಿದ್ದೆ.

(ರೇಡಿಯೆಂಟ್ ಹೆಲ್ತಿನಿಂದ).

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟಿಯೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ನವಯುಗ ಎಂಟರ್‌ಪ್ರೈಜ್ ಲಿಮಿಟೆಡಿನ ಪಾಲುಗಾರರೂ ಅವರೊಡನೆ ಹಣ ತೆತ್ತು ಹೊಸ ಪಾಲುಗಳನ್ನು ಪಡಕೊಳ್ಳಬೇಕಾಗಿಯೂ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಪ್ರಕಾಶಿನಿ

ಕನ್ನಡ ಮಾಸಪತ್ರಿಕೆ

ಶ್ರೀ. ಎಂ. ವಿ. ಹೆಗ್ಡೆಯವರ ಸಂಪಾದಕತ್ವ ಮತ್ತು ವ್ಯವಸ್ಥಾಪಕತ್ವದಲ್ಲಿ ನವೀನ ರೀತಿಯಿಂದ ಹೊರಡಲಿದೆ.

ಮಾದರಿಗಾಗಿ ಜೂನ್ ತಿಂಗಳ ಸಂಚಿಕೆಯನ್ನು ನಿರೀಕ್ಷಿಸಿರಿ

ವಾರ್ಷಿಕ ಚಂದಾ ರೂ 3-0-0. ಬಿಡಿ ಸಂಚಿಕೆ 0-4-0.

ಜಾಹೀರಾತು ಕೊಡಲಿಚ್ಛಿಸುವವರು—ಚಂದಾದಾರರಾಗಲು ಬಯಸುವವರು—ಏಜಂಟರಾಗಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ—

ವ್ಯವಸ್ಥಾಪಕ,
'ಪ್ರಕಾಶಿನಿ',
ನವಯುಗ ಪ್ರೆಸ್, ಉಡುಪಿ, ದ. ಕ.

WANTED

A travelling Salesman (1) for mysore state & (2) for south india.

with business qualifications and previous experience in the line. Pay and commission according to merit

Aplly to:

T. L. S. UPADHYAYA
Manufacturer of
AGARBATTIES & OTHER PERFUMES, MYSORE.

'ಇದೇ ತಾ. 24ನೇ ಪೂರ್ವಾಹ್ನ 11 ಘಂಟೆಗೆ ಸರಿಯಾಗಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಕೌನ್ಸಿಲ್ ಸಭೆಗಳ ಪ್ರಥಮಾಧಿವೇಶನಗಳು ಕೂಡಿಬಂದುವು. ಕೌನ್ಸಿಲ್ ಎಂಬುದು ಮುಂಡಾಸು; ಆದರೆ ಎಸೆಂಬ್ಲಿ ಶಿರಸ್ಸು; ನೋಟ ಈ ಮುಖ್ಯ ಸಭೆಯೊಳಗೆ ಬೀಳಲಿ.'

ಮದ್ರಾಸಿನ ಫೋರ್ಟ್ ಜೋರ್ಜ್ ಭವನದಲ್ಲಿ 'ಎಸೆಂಬ್ಲಿ ಸದನ'ವಿದೆ. ನಮ್ಮ ಊಹೆಯಂತೆ ಈ ಬಾರಿ ಕಡಿಮೆಯೆಂದರೆ ಒಂದು ತಿಂಗಳಾದರೂ ಅದರ ರಿಪೇರಿ ಕೆಲಸ ನಡೆದಿರಬೇಕು; ಗೆದ್ದಲ ಹುತ್ತಗಳು, ಜೇಡರ ಬಲೆಗಳು ಆ ವಿಶಾಲ ಭವನದಲ್ಲೆಷ್ಟು ಹರಡಿದ್ದವೋ! ಆಗೋಸ್ತು ಗಲಭೆಯಾಗಿ ಕಾಂಗ್ರೆಸ್ ಆಫೀಸುಗಳಿಗೆ ಬೀಗ ಮುದ್ರೆ ಬಿದ್ದು ಆರು ತಿಂಗಳ ನಂತರ ನೋಡುವಾಗ ಒಳಗಿನ ರೆಕಾರ್ಡುಗಳೆಲ್ಲಾ ಗೆದ್ದಲು ತಿಂದು ಹೋಗಿದ್ದುವು; ರಾಷ್ಟ್ರ ಧ್ವಜಗಳು ಮೇಜು ಒರಸಲುಪಯೋಗಿಸಲ್ಪಟ್ಟಿದ್ದುವು; ಅವುಗಳ ಕೋಲುಗಳು ಪ್ರಾಯಶಃ ಕಲೆಕ್ಟರರ ಮಕ್ಕಳ 'ಕುಟ್ಟಿದೊಣ್ಣೆ'ಗೆ ಹೋಗಿದ್ದುವೋ ಏನೋ! ಅಂದ ಮೇಲೆ ಇದೊಂದು ಎಸೆಂಬ್ಲಿ ಭವನ ಇದ್ದ ಹಾಗೆ ಇದ್ದೀತೆ? ಈ ಭವನದಲ್ಲಿ ಇದಕ್ಕಿಂತ ಮೊದಲು ಎಸೆಂಬ್ಲಿ ಸಭೆ ಸೇರಿದ್ದುದು ಕಳೆದ 1939ನೇ ಒಕ್ಟೋಬರ್ ತಿಂಗಳ ಕೊನೆಯಲ್ಲಿ. ಬ್ರಿಟಿಷ್ ಸರಕಾರವು ತಮ್ಮನ್ನು ವಿಚಾರಿಸದೇನೇ ಹಿಂದೂ ದೇಶವನ್ನು ಯುದ್ಧ ಭಾಗೀ ರಾಷ್ಟ್ರವಾಗಿ ಘೋಷಿಸಿದ್ದಕ್ಕಾಗಿ ತಮ್ಮ ನಿಷೇಧವನ್ನು ಸೂಚಿಸಿ ಕಾಂಗ್ರೆಸ್ ಮಂತ್ರಿಗಳು ಅಂದು ಬರ್ಖಾಸ್ತು ಪಡಿಸಿದ್ದ ಆ ಸಭೆಯು ಆ ಮೇಲೆ ಸೇರಿದುದು 1946ನೇ ಮೇ 24ರಲ್ಲೇ. ಆದರೆ ಕೆಲವು ಸಭಿಕರ ತಲೆಯೊಳಗಲ್ಲದೆ, ಸಭಾ ಭವನದಲ್ಲಿ ಜೇಡರ ಬಲೆಯಿದೆಯೆಂಬ ದೂರು ಕೇಳಿ ಬಂದಿಲ್ಲ, ಸಂತೋಷ!

೦೦ ೦೦ ೦೦

ಸಭೆಯ ಆಸನ ವ್ಯವಸ್ಥೆ ನಾಜೂಕಾಗಿತ್ತು. ಈ ಬಾರಿಯದು 'ತರುಣ ಸಭೆ'; [illegible] ಎಳೆಯದಾಗಿ ಕಾಣುತಿತ್ತು. ಸದಸ್ಯರಲ್ಲಿ ಹೆಚ್ಚಿನವರು ಪ್ರಾಯ ಇಪ್ಪತ್ತರ ಮತ್ತು ಮೂವತ್ತರ ಗಡಿಯೊಳಗಿನ ತರುಣರು. ಅದರಲ್ಲೂ ಹೆಚ್ಚಿನ ತಾರುಣ್ಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷದವರಲ್ಲೇ. ಸದಸ್ಯರ ಸಂಖ್ಯೆಯ ⅓ನೇ ಅಂಶದಷ್ಟು ಹಳೇ ಹದ್ದುಗಳು-ಈ ಮೊದಲ ಎಸೆಂಬ್ಲಿಯಲ್ಲೂ ಸದಸ್ಯರಾಗಿದ್ದವರೇ. ಆರಂಭದಲ್ಲಿ ಸಭಿಕರು ತಮ್ಮೊಳಗೇನೇ ಹೊಸ ಪರಿಚಯ ಮಾಡಿಕೊಳ್ಳುವ-ಹಳೇ ಸ್ನೇಹವನ್ನು ಪುನರು



Approved firm by the Govt. of Mysore
Certified by the Agent of the Govt. of Ceylon India.

ಒಂದು ಲಘು ನೋಟ.

ಮದ್ರಾಸ್ ಎಸೆಂಬ್ಲಿಯ ಆರಂಭ ದೃಶ್ಯ

ಜ್ಜೀವನಮಾಡಿಕೊಳ್ಳುವ-ದೃಶ್ಯವು ನೋಡುವಂತಹದಿತ್ತು; ಮುಂದಕ್ಕೆ ಸಭಾ ಕಾರ್ಯಕ್ರಮ ನಡೆಯುತ್ತಿರುವಾಗ ಪರಸ್ಪರ ಹರಟೆಯ ಮೂಲಕ ಕಾಲಹರಣ ಮಾಡುವ ಅನುಕೂಲತೆಗೆ ಹಾಕಿದ ಅಸ್ತಿವಾರವಿದು! ಇರಲಿ; ಯಾಕೆ ಕೂಡದೆನ್ನಬೇಕು? ಕೆಲವು ಸದಸ್ಯರು 'ಮೂಕ ಮಿಲಿಯ ಮಂದಿಯ ಯಥಾರ್ಥ ಪ್ರತಿನಿಧಿಗಳು' ಎಂಬ ಕೀರ್ತಿ ಬಾರದಂತೆ ಅವರು ಪರಸ್ಪರ ಮಾತಾಡಿಕೊಳ್ಳುವ ಸೌಕರ್ಯವಾದರೂ ಇದ್ದಿರಲಿ.

ಉದ್ಘಾಟನಾದಿನ- ಆ ದಿನ ಕೆಲಸವೇನೂ ಇಲ್ಲವೆಂಬುದರಿಂದ ಭತ್ತೆಯಾನೆ ಸಂಬಳ ವಜಾವಾಗುವಂತಿಲ್ಲ— ಆದ್ದರಿಂದ ಎಸೆಂಬ್ಲಿಯ 215 ಸದಸ್ಯರ ಪೈಕಿ 204 ಮಂದಿ ಹಾಜರಿದ್ದರು. ಎರಡು ಸ್ಥಾನಗಳು ಉಪಚುನಾವಣೆ ನಡೆಯಲು ಬಾಕಿಯಿವೆ. 9 ಮೆಂಬರರು ಗೈರು ಹಾಜರಾಗಿದ್ದರು. ಅಂತೂ ಹಾಜರಿ ಚಿಂತಿಲ್ಲ-ನಮ್ಮ ಹಳ್ಳೀ ಶಾಲೆಗಳ ಅಧ್ಯಾಪಕರು ತಮ್ಮ ಹಾಜರೀ ರಿಜಿಸ್ಟ್ರಿಗಳನ್ನೊಮ್ಮೆ— ಸಂಬಳದ ಮಾತು ಪ್ರತ್ಯೇಕ—ಇದರೊಡನೆ ಹೋಲಿಸಿ ನೋಡಬೇಕು.

ಪಂಗ್ತೀ ವ್ಯವಸ್ಥೆಯು ತಕ್ಕ ಮಟ್ಟಿಗೆ ನಮ್ಮಲ್ಲಿಯ ಕಂಟ್ರೋಲ್ ವಸ್ತ್ರದಂಗಡಿಗಳು ಮಾಡುವ ಗಿರಾಕಿಗಳ ಸಾಲುಗಳ ವ್ಯವಸ್ಥೆಯನ್ನೇ ಅನುಸರಿಸಿದ್ದಿತು ಅಂದರೆ ಜಮಗಾಗದವರು. ಇದುರುಗಡೆಯಲ್ಲಿ ಕಾಯುತ್ತಾ ನಿಂತಿದ್ದಂತೆಯೇ, ತಮ್ಮವರನ್ನು ಕೊಟ್ಟು ಕಳುಹಿಸಲು ತಮ್ಮ ಬೆಂಗಡೆಯಲ್ಲಿ ನಿಲ್ಲಿಸಿಕೊಂಡಂತೆ 215 ಸಂಖ್ಯೆಯ ಎಸೆಂಬ್ಲಿಯಲ್ಲಿ 163 ಮಂದಿ ಕಾಂಗ್ರೆಸ್ ಪಕ್ಷೀಯರು. ಅವರಿಗೆಲ್ಲಾ ಅಧ್ಯಕ್ಷರ ಹಿಂಬದಿಯಲ್ಲಿ ಬೆಂಚು ವ್ಯವಸ್ಥೆಗಳಿದ್ದುವು. ಆದರೆ ಹಿಂಬದಿ ಹಿಡಿಯಬೇಕೆ? ಈ ಬಳ ಖಾದಿಧಾರಿ ಬಿಳಿ ಗೆದ್ದಲಿರುವೇ ಸಾಲುಗಳು ಅಧ್ಯಕ್ಷರ ಹಿಂಬದಿಯನ್ನೆಲ್ಲಾ ತುಂಬಿ ಎಡಬದಿಯಲ್ಲೂ ಸೇರಿ ಭವನದ ಆ ಭಾಗದ ಅರೆವಾಸಿ ಸ್ಥಳವನ್ನು ಮಿಕ್ಕಿಯೇ ಆಕ್ರಮಿಸಿ ಮುಂದಿಸಿದ್ದುವು. ಮಂತ್ರಿಗಳು ಟ್ರೆಜರಿ ಬೆಂಚಿಯಲ್ಲಿ ಮುಂದಿದ್ದರು. ಆ ಮೇಲಿನ ಅಧಿಕ ಸಂಖ್ಯೆಯು ಮತ್ತು ಮುಖ್ಯ ವಿರೋಧಿ ಪಕ್ಷವೆಂದರೆ ಮುಸ್ಲಿಂ ಲೀಗ್. ಇವರು ಇದಿರುಗಡೆಯ ಬೆಂಚುಗಳನ್ನಾಕ್ರಮಿಸಿದ್ದರು. ಇವರ ಸಂಖ್ಯೆ 28. ಮದ್ರಾಸ್ ಜಿನ್ನರೆಂಬಂತೆ ಆ ಪಕ್ಷದ ನಾಯಕ ಮಹಮ್ಮದ್ ಇಸ್ಮಾಯಿಲ್ ಸಾಹೇಬರೂ, ಮದ್ರಾಸ್ ಲಿಯಾಖತ್ ಆಲೀಖಾನರೆಂಬಂತೆ ಉಪನಾಯಕ ಬಿ. ಬಿ ಪೋಕರ್ ಸಾಹೇಬರೂ (ಇಷ್ಟರ ತನಕ ತಿಳಿದುಬಂದಂತೆ ಪೋಕ್ರಿ ಸಾಹೇಬರಲ್ಲ) ಮುಂಭಾಗದಲ್ಲಿ ಕುಳಿತಿದ್ದರು. ಮತ್ತಾರುಬೇಕು? ಇದ್ದರು—ಕಳೆದ ಬಾರಿ ಮುಖ್ಯ ಪ್ರತಿಪಕ್ಷವಾಗಿದ್ದ ಜಸ್ಟೀಸ್ ಪಕ್ಷದ ನಾಯಕ ಸರ್. ಎಮ್. ಎ. ಮುತ್ತಯ ಚೆಟ್ಟಿಯಾರ್, ಸಿ. ನಟೇಶನ್ ಮತ್ತು ಇಬ್ಬರು ಯುರೋಪಿಯನ್ ಸದಸ್ಯರೂ ಇದಿರು ಬೆಂಚುಗಳಲ್ಲಿ ಕುಳಿತಿದ್ದರು. ಅಧ್ಯಕ್ಷ ಚುನಾವಣೆಯಾಗುವ ವರೆಗೆ ಸಭಾ ಕಾರ್ಯಕ್ರಮಗಳನ್ನು ನಿರ್ವಹಿಸಲು ಗವರ್ನರರಿಂದ ನೇಮಕಗೊಂಡಿದ್ದ ಯುರೋಪಿಯನ್ ಪಕ್ಷ ಪ್ರಮುಖ ಬಿ.ಎಚ್. ಎಸ್ ಟೌನ್ ಇವರು 'ಏಕ್ ರೋಜ್'ಕಾ ಖಲೀಫ'ನಂತೆ ಅಧ್ಯಕ್ಷ ಪೀಠವನ್ನಲಂಕರಿಸಿದ್ದರು. ಪ್ರೇಕ್ಷಕರ ಗೆಲರಿಯು ತುಂಬಿ ತುಳುಕಾಡುತಿತ್ತು. ಪೂರ್ತಿ ಏಳು ವರುಷಗಳ ನಂತರ ಹೊಸತಾಗಿ ನೋಡಲು ಸಿಕ್ಕಿದ. ಈ ನಾಟಕವನ್ನು ಯಾರು ಬಿಟ್ಟಾರು? ಆಂದಿನ ವರದಾಚಾರ್ಯರ ನಾಟಕವನ್ನು ಮತ್ತೊಮ್ಮೆ ಕಾಣುವ ಸಂದರ್ಭ ಬಂದರೆ ಯಾರಾದರೂ ಹೋಗದೆ ಬಿಟ್ಟಾರೆ? ಅಧ್ಯಕ್ಷರು ಯುರೋಪಿಯಾನನಾದ್ದರಿಂದಲೋ ಏನೋ-ನಿಶ್ಚಿತ ಸಮಯದಲ್ಲೇ ಸಭಾರಂಭವಾಯಿತು. ನೋಟೀಸಿನಲ್ಲಿ ಘಂಟೆ 11 ಎಂದಿದ್ದರೆ, ಸಭಾರಂಭದಲ್ಲಿ ಆದರ ಏಕ ಮಾತ್ರ!! ಹಾರಿ ಹೋಗಿ ಘಂಟೆ 1 ಆಗಿರಲಿಲ್ಲ.

೦೦ ೦೦ ೦೦

ಅಧ್ಯಕ್ಷರು ಪೀಠಿಕೆಯಾಗಿ ಎರಡು ಮಾತುಗಳನ್ನಾಡಿದರು. ಆ ಮೇಲೆ ಸದಸ್ಯರ ಪ್ರಮಾಣ ಸ್ವೀಕಾರ ವಿಧಿಯನ್ನು ನಿರ್ವಹಿಸಲು ಕಾರ್ಯದರ್ಶಿಗೆ ಆಜ್ಞೆಯಿತ್ತರು. ನಮ್ಮಲ್ಲಿಯ ಪ್ರಸಾದ ವಿತರಣೆಗಿರುವಂತೆಯೇ ಈ ಪ್ರತಿಜ್ಞಾವಿಧಿ ಸ್ವೀಕಾರವೂ ಮರ್ಯಾದೆಯನ್ನನುಸರಿಸಿ ನಡೆಯಿತು. ಪ್ರಥಮತಃ ಮಂತ್ರಿಗಳು, ಆ ಮೇಲೆ ವಿರುದ್ಧ ಪಕ್ಷದ ನಾಯಕ, ಮತ್ತೆ ಪಟ್ಟಿಯಲ್ಲಿದ್ದಂತೆ ಅನುಕ್ರಮವಾಗಿ ಮಾಜೀ ಮಂತ್ರಿಗಳು, ಮತ್ತು ಉಳಿದೆಲ್ಲಾ ಸದಸ್ಯರು ಪ್ರಮಾಣಬದ್ಧರಾದರು. ಇದು ಪ್ರತಿಯೊಂದು ಶಾಸನ ಸಭೆ ಯಾನೆ ಸರಕಾರಸ್ಥಾನಗಳಲ್ಲಿ ಸದಸ್ಯರಿಂದ ಪ್ರಥಮತಃ ಮಾಡಿಸುವ ಕೆಲಸ. ಕೋರ್ಟುಗಳಲ್ಲಿ 'ನಾನು ದೇವರ ಸಾಕ್ಷಿ...' ಇತ್ಯಾದಿ ಕಲಿಸಿಕೊಟ್ಟು ಹೇಳಿಸುವಂತೆಯೇ ಒಮ್ಮೊಮ್ಮೆ ಇಲ್ಲಿಯೂ ಆಗುವದಿದೆ. ಅಥವಾ ಸದಸ್ಯರು ತಾವಾಗಿ ಓದುವದಿದೆ; ಬಂದವರು ಬಾಯಿಪಾಠ ಹೇಳಲೂ ಬಹುದು. ಅಂತೂ ಸದಸ್ಯನಾದವನ ಬಾಯಿಯಿಂದ-ಹೃದಯದಿಂದೆಂದು ಪ್ರಮಾಣಪೂರ್ವಕ ಹೇಳದಲ್ಲಿ ನರಕವೇ ಗತಿ! ಆ ಪ್ರಮಾಣ ವಾಕ್ಯಗಳು ಬಂದೇ ತೀರಬೇಕು. ರಾಜಭಕ್ತಿ ಸ್ವೀಕಾರದ ಆ ಪ್ರತಿಜ್ಞೆಯನ್ನು ಮಾಡಿ 'ನಾನು....ವರ್ತಿಸುತ್ತೇನೆ' ಎಂದು ಅಲ್ಲಿ ಹೇಳಿದಂತೆಯೇ ನಮ್ಮ ಪ್ರತಿನಿಧಿಗಳು ನಿಜಕ್ಕೂ ವರ್ತಿಸುತಿದ್ದರೆ, ಬ್ರಿಟಿಷ್ ಮಂತ್ರಿ ಸಮಿತಿಯಿಲ್ಲಿಗೆ ಬಂದು ಸ್ವರಾಜ್ಯದಾನಮಾಡುವ ವ್ಯವಸ್ಥೆಗಾಗಿ ಒದ್ದಾಡುವ ಸಂದರ್ಭವೇ ಬರುತಿರಲಿಲ್ಲ ಅದು ಹೇಗೂ ಇರಲಿ, ಪ್ರತಿಜ್ಞೆಯನ್ನಷ್ಟು ಹೇಳಿ ಮುಗಿಸಿ ನಾಲಿಗೆ ಕಚ್ಚಿಕೊಂಡರಾಯಿತಷ್ಟೆ!

ಪ್ರಥಮತಃ ಪ್ರಧಾನ ಮಂತ್ರಿ ಶ್ರೀ ಟಿ. ಪ್ರಕಾಶಮರು ಪ್ರಮಾಣಮಾಡಿಬಂದರು; ಅವರ ಬೆನ್ನಲ್ಲೇ ಹೋದವರು ರೆವಿನ್ಯೂ ಮಂತ್ರಿ ನಮ್ಮ ಶ್ರೀ. ಕೆ. ಆರ್. ಕಾರಂತರು. ಎರಡನೇ ಮರ್ಯಾದೆ ಪಡೆದ ಗುತ್ತಿನವರು ನಾವು ಎಂಬೊಂದು ಹೆಗ್ಗಳಿಕೆ ಬಂತು. ಆದರೆ ಒಂದು ಪ್ರಮಾದವೂ ಆಗಿ ಹೋಯಿತು. ಮಂಗಳೂರಿಗೆ ಬಂದಾಗ ಇಂಗ್ಲಿಷಿನಲ್ಲಿ ಮಾತನಾಡಿದವರೊಡನೆಯೂ ಕನ್ನಡದಲ್ಲೇ ನುಡಿಯಲಾರಂಭಿಸಿ ನುಡಿಭಕ್ತರ ಶ್ಲಾಘನೆ ಕಟ್ಟಿಕೊಂಡು ಹೋಗಿದ್ದರು ಮಾನ್ಯ ಕಾರಂತರು. ಆದರೆ ಅಲ್ಲಿ ಪ್ರಮಾಣ ಮಾಡಿದುದು ಇಂಗ್ಲಿಷಿನಲ್ಲೇ- ತಪ್ಪೇನೂ ಇಲ್ಲ; ಅದರ ಮೂಲ ರೂಪವಿರುವದು ಇಂಗ್ಲಿಷಿನಲ್ಲೇ; ಆದರೆ ಕನ್ನಡಿಗ ಕಾರಂತರು ಕಡೆಗೆ ಬೇಕುತಿದ್ದರೆ, ನಿಜಕ್ಕೂ ಕನ್ನಡದಲ್ಲೇ ಪ್ರತಿ

ANNOUNCEMENT.

Your presence is cordially welcome for the opening ceremony of the

SHIRVA HINDU HIGH SCHOOL

on Sunday, the 2nd June 1946 at 10-45 A. M.

H. H. Sri. Vibudhesha Thirtha Swamiar

of Admar Mutt, Udipi,

has kindly consented to open the School

K. Muddu Shetty,
President.

With best compliments from the Executive Council of the B. N. Vidyavardhaka Sangha.

ಪ್ರಕಟಣೆ.

ತಾ. 2-6-1946ನೇ ಆದಿತ್ಯವಾರ ಪೂರ್ವಾಹ್ನ 10-45 ಗಂಟೆಗೆ

ಶಿರ್ವ ಹಿಂದೂ ಹೈಸ್ಕೂಲಿನ

ಉಡುಪಿ ಅದಮಾರು ಮಠದ ಶ್ರೀ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರ ಹಸ್ತದಿಂದ

ಪ್ರಾರಂಭೋತ್ಸವವು ಜರಗಲಿರುವುದು.

ವಿದ್ಯಾಭಿಮಾನಿಗಳೆಲ್ಲರಿಗೂ ಸುಸ್ವಾಗತ

ಕೆ. ಮುದ್ದು ಶೆಟ್ಟಿ, ಪ್ರೆಸಿಡೆಂಟ್.

ಬಿ. ಎನ್. ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಮಂಡಳಿಯ ಸವಿನಯ ಆಮಂತ್ರಣ.

ಜ್ಞಾ ವಚನಗಳನ್ನು ಉಚ್ಚರಿಸುತ್ತಿದ್ದರು. ಅವರ ಬೆನ್ನ ಹಿಂದೆ ಸಾರ್ವಜನಿಕ ಖಾತೆಯ ಮಂತ್ರಿ ಭಕ್ತವತ್ಸಲಮ್. ಕೊನೆಗೆ ಬಂದ ಈ ಮೂವರು ಮಂತ್ರಿಗಳೂ ಇಂಗ್ಲಿಷನ್ನೇ ಆಧರಿಸಿದ್ದರೆ ಆ ಮೇಲಿನವರು ಅದನ್ನು ಅರೆವಾಸಿ ಬದಲಾಯಿಸಿದರು. ಅವರೆಂದರೆ ವಿದ್ಯಾಮಂತ್ರಿ ಮಾನ್ಯ ಅವಿನಾಶಿಲಿಂಗಂ ಚೆಟ್ಟಿಯಾರರು. ಶ್ರೀ ಚೆಟ್ಟಿಯಾರರು ಇಂಗ್ಲಿಷಿನಲ್ಲಿ ಪಾಠ ಕೊಟ್ಟು ತಮಿಳಿನಲ್ಲಿ ಸಹಿಮಾಡಿದರು. ನೆನಪಿರಲಿ-ಅವರು ವಿದ್ಯಾಮಂತ್ರಿಗಳು. ಅವರ ಈ ಮೊದಲ ಕೆಲಸವನ್ನು ಕಂಡು ನಮ್ಮ ಪ್ರಾಂತ್ಯಕ ಶಿಕ್ಷಣದಲ್ಲಿ ಪರನೊಬ್ಬೊಂದು ಭಾಷೆ, ಲೇಖನಕ್ಕೊಂದು ಭಾಷೆಯಾಗಬಹುದೋ ಎಂಬ ಅನುಮಾನ ಬೇಡ-ಶಾರದಾನುಗ್ರಹದಿಂದ ಹಾಗಾಗದು!

ಆ ಮೇಲಿನ ಸರ್ತಿ ಮಾನ್ಯ ಡೇನಿಯಲ್ ಥೋಮಸ್, ಸ್ಥಳೀಯ ಸಂಸ್ಥೆಗಳ ಮಂತ್ರಿಗಳದು. ಈ ಮಾನ್ಯರು ಖಾದಿ ಜುಬ್ಬ, ಗಾಂಧೀಟೋಪಿ ತೊಟ್ಟುಕೊಂಡು 'ವೈಟ್‌ವಾಶ್' ಮಾಡಿದ [ಸಣ್ಣ]ದೊಂದು ಗೋಡೆಯೇ ನಡೆದು ಬಂದಂತೆ ಅಧ್ಯಕ್ಷರ ಆಸನದ ಬಳಿ ಬಂದರು. ತಮಿಳು ಭಾಷೆಯಲ್ಲೇ ಪ್ರತಿಜ್ಞಾ ವಾಕ್ಯಗಳನ್ನು ಉಚ್ಚರಿಸಿದರು. ತಮಿಳಿನಲ್ಲೇ ಉಚ್ಚಾರ ಮತ್ತು ಸಹಿಮಾಡಿದ ಮತ್ತೊಬ್ಬ ಮಂತ್ರಿಯೆಂದರೆ ಬೇಸಾಯ ಮಂತ್ರಿ ಮಾನ್ಯ ಪಿ ಎಸ್. ಕುಮಾರಸ್ವಾಮಿ ರಾಜರು. ಕೋರ್ಟು ಜೈಲು ಮಂತ್ರಿ ಶ್ರೀ ಕೆ. ಭಾಷ್ಯಮರು ಬರುವದರಲ್ಲೂ ಕೋರ್ಟು ಮುನ್ಸಿಫರ ಮರ್ಜಿಯನ್ನನುಸರಿಸಿ 20 ಮಿನಿಟು ತಡವಾಗಿ ಆಗಮಿಸಿದ್ದರಿಂದ ಅವರ ಸರದಿ ಕಡೆಗೆ ಬಿತ್ತು.

ಮುಸ್ಲಿಂ ಲೀಗ್ ಪಾರ್ಟಿಯ ನಾಯಕ, ಉಪನಾಯಕರು, ಕಾಂಗ್ರೆಸ್ ಪಕ್ಷದ ನಾಯಕರನ್ನೆ ಅನುಕರಿಸಿ ಇಂಗ್ಲಿಷಿನಲ್ಲೇ ಪ್ರತಿಜ್ಞೆ ತೊಟ್ಟರು. ಪಿ. ಅಬ್ದುಲ್ ಹಮೀದ್ ಖಾನರು ಬೇರಿಬ್ಬರು ಮಂತ್ರಿಗಳ ಮಾದರಿಯನ್ನನುಸರಿಸಿ ತಮ್ಮ ಸ್ವಭಾಷೆಯಾದ ಉರ್ದುವಿನಲ್ಲೇ ಪ್ರಮಾಣಮಾಡಿದರು. ಕೊನೆಗೆ ಮುಸ್ಲಿಂ ಲೀಗಿನ ಹೆಚ್ಚಿನ ಸದಸ್ಯರ ಬಾಯಿಯಿಂದ ಉರ್ದು ಉದುರಿತು.

ಇಷ್ಟೆಲ್ಲಾ ಆಗುವದನ್ನೂ ಕನ್ನಡ ಜಂಪಿ ಕಣ್ಣೆರಿಸಿಂದಲೇ ನೋಡುವಂತಾಗಿತ್ತು, ಪುಣ್ಯಕ್ಕೆ ಅಷ್ಟರಲ್ಲಿ ಶ್ರೀ ಬಿ ಅನಂತಾಚಾರಿಯರಿದ್ದರು. ಇವರು ಒಬ್ಬರಿಯವರು ಅವರೊಬ್ಬರು ಕನ್ನಡದಲ್ಲೇ ಪ್ರತಿಜ್ಞೆ ಸ್ವೀಕರಿಸಿದರು. ಆದರೆ ಆ ಸಂದರ್ಭದಲ್ಲಿ ಕನ್ನಡದ ದುರ್ದೈವ ಸ್ಮರಣೆಗೆ ಬಂತೋ-ಕನ್ನಡ ನಾಡಿನಲ್ಲಿ ಪ್ರಬಲವಾಗಿರುವ ಹುಸುಗೇ ನಿರ್ಬಂಧದ ಪ್ರಭಾವ ಕಾಣಿಸಿತೋ-ಅಂತೂ ಶ್ರೀ ಬಿ, ಅನಂತಾಚಾರ್ಯರಿಂದ ಸಾಕಷ್ಟು ಗಟ್ಟಿಯಾಗಿ ಅದನ್ನು ಉಚ್ಚರಿಸಲಾಗಲಿಲ್ಲ. 'ಕನ್ನಡದ ನಗಾರಿಗಳು' ಕನ್ನಡ ಕೇಸರಿಗಳು' 'ಕನ್ನಡ ತಂಬಟೆಗಳು' ಎಸೆಂಬ್ಲಿಗೆ ಹೋಗಬೇಕಿತ್ತೆಂಬುದನ್ನು ಈ ಸಂದರ್ಭವು ಎತ್ತಿ ತೋರಿಸಿತು! ಶ್ರೀ. ಆನಂದನ್ ನಂಬಿಯಾರರು ಮಳೆಯಾಳಿಯಲ್ಲಿ ವಿಧಿ ಸ್ವೀಕಾರ ಮಾಡಿದರು. ಆದರೆ ಒಂದು ಆಶ್ಚರ್ಯ-ತೆಲುಗಿನ ಸುದ್ದಿಯೇ ಇಲ್ಲ. ಕಾರಣವೇನೋ? ಪ್ರತ್ಯೇಕಾಂಧ್ರ ಪ್ರಾಂತಿಕ ಸಭೆಗಲ್ಲದೆ, ಈ ಶಾಸನ ಸಭೆಯೊಳಗೆ ಆಂಧ್ರ ಭಾಷೆಯನ್ನೇ ಹೊಗಿಸಬಾರದೆಂಬಷ್ಟು ಕ್ರೋಧ ಆಂಧ್ರ ಸದಸ್ಯರಿಗೆ ಸದ್ಯದ ಪ್ರಾಂತಿಕ ವ್ಯವಸ್ಥೆಯ ಮೇಲುಂಟೇನೋ! ಹೇಗೂ ಇರಲಿ; ಅಂತೂ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೊದಲ ಸಭೆಯನ್ನು ಭಾಷಾ ಜೀನಿಗಳ 'ವಿವಿಧ ಭಾಷಾ ಸಮ್ಮೇಲನ' ಎಂದು ಕರೆಯುವದಾದರೆ ಕರೆಯಬಹುದು.

ಪ್ರತಿಜ್ಞಾ ಸ್ವೀಕಾರಕ್ಕೆ 40 ಮಿನಿಟು ಹಿಡಿದು ಆ ವೇಳೆ ಅಧ್ಯಕ್ಷರು ಸಭೆಯನ್ನು ಮರುದಿನಕ್ಕೆ ಮುಂದರಿಸಿಟ್ಟರು.

ಕೌನ್ಸಿಲಿನಲ್ಲಿಯೂ ಇದೇ ರೀತಿ ಪ್ರತಿಜ್ಞಾ ವಿಧಿಯು ಶ್ರೀ ಗುರುದೇವತಾನುಗ್ರಹದಿಂದ ಯಥಾವಿಧಿ ಸಾಂಗೋಪಾಂಗವಾಗಿ ನೆರವೇರಿತು.

ಎಸೆಂಬ್ಲಿಯಲ್ಲಿ ಶ್ರೀ ಗೋಪಾಲ ರೆಡ್ಡಿ, ಶ್ರೀ. ಮುನಿಸ್ವಾಮಿ ಪಿಳ್ಳೆಯವರೂ, ಕೌನ್ಸಿಲಿನಲ್ಲಿ ಡಾ॥ ಟಿ ಎಸ್. ಎಸ್. ರಾಜನೂ ಪ್ರತಿಜ್ಞೆ ಮಾಡಲೆದ್ದು ಹೋಗುವಾಗ ಅವರ ಮೇಲೆ ಕನಿಕರದಿಂದ ಪ್ರೇಕ್ಷಕರ ಹೃದಯವೂ ಎದ್ದಿರಬೇಕು. ಇವರು ಮೂವರೂ ಕಳೆದ ಬಾರಿಯ ಕಾಂಗ್ರೆಸ್ ಮಂತ್ರಿಗಳಾಗಿದ್ದವರು; ಈ ಬಾರಿ ಸಾಮಾನ್ಯ ಸದಸ್ಯರಸಾಲಿನಿಂದಲೇ ಹೋಗುವ ದುರ್ದೆಶೆಯೊದಗಿತು. ರಾಜಾಜಿ? ಇಲ್ಲಿ ಶ್ರೀ. ಪ್ರಕಾಶಮರು ಪ್ರತಿಜ್ಞಾ ನೊಲ್ಲುಗಳನ್ನು ಪಠಿಸುವಾಗ ರಾಜಾಜೀ ತನ್ನ ಮನೆಯಲ್ಲಿ ಕಂಠಪೋರೆಮಾಡಿಕೊಂಡು ಕುಳಿತು ಗೀತಾಶ್ಲೋಕ ಪಠಿಸುತ್ತಿದ್ದಿರಬಹುದು. ಮಾನ್ಯಗಿರಿಯವರೂ ಇರಲಿಲ್ಲ, ಛಲ್ಲಿಗೆ ಹೋಗಿದ್ದರಂತೆ. ಅಂತೂ ನಮ್ಮ ಪ್ರಾಂತಿಕ ಎಸೆಂಬ್ಲಿ ಒನ್ಮೆಗಾರಂಭವಾಯಿತು.

ಇಬ್ಬದಿಯ ಧಾಳಿಗೊಳಗಾಗಿರುವ ಬ್ರಿಟಿಷ್ ಯೋಜನೆ

ಆ ಕಡೆಯಿಂದ ಲೀಗ್, ಈ ಕಡೆಯಿಂದ ಕಾಂಗ್ರೆಸ್ ಆಕ್ಷೇಪಗಳು

ಬ್ರಿಟಿಷ್ ಸೂಚನೆಗಳ ದೀರ್ಘಾಭ್ಯಾಸ ಮಾಡಿ,ಕಟ್ಟಕಡೆಗೆ ಮಿ.ಜಿನ್ನರು ಮೇತಾ. 22ರಲ್ಲಿ ಸಿಮ್ಲಾದಿಂದೊಂದು ಹೇಳಿಕೆ ಹೊರಡಿಸಿದರು. ಕೊನೆಯ ತೀರ್ಮಾನವು ಲೀಗ್ ಕಾರ್ಯಕಾರೀ ಸಮಿತಿ ಮತ್ತು ಕೌನ್ಸಿಲನ್ನೇ (ಜೂನ್ 3ಕ್ಕೆ ನವದಿಲ್ಲಿಯಲ್ಲಿ ಪ್ರಾರಂಭಿಸಲಿವೆ) ಹೊಂದಿಕೊಂಡಿದೆ ಎನುತ್ತಾ, ತಾವಿನ್ನೂ ದೃಢವಾಗಿ ನಂಬಿರುವ ಪಾಕಿಸ್ತಾನವನ್ನು ಬದಿಗೊತ್ತಿ, ಅದನ್ನು ಖಂಡಿಸುವ ಅಧಿಕಪ್ರಸಂಗವನ್ನೂ ಬ್ರಿಟಿಷ್ ಸಮಿತಿ ಮಾಡಿದ್ದಕ್ಕಾಗಿ ಮಿ. ಜಿನ್ನರು ಅತ್ಯಂತ ವಿಷಾದ ವ್ಯಕ್ತಪಡಿಸಿದ್ದಾರೆ. ಲೀಗಿನ ಕೊನೆಯ ಬೇಡಿಕೆಯ ಒರೆಗಲ್ಲಲ್ಲಿ ಬ್ರಿಟಿಷ್ ಸೂಚನೆಗಳನ್ನು ಲೀಗ್ ಅಧ್ಯಕ್ಷರು ಈ ರೀತಿ ತಿಕ್ಕಿ ತೋರಿಸಿದ್ದಾರೆ:—

1. ಪಂಜಾಬ್, ಗಡಿನಾಡು, ಬಲೂಚಿಸ್ತಾನ, ಸಿಂಧ್, ಬಂಗಾಳ, ಅಸ್ಸಾಮು-ಈ ಆರು ಪ್ರಾಂತ್ಯಗಳು ಏಕ ಮಾತ್ರ ಪಾಕಿಸ್ತಾನ್ ಸಂಗಡವಾಗಿರಬೇಕೆಂದು ಲೀಗ್ ಕೇಳಿದ್ದರೆ, ಅದು ಎರಡು ಸಂಗಡಗಳಾಗಿ ವಿಂಗಡಿಸಲ್ಪಟ್ಟಿದೆ.

2. ಲೀಗ್ ಕೇಳಿದುದು ಪಾಕಿಸ್ತಾನ್ ಮತ್ತು ಹಿಂದುಸ್ಥಾನ್ ಸಂಗಡಗಳಿಗೆ ಎರಡು ರಾಜ್ಯಾಂಗ ರಚನಾ ಸಭೆಗಳಾಗಿದ್ದರೆ, ಬ್ರಿಟಿಷ್ ಸೂಚನೆಯಲ್ಲಿರುವದು ಒಂದೇ ರಾಜ್ಯಾಂಗ ರಚನಾ ಸಭೆ.

3. ಲೀಗ್-ಹಿಂದುಸ್ಥಾನ್, ಪಾಕಿಸ್ತಾನ್ ಫೆಡರೇಶನುಗಳ ಸಮ ಪ್ರಾತಿನಿಧ್ಯವುಳ್ಳ ಕೇಂದ್ರ ಯೂನಿಯನ್ ಇರತಕ್ಕದ್ದು. ಇದನ್ನು ಎರಡು ಫೆಡರೇಶನುಗಳು ಸ್ವಯಂ ಪ್ರೇರಣೆಯಂತೆ ನಿರ್ಧರಿಸತಕ್ಕದ್ದು. ಬ್ರಿಟಿಷ್ ಸೂ.—ಮಿಲಿಯಕ್ಕೊಬ್ಬನಂತೆ ಪ್ರಾತಿನಿಧ್ಯವಿದ್ದು ಆಶ್ರಿತ ರಾಜ್ಯಗಳ ಪ್ರತಿನಿಧಿಗಳೂ ಸೇರುವ ಕೇಂದ್ರ ರಾಜ್ಯಾಂಗ ರಚನಾ ಸಭೆಯೇ ಆ ರೀತಿ ನೀತಿಗಳನ್ನು ನಿರ್ಧರಿಸತಕ್ಕದ್ದು.

4. ಲೀಗ್—ಕೇಂದ್ರಕ್ಕೆ ವಿದೇಶ ಸಂಬಂಧ, ರಕ್ಷಣೆ ಮತ್ತು ರಕ್ಷಣೆಗಗತ್ಯವುಳ್ಳಷ್ಟೇ ಸಂಚಾರವ್ಯವಹಾರಾಧಿಕಾರವಿರತಕ್ಕದ್ದು. ಇವುಗಳ ಖರ್ಚನ್ನು ಇಕ್ಕಡೆಯ ಫೆಡರೇಶನುಗಳು ವಂತಿಗೆಯಾಗಿ ತೆರಬೇಕಲ್ಲದೆ ಕೇಂದ್ರಕ್ಕೆ ಅದನ್ನೆತ್ತುವ ಅಧಿಕಾರವಿರಕೂಡದು. ಬ್ರಿಟಿಷ್ ಸೂ—ವಿದೇಶ ಸಂಬಂಧ, ರಕ್ಷಣೆ, ಮತ್ತು ವಾಹನ ವ್ಯವಹಾರಗಳ ಅಧಿಕಾರವೂ ಅವುಗಳಿಗಾಗಿ ದುಡ್ಡೆತ್ತುವ ಅಧಿಕಾರವೂ ಕೇಂದ್ರಕ್ಕಿದೆ.

5. ಲೀಗ್—ಕೇಂದ್ರ ಯೂನಿಯನಿಗೆ ನ್ಯಾಯ ವಿಧಾಯಕ ಸಭೆಯೇ ಇರಬಾರದು. ಆದರೂ ಈ ಪ್ರಶ್ನೆಯನ್ನು ಎರಡು ಫೆಡರೇಶನುಗಳ ಸಮಪ್ರಾತಿನಿಧ್ಯವುಳ್ಳ ಜತೆ ಫೆಡರೇಶನಿನ ತೀರ್ಮಾನಕ್ಕೊಪ್ಪಿಸಿ, ಅವು ಬೇಕೆಂದು ತೀರ್ಮಾನವಾದಲ್ಲಿ ಆ ಯೂನಿಯನಿನ ಕಾರ್ಯಕಾರಿ ಸಮಿತಿ ಮತ್ತು ಎಸೆಂಬ್ಲಿಯಲ್ಲಿಯೂ ಪಾಕಿಸ್ತಾನ್ ಹಿಂದುಸ್ಥಾನ್ ಗುಂಪುಗಳೊಳಗೆ ಸಮಪ್ರಾತಿನಿಧ್ಯವಿರತಕ್ಕದ್ದು. ಬ್ರಿಟಿಷ್ ಸೂ—ಮೇಲಿನ ಸೂಚನೆಗಳನ್ನು ಕಡೆಗಣಿಸಿದೆ.

6. ಲೀಗ್-ಕೇಂದ್ರ ಶಾಸನಸಭೆಯಲ್ಲಿ, ಕಾರ್ಯಕಾರೀ ಸಮಿತಿಯಲ್ಲಿ, ಅಥವಾ ಆ ಘಳಿಗೆಯಲ್ಲಿ ⅔ ಅಂಶದ ಬಹುಮತ ದೊರೆತವಿನಹ ವಿರೋಧವುಳ್ಳ ಯಾವ ವಿಷಯವನ್ನೂ ತೀರ್ಮಾನಿಸಬಾರದು. ಬ್ರಿಟಿಷ್ ಸೂ.—ಮುಖ್ಯ ಜಾತೀಯ ಪ್ರಶ್ನೆ ಬಂದರೆ ಇಕ್ಕಡೆಯ ಪ್ರಮುಖ ಪಕ್ಷಗಳ ಇಡರ ಪ್ರತಿಯೊಂದರ ಹಾಜರಿದ್ದ ಸದಸ್ಯರ ಬಹುಮತ ಮತ್ತು, ಹಾಗೆಯೇ ಇಡೀ ಸಭೆಯ ಬಹುಮತ ದೊರೆತೇ ಮಂಜೂರಾಗತಕ್ಕದ್ದು. ಈ ಪ್ರಶ್ನೆಯನ್ನು ನಿರ್ಧರಿಸುವ ಅಧಿಕಾರ ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರದು; ಅನುಮಾನ ಬಂದಲ್ಲಿ ಅವರು ಫೆಡರಲ್ ಕೋರ್ಟಿನ ಸಲಹೆ ಕೇಳಬಹುದು.

7. ಲೀಗ್-ಬ್ರಿಟಿಷ್ ಸೂಚನೆಯಂತೆ ಕೇಂದ್ರ ರಾಜ್ಯಾಂಗ ರಚನಾ ಸಭೆಯಲ್ಲಿ ಬ್ರಿಟಿಷ್ ಭಾರತಕ್ಕಿರುವ 292 ಸ್ಥಾನಗಳಲ್ಲಿ ಮುಸಲ್ಮಾನರಿಗೆ ಕೇವಲ 79 ಸ್ಥಾನಗಳು ದೊರೆಯುವವು. ಸಂಸ್ಥಾನಗಳಿಗೆ ದೊರೆಯುವ 93ರಲ್ಲೆ ಬಹುಸಂಖ್ಯೆಯವರು ಹಿಂದುಗಳಾಗುವರು. ನಾಗರಿಕ ಅಲ್ಪ ಸಂಖ್ಯಾಕ ಹಕ್ಕು ರಕ್ಷಣೆಯ ಸಲಹೆಗಾರ ಸಮಿತಿಯನ್ನು ರಾಜ್ಯಾಂಗ ರಚನಾಸಭೆಯೇ ಬಹುಮತದಿಂದ ನೇಮಿಸಿಕೊಳ್ಳುವದರಿಂದ ಅದೂ ಹಿಂದುಗಳದ್ದಾಗುವದು.

ಮುಟ್ಟಾಗುಳಿಕೆ

ಹಲಕಾಲಗಳಿಂದ ಕಟ್ಟಿಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ಯಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯುಗೊಳಿಸುವುದು; ಬೇಕಾದಾಗ ಗರ್ಭಧಾರಣೆಯನ್ನು ಬಿಡಿಸುವುದು; ಹಾನಿಯಾದರೆ ನುಂದಿ ತೃಪ್ತರಾಗದ್ದಾರೆ! ಬೆಲೆ ರೂ. 3/- ಕ್ರಮವಾದ ಕೇಸುಗಳಿಗೆ ರೂ. 5. 6 ತಿಂಗಳ ಬತ್ತ ರ ಕಂಟ್ರೋಲಿಗೆ ರೂ. 4/- (ಸಿ. ಸಿ. 12 ಅಣೆ ಅಲಾಯಿದ)

Mrs. P. DEVEE,
P. D. S. (S. F.) Tollygunge, Calcutta
ಏಜೆಂಟ್ಸ್: ಪಾ ಕಂಪೆನಿ, ಮಂಗಳೂರು

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಆಡಚಣೆ ಮತ್ತು ಅವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಇವರೇ, ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧದಿಂದ ಬೆಳೆಯುವ ಸ್ನೇಹವೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮುಖ್ಯವಾದ ಕಾರಣ. ಈ ರೀತಿ ಕಳೆದ 40 ವರ್ಷಗಳಿಂದಲೂ ದೀರ್ಘಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ಪ್ರತೀತಿಗೆ ಹೆಮ್ಮೆ ಪಡುತ್ತದೆ.

ಕೆನರಾ ಬ್ಯಾಂಕ್
Estd: 1906

CANARA BANK LIMITED
(Incorporated in British India. liability of Members Limited.)

ಆಕ್ಷೇಪಗಳಿಗೆ ಬ್ರಿಟಿಷ್ ಪ್ರತಿನಿಧಿಗಳ ಉತ್ತರ.

8. ಲೀಗ್—ಪಾಕಿಸ್ತಾನ್ ಸಂಗಡಕ್ಕೆ 10 ವರುಷಗಳ ನಂತರ ಕೇಂದ್ರ ಯೂನಿಯನಿನಿಂದ ಪ್ರತ್ಯೇಕವಾಗುವ ಹಕ್ಕಿರಬೇಕು. ಬ್ರಿಟಿಷ್ ಸೂ—10 ವರುಷಗಳ ನಂತರ ಕೇಂದ್ರ ಯೂನಿಯನಿನ ಪುನರ್ಘಟನೆ ಮಾಡಿಕೊಳ್ಳಬಹುದು. ಪ್ರಾಂತಿಕ ಸಂಗಡಗಳು ಹೊಸ ಸಂಗಡ ಪದ್ಧತಿ ರಚಿಸಿಕೊಂಡು ಅದಕ್ಕನುಸಾರವಾದ ಚುನಾವಣೆ ನಡೆದ ಮೇಲೆಯೂ, ಪ್ರತಿ 10 ವರುಷಗಳ ನಂತರವೂ ಯಾವುದಾದರೊಂದು ಪ್ರಾಂತ್ಯಕ್ಕೆ ಆ ಸಂಗಡದಿಂದ ಪ್ರತ್ಯೇಕವಾಗುವ ಹಕ್ಕಿದೆ.

ಎ. ಸೂ — ಮಿ. ಜಿನ್ನಾರ ಹೇಳಿಕೆಯ-ಸಿದ್ಧಿಗಿಂತ ಎಷ್ಟೋ ಪಾಲು ಅಧಿಕ ಸಾಮ್ಯವಾಗಿತ್ತು. ಪ್ರಾಂತಿಕ ಸಂಗಡಗಳ ರಚನೆಯಿಂದ ದೊರೆತ ಅಲ್ಪ ಸಮಾಧಾನ ಮತ್ತು ಇಂತಹ ವಾತಾವರಣದಲ್ಲಿ ಅವರಿಗೊದಗಿರುವ ನಿಸ್ಸಹಾಯಕತೆ, ಹಾಗೂ ಕೆಲವು ಲೀಗ್ ಪ್ರಮುಖರಲ್ಲಿಯೇ ಬ್ರಿಟಿಷ್ ಸೂಚನೆಗಳ ಕುರಿತು ಹುಟ್ಟಿರುವ ತೃಪ್ತಿ-ಇದಕ್ಕೆ ಕಾರಣವಾಗಿರಬಹುದು. ನಿರೀಕ್ಷಿಸಿದಂತೆ ಮಿ. ಜಿನ್ನಾರೇ ಯೋಜನೆಯನ್ನು ಕಂಠೋಕ್ತವಾಗಿ ತಿರಸ್ಕರಿಸಿ ಬಿಟ್ಟಿಲ್ಲ.

ಕಾಂಗ್ರೆಸ್ ತಕ್ಕಡಿಯಲ್ಲಿ ಬ್ರಿಟಿಷ್ ಸೂಚನೆಗಳು

ಮೇ ತಾ. 18ರಿಂದ 24ರ ವರೆಗಿನ ಇಡೀ ವಾರದಲ್ಲಿ ನವದಿಲ್ಲಿಯಲ್ಲಿ ದಿನಂಪ್ರತಿ ಸೇರಿ ಗಾಢವಿಮರ್ಶೆ ನಡೆಸಿ, ಬ್ರಿಟಿಷ್ ಪ್ರತಿನಿಧಿಗಳಿಂದ ಸ್ಪಷ್ಟೀಕರಣ ಕೇಳಿಕೊಂಡು, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕಟ್ಟಕಡೆಗೆ ಬ್ರಿಟಿಷ್ ಸೂಚನೆಗಳ ಕುರಿತು 1000 ಶಬ್ದಗಳುಳ್ಳ ಒಂದು ಠರಾವನ್ನು ಮಂಜೂರು ಮಾಡಿದೆ. ಆ ದು ಬ್ರಿಟಿಷ್ ಯೋಜನೆಯನ್ನು ಕಾಂಗ್ರೆಸ್ ಧೋರಣೆಯ ತಕ್ಕಡಿಯಲ್ಲಿ ತೂಗಿ ನೋಡಿರುವದು ಹೀಗೆ:-

1. ಬ್ರಿಟಿಷ್ ಸೂಚನೆಗಳು ಅಪೂರ್ಣ ಮತ್ತು ಅನಿಶ್ಚಿತವಿವೆ. ಆದ್ದರಿಂದ ನಿಯೋಜಿತ ತಾತ್ಕಾಲಿಕ ಸರಕಾರದ ಅಧಿಕಾರ, ಸಂಯೋಜನೆ [illegible] ಚಿತ್ರ ದೊರೆಯದೆ ಈ ಕಮಿಟಿಗೆ ತನ್ನ ಅಭಿಪ್ರಾಯ ತಿಳಿಸುವದು ಅಸಾಧ್ಯವಾಗಿದೆ.

2. ಕಾಂಗ್ರೆಸಿನ ಕಣ್ಣು ಮುಂದಿರುವ ಗುರಿಗಳು:-ಭಾರತಕ್ಕೆ ಸ್ವಾತಂತ್ರ್ಯ, ಮಿತವಾದ ಆದರೆ ಪ್ರಬಲವಾದ ಅಧಿಕಾರವುಳ್ಳ ಕೇಂದ್ರ, ಪ್ರಾಂತ್ಯಗಳಿಗೆ ಪೂರ್ಣ ಸ್ವಾತಂತ್ರ್ಯ, ಕೇಂದ್ರ ಮತ್ತು ಈ ಪ್ರಾಂತ್ಯಗಳಲ್ಲಿ ಪ್ರಜಾಪ್ರಭುತ್ವಾನುಸಾರವಾದ ರೂಪರೇಷೆ, ಪ್ರತಿಯೊಬ್ಬನ ವ್ಯಕ್ತಿ ಸ್ವಾತಂತ್ರ್ಯದ ಭರವಸೆ, ಈ ವಿಶಾಲ ಕ್ಷೇತ್ರದೊಳಗೆ ತಾನಿಚ್ಛಿಸುವ ಬಾಳುವೆ ನಡೆಸಲು ಪ್ರತಿಯೊಂದು ಸಮಾಜಕ್ಕೂ ಸ್ವಾತಂತ್ರ್ಯ. ಈ ಗುರಿಗಳಿಗಿಂತ ಬ್ರಿಟಿಷ್ ಸೂಚನೆಗಳು ಭಿನ್ನವಾಗಿರುವದು ಶೋಚನೀಯ.

3. ತಾತ್ಕಾಲಿಕ ರಾಷ್ಟ್ರೀಯ ಸರಕಾರವು ಕಾನೂನು ರೂಪದಲ್ಲಿಲ್ಲವಾದರೂ ಕಾರ್ಯರೂಪದಲ್ಲಿ ಅತಿ ಹೆಚ್ಚಿನ ಸ್ವಾತಂತ್ರ್ಯ ಪಡೆದಿರಬೇಕು. ಮಧ್ಯಾವಧಿಯಲ್ಲಿ ವೈಸರಾಯರು ಇರಬಹುದಾದರೂ ಮಂತ್ರಿಮಂಡಲವು ಶಾಸನ ಸಭೆಗೆ ಹೊಣೆಯಾಗಿರಬೇಕು. ಸ್ವಾತಂತ್ರ್ಯಕ್ಕೆ ಬ್ರಿಟಿಷ್ ಸೇನೆಯು ಇಲ್ಲಿರುವದು ಆತಂಕ. ಅಂತೆಯೇ ಈ ಮಧ್ಯಾವಧಿಯ ವರೆಗಾದರೂ ಆಶ್ರಿತ ರಾಜರುಗಳ ಮೇಲೆ ಬ್ರಿಟಿಷ್ ಸಿಂಹಾಸನದ ಮೇಲಧಿಕಾರವೇ ಉಳಿದ ಸಿಂಹಾಸನದ ಪ್ರತಿನಿಧಿಯು ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಅಂಕಿತಗೊಳಗಾಗದಿರುವದು ಒಂದು ಆತಂಕ. ಇವೆರಡನ್ನೂ ದೂರೀಕರಿಸಿ ತಾತ್ಕಾಲಿಕ ಸರಕಾರವು ಸ್ವತಂತ್ರ ಸರಕಾರದಂತೆ ವರ್ತಿಸುವಂತಾಗಬೇಕು.

4. ರಾಜ್ಯಾಂಗ ರಚನಾ ಸಭೆಗೆ ಮಿಲಿಯುಕ್ಕೊಬ್ಬ ಪ್ರತಿನಿಧಿಯೆಂದು ವಿಧಿಸುವಾಗ ಎಸೆಂಬ್ಲಿಗಳಲ್ಲಿ-ಮುಖ್ಯವಾಗಿ ಆಸ್ಸಾಮ್ ಬಂಗಾಳಗಳಲ್ಲಿ—ಯುರೋಪಿಯನರಿರುವದನ್ನು ಮರೆತು ಬಿಡಲಾಗಿದೆ. ಅದನ್ನು ತಿದ್ದಬೇಕು.

5. ಬಲೂಚಿಸ್ಥಾನದಲ್ಲಿ ಚುನಾಯಿತ ಶಾಸನ ಸಭೆಯೇ ಇಲ್ಲ. ನಾಮಕರಣ ಹೊಂದಿದವನು ಅಲ್ಲಿಯ ಜನತೆಯ ಪ್ರತಿನಿಧಿಯಾಗುವುದು ಸರಿಯಲ್ಲ. ಕೌನ್ಸಿಲಿನಲ್ಲಿ ನಾಮಕರಣ ಹೊಂದಿದ ಕೆಲವರು ಮತ್ತು ನೂರಕ್ಕೆ ಕಡಿಮೆ ಮತದಾರರಿಂದ ಚುನಾವಣೆಗೊಂಡ ಯುರೋಪಿಯನ್ ಸದಸ್ಯರು ಮಾತ್ರ ಇದ್ದಾರೆ. ಸಾಮಾನ್ಯ ಮತದಾರರಿಂದ ಆರಿಸಿಬಂದವರೇ ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಬೇಕು.

6. ಪ್ರಾಂತ್ಯ ಮತ್ತು ಪ್ರಾಂತಿಕ ಸಂಗಡಗಳ ಕುರಿತು, 'ಬ್ರಿಟಿಷ್ ಯೋಜನೆಯ ಕೆಲವು ಭಾಗಗಳು ತಮ್ಮೊಳಗೇನೇ ಘರ್ಷಿಸಿಕೊಳ್ಳುವಂತಿವೆ. ಪ್ರಾಂತ್ಯಗಳಿಗೆ ಪೂರ್ಣಾಧಿಕಾರವೂ, ಸಂಗಡದಲ್ಲಿ ಸೇರುವ ಯಾ ಸೇರದಿರುವ ಸ್ವಾತಂತ್ರ್ಯವೂ ಇದೆ ಎಂದು ಒಂದೆಡೆಯಲ್ಲಿ ನಮೂದಿಸಲ್ಪಟ್ಟರೆ ಮತ್ತೊಂದೆಡೆಯಲ್ಲಿ ಪ್ರಥಮತಃ ನಿಯೋಜಿತ ಸಂಗಡದೊಳಗೆ ಕಡ್ಡಾಯವಾಗಿ ಸೇರಲೇಬೇಕೆಂಬ ಅರ್ಥವಾಗುತ್ತದೆ. ಈ ಮಟ್ಟಿಗೆ ಪ್ರಾಂತಿಕ ಕೂಟದೊಳಗೆ ಸೇರುವ, ಯಾ, ಬಿಡುವ ಸ್ವಾತಂತ್ರ್ಯ ಪ್ರತಿಯೊಂದು ಪ್ರಾಂತದ್ದೆಂದು ಸ್ಪಷ್ಟೀಕರಿಸಬೇಕು.

ಬ್ರಿ. ಸೂ.-ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಆಕ್ಷೇಪಗಳು ಬ್ರಿಟಿಷ್ ಯೋಜನೆ ತಿರಸ್ಕರಣೀಯವೆಂಬ ಸೂಚನೆಗಳಲ್ಲ. ಶಾಶ್ವತ ರಾಜ್ಯಾಂಗ ರಚನಾ ವಿಧಾನದಲ್ಲಿ ಸಂಗಡಗಳಲ್ಲಿ ಸೇರುವ ಮಟ್ಟಿಗೆ ಪ್ರತಿ ಪ್ರಾಂತ್ಯಕ್ಕೆ ಸ್ವಾತಂತ್ರ್ಯವಿರತಕ್ಕದ್ದೆಂಬ ಮುಖ್ಯ ಸೂಚನೆಯೊಂದನ್ನು ಬಿಟ್ಟರೆ, ಅದರ ಮಿಕ್ಕೆಲ್ಲಾ ಪ್ರಬಲಾಕ್ಷೇಪಗಳೂ ತಾತ್ಕಾಲಿಕ ಸರಕಾರ ರಚನೆಯ ಭಾಗದಲ್ಲೇ. ಹೇಗಿದ್ದರೂ ಲೀಗ್ ಕಮಿಟಿಗಳ ಅಭಿಪ್ರಾಯ ತಿಳಿಯದೆ ಏನನ್ನೂ ನಿರ್ಧರಿಸುವದು ಅಸಾಧ್ಯವಾದ್ದರಿಂದ ಜೂನ್ ಮಧ್ಯದೊಳಗ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ನಿರ್ಮಾಣವಿಲ್ಲ.

ಇಕ್ಕಡೆಯವರಿಗೂ ಬ್ರಿಟಿಷರ ಪ್ರತ್ಯುತ್ತರ

ಮಿ. ಜಿನ್ನಾ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆಕ್ಷೇಪಗಳಿಗೆ ಇದೇ ತಾ 25ರಲ್ಲಿ ಬ್ರಿಟಿಷ್ ಮಂತ್ರಿ ಸಮಿತಿ ಸದಸ್ಯರ ಮತ್ತು ವೈಸರಾಯರ ಉತ್ತರವೊಂದು ಹೊರ ಬಿದ್ದಿದೆ. "ಈ ಯೋಜನೆಯು ಇದ್ದಂತೆ ಇರುವಂತಹದು. ಮತ್ತದನ್ನು ಸ್ವೀಕರಿಸಿ ಸಹಕಾರ ಸ್ಫೂರ್ತಿಯಿಂದ ಕೆಲಸ ಮಾಡಿದರೇನೇ ಅದು ಜಯಶೀಲವಾಗಬಲ್ಲುದು" ಎಂದವರು ಕಂಠೋಕ್ತವಾಗಿ ಹೇಳಿದ್ದಾರೆ. ಆಕ್ಷೇಪಗಳಿಗೆ ಅವರ ಉತ್ತರ ಹೀಗಿದೆ:-

1. ತಾತ್ಕಾಲಿಕ ಸರಕಾರಕ್ಕೆ ಹೊಸ ಅಸ್ತಿವಾರವೇ ಹಾಕಲ್ಪಡುವದು. ಯುದ್ಧ ಸಚಿವರ ಸಮೇತ ಎಲ್ಲಾ ಸ್ಥಾನಗಳೂ ಹಿಂದೀಯರಿಗೆ. ಹಿಂದೀ ರಾಜಕೀಯ ಪಕ್ಷ ಪ್ರಮುಖರೊಡನೆ ಪರ್ಯಾಲೋಚಿಸಿ, ಈ ಸದಸ್ಯರನ್ನು ನೇಮಿಸಿಕೊಳ್ಳಲಾಗುವದು. ಇದು ಭಾರತ ಸರಕಾರದಲ್ಲಾಗುವ ಗಣ್ಯ ಬದಲಾವಣೆ. ಮತ್ತು ಸ್ವಾತಂತ್ರ್ಯದ ಕಡೆಗಿಡುವ ದೊಡ್ಡ ಹೆಜ್ಜೆ. ಬ್ರಿಟಿಷ್ ಸರಕಾರವು ಈ ಬದಲಾವಣೆಯನ್ನು ಒಪ್ಪಿಕೊಂಡು, ಅವುಗಳಿಗೆ ಸಂಪೂರ್ಣ ಮಾನ್ಯತೆ ಸಲ್ಲಿಸಿ, ದೈನಂದಿನ ಆಡಳಿತೆಯಲ್ಲಿ ಈ ಸರಕಾರಕ್ಕೆ ಅತಿ ಹೆಚ್ಚಿನ ಸ್ವಾತಂತ್ರ್ಯವನ್ನೊಪ್ಪಿಸಿಕೊಡಲಿದೆ.

2. ಹೊಸ ರಾಜ್ಯಾಂಗ ರಚನೆಯಲ್ಲಿ ಹಿಂದೀ ಜನತೆಯ ಅಭಿಮತಕ್ಕೆ ವಿರುದ್ಧವಾಗಿ ಬ್ರಿಟಿಷ್ ಸೇನೆಯನ್ನು ಇಲ್ಲಿಡುವ ಬಯಕೆ ನಿಜಕ್ಕೂ ಇಲ್ಲವಾದರೂ, ತಾತ್ಕಾಲಿಕ ಸರಕಾರದ ಅವಧಿಯಲ್ಲಿ-ಅದು ತೀರಾ ಗಿಡ್ಡವಾಗಿರುವದೆಂದು ಆಶಿಸಲಾಗಿದೆ-ಭಾರತದ ರಕ್ಷಣೆಯ ಹೊಣೆಯು ಬ್ರಿಟನಿನ ಮೇಲೆಯೇ ಇರುವದರಿಂದ ಬ್ರಿಟಿಷ್ ಸೇನೆಗಳು ಇಲ್ಲಿರಬೇಕಾಗಿದೆ.

3. ನಮ್ಮ ಅಭಿಪ್ರಾಯದಲ್ಲಿ ಸೂಚನೆಗಳು ಸುಸ್ಪಷ್ಟವಿವೆ. ರಾಜ್ಯಾಂಗರಚನಾ ಸಭೆಯು ನಿರ್ಮಾಣಗೊಂಡು ಕಾರ್ಯಾರಂಭಿಸಿದ ಮೇಲೆ ಅದರ ನಿರ್ಧಾರಗಳನ್ನು ಪಾರ್ಲಿಮೆಂಟಿಗೆ ಶಿಫಾರಸು ಮಾಡುವದೊಂದನ್ನಲ್ಲದೆ ಅದರ ನಡುವೆ ಪ್ರವೇಶಿಸುವ ಅಥವಾ ಕೆಲಸಗಳನ್ನು ಪ್ರಶ್ನಿಸುವ ಪ್ರಶ್ನೆಯೇ ಇಲ್ಲ. ಎರಡೇ ಶರ್ತಗಳೆಂದರೆ ಅಲ್ಪ ಸಂಖ್ಯಾಕರ ರಕ್ಷಣೆ ಮತ್ತು ಆಶ್ರಿತ ರಾಜ್ಯಗಳೊಡನೆ ಒಪ್ಪಂದದ ವ್ಯವಸ್ಥೆ ಮಾಡಿಕೊಳ್ಳತಕ್ಕದೆಂಬುದು. ಅಂತೆಯೇ ಅಧಿಕಾರ ಬದಲಾವಣೆಯ ಕಾಲದಲ್ಲಿ ಅಗತ್ಯಬೀಳುವಂತೆ ಬ್ರಿಟಿಷ್ ಸರಕಾರದೊಡನೊಂದು ಒಪ್ಪಂದಕ್ಕೆ ಸಮ್ಮತಿಸಿ ಸೂಚಿಸಿದಂತಾಯಿತು.

4. ನವ ಪದ್ಧತಿಯ ಪರಿಣಾಮವಾಗಿ ಕೆಲವೇ ಮಂದಿ ಯುರೋಪಿಯನರು ರಾಜ್ಯಾಂಗರಚನಾ ಸಭೆಗೆ ಆರಿಸಲ್ಪಡುವಂತಾಗಿದೆ. ಹೀಗೆ ದೊರೆತ ಅಧಿಕಾರವನ್ನ ಉಪಯೋಗಿಸಿಸುವ ಯಾ ಬಿಡುವ ಕುರಿತು ನಿರ್ಧರಿಸಬೇಕಾದವರು ಅವರೇ.

5. ಬಲೂಚಿಸ್ಥಾನದ ಮಟ್ಟಿಗೆ ಶಾಹಿ ಜಿರ್ಗಾ ಮತ್ತು ಕ್ವೆಟ್ಟಾ ನಗರ ಸಭೆಯ ಅನಧಿಕಾರೀ ಸದಸ್ಯರ ಜತೆ ಸಭೆಯಲ್ಲೇ ರಾಜ್ಯಾಂಗರಚನಾಸಭೆಯ ಪ್ರತಿನಿಧಿಗಳಾರಿಸಲ್ಪಡಬೇಕು. ಕೂರ್ಗಿನ ಇಡೀ ಕೌನ್ಸಿಲಿಗೆ ಮತಾಧಿಕಾರವಿದ್ದರೂ ಚುನಾವಣೆಯಲ್ಲಿ ಭಾಗ ವಹಿಸದಂತೆ ಅಧಿಕಾರೀ ಸದಸ್ಯರಿಗೆ ಸೂಚನೆಗಳು ಹೋಗುವವು.

6. ಪ್ರಾಂತಿಕ ಸಂಗಡಗಳನ್ನು ಸೇರಿಕೊಳ್ಳುವ ಅಥವಾ ಸೇರದಿರುವ ಅಧಿಕಾರವು ಪ್ರಥಮ ಭಾಗದಲ್ಲೇ ಪ್ರತಿಯೊಂದು ಪ್ರಾಂತ್ಯಕ್ಕಿದೆ ಎಂದು ಕಾಂಗ್ರೆಸ್ ಅರ್ಥಕಟ್ಟಿದೆ. ನಮ್ಮ ಉದ್ದೇಶ ಹಾಗಲ್ಲ. ಪ್ರಥಮತಃ ನಿಯೋಜಿತ ಗುಂಪಿನೊಳಗೆ ಪ್ರಾಂತ್ಯವು ಸೇರಲೇ ಬೇಕು. ಆ ನವ ನಿಬಂಧನೆಗನುಸಾರವಾದ ಮತದಾನಮೂಲಕ ಚುನಾವಣೆ ನಡೆದ ಮೇಲೆ ಪ್ರಾಂತ್ಯವು ಗುಂಪನ್ನು ಬಿಡುವ ನಿರ್ಧಾರವನ್ನು ಪ್ರಜಾಪ್ರಭುತ್ವಕ್ಕನುಗುಣವಾಗಿಯೇ ಮಾಡಬಹುದು.

7. ಆಶ್ರಿತ ರಾಜ್ಯಗಳ ಪ್ರತಿನಿಧಿಗಳನ್ನು ಚುನಾಯಿಸುವದು ಹೇಗೆಂಬ ಪ್ರಶ್ನೆಯು ಆಶ್ರಿತ ರಾಜ್ಯಗಳೊಡನೆಯೇ ಆಲೋಚಿಸತಕ್ಕಂತಹದಿದೆ ಹೊರತು ನಮ್ಮೊಡನಲ್ಲ.

8. ಮಧ್ಯಾವಧಿಯಲ್ಲಿ ಸದ್ಯದ ರಾಜ್ಯಭಾರ ಪದ್ಧತಿಯೇ ಮುಂದೊತ್ತಬೇಕೆಂಬುದಕ್ಕೆ ಕಾಂಗ್ರೆಸ್ ಒಪ್ಪಿದುವಾಗ, ಈ ಮಧ್ಯಾವಧಿಯ ಸರಕಾರವನ್ನು ಎಸೆಂಬ್ಲಿಗೆ ಹೊಣೆಯಾಗಿರುವಂತೆ ಮಾಡಲಾಗುವದಿಲ್ಲ. ಆದರೆ ಎಸೆಂಬ್ಲಿಯ ಬೆಂಬಲ ತಮಗೆ ದೊರೆಯದಿದ್ದರೆ ಅಥವಾ ಅವಿಶ್ವಾಸ ಮಂಜೂರಾದರೆ ಮಂತ್ರಿಗಳು ವ್ಯಕ್ತಿಶಃ ಅಥವಾ ಸಾಮೂಹಿಕವಾಗಿ ಸ್ವಂತ ಇಚ್ಛೆಯಿಂದ ರಾಜೀನಾಮೆ ಕೊಡಬಹುದು.

WANTED

Three Organisers for the District of South Kanara on a salary ranging from Rs. 75/- to Rs. 225/- p. m on a nominal guarantee of business. For further particulars, please apply to the **Secretary** who is now camping in Udipi.

THE

UNITED KARNATAK INSURANCE Co., Ltd.

UDIPI.

H. O. **DHARWAR.** ESTD 1929.

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, South Kanara.

CAPITAL

Authorised	Rs 25,00,000
Issued & Subscribed ...	„ 16,00,000
Paid up	„ 15,60,120
Reserves	„ 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted.

ಉಡುಪಿ, ಗುರುವಾರ, ೩೦-೫-'೪೬

ಕಾಂಗ್ರೆಸ್ ಸರಕಾರದ ಆಹಾರ ವ್ಯವಸ್ಥೆ

ಮದ್ರಾಸಿನ ಕಾಂಗ್ರೆಸ್ ಸರಕಾರವು ಪ್ರಾಂತ್ಯದ ಆಹಾರವ್ಯವಸ್ಥೆಗಾಗಿ ಮನೋಹರ ಯೋಜನೆಯೊಂದನ್ನು ತಯಾರಿಸಿದೆ. ಸಾರ್ವಜನಿಕರ ಸಹಕಾರವನ್ನು ಗಳಿಸಲು-ಆಹಾರ ವ್ಯವಸ್ಥೆಗೆ ಜನತೆಯ ಅಭಿಮತವೇ ಅಸ್ತಿವಾರವಾಗಿರುವಂತೆ ಮಾಡಲು-ಕೈಗೊಂಡ ಹಂಚಿಕೆಯಿದು. ಇದರ ರೂಪರೇಖೆ ಹೀಗಿದೆ:-ಸದ್ಯದ 'ಆಹಾರ ಸಮಿತಿ'ಗಳನ್ನೆಲ್ಲಾ ಬರಖಾಸ್ತುಪಡಿಸಲಾಗುವದು. ಅವುಗಳ ಬದಲಿಗೆ ಜನ ಪ್ರತಿನಿಧಿಗಳ ಗ್ರಾಮ, ತಾಲೂಕು, ಮತ್ತು ಜಿಲ್ಲಾ ಸಮಿತಿಗಳೇರ್ಪಡುವವು. ಆಹಾರ ಧಾನ್ಯಗಳ ಸಂಗ್ರಹ ಮತ್ತು ವಿತರಣೆಗೆ ಈ ಕಮಿಟಿಗಳೇ ಮಾಧ್ಯಮವಾಗುವವು.

ಗ್ರಾಮ ಸಮಿತಿ:—ತಹಶೀಲ್ದಾರರು ಪ್ರತಿಯೊಂದು ಗ್ರಾಮದ ನಿವಾಸಿಗಳ ಸಭೆ ಕರೆದು ನಿಜವಾದ ಪ್ರತಿನಿಧಿಗಳನ್ನು ಆರಿಸಿ ಗ್ರಾಮ ಸಮಿತಿ ರಚಿಸಬೇಕು. ಇದರಲ್ಲಿ ೫ರಿಂದ ೮ರ ವರೆಗೆ ಸದಸ್ಯರಿರಬಹುದು. ಗ್ರಾಮ ಸಣ್ಣದಿದ್ದರೆ ಕೆಲವು ಗ್ರಾಮಗಳಿಗೆ ಸೇರಿ-ಹಲವು ಗ್ರಾಮಗಳಿರುವ ಮುನಿಸಿಪಲ್ ಪ್ರದೇಶದಲ್ಲಿ ಆ ಮುನಿಸಿಪಾಲಿಟಿಗೊಂದೇ-ಸಮಿತಿ ರಚಿಸಬಹುದು. ಸಮಿತಿಯು ತನ್ನ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಬೇಕು. ಇಂತಹ ಕಮಿಟಿಯು ನಿಜವಾದ ಜನಪ್ರತಿನಿಧಿಗಳಿಂದ ಕೂಡಿದ್ದೆಂಬುದನ್ನು ರೆವಿನ್ಯೂ ಡಿವಿಜನಲ್ ಆಫೀಸರರು ಶೋಧಿಸಿ ಒಪ್ಪಿಗೆಕೊಡಬೇಕು.

ತಾಲೂಕು ಸಮಿತಿ:—ತಹಶೀಲ್ದಾರರು ಪ್ರತಿಯೊಂದು ಫಿರ್ಕಾದ ಗ್ರಾಮ ಸಮಿತಿಗಳ ಒಟ್ಟು ಸಭೆಯನ್ನು ಯೋಗ್ಯ ಕೇಂದ್ರ ಸ್ಥಳದಲ್ಲಿ ಕರೆದು ತಾಲೂಕು ಸಮಿತಿಗೆ ಇಬ್ಬರು ಪ್ರತಿನಿಧಿಗಳನ್ನಾರಿಸುವಂತೆ ಕೇಳಿಕೊಳ್ಳತಕ್ಕದ್ದು. ಹೀಗೆ ಚುನಾಯಿಸಲ್ಪಟ್ಟ ಸುಮಾರು 10 ಮಂದಿ ಸೇರಿ ತಾಲೂಕು ಕಮಿಟಿಯಾಗುವದು. ತಹಶೀಲ್ದಾರರು ಈ ತಾಲೂಕು ಸಮಿತಿಯ ಕನ್ವೀನರ್ ಮತ್ತು ಡಿವಿಜನಲ್ ಆಫೀಸರ್ ಅದರ ಅಧ್ಯಕ್ಷನಾಗಿರಬೇಕು. ಆ ಭಾಗದ ಎಸೆಂಬ್ಲಿ ಸದಸ್ಯರು ಈ ಸಮಿತಿಯ 'ಎಕ್ಸ್ ಓಫೀಶಿಯೋ' ಸದಸ್ಯರಾಗುವರು.

ಜಿಲ್ಲಾ ಸಮಿತಿ:—ಈ ಸಮಿತಿಗೆ ಜಿಲ್ಲಾ ಕಲೆಕ್ಟರರು ಅಧ್ಯಕ್ಷರು. ಜಿಲ್ಲಾ ಸಪ್ಲೈ ಆಫೀಸರರು ಅದರ ಕಾರ್ಯದರ್ಶಿಯಾಗಿಯೂ ಜಿಲ್ಲಾ ರೇಶನಿಂಗ್ ಆಫೀಸರ್, ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ಮತ್ತು ಕೋಪರೇಟಿವ್ ಸೊಸೈಟಿಯ ಡಿಪ್ಯುಟಿ ರಿಜಿಸ್ಟ್ರಾರರು ಅದರ 'ಎಕ್ಸ್ ಓಫಿಶಿಯೋ' ಸದಸ್ಯರಾಗಿಯೂ ಇರುವರು. ಪ್ರಾಂತಿಕ ಮತ್ತು ಕೇಂದ್ರ ಎಸೆಂಬ್ಲಿಗಳ ಸದಸ್ಯರೂ, ಪ್ರತಿಯೊಂದು ತಾಲೂಕು ಕಮಿಟಿಯ ಅನಧಿಕಾರಿ ಸದಸ್ಯರಿಂದೊಬ್ಬನಂತೆ ಆರಿಸಿಬಂದವರೂ ಅದರ ಸದಸ್ಯರಾಗಿರುವರು. ಈ ಕಮಿಟಿಗೆ ಬೇಕೆಂದರೆ ಇತರ ಮೂವರನ್ನು ನೇಮಿಸಿಕೊಳ್ಳುವ ಅಧಿಕಾರವಿದೆ. ಕೋಪರೇಟಿವ್ ಸ್ಟೋರ್ಸುಗಳಿಗೆ ಧಾನ್ಯ ಸಂಗ್ರಹಾಧಿಕಾರವಿರುವಲ್ಲಿ ಈ ಮೂವರಲ್ಲೊಬ್ಬನನ್ನು ಅವುಗಳಿಂದಾರಿಸಿಕೊಳ್ಳತಕ್ಕದ್ದು.

ಪ್ರತಿಯೊಬ್ಬ ರೈತನ ಧಾನ್ಯ ಉತ್ಪತ್ತಿ ಅವನ ಎಲ್ಲಾ ವೆಚ್ಚ ಮತ್ತು ಉಳಿತಾಯ ಮೊದಲಾದ ಲೆಕ್ಕಪತ್ರಗಳನ್ನು ರೆವಿನ್ಯೂ ನೌಕರರು ತಯಾರಿಸಿ, ಅದನ್ನು ಸಂಬಂಧಪಟ್ಟ ರೈತನಿಗೆ ತಿಳಿಸಿ ಗ್ರಾಮ ಸಮಿತಿಯ ಮುಂದೆ ಇಡಬೇಕು. ಅದನ್ನು ಗ್ರಾಮ ಸಮಿತಿಯು ಪರಿಶೋಧಿಸಬೇಕು. ರೈತನ ಆಕ್ಷೇಪಗಳೇನಾದರೂ ಇದ್ದರೆ ವಿಚಾರಿಸಿ ತೀರ್ಮಾನಿಸಬೇಕು. ಈ ತನಿಖೆ ಮುಗಿಯುವನಕ ರೈತನು ಸ್ವೇಚ್ಛೆಯಿಂದ ಕೊಟ್ಟ ಧಾನ್ಯವನ್ನಷ್ಟೇ ಪಡಕೊಳ್ಳಬೇಕು. ಗ್ರಾಮ ಸಮಿತಿಗಳು ತಮ್ಮ ಈ ಪಟ್ಟಿಗಳನ್ನೆಲ್ಲಾ ತಾಲೂಕು ಸಮಿತಿಗಳಿಗೆ ಕಳುಹಿಕೊಡತಕ್ಕದ್ದು. ಗ್ರಾಮ ಸಮಿತಿಗಳ ಈ ಪಟ್ಟಿಗಳು ಸರಿಯಲ್ಲವೆಂದು ತಾಲೂಕು ಕಮಿಟಿಗೆ ಖಚಿತವಾದಲ್ಲಿ ಅದನ್ನು ತಿದ್ದುವ ಅಧಿಕಾರ ತಾಲೂಕು ಕಮಿಟಿಗಿದ್ದು, ಆ ತೀರ್ಮಾನದಂತೆ ವರ್ತಿಸಲು ಗ್ರಾಮ ಸಮಿತಿ ಬದ್ಧವಿದೆ. ಗ್ರಾಮ ಸಮಿತಿಯ ತೀರ್ಮಾನದ ವಿರುದ್ಧ ತಾಲೂಕು ಕಮಿಟಿಗೆ ಅಪೀಲು ಮಾಡುವ ಅಧಿಕಾರವು ಪ್ರತಿಯೊಬ್ಬ ಉತ್ಪಾದಕನಿಗೂ ಇದೆ. ಇಂತಹ ಆಕ್ಷೇಪಗಾರನ ಹವಾಲೆಗಳನ್ನು ಕೇಳಿಕೊಂಡು ತಾಲೂಕು ಸಮಿತಿ ಕೊಡುವ ತೀರ್ಮಾನವೇ ವ್ಯಕ್ತಿಗತ ಆಕ್ಷೇಪಗಳ ಮಟ್ಟಿಗೆ ಕೊನೆಯದು. ಈ ಅಪೀಲುಗಳ ವಿಚಾರಣೆಗೆ ತಾಲೂಕು ಕಮಿಟಿಯು ಉಪಸಮಿತಿಯನ್ನು ನೇಮಿಸಿಕೊಳ್ಳಬಹುದು. ಅಂತಹ ಉಪಸಮಿತಿಗೆ ತಹಶೀಲ್ದಾರರೇ ಅಧ್ಯಕ್ಷರಾಗಿರಬೇಕು. ತಾಲೂಕು ಸಮಿತಿಯು ಗ್ರಾಮ ಪಟ್ಟಿಗಳನ್ನು ಕಾಲಕಾಲಕ್ಕೆ ಜಿಲ್ಲಾ ಸಮಿತಿಗೆ ಕಳುಹಿಸಬೇಕು. ಜಿಲ್ಲಾ ಸಮಿತಿಯು ಎಲ್ಲಾ ತಾಲೂಕು ಪಟ್ಟಿಗಳನ್ನು ಕ್ರೋಢೀಕರಿಸಿ ಜಿಲ್ಲೆಯ ಸ್ಥಿತಿಗತಿ ನಿರ್ಧರಿಸತಕ್ಕದ್ದು. ತಾಲೂಕು ಕಮಿಟಿಯೊಪ್ಪಿಸಿದ ಧಾನ್ಯಸಂಗ್ರಹಪಟ್ಟಿ ಕಡಿಮೆಯೆಂದು ತೋರಿದಲ್ಲಿ, ಜಿಲ್ಲಾ ಸಮಿತಿಯ ಸಲಹೆ ಪಡೆದು ಅದನ್ನು ವಜಾ ಪಡಿಸಿ, ಬೇರೆ ಪಟ್ಟಿ ತಯಾರಿಗಾಗಿ ವಾಪಾಸು ಕಳುಹುವ ಅಧಿಕಾರ ಕಲೆಕ್ಟರರಿಗಿದೆ.

ಹಳ್ಳಿಗಳ ಉಳಿತಾಯದ ಅಕ್ಕಿಯನ್ನು ಪಡಕೊಳ್ಳುವರೆ, ಪ್ರತಿಯೊಂದು ಫಿರ್ಕವನ್ನು ಐದಾರು ವಿಭಾಗವಾಗಿ ವಿಂಗಡಿಸಿ ಐದಾರು ಡಿಪೋಗಳನ್ನು ತೆರೆಯುವ—ಕೋಪರೇಟಿವ್ ಸ್ಟೋರ್ಸ್‌ಗಳಿದ್ದಲ್ಲಿ ಈ ಸಂಬಂಧದ ಶಾಖೆ ತೆರೆಯುವಂತೆ ಅದನ್ನೇ ಕೇಳಿಕೊಳ್ಳುವ--ಇದಾವುದೂ ಸಾಧ್ಯವಾಗದಲ್ಲಿ ಅದಕ್ಕಾಗಿ ಏಜೆಂಟರನ್ನು ನೇಮಿಸುವ ಸೂಚನೆಗಳಿವೆ. ಹಳ್ಳಿಗರ ಬತ್ತ ಕುಟ್ಟುವ ಉದ್ಯೋಗಕ್ಕೆ ಪ್ರೋತ್ಸಾಹಕೊಡುವ ವಿಧಾನಗಳು, ಹಳ್ಳಿಗಳಿಗೆ ಧಾನ್ಯ ಸಂಗ್ರಹದ ಗೋಡಾನುಗಳ ವ್ಯವಸ್ಥೆಗಳೆಲ್ಲಾ ಈ ಯೋಜನೆಯಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿವೆ. ಅಗತ್ಯವುಳ್ಳವರಿಗೆ ಹಸುಗೇಕಾರ್ಡು ಸರಿಯಾಗಿ ದೊರೆಯುವುವಂತೆಯೂ, ಆ ಸಂಬಂಧದ ಫೋರ್ಜರಿಗಳಾಗದಂತೆಯೂ ನೋಡುವ ಹೊಣೆ ಗ್ರಾಮ ಸಮಿತಿಯ ಮೇಲಿದೆ. ಮುಖ್ಯವಾಗಿ ಧಾನ್ಯ ಸಂಗ್ರಹದಲ್ಲಿ ರೈತರಿಗಾಗಿರುವ ಅನ್ಯಾಯಗಳು ಕಾಂಗ್ರೆಸ್ ಸರಕಾರದ ಮನಸಿಗೆ ನಾಟಿರುವಂತಿದೆ. ಈಗಲೂ ಕಾನೂನುಬದ್ಧವಾಗಿ ರೈತರ ಸಾಗುವಳಿ ಖರ್ಚು, ಮನೇ ವೆಚ್ಚ, ಕೂಲಿ ಅಂಶ, ಇತ್ಯಾದಿಗಳನ್ನು ಒಟ್ಟು ಉಳಿಯುವ ಧಾನ್ಯವನ್ನು ಮಾತ್ರ ಸಂಗ್ರಹಿಸಬೇಕೆಂದಿದ್ದರೂ ಸದ್ಯ ಅವೆಲ್ಲವನ್ನೂ ಮರೆತು ರೈತರಲ್ಲಿದ್ದುದನ್ನೆಲ್ಲಾ ಸಂಗ್ರಹಿಸಿದ ದೃಷ್ಟಾಂತಗಳು ಸರ್ವಸಾಮಾನ್ಯವಾಗಿವೆ. ಕಾಂಗ್ರೆಸ್ ಸರಕಾರದ ಈ ಹೊಸ ಯೋಜನೆಯಲ್ಲಿ ಸಾಗುವಳಿದಾರರಿಗೆ ಕಾಯಂ ಕೆಲಸಗಾರರ ಪಡಿಯಕ್ಕಿ ಮಾತ್ರವಲ್ಲ, ಬೇಸಾಯವೇ ಮೊದಲಾದ ವಿಶೇಷ ಸಂದರ್ಭಗಳ ಕೂಲಿಯಕ್ಕಿಯನ್ನೂ ಬಿಡತಕ್ಕದ್ದೆಂಬ ಸ್ಪಷ್ಟ ನಿಯಮವಿದೆ. ರೈತರ ಮೇಲೆ ಧಾನ್ಯ ಸಂಗ್ರಹ ಸಂಬಂಧವಾಗಿ ಆಗಿರುವ ಅತ್ಯಾಚಾರ ಮತ್ತು ಮೊಕದ್ದಮೆಗಳ ಸಂಬಂಧದ ದೂರನ್ನು ಗಮನಿಸಿ, ಸದ್ಯ ಬಾಕಿಯಿರುವ ಮೊಕದ್ದಮೆಗಳಲ್ಲಿ ಹಿಂಸೆ ಮತ್ತು ದೊಡ್ಡ ಪರಿಣಾಮದ ವಂಚನೆಯವುಗಳನ್ನು ಬಿಟ್ಟು ಮಿಕ್ಕೆಲ್ಲವನ್ನೂ ಹಿಂದೆಗೆಕೊಳ್ಳಬೇಕೆಂದು ಸರಕಾರವು ಕಲೆಕ್ಟರರನ್ನು ಕೇಳಿಕೊಂಡಿರುವುದು ಅಭಿನಂದನೀಯ.

ಪ್ರಾಯಶಃ ಮುಂದಿನ ಬೆಳೆಯ ಸಮಯದಲ್ಲಿ ಮಾತ್ರವೇ ಈ ಯೋಜನೆಯು ಪೂರ್ಣ ಅಸ್ತಿತ್ವಕ್ಕೆ ಬರಲು ಸಾಧ್ಯ. ಅದರಲ್ಲೂ ಸೂತ್ರಧಾರಿತ್ವ ಸರಿಯಾಗಿಲ್ಲದೆ ಹೋದರೆ ಇಷ್ಟೊಂದು ಮನೋಹರವಾಗಿರುವ ಈ ವ್ಯವಸ್ಥೆಯು ವಾಚನ ಸೌಖ್ಯವನ್ನಲ್ಲದೆ ಬೇರಾವ ಸುಖವನ್ನೂ ನಿರ್ಮಿಸದೆ ಹೋಗಬಹುದು. ಆದ್ದರಿಂದ ಈ ಸೂತ್ರಗಳಂತೆ ಪರಿಣಾಮಕಾರೀ ಕೆಲಸ ನಡೆಯಲಿ. "ಮದ್ರಾಸಿನ ಈಗಿನ ಮಂತ್ರಿಮಂಡಲ ಅಧಿಕಾರ ವಹಿಸಿ ತಿಂಗಳು ಕಳೆದರೂ ಆಹಾರ ವ್ಯವಸ್ಥೆಯಲ್ಲಿ ಬಡಾಯಿಯೊಂದನ್ನಲ್ಲದೆ ಬೇರೇನನ್ನೂ ಮಾಡಲೂ ಶಕ್ತವಾಗಿಲ್ಲ" ಎಂದ ರಾಜಾಜಿಯ ಮಾಗ್ದಾಣದ ನೋವು ಪ್ರಕಾಶಂ ಮಂತ್ರಿಮಂಡಲದ ಸ್ಮರಣೆಯಲ್ಲುಳಿಯಲಿ!

CHAMPAE'S

Snow & Castrex

(Sole Distributers for (Tnata.)

Prop: K. G. NAYAK,

Santhekatte, UDIPI, S. K.

Navayuga Enterprise Ltd. Udipi

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ತಾ. 12—5—'1946ರಲ್ಲಿ ಜರಗಿದ ಪಾಲುದಾರರ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಪಾಲು ಭಂಡವಾಳವನ್ನು 1,00,000 ರೂಪಾಯಿಗೆ ಹೆಚ್ಚಿಸುವ ನಿರ್ಣಯ ಮಾಡಲ್ಪಟ್ಟಿರುವುದು. ಆ ಸಂಬಂಧ ರೂ 10ರ 8000 ಹೊಸ ಪಾಲುಗಳನ್ನು ಹೊರಡಿಸಲಾಗಿದೆ. (ಪ್ರತಿ ಪಾಲಿಗೂ ರೂ 1/ ಪ್ರವೇಶ ಧನ ಪ್ರತ್ಯೇಕ) **ಈ ಹೊಸ ಪಾಲುಗಳು ಈಗಿನ ಪಾಲುದಾರರಿಗೆ ಮಾತ್ರವೇ ಅವರವರಿಗೆ ಈಗಿರುವ ಪಾಲುಗಳಿಗೆ 1ಕ್ಕೆ 4ರಂತೆ ಕೊಡಲ್ಪಡುವವು ಪ್ರತಿ ಪಾಲುದಾರರಿಗೂ ಪಾಲು ಅರ್ಜಿಗಳು ಕಳಿಸಲ್ಪಟ್ಟಿವೆ. ಅವರೆಲ್ಲರೂ ಆ ಪಾಲು ಅರ್ಜಿಯನ್ನು ಬರೆದು ತಕ್ಕ ಹಣದೊಂದಿಗೆ ತಾ 30-6-46ರ ಒಳಗಾಗಿ ಆದಷ್ಟು ಬೇಗನೆ ಕಳಿಸಿ ಕೊಡುವಂತೆ ಅಪೇಕ್ಷಿಸೋಣಾಗುತ್ತದೆ. ತಾ. 30-6-46ರ ಅವಧಿಯೊಳಗಾಗಿ ಅರ್ಜಿ ಹಾಗೂ ಹಣವು ಸಾವತಿಯಾಗದಿದ್ದರೆ ಹೊಸ ಪಾಲುಗಳು ಬೇಡವೆಂದೆಣಿಸಲ್ಪಟ್ಟು ಅವು ಇತರರಿಗೆ ಕೊಡಲ್ಪಡುವವು.**

ಕೆ. ಎಚ್. ಶೆಟ್ಟಿ,	**ಕೆ. ಜೆ. ಬಲ್ಲಾಳ್, ವಕೀಲ್,**
ಮೆನೇಜಿಂಗ್ ಡೈರೆಕ್ಟರ್.	ಚೆಯರ್‌ಮೇನ್.

ವಿ. ಸೂ:- ಹೊಸದಾಗಿ ಪಾಲುಗಳನ್ನು ಪಡೆಯಲಪೇಕ್ಷಿಸುವ ಮಹನೀಯರು ಪಾಲು ಅರ್ಜಿಗಳಿಗಾಗಿ ಬರಕೊಳ್ಳಬಹುದು. ಆದರೆ ಅವರಿಗೆ ಪಾಲು ಕೊಡುವ ವಿಚಾರ ತಾ. 30-6-46ರ ನಂತರವೇ ಆಲೋಚಿಸಲ್ಪಡುವುದು.

ಬೊಂಬಾಯಿಯ ಪಾಲುದಾರರು ತಮ್ಮ ಹಕ್ಕಿನ ಹೊಸ ಪಾಲುಗಳನ್ನು ಅಲ್ಲಿಗೆ ಬಂದಿರುವ ಶ್ರೀ ಕೆ. ಜಗನ್ನಾಥ ಶೆಟ್ಟರೊಡನೆ ಹಣ ತೆತ್ತು ಪಡಕೊಳ್ಳಬೇಕಾಗಿ ವಿನಂತಿ.

ವಿಶೇಷ ಸುದ್ದಿಗಳು

○ ಮದ್ರಾಸ್ ಎಸೆಂಬ್ಲಿಗೆ ಶ್ರೀ. ಜೆ. ಶಿವಷಣ್ಮುಗಮ್ ಅಧ್ಯಕ್ಷರಾಗಿಯೂ ಶ್ರೀಮತಿ ಅಮ್ಮಣ್ಣ ರಾಜಾ ಉಪಾಧ್ಯಕ್ಷರಾಗಿಯೂ, ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ ಶ್ರೀ ಆರ್. ಬಿ ರಾಮಕೃಷ್ಣರಾಜು ಅಧ್ಯಕ್ಷರಾಗಿಯೂ ಶ್ರೀ. ಕೆ. ವೆಂಕಟ ಸ್ವಾಮಿ ನಾಯುಡು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ. ನಾಲ್ವರೂ ಕಾಂಗ್ರೆಸಿಗರು ಮಂತ್ರಿಗಳ ಮತ್ತಿತರ ಸಂಬಳ ಏರಿಸುವ ನಿರ್ಣಯವೂ ಆಗಿದೆ

○ ಅಕ್ಕಿಯ ಅಭಾವ ಮತ್ತು ಗೋಧಿಯು ಆಮದು ಕದ್ದುದರಿಂದ ಮದ್ರಾಸ್ ಸರಕಾರವು ಹಸುಗೆಯ ಅಕ್ಕಿಯ ಪರಿಮಾಣದಲ್ಲಿ 1/6ನೇ ಅಂಶವನ್ನು ಕಡಿಮೆಮಾಡಿ ಆ ಅಂಶ ಗೋಧಿ ಕೊಡುವ ನಿರ್ಧಾರ ಮಾಡಿದೆ. ಕಾಫಿ ಹೋಟೆಲುಗಳಿಗೆ ಇನ್ನು ಮುಂದೆ ಅಕ್ಕಿ ಕೊಡಲ್ಪಡುವದಿಲ್ಲ.

○ ಪಂಡಿತ ನೆಹರುಗಳು ತಾ. 26ರಲ್ಲಿ ವೈಸರಾಯರ ಭೇಟಿ ಪಡೆದು ಸುದೀರ್ಘ ಸಂಭಾಷಣೆ ನಡಿಸಿದರು. ಅಸ್ಸೆಂಬ್ಲಿಗಳಿಗೆ ಬ್ರಿಟಿಷ್ ರಾಯಭಾರಿಗಳಿತ್ತ ಉತ್ತರವನ್ನು ಕೇಳಿದೊಡನೆ, ಪಂಡಿತ ನೆಹರುಗಳು ಉರಿದು ಬಿದ್ದು "ಅವರು ದ್ವಯಾರ್ಥದ ಮಾತಾಡುವದನ್ನೇಕೆ ಬಿಡಬಾರದು? ಈ ಹೇಳಿಕೆಗಳೆಲ್ಲಾ ಯಾಕಾಗಿ? ಸ್ವಾತಂತ್ರ್ಯ ಹೊಂದಲು ಎರಡು ಹೊಸ ಶರ್ತಗಳು ಬೇಕೆಂಬ ಊಹೆಯೆಬ್ಬಿಸುವದರಿಂದ ಪ್ರಯೋಜನವಾದರೂ ಏನು? ಹಲವು ವರುಷ ಅದರೊಡನೆ ಹೋರಾಡಿದ್ದ ನಾನು ವೈಸರಾಯಿ ಕೌನ್ಸಿಲಿನಲ್ಲಿ ಸೇರುವಂತಿಲ್ಲ. ನಮ್ಮ ಪ್ರಾಂತ್ಯಗಳು ಸಂಘದಲ್ಲಿ ಸೇರಲಿಚ್ಛಿಸದಿದ್ದರೆ, ಹಾಗೆ ಸೇರುವಂತೆ ಮಾಡುವವರು ಯಾರವರು?" ಎಂದು ಗರ್ಜಿಸಿದ್ದಾರೆ.

○ ಸಯ್ಯಾಮಿನ ಗಡಿಯೊಳಗಡೆ ಫ್ರೆಂಚ್ ಸೇನೆಯು ನುಗ್ಗಿ ಮುಂದೊತ್ತುತ್ತಿದೆಯೆಂದೂ, ಸರಹದ್ದಿನ ನಗರಗಳ ಮೇಲೆ [illegible] ದಾಳಿ ನಡೆಸುತ್ತಿದೆಯೆಂದೂ ವಾರ್ತೆ ಬಂದಿದೆ ಸಯಾಮ್ ಸರಕಾರವು ಜಾಗತಿಕ ಸಂಘಕ್ಕೆ ಮೊರೆಯಿಟ್ಟು, ಇದನ್ನು ತಡೆಗಟ್ಟುವಂತೆ, ಇಂಗ್ಲಾಂಡು ಅಮೇರಿಕಗಳನ್ನು ಕೇಳಿಕೊಂಡಿದೆ

THE VIJAYA BANK LTD.

ANNOUNCEMENT

Since the new shares issued have been immediately over-subscribed, applications for shares will not be entertained hereafter from anyone except the existing shareholders who hold five or more shares and only to the number of shares they are entitled upto 8-6-'46, the time already granted to them.

We take this opportunity to thank shareholders and other well-wishers for the keen interest they have evinced in our shares, though it may not be possible for us to allot to the applicants all the shares they have applied for.

S. Mahabala Shetty,
Secretary.

Place- Mangalore
Date 27-5-1946

ಉಡುಪಿಯಲ್ಲಿ ಮಕ್ಕಳ ಕೂಟದ ದ. ಕ. ಜಿಲ್ಲಾ ಸಮ್ಮೇಲನ.

ತಾ. 27ನೇ ಪೂರ್ವಾಹ್ನ ರಾಷ್ಟ್ರಧ್ವಜದೊಂದಿಗೆ ಮಕ್ಕಳ ಪ್ರಭಾತಫೇರಿ ನಡೆದು ಸಮ್ಮೇಲನ ಮತಾರದಲ್ಲಿ ಶ್ರೀಮತಿ ಯು. ರಾಧಾಬಾಯಿಯವರಿಂದ ಧ್ವಜಾರೋಹಣವಾಯಿತು. ಆ ಮೇಲೆ ಕಿರಿಯರ ಲೇಖನ ಸ್ಪರ್ಧೆ ನಡೆಯಿತು. ಅಪರಾಹ್ನ 3-30ಕ್ಕೆ ಸಮ್ಮೇಲನ ರಂಗವಾದ ಶ್ರೀ. ನೋರ್ಡನ್ ಹಾ. ಎ ಶಾಲೆಯಲ್ಲಿ ಉಡುಪಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಮ್ಮೇಲನ ನೆರೆಯಿತು ಸ್ವಾಗತಾಧ್ಯಕ್ಷರೂ ಈ ಸಮ್ಮೇಲನದ ವ್ಯವಸ್ಥಾಪಕರೂ ಆದ ಶ್ರೀ. ಬಿ. ಅಂತಯ್ಯ ಸೆಟ್ಟರು ಸ್ವಾಗತ ಭಾಷಣವಿತ್ತು ಸಮ್ಮೇಲನಕ್ಕೆ ಬಂದ ಸಂದೇಶಗಳನ್ನು ಓದಿ ಹೇಳಿದರು. ಆ ವೇಳೆ ಶ್ರೀ. ಬಿ. ರಾಮಕೃಷ್ಣಾಚಾರ್, ಮತ್ತು ಶ್ರೀ. ಪಿ ಕುಪ್ಪಣ್ಣಾಚಾರ್ಯರ ಬೋಧಪ್ರದ ಭಾಷಣಗಳಾದುವು. ಶ್ರೀ. ಎಸ್. ಎಲ್. ನಾರಾಯಣ ಭಟ್ಟರೂ ಶ್ರೀ. ಹರಿದಾಸ ಬಲ್ಲಾಳರೂ ಆಧುನಿಕ ಕವಿತೆಗಳನ್ನು ಸುಶ್ರಾವ್ಯವಾಗಿ ಓದಿದರು. ಅಧ್ಯಕ್ಷರು ಮಕ್ಕಳಿಗೆ ಮಾರ್ಗದರ್ಶಕವಾಗುವ ಹೃದಯಂಗಮ ಭಾಷಣವಿತ್ತರು.

ತಾ. 28ರಲ್ಲಿ ಪುಂಜಾನೆ ಮಕ್ಕಳ ವಾಚನ ಸ್ಪರ್ಧೆ ನಡೆಯಿತು. ಸಂಜೆ 3-30ಕ್ಕೆ ಪಂಡಿತ ಶ್ರೀ. ಕೆ. ವೆಂಕಟರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಸಮ್ಮೇಲನಾರಂಭವಾಯಿತು. ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರೂ, ಶ್ರೀ. ಕೆ. ವಿಠಲ ಶೆಣ್ಯೆಯವರೂ ಮಕ್ಕಳ ಆರೋಗ್ಯ, ಆಹಾರ, ಕಲೆ, ಸಾಹಿತ್ಯ, ಇತ್ಯಾದಿ ವಿಷಯಗಳನ್ನೆತ್ತಿ ಅಮೂಲ್ಯ ಉಪನ್ಯಾಸಗಳನ್ನಿತ್ತರು, ಶ್ರೀ ಗಳಾದ ಕು. ಹರಿದಾಸ ಭಟ್ಟ ಮತ್ತು ಅನಂತ ಪುರಾಣಿಕರೂ ಶ್ರೀಮತಿ ಯು. ರಾಧಾ ಬಾಯಿಯವರೂ ಸುಮಧುರವಾಗಿ ಕವಿತಾ ವಾಚನ ಮಾಡಿದರು. ಅಧ್ಯಕ್ಷರು ಸುಂದರ ಶೈಲಿಯಲ್ಲಿ ಮಕ್ಕಳ ಭಾವೀ ಜೀವನಕ್ಕೆ ಮೇಲ್ಪಂಕ್ತಿಯಾಗಬಲ್ಲ ಬೋಧಪ್ರದ ಭಾಷಣವಿತ್ತರು. (ಸಮ್ಮೇಲನವು ಮೂರು ದಿನ ನಡೆಯಿತು. ಕೊನೆಯ ದಿನದ ವಾರ್ತೆ ಮುಂದಿನ ವಾರ)

○ ಈಜಿಪ್ಟಿನಿಂದ ಸೇನೆ ಹಿಂದೆಗೆಯುವ ಅಟ್ಲೀ ಸರಕಾರದ ನಿರ್ಧಾರಕ್ಕೆ ಚರ್ಚಿಲ್ ಮತ್ತು ಕನ್ಸರ್ವೇಟಿವ್ ಪಕ್ಷವು ಪ್ರಬಲ ವಿರೋಧ ಸೂಚಿಸಿದೆ. ಈಗ ನಡೆಯುತ್ತಿರುವ ಬ್ರಿಟಿಷ್—ಈಜಿಪ್ಟ್ ಮಾತುಕತೆಯು ಯೋಗ್ಯ ಅಭಿವೃದ್ಧಿ ಪಡೆದಂತೆ ತೋರುವದಿಲ್ಲ

○ ಇರಾನಿನಲ್ಲಿ ರಶ್ಯದ ವರ್ಚಸ್ಸಿರುವ ಅಜ್ಹರ್‌ಬೈಜಾನ್ ಪ್ರಾಂತ್ಯಕ್ಕೂ ಇರಾನ್ ಸರಕಾರಕ್ಕೂ ನಡೆಯುತ್ತಿರುವ ಮಾತುಕತೆ ಒಮ್ಮೆ ಮುರಿಯುವಂತಾದರೂ ಈಗ ಪುನಃ ಆರಂಭವಾಗಿದೆ, ರಶ್ಯದ 'ಪ್ರಾವ್ಡಾ' ಪತ್ರಿಕೆಯು ಆಂಗ್ಲೋ ಅಮೆರಿಕನರ ಕಪಟಾಚರಣೆಯನ್ನು ಖಂಡಿಸಿದೆ.

ಮಂಗಳೂರು.

ರೇಡಿಯೊ ಹೌಸಿನ ಪ್ರಾರಂಭೋತ್ಸವ— ಉಡುಪಿಯ ವಿಜಯಾ ಕನ್‌ಸ್ಟ್ರಕ್ಷನ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ಲಿಮಿಟೆಡಿನವರು ಶ್ರೀ. ಬಿ. ರಂಗನಾಥ ಶೆಣ್ಯೆಯವರ ವ್ಯವಸ್ಥಾಪಕತ್ವದಲ್ಲಿ ಮಂಗಳೂರಲ್ಲಿ ಒಂದು ರೇಡಿಯೊ ಹೌಸನ್ನು ತೆರೆದಿರುತ್ತಾರೆ. ಇದರ ಪ್ರಾರಂಭೋತ್ಸವವು ತಾ. 21ರಲ್ಲಿ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಡಾ. ಯು. ಪಿ. ಮಲ್ಯ, ಎಂ. ಎಲ್. ಎ. ರವರಿಂದ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಚರ್ಮ ಹದಮಾಡುವದು ಮತ್ತು ಚರ್ಮದ ವಸ್ತುಗಳನ್ನು ತಯಾರಿಸುವದು--ಇತ್ಯಾದಿ ವಿಷಯಗಳಲ್ಲಿ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಶಾಖೆಯ ನೇತೃತ್ವದಲ್ಲಿ 'The Institute of Leather Technology, Washermanpet, Madras'ನಲ್ಲಿ ಟ್ರೈನಿಂಗ್ ಕೊಡಲಾಗುವುದು. ಎರಡು ವರುಷಗಳ ಟ್ರೈನಿಂಗ್ ಅವಧಿಯಲ್ಲಿ ತಿಂಗಳೊಂದರ ರೂಪಾಯಿ ಇಪ್ಪತ್ತೈದರಂತೆ ಸ್ಟೈಪೆಂಡ್ ಕೊಡಲಾಗುವುದು. ಟ್ರೈನಿಂಗ್ ಬಗ್ಗೆ ಹನ್ನೆರಡು ಮಂದಿಯನ್ನು ಮಾತ್ರ ಆರಿಸಲಾಗುವದು. ಮೆಟ್ಟು ಹೊಲಿಯುವ ಜಾತಿಯ ಹರಿಜನರ ಅರ್ಜಿಗಳಿಗೆ ಪ್ರಥಮತಃ ಗಮನ ಕೊಡಲಾಗುವುದು. ಕ್ಲಾಸುಗಳು ಜುಲಾಯಿ ಒಂದನೇ ತಾರೀಕಿನಂದು ಆರಂಭವಾಗುವುವು ಜೂನ್ ಹದಿನೈದನೇ ತಾರೀಕಿನವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವದು. ಹೆಚ್ಚಿನ ಮಾಹಿತಿಯನ್ನು ಆ ಶಾಲೆಯ ಪ್ರಿನ್ಸಿಪಾಲರಿಂದ ಪಡೆಯಬಹುದು.

ಉಡುಪಿ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ—ಹೊಸ ಶೇರುಗಳನ್ನು ಪಡೆಯುವ ಅವಧಿಯು ತಾ. 30-6-46ರ ತನಕ ಇದ್ದರೂ, ಆವಾಗ ಕಾಯದೆ ಪಾಲುಗಾರರೆಲ್ಲರೂ ತಮ್ಮ ಪಕ್ಕದ ಪಾಲುಗಳನ್ನು ಆ ಮೊದಲೇ ದಯಮಾಡಿ ಪಡಕೊಳ್ಳಬೇಕೆಂದೂ, ಬೇಡವಾದವರು ಮುಂದಾಗಿ ತಿಳಿಸಿದರೆ ಅವನ್ನು ಬೇರೆಯವರಿಗೆ ಕೊಡಲು ಅನುಕೂಲವಾಗುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ. ಇಷ್ಟರಲ್ಲೇ ಸುಮಾರು ಒಂದು ಸಾವಿರ ಪಾಲುಗಳು ವಿಕ್ರಿತವಾಗಿರುವುದೆಂದು ತಿಳಿದುಬರುತ್ತದೆ.

ನಿಧನ-ಇಲ್ಲಿಯ ಕೀರ್ತಿವಂತ ಅಡ್ಕೆ ಸಾಹುಕಾರರಾಗಿದ್ದ ಶ್ರೀ. ಕಲ್ಸಂಕ ಮಂಜುನಾಥ ಪೈಗಳವರು ತಾ. 17ರಲ್ಲೂ ಇವರ ಸಹಧರ್ಮಿಣಿ ಶ್ರೀಮತಿ ಸರಸ್ವತಿ ಬಾಯಿಯವರು ತಾ. 21ರಲ್ಲೂ ವೃದ್ಧಾಪ್ಯದನಿಮಿತ್ತ ದಿವಂಗತರಾದರು. ಈರ್ವರ ಆತ್ಮಗಳಿಗೂ ಚಿರಶಾಂತಿ ಇರಲಿ. ಇವರ ಸಮೀಪ ಬಳಗದ ಶ್ರೀಗಳಾದ ಕಲ್ಸಂಕ ವೆಂಕಟ್ರಾಯ ಪೈ, ಯು. ಕೇಶವ ಕಾಮತ್, ಮುನಿಸಿಪಲ್ ಕೌನ್ಸಿಲರ್ ಮೊದಲಾದವರೊಡನೆ ಸಹಸಂತಾಪವನ್ನು ಸೂಚಿಸುವೆವು.

(೬ನೇ ಪುಟದಿಂದ)

ದೆಂಬುದು ಸ್ಪಷ್ಟವಿದೆ. ಅದು ಮುಂದಾಗಿ ಇಷ್ಟನ್ನೇ ಸೂಚಿಸುವಂತಿದೆ:-ರಾಜ್ಯಾಂಗ ರಚನಾ ಸಭೆಯ ಪ್ರಥಮಾಧಿವೇಶನದಲ್ಲಿ ಅದರ ಅಧ್ಯಕ್ಷರು, 'ಸಂಘದ ತತ್ವವನ್ನು ನೀವು ಅಂಗೀಕರಿಸುವಿರೋ, ಅಂಗೀಕರಿಸುವದಾದರೆ ನಿಮ್ಮ ಪ್ರಾಂತ್ಯಕ್ಕೆ ಕೊಡುವ ಪಾಲನ್ನೊಪ್ಪಿವಿರೋ?' ಎಂದು ಪ್ರಾಂತಿಕ ಪ್ರತಿನಿಧಿಗಳನ್ನು ಮೊದಲಾಗಿ ವಿಚಾರಿಸಿಕೊಳ್ಳುವರು. ಪ್ರತಿಯೊಂದು ಪ್ರಾಂತ್ಯಕ್ಕೂ ಈ ಸ್ಥಿರ ಸ್ವಾತಂತ್ರ್ಯವಿದೆ. ಈ ಸಂಬಂಧದಲ್ಲಿ ಬ್ರಿಟಿಷ್ ಹೇಳಿಕೆಯ ಎರಡು ಪಾರಾಗಳಲ್ಲಿರುವ ತಿಕ್ಕಾಟವನ್ನೂ ಬ್ರಿಟಿಷ್ ಸೂಚನೆಯ ಘನತೆಯನ್ನೇ ಕೆಡಿಸುವ ಕಡ್ಡಾಯದ ಅಂಶವನ್ನೂ ನಿವಾರಿಸಲು ಬೇರೆ ಹಾದಿಯೇ ಇಲ್ಲವೆಂದು ನನಗನ್ನಿಸುತ್ತದೆ. ನನ್ನೀ ಅರ್ಥವು ಸಿಂಧುವಾದಲ್ಲಿ, ಈ ಪ್ರಾಂತಿಕ ಸಂಗಡಗಳ ಸೂಚನೆಯಿಂದ ದಿಗಿಲುಗೊಳ್ಳುವರೆ ಕಾರಣವಿಲ್ಲನೆಂದು ನಾನು ಭಯ ಪೀಡಿತರನ್ನೆಲ್ಲಾ ಕೇಳಿಕೊಳ್ಳುತ್ತೇನೆ.

ಈ 'ಪ್ರೊಮಿಸರಿ ನೋಟು'

ಈ ದಾಖಲೆಯೆಂದರೆ ಅತ್ಯಲ್ಪ ಕಾಲದಲ್ಲಿ ಹೇಗೆ ಸ್ವಾತಂತ್ರ್ಯ ಹೊಂದಬಹುದೆಂಬುದನ್ನು ತೋರಿಸುವ ಒಂದು ವಿಜ್ಞಾಪನೆ, ಮತ್ತು ಸಲಹೆ ಮಾತ್ರವೆಂಬುದನ್ನು ಮರೆತು ಬಿಟ್ಟ ಅವಸರದ ವಾಚಕರನ್ನು ಸಮುಕ್ಕಿಗೀಡು ಮಾಡುವ ಇತರ ಹಲವು ವಿಷಯಗಳು ಬ್ರಿಟಿಷ್ ಹೇಳಿಕೆಯಲ್ಲಿವೆ. ಕಾರಣವು ಸುಸ್ಪಷ್ಟವಿದೆ. ಸದ್ಯದ ಗೊಂದಲದಿಂದಾವಿರ್ಭವಿಸಲಿರುವ ನವಜಗತ್ತಿನಲ್ಲಿ ಬಂಧಿತ ಭಾರತವು ಬ್ರಿಟಿಷ್ ಕಿರೀಟದ 'ಅತ್ಯುಜ್ವಲ ರತ್ನ'ವಾಗಿ ಮುಂದಕ್ಕಿರದು. ಬ್ರಿಟಿಷ್ ಕಿರೀಟದ ಆ ಭಾಗವಿನ್ನು ಮುಂದೆ ಕಗ್ಗತ್ತಲೆಯದಾಗುವುದು. ಎಷ್ಟೆಂದರೆ ಕಸದ ಬುಟ್ಟಿಗೆ ಸೆಯುವಷ್ಟು ಅಲ್ಲಿ ಕಪ್ಪು ಹರಡುವದು. ಬ್ರಿಟಿಷ್ ಮುಕುಟವು ಬ್ರಿಟನಿಗೂ ಜಗತ್ತಿಗೂ ಇನ್ನು ಮುಂದೆ ಸದುಪಯೋಗವಾಗಲೆಂದು ನನ್ನೊಂದಿಗೆ ವಾಚಕರೂ ಆಶಿಸಲಿ ಮತ್ತು ಪ್ರಾರ್ಥಿಸಲಿ. ಸದ್ಯದ ಅತ್ಯುಜ್ವಲರತ್ನವೆಂಬುದೊಂದು ಬಡಾಯಿ ಮಾತ್ರ. ಈ 'ಪ್ರೊಮಿಸರಿ ನೋಟ್'ನಂತೆ ಪೂರ್ಣ ಸಂದಾಯವಾದಾಗ ಬ್ರಿಟಿಷ್ ಕಿರೀಟಕ್ಕೊಂದು ಅನುಪಮ ರತ್ನ ಸೇರಲಿದೆ. ಸ್ವಕರ್ತವ್ಯ ನಿರ್ವಹಿಸಿದ ಶುದ್ಧ ಪ್ರಕಾಶವನ್ನೇ ಅದು ಬೀರಲಿದೆ.

ತಾರೀಕು 31—5—46ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ಕೆ. ಬಿ ಲಾಲರ ವಿರಚಿತ

ಸುರೇಂದ್ರ, ನೂರಜಹಾನ್. ಕನಯ್ಯಾಲಾಲ್, ವತ್ಸಲಾ ಕುಮ್ಟೆಕಾರ್, ಯಾಕೂಬ್, ಮಾಯಾಬನರ್ಜಿ, ಉಲ್ಲಾಸ್, ಮೊದಲಾದವರಿಂದ ನಟಿಸಲ್ಪಟ್ಟ

ಲಾಲ್ ಹವೇಲಿ

ನಂತರ: —

ಕಮಿಯಾ, ವತನ್ ಕೇ ಪ್ರಕಾಶ್, ಜೂಡಿಯಾ, ಸರದಾರ್.

Christian High School, UDIPI.

Wanted immediatly (a) one Kannada Vidwan—S S L.C. Holder preferred (b) a Writer—S.S.L.C knowledge of Typewriting and Book-keeping essential Apply to the correspondent stating terms.

A. S Karet, B A., L T,
Correspondent.

'ಬ್ರಿಟನಿನ ಸತ್ಸಾಹಸ'

'ಈ ಪ್ರೊಮಿಸರಿ ನೋಟಿನಂತೆ ಸರಿಯಾಗಿ ಸಲಾಯಿಸಲಿ'

ಬ್ರಿಟಿಷ್ ಯೋಜನೆಯ ಕುರಿತು ಗಾಂಧಿಜೀಯ ಅಭಿಪ್ರಾಯ.

'ಒಂದು ಪೃಥಕ್ಕರಣ' ಎಂಬ ಶಿರೋನಾಮೆಯುಳ್ಳ ಮೇ ತಾ. 26ರ 'ಹರಿಜನ' ಸಂಚಿಕೆಯಲ್ಲಿ ಗಾಂಧಿಜೀ ಈ ರೀತಿ ಬರೆದಿದ್ದಾರೆ.-

ಬ್ರಿಟನಿನ ಸತ್ಸಾಹಸ

''ಬ್ರಿಟಿಷ್ ಸರಕಾರದ ಪರವಾಗಿ ಬ್ರಿಟಿಷ್ ಸಮಿತಿ ಮತ್ತು ವೈಸರಾಯರು ಹೊರಡಿಸಿದ ರಾಜ್ಯ ಪತ್ರವನ್ನು ನಾಲ್ಕು ದಿನಗಳ ವರೆಗೆ ಶೋಧನಾತ್ಮಕವಾಗಿ ಪರೀಕ್ಷಿಸಿದ ನಂತರ, ನನ್ನ ನಿರ್ಧಾರವೇನೆಂದರೆ ಸದ್ಯಸ್ಥಿತಿಯಲ್ಲಿ ಬ್ರಿಟಿಷ್ ಸರಕಾರವು ತಯಾರಿಸಬಹುದಾದ ಉತ್ತಮ ದಾಖಲೆಯಿದು. ಅದನ್ನು ಕಾಣುವಷ್ಟು ಸೌಜನ್ಯವು ನಮ್ಮಲ್ಲಿದ್ದರೆ ಅದರಲ್ಲಿ ನಮ್ಮ ದೌರ್ಬಲ್ಯದ ಛಾಯೆ ಪಡಿಮೂಡಿದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಒಮ್ಮತವಾಗಲಿಲ್ಲ, ಆಗುವಂತಿಲ್ಲ. ನಮ್ಮೊಳಗಿನ ಭಿನ್ನಾಭಿಪ್ರಾಯಗಳು ಬ್ರಿಟಿಷ್ ನಿರ್ಮಾಣಗಳೆಂಬ ಅವಿವೇಕಪೂರ್ಣ ಆತ್ಮ ಸಂತೋಷವನ್ನು ನಾವೀ ಸಂದರ್ಭದಲ್ಲೂ ಅನುಭವಿಸಿದೆವಾದರೆ ನಾವು ಮಹಾ ತಪ್ಪಿತಸ್ಥರಾಗುವೆವು. ಅವುಗಳ ಸದುಪಯೋಗಮಾಡಿಕೊಳ್ಳಲು ಬ್ರಿಟಿಷ್ ಸಮಿತಿಯು ಇಂಗ್ಲಾಂಡಿನಿಂದ ಇಷ್ಟು ದೂರ ಬಂದುದಲ್ಲ. ಬ್ರಿಟಿಷ್ ರಾಜ್ಯ ಭಾರವನ್ನು ಸುಲಭವಾಗಿ ಹಾಗೂ ಕ್ಷಿಪ್ರದಲ್ಲಿ ಅಂತ್ಯಪಡಿಸುವ ವಿಧಾನ ಹುಡುಕಲು ಅವರು ಬಂದಿದ್ದರು. ತದ್ವಿರುದ್ಧ ರುಜುವಾತು ದೊರೆಯುವ ತನಕ ಅವರ ಹೇಳಿಕೆಯಲ್ಲಿ ವಿಶ್ವಾಸವಿಡುವಷ್ಟು ಧೈರ್ಯ ನಮಗಿರಬೇಕು; ವಂಚಿಸಲ್ಪಟ್ಟವನ ಧೀರತನ ವಂಚಕನ ಮೇಲ್ಪ್ರಕಾರ ಕಡಹುತ್ತದೆ. ಬ್ರಿಟನಿಗಾವುದು ಹಿತವೋ ಹಿಂದೀಯರಿಗೂ ಅದೇ ಉತ್ತಮ ಅಥವಾ ವಿಹಿತವೆಂದು ನನ್ನ ಅಭಿಪ್ರಾಯವಲ್ಲ. ಅವರಿಗೆ ಉತ್ಕೃಷ್ಟವಾದುದು ಬಹುಶಃ ನಮಗಪಾಯಕರವಿರಬಹುದು. ನನ್ನೀ ಅರ್ಥವು ಇನ್ನು ಮುಂದಿನವುಗಳಿಂದ ಸ್ಪಷ್ಟವಾಗುವದೆಂದು ನಂಬುತ್ತೇನೆ.

ವಿಜ್ಞಾಪನೆ ಮತ್ತು ಉಪದೇಶ

ಸಿಮ್ಲಾದಲ್ಲಿ ಎರಡು ಪಕ್ಷಗಳನ್ನು ಸಮ್ಮೇಲನದ ಮೇಜಿನ ಮುಂದೆ ಒಟ್ಟು ಕೂಡಿಸಲು ಬ್ರಿಟಿಷ್ ಸಮಿತಿಗೆ ಸಾಧ್ಯವಾದರೂ (ಅಷ್ಟಾಗಬೇಕಾದರೆ ಅವರೆಂತಹ ತಾಳ್ಮೆ ಮತ್ತು ಚಾತುರ್ಯ ಪ್ರದರ್ಶಿಸಬೇಕಾಯಿತೆಂಬುದನ್ನು ಅವರು ಮಾತ್ರ ಹೇಳಬಲ್ಲರು) ಆ ಎರಡು ಪಕ್ಷಗಳೊಂದು ಒಮ್ಮತಕ್ಕೆ ಬಾರದೆ ಹೋದುವು; ಆದರೆ ಅವರನ್ನು ಯಾವುದೂ ದಿಗಿಲುಗೊಳಿಸಲಿಲ್ಲ. ಅವರು ಅಲ್ಲಿಂದ ಭಾರತದ ಬಯಲಿಗಿಳಿದರು; ಬ್ರಿಟಿಷ್ ಹತೋಟಿ, ಯಾನೆ ವರ್ಚಸ್ಸು ಇರದ ಸ್ವತಂತ್ರ ಭಾರತದ ಜಾತಕ ನಿರ್ಮಿಸಲು ರಾಜ್ಯಾಂಗ ರಚನಾ ಸಭೆಯ ಘನ ದಾಖಲೆಯೊಂದನ್ನು ತಯಾರಿಸಿದರು. ಅದೊಂದು ವಿಜ್ಞಾಪನೆ, ಮತ್ತೊಂದು ಉಪದೇಶ ಕೂಡಾ. ಅದರಲ್ಲಿ ಒತ್ತಾಯವೇನೂ ಸೇರಿಲ್ಲ. ಹಾಗಾಗಿ ಪ್ರಾಂತಿಕ ಎಸೆಂಬ್ಲಿಗಳು ಪ್ರತಿನಿಧಿಗಳನ್ನು ಚುನಾಯಿಸಬಹುದು ಅಥವಾ ಚುನಾಯಿಸದಿರಬಹುದು. ಹಾಗೆ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸಬಹುದು----ವಹಿಸದಿರಲೂಬಹುದು. ಹಾಗೆ ಸೇರುವ ಎಸೆಂಬ್ಲಿಯಾದರೋ, ಬ್ರಿಟಿಷ್ ಹೇಳಿಕೆಗಿಂತ ಭಿನ್ನವಾದ ರೀತಿಯೊಂದನ್ನು ತಯಾರಿಸಿಕೊಳ್ಳಲೂಬಹುದು. ಯಾವನಾದರೊಬ್ಬನಿಗೆ ಅಥವಾ ಒಂದು ಪಕ್ಷಕ್ಕೆ ಏನಾದರೂ ಲಗಾವಾಗುವಂತಿದ್ದರೆ ಅದು ಪರಿಸ್ಥಿತಿ ಜನ್ಯ ಆವಶ್ಯಕತೆಗೆ ಒಳಗಾಗಿಯೇ. ಎರಡು ಪ್ರಮುಖ ಪಕ್ಷಗಳು ಪ್ರತ್ಯೇಕ ಮತದಾನಕ್ಕೆ ಒಳಗಾಗುವ ಆ ವಿಧಾನವು ಎಸೆಂಬ್ಲಿಯ ಅಸ್ತಿತ್ವಕ್ಕಾಗಿಯಲ್ಲದೆ ಜೀವಾವುದಕ್ಕೂ ಅಲ್ಲ.

ವಿಸರ್ಜನೆಯ ಮೊದಲ ಹೆಜ್ಜೆ

ಇದನ್ನು ಬರೆಯುವ ಕಾಲದಲ್ಲಿ ನಾನಾ ಹೇಳಿಕೆಯನ್ನು ನೋಡಿಕೊಂಡಿದ್ದೇನೆ; ಅದನ್ನು ಕೆಲವು ಕೆಲವಾಗಿ ಪುನಃ ಪುನಃ ಓದಿಕೊಂಡು, ಕಾನೂನಿನಂತೆ ಲಗಾವಾಗುವಂತಹದಾವುದೂ ಅದರಲ್ಲಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಅದರಲ್ಲಿರುವ ಅಂಗೀಕಾರಬದ್ಧ ಶಕ್ತಿಗಳೆಂದರೆ ಮರ್ಯಾದೆ ಮತ್ತು ಆವಶ್ಯಕತೆಮಾತ್ರ. ಬ್ರಿಟನಿಗೆ ಲಗಾವಾಗುವ ಒಡರ ಭಾಗವೊಂದೇ ಅಂಗೀಕಾರಬದ್ಧವಿದೆ ಆದ್ದರಿಂದಲೇ ಬ್ರಿಟಿಷ್ ಸರಕಾರ ಮತ್ತು ಪಾರ್ಲಿಮೆಂಟಿನ ಎರಡು ಸಭೆಗಳ ಸಂಪೂರ್ಣಾನುಮೋದನೆ ಪಡೆಯುವ ಮುಂಜಾಗ್ರತೆಯನ್ನು ಬ್ರಿಟಿಷ್ ಸಮಿತಿಯ ನಾಲ್ವರು ಸದಸ್ಯರು ವಹಿಸಿದರೆಂದು ನಾನು ನೆನಸುತ್ತೇನೆ. ಅಧಿಕಾರ ವಿಸರ್ಜನೆಯ ಪ್ರಥಮ ಹೆಜ್ಜೆಯಾಗಿರುವ ಈ ಹೇಳಿಕೆಗಾಗಿ ಹೃತ್ಪೂರ್ವಕ ಅಭಿನಂದನೆ ಪಡೆಯುವ ಹಕ್ಕು ಬ್ರಿಟಿಷ್ ಸಮಿತಿಗಿದೆ. ಈ ವಿಸರ್ಜನೆ ಪೂರ್ಣಗೊಳ್ಳಬೇಕಾದರೆ ಇತರ ಹೆಜ್ಜೆಗಳೂ ಅಗತ್ಯವಿರುವದರಿಂದಲೇ ನಾನಿದನ್ನು 'ಪ್ರೊಮಿಸರಿ ನೋಟು' ಎಂದು ಕರೆದಿದ್ದೇನೆ.

ಸ್ವೇಚ್ಛಾಧಿಕಾರ

ಈ ಹೇಳಿಕೆಯು ಹಿಂದುಸ್ಥಾನದ ಸ್ವೇಚ್ಛೆಯ ಉತ್ತರವನ್ನು ಪಡೆಯುವಂತಿದೆ ಯಾದರೂ, ಕಡ್ಡಾಯವಾದ ಕಾರ್ಯದಂತೆಯೇ ಈ ಸ್ವಯಂಪ್ರೇರಣಾ ಕಾರ್ಯವನ್ನೂ ಯೋಗ್ಯ ರೀತಿಯಿಂದ ನಿರ್ವಹಿಸುವಷ್ಟು ಸಂಘಟನೆಗೊಂಡ ಮತ್ತು ಜವಾಬ್ದಾರಿಯರಿತ ಪಕ್ಷಗಳು ಹಿಂದೀಯರದೆಂದು ಬ್ರಿಟಿಷ್ ಸಮಿತಿಯು ಸಹಜವಾಗಿ ಭಾವಿಸಿದೆ. ಆದ್ದರಿಂದಲೇ ಲೋರ್ಡ್ ಪೆಥಿಕ್ ಲಾರೆನ್ಸರು ಒಂದು ಪತ್ರಿಕಾ ಸಮ್ಮೇಲನದಲ್ಲಿ ಹೀಗೆಂದಿದ್ದರು:-''ಆ ಅಸ್ತಿವಾರವನ್ನು ಧರಿಸಿ ಅವರು ಒಟ್ಟಾಗುತ್ತಾರಾದರೆ ಅವರದನ್ನು ಒಪ್ಪಿಕೊಂಡರೆಂದಾಯಿತು. ಆದರೂ ಪ್ರತಿಯೊಂದು ಪಕ್ಷವು ಬಹುಮತದಿಂದ ಆ ಮೇಲೂ ಅದರದನ್ನು ಬದಲಾಯಿಸಬಲ್ಲರು.'' ಮುಖ್ಯ ಪಕ್ಷಗಳಿಂದದು ಮಾನ್ಯತೆಯು ಹೊಂದದಿದ್ದಲ್ಲಿ ಆ ಬ್ರಿಟಿಷ್ ಹೇಳಿಕೆಯು ಸುಜ್ಞಾನವಿದ್ದು ಬರುವ ಪ್ರತಿನಿಧಿಗಳು, ಅದನ್ನೇ ಅಸ್ತಿವಾರವಾಗಿಟ್ಟುಕೊಳ್ಳಲು ಬದ್ಧರೆಂಬ ಅವರ ಮಾತು ಸರಿ. ಎರಡು ಅಥವಾ ಅಧಿಕ ಪಕ್ಷಗಳು ಒಟ್ಟು ಕೂಡಿದಾಗ ಪರಸ್ಪರ ತಿಳುವಳಿಕೆಯಿಂದ ಒಂದು ವ್ಯವಸ್ಥೆಗೆ ಬರಬಹುದು. ಸ್ವತಯಾರಿ ಮಧ್ಯಸ್ಥಗಾರನೊಬ್ಬನು (ಪಕ್ಷಗಳಿಂದ ಸೂಚಿಸಲ್ಪಟ್ಟವನಲ್ಲವಾದರಿಂದ, ಯೋಜನೆಯ ಲೇಖಕರು ತಾವಾಗಿ ತಯಾರಾಗಿದ್ದರು), ಕೆಲವೊಂದು ಕನಿಷ್ಠಾಂಶಗಳುಳ್ಳ ಸೂಚನೆಯನ್ನು ತಾನು ಮುಂದಿಟ್ಟರೆ ಆಪಕ್ಷಗಳೊಂಗು ಒಮ್ಮತಕ್ಕೆ ಬರಬಹುದೆಂದೂ, ತನ್ನಾ ಸೂಚನೆಯ ತಿದ್ದುಪಡಿ ಅಥವಾ ಪೂರ್ತಿ ಬದಲಾವಣೆಯ ಸ್ವಾತಂತ್ರ್ಯಕ್ಕೆ ಕೊಟ್ಟರಾಯಿತೆಂದೂ ಕಲ್ಪಿಸಿಕೊಳ್ಳುತ್ತಾನೆ.

ಪಂಗಡಗಳೊಳಗಿನ ತುಂಡುಗಳು

ಇಷ್ಟರ ತನಕ ಎಲ್ಲವೂ ಚೊಕ್ಕವಿದೆ. ಆದರೆ ಪ್ರಾಂತಿಕ ತುಂಡುಗಳ ಗತಿಯೇನು? ಭಾರತದಲ್ಲಿ ಪಂಜಾಬೊಂದೇ ತಮ್ಮ ನೆಲೆಯಾಗಿರುವ ಸಿಖ್ಖರು, ತಮ್ಮ ಮನೋವೃತ್ತಿಗೆ ವಿರುದ್ಧವಾಗಿ, ಸಿಂಧ್, ಬಲೂಚಿಸ್ಥಾನ, ಮತ್ತು ಗಡಿನಾಡುಗಳೂ ಸೇರಿರುವ ಭಾಗದಲ್ಲಿರಲು ಒಪ್ಪಬೇಕೆ? ಅಥವಾ ಗಡಿನಾಡು ಪ್ರಾಂತ್ಯವು ತನ್ನಿಚ್ಛೆಗೆ ವ್ಯತಿರಿಕ್ತವಾಗಿ B ಪಂಗಡವೆಂದು ಕರೆಯಲ್ಪಟ್ಟ ಪಂಜಾಬಿನೊಂದಿಗೂ ಮುಸ್ಲೀಮೇತರ ಪ್ರಾಂತ್ಯವಾದ ಅಸ್ಸಾಮು C ಪಂಗಡದೊಂದಿಗೂ ಕೂಡಬೇಕೆ? ಬ್ರಿಟಿಷ್ ಹೇಳಿಕೆಯನ್ವಯದ ಸ್ವಯಂ ನಿರ್ಣಯಕ್ಕನುಗುಣವಾಗಿ ಪ್ರಾಂತ್ಯಗಳ ವ್ಯಕ್ತಿಗತ ಹಕ್ಕಿಗೆ ಕುಂದು ಬರಕೂಡದೆಂದೇ ನನ್ನ ಅಭಿಪ್ರಾಯ. ಪಂಗಡಗಳನ್ನು ಸೇರುವ ಮಟ್ಟಿಗೆ ಅವುಗಳ ಯಾವುದೇ ಸದಸ್ಯನಿಗೆ ಸ್ವಾತಂತ್ರ್ಯವಿದೆ. ಪಂಗಡದಿಂದ ಹೊರಗಿರುವ ಐಚ್ಛಿಕ ಸ್ವಾತಂತ್ರ್ಯವೆಂಬುದು ಒಂದು ಉಪರಕ್ಷಣೆ. ಅದು ಬ್ರಿಟಿಷ್ ಹೇಳಿಕೆಯ ಬೇರೆ ಪಾರದಲ್ಲಿರುವ ಭಿನ್ನ ಸೂಚನೆಯಿಂದ ವಜಾ ಹೊಂದಲಾರದು. ಈ ಸ್ವಾತಂತ್ರ್ಯವನ್ನು ದಾಖಲೆಯ 19ನೇ ಸೆಕ್ಷನಿನಲ್ಲಿರುವ, ಹೇಗೆ ಮಾಡತಕ್ಕದ್ದೆಂಬ ಸೂಚನೆಯು (ಆಜ್ಞೆಯಲ್ಲ) ಅಪಹರಿಸಲಾರ

(೭ನೇ ಪುಟ ನೋಡಿರಿ)



ಕುಟುಂಬದೊಳಗಿನ ಚಿಲ್ಲರೆ ಬೇನೆ

ಜವೇರಿಯನ್ ಜೀವನ ಮಿಕ್ಸ್ಚರ್

ಜವೇರಿಯನ್ ಮತ್ತು ಕಂ.

ಮುಂಬಯಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಈ ಬಿನ್ನದ ಬಾಟ್ಲಿಗಳು ಹೆಚ್ಚು ಕಡಿಮೆ ಆಹಾರಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ. ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಪಾರಾಚಾರ್ಯ, ರಥಬೀದಿ, ಉಡುಪಿ.

ಮಂಗಳೂರು.

ಪರೀಕ್ಷೆಯ ಫಲಿತಾಂಶ-ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನಿಂದ ಇಂಟರ್ ಮಿಡಿಯೆಟ್ ಪರೀಕ್ಷೆಗೆ ಕುಳಿತ ೧೬೯ ಮಂದಿ ವಿದ್ಯಾರ್ಥಿಗಳಲ್ಲಿ, ೧೩೦ ಮಂದಿ ಎಲ್ಲ ವಿಭಾಗಗಳಲ್ಲಿಯೂ ತೇರ್ಗಡೆ ಹೊಂದಿದ್ದಾರೆ.

ಕೊಳಕೆ ಬೆಳೆಯ-ಉಳಿಕೆಯನ್ನು ಅಕ್ಕಿಯಾಗಿರಲಿ ಅಥವಾ ಭತ್ತವಾಗಿರಲಿ ತಾ. ೩೦ ೬-೪೬ರ ಒಳಗೆ ಸ್ಟೋರಿಗೆ ಒಪ್ಪಿಸತಕ್ಕದ್ದು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ

ರೈಲ್ವೆ ಮುಷ್ಕರ-ಕಳೆದ ತಾ. ೧೯ರಂದು ಸ್ಥಳೀಯ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ. ಬಿ ವಿ ಕಕ್ಕಿಲ್ಲಾಯರು ಅಧ್ಯಕ್ಷತೆ ವಹಿಸಿದ್ದರು. ಪ್ರಾಂತೀಯ ರೈಲ್ವೆ ಯೂನಿಯನಿನ ಉಪಾಧ್ಯಕ್ಷರಾದ ಶ್ರೀ. ಕೆ ಕೃಷ್ಣಪಿಳ್ಳೆಯವರು ಮಾತನಾಡುತ್ತಾ, ಎಸ್ ಐ ರೈಲ್ವೆಯು ಕೆಲ ಮಂದಿ ಕೆಲಸಗಾರರನ್ನು ತೆಗೆದು ಹಾಕಿರುವುದರಿಂದ ತಾ ೨೦ರಂದು ಈ ರೈಲಿನ ಕೆಲಸಗಾರರು ಒಂದು ದಿನದ ಮುಷ್ಕರ ಹೂಡುವರು ಎಂದರು ಮರುದಿನ ಇಲ್ಲಿಯ ರೈಲ್ವೆ ಕೆಲಸಗಾರರು (ಕೂಲಿಗಳು, ಮತ್ತಿತರ ಕೆಳತರಗತಿಯ ಕೆಲಸಗಾರರು ಮಾತ್ರ) ಒಂದು ದಿನದ ಮುಷ್ಕರ ಹೂಡಿದ್ದರು ಆದರೆ ಹೊರಡುವ ರೈಲುಗಳೆಲ್ಲ ಸಕಾಲದಲ್ಲೇ ಹೊರಟಿದ್ದುವು ಬರುವ ರೈಲುಗಳು ಅವೇಳೆಯಲ್ಲಿ ಬಂದಿದ್ದುವು ತಾ. ೨೧ರಂದು ಮಾತ್ರ ಮೈಲು ಗಾಡಿಯು ೩ ಗಂಟೆ ತಡವಾಗಿ ಹೊರಟಿತು

ಅಕ್ಕಿ ಕೊಟ್ಟು ಗೋಧಿ ಪಡೆಕೊಳ್ಳುವ-ಅನುಕೂಲತೆಗಳ ಕುರಿತು ಜಿಲ್ಲಾ ಕಲೆಕ್ಟರರು ನಿರ್ದೇಶಿಸಿರುವ ನಿಯಮಗಳಿಗನುಸಾರವಾಗಿ ಎಲ್ಲಾ ಸ್ವೀಕಾರ ಡಿಪೋಗಳಲ್ಲಿ ಅಕ್ಕಿ ಗೋಧಿಗಳ ಬದಲಾವಣೆ ವಹಿವಾಟುಗಳನ್ನು ಈಗಲೇ ಆರಂಭಿಸಬೇಕಾಗಿ ಎಲ್ಲಾ ಡಿಪೋ ಏಜಂಟರುಗಳಿಗೆ ತಿಳಿಸಲಾಗಿದೆ. ಮಂಗಳೂರು ಪಟ್ಟಣದಲ್ಲಿ ಮಾತ್ರ ಪ್ರತ್ಯೇಕ ಏರ್ಪಾಡು ಮಾಡುವ ತನಕ ಮಂಗಳೂರು 'ಬಿ' ಡಿಪೋವಿನಲ್ಲೇ ಅಕ್ಕಿ ಕೊಟ್ಟು ಗೋಧಿ ಪಡೆಕೊಳ್ಳಬಹುದು ವರ್ಗದಾರರಿಗೆ ಮತ್ತು ಅಕ್ಕಿ ಪಾಸ್ಪಾಸು ಇರುವವರಿಗೆ ಅವರು ಕೊಡುವ ಅಕ್ಕಿಯಷ್ಟೇ ಗೋಧಿಯನ್ನು ಕೊಡಲಾಗುವದು ಪರಂತು ಒಂದು ಕಳಸೆಗಿಂತಲೂ ಕಡಿಮೆ ಪರಿಮಿತಿಯಲ್ಲಿ ಸ್ವೀಕರಿಸಲಾಗದು. ಎಲ್ಲಾ ತರದ ಅಕ್ಕಿ ಎಂದರೆ ರಾಶಿ ತೊಳ್ಳು ಬೆಳ್ತಿಗೆಯನ್ನು ಸ್ವೀಕರಿಸಲಾಗುವದು ಕಾಸರಗೋಡು ತಾಲೂಕಿನಲ್ಲಿ ಭತ್ತವನ್ನು ಸಹ ಸ್ವೀಕರಿಸಿ ಬದಲು ಗೋಧಿ ಕೊಡಲ್ಪಡುವುದು ಆದರೆ ಭತ್ತ ಕೊಡುವ ಸಂದರ್ಭದಲ್ಲಿ ಒಂದು ಮುಡಿಗಿಂತಲೂ ಕಡಮೆಯಾಗದಷ್ಟು ಭತ್ತವನ್ನು ಕೊಡಬೇಕಾಗುತ್ತದೆ ಮತ್ತು ಭತ್ತದ ಅಳತೆಯ ಅರ್ಧಾಂಶಕ್ಕಿಂತಲೂ ಹೆಚ್ಚಿಗೆ ಗೋಧಿ ಸಿಗಲಾರದು ಈ ರೀತಿ ವಹಿವಾಟಿಗೆ ರೆವಿನ್ಯು ಅಧಿಕಾರಿಗಳ ಹಾಗೂ ಉದ್ಯೋಗಸ್ಥರ ಯಾವುದೊಂದು ಅಗತ್ಯವಿರುವುದಿಲ್ಲ

ಬಿಲ್ಲವ ಸಮಾಜ ಸೇವಾ ಸಂಘ ಮೂಲ್ಕಿ-ಇದರ ಹನ್ನೆರಡನೆಯ ವಾರ್ಷಿಕ ಮಹಾ ಸಭೆಯು ತಾ. ೧೯ರಲ್ಲಿ ಶ್ರೀ. ಎಸ್. ಗೋಪಾಲಕೃಷ್ಣ, ಎಡ್ವೊಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು ಬಾಲಕಿಯರಿಂದ ಶ್ರೀದೇವತಾ ಪ್ರಾರ್ಥನೆಯಾಗಲು ಸಭಾ ಕಾರ್ಯಗಳು ಆರಂಭವಾದವು. ಸಂಘದ ಗೌ. ಕಾರ್ಯದರ್ಶಿಯವರಾದ ಶ್ರೀ ಎಂ ಕೆ. ಎಲ್ಲಪ್ಪನವರು ವರದಿಯನ್ನು ಓದಿ ಹೇಳಿದರು. ಅನಂತರ ನೆರೆದ ಸಭಿಕರಲ್ಲಿ ಶ್ರೀ. ಎಂ ಬಾಬು ಶ್ರೀ ಎಂ ಬಾಸ್ಕರ ಶ್ರೀ ಎಸ್ ಟಿ. ಸುವರ್ಣ ಶ್ರೀ ಕೆ ಸಿಟ್ಟಪ್ಪ ಇವರು ಭಾಷಣಗಳಸ್ಸಿತ್ತರು ಹೊಸ ಕಾರ್ಯಕಾರಿ ಮಂಡಳಿಯ ಚುನಾವಣೆಯಾಗಿ ಶ್ರೀ. ಎಂ ಕೊರಗಪ್ಪ ಮತ್ತು ಬಿಲ್ಲವರ ಯೂನಿಯನಿನ ಅಧ್ಯಕ್ಷರಾದ ಶ್ರೀ. ಎಚ್. ಕೊರಗಪ್ಪನವರ ಅಕಾಲ ನಿಧನಕ್ಕೆ ದುಃಖ ಸಂತಾಪವಾಗಿ ಅಧ್ಯಕ್ಷರು ಸಂಘದ ಪ್ರವರ್ಧನದ ಕುರಿತು ಭಾಷಣ ಮಾಡಿದರು

ಹೋಟೇಲು ಕೆಲಸಗಾರರ ಸಮಿತಿ-ಮಂಗಳೂರಿನ ಹೋಟೇಲು ಕೆಲಸಗಾರರ ಸಭೆಯೊಂದು ತಾ 26ನೇ ರಾತ್ರಿ ಕಾಂಗ್ರೆಸ್ ಕಛೇರಿಯಲ್ಲಿ "ಯುವ ಜನ ಕಾಂಗ್ರೆಸಿನ" ಆಶ್ರಯದಲ್ಲಿ ಜರಗಿತು. ಶ್ರೀ. ಬಾಲಕೃಷ್ಣ ಸೇನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಚ್. ವೆಂಕಟೇಶ ಪೈಯವರು ಸಭೆಯ ಉದ್ದೇಶವನ್ನು ವಿವರಿಸಿದರು ಸಭಿಕರಲ್ಲಿ ಕೆಲವರು ಹೊಟೇಲು ಕೆಲಸಗಾರರ ಸಂಘಟನೆಯ ಆವಶ್ಯಕತೆಯ ಕುರಿತು ಮಾತನಾಡಿದರು. ಆ ಮೇಲೆ ಡಾ। ಸಂಜೀವನಾಥರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ವೆಂಕಟೇಶ ಪೈ ಮತ್ತು ಅಮ್ಮಂಬಳ ವಾಲಪ್ಪ ಇವರು ಜತೆ ಕಾರ್ಯದರ್ಶಿಗಳಾಗಿಯೂ ಶ್ರೀ ಎಚ್ ಬಾಲಕೃಷ್ಣ ಸೇನವ ಇವರು ಕೋಶಾಧಿಕಾರಿಯಾಗಿಯೂ, ಕೆಲಸಗಾರರಲ್ಲಿ ಹನ್ನೊಂದು ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು

ಉಡುಪಿ

ಸಂಸ್ಕೃತ ಶಿಬಿರ-ಈ ಶಿಬಿರದಲ್ಲಿ ಇದೇ ತಾ 4ರಿಂದ 17ರ ತನಕ ವಿವಿಧ ಪಂಡಿತರುಗಳಿಂದ ಸಂಸ್ಕೃತದ ಮಹತ್ವ ಮತ್ತು ಪ್ರಚಾರದ ವಿಷಯವಾಗಿ ಭಾಷಣಗಳಾದುವು.

ಹವಾಮಾನ-ಸೆಖೆ ವಿಪರೀತವಾಗಿದೆ. ತಾಗಿ 24, 25, ಮತ್ತು 26ರಲ್ಲಿ ವಿಶೇಷ ಮಳೆ ಬಿದ್ದಿರುತ್ತದೆ, ನೀರಿಲ್ಲದೆ ಪೇಚಾಡುತ್ತಿದ್ದವರಿಗೆ ಸ್ವಲ್ಪ ಅನುಕೂಲವಾಗುವಂತಾಯಿತು ಈಗ ಸೆಖೆ ಮತ್ತಷ್ಟು ಹೆಚ್ಚಾಗಿದೆ.

ಬಸ್ ಪ್ರಯಾಣಿಕರ ಗೋಳು-ಇದೇ ತಾ 20ರಲ್ಲು ಮಂಗಳೂರಿನಿಂದ ಒಂಭತ್ತು ಗಂಟೆಯ ಕರಾವಳಿ ಲ್ಯಾನ್ ಬಸ್ಸಿನಲ್ಲಿ ಉಡುಪಿಗೆ ಬರುವಾಗ ಉದ್ಯಾವರವರೆಗೆ ಬಸ್ಸು ಏನೂ ತೊಂದರೆಯಿಲ್ಲದೆ ಕನೆಕ್ಷನ್ ಬಸ್ಸುಗಳು ಸಿಕ್ಕಿ 11-45ಕ್ಕೆ ಉದ್ಯಾವರಕ್ಕೆ ಬಂದಿತೆಂದೂ ಅನಂತರ 2½ ತಾಸಿನವರೆಗೆ ಕನೆಕ್ಷನ್ ಬಸ್ಸು ಬಾರದೆ ಉದ್ಯಾವರದೊಳೆಯ ಬಯಲಲ್ಲಿ ಪ್ರಯಾಣಿಕರೆಲ್ಲರೂ ಕಾಯಬೇಕಾಯಿತೆಂದೂ ವಿಚಾರಿಸಲಾಗಿ ಪ್ರ[illegible]ವು ಇದೇ ಹಾಗೆಂದೂ ತಿಳಿದು ಬರುತ್ತದಾಗಿ ಸಂಕಷ್ಟಕ್ಕೊಳಗಾದ ಪ್ರಯಾಣಿಕರೊಬ್ಬರು ಬರೆಯುತ್ತಾರೆ. ಬಸ್ ಕಂಪೆನಿಯವರು ಈ ಕಡೆಗೆ ಗಮನ ಕೊಡುವರೇ?

BANK WITH THE LARGEST CONNECTIONS ON THE WEST COAST

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd
ETD 1925

WANTED

Applications are invited from Candidates for the following posts on scales of pay noted below for the High School to be opened at Barkur

B.A L T. or B.E I. -Rs. 65/-5/2-100. 2 posts.
Secondary Grade Trained -Rs 30-2/2-50. 3 posts.
Canarese Pundit -Rs. 30-2/2-50-1 post.
Drawing Master -Rs. 25-2/2-45-1 post.
Physical Instructor (Y.M C.A. Trained) Rs. 30-2/2-50 1 post.
Clerk -S S.L C. passed with experience Rs. 30-2/2-50. 1 Post

Dearness allowance at Government rates will be given Posts are permanent Experienced Teachers will be given a higher initial salary according to qualifications and service. The candidates should be prepared to join service immediately The applicants should state in their applications age, qualification & previous experience if any The applications should be addressed to **THE PRESIDENT, THE BARKUR EDUCATIONAL SOCIETY, BARKUR (S KANARA)** and should reach not later than 5th June 1946 Applicants can have interview at their own cost.
BARKUR, 25-5 '46.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

PLEASE DON'T MISS

Your Favourite — in a New Cover

KERALA SOAP INSTITUTE, CALICUT

WANTED
For the
S. V. HIGH SCHOOL
Ganguli, S. Kanara.

1. A trained Graduate Assistant, L. T. or B T
2. A Kannada Vidwan
3. A Drawing Teacher, holding a Technical Teacher's Certificate of the Higher Grade in Drawing.
4. A Physical Training Instructor with a certificate of the Higher Grade from the Y. M. C. A. College of Physical Education, Madras.

To join duty immediately Apply stating Terms to.
The Manager,
S V. HIGH SCHOOL,
Ganguli.

ದಕ್ಷಿಣ ಕನ್ನಡ.

ಶಿರೂರು–ಶಿರೂರು ಏಸಿಸ ಶಾಲೆ ಮಕ್ಕಳ ಲಕ್ಷ್ಮೀಶರ ಸಂಘದ ಏಸಾವರಣೆಯು 18-5-46ರಲ್ಲಿ ಎಸ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೃಷ್ಣ ಲೀಲೆ ಎಂಬ ಯಕ್ಷಗಾನ ನಾಟಕವೂ ವಿವಿಧ ವಿನೋದಾವಳಿಗಳೂ ಜರಗಿದುವು. ಶಾಲಾ ಮೆನೇಜರ್ ಶ್ರೀ ಎಚ್. ಮಹಾಬಲ ಶೆಟ್ಟಿ ಶಾಲಾ ಕಟ್ಟೋಣದ ನಿಧಿಗೆ ರೂಪಾಯಿ 608-12-0 ಸಂಗ್ರಹವಾಗಿದೆ, ಇನ್ನು ಮುಂದೆಯೂ ಸಹಾಯಧನ ನೀಡಬೇಕಾಗಿ ಸಭಿಕರೊಡನೆ ಕೇಳಿಕೊಂಡು ಧನ್ಯವಾದದೊಡನೆ ಸಭೆಯು ಮುಕ್ತಾಯವಾಯಿತು.

ಹರಿಜನರಿಗೆ ಕಡ್ಡಾಯ ಶಿಕ್ಷಣ ಬೇಕು ತಾ. 16-5-46ರ ನವಯುಗ ಪತ್ರಿಕೆಯಲ್ಲಿ ಲೇಬರ್ ಶಾಲೆಗಳನ್ನು ಸಂಬಂಧಗಳಲ್ಲಿ ಪ್ರಥಮ ಕಡ್ಡಾಯ ಶಿಕ್ಷಣ ಜಾರಿಗೆ ತರಬೇಕೆಂದು ಕೋಟ ಲೇಬರ್ ಶಾಲಾ ಕಮಿಟಿ ಅಧ್ಯಕ್ಷ ಶ್ರೀ ಸೋಮನವರ ಅತ್ಯುತ್ತಮ ಸೂಚನೆಯನ್ನು ಹರಿಜನ ಹಿತದೃಷ್ಟಿಯಿಂದ ಪ್ರಶಂಸಿಸಿ ಹರಿಜನ ಮಕ್ಕಳ ಕಡ್ಡಾಯ ಶಿಕ್ಷಣಕ್ಕೆ ಲೇಬರ್ ಶಾಲೆಗಳು ಮನಸಿಟ್ಟುಗಳಲ್ಲಿ ಏರ್ಪಾಡಾಗಬೇಕಾಗಿ ಗ್ರಾಮ ಉದ್ಯೋಗಸ್ಥರನ್ನೂ, ಶಿಕ್ಷಣ ಸಪ್ಲೈ ಆಫೀಸರುಗಳನ್ನೂ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಯುವ್. ಎಲ್. ಎ. ಶ್ರೀ ಅಪ್ಪರವರನ್ನೂ ವಿನಂತಿಮಾಡಿಕೊಳ್ಳಲಾಗುತ್ತಿದೆ. ಎಂದು ಶ್ರೀ. ಪೂಜ, ನಾಗೂರು ಲೇಬರ್ ಸ್ಕೂಲ್ ಕಮಿಟಿ ಅಧ್ಯಕ್ಷರು ಬರೆಯುತ್ತಾರೆ.

ಹೆಬ್ರಿ—ಇಲ್ಲಿಯ ಬೋರ್ಡ್ ಹಾ. ಎ. ಶಾಲಾ ಹಳೆ ವಿದ್ಯಾರ್ಥಿ ಸಂಘದವರು ಶಾಲೆಯ ಸಹಾಯಾರ್ಥವಾಗಿ ತಾ. 30-5-46ನೇ ಗುರುವಾರ "ವಿಶ್ವಾಮಿತ್ರ ಬಾಯಿ" ಎಂಬ ನಾಟಕವನ್ನು ಆಡಲಿರುತ್ತಾರೆ.

ಬಾರಕೂರು—ಬಾರಕೂರು ವಿದ್ಯಾಭಿವರ್ಧಕ ಸಂಘದ ವತಿಯಿಂದ ಬಾರಕೂರಿನಲ್ಲಿ ಹೈಸ್ಕೂಲನ್ನು ಸ್ಥಾಪಿಸುವರೆ (The Barkur Educational Society, Barkur) ಇವರಿಗೆ ಮದ್ರಾಸು ವಿದ್ಯಾಖಾತೆಯ ಡೈರೆಕ್ಟರವರು ಅನುಮತಿ ಕೊಟ್ಟಿರುತ್ತಾರೆ. ಇದೇ ಜೂನ್ ತಾ. 6 ರಿಂದ I, II, III, IV ನೇ ಫಾರ್ಮುಗಳು ತೆರೆಯಲ್ಪಡುವವು. ಇದರಿಂದ ಬಾರಕೂರು ಮತ್ತು ಆಸುಪಾಸು ಗ್ರಾಮಗಳಿಗೆ ಈ ವರೆಗೆ ಪ್ರೌಢ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದ ಕೊರತೆಯೊಂದು ನಿವಾರಣೆಯಾದಂತಾಯಿತು. ಬಾರಕೂರಿಗೆ ಹೈಸ್ಕೂಲಿನ ಅಗತ್ಯವನ್ನು ಮನಗಂಡು ಅನುಮತಿಕೊಟ್ಟ ವಿದ್ಯಾಖಾತೆಯವರಿಗೆ ಊರವರು ಋಣಿಯಾಗಿರುತ್ತಾರೆ. ಈ ಸಂದರ್ಭವನ್ನು ಎಲ್ಲರೂ ಉಪಯೋಗಿಸಿಕೊಂಡು ಪ್ರೌಢ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಬೇಕಾಗಿ ಬಾರಕೂರು ವಿದ್ಯಾಭಿವರ್ಧಕ ಸಂಘದವರ ವಿನಂತಿ.

ಕೆಕ್ಕಟ್ಟೆ ಬಡ ವಿದ್ಯಾರ್ಥಿ ಸಂಘ–ಇಲ್ಲಿಯ ಬಿ. ಬೋರ್ಡಿನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಲಿಯುವ ಅನಾಥ ಮಕ್ಕಳಿಗೆ ಸ್ಲೇಟು, ಪುಸ್ತಕ, ವಗೈರೆಗಳು ಬೇಕಾದರೆ ತಾ. 1-7-46ರ ಒಳಗೆ ಸಂಘಕ್ಕೆ ಅರ್ಜಿ ಸಲ್ಲಿಸಿಕೊಳ್ಳತಕ್ಕದ್ದು. ಎಂದು ಕಾರ್ಯದರ್ಶಿಗಳು ಬರೆಯುತ್ತಾರೆ.

ಪಾದೂರು— ಪಾದೂರು ಬಿ. ಬಿ. ಯುನಿಯನ್ ಶಾಲೆಯ ಹೆತ್ತವರ ಸಂಘವು ಸ್ಥಾಪನೆಯು ಶ್ರೀ ಕೆ. ವಾಸುದೇವ ಉಪಾಧ್ಯಾಯ ಪಟೇಲ್ ಇವರ ಅಧ್ಯಕ್ಷತೆಯಲ್ಲಿ ತಾ. 21-5-46ರಲ್ಲಿ ಆಯಿತು. ಮಕ್ಕಳ ಚಟುವಟಿಕೆಗಳೂ, ಸಭಿಕರ ಭಾಷಣಗಳೂ ಮುಗಿದ ಬಳಿಕ ಅಧ್ಯಕ್ಷರು ಶಾಲೆಯ ಏಳಿಗೆ, ಗ್ರಾಮ ವಾಚನಾಲಯ ಇವುಗಳ ವಿಷಯ ಕನ್ನಡ ಸುರಸ ಭಾಷಣವನ್ನಿತ್ತರು.

ವಿದ್ಯಾದಾಯಿನಿ ಸಭೆ, ಬೊಂಬಾಯಿ–ಈ ಕೆಳಗಿನ ಸದಸ್ಯರು ಸನ್ 1945-46ನೇ ಕಾರ್ಯಕಾರೀ ಸಮಿತಿಯ ಪದಾಧಿಕಾರಿಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಶ್ರೀಯುತರುಗಳಾದ ಯು. ಬಿ. ತೇಜಪ್ಪ, ಅಧ್ಯಕ್ಷ. ಕೆ. ಕೆ. ಕೋಟ್ಯಾನ್, ಉಪಾಧ್ಯಕ್ಷ. ಯು. ಗಿರಿಯಪ್ಪ ಕೋಟ್ಯಾನ್, ಮಾನಾರ್ಥ ಕಾರ್ಯದರ್ಶಿ, ಎಚ್. ಮಂಜುನಾಥ ಪಾಲನ್, ಸಹಾಯಕ ಕಾರ್ಯದರ್ಶಿ. ಪಿ. ವೇಣುಗೋಪಾಲ್ ಸುವರ್ಣ, ಮಾನಾರ್ಥ ಕೋಶಾಧಿಕಾರಿ. ಎಮ್. ಕೆ. ವೀರಯ್ಯ, ಮತ್ತು ಎಸ್. ಎಮ್. ಸನಿಲ್, ಜೊತೆ ಲೈಬ್ರೇರಿಯನ್ಸ್.

ರಜಕ ಸಂಘ ಬೊಂಬಾಯಿ—ಈ ಸಂಘವು ಸ್ವಸಮಾಜದ ಬಂಧುಗಳಲ್ಲೊಂದು ವಿನಂತಿ ಮಾಡುತ್ತಾ, ವಿದ್ಯೆಯಲ್ಲಿ ಹಿಂದುಳಿದಿರುವ ನಮ್ಮ ಸಮಾಜವು ಸಂಘಟಿತವಾಗಿ ಬಲಗೊಂಡು ಮುಂದೆಬರಬೇಕು; ಕಳೆದ ವರ್ಷ ಸ್ವಸಮಾಜದಲ್ಲಿ ಮುಂದಿ ಬಡ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡಿದೆ. ಈ ವರ್ಷವೂ ಹೀಗೆಯೇ ಧನಸಹಾಯ ಮಾಡಲು ಅನುಕೂಲವಾಗುವಂತೆ, ನಿಧಿ ಸಂಗ್ರಹಿಸಲು ಸ್ವಸಮಾಜದ ಬಂಧುಗಳು ನೆರವಾಗಬೇಕು ಎಂದು ಪ್ರಕಟಿಸಿದೆ.

ದಿ. ವಿದ್ಯಾದಾಯಿನಿ ಸಭೆ, ಬೊಂಬಾಯಿ–ಈ ಸಭೆಯಿಂದ ಬಿಲ್ಲವ ಸಮಾಜದ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ಕೊಡಲಾಗುವುದು. ಅರ್ಜಿ ಪತ್ರಗಳು ಇದೇ ಬರುವ ಜೂನ್ ತಿಂಗಳ 20ನೇ ತಾರೀಕಿನ ಒಳಗೆ ಮುಟ್ಟತಕ್ಕದ್ದು. 'ಕಾರ್ಯದರ್ಶಿ', ವಿದ್ಯಾದಾಯಿನಿ ಸಭಾ, 31, ರಘುನಾಥ ದಾದಜಿ ರಸ್ತೆ, I ಫ್ಲೋರ್, ಫೋರ್ಟ್, ಬೊಂಬಾಯಿ.

ಮಂಗಳೂರು.

ಗಾಯನ ಕಚೇರಿ—ಇದೇ ತಾ. 22ನೇ ಬುಧವಾರ ಸಂಜೆ ಆರು ತಾಸಿಗೆ ಶ್ರೀ ಎಚ್. ಸುಂದರರಾಮರಾಯರಲ್ಲಿ ರಾವ್ ಬಹದ್ದೂರ್ ಶ್ರೀ ಎನ್. ಎಮ್. ಅಡ್ಯಂತಾಯರವರ ಸಂಗೀತ ಕಚೇರಿಯು ನಡೆಯಿತು. ಸಂಗೀತ ಪ್ರೇಮಿಗಳನೇಕರು ಆಹ್ವಾನಿತರಾಗಿದ್ದರು. ಪ್ರೊ. ಎಚ್. ತಾರಾನಾಥರವರ ತಬ್ಲಾವಾದನವೂ ಶ್ರೀ ಎಚ್. ಸುಂದರ ರಾಯರ ಹಾರ್ಮೋನಿಯಮೂ ಪ್ಲೇರಿ ಗಾಯನವು ಅತ್ಯಂತ ಮನೋಹರವಾಯಿತು.

ಹಿಂದೂಸ್ಥಾನಿ ಸಂಗೀತ ಕಲೆಯಲ್ಲಿ ಪರಿಶ್ರಮವುಳ್ಳವರೆಂದು ಶತಶ ಕಲಾ ಸೇವೆಗಾಗಿ ದುಡಿದ ನಿಗರ್ವಿ ವಿದ್ವಾಂಸರಾದ ಶ್ರೀ ಅಡ್ಯಂತಾಯರು ಮಾರುಬೇಹಾಗ್, ಸೌಗಂಧ್, ದುರ್ಗಾ ಮತ್ತು ಭೈರವಿ ಈ ನಾಲ್ಕು ರಾಗಗಳನ್ನು ಸುಶ್ರಾವ್ಯವಾಗಿ, ವಿದ್ವತ್ ಪೂರ್ಣವಾಗಿ ಹಾಡಿ ತೋರಿಸಿ ಸಭಿಕ ವರ್ಗವನ್ನು ಆನಂದಗೊಳಿಸಿದರು. ಪ್ರೊ। ತಾರಾನಾಥರ ತಬಲಾವಾದನವು ಅತಿ ಆಹ್ಲಾದಕರವಿತ್ತು.

ಪ್ರಧಾನ ಮಂತ್ರಿಗಳೊಡನೆ ಬಿನ್ನಹ–ಕೆನರಾ ವಾಣಿಜ್ಯ ಸಂಘದವರು, ಈ ಜಿಲ್ಲೆಯ ಅಕ್ಕಿ, ವಸ್ತ್ರಗಳ ಸಾರೈಕೆ ಮತ್ತು ವಿತರಣೆಯಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸಿ, ಸುಧಾರಿಸುವ ಸಲಹೆಗಳನ್ನು ಸೂಚಿಸಿ ಒಂದು ಬಿನ್ನಹವನ್ನು ಮದ್ರಾಸು ಪ್ರಧಾನರಿಗೆ ಕಳಿಸಿರುವರು. ಈ ಜಿಲ್ಲೆಯನ್ನು ಆಹಾರ ಕ್ಷಾಮದ ದವಡೆಯಿಂದ ತಪ್ಪಿಸಬೇಕೆಂದೂ ಇಲ್ಲಿನ ಅಕ್ಕಿಯನ್ನು ಹೊರಗಿನ ಜಿಲ್ಲೆಗಳಿಗೆ ಕಳಿಸಬಾರದಾಗಿಯೂ ವಸ್ತ್ರದ ವಿತರಣೆಯು ಜಿಲ್ಲೆಯ ವ್ಯಾಪಾರದಲ್ಲಿ ಮಾಹಿತಿ ಇಲ್ಲದವರ ಕೈಗೆ ಸಿಕ್ಕಿ ದೋಷಯುಕ್ತವಾಗಿದೆಯೆಂದೂ ಇದನ್ನು ಸಕಾಲದಲ್ಲಿ ಸರಿಪಡಿಸದಿದ್ದರೆ ಜಿಲ್ಲೆಯ ನಾಗರಿಕರಿಗೆ ತೊಂದರೆಯಾಗುವುದೆಂದೂ ಆ ಬಿನ್ನಹದಲ್ಲಿ ತಿಳಿಸಲಾಗಿದೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರಿ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುಲಭ ಮಾಡಿದಾಗಲೇ ಕೆಮ್ಮೂ ಶೀತವೂ ಸಿಲ್ಲದವು; ಹೊಟ್ಟೆ ಹಸಿವಾಗುವದು; ಸಹಜಶಕ್ತಿ ಯಿಯು ವೃದ್ಧಿಸುವದು; ಫುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮುರೋಗಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೆಮ್ಮು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ರೋಗಕ್ಕೆ ಪುರೋಹಿತ ಶ್ವಾಸಹಾರಿ ಸ್ಪೆಶಲ್ (ಸಿಗರೇಟ್ ಸೆಪ್ಸಲ್) ತೆಗೆದುಕೊಳ್ಳಬೇಕು. ಅಜೀರ್ಣ ಮುಕ್ತು ಅವರ ಶಕ್ತಿಹಿಂದ ಏಳುವ ದಮ್ಮಿನ ಬರು ಶ್ವಾಸಹಾರಿ ಕಂಪೌಂಡ (ಕಂಪ್ಯು ಸ್ಟ್ರಾಂಗ್) ತೆಗೆದುಕೊಳ್ಳಬೇಕು.

[illegible]

ಪುರೋಹಿತ ಫಾರ್ಮಸಿ, ಕೊಲ್ಹಾಪುರ

[illegible]

ವನಮಾಲೀ ಭಿಕಾ ಮತ್ತು ಕಂಪನಿ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.



ಕ. ಆ. ವಿ. ಪಿ. ಕಣ್ಣಿನ ಹಾಸ್ಪಿಟಲ್

ಖಾಸಬಾಗ, ಬೆಳಗಾವ

ಇಲ್ಲಿಯ ತಜ್ಞ ಸರ್ಜನರಾದ **ಡಾ. ಎನ್. ಪಿ. ಮೋದಿಯವರು** ಉತ್ತರ ಹಿಂದುಸ್ಥಾನ, ಪಂಜಾಬ್, ಮತ್ತು ರಾಜಪುತಾನಾದಲ್ಲಿ ಕಣ್ಣಿನ ಎಷ್ಟೋ ಆಪರೇಶನಗಳನ್ನು ಮಾಡಿ ವಿಶೇಷ ಜ್ಞಾನವನ್ನು ಸಂಪಾದಿಸಿ ತಿರುಗಿ ಬೆಳಗಾವಿಗೆ ಒಂದು ತಮ್ಮ ಕೆಲಸದ ಮೇಲೆ ಹಾಜರಾಗಿದ್ದಾರೆ ಆದ್ದರಿಂದ ಎಲ್ಲ ಕಣ್ಣಿನ ರೋಗಿಗಳು ಅವರ ಜ್ಞಾನದ ಲಾಭವನ್ನು ಹೊಂದಬಹುದು.

ಸೆಕ್ರೆಟರಿ,
ಕ. ಆ ವಿ. ಪಿ. ಖಾಸಬಾಗ,
ಬೆಳಗಾವ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಜೇನಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೫ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:-ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ

Ayurveda Oushadalaya GADAG.

ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಸ್ಥಾನದಿಂದ ಪ್ರಕಟನೆ

ಇದೇ ಬರುವ 1946ನೇ ಇಸವಿಯ ಜೂನು ತಾರೀಕು ೨ರಲ್ಲು ಶ್ರೀ ಮೂಕಾಂಬಿಕಾ ದೇವಳ ಸನ್ನಿಧಿಯಲ್ಲಿ ಅಷ್ಟಬಂಧ ಕಲಶ ಮಹೋತ್ಸವವನ್ನು ನೆರವೇರಿಸುವದೆಂತ ಶ್ರೀ ದೇವಳ ಮೊಕ್ತೇಸರರು ನಿಶ್ಚಯಿಸಿದ ಪ್ರಯುಕ್ತ ಸದ್ರಿ ಕೆಲ್ಸಕ್ಕೆ ಹೇರಳ ಹಣ ಬೇಕಾದ್ದರಿಂದ ಮೊಕ್ತೇಸರರ ಪರವಾಗಿ ಎಕ್ಸಿಕ್ಯುಟಿವ್ ಆಫೀಸರನಾದ ನಾನು ಈ ಮೂಲಕ ಸರ್ವ ಭಕ್ತಾದಿಗಳಿಗೂ ತಮ್ಮ ಯಥಾನುಶಕ್ತಿ ಹಣ ಸಹಾಯಮಾಡಬೇಕಾಗಿ ಕೋರುತ್ತೇನೆ. ಹಣವನ್ನು ಕಳುಹಿಸುವವರು ದೇವಳ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ. ಎತ್ತರೆ ಮಂಜಯ್ಯ ಶೆಟ್ರು, ಏಜ್ಯುಕೇಟರ್, ಕುಂದಾಪುರ, ಕಲಶ ಫಂಡಿನ ಕೋಶಾಧಿಕಾರಿಯವರ ಇವರಿಗೆ ಹಣವನ್ನು ಕಳುಹಿಸಬಹುದು. ಅಥವಾ ಶ್ರೀ ದೇವಳ ಎಕ್ಸಿಕ್ಯುಟಿವ್ ಆಫೀಸರ್ ಸಿ. ಎಚ್. ಶೆಟ್ಟಿ ಇವರಿಗೆ ಕಳುಹಿಸಬಹುದೆಂಬ ಸಂಗ್ತಿ ಸರ್ವ ಭಕ್ತಾದಿಗಳಿಗೂ ಈ ಮೂಲಕ ತಿಳಿಸಿಯದೆ.

CH. SHETTY, E. O.

ಸ್ವಾಸ್ಥ್ಯ ರಕ್ಷಣೆಯ ಉಪಾಯ

ಹಿಂದೂ ಶಾಸ್ತ್ರದಲ್ಲಿ ಹೇಳಿರುವ ನಮ್ಮ ಪ್ರತಿಯೊಂದು ರೀತಿ, ನೀತಿ ಪ್ರತಿಯೊಂದು ಪದ್ಧತಿ,ಸ್ಮೃತಿಯೊಂದು ವ್ಯವಸ್ಥೆಯು ಸ್ವಾಸ್ಥ್ಯದ ತತ್ವಗಳಿಂದ ಪೂರ್ಣವಾಗಿದೆ. ನಮ್ಮ ಧರ್ಮ ನೀತಿಯ ಪ್ರತಿಯೊಂದು ಅಂಶವು ವಿಜ್ಞಾನದಿಂದ ಕೂಡಿದ್ದು,ಶಾರೀರಿಕ ಹಾಗೂ ಮಾನಸಿಕ ಉನ್ನತಿಗೆ ಅತ್ಯುಪಯೋಗವಾಗಿದೆ. ಮಾತ್ರವಲ್ಲ. ಮಾನವ ಜೀವನದ ರಕ್ಷಣೆಗೆ ಒಂದು ಅಭೇದ್ಯ ಅಸ್ತ್ರವಾಗಿದೆ! ಇದರಿಂದ ಸ್ವಾಸ್ಥ್ಯಕ್ಕೆ ಒಳ್ಳೆಯ ರಕ್ಷಣೆಯುಂಟಾಗುತ್ತದೆ. ಶಾಸ್ತ್ರೋಕ್ತವಾದ ಉಪದೇಶಗಳನ್ನು ಪಾಲನೆ ಮಾಡುವುದರಿಂದ ನಮ್ಮ ರೋಗಗಳು ಮತ್ತು ಅಕಾಲ ಮೃತ್ಯುವಿನ ಸಂಖ್ಯೆಯು ಕಡಿಮೆಯಾಗಿ, ನಮ್ಮ ಆಯುಷ್ಯವು ವೃದ್ಧಿಯಾಗುತ್ತದೆ.

ಸ್ವಾಸ್ಥ್ಯ ರಕ್ಷಣೆಗೆ ಪ್ರತಿ ನಿತ್ಯ ಬ್ರಾಹ್ಮೀ ಮುಹೂರ್ತದಲ್ಲಿ * ಶಯ್ಯೆಯಿಂದ ಏಳಬೇಕು. ಪ್ರಾತಃಕಾಲದ ಸುಗಂಧಿತವಾದ ವಾಯುವನ್ನು ಸೇವಿಸಬೇಕು. ಕಟುಕಷಾಯ ಮರಗಳ ಕಡ್ಡಿಯಿಂದ ಹಲ್ಲು ನಾಲಿಗೆಗಳನ್ನು ಉಜ್ಜಿ ಸ್ವಚ್ಛ ಮಾಡಬೇಕು. ಸಂಧ್ಯಾವಂದನೆ ಮತ್ತು ಪ್ರಾಣಾಯಾಮದ ಮೂಲಕ ಮನಸ್ಸಿನ ಮಲಿನತೆಯನ್ನೂ, ಯಕೃತ್, ಪ್ಲೀಹಾ, ಅಮಾಶಯ, ಶ್ವಾಸಕೋಶ ಮೊದಲಾದ ಯಂತ್ರಗಳಲ್ಲಿ ಸಂಚಿತವಾದ ಮಲವನ್ನೂ ದೂರ ಮಾಡಬೇಕು.ಪೂರ್ವ ದಿಕ್ಕಿಗೆ ಎದುರಾಗಿ ಸುಂದರವಾದ ಆಸನದಲ್ಲಿ ಕುಳಿತು, ಮನಸ್ಸಿಗೆ ಶಾಂತಿಯನ್ನುಂಟುಮಾಡುವಂಥ ಸಾತ್ವಿಕ ಆಹಾರವನ್ನು ಮೌನದಿಂದ ಮೆಲ್ಲನೆ ಭುಂಜಿಸಬೇಕು. ಉದರದ ಎರಡು ಭಾಗಗಳನ್ನು ಖಾದ್ಯ ಪದಾರ್ಥಗಳಿಂದಲೂ, ಇನ್ನೊಂದು ಭಾಗವನ್ನು ನೀರಿನಿಂದಲೂ ಪೂರ್ಣ ಮಾಡಿ, ಉಳಿದ ಒಂದು ಭಾಗವನ್ನು ವಾಯು ಸಂಚಾರಕ್ಕೂ, ಪರಿಪಾಕ ಕ್ರಿಯೆಯ ಅನುಕೂಲಕ್ಕಾಗಿಯೂ ಖಾಲಿ ಬಿಟ್ಟಿರಬೇಕು. ಎರಡು ಹಗಲಲ್ಲಿ ಎರಡಾವರ್ತಿ ಮಾತ್ರ ಭೋಜನ ಮಾಡಬೇಕು. ಪರ್ವತಿಥಿಗಳಲ್ಲಿ ಯಥಾ ಶಕ್ತಿ ಖಾದ್ಯ ಪದಾರ್ಥಗಳನ್ನು ತ್ಯಾಗ ಮಾಡಬೇಕು. ಮುಖ ಶುದ್ಧಿಗಾಗಿ ಮಾತ್ರ ತಾಂಬೂಲ ಸೇವನೆ ಮಾಡಬೇಕು. ಹಗಲಲ್ಲಿ ಮಲಗಬಾರದು. ಮೈಥುನವಾಡಬಾರದು. ವ್ಯರ್ಥವಾಗಿ ವಾದ ವಿವಾದ, ಪರ ನಿಂದೆ, ಜುಗಾರಿ, ಚದುರಂಗ, ಇಸ್ಪೀಟು ಮೊದಲಾದ ವ್ಯಸನಗಳಿಂದ ವಿಮುಖರಾಗಬೇಕು. ತಲೆ, ಕಿವಿ, ಕಣ್ಣು, ಮೂಗು, ಪಾದ ಮೊದಲಾದ ಅಂಗಗಳಲ್ಲಿ ಎಣ್ಣೆ ತಿಕ್ಕಿ ಸ್ವಚ್ಛವಾದ ನೀರಿನಿಂದ ಸ್ನಾನ ಮಾಡತಕ್ಕದ್ದು. ಚರ್ಮ ರೋಗಗಳಿಂದ ಮುಕ್ತನಾಗುವುದಕ್ಕೆ ಶರೀರದಲ್ಲಿ ಮೃತ್ತಿಕಾ (ಮಣ್ಣು) ಲೇಪನ ಮಾಡುವುದು, ಶಿರೋರೋಗದ ಶಮನಕ್ಕಾಗಿ ಮಸ್ತಕದಲ್ಲಿ ಚಂದನಾದಿಗಳ ಲೇಪನ ಮಾಡುವುದು, ಗೃಹ ದೇವತೆಯ ಪೂಜೆಗೆ ಪುಷ್ಪ ಸಂಚಯ ಮಾಡುವುದು, ಶರೀರವು ವೃಥಾ ವಾಗುವುದಕ್ಕೆ, ಜಠರಾಗ್ನಿಯು ವೃದ್ಧಿಯಾಗುವುದಕ್ಕೆ ನಿಯಮಿತ ರೂಪದಿಂದ ವ್ಯಾಯಾಮ ಮಾಡುವುದು, ಇವೇ ಮೊದಲಾದ ದಿನಚರ್ಯೆಯನ್ನು ಪೂರ್ವ ಕಾಲದಲ್ಲಿ ಪ್ರತಿ ಮನೆಗಳಲ್ಲಿಯೂ ಮಾಡುತ್ತಿದ್ದರು. ಈಗಲೂ ಕೆಲವು ಕಡೆ ಈ ನಿಯಮಗಳನ್ನು ಪಾಲನೆ ಮಾಡುತ್ತಾರೆ. ಈ ನಿಯಮಗಳು ನಿಜವಾಗಿಯೂ ಬಹಳ ಹಿತಕರವಾಗಿವೆ. ಹಾಗೂ ವಿಜ್ಞಾನ ಯುಕ್ತವಾಗಿವೆ. ಆದರೆ ಹಿಂದೂಗಳಲ್ಲಿ ಶೇಕಡಾ 85 ಮಂದಿ ಈ ಸದಾಚಾರ-ವ್ಯವಹಾರವನ್ನು ಮರೆತು, ಸ್ವೇಚ್ಛಾಚಾರಿಗಳಾಗಿ ನಿಸ್ಸಾರವಾದ ವಿದೇಶಿ ಸಭ್ಯತೆಯ ಸೋಗಿನಲ್ಲಿ ತಮ್ಮ ಜೀವನವನ್ನು ಕೆಡಿಸಿಕೊಳ್ಳುವುದು ಅತ್ಯಂತ ಖೇದದ ಸಂಗತಿಯಾಗಿದೆ. ಈ ಕಾಲದಲ್ಲಿ ಭಾರತವಾಸಿಗಳಾದ ಪ್ರತಿಯೊಂದು ಸಂಪ್ರದಾಯದ, ಪ್ರತಿಯೊಂದು ಶ್ರೇಣಿಯ ಪ್ರತಿಯೊಬ್ಬ ವ್ಯಕ್ತಿಯು ಸ್ವಾಸ್ಥ್ಯ ರಕ್ಷಣೆ ಹಾಗೂ ಸ್ವಾಸ್ಥ್ಯಚರ್ಯೆಯು ತನ್ನ ಮುಖ್ಯ ಧರ್ಮವೆಂದು ತಿಳಿದು ಪಾಲನೆ ಮಾಡಬೇಕು. ಈ ಸ್ವಾಸ್ಥ್ಯ ಧರ್ಮದ ಪುರೋಹಿತರೆಂದರೆ ಆಯುರ್ವೇದಿಯ ಚಿಕಿತ್ಸಕರಾಗಿರುವರು. ಯಾವುದೊಂದು ಭಯಂಕರ ರೋಗದ ಚಿಕಿತ್ಸೆಯಲ್ಲಿ ಸಫಲತೆಯುಂಟಾದರೆ ಚಿಕಿತ್ಸಕನಿಗೆ ಉಂಟಾಗುವ ಸಂತೋಷವು ಅಪ್ರತ್ಯಕ್ಷವಲ್ಲ. ಆದರೆ ಚಿಕಿತ್ಸೆಯಲ್ಲಿ ವ್ಯರ್ಥ ಆಡಂಬರ ರಚನೆ, ವ್ಯರ್ಥ ವ್ಯಯ, ಚಿಕಿತ್ಸಕರಲ್ಲಿ ಪರಸ್ಪರ ದ್ವೇಷಾಸೂಯೆ, ರೋಗಿಗಳ ಅವಿಶ್ವಾಸ ಅಸ್ಥಿರತೆ, ಕೃಪಣತೆ ಮತ್ತು ವೈದ್ಯರ ಅತ್ಯಂತ ಅರ್ಥ ಲೋಲುಪತೆ ಇತ್ಯಾದಿ ಕಾರಣಗಳಿಂದ ಚಿಕಿತ್ಸೆಯ ಮುಖ್ಯ ಉದ್ದೇಶವು ನಷ್ಟವಾಗಿ, ಚಿಕಿತ್ಸಕನ ಹಾಗೂ ರೋಗಿಗಳ ಮಧ್ಯದಲ್ಲಿ ಭೋಜ್ಯ-ಭೋಜಕರಂತಹ ಸಂಬಂಧವು ಸ್ಥಾಪಿತವಾಗಿದೆ. ಚಿಕಿತ್ಸೆಯು ಸೇವಾಧರ್ಮದ ಒಂದು ಮುಖ್ಯ ಅಂಗವೆಂಬುದನ್ನು ಓ. ಕಾಲದಲ್ಲಿ ದೇಶದ ವೈದ್ಯರು ಮರೆತಿದ್ದಾರೆ. ಹಾಗೆಯೇ ವೈದ್ಯನು ದೇವತಾ ಸ್ವರೂಪನೆಂದು ತಿಳಿಯುವ ಗೃಹಸ್ಥರೂ ಈ ಕಾಲದಲ್ಲಿಲ್ಲ. ಭಾವ ಪ್ರಕಾಶ ವೈದ್ಯ ಗ್ರಂಥದಲ್ಲಿ—"ಸರ್ವೇ ದ್ರವ್ಯಮಪೇಕ್ಷಂತೆ ರೋಗಿ ಪ್ರಭೃತಯೋಯತಃ।ವಿನಾವಿತ್ತಂ ನಭೈಷಜ್ಯಂ ಚಿಕಿತ್ಸಾಂಗಂ ಯತೋ ಧನಂ"॥ ರೋಗ ಗ್ರಸ್ತ ವ್ಯಕ್ತಿಗೆ ಔಷಧದ ಆವಶ್ಯಕತೆಯುಂಟು; ದ್ರವ್ಯವಿಲ್ಲದೆ ಔಷಧವು ದೊರೆಯುವುದಿಲ್ಲ. ಆದುದರಿಂದ ದ್ರವ್ಯವು ಚಿಕಿತ್ಸೆಯ ಒಂದು ಅಂಗವೆಂದು ಹೇಳಿದೆ.

ಇನ್ನು ಮಹಾಮುನಿ ಚರಕನು ಕೂಡ ಚಿಕಿತ್ಸಕರಿಗೆ—"ನಾತ್ಮಾರ್ಥಂ ನಾಪಿ ಕಾಮಾರ್ಥಮಥ ಭೂತ ದಯಾಂಪ್ರತಿ। ವರ್ತತೆ ಯಶ್ಚಿಕಿತ್ಸಾಯಾಂ ಸ ಸರ್ವಮತಿ ವರ್ತತೆ॥ ತನ್ನ ಸ್ವಾರ್ಥ ಸಿದ್ಧಿಗಾಗಿ ಚಿಕಿತ್ಸೆ ಮಾಡುವುದಲ್ಲ, ಕೇವಲ ಮಾನವ ಜಾತಿಯ ಹಿತಕ್ಕಾಗಿ ಕರುಣೆಯಿಂದ ಚಿಕಿತ್ಸೆಮಾಡಬೇಕೆಂದು ಉಪದೇಶಿಸಿದ್ದಾನೆ."

ಆದುದರಿಂದ ಚಿಕಿತ್ಸಾ ಶಾಸ್ತ್ರವನ್ನು ಓದಲಿಕ್ಕೆ ಹಾಗೆಯೇ ಚಿಕಿತ್ಸಾ ಕಾರ್ಯದಲ್ಲಿ ಪ್ರವೃತ್ತರಾಗಲಿಕ್ಕೆ ಮುಂದೆ ಬರುವ ಪ್ರತಿಯೊಬ್ಬರೂ ಮೊದಲಿಗೆ—"ನಾನು ಮನ ವಚನ ಕಾಯಗಳಿಂದ ಸಂಪೂರ್ಣ ಆಧಿವ್ಯಾಧಿ, ವೃದ್ಧಾವಸ್ಥೆಯನ್ನು ಗುಣಪಡಿಸುವುದಕ್ಕಾಗಿ, ಮನುಷ್ಯರ ಹಿತಕ್ಕಾಗಿ ಸಿದ್ಧನಾಗುತ್ತೇನೆ. ಹಾಗೆಯೇ ಮನುಷ್ಯ ಜಾತಿಯ ಕಲ್ಯಾಣವನ್ನು ಮಾಡುವುದೇ ನನ್ನ ಮುಖ್ಯ ಉದ್ದೇಶ. ದ್ರವ್ಯ ಸಂಪಾದನೆಯು ನನ್ನ ಗೌಣ ಕಾರ್ಯವೆಂದು ಸಂಕಲ್ಪ ಮಾಡಿಕೊಳ್ಳಬೇಕು." ಈಗೀಗ ಅಮೇರಿಕಾ, ಇಂಗ್ಲಾಂಡು ಮೊದಲಾದ ದೇಶಗಳಲ್ಲಿ ಹೆಚ್ಚು ಮಂದಿ ಚಿಕಿತ್ಸಕರು ಈ ಉದ್ದೇಶವನ್ನಿಟ್ಟುಕೊಂಡೇ ಚಿಕಿತ್ಸಾ ಕಾರ್ಯವನ್ನು ಪ್ರಾರಂಭ ಮಾಡುತ್ತಾರೆ. ಮಾನವ ಜಾತಿಗೆ ನಿಜವಾದ ಉಪಕಾರವಾಗುವ ಸುಲಭ ದಾರಿಯನ್ನು ಹುಡುಕುತ್ತಿದ್ದಾರೆ, ಸಾಂಕ್ರಾಮಿಕ ಹಾಗೂ ಸಾಧ್ಯವ್ಯಾಧಿಗಳ ಪ್ರಭಾವವನ್ನು ನಷ್ಟ ಮಾಡುವುದಕ್ಕಾಗಿ ಎಷ್ಟೋ ಸಂಘ ಸಮಿತಿಗಳು, ಪರೀಕ್ಷಾ ಸ್ಥಾನಗಳು ದಾತವ್ಯ ಚಿಕಿತ್ಸಾಲಯಗಳು ಔಷಧಾಲಯಗಳು ಅಲ್ಲಲ್ಲಿ ತೆರೆಯಲ್ಪಟ್ಟಿವೆ. ನಮ್ಮ ದೇಶದಲ್ಲಿಯೂ ಅಂತಹ ಚಿಕಿತ್ಸಾಲಯ ಔಷಧಾಲಯಗಳನ್ನು ತೆರೆಯುವ ಹೆಚ್ಚು ಆವಶ್ಯಕತೆಯುಂಟು. ಆ ಕಾರ್ಯಗಳಿಗೆ ನಾವು ಸರಕಾರವನ್ನು ಪ್ರಾರ್ಥಿಸಿಕೊಂಡರೆ ಪೂರ್ಣ ಕೆಲಸವಾಗಲಾರದು. ನಮ್ಮ ಭಾರವನ್ನು ನಮ್ಮ ಹೆಗಲಲ್ಲಿ ಧರಿಸಿದರೆ ಮಾತ್ರ ನಮ್ಮ ಕಲ್ಯಾಣವಾದೀತು.

—ಎನ್. ಎಸ್. ಜೈನಿ.

* ಬ್ರಾಹ್ಮೇ ಮುಹೂರ್ತೇ ಚೋತ್ತಿಷ್ಠೇತ್ ಸ್ವಸ್ಥೋ ರಕ್ಷಾರ್ಥ ಮಾಯುಷಃ॥

FOR LIFE ASSURANCE

CONSULT

The New Gaurdian of India Life Insrce Co, Ltd.,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade, Post Box No. 142, **MADRAS.**

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯ ತಕ್ಕ ಸ್ಥಾಳಿಗಳು ಬಂದಲ್ಲಿ ರೋಗಗಳಿಗೆ ತಕ್ಕ ಔಷಧಿ ಕೊಡಲಾಗುವುದು. (1) ಉಡುಪಿ ಏಜಂಟರು: — ಪವಮಾನ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು - ಫ್ರೆಂಡ್ಸ್ ಸ್ಟೋರ್ಸ್. ಕೆಪುಸ್ಸ್ 183. ಸುಬಾರಿತ-ಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮ್ಮಣ್ಣು, ಜಿ. ಐ. ಪಿ. ಮಾಡುಂಗಾ.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ

ವಾರ್ಷಿಕ ಚಂದಾ ರೂ 4-8-0

ಅರ್ಧ ವರ್ಷಕ್ಕೆ ರೂ.-2-8-0

ಮಾಹಿತಿಗೆ ಸಂಪಾದಕರಿಗೆ ಬರೆಯಿರಿ.

ಮೆನೇಜರ್ ನವಯುಗ,ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shenoy at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫ ವಾರ ೪೦] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol 25 No 40

Founder: SRI A. B. SHETTY. M. L. A.

ಉಡುಪಿ ● 6-6-1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

REGD.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಕೆಮ್ಮು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಷ್ಟದಾತ, ಮೊದಲಾದ ಎಲ್ಲ ರೋಗಗಳಿಗೂ ಸಿದ್ಧ. ಕೆ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಗುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THOUGH DEAD MEN DO NOT TELL TALES THEIR WIDOWS SOMETIMES DO.

The tale ''HE DIDN'T INSURE'' speaks volumes of the painful life that the bereaved family has to lead.

Wise men never give room for such tales to go round after them.

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

Chief Agents for the Bombay and Madras Presidencies including States and the States of Mysore and Hyderbad:—

The Commercial Corporation of India, Ltd.,

UDIPI, S. India.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಶೂಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ೧-೮ಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ— ಹುಂಬರವಾಡಿ ಸ್ಟೋರ್ಸ. ದಾವಣಗೇರಿ.— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಿನ್ನಿ, ಕೆಮಿಸ್ಟ, ಹಾವೇರಿ, ಬ್ಯಾಡ

Ayurveda Oushadalaya, GADAG CITY.

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including

Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT

TRIVENDRUM * UDIPI * AND BOMBAY.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು.— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಪ್ಪಲ್; ನವಭಾರತ ಬುಕ್ ಡಿಪೋ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪಿತ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೫ | ವಾರ ೪೦ ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol. 25 No. 40
Founder: SRI A. B. SHETTY. M. L. A.

ಉಡುಪಿ ● 6-6-1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳು, ಎದೆನೋವು, ಗಾಯಗಳು ಬಾಳು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಸ್ತ್ರ ಮಾತ್ರ ಮೊದಲಾದ ರೋಗಗಳಿಗೂ, ಸ್ವಲ್ಪ ಹಚ್ಚಿ ತಿಕ್ಕಿದರೆ ಕಡಿಮೆಯಾಗುವದು.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

THOUGH DEAD MEN DO NOT TELL TALES THEIR WIDOWS SOMETIMES DO.

The tale ''HE DIDN'T INSURE'' speaks volumes of the painful life that the bereaved family has to lead.

Wise men never give room for such tales to go round after them.

THE CANARA MUTUAL ASSURANCE COMPANY, LTD.,
Head Office:- **UDIPI, (S. India.)**

Chief Agents for the Bombay and Madras Presidencies including States and the States of Mysore and Hyderbad:—

The Commercial Corporation of India, Ltd.,
UDIPI, S. India.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜ ನಿರಾಳೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸಪ್ಲೈರ್ಸ, ದಾವಣಗೇರಿ,—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡ

Ayurveda Oushadalaya, GADAG CITY.

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ಹಾರೈಕೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

For prompt and efficient Banking Service

Bank with

THE VIJAYA BANK LIMITED.
Head Office:—**MANGALORE**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಭವಿಷ್ಯ ಬದಲಾಯಿಸಿದ ಚುಂಬನಗಳು!

ಅಮೇರಿಕದ ವ್ಯೋಮಿಂಗ್ ಎಂಬುದು ಗಣಿಗಳ ನಗರ. ಅಲ್ಲಿಯ ರಸ್ತೆಗಳಲ್ಲೊಬ್ಬ ತರುಣ ಸುತ್ತಾಡುತ್ತಾ ಬಂದ. ಜೇಬಿನಲ್ಲಿ ಒಂದೇ ಒಂದು ಕುರುಡು ನಾಣ್ಯ ಕೂಡಾ ಇಲ್ಲ. ಕೆಲಸ ಹುಡುಕಿಕೊಂಡು ಒಂದಿರಬಹುದು. ಅದು ವರೆಗೆ ದೊರೆತುದು ರಸ್ತೇ ಸರ್ವೆ ಮಾಡುವ ಕೆಲಸ ಮಾತ್ರ. ಆದರೆ ಹೊಟ್ಟೆ ಕಾಯುವಂತಿಲ್ಲ. ಒಂದು ಸೆಲೂನಿನ ಮುಂದೆ ನಿಂತು ನೋಡಿದ. ಒಳಗಡೆ ಕೆಲವು ಮಜಾಗಾರರು ಕುಡಿದು ಕುಣಿಯುತಿದ್ದರು. ಅವರ ಲೋಕವೇ ಬೇರೆಯಾಗಿತ್ತು. ನಿರುದ್ಯೋಗೀ ತರುಣನ ಮನಸ್ಸಿಲ್ಲವಾದರೂ ಹೊಟ್ಟೆ ಅಲ್ಲಿಗೆಳೆಯಿತು. ಕುಡಿಕರೊಡನೆ ಒಂದೂಟದ ಹಣವನ್ನು ಯಾಚಿಸಿದ; 'ಭಿಕ್ಷೆಯಾಗಿ ಕೊಡಬೇಕೆಂದಿಲ್ಲ; ನೀವು ಹೇಳಿದ ಕೆಲಸ ಮಾಡುತ್ತೇನೆ' ಎಂದವರಿಗೆ ಮುಂದಾಗಿ ಭಾಷೆ ಕೊಟ್ಟ. ಅವರ ಮಿದುಳಿನಲ್ಲಿ ಆಗ ಸಂಚಾರವಾಗುತಿದ್ದುದು ನೆತ್ತರಲ್ಲ-ಲಿಕ್ಕರು. 'ಸತ್ಯಕ್ಕೂ ಹೇಳಿದ ಕೆಲಸ ಮಾಡುವೆಯಾ?' ಎಂದವರು ಮೂರು ಬಾರಿ ಇವನನ್ನು ಪ್ರಶ್ನಿಸಿದರು. ಹಸಿವೆ ತಣಿಯುವ ಆಸೆಯಿಂದ ಇವ ಗಟ್ಟಿಯಾಗಿ ಒಪ್ಪಿಕೊಂಡ. ಅವರು ಅರ್ಧ ಡೋಲರನ್ನು ಇವನ ಕೈಗಿಟ್ಟರು. 'ನೋಡು, ಮೇಲಂತಸ್ತಿನಲ್ಲಿ ಒಬ್ಬ ಯುವತಿಯಿದ್ದಾಳೆ. ಅವಳಿಗೊಂದು ಚುಂಬನ ಕೊಟ್ಟು ಬಾ' ಎಂದಾಜ್ಞಾಪಿಸಿದರು. ಆ ಯುವತಿಯೇನವರಿ ಸಾಮಾನ್ಯಳಲ್ಲ. ಚುಂಬನ ಪರಿವಾರವೇ ಇಲ್ಲದ ಪೂರ್ವದೇಶವೊಂದರ ಗಣಿ ಶ್ರೀಮಂತನೊಬ್ಬನ ಮಗಳು. ಆ ಮಿಲಿಯಾಧಿಪ ತನ್ನ ಪ್ರೀತಿಯ ಮಗಳೊಂದಿಗೆ ಅಂದು ಮುಂಜಾನೆ ತನ್ನ ಆಸ್ತಿಪಾಸ್ತಿಗಳನ್ನು ನೋಡಿಕೊಂಡು ಹೋಗಲು ಈ ನಗರಕ್ಕೆ ಬಂದು ಹೊಟೆಲಿನಲ್ಲಿ ಉಳಕೊಂಡಿದ್ದ. ನಿರುದ್ಯೋಗಿಗೆ ಒಳ್ಳೇ ಕೆಲಸ ಸಿಕ್ಕಿತು! ಆದರೆ ಈ ತರುಣನಿಗಾಗ ನಿಜಕ್ಕೂ ಹಸಿವೆಯಾಗಿತ್ತು. ಆಲೋಚನೆಗೆ ಅವಕಾಶವೇ ಇರಲಿಲ್ಲ. ಅವ ಹಿಂದುಮುಂದು ನೋಡದೆ ನೆಟ್ಟಗೆ ಹೊಟೆಲಿನ ಉಪ್ಪರಿಗೆ ಹತ್ತಿದ; ಅವನಿಗರ್ಧ ಡೋಲರ್ ಕೊಟ್ಟವರು ಅವನ ಹಿಂಗಡೆಯಿಂದ ಹೋದರು. ಯುವತಿ ವರಾಂಡದಲ್ಲಿ ಕುಳಿತುಕೊಂಡು ಓದುತ್ತಿದ್ದಳು. ಹಸಿವುಪೀಡಿತ ನೀದಾ ಅವಳಿದ್ದಲ್ಲಿಗೆ ನಡೆದು ಒಂದೇ ಒಂದು ಶಬ್ದವಾಡದೆ ಆ ಕೆಂಪುಟಿಗಳಿಗೆ ತನ್ನ ತುಟಿಗಳನ್ನೊತ್ತಿ ಬಿಟ್ಟ. ಇದು ಎಲ್ಲಿಂದ ಬಡಿದ ಸಿಡಿಲು ಎಂಬುವದನ್ನರಿಯದ ಆ ಯುವತಿ ಒಮ್ಮೆಯೇ ಕೂಗಿಕೊಂಡು ಕುಳಿತ ಕುರ್ಚಿಯಿಂದ ಹಾರಿಬಿಟ್ಟಳು. ತಂದೆ ಧಾವಿಸಿ ಬಂದು ಇವನ ಮುಖಕ್ಕೊಂದೇಟು ಏರಿಸಿ ದಬ್ಬಿಬಿಟ್ಟ. ಆ ರಭಸಕ್ಕೆ ಈ ತರುಣ ವರಾಂಡದಿಂದ ಸುಮಾರು ಹನ್ನೆರಡು ಅಡಿ ಕೆಳಗೆ ಬಿದ್ದು ತಲೆಯು ಒಂದು ಬಂಡೆಗೆ ಬಡಿಯಿತು. ಅವನನ್ನು ಹೆಕ್ಕುವಾಗ ಎಲ್ಲರೂ ಹೆಣವೆಂದೇ ಭಾವಿಸಿದ್ದರು. ಇಷ್ಟಾದಾಗ ಆ ಅಮಲುಖೋರರಿಗೂ ಪ್ರಜ್ಞೆ ಬಂತು. ತಮ್ಮಿಂದಾದ ಈ ಕೃತ್ಯಕ್ಕಾಗಿ ಪಶ್ಚಾತ್ತಾಪಗೊಂಡು ಸಂಗತಿಯೆಲ್ಲವನ್ನೂ ಆ ಮಿಲಿಯಾಧಿಪನಿಗೆ ವಿವರಿಸಿದರು. ಆಗ ತಂದೆ, ಮಗಳು, ಇಬ್ಬರ ಹೃದಯವೂ ಕರಗಿಹೋಯಿತು. ಅವರು ಓಡಿಬಂದು ಕಲ್ಲಿನೆಡೆಯಲ್ಲಿ ಬಿದ್ದಿದ್ದ ಪಾಪದ ಮನುಷ್ಯನನ್ನು ತಮ್ಮ ಕೋಣೆಗೆ ತಂದು ಕೂಡಲೇ ಚಿಕಿತ್ಸೆ ಮಾಡಿಸಿ ಬದುಕಿಸಿದರು. ಮನುಷ್ಯ ಯಥಾಸ್ಥಿತಿಗೆ ಬಂದ. ಅವನ ಪ್ರಾಣವನ್ನೊಮ್ಮೆ ಕಿತ್ತು ಮತ್ತೊಮ್ಮೆ ನೆಟ್ಟ ಆ ಶ್ರೀಮಂತ ತನ್ನ ಗಣಿಯೊಂದರಲ್ಲಿ ಅವನಿಗೆ ಕೆಲಸ ಕೊಟ್ಟ. ಇವ ತನ್ನ ಕೆಲಸದಲ್ಲೆಂತಹ ಸಾಮರ್ಥ್ಯ ಪ್ರದರ್ಶಿಸಿದನೆಂದರೆ, ಆ ಶ್ರೀಮಂತನ ಪಾಶ್ಚಿಮಾತ್ಯ ರಾಷ್ಟ್ರಗಳ ಆಸ್ತಿಗಳಿಗೆಲ್ಲಾ ಇವನೇ ಜನರಲ್ ಮೆನೇಜರ್ ಆದ. ಈಗಿನ ವಾರ್ತೆಯೆಂದರೆ-ಇನ್ನು ಧನಿಕ ಕುವರಿಯನ್ನು ಬೇಕಾದಾಗ ಚುಂಬಿಸಲಾಗುವಂತೆ, ಸದ್ಯದಲ್ಲೇ ಅವರ ವಿವಾಹವಾಗಲಿದೆಯಂತೆ.

○○ ○○ ○○

ಇದು ಲಂಡನಿನ ರಸ್ತೆಯೊಂದರಲ್ಲಿ ನಡೆದ ಕಥೆ. ಅವನೂ ಒಬ್ಬ ಹಾದಿಹೋಕ. ತನ್ನಷ್ಟಕ್ಕೆ ಹಾದ ಹೋಗುತ್ತಿದ್ದ ಓರ್ವ ಮಹಿಳೆಯ ಗಲ್ಲಕ್ಕೆ ಬಲವಾಗಿ ಮುತ್ತನ್ನೊತ್ತಿಬಿಟ್ಟ. ತತ್ಸಂಬಂಧವಾಗಿ ಮೆಜಿಸ್ಟ್ರೇಟರ ಮುಂದೆ ಹಾಜರಾಗಬೇಕಾಯಿತು. ಅಲ್ಲಿ ಅವನ ಹೇಳಿಕೆಯಿಷ್ಟೆ: 'ನಾನು ನನ್ನ ಹಳೆಯ ಪ್ರೇಯಸಿಯೇ ಈಕೆ ಎಂದು ತಪ್ಪಾಗಿ ಭಾವಿಸಿಕೊಂಡೆ. ಹಾಗೆ ಮಾಡಿದೆ. ನಾನಾಕೆಯನ್ನು ನಾಲ್ಕು ವರುಷಗಳಿಂದ ನೋಡಿರಲಿಲ್ಲ" ಈ ವಾದ ಕಾನೂನಿಗೆ ಸಮ್ಮತವಾಗಲಿಲ್ಲ. ಅಪರಾಧಿಗೆ ಮೊಕದ್ದಮೆಯ ಖರ್ಚು ಹಾಗೂ 40 ಶಿಲ್ಲಿಂಗ್ ಜುಲ್ಮಾನೆಯಾಯಿತು. ಇದರ ಸವಿವರ ವರದಿ ಪ್ರಕಟವಾದ ಒಂದು ಪತ್ರಿಕೆಯನ್ನು ನ್ಯೂಜೀಲೇಂಡಿನಲ್ಲಿದ್ದ ಜಾನುವಾರು ವ್ಯಾಪಾರೀ ಶ್ರೀಮಂತನೊಬ್ಬನ ಪತ್ನಿ ಓದಿಕೊಂಡಳು. ಲಂಡನಿನಲ್ಲಿ ದಸ್ತಗಿರಿಯಾದ ಮನುಷ್ಯನ ಮಾಜೀ ಪ್ರೇಯಸಿ ಅವಳೇ. ಕೂಡಲೇ ಅವಳಿಂದ ಇವನಿಗೊಂದು ಕಾಗದ ಬಂತು. 'ಕೋರ್ಟಿನಲ್ಲಿ ಕೊಟ್ಟ ಹೇಳಿಕೆಯಂತೆ ನೀನಿನ್ನೂ ನನ್ನನ್ನು ಪ್ರೇಮಿಸುವದಾದರೆ ಕೂಡಲೇ ನ್ಯೂಜೀಲೇಂಡಿಗೆ ಹೊರಟು ಬಾ. ನನ್ನ ಗಂಡ ಮರಣೋನ್ಮುಖನಾಗಿದ್ದಾನೆ. ಅವನು ಸತ್ತೊಡನೆ ನಾವಿಬ್ಬರೂ ಮದುವೆಯಾಗಿ ಸುಖವಾಗಿ ಬಾಳೋಣ.' ಎಂದು ಆ ಕಾಗದದಲ್ಲಿತ್ತು. ಈ ಮನುಷ್ಯ ತಡಮಾಡದೆ ನ್ಯೂಜೀಲೇಂಡಿಗೆ ಸ್ಟೀಮರು ಹತ್ತಿದ. ಅಲ್ಲಿ ಕಾಲಿಟ್ಟೊಡನೆ ಇವನ ಕೈಗೆ ಕೋಳ ಬಿತ್ತು. ಬಂಧನದಲ್ಲಿರುವಾಗ ಸಂಗತಿಯೆಲ್ಲಾ ಇವನಿಗೆ ತಿಳಿಯಿತು. ತನಗೆ ಪತ್ರ ಬರೆದ ಮಹಿಳೆಯು ಗಂಡನಿಗೆ ವಿಷ ಹಾಕಿದ ಆರೋಪದಿಂದ ಪಕ್ಕದ ಜೈಲು ಕೋಣೆಯಲ್ಲೇ ಇದ್ದಳು. ಇವನ ಪೆಟ್ಟಿಗೆಯಲ್ಲಿ ಆಕೆ ಬರೆದಿದ್ದ ಪತ್ರವೂ ಸಿಕ್ಕಿ, ಅವಳ ಮೇಲಿನ ಆರೋಪ ರುಜುವಾಯಿತು. ಆದರೆ ಈ ಮನುಷ್ಯನು ಕೊಲೆಯ ಪ್ರಯತ್ನದ ಸಹಭಾಗಿಯೆಂಬುದಕ್ಕೆ ಆಧಾರವೇನೂ ಇರಲಿಲ್ಲವಾದ್ದರಿಂದ ಅವನ ಬಿಡುಗಡೆಯಾಯಿತು. ತನ್ನ ಪ್ರೇಯಸಿಯು ಕೊಲೆಯ ಪ್ರಯತ್ನಕ್ಕಾಗಿ ದೀರ್ಘಾವಧಿಯ ಶಿಕ್ಷೆಗೊಳಗಾದುದನ್ನು ತಿಳಿದೊಡನೆ ಈತನಿಗೆ ಪ್ರಪಂಚವೇ ಶೂನ್ಯವಾಗಿ ಪಿಸ್ತೂಲಿನಿಂದ ತಲೆಗೆ ಗುಂಡಿಟ್ಟು ಕೊಂಡು ತನ್ನ ಮಿದುಳನ್ನು ತಾನೇ ಛೇದಿಸಿಕೊಂಡು ಮಡಿದ.

○○ ○○ ○○

ಅಮೇರಿಕದ ಒಂದು ನಗರದಲ್ಲಿ ಒಬ್ಬ ಶ್ರೀಮಂತನಿದ್ದಾನೆ. ಅವನ ಇಂದಿನ ಸ್ಥಾನಕ್ಕೂ ಚುಂಬನವೇ ಕಾರಣ. ಮೊದಲೊಮ್ಮೆ ಆತ ಪ್ಯಾಕ್ಟರಿಯೊಬ್ಬನ ಕ್ಲಾರ್ಕ್ ಆಗಿದ್ದ. ಒಂದು ರಾತ್ರಿ ಮಜಾ ಸಭೋಗಿ ತರುಣರ ಗುಂಪನ್ನು ಆತ ಸೇರಿಕೊಂಡ. ಆ ಗುಂಪು ಪ್ರತಿಯೊಂದು ಲಿಕ್ಕರ್ ಅಂಗಡಿಯ ರುಚಿನೋಡುತ್ತಾ ಬೆಳಗಾಗುವವರೆಗೂ ತಿರುಗಾಟದಲ್ಲೇ ಇತ್ತು. ಆಗ ಇವನ ತಲೆಯ ಅಮಲು ಇವನನ್ನು ಮಾತಾಡಿಸಿತು:- "ಬೆಳಗ್ಗೆ 8 ಘಂಟೆಗೆ ಸರಿಯಾಗಿ ನಾನೀ ನಗರದ ಮುಖ್ಯ ರಸ್ತೆಗೆ ಕಾಲಿಡುತ್ತೇನೆ, ಆಗ ಪ್ರಥಮತಃ ಯಾವ ಮಹಿಳೆ ನನಗಿದಿರಾಗುವಳೋ ಅವಳನ್ನು ಚುಂಬಿಸುವದೇ ಸರಿ''. ಅವ ಹಾಗೆ ಮಾಡಿಯೇ ಬಿಟ್ಟ. ಶಪಥ ಪೂರೈಸಿದ ಮೇಲೆ ಅವನ ಕಣ್ಣು ತೆರೆಯಿತು. ಆತ ಚುಂಬನಕೊಟ್ಟ ಯುವತಿ ಬೇರಾರೂ ಅಲ್ಲ--ಅವನ ಯಜಮಾನನ ಪುತ್ರಿ. ಮತ್ತೇನುಮಾಡುವದೆಂಬುದವನಿಗೆ ತೋಚಲಿಲ್ಲ. ಇಂತಹ ಕೆಲಸ ಮಾಡುವವನು ಯಥಾರ್ಥವಾದಿ ಇರಬೇಕೆಂಬುದು ಸ್ಪಷ್ಟವಷ್ಟೆ; ಅದಕ್ಕನುಗುಣವಾಗಿ ಧನಿಯಿದ್ದಲ್ಲಿಗೆ ನೀದಾ ಹೋಗಿ ಎಲ್ಲವನ್ನೂ ಅವನೊಡನೆ ನಿವೇದಿಸಿಕೊಂಡು ಕ್ಷಮೆಯಾಚಿಸಿದ. ಆದರೆ ಯಜಮಾನನಿಂದ ಈ ತಪ್ಪನ್ನು ಕ್ಷಮಿಸುವದು ಅಸಾಧ್ಯವಾಯಿತು. ತನ್ನ ಪುತ್ರಿಯನ್ನು ತನ್ನ ನೌಕರನು ಬಹಿರಂಗವಾಗಿ ಚುಂಬಿಸಿದ ಅಪಮಾನ ಅತಿದೊಡ್ಡದೆಂದು ಆತನಿಗೆ ತೋರಿತು. ಆದರೆ ಆತ ಕ್ಷಮೆಕೇಳುತ್ತಾನೆ; ಪ್ರಮಾದವಶಾತ್ ತಪ್ಪುಮಾಡಿದವ. ಕೆಲಸದಿಂದ ತಳ್ಳಿಬಿಟ್ಟರೆ ತಪ್ಪಿಗೆ ಮಿಕ್ಕಿದ ಶಿಕ್ಷೆಕೊಟ್ಟಂತಾ

(೧೧ನೇ ಪುಟ ನೋಡಿರಿ)

WANTED

A travelling Salesman (1) for mysore state & (2) for south india.

with business qualifications and previous experience in the line. Pay and commission according to merit

Aplly to:

T. L S. UPADHYAYA

Manufacturer of

AGARBATTIES & OTHER PERFUMES, MYSORE



Approved firm by the Govt. of Mysore

Certified by the Agent of the Govt. of Cylone Indian,

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಅಡಚಣೆ ಮತ್ತು ಆವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ಕರ್ಮೋತ್ಸಾಹದ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಇವರೇ ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧದ ತಿಳಿಯುವ ವ್ಯಕ್ತಿಗಳೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಗಿಂತಲೂ ಹೆಚ್ಚುಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ಸ್ಫೂರ್ತಿಗೆ ಹೆಮ್ಮೆ ಪಡುತ್ತದೆ.

ಕೆನರಾ ಬ್ಯಾಂಕ್

Estd: 1906

CANARA BANK LIMITED

(Incorporated in British India. liability of Members Limited.)

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ಗಲ್ಲಿಗೇರುವ ಮೊದಲು ಮಗ ತಂದೆಗೆ ಬರೆದ ಪತ್ರ

ಆಜಾದ್ ಹಿಂದ್ ಯೋಧ ಮಹಮ್ಮದ್ ಅಬ್ದುಲ್ ಕಾದಿರ್

ವೀರಾತ್ಮ ಮಹಮ್ಮದ್ ಅಬ್ದುಲ್ ಕಾದಿರ್ ತಿರುವಾಂಕೂರಿನವರು. ಮಹಾ ಯುದ್ಧಾರಂಭಕ್ಕೆ ಮೊದಲೇ ಸಂಪಾದನೆಗಾಗಿ ಮಲಯಕ್ಕೆ ಹೋಗಿದ್ದ ಎಳೆತರುಣ. ಯುದ್ಧದಲ್ಲಿ ಮಲಯದ ಪತನವಾದೊಡನೆ ಅವರು ಆಜಾದ್ ಹಿಂದ್ ಫೌಜಿಗೆ ಸೇರಿಕೊಂಡರು. ಹಿಂದುಸ್ಥಾನದಲ್ಲಿ ಗುಪ್ತಪ್ರಚಾರಕಾರ್ಯ ನಡೆಸುವದಕ್ಕಾಗಿ ಸಬ್‌ಮೇರಿನ್ ಒಂದರಲ್ಲಿ ಕುಳಿತು ಇಲ್ಲಿ ಇಳಿದೊಡನೆ ಹಿಂದೀ ಸರಕಾರದಿಂದ ಹಿಡಿಯಲ್ಪಟ್ಟರು. ಮದ್ರಾಸಿನಲ್ಲಿ ಅವರನ್ನು ಫಾಶಿಗೆ ಕೊಡಲಾಯಿತು. ಮಾತೃಭೂಮಿಯ ಸ್ವಾತಂತ್ರ್ಯ ಯಜ್ಞ ಕುಂಡಕ್ಕಾಹುತಿಯಾದ ಈ ವೀರ ಯುವಕ ಮರಣದ ಮುಂಜಾನೆಯ ರಾತ್ರಿಯಲ್ಲಿ ಮದ್ರಾಸಿನ ಜೈಲಲ್ಲಿ ಕುಳಿತುಕೊಂಡು ತನ್ನ ತಂದೆಗೆ ಬರೆದಿದ್ದ ಪತ್ರವಿದು. ಕುಟುಂಬವಿದ್ದವರೋದಿದರೆ ಕಣ್ಣೀರು ಬರಬೇಕು!

ನನ್ನ ಪ್ರಿಯ ಪಿತನೇ,

ನಾನೀ ಪತ್ರವನ್ನು ಸುಮಾರು ಎರಡು ತಿಂಗಳ ಮೊದಲೇ ಬರೆಯಲಿದ್ದೆ. ಆದರೆ ಕೆಲವು ಸನ್ನಿವೇಶಗಳ ದಕ್ಕೆಯಿತ್ತ ಬಂದವು. ಈಗ, ನನ್ನ ಜೀವಮಾನದಲ್ಲಿ ಇದೇ ಕೊನೆಯ ಬಾರಿ, ನಾನು ಕಾಗದ ಮತ್ತು ಪೆನ್ನನ್ನು ಉಪಯೋಗಿಸುತಿದ್ದೇನೆ. ಜೀವಮಾನದಲ್ಲಿ ನಾವು ಒಮ್ಮೊಮ್ಮೆ ಅತ್ಯಂತ ವೇದನಾತ್ಮಕವಾದ ಹಾಗೂ ಬಹುಮುಖ ದುಃಖದಾಯಕವಾದ ಸಂದರ್ಭಗಳಿಗೆ ಗುರಿಯಾಗಬೇಕಾಗುತ್ತದೆ. ಇಂಥವುಗಳೆಲ್ಲ, ಅಲ್ಲಾನು ನಮ್ಮ ಪರೀಕ್ಷೆಗಾಗಿ ಮುಂದೊಡ್ಡುವ ಸೋಪಾನಗಳು ಅಥವಾ ಒರೆಗಲ್ಲೆಂದು ಭಾವಿಸಬೇಕು. ಭೀಕರರೂಪದ ಬಡತನ ಮತ್ತು ಸಂಕಷ್ಟಗಳು, ಆಶಾಭಂಗಗಳು ಹಾಗೂ ಜೀವಕ್ಕಪಾಯಗಳು ನಮ್ಮನ್ನೆದಿರಿಸುತ್ತವೆ. ಆದರೆ ನಾವು ಗೊಣಗಬೇಕಾದ ಸಂದರ್ಭಗಳು ಇವಲ್ಲ. ಬದಲಿಗೆ ಇದು ಅಲ್ಲಾನ ಚಿತ್ತವೆಂದು ನಾವು ಭಾವಿಸಿಕೊಳ್ಳಬೇಕು; ಅತನ ಮೇಲೆ ಅಚಲ ವಿಶ್ವಾಸವಿಟ್ಟು ಈ ಸಂಕಷ್ಟಗಳನ್ನೆಲ್ಲಾ ಅನುಭೋಗಿಸಿ ಮುಗಿಸಬೇಕು. ಕಷ್ಟಸಹನೆಯು ಸದ್ಗುಣಗಳಲ್ಲೊಂದು ಎಂದೇ ಪವಿತ್ರ ಕುರಾನು ನಮಗೆ ಸುಸ್ಪಷ್ಟ ಬೋಧನೆ ಕೊಡುತ್ತಿದೆ. ನಮ್ಮ ಜೀವನದಲ್ಲೇ ಪ್ರಾಮುಖ್ಯವಾದ ಪರೀಕ್ಷೆಯು ನಡೆವ ನಾವು ಸಿಕ್ಕಿಕೊಂಡ ಬಿಕ್ಕಟ್ಟಿನ ಸಂದರ್ಭಗಳಲ್ಲಿ, ಅದನ್ನು ಧೈರ್ಯವಾಗಿ ಎದಿರಿಸುವ ಬುದ್ಧಿ ಬಲವು ಅಲ್ಲಾನ ಅನುಗ್ರಹದಿಂದ ದೊರೆಯುತ್ತದೆ. ನಮ್ಮೆಂದಿದಿರಿಸಲಾಗದ ಯಾವುದೊಂದ ವಿಷಯವನ್ನೂ ಅವನು ನಮ್ಮ ಮುಂದಿಡಲಾರ.

ಪ್ರಿಯ ತಂದೆಯೇ, ಅಲ್ಲಾನು ನನಗೆ ಶಾಂತ ಹಾಗೂ ಸ್ಥಿರವಾದ ಮನವನ್ನು ದಯಪಾಲಿಸಿದ್ದಾನೆ. ಸದ್ಯದ ನನ್ನ ಮತ್ತು ನಿಮ್ಮ ನಿಸ್ಸಹಾಯಕ ಸ್ಥಿತಿಗಾಗಿ ನಾವು ಗ[illegible]ಬಾರದು; ಗೊಂದಲಕ್ಕೀಡಾಗಲೂ ಬಾರದು. ಅಲ್ಲಾನ ಬಯಕೆಗನುಸಾರವಾಗಿ ಒಂದು ಜೀವವನ್ನು ಸಂತೋಷಪೂರ್ವಕ ಬಲಿದಾನ ಮಾಡಬೇಕಾದ ಸುಸಂದರ್ಭವಿದು. ಅಲ್ಲಾ ಈಗ ಮುಂದಿಟ್ಟಿರುವ ಪರೀಕ್ಷೆಯೆಂದರೆ ನನ್ನ ಮಟ್ಟಿಗೆ ಪ್ರಾಣದ ಪ್ರಶ್ನೆ; ನಿಮ್ಮ ಮಟ್ಟಿಗೆ ಓರ್ವ ಪುತ್ರನನ್ನು ಕಳಕೊಳ್ಳುವ ಸಂದರ್ಭ. ನನ್ನ ಹೃದಯ ಧೈರ್ಯದಿಂದ ತುಂಬಿದೆ; ಪ್ರತಿಯೊಂದು ಕ್ಷಣವೂ ಮನಶ್ಶಾಂತಿ ಮತ್ತು ಮನೋಬಲ ಹೆಚ್ಚುತ್ತಿದೆ.

ಈ ಪತ್ರವು, ಇಷ್ಟರಲ್ಲೇ ಜೆಂದಿರುವ ನಿಮ್ಮ ಹೃದಯಕ್ಕೆ ಟೋರ್ಪೆಡೊ ಆಗುವದೆಂಬುದನ್ನು ನಾನು ಬಲ್ಲೆ. ನಾನೀಗ ನಿಮ್ಮನ್ನು ಕುದಿವ ಬಾಣಲೆಯಿಂದ ಉರಿಯುವ ಒಲೆಗೆ ದೂಡುತಿದ್ದೇನೆ. ನನ್ನ ಜನನವೂ ಜೀವನವೂ ನಿಮಗೆ ಕಷ್ಟದಾಯಕವಾಗಿಯೇ ಇದ್ದುವು; ನಾನು ಹುಟ್ಟಿದ ಘಳಿಗೆಯಿಂದ ಈ ದಿನದವರೆಗೆ ಸಂಕಷ್ಟವೇ. ನೀವು ನಿಮ್ಮ ಅನುಕೂಲತೆಗೆ ಮಿಕ್ಕಿ ನನಗೆ ವಿದ್ಯಾಭ್ಯಾಸ ಕೊಡಲು ಆಶಿಸಿದ್ದಿರಿ; ನನ್ನ ಅಭಿರುಚಿಗೆ ತಕ್ಕಂತೆ ದೈಹಿಕ ಶಿಕ್ಷಣ ಕೊಡಿಸಿದಿರಿ; ನಿಮ್ಮ ಸಾಧ್ಯತೆಯ ಮಿತಿಯನ್ನು ಮೀರಿ ನನಗೆ ಎಲ್ಲಾ ವಿಧದ ಸೌಕರ್ಯಗಳನ್ನು ಒದಗಿಸಿದಿರಿ. ನನ್ನ ಬಾಲ್ಯವು ಸುಖಕರವಾಗುವಂತೆ, ಭವಿಷ್ಯವು ಭದ್ರವಾಗುವಂತೆ ಮಾಡುವದಕ್ಕಾಗಿ ನೀವು ಪಟ್ಟ ಕಷ್ಟ, ದುಃಖಗಳನ್ನೆಲ್ಲಾ ನೆನಸುವಾಗ ನನ್ನ ಎದೆಯೊಡೆಯುತ್ತಿದೆ. ನನಗಾಗಿ ನೀವು ಸುರಿಸಿದ್ದ ತುದಿಯಿಲ್ಲದ ಆ ಕಣ್ಣೀರ ಕಾಲಿವೆಯು ಈಗ ನನ್ನ ಹೃದಯವನ್ನು ಕೊಚ್ಚಿಕೊಂಡು ಹೋಗುತ್ತಿದೆ. ನಾನು ಮಲಯಕ್ಕೆ ಹೊರಟಾಗ, ಇನ್ನಾದರೂ ನನ್ನ ದುರ್ಘಟನೆಗಳೆಲ್ಲಾ ಹೋಗಬಹುದೆಂದು ನೀವು ಆಶಿಸಿದಿರಿ. ಕೊನೆಗಾದರೂ ನಿಮ್ಮ ಮಗ ನಿಮ್ಮ ಪ್ರಯೋಜನಕ್ಕೆ ಮತ್ತು ಸಹಾಯಕ್ಕೆ ಒದಗುವನೆಂದು ನೀವಾಗ ಆಶಿಸಿದ್ದಿರಿ. ನೀವು ಇನ್ನೂ ಹೆಚ್ಚಿನ ಆಶೆಗಳನ್ನು ಕಟ್ಟಿಕೊಂಡಿದ್ದಿರೆಂಬುದನ್ನೂ ನಾನು ಬಲ್ಲೆ. ಆದರೆ ಈಗ ನಾನೇನು ಮಾಡಲು ಸಾಧ್ಯ? ಅಲ್ಲಾನನ್ನೆ ಕೇಳಿರಿ; ಅವನನ್ನು ಪ್ರಾರ್ಥಿಸಿರಿ; ಅವನು ನಿಮಗುತ್ತರ ಕೊಡುತ್ತಾನೆ; ಹಾಗೆಂದು ಪವಿತ್ರ ಕುರಾನು ಹೇಳುತ್ತಿದೆ.

ಈ ಅಲ್ಪಾವಧಿಯ ಜೀವನದಲ್ಲಿ ನಾನೇನಾದರೂ ವಿಜಯಗಳನ್ನು ಪಡೆದಿದ್ದರೆ, ಅದು ಅಲ್ಲಾನ ಕೃಪೆ ಮತ್ತು ನೀವು ನನಗಾಗಿ ಮಾಡುತ್ತಿದ್ದ ಹೃತ್ಪೂರ್ವಕ ಪ್ರಾರ್ಥನೆಯ ಪ್ರತಿಫಲ. ನಿಮ್ಮನ್ನು ನಿರಾಶೆಗೊಳಿಸಬಾರದು, ಅಥವಾ ನನ್ನಿಂದಾಗಿ ನೀವು ಎಳ್ಳಷ್ಟು ನೋಯುವಂತಾಗಬಾರದು ಎಂಬುದೇ ನನ್ನ ಜೀವನದ ಅತಿದೊಡ್ಡ ಬಯಕೆಯಾಗಿತ್ತು. ಈ ಬಯಕೆಯನ್ನು ಪೂರ್ಣಗೊಳಿಸುವಂತೆ ನಾನು ದೈವಿಕ ಸಹಾಯಕ್ಕಾಗಿ ಪ್ರಾರ್ಥಿಸಿದ್ದೆ. ನಮ್ಮ ಜೀವನ ದೋಣಿಯನ್ನು ಮುಂದೆ ತಳ್ಳುವ ಸನೆಕೋಲುಗಳೇ ಆಶೆ ಮತ್ತು ಆಕಾಂಕ್ಷೆಗಳು. ಆದರೆ ಬಹುತೇಕವಾಗಿ ಅವು ಅಪೂರ್ಣವಾಗಿಯೇ ಉಳಿಯುವವು. ನಮ್ಮೆಲ್ಲಾ ಆಕಾಂಕ್ಷೆಗಳೂ ಕಾರ್ಯತಃ ಫಲಿಸುವಂತಿದ್ದರೆ ಅದೆಷ್ಟು ರಮ್ಯತೆ ಬರುತಿತ್ತು! ಜೀವನಪಥದಲ್ಲಿ ನಾವು ಅಪರಿಚಿತ ವಿಷಯಗಳ ಶೋಧ ಮಾಡುತ್ತಾ ಮುಂದೊತ್ತುತ್ತೇವೆ. ಅನಿರೀಕ್ಷಿತ ವಿಷಯಗಳು ನಮಗಾಗ ಸಂಭವಿಸುತ್ತವೆ. ಆದರೂ ಜೀವನದ ಅರ್ಥವೇನು ಎಂಬುದನ್ನರಿಯಲು ನಾವೊಂದು ಕ್ಷಣ ತಡೆಯುವುದಿಲ್ಲ. ಇದು ಸ್ವತಃ ಒಂದು ಸಮಸ್ಯೆಯಾಗಿದೆ. ನಾವು ಹೆಚ್ಚು ಹೆಚ್ಚು ಆಲೋಚಿಸಿದಂತೆ ಗೊಂದಲವು ಹೆಚ್ಚೆಚ್ಚೇ ಆಗುತ್ತದೆ. ಮನುಷ್ಯನಿಗೆ ಬೇಕಾದುದು ಬದುಕುವದೊಂದೇ. ಆದರೆ ಮನುಷ್ಯನ ಬಯಕೆಗಳ ಕೊನೆಯಲ್ಲೊಂದು ಸತ್ಯ ಮಿತಿಯಿದೆಯೆ? ನನಗಾಶ್ಚರ್ಯವಾಗುತ್ತಿದೆ. ಇದು ನಮ್ಮ ಮೆದುಳು ಶಕ್ತಿಯ ತೀರ್ಮಾನಕ್ಕೆ ನಿಲುಕಲಾರದ ಅಲ್ಲಾ ನಿರ್ಮಿತ ಜೀವನ ಸಮಸ್ಯೆ. ನಾವು ಕೆಲವು ತತ್ವ ಮತ್ತು ಧೋರಣೆಗಳನ್ನು ಅತ್ಯಂತ ಪ್ರೀತಿಯವುಗಳೆಂದು ಅಪ್ಪಿ ಹಿಡಿದುಕೊಂಡು ವ್ಯವಹಾರ ಜೀವನ ಪಥದಲ್ಲಿ ಮುಂದೊತ್ತುತ್ತೇವೆ. ಆದರೆ ಈ ತತ್ವಗಳನ್ನಾಧರಿಸಿ, ಅವುಗಳ ಸಾಧನೆಗಾಗಿ ಒದಾ ಡಿದುದಕ್ಕಾಗಿ, ಸತ್ಯ ಮತ್ತು ನ್ಯಾಯಕ್ಕೆ ವಿರೋಧವಾಗಿಯೂ ನಾವು ಖಂಡಿಸಲ್ಪಡುತ್ತೇವೆ.

ಮನುಷ್ಯನಿಗೂ ಪ್ರಾಣಿಯೊಂದು ಪ್ರಾಣಿಯಂತೆ ಮರಣವಿದ್ದೇ ಇದೆಯಾದರೂ, ಒಂದು ಗುರಿ ಮತ್ತು ಜೀವನಾಸಕ್ತಿಯೊಂದು ಘನತೆ ಸಾಧಿಸುವದರಿಂದಲೇ ಪ್ರಾಣಿಗಳ ಮಟ್ಟದಿಂದ ಆತ ಮೇಲಕ್ಕೇರುತ್ತಾನೆ. ಜೀವನಕ್ಕೊಂದು ಪರಿಮಳ ಮತ್ತು ಉದ್ದೇಶವನ್ನು ಸೇರಿಸಲು ಆತ ಪ್ರಯತ್ನಿಸುತ್ತಾನೆ. ಸಂದರ್ಭಾನುಸಾರವಾಗಿ ಆತ ತನ್ನನ್ನು ತಾನೇ ಮರೆತು, ತನ್ನ ತತ್ವಕ್ಕಂಟಿಕೊಂಡು ಬರುವ ಮೃತ್ಯುವನ್ನೂ ಎದಿರಿಸುತ್ತಾನೆ. ಹೀಗೆ ಆತ ಪ್ರತಿಯೊಂದಕ್ಕೂ ಸಿದ್ಧನು; ಎಂತಹ ಸಂದರ್ಭವನ್ನಾದರೂ ಯಥಾರ್ಥತೆ ಮತ್ತು ನಿಸ್ವಾರ್ಥತೆಯಿಂದ ಎದಿರಿಸಲು ತಯಾರೇ. ಈ ನಶ್ವರ ಕಾಯಕ್ಕಾಗಿ ನಾವೇಕೆ ತಪಿಸಬೇಕು? ವ್ಯವಹಾರಜ್ಞ ಮನುಷ್ಯನೊಬ್ಬನು ಅದನ್ನು ಗಣ್ಯ ಮಾಡಲಾರ. ಕಾರ್ಯಕ್ಕಾಗಿ ಏಕದಂ ಹೆಜ್ಜೆಯಿಡುತ್ತಾ ಆತ ಮುಂದೊತ್ತಿಬಿಡುತ್ತಾನೆ.

ತಂದೆಯೇ, ನಾದು ಉದ್ದ ಬರೆವೆ. ಆದರೆ ಎಲ್ಲಾ ಏನೆಂಬದನ್ನು ನಾನರಿಯೆ. ನಾನು ಐದು ವರುಷಗಳ ಪೂರ್ವದಲ್ಲಿ, ನನ್ನ ತಾರುಣ್ಯದ ಮುಂಬೆಳಕಿನಲ್ಲೇ, ನಿಮ್ಮ ಪ್ರೇಮಮಯೀ ಹಿತದಿಂದ ತಪ್ಪಿ, ಐಶ್ವರ್ಯ ಮತ್ತು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಮಾತೃಭೂಮಿಯನ್ನು ಬಿಟ್ಟು ಬಂದಿದ್ದೆ. ನನ್ನಾ ಪ್ರಯಾಣದ ಪ್ರ

WANTED

A qualified Compounder. Apply immediately stating the minimum salary expected.

K. L. AITHAL, M.B. & B.S.,
UDIPI. (S. K.)

WANTED

Three Organisers for the District of South Kanara on a salary ranging from Rs. 75/- to Rs. 225/- p.m on a nominal guarantee of business. For further particulars, please apply to the **Secretary** who is now camping in Udipi.

THE
UNITED KARNATAK INSURANCE Co., Ltd.
UDIPI.

H. O. DHARWAR. ESTD 1929.

ಚಂದಾದಾರರಿಗೆ ಸೂಚನೆ

ಚಂದಾದಾರರು ತಮ್ಮ ವಿಳಾಸಗಳಲ್ಲಿ ಬದಲಾವಣೆ ಮಾಡಲು ಪತ್ರವ್ಯವಹಾರ ಮಾಡುವಾಗ ಸಂಪೂರ್ಣ ವಿಳಾಸ ಹಾಗೂ ಚಂದಾ ನಂಬ್ರವನ್ನು ಕೂಡನೆ ಪತ್ರದಲ್ಲಿ ಬರೇ ಚಿಕ್ಕ ದಸ್ಕತನ್ನು ಹಾಕುತ್ತಿರುವುದು ನಮ್ಮ ಅನುಭವಕ್ಕೆ ಬಂದಿರುತ್ತದೆ. ಅಂಥ ಪತ್ರವ್ಯವಹಾರದಿಂದ ತಕ್ಕ ನಿವಾರಿಸಿಕೊಳ್ಳಲು ಏನೂ ಪ್ರಯೋಜನವಾಗಲಾರದು. ಸಂಪೂರ್ಣ ವಿಳಾಸ ಮತ್ತು ಚಂದಾ ನಂಬ್ರವನ್ನು ಸ್ಪಷ್ಟ ಬರೆಯಬೇಕಾಗಿ ಸೂಚನೆ

ತಿಫಲವಾಗಿ ನೀವು ಬಹಳವನ್ನು ನಿರೀಕ್ಷಿಸಿದ್ದಿರಬಹುದು. ನೀವವರಿಂದ ಯಾವ ಲಾಭವನ್ನೂ ಪಡೆಯದಿರಬಹುದು. ಆದರೆ ನನಗದರಿಂದ ಲಾಭವಾಗಿದೆ ಎಂಬ ಹೆಗ್ಗಳಿಕೆಯಿದೆ. ಹೇಗೆ? ಜೀವನವೆಂದರೇನು ಎಂಬುದನ್ನು ಸ್ವಲ್ಪವಾದರೂ ತಿಳಿದುಕೊಂಡುದರಿಂದ. ಬಡವ ಮತ್ತು ನಿಸ್ಸಹಾಯಕನಾಗಿದ್ದ ನೀವು, ಆ ಬಡತನ ಮತ್ತು ಸಂಕಷ್ಟದ ಮೂಲಕವೇ ನನ್ನನ್ನು ಮೇಲಕ್ಕೆತ್ತಿದಿರಿ. ಪ್ರತಿಕೂಲ ವಿದ್ಯಮಾನ ಮತ್ತು ವಿವಿಧ ಸಂದರ್ಭಗಳಲ್ಲಿ ಜೀವನೋಪಾಯವನ್ನು ಕಲಿತುಕೊಂಡು ಬರಲು ನೀವು ನನ್ನನ್ನು ಹೊರ ದೇಶಕ್ಕೆ ಕಳುಹಿದಿರಿ. ಆದರೆ ನಾನೋ—ನಿಮಗೆ ಅದೃಶ್ಯವಾಗಿದ್ದ ಹಾದಿಯೊಂದನ್ನು ಹಿಡಿದೆ. ನಿಮ್ಮ ಕಡೆಗಿದ್ದ ನನ್ನ ಪಾಲಿನ ಕರ್ತವ್ಯವನ್ನು ನಾನೆಂದೂ ಮರೆತವನಲ್ಲ. ಆ ಕರ್ತವ್ಯವನ್ನು ಪೂರೈಸುವೆನೆಂದು ನಾನಾಗ ಭಾವಿಸಿದ್ದೆ. ಆದರೆ ನನ್ನ ಅಂದಾಜು ತಪ್ಪಾಯಿತೆಂಬುದು ಈಗ ಮಾತ್ರ ನನಗೆ ಮನವರಿಕೆಯಾಗಿದೆ.

ಪ್ರಿಯ ತಂದೆಯೇ, ನಿಮ್ಮ ಕಡೆಗಿದ್ದ ನನ್ನ ಕರ್ತವ್ಯದ ಕುರಿತು ನಾನೆಂದೂ ಸ್ವಾರ್ಥಿಯಾಗಿರಲಿಲ್ಲ; ಅಸಡ್ಡೆಯಿಂದಿರಲೂ ಇಲ್ಲ. ನನ್ನ ಮಟ್ಟಿಗೆ ನನಗದು ತಿಳಿದಿದೆ; ಇತರರಿಗೆ ತಿಳಿಯದಿರಬಹುದು. ಆದರೆ ನನ್ನ ಯಥಾರ್ಥತೆಯು ಅಲ್ಲಾನಿಗೆ ಗೊತ್ತಿದೆ. ಅದಕ್ಕಾಗಿ ಆತನು ನಿಮ್ಮನ್ನೂ ನನ್ನನ್ನೂ ಆಶೀರ್ವದಿಸಿಯಾನು. ನೀವು ನನ್ನಿಂದೇನನ್ನು ನಿರೀಕ್ಷಿಸಿದ್ದಿರೋ ಅದರ ಹತ್ತು ಪಾಲನ್ನನ್ನು ಅವನು ನಿಮಗೆ ಅನುಗ್ರಹಿಸಿಯಾನು. ಈ ತಲೆಮಾರಿನಲ್ಲೇ ನಮ್ಮ ಇಂದಿನ ದುಃಖ ಸಮೂಹಗಳೆಲ್ಲಾ ನಿಜಕ್ಕೂ ನಿವಾರಣೆಗೊಳ್ಳಲಿವೆ.

ಎಪ್ರಿಲ್ 1ರಲ್ಲಿ ನನ್ನ ಮೇಲೆ ತೀರ್ಪು ಕೊಡಲ್ಪಟ್ಟಿತು. ಪಿ. ಪಿ. ಸಿ. 121. ಎ. ಪ್ರಕಾರ ನನಗೆ ೫ ವರುಷಗಳ ಕಠಿಣ ಸಜೆಯೂ, ಒರ್ಡಿನೆನ್ಸ್ IIIರ ಪ್ರಕಾರ ನನಗೆ ಜೀವಾಂತ ಶಿಕ್ಷೆಯೂ ವಿಧಿಸಲ್ಪಟ್ಟಿದೆ. ಓರ್ವ ಯುರೋಪಿಯನ್ ಸ್ಪೆಶ್ಯಲ್ ಜಡ್ಜ ನನ್ನ ಕೇಸಿನ ವಿಮರ್ಶೆ ನಡಿಸಿದ್ದ. ಆತ ಕೆಳಕೋರ್ಟಿನ ತೀರ್ಪನ್ನು ಕಾಯಂಗೊಳಿಸಿ, ತನ್ನ ತೀರ್ಮಾನದಲ್ಲಿ "ಇವರು ಅಪಾಯ ಸನ್ನಿಹಿತ ಭಾರತದ ಸಂದಿಗ್ಧ ಸಮಯದಲ್ಲೇ, ಈ ಭೂಮಿಯ ಮೇಲೆ ವೈರಿ ಧಾಳಿಯನ್ನು ಆಶಿಸುತ್ತಿದ್ದುದರಿಂದ ಅವರ ಅಪರಾಧವು ಅಕ್ಷಮ್ಯ. ಅವರು ಸಾಯಬೇಕು." ಎಂದು ಕೂಡಿಸಿ ಬರೆದಿದ್ದಾನೆ. ಎಪ್ರಿಲ್ ೨೧ರಲ್ಲಿ ಇದೂ ಪ್ರಕಟವಾಯಿತು. ಆ ಮೇಲೊಂದು ಅರ್ಜಿ ವೈಸರಾಯರಿಗೆ ಹೋಯಿತು....

ನನ್ನ ಪ್ರೀತಿಯ ತಂದೆಯೇ, ಈ ಆಘಾತಮಯ ಸುದ್ದಿಯು ನಿಮ್ಮನ್ನು ಶೋಕಸಾಗರದಲ್ಲದ್ದುವದೆಂಬುದನ್ನು ನಾನು ಬಲ್ಲೆ. ನಿಮ್ಮ ಭಾವನೆಯನ್ನು ಹತೋಟಿಯಲ್ಲಿಟ್ಟುಕೊಳ್ಳಿ, ನಿಮ್ಮನ್ನು ನೀವೇ ಸಂತೈಸಿಕೊಳ್ಳಿ, ನನಗಾಗಿ ದುಃಖಿಸಬೇಡಿ ಎಂದು ಅಲ್ಲಾನ ಆಣೆಯಿಟ್ಟು ಬೇಡಿಕೊಳ್ಳುತ್ತೇನೆ. ಇಂತಹ ನಿಸ್ಸಹಾಯಕ ಸ್ಥಿತಿಯಲ್ಲಿ ನಮ್ಮ ಏಕಮಾತ್ರ ಸಹಾಯವೆಂದರೆ ಅಲ್ಲಾ. ಅವನೊಬ್ಬನೇ......

ಪ್ರಿಯಜನಕಾ, ನಾನು ನಿಮ್ಮನ್ನೆಲ್ಲಾ ಶಾಶ್ವತವಾಗಿ ಅಗಲುತ್ತಿದ್ದೇನೆ. ನಾಳೆ ಮುಂಜಾನೆ ಆರು ಗಂಟೆಗೆ ಈ ಜೀವ ಅದೃಶ್ಯವಾಗುವುದು. ಈ ಕೈ ಮತ್ತೆ ಅಲುಗಾಡಲಾರದು; ಈ ಹೃದಯದಲ್ಲಿ ಮತ್ತೆ ಎಂದಿಗೂ ಬಡಿದಾಟ ಅಥವಾ ಭಾವನೆಯೇಳಲಾರದು. ಈ ಸಂದರ್ಭದಲ್ಲಿ, ನಿನ್ನ ಮಾ ಚೆಲುವೆಯಂತೆ ನನ್ನ ಅಕ್ಕ ತಂಗಿಯರ, ಅಣ್ಣ ತಮ್ಮಂದಿರ ಮತ್ತು ನಿಮ್ಮೆಲ್ಲರ ಚಿತ್ರ ನನ್ನ ಕಣ್ಣ ಮುಂದೆ ಬರುತ್ತಿದೆ. ಅವರೆಲ್ಲರ ಮತ್ತು ನಿಮ್ಮ ಹೃದಯಗಳೊಂದಿಗೆ ನನ್ನ ಹೃದಯವು ಮೌನ ಸಂಭಾಷಣೆ ನಡೆಸುತ್ತಿದೆ. (ನನ್ನ ಪೆನ್ನು ಮುಂದುವರಿಯದೆ ನಿಂತಿತು; ಒಂದು ಪೆನ್ಸಿಲು ನನ್ನ ಸಹಾಯಕ್ಕೆ ಬಂತು) ನಾನು ನನ್ನ ಸಹೋದರರ ಪಾಲಿನ ಕರ್ತವ್ಯವನ್ನು ಮಾಡಲಾರದೆ ಹೋದೆನೆಂಬುದನ್ನು ಬಲ್ಲೆ. ನಾನವರಲ್ಲಿ ಯಾರಿಗೂ ಸಹಾಯವಾಡಿಲ್ಲ. ನಾನವರಿಗೆ ಸಹಾಯ ಮಾಡಬೇಕಾದ ಕಾಲ ಈಗ ತಾನೇ ಹಸ್ತಗತವಾಗಿದೆ ಎಂದು ನಾನು ನೆನಸಿದ್ದೆ. ಆದರೆ ವಸ್ತುತಃ ಹಾಗಿಲ್ಲ. ನಿಮ್ಮ ಸದ್ಯದ ಯೋಚನೆ ನಿಜಕ್ಕೂ ಹೀಗೆ ಇರಲಿಕ್ಕಿಲ್ಲ.

ಪ್ರಿಯ ತಮ್ಮಾ, ಅಬ್ದುಲ್ ರಹೀಮ್, ನಿನ್ನ ಹಿರಿಯಣ್ಣ—ನಿನ್ನ ಏಕ ಮಾತ್ರ ಸಹೋದರ—ಈ ಪ್ರಪಂಚವನ್ನು ಬಿಟ್ಟು ಹೋಗುತ್ತಿದ್ದಾನೆ. ನನ್ನ ಜೀವನದ ಅಲ್ಪಾವಧಿಯಲ್ಲಿ ನಾನು ಹಲವು ಪ್ರಸಿದ್ಧ ಮತ್ತು ಯಥಾರ್ಥ ಸ್ನೇಹಿತರನ್ನುಗಳಿಸಿದ್ದೇನೆ. ಅವರೆಲ್ಲಾ ನಿನ್ನನ್ನು ತಮ್ಮ ಸ್ವಂತ ತಮ್ಮನೆಂದೇ ಭಾವಿಸುವರು. ನನ್ನ ಮರಣದಿಂದ ನೀನು ಕಳೆಕೊಂಡ ಪ್ರೀತಿಯು ಒಂದು ದಿನ ಅವರಿಂದ ನಿನ್ನ ಪಾಲಿಗೆ ತುಂಬಿ ಬರುವದು. ನನ್ನ ಪ್ರೀತಿಯ ತಾಯಿ ಮತ್ತು ಏಕ ಮಾತ್ರ ತಂಗಿಯನ್ನು ನಾನು ನಿನ್ನ ಕೈಗೊಪ್ಪಿಸಿಕೊಡುತ್ತಿದ್ದೇನೆ. ನಿನ್ನ ಪ್ರೀತ್ಯಾದರಗಳ ಬಲದಿಂದ ಅವರು ನನ್ನ ಅಗಲುವಿಕೆಯನ್ನು ಮರೆಯುವಂತಾಗಲಿ. ಅವರಿಗೆ ನನ್ನಿಂದಾಗಿರುವ ದುಃಖವು ನಿನ್ನ ಪ್ರೀತಿ ಪ್ರವಾಹದಲ್ಲಿ ಮುಳುಗಿ ಹೋಗುವಂತೆ ಮಾಡು. ನನ್ನ ಸೇವೆಗಳಿಗಾಗಿ ಏನಾದರೂ ಬಹುಮಾನ ನಿನಗೆ ದೊರೆತರೆ ಅದು ಅವರಿಬ್ಬರಿಗೂ ಸಿಕ್ಕುವಂತೆ ಮಾಡು. ನನ್ನ ಪಾಲಿನ ಯಾವ ಬಹುಮಾನವನ್ನು, ಯಾರಿಂದ, ಹೇಗೆ ನೀನು ಪಡೆಯುವೆ ಎಂಬುದನ್ನು ನಾನು ಹೇಳಲಾರೆ. ನೀನದನ್ನು ಪಡೆಯುವದು ಖಂಡಿತ. ಅದನ್ನು ಕೊಡುವವರಾರು ಎಂದು ವಿಚಾರಿಸುವದಕ್ಕೂ ನೀನು ಹೋಗಬೇಕಾಗಿಲ್ಲ. ಅದು ನೀನಿದ್ದಲ್ಲಿಗೆ ಬರಲಿದೆ. ನಮ್ಮ ಸಮೀಪ ಸಂಬಂಧಿಕರಿಗೆಲ್ಲಾ ನನ್ನ ಪ್ರೀತಿ ಪೂರ್ಣ ವಂದನೆಗಳನ್ನು ತಿಳಿಸು. ಅವರೆಲ್ಲಾ ನನ್ನನ್ನು ಹೃದಯತಃ ಪ್ರೇಮಿಸುತ್ತಿದ್ದರು. ನನ್ನನ್ನು ಮರೆತು ಬಿಡುವಂತೆ ಅವರಿಗೆ ತಿಳಿಸು. ನನ್ನನ್ನು ಪ್ರೀತಿಸುತ್ತಿದ್ದ ಎಲ್ಲಾ ಸ್ನೇಹಿತರಿಗೂ ಸಂಬಂಧಿಕರಿಗೂ ನನ್ನ ಪ್ರೇಮ ಪೂರ್ಣ ಕೊನೆಯ ವಂದನೆಗಳು. ಕೆ. ಎಮ್. ಖಾದರ್ ಫಾಯಿಲ್ವಾನ್, ಪರಾವೂರ್, ಎಮ್. ಕೆ. ಆಸಾನ್, ಎಡಾವಾ, ಅಬ್ದುಲ್ ಮಜೀದ್, ಅಲಾವುದ್ದೀನ್, ಈಗ ಮಲಯದಲ್ಲಿದ್ದಾರೆ. ಅವರೆಲ್ಲಾ ನನ್ನ ನಿಕಟಾನುಯಾಯಿಗಳಾಗಿದ್ದರು. ನಾನು ಬಲಿದಾನವಿತ್ತ ಮಹತ್ಸಾಧನೆಯ ಭಾವೀ ಸೂತ್ರಧಾರಿತ್ವವು ಅವರ ಪಾಲಿಗೆ ಹೋಗಬಹುದು. ವಿವಿಧ ಸಂದರ್ಭಗಳಲ್ಲಿ ನನ್ನ ಹಿತಚಿಂತಕರೂ ಸಹಾಯಕರೂ ಆಗಿದ್ದ ಹಲವು ಮಿತ್ರರ ಮತ್ತು ಸಂಬಂಧಿಕರ ಹೆಸರನ್ನು ನಾನಿಲ್ಲಿ ಬರೆದಿಲ್ಲ.

ಗಂಟೆಯ ಮುಳ್ಳು ಮಧ್ಯರಾತ್ರಿಯ ಹನ್ನೆರಡು ಹೊಡೆಯಲು ಸಮೀಪಿಸುತ್ತಾ ಇದೆ. ನನ್ನ ಮರಣ ದಿನದ ಪ್ರಥಮ ಚಲನೆಯಾರಂಭವಾಗುತ್ತಿದೆ. ಮುಳಲ ಕಣಗಳು ಹಾಂಹತ್ತಿದುವು. ಶುಕ್ರವಾರ, ರಮ್ಜಾನಿನ ಏಳನೇ ದಿನ, ಮುಂಜಾನೆ ಘಂಟೆ ೫ರಿಂದ ೬ರ ಒಳಗೆ ನಾನು ಸಾಯುತ್ತೇನೆ

ನನ್ನ ಅತ್ಯಂತ ಪ್ರೀತಿಯ ಮತ್ತು ಭಕ್ತಿಯ, ತಂದೆ, ತಾಯಿ, ತಂಗಿ, ಪರಿಚಿತ ಮತ್ತು ಅಪರಿಚಿತ ಮಿತ್ರ ಸಂಬಂಧಿಕರೇ, ನಿಮ್ಮೆಲ್ಲರಿಗೂ ವಿದಾಯಗಳು. ನಿಮ್ಮನ್ನು ಸಂತೈಸಲು ನನ್ನಲ್ಲೇನೂ ಇಲ್ಲ. ಸಾವಿನ್ನು ಸ್ವರ್ಗದಲ್ಲಿ ಒಟ್ಟಾಗುವಾ. ನನಗಾಗಿ ದುಃಖಿಸಬೇಡಿರಿ. ನನ್ನೀ ನಮ್ರ ಜೀವನ ನಾಟಕ ಮುಗಿಸಲು ಇನ್ನು ಕೆಲವೇ ಮಿನಿಟುಗಳುಳಿದಿವೆ. ನಾನೆಷ್ಟು ಶಾಂತವಾಗಿ ಮತ್ತು ಧೈರ್ಯದಿಂದ ಸಾವನ್ನೆದುರಿಸಿದೆನೆಂಬುದನ್ನು ಒಂದು ದಿನ ಆ ದೃಶ್ಯದ ಪ್ರತ್ಯಕ್ಷ ದರ್ಶಿಯಿಂದ ನೀವು ತಿಳಿಯುವಿರಿ. ಆಗ ನಿಮ್ಮಲ್ಲಿ ಆನಂದ ಮತ್ತು ಹೆಗ್ಗಳಿಕೆ ಮೂಡುವದು.

ಸಲಾಂ ಮಾಲೆಕುಮ್

ನಿಮ್ಮ ಪ್ರೀತಿಯ ಮಗ

ಮಹಮ್ಮದ್ ಅಬ್ದುಲ್ ಖಾದಿರ್

ಘಂಟೆ ಬಡಿಯುತ್ತಿದೆ

ಮೃತ್ಯು ಕಾಯುತ್ತಿದೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ಪರಿಣಾಮ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲಿಷ್ಟವಾದ ಕೇಸುಗಳಿಗೆ ರೂ. 5. ೯ ತಿಂಗಳ ಬರ್ತ್ ಕಂಟ್ರೋಲಿಗೆ ರೂ 4/- (ವಿ. ಪಿ. 12 ಆಣೆ ಅಧಿಕ.)

Mrs. P. DEVEE,

[illegible] Tollygunge, Calcutta.

ಶಾಲೋಪಯೋಗಿ ಸಾಹಿತ್ಯಗಳು

ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮುದ್ರಿತ ರಿಟರ್ನ್ ಫಾರ್ಮುಗಳು, ರಿಕಾರ್ಡ್ ಶೀಟ್‌ಗಳು, ಮಗ್ಗಿ ಪುಸ್ತಕಗಳು ಇತ್ಯಾದಿ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,

ಉಡುಪಿ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

ENGLISH MADE EASY
(SELF ENGLISH STUDY)

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0

1—8—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

[illegible] ಉಡುಪಿ. ದ. ಭಾರತ

ಬ್ರಿಟಿಷ್ ಯೋಜನೆಯ ಮುಖ್ಯ ದೋಷಗಳು

ಗಾಂಧಿಜೀಯ ಅಭಿಪ್ರಾಯ

ತಾ. 2-6-46ರ 'ಹರಿಜನ' ಪತ್ರಿಕೆಯಲ್ಲಿ 'ಮುಖ್ಯ ದೋಷಗಳು' ಎಂಬ ಶಿರೋನಾಮದಡಿಯಲ್ಲಿ ಬ್ರಿಟಿಷ್ ಯೋಜನೆಯ ಕುರಿತು ಗಾಂಧಿಜೀ ಹೀಗೆ ಬರೆದಿದ್ದಾರೆ:—

ದುಶ್ಶಕುನ

"ಅಂತರ್ಯಾತೀ ಮತ್ತು ಕಾನೂನು ಬದ್ಧವಾಗಿ ಅವಲೋಕಿಸಿದಾಗ ಬ್ರಿಟಿಷ್ 'ರಾಜ್ಯ ಪತ್ರ'ವು ಧೀರೋದಾತ್ತವಾಗಿರುವಂತೆ ನನಗ ತೋರಿತು. ಹಾಗಿದ್ದರೂ ಅದಕ್ಕೆ ಬಂದ ಅಧಿಕೃತ ಸ್ಪಷ್ಟೀಕರಣವು ಜನಪ್ರಿಯತೆ ಗಳಿಸುವಂತಹದಲ್ಲ. ಹಾಗಿದ್ದಲ್ಲಿ ಮತ್ತು ಅದೇ ಕಾಯಂಗೊಂಡಲ್ಲಿ ಅದೊಂದು ದುಶ್ಶಕುನವಾಗುವದು. ಭಾರತದ ಸುದೀರ್ಘ ಬ್ರಿಟಿಷ್ ಆಡಳಿತೆಯ ಚರಿತ್ರೆಯಲ್ಲಿ ಈ ಅಧಿಕೃತ ಸ್ಪಷ್ಟೀಕರಣವು ಉದ್ಧೃತಗೊಂಡಿದೆ, ಮತ್ತದನ್ನೇ ಮುಂದೊತ್ತಲಾಗಿದೆ. ಭಾರತದಲ್ಲಿ ಕಾನೂನು, ದಾತ, ಜಡ್ಜ ಮತ್ತು ಆ ಸಂಬಂಧದ ಕ್ರಿಯಾಕರ್ತನ ಅಧಿಕಾರಗಳೆಲ್ಲಾ ಒಬ್ಬ ವ್ಯಕ್ತಿಯಲ್ಲಿಯೇ ಐಕ್ಯಗೊಂಡಿವೆ ಎಂದು ಹೇಳಲು ನಾನು ಈ ಮೊದಲು ಅನುಮಾನಿಸಿಲ್ಲ. ಬ್ರಿಟಿಷ್ ರಾಜ್ಯ ಪತ್ರವು ಸಾಮ್ರಾಜ್ಯವಾದೀ ಸಂಪ್ರದಾಯಕ್ಕಿಂತ ಭಿನ್ನವಾಗಿಲ್ಲವೆ? 'ಇದೆ' ಎಂದೇ ನಾನಿದಕ್ಕೆ ಉತ್ತರಕೊಟ್ಟಿದ್ದೇನೆ. ಅದು ಹೇಗುಂಟೋ ಹಾಗಿರಲಿ. ನಾವೀಗ ಅದರೊಳಗಿರುವ ಆ ಭಾವಗಳ ಕಡೆಗೊಮ್ಮೆ ದೃಷ್ಟಿ ಬರೋಣ

ಪ್ರಥಮ ದೋಷ

ಬ್ರಿಟಿಷ್ ಪ್ರತಿನಿಧಿ ಸಮಿತಿಯು ಸಿಮ್ಲದಲ್ಲಿ ಸ್ವಲ್ಪಾವಧಿ ಕಳೆದು ಮೇ 14ರಲ್ಲಿ ದಿಲ್ಲಿಗೆ ಮರಳಿತು. ತಾ. 16ರಲ್ಲೇ ತಮ್ಮ ಹೇಳಿಕೆಯನ್ನವರು ಹೊರಡಿಸಿದರು. ಆದರೆ ಕೇಂದ್ರದಲ್ಲಿ ಜನಪ್ರತಿನಿಧಿ ಸರಕಾರ ಸ್ಥಾಪನೆಯಾಗುವದು ನಮಗಿನ್ನೂ ದೂರವೇ ಇದೆ. ಹೇಳಿಕೆಯನ್ನು ಜಾಹೀರು ಮಾಡುವ ಮೊದಲೇ ಅವರು ಕೇಂದ್ರ ಸರಕಾರ ನಿರ್ಮಾಣಮಾಡಬಹುದಿತ್ತು, ಆದರೆ ಅವರು ಮುಂದಾಗಿ ಹೇಳಿಕೆ ಹೊರಡಿಸಿದರು, ಆ ಮೇಲೆ ನಡುಗಾಲ ಸರಕಾರದ ರಚನೆಗಾಗಿ ಶೋಧಮಾಡಲಾರಂಭಿಸಿದರು. ಮಿಲಿಯಾಂತರ ಜನರು ಆಹಾರ ಮತ್ತು ವಸ್ತ್ರದ ಅಭಾವದಿಂದ ಸಂಕಟ ಪಡುತ್ತಿರುವಾಗ, ಮೇಲಿನ ಕಾರ್ಯವಾಗಬೇಕಾದರೆ ಮುಂದೆ ದೀರ್ಘಕಾಲ ಹಿಡಿಯಬಹುದು. ಇದು ನಂಬ್ರ 1ನೇ ದೋಷ.

ದ್ವಿತೀಯ ದೋಷ

ಬ್ರಿಟಿಷ್ ಮೇಲಧಿಕಾರದ ಪ್ರಶ್ನೆ ಈ ವರೆಗೆ ಇತ್ಯರ್ಥಗೊಂಡಿಲ್ಲ. ಭಾರತದಲ್ಲಿ ಬ್ರಿಟಿಷ್ ಆಡಳಿತೆ ಅಂತ್ಯವಾಗುವಾಗಲೇ ಆಶ್ರಿತ ರಾಜ್ಯಗಳ ಮೇಲಿನ ಬ್ರಿಟಿಷ್ ಶ್ರೇಷ್ಠತ್ವ ತೊಲಗುವದು ಎಂದು ಹೇಳಿದರೆ ಸಾಲದು. ನಡುಗಾಲದ ಅವಧಿಯಲ್ಲಿ ಅನಿಬಂಧವಾಗಿ ಅದು ಸಾಗಿದರ ಕಷ್ಟದಾಯೀ ಪಡಿಯೊಂದನ್ನು ಮುಂದಿನ ಸ್ವತಂತ್ರ ಸಂಕಾಲದ ಪಾಲಿಗದು ಉಳಿಸಿಹೋಗಲಿದೆ. ನಡುಗಾಲ ಸರಕಾರದ ಸ್ಥಾಪನೆಯೊಂದಿಗೆ ಅಂತ್ಯಗೊಳ್ಳುವದು ಅದಕ್ಕೆ ಅಸಾಧ್ಯವಾದರೆ, ಅದರೊಡನೆ ಸಹಕರಿಸುತ್ತದು ಆಶ್ರಿತ ರಾಜ್ಯಗಳ ಪ್ರಜೆಗಳ ಹಿತವೊಂದನ್ನೇ ಸಾಧಿಸುವಂತಿರಬೇಕು. ಸ್ವಾತಂತ್ರ್ಯದ ಅಪೇಕ್ಷೆಯುಳ್ಳವರು ಮತ್ತದಕ್ಕಾಗಿ ಹೋರಾಡುತ್ತಿರುವವರೆಂದರೇ ಜನರ. ಹೊರತು, ಜನತೆಯ ಸ್ವಾತಂತ್ರ್ಯದ ಮನಿಸುವಾಗ ತಾವದರ ಮರಿಗಳಲ್ಲವೆಂದು ಹೇಳುತ್ತಿದ್ದರೂ ವಿದೇಶೀ ಅಳ್ವಿಕೆಯನ್ನೇ ಆಧರಿಸಿ ನಿಂತಿರುವ ಆಶ್ರಿತ ರಾಜರಲ್ಲ. ಆಶ್ರಿತ ರಾಜರು ತಮ್ಮ ಸ್ಥಾನಕ್ಕೆ ಸುಗುಣವಾಗಿ ವರ್ತಿಸುವದಾದರೆ, ತಾವು ಜನತೆಯ ಮೇಲಧಿಕಾರಕ್ಕೆ ಶರಣು ಬಂದು ಹೊಸ ಯೋಜನೆಯಲ್ಲಿ ನಮೂದಿಸಲ್ಪಡಿಸಬೇಕು. ಇದು ನಂಬ್ರ 2ನೇ ದೋಷ.

ಟ್ಟಿರುವ ಜನತಾ ಶ್ರೇಷ್ಠತ್ವವನ್ನು ಸ್ವಾಗ

ವಿದೇಶೀ ಸೇನೆ ಬೇಕೆ?

ನಡುಗಾಲಾವಧಿಯಲ್ಲಿ ದೇಶದ ಆಂತರಿಕ ಶಾಂತಿಯ ರಕ್ಷಣೆಗಾಗಿಯೂ ಹೊರಗಿನ ಧಾಳಿಯ ಪ್ರತಿಭಟನೆಗಾಗಿಯೂ ಸೇನೆಗಳು ಇಲ್ಲಿ ಉಳಿಯುತ್ತವೆ ಎಂಬ ಹೇಳಿಕೆಯಿದೆ. ಆ ಗೌಂವಾರ್ಹ ಅವಧಿಯಲ್ಲಿ ಈ ಉದ್ದೇಶವಿಟ್ಟುಕೊಂಡು ಬ್ರಿಟಿಷ್ ಸೇನೆಯಲ್ಲಿ ನಿಂತು ಬಿಟ್ಟರೆ, ಅವರ ಇರಸ್ತಿಕೆಯು ರಾಜ್ಯಾಂಗರಚನಾ ಸಭೆಯ ಎದೆ ಕುಗ್ಗಿಸದಿರದು. ಸ್ವತಂತ್ರನಾಮಾಂಕಿತ ಸರಕಾರ ರಚನೆಗೊಂಡ ಮೇಲಂತೂ ಅದು ಮತ್ತಷ್ಟು ಅನಪೇಕ್ಷಣೀಯವಾಗುವದು ಸಂಭವನೀಯ. ಒಳಗಿನ ಅಥವಾ ಹೊರಗಿನ ರಕ್ಷಣೆಗಾಗಿ ಪರದೇಶೀ ಸೇನೆ ಬೇಕೆಂದು ಅಪೇಕ್ಷಿಸುವ-ಅಥವಾ ಅದು ಹೇರಲ್ಪಟ್ಟ-ಒಂದು ರಾಷ್ಟ್ರವು ಯಾವ ವಿಧದಿಂದಲೂ ಸ್ವತಂತ್ರ ರಾಷ್ಟ್ರವೆಂದು ಗಣಿಸಲ್ಪಡಲಾರದು, ಅಂತಹ ರಾಷ್ಟ್ರವು ಸ್ವಾಡಳಿತೆ ನೋಡಲು ಅನರ್ಹವಿದೆ ಎಂಬುದೇ ಇದರ ಮಥಿತಾರ್ಥ. ಏಕಾಕಿಯಾಗಿ ನೆಟ್ಟಗೆ ತಲೆಯೆತ್ತಿ ನಿಲ್ಲಲು ಶಕ್ತವಾದಾಗಲೇ ಅದರ ಸತ್ವ ಪರೀಕ್ಷೆ. ನಾವು ಸ್ವತಂತ್ರವಾದಾಗ ಸ್ವೈಅನ್ನಿಸಿಕೊಳ್ಳಬೇಕಾದರೆ ನಡುಗಾಲ ಅವಧಿಯಲ್ಲಿ ಅನ್ಯ ಸಹಾಯವಿಲ್ಲದೇನೇ ಕಾರ್ಯ ನಿರ್ವಹಿಸಿಕೊಳ್ಳಲು ನಾವು ಕಲಿಯಬೇಕು; ಚಮಚದಿಂದ ತಿನ್ನಿಸಲ್ಪಡುವಂತಿರುವದನ್ನು ನಾವಿನ್ನು ನಿಂದಲೇ ಬಿಟ್ಟು ಬಿಡಬೇಕು

ಬ್ರಿಟಿಷ್ ಮಂತ್ರಿಗಳ ಯಥಾರ್ಥತೆ

ಇವೆಲ್ಲಾ ವಿಷಯಗಳು ನಮ್ಮಿಚ್ಛೆಯಂತೆ ಆಗುತ್ತಿಲ್ಲವಾದರೆ ಅದಕ್ಕೆ ನಮ್ಮ ದೌರ್ಬಲ್ಯವೇ ಕಾರಣವೆಂದು ಭಾವಿಸಬೇಕು. ಇದಕ್ಕೆ ಬ್ರಿಟಿಷ್ ಸರಕಾರ ಅಥವಾ ಅಲ್ಲಿಯ ಜನತೆ ಹೊಣೆಯಾಗದು. ನಮಗೇನೇ ದೊರೆಯಲಿ, ಅದು ನಮ್ಮ ಯೋಗ್ಯತೆಗೆ ಹೇಳಿಸಿದಂತಹದೇ ಹೊರತು, ಸಮುದ್ರದಾಚೆಯಿಂದ ಬಂದ ಉಡುಗೊರೆಯೇನೂ ಅಲ್ಲ. ಆ ಮೂವರು ಮಂತ್ರಿಗಳು ತಾವೇನನ್ನು ಜಾಹೀರುಮಾಡಿದ್ದರೋ ಅದನ್ನು ಮಾಡುವದಕ್ಕಾಗಿ ಬಂದಿದ್ದರು. ಬ್ರಿಟಿಷ್ ಜಾಹೀರುನಾಮೆಗಿಂತ ಹೆಜ್ಜೆ ಹಿಂದಿಟ್ಟು, ಬ್ರಿಟಿಷ್ ಆಡಳಿತೆಯನ್ನುಳಿಸಿಕೊಳ್ಳಲು ಹಾದಿ ಹಂಚಿಕೆಗಳನ್ನು ಹುಡುಕ ಹತ್ತಿದರೆ ಆಗ ಮಾತ್ರ ನಾವವರನ್ನು ದೂರಬೇಕು. ಭಯಕ್ಕಿನ್ನೂ ಅವಕಾಶವಿದೆ ಆದರೆ ಅವರ ಬಾಯಿಯಲ್ಲೊಂದು, ಮನಸ್ಸಿನಲ್ಲಿ ಬೇರೊಂದಿದೆ ಎಂಬ ಚಿಹ್ನೆಯು ದಿಗಂತದಲ್ಲಿನ್ನೂ ಕಂಡು ಬರುವದಿಲ್ಲ".

Navayuga Enterprise Ltd. Udipi

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,

ಉಡುಪಿ.

ತಾ. 12—5—'1946ರಲ್ಲಿ ಜರಗಿದ ಪಾಲುದಾರರ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಪಾಲು ಭಂಡವಾಳವನ್ನು 1,00,000 ರೂಪಾಯಿಗೆ ಹೆಚ್ಚಿಸುವ ನಿರ್ಣಯ ಮಾಡಲ್ಪಟ್ಟಿರುವುದು. ಆ ಸಂಬಂಧ ರೂ 10ರ 8000 ಹೊಸ ಪಾಲುಗಳನ್ನು ಹೊರಡಿಸಲಾಗಿದೆ. (ಪ್ರತಿ ಪಾಲಿಗೂ ರೂ 1/ ಪ್ರವೇಶ ಧನ ಪ್ರತ್ಯೇಕ) ಈ ಹೊಸ ಪಾಲುಗಳು ಈಗಿನ ಪಾಲುದಾರರಿಗೆ ಮಾತ್ರವೇ ಅವರವರಿಗೆ ಈಗಿರುವ ಪಾಲುಗಳಿಗೆ 1ಕ್ಕೆ 4ರಂತೆ ಕೊಡಲ್ಪಡುವವು. ಪ್ರತಿ ಪಾಲುದಾರರಿಗೂ ಪಾಲು ಅರ್ಜಿಗಳು ಕಳಿಸಲ್ಪಟ್ಟಿವೆ. ಅವರೆಲ್ಲರೂ ಆ ಪಾಲು ಅರ್ಜಿಯನ್ನು ಬರೆದು ತಕ್ಕ ಹಣದೊಂದಿಗೆ ತಾ **30-6-46**ರ ಒಳಗಾಗಿ ಆದಷ್ಟು ಬೇಗನೆ ಕಳಿಸಿ ಕೊಡುವಂತೆ ಅಪೇಕ್ಷಿಸೋಣಾಗುತ್ತದೆ. ತಾ. 30-6-46ರ ಅವಧಿಯೊಳಗಾಗಿ ಅರ್ಜಿ ಹಾಗೂ ಹಣವು ಪಾವತಿಯಾಗದಿದ್ದರೆ ಹೊಸ ಪಾಲುಗಳು ಬೇಡವೆಂದೆಣಿಸಲ್ಪಟ್ಟು ಅವು ಇತರರಿಗೆ ಕೊಡಲ್ಪಡುವವು.

ಕೆ. ಎಚ್. ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್

ಕೆ. ಜೆ. ಬಲ್ಲಾಳ್, ವಕೀಲ್, ಚೆಯರ್‌ಮೇನ್.

ವಿ ಸೂ:-ಹೊಸದಾಗಿ ಪಾಲುಗಳನ್ನು ಪಡೆಯಲಪೇಕ್ಷಿಸುವ ಮಹನೀಯರು ಪಾಲು ಅರ್ಜಿಗಳಿಗಾಗಿ ಬರಕೊಳ್ಳಬಹುದು ಇತರ ಅವರಿಗೆ ಪಾಲು ಕೊಡುವ ವಿಚಾರ ತಾ 30-6-46ರ ನಂತರವೇ ಆಲೋಚಿಸಲ್ಪಡುವುದು

ಬೊಂಬಾಯಿಯ ಪಾಲುದಾರರು ತಮ್ಮ ಹಕ್ಕಿನ ಹೊಸ ಪಾಲುಗಳನ್ನು ಅಲ್ಲಿಗೆ ಬಂದಿರುವ ಶ್ರೀ. ಕೆ ಜಗನ್ನಾಥ ಶೆಟ್ಟರೊಡನೆ ಹಣ ತತ್ತ ಪಡಕೊಳ್ಳಬೇಕಾಗಿ ವಿನಂತಿ

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೋ, ... ಸಿಕ ಸಂಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road Mangalore

NOTICE

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. I A 1027/1946 in
O S No. 168 1946.

ನೆಕ್ಕರೆ ಕಳೆಯ ಶಂಕ್ರನಾರ್‍ಯಣ ಭಟ್ಟ —ಅರ್ಜಿದಾರ.

ಮತ್ತು

ಪರಮೇಶ್ವರ ಭಟ್ಟ ಸಹಾ—ಪ್ರತಿವಾದಿಗಳು.

ಪ್ರತಿವಾದಿಯು ತಾರೀಕು 27 9 1945ರಲ್ಲಿ ಮಾಡಿಕೊಂಡ ಪಾಲು ಪಟ್ಟಿಯು ವಳ ಸಂಚಿನದು, ಮೋಸದ್ದು ಮತ್ತು ವಾದಿಗೂ ಇತರ ಸಾಲಗಾರರಿಗೂ ಮೋಸ ಕೊಡುವ ಉದ್ದೇಶದ್ದೆಂತ ಡಿಕ್ಲರೇಶನ್ ಬಗ್ಗೆ ವಾದೀಯು ತನ್ನ ಒಗಸ್ಟು ನ 1ನೇ ಪ್ರತಿವಾದೀಯ ಮೇಲಿನ ಸಾಲಗಾರರ ಪರವಾಗಿ ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 10-6-1946ಕ್ಕೆ ಪ್ರಥಮ ತನ್ನಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದಲ್ಲಿ ಕಕ್ಷಿಯಾಗಿ ಸೇರುವರೆ ಮನಸ್ಸುಳ್ಳವರು ಆ ದಿವಸ ಯಾ ಅದ್ರ ಮುಂಚಿತವಾಗಿ ಕೋರ್ಟಿಗೆ ಹಾಜರು ಮಾಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ

K. Sundar Rama Shetty.

Vakil for Petitioner

The Canara Banking Corporation Limited.
(Incorporated in British India, with limited Liability)
Estd: 1906.
Head Office: **UDIPI**, South Kanara.
CAPITAL

Authorised	Rs. 25,00,000
Issued & Subscribed ...	„ 16,00,000
Paid up	„ 15,60,120
Reserves	„ 4,60,000

ANNOUNCEMENT.
A Branch has been opened at BYADGI (Dharwar Dt.) **on 22nd May 1946.**
All kinds of banking business transacted

ಉಡುಪಿ, ಗುರುವಾರ, ೬-೬-'೪೬

ಅಪಾಯ ನಿರೀಕ್ಷೆ

ತಮ್ಮ 16 ಬೇಡಿಕೆಗಳು ಮಾನ್ಯವಾಗದಿದ್ದಲ್ಲಿ ಇದೇ ಜೂನ್ ತಾ 27ನೇ ಮಧ್ಯರಾತ್ರಿಯಿಂದ ಮುಷ್ಕರ ಹೂಡುವೆವೆಂದು ಸುಮಾರು 10 ಲಕ್ಷ ರೈಲ್ವೇ ಕೆಲಸಗಾರರ ಪರವಾಗಿ ಭಾರತದ 8 ಮುಖ್ಯ ರೈಲ್ವೇ ಶಾಖೆಗಳಿಗೆ ಇದೇ ತಾ. 1ರಲ್ಲಿ ನೋಟೀಸು ಹೋಗಿದೆ. ತಾ. 27ರೊಳಗೆ ಕೊನೆಯ ಜಯಶೀಲ ಪ್ರಯತ್ನವೊಂದು ನಡೆಯದೆ ಹೋದರೆ ಅಖಿಲ ಹಿಂದುಸ್ಥಾನದ ಸುಮಾರು 40000 ಮೈಲುದ್ದದ ರೈಲ್ವೇ ಕಂಬಿಗಳಲ್ಲಿ ಬಾಳಲಿಚ್ಛಿಸುವವರೂ ಸುಖನಿದ್ರೆ ಮಾಡಬಹುದಾದ ಕಾಲ ಬರುವದು ಖಂಡಿತ! ಈ ಮಾದರಿಯ ಅಖಿಲ ರಾಷ್ಟ್ರವ್ಯಾಪೀ ಮುಷ್ಕರವು ಹಿಂದೂ ದೇಶದ ಇದುವರೆಗಿನ ಚರಿತ್ರೆಯಲ್ಲೇ ಕಾಣಸಿಗದಂತಹದು. ಅಂತೆಯೇ ಈ ವರುಷ ಬಯ ಬೀರುತ್ತಿರುವ ಅಖಿಲ ರಾಷ್ಟ್ರ ವ್ಯಾಪೀ ಆಹಾರ ಬರಗಾಲವೂ ಭಾರತಕ್ಕೆ ಹೊಸತೇ. ಇವೆರಡರಲ್ಲಿ ಒಂದೊಂದೂ ರಾಷ್ಟ್ರದ ಪಾಲಿಗೆ ಮಹಾ ವಿಪತ್ತು; ಎರಡೂ ಜತೆಗೂಡಿ ಒದಗುವ ಪ್ರಳಯವನ್ನು ನೆನಸುವಾಗ ನಿಜಕ್ಕೂ ಹೃದಯ ತಲ್ಲಣಿಸುತ್ತಿದೆ.

ಇದು ವರೆಗೆ ಕಾಲ ಮೀರಿಲ್ಲ, ಇದು ಅಶಕ್ಯವೂ ಅಲ್ಲ. ಯುದ್ಧಾಂತ್ಯವಾದೊಡನೆಯೇ ರೈಲ್ವೇ ಮುಷ್ಕರದ ನಿರೀಕ್ಷೆಯಿದ್ದಿತ್ತು, ಆಂದ ಮೇಲೆ ರೈಲ್ವೇ ಕೆಲಸಗಾರರ ಬಾಳುವೆಯು ಯುದ್ಧಾವಧಿಯಲ್ಲಿಯೇ ಅಸಹ್ಯವಾಗಿದ್ದಿರಬೇಕು. ಈ ಹೊಸ ಬಗೆದು ತಮ್ಮ ಸಂಕಷ್ಟ ನಿವಾರಣೆಯ ಉದ್ದೇಶದಿಂದ ಆ ಕಾಲದಲ್ಲೇ ರೈಲ್ವೇ ಕೆಲಸಗಾರರು ಮುಷ್ಕರ ಹೂಡುತಿದ್ದರೆ ಯುದ್ಧನಿರತ ಹಿಂದೀ ಸರಕಾರವೆಂತಹ ಪೇಚಿನಲ್ಲಿ ಬೀಳುತ್ತಿತ್ತು ಎಂಬ ಚಿತ್ರವನ್ನೊಮ್ಮೆ ಕಣ್ಣ ಮುಂದೆ ತಂದುಕೊಳ್ಳಬೇಕು. ಆಗೋಸ್ತು ಗಲಭೆಗೆ ಜಾಪಾನೀ ಪಕ್ಷಪಾತಿತ್ವವೆಂಬ ಹೆಸರುಕೊಟ್ಟ ಸರಕಾರವು, ಈ ಮುಷ್ಕರಗಾರರನ್ನು ಜಪಾನರೆಂದೇ ಗಣಿಸುತ್ತಿದ್ದಿತೆಂಬ ಕುರಿತು ಸಂದೇಹವಿಲ್ಲ. ತಮ್ಮ ಹೊಟ್ಟೆಯ ಪಾಡಿನ ನೋವಿನ ಮೊದಲು ಲೋಕವನ್ನೊಮ್ಮೆ ನೋಡಿಕೊಳ್ಳುವ ದೃಷ್ಟಿ ಕೆಲಸಗಾರರಿಗಿರುವುದಕ್ಕೆ ಇದೊಂದು ನಿದರ್ಶನ.

ಈಗ ರೈಲು ಕೆಲಸಗಾರರು ನಡು ಬಗಿದಿದ್ದಾರೆ. ಆದರೆ ರೈಲ್ವೇ ಬೋರ್ಡಿಗೆ ಮಾತ್ರವಲ್ಲ, ಮಾಲಕ ವರ್ಗಕ್ಕೇನೆ ಇಂತಹ ಬೇಡಿಕೆಗಳು ಯಾವ ಹೊತ್ತಿನಲ್ಲೇ ಬಂದರೂ ಅದು ದುಷ್ಕಾಲ! ಅ. ಭಾ. ರೈಲ್ವೇ ಕೆಲಸಗಾರ ಸಂಘವು ಮುಂದಿಟ್ಟಿರುವ 16 ಬೇಡಿಕೆಗಳಲ್ಲಿ ಅತ್ಯಾಸೆ, ಅಧಿಕ ಪ್ರಸಂಗಗಳೇನೂ ಕಾಣುವದಿಲ್ಲ. ಆದರೆ ಸರಕಾರದ ರೈಲ್ವೇ ಬೋರ್ಡಿನ ದೃಷ್ಟಿಕೋನವೇ ಬೇರೆ. ಹಿಂದೀ ಸರಕಾರದ ಯುದ್ಧ ವಾಹನ ವ್ಯವಸ್ಥೆಗಳ ಸದಸ್ಯ ಸರ್ ಎಡ್ವರ್ಡ್ ಬೆಂಥಾಲರಿಗಿದರಲ್ಲಿ "ಸರಕಾರ ಮತ್ತು ಜನತೆಯನ್ನು ಬೆದರಿಸಲು ಅವರ ತಲೆಯ ಕಡೆಗೆ ರೈಲ್ವೇ ಕೆಲಸಗಾರರೆತ್ತಿದ ಪಿಸ್ತೂಲು" ಕಾಣುತ್ತಿದೆಯಂತೆ! ಇದು ಕಾಯಿದೇ ವಿರುದ್ಧ ಕೃತ್ಯವೆಂದೂ ಅವರೊಂದು ನಿಯಮವನ್ನಾಧರಿಸಿ ಮುಂದಾಗಿ ಎಚ್ಚರ ಕೊಟ್ಟಿದ್ದಾರೆ. ಕೆಲಸಗಾರರ ಬೇಡಿಕೆಯನ್ನು ಮನ್ನಿಸಲು ಹೋದರೆ ಸುಮಾರು 10 ಕೋಟಿ ರೂಪಾಯಿಗಳ ಅಧಿಕ ವೆಚ್ಚ ಹುಟ್ಟುವದು—ಸಂಚಾರ ಮತ್ತು ಸಾಮಾನುಗಳ ಮೇಲಿನ ಟಿಕೇಟಿನ ದರವನ್ನು ನೇಕಡಾ 12ರಷ್ಟು ಹೆಚ್ಚಿಸಬೇಕಾಗುವದು—ನಾವು ಪುನರ್ರಚನೆಗಳಿಗಾಗಿ ಪ್ರಾಂತ್ಯಗಳಿಗೆ ಸಹಾಯವಾಗಿ ಸಲ್ಲಿಸಬೇಕೆಂದಿದ್ದ ನಿಧಿಯು ನಮಸಂಖ್ಯೆಯುಷ್ಟಗುವ ವೊಬಲಗು ರೈಲ್ವೇ ಕೆಲಸಗಾರರನ್ನು ತೃಪ್ತಿಪಡಿಸಲು ವೆಚ್ಚವಾದಲ್ಲಿ ಪ್ರಾಂತ್ಯಗಳ ಆರೋಗ್ಯ, ವ್ಯವಸಾಯ, ವಿದ್ಯೆ, ರಸ್ತೆಗಳ ಸುಧಾರಣೆ ಹಿಂದೆ ಬೀಳುವದು—ಎಂದೆಲ್ಲಾ ಭಯ ಬೀರಿ, ಸರಕಾರೀ ಪ್ರತಿನಿಧಿಗಳು ಜನತೆಯ ಕಣ್ಣ ಮುಂದೆ ಈ ಮುಷ್ಕರಗಾರರನ್ನು ಅಪಾಯ ನಿರ್ಮಾಪಕರಂತೆ ಚಿತ್ರಿಸುತ್ತಿದ್ದಾರೆ. ರಾಷ್ಟ್ರದ ಮತ್ತು ಸರಕಾರದ ಮುಂದಿರುವ ಗಂಡಾಂತರದ ಸರಿಯಾದ ಜ್ಞಾನವುಳ್ಳ ಜವಾಬ್ದಾರೀ ಅಧಿಕಾರಿಗಳು ಈ ಕಾಲದಲ್ಲಿ ಇಂತಹ ಘೋಷಣೆ ವಹಿಸಿರುವದು ನಿಜಕ್ಕೂ ಶೋಚನೀಯ. ಮುಷ್ಕರದ ನೋಟೀಸು ಹೊರಡುವ ಪೂರ್ವದಲ್ಲೇ ರೈಲ್ವೇ ಬೋರ್ಡು ಮತ್ತು ಕೆಲಸಗಾರರ ಮುಷ್ಕರ ರಚನಾ ಸಮಿತಿಯ ಪ್ರತಿನಿಧಿಗಳೊಳಗೆ ನಡೆದ ಸಂಧಾನ ಮಾತುಕತೆಗಳು ನಿಷ್ಫಲವಾದುದರಿಂದ ಸದ್ಯ ನಿರಾಶೆ ಕವಿದಿದೆ.

ಕೂಲಿಗಾರನಿಗೆ ಕೂಡಾ ಸಮಾಧಾನ ಕೂಲಕ ದೊರೆಯದೆ ಹೋಗುವದಿಲ್ಲ. ವಾದ ಬಲವೇ ನ್ಯಾಯ ಬಲವಲ್ಲ. ಆಹಾರದ ಭೀಕರ ಬರಗಾಲದ ಛಾಯೆಯಡಿಯಲ್ಲಿ ರಾಷ್ಟ್ರವಿರುವಾಗ, ಅ. ಭಾ. ರೈಲ್ವೇ ಮುಷ್ಕರವೆದ್ದು ಪ್ರಾಣಾವಶ್ಯಕ ಜೀವನಧಾನ್ಯಗಳ ಆಮದು ರಪ್ತುಗಳಿಗೆ ಆತಂಕ ಬಿದ್ದರೆ, ಈ ಮುಷ್ಕರಕ್ಕೆ ಹೇತುವಾದ ಕಾರಣಗಳು ಎಷ್ಟೇ ಚಾತುರ್ಯಪೂರ್ಣವಾಗಿ ಮುಂದೆ ಬಂದರೂ ರಾಷ್ಟ್ರವು ಅದರ ಹೊಣೆಗಾರರನ್ನು ಕ್ಷಮಿಸುವಂತಿಲ್ಲ. ಮೌಲಾನಾ ಅಜಾದ್, ಪಂಡಿತ ನೆಹರು, ನವಾಬಝಾದ ಲಿಯಾಕತ್ ಅಲೀಖಾನ್ ಮೊದಲಾದ ಜನ ಪ್ರಮುಖರೊಡನೆ ವೈಸರಾಯರು ಇಷ್ಟರಲ್ಲೇ ಈ ಸಂಬಂಧದ ಮಾತು ಕತೆ ನಡೆಸ ಹತ್ತಿದ್ದಾರೆ; ಕೂಲಿಗಾರರ ಪ್ರಮುಖರು ರಾಷ್ಟ್ರೀಯ ಆಪತ್ತಿನ ಈ ಕಾಲದಲ್ಲಿ ರೈಲ್ವೆ ಮುಷ್ಕರವೆಂತಹ ಪ್ರಳಯವನ್ನು ನಿರ್ಮಿಸಬಹುದೆಂಬುದನ್ನೂ ಹಿಸಿಕೊಂಡು ತಮ್ಮ ಜವಾಬ್ದಾರಿಯರಿತು ವರ್ತಿಸುತಿದ್ದಾರೆ; ಈ ಆಶಾ ಜ್ಯೋತಿಗಳೀಗ ದಿಗಂತದಲ್ಲಿ ಮಿನುಗುತಿದ್ದರೂ, ಹಗಲಾಗಬಾರದೇಕೆ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತಿದೆ. ರಾಷ್ಟ್ರೀಯ ಸರಕಾರವೊಂದೇ ಸುಪ್ರಭಾತ. ಗಾಂಧಿಜೀ ಬರೆದಂತೆ ಬ್ರಿಟಿಷ್ ಮಂತ್ರಿ ಸಮಿತಿಯು ತನ್ನ ಹೇಳಿಕೆ ಹೊರಡಿಸುವ ಮೊದಲೇ ನಡುಗಾಲ ಕೇಂದ್ರ ಸರಕಾರ ನಿರ್ಮಿಸಬಹುದಿದ್ದಿತು. ಮುಷ್ಕರದಾವಾಗ್ನಿಯೇಳುವದಕ್ಕೆ ಇನ್ನೂ ಇಪ್ಪತ್ತು ದಿನಗಳ ಪೂರ್ಣಾವಕಾಶವಿದೆ, ರೈಲ್ವೇ ವಿವಾದದ ಕೂಲಂಕುಶ ವಿಚಾರಣೆ ನಡಿಸಿ, ಅಧಿಕೃತ ಆಶ್ವಾಸನೆ ಕೊಟ್ಟು ಶಾಂತಿ ಸ್ಥಾಪಿಸಲು ನ.ಕೂಲವಾಗುವಂತೆ ರೈಲ್ವೇ ಖಾತೆಯು ಜನ ಪ್ರತಿನಿಧಿಯು ಕೈಗೆ ಹೋಗುವ ನಡುಗಾಲ ಸರಕಾರವನ್ನು ವೈಸರಾಯರೀಕೆ ಕೂಡಲೇ ರಚಿಸಬಾರದು? ಮುಷ್ಕರಗಾರರ ಘೋಷಣೆಗೂ ಇಂದಿನ ಸರ್ ಬೆಂಥಾಲರಂತಹ ಬ್ರಿಟಿಷ್ ಪ್ರತಿನಿಧಿ ಯುರೋಪಿಯನನ ಮನೋವೃತ್ತಿಗೂ ದಕ್ಷಿಣೋತ್ತರ ವ್ಯತ್ಯಾಸ ಕಾಣುತ್ತಿದೆ ಸರ್. ಬೆಂಥಾಲರ ಸ್ಥಾನಗಳಲ್ಲಿ ಸರ್ದಾರ್ ಪಟೇಲ್ ಅಥವಾ ನವಾಬಝಾದಾ ಲಿಯಾಖತರಂಥವರು ಕುಳಿತೊಡನೆಯೇ ಛಾಪೀ ಅನಾಹುತದ ಪ್ರಭಾವ ಆರಿವಾಸಿ ಕುಗ್ಗದಿರದು. ಆ ಮೇಲೆ ಈ ಪ್ರಶ್ನೆಯನ್ನು ಬಿಡಿಸುವದು ಸುಲಭವಾಗಬಹುದು. ಅನ್ನ ವಸ್ತ್ರಗಳ ಅಭಾವ ಭಾರತವನ್ನು ದೀರ್ಘ ಕಾಲದಿಂದ ಬಿದರಿಸುತ್ತಿದೆ; ರೈಲ್ವೇ ಮುಷ್ಕರವೀಗ ಭಯ ಬೀರುತ್ತಾ ಸಮೀಪಿಸುತ್ತಿದೆ. ಇವೆಲ್ಲವುಗಳ ಪರಿಹಾರಕ್ಕೆ ಏಕಮಾತ್ರ ಉಪಾಯವಾಗಿರುವ ಕೇಂದ್ರ ಸರಕಾರದ ರಾಷ್ಟ್ರೀಕರಣ ಮಾಡಲು ಲೋರ್ಡ್ ವೇವೆಲರು ಇನ್ನಾದರೂ ತಡಮಾಡಲಾರರೆಂದು ಆಶಿಸಬಹುದೆ?

'ಹೈಲ್ ಹಿಟ್ಲರ್' ಬದಲಿಗೆ '88'!

ಜುಲುಮೆಯಿಂದ ಒಂದು ತತ್ವವನ್ನು—ಅದು ಸರಿಯಿರಲಿ, ತಪ್ಪಾಗಿರಲಿ—ನಿರ್ಮೂಲಿಸಲಾಗುವುದಿಲ್ಲವೆಂಬುದಕ್ಕೆ ಇಂದಿನ ಜರ್ಮನರೊಂದು ನಿದರ್ಶನ. ಕೆಲವು ಜರ್ಮನರ ಅಂತರಾಳದಲ್ಲಿ ಇನ್ನೂ ನಾಜಿತ್ವ ಅಡಗಿಕೊಂಡಿರುವಂತಿದೆ, ಸ್ವಾಭಿಮಾನದಿಂದ ಕುದಿಯುತ್ತಿರದ ಜರ್ಮನನೇ ಅಲ್ಲಿಲ್ಲವೆನ್ನಬಹುದು. ಮಿತ್ರರಾಷ್ಟ್ರೀಯರ ಅಂಕೆಗೊಳಗಾಗಿರುವುದರಿಂದಲೋ—ನಾಜಿತ್ವದಿಂದಾಗಿರುವ ಅನ್ಯಾಯ ಅಪಜಯಗಳ ಪರಿಣಾಮವಾಗಿಯೋ—ಜರ್ಮನರು ಫೇಸಿಸ್ಟ್ ವಿರೋಧಿಗಳಾಗಿ ಮಾರ್ಪಡುತಿದ್ದಾರೆ. ಆದರೆ ಪರರ ಅಧಿಕಾರವಿಲ್ಲದೆ ಸ್ವತಂತ್ರ ಬಾಳುವೆ ನಡಿಸುವ ಹುರುಪು ಪ್ರತಿಯೊಬ್ಬ ಜರ್ಮನನ ರಕ್ತಗತವಾಗಿದೆ.—ಆ ರಕ್ತವೀಗ ಒಳಗಿಂದೊಳಗೆ ಕುದಿಯುತ್ತಿದೆ. ಹಿಟ್ಲರನ ಕಾಲದಲ್ಲಿ 'ಹೈಲ್ ಹಿಟ್ಲರ್' ಘೋಷಗಳು ಎಲ್ಲೆಡೆಗಳಿಂದಲೂ ಕೇಳಬರುತಿದ್ದರೆ ಈಗ ಅಲ್ಲಲ್ಲಿಯ ಗೋಡೆಗಳಲ್ಲಿ '88' ಅಂಕೆ ಕಂಡು ಬರುತ್ತಿದೆಯಂತೆ. 'Hail Hitler' ಎಂಬೆರಡು ಪದಗಳ ಮೊದಲ ಅಕ್ಷರವು H. ಈ ಅಕ್ಷರವು ಅಕ್ಷರ ಮಾಲೆಯಲ್ಲಿ 8ನೆಯದು. ಆದ್ದರಿಂದ '88' ಎಂದರೆ 'ಹೈಲ್ ಹಿಟ್ಲರ್' ಎಂದರ್ಥ.

'ಫೇಸಿಸಮಿನಾಹುತಿಯಾದವರ' ಒಂದು ಸಾರ್ವಜನಿಕ ಸಭೆಯು ಜೂನ್ ತಾ. 2ಕ್ಕೆ ಬರ್ಲಿನಿನಲ್ಲಿ ಸೇರಲಿದ್ದಿತು. ಆದರೆ ಅಲ್ಲಿಯ ಮಿತ್ರರಾಷ್ಟ್ರೀಯ ಸರಕಾರದ ಅಧಿಕಾರಿಗಳು ಬಹಿಷ್ಕಾರ ಹಾಕಿದ್ದರು. ಆದರೆ ಜರ್ಮನರು ನಿಷೇಧಾಜ್ಞೆಯನ್ನು ಕಡೆಗಾಣಿಸಿ ಅಲ್ಲಿಯ ಥಿಯೇಟರಿನಲ್ಲಿ ಪ್ರಚಂಡ ಸಭೆ ಸೇರಿದರು. ಹಲವು ಭಾಷಣಗಾರರು ಸ್ವಾಭಿಮಾನಪೂರಿತ ಉಜ್ವಲ ಭಾಷಣಗಳನ್ನಿತ್ತರು. 'ಸಮತಾವಾದಿ ಪದ್ಧತಿಯ ಸ್ವತಂತ್ರ ರಾಷ್ಟ್ರ ನಮಗೆ ಬೇಕು.' 'ನಮಗೆ ಮಿತ್ರ ರಾಷ್ಟ್ರೀಯರ ಅವಶ್ಯಕತೆಯಿಲ್ಲ. ನಮ್ಮನ್ನು ನಾವೇ ಆಳಿಕೊಳ್ಳಬಲ್ಲೆವು' ಎಂದೇ ಎಲ್ಲಾ ಉಪನ್ಯಾಸಕರ ವೀರ ಘೋಷಣೆ. "ಜರ್ಮನಿಯಲ್ಲಿ ಸದ್ಯಕ್ಕಿರುವ 'ಫೇಸಿಸ್ಟ್ ವಿರೋಧಿ ಕೌನ್ಸಿಲ'ನ್ನು ರದ್ದು-ಪಡಿಸಬೇಕು ಹೊಸ ಚುನಾವಣೆಯಾಗಬೇಕು. ಸದ್ಯದ ಕೌನ್ಸಿಲಿನಂತೆ ಸಿಗರ್ ಸೇದುತ್ತಾ ವೈನ್ ಕುಡಿಯುತ್ತಾ ಕಾಲಕಳೆಯುವವರು ನಮಗೆ ಬೇಡ. ಜರ್ಮನ್ ಜನತೆಯ ಹಿತಸಂಬಂಧಗಳಿಗೊದಗುವ ಧಕ್ಕೆಗಳನ್ನು ತಡೆಯುವವರೇ ಬೇಕು' ಎಂದೆಲ್ಲಾ ಆ ಸಭೆಯಲ್ಲಿ ವೀರ ವಾಣಿಗಳು ಕೇಳಬಂದುವು. ಜರ್ಮನ್ ಪೋಲಿಸರೂ ರಶ್ಯನ್ ಸೈನಿಕರೂ ಈ ಕಾಯಿದೆ ವಿರುದ್ಧ ಸಭೆಯನ್ನು ನಿಂತು ನೋಡುತಿದ್ದರಲ್ಲದೆ ಆತಂಕಿಸಲು ಹೋಗಲಿಲ್ಲ!

ಮೇಕರ್ಥರರ ಕೊಲೆಯ ಪ್ರಯತ್ನ

ಕಬ್ಬಿಣದ ಕಟ್ಟುಗಳಿಂದ ಬಿಗಿಯಲ್ಪಟ್ಟಂತಿರುವ ಜಪಾನರಲ್ಲಿಯೂ ಸ್ವಾಭಿಮಾನದ ಉರಿ ಒಳಗಿಂದೊಳಗೆ ಧಗಧಗಿಸುತ್ತಿರುವಂತಿದೆ. ಅಲ್ಲಿ ಮಿತ್ರ ರಾಷ್ಟ್ರೀಯ ಮುಖ್ಯ ಸೇನಾನಿಯಾಗಿದ್ದು, ಚಕ್ರವರ್ತಿಯ ಸಮೇತ ಇಡೀ ಜಪಾನನ್ನೇ ತನ್ನಿಚ್ಛೆಯಂತೆ ಆಡಿಸುತ್ತಿರುವ ಜನರಲ್ ಮೇಕ್ ಅರ್ಥರರನ್ನು ಕೊಲೆ ಮಾಡಲು ಮೂರು ಬಾರಿ ಪ್ರಯತ್ನ ನಡೆಯಿತು.

ಕಳೆದ ವರುಷದಲ್ಲೊಮ್ಮೆ ಮನಿಲದಲ್ಲಿ ಜನರಲ್ ಮೇಕರ್ಥರರ ಪ್ರಾಣಾಪಹಾರ ಪ್ರಯತ್ನ ಮಾಡಿದರೆಂದು ಹಲವು ಜಪಾನರಿಗೆ ಮರಣದಂಡನೆಯಾಗಿತ್ತು. ಕಳೆದ ಎಪ್ರಿಲ್ 30ರಲ್ಲಿ ಆ ಸಂಬಂಧದ ಮತ್ತೊಂದು ಒಳಸಂಚು ಕಂಡುಹಿಡಿಯಲ್ಪಟ್ಟಿದ್ದಿತು. ಮೂರನೆಯದು ಕಳೆದ ವಾರದ

ಲ್ಲೇ ನಡೆದಿತ್ತು. ಟೋಕಿಯೋದ ಅಮೇರಿಕದ ರಾಯಭಾರಿ ನಿವಾಸಕ್ಕೂ ತನ್ನ ಮುಖ್ಯ ಕಾರ್ಯಾಲಯಕ್ಕೂ ಮೇಕರ್ಥರರು ಹೋಗಿ ಬರುವ ಹಾದಿಯೊಂದು ಎಲ್ಲರಿಗೂ ಗೊತ್ತಿದ್ದದ್ದೇ. ಆ ಹಾದಿಯಲ್ಲೇ ಅವರಿಗೆ ಗುಂಡಿಡುವ ಒಳ ಸಂಚು ನಡೆದಿದ್ದುದನ್ನು ಅಮೇರಿಕನ್ ಶೋಧನಾ ಚತುರ ಶಾಖೆ ಪತ್ತೆ ಹಚ್ಚಿದುದರಿಂದ ಅವರ ವೈಗಾವಲಿಗೆ ಬಲವಾದ ಪಹರೆಯಿಡಲಾಯಿತು. ಅದ್ದರಿಂದ ಕೊಲೆಗಡುಕರಿಗೆ ಅವಕಾಶ ದೊರೆಯಲಿಲ್ಲ.

ಜಾಗತಿಕ ಸಂಘಕ್ಕೆ ನೀಗ್ರೋಗಳ ಮೊರೆ

ಪ್ರಪಂಚಕ್ಕೆ ಶಾಂತಿ ಸಮಾನತೆಯ ಹಿತೋಪದೇಶವನ್ನು ಕೊಡುವ ಸ್ಥಾನ ತನ್ನದೆಂದು ಹೆಮ್ಮೆ ಪಡುತ್ತಿರುವ ಅಮೇರಿಕದಲ್ಲಿರುವ ನೀಗ್ರೋಗಳ ಸ್ಥಿತಿ ಶೋಚನೀಯವಾಗಿದೆ; ಭಾರತದ ಅಸ್ಪೃಶ್ಯ ವರ್ಗಕ್ಕಿಂತಲೂ ಹೆಚ್ಚಿನ ಅಮಾನುಷ ಅಪಮಾನಗಳಿಗೆ ಅಮೇರಿಕದ ನೀಗ್ರೋಗಳು ಗುರಿಯಾಗಿದ್ದಾರೆ. ಶ್ವೇತ ವರ್ಣೀಯರಿಂದ ನೀಗ್ರೋ ಜನಾಂಗವನುಭವಿಸಿರುವ, ಮತ್ತೀಗಲೂ ಅನುಭವಿಸುತ್ತಿರುವ ಚಿತ್ರ ಹಿಂಸೆಯು ಬೇರೆಲ್ಲಿಯೂ ಕಾಣಸಿಗದಂತಹದು. ಅಮೇರಿಕದ ಡೆಟ್ರೋಯಿಟ್‌ನಲ್ಲಿ ಇತ್ತೀಚೆಗೆ ಸೇರಿದ ನೀಗ್ರೋ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮೀದುಸ್ಥಿತಿ ನಿವಾರಣೆಗಾಗಿ ಜಾಗತಿಕ ಸಂಘಕ್ಕೆ ಮೊರೆಯಿಡಬೇಕೆಂಬ ನಿರ್ಧಾರವಾಗಿದೆ. ಅಮೇರಿಕದಲ್ಲಿರುವ ಸುಮಾರು 13,000,000 ತಮ್ಮವರು ಪಡುತ್ತಿರುವ ಕಷ್ಟನಷ್ಟಗಳು, ಅಪಮಾನ ಅಸಮಾನತೆಗಳು ಅಮಾನುಷವಿವೆ, ವರ್ಣದ್ವೇಷದ ಅಶಾಸ್ತ್ರೀಯ ಫೇಸಿಸ್ಟ್ ತತ್ವಗಳಿಗೆ ಅವರು ಆಹುತಿಯಾಗಿದ್ದಾರೆ. ಸುಮಾರು ಒಂದು ಶತಮಾನದಿಂದ ನಾವು ನಮ್ಮ ರಾಷ್ಟ್ರೀಯ ಗಡಿಯೊಳಗೆ ಇದಕ್ಕಾಗಿ ಒದ್ದಾಡಿ ನೋಡಿದೆವು. ನಮಗೀಗ ಪೂರ್ಣ ಸ್ವಾತಂತ್ರ್ಯ ಮತ್ತು ಸಮಾನತೆ ಬೇಕು. ಆ ಹೊಗಳು ನಾವು ಸುಮ್ಮಗಾಗುವಂತಿಲ್ಲ. ಒಬ್ಬನೇ ಒಬ್ಬ ಗುಲಾಮನಾಗಿದ್ದರೆ ಎಲ್ಲರೂ ಬಂಧನದಲ್ಲಿದ್ದಂತೆ" ಎಂದು ನೀಗ್ರೋ ವಿಜ್ಞಾಪನೆಯಲ್ಲಿದೆ. ತಾನೇ ಲೋಕ ಸುಭಿಕ್ಷದಾತನೆಂದು ತನಗೆ ತಾನೇ ಹೆಸರಿಟ್ಟುಕೊಂಡಿರುವ ಮಿತ್ರ ರಾಷ್ಟ್ರೀಯ ಸಂಘವು ಇದಕ್ಕೇನೆನ್ನುವುದೋ ನೋಡಲಿದೆ.

ಕಡೆಕಾರು- ತಾ. 1-6-46ನೇ ಶನಿವಾರ ದಿನ ಉಡುಪಿ ತಾಲೂಕು ಕಡೆಕಾರು ಗ್ರಾಮದ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಉಡುಪಿರೇಂಜಿನ ಶಾಲೆಗಳ ಸೀನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಸಂಜೀವಭಟ್ಟರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಶಾಲಾ ಬಾಲಕ ಬಾಲಕಿಯರು ವಿವಿಧ ವಿನೋದ, ಯಕ್ಷಗಾನ, ನಾಟಕ, ಇತ್ಯಾದಿ ಕಾರ್ಯಕ್ರಮಗಳಿಂದ ಪ್ರೇಕ್ಷಕರ ಮನಸ್ಸಂತೋಷ ಪಡಿಸಿದರು. ಗ್ರಾಮಸ್ಥರು ಮಕ್ಕಳಿಗೆ ಅನೇಕ ಪಾರಿತೋಷಕಗಳಿಂದಲೂ ಭಾಷಣಗಳಿಂದಲೂ ಪ್ರೋತ್ಸಾಹಿಸಿ ಶಾಲೆಯನ್ನು ಹರಸಿದರು. ಅಧ್ಯಕ್ಷರ ಭಾಷಣವಾದಮೇಲೆ ಧನ್ಯವಾದ ಮಂಗಲದೊಂದಿಗೆ ಸಭೆಯು ಮುಕ್ತಾಯವಾಯಿತು.

ಜೂನ್ ೧೬ರೊಳಗೆ ನಡುಗಾಲ ಸರಕಾರವೆ?

ರೂಪರೇಷೆ ಹೇಗೆಂಬುದನ್ನು ಸ್ಪಷ್ಟಪಡಿಸದ ತತ್ಕಾಲಿಕ ಕೇಂದ್ರ ಸರಕಾರದ ಕುರಿತು ಏನನ್ನೂ ಹೇಳುವದಸಾಧ್ಯ ಎಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಅಭಿಪ್ರಾಯಾನುಸಾರವಾಗಿ ವೈಸರಾಯರಿಂದೊಂದು ಸ್ಪಷ್ಟೀಕರಣ ಸಂದೇಶವು ಮುಸ್ಸೋರಿಯಲ್ಲಿರುವ ಮೌಲಾನಾ ಆಜಾದರಿಗೆ ತಲಪಿದೆಯೆಂದು ತಿಳಿದುಬರುತ್ತದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜೂನ್ 9ಕ್ಕೆ ಢಿಲ್ಲಿಯಲ್ಲಿ ಸೇರಿ ಈ ಕುರಿತು ನಿರ್ಧಾರ ಮಾಡಲಿದೆ. ಮೌ. ಆಜಾದರೂ, ಗಾಂಧೀಜೀಯೂ ಆ ದಿನವೇ ಢಿಲ್ಲಿಗೆ ಬರಲಿದ್ದಾರೆ.

ಇದು ವರೆಗೂ ಸಿಮ್ಲಾದಲ್ಲಿದ್ದ ಮಿ. ಜಿನ್ನರು ನವಢಿಲ್ಲಿಗಾಗಮಿಸಿ ತಾ. ೮ರಲ್ಲಿ ವೈಸರಾಯರೊಡನೆ ಒಂದು ಘಂಟೆ ಮಾತುಕತೆ ನಡೆಸಿದ್ದಾರೆ. ಲೀಗ್ ಕಾರ್ಯಕಾರೀ ಸಮಿಟಿಯ ಸಭೆ ತಾ. ೩ರಿಂದ ಢಿಲ್ಲಿಯಲ್ಲಾರಂಭಿಸಿದೆ. ತಾ. ೬ರಲ್ಲಿ ಅದು ತನ್ನ ನಿರ್ಧಾರವಮಾಡಲಿದೆ. ಈ ನಿರ್ಧಾರವು ಲೀಗ್ ಕೌನ್ಸಿಲಿನಲ್ಲಿ ಪರ್ಯಾಲೋಚಿಸಲ್ಪಡುವದು.

ಆಶ್ರಿತರಾಜರ ಪ್ರತಿನಿಧಿಗಳ ಸಭೆಯು ಜೂನ್ ತಾ 7ಕ್ಕೆ ಬೊಂಬಾಯಿಯಲ್ಲಿ ಸೇರಿ ಬ್ರಿಟಿಷ್ ಯೋಜನೆಯ ಕುರಿತು ತನ್ನ ಅಭಿಪ್ರಾಯಮೀಯಲಿದೆ ಹೀಗಾಗಿ ಇದೇ ತಾ. 10ರೊಳಗೆ ಬ್ರಿಟಿಷ್ ಮಂತ್ರಿತ್ರಯರಿಗೂ ವೈಸರಾಯರಿಗೂ, ಲೀಗ್, ಕಾಂಗ್ರೆಸ್ ಮತ್ತು ಆಶ್ರಿತ ರಾಜರ ಕೊನೆಯ ನಿರ್ಧಾರಗಳು ತಿಳಿದು ಬರುವವು. ಮರುದಿನ ಅಥವಾ ಒಂದೆರಡು ದಿನಗಳೊಳಗೆ ಬ್ರಿಟಿಷ್ ರಾಯಭಾರಿಗಳು, ಭಾರತದ ಭಾವೀ ವ್ಯವಸ್ಥೆಯ ಕುರಿತು ತಮ್ಮ ಅಂತಿಮ ನಿರ್ಧಾರಗಳನ್ನು ಹೊರಗೆಡಹುವರೆಂಬ ನಿರೀಕ್ಷೆಯಿದೆ. ಸಿಮ್ಲಾದಲ್ಲಿ ಮಿ. ಜಿನ್ನರಿತ್ತ ಕೊನೆಯ ಸಂದೇಶದಲ್ಲಿ 'ಸಂಧಾನ ಮೂಲಕ ಒಂದು ವ್ಯವಸ್ಥೆಮಾಡಿಕೊಳ್ಳುವ ಆಶೆಯಿದೆ' ಎಂದುದರಿಂದ ಏನಾದರೊಂದು ಸುಗಮ ತೀರ್ಮಾನವಾಗಬಹುದೆಂಬ ನವಾಶೋದಯವಾಗಿದೆ.

ಈ ಸಂದರ್ಭವನ್ನು ಕಳಕೊಳ್ಳಬಾರದು.

ರಾಜಾಜಿಯ ಬೋಧನೆ.

"ಬ್ರಿಟಿಷ್ ಕೂಲಿಕಾರ ಸರಕಾರದ ಸಮಿತಿಯು ಕುರಿತು ಐಕ್ಯದ ಪ್ರಚಾರ'ವನ್ನು ಖಂಡಿಸುತ್ತಾ ಶ್ರೀ ಸಿ ರಾಜಗೋಪಾಲಾಚಾರ್ಯರು ಬ್ರಿಟಿಷ್ ಯೋಜನೆಯನ್ನು ಸ್ವೀಕರಿಸಬೇಕೆಂದು ವಿಜ್ಞಾಪಿಸಿದ್ದಾರೆ. 'ಭಾರತಕ್ಕೆ ಅತ್ಯಗತ್ಯವಾಗಿರುವ ನೈತಿಕಾವಶ್ಯಕತೆಯೆಂದರೆ ಸ್ವಾತಂತ್ರ್ಯ; ಮತ್ತು ಪೂರ್ಣ ಸ್ವಾತಂತ್ರ್ಯದ ಪಥವು ಈಗ ದೊರೆತಿರುವ ತೀರ್ಮಾನದಲ್ಲೇ ಇದೆ ಹೊರತು ನಮ್ಮ ವಿರುದ್ಧಾಭಿಪ್ರಾಯಗಳಿಗೆ ಹೊಸ ಜೀವ ಕೊಡುವುದರಲ್ಲಿಲ್ಲ" ಎನ್ನುತ್ತಾ ಆಚಾರ್ಯರಂದಿದ್ದಾರೆ "ಭಾರತಕ್ಕೆ ಬಂದಿರುವ ಬ್ರಿಟಿಷ್ ಸಮಿತಿಯ ಕುರಿತು ರಷ್ಯವು ಮಾಡುತ್ತಿರುವ ಪ್ರಚಾರದಿಂದ ಯಾರೂ ವಂಚಿಸಲ್ಪಡಬಾರದು. ನಾನು ಐಕ್ಯದ ಸಾಮೂಹಿಕ ಜೀವನ ವ್ಯವಸ್ಥೆಯನ್ನೊಪ್ಪುವವ; ಅದನ್ನು ನಿರ್ವಿಕಾರ ಮತ್ತು ಅಭಿರುಚಿ ಪೂರ್ಣವಾಗಿ ಅಭ್ಯಾಸಿಸಲಿಚ್ಛಿಸುವವ ಆದರೆ ಈಗ ಭಾರತದಲ್ಲೊಂದು ತೀರ್ಮಾನವಾಗುವದು ಈಗ ರಷ್ಯಕ್ಕೆ ಬೇಕಾಗಿಲ್ಲ. ಹಿಂದೀ ಸಮಸ್ಯೆಯೊಂದು ನಿವಾರಣೆಗೊಂಡಲ್ಲಿ ಅದರಿಂದ ಇಂಗ್ಲಾಂಡಿನ ಬಲವು ಹೆಚ್ಚುವದು ಖಂಡಿತವಾದ್ದರಿಂದ ಅಸಯಾಸ್ಯಯಿಂದ ಬ್ರಿಟನು ಬಿಡುಗಡೆಗೊಳ್ಳುವದನ್ನು ರಷ್ಯ ಅಪೇಕ್ಷಿಸುವದಿಲ್ಲ. ಸ್ವತಂತ್ರ ಸ್ನೇಹಮಯೀ ಭಾರತವು, ಜನಮತ ವಿರೋಧಿ ದಬ್ಬಾಳಿಕೆಗೊಳಗಾಗಿರುವ ಭಾರತಕ್ಕಿಂತ ಹೆಚ್ಚಿನ ಸಹಾಯಕಾರಿಯೆಂಬುದನ್ನೀಗ ಶತ್ರುಮಿತ್ರರೆಲ್ಲರೂ ಮನಗಂಡಿದ್ದಾರೆ. ಭದ್ರತೆ ಮತ್ತು ಮಹಾಶಕ್ತಿ ಸಾಧನೆಯ ತನ್ನ ಯೋಜನೆ ಪೂರ್ಣಗೊಳ್ಳುವವರೆಗೆ ಹಿಂದೀ ಪ್ರಶ್ನೆಯು ಇದ್ದಂತೆ ಉಳಿಯುತ್ತಿರಬೇಕೆಂದು ರಷ್ಯವಪೇಕ್ಷಿಸುವದರ ಗುಟ್ಟು ಇದೇ. ಆದರೆ ನಾವು ನೋಡಬೇಕಾದುದು ನಮ್ಮ ಅಭಿವೃದ್ಧಿಯೊಂದನ್ನೇ. ರಷ್ಯಕ್ಕನುಕೂಲವಾಗಬೇಕೆಂಬುದಕ್ಕಾಗಿ ನಾವು ನಮ್ಮ ... ಕೊಳ್ಳಲು ತಡ ಮಾಡುವದಸಾಧ್ಯ.

ಹಿಂದೀ ಕಮ್ಯೂನಿಸ್ಟರು "ಒಂದು ರಾಷ್ಟ್ರೀಯ ಪಕ್ಷವೆಂಬ ಸ್ವಾತಂತ್ರ್ಯ ಪಡೆದಿದ್ದರೂ ಇನ್ನೂ ರಷ್ಯದ ಹಿಡಿತದಿಂದ ತಪ್ಪಿಸಿಕೊಳ್ಳಲಸಮರ್ಥರಾಗಿರುವರೆನ್ನಲು- — ಬ್ರಿಟಿಷ್ ಸೂಚನೆಗಳ ಧಿಕ್ಕಾರಕ್ಕೆ ಮೋಸ್ಕೋ ತೀರ್ಮಾನದಿಂದ ಪ್ರೇರಣೆಗೊಂಡಿರುವರೆನ್ನಲು ಖೇದಗೊಳ್ಳುತ್ತೇನೆ. ಕಮ್ಯೂನಿಸ್ಟರ ಜತೆಗೆ ಇತರ ಕೆಲವು ಪಕ್ಷಗಳೂ ಇವೆ. ಇವರಿಗೆ ತಮ್ಮ ನಾಗರಿಕತೆಗಿಂತಲೂ ಕಲಹದ ಮೇಲೆ ಅಭಿರುಚಿ ಹೆಚ್ಚಿಗೆ. ಸ್ವಾತಂತ್ರ್ಯದ ಗುರಿಮುಟ್ಟುವ ಮೊದಲೇ ತಾವು ಅಗ್ರಗಣ್ಯ ಸ್ಥಾನಕ್ಕೇರಬೇಕೆಂಬೊಂದು ಬಯಕೆಯೂ ಇಂಥವರಲ್ಲಿದ್ದಿರಬಹುದು. ಇದು ಸ್ವಾರ್ಥ; ಸಂಕುಚಿತ ದೃಷ್ಟಿ. ಸ್ವತಂತ್ರ ಸ್ಥಿತಿಯಲ್ಲಿ ಕಾಲಾನುಗುಣವಾಗಿ ಮತ್ತು ಅನುಭವ ಬಲದಿಂದ ತತ್ವಗಳು ತಾವಾಗಿ ತಲೆಯೆತ್ತಲಿವೆ. ಈಗ ಬಂದಿರುವ ಸಂದರ್ಭವನ್ನು ಕಳಕೊಳ್ಳುವ ಮೂಲಕ ಆವುಗಳನ್ನು ಹಿಂದೆ ಹಾಕುವದು ವಿವೇಕವಲ್ಲ".

ಎಸೆಂಬ್ಲಿ ಸದಸ್ಯರ ಸಂಬಳ

ಎಸೆಂಬ್ಲಿ ಸದಸ್ಯನೊಬ್ಬನಿಗೆ ತಿಂಗಳಿಗೆ 200 ರೂಪಾಯಿ ಸಂಬಳ ದೊರೆಯುತ್ತದೆ. ಹೊರಗಿನ ಸದಸ್ಯರು ಎಸೆಂಬ್ಲಿ ಸಭೆ ನಡೆಯುವ ದಿನಗಳಲ್ಲಿ ದಿನಕ್ಕೆ 15 ರೂ.ಗಳಂತೆ ಎಲೋವೆನ್ಸ್ ಪಡೆಯಬಹುದು. ಅಂತೆಯೇ ದಿನಕ್ಕೆ ರೂ. 2-8-0ಯಂತೆ ಪ್ರಯಾಣಭತ್ತೆಯನ್ನೂ ಪಡೆಯಬಹುದು. ಮಾತ್ರವಲ್ಲ, ತನ್ನೂರಿನಿಂದ ಬಂದು ಹೋಗುವರೆ ಆತನಿಗೆ ರೈಲ್ವೆಯ ಫಸ್ಟ್ ಕ್ಲಾಸಿನ 1⅓ ಪಾಲಷ್ಟು ಪ್ರಯಾಣ ಭತ್ತೆ ಕೊಡಬೇಕು. ಈ ಸಂಬಂಧದ ಪ್ರಶ್ನೆಗೆ ಉತ್ತರಿಸುತ್ತಾ ಗಾಂಧಿಜೀಯಂದಿದ್ದಾರೆ:—

"ನನ್ನ ಅಭಿಪ್ರಾಯದಲ್ಲಿ ಎಸೆಂಬ್ಲಿಗಳ ಸದಸ್ಯರು ಪಡೆಯುತ್ತಿರುವ ಸಂಬಳವು ಅವರು ದೇಶಕ್ಕೆ ಸಲ್ಲಿಸುವ ಸೇವೆಯ ಪರಿಮಾಣಕ್ಕೆ ಮಿಕ್ಕಿದುದು. ಈ ಸಂಬಳ ಧಾರಣೆಯು ಇಂಗ್ಲಾಂಡಿನ ಮಾದರಿಯಲ್ಲಿದೆಯೊಂತು, ಜಗತ್ತಿನಲ್ಲೇ ಬಡರಾಷ್ಟ್ರವಾಗಿರುವ ಇಲ್ಲಿಯ ಉತ್ಪತ್ತಿಗನುಗುಣವಾಗಿ ಇಲ್ಲ. ಆದ್ದರಿಂದ ನನ್ನ ಸೂಚನೆಯೆಂದರೆ ಮಂತ್ರಿಗಳು ಎಸೆಂಬ್ಲಿಯ ಅಭಿಮತ ಪಡೆದು ಸಂಬಳದ ಎಲ್ಲಾ ಧಾರಣೆಯನ್ನೂ ತಗ್ಗಿಸಿಕೊಳ್ಳಬೇಕು. ಅಷ್ಟರ ವರೆಗೆ ಪಡೆದ ಸಂಬಳದಲ್ಲಿ ಸದಸ್ಯನು, ತಾನು ಸೇರಿದ ಪಕ್ಷವು ಯಾವ ಮಟ್ಟವನ್ನು ನಿರ್ಧರಿಸುತ್ತದೋ ಅಷ್ಟಕ್ಕೆ ಮಿಕ್ಕಿದಂಶವನ್ನೆಲ್ಲಾ ಆ ಪಕ್ಷಕ್ಕೆ ಕೊಟ್ಟು ಬಿಡಬೇಕು. ಇದು ಅಸಾಧ್ಯವಾದರೆ ತನಗೆ ಮತ್ತು ಕುಟುಂಬದ ವೆಚ್ಚಕ್ಕೆಷ್ಟು ಬೇಕೆಂಬುದು ಅವನಿಗೆ ಮನವರಿಕೆಯಾಗುತ್ತದೋ ಅಷ್ಟನ್ನಲ್ಲದೆ ಉಳಿದ ಅಂಶವನ್ನೆಲ್ಲಾ ಯಾವುದಾದರೊಂದು ವಿಧಾಯಕ ಕಾರ್ಯ ಕ್ರಮಗಳಿಗೆ ಅಥವಾ ಅಂತಹ ಸಾರ್ವಜನಿಕ ಸೇವೆಗಳಿಗೆ ಉಪಯೋಗಿಸಬೇಕು."

ತಾರೀಕು 4—6—46ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ಕಿಶೋರ್ ಸಾಹು ಮತ್ತು ಪ್ರತಿಮಾದಾಸ್ ಗುಪ್ತಾ ನಟಿಸಿರುವ

ಕುಂವಾರ-ಬಾಪ್

ತಾರೀಕು 6—6—46ರಿಂ

ವತನ್-ಕಿ-ಪುಕಾರ್

ನಂತರ:—

ತಾರೀಕು 8—6—46ರಿಂದ

ಪ್ರತಿಮಾದಾಸ ಗುಪ್ತಳ ಸ್ವಂತ ತಯಾರಿಕೆ—

ಬೇಗಂ ನಾರಾಳಿರುವ ಬಿಕಾರಿಯ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.

ವಾರ್ಷಿಕ ಚಂದಾ ರೂ. 4-8-0

ಅರ್ಧ ವರ್ಷಕ್ಕೆ ರೂ.-2-8-0

ಮಾದರಿ ಸಂಚಿಕೆಗೆ ಬರೆಯಿರಿ,

ಮೆನೇಜರ್ ನವಯುಗ, ಉಡುಪಿ.

ಮಂಗಳೂರು

ಎರಡನೆಯ ಜೆಳೆಯ-ಭತ್ತ ಅಥವಾ ಅಕ್ಕಿಯನ್ನು ಸ್ವೀಕರಿಸುವ ಕೊನೆಯ ತಾರೀಕನ್ನು ತಾ. ೧೫-೬-೪೬ರ ವರೆಗೆ ಮುಂದರಿಸಲಾಗಿದೆ.

ರೇಶನಿಂಗ್ ಆಫೀಸರರ ಪ್ರಕಟಣೆ--ಊಟದ ಹೋಟೇಲುಗಳಿಗೆ ಕೊಡತಕ್ಕ ಯುನಿಟ್ (೬ಔನ್ಸು) ಒಂದರ ರೇಶನ್ನಲ್ಲಿ ೩ನೆ ಯುನಿಟು (೨ಔನ್ಸು) ಗೋಧಿ ಯಾ-ಗೋಧಿ ಹಿಟ್ಟನ್ನೂ ಉಳಿದುದನ್ನು ಮಾತ್ರ ಅಕ್ಕಿಯಾಗಿಯೂ ಕೊಡುವುದಿತ್ತು. ಇನ್ನುಮುಂದೆ ಅ. ೧೧೩ಯುನಿಟು (೨ ಔನ್ಸು) ಗೋಧಿ, ಗೋಧಿ ಹಿಟ್ಟು, ಸೋಜೀ, ಪಟ್ರೀಜ್ ಕೊಡಲ್ಪಡುವುದು.

ಪ್ಲೇಗ್ ವರದಿ--ಕಳೆದ ತಾ 25ಕ್ಕೆ ಅಂತ್ಯವಾದ ವಾರದಲ್ಲಿ ಮಂಗಳೂರು ನಗರದಲ್ಲಿ ಒಂದುಕಡೆ ಇಲಿಬಿದ್ದ ಸುದ್ದಿಯಿದೆ. ಇಲಿಯ ರಕ್ತವನ್ನು ಗಿಂಡಿಗೆ ಪರೀಕ್ಷಾರ್ಥ ಕಳುಹಿಸಲಾಗಿದೆ. ಜನರಲ್ಲಿ ಯಾರಿಗೂ ಪ್ಲೇಗ್ ರೋಗ ಕಂಡುಬಂದುದಿಲ್ಲ. ಇಲಿ ಬಿಲಿಗಳಿಗೆ ಗ್ಯಾಸ್ ಹೊಡೆಯುವುದು, ಸೂದುಗಳನ್ನಿಟ್ಟು ಇಲಿಗಳನ್ನು ಹಿಡಿಯುವುದು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಲಿವೆ. ಈತನಕ95,913 ಇಲಿ ಬಿಲಗಳನ್ನು ಗ್ಯಾಸ್ ಹೊಡೆದು ಮುಚ್ಚಲಾಗಿದೆ. 19,616 ಮಂದಿಗೆ ಪ್ಲೇಗ್ ಪ್ರತಿಬಂಧಕ ಸೂಜಿ ಚುಚ್ಚಲಾಗಿದೆ.

ಸಭೆ--ಮಂಗಳೂರಲ್ಲಿ ಭಾರತ ರಾಷ್ಟ್ರೀಯ ಕಥೋಲಿಕ್ ತರುಣ ಕಾಂಗ್ರೆಸೊಂದನ್ನು ರಚಿಸಿಕೊಳ್ಳುವ ಬಗ್ಗೆ ಚರ್ಚಿಸುವರೆ ಕಥೋಲಿಕ್ ತರುಣರ ಸಭೆಯೊಂದು ಮಿಲಾಗ್ರಿಸ್ ಹೈಸ್ಕೂಲಿನ ವಠಾರದಲ್ಲಿ ಕಳೆದ ತಾ. 30ರಲ್ಲಿ ಜರಗಿತು.

ಸೋಮೇಶ್ವರ ಪೇಟೆ— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ಮಕ್ಕಳ ಪತ್ರದ ಕೂಟವು ಕಳೆದ ತಾ 30-5-46ರಲ್ಲು ಶ್ರೀ. ಕೆ. ನಾರಾಯಣ ಕೂಡರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು. ಶ್ರೀ. ರಾಮಕೃಷ್ಣ ಹೆಬ್ಬಾರ M. A. M. S.ರವರು ಶಾಲಾ ಸಳಿಗೆಯ ವಿಷಯ ಭಾಷಣ ಮಾಡಿದರು.

ಉಡುಪಿ

ಉಡುಪಿಯಲ್ಲಿ ಮಕ್ಕಳಕೂಟದ ದ. ಕ. ಸಮ್ಮೇಲನ--ಮೂರನೆಯ ದಿನದ ಅಧಿವೇಶನವು (ಎರಡು ದಿನಗಳ ವಾರ್ತೆ ಹಿಂದಿನ ಸಂಚಿಕೆಯಲ್ಲಿ ಬಂದಿದೆ) ಶ್ರೀ. ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿಯಿತು. ಪ್ರಥಮತ ಮಕ್ಕಳ ಪುರಮೆರವಣಿಗೆ ನಡೆಯಿತು. ಶ್ರೀ. ಮುಖ್ಯಪ್ರಾಣ ತಂತ್ರಿಗಳ ಬೋಧಪ್ರದ ಭಾಷಣವಾದಮೇಲೆ ಶ್ರೀ. ಎಸ್. ಎಲ್. ನಾರಾಯಣ ಭಟ್ಟರು ಮಕ್ಕಳ ಭಾಷೆಯಲ್ಲೇ ಸುರಸ ಉಪನ್ಯಾಸವಿತ್ತರು. ನಡನಡುವೆ ಕೆಲವು ಬಾಲಕ ಬಾಲಕಿ, ಯುವಕ-ಯುವತಿಯರ ಸುಶ್ರಾವ್ಯ ಕವಿತಾ ವಾಚನ ಗಾಯನಗಳಾದುವು. ಸದ್ಯಸ್ಥಿತಿಯಲ್ಲಿ ಮಕ್ಕಳ ಶಿಕ್ಷಣವೆಂತಹದಿರಬೇಕೆಂಬ ಕುರಿತು ಅಧ್ಯಕ್ಷರ ಭಾಷಣವಾದನಂತರ ಕಿದಿಯೂರು ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಅಭಿನಯವೂ ಇತರರ ಕೆಲವು ಪ್ರದರ್ಶನಗಳೂ ನಡೆದುವು. ಸ್ಪರ್ಧೆಗಳಲ್ಲಿ ಗೆದ್ದವರಿಗೂ ಇತರರಿಗೂ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು. ಶ್ರೀ. ಪಿ. ಅಂತಯ್ಯ ಸೆಟ್ಟರ ಧನ್ಯವಾದಗಳೊಂದಿಗೆ ಸಮ್ಮೇಲನ ಸಮಾಪ್ತಿಯಾಯಿತು

ಬಿಲ್ಲು ವಿದ್ಯೆ ಪ್ರದರ್ಶನ- ವಿಜಯನಗರದ ಶ್ರೀ. ರಾಮಮೂರ್ತಿ ರಾವ್ ಅವರು ತಾ. ೩ರಲ್ಲು ರಾತ್ರಿ ಶ್ರೀಕೃಷ್ಣ ಮಠದ ಭೋಜನ ಶಾಲಾ ಮಹಡಿಯಲ್ಲಿ ಬಿಲ್ಲು ವಿದ್ಯೆಯನ್ನು ಪ್ರದರ್ಶಿಸಿದರು. ಪರ್ಯಾಯ ಶ್ರೀ. ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಅಷ್ಟಮಠಾಧಿಪತಿಗಳ ಪರವಾಗಿ ಪ್ರದರ್ಶಕಗಾರರಿಗೆ ಪ್ರಶಸ್ತಿ ಪತ್ರಿಕೆಯನ್ನೂ ಸಂಭಾವನೆಯನ್ನೂ ಕೊಟ್ಟು ಅನುಗ್ರಹಿಸಿದರು. ಪ್ರದರ್ಶನವು ಪ್ರೇಕ್ಷಣೀಯವಿತ್ತು.

ಪ್ರೆಸ್ ಕೆಲಸಗಾರರ ಸಂಘ-ದ ಪ್ರೈವಾರ್ಷಿಕ ಮಹಾ ಸಭೆಯು ತಾ 2 6 46ನೇ ಅಪರಾಹ್ನ ಸಂಘದ ಕಾರ್ಯಾಲಯದಲ್ಲಿ ಶ್ರೀ. ಕೆ. ವಿಠ್ಠಲದಾಸ ಕಾಮತರ ಅಧ್ಯಕ್ಷತೆಯಲ್ಲಿ ಸೇರಿಯಿತು. ಅದುವರೆಗಿನ ಲೆಕ್ಕಪತ್ರ, ಕಾರ್ಯಕಲಾಪಗಳ ಪರಿಶೀಲನೆ ನಡೆಯಿತು. ಶ್ರೀ. ಕೆ. ಶ್ರೀನಿವಾಸಾಚಾರ್ಯರು ಕೆಲಸ ನಿವೃತ್ತಿ ನಿಮಿತ್ತ ಖಜಾಂಜಿ ಸ್ಥಾನಕ್ಕೆ ರಾಜೀನಾಮೆಯನ್ನಂಗೀಕರಿಸಿ, ಶ್ರೀ. ನಗ್ರಿ ವೆಂಕಟಕೃಷ್ಣ ಭಟ್ಟರನ್ನು ಸರ್ವಾನುಮತದಿಂದ ಖಜಾಂಜಿಯಾಗಿ ಆರಿಸಲಾಯಿತು. ಕಾರ್ಯಕಾರೀ ಸಮಿತಿಯು ಗಾಢಾಲೋಚನೆಯ ನಂತರ ನಿರ್ಧರಿಸಿ ಮುಂದಿಟ್ಟಂತೆ, ರೂ. 12ಕ್ಕೆ ಕಡಿಮೆಯಿಲ್ಲದಷ್ಟು ಮಾಸಿಕ ತುಟ್ಟಿ ಭತ್ತೆ ಪ್ರತಿಯೊಬ್ಬ ಕೆಲಸಗಾರನಿಗೂ ದೊರೆಯಬೇಕೆಂಬ ಸೂಚನೆಯು ಕುರಿತು ಸವಿವರ ಚರ್ಚೆ ನಡೆದು ಅದು ಸರ್ವಾನುಮತಿಯಿಂದ ಅಂಗೀಕರಿಸಲ್ಪಟ್ಟಿತು. ಈ ಸಂಬಂಧ ಅಗತ್ಯವುಳ್ಳ ಕಾರ್ಯಗಳನ್ನು ಕೈಗೊಳ್ಳುವರೆ ಕಾರ್ಯಕಾರೀ ಸಮಿತಿಗೆ ಅಧಿಕಾರಕೊಟ್ಟು ಸಭಾ ಸತ್ಕಾರ, ಧನ್ಯವಾದಗಳೊಂದಿಗೆ ಸಭೆ ಮುಗಿಯಿತು.

ಕೆನರಾ ಸಿಟಿಝನ್‌ಶಿಪ್ ಕೋಲೇಜ್ದ. ಕ. ವಿದ್ಯಾರ್ಥಿ ಕಾಂಗ್ರೆಸಿನ ಕಡೆಯಿಂದ ನಾಗರೀಕ ಶಿಕ್ಷಣ ಕೊಡುವ ಕಾಲೇಜು ಕಳೆದ ತಿಂಗಳ ತಾ. ೧೫ರಿಂದ 31ರ ತನಕ ಮಣಿಪಾಲದಲ್ಲಿ ನಡೆಯಿತು. ದಕ್ಷಿಣಕನ್ನಡ ಮತ್ತು ಉತ್ತರಕನ್ನಡದ ಸುಮಾರು 30 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ತರಬೇತಿ ಪಡೆದರೆಂದು ತಿಳಿದು ಬರುತ್ತದೆ. ಹಲವು ಮಂದಿ ತಜ್ಞರಿಂದ ತರಬೇತಿ ವರ್ಗಗಳು ನಡೆಸಲ್ಪಟ್ಟುವು. ಜಗತ್ತಿನ ಮತ್ತು ನಮ್ಮ ದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ವಿಷಯಗಳ ಕುರಿತು ಅಲ್ಲಿ ಶಿಕ್ಷಣ ಕೊಡಲ್ಪಟ್ಟಿತು. ಜೊತೆಗೆ ಕಾರವಾರದ ಶ್ರೀ। ರಾಮದಾಸ ಫೇನೆ ಮತ್ತು ಶ್ರೀ। ಎಫ್. ಫೆರ್ನಾಂಡಿಸ್ ಇವರ ನೇತೃತ್ವದಲ್ಲಿ ರಾಷ್ಟ್ರ ಸೇವಾ ದಳದ ತರಬೇತಿಯೂ ಹಿಂದೀ ವರ್ಗಗಳೂ ನಡೆಸಲ್ಪಟ್ಟವು. ಕಾಲೇಜಿನ ಸಮಾಪ್ತಿ ಸಮಾರಂಭವು ಅ. ಭಾ. ವಿದ್ಯಾರ್ಥಿ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ। ದಿನಕರ ಸಾತ್ರೆಕಾರರವರ ಅಧ್ಯಕ್ಷತೆಯಲ್ಲಿ ತಾ. 31ರಲ್ಲಿ ಉಡುಪಿ ಬೋರ್ಡು ಹೈಸ್ಕೂಲಿನ ಜನತಾ ಸಭಾಸದನದಲ್ಲಿ ಜರಗಿತು.

ಯಕ್ಷಗಾನ— ತಾ. 26ನೇ ರಾತ್ರಿ ಶ್ರೀ ಮದನಂತೇಶ್ವರದ ಚಾವಡಿಯಲ್ಲಿ ಉಡುಪಿ ಯಕ್ಷಗಾನ ಸಂಘದವರಿಂದ ಕರ್ಣಪರ್ವ ತಾಳಮದ್ದಳೆ ಸುಶ್ರಾವ್ಯವಾಗಿ ಜರಗಿತು. ಶ್ರೀಗಳಾದ ಪಿ. ದೇಜು ಸೆಟ್ಟಿ, ಪಿ. ಸೀನ ಸೆಟ್ಟಿ, ಶಿವಪುರ ಪಂಡಿತ್ ಮೊದಲಾದ ಪ್ರಸಿದ್ಧರು ಅರ್ಥಧಾರಿಗಳಿದ್ದರು.

ಕೊಡೆ ಪಡೆಯುವ ಉಪಾಯವೇನು?

ಮಳೆಗಾಲವಾರಂಭವಾಗಿದೆ. ಕೊಡೆಯಿಲ್ಲದೆ ಒದ್ದೆ ಮೈಯಲ್ಲೇ ಸಂಚರಿಸುತ್ತಿರುವವರೂ, ಕೊಡೆಯ ಅಭಾವದಿಂದ ಕೆಲಸಕ್ಕೆ ಹೋಗಲಾರದೆ ಮನೆ ಹಿಡಿದು ಕುಳಿತವರೂ ಬಹು ಸಂಖ್ಯೆಯಲ್ಲಿ ಕಾಣಲು ಸಿಗುತ್ತಿರುವದು ಈ ವರುಷದ ಒಂದು ವಿಶೇಷ ದೃಶ್ಯ. ಉಡುಪಿಯ ಕೆಲವಂಗಡಿಗಳಿಗೆ ಕೊಡೆಗಳು ಬಂದಿವೆಯೆಂದೂ ಬರುತ್ತಿವೆ ಎಂದೂ ವಾರ್ತೆ ಇದೆ. ಆದರೆ ಅಂಗಡಿಗಳಿಗೆ ಹೋಗಿ ಕೇಳಿದರೆ ಟೆಕ್ಸ್‌ಟೈಲ್ ಕಂಟ್ರೋಲಿಂಗ್ ಆಫೀಸರರ ಪರವಾನಗಿ ಬೇಕೆಂದು ಕೆಲವರೂ, ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಪರವಾನಗಿ ಎಂದು ಕೆಲವರೂ ಹೇಳುತ್ತಾರೆ. ಸ್ಪಷ್ಟವಾಗಿ ಹೇಳುವಷ್ಟು ಸಹನೆ ಅಥವಾ ಜ್ಞಾನ ಅಂಗಡಿಯವರಿಗಿರುವಂತಿಲ್ಲ. ಉಡುಪಿಯವನೊಬ್ಬನು, ಮಂಗಳೂರಲ್ಲಿರುವ ಆಫೀಸರರಿಗೆ ಅರ್ಜಿ ಹಾಕಿ ಅವರಿಂದ ಅನುಮತಿ ಬರುವಾಗ ಮಳೆಗಾಲ ಹೋಗಿ ಬಿಟ್ಟರೆ? ಎಂದು ಕೆಲವರು ಶಂಕಿಸಹತ್ತಿದ್ದಾರೆ. ಏನಿಲ್ಲೆಂದರೂ ಅರ್ಜಿ ಹಾಕಿ ಒಂದು ವಾರವಾದರೂ ಹೋಗದೆ ಕೊಡೆ ದೊರೆಯುವದು (ನಿಶ್ಚಯವಿಲ್ಲ) ಅಸಾಧ್ಯ. ಇದು ವ್ಯವಹಾರ ಯೋಗ್ಯ ವ್ಯವಸ್ಥೆಯೇ? ಎಂದು ಒದ್ದೆತಲೆಯ ಹಲವರು ಪ್ರಶ್ನಿಸಿದ್ದಾರೆ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅನೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಿದ್ದು.)



ಈ ಔಷಧಿಯ ಹೆಚ್ಚಿನ ಉಪಯೋಗಗಳು ಹೆಚ್ಚು ಕಡಿಮೆ ಅರಿವಿನವರಿಗೆ ಬರುವವು. ಆದರೆ ಕೇವಲ ೮ ದಿನಗಳಲ್ಲೇ ಒಂದು ಬಾಣಂತಿತನಕ್ಕೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಅಸ್ತಿ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ

ಸಾಮಾಜಿಕ ನಾಟಕ

(ಮದ್ರಾಸಿನ ಡಾಕ್ಟರ್ ಯು ರಾಮರಾಯರ ಮುನ್ನುಡಿ ಸಮೇತ.)

ಬೆಲೆ 0—12—0 ಮಾತ್ರ

ಮೀರಾಬಾಯಿ

(ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರ ಮುನ್ನುಡಿಯೊಡನೆ)

ಭಗವದ್ಭಕ್ತಿಯ ಮಹಾತ್ಮೆಯನ್ನು ಮನಗಾಣಿಸುವ ಚಾರಿತ್ರಿಕ ನಾಟಕ.

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ

ಭಕ್ತಿಪ್ರಾಧಾನ್ಯ ನಾಟಕ.

ಬೆಲೆ 1—0—0.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಿರಿಯರ ಪ್ರಪಂಚ, ಉಡುಪಿ.

ಕಾವ್ಯ ಸಾಮ್ರಾಜ್ಯ

(ಕಿರಿಯರ ಪ್ರಪಂಚದವರು ಪ್ರಕಟಿಸಿದ ಆಧುನಿಕ ಕವಿತಾ ಸಂಗ್ರಹ)

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ 1946 ಕಾವ್ಯ ಪರೀಕ್ಷೆಗೆ ಮೊದಲ ಪತ್ರಿಕೆಯು ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಬೆಲೆ ರೂ 1—0—0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗಾಗಲೀ ಬರೆಯಿರಿ.

NAVAYUGA

The Leading Karnada weekly

Published every Thursday

The best medium for advertisement of every kind

For advt. rates:-

The advt. Manager

Navayuga Udipi.

ಸ್ವೀಕಾರ–ವಿಮರ್ಶೆ

[ನವಯುಗದಲ್ಲಿ ವಿಮರ್ಶೆಯ ಬಗ್ಗೆ ಬರುವ ಎಲ್ಲ ಪುಸ್ತಕಗಳನ್ನು ಉತ್ತಮ ಸಾಹಿತ್ಯ ವಿಮರ್ಶಕರುಗಳಿಂದ ನಿಷ್ಪಕ್ಷಪಾತವಾಗಿ ವಿಮರ್ಶಿಸಿ, ಪ್ರತಿ ಸಂಚಿಕೆಯಲ್ಲಿ ಕ್ರಮಶಃ ಪ್ರಕಟಿಸುವ ಏರ್ಪಾಡನ್ನು ಮಾಡಲಾಗಿದೆ. ವಿಮರ್ಶೆಯನ್ನು ಅಪೇಕ್ಷಿಸುವ ಗ್ರಂಥಕರ್ತರು ತಮ್ಮ ಗ್ರಂಥದ ಎರಡು ಪ್ರತಿಗಳನ್ನು ಕಳಿಸಿಕೊಡಬೇಕಾಗಿ ಕೋರಿಕೆ. —ಸಂ. ನ]

೧. ಘಾಟೀ ಮುದುಕ ಮತ್ತು ಇತರ ಕಥೆಗಳು—ಬರೆದವರು "ದೇವುಡು" ಪ್ರತಿಭಾ ಗ್ರಂಥಮಾಲಾ ಧಾರವಾಡ– ಕಿರಣ ೧, ಕಿರೀಟಾಕಾರದ ಪುಟಗಳು ೧೩೫. ಬೆಲೆ ರೂ. ೧-೪-೦.

ಇದರಲ್ಲಿ ೪ ಕತೆಗಳಿವೆ. ೧ನೆಯ 'ಘಾಟೀ ಮುದುಕ' ಎಂಬುದು ಚೀನಿ ಕತೆಯೊಂದರ ಛಾಯಾನುವಾದವಾಗಿದ್ದು ಮೊದಲಿಂದ ಕೊನೆವರೆಗೂ ಕುತೂಹಲಕೆರಳಿಸುವ ಕಥಾವಸ್ತುವಿನಿಂದ ಕೂಡಿದೆ. ೨ನೆಯ "ಆಳೋ ಅರಸೋ" ಎಂಬುದು ಲೇಖಕರ ಮಾತಿನಲ್ಲಿ ಪರಭಾಷೆಯಲ್ಲಿಯ ಐತಿಹಾಸಿಕ ಕತೆಯು 'ಛಿಸಿ'. ಪರತಂತ್ರಳಾಗಿ ಪ್ರಿಯನೊಡನೆ ಸುಖದಲ್ಲಿರುವುದಕ್ಕಿಂತ, ತಾನು ಮತ್ತು ತನ್ನವರ ಸ್ವಾತಂತ್ರ್ಯಕ್ಕಾಗಿ ಮಡಿವುದೇಲೇಸೆಂದು ಆತ್ಮಬಲಿದಾನ ಗೈದ ವೀರಾಂಗನೆಯೋರ್ವಳ ಈ ಕತೆ ಹೃದಯಂಗಮವಾಗಿದೆ. ಆದರೆ ಕತೆಯನ್ನು ದೇಶೀಯ ಸನ್ನಿವೇಶಗಳಿಗೆ ಹೊಂದಿಸುವಾಗ, ಮೂಲದಲ್ಲಿಯ ಕೆಲವು ಹೆಸರುಗಳನ್ನುಮಾತ್ರ ಹಾಗೆಯೇ ಇಟ್ಟು ಉಳಿದವುಗಳನ್ನುಹಿಂದೀಕರಿಸಿದುದರ ಔಚಿತ್ಯವೇನೋ ತಿಳಿಯಲಾರದು. ೩ನೆಯ 'ಮರಭಿಮಾನ' ಹಳ್ಳಿಜೀವನದ ಒಂದು ಸ್ವಾಭಾವಿಕ ಚಿತ್ರ. ೪ನೆಯ 'ಮೂರು ಕನಸು' ಎಂಬುದು ಕಾಮುಕಿಯಾದ ತರುಣ ವಿಧವೆಯೊಬ್ಬಳ ಔದಾರ್ಯವನ್ನು ವರ್ಣಿಸುವ ಜೀವನ ಚಿತ್ರ. ಇವೆರಡು ಕೂಡಾ ಅತಿ ಸೊಗಸಾಗಿಯೇ ಚಿತ್ರಿಸಲ್ಪಟ್ಟಿವೆ. ಹಲವಾರು ಕತೆ, ಕಾದಂಬರಿಗಳನ್ನು ಬರೆದು ಪ್ರಸಿದ್ಧರಾದ ಶ್ರೀ. ದೇವುಡು ಅವರ ಪಳಗಿದ ಕೈಯಿಂದ ಬಳಿಕ ಮತ್ತೆ ಕೇಳಬೇಕೆ? ಸಂಗ್ರಹವು ವಾಚನೀಯವಾಗಿದ್ದು ಓದುಗರ ಮೆಚ್ಚುಗೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

೨. ಭಗತ್ ಸಿಂಗ್—ಅನುವಾದಕರು ಎಸ್. ಎನ್. ನಂಜುಂಡಸ್ವಾಮಿ. ಜನತಾ ಸಾಹಿತ್ಯ, ಹುಬ್ಬಳ್ಳಿಯವರ ಪ್ರಕಟಣ. ಕಿರೀಟಾಕಾರದ ಪುಟಗಳು ೫೩. ಬೆಲೆ ೮ ಆಣೆ.

'ಮೃತ್ಯುವನ್ನು ತಿರಸ್ಕರಿಸಿ, ಸಾಮ್ರಾಜ್ಯಶಾಹಿಯ ಪತನಕ್ಕೆ ಪಣತೊಟ್ಟು, ಅವರ ಸಮಾಧಿಯ ಮೇಲೆ ಸ್ವರಾಜ್ಯಭವನವನ್ನು, ಜನತಾ ಸರಕಾರವನ್ನು ರಚಿಸಲು ಯತ್ನಿಸಿದ' ವೀರಯೋಧ ಭಗತ್‌ಸಿಂಗ | ಮತ್ತು ಅವನ ಸಂಗಾತಿಗಳಾದ ಕಿಶೋರಿ ಲಾಲ್, ಶಿವವರ್ಮ, ಜಯದೇವ್ ಮುಂತಾದವರ ವ್ಯಕ್ತಿಪರಿಚಯವನ್ನೊಳಗೊಂಡ ಕಿರಿಯ ಹೊತ್ತಗೆಯಿದು. ಕ್ರಾಂತಿಕಾರಿ ಯುವಕರು ತೋರಿದ ಸ್ವಾರ್ಥತ್ಯಾಗ, ಅನುಭವಿಸಿದ ಕಾರಾಗೃಹವಾಸದ ಕಷ್ಟನಷ್ಟಗಳನ್ನು ಚಿತ್ರಿಸುವ, ಅಜಯಕುಮಾರ ಘೋಷರ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿ, ಹಿಂದೀ ಕ್ರಾಂತಿ ಇತಿಹಾಸದ ಮೇಲೆ ಲೇಖಕರು ತುಂಬ ಬೆಳಕನ್ನು ಚೆಲ್ಲಿದ್ದಾರೆ.

೩. ದಾಸರ ಹುಡುಗಿ— ಕತೆಗಾರರು ಶ್ರೀ. ಟೇಂಗ್ಸೆ ಗೋವಿಂದರಾಯರು, ಬೆಳಗಾವಿ, ಸಂಪಾದಕರು–ಶ್ರೀ. ಪ್ಯಾಟಿ ಶ್ಯಾಮರಾಯರು. ವಿಜಯಗ್ರಂಥಮಾಲೆಯ ೧ನೆಯ ಕುಡಿ. ಕಿರೀಟಾಕಾರದ ಪುಟಗಳು ೧೧೨. ಬೆಲೆ. ರೂ. ೧-೮-೦

ಇದು ಈಗಲೇ ಕಥಾಪ್ರಪಂಚದಲ್ಲಿ ಸುಪರಿಚಿತರಾದ ಟೆಂಗ್ಸೆ ಗೋವಿಂದರಾಯರ "ಗಂಗೆಯ ಗುತ್ತಿಗೆ" "ದಾಸರ ಹುಡುಗಿ" ಮುಂತಾದ ೧೦ ಕಿರುಗತೆಗಳ ಸಂಗ್ರಹ. ಶ್ರೀ. ಟೇಂಗ್ಸೆಯವರಲ್ಲಿ ಎಲ್ಲ ಬಗೆಯ ಜೀವನವನ್ನು, ಎಲ್ಲ ತರದ ವ್ಯಕ್ತಿಗಳನ್ನು, ಮನಗಾಣುವಂತೆ ಚಿತ್ರಿಸುವ ಜಾಣ್ಮೆಯಿದೆ. ಪ್ರತಿಯೊಂದು ಕತೆಯಲ್ಲಿ ಲೇಖಕರ ಬುದ್ಧಿಯ ನಾವೀನ್ಯ, ರಸಿಕತೆಯ ಚಮತ್ಕಾರ, ಇಲ್ಲವೇ ಪರೋಕ್ಷವಾರದೀಯುವ ಚಾತುರ್ಯ ತೋರಿಬರುತ್ತದೆ. ಶ್ರೀ. ದ. ರಾ. ಬೇಂದ್ರೆಯವರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ಲೇಖಕರಲ್ಲಿರುವ 'ಕಾದಂಬರಿಗಳನ್ನೇ ಕತೆಯ ಹದಕ್ಕೆ ಇಳಿಸುವ ಜೋದ್ಯ' ಮತ್ತು ಶುದ್ಧಾಶುದ್ಧ ಪತ್ರಿಕೆಯನ್ನು ಆಗಾಗ ನೋಡಬೇಕಾದ ಪ್ರಸಂಗವಿಲ್ಲದಿರುತಿದ್ದರೆ ಸಂಗ್ರಹವು ಮತ್ತಷ್ಟು ಆಕರ್ಷಣೀಯವಾಗುತ್ತಿಂಬುವುದರಲ್ಲಿ ಸಂದೇಹವಿಲ್ಲ. ಇಷ್ಟಿದ್ದರೂ ಮುನ್ನುಡಿಕಾರರೊಂದಿಗೆ ನಾವು ಕೂಡ 'ದಾಸರ ಹುಡಿಗೆ'ಯು ಕತೆಯಲ್ಲಿ ಕೀರ್ತಿವಂತಳಾದಂತೆ ಈ ಸಂಗ್ರಹದ ಹೆಸರಾಗಿ ಲೇಖಕರಿಗೂ ಒಳ್ಳೆ ಹೆಸರು ತರುವಳೆಂದು" ನಂಬಿದ್ದೇವೆ.

—ಕೆ ವಿ. ಎಸ್.

ಶಿರ್ವ ಹಿಂದೂ ಹೈಸ್ಕೂಲು ಉದ್ಘಾಟನೆ

ತಾರೀಕು 2 6 46ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್) ಶಿರ್ವ, ಇದರ ವತಿಯಿಂದ ಶಿರ್ವ ಹಿಂದೂ ಹೈಸ್ಕೂಲು ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರ ಹಸ್ತದಿಂದ ತೆರೆಯಲ್ಪಟ್ಟಿತು. ಸಂಘದ ಕಾರ್ಯದರ್ಶಿ ಶ್ರೀ. ಎನ್. ಎಸ್. ಕುತ್ಯಾರರು ಸಭೆಗೆ ಬಂದ ಸಮಯೋಚಿತ ಹಲವಾರು ಸಂದೇಶಗಳನ್ನು ಓದಿ ಹೇಳಿದರು. ಸಂಘದ ಅಧ್ಯಕ್ಷರಾದ ಶ್ರೀ. ಮುದ್ದು ಸಿಟ್ರಿ ಹೈಸ್ಕೂಲಿನ ಕುರಿತು ನಿವೇದನೆ ಮಾಡಿ, ಮಹಾ ಜನರ ಸಹಕಾರ ಕೋರಿದರು. ಎಡಿ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ತಿಮ್ಮಪ್ಪ ಸೆಟ್ಟಿ, ರಾವ್ ಬಹದ್ದೂರ್ ಕೆ ಟಿ, ಆಳ್ವರು ವಿದ್ಯಾವರ್ಧಕ ಸಂಘದವರ ಕೆಲಸವನ್ನು ಅಭಿನಂದಿಸಿ ಭಾಷಣವಿತ್ತರು. ಮಹಾಜನರು ಈ ಹೈಸ್ಕೂಲಿಗೆ ಸಹಾಯ ಮಾಡಬೇಕೆಂದರು.

ಬಳಿಕ ಶ್ರೀ. K. ಸಂಜೀವ ಭಟ್ರು, ಶ್ರೀ. ಕುತ್ಯಾರು ಮಹಾಬಲ ಸೆಟ್ರಿ ಶಾಲೆಗೆ ಏಳಿಗೆ ಯೋಭಿವೃದ್ಧಿಯನ್ನು ಹಾರೈಸಿ ಮಾತಾಡಿದರು. ಶ್ರೀ. ಎ. ಬಿ. ಶೆಟ್ಟು ಶಾಲೆಯ ಉದ್ಘಾಟನೆಯನ್ನು ಮಾಡುತ್ತ "ಈ ಸಮಾರಂಭಕ್ಕೆ ನಾನು ಬಹಳ ಸಂತೋಷದಿಂದ ಮತ್ತು ಸಂಪೂರ್ಣ ಮನಸ್ಸಿನಿಂದ ಒಪ್ಪಿರುವೆನು. ಈ ಶಾಲೆಯ ಸ್ಥಾಪನೆಯಲ್ಲಿ ಕೆಲಸ ಮಾಡುತಿದ್ದ ಇಲ್ಲಿಯವರ ಹುರುಪನ್ನು ಕಂಡು ನಾನು ತುಂಬಾ ಸಂತೋಷಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 35 ಹುಡುಗರ ಹೈಸ್ಕೂಲೂ 15 ಹುಡುಗಿಯರ ಹೈಸ್ಕೂಲೂ ಇರುವುದು ತುಂಬಾ ಸಂತೋಷಕರ. ಇದು ನಮ್ಮ ಜಿಲ್ಲೆಯ ವಿದ್ಯಾಭಿರುಚಿಯನ್ನು ಸೂಚಿಸುವುದು. ನಮ್ಮ ಜಿಲ್ಲೆಯು ಸಂಸ್ಥಾನದ ಬೇರೆ ಜಿಲ್ಲೆಗಳಿಗಿಂತ ವಿದ್ಯೆಯಲ್ಲಿ ಮುಂದುವರಿದುದು ಒಂದು ಹೆಮ್ಮೆಯ ಮಾತಾಗಿದೆ. ನಮ್ಮ ಜಿಲ್ಲೆಯು ಸದ್ಯದಲ್ಲೇ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜಿಲ್ಲೆಯಾಗಲಿರುವುದು ಆದರೆ ಈಗ ಪ್ರತಿ ಹಳ್ಳಿಗಳಲ್ಲಿಯೂ ಹೈಸ್ಕೂಲುಗಳು ಜಗಿ ಚಲೋ ರೀತಿಯಲ್ಲಿ ನಡೆಯುವುದನ್ನು ನೋಡಿದರೆ ಪ್ರಾಥಮಿಕ ಶಿಕ್ಷಣದಲ್ಲಿಯೇ ಸಂತೃಪ್ತರಾಗದೆ ನಮ್ಮ ಜಿಲ್ಲೆಯುSecondary Education for all ಎಂಬ ಧ್ಯೇಯವನ್ನು, ಇಟ್ಟುಕೊಂಡಿದೆಯೆನ್ನಬಹುದು. ಇದು ಲೋಕದ ಬಾಕಿ ದೇಶಗಳ ಮುಟ್ಟಿವಾಗಿದೆ. ಪೇಟೆಯನ್ನು ಬಿಟ್ಟು ಹೈಸ್ಕೂಲುಗಳು ಹಳ್ಳಿಯನ್ನು ಸೇರುವುದು ಶೇಕಡಾ 90ರಷ್ಟು ಹಳ್ಳಿಗಳಿರುವ ನಮ್ಮ ದೇಶದ ಏಳಿಗೆಯನ್ನು ಸೂಚಿಸುತ್ತದೆ.

ವಿದ್ಯೆಯೆಂದರೆ ನೌಕರಿಯ ಪಾಸ್‌ಪೋರ್ಟೆಂದು ತಿಳಿಯುವುದು ನ್ಯಾಯವಲ್ಲ. ಅದು ಮನುಷ್ಯನ ನೈತಿಕ ಬೆಳವಣಿಗೆಯ ತಳಹದಿ. ಇದು ಪ್ರತಿಯೊಬ್ಬನಿಗೂ ಅಗತ್ಯ ಹೈಸ್ಕೂಲು ಶಿಕ್ಷಣದೊಟ್ಟಿಗೆಯೇ ಕೃಷಿ, ವ ಕೈಗಾರಿಕೆಯ ಶಿಕ್ಷಣಗಳನ್ನು ಕೊಡಬೇಕು ಈ ಶಾಲೆಯಲ್ಲಿ ● ವ್ಯವಸ್ಥೆಯ ಏರ್ಪಾಡು ಇದೆಯೆಂದು ನಾನು ತಿಳಿಯುತ್ತೇನೆ. ಯಾವುದಾದರೂ ಒಳ್ಳೆಯ ಕೆಲಸವು ಹಣ ಮತ್ತು ಪ್ರಯತ್ನವಿಲ್ಲದೆ ಆಗಲಾರದು. ನಿಮ್ಮ ಕೆಲಸಕ್ಕೆ ಕಡಿಮೆಯೆಂದರೆ ಈ ವರ್ಷದಲ್ಲಿ 1 ಲಕ್ಷ ರೂಪಾಯಿಯಾದರೂ ಬೇಕು. ಇದಕ್ಕೆ ನಿಮ್ಮ ಶಿರ್ವ ನ^ಚೆಟ್ಟಿನವರು ದೊಡ್ಡ ಮನಸ್ಸುಮಾಡಿ 20ಎಕ್ರೆ ಕೊಟ್ಟಂತೆಯೇ ಪ್ರತಿ ಒಬ್ಬರು ಅವರ ನೋಲ್ಪಂಕ್ತಿಯನ್ನು ಅನುಸರಿಸಿ ಸಹಾಯ ಮಾಡಲು ಹೊರಟಿರುವರೆಂದು ತಿಳಿಯುವರೇ ಸಂತೋಷ ಪಡುತ್ತೇನೆ. ಧನಿಕರು ಬಾಹ್ಯಾಡಂಬರಕ್ಕೋಸ್ಕರ–ಮಂದಲ, ಸೇಸು, ಸದಸ್ಯ ಭೋಜನ" ಇತ್ಯಾದಿಗಳಿಗೆ ಧನವನ್ನು ಹಾಳುಮಾಡಿ ಸಮಾಜವನ್ನು ಕೆಡಿಸುವ ಬದಲು ನಿಮ್ಮ ಹೈಸ್ಕೂಲಿಗೆ ಧನ ಸಹಾಯ ಮಾಡಿ ಸಮಾಜವನ್ನೂ ದೇಶವನ್ನೂ ಉದ್ಧರಿಸಬೇಕೆಂದು ನನ್ನ ಅಪೇಕ್ಷೆ" ಎಂದರು. ವಂದೇ ಮಾತರಂ ಹಾಡಿನೊಂದಿಗೆ ಸಭೆಯು ಮುಕ್ತಾಯವಾಯಿತು

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ:–ಆಹಾರ, ಗುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:–ಗದಗ ಫಾರ್ಮಸಿ, ಹುಬ್ಬಳ್ಳಿ:–ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ

Ayurveda Oushadalaya. GADAG.

ಕಾಸರಗೋಡು

ಶೋಚನೀಯ ನಿಧನ--ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಜನಪ್ರಿಯ ಪ್ರಿನ್ಸಿಪಾಲರಾಗಿದ್ದ ಶ್ರೀ ಬಿ. ನಾರಾಯಣ ಭಟ್ಟ, ಬಿ. ಎ. ಇವರು ತಮ್ಮ ಮಧ್ಯ ವಯಸ್ಸಿನಲ್ಲಿಯೇ ದೈವಾಧೀನರಾದರೆಂದು ತಿಳಿಸಲು ವಿಷಾದ ಪಡುತ್ತೇವೆ.

ಕವಿವರ್ಯ ಬೇಂದ್ರೆಯವರ ಹುಟ್ಟು ಹಬ್ಬ–ಕನ್ನಡ ಕವಿತಿಲಕ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ೫೦ನೆಯ ಹುಟ್ಟು ಹಬ್ಬವು ತಾ.೩೧ರಂದು ಧಾರವಾಡದಲ್ಲಿ ಬಲು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅದರ ಸಂಬಂಧವಾಗಿ ತಾ. ೨೫ರಂದು ಕನ್ನಡ ಸಾಹಿತ್ಯೋತ್ಸವವೂ ಆಚರಿಸಲ್ಪಟ್ಟಿತು. ಶ್ರೀ। ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಅಧ್ಯಕ್ಷರಾಗಿದ್ದರು. ಸಂಜೆ ಧಾರವಾಡ ನಗರ ಸಭೆಯವರು ಕವಿ ಬೇಂದ್ರೆಯವರಿಗೆ ಮಾನಪತ್ರವನ್ನರ್ಪಿಸಿದರು. ಸತ್ಕಾರ ಸಮಿತಿಯವರ ದೀರ್ಘ ವರದಿಯು ಓದಲ್ಪಟ್ಟ ನೇಲೆ, ವಿವಿಧ ಸಂಸ್ಥೆ ಸಂಘಗಳವರ ಪುಸ್ತಕ ಮಾನಪತ್ರ ಇತ್ಯಾದಿಗಳು ಬೇಂದ್ರೆಯವರಿಗೆ ಅರ್ಪಿಸಲ್ಪಟ್ಟವು. ಸತ್ಕಾರ ಸಮಿತಿಯ ಪರವಾಗಿ ಸಂಗ್ರಹವಾಗಿದ್ದ ಹತ್ತು ಸಾವಿರದ ಒಂದು ರೂ. ನಿಧಿ ಕವಿವರ್ಯರಿಗೆ ಸಮರ್ಪಿಸಲ್ಪಟ್ಟಿತು. ಬೇಂದ್ರೆಯವರು ಉತ್ತರ ರೂಪವಾಗಿ ಮಾತನಾಡುತ್ತಾ "ಈ ಕೊಡುವ ಬುದ್ಧಿ ಬಯಲಬೆಳೆಯಲಿ ಹಣದಿಂದ ನಾನು ಮತ್ತನಾಗದಂತೆ ನೋಡಿಕೊಳ್ಳುತ್ತೇನೆ. ಇದರ ಸದ್ವಿನಿಯೋಗವೇ ನನ್ನಿಂದ ಅದೀತು ಬೇರೆ ರೀತಿ ವೆಚ್ಚಮಾಡುವುದು ನನ್ನ ಬಡಜೀವನದಲ್ಲಿ ನನಗೆ ಬಳಕೆಯೇ ಇಲ್ಲ ಕನ್ನಡ ಜನ ಎಂದಿಗೂ ನನ್ನನ್ನುರಕ್ಷಿಸಿ–ಶಿಕ್ಷಿಸಿ ಹಾದಿ ತೋರಲಿ" ಎಂದರು. ರಾತ್ರೆ ವಿನೋದ ಕಾರ್ಯಕ್ರಮಗಳೊಡನೆ ಸಮಾರಂಭ ಕೊನೆಗೊಂಡಿತು.

ನೀಲಗಿರಿ ಮೊಡರ್ನ್ ಹಿಂದೂ ಹೋಟೆಲಿನಲ್ಲಿ ಮಕ್ಕಳ ಕೂಟವು-ತಾ.30ರಲ್ಲಿ ಮೈಸೂರು ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಶ್ರೀ. ತಂಬು ಚೆಟ್ಟಿಯವರ ಪತ್ನಿ ಲೇಡಿ ತಂಬು ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಹಾರ ನಂತರ ಮಕ್ಕಳ ಆಟದ ಸ್ಪರ್ಧೆಗಳು ಮಿಸ್ ಲಾಜರಸ್‌ರವರ ನೇತೃತ್ವದಲ್ಲಿ ಜರಗಿತು. ಬಹುಮಾನ ವಿತರಣೆಯಾದ ಬಳಿಕ ಲೇಡಿ ತಂಬುಚೆಟ್ಟಿಯವರು ಶ್ರೀ. ಸೀತಾರಾಮರಾಯರಿಗೆ ಮಕ್ಕಳ ಮೇಲಿರುವ ಪ್ರೇಮವನ್ನು ಕೊಂಡಾಡಿ ಇಂತಹ ಮಕ್ಕಳ ಕೂಟಗಳ ಆವಶ್ಯಕತೆ ಹಾಗೂ ಮಹಾಜನರ ಬೆಂಬಲ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣವಿತ್ತರು. ಶ್ರೀ. ಸೀತಾರಾಮರಾಯರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಾರರೂ ಅವರೊಡನೆ ಹಣ ತೆತ್ತು ಹೊಸ ಪಾಲುಗಳನ್ನು ಪಡಕೊಳ್ಳಬೇಕಾಗಿಯೂ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್.

ದಕ್ಷಿಣ ಕನ್ನಡ.

ಮಂಗಳೂರು

ಪ್ರಕಟಣೆ

ಮದುವೆ ಹೊರತು ಇತರ ಯಾವ ಕೂಟಕ್ಕೆಲ್ಲಾ ಆಮಂತ್ರಣ ಕೊಟ್ಟವರು ಸೇರಿ ೨೦ ಜನರಿಗಿಂತ ಹೆಚ್ಚಿನವರಿಗೆ ಆಹಾರ (ಪಾನೀಯ ವಿನಹ) ಒದಗಿಸುವ ಅತಂಕವು ಇತ್ತು. ಮದುವೆ ಕೂಟದಲ್ಲಿ ಆಹಾರವನ್ನು ಕೊಡತಕ್ಕ ಸಂಖ್ಯೆಯು ೫೦ಕ್ಕೆ ಮೀರಬಾರದೆಂಬದಾಗಿ ಸರಕಾರವು ನಿಶ್ಚಯಿಸಿರುತ್ತದೆ. ಹೀಗೆ ೫೦ ಜನರ ಲಿಸ್ಟು ತೆಗೆಯುವಾಗ ವಧೂವರರು ಮತ್ತು ಅವರ ಕುಟುಂಬದವರಾದ ಕಾಯಂ ಯಾ ತಂಗಾಮಿ ರೇಶನ್ ಕಾರ್ಡುಗಳನ್ನು ಪಡೆದು, ಅಕ್ಕಿಯನ್ನು ಉಪಯೋಗಿಸುವರ ಅನುಮತಿ ಪಡೆದವರನ್ನು ಸಿಂಪಿಸಬೇಕು. ಮದುವೆ ಜರಗುವ ಸಭಾದಿನ ಹೊರತು ಇನ್ನಿತರ ಸಂದರ್ಭದಿಂದ ಬಂದ ನೆಂಟರ ಬಂಧುಗಳಿಗೆ ಮಾತ್ರ ತಂಗಾಮಿ ಕಾರ್ಡು ರೇಶನ್ ಆಫೀಸರರು ಕೊಡುವರು. ... ದಿವಸಗಳಿಗೆ ಕಡಿಮೆ ಸಿಕ್ಕುವ ... ದಿವಸಗಳಿಗೆ ಇದು ... ಕಾರ್ಡು ಪಡೆಯದೆ ಇರುವ ... ದವರು ಈ ೫೦ ಜನಸಂಖ್ಯೆಯ ಲೆಕ್ಕಕ್ಕೆ ಒಳಗಾಗುವರು.

ಈ ಕಟ್ಟು ಮದುವೆಯ ಪಾರ್ಟಿಯಲ್ಲಿ ಪಾನೀಯ ಮಾತ್ರ ಕೊಡುವುದಕ್ಕೆ ಅನ್ವಯವಾಗುವುದಿಲ್ಲ.

ಡಿ॥ ಮುನ್ಸಿಫರುಗಳ ವರ್ಗಾವಣೆ—ಶ್ರೀ. ಬಿ. ಕೊರಗಪ್ಪ ಬಿ. ಎ. ಬಿ. ಎಲ್. ಕಾರ್ಕಳದಿಂದ (ಸೀಲುಮಿಸ) ಪಂಕಟೀ ದುರ್ಗಕ್ಕೆ; ಮಿ. ಜೆ ಎಂ. ಶಿಕೇರಾ ಎಂ. ಎ. ಎಂ. ಎಲ್. ಪಂಕಟೀ ದುರ್ಗದಿಂದ ಕಲ್ಲಿಕೋಟೆಗೆ (ಎಡಿಶನಲ್), ಮಿ.ಡಿ. ಸರೋನ್ಹ ಬಿ. ಎ. ಬಿ. ಎಲ್. ಉಡುಪಿಯಿಂದ ಕಾರ್ಕಳಕ್ಕೆ, ಮಿ. ಇ. ಇ. ಗೊನ್ಸಾಲ್ವಿಸ್ ಬಿ. ಎ. ಬಿ. ಎಲ್ ಉಡುಪಿಗೆ (ಪ್ರಿನ್ಸಿಪಾಲ್); ಕನ್ನಾನೂರಿನ ಎಡ್ವೋಕೇಟ್ ಶ್ರೀ. ಟಿ. ಕೆ. ವೆಂಕಟರಂಗಯ್ಯ ಬಿ. ಎ. ಬಿ. ಎಲ್. ಉಡುಪಿಗೆ (ಎಡಿಶನಲ್); ಶ್ರೀ. ಎಂ ರಾಧಾಕೃಷ್ಣ ಶೆಣೈ ನೆಲ್ಲೂರಿನಿಂದ ಕುಂದಾಪುರಕ್ಕೆ; ಶ್ರೀ. ಯು. ನಾರಾಯಣ ರಾವ್ ಬಿ. ಎ. ಬಾರ್-ಎಟ್-ಲಾ ಕುಂದಾಪುರದಿಂದ ಕಡಪಕ್ಕೆ ಜಿಲ್ಲಾ ಮುನ್ಸಿಫರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಜಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲಾ—ವಿದ್ಯಾರ್ಥಿಗಳ ಸಂಘದ ದ್ವಿತೀಯ ವರ್ಷೋತ್ಸವವು ತಾ 26 5 46ರಲ್ಲಿ ಶ್ರೀ ಕೃಷ್ಣ ಗುರು ಎಂ ಅರ್. ಭಟ್ ಆಯುರ್ವೇದ ವೈದ್ಯೋಪಾಧ್ಯಾಯರು ಇವರ ಅಧ್ಯಕ್ಷತೆಯಲ್ಲಿ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅನೇಕ ಸಾರೆ ಅವಶ್ಯಕತೆಯೂ ಇರುವುದಿಲ್ಲ ...

ಜವೇರಿಯನ್ ಜೀವನ ಮಿಕ್ಶ್ಚರ್ ...

ಎಮ್ ಏಚ್ ಜವೇರಿಯನ ಮತ್ತು ಕಂಪ್ರಿನ್ಸೆಸ್ ಸ್ಟ್ರೀಟ, ಮುಂಬಾಯಿ ೨.

ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಿತು.

ಪುತ್ತೂರು—ಇಲ್ಲಿಂದ ಮಂಗಳೂರಿನ ಬಸ್ ನಿಲ್ದಾಣದ ವೈಕರೆ ಹೋಗುವವರು ಮಂಗಳೂರು ಬೆಂಗಳೂರು ಕಟ್ಟೆ... ಪತ್ರಿಕೆಗಳ ... ಪತ್ರಿಕೆ ... ಕಮಿಶನ್ ... ಬಸ್ ಟಿಕೇಟ್ ಕೊಡುವುದಾದರೂ ... ತೆಗೆದುಕೊಳ್ಳಬೇಕೆಂದು ... ಪತ್ರಿಕೆ ಪಡೆಕೊಂಡರೂ ... ಟಿಕೇಟುಗಾಗಿ ... ಪತ್ರಿಕೆ ತೆಗೆದುಕೊಳ್ಳದೆ ... ಪತ್ರಿಕೆ ... ಟಿಕೇಟಾದರೂ ಪತ್ರಿಕೆ ತೆಗೆದುಕೊಳ್ಳಬೇಕು. ... ಎಂ ಕೆ. ಅ... , ... ಇವರು ಒದೆಯುತ್ತಾರೆ.

ಬ್ರೆಡ್ ಟಿಕೇಟುಗಳು—ಪಕ್ಕಿಟ್ ಉಪ್ಪೋಗಿಸುವರು ಇತರರು ಸಂಚಾರ ವೇಳೆಯಲ್ಲಿ ಫ್ರೀ ರೇಶನಿಂಗ್ ಕ್ಷೇತ್ರದಲ್ಲಿ ಸುಲಭವಾಗಿ ಬ್ರೆಡ್ಡನ್ನು ಪಡೆಯುವರೆ ಅಂದವರು ತಮ್ಮ ಕಾಯಂ ವಾಸಸ್ಥಾನದ ರೇಶನಿಂಗ್ ಅಂಗಡಿಯಲ್ಲಿ ಪ್ರೀಡ್ ರೇಶನ್ ಕಾರ್ಡನ್ನು ರಿಜಿಷ್ಟ್ರು ಮಾಡಿಸಿ ಬ್ರೆಡ್ ಟಿಕೇಟುಗಳನ್ನು ಪಡೆಯತಕ್ಕದು. ಈ ಟಿಕೇಟುಗಳನ್ನು ಬೊಂಬಾಯಿ ಗ್ ರೇಶನ್ ಕಾರ್ಡನ್ನು ಇನ್ನೊಂದು ಬ್ರೆಡ್ ರೇಶನ್ ಕ್ಷೇತ್ರದ ಅಂಗಡಿಯಲ್ಲಿ ಹಾಜರುಪಡಿಸಿದರೆ ಬ್ರೆಡ್ ದೊರೆಯುವುದು. ಟಿಕೇಟುಗಳನ್ನು ನಾಲ್ಕು ವಾರಗಳ ಪ್ರಯಾಣಕ್ಕೆ ಜಾಸ್ತಿ ಸಮಯಕ್ಕೆ ಪಡೆಯಲಾಗದು.

ಹೆಗ್ಗ—ವೆಗ್ಗ ಬೋರ್ಡು ಎಲಿಮೆಂಟ್ರಿ ಶಾಲಾ ವರ್ಧಂತ್ಯುತ್ಸವವು 30-5-46ರಲ್ಲಿ ಉಡುಪಿ ರೇಂಜ್ ಡೆಪ್ಯೂಟಿ ಇನ್ಸ್ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶಾಲಾ ವರದಿವಾಚನವಾದ ತರುವಾಯ "ವಿಷ್ಣುರಾಯಿ" ನಾಟಕವು ಶಾಲ ಬಾಲಕ ಬಾಲಕಿಯರಿಂದ ಮನೋರಂಜಕವಾಗಿ ನಟಿಸಲ್ಪಟ್ಟಿತು. ಶ್ರೀಗಳಾದ ಅಜ್ಜಣ್ಣ ಶೆಟ್ಟಿ ಎಸ್ ಭವಾನಿ ಶಂಕರ ಹೆಗ್ಡೇರು ಮಾತನಾಡಿದರು ಈ ಸಂಸ್ಥೆಗೊಂದು ಹಾಯರ್ ಎಲಿಮೆಂಟರಿ ಶಾಲೆಯು ಅಗತ್ಯವೆಂದು ಶ್ರೀ ಹೆಗ್ಡೇರು ಹೇಳಿದರು ಊರವರು ಸಹಕಾರಮಿತ್ರರ ತಾವು (ಇಲಾಖೆಯವರು) ಆದಷ್ಟು ಬೇಗನೆ ಹಾಯರ್ ಎಲಿಮೆಂಟರಿ ಶಾಲೆತೆರೆಯುವರೇ ಪ್ರಯತ್ನಿಸುವುದಾಗಿ ಅಧ್ಯಕ್ಷರು ಆಶ್ವಾಸನೆಯಿತ್ತರು. ನಾಟಕದಲ್ಲಿ ಪಾತ್ರ ವಹಿಸಿದ ಮಕ್ಕಳಿಗೆ ಇನಾಂ ಹಂಚಿದ ಬಳಿಕ ಹೆಡ್ಮಾಸ್ತರ್ ಶ್ರೀ. H ವಿಟ್ಠಲ್ ಶೆಟ್ರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮಣಿಪುರ—ತಾ. 19-5-46ರಲ್ಲಿ ಮಣಿಪುರ ಜಿಲ್ಲದ ಯೂನಿಯನಿನವರು ಕಟ್ಟಿಸಿದ "ಗುರು ನಾರಾಯಣ ಮಂದಿರದ" ಪ್ರವೇಶೋತ್ಸವವು ರಾವ್. ಬಹದ್ದೂರ್ ಯಸ್. ಯಸ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ಸಂಜೀವ ಶ್ರೀ. ತಲವಾರ್ B A. B. L. ರವರು, ಅಂದೇ ಉದ್ಯಾವರ ಸಂಘದಿಂದ ತಂದ ಗುರುವರದ ಪೀಠಾಲಂಕಾರ ಮಾಡಿದರು. ಸಭಾಧ್ಯಕ್ಷರಭಾವ ಚಿತ್ರವನ್ನು ಶ್ರೀ. ಬಿ. ಜಿ. ದಾಸ್. B. A. B L. ಇವರು ಅನಾವರಣ ಮಾಡಿದರು, ಸಭಿಕರ ಭಾಷಣವಾದ ನಂತರ ಮಣಿಪುರ ಬೋರ್ಡು ಎಲಿಮೆಂಟರಿ ಶಾಲಾ ಹುಡುಗರು ಮೀನಾಕ್ಷಿ ಕಲ್ಯಾಣವೆಂಬ ಯಕ್ಷಗಾನವನ್ನು ಆಡಿ ತೋರಿಸಿದರು.

ಮುಂಡ್ಕೂರ—ಇಲ್ಲಿನ ಸಂಕಲಕರಿಯ ಎಯಿಡೆಡ್ ಶಾಲೆಯಲ್ಲಿ ತಾ. 27-5-46 ರಲ್ಲಿ ಹೆತ್ತವರ ಸಭೆಯು ●. ಕೊಡಂಕೂರು ಬಾಬು ಭಟ್ರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ವಿನೋದಾವಳಿಗಳೂ ಇದ್ದುವು.

ಕುಂದಾಪುರ—ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಈಗ ಕಟ್ಟಿಸಿರುವ ಬಿಲ್ಡಿಂಗಿನ ಪ್ರವೇಶೋತ್ಸವವು ತಾ 1-6-46 ರಲ್ಲಿ ಶ್ರೀ. ಕೆ. ವೆಂಕಪ್ಪ ಶೆಟ್ರು, ವಕೀಲ್ ಇವರ ಹಸ್ತದಿಂದ ಶ್ರೀ.ಬಿ.ವ್ಯಾಸರಾಯ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭಿಕರ ಹಾಗೂ ಅಧ್ಯಕ್ಷರ ಭಾಷಣಗಳಾದ ಮೇಲೆ ಶ್ರೀ. ಸ್ವಾ ಮುಂಜಯ್ಯ ಶೆಟ್ರು ಎಡ್ವೊಕೇಟ್ ಇವರು ಧನ್ಯವಾದವನ್ನಿತ್ತರು.

BANK WITH THE LARGEST CONNECTIONS ON THE WEST COAST

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd

ETD. 1925

FOR LIFE ASSURANCE
CONSULT
The New Gaurdian of India Life Insrce. Co , Ltd.,
(Chairman - The Hon'ble Mr. M. CT. M Chidambaram Chettiar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE & KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು, (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು- ಪಾಪ್ಯುಲರ್ ಸ್ಟೋರ್ಸ್, ಶೆಡ್ ನಂ. 183. ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್, ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಶೆಡ್ ನಂ., ಜಿ. ಐ. ಪಿ. ಮಾಟುಂಗಾ.

WANTED

A Secondary Grade Trained for Maryknoll School Barkur.

Apply to.

Rev. Fr. M. F. C. Castelino,
Manager,
Mt. Thabor, Lorette Post
(S. Kanara)

(೨ನೇ ಪುಟದಿಂದ)
ಗಬಹುದು, ಎಂದೆಲ್ಲಾ ಯೋಚಿಸಿ, ಕೊನೆಗೆ ಆತನನ್ನು ತನ್ನ ಕೆಲಸದಿಂದ ಡಿಸ್‌ಮಿಸ್ ಮಾಡಿದ; ಜತೆಯಲ್ಲಿ ಒಂದು ಅತ್ಯುತ್ತಮ ಶಿಫಾರಸು ಪತ್ರವನ್ನು ಬರೆದು ಆ ನಗರದ ಬೇರೊಂದು ಕಡೆಯಲ್ಲಿದ್ದ ತನ್ನ ಮಿತ್ರ ಸಾಹುಕಾರನೊಬ್ಬನ ಬಳಿಗೆ ಕಳುಹಿಕೊಟ್ಟ. ತನಗೊಬ್ಬ ಒಳ್ಳೇ ಕ್ಲಾರ್ಕನ್ನು ದೊರಕಿಸಿಕೊಡಬೇಕೆಂದು ಆ ಮಿತ್ರ ಈತನೊಡನೆ ಆ ಮೊದಲೇ ಕೇಳಿಕೊಂಡಿದ್ದ. ಹೊಸ ಕೆಲಸದಲ್ಲಿ ಈ ಕ್ಲಾರ್ಕ ಮಿಂಚುವೇಗದಿಂದ ಅಭಿವೃದ್ಧಿ ಪಡೆದು ಎರಡೇ ವರುಷಗಳಲ್ಲಿ ತನ್ನ ಕಂಪೆನಿಯ ಒಬ್ಬ ಪಾಲುಗಾರನಾಗಿದ್ದಾನೆ. ಈಗ ದೊಡ್ಡ ಶ್ರೀಮಂತನಾಗಿದ್ದಾನೆ ಈಗ ಇರುವ ಒಂದೇ ಒಂದು ಕೊರತೆಯೆಂದರೆ, ಅವನ ಈ ಸಂಪತ್ತಿನ ಮೂಲ ಕಾರಣವಾದ ಆತುಟಿಗಳನ್ನು ಮತ್ತೊಮ್ಮೆ ಚುಂಬಿಸುವ ಭಾಗ್ಯವಿಲ್ಲದಿರುವದು. ಹಾಗಾಗುವ ಸಂಭವವೇ ಇಲ್ಲವಂತೆ

೦೦ ೦೦ ೦೦

ಇದೂ ಅಮೇರಿಕದ್ದೇ ಕಥೆ ಅಲ್ಲಿಯ ಲೀಡ್ಸ್‌ನ ಸಿಗರ್ ಅಂಗಡಿಗೆ ತರುಣನೊಬ್ಬ ಸಿಗರ್ ಪಡಕೊಳ್ಳಲು ಬಂದಿದ್ದ. ಮಾರಾಟಕ್ಕೆ ಸಾಹುಕಾರನ ಮಗಳು-ಸುಂದರಿ ಯುವತಿ- ಕುಳಿತಿದ್ದಳು. ತರುಣ ವ್ಯಾಪಾರದ ನಡುವೆ ಅವಳೊಡನೆ ಬೇಕಾದಷ್ಟು ತಮಾಷೆಯಾಡಿದ. ಮಾರಾಟ ಕಲೆಯನ್ನರಿತಿದ್ದ ಆ ಯುವತಿಯೂ ಇವನ ಲಗು ಭಾಷೆಗಳಿಗೆ ಸ್ವಾಗತವಿತ್ತಳು. ಯುವಕನು ಅವಳ ಹಾವಭಾವಕ್ಕೆ ವಿಪರೀತ ಅರ್ಥ ಕಟ್ಟಿರಬೇಕು. ಪಕ್ಕನೇ ಬಗ್ಗಿ ಪೆಟ್ಟಿಗೆಗಡ್ಡ ಕುಳಿತಿದ್ದ ಯುವತಿಯ ಕೆಂಪು ತುಟಿಗಳ ರಸ ಹೀರಿಬಿಟ್ಟ ತರುಣಿಯೊಮ್ಮೆ ಕೂಗಿ ಅಷ್ಟಯೇ ಅವನ ಎರಡೂ ಕಿವಿಗಳನ್ನು ಹಿಡಿದು ಮೂರು ಸುತ್ತು ತಿರುಗಿಸಿದಳು. ಅವಳ ತಂದೆ ಬಂದು ಈ ಮನುಷ್ಯನ ತಲೆಯ ಮೇಲೆ ಎರಡು ಸಿಗರ್ ಪೈಪುಗಳನ್ನೂ ಒಂದು ಸಿಗರ್ ಪೆಟ್ಟಿಗೆಯನ್ನೂ ಒಡೆದ. ತನ್ನ ಅಪರಾಧಕ್ಕೆ ಮಿಕ್ಕಿದ ಶಿಕ್ಷೆಯಾಯಿತೆಂದು ತರುಣನ ಮನಸ್ಸು ಕುದಿಯಿತು. ಆತ ಫಿರ್ಯಾದಿ ಕೊಟ್ಟು ಸಿಗರ್ ವ್ಯಾಪಾರಿಯನ್ನೂ ದಸ್ತಗಿರಿ ಮಾಡಿಸಿದ ತನಿಖೆಯ ವೇಳೆ ಕೋರ್ಟಿನಲ್ಲಿ ತಮಾಷೆಯೇ ತಮಾಷೆ, ನಗುವೇ ನಗು. ಆ ಮೇಲೆ ಈ ಉಭ್ರಮಿ ಯುವಕ ಊರವರಿಗೊಂದು ಪರಿಹಾಸ್ಯದ ವಸ್ತುವಾಗಿ ಹೋದ ಅವನ ಬಾಳುವೆ ಲಜ್ಜಾಸ್ಪದವಾಯಿತು. ಇಂತಹ ಅವಸ್ಥೆಯಲ್ಲಿ ಆ ಊರಿನಲ್ಲಿ ವಾಸಿಸುವದೇ ತರುಣನಿಗೆ ಅಸಹ್ಯವಾಯಿತು. ಆತ ದಕ್ಷಿಣ ಆಫ್ರಿಕಕ್ಕೆ ಓಡಿಹೋದ. ಅಲ್ಲಿ ಕೇಪ್ ಟೌನಿನಲ್ಲಿ ಕೆಲಸವಾಯಿ ಕೆಲಸವಿಲ್ಲದ ಅಲೆದಾಡಿದ. ಮತ್ತಲ್ಲಿಂದ ಕಿಂಬೆರ್ಲಿ ಎಂಬಲ್ಲಿಗೆ ಹೋದ.ಅವನ ಭಾಗ್ಯಲಕ್ಷ್ಮಿ ಅಲ್ಲಿ ಕಾದು ಕೂತಿದ್ದಳು ಸುದೈವವಶಾತ್ ಒಂದು ಸಣ್ಣ ಭೂಮಿಯನ್ನು ಕ್ರಯಕ್ಕೆ ಪಡಕೊಳ್ಳಲು ಅವನಿಗೆ ಸಾಧ್ಯವಾಯಿತು; ಆ ಭೂಮಿಯಲ್ಲಿ ವಜ್ರಗಳಿರಬೇಕೆ? ಕೆಲವು ವಾರಗಳಲ್ಲೇ ಅದು ವಜ್ರಭರಿತ ಭೂಮಿಯೆಂಬುದು ಗೊತ್ತಾಯಿತು. ಕ್ರಯಕ್ಕೆ ಪಡೆಯಲು ಕಂಪೆನಿಯೊಂದು ಮುಂದೆಬಂತು ಆದರೆ ಈ ಚುಂಬನ ಪ್ರಸಿದ್ಧ ಸುಲಭದಲ್ಲಿ ಮಾರಲೊಪ್ಪದೆ ಕೊನೆಗೆ 4000 ಪೌಂಡುಗಳಿಗದನ್ನು ವಿಕ್ರಯಿಸಿದ; ಅವನದನ್ನು ಪಡಕೊಂಡಿದ್ದುದು 600 ಪೌಂಡುಗಳಿಗೆ. ಆದರಲ್ಲಿ 20,000 ಪೌಂಡು ಕೊಟ್ಟು ಬೇರೊಂದು ಆಸ್ತಿಯನ್ನು ಕ್ರಯಮಾಡಿಕೊಂಡ-ಆ ಮನುಷ್ಯನ ಕೈಯಲ್ಲಾವ ಭಾಗ್ಯರೇಖೆಯಿದೆಯೋ-ಆ ಭೂಮಿಯಡಿಯಲ್ಲಿ ಭಂಗಾರವಿರುವದು ಗೊತ್ತಾಗಬೇಕೆ? ಅದನ್ನು ಕೊನೆಗಾತ 1,60000 ಪೌಂಡುಗಳಿಗೆ ವಿಕ್ರಯಿಸಿದ. ಹೀಗೆ ಒಂದು ಚುಂಬನ ಕೊಟ್ಟು ಓಡಿ ಬಂದುದರಿಂದ ಅವನಿಗೆ 1,80000 ಪೌಂಡುಗಳ ನಿವ್ವಳ ಲಾಭ ದೊರೆಯಿತು.

ನೀವೀಗ ನಿಮ್ಮ ಅಭಿಪ್ರಾಯವನ್ನೇ ಕೊಡಿ- ಇಂತಹ ಭಾಗ್ಯಹೀರಬಹುದಾದರೆ ಕತ್ತರೀ ತುಟಿಗಳನ್ನು ಕೂಡ ಚುಂಬಿಸಲಾರಿರಾ?

(ಆಯ್ದುಕೊಂಡುದು)

ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್, ಮುಂಬಾಯಿ— ಮುಂಬಾಯಿ ಬಂಟರ ಯಾನೆ ನಾಡವರ ಸಂಘದ ಮುಖಾಂತರ ನಡೆಯುಕೊಂಡು ಬರುವ ನೈಟ್ ಸ್ಕೂಲಿನ ಶಾಲೆಯ ವಾರ್ಷಿಕೋತ್ಸವವು ಇದೇ ಜೂನ್ ತಿಂಗಳ ತಾ 13ನೇ ಗುರುವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಮುಂಬಾಯಿ, ಕೋಟೆಯೊಳಗಿನ ಸರ್ ಕವಾಸ್ಜಿ ಜಹಂಗೀರ್ ಹೋಲಿನಲ್ಲಿ ನೆರವೇರಲಿರುವುದು. ಈ ಸಂದರ್ಭದಲ್ಲಿ ಬೋಳಾರ ಪುರುಷೋತ್ತಮ ನ್ಯಾಕರಿಂದ ಬರೆಯಲ್ಪಟ್ಟಿರುವ 'ನವೂಜದ ಅಗ್ನಿಕುಂಡ' ಎಂಬ ನಾಟಕವನ್ನು ಶಾಲಾ ಉಪಾಧ್ಯಾಯ ವಿದ್ಯಾರ್ಥಿಗಳಿಂದ ಧರ್ಮಾರ್ಥವಾಗಿ ಅಭಿನಯಿಸಲ್ಪಡುವುದು."

ನಮ್ಮಲ್ಲಿ ಸಿಗುವ ಕೆಲವು ಅಮೂಲ್ಯ ಪುಸ್ತಕಗಳು

ನಾಟಕಗಳು			
ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	8	0
ಕುಶಲವ	0	5	0
ವ್ಯಭಿಚಾರಿಣಿ ಯಾರು?	0	12	0
ಹೆಂಡ್ತಿ ಗಂಡನಾದರೆ!	0	4	0
ಪುರುಷ ವಧು'	0	4	0
ದೇಶಭಕ್ತ	1	4	0
ರಂಗಭೂಮಿ	0	8	0
ಸೇವಾಪಥ	0	8	0
ಪ್ರಕಾಶ	2	4	0
ಮೂರು ಪ್ರಹಸನಗಳು	[illegible]	4	0
ಆರೋಗ್ಯ ಪ್ರತಾಪ	0	12	0
ಧರ್ಮಸಂಕಟ	0	5	0
ಮಂಚಾರತಿ	0	6	0
ಪ್ರತೀಕಾರ	0	6	0
ಬಣ್ಣದ ಬೀಸಣಿಗೆ	1	4	0
ಶಂಭೂಕ ವಧೆ	0	2	0
ಮೀರಾಬಾಯಿ	0	10	0
ಸರಸ್ವತಿ	0	12	0
ಕತೆಗಳು			
ಅಂತರಂಗದ ಕತೆಗಳು	0	10	0
ನಾಡಕತೆಗಳು	0	3	0
ನಂದಾದೀಪ	0	10	0
ನಾರೀಹೃದಯ	0	14	0
ಭಾರತೀಯ ಕತೆಗಳು	0	14	0
ನಗೆ ಸೋಟಿಗಳು	0	14	0
ಅನ್ನಲೀನವು ಮತ್ತು ಇತರ ಕತೆಗಳು	1	0	0
ವಿಷ್ಣುವಿನ ಅಪರಾಧಗಳು	0	12	0
ಆಕಾಶಗಂಗೆ	1	12	0
ಪ್ರೇಮಲಾಭ	0	5	0
ಪ್ರತಿಧ್ವನಿ	1	0	0
ಕಂದೂಕಾಣದ ನೋಟಗಳು	0	8	0
ಅಮತಿ ಇತ್ಯಾದಿ ಕತೆಗಳು	0	12	0
ಪ್ರೇಮ ಪ್ರವಾಹ	0	8	0
ಚಿಗುರು	0	6	0

ಕವಿತೆಗಳು			
ಕಾವ್ಯ ಸಾಮ್ರಾಜ್ಯ	1	0	0
ಶ್ರೀಮುಖ	1	0	0
ಮುಗುಳು	0	3	0
ಪರಾಗ	0	9	0
ಭಾರತ ಗೀತಾಂಜಲಿ	0	3	0
ಚಲಚ್ಚಿತ್ರ ಪದ್ಯಾವಳಿ	0	3	0
ಕಾದಂಬರಿಗಳು			
ಸುಶೀಲೆ	1	0	0
ಲಾವಣ್ಯವತಿ	0	12	0
ಸನ್ಯಾಸಿಯ ಸೋಗಿನಲ್ಲಿ	0	8	0
[illegible]ಮುದ್ರೆ	0	6	0
ವೀರಭೂಮಿ	0	2	0
ಇತರ			
ಸಾಮುದ್ರಿಕ ಶಾಸ್ತ್ರ	0	8	0
ಪುರಂದರದಾಸರ ಕೀರ್ತನೆ (೪ ಭಾಗ ಬೈಂಡ್ ಮಾಡಿದ್ದು)	1	8	0
ಏಕಾಂತ ರಾಮಾಯಣ	0	1	0
ಮಲ್ಲಯುದ್ಧ	1	4	0
ಸೌಂದರ್ಯಲಹರಿ	1	0	0
ಶರಪಕ್ಷಿ	0	8	0
ಆರತಿ	1	0	0
ಕನ್ನಡ ಪಟ್ಟು	0	5	0
ಹೆಣ್ಣಿನ ಕೂದಲು	0	5	0
ಧರ್ಮಸಾಮ್ರಾಜ್ಯ	1	8	0
ಭಾರತದಲ್ಲಿ ಜಾತಿಭೇದ	1	0	0
ಗೀತೆಯ ಕೈಗನ್ನಡಿ	0	8	0
ಸುಲಭದಲ್ಲಿ ಇಂಗ್ಲಿಷ್	1	4	0
ಬಾಲ ಸಾಹಿತ್ಯ	0	3	0
ಆರೋಗ್ಯ ಸಾಧನ	1	0	0
[illegible] ಇತಿಹಾಸ	2	8	0
ಶಾಂತಿಪುರಾಣ	3	0	0
ಮಿತಸಂತತಿ	0	8	0
ಜೇನಿನ ವ್ಯವಸಾಯ	1	0	0
ವಿಚಾರವಾಹಿನಿ	0	4	0
ಪ್ರಕಾಶಿನಿ (೬ ಭಾಗಗಳು ಪ್ರತಿ 1ಕ್ಕೆ)	0	4	0

ನವಭಾರತ ಪುಸ್ತಕಭಂಡಾರ, ಉಡುಪಿ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು [illegible] ದಮ್ಮುಕಿ ಆದದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸೇವನ್ನ ಮಾಡಿದಾಗಲೇ ಕೆಮ್ಮೂ ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು, ಪಚನಕ್ರಿಯೆಯು ತಿದ್ದುವದು, ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ತೀಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

[illegible]

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಬೆಂಗಳೂರು; ಟಿ.ಸಿ ನಟರಾಜನ್ ಕೊ, ಮೈಸೂರು

ಮುಂಬಯಿ ಸೋಲ ಏಜಂಟರು

ವನಮಾಲೀ ಛಿಕಾ

ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

CHAMPAE'S

Snow & Castrex

(Sole Distributers for(India.)

Prop: K. G. NAYAK,
Santhekatte, UDIPI, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫ | ವಾರ ೪೧ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. | Vol. 25 No. 41

Founder SRI A. B. SHETTY, M. L. A.

ಉಡುಪಿ • 13-6-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ, ತಲೆನೋವು, ಶೀತ, ನೆಗಡಿ, ಉಳುಕು, ಚಳುಕು, ಹಲ್ಲು ನೋವು, ಕೀಲು ನೋವುಗಳಿಗೆ ಉತ್ತಮ ಔಷಧ ... ರೋಗಗಳಿಗೆ ...

REGD.

ಸಗಟು ಮತ್ತು ಸಣ್ಣ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

NAVAYUGA ENTERPRISE LTD.,

UDIPI, S. INDIA

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್.

To

The Shareholders,

It has been resolved that the nominal Share Capital of the Company be increased to Rupees one lakh (Rs. 1,00,000/-) by the issue of 8000 new shares with a nominal value of Rs 10/- per share and an admission fee of Re. 1/- per share payable on application. The new shares will rank for dividend from the date of allotment. The issue is confined in the first instance to the existing shareholders in the proportion of 4 shares to every one of the share held by them. If acceptance of the offer is not received by the Office of the Company along with the necessary amount on or before 30—6—46, the same will be considered to have been declined.

The terms of issue and the connected particulars have been posted separately to the shareholders, along with the application form.

Applications for additional shares from the existing shareholders and those for shares from others may be made along with the necessary amount, so as to reach us on or before 30-6-'46, but all such applications will be considered only subject to shares being available and the allotment of such shares shall be at the absolute discretion of the Directors of the Company.

Application forms can be obtained personally at the Company Office or will be sent on application.

The subscription to the shares may be closed at any time earlier than 30-6-'46, as soon as it is estimated that the Capital offered is taken up, except to the shareholders to the extent of the shares they are entitled.

K. H. Shetty, Mg. Director. K. J. Ballal, M.L.C. Chairman

M. S. Pejathaya, Agent ...

B. Krishnaya Hegde, Ex. Dt. Bd. Member.

Directors.

ಪಾಲುದಾರರ ಅವಗಾಹನೆಗೆ

ಕಂಪೆನಿಯ ಪಾಲುಭಂಡವಾಳವನ್ನು ಒಂದು ಲಕ್ಷಕ್ಕೇರಿಸುವ ಸಲುವಾಗಿ ಪಾಲು ಒಂದರ ರೂಪಾಯಿ 10/- ಮತ್ತು ಪ್ರವೇಶ ಪಾಸಲು ರೂಪಾಯಿ 1/-ರಂತೆ 8000 ಹೊಸ ಶೇರುಗಳನ್ನು ವಿಕ್ರಯಿಸಬೇಕಾಗಿ ಕಂಪೆನಿಯ ವಿಶೇಷ ಮಹಾ ಸಭೆಯಲ್ಲಿ ನಿರ್ಧಾರವಾಗಿದೆ.

ಶೇರುಗಳ ಮೌಲ್ಯ ಮತ್ತು ಪ್ರವೇಶ ಪಾಸಲನ್ನು ಅರ್ಜಿಯೊಂದಿಗೇನೇ ಕೊಡಬೇಕಾಗಿದೆ. ಶೇರುಗಳು ಸೆಂಕ್ಷನ್ ಆದ ತಾರೀಕಿನಿಂದ ಶೇರುಗಳ ಲೆಕ್ಕಕ್ಕೆ ಬಡ್ಡಿ ಯಾನೆ ಡಿವಿಡೆಂಟ್ ದೊರೆಯುವುದು. ಈ ಹೊಸ ಶೇರುಗಳನ್ನು ಕಂಪೆನಿಯ ಚಾಲ್ತಿ ಮೆಂಬರರಿಗೇನೇ ಪ್ರತಿಯೊಂದು ಪಾಲಿಗೆ 4 ಹೊಸ ಪಾಲುಗಳಂತೆ ಪ್ರಥಮತ ಕೊಡಲಾಗುವುದು. ತಾ 30-6-46 ರೊಳಗಾಗಿ ಹೊಸ ಪಾಲುಗಳ ಬಗ್ಗೆ ಅರ್ಜಿಗಳೂ ಅವುಗಳಿಗೆ ಸಂಬಂಧಿಸಿದ ಹಣವೂ ಕಂಪೆನಿ ಆಫೀಸಿಗೆ ತಪ್ಪಿದಿದ್ದಲ್ಲಿ ಚಾಲ್ತಿ ಮೆಂಬರರಿಗೆ ಹೊಸ ಪಾಲುಗಳ ಆವಶ್ಯಕತೆಯಿಲ್ಲವೆಂದೇ ಪರಿಗಣಿಸಲಾಗುವುದು. ಹೊಸ ಶೇರುಗಳ ಅರ್ಜಿ ಫಾರ್ಮನ್ನೂ ತತ್ಸಂಬಂಧ ಮಾಹಿತಿ ಪಟ್ಟಿಯನ್ನೂ ಈ ಮೊದಲೇ ಎಲ್ಲಾ ಪಾಲುದಾರರಿಗೆ ಕಳುಹಿಸಲಾಗಿಯದೆ.

ಚಾಲ್ತಿ ಮೆಂಬರರಿಂದಲೂ ಇತರರಿಂದಲೂ ಹೊಸ ಶೇರುಗಳ ಬಗೆ ಅರ್ಜಿ ಮತ್ತು ಪಾಲು ಭಂಡವಾಳ ಹಾಗು ಪ್ರವೇಶ ಧನವನ್ನು ತಾ 30-6-46ರ ತನಕ ಈ ಕಚೇರಿಗೆ ಸಲ್ಲಿಸಿದವರಿಂದ ಸ್ವೀಕರಿಸಲ್ಪಡುವವು. ಆದರೆ ಸಾಕಷ್ಟು ಶೇರುಗಳು ಉಳಿದಿದ್ದರೆ ಅವುಗಳನ್ನು ಯಾರ್ಯಾರಿಗೆ ಎಷ್ಟೆಷ್ಟು ಎಂದು ಸೆಂಕ್ಷನ್ ಮಾಡುವ ಅಧಿಕಾರವು ಕಂಪೆನಿಯ ಡೈರೆಕ್ಟರರಿಗೇನೇ ಇರುವುದು.

ಅರ್ಜಿ ಫಾರ್ಮುಗಳನ್ನು ಕಂಪೆನಿಯ ಆಫೀಸಿನಿಂದ ಸ್ವತಃ ಯಾ ಪತ್ರ ಬರೆದು ಪಡೆಯಬಹುದು

ಕಂಪೆನಿಯ ಹೊಸ ಶೇರುಗಳ ಬಗೆ ಅರ್ಜಿಗಳನ್ನು ತಾ 30-6-46 ರ ತನಕ ಸ್ವೀಕರಿಸಬಹುದೆಂದಿದ್ದರೂ ಆ ಅವಧಿಯೊಳಗಾಗಿಯೇ ಎಲ್ಲಾ ಪಾಲುಗಳಿಗೂ ಅರ್ಜಿಗಳು ಬಂದಲ್ಲಿ ತದನಂತರ ಬಂದ ಚಾಲ್ತಿ ಮೆಂಬರರಲ್ಲದವರ ಅರ್ಜಿಗಳಿಗೆ ಸ್ಥಿರ ಕೊಡಲಾಗಲಿಕ್ಕಿಲ್ಲ.

ಕೆ. ಎಚ್. ಶೆಟ್ಟಿ, ಮ್ಯಾನೇಜಿಂಗ್ ಡೈರೆಕ್ಟರ್ ಕೆ. ಜೆ. ಬಲ್ಲಾಳ್, ಚೆಯರ್‌ಮ್ಯಾನ್.

ಎಂ. ಎಸ್. ಪೆಜತ್ತಾಯ, ಬಿ. ಕೃಷ್ಣಯ್ಯ ಹೆಗ್ಡೆ,

ಡೈರೆಕ್ಟರರು

★ ಆ ನದೀ ತೀರದಲ್ಲಿ ★

(ಕವಿ ರವೀಂದ್ರರ ಕತೆಗಳಲ್ಲೊಂದು)

ಅನುವಾದಕ —

ಶ್ರೀ. ಎನ್. ಗಣೇಶ ಚಿಪಳೂಣಕರ, ಹೆಬ್ರಿ.

ಆಶ್ವೀಜ ಮಾಸದ ದಿವಸಗಳು. ಗಂಗಾ ನದಿಗೆ ನೆರೆ ಬಂದಿದ್ದಿತು. ನದಿಗೆ ಕಟ್ಟಿಕೊಳ್ಳಲಾದ ಹಂತಗಳಲ್ಲಿ ನಾಲ್ಕು ಮಾತ್ರ ಮೇಲಕ್ಕೆ ಕಾಣುತ್ತಿದ್ದವು. ಪೊದೆಗಿಡಗಳೆಲ್ಲ ನೀರಿನಲ್ಲಿ ಮುಳುಗಿದ್ದುವು. ನೀರು ನೇರಳೆ ಮರಗಳಿಗೆ ಕಟ್ಟಿಡಲಾದ ಸಣ್ಣ ಸಣ್ಣ ದೋಣಿಗಳು ನೆರೆಯ ಜರತಕ್ಕೆ ತರಂಗವಾಡುತ್ತಲಿದ್ದವು. ಉನ್ನತ ಪ್ರದೇಶಗಳಲ್ಲಿಯ ಗರಿಕೆ ಹುಲ್ಲಿನ ಮೇಲೆ ನೀರಿನ ಹನಿಗಳು ಕೂತು, ಸೂರ್ಯನ ಎಳೆ ಹೊಂಬಿಸಿಲಿಗೆ ಅವು ಮುತ್ತುಗಳಂತೆ ಬಿಂಬಿಸುತ್ತಿದ್ದವು. ಅಂತೂ ಒಂದು ತೆರದ ಆನಂದಕರವಾದ ನೋಟ....ಆಹ್ಲಾದ!

ಚಿಕ್ಕ ದೋಣಿಗಳು ಅವುತ್ತ ಶ್ವೇತ ವರ್ಣದ ಶುಭ್ರ ಪತಾಕೆಗಳನ್ನು ಸೂರ್ಯರಶ್ಮಿ ಶೋಭಿತ ನದಿಯ ಮೇಲೆ ನಾಲ್ಕೂ ದಿಕ್ಕಿಗೆ ಪಸರಿಸಿದ್ದವು. ಪೂಜಾರಿ ತನ್ನ ಸಂಧ್ಯಾ-ಪೂಜಗಳ ಸಾಹಿತ್ಯ ಹಿಡಿದುಕೊಂಡು ನದಿಯಲ್ಲಿ ಸ್ನಾನಕ್ಕಾಗಿ ಆಗಮಿಸಿದನು. ವನಿತೆಯರು ತಮ್ಮ ಕಂಚಿನ ಬಿಂದಿಗೆಗಳನ್ನು ಎತ್ತಿಕೊಂಡು, ಇಬ್ಬರು, ಮೂವರು, ಹೀಗೆ ನೇರ ನದಿಯ ದಿಕ್ಕಿಗೆ ಬರಹತ್ತಿದರು—

...ಅದೇ ವೇಳೆಗೆ ಕುಸುಮಳು ಸಹ ನಿತ್ಯ ಸ್ನಾನಕ್ಕೆ ಬರತಕ್ಕವಳು. ಆದರೆ ಇಂದು ಅವಳು ಬರಲಿಲ್ಲ. ಭವಾನಿ ಮತ್ತು ಸ್ವರ್ಣಲತೆಗೆ ಏನೋ ತಪ್ಪಿದಂತೆ ಭಾಸವಾಗಹತ್ತಿತು. ಅವರಿಗೆ ನದೀ ಕಿನಾರೆಯಲ್ಲಿ ಚಿತ್ತ ಸ್ವಾಸ್ಥ್ಯವೇ ಉಳಿಯಲಿಲ್ಲ. ಕುಸುಮಳು ಮದುವೆಯಾಗಿ ಅವಳು ತನ್ನ ಗಂಡನ ಮನೆಗೆ ತೆರಳಿದಳೆಂದು ಅಲ್ಲಿ ಹೆಂಗಸರು ಗುಜು ಗುಜು ಸುದ್ದಿ ಮಾಡಿದರು.

ವರ್ಷವೊಂದು ಉರುಳಿತು. ಕುಸುಮಳು ಇಂದು ವಿಧವೆಯಾಗಿದ್ದಳು. ಅವಳ ಗಂಡನು ಎಲ್ಲಿಯೋ ದೂರದೂರ ಏನೋ ಒಂದು ಕೆಲಸದಲ್ಲಿದ್ದನು. ಆಕೆಯ ಮತ್ತು ಆತನ ಭೇಟಿಯು ಲಗ್ನವಾದ ಬಳಿಕ ಬರೀ ಎರಡು ಬಾರಿಯಾಗಿದ್ದಿತು. ಅವನು ಮೃತಿ ಹೊಂದಿದ ವರ್ತಮಾನವೂ ಕೂಡ, ಯಾರೋ ಬರೆದ ಪತ್ರದಿಂದಾಗಿ ಅವಳಿಗೆ ತಿಳಿಯಿತು. ಬಾಲ್ಯಾವಸ್ಥೆಯ ಎಂಟನೆ ವಯಸ್ಸಿನಲ್ಲಿಯೇ ವೈಧವ್ಯ! ಅವಳು ತನ್ನ ಸೌಭಾಗ್ಯದ ಕುಂಕುಮತಿಲಕವನ್ನು ಉಜ್ಜಿದಳು. ಕಂಕಣಗಳನ್ನು ತೆಗೆದಿಟ್ಟಳು ಮತ್ತು ಗಂಗಾ ನದೀ ತೀರದಲ್ಲಿರುವ ಅವಳ ಹಿರಿಯರ ಮನೆಯನ್ನು ಸೇರಿದಳು. ಅವಳ ಬಾಲ ವೈಧವ್ಯದ ಯಾತನೆ ಕೆಲ್ಲರಿಗೂ ಲಗ್ನವಾಗಿದ್ದಿತು.

ನೈಸರ್ಗಿಕ ಕ್ರಮದಂತೆ ಗಂಗಾ ನದಿಗೆ ಹೇಗೆ ನೆರೆ ಏರುತ್ತ ಬರುತಿತ್ತೋ ಹಾಗೆಯೇ ಕುಸುಮಳು ದಿನದಿನಕ್ಕೆ ಯೌವನದಲ್ಲಿ ಪದಾರ್ಪಣ ಮಾಡುತ್ತ ಸೌಂದರ್ಯಶಾಲೀ ತರುಣಿಯಾದಳು. ಅವಳ ವಿಚಾರಮಗ್ನ ಚಿಂತಾ ಗ್ರಸ್ತ ನೋಟ ಮತ್ತು ಶಾಂತ ಗಂಭೀರ ಪ್ರವೃತ್ತಿಗಳಿಂದಾಗಿ ಅವಳಲ್ಲಿ ಒಂದು ರೀತಿಯ ವಿಕ್ಷಿಪ್ತತೆ ಬಂದ ಹಾಗೆ ನೋಟಕರಿಗೆ ಭಾಸವಾಗುತ್ತಿತ್ತು. ಮತ್ತು ಅವಳನ್ನು ಕಂಡೊಡನೆ ಎಂತಹ ತರುಣರೂ ಕೂಡ ಮುಗ್ಧರಾಗುವಷ್ಟು ಸೌಂದರ್ಯ ಆಕೆಯಲ್ಲಿ ಮನೆ ಮಾಡಿತ್ತು. ಹೀಗೆ ಹತ್ತು ವರ್ಷಗಳು ದಾಟಿದವು; ಆದರೆ ಕುಸುಮಳು ತಾರುಣ್ಯದ ಹಂತಕ್ಕೆ ಏರಿದುದು ಯಾರ ಮನಸ್ಸಿಗೂ ಬರಲಿಲ್ಲ.

ಕಾರ್ತೀಕ ಮಾಸದೊಳಗಣ ಒಂದು ದಿವಸ ಪ್ರಾಂಜಾನೇ...ಒಬ್ಬ ಎತ್ತರವುಳ್ಳ ಬಳಿಯ ತರುಣ ಸನ್ಯಾಸಿಯು ಗಂಗಾ ತಟಾಕದ ಶಿವಾಲಯದಲ್ಲಿ ಪ್ರಕಟವಾದ. ಅವನು ಯಾವಾಗ ಮತ್ತು ಎಲ್ಲಿಂದ ಬಂದ ಎಂಬುದು ಯಾರಿಗೂ ತಿಳಿಯದ ಸಮಸ್ಯೆಯಾಗಿದ್ದಿತು. ಆ ವರ್ತಮಾನವು ಸಮಾಜದ ಮಂದಿಗಳೊಳಗೆ ಹಬ್ಬಲು ತಡವಾಗಲಿಲ್ಲ. ನೀರಿಗಾಗಿ ನದೀತೀರಕ್ಕೆ ಬರುತ್ತಿರುವ ಸ್ತ್ರೀಯರು ತಮ್ಮ ಬಿಂದಿಗೆಗಳನ್ನು ಅಲ್ಲಿಯೇ ಇರಿಸಿ, ಶಿವ ದರ್ಶನಕ್ಕಾಗಿ ದೇವಾಲಯಕ್ಕೆ ಬರುತ್ತಿದ್ದರು. ಮತ್ತು ಪವಿತ್ರ ಗುರು ಚರಣಗಳಲ್ಲಿ ತಮ್ಮ ಶಿರಗಳನ್ನು ಬಾಗಿಸಿ ವಂದಿಸುತ್ತಿದ್ದರು. ಅಂತೂ ಶಿವ ಮಂದಿರದಲ್ಲಿ ಜನ ಜಂಗುಳಿಯ ಸಂಗಮ ಅಧಿಕವಾಗತೊಡಗಿತು.

ಸನ್ಯಾಸಿಯ ಕೀರ್ತಿ ಸ್ತ್ರೀಯರಲ್ಲಿ ಬಲು ಬೇಗನೆ ಹಬ್ಬಿಕೊಂಡಿತು. ಹಲವರು ದರ್ಶನಕ್ಕಾಗಿ, ಔಷಧಿಗಳಿಗಾಗಿ, ಪುರಾಣ ಶ್ರವಣಕ್ಕಾಗಿ ಅಲ್ಲಿಗೆ ಬರುತ್ತಿದ್ದರು. ಹಲವು ಮಾಸಗಳು ಕಳೆದವು. ಚೈತ್ರ ಮಾಸದಲ್ಲಿ ಖಗ್ರಾಸ ಸೂರ್ಯಗ್ರಹಣ ಬಂದಿತ್ತು. ದೂರದೂರದ ಊರುಗಳಿಂದಲೂ ಅಂದು ಆ ಪವಿತ್ರ ನದಿಯ ಸ್ನಾನಕ್ಕಾಗಿ ಜನರು ತಂಡತಂಡವಾಗಿ ಬರಹತ್ತಿದರು. ಔದುಂಬರ ವೃಕ್ಷದ ಕೆಳಗೆ ಒಂದು ಜಾತ್ರೆಯೇ ನೆರೆಯಿತು. ಯಾತ್ರಾರ್ಥಿಗಳಲ್ಲಿ ಹಲವರು ಸನ್ಯಾಸಿಯ ದರ್ಶನಕ್ಕೆ ಹೋದರು. ಅವರ ಪೈಕಿ ಕುಸುಮಳ ಗಂಡನ ಮನೆಯ ಊರಿನ ಮಂದಿಯೂ ಬಹಳವಿದ್ದರು.

ಪ್ರಾತಃ ಸಮಯ ಸನ್ಯಾಸಿ ಜಪಮಾಲೆ ಹಿಡಿದುಕೊಂಡು ನದೀ ತಟಾಕದಲ್ಲಿ ಧ್ಯಾನಮಗ್ನನಾಗಿದ್ದ. ಆಗ ಯಾತ್ರಾರ್ಥಿ ಸ್ತ್ರೀಯರಲ್ಲಿ ಒಬ್ಬಳು ಆಶ್ಚರ್ಯಚಕಿತಳಾಗಿ ಇನ್ನೊಬ್ಬಳೊಡನೆ ಹೇಳಿದಳು..-"ಜಾನಕಿ! ಇವನು ನಮ್ಮ ಕುಸುಮಳ ಗಂಡನಲ್ಲವೇ ಹಾದು!" "ನಮ್ಮ ಚಟರ್ಜಿಯವರ ಮಗನಿವನ! ಇನ್ನೊಬ್ಬಳು ಮಾತಿಗೆ ಮಾತು ಕೊಟ್ಟಳು. "ಆದರೆ ಅವನು ಈ ಮೊದಲು ಸತ್ತಿದ್ದಾನಷ್ಟೆ?" ಮೂರನೆಯವಳು ಹೇಳಿದಳು. "ಅವನಿಗೆ ಇಷ್ಟು ಗಡ್ಡವಾದರೂ ಎಲ್ಲಿಂದ! ನಾಲ್ಕನೆಯವಳೆಂದಳು.

ನಂತರ ಯಾರೂ ವಿಚಾರ ಮಾಡಲಿಲ್ಲ. ಆದರೆ ವಿಧವೆ .!

ಅಂದು ಪೂರ್ಣಿಮೆಯ ರಾತ್ರಿ. ಹಿಟ್ಟಿನ ಹಾಗೆ ತಿಂಗಳು ಚೆಲ್ಲಿ ಬಿದ್ದಿದೆ. ಕುಸುಮಳು ಏಕಾಂಗಿಯಾಗಿ ಬಂದು ಗಂಗಾ ತಟಾಕದಲ್ಲಿ ಕುಳಿತಳು. ನದಿಯ ಘಟ್ಟದ ಮೇಲೆ ಬೇರೆ ಯಾರೂ ಕಾಣುತ್ತಿರಲಿಲ್ಲ. ರಾತ್ರಿ ಹುಳಗಳ ಕರ್ಕಶ ಸಂಗೀತ ಶುರುವಾಗಿದ್ದಿತು. ದೇವ ಮಂದಿರದೊಳಗಣ ಘಂಟಾನಾದವು ಗಾಳಿಯಲ್ಲಿ ಲೀನವಾಗುತ್ತಿತ್ತು. ಅದರ ಧ್ವನಿಯು ನದಿಯ ಆಚೆಯ ತೀರಕ್ಕೆ ಹೋಗಿ ಪ್ರತಿಧ್ವನಿಸುತ್ತಿತ್ತು. ಚಂದಿರನ ಪ್ರಕಾಶವು ನದಿಯ ನೀರಿನ ಮೇಲೆ ಬೆಳ್ಳಿಯ ರೇಖೆಗಳಂತೆ ಹೊಳೆಯುತ್ತಿದ್ದಿತು. ಮೇಲಿನಿಂದ ಶಿವ ಮಂದಿರ, ಹಿಂದೆ ಕಾಶೀ ಪಟ್ಟಣದ ಗಗನ ಚುಂಬಿತ ಶಿಲ್ಪಕಲಾ ಕಟ್ಟಡಗಳು ಒಂದು ದಿಕ್ಕಿಗೆ ರಾತ್ರಿಯವನ ಸ್ತ್ರೀಯ ಸೌಂದರ್ಯ—ಆದರಲ್ಲಿಯೂ ನದೀ ತೀರ! ಎಂತಹ ಆನಂದ! ಅದೆಂತಹ ಸೊಬಗು!!

ಮೆಲ್ಲಮೆಲ್ಲನೆ ಸನ್ಯಾಸಿ ಶಿವಮಂದಿರದಿಂದ ಹೊರ ಬಿದ್ದ. ನದೀ ಘಟ್ಟಕ್ಕೆ ಅನತಿದೂರದಲ್ಲಿ ಯಾರೋ ಯುವತಿಯೊಬ್ಬಳು ಕುಳಿತಿದ್ದಂತೆ ಸನ್ಯಾಸಿಗೆ ತೋರಿತು. ಅವನು ಹಿಂದೆ ತಿರುಗಿ ಹೋಗುವುದರಲ್ಲಿದ್ದ-ಆದರೆ ಅಷ್ಟರಲ್ಲಿ ಕುಸುಮಳು ತಿರುಗಿ ನೋಡಿದಳು. ಅವಳ ತಲೆಯ ಮೇಲಿನ ಸೆರಗು ಹೆಗಲ ಮೇಲೆ ಇಳಿಯಿತು. ಈಗ ಅವಳ ಸೌಂದರ್ಯ ಸಣಸಾಟವು ಬಹಳ ಮೋಹಕವಾಗಿದ್ದಿತು!

ಒಂದು ನೀಕರ್ಗೆ ವಿಕಾರವಾಗಿ ಕೂಗುತ್ತ ಅವಳ ತಲೆಯ ಮೇಲಿಂದ ಹಾರಿ ಹೋಯಿತು. "ಅವಳು ಸುಧಾರಿಸಿಕೊಂಡು ತನ್ನ ಮಸ್ತಕವನ್ನು ಸನ್ಯಾಸಿಯ ಚರಣಗಳ ಮೇಲೆ ಇಟ್ಟಳು. ಅವನು ಆಶೀರ್ವಾದ ಕೊಡುತ್ತ ಕೇಳಿದ—"ನೀವು ಯಾರು?"

"ನಾನು. .ನಾನು ಕುಸು. ..ಮ!" ಅವಳು ಹೇಳಿದಳು

—ಇಬ್ಬರೂ ಆ ರಾತ್ರಿ ಏನನ್ನೂ ಮಾತನಾಡಲಿಲ್ಲ. ಕುಸುಮಳು ಮಾಲುತ್ತ ಮಂದಗತಿಯಿಂದ ಮನೆಸೇರಿದಳು. ಅವಳ ಮನೆ ಹತ್ತಿರವೇ ಇತ್ತು. ಸನ್ಯಾಸಿಯು ಮಾತ್ರ ಬಹಳ ರಾತ್ರಿಯ ತನಕ ಘಟ್ಟದ ಮೇಲೆ ಕುಳಿತು ವಿಚಾರಮಾಡುತ್ತಲಿದ್ದ. ಪಶ್ಚಿಮ ದಿಕ್ಕಿಗೆ ಇದ್ದ ಸನ್ಯಾಸಿಯ ನೆರಳು ಪೂರ್ವ ದಿಕ್ಕಿಗೆ ಬದಲಿದೊಡನೆ ಅವನು ಅಲ್ಲಿಂದ ಎದ್ದು ಮಂದಿರ ಪ್ರವೇಶ ಮಾಡಿದ .....

(೧೧ನೇ ಪುಟ ನೋಡಿರಿ)

THE
Bombay Life Assurance Company Ltd.
(ESTD 1908)
A PREMIER INSURANCE COMPANY
New Business in 1945 - - 2,77,23,100
KOCHIKAR BROTHERS, LTD.
(ESTD 1910)
Chief Agents for South India including
Travancore, Cochin and Mysore State
New Business in 1945 in our area – Over 5 Millions
OUR Expert advice gained by 35 years Experience
is at your door FREE.
Drop a card to any of our Offices at –
MADRAS · BANGALORE · MADURA · CALICUT
TRIVENDRUM · UDIPI · AND BOMBAY

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.
ತಾ 28--8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.
ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಇಂದಿಗೆ ತಕ್ಕ ನಾಟಕ
ದೇಶಭಕ್ತ
ಶ್ರೀ ಕೆ ಕೆ ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮುಂದಬ್ಬಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.
ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆವಶ್ಯಕವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ನಡೆಯುತ್ತಿರುವ ಜವಾಬ್ದಾರಿಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.
ಬೆಲೆ ರೂ 1—1—0
ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ನಗರಸಭೆ ಮತ್ತು ಕಟ್ಟಡ ರಚನೆ

[ಒರ್ವ 'ನಾಗರಿಕ'ನಿಂದ]

ಅಂಗೋಪಾಂಗಗಳ ದೇಹವಿದ್ದರೇನೇ ಶರೀರ'ವೆಂಬಂತೆ ಕಟ್ಟಡಗಳುಳ್ಳ ನಗರವಾದರೇನೇ ಅಲ್ಲಿ ನಗರ ಸಭೆಯ ನಿರ್ಮಾಣ. ಆದ್ದರಿಂದ ತನ್ನ ಕ್ಷೇತ್ರದಲ್ಲಿ ಹೊಸ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಪ್ರೋತ್ಸಾಹ ಕೊಡುವ ಒಂದು ಮುನಿಸಿಪಾಲಿಟಿಯು ಸ್ವತಃ ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಂಡಂತೆ. ಖಾಸಗೀ ಮಹನೀಯರು ತಮ್ಮ ಸೌಕರ್ಯ, ಸ್ವಂತೋದ್ಯೋಗಗಳಿಗಾಗಿ ಹೊಸ ಕಟ್ಟಡಗಳನ್ನು ಕಟ್ಟಿಸುತ್ತಿರಬಹುದು. ಮುನಿಸಿಪಾಲಿಟಿಯು, ಅದು ತನ್ನ ಸ್ವಂತ ಕಟ್ಟಡವೆಂದು ಭಾವಿಸಿ ಅಂಥವುಗಳ ಮೇಲೆ ಕ್ರಮಬದ್ಧ ಕರ ತೆರಿಗೆ ಹೇರಬಾರದೆಂಬ ವಾದವಲ್ಲ. ಆದರೆ ಅಂಥವರನ್ನು ತನ್ನ ಪ್ರತಿಸ್ಪರ್ಧಿಗಳೆಂಬಂತೆ ಭಾವಿಸಿ, ಅವರ ಕೆಲಸಗಳಿಗೆ ಅಡ್ಡಗಾಲಿಡುವ ಪ್ರಯತ್ನ ಮಾತ್ರ ನ್ಯಾಯವಲ್ಲ. ನಗರ ಸಭಾಧಿಕಾರಿಗಳು ತುಸು ವ್ಯವಹಾರ ಜ್ಞಾನವನ್ನು ಉಪಯೋಗಿಸಿದರೆ, ನಗರ ಸಭೆಯ ಕಾರ್ಯವು ಅದರ ಸಂಬಳ ಪಡೆಯುವ ಒರ್ವ ನೌಕರನ ಜೀವನಾವಧಿಯಲ್ಲಾದುದಕ್ಕಿಂತಲೂ ಹೆಚ್ಚಾಗಿ ಸಣ್ಣ ದೊಡ್ಡ ನವ ಕಟ್ಟಡಗಳನ್ನು ನಿರ್ಮಿಸಿದ ಊರ ಭಾಗ್ಯವಂತರು ಹಾಗೂ ಬಡವರಿಂದ ಆಗಿದೆ ಎಂಬುದನ್ನು ತಿಳಿಯದಿರಲಾರರು. ದೃಷ್ಟಾಂತಕ್ಕಾಗಿ, ಊರನ್ನು ಸ್ವಚ್ಛವಾಗಿ ಇಡುವದು ಮುನಿಸಿಪಾಲಿಟಿಯ ಕರ್ತವ್ಯ; ಆದರೆ ಖಾಸಗೀ ಮನೆಯವರು ತಾವಾಗಿ ತಮ್ಮ ಆಸುಪಾಸಿನ ವಲಯಗಳನ್ನು ಸ್ವಚ್ಛಗೊಳಿಸಿಕೊಂಡರೆ ನಗರ ಸಭೆಯು ಅಂಥವರನ್ನು ತನ್ನ ಪ್ರತಿಸ್ಪರ್ಧಿಗಳೆಂದು ಭಾವಿಸುತ್ತಿದೆಯೆ? ಅವರ ಆ ಕಾರ್ಯಕ್ಕೇನಾದರೂ ನಿರ್ಬಂಧ ಹಾಕುತ್ತದೆಯೆ? ಅದೇ ರೀತಿ ಹೊಸ ಕಟ್ಟಡಗಳಿಂದ ನಗರ ಸಭೆಯ ಕಾರ್ಯವೇ ಆಗುತ್ತಿದೆ; ನಗರದ ಶೋಭೆ ಹೆಚ್ಚುತ್ತಿದೆ; ನಾಗರಿಕರ ಆವಶ್ಯಕತೆಯ ಪೂರೈಕೆಯಾಗುತ್ತಿದೆ, ಎಂಬ ಸತ್ಯವನ್ನರಿತಿದ್ದರೆ ಉಡುಪಿ ಮುನಿಸಿಪಾಲಿಟಿಯು ಇಂದಿನ ಕೆಲವು ಅನಗತ್ಯ ನಿರ್ಬಂಧಗಳನ್ನು ಹೇರುತ್ತಿರಲಿಲ್ಲ.

ನಿಯಮಗಳ ಅರ್ಥವೇನು?

ಕಟ್ಟಡ ಸಂಬಂಧದ ನ್ಯಾಯಬದ್ಧ ಮುನ್ಸಿಪಲ್ ನಿಯಮಗಳಿರಬಾರದೆಂದು ಜವಾಬ್ದಾರಿಯರಿತವರಾರೂ ಹೇಳುವಂತಿಲ್ಲ. ಆದರೆ ಉಡುಪಿ ಮುನಿಸಿಪಾಲಿಟಿಯ ಸಂಬಂಧಪಟ್ಟ ನೌಕರರು ಅದನ್ನು ಉಪಯೋಗಿಸುವ ರೀತಿನೀತಿಗಳು ಕೆಲವು ಸಂದರ್ಭಗಳಲ್ಲಿ ತೀರಾ ವಿಲಕ್ಷಣವಿವೆ. ನಗರ ಸಭೆಯ ಗಡಿಯೊಳಗೆ ಕಟ್ಟೋಣ ಕಟ್ಟಿಸುವವರು ಮುಂದಾಗಿ ಅದರ ನಕಾಶೆಯನ್ನು ನಗರ ಸಭೆಗೊಪ್ಪಿಸಿ ಅನುಮತಿಪಡಕೊಳ್ಳಬೇಕೆಂಬ ನ್ಯಾಯಬದ್ಧ ನಿಯಮವಿದೆ. ಆಳತೆ ಜ್ಞಾನವಿಲ್ಲದ ಊರವರಿಗೆ ಇಂತಹ ನಕಾಶೆಗಳನ್ನು ದುಡ್ಡು ಕೊಡದೆ ಮಾಡಿಸಲು ಸಾಧ್ಯವಿಲ್ಲ. ಬಲ್ಲವರಿಂದ ಮುನ್ಸಿಪಲ್ ನಿಯಮಗಳಿಗೆ ಸರಿಯಾದ ಲಕ್ಷ್ಯಗೊಟ್ಟೇ ಇಂತಹ ನಕಾಶೆಗಳು ತಯಾರಾಗುತ್ತವೆ. ಆದರೂ ನಗರ ಸಭೆಯ ಸಂಬಂಧಪಟ್ಟ ನೌಕರರಿಂದ ತಿರಸ್ಕರಿಸಲ್ಪಡದ ನಕಾಶೆಗಳು ಕಡಿಮೆಯೆಂದು ಕೇಳುತ್ತೇವೆ. ತಮ್ಮದೇ ಸರಿಯೆಂದು ಹಠಹಿಡಿದು ವಾದಿಸಿ ತನಿಖೆ ನಡೆಯುವಂತೆ ಮಾಡುವವರಿದ್ದ ಸಂದರ್ಭಗಳಲ್ಲಿ ಅದು ಸರಿಯೆಂದು ಕೊನೆಗೆ ಒಪ್ಪಿಗೆ ದೊರೆತ ದೃಷ್ಟಾಂತಗಳೇನೋ ಇವೆ. ಆದರೆ ಈ ನ್ಯಾಯಬದ್ಧ ಸೋಲನ್ನೊಪ್ಪಿಕೊಳ್ಳುವದು ನಗರ ಸಭೆಯ ನೌಕರರ ಘನತೆಗೆ ಕುಂದೆಂದು ಅವರು ಭಾವಿಸಿಕೊಂಡು 'ತೋಳ-ಕುರಿಮರಿ'ಯ ಕಥೆಯಂತೆ ಒಂದಲ್ಲೊಂದು ನೆವನದಿಂದ ಆತಂಕಿಸುತ್ತಲೇ ಹೋಗಬಲ್ಲರು. ಒಂದು ಕಟ್ಟಡವು ನಿಯಮಾನುಸಾರ ಸಾಕಷ್ಟು ದೂರದಲ್ಲಿದ್ದರೆ ಕೊನೆಗೆ, ಅದರ ಆಸ್ತಿವಾರ ಅಭದ್ರವಿದೆ ಎಂದವರು ಹೇಳಬಲ್ಲರು.

ನೌಕರರ ಯೋಗ್ಯತೆ

ಕಟ್ಟಡ ವಿಚಾರಣೆ ನಡಿಸುವ ಮುನಿಸಿಪಲ್ ನೌಕರರ ಯೋಗ್ಯತೆಯೆಷ್ಟು ಎಂಬುದನ್ನು ಇಂತಹ ಸಂದರ್ಭಗಳಲ್ಲಿ ಗಣಿಸಬೇಕಾದುದು ಅಗತ್ಯ. ಕೆಲವು ನಿಯಮಗಳನ್ನು ಕಲಿತುಕೊಂಡು ಒಬ್ಬನು 'ಓವರ್ಸೀಯರ'ನಾದ ಮಾತ್ರಕ್ಕೆ ಕಟ್ಟಡ ಸಂಬಂಧದ ಸರ್ವ ಜ್ಞಾನವೂ ಆತನಿಗಿರುವದು ಸಂಭವನೀಯವೆ? ಹಲವು ಕಟ್ಟಡಗಳನ್ನು ಕಟ್ಟಿ ಅನುಭವವುಳ್ಳ ಒಬ್ಬ ಸಾಮಾನ್ಯ ಮೇಸ್ತ್ರಿಯ ಮಟ್ಟಕ್ಕೆ ಅವನೆಂದಿಗೂ ಬರಲಾರ. ಆದರೆ ಅನುಭವವಿಲ್ಲದಿದ್ದರೂ ಅವರಿಗೆ ಅಧಿಕಾರ ಬರುತ್ತದೆ. ಇಂತಹ ಅನುಭವಶೂನ್ಯ ಅಧಿಕಾರದಿಂದ ತಪ್ಪುಗಳಾಗುವದು ಸ್ವಾಭಾವಿಕ. ಈ ರೀತಿ ಜ್ಞಾನದ ಅಭಾವದಿಂದಾಗಿ ಅನಿವಾರ್ಯ ತಪ್ಪುಗಳಿಂದರೆ, ಅಂಥವರ ಸ್ಥಾನಮಾನಗಳ ದೆಸೆಯಿಂದಾಗಿ ಕೆಲವು ಅನ್ಯಾಯಗಳಾಗುವದೂ ಸಂಭವನೀಯ. ಒಂದು ಕಟ್ಟಡದ ಆಸ್ತಿವಾರ ಮತ್ತು ಆಕಾರದ ಸರಿಯಾದ ಪರಿಜ್ಞಾನವೆಂಬುದು ಹೊಸಬನೊಬ್ಬನಿಗೆ ಬಿಲ್ಲೆ ಕಟ್ಟಿದ ಮಾತ್ರಕ್ಕೆ ಅದರಲ್ಲಿ ನೇತಾಡಿ ಕೊಂಡು ಬರುವಂತಹದಲ್ಲ. ಇಂತಹ ಪ್ರಾಮುಖ್ಯ ವಿಷಯದಲ್ಲಿ ನಗರ ಸಭೆಯು, ಆತನು ಅನನುಭವಿಯೆಂಬುದನ್ನು ಮರೆತರೂ, ತಾನು [illegible] ಗ ಅದನ್ನು ಮರೆಯುವದಿಲ್ಲ. ಹೀಗಾಗಿ, ಈ ವಿಭಾಗದ ನೌಕರರು ಕಡಿಮೆ ಸಂಬಳ ಪಡೆದು ಪ್ರಾಮುಖ್ಯ ತೀರ್ಮಾನಗಳನ್ನು ಕೊಡುವವರಾಗಿದ್ದಾರೆ. ಕಟ್ಟಡ ನಿರ್ಮಾಪಕರಿಗೆಲ್ಲಾ ಇಂಥವರ ಅನುಗ್ರಹವು ಬೇಕಾಗುತ್ತದೆ. ಈ ಅನುಗ್ರಹ ಸಂಪಾದನೆಗೆ ತಪ್ಪಿದ ದೋಷವೇ 'ಆಸ್ತಿವಾರ ದೋಷ'ವಾಗಬಹುದು! ಅಂದ ಮೇಲೆ ಈ ಕುರಿತು ತಜ್ಞರಾದವರ ಮೇಲ್ತನಿಖೆಯಿದ್ದು, ನಗರ ಸಭೆಯು ಸರಿಯಾದ ವಿಮರ್ಶೆಯಿಂದ ಕೊನೆಯ ತೀರ್ಮಾನ ಕೊಡುವ ವ್ಯವಸ್ಥೆಯಿರುವದು ಅಗತ್ಯವಲ್ಲವೆ?

ನಗರ ಸಭೆಯ ಅಸಡ್ಡೆ

ಆದರೆ ನಮ್ಮ ದುರ್ದೈವದಿಂದ ಉಡುಪಿ ನಗರ ಸಭೆಯು ಇಂತಹ ಪ್ರಸಂಗಗಳ ಗೊಡವೆಗೇನೇ ಹೋಗದಷ್ಟು ಸುಖಜೀವಿಯಾಗಿದೆ. ಉಡುಪಿಯ ನಗರ ಪಿತಾಮಹರೆಲ್ಲಾ ಪೀಠಾಲಂಕಾರಪ್ರಿಯರು; ಊರವರ ದೂರುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವಷ್ಟು ಲಘು ಮನುಷ್ಯರಲ್ಲ! ಇಂತಹ ಕೆಲವು ದೂರುಗಳು ನಗರ ಸಭೆಯ ವರೆಗೂ ಹೋಗಿ ಅರಣ್ಯ ರೋದನಗಳಾಗಿವೆ. ಹೀಗಿರುವದರಿಂದಾಗಿ ಹೊಸ ಕಟ್ಟಡಗಳ ಮಟ್ಟಿಗೆ, ಅನುಭವ ಮತ್ತು ಅನುಕೂಲತೆಯ ಅಭಾವವುಳ್ಳ ಸಾಮಾನ್ಯ ನೌಕರರ ಅಭಿಮತವೇ ಕೊನೆಯ ತೀರ್ಮಾನವೆಂದಾದರೆ ಊರವರಿಗೆಂತಹ ಅಡಚಣೆಗಳೊದಗಬಹುದೆಂಬುದನ್ನು ಸುಲಭದಲ್ಲಿ ಊಹಿಸಬಹುದು. ಆ ತೀರ್ಮಾನಗಳ ಯೋಗ್ಯತೆಗೆ ಸಾಕ್ಷಾತ್ ನಿದರ್ಶನಗಳೇ ಬೇಕಾಗಿದ್ದರೆ ಮುನಿಸಿಪಾಲಿಟಿಯವರು ಮಾಡಿಸಿರುವ ಬಾವಿ, ಸಂಕದಂತಹ ಅಲ್ಪ ಸ್ವಲ್ಪ ರಚನೆಗಳು ಕೆಲವು ಜರಿದು ಬಿದ್ದು ಊರವರಿಗಾ ಯೋಗ್ಯತೆಯನ್ನು ಸಾರಿ ಹೇಳುವಂತಿವೆ. ಲಕ್ಷಗಳ ಸಂಖ್ಯೆಯಲ್ಲಿ ರೂಪಾಯಿಗಳನ್ನು ವ್ಯಯಿಸಿ, ನೂರಾರು ಕಟ್ಟಡಗಳನ್ನು ಕಟ್ಟಿಸಿ ಅನುಭವವುಳ್ಳವರ ಅಭಿಪ್ರಾಯ ಸುಳ್ಳು-ಅನನುಭವೀ ಮುನಿಸಿಪಲ್ ನೌಕರರ ಶಿಫಾರಸ್ ಮಾತ್ರ ಸತ್ಯವೆ? ಅಂತೆಯೇ ತನ್ನ ಮರಿಗಳ ತಲೆಯ ಮೇಲೊಂದು ಮಾಡು ಇರಬೇಕೆಂದು, ಹೊಟ್ಟೆಬಟ್ಟೆಗೂ ಸಾಕಾಗದ ಬೆವರ ಹಣದಲ್ಲಿ ಅತಿ ಪ್ರಯಾಸದಿಂದ ಸ್ವಲ್ಪಾಂಶವನ್ನು ಉಳಿಸಿದ ಬಡವನೊಬ್ಬನು ಗುಡಿಸಲು ಕಟ್ಟುವಾಗ ಆ ಸಂಬಂಧದ ಜಾಗರೂಕತೆ ವಹಿಸಲಾರ—ಮುನಿಸಿಪಲ್ ನೌಕರರು ಮಾತ್ರ ಜಾಗ್ರತೆಯವರೆಂದು ಭಾವಿಸಬೇಕೆ? ಊರವರ ಭದ್ರತೆಯ ಹೊಣೆ ನಗರ ಸಭೆಯ ಮೇಲಿರುವದು ನಿಜ; ಅಂತೆಯೇ ಕಟ್ಟಡ ಕಟ್ಟಿಸುವ ಮಹನೀಯರಿಗೆ ತಮ್ಮ ಹಣ, ಜನ, ಮತ್ತು ಪರಿಶ್ರಮಗಳ ರಕ್ಷಣೆಯ ಹೊಣೆಯೇ ಅರಿಯದೆ? 'ಅಸ್ಥಿರ ಅಸ್ತಿವಾರ ಹಾಕಿದ್ದಾರಾದ್ದರಿಂದ ಅಪಾಯವಿದೆ' ಎಂದು ಆಕ್ಷೇಪಿಸುವವರು, ಅದು ನಿಜಕ್ಕೂ ಹಾಗಿದ್ದಲ್ಲಿ ಅದರ ಪ್ರಥಮ ಮತ್ತು ಅತಿ ದೊಡ್ಡ ಭಾಗವು ಕಟ್ಟಡ ನಿರ್ಮಾಪಕರ ತಲೆಯ ಮೇಲೆಯೇ ಬೀಳುವಂತಹದೆಂಬುದನ್ನೂ, ಆ ತಲೆಯೆಂದರೆ ಇದರ ಸೂಕ್ಷ್ಮವನ್ನರಿತ ಅನುಭವಪೂರ್ಣ ಮೆದುಳಿನಿಂದ ತುಂಬಿರುವಂತಹದೆಂಬುದನ್ನೂ ಮರೆಯಬಹುದೆ?

ಒಂದು ಸೂಚನೆ

ಕಟ್ಟಡಗಳ ಸಂಬಂಧದ ಸೂಕ್ಷ್ಮ ಜ್ಞಾನವು ಕೌನ್ಸಿಲರರಿಗಿರುವದು ಅಸಾಧ್ಯ. ಆದರೆ ಅದರಲ್ಲಿ ನುರಿತ ಬೇರೆ ಸದ್ಗೃಹಸ್ಥರಿದ್ದಾರೆ. ಮುನ್ಸಿಪಾಲಿಟಿಯ ಅಲ್ಪ ನಿರ್ಮಾಣಗಳು ಜರಿದು ಬಿದ್ದಿರುವಾಗ, ತಮ್ಮ ಹತ್ತಾರು ಮಾಳಿಗೇ ಕಟ್ಟಡಗಳು ಎಷ್ಟೋ ವರ್ಷಗಳಿಂದ ತಲೆಯೆತ್ತಿ ರಾಜಿಸುತ್ತಿರುವಂತೆ ಮಾಡಿರುವ ತಜ್ಞರಿದ್ದಾರೆ. ಕಟ್ಟಡಗಳ ಸಂಬಂಧದ ಅಧಿಕಾರ ನಗರ ಸಭೆಗಿದ್ದರೆ ಅನುಭವ ಇವರಿಗಿದೆ. ನಗರ ಸಭೆಯಾದರೋ ಆಕಾಶದಿಂದ ಅವತರಿಸಿದ ಸಂಸ್ಥೆಯಲ್ಲ— ಜನ ಪ್ರಾತಿನಿಧ್ಯವುಳ್ಳ ಆಡಳಿತೆಯ ಸಂಸ್ಥೆಯದು. ಆದ್ದರಿಂದ ಕಟ್ಟಡ ಸಂಬಂಧದ ದೂರುಗಳ ಕುರಿತು ವಿಚಾರಿಸಿ ಕೊನೆಯ ತೀರ್ಮಾನವೀಯಲು ನಗರ ಸಭೆಯು ನುರಿತ ಗೃಹಸ್ಥರ ಒಂದು ಸಮಿತಿಯನ್ನು ಏಕೆ ನೇಮಿಸಿಕೊಳ್ಳಬಾರದು? ಇಂದಿನ ಕಾಂಗ್ರೆಸ್ ಸರಕಾರವು ಪ್ರತಿಯೊಂದು ವಿಭಾಗಕ್ಕೂ ಇಂತಹ ಜನಪ್ರತಿನಿಧಿ ಸಮಿತಿಗಳನ್ನು ಸ್ಥಾಪಿಸುತ್ತಿರುವಾಗ ನಮ್ಮ ನಗರ ಸಭೆಯೂ ಆ ಮಾದರಿಯನ್ನೇಕೆ ಅನುಸರಿಸಬಾರದು? ಇದು ಮಾಳಿಗೇ ಮನೆಯ ಮೇಲಿನ ಮಮತೆಯಿಂದ ಮುಂದೆ ಬಂದಿರುವ ಅಭಿಪ್ರಾಯವೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಒಂದು ನೂತನ ಮಾಳಿಗೇಮನೆ ಏಳುವಾಗ ಬಡವರ ಹತ್ತು ಗುಡಿಸಲುಗಳೇಳುತ್ತವೆ. ನಗರ ಸಭೆಯ ನಿರ್ಬಂಧಗಳು ಈ ಮಟ್ಟಿಗೆ ಸರ್ವಸಮತೆಯನ್ನಂಗೀಕರಿಸಿವೆ. ಆದ್ದರಿಂದ ಇಲ್ಲಿಯೂ ಬಡವರ ಬೊಬ್ಬೆಯೇ ದೊಡ್ಡದು. ಶ್ರೀಮಂತರ ಮೇಲಿನ ಪ್ರತಿಬಂಧಗಳನ್ನೇ ಎತ್ತಿಕೊಂಡರೂ, ಕಟ್ಟಡಾತಂಕಗಳಿಂದ ಸಂಪತ್ತಿನ ರಾಷ್ಟ್ರೀಕರಣವಾಗುತ್ತದೆಯೆ? ಇದು ಕೇವಲ ನ್ಯಾಯಾನ್ಯಾಯ-ಜ್ಞಾನಾಜ್ಞಾನದ ಪ್ರಶ್ನೆ. ಶ್ರೀಮಂತರು ಸಾವಿರಾರು ರೂಪಾಯಿಗಳನ್ನು—ಬಡವರು ಅತಿಪ್ರಯಾಸದಿಂದ ತಮ್ಮ ಹತ್ತೈವತ್ತು ರೂಪಾಯಿಗಳನ್ನು ವ್ಯಯಿಸಿ ನಿರ್ಮಿಸಿದ ಒಂದು ರಚನೆಯು ಅಧಿಕಾರಿಗಳ ನಿಷ್ಕಾರಣ ನಿಯಮದಿಂದ 'ಕುಂಬಾರಗೆ ವರುಷ, ದೊಣ್ಣೆಗೆ ನಿಮಿಷ' ಎಂಬಂತಾಗುವದಾದರೆ ಅದು ಮಾನುಷತ್ವಕ್ಕೆ ಸಂಬಂಧಿಸಿದ ಪ್ರಶ್ನೆ. ನಗರ ಸಭೆಯು ಲಘುವಾಗಿ, ಅಥವಾ ತಾತ್ಸಾರದಿಂದ ನೋಡುವಷ್ಟು ಅಲ್ಪ ವಿಷಯ ಇದಲ್ಲ. ಆದ್ದರಿಂದ ನಗರ ಸಭೆಯು ಕಣ್ಣು ತೆರೆದು ಇನ್ನಾದರೂ ನ್ಯಾಯಪಾಲಿಸುವ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಜನರು ಚಳವಳೆಬ್ಬಿಸಿ, ಕಾಂಗ್ರೆಸ್ ಮಂತ್ರಿಗಳಲ್ಲಿ ದೂರಿಟ್ಟಾದರೂ ನ್ಯಾಯಸಾಧಿಸಿಕೊಳ್ಳಬೇಕು.

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಅಡಚಣೆ ಮತ್ತು ಅವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಇವರೇ ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧದಿಂದ ಬೆಳೆಯುವ ವ್ಯಕ್ತಿಯೋ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಗಿಂತಲೂ ಹೆಚ್ಚುಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ವ್ಯಕ್ತಿಗೆ ನಮ್ಮ ಪಡುತ್ತದೆ.

ಕೆನರಾ ಬ್ಯಾಂಕ್

Estd: 1906

CANARA BANK LIMITED

(Incorporated in British India, liability of Members Limited.)

ಬ್ರಿಟಿಷ್ ಯೋಜನೆಗೆ ಮುಸ್ಲಿಂ ಲೀಗಿನ ಅಂಗೀಕಾರ

ಒಳಹೊಕ್ಕು ಹೋರಾಡುವದೇ ಉದ್ದೇಶ.

ನವದಿಲ್ಲಿಯಲ್ಲಿ ಇದೇ ತಾ. ೬ ಮತ್ತು ೮ರಲ್ಲಿ ಸೇರಿದ ಮುಸ್ಲಿಂ ಲೀಗಿನ ಕೌನ್ಸಿಲ್ ಸಭೆಯು ಬ್ರಿಟಿಷ್ ಯೋಜನೆಯನ್ನು ಅಂಗೀಕರಿಸುವ ನಿರ್ಧಾರಮಾಡಿ ಕೌತುಕಾನಂದವನ್ನು ನಿರ್ಮಿಸಿದೆ. ತತ್ಫಲವಾಗಿ ಹಿಂದೀ ರಾಜಕೀಯ ವಾತಾವರಣವೇ ಬದಲಾಯಿಸಿತೆನ್ನಬೇಕು. ಮುಸ್ಲಿಂ ಲೀಗಿನ ಅಂಗೀಕಾರವು ಸಮ್ಮತಿಯದಲ್ಲ; ಸಂಗ್ರಾಮ ಬುದ್ಧಿಯದು! ತಾತ್ಕಾಲಿಕ ಸರಕಾರ ಮತ್ತು ರಾಜ್ಯಾಂಗ ರಚನಾ ಸಭೆಯೊಳಗೆ ಪ್ರವೇಶಿಸಿ ಪಾಕಿಸ್ತಾನಕ್ಕಾಗಿ ಹೋರಾಡಬೇಕೆಂಬ ಉದ್ದೇಶದಿಂದಲ್ಲದೆ ಸದ್ಯದ ಬ್ರಿಟಿಷ್ ಯೋಜನೆ ನಿರ್ದೋಷವಾದದ್ದೆಂಬ ಭಾವನೆಯಿಂದ ಲೀಗ್ ಅಂಗೀಕಾರ ನಿರ್ಧಾರವನ್ನು ಮಾಡಿಲ್ಲ. ಲೀಗ್ ಮುಂದಾಳುಗಳ ಹಠ ಮನೋವೃತ್ತಿ, ಬೆದರಿಕೆಯ ಮಾತುಗಳಿಗೆ ಬೆಲೆ ಕಟ್ಟಿದವರು ಈ ಮಾರ್ಪಾಟಿನಿಂದ ಹೆಚ್ಚು ಹಿಗ್ಗಬಹುದು; ಆದರೆ ಮುಸ್ಲಿಂ ಲೀಗಿನ ಶಕ್ತಿಸಾಮರ್ಥ್ಯ ಮತ್ತು ಅದರ ವಾದದಲ್ಲಿನ ನ್ಯಾಯಾಂಶಗಳ ಗುಟ್ಟರಿತವರು ಇಷ್ಟನ್ನಲ್ಲದೆ ಬೇರಾವುದನ್ನು ಮಾಡುವದು ಲೀಗಿಗೆ ಅಸಾಧ್ಯವೆಂಬುದನ್ನು ಮೊದಲೇ ಊಹಿಸಿರಬಹುದು. 'ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ಪಾಕಿಸ್ತಾನ ರಚನೆಗೆ ಪೂರ್ವ ಸಮ್ಮತಿ ದೊರೆಯದ ಯಾವ ವ್ಯವಸ್ಥೆಯಲ್ಲೂ ನಾವು ಭಾಗ ವಹಿಸುವಂತಿಲ್ಲ' ಎಂದು ನೆನ್ನೆಯವರೆಗೂ ಆಗಾಗ ಘರ್ಜಿಸುತ್ತಿದ್ದ ಮಿ. ಜಿನ್ನರಲ್ಲಿ ಈಗ 'ಪಾಕಿಸ್ತಾನ ಗುರಿ' ಮುಟ್ಟುವದಕ್ಕಾಗಿ ವಿಧಾಯಕ ರೀತಿಯಿಂದ ಪರಿಶ್ರಮಿಸುವಷ್ಟು ಸಹನೆ ಮೂಡಿದ ಆ ಮೃದುತ್ವವು ಸೊಗಸಾದ ನೋಟವಲ್ಲವೆ?

ಲೀಗ್ ನಿರ್ಧಾರದ ರೂಪ

ಪಾಕಿಸ್ತಾನವನ್ನು ಖಂಡಿಸಿದ ಬ್ರಿಟಿಷ್ ಯೋಜನೆಯ ಕಾರಣಗಳನ್ನು ಲೀಗ್ ಬಹು ಕಠಿಣವಾಗಿ ಟೀಕಿಸಿ ಅದು 'ಅನಗತ್ಯ, ಅನ್ಯಾಯ ಮತ್ತು ಅಸಂಬದ್ಧ ವಿಧ'ವೆಂದೂ ಹಿಂದೂಗಳ ಮನವೊಲಿಸುವದಕ್ಕಾಗಿ ಈ ಖಂಡನೆ ಬಂದಿದೆಯಲ್ಲದೆ, ಪಾಕಿಸ್ತಾನದ ಆವಶ್ಯಕತೆಯು ಬ್ರಿಟಿಷ್ ಯೋಜನೆಯ ಬೇರೆ ಭಾಗದಲ್ಲಿದೆಯೆಂದೂ ಲೀಗ್ ಠರಾವಿನಲ್ಲಿದೆ. ಆದರೂ B ಮತ್ತು C ಪ್ರಾಂತಿಕ ಸಂಗಡಗಳಿಗೆ ೬ ಮುಸ್ಲಿಂ ಪ್ರಾಂತ್ಯಗಳನ್ನು ಕಡ್ಡಾಯವಾಗಿ ಪ್ರತ್ಯೇಕಿಸಿರುವದರಲ್ಲಿ ಪಾಕಿಸ್ತಾನದ ಅಸ್ತಿವಾರ ಬಿದ್ದಿರುವುದರಿಂದಲೂ, ಅದು ಕ್ರಮೇಣ ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ಪಾಕಿಸ್ತಾನವಾಗಿ ರೂಪುಗೊಳ್ಳಬಲ್ಲುದೆಂಬ ಭರವಸೆಯಿಂದಲೂ, ಮತ್ತು ಈ ಸಂಗಡಗಳು ಅಥವಾ ಪ್ರಾಂತ್ಯಗಳಿಗೆ ಕೇಂದ್ರ ಯೂನಿಯನಿನಿಂದ ಪ್ರತ್ಯೇಕವಾಗುವ ಸಂದರ್ಭ ಮತ್ತು ಹಕ್ಕಿದೆ ಎಂಬ ನಿರೀಕ್ಷೆಯಿಂದಲೂ ಲೀಗ್ ಕೌನ್ಸಿಲು ಈ ಯೋಜನೆಯನ್ನು ಒಪ್ಪಿ ರಾಜ್ಯಾಂಗರಚನಾಸಭೆಯಲ್ಲಿ ಭಾಗವಹಿಸಲಿಚ್ಛಿಸುತ್ತದೆ. ಮುಸ್ಲಿಂ ಲೀಗಿನ ಕೊನೆಯ ಧೋರಣೆಯೆಂಬುದು ರಾಜ್ಯಾಂಗ ರಚನಾಸಭೆಯ ಕಾರ್ಯದ ಕೊನೆಯ ತೀರ್ಮಾನಗಳನ್ನೂ ಆ ಸಭೆಗಿರುವ ಮೂರು ಅಂತಸ್ತುಗಳ ಜತೆ ಮತ್ತು ಪ್ರತ್ಯೇಕ ಪರಿಶೀಲನೆಗಳಿಂದ ಹೊರಬೀಳುವ ರಾಜ್ಯಾಂಗ ವಿಧಾನಗಳನ್ನೂ ಅವಲಂಬಿಸಿದೆ ಮಾತ್ರವಲ್ಲ; ಮುಸ್ಲಿಂ ಲೀಗಿನ ಪೃಥಕ್ಪಾದ ಮೂಲಭೂತ ತತ್ವಗಳಿಗೆ ವಿರುದ್ಧವೆಂದು ತೋರಿದರೆ, ರಾಜ್ಯಾಂಗ ರಚನಾಸಂಸ್ಥೆಯ ಕಾರ್ಯಕಲಾಪಗಳು ನಡೆಯುತ್ತಿರುವಾಗಲೇ, ಅಥವಾ ಸಂದರ್ಭಾನುಸಾರವಾಗಿ ಅಗತ್ಯಬಿದ್ದಾಗ, ಈ ಠರಾವಿನಲ್ಲಿ ನಮೂದಿಸಿರುವ ಧೋರಣೆ ಮತ್ತು ಮನೋವೃತ್ತಿಯನ್ನು ತಿದ್ದುವ ಅಥವಾ ಬದಲಾಯಿಸುವ ಅಧಿಕಾರವನ್ನೂ ಲೀಗ್ ಕಾದಿಟ್ಟುಕೊಂಡಿದೆ. ನಡುಗಾಲ ಸರಕಾರ ರಚನೆಯ ಮಟ್ಟಿಗೆ ವೈಸರಾಯರೊಡನೆ ತನಗೆ ಯುಕ್ತಕಂಡಂತೆ ವ್ಯವಹರಿಸುವ ಅಧಿಕಾರವನ್ನು ಅಧ್ಯಕ್ಷರಿಗೀಯಲಾಗಿದೆ

ಬುದ್ಧಿವಂತಿಕೆಯ ಕಾರ್ಯ

ಮಿ. ಜಿನ್ನರಿಂದ 'ಮುಸ್ಲಿಂ ಪಾರ್ಲಿಮೆಂಟ್' ಎಂದು ಕರೆಯಲ್ಪಟ್ಟ ಲೀಗ್ ಕೌನ್ಸಿಲ್ ಸಭೆಸೇರುವ ಮೊದಲು ಅದರ ಕಾರ್ಯಕಾರೀ ಸಮಿತಿಯು ತಾ. ೩ ಮತ್ತು ೪ರಲ್ಲಿ ಸೇರಿದ್ದಿತು. ಆದರೆ ಪದ್ಧತಿಯಂತೆ ಯಾವ ಠರಾವನ್ನೂ ಮಾಡದೆ ಕೌನ್ಸಿಲ್ ಸದಸ್ಯರ ಸ್ವತಂತ್ರ ವಿಮರ್ಶಾತ್ಮಕ ನಿರ್ಣಯಕ್ಕದನ್ನು ಒಪ್ಪಿಸಿದ್ದಿತು. ಮಿ. ಜಿನ್ನರು ತನ್ನ ಪ್ರಾರಂಭದ ಭಾಷಣದಲ್ಲಿ ಪದ್ಧತಿಯಂತೆ ಕಾಂಗ್ರೆಸನ್ನು ಅಣಕಿಸಿ, ಪಾಕಿಸ್ತಾನದ ಕುರಿತೆರಡು ವೀರವಾಕ್ಯಗಳನ್ನಾಡಿ, ನಿರ್ಣಯಾಧಿಕಾರವನ್ನು ಕೌನ್ಸಿಲಿಗೇ ಬಿಟ್ಟುಕೊಟ್ಟರು. ಕೌನ್ಸಿಲು ಗುಪ್ತ ಸಭೆ ನಡೆಸಿ ಎರಡು ದಿನ ತೀವ್ರ ಚರ್ಚೆ ನಡೆಸಿದಿತೆಂದೂ ಸುಮಾರು 20 ಸದಸ್ಯರು ಭಾಷಣವಿತ್ತಿದ್ದರೆಂದೂ ತಿಳಿದು ಬರುತ್ತದೆ. 'ತಾತ್ಕಾಲಿಕ ಸರಕಾರದಲ್ಲಿ ಕಾಂಗ್ರೆಸ್ ಲೀಗ್ ಸಮಪ್ರಾತಿನಿಧ್ಯ ದೊರೆಯಲಿದೆ. ನೀವೀ ಯೋಜನೆಯನ್ನು ಅಂಗೀಕರಿಸದಿದ್ದರೆ ಆ ಅನುಕೂಲತೆಯೇ ತಪ್ಪುವದು. ನಮ್ಮ ವಾದಕ್ಕೆ ಬೆಲೆಬಾರದಾಗಲೆಲ್ಲ ರಾಜ್ಯಾಂಗ ರಚನಾ ಸಭೆಯಲ್ಲಿ ಬಿಕ್ಕಟ್ಟು ನಿರ್ಮಿಸಬಹುದು. ನಡುಗಾಲದಲ್ಲಿ ರಕ್ಷಣೆಗೆ ಬ್ರಿಟಿಷ್ ಸೇನೆಯೇ ಇದೆ. ಕೇಂದ್ರಕ್ಕಿರುವ ರಕ್ಷಣೆ,ವಾಹನ ಇತ್ಯಾದಿಗಳ ಅಧಿಕಾರ ಕಡಿಮೆಮಾಡಲು ರಾಜ್ಯಾಂಗ ರಚನಾ ಸಭೆಯಲ್ಲಿ ನಾವು ಹೋರಾಡಬಹುದು' 10 ವರುಷಗಳೊಳಗೆ ಸ್ವತಂತ್ರ ಪಾಕಿಸ್ತಾನ್ ನಿರ್ಮಿಸುವ, ಭರವಸೆಕೊಡುತ್ತೇನೆ' ಎಂದೆಲ್ಲಾ ಮಿ. ಜಿನ್ನರು ಯೋಜನೆಯ ಅಂಗೀಕಾರಕ್ಕೆ ಹುರಿದುಂಬಿಸಿದ್ದರೆಂದು ತಿಳಿದುಬರುತ್ತದೆ. ಮಿ. ಕಲೀಖುಜ್ಜಾಮಾನರು ಹಾಕಿದ ಈಯೊಂದು ಸ್ಪಷ್ಟಪ್ರಶ್ನೆಯು ಸದಸ್ಯರ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತಂತೆ - 'ಬ್ರಿಟಿಷ್ ಯೋಜನೆಯನ್ನು ತಿರಸ್ಕರಿಸಿದಲ್ಲಿ ಅನಿವಾರ್ಯವಾಗಿ ಒದಗಲಿರುವ ಜೈಲುವಾಸ ಮತ್ತು ಕಷ್ಟಾನುಭವಕ್ಕೆ ನೀವೆಲ್ಲಾ ತಯಾರಿರುವಿರಾ? ಇಲ್ಲವಾದರೆ ಅದನ್ನಂಗೀಕರಿಸಿ ಸಾಧ್ಯವಿದ್ದಷ್ಟು ಪ್ರಯೋಜನ ಮಾಡಿಕೊಳ್ಳುವದೇ ಬುದ್ಧಿವಂತಿಕೆ!' ಕೊನೆಯಲ್ಲಿ ಮೇಲಿನ ಠರಾವಿಗೆ ಮೌಲಾನಾ ಹಜ್ರತ್ ಮೋಹಾನಿಯೊಬ್ಬರ ಹೊರತು 300ಕ್ಕು ಮಿಕ್ಕಿದ ಮಿಕ್ಕೆಲ್ಲಾ ಸದಸ್ಯರ ಒಪ್ಪಿಗೆಯೂ ದೊರೆಯಿತೆಂದು ತಿಳಿದು ಬರುತ್ತದೆ.

ಮಿ. ಜಿನ್ನರ ಭಾಷಣ

ಲೀಗ್ ಕೌನ್ಸಿಲಿನ ಆರಂಭ ಭಾಷಣದಲ್ಲಿ ಮಿ. ಜಿನ್ನರು ತನ್ನ ಸ್ವಭಾವಸಿದ್ಧ ಬಿಗುಮಾತು, ಅಣಕಾಟಗಳನ್ನು ಬಿಟ್ಟಿರಲಿಲ್ಲ. "ಸರ್ವಾಂಗ ಸಂಪೂರ್ಣವಾದ ಸಾರ್ವಭೌಮಾಧಿಕಾರವುಳ್ಳ ಪಾಕಿಸ್ತಾನ ದೊರೆಯದೆ ಮುಸ್ಲಿಂ ಭಾರತ ವಿರಮಿಸುವಂತಿಲ್ಲ ಎಂದು ನಾನು ನಿಮಗನ್ನುತ್ತೇನೆ (ಅತ್ಯುತ್ಸಾಹ ಧ್ವನಿ) ಈ ಕುರಿತು ಬ್ರಿಟಿಷ್ ಸಮಿತಿ ಮುಂದಿಟ್ಟ ಮಾತು, ಕಾರಣ, ಮತ್ತಾರೀತಿಯಲ್ಲಿ ಕಾಂಗ್ರೆಸಿನ ಮನವೊಲಿಸುವದೊಂದಲ್ಲದೆ ಬೇರೆ ಉದ್ದೇಶವಿಲ್ಲವೆಂದು ಸುಸ್ಪಷ್ಟವಾಗಿ ಮತ್ತೊಮ್ಮೆ ಹೇಳುತ್ತೇನೆ ('ನಾಚಿಕೆ ನಾಚಿಕೆ' ಬೊಬ್ಬೆ) ಸತ್ಯಸ್ಥಿತಿಯೆಂದರೆ ಅವರ ಆ ಯೋಜನೆಯಲ್ಲಿಯೇ ಪಾಕಿಸ್ತಾನದ ಅಸ್ತಿವಾರ ಅಡಗಿದೆ ('ಕೇಳಿರಿ, ಕೇಳಿರಿ' ಬೊಬ್ಬೆ) ಕಾಂಗ್ರೆಸ್ ಪತ್ರಿಕೆಗಳೂ, ಹಿಂದುಗಳೂ ಪಾಕಿಸ್ತಾನ್ ನಿರಾಕರಣೆಯ ಆ ವಾಕ್ಯಗಳನ್ನು ಕೇಳಿದೊಡನೆ, ಮತ್ತಾ ಸಕ್ಕರೆ ಲೇಪಿತ ಗುಳಿಗೆ ದೊರೆತೊಡನೆ (ನಗು) ಸಂತೋಷ ನರ್ತನಕ್ಕಾರಂಭಿಸಿದರು. ಸಹಜವಾಗಿ ಮುಸ್ಲಿಮರದಕ್ಕೆ ಬಲವಾದ ಖಂಡನೆ ಮತ್ತು ಪ್ರತಿಭಟನೆಗಾರಂಭಿಸಿದರು. ಆದರೆ ಅದು ಸಕ್ಕರೆ ಲೇಪದ ಗುಳಿ

ಕೇರಳಾ ಸೋಪ್ ಇನ್ಸ್ಟಿಟ್ಯೂಟ್
ಕಲ್ಲಿಕೋಟೆ.

THE CANARA MUTUAL ASSURANCE COMPANY, LTD.,
Head Office **UDIPI (S. India.)**

NEW APPOINTMENTS.

Applications from candidates (both Boys and Girls) of S. S. L. C. Standard are invited for clerical posts in the Company.

Applicants shoud possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

Last date by which Applications should reach this Office shall be 30th June, 1946.

Udipi, 6-6-1946.

T. R. A. Pai,
Managing Director

ಕಾಲೋಪಯೋಗಿ ಸಾಹಿತ್ಯಗಳು

ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮುತ್ತಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟುಗಳು, ನುಗ್ಗಿ ಪುಸ್ತಕಗಳು ಇತ್ಯಾದಿ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,
ಉಡುಪಿ.

ಗೆ, ಮತ್ತು ದರಲ್ಲಿದ್ದ ಸಕ್ಕರೆಯಷ್ಟು ಕಡಿ ಮೆಯೆಂದರೆ, ಅದು ಸಕ್ಕರೆರಹಿತ ಕಹಿ ಪಾತ್ರೆಯೆಂಬುದನ್ನು ಕಾಂಗ್ರೆಸ್ ಪತ್ರಿಕೆ ಗಳು ತಿಳಿಯಲು ಹೆಚ್ಚು ಸಮಯ ಹೋ ಗಲಿಲ್ಲ (ನಗು).

ಪತ್ರಿಕೆಗಳ ಬುದ್ಧಿ

'ನಾವು ಸದಾಕಾಲ ಹೋರಾಡಿಕೊಂ ಡಿರಲಾಗುವದಿಲ್ಲ' ಎಂದು ನಾನು ನಿನ್ನೆ ದಿನ ಹೇಳಿದೊಡನೆ ಹೊಂದು ಬುದ್ಧಿಯ ಕೆಲವು ಪತ್ರಿಕೆಗಳು ಒಮ್ಮೆಗೇ ನಗೆದು 'ಮಿ. ಜಿನ್ನರಿಗೆ ಬುದ್ಧಿ ಬಂತು' ಎಂದು ತೀರ್ಪುಕೊಡಹತ್ತಿದುವು. ನನಗೆ ಬುದ್ಧಿ ಬಂದುದಕ್ಕಾಗಿ ನಾನು ಆನಂದ ಪಡು ತ್ತೇನೆ ಆದರೆ ಅವುಗಳಿಗೂ ಬುದ್ಧಿ ಬರ ಲಿ ಎಂದೇ ನನ್ನಾಶೆ (ನಗು) 'ನಾವು ಹೋರಾಡಿಕೊಂಡಿರಲಾಗುವದಿಲ್ಲ' ಎನ್ನು ವಾಗ ನಾನು, ನಮ್ಮ ಸಮೇತ ಅವರಲ್ಲಿ ಯೂ ಪ್ರತಿಯೊಬ್ಬನಿಗೂ ಹೇಳಿದ ಮಾ ತಲ್ಲವೇನಿದು?'

ಕಾಂಗ್ರೆಸ್ ಪ್ರಾಂತ್ಯಗಳಲ್ಲಿ

ದಕ್ಷಿಣಾಫ್ರಿಕ, ಇಂಡೋನೇಶಿಯಾ, ಕಾಶ್ಮೀರದ ಚಳವಳ ಕುರಿತು ಪ್ರಸ್ತಾಪಿಸಿ, ಆಹಾರಾಭಾವನಿವಾರಣೆಯಲ್ಲಿ ನಿಶ್ಶರ್ತ ಸ ಹಕಾರ ನೀಡಬಯಸಿ ಮಿ. ಜಿನ್ನರೆಂದರು: 'ಕಾಂಗ್ರೆಸ್ ಸರಕಾರಗಳಿದ್ದ ಪ್ರಾಂತ್ಯಗ ಳಿಂದ ದಂಗೆಗಳ ವಾರ್ತೆ ಬರುತ್ತಿದೆ. ಇದ ಕ್ಕಿರುವ ಏಕಮಾತ್ರ ಚಿಕಿತ್ಸೆಯೆಂದರೆ ಪಾ ಕಿಸ್ತಾನ ಸ್ಥಾಪನೆ. ಅದಾದ ಮೇಲೆ ಹಿಂ ದುವಿನ ಬುದ್ಧಿ ಬದಲಾಗುವುದು. ಈಗ ದುರ್ದೈವವಶಾತ್ ಹಿಂದುವಿನ ತಲೆ ಉ ಬ್ಬಿಹೋಗಿದೆ ಕಾಂಗ್ರೆಸ್ ಮಂತ್ರಿ ಮಂ ಡಲ ಸ್ಥಾಪನೆಯಾದಲ್ಲೆಲ್ಲಾ ಹಿಂದೂ ರಾಜ್ಯ ಸ್ಥಾಪನೆಯಾಯಿತೆಂದು ಅವ ಭಾ ವಿಸುತ್ತಿದ್ದಾನೆ ಈ ರೋಗಕ್ಕೆ ಮದ್ದಿಲ್ಲ. ಈ ದುರ್ಭಾವನೆಯಿಂದಾಗಿ ಹಿಂದುವೀ ಗ ಅತಿಗರ್ವಿ, ಆತಂಕದಾಯಿ, ಆಕ್ರಮಣ ಗಾರನಾಗಿದ್ದಾನೆ. ಆದರೆ ಇದು ತಾನಾಗಿ ಮೈದುತ್ವಕ್ಕೆ ಬರಲಿದೆ ಎಂದು ನನ್ನ ಅಭಿ ಪ್ರಾಯ; ಇಲ್ಲವಾದಲ್ಲಿ, ಅದನ್ನು ಮೃದು ಗೊಳಿಸಲು ನಾವೇ ಏನನ್ನಾದರೂ ಮಾಡ ಬೇಕಾಗುವದು. ('ಕೇಳಿರಿ ಕೇಳಿರಿ' ಬೊಬ್ಬೆ)'

ಕೌನ್ಸಿಲ್ ಸಭೆಯ ಮುಕ್ತಾಯ ಭಾಷ ಣದಲ್ಲಿ ಮಿ. ಜಿನ್ನರು ಕೊನೆಯ ವಾಕ್ಯ ಮಾಡಿದ್ದಿಷ್ಟೆ:—"ಕ್ರಿಪ್ಸ್ ಸೂಚನೆಯನ್ನು ನಿರಾಕರಿಸಿರೆಂದು ನಾನು ನಿಮಗುಪದೇಶಿಸಿ ದ್ದೆ; ಶಿಮ್ಲಾ ಯೋಜನೆಯ ನಿರಾಕರಣೆಗೂ ನಾನೇ ಉಪದೇಶಿಸಿದ್ದೆ; ಆದರೆ ಬ್ರಿಟಿಷ್ ಮಂತ್ರಿ ಸಮಿತಿಯ ಯೋಜನೆಯನ್ನೂ ನಿರಾಕರಿಸಿರೆನ್ನಲಾರೆ. ಅದನ್ನು ಅಂಗೀಕರಿ ಸಿರೆಂದೇ ನನ್ನ ಸಲಹೆ".

'ಚಾತುರ್ಯ ಪೂರ್ಣ ಧೋರಣೆ' 'ಅ ವ್ಯವಹಾರ್ಯತೆಯ ಮೇಲೆ ವ್ಯವಹಾರ ಜ್ಞಾನ ಪಡೆದ ವಿಜಯ' 'ಬ್ರಿಟಿಷ್ ಕೂಲಿ ಗಾರ ಸರಕಾರವು ಹೋರಾಟದಲ್ಲಿ ಅರೆ ವಾಸಿ ಗೆದ್ದಂತಾಯಿತು' ಎಂದು ಇಂಗ್ಲಾಂ ಡು ಅಮೇರಿಕಗಳಲ್ಲಿ ಲೀಗ್ ನಿರ್ಧಾರಕ್ಕೆ ಸುಸ್ವಾಗತ ದೊರೆತಿದೆ.

WANTED

A travelling Salesman (1) for mysore state & (2) for south india.

with business qualifications and previous experience in the line. Pay and commission according to merit

Apply to:

T. L. S. UPADHYAYA
Manufacturer of
AGARBATTIES & OTHER PERFUMES, MYSORE

ಬ್ರಿಟಿಷರು ಕಪಟ ನಾಟಕ ಮಾಡುತ್ತಿರುವರೆ?

ಸಂದೇಹ ಮುದ್ರೆಗಳು.

೧. ಹಿಂದುಗಳ ಬಹುಮತವಾಗಬಹು ದಾದ ಯೂನಿಯನ್ ಕೇಂದ್ರಕ್ಕೆ ದೇಶ ರ ಕ್ಷಣಾ ಜವಾಬ್ದಾರಿ ಹೋಗುತ್ತದಾದರೂ, ಬ್ರಿಟಿಷ್ ಸೇನೆಯು ಇಲ್ಲಿ ಚಿರಕಾಲವಿರುವ ದು ಖಂಡಿತವಾದ್ದರಿಂದ ಈ ಕುರಿತು ಭ ಯ ಬೇಡ, ಎಂದು ಜಿನ್ನರು ಲೀಗ್ ಕೌ ನ್ಸಿಲಿಗೆ ಆಶ್ವಾಸನೆ ಕೊಟ್ಟರಂತೆ. ಇದು ನಿಜವಾದರೆ ಸ್ವಾತಂತ್ರ್ಯಕ್ಕರ್ಥವಿದೆಯೆ?

೨. ನಡುಗಾಲ ಸರಕಾರದಲ್ಲಿ ವೈಸರಾ ಯರು ಕಾಂಗ್ರೆಸ್ ಮತ್ತು ಲೀಗಿಗೆ ಸಮ ಪ್ರಾತಿನಿಧ್ಯ ಕೊಡುತ್ತಾರಾದ್ದರಿಂದ ಈ ಸಂದರ್ಭವನ್ನು ಕಳಕೊಳ್ಳಕೂಡದೆಂದೂ ಮಿ. ಜಿನ್ನರು ವೈಸರಾಯರೊಡನೆ ಮಾ ತಾಡಿ ಬಂದೇ ಕೌನ್ಸಿಲ್ ಸಭೆಯಲ್ಲಿ ಹೇ ಳಿದ್ದರಂತೆ. ೨೫ ಕೋಟಿಗೂ ೬ ಕೋಟಿ ಗೂ ಸಮಾನತೆಯೆಂದರೆ ಯಾವನ್ಯಾಯ?

೩. ಮಿ. ಜಿನ್ನರು ಸ್ವತಃ ಎಕ್ಸಿಕ್ಯೂಟಿ ವ್ ಕೌನ್ಸಿಲಿಗೆ ಬರಬೇಕೆಂದೂ ಅದರ ಡಿ ಪ್ಯುಟಿ ಪ್ರೆಸಿಡೆಂಟ್ (ವೈಸರಾಯರೇ ಪ್ರೆ ಸಿಡೆಂಟ್) ಸ್ಥಾನ ಸ್ವೀಕರಿಸಬೇಕೆಂದೂ ವೈಸರಾಯರು ಕೇಳಿಕೊಂಡಿದ್ದಾರಂತೆ. ಏ ನಿದು, ಸ್ವಾತಂತ್ರ್ಯಕ್ಕಾಗಿ, ಕಾಂಗ್ರೆಸ್ ತ ನ್ನೊಡನೆ ಹೋರಾಡಲೆದ್ದಾಗಲೆಲ್ಲಾ ಕಾಂ ಗ್ರೆಸನ್ನು ಬೈಯುತಿದ್ದ ಮಿ. ಜಿನ್ನರ ಉಪ ಕಾರಕ್ಕಾಗಿ ಬ್ರಿಟಿಷ್ ಸರಕಾರದ ಪ್ರತ್ಯು ಪಕಾರ ಇದಾಗಿರಬಹುದೆ?

೪. ತಮ್ಮ ಯೋಜನೆ ಪ್ರಕಟವಾದ ಮೇಲೆ ಕಾಂಗ್ರೆಸ್ ಕೇಳಿದ್ದ, ನಡುಗಾಲಾ ವಧಿಯಲ್ಲೇ ಬ್ರಿಟಿಷ್ ಸೇನೆ ಹಿಂದೆಗೆಯ ಬೇಕು—ಆಶ್ರಿತ ರಾಜ್ಯಗಳ ಮೇಲಿನ ಬ್ರಿಟಿ ಷ್ ಅಧಿಕಾರವನ್ನೂ ನಡುಗಾಲದಲ್ಲಿ ಬಿ ಡಬೇಕು—ಪ್ರಾಂತಿಕ ಪಾಳೆಯದಲ್ಲಿ ಸೇ ರುವ ಯಾ ಸೇರದಿರುವ ಸ್ವಾತಂತ್ರ್ಯ ಪ್ರ ತಿಯೊಂದು ಪ್ರಾಂತ್ಯಕ್ಕಿರಬೇಕು—ಎಂಬೆ ಲ್ಲಾ ಬೇಡಿಕೆಗಳನ್ನೂ ಬ್ರಿಟಿಷ್ ಸಮಿತಿ ಅಲ್ಲಗಳೆದು, ಮಿ ಜಿನ್ನರು ಕೇಳಿದ್ದಕ್ಕೆ ಲ್ಲಾ ಸಮ್ಮತಿ ಸೂಚಿಸಿದಂತಿದೆ. ಹಿಂದು ಸ್ಥಾನದಲ್ಲೊಂದು ಸುವ್ಯವಸ್ಥೆಯಾಗುವದು ಬೇಡವೆಂದೇ ಬ್ರಿಟಿಷರು ಈ ಆಟವಾಡು ತ್ತಿರಬಹುದೆ?

೫. ಲೀಗ್ ಒಪ್ಪದಿದ್ದರೆ ರಾಜ್ಯಾಂಗ ರಚನಾ ಸಭೆಯ ಕಾರ್ಯಕಲಾಪಗಳು ಮುಂದುವರಿಯಲಾರವು, ಎಂಬ ಆಶ್ವಾ ಸನೆ ಬ್ರಿಟಿಷರಿಂದ ಮಿ ಜಿನ್ನರಿಗೆ ದೊರೆ ತಿರಬೇಕು. ಹಿಂದೀಯರದೇ ಆದ ವಿಮಾ ನ ಮತ್ತು ನೌಕಾ ಬಲವಿಲ್ಲವಾದ್ದರಿಂದ ಶಾಶ್ವತ ರಾಜ್ಯಾಂಗ ರಚನೆಯಾದ ಮೇ ಲೂ ಬ್ರಿಟಿಷ್ ಬಲಗಳು ನಿಲ್ಲುತ್ತವೆ ಎಂಬ ಆಶ್ವಾಸನೆಯೂ ದೊರೆತಿರಬೇಕು. ರಾಜ್ಯಾಂಗ ರಚನಾ ಸಭೆ ವಿಜಯಿಯಾಗ ದಿದ್ದರೆ, ಮತ್ತೆ ನಡುಗಾಲ ವ್ಯವಸ್ಥೆಯೇ ಶಾಶ್ವತವಾಗುವದು. ಅದರಲ್ಲಿ ಮುಸ್ಲಿಂ ಲೀಗಿಗೆ ಸಮಪ್ರಾತಿನಿಧ್ಯವಿದ್ದು ರಕ್ಷಣೆಗೆ ಬ್ರಿಟಿಷ್ ಸೇನೆಯಿರುವಾಗ ತನ್ನ ಇಚ್ಛೆ ಕೈಗೂಡುವದೆಂಬ ನೋಟದಿಂದಲೇ ಈ ಬಾರಿ ಜಿನ್ನರೊಪ್ಪಿದ್ದಲ್ಲವೆ? ಇಂತಹ ಆಶೆ ಹುಟ್ಟಿಸಿರುವ ಬ್ರಿಟಿಷರಿಗೆ ಭಾರತ ವನ್ನು ಬಿಡಲು ಮನಸ್ಸಿಲ್ಲವೆಂಬ ಸಂದೇಹ ಹುಟ್ಟುವದಿಲ್ಲವೆ?

೬. ಸುಮಾರು 8 ಕೋಟಿ ಮುಸಲ್ಮಾ ನರಿಗೆಂತಹ ಸಮ ಪ್ರಾತಿನಿಧ್ಯ ದೊರೆಯು ವಾಗ 6½ ಅಥವಾ 7 ಕೋಟಿಯಷ್ಟಿರುವ ದಳಿತ ವರ್ಗಕ್ಕೂ, ಒಟ್ಟಿಗೆ ಮುಸಲ್ಮಾನರ ಷ್ಟೇ ಆಗುವ ಇತರ ಅಲ್ಪ ಸಂಖ್ಯಾಕ ಸ ಮಾಜಗಳವರಿಗೂ ಅದೇ ದಾಮಾಶಾಯ ವಾಗಿ ಪ್ರಾತಿನಿಧ್ಯ ದೊರೆಯುವದು ಬೇ ಡವೆ?

೭. ಇವೆಲ್ಲವನ್ನೂ ನೋಡುವಾಗ ತ ಮ್ಮ ಸ್ಥಾನಕ್ಕೆ ಲೀಗನ್ನು ಏರಿಸಿ, ಅವರಿಗೆ ನೆರವಾಗುವ ನೆವನವನ್ನು ಹೇಗಾದರೂ ಸಂಪಾದಿಸಿ, ಭಾರತದಲ್ಲಿಯೇ ನಿಲ್ಲುವ ಇಚ್ಛೆ ಬ್ರಿಟಿಷರಿಗಿದ್ದಂತೆ ಕಾಣುವದಿಲ್ಲವೆ?

BANK WITH THE LARGEST CONNECTIONS ON THE WEST COAST

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd
STD. 1925

WANTED

Organiser ... salary on a nominal guarantee of business.

For further particulars please apply to:

THE
UNITED KARNATAK INSURANCE Co., Ltd.
HEAD OFFICE DHARWAR.

Or

BRANCH OFFICE:
Court Road, UDIPI, S. K.

FOR LIFE ASSURANCE
CONSULT
The New Gaurdian of India Life Insrce Co, Ltd.,
(Chairman - The Hon'ble Mr. M. CT. M Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142.
MADRAS.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

The Canara Banking Corporation Limited.
(Incorporated in British India, with limited Liability)
Estd 1906.
Head Office: **UDIPI**, South Kanara.
CAPITAL

Authorised	... ...	Rs. 25,00,000
Issued & Subscribed	... ...	„ 16,00,000
Paid up	... ...	„ 15,60,120
Reserves	... ...	„ 4,00,000

ANNOUNCEMENT.
A Branch has been opened at BYADGI (Dharwar Dt.) **on 22nd May 1946.**
All kinds of banking business transacted

ಉಡುಪಿ, ಗುರುವಾರ, ೧೩-೬-'೪೬

ಮುಂದೇನು?

ಮುಸ್ಲಿಂ ಲೀಗು ಬ್ರಿಟಿಷ್ ಯೋಜನೆಯನ್ನು ಅಂಗೀಕರಿಸುವ ನಿರ್ಧಾರ ಮಾಡಿದೆ. ಆ ನಿರ್ಧಾರದಲ್ಲಿ ತುಂಬಿರುವ ಉದ್ವೇಗವನ್ನು ಕಂಡರೆ ರಾಷ್ಟ್ರ ಹಿತ ಚಿಂತಕರು ಆನಂದಪಡಲವಕಾಶವಿಲ್ಲ. ಪಾಕಿಸ್ತಾನಿ ಮುಸಲ್ಮಾನರಾದರೂ ಲೀಗಿನ ಈ ವ್ಯವಸ್ಥೆಗಾಗಿ ಹೆಗ್ಗಳಿಕೆ ಪಡುವರೆಂತೋ ಅರ್ಥವಾಗುವದಿಲ್ಲ. ಲೀಗ್ ಅನುಯಾಯಿ ಬಹು ಮುಸಲ್ಮಾನರ ಮನೋವೃತ್ತಿಯೆಂದರೆ ಮಿ. ಜಿನ್ನರ ಅಂಧಾನುಯಾಯಿತ್ವ, ಕಟ್ಟುದ್ರ ಧರ್ಮಾಭಿಮಾನ, ಮತ್ತು ಒಣ ಹೆಗ್ಗಳಿಕೆಯ ಪಂಚಕಜ್ಜಾಯ ಮಾತ್ರ ಎಂದೇ ನಮ್ಮ ಭಾವನೆಯಿತ್ತು. ಲೀಗಿನ ಈಗಿನ ನಿರ್ಧಾರದಿಂದ ಅವುಗಳಲ್ಲೊಂದು ಭಾಗ—ಆ ಹೆಗ್ಗಳಿಕೆ—ಮಾಯವಾಗಿದೆ. ಅದು ಹೇಗೆ ಎಂಬುದು—ನವ ದಿಲ್ಲಿಯಲ್ಲೇ ಕೇವಲ ಒಂದೂವರೆ ತಿಂಗಳ ಮೊದಲು ನೆರೆದ ಲೀಗ್ ಕನ್ವೆನ್ಷನಲ್ಲಾದ ನಿರ್ಧಾರ ಮತ್ತು ಭಾಷಣಗಳೊಡನೆ ಮೊನ್ನೆಯ ನಿರ್ಧಾರವನ್ನು ಹೋಲಿಸಿದರೆ ತಿಳಿದೀತು. ಆ ದುರಭಿಮಾನವನ್ನು ತ್ಯಾಗಮಾಡಬಾರದೆಂಬ ವಾದವಿಲ್ಲ. ತಿರುಳಿನಂತಿರುವ ಮುಂದಾಲೋಚನೆಯನ್ನು ಬಿಡದೆ ದುರಭಿಮಾನದ ಸಿಪ್ಪೆಯನ್ನಷ್ಟೇ ಸುಲಿದುಕೊಂಡರೆ, ಅದು ಪರಾಭವ ಮನೋವೃತ್ತಿ ಹೊರತು ಬ್ಯಾರೆ ನೋಡುವುದಲ್ಲ. ಮುಸ್ಲಿಂ ಲೀಗು ಘಟನಾ ಸಮಿತಿಯನ್ನು ಪ್ರವೇಶಿಸಲೊಪ್ಪಿರುವದಾದರೆ, ಅದು ಪಾಕಿಸ್ತಾನ್ ಕಾರ್ಯನೀತಿಯ ಭಾವನೆಯಿಂದಲೇ, ನಡುಗಾಲ ಸರಕಾರದಲ್ಲಿ ಸೇರಲು ಸಮ್ಮತಿಸಿದ್ದಾದರೆ ಅಲ್ಲಿ ಸಮಪ್ರಾತಿನಿಧ್ಯ ದೊರೆಯುವದೆಂಬ ನಂಬಿಕೆಯಿಂದಲೇ. ಇವೆರಡೂ ಸ್ಥಳದಲ್ಲಿ ಅವೆರಡರಲ್ಲೂ ಮುಸ್ಲಿಂ ಲೀಗ್ ಇಲ್ಲ ಅಂತೂ ವಿರೋಧವೊಂದನ್ನೆ ಪ್ರತಿವಿಧಾಯಕ ಅಚಲತೆಗಾಗಿ ಈ ಅಂಗೀಕಾರದಲ್ಲಿ 'ನಡುಗಾಲ ಅವಧಿಯಲ್ಲಿ ಹಕ್ಕು ಪ್ರಕಾರ, ಆ ವೇಳೆ ಅನಿವಾರ್ಯವಾಗಿ ಬ್ರಿಟಿಷ್ ಸೇನೆ ಇಲ್ಲಿ ನಿಲ್ಲಲಿದೆಯಾದ್ದರಿಂದ ಮುಸಲ್ಮಾನರಿಗೆ ಭಯವಿಲ್ಲ' ಎಂಬ ಭಾವನೆಯಿಟ್ಟುಕೊಂಡವರು ಬ್ರಿಟಿಷರಿಗಿಂತಲೂ ಹೆಚ್ಚಿನ ಅಪಾಯಗಳು; ಒಂದು ರಾಷ್ಟ್ರದ ನಾಗರಿಕ ಹಕ್ಕು ಸ್ವಭಾವವನ್ನಾಧರಿಸಿ ದೊರೆಯುವಂತಿದ್ದರೆ, ಸ್ವತಂತ್ರ ರಾಷ್ಟ್ರ ನಿರ್ಮಾಣದಲ್ಲಿ ಈ ವಿದೇಶೀ ಭಾವನೆಯವರೂ ಬ್ರಿಟಿಷರಂತೆಯೇ ಸ್ಥಾನಚ್ಯುತರಾಗಬೇಕಾಗುತಿತ್ತು. ಆದ್ದರಿಂದ ಮುಸ್ಲಿಂ ಲೀಗಿನ ಇಂದಿನ ನಿರ್ಧಾರಕ್ಕಾಗಿ ಸಂತೋಷಪಡಲವಕಾಶವಿಲ್ಲ.

ಆದರೆ ಇಲ್ಲಿ ಪ್ರಶ್ನಿಸಬೇಕಾದುದು ಮಿ. ಜಿನ್ನರನ್ನಲ್ಲ; ಬ್ರಿಟಿಷ್ ಮಂತ್ರಿ ಸಮಿತಿಯನ್ನು, ವೈಸರಾಯಿ ವೇವೆಲರನ್ನು. ಯೋಜನೆಯ ರೂಪರೇಷೆಯ ಮಟ್ಟಿಗೆ ಮೂರನೆಯವರಾದ ಬ್ರಿಟಿಷರು ನ್ಯಾಯವಾಗಿಯೇ ವರ್ತಿಸಿದ್ದರೆಂಬ ಅಭಿಪ್ರಾಯವು ಲೀಗ್ ನಿರ್ಧಾರದಿಂದ ಬದಲಾಗದು. 'ಬ್ರಿಟಿಷ್ ಸಮಿತಿ ಅಡಿದಂಕಿಮಾಡಲು ಬಂದಿದೆ. ತದ್ವಿರುದ್ಧವಾಗಿ, ತಮ್ಮ ಸಾಮ್ರಾಜ್ಯವನ್ನುಳಿಸಿಕೊಳ್ಳುವ ಯುಕ್ತಿಯನ್ನವರು ಆಗಹತ್ತಿದುದನ್ನು ಕಂಡ ಹೊರತು ನಾವವರನ್ನು ದೂರಬಾರದು' ಎಂದ ಗಾಂಧಿಜೀಯ ಮಾತು ಅಕ್ಷರಶಃ ಮಾನ್ಯ. ಅದಕ್ಕನುಸಾರವಾಗಿ ಈಗ ತಾನೇ ಆ ಕಪಟ ನಾಟಕವಾರಂಭಿಸಿರುವರೋ ಎಂಬ ಸಂದೇಹ ಮೂಡುತ್ತಿದೆ. ಆಶ್ರಿತ ರಾಜರ ಮೇಲಿನ ಧನಿತ್ವವನ್ನೂ, ತಮ್ಮ ಸೇನೆಯನ್ನೂ ನಡುಗಾಲದಲ್ಲಿ ಹೊಂದಿರುವದು ಬ್ರಿಟಿಷರಿಗಸಾಧ್ಯವಾದರೆ ಇದ್ದುಕೊಳ್ಳಲಿ; ಆದರೆ ಆ ನಡುಗಾಲವನ್ನು ಆದಷ್ಟು ಕಿರಿದುಗೊಳಿಸುವ ಪೂರ್ಣಾಧಿಕಾರ ಮತ್ತು ಅನುಕೂಲತೆ ರಾಷ್ಟ್ರಕ್ಕಿರಬೇಕು. ಹಾಗಾಗಬೇಕಾದರೆ ಕೇಂದ್ರ ಘಟನಾ ಸಮಿತಿಗೆ ಪೂರ್ಣಾಧಿಕಾರವಿರಬೇಕಾದುದು ಮುಖ್ಯ. ಮಾತ್ರವಲ್ಲ, ಅದರ ಬಹುಸಂಖ್ಯಾಕರ ಹಾಜರಿಯಿದ್ದಲ್ಲಿ, ಯಾವುದಾದರೊಂದು ಪಕ್ಷ ಗೈರು ಹಾಜರಾಯಿತೆಂಬ ಕಾರಣದಿಂದ ಅದರ ಕೆಲಸ ನಿಲ್ಲದಂತಾಗಬೇಕಾದುದು ಅತ್ಯಗತ್ಯ. ಸರ್ವ ಸ್ವತಂತ್ರಾಧಿಕಾರವುಳ್ಳ ಕೇಂದ್ರ ರಾಜ್ಯಾಂಗ ರಚನಾ ಸಭೆಯು ಪ್ರಜಾಪ್ರಭುತ್ವದ ನಿಯಮಗಳಂತೆ, ಬಹುಮತೀಯ ತೀರ್ಮಾನ ಹೊಂದುವ ಹಕ್ಕಿಗೆ ಯಾವ ಕಾರಣದಿಂದಲೂ ಭಂಗ ಬರಕೂಡದು. ಹಾಗೆ ರೂಪುಗೊಂಡ ಸ್ವತಂತ್ರ ಸರಕಾರವು, ಬ್ರಿಟಿಷ್ ಸೇನೆ ಇನ್ನಾರು ತಿಂಗಳು ನಿಲ್ಲಲಿ ಎಂದು ಕೇಳಿಕೊಳ್ಳಬಹುದು, ಅಥವಾ 12 ಘಂಟೆಯೊಳಗೆ ಹೊರಡಲಿ ಎಂದು ನೋಟೀಸು ಕೊಡಬಹುದು. ಅಂತೂ ಆಗ ಆ ಸರಕಾರ ಹೇಳಿದಂತಾಗಬೇಕೇ ಹೊರತು, ಇಂದು ಸರ್. ಕ್ರಿಪ್ಸರು ಮಿ. ಜಿನ್ನರ ಕಿವಿಯಲ್ಲಾಡಿದಂತಾಗಬಾರದು. ಸ್ವತಂತ್ರ ಹಿಂದೀ ಸೇನೆಯಲ್ಲಿ ಪ್ರಥಮತಃ ವಿಮಾನ, ನೌಕೆಗಳ ಅಭಾವವಿರುವದು ಖಂಡಿತ. ಇತರರು ಆಗಲೇ ಆಕ್ರಮಣ ಯುದ್ಧಕ್ಕೇಳುವ ಅಥವಾ ರಕ್ಷಣಾ ಯುದ್ಧ ಹೂಡಬೇಕಾದ ಸಂದರ್ಭ ಪ್ರಾಪ್ತವಾಗುವದೂ ಅಸಂಭವ. ಆದ್ದರಿಂದ ಮತ್ತೂ ಬ್ರಿಟಿಷ್ ಸೇನೆ ನಿಲ್ಲುವದೆಂದು ಮಿ. ಜಿನ್ನರು ಅಥವಾ ಬ್ರಿಟಿಷರೇಕೆ ಸ್ವಪ್ನ ಕಾಣಬೇಕು?

ಇನ್ನು ಆ ಶಾಶ್ವತ ವ್ಯವಸ್ಥೆಯಾಗುವವರೆಗೆ ಆಳಲಿರುವ ನಡುಗಾಲ ಸರಕಾರದ ಮಾತು. ಈ ಸರಕಾರದಲ್ಲಿ ಕಾಂಗ್ರೆಸ್-ಲೀಗ್ ಸಮಪ್ರಾತಿನಿಧ್ಯವಿದೆಯೆಂದು ಮಿ. ಜಿನ್ನರು ಖಂಡಿತಾಶ್ವಾಸನೆಯಿತ್ತಿರುವರೆಂದು ತಿಳಿದುಬರುತ್ತದೆ. ವೈಸರಾಯರು ಅದ ಕೊಟ್ಟಿರಬಹುದು. ಭುಲಾಭಾಯಿ-ಲಿಯಾಖತ್ ಒಪ್ಪಂದ ಪ್ರಮಾಣದಿಂದಾಗಿ ಕಳೆದ ವರುಷದ ಸಿಮ್ಲಾ ಸಮ್ಮೇಲನದಲ್ಲಿ ಈ ರೋಗ ನೋಂಕಿದ್ದಿತು, ಅದಿಂದು ಅಂಟುರೋಗವಾಗಿ ಹಬ್ಬುತ್ತಾ ಹೋಗುವದು ಅತ್ಯಪಾಯಕರ. ಕಾಂಗ್ರೆಸ್-ಲೀಗ್ ಸಮಪ್ರಾತಿನಿಧ್ಯವೇ ಲೀಗಿಗೆ ಸಮಾನತೆ ಕೊಟ್ಟುದನ್ನು ಹೇಗಾದರೂ ಸಹಿಸಿಕೊಳ್ಳೋಣ—ಮಿಕ್ಕ ರಾಜಕೀಯ ಪಕ್ಷಗಳಿಗೂ ಅವುಗಳ ಬಲಕ್ಕನುಸಾರವಾದ ಪ್ರಾತಿನಿಧ್ಯವಾದರೂ ಇರಬೇಡವೇ? ಹಿಂದೂ–ಮುಸ್ಲಿಂ ಸಮಪ್ರಾತಿನಿಧ್ಯವೆ? ಮೂರಂಶಕ್ಕೆ ಒಬ್ಬನಿಗೆ ಪಾಲುಕೊಟ್ಟಂತಾಗುವದಾದರೂ ಇಲ್ಲಿಯೂ ಅದೇ ಅಪಾಯಕರ ಔದಾರ್ಯ ವಹಿಸೋಣ. ಆದರೆ ಅದೇ ರೀತಿ ಮಿಕ್ಕ ಅಲ್ಪಸಂಖ್ಯಾಕ ಸಮಾಜಗಳವರಿಗೂ ಪ್ರಾತಿನಿಧ್ಯ ದೊರೆಯುವುದು ಬೇಡವೇ? ಇದಾವ ನ್ಯಾಯವನ್ನೂ ನೋಡದೆ ಕೇವಲ ಮುಸ್ಲಿಂ ಲೀಗಿಗೆ ಮಾತ್ರ ಅತಿರೇಕ ರಿಯಾಯಿತಿಯೆಂಬುದು ಒಪ್ಪಲಾಗದ ವಿಷಯ. ಸಮಪ್ರಾತಿನಿಧ್ಯವೆಂಬ ಅಡಿಗಲ್ಲು ಅಲ್ಲಾಡಿಯೇ ಕಳೆದ ಬಾರಿಯ ಸಿಮ್ಲಾ ಯೋಜನೆಯ ಅಸ್ತಿವಾರ ಅಡಿಮೇಲಾಗಿತ್ತು, ಮಣ್ಣಾಡಿಯಿಂದ ಈ ಕಲ್ಲನ್ನೆತ್ತಿ ತಂದು ವೈಸರಾಯರದನ್ನೀಗ ನ್ಯಾಯದ ತಲೆಗೇನೇ ಹಾಕಲು ಒಗೆದಂತಿದೆ. ಬ್ರಿಟಿಷರೀಗ ನಿಜಕ್ಕೂ ಭಾವೀ ಸ್ವತಂತ್ರ ಭಾರತವನ್ನು ಕಟ್ಟಲು ಹೊರಟಿರುವದಾದರೆ, ಜನಸಂಖ್ಯೆಯನ್ನಾಧರಿಸಿ ಘಟನಾ ಸಮಿತಿಗೆ ಕೊಟ್ಟ ಪ್ರಾತಿನಿಧ್ಯ ವಿಧಾನದಲ್ಲೇ ತಾತ್ಕಾಲಿಕ ಸರಕಾರವನ್ನೂ ರಚಿಸಬೇಕು. ಆಗ ಹೋದ ಅವಘಡದ ಯಾವುದನ್ನೂ ಆಯ್ದುಕೊಳ್ಳದೆ, ಭಾವೀ ಭದ್ರತೆಯ ಅಂಶವನ್ನೇ ಅಂಗೀಕರಿಸಿಕೊಳ್ಳಬೇಕು. ಹೀಗಾಗುವ ಬದಲಿಗೆ ಮಿ. ಜಿನ್ನರ ಹಗಲು ಕನಸಿನಂತಾಗುವದಾದರೆ—ಘಟನಾ ಸಮಿತಿಯ ಕಾರ್ಯದಲ್ಲಿ ಬಿಕ್ಕಟ್ಟಿದ್ದು ಅದು ಮೂಲೆಗೆ ಬಿದ್ದು ನಡುಗಾಲ ಸರಕಾರವೇ ಕೊನೆಗಾಲದವರೆಗೂ ಉಳಿಯುವಂತಾಗಿ ಆ ಸರಕಾರದಲ್ಲಿ ಲೀಗ್ ಸಮಪ್ರಾತಿನಿಧ್ಯವಿದ್ದರೆ— ಆಗ ಅದು ಸ್ವಾತಂತ್ರ್ಯದಾಶೆಗೆತ್ತಿದ ಮಂಗಳಾರತಿಯೇ ಸರಿ. ಈಗ ದಿಲ್ಲಿಯಲ್ಲಾಗುತ್ತಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರವು ಈ ಕತ್ತಲೆಗೊಂದು ದೀವಿಗೆಯಾಗುವುದೆಂದು ಆಶಿಸುತ್ತೇವೆ.

S. R. S. Home Old Boy's Association.

In pursuance of the objects of the Association, information has been collected about the following courses of study with a view to help young men to prosecute their study after finishing their school or college courses. Intending candidates should interview or correspond with the undermentioned for any particulars.

Director, X-ray Institute,
Feliy Pai Buildings,
Hampankatta, Maagalore.

(1) Madras Medical College (2) Agricultural colleges, Coimbatore & Bapatla (3) Engineering colleges. Guindy & Coimbatore (4) All courses in Annamalai University (5) Professional studies in India (6) Hand book of different careers (7) Course. Schemes of examination & Syllabus for B. E. degree etc. and Overseer Diploma (8) Technical Department St Xavier's College, Bombay (9) Indian Institute of Science, Bangalore (10) Kalakshetra, Adyar (11) Calcutta Dental College (12) P. T. Changalwarians Naicker Institute (13) Benares Hindu University (14) General Prospects by K. S. Iyears (15) United Province Engineering Institute (16) Jamshedpur Technical Institute Prospects (17 Bullitin of the Sir Dorabji Tata Graduate School of Social work, Bombay (18) Indian Air Force Pilots and Observers (19) Sri Shivaji Preparatory Military School, Poona (20) Information or recruitment to the Officer ranks of H. M. S. land, air and naval forces (21 Forest College, Coimbatore (22) Veterinary College, Madras (23) Government School of Arts and crafts, Madras (24) Government School of Technology.

ತಾರೀಖು **12—6—46**ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ದ್ವಾರಕನಾಥರ ತಮಿಳು ಚಿತ್ರ
ದಾನಶೂರ ಕರ್ಣ
ಟಿ.ಎಸ್. ಸಂತಾನಂ. ಬಿ.ಆರ್. ಪಂತಲು, ಎಂ.ಎಸ್. ತ್ರಿಪುರಾಂಬ
ಬರುವ ಚಿತ್ರ- --ಪ್ರಕಾಶ ಚಿತ್ರ–
ಚುಡಿಯಾ
ಪ್ರೇಮ ಅದೀಬ್, ಮಾಯ ಬೆನರ್ಜಿ, ಜೀವನ್.

ಢಿಲ್ಲಿಯಲ್ಲಿ ಅಭಿಪ್ರಾಯ ಮಂಥನ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ತಾ ೧೧ರಿಂದ ಪ್ರತಿದಿನ ನವಢಿಲ್ಲಿಯಲ್ಲಿ ಸೇರಿ ಬ್ರಿಟಿಷ್ ಯೋಜನೆಯ ಕುರಿತು ಕೊನೆಯ ತೀರ್ಮಾನಕ್ಕಾಗಿ ಪುನಃ ತಾ 12ರಲ್ಲಿ ಸೇರಲಿದೆ. ಆಜಾದ್, ಪಟೇಲ್, ನೆಹರು, ರಾಜೇಂದ್ರ ಪ್ರಸಾದ್, ಸರೋಜಿನಿ ನಾಯಿಡು, ಗೋವಿಂದ ವಲ್ಲಭ ಪಂತ್, ಶಂಕರ ರಾವ್ ದೇವ್, ಪಟ್ಟಾಭಿ, ಕೃಪಾಲನಿ, ಪ್ರಫುಲ್ಲ ಘೋಷ್, ಆಸಫ್ ಆಲಿಗಳು ಹಾಜರಿದ್ದರು. ತಾ 11ರಲ್ಲಿ ಕೂಡಲೇ ಢಿಲ್ಲಿಗೆ ಹೊರಟು ಬರುವಂತೆ ರಾಜಾಜಿಗೆ ಮೌಲಾನಾ ಆಜಾದರ ಅತ್ಯವಸರದ ಟೆಲಿಫೋನ್ ಕರೆ ಬಂದಿದೆ. ಆಜಾದ್ ನೆಹರು, ಗಾಂಧೀ ಆಜಾದ್–ಧುರೀಣರು ಜತೆಯಲ್ಲಿ ಪ್ರತ್ಯಪ್ರತ್ಯೇಕವಾಗಿಯೂ ವೈಸರಾಯ ಮತ್ತು ಮಂತ್ರಿ ಸಮಿತಿಯವರೊಡನೆ ಸಂಭಾಷಣೆ ನಡೆಸಿದ್ದಾರೆ ಇಷ್ಟರಲ್ಲೇ ಕಾಂಗ್ರೆಸಿನ ಕೊನೆಯ ಉತ್ತರ ಹೋಗಿರಬಹುದು.

ಕಾಂಗ್ರೆಸಿನ ಆಕ್ಷೇಪಗಳೇನು?

ಘಟನಾ ಸಭೆಯ ನಿರ್ಧಾರಗಳನ್ನು ಪಾರ್ಲಿಮೆಂಟಿನ ಮುಂದಿಟ್ಟು ಮಂಜೂರು ಮಾಡಿಸಿ, ಆ ಮೇಲೆ ಸ್ವತಂತ್ರ ಭಾರತ ಸರಕಾರದೊಡನೊಂದು ಸ್ನೇಹ ಕರಾರು ಮಾಡಿಕೊಳ್ಳುವದೇ ಬ್ರಿಟಿಷ್ ಸರಕಾರದ ಧ್ಯೇಯವೆಂದು ಅಟ್ಲೀ ಭಾಷಣ ಮತ್ತು ಬ್ರಿಟಿಷ್ ಸಮಿತಿಯ ಮೂಲ ಹೇಳಿಕೆಯಲ್ಲಿದ್ದರೂ ಕೊನೆಯ ಹೇಳಿಕೆಯಲ್ಲಿ ತಪ್ಪಿರುದ್ದ ಅಭಿಪ್ರಾಯವನ್ನು ಬ್ರಿಟಿಷ್ ಸಮಿತಿ ಪ್ರಕಟಿಸಿ ಅಲ್ಪ ಸಂಖ್ಯಾಕರ ಕುರಿತು ಸಮಾಧಾನಕರ ವ್ಯವಸ್ಥೆಯಾಗಿಕೊಳ್ಳಬೇಕು ಮತ್ತು ಮುಖ್ಯ ದ್ವಿಪಕ್ಷಗಳೊಳಗೊಂದು ಒಪ್ಪಂದ ಪತ್ರಕ್ಕೆ ಸಹಿ ಬೀಳಬೇಕು ಎಂಬೆರಡು ಹೊಸ ಶರ್ತಗಳನ್ನು ಹಾಕಿದ್ದು ಖಂಡನೀಯ. ಅದಕ್ಕಾಗಿ ನಿಷೇಧ ಸೂಚಿಸಲಾಗಿದೆ. ಯೋಜನೆಯನ್ವಯ ಪ್ರಾಂತ್ಯಗಳಿಗೆ ಗ್ರೂಪುಗಳಲ್ಲಿ ಸೇರುವ ಯಾ ಸೇರದಿರುವ ಸ್ವಾತಂತ್ರ್ಯವಿರುತ್ತದೆಂದು ಕಾನೂನು ತಜ್ಞರ ಅಭಿಪ್ರಾಯವಿದ್ದರೂ ಪ್ರಾಂತ್ಯಗಳು ಖಡ್ಡಾಯವಾಗಿ ಸಂಗಡ ಸೋಳಗೆ ಸೇರಲೇಬೇಕೆಂದು ಈಗ ಹೇಳುತ್ತಿರುವದು ತಪ್ಪು. ತಾತ್ಕಾಲಿಕ ಸರಕಾರದಲ್ಲಿ ಕಾಂಗ್ರೆಸ್-ಲೀಗ್ ಸಮಪ್ರತಿನಿಧ್ಯಕ್ಕೆ ಕಾಂಗ್ರೆಸ್ ಒಪ್ಪುವಂತಿಲ್ಲ.

ತಾತ್ಕಾಲಿಕ ಸರಕಾರದಲ್ಲಿ—

12 ಸದಸ್ಯರಿದ್ದು ಕಾಂಗ್ರೆಸ್ ಮತ್ತು ಲೀಗಿಗೆ ಐದೈದು ಸ್ಥಾನಗಳನ್ನು ಕೊಟ್ಟು ಸಿಖ್ಖರಿಗೊಂದು, ಕ್ರೈಸ್ತರಿಗೊಂದನ್ನೀಯುವದೇ ವೈಸರಾಯರ ಮೊದಲ ಅಭಿಪ್ರಾಯ ಮತ್ತದಕ್ಕೆ ಜಿನ್ನರ ಸಮ್ಮತಿ. ಆದರದಕ್ಕೆ ಕಾಂಗ್ರೆಸಿನ ವಿರೋಧವಿರುವದರಿಂದ ಕಾಂಗ್ರೆಸ್-ಲೀಗ್‌ಗಳಿಗೆ ತಲಾ ೬ರಂತೆ ಕೊಟ್ಟು ಉಳಿದಿಬ್ಬರ ಸವರ್ಣ ಹಿಂದುಗಳನ್ನು ವೈಸರಾಯರೇ ನೇಮಿಸಿಕೊಳ್ಳುವರೆಂದೂ, ಆಗ ಕಾಂಗ್ರೆಸ್ ಒಬ್ಬ ರಾಷ್ಟ್ರೀಯ ಮುಸಲ್ಮಾನ್, ಮತ್ತೊಬ್ಬ ದಳಿತ ವರ್ಗದವನನ್ನಾರಿಸಿದರೆ ೫ ಮುಸ್ಲಿಂ ೫ ಹಿಂದು ಸಮಪ್ರತಿನಿಧ್ಯವಾಗುವುದೆಂದೂ ವಾರ್ತೆಯಿದೆ ಇದಕ್ಕೂ ಸದಸ್ಯರ ಸ್ಥಾನಗಳನ್ನು 12ರಿಂದ 15ಕ್ಕೇರಿಸುವದಕ್ಕೂ ಮಿ. ಜಿನ್ನಾರ ಖಂಡಿತ ವಿರೋಧವಿದೆ. ದೇಶಭದ್ರತೆಯೇ ಮೊದಲಾದ ವಿಶೇಷ ಸಂದರ್ಭಗಳಲ್ಲಲ್ಲದೆ, ಬೇರೆಂದಿಗೂ ತಾನೀ ನಡುಗಾಲ ಸರಕಾರದ ಕಾರ್ಯದಲ್ಲಿ ಕೈಹಾಕುವದಿಲ್ಲವೆಂದು ವೈಸರಾಯರಾಶ್ವಾಸನೆಯಿತ್ತಿರುವದರಿಂದ ಕಾಂಗ್ರೆಸ್ ಒಂದಂಶ ಸಮಾಧಾನಗೊಂಡಿದೆ

ಸಿಖ್ಖರ ಅಭಿಮತ

ಆಶ್ರಿತ ರಾಜರ ಪ್ರತಿನಿಧಿಗಳ ಸಭೆಯು ಬೊಂಬಾಯಿಯಲ್ಲಿ ಸೇರಿ ಯೋಜನೆಯ ಕುರಿತು ಸಾಮಾನ್ಯತ ಸಮ್ಮತಿ ಸೂಚಿಸಿದೆ. ಸಿಖ್ಖರ ವಿರೋಧ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸಿಖ್ಖರು ಹತ್ತು ವರುಷಗಳಲ್ಲಿ ಅಂಗುಲಂಗುಲವಾಗಿ ಸಾಯುವುದಕ್ಕಿಂತ ಧೀರ ಮರಣಕ್ಕೀಗಲೇ ತಯಾರಿದ್ದಾರೆಂದು ಸಿಖ್‌ಪ್ರಮುಖರು ಬ್ರಿಟಿಷ್ ಪ್ರತಿನಿಧಿಗಳೊಡನೆ ಹೇಳಬಂದಿದ್ದಾರೆ. ಆಸ್ಸಾಮು ಬಂಗಾಳ, ಪಂಜಾಬು, ಗಡಿನಾಡು ಮೊದಲಾದ ಎಲ್ಲಾ ಪ್ರಾಂತ್ಯಗಳ ಕಾಂಗ್ರೆಸಿಗರೂ, ಮುಸಲ್ಮಾನೇತರರೆಲ್ಲರೂ ಪ್ರಾಂತಿಕ ಸಂಗಡಗಳ ಕಡ್ಡಾಯದ ಕುರಿತು ವಿರುದ್ಧ ಚಳವಳಿಯೆಬ್ಬಿಸುತಿದ್ದಾರೆ. ದಳಿತ ವರ್ಗವು ತಮಗನ್ಯಾಯವಾಗಿದೆ ಎಂದು ಚಳವಳಿಸುತ್ತಿದೆ.

ನಿಯೋಜಿತ ರೈಲ್ವೇ ಮುಷ್ಕರ

ಹಿಂದೀ ಸರಕಾರವೀಗ ಈ ಮುಷ್ಕರ ಸಂಬಂಧದ ಎಲ್ಲಾ ವಾದಗಳನ್ನೂ ಸಂಪೂರ್ಣವಾಗಿ ನ್ಯಾಯಾಧೀಶರ ತೀರ್ಮಾನಕ್ಕೆ ಬಿಡಲು ಒಪ್ಪಿದೆ. ರೈಲ್ವೇ ಬೋರ್ಡಿನ ಆರ್ಥಿಕ ಸಮಿತಿಯು, ಈ ಸಂಬಂಧದಲ್ಲೇಳುವ ಹಣದ ಪ್ರಶ್ನೆಯನ್ನು ವಿಚಾರಿಸಲು ನವಢಿಲ್ಲಿಯಲ್ಲಿ ಸೇರಿದೆ. ನ್ಯಾಯಾಧೀಶರ ತೀರ್ಮಾನವಾಗಲಿರುವದರಿಂದ ಕೆಲಸಗಾರರು ಮುಷ್ಕರ ಹೂಡಬಾರದೆಂದು ಕಾಂಗ್ರೆಸ್ ಮತ್ತು ಇತರ ಜನ ಪ್ರಮುಖರು ವಿನಂತಿ ಮಾಡಿಕೊಂಡಿದ್ದಾರೆ

ಕಾಶ್ಮೀರದಲ್ಲಿ

ಪ್ರಜಾಪ್ರಭುತ್ವಕ್ಕಾಗಿ ಚಳವಳ ಹೂಡಿದ್ದ ಶೇಖ್ ಅಬ್ದುಲ್ಲರನ್ನು ಅಲ್ಲಿಯ ಸಂಸ್ಥಾನ ಸರಕಾರವು ದಸ್ತಗಿರಿ ಮಾಡಿ ಜನರ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ಪಂಡಿತ ನೆಹರುಗಳು ತೀವ್ರವಾಗಿ ಖಂಡಿಸಿದ್ದರು ? ಂದೂ ರಾಜರನ್ನುಳಿಸಿ ಮುಸ್ಲಿಂ ರಾಜ್ಯ ಸ್ಥಾಪಿಸುವದಕ್ಕಾಗಿಯೇ ಶೇಖ್ ಅಬ್ದುಲ್ಲರ ಪ್ರಯತ್ನವೆಂದೂ, ನೆಹರುಗಳ ಮಾತು ಖಂಡನೀಯವೆಂದೂ ಅಲ್ಲಿಯ ಹಿಂದೂ ಸಭೆಯವರ ವಾದವಿದೆ.

ಅಂತರ್ರಾಷ್ಟ್ರೀಯ

ಸ್ಪೈನಿನ ಫ್ರಾಂಕೋ ಆಡಳಿತೆಯ ವಿರುದ್ಧ ಮಿತ್ರರಾಷ್ಟ್ರ ಸಂಘದಲ್ಲಿ ಆದ ನಿರ್ಧಾರವು ತುಸು ಉದ್ವೇಗವನ್ನೆಬ್ಬಿಸಿದೆ. ಬರ್ಮದಲ್ಲಿ ಪೂರ್ಣಸ್ವಾತಂತ್ರ್ಯಕ್ಕಾಗಿ ಜನರ ಪ್ರಚಂಡ ಪ್ರದರ್ಶನ ನಡೆಯಿತು. ಬ್ರಿಟನಿನ ಕಾಮನ್ಸ್ ಸಭೆಯಲ್ಲಿ ವಿದೇಶೀ ಸಂಬಂಧದ ಚರ್ಚೆ ನಡೆದಾಗ ವಿದೇಶ ಮಂತ್ರಿ ಮಿ. ಬೆವಿನರು ರಶ್ಯದ ಸಂದೇಹಾತ್ಮಕ ಧೋರಣೆಯ ಕುರಿತು ವರ್ಣಿಸಿದರಲ್ಲದೆ, ಮಿ. ಚರ್ಚಿಲ್ಲರೇ ಮೊದಲಾದವರು ರಶ್ಯದ ಮನೋವೃತ್ತಿಯನ್ನು ತೀವ್ರವಾಗಿ ಖಂಡಿಸಿದರು.

ಸಯಾಮಿನ ಅರಸನ ದುರ್ಮರಣ

ಅಕ್ಕ ಉಳಿಕಾಯಕ್ಕೆ ಪ್ರಸಿದ್ಧಿ ಹೊಂದಿರುವ ಸಯ್ಯಾಮಿನ ತರುಣ ರಾಜಾ ಆನಂದ ಮೊಹಿದೋಲರು ತಾ.೯ನೇ ಅಪರಾಹ್ನ ತನ್ನ ಅರಮನೆಯಲ್ಲಿ ಮಡಿದು ಬಿದ್ದಿದ್ದ ವಾರ್ತೆ ಸಯಾಮನ್ನೆಲ್ಲಾ ಭಯ ಶೋಕಾಬ್ಧಿಯಲ್ಲದ್ದಿದೆ. ಒಂದು ಗನ್ ಆಕಸ್ಮಾತ್ ಸಿಡಿದುದೇ ಈ ದುರ್ಮರಣಕ್ಕೆ ಕಾರಣವೆಂಬ ವರದಿಯಾಗಿದೆ. ದಿವಂಗತ ರಾಜರು ಕೇವಲ 20 ವರ್ಷ ಪ್ರಾಯದವರು 1935ರಲ್ಲಿ ಪಟ್ಟಕ್ಕೇರಿದವರು. ಕಳೆದ ವರುಷ ತನ್ನ ವಿದ್ಯಾಭ್ಯಾಸ ಮುಗಿಸಿದವರು.

ರಶ್ಯದ ಆರೋಪ

ಬ್ರಿಟಿಷ್ ವಿದೇಶ ಮಂತ್ರಿ ಬೆವಿನರ ಪಾರ್ಲಿಮೆಂಟ್ ಭಾಷಣವನ್ನು 'ಮಿತ್ರರ ಒಗ್ಗಟ್ಟನ್ನೊಡೆದು ರಶ್ಯದ ಮೇಲೆ ಜಿಗುಪ್ಸೆ ಮತ್ತು ಒತ್ತಡ ಬೆಳೆಸುವ ಯತ್ನವಿದು' ಎಂದು ಮಾಸ್ಕೋ ರೇಡಿಯೋ ಟೀಕಿಸಿದೆ. ಚೀನದಲ್ಲಿ ಕಮ್ಯೂನಿಸ್ಟರ ವಿರುದ್ಧ ಹೋರಾಡಲು ಚಿಯಾಂಗರಿಗೆ ಅಮೇರಿಕನರು ಸಹಾಯವೀಯುತಿದ್ದಾರೆಂದು ರಶ್ಯವು ಆರೋಪಿಸಿದೆ.



ಕುಟುಂಬ ದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಬಳಿಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಜವೇರಿಯನ್ ಜೀವನ ಮಿಕ್ಶ್ಚರ್

ಎಮ್ ಎಚ್ ಜವೇರಿಯನ್ ಮತ್ತು ಕಂ ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨

ದಿ ಆರ್ಯನ್ ಚಾಂಪಿಯನ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ

... ಸರ್ಕಲ್, ಪೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೇ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಅವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯು

ಚೆಯರ್‌ಮನ್

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭವನ್ನು ಒದಗಿಸಿಕೊಡುವೆವು ... ಅನುಭವಿಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ ಎಸ್ಸ್ಕ್ವಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಜೀವನವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾರ್ಕ್ ಇಟ್ಟಿದೆ.)



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು ಡಾ॥ ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ನಮ್ಮ ಬೊಂಬಾಯಿಯ ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಬೊಂಬಾಯಿಯ ಚಂದಾದಾರರು ಅದನ್ನು ಈಗ ಅಲ್ಲಿಗೆ ಬಂದಿರುವ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಕೊಡಬೇಕಾಗಿಯೂ ಹೊಸತಾಗಿ ಚಂದಾದಾರರಾಗಲಿಚ್ಛಿಸುವವರೂ ಅವರೊಡನೆ ಚಂದಾಹಣ ತೆತ್ತು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಾರರೂ ಅವರೊಡನೆ ಹಣ ತೆತ್ತು ಹೊಸ ಪಾಲುಗಳನ್ನು ಪಡಕೊಳ್ಳಬೇಕಾಗಿಯೂ ಅಪೇಕ್ಷಿಸಲಾಗುತ್ತದೆ.

ಮೆನೇಜರ್,

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.
ಶರ್ತಗಳಿಗೆ ಬರೆಯಿರಿ.
'ಅಂತರಂಗ', ಉಡುಪಿ.

ಉಡುಪಿ

ಈ ಊರ ಕ್ರಿಶ್ಚಿಯನ್ ಹೈಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿನಿಯರಲ್ಲಿ ಒಬ್ಬಳು ಮಹಮ್ಮದೀಯ ಪಂಥಕ್ಕೆ ಸೇರಿದವಳು. ಇವಳು ಆದೇ ಶಾಲೆಯ ಡ್ರಿಲ್ ಮಾಸ್ತರ್ ಬಿ. ಎಚ್. ಅಹಮ್ಮದರ ಮಗಳು.

ತೆಂಗಿನೆಣ್ಣೆಯ ಬೆಲೆಯು ಈಗ ಸರಾಸರಿ ಶೇರಿಗೆ 3-10-0ಗೆ ಏರಿದೆ. ದರ ನಿಯಂತ್ರಣವಾಗದಿದ್ದರೆ ಬಡವರಿಗೆ ಉಳಿಗಾಲವಿಲ್ಲ. ಮೇಲಧಿಕಾರಿಗಳು ತೀವ್ರ ಗಮನ ಕೊಡಬೇಕಾಗಿದೆ.

ಬೇಂಕ್ ಲೂನ್ ಕ್ಲೋಕ್ ಮರ್ಚಂಟ್ ಎಸೋಸಿಯೇಶನ್—ಉಡುಪಿ ಎಂಬ ಸಂಘ ಸ್ಥಾಪಿಸಿ, ತಾ 10-6-46ರಲ್ಲಿ ಶ್ರೀ. ಎಂ. ಪಾಂಡುರಂಗ ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಸ್ಥಾಪಿಸಲ್ಪಟ್ಟಿತು. ಶ್ರೀ ಬಿ. ರಮಾನಾಥ ಪೈಗಳು ಅಧ್ಯಕ್ಷರಾಗಿ ಶ್ರೀ ಎಸ್. ಎಸ್. ನಾಯಕರು ಕಾರ್ಯದರ್ಶಿಗಳಾಗಿ, ಶ್ರೀ. ದೇವೇಂದ್ರ ಶೆಣೈಯವರು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು. ಕೆಲವರನ್ನು ಕಮಿಟಿ ಮೆಂಬರರನ್ನಾಗಿಯೂ ಆರಿಸಲಾಯಿತು. ಕೈ ಮಗ್ಗದ ಜವುಳಿ ವ್ಯಾಪಾರಸ್ಥರ ಹಾಲಿ ಕಷ್ಟಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನಿವೇದಿಸಿಕೊಳ್ಳುವದು ಸಂಘದ ಉದ್ದೇಶವಾಗಿರುತ್ತದೆ.

ಕಳವಿನ ತನಿಖೆ

ಕಾರ್ಕಳ ತಾಲೂಕು, ಕಾಂತಾವರ ಮತ್ತು ಇತರ ಗ್ರಾಮಗಳಲ್ಲಿ ತನ್ನ ಸಂಬಂಧಿಕರ ಮನೆಗಳಲ್ಲಿರುತ್ತಿದ್ದನು. ತಾನು ಒಬ್ಬ ಬ್ರಾಹ್ಮಣನೆಂದು ಹೇಳಿ [illegible] ತನ್ನ ಹೆಸರು ರಾಮ [illegible] ಎಂದೂ ಹೇಳಿ, ಉಡುಪಿ ತಾಲೂಕು ಕುಕ್ಕುಂದೂರು ಗ್ರಾಮದ ನನ್ನ ಸಂಬಂಧಿಕರ ಮನೆಯಲ್ಲಿ, ಕಳವು 4½ ತಿಂಗಳಿಂದ ಕೆಲ್ಲಿಸಿದ್ದ. ಸುಮಾರು 22 ವರುಷ ಪ್ರಾಯ, 5' ಫೀಟು ಎತ್ತರ, ಸಪೂರ ದೇಹ, ಗಸಾ ಕಪ್ಪು ಬಣ್ಣ, ಸಣ್ಣ ಮುಖ, ಉದ್ದ ಕೂದಲು, ಹಣೆಯಲ್ಲಿ ಗಾಯದ ಕಲೆ, ಎಡ ಕಣ್ಣಿಯ ಸಮೀಪ ಎಂದೂ ಒಂದು ತಿವಿಯ ಮಧ್ಯ ಎರಡು, ಈ ರೀತಿ ಕೊನೆ ಕಚ್ಚಿ ಹೋಳ್ಕು ಹಲ್ಲು ದೊಡ್ಡದಾದ ರಂಧ್ರಗಳು, ಸ್ವಲ್ಪ ಒಳಗಾಗಿದ ನಡೆ, ಇತ್ಯಾದಿ ಚಹರೆಗಳುಳ್ಳ ತರುಣನು ಮನೆಯವರನ್ನು ವಂಚಿಸಿ, ತಾ7-6-46ನೇ ರಾತ್ರಿ ಪೂರ್ವ ಕಾಲ ಘಂಟೆ 5ಕ್ಕೆ ನನ್ನ ಮನೆಯಿಂದ ಈ ಕೆಳಗೆ ಕಾಣಿಸಿದ ಸುಮಾರು ರೂಪಾಯಿ 526 0 0 ಬೆಲೆಬಾಳುವ ಸೊತ್ತುಗಳನ್ನು ಕಳವು ಮಾಡಿ [illegible] ಕಳವು ಮಾಡಿ [illegible] ತಾ 7-6-46ರಲ್ಲಿ ಉಡುಪಿ ಪೋಲೀಸ್ ಸ್ಟೇಶನಿಗೆ ಪಿರ್ಯಾದಿ ಕೊಟ್ಟಿದ್ದೇನೆ. ಮಹಾ ಜನರು ಮೇಲಿನವನು, ಸದ್ರಿ ಕಳವಾದ ಸೊತ್ತುಗಳು ಸಿಕ್ಕಿದಲ್ಲಿ ಅವನನ್ನು ಹಿಡಿದು ಉಡುಪಿ ಪೋಲೀಸ್ ಸ್ಟೇಶನ್, ಯಾ, ಸಮೀಪದ ಪೋಲೀಸ್ ಸ್ಟೇಶನಿಗೆ ಒಪ್ಪಿಸಿ, ಈ ಬಗ್ಗೆ ಜನಸೇವೆಯ ಮಾಹಿತಿ ತಿಳಿಸಿದವರಿಗೆ, ಆ ಬಗ್ಗೆ ರೂಪಾಯಿ 15 0-0ನ್ನು ಆ ಸುಳಿವಿನವರಿಗೆ ಇನಾಮಾಗಿ ಕೊಡಲಾಗುವುದು

ಕಳವಾದ ಸೊತ್ತುಗಳ ವಿವರ

(1) ವೆಸ್ಟ್ ಎಂಡ್ ವಾಚ್ ಕಂಪನಿಯ 18 ಕೇರೆಟ್ ಚಿನ್ನದ ಪಾಕೇಟ್ ವಾಚು 1ರ ಅಂದಾಜು ಕ್ರಯ ರೂಪಾ 250 0 -0 (2) ಸದ್ರಿ ವಾಚಿನ 18 ಕೇರೆಟ್ ಚಿನ್ನದ ಗೊಲುಸು ಚೈನ್ 1ರ ಅಂದಾಜು ಕ್ರಯ ರೂಪಾ 50 0 0 (3) ಸದ್ರಿ ಚೈನಿನಲ್ಲಿ ತೂಗಾಡುತ್ತಿರುವ ಎರಡು ಮಗ್ಗುಲಲ್ಲಿ ಶ್ರೀ ಕಾಶೀಮಠದ ಸ್ವಾಮಿಯವರು, ಕೆ. ಗಣಪಯ್ಯ ಶೆಟ್ಟಿಯವರ ಸಂಸ್ಕೃತ ಪಾಠಶಾಲೆಯ ಸಹಾಯದ ಬಗ್ಗೆ 1934ರಲ್ಲಿ ಕೊಡಲ್ಪಟ್ಟ ಬಹುಮಾನ ಎಂದು ಇಂಗ್ಲಿಷ್‌ನಲ್ಲಿ ಕೆತ್ತಿರುವ ಅಕ್ಷರಗಳೂ, ಮತ್ತೊಂದು ಮಗ್ಗುಲಲ್ಲಿ ಸದ್ರಿ ಸ್ವಾಮಿಗಳ ಚಿತ್ರ ಉಳ್ಳ ಪವನ್, 2 ಪವನ್ ತೂಕದ ಮೆಡಲ್ ಇರುವ ಅಂದಾಜು 1ರ ಕ್ರಯ 150 -0 0 (4) ಸೇರಿಗೆ ಬಂಗಾರ, ಮತ್ತು ಇತರ ಹಿತ್ತಾಳೆ ಸಾಮಾನುಗಳುಳ್ಳ ಬೆತ್ತದ ಪೆಟ್ಟಿಗೆ, ಬ್ರೌನ್ ಕಲರ್ ಶರ್ಟ್ 1ರ ಅಂದಾಜು ಕ್ರಯ. 25 -0 0 (5) K. V. ಬಿ ಎಂಬ ಇಂಗ್ಲೀಷ್ ಅಕ್ಷರಗಳಿರುವ ಕಪ್ಪು ವಸ್ತ್ರದ ಚೀಲ ಕೊಡೆ 1ರ ಅಂದಾಜು ಕ್ರಯ ರೂಪಾ 2- 4 0 (6) ಕರಿಸ್ತಿ ಸೀರೆಗಳು ವ, ಚಿಲ್ಲರೆ ಕೂಡಾ ಸಗ್ಗು ರೂಪಾ 48 -12 0 ಈ ರೀತಿ ಒಟ್ಟು ಅಂದಾಜು ಸಗ್ಗು, ವ, ಸಗ್ಗು ಕೂಡಾ ರೂಪಾ 526—0—0.

ಕೆ. ಗಣಪಯ್ಯ ಶೆಟ್ಟಿ
ಮೆನೇಜರ್
ಕುಂಜಾರು ಗಿರಿ ಹಾಯರ್ ಎಲಿಮೆಂಟ್ರಿ ಶಾಲೆ, ಕುರುಕಾಲು ಗ್ರಾಮ.
ಕುಂಜಾರುಗಿರಿ ಪೋಸ್ಟು
ಉಡುಪಿ ತಾಲೂಕು-(ದ. ಕನ್ನಡ)
ಕುರುಕಾಲು ತಾ 10 6 46.

ಮದ್ರಾಸ್ ಸರಕಾರದ ಪಬ್ಲಿಕ್ ಹೆಲ್ತ್ ಮಂತ್ರಿಗಳಿಗೆ ಅಖಿಲ ಕೇರಳ ಆಯುರ್ವೇದಿಕ್ ಕಾಂಗ್ರೆಸ್— ಕಡೆಯಿಂದ ದೇಶಿ ಹಾಗೂ ಆಯುರ್ವೇದ ಔಷಧಗಳ ಪುನರುಜ್ಜೀವನದ ಕುರಿತು ಒಂದು ಮನವಿ ಕಳುಹಲಾಗಿದೆ. ಅದರ ಸಾರಾಂಶ ಹೀಗಿದೆ:— ಆಯುರ್ವೇದದ ಮಹತ್ವವು ಪುರಾತನ ಕಾಲದಿಂದ ನಡೆದುಬಂದುದು. ಪಾಶ್ಚಿಮಾತ್ಯರು ಕೂಡ ಆಯುರ್ವೇದ ಮದ್ದುಗಳ ಗುಣ ದೋಷಗಳನ್ನು ವಿಮರ್ಶಿಸಿದುದು ಇತ್ತೀಚೆಗೆ. ಭರತಖಂಡದ ಸಂದು ಮೂಲೆಗಳಲ್ಲಿಯೂ ವಿಶೇಷತಃ ಪ್ರಚಾರದಲ್ಲಿದ್ದುದು ಆಯುರ್ವೇದ ವಿಧಾನಗಳೇ. ಇಂದಿಗೂ ಸೇಕಡಾ 80—90ರಷ್ಟು ಮಂದಿ ಹಳ್ಳಿ ಜನರು ದೇಶೀಯ ಮದ್ದುಗಳನ್ನೇ ಉಪಯೋಗಿಸುತ್ತಿರುವರು. ಇಷ್ಟು ಪುರಾತನವಾದ ಆಯುರ್ವೇದಕ್ಕೆ ವಿಶೇಷ ಪ್ರಭುತ್ವದಲ್ಲಿ ಯೋಗ್ಯ ಮನ್ನಣೆ ದೊರೆಯದೆ ಅಲ್ಲಗಳೆಯಲ್ಪಟ್ಟಿವೆ. ಕಳೆದ ಕಾಂಗ್ರೆಸ್ ಮಂತ್ರಿಮಂಡಳವು ದೇಶೀಯ ಔಷಧಿಗಳ ಸ್ಥಾನ ಮಾನವನ್ನು ವಿಮರ್ಶಿಸಬೇಕೆಂದು ದೇಶೀಯ ಪಂಡಿತರಲ್ಲಿ ಕೆಲವರನ್ನು ನೇಮಿಸಿದ್ದರು. ಆದರೆ ಮಧ್ಯೆ ಬಂದ ಅಗಿನ ಮಂತ್ರಿಗಳಾದ ಡಾ|| ಟಿ. ಎಸ್. ಎಸ್. ರಾಜನ್‌ರವರು ದುಡ್ಡು ಇಂಗ್ಲಿಷ್ ಔಷಧಗಳನ್ನೇ ಪ್ರೋತ್ಸಾಹಿಸತಕ್ಕ ಮನೋಸ್ಥಿತಿಯವರಿದ್ದರು. ಮುಂಬಾಯಿನ ಕೆಲವು ಗಣನೀಯ ಔಷಧಗಳು ಮಹಾ ರೋಗಗಳನ್ನು ತೀವ್ರ ಗುಣಪಡಿಸುವಂತಹದಿದ್ದು ಆಂಗ್ಲ ವೈದ್ಯರಿಗೂ ಆಶ್ಚರ್ಯವನ್ನುಂಟುಮಾಡತಕ್ಕವುಗಳು. ಇಂತಹ ಪರಿಸ್ಥಿತಿಯಲ್ಲಿ ಜನತಾ ಸರಕಾರವು ಪುನಹ ಉದಯವಾದ ಈ ಸಂದರ್ಭದಲ್ಲಿ ಈ ಕೆಳಗಿನ ಕೆಲವು ಪ್ರಾಮುಖ್ಯ ವಿಷಯಗಳು ತೀವ್ರ ಗಮನಕ್ಕೆ ಯೋಗ್ಯವಾಗಿವೆ.

(1)ದೇಶೀ ಔಷಧಿಯ ಶಾಲೆಯೊಂದನ್ನು ಮದ್ರಾಸಿನಲ್ಲಿ ಸ್ಥಾಪಿಸಿ ಇಂಗ್ಲಿಷ್ ಮತ್ತು ಆಯುರ್ವೇದ ರೀತ್ಯಾ ಅನುಭವಶಾಲಿ ವೈದಿಕ್ಯರನ್ನು ಅದರ ಮೇಲ್ವಿಚಾರಕ್ಕೆ ನೇಮಿಸುವುದು. ಈಗ ಇರುವ ಸರಕಾರೀ ಸ್ಕೂಲ್ ಒಫ್ ಇಂಡಿಯನ್‌ಮೆಡಿಶಿನ್‌ನಿಂದ ಕೇರಳ ಆಂಧ್ರ ಮತ್ತು ತಮಿಳುನಾಡು ಕೇಂದ್ರಗಳಲ್ಲಿ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು. ಶಸ್ತ್ರ ಮತ್ತು ಸೂಲಗಿತ್ತಿ ವಿದ್ಯೆಯನ್ನು ಕೊಡುವುದು. ಯೋಗ್ಯ ಶಿಕ್ಷಣ ಕ್ರಮ ಪಟ್ಟಿಯನ್ನು ತಯಾರಿಸುವುದು. ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ದೇಶೀ ಔಷಧ ಶಾಖೆಗಳನ್ನು ತೆರೆಯುವುದು. ಮತ್ತು ಮದ್ದಿನ ಬಗ್ಗೆ ವ್ಯವಸ್ಥೆ ಮಾಡುವುದು ಹಳ್ಳಿಹಳ್ಳಿಗಳಲ್ಲಿ ಧರ್ಮಾರ್ಥ ಔಷಧಾಲಯಗಳನ್ನು ತೆರೆಯುವುದು

(2) ಈಗ ಉದ್ಯೋಗದಲ್ಲಿರುವ ಪಂಡಿತರ ಯೋಗ್ಯತೆಗಳನ್ನು ಪರಾಂಬರಿಸಿ ಅಂಗೀಕರಿಸುವುದು.

(3) ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟನ್ನು ತಿದ್ದುಪಡಿ ಮಾಡಿ ದೇಶೀಯ ಡಾಕ್ಟರರನ್ನು ರಿಜಿಸ್ಟ್ರಿ ಮಾಡಿಕೊಳ್ಳುವುದು.

(4) ದೇಶೀಯ ಮದ್ದುಗಳನ್ನು ಒಂದೇ ತೆರನಾಗಿ ಎಲ್ಲಾ ವೈದ್ಯರು ತಯಾರಿಸುವಂತೆ ಸರ್ವ ಸಮ್ಮತವಾದ ಮಿತಿಯನ್ನು ನಿರ್ಧರಿಸುವುದು. ಆ ಬಗ್ಗೆ ಅಲ್ಲಲ್ಲಿ ಫಾರ್ಮಸಿಗಳನ್ನು ತೆರೆಯುವುದು.

ಮಂಗಳೂರು

ಗೀತಾ ಮಂದಿರ ಪ್ರವೇಶೋತ್ಸವವು—ತಾ 9ರಲ್ಲಿ ಪೂರ್ವಾಹ್ನ 9ಗಂಟೆಗೆ ಶಿವಗಿರಿ ಮಠದ ಬ್ರಹ್ಮ ಶ್ರೀ ಶಂಕರಾನಂದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕುದ್ರೋಳಿಯಲ್ಲಿ ಶ್ರೀ ಶಂಕರ ಶಾಂತಿಯವರು ಕಟ್ಟಿಸಿದ ಗೀತಾ ಮಂದಿರಕ್ಕೆ ಶ್ರೀ. ವಿಠಲ ಶಾಂತರಾಮ ಕುಲಕರ್ಣಿಯವರು ತಮ್ಮ ಧರ್ಮಪತ್ನಿ ದಿವಂಗತ ಅನ್ನಪೂರ್ಣಾ ದೇವಿಯ ಹೆಸರಿನಲ್ಲಿ ದಾನವಿತ್ತ ವಿದ್ಯುತ್‌ದೀಪವನ್ನು ಡಾ|| ಕೆ. ಗಿರಿಧರರಾಯರು ಬೆಳಗಿಸಿದರು. ತದನಂತರ ಶ್ರೀ. ನಾರಾಯಣಗುರು ಮತ್ತು ಶ್ರೀ. ಕೃಷ್ಣದಾಸಾನಂದರ ಭಾವ ಚಿತ್ರಗಳ ಅನಾವರಣವೂ ನಡೆಯಿತು. ಶ್ರೀಗಳಾದ ಎನ್. ವಿ. ಶಾಸ್ತ್ರಿ, ಸಿದ್ದೋಡಿ ಅನಂತ ಉಪಾಧ್ಯಾಯ, ಎಸ್. ಆರ್. ಭಟ್ ಮೊದಲಾದವರ ಉಪನ್ಯಾಸಗಳಾದುವು. ಶ್ರೀ. ಲಕ್ಷ್ಮಣದೇವ ವಿದ್ಯಾರ್ಥಿಯವರಿಂದ "ಸತ್ಯ ವಿಜಯ ಹರಿಕಥೆ" ನಡೆಯಿತು.

ಉಪಾಧ್ಯಾಯಿನಿ ಬೇಕು.

ಸೆಕೆಂಡರಿ ಗ್ರೇಡ್ ಟ್ರೈನ್ಡ್ ಉಪಾಧ್ಯಾಯಿನಿಯೊಬ್ಬರು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು.

ಕೆ. ಶೇಷಗಿರಿ ಕಾಮತ್
ಮೆನೇಜರ್
ಸರಸ್ವತಿ ಬಾಲಿಕಾ ಪಾಠಶಾಲಾ
ಉಡುಪಿ (ದ. ಕ.)

ಮುಟ್ಟಾಗುಳಿಕೆ

ಸಲಿಂಗೊಂದಿದ ಶಕ್ತಿಗಿನ್ನು, ಶಕ್ತಿದ ಗರ್ಭಧಾರಣೆ ಆಗದು. ಇತ್ಯಾದಿ ಕಾರಣದಿಂದ ಉಂಟಾಗುವ— ಮುಂಬಾಯಿ ಮಾತ್ರೆಗಳು ಬಲಿಷ್ಠ ಪರಿಣಾಮ—ಹೊಂದಿರುತ್ತದೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗಿಗೊಳಿಸುವುದು; ಬೇಕಾದಾಗ ಗರ್ಭ ಧಾರಣೆಯನ್ನು ನಿಲ್ಲಿಸುವುದು; ಸಾಧಾರಣ ಗುಣದ ಮಾತ್ರೆಗಳಿಗೆ ಬೆಲೆ ರೂ. 3! ಬಲವಾದ ಕೇಸುಗಳಿಗೆ ರೂ. 5. 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4!. (ವಿ. ಪಿ. 12 ಅಣೆ ಅಧಿಕ.)

Mrs. P. DEVEE,
P. B. 5. (A. K.) Tollygunge, Calcutta
ಸ್ಟಾಕಿಸ್ಟ್: ಪಾ ಶಂಕರ್, ಮಂಗಳೂರು

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches. **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಸಮಂತದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.



Approved firm by the Govt. of Mysore
Certified by the Agent of the Govt. of Cyloce Indian.

ಸ್ವೀಕಾರ-ವಿಮರ್ಶೆ

೧ ಹುಬಳ್ಳಿ ಗಜೇಟ್-ಕಾಂಗ್ರೆಸ್ ವಿಶೇಷಾಂಕ-ಡೆಮಿ ೧/೪ ಆಕಾರದ ೧೧೨ ಪುಟಗಳು. ಬೆಲೆ ೮ ಆಣೆ.

ಡಾ. ನಾ. ಸು. ಹರ್ಡೀಕರರಿಂದ ಸ್ಥಾಪಿಸಲ್ಪಟ್ಟು, ಈಗ ಅವರ ಸಂಚಾಲನೆ ಹಾಗೂ ರಾ. ವೆ. ಕುರಗುಂದರಿಯವರ ಸಂಪಾದಕತ್ವದಲ್ಲಿ ಹೊರಡುತ್ತಿರುವ ಹುಬಳ್ಳಿ ಗಜೇಟಿನವರು ಸ್ವಾತಂತ್ರ್ಯ ದಿನದಂದು ಪ್ರಕಟಿಸಿದ ವಿಶೇಷಾಂಕವನ್ನು ಆಸ್ವಾದದಿಂದ ಸ್ವೀಕರಿಸಿದ್ದೇವೆ. ಈ ಸಂಚಿಕೆಯಲ್ಲಿ, ಅಖಿಲ ಭಾರತದ ಕಾಂಗ್ರೆಸ್ಸಿನ ಇತಿಹಾಸ, ಅದರ ಘಟನೆ, ಧೋರಣೆ, ಭವಿತವ್ಯ ಇತ್ಯಾದಿ ವಿಷಯಗಳ ಮತ್ತು ಮುಸ್ಲೀಮರ ರಾಷ್ಟ್ರೀಯ ಪಕ್ಷಗಳ ಕುರಿತಾದ ವಿಚಾರ ಪರಿಪ್ಲುತ ಲೇಖನ ಹಾಗೂ ಕವಿತೆಗಳಿವೆ. ಹೀಗೇ ಒಂದೇ ವಿಷಯವನ್ನು ಗುರಿಯಾಗಿಟ್ಟುಕೊಂಡು, ಅದರ ಬೇರೆಬೇರೆ ಅಂಗಗಳನ್ನು ಅಭ್ಯಾಸಿಸಿ, ವಿಶೇಷ ಸಂಚಿಕೆಯನ್ನು ಹೊರಡಿಸಿದ ಪತ್ರಿಕೆಯ ಸಂಪಾದಕ ಮಂಡಲದ ಬರೆಹಗಾರರ ಪ್ರಯತ್ನವಿದು ಸ್ತುತ್ಯ; ಅಲ್ಲದೆ ಇದು ಇತರ ಪತ್ರಿಕೆಗಳಿಗೆ ಮಾದರಿಯೆನ್ನಲೂ ಬಹುದು. ಸಂಚಿಕೆಯು ರಾಷ್ಟ್ರಪ್ರೇಮಿಗಳೆಲ್ಲರೂ ಸಂಗ್ರಹಿಸಲು ಯೋಗ್ಯವಾಗಿದೆ.

೨ ಪ್ರಗತಿ- ಮಾಸಪತ್ರಿಕೆ. ಸಂ. ೧. ಸಂಚಿಕೆ ೮. ಸಂಪಾದಕರರು ಗು. ವಿ. ದೇಶಪಾಂಡೆ ಕ್ರೌನ್ ೧/೪ ಆಕಾರದ ೪೦ ಪುಟಗಳು, ವಾ. ಚಂದಾ ೩-೮-೦ . ಬಿಡಿಸಂಚಿಕೆ ಬೆಲೆ-೫ ಆಣೆ.

ರಬಕವಿಯ ಗೆಳೆಯರ ಗುಂಪಿನವರು ಹೊರಡಿಸುತ್ತಿರುವ 'ಪ್ರಗತಿಶೀಲ' ಮಾಸಪತ್ರಿಕೆಯಿದು. ಹೆಸರೇ ಸೂಚಿಸುವಂತೆ, ಪ್ರಗತಿಶೀಲ ದೃಷ್ಟಿಯಿಂದ ಬರೆಯಲ್ಪಟ್ಟ ಕತೆ, ಕವನ, ಲೇಖನಗಳಿಂದ ಕೂಡಿ, ವಿಚಾರ ವೈವಿಧ್ಯಗಳಿಂದೊಡಗೂಡಿ ಸುಂದರವಾಗಿದೆ. ಕನ್ನಡ ಮಾಸಪತ್ರಿಕೆಗಳಲ್ಲಿ ಪ್ರಾಯಶಃ ೫-೭ ವರ್ಷಗಳಿಗಿಂತ ಹೆಚ್ಚು ಕಾಲ ಬಾಳಿದವುಗಳು ವಿರಳವೆಂದು ವಿಷಾದದಿಂದ ಒಪ್ಪಬೇಕು. ಗೆಳೆಯರ ಗುಂಪಿನ ಹೊಸ ಹುರುಪಿನಿಂದ ಹೊರಟ ಈ ಪತ್ರಿಕೆಯು, ಮೇಲ್ಕಂಡ ವಿಷಯಗಳಿಂದ ಹೇಗೋ ಹಾಗೆ ಉತ್ತಮ ಕಾಗದದ ಮೇಲೆ ಅಚ್ಚಾಗಿ ಕನ್ನಡದ ಆದರ್ಶ ಪತ್ರಿಕೆಯೆನ್ನಿಸಲೆಂದು ನಾವು ಹಾರೈಸುತ್ತೇವೆ.

೩ Film Filter- ಸಂ ೧. ಸಂಚಿಕೆ ೧ ಡೆಮಿ ೧/೪ ಆಕಾರದ ೫೦ ಪುಟಗಳು. ಬೆಲೆ ರೂ. ೧. ಸಂಪಾದಕರು ಡಿ. ಬಿ. ಫೊಂ[illegible] ಅವರು.

ಭರದಿಂದ ಪ್ರಗತಿ ಹೊಂದುತ್ತಿರುವ ಸಿನೆಮಾ, ಕಲೆ ಮತ್ತು ಕ್ರೀಡಾಂಕಗಳು ಮುಂತಾದ ವಿಷಯಗಳ ಮೇಲೆ ನಿಜಾಭಿಪ್ರಾಯವಾದ ಲೇಖನಗಳನ್ನು ಜನತೆಗೆ ಒದಗಿಸಿಕೊಡುವ ಧ್ಯೇಯದಿಂದ, ಹೊಸತಾಗಿ ಜನ್ಮತಾಳಿದ ಆಂಗ್ಲ ಭಾಷೆಯ ಸಿನೆಮಾ ಪತ್ರಿಕೆಯಿದು, ಚಲನಚಿತ್ರದ ಅಂಗಗಳನ್ನು ಕುರಿತು ಮಾಹಿತಿ, ಸಿನೆಮಾ ಸುದ್ದಿ, ತಾರೆಯರ ಚಿತ್ರಗಳು ಇತ್ಯಾದಿಗಳಿಂದೊಡಗೂಡಿ ಹೊಳಪಿನ ಕಾಗದದ ಮೇಲೆ ಅಚ್ಚಾಗಿ, ಆಕರ್ಷಣೀಯವಾದ ಹೊರ ಮೈಯಿದ್ದು ಸಂಚಿಕೆಯು ಸೊಗಸಾಗಿದೆ. ಮುಖ್ಯತ ಮುದ್ರಣವಿಚಾರದಲ್ಲಿ ಮತ್ತಷ್ಟು ಸುಧಾರಣೆಯನ್ನು ಮಾಡಲಿಪ್ಪೇವೆಂದು ಸಂಪಾದಕರು ಆಶ್ವಾಸನೆಯಿತ್ತಿದ್ದಾರೆ. ಪತ್ರಿಕೆಯಿದು ಬಹುಕಾಲ ಬಾಳಲೆಂದು ಆಶಿಸುತ್ತೇವೆ.

೪ ವಿಷ್ಣುವಿನ ದಶಪರಾಧಗಳು ಅರ್ಥಾತ್ ದಶಾವತಾರಗಳು- ಉಡುಪಿಯ ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ-ನುಡಿ೨೪, ಬರೆದವರು ಮ. ವಿ. ಹೆ[illegible] ಕಿರೀಟಾಕಾರದ ಪುಟಗಳು ೭೪, ಬೆಲೆ. ೧೨ ಆಣೆ.

ಕಲಿಯುಗದ ಜನತೆಯಲ್ಲಿ ಕಂಡುಬರುವ ಮಾಂಸ ಸೇವನೆ, ಮದ್ಯ ಪಾನ, ವ್ಯಭಿಚಾರವೇ ಮುಂತಾದ ಎಲ್ಲಬಗೆಯ ಪಾಪಕೃತ್ಯಗಳಿಗೂ [illegible] ಮುಂತಾದ ಹೇಯ ರಾಜಕೀಯ ತತ್ವಗಳಿಗೂ ಹೊಣೆಗಾರನು ಸಾಕ್ಷಾತ್ ಶ್ರೀ ವಿಷ್ಣುವೇ ಎಂದೊಡನೆ ಸನಾತನಿಗಳು ರೇಗುವುದು ಸಹಜ. ಆದರೆ ಶ್ರೀ. ಎಂ. ವಿ. ಹೆಗ್ಡೆ ಅವರು, ಈ ಪುಸ್ತಕದಲ್ಲಿ 'ಖಿಲಾಡಿ ಕಿಟ್ಟು'ವಿನ ಬಾಯಿಯಿಂದ ಗೊಡ್ಡು ಸನಾತನಿ ತಿಮ್ಮಣ್ಣ ಭಟ್ಟರಿಗೆ ದಶಾವತಾರದ ಕತೆಗಳನ್ನು ಹೇಳಿಸಿ, ಮೇಲಿನ ಅಭಿಪ್ರಾಯವನ್ನು ಯಶಸ್ವಿಯಾಗಿ ಸಮರ್ಥಿಸಿದ್ದಾರೆ. ಕನ್ನಡದಲ್ಲಿ ವಿನೋದ ಬರೆಹಗಳೇ ಕಡಿಮೆಯಿರುವಾಗ, ವಿಡಂಬನ ಯುಕ್ತವಾದ ವಿನೋದವಂತೂ ಮತ್ತಷ್ಟು ವಿರಳವೆನ್ನಬೇಕು. ಶ್ರೀ. ಹೆಗ್ಡೆ ಅವರು ವಿಷ್ಣುವಿನ ಮೇಲೆ ದಶಾಪರಾಧಗಳ ಬಲವಾದ 'ಚಾರ್ಜ್‌ಶೀಟ್' ತಯಾರಿಸಿದುದೊಂದೇ ಯಲ್ಲ, ಕನ್ನಡದಲ್ಲಿ ಹೊಸಬಗೆಯ ವಿಡಂಬನ ಸಾಹಿತ್ಯ ಬೀಜವನ್ನು ಬಿತ್ತಿದ್ದಾರೆಂದರೆ ತಪ್ಪಾಗದು. ಹೊತ್ತುಗೆಯಿದು ಕಿರಿಯರೂ ವಾಚಕರ, ಮುಖ್ಯತ ಸಾಂಪ್ರದಾಯವಾದಿಗಳ, ಬುದ್ಧಿಶಕ್ತಿಗೆ ಚುರುಕಾದ ಕೆಲಸವನ್ನು ಕೊಡುವಂತಹುದಾಗಿದೆ. ಅಲ್ಲದೆ ಲೇಖಕರು ಎಲ್ಲ ಧರ್ಮಗಳ, ಎಲ್ಲ ಹೆಸರಿನ ದೇವರು ಒಂದೇ-'ಪ್ರಕೃತಿ ಶಕ್ತಿ' ಎಂಬುವನ್ನು ಇಲ್ಲಿ ಪರೋಕ್ಷವಾಗಿ ಪ್ರತಿಪಾದಿಸಿದ್ದಾರೆ. ಎಲ್ಲರೂ ಅವಶ್ಯವಾಗಿ ಓದಲೇಬೇಕಾದ ಸ್ವಾರಸ್ಯಮಯ ಪುಸ್ತಕ.

ಕೆ ವಿ ಎಸ್.

ಮಂಗಳೂರು

ಜಿಲ್ಲೆಯ ಹೋಟೇಲು ಮಾಲಿಕರು-- ಕಾಳು ಬೇಳೆ ಇತ್ಯಾದಿ ಆಹಾರಧಾನ್ಯಗಳನ್ನು ಒಂದು ತಿಂಗಳಿಗೆ ಬೇಕಾಗುವುದಷ್ಟನ್ನು ಮಾತ್ರ ಸಂಗ್ರಹಿಸಿಟ್ಟುಕೊಳ್ಳಬೇಕು-ಎಂದು ಜಿಲ್ಲಾ ಕಲೆಕ್ಟರ್ ತಿಳಿಸಿದ್ದಾರೆ.

ಎಸ್. ಆರ್. ಎಸ್. ಹೋಮಿನಲ್ಲಿ--ಶ್ರೀಯುತರಾದ ಬಿ. ಎಲ್. ಎಸ್. ರೈ, ಸಬೋರ್ಡಿನೇಟ್ ಜಡ್ಜ್, ರಾಮನಾಥ್, ಡಾಕ್ಟರ್ ಕೆ. ಮಂಜುನಾಥ ರೈ, ಡಾಕ್ಟರ್ ಎಸ್. ಟಿ. ಕಂಬಳ, ಪಿ. ಎಸ್. ತಿಮ್ಮಪ್ಪ ಸೆಟ್ಟಿ, ಡಾಕ್ಟರ್ ವೇಣು ಗೋಪಾಲಸೆಟ್ಟಿ, ಕೆಪ್ಟನ್ ಅನಂತ ರಾಮಸೆಟ್ಟಿಯವರನ್ನು ಗೌರವಿಸುವ ಮತ್ತು ವರ್ಷದ ನೂತನ ವಧೂವರರಿಗೆ ಶುಭಕೋರುವ ಸಭೆಯೊಂದು ಕಳೆದ ತಾ. 25 ರಲ್ಲಿ ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಜರಗಿತು. ಶ್ರೀಯುತರಾದ ಕೆ. ರಂಗಪ್ಪಸೆಟ್ಟಿ ಎಡ್ವೊಕೇಟ್, ರಂಕರಮಲ್ಲ ಎಡ್ವೊಕೇಟ್, ಪಿ. ರಾಜೀವಸೆಟ್ಟಿ, ಡಾಕ್ಟರ್ ಕೆ. ಜಿ. ಎಸ್. ಭಂಡಾರಿ, ಆನಂದಸೆಟ್ಟಿ, ಇವರ್ಣಾಡಿ, ಎಡ್ವೋಕೇಟ್, ರಾವ್‌ಸಾಹೇಬ್ ಪಿ. ಆರ್. ಆರ್. ಪೂಂಜ ಮೊದಲಾದವರು. ಸನ್ಮಾನ್ಯ ಅತಿಥಿಗಳ ಗುಣಗಾನಮಾಡಿ ಸರ್ವತೋಮುಖ ಶ್ರೇಯಸ್ಸನ್ನು ಕೋರಿ ಮಾತನಾಡಿದರು. ಡಾ. ಕೆ. ಎಸ್. ರೈ. ಮತ್ತು ಡಾ. ಎಸ್ ಟಿ ಕಂಬಳಿಯವರ, ತಮ್ಮನ್ನಿ[illegible] ಸನ್ಮಾನಿಸಿದುದಕ್ಕಾಗಿ ಹಳೆ ವಿದ್ಯಾರ್ಥಿ ಸಂಘಕ್ಕೆ ಆಭಾರ ಮನ್ನಿಸಿ ವಿದ್ಯಾರ್ಥಿನಿ ಭವನದ ಬಗ್ಗೆ ಸಮಾಜದವರು ಉದಾರ ಮನಸ್ಸಿನಿಂದ ಧನಸಹಾಯ ನೀಡಬೇಕಾಗಿ ವಿನಂತಿಸಿ ಸಂಘದ ಶ್ರೇಯೋಭಿವೃದ್ಧಿಗೆ ಹಲವಾರು ಸೂಚನೆಗಳನ್ನಿತ್ತರು.

ನಿಧನ-ನಂಜನಗೂಡು ಸಬ್ [illegible] ರಾಜಾ ವಿಸ್ತ್ರಿಯಲ್ ಕಾರ್ ಸ್ಟ್ರೀಟ್, ಮಂಗಳೂರು ಇವರ ಮೆನೇಜರ್ ಕೊಲ್ಯ ಸುಬ್ರಾಯರ ಮಗ ಕೇಶವ ದೇವರಾಯರು ಕೆಲವು ಸಮಯದಿಂದ ಕಠಿಣ ಕಾಯಿಲೆಯಲ್ಲಿದ್ದು ತನ್ನ ಸ್ವಂತ ಮನೆಗೆ ಹೋಗಿದ್ದವರು ಇದೇ ತಾ ೧ರಲ್ಲಿ ದೈವಾಧೀನರಾದರೆಂಬುದು ವಿಷಾದಕರವಿದೆ.

ಬಾರಕೂರು- ಇಲ್ಲಿಯ ವಿದ್ಯಾಭಿವರ್ಧನಿ ಸಂಘದವತಿಯಿಂದ ಸ್ಥಾಪಿಲ್ಪಟ್ಟ ಪ್ರಾಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. ೬ರಲ್ಲಿ ಶ್ರೀ. ಕೆ. ಸಂಜೀವ ಭಟ್, ಡಿಪ್ಯುಟಿ ಇನ್ಸ್ಪೆಕ್ಟರ್ ಇವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು. ಸಂಘದ ಅಧ್ಯಕ್ಷರಾದ ಭಂಡಾರಕೇರಿಮಠದ ಶ್ರೀ. ವಿದ್ಯಾಮಾನ್ಯ ತೀರ್ಥ ಸ್ವಾಮಿಗಳವರ ಆಶೀರ್ವಚನಗಳು ಸಂದೇಶಗಳು, ವರದಿವಾಚನ, ಸಭಿಕರ ಭಾಷಣ, ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ.
(ರಿಜಿಸ್ಟರ್ಡ್) ಶಿರ್ವ.

NOTICE

ಈ ಮೂಲಕ, ಮೇಲಿನ ಸಂಘದ ಎಲ್ಲಾ ಮೆಂಬರರಿಗೆ ತಿಳಿಯಪಡಿಸುವದೇನೆಂದರೆ ಈ ಸಂಘದ ಎರಡನೇ ಮಹಾ ಸಭೆಯು ತಾ. 30-6-46ನೇ ಆದಿತ್ಯವಾರ ಸಾಯಂಕಾಲ ಗಂಟೆ ೩ಕ್ಕೆ ಸಂಘದ ಆಫೀಸಿನಲ್ಲಿ ಜರಗಲಿರುವುದರಿಂದ, ಎಲ್ಲರೂ ತಪ್ಪದೆ ಬರಬೇಕಾಗಿ ವಿನಂತಿ

N. S. Kuthiar,
Hon. Secretary.
Office of the Sangha, Shirva, S. K.
10—6—1946

ನೋಟೀಸು

ಮೂಲ್ಕಿ ಆಸ್ಪತ್ರೆ ಬಡ ಫಂಡಿನ ಜನರಲ್ ಬೋಡಿ ಮೀಟಿಂಗು ಇದೆ ಬರುವ ಜುಲೈ ತಾ ೬ನೇ ಶನಿವಾರ ಸಾಯಂಕಾಲ ಘಂಟೆ 4 ಕ್ಕೆ 'ಮೂಲ್ಕಿ ಕೋಪರೇಟಿವ್ ಸ್ಟೋರ್ಸ್ಸು ಲಿಮಿಟೆಡ್" ಇವರ ಕಟ್ಟಡದ ಮಾಳಿಗೆಯಲ್ಲಿ ಜರಗುವುದು. ಮೆಂಬರರೆಲ್ಲರೂ ಬರುವಂತೆ ವಿನಂತಿಯಿದೆ.

ಎಸ್. ಆರ್. ಪೂಂಜ
ಸೆಕ್ರೆಟರಿ.
Hospital Poor Fund Moolky.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರವೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ [illegible] ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ತಲೆನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ್ 1ರ 10-0-0, ½ ರಾತ್ತಲ್ 5-4-0, ¼ ರಾತ್ತಲ್ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಡ್ಯಾರಿ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ದವಾಖಾನೆ ಬಹುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು: ಫೂಪ್ಯುಲರ್ ಸ್ಟೋರ್ಸ್, ಕೆಮಿಸ್ಟ್, 183. ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಚಂದಾದಾರರಿಗೆ ಸೂಚನೆ

ಚಂದಾದಾರರು ತಮ್ಮ ವಿಳಾಸಗಳಲ್ಲಿ ಬದಲಾವಣೆ ಮಾಡಲು ಪತ್ರವ್ಯವಹಾರ ಮಾಡುವಾಗ ಸಂಪೂರ್ಣ ವಿಳಾಸ ಹಾಗೂ ಚಂದಾ ನಂಬ್ರವನ್ನು ಕೊಡದೆ ಪತ್ರದಲ್ಲಿ ಏರೇ ಚಿಕ್ಕ ವಸ್ತುವನ್ನು ಹಾಕುತ್ತಿರುವುದು ನಮ್ಮ ಅನುಭವಕ್ಕೆ ಬಂದಿರುತ್ತದೆ ಅಂತಹ ಪತ್ರವ್ಯವಹಾರಗಳಿಂದ ತಕ್ಕ ನಿಗಾ ತೆಗೆದುಕೊಳ್ಳಲು ಏನೂ ಪ್ರಯೋಜನವಾಗಲಾರದು. ಸಂಪೂರ್ಣ ವಿಳಾಸ ಮತ್ತು ಚಂದಾ ನಂಬ್ರವನ್ನು ಸ್ಪಷ್ಟ ಬರೆಯಬೇಕಾಗಿ ಸೂಚನೆ.

—ಮೆನೇಜರ್.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತ, ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮೋಟಾರ್ ಬಸ್ಸುಗಳನ್ನು ಸರಕಾರವೇ ನಡೆಸಬೇಕು!

ಮ॥ ಇಮಾಂ ಸಾಹೇಬರ ವರದಿ.

ಹೈದರಾಬಾದ್ ಸಂಸ್ಥಾನದ ಮಾದರಿ.

ರೈಲುಗಳಂತೆ ಮೋಟಾರ್ ಬಸ್ಸುಗಳನ್ನು ಸರಕಾರದವರೇ ನಡೆಸತೊಡಗಿದರೆ ಜನರಿಗೆ ಅನುಕೂಲವೋ ಅನಾನುಕೂಲವೋ ಎಂಬ ವಿಚಾರದಲ್ಲಿ ಇನ್ನೂ ಭಿನ್ನಾಭಿಪ್ರಾಯವಿರಬಹುದು. ಆದರೆ ಮೋಟಾರು ಬಸ್ಸುಗಳ ಈಗಿನ ಅವ್ಯವಸ್ಥೆ ತಪ್ಪಿ ಬಸ್ಸುಗಳ ಪ್ರವಾಸ ನೆಟ್ಟಗೆ ಸುಖಕರವಾಗಬೇಕಾದರೆ ಸರಕಾರದವರಿಗೆ ಹಾಕಬೇಕೆಂಬ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯವಿರಲಾರದು. ಈ ಬಗ್ಗೆ ಅಂದರೆ ಮೈಸೂರು ಸರಕಾರದವರು ಸಂಸ್ಥಾನದ ಬಸ್ಸುಗಳ ಏರ್ಪಾಡನ್ನು ಪ್ರವರ್ತಿಸಬೇಕಾಗಿ ಮಿ॥ ಇಮಾಂ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನಿಯಮಿಸಿದ್ದರು. ಹೈದರಾಬಾದ ಸಂಸ್ಥಾನದಲ್ಲಿ ಬಸ್ಸುಗಳ ವ್ಯವಸ್ಥೆ ಹೇಗಿದೆ ಎಂಬುದನ್ನು ತಿಳಿದುಕೊಂಡು ಬರಲು ಮಿ॥ ಇಮಾಂ ಸಾಹೇಬರನ್ನು ಹೈದರಾಬಾದ್ ಸಂಸ್ಥಾನಕ್ಕೆ ಕಳಿಸಿದ್ದರು. ಅವರ ವರದಿ ಈಗ ಪ್ರಕಟವಾಗಿದು ಅದರ ಮುಖ್ಯಾಂಶಗಳು ಕೆಳಗೆ ಕಂಡಂತಿವೆ.

ಹೈದರಾಬಾದ್ ಯೋಜನೆ

೧೯೩೨ರಿಂದ ಹೈದರಾಬಾದ್ ಸಂಸ್ಥಾನದಲ್ಲಿಯ ಎಲ್ಲಾ ಬಸ್ಸುಗಳನ್ನು ಸರಕಾರದವರೇ ನಡೆಸುತ್ತಿದ್ದಾರೆ. ಆದರೆ ಪ್ರಯಾಣಿಕರು ಹೇಳುವ ಬಸ್ಸುಗಳನ್ನು ಮಾತ್ರ ಅವರು ನಡೆಸುತ್ತಿದ್ದಾರೆ. ಸಾಕಷ್ಟು ಅನುಭವ ದೊರೆತ ಮೇಲೆ ಅವನ್ನೂ ಸರಕಾರದವರೇ ನಡೆಸಬೇಕೆಂದಿದ್ದಾರೆ. ೧೯೩೨ರ ವರೆಗೆ ಬಸ್ಸುಗಳನ್ನು ಖಾಸಗಿ ಜನರು ನಡೆಸುತ್ತಿದ್ದರು. ಅವರು ತಮ್ಮ ತಮ್ಮಲ್ಲಿ ಮತ್ತು ರೈಲ್ವೆಗಳೊಡನೆ ಸ್ಪರ್ಧೆ ನಡೆಸುತ್ತಿದ್ದರು. ಇದರಿಂದ ರೈಲ್ವೆ ಉತ್ಪತ್ತಿ ಕಡಿಮೆಯಾಯಿತು. ಕೊನೆಗೆ ರೈಲ್ವೇ ಕಂಪನಿಯವರು ಹಲಕೆಲವು ರಸ್ತೆಗಳನ್ನು ಗಳ ನಡುವೆ ತಮ್ಮ ಬಸ್ಸುಗಳನ್ನು ಓಡಾಡಿಸ ಲಾರಂಭಿಸಿದರು. ರೈಲ್ವೆ ಕಂಪನಿಯ ಬಸ್ಸುಗಳು ಖಾಸಗಿ ಜನರ ಬಸ್ಸುಗಳಿಗಿಂತ ಹೆಚ್ಚು ಸುಖಕರವಾಗಿದ್ದುದರಿಂದ ಜನರು ಸಹ ರೈಲ್ವೇ ಕಂಪನಿಯ ಬಸ್ಸುಗಳಲ್ಲಿಯೇ ಹೋಗುತ್ತಿದ್ದರೆಂದೂ ತಿಳಿಯಬಂದಿದೆ. ಕೊನೆಗೆ ಈ ಯೋಜನೆ ಎಲ್ಲಾ ಕಡೆಗೂ ಹಬ್ಬಿತು. ಸದ್ಯಕ್ಕೆ ಸಂಸ್ಥಾನದಲ್ಲಿರುವ ಎಲ್ಲಾ ಬಸ್ಸುಗಳೂ ಸರಕಾರದವು. ಖಾಸಗಿ ಬಸ್ ಮಾಲೀಕರಿಗೆ ಯಾವ ಪರವಾನೆ ಕೊಡಲಾಗಿಲ್ಲ. ಈ ಬಸ್ಸುಗಳ ವ್ಯವಸ್ಥೆಗಾಗಿ ಸರಕಾರದವರು ಒಂದು ಪ್ರತ್ಯೇಕ ಖಾತೆಯನ್ನೇ ಏರ್ಪಡಿಸಿದ್ದಾರೆ. ಈ ಖಾತೆಯು ಆದಾಯದಲ್ಲಿ ಸುಮಾರು ... ಬಸ್ಸುಗಳು ಓಡಾಡುತ್ತಿವೆ.

ಎರಡು ಮುಖ್ಯ ಸಂಗತಿಗಳು

ಹೈದರಾಬಾದ್ ಯೋಜನೆಯಲ್ಲಿ ಎರಡು ಮುಖ್ಯ ಸಂಗತಿಗಳು ಕಂಡು ಬರುತ್ತವೆ. ಮೊದಲನೆಯದೆಂದರೆ ಎಲ್ಲಾ ಬಸ್ಸುಗಳೂ ಒಂದೇ ಆಕಾರ ಮತ್ತು ರಚನೆಯುಳ್ಳವೆ. ಮತ್ತು ಅವೆಲ್ಲ ಡಿಸೆಲ್ ಆಯಿಲ್‌ನಿಂದಲೇ ನಡೆಯುತ್ತವೆ. ಎರಡನೆಯದೆಂದರೆ ಈ ಬಸ್ಸುಗಳ ಬಿಡಿಭಾಗ ಎಂದು ಸೆಂಟ್ರಲ್ ವರ್ಕ್‌ಶಾಪ್ ಎಂಬ ಒಂದು ದೊಡ್ಡ ಯಾಂತ್ರಿಕ ಕಾರ್ಖಾನೆ ... ಬಸ್ಸು ಕಟ್ಟುವ ಕೆಲಸದಲ್ಲಿಯೇ ಅದನ್ನು ದಿನೇ ದಿನೇ ಮಾಡಲಾಗುವದು. ಇದರಿಂದ ಪ್ರತಿಯೊಂದು ಬಸ್ಸು ಸ್ವಲ್ಪವೂ ತೊಂದರೆ ಕೊಡದಂತೆ ಓಡಾಡುತ್ತವೆ. ಒಂದು ವೇಳೆ ಯಾವುದಾದರೊಂದು ಬಸ್ಸು ಕೆಟ್ಟರೆ ತಕ್ಷಣ ಬೇರೊಂದು ಬಸ್ಸು ಸಿದ್ಧವಾಗಿರುತದೆ. ಒಟ್ಟಿನಲ್ಲಿ ಯಾವ ದಾರಿಗೆ ಹೋಗಬೇಕಾದರೂ ಸರಕಾರದ ಬಸ್ಸಿನ ಪ್ರಯಾಣವೇ ಸುಖಕರವೆಂದು ಭಾವನೆ ಯಾಗುತ್ತದೆ. ಇಡೀ ಸಂಸ್ಥಾನವನ್ನು ಹಲವಾರು ಜಿಲ್ಲೆಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಡಿಪೋ ಇದೆ. ಆ ಡಿಪೋಗಳಿಂದಲೇ ಬಸ್ಸುಗಳು ಓಡಾಡುತ್ತವೆ. ಡಿಪೋದಲ್ಲಿ ಎಲ್ಲಾ ಸಾಮಾನುಗಳೂ ಇವೆ. ಮೈಸೂರಿನಲ್ಲಿಯೂ ಇದೇ ರೀತಿ ಇರಬೇಕು.

ಆದರೆ ಒಂದು ಯೋಜನೆಯನ್ನು ಮೈಸೂರು ಸಂಸ್ಥಾನದಲ್ಲಿಯೂ ಜಾರಿಗೆ ತರಬೇಕೆಂದು ಮಿ॥ ಇಮಾಂ ಸಾಹೇಬರು ಅಭಿಪ್ರಾಯ ಪಡುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಸದ್ಯಕ್ಕೆ ಮೂರು ಬಗೆಯ ರಸ್ತೆಗಳಿವೆ. ಅವು ಯಾವುವೆಂದರೆ ೧) ರೈಲ್ವೆ ಮಾರ್ಗಗಳ ಪಕ್ಕದಲ್ಲಿರುವವು. ೨) ಫೀಡರ್ ಸರ್ವೀಸ್ ರಸ್ತೆಗಳು ಮತ್ತು ೩) ಬೇರೆ ರಸ್ತೆಗಳು. ಮೊದಲನೆ ವರ್ಗದ ರಸ್ತೆಗಳಿಂದ ರೈಲ್ವೇ ಆದಾಯದ ಮೇಲೆ ಪರಿಣಾಮವಾಗುತ್ತದೆ. ಈಗ ಸಂಸ್ಥಾನದಲ್ಲಿರುವ ಎಲ್ಲಾ ಬಸ್ಸುಗಳನ್ನು ಖಾಸಗಿ ಜನರೇ ನಡೆಸುತ್ತಾರೆ. ಉದಾಹರಣೆಗೆ ಹರಿಹರದಿಂದ ಬೆಂಗಳೂರಿನ ವರೆಗೂ ಅಲ್ಲದೆ ಮೈಸೂರಿಗೂ ರೈಲ್ವೇ ಮಾರ್ಗವಿದೆ. ಈ ಮಾರ್ಗದ ಪಕ್ಕದಲ್ಲೇ ಬಸ್ ರಸ್ತೆ ಇದೆ. ರೈಲ್ವೇ ದರಕ್ಕಿಂತ ಕಡಿಮೆ ದರದಲ್ಲಿ ಈ ಬಸ್ಸುಗಳು ಓಡಾಡುವುದು. ಆದ್ದರಿಂದ ಮೈಸೂರು ಸರಕಾರದವರು ಮೊದಲು ಸಂಸ್ಥಾನದಲ್ಲಿಯ ರಸ್ತೆಗಳನ್ನೆಲ್ಲಾ ಪರಿಶೀಲಿಸಿ ಅವನ್ನು ಮಾರ್ಗಗಳನ್ನಾಗಿ ವಿಂಗಡಿಸಿ ಅವುಗಳಲ್ಲಿ ಬಸ್ಸು ನಡೆಸುವ ಅಧಿಕಾರವನ್ನು ತಾವೇ ಇಟ್ಟುಕೊಳ್ಳಬೇಕು. ಅವಶ್ಯವೆನಿಸಿದರೆ ಕೆಲವು ಫೀಡರ್ ರಸ್ತೆಗಳಲ್ಲಿ ಮಾತ್ರ ಖಾಸಗಿ ಜನರು ಬಸ್ಸುಗಳನ್ನು ನಡೆಸುವದಕ್ಕೆ ಅಪ್ಪಣೆ ಕೊಡಬೇಕು. ಆ ಮೇಲೆ ಬಸ್ಸುಗಳನ್ನು ಸಂಸ್ಥಾನವೇ ನಡೆಸುವದಕ್ಕಾಗಿ ಒಂದು ಕೇಂದ್ರ ಸಂಸ್ಥೆಯನ್ನೇರ್ಪಡಿಸಬೇಕು.

ಇಂದಿನ ಸ್ಥಿತಿಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಖಾತೆಯೊಂದನ್ನು ಏರ್ಪಡಿಸುವದಕ್ಕೆ ಬಹಳ ಖರ್ಚು ತಗಲಬಹುದು. ಆದರೆ ಅದಕ್ಕೆ ಈಗ ಸರಿಯಾದ ಸಮಯ ಬಂದಿದೆ. ಈಗಿರುವ ಬಸ್ಸುಗಳನ್ನೆಲ್ಲಾ ಸರಕಾರದವರೇ ತೆಗೆದುಕೊಳ್ಳಬೇಕು. ಪ್ರಾರಂಭದಲ್ಲಿ ಸುಮಾರು ೧೦೦ ಬಸ್ಸುಗಳನ್ನಿಟ್ಟುಕೊಂಡು ಈ ಯೋಜನೆಯನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಸರಕಾರದವರು ಮೊದಲು ೫೦ ಲಕ್ಷ ಬಂಡವಾಳ ವೆಚ್ಚ ಮಾಡಬೇಕಾಗುತ್ತದೆ.

ಬಸ್ಸುಗಳನ್ನು ಸ್ವತಃ ಸರಕಾರದವರು ನಡೆಸುವದು ಒಳ್ಳೆಯದೋ ಅಥವ ಬ್ರಿಟಿಷ್ ಇಂಡಿಯಾದಲ್ಲಿ ಮಾಡುವಂತೆ ಜಾಯಿಂಟ್ ಸ್ಟಾಕ್ ಕಂಪನಿಗಳನ್ನೇರ್ಪಡಿಸಬೇಕೋ ಎಂಬ ವಿಚಾರವನ್ನು ಚರ್ಚಿಸುತ್ತಾ ಇಮಾಂ ಸಾಹೇಬರು ಸರಕಾರವೇ ನಡೆಯಿಸುವದು ಉತ್ತಮವೆಂದಿದ್ದಾರೆ. ಜಾಯಿಂಟ್ ಸ್ಟಾಕ್ ಕಂಪನಿ ಮಾಡಿದರೆ ಈಗಿನ ಬಸ್ ಮಾಲೀಕರೂ ಅದರಲ್ಲಿ ಸೇರಿಕೊಳ್ಳಬಹುದು. ಆದರೆ ಖಾಸಗಿ ಕಂಪನಿಯವರಿಂದ ರೈಲಿನೊಡನೆ ಸ್ಪರ್ಧೆ ನಡೆಸುವದು ನಿಲ್ಲುತ್ತದೆಯೋ? ಅದಕ್ಕೆ ಒಂದು ಖಾಸಗಿ ಜನರ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಸರಕಾರವು ಒಂದು ಪಾಲು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕಿಂತ ಸರಕಾರದವರೇ ನಡೆಸುವದೇ ಉತ್ತಮವೆಂದು ಅವರು ಅಂದಿದ್ದಾರೆ.

ಸಂಜಯ

ದಕ್ಷಿಣ ಕನ್ನಡ.

ಮೂಲ್ಕಿ—ಸ್ಥಳೀಕ ಯೂನಿಯನ್ ಕ್ಲಬ್ಬಿನ ವರ್ಷ ವರ್ಧಂತಿ ಉತ್ಸವವೂ, ದಿವಂಗತ ಡಾಕ್ಟರ್ ಬೋಳ ಶ್ಯಾಮರಾಯರ ಜನ್ಮ ದಿನಾಚರಣೆಯೂ ತಾ. 16 6-46ನೇ ರವಿವಾರ ಸಾಯಂಕಾಲ ಗಂಟೆ 5ಕ್ಕೆ ಕ್ಲಬ್ಬಿನ ಸಭಾ ಮಂದಿರದಲ್ಲಿ ಡಾಕ್ಟರ್ ಯು. ಪಿ. ಮಲ್ಯ, ಎಮ್. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಜರಗುವುದು.

ಪಂಜ—ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ತಾ 4 6-1946ರಲ್ಲು ಪುತ್ತೂರು ತಾಲೂಕಿನ ಶಾಲೆಗಳ ಸೀನಿಯರ್ ಡಿ. ಇನ್ಸ್‌ಪೆಕ್ಟರ್ ಶ್ರೀ ಪ್ಪ. ಗೋಪಾಲ ಬಿ.ಎ.,ಎಲ್.ಟಿ. ಇವರ ಸಭಾಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಚಟುವಟಿಕೆಗಳಲ್ಲಿ ಹಳೇ ವಿದ್ಯಾರ್ಥಿಗಳೂ ಅನೇಕರೂ ಭಾಗ ವಹಿಸಿದ್ದರು. ಸಕಲ ಕಾರ್ಯಕ್ರಮಗಳೂ ಕಿಕ್ಕಿರಿದು ಬಂದ ಪ್ರೇಕ್ಷಕರನ್ನು ತುಂಬಾ ಸಂತೋಷಪಡಿಸಿ, ಸಮಾರಂಭವು ಯಶಸ್ವೀ ರೀತಿಯಲ್ಲಿ ಕೊನೆಗೊಂಡಿತು.

ಪೆರ್ಡೂರು—ಶ್ರೀ ಅನಂತಪದ್ಮನಾಭ ದೇವಸ್ಥಾನ ಪ್ರಾಥಮಿಕ ಶಾಲಾ ಮಕ್ಕಳ ಹೆತ್ತವರ ಕೂಟದ ವಾರ್ಷಿಕಾಧಿವೇಶನವು ತಾ 3 6 1946ರಲ್ಲಿ ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿಜರಗಿತು. ಕಾರ್ಯಕ್ರಮದಂತೆ ಪ್ರಾರ್ಥನಾನಂತರ ಶ್ರೀ ಅನಂತಪದ್ಮನಾಭ ಅಡಿಗಳು ಶಾಲಾ ಸ್ವಸ್ತಿ ವಾಚನ ಮಾಡಿದರು. ಕೊನೆಗೆ ಪಾರಿತೋಷಕ ವಿತರಣ, ಸಭಿಕರ ಭಾಷಣ. ಅಧ್ಯಕ್ಷರ ಭಾಷಣ ಆದ ನಂತರ ಮಕ್ಕಳ ವಿವಿಧ ವಿನೋದಾವಳಿಯೊಂದಿಗೆ ಶಾಲಾ ಬಾಲ ಬಾಲೆಯರು "ಕೃಷ್ಣ ಕುಚೇಲ" ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು.

ಕಡಂದಲೆ ಬೋರ್ಡ್ ಶಾಲಾ ಕಟ್ಟೋಣದ ವಿಸ್ತಾರಣೀ ಸಮಿತಿ

ಮಾನನೀಯರೇ,

ನಮ್ಮ ಸಮಿತಿಯ ಕಡೆಯಿಂದ ಮುಂಬಾಯಿ ಮದ್ರಾಸ್ ಮುಂತಾದ ಕಡೆಯ ಮಹನೀಯರಲ್ಲಿ ಕಟ್ಟೋಣದ ವಿಸ್ತರಣದ ಬಗ್ಗೆ ಧನ ಸಹಾಯವನ್ನು ಕೋರಲು ಪ್ರತಿನಿಧಿಗಳು ತ್ವರೆಯಲ್ಲಿ ಹೊರಡಲಿರುವರು.

ವಿದ್ಯಾಭಿಮಾನಿಗಳಾದ ತಾವೆಲ್ಲರೂ ಧನ ಸಹಾಯವನ್ನಿತ್ತು, ಪ್ರೋತ್ಸಾಹಿಸಿ, ಪುಣ್ಯ ಸಂಪಾದಿಸಿಕೊಳ್ಳಬೇಕಾಗಿ ಕೋರುತ್ತೇವೆ.

ಪಟೇಲ್ ಕಡಂದಲೆ ಗುತ್ತು
ದೇಜು ಶೆಟ್ಟಿ,
ಕಮಿಟಿ ಪ್ರಸಿಡೆಂಟ್,

ಕಡಂದಲೆ, ತಾ. 10 6 1946.

ಮೂಲ್ಕಿ ಬಿಲ್ಲವ ಸೇವಾ ಸಂಘ—ಹೈಸ್ಕೂಲುಗಳ IV, V, VI, ಫೋರ್ಮು ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಿಲ್ಲವ ಜಾತಿಯ ಯೋಗ್ಯತೆಯುಳ್ಳ ಬಡವಿದ್ಯಾರ್ಥಿಗಳು ಆಯಾ ಶಾಲಾ ಮುಖ್ಯೋಪಾಧ್ಯಾಯರ ಮತ್ತು ಸಂಘದ ಸದಸ್ಯರಲ್ಲೊಬ್ಬರ ಯಾ ಊರ ಸ್ವಜಾತಿ ಪ್ರಮುಖರಲ್ಲೊಬ್ಬರ, ಶಿಫಾರಸಿನೊಂದಿಗೆ ಇದೇ ಜೂನು ಅಂತ್ಯದೊಳಗೆ ಸಂಘಕ್ಕೆ ಅರ್ಜಿಯನ್ನು ಹಾಕಿದರೆ ಯೋಗ್ಯತೆ ಪರಿಶೀಲಿಸಿ ವಿಧ್ಯಾರ್ಥಿವೇತನ ಕೊಡಲಾಗುವುದು.

ಕೊಲೆಕಾಡಿ—ವಿದ್ಯಾ ಪ್ರಚಾರಿಣೀ ಹಾಯರ್ ಎಲಿಮೆಂಟರೀ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ದಿನಾಚರಣೆಯು ತಾ. 5. 6 46ರಲ್ಲು ಶ್ರೀಮಾನ್ V. ಗೋಕುಲದಾಸ್ ಕಾಮತ್ B.A. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು, ಸದ್ರಿ ಶಾಲಾ ಹಳೆ ವಿದ್ಯಾರ್ಥಿಗಳಿಂದ 'ಸಂಶಯದ ಭೂತ' ಎಂಬ ತುಳು ನಾಟಕ ಮತ್ತು ಮಂಗಳೂರು ಕೆನರಾ ಹೈಸ್ಕೂಲಿನ ಉಪಾಧ್ಯಾಯರಾದ ಹಾಸ್ಯ ಪಟು ಶ್ರೀಮಾನ್ ಕೆ. ನಾರಾಯಣರವರಿಂದ ವಿವಿಧ ಹಾಸ್ಯ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟು, ಸಂಘದ ಕಾರ್ಯದರ್ಶಿಯಾದ ಶ್ರೀ. T. ಬಾಲಕೃಷ್ಣ ಶೆಟ್ಟಿ ಧನ್ಯವಾದ ಅರ್ಪಣದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಮೊಗವೀರ ವಿದ್ಯಾರ್ಥಿಗಳ ಅವಗಾಹನೆ ಬಗ್ಗೆ ಮುಂಬಯಿ, ಮೊಗವೀರ ವ್ಯವಸ್ಥಾಪಕ ಮಂಡಳಿ

ವಿದ್ಯಾರ್ಥಿವೇತನಕ್ಕೆ ಅರ್ಜಿ—ಮಂಡಳಿಯಿಂದ ವಿದ್ಯಾರ್ಥಿವೇತನ ಪಡೆಯಲಪೇಕ್ಷಿಸುವವರು ತಮ್ಮ ಅರ್ಜಿ ಪತ್ರಗಳನ್ನು ಇದೇ ಜೂನ್ ತಿಂಗಳ 25ನೇ ತಾರೀಕಿನ ಒಳಗೆ ಕಾರ್ಯದರ್ಶಿಗಳಿಗೆ ಒದಗಿಸಿ ತಕ್ಕದ್ದು.

ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತು ಪಾಸಾಗಿ ಹೆಚ್ಚಿನ ಮಾರ್ಕನ್ನು ಪಡೆದ ಮೊಗವೀರ ವಿದ್ಯಾರ್ಥಿಗೆ, ಒಂದುವೇಳೆ ವಿದ್ಯಾರ್ಥಿನಿಯರು ಇರದಿದ್ದರೆ ಮೊಗವೀರ ವಿದ್ಯಾರ್ಥಿಗಳಿಗೆ ಎಂದಿನಂತೆ ಈ ವರುಷವೂ ಕೈಮುಚಾಲು ತನ್ನಪ್ಪ ಸಾಲ್ಯಾನರ ಸ್ಮಾರಕ ಚಿನ್ನದ ಪದಕವನ್ನು ಇನಾಮಾಗಿ ಕೊಡಲಾಗುವುದು. ಆದುದರಿಂದ, ಹಿಂದುಸ್ಥಾನದ ಯಾವದೇ ಭಾಗದಲ್ಲಿ ಈ ವರುಷ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಮೊಗವೀರ ವಿದ್ಯಾರ್ಥಿನಿಯರು ಮತ್ತು ವಿದ್ಯಾರ್ಥಿಗಳು ಆಯಾಯ ಶಾಲೆಯ ಮುಖ್ಯೋಪಾಧ್ಯಾಯರ ದಸ್ತಖತಸಹಿತ ಅವರವರ ಮಾರ್ಕಿನ ಪಟ್ಟಿಯನ್ನು ಅವರ ಪೂರ್ಣ ಹೆಸರು, ವಿಳಾಸದೊಂದಿಗೆ ಇದೇ ಜೂನ್ ತಿಂಗಳ ತಾ. 20 ರೊಳಗೆ ಮಂಡಲಿಯ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡುವಂತೆ ಈ ಮೂಲಕ ವಿನಂತಿಸೋಣಾಗಿದೆ.

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

(೩ನೇ ಪುಟದಿಂದ)

....ಆ ವೇಳೆ ದಿನಾಲೂ ಕುಸುಮಳು ಮಂದಿರಕ್ಕೆ ಸನ್ಯಾಸಿಯ ಭೇಟಿಗಾಗಿ ಬರ ತೊಡಗಿದಳು. ಅವನು ಪವಿತ್ರ ಧರ್ಮ ಗ್ರಂಥಗಳನ್ನು ಪಠಿಸುತ್ತಿದ್ದ-ಆಕೆ ತಲ್ಲೀನ ಳಾಗಿ ಅದನ್ನು ಶ್ರವಣ ಮಾಡುತ್ತಿದ್ದಳು. ಬೆಳಗ್ಗೆ ಸ್ನಾನ-ಸಂಧ್ಯೆ--ಪೂಜೆಗಳಾಗುವ ತನಕ ಅವನು ಕುಸುಮಳನ್ನು ಪಾಠ ನಾಡಿಸುತ್ತಿದ್ದ. ಮತ್ತು ಧರ್ಮ ಬೋಧೆ ಹೇಳುತ್ತಿದ್ದ. ಅವಳಿಗೆ ಅದರ ಸಂಪೂರ್ಣ ಅರ್ಥವಾಗುತ್ತಿರಲಿಲ್ಲ. ಅವನಿಗೆ ಬೇಕಾದ ಪತ್ರ-ಪುಷ್ಪ, ಗಂಗಾಜಲವನ್ನು ಆಕೆಯೇ ನಿತ್ಯವೂ ತಂದು ಕೊಡುತ್ತಿದ್ದಳು.

ಚಳಿಗಾಲ ಕಳೆಯುತ್ತ ಬಂದಿತ್ತು. ಶಿಂ ಪಾದ ಗಾಳಿ ಬೀಸಲು ಪ್ರಾರಂಭವಾಯಿ ತು. ಮಧ್ಯೆ ಮಧ್ಯೆ ಬಿಸಿಯಾದ ಗಾಳಿ ಬೀಸಿ ತಂಪಿನ ಶೀತವನ್ನು ಕಡಿಮೆ ಮಾ ಡುತ್ತಿತ್ತು ರಸಿಕ ದಂಪತಿಗಳು ತಮ್ಮ ಚಿಕ್ಕ ದೋಣಿಗಳನ್ನು ಗಂಗೆಯಲ್ಲಿ ತೇಲ ಬಿಟ್ಟು ಸ್ವೈರ ವೃತ್ತಿಯಿಂದ ಅವುಗಳನ್ನು ನಡೆಸುತ್ತ "ಕೃಷ್ಣ...ಕ ನ್ಹಯಾ" ಹಾ ಡುತ್ತ ......ಇದ್ದರು. ಇಂತಹ ದಿವಸಗಳು ......!

ಅವರಿಬ್ಬರು ಒಂದು ರಾತ್ರಿ ಅದೇ ನದೀ ಘಟ್ಟದ ಮೇಲೆ ಒಬ್ಬರನ್ನೊಬ್ಬರು ಸಂಧಿ ಸಿದರು. ಕುಸುಮಳು ಮಾತು ಮೊದಲು ಮಾಡಿದಳು:-"ಸ್ವಾಮಿನ್! ತಾವು ನನಗೆ ಹೇಳಿ ಕಳುಹಿಸಿದಿರಿ!"

"ಹೌದು; ಇತ್ತೀಚೆಗೆ ನೀನು ನನಗೆ ಕಾಣಸಿಕ್ಕುವುದೇ ಇಲ್ಲ. ನಿನಗೆ ದೇವರ ಮೇಲೆ ವಿರಕ್ತಿ ಹುಟ್ಟಿರಬಹುದು?" ಅವನು ಕೇಳಿದ ಆಕೆ ಮೌನ.

"ನಿನಗೆ ಏನಾಯಿತೆಂದು ಹೃದಯ ಬಿ ಚ್ಚಿ ಹೇಳಬಾರದೆ ನನ್ನಲ್ಲಿ?" ಅವನು ತಿರು ಗಿ ಕೇಳಿದ.

ಮುಖವನ್ನು ಹಿಂದೆ ತಿರುಗಿಸಿ ನಿಟ್ಟು ಸಿರನ್ನು ಬಿಡುತ್ತ ಅವಳು ಹೇಳಿದಳು:-- "ಮಹಾ ಸ್ವಾಮಿ, ನಾನು ಪಾಪಿ. ತ ಪ್ಪಿದೆ."

"ನಿನ್ನ ಹೃದಯದಲ್ಲಿ ಅಶಾಂತಿ ನೆಲ ಸಿದೆಯೆಂಬುದನ್ನು ನಾನು ಅರಿತೆ" ಅವನು ಉದ್ಗಾರ ತೆಗೆದ. ಅವಳು ದುಃಖವನ್ನು ತಡೆಯಲಾರದೆ ನದೀ ದಂಡೆಯ ಶಿಲೆಯ ಮೇಲೆ ಕುಳಿತು ಸನ್ಯಾಸಿಯ ಪಾದಗಳ ಮೇಲೆ ಎರಗಿದಳು. ಅವನು ತುಸ ಹಿಂದೆ ಸರಿದು ಹೇಳಿದ:--"ನಿನಗೆ ಏನಾಗುತ್ತಿದೆ? ನಿನ್ನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿಸು. ಅಂದರೆ ನಾನು ನಿನಗೆ ಮಾರ್ಗ ದರ್ಶನ ಮಾಡಿಸಿಯೇನು. ಮತ್ತು ನಿನಗೆ ಶಾಂತತೆ ಲಭಿಸೀತು."

ಅವಳು ಬಿಕ್ಕಿ ಬಿಕ್ಕಿ ಅಳುತ್ತ ಮೆಲ್ಲನೆ ಹೇಳ ತೊಡಗಿದಳು "ತಮಗೆ ಕೇಳಬೇ ಕೆ-ನಿಮ್ಮಲ್ಲಿ ಹೇಳುತ್ತೇನೆ. ತಮಗೆ ಅದು ತಿಳಿದಿರಬಹುದು. ನಾನು....ಒಂದು ವ್ಯಕ್ತಿ ಯನ್ನು ದೇವರೆಂದು ಪೂಜೆ ಮಾಡಿದೆ" ಅವಳು ಮುಂದೆ ಹೇಳಿದಳು, "ಭಕ್ತಿಯಿಂ ದ ನನ್ನ ಹೃದಯ ತುಂಬಿ ಬಂದಿತು ಅವ ರೆ ಒಂದು ರಾತ್ರಿ ನನ್ನ ದೇವರು, ನನ್ನ ಕೈಯನ್ನು ತನ್ನ ಪ್ರೇಮ ಹಸ್ತಗಳಿಂದ ಚುಂಬಿಸುತ್ತ, ನನ್ನಲ್ಲಿ ಮಾತನಾಡುತ್ತ, ವೃಂದಾವನದಲ್ಲಿ ಆಡ್ಡಾಡುತ್ತಿದ್ದಂತೆ ಸ್ವಪ್ನ ದಲ್ಲಿ ಕಂಡೆನು. ಆ ಸ್ವಪ್ನ ಇನ್ನೂ ನನ್ನ ಹೃದಯವನ್ನು ಕೊರೆಯುತ್ತಿದೆ!"

"ನೀನು ಸ್ವಪ್ನದಲ್ಲಿ ಯಾರನ್ನು ಕಂಡೆ ಯೆಂಬುದನ್ನು ನಿಜವಾಗಿ ಹೇಳು".

"ಛೆ! ಅದು ನನ್ನಿಂದ ಆಗದ ವಿಷಯ" ಕೈ ಜೋಡಿಸಿ ಆಕೆ ವಿನಂತಿಸಿಕೊಂಡಳು.

"ನೀನು ಹೇಳಲೇ ಬೇಕು!" ಆ ವಾಕ್ಯ ದಲ್ಲಿ ದೃಢ ನಿರ್ಧಾರ ತುಂಬಿತ್ತು.

"ಹೇಳದೆ ಗತ್ಯಂತರವಿಲ್ಲವೇ?" ಅವಳು ಪುನಃ ಮಾಡಿದಳು.

"ಇಲ್ಲ!" ಅವನು ಹೇಳಿದ.

"ಅವರೆ...ಅವರೆ ನಾನು...ತಮ್ಮನ್ನೇ ಕಂಡೆ ಮಹಾ ಸ್ವಾಮಿ...!" ಅವಳು ಶಿಲಾ ಹಂತದ ಮೇಲೆ ಧೊಪ್ಪನೆ ಬಿದ್ದಳು ಮ ತ್ತು ಅಳ ಹತ್ತಿದಳು

ಆಕೆ ಆವೇಗ ದುಃಖದಲ್ಲಿ ಮುಳುಗಿರು ವಾಗಲೇ ಸನ್ಯಾಸಿ ಹೇಳ ತೊಡಗಿದ:—"ನಾಳೆ ಈ ರಾತ್ರಿ ಈ ಊರನ್ನು ಬಿಟ್ಟು ಹೋಗುವ ನಿಶ್ಚಯ ಮಾಡಿದ್ದೇನೆ-ನಿನ್ನ ಮನಸ್ಸು ಇನ್ನು ಮುಂದೆ ನನ್ನ ಹೋಲಿ ಬೀಳಬಾರದೆಂದು. ನಾನು ಒಬ್ಬ ಸನ್ಯಾಸಿ ಯಿದ್ದೇನೆ. ಇದು ನಿನಗೆ ತಿಳಿದಿರಲಿ, ಇದರ ಲ್ಲಿ ಏನೂ ಗುಟ್ಟಿಲ್ಲ. ನೀನು ನನ್ನನ್ನು ಮರೆ ತು ಬಿಡಬೇಕು!"

"ಅಪ್ಪಣೆ ಮಹಾ ಸ್ವಾಮಿನ್! ಇದು ತಮ್ಮ ಆಜ್ಞೆ!" ಶೂನ್ಯ ದೃಷ್ಟಿಯಿಂದೊಮ್ಮೆ ಕುಸುಮಳು ಸನ್ಯಾಸಿಯನ್ನು ದಿಟ್ಟಿಸಿದಳು.

"ಒಳ್ಳೇದು, ನಾನು ಬರುತ್ತೇನೆ." ಸನ್ಯಾಸಿಯೆಂದ.

ಅವನು ಅದೃಶ್ಯನಾಗುವ ವರೆಗೆ ಕುಸು ಮಳು ಆ ದಿಕ್ಕನ್ನು ನೋಡುತ್ತಾ ಕುಳಿ ತಳು. ಅವನ ಪಾದ ಧೂಳನ್ನು ಹಣೆಗೆ ಆಕೆಯು ಹಚ್ಚಿಕೊಂಡು ಒಂದು ದೀರ್ಘ ಶ್ವಾಸವನ್ನು ಬಿಟ್ಟಳು.

—ಚಂದ್ರನು ಅಸ್ತಮಾನದ. ರಜನಿ ಯು ಘೋರ ಅಂಧಕಾರ ಮಯವಾದಳು. ಪವಿತ್ರ ಗಂಗಾ ನದಿಯ ಜಲರಾಶಿಯಲ್ಲಿ, ನ..ಳ್..ಳ್...ಕೃ...ಷ್...ಷ...ಂ" ಎಂಬ ಶಬ್ದವೊಂದು ಕೇಳಿಸಿತು ನಿಬಿಡ ಅಂಧಕಾರದಲ್ಲಿ ಗಾಳಿಯು ಎಡೆಬಿಡದೆ ಬೀ ಸುತ್ತಿದ್ದಿತು-ಆಕಾಶ ಮಂಡಲದ ವರೆಗೂ ಏರಿ ಹೋಗುವ ಇಚ್ಛೆ ವಾಯು ದೇವನಿಗೆ ಉಂಟಾಗಿರಬಹುದು. ಭಾಗೀರಥಿಯು ಭಾ ನ-ಬಾಯಾಗಿ ಭೋರ್ಗರೆಯುತ್ತ ಸಾಗುತ್ತಿ ದ್ದಳು.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ಮುಚ್ಚಿ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯು ವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವವು; ಹೊಟ್ಟೆ ಹಸ ವಾಗುವದು; ಪಚನಶಕ್ತಿ ಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ೪ ವೇಳೆ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾ ರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಲೇಬಲ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನ ವರು ಶ್ವಾಸಹಾರೀ ಕಂಪೌಂಡ (ಕೆಂಪು ಲೇಬಲ) ತೆಗೆದುಕೊಳ್ಳಬೇಕು

[illegible]

ಪುರೋಹಿತ ಫಾರ್ಮಸಿ, ಕೊಲ್ಹಾಪುರ

[illegible]

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ,

ಮುಂಬಯಿ ೨.

PUROHIT

SHWAS-HARI

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea. Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಅವಲ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಿಂದ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಏಜೆಂಟರು.—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಟಿ. ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ..ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ [illegible] ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಮೆಡಿಕಲ ಸ್ಟೋರ್ಸ್. ಸತ್ಯನ್ನ ವಹಾರ ಮಾಡತಕ್ಕ ಮಾಲಕರ ಬೇಕಾ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya. GADAG.

ಕಾವ್ಯ ಸಾಮ್ರಾಜ್ಯ

(ಕಿರಿಯರ ಪ್ರಪಂಚದವರು ಪ್ರಕ ಟಿಸಿದ ಆಧುನಿಕ ಕವಿತಾ ಸಂಗ್ರಹ)

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ 1946 ಕಾವ್ಯ ಪರೀಕ್ಷೆಗೆ ಮೊದಲ ಪತ್ರಿಕೆಯ ಪುಸ್ತಕವಾಗಿ ಆ ರಿಸಲ್ಪಟ್ಟಿದೆ.

ಬೆಲೆ ರೂ 1—0—0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗಾ ಗಲೀ ಬರೆಯಿರಿ

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟ ವಾಗುತ್ತವೆ

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2 -

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K H. Shetty at the Navayuga Press, Udipi, S. India.

Regd. No. M 3618. **SILVER JUBILEE YEAR** ರಜತೋತ್ಸವದ ವರ್ಷ. **Estd. 1921** ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫ ವಾರ ೪೨] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: **SRI A. B. SHETTY.** *M. L. A.* [Vol. 25 No. 42

ಉಡುಪಿ • **20-6-1946** • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ.

ತಲೆನೋವು, ಶೀತ, ನೆಗಡಿ, ಉಳುಕು ಶರೀರದ ನೋವು, ಹಲ್ಲು ನೋವು, ಗಾಯಗಳು ಬಾವು ಹುಣ್ಣು, ವಿಷಜಂತುಗಳ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ, ಶುಲಭ ಮತ್ತು ಪರಿಣಾಮಕಾರಿ ಔಷಧಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

NAVAYUGA ENTERPRISE LTD.,

UDIPI, S. INDIA

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್.

To

The Shareholders,

It has been resolved that the nominal Share Capital of the Company be increased to Rupees one lakh (Rs. 1,00,000/-) by the issue of 8000 new shares with a nominal value of Rs. 10/- per share and an admission fee of Re. 1/- per share payable on application. The new shares will rank for dividend from the date of allotment. The issue is confined in the first instance to the existing shareholders in the proportion of 4 shares to every one of the share held by them. If acceptance of the offer is not received by the Office of the Company along with the necessary amount on or before 30—6—'46, the same will be considered to have been declined.

The terms of issue and the connected particulars have been posted separately to the shareholders, along with the application form.

Applications for additional shares from the existing shareholders and those for shares from others may be made along with the necessary amount, so as to reach us on or before 30-6-'46, but all such applications will be considered only subject to shares being available and the allotment of such shares shall be at the absolute discretion of the Directors of the Company.

Application forms can be obtained personally at the Company Office or will be sent on application.

The subscription to the shares may be closed at any time earlier than 30-6-'46, as soon as it is estimated that the Capital offered is taken up, except to the shareholders to the extent of the shares they are entitled.

K. H. Shetty, *Mg Director.*

K. J. Ballal, B. A. LL. B *Chairman*

M. S Pejathaya, *Agent Palimar Mutt.*

B. Krishnaya Hegde, *Ex Dt Bd. Member.*

Directors.

ಪಾಲುದಾರರ ಅವಗಾಹನೆಗೆ

ಕಂಪೆನಿಯ ಪಾಲುಭಂಡವಾಳವನ್ನು ಒಂದು ಲಕ್ಷಕ್ಕೇರಿಸುವ ಸಲುವಾಗಿ ಪಾಲು ಒಂದರ ರೂಪಾಯಿ 10/- ಮತ್ತು ಪ್ರವೇಶ ಹಾಸಲು ರೂಪಾಯಿ 1/-ರಂತೆ 8000 ಹೊಸ ಶೇರುಗಳನ್ನು ವಿಕ್ರಯಿಸಬೇಕಾಗಿ ಕಂಪೆನಿಯ ವಿಶಿಷ್ಟ ಮಹಾ ಸಭೆಯಲ್ಲಿ ನಿರ್ಧಾರವಾಗಿದೆ.

ಶೇರುಗಳ ಹಣ ಮತ್ತು ಪ್ರವೇಶ ಹಾಸಲನ್ನು ಅರ್ಜಿಯೊಂದಿಗೇನೇ ಕೊಡಬೇಕಾಗಿದೆ. ಶೇರುಗಳು ಸೆಂಕ್ಷನ್ ಆದ ತಾರೀಕಿನಿಂದ ಶೇರುಗಳ ಹಕ್ಕು ಬಡ್ಡಿ ಯಾನೆ ಡಿವಿಡೆಂಟ್ ದೊರೆಯುವುದು. ಈ ಹೊಸ ಶೇರುಗಳನ್ನು ಕಂಪೆನಿಯ ಚಾಲ್ತಿ ಮೆಂಬರರಿಗೇನೇ ಪ್ರತಿಯೊಂದು ಪಾಲಿಗೆ 4 ಹೊಸ ಪಾಲುಗಳಂತೆ ಪ್ರಥಮತ ಕೊಡಲಾಗುವುದು. ತಾ 30-6-46 ರೊಳಗಾಗಿ ಹೊಸ ಪಾಲುಗಳ ಬಗ್ಗೆ ಅರ್ಜಿಗಳೂ ಅವುಗಳಿಗೆ ಸಂಬಂಧಿಸಿದ ಹಣವೂ ಕಂಪೆನಿ ಆಫೀಸಿಗೆ ತಲ್ಪದಿದ್ದಲ್ಲಿ ಚಾಲ್ತಿ ಮೆಂಬರರಿಗೆ ಹೊಸ ಪಾಲುಗಳ ಅವಶ್ಯಕತೆಯಿಲ್ಲವೆಂದೇ ಪರಿಗಣಿಸಲಾಗುವುದು. ಹೊಸ ಶೇರುಗಳ ಅರ್ಜಿ ಫಾರ್ಮನ್ನೂ ತತ್ಸಂಬಂಧ ಮಾಹಿತಿ ಪಟ್ಟಿಯನ್ನೂ ಈ ಮೊದಲೇ ಎಲ್ಲಾ ಪಾಲುದಾರರಿಗೆ ಕಳುಹಿಸಲಾಗಿಯದೆ.

ಚಾಲ್ತಿ ಮೆಂಬರರಿಂದಲೂ ಇತರರಿಂದಲೂ ಹೊಸ ಶೇರುಗಳ ಬಗೆ ಅರ್ಜಿ ಮತ್ತು ಪಾಲು ಭಂಡವಾಳ ಹಾಗು ಪ್ರವೇಶ ಧನವನ್ನು ತಾ 30-6-46ರ ತನಕ ಈ ಕೆಳಗೆ ಸಹಿ ಮಾಡಿದವರಿಂದ ಸ್ವೀಕರಿಸಲ್ಪಡುವವು. ಆದರೆ ಸಾಕಷ್ಟು ಶೇರುಗಳು ಉಳಿದಿದ್ದರೆ ಅವುಗಳನ್ನು ಯಾರ್ಯಾರಿಗೆ ಎಷ್ಟೆಷ್ಟು ಎಂದು ಸೆಂಕ್ಷನ್ ಮಾಡುವ ಅಧಿಕಾರವು ಕಂಪೆನಿಯ ಡೈರೆಕ್ಟರರಿಗೇನೇ ಇರುವುದು.

ಅರ್ಜಿ ಫಾರ್ಮುಗಳನ್ನು ಕಂಪೆನಿಯ ಆಫೀಸಿನಿಂದ ಸ್ವತಃ ಯಾ ಪತ್ರ ಬರೆದು ಪಡೆಯಬಹುದು.

ಕಂಪೆನಿಯ ಹೊಸ ಶೇರುಗಳ ಬಗ್ಗೆ ಅರ್ಜಿಗಳನ್ನು ತಾ30-6-46ರ ತನಕ ಸ್ವೀಕರಿಸಬಹುದೆಂದಿದ್ದರೂ ಆ ಅವಧಿಯೊಳಗಾಗಿಯೇ ಎಲ್ಲಾ ಪಾಲುಗಳಿಗೂ ಅರ್ಜಿಗಳು ಬಂದಲ್ಲಿ ತದನಂತರ ಬಂದ ಚಾಲ್ತಿ ಮೆಂಬರರಲ್ಲದವರ ಅರ್ಜಿಗಳಿಗೆ ಶೇರು ಕೊಡಲಾಗಲಿಕ್ಕಿಲ್ಲ.

ಕೆ. ಎಚ್. ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್.

ಕೆ. ಜೆ. ಬಲ್ಲಾಳ್, ಚೆಯರ್‌ಮ್ಯಾನ್

ಎಂ. ಎಸ್. ಪೆಜತ್ತಾಯ, ಬಿ. ಕೃಷ್ಣಯ್ಯ ಹೆಗ್ಡೆ, ಡೈರೆಕ್ಟರರು

ತಸ್ಕರಗಾರನೊಬ್ಬನ ಜೀವನ ಚರಿತ್ರೆ

★ ಕೈದಿ ಶುಕ ★

ಲೇಖಕರು:—

ಲೆಫ್ಟಿನೆಂಟ್ ಕರ್ನಲ್ ಎ. ಎಚ್. ಶೇಕ್, ಸಿ. ಐ. ಇ.

ಲೆ. ಕ. ಶೇಕರು ಸಂಯುಕ್ತ ಪ್ರಾಂತ್ಯದ ಜೈಲುಗಳ ನಿವೃತ್ತ ಇನ್ಸ್‌ಪೆಕ್ಟರ್ ಜನರಲ್. ಕ್ರಿಮಿನಲ್ ಮನೋವೃತ್ತಿಯ ಹುಟ್ಟು, ಬೆಳವಣಿಗೆ, ನುತ್ತದು ಅಭೇದ್ಯವಾದಾಗ ಏಳುವ ಸಮಸ್ಯೆ—ಇವನ್ನೆಲ್ಲಾ ಪ್ರತ್ಯಕ್ಷಾನುಭವದಿಂದ 'ಪೆನಾಲ್ ರಿಫೋರ್ಮರ್'ನಲ್ಲಿ ಬರೆದಿದ್ದರು. ಅದರ ಅನುವಾದವಿದು.

ಕೆಲವು ಕೈದಿಗಳ ಜೀವನ ಚರಿತ್ರೆಯನ್ನವಲೋಕಿಸಿದರೆ, ಮರಣದಂಡನೆಯೇ ಬೇಕೆಂಬ ವಾದಕ್ಕೊಂದು ಆಧಾರ ದೊರೆಯುತ್ತದೆ. ಕೈದಿ ಶುಕನ ಚರಿತ್ರೆ ಅಂತಹವುಗಳಲ್ಲೊಂದು.

ಶುಕ ಎಂದರೆ 'ಕ್ರಿಮಿನಲ್' ಪದವು ಅಕ್ಷರಶಃ ಲಗಾವಾಗುವಂತಹ ಮನುಷ್ಯ. ಅವನು ಕಡಿಮೆಯೆಂದರೆ ಮಾನವ ಪ್ರಾಣಗಳ 30 ಕೊಲೆಗಳ ಹೊಣೆಗಾರನಿದ್ದಾನೆ. ಸಂದರ್ಭ ದೊರೆಯುತ್ತಿದ್ದರೆ ಅವನಿನ್ನೆಷ್ಟೋ ಮಂದಿಯನ್ನು ಕೊಲ್ಲುತಿದ್ದ. ಅದಕ್ಕಾಗಿ ಪಶ್ಚಾತ್ತಾಪದ ಅಣುಮಾತ್ರವಾದರೂ ಅವನಲ್ಲಿರಲಿಲ್ಲ; ಈಗಲೂ ಇಲ್ಲ. ಬದಲಿಗೆ ಮಾನವ ಪ್ರಾಣದ ಮೇಲಿನ ಅವನ ಕಠೋರತೆ ಎಷ್ಟು ಬಲವಾಗಿ ಮತ್ತು ಆಳವಾಗಿದೆಯೆಂದರೆ ಪ್ರಾಣಾಪಹಾರದಲ್ಲೇ ಅವ ಮನಶ್ಶಾಂತಿ ಪಡುತಿದ್ದಾನೆ.

ಅವನ ಮಟ್ಟಿಗೆ ಹೆಂಗಸೆಂದರೆ ಲೈಂಗಿಕ ತೃಷೆ ತಣಿಸುವ ಭೋಗವಸ್ತು ಮಾತ್ರ. ಸಂಪಾದಿಸಿಕೊಂಡರಾಯಿತು; ಕಾಮತೃಷೆ ತಣಿಸಿದರಾಯಿತು ಎಂದಿಷ್ಟೇ ಸ್ತ್ರೀಯರ ಕಡೆಗೆ ಅವನ ಮನೋಧರ್ಮ. ಇಷ್ಟಕ್ಕಲ್ಲದೆ ಬೇರಾವುದಕ್ಕೂ ಅವನಿಗವರು ಬೇಕಾಗಿಲ್ಲ. ಜೀವನ ಸಹಭಾಗಿತ್ವವೆಂಬ ಅಭಿಪ್ರಾಯವು ಅವನಲ್ಲಿಲ್ಲವೇ ಇಲ್ಲ

ಇನ್ನು ಹಣದ ಮಟ್ಟಿಗೆ, ಅವನದಕ್ಕೆ ದುಡಿಯಲಾರ. ಅವನು ಅನ್ಯರ ಹಣವನ್ನು ಅವರಿಗೆ ಗೊತ್ತಾಗದಂತೆ-ಅಗತ್ಯ ಬಿದ್ದಾಗ ಅವರಿಗೆ ತಿಳಿಯುವಂತೆಯೇ ಬಲಾತ್ಕಾರದಲ್ಲಿ-ತೆಗೆದುಕೊಂಡು ಬಿಡುತ್ತಾನೆ. ಹೀಗೆ ಹಣ ಸಂಗ್ರಹಿಸುವದು ಸಂಪೂರ್ಣ ನ್ಯಾಯಸಂಪೇ ಅವನ ಭಾವನೆ.

ತನ್ನ ಸಾಧನೆಗಳಿಗಾಗಿ ಅವನಲ್ಲಿ ಹೆಗ್ಗಳಿಕೆಯಿದೆ. ತಾನೊಬ್ಬ 'ಬಹದೂರ'ನೆಂದು -'ಬುದ್ಧಿವಂತ'ನೆಂದು,-ಓರ್ವ 'ನಾಯಕ'ನೆಂದು ಆತ ನೆನಸಿಕೊಂಡಿದ್ದಾನೆ. ತನ್ನ ಧೈರ್ಯ ಮತ್ತು ನಾಯಕತ್ವದ ಬಲದಿಂದಲೇ ತಾನೂ ತನ್ನ ಸಂಗಡಿಗರೂ ಎಷ್ಟೋ ವರುಷ ಎಷ್ಟೆಷ್ಟೋ ಕಳ್ಳತನ, ದರೋಡೆ, ಕೊಲೆಗಳನ್ನು ಮಾಡಿಯೂ ಕಾನೂನಿನ ಹಿಡಿತಕ್ಕೆ ಸಿಕ್ಕಲಿಲ್ಲ, ಎಂದು ಅವನನ್ನುತ್ತಾನೆ.

1933ರಲ್ಲಿ ಅವನಿಗೆ ಶಿಕ್ಷೆಯಾಗಿತ್ತು. ಆಗ ಅವನ ಪ್ರಾಯ 31. ಅವನ ವಿಚಾರಣೆ ಒಂದು ವರುಷ ನಡೆದಿತ್ತು, ಅವನಿಗೆ 87 ವರುಷ ಸಜೆಯೆಂದು ವಿಧಿಸಲ್ಪಟ್ಟಿದೆ. ಈ ಶಿಕ್ಷೆಯನ್ನು ಪೂರ್ತಿ ಅನುಭವಿಸಬೇಕಾದರೆ ಶ.ಕ 118ನೇ ವರುಷ ಪ್ರಾಯವಾಗುವ ವರೆಗೂ ಇರಬೇಕು. ಇದು ಅಗಡ ಮಾತು. ಅವನು 7 ವರುಷ ಬಾಳುತ್ತಾನೆಂದು ಊಹಿಸೋಣ, ಆ 39 ವರುಷಗಳ ಅವನ ಸಾಕೋಣಕ್ಕಾಗಿ ತೆರಿಗೆ ದಾರರ ತಲೆಯ ಮೇಲೆ ರೂ. 3120 ಬೀಳುತ್ತದೆ. ಅವನು ತಪ್ಪಿಸಿಕೊಳ್ಳುವದರಲ್ಲಿ ನಿಪುಣ. ಹಾಗೆ ತಪ್ಪಿಸಿಕೊಂಡನಾದರೆ ಮತ್ತೊಮ್ಮೆ ದಸ್ತಗಿರಿಯಾಗುವ ನೊದಲೇ ಪ್ರಾಣಸೊತ್ತುಗಳಿಗೆ ವಿಪರೀತ ಹಾನಿಮಾಡಬಲ್ಲ. ಆದ್ದರಿಂದ ಅವನ ಮೇಲೆ ಪ್ರತ್ಯೇಕ ಕಾವಲಿಡಬೇಕಾದ್ದರಿಂದ, ಆ ಪ್ರತ್ಯೇಕ ವಾರ್ಡನ 39 ವರುಷದ ಸಂಬಳವಾಗಿ ನಾವು ಬೇರೊಂದು 9360 ರೂಪಾಯಿಗಳನ್ನೂ ಮೇಲಿನ ಮೊತ್ತಕ್ಕೆ ಕೂಡಿಸಿಕೊಳ್ಳಬೇಕು. ಹೀಗಾಗಿ, ಅವನಿಂದಾಗಿ ಈ ಮೊದಲಾಗಿರುವ ಸೊತ್ತು, ಪ್ರಾಣ, ಮತ್ತು ವಿಚಾರಣೆಯ ನಷ್ಟಗಳಲ್ಲದೆ, ಮೇಲಿನ ವೆಚ್ಚ ಜುಮ್ಲಾ ರೂ.12500 ತೆರಿಗೆದಾರನ ತಲೆಯ ಮೇಲೆ ಬೀಳುತ್ತದೆ. ಶುಕನನ್ನು ಉಳಿಸಿಕೊಳ್ಳುವದಕ್ಕಿರುವ ಒಂದೇ ಒಂದು ನ್ಯಾಯಬದ್ಧ ಕಾರಣವೇದರೆ ಆತನು ಮುಂದಕ್ಕಾದರೂ ಸಮಾಜಕ್ಕೊಂದು ಸಾಲವಾಗುವ ಬದಲು ಸೊತ್ತಾಗಬಲ್ಲನೋ ಎಂದು ನೋಡುವದಕ್ಕಾಗಿ. ಆದರೆ ಆತನನ್ನು ಸೊತ್ತಾಗಿ ಮಾರ್ಪಡಿಸುವ ಆಶೆ ಕಾಣುವದಿಲ್ಲ. ಕೆಲಸದಲ್ಲಿ ಅವನ ಅಸಹಕಾರ ಮತ್ತು ಸಮಾಜದ ಮೇಲೆ ಅವನಿಗಿರುವ ಕಠೋರ ಭಾವನೆಯು ಅತ್ಯುಗ್ರವಾದುದು. ತನ್ನ ದುಷ್ಕೃತ್ಯಗಳ ಒಳಭಾಗವನ್ನೊಮ್ಮೆ ನೋಡುವ ದೃಷ್ಟಿಯೇ ಅವನಲ್ಲಿಲ್ಲ; ಅವನಲ್ಲಂತಹ ಒಳನೋಟವನ್ನು ಸೃಷ್ಟಿಸಲು ನಮ್ಮಿಂದಾಗಲೂ ಇಲ್ಲ. ದುಷ್ಕೃತ್ಯಗಳ ಒಳನೋಟವೇ ಬೀಳದಲ್ಲಿ ನಾವು ಚಿಕಿತ್ಸಾತ್ಮಕ ಬುದ್ಧಿ ತಂತ್ರವನ್ನು ಪ್ರಯೋಗಿಸಲಾಗುವದಿಲ್ಲ; ಚಿಕಿತ್ಸಾ ಬುದ್ಧಿ ಪ್ರಯೋಗದ ಕಡೆ ದೋಷ ನಿವಾರಣೆ ಮಾಡಲು ಸಾಧ್ಯವೇ ಎಂಬುದನ್ನು ಹೇಳುವ. ನಮ್ಮ ಕ್ರಿಮಿನಲ್ ಆಡಳಿತೆಯಲ್ಲಿ ಶಾಸ್ತ್ರೀಯ ಯಾಂತ್ರಿಕ ಪ್ರಯೋಗವು ಅತ್ಯವಶ್ಯ ಮತ್ತು ಅತ್ಯವಸರದ್ದೆಂಬ ಭಾವನೆ ಇಂತಹ ಒಂದು ಕೇಸಿನಿಂದ ಬಲವಾಗಿ ಮೂಡುತ್ತದೆ. ಆಧ್ಯಾತ್ಮಿಕಜ್ಞರು, ಮನಶ್ಶಾಸ್ತ್ರಜ್ಞರು, ಮತ್ತು ಸಮಾಜ ಶಾಸ್ತ್ರಜ್ಞರುಳ್ಳ ಒಂದು ಮಂಡಲಿ ರಚನೆಗೊಳ್ಳಬೇಕು. ಅವರು ದುರ್ವರ್ತನೆಗಳ ಡಾಕ್ಟರರು. ಪ್ರತಿಬಂಧ ಅಥವಾ ಸುಧಾರಣೆಯ ಅಭಿಪ್ರಾಯಗಳನ್ನು ಕೊಡಲು ಅವರಿಗೆ ಮಾತ್ರ ಸಾಧ್ಯ. ಅವರಾದರೆ, ಕ್ರಿಮಿನಲ್ ಭಾವದ ಮೂಲಬೇರನ್ನು ಕಂಡುಹಿಡಿದು ತಕ್ಕ ಚಿಕಿತ್ಸೆಯನ್ನು ಸೂಚಿಸಬಲ್ಲರು. ಒಬ್ಬ ಮನುಷ್ಯ ಸುಧಾರಣೆಗೆ ಬರಬಲ್ಲನೋ, ಯಾ, ಅಜೇಯನೋ ಎಂಬುದನ್ನೂ ಅವರು ಮಾತ್ರ ಹೇಳಬಲ್ಲರು.

೦೦ ೦೦ ೦೦

ಸುಕನ ಹೇಳಿಕೆಯಿಂದಲೇ ಆಯ್ದುಕೊಂಡ ಅವನ ಜೀವನ ಚರಿತ್ರೆಯ ಸಾರಾಂಶ ಹೀಗಿದೆ. ಅವನು 1903ರಲ್ಲಿ ಭಾರತೀಯ ಸಂಸ್ಥಾನವೊಂದರಲ್ಲಿ ಜನಿಸಿದ. ಅವನ ತಂದೆಗಿಬ್ಬರು ಪತ್ನಿಯರಿದ್ದರು. ಇವನ ತಾಯಿ ಮೊದಲನೇ ಹೆಂಡತಿ. ಎರಡನೇ ಹೆಂಡತಿಗಿಬ್ಬರು ಮಕ್ಕಳಿದ್ದರು. ಇವರೆಲ್ಲರಿಗೂ ಒಂದೇ ಮನೆಯಲ್ಲಿ ವಾಸ. ಬಾಲ್ಯದಲ್ಲಿ ಶುಕನಿಗೆ ತಂದೆಯೊಡನೆ ವಿಶೇಷ ಸಂಬಂಧವಿರಲಿಲ್ಲ. ಸರಕಾರೀ ಉದ್ಯೋಗದಲ್ಲಿದ್ದ ತಂದೆ ಹೆಚ್ಚಾಗಿ ದೂರದಲ್ಲೇ ಇರುತಿದ್ದ. ತಾಯಿ ಈತನನ್ನು ಪರಬ್ರಹ್ಮ ಮಾಡಿ ಬಿಟ್ಟಿದ್ದಳು. ತನಗೆಂತಹ ತೊಂದರೆಯಾದರೂ ಇವನು ಕೇಳಿದ್ದನ್ನೆಲ್ಲಾ ಕೊಡುತಿದ್ದಳು. ಇವ ಅವಳ ಹತೋಟಿಯಲ್ಲಿರಲಿಲ್ಲ; ತನಗೆ ಮನ ಬಂದಂತೆ ವರ್ತಿಸುತಿದ್ದ. ತನ್ನ ಮಲತಾಯ ಮಕ್ಕಳಿಗಿಂತ ಶುಕ ಸಣ್ಣವನಾಗಿದ್ದರೂ ಅವರಿಗಿಂತ ಬಲಶಾಲಿಯಾಗಿದ್ದ; ಮತ್ತವರಿಗೆ ಹೊಡೆಯುತಿದ್ದ. 11ನೇ ಪ್ರಾಯದಲ್ಲಿ ಈತ ಶಾಲೆಗೆ ಹೋಗಲಾರಂಭ. ಆದರೆ ಕಲಿಯುವ ಮನಸ್ಸೇ ಇರಲಿಲ್ಲ. ತಂಟೆ ಮತ್ತು ಆಟದಲ್ಲೇ ಸಮಯ ಕಳೆಯುತಿದ್ದ. ಉಪಾಧ್ಯಾಯರು ಇವನೆಂದರೆ ಹೆದರುತಿದ್ದರು. ಶುಕನ 12ನೇ ವರುಷದಲ್ಲಿ ತಂದೆ ತೀರಿ ಹೋದ. ಅವನ ಬೆನ್ನಲ್ಲೇ ತಾಯಿಯೂ ಸತ್ತಳು. ತಂದೆಯು ವಿಷ ಹಾಕಿ ಕೊಲ್ಲಲ್ಪಟ್ಟನೆಂದೂ, ವಿಷ ಹಾಕಿದ ಮನುಷ್ಯನು ಇಂಥವನೇ ಎಂದೂ, ತಾಯಿಯು ಶುಕನಿಗೆ ಹೇಳಿದ್ದಳು. ಇದರಿಂದ ಅವನಲ್ಲಿ ಪ್ರತೀಕಾರೇಚ್ಛೆ ಮೊಳೆಯಿತು. ತಂದೆ ತಾಯಿಗಳು ಮಡಿದ ನಂತರ ಶುಕ ಮಲತಾಯಿಯ ಆಶ್ರಿತನಾದ. ಅವಳು ಇವನನ್ನು ಸರಿಯಾಗಿ ನೋಡಲಿಲ್ಲ; ಅನ್ನ ವಸ್ತ್ರ ಕೊಡಲಿಲ್ಲ. ಹೀಗಾಗಿ ಅವನ ಆರೋಗ್ಯ ಕೆಟ್ಟಿತು. ಆತ ನಿತ್ರಾಣವಾದ. ಈಗ ಶಾರೀರಿಕ ಬಲದಿಂದ ಕೊಬ್ಬಿದ್ದ ಅವನ ಮಲತಾಯಿ ಮಕ್ಕಳು ಇವನಿಗೆ ಮನ ಬಂದಂತೆ ಪ್ರಹರಿಸುತಿದ್ದರು. ಪ್ರತೀಕಾರದಿಂದ ಕುದಿಯುತಿದ್ದರೂ ಇವನಿಂದೇನು ಮಾಡುವದಕ್ಕೂ ಆಗುತ್ತಿರಲಿಲ್ಲ. ಹರಕು ವಸ್ತ್ರ ಮತ್ತು ಹಸಿವೆಯಿಂದ ಅವ ದೂಡಬೇಕಾಯಿತು; ಇದು ಅವನ ಮನಸ್ಸಿನ ಕಠೋರತೆ ಹೆಚ್ಚಿಸಿತು. ಹಸಿವೆ ತಣಿಸುವದಕ್ಕಾಗಿ ಆತ ನೆರೆಮನೆಗಳಿಗೆ ನುಗ್ಗಿ, ಅವರ ಆಡು ದನಗಳ ಹಾಲು ಕದ್ದು ಕುಡಿಯುತಿದ್ದ.

ಅವನಿಗಾಗ 13 ವರುಷ. ತಂದೆಗೆ ವಿಷ ಕೊಟ್ಟವನೆಂದು ಊಹಿಸಲ್ಪಟ್ಟಿದ್ದ ಮನುಷ್ಯ ಆ ಗ್ರಾಮಕ್ಕೆ ಬಂದಿದ್ದ. ಶುಕ ಒಂದು ಕೈಕೊಡಲಿ ಮತ್ತು ತನ್ನ ಪಾದಗಳಿಗಿಂತ ಎಷ್ಟೋ ಪಾಲು ದೊಡ್ಡದಾದ ಜೋಡು ಕದ್ದುಕೊಂಡ. ಆ ಮನುಷ್ಯ ಮುಂಜಾನೆ ಗದ್ದೆಯಲ್ಲಿದ್ದಾಗ ಶುಕ ಹಿಂದಿನಿಂದ ಹೋಗಿ ಕೊಡಲಿಯಿಂದ ಅವನ ತಲೆಯೊಡೆದು ಕೊಂದುಬಿಟ್ಟ. ಅಲ್ಲಿ ಬಿಟ್ಟುಬಂದಿದ್ದ ಜೋಡಿನ ಆಧಾರದಿಂದ ಕೊಲೆಗಾರನು ಪ್ರೌಢನಿರಬೇಕು ಹೊರತು 13 ವರುಷದ ಹುಡುಗನಲ್ಲವೆಂಬುದು ಸಿದ್ಧವಾದುದರಿಂದ ಇವನ ಮೇಲೆ ಅನುಮಾನ ಬರಲೇ ಇಲ್ಲ

ಮೂರು ವರ್ಷ ಹಿಂದೀ ಸೇನೆಯಲ್ಲಿ 'ವೈಸರಾಯಿ ಕಮಿಶನ್‌ಡ್' ಆಫೀಸರ್ ಆಗಿದ್ದ ಶುಕನ ಸಮೀಪದ ಸಂಬಂಧಿಕನೊಬ್ಬನು ಊರಿಗೆ ಬಂದವ, ಶುಕನ ದುಸ್ಥಿತಿಯನ್ನು ಕಂಡು ತನ್ನೊಂದಿಗೆ ಕರೆದೊಯ್ದ. ಅಲ್ಲಿ ಅವನಿಗೋರ್ವ ಖಿಲಾಡಿಯ ಸ್ನೇಹವಾಗಿ ಕೆಲವು ಕಳವು ನಡಿಸಿದ. ಅವನ 15ನೇ ಪ್ರಾಯದಲ್ಲಿ, ಕರೆದೊಯ್ದ ಸಂಬಂಧಿಕನ ದೆಸೆಯಿಂದ ಸೇನೆಯಲ್ಲಿ ಆತನನ್ನು ಸೇರಿಸಿಕೊಂಡರು. ತನ್ನ ವಶವಿದ್ದ ವಸ್ತ್ರದ ಗೋಡಾನಿನಲ್ಲಿ ಇವ ಅಂದಾದಬಾರು ನಡಿಸಿದ್ದರಿಂದ ಅಲ್ಲಿ ಲೆಕ್ಕಕ್ಕೆ ಕಡಿಮೆ ಕಂಡು ಬಂತು. ಇದನ್ನು ಭರ್ತಿ ಮಾಡುವದಕ್ಕಾಗಿ ಅವ ಸೇನೆಯ ಒಂದು ರಿವಾಲ್ವರನ್ನು ಕದ್ದುಕೊಂಡು ಸ್ಥಳೀಯ ಪೋಸ್ಟಾಫೀಸಿಗೆ ಹೋಗಿ ಪೋಸ್ಟು ಮಾಸ್ಟರನನ್ನು ಬೆದರಿಸಿ ಅಲ್ಲಿದ್ದ ಹಣವನ್ನೆಲ್ಲಾ ದೋಚಿಕೊಂಡು ಬಂದ.

ಅವನು ಸೈನಿಕೋದ್ಯೋಗಿಯಾಗಿ ಇರಾಕಿನಲ್ಲೂ ಇದ್ದ. ಅಲ್ಲಿಯವರ ಮನೆಗಳಲ್ಲಿ ಎಷ್ಟೋ ಕಳವುಗಳನ್ನು ನಡಿಸಿದ್ದ. ಕೊನೆಗೆ ಹಲವರೊಡನೆ ಯುದ್ಧ ಕೈದಿಯಾಗಬೇಕಾಯಿತು. ಟರ್ಕಿಯಲ್ಲಿ ಯುದ್ಧ ಕೈದಿಯಾಗಿ ಶಿಬಿರದಲ್ಲಿದ್ದಾಗ, ವಿನಾಕಾರಣ ಮೂವರು ಸೋಲ್ಜರರನ್ನಿರಿತ ಕೊಂದಿದ್ದ. ಆ ಮೂವರು ಸೋಲ್ಜರರು ಕೈದಿಗಳ ಬದಲಾವಣೆಯಂತೆ ಅಲ್ಲಿಂದ ಹೋಗಲಿದ್ದುದರಿಂದ ತಾನು ಮಾತ್ರ ಅಲ್ಲಿಯೇ ಇರುವಂತಾದುದಕ್ಕಾಗಿಯೇ ಈರ್ಷ್ಯೆಗೊಂಡು ಕೊಲೆ ನಡೆಸಿದ್ದ. ಈ ಅಪರಾಧ

(೧೧ನೇ ಪುಟ ನೋಡಿರಿ)

THE

Bombay Life Assurance Company Ltd.

(ESTD·1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including

Travancore, Cochin and Mysore State.

New Business in 1945 in our area:- Over 5 Millions.

OUR Expert advice gained by 35 years Experience is at your door FREE.

Drop a card to any of our Offices at:—

MADRAS * BANGALORE * MADURA * CALICUT

TRIVENDRUM * UDIPI * AND BOMBAY.

ಸ್ವಾತಂತ್ರ್ಯ

ವೈದ್ಯ ವಿನಾಯಕ ರಾವ್ ಬಾಪಟ.

‘ಸ್ವಾತಂತ್ರ್ಯವು ಪ್ರತಿಯೊಬ್ಬ ಮನುಷ್ಯನ ಆ ಜನ್ಮಸಿದ್ಧ ಹಕ್ಕು. ಅವನು ಸಾಧನೆಮಾಡಿ ಅದನ್ನು ಸಂಪಾದಿಸಲೇ ಬೇಕು. ಇದಕ್ಕಾಗಿ ಎಷ್ಟು ತ್ಯಾಗವನ್ನು ಬೇಕಾದರೂ ಮಾಡಬಹುದು.” ಈ ಅರ್ಥದ ಮಾತುಗಳನ್ನು ನಾವು ನಿತ್ಯವೂ ಕೇಳುತ್ತಲೇ ಇದ್ದೇವೆ. ಈ ಶಬ್ದವು ‘ಪರಕೀಯರ ಆಳ್ವಿಕೆಯಿಂದ ಮುಕ್ತರಾಗುವುದು’ ಎಂಬ ಅರ್ಥ ಸೂಚನೆಗಾಗಿ ಮೊದಮೊದಲು ಉಪಯೋಗಿಸಲ್ಪಡುತ್ತಿತ್ತು. ಬರು ಬರುತ್ತ ಇದರ ವ್ಯಾಪಕತ್ವವು ವಿಸ್ತಾರವಾಯಿತು. ಪೌರಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಸ್ತ್ರೀ ಸ್ವಾತಂತ್ರ್ಯ ಎಂಬ ಬೇರೆ ಬೇರೆ ಅರ್ಥದ ಸ್ವಾತಂತ್ರ್ಯ ಕಲ್ಪನೆಯು ಮೂಡಿತು. ಇನ್ನೂ ಮೂಡುತ್ತಿದೆ. ಇನ್ನೊಬ್ಬರ ಪ್ರತಿಭಟನೆ, ವಿರೋಧ ಅಥವಾ ಆತಂಕಗಳಿಂದ ತನ್ನ ಮನಸ್ವಿ ವರ್ತನೆಗೆ ವಿರೋಧವುಂಟಾಗಬಹುದಾದ ಸಂದರ್ಭಗಳಲ್ಲೆಲ್ಲಾ ಸ್ವಾತಂತ್ರ್ಯವನ್ನು ಸ್ಥಿರೀಕರಿಸುವ ಪ್ರಯತ್ನವು ನಡೆಯುತ್ತಿದೆ. ಹೀಗಾಗಿ ಸ್ವಾತಂತ್ರ್ಯವು ಸ್ವೇಚ್ಛಾರೂಪವನ್ನು ತಾಳಿದೆ. ಎಲ್ಲಾ ವಿಷಯಗಳಲ್ಲಿಯೂ, ಎಲ್ಲರಿಗೂ ಈ ರೀತಿಯ ಸ್ವತಂತ್ರವು ಹಿತಕರವಲ್ಲವೆಂಬುದೂ, ಅದು ಆತ್ಮಘಾತುಕವೂ, ರಾಷ್ಟ್ರಘಾತುಕವೂ ಆಗಿದೆ ಎಂಬುದೂ ವಿಚಾರವಂತರಿಗೆ ಗೊತ್ತು. ಆದ್ದರಿಂದ ಸ್ವತಂತ್ರಾಭಿಲಾಷಿಗಳೆಲ್ಲರೂ “ಸ್ವತಂತ್ರ” ಎಂಬ ಶಬ್ದದ ಅರ್ಥವನ್ನೂ, ಅದರ ವ್ಯಾಪ್ತಿಯನ್ನೂ ತಿಳಿದುಕೊಳ್ಳುವುದು ಹಿತಕರ.

‘ಸ್ವ’ ಎಂದರೆ ತನ್ನ ಅಥವಾ ಆತ್ಮನ, ‘ತಂತ್ರ’ ಎಂದರೆ ಅಧೀನ (ದಲ್ಲಿರುವುದು). ಅಂದರೆ ಮನುಷ್ಯನು ತನ್ನ ಮನಸ್ಸು ಬುದ್ಧಿಗಳನ್ನು ಆತ್ಮನ ಅಧೀನ ಪಡಿಸಿರುವುದು ಎಂಬರ್ಥ. ಈ ತರಹದ ಸ್ವತಂತ್ರ ಮನುಷ್ಯರು ವಿರಳ. ಕಾರಣಾಂತರದಿಂದ ಮನುಷ್ಯನು ಅಥವಾ ರಾಷ್ಟ್ರವು ಇನ್ನೊಬ್ಬನು ಅಥವಾ ಇನ್ನೊಂದು ರಾಷ್ಟ್ರದ ಅಧೀನವಾಗಿರುವಾಗ ಅಪರಾಧೀನತೆಯಿಂದ ತಪ್ಪಿಸಿಕೊಳ್ಳುವುದನ್ನು ಸಹ ಸ್ವಾತಂತ್ರ್ಯ ಎಂದು ಕರೆಯುತ್ತೇವೆ [illegible] ನಿಜವಾದ ಸ್ವಾತಂತ್ರ್ಯವಾಗಿರದೆ, ಸ್ವಾತಂತ್ರ್ಯ ಸಾಧನೆಯಲ್ಲಿ ಒಂದು ಹಂತ ಮಾತ್ರ. ಕೇವಲ ಪರಕೀಯರ ತಂತ್ರದಿಂದ ತಪ್ಪಿಸಿಕೊಂಡ ಮಾತ್ರಕ್ಕೆ ಮನುಷ್ಯನು ಸ್ವತಂತ್ರನಾಗುವುದಿಲ್ಲ. ಇದೇ ರೀತಿಯಾಗಿ ನಿತ್ಯದ ಬೇರೆ ಬೇರೆ ವ್ಯವಹಾರಗಳಲ್ಲಿ ಬೇರೊಬ್ಬರಿಂದ ಯಾವತರಹದ ವಿರೋಧ, ತಡೆ, ಅಥವಾ ಆತಂಕಗಳು ಇರಕೂಡದೆಂದು ಅಪೇಕ್ಷಿಸುವುದು, ಅಥವಾ ಅದನ್ನು ಪ್ರತಿಭಟಿಸುವುದು ಸಹ ಸ್ವಾತಂತ್ರ್ಯವಾಗಲಾರದು. ಏಕೆಂದರೆ ಇದರಿಂದ ಸ್ವೇಚ್ಛಾ ವರ್ತನೆಗೆ ಆಸ್ಪದವಾಗಿ ಪರಸ್ಪರ ಕಲಹವುಂಟಾಗುತ್ತದೆ. ಮನುಷ್ಯನ ಪ್ರಗತಿಯಾಗಬೇಕಾದರೆ ತಂದೆತಾಯಿ, ಗುರು ಹಿರಿಯರು, ಮಿತ್ರರು, ಬುದ್ಧಿವಂತರು, ಹಿತೈಷಿಗಳು, ರಾಜಕೀಯ ನೈತಿಕ ಇಲ್ಲವೆ ಧಾರ್ಮಿಕ ಸಂಘಗಳು, ಇತ್ಯಾದಿ ಜನರ ಮೇಲು ಹಿಡಿತವು ಅತ್ಯಗತ್ಯವಾಗಿದೆ. ಆದರೆ ಈ ಹಿಡಿತಕ್ಕೂ ಒಂದು ಮಿತಿ ಅಥವಾ ವಿಧಾನ ಅವಶ್ಯಕ. ಇಲ್ಲದಿದ್ದಲ್ಲಿ ಅಲ್ಲಿಯೂ ಸ್ವೇಚ್ಛಾವೃತ್ತಿಯನ್ನು ಕಾಣಬಹುದು.

ಸ್ವಾತಂತ್ರ್ಯಕ್ಕೂ ಸ್ವೇಚ್ಛೆಗೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕಾದರೆ ಈ ವಿಷಯವನ್ನು ಇನ್ನೂ ಆಳವಾಗಿ ಪರೀಕ್ಷಿಸಬೇಕು. ‘ಪರತಂತ್ರ’ ಎಂಬ ಶಬ್ದವು ಎಲ್ಲರಿಗೂ ಪರಿಚಿತವಾದುದು. ಇನ್ನೊಬ್ಬರ ಅಧೀನದಲ್ಲಿರುವುದು ಎಂದಿದರ ಅರ್ಥ. ಪ್ರಪಂಚದಲ್ಲಿ, ಹಿಂದೆ ತಿಳಿಸಿದ ಅರ್ಥದ ಸ್ವತಂತ್ರರು ಕೆಲವೇ ಜನರಿದ್ದಾರೆ, ಉಳಿದ ಬಹುಮಂದಿ ಪರತಂತ್ರರು. ಪರತಂತ್ರದವರನ್ನು, ಜೀವತಂತ್ರರು, ವಿಷಯತಂತ್ರರು, ಮತ್ತು ಧರ್ಮತಂತ್ರರು ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಸ್ವಸುಖ (ಇಂದ್ರಿಯ ಸುಖ)ವನ್ನೂ, ಸ್ವಾಭಿಮಾನವನ್ನೂ ಮರೆತು ಇನ್ನೊಬ್ಬರಿಗೆ ವಿಷಯ ಸುಖಗಳನ್ನೊದಗಿಸುವುದಕ್ಕಾಗಿ ಅವರ ದಾಸರಂತೆ ಬಲಾತ್ಕಾರದಿಂದಲೋ ಇಲ್ಲವೆ ಸಂದರ್ಭದ ಒತ್ತಾಯದಿಂದಲೋ, ಅವರ ಅಧೀನರಾಗಿರುವವರು “ಜೀವತಂತ್ರರು” ಇದಕ್ಕಿಂತ ಸ್ವಲ್ಪ ಮೇಲ್ಪ್ರಗತಿಯವರು “ವಿಷಯತಂತ್ರರು”. ಇವರು ಕೇವಲ ತಮ್ಮ ಇಂದ್ರಿಯಗಳ ಅಧೀನರಾಗಿ ಆ ಇಂದ್ರಿಯಗಳ ತೃಪ್ತಿಗಾಗಿ ನಾನಾ ತರಹದ ಭೋಗಗಳನ್ನು ಅನುಭವಿಸುವುದರಲ್ಲಿ ಮಗ್ನರಾಗಿರುತ್ತಾರೆ. ಆ ಸುಖಸಾಧನೆಗಳನ್ನು ಹೊಂದಲು ಯಾವ ತರಹದ ತ್ಯಾಗವನ್ನು ಮಾಡ[illegible] ಹಿಂಜರಿಯುವುದಿಲ್ಲ. ಇದಕ್ಕಿಂತ ಮೇಲ್ಪ್ರಗತಿಯವರು “ಧರ್ಮತಂತ್ರರು” ಇವರು ವಿಷಯೋಪಭೋಗಗಳಲ್ಲಿ ಸುಖವಿಲ್ಲ ಎಂಬುದನ್ನು ಮನಗಂಡು, ಇಂದ್ರಿಯಗಳು ವಿಷಯಸುಖವನ್ನು ಅಪೇಕ್ಷಿಸಿದ ಹಾಗೆಲ್ಲಾ ಅವನ್ನು ಜಗ್ಗಿ ಹಿಂದಕ್ಕೆಳೆದು ಧರ್ಮಮಾರ್ಗದ ಕಡೆಗೆ ತಿರುಗಿಸುತ್ತಾರೆ. ಇವರ ದೃಷ್ಟಿಯಿಂದ ವಿಷಯ ಲಾಲಸೆಯು ತುಚ್ಛವಾದುದು. ಕೇವಲ ಧರ್ಮಮಾರ್ಗಾನುಸರಣೆಯೇ ಇವರ ಆದರ್ಶ. ಧಾರ್ಮಿಕ ಜೀವನವೇ ಇವರ ಪುರುಷಾರ್ಥ. ಆ ತರಹದ ಜೀವನದಿಂದಲೇ ಅವರ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ.

ಜೀವತಂತ್ರರು, ವಿಷಯತಂತ್ರರು, ಧರ್ಮತಂತ್ರರು ಇವರೆಲ್ಲರೂ ನಿಜವಾಗಿ ಪರತಂತ್ರರೇ ಆಗಿದ್ದಾಗ್ಯೂ ಅವರಲ್ಲಿ ವ್ಯತ್ಯಾಸವಿದೆ. ಜೀವತಂತ್ರರು ಎಲ್ಲಕ್ಕಿಂತಲೂ ಕನಿಷ್ಟ ದರ್ಜೆಗೆ ಸೇರಿದ್ದಾರೆ. ಧರ್ಮತಂತ್ರರು ಶ್ರೇಷ್ಠ ದರ್ಜೆಯವರು. ಮನುಷ್ಯನು ಜೀವತಂತ್ರನಾಗಿರುವಾಗ ಅವನಿಗೆ ಅನೇಕ ಸಾಮಾಜಿಕ, ಅಥವಾ ರಾಜಕೀಯ ಬಂಧನವಿರುವುದರಿಂದ ಅವನು ಆತ್ಮಕಲ್ಯಾಣವನ್ನು ಸಾಧಿಸಲು ಶಕ್ಯವಾಗುವುದಿಲ್ಲ. ಆದ್ದರಿಂದಲೇ ಅವನು ಮೊದಲು ತನ್ನ ಈ ಪಾರತಂತ್ರಿಕ ಬಂಧನದಿಂದ ತಪ್ಪಿಸಿಕೊಳ್ಳಬೇಕು. ಈ ಬಂಧವಿಮೋಚನೆಯನ್ನು ಆತನ ಮೊದಲಿನ ಸ್ಥಿತಿಗೆ ಹೋಲಿಸಿ ಇದನ್ನು ಸ್ವಾತಂತ್ರ್ಯ ಎಂದು ಕರೆದಾಗ್ಯೂ ಅದು ನಿಜವಾದ ಸ್ವಾತಂತ್ರ್ಯವಲ್ಲ. ಸ್ವಾತಂತ್ರ್ಯಮಾರ್ಗದಲ್ಲಿ ಒಂದು ಕುಪ್ಪಳವನ್ನು ಹಾರಿದಂತಾಯಿತು ಅಷ್ಟೆ. ಇದು ವರೆಗೆ ಬಂಧನದಲ್ಲಿದ್ದ ಅವನು ಈಗ ಯಾವ ನಿರ್ಬಂಧವೂ ಇಲ್ಲದ್ದರಿಂದ ಸ್ವೇಚ್ಛೆಯಾಗಿ ವರ್ತಿಸುತ್ತಾ, ತನ್ನ ಇಂದ್ರಿಯಗಳನ್ನು ತೃಪ್ತಿಪಡಿಸಲು ವಿಷಯೋಪಭೋಗಗಳಲ್ಲಿ ನಿರತನಾಗಬಹುದು. ಹಾಗಾದರೆ ಅವನು ವಿಷಯತಂತ್ರನಾಗುತ್ತಾನೆ. ಇದರಿಂದ ಕ್ರಮೇಣ ಅವನ ಅಧಃಪತನವಾಗಿ ಅವನು ತನ್ನ ಆತ್ಮಬಲವನ್ನೂ, ಶರೀರಬಲವನ್ನೂ ಕಳೆದುಕೊಂಡು, ಸನ್ನಿವೇಶದ ಒತ್ತಾಯದಿಂದ ಬಹುತೇಕ ವಿಷಯತಂತ್ರರ ಇಲ್ಲವೆ ಅಪರೂಪವಾಗಿ ಧರ್ಮತಂತ್ರರ ಅಧೀನನಾಗಿ ಮುಂದೆ ವಿಷಯಭೋಗದ ಸುಖಕ್ಕೂ ಎರವಾಗಬೇಕಾಗುತ್ತದೆ. ಹೀಗಾಗಿ ಅವನು ಮುಂದುವರಿದು ಧರ್ಮತಂತ್ರನಾಗುವ ಬದಲು, ಇನ್ನೂ ಹಿಂದಕ್ಕೆ ಸರಿದು ಕಾಲಕ್ರಮದಲ್ಲಿ ಪುನಃ ಜೀವತಂತ್ರನಾಗುತ್ತಾನೆ ಆದ್ದರಿಂದ ವಿಷಯತಂತ್ರನಾದ ಮನುಷ್ಯನು ಈ ಕಾಲದಲ್ಲಿ ಎಚ್ಚರಿಕೆಯಿಂದ ವರ್ತಿಸಿದರೆ- ಅದರೆ ವಿಷಯೋಪಭೋಗಗಳಲ್ಲಿ ಮಗ್ನನಾಗಿ, ಕೇವಲ ವಿಷಯ ಸುಖವೇ ತನ್ನ ಪುರುಷಾರ್ಥವೆಂದು ತಿಳಿಯದೆ, ವ್ಯವಹಾರ ದೃಷ್ಟಿಯಿಂದ ಅವಶ್ಯವಾದಷ್ಟು ಮಾತ್ರ ವಿಷಯಸುಖಗಳನ್ನನುಭವಿಸುತ್ತ ಅದರಲ್ಲಿ ಮನುಕಾರ ಬುದ್ಧಿಯನ್ನಿಟ್ಟುಕೊಳ್ಳುವಂತೆ ವರ್ತಿಸಿದರೆ— ಅವನು ಆತ್ಮಕಲ್ಯಾಣಮಾರ್ಗವನ್ನು ಅನುಸರಿಸಿದಂತಾಗಿ ಸ್ವಾತಂತ್ರ್ಯದ ಸಮೀಪವನ್ನು ಮುಟ್ಟಬಹುದು.

ಧರ್ಮತಂತ್ರವು ತತ್ವತಃ ಪರತಂತ್ರವೇ ಆದಾಗ್ಯೂ, ಅದು ಶ್ರೇಷ್ಠ ರೀತಿಯ ಪರತಂತ್ರವಾಗಿದೆ, ಮತ್ತು ಸ್ವತಂತ್ರಕ್ಕೆ ಸಮೀಪವಾಗಿದೆ. ವಿಷಯತಂತ್ರದಿಂದ ಮುಕ್ತನಾದ ಮನುಷ್ಯನು ಧರ್ಮತಂತ್ರನಾಗಿ ಧರ್ಮಮಾರ್ಗಾನುಸರಣೆಯಲ್ಲಿ ತನ್ನ ಜೀವನವನ್ನು ನಡೆಯಿಸುವುದಾದರೆ ಅವನು ಕಾಲಕ್ರಮದಲ್ಲಿ ತತ್ವತಃ ಸ್ವತಂತ್ರನಾಗುತ್ತಾನೆ. ಧರ್ಮತಂತ್ರನಾದ ಮನುಷ್ಯನು ಶಾಸ್ತ್ರೋಕ್ತವೂ, ಶ್ರೇಷ್ಠವೂ, ಮತ್ತು ಸಾತ್ವಿಕವೂ ಆದ ಹಾಗೂ ಅನ್ಯರಿಗೆ ಬಾಧಕವಾಗದ ಮಾರ್ಗವನ್ನವಲಂಬಿಸಿರುವುದರಿಂದ ಅವನು ಹಿಂದಕ್ಕೆ ಸರಿಯುವ ಅಥವಾ ಜಾರಿ ಕೆಳಗೆ ಬೀಳುವ–ಅಂದರೆ ವಿಷಯತಂತ್ರನಾಗುವ—ಸಂಭವವು ಕಡಿಮೆ. ಮನಃಪೂರ್ತಿಯಾಗಿ ಧರ್ಮತಂತ್ರಿಯಾದವನು ಜಾಗ್ರತೆಯಾಗಿ ಸ್ವತಂತ್ರ ಸುಖವನ್ನು ಅನುಭವಿಸುತ್ತಾನೆ. ಅಂದರೆ ಆತ್ಮಸಾಕ್ಷಾತ್ಕಾರವನ್ನು ಪಡೆದು ಆತ್ಮಾನಂದದ ಸುಖವನ್ನು ಅನುಭವಿಸುತ್ತಾನೆ. ಇದೇ ನಿಜವಾದ ಸ್ವಾತಂತ್ರ್ಯ. ಇದೇ ಮನುಷ್ಯನ ಅತ್ಯುಚ್ಚಧ್ಯೇಯ. ಇದನ್ನು ಪಡೆಯುವುದಕ್ಕಾಗಿ ನಾವು ಹಗಲಿರುಳೂ ದುಡಿಯಬೇಕು. ಇದನ್ನು ಸಾಧಿಸಬೇಕಾದರೆ ‘ವಿಷಯತಂತ್ರ’ದಿಂದ ಮುಕ್ತರಾಗಿ ‘ಧರ್ಮತಂತ್ರ’ರಾಗಲೇಬೇಕು. ಇದೇ ಮಾತನ್ನು ಶಾಸ್ತ್ರಗಳೂ, ಅನುಭವಿಕರೂ ಬಾರಿ ಬಾರಿಗೂ ಸಾರುತ್ತಿದ್ದಾರೆ. ವ್ಯಾಸಮಹರ್ಷಿಗಳೂ ಸಹ ಇದೇ ಮಾತನ್ನು ಘಂಟಾಘೋಷದಿಂದ ಸಾರಿದ್ದಾರೆ.

ಊರ್ಧ್ವ ಬಾಹುರ್ವಿರೌಮ್ಯೇಷ ನಹಿ ಕಶ್ಚಿಚ್ಛೃಣೋತಿಮಾಂ ।
ಧರ್ಮಾದರ್ಥಶ್ಚಕಾಮಶ್ಚ ತಸ್ಮಾದ್ಧರ್ಮ ಪರೋಭವ ॥

ಅರ್ಥ--ಧರ್ಮಮಾರ್ಗಾನುಸರಣೆಯಿಂದಲೇ ಅರ್ಥ ಪ್ರಾಪ್ತಿಯೂ, ಇಷ್ಟ ವಿಷಯ ಸಿದ್ಧಿಯೂ ಲಭಿಸುತ್ತದೆ. ಆದ್ದರಿಂದಲೇ ಮನುಷ್ಯನು ಧರ್ಮಮಾರ್ಗಾವಲಂಬಿಯಾಗಬೇಕು. ನಾನು ಈ ಮಾತನ್ನು ಎರಡೂ ಕೈಗಳನ್ನು ಎತ್ತಿ ಕೂಗಿ ಸಾರಿ ಸಾರಿ ಹೇಳುತ್ತಿದ್ದೇನೆ. ಆದರೆ ನನ್ನ ಮಾತನ್ನು ಮಾತ್ರ ಯಾರೂ ಕೇಳುವುದಿಲ್ಲ

ಒಟ್ಟಿನಲ್ಲಿ ‘ಸ್ವಾತಂತ್ರ್ಯ’ವೆಂದರೆ ಮನುಷ್ಯನು ಇನ್ನೊಬ್ಬರ ಆಳ್ವಿಕೆಗೆ ಒಳಗಾಗದೆ ತನ್ನನ್ನು ತಾನೇ ಆಳಿಕೊಳ್ಳುವುದು. ಇದನ್ನು ಸಾಧಿಸಬೇಕಾದರೆ ಇಂದ್ರಿಯಗಳ ಹತೋಟಿಯು ಅವಶ್ಯ. ಅಂದರೆ ಮನುಷ್ಯನು ತನ್ನ ಇಂದ್ರಿಯಗಳನ್ನು ತನ್ನ ಅಧೀನಪಡಿಸಿಟ್ಟುಕೊಂಡು ಅವುಗಳ ಮೇಲೆ ಅಧಿಕಾರ ನಡೆಸುವಷ್ಟು ಸಾಮರ್ಥ್ಯವನ್ನು ಸಂಪಾದಿಸಬೇಕು. ಧರ್ಮಮಾರ್ಗಾನುಸರಣೆಯೇ ಇದಕ್ಕೆ ಸುಲಭವಾದ ಮಾರ್ಗ.

ಜೀವತಂತ್ರ, ವಿಷಯತಂತ್ರ, ಧರ್ಮತಂತ್ರ ಎಂಬ ವಿಭಜನೆಯು ಮೂಲಪತ್ರ ಗಳ [illegible]

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
[illegible] ವ್ಯಾಪಾರಾಯರ್,
[illegible], ಉಡುಪಿ.

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಅಡಚಣೆ ಮತ್ತು ಅವಶ್ಯಕತೆ ಮುಂತಾದವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತುಂಬಿಡುವ ಸ್ತ್ರೀಪುರುಷರು —
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಇವರೇ ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧದಿಂದ ಬೆಳೆಯುವ ಪ್ರವೃತ್ತಿಯೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಗಿಂತಲೂ ಹೆಚ್ಚು ಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ಪ್ರವೃತ್ತಿಗೆ ಹೆಸ್ಸು ಪಡುತ್ತದೆ.

ಕೆನರಾ ಬ್ಯಾಂಕ್
Estd: 1906

CANARA BANK LIMITED
(Incorporated in British India, liability of Members Limited.)

ಸಮಪ್ರಾತಿನಿಧ್ಯಕ್ಕೆ ಕಾಂಗ್ರೆಸಿನ ಸ್ಪಷ್ಟ ಧಿಕ್ಕಾರ

ವೈಸರಾಯರಿಂದಲೇ ಸದಸ್ಯರ ನೇಮಕ

ಸಿಮ್ಲಾ ಸಮ್ಮೇಲನವಾಗಿದ ಮೇಲೆ ಸುಮಾರು ಒಂದು ತಿಂಗಳ ತನಕ ಬ್ರಿಟಿಷ್ ಮಂತ್ರಿ ಸಮಿತಿ ಮತ್ತು ವೈಸರಾಯರು ಕಾಂಗ್ರೆಸ್ ಪ್ರಮುಖರೊಡನೆ ನಡಿಸಿದ ಸಂಧಾನ ಮಾತುಕತೆಗಳು ತಾ. 14ರಲ್ಲಿ ಮತ್ತೊಮ್ಮೆ ನಿಷ್ಫಲವಾದುವು ಈ ನಡುವೆ ಮುಸ್ಲಿಂ ಲೀಗ್ ಕೌನ್ಸಿಲು ಬ್ರಿಟಿಷ್ ಯೋಜನೆಯ ಅಂಗೀಕಾರದ ನಿರ್ಧಾರ ಮಾಡಲು ತಾತ್ಕಾಲಿಕ ಸರಕಾರದಲ್ಲಿ ಕಾಂಗ್ರೆಸ್-ಲೀಗ್ ಸಮಪ್ರಾತಿನಿಧ್ಯದ ಆಶ್ವಾಸನೆ ವೈಸರಾಯರಿಂದ ದೊರೆತುದೇ ಮುಖ್ಯ ಕಾರಣ. ಕಾಂಗ್ರೆಸಿನ ಹಲವು ಆಕ್ಷೇಪಗಳ ಪೈಕಿ ಮುಖ್ಯಾಕ್ಷೇಪಕ್ಕೂ ಇದೇ ಕಾರಣ. ಗಾಂಧಿ, ನೆಹರು, ಅಜಾದ್, ವಲ್ಲಭಾಯಿ ಮತ್ತಿತರ ಕಾಂಗ್ರೆಸ್ ಪ್ರಮುಖರೊಡನೆ ಬ್ರಿಟಿಷ್ ಸಮಿತಿ ಮತ್ತು ವೈಸರಾಯರು ಅತ್ಯಾಗ್ರಹದ ವಿನಂತಿ ಮಾಡಿಕೊಂಡಿದ್ದರು: ಆದರೆ ಎಲ್ಲಾ ಮಾತುಕತೆಗಳಲ್ಲೂ ಒಂದೋ ಕಾಂಗ್ರೆಸ್-ಲೀಗ್ ಇಲ್ಲವೇ ಸವರ್ಣ ಹಿಂದೂ-ಮುಸ್ಲಿಂ ಸಮಪ್ರಾತಿನಿಧ್ಯದ ಸೂಚನೆಯನ್ನೇ ಹಲವು ವಿಧದಿಂದ ರೂಪಾಂತರಿಸಿ ಹೇರಲು ನೋಡಿದ್ದರು. ಆದರೆ ತಾ. 14ರಲ್ಲಿ ಕಾಂಗ್ರೆಸ್ ಅಧ್ಯಕ್ಷರ ಸಶರ್ತ ನಿರಾಕರಣಾ ಪತ್ರ ಹೋಯಿತು.

ಕಾಂಗ್ರೆಸಿನ ಆಕ್ಷೇಪಗಳು

ಯಾವ ವಿಧದ ಸಮ ಪ್ರಾತಿನಿಧ್ಯಕ್ಕೂ ಕಾಂಗ್ರೆಸ್ ಎಷ್ಟಕ್ಕೂ ಒಪ್ಪುವಂತಿಲ್ಲ. ಅದೇ ರೀತಿ ಕಾಂಗ್ರೆಸ್ ಅಧ್ಯಕ್ಷರ ಪತ್ರದಲ್ಲಡಕವಾಗಿರುವ ಬೇಡಿಕೆಗಳು ಮಾನ್ಯವಾಗದಿದ್ದರೆ ದೀರ್ಘಾವಧಿ ವ್ಯವಸ್ಥೆಗೂ ಒಪ್ಪಿಗೆಯಿಲ್ಲ. ಆ ಬೇಡಿಕೆಯೆಂದರೆ ಬಂಗಾಳ ಮತ್ತು ಅಸ್ಸಾಮುಗಳ ಎಸೆಂಬ್ಲಿಗಳ ಯುರೋಪಿಯನ್ ಸದಸ್ಯರು ಶಾಶ್ವತ ರಾಜ್ಯಾಂಗ ರಚನಾ ಸಭೆಗಾಗುವ ಚುನಾವಣೆಯಲ್ಲಿ ಭಾಗವಹಿಸಬಾರದು. ಬ್ರಿಟಿಷ್ ಸಮಿತಿ ಹೇಳಿಕೆಯ 15ನೇ ಕಲಮಿನ ಉಪಕಲಮ್ 5ರನ್ವಯ, ಯಾವುದೇ ಪ್ರಾಂತ್ಯಕ್ಕೆ ಪ್ರಥಮ ರಂಗದಲ್ಲೇ ಪ್ರಾಂತಿಕ ಪಂಗಡಗಳಲ್ಲಿ ಸೇರುವ ಯಾ ಸೇರದಿರುವ ಸ್ವಾತಂತ್ರ್ಯವಿದೆಯೆಂದೇ ಪ್ರಮುಖ ನ್ಯಾಯತಜ್ಞರ ಅಭಿಪ್ರಾಯವಿದೆ. ಆದ್ದರಿಂದ ಘಟನಾ ಸಮಿತಿಯಲ್ಲಿ ಕಾಂಗ್ರೆಸ್ ಹಾಗೆಂದೇ ಭಾವಿಸಿ ವರ್ತಿಸುವದು. ಅದಕ್ಕನುಗುಣವಾಗಿ ಘಟನಾ ಸಮಿತಿಯು ಸಭೆ ಸೇರಿದಾಗ ಪ್ರಾಂತ್ಯಗಳು ಪ್ರಾಂತಿಕ ಪಂಗಡಗಳಲ್ಲಿ ಸೇರಲಿಷ್ಟ ಪಡುವವೋ ಎಂಬುದನ್ನು ಮುಂದಾಗಿ ನಿರ್ಧರಿಸಿಕೊಳ್ಳುವದು ಪ್ರಾಂತ್ಯಗಳ ಈ ಅಧಿಕಾರವನ್ನು ಕಸಗೊಳ್ಳಲು ಯಾರಿಂದಲೂ ಆಗದು. ಆ ಘಟನಾ ಸಮಿತಿಯೊಮ್ಮೆ ಅಸ್ತಿತ್ವಕ್ಕೆ ಬಂದೊಡನೆ ಅದು ಸ್ವತಂತ್ರಾಧಿಕಾರವುಳ್ಳದ್ದಾಗುವದು; ಪ್ರತಿಯೊಂದು ಪ್ರಶ್ನೆಯನ್ನು ತೀರ್ಮಾನಿಸುವ ಅಧಿಕಾರವೂ ಅದಕ್ಕೆ ಬರುತ್ತದೆ. ಆದರೆ ಅಲ್ಪ ಸಂಖ್ಯಾಕ ಸಮಾಜಗಳ ಹಿತರಕ್ಷಣೆಯ ವ್ಯವಸ್ಥೆ ಮತ್ತು ಬ್ರಿಟನಿನೊಡನೆ ಸಮಾನತೆಯ ಕರಾರೊಂದನ್ನು ಮಾಡಿಕೊಳ್ಳುವ ಎರಡು ಶರ್ತಗಳೇನೋ ಇವೆ. ಇವೆರಡರ ವಿನಹ ಮಿಕ್ಕೆಲ್ಲಾ ವಿಷಯಗಳಲ್ಲೂ ತನ್ನಿಚ್ಛೆಯಂತೆ ವರ್ತಿಸುವ ಪೂರ್ಣಾಧಿಕಾರ ಈ ರಾಜ್ಯಾಂಗ ರಚನಾ ಸಭೆಗಿದೆ. ಈ ವಿಷಯಗಳನ್ನು ಸ್ಪಷ್ಟೀಕರಿಸಿ ಕಾಂಗ್ರೆಸ್ ಅಧ್ಯಕ್ಷರ ಖಂಡತುಂಡ ಪತ್ರ ಹೋಗಿದೆ. ಘಟನಾ ಸಮಿತಿಯಲ್ಲಿ ಆಶ್ರಿತ ರಾಜ್ಯಗಳ ಜನತೆಗೇನೇ ಪ್ರಾತಿನಿಧ್ಯವೆಂದು ಸ್ಪಷ್ಟಪಡಿಸದುದನ್ನೂ ಆ ಪತ್ರದಲ್ಲಿ ಖಂಡಿಸಲಾಗಿದೆ.

ಬ್ರಿಟಿಷ್ ಸಮಿತಿಯ ಪುನರಾಲೋಚನೆ

ಕಾಂಗ್ರೆಸ್ ಅಧ್ಯಕ್ಷರ ಪತ್ರದಿಂದ ಬ್ರಿಟಿಷ್ ಸಮಿತಿಯು ಒಂದು ಹಂಚಿಕೆಗೆ ಅರ್ಧ ಚಂದ್ರ ಪ್ರಯೋಗವಾದಂತಾಯಿತು. ಶಾಶ್ವತ ರಾಜ್ಯಾಂಗ ವ್ಯವಸ್ಥೆಯ ಸಂಬಂಧದ ಆಕ್ಷೇಪಗಳನ್ನು ಸದ್ಯಕ್ಕೆ ಒತ್ತಟ್ಟಿಗಿಟ್ಟರೂ ಕೂಡಲೇ ಸ್ಥಾಪನೆಯಾಗಬೇಕಾದ ನಡುಗಾಲ ಸರಕಾರಕ್ಕೆ ಭಂಗ ಬಂತು. 12 ಸ್ಥಾನಗಳಿದ್ದು ಕಾಂಗ್ರೆಸ್-ಲೀಗುಗಳಿಗೆ ತಲಾ 5ರಂತೆ ಸ್ಥಾನ ದೊರೆಯದ ಯಾವ ತಾತ್ಕಾಲಿಕ ವ್ಯವಸ್ಥೆಗೂ ಮುಸ್ಲಿಂ ಲೀಗಿನವರೊಪ್ಪುವಂತಿಲ್ಲ. ಮಿ. ಜಿನ್ನರೊಡನೆ ಈ ಸಂಬಂಧವಾಗಿ ನಡಿಸಿದ ಮಾತುಕತೆಗಳು ಫಲಿಸಲಿಲ್ಲ. ಕಾಂಗ್ರೆಸಂತೂ ಕಂಠೋಕ್ತವಾಗಿ ಮೇಲಿನ ವ್ಯವಸ್ಥೆಯನ್ನು ಧಿಕ್ಕರಿಸಿಬಿಟ್ಟಿದೆ. ಪೆಥಿಕ್ ಲಾರೆನ್ಸ್, ಕ್ರಿಪ್ಸ್, ಅಲೆಕ್ಸಾಂಡರ್ ಮತ್ತು ವೇವೆಲರು ತಾ 15ರಲ್ಲಿ ಮುಂದೇನು ಎಂಬ ಕುರಿತು ತಮ್ಮೊಳಗೇನೇ 200 ಮಿನಿಟು ಪರ್ಯಾಲೋಚಿಸಿಕೊಂಡರು. ಪ್ರಧಾನಿ ಅಟ್ಲೀ ಮತ್ತು ಬ್ರಿಟಿಷ್ ಮಂತ್ರಿಮಂಡಲಕ್ಕೆ ಎಲ್ಲವನ್ನೂ ವರದಿ ಮಾಡಿದರೆಂದೂ ಅಲ್ಲಿಂದ ಹೊಸ ಸೂಚನೆ ಬಂದಿರಬೇಕೆಂದೂ ತಿಳಿದುಬರುತ್ತದೆ. ಕಾಂಗ್ರೆಸ್ ಮತ್ತು ಲೀಗುಗಳ ಅಭಿಪ್ರಾಯವನ್ನೊಂದುಮಾಡಿಸುವ ಉಪಾಯವೇ ಬ್ರಿಟಿಷ್ ರಾಯಭಾರಿಗಳಿಗಿರಲಿಲ್ಲ. ಜತೆ ಮಾತುಕತೆ ನಡಿಸುವಂತೆ ಕೇಳಿಕೊಂಡಾಗ ಮೌಲಾನಾ ಅಜಾದರೊಡನೆ ಮಾತಾಡಲು ಮಿ. ಜಿನ್ನರು ನಿರಾಕರಿಸಿದರಂತೆ. ಅಧ್ಯಕ್ಷರ ವಿನಹ ಮಿಕ್ಕವರನ್ನು ತನ್ನ ಪ್ರತಿನಿಧಿಯಾಗಿ ಕಳುಹಲಾರೆನೆಂದು ಕಾಂಗ್ರೆಸ್ ಕಮಿಟಿಯೂ ಹಠ ಹಿಡಿಯಿತು. ಪಂಡಿತ ನೆಹರುಗಳೊಡನೆ ಚರ್ಚಿಸಲು ಮಿ. ಜಿನ್ನರಿಗೆ ವೈಸರಾಯರ ಆಮಂತ್ರಣ ಹೋದುದನ್ನೂ ಅವರು ನಿರಾಕರಿಸಿದರೆಂದೂ, ಸಮಪ್ರಾತಿನಿಧ್ಯವೆಂಬುದು ಚರ್ಚಾತ್ಮಕ ವಿಷಯವೇ ಅಲ್ಲವಾದ್ದರಿಂದ ಆ ಕುರಿತು ಮಾತುಕತೆಯಿಲ್ಲವೆಂದೇ ಮಿ. ಜಿನ್ನರ ಛಲವೆಂದೂ ತಿಳಿದುಬರುತ್ತದೆ. ಆದ್ದರಿಂದ ಕೊನೆಗೆ ತಾ 16ರಲ್ಲಿ ವೈಸರಾಯರು ತಾನೇ ನಡುಗಾಲ ಸರಕಾರದ ಸದಸ್ಯರನ್ನಾರಿಸಿಕೊಳ್ಳುವ ನಿರ್ಧಾರ ಮಾಡಿ, ಒಂದು ಪ್ರಕಟಣೆ ಹೊರಡಿಸಿದರು.

ವೈಸರಾಯರ ಪ್ರಕಟಣೆ

"ಹಿಸ್ ಎಕ್ಸೆಲ್ಲೆನ್ಸಿ ವೈಸರಾಯರು ಮಂತ್ರಿ ಸಮಿತಿ ಸದಸ್ಯರ ಅಭಿಮತ ಪಡೆದು, ಕೆಲಸಮಯದಿಂದ ಎರಡು ಮುಖ್ಯ ಪಕ್ಷಗಳಿಂದ ಮತ್ತು ಕೆಲವು ಅಲ್ಪ ಸಂಖ್ಯಾಕರಿಂದಾಯ್ದುಕೊಳ್ಳಲ್ಪಟ್ಟ ಒಂದು ಸಮ್ಮಿಶ್ರ ಸರಕಾರ ಸ್ಥಾಪಿಸುವ ಸಾಧ್ಯತೆಯ ಶೋಧನೆ ನಡೆಸಿದರು. ಅಂತಹ ಸರಕಾರ ರಚನೆಯ ಮಟ್ಟಿಗೆ ಆವೆರಡು ಮುಖ್ಯ ಪಕ್ಷಗಳೊಳಗಿರುವ ತೊಡಕುಗಳನ್ನು ಆ ಸಂಬಂಧದ ಮಾತುಕತೆಗಳು ಬಹಿರಂಗಪಡಿಸಿವೆ. ಈ ಸಂಕಷ್ಟಗಳು ಮತ್ತವುಗಳ ನಿವಾರಣೆಗಾಗಿ ಎರಡೂ ಪಕ್ಷಗಳು ಮಾಡಿದ ಪ್ರಯತ್ನಗಳು ವೈಸರಾಯರಿಗೂ ಮಂತ್ರಿಸಮಿತಿಯವರಿಗೂ ಮನವರಿಕೆಯಾಗಿವೆ. ಈ ಮಾತುಕತೆಗಳನ್ನು ಇನ್ನೂ ಉದ್ದ ಬೆಳೆಸಿ ಫಲವಿಲ್ಲವೆಂದು ಅವರು ಭಾವಿಸುತ್ತಾರೆ. ಅತಿ ಹೆಚ್ಚಿನದಾದ ಹಾಗೂ ಪ್ರಾಮುಖ್ಯವಾದ ಕಾರ್ಯಭಾರ ಹೊರಲು ಬಲವಾದ ಹಾಗೂ ಪ್ರಾತಿನಿಧ್ಯ ಸ್ವರೂಪದ ನಡುಗಾಲ ಸರಕಾರದ ರಚನೆಯಾಗುವದು ನಿಜಕ್ಕೂ ಅತ್ಯಾವಶ್ಯಕವಿದೆ. ಆದ್ದರಿಂದ ಮೇ ತಾ. 16ರಲ್ಲಿ ಹೊರಡಿಸಿರುವ ಹೇಳಿಕೆಗನುಗುಣವಾಗಿ ರಾಜ್ಯಾಂಗರಚನಾ ಕಾರ್ಯವು ಸಾಗಲಿರುವದನ್ನು ಅಧರಿಸಿ, ನಡುಗಾಲ ಸರಕಾರದ ಸದಸ್ಯರಾಗಿ ಸೇರಿಕೊಳ್ಳುವಂತೆ ವೈಸರಾಯರು ಈ ಕೆಳಗಿನ ಮಹನೀಯರಿಗೆ ಆಮಂತ್ರಣ ಕಳುಹುತ್ತಾರೆ.

1. ಸರ್ದಾರ್ ಬಲದೇವ ಸಿಂಗ್.
2. ಸರ್. ಎನ್.ಪಿ. ಇಂಜಿನೀಯರ್.

WANTED

Organisers on decent salary on a nominal guarantee of business.

For further particulars please apply to:

THE
UNITED KARNATAK INSURANCE Co., Ltd.
HEAD OFFICE: **DHARWAR.**
Or
BRANCH OFFICE:
Court Road, UDIPI, S. K.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಹಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.



Approved firm by the Govt. of Mysore
Certified, by the Agent of the Govt. of Cylone Indian,

ತಾತ್ಕಾಲಿಕ ಸರಕಾರದಲ್ಲಿ ಯಾರಾರು?

3. ಶ್ರೀ. ಜಗಜೀವನ ರಾವ್.
4. ಪಂಡಿತ ಜವಾಹಿರಲಾಲ ನೆಹರು
5 ಮಿ ಎಂ. ಎ ಜಿನ್ನ.
6. ನವಾಬಝಾದಾ ಲಿಯಾಖತ್ ಅಲೀಖಾನ್
7. ಶ್ರೀ. ಹರೆಕೃಷ್ಣ ಮೆಹತಾಬ್.
8. ಡಾ। ಜೋನ್ ಮತಾಯಿ.
9. ನವಾಬ್ ಮಹಮ್ಮದ್ ಇಸ್ಮಾಯಿಲ್ ಖಾನ್.
10 ಖ್ವಾಜಾ ಸರ್ ನಾಜಿಮುದ್ದೀನ್
11. ಸರ್ದಾರ್ ಅಬ್ದುಲ್ ರಾಬ್ ನಿಸ್ತಾರ್
12 ಶ್ರೀ ಸಿ ರಾಜಗೋಪಾಲಾಚಾರಿ.
13 ಡಾ। ರಾಜೇಂದ್ರ ಪ್ರಸಾದ್.
14. ಸರ್ದಾರ್ ವಲ್ಲಭಾಯಿ ಪಟೇಲ್.

ಮೇಲಿನವರಲ್ಲಿ ಯಾರಿಗಾದರೂ ಖಾಸಗೀ ಕಾರಣದಿಂದಾಗಿ ಆಮಂತ್ರಣವನ್ನಂಗೀಕರಿಸಲು ಅಸಾಧ್ಯವಾದಲ್ಲಿ, ವೈಸರಾಯರು ಆಲೋಚನೆ ಕೇಳಿ ಅಂಥವರ ಸ್ಥಾನಕ್ಕೆ ಬೇರೆಯವರನ್ನು ಆರಿಸಿಕೊಳ್ಳುವರು. ಎರಡು ಮುಖ್ಯ ಪಕ್ಷಗಳ ನಾಯಕರ ಅಭಿಪ್ರಾಯ ಕೇಳಿದ ವೇಲೆಯೇ ವೈಸರಾಯರು ಖಾತೆಗಳನ್ನು ಹಂಚಿ ಹಾಕಲಿದ್ದಾರೆ. ಮೇಲಿನ ಮಾದರಿಯ ತಾತ್ಕಾಲಿಕ ಸರಕಾರ ರಚನೆಯು ಮುಂದಿನ ಯಾವುದೇ ಜಾತೀಯ ಪ್ರಶ್ನೆಯ ತೀರ್ಮಾನಕ್ಕೊಂದು ಮೇಲ್ಪಂಗ್ತಿಯೆಂದು ಕಟ್ಟಿಕೊಳ್ಳಕೂಡದು. ಇದೆಂದರೆ ಕೇವಲ ಸದ್ಯದ ಸಂಕಷ್ಟ ನಿವಾರಣಾರ್ಥವಾಗಿ ಕಾಲಸ್ಥಿತಿಗೆ ತಕ್ಕಂತೆ ಮುಂದೆ ಬಂದ ಹಾಗೂ ಸಾಧ್ಯವಿದ್ದಷ್ಟು ಉತ್ತಮವಾದ ನಡುಗಾಲ ಸರಕಾರ ರಚನೆ ಮಾಡುವ ವಿಧಾನ ಮಾತ್ರ.

ಈ ವಿಷಯದಲ್ಲೊಂದು ತೀವ್ರ ತೀರ್ಮಾನಗೊಳ್ಳುವ ಇಚ್ಛೆಯಲ್ಲಿ ಎಲ್ಲಾ ಸಮಾಜಗಳ ಹಿಂದೀಯರೂ ಇದ್ದಾರೆಂದು ವೈಸರಾಯರೂ ಮಂತ್ರಿ ಸಮಿತಿಯವರೂ ನಂಬುತ್ತಾರೆ. ಮತ್ತು ಆ ಮೂಲಕ ರಾಜ್ಯಾಂಗ ರಚನೆಯು ಮುಂದೊತ್ತಲ್ಪಡುವದೆಂದೂ, ಅಷ್ಟರ ವರೆಗೆ ಹಿಂದೀ ಸರಕಾರ ಯಂತ್ರವು ಸಾಧ್ಯವಿದ್ದಷ್ಟು ಪರಿಣಾಮಕಾರಿಯಾಗಿ ಸಾಗುವದೆಂದೂ ಆಶಿಸುತ್ತಾರೆ. ಆದ್ದರಿಂದ ಎಲ್ಲಾ ಪಕ್ಷೀಯ ರೂ-ಮುಖ್ಯತಃ ಎರಡು ಪ್ರಮುಖ ಪಕ್ಷಗಳು— ಈ ಸೂಚನೆಯನ್ನು ಅಂಗೀಕರಿಸಿ, ಸದ್ಯದ ಗಂಡಾಂತರಗಳಿಂದ ಪಾರಾಗುವದಕ್ಕೂ ತಾತ್ಕಾಲಿಕ ಸರಕಾರವು ಜಯಶೀಲವಾಗಿ ಸಾಗುವಂತೆ ಮಾಡುವದಕ್ಕೂ ನೆರವಾಗುವರೆಂದು ಅವರು ಆಶಿಸುತ್ತಾರೆ. ಈ ಸೂಚನೆಯು ಅಂಗೀಕಾರ ಹೊಂದಿದಲ್ಲಿ ಜೂನ್ 26ಕ್ಕೇನೇ ಹೊಸ ಸರಕಾರದ ಉದ್ಘಾಟನೆ ಮಾಡುವ ಗುರಿ ವೈಸರಾಯರಿಗಿದೆ. ಮೇಲಿನ ವಿಧಾನ ಸರಕಾರದಲ್ಲಿ ಸೇರಲು ಎರಡು ಮುಖ್ಯ ಪಕ್ಷಗಳು ಅಥವಾ ಅವುಗಳಲ್ಲೊಂದು ಅಸಮ್ಮತಿಸಿದ ಪಕ್ಷದಲ್ಲಿ, ಆ ಸ್ಥಾನಗಳಿಗೆ ಮೇ 16ರ ಹೇಳಿಕೆಗೊಪ್ಪುವವರ ಪೈಕಿ ಸಾಧ್ಯವಿದ್ದಷ್ಟು ಜನ ಪ್ರಾತಿನಿಧ್ಯವುಳ್ಳವರನ್ನು ಆರಿಸಿಕೊಳ್ಳುವದೇ ವೈಸರಾಯರ ಉದ್ದೇಶ.

ಮೇ. 16ರ ಹೇಳಿಕೆಗನುಸಾರವಾಗಿ ರಾಜ್ಯಾಂಗ ರಚನಾಯಂತ್ರ ನಿರ್ಮಾಣಕ್ಕಾಗಿ ಅಗತ್ಯವುಳ್ಳ ಚುನಾವಣೆಗಳನ್ನು ನಡೆಸುವಂತೆ ಪ್ರಾಂತಿಕ ಎಸೆಂಬ್ಲಿಗಳನ್ನು ಕರೆಯಲು ವೈಸರಾಯರು ಪ್ರಾಂತಿಕ ಗವರ್ನರುಗಳಿಗೆ ಸೂಚನೆಗಳನ್ನು ಕಳುಹಿದ್ದಾರೆ"

ಯಾರಾರ ಕಡೆ ಎಷ್ಟೆಷ್ಟು?

ಮೇಲಿನ 14 ಸದಸ್ಯರ ಪೈಕಿ, ಪಂಡಿತ ಜವಾಹಿರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಶ್ರೀ. ರಾಜಗೋಪಾಲಾಚಾರಿ, ಶ್ರೀ. ಹರೆಕೃಷ್ಣ ಮೆಹತಾಬ್, ಶ್ರೀ ಜಗಜೀವನ ರಾವ್ (ಹರಿಜನ)-ಈ 6 ಮಂದಿ ಕಾಂಗ್ರೆಸಿಗರು.

ಮಿ. ಎಂ. ಎ ಜಿನ್ನ, ನವಾಬಝಾದಾ ಲಿಯಾಖತ್ ಅಲೀಖಾನ್, ನವಾಬ್ ಮಹಮ್ಮದ್ ಇಸ್ಮಾಯಿಲ್ ಖಾನ್, ಖ್ವಾಜಾ ಸರ್ ನಾಜಿಮುದ್ದೀನ್, ಸರ್ದಾರ್ ಅಬ್ದುಲ್ ರಾಬ್‌ನಿಸ್ತಾರ್-ಈ 5 ಮಂದಿ ಮುಸ್ಲಿಂ ಲೀಗಿನವರು.

ಡಾ। ಜೋನ್ ಮತಾಯಿ ಕ್ರೈಸ್ತ ಸರ್ ಎನ್. ಪಿ. ಇಂಜಿನೀಯರ್ ಪಾರ್ಸಿ. ಸರ್ದಾರ್ ಬಲದೇವ ಸಿಂಗ್ ಸಿಖ್

ಕಾಂಗ್ರೆಸ್-ಲೀಗ್‌ಗಳನ್ನು ತಕ್ಕಡಿಯಲ್ಲಿಡುವದಾದರೆ ಮೊದಲನೆಯದಕ್ಕೆ ಒಂದು ಸ್ಥಾನ ಹೆಚ್ಚಿಗೆ ದೊರೆತಿದೆ. ಹಿಂದೂ-ಮುಸ್ಲಿಮ್ ವಿಧಾನದಿಂದ ತೂಗುವದಾದರೆ 5 ಸವರ್ಣ ಹಿಂದು (ಮೇಲಿನ 5 ಮಂದಿ ಕಾಂಗ್ರೆಸ್ ಪ್ರಮುಖರನ್ನು ಕೇವಲ ಹಿಂದುಗಳೆನ್ನಲು ಲೀಗಿನವರಿಗಲ್ಲದೆ ಮಿಕ್ಕವರಿಗೆ ಮನಸ್ಸೊಪ್ಪದು) ಒಂದು ಹರಿಜನ, 5 ಮುಸಲ್ಮಾನ್. ತಾತ್ಕಾಲಿಕ ಸರಕಾರ ರಚನೆಯ ಮಟ್ಟಿಗೆ ಕಾಂಗ್ರೆಸಿನ ಸೂಚನೆಯಿದ್ದುದೆಂದರೆ, 15 ಮಂದಿಯ ಕಮಿಟಿಯಿರಬೇಕು; ಅವರಲ್ಲಿ ಐವರನ್ನು ಲೀಗಿನವರಾರಿಸಿಕೊಡಲಿ ಮಿಕ್ಕ 10 ಮಂದಿಯನ್ನು (ಕಾಂಗ್ರೆಸಿಗರನ್ನೇ ಅಲ್ಲ) ಕಾಂಗ್ರೆಸ್ ಆರಿಸಬೇಕು. ಸದ್ಯದ ಕಾರ್ಯಕಾರೀ ಕಮಿಟಿಯಲ್ಲಿ 15 ಮಂದಿಯಿದ್ದರೂ 4 ಮಂದಿ ಮಾತ್ರ ಮುಸಲ್ಮಾನರಿದ್ದಾರೆ. ಆದರೆ ಲೀಗಿನವರ ಹಟ್ಟಾಗ್ರಹವೆಂದರೆ ತಾತ್ಕಾಲಿಕ ಸರಕಾರದಲ್ಲಿ ಹನ್ನೆರಡೇ ಮಂದಿಯಿರತಕ್ಕದ್ದು. ಅದರಲ್ಲಿ ಐದೈದು ಕಾಂಗ್ರೆಸ್-ಲೀಗ್ ಯಾನೆ ಹಿಂದೂ-ಮುಸ್ಲಿಮ್ ಪ್ರಾತಿನಿಧ್ಯವಿರಬೇಕು. ಆದರೆ ವೈಸರಾಯಿ ಮತ್ತು ಬ್ರಿಟಿಷ್ ಸಮಿತಿಯು ಇದೀಗ ದ್ವಿತೀಯ ಬಾರಿ ಇವೆರಡು ವಾದಗಳ ಮಧ್ಯ ಹಾದಿ ಹಿಡಿದಿದೆ. ಇದಕ್ಕೆ ಕಾಂಗ್ರೆಸಿನ ಆಕ್ಷೇಪವಿರುವದು ಸ್ವಾಭಾವಿಕವಾದರೂ ಕೊನೆಗದು ಒಪ್ಪುವದು ಸಂಭವನೀಯ. ಆದರೆ ಲೀಗಿನ ಪೌರುಷಕ್ಕೆ ಇದು ಸರ್ವಥಾ ಒಗ್ಗದು. ಯಾರಾದರೂ ಒಪ್ಪದಿದ್ದಲ್ಲಿ ಬೇರೆಯವರನ್ನಾರಿಸಿಕೊಳ್ಳುವೆನೆಂಬ ವೈಸರಾಯರ ಬೆದರಿಕೆಯೇ ಇಲ್ಲಿ ಕಾರ್ಯ ಸಾಧಿಸಬೇಕು 14 ಸದಸ್ಯರುಳ್ಳ ಒಂದು ಕಮಿಟಿಯಲ್ಲಿ 6 ಮಂದಿ ಕಾಂಗ್ರೆಸಿಗರೇ ಇದ್ದು ಇತರ ಅಲ್ಪಸಂಖ್ಯಾಕ ಸಮಾಜಗಳ ಮೂವರು ಸದಸ್ಯರು ನ್ಯಾಯ ಪಕ್ಷಪಾತಿಗಳಿರುವುದರಿಂದ ಅಲ್ಲಿ ನಿಜಕ್ಕೂ ಜಿನ್ನರ ಬೇಳೆ ಬೇಯುವಂತಿಲ್ಲ. ತಾತ್ಕಾಲಿಕ ಸರಕಾರದಲ್ಲಿ ಸಮಪ್ರಾತಿನಿಧ್ಯ ದೊರೆತರೆ-ರಾಜ್ಯಾಂಗ ರಚನಾ ಸಭೆಯಲ್ಲಿ ತಾವು ಬಿಕ್ಕಟ್ಟನ್ನು ನಿರ್ಮಿಸಿ ಈ ತಾತ್ಕಾಲಿಕ ಸರಕಾರವೇ ಚಿರಕಾಲ ನಿಲ್ಲುವಂತಾದರೆ-ತನ್ನ ಕಾರ್ಯ ಕೈಗೂಡುವದೆಂಬ ಆಶೆಯಿಂದ ಬ್ರಿಟಿಷ್ ಯೋಜನೆಯನ್ನು ಲೀಗ್ ಕೌನ್ಸಿಲಿನಿಂದ ಅಂಗೀಕಾರ ಮಾಡಿಸಿದ್ದ ಮಿ. ಜಿನ್ನರೀಗ ನಿರಾಶೆಗೊಂಡರೆನ್ನಬೇಕು. ಇತ್ತ ಶಾಶ್ವತ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನಾರಿಸುವ ವ್ಯವಸ್ಥೆ ನಡೆಯುತ್ತಿದೆ. ಬಂಗಾಳ ಎಸೆಂಬ್ಲಿಯ ಯುರೋಪಿಯನ್ ಸದಸ್ಯರ ಪಕ್ಷದ ಸಭೆಯು, ತಮ್ಮ ಪ್ರತಿನಿಧಿಯನ್ನು ಆ ಸಭೆಗೆ ನಿಲ್ಲಿಸ ಕೂಡದೆಂದು ನಿರ್ಧರಿಸಿ ಕಾಂಗ್ರೆಸಿನ ಬೇಡಿಕೆ ಅರೆವಾಸಿ ಫಲಿಸುವಂತೆ ಮಾಡಿದೆ. ಆದ್ದರಿಂದ ನಡುಗಾಲ ಸರಕಾರ ರಚನೆಯು ವಿಭಾಗದಲ್ಲಿ ಒಮ್ಮತವಿದ್ದ ನಿರಾಶೆಯ ಕಾರ್ಮೋಡವೀಗ ಹೆಚ್ಚೆನಂತ ಚದರಿ, ದಿಗಂತದಲ್ಲಿ ಪ್ರಕಾಶ ಕಾಣುತ್ತಿದೆ

In the Court of the District Munsiff of Kundapur

R. E. P 117/1945
O S No. 84/1...

Between
Mahabala Shetty (Plaintiff — Petitioner
and
Daraiya Shetty & others (Defendants) — Respondents

To
2nd Respondent Chandamma Shedthi,
4th Respondent Manjamma Sedthi,
5th Respondent Kanaka Shedthi,
Children of Seshi Shedthi,
All are residing at Haladi village of Udipi Taluk,
— Judgment Debtors

Whereas in the above named suit the petitioner the decree-holder, has applied for the sale of immoveable properties You are hereby informed that the 4th day of July, 1946 has been fixed for settling the terms of the proclamation of sale

B S. Shetty, B. A., L. L.
Pleader for Petitioner.
13.6.46.

For prompt and efficient Banking Service

Bank with

THE VIJAYA BANK LIMITED.

Head Office:— **MANGALORE**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನ ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ರ ಪಿನ್ನಾನ ಬಾಟ್ಲಿಗಳು ಹೊಸ್ತು ಕೆಡೆಮು ಅರವಿನಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು,** ದ.ಕ.

ಸ್ಟಾಕಿಸ್ಟರು- ಡಾ। ಐ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

WANTED

Applications are invited from candidates for the following posts:

1 Two Secondary Grade Trained Teachers
2 One Drawing Master
3 One Physical Instructor (Y M C A Trained).

Posts are permanent Dearness allowance will be given at Government rate Salary according to qualifications and service The candidates should be prepared to join service immediately Apply to

The Correspondent,
Hindu High School,
Shirva (S. Kanara.)

The Canara Banking Corporation Limited.

(Incorporated in British India, with limited Liability.)

Estd 1906.

Head Office: **UDIPI**, South Kanara.

CAPITAL

Authorised	Rs. 25,00,000
Issued & Subscribed ...	,, 16,00,000
Paid up	,, 15,60,120
Reserves	,, 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted

ಉಡುಪಿ, ಗುರುವಾರ, ೨೦-೬-'೪೬

ಸಾಂಸ್ಥಾನಿಕ ಪ್ರಜೆಗಳು

ಬ್ರಿಟಿಷ್ ಯೋಜನೆಯ ಪ್ರಾಮುಖ್ಯ ದೋಷಗಳಲ್ಲೊಂದೆಂದರೆ ಆಶ್ರಿತ ರಾಜ್ಯಗಳ ಜನತೆಯ ಕಡೆಗಿನ ಅಸಡ್ಡೆ; ಇನ್ನೂ ಬೆಳಕು ಬೀಳದಿರುವ ಅತಿ ದೊಡ್ಡ ಭಾಗವೆಂದರೂ ಅದೇ. ಬ್ರಿಟಿಷ್ ಸಮಿತಿಯು ಪ್ರತಿಯೊಂದು ವಿಷಯದಲ್ಲೂ ವಿಶೇಷ ಪ್ರಾಮುಖ್ಯತೆ ಕೊಟ್ಟಿರುವ ಮುಸಲ್ಮಾನರಿಗಿಂತ ಆಶ್ರಿತ ರಾಜ್ಯಗಳಲ್ಲಿರುವ ಪ್ರಜೆಗಳ ಸಂಖ್ಯೆ ಜಾಸ್ತಿ; ಹಿಂದುಸ್ಥಾನದ ಸುಮಾರು 93 ಮಿಲಿಯ ಜನತೆಯ ಹಣೆ ಬರಹಗಳಿಗೆ ಕೆಲವು ಆಶ್ರಿತ ರಾಜರ ಮಕುಟಗಳ ಪ್ರಕಾಶವೇ ಇಂದು ಬೆಳಕಾಗಿನಿಂತಿದೆ. ಮೇ. 16ರ ಆ ಚರಿತ್ರಾರ್ಹ ಬ್ರಿಟಿಷ್ ಹೇಳಿಕೆಯಲ್ಲಿ ಇಂತಹ ಪ್ರಾಮುಖ್ಯ ವಿಷಯದ ಕುರಿತು ಅಸ್ಪಷ್ಟಾರ್ಥದ ಮೂರು ನಾಲ್ಕು ವಾಕ್ಯಗಳಿಗಿಂತ ಹೆಚ್ಚಿಗೆ ಬಂದಿಲ್ಲ. 'ಅದು ನಮ್ಮ ಕೆಲಸವಲ್ಲ; ಆಶ್ರಿತ ರಾಜರ ಕಿರೀಟಗಳ ಮೇಲೆ ಕೈಯ್ಯಾಡಿಸುವ ನಮ್ಮ ಅಧಿಕಾರವು ಶಾಶ್ವತ ರಾಜ್ಯಾಂಗ ರಚನೆಯಾದೊಡನೆ ವಜಾ ಆಗುವದು. ಘಟನಾ ಸಮಿತಿ ಮತ್ತು ಆಶ್ರಿತ ರಾಜ್ಯಗಳೇ ತಮ್ಮೊಳಗೊಂದು ಸಂಬಂಧ ನಿರ್ಮಿಸಿಕೊಳ್ಳಬೇಕು' ಎಂದು ಬ್ರಿಟಿಷರಿದಕ್ಕೆ ಕಾರಣಕೊಟ್ಟಿದ್ದಾರೆ. ಆದೂ ನಡುಗಾಲ ಸರಕಾರದ ಅವಧಿಯಲ್ಲಿ ಸಂಸ್ಥಾನಗಳ ಮೇಲಿನ ಬ್ರಿಟಿಷ್ ಪ್ರಭುತ್ವ ತೊಲಗುವಂತಿಲ್ಲ.

ಈ ಮಟ್ಟಿಗೆ ಬ್ರಿಟಿಷ್ ಸಮಿತಿಯು ಇದಕ್ಕಿಂತ ಉತ್ತಮ ವಿಧಾನವನ್ನಂಗೀಕರಿಸಿಕೊಳ್ಳಬಹುದಿತ್ತು. 'ರಾಜ್ಯಾಂಗ ರಚನಾ ಸಭೆಯಲ್ಲಿ ಬ್ರಿಟಿಷ್ ಹಿಂದುಸ್ಥಾನದ ಪ್ರಾಂತ್ಯಗಳ ಮತ್ತು ಆಶ್ರಿತ ರಾಜ್ಯಗಳ ಪ್ರತಿನಿಧಿಗಳಿರುವ'ರೆಂದು ಬ್ರಿಟಿಷ್ ಯೋಜನೆಯನ್ನುತ್ತಿದೆ. ಹೀಗೆನ್ನುವಾಗ ಆಶ್ರಿತ ರಾಜ್ಯಗಳಲ್ಲಿ ಸದ್ಯಕ್ಕಿರುವ ರಾಜ್ಯಭಾರ ಕ್ರಮಕ್ಕನುಸಾರವಾಗಿಯೇ ಅವುಗಳ ಪ್ರತಿನಿಧಿಗಳು ಆರಿಸಲ್ಪಡುವರೆಂಬ ಅರ್ಥವಾಗುತ್ತದೆ. ಪ್ರಜಾಪ್ರಭುತ್ವವಿರುವ ಒಂದೇ ಒಂದು ಆಶ್ರಿತ ರಾಜ್ಯ ಭಾರತದಲ್ಲಿ ಸದ್ಯಕ್ಕಿಲ್ಲ. ಅಂದ ಮೇಲೆ ಘಟನಾ ಸಮಿತಿಯಲ್ಲಿ ಸಂಸ್ಥಾನಗಳ ಪರವಾಗಿ ಆ ನೃಪಗಳ ರಾಜರ ಪ್ರಾತಿನಿಧ್ಯವೇ ಇರಬೇಕೇ? ಇದು ನಿಜಕ್ಕೂ ಪ್ರಜಾನುರಾಗ ಮತ್ತು ಸಂಸ್ಕಾರರಹಿತ ಸರ್ವಾಧಿಕಾರೀ ಮನೋವೃತ್ತಿಯ ಪ್ರಾತಿನಿಧ್ಯವಾಗಲಿದೆ. ಆದರಲ್ಲೂ ಘಟನಾಸಮಿತಿಯ ಆದಿ ಭಾಗದಲ್ಲಿ ಸಂಸ್ಥಾನಗಳ ಪ್ರತಿನಿಧಿಗಳು ಭಾಗವಹಿಸುವ ವ್ಯವಸ್ಥೆ ನಿರ್ಮಾಣವಾಗಿಲ್ಲ; ಪ್ರಥಮತಃ ಸಂಸ್ಥಾನಗಳ 'ಸಂಧಾನ ಸಮಿತಿ'ಯೊಂದು ರಚಿಸಲ್ಪಟ್ಟು, ಅದೇ ಘಟನಾ ಸಮಿತಿಯೊಡನೆ ವ್ಯವಹರಿಸಬೇಕು; ಯೂನಿಯನ್ ಕೇಂದ್ರದ ರಚನೆಯಾಗುವ ಕೊನೆಯ, ಸಭೆಗಳಲ್ಲೇ ಸಂಸ್ಥಾನದ ಪ್ರತಿನಿಧಿಗಳು ಘಟನಾ ಸಮಿತಿಯಲ್ಲಿ ಸೇರಿಕೊಳ್ಳುವರು. ಈ ರೀತಿ ಬುಡದಿಂದ ತುದಿಯ ವರೆಗೂ ಸಂಸ್ಥಾನಗಳ ಒಳವ್ಯವಸ್ಥೆಯನ್ನು ಗಣನೆಗೆ ಇಟ್ಟುಕೊಳ್ಳದೆ ಪ್ರಚಲಿತ ರಾಜ್ಯಭಾರವನ್ನೇ ಸ್ವಾಗತಿಸಿದಂತಾಗಿದೆ. ಇದು ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯಾಕಾಂಕ್ಷೆಗೆ ಮಾಡಿರುವ ಅಪಮಾನ. ಸಾಂಸ್ಥಾನಿಕ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಈಗ ಹೆಚ್ಚಿನ ಅನುಕೂಲತೆ ದೊರೆಯಿತೆಂಬುದು ನಿಜ; ಆದರೆ ಮಿಕ್ಕ ಕಡೆಗಳವರಿಗೆ ಸ್ವಾತಂತ್ರ್ಯವನ್ನು ರೂಪಿಸಿಕೊಳ್ಳುವ ಸಂದರ್ಭವೊದಗಿರುವಾಗ, ಭಾರತದ ಇಷ್ಟೊಂದು ವಿಸ್ತಾರವಾದ ಭಾಗಗಳವರಿಗೆ ಅದಕ್ಕಾಗಿ ಹೋರಾಡುವ ಕೆಲಸಕೊಟ್ಟುದು ನ್ಯಾಯವಲ್ಲ. ಆದರೂ ಆಶ್ರಿತ ರಾಜರೀಗ ಕಣ್ಣುತೆರೆಯದಿದ್ದರೆ ಅವರ ವಿನಾಶ ಖಂಡಿತ. ನೂತನ ವ್ಯವಸ್ಥೆಯಲ್ಲಿ ಅವರನ್ನು ಪೀಠದಿಂದೆಬ್ಬಿಸುವ ಕೈ ಮುಂದೆ ಬಂದಿಲ್ಲ ನಿಜ, ಆದರೆ ಇನ್ನೂ ಆಕಾಶಕ್ಕೇನೇ ಮುಖ ಮಾಡಿರುವ ಸಂಸ್ಥಾನಾಧೀಶರು ತಲೆತಗ್ಗಿಸಿ ವಸ್ತುಸ್ಥಿತಿಯನ್ನು ನೋಡಬಲ್ಲರಾದರೆ ತಮ್ಮ ಪೀಠದಡಿಯಲ್ಲಿ ಕುಳಿ ತೋಡಲಾಗಿದೆ ಎಂಬುದನ್ನು ಕಾಣದಿರರು. ನಿರಂಕುಶಾಡಳಿತೆಯ ಯುಗ-ಕಿರೀಟಗಳ ಕಾಲ-ಕಳೆದಿದೆ ಅಖಿಲ ಯುರೋಪಿನಲ್ಲೇ ಅತೀ ಹಿರಿಯ ರಾಜ ಕುಟುಂಬವಾಗಿದ್ದು, 900 ವರುಷಗಳಿಂದಿದ್ದ ಇಟಲಿಯ ರಾಜತ್ವವು ಮೊನ್ನೆ ತಾನೇ ಮಣ್ಣುಪಾಲಾಗಿ ರಿಪಬ್ಲಿಕ್ ಸರಕಾರ ಬಂದಿದೆ. ಬ್ರಿಟಿಷ್ ಮೇಲಧಿಕಾರದ ಸೂತ್ರ ಕಡಿಯಲ್ಪಟ್ಟ ಸಂಸ್ಥಾನಾಧೀಶರು ಸ್ವತಂತ್ರ ನವ ಭಾರತದಲ್ಲಿ ತಮ್ಮ ಪ್ರಜೆಗಳ ಅಭಿಮತಕ್ಕೆ ವ್ಯತಿರಿಕ್ತವಾಗಿ ಒಂದೇ ಒಂದು ದಿನ ಅಧಿಕಾರ ನಿರ್ವಹಿಸಲಾರರು. ಆಶ್ರಿತರ ಮೇಲೆ ಅಂತಹ ಸುಧಾರಣೆಯು ಆಪತ್ತಾಗಿ ಬಂದು ಬೀಳುವದಕ್ಕಿಂತ, ಅದನ್ನು ಅಧಿಕೃತವಾಗಿ ಆಮಂತ್ರಿಸಿಕೊಳ್ಳುವದೇ ವಾಸಿ. ಆದ್ದರಿಂದ ತಾವು ಕೇವಲ ನಾಮ ಮಾತ್ರ ರಾಜರಾಗಿ ಉಳಿಯುವ ಪ್ರಜಾಪ್ರಭುತ್ವವನ್ನು ತಮ್ಮ ರಾಜ್ಯಗಳಲ್ಲಿ ಸ್ಥಾಪಿಸಿ, ರಾಜ್ಯಾಂಗ ರಚನಾ ಸಭೆಗೆ ಆ ಪ್ರಜಾಪ್ರತಿನಿಧಿಗಳೇ ಹೋಗುವಂತಹ ವ್ಯವಸ್ಥೆಯನ್ನು ರಾಜರು ಮಾಡಿಕೊಳ್ಳುವದು ಎಲ್ಲರಿಗೂ ಹಿತಕರ.

ಮಂಗಳೂರು

ಇಲೆಕ್ಟ್ರಿಕ್ ಸೈರನುಗಳ ಏಲಂ— ಎರಡು ಉತ್ತಮ ಇಲೆಕ್ಟ್ರಿಕ್ ಸೈರನುಗಳನ್ನು ಇದೇ ಬರುವ ಜೂನ್ ೨೯ನೇ ಶನಿವಾರ ಮಧ್ಯಾಹ್ನ ೨-೩೦ ಗಂಟೆಗೆ ದ. ಕ. ಜಿಲ್ಲಾ ಟ್ರೆಜರಿ ಡಿಪ್ಯುಟಿ ಕಲೆಕ್ಟರರ ಆಫೀಸಿನಲ್ಲಿ ಬಹಿರಂಗ ಏಲಂ ಹಾಕಲಾಗುವುದು. ಎಷ್ಟಕ್ಕೆ ಏಲಂ ಆಗಿ ಹೋಗುವುದೋ ಆ ಮೊಬಲಗನ್ನು ಕೂಡಲೇ ನಗದಿ ತೆತ್ತು ಸೈರನುಗಳನ್ನು ಕೊಂಡುಹೋಗತಕ್ಕದ್ದು ಎಂದು ಟ್ರೆಜರಿ ಡಿಪ್ಯುಟಿ ಕಲೆಕ್ಟರರು ತಿಳಿಸುತ್ತಾರೆ.

ಸಭೆ— ದ. ಕ. ಜಿಲ್ಲಾ ಯುವಜನ ಕಾಂಗ್ರೆಸಿನ ತಾತ್ಕಾಲಿಕ ಸಮಿತಿಯ ಸಭೆಯು ಶ್ರೀ. ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಯುವಜನ ಕಾಂಗ್ರೆಸಿನ ಸದಸ್ಯರನ್ನು ಜೂನ್ ತಾ. ೩೦ರ ತನಕ ಸಾಧ್ಯವಿದ್ದಷ್ಟು ಸೇರಿಸಬೇಕು; ಜುಲೈ ತಿಂಗಳ ಮೊದಲನೆ ರವಿವಾರ ಮಹಾಸಭೆ ಕರೆಯಬೇಕು; ಜಿಲ್ಲೆಯ ಇತರ ಭಾಗಗಳಲ್ಲಿ ಯುವಜನ ಕಾಂಗ್ರೆಸಿನ ಸದಸ್ಯರನ್ನು ಸೇರಿಸುವರೆ ಶ್ರೀ। ದೇವಪ್ಪ ಆಳ್ವರನ್ನು ಕೇಳಿಕೊಳ್ಳಬೇಕು; ಯುವಜನ ಕಾಂಗ್ರೆಸಿನ ಧ್ಯೇಯ ಮತ್ತು ಉದ್ದೇಶಗಳನ್ನು ವಿವರಿಸುವಂತಹ ಕರ ಪತ್ರಗಳನ್ನು ಛಾಪಿಸಿ ಹಂಚಬೇಕು, ಬರುವ ಸಪ್ಟಂಬರ್ ತಿಂಗಳ ಸುಮಾರಿಗೆ ಯುವಜನ ಕಾಂಗ್ರೆಸ್ಸಿನ ಪ್ರಥಮ ಸಮ್ಮೇಳನ ಕರೆಯಬೇಕು; ಮುಂತಾದ ನಿರ್ಣಯಗಳಾದುವು.

ಹವಾಮಾನ—ಕಳೆದ ನಾಲ್ಕೈದು ದಿನಗಳಿಂದ ಹಗಲು ರಾತ್ರಿ ಚೆನ್ನಾಗಿ ಮಳೆ ಸುರಿಯುತ್ತಿದೆ. ಮಳೆ ಆರಂಭವಾದಂದಿನಿಂದ ಈ ತನಕ ಸುಮಾರು ೩೦ ಇಂಚುಗಳಷ್ಟು ಮಳೆ ಬಿದ್ದದ್ದಾಗಿರಬಹುದು. ಹೊಲಗಳಲ್ಲಿ ಸಾಗುವಳಿ ಕೆಲಸ ಪೂರ್ಣಗೊಳ್ಳುತ್ತಾ ಬಂದಿದೆ. ಊರಲ್ಲಿ ಅಲ್ಲಲ್ಲಿ ವಿಷಮಜ್ವರ, ಆಮಾಂಶ ಕಾಹಿಲೆ-ಇತ್ಯಾದಿ ಮಳೆಗಾಲದ ಆರಂಭದಲ್ಲಿ ತೋರುವ ರೋಗರುಜಿನಗಳು ಕಾಣಸತೊಡಗಿವೆ.

ರಸ್ತೆಗಳ ರಿಪೇರಿ— ಪ್ರಮುಖ ರಸ್ತೆಗಳೇ ವಾಹನ ಸಂಚಾರ ನಡೆಯುವ ಕಾಲಕ್ಕೆ ರಂಗಪಂಚಮಿಯ ಪಿಚಕಾರಿಯ ರೂಪ ಧರಿಸುತ್ತವೆ. ರಸ್ತೆಗಳಲ್ಲಿ ಅಲ್ಲಲ್ಲಿ ದೊಡ್ಡ ದೊಡ್ಡ ಗುಳಿಗಳು ಬಿದ್ದು ದಾರಿ ನಡೆಯುವವರಿಗೆ ಕೆಸರು ನೀರಿನ ಅಭಿಷೇಕವಾಗುತ್ತದೆ. ರಸ್ತೆಗಳ ರಿಪೇರಿ ಬೇಗನೆ ನಡೆಯುವುದವಶ್ಯವಿದೆ.

ರಾಷ್ಟ್ರ ಸೇವಾದಳದ— ಸೈನಿಕರ ಮಹಾ ಸಭೆಯು ತಾ ೧೮ರಂದು ಕೆನರಾ ಹೈಸ್ಕೂಲಿನಲ್ಲಿ ಜರಗಿ, ಜಿಲ್ಲಾ ಸಂಘಟಕ ಶ್ರೀ ರಾಮರಾಜ ಕಿಣಿಯವರ ನೇತೃತ್ವದಲ್ಲಿ ಈ ಕೆಳಗಿನ ಮಂಡಳಿಯು ಸ್ಥಾಪಿಸಲ್ಪಟ್ಟಿತು. ಶ್ರೀ ಗಣಪತಿ ಪ. ವಿ. ಉಪಾಧ್ಯಾಯರು ನಗರ ಸಂಘಟಕ, ಬಾಲಕೃಷ್ಣ ಬಾಳಿಗರು ಕಾರ್ಯದರ್ಶಿ. ಗೋಪಾಲ ಶೆಣೈ ಶಿಕ್ಷಕ; ಎಮ್. ಎಸ್. ಪೈ ಕೋಶಾಧಿಕಾರಿ.

ಚಿಮಿಣಿ-ಎಣ್ಣೆಯ ಸಂಗ್ರಹವು ಹೆಚ್ಚಿರುವ ಪರಿಂದ ಮಂಗಳೂರು ನಗರದಲ್ಲಿ ಎಣ್ಣೆಯ ಕಾರ್ಡು ಉಳ್ಳವರಿಗೆ ತುಸು ಹೆಚ್ಚು ಎಣ್ಣೆ ಸಿಗ ಪುದು ತಿಂಗಳಿಗೆ ಒಂದು ಬಾಟ್ಲಿ ಇರುವವರಿಗೆ ೧॥ ಬಾಟ್ಲಿಯೂ ೧॥ ಬಾಟ್ಲಿ ಇರುವವರಿಗೆ ೨ ಬಾಟ್ಲಿಯೂ ಸಿಗುವುದು. ತಿಂಗಳಿಗೆ ಈಗ ೧॥ ಬಾಟ್ಲಿಗಿಂತ ಹೆಚ್ಚಿಗೆ ಇದ್ದವರಿಗೂ, ಮನೆಯಲ್ಲಿ ಇಲೆಕ್ಟ್ರಿಕ್ ದೀಪವಿದ್ದು ತಿಂಗಳಿಗೆ ॥ ಬಾಟ್ಲಿ ಸಿಗುವವರಿಗೂ ಸದ್ಯ ಹೆಚ್ಚಿಗೆ ಸಿಗಲಾರದು.

ಉಡುಪಿ

ಕೌನ್ಸಿಲು ಸಭೆಯು—ತಾ. 17ರಲ್ಲು ಸಂಜೆ ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಟೌನ್ ಸರ್ವೆ ಕೆಲಸವು ಟೌನ್ ಪ್ಲಾನಿಂಗ್ ಕಾರ್ಯಕ್ಕಿಂತ ಮುಂಚಿತವಾಗಿ ನಡೆಯಬೇಕೆಂದು ನಿರ್ಧಾರವಾಯಿತು. ಲೈಬ್ರೆರಿಗೆ ರೂಪಾಯಿ 400ರ ಗ್ರಾಂಟ್ ಪಡೆಯುವರೆ ಮಾಡಿದ ಅರ್ಜಿಯನ್ನು ಮಂಜೂರು ಮಾಡಲಾಯಿತು.

ಮಳೆ-ಚೆನ್ನಾಗಿ ಬರುತ್ತಿದೆ. ಕೂಲಿಯಾಳುಗಳ ಕೊರತೆಯಿಂದ ಬೇಸಾಯಕ್ಕೆ ತುಂಬ ತೊಂದರೆಯಾಗಿದೆಯೆಂಬ ಕೂಗೆದ್ದಿದೆ.

ಕೊಡೆ-ವಸ್ತ್ರದ ಕೊಡೆಗಳಿಲ್ಲದೆ ಜನತೆಯಲ್ಲಿ ಹಾಹಾಕಾರವೆದ್ದಿದೆ. ಕೊಡೆಗಳಿಗಾಗಿ ಅರ್ಜಿ ಎಂಬುದು ಜನತೆಗೆ ತಿಳಿಯಲಾಗಿದೆ. ಅರ್ಜಿ ಕೊಟ್ಟರೂ ನಿರಾಶೆಯೇ ಹಲವರ ಗತಿಯಾಗಿದೆ.

ಗೋಧಿ ತಯಾರಿಕೆಯ ಯೋಜನೆ-ಅಕ್ಕಿಯ ಅಭಾವದಿಂದಾಗಿ ಉಡುಪಿಯ ಪಡಿಯಕ್ಕಿ ಕ್ಷೇತ್ರದಲ್ಲಿ ತಾ. 16-6-46ರಿಂದ ಗೋಧಿ ಹಿಟ್ಟು (ಮೈದಾ) ಸಜ್ಜಿಗೆ ಮತ್ತು ಬ್ರೆಡ್ ರೇಶನ್ ಆಹಾರವಸ್ತುಗಳಾಗಿ ಜನತೆಗೆ ಕೊಡಲಾಗುವುದು. ರೇಶನ್ ಕಾರ್ಡುಗಳನ್ನೂ ಪರ್ಮಿಟುಗಳನ್ನೂ ರೇಶನ್ ಅಂಗಡಿಗಳಲ್ಲಿ ಹಾಜರು ಮಾಡಿ ಮೇಲಿನ ವಸ್ತುಗಳನ್ನು ಪಡೆಯಬಹುದಾಗಿದೆ. ಬ್ರೆಡ್ ಮಾತ್ರ ಅವು ತಯಾರಾಗುವ ಅಂಗಡಿಗಳಲ್ಲಿ ದೊರೆಯುವುದು. 56 ಯೂನಿಟ್‌ಗಳಷ್ಟು ರೇಶನ್ ಪಡೆಯತಕ್ಕವನು ಮೈದಾ, ಸಜ್ಜಿಗೆ, ಬ್ರೆಡ್ ಮತ್ತು ಅಕ್ಕಿಯನ್ನು ಒಟ್ಟಿಗೆ 56 ಯೂನಿಟ್‌ಗಳಷ್ಟೇ ಪಡೆಯಲು ಅರ್ಹನು. ಮೈದಾ, ಸಜ್ಜಿಗೆ ಸ್ಟಾಕು ಕಡಿಮೆಯಾದಲ್ಲಿ ಅದೇ ದಾಮಾಷಯದ ಮೇಲೆ ಅವನ್ನು ಪಡೆಯಬಹುದಾಗಿದೆ.

ಖಾನಾವಳಿಯಾ ಹೋಟೆಲುಗಳು ಹದಿನೈದು ದಿವಸಗಳಿಗೆ ಒಂದು ಗೋಣಿಗಿಂತ ಜಾಸ್ತಿ ಮೈದಾ ಅಥವಾ ಸಜ್ಜಿಗೆ ಪಡಕೊಳ್ಳುವಲ್ಲಿ ಆ ಬಗ್ಗೆ ರೇಶನಿಂಗ್ ಆಫೀಸರರಿಂದ ಪರ್ಮಿಟು ಪಡೆದು ರಖಂ ವ್ಯಾಪಾರಿಗಳಿಂದ ಪಡೆಯಬೇಕು. ಇತರ ಚಿಲ್ಲರೆ ಹೋಟೆಲುಗಳು ರಿಟೈಲ್ ಅಂಗಡಿಗಳಿಂದ ಪಡೆಯಬಹುದು.

ಬ್ರೆಡ್--ವಿಶೇಷತಃ ಅಪೇಕ್ಷಿಸುವವರು ಮುಂದಾಗಿ ಬ್ರೆಡ್ ವ್ಯಾಪಾರಿಗಳಲ್ಲಿ ತಮ್ಮ ಕಾರ್ಡನ್ನು ರಿಜಿಸ್ತ್ರ ಮಾಡಬೇಕು. ಬ್ರೆಡ್ ಕೂಪನ್‌ಗಳನ್ನು ಪಡೆಯಬೇಕು. ಕಾಯಿಲೆ ಸಂಬಂಧ ಅಪರೂಪ ಬ್ರೆಡ್ಡನ್ನು ಅಪೇಕ್ಷಿಸುವವರು ಆ ಬಗ್ಗೆ ರಿಜಿಸ್ತ್ರಿ ಮಾಡುವ ಆವಶ್ಯಕತೆಯಿಲ್ಲ. ರೇಶನ್ ಯೂನಿಟ್‌ಗಳ ಮಿತ ಈ ರೀತಿ ನಿರ್ಧರಿಸಲಾಗಿದೆ.

1 ಯೂನಿಟ್ ಸಜ್ಜಿಗೆ= ¼ ಸಾವು. 1 ಯೂನಿಟ್ ಮೈದಾ ಹಿಟ್ಟು - 6 ಔನ್ಸು (15 ತೊಲೆ) 1 ಯೂನಿಟ್ ಬ್ರೆಡ್= 8 ಔನ್ಸು ಭಾರದ ½ ಪೌಂಡು.

ಪ್ರಕಟಣೆ

ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಮೂಲ್ಕಿ ಶ್ರೀನಿವಾಸ ರಾಮಚಂದ್ರ ಕುಡುವರು ದೇವರ ಭಂಡಾರಕ್ಕೆ ಬರಕೊಟ್ಟ ಸೆಟ್ಲಮೆಂಟ್ ಸಾಧನದ ಪ್ರಕಾರ ಒಡವರಿಗೆ ಕೊಡತಕ್ಕ ಧರ್ಮವು ದೇಶದ ಈಗಿನ ಪರಿಸ್ಥಿತಿಗನುಸರಿಸಿ ಇದೇ ಜ್ಯೇಷ್ಠ ಬ ೯ಯು ಆದಿತ್ಯವಾರ ತಾ. 23-6-1946ನೇ ಮಧ್ಯಾಹ್ನ 4 ಗಂಟೆಯಿಂದ ಪ್ರಾರಂಭಿಸಲ್ಪಡುವದು.

ಮೆನೇಜಿಂಗ ಟ್ರಸ್ಟಿ.

ಪ್ರಕಟಣೆ.

ನಂದಳಿಕೆ—ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹಳೆ ಕಟ್ಟಡವನ್ನು ದುರಸ್ತಿ ಮಾಡುವ ಮತ್ತು 250 ಮಕ್ಕಳಿಗೆ ಬೇಕಾಗುವ ಹೊಸ ಕಟ್ಟಡವನ್ನು ನಿರ್ಮಿಸುವುದಕ್ಕಾಗಿ ಬೆಳ್ಮಣ್ಣು ಪಟೇಲ್ ಶ್ರೀ. ಯಮ್. ವೆಂಟ್ರಾಯರು ಅಧ್ಯಕ್ಷರಾಗಿ ಮೊದಲೇ ಒಂದು ಸಮಿತಿಯು ಸ್ಥಾಪಿಸಲ್ಪಟ್ಟಿರುತ್ತದೆ. ಸದ್ರಿ ಸಮಿತಿಯ ಕಡೆಯಿಂದ ಕಾರ್ಯದರ್ಶಿಯವರು ಧನಸಹಾಯಕ್ಕಾಗಿ ಕೆಲವು ಸದಸ್ಯರೊಡನೆ ಬೊಂಬಾಯಿ ಮೈಸೂರು ಅತ್ತ ಕಡೆ ಶೀಘ್ರ ಹೊರಡಲಿಕ್ಕಿರುವರು. ಆ ಸಂದರ್ಭದಲ್ಲಿ, ಪರಊರ ಮತ್ತು ಊರ ಮಹನೀಯರೂ ಈ ಶಾಲಾ ಹಳೇ ವಿದ್ಯಾರ್ಥಿಗಳೂ ಪ್ರೋತ್ಸಾಹಿಸಬೇಕಾಗಿ ಸಮಿತಿಯ ಕಡೆಯಿಂದ ವಿನಂತಿ.

ವೈಸರಾಯೀ ಆಮಂತ್ರಣದ ಕುರಿತು ಕಾಂಗ್ರೆಸ್-ಲೀಗ್ ವಿಮರ್ಶೆ.

ತಾತ್ಕಾಲಿಕ ಸರಕಾರ ರಚನೆಯ ಕುರಿತು ವೈಸರಾಯರು ಕೊಟ್ಟ ಹೇಳಿಕೆಯ ಪರಾಮರ್ಶೆಯು ತಾ. 16ರಿಂದ ಆರಂಭಿಸಿದೆ ಇದು ವರೆಗೆ ಕೊನೆಯ ನಿರ್ಧಾರವಾಗಿಲ್ಲ. ಕಾಂಗ್ರೆಸ್ ಕಮಿಟಿ ಅಳವಾದ ಆಲೋಚನೆಯಲ್ಲಿ ಬಿದ್ದಿದೆ. ತಾ. 17ರಲ್ಲಿ ಮೌಲಾನಾ ಅಜಾದರು ಸರ್. ಕ್ರಿಪ್ಸರೊಡನೆ ದೀರ್ಘ ಸಂಭಾಷಣೆ ನಡಿಸಿದರು. ಮಹಾತ್ಮಾ ಗಾಂಧಿಯವರಿಗೂ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರಿಗೂ ಪ್ರಮುಖ್ಯ ಮಾತುಕತೆಗಳಾದುವು. ಇತ್ತ ಮುಸ್ಲಿಂ ಲೀಗ್ ಕಾರ್ಯಕಾರೀ ಕಮಿಟಿಯೂ ತಾ. 16ರಿಂದ ವೈಸರಾಯೀ ಸೂಚನೆಯ ಗಾಢಾಲೋಚನೆಯಲ್ಲಿ ಬಿದ್ದಿದೆ. ಎರಡೂ ಕಡೆಗಳವರ ಕೊನೆಯ ತೀರ್ಮಾನಗಳು ಇದೇ ತಾ. 19 ರೊಳಗೆ ದೊರೆತಿರಬಹುದು.

ಕಾಂಗ್ರೆಸ್ ನಡಿಸುತ್ತಿರುವ ವಿಮರ್ಶೆ

ತಾವು 15 ಹೆಸರಿದ್ದ ಪಟ್ಟಿಯೊಪ್ಪಿಸಿದ್ದರೂ ವೈಸರಾಯರು 14ನ್ನಾದರೂ ನೇಮಿಸಿ ಕೊಂಡಿದ್ದಾರೆಂಬ ಅರ್ಧ ಸಮಾಧಾನ ಕಾಂಗ್ರೆಸಿಗರಿಗಿದೆ. ಕಾಂಗ್ರೆಸಿಗರು ಸೂಚಿಸಿದ್ದ 12 ಹೆಸರುಗಳನ್ನು ವೈಸರಾಯರು ಮಾನ್ಯಮಾಡಿದ್ದಾರೆ ಅವರ್ಣ-ಸವರ್ಣ ಭೇದವಿಲ್ಲದ ಕಾಂಗ್ರೆಸಿಗೆ 6 ಸ್ಥಾನಗಳು ದೊರೆತಿರುವದರಿಂದ ಲೀಗಿಗೆ ಸಮಪ್ರಾತಿನಿಧ್ಯ ತಪ್ಪಿದೆ. ಕೇಂದ್ರ ಎಸೆಂಬ್ಲಿಯಲ್ಲಿ ನಾಯಕರಾಗಿರುವ ಶ್ರೀ ಶರಶ್ಚಂದ್ರ ಬೋಸರಿಗೆ ಸ್ಥಾನ ಕೊಡದಿದ್ದುದು ತೀರಾ ಆಕ್ಷೇಪಣೀಯ. ಅಂತೆಯೇ ಕಾಂಗ್ರೆಸ್ ಹ್ಯಾಕಮಾಂಡಿನೊಡನೆ ಪ್ರಸ್ತಾಪಿಸದೆ ಒರಿಸ್ಸಾದ ಪ್ರಧಾನ ಮಂತ್ರಿಯಾಗಿರುವ ಶ್ರೀ. ಹರೇಕೃಷ್ಣ ಮೆಹತಾಬರನ್ನು ನೇಮಿಸಿಕೊಂಡದ್ದು ತಪ್ಪು. ಒರಿಸ್ಸಾದಿಂದ ಮೆಹತಾಬರನ್ನು ಬಿಡುವದಕ್ಕಾಗಲೀ ಎಸೆಂಬ್ಲಿ ನಾಯಕ ಶರಶ್ಚಂದ್ರ ಬೋಸರನ್ನು ಸೇರಿಸಿಕೊಳ್ಳದಿರುವದಕ್ಕಾಗಲೀ ಕಾಂಗ್ರೆಸಿನ ಒಪ್ಪಿಗೆಯಿಲ್ಲ. ಅಂತೆಯೇ ಪಾರ್ಸಿಗಳ ಪರವಾಗಿ ಸರ್. ನೋಶಿರ್ವಾನ್ ಇಂಜನೀಯರರ ಬದಲಿಗೆ ಬೇರೆಯವರನ್ನು ಆರಿಸಿಕೊಳ್ಳಬಹುದಿತ್ತು. ಕಾಂಗ್ರೆಸಿನವರ ಪಟ್ಟಿಯಲ್ಲಿದ್ದ ಆಂಗ್ಲೋ ಇಂಡಿಯಾನರಾದ ಮಿ ಫ್ರಾಂಕ್ ಅಂತೋನಿಯವರ ಹೆಸರನ್ನೂ ಬಿಡಲಾಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಪ್ರತಿನಿಧಿಯ ವಿರುದ್ಧ ನಿಂತು ಸೋತುಹೋಗಿದ್ದ, ಮಿ. ಜಿನ್ನರ ಪಟ್ಟದಶಿಷ್ಯ ಅಬ್ದುಲ್‌ರಾಬ್ ನಿಸ್ತಾರರನ್ನು ನೇಮಿಸಿಕೊಂಡದ್ದು ಅತಿರೇಕ. ಥೀಗೆಲ್ಲಾ ಕಾಂಗ್ರೆಸ್ ವಿಮರ್ಶೆಗಳವೆ. ಪ್ರತಿಯೊಂದು ಬಾರಿಯೂ ಜಿನ್ನರನ್ನೊಲಿಸುವ ಪ್ರಯತ್ನವೇ ನಡೆದಿದೆಯೆಂದು ಜಿಗುಪ್ಸೆ ತೋಳಿತಿದೆ. ಆದರೆ ಆ ಮೊದಲಿನ ವಿಧಾನಗಳಿಗಿಂತ ಇದು ವಾಸಿಯೆಂಬ ಸಮಾಧಾನವಿದೆ. ಅಂತೂ ಹಿಡಿಯಲಿಕ್ಕೂ ಇಲ್ಲ, ಬಿಡಲಿಕ್ಕೂ ಆಲ್ಲವೆಂಬಂತೆ ಕಾಂಗ್ರೆಸ್ ದೀರ್ಘಾಲೋಚನೆಯಲ್ಲಿ ಬಿದ್ದಿದೆ. ಯಾವ ತೀರ್ಮಾನಕ್ಕೇನೇ ಬಂದರೂ ಕಾಂಗ್ರೆಸಿನ ಮನಸ್ಸು ಶುಭ್ರನಾಗದಂತಾಗಿದೆ.

ಲೀಗ್ ಏನಂತೆ?

ಮುಸ್ಲಿಂ ಲೀಗಿನ ಧ್ಯೇಯ... ಸವರ್ಣ ಹಿಂದುಗಳೊಡನೆ ಮುಸ್ಲಿಮರಿಗೆ ಸಮಪ್ರಾತಿನಿಧ್ಯ ದೊರೆತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮುಸ್ಲಿಂ ಸ್ಥಾನಗಳಿಗೆಲ್ಲಾ ಲೀಗಿನವರನ್ನೇ ಆರಿಸಿಕೊಂಡಿರುವುದರಿಂದ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಲೀಗ್ ಎಂದು ಒಪ್ಪಿದಂತಾಗಿದೆ. ಆದರೆ ಇದೀ ಕಮಿಟಿಯಲ್ಲಿ ಮುಸ್ಲಿಮರ ವರ್ಚಸ್ಸು ಕಡಿಮೆಯಿದೆ-ಎಂದೆಲ್ಲಾ ಲೀಗಿನವರ ಅಭಿಪ್ರಾಯವಿದೆ. ಕಾಂಗ್ರೆಸನ್ನು ಬದಿಗೊತ್ತಿ ಲೀಗ್ ಸರಕಾರ ಸ್ಥಾಪನೆಯಾಗುವದೆಂಬ ಆಶೆ ಮುಸಲ್ಮಾನರಲ್ಲಿದ್ದರೂ ಸದ್ಯ ಆ ಬಯಲಾಸೆ ಕುಸಿದು ಬಿದ್ದಿದೆ.

ಸದ್ಯದ ಸ್ಥಿತಿಗತಿಗಳನ್ನು ನೋಡುವಾಗ ವೈಸರಾಯರಂಗೀಕರಿಸಿದ ಇಂದಿನ ವಿಧಾನವು ಇಕ್ಕಡೆಯವರಿಗೂ ಸಮಾಧಾನಕರವಲ್ಲ. ಆದರೆ ತಾವು ನಿರಾಕರಿಸಿದಲ್ಲಿ ಅನ್ಯರು ಬರುವ ಅಪಾಯ ಖಂಡಿತವಿರುವುದರಿಂದ ಇಕ್ಕಡೆಯವರೂ ಕೊನೆಗೆ ಒಪ್ಪಿಗೆ ಕೊಡುವ ಸಂಭವವಿದೆ. ಘಟನಾ ಸಮಿತಿಗೆ ಪ್ರತಿನಿಧಿಗಳನ್ನಾರಿಸಲು ಎಸೆಂಬ್ಲಿ ಸಭೆಗಳನ್ನು ಕರೆಯುಲು ಗವರ್ನರರು ಕೇಳಿಕೊಂಡದಕ್ಕೆ ತಾವು ಸೂಚನೆ ಕೊಡದೆ ಮಾಡಬೇಡಿರೆಂದು ಕಾಂಗ್ರೆಸ್ ಹ್ಯಾಕಮಾಂಡ್ ಕಾಂಗ್ರೆಸ್ ಮಂತ್ರಿಗಳಿಗೆ ತಿಳಿಸಿದೆ.

BANK WITH THE LAPGEST CONNECTIONS ON THE WEST COAST

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD. 1925

The S. R. S. Home Old Boarders Association, Mangalore

In the meeting of the above Association held on 14-6-'46 it has been resolved that on account of the arrears in the collection of the annual subscription due from the members, that the persons who become life members by payment of Rs. 10/- or patron members by payment of Rs. 25/- by the end of December 1946 their aggregate arrears up to date will be given up.

It is therefore requested that the old Boarders wherever they are residing may send their life or patron membership fee without waiting for any separate communication.

For the benefit of the many unemployed young men and women of the community who desire to be employed in suitable places be-fitting their qualifications, a register is maintained by the Old Boys Association, and a such men and women are requested to register their names with the member in charge of the Information Bureau of the Association (Dr. K. B. Shetty, X-Ray Institute, Hampankatta, Mangalore) with their qualifications age etc. and their permanent addresses.

The Old Boys Association intend to get all the necessary information with regard to the vacancies in the different departments in the presidency and inform the suitable candidates and try to guide them so that they may try their chances to secure employment at the earliest opportunity.

It is hoped that every one take advantage of the scheme and register their names as early as possible.

(Sd.) **K. U. Shetty,**
Hon. Secretary,
S. R. S Home Old Boarders Association.
MANGALORE, 15-6-46.

ಕಡಂದಲೆ ಬೋರ್ಡ್ ಶಾಲಾ ಕಟ್ಟೋಣದ ವಿಸ್ತಾರಣೀ ಸಮಿತಿ

ಮಹಾಶಯರೇ,

ನಮ್ಮ ಸಮಿತಿಯು ಕಡೆಯಿಂದ ಮುಂಬಾಯಿ ಮದ್ರಾಸು ಮುಂತಾದ ಕಡೆಯ ಮಹನೀಯರಲ್ಲಿ ಕಟ್ಟೋಣದ ವಿಸ್ತರಣದ ಬಗ್ಗೆ ಧನ ಸಹಾಯವನ್ನು ಕೋರಲು ಪ್ರತಿನಿಧಿಗಳು ತ್ವರ್ಯದಲ್ಲಿ ಹೊರಡಲಿರುವರು.

ವಿದ್ಯಾಭಿಮಾನಿಗಳಾದ ತಾವೆಲ್ಲರೂ ಧನ ಸಹಾಯವನ್ನಿತ್ತು, ಪ್ರೋತ್ಸಾಹಿಸಿ, ಪುಣ್ಯ ಸಂಪಾದಿಸಿಕೊಳ್ಳಬೇಕಾಗಿ ಕೋರುತ್ತೇನೆ.

ಪಟೇಲ್ ಕಡಂದಲೆ ಗುತ್ತು
ದೇಜು ಶೆಟ್ಟಿ,
ಕಮಿಟಿ ಪ್ರಸಿಡೆಂಟ್
ಕಡಂದಲೆ, ತಾ. 10 6-46.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಕೆ ಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ಥ್ ಕಂಟ್ರೋಲಿಗೆ ರೂ. 4/. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
F. D. S. (A E.) Tollygange, Calcutta.
ಸ್ಟಾಕಿಸ್ಟ್: ಸಾ ಕಂಪೆನಿ, ಮಂಗಳೂರು

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ.

ಜವೇರಿಯಸ್ ಜೀವನ ಮಿಕ್ಶ್ಚರ್

ಏಮ್. ಜೆ. ಜವೇರಿಯಾ ಪುಸ್ತಕಂ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨.

ತಾರೀಕು **20—6—46**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ಸಾಮಾಜಿಕ ಚಿತ್ರಗಳಲ್ಲಿ ಸರ್ವಶ್ರೇಷ್ಠವಾದ
ಹಾಸ್ಯರಸಪೂರ್ಣ ಚಿತ್ರ.

ಮನೋರಮ

ಈಶ್ವರಲಾಲ್, ಲೀಲಾ ಚಿಟ್ನೀಸ್, ಚಾರ್ಲಿ.

ಬರುವ ಚಿತ್ರ-
ಕೆಪ್ಟನ್ ಬ್ಲಡ್, ಎರೊಲ್ ಫ್ಲಿನ್.

ಸ್ವೀಕಾರ-ವಿಮರ್ಶೆ

೮. ಸಂಗೀತಾಚಾರ್ಯ (ಭಾಗ ೧)- ಲೇಖಕರು ಎಸ್. ಎನ್. ರಾವ್. ಗರಿವಾಸ. ಪ್ರಕಾಶಕರು; ರಾಮಶ್ರೀ ಬುಕ್ ಡಿಪೋ ಧಾರವಾಡ. ಕ್ರೌನ್ ಆಕಾರದ ಪುಟಗಳು ೧೩೦. ಬೆಲೆ ರೂ. ೧-೪-೦

ಪ್ರಾಥಮಿಕ ಸಂಗೀತವನ್ನು ಶಾಸ್ತ್ರೀಕ್ತವಾಗಿ ಕಲಿಯುವವರ ಬಗ್ಗೆ ಈ ಪುಸ್ತಕವು ರಚಿತವಾಗಿದೆ. ಮೊದಲಿನ ಕೆಲವು ಪುಟಗಳಲ್ಲಿ ಸಂಗೀತದ- ಮುಖ್ಯತಃ ಹಾರ್ಮೋನಿಯಮ್ ಅಭ್ಯಾಸದ ಮೂಲತತ್ವಗಳನ್ನೂ ಮತ್ತಿನ ಪುಟಗಳಲ್ಲಿ ಕನ್ನಡ ಭಾಷೆಯ ಕೆಲವು ಉತ್ತಮ ರಚನೆಗಳನ್ನು ಉತ್ತರಾದಿ (ಹಿಂದೂಸ್ಥಾನಿ) ರೀತಿಯಲ್ಲಿ ಹಾಡುವ ಬಗ್ಗೆ ಸಲಹೆಗಳನ್ನೂ ಕೊಡಲಾಗಿದೆ. ಸಂಗೀತವು ಪುಸ್ತಕಗಳನ್ನು ಓದಿ ಬರತಕ್ಕ ಕಲೆಯಲ್ಲವೆಂಬುದನ್ನು ಒಪ್ಪಲೇ ಬೇಕಾದರೂ, ಪ್ರಾಥಮಿಕ ಸಂಗೀತಾಭ್ಯಾಸಿಗಳಿಗೆ ಇದು ತುಂಬ ಸಹಕಾರಿಯಾಗಬಲ್ಲುದೆಂದು ಹೇಳಬಹುದು.

೯. ಶ್ರೀ ಮಧ್ವಾಚಾರ್ಯರ ಮೂಲ ಸಿದ್ಧಾಂತ- ಜಿಜ್ಞಾಸಾಮಂಡಲದ ಗ್ರಂಥಮಾಲೆ, ಧಾರವಾಡ ಪ್ರಥಮ ಪುಷ್ಪ, ಬರೆದವರು ಶ್ರೀ ಆಲೂರು ವೆಂಕಟರಾಯರು. ಕ್ರೌನ್ ಆಕಾರದ ೩೦ ಪುಟಗಳು ಬೆಲೆ ೦-೮-೦

ಇದು ಕನ್ನಡಿಗರಿಗೆ ಚಿರಪರಿಚಿತರಾದ ಶ್ರೀ ಆಲೂರು ವೆಂಕಟರಾಯರು ಕಳೆದ ಮೇ ತಿಂಗಳಲ್ಲಿ ಮುಂಬಯಿ ಮಾಧ್ವಸಂಘದ ಆಶ್ರಯದಲ್ಲಿ ಜರಗಿದ ಮಧ್ವನವಮಿ ಉತ್ಸವದ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣ. "ನಾರಾಯಣನು ಸರ್ವಗುಣಪೂರ್ಣನು ಹಾಗೂ ಸರ್ವದೋಷವರ್ಜಿತನು" ಎಂಬುದೇ ಮಧ್ವಮತದ ಮೂಲಸಿದ್ಧಾಂತ; "ಪೂರ್ಣ ಬ್ರಹ್ಮವಾದ"ವೆಂಬ ಹೆಸರೇ ಆ ಸಿದ್ಧಾಂತಕ್ಕೆ ಎಲ್ಲಕ್ಕೂ ಒಪ್ಪುಗೆಯಲ್ಲುತ್ತದೆ' ಎಂಬುದನ್ನು ಭಾಷಣಕರ್ತರು, ತಮಗೆ ತಿಳಿದ ರೀತಿಯಲ್ಲಿ, ಸಕಾರಣವಾಗಿ ಸಾಧಿಸಿದ್ದಾರೆ. ಆದರೆ ಅನ್ಯಮತೀಯ ಪ್ರಚಾರ ಗ್ರಂಥಗಳೊಡನೆ ಹೋಲಿಸುವಾಗ ಈ ಕಿರಿಯ ಹೊತ್ತಗೆಯ ಬೆಲೆ ಬಲು ಆಗೆ ಇಟ್ಟುದು ಸ್ವಲ್ಪ ಹೆಚ್ಚೆಂದೇ ನಮ್ಮ ಅಭಿಪ್ರಾಯ.

೧೦. ರಾಜಲಕ್ಷ್ಮಿ-ಪ್ರತಿಭಾ ಗ್ರಂಥಮಾಲೆ, ಧಾರವಾಡ- ೩ ರಣಿ, ಮೂಲ ಲೇಖಕರು ದಿವಂಗತ ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು; ಶ್ರೀ ಗುರುನಾಥ ಜೋಶಿ. ಕ್ರೌನ್ ಆಕಾರದ ಪುಟಗಳು ೧೨೪. ಬೆಲೆ ರೂ. ೧-೪-೦

ಇದು ಬಂಗಾಲೀ ಭಾಷೆಯ ಸುಪ್ರಸಿದ್ಧ ಕತೆಗಾರ ದಿವಂಗತ ಶರಚ್ಚಂದ್ರರ ಅನುವಾದಗಳಾದ "ರಾಜ ಲಕ್ಷ್ಮಿ" "ಸತ್ಯೇಂದ್ರನಾಥ" "ಬೆಳಕು ನೆಳಲು" "ವಿಲಾಸಿ" ಎಂಬ ನಾಲ್ಕು ನೀಳ್ಗತೆಗಳ ಸಂಗ್ರಹ. ಕತೆಗಳಲ್ಲಿ ಶರಚ್ಚಂದ್ರರ ಕಥನ ಕಲೆಯ ಸಲ್ಲಕ್ಷಣಗಳೆಲ್ಲ ಕಂಡುಬರುತ್ತಿವೆ. ಮುಖ್ಯತಃ ನಾರೀ ಹೃದಯದಲ್ಲಿಯ ನಿಸ್ವಾರ್ಥತೆ, ಪವಿತ್ರ ಪ್ರೇಮ, ಮುಂತಾದ ಸದ್ಗುಣಗಳು ಹೃದಯ ಸ್ಪರ್ಶಿಯಾಗುವಂತೆ ಚಿತ್ರಿತವಾಗಿವೆ. ಶ್ರೀ ಗುರುನಾಥ ಜೋಶಿಯವರು ತಮ್ಮ ಇತರ ಹಲವು ಗ್ರಂಥಗಳಂತೆಯೇ ಇದನ್ನು ಕೂಡ ಅಂದವಾಗಿಯೇ ಅನುವಾದಿಸಿದ್ದಾರೆ.

೧೧. ಮೊಗವೀರ ವ್ಯವಸ್ಥಾಪಕ ಮಂಡಳಿ-ಮುಂಬಯಿ. ಇವರ ೧೨ನೆಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯ ವರ್ಷದಲ್ಲಿ ಮಂಡಳಿಯವರು ಈ ವರೆಗೆ ನಡೆಸುತ್ತ ಬಂದಿರುವ, ಫ್ರೀನೈಟ್ ಸ್ಕೂಲ್, ಪ್ರಾಥಮಿಕ ಶಾಲೆ, ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರ, ವಿದ್ಯಾರ್ಥಿವೇತನ ಯೋಜನಾ ಮೊದಲಾದ ವಿವಿಧ ಕಾರ್ಯಕ್ರಮಗಳಲ್ಲಿ ಸರ್ವತೋಮುಖವಾದ ಅಭಿವೃದ್ಧಿಯು ಕಂಡುಬರುವುದು ಸ್ತುತ್ಯ. ಸಂಘಕ್ಕೆ ಅತ್ಯಗತ್ಯವಾಗಿರುವ ಧನ ಸಹಾಯವನ್ನು ಸದಸ್ಯರು ವ ಇತರರು ನೀಡುವರಾಗಿ ನಂಬುತ್ತೇವೆ.

೧೨. ವಿದ್ಯಾದಾಯಿನಿ ಹಾಯಸ್ಕೂಲ್ ಡ. ಕ.—೧೯೪೪-೪೫ರ ವರದಿಯು ನಮ್ಮ ಕೈಸೇರಿದೆ. ಶಾಲೆಯ ವರದಿಯ ವರ್ಷದಲ್ಲಿ, ನೂತನ ಹಾಯಸ್ಕೂಲಿನ ೪ನೆಯ ಫಾರ್ಮನ್ನು ತೆರೆದು ಪಾಠ ಹಾಗೂ ಪಾಠೇತರ ಚಟುವಟಿಕೆಗಳಲ್ಲಿ ಮತ್ತು ವಿದ್ಯಾರ್ಥಿವಸತಿ ಗೃಹವೇ ಮೊದಲಾದ ಶಾಲಾ ಚಟುವಟಿಕೆಯ ವಿವಿಧ ಅಂಗಗಳಲ್ಲಿ ತುಂಬಾ ಅಭಿವೃದ್ಧಿಯನ್ನು ತೋರಿಸಿ, ಸಂದರ್ಶಕರೆಲ್ಲರ ಮೆಚ್ಚಿಗೆಗೆ ಪಾತ್ರವಾಗಿರುವುದು ಸ್ತುತ್ಯ. ಯೋಗ್ಯ ಆಡಳಿತೆ ಮತ್ತು ಸಮರ್ಥ ಅಧ್ಯಾಪಕ ವೃಂದವಿರುವ ಈ ಶಾಲೆ ಶೀಘ್ರದಲ್ಲೇ ವಿದ್ಯಾಕ್ಷೇತ್ರದಲ್ಲೊಂದು ದೀಪಸ್ತಂಭವಾಗಲೆಂದು ಹಾರೈಸುತ್ತೇವೆ.

—ಕೆ. ವಿ. ಎಸ್.

ಕೋಟೇಶ್ವರ—ತಾ. 15 ಮತ್ತು 16ರಂದು ಕ್ರಮವಾಗಿ ಗ್ರಾಮ ಉದ್ಯೋಗಸ್ಥರಿಂದ ಮತ್ತು ಶಾಲಾ ಉಪಾಧ್ಯಾಯರ ವೃಂದದವರಿಂದಲೂ ಪ್ರಚಾರ ನಡಿಸಲ್ಪಟ್ಟು ತಾ. 17 ರಂದು ಬೆಳಗ್ಗೆ ಗಂಟೆ 10ಕ್ಕೆ ಸರಿಯಾಗಿ ಸ್ಥಳೀಯ ಕೋಟೇಶ್ವರದ ಕೇಂದ್ರದ ಬುಡ್ಡರ ಶಿಕ್ಷಣದ ಉದ್ಘಾಟನ ಸಮಾರಂಭವು ಶ್ರೀ. ಬಿ. ಗಣೇಶ ಬಿ. ಎ. ತಹಶಿಲ್ದಾರ್ ಇವರ ಸನ್ನಿಧ್ಯ ಅಧ್ಯಕ್ಷತೆಯಲ್ಲಿ ನೆರೆಯಿತು. ಸುಮಾರು 600 ಮಕ್ಕಳಿಂದೊಡಗೂಡಿದ ಪ್ರಚಾರ ಮೆರವಣಿಗೆಯು ಪ್ರೇಕ್ಷಣೀಯವಾಗಿತ್ತು. ಊರವರುಹನೀಯರ ನೆರವಿನಿಂದ ಮಕ್ಕಳೆಲ್ಲರಿಗೆ ಸಿಹಿ ತಿಂಡಿ ಹಂಚಿದ ತರುವಾಯ ನೆರೆದ ಸಾರ್ವಜನಿಕ ಸಭೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ. ಬಿ. ರಾಮಚಂದ್ರರಾಯರು ತಮ್ಮ ಮೊದಲ ಮಾತಿನಲ್ಲಿ ಬುಡ್ಡರ ಶಿಕ್ಷಣದ ಗೊತ್ತು ಗುರಿಗಳನ್ನು ತಿಳಿಸಿ ಅದನ್ನು ಯಶಸ್ವಿಯಾಗಿಸಲು ಊರವರ ನೆರವನ್ನು ಬೇಡಿದರು. ಶ್ರೀ. ಬಿ. ಯಸ್. ಹತ್ವಾರರು, ಶ್ರೀ. ನಾರಾಯಣ ಸೆಟ್ಟರು ಮತ್ತು ಶ್ರೀ. ಜೆ. ಸೂರ್ಯನಾರಾಯಣ ಐತಾಳರು ಸಂದರ್ಭೋಚಿತ ಮಾತುಗಳನ್ನಾಡಿ ಶಾಲಾಕಟ್ಟಡದ ಮತ್ತು ಬಡಮಕ್ಕಳಿಗೆ ವಸ್ತ್ರಬಟ್ಟೆಗಳನ್ನೊದಗಿಸುವುದು ಮುಂತಾದ ವಿಷಯಗಳ ಕಡೆಗೆ ಸಭಿಕರ ಮನಸ್ಸನ್ನೆಳಸಿದರು. ಅನಂತರ ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ. ಉಗ್ರಾಣ ಕೃಷ್ಣರಾವ್ ಬಿ. ಎ. ಯಲ್. ಟಿ. ಇವರು ಬುಡ್ಡರ ಶಿಕ್ಷಣದ ವಿಷಯ ವಿಚಾರ ಪ್ರಚೋದಕ ಭಾಷಣ ಮಾಡಿ ಊರವರ ಸಹಕಾರವನ್ನು ಶ್ಲಾಘಿಸಿದರು. ಸಭಾಧ್ಯಕ್ಷರು ತಮ್ಮ ಆವೇಶಯುಕ್ತ ಮಾತುಗಳಿಂದ ಕೋಟೇಶ್ವರವು ಯಾವಾಗಲೂ ಅನೇಕ ಕಾರ್ಯಕಲಾಪಗಳ ಕೇಂದ್ರವಾಗಿದ್ದುದಕ್ಕೆ ಸಂತೋಷಿಸಿ ಊರವರ ನಿಸ್ವಾರ್ಥ ಸಹಕಾರದಿಂದಲೂ ಈಗ ಜ್ಯಾರಿಗೆ ಬಂದ ಬುಡ್ಡರ ಶಿಕ್ಷಣದಿಂದಲೂ ಮುಂದಾಳುಗಳ ಅತಿ ಆಕಾಂಕ್ಷೆಗಳು ಬೇಗನೇ ಫಲಿಸಲೆಂದು ಹಾರೈಸಿದರು. ಈ ಸಂದರ್ಭದಲ್ಲಿ ಅಧ್ಯಾಪಕ ಶ್ರೀ. ಕೆ. ಮಂಜುನಾಥ ಐತಾಳರವರು ಬಡಮಕ್ಕಳಿಗೆ ವಸ್ತ್ರಬಟ್ಟೆಗಳನ್ನೊದಗಿಸುವ ಬಗ್ಗೆ 25ರೂಪಾಯಿಗಳ ಉದಾರ ಸಹಾಯವನ್ನಿತ್ತುದು ಸ್ತುತ್ಯ.

ಹೆಬವಾಡಿ-ಇಲ್ಲಿಯ ಹಳೆ ವಿದ್ಯಾರ್ಥಿ ಸಂಘದವರು ತಾ 5 ಮತ್ತು 10ರಲ್ಲಿ ಸ್ಥಳೀಯ ಶಾಲಾ ಕಟ್ಟಡದ ಸಹಾಯಾರ್ಥವಾಗಿ 'ದೇಶಭಕ್ತ' ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು. ಶ್ರೀ. ಎಚ್. ವಿಟ್ಠಲ ಶೆಟ್ರು ನಾಯಕನ ಪಾತ್ರವನ್ನೂ ಶ್ರೀ. ಎಚ್. ಶಂಕರ ಶೆಟ್ರು ನಾಯಕಿಯ ಪಾತ್ರವನ್ನೂ ಚೆನ್ನಾಗಿ ಅಭಿನಯಿಸಿದರು. ನಾಟಕದ ನಿರ್ದೇಶಕ ಶ್ರೀ. ಪಿ. ಯಲ್. ರಾಘವೇಂದ್ರ ರಾಯರಿಗೆ ಚಿನ್ನದ ಪದಕವು ಕೊಡಲ್ಪಟ್ಟಿತು.

ಬದಿಯಡ್ಕ-ಕಾಸರಗೋಡು ತಾಲೂಕಿನ ರೈತರಿಗೆ ಧರ್ಮಾರ್ಥವಾಗಿ ನೆಲಗಡಲೆ ಹಿಂಡಿ ಇತ್ಯಾದಿ ಗೊಬ್ಬರಗಳನ್ನು ಒದಗಿಸುವುದಕ್ಕಾಗಿ ಸರಕಾರವು ಮುಂದೆ ಬಂದಿದೆ ಯಾದರೂ ಸರಕಾರವು ಸಮಯಕ್ಕೆ ಸರಿಯಾಗಿ ಗೊಬ್ಬರವು ರೈತರ ಕೈಸೇರುವಂತೆ ಮಾಡಲು ಕೈಕೊಂಡ ಏರ್ಪಾಡುಗಳು ಸಾಲವೆಂದು ಸುತ್ತಮುತ್ತಲಿನ ಗ್ರಾಮ ನಿವಾಸಿಕರನ್ನು ವಿಚಾರಿಸಿದರೆ ತಿಳಿದುಬರುತ್ತದೆ. ಇನ್ನಾದರೂ ಬೇಗನೆ ಹಂಚುವ ವ್ಯವಸ್ಥೆ ಮಾಡದಿದ್ದರೆ ಎಲ್ಲರೂ ಎಣ್ಣೆಲು ಬೆಳೆಗೆ ನೆಲಗಡಲೆ ಹಿಂಡಿಯನ್ನು ಉಪಯೋಗಿಸುವುದು ಹೇಗೆ? ಸಾರ್ವಜನಿಕರು ಸಂಪೂರ್ಣ ಸಹಕರಿಸದಿದ್ದರೆ ಗೊಬ್ಬರ ಯೋಜನೆಯು ಸರಿಯಾಗದು.

ಪುತ್ತೂರು

ನಿಧನ—ಇಲ್ಲಿಯ ಜನಪ್ರೀತ ವಕೀಲರೂ ಕಾಂಗ್ರೆಸ್ ಭಕ್ತರೂ ಆಗಿದ್ದ ಶ್ರೀ ಎಚ್. ಚನ್ನಪ್ಪ ಗೌಡರು ಕಳೆದ ತಾ 9ರಲ್ಲಿ ತರುಣ ಪ್ರಾಯದಲ್ಲಿ ಅಕಾಲ ನಿಧನ ಹೊಂದಿದುದು ವಿಷಾದವೆನಿಸುತ್ತದೆ. ಇವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್ ನರಸಿಂಗ ರಾವ್,
ಪ್ರೊಪ್ರೈಟರ್.

**ಕೇರಳಾ ಸೋಪ್ ಇನ್ಸ್ಟಿಟ್ಯೂಟ್
ಕಲ್ಲಿಕೋಟೆ**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬರಮಾತ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾನ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ಶಾಲೋಪಯೋಗಿ
ಸಾಹಿತ್ಯಗಳು

ಡ್ರಾಯಿಂಗ್ ಮತ್ತು ನೋಟ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟರುಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಪೋರ್ಟ್ ಶೀಟ್‌ಗಳು, ಮಗ್ಗಿ ಪುಸ್ತಕಗಳು ಬೆಲ್ಲರಿಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ.

ನವಯುಗ ಪ್ರೆಸ್, ಉಡುಪಿ.

ಕಡ್ಡಾಯ ಶಿಕ್ಷಣ

ಅನ್ನ ಬಟ್ಟೆಗೆ ಗತಿಯಿಲ್ಲದ ಬಡವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅಸಮರ್ಥರಾಗಿ ಮಕ್ಕಳನ್ನು ದುಡಿಯಲು ತಮ್ಮೊಂದಿಗೆ ಸೇರಿಸಿಕೊಳ್ಳುತ್ತಿರುವುದರಿಂದ ಓದು ಬರಹ ಗೊತ್ತಿಲ್ಲದವರ ಸಂಖ್ಯೆಯು ಶೋಚನೀಯ ಮಟ್ಟಕ್ಕೆ ಇಳಿದಿದೆ. ಈ ದೋಷವನ್ನು ನಿವಾರಿಸಲು ಕಡ್ಡಾಯ ಶಿಕ್ಷಣವನ್ನು ಜ್ಯಾರಿಗೆ ತಂದು ಬಡ ಮಕ್ಕಳಿಗೆ ಒಂದು ಹೊತ್ತಿನ ಊಟ, ಬಟ್ಟೆ ಇತರ ಉಪಕರಣಗಳನ್ನು ಒದಗಿಸಿ ಕೊಡುವ ಮಹಾತ್ಕಾರ್ಯವನ್ನು ಮೂಸ್ಕ ಸರಕಾರದವರು ಕೈಗೊಂಡು ಜಿಲ್ಲಾ ಬೋರ್ಡುಗಳ ಮುಖಾಂತರ ಚುನಾಯಿಸಲ್ಪಟ್ಟ ಕೆಲವು ಕ್ಷೇತ್ರಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಜ್ಯಾರಿಗೆ ತಂದಿರುವರು. ಮತ್ತು ಈ ಕಾರ್ಯಕ್ರಮವನ್ನು ವಿಸ್ತರಿಸುವ ಏರ್ಪಾಡುಗಳನ್ನು ಮಾಡುತ್ತಲಿರುವರು

ಕಳೆದ ನಾಲ್ಕಾರು ವರ್ಷಗಳಿಂದ ಕರಾವಳಿಯಲ್ಲಿರುವ ಹೆಚ್ಚಿನ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಿನ ಕ್ರಮವಿಲ್ಲದೆ ಏರುತ್ತಲಿತ್ತು. ಉಪಾಧ್ಯಾಯರುಗಳ ಅಭಾವ, ಸ್ಥಳ ಸಂಕೋಚ, ಉಪಕರಣಗಳ ಕೊರತೆ ಹೆಚ್ಚಿನ ಕಡೆಗಳಲ್ಲಿ ತೋರಿ ಬರುತ್ತಲಿರುವುದಾದರೂ ಇಂತಹ ಸ್ಥಳಗಳನ್ನೇ ಕಡ್ಡಾಯ ಶಿಕ್ಷಣದ ಕೇಂದ್ರಗಳಾಗಿ ಚುನಾಯಿಸಿ ಇನ್ನೂ ಹೆಚ್ಚಿನ ಅವ್ಯವಸ್ಥೆ ಉಂಟಾಗದಂತೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದು ಸುಲಭ ಸಾಧ್ಯವಲ್ಲ. ಮೊದಲಾಗಿ ಒಳ ಪ್ರಾಂತ್ಯದ ಹಳ್ಳಿಗಳನ್ನೇ ಕಡ್ಡಾಯ ಶಿಕ್ಷಣದ ಕೇಂದ್ರಗಳಾಗಿ ಆರಿಸಿ ಸಾಕಷ್ಟು ಪ್ರಚಾರ ಕಾರ್ಯವನ್ನು ಕೈಕೊಂಡರೆ ಸರಕಾರದವರು ದಯಪಾಲಿಸುವ ಅನುಕೂಲತೆಗಳ ಪ್ರಯೋಜನವನ್ನು ಹೊಂದಲು ಮೂಸ್ಕ ಜಿಲ್ಲಾ ಬೋರ್ಡಿನೊಡನೆ ಹಳ್ಳಿಗರು ಸಹಕರಿಸಲು ಹಿಂಜರಿಯರು.

ಕಡ್ಡಾಯ ಶಿಕ್ಷಣದ ಕೇಂದ್ರಗಳಲ್ಲಿ ಬಡ ಮಕ್ಕಳಿಗೆ ಮಧ್ಯಾಹ್ನ ಊಟ ಕೊಡುವರೆ ತಲಾ ಒಂದರ 0-1 6 ಖರ್ಚು ಮಾಡುವುದಲ್ಲದೆ ಅಂತಹ ಹುಡುಗರಿಗೆ ಬೇಕಾಗುವ ಬಟ್ಟೆ ಮತ್ತು ಶಾಲಾ ಉಪಕರಣಗಳನ್ನು ಒದಗಿಸುವ ಏರ್ಪಾಡು, ಉಂಟಂತೆ ಈ ರಿಯಾಯತಿಗೆ ಅರ್ಹರಾದ ಬಡ ಮಕ್ಕಳ ರಿಜಿಸ್ಟ್ರಿಯನ್ನು ಗ್ರಾಮ ಕಮಿಟಿಗಳ ಮುಖಾಂತರ ತಯಾರಿಸುವುದು ಸುಲಭ ಕೆಲಸ ಬೆಳಗ್ಗಿನ ಶಿಕ್ಷಣ ಮುಗಿದೊಡನೆ ಊಟದ ಏರ್ಪಾಡು ಮಾಡುವದು ಕಾರ್ಯತ. ಜಿಗುಪ್ಸಾದ ಕೆಲಸ ಅಡಿಗೆಗೆ ಬೇಕಾದ ಸಾಮಾನುಗಳನ್ನು ಆಗಾಗ್ಗೆ ತಂದು ದಾಸ್ತಾನು ಇಟ್ಟುಕೊಳ್ಳುವುದು ದಿನವಹಿ ಅಳತೆ ತೂಕ ಮಾಡಿ ಅವುಗಳನು ಉಪಯೋಗಿಸುವುದು, ದಿನಾಲು ಉಳಿದ ಸ್ಟೋಕಿನ ಜವಾಬ್ದಾರಿ ಮುಂತಾದ ಕಠಿನ ಸಮಸ್ಯೆಗಳಿವೆ. ಈಗಲೇ ಓದು ಬರಹ ಮುಂತಾದ ಪ್ರಾಮುಖ್ಯ ವಿಚಾರದಲ್ಲಿಯೇ ಮಕ್ಕಳ ಅಭಿವೃದ್ಧಿಯು ಕುಂದುತ್ತಲಿರುವುದು ಅನೇಕ ಕಡೆಗಳಲ್ಲಿ ತೋರಿಬರುತ್ತವೆ. ಇತ್ತೀಚೆಗೆ ಒಬ್ಬರು ಮೇಲ್ತರಗತಿಯ ವಿದ್ಯಾಧಿಕಾರಿಗಳು ಒಂದು ಕಡ್ಡಾಯ ಶಿಕ್ಷಣ ಕೇಂದ್ರದ ಒಂದು ಶಾಲೆಯನ್ನು ಸಂದರ್ಶಿಸಿದಾಗ ಒಬ್ಬ ಉಪಾಧ್ಯಾಯರು ಕಣ್ಮರೆಯಾಗಿದ್ದರಂತೆ. ಸ್ವಲ್ಪ ಸಮಯದ ನಂತರ ವಿಚಾರಿಸಿದಾಗ ತಾನು ಅಡಿಗೆಯ ಏರ್ಪಾಡಿನಲ್ಲಿದ್ದೆನೆಂದು ಅವರು ತಿಳಿಸಿದರೆಂದೂ ಒಂದು ವಾರ್ತೆ ಕೇಳಿಬರುತ್ತಿದೆ. ಅಲ್ಲದೆ ಊಟದ ಬಗ್ಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ರಖಂ ಆಗಿ ಪೇಟೆಗಳಿಂದ ತಂದಿಟ್ಟುಕೊಳ್ಳುವುದು ಅಸಾಧ್ಯ. ಚಿಕ್ಕಚಿಕ್ಕ ಅಂಗಡಿಗಳಿಂದಲೇ ಕೇಳಿದಷ್ಟು ದರ ಕೊಟ್ಟು ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗುವುದು. ಅಂತೂ ಹಣವು ಮುಷ್ಕ. ಪೋಲಾಗದಂತೆ ನೋಡಿಕೊಳ್ಳುವುದು ಅತಿಕಷ್ಟ. ಅಲ್ಲದೆ ಊಟ ಮಾಡಿದ ನಂತರ ಬಿಡಿಪಾಟಿಸಾಗದಂತೆ ಚಿಕ್ಕ ಮಕ್ಕಳನ್ನು ಕಾದುಕೊಳ್ಳುವುದು ಸುಲಭವಲ್ಲ

ಮೇಲಿನ ಕೊರತೆಗಳನ್ನು ಹೋಗಲಾಡಿಸಲು ತಿಂಗಳಲ್ಲಿ ಸರಿಯಾಗಿ ಶಾಲೆಗೆ ಬಂದ ಪ್ರತಿ ಹುಡುಗನಿಗೆ ದಿನಕ್ಕೆ ಒಂದು ಯುನಿಟ್ಟಿನ ಪ್ರಕಾರ ಎಣಿಸಿ ವಾರಕ್ಕೊಮ್ಮೆ ಯಾ ತಿಂಗಳಿಗೊಮ್ಮೆ ಆಹಾರ ಧಾನ್ಯ ಮಾಫಿಯಾಗಿ ಪಡೆಯುವ ತಕ್ಕ ಏರ್ಪಾಡು ಮಾಡುವುದು ಸ್ನೇರು ಹಾಜರಿ ಬಗ್ಗೆ ಅರ್ಧ ದಿನಕ್ಕೆ ½ ಯುನಿಟು ಮತ್ತು ಇಡಿ ದಿನಕ್ಕೆ 1 ಯುನಿಟ್ಟಿನಂತೆಯೂ ಪಡಿ ತಗೆಯುವುದು. ಈ ರೀತಿ ಹಂಚಲ್ಪಡುವುದರಿಂದ ಕಟ್ಟಿಗೆ, ಮಜೂರಿ ಮುಂತಾದ ಆಗಬಹುದು ಖರ್ಚು ಉಳಿಯುವುದು ಈ ಉಳಿತಾಯದಿಂದ ಸಾಧ್ಯವಾದರೆ ಪ್ರತಿ ಹುಡುಗನಿಗೆ ತಿಂಗಳಿಗೆ 30 ಯುನಿಟ್ಟಿನಂತೆ ಕ್ರಮವಾಗಿ ವರ್ಷದಲ್ಲಿ ಹನ್ನೊಂದು ತಿಂಗಳಲ್ಲಿ ಹಂಚಬಹುದು 3 ತಿಂಗಳು ಯಾ 6 ತಿಂಗಳಿಗೊಮ್ಮೆ ಪ್ರತಿ ಹುಡುಗನಿಗೂ ಒಂದೊಂದು ರೇಷನಿಂಗ್ ಕಾರ್ಡು ಕೊಡಲ್ಪಡಬೇಕು. ಪ್ರತಿ ವಾರದಲ್ಲಿ ಸಂದ ಆಹಾರದ ಪರಿಮಾಣವನ್ನು ದರಲ್ಲಿ ನಮೂದಿಸಲ್ಪಡಬೇಕು ವಾರದ ಕಡೇ ದಿನ ಹಂಚುವ ಕೆಲಸವನ್ನು ಆಯಾಯ ಗ್ರಾಮಗಳಲ್ಲೇ ಪೂರೈಸಬಹುದು. ಈ ರೀತಿ ಮಾಡುವುದರಿಂದ ಹೆಚ್ಚಿನ ತೊಂದರೆಗಳು ಮಾಯವಾಗುವುವು.

'A'

ದಮ್ಮಣ್ಣಾ ಕೇಳೋ ಕೇಳು

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದಮನಕ್ಕೆ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯುವದು ಈ ಔಷಧ ಸುರುವು ಮಾಡಿದ... ಕೆಮ್ಮೂ ತೇಕೂ ನಿಲ್ಲುವವು, ಹೊಟ್ಟೆ ಹಗುರಾಗುವದು; ಪಚನಶಕ್ತಿಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿನಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ ೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ಸಿ. ನಟರಾಜನ್ ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT
SHWAS-HARI

ನೋಟೀಸು

ಉಡುಪಿ ತಾಲೂಕು ಪಡ್ಡಾಲು ಗ್ರಾಮದ ಕಾಡಿಪಟ್ಣದಲ್ಲಿರುವ ಅಂಗಡಿ ಆದಂ ಸಾಹೇಬರ ಹೆಂಡ್ತಿ ಆಚೀಜಾಂಬಿಯು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದು-

ನನ್ನ ಮಗ ಹಾಲಿ ಬೊಂಬಾಯಿಯಲ್ಲಿರುವ ಮಹಮ್ಮದ್ ಗೌಸ್ ಶೇಕ್ ಅದಮ್ ಸಾಹೇಬನು ತಾರೀಕು 9-1-1946ರಲ್ಲಿ ನನ್ನ ಗಂಡನು, ಇತರ ಮಕ್ಕಳು ಇಲ್ಲದ ಸಮಯ ಮೂಲ್ಕಿ ಸಬ್ ರಿಜಿಸ್ಟ್ರಿ ಆಫೀಸಿಗೆ ಯಾವುದೋ ದಸ್ತಾವೇಜು ಬರೆಕೊಡುವ ಬಗ್ಗೆ ಕರಕೊಂಡು ಹೋದವನು ನನ್ನ ತಿಳುವಳಿಕೆಯಿಲ್ಲದೆ ವ ನನ್ನನ್ನು ವಂಚಿಸಿ ಮೋಸದಿಂದ ಒಂದು ಧರ್ಮ ಸಾಧನ ಸಹಾ ಬರ್ಡ್ಯಾರಿ ರಿಜಿಸ್ಟ್ರಿ ಸಹಾ ಮಾಡಲ್ಪಟ್ಟಿದೆ ಎಂಬದು ನನ್ನ ತಿಳುವಳಿಕೆಗೆ ಇತ್ತೀಚೆಗೆ ತಿಳಿದುಬಂದಿರುತ್ತದೆ ಸದ್ರಿ ಸಂಗ್ತಿ ನನ್ನ ತಿಳುವಳಿಕೆಗೆ ಬಂದ ಕೂಡಲೇ ಸದ್ರಿ ನನ್ನ ಮಗನಿಗೆ ತಾ 27 5 1946ರಲ್ಲಿ ರಿಜಿಸ್ಟ್ರಿ ನೋಟೀಸ್ ಮೂಲಕ ಸದ್ರಿ ಧರ್ಮಸಾಧನವನ್ನು ರದ್ದು ಮಾಡಿಕೊಡಬೇಕಾಗಿ ತಿಳಿಸಿರುತ್ತೇನೆ ಅದಕ್ಕೆ ಆತನು ಆ ಧರ್ಮಸಾಧನವನ್ನು ತಾನು ಸ್ವೀಕರಿಸಲಿಲ್ಲವಾಗಿಯೂ ವ ಅದು ರದ್ದಾಗಿರುತ್ತದಾಗಿಯೂ ಅದನ್ನು ಆಧರಿಸಿಕೊಂಡು ಮುಂದುವರಿಸುವದಿಲ್ಲವಾಗಿಯೂ ಕಾಣ್ಸಿ ತಾ 10 6 1946ರಲ್ಲಿ ನಂ. 819ನೆ ನನಗೆ ಜವಾಬು ಬಿಟ್ಟಿರುತ್ತಾನೆ ಆದುದರಿಂದ ಸದ್ರಿ ಧರ್ಮಸಾಧನ ತನ್ನಂತೆ ರದ್ದಾಗಿರುತ್ತದೆ ಅದು ಜಾರಿಗೆ ಬರತಕ್ಕದ್ದಲ್ಲಾ ವ ಜಾರಿಗೆ ಬಂದದ್ದೂ ಇಲ್ಲಾ. ಸದ್ರಿ ಧರ್ಮಸಾಧನದಲ್ಲಿ ತೋರುವ ಆಸ್ತಿಗಳನ್ನು ಎಲ್ಲಾ ಮಕ್ಕಳಿಗೂ ಹಕ್ಕು ಸಿಕ್ಕುವಹಾಗೆ ನಾನು ಬೇರೆ ಏರ್ಪಾಡನ್ನು ಮಾಡುವ ಆಲೋಚನೆಯಲ್ಲಿದ್ದೇನೆ ಆದುದರಿಂದ ಮೋಸದಿಂದ ಮಾಡಿಸಿಕೊಂಡಿರುವ ಆ ಧರ್ಮಸಾಧನ ಯಾನೆ ಸಟ್ಲ್‌ಮೆಂಟ್ ಡೀಡಿನ ಆಧಾರದಿಂದ ಯಾರೂ ಯಾವ ತರದ ವ್ಯವಹಾರವನ್ನೂ ಆತನ ಮುಖಾಂತರ ನಡಿಸಬಾರದಾಗಿಯೂ ಮಾಡಿದರೆ ಮೋಸದಲ್ಲಿ ಬೀಳುವಿರಾಗಿಯೂ ಎಂಬ ಕಾರಣದಿಂದ ಈ ಜಾಹೀರಾತನ್ನು ಪ್ರಕಟಿಸಿರುತ್ತೇನೆ.

● ಈ ಎಡಕೈ ಹೆಬ್ಬೆಟ್ಟಿನ ಗುರುತು
ಆಚೀಜಾಂಬಿ ರುಜು

ತಾ 17 6 1946

ನೋಟೀಸು

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ವ ಸ್ಮೋಲ್ ಕೋಸ್ ಜಡ್ಜರ ಕೋರ್ಟಿನಲ್ಲಿ

S. C. 131/1946.

ಮಂಗ್ಳೂರು ಶ್ರೀ ವೆಂಕಟ್ರಮಣಾ ಟೆಂಪಲ್ —ವಾದಿ.

ಮತ್ತು

K ಉಪೇಂದ್ರ ಪ್ರಭು —ಪ್ರತಿವಾದಿ.

ಮಂಗ್ಳೂರು ಕ್ಯಾಹರಿನಲ್ಲಿರುವ ಕೊಟಿಕಾರ ಮಂಜುನಾಥ ಪ್ರಭುಗಳ ಮಗ ಕೆ. ಉಪೇಂದ್ರ ಪ್ರಭುರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಸದ್ರಿ ವಾದಿ ಭಂಡಾರಕ್ಕೆ ನಿಂಮಿಂದ ಬರಬೇಕಾದ ಬ್ಯಾವೇಜಿನ ವಸೂಲಿ ಕುರಿತು ಮೇಲಿನ ದಾವಾ ದಾಖಲು ಮಾಡಿ ಸದ್ರಿ ದಾವೆಯು ತಾ 26—6—1946ರಲ್ಲು ತನ್ನ ಬಗ್ಗೆ ಇಟ್ಟಿರುತ್ತಾರೆ. ಸದ್ರಿ ದಾವೆಯಲ್ಲಿ ನಿಂಮ ಉದಾಹರಣೆ ವಗೈರೆ ಇದ್ರೆ ಆ ದಿನ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ನೀವು ಸ್ವತಹಾ ಹಾಜರಾಗಿ ಯಾ ನಿಂಮಿಂದ ಅಧಿಕಾರಹೊಂದಿದ ವಕೀಲರ ಮುಖಾಂತ್ರ ಸದ್ರಿ ಉದಾಹರಣೆಯನ್ನು ಹಾಜ್ರುಪಡಿಸತಕ್ಕದ್ದು. ಇದ್ಕೆ ತಪ್ಪಿದಲ್ಲಿ ನಿಂಮನ್ನು ತಿವ್ಯಾ ಮಾಡಿ ಸದ್ರಿ ದಾವೆಯನ್ನು ನಿಂಮ ಗೈರಾಜ್ರಿಯಲ್ಲಿ ತೀರ್ಮಾನಿಸಲಾದೀತು. ತಿಳಿದಿರಲಿ

J Upendra Prabhu
Vakil for Plaintiff

Mangalore
14-6-1946

ನೋಟೀಸು

ಕಾಸರಗೋಡು ಡಿ ಮು ಕೋರ್ಟಿನಲ್ಲಿ.

O P No. 93/1946

ಉಮ್ಮಾರೀಮ್ಮ ಕೂಡಾ —ಅರ್ಜಿದಾರು.

1ನೇ ಅರ್ಜಿದಾರಳ ಗಂಡ ವ 2ರಿಂದ 6ನೇ ಅರ್ಜಿದಾರರ ತಂದೆ ಮೃತಪಟ್ಟ (ಚಮನಾಡು C H ಹಸಂ ಕುಟ್ಟಿ ಎಂಬವನಿಗೆ ಹೊರಗಿನಿಂದ ಸಲತಕ್ಕ ಸಾಲವನ್ನು ವಸೂಲು ಪಡಿಯುವರೆ ಸಾಕ್ಸೆಸ್ಸನ್ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಮೇಲ್ಕಂಡ ಅರ್ಜಿಯು ತಾರೀಕು 9 7-1646ಕ್ಕೆ ವಿಚಾರಣೆಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗಿದೆ

ಕಾಸರಗೋಡು Sd **P. Ahmad.**
16—6—46 Advocate for Petitioner

THE CANARA MUTUAL ASSURANCE COMPANY, LTD.,

Head Office.- **UDIPI, (S. India.)**

NEW APPOINTMENTS.

Applications from candidates (both Boys and Girls) of S. S. L. C. Standard are invited for clerical posts in the Company

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

Last date by which Applications should reach this Office shall be 30th June, 1946

Udipi, 6-6 1946. T. R. A Pai, *Managing Director*

FOR LIFE ASSURANCE

CONSULT

The New Gaurdian of India Life Insrce Co, Ltd,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade. Post Box No 142.
MADRAS.

ದಕ್ಷಿಣ ಕನ್ನಡ

ಮೂಲ್ಕಿ—ತಾ 7-6 1946ರಲ್ಲಿ ಡಾಕ್ಟರ್ ಯು. ಪಿ ಮಲ್ಯ ಎಮ್.ಎಲ್.ಎ.ರವರು ಇಲ್ಲಿ ಹರಿಜನರಾದ ಮುಂಡಾಳ ವರ್ಗದವರು ಕಟ್ಟಿಸಿದ ಸಮಾಜ ಕಟ್ಟಡದ ಪ್ರವೇಶೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. 1926ರಲ್ಲಿ ಬೋರ್ಡು ಶಾಲೆಯಲ್ಲಿ ಹೇಗೆ ಪ್ರವೇಶ ಕೊಡಲಾಯಿತು. 7ನೇ ರಾಜಕೀಯ ಪರಿಷತ್ತಿನಲ್ಲಿ ಸಹ ಪಂಕ್ತಿ ಭೋಜನ, ಒಂದನೇ ಹರಿಜನ ಪರಿಷತ್ತಿನಲ್ಲಿ ಅವರ ಸಂಗಡದ ಅನೇಕ ಮುಂದಾಳುಗಳ ಅಂತೂ ಅಧ್ಯಕ್ಷ ಶ್ರೀ ಮುನ್ನಿಸ್ವಾಮಿ ಪಿಳ್ಳೆಯವರ ಸಂಪರ್ಕ, ಇತರ ಹಿಂದುಳಿದ ಜಾತಿಗಳ ಯತ್ನ, ಇತ್ತೀಚೆಗೆ ಸರಕಾರಿ ಕೆಲಸ ಮೊತ್ತಕು ಮುಲ್ಕಿಗೆ ಬಂದಿರಲು ಕೆಲವರ ಕುತೂಹಲ, ಮತ್ತು ಇವರಲ್ಲಿ ಕೆಲವರ ಉತ್ತೇಜನದಿಂದ ಈ ಸಮಾಜ ಕಟ್ಟಡವು ಹೇಗೆ ಬಂತೆಂಬುದನ್ನು ಶ್ರೀ ಯಮ್. ಆರ್. ಪೂಂಜರು ಹರಿಜನರ ಪರವಾಗಿ ಸವಿವರವಾಗಿ ತಿಳಿಸಿದರು. ಶ್ರೀ ಡಾಕ್ಟರ್. ರಾಯಪ್ಪ ಕಮ್ಮತಿಯವರು ಹರಿಜನರ ಏಳಿಗೆಯಲ್ಲಿ ಎಲ್ಲವರ ಸಹಕಾರವಿರುವುದೆಂದೂ, ಈ ಸಮಾಜ ಅವರೆಲ್ಲರೂ ಮೇಲೆ ಬರಲು ಯತ್ನಿಸುವುದು ಅಗತ್ಯವೆಂದೂ ಸೂಚಿಸಿದರು. ಡಾ. ಮಲ್ಯರು ಅವರಿಗೆ ಬೇಕಾದ ಅನೇಕ ಬುದ್ಧಿ ವಚನ ಹೇಳಿ ಸರಕಾರವು ಮಧ್ಯಪಾನ ನಿಷೇಧ, ದೇವಸ್ಥಾನ ಪ್ರವೇಶದ ಕಾನೂನೂ ಬೇಗ ತರಲಿರುವುದರಿಂದ ಈ ಮುಂಚೆಯೇ ಹರಿಜನರು ಮಧ್ಯಪಾನವನ್ನು ಬಿಟ್ಟು ಹೆಸರು ಪಡೆಯಬೇಕೆಂದೂ, ಸವರ್ಣ ಹಿಂದುಗಳ ದೇವಸ್ಥಾನಗಳನ್ನು ಎಲ್ಲರ ಪ್ರವೇಶಕ್ಕೆ ಬಿಟ್ಟುಕೊಟ್ಟು ತಮ್ಮಲ್ಲಿರುವ ಕೊರತೆಯನ್ನು ನಿವಾರಿಸಿಕೊಳ್ಳುವುದು ಉಚಿತವೆಂದೂ ಸುರಸವಾದ ಮಾತುಗಳಿಂದ ಸೂಚಿಸಿದರು. ಕಟ್ಟಡದ ಖರ್ಚಿಗೆ ವಂತಿಗೆ ಕೊಟ್ಟವರ ಹೆಸರು ಮತ್ತು ಧನ ಸಹಾಯವನ್ನು ಓದಲಾಯಿತು. ಸುಮಾರು 350ಕ್ಕೆ ಮಿಕ್ಕಿದ ಹರಿಜನರು ಹಾಜರಿದ್ದರು.

ಹಂಗಾರಕಟ್ಟೆ ಬೆಂಗಳೆ—ಸ್ಥಳೀಯ ಮೊಗವೀರ ಜನಾಂಗದ ಕೋರಿಕೆಯ ಮೇರೆಗೆ ಗವರ್ನ್‌ಮೆಂಟ್ ಫಿಶರೀಸು ಇಲಾಖೆಯವರು ಗ್ರಾಮಸ್ಥರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಸ್ಥಳೀಯ ಪ್ರಸಿದ್ಧ ವ್ಯಾಪಾರಗಳೊಬ್ಬರಾದ ಜನಾಬ್ T. S. ಅಬ್ದುಲ್ ರಹಿಮಾನ್ ಸಾಹೇಬರು ಹೊಸತಾಗಿ ಕಟ್ಟಿಸಿದ ಕಟ್ಟಡದಲ್ಲಿ ತಾ. 15 6-46ರಲ್ಲು ಒಂದು ಎಲಿಮೆಂಟರಿ ಶಾಲೆಯನ್ನು ತೆರೆದಿರುವರು. ಶ್ರೀ. ಬಿ. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ. ಅಲಾದಿಯವರು ವಿದ್ಯಾಭ್ಯಾಸದ ಕುರಿತು ಸರಸವಾದ ಭಾಷಣವನ್ನಿತ್ತರು. ಶಾಲೆಯ ಅಭಿವೃದ್ಧಿಗಾಗಿ ತುಂಬಾ ಮಂದಿ ವಿದ್ಯಾಪ್ರೇಮಿಗಳು ಸುಮಾರು ರೂ. 275/ರಷ್ಟು ಧನಸಹಾಯವನ್ನಿತ್ತರು. ಶ್ರೀ. ಜಿ. ಪಿ ಬಂಗೇರ, ಶ್ರೀ. ವೈ. ಜಿ. ಕರ್ಕೇರ, ಮೊದಲಾದ ಉತ್ಸಾಹಿಗಳು ಒಳಗೊಂಡ ಒಂದು ಶಾಲಾ ಆಡಳಿತೆ ಮಂಡಳಿಯನ್ನು ರಚಿಸಿದ್ದರು. ತೆರೆನಿಕೆಯ ದಿನ ಸುಮಾರು 100ಮಂದಿ ಮಕ್ಕಳು ಹಾಜರಿದ್ದರು. ಸಭಾಸತ್ಕಾರವಾದನಂತರ ಶ್ರೀ. ಎ. ಸುಬ್ಬನವರು ಪ್ರಸ್ತುತ ಶಾಲಾ ಹೆಡ್ ಮಾಸ್ತರರು, ಅಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದವನ್ನರ್ಪಿಸಿದರು.

ಕುಂದಾಪುರ—ಇಲ್ಲಿಯ ಹೈಸ್ಕೂಲಿನಿಂದ ಕಳೆದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆ ತರಗತಿಯ 61 ವಿದ್ಯಾರ್ಥಿಗಳೂ ಕಳುಹಲ್ಪಟ್ಟು 43 ಮಂದಿ ಪಾಸಾಗಿರುವರು. ಪ್ರೆಸಿಡೆನ್ಸಿ ಸರಾಸರಿ ಮಾರ್ಕುಗಳಿಗಿಂತಲೂ ಜಾಸ್ತಿ ಮಾರ್ಕುಗಳನ್ನು ಸರ್ವಸಾಧಾರಣ ಎಲ್ಲಾ ಹುಡುಗರೂ ಪಡೆದಿರುತ್ತಾರೆ. ಸೇಕಡಾ 70ರಷ್ಟು ವಿದ್ಯಾರ್ಥಿಗಳು ಪಾಸಾದುದು ಸಂತೋಷಕರ.

ಹಿಂದೂ ಹೈಸ್ಕೂಲ್ ಶಿರ್ವ—ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಶಿರ್ವ ಹಿಂದೂ ಹೈಸ್ಕೂಲಿನ ಸತಿಯಿಂದ ಶಾಲಾ ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಸೌಕರ್ಯಕ್ಕಾಗಿ ಶಿವಳ್ಳಿ ಬ್ರಾಹ್ಮಣರಿಂದ ಒಂದು ಹೊಸ್ಟೆಲನ್ನು ತೆರೆಯಲಾಗಿದೆ. ಸೇರಬೆಟ್ಟಿಸುವವರು ಕೂಡಲೇ ಶಾಲಾ ಹೆಡ್ಮಾಸ್ಟರರೊಡನೆ ಪತ್ರ ವ್ಯವಹಾರ ನಡೆಸಬಹುದು. ಯಾ ಮುಖತ ಮಾತಾಡಬಹುದು.

ಕಥಾ ಸ್ಪರ್ಧೆ—ಹೆಬ್ರಿಯ 'ಕಿರಿಯ ಬರಹಗಾರರ ಬಳಗ'ದವರು ಒಂದು ಕತೆಗಳ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ಕತೆಗಳನ್ನು ಕರ್ನಾಟಕದ ಯಾವತ್ತೂ ಭಾಗದವರು ಮತ್ತು ಹೊರಗಿನವರು ಕಳುಹಿಸಬಹುದು. ಕತೆಗಳನ್ನು ಜುಲೈ ೩೧ರೊಳಗೆ ಕಳುಹಿಸಬೇಕು.

(೧) ಕತೆಯು ಸ್ವತಂತ್ರವಾಗಿರಬೇಕು. ಭಾಷಾಂತರವಾಗಲೀ ರೂಪಾಂತರವಾಗಲೀ ಆಗಿರದೆ ಚೊಕ್ಕಟವಾಗಿ ಬರೆದಿರಬೇಕು. (೨) ಕತೆಯು ಫುಲ್‌ಸ್ಕ್ಯಾಪ್ ಹತ್ತು ಪುಟಗಳಿಗೆ ಮೀರಕೂಡದು. (೩) ಪ್ರತಿ ಒಬ್ಬರೂ ನಾಲ್ಕಾಣೆಯನ್ನು ಬಳಗದ ವಾಚನಾಲಯದ ಸಹಾಯಾರ್ಥವಾಗಿ ಕಳುಹಿಸಬೇಕು. (೪) ಒಬ್ಬರು ಎಷ್ಟೂ ಕತೆಗಳನ್ನು ಕಳುಹಿಸಬಹುದು; ಹೆಚ್ಚಿಗೆ ಹಣ ಕಳುಹಿಸುವ ಅವಶ್ಯವಿಲ್ಲ. (೫) ಉತ್ತಮವಾದ ಕತೆಗಳಿಗೆ ಪ್ರಥಮ, ದ್ವಿತೀಯ ಬಹುಮಾನ ಕೊಡಲಾಗುವುದು; ಸ್ತ್ರೀಯರ ವಿಭಾಗಕ್ಕೆ ಪ್ರತ್ಯೇಕ ಬಹುಮಾನವನ್ನು ಕೊಡಲಾಗುವುದು. (೬) ಕತೆಗಳನ್ನು ವಾಪಾಸು ಕಳುಹಿಸಬೇಕಾದಲ್ಲಿ ಅಂಚೆ ಚೀಟು ಇಡತಕ್ಕದ್ದು. (೭) ಉತ್ತಮವಾದ ಕತೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಕತೆಗಳನ್ನು ರಿಜಿಸ್ಟರ್ ಬುಕ್ ಪೋಸ್ಟಿನಿಂದ ಕಳುಹಿಸಿದರೆ ಒಳ್ಳೇದು. ಕಾರ್ಯದರ್ಶಿ—ಎಸ್. ಜಿ. ಚಿಪಳೂಣಕರ, 'ಕಿರಿಯ ಬರಹಗಾರರ ಬಳಗ' ಹೆಬ್ರಿ. (ದ ಕನ್ನಡ)

ಬಿಲ್ಲವರ ಎಸೋಸಿಯೇಶನ್—ನಮ್ಮ ಎಸೋಸಿಯೇಶನಿನಿಂದ ವಿದ್ಯಾರ್ಥಿವೇತನವನ್ನು ಪಡೆಯಬಿಚ್ಛಿಸುವ ಬಡ ವಿದ್ಯಾರ್ಥಿಗಳು ಇದೇ ಜುಲಾಯಿ ತಿಂಗಳ ತಾ. 31ರೊಳಗೆ ತಮ್ಮ ವಿದ್ಯಾವೇತನದ ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬಹುದು. ಗೌರವ ಪ್ರಧಾನ ಕಾರ್ಯದರ್ಶಿ, ಬಿಲ್ಲವರ ಎಸೋಸಿಯೇಶನ್. 17, ರಘುನಾಥ ದಾದಾಜಿ ರಸ್ತೆ ಕೋಟೆ ಮುಂಬಾಯಿ.

ಸೌತ್ ಕೆನರಾ ಎಸೋಸಿಯೇಶನ್ ಬಳ್ಳಾರಿ—ಇಲ್ಲಿಗೆ ಆಗಮಿಸಿದ ಕಂದಾಯ ಮಂತ್ರಿ ಶ್ರೀ. K.R. ಕಾರಂತರಿಗೆ ಮೇಲಿನ ಎಸೋಸಿಯೇಶನ್‌ನವರು ಒಂದು ಸತ್ಕಾರ ಕೂಟ ಏರ್ಪಡಿಸಿದರು. ಆಹಾರ ವಸ್ತುವಿನ ಕೊರತೆಯು ಈ ದಿನದಲ್ಲಿ ಬರೇ ಕಾಫಿಯಿಂದಲೇ ಸತ್ಕರಿಸಬೇಕಾಯಿತು. ಸಂಘದ ಅಧ್ಯಕ್ಷ ಡಾ। ಯು. ಕೆ. ಯಲ್, ನಾರಾಯಣರಾಯರು ಅತಿಥಿಗಳನ್ನು ಸ್ವಾಗತಿಸಿದ ಮೇಲೆ, ಶ್ರೀ. ಕಾರಂತರು ಈ ಸಂಘದ ಔಚಿತ್ಯದ ಕುರಿತು ಮಾತಾಡಿ, ತನ್ನ ಉದಾತ್ತವಾದ ಸಹಾನುಭೂತಿ ತೋರಿಸಿದರು. ಕೊನೆಗೆ ಕಾರ್ಯದರ್ಶಿ ಶ್ರೀ. ಬಿ. ಕೆ. ಪಾಳ್ವರು ಸಂಘದ ಚಟುವಟಿಕೆಗಳನ್ನು ವಿವರಿಸಿ, ಅತಿಥಿ ಅಭ್ಯಾಗತರಿಗೆ ಧನ್ಯವಾದವಿತ್ತು, ಸಭೆ ಮುಗಿಯಿತು.

ಪ್ರಸಿದ್ಧಿ ಪಡೆಯುವ ಹೊಸ ಮಾರ್ಗ

ಇತ್ತೀಚೆಗೆ ಸಮ್ಮೇಲನ, ಪರಿಷತ್ತು ಸಭೆ ವರ್ಗಗಳು ಕ್ಯಾಂಪುಗಳು ಬಹು ವೇಗದಿಂದ ಪ್ರಚಾರದಲ್ಲಿ ಬರಹತ್ತಿವೆ. ಇವುಗಳಿಗೆ ಇಂಥಿಂಥ ದೊಡ್ಡವರನ್ನು ಆಮಂತ್ರಿಸಲಾಗಿದೆಂದೂ ಇಂತಹ ವಿಷಯಗಳು ಚರ್ಚಿಸಲ್ಪಡುವವೆಂದೂ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಯಾರು ಇಂತಹ ಪ್ರಕಟನೆಗಳನ್ನು ಕಳಿಸುವದು ಸಾರ್ವಜನಿಕ ಜೀವದಲ್ಲಿ ಅವರ ಸ್ಥಾನವೇನು ಆಮಂತ್ರಿತರಾದ ಸದ್ಗೃಹಸ್ಥರು ಬರಲೊಪ್ಪಿರುವರೇ ಮೊದಲಾದ ವಿಷಯಗಳ ಬಗ್ಗೆ ಯಾರೂ ವಿಚಾರ ಮಾಡುವದಿಲ್ಲ. ಮತ್ತು ಸಂಚಾಲಕರಂತೂ ಆ ವಿಷಯದಲ್ಲಿ ಮೌನ ವ್ರತ ಧಾರಣ ಮಾಡುತ್ತಾರೆ. ಸರಕಾರದವರು ಅಂಚೆಯ ಖಾತೆಯನ್ನು ನಿರ್ಮಿಸಿ ಆಮಂತ್ರಣ ಕಳಿಸಲು ಹಗರು ಮಾಡಿದ್ದಾರೆ. ಇಂತಹ ಪ್ರಕಟಣೆಗಳಿಂದ ಜನರು ನಿಜವಾಗಿ ಅನೇಕ ಬಾರಿ ಮೋಸ ಹೋಗುತ್ತಾರೆ. ಮತ್ತು ಕೆಲವು ಸಂಚಾಲಕರು ಹಳ್ಳಿ ಹಳ್ಳಿಗಳಲ್ಲಿ ಹಣವೆತ್ತಲೊಂದು ಸಾಧನಮಾಡಿಕೊಳ್ಳುತ್ತಾರೆಂದು ನನ್ನ ಅನುಭವಕ್ಕೆ ಬಂದಿದೆ. ಸರಕಾರೀ ಅಧಿಕಾರಿಗಳಲ್ಲಿಯ ಲಂಚಗುಳಿತನವನ್ನು ತೆಗೆದು ಹಾಕಲು ಪ್ರಯತ್ನಪಡುತ್ತಿರುವಾಗ ಇದೆಂದು ಹೊಸ ಭೂತವು ಎದ್ದು ಕುಳಿತಿದೆ.

ಆದ್ದರಿಂದ ಇಂತಹ ಪ್ರಕಟನೆಗಳಿಗೆ ಎಡೆ ಕೊಡಕೂಡದು. ದೊಡ್ಡ ದೊಡ್ಡವರು ಬರುವರೆಂದು ತಿಳಿದುಕೊಂಡು ಜನರು ವ್ಯರ್ಥ ತೊಂದರೆಗೊಳಗಾಗುತ್ತಾರೆ ಪ್ರಸಿದ್ಧಿ ಪಡೆಯುವ ಇದೊಂದು ಹೊಸ ಮಾರ್ಗವನ್ನು ಕೆಲವು ಜನರು ಶೋಧಮಾಡಿದಂತೆ ತೋರುತ್ತದೆ. ಜನರು ಎಚ್ಚರ ಪಡಬೇಕು.

—ಕಾಂಗ್ರೆಸ್ಸಿಗರು

PUBLICACTION

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P 48 45. R. I. A. 587/46.

ಲಕ್ಷ್ಮೀಬಾಯಿ A. ಪ್ಯಾಸುರಾಯ ಪ್ರಭುವಿನ ಅಂಬಪ್ಪ ಕಾಮತರ ವಿಧವೆ ಉಡುಪಿ ಕಸಬಾ ಅಜ್ಜರಕಾಡು, ಅರ್ಜಿದಾರಳು,

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಅರ್ಜಿದಾರಳ ಮಗ ನಂತ್ರ ಸ್ವರ್ಗಸ್ಥನಾದ A. ನಾಗವೇಂದ್ರ ಕಾಮತರ ಹೆಸರಲ್ಲಿ ಅರ್ಜಿಯಲ್ಲಿ ನಿನ್ನಿಸಿದ ರೀತಿ- ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ ಉಡುಪಿ, ಈ ಬ್ಯಾಂಕಿನ ಬಾಬ್ತು ಹಿಂತಕ್ಕೆ ವ್ಯಾಜ್ಯಗಳು ಇತ್ಯಾದಿ ವಸೂಲು ಮಾಡಿಕೊಳ್ಳುವದಕ್ಕಾಗಿ ವಾರಿಸುದಾರಳು ವ ಪಕ್ಷದಾರಳಾದ ತನಗೆ ಎಕ್ಸ್‌ಟೆನ್ಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 6 7-1946ಕ್ಕೆ ಮುಂದೂಡಲಾಗಿಯದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಸಹಾ ಈ ಮೂಲಕ ಪ್ರಕಟಿಸಲಾಗಿಯದೆ.

By order of the Court.

Narasimha Vittal Kamath
Advocate for Petitioner.

ಉಡುಪಿ 15-6-46

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ರಕ್ತವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧ ರಚಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಫುಡ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಕುಂಭಾರಬಾಗ್ ರೋಡ್, ಜಿ. ಐ. ಪಿ ರೈಲಿ, ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಇನಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 491/1945.

ಕರಿಂದಳನ್ ರಾಮನ್ —ವಾದಿ.

ಮತ್ತು

ಅಂಬು ನಾಯರ್ —ಪ್ರತಿವಾದಿ.

ಇವರೊಳಗೆ

ತಾರೀಕು 10-6-1946

ಕಾಸರಗೋಡು ತಾಲೂಕು ಕರಿಂದಳ ಗ್ರಾಮದಲ್ಲಿರುವ ಕೀಯನೂರು ವೈದ್ಯಾಬೇರಿ ಕಂಬಿಕಾನೋನ್ ತಾಯತ್ತೀ ಪ್ರದಿಯ ವಿಳಿತಿಲ್ ಚಿರಂಪ್ಪ ಅಂಮನ ಮಗ ಪ್ರತಿವಾದಿ ಅಂಬು ನಾಯರರೀಗೆ

ಸದ್ರಿ ಪ್ರತಿವಾದೀಯು ವಾದೀಗೆ ತಾರೀಕು 4 12 1942ಲ್ಲು ರೂಪ್ಯಾ 100/—ಕ್ಕೆ ಬರಕೊಟ್ಟ ಪ್ರೋ. ನೋಟು ಪ್ರಕಾರ ಅಸ್ಲು ಬಡ್ಡಿ ಅವಜನ್ನು ಬರಕೊಡುವರ ವಾದೀಯು ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 24-6-1946ಕ್ಕೆ ಆಪ್ಪೆರು ತನ್ನಿಗೆ ಇಟ್ಟಿರುತ್ತದೆಂತ ಈ ಮೂಲಕ ತಿಳಿಯಪಡಿಸೋಣಾಗಿಯದೆ. ಸದ್ರಿ ಪ್ರತಿವಾದಿಯು ಸದ್ರಿ ತಾರೀಕಿಗೆ ಕೋರ್ಟಿಗೆ ಹಾಜರಾಗದಿದ್ರೆ ಅವನ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವದು.

Kasaragod 10 6- 46. } **B.S. Kakkilaya** Advocate for Petitioner

---

CHAMPAE'S

Snow & Castrex

(Sole Distributers for (India)

Prop: K. G. NAYAK,

Santhekatte, UDIPI, S. K.

ಬೆಳಕಿಗೆ ಬಿದ್ದು ಇವನ ವಿಚಾರಣೆಯಾಗಲಿದ್ದಾಗ ಶುಕ ಮಿತ್ರವರೊಡನೆ ಅಲ್ಲಿಂದ ತಪ್ಪಿಸಿಕೊಂಡ. ಅವನಿದ್ದ ಸೇನಾ ದಳವು ಅಷ್ಟರಲ್ಲೇ ಭಾರತಕ್ಕೆ ಬಂದಿತ್ತು. ಅವನದನ್ನು ಪುನಃ ಸೇರಿಕೊಂಡ. ಕೆಲವೇ ದಿನಗಳಲ್ಲಿ ಇವನಿದ್ದ ಗುಂಪಿಗೂ ಬೇರೊಂದು ಗುಂಪಿಗೂ ಜಗಳವೆದ್ದಿತು ಶುಕ ಈ ಜಗಳದಲ್ಲಿ ಮುಖ್ಯ ಭಾಗ ವಹಿಸಿ 11 ಜನರನ್ನು ವಧಿಸಿಬಿಟ್ಟ. ಅವನು ಕೋರ್ಟು ಮಾರ್ಶಲಿಗೊಳಗಾಗಿ ಜೀವಾವಧಿ ಸಜೆಯ ತೀರ್ಪಾಯಿತು ಆದರೆ ಇವನ ಕಮಾಂಡಿಂಗ್ ಆಫೀಸರನು ಅಪರಾಧಿಯ ಯುದ್ಧ ಸೇವೆ ಮತ್ತು ಪ್ರಾಯವನ್ನು ಗಣಿಸಿ ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಂಡಂತೆ ಇವನಿಗೆ ಕ್ಷಮೆ ದೊರೆಯಿತು.

1921ರಲ್ಲಿ-ತನ್ನ 18ನೇ ಪ್ರಾಯದಲ್ಲಿ-ಅವ ಪೋಲೀಸ್ ಖಾತೆಗೆ ಸೇರಿದ. ಅವನನ್ನೊಂದು ದೊಡ್ಡ ನಗರಕ್ಕೆ ಹಾಕಲಾಯಿತು. ಈ ಸಮಯದಲ್ಲೇ ಒಬ್ಬಳೊಡನೆ ಆತ್ಮಪ್ರಣಯ ಬೆಳೆಸಿದ. ಅವಳನ್ನು ಅಪಹರಿಸಿಕೊಂಡು ಬಂದಿಸಿಟ್ಟುಕೊಳ್ಳುವದಕ್ಕಾಗಿ ಇವ ಕೆಲವು ಅದ್ಭುತ ಕಾರ್ಯಗಳನ್ನು ಮಾಡಿಬಿಟ್ಟ. ಮತ್ತು ತಮ್ಮಿಬ್ಬರ ಸುಖ ಜೀವನಕ್ಕಾಗಿ ಎಷ್ಟೋ ಬಾರಿ ಕಳವು ಮಾಡಿ ತಂದಿದ್ದ. ದಂಗೆ ಸುಲಿಗೆಗಳಿಂದ ಹಣ ಸಂಪಾದಿಸುವ ತನ್ನ ಇಚ್ಛಾಪೂರ್ತಿಗಾಗಿ, ಶುಕ ಪೋಲೀಸ್ ಖಾತೆಯಲ್ಲಿದ್ದಂತೆಯೇ ಒಂದು ದಂಗೇಗಾರ ದಳ ನಿರ್ಮಿಸಿಕೊಂಡಿದ್ದ. ಅವರೊಂದು ಕಪಟ ಇನ್ಶೂರೆನ್ಸ್ ಕಂಪೆನಿಯನ್ನು ತೆರೆದರು; ಈ ದಗಾಖೋರರ ತಂಗಡ ಅದರ ಕಾರ್ಯಾಲಯದಲ್ಲಿಯೇ ಸಭೆ ಸೇರುತಿತ್ತು. ಅದ್ಭುತ ಸಾಹಸಮಯೀ ಘಟಯಿತುಗಳ ಪುಸ್ತಕಗಳನ್ನೋದಿ ಆತ ತನ್ನ ಚಾತುರ್ಯವನ್ನು ಹೆಚ್ಚಿಸಿಕೊಂಡ. ತನ್ನ ಕಾರ್ಯಕ್ಕಾಗಿ ಒಂದೊಳ್ಳೇ ಕಾರನ್ನು ಪಡೆಕೊಂಡ. ದಂಗೆಗಳೆಲ್ಲಾ ರಾತ್ರಿಯಲ್ಲೇ ನಡೆಯುತ್ತಿದ್ದವು; ಆತ ಒಂದೇಒಂದು ಬಾರಿಯಾದರೂ 'ಡ್ಯೂಟಿ'ಗೆ ಗೈರು ಹಾಜರಾದುದನ್ನು ಕಂಡವರಿಲ್ಲ. ಹೀಗಾಗಿ ಅವನ ವಿಷಯವಾಗಿ ಗುಜುಗುಜು ಹು[illegible]ದರೂ ಪೋಲಿಸ್ ಮೇಲಧಿಕಾರಿಗಳು ಅದನ್ನು ಒಪ್ಪುತ್ತಿ ನಂಬಲಿಲ್ಲ. ಆದ್ದರಿಂದ ಅವನು ಮತ್ತೂ ಹಲವು ವರುಷ ಗ[illegible] ಸುಲಿಗೆ ನಡೆಸುತ್ತಲೇ ಇದ್ದ.

ಆ ವೇಳಿನ ಅವನ ಚರಿತ್ರೆಯೆಂದರೆ ಹಣಕ್ಕಾಗಿ ಅಥವಾ ಮಿತ್ರರ ಸಹಾಯಕ್ಕಾಗಿ ನಡೆಸಿದ ದರೋಡೆ, ಕೊಲೆಗಳ ಸರಣಿಯೇ. ದಿನದಿಂದ ದಿನಕ್ಕೆ ಅವನ ಧೈರ್ಯ ಹೆಚ್ಚುತ್ತಾ ಹೋಯಿತು. ಒಂದು ದಿನ ತನ್ನ ಕೈಗೆ ಕೋಳ ಬೀಳುವದೆಂಬುದು ಆತನಿಗೆ ಗೊತ್ತಿತ್ತು. ಆದ್ದರಿಂದ ಅವ ತನ್ನ ಹೆಚ್ಚಿನ ಹಣವನ್ನು ಹೆಂಡತಿಗೆ ರವಾನಿಸಿಡುತಿದ್ದ. ಕೊನೆಗಾತ ಸಿಕ್ಕಿಬಿದ್ದ ಕತೆ ಹೀಗಿದೆ. ತಾನು ಸುಲಿದ ತಂದಿದ್ದ ಆಭರಣಗಳಲ್ಲಿ ಸ್ವಲ್ಪಾಂಶವನ್ನು ಆತ ತನ್ನೊಬ್ಬ ಮಿತ್ರನಿಗೆ ಕೊಟ್ಟಿದ್ದ. ಅವುಗಳಲ್ಲಿ ಕೆಲವನ್ನು ಹಿಡಿದುಕೊಂಡು ಈ ಮಿತ್ರನೊಂದು ಜಾತ್ರೆಗೆ ಹೋಗಿದ್ದಾಗ ಪೋಲೀಸರ ದೃಷ್ಟಿಗೆ ಬಿದ್ದು ಸಂದೇಹಕ್ಕೆ ಬಲಿಯಾದ. ಅವನ ಮನೆಯ ಜಡ್ತಿ ನಡಿಸಿದಾಗ ಅಲ್ಲಿ ಕಳವಾಗಿದ್ದ ಆಭರಗಳು ಮತ್ತು ಒಂದು ಕಳವಿನ ರಿವೋಲ್ವರ್ ಪೋಲೀಸರಿಗೆ ದೊರೆತುವು. ತನಗದನ್ನು ಕೊಟ್ಟವನು ಶುಕನೆಂದು ಈ ಮಿತ್ರ ಬಾಯಿ ಬಿಟ್ಟ. ಮತ್ತಾತ ಮಾಫಿ ಸಾಕ್ಷಿಯಾಗಲು ಒಪ್ಪಿಕೊಂಡ. ಇದರಿಂದಾಗಿ ಶುಕನದಸ್ತಗಿರಿಯಾಯಿತು. ಅವನ ಮನೆ ಜಡ್ತಿ ನಡಿಸಿದಾಗ, ವಿಶೇಷ ಬೆಳ್ಳಿ ಭಂಗಾರಗಳು ದೊರೆತುವು.

ಅವನ ವಿಚಾರಣೆ ನಡೆಯುತಿತ್ತು; ಮಾಫಿ ಸಾಕ್ಷಿಗಾರನ ಹೇಳಿಕೆಯಾಗುತಿತ್ತು. ಶುಕ ಕೋರ್ಟಿನಲ್ಲಿಯೇ ಸಾಕ್ಷಿಗಾರನ ಮೂಗನ್ನು ಕತ್ತರಿಸಿಬಿಟ್ಟ. 'ಲೋಕ್ ಅಪ್'ನಲ್ಲಿರುವಾಗಲೂ ತಪ್ಪಿಸಿಕೊಳ್ಳಲು ಅವನು ಅದ್ಭುತ ಸಾಹಸಗಳನ್ನು ಮಾಡಿದ್ದ; ಆವರೆಲ್ಲವೂ ನಿಷ್ಫಲವಾಗಿದ್ದುವು ಕೆಲವು ಬಾರಿ ಈತ ಸ್ವತಃ ಪಹರೆಗಾರನಿಗೆ ಹೊಡೆದೋಡಿ ಹೋಗಲು ಪ್ರಯತ್ನಿಸಿದ್ದನಲ್ಲದೆ, ಅವನ ಹೆಂಡತಿ ಮೊದಲಾದವರು ಹೊರಗಿನಿಂದಲೂ ಯತ್ನಿಸಿದ್ದರು. ಇನ್ನು ಸಂಯುಕ್ತ ಪ್ರಾಂತ್ಯದ ಸೆಂಟ್ರಲ್ ಜೈಲಿನಲ್ಲಿ ಬಂಧಿಯಾಗಿರುವಾಗ ಆತನೊಮ್ಮೆಯೂ ಜೈಲಧಿಕಾರಿಗಳಿಗೆ ವಿಧೇಯನಾಗಿರಲಿಲ್ಲ; ಜೈಲು ನಿಯಮಗಳನ್ನೂ ಪಾಲಿಸಲಿಲ್ಲ. ಒಮ್ಮೆ ಆತ ಅಧಿಕಾರಿ ಕೈದಿಗೆ ಹೊಡೆದಿದ್ದನಲ್ಲದೆ, ಬೇರೊಂದು ಬಾರಿ ಮತ್ತೊಬ್ಬ ಕೈದಿ ಅಧಿಕಾರಿಗೆ ತಿವಿದಿದ್ದ. ಸರ್ಕಲ್ ಜೈಲರನೊಡನೆ ಅವನೆಷ್ಟೋ ಬಾರಿ ಜಗಳ ಮಾಡಿದ್ದ. ಜೈಲು ಸುಪರಿಂಟೆಂಡೆಂಟನನ್ನು ಕೊಂದು ಹಾಕಬೇಕೆಂಬ ಉತ್ಕಟೇಚ್ಛೆ ಅವನಲ್ಲಿದ್ದರೂ ಅವರು ಮಾತ್ರ ಸಿಕ್ಕಿರಲಿಲ್ಲ. ಗವರ್ನರರು ಜೈಲನ್ನು ಸಂದರ್ಶಿಸಿದಾಗ ಅವರಿಗೂ ಹೊಡೆಯಬೇಕೆಂದು ಆತ ಬಗೆದಿದ್ದ. ಆದರೆ ಶುಕನನ್ನು ಕೂಡಿಸಿದ್ದ ಸರ್ಕಲಿಗೆ ಗವರ್ನರ್ ಬಾರದೆ ಹೋದರು. ಒಂದು ಚೂರಿ, ಮತ್ತೊಂದು ಕಟಾಣಿ ಸದಾಕಾಲ ಅವನ ವಶವಿದ್ದುವು. ಜಡ್ತಿಯಾಗದಂತೆ ಲಂಚ ಕೊಟ್ಟು ತಾನು ತಪ್ಪಿಸಿಕೊಳ್ಳುತಿದ್ದೆನೆಂದು ಅವನನ್ನುತ್ತಾನೆ. ನಿರ್ಬಂಧನಿದ್ದ ಯಾವುದೇ ಸಾಮಾನು ಅಥವಾ ಆಹಾರವನ್ನಾದರೂ ಜೈಲಿನೊಳಗವ ತರಿಸಿಕೊಳ್ಳಲು ಶಕ್ತನಾಗಿದ್ದ".

—'Penal Reformer'.

In the Court of the District Munsif of Mangalore.

O. S. No. 398/1944
R. I. A. No. 193/1945

Between
Pascal Lobo (Plaintiff)
--Petitioner.
and
1. Aithappa Maistry
2. Yemunamma (Defendants)
—Respondents.

To
The Respondents

Notice is hereby given that the above application filed by the Plaintiff for the passing of a final decree for sale of the Mortgaged property, against the Respondents stands posted for hearing on 29-6-1946 where Respondents are at liberty to appear and oppose the same.

P. D. Souza,
Vakil for Petitioner.
12-6-1946.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಬೇವಿನಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ
Ayurveda Ouchadalaya. GADAG.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 32/1946.

1. ಸರಸ್ವತಿ, ರಾಮಚಂದ್ರ ಕಲ್ಕೂರರ ವಿಧವೆ 2. ಸೂರ್ಯನಾರಾಯಣ, ರಾಮಚಂದ್ರ ಕಲ್ಕೂರರ ಮಗ. ಮೈನರ್ ರಕ್ಷಕ—ಲಕ್ಷ್ಮೀನಾರಾಯಣ ಭಟ್ಟ, ವೆಂಕಟಾಚಲ ಭಟ್ಟರ ಮಗ, ಉಡುಪಿ ತಾಲೂಕು ಮಣಿಪುರ ಗ್ರಾಮದ ಕೊಡಂಗಳ. —ಅರ್ಜಿದಾರರು.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದ್ರೆ:-

ಮೇಲ್ಕಂಡ ಅರ್ಜಿ ಪ್ರಕರಣೆಯಲ್ಲಿ 1 ನೇ ಅರ್ಜಿದಾರಳ ಗಂಡ-ವ-2 ನೇ ಅರ್ಜಿದಾರನ ತಂದೆ ತಾ 5-2-46ರಲ್ಲು ಮೃತಪಟ್ಟ ರಾಮಚಂದ್ರ ಕಲ್ಕೂರರಿಗೆ ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ ಇದರ ಪೊಲಿಸಿ ನಂಬ್ರ 58911ರ ಬಾಬ್ತು ಬರತಕ್ಕ ಹ್ಯವಜನ್ನು "ದಿ ಓರಿಯಂಟಲ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್" ಇದರ ಪೊಲಿಸಿ ನಂಬ್ರ 27541ರ ಬಾಬ್ತು ಬರತಕ್ಕ ಹ್ಯವಜನ್ನು ಮತ್ತು ಸೆಕ್ರೆಟರಿ ಓಫ್ ಸ್ಟೇಟ್ ಪೋಸ್ಟ್ ಆಫೀಸು ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು NS A ೨ 203626ರಿಂದ 203628, NS A/1o 017952 ಮತ್ತು ಬೂಕು ನಂಬ್ರ 757ರ ರಶೀದಿ ನಂಬ್ರ 37807ರ ಬಾಬ್ತು ಹ್ಯವಜುಗಳನ್ನು ವಸೂಲು ಪಡಿಯುವರೆ ಅರ್ಜಿದಾರರೇ ಹಕ್ಕುದಾರರೆಂತಲೂ ಆ ಕುರಿತು ಅರ್ಜಿದಾರನ ಬಗ್ಗೆ ಅವರ ರಕ್ಷಕ ಲಕ್ಷ್ಮೀನಾರಾಯಣ ಭಟ್ಟರ ಹೆಸ್ರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರರು ದಾಖಲ್ಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 29-6-46ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲುಳ್ಳವರು ಸದ್ರಿದಿವಸ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟಿನಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಉಡುಪಿ } **P. V. Acharya.**
ತಾ 11-6-46. } Vakil for Petitioner[9]

ನೋಟೀಸು

ಉಡುಪಿ ಡಿ ಮು. ಕೋರ್ಟಿನಲ್ಲಿ

O. S. No 47/46

ಕೆ. ಶೀತಾರಾಮ ಶಾಸ್ತ್ರಿ — ವಾದಿ

ಮತ್ತು

ಮಧ್ವಾಚಾರ್ ಗೋವಿಂದಾಚಾರ್ ಉಮಾರ್ಜಿ — ಪ್ರತಿವಾದಿ

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಜಯಕರ್ನಾಟಕ ನಾಟಕ ಮಂಡಳಿಯ ಪ್ರೊಪ್ರೈಟರ್ ಕೆ. ಶೀತಾರಾಮ ಶಾಸ್ತ್ರಿಯು ಸದ್ರಿ ನಾಟಕದಲ್ಲಿ ಮುಖ್ಯ Actor ನಾಗಿದ್ದ ಪ್ರತಿವಾದಿಯು ಸದ್ರಿ ಕಂಪನಿಯನ್ನು ಬಿಟ್ಟಬಿಟ್ಟಂದ ಆ ವಾದಿಗೆ ಉಂಟಾದ ನಷ್ಟ ವಗೈರೆ ಕೇಳಿ ಪ್ರತಿವಾದಿ ಮೇಲೆ ಮಾಡಿದ ಸದ್ರಿ ವ್ಯಾಜ್ಯವು ನೋಟೀಸ್ ಬಗ್ಗೆ ತಾ. 28-6-46ಕ್ಕೆ ಮುಂದೋಗಾಗಿರುವದೆ ಹಾಗೆ ನಸ್ಸಿಗ ಇಟ್ಟ ದಿವಸ ಸದ್ರಿ ಪ್ರತಿವಾದಿಯು ಸ್ವತಹಾ ವ, ವಕೀಲರ ಮುಖಾಂತ್ರ ಹಾಜರಾಗಿ ಆಕ್ಷೇಪ ವಗೈರೆ ಇದ್ದರೆ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

P. Padmanabha Rao.
Vakil for Plaintiff.
ಉಡುಪಿ ತಾ. 12-6-46.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪಿತ.

NAVAYUGA ನವಯುಗ

ವರ್ಷ ೨೫ ವಾರ ೪೩ | ಪ್ರತಿ ಗುರುವಾರ ಹೊರಡುವ ಸ್ವಾತಂತ್ರ್ಯದ ವಾರಪತ್ರಿಕೆ. Founder SRI A. B. SHETTY, M. L. A. | Vol. 25 No. 43

ಉಡುಪಿ • 27-6-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.

ತಲೆನೋವು, ನೆಗಡಿ, ವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಹಚ್ಚಬೇಕು, ನೋಡಿದರೆ ಎಲ್ಲಾ ರೋಗಗಳಿಗೂ ...

REGD.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ. ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಡವೂರು; ನವಭಾರತ ಬುಕ್ ಡಿಪೊ

THE CANARA MUTUAL ASSURANCE COMPANY, LTD.,

Head Office - **UDIPI, (S. India.)**

NEW APPOINTMENTS.

Applications from candidates (both Boys and Girls) of S. S. L. C Standard are invited for clerical posts in the Company

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman

Last date by which Applications should reach this Office shall be 30th June, 1946

Udipi, 6-6 1946. T. R. A. Pai, *Managing Director.*

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in ... in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ... ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕನಾಲದಾನಿ, ಕೆಮಿಸ್ಟ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಅರಸೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

★ ಈ ಹದಿನಾಲ್ಕು ಮಂದಿ ★

ವೈಸರಾಯಿ ವೇವೆಲರು ಬ್ರಿಟಿಷ್ ಮಂತ್ರಿ ಸಮಿತಿ ಮತ್ತು ಬ್ರಿಟನಿನ ಪ್ರಧಾನಿ ಆಟ್ಲಿ ಹಾಗೂ ಮಂತ್ರಿ ಮಂಡಲದ ಸಲಹೆ ಪಡೆದು, ಕಾಂಗ್ರೆಸ್–ಲೀಗ್ ಎಳೆದಾಟಗಳ ಮಧ್ಯದ ಒಂದು ಹಾದಿ ಹಿಡಿದು, ಹದಿನಾಲ್ಕು ಮಂದಿಯನ್ನು ತಾತ್ಕಾಲಿಕ ಸರಕಾರಕ್ಕಾರಿಸಿಕೊಂಡಿರುವರಷ್ಟೆ. ಅವರು ಯಾರಾರು ಎಂಬುದು ಗೊತ್ತೆ?

ಸರದಾರ ಬಲದೇವ ಸಿಂಘ್

ಇವರು ಉಗ್ರ ಸಿಖ್‌ಅಭಿಮಾನಿ. ಧೀರ ಮತ್ತು ಸಾಹಸಿ; ಆದರೆ ಅದೇ ಪರಿಮಾಣದಲ್ಲಿ ಉಗ್ರ ರಾಷ್ಟ್ರಾಭಿಮಾನಿಯೆನ್ನಲಾಗುವದಿಲ್ಲ. ಸಿಖ್ಖರು ಅಲ್ಪಸಂಖ್ಯಾಕರಾದರೂ ಅವರ ಸ್ವಸಮಾಜಾಭಿಮಾನವು ರಾಷ್ಟ್ರಾಭಿಮಾನದೊಡನೆ ಢಿಕ್ಕಿ ಹೊಡೆಯುವದು ಅತ್ಯಪರೂಪ. ಬದಲಿಗೆ, ಹುಟ್ಟು ಧೀರರಾದ–ಚರಿತ್ರೆಯ ರಜಪೂತರ ಪೌರುಷಧಾರಿಗಳಾದ—ಸಿಖ್ಖರ ಅಮೂಲ್ಯ ಗುಣಗಳು ರಾಷ್ಟ್ರೀಯ ಕಾರ್ಯಕ್ಕೆ ವಿಶೇಷತಃ ನೆರವಾಗಿವೆ. ಸರ್ದಾರ್ ಬಲದೇವಸಿಂಘರು ಪಂಜಾಬಿನ ಸಮ್ಮಿಶ್ರ ಸರಕಾರದಲ್ಲಿ (ಕಾಂಗ್ರೆಸ್ ಬೆಂಬಲ ಮತ್ತು ಬೆರಕೆಯುಳ್ಳದ್ದು) ಓರ್ವ ಮಂತ್ರಿಯಾಗಿದ್ದಾರೆ. ಇದು ವರೆಗೆ ಇವರು ವೈಸರಾಯರ ಆಮಂತ್ರಣ ಸ್ವೀಕರಿಸಿಲ್ಲ. ಕಾರಣವೆಂದರೆ ಬ್ರಿಟಿಷ್ ಯೋಜನೆಯ ಮೂಲ ತತ್ವಗಳಿಗೇನೇ ಸಿಖ್ಖರ ಪ್ರಬಲ ವಿರೋಧವಿದೆ. 'ನಾವು ಹತ್ತು ವರುಷಗಳಲ್ಲಿ ಇಂಚಿಂಚಾಗಿ ಸಾಯುವದಕ್ಕಿಂತ ಈ ಯೋಜನೆಯನ್ನು ವಿರೋಧಿಸಿ ಒಮ್ಮೆಗೇ ಧೀರ ಮರಣ ಹೊಂದುತ್ತೇವೆ' ಎಂದು ಮಾಸ್ಟರ್ ತಾರಾಸಿಂಗರೂ ಇದೇ ಬಲದೇವ ಸಿಂಗರೂ ಬ್ರಿಟಿಷ್ ರಾಯಭಾರಿಗಳೊಡನೆ ಹೇಳಿ ಬಂದಿದ್ದರು. ಆದರೆ ಈಗ ಸರ್ದಾರ್ ಸಿಂಗರು ನವದಿಲ್ಲಿಗೆ ಹೋಗಿ ಕಾಂಗ್ರೆಸ್ ಪ್ರಮುಖರೊಡನೆ ಮಾತಾಡಿದ್ದಾರೆ. ಕಾಂಗ್ರೆಸ್ ಈ ವ್ಯವಸ್ಥೆಗೊಪ್ಪುವಾಗ ಸಿಖ್ಖರೂ ಒಪ್ಪುವ ಸಂದರ್ಭವೊದಗಬಹುದು 'ಪಂಥ್ ಕೌನ್ಸಿಲ್' ಹೇಗೆ ನಿರ್ಧರಿಸುವದೋ ಹಾಗಾಗಲಿದೆ.

ಸರ್. ಎನ್. ಪಿ. ಇಂಜನೀಯರ್

ಇವರು ಹಿಂದೀ ಸರಕಾರದ ಎಡ್ವೊಕೇಟ್ ಜನರಲ್ ಆಗಿರುವವರು. ಆಜಾದ್ ಹಿಂದ್ ಕೇಪ್ಟನರಾದ ಷಾ‌ನವಾಜ್, ಸೈಗಾಲ್, ಧಿಲ್ಲೋನರ ಆ ಪ್ರಸಿದ್ಧ ಕೆಂಪುಕೋಟೆ ವಿಚಾರಣೆಯಲ್ಲಿ ಸರಕಾರೀ ವಕೀಲರಾಗಿದ್ದ ಸರ್. ನೋಶಿರ್ವಾನರ ಹೆಸರು ಮರೆತು ಹೋದೀತೇ! ಶ್ರೀ. ಭೂಲಾಭಾಯಿಗಳೆದಿರು ಇವರ ತೇಜಸ್ಸನ್ನು ಮೆರುಗಲಿಲ್ಲ; ಆದರೆ ದೇಸಾಯಿಗಳ ಗೈರು ಹಾಜರಿಯಲ್ಲಿ ಇದಿರು ವಾದಿ ಮಿ. ಅಸಫ್ ಅಲಿಯವರನ್ನು ಕೆರಳಿಸಿ, ಆದರೆ ತಾನು ಶಾಂತ ಗಂಭೀರದಿಂದ ವಾದಿಸಿ ಹಿರಿತನ ತೋರಿಸಿದ್ದರು. ಕೆಂಪು ಕೋಟೆಯ ತನ್ನ ಕೊನೆಯ ವಾದದಲ್ಲಿ 'ಅಪರಾಧಿಗಳ ದೇಶ ಸೇವೆಯ ಏಕ ಮಾತ್ರ ಉದ್ದೇಶವನ್ನು ಗಮನಿಸಿ ಕ್ಷಮೆನೀಡಬಹುದು' ಎಂದು ಸರಕಾರೀ ವಕೀಲರಾದ ಇವರೇ ಸೂಚಿಸಿದ್ದರು. ವ್ಯಕ್ತಿಗತ ಆಕ್ಷೇಪಕ್ಕೆಡೆಯಿಲ್ಲ. ಆದರೆ ಇವರು ಸರಕಾರೀ ನೌಕರರು. ರಾಷ್ಟ್ರೀಯ ಸರಕಾರದಲ್ಲಿ ಇವರಿಗೂ ಸ್ಥಾನ ಕೊಟ್ಟುದು ಸರಿಯಲ್ಲ ಎಂದು ಕಾಂಗ್ರೆಸಿನ ಪ್ರಬಲಾಕ್ಷೇಪವಿದೆ. ಇವರು ಪಾರಶಿ; ಪಾರ್ಶಿಗಳಲ್ಲಿ ಸರ್. ಕವಾಸ್ಜಿ ಜಹಾಂಗೀರ್, ವೀರನರಿಮನ್ ಮೊದಲಾದ ಬೇರೆ ಕೆಲವು ಪ್ರಸಿದ್ಧರೂ ಇದ್ದಾರೆ. ರಾಜಕುಮಾರಿ ಅಮೃತ ಕೌರರಿಗೆ ಸ್ಥಾನಕೊಡುತ್ತಿದ್ದರೆ ಪಾರ್ಶಿ ಮತ್ತು ಮಹಿಳಾ ಪ್ರಾತಿನಿಧ್ಯವೆರಡೂ ಆಗುತಿತ್ತೆಂದು ಗಾಂಧಿಜಿಯ ಅಭಿಪ್ರಾಯವಿದೆ. ಆದರೆ ನೋಶಿರ್ವಾನರಿನ್ನು ಕದಲುವ ಸಂಭವವಿಲ್ಲ. ಈಗ ಭುಲಾಭಾಯಿಗಳೂ ಇರಬೇಕಿತ್ತು ಅನ್ನಿಸುತ್ತದೆ.

ಶ್ರೀ ಜಗಜೀವನ ರಾಮ್

ಇವರು ದಳಿತ ವರ್ಗದ ಪ್ರತಿನಿಧಿ; ಹರಿಜನ; ಕಾಂಗ್ರೆಸಿಗ. ಏಳೆಂಟು ಕೋಟಿ ಮುಸಲ್ಮಾನರಿಗೆ ೫ ಸ್ಥಾನಗಳನ್ನು ಕೊಟ್ಟಿರುವಾಗ, ಆರು ಕೋಟಿಯಷ್ಟಿರುವ ಹರಿಜನರಿಗೆ 40 ಲಕ್ಷವಿರುವ ಸಿಖ್ಖರಿಗೂ ಕೇವಲ 30 ಲಕ್ಷವಿರುವ ಕ್ರೈಸ್ತರಿಗೂ ದೊರೆತಂತೆ ಒಂದೇ ಸ್ಥಾನ ದೊರೆತಿದೆ. ಆ ಒಂದು ಸ್ಥಾನವೂ ಕಾಂಗ್ರೆಸಿಗರಾದ ಜಗಜೀವನರಾಮರಿಗೆ ಹೋದುದು ಡಾ। ಅಂಬೇಡ್ಕರರಲ್ಲಿ ಹೊಟ್ಟೆಯುರಿಯನ್ನೆಬ್ಬಿಸಿದೆ. ಅವರು ಪ್ರಧಾನಿ ಆಟ್ಲಿಯವರಿಗೇನೇ ಮೊರೆಯಿಟ್ಟಿದ್ದಾರೆ. ಈ ಜಗಜೀವನರಾಮರು ಕಾಂಗ್ರೆಸ್ ಬೆಂಬಲದಿಂದ ಪ್ರಸಿದ್ಧಿಗೆ ಬಂದವರು.

ಪಂಡಿತ ಜವಾಹಿರ ಲಾಲನೆಹರು

ಇವರ ಪರಿಚಯ ಬೇಡತಾನೆ? ಮೊನ್ನೆ ತಾನೇ ಒಮ್ಮೆ ಉರಿದು ಬಿದ್ದು 'ಈ ಬ್ರಿಟಿಷರು ದ್ವ್ಯರ್ಥದ ಮಾತಾಡುವುದನ್ನೇಕೆ ಇನ್ನೂ ಬಿಡುವದಿಲ್ಲ? ಇಷ್ಟು ದೀರ್ಘಾವಧಿ ಆದರೊಡನೆ ಹೋರಾಡಿರುವ ನಾನು ವೈಸರಾಯೀ ಕೌನ್ಸಿಲಿನಲ್ಲಿ ಸೇರುವಂತಿಲ್ಲ' ಎಂದಿವರು ಘರ್ಜಿಸಿದ್ದರು ಅದನ್ನು ಕೇಳದವರಂತೆ ಮಾಡಿಕೊಂಡು ವೈಸರಾಯರು ಇವರನ್ನೀಗ ಆಮಂತ್ರಿಸಿದ್ದಾರೆ ಆದರೆ ಆ ಆಮಂತ್ರಣ ಹೋಟದಹೊರ್ತದ ಲಕ್ಷಣವೇನೋ– ಕಾಶ್ಮೀರಕ್ಕೆ ಹೋದಲ್ಲಿ ನೆಹರುಗಳ ದಸ್ತಗಿರಿಯಾಗಿ ಬಿಡುಗಡೆಯಾಯಿತೆಂದೂ ಅಲ್ಲಿ ಮುನ್ನುಗ್ಗುವಾಗ ನೆಹರುಗಳ ಕೆನ್ನೆಗೆ ಜಖಮಾಗಿದೆಯೆಂದೂ ರೋಮಾಂಚಕಾರೀ ಸುದ್ದಿ ಬಂದಿದೆ. ಸರಕಾರೀ ಸದಸ್ಯ ನೆಹರುಗಳಿಗಿಂತ ಮುಂದಾಗಿ ಮತ್ತು ಆಕರ್ಷಣೀಯವಾಗಿ ಕೆನ್ನೆಯಲ್ಲಿ ರಕ್ತಸುರಿಯುವ ಪಂಡಿತರ ಚಿತ್ರ ಕಣ್ಣ ಮುಂದೆ ಬರುತ್ತಿದೆ. ಕಾಶ್ಮೀರದ ರಾಜರು ಕೆಲಸ ಕೆಡಿಸಿಕೊಂಡರು. ಜವಾಹಿರಲಾಲರು ನಿಯೋಜಿತ ರಾಷ್ಟ್ರಪತಿ. ಅವರೂ ಇತರ ಅಗ್ರಗಣ್ಯ ಕಾಂಗ್ರೆಸ್ ಪ್ರಮುಖರೂ ಸರಕಾರೀ ಅಧಿಕಾರಿಗಳಾಗಿ ಹೋದರೆ ಮತ್ತೆ ಕಾಂಗ್ರೆಸ್ ಅಧ್ಯಕ್ಷರಾಗಿ ಜೈಪ್ರಕಾಶ್, ಅಥವಾ ಕೃಪಾಲನಿ ಬರುತ್ತಾರೇನೋ. ಇಲ್ಲವಾದರೆ ನಮ್ಮ ಆಂಧ್ರರಿಗೆ ಮತ್ತೊಂದು 'ಚಾನ್ಸ್' ದೊರೆಯಿತು- ಡಾ। ಪಟ್ಟಾಭಿ ರಾಷ್ಟ್ರಪತಿಯಾಗಬಹುದು· ವಿದೇಶ ಸಂಬಂಧಖಾತೆ ಪಂಡಿತ ಜವಾಹಿರಲಾಲರಿಗೆಂದು ಅಡ್ಡಿ ವಿನಹಾ ಹೇಳಬಹುದು. ನಾವನ್ನುವದಾದರೆ ಸಗ್ಗ ನೆಹರುಗಳು ಈ ಸೀರಕ್ಕೇರಬಾರದು; ಈ ಅರ್ಧಮರ್ಧ ನಡುಗಾಲ ಸರಕಾರಕ್ಕೆ ನೆಹರುಗಳನ್ನು ಕೂಡಿಸುವದೂ ಎತ್ತಿನ ಗಾಡಿಗೆ ಇಂಜಿನು ಜೋಡಿಸುವದೂ ಒಂದೇ. ಅಲ್ಲಿ ಕೃಪಾಲನಿ ಅಥವಾ ಸರೋಜಿನಿ ದೇವಿಯಿದ್ದಾರಲ್ಲಾ–ಅವರನ್ನೇಕೆ ಹಾಕಬಾರದು?

ಮಿ. ಎಂ. ಎ. ಜಿನ್ನಾ

ಸಾಹೇಬರ ಕುರಿತು ಏನೂ ಹೇಳಬೇಕಾಗಿಲ್ಲ ತಾನೆ? ಅಲ್ಲಿ ಯಾವ ಖಾತೆಗೆ ಕೈ ಕೊಡುತ್ತಾರೋ! 'ಆ ಕಡೆಯಿಂದ ಮಿಸ್ಟರ್ ಗಾಂಧಿ ಬಾರದೆ ಈ ಕಡೆಯಿಂದ ನಾನು ಬರಲಾರೆ' ಎಂದು ಮಿ. ಜಿನ್ನರು ಮುಷ್ಕರ ಹಿಡಿಯುವದು ಪಾಸಿ. ಮಿ. ಜಿನ್ನರು ವೈಸರಾಯರಿಗೊಪ್ಪಿಸಿದ್ದ ಹೆಸರು ಪಟ್ಟಿಯಲ್ಲಿದ್ದ ಐವರನ್ನೇ ಈಗ ಆರಿಸಿಕೊಳ್ಳಲಾಗಿದೆಯಂತೆ ಈ ಆರಿಸುವಿಕ ಸರಿಯಲ್ಲವೆಂದು ಲೀಗ್ ಪಾಳೆಯದಲ್ಲೇ ಅತೃಪ್ತಿಯಿದೆಯಂತೆ. ಸಂಯುಕ್ತ ಪ್ರಾಂತ್ಯವೊಂದರಿಂದಲೇ ಇಬ್ಬರನ್ನು (ನವಾಬಝಾದಾ ಲಿಯಾಕತ್ ಅಲೀಖಾನ್ ಮತ್ತು ನವಾಬ್ ಮಹಮ್ಮದ್ ಇಸ್ಮಾಯಿಲ್) ಆರಿಸಿದ್ದೇಕೆ? ಲೀಗಿಗೆ ಅಪರಿಚಿತರಾದ ಗಡಿನಾಡಿನ ಸರ್ದಾರ್ ಅಬ್ದುಲ್‌ರಬ್ ನಿಸ್ತಾರರೇಕೆ? ಎಂದು ಲೀಗ್ ಪ್ರಮುಖರೇ ಕೇಳುತಿದ್ದಾರೆಂದು ವಾರ್ತೆ. ಕಳೆದ 25ವರುಷಗಳಿಂದಎಡೆಬಿಡದೆ ತಮಗೆ ಪ್ರಾತಿನಿಧ್ಯವಿದ್ದ ವೈಸರಾಯೀ ಕೌನ್ಸಿಲಿನಲ್ಲಿ ಈ ಬಾರಿ ಕ್ವಯಿದೀ ಆಝಾಮರು ತಮ್ಮನ್ನು ಹೊರ ಹಾಕಿದರುಎಂದು ಪಂಜಾಬು ಮುಸ್ಲಿಮರೆಲ್ಲಾ ದೂರುತಿದ್ದಾರಂತೆ. ಮಿ. ಜಿನ್ನರು ತಾನು ಹಿಂದೆ ನಿಂತು, ನಗಾರಿಬಾಯಿಯ ಸರ್. ಖಾನ್ ನೂನರಿಗೋ, ತನ್ನ ಬೇರೊಬ್ಬ ಬಂಟನಿಗೋ ಆ ಸ್ಥಾನ ಬಿಟ್ಟು ಕೊಡಬಹುದೆಂದು ಕೆಲವರ ಆಶೆ. ಆದರೆ ಮಿ. ಜಿನ್ನರನ್ನು ಸರಕಾರೀ ಸ್ಥಾನದಿಂದ ಬಿಡಬಾರದು; ಯಾಕಂದರೆ ಹೊರಗಿದ್ದು ಮಾತಾಡಿದ ಶೈಲಿಯಲ್ಲಿ ಅಲ್ಲಿದ್ದು ಮಾತಾಡಲಾಗದ ಒಂದು ಉಪಕಾರವಿದೆ. ಆದರೆ ಇವರ ಕೈಗೆ ಬಂದ ಖಾತೆ ದ್ವಿದಳವಾಗಿ ಹೋಗುವದೋ ಎಂದೊಂದು ಭೀತಿ.

ನವಾಬಝಾದಾ ಲಿಯಾಕತ್ ಅಲೀಖಾನ್

ಲೀಗಿನ ಕಾರ್ಯದರ್ಶಿ; ಜಿನ್ನರನಂತರ ಇವರೇ. ನವಾಬ ಝಾದಾ [ರಾಜಕುವರ] ಎಂದ ಮೇಲೆ ಶ್ರೀಮಂತಿಕೆಗೆ ಕೊರತೆಯಿಲ್ಲ; ಅಲೀಖಾನರಲ್ಲಿ ಬುದ್ಧಿಮತ್ತೆ, ಪ್ರಸಂಗಾವಧಾನತೆ, ವ್ಯವಹಾರ ಜಾಣ್ಮೆಗೂ ಅಭಾವವಿಲ್ಲ. ಲೀಗಿನಲ್ಲಿರುವ ಮಿಕ್ಕವರೆಲ್ಲಾ ಮಿ. ಜಿನ್ನರಿಂದ ಆಜ್ಞೆಯೊಂದನ್ನೇ ಪಡೆಯುವವರಾಗಿದ್ದರೆ, ಇವರು ಆಲೋಚನೆಯನ್ನೂ ಕೊಡುವವರು. ಸಾಮೂಹಿಕವಾಗಿಯಲ್ಲದೆ, ವ್ಯಕ್ತಿಶಃ ತನ್ನನ್ನು ದೂರುವಂತಹ ಹೇಯ ಮಾತುಗಳನ್ನಾಡುವ ಅಭ್ಯಾಸ ಮಿಕ್ಕ ಲೀಗ್ ಪ್ರಮುಖರಲ್ಲಿದ್ದಷ್ಟು ಇವರಲ್ಲಿಲ್ಲ. ಮುಂದೆ ವಿಶೇಷ ಕೀರ್ತಿಗಳಿಸಲಿರುವ ಸದಸ್ಯರಲ್ಲಿ ಇವರೊಬ್ಬರು.

ಶ್ರೀ ಶರಚ್ಚಂದ್ರ ಬೋಸ್

'ಬೋಸ್‌ಸ್ಫೂರ್ತಿ'ಯೇ ಬ್ರಿಟಿಷರಿಗೊಗ್ಗುವದಿಲ್ಲವೆಂಬುದಕ್ಕೆ ಮತ್ತೊಂದು ನಿದರ್ಶನವಾಗಿ ಇವರ ಹೆಸರು ಪ್ರಥಮತಃ ಬಿಟ್ಟು ಹೋಗಿತ್ತು. ಕೇಂದ್ರ ಅಸೆಂಬ್ಲಿಯಲ್ಲಿ ಪ್ರಮುಖ ಪಕ್ಷವಾಗಿರುವ ಕಾಂಗ್ರೆಸಿಗರ ನಾಯಕನಾದ ಇವರನ್ನು ವೈಸರಾಯರು ಸ್ವಬುದ್ಧಿಯಿಂದಲೇ ಆರಿಸಿಕೊಳ್ಳಬೇಕಿತ್ತು; ಆದರೆ ಕಾಂಗ್ರೆಸಿಗರು ತಮ್ಮ ಪಟ್ಟಿಯಲ್ಲಿ ಹೆಸರು ಹಾಕಿದ್ದರೂ ಕೂಡ ಲೋರ್ಡ್ ವೇವೆಲರು ಇವರನ್ನು ಬಿಟ್ಟೇ ಬಿಟ್ಟು, ಒರಿಸ್ಸಾದ ಕಾಂಗ್ರೆಸ್ ಪ್ರಧಾನಿ ಶ್ರೀ ಹರೆಕೃಷ್ಣ ಮೆಹತಾಬರನ್ನು ಸೇರಿಸಿಕೊಂಡಿದ್ದರು. ಇದರಿಂದ ಕಾಂಗ್ರೆಸಿಗೆ ಮತ್ತೂ ಎರಡುವಿಧದ ತೊಂದರೆಯಿತ್ತು. ಒಂದನೆಯದು ಮುಂದಿನ ರಾಜ್ಯಾಂಗ ರಚನೆಯಲ್ಲಿ ಪ್ರಾಮುಖ್ಯ ಸ್ಥಾನ ಹೊಂದಲಿರುವ ಬಂಗಾಳದ ಪರವಾಗಿ ಕಾಂಗ್ರೆಸ್ ಪ್ರತಿನಿಧಿಯಿಲ್ಲದಿರುವದು; ಎರಡನೆಯದು ಒರಿಸ್ಸಾಕ್ಕೆ ಶ್ರೀ ಹರಿಕೃಷ್ಣ ಮೆಹತಾಬರ ಆವಶ್ಯಕತೆಯಿರುವದು. ಆದ್ದರಿಂದ ಬೇರೆ ವಿಷಯ ಹೇಗಾದರೂ, ಮೆಹತಾಬರ ಬದಲಿಗೆ ಬೋಸರನ್ನು ಹಾಕದೆ ತಾವು ಸರ್ವಥಾ ಒಪ್ಪುವಂತಿಲ್ಲವೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಹಠ ಹಿಡಿಯಿತು. ವೈಸರಾಯರೂ ಕೊನೆಗೊಪ್ಪಿದರು. ಈ ಹದಿನಾಲ್ಕು ಮಂದಿಯ ಪೈಕಿ ವೈಸರಾಯರಪೇಕ್ಷಿಸದೇನೇ ಬಂದವರೆಂದರೆ ಶ್ರೀ ಶರಚ್ಚಂದ್ರರೊಬ್ಬರೇ. ಬ್ರಿಟಿಷಂದಿರಲ್ಲಿ ಸಿಡಿಮಿಡಿನಂತಿರುವ

(೧೧ನೇ ಪುಟ ನೋಡಿರಿ)

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಬೇಡಿಕೆ ಮತ್ತು ಅವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಇವರೇ ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧವಿಂದ ಬೆಳೆಯುವ ವ್ಯಕ್ತಿಯೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಗಿಂತಲೂ ಹೆಚ್ಚು ಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ಬೆಳೆದ ವ್ಯಕ್ತಿಗೆ ಹೆಮ್ಮೆ ಪಡುತ್ತದೆ.

ಕೆನರಾ ಬ್ಯಾಂಕ್

Estd: 1906

CANARA BANK LIMITED

(Incorporated in British India. liability of Members Limited.)

ಆಹಾರ ವ್ಯವಸ್ಥೆಗಾಗಿ ಮದ್ರಾಸ್ ಸರಕಾರದ ಜನತಾ ಯೋಜನೆ.

ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ಆಹಾರ ಧಾನ್ಯಗಳ ಸಂಗ್ರಹ ಮತ್ತು ವಿತರಣೆಯಲ್ಲಿ ಜನರ ಪ್ರಾತಿನಿಧ್ಯವಿರಬೇಕೆಂಬ ಸದುದ್ದೇಶದಿಂದ ಈಗ ಜ್ಯಾರಿಗೆ ತರಲಿತ್ತಿರುವ ಹೊಸ ಯೋಜನೆಯ ಕುರಿತು ನಾವು ಈ ಮೊದಲೊಮ್ಮೆ ಪ್ರಸ್ತಾಪಿಸಿದ್ದೆವು. ಸಂಬಂಧಪಟ್ಟ ಅಧಿಕಾರಿಗಳೀಗ ಗ್ರಾಮ ಕಮಿಟಿಗಳ ರಚನೆಗೆ ತೊಡಗಿದ್ದಾರೆ. ಜನರ ತಿಳುವಳಿಕೆಗಾಗಿ ಈ ಹೊಸ ವ್ಯವಸ್ಥೆಯ ರೂಪರೇಖೆಯನ್ನು ಇಲ್ಲಿ ಕೊಡಲಾಗಿದೆ. ಅಧಿಕಾರಬದ್ಧವಾಗಿ ಕುಂದಾಪುರ ಡಿವಿಜನಿನ ತಾಲೂಕು ಕಮಿಟಿಗಳ ಕಾಯಂ ಸದಸ್ಯರಾಗುವ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ., ಇವರು ಈ ಕುರಿತು ಹೀಗೆ ಬರೆದು ತಿಳಿಸಿದ್ದಾರೆ:—"ಗ್ರಾಮ ಕಮಿಟಿಗಳ ಸದಸ್ಯರನ್ನಾರಿಸಿಕೊಳ್ಳಲು ಈಗ ತಹಸೀಲ್ದಾರರುಗಳು ಪ್ರತಿ ತಾಲೂಕಿನಲ್ಲೂ ಸಂಚರಿಸುತ್ತಿದ್ದಾರೆ. ಯೋಗ್ಯರಾದವರೇ ಈ ಕಮಿಟಿಗಳಲ್ಲಿದ್ದು ಅವು ಜಯಶೀಲವಾಗಿ ನಡೆಯುವಂತಾಗಬೇಕು. ಈ ಗ್ರಾಮ ಸಮಿತಿಗಳು ಅಕ್ಕಿಯ ಸಂಗ್ರಹ ಮತ್ತು ವಿತರಣೆಯಲ್ಲಿಯೂ ಉಳಿತಾಯಾಂಶದ ನಿರ್ಣಯದಲ್ಲಿಯೂ ಪ್ರಾಮುಖ್ಯ ಕರ್ತವ್ಯ ಹಾಗೂ ಅಧಿಕಾರಗಳನ್ನು ನಿರ್ವಹಿಸಬಲ್ಲುವು. ಅಂತೆಯೇ ಸಕ್ಕರೆ, ಚಿಮಿಣಿಎಣ್ಣೆ, ವಸ್ತ್ರ, ನೂಲು ಇತ್ಯಾದಿ ನಿಯಂತ್ರಿತ ಸಾಮಾನುಗಳನ್ನು ಸರಿಯಾಗಿ ಹಂಚುವ ಅಧಿಕಾರವೂ ಗ್ರಾಮ ಕಮಿಟಿಗಳಿಗೆ ದೊರೆಯಲಿದೆ. ನಾನು ಜುಲಾಯಿ ಪ್ರಥಮ ವಾರದ ಆದಿಯಲ್ಲಿ ಉಡುಪಿಗೆ ಬರಲಿದ್ದೇನೆ. ಆಗ ಗ್ರಾಮ ಸಮಿತಿಗಳಿಗಾರಿಸಲ್ಪಟ್ಟ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ, ತಹಶೀಲ್ದಾರರಿಂದಾಗಿರುವ ಆ ನೇಮಕಗಳ ಕುರಿತು ನನ್ನ ಸೂಚನೆಗಳೇನಾದರೂ ಇದ್ದರೆ ಕೊಡಲಿದ್ದೇನೆ".

ಗ್ರಾಮ ಕಮಿಟಿಗಳು

ಗ್ರಾಮ ಕಮಿಟಿಯಲ್ಲಿ ೫ರಿಂದ ೭ರ ತನಕ ಮೆಂಬರರಿರಬಹುದು. ಸಾಮಾನ್ಯವಾಗಿ ಒಂದು ರೆವೆನ್ಯೂ ಗ್ರಾಮಕ್ಕೆ ಒಂದು ಕಮಿಟಿ ಮಾಡಲಾಗುವುದು ಗ್ರಾಮಗಳು ಚಿಕ್ಕದಿದ್ದರೆ ಎರಡು ಮೂರು ಗ್ರಾಮಗಳನ್ನು ಸೇರಿಸಿ ಅವುಗಳಿಗೆ ಒಂದು ಕಮಿಟಿ ಏರ್ಪಡಿಸಲಾಗುವುದು. ಒಂದು ಮುನಿಸಿಪಾಲಿಟಿಯೊಳಗೆ ಇರಬಹುದಾದ ಗ್ರಾಮಗಳಿಗೆ ಒಂದು ಮುನಿಸಿಪಾಲಿಟಿ ಕಮಿಟಿ ನೇಮಿಸಲಾಗುವುದು. ತಹಸೀಲ್ದಾರರು ಒಂದು ಗ್ರಾಮದ ಜನರೆಲ್ಲರ ಸಭೆ ಕರೆದು ಅವರೊಡನೆ ಆಲೋಚಿಸಿ ಅವರ ನಿಜವಾದ ಪ್ರತಿನಿಧಿಗಳಾಗಿಯೂ ಒಳ್ಳೇ ಅರ್ಹತೆಯುಳ್ಳವರೂ ಆದ ಜನರನ್ನೇ ಕಮಿಟಿಗೆ ನೇಮಿಸುವರು ಹೀಗೆ ನೇಮಿಸುವಾಗ ಅವರು ರಾಜಕೀಯ ದೃಷ್ಟಿಯಿಂದ ಯಾವ ಪಂಗಡಕ್ಕೆ ಸೇರಿದವರೆಂಬುದನ್ನು ಎಣಿಸಲಾಗುವುದಿಲ್ಲ

ತಾಲೂಕು ಕಮಿಟಿಗಳು

ಪ್ರತಿ ರೆವೆನ್ಯೂ ಫಿರ್ಕಾದಲ್ಲಿಯ ಗ್ರಾಮ ಕಮಿಟಿಗಳನ್ನು ಅನುಕೂಲ ಸ್ಥಳದಲ್ಲಿ ತಹಸೀಲ್ದಾರರು ಒಟ್ಟು ಸೇರಿಸಿ ತಾಲೂಕು ಕಮಿಟಿಗೆ ಎರಡು ಮಂದಿ ಪ್ರತಿನಿಧಿಗಳನ್ನು ಚುನಾಯಿಸುವಂತೆ ಹೇಳುವರು. ಹೀಗೆ ಒಂದು ತಾಲೂಕು ಕಮಿಟಿಯಲ್ಲಿ ಸುಮಾರು 10 ಮೆಂಬರರಿರುವರು. ಮತ್ತು ಇವರು ಫಿರ್ಕಾ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟವರಿರುವರು. ಈ ಕಮಿಟಿಗೆ ತಹಸೀಲ್ದಾರರು ಕನ್ವೀನರ್ ಆಗಿಯೂ ಡಿವಿಜನಲ್ ಆಫೀಸರರು ಅಧ್ಯಕ್ಷರಾಗಿಯೂ ಇರುವರು. ಆಯಾ ತಾಲೂಕುಗಳಿಂದ ಮದ್ರಾಸ್ ನ್ಯಾಯವಿಧಾಯಕ ಸಭೆಗಳಿಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರು ಈ ಕಮಿಟಿಗಳಿಗೆ ಕಾಯಂ ಸದಸ್ಯರಾಗಿ ಇರುವರು.

ಜಿಲ್ಲಾ ಕಮಿಟಿಗಳು

ಈ ಕಮಿಟಿಯಲ್ಲಿ ಜಿಲ್ಲಾ ಕಲೆಕ್ಟರರು ಅಧ್ಯಕ್ಷರಾಗಿಯೂ ಜಿಲ್ಲಾ ಸಪ್ಲೈ ಆಫೀಸರರು ಕಾರ್ಯದರ್ಶಿಯರಾಗಿಯೂ ಜಿಲ್ಲಾ ರೇಶನಿಂಗ್ ಆಫೀಸರರು, ಜಿಲ್ಲಾ ಕೃಷಿ ಇಲಾಖೆಯ ಆಫೀಸರರು ಮತ್ತು ಸಹಕಾರೀ ಸಂಘಗಳ ಡಿಪ್ಯೂಟಿ ರಿಜಿಸ್ಟ್ರಾರರು ಇದರ ಕಾಯಂ ಸದಸ್ಯರಾಗಿಯೂ ಇರುವರು. ಪ್ರಾಂತಿಕ ಹಾಗೂ ಕೇಂದ್ರ ನ್ಯಾಯವಿಧಾಯಕ ಸಭೆಗಳ ಮೆಂಬರರು ಮತ್ತು ಪ್ರತಿ ತಾಲೂಕು ಕಮಿಟಿಯ ಬಿನ್ ಸರಕಾರೀ ಮೆಂಬರರೊಳಗಿಂದ ಚುನಾಯಿಸಲ್ಪಡುವ ಒಬ್ಬೊಬ್ಬ ಪ್ರತಿನಿಧಿಗಳು ಅವರಲ್ಲದೆ ಬೇರೆ ಮೂರು ಮಂದಿಗೆ ಮೀರದ ಸದಸ್ಯರನ್ನು ಕಮಿಟಿಯವರು ಸೇರಿಸಿಕೊಳ್ಳಬಹುದು. ಇವರ ಪೈಕಿ ಒಬ್ಬರು ಎಲ್ಲಿ ಧಾನ್ಯ ಸಂಗ್ರಹ ಕಾರ್ಯವನ್ನು ಜಿಲ್ಲಾ ಸಹಕಾರೀ ಹೋಲ್‌ಸೇಲ್ ಸ್ಟೋರ್ಸಿಗೆ ವಹಿಸಿ ಕೊಟ್ಟಿದೆಯೋ ಅಲ್ಲಿ ಇಂಥ ಸ್ಟೋರಿನ ಪ್ರತಿನಿಧಿ ಇರಬೇಕು.

ಉಳಿತಾಯ ನಿರ್ಣಯಿಸುವಿಕೆ

ಧಾನ್ಯ ಸಂಗ್ರಹಕ್ಕಾಗಿ ಒಬ್ಬೊಬ್ಬರು ಎಷ್ಟೆಷ್ಟು ಕೊಡಬೇಕೆಂದು ರೆವೆನ್ಯೂ ಸಿಬ್ಬಂದಿಯವರು ತಯಾರಿಸುವ ಪಟ್ಟಿಯನ್ನು ಗ್ರಾಮ ಕಮಿಟಿಯವರು ಪರಿಶೀಲಿಸುವರು. ಪ್ರತಿ ರೈತನು ಮಾಡಿದ ಸಾಗುವಳಿಯ ವಿಸ್ತೀರ್ಣ ಅವನಿಗೆ ದೊರೆತ ಉತ್ಪತ್ತಿ ಮತ್ತು ಅವನ ಆವಶ್ಯಕತೆಗಳನ್ನು ಕಾಣಿಸುವ ರಿಜಿಸ್ಟರನ್ನು ರೆವೆನ್ಯೂ ಸಿಬ್ಬಂದಿಯವರು ತಯಾರಿಸಿ ಅವನ ಉಳಿತಾಯವನ್ನು ನಿರ್ಣಯಿಸಿ ಅದನ್ನು ಆ ರೈತನಿಗೆ ತಿಳಿಸತಕ್ಕದ್ದು. ಇಂಥ ಪಟ್ಟಿಗಳನ್ನು ಗ್ರಾಮ ಕಮಿಟಿಯ ಮುಂದಿಟ್ಟು ಆಯಾ ರೈತರ ಆಕ್ಷೇಪಗಳಿದ್ದರೆ ಆ ಕಮಿಟಿಯೇ ವಿಚಾರಿಸಿ ಪಟ್ಟಿಯನ್ನು ಮಂಜೂರು ಮಾಡಲಾಗುವುದು. ಪಟ್ಟಿಗಳ ಪರಿಶೀಲನೆ ಮತ್ತು ಮಂಜೂರಾತಿ ಆಗುವ ಮೊದಲೇ ರೈತರು ತಾವಾಗಿ ಕೊಡಬಹುದಾದ ಎಲ್ಲ ಧಾನ್ಯವನ್ನು ಕ್ರಯಕ್ಕೆ ಪಡೆಯಲಾಗುವುದು.

ಧಾನ್ಯ ಸಂಗ್ರಹದ ಈಗಿನ ಕ್ರಮಗಳಲ್ಲಿ ಉಳಿತಾಯವನ್ನು ನಿರ್ಣಯಿಸುವಾಗ ರೈತನಿಗೆ ಮನೆಯವರ ಊಟದ ಬಗ್ಗೆ ಮತ್ತು ಸಾಗುವಳಿ ಖರ್ಚಿಗೆ ಬೇಕಾಗುವಷ್ಟು ಬಿಟ್ಟು ಉಳಿಯುವುದನ್ನು ಮಾತ್ರ ಸಂಗ್ರಹಿಸಬೇಕೆಂದಿದೆಯಾದರೂ ಜ್ಯಾರಿಗೆ ಬರುವಾಗ ಖರ್ಚಿಗೆ ಸಾಕಷ್ಟು ಬಿಡುವುದಿಲ್ಲವೆಂದೂ ಅವನಿಂದ ವಸೂಲು ಮಾಡಬೇಕಾದುದಕ್ಕಿಂತ ಹೆಚ್ಚಿಗೆ ವಸೂಲು ಮಾಡಲಾಗುತ್ತಿದೆಯೆಂದೂ ತಿಳಿದು ಬರುತ್ತದೆ. ಇದನ್ನು ನಿಲ್ಲಿಸಬೇಕು. ರೈತನ ಸ್ವಂತ ಖರ್ಚಿಗೆ ಹಾಗೂ ಸಾಗುವಳಿ ಖರ್ಚಿಗೆ ಸಾಕಾಗುವಷ್ಟನ್ನು ಅವನಿಗೆ ಬಿಡಬೇಕು. ಆಯಾ ತಾಲೂಕು ಕಮಿಟಿಗಳೊಡನೆ ವಿಚಾರಿಸಿ ಕಲೆಕ್ಟರರು ಯಾವ ಬಗ್ಗೆ ಎಷ್ಟು ಬಿಡಬೇಕೆಂಬ ದರಗಳನ್ನು ಆಯಾ ತಾಲೂಕಿನ ಮಟ್ಟಿಗೆ ನಿರ್ಣಯಿಸಬೇಕು ಸಾಗುವಳಿ ಖರ್ಚನ್ನು ಎಣಿಸುವಾಗ ಧಾನ್ಯರೂಪದಲ್ಲಿ ಮಜೂರಿ ಕೊಡಲು ಬೇಕಾಗುವುದನ್ನು ಮತ್ತು ಸಾಗುವಳಿ ಕಾಲಕ್ಕೆ ಕೆಲಸ ಮಾಡುವವರಿಗೆ ಕೊಡಲಿಕ್ಕೆ ಬೇಕಾಗುವುದನ್ನು ಎಣಿಸಬೇಕು. ಈಗಿನ ಕ್ರಮಗಳಲ್ಲಿಯೂ ಇದೇ ರೀತಿ ಹೇಳಿದೆಯಾದರೂ ಕಾಯಂ ನೌಕರರ ಮಟ್ಟಿನ ಖರ್ಚನ್ನು ಮಾತ್ರ ಈಗ ಎಣಿಸಲಾಗುತ್ತಿದೆಯಷ್ಟೆ ಸಾಗುವಳಿ ಕಾಲದ ಕೆಲಸಗಾರರ ಮಜೂರಿ ಎಣಿಸಲಾಗುತ್ತಿಲ್ಲ ರೇಶನ್ ಕಾರ್ಡುಗಳನ್ನು ಹಂಚಲು ತೆಗೆದ ಲೆಕ್ಕವನ್ನು ಕಮಿಟಿಯವರು ತನಿಖೆ ನಡೆಸಿ ಪರಿಶೀಲಿಸಿ ಮಂಜೂರುಮಾಡಬೇಕು. ಆಯಾ ಕುಟುಂಬದಲ್ಲಿ ಇದ್ದುದಕ್ಕಿಂತ ಹೆಚ್ಚು ಸಂಖ್ಯೆ ಕಾಣಿಸಿ ಹೆಚ್ಚಿಗೆ ಪಡೆಯುವುದನ್ನು ನಿಲ್ಲಿಸಬೇಕು. ಗ್ರಾಮದಲ್ಲಿ ಸಾಗುವಳಿ ಉತ್ಪತ್ತಿ ಇಲ್ಲದವರು ಮತ್ತು ತಮ್ಮ ಖರ್ಚಿಗೆ ಸಾಕಷ್ಟು ಉತ್ಪತ್ತಿ ಇಲ್ಲದವರು ಇವರ ಆವಶ್ಯಕತೆಗಳನ್ನು ಆಗಿಂದಾಗ ನಿರ್ಣಯಿಸಲಾಗುವ ರೇಶನ್ ದರಗಳಂತೆ ಎಣಿಸಬೇಕು. ಹೀಗೆ ಬೇಕಾಗುವಷ್ಟು ಪ್ರಮಾಣದ ಧಾನ್ಯವನ್ನು ಗ್ರಾಮಕಮಿಟಿಯು ತಾವೇ ಅಥವಾ ಇತರರನ್ನು ಸೇರಿಸಿಕೊಂಡು ಸಹಕಾರೀ ಸಂಘವಾಗಿ ಸಂಗ್ರಹಿಸಬೇಕು. ಈ ರೀತಿ ಸಂಗ್ರಹಿಸಲು ಗ್ರಾಮ ಕಮಿಟಿಗೆ ಸಾಧ್ಯವಿಲ್ಲದ್ದಲ್ಲಿ ತಹಸೀಲ್ದಾರರು ಕಮಿಟಿಯೊಡನೆ ಆಲೋಚಿಸಿ ಈ ಬಗ್ಗೆ ಒಬ್ಬಿಬ್ಬರು ಏಜಂಟರನ್ನು ನೇಮಿಸುವರು. ಇಂಥ ಏಜಂಟರ ಕೆಲಸವೆಂದರೆ ರೈತರಿಂದ ಮೇಲೆ ಕಾಣಿಸಿದಂತೆ ಧಾನ್ಯವನ್ನು ಕ್ರಯಕ್ಕೆ ಪಡೆದು ರೇಶನ್ ಕಾರ್ಡುಗಳಿದ್ದವರಿಗೆ ಇದನ್ನು ಮಾರುವುದು ಆಯಾ ಗ್ರಾಮಕ್ಕೆ ಕಲೆಕ್ಟರರು ನೇಮಿಸುವ ದರದಲ್ಲಿ ಧಾನ್ಯವನ್ನು ಇವರು ಕ್ರಯಕ್ಕೆ ಪಡೆಯಬೇಕು. ಮತ್ತು ಚಿಲ್ಲರೆ ವ್ಯಾಪಾರದ ಖರ್ಚಿಗಾಗಿ ನಮೂದಿಸಲಾಗುವಷ್ಟನ್ನು ಮಾತ್ರ ಇದಕ್ಕೆ ಕೂಡಿಸಿ ಮಾರಾಟ ಮಾಡಬೇಕು. ಏಜಂಟರು ಧಾನ್ಯವನ್ನು ಪಡೆಯುವ ಸಂದರ್ಭದಲ್ಲಿ ಅದರ ದಾಸ್ತಾನಿನ ಏರ್ಪಾಡನ್ನು ಅವರೇ ಮಾಡಬೇಕು. ಕಮಿಟಿಯವರು ಪಡೆಯುವ ಸಂದರ್ಭದಲ್ಲಿ ಇವರು ತಮ್ಮ ಸ್ವಂತ ಕಟ್ಟಡ ತಯಾರಿಸಿಕೊಳ್ಳುವಲ್ಲಿ ತನಕ ದಾಸ್ತಾನಿಡಲು ಬೇಕಾಗುವ ಅನುಕೂಲತೆಯನ್ನು ಒದಗಿಸಿಕೊಳ್ಳುವುದರಲ್ಲಿ ತಹಸೀಲ್ದಾರರು ಇವರಿಗೆ ಬೇಕಾದ ಸಹಾಯ ಮಾಡುವರು. ಸಾಧ್ಯವಿರುವ ಮಟ್ಟಿಗೆ ಜನರಿಗೆ ಭತ್ತವನ್ನೇ ಮಾರಾಟಮಾಡಬೇಕು. ಇಂಥ ಭತ್ತ ಜನರು ಕೈಯಿಂದ ಕುಟ್ಟಿ ಅಕ್ಕಿ ತಯಾರಿಸುವದಕ್ಕೆ ಪ್ರೋತ್ಸಾಹ ಸಿಕ್ಕಬೇಕೆಂಬುದೇ ಇದರ ಉದ್ದೇಶ. ಮಿಲ್ಲುಗಳ ಮೂಲಕ ಅಕ್ಕಿ ತಯಾರಿಸುವ ಅಗತ್ಯವಿದ್ದಲ್ಲಿ ಏಜಂಟರ, ಅಥವಾ ಕಮಿಟಿಯವರು ಈ ಬಗ್ಗೆ ಏರ್ಪಾಡು ಮಾಡಬೇಕು. ಮಿಲ್ಲುಗಳಿಗೆ ಕೊಡುವ ಬದಲು ಗ್ರಾಮದಲ್ಲಿಯೇ ಕೈಯಿಂದ ಕುಟ್ಟಿಸಿ ಅಕ್ಕಿ ತಯಾರಿಸಿ ಅಕ್ಕಿ ಮಾರಲು ಏರ್ಪಡಿಸುವುದು ಉತ್ತಮ.

ಗ್ರಾಮಗಳ ಪಟ್ಟಿಗಳು ಮಂಜೂರಾದ ಬಳಿಕ ಅವನ್ನು ತಾಲೂಕು ಕಮಿಟಿಗಳಿಗೆ ಕಳುಹಿಸಬೇಕು. ಈ ಪಟ್ಟಿಗಳಲ್ಲಿಯ ಎಣಿಕೆಗಳು ನ್ಯಾಯವಾಗಿವೆಯೋ ಎಂದು ತಾಲೂಕು ಕಮಿಟಿಯವರು ಪರಿಶೀಲಿಸಿ ಗ್ರಾಮದಿಂದ ವಸೂಲಾಗಬೇಕಾದ ಧಾನ್ಯ ಕಡಮೆ ಎಣಿಸಲಾಗಿದೆಯೆಂದು ಕಂಡು ಬಂದಲ್ಲಿ ತಾಲೂಕು ಕಮಿಟಿಯವರು ಇದನ್ನು ಹೆಚ್ಚಿಸಬಹುದು. ಹೀಗೆ ಹೆಚ್ಚಿಸಿದ ಅಂಶವನ್ನು ಆಯಾ ರೈತರೊಳಗೆ ನ್ಯಾಯವಾದ ರೀತಿಯಲ್ಲಿ ಗ್ರಾಮ ಕಮಿಟಿಯವರು ಹಂಚಿಹಾಕಬೇಕು. ಯಾವನೊಬ್ಬ ರೈತನಿಗೆ ಗ್ರಾಮದ ಕಮಿಟಿಯ ತೀರ್ಮಾನ ಒ

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: **DHARWAR.**

Or

BRANCH OFFICE:

Court Road, UDIPI, S. K.

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ಪ್ಪಿಗೆ ಇಲ್ಲದಿದ್ದಲ್ಲಿ ಅವನು ಈ ಕುರಿತು ತಾಲೂಕು ಕಮಿಟಿಗೆ ಅಪೀಲು ಮಾಡಬಹುದು. ತನ್ನ ಹೇಳಿಕೆಯನ್ನು ಸಮರ್ಥಿಸಲು ತಾಲೂಕು ಕಮಿಟಿಯವರು ಅವನಿಗೆ ಅವಕಾಶ ಕೊಡುವರು ಮತ್ತು ನ್ಯಾಯವೆಂದಾದರೆ ಅವನ ಅಂಶದಲ್ಲಿ ತಿದ್ದುಪಡಿ ಮಾಡುವರು. ಹೀಗೆ ವ್ಯಕ್ತಿಶಃ ಹೊರಿಸಲಾಗುವ ಅಂಶಗಳ ಕುರಿತು ತಾಲೂಕು ಕಮಿಟಿಯವರ ತೀರ್ಮಾನವೇ ಕೊನೆಯದು. ಇಂಥ ಅಪೀಲುಗಳ ವಿಚಾರಣೆ ಬಗ್ಗೆ ತಾಲೂಕು ಕಮಿಟಿಯವರು ಒಂದು ಸಬ್ ಕಮಿಟಿ ನೇಮಿಸಬಹುದು. ಮತ್ತು ತಹಸೀಲ್ದಾರರು ಇದರ ಅಧ್ಯಕ್ಷರಾಗಿರಬೇಕು.

ಗ್ರಾಮ ಪಟ್ಟಿಗಳ ಸಾರಾಂಶವನ್ನು ತಾಲೂಕು ಕಮಿಟಿಯವರು ಆಗಿಂದಾಗ ಜಿಲ್ಲಾ ಕಮಿಟಿಗೆ ಕಳುಹಿಸಬೇಕು. ಜಿಲ್ಲಾ ಕಮಿಟಿಯು ಆಯಾ ತಾಲೂಕುಗಳ ಸಂಗ್ರಹ ಪ್ರಮಾಣವನ್ನು ಪರಿಶೀಲಿಸಿ ಮಂಜೂರು ಮಾಡಬೇಕು. ತಾಲೂಕು ಕಮಿಟಿಯವರು ನಿರ್ಣಯಿಸಿದ ಸ್ಥಳೀಕ ಉತ್ಪತ್ತಿ, ಖರ್ಚು ಹಾಗೂ ಉಳಿತಾಯದ ಪ್ರಮಾಣವು ಕಡಮೆಯೆಂದು ಕಂಡುಬಂದಲ್ಲಿ ಜಿಲ್ಲೆಯ ಹಾಗೂ ಪ್ರಾಂತ್ಯದ ಉಳಿದ ಭಾಗದ ಹಿತಕ್ಕಾಗಿ ಜಿಲ್ಲಾ ಕಮಿಟಿಯೊಡನೆ ವಿಚಾರಿಸಿ ತಾಲೂಕು ಕಮಿಟಿಯವರು ತಯಾರಿಸಿದ ಪಟ್ಟಿಯನ್ನು ತಿದ್ದಲು ಜಿಲ್ಲಾ ಕಲೆಕ್ಟರಿಗೆ ಅಧಿಕಾರವಿರತಕ್ಕದ್ದು.

ರಫ್ತು ಮಾಡಲು ಧಾನ್ಯಸಂಗ್ರಹ

ಗ್ರಾಮದ ಹೊರಗಿನ ಅವಶ್ಯಕತೆಗಳ ಬಗ್ಗೆ ಸಂಗ್ರಹಿಸಲಾಗುವ ಉಳಿತಾಯದ ಭಾಗದ ಬಗ್ಗೆ ಒಂದು ಫಿರ್ಕಾವನ್ನು 5 ಅಥವಾ 6 ಗುಂಪುಗಳಾಗಿ ವಿಭಾಗಿಸಿ ಒಂದೊಂದು ಗುಂಪಿಗೆ ಒಂದೊಂದು ಡಿಪ್ಪೋ ಏರ್ಪಡಿಸಲಾಗುವುದು. ಆಯಾ ಗುಂಪಿನ ಉಳಿತಾಯವನ್ನು ಸಂಗ್ರಹಿಸಿ ಡಿಪ್ಪೋದಲ್ಲಿ ದಾಸ್ತಾನಿಡುವ ಏರ್ಪಾಡು ಮಾಡಲು ಒಬ್ಬ ಸಂಗ್ರಹ ಏಜಂಟನ್ನು ನೇಮಿಸಲಾಗುವುದು. ಈ ಕಾರ್ಯವನ್ನು ಕೈಕೊಳ್ಳುವ ಸಹಕಾರೀ ಸಂಘವಿದ್ದರೆ ಅಂಥ ಸಂಘವು ಆಗತ್ಯವಿದ್ದಲ್ಲಿ ಈ ಬಗ್ಗೆ ತನ್ನ ಶಾಖೆ ಏರ್ಪಡಿಸುವಂತೆ ಕೇಳಲಾಗುವುದು. ಇಂಥ ಸಂಘ ಇಲ್ಲದ್ದಲ್ಲಿ ಅಥವಾ ಅದಕ್ಕೆ ಇಷ್ಟವಿಲ್ಲದಲ್ಲಿ ಡಿವಿಜನಲ್ ಆಫೀಸರರು ತಾಲೂಕು ಕಮಿಟಿಯೊಡನೆ ವಿಚಾರಿಸಿ ಯೋಗ್ಯ ಏಜಂಟರನ್ನು ನೇಮಿಸುವರು. ಸಂಗ್ರಹ ಏಜಂಟರು ತಮ್ಮ ಡಿಪ್ಪೋಗಳಲ್ಲಿ ದಾಸ್ತಾನಾಗುವ ಧಾನ್ಯ ಶಿಲ್ಕನ್ನು ಪ್ರತಿವಾರ ಆಯಾ ತಹಸೀಲ್ದಾರರಿಗೆ ತಿಳಿಸಬೇಕು. ಕೊಟ್ಟಿದ್ದ ಸ್ಥಳದಿಂದ ಕಡಿಮೆ ಬೀಳುವ ಸ್ಥಳಕ್ಕೆ ತಹಸೀಲ್ದಾರರು ಧಾನ್ಯವನ್ನು ಸಾಗಿಸುವ ಏರ್ಪಾಡು ಮಾಡುವರು. ಧಾನ್ಯ ಸಂಗ್ರಹ ಕಾರ್ಯದ ಯಾವತ್ತೂ ಕಾರ್ಯಗಳಲ್ಲಿ ಜಿಲ್ಲಾ ಸಹಕಾರೀ ಸ್ಟೋರುಗಳ ಮೂಲಕ ಸಹಕಾರೀ ಸಂಘಗಳನ್ನು ಉಪಯೋಗಿಸಿಕೊಳ್ಳುವುದು ರೆವಿನ್ಯೂ ಶಿಬಂದಿಯವರ ಉದ್ದೇಶವಾಗಿರಬೇಕು. ಎಲ್ಲಿ ಸಂಘಗಳಿಲ್ಲವೋ ಅಲ್ಲಿ ಸಂಘಗಳನ್ನು ಏರ್ಪಡಿಸುವಂತೆ ರಿಜಿಸ್ಟ್ರಾರರನ್ನು ಕೇಳಲಾಗುವುದು.

ಕೈಯಿಂದ ಕುಟ್ಟಿ ಅಕ್ಕಿ ತಯಾರಿಸುವುದನ್ನು ಸಾಧ್ಯವಿದ್ದ ಮಟ್ಟಿಗೆ ಪುನರುಜ್ಜೀವನಗೊಳಿಸುವುದು ಸರಕಾರದ ಉದ್ದೇಶ. ಆದಷ್ಟು ಬೇಗನೆ ಅಕ್ಕಿ ಮಿಲ್ಲುಗಳನ್ನು ನಿಲ್ಲಿಸುವ ಯತ್ನ ಮಾಡಲಾಗುವುದು. ಇದರಿಂದಾಗಿ ಕಮಿಟಿಯವರು ಮೇಲೆ ಸೂಚಿಸಿದಂತೆ ಅಕ್ಕಿಯನ್ನು ಕೈಯಿಂದ ಕುಟ್ಟಿಸಿಯೇ ತಯಾರಿಸುವಂತೆ ಎಲ್ಲ ಪ್ರಯತ್ನ ಮಾಡಬೇಕು. ಗಿರಾಕಿಗಳಿಗೆ ಭತ್ತವನ್ನೇ ಒದಗಿಸಿ ಅವರೇ ಸ್ವಂತ ಭತ್ತ ಕುಟ್ಟಿ ಅಕ್ಕಿ ತಯಾರಿಸುವಂತೆ ಮಾಡಬಹುದು ಇಲ್ಲವೆ ಸಂಗ್ರಹವಾದ ಭತ್ತವನ್ನು ಸಾಧ್ಯವಿದ್ದಷ್ಟರ ಮಟ್ಟಿಗೆ ಮಿಲ್ಲುಗಳಿಗೆ ಕೊಡದೆ ಕೈಯಿಂದ ಕುಟ್ಟಿಸಿ ಅಕ್ಕಿಯನ್ನು ಒದಗಿಸಬಹುದು. ಗ್ರಾಮದ ಆವಶ್ಯಕತೆಗಳ ಪಟ್ಟಿಗೆ ಬೇಕಾಗುವಷ್ಟು ಭತ್ತದ ಬದಲು ಅಕ್ಕಿಯನ್ನೇ ಸಂಗ್ರಹಿಸಬಹುದು. ಭತ್ತ ಮತ್ತು ಅಕ್ಕಿಯ ಕ್ರಯಗಳನ್ನು ನಿರ್ಣಯಿಸುವಾಗ ಭತ್ತಕ್ಕಿಂತ ಅಕ್ಕಿ ಕೊಡುವುದೇ ಲಾಭದಾಯಕವಾಗುವಂತೆ ಕ್ರಯಗಳನ್ನು ನಿರ್ಣಯಿಸಲಾಗುವುದು.

ಕ್ರಯ ನಿರ್ಣಯ

ಸಂಬಂಧಪಟ್ಟವರೆಲ್ಲರೊಡನೆ ವಿಚಾರಿಸಿ ಆಯಾ ಜಿಲ್ಲೆಗೆ ಒರುವ ಬೆಳೆಗೆ ಸರಕಾರದವರು ಕ್ರಯ ನಿರ್ಣಯಿಸುವರು. ಕಲೆಕ್ಟರರು ಆಯಾ ಗ್ರಾಮ ಹಾಗೂ ಆಯಾ ಡಿಪ್ಪೋಗಳಲ್ಲಿಯ ಕ್ರಯಗಳನ್ನು ಇದರಿಂದ ಎಣಿಸಿ ನಿರ್ಣಯಿಸುವರು. ಮತ್ತು ಇವೆಲ್ಲದರಲ್ಲಿ ಜಿಲ್ಲಾ ಕಮಿಟಿಯ ಆಲೋಚನೆ ತೆಗೆದುಕೊಳ್ಳುವರು.

ಗ್ರಾಮ ಕಮಿಟಿಗಳನ್ನು ನೇಮಿಸಿದೊಡನೆ ಅವರು ಮಾಲು ದಾಸ್ತಾನಿಗೆ ಕಟ್ಟಡದ ಅನುಕೂಲತೆಗಳನ್ನು ಆದಷ್ಟು ಬೇಗನೆ ಒದಗಿಸಿಕೊಳ್ಳಬೇಕು. ಈ ಕಮಿಟಿಗಳನ್ನು ನೇಮಿಸುವ ಏರ್ಪಾಡು ಬೇಗನೆ ಮಾಡಲಾಗುವುದು. ಸಕ್ಕರೆ, ಚಿಮಿಣಿಎಣ್ಣೆ, ಬಟ್ಟೆ, ನೂಲು ಇತ್ಯಾದಿ ಕಂಟ್ರೋಲ್ ಮಾಲುಗಳ ವಿತರಣೆಯನ್ನೂ ಈ ಕಮಿಟಿಗೆ ಕೊಡಲಾಗುವುದು. ಸಾಗುವಳಿ ಉಪಕರಣಗಳು, ಗಾಡಿ ಪಟ್ಟಿಗಳು ಇತ್ಯಾದಿ ಆಯಾ ಗ್ರಾಮಕ್ಕೆ ಒದಗಿಸುವ ಮಾಲುಗಳ ವಿತರಣೆಯನ್ನೂ ಇದೇ ಕಮಿಟಿಗೆ ಕೊಡಲಾಗುವುದು. ಆಯಾ ಗ್ರಾಮಕ್ಕೆ ಹಾಗೂ ತಾಲೂಕಿಗೆ ಎಷ್ಟು ಅಂಶ ಕೊಡಬೇಕೆಂಬುದನ್ನು ಡಿವಿಜನಲ್ ಆಫೀಸರರು ಮತ್ತು ಕಲೆಕ್ಟರರು ತಮ್ಮ ಕಮಿಟಿಗಳೊಡನೆ ವಿಚಾರಿಸಿ ನಿರ್ಣಯಿಸುವರು. ಅಂದರೆ ಜಿಲ್ಲೆಗೆ ಎಷ್ಟು ಒದಗಿಸಬೇಕೆಂಬುದನ್ನು ಸರಕಾರದವರು ನಿರ್ಣಯಿಸುವರು. ಕಲೆಕ್ಟರರು ಜಿಲ್ಲಾ ಕಮಿಟಿಯೊಡನೆ ವಿಚಾರಿಸಿ, ಆಯಾ ತಾಲೂಕಿನ ಅಂಶವನ್ನು ಡಿವಿಜನಲ್ ಆಫೀಸರರು ತಾಲೂಕು ಕಮಿಟಿಯೊಡನೆ ವಿಚಾರಿಸಿ, ಗ್ರಾಮಗಳ ಅಂಶವನ್ನು ನಿರ್ಧರಿಸುವರು ಮತ್ತು ಗ್ರಾಮ ಕಮಿಟಿಗಳು ತಮ್ಮ ಅಂಶವನ್ನು ನ್ಯಾಯವಾದ ರೀತಿಯಲ್ಲಿ ಗ್ರಾಮಸ್ಥರಿಗೆ ಹಂಚುವವು. ಗ್ರಾಮ ಕಮಿಟಿಯ ಅಧ್ಯಕ್ಷರು ಈ ಬಗ್ಗೆ ಒಂದು ಕಮಿಟಿ ಸಭೆ ಸೇರಿಸಿ ಯಾರಿಗೆ ಎಷ್ಟು ಹಂಚಬೇಕೆಂಬ ಬಗ್ಗೆ ಪಟ್ಟಿ ತಯಾರಿಸಿ ಅದನ್ನು ಫಿರ್ಕಾ ಸಪ್ಲೈ ಆಫೀಸರರು ಮಂಜೂರು ಮಾಡಿದ ಮೇಲೆ ಆ ಪಟ್ಟಿಯಂತೆ ಮಾಲು ಹಂಚಲಾಗುವುದು. ಗ್ರಾಮ ಕಮಿಟಿಗಳ ಹಂಚೋಣದ ಕುರಿತು ಆಕ್ಷೇಪಗಳಿದ್ದರೆ ತಾಲೂಕು ಕಮಿಟಿಯವರು ಇದನ್ನು ವಿಚಾರಿಸಿ ತೀರ್ಮಾನಿಸುವರು.

ಜಿಲ್ಲಾ ಆಹಾರ ಸಮಿತಿಗಳ ಮುಕ್ತಾಯ

ಈಗಿನ ಜಿಲ್ಲಾ ಆಹಾರ ಸಮಿತಿಗಳನ್ನು ಮುಕ್ತಾಯಗೊಳಿಸಲಾಗುವುದು.

ತಾಲೂಕು ಮತ್ತು ಜಿಲ್ಲಾ ಕಮಿಟಿಗಳ ಬಿನ್ ಸರಕಾರೀ ಮೆಂಬರರಿಗೆ ನಮೂದಿಸಲಾಗುವ ದರಗಳಂತೆ ಕಮಿಟಿ ಸಭೆಗಳಿಗೆ ಹೋದ ಬಗ್ಗೆ ಭತ್ತೆ ಕೊಡಲಾಗುವುದು.

ಇದುವರೆಗೆ ಧಾನ್ಯ ಸಂಗ್ರಹ ಕಾರ್ಯಕ್ರಮವನ್ನು ಕ್ರೂರವಾಗಿ ನಡೆಸಲಾಗಿದೆಯೆಂದೂ ಸರಿಯಾದ ವಿಚಾರವಿಲ್ಲದೆ ತಕ್ಷೀರುಗಳನ್ನು ನಡೆಸಲಾಗಿದೆಯೆಂದೂ ಒಂದು ಭಾವನೆ ಉಂಟು. ಈಗ ಬಾಕಿ ಇದ್ದ ಎಲ್ಲಾ ತಕ್ಷೀರುಗಳನ್ನು ಪರಿಶೀಲಿಸಿ ಹಿಂಸೆಯನ್ನೊಳಗೊಂಡ ಅಥವಾ ದೊಡ್ಡ ಪ್ರಮಾಣದಲ್ಲಿ ಬೇಕೆಂತಲೇ ವಂಚಿಸಲೆತ್ನಿಸಿದ ತಕ್ಷೀರುಗಳನ್ನಲ್ಲದೆ ಬೇರೆ ಎಲ್ಲ ತಕ್ಷೀರುಗಳನ್ನು ಹಿಂತೆಗೆಯುವಂತೆ ಕಲೆಕ್ಟರರನ್ನು ಕೇಳಿಕೊಳ್ಳಲಾಗುವುದು.

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟು ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ

ಶ್ರೀಕೃಷ್ಣ

ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ಉಚ್ಚ ಉತ್ತಮ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಆಗುಹೋಗುಗಳ ವಿವರಗಳೂ ಈ ಸಂಪುಟಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4 8 0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ರಾಜಗೋಪಾಲಾಚಾರ್ಯ,
ಕರಂಬಳ್ಳಿ, ಉಡುಪಿ

ಕೇರಳಾ ಸೋಪ್ ಇನ್ಸ್ಟಿಟ್ಯೂಟ್,
ಕಲ್ಲಿಕೋಟೆ.

ENGLISH MADE EASY

(SELF ENGLISH STUDY)

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0

1—8—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

★ ನೆಹರುಗಳ ಕಾಶ್ಮೀರ ಧಾಳಿ ★

ಬೆಯನೆಟ್ ಬೇಲಿಯನ್ನು ಭೇದಿಸಿ ನುಗ್ಗಿದರು!

ಕಾಶ್ಮೀರ ಸಂಸ್ಥಾನದ ಪ್ರಜಾ ಚಳವಳಿಯ ನಾಯಕನಾಗಿದ್ದು ದಸ್ತಗಿರಿಯಾಗಿ ವಿಚಾರಣೆ ಬಾಕಿಯಿರುವ ಶೇಕ್ ಅಬ್ದುಲ್ಲಾರವರ ಡಿಫೆನ್ಸ್ ವ್ಯವಸ್ಥೆಗಾಗಿ ಆಸಫ್ ಆಲಿ, ದಿವಾನ್ ಚಮನಲಾಲ್, ಬಲದೇವಸಹಾಯಿ ಮತ್ತು ಮಹಮ್ಮದ್ ಯೂನ್‌ಸ್ ಮೊದಲಾದವರನ್ನು ಕೂಡಿಕೊಂಡು ಪಂಡಿತ ಜವಾಹಿರಲಾಲರು ನವದಿಲ್ಲಿಯಿಂದ ಕಾಶ್ಮೀರಕ್ಕೆ ಹೊರಟಿದ್ದರು. ನೆಹರು ಮತ್ತವರ ಅನುಯಾಯಿಗಳಿದ್ದ ಕಾರು ತಾ 19ನೇ ಅಪರಾಹ್ನ 2½ ಘಂಟೆಗೆ ಸರಿಯಾಗಿ ಕಾಶ್ಮೀರದ ಗಡಿಯಾದ ಕೊಹಲಾದಲ್ಲಿಯ ಸೇತುವೆಯನ್ನು ಜನ ಸಂದಣಿಯ ಪ್ರಚಂಡ ಜಯಕಾರಗಳ ನಡುವೆ ದಾಟ ಹತ್ತಿತು. ಬ್ರಿಟಿಷ್ ಭಾರತದಿಂದ ದೊಡ್ಡ ಜನ ಗುಂಪು ಅವರನ್ನು ಹಿಂಬಾಲಿಸಿದ್ದಿತು.

ಪ್ರತಿಬಂಧಕಾಜ್ಞೆ

ಸೇತುವೆಯಲ್ಲಿ ಕಾಶ್ಮೀರದ ಜಿಲ್ಲಾ ಮೆಜಿಸ್ಟ್ರೇಟ್ ಮಿ. ಠಾಕರು ನೆಹರುಗಳ ಕಾರನ್ನು ತಡೆದು ನಿಲ್ಲಿಸಿ ಪಂಡಿತರೊಬ್ಬರನ್ನು ಬಿಟ್ಟು ಮಿಕ್ಕವರು ಹೋಗುವದಕ್ಕೆ ಅಡ್ಡಿಯಿಲ್ಲವೆಂದರು. ಇಂತಹ ಪ್ರತಿಬಂಧಕ್ಕೆ ಅಧಿಕಾರದ ಆಧಾರವೇನೆಂದು ಪಂಡಿತಜೀ ಪ್ರಶ್ನಿಸಿದಾಗ ಕಲೆಕ್ಟರರು ತನ್ನ ಜೇಬಿನಿಂದೊಂದು ಟೈಪ್ ಮಾಡಿದ ನೋಟೀಸನ್ನು ತೆಗೆದು ನಡುಗುವ ಸ್ವರ ಮತ್ತು ಕೈಗಳಿಂದ ಜವಾಹಿರರ ಮೇಲೆ ಜ್ಯಾರಿಮಾಡಿದರು. ನೆಹರು ಪ್ರವೇಶದಿಂದ ಕಾಶ್ಮೀರದ ಸಾರ್ವಜನಿಕ ಶಾಂತಿಗೆ ಭಂಗವಿರುವದರಿಂದ ಅಲ್ಲಿಯ ಡಿಫೆನ್ಸ್ ಶಾಸನದನ್ವಯ ಜಿ. ಮೆಜಿಸ್ಟ್ರೇಟರು ಹಾಕಿದ ನಿಷೇಧಾಜ್ಞೆಯಾಗಿತ್ತದು. ಪಂಡಿತರು ಅಪೇಕ್ಷಿಸಿದಂತೆ ನೋಟೀಸಿನ ಒಂದು ಪ್ರತಿಯನ್ನು ಅವರಿಗೆ ಕೊಡಲಾಯಿತು.

ಹೆಜ್ಜೆ ಹಿಂದಿಡಲು ನಿರಾಕರಣೆ

ನೆಹರುಗಳು ಹಿಂದಿರುಗಲೊಪ್ಪಲಿಲ್ಲ ಶೇಕ್ ಅಬ್ದುಲ್ಲಾರ ಡಿಫೆನ್ಸಿಗಾಗಿ ಕರೆತಂದಿದ್ದ ಶ್ರೀ ಬಲದೇವಸಹಾಯಿ ಮತ್ತು ಶ್ರೀ. ಅವನೀಶಸಿನ್ಹರನ್ನು ಶ್ರೀನಗರಕ್ಕೆ ಬೀಳ್ಕೊಟ್ಟು ಮಿಕ್ಕವರೊಂದಿಗೆ ಅಲ್ಲೇ ನಿಂತುಬಿಟ್ಟರು ಕಲೆಕ್ಟರರು ವಯರ್ಲೆಸ್ ವ್ಯವಸ್ಥೆಯಿದ್ದ ಎರಡು ಮಿಲಿಟರಿ ಲೋರಿಗಳೊಡನೆ ಬಂದಿದ್ದುದರಿಂದ ನೆಹರುಗಳು ನಿರಾಕರಿಸಿದೊಡನೆ ಮಹಾರಾಜಾ ಸರಕಾರದ ಮುಖ್ಯಾಧಿಕಾರಿಗಳೊಡನೆ ಮುಂದೇನು ಮಾಡಬೇಕೆಂದು ಅಲ್ಲಿಂದಲೇ ವಿಚಾರ ವಿನಿಮಯ ನಡೆಸಹತ್ತಿದರು. ಕಾಶ್ಮೀರ ಸಂಸ್ಥಾನದ ಕೆಲವು ಜನರು ಗುಂಪು ಕೂಡಿಕೊಂಡು ಕರಿ ಪತಾಕೆಗಳೊಂದಿಗೆ ಬಂದು 'ನೆಹರು ಹಿಂದೆ ಹೋಗು' ಎಂದು ಬೊಬ್ಬಿಡುತಿದ್ದರು. ನೆಹರುಗಳ ಹಿಂಭಾಗದಲ್ಲಿ ಈ ಕಡೆಯ ವಿಶೇಷ ಜನತಂಡ ನೆರೆದು ಮಿಲಿಟರಿ ಮತ್ತು ಪೋಲಿಸರಿಂದ ಸೇತುವೆಯಲ್ಲೇ ತಡೆಯಲ್ಪಟ್ಟು ಪ್ರತಿ ಜಯಕಾರವೆಬ್ಬಿಸುತಿತ್ತು. ದಿವಾನ್ ಚಮನಲಾಲರು ಒಮ್ಮೆ ತಮ್ಮ ಕಡೆಯ ಜನದಿದ್ದಲ್ಲಿಗೆ ಹೋಗಿ ಉಪದೇಶಿಸಿದರು. ಆ ಮೇಲೆ ಪೋಲಿಸ್ ಅಧಿಕಾರಿಯಿಂದ ಬಂದ ದಸ್ತಗಿರಿಯ ಬೆದರಿಕೆಗಂಜದೆ ಅಡ್ಡಗಟ್ಟಿನಿಂತಿದ್ದ ಕರಿ ಧ್ವಜ ಧಾರಿಗಳ ನಡುವೆ ನುಗ್ಗಿದಾಗ, ಅವರು ಚದರಿದರು 'ನಿಮ್ಮನ್ನು ದಸ್ತಗಿರಿಮಾಡಲಾಗಿದೆ' ಎಂದು ಅಧಿಕಾರಿಯೊಬ್ಬನು ಬಾಯ್ದೆರೆಯಾಗಿ ಹೇಳಿದರೂ ಚಮನಲಾಲರನ್ನು ಕೈದಿನಲ್ಲಿಡಲೇ ಇಲ್ಲ.

ನೆಹರು ಮುನ್ನುಗ್ಗಿದರು

ಸುಮಾರು 5 ಘಂಟೆ ಹೀಗೆಯೇ ಕಳೆಯಿತು. ಇಷ್ಟು ಹೊತ್ತೂ ಪಂಡಿತಜೀ ಕಾರಿನಿಂದಿಳಿದು 'ಏಕಾಂಕ ನಾಟಕಗಳು' ಎಂಬ ಪುಸ್ತಕವನ್ನೋದುತ್ತಾ ನಿಂತಿದ್ದರು ಅಪರಾಹ್ನ 7-40ರ ವರೆಗೂ ಯಾವ ಸೂಚನೆಯೂ ಬಾರದಿದ್ದನ್ನು ಕಂಡು ಪಂಡಿತಜೀ ತಲೆಯೆತ್ತಿದರು. "ತಾವು ಭಾರತ ರಾಷ್ಟ್ರಸಭೆಯ ಭಾವೀ ಅಧ್ಯಕ್ಷನೊಡನೆ ವ್ಯವಹರಿಸುತ್ತಿದ್ದೇವೆಂಬುದನ್ನು ಬಹುಶಃ ಕಾಶ್ಮೀರ ಸಂಸ್ಥಾನಾಧಿಪತಿಗಳು ಅರಿತಿಲ್ಲ, ನಾನು ಹೆಜ್ಜೆ ಹಿಂದಿಡಲು ಕಲಿತಿಲ್ಲ' ಎನ್ನುತ್ತಾ ಪಂಡಿತ ನೆಹರುಗಳು ತನ್ನ ಅನುಯಾಯಿಗಳೊಂದಿಗೆ ಮುನ್ನುಗ್ಗಿದರು ಗಡಿಯಲ್ಲಿ ಥಳಥಳಿಸುವ ಬೆಯನೆಟುಗಳನ್ನು ಅಡ್ಡವಾಗಿ ಹಿಡಿದುಕೊಂಡು ಕೋಟೆಗಟ್ಟಿನಿಂತಿದ್ದ ಮಿಲಿಟರಿ ಮತ್ತು ಪೋಲೀಸ್ ಬೇಲಿಯ ಕಡೆಗೆ ಪಂಡಿತಜೀ ಹೆಜ್ಜೆಯಿಡುತ್ತಿದ್ದುದನ್ನು ಕಂಡಾಗ ಪ್ರೇಕ್ಷಕರ ಕಂಠ ಮತ್ತು ಉಸಿರು ಕೂಡಾ ಒಮ್ಮೆ ಸ್ತಬ್ಧವಾಯಿತು.

ಅದ್ಭುತ ಎದೆಗಾರಿಕೆ!

ಪಂಡಿತಜೀ ಬೆಯನೆಟ್ ಬೇಲಿಯನ್ನು ದೂಡಿಕೊಂಡು ಮುಂದೊತ್ತುವಾಗ ರೈಫಲ್ ತುದಿಗೆ ಸಿಕ್ಕಿಸಿದ್ದ ಕಿರುಗತ್ತಿಯೊಂದರಿಂದ ಅವರ ಎದೆ ಸೀಳಹೋಗದಿದ್ದುದೊಂದು ಆಶ್ಚರ್ಯವೇ ಸರಿ ಆದರೂ ನೆಹರುಗಳ ಕಪಾಳಕ್ಕೆ ಒಂದು ಸಣ್ಣ ಗಾಯವಾಯಿತು ಅಂತೆಯೇ ಚಮನಲಾಲರ ಕೆನ್ನೆಗೂ ತುಸು ಗಾಯವಾಯಿತಲ್ಲದೆ ಪ್ರೊಫೆಸರ್ ಚಂದರ ಕಿವಿಬಳಿ ಹರಿದು ಹೋಯಿತು ಆಸಫ್ ಆಲಿಗಳಿಗೂ ಒಂದು ಬೆಯನೆಟ್ ಗುರಿಹಿಡಿದಿದ್ದರೂ ಅವರು ತಪ್ಪಿಸಿಕೊಂಡು ಮುಂದೊತ್ತಿದರು ಒಳಭಾಗಗಳಲ್ಲಿ ಪೋಲಿಸ್ ಸೇನಾ ಪಹರೆಗಳಲ್ಲದೆ ಮರ, ತಂತಿಗಳ ಅಡ್ಡ ಬೇಲಿಗಳನ್ನೂ ಹಾಕಿದ್ದರು. ನೆಹರು ಮತ್ತವರ ಸಂಗಡಿಗರು ಎಲ್ಲವನ್ನೂ ದಾಟಿ ಮುಂದೊತ್ತಿದಾಗ ಜಿಲ್ಲಾ ಮೆಜಿಸ್ಟ್ರೇಟರು ಕೋವಿಗಳನ್ನು ತುಂಬಿಸಿಕೊಳ್ಳುವಂತೆ ಸೈನಿಕರಿಗೆ ಆಜ್ಞಾಪಿಸಿ ಆ ಕೂಟವನ್ನೇ 'ಬೇಕಾಯಿದೆ ಶೀರ'ಗೊಳಿಸುವದಾಗಿ ಬೆದರಿಸಿದರು. ಅದರೆ, 'ನಾವೆಲ್ಲಾ ಶಾಂತರಾಗಿದ್ದು ದಸ್ತಗಿರಿಗೆ ಸಿದ್ಧರಿರುವಾಗ ಹಾಗೆ ಮಾಡಲು ನಿಮ್ಮಿಂದ ಸಾಧ್ಯವಿಲ್ಲ' ಎಂದು ಮಿ. ಆಸಫ್ ಆಲಿ ಎಚ್ಚರಿಸಿದರು "ನಿಮ್ಮ ಮಹಾರಾಜರಿರಲಿ, ವೈಸರಾಯರೇ ಇರಲಿ, ನನ್ನ ಮನಸ್ಸಾಕ್ಷಿಗೆ ವಿರುದ್ಧವೆಂದು ಕಂಡರೆ ನಾನಾರ ಆಜ್ಞೆಯನ್ನೂ ಪಾಲಿಸುವವನಲ್ಲ ಕಳೆದ 30 ವರುಷಗಳಲ್ಲಿ ನಾನು ಹಾಗೆ ಮಾಡಿದ್ದಿಲ್ಲ. ಕಾಶ್ಮೀರ ಮಹಾರಾಜರು ನನ್ನ ಕುರಿತು ತೋರಿಸಿದ ಈ ಅಗೌರವಕರ ಧೋರಣೆಗಾಗಿ ಎಷ್ಟೇ ವಾರ ಹಿಡಿದರೂ ಕಾಶ್ಮೀರದೊಳಗೆ ನುಗ್ಗುವದೇ ಸರಿಯೆಂದು ನನ್ನ ಶಪಥವಿದೆ. ಏನೇ ಆದರೂ ಶ್ರೀನಗರ ಸೇರುತ್ತೇನೆ" ಎಂದು ನೆಹರುಗಳು ಜಿಲ್ಲಾ ಮೆಜಿಸ್ಟ್ರೇಟರಿಗೆ ಬೆದರಿಕೆ ಹಾಕಿ ಅನುಯಾಯಿಗಳೊಂದಿಗೆ ಮೂರು ಮೈಲಷ್ಟು ನಡೆದುಕೊಂಡೇ ಮುಂದೆ ಹೋದರು. ಅಲ್ಲಿಯೇ ನೆಲದಲ್ಲಿ ಕುಳಿತು ಊಟತೀರಿಸುವಾಗ ಅವರ ಕಾರು ಅಲ್ಲಿಗೆ ಬಂದುದರಿಂದ ಎಲ್ಲರೂ ಕಾರು ಹತ್ತಿ-ನೆಹರುಗಳು ಮಾಡಿನಲ್ಲಿ ಕುಳಿತುಕೊಂಡು— ಕಾಶ್ಮೀರ ಗಡಿಯ 50 ಮೈಲು ಒಳಗಡೆಯ ಡೊಮೆಲ್ ಎಂಬ ಹಳ್ಳಿಯನ್ನು ನಿರಾತಂಕವಾಗಿ ಮುಟ್ಟಿದರು. ರಾತ್ರಿ ಅಲ್ಲಿಯ ಬಂಗಲೆಯಲ್ಲಿ ಕಳೆಯಿತು.

ಪಂಡಿತರ ದಸ್ತಗಿರಿ

ತಾ 20ನೇ ಮುಂಜಾನೆ ಕಾಶ್ಮೀರಾಧಿಕಾರಿಗಳು ನೆಹರುಗಳನ್ನು ಬಂಧಿಸಿ ಆ ದಿನ ಅಲ್ಲಿಯ ಬಂಗಲೆಯಲ್ಲೇ ಇಟ್ಟು ಮರುದಿನ ವಿಶೇಷ ಸೌಕರ್ಯವುಳ್ಳ ಚಿನಾರಿಗೊಯ್ದು ಅಲ್ಲಿಯ ಸರಕಾರಿ ಬಂಗಲೆಯಲ್ಲಿಟ್ಟರು. ಒಂದು ಸರಕಾರೀ ಕಾರು ಸಮೇತ ಸಕಲ ಸೌಕರ್ಯಗಳೊಂದಿಗೆ ಪಂಡಿತಜೀಯನ್ನಲ್ಲಿ ವಿಶೇಷ ಗೌರವದಿಂದ ಕಾಣಲಾಯಿತು. 'ಅಖಿಲ ಭಾರತ ಪ್ರಾಮುಖ್ಯತೆಯ ಕಾರ್ಯಗಳು ಪಂಡಿತರಿಗೆ ಬೇರೆ ಕಡೆಯಲ್ಲಿರುವಾಗ ಅವರನ್ನು ಕಾಶ್ಮೀರದಲ್ಲಿ ನಿರ್ಬಂಧಿಸಿಡುವ ಇಚ್ಛೆ ನಮಗಿಲ್ಲ. ಪಂಡಿತ ಜವಾಹಿರಲಾಲರು ಕಾಶ್ಮೀರ ಬಿಂದಹೋಗಲು ಸ್ವತಂತ್ರರಿದ್ದಾರೆ. ಅವರು ದಿಲ್ಲಿಗೆ ಹೋಗುವದಾದರೆ ಕಾಶ್ಮೀರ ಸರಕಾರವು ವಿಮಾನ ವ್ಯವಸ್ಥೆ ಮಾಡಿಕೊಡುವದು. ನೆಹರು ಮುಂತಾದವರಿಗೆ ಬೆಯನೆಟ್ ಗಾಯಗಳಾಗಿವೆ ಎಂಬುದು ಶುದ್ಧ ಸುಳ್ಳು. ಎಂದೂ ಲಾಠಿ, ಕೋವಿ, ಅಥವಾ ಬಲ ಪ್ರಯೋಗ ಮಾಡಬಾರದೆಂದು, ಅಲ್ಲಿದ್ದ ಪಹರೆ ಪೋಲೀಸ್ ಮತ್ತು ಸೈನಿಕರಿಗೆ ಕಟ್ಟಾಜ್ಞೆಕೊಡಲಾಗಿತ್ತು ನೆಹರುಗಳ ಮೇಲೆ ಆಜ್ಞೆ ಜಾರಿ ಮಾಡಿದ ಮೆಜಿಸ್ಟ್ರೇಟರು ಅವರ ಸಮೀಪ ಸಂಬಂಧಿಕರು ಜನರನ್ನೂ ನೆಹರೂ ಸಂಗಡವನ್ನೂ ಸಿಂಗರಿಸುವದಕ್ಕಾಗಿಯೇ ಜಿಲ್ಲಾ ಮೆಜಿಸ್ಟ್ರೇಟರು ಡೋಮೆಲಿನ್ ವರೆಗೂ ಹಿಂದೆ ಹೋಗಿದ್ದರು.' ಎಂದೆಲ್ಲಾ ಕಾಶ್ಮೀರ ಸರಕಾರವು ಪ್ರಕಟಿಸಿಯುತ್ತಿದೆ.

ಕಾರ್ಯಕಾರೀ ಕಮಿಟಿಯ ಕರೆ

ನೆಹರು ಘಟನೆಯ ಮಿಂಚು ವಾರ್ತೆಯಿಂದ ಇಡೀ ರಾಷ್ಟ್ರವು ಉದ್ವೇಗಗೊಂ

(೬ನೇ ಪುಟ ನೋಡಿರಿ)

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಅನ್ಯಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ ಕೆಲ ದಿನಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ಲೈಮಾಂದ ಕೇಸುಗಳಿಗೆ ರೂ. 5 6ತಿಂಗಳ ಬರ್ಥ ಕಂಟ್ರೋಲಿಗೆ ರೂ 4|- (ವಿ. ಪಿ. 12 ಆಣೆ ಅಲಾಯಿದ)

Mrs. P. DEVEE,

F. D. 5, (A. E.) Tollygunge, Calcutta.

ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ ಕೆ ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ

ಬೆಲೆ ರೂ 1—1—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

The Canara Banking Corporation Limited.

(Incorporated in British India, with limited Liability)

Estd: 1906.

Head Office: **UDIPI**, South Kanara.

CAPITAL

Authorised	Rs. 25,00,000
Issued & Subscribed ...	,, 16,00,000
Paid up	,, 15,60,120
Reserves	,, 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted.

ನವಯುಗ

ಉಡುಪಿ, ಗುರುವಾರ, ೨೭-೬-'೪೬

ದಕ್ಷಿಣಾಫ್ರಿಕದ ದಬ್ಬಾಳಿಕೆ

ದಕ್ಷಿಣಾಫ್ರಿಕದಲ್ಲಿರುವ ಸುಮಾರು 250,000 ಭಾರತೀಯರ ಮೇಲೆ ಅಲ್ಲಿಯ ಜನರಲ್ ಸ್ಮಟ್ಸ್ ಸರಕಾರವು ನಡೆಸುತ್ತಿರುವ ದಬ್ಬಾಳಿಕೆಯು ಮಾನುಷತ್ವಕ್ಕೆ ಬಿದ್ದ ಧಕ್ಕೆಯಾಗಿದೆ; ತಾವೇ ಮೇಲೆಂಬ ಬಿಳಿಜನಾಂಗದ ವರ್ಣದ್ವೇಷ, ದರ್ಪ, ಮತ್ತು ಪಾಶವಿಕ ಮನೋವೃತ್ತಿಗೆ ಇದಕ್ಕಿಂತ ಸ್ಪಷ್ಟವಾದ ನಿದರ್ಶನ ಬೇರೊಂದಿರಲಾರದು. ದ. ಅಫ್ರಿಕದಲ್ಲಿ ಕರಿ ಚರ್ಮವೆಂಬೊಂದೇ ಕಾರಣದಿಂದ ಹಿಂದೀಯರು ಅಸ್ಪೃಶ್ಯರಾಗಿರುವುದು ನಿನ್ನೆ ಮೊನ್ನೆಯಿಂದಲ್ಲ. 1885ನೇ ಇಸವಿಯಿಂದಲೂ ಅಲ್ಲಿಯ ಬಿಳಿ ಜನರು ಹಿಂದೀಯರಿಗೆ ಮಾನವ ಸಹಜ ನಾಗರಿಕ ಹಕ್ಕುಗಳನ್ನು ನಿರಾಕರಿಸುತ್ತಾ ಬಂದಿದ್ದಾರೆ. ಗಾಂಧಿಜೀ, ಮಾನ್ಯ ಶ್ರೀನಿವಾಸ ಶಾಸ್ತ್ರಿಗಳಂಥವರು ಈ ಬರ್ಬರ ಅತ್ಯಾಚಾರವಿದಿರು ಹೋರಾಡಿಯೇ ಮಾನ್ಯತೆಗೇರಿದ್ದರು. ಕಾಲಚಕ್ರದಡಿಯಲ್ಲಿ ಎಂತೆಂತಹ ಸಂಕುಚಿತ ಸ್ವಾರ್ಥ, ದುರಭಿಮಾನಗಳು ನುಚ್ಚುನುರಿಯಾದರೂ ದ. ಅಫ್ರಿಕದ ಬಿಳಿಜನಾಂಗದವರ ವರ್ಣದ್ವೇಷ ಮಾತ್ರ ನಶಿಸುವ ಬದಲಿಗೆ ಬೆಳೆಯುತ್ತಾ ಬಂದಿದೆ. ಹಿಂದೀಯರ ಸ್ಥಳಾಧಿಕಾರ, ಸ್ಥಾನಮಾನ, ಇತ್ಯಾದಿ ಎಲ್ಲಾ ನಾಗರಿಕ ಹಕ್ಕುಗಳನ್ನೂ ಕಸಗೊಳ್ಳುವ 'ಘೆಟ್ಟೋ ಮಸೂದೆ'ಯನ್ನ ದ. ಅಫ್ರಿಕದ ಬಿಳಿಯರ ಸರಕಾರವು ಮಂಜೂರುಮಾಡಿಕೊಂಡಂದಿನಿಂದ ಭಾರತ ಸರಕಾರವೂ ತನ್ನಿಂದ ಸಾಧ್ಯವಿದ್ದ ಪ್ರತಿಕ್ರಿಯೆಗಳನ್ನು ಕೈಕೊಂಡಿದ್ದಿತು. ದಕ್ಷಿಣಾಫ್ರಿಕದ ವ್ಯಾಪಾರಕ್ಕೆ ಬಹಿಷ್ಕಾರ ಹಾಕಿ, ಅಲ್ಲಿಯವರು ಭಾರತಕ್ಕಾಗಮಿಸುವಂತೆಯೂ ಪ್ರತಿಬಂಧಿಸಿ, ಅಲ್ಲಿದ್ದ ಹಿಂದೀ ಹೈಕಮಿಶನರರನ್ನು ಹಿಂದೆ ಕರೆಸಿಕೊಂಡಿತು. ಆದರೆ, ಶ್ವೇತವರ್ಣೀಯರ ದುರಹಂಕಾರ ಅಭೇದ್ಯವಾದುದು. ಅವರು ಹಿಂದೀಯರನ್ನು ಕೇವಲ ಪಶುಗಳಂತೆ ಕಾಡುವ ದೃಢ ಸಂಕಲ್ಪ ಮಾಡಿದಂತಿದೆ. ಒಂದು ವರ್ಗದ ಮೇಲೆ ಇನ್ನೊಂದು ವರ್ಗವು ಮಾಡುವ ಇಂತಹ ಆಕ್ರಮಣವು ಕಾಡುಪ್ರಾಣಿಗಳಲ್ಲಲ್ಲದೆ ಮಾನವ ಪ್ರಪಂಚದಲ್ಲೀ ಬೇರಿರಲಾರದು. ಈ ಅತ್ಯಾಚಾರಕ್ಕೆ ಪ್ರತಿಯಾಗಿ ಈಗ ಸೌಮ್ಯ ಸತ್ಯಾಗ್ರಹವಾರಂಭಿಸಿರುವ ಅಲ್ಲಿಯ ಹಿಂದೀಯರು ದಸ್ತಗಿರಿ ಮತ್ತು ಶಿಕ್ಷೆಗೊಳಗಾಗುತ್ತಿದ್ದಾರೆ. ಅತ್ಯಂತ ಖಂಡನೀಯವೆಂದರೆ ಅಲ್ಲಿಯ ಸತ್ಯಾಗ್ರಹ ಶಿಬಿರದ ಮೇಲೆ ಬಿಳಿವರ್ಣೀಯರು ನಡೆಸುತ್ತಿರುವ ಧಾಳಿಗಳು; ಶಾಂತ ಶಿಬಿರದ ಮೇಲೆ ದೌಡಿಟ್ಟು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಸತ್ಯಾಗ್ರಹಿಗಳನ್ನು ಹಿಂಸಿಸುತ್ತಿರುವ ಶ್ವೇತವರ್ಣೀಯರಿಗೆ ಸರಕಾರದಿಂದಾವ ತಡೆಯೂ ಬಂದಿಲ್ಲ. ಇದೀಗ ಬಿಳಿಜನರು ಮಾಡುತ್ತಿರುವ ಲೋಕಶಾಂತಿ ವ್ಯವಸ್ಥೆಯ ಒಂದು ಮಾದರಿ!

ಈಗ ಭಾರತದ ಪರವಾಗಿ ಜಾಗತಿಕ ಸಂಘಕ್ಕೆ ದಕ್ಷಿಣಾಫ್ರಿಕ ಸರಕಾರದ ಮೇಲೆ ದೂರುಹೋಗಿದೆ. ಜಾಗತಿಕ ಸಂಘದಲ್ಲಿ ಹಿಂದೀ ಪ್ರತಿನಿಧಿಗಳ ನಾಯಕನಾಗಿರುವ ಸರ್. ಎ. ರಾಮಸ್ವಾಮಿ ಮುದಲಿಯಾರರು ಸಂಘದ ಮುಖ್ಯ ಕಾರ್ಯದರ್ಶಿಗೆ ಅರ್ಜಿಯೊಪ್ಪಿಸಿ ಬರುವ ಸೆಪ್ಟೆಂಬರ 3ರಲ್ಲಿ ಸೇರಲಿರುವ ಸಂಘದ ಸಾಮಾನ್ಯ ಸಭೆಯ ಮುಂದದನ್ನು ಇಡುವಂತೆ ಕೇಳಿಕೊಂಡಿದ್ದಾರೆ. ದ. ಆಫ್ರಿಕವೂ ಭಾರತದಂತೆಯೇ ಬ್ರಿಟಿಷ್ ಆಳ್ವಿಕೆಯಲ್ಲಿರುವ ರಾಷ್ಟ್ರ. ಇವೆರಡರೊಳಗಿನ ವಾದವೊಂದನ್ನು ತೀರ್ಮಾನಿಸುವ ಕೆಲಸವು ಸಂಯುಕ್ತ ರಾಷ್ಟ್ರಗಳ ಸಂಘದ ಪಾಲಿಗೆ ಹೋಗಬೇಕಾಯಿತು! 'ವರ್ಗ, ಲಿಂಗ, ಭಾಷೆ, ಧರ್ಮ, ಭೇದ ನೋಡದೆ ಎಲ್ಲರ ಮಾನವಸಿದ್ಧ ಹಕ್ಕನ್ನೂ ಪಾಲಿಸುವದೇ ತನ್ನ ಧ್ಯೇಯ' ಎಂಬುದನ್ನು ತನ್ನ ಮೊದಲ ನಿಬಂಧನೆಯಲ್ಲೇ ಸೇರಿಸಿಕೊಂಡಿರುವ ಜಾಗತಿಕ ಸಂಘವು ಈ ಅಮಾನುಷ ಅತ್ಯಾಚಾರಗಳಿಗೇನನ್ನುವುದೋ ನೋಡಲಿಕ್ಕಿದೆ. ಏನೇ ಆದರೂ ಲೋಕದ ದೃಷ್ಟಿಯನ್ನೀ ಕಡೆಗೆಳೆಯುವ ಪ್ರಚಾರ ಮೌಲ್ಯವು ಈ ದೂರಿಗಿದೆ. ಲೋಕ ಹಿತಾಕಾಂಕ್ಷಿಗಳೆಲ್ಲಾ ಈ ಕಲ್ಮಷವನ್ನು ದೂರಮಾಡಲು ಇನ್ನಾದರೂ ನೆರವಾಗುವರೆಂದು ಆಶಿಸಬಹುದೇ?

ಅನಾಹುತ ತಪ್ಪಿತು

ಇದೇ ತಾ. 27ನೇ ಮಧ್ಯರಾತ್ರಿಯಿಂದಾರಂಭವಾಗಲಿದ್ದ ಅಖಿಲ ಭಾರತ ರೈಲ್ವೇ ಮುಷ್ಕರವನ್ನು ಅ. ಭಾ. ರೈಲ್ವೇ ಫೆಡರೇಶನಿನ ಕ್ರಿಯಾ ಸಮಿತಿಯು ಹಿಂದೆಗೆದು ಕೊಂಡಿತೆಂಬುದು ಅತ್ಯಾನಂದದ ಸಂಗತಿ. ನಡುಗಾಲ ಸರಕಾರದಲ್ಲಿ ಕಾಂಗ್ರೆಸ್ ಸೇರದಂತಹ ಸ್ಥಿತಿಯೊದಗಿ ನಿಟ್ಟುಸಿರು ಬಿಡುವಾಗಲೇ ಇದೊಂದು ಅನಾಹುತ ತಪ್ಪಿದ ಸುಖಸ್ಮರಣೆಯಿಂದ ಹಿಂದೀಯರು ಸಮಾಧಾನದುಸಿರನ್ನೂ ಬಿಡುವಂತಾಗಿದೆ. ಇದಕ್ಕಾಗಿ ಅಖಿಲ ಭಾರತವು ರೈಲ್ವೇ ಕೆಲಸಗಾರರಿಗೆ ಧನ್ಯವಾದ ಕೊಡಬೇಕು. ಕೆಲಸಗಾರರ ಸಂಯುಕ್ತ ಸಭೆ ಮತ್ತು ರೈಲ್ವೇ ಬೋರ್ಡುಗಳೊಳಗೊಂದು ಸಂಧಾನ ನಡೆದೇ ಮುಷ್ಕರ ವಜಾಗೊಂಡಿತು. ಎಲ್ಲಾ ಸರಕಾರೀ ನೌಕರರ ವೇತನ ಕ್ರಮ ನಿರ್ಧರಿಸಲು ನೇಮಿಸಲ್ಪಡುವ ಸಮಿತಿಯು ರೈಲ್ವೇ ಕೆಲಸಗಾರರ ಸ್ಥಿತಿಗತಿಗೆ ಪ್ರಥಮ ಲಕ್ಷ್ಯವೀಯುವದು; ಇನ್ನಾರು ತಿಂಗಳೊಳಗೆ ಆ ಕುರಿತು ನಿರ್ಧರಿಸಲಿರುವದು. ಈ ಮಧ್ಯಾವಧಿಯಲ್ಲಿ ಕೆಲಸಗಾರರ ರಕ್ಷಣೆಯ ಏರ್ಪಾಡಾಗಿದೆ. ಮಧ್ಯಸ್ಥಗಾರರ ತೀರ್ಮಾನವಾದ ಮೇಲೆ ಎಲ್ಲವನ್ನೂ ಪರಿಶೀಲಿಸಿ ಆಗತ್ಯವುಳ್ಳ ಕಾರ್ಯ ಕೈಗೊಳ್ಳುವ ಅಧಿಕಾರ ಕೆಲಸಗಾರ ಸಂಘಕ್ಕಿದೆ. ಅಂತೂ ರೈಲ್ವೇ ಕೆಲಸಗಾರರು ಸೋತು ಸಂಧಾನಮಾಡಿಕೊಂಡುದಲ್ಲ. ಇಲ್ಲಿ ಆ ಎರಡು ಇದಿರುವಾದಿ ಪಕ್ಷಗಳ ಸೋಲು—ಗೆಲವಿನ ಪ್ರಶ್ನೆ ಮುಖ್ಯವಲ್ಲ. ಆಹಾರ ಬರಗಾಲದ ಈ ದುಷ್ಕಾಲದಲ್ಲಿ—ರಾಷ್ಟ್ರದ ಅದೃಷ್ಟ ನಿರ್ಮಾಪಕ ರಾಜಕೀಯಾಂದೋಲನ ನಡೆಯುತ್ತಿರುವ ಸಂಧಿಗ್ಧಾವಧಿಯಲ್ಲಿ—ರೈಲ್ವೇ ಮುಷ್ಕರದ ಅಪಾಯ ತಪ್ಪಿದುದು ಒಂದು ರಾಷ್ಟ್ರೀಯ ವಿಜಯ. 'ದೇಶದ ರಾಜಕೀಯ ಮತ್ತು ಆಹಾರ ಪರಿಸ್ಥಿತಿಯ ದುರುಪಯೋಗಮಾಡಿಕೊಳ್ಳಲು ಕೆಲಸಗಾರರ ಸಂಯುಕ್ತ ಸಭೆ ತಯಾರಾಗಿದೆ ಎಂಬ ಆರೋಪವನ್ನು ಫೆಡರೇಶನ್ ಅಲ್ಲಗಳೆಯುತ್ತದೆ. ಬದಲಾಗಿ ನಮ್ಮ ಬೇಡಿಕೆಗಳಿಗೆ ಸರಕಾರದ ಉತ್ತರವೆಷ್ಟೇ ಅಸಮಾಧಾನಕರವಿದ್ದರೂ ರಾಷ್ಟ್ರದ ಸದ್ಯದ ರಾಜಕೀಯ, ಆರ್ಥಿಕ ಹಾಗೂ ಆಹಾರ ಪರಿಸ್ಥಿತಿಯನ್ನು ಗಮನಿಸಿ, ಪ್ರಕೃತ ಅಂಗೀಕಾರ ಪಡೆದ ಶರ್ತಗಳನ್ನೂ ಲಕ್ಷಿಸಿ, ಎಲ್ಲಾ ಒಳ ಯೂನಿಯನುಗಳೂ ಮುಷ್ಕರ ನೋಟೀಸನ್ನು ಹಿಂದೆಗೆದುಕೊಳ್ಳಬೇಕೆಂದೂ ಪೂರ್ವ ನಿಶ್ಚಯದಂತೆ ರೈಲ್ವೇ ಕೆಲಸಗಾರರು ಕೆಲಸ ನಿಲ್ಲಿಸದಂತೆ ನೋಡತಕ್ಕದ್ದೆಂದೂ ಫೆಡರೇಶನ್ ನಿರ್ಧರಿಸುತ್ತದೆ' ಎಂಬ ರೈಲ್ವೇ ಕೆಲಸಗಾರ ಸಂಯುಕ್ತ ಸಂಘದ ನಿರ್ಣಯವು ರಾಷ್ಟ್ರಪ್ರೇಮಪೂರಿತವಾದುದು. ಶಾಂತಿದಾನ, ಪ್ರಾಣದಾನಮಾಡಿದ ಉಪಕಾರ ಅದರಿಂದಾಗಿದೆ.

ಮಂಗಳೂರು

ಜಿಲ್ಲಾ ಆಹಾರ ಸಮಿತಿಯ ಸಭೆ- ತಾ 14ರಲ್ಲು ಶ್ರೀ. ಎಸ್ ಭೂತಲಿಂಗಂ ಜಿಲ್ಲಾ ಕಲೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಮೆಯಾದ ಹಾಗೂ ಶಿಲ್ಕಿನಲ್ಲಿರುವ ಅಕ್ಕಿಯ ಕುರಿತು ಜಿಲ್ಲಾಧಿಕಾರಿಗಳು ಅಂಕೆ ಸಂಖ್ಯೆಗಳನ್ನು ಸೂಚಿಸಿದರು. ಹೊಸ ಬೆಳೆಯ ತನಕ 10,000 ಟನ್ ಅಕ್ಕಿ ಕಡಿಮೆ ಬೀಳುವುದರಿಂದ ಮಲಬಾರು ಜಿಲ್ಲೆಗೆ ಸಾಲವಾಗಿ ಕೊಟ್ಟ ಅಕ್ಕಿ ಸಿಕ್ಕದೆ ನಿರ್ವಾಹವಿಲ್ಲವೆಂದಭಿಪ್ರಾಯ ಸೂಚಿಸಲಾಯಿತು. ಹಳೆ ಬಾವಿ ಕೆರೆಗಳ ದುರುಸ್ತಿ ಹಾಗೂ ಹೊಸತನ್ನು ಆಗೆಯುವುದರ ಬಗ್ಗೆ ಸರಕಾರವು ಕೊಡುವ ಗ್ರ್ಯಾಂಟಿನ ಕುರಿತು ಜಿಲ್ಲೆಯಲ್ಲಿ ಸಾಕಷ್ಟು ಜನಜಾಗ್ರತಿಯುಂಟಾಗಲಿಲ್ಲವೆಂದು ಶ್ರೀ. ಎ. ಬಿ. ಶೆಟ್ಟರು ಜಾಹೀರು ಪಡಿಸಿದರು. ಪತ್ರಿಕೆಗಳ ಮೂಲಕವೂ ಛಾಪಾ ನೋಟೀಸುಗಳ ಮೂಲಕವೂ ಪ್ರಚಾರ ಕಾರ್ಯವನ್ನು ಕೈಕೊಳ್ಳಲಾಗಿತ್ತು ಎಂದು ಕಲೆಕ್ಟರರು ಸಮಾಧಾನದ ಉತ್ತರವನ್ನಿತ್ತರು. ಇನ್ನೊಂದು ವರ್ಷವೂ ಇಂತಹ ರಿಯಾಯತಿ ಸರಕಾರದಿಂದ ಕೊಡಲ್ಪಟ್ಟರೆ ಆಗತಾನೇ ಶೀಘ್ರ ಜನಜಾಗ್ರತಿ ಪ್ರಚಾರಕಾರ್ಯವನ್ನು ಮುತವರ್ಜಿಯಿಂದ ಮುಂದೊತ್ತಲಾಗುವುದೆಂದು ಭರವಸೆಯನ್ನು ಸಹಕೊಟ್ಟರು. ರಸಾಯನಿಕ ಗೊಬ್ಬರವನ್ನು ಕಾಸರಗೋಡು ತಾಲೂಕಿಗೆ ಧರ್ಮಾರ್ಥ ಹಂಚುವಂತೆ ಇತರ ತಾಲೂಕುಗಳಿಗೂ ಅಂತಹ ರಿಯಾಯತಿ ದೊರೆಯುವಂತೆ ಸರಕಾರಕ್ಕೆ ವಿನಂತಿಸಬೇಕೆಂದಾಯಿತು. ಪರಂಬೋಕು ಸ್ಥಳಗಳಲ್ಲಿರುವ ನಾದುರುಸ್ತಿ ಕೆರೆಗಳನ್ನು ಸರಿಪಡಿಸಿದರೆ ಆಹಾರ ವಸ್ತುಗಳನ್ನು ಹೆಚ್ಚು ಬೆಳೆಸಲು ಅನುಕೂಲವಾಗುವುದೆಂದೂ ಶ್ರೀ. ಕೆ. ಜಿನರಾಜ ಹೆಗ್ಡೆಯವರು ಸೂಚಿಸಿದರು. ಆ ಬಗ್ಗೆ ತಕ್ಕ ನಿಗಾ ತೆಗೆದುಕೊಳ್ಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು. ಗ್ರಾಮ, ತಾಲೂಕು, ಜಿಲ್ಲಾ ಕಮಿಟಿಗಳು ಸ್ಥಾಪಿಸಲ್ಪಡುವ ತನಕ ಜಿಲ್ಲಾ ಆಹಾರ ಸಮಿತಿಯು ಜೀವಂತವಿರುವುದೊಳ್ಳಿತೆಂದು ಸಭೆಯ ಅಭಿಪ್ರಾಯವಾಯಿತು.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 120146.

ವಾದಿ—ವೈ. ಕೃಷ್ಣಪ್ಪ ಸೆಟ್ಟಿ. ಯವರ ಜನರಲ್ ಪವರ್ ಓಫ್ ಎಟರ್ನಿ ಹೋಲ್ಡರ್ ವೈ. ಸೂರ್ಯಣ್ಣ ಸೆಟ್ಟಿ.

ಪ್ರತಿವಾದಿರು—ಗಣೇಶ ರಾವ್ ಕೂಡಾ. ಯವರೊಳಗೆ 1ನೇ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ.

1ನೇ ಪ್ರತಿವಾದಿ. ಬಿಜೂರು ಗಣೇಶ ರಾವ್, [illegible] ಪಾಂಡುರಂಗರಾಯರ ಮಗ ಕುಂದಾಪುರ ತಾಲ್ಕು ಬಿಜೂರು ಗ್ರಾಮದ [illegible] ರಾವ್.

ಸದ್ರಿ ವಾದಿಯು ಸದ್ರಿ ಪ್ರತಿವಾದಿರಿಂ[illegible] ಬಹ ಮೂಲಗೇಣಿ ಗೇಣಿ ಬಾಕಿ ವ್ಯವೇಜು ರೂ. 362 9-10ನ್ನು ಬರಮಾಡಿಕೊಳ್ಳು[illegible] ರೇ ವಾಕಲ್ಲು ಮಾಡಿದ ಮೇಲಿನ ದಾವೆಯು ತಾರೀಕು 10-7-46ಕ್ಕೆ ತನ್ಕಿಗೆ ಇಟ್ಟಿದೆ. [illegible] ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ 11ಗಂಟೆಗೆ ಮೇಲ್ಕಾಣಿಸಿ[illegible] ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

Y. Manjaya Shetty,
Advocate for Plaintiff

ತಾರೀಕು 22 6 46
ಮೊಕ್ಕಾಂ: ಕುಂದಾಪುರ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ನಡೆಯುವ ಚಿತ್ರ

ಕೆಪ್ಟನ್ ಬ್ಲಡ್

ಬರುವ ಚಿತ್ರ-

ಎರೊಲ್ ಫ್ಲಿನ್.

ನಡುಗಾಲ ಸರಕಾರದ ವೈಸರಾಯೀ ವ್ಯವಸ್ಥೆಗೆ ಕಾಂಗ್ರೆಸಿನ ಧಿಕ್ಕಾರ!

ಘಟನಾ ಸಮಿತಿಗಾದರೂ ಒಪ್ಪಬಹುದೆ?

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನಡುಗಾಲ ಸರಕಾರ ವ್ಯವಸ್ಥೆಯನ್ನು ಧಿಕ್ಕರಿಸುವ ನಿರ್ಣಯವನ್ನು ಮಾಡಿಟ್ಟಿದೆ; ಆದರೆ ಅದರ ಬೆನ್ನಲ್ಲೇ ಬ್ರಿಟಿಷ್ ರಾಯಭಾರಿಗಳು ಹೊಸ ಮಾತುಕತೆಗಳನ್ನು ಪ್ರಾರಂಭಿಸಿದುದರಿಂದ ಈ ತನಕ ಆ ನಿರ್ಣಯವನ್ನು ಜ್ಯಾಹೀರುಮಾಡಿಲ್ಲ. ಸದ್ಯ ಶಾಶ್ವತ ರಾಜ್ಯಾಂಗ ರಚಿಸುವ ಘಟನಾ ಸಮಿತಿಯನ್ನು ಒಪ್ಪಬೇಕೋ ಬೇಡವೋ ಎಂಬ ಕುರಿತು ಕಾಂಗ್ರೆಸಿನ ವಿಚಾರ ನಡೆದಿದೆ. ಘಟನಾ ಸಮಿತಿಯ ಸದಸ್ಯತನಕ್ಕೆ ಉಮೇದ್ವಾರರಾಗುವವರು ಪ್ರಾಂತಿಕ ಕೂಟಗಳನ್ನೇ ಖಡ್ಡಾಯಗೊಳಿಸುವ ಅಂಶವನ್ನೊಪ್ಪಿ ಸಹಕೊಡತಕ್ಕದ್ದೆಂದು ಬಂಗಾಳಾ ಗವರ್ನರರು ಆಜ್ಞೆ ಹೊರಡಿಸಿದ್ದಾರೆಂಬ ವಾರ್ತೆಯಿಂದ ಘಟನಾ ಸಮಿತಿಗೂ ಕಾಂಗ್ರೆಸಿನ ಬಹಿಷ್ಕಾರ ಖಂಡಿತವೆಂದೊನ್ನ್ಯೆ ವಾತಾವರಣ ಕಟ್ಟಿದ್ದಿತು. ಆದರೆ ಅಂತಹ ನಿರ್ಬಂಧಕಾಜ್ಞೆ ಹೊರಡಿಸಿಲ್ಲವೆಂದು ಬಂಗಾಳ ಮತ್ತು ಕೇಂದ್ರ ಸರಕಾರಗಳು ಪ್ರಕಟಿಸಿದುದಲ್ಲದೆ, ಬ್ರಿಟಿಷ್ ಮಂತ್ರಿ ಸಮಿತಿಯವರೂ ಕಾಂಗ್ರೆಸ್ ಪ್ರಮುಖರಿಗೆ ಆ ಕುರಿತು ಸಮಾಧಾನ ಹೇಳಿರುವುದರಿಂದ ಇದು ವರೆಗೆ ರಾಜ್ಯಾಂಗ ರಚನಾ ಸಭೆಗೆ ಕಾಂಗ್ರೆಸ್ ಒಪ್ಪುವ ಸಂಭವ ಕಾಣುತ್ತದೆ. ಈ ಶಾಶ್ವತ ವ್ಯವಸ್ಥೆಯ ಮಾತುಕತೆಗಳ ನಡುವೆ ನಡುಗಾಲ ವ್ಯವಸ್ಥೆಯ ಒಪ್ಪಿಗೆಯಾದರೂ ಆಗಬಹುದು, ಎಂದು ಅತ್ಯಲ್ಪ ಆಸೆಯುಳಿದಿದೆ. ಸದ್ಯ, ನಡುಗಾಲ ಸರಕಾರವನ್ನು ಬಹಿಷ್ಕರಿಸಿ ಶಾಶ್ವತ ರಚನೆಯಲ್ಲಿ ಭಾಗವಹಿಸುವ ಸಂಭವವೊಂದೇ ಕಾಂಗ್ರೆಸಿನ ಮುಂದಿರುವಂತೆ ಕಾಣುತ್ತಿದೆ. ಎರಡರ ನಿರ್ಧಾರವೂ ಒಟ್ಟಿಗೆ ಹೊರಬೀಳಬಹುದಾದ್ದರಿಂದ ಸ್ಪಷ್ಟ ನಿರ್ಣಯಗಳಾಗಲು ಇನ್ನೂ ಒಂದೆರಡು ದಿನ ತಡವಾಗಬಹುದು.

ನಡೆದುದೇನು?

14 ಮಂದಿಯ ನಡುಗಾಲ ಸರಕಾರ ಸ್ಥಾಪಿಸುವ ವೈಸರಾಯರ ಹೊಸ ಸೂಚನೆಯು ಕಾಂಗ್ರೆಸಿಗೆ ಸಮಾಧಾನಕರವಿರದಿದ್ದರೂ ಭಾವೀ ವ್ಯವಸ್ಥೆಯ ದೃಷ್ಟಿಯಿಂದ ಅದನ್ನಂಗೀಕರಿಸುವ ನಿರ್ಧಾರಕ್ಕೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಪ್ರಥಮತಃ ಬಂದಿತ್ತು. ರಾಷ್ಟ್ರೀಯ ಮುಸಲ್ಮಾನರನ್ನು ಸೇರಿಸಿಕೊಳ್ಳುವ ಹಕ್ಕು ಕಾಂಗ್ರೆಸಿಗಿರಲೇಬೇಕೆಂದು ಮುಖ್ಯವಾಗಿ ಗಾಂಧಿಜೀ ಹಠಹಿಡಿದಿದ್ದರೆಂದೂ ಕಾರ್ಯಕಾರೀ ಸಮಿಟಿಯ ಬಹು ಸಂಖ್ಯಾಕ ಸದಸ್ಯರು ಈ ಕುರಿತು ಮಹಾತ್ಮರೊಡನೆ ಭಿನ್ನಾಭಿಪ್ರಾಯಗೊಂಡಿದ್ದರೆಂದೂ ತಿಳಿದು ಬರುತ್ತದೆ.

ಆದರೆ ಅದರ ಮರುಸಭೆಯಲ್ಲೇ ವೈಸರಾಯರಿಗೆ ಜಿನ್ನರು ಬರೆದ ಆಕ್ಷೇಪ ಪತ್ರವೂ ಅದಕ್ಕೆ ವೈಸರಾಯರಿತ್ತ ಉತ್ತರವೂ ಕಾಂಗ್ರೆಸ್ ಪ್ರಮುಖರೆಲ್ಲರ ಭಾವನೆಯನ್ನೂ ಉಗ್ರತೆಗೆ ಬದಲಾಯಿಸಿ ಬಿಟ್ಟಿತು.

ಕಾಂಗ್ರೆಸಿನ ಅಸ್ತಿತ್ವಕ್ಕೇನೇ ಆಘಾತ

ಮಿ. ಜಿನ್ನರು ತನ್ನ ಪತ್ರದಲ್ಲಿ-ಯಾವ ಯಾವ ಖಾತೆಗಳು ಯಾರಾರಿಗೆಂಬುದು ಮೊದಲು ನಿಶ್ಚಯವಾಗಿಕೊಳ್ಳಬೇಕು; ಅಲ್ಪ ಸಂಖ್ಯಾಕ ಸಮಾಜಗಳ (ಕಾಂಗ್ರೆಸಿಗನಾಗಿದ್ದರೂ ಹರಿಜನ ಪ್ರತಿನಿಧಿ ಸಮೇತ) ಪ್ರತಿನಿಧಿಗಳಲ್ಲಿ ಯಾರಾದರೂ ನಿರಾಕರಿದರೆ ಬೇರೆಯವರನ್ನು ಆರಿಸಿಕೊಳ್ಳುವ ಮೊದಲು ಲೀಗಿನ ಅಭಿಪ್ರಾಯ ಕೇಳಿಕೊಳ್ಳಬೇಕು; ಬಹು ಸಂಖ್ಯಾಕ ಮುಸ್ಲಿಂ ಸದಸ್ಯರ ಸಮ್ಮತಿ ದೊರೆಯದೆ ಯಾವ ಜಾತೀಯ ಪ್ರಶ್ನೆಯನ್ನೂ ನಡುಗಾಲ ಸಮಿತಿ ಚರ್ಚಿಸಬಾರದು, ಕಾಂಗ್ರೆಸಿನ ಸ್ಥಾನದಿಂದಲಾದರೂ ಮುಸ್ಲಿಂ ಲೀಗಿಗೆ ಸೇರದ ಯಾವ ಮುಸಲ್ಮಾನನನ್ನೂ ಆ ಸಮಿತಿಯಲ್ಲಿ ಸೇರಿಸಿಕೊಳ್ಳಕೂಡದು—ಎಂದು ವೈಸರಾಯರಿಗೆ ಬರೆದಿದ್ದರು ಈ ಶರ್ತುಗಳಿಗೆ ಬಹು ಮಟ್ಟಿಗೆ ಒಪ್ಪಿಯೇ ವೈಸರಾಯರು ಉತ್ತರಕೊಟ್ಟಂತಿತ್ತು. ಇದರಿಂದ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸಿಗೆ ತನ್ನ ಪಾಲಿನ 6 ಸ್ಥಾನಗಳಲ್ಲೊಂದನ್ನು ಕೂಡಾ ರಾಷ್ಟ್ರೀಯ ಮುಸಲ್ಮಾನನಿಗೆ ಕೊಡುವ ಹಕ್ಕಿಲ್ಲವೆಂದಾಗಿ ಅದು ಕೇವಲ ಹಿಂದೂ ಸಂಸ್ಥೆಯೆನ್ನಿಸುವದು. ಮಿ. ಜಿನ್ನರ ಇಷ್ಟವನ್ನೇ ಎಡೇರಿಸಿಕೊಡ ಪಡಕಕ್ಕಾಗಿ ತನ್ನ ನ್ಯಾಯಬದ್ಧ ಮತ್ತು ಜನ್ಮಸಿದ್ಧ ಹಕ್ಕನ್ನು ತನಗೆ ಕೊಡಲು ವೈಸರಾಯರು ತಯಾರಿಲ್ಲವೆಂದಾದೊಡನೆ ಕಾಂಗ್ರೆಸು ಕಮಿಟಿಯು ನಡುಗಾಲ ಸರಕಾರದ ರಚನೆಗೆ ಬಹಿಷ್ಕಾರ ಹಾಕುವ ನಿರ್ಧಾರ ಮಾಡಿತು. ಸರಕಾರೀ ನೌಕರ ಸರ್. ಇಂಜಿನೀಯರರ ಬದಲಿಗೆ ಬೇರೆ ಪಾರ್ಸಿಯನ್ನು, ಹಾಕಬೇಕು—ಮೆಹತಾಬ್ ಬದಲಿಗೆ ಶರತ್ಚಂದ್ರರನ್ನು ಹಾಕಬೇಕೆಂಬ ಬೇರೆರಡು ಸೂಚನೆಗಳೂ ಇದ್ದುವು.

ಬ್ರಿಟಿಷರ ಹೊಸ ಪ್ರಯತ್ನ

ಈ ನಿರ್ಧಾರವು ತಾ. 22ರಲ್ಲೇ ಆಗಿದ್ದು ಅದರ ಕೊನೆಯ ಮಂಜೂರಾತಿಗಾಗಿಯೇ ನೆಹರುಗಳನ್ನು ಒತ್ತಾಯ ಪೂರ್ವಕ ಕಾಶ್ಮೀರದಿಂದ ಕರೆಯಲಾಗಿತ್ತು. ಆದರೆ ಬ್ರಿಟಿಷ್ ರಾಯಭಾರಿಗಳು, ಕೂಡಲೆ ಎಚ್ಚರಗೊಂಡು ತಾ. 23ನೇ ಮುಂಜಾನೆ ಕಾಂಗ್ರೆಸಿನ 'ಉಗ್ರ ಮನುಷ್ಯ'ನೆಂದು ಗಣಿಸಲ್ಪಟ್ಟಿರುವ ವಲ್ಲಭಾಯಿಗಳನ್ನು ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರು ಆಮಂತ್ರಿಸಿ ಹೊಸ ಹಾದಿಯನ್ನು ಶೋಧಿಸಲಾರಂಭಿಸಿದರು. ಗಾಂಧೀ- ಪೆಥಿಕ್‌ಲಾರೆನ್ಸ್ ಮಾತುಕತೆಗಳೂ ನಡೆದವು. ಅಂದು ಅಪರಾಹ್ನ ಮೌಲಾನಾ ಅಜಾದ್, ನೆಹರು, ವಲ್ಲಭಾಯಿ, ರಾಜೇಂದ್ರ ಪ್ರಸಾದರೀ ಕಡೆಯಿಂದಲೂ ಬ್ರಿಟಿಷ್ ಸಮಿತಿ ಸದಸ್ಯರು ಮತ್ತು ವೈಸರಾಯರ ಕಡೆಯಿಂದಲೂ ದೀರ್ಘ ಸಂಭಾಷಣೆ ನಡಿಸಿದರು, ಜಿನ್ನರ ಸೂಚನೆಗಳಿಗೆ ಒಪ್ಪಿಗೆಯನ್ನು ಕೊಟ್ಟಿಲ್ಲವೆಂದು ತಿಳಿಸಿ ಕಾಂಗ್ರೆಸಿನ ರಾಷ್ಟ್ರೀಯ ಸ್ವರೂಪವನ್ನೊಪ್ಪಿ ಹೇಗಾದರೂ ನಡುಗಾಲ ವ್ಯವಸ್ಥೆಯಲ್ಲಿ ಸೇರಲೇಬೇಕೆಂದು ಬ್ರಿಟಿಷ್ ಪ್ರತಿನಿಧಿಗಳು ಕಾಂಗ್ರೆಸ್ ಪ್ರತಿನಿಧಿಗಳಿಗೆ ಆಗ್ರಹದ ವಿಜ್ಞಾಪನೆ ಮಾಡಿದರೆಂದು ತಿಳಿದುಬರುತ್ತದೆ. ಯಾವುದೂ ವ್ಯತ್ಯಾಸವಾಗದೆ ಕೊನೆಯಲ್ಲಿ ಕಾಂಗ್ರೆಸ್ ಸಮಿತಿಯು ನಡುಗಾಲ ಸರಕಾರದ ಧಿಕ್ಕಾರದ ನಿರ್ಣಯವನ್ನೇ ಮಾಡಿ, ಶಾಶ್ವತ ವ್ಯವಸ್ಥೆಯ ಘಟನಾ ಸಮಿತಿಯ ಪರಿಶೀಲನೆಯನ್ನು ಮರುದಿನಕ್ಕಿಟ್ಟಿತು.

ಘಟನಾ ಸಮಿತಿಗೊಂದು ಆಕ್ಷೇಪ

ಮೇ ತಾ. 16ರ ಬ್ರಿಟಿಷ್ ಜಾಹೀರುನಾಮೆಯ 19ನೇ ಕಲಮಿಗೆ (A.B..C ಯೆಂದು ಪ್ರಾಂತಿಕ ಪಂಗಡಗಳನ್ನು ಖಡ್ಡಾಯವಾಗಿ ವಿಂಗಡಿಸಿರುವ ಭಾಗ) ಬರಹನಿಶಿ ಒಪ್ಪಿಗೆ ಕೊಡದವರು ಘಟನಾ ಸಮಿತಿಯ ಸದಸ್ಯತನಕ್ಕೆ ಉಮೇದ್ವಾರರಾಗಕೂಡದು ಎಂದು ಬಂಗಾಳಾ ಗವರ್ನನರಿಂದ ಅಲ್ಲಿಯ ಎಸೆಂಬ್ಲಿಗೂ, ವೈಸರಾಯ ಆಫೀಸಿನಿಂದ ಪ್ರಾಂತಿಕ ಎಸೆಂಬ್ಲಿಗಳ ಅಧ್ಯಕ್ಷರುಗಳಿಗೂ ಸರ್ಕ್ಯುಲಾರುಗಳು ಹೋಗಿವೆ ಎಂಬುದನ್ನು ತಿಳಿದೊಡನೆ ಕಾಂಗ್ರೆಸ್ ಪ್ರಮುಖರು ರೇಗಿಬಿದ್ದರು. ಆದರೆ ಬಂಗಾಳಸರಕಾರವೂ ಕೇಂದ್ರ ಸರಕಾರವೂ ಇಂತಹ ನಿರ್ಬಂಧವನ್ನು ತಾವು ಹಾಕಿಲ್ಲವೆಂದು ಅಲ್ಲಗಳೆದು ಹೇಳಿಕೆ ಹೊರಡಿಸಿವೆ. ಬ್ರಿಟಿಷ್ ರಾಯಭಾರಿಗಳೂ ಗಾಂಧಿ ವಲ್ಲಭಾಯಿಗಳನ್ನು ಕರೆಸಿಕೊಂಡು ಆ ಸರ್ಕ್ಯುಲಾರುಗಳಿಗೆ ಯಾವ ವಿಶೇಷಾರ್ಥವೂ ಇಲ್ಲವೆಂದು ಅರ್ಥವಿವರಣೆ ಮಾಡಿ ಸಮಾಧಾನ ನಡಿಸಿದ್ದಾರೆ. ಇನ್ನೂ ಎರಡು ಮೂರು ದಿನಗಳೊಳಗೆ ಯಾವ ನಿರ್ಧಾರಕ್ಕೆ ಬರುವದೂ ಅಸಾಧ್ಯವಾಗಬಹುದೆಂದು ಮೌಲಾನಾ ಅಜಾದರೆಂದಿದ್ದಾರೆ. ಮುಸ್ಲಿಂ ಲೀಗು ಇದು ಇದು ವರೆಗೆ ಯಾವ ಕೊನೆಯ ನಿರ್ಧಾರವನ್ನೂ ಮಾಡಿಲ್ಲ.

ಸಿಖ್ಖರ ಪಾಂಥಿಕ್ ಬೋರ್ಡು ನಡುಗಾಲ ಸರಕಾರವನ್ನು ಬಹಿಷ್ಕರಿಸಿ ಹೋರಾಡುವ ನಿರ್ಧಾರಮಾಡಿದೆ. 'ಮುಂದೆ ಎರಡು ಮೂರು ದಿನಗಳೊಳಗೆ ಪಂಜಾಬಿನಲ್ಲಿ ಭೀಕರ ಸ್ಥಿತಿಯುಂಟಾಗಬಹುದು ಎಂದು ವೈಸರಾಯರ ಆಮಂತ್ರಣ ನಿರಾಕರಿಸಿರುವ ಸರ್ದಾರ್ ಬಲದೇವಸಿಂಗರೆಂದಿದ್ದಾರೆ

ನವದಿಲ್ಲಿಯಲ್ಲಿ ಸೇರಿದ ಆಂಗ್ಲೋ ಇಂಡಿಯಾನರ ಮಹಾಸಭೆಯು ಬ್ರಿಟಿಷ್ ಯೋಜನೆಯನ್ನು ತಿರಸ್ಕರಿಸಿ ಸದ್ಯದ ಆಡಳಿತೆಯೊಡನೆ ಅಸಹಕರಿಸಬೇಕೆಂಬ ನಿರ್ಣಯಮಾಡಿದೆ.

Navayuga Enterprise Ltd. Udipi

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ತಾ. 12—5—'1946ರಲ್ಲಿ ಜರಗಿದ ಪಾಲುದಾರರ ವಿಶಿಷ್ಟ ಮಹಾ ಸಭೆಯಲ್ಲಿ ಈ ಸಂಸ್ಥೆಯ ಪಾಲು ಭಂಡವಾಳವನ್ನು **1,00,000** ರೂಪಾಯಿಗೆ ಹೆಚ್ಚಿಸುವ ನಿರ್ಣಯ ಮಾಡಲ್ಪಟ್ಟಿರುವುದು. ಆ ಸಂಬಂಧ ರೂ. **10** ರ **8000** ಹೊಸ ಪಾಲುಗಳನ್ನು ಹೊರಡಿಸಲಾಗಿದೆ. (ಪ್ರತಿ ಪಾಲಿಗೂ ರೂ 1/ ಪ್ರವೇಶ ಧನ ಪ್ರತ್ಯೇಕ) ಈ ಹೊಸ ಪಾಲುಗಳು ಈಗಿನ ಪಾಲುದಾರರಿಗೆ ಮಾತ್ರವೇ ಅವರವರಿಗೆ ಈಗಿರುವ ಪಾಲುಗಳಿಗೆ 1ಕ್ಕೆ 4ರಂತೆ ಕೊಡಲ್ಪಡುವವು. ಪ್ರತಿ ಪಾಲುದಾರರಿಗೂ ಪಾಲು ಅರ್ಜಿಗಳು ಕಳಿಸಲ್ಪಟ್ಟಿವೆ. ಅವರೆಲ್ಲರೂ ಆ ಪಾಲು ಅರ್ಜಿಯನ್ನು ಬರೆದು ತಕ್ಕ ಹಣದೊಂದಿಗೆ ತಾ **30-6-46**ರ ಒಳಗಾಗಿ ಆದಷ್ಟು ಬೇಗನೆ ಕಳಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ. ತಾ. **30-6-46**ರ ಅವಧಿಯೊಳಗಾಗಿ ಅರ್ಜಿ ಹಾಗೂ ಹಣವು ಪಾವತಿಯಾಗದಿದ್ದರೆ ಹೊಸ ಪಾಲುಗಳು ಬೇಡವೆಂದೆಣಿಸಲ್ಪಟ್ಟು ಅವು ಇತರರಿಗೆ ಕೊಡಲ್ಪಡುವವು.

ಕೆ. ಎಚ್. ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್.

ಕೆ. ಜೆ. ಬಲ್ಲಾಳ್, ವಕೀಲ್, ಚೆಯರ್‌ಮೇನ್.

ವಿ. ಸೂ:—ಹೊಸದಾಗಿ ಹತ್ತು ಯಾ ಹೆಚ್ಚು ಪಾಲುಗಳನ್ನು ಪಡೆಯಲಪೇಕ್ಷಿಸುವ ಮಹನೀಯರು ಪಾಲು ಅರ್ಜಿಗಳಿಗಾಗಿ ಬರೆಕೊಳ್ಳಬಹುದು. ಆದರೆ ಅವರಿಗೆ ಪಾಲುಕೊಡುವ ವಿಚಾರ ತಾ. 30-6-46ರ ನಂತರವೇ ಆಲೋಚಿಸಲ್ಪಡುವುದು.

ಬೊಂಬಾಯಿಯ ಪಾಲುದಾರರು ತಮ್ಮ ಹಕ್ಕಿನ ಹೊಸ ಪಾಲುಗಳನ್ನು ಅಲ್ಲಿಗೆ ಬಂದಿರುವ ಪ್ರತಿನಿಧಿ ಶ್ರೀ. ಕೆ. ಜಗನ್ನಾಥ ಶೆಟ್ಟರೊಡನೆ ಹಣ ತೆತ್ತು ಪಡೆಕೊಳ್ಳಬೇಕಾಗಿ ವಿನಂತಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನೆರವಿನಿಂದ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd., Moolky. S. K.

ಉಡುಪಿ

ಭ್ರೂಣಹತ್ಯೆ-ಜನೇ ತಾ 25ನೇ ಸುಮಂಜಾನೆ ಉಡುಪಿ ಸುಸೀಬಿ ರಸ್ತೆಯ ತೋಡಿನಲ್ಲಿ ನುಗುವಿನ ಶವವೊಂದು ಬಿದ್ದಿತ್ತು. ಮಗು ಗಂಡಾಗಿತ್ತೆಂದೂ ಗರ್ಭ ತುಂಬಿ ಅಂದೇ ಹುಟ್ಟಿದಂತಿತ್ತೆಂದೂ ತಿಳಿಸಬರುತ್ತದೆ. ಅದರ ಕಣ್ಣೊಂದನ್ನು ಪ್ರಾಯಶಃ ಕಾಗೆ ಕುಕ್ಕಿ ರಕ್ತದ ಕಲೆಯುದ್ದಿತ್ತಾದ್ದರಿಂದ, ತೋಡ ಸೀರಿನಿಂದ ಕೊಚ್ಚಿ ಹೋದೀತೆಂಬ ಆಶೆಯಿಂದ ಜೀವಂತ ಶಿಶುವನ್ನೇ ಯಾರೋ ಬಿಸಾಡಿದಿರಬೇಕೆಂದು ಊಹಿಸಲಾಗಿದೆ. ಆ ಹೃದಯದ್ರಾವಕ ದೃಶ್ಯವು ಸಮಾಜದ ಕುರುಡು ನಿಯಮಗಳ ಭೀಕರ ಚಿತ್ರವನ್ನು ಕಣ್ಣ ಮುಂದೆ ತರುತಿತ್ತು! ಯಾವ ಕಾರಣದಿಂದಾದರೂ ಇಂತಹ ಶೋಚನೀಯ ಹೇಯ ದುರಂತಗಳು ನಡೆಯದಂತೆ ಮಾಡುವ ಸುಧಾರಣೆ ಮತ್ತು ವ್ಯವಸ್ಥೆಯಿರುವುದು ಅಗತ್ಯವಲ್ಲವೆ?

ಶಾಲಾ ವರ್ಧಂತಿ-ಕಿದಿಯೂರು ಹಾ. ಪ್ರಾ. ಶಾಲಾ ವರ್ಧಂತಿ ಸಮಾರಂಭವು ತಾ 17ರಲ್ಲು ಶಾಲಾ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಗೆ ಹೊಸತಾಗಿ ಕಟ್ಟಿಸಿದ ಕಟ್ಟೋಣದ ಪ್ರವೇಶ ಉತ್ಸವವೂ ಅಂದೇ ಬೆಳಿಗ್ಗೆ ಜರಗಿತು. ಮರುದಿನ ಆ ಶಾಲೆಯ ಹಳೆ ವಿದ್ಯಾರ್ಥಿ ಕೂಟದ ದಿನಾಚರಣೆಯು ಡಾ. ಟಿ. ಎಮ್. ಎ. ಪೈಗಳವರ ನೇತೃತ್ವದಲ್ಲಿ ಜರಗಿತು.

ತಿದ್ದುಪಡಿ-ತಾ ೧೯ರ ಸಂಚಿಕೆಯಲ್ಲಿ 'ಈ ಬಾರಿ ಕ್ರಿಶ್ಚಿಯನ್ ಹೈಸ್ಕೂಲಿನಿಂದ S. S. L. C. ಪರೀಕ್ಷೆಗೆ ಕುಳಿತ ವಿದ್ಯಾರ್ಥಿನಿಯರಲ್ಲಿ ಒಬ್ಬಳು ಮಹಮ್ಮದೀಯ ಪಂಥಕ್ಕೆ ಸೇರಿದವಳು' ಎಂದಿದೆ. ಅದು ಕುಳಿತು ಪಾಸಾದವರಲ್ಲಿ ಎಂದಾಗಬೇಕು ಮತ್ತು ಈ ಹುಡುಗಿಯು S. S. L. C. ಪರೀಕ್ಷೆಯಲ್ಲಿ ಈ ತನಕ ಪಾಸಾದ ಮುಸ್ಲಿಮ್ ಹುಡುಗಿಯರಲ್ಲಿ ಇಡೀ ಜಿಲ್ಲೆಯಲ್ಲಿ ಎರಡನೆಯವಳಾಗಿದ್ದಾಳೆ.

(ಸಂ. ನ.)

ಪಡುಬಿದ್ರಿ-ಸ್ಥಳೀಕ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ. ಅಬ್ಬು ಗಡಿಯಾರ, ಶ್ರೀ ರಾಮದಾಸ ಪೈಗಳ ನೇತೃತ್ವದಲ್ಲಿ ತಾ 15—6—46ನೆ ಶನಿವಾರ ರಾತ್ರಿ ಗಂಟೆ 9ಕ್ಕೆ ಹರಿದಾಸ ಬಿ. ಮಹದೇವನವರು "ಶ್ರೀಮತೀ ಪರಿಣಯ"ವೆಂಬ ಹರಿಕಥೆಯ

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 69/1946.

ವಾದಿ— ಮುತ್ತಕ್ಕ ಸೆಡ್ತಿ.

ಪ್ರತಿವಾದಿರು— ಪಿ. ಪಿ ಸಕಿನಾ ಕೂಡಾ.

ಉತ್ತರ ಕನ್ನಡಾ ಜಿಲ್ಲಾ ಹೊನ್ನಾವರ ತಾಲ್ಲೂ ಮುರ್ಡೇಶ್ವರದಲ್ಲಿರುವ ಅಲ್ಲಿ ಸ್ಯಾಬ್ ರ ಮಗ 3ನೇ ಪ್ರತಿವಾದಿ ಮುಹಮ್ಮದ ಜಿಪ್ರಿ 1, 6ನೇ ಪ್ರತಿವಾದಿ ಶಬರಿಗ ರಾಬಿ ಪ್ಯಾಸುಭಾಗ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸಾವುದೇನೆಂದರೆ –

ದಾವೆಯಲ್ಲಿ ಕಾಣಿಸಿದ ಸ್ಥಳಗಳನ್ನು ದಾವಾ ಫೋರ್ಗ್ಯಾದಿ ಆದಸ್ತ ವ ಅಡವು ಮಾಡದು ಮಾಡಿದ ಎಲ್ಲಾ ಹರಾಧೀನಗಳಿಂದ ವಿರುತಪಡಿಸಿ 5, 6ನೇ ಪ್ರತಿವಾದಿಗಳಾದ ಹರಾಧೀನಗಳ ಪುಜಾನು ಪಿರಾಂ- 1ರಿಂದ 4ನೇ ವರೆಗಿನ ಪ್ರತಿವಾದಿರ ಸ್ವಾಧೀನತೆಯಿಂದ ತಪ್ಪಿಸಿ ವಾದಿಳ ಸ್ವಾಧೀನ ಕೊಡಿಸಬೇಕೆಂ ವಾದಿಳು ದಾಕಲು ಮಾಡಿದ ಮೇಲಿನ ದಾವೆಯು ತಾ. 2-7-46 ಕ್ಕೆ ತನ್ನಿಗೆ ಇಟ್ಟಿದೆ. ಆ ದಿವಸ ನಿಮ್ಮದೇನಾದರೂ ಆಕ್ಷೇಪಯದ್ದರೆ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಪ್ಯಾಕೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಯೆಕ್ಸ್‌ಪಾರ್ಟೆ ಮಾಡಲಾದೀತೆಂತ ಈ ಮೂಲಕ ತಿಳಿಸಿಯದೆ.

By order of the court,

Y Tejappa Shetty.

Advocate, Coondapoor

Coondapoor,
Date 18—6—1946.

(೫ನೇ ಪುಟದಿಂದ)

ಡಿತು. ಪಂಜಾಬು, ಗಡಿನಾಡು ಮೊದಲಾದ ಕಡೆಗಳಿಂದ ಪ್ರಮುಖರೂ ಸ್ವಯಂಸೇವಕರೂ ಕಾಶ್ಮೀರಕ್ಕೆ ಹೊರಡಲು ನಡು ಬಿಗಿದರು. ತಮ್ಮ ಸೂಚನೆ ವಿನಹಾ ಹೊರಡಬೇಡರೆಂದು ಕಾಂಗ್ರೆಸ್ ಅಧ್ಯಕ್ಷರು ಹಲವರನ್ನು ತಡೆಯಬೇಕಾಯಿತು. ದೇಶದ ಸಣ್ಣ ದೊಡ್ಡ ಪಟ್ಟಣಗಳಲ್ಲೆಲ್ಲಾ ಹರತಾಳ, ನಿಷೇಧ ಸಭೆಗಳು ನಡೆದುವು. ಇತ್ತ ನವದಿಲ್ಲಿಯಲ್ಲಿ ನಡೆಯುತ್ತಿದ್ದ ನಡುಗಾಲ ಸರಕಾರ ರಚನೆಯ ಪ್ರಾಮುಖ್ಯ ಮಾತುಕತೆಗಳನ್ನು ಮುಂದೊತ್ತಲು ಪಂಡಿತಜೀಯ ಗೈರುಹಾಜರಿಯಿಂದಾಗಿ ಕಾಂಗ್ರೆಸ್ ಕಾ. ಸಮಿತಿಗೆ ಅಸಾಧ್ಯವಾಯಿತು. ರಾಷ್ಟ್ರಪತಿ ಆಜಾದರು ವೈಸರಾಯರೊಡನೆ ಮಾತಾಡಿದ್ದಲ್ಲದೆ ಕಾಶ್ಮೀರ ಮಹಾರಾಜರಿಗೂ ಪಂಡಿತ ನೆಹರುಗಳಿಗೂ ತಂತಿಬಿಟ್ಟರು. 'ಪಂಡಿತ ನೆಹರುಗಳು ಹಿಂದಿರುಗಲಾಗುವಂತೆ ಶೇಕ್ ಅಬ್ದುಲ್ಲಾರ ವಿಚಾರಣೆಯನ್ನು ಮುಂದುವರಿಸಬೇಕಂದೇ ಮೌಲಾನರು ಮಹಾರಾಜರನ್ನು ಕೇಳಿಕೊಂಡಿದ್ದರು. 'ನೆಹರು ಆಡ್ಡಿ ವಿನಹಾ ದಿಲ್ಲಿಗೆ ಹಿಂದಿರುಗಬಹುದು; ಅವರನ್ನು ನಿರ್ಬಂಧದಲ್ಲಿಡುವ ಉದ್ದೇಶ ನಮ್ಮದಲ್ಲ. ಶೇಕ್ ಅಬ್ದುಲ್ಲಾರ ವಿಚಾರಣೆಯು ಸ್ವತಂತ್ರ ನ್ಯಾಯಸ್ಥಾನದ ಕೈಯಲ್ಲಿರುವದರಿಂದ, ಅದು ವಿಚಾರಣೆ ಮುಂದುವರಿಸುತ್ತದಾದರೆ ನಮ್ಮ ಅಕ್ಷೇಪವಿಲ್ಲ" ಎಂದು ಮಹಾರಾಜರ ಉತ್ತರ ಬಂತು. ಪ್ರಧಾನ ಮಂತ್ರಿಯ ವಿಳಾಸಕ್ಕೆ ಪಂಡಿತರಿಗೆ ಬಂದಿದ್ದ ತಂತಿಯನ್ನು, ಕಾಶ್ಮೀರ ಸರಕಾರವು ಶ್ರೀನಗರದಿಂದ ವಯರ್ಲೆಸ್ ಮೂಲಕ ಕೂಡಲೇ ನೆಹರುಗಳಿಗೆ ತಿಳಿಸಿದ್ದಲ್ಲದೆ ಒಂದು ಜನವಾಡಿ ಮೂಲಪ್ರತಿಯನ್ನೂ ಕಳುಹಿಕೊಟ್ಟಿದ್ದಿತು

ಮೌಲಾನರು ಒತ್ತಾಯಿಸಿ ಬರಮಾಡಿಸಿದರು

'ಹೊರಡುವಾಗ ಮಾತು ಕೊಟ್ಟದ್ದಂತೆ ನಾಳೆಯೇ ಹೊರಟು ಬನ್ನಿರೆಂದು ಕಾಂ. ಕಮಿಟಿಯ ಸಲಹೆಯಿದೆ. ಕಮಿಟಿಯ ಕೊನೆಯ ತೀರ್ಮಾನಕ್ಕಾಗಿ ನಿಮ್ಮಾಗಮನವನ್ನು ಕಾಯಲಾಗಿದೆ. ಮಹಾ ರಾಜರಿಗೂ ತಂತಿ ಬಿಟ್ಟಿದ್ದೇನೆ' ಎಂದು ತಾ. 21ರಲ್ಲಿ ಮೌಲಾನರು ನೆಹರುಗಳಿಗೆ ಕೊಟ್ಟ ಪ್ರಥಮ ತಂತಿಯಲ್ಲಿತ್ತು. 'ನನ್ನ ಮೈತ್ರೀ ಮನೋವೃತ್ತಿಯನ್ನು ಅಲಕ್ಷ್ಯಿಸಿ ಕಾಶ್ಮೀರ ಸರಕಾರವು ನನ್ನ ಮೇಲೆ ತೋರಿಸಿದ ಮಹತ್ತಾದ ಅಗೌರವಕ್ಕಾಗಿ ಶ್ರೀನಗರ ಪ್ರವೇಶ ಸಮೇತ ಸರ್ವವಿಧದ ಚಳವಳ ಸ್ವಾತಂತ್ರ್ಯ ದೊರೆಯದೆ ಹಿಂದಿರುಗಲಾರೆನೆನ್ನಲು ವಿಷಾದಿಸುತ್ತೇನೆ ನಾನಿಲ್ಲದೇನೇ ವರ್ಕಿಂಗ್ ಕಮಿಟಿ ಕೆಲಸ ಸಾಗಿಸಬೇಕೆಂದು ವಿಜ್ಞಾಪನೆ" ಎಂದಿದಕ್ಕೆ ಪಂಡಿತರ ಉತ್ತರ ಬಂತು. ರಾಷ್ಟ್ರಪತಿ ಆಜಾದರು ಗಾಂಧಿಜೀಯೊಡನೆ ಪರ್ಯಾಲೋಚಿಸಿ ಪುನಃ ತಾ. 22ರಲ್ಲಿ ಪಂಡಿತರಿಗೆ ತಂತಿ ಬಿಟ್ಟರು: 'ಎಲ್ಲಕ್ಕಿಂತ ಮೇಲಾಗಿ ನೀವು ಇಲ್ಲಿರುವದು ಅಗತ್ಯವೆಂದು ನನ್ನ ಮತ್ತು ಎಲ್ಲರ ಅಭಿಪ್ರಾಯ. ನೀವು ದೀರ್ಘಾವಧಿಯಿಂದ ಹೊಂದಿಕೊಂಡಿರುವ ಒಂದು ಸಂಸ್ಥೆಗೆ ನೀವು ಅಧೀನರೆಂಬುದು ನೆನಪಿರಲಿ. ನಿಮಗೂ ನಮಗೂ ಅದರ ಆವಶ್ಯಕತೆಗಳೇ ಅತ್ಯಂತ್ಯ ಪ್ರಾಮುಖ್ಯವಾಗಿರಬೇಕು. ಅಂತೆಯೇ ನಿಮ್ಮ ಗೌರವವೇ ನಮ್ಮ ಗೌರವವೆಂಬುದೂ, ಕಾಂಗ್ರೆಸ್ ಕರೆಗೆ ನೀವು ವಿಧೇಯರಾದೊಡನೆ ಸ್ವಭಾವತಃ ನಿಮ್ಮ ಗೌರವ ರಕ್ಷಣೆಯ ಹೊಣೆಯು ಅದರದ್ದಾಗುವದೆಂಬುದೂ ನೆನಪಿರಲಿ. ಶೇಕ್ ಅಬ್ದುಲ್ಲಾನ ಮೊಕದ್ದಮೆ ಮತ್ತು ಕಾಶ್ಮೀರ ಜನತೆಯ ಹಿತಸಾಧನೆಯಲ್ಲಿ ಕಮಿಟಿಯ ಅಭಿಮತವೂ ನಿಮ್ಮೊಂದಿಗೇನೇ ಐಕ್ಯಗೊಂಡಿದೆ. ಆದ್ದರಿಂದ ಇದಕ್ಕುತ್ತರವಾಗಿ ನೀವು ಹಿಂದಿರುಗುವರೆಂದು ನನ್ನ ನಿರೀಕ್ಷೆ. ಕಾಂಗ್ರೆಸಿನಿಂದ ಬಿಡುಗಡೆಗೊಂಡೊಡನೆಯೇ ನಿಮ್ಮ ಗೌರವ ರಕ್ಷಣೆಗಾಗಿಯೂ ಉದ್ದೇಶ ಸಾಧನೆಗಾಗಿಯೂ ಕಾಶ್ಮೀರಕ್ಕೆ ಹಿಂದಿರುಗಲಿರುವೆನೆಂದು ಮಹಾರಾಜಾ ಸಾಹೇಬರಿಗೆ ಹೇಳಿಬಿಡಿ. ನಾನಿದನ್ನು ಪತ್ರಿಕೆಗಳಿಗೆ ಪ್ರಕಟಣೆಗೆ ಕೊಡುತ್ತೇನೆ'–ಈ ಖಂಡತುಂಡ ಸೂಚನೆಯಿಂದ ಪಂಡಿತಜೀ ಮೆತ್ತಗಾಗಿ ಕಾಂಗ್ರೆಸ್‌ಆಜ್ಞೆಗೆ ತಲೆಬಾಗಿದರು. ಅಂತೆಯೇ ರಾವಲ್ಪಿಂಡಿವರೆಗೆ ಕಾರಿನಲ್ಲಿ ಬಂದು ಅಲ್ಲಿಯ ಚಕಲಾ ನಿಲ್ದಾಣದಲ್ಲಿ ತಾ. 22ನೇ ರಾತ್ರಿ 9-30ಕ್ಕೆ ವಿಮಾನ ಹತ್ತಿ ತಾ 23ನೇ ಪೂರ್ವಾಹ್ನ 1-40ಕ್ಕೆ ನವದಿಲ್ಲಿಗೆ ಮುಟ್ಟಿ ಕಾಂಗ್ರೆಸ್ ಕಮಿಟಿಯ ಚರ್ಚೆಗಳಲ್ಲಿ ಪ್ರಾಮುಖ್ಯ ಭಾಗವಹಿಸಿದರು ಶೇಕ್ ಅಬ್ದುಲ್ಲಾರ ವಿಚಾರಣೆಯು ಜುಲೈ ತಾ. 1ಕ್ಕೆ ಮುಂದುವರಿಸಲ್ಪಟ್ಟಿದೆ. ಸಂಸ್ಥಾನಿಕ ಪ್ರಜಾಪರಿಷತ್ತಿನ ಕಾರ್ಯದರ್ಶಿಯಾಗಿದ್ದು ನೆಹರುಗಳೊಂದಿಗೆ ಹೋಗಿದ್ದ ಶ್ರೀ ಕಚ್ರು ಕಾಶ್ಮೀರದಲ್ಲೇ ಬಂಧನದಲ್ಲಿದ್ದಾರೆ.

ನೆಹರುಗಳ ಹೇಳಿಕೆ

ಬಯನೆಟ್, ಲಾಠಿಗಳ ಮಧ್ಯದಿಂದ ತಾನು ನುಗ್ಗಿದುದಾದರೂ ತನಗಾವ ಜಖಮೂ ಆಗಿಲ್ಲವೆಂದೂ ಪೋಲಿಸ್ ಯಾನೆ ಮಿಲಿಟರಿಯವರನ್ನು ತಾನೇನೂ ದೂರಲಾರೆನೆಂದೂ ನೆಹರುಗಳೆಂದಿದ್ದಾರೆ. 'ನಾನು ಯಾವ ಸಂಸ್ಥಾನಕ್ಕಾದರೂ ಹೊರಗಿನವನೆಂದು ಭಾವಿಸಲಾರೆ. ಇಡೀ ಭಾರತವೇ ನನ್ನ ಮನೆಯಾಗಿದ್ದು, ಅದರ ಯಾವ ಮೂಲೆಗಾದರೂ ಹೋಗುವ ಅಧಿಕಾರ ನನಗಿದೆ ಎನ್ನುತ್ತೇನೆ. ಹಿಂದುಸ್ಥಾನ ಮತ್ತದರ ಜನತೆಯಲ್ಲುಂಟಾಗಿರುವ ಹೊಸ ವಾತಾವರಣವನ್ನು ರಾಜರು ಮತ್ತಿತರರು ಅರಿವಾಗಿ ಚಿಂತಿಸುವಂತಾದರೆ ಕಾಶ್ಮೀರದ ಘಟನೆಗಾಗಿ ನನಗೆ ಪಶ್ಚಾತ್ತಾಪವಿಲ್ಲ ಈ ದಿನ 'ಹೈನೆಸ್'ಗಳಿಗೆ ಮತ್ತು 'ಎಕ್ಸೆಲೆನ್ಸಿ'ಗಳಿಗೆ ಜನತೆಯ ದೃಷ್ಟಿಯಲ್ಲಿ ಬೆಲೆಯಿಲ್ಲ. ಇಂದು ಓರ್ವನ ಯೋಗ್ಯತೆಯನ್ನರಿಯುವದು ಆತನಿಗೆ ದೊರೆಯುವದೆಷ್ಟು ಎಂಬುದನ್ನು ಕಂಡಲ್ಲ; ಶ್ರಮ ಮತ್ತು ಸೇವೆಯ ರೂಪದಿಂದ ಆತ ಸಾರ್ವಜನಿಕರಿಗೆ ಕೊಡುವದೆಷ್ಟು ಎಂಬುದೊಂದನ್ನೇ ಆಧರಿಸಿ' ಎಂದು ನೆಹರುಗಳೆಂದಿದ್ದಾರೆ.

ನ್ನು ಜರಗಿಸಿರುತ್ತಾರೆ. ಅಲ್ಲದೆ ಮೇಲಿನ ಮಹನೀಯರಿಂದ ಮಂದಿರದಲ್ಲಿ ತಾ 16ರಿಂದ 5 ದಿನಗಳ ಹರಿಕಥೆಯೂ ನಡೆಯುತ್ತಲಿದೆ. ಕೀರ್ತನೆಯು ಜನರಲ್ಲಿ ಒಳ್ಳೆ ಪರಿಣಾಮ ಉಂಟುಮಾಡಿರುತ್ತದೆ. ತಾ 19ನೆ ದಿನದ ಕಥೆಯನ್ನು ಅಂಗಡಿ ಶ್ರೀ. ಕೊರಗ ಸೆಟ್ಟರು ತಮ್ಮ ಸ್ವಂತ ಖರ್ಚಿನಲ್ಲಿ ನೆರವೇರಿಸಿಕೊಟ್ಟಿರುತ್ತಾರೆ

BANK WITH THE LARGEST CONNECTIONS ON THE WEST COAST

OFFERS:-
EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD. 1925

ಬಾಣಂತಿಯರ ನಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ರ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ಆರದಿವಸಗಳಿಗೆ ಬರುವವು. ಅಂದರೆ ಕೇವಲ ೪ ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ. ಕ.

ಸ್ಥಾಪಿಸಿದವರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

ಮಂಗಳೂರು.

ಜಿಲ್ಲಾ ಬೋರ್ಡಿನ—ಸಾಮಾನ್ಯ ಸಭೆಯೊಂದು ತಾ ೨೦ರಂದು ಶ್ರೀ। ಅರೂರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ, ಜಿಲ್ಲಾ ಬೋರ್ಡುಗಳ ಡಿ। ಇನ್ಸ್‌ಪೆಕ್ಟರ ಸೂಚನೆಯೊಂದರ ಕುರಿತು ತೀವ್ರ ಚರ್ಚೆ ನಡೆಯಿತು. “ದ. ಕ. ಜಿ. ಬೋರ್ಡಿನಲ್ಲೀಗ ೪೪ ಮಂದಿ ಸದಸ್ಯರಿದ್ದಾರೆ. ಎಂದರೆ, ಸಾಮಾನ್ಯವಾಗಿ ಪ್ರತಿ ಲಕ್ಷ ಪ್ರಜೆಗಳಿಗೆ ೩ ಸ್ಥಾನಗಳಂತೆ ಹಂಚಿ ಹಾಕಲಾಗಿದೆ. ತಾಲೂಕುಗಳ ಜನಸಂಖ್ಯೆಯನ್ನು ಅನುಲಕ್ಷಿಸಿದರೆ, ಕಾರ್ಕಳ ಹಾಗೂ ಉಡುಪಿಗೆ ಒಂದೊಂದು ಸ್ಥಾನಗಳು ಹೆಚ್ಚಿವೆ. ಕಾಸರಗೋಡಿಗೆ ೨ ಸ್ಥಾನಗಳು ಕಡಿಮೆ ಇವೆ. ಜಿಲ್ಲಾ ಬೋರ್ಡು ಇದನ್ನು ಸರಿಪಡಿಸಿಕೊಳ್ಳಬಹುದು’ ಎಂಬುದು ಇನ್ಸ್‌ಪೆಕ್ಟರರ ಸೂಚನೆಯಾಗಿತ್ತು. ಕಾಸರಗೋಡಿನ ರಾಘವನ್ ನಂಬಿಯಾರರೂ ಡಾ। ಬಿ. ಶೆಣ್ಯಾಯರೂ ಇದನ್ನು ಸಮರ್ಥಿಸಿ, ಕಾಸರಗೋಡಿಗೆ ಎರಡು ಸ್ಥಾನ ಹೆಚ್ಚು ಸಿಗಬೇಕಾದುದು ನ್ಯಾಯ ಎಂದರು. ಶ್ರೀ। ಕೃಷ್ಣಯ್ಯ ಶೆಟ್ಟರೇ ಮೊದಲಾದವರು ‘ಸ್ಥಾನಗಳ ವಿತರಣೆಯು ಇದ್ದಂತೆಯೆ ಇರಲಿ’ ಎಂದರು. ಈ ಕುರಿತು ತೀವ್ರ ಚರ್ಚೆ ನಡೆದ ಬಳಿಕ ಓಟು ತೆಗೆಯಲಾಗಿ, ಸೂಚನೆಯ ಪರವಾಗಿ ಎರಡು ಮತಗಳೂ ವಿರುದ್ಧವಾಗಿ ೨೨ ಮತಗಳೂ ದೊರೆತುವು. ಪನ್ನಾಡ್ ಸಾಹೇಬರು ಈ ವಿಷಯ ಕೊನೆಗೊಂಡೊಡನೆಯೆ ಸಭೆಯಿಂದ ಹೊರನಡೆದರು.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಇಡದೆ ... ... ಕಿಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವವು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩.೬.೦; ೫.೧೨.೦ ಮತ್ತು ೧೦.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು.ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ ನಟರಾಜನ್&ಕೊ,ಮೈಸೂರು.

ಮುಂಬಯಿ ಸೋಲ ಏಜಂಟರು:—

ವನಮಾಲೀ ಛೆಕಾ ಮತ್ತು ಕಂಪನಿ.
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

PUROHIT SHWAS-HARI

ಹೆಚ್ಚು ಎಂ.ಡಿ ಲೈಸೆನ್ಸ್ ಹೊಂದಿದ ವೈದ್ಯರು “ಲೋಕಲ್ ಫಂಡ್” ಆಸ್ಪತ್ರೆಗಳಲ್ಲಿ ನೇಮಕಕ್ಕಾಗಿ ಸಿಗುವಂತೆ ಮಾಡಲು ಅಲ್ಲಲ್ಲಿ ವೈದ್ಯಕೀಯ ಶಾಲೆಗಳನ್ನು ಸ್ಥಾಪಿಸಬೇಕೆಂಬ ಸೂಚನೆ ಬಂದಾಗ “ನಮಗಿನ್ನು ಬರೇ ಲೈಸೆನ್ಸ್ ಹೊಂದಿದ ವೈದ್ಯರು ಬೇಡ, ಪದವೀಧರರಾದ ಡಾಕ್ಟರರೇ ಬೇಕು, ಅದಕ್ಕಾಗಿಯೇ ಹಿಂದಿನ ಕಾಂಗ್ರೆಸ್ ಸರಕಾರವು ಎಲ್. ಎಂ. ಪಿ. ಮೊದಲಾದ ವೈದ್ಯಕೀಯ ಶಾಲೆಗಳನ್ನೇ ಕೊನೆಗೊಳಿಸಿದೆ. ।ಈಗ ಪೂರ್ವ ಕರಾವಳಿಯಲ್ಲಿ ೩ ವೈದ್ಯಕೀಯ ಕಾಲೇಜುಗಳಿವೆ. ನಾಲ್ಕನೆಯದೊಂದು ಗುಂಟೂರಿನಲ್ಲಿ ಸ್ಥಾಪಿಸಲ್ಪಡುತ್ತಿದೆ. ಪಶ್ಚಿಮ ಕರಾವಳಿಯಲ್ಲಿಯೂ ಒಂದು ಕಾಲೇಜು ಸ್ಥಾಪಿಸಲ್ಪಡಬೇಕು” ಎಂದು ಡಾ। ಪಿ.ಜಿ. ಆಚಾರ್ಯರು ಸೂಚಿಸಿದರು.

ಡಿ. ಬೋರ್ಡಿನಿಂದ ಲೈಸನ್ಸ್ ಪಡೆದ ಹೊಟೆಲುಗಳಲ್ಲೆಲ್ಲ ಹರಿಜನರಿಗೆ ಪ್ರವೇಶ ಹಾಗೂ ಸತ್ಕಾರಗಳು ನಿರಾಕರಿಸಲ್ಪಡಬಾರದೆಂಬ ನಿಯಮವನ್ನು ಮುಂದೆ ಲೈಸನ್ಸ್ ಕೊಡುವಾಗ ನಿಬಂಧನೆಗೆ ಸೇರಿಸಬೇಕೆಂಬ ಶ್ರೀ। ಶಂಕರನವರ ನಿರ್ಣಯವು ಮಾನ್ಯವಾಯಿತು.

ಶ್ರೀ। ಸರ್ವೋತ್ತಮ ಶೈ- ಅವರು ಜಿಲ್ಲಾ ಬೋರ್ಡಿನಿಂದ ಮದ್ರಾಸ್ ಸೆನೆಟಿನ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ.

ನೆಹರೂಗಳ ಬಂಧನದ- ನಿಷೇಧಾರ್ಥವಾಗಿ ೨೧ರಂದು ಮಂಗಳೂರಿನಲ್ಲಿ ಅಖಂಡ ಹರತಾಳ ಆಚರಿಸಲ್ಪಟ್ಟಿತ್ತು

ಸಾರ್ವಜನಿಕ ಸಭೆ—ಪಂಡಿತ ನೆಹರುಗಳ ಹಾಗೂ ರಾಮ ಮನೋಹರ ಲೋಹಿಯ ಅವರ ಬಂಧನವನ್ನು ನಿಷೇಧಿಸಿ, ತಾ. ೨೧ರಂದು ಸಂಜೆ, ನಗರ ಕಾಂಗ್ರೆಸ್ ಸಮಿತಿಯ ಹಾಗೂ ಯುವಜನ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನೆರೆಯಿತು

ಡಾ॥ ಎಲ್. ಪಿ. ಫೆರ್ನಾಂಡಿಸರ ನಿಧನ- ಮಂಗಳೂರಿನ ಪ್ರಸಿದ್ಧ ಹಾಗೂ ಜನಪ್ರೀತ ಡಾಕ್ಟರರಾದ ಡಾ। ಎಲ್ ಪಿ. ಫೆರ್ನಾಂಡಿಸರು ತಾ. ೨೦ರಂದು ಸ್ವರ್ಗಸ್ಥರಾದ ರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಕಂಕನಾಡಿ ಫಾದರ್ ಮುಲ್ಲರರ ಆಸ್ಪತ್ರೆಯ ಸಂಚಾಲಕರಾಗಿದ್ದು ಬಡ ಜನರ ಸೇವೆಯನ್ನು ತುಂಬಾ ನಡೆಸಿದ್ದಾರೆ. ವರ್ಷ ೭೪ ಆಗಿದ್ದರೂ ಫೆರ್ನಾಂಡಿಸರು ಶಸ್ತ್ರ ಕ್ರಿಯೆಯನ್ನು ಕೊನೆಯ ತನಕ ನಿರ್ಭೀತರಾಗಿ ಯಶಸ್ವಿಯಾಗಿ ನಡೆಸುತ್ತಿದ್ದರು.

ಜಾತಿ ಭೇದ ವರ್ಗ ಭೇದಗಳ ಎಣಿಕೆಯಿಲ್ಲದೆ ಸಕಲ ಜನ ವರ್ಗದ ಸೇವೆಗೆ ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದ ಶ್ರೀಯುತರ ಮರಣದಿಂದ ವೈದ್ಯಕೀಯಕ್ಕೆ ಮಾತ್ರವಲ್ಲ, ಇಡೀ ಜಿಲ್ಲೆಗೇ ಅಪಾರವಾದ ನಷ್ಟವಾಗಿದೆ.

ಕಲೆಕ್ಟರರ ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ: ಇದೇ ೧೯೪೬ನೆಯ ಜೂನು ಮತ್ತು ಜುಲಾಯಿ ತಿಂಗಳುಗಳಲ್ಲಿ ಯಸ್. ಕೆ. ಸಿ. ಸಿ. ಪಬ್ಲಿಕ್ ಸ್ಟೋರಿನ ಡಿಪೋಗಳಿಗೆ ಅಕ್ಕಿ ಭತ್ತ ಅಥವಾ ರಾಗಿ ಖಾಯಿತಿ ಮಾಡುವ ಸಾಗುವಳಿದಾರರಿಗೆ ಮತ್ತು ರೈತರಿಗೆ ಸದರಿ ಅಕ್ಕಿ, ಭತ್ತ ಮತ್ತು ರಾಗಿಯ ಕ್ರಯದ ಹೊರತು ಈ ಕೆಳಗೆ ಕಾಣಿಸಿದ ರೀತಿಯಲ್ಲಿ ಹೆಚ್ಚಿಗೆ ಬೋನಸ್ ಕೊಡಲಾಗುವುದು. ಅಕ್ಕಿ ಮುಡಿ ಒಂದರ ರೂ. ೧-೯-೨, ಭತ್ತ ಮುಡಿ ಒಂದರ ರೂ. ೦-೧೨-೭, ರಾಗಿ ಮುಡಿ ಒಂದರ ರೂ. ೦ ೧೪-೩.

ಮೇಲಿನ ರೀತಿಯಲ್ಲಿ ಸಲತಕ್ಕ ಬೋನಸನ್ನು ಇನ್ನು ಮುಂದೆ ಖಾಯಿತಿ ಮಾಡುವ ಮತ್ತು ಸಾಗುವಳಿದಾರರಿಗೆ ಹಾಗೂ ರೈತರಿಗೆ ಆಯಾ ಡಿಪೋ ಏಜಂಟರೇ ಈ ಬೋನಸನ್ನು ಮಾಲಿನ ಕ್ರಯದೊಂದಿಗೆ ಕೊಡುವರು. ಆದರೆ ತಾ. ... ...ರಿಂದ ಈ ವರೆಗೆ ಸಲತಕ್ಕ ಬೋನಸನ್ನು ಆಯಾ ತಾಲೂಕು ಸಪ್ಲಾಯಿ ಆಫೀಸರರು ಕೊಡುವರು. ಈ ಬಗ್ಗೆ ಸಂಬಂಧಪಟ್ಟ ಸಾಗುವಳಿದಾರರು ಯಾ ರೈತರು ಆಯಾ ಡಿಪೋ ಏಜಂಟರಿಂದ ಪಡೆದ ಖಾಯಿತಿ ರಶೀದಿಯನ್ನು ಆಯಾ ತಾಲೂಕು ಸಪ್ಲಾಯಿ ಆಫೀಸರರ ಮುಂದೆ ಹಾಜರು ಪಡಿಸತಕ್ಕದ್ದು ಅಥವಾ ರಿಜಿಸ್ಟ್ರಿ ಮೂಲಕ ಕಳುಹಿಸತಕ್ಕದ್ದು.

ಅವರಿಗೆ ಉಪಯೋಗಕ್ಕೆ ನ್ಯಾಯವಾಗಿ ಬಿಟ್ಟ ಸ್ಟಾಕಿನ ಹೊರತು ಇತರ ಅಕ್ಕಿ, ಭತ್ತ ಯಾ ರಾಗಿಯನ್ನು ಯಾರಾದರೂ ಅಡಗಿಸಿಟ್ಟದ್ದಲ್ಲಿ ಹಾಗೆ ಅಡಗಿಸಿಟ್ಟದ್ದು ವರ್ತಮಾನವನ್ನು ಬರುವ ಅಗೋಸ್ತು ತಿಂಗಳಲ್ಲಿ ಅಥವಾ ಅನಂತರ ಯಾರಾದರೂ ಸರಕಾರಕ್ಕೆ ತಿಳಿಸಿದರೆ, ಹಾಗೆ ಸಹಜವಾದ ವರ್ತಮಾನ ಕೊಟ್ಟವರಿಗೆ ಈ ಕೆಳಗಿನ ರೀತಿಯಲ್ಲಿ ಇನಾಮು ಕೊಡಲಾಗುವುದು.

ಅಕ್ಕಿ, ಭತ್ತದ ವಿಚಾರದಲ್ಲಿ, ಸ್ವಾಧೀನಪಡಿಸಿದ ಅಕ್ಕಿ, ಭತ್ತದ ಕ್ರಯದ ಸೇಕಡಾ ೩ಕ್ಕೆ ಮಿಗದಷ್ಟು ಹಣ. ರಾಗಿಯಾದರೆ ಸ್ವಾಧೀನಪಡಿಸಿದ ರಾಗಿಯ ಕ್ರಯದ ಸೇಕಡಾ ೨॥ಗೆ ಮೀರದಷ್ಟು ಹಣ.

ವರ್ತಮಾನ ಸಿಕ್ಕಿ ಅಡಗಿಸಿಟ್ಟದ್ದ ಸಂಗ್ರಹವನ್ನು ರಿಕ್ವಿಸಿಶನ್ ಮಾಡಿ ಸ್ವಾಧೀನಪಡಿಸಿಕೊಂಡ ಸಂಗ್ರಹಕ್ಕೆ ಈ ಕೆಳಗೆ ಕಾಣಿಸಿದಂತೆ ಕನಿಷ್ಠ ಕೊಡಲಾಗುವುದು.

ಅಕ್ಕಿಗೆ ಮುಡಿ ಒಂದರ ರೂ. ೦-೧೨-೭, ಭತ್ತಕ್ಕೆ ಮುಡಿ ಒಂದರ ರೂ. ೦ ೬ ೪, ರಾಗಿಗೆ ಮುಡಿ ಒಂದರ ರೂ. ೦-೫ ೯.

ಮಹಾ ಸಭೆ—ಇತ್ತೀಚೆಗೆ ಯುವಜನ ಕಾಂಗ್ರೆಸಿನ ಆಶ್ರಯದಲ್ಲಿ ಜನ್ಮ ತಾಳಿದ ಹೊಟೆಲು ಕೆಲಸಗಾರರ ಸಂಘದ ಮಹಾ ಸಭೆಯು ಕಾಂಗ್ರೆಸ್ ಕಚೇರಿಯಲ್ಲಿ ತಾ 23ರಲ್ಲು ರಾತ್ರಿ 9-30ಕ್ಕೆ ಜರಗಿತು. ಶ್ರೀ ಬಾಲಕೃಷ್ಣ ಶೆಣವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಉದ್ದೇಶಗಳನ್ನು ಮುಂದೊತ್ತುವರೆ ಕಾರ್ಯನಿರ್ವಾಹಕ ಮಂಡಳಿಯ ರಚನೆಯಾಯಿತು. ಕೆಲಸಗಾರರ ಹಿತಚಿಂತಕರಾದ ಮೂವರು ವಕೀಲರನ್ನು ಗೌರವ ಸದಸ್ಯರನ್ನಾಗಿ ಸೇರಿಸಿಕೊಳ್ಳುವ ನಿರ್ಧಾರವಾಯಿತು.

ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘ ಮುಂಬಯಿ—ಈ ಸಂಘದ ಪಂಚಮ ವಾರ್ಷಿಕ ಮಹಾ ಸಭೆಯು ತಾ 16-6 46ರಲ್ಲಿ ಕೋಟೆಯೊಳಗಿನ ಹೊಂಗ್‌ಕೊಂಗ್ ಬ್ಯಾಂಕ್ ಕಟ್ಟಡದ ಒಂದನೇ ಮಾಳಿಗೆಯಲ್ಲಿ ಶ್ರೀ ಎಮ್. ಆರ್. ಬಸ್ರೂರ್. B. A, Cert , A I. I. B. Cert , A. I. B. (Eng) ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಅತಿಥಿಗಳಾಗಿ ಬಂದಿದ್ದ ಶ್ರೀಗಳಾದ ... ಬಂಗೇರ, ಕೆ. ಟಿ. ಕರ್ಕೇರ, ಡಿ. ಟಿ. ಕಾಂಚನ ಮತ್ತು ಸದಸ್ಯರಲ್ಲಿ ಹಲವರು ಸಂಘದ ಮುಂದಿನಾಭಿವೃದ್ಧಿಯ ಕುರಿತು ರಂಜನೆಯ ಸುರಸವಾದ ಭಾಷಣಗಳನ್ನಿತ್ತಿರುವರಲ್ಲದೆ, ಸಂಘವು ಮುಂದಕ್ಕೆ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶೀರ್ವದಿಸಿದರು.

ಮೊಗವೀರ ವಾಗ್ವರ್ಧಿನಿ ಸಮಿತಿ ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯವರ ವ್ಯವಸ್ಥಾಪಕತ್ವದಲ್ಲಿ ಏರ್ಪಟ್ಟ ಈ ವಾಗ್ವರ್ಧಿನಿ ಸಮಿತಿಯ ಉದ್ಘಾಟನ ಸಮಾರಂಭವು ತಾ 9 6-46ರಲ್ಲಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ಆಫೀಸಿನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ. ಬಿ. ಶಿವಸಾಲಿಯಾನರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯಕ್ರಮಗಳಂತೆ ಮೊದಲು ಈ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಎ. ಪುತ್ರಣರು ಸ್ವಾಗತ ಭಾಷಣವಿತ್ತು ಅಧ್ಯಕ್ಷರ ಆಯ್ಕೆಯನ್ನು ಮಾಡಿದರು. ಶ್ರೀ ಬಿ. ಆನಂದರವರು ಈ ಸಮಿತಿಯನ್ನು ಏರ್ಪಡಿಸಲು ಕಾರಣವೇನೆಂದು ವಿಸ್ತರಿಸಿ ಹೇಳಿದರು. ಶ್ರೀ ಬಿ. ರಮಾನಂದ ಅಮೀನರು ಅದರ ಮಾತನ್ನು ಇನ್ನಷ್ಟು ದೃಢೀಕರಿಸಿದರು. ಶ್ರೀಗಳಾದ ಎಸ್. ಸಿ. ಪಡುಬಿದ್ರಿ, ಜಿ. ಸಿ. ಪುತ್ರನ್, ನಾರಾಯಣ ಬಂಗೇರ, ಡಿ. ಟಿ. ಕಾಂಚನ್, ಎಲ್. ಎಮ್. ಮೆಂಡನ್, ಡಿ. ಜಿ. ಬಂಗೇರ, ಡಿ ಎ. ಕರ್ಕೇರ, ... ಯಾನ್, ಕೆ. ಪದ್ಮ ಮತ್ತು ಕೆ. ... ರವರು ಈ ವಾಗ್ವರ್ಧಿನಿ ಸಮಿತಿಯಿಂದಾ... ಯುವ ಪ್ರಯೋಜನದ ಕುರಿತು ಭಾಷಣಗಳನ್ನಿತ್ತರು. ತದನಂತರ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬತ್ತುವದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರದು ರೂ. 3—8 0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯತ್ತವೆ. ಶ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಚಿಕಿತ್ಸೆ ಮಾಡಲಾಗುವುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುದಾಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದಕ್ಷಿಣ ಕನ್ನಡ

ಜಿಲ್ಲೆಯ ಕಾಫಿ ಮತ್ತು ಊಟದ ಹೋಟೆಲುಗಳಲ್ಲಿ ಸರ್ವರಿಗೂ ಪ್ರವೇಶ ದೊರೆಯಬೇಕು

ಶ್ರೀ. ಕೆ. ಈಶ್ವರ, ಎಮ್. ಎಲ್. ಎ. ಅವರ ಪ್ರಕಟಣೆಯ ಸಾರಾಂಶ- ಜಿಲ್ಲೆಯ ಕಾಫಿ ಮತ್ತು ಊಟದ ಹೋಟೆಲುಗಳಲ್ಲಿ ಎಲ್ಲರಿಗೂ ಪ್ರವೇಶವನ್ನು ಕೊಡಬೇಕೆಂದು, ಮೇ ತಿಂಗಳ ತಾ 11ಕ್ಕೆ ಮದ್ರಾಸ್ ಸರಕಾರವು ಹೊರಡಿಸಿದ ಆರ್ಡರ್ ಮೇರೆಗೆ ನಮ್ಮ ಜಿಲ್ಲೆಯ ಹರಿಜನರಿಗೆ ಹೋಟೆಲು ಪ್ರವೇಶವು ಕೂಡಲೇ ಸಿಕ್ಕಬೇಕು. ಯಾವ ಹೋಟೆಲುಗಳಲ್ಲಿ ಹರಿಜನರ ಪ್ರವೇಶಕ್ಕೆ ಆತಂಕವಿದೆಯೋ ಅಂತಹ ಹೋಟೆಲುಗಳ ಲೈಸೆನ್ಸುಗಳನ್ನು ರದ್ದು ಮಾಡುವ ಅಧಿಕಾರವು ಮುನಿಸಿಪಾಲಿಟಿಯ ಕಮಿಶನರರಿಗೂ ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೂ ಇರುವುದು. ಈ ವಿಷಯವನ್ನು ಎಲ್ಲಾ ಹೋಟೆಲ್ ಮ್ಯಾನೇಜರ ಹಾಗೂ ಮಹಾ ಜನರ ತಿಳುವಳಿಕೆ ಬಗ್ಗೆ ಕಮಿಶನರರೂ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೂ ಡಂಗುರ ಹೊಡಿಸಿ ಪ್ರಚಾರ ಮಾಡಬೇಕಾಗಿದೆ. ಯಾವ ಹೋಟೆಲ್ ಮ್ಯಾನೇಜನು ಹರಿಜನರಿಗೆ ಪ್ರವೇಶ ಕೊಡಲು ನಿರಾಕರಿಸುವನೋ ಅಂತವನ ಹೆಸರನ್ನು ತನಗೆ ಕೂಡಲೇ ತಿಳಿಸಬೇಕಾಗಿ ಸ್ವರಾಜ್ಯ ಸಂಸ್ಥೆಗಳ ಮಂತ್ರಿಗಳು ತಿಳಿಸಿರುತ್ತಾರೆ. ಇಂತಹ ಅನಪೇಕ್ಷಿತ ವಾತಾವರಣಕ್ಕೆ ಆಸ್ಪದವೀಯದೆ ಎಲ್ಲಾ ಕಾಫಿ ಮತ್ತು ಊಟದ ಹೋಟೆಲ್ ಮ್ಯಾನೇಜರು ಹರಿಜನರಿಗೆ ಪ್ರವೇಶ ಕೊಡಬೇಕಾಗಿ ವಿನಂತಿ.

ಫಲಿಮಾರು- ಮೂಲ್ಕಿ ಹೊಳೆಗೆ ಮುಂದ್ಯೂರಿನಲ್ಲಿ ಮಾನಮೂಲಿಗೆ ವಿರೋಧವಾಗಿ ಹಾಕಿದ ಕಟ್ಟದ ಸಂಬಂಧ ಪಲಿಮಾರು ಕಟ್ಟದ ರಕ್ಷಣಾಸಮಿತಿಯ ಅಧ್ಯಕ್ಷರಾದ ಶ್ರೀ. M. ಶ್ರೀನಿವಾಸ ಪೆಜತ್ತಾಯರು ಜಿಲ್ಲಾ ಕಲೆಕ್ಟರ ದೊರೆಗಳವರ ಸಮಕ್ಷಮ ಆಕ್ಷೇಪಣೆ ಅರ್ಜಿ ದಾಖಲು ಮಾಡಿದ ಪ್ರಯುಕ್ತ ತಾ 8-6-46 ರಲ್ಲು ಕಲೆಕ್ಟರ ದೊರೆಗಳವರಿಂದ ಈ ಕೆಳಗಣ ಹುಕುಂ ಬಂದಿರುತ್ತದೆ. ಇನ್ನು ಮುಂದಕ್ಕೆ ಮುಂದ್ಯೂರಿನಲ್ಲಿ ಮೂಲ್ಕಿ ಹೊಳೆಗೆ ಕಟ್ಟವನ್ನು ಹಾಕದಂತೆ ಮಂಗಳೂರಿನ ತಹಶೀಲ್ದಾರರವರು ಜಾಹೀರ ಮಾಡಿಸಬೇಕು. ಅಲ್ಲದೆ ತದ್ವಿರುದ್ಧವಾಗಿ ಕಟ್ಟ ಕಟ್ಟಿದ್ದಲ್ಲಿ ಸದ್ರಿ ಕಟ್ಟವನ್ನು ಬಲಾತ್ಕಾರದಿಂದ ತೆಗಿಸಲಾಗುವುದು.

ತಾ 19-6-46ನೇ ಬುಧವಾರ ಅಪರಾಹ್ನ ಘಂಟೆ 4ಕ್ಕೆ ಫಲಿಮಾರು ಗ್ರಾಮದ ಶ್ರೀ ಫಲಿಮಾರು ಮಠದಲ್ಲಿ ಮಠದ ಮ್ಯಾನೇಜರಾದ ಶ್ರೀ. ಶ್ರೀನಿವಾಸ ಪೆಜತ್ತಾಯರವರ ಅಧ್ಯಕ್ಷತೆಯಲ್ಲಿ ಕಟ್ಟದ ಕಾರ್ಯನಿರ್ವಾಹಕ ಮಂಡಳಿಯ ಸಭೆ ಜರಗಿ ಜಿಲ್ಲಾ ಕಲೆಕ್ಟರವರಿಂದ ಬಂದ ಹುಕುಮನ್ನು ಓದಿ ರಿಕಾರ್ಡು ಮಾಡಲಾಯಿತು. ಮತ್ತು ಈ ವರೇಗಿನ ಆಯ ವ್ಯಯಗಳ ಪರಿಶೀಲನೆ ಮಾಡಿ ಬಂದ ಸಭಿಕರು ಹಾರಯಿಂಗೆ ವಂದನೆಗಳು ಅರ್ಪಿಸಲಾಗಿ ಸಭೆ ಕೊನೆಗೊಂಡಿತು.

ಹೆಜಮಾಡಿ- ಖಡ್ಡಾಯ ಶಿಕ್ಷಣದ ಪ್ರಾರಂಭೋತ್ಸವವು ತಾ 15-6-46ರಲ್ಲಿ ಜರಗಿತು. ಹಾಯರ್ ಎಲಿಮೆಂಟರಿ ಶಾಲಾ ಮತ್ತು ಮುಹಮ್ಮದಿ ಶಾಲಾ ಮಕ್ಕಳಿಂದಲೂ ಊರ ಮಹನೀಯರಿಂದಲೂ ಕೂಡಿದ ಪ್ರಚಂಡ ಮೆರವಣಿಗೆಯಾದ ನಂತರ ಹೆಜಮಾಡಿ ಶಾಲಾ ಕಟ್ಟಡದಲ್ಲಿ ಗರಡಿ ಮನೆ ಶ್ರೀ. ಎಚ್. ಪೇಜು ಸೆಟ್ರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ನೆರೆದ ಸಭೆಯಲ್ಲಿ ಮಕ್ಕಳ ವಿವಿಧ ಚಟುವಟಿಕೆಗಳು ನಡೆದು, ಖಡ್ಡಾಯ ಶಿಕ್ಷಣದ ಪ್ರಯೋಜನ, ಕ್ರಮ ಇತ್ಯಾದಿಗಳ ಕುರಿತು ಭಾಷಣಗಳಾದ ನಂತರ ಅಧ್ಯಕ್ಷರಿಗೂ, ನೆರೆದ ಸಭಿಕರಿಗೂ ಧನ್ಯೋಕ್ತಿಗಳ ಅರ್ಪಣೆಯಾಗಿ, ಮಂಗಲ ಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಇನ್ನಂಜೆ- ತಾ 19 6 1946ರಲ್ಲಿ ಸ್ಥಳೀಯ ಗ್ರಾಮ ಸೇವಾ ಸಮಿತಿಯ ಆಶ್ರಯದಲ್ಲಿ, ಸಮಿತಿಯ ಮುಖ್ಯೋದ್ದೇಶಗಳಲ್ಲೊಂದಾದ ಸಾರ್ವಜನಿಕ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರದ ಉದ್ಘಾಟನಾ ಸಮಾರಂಭವು ಶ್ರೀ ಗುಂಡಿಬೈಲು ಸುಬ್ರಹ್ಮಣ್ಯಾಚಾರ್ಯರಿಂದ ಜರಗಿಸಲ್ಪಟ್ಟಿತು. ಸಮಿತಿಯ ಅಧ್ಯಕ್ಷರಾದ ಶ್ರೀ. ಯು. ಯಸ್. ರಾಯರು 1. ವಾಚನಾಲಯ ಮತ್ತು ಪುಸ್ತಕ ಭಂಡಾರ 2. ವಯಸ್ಕರ ಶಿಕ್ಷಣ 3. ನೂಲುವಿಕೆ, ನೇಯುವಿಕೆ ಮೊದಲಾದ ಗುಡಿ ಕೈಗಾರಿಕೆಗಳ ಪ್ರೋತ್ಸಾಹ 4. ಶಿಶು ಪರಿಪಾಲನೆ, ಗರ್ಭಿಣೀ ಸಂರಕ್ಷಣ ವಿಧಾನ 5. ಸಾರ್ವಜನಿಕ ಆರೋಗ್ಯ 6. ಹಿಂದೀ ಪ್ರಚಾರ ಇವೇ ಮೊದಲಾದ ಸಮಿತಿಯ ಮುಖ್ಯೋದ್ದೇಶಗಳನ್ನು ವಿವರಿಸಿದರು. ಶ್ರೀ ಶ್ರೀನಿವಾಸ ಮಿತ್ತಂತಾಯರೂ ಅಧ್ಯಕ್ಷರೂ ವಾಚನಾಲಯ ಮತ್ತು ಪುಸ್ತಕ ಭಂಡಾರದ ಆವಶ್ಯಕತೆಯನ್ನು ಸಮರ್ಥಿಸಿ ಈ ಸಂಸ್ಥೆಯು ಚಿರಕಾಲ ಬಾಳಲೆಂದು ಹಾರೈಸಿದರು.

The S. R. S. Home Old Boarders Asssociation, Mangalore.

In the meeting of the above Association held on 14-6-'46 it has been resolved that on account of the arrears in the collection of the annual subscription due from the members, that the persons who become life members by payment of Rs. 10/- or patron members by payment of Rs. 25/- by the end of December 1946 their aggregate arrears up to date will be given up.

It is therefore requested that the old Boarders wherever they are residing may send their life or patron membership fee without waiting for any separate communication.

For the benefit of the many unemployed young men and women of the community who desire to be employed in suitable places be-fitting their qualifications, a register is maintained by the Old Boys Association, and a such men and women are requested to register their names with the member in charge of the Information Bureau of the Association (Dr. K. B. Shetty, X-Ray Institute, Hampankatta, Mangalore) with their qualifications age etc. and their permanent addresses.

The Old Boys Association intend to get all the necessary information with regard to the vacancies in the different departments in the presidency and inform the suitable candidates and try to guide them so that they may try their chances to secure employment at the earliest opportunity.

It is hoped that every one take advantage of the scheme and register their names as early as possible.

(*Sd.*) **K. U. Shetty,**
Hon. Secretary,
S. R. S Home Old Boarders Association.
MANGALORE, 15-6-'46.

ಎಸ್. ಆರ್. ಎಸ್. ಹೋಮ್ ಹಳೆ ನಿವಾಸಿಗಳ ಸಂಘ, ಮಂಗಳೂರು

ತಾ. 14 6-46ರಲ್ಲು ಕೂಡಿದ ಮೇಲ್ಕಂಡ ಸಂಘದ ಸಭೆಯಲ್ಲಿ ಸಂಘದ ಮೆಂಬರರ ವಾರ್ಷಿಕ ಸದಸ್ಯತನದ ಫೀಸು ವಸೂಲಿ ಬಾಕಿಯುಳ್ಳುದನ್ನು ಪರಿಗಣಿಸಲಾಯಿತು. ಡಿಸೆಂಬರ ಅಂತ್ಯದೊಳಗಾಗಿ ಸಂಘಕ್ಕೆ ರೂಪಾಯಿ 10ರಂತೆ ಕೊಟ್ಟು ಆಜೀವ ಮೆಂಬರರಾಗುವವರಿಂದಲೂ ರೂಪಾಯಿ 20ರಂತೆ ಕೊಟ್ಟು ಆಶ್ರಯದಾತರಾಗುವವರಿಂದಲೂ ಈ ತನಕ ಅಂಥವರಿಂದ ಬಾಕಿಯಾಗಿರುವ ವಾರ್ಷಿಕ ವರ್ಗಣೆಯನ್ನು ಮನ್ನಾಮಾಡಲಾಗುವುದು. ಆದುದರಿಂದ ಈ ಸಂಘದವರು ಎಲ್ಲಿದ್ದರೂ ಕೂಡ ಬೇಗನೆ ಆಜೀವ ಹಾಗು ಆಶ್ರಯದಾತರಾಗಿ ಸದಸ್ಯತನದ ಹಣವನ್ನು ಕಳುಹಿಸಿಕೊಡಬಹುದು.

ಸಮಾಜದ ನಿರುದ್ಯೋಗಿ ತರುಣ ತರುಣಿಯರಿಗೆ ಅವರವರ ಯೋಗ್ಯತೆಗೆ ಉಚಿತವಾದ ಕೆಲಸಗಳನ್ನು ಕಲ್ಪಿಸಿಕೊಡುವರೆ ಸಂಘದ ಕಡೆಯಿಂದ ಒಂದು ರಿಜಿಸ್ಟ್ರಿಯನ್ನು ಇಡಲಾಗಿದೆ. ಈ ಸುಸಂಧಿಯ ಸದುಪಯೋಗವನ್ನು ಪಡೆಯಲಿಚ್ಛಿಸುವವರು ತಮ್ಮ ವಿದ್ಯೆಯ ಯೋಗ್ಯತೆ, ಪ್ರಾಯ, ಖಾಯಂ, ವಿಳಾಸ ಇತ್ಯಾದಿ ಮಾಹಿತಿಗಳನ್ನು ಡಾಕ್ಟರ್ ಕೆ. ಬಿ. ಸೆಟ್ಟಿ, ಎಕ್ಸ್‌ರೇ ಇನ್ಸ್ಟಿಟ್ಯೂಟ್ ಹಂಪನಕಟ್ಟೆ, ... ಅವರಿಗೆ ತಿಳಿಸಿ ರಿಜಿಸ್ಟ್ರಿಯಲ್ಲಿ ದಾಖಲು ಮಾಡಿಸಬಹುದು.

ಮದ್ರಾಸು ಸಂಸ್ಥಾನದಲ್ಲಿಯ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಉದ್ಯೋಗಗಳ ಅನುಭವವನ್ನು ಸಂಘದ ಕಡೆಯಿಂದ ಪಡೆಯುವ ಏರ್ಪಾಡು ಮಾಡಲಾಗಿದೆ. ತನ್ಮೂಲಕ ಬೇಗನೆ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಪ್ರಯತ್ನಿಸಲಾಗುವುದು. ಸಮಾಜದ ತರುಣ ತರುಣಿಯರು ಜಾಗರೂಕರಾಗಬೇಕಾಗಿ ವಿನಂತಿ.

ಕೆ. ಯು. ಸೆಟ್ಟಿ,
ಗೌ। ಕಾರ್ಯದರ್ಶಿ ಎಸ್. ಆರ್. ಎಸ್. ಹೋಮ್. ಓಲ್ಡ್ ಬೋರ್ಡರ್ಸ್ ಎಸೋಸಿಯೇಶನ್, ಮಂಗಳೂರು, 15-6-46

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು
ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ
ಸಾಮಾಜಿಕ ನಾಟಕ
(ಮದ್ರಾಸಿನ ಡಾಕ್ಟರ್ ಯು ರಂಗರಾಯರ ಮುನ್ನುಡಿ ಸಮೇತ)
ಬೆಲೆ 0—12—0 ಮಾತ್ರ

ಮೀರಾಬಾಯಿ

(ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರ ಮುನ್ನುಡಿಯೊಡನೆ)

ಭಗವದ್ಭಕ್ತಿಯ ಮಹಾತ್ಮೆಯನ್ನು ಮನಗಾಣಿಸುವ
ಚಾರಿತ್ರಿಕ ನಾಟಕ.

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಪಂಚ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ
ಭಕ್ತಿಪ್ರಾಧಾನ್ಯ ನಾಟಕ.

ಬೆಲೆ 0—10—0.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | **ಕಿರಿಯರ ಪ್ರಪಂಚ,** ಉಡುಪಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಎಮ್. ಎಮ್. ಜವೇರಿಯವರ ಮಕ್ಕಳ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨

EPILEPSY & HYSTERIA

Cured for ever.

By smelling this wonderful herb when attacked by fits a black worm 1½" long will come out with the sneezes of the patient. The patient will get a miracle cure of the disease for ever.

Apply in English to:

Shri 108 Mahatma Sidh Baba, Nagod Post
(JUBBULPORE)

(೨ನೇ ಪುಟದಿಂದ)

ಮನುಷ್ಯ. ಆದ್ದರಿಂದ ಸರ್. ನೋಶಿರ್ವಾನ್, ಡಾ| ಮಥಾಯಿಯಂಥವರಿರುವಾಗ ಬೋಸಸಂಘದವರಿರುವದು ವೈಸರಾಯರಿಗೆ ಬೇಡವಿನ್ನಿಸಿದರೂ ರಾಷ್ಟ್ರದ ಪಾಲಿಗೆ ಅಗತ್ಯವಾಗಿ ಬೇಕು.

ಡಾ| ಜೋನ್ ಮಥಾಯಿ

ಇವರು ಕ್ರೈಸ್ತರ ಪ್ರತಿನಿಧಿ ದೊಡ್ಡ ಸರಕಾರೀ ಅಧಿಕಾರದಲ್ಲಿದ್ದರು; ಘನವ್ಯಕ್ತಿ. ಸಣ್ಣ, ಸೂಕ್ಷ್ಮ ಕಾರ್ಯಗಳಿಗೆ ಹೇಳಿಸಿದವರಲ್ಲ ನ್ಯಾಯಾಧೀಶರಂತೆ ಮೇಲ್ಪಂಕ್ತಿಯ ಘನವರ್ತನೆಯುಳ್ಳ ಮನುಷ್ಯ. ಇಂತಹ ಮಹಾನುಭಾವರಿಂದ ಹಿತ ಯಾ ಅಹಿತ ವಾಪ್ಪದನ್ನೂ ಕಾಂಗ್ರೆಸ್ ಅಥವಾ ಲೀಗ್ ನಿರೀಕ್ಷಿಸುತ್ತಿಲ್ಲ. ನೋಶಿರ್ವಾನ್ ಮತ್ತು ಮಥಾಯಿಗಳ ನೇಮಕವೆಂದರೆ ಬ್ರಿಟಿಷ್ ರಾಯಭಾರಿಗಳು ಹೂಡಿರುವ ಒಂದು ಬುದ್ಧಿವಂತಿಕೆಯಿರಬಹುದೇ ಎಂಬ ಅನುಮಾನ ಬರುತ್ತದೆ ಬಹು ಸಂಖ್ಯಾಕರಾದ ಕಾಂಗ್ರೆಸ್– ಲೀಗ್ ಸದಸ್ಯರು ಅಲ್ಲಿಯೂ ಪರಸ್ಪರ ಸ್ಪರ್ಧಿಸಿಕೊಳ್ಳುವಾಗ ಮಿಕ್ಕುಳಿದ ಸದಸ್ಯರ ಅಭಿಮತಕ್ಕೆ ಬೆಲೆ ಬರುತ್ತದೆ. ಆದ್ದರಿಂದ ಬ್ರಿಟಿಷ್ ಸಂಸ್ಕಾರವೇ ರೋಮ-ರೋಮಗಳಲ್ಲಿ ತುಂಬಿರುವ ಇವರಿಬ್ಬರೂ ಅಲ್ಲಿದ್ದು ತಮ್ಮ ಕೆಲಸಮಾಡುತ್ತಿರಲಿ ಎಂದು ವೈಸರಾಯರು ಹೀಗೆ ಮಾಡಿದರೇನೋ! ಅಮೇರಿಕದಲ್ಲಿ ಶಿಕ್ಷಣ ಪಡೆಯುತ್ತಿದ್ದ ಮಿಸ್. ಮಥಾಯಿ ಎಂಬಾಕೆ ಕಾಣೆಯಾದ ವಾರ್ತೆಯೊಂದು ಅದ್ಭುತರಮ ಕಥೆಯಾಗಿ ಕೆಲಕಾಲದ ಹಿಂದೆ ಪತ್ರಿಕೆಗಳಲ್ಲೆಲ್ಲಾ ಪ್ರಾಮುಖ್ಯತೆ ಪಡೆದಿತ್ತು. ಆ ಯುವತಿ ಇದೇ ಡಾ| ಮಥಾಯಿಯವರ ಪುತ್ರಿ. ಆಂಗ್ಲೋ ಇಂಡಿಯನ್ ನಾಯಕರೂ ರಾಷ್ಟ್ರೀಯ ಮನೋವೃತ್ತಿಯವರಾದ ಮಿ. ಫ್ರೆಂಕ್ ಅಂತೋನಿಯವರ ನ್ನಾರಿಸುತಿದ್ದರೆ ಎಷ್ಟು ಆನಂದವಾಗುತಿತ್ತೋ ಅಂತಹ ಸಂತೋಷವನ್ನು ಡಾ| ಮಥಾಯಿಯವರ ನೇಮಕ ನಿರ್ಮಿಸಿಲ್ಲ.

ನ... ... ...ಸ್ಟರ್ ಇಸ್ಮಾಯಿಲ್ ಖಾನ್

ಮಿ. ಜಿನ್ನರ ಬಲಗೈ ಬಂಟರಲ್ಲೊಬ್ಬರು. ಸಂಯುಕ್ತ ಪ್ರಾಂತ್ಯದವರಾದ್ದರಿಂದ ಮಂತ್ರಿಯಾಗಿ, ಮತ್ತಾವುದೇ ವಿಧದ ಜವಾಬ್ದಾರಿ ಹೊತ್ತು ರಾಜ್ಯಭಾರ ನಡೆಸಿದ್ದ ಅನುಭವಿಯೇನೂ ಅಲ್ಲ. ಆದರೆ ಕಾಂಗ್ರೆಸನ್ನು ದೂರುವ ಗುಣವಿಶೇಷವೊಂದನ್ನೇ ಯೋಗ್ಯತೆಯಾಗಿ ಗಣಿಸುತ್ತಿರುವ ಮಿ. ಜಿನ್ನರು ಸಿಮ್ಲಾ ಸಮ್ಮೇಲನದಲ್ಲೂ ಇವರನ್ನು ಲೀಗ್ ಪ್ರತಿನಿಧಿಯಾಗಿ ಕರೆದೊಯ್ದಿದ್ದರು. ಈಗ ಸರಕಾರೀ ಸದಸ್ಯರಾಗಿ ಆಮಂತ್ರಿಸಲ್ಪಟ್ಟಿದ್ದಾರೆ

ಖ್ವಾಜಾ ಸರ್. ನಾಜಿಮುದ್ದೀನ್

ಆ 14ರ ಪೈಕಿ ಇಬ್ಬರೇ ಇರುವ 'ಸರ್'ಗಳಲ್ಲಿ ಇವರೊಬ್ಬರು. ಬಂಗಾಳದವರು ಭಯಂಕರ ಲೀಗ್ ಸ್ಫೂರ್ತಿಯ ಮನುಷ್ಯ. ಆ ಕಡೆಯಲ್ಲಿ ಶರಶ್ಚಂದ್ರರಿರುವದರಿಂದ ನಾಜೀಮುದ್ದೀನರಿಂದಾಗಿ ಈ ಕಡೆಯ ತಕ್ಕಡಿ ತಗ್ಗುವ ಹೆದರಿಕೆಯಿಲ್ಲ. ಆದ್ದರಿಂದ 'ತೂಕದ ಮನುಷ್ಯ' ಎಂದೇ ಹೇಳೋಣ!

ಸರ್ದಾರ್ ಅಬ್ದುರ್‌ರಾಬ್ ನಿಸ್ತಾರ್

ಇವರು ಗಡಿನಾಡಿನವರು. ಇದುವರೆಗಿನ ಜಾತಕ ನೋಡುವಾಗ ಇವರಿಗೆ ಬೇಕಾಗಿರುವದು ಕೀರ್ತಿಯೊಂದೇ. ಕಳೆದ ಬಾರಿಯ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೇಟಿಗಾಗಿ ಅರ್ಜಿ ಹಾಕಿದ್ದರಂತೆ. ಅದು ನಿರಾಕರಿಸಲ್ಪಟ್ಟಾಗ ಲೀಗ್ ಟಿಕೇಟು ಪಡೆದು ಸ್ಪರ್ಧಿಸಿ ಕಾಂಗ್ರೆಸ್ ಉಮೇದ್ವಾರಿಯಿದಿರು ಸೋತು ಹೋಗಿದ್ದರಂತೆ. ಗಡಿನಾಡಿನ ಪಠಾಣರೆಲ್ಲಾ ಕಾಂಗ್ರೆಸ್ ಭಕ್ತರಾಗಿರುವಾಗ ಇದಕ್ಕಿಂತ 'ಊಚಾ' ವಸ್ತು ಅಲ್ಲಿ ಮಿ. ಜಿನ್ನರಿಗೆ ದೊರೆಯಲಿಲ್ಲ. ಖಾನ್ ಸಹೋದರರಿದಿರು ನಿಲ್ಲುವ ಕಲ್ಲಮೂರ್ತಿಯಾದರೂ ಮಿ. ಜಿನ್ನರ ದೃಷ್ಟಿಯಲ್ಲಿ ಕಲಿ ಮೂರ್ತಿ! ಅವರು ಸಿಮ್ಲಾ ಸಮ್ಮೇಲನಕ್ಕೆ ಅಬ್ದುಲ್‌ರಾಬ್ ನಿಸ್ತಾರರನ್ನೇ ಆರಿಸಿಕೊಂಡರು. ಅಲ್ಲಿ ಇವರ ಚಟುವಟಿಕೆಗಳನ್ನು ಕಂಡ ಜಿನ್ನರಿಗೆ ನಿಸ್ತಾರರ ಮೇಲಿನ ಮಮತೆ ವಿಸ್ತಾರವಾಯಿತು. ಸರ್ಕಾರ ಸಂಕಾರಕ್ಕೂ ಅವರ ಹೆಸರನ್ನೇ ಸೂಚಿಸಿದರು. ಲೀಗಿನಲ್ಲಿ ನುರಿತವರು ಬೇರಿರುವಾಗ ಈ ಹೊಸಬನೇಕೆ ಎಂದು ಮುಸಲ್ಮಾನರಿಗೂ ಇದರಿಂದ ಅತೃಪ್ತಿ; ಗಡಿನಾಡು ಕಾಂಗ್ರೆಸಿನ ಹಿಂದಿರುವಾಗ ಈ ನಿಸ್ತಾರರನ್ನು ನೇಮಿಸಿ ಕೊಂಡುದು ಯಾವ ಆಧಾರದಿಂದ? ಎಂದು ಕಾಂಗ್ರೆಸಿಗಂತೂ ಸಿಟ್ಟೇ ಸಿಟ್ಟು. ಅದರೂ ಜಿನ್ನರ ಅನುಗ್ರಹ ಬಲದಿಂದ ನಿಸ್ಸಾರ ನಿಸ್ತಾರರ ಭಾಗ್ಯೋದಯವಾಯಿತು.

ಶ್ರೀ ಸಿ. ರಾಜಗೋಪಾಲಾಚಾರಿ

ಮದ್ರಾಸಿನ ಎಂ. ಎಲ್. ಎ. ಗಳಿಂದ ದೊರೆಯದ ಮರ್ಯಾದೆ- ದೊರಕದ ಪೀಠ-ರಾಜಾಜಿಗೆ ವೈಸರಾಯರಿಂದ ದೊರೆಯಲಿದೆ ಎಂದು ನಾವಾಗಲೇ ಹೇಳಿದ್ದೆವು ಕಾಂಗ್ರೆಸ್ ಕಾರ್ಯಕಾರೀ ಸಭೆಯು ತನ್ನ ಕೊನೆಯ ಭಾಗದಲ್ಲಿ ಆಚಾರ್ಯರ ಮೆದುಳಬತ್ತಿಯ ಪ್ರಕಾಶದಿಂದಲೇ ಎಲ್ಲವನ್ನೂ ಕಂಡಿದ್ದಿತೆನ್ನಬೇಕು. ಅದಕ್ಕಾಗಿ ಮೌಲಾನಾ ಆಜಾದರವರನ್ನು ಅವಸರದಿಂದ ತರಿಸಿಕೊಂಡಿದ್ದರು. ಆಚಾರ್ಯರು ತಮ್ಮ ತಲೆಮೇಲೆ ಬಂದುದನ್ನು ಕಂಡು ಪ್ರಕಾಶಮ್ ಮಂತ್ರಿಮಂಡಲ ಗಾಬರಿಗೊಂಡ ವಾರ್ತೆಯಿಲ್ಲ. ಬಹುಶಃ ಆ 14 ಮಂದಿಯಲ್ಲಿ ತೀರಾ ಕುಳ್ಳನೆಂದರೆ ಇವರೇ. ಆದರೆ ಮೂರ್ತಿ ಎಲ್ಲರಿಗಿಂತಲೂ ಕಿರಿದಾದರೂ ಕೀರ್ತಿ ಎಲ್ಲರಿಗಿಂತ ಹೆಚ್ಚಿರುವದೂ ರಾಜಾಜಿಯದೇ.

ಡಾ| ರಾಜೇಂದ್ರ ಪ್ರಸಾದ

ಹೇಳಬೇಕೆ? ನಿಜಕ್ಕೂ ಹಿಂದುಸ್ಥಾನದಂತಹ ರಾಷ್ಟ್ರವು ಸ್ವತಂತ್ರವಾಗುವ ಕಾಲದಲ್ಲಿ ಅಧಿಕಾರ ಸ್ಥಾನದಲ್ಲಿರಲು ಪ್ರಸಾದರನ್ನು ಯೋಗ್ಯ ಜನ ಬೇರಿರಲಾರರು. ತೀವ್ರತೆಯಲ್ಲಿ, ಚಟುವಟಿಕೆಯಲ್ಲಿ, ಬಿಗುತನದಲ್ಲಿ ಇವರನ್ನು ಹಿಂದಿಕ್ಕುವವರಿರಬಹುದು. ಆದರೆ ಎಲ್ಲವನ್ನೂ ತೂಗಿ ನೋಡುವದಾದರೆ ಭಾರತವು ಸರ್ವಾಧಿಕಾರಿಯೊಬ್ಬನನ್ನು ಆರಿಸುವ ಸಂದರ್ಭ ಬಂದರೆ ರಾಜೇಂದ್ರರೇ ಬಂದಾರು. ಒಂದು ವಾದದಲ್ಲಿ ಅಥವಾ ನ್ಯಾಯದಲ್ಲಿ ಅಣುವಾಗಿ ಅಡಿಯಲ್ಲಿ ಸೇರಿಹೋಗಿರುವ ಮರ್ಮವನ್ನು ಶೋಧಿಸಬಲ್ಲ ಸೂಕ್ಷ್ಮಜ್ಞಾನವುಳ್ಳವರೆಂದರೆ ಬಾಬು ರಾಜೇಂದ್ರ ಪ್ರಸಾದರು. ಇಂತಹ ಜಟಿಲವಾದ ಪ್ರಶ್ನೆಗಳು ಮುಂದೆ ಬಂದಾಗಲೆಲ್ಲಾ ಗಾಂಧಿಜೀ ಸಮೇತ, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೇ ಬಾಬು ರಾಜೇಂದ್ರರ ಸಲಹೆ ಕೇಳುವ ಸಂಪ್ರದಾಯವಿದೆ. ಆದರೇನು ಮಾಡಲಿ—ಉಬ್ಬಸರೋಗವೊಂದು ಬಿಡಲೊಲ್ಲದು.

ಸರ್ದಾರ್ ವಲ್ಲಭಭಾಯಿ ಪಟೇಲ್

'ಸರಿ ಇವರಿದ್ದಾರೇನು? ಹಾಗಾದರೆ ಹೆದರಿಕೆಯಿಲ್ಲ' ಎಂದು ರಾಷ್ಟ್ರಾಭಿಮಾನಿಗಳೆಲ್ಲಾ ಸಮಾಧಾನ ತಾಳಬಹುದು ಕಾಂಗ್ರೆಸು ಬಗ್ಗುವದು ನ್ಯಾಯಕ್ಕಲ್ಲದೆ ಭಯಕ್ಕಲ್ಲ ಎಂಬುದನ್ನು ಈ ಬಾರಿ ಮಿ. ಜಿನ್ನರಿಗೆ ತೋರಿಸಿಕೊಟ್ಟವರು ನಿಜಕ್ಕೂ ಸರ್ದಾರರೇ. ಲೀಗನ್ನು ಸಮಜಾಯಿಸುವದಕ್ಕಾಗಿ ಒಂದಿಂಚೂ ಅಲುಗಾಡಲೊಪ್ಪದ ಕಾಂಗ್ರೆಸ್ ಸಮಿತಿಯ ಇಂದಿನ ದೃಢತೆಯ ಮೂಲ ಇವರೇ- ಉಕ್ಕಿನ ಮನುಷ್ಯ ವಲ್ಲಭಭಾಯಿ! ಅವರ ಕೈಗೆ ರೈಲ್ವೇಖಾತೆ ಇಂದೇ ಬರಲಿ- ನಾಳೆ ಆ ರೈಲ್ವೆ ಮುಷ್ಕರ ನಡೆಯುವಂತಿಲ್ಲ, ಗೃಹಖಾತೆ ಕೊಡಿ- ಜಾತೀಯ ಜಗಳ ಅಥವಾ ಇತರ ಕಿರುಕುಳಗಳ ಪ್ರಸ್ತಾಪ ಮತ್ತಿಲ್ಲ. ವಲ್ಲಭಭಾಯಿಗಳಿದ್ದ ಮೇಲೆ ಕಾಂಗ್ರೆಸ್ ವಂಚಿಸಲ್ಪಡುವದೆಂಬ ಭಯವೇ ಬೇಡ. ಅವರು ಪ್ರತಿಯೊಂದನ್ನೂ ಪಟ್ಟೊಂದು ತುಂಡೆರಡೆಂಬರತೆ ಮಾಡಿಯಾರು; ಮಿಕ್ಕವರಿಂದಲೂ ಅದೇ ರೀತಿ ಮಾಡಿಸಿಯಾರು.

FOR LIFE ASSURANCE
CONSULT
The New Gaurdian of India Life Insrce Co, Ltd.,
(Chairman:- The Hon'ble Mr. M. CT. M Chidambaram Chettyar.)
A policy in this progressive Life Office is a good investment; its Agency is a valuable business connection.
LOCALOFFICES IN SOUTH KANARA
MANGALORE & KARKALA.
HEAD OFFICE.
"United India Life Bldg"
Esplanade, Post Box No. 142.
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಚಾರ್ಜ ೮ ಆಣೆ-
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.
ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG.

ವಿವಿಧ ಪಾತ್ರೆಗಳು

ಯಾವತ್ತೂ ವಿಧ 'ಜೆ...' ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಶಾಲೋಪಯೋಗಿ ಸಾಹಿತ್ಯಗಳು
ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡ್ ಶೀಟ್‌ಗಳು, ಮುಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!
ನವಯುಗ ಪ್ರೆಸ್, ಉಡುಪಿ.



Approved firm by the Govt. of Mysore Certified by the Agent of the Govt. of Cylone Indian.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ವಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫ ವಾರ ೪೩] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: SRI A. B. SHETTY. M. L. A. [Vol. 25 No. 43

ಉಡುಪಿ ● 4—7—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ. ತಲೆವೇದನೆ, ಶೀತ, ವೇದನೆ, ಕುಲುಕು ಕತ್ತಿಗೆ, ಛುಳ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೂಡಿನ ನೋವು ಎಲ್ಲಾ ರೋಗಗಳಿಗೂ ಸಿದ್ಧ. ಪಥ, ಪುಳುಕಡ್ಡಿ ಮತ್ತು ಸಕ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ನರ್ಸಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ತೇಪ ಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

THE CANARA MUTUAL ASSURANCE COMPANY, LTD.,

Head Office:- **UDIPI, (S. India.)**

NEW APPOINTMENTS.

Applications from candidates (both Boys and Girls) of S. S. L. C. Standard are invited for clerical posts in the Company

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

Last date by which Applications should reach this Office shall be 30th June, 1946.

Udipi, 6-6-1946.

T. R. A. Pai,
Managing Director.

THE
Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area:– **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 8—8—45 ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ನವಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ, ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches. **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಪತಿತ ಮಕ್ಕಳ ಪಾಲನಾ ವ್ಯವಸ್ಥೆ ಬರಲಿ.

ಲೇ— 'ವಿಚಾರಿ'

ಉಡುಪಿಯ ಮಸೀದಿ ರಸ್ತೆಯ ತೋಡಿನಲ್ಲಿ--ಕೋರ್ಪರೇಶನ್ ಬೇಂಕಿನ ಮುಂಭಾಗದೊಂದು ಬದಿಯಲ್ಲಿ--ಇದೇ ಜೂನ್ ತಾ. 2೮ನೇ ಮುಂಜಾನೆ ಮಗುವಿನ ಶವವೊಂದು ಬಿದ್ದಿತ್ತು. ಗಂಡು ಮಗು; ನವಮಾಸ ತುಂಬಿ ಹಡೆದಂತಿದ್ದ ಕೂಸು; ಅತೀ ಸುಂದರ ಹಸುಳೆ. ಮಗುವಿನ ಒಂದು ಕಣ್ಣು ಘಾಯದಿಂದ ಹೋಗಿತ್ತು; ಘಾಯದಲ್ಲಿ ರಕ್ತದ ಕಲೆಯೂ ಕಾಣುತಿತ್ತು. ಕಣ್ಣನ್ನು ಕಾಗೆ ಕುಕ್ಕಿರಬೇಕೆಂದು ಕೆಲವರು ಅಭಿಪ್ರಾಯಪಟ್ಟರು; ಆದರೆ ಆ ನಸುಕು ಮುಂಜಾನೆಯಲ್ಲಿ ಕಾಗೆ ಹಾರಾಡಿರಲಾರದು. ಪ್ರಾಯಶಃ ತೋಡಿಗೆ ಹಾಕುವಾಗ ಅದೆ ಘಾಯವಾಗಿರಬೇಕದು. ಅದೇನೇ ಇದ್ದರೂ ಘಾಯದಲ್ಲಿ ರಕ್ತದ ಕಲೆಯಿರಬೇಕಾದರೆ ಅದಾಗುವ ವರೆಗೂ ಮಗು ಜೀವದಲ್ಲಿದ್ದಿರಬೇಕು. ಮಗುವನ್ನು ಕಂಡಮೇಲೆಯೇ ಆಸುಪಾಸಿನ ಕೆಲವರಿಗೆ ನಸಕಿನಲ್ಲಿ ಹಸುಕೂಸಿನ ಅಳು ಕೇಳಿದ ನೆನಪಾಗಿತ್ತು, ಅದೇನೆಂಬುದನ್ನು ನೋಡಲು ಯಾರೂ ಸಕಾಲದಲ್ಲಿ ಹೊರಬಾರದಿದ್ದುದರಲ್ಲಿ ಆಶ್ಚರ್ಯವಿಲ್ಲ; ಕೂಸೊಂದನ್ನು ಕೊಲ್ಲಲು ರಸ್ತೇ ಬದಿಗೆ ತಂದಿರಬಹುದೆಂಬ ಊಹೆ ಥಕ್ಕನಾರಿಗೂ ಬರುವಂತಹದಲ್ಲ. ಏನೋ, ಯಾರದೋ ಎಂದು ನಿದ್ದೆಗಣ್ಣನ್ನು ತೆರೆಯದಿರುವದೇ ಸ್ವಾಭಾವಿಕ. ಅಂತೂ ಮಗುವಿನ 'ಕೊಲೆಯಾಗಿತ್ತು. ಕುಟುಂಬಿಕರಿಂದ ಕಾಣಲಾಗುವ ದೃಶ್ಯ ಅದಾಗಿರಲಿಲ್ಲ. ಆ ತಿಳಿ ಮುಂಜಾನೆಯಲಿ ಸಾಯುವದಕ್ಕಾಗಿಯೇ ಹುಟ್ಟಿದ್ದ-ರಸ್ತೆಯಲ್ಲಿ ಬಿದ್ದಿದ್ದ-ಆ ಹಸುಳೆಯನ್ನು ಕಂಡವರ ಕರುಳು ಬೆಂದಿತು; ಜನ್ಮಜನ್ಮಗಳ, ದಿಕ್ಕುದೆಸೆಗಳ, ಸ್ವರ್ಗ ನರಕಗಳ ಸ್ಮರಣೆ ಬಂದು ವ್ಯಸನವೋ ಸಂಕಟವೋ ಎಂದು ಹೇಳಲಾಗದ ಒಂದು ವಿಧದ ತಳಮಳವುಂಟಾಯಿತು. ಆ ಕದಡು ಮನಸ್ಸಿನಲ್ಲೇ 'ಮನುಷ್ಯನು ಮಾಡಲಾಗದುದೇನಿದೆ?' ಎಂಬ ಪ್ರಶ್ನೆ ಹುಟ್ಟಿತು. 'ಅಟಂ ಬೋಂಬಿನ ಪ್ರಥಮ ವಾರ್ತೆ ಬಂದಾಗ ಕೂಡ ಈ ಪ್ರಶ್ನೆ ಇಷ್ಟು ಬಲವಾಗಿ ಹುಟ್ಟಿರಲಿಲ್ಲ. ಶಿಶುವನ್ನು ಅಲ್ಲಿ ಹಾಗೆ ಬಿಟ್ಟವರು ಭ್ರೂಣಹತ್ಯೆಯೊಂದನ್ನೇ ಮಾಡಿದ್ದಲ್ಲ; ಊರವರ ಮನೋಹತ್ಯೆಯನ್ನೂ ಮಾಡಿದ್ದಾರೆ. ಇಂತಹ ಕೊಲೆ ಎಷ್ಟು ನಡೆಯುತ್ತಿರುವವೋ ಯಾರು ಬಲ್ಲ. ಆದರೆ ಹೀಗೆ, ಎಲ್ಲರ ಕಣ್ಣಿಗೆ ಬೀಳುವ ರೀತಿಯಲ್ಲಾಗುವದು ಅಪರೂಪ. ಆ ಪಾಪಿಗಳ ಕಾರ್ಯ ಗುರಿ ತಪ್ಪಿಲ್ಲ; ಆದರೆ ಕಾರ್ಯರೀತಿ ತಪ್ಪಿದ್ದಿರಬೇಕು. ನಿಜಕ್ಕೂ ಶಿಶುವನ್ನು ಅಲ್ಲಿ ಹಾಕುವ ಉದ್ದೇಶ ಕೊಲೆಗಾರರಿಗಿದ್ದಿರಲಾರದು. ಸಮಾಜದಿದಿರು ತಾಯ್ತನ ಹೊಂದಬಾರದ ಸ್ಥಿತಿಯಲ್ಲಿರುವವಳು ಗರ್ಭಕ್ಕೆ ನವಮಾಸ ತುಂಬುವ ವರೆಗೂ ಸುಮ್ಮಗಿದ್ದಳೆಂದರೆ ಅದು ಆಶ್ಚರ್ಯ; ಒಂದೋ ಆ ಮೊದಲು ಗರ್ಭನಿರೋಧ ಮತ್ತು ಗರ್ಭಪಾತಕ್ಕಾಗಿ ಅವಳು ನಡಿಸಿದ ಪ್ರಯತ್ನಗಳು ನಿಷ್ಫಲವಾಗಿರಬೇಕು; ಇಲ್ಲವೇ ಕ್ರಮಪ್ರಕಾರ ಹೆತ್ತ ನಂತರ 'ವಿಲೇವಾರಿ' ಮಾಡುವದೇ ಸುಲಭವೆಂಬಾಕೆಯ ಅಭಿಪ್ರಾಯವೋ ಅನುಭವವೋ ಇದ್ದಿರಬೇಕು. ಹೇಗಿದ್ದರೂ ಗರ್ಭ ತುಂಬಿ ಹೆರುವದೆಂದಾದ ಮೇಲೆ ಹೆರುವ ಸಮಯ, ಸ್ಥಳದ ಮೇಲೆ ಅಧಿಕಾರ ಉಳಿಯುವದಿಲ್ಲ. ಈ ಶಿಶುಹುಳವನ್ನು ಹೆತ್ತವಳು ಮುಂಜಾನೆ ಸಮೀಪಿಸುವ ಹೊತ್ತಿಗೇನೇ ಹೆತ್ತಿರಬೇಕು. ಉಡುಪಿಯಲ್ಲಿ 'ಕಲ್ಸಂಕ ತೋಡು' ಹೆಸರಾದುದು; ಈಗಂತೂ ಸೆಳೆತ ವಿಶೇಷ. ಆ ಶಿಶುವನ್ನು ಆ ತೋಡಿಗೆ ಹಾಕುವ ಉದ್ದೇಶವಿದ್ದಿರಬಹುದು; ಮಗು ಬಿದ್ದಿದ್ದ ಸ್ಥಳಕ್ಕಿಂತ ಆ ತೋಡು ಸುಮಾರು ಅರ್ಧ ಫರ್ಲಾಂಗು ದೂರವಿದೆ. ಇಲ್ಲಿಯೇ ಜನರಿಗೆ ಕೇಳುವಂತೆ ಕೂಗಹತ್ತಿದ ಶಿಶುವನ್ನು ಇನ್ನೂ ಅರ್ಧ ಫರ್ಲಾಂಗು ಮೆರವಣಿಗೆ ಮಾಡುವದಸಾಧ್ಯವಾಗಿರಬೇಕು. ಮೇಲಾಗಿ ಆ ರಾತ್ರಿಯಿಡೀ ಭಾರೀಮಳೆ ಬಂದಿತ್ತು. ರಸ್ತೇ ಬದಿಯ ಚರಂಡೀ ತೋಡು ಕೂಡಾ ಉಗ್ರ ಪ್ರವಾಹವಾಗಿತ್ತು. ಅದುಹೋಗಿ ಕೂಡುವದೂ ಕಲ್ಸಂಕ ತೋಡಿಗೇನೇ. ಅದ್ದರಿಂದ ಶಿಶು ಅಲ್ಲಿಯೇ ರಸ್ತೇ ಪಕ್ಕದ ತೋಡಿಗೆಸೆಯಲ್ಪಟ್ಟಿರಬೇಕು. ಆದರೆ ಮಗು ಬೀಳುವಾಗಲೇ ತೋಡ ನೀರಿಳಿದಿರಬೇಕು; ಆದಿನ ಮುಂಜಾನೆಯ ಹೊತ್ತಿಗೆ ಮಳೆಯೇ ಇರಲಿಲ್ಲ. ಆ ಸಂಬಂಧವಾಗಿನಡೆದ ಪೋಲೀಸು ತಪಾಸಣೆ, ಗುಮಾನೆ, ದಸ್ತಗಿರಿ, ತನಿಖೆಕಾರ್ಯಗಳ ಪ್ರಸ್ತಾಪ ಇಲ್ಲಿ ಬೇಡ. ಸಾಮಾಜಿಕ ಶಿಸ್ತು-ಗೌರವ ರಕ್ಷಣೆಯ ನಿಷ್ಠುರತೆ-ಪಾವಿತ್ರ್ಯಪಾಲನೆಗಳಲ್ಲಿ ತಮ್ಮ ಸರಿಗಟ್ಟುವವರಿಲ್ಲವೆಂಬ ಠೇಂಕಾರ ಯಾವ ಸಮಾಜಕ್ಕೂ ಇರಬಾರದು; ಯಾವುದೊಂದು ಮನೆತನಕ್ಕೂ, ಯಾರೊಬ್ಬರಿಗೂ ಅಂತಹ ವಿಶ್ವಾಸವಿರಕೂಡದು, ಎಂಬೊಂದು ಎಚ್ಚರಿಕೆ ಮಾತ್ರ ಇದ್ದಿರಲಿ. ಪ್ರಕೃತಿ ಸಹಜ, ಹಸಿವು, ಸ್ವಭಾವ ಜನ್ಯತೃಷೆ, ಅಥವಾ ವರ್ಗದ್ವೇಷ ಇರಲಿ-ಅದನ್ನು ದಿರಿಸಿ ತಡೆಯುವಂತಹದು ಈ ಪ್ರಪಂಚದಲ್ಲೇ ಇಲ್ಲ. ಅಂತಹ ತಡೆಯೆಂದು ಮಹಿಳೆಯರನ್ನು ಒಚ್ಚಿಡುವ ಪದ್ಧತಿ ವಹಿಸಿದವರು ಈ ಹಸಿವು ಪರಿಹಾರಕ್ಕೊಂದು ಏಕಾಂತದ ಅನುಕೂಲತೆಯೊದಗಿಸಿಕೊಟ್ಟಂತೆಯೇ ಸರಿ!

ತಾಯಿ ಅಪರಾಧಿಯೆ?

ಜನರ ಜ್ಞಾನಚಕ್ಷುವನ್ನು ತೆರೆಯಿಸುವ ಉದ್ದೇಶದಿಂದಲೇ ಈ ಪ್ರತ್ಯಕ್ಷ ಚಿತ್ರವನ್ನಿಲ್ಲಿ ಬಿಡಿಸಿ ತೋರಿಸಬೇಕಾಯಿತು. ಇಂತಹ ಒಂದು ಸಂಗತಿಯನ್ನು ಸಹಿಸುವ ಅಥವಾ ಕ್ಷಮಿಸುವ ಶಕ್ತಿ ಯಾವುದಕ್ಕಾದರೂ ಇದೆಯೇ? ಈ ಮಾದರಿಯ-ಅಪರಾಧಿಯಲ್ಲದವರ ಕೊಲೆ, ಉದ್ದೇಶವಿಲ್ಲದವರಿಂದಾಗುವ ಬೇರೆ ನಿದರ್ಶನವಿದ್ದೀತೆ? ಮಾನವ ಪ್ರಪಂಚಕ್ಕೆ ಹೊಸತಾಗಿ ಇಳಿಯುವ ದೈವಿಕ ಮುದ್ದೆ- ಪ್ರಪಂಚದಲ್ಲಿರುವ ಸರ್ವರೂ ನಿಸ್ಸಂಕೋಚವಾಗಿ, ಅನಿರ್ಬಂಧವಾಗಿ, ತುಂಬು ಹೃದಯದಿಂದ ಬಿದ್ದು ಕೊಂಡಾಟನಡಿಸಬಹುದಾದ ಹಾಲ ಹಸುಳೆ- ಅದನ್ನು ಕೊಲೆಮಾಡಿದ ಅಪರಾಧಕ್ಕೆ ಸಮಾನವಾದುದು ಪ್ರಪಂಚದಲ್ಲಿ ಬೇರಾವುದಿದ್ದೀತು? ಇಂತಹ ಮಹಾಪರಾಧಕ್ಕೆ ಯಾರು ಹೊಣೆ? ಅದಕ್ಕೆ ತಕ್ಕ ಶಿಕ್ಷೆಯನ್ನು ಯಾರು ಅನುಭವಿಸಬೇಕು? 'ಆ ಕೊಲೆಗಾತಿಯೇ ಅನುಭವಿಸಬೇಕು; ಅವಳನ್ನು ನಿಧಾನವಾಗಿ ಕೊಚ್ಚಿ ಅಥವಾ ಉಸಿರು ಕಟ್ಟಿಸಿ ಕೊಲ್ಲಬೇಕು' ಎಂದು ಎಲ್ಲರೂ ಹೇಳಬಹುದು. ಹೌದು; ಈ ಕೃತ್ಯವು ಅಂತಹ ಶಿಕ್ಷೆ ಹೊಂದತಕ್ಕಂತಹದೇ ಇದೆ; ಆದರೆ ಅನ್ನನುಭವಿಸಬೇಕಾದವಳು ನಿಜಕ್ಕೂ ಆ ಹತಭಾಗ್ಯೆಯೆ? ಅವಳ ಕೃತ್ಯವೇ ಅವಳು ಅನುಭವಿಸಿದ ಮಹಾ ಶಿಕ್ಷೆ; ಅಷ್ಟು ದೊಡ್ಡ ಶಿಕ್ಷೆಯು ಪ್ರಪಂಚದಲ್ಲಿ ಬೇರಾರಿಗೂ ಆಗಿರಲಾರದು. ತನ್ನ ಹೃದಯದೆರಕದ ಪರಿಣಾಮವಾಗಿ ಹುಟ್ಟಿದ—ತಾನಿದ್ದುದರಿಂದಾಗಿಯೇ ಅದೂ ಇದ್ದ- ತನ್ನ ಶಿಶುವನ್ನು ಕೊಲೆ ಮಾಡಿದವಳು, ಆಕೆ ತನ್ನ ದೇಹದೊಂದು ಭಾಗವನ್ನು ಕಡಿದು ಕೊಂಡಳೇ ಹೊರತು ಬೇರಾರಿಗೇನು ಅನ್ಯಾಯಮಾಡಿದಂತಾಯಿತು? ಆದರ ನೋವನ್ನು, ಆ ಹೊಟ್ಟೆ ಉರಿಯನ್ನು ಅವಳು ಸಹಿಸ ಬೇಕಾಗುವಷ್ಟು ಬೇರಾರು ಅನುಭವಿಸಬೇಕಾಗಿದೆ? ಆ ಮಗುವೂ ಈ ತಾಯಿಯಷ್ಟು ವೇದನೆಯನುಭವಿಸಿರಲಾರದು; ಇವಳು ಸತ್ತಷ್ಟು ಬಲವಾಗಿ ಅದು ಸಾಯದು! ಹಾಗಾದರೆ ಅವಳಿಗೆ ಇದಕ್ಕಿಂತಲೂ ದೊಡ್ಡದಾದ ಶಿಕ್ಷೆಯನ್ನು ತರುವದೆಲ್ಲಿಂದ? ಅವಳು ತನ್ನ ದೇಹದೊಂದು ಭಾಗವನ್ನು ತಾನೇ ಕೊಯ್ದುಕೊಂಡಿದ್ದಾಳೆ; ತನ್ನ ಹೃದಯವನ್ನು ತಾನು ಇರಿದುಕೊಂಡಿದ್ದಾಳೆ; ಕೊಲೆಯಾಗುವವನ ಸಂಕಟ- ಕೊಲೆಮಾಡುವವನ ಉದ್ವೇಗ, ಎರಡನ್ನೂ ಆಕೆಯೊಬ್ಬಳೇ ಅನುಭವಿಸಿದ್ದಾಳೆ. ಯಾವ ಶಿಕ್ಷೆಯೂ ಇದಕ್ಕೆ ಸಾಟಿಯಲ್ಲ. ಆದ್ದರಿಂದ ಅವಳು ದ್ವೇಷಕ್ಕರ್ಹಳಲ್ಲ; ಕನಿಕರಕ್ಕೆ ಭಾಧ್ಯಳು. ಕೊನೆಯ ಪಕ್ಷ ಆ ಕೊಲೆಯಾದ ಶಿಶುವಿನ ಮೇಲಷ್ಟು ಕರುಣೆ ಮೊಳೆಯುತ್ತದೋ ಅಷ್ಟೇ ಸಹಾನುಭೂತಿ ಅವಳ ಮೇಲೂ ಇರಬೇಕು. ಆರೋಪ ಬಂದೊಡನೆಯೇ ಆಕೆಯನ್ನು ಅಪರಾಧಿಸ್ಥಾನದಿಂದ ಮುಕ್ತಾಯಗೊಳಿಸಬೇಕು.

ತಂದೆಯಾದವ?

ಹಾಗಾದರೆ ಈ ಹೇಯ ಅತ್ಯಾಚಾರದ ಹೊಣೆ ಯಾರ ತಲೆಯ ಮೇಲೆ? ಆ ಕೂಸನ್ನು ಹುಟ್ಟಿಸಿದವನ ಮೇಲೆ ಬೀಳುತ್ತದೆಯೆ? ಬಹುಶಃ ತಾಯಿಗಿಂತ ಹೆಚ್ಚಾಗಿ ಆ ಜವಾಬ್ದಾರಿ ತಂದೆಯ ಮೇಲೆ ಬಿದ್ದೀತು. ಆದರೆ ಇಂತಹ ಸಂದರ್ಭಗಳಲ್ಲಿ ಆತ ಕಾಣೆಯಾಗುತ್ತಾನೆ. ಕಳವು ಮಾಡಿದವನಿಗಿಂತ ಮೊದಲಾಗಿ ಆತ ದೊರೆಯದೆ ಹೋದರೆ ಕೊನೆಯ ವರೆಗೂ ಕಳ್ಳ ಸೊತ್ತನ್ನಿಟ್ಟುಕೊಂಡವನೇ ಕಳ್ಳನಾಗ ಬೇಕಾಗುತ್ತದೆ. ಅಂತೆಯೇ ಪ್ರಕೃತಿನಿಯಮದಿಂದಾಗಿ—ಹುಟ್ಟಿಸಿದ ತಂದೆಯಾದವನು ತಪ್ಪಿಸಿಕೊಂಡು ಹೊತ್ತು ಹೆತ್ತ ತಾಯಿಯೇ ಅಪರಾಧಿಯಾಗಿ ಸಿಕ್ಕುತ್ತಾಳೆ ಈ ದುಷ್ಕೃತ್ಯದಮೂಲದಲ್ಲಿ ಹೆಜ್ಜೆ ಮುಂದಿಟ್ಟವನು ಅವನೇ ಆಗಿರಬಹುದು; ಅವಳ ಅಪವಾದ ಭೀತಿ, ಸ್ತ್ರೀಸಹಜ ಸಂಕೋಚ, ಭಾವೀ ವಿಪತ್ತಿನ ಭಯ, ಇತ್ಯಾದಿ ಪರದೆಗಳನ್ನೆಲ್ಲಾ ಹರಿದು ಆಕೆಯನ್ನು ತಯಾರುಗೊಳಿಸಿದವನೇ ಆತನಿರಬಹುದು ಅಂದಮೇಲೆ ಅವನನ್ನು ಪ್ರಥಮಾರೋಪಿಯಾಗಿಯೂ ಅವಳನ್ನು ದ್ವಿತೀಯಾರೋಪಿಯಾಗಿಯೂ ಗಣಿಸಬಹುದು? ವಿಚಾರಬುದ್ಧಿಯದನ್ನೊಪ್ಪುವದಿಲ್ಲ. ತಾಯಿಯು ಸ್ವಲ್ಪನಾದರೂ ಶಿಶುವಿನ ಕೊಲೆಯು ಈ ಕಳ್ಳ ತಂದೆಯ ಮೇಲೆ ಪರಿಣಾಮವನ್ನುಂಟುಮಾಡದೆ ಹೋಗುವದಿಲ್ಲ. ಯಾವ ತಪ್ಪಿಗಾದರೂ ಮನಸ್ಸೇ ಮೂಲ ತಾನೆ? ಮನಶ್ಶಾಸ್ತ್ರವರಿತವರ ಕೈಯಲ್ಲೇ ತಪ್ಪಿಗೆ ಪ್ರಾಯಶ್ಚಿತ್ತವೀವ ಅಧಿಕಾರವಿದ್ದಲ್ಲಿ ಆ ನ್ಯಾಯಾಧೀಶ ಇಂತಹ ತಂದೆತಾಯಿಗಳು ತಮ್ಮ ತಪ್ಪಿನ ಹತ್ತುಪಾಲಷ್ಟು ಶಿಕ್ಷೆಯನ್ನು ಸ್ವತಃ ಅನುಭವಿಸಿದ್ದಾರಾದ್ದರಿಂದ ಅದಕ್ಕೆ ಪರಿಹಾರವಾಗಿ ಅವರಿಗೆ ಯೋಗ್ಯ ಆರೈಕೆ ದೊರೆಯಬೇಕೆಂದು ವಿಧಿಸಿಯಾನು. ತಾಯಿಯ ಮಾತಂತಿರಲಿ, ತಂದೆಯಾದ ಮನುಷ್ಯ ಕೂಡಾ ಮಗುವನ್ನುಳಿಸಿ, ಮಾನವನ್ನುಳಿಸಲು ಸಾಧ್ಯವುಳ್ಳ ಯಾವ ಹಂಚಿಕೆಯೂ ದೊರೆಯದಿದ್ದಲ್ಲಿ ಮಾತ್ರ ಆತ್ಮಹತ್ಯೆಗೆಳಸುವಂತೆ ಈ ಕೃತ್ಯಕ್ಕೂ ಇಳಿದಾನು. ಇಲ್ಲಿ ಮಾನದ ಪ್ರಶ್ನೆಯು ಮುಖ್ಯವಾಗಿ ತಾಯಿಯದು; ಈ ದುಷ್ಕೃತ್ಯದಿಂದಾಗಿ ತನ್ನಲ್ಲೇ ಘಾತಿಗೂ ಸಿಕ್ಕಿದ ಶಿಕ್ಷೆಯ ಅನುಭವ ಹೊಂದುವವಳೂ ಅವಳೇ. ಈ ದುರಂತ ನಾಟಕದಲ್ಲಿ

[೧೧ನೇ ಪುಟ ನೋಡಿರಿ]

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: DHARWAR.

Or

BRANCH OFFICE:

Court Road, UDIPI, S. K.

ನ್ಯಾಯಾಧಿಕಾರವನ್ನು ಕ್ರಿಯಾಧಿಕಾರದಿಂದ ಬಿಂಗಡಿಸುವ ಆವಶ್ಯಕತೆ

ಕಲೆಕ್ಟರ್ ಶ್ರೀ. ಪಿ. ರಾಮದಾಸರ ವರ್ತನೆಯ ಮೇಲೆ ಹೈಕೋರ್ಟು ಜಡ್ಜರ ಟೀಕೆ.

ಇತ್ತೀಚೆಗಿನ ವರೆಗೆ ದ. ಕ. ಜಿಲ್ಲಾ ಮೆಜಿಸ್ಟ್ರೇಟ್ ಮತ್ತು ಕಲೆಕ್ಟರರಾಗಿದ್ದ ರಾವ್ ಬಹದೂರ್ ಪಿ. ರಾಮದಾಸರು, ಬಜ್ಪೆ ಜಕ್ರಿಬ್ಯಾರಿಯ ಮೇಲಿನೊಂದು ಮೊಕದ್ದಮೆಯ ಸಂಬಂಧವಾಗಿ ಮಾಡಿದ ಒಂದು ವರದಿಯನ್ನು ಟೀಕಿಸಿ, ಇದೇ ಜೂನ್ 24ರಲ್ಲೊಂದು ಆಜ್ಞೆ ಕೊಡುವ ಸಂದರ್ಭದಲ್ಲಿ "ನ್ಯಾಯಾಧಿಕಾರ ಮತ್ತು ಕ್ರಿಮಿನಲ್ ಕ್ರಿಯಾಧಿಕಾರಗಳನ್ನು ಪ್ರತ್ಯೇಕಿಸುವ ಸುಧಾರಣೆ ಅತ್ಯಗತ್ಯವೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ"ಎಂದು ಮದ್ರಾಸ್ ಹೈಕೋರ್ಟಿನ ಜಸ್ಟಿಸ್ ಚಂದ್ರಶೇಖರ ಅಯ್ಯರರೆಂದಿದ್ದಾರೆ.

ಮೊಕದ್ದಮೆಯ ಕಥೆ

ತನ್ನಲ್ಲಿರುವ ಬತ್ತದ ಸ್ಟಾಕಿನ ಕುರಿತು ತಪ್ಪು 'ಡಿಕ್ಲರೇಶನ್' ಕೊಟ್ಟನೆಂಬ ಆರೋಪಕ್ಕೊಳಗಾಗಿ ಬಜ್ಪೆ ಜಕ್ರಿಬ್ಯಾರಿಯೆಂಬವನಮೇಲೆ ಮಂಗಳೂರಿನ ಎಡಿಶನಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿತ್ತು. ಈ ಪ್ರೊಸಿಕ್ಯೂಶನಿಗೆ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರ ಸಂಕಲ್ಪನಾಗಿದೆ ಎಂಬುದನ್ನು ಋಜುಪಡಿಸಲು ಪ್ರೊಸಿಕ್ಯೂಶನ್ ಕಡೆಯಿಂದ ರಿಕಾರ್ಡು ದಾಖಲಾಗಿತ್ತು. ಹೀಗೆ ದಾಖಲಾತಿಕೊಂಡಿದ್ದ ರಿಕಾರ್ಡಿನಲ್ಲಿದ್ದಂತೆ, ಆರೋಪಿಗೆ ಬಂಧನ ಶಿಕ್ಷೆ ಯೀಯುವಂತೆ ಒತ್ತಾಯಿಸತಕ್ಕದೆಂದು ತಾಲೂಕು ಸಪ್ಲೈ ಆಫೀಸರರಿಗೂ, ಈ ಮೊಕದ್ದಮೆ ನಡಿಸುತಿದ್ದ ಸಹಾಯಕ ಪಬ್ಲಿಕ್ ಪ್ರೊಸಿಕ್ಯೂಟರರಿಗೂ ಜಿಲ್ಲಾ ಮೆಜಿಸ್ಟ್ರೇಟರು ಸೂಚಿಸಿದ್ದರೆಂಬುದು ತಿಳಿದುಬಂತು. ಜಿಲ್ಲಾ ಮೆಜಿಸ್ಟ್ರೇಟರ ಇಂತಹ ಸೂಚನೆಯು, ಅವರ ಕೈಕೆಳಗಿನ ಅಧಿಕಾರಿಯಾಗಿರುವ ವಿಚಾರಣಾ ಮೆಜಿಸ್ಟ್ರೇಟರಮೇಲೆ ಪ್ರಭಾವ ಬೀರಬಹುದೆಂದೂ, ತನಗೆ ನ್ಯಾಯವಾಗದೆಂಬ ಭಯವಿದೆಯೆಂದೂ ಈ ಮೊಕದ್ದಮೆಯನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಬೇಕೆಂದೂ ಆರೋಪಿಯು ಹೈಕೋರ್ಟಿಗೆ ಅರ್ಜಿಮಾಡಿದ್ದ. ಶ್ರೀ. ಜಸ್ಟಿಸ್ ಚಂದ್ರಶೇಖರ ಅಯ್ಯರರು ಈ ಟ್ರಾನ್ಸ್‌ಫರ್ ಅರ್ಜಿಯನ್ನು ಡಿಸ್‌ಮಿಸ್ ಮಾಡಿದರು. ಆದರೆ ಇಂತಹ ಸೂಚನೆಗಳು "ಅತ್ಯಂತ ದುರದೃಷ್ಟದಾಯಿಗಳಿವೆ ಮತ್ತವು ನ್ಯಾಯಾಡಳಿತೆಯ ನಿಷ್ಪಕ್ಷಪಾತತೆಯ ಕುರಿತು ಸಾರ್ವಜನಿಕ ವಿಶ್ವಾಸಕ್ಕೆ ಭಂಗವೊಡ್ಡುವದು ಖಚಿತವಿದ್ದು ನ್ಯಾಯಸ್ಥಾನದ ಸ್ವಾತಂತ್ರ್ಯವನ್ನು ತಗ್ಗಿಸುವಂತಾಗುತ್ತದೆ" ಎಂದಭಿಪ್ರಾಯಪಟ್ಟಿದ್ದರು. ಅಂತೆಯೇ ಈ ಸಂಬಂಧದ ಒಂದು ರಿಪೋರ್ಟನ್ನೂ ಜಿಲ್ಲಾ ಮೆಜಿಸ್ಟ್ರೇಟರಿಂದ ಅವರು ಕೇಳಿದ್ದರು ಜಿಲ್ಲಾ ಮೆಜಿಸ್ಟ್ರೇಟರು ತನ್ನ ರಿಪೋರ್ಟನ್ನು ಒಪ್ಪಿಸುತ್ತಾ ಹೈಕೋರ್ಟಿನ ಟೀಕೆಗಳು ಯೋಗ್ಯವಲ್ಲವೆಂದೂ, ಜಿಲ್ಲಾ ಮೆಜಿಸ್ಟ್ರೇಟರ ಕಾರ್ಯಕ್ರಮಗಳವೆಂಬ ತಪ್ಪಭಿಪ್ರಾಯದಿಂದ ಅವು ಹೊರಟಂತಿವೆಯೆಂದೂ ನಿವೇದಿಸಿಕೊಂಡು, ಆ ಮೊಕದ್ದಮೆಯ ಕಾರ್ಯಕಲಾಪಗಳಿಂದ ಈ ಟೀಕೆಗಳನ್ನು ತೊಡೆದು ಹಾಕಬೇಕೆಂದು ವಿಜ್ಞಾಪಿಸಿಕೊಂಡಿದ್ದರು

ಹೈಕೋರ್ಟು ಜಡ್ಜರ ಆಜ್ಞೆ

ಜಿಲ್ಲಾ ಮೆಜಿಸ್ಟ್ರೇಟರ ರಿಪೋರ್ಟನ್ನು ಪರಾಂಬರಿಸಿ ಆಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರರ ವಾದವನ್ನೂ ಕೇಳಿಕೊಂಡು, ಹೈಕೋರ್ಟು ನ್ಯಾಯಾಧೀಶರು ಕೊಟ್ಟ ಅಪ್ಪಣೆ ಹೀಗಿದೆ. "ಕಲೆಕ್ಟರ್ ರಾವ್ ಬಹದೂರ್ ಪಿ ರಾಮದಾಸರಿಂದ ಬಂದಿರುವ ರಿಪೋರ್ಟನ್ನೋದುವಾಗ ರಮ್ಯತೆಯಿದೆ. ರೈತರು ತಮ್ಮಲ್ಲಿರುವ ಭತ್ತದ ಸ್ಟಾಕಿನ ಸರಿಯಾದ ಡಿಕ್ಲರೇಶನ್ ಕೊಡುವ ಕುರಿತಾಗುವ ಫೋರ್ಜರಿಗಳಿಗಾಗಿ ಭಾರತ ರಕ್ಷಣಾ ಶಾಸನದ ನಿಯಮಗಳನ್ವಯದ ಪ್ರೊಸಿಕ್ಯೂಶನುಗಳ ನಮೂದನೆಯೊಂದಿಗೆ ಸರಕಾರದ ಧೋರಣೆಯನ್ನು ಸ್ಪಷ್ಟಪಡಿಸಲೆತ್ನಿಸುವಾಗ, ಅದು ಅವಿವೇಕಿಯಾಗಿದೆ; ಮತ್ತು ತಾನು ಮಾಡಿದುದರ ನ್ಯಾಯಸಮರ್ಥನೆ ಮಾಡಿಕೊಳ್ಳುವಾಗ ಅದು ಮೂರ್ಖತನದ್ದಾಗಿದೆ ಈ ಬಿಕ್ಕಟ್ಟಿನ ಕಾಲದಲ್ಲಿ ಭತ್ತದ ಸ್ಟಾಕುಗಳ ವಂಚನೆಯು ಸಮಾಜದ್ರೋಹ ಕೃತ್ಯವೆಂದೂ, ಅದು ಋಜುವಾತುಗೊಂಡಾಗಲೆಲ್ಲಾ ಯೋಗ್ಯ ಶಿಕ್ಷೆಯಾಗುವದೆಂದೂ ಈ ಮಹನೀಯನು ಹೈಕೋರ್ಟಿಗೆ ಹೇಳಿಕೊಡುವ ಆಗತ್ಯವಿಲ್ಲ. ಬದಲಿಗೆ ಸ್ವತಃ ಅವರ ಅಭಿಪ್ರಾಯಾನುಗುಣವಾಗಿಯೇ ಇಂತಹ ಸೆಂಕ್ಷನಿನ ಅಗತ್ಯವಿಲ್ಲವೆಂದಿರುವಾಗ, ಪ್ರೊಸಿಕ್ಯೂಶನಿಗೆ ಒಂದು ಬರಹ ನಿಶಿ ಸೆಂಕ್ಷನ್ ಕೊಡುವ ಆಗತ್ಯವೇನಿತ್ತು ಎಂಬುದರ ಕಾರಣಕೊಡಬೇಕೆಂದೇ ಅವರನ್ನು ಕೇಳಿಕೊಳ್ಳಲಾಗಿತ್ತು; ಮತ್ತು ಬಂಧನ ಶಿಕ್ಷೆ ವಿಧಿಸುವಂತೆ ಒತ್ತಾಯಿಸಬೇಕೆಂದು ಮಂಗಳೂರಿನ ತಾಲೂಕು ಸಪ್ಲೈ ಆಫೀಸರರಿಗೂ, ಮಂಗಳೂರು ಆಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರರಿಗೂ ಸೂಚನೆಗಳಿದ್ದ ಈ ಸೆಂಕ್ಷನ್ ಆಜ್ಞೆಯನ್ನ ಮೆಜಿಸ್ಟ್ರೇಟರ ಮುಂದೆ ದಾಖಲಾಗಲು ಬಿಟ್ಟ ಕಾರಣವೇನು ಎಂದೂ ಕೇಳಲಾಗಿತ್ತು. ತಾನಿದನ್ನು, ಜಿಲ್ಲಾ ಕಲೆಕ್ಟರನ ಅಧಿಕಾರದಿಂದ ಮಾಡಿದೆನಲ್ಲದೆ ಜಿಲ್ಲಾ ಮೆಜಿಸ್ಟ್ರೇಟನಾಗಿಯಲ್ಲ; ಮತ್ತು ಆ ಶಿಕ್ಷೆಯಲ್ಲದಕವಾಗಿದ್ದುದೆಲ್ಲಾ ತನ್ನೀ ಖಾತೆಗೆ ಸಂಬಂಧಿಸಿದ ಅಥವಾ ಕ್ರಿಯಾಧಿಕಾರೀ ಸೂಚನೆಯೆಂದೇ ಅವರ ಮುಖ್ಯ ಸ್ವಸಮರ್ಥನೆ.

ಸದ್ಯಸ್ಥಿತಿಯಲ್ಲಿ ಒಬ್ಬ ಜಿಲ್ಲಾ ಕಲೆಕ್ಟರನಾಗಿರುವ ಮನುಷ್ಯನೇ,ಯಾರ ಕೈಕೆಳಗೆ ಕೆಳಗಿನ ಮೆಜಿಸ್ಟ್ರೇಟರುಗಳಿದ್ದಾರೋ ಆ ಜಿಲ್ಲಾ ಮೆಜಿಸ್ಟ್ರೇಟನೂ ಆಗಿದ್ದಾನೆ ಎಂಬುದನ್ನೂ, ಆ ಜಿಲ್ಲೆಯ ಮಟ್ಟಿಗೆ ಅವನೇ ಪೋಲಿಸಿನ ಮುಖ್ಯಾಧಿಕಾರಿಯಾಗುತ್ತಾನೆಂಬುದನ್ನೂ ಇವರಂತಹ ಅನುಭವಶಾಲಿ ಅಧಿಕಾರಿಯು ಸತ್ಯಕ್ಕೂ ತಿಳಿದಿರಬೇಕು. ಇವರು, ತಾನು ಏನೇ ಆಗಿದ್ದೆನೆಂದು ಹೇಳಿಕೊಂಡರೂ ತನ್ನ ಸ್ವಂತ ಸಹಿಹಾಕಿ ಕಳುಹಿಸಿದ ಇಂತಹ ಬರೆಹ ನಿಶಿ ಸೂಚನೆಯು—ಅಥವಾ ಇವರು ಉದ್ದೇಶಪೂರ್ವಕವಾಗಿ ಯಾ ಅನುದ್ದೇಶಪೂರ್ವಕ ಹೆಡ್ ಕ್ಲಾರ್ಕರಿಂದದಕ್ಕೆ ಸಹಿ ಹಾಕಿಸುವ ಮುಂಜಾಗ್ರತೆ ವಹಿಸಿದ್ದರೂ ಕೂಡಾ—ಆ ಮೊಕದ್ದಮೆಯ ತನಿಖೆ ನಡಿಸಲಿರುವ ದುರ್ದೈವೀ ಮೆಜಿಸ್ಟ್ರೇಟರ ಮನಸ್ಸಿನ ಮೇಲೆ ಏಕಮಾತ್ರ ಪರಿಣಾಮವನ್ನುಂಟುಮಾಡಬಲ್ಲುದು; ಆ ಪರಿಣಾಮವೆಂದರೆ ಕಲೆಕ್ಟರರ, ಜಿಲ್ಲಾ ಮೆಜಿಸ್ಟ್ರೇಟರ ಸಮ್ಮಿಶ್ರ ಅಧಿಕಾರಗಳನ್ನು ವಹಿಸಿರುವ ಮತ್ತು ಪೋಲಿಸ್ ಮುಖ್ಯಾಧಿಕಾರವಿರುವ ಮನುಷ್ಯನ ಅಭಿಪ್ರಾಯಾನುಸಾರವಾಗಿ ಇದು ಶಿಕ್ಷೆ ಕೊಡಬೇಕಾದ ಮೊಕದ್ದಮೆಯಾಗಿದೆ-ಮತ್ತಾ ಶಿಕ್ಷೆಯು ಬಂಧನರೂಪದಲ್ಲೇ ಇರಬೇಕಾಗಿದೆ ಎಂಬುದೇ. ಇಲ್ಲಿಯ ತಪ್ಪು ಅತ್ಯಂತ ಸ್ಪಷ್ಟವಿದೆ; ಮತ್ತು ಸಂಬಂಧಪಟ್ಟ ಅಧಿಕಾರಿಗೆ ಅದು ಕಾಣುವದಿಲ್ಲವಾದರೆ ಅದಕ್ಕೆ ಒಂದೋ ಆತನ ವಿಶೇಷ ದುರ್ಲಕ್ಷ್ಯವೇ ಕಾರಣವಿರಬೇಕು,ಇಲ್ಲವೇ ಆತ ಇಚ್ಛಾಪೂರ್ವಕವಾಗಿ ಯದ್ವಾತದ್ವತೆ ವಹಿಸಿರಬೇಕು. ತನ್ನ ಕ್ರಿಮಿನಲ್ ಸಂಬಂಧದ ಕ್ರಿಯಾಧಿಕಾರದ ಆಧಾರದಿಂದ ಸ್ವತಃ ತನಗೇನೇ! ಈ ಸೂಚನೆ ಕಳುಹಿಸಲು ಈ ಮಹನೀಯನಿಗೆ ಸಾಧ್ಯವಾದ ಈ ಘಟನೆಯು, ನ್ಯಾಯಾಧಿಕಾರ ಮತ್ತು ಕ್ರಿಯಾಧಿಕಾರಗಳನ್ನು ಬಿಂಗಡಿಸುವ ಸುಧಾರಣೆಯು ಅತ್ಯಾವಶ್ಯಕವೆಂಬುದಕ್ಕೊಂದು ಉಜ್ವಲ ನಿದರ್ಶನವಾಗಿದೆ.

ಹೈಕೋರ್ಟು ಮಾಡಿದುದನ್ನು ಕಂಡು ಈ ಅಧಿಕಾರಿ ಶೋಕತಪ್ತನಾದಂತಿರುವದ ಅತ್ಯಂತ ವಿಲಕ್ಷಣವೇ ಸರಿ. ಈ ಮಾದರಿಯ ಜನರ ಕೈವಾಡದಿದಿರಲ್ಲಿ ನ್ಯಾಯಾಡಳಿತೆಯ ಘನತೆಯನ್ನುಳಿಸುವದಕ್ಕಾಗಿಯೇ ಹೈಕೋರ್ಟು ಸಕಾಲದಲ್ಲಿ ಮಧ್ಯಪ್ರವೇಶ ಮಾಡಿದ್ದಿತು; ಇದಕ್ಕಾಗಿ ಕೃತಜ್ಞನಾಗಿರುವ ಬದಲಿಗೆ, ಈ ಮೊದಲ ಸಂದರ್ಭದಲ್ಲಿ ನಾನು ಮಾಡಿರುವ ಟೀಕೆಯನ್ನು ತೊಡೆದುಹಾಕಬೇಕೆಂದು ಅವರ ಯೋಚನೆಯಿರುವಂತೆ ಕಾಣುತ್ತದೆ. ಅವು ಹಾಗೆಯೇ ಉಳಿಯುವವು; ಮತ್ತು ಈ ಸಂಬಂಧವಾಗಿ ಸರಕಾರವು ತನಗೆ ಯುಕ್ತಕಂಡ ಕಾರ್ಯ ಕೈಕೊಳ್ಳಲೆಂದು ಈ ಆಜ್ಞೆಯೊಂದಿಗೆ ಅವನ್ನು ಸರಕಾರದ ಮುಂದಿಡಲಾಗುವದು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಶಿವಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3। ಕ್ಲಿಷ್ಟವಾದ ಕೇಸುಗಳಿಗೆ ರೂ. 5. ಬರ್ತ್ ಕಂಟ್ರೋಲಿಗೆ ರೂ 4।. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E) Tollygunge, Calcutta

ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಜನರೇ ಬ್ಯಾಂಕಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು ಗಿರಾಕಿಗಳ ಅಡಚಣೆ ಮತ್ತು ಆವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ, ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ, ತಮಗೆ ಬ್ಯಾಂಕಗಳಿಂದ ಸಹಾಯ ದೊರಕುವದೆಂದು ನಿರೀಕ್ಷಿಸುವ ಸ್ತ್ರೀ ಪುರುಷರು—

ಜನರೇ ಬ್ಯಾಂಕಗಳನ್ನು ಕಟ್ಟುವರು. ಈ ಬಗೆಯ ಮಾನವೀ ಸಂಬಂಧದಿಂದ ಬೆಳೆಯುವ ವ್ಯಕ್ತಿತ್ವವೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಂದಲೂ ಹೆಚ್ಚು ಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ವ್ಯಕ್ತಿತ್ವಗೆ ಹೆಸ್ರು ಪಡೆದ್ದದೆ.

ಕೆನರಾ ಬ್ಯಾಂಕ್

Estd: 1906

CANARA BANK LIMITED

(Incorporated in British India. liability of Members Limited.)

ಕಾವ್ಯ ಸಾಮ್ರಾಜ್ಯ

(ಕಿರಿಯರ ಪ್ರಪಂಚದವರು ಪ್ರಕಟಿಸಿದ ಆಧುನಿಕ ಕವಿತಾ ಸಂಗ್ರಹ)

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ 1946 ನೇ ಸಾಲಿನ ಪರೀಕ್ಷೆಗೆ ಮೊದಲ ಪತ್ರಿಕೆಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಬೆಲೆ ರೂ 1—0—0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗಾಗಲೀ ಬರೆಯಿರಿ.

ಕಲೆಕ್ಟರ್ ಮತ್ತು ಜಿಲ್ಲಾ ಮೆಜಿಸ್ಟ್ರೇಟ್ ಅಧಿಕಾರಗಳನ್ನು ವಿಂಗಡಿಸುವ ಯೋಜನೆ

ಕ್ರಿಮಿನಲ್ ಕ್ರಿಯಾಧಿಕಾರ ಮತ್ತು ತೀರ್ಮಾನಾಧಿಕಾರಗಳಿಗೆ ಭಿನ್ನ ಸ್ಥಾನಗಳು.

ಸದ್ಯ ಜಿಲ್ಲಾ ಕಲೆಕ್ಟರರೇ ಜಿಲ್ಲಾ ಮೆಜಿಸ್ಟ್ರೇಟರೂ ಆಗಿದ್ದಾರೆ. ತಕ್ಷೀರಿಗೆಳೆಯುವ ಅಧಿಕಾರವೂ ಅದರ ನ್ಯಾಯ ತೀರ್ಮಾನ ಮಾಡುವ ಹಕ್ಕೂ ಒಂದೇ ಕೈಯಲ್ಲಿದೆ. ವಾದಿಯೂ ನ್ಯಾಯಾಧೀಶನೂ ಒಬ್ಬನೇ ಎಂಬಂತೆ, ಇದರಿಂದಾಗಿ ನಿಷ್ಪಕ್ಷಪಾತ ನ್ಯಾಯ ಸಾಧನೆಗೆ ಆತಂಕಗಳೊದಗಿದ ದೃಷ್ಟಾಂತಗಳು ಬೇಕಾದಷ್ಟು ದೊರೆತಿವೆ. ಸರ್. ತೇಜ ಬಹದೂರು ಸಪ್ರುಗಳು ಇವೆರಡನ್ನೂ ವಿಂಗಡಿಸಬೇಕೆಂದು ಇತ್ತೀಚೆಗೆ ಸಕಾರಣವಾಗಿ ವಾದಿಸಿದ್ದರು. ಈ ಹೇಳಿಕೆಯು ಪ್ರಸಿದ್ಧ ಕಾನೂನು ತಜ್ಞರ ಹಾಗೂ ನ್ಯಾಯಚಿಂತಕರ ಅನುಮೋದನೆ ಪಡೆದಿದ್ದಿತು. ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಸರಕಾರವು ಇವೆರಡನ್ನೂ ವಿಂಗಡಿಸುವ ಯೋಜನೆಯನ್ನೀಗ ಕೈಕೊಂಡಿದೆ. ಕಾನೂನು ಮಂತ್ರಿಗಳಾದ ಶ್ರೀ. ಕೆ. ಭಾಷ್ಯಮರೊಂದು ಯೋಜನೆ ತಯಾರಿಸಿದ್ದಾರೆ; ಅದನ್ನೀಗ ಮದ್ರಾಸ್ ಸರಕಾರ ಪರ್ಯಾಲೋಚಿಸುತ್ತಿದೆ. ಇದೇ ಜುಲಾಯಿತಿಂಗಳಾಂತ್ಯದೊಳಗೆ ಈ ಕೆಳಗಿನ ಮುಖ್ಯಾಂಶಗಳನ್ನೊಳಗೊಂಡ ಸುಧಾರಣೆಯು ಮಂಜೂರಾಗಿ ಅಸ್ತಿತ್ವಕ್ಕೆ ಬರುವದೆಂದು ನಿರೀಕ್ಷಿಸಲಾಗಿದೆ.

ಯೋಜನೆಯ ಮುಖ್ಯಾಂಗಗಳು

ಕ್ರಿಮಿನಲ್ ಪೆನಲ್ ಕೋಡಿನ ನ್ಯಾಯದ ಕರ್ತವ್ಯಗಳನ್ನು ನಿರ್ವಹಿಸಲು ಪ್ರತಿಯೊಂದು ಜಿಲ್ಲೆಗೂ ಒಬ್ಬ ಪ್ರತ್ಯೇಕ ಜಿಲ್ಲಾ ಮೆಜಿಸ್ಟ್ರೇಟನ ನೇಮಕವಾಗುವದು. ಅರ್ಥಾತ್ ಜಿಲ್ಲಾ ಕಲೆಕ್ಟರ್ ಮತ್ತು ಜಿಲ್ಲಾ ಮೆಜಿಸ್ಟ್ರೇಟ್ ಬೇರೆ ಬೇರೆಯಾಗಿ ಇಬ್ಬರು ವ್ಯಕ್ತಿಗಳಿರುವರು; ಇವರಿಬ್ಬರೊಳಗೆ ಪರಸ್ಪರ ಸಂಬಂಧವಿರಲಾರದು. ಜಿಲ್ಲಾ ಮೆಜಿಸ್ಟ್ರೇಟರು, ಪ್ರಾಂತಿಕ ಸರಕಾರದ ಕೈಕೆಳಗಿನವರಲ್ಲದೆ ಜಿಲ್ಲಾ ಕಲೆಕ್ಟರರ ಕೆಳಗಿನ ಅಧಿಕಾರಿಯಲ್ಲ. ಕ್ರಿಮಿನಲ್ ಕಾರ್ಯಾಧಿಕ್ಯದ ದೆಸೆಯಿಂದಾಗಿ ಇತ್ತೀಚಿಗಿನ ಕೆಲವು ವರುಷಗಳಲ್ಲಿ ಪ್ರತಿಯೊಂದು ಜಿಲ್ಲೆಗೂ ಮೂರು ಅಥವಾ ನಾಲ್ಕು ಮಂದಿಯಂತೆ 'ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರು'ಗಳ ನೇಮಕವಾಗಿದೆಯಷ್ಟೆ. ಹೊಸ ಯೋಜನೆಯಂತೆ ಇವರೆಲ್ಲಾ 'ಸಬ್ ಡಿವಿಜನಲ್ ಮೆಜಿಸ್ಟ್ರೇಟರಾಗಿ ಗಣಿಸಲ್ಪಟ್ಟು ಪ್ರತಿಯೊಬ್ಬನಿಗೂ ಎರಡು ಅಥವಾ ಮೂರು ತಾಲೂಕುಗಳನ್ನೊಪ್ಪಿಸಲಾಗುವದು. ಪ್ರಥಮ ವರ್ಗದ ತಕ್ಷೀರುಗಳ ವಿಚಾರಣೆ ನಡೆಸುವರು, ಹಾಗೂ ಎರಡನೇ ಮತ್ತು ಮೂರನೇ ವರ್ಗದ ಮೆಜಿಸ್ಟ್ರೇಟರುಗಳ ಮೇಲಿನ ಅಪೀಲುಗಳನ್ನು ತೀರ್ಮಾನಿಸುವ ಅಧಿಕಾರ ಇವರಿಗಿದೆ. ಮೇಲ್ಗಡೆ ನಮೂದಿಸಿದಂತೆ ಹೊಸದಾಗಿ ನೇಮಕ ಹೊಂದುವ ಜಿಲ್ಲಾ ಮೆಜಿಸ್ಟ್ರೇಟರಿಗೆ, ಈ ಸಬ್ ಡಿವಿಜನಲ್ ಮೆಜಿಸ್ಟ್ರೇಟರುಗಳ ಮೇಲ್ತನಿಖೆ ಮತ್ತು ಹತೋಟಿಯ ಅಧಿಕಾರವಿರುತ್ತದೆ. ಸ. ಡಿ. ಮೆಜಿಸ್ಟ್ರೇಟರುಗಳು ಸಾಧ್ಯವಿದ್ದಷ್ಟು ತಮ್ಮ ಕ್ಷೇತ್ರದೊಳಗೆ ಸಂಚರಿಸಿ ಆಯಾಯಾ ತಾಲೂಕಿನ ಕೇಸು ಮತ್ತು ಅಪೀಲುಗಳನ್ನು ತಾಲೂಕು ಕೇಂದ್ರಗಳಲ್ಲೇ ನಡೆಸುತ್ತಿರಬೇಕು. ಈ ಮೂಲಕ ಈಗ ಇರುವ ರೆವಿನ್ಯೂ ಡಿವಿಜನಲ್ ಆಫೀಸರರ ಫಸ್ಟ್ ಕ್ಲಾಸ್ ಮತ್ತು ಅಪೀಲು ಮೆಜಿಸ್ಟ್ರೇಟರ ಅಧಿಕಾರಗಳು ವಜಾ ಹೊಂದುವವು; ರೆವಿನ್ಯೂ ಮತ್ತು ಇತರ ಕಾರ್ಯಾಧಿಕಾರಗಳು ಮಾತ್ರವೇ ಅವರ ಪಾಲಿಗುಳಿಯುವವು. ಎರಡನೇ ಮತ್ತು ಮೂರನೇ ವರ್ಗದ ಮೆಜಿಸ್ಟ್ರೇಟರುಗಳು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಮತ್ತು ಜಿಲ್ಲಾ ಮೆಜಿಸ್ಟ್ರೇಟರ ಕೈಕೆಳಗೆ ಅವರಿಬ್ಬರ ಮೇಲ್ತನಿಖೆಗೊಳಪಟ್ಟಿರಬೇಕು. ಈ ರೀತಿ ಸದ್ಯ ಸಬ್ ಡಿವಿಜನಲ್ ಆಫೀಸರರಿಗಿರುವ 'ಕೇಸ್ ತನಿಖೆ' ಮಾಡುವ ಅಧಿಕಾರವು ಅವರ ಕೈತಪ್ಪಿ, ಈಗ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಆಗಿರುವವರ ಕೈಗೆ ಹೋಗಲಿದೆ; ಅಂತೆಯೇ ಈಗ ಜಿಲ್ಲಾ ಕಲೆಕ್ಟರರಿಗಿರುವ ಅದೇ ಅಧಿಕಾರವೂ ಪ್ರತ್ಯೇಕ ವ್ಯಕ್ತಿ ಜಿಲ್ಲಾ ಮೆಜಿಸ್ಟ್ರೇಟರೊಬ್ಬರಿಗೆ ಹೋಗಲಿದೆ. ಈ ಮೆಜಿಸ್ಟ್ರೇಟ್ ಸರಪಣಿಯ ಬುಡದಿಂದ ತುದಿಯ ವರೆಗೂ ಸಬ್ ಡಿವಿಜನಲ್ ಆಫೀಸರರಿ (ಸಬ್ ಕಲೆಕ್ಟರ್)ಗಾಗಲೀ ಜಿಲ್ಲಾ ಕಲೆಕ್ಟರರಿಗಾಗಲೀ ಏನೊಂದೂ ಅಧಿಕಾರವಿಲ್ಲ. ಸಿವಿಲ್ ಕೋರ್ಟುಗಳಂತೆಯೇ ಕ್ರಿಮಿನಲ್ ಕೋರ್ಟುಗಳೂ ಸ್ವತಂತ್ರಗೊಳ್ಳುತ್ತವೆ.

ಮೆಜಿಸ್ಟ್ರೇಟ್ ಅಧಿಕಾರ ತಪ್ಪಿದರೆ, ಕಲೆಕ್ಟರರ ಘನತೆ ತಗ್ಗುವದೆಂದೂ, ಆ ಮೂಲಕ ಅವರ ಕಾರ್ಯಗಳ ಮೇಲಿನ ವಿಧೇಯತೆ ಕಡಿಮೆಯಾಗಬಹುದೆಂದೂ ಇರುವ ಕೆಲವರ ಅಭಿಪ್ರಾಯವನ್ನು ಮದ್ರಾಸ್ ಸರಕಾರವು ಸಕಾರಣವಾಗಿ ಅಲ್ಲಗಳೆದು ಕ್ರಿಮಿನಲ್ ಪಿ. ಸಿ.ಯ ಅಧ್ಯಾಯ 8ರಿಂದ 11ರ ವರೆಗಿನನ್ವಯದ ಅಧಿಕಾರಗಳು ಮತ್ತೂ ಜಿಲ್ಲಾ ಮತ್ತು ಸಬ್ ಕಲೆಕ್ಟರರಿಗುಳಿಯುತ್ತವೆ. ಜಿಲ್ಲಾ ಕಲೆಕ್ಟರರಿಗೆ ಪೋಲೀಸ್ ಜೈಲು ನೀರಾವರಿ, ಅಬ್ಕಾರಿ ಇತ್ಯಾದಿ ಹಲವು ಅಧಿಕಾರಗಳುಳಿಯುತ್ತವೆ. ಅವರೇ ಆ ಜಿಲ್ಲೆಯ ಮಟ್ಟಿಗೆ ಸರಕಾರದ ಕಣ್ಣು ಮತ್ತು ಕಿವಿ. ಹೆಚ್ಚಿನ ಸಾಮಾಜಿಕ ಚಟುವಟಿಕೆಗಳಾರಂಭವಾಗುವಾಗ ಇವರ ಕೆಲಸ ಇನ್ನೂ ಹೆಚ್ಚಲಿದೆ. ಈಗ ಅವರಿಗೆ ಸ್ವಲ್ಪ ಕ್ರಿಮಿನಲ್ ಅಧಿಕಾರವೂ ಇದ್ದರೂ, ಹೆಚ್ಚಿನ ಕ್ರಿಮಿನಲ್ ಕೆಲಸಗಳನ್ನು ಅವರ ಖಾಸಗೀ ಸಹಾಯಕರಾದ ಎಡಿಶನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೇ ನಿರ್ವಹಿಸುತಿದ್ದಾರೆ. ಅಂದ ಮೇಲೆ ಆ ಕಾರ್ಯ ನಿರ್ವಾಹಕ್ಕೆ ಸ್ವತಂತ್ರ ಮೆಜಿಸ್ಟ್ರೇಟರನ್ನೇ ನೇಮಿಸುವದು ವಿಹಿತ. ಈ ಮೂಲಕ ಕೆಳಗಿನ ನ್ಯಾಯಸ್ಥಾನಗಳು ಸ್ಥಳೀಯ ಪೋಲಿಸ್ ಮತ್ತು ಅಧಿಕಾರಿಗಳ ಭಯದಿಂದ ನಿಜಕ್ಕೂ ಬಿಡುಗಡೆ ಹೊಂದುತ್ತವೆ. ಬೇರಾವ ಅಧಿಕಾರದ ಭಯ, ಹಂಗು, ದಾಕ್ಷಿಣ್ಯಕ್ಕೂ ಒಳಗಾಗದೆ ಕ್ರಿಮಿನಲ್ ಕೋರ್ಟುಗಳೂ ಸಿವಿಲ್ ಕೋರ್ಟುಗಳಂತೆಯೇ ಸ್ವತಂತ್ರವಾಗಿ ವರ್ತಿಸಲನುಕೂಲವಾಗುತ್ತದೆ.

The S. R. S. Home Old Boarders Asssociation, Mangalore.

In the meeting of the above Association held on 14-6-'46 it has been resolved that on account of the arrears in the collection of the annual subscription due from the members, that the persons who become life members by payment of Rs. 10/- or patron members by payment of Rs. 25/- by the end of December 1946 their aggregate arrears up to date will be given up.

It is therefore requested that the old Boarders wherever they are residing may send their life or patron membership fee without waiting for any separate communication.

For the benefit of the many unemployed young men and women of the community who desire to be employed in suitable places be-fitting their qualifications, a register is maintained by the Old Boys Association, and a such men and women are requested to register their names with the member in charge of the Information Bureau of the Association (Dr. K. B. Shetty, X-Ray Institute, Hampankatta, Mangalore) with their qualifications age etc. and their permanent addresses.

The Old Boys Association intend to get all the necessary information with regard to the vacancies in the different departments in the presidency and inform the suitable candidates and try to guide them so that they may try their chances to secure employment at the earliest opportunity.

It is hoped that every one take advantage of the scheme and register their names as early as possible.

(*Sd.*) **K. U. Shetty,**
Hon. Secretary,
S. R. S. Home Old Boarders Association.
MANGALORE, 15-6-'46.

ಎಸ್. ಆರ್. ಎಸ್. ಹೋಮ್ಸ್ ಹಳೆ ನಿವಾಸಿಗಳ ಸಂಘ, ಮಂಗಳೂರು

ತಾ. 14-6-46ರಲ್ಲಿ ಕೂಡಿದ ಮೇಲ್ಕಂಡ ಸಂಘದ ಸಭೆಯಲ್ಲಿ ಸಂಘದ ಮೆಂಬರರ ವಾರ್ಷಿಕ ಸದಸ್ಯತನದ ಫೀಸು ವಸೂಲಿ ಬಾಕಿಯಿದ್ದುದನ್ನು ವಿಮರ್ಶಿಸಲಾಯಿತು. ಡಿಸೆಂಬರ ಅಂತ್ಯದೊಳಗಾಗಿ ಸಂಘಕ್ಕೆ ರೂಪಾಯಿ 10ರಂತೆ ಕೊಟ್ಟು ಆಜೀವ ಮೆಂಬರರಾಗುವವರಿಂದಲೂ ರೂಪಾಯಿ 25ರಂತೆ ಕೊಟ್ಟು ಆಶ್ರಯದಾತರಾಗುವವರಿಂದಲೂ ಈ ತನಕ ಅವಧಿಯಿಂದ ಬಾಕಿಯಾಗಿರುವ ವಾರ್ಷಿಕ ವರ್ಗಣಿಯನ್ನು ಮನ್ನಾ ಮಾಡಲಾಗುವುದು. ಆದುದರಿಂದ ಈ ಸಂಘದವರು ಎಲ್ಲಿದ್ದರೂ ಕೂಡ ಬೇಗನೆ ಆಜೀವ ಹಾಗು ಆಶ್ರಯದಾತರಾಗಿ ಸದಸ್ಯತನದ ಹಣವನ್ನು ಕಳುಹಿಸಿಕೊಡಬಹುದು.

ಸಮಾಜದ ನಿರುದ್ಯೋಗಿ ತರುಣತರುಣಿಯರಿಗೆ ಅವರವರ ಯೋಗ್ಯತೆಗೆ ಉಚಿತವಾದ ಕೆಲಸಗಳನ್ನು ಕಲ್ಪಿಸಿಕೊಡುವದೆ ಸಂಘದ ಕಡೆಯಿಂದ ಒಂದು ರಿಜಿಸ್ಟ್ರಿಯನ್ನು ಇಡಲಾಗಿದೆ. ಈ ಸುಸಂಧಿಯ ಸದುಪಯೋಗವನ್ನು ಪಡೆಯಲಿಚ್ಛಿಸುವವರು ತಮ್ಮ ವಿದ್ಯೆಯ ಯೋಗ್ಯತೆ, ಪ್ರಾಯ, ಖಾಯಂ ವಿಳಾಸ ಇತ್ಯಾದಿ ಮಾಹಿತಿಗಳನ್ನು ಡಾಕ್ಟರ್ ಕೆ. ಬಿ. ಶೆಟ್ಟಿ, ಎಕ್ಸ್‌ರೇ ಇನ್ಸ್ಟಿಟ್ಯೂಟ್ ಹಂಪನಕಟ್ಟೆ, ಮಂಗಳೂರು, ಇವರಿಗೆ ತಿಳಿಸಿ ರಿಜಿಸ್ಟ್ರಿಯಲ್ಲಿ ದಾಖಲು ಮಾಡಿಸಬಹುದು.

ಮದ್ರಾಸು ಸಂಸ್ಥಾನದಲ್ಲಿಯ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಸ್ಥಾನಗಳ ಅನುಭವವನ್ನು ಸಂಘದ ಕಡೆಯಿಂದ ಪಡೆಯುವ ನಿರ್ಧಾರವು ಮಾಡಲಾಗಿದೆ. ತನ್ಮೂಲಕ ಬೇಗನೆ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಲು ಪ್ರಯತ್ನಿಸಲಾಗುವುದು. ಸಮಾಜದ ತರುಣತರುಣಿಯರು ಜಾಗರೂಕರಾಗಬೇಕಾಗಿ ವಿನಂತಿ.

ಕೆ. ಯು. ಶೆಟ್ಟಿ,
ಗೌ। ಕಾರ್ಯದರ್ಶಿ. ಎಸ್. ಆರ್. ಎಸ್. ಹೋಮ್ಸ್ ಓಲ್ಡ್ ಬೋರ್ಡರ್ಸ್ ಎಸೋಸಿಯೇಶನ್, ಮಂಗಳೂರು. 15-6-46

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
Indra Bhavan Coffee Hotel,
Balmatta Road, Mangalore.

ನೆಲಗಡಲೆಯ ಉಪಯೋಗ

[ಡಾ. ಎ. ಟಿ ಡಬ್ಲ್ಯು ಸಿಮನ್ಸರ ಸುದೀರ್ಘ ಲೇಖದ ಸಾರ.]

ನಮ್ಮ ಜನರು ಇಷ್ಟೊಂದು ದುರ್ಬಲರಾಗುವುದಕ್ಕೆ ನಮ್ಮ ಆಹಾರಪದಾರ್ಥದಲ್ಲಿ ಪಿಷ್ಟ ಆಹಾರ ಸತ್ವಕ್ಷಾರಗಳ ಕೊರತೆಯೆ ಮುಖ್ಯ ಕಾರಣವೆಂದು ಅವರು ಅಭಿಪ್ರಾಯಪಡುತ್ತಾರೆ. ಬಂಗಾಲ ಬರಗಾಲದ ಕಾಲಕ್ಕೆ ಉಪವಾಸ ಬಳಲುವ ಮನುಷ್ಯನ ಪ್ರಾಣವನ್ನುಳಿಸುವುದಕ್ಕಾಗಿ ಗಂಜಿಗಿಂತ ಪಿಷ್ಟವನ್ನೆ ಹೆಚ್ಚಾಗಿ ಉಪಯೋಗಿಸಬೇಕಾಯಿತೆಂದು ಸಿದ್ಧವಾಗಿದೆ. ಹೆಚ್ಚು ಪಿಷ್ಟವನ್ನು ಕೊಟ್ಟದ್ದಾದರೆ ಉಳಿದ ಧಾನ್ಯಗಳನ್ನು ಕೊಡುವುದಕ್ಕಿಂತ ಹೆಚ್ಚು ಪೌಷ್ಟಿಕ ಪದಾರ್ಥಗಳನ್ನು ಕೊಟ್ಟಂತಾಗುವುದು. ನೆಲಗಡಲೆ ಹಿಟ್ಟಿನಲ್ಲಿ ೫೦%ಕ್ಕಿಂತ ಹೆಚ್ಚು ಪಿಷ್ಟ ಸತ್ವವಿರುತ್ತದೆ. ಉಳಿದ ಯಾವದೇ ಪಲ್ಲೆಕಾಯಿಗಳಲ್ಲಿರುವ ಸತ್ವಕ್ಕಿಂತ ಹೆಚ್ಚು ಪಿಷ್ಟಸತ್ವ ಅದರಲ್ಲಿರುತ್ತದೆ ಹಾಗೂ ಅದು ತಿನ್ನುವ ಪದಾರ್ಥವಿರುತ್ತದೆ. ಒಂದು ಎಕರೆ ಭೂಮಿಯಲ್ಲಿ ಬೆಳೆದ ಗೋದಿ, ಸಣ್ಣ ಧಾನ್ಯಗಳು ಮತ್ತು ಬತ್ತದಿಂದ ಬರುವ ಪಿಷ್ಟಪದಾರ್ಥಕ್ಕಿಂತ ಹೆಚ್ಚು ಪಿಷ್ಟಸತ್ವ ಸಿಕ್ಕುತ್ತದೆ. ಹೀಗಿದ್ದರೂ ನಾವು ನೆಲಗಡಲೆಯ ಪೂರ್ಣ ಉಪಯೋಗ ಮಾಡುವುದಿಲ್ಲ. ನೆಲಗಡಲೆಯಲ್ಲಿ ೪೫% ಕೇವಲ ಎಣ್ಣೆಗಾಗಿ ಉಪಯೋಗಿಸಲಾಗುತ್ತದೆ. ಉಳಿದ ೫೫%ರ ಗತಿಯೇನು? ಇಡೀ ಕಾಯಿಯನ್ನೆ ನಾವು ತಿನ್ನುವುದಾದರೆ ಎಣ್ಣೆ ತೆಗೆದುಳಿದದ್ದನ್ನು ನಾವೇಕೆ ತಿನ್ನಬಾರದು? ಏಕೆಂದರೆ ನಮ್ಮ ದನಗಳ ಹಿಂಡಿಗಾಗಿ ಅದು ಬೇಕಾಗುತ್ತದೆ ಮತ್ತು ನಮ್ಮ ಕಬ್ಬಿನ ಹೊಲಗಳಿಗೆ ಮತ್ತು ಬತ್ತದ ಗದ್ದೆಗಳಿಗೆ ಗೊಬ್ಬರ ಹಾಕುವುದಕ್ಕಾಗಿ ಆ ಹಿಂಡಿ ಬೇಕೆಂದು ನಮ್ಮ ಅರ್ಥಶಾಸ್ತ್ರ ವಿಶಾರದರು ಉತ್ತರಿಸುತ್ತಾರೆ. ನಮ್ಮ ಹೊಲಗಳ ಸತ್ವವನ್ನು ಹೆಚ್ಚಿಸುವುದಕ್ಕಾಗಿ ತಿನ್ನಲಿಕ್ಕೆ ಉಪಯೋಗವಿಲ್ಲದ ಶಗಣಿ ಹೊಲಸು ಅಥವಾ ಪಕ್ಷಿ ವಿಷ್ಟದಂಥ ಪದಾರ್ಥಗಳು ಸಿಕ್ಕುತ್ತಿರುವಾಗ ತಿನ್ನಲಿಕ್ಕೆ ಬರುವಂಥ ಇಂಥ ಪಿಷ್ಟಸತ್ವಗಳನ್ನು [illegible]ಕ್ಕಾಗಿ ಉಪಯೋಗಿಸುವುದೆಂದರೆ ಹಾಳುಮಾಡಿದ ಅಪರಾಧ ಮಾಡಿದಂತೆಯೇ ಎಂದು ಡಾ. ಸಿಮನ್ಸರು ಪ್ರತಿಪಾದಿಸುತ್ತಾರೆ. ಕಬ್ಬಿನ ಹೊಲಗಳನ್ನು ಸತ್ವಯುತ ಮಾಡುವುದಕ್ಕಾಗಿ ನಾವು ನೆಲಗಡಲೆ ಹಿಂಡಿಯನ್ನುಪಯೋಗಿಸುವುದಾದರೆ ನಾವು ಹೊಲದಲ್ಲಿ ಬೆಳೆದ ಪಿಷ್ಟಸತ್ವವೆಲ್ಲ ಹಾಳಾದಂತೆಯೆ. ಏಕೆಂದರೆ ಕಬ್ಬಿನಲ್ಲಿ ಪಿಷ್ಟ ಸತ್ವವೆ ಇರುವುದಿಲ್ಲ. ಈ ಪಿಷ್ಟ ಸತ್ವವನ್ನಲ್ಲದೆ ಹಿಂಡಿಯಲ್ಲುಳಿದ ೧೮% ಎಣ್ಣೆ ಪೌಷ್ಟಿಕಸತ್ವ ಮತ್ತು ಕ್ಷಾರದ ಹಾನಿಯು ಬೇರೆ. ಹಿಂಡುವ ದನಗಳಿಗೂ ನಾವು ಹಿಂಡಿಯನ್ನು ಹಾಕುತ್ತೇವೆ. ಇದರಿಂದ ಹಾಲಿನ ಉತ್ಪತ್ತಿ ಹೆಚ್ಚುತ್ತದೆ. ಹಾಲು ಅತ್ಯುತ್ಕೃಷ್ಟವಾದ ಆಹಾರ ಪದಾರ್ಥ. ಆದರೆ ಒಂದು ಆಕಳಿಗೆ ೧೦ ಪೌಂಡಿನಷ್ಟು ನೆಲಗಡಲೆ ಪಿಷ್ಟವನ್ನು ನಾವು ಕೊಟ್ಟರೆ ಅದರಿಂದ ಕನಿಷ್ಠ ಅರ್ಧ ಪೌಂಡಿನಷ್ಟಾದರೂ ಹಾಲಿನ ಪಿಷ್ಟವು ಬರುವದೋ ಇಲ್ಲವೋ ಸಂಶಯ. ಹತ್ತಿಕಾಳು ಮೊದಲಾದ ತಿನ್ನಲಿಕ್ಕೆ ಬಾರದಂಥ ಪದಾರ್ಥಗಳಿಂದ ಇಷ್ಟೇ ಲಾಭ ದೊರೆಯಲಿರುವಾಗ ನೆಲಗಡಲೆಯಂಥ ತಿನ್ನುವ ಪದಾರ್ಥವನ್ನು ಹಾಳು ಮಾಡುವುದು ಸರಿಯೆ ಎಂಬುದು ವಿಚಾರ ಮಾಡತಕ್ಕ ವಿಷಯವಾಗಿದೆ.

ಪ್ರೊ. ಬಿ. ಜಿ. ಎಸ್. ಆಚಾರ್ಯರು ನಿಯಂತ್ರಿತ ರೀತಿಯಿಂದ ಇಲ್ಲಿಯ ಆಹಾರದ ಪ್ರಯೋಗಗಳನ್ನು ನಡೆಸಿದ ನಂತರ ನೆಲಗಡಲೆ ಪಿಷ್ಟವು ಪ್ರಾಣಿಸತ್ವದ ದೃಷ್ಟಿಯಿಂದ ಬಹಳ ಮಹತ್ವದ ಸತ್ವವೆಂದು ಕಂಡುಹಿಡಿದರೆಂದು ಡಾ। ಸಿಮನ್ಸರು ಉಲ್ಲೇಖಿಸುತ್ತಾರೆ. ನೆಲಗಡಲೆ ಪಿಷ್ಟವು ಬಹಳ ಪಾಚಕವೆಂದೂ ಕಂಡುಬಂದಿದೆಂದು ಅವರು ಹೇಳುತ್ತಾರೆ. ಅದು ಹೆಂಡದ ನೊರೆಯಲ್ಲಿರುವ ಪಿಷ್ಟದಷ್ಟು ಸತ್ವಯುತವಾಗಿದ್ದು ಹಾಲು ಮತ್ತು ಮಾಂಸದಲ್ಲಿ ಸಿಕ್ಕುವ ಪ್ರಾಣಿಪಿಷ್ಟದಷ್ಟು ಸತ್ವಯುತವೆಂದು ಅವರ ಅಭಿಪ್ರಾಯ.

ಸ್ವಚ್ಛ ನೆಲಗಡಲೆ ಹಿಂಡಿಯಲ್ಲಿ 50%ಕ್ಕಿಂತ ಹೆಚ್ಚು ಒಳ್ಳೆ ಪಿಷ್ಟ 13%ಕ್ಕಿಂತ ಹೆಚ್ಚು ಮಾಂಸವಿರುತ್ತದೆ. ಆದುದರಿಂದ ಹೊಲದಲ್ಲಿ ಹಾಕಿದ ಪ್ರತಿಯೊಂದು ಟನ್ ಹಿಂಡಿಯಿಂದ 30 ಕರಿ ಹಿಂಡಿನ, 50 ಸಾವಿರ ತತ್ತಿಗಳ ಇಲ್ಲವೆ 15000 ಸೇರು ಹಾಲಿನಲ್ಲಿದ್ದಷ್ಟು ಪೌಷ್ಟಿಕ ಪಿಷ್ಟವನ್ನು ಹಾಳುಮಾಡಿದಂತಾಗುತ್ತದೆ.

ಈ ಪಿಷ್ಟಸತ್ವವಲ್ಲದೆ ನೆಲಗಡಲೆಯಲ್ಲಿ ಕೊಬ್ಬು ಗಂಜಿ ಮತ್ತು ಖನಿಜ ದ್ರವ್ಯಗಳು ಇರುವವು. ಆದುದರಿಂದ ಸ್ವಲ್ಪ ಹೆಚ್ಚಾಗಿ ಗಂಜಿ ಮತ್ತು 'ಸಿ' ಸತ್ವವನ್ನು ಕೂಡಿಸಿದ್ದಾದರೆ ಅದೊಂದು ಸಂಪೂರ್ಣ ಆಹಾರವೇ ಆಗುವುದು. ಜನತೆಯ ಆರೋಗ್ಯ ಮತ್ತು ಆಯುಷ್ಯಾಭಿವೃದ್ಧಿಯ ಮೇಲೆ ಅತ್ಯಂತ ಮಹತ್ವದ ಪರಿಣಾಮವನ್ನುಂಟುಮಾಡುವ ಸತ್ವವು ಹಿಂದುಸ್ಥಾನದಲ್ಲಿ ಬಹಳ ಕಡಿಮೆಯಿದೆಂದು ಕಂಡುಬಂದಿದೆ. ನೆಲಗಡಲೆಯು ಈ ಸತ್ವದಿಂದ ತುಂಬಿದ್ದಾಗಿದೆ. ವಿಶೇಷತಃ ಬಿ ಸತ್ವವು ಅದರಲ್ಲಿ ಹೆಚ್ಚಾಗಿದೆ. ಅತಿ ಮಹತ್ವದ 'ನಿಕೊಟ್ರೆನಿಕ್ ಆಸಿಡ್' ಮತ್ತು 'ರಿಬೊಫ್ಲಾವಿನ್'ಗಳು ಅದರಲ್ಲಿ ಬಹಳಿರುತ್ತವೆ. ಕೊಲ್ಹಾಪುರದ ಒಂದು ದೂರದ ಹಳ್ಳಿಯಲ್ಲಿ ಪಾದ್ರಿಗಳಾಗಿರುವ ಶ್ರೀ. ಕಿಂಕೇಡರು ತಮ್ಮ ಶಾಲೆಯ ಹುಡುಗರು ನೆಲಗಡಲೆಯನ್ನು ಕೈಗಾಣದಲ್ಲಿ ಹಿಂಡಿತೆಗೆದ ಹಿಂಡಿಯನ್ನು ತಿಂದು ಬಹಳ ಉತ್ತೇಜಿತರಾಗಿರುವರೆಂದು ಕಂಡುಹಿಡಿದಿದ್ದಾರೆ. ಹಳ್ಳಿಗರೂ ಈ ಬಗ್ಗೆ ಇದ್ದ ಪೂರ್ವಾಗ್ರಹವನ್ನು ಬಿಟ್ಟುಕೊಟ್ಟರುವರು. ತಮ್ಮ ನಿತ್ಯದ ಸಣ್ಣ ಧಾನ್ಯಗಳ 1/2—1/5 ಪ್ರಮಾಣದಲ್ಲಿ ಅದನ್ನು ಉಪಯೋಗಿಸುತ್ತಾರೆ. ಮಧುಮೇಹಿಗಳಿಗೆ ರೊಟ್ಟಿಯು ಹೆಚ್ಚಿನ ಸೀದಾ ಸಿಕ್ಕು ಅವರ 'ಚೈನಿ'ಗೆ ಸಹಾಯವಾಗುವದರಿಂದ ವಿಶೇಷ ಧಾನ್ಯಗಳನ್ನ ಪೀಸುತ್ತಾರೆ. ನೆಲಗಡಲೆ ಹಿಟ್ಟನ್ನು ಕೂಡಿಸಿದ ಹಿಟ್ಟಿನಿಂದ ಮಾಡಿದ ರೊಟ್ಟಿಯು ಮಕ್ಕಳಿಗೆ ಬಹಳ ಸೇರುತ್ತದೆ. ಸ್ವಲ್ಪ ಉಪ್ಪು ಅದರಲ್ಲಿ ಕೂಡಿಸಿದ್ದಾದರೆ ವಯಸ್ಕರು ಅದನ್ನು ರುಚಿಮಾಡಿಕೊಂಡು ತಿನ್ನುತ್ತಾರೆ. ಅಪರೂಪ ಪದಾರ್ಥಗಳನ್ನು ಮತ್ತು ವಿರಾಯಿಗಳನ್ನು ಮಾಡುವದಕ್ಕಾಗಿಯೂ ನೆಲಗಡಲೆ ಹಿಟ್ಟನ್ನು ಉಪಯೋಗಿಸಬಹುದಾಗಿದೆ.

ವ್ಯಾಪಾರಿ ನೆಲಗಡಲೆಯ ನಿಯಂತ್ರಿತ ಧಾರಣೆ ಟನ್ನಿಗೆ 75 ರೂಪಾಯಿ ಇದೆ. ತಿನ್ನಲಿಕ್ಕೆ ಬರುವಂಥ ನೆಲಗಡಲೆ ಬೆಲೆ ಇದಕ್ಕೂ ಸ್ವಲ್ಪ ಹೆಚ್ಚು. ವ್ಯಾಪಾರಿ ನೆಲಗಡಲೆ ಧಾರಣೆಗಿಂತ ಈ ಧಾರಣೆ ಹೆಚ್ಚಿಗಿದ್ದರೂ ಉಳಿದ ಸಣ್ಣ ಧಾನ್ಯಗಳ ಧಾರಣೆಗಿಂತ ಅದು ಬಹಳ ಕಡಿಮೆ ಇರುವದೆಂದು ಡಾ। ಸಿಮನ್ಸರ ಅಭಿಪ್ರಾಯ.

ಹಿಂಡಿಯನ್ನು ತಿನ್ನುವ ಪದಾರ್ಥವನ್ನಾಗಿ ಮಾರ್ಪಡಿಸುವದರಿಂದ ಎಣ್ಣೆಯ ಇಲ್ಲವೆ ನೆಲಗಡಲೆಯ ಪೇಟೆಯ ಮೇಲೆ ಯಾವದೇ ಬಗೆಯ ಪರಿಣಾಮವುಂಟಾಗಲಾರದೆಂದು ಎಣ್ಣೆ ಕಾರಖಾನೆದಾರರ ದೃಷ್ಟಿಯಿಂದಲೂ ಹೇಳಬಹುದು.

ಹಿಂದುಸ್ಥಾನದಲ್ಲಿ 15 ಲಕ್ಷ ಟನ್ ನೆಲಗಡಲೆ ಬೆಳೆಯುವದೆಂದು ಅಂದಾಜು. ಈ ಬೆಳೆಯಿಂದ ಇಂತು 7 ಲಕ್ಷ ಟನ್ ಅತ್ಯುತ್ತಮ ಆಹಾರ ಪದಾರ್ಥವನ್ನು ಜನತೆಗೆ ಸಿಕ್ಕುವಂತೆ ಇದರಿಂದ ಮಾಡಬಹುದು. 3500 ಕೋಟಿ ತತ್ತಿ ಇಲ್ಲವೆ 1000 ಕೋಟಿ ಸೇರು ಹಾಲು ಇಲ್ಲವೆ 300 ಲಕ್ಷ ಕುರಿಗಳ ಸತ್ವದಷ್ಟು ಸತ್ವವು ಈ ನೆಲಗಡಲೆ ಹಿಂಡಿಯಲ್ಲಿ ಇರುವದು. ಗಂಜಿ, ಕೊಬ್ಬು, ಖನಿಜ ಮತ್ತು ಪೌಷ್ಟಿಕ ಪದಾರ್ಥಗಳ ವಾರ್ಷಿಕ ಹಾನಿ ಬೇರೆ. ಈ ಮಹತ್ವದ ನೆಲಗಡಲೆಯ ಉಪಯೋಗವನ್ನು ತಪ್ಪಾಗಿ ಮಾಡಹತ್ತಿದ್ದರಿಂದಲೇ ಇಷ್ಟೆಲ್ಲ ಹಾನಿ.

WANTED

Young and energetic canvassing agents to represent Mysore, Coorg and South Kanara areas for

ORIENTAL PHARMACEUTICAL WORKS GUNTAKAL.

Persons with previous experience preferred. For terms please apply before 15-7-46 to the Manager (on tour) c/o

Navayuga Press, Udipi.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 120/1946

ಶ್ರೀಮತಿ ಪುಷ್ಪಯ್ಯ ಶ್ಯಾನುಭಾಗ —ವಾದಿ

ಮತ್ತು

ನಲ್ಲಿ ಶೆಡ್ತಿ ಕೂಡಾ ಪ್ರತಿವಾದಿರು

ಯಿವರೊಳಗೆ

ನರ್ಸಿ ಶೆಡ್ತಿ-ಸೊಕ್ಕೆ ಶೆಡ್ತಿ ಮಗಳು. ಶಿರ್ವ ಗ್ರಾಮದ ಪಂಜಿಮಾರು.

ಸದ್ರಿ ಮೇಲ್ಕಂಡ ದಾವೆಯಲ್ಲಿ ವಾದಿಗೆ ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ಗೇಣಿ ಬಾಕಿಗೆ ವಾದಿಯು ಸದ್ರಿ ದಾವಾ ಹೂಡಿದ್ದಾಗಿರುತ್ತದೆ. ಸದ್ರಿ ದಾವೆಯು ತಾರೀಕು 19-7-46ಕ್ಕೆ ತನ್ಖಿಗೆ ಯಿಟ್ಟಿರುವದರಿಂದ ಸದ್ರಿ ವ್ಯಾಜ್ಯದಲ್ಲಿ 1ನೇ ಪ್ರತಿವಾದಿಳು ನರ್ಸಿ ಶೆಡ್ತಿ ಬಾಬ್ತು ಯೇನಾದ್ರೂ ಆಕ್ಷೇಪ ಹೇಳುವದೇ ಯಿರುವ ಸಂಗ್ತಿಯಲ್ಲಿ ಅವಳು ಸ್ವತಹ ವ ವಕೀಲರ ದ್ವಾರಾ ಸದ್ರಿ ದಿವಸ ಬೆಳಿಗ್ಯೆ 10 ಗಂಟೆ ಕೋರ್ಟಿನ ಮುಂದೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವಳ ಗೈರುಹಾಜರಿಯಲ್ಲಿ ಯೇಕಪಕ್ಷವಾಗಿ ಸದ್ರಿ ದಾವಾ ತೀರ್ಮಾನಿಸಲ್ಪಡುವದು. ಯೆಂಬ ಸಂಗ್ತಿ ಯಿದರ ಮೂಲಕ ತಿಳಿಸೋಣಾಗಿಯದೆ.

K. Varadaraya Pai,
Advocate for Plaintiff

ತಾರೀಕು 1-7-46,
ಉಡುಪಿ.

ENGLISH MADE EASY

(SELF ENGLISH STUDY)

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊಡದ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0

1—8—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

The Canara Banking Corporation Limited.

(Incorporated in British India, with limited Liability.)

Estd 1906.

Head Office: **UDIPI**, South Kanara.

CAPITAL

Authorised	Rs. 25,00,000
Issued & Subscribed ...	,, 16,00,000
Paid up	,, 15,60,120
Reserves	,, 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted.

ಉಡುಪಿ, ಗುರುವಾರ, ೪-೭-'೪೬

ಪರ್ವತ ಪ್ರಸವ!

ಬ್ರಿಟಿಷ್ ಮಂತ್ರಿ ಸಮಿತಿ ಸದಸ್ಯರಾದ ಲೋರ್ಡ್ ಪೆಥಿಕ್ ಲಾರೆನ್ಸ್, ಸರ್. ಸ್ಟಾಫೋರ್ಡ್ ಕ್ರಿಪ್ಸ್, ಮಿ. ಎ. ವಿ ಅಲೆಕ್ಸಾಂಡರರು ಹಿಂದುಸ್ಥಾನದ ತಮ್ಮ ಕಾರ್ಯಕ್ರಮಗಳನ್ನು ಮುಗಿಸಿ ಈಗ ಲಂಡನಿಗೆ ಮರಳಿದ್ದಾರೆ. ಸುಮಾರು ಮೂರೂವರೆ ತಿಂಗಳು ಸೈರು ಹಾಜರಾಗಿದ್ದವರು ಈಗ ತಮ್ಮ ಸ್ವಂತ ಊರನ್ನು ಸೇರುವಾಗ ಒಂದು ರಮ್ಯಾನಂದವನ್ನು ಅನುಭವಿಸದಿರಲಾರರು. ಆದರೆ ಹಿಂದುಸ್ಥಾನದಲ್ಲಿ ಶ್ಲಾಘನೀಯ- ಆನಂದದಾಯಕ-ಕಾರ್ಯವೇನನ್ನಾದರೂ ಮಾಡಿ ಮರಳಿದ ಹೆಗ್ಗಳಿಕೆ ಅವರಲ್ಲಿರಲು ಸಾಧ್ಯವಿಲ್ಲ. ಬ್ರಿಟಿಷ್ ಸಮಿತಿಯ ಹದಿನಾಲ್ಕು ವಾರಗಳ ಪ್ರಯತ್ನದ ಪ್ರತಿಫಲವಾಗಿ ಈ ದಿನ ನಮಗೆ ದೊರೆತುದು ಯುರೋಪಿಯಾನರು ಇರುವ 'ಜೋಪಾಸನಾ ಸರಕಾರ'; ಶೇರ್, ಅಂಬೇಡ್ಕರರ ಬದಲಿಗೆ ಬೆವೂರು, ಸ್ಮಿತರಿಗೆ ಅಧಿಕಾರ! ಈ ಬಗಲಾವಣೆಯು ನಮಗೊದಗಿದ ಅವನತಿಯೇ ಹೊರತು ಅಭಿವೃದ್ಧಿಯಲ್ಲ. ಆದರಿದು ಅನಿವಾರ್ಯ ಹಂಚಿಕೆ; ತಾತ್ಕಾಲಿಕ ವ್ಯವಸ್ಥೆ. ಜನಪ್ರತಿನಿಧಿಗಳ ನಡುಗಾಲ ಸರಕಾರ ಸ್ಥಾಪಿಸದಂತೆ ತಡೆಯಾದುದು ಕಾಂಗ್ರೆಸ್ ಲೀಗ್ ಭಿನ್ನಾಭಿಪ್ರಾಯಗಳೇ ಹೊರತು ಬ್ರಿಟಿಷರ ಮನೋವೃತ್ತಿಯಲ್ಲ. ಆವೆರಡು ಪಕ್ಷಗಳೊಳಗೊಪ್ಪಂದವಾಗಿ ಜನತಾ ಸರಕಾರ ಬರುವ ವರೆಗೆ ಅವರ ಪೀಠಗಳು ಖಾಲಿ ಬೀಳದಂತೆ-ಕಾವಲಿಗಾಗಿ-ಮಾತ್ರವೇ ಈ ಜೋಪಾಸನಾ ಸರಕಾರ ನೇಮಕಗೊಂಡಿದೆ. ಹಿಂದೀಯ ಪಕ್ಷಗಳೊಳಗೆ ಒಪ್ಪಂದವಾಗದೆ ಹೋದರೂ ಘಟನಾ ಸಮಿತಿಯ ಕಾರ್ಯ ಮುಗಿಯುವಾಗ ಈ ನಡುಗಾಲ ವ್ಯವಸ್ಥೆ ವಜಾ ಹೊಂದಿ ಸ್ವತಂತ್ರ ಸರಕಾರ ಸ್ಥಾಪನೆಯಾಗಲೇಬೇಕು. ಅಂದ ಮೇಲೆ ಬ್ರಿಟಿಷ್ ಸಮಿತಿಯ ಪ್ರಯತ್ನ ವ್ಯರ್ಥವಾಯಿತೆನ್ನುವದೇಕೆ—ಎಂಬ ಪ್ರಶ್ನೆ ಬರಬಹುದು. ಎಂದಿನಂತೆ ಈ ವಾದವೂ ಆಶೆಯ ಮೇಲೆ ನಿಂತಿದೆ ಹೊರತು ಆಧಾರದ ಮೇಲಲ್ಲ; ಬ್ರಿಟಿಷರ ಈಗಿನ ಧೋರಣೆಯೇ ಮುಂದಕ್ಕೂ ಉಳಿದರೆ ನಡುಗಾಲ ಸರಕಾರ ಸ್ಥಾಪನಾ ಯತ್ನಕ್ಕೊದಗಿದ ದುರದೃಷ್ಟವೇ ಘಟನಾ ಸಮಿತಿಗೂ ಒದಗಬಹುದು. ಈ ಬಾರಿ ಬ್ರಿಟಿಷರು ದುರುದ್ದೇಶ ಕಟ್ಟಿಕೊಂಡು ಬಂದಿದ್ದರೆಂದು ಹೇಳಲಾಗುವದಿಲ್ಲವಾದರೂ ಆಳುಕು ಬುದ್ಧಿಯಿಂದಿದ್ದರೆಂದು ಹೇಳಲಡ್ಡಿಯಿಲ್ಲ. ಇನ್ನಾದರೂ ನ್ಯಾಯನಿಷ್ಠುರತೆಯ ಖಚಿತ ಧೋರಣೆಯನ್ನವರು ವಹಿಸದಿದ್ದಲ್ಲಿ ಇದುವರೆಗಿನ ಕೃತ್ಯಗಳಂತೆಯೇ ಇನ್ನು ಮುಂದಿನ ಕಾರ್ಯಗಳೂ ಪರ್ವತ ಪ್ರಸವವಾಗುವದೇ ಸರಿ.

ಈ ಸಂದರ್ಭದಲ್ಲಿ ಸೂಕ್ಷ್ಮಬುದ್ಧಿ, ವ್ಯವಹಾರ ಜಾಣ್ಮೆ, ನ್ಯಾಯ ನಿಷ್ಠುರತೆ, ರಾಷ್ಟ್ರ ಪ್ರೇಮಗಳಿಗೆ ಒಂದಿಷ್ಟು ಭಂಗ ಬಾರದಂತೆ ಆದಿಯಿಂದ ಅಂತ್ಯದ ವರೆಗೂ ವ್ಯವಹರಿಸಿ, ರಾಷ್ಟ್ರವು ತಮ್ಮ ಮೇಲಿಟ್ಟಿರುವ ವಿಶ್ವಾಸವನ್ನು ಸಾರ್ಥಕಗೊಳಿಸಿದ ಕಾಂಗ್ರೆಸ್ ಪ್ರಮುಖರನ್ನು ಅಭಿನಂದಿಸಬೇಕು. ರಾಷ್ಟ್ರೀಯ ಮಹಾ ಸಭೆಗೆ ಸವರ್ಣ ಹಿಂದುಗಳ ಸಂಸ್ಥೆಯೆಂಬ ಎಲ್ಲೆಯನ್ನು ಕಟ್ಟಬೇಕೆಂದು ಮಿ. ಜಿನ್ನರು ಪ್ರದರ್ಶಿಸಿದ ಹಠಮಾರಿತನವು ಕೊನೆಗೆ ಬೀಸಿದವನ ನೊಸಲನ್ನೇ ಘಾತಿಸುವ ಖಡ್ಗದಂತಾಯಿತು. ಈ ಪಾಠವನ್ನು ಮುಸ್ಲಿಂ ಲೀಗ್ ಮರೆಯಬಾರದು. ತನ್ನ ಸ್ಥಾನಮಾನಗಳನ್ನೊಬ್ಬನು ದುಡಿದು ನಿರ್ಮಿಸಿಕೊಳ್ಳಬೇಕು—ದುಡುಕಿ ನಿರ್ಣಯಿಸಿಟ್ಟುಕೊಳ್ಳಲಾಗುವದಿಲ್ಲ. ದಿನದ ಇಪ್ಪತ್ತನಾಲ್ಕು ಘಂಟೆಗಳ ಪೈಕಿ ಐದೇ ಮಿನಿಟಾದರೂ ಮಿ. ಜಿನ್ನರಲ್ಲಿ ಈ ಸಾಮಾನ್ಯ ತಿಳುವಳಿಕೆ ಮೂಡುತಿದ್ದರೆ, ಬ್ರಿಟಿಷ್ ರಾಯಭಾರಿಗಳ ಕೊನೆಯ ತೀರ್ಮಾನದ ದರ್ಪಣದಲ್ಲಿ ತನ್ನ ಮುಖ ನೋಡಿಕೊಳ್ಳುತಿದ್ದರು. ನಡುಗಾಲ ಸರಕಾರದ ಸದಸ್ಯರ ಹೆಸರನ್ನು ಸೂಚಿಸುವಾಗ "ಈ ಪೈಕಿ ಯಾರಾದರೂ ಒಪ್ಪದಿದ್ದಲ್ಲಿ, ಮಿಕ್ಕವರನ್ನು ನೇಮಿಸಿಕೊಂಡು ಕೆಲಸ ಮುಂದೊತ್ತಲಾಗುವದು" ಎಂದು ವೈಸರಾಯರು ಸ್ಪಷ್ಟವಾಗಿ ಹೇಳಿದ್ದರು. ಕಾಂಗ್ರೆಸು ಒಪ್ಪಲಿಲ್ಲ; ಆದರೆ ಕೆಲಸ ಮುಂದೊತ್ತಲು ವೈಸರಾಯರಿಂದ ಆಗಲಿಲ್ಲ. "ಲೀಗ್ ಕೌನ್ಸಿಲಿನ ಅಭಿಪ್ರಾಯ ಪಡೆಯದೆ ಇಂತಹ ಬದಲಾವಣೆಗೊಪ್ಪಲು ಸಾಧ್ಯವಿಲ್ಲ" ಎಂದು ಆಗ ತಾನೇ ಹೇಳಿದ್ದ ಮಿ. ಜಿನ್ನರು ಕಾಂಗ್ರೆಸ್ ನಿರಾಕರಿಸಿತೆಂದೊಡನೆ, ತನ್ನ ಸುದಿನ ಮೂಡಿತೆಂದು ಹಿಗ್ಗಿ, ತನ್ನ ನಿಯಮವನ್ನು ತಾನೇ ಮುರಿದು ಒಪ್ಪಿಕೊಂಡರೂ ವೈಸರಾಯರದಕ್ಕೆ ಬೆಲೆ ಕೊಡಲಿಲ್ಲ. ಒಂದೊಮ್ಮೆಗೆ ತಾವು ಒಪ್ಪದೆ, ಕಾಂಗ್ರೆಸ್ ಒಪ್ಪುತಿದ್ದರೆ ಹೇಗಾಗುತಿತ್ತು ಎಂದು ಮಿ. ಜಿನ್ನರೀ ಘಟನೆಯ ಬದಿಬದಲಾಯಿಸಿ ನೋಡಬೇಕು- ಹಾಗಾಗುತಿದ್ದರೆ ನಿಜಕ್ಕೂ ನಡುಗಾಲ ಸರಕಾರದ ರಚನೆ ಸಾಧ್ಯವಾಗುತಿತ್ತು. ಲೀಗ್ ಮುಸಲ್ಮಾನರ ಬದಲಿಗೆ ಇತರ ಮುಸಲ್ಮಾನರು ವೈಸರಾಯರಿಗೆ ದೊರೆಯುತಿದ್ದರು. ಆದರೆ ಕಾಂಗ್ರೆಸಿನ ನಿರಾಕರಣೆಯೊಂದಿಗೆ 'ಜನ ಪ್ರಾತಿನಿಧ್ಯವೆಂಬ ಮಾತೇ ಬಂಜೆಯಾಯಿತು; ಮಿ. ಜಿನ್ನರೆಷ್ಟೇ ಉರಿದುಬಿದ್ದರೂ ಬ್ರಿಟಿಷ್ ರಾಯಭಾರಿಗಳಿಗೆ ತಾತ್ಕಾಲಿಕ ಸರಕಾರ ಸ್ಥಾಪಿಸುವ ಉಪಾಯವೇ ಹೊಳೆಯಲಿಲ್ಲ. ಲೀಗ್ ಮುಸಲ್ಮಾನರು ತಮ್ಮದೇ ಆದ ಸ್ವಪ್ನಲೋಕದಿಂದ ಇಳಿದು ನಿಂತರೆ ತಾವುಒಂದು ಜಾತಿಯೊಳಗಿನ ಒಂದು ಪಕ್ಷ ಮಾತ್ರವೆಂದೂ, ತಮ್ಮ ಯೋಗ್ಯತೆಗೆ ಮಿಕ್ಕಿದ ಪ್ರಾಮುಖ್ಯತೆಯನ್ನು ತಾವು ಪಡೆದಿದ್ದರೆ ,ಅದು ಕೇವಲ ಕಾಂಗ್ರೆಸಿನ ಔದಾರ್ಯದಿಂದೆಂದೂ, ಕಾಂಗ್ರೆಸು ಹಠಹಿಡಿದು ನಿಂತಲ್ಲಿ ತಮ್ಮ ಬೆಲೆ ತಗ್ಗುವದೆಂದೂ ಈ ಪಾಠದಿಂದ ತಿಳಿಯದಿರಲಾರರು. ನ್ಯಾಯವೊಂದಕ್ಕಲ್ಲದೆ ನಮ್ಮ ದರ್ಪಕ್ಕೆ ಬೆಲೆ ಬಾರದೆಂಬುದನ್ನು ಇನ್ನಾದರೂ ಅರಿತುಕೊಂಡು ಮಿ. ಜಿನ್ನರು ಕಾಂಗ್ರೆಸಿನೊಡನೆ ಸಂಧಾನಕ್ಕೆ ಮುಂದಾಗಲಾರರೆ?

ಆಟಂ ಬಾಂಬು ಪರೀಕ್ಷೆ

ಅಮೇರಿಕವು ಇದೇ ಜೂನ್ ತಾ. 30 ರಲ್ಲಿ ಮಧ್ಯ ಶಾಂತ ಸಮುದ್ರದ ಬಿಕಿನಿ ಖಾರಿಯಲ್ಲಿ ಪರೀಕ್ಷಾರ್ಥವಾಗಿ ಆಟಂ ಬೋಂಬೊಂದನ್ನು ಹಾಕಿತೆಂದೂ ಈ ಪರೀಕ್ಷೆಯು ಜಯಶೀಲವಾಯಿತೆಂದೂ ವಾರ್ತೆ ಬಂದಿದೆ. ಈ ಸ್ಫೋಟದಿಂದ ಮಧ್ಯದಲ್ಲಿ ಅಚ್ಚಕಿತ್ತಳೇ ಹಳದೀ ಬಣ್ಣದ ಜ್ವಾಲೆಯೊಂದಿಗೆ ಸುಮಾರು 50 ಸಾವಿರ ಅಡಿ ಎತ್ತರಕ್ಕೆ ಹೊಗೆ ಹಬ್ಬಿದ್ದಿತಂತೆ. ಆ ಸಮುದ್ರ ಸರೋವರವೇ ಬೆಂಕಿ ಹೊಗೆಯ ರೂಪದಿಂದ ಅದೃಶ್ಯವಾಗಿ ಹೋಗಿತ್ತಂತೆ. ಸುಮಾರು 200 ಹಡಗಗಳು, 150 ವಿಮಾನಗಳು, ನಾವಿಕರು, ವೈಜ್ಞಾನಿಕರು ಮತ್ತು ಪರೀಕ್ಷಕರೆಂದು 40000 ಜನರು ಭಾಗವಹಿಸಿದ್ದ ಈ ಪರೀಕ್ಷೆಯಲ್ಲಿ ಜನಹಾನಿಯೇನೂ ಆಗಲಿಲ್ಲವೆಂದೂ, ಪ್ರಳಯ ತೆರೆಗಳಂತಹ ನಿರೀಕ್ಷಿತ ಅಪಾಯಗಳೂ ಒದಗಲಿಲ್ಲವೆಂದೂ ಆದರ ಶಬ್ದ ಕೂಡಾ ನಿರೀಕ್ಷೆಯಷ್ಟಿರಲಿಲ್ಲವೆಂದೂ ತಿಳಿದುಬರುತ್ತದೆ. ಪರಿಣಾಮ ಪರೀಕ್ಷೆಗಾಗಿ ಆ ಸರೋವರದಲ್ಲಿ ನಿಲ್ಲಿಸಿದ್ದ ಹಡಗಗಳಲ್ಲಿ ಕೆಲವು ಮುಳುಗಿಹೋದುವು; ಕೆಲವು ಉರಿದು ಹೋದುವು; ಇನ್ನು ಕೆಲವಕ್ಕೆ ಜಖಮಾಯಿತು. ಇದು ಪ್ರಪಂಚದಲ್ಲೊಡೆದ ನಾಲ್ಕನೇ ಆಟಂ ಬೋಂಬು. ಕೇವಲ ಇದೊಂದು ಪ್ರಯೋಗಕ್ಕಾಗಿ ಆದ ವೆಚ್ಚದ ಅಂದಾಜು 2 ಕೋಟಿ ರೂ.ಗಳಿಂದ 15 ಕೋಟಿ ರೂ.ಗಳ ವರೆಗಿದೆ. ಸ್ಪಷ್ಟ ಪರಿಣಾಮವು ಇನ್ನೊಂದು ತಿಂಗಳ ಮೊದಲು ತಿಳಿದು ಬರಲಾರದು.

"ಇದು ಆಟಂ ಬೋಂಬಿನ ಶಮನಗಳನ್ನು ಕಂಡು ಹಿಡಿಯಲು ನಡಿಸಿದ ಪ್ರಯೋಗ" "ಶಾಂತಿ ರಕ್ಷಣೆಗಾಗಿ ಅಮೇರಿಕವು ಅಜೇಯವಾಗಿರಬೇಕೆಂಬುದನ್ನೂ ಇದೆಯೆಂಬುದನ್ನೂ ತೋರಿಸಲು ನಡಿಸಿದ ಪ್ರದರ್ಶನ" ಎಂದೆಲ್ಲಾ ಅಮೇರಿಕಾನರು ಈ ಪ್ರಯೋಗಕ್ಕೆ ಕಾರಣ ಕೊಟ್ಟಿದ್ದಾರೆ. ಆದರೆ ಮಿತ್ರ ರಾಷ್ಟ್ರೀಯರೊಳಗಿರುವ ಮನೋಮಾಲಿನ್ಯವನ್ನೂ ಪ್ರಮುಖ ರಾಷ್ಟ್ರಗಳ ಸ್ವಾರ್ಥ ಮನೋವೃತ್ತಿಯನ್ನೂ ಅರಿತಿರುವ ದುರ್ಬಲ ರಾಷ್ಟ್ರಗಳು ಹಾಗೂ ಮಾನವ ಜನಾಂಗವೇ ಇಂತಹ ಪ್ರಳಯ ಪ್ರದರ್ಶನವನ್ನು ಸಂದೇಹ, ಭೀತಿಗಳಿಂದ ಕಾಣುವಂತಾಗಿದೆ. ಲೋಕ ಶಾಂತಿಯ ಅವಶ್ಯಕತೆಗಾಗಿ ಈ ಪ್ರಳಯಾಗ್ನಿಯ ನಿರ್ಮಾಣಕ್ಕೇನೇ ಬಹಿಷ್ಕಾರ ಬೀಳುವದಗತ್ಯವಲ್ಲವೆ?

ಶ್ರೀ| ಎ. ಬಿ. ಶೆಟ್ಟರ ಸಂಚಾರ- ಆಹಾರ ಪೂರೈಕೆಯ ವಿಚಾರದಲ್ಲಿ ಅನಧಿಕಾರಿಗಳ ಬೆಂಬಲವನ್ನು ಸಂಪಾದಿಸುವ ಉದ್ದೇಶದಿಂದ ಪ್ರತಿ ಗ್ರಾಮಗಳಲ್ಲಿಯೂ ತಾಲೂಕುಗಳಲ್ಲಿಯೂ ಜನತಾ ಸಮಿತಿಗಳು ಸ್ಥಾಪಿಲ್ಪಡುವುವಷ್ಟೆ. ಈ ಸಮಿತಿಗಳನ್ನು ಅದಷ್ಟು ಪ್ರಾತಿನಿಧಿಕಗೊಳಿಸುವ ಉದ್ದೇಶದಿಂದ, ಶ್ರೀ| ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರು, ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಸಂಚರಿಸತೊಡಗಿರುವರು. ಈ ಸಮಿತಿಗಳಲ್ಲಿ ಉತ್ಸಾಹ ಉಳ್ಳವರು ಶ್ರೀಯುತರನ್ನು ಈ ಕೆಳಗಿನ ದಿನಗಳಲ್ಲಿ ಭೇಟಿಯಾಗಬಹುದು- ಕಾರ್ಕಳ- ಜುಲಾಯಿ ತಾ. ೨, ಕುಂದಾಪುರ- ಜುಲಾಯಿ ತಾ. ೪; ಉಡುಪಿ-ಜುಲಾಯಿ ತಾ. ೩ ಮತ್ತು ೫.

ಶೋಚನೀಯ ವಾರ್ತೆ- ಕೆಲವು ದಿನಗಳಿಗೆ ಹಿಂದೆ ಕಾರ್ಕಳ ತಾಲೂಕಿನ ಕೆರವಾಸಿ ಗ್ರಾಮದ ಎಣ್ಣೆಹೊಳೆಯಲ್ಲಿ ಅತ್ಯಂತ ಶೋಚನೀಯ ದುರ್ಘಟನೆಯೊದಗಿದ ವಾರ್ತೆ ಬಂದಿದೆ. ಏಳೆಂಟು ಜನರು ದೋಣಿಯನ್ನೇರಿ ಹೊಳೆದಾಟುತಿದ್ದಾಗ ತೇಲಿ ಬಂದೊಂದು ತೆಂಗಿನಕಾಯಿಯನ್ನು ಹಿಡಿಯಲು ದೋಣಿಯವನೂ ಅದರಲ್ಲಿದ್ದ ಹಳ್ಳಿ ಹೆಂಗಸರೂ ಪ್ರಯತ್ನಿಸಿದ್ದರಿಂದ ದೋಣಿ ಕವಚಿಬಿದ್ದು ಎಲ್ಲರೂ ನೀರು ಪಾಲಾದರು. ಅವರಲ್ಲಿ ಈಜಬಲ್ಲ ಕೆಲವರನ್ನೂ ಈಜಲರಿಯದ ಮಿಕ್ಕವರು ಹಿಡಿದು ಕೊಂಡುದರಿಂದ 3 ಮಂದಿಯೂ ಮುಳುಗಿ ಸತ್ತೇ ಹೋದರೆಂದೂ, ಆ ಪೈಕಿ ಸುಮಾರು 70 ವರುಷದ ಹಣ್ಣು ಮುದುಕಿಯೊಬ್ಬಳು ಮಾತ್ರ ತೇಲಿಹೋಗಿ ಒಂದು ಬಂಡೆ ದೊರೆತುದರಿಂದ ಬದುಕಿದಳೆಂದೂ ತಿಳಿದುಬರುತ್ತದೆ.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಅಶಕ್ತ ವಯಸ್ಸಿನ ಆಶ್ರಯವಾಗಿ— ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣಗಾಗಿ-- ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಸರುಗಳಾಗುವವರೂ ಬರೆಯಿರಿ—

ಪಿ. ಡಿ. ನಾಯಕ್, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ಘಟನಾ ಸಮಿತಿಯ ಚುನಾವಣಾ ಸಿದ್ಧತೆ.

ತ್ರಸ್ತ ಜಾಲಿನ ಸ್ಥಾನಗಳಲ್ಲೊಂದನ್ನು ರಾಷ್ಟ್ರೀಯ ಮುಸಲ್ಮಾನರಿಗೆ, ಅಥವಾ ತನ್ನ ರಾಷ್ಟ್ರೀಯ ಸ್ವರೂಪಕ್ಕನುಸಾರವಾಗಿ ಇಚ್ಛೆಯಿದ್ದವರಿಗೆ ಕೊಡುವ ಹಕ್ಕು ತನಗಿರಬೇಕೆಂಬ ಮುಖ್ಯ ವಾದಕ್ಕೆ ವೈಸರಾಯರ ಒಪ್ಪಿಗೆ ದೊರೆಯದೆ ಕಾಂಗ್ರೆಸ್ ಕಾರ್ಯಕಾರೀ ಕಮಿಟಿಯು ನಡುಗಾಲ ಸರಕಾರದಲ್ಲಿ ಸೇರಲು ನಿರಾಕರಿಸಿದ್ದಿತಷ್ಟೆ. ಆದರೆ ಉಮೇದ್ವಾರಿಕೆಯ ಕುರಿತು ತಮ್ಮ ನಿರ್ಬಂಧವಾವುದೂ ಇಲ್ಲವೆಂದು ಬ್ರಿಟಿಷ್ ಪ್ರತಿನಿಧಿಗಳ ಸ್ಪಷ್ಟ ಆಶ್ವಾಸನೆ ದೊರೆತ ನಂತರವೇ ಘಟನಾ ಸಮಿತಿಯಲ್ಲಿ ಭಾಗವಹಿಸುವ ನಿರ್ಧಾರವನ್ನದು ಮಾಡಿದೆ.

ಜೋಪಾಸನಾ ಸರಕಾರ ಸ್ಥಾಪನೆ

ಮಧ್ಯಾವಧಿ ಸರಕಾರವನ್ನು ಕಾಂಗ್ರೆಸ್ ಧಿಕ್ಕರಿಸಿದೊಡನೆ, 'ಎರಡು ಮುಖ್ಯ ಪಕ್ಷಗಳ ಸಮ್ಮತಿಯಿಂದೊಂದು ಸರಕಾರರಚನೆ ಸಾಧ್ಯವಾಗುವ ವರೆಗೆ ಆಡಳಿತನಡಿಸಲು' ಜೋಪಾಸನಾ ಸರಕಾರವೊಂದನ್ನು ವೈಸರಾಯರು ನೇಮಿಸಿಕೊಂಡಿದ್ದಾರೆ. ಇದು 93ನೇ ಸೆಕ್ಷನಿನಾಳ್ವಿಕೆಯ ಕಾಲದಲ್ಲಿ ಪ್ರಾಂತಿಕ ಗವರ್ನರರುಗಳು ನೇಮಿಸಿಕೊಂಡಿದ್ದ ಸಲಹೆಗಾರ ಸರಕಾರದಂತೆಯೇ ಸರಿ. ಈ ಮಂಡಲಿಯಲ್ಲಿ ಫೀಲ್ಡ್ ಮಾರ್ಶಲ್ ಸರ್. ಆಚಿನ್‌ಲೆಕ್ (ಯುದ್ಧ ಖಾತೆ) ಸರ್ ಗುರುನಾಥ್ ಬೆವೂರ್ (ವ್ಯಾಪಾರ ಮತ್ತು ವಸಾಹತು ಸಂಬಂಧ ಖಾತೆ) ಸರ್. ಎರಿಕ್ಕ್ ಕೋಟ್ಸ್ (ಹಣಕಾಸು) ಸರ್. ಎರಿಕ್ ಕೋನ್ರಾನ್‌ಸ್ಮಿತ್ (ಯುದ್ಧ ವಾಹನ, ರೈಲು, ಪೋಸ್ಟು ಮತ್ತು ವಿಮಾನ ಖಾತೆ) ಸರ್. ರೋಬರ್ಟ್ ಹಚಿಂಗ್ಸ್ (ಆಹಾರ ಮತ್ತು ಬೇಸಾಯ) ಸರ್. ಅಕ್ಬರ್ ಹೈದರಿ (ಕೆಲಸಗಾರರು, ಕೆಲಸ ಖಾತೆ, ಗನಿ ಮತ್ತು ಪವರ್, ಸುದ್ದಿ, ಕಲೆ ಮತ್ತು ಆರೋಗ್ಯ ಖಾತೆಗಳು) ಸರ್. ಜೋರ್ಜ್ ಸ್ಪೆನ್ಸೆ (ಕಾನೂನು ಮತ್ತು ಪಿ[illegible]ತಿ) [illegible] ನಾಥ್ (ಗೃಹ, ಕೈಗಾರಿಕೆ, ಮತ್ತು ಸರಬರಾಯಿ ಖಾತೆ)

ಇದೇ ತಾ ೪ರಲ್ಲಿ ಈ ಮೊದಲಿನ ಕಾರ್ಯಕಾರೀ ಸದಸ್ಯರ ರಾಜೀನಾಮೆಯು ಅಸ್ತಿತ್ವಕ್ಕೆ ಬಂದು ಹೊಸ ಸದಸ್ಯರು ಪ್ರಮಾಣಬದ್ಧರಾಗಿ ಅಧಿಕಾರ ನಿರ್ವಹಿಸ ಹತ್ತಿದ್ದಾರೆ. ಬ್ರಿಟಿಷ್ ಮಂತ್ರಿ ಸಮಿತಿಯವರು ಪಾರ್ಲಿಮೆಂಟ್ ಮತ್ತು ಬ್ರಿಟಿಷ್ ಮಂತ್ರಿಮಂಡಲಕ್ಕೆ ವರದಿಯೊಪ್ಪಿಸುವದಕ್ಕಾಗಿಯೂ, ಮುಂದಾಲೋಚನೆ ನಡೆಸುವದಕ್ಕಾಗಿಯೂ ಜೂನ್ ತಾ 29ರಲ್ಲಿ ಲಂಡನಿಗೆ ಮರಳಿದ್ದಾರೆ.

ಮಿ ಜಿನ್ನರ ಕ್ರೋಧ

ಕಾಂಗ್ರೆಸ್ ನಿರಾಕರಣೆ ಬರುವ ವರೆಗೆ ಏನೂ ಹೇಳುತ್ತಿದ್ದ ಜಿನ್ನರು ಆ ಮೇಲೆ ಕೂಡಲೇ ನಡುಗಾಲ ಸರಕಾರಕ್ಕೆ ಒಪ್ಪಿಗೆ ಸೂಚಿಸಿದ್ದರು. ಮಾತಿತ್ತಂತೆ ಕಾಂಗ್ರೆಸಿಗರ ಬದಲಿಗೆ ಬೇರೆಯವರನ್ನು ನೇಮಿಸಿಕೊಂಡು ತಮ್ಮದೇ ಆದ ತಾತ್ಕಾಲಿಕ ಸರಕಾರ ರಚನೆಯಾಗುವದೆಂದೂ, ಮುಂದೆ ರಾಜ್ಯಭಾರ ಯಂತ್ರದ ಚಾಲಕತ್ವ ದೊರೆತಾಗ ತಮ್ಮ ಧೋರಣೆಗನುಗುಣವಾದ ವಾತಾವರಣ ನಿರ್ಮಿಸಲನುಕೂಲವಾಗುವದೆಂದೂ ಲೀಗ್ ಮುಸಲ್ಮಾನರ ಆಶೆಯಿದ್ದಿತು. ಆದರೆ ಬ್ರಿಟಿಷರ ಜೋಪಾಸನಾ ಸರಕಾರದ ಆಲೋಚನೆ ಕೇಳಿದೊಡನೆ ಮಿ. ಜಿನ್ನರು ಉರಿದು ಬಿದ್ದು ನಿಷೇಧ ಪತ್ರ ಬರೆದರು. "ನೀವು ಕಾಂಗ್ರೆಸ್-ಲೀಗ್ ಐದ್ಯನು ಮತ್ತು ಇತರ ಅಲ್ಪ ಸಂಖ್ಯಾಕರಿಗೆ ಡು ಸ್ಥಾನಗಳೆಂಬ ಆಶ್ವಾಸನೆಯನ್ನು ನನಗೆ ಕೊಟ್ಟು ತಪ್ಪಿದಿರಿ; ಯಾರಾದರೂ ಪ್ಪದಿದ್ದರೆ ಬದಲಿಗರನ್ನು ನೇಮಿಸಿ ನಡುಗಾಲ ಸರಕಾರ ರಚಿಸುವ ಭಾಷೆ ಕೊಟ್ಟು ತಪ್ಪಿದಿರಿ. ಆ ಸರಕಾರ ರಚನೆಯಾಗುವ ವರೆಗೆ ಘಟನಾ ಸಮಿತಿಯ ರಚನೆಯನ್ನೂ ಹಿಂದೆ ಹಾಕಬೇಕು", ಎಂದೇ ಮಿ. ಜಿನ್ನರ ಅಭಿಪ್ರಾಯ. "ಸಮಪ್ರಾತಿನಿಧ್ಯದ ಕುರಿತು ನಾವು ನಮ್ಮ ಆಲೋಚನೆಯನ್ನಷ್ಟೇ ಹೇಳಿದ್ದೆವಲ್ಲದೆ ನಿಮಗಾವ ಭಾಷೆಯನ್ನೂ ಕೊಟ್ಟಿಲ್ಲ; ಇನ್ನಾದರೂ ಶಕ್ಯಸೆಯವರ ಒಪ್ಪಂದದಿಂದ ಮಧ್ಯಾವಧಿ ರಾಷ್ಟ್ರೀಯ ಸರಕಾರ ರಚಿಸುವ ಯೋಚನೆ ಬಿಟ್ಟಿಲ್ಲ. ಘಟನಾ ಸಮಿತಿಯ ರಚನೆಯನ್ನು ಹಿಂದೆ ಹಾಕಲು ಸಾಧ್ಯವಿಲ್ಲ" ಎಂದು ಬ್ರಿಟಿಷ್ ಸಮಿತಿ ಸದಸ್ಯರೂ ವೈಸರಾಯರೂ ಮಿ. ಜಿನ್ನರಿಗೆ ಖಂಡತುಂಡ ಉತ್ತರ ಕೊಟ್ಟಿದ್ದಾರೆ.

ಘಟನಾ ಸಮಿತಿಯ ಭವಿಷ್ಯವೇನು?

ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನಾರಿಸುವ ಕಾರ್ಯಕ್ರಮಗಳೀಗ ಭರದಿಂದ ನಡೆಯುತ್ತಿವೆ. ಈ ಸಂಬಂಧವಾಗಿ ಕಾಂಗ್ರೆಸ್ ಪ್ರಾಂತ್ಯಗಳಿಗೆ ಕಾರ್ಯಕಾರೀ ಸಮಿತಿಯ ಆಜ್ಞೆಗಳು ಹೋಗಿವೆ. ಪ್ರತಿನಿಧಿ ಚುನಾವಣೆಯಲ್ಲಿ ಎಲ್ಲಾ ಜಾತಿಮತಗಳವರಿಗೂ ನ್ಯಾಯ ದೊರೆಯುವಂತೆ ನೋಡಬೇಕೆಂದೂ, ಸಪ್ರು, ಜಯಕರ ಕಾಂಗ್ರೆಸೇತರ ಪ್ರಾಜ್ಞರೆಲ್ಲರನ್ನೂ ಅಲ್ಲಿಗಾರಿಸಬೇಕೆಂದೂ ಕಾಂಗ್ರೆಸ್ ನಿರ್ಧರಿಸಿದೆ. ಅಖಿಲ ರಾಷ್ಟ್ರದ ವಿವಿಧಾಭಿಪ್ರಾಯಗಳ ಎಲ್ಲಾ ಆಧ್ವರೂ ಈ ಘಟನಾ ಸಮಿತಿಯಲ್ಲಿ ಇರುವಂತಾಗುವದು. ಆದರೆ ಈ ಘಟನಾ ಸಮಿತಿಯ ಹಕ್ಕು ಬಾಧ್ಯತೆ, ಕಾರ್ಯಕ್ರಮಗಳ ಕುರಿತು ಕಾಂಗ್ರೆಸ್ ಕಟ್ಟಿಕೊಂಡಿರುವ ಅಭಿಪ್ರಾಯಗಳಿಗೂ ಬ್ರಿಟಿಷರ ಅಭಿಪ್ರಾಯಗಳಿಗೂ ವ್ಯತ್ಯಾಸವಿದೆ. ಮುಖ್ಯವಾಗಿ ಪ್ರಾಂತಿಕ ಪಂಗಡದಲ್ಲಿ ಸೇರುವ ಯಾ ಸೇರದಿರುವ ಪ್ರತಿಯೊಂದು ಪ್ರಾಂತ್ಯದ ಹಕ್ಕಿನ ಕುರಿತು ಎರಡು ಕಡೆಯವರ ಅಭಿಪ್ರಾಯಗಳೂ ಪೂರ್ವ ಪಶ್ಚಿಮಗಳಂತಿವೆ. ಮುಸ್ಲಿಂ ಲೀಗೂ ಅದರಲ್ಲಿ ಭಾಗ ವಹಿಸಲೊಪ್ಪಿರುವದರಿಂದ, ಅಲ್ಲಿಯೂ ಘರ್ಷಣೆ ಮತ್ತು ಬಿಕ್ಕಟ್ಟು ಉಂಟಾಗುವದು. ಆದರೆ ಕಾಂಗ್ರೆಸು ಬೇರಾವುದನ್ನೂ ಗಣಿಸದೆ ತನ್ನ ಅಭಿಪ್ರಾಯಾನುಸಾರವಾಗಿ ಈ ಘಟನಾ ಸಮಿತಿಯ ಕಾರ್ಯಗಳನ್ನು ಮುಂದೊತ್ತುವ ದೃಢ ಸಂಕಲ್ಪಮಾಡಿದೆ. ಅಲ್ಲಿ ಹೊಸ ವಿಧದ ಸ್ವತಂತ್ರ್ಯ ಹೋರಾಟವೇ ಕಾಂಗ್ರೆಸಿನಿಂದಾಗಬಹುದು. ಅ. ಭಾ. ಕಾಂ. ಕಮಿಟಿಯ ಸಭೆಯು ಜುಲಾಯಿ ತಾ. 6 ಮತ್ತು 7ರಲ್ಲಿ ಬೊಂಬಾಯಿಯಲ್ಲಿ ಸೇರಲಿದೆ. ಪ್ರೇಕ್ಷಕರಿಗಲ್ಲಿ ಪ್ರವೇಶವಿಲ್ಲ. ಬೊಂಬಾಯಿಯ ಸಭೆ ಮುಗಿದೊಡನೆ ಪಂಡಿತ ನೆಹರುಗಳು ಪುನಃ ಕಾಶ್ಮೀರಕ್ಕೆ ಹೋಗುವ ಆಲೋಚನೆಯಲ್ಲಿದ್ದಾರೆ. ಮೌಲಾನಾ ಆಜಾದರು ಕಾಶ್ಮೀರಾಧಿಕಾರಿಗಳೊಡನೆ ಪತ್ರ ವ್ಯವಹರಿಸುತಿದ್ದಾರೆ.

ಪ್ಯಾರಿಸಿನಲ್ಲಿ

ಸೇರಿರುವ ಚತುರ್ರಾಷ್ಟ್ರ ವಿದೇಶ ಮಂತ್ರಿಗಳಲ್ಲಿ ಕೂಡಲೆ ಒಂದು ಶೀಘ್ರ ಒಪ್ಪಂದವಾಗುವ ಆಶೆಯಿದೆಯೆಂದೂ ಸದ್ಯದಲ್ಲೇ 21 ರಾಷ್ಟ್ರಗಳ ಶಾಂತಿ ಸಮ್ಮೇಲನ ನೆರೆಯಲಿದೆಯೆಂದೂ ವಾರ್ತೆ ಬಂದಿದೆ.

Navayuga Enterprise Ltd. Udipi

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,
ಉಡುಪಿ.

ಪ್ರಾರಂಭದ ವರ್ಷದಿಂದಲೆ ಪಾಲುದಾರರಿಗೆ ಲಾಭಾಂಶ ಹಂಚಿದ—ಕಳೆದೆರಡು ವರ್ಷಗಳಿಂದ ಸೇಕಡಾ ರೂ. 6¼ರಂತೆ ಲಾಭಾಂಶ ಹಂಚಿದ—ಲಾಭದಾಯಕ ಸಂಸ್ಥೆ.

ಪ್ರಥಮವಾಗಿ ರಿಜಿಸ್ಟರಾದ ಪಾಲುಭಂಡವಾಳ	ರೂ. 20,000
ಇತ್ತೀಚೆಗೆ ಹೆಚ್ಚಿಸಿದ್ದು	,, 80,000
	1,00,000

ಕೆಲವು ಪಾಲುಗಳು ದೊರೆಯುತ್ತವೆ.

(ಪಾಲು ಒಂದರ ರೂ. 10/-, ಪ್ರವೇಶ ಧನ ಪ್ರತಿ ಪಾಲಿಗೂ ರೂ. 1/-. ಹೀಗೆ ರೂ. 11 ಪಾಲು ಅರ್ಜಿಯೊಂದಿಗೆ ಒಮ್ಮೆಯೇ ತೆರಲ್ಪಡತಕ್ಕದ್ದು)

10 ಪಾಲುಗಳಿಗಿಂತ ಕಡಿಮೆ ಕೊಡಲ್ಪಡುವುದಿಲ್ಲ.

ಬೇಕಾದವರು ಪಾಲು ಅರ್ಜಿಗಳಿಗಾಗಿ ಕೂಡಲೇ ಬರೆದುಕೊಳ್ಳಬಹುದು.

ಮೆನೇಜಿಂಗ್ ಡೈರೆಕ್ಟರ್,
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,
ಉಡುಪಿ, ದ. ಕನ್ನಡ.

Approved firm by the Govt. of Mysore
Certified by the Agent of the Govt. of Cylone Indian.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ನಡೆಯುವ ಚಿತ್ರ

—: ಅರ್ಧನಾರಿ :—

ಎಂ ವಿ. ರಾಜಮ್ಮ, ಚಿನ್ನಪ್ಪ ಮೊದಲಾದವರು.

ಬರುವ ಚಿತ್ರ

ತಾರೀಖು 8—7—46ರಿಂದ

KISKI BIBI.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಲಯ,
ರಥಬೀದಿ, ಉಡುಪಿ.

ಗಾಂಧಿಜೀಯ ರೈಲನ್ನುರುಳಿಸುವ ಯತ್ನ

'ದ. ಆಫ್ರಿಕದಲ್ಲಿ ನಾನೇ ಸತ್ಯಾಗ್ರಹ ಹೂಡಬೇಕಾದ ಸಮಯಬಂದೀತು'-ಗಾಂಧಿಜೀ.

ನವದಿಲ್ಲಿಯ ಕೊನೆಯ ಸಾಯಂ. ಪ್ರಾರ್ಥನಾ ಸಭೆಯಲ್ಲಿ ದಕ್ಷಿಣಾಫ್ರಿಕದ ಹಿಂದೀಯರ ಕುರಿತು ಮಾತಾಡುತ್ತಾ ಮಹಾತ್ಮಾಜೀ ಹೀಗಂದಿದ್ದಾರೆ:—

ಗೌರವ ಕಣಜ

"ಹಿಂದುಸ್ಥಾನವು ಕ್ಷಿಪ್ರಗತಿಯಿಂದ ಮಾನವ ವರ್ಗದ ಮರ್ಯಾದೆ ಮತ್ತು ಘನತೆಯ ಕಣಜವಾಗುತ್ತಾ ಬರುತ್ತಿದೆ. ದಕ್ಷಿಣಾಫ್ರಿಕದ ವೀರ ಹೋರಾಟಗಾರರ ಸಂಗ್ರಾಮದಲ್ಲಿ ಸಹಾಯನೀಡಲು ಅದು ಧುಮುಕುವದು ಪ್ರಸಂಗೋಚಿತವಿದೆ. ಅವರ ಕಣ್ಣ ಮುಂದಿನ ಹಾದಿ ಸುಸ್ಪಷ್ಟವಿರಬೇಕು. ಅದೆಂದು ಶುದ್ಧವಿತ್ತೆಂಬುದನ್ನು ನಾನು ತಿಳಿಯಬೇಕೆಂದಿದ್ದೇನೆ. ಈ ಮಧ್ಯೆ ವೈಸರಾಯರೂ ಭಾರತದಲ್ಲಿರುವ ಇತರ ಶ್ವೇತವರ್ಣೀಯ ಸ್ತ್ರೀಪುರುಷರೂ ಈ ಕರ್ತವ್ಯದಲ್ಲಿ ತಮ್ಮ ಪಾಲನ್ನೂ ನಿರ್ವಹಿಸುವಂತೆ ನಾನವರ ಸಹಾನುಭೂತಿಯನ್ನು ಎಬ್ಬಿಸಿದ್ದೇನೆ".

ದ. ಆಫ್ರಿಕದ ಪರಿಚಯುಸ್ಥ

ದಿನಂಪ್ರತಿ ಹೆಚ್ಚುತ್ತಿರುವ ಪುಂಡಾಟಿಕೆಗಳ ನಡುವೆ ಏನೊಂದೂ ಪ್ರತೀಕಾರ ಮಾಡದೆ ಶಾಂತ ಸತ್ಯಾಗ್ರಹ ಕೈಕೊಂಡಿರುವ ದಕ್ಷಿಣಾಫ್ರಿಕದ ಭಾರತೀಯರ ಧೈರ್ಯ ಮತ್ತು ತ್ಯಾಗಗಳನ್ನು ಮುಕ್ತಕಂಠದಿಂದ ಹೊಗಳಿ ಗಾಂಧಿಜೀಯೆಂದರು "ನಾನು ಭಾರತದಲ್ಲಿ ಜನಿಸಿದವ; ಆದರೆ ದಕ್ಷಿಣಾಫ್ರಿಕದಲ್ಲಿ ಆದವ. ಅಲ್ಲಿಯ ಪ್ರತಿಯೊಂದು ಪ್ರಾಂತ್ಯದ ಪರಿಚಯವೂ ನನಗಿದೆ. ನನ್ನ ಜೀವನವು ನಡು ಹಗಲಲ್ಲಿದ್ದ ಆ 20 ವರುಷಗಳನ್ನು ನಾನು ಅಲ್ಲಿಯೇ ಕಳೆದಿದ್ದೇನೆ. ದಕ್ಷಿಣಾಫ್ರಿಕದ ಬಿಳಿ ಜನರನ್ನು ನಾನು ಬಲ್ಲೆ. ನನ್ನ ದೇಶೀಯರನ್ನು ಹೇಗೋ ಹಾಗೆಯೇ ನಾನವರನ್ನು ಪ್ರೀತಿಸಿದ್ದೇನೆ. ಅವರಲ್ಲಿ ಕೆಲವರ ಪುಂಡಾಟಿಕೆಯನ್ನು ಕಂಡು ನಾನು ಲಜ್ಜಿತನಾಗಿದ್ದೇನೆ. ಅಲ್ಲಿಯ ಯುರೋಪಿಯನ್ನರ ಬಿಳಿಜನಕೆಯೆತ್ತರ ಸಹಾನುಭೂತಿಯೂ ಈ ಪುಂಡಾಟಿಗಳಿಗಿದೆ ಎಂಬ ಭೀತಿ ನನಗಿದೆ".

ಬಿಳಿಯರಲ್ಲಿ ಜ್ಞಾನೋದಯವಾಗಲಿ!

ಇಂತಹ ಮೌನ ಸಹಾನುಭೂತಿಯಿಲ್ಲದೆ ಪುಂಡಾಟಿಕೆಯೆಂದಿಗೂ ಹೀಗೆ ಜ್ವಲಿಸುವಂತಿಲ್ಲ. ಸತ್ಯಾಗ್ರಹಿಗಳಲ್ಲಿರುವ ಅಗಾಧ ಶಕ್ತಿ ಮತ್ತು ಯಥಾರ್ಥತೆಯು ಬಿಳಿ ಜನರಿಗೆ ಮುಂದಟ್ಟಾದೊಡನೆ ಅವರವುಗಳನ್ನು ಗೌರವಿಸುವರೆಂದೂ ತಮ್ಮ ಸಹಾನುಭೂತಿಯನ್ನು ಅತ್ಯಾಗಿ ಸತ್ಯಾಗ್ರಹಿಗಳ ಕಡೆಗೆ ವರ್ಗಾಯಿಸಲಿದ್ದಾರೆಂದೂ ನನ್ನ ಗಾಢ ಆಶೆಯಿದೆ. ಸತ್ಯಾಗ್ರಹಿಗಳ ಮೇಲೆ ದೇವರು ಅನುಗ್ರಹಿಸುವಂತೆ ನೀವೆಲ್ಲಾ ಹೃತ್ಪೂರ್ವಕ ಪ್ರಾರ್ಥಿಸಬೇಕು. ಅಲ್ಲಿಯವರ ವಿಜಯಕ್ಕಾಗಿ ಹಣ ಕಳುಹಿಸಿಕೊಡಿರೆಂದು ನಾನು ನಿಮ್ಮನ್ನು ಕೇಳುವದಿಲ್ಲ. ಹಣವು ಅವರಿಗೆ ವಿಜಯ ದೊರಕಿಸಿಕೊಡುವಂತಿಲ್ಲ. ಅವರಲ್ಲಿ ಸಾಕಷ್ಟು ಹಣವಿದೆ. ಆದರೆ ಪರಿಶುದ್ಧ ರೀತಿಯ ಅಹಿಂಸಾತ್ಮಕ ಸತ್ಯಾಗ್ರಹವನ್ನು ಸ್ವತಃ ನಾನೇ ಹೂಡಬೇಕಾದ ಕಾಲ ಬರಲೂ ಬಹುದು; ಆಗ ಅದು ಕರ್ತವ್ಯವಾಗುವದು".

ಈ ಬೋಧನೆಯ ನಂತರ ಗಾಂಧಿಜೀ ಕೂಡಿದವರಿಂದ ಒಂದು 'ದೈವಿಕ ಡ್ರಿಲ್' ಮಾಡಿಸಿದರು. ಎಲ್ಲರೂ ತಮ್ಮ ಕಣ್ಣನ್ನು ಮುಚ್ಚಿ ಹನ್ನೆರಡು ಬಾರಿ ರಾಮನಾಮ ಜಪಿಸಬೇಕೆಂದು ಕೇಳಿಕೊಂಡು ಸ್ವತಃ ತಾನೇ ಅದನ್ನು ಮಾಡಿ ತೋರಿಸಿದರು. ಜನ ತಂಡ ಅವರನ್ನನುಸರಿಸಿ ಈ ನಾಮವನ್ನು ಮೂರು ಬಾರಿ ಮಾಡಿತು.

ಮಹಾತ್ಮರಿದ್ದ ರೈಲನ್ನುರುಳಿಸುವ ಯತ್ನ!

ತಾ. 28ನೇ ರಾತ್ರಿ ನವದಿಲ್ಲಿಯಲ್ಲಿ ಸ್ಪೆಶ್ಯಲ್ ಟ್ರೈನನ್ನು ಹತ್ತಿ ಮಹಾತ್ಮಾ ಗಾಂಧಿ ಪೂನೆಗೆ ಹೊರಟಿದ್ದರು. ಅವರಿದ್ದ ಬಂಡಿ ಬೊಂಬಾಯಿ ಮಾರ್ಗವಾಗಿ ತಾ. 30ನೇ ಅತಿ ಮುಂಜಾನೆ 2 ಘಂಟೆಗೆ, ಪೂನೆಗೆ ಸುಮಾರು 68 ಮೈಲು ದೂರದ ನೆರಾಲ್ ಎಂಬಲ್ಲಿಗೆ ಬರುತ್ತಿದ್ದಾಗ ಕಂಬಿಗಳಲ್ಲಿಟ್ಟಿದ್ದ ಎರಡು ಮೂರು ಬಂಡೆಕಲ್ಲುಗಳಿಗೆ ಬಡಿಯಿತು. ಆಗ ಬಂಡಿಯು ಸುಮಾರು 35ರಿಂದ 40 ಮೈಲಷ್ಟು ವೇಗವಾಗಿ ಚಲಿಸುತಿತ್ತಂತೆ. ಇಂಜಿನು ಡ್ರೈವರನು ಕಂಬಿಯಲ್ಲಿರುವ ಕಲ್ಲುಗಳನ್ನು ಕಾಣುವ ಮೊದಲೇ ಬಂಡಿಯ ಎಲೆಕ್ಟ್ರಿಕ್ ಎಂಜಿನಿನ ಮುಂಭಾಗವು ಕಲ್ಲುಗಳಿಗೆ ಢಿಕ್ಕಿ ಹೊಡೆದು ತುಸು ಜಖಮಾಯಿತು. ಆ ಘರ್ಷಣೆಯ ರಭಸಕ್ಕೆ ಗಾಡಿಯೊಳಗಿದ್ದ ಗಾಂಧಿಜೀ ಮತ್ತವರ ಅನುಯಾಯಿಗಳನ್ನು ಬಲವಾಗಿ ಕುಲುಕಿದಂತಾಯಿತು. ಆದರೆ ಯಾರಿಗೂ ಜಖಮಾಗಿಲ್ಲ.

ಗಾಂಧಿಜೀಯ ಬಂಡಿಯನ್ನು ಉರುಳಿಸುವ ಉದ್ದೇಶದಿಂದಲೇ ಯಾರೋ ದುಸ್ಸಾಮರು ಈ ಕಲ್ಲುಗಳನ್ನು ತಂದು ಹಾಕಿದ್ದರೆಂದು ನಂಬಲಾಗಿದೆ. ಪ್ರತಿಯೊಂದು ಕಲ್ಲೂ ಎರಡು ಮೂರು ಮಂದಿ ಎತ್ತುವಷ್ಟು ದೊಡ್ಡದಿತ್ತು; ಸಮೀಪದಲ್ಲಿ ಅಂತಹ ಕಲ್ಲಿದ್ದ ಜಾಗವಿರಲಿಲ್ಲ; ಗಾಂಧಿಜೀಯ ಗಾಡಿ ಬರುವ ಅರ್ಧ ಘಂಟೆಗೆ ಮೊದಲು ಪ್ರಯಾಣಿಕರ ರೈಲುಗಾಡಿಯೊಂದು ಆ ಕಂಬಿಗಳ ಮೇಲೆ ಹೋಗಿತ್ತಾದರೂ ಆಗ ಕಲ್ಲುಗಳಿರಲಿಲ್ಲ. ಈ ಕುರಿತೀಗ ಪೋಲಿಸ್ ತನಿಖೆ ನಡೆಯುತ್ತಿದೆ. ಅವಘಡ ದೆಸೆಯಿಂದ ಸುಮಾರು 6½ ಘಂಟೆ ತಡವಾಗಿ ಪೂನೆಗೆ ಬಂದು ಮುಟ್ಟಿದ ಮಹಾತ್ಮರು ಡ್ರೈವರ್ ಮತ್ತು ಗಾರ್ಡನ ಸತ್ಸಾಹಸಕ್ಕಾಗಿ ಇಬ್ಬರಿಗೂ ಹೃತ್ಪೂರ್ವಕ ಧನ್ಯವಾದಗಳನ್ನಿತ್ತರು. "ನೀವು ಸುರಕ್ಷಿತರಾಗಿ ಹಾಗೂ ಜಖಮಾಗದೆ ಉಳಿದುದಕ್ಕಾಗಿ ನಾವೇ ಕೃತಜ್ಞರಾಗಿರಬೇಕು"ಎಂದು ಅವರಿಬ್ಬರೂ ಮಹಾತ್ಮರಿಗೆ ಪ್ರತಿವಂದನೆ ಸಲ್ಲಿಸಿದರು.

ಉಡುಪಿ

ನಗರ ಸಭೆಯು--ಕಳೆದ ತಾ 26ರಲ್ಲು ಸಂಜೆ ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. 1944ನೇ ಇಸವಿ ಜುಲ್ಯಾ ತಿಂಗಳಿಂದ ಮುನಿಸಿಪಾಲಿಟಿಯ ತೋಟಿ ವರ್ಗದವರಿಗೆ ಇತ್ತೀಚೆಗೆ ಜ್ಯಾರಿಗೆ ಬಂದ ಸ್ಕೇಲಿನಂತೆ ತುಟ್ಟಿ ಭತ್ತೆ ಕೊಡಬೇಕೆನ್ನುವಂತೆಯೇ ಇತರ ಎಲ್ಲಾ ಮುನಿಸಿಪಲ್ ನೌಕರರಿಗೂ ಅದೇ ಸ್ಕೇಲಿನಂತೆ ಅದೇ ಸಮಯದಿಂದ ತುಟ್ಟಿಭತ್ತೆ ಸಿಗುವಂತಾಗಬೇಕೆಂದು ಸರಕಾರದ ಅವಗಾಹನೆಗೆ ತರಲಾಯಿತು. ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನ್ ಮದ್ರಾಸ್ ಈ ಸಂಸ್ಥೆಗೆ ರೂಪ್ಯಾ 25- ಸಹಾಯಧನ ಕೊಡಬಹುದೆಂದಾಯಿತು. ನಗರ ಸಭೆಯ 1944-45ನೇ ಗರವರುಷದ ಆಡಳಿತ ವರದಿ ಸ್ವೀಕರಿಸುವಾಗ ಚೆಯರ್‌ಮೆನ್, ಕೌನ್ಸಿಲರ್ಸ್ ಮತ್ತು ಕಮಿಶನರ್ ಇವರೊಳಗೆ ಪರಸ್ಪರ ಐಕ್ಯತೆ, ಸೌಹಾರ್ದವಿತ್ತೆಂದೂ ಬಾಲ್ಕಿ ವರುಷದಲ್ಲಿ ಜನತೆಗೆ ಹೆಚ್ಚಿನ ಸೌಕರ್ಯಗಳನ್ನೀಯುವ ಮಹಾ ಸಂಕಲ್ಪ ಮಾಡಿರುವುದೆಂದೂ ಅರ್ಥವುಳ್ಳ ಒಕ್ಕಣೆ ಸೇರಿಸಲಾಯಿತು. ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟಿಗನುಸಾರವಾಗಿ ಕಮಿಶನರರು ನಿವೃತ್ತ ಸರ್ಜನ್ ಶ್ರೀ ಎಸ್. ಶ್ರೀನಿವಾಸರಾಯರಿಗೆ ಕೊಟ್ಟ ನೋಟೀಸಿನ ಕುರಿತು ಅವರು ಕೌನ್ಸಿಲಿಗೆ ಮಾಡಿದ ಅಪೀಲು ಪರಾಂಬರಿಸಲಾಗಿ ಅದು ತಿರಸ್ಕರಿಸಲ್ಪಟ್ಟಿತು. ಅಪೀಲು ಅರ್ಜಿಯಲ್ಲಿ 'ಬ್ರಾಹ್ಮಣಸ್ತ್ರಾನ್' ಎಂಬ ಒಕ್ಕಣೆಯ ಕುರಿತು ಚೆಯರ್ ಮೆನರು ತನ್ನ ಅತೃಪ್ತಿಯನ್ನು ಸೂಚಿಸಿದರು.

ತೇರು ಬೀದಿಯಲ್ಲಿ ಸಭೆ--ಸ್ಥಳೀಯ ಬೀಡಿ ಮತ್ತು ನೇಕಾರ ಯೂನಿಯನ್ನುಗಳ ನೇತೃತ್ವದಲ್ಲಿ ತಾ 1ರಲ್ಲು ಸಂಜೆ ಶ್ರೀ. ಎಸ್. ಸೂನೆನ್ನರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಬೀಡಿ ಯೂನಿಯನ್ನಿನ ಕಾರ್ಯದರ್ಶಿಯರಾದ ಶ್ರೀ ವಾಸ ಸೇರಿಗಾರರಿಗೆ ನಾಲ್ಕೈದು ಮಂದಿ ಮಹಮ್ಮದೀ ಬೀಡಿ ಮಾಲಿಕರು ತಾ 29ರಲ್ಲು ರಾತ್ರಿ ಹೊಡೆದುದರ ನಿಷೇಧ ಪ್ರದರ್ಶಿಸಲಾಯಿತು. ಕೆಲಸಗಾರರಿಗೂ ಮಿಲ್ ಬಟ್ಟೆ ಸರಾಗದೊರೆಯುವ ಏರ್ಪಾಡನ್ನು ಮಾಡುವಂತೆ ಸರಕಾರವನ್ನು ವಿನಂತಿಸಲಾಯಿತು.

ಕಾಲೇಜು ಸ್ಥಾಪನೆ ಯೋಜನೆ ಮನ್ನಾ ಮಾಡಲಾಯಿತು--ಕಳೆದ ತಾ. 27ರಲ್ಲು ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ, ಇದರ ಸುಪ್ರೀಮ್ ಗವರ್ನಿಂಗ್ ಬೋಡಿಯ ಸಭೆಯು ಡಾ। ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಈ ತನಕ ಸಾಧಾರಣ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ ಕಾಲೇಜು ಫಂಡಿಗೆ ಜಮೆಯಾಗಿರುವುದರಿಂದಲೂ ಕಾಲೇಜು ಸ್ಥಾಪಿಸಲು ಕನಿಷ್ಟ ಹತ್ತು ಲಕ್ಷ ರೂಪಾಯಿ ಬೇಕಾಗಿರುವುದರಿಂದಲೂ ಪ್ರಕೃತ ಕಾಲೇಜು ಯೋಜನೆಯನ್ನು ಜನರ ಬೆಂಬಲ ದೊರಕದಿದ್ದುದರಿಂದ, ಮುಕ್ತಾಯಗೊಳಿಸಿ ಈ ತನಕ ವಸೂಲಾದ ಹಣವನ್ನು ಅವರವರಿಗೇನೇ ವಾಪಾಸು ಕೊಡಬೇಕೆಂದು ನಿರ್ಧರಿಸಲಾಯಿತು.

ನಿಧನ--ಉಡುಪಿಯ ಉತ್ಸಾಹೀ ತರುಣ ಕಾಂಗ್ರೆಸ್ ಕೆಲಸಗಾರರಲ್ಲೊಬ್ಬರಾಗಿದ್ದ ಶ್ರೀ. ಕೆ. ಕಮಲಾಕ್ಷ ಕಾಮತ್ ಅವರು ಕೆಲಕಾಲ ಅಸ್ವಸ್ಥದಿಂದಿದ್ದು, ಇದೇ ಕಳೆದ ಶನಿವಾರ ತಾ. ೨೯ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಪಡುತ್ತೇವೆ. ಮೃತರು ಸುಮಾರು 33 ವರ್ಷದವರಾಗಿದ್ದು, ೧೯೩೦-೩೨ರ ಕಾಂಗ್ರೆಸ್ ಚಳುವಳದಲ್ಲಿ ಭಾಗವಹಿಸಿ, ಕಾರಾಗ್ರಹವನ್ನು ಸೇರಿದ್ದರಲ್ಲದೆ ಅನಂತರವೂ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದ ದುಡಿಯುತಿದ್ದರು. ಅಲ್ಲದೆ, ಉಡುಪಿಯ ವೈ. ಎಮ್. ಎಸ್. ಸಿ ಯ ಉತ್ತಮ ತರುಣ ಕ್ರಿಕೆಟ್ ಆಟಗಾರರಲ್ಲಿ ಒಬ್ಬರೆಂದು ಸುಪ್ರಸಿದ್ಧರಾಗಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಅಕಾಲ ನಿಧನದಿಂದ ಬಂಧು ಬಳಗದವರಿಗಾದ ದುಃಖದಲ್ಲಿ ಸಹಸಂತಾಪವನ್ನು ಸೂಚಿಸುವೆವು.

BANK WITH THE LARGEST CONNECTIONS ON THE WEST COAST

OFFERS:-
EFFICIENT, PROMPT & COURTEOUS
SERVICE OF EVERY TYPE

OPEN AN ACCOUNT with
The Canara Industrial & Banking Syndicate Ltd
ESTD 1925

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟದೆ.)

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೮ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ। ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಮಂಗಳೂರು.

ಪತ್ರಿಕಾ ಪ್ರತಿನಿಧಿಗಳೊಡನೆ ಜಿಲ್ಲಾ ಕಲೆಕ್ಟರರ ಮಾತುಕಥೆ.

ಕಳೆದ ಬುಧವಾರ ತಾ. ೨೬ನೇ ಅಪರಾಹ್ನ ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ. ಭೂತಲಿಂಗಂ, ಐ. ಸಿ. ಎಸ್., ಅವರು ಮೊದಲ ಬಾರಿಯಾಗಿ ತಮ್ಮ ಕಚೇರಿಗೆ ಇಲ್ಲಿನ ಪತ್ರಿಕಾ ಪ್ರತಿನಿಧಿಗಳನ್ನು ಆಮಂತ್ರಿಸಿ ಅವರೊಡನೆ ಮಾತುಕಥೆ ಬೆಳೆಸಿದರು. ಗ್ರಾಮ, ತಾಲೂಕು, ಜಿಲ್ಲಾ ಸಮಿತಿಗಳ ರಚನೆಯ ಉದ್ದೇಶಗಳೇನು, ಅವುಗಳ ರಚನಾ ಕ್ರಮ ಕರ್ತವ್ಯಾಂಶಗಳು ಯಾವುವು ಸಹಕಾರದವರು ವ್ಯಾಪಾರಿಗಳ ಸ್ಥಾನವೆಲ್ಲಿ ಎಂಬಿತ್ಯಾದಿ ವಿಷಯಗಳಲ್ಲಿ ಅಗತ್ಯವಿರುವ ಮಾಹಿತಿಯನ್ನು ಕೊಟ್ಟು "ಇದರಿಂದ ಸಹಕಾರಿ ಸಂಸ್ಥೆಗಳ ಸ್ಥಾನ ದುರ್ಬಲಗೊಳ್ಳುವುದಿಲ್ಲ"ವೆಂಬ ಕುರಿತು ಆಶ್ವಾಸನ ನೀಡಿದರು. ಪತ್ರಿಕಾ ಪ್ರತಿನಿಧಿಗಳು ಕೇಳಿದ ಸಲವು ಸಂದಿಗ್ಧಾಂಶಗಳಿಗೆ ಸಂದೇಹನಿವೃತ್ತಿಯ ಉತ್ತರಗಳನ್ನು ಹೇಳಿದರು.

ಗ್ರಾಮಸಮಿತಿಗಳ ರಚನೆಗಾಗಿ ಸಂಬಂಧಪಟ್ಟ ಅಧಿಕಾರಿಗಳೇ ಅಲ್ಲಲ್ಲಿ ಸಂಚರಿಸುತಿದ್ದಾರೆ; ಯೋಗ್ಯ ಸಮರ್ಥ ಸದಸ್ಯರ ಆಯ್ಕೆಗಾಗಿ ತಾವು ಬಿಗಿಯಾದ ಆಪ್ಪಣೆಗಳನ್ನೇ ಆ ಅಧಿಕಾರಿಗಳಿಗೆ ಕೊಟ್ಟಿದ್ದೇವೆ; ಈ ಸಮಿತಿಗಳ ರಚನೆ ಬರುವ ತಿಂಗಳ ಮಧ್ಯ ಭಾಗದೊಳಗಾಗಿ ಆಗುವುದೆಂದು ನಿರೀಕ್ಷೆ. ಗ್ರಾಮ ಸಮಿತಿಗಳು ಆಯಾ ಗ್ರಾಮಗಳಿಗೆ ಬೇಕಾದ ಆಹಾರ ವಸ್ತುಗಳನ್ನು ಅಲ್ಲಿ ಬೆಳೆದ ಪೈರಿನಿಂದ ಅಲ್ಲಲ್ಲೇ ವಿತರಣ ಮಾಡುವವು; ಅಲ್ಲಿನ ಪೈರಿನ ಉತ್ಪತ್ತಿ ಎಷ್ಟೆಂದೂ ಅವು ಧಾನ್ಯಭಾಗರ ಪಟ್ಟಿಯನ್ನು ನೋಡಿ ಗೊತ್ತು ಹಚ್ಚುವುವು. ಈ ಸಮಿತಿಗಳ ಈ ಕಾರ್ಯ ಭಾಗಗಳ ಕುರಿತು ತಾಲೂಕು ಸಮಿತಿಗಳು ನಿರೀಕ್ಷಿಸುವವು; ಗ್ರಾಮ ಸಮಿತಿಗಳು ಅಶಕ್ತವಾದುವು ಎಂಬಿತ್ಯಾದಿ ಕಾರಣಗಳಿಂದ ಅವನ್ನು ರದ್ದು ಮಾಡಲಾಗುವುದು; ಗ್ರಾಮ ಸಮಿತಿಗಳು ಏರ್ಪಡಿಸಲಾಗದ ಕಡೆ, ಸಹಕಾರಿ ಸಂಸ್ಥೆಗಳು ಅವೂ ಇಲ್ಲದ ಕಡೆ ವ್ಯಾಪಾರಿಗಳು-ಹೀಗೆ ವ್ಯವಸ್ಥೆ ಮಾಡಲಾದೀತು; ಎಂದು ಮುಂತಾಗಿ ಕಲೆಕ್ಟರರು ಸಮಗ್ರವಾಗಿ ತಿಳಿಯಪಡಿಸಿದರು.

ಕಲೆಕ್ಟರರೊಡನೆ ಅವರ ಪರ್ಸನಲ್ ಅಸಿಸ್ಟೆಂಟ್ ವಿ. ಕೆ. ಗುಲಾಂ ಮಹಮ್ಮದರೂ ಸರಬಾಯಿ ಆಫೀಸರ್ ಶ್ರೀ ಎಂ. ಬಿ ಶಂಕರ [illegible] ಇದ್ದರು.

ಪಿರಿಯಾಡಿಕಲ್ ಕಾನ್ಫರೆನ್ಸ್

ಈ ಜಿಲ್ಲಾ ಕಾನ್ಫರೆನ್ಸ್ ನಮ್ಮ ಕಲೆಕ್ಟರರ ಕಚೇರಿಯಲ್ಲಿ ಅವರ ನೇತೃತ್ವದಲ್ಲಿ ಈಚಿಗೆ ಸೇರಿ "ಗ್ರಾಮ ಪುನರ್ರಚನೆಯ ಯೋಜನೆ"ಯ ಉದ್ದೇಶಕ್ಕಾಗಿ ಮೂಲ್ಕಿಯನ್ನು ಜುನಾಯಿಸಿ ಜನಮನ್ನಾರುಗಳ ಆಹಾರವನ್ನು ಈ ಜಿಲ್ಲೆಯಲ್ಲಿ ಸಹಕಾರಿ ಸಂಘಗಳ ಡೆ. ರಿಜಿಸ್ಟ್ರಾರರ ಮೂಲಕ ಹಂಚೋಣವಾಗಬೇಕೆಂದು ನಿರ್ಧರಿಸಲಾಯಿತು. ಈ ಕಾನ್ಫರೆನ್ಸಿನವರ ಸುಮಾರು ೨೦ ಸಾವಿರ ರೂಗಳದೊಂದು ಬಜೆಟ್ ತಯಾರಿಸಿದ್ದು ಅದರ ವಿನಿಯೋಗ ಈ ರೀತಿ ಇದೆ:- ಮಿಯ್ಯಾರಿನ ಕಾಲು ಸಂಕಕ್ಕಾಗಿ ರೂ. ೫೦೦; ಗ್ರಾಮಾಂತರಗಳ ಆಸ್ಪತ್ರೆಗಳಿಗಾಗಿ ರೂ. ೫೦೦; ಮಂಗಳೂರಿನ ಕಾಲು ಸೇತುವೆಗಳಿಗಾಗಿ ರೂ. ೪೦೦; ಅವಕ್ಕಾಗಿಯೇ ಉಡ್ಪಿಗೆ ರೂ. ೧೯೫೦; ಅವಕ್ಕಾಗಿಯೇ ಕಾಸರಗೋಡಿಗೆ ೨೭೦೮ರೂ. (ಲೈಬ್ರೆರಿ) ಪುಸ್ತಕ ಭಂಡಾರಗಳಿಗೆ ರೂ. ೪೨೦೦; ಕಾಸರಗೋಡಿನ ಪೈಲೇರಿಯಾ ನಿವಾರಣೆಗಾಗಿ ರೂ. ೧ಸಾವಿರ.

ಸಾಟ್ಟಾ ಆಟಗಾರರಿಗೆ ಶಿಕ್ಷೆ—

ಸಾಟ್ಟಾ ಆಡಿದ ಆರೋಪಕ್ಕೊಳಪಡಿಸಿ ನರಸಿಂಹ ನ್ಯಾಕ, ವಾಸುದೇವಮಲ್ಯ ಮತ್ತು ಫ್ರಾನ್ಸಿಸ್ ಕೊಸಸ್ ಎಂಬವರನ್ನು ಸ್ಪೆ| ಸಬ್ ಮೆಜಿಸ್ಟ್ರೇಟರು ವಿಚಾರಣೆ ನಡೆಸಿ ರೂ. ೧೦೦ರಿಂದ ೫೦ರ ವರೆಗಿನ ಜುಲುಮಾನೆ ವಿಧಿಸಿದರು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ-

ಮೊಗವೀರ ವ್ಯವಸ್ಥಾಪಕ ಮಂಡಳಿಯ 43ನೇ ವರ್ಧಂತ್ಯುತ್ಸವವೂ ಮೊಗವೀರ ಗಾರ್ಡ್ಸ್‌ನ ಉದ್ಘಾಟನಾ ಸಮಾರಂಭವೂ ಮತ್ತು ಮೊಗವೀರ ಫ್ರೀನೈಟ್ ಹೈಸ್ಕೂಲಿನ ಪಾರಿತೋಷಕ ವಿತರಣವೂ ಇದೇ ತಿಂಗಳ ದಿನಾಂಕ 23ರಲ್ಲಿ ಗೌರವಾಸ್ಪದ ಪರ್ತಕ ವಿಭೂಷಣ ಶ್ರೀ. ಬಸಪ್ಪ ಪಿ ಭೂಮರೆಡ್ಡಿಯವರ ಸನ್ನಾಧ್ಯಕ್ಷತೆಯಲ್ಲಿ ಸರ್ ಕಾವಸ್ಜಿ ಜಹಂಗೀರ್ ಸಭಾಸದನದಲ್ಲಿ ಬಹು ವಿಜೃಂಭಣೆಯಲ್ಲಿ ಜರಗಿತು. ಶ್ರೀ. ಬಿ ಶಿವ ಸಾಲಿಯಾನರು ಅಂದಿನ ಅಧ್ಯಕ್ಷರನ್ನೂ ಸಭಿಕರನ್ನೂ ಸುಸ್ವಾಗತಿಸಿದಬಳಿಕ ಅಧ್ಯಕ್ಷರ ಔದಾರ್ಯವನ್ನೂ ವ್ಯಾಪಾರ ಕುಶಲತೆಯನ್ನೂ ಜೀವನರಂಗದ ಹೋರಾಟವನ್ನೂ ಎತ್ತಿ ಮಾತಾಡಿ ಸಭಿಕರಿಗೆ ಅವರ ಪರಿಚಯ ಮಾಡಿಕೊಟ್ಟು ಮಂಡಳಿಯು ಇಷ್ಟು ವರ್ಷಗಳ ವರೇಗೆ ಸಮಾಜದ ಸಾಧನ ಮತ್ತು ದೇಶದ ಅಭ್ಯುದಯದ ಕಾರ್ಯದಲ್ಲಿ ಯಾವರೀತಿಯಲ್ಲಿ ತನ್ನ ಪಾತ್ರವನ್ನು ವಹಿಸಿರುವುದೆಂದು ಸಭಿಕರಿಗೆ ಮನದಟ್ಟಾಗುವ ರೀತಿಯಲ್ಲಿ ವಿಶದೀಕರಿಸಿದರು. ಅನೇಕ ಘನ್ಯ ಮಹನೀಯರಿಂದಲೂ ಸಂಘ ಸಂಸ್ಥೆಗಳಿಂದಲೂ ಬಂದ ಶುಭ ಸಂದೇಶಗಳನ್ನು ಶ್ರೀ ರಾಮ ಡಿ. ಮೆಂಡನರು ಓದಿ ಹೇಳಿದರು.

ಆ ಮೇಲೆ "ಮೊಗವೀರ ಗಾರ್ಡ್ಸ್" ಉದ್ಘಾಟನಾ ಸಮಾರಂಭವು ಅಧ್ಯಕ್ಷರ ಸ್ವಹಸ್ತದಿಂದ ನೆರವೇರಿತು. ಮಂಡಳಿಯ ಪ್ರಧಾನ ಕಾರ್ಯದರ್ಶಿ ಶ್ರೀ. ಎಸ್. ಸಿ. ಪಡುಬಿದ್ರಿಯವರು ಮಂಡಳಿಯ ಸಂಕ್ಷಿಪ್ತ ಚರಿತ್ರೆಯನ್ನು ಓದಿದಬಳಿಕ ಬಹುಮಾನ ವಿತರಣವಾಯಿತು.

ಸಭಿಕರ ಪೈಕಿ ಶ್ರೀ. ಟಿ. ಎಸ್. ಹೆಗ್ಡೆ, ಪ್ರೊ. ಇನಾಮ್‌ದಾರ್, ಪಿ ಜಿ. ಆಚಾರ್, ಲೆಪ್ಟನೆಂಟ್ ಕೆ. ರಾಜ ಗೋಪಾಲನ್(INA) ಮತ್ತು ಜೆ. ಎಸ್. ಐಯರ್ ಇವರೇ ಮೊದಲಾದವರು ಶೈಕ್ಷಣಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಮಂಡಳಿಯು ಗೈದ ಸೇವೆಯನ್ನು ಶ್ಲಾಘಿಸಿ ಮಾತಾಡಿದರು,

ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ತಾನು ನೋಡಿದ ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಮಂಡಳಿಯು ಆದರಿಂದ ನಡೆಸಲ್ಪಡುವ ಶಾಲೆಯು ತನ್ನದೇ ಒಂದು ಮಟ್ಟಕ್ಕೆ ಸೇರಿದವಾದರೂ ಸಂಸ್ಥೆಗಳಾಗಿವೆ ಅಲ್ಲದೆ ಧರ್ಮಾರ್ಥವಾಗಿ ಸಾಧಾರಣ ಏಳುನೂರು ಮಕ್ಕಳಿಗೆ ಒಂದನೇ ಕ್ಲಾಸಿನಿಂದ ಮೆಟ್ರಿಕ್ ಪರೀಕ್ಷೆಯ ವರೇಗೆ ಜಾತಿ ಭೇದವಿಲ್ಲದೆ ವಿದ್ಯಾದಾನ ಗೈಯುವ ಇಂಥಾ ಬೇರೊಂದು ಶಾಲೆಯು ಬ್ರಿಟಿಷ್ ಹಿಂದೂಸ್ಥಾನದಲ್ಲಿ ಯಾಗಲೀ ಅಥವಾ ಬೇರೆ ಎಲ್ಲಿಯಾದರೂ ಇದೆಯೋ ಇಲ್ಲವೋ ಎಂಬುದು ಸಂದೇಹಾಸ್ಪದವಾಗಿರುವುದು ಎಂದು ತಮ್ಮ ರಸವತ್ತಾದ ಭಾಷಣದಿಂದ ಮಂಡಳಿಯ ಚಟುವಟಿಕೆಗಳಲ್ಲಿ ಸೇರಿದ ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರ, ತ್ರೈಮಾಸಿಕ ಪತ್ರಿಕೆ, ಕೋಪರೇಟಿವ್ ಬ್ಯಾಂಕ್, ಮತ್ತು ಮೊಗವೀರ ವ್ಯಾಯಾಮ ಸಮಿತಿ ಇತ್ಯಾದಿ ಅನೇಕ ಕಾರ್ಯಗಳನ್ನು ಶ್ಲಾಘಿಸಿ, ಮಂಡಳಿಯ ವಿದ್ಯಾನಿಧಿಗೆ ರೂಪಾಯಿ 2505/-ನ್ನು ತಮ್ಮ ಉದಾರ ಹಸ್ತದಿಂದ ದಾನವಿತ್ತರು.

ಶ್ರೀ. ಬಿ. ಎ. ಕರ್ಕೇರರು ಸಭಾಧ್ಯಕ್ಷರಿಗೂ ಉಪಕಾರ ಸ್ಮರಣೆಯನ್ನು ಕೋರಿದ ಬಳಿಕ ಶಾಲೆಯ ಉಪಾಧ್ಯಾಯರೂ ವಿದ್ಯಾರ್ಥಿಗಳೂ "ಮಿಸ್ 1946" ಎಂಬ ಸಾಮಾಜಿಕ ನಾಟಕವನ್ನು ಬಹಳ ಕೌಶಲ್ಯತೆಯಿಂದ ಆಡಿ ತೋರಿಸಿದ ನಂತರ ಅಂದಿನ ಸಮಾರಂಭವು ಮುಕ್ತಾಯ ಗೊಂಡಿತು.

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade. Post Box No. 142. MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾದ್ದರೆ,....ಚಟ್ಟೆ ಬದ್ಧಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

ಕುಟುಂಬಿದೊಳಗಿನ ಚಿಲ್ಲರೆ ಬೇನೆ

ಬೇಸರಿಕೆಗಳನ್ನು ಹೋಗಲಾಡಿಸುವದಕ್ಕಾಗಿ ತಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ [illegible]

ಜವೇರಿಯನ್ ಜೀವನ ಮಿಕ್ಶ್ಚರ್ [illegible]

ಜವೇರಿಯನ್ ಮತ್ತು ಕಂಪನಿ ಮುಂಬಾಯಿ

NOTICE

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

os. 73/1946

ಮಂಜಯ್ಯ ಹೆಗ್ಡೆ-ಪರಮೇಶ್ವರಿ ಹೆಗ್ಗಡ್ತಿ ಮಗ ಮಂಗಳೂರು ತಾಲ್ಲೂಕು ಪರೇಕಳ ಗ್ರಾಮದಲ್ಲಿರುವವ —ವಾದಿ.

1. ಮರಿಯೂಜ ಬ್ಯಾ-ಶಿವಶಂಕುತ್ತಿಂಚನ ಹೆಂಡ್ತಿ-2. ಪಿಯೊದನೋಜಾ ಬ್ಯಾ-ದಾನಿಯೋಜನ ಮಗಳು-3. ಶಿವಶಂಕುತ್ತಿಂಚ-ಜೋಳಾ ಮಾಸ್ಕು ಕುತ್ತಿಂಚನ ಮಗ ಯುವರೆಲ್ಲರು-ಮಂಗಳೂರು ತಾಲ್ಲೂಕು ನೀರುಗಾನ ಗ್ರಾಮದ ಬೋಳಾದಲ್ಲಿರುವವರು ಪ್ರತಿವಾದಿಗಳು.

2ನೇ ಪ್ರತಿವಾದಿ-ಪಿಯೊದನೋಜಾ ಬ್ಯಾಗೆ. ಯಿಮೂಲಕ ತಿಳಿಯಪಡಿಸುವುದೇನಂದ್ರೆ—

ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯರ ಮೇಲೆ "mortagage redemption decree"ಬಗ್ಗೆ ಒಂದು ವ್ಯಾಜ್ಯ ದಾಕಲು ಮಾಡಿರುತ್ತಾನೆ. ಸದ್ರಿ ವ್ಯಾಜ್ಯವು ತಾ 9-7-1946ರಲ್ಲು ತನ್ಕಿಗೆ ಇಟ್ಟಿದೆ. ಸದ್ರಿ ದಾವೆಯಲ್ಲಿ 2ನೇ ಪ್ರತಿವಾದಿಯ ಉತ್ತಾರಣೆ ವಗೈರೆ ಇದ್ದರೆ-ಸದ್ರಿ ದಿವಸ ಸದ್ರಿಕೋರ್ಟಿನ ಮುಂದೆ ನೀವು ಸ್ವತಹಾ ಹಾಜರಾಗಿ, ಯಾ, ನಿಮ್ಮಿಂದ ಅಧಿಕಾರ ಹೊಂದಿದ ವಕೀಲರ ಮುಖಾಂತರ ಸದ್ರಿ ಉದಾರಣೆಯನ್ನು ಹಾಜರುಪಡಿಸತಕ್ಕದ್ದು-ಇದಕ್ಕೆ ತಪ್ಪಿದಲ್ಲಿ ನಿಮ್ಮನ್ನು ಶಿವ್ಯಾಮಾಡಿ, ಸದ್ರಿ ದಾವೆಯನ್ನು ನಿಮ್ಮ ಗೈರಾಜರಿಯಲ್ಲಿ ತೀರ್ಮಾನಿಸಲಾದೀತು-ತಿಳಿದಿರಲಿ.

ಮಂಗಳೂರು 25-6-46

H. D. Alva.
Vakil for Plaintiff.

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟು ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉದ್ದಾಮ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಆಗುಹೋಗುಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4-8-0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ ರಾಜಗೋಪಾಲಾಚಾರ್ಯ, ಕರಂಬಳ್ಳಿ, ಉಡುಪಿ.

ಸ್ವೀಕಾರ-ವಿಮರ್ಶೆ

೧೪ ಭಾರತದಲ್ಲಿ ಜಾತಿ ಭೇದ— ಲೇಖಕರು ಆಚಾರ್ಯ ಕ್ಷಿತಿಮೋಹನ ಸೇನ್ ಶಾಸ್ತ್ರಿ, ಅನುವಾದಕರು. S. L. ಸುಬ್ರಹ್ಮಣ್ಯಂ, ಕೊಡಗನೂರು, ಪ್ರಕಾಶಕರು, ಕಿರಿಯರ ಪ್ರಪಂಚ ಉಡುಪಿ ಕ್ರೌನ್ ಆಕಾರದ ಪುಟಗಳು ೧೪. ಬೆಲೆ. ೧ರೂ.

ನಮ್ಮ ಸಮಾಜದ ಸರ್ವನಾಶಕ್ಕೆ- ನಮ್ಮ ರಾಜಕೀಯ ಕುತ್ತಗಳಿಗೆ- ಜಾತೀಯತೆಯೇ ಅತಿ ಮುಖ್ಯ ಕಾರಣವೆಂಬುದನ್ನು ಎಲ್ಲರೂ ಅರಿತಿದ್ದಾರೆ. ಆದರೆ ಜಾತೀಯತೆಯ ಮೂಲವೆಲ್ಲಿ? ಜಾತಿಗಳಲ್ಲಿ ನೂರಾರು ಒಳಭೇದಗಳು ಹೇಗೆ ಹೆಚ್ಚುತ್ತ ಬಂದುವು? ಪರಿಣಾಮವಾಗಿ, ಹಿಂದೂ ಸಮಾಜವು ಹೇಗೆ ನಿರ್ವೀರ್ಯವಾಗುತ್ತಿದೆಯೆಂಬುದನ್ನು ತಿಳಿದವರು ವಿರಳ. ಕಿರಿಯರ ಪ್ರಪಂಚದ 'ಕೊಡುಗೆ' ಗ್ರಂಥಮಾಲೆಯ ೧೪ನೆಯ ಕುಡಿಯಾದ ಈ ಪುಸ್ತಿಗೆಯು ಇವೆಲ್ಲ ವಿಚಾರಗಳನ್ನು ಕೂಲಂಕುಷವಾಗಿ ಚರ್ಚಿಸುತ್ತದೆ. ಕತೆ, ಕಾದಂಬರಿಗಳಿಂದಲೇ ತುಂಬಿರುವ ಕನ್ನಡ ಸಾಹಿತ್ಯದಲ್ಲಿ, ಒಂದಲ್ಲೊಂದು ಇಲ್ಲೊಂದು ಎಂಬಂತೆ ಇಂತಹ ವಿಚಾರಣೀಯವಾದ ವಿಷಯಗಳನ್ನು ಕುರಿತು ಗ್ರಂಥಗಳು ಇತ್ತೀಚೆಗೆ ತಾನೇ ಕಾಣಿಸಿಕೊಳ್ಳುತ್ತಿರುವುದು ಸ್ತುತ್ಯ. ಈ ಪುಸ್ತಕವು ಅಂತಹ ಉತ್ತಮ ಗ್ರಂಥಗಳಲ್ಲೊಂದಾಗಿದೆ. ಅನುವಾದವು ಸರಳವಾಗಿ, ಅಂದವಾಗಿದೆ.

೧೫ ಕ್ರೈಸ್ತೆ ಮಹಾ ಮುಷ್ಕರ-- ಬರೆದವರು ಎಸ್. ಕೆ. ಉಪಾಧ್ಯಾಯ. ಪ್ರಕಾಶಕರು, ಜನತಾ ಸಾಹಿತ್ಯ, ಹುಬ್ಬಳ್ಳಿ. ಪುಟಗಳು, ೬೬. ಬೆಲೆ. ೨ಆಣೆ.

ಈಗಾಗಲೇ ಕ್ರಾಂತಿಕಾರಿ ಚಳವಳದ ಕುರಿತು ಪುಸ್ತಕಗಳ ಪ್ರಚಾರಕ್ಕೆ ತೊಡಗಿರುವ ನವೋದಿತ ಜನತಾ ಸಾಹಿತ್ಯದವರ ಕಿರು ಹೊತ್ತಿಗೆಯ ಮಾಲೆಯಲ್ಲಿ ಪ್ರಾಯಶಃ ಇದು ನಾಲ್ಕನೆಯದಾಗಿದೆ. ಇದೇ ೨೧ನೇ ತಾರೀಕು ಭಾರತದಲ್ಲಿ ಜರಗಲಿಕ್ಕಿದ್ದ ರೈಲ್ವೆ ಕೆಲಸಗಾರರ ಮುಷ್ಕರದ ಉದ್ದೇಶ, ಆದರ ನ್ಯಾಯಾನ್ಯಾಯ ವಿಮರ್ಶೆ, ಮತ್ತು ಅದರಿಂದಾಗಬಹುದಾಗಿದ್ದ ಅನಾಹುತಗಳನ್ನು ಬಣ್ಣಿಸುವ ಈ ಹೊತ್ತಿಗೆಯು ತೀರ ಪ್ರಸ್ತುತವಾಗಿದೆ. ಪ್ರಕಾಶಕರಿಂದೆಂತೆ ಸ್ವಾತಂತ್ರ್ಯ ಹೋರಾಟದ ಒಂದಂಶವಾದ ಈ ಮುಷ್ಕರವು ಯಶಸ್ವಿಯಾಯಿತೆಂದು ಕೇಳಿ ಎಲ್ಲರಿಗೂ ಸಂತೋಷವಾಗಲೇ ಬೇಕು. ಮುಖ್ಯತಃ ಪ್ರಚಲಿತ ವಿಷಯಗಳ ಕಡೆಗೇನೆ ಗಮನವನ್ನೀಯುತ್ತಿರುವ ಜನತಾಸಾಹಿತ್ಯವು ಇನ್ನೂ ಹೆಚ್ಚಿನ ಬೆಳೆಯಲಿ.

೩. ಮೈಸೂರು ಕಾಂಗ್ರೆಸ್ ತುಮಕೂರು ವಿಶೇಷಾಧಿವೇಶನ ಸಂಚಿಕೆ- ಲೇಖಕರು, ಶ್ರೀ. ಆರ್. ಎಸ್. ಉಪಾಧ್ಯ, ಪ್ರಕಾಶಕರು, ಕಟಕ, ಅರಳೇ ಪೇಟೆ, ಬೆಂಗಳೂರು ಸಿಟಿ. ಕ್ರೌನ್ ೮ ಆಕಾರದ ೧೦೦ ಪುಟಗಳು. ಬೆಲೆ ರೂ ೧-೦-೦

ಗತವಾರ್ಷಿಕದ ಜನವರಿ ತಿಂಗಳಲ್ಲಿ, ಯಶಸ್ವಿಯಾಗಿ ಜರಗಿದ ಮೈಸೂರು ಕಾಂಗ್ರೆಸ್ ನ ತುಮಕೂರು ವಿಶೇಷಾಧಿವೇಶನದ ಸಕಲ ವಿವರಗಳನ್ನು ಒಳಗೊಂಡ ಈ ಸಂಚಿಕೆಯು ಅಂದೇ ಹೊರಬೀಳಬೇಕಾಗಿತ್ತಾದರೂ ಕಾರಣಾಂತರಗಳಿಂದ ತಳೆದ ಮಾರ್ಚ ತಿಂಗಳಲ್ಲಿ ಹೊರಬಿದ್ದಿದೆ. ಸುಂದರವಾಗಿ ಮುದ್ರಿತವಾದ ಈ ಪುಸ್ತಕದ ಮೊದಲನೆಯ ಭಾಗದಲ್ಲಿ, ಅಧಿವೇಶನದ ಸ್ವಾಗತಾಧ್ಯಕ್ಷ ಹಾಗೂ ಅಧ್ಯಕ್ಷರ ಭಾಷಣಗಳೂ ತುಮಕೂರು ಜಿಲ್ಲೆಯ ಕಾಂಗ್ರೆಸ್ ಇತಿಹಾಸ ಮತ್ತು ಅಧಿವೇಶನದ ವಿವರಗಳೂ ಇವೆ. ಎರಡನೆಯ ಭಾಗದಲ್ಲಿ, ಮೈಸೂರಿನ ಕಾಂಗ್ರೆಸ್ ಮುಂದಾಳುಗಳಾದ ೧೧ ಮಂದಿ ವ್ಯಕ್ತಿಗಳ ಪರಿಚಯವಿದೆ. ಕಾಂಗ್ರೆಸ್ ಚಳುವಳಿಯ ಕ್ಷಿ ಮೈಸೂರು ತೆಗೆದುಕೊಂಡ ಭಾಗದ ಸಂಪೂರ್ಣ ಪರಿಚಯ ಈ ಪುಸ್ತಕದಲ್ಲಿದೆ. ತುಮಕೂರು ಕಾಂಗ್ರೆಸ್ ಕೆಲಸಗಾರರು ಮತ್ತು ಮೈಸೂರು ಕಾಂಗ್ರೆಸ್ ಧುರೀಣರುಗಳ ಹಲವಾರು ಚಿತ್ರಗಳಿಂದೊಡಗೂಡಿ ಸಂಚಿಕೆಯು ಸಂಗ್ರಹ ಯೋಗ್ಯವಾಗಿದೆ.

—ಕೆ. ವಿ. ಎಸ್.

ದಕ್ಷಿಣ ಕನ್ನಡ

ಕುಂಜತ್ತಬೈಲು— ತಾ 25-7 46ನೇ ಸೋಮವಾರ ರಾತ್ರಿ ಸುಲಿಯೊಂದು ಕುಂಜಾಲಲ್ಲಿರುವ ಗುರುವ ಪೂಜಾರಿ ಯೆಂಬವನ ಮನೆಹೊಕ್ಕು ಮಲಗಿರುವ ಆತನ ಹೆಂಡತಿಯ ಮೈಮೇಲೆ ಹಾರಿ ವಿಶೇಷ ಘಾಯಗೊಳಿಸಲು ಮನೆ ಮಂದಿಗಳು ಬೊಬ್ಬೆಹಾಕಿದೊಡನೆ ಅಲ್ಲಿಂದ ಹೊರಟು ಹೋಗಿ, ಸಾಮಾನ್ಯ ಬೆಳಿಗ್ಗೆ 8 ಘಂಟೆ ಸಮಯ ಸಮೀಪದಲ್ಲಿರುವ ಗೋಪಾಲ ಪ್ರಭು ಎಂಬವರ ಮನೆ ನುಗ್ಗಿ ಹಲಸಿನಹಣ್ಣು ತಿನ್ನುತ್ತಾ ಕುಳಿತಿರುವ ತರುಣನೊಬ್ಬನ ಮೈಮೇಲೆ ಧಾವಿಸಿ ಉಗುರುಗಳಿಂದಲೂ ಹಲ್ಲುಗಳಿಂದಲೂ ಹರಿದು ಮೈ ತುಂಬಾ ಘಾಯವನ್ನುಂಟುಮಾಡಿ, ಅಲ್ಲಿಂದ ಹೊರಟು ತಿರುಗಿ ಪೇಟೆಗೆಬಂದು ಹೆಂಡವನ್ನು ಹೊತ್ತುಕೊಂಡು ಬರುತ್ತಿರುವ ಬಿಲ್ಲವನೊಬ್ಬನ ಮೇಲೆ ಮಾರ್ಗದಲ್ಲಿ ಹಾರಿ ಆತನನ್ನು ಜಖಂ ಗೊಳಿಸಿತು. ಕೂಡಲೇ ಕುಂಜಾಲು ನಿವಾಸಿಕರಲ್ಲಿ ಕೆಲವರು ದೊಣ್ಣೆ ಕೋಲುಗಳನ್ನು ಹಿಡಿದು ಬೇಟೆಯಾಡಲು, ಘರ್ಜಿಸುತ್ತಾ ಅತ್ತಿತ್ತ ಓಡಾಡುತ್ತಾ ಬೇಟೆಗಾರರಲ್ಲಿ ಒಬ್ಬರಾದ ತಿಮ್ಮ ಸೆಟ್ಟಿ ಎಂಬವರ ಮೇಲೆ ಧಾವಿಸಿ ಘಾಯಗೊಳಿಸಿತು ಬ್ರಹ್ಮಾವರ ಶ್ರೀ. ಶ್ರೀನಿವಾಸರಾವ್ ಎಂಬವರು ಈ ಸಮಾಚಾರವನ್ನು ಕೇಳಿದೊಡನೆ ಕುಂಜಾಲಿಗೆ ಬಂದು ತಮ್ಮ ತುಪಾಕಿಯಿಂದ ಗುರಿಯಿಟ್ಟು ಪಶುವೊಂದನ್ನು ಕೊಂದಿಕ್ಕಿ ಭಯಗ್ರಸ್ತರಾದ ಕುಂಜಾಲು ಹಾಗು ಸುತ್ತ ಮುತ್ತಲಿನ ನಿವಾಸಿಕರ ಭಯವನ್ನು ನಿವಾರಿಸಿರುವುದು ಸ್ತುತ್ಯ. ಇದೇ ಹುಲಿಯು ತಾ 24-6 46ನೇ ದಿನ ಸಂಜೆ 4ಘಂಟೆಗೆ ಪೇತ್ರಿ...ಯಲ್ಲಿ ಹೆಂಗಸೊಬ್ಬಳ ಮೇಲೆ ಹಾರಿತ್ತೆಂದೂ ಮರುದಿನ ಸಂಜೆಗೆ ಆರೂರುಗ್ರಾಮದ ಆಲುಂಜೆಯಲ್ಲಿ ಗಂಡಸೊಬ್ಬನ ಮೇಲೆ ಧಾವಿಸಿ ಘಾಯಗೊಳಿಸಿರುತ್ತದೆಯೆಂದೂ ತಿಳಿದು ಬರುತ್ತದೆ.

ಬೈಲೂರು ತಾ. 27-6 46ರಲ್ಲು ಶ್ರೀ ಜಿ. ನಾಗಣ್ಣ ಹೆಗ್ಡೆ ಎಕ್ಸ್. ಎಮ್. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಡಾಕ್ಟರ್ ರಾಜೀವ ಶೆಟ್ಟರ ಪ್ರೇಮ ಮೆಡಿಕಲ್ ಹಾಲಿನ ಉದ್ಘಾಟನಾ ಸಮಾರಂಭವು ನೆರವೇರಿತು. ಡಾಕ್ಟರರ ಪರಿಚಯವನ್ನು ಶ್ರೀ ಯು. ಕೆ. ಕೃಷ್ಣಯ್ಯ ಶೆಟ್ಟರು ಮಾಡಿದನಂತರ ಸ್ಥಳೀಯ ಡಾಕ್ಟರ್ ಶ್ರೀ ಎ. ಬಿ ಲಕ್ಷ್ಮೀನಾರಾಯಣ ರಾಯರೂ ಶ್ರೀ. M. ಎ. ಕಿಣಿಯವರೂ ಚಾಳ ಬೆಟ್ಟು ಅಂತಯ್ಯಶೆಟ್ಟರವರೂ ಸಂದರ್ಭೋಚಿತ ಭಾಷಣವಿತ್ತು "ಹಾಲಿನ" ಶ್ರೇಯೋಭಿವೃದ್ಧಿಯನ್ನು ಕೋರಿದರು. ಬಳಿಕ ಅಧ್ಯಕ್ಷರು ಆಯುರ್ವೇದದ ಮಹತ್ವ, ಹಾಗೂ ಈಗ ತಾನೇ ನಮ್ಮ ಸರಕಾರದವರು ಆದಕ್ಕೆ ಕೊಡುತ್ತಿರುವ ನಿರ್ದಿಷ್ಟ ಪ್ರೋತ್ಸಾಹ ಇತ್ಯಾದಿ ವಿವರಿಸಿ, ಭಾಷಣ ಮಾಡಿದರು. ಡಾಕ್ಟರ್ ರಾಜೀವಶೆಟ್ಟರು ಧನ್ಯವಾದವನ್ನರ್ಪಿಸಿದ ಬಳಿಕ ಲಘು ಫಲಾಹಾರದಿಂದ ಸಭೆಯು ಮುಕ್ತಾಯವಾಯಿತು.

ಪಂಜಾಬಿನ ಅಕ್ಕಿ— ನಮ್ಮ ಜಿಲ್ಲೆಗೆ ಸುಮಾರು ೨೦ ಸಾವಿರ ಮುಡಿ ಪಂಜಾಬ್ ಅಕ್ಕಿ ಸದ್ಯದಲ್ಲಿ ಬರಲಿದೆ.

ಗ್ರಾಮ ಸಮಿತಿಗಳ ರಚನೆಯ ಕುರಿತು ಕಲೆಕ್ಟರರ ಪ್ರಕಟನೆ— ಆಹಾರ ಆದಳಿತೆಯು ಜನಪ್ರಿಯವಾಗಿಯೂ, ಫಲಪ್ರದವಾಗಿಯೂ ಸಾಗುವ ಬಗ್ಗೆ ಆನಧಿಕಾರಿ ಸಾರ್ವಜನಿಕರ ಸಹಕಾರವನ್ನು ಹೊಂದಬೇಕಾಗಿ ಸರಕಾರದವರು ನಿರ್ಧರಿಸಿ ಆ ಬಗ್ಗೆ ಗ್ರಾಮಸಮಿತಿಗಳ ಮೊದಲ್ಗೊಂಡು ಒಂದು ಯೋಜನೆಯನ್ನು ತಯಾರಿಸಿದ್ದಾರೆ. ಆ ಕಮಿಟಿಗೆ ತಕ್ಕ ಯೋಗ್ಯ ಜನರನ್ನು ಆರಿಸುವ ಬಗ್ಗೆ ಗ್ರಾಮಸ್ಥರೆಲ್ಲರ ಅಭಿಪ್ರಾಯವನ್ನು ಹೊಂದಲು ಪ್ರತಿ ಗ್ರಾಮಗಳಲ್ಲಿಯೂ ತಾಲೂಕುಗಳಲ್ಲಿಯೂ ತಹಶಿಲ್ದಾರರೇ ಮೊದಲಾದ ಅಧಿಕಾರಿಗಳು ಸಾರ್ವಜನಿಕರ ಸಭೆಗಳನ್ನು ಕೂಡಿಸುತ್ತಾರೆ. ಅದಕ್ಕೆ ಗ್ರಾಮಗಳ ಎಲ್ಲಾ ಪ್ರಾಯಸ್ಥ ಜನರು ಈಗ ಸಾಗುವಳಿಯ ಮುಖ್ಯ ಕಾಲವಾಗಿ ಕೆಲಸದ ಅವಸರವಿದ್ದರೂ ಅಗತ್ಯ ಬಂದು ಆಹಾರದ ಬಿಕ್ಕಟ್ಟಿನ ಈ ಕಠಿಣ ಸಮಯದಲ್ಲಿ ಸಮಸ್ತರೂ ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು, ಅತಿ ಪ್ರಾಮುಖ್ಯವಾದ ಈ ಕೆಲಸಕ್ಕೆ ನೆರವಾಗುವುದು ಅತಿ ಅವಶ್ಯ- ಎಂದು ಪ್ರಕಟಿಸಿದ್ದಾರೆ.

ಬ್ರಹ್ಮಾವರ- ಇದೇ 8-10ದಿನಗಳಲ್ಲಾ ಗ್ರಾಮದ ನಿಶೇಷ ಮಳೆಬಂದು ನೆರೆಹಾವಳಿಯಿಂದ ಮಟಪಾಡಿ, ಚಾಂತಾರು, ಹೇರೂರು, ಬೈಕಾಡಿ, ವಾರಂಬಳ್ಳಿ, ಹಂದಾಡಿ, ಕುಮ್ರಗೋಡು ಗ್ರಾಮದಲ್ಲಿನೆಟ್ಟ ಪೈರೆಲ್ಲಾ ಕೊಳೆತುಹೋಗಿ ಅಪಾರ ನಷ್ಟವುಂಟಾಗಿದೆ.

ತಾ.23-6-46ರಲ್ಲು ಇಲ್ಲಿಯ ಶ್ರೀ.ಎಸ್. ನಾಗೇಶ ನಾಯ್ಕರ ಧರ್ಮ ಪತ್ನಿಯವರು ದಿ. ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿಯಲ್ಲಿ ಹೆಚ್ಚಿನ ಕೃಪೆಯಿಂದ ಕೆಲಸ ಮಾಡಿದುದಕ್ಕಾಗಿ ಸದರಿ ಕಂಪೆನಿಯ ಉಡುಪಿ ಬ್ರೇಂಚ್ ಮೇನೇಜರ್ ಶ್ರೀ ಬಿ. ಎಸ್. ಎ. ಕಿಣಿಯವರು ಒಂದು ವಿಶೇಷ ಸತ್ಕಾರಕೂಟವನ್ನು ಸ್ಥಳೀಯ C. H. E. Schoolನಲ್ಲಿ ಶಾಲಾ ಮನೇಜರರಾದ ರೆವರೆಂಡ್ ಫಾದರ್ ೨. ಜಿ. ಕೋರಿಯರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿ ಶ್ರೀಮತಿಯವರಿಗೆ ಒಂದು ಸುವರ್ಣಪದಕವನ್ನು ಸಂತೋಷಕರವಾಗಿತ್ತರು.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯಸ್ಪರ್ಶಕರಾದ ರೀತಿಯಲ್ಲಿ ಕಾಣಿಸುವ

ಸಾ ಮಾ ಜಿ ಕ ನಾ ಟ ಕ

(ಮಂಗಳೂರಿನ ಡಾಕ್ಟರ್ ಯು. ರಾಮರಾಯರ ಮುನ್ನುಡಿ ಸಮೇತ

ಬೆಲೆ 0—10—0 ಮಾತ್ರ

ಮೀರಾಬಾಯಿ

(ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯ ತೀರ್ಥ ಶ್ರೀಪಾದಂಗಳವರ ಮುನ್ನುಡಿಯೊಡನೆ)

ಭಗವದ್ಭಕ್ತಿಯ ಮಹಾತ್ಮೆಯನ್ನು ಮನಗಾಣಿಸುವ ಚಾರಿತ್ರಿಕ ನಾಟಕ.

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಬೆಲೆ 0—10—0

ಎರಡೂ ಪ್ರತಿ ಬೇಕಾದವರು ರೂ. 1—8—0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ನಮ್ಮ ಬರೇ ದಮ್ಮುಕೆಂದವೆ ಅವನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸೇವನವು ಮಾಡಿದಾಗಲೇ ಕೆಮ್ಮು ತೀರೂ ನಿಲ್ಲುವವು, ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮಿಗೆಲ್ಲಿಯೂ ಸ್ಥಳವೇ ಸಿಗುವದಿಲ್ಲ.

ದಮ್ಮು, ಕೆಮ್ಮು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ಸೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೭-೦; ೫-೧೨-೦ ಮತ್ತು ೧೧-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು.ಪೊಪ್ಯುಲರ್ ಸ್ಟೋರ್ಸ್, ಮಂಗಳೂರು;ಟಿ.ಸಿ ನಟರಾಜನ್&ಕೋ,ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

PUROHIT SHWAS-HARI

[೨ನೇ ಪುಟದಿಂದ]

ಗಂಡಸಿನದು ಸಹಾಯಕನ ಪಾತ್ರ ಮಾತ್ರ. ತನ್ನವಳ ಮಾನವುಳಿಸುವುದಕ್ಕಾಗಿಯೇ ಅವನ ಕೆಲಸ. ನಿಜವಾದ ಪ್ರೇಮಿಯೊಬ್ಬನು ತನ್ನ ಮರಣದಿಂದ ಆ ಮಾನ ಉಳಿಯುವಂತಿದ್ದರೆ ಅದಕ್ಕೂ ತಯಾರಾದಾನು; ಆದರೆ ಪ್ರಕೃತಿ ನಿಯಮವು ಇಂತಹ ಅನುಕೂಲತೆಯೊದಗಿಸಿಲ್ಲವಾದ್ದರಿಂದ ಅನೈತಿಕ ಗರ್ಭ ನಿರ್ಮಿಸಿ ಆತ್ಮ ಹತ್ಯೆ ಮಾಡಿಕೊಂಡವರಿಲ್ಲ; ಆದರೆ ಅಂತಹ ಗರ್ಭ ಹೊತ್ತವರು ಜೀವತೆಗೆದುಕೊಳ್ಳುವದಿದೆ. 'ಮಗುವನ್ನು ಕೊಲ್ಲುವದಕ್ಕಿಂತ ಆ ರಾಕ್ಷಸಿ ತಾನೇ ಸಾಯುವದು ಯೋಗ್ಯವಲ್ಲವೆ?' ಎಂದು ಪ್ರಶ್ನಿಸುವವರಿದ್ದಾರೆ. ಆದರೆ ಆ ತಾಯಿ ಮತ್ತು ಮಗು ಬೇರೆ ಎಂದು ಮೂರನೆಯವರು ಭಾವಿಸಬೇಕು ಹೊರತು ಆಕೆಯ ಪಾಲಿಗೆ ಅದೂ ತಾನೂ ಒಂದೇ; ಮಗು ಅವಳ ಒಂದು ಭಾಗ; ಇಡಿಯನ್ನು ನಿರ್ನಾಮ ಮಾಡುವುದಕ್ಕಿಂತ ಸಂಬಂಧ ಪಟ್ಟ ಭಾಗವನ್ನೇ ಕಡಿದುಕೊಳ್ಳೋಣವೆಂದು ಹೆಚ್ಚಿನ ಸಂಧರ್ಭಗಳಲ್ಲಿ ಅನ್ನಿಸುತ್ತದೆ. ಅಂತೂ ಆ ಹಾನಿ ಸಣ್ಣದಿರಲಿ, ದೊಡ್ಡದಿರಲಿ, ಅವಳದನ್ನು ತನಗೆ ತಾನೇ ಮಾಡಿಕೊಳ್ಳುತ್ತಾಳೆ ಹೊರತು ಬೇರೆಯವರಿಗಲ್ಲ. ಅವಳ ಪ್ರಿಯತಮನು ಅವಳಿಗಾಗಿ ಈ ಕೆಲಸಕ್ಕೆ ನೆರವಾಗುತ್ತಾನೆ. ಅಂದ ಮೇಲೆ ರೋಮನ್ನಿಗುರಿಸುವ ಈ ದುಷ್ಕೃತ್ಯವಾಗುವದು ಕೇವಲ ಮಾನ ರಕ್ಷಣೆಗಾಗಿ! ಯಾವ ಸುಖ, ಲಾಭ, ಹಿತ ಸಾಧನೆಗಾಗಿಯೂ ಈ ಕೊಲೆ ನಡೆಯುವದಲ್ಲ; ಸಮಾಜದಿದಿರಲ್ಲಿ ಗೌರವ ಉಳಿಸಿಕೊಳ್ಳಬೇಕೆಂಬ ಏಕಮಾತ್ರ ಉದ್ದೇಶದಿಂದಾಗುತ್ತದೆ. ಎಲ್ಲಕ್ಕಿಂತ ಪವಿತ್ರವೆನ್ನಿಸಿರುವ ಈ ಗೌರವಕ್ಕಾಗಿ ತಮಗೆ ತಾವೇ ಹಾನಿ ಮಾಡಿಕೊಳ್ಳುವದಕ್ಕಿಂತ ಹೆಚ್ಚಿನ ಆತ್ಮಯಜ್ಞ ಯಾವುದಿದೆ? ತ್ಯಾಗ ಬೇರೇನಿದೆ?

ತಪ್ಪೆಲ್ಲಿ?

ಹಾಗಾದರೆ, ಇದರಲ್ಲಿರುವ ಅಮಾನುಷ ಕ್ರೌರ್ಯದ ಹೊಣೆ ಆ ಒಂದು 'ಮಾನ'ದ ಮೇಲೆ ಬೀಳುತ್ತದೆ. ಇಷ್ಟೊಂದು ಶಿಶುಹತ್ಯೆಗಳ ಪಾಪದ ಜವಾಬ್ದಾರಿ ಸಮಾಜವು ನಿರ್ಮಿಸಿಟ್ಟಿರುವ ಆ 'ಗೌರವ'ದ್ದಾಗುತ್ತದೆ. ನಿಜಕ್ಕೂ ಈ ಗೌರವ ಇಷ್ಟೊಂದು ಪ್ರಾಣ ಬಲಿಪಡೆಯಲು ಯೋಗ್ಯವಾದುದೆ? ಅದು ಸಮಾಜದ ಪ್ರಚಲಿತ ನಿಯಮ ಯಾನೆ ಶಿಸ್ತನ್ನು ಆಧರಿಸಿ ನಿಂತಿರುವ ಒಂದು ಪದ್ಧತಿ. ಆ ನಿಯಮದ ಯೋಗ್ಯಾಯೋಗ್ಯತೆಯನ್ನರಿಯಲು, ಗುಣದೋಷಗಳನ್ನು ನಿರ್ಮಿಸಲು ಇಲ್ಲಿ ಸಾಕಷ್ಟು ಅವಕಾಶವಿಲ್ಲ. ನ್ಯಾಯಾಧೀಶರಂತೆ ಶೋಧಿಸಿದರೆ ಅದು ಸಂಪೂರ್ಣ ತಪ್ಪೆಂಬ ತೀರ್ಮಾನಕ್ಕೆ ಬರುತ್ತೇವೆ. ಒಂದು ತಪ್ಪನ್ನುಳಿಸುವದಕ್ಕಾಗಿ ಇಷ್ಟು ಶಿಶುಹತ್ಯೆಗಳು ನಡೆಯುತ್ತಿವೆ ಎನ್ನುವಾಗ ಒಮ್ಮೆ ಕರುಳು ಬೇಯುತ್ತದೆ. ಈ ಕುರಿತು ಭಿನ್ನಾಭಿಪ್ರಾಯ ಪಡುವವರಿರಬಹುದು. ಆದರೆ 'ಅದೊಂದು ಪದ್ಧತಿ ಮಾತ್ರ; ಯಾವ ಪದ್ಧತಿಯಾದರೂ ಬದಲಾಗುವಂತಹದೇ' ಎಂಬ ವಾದಕ್ಕೂ ಒಪ್ಪದವರಿದ್ದಾರೆಯೆ? ಲಕ್ಷ ಸಂಖ್ಯೆಯ ಭ್ರೂಣಹತ್ಯೆಗೆ ಅವಕಾಶವಿತ್ತಿದೆ ಎಂಬೊಂದೇ ಕಾರಣಕ್ಕಾಗಿ (ಈ ಸಾಮಾಜಿಕ ಪದ್ಧತಿಯಲ್ಲಿ ಮಿಕ್ಕವೆಲ್ಲವೂ ಅಮೂಲ್ಯ ಗುಣಗಳೇ ಎಂದರೂ) ಅಂತಹ ನಿಯಮವನ್ನು ಸಡಲಿಸಿದರಾಗದೆ? ಸಾಧ್ಯವೇ ಇಲ್ಲವೆನ್ನೋಣ; ಅದರ ಸಾಧ್ಯಾಸಾಧ್ಯತೆ, ಗುಣದೋಷಗಳ ವಿಮರ್ಶೆಯನ್ನೇ ಇಲ್ಲಿ ಬಿಟ್ಟು ಬಿಡೋಣ. ಆ ನಿರ್ದೋಷೀ ಶಿಶುಗಳು ಬದುಕಿ ಉಳಿಯುವಂತಾಗಬೇಕೆಂಬುದಕ್ಕಾದರೂ ವಿರೋಧವಿದ್ದೀತೆ? ನಿಜಕ್ಕೂ ಇರಲಾರದು. ಹಾಗಾದರೆ ಈ ಪತಿತ ಶಿಶುಗಳ ರಕ್ಷಣಾ ವ್ಯವಸ್ಥೆಯಾಗಲಿ; ಸದ್ಯಕ್ಕೆ ಅಷ್ಟಾದರೂ ಬರಲಿ.

ಆ ವ್ಯವಸ್ಥೆ ಹೇಗೆ?

ನಮ್ಮಲ್ಲಿ ಕಾರ್ಯತಃ ಸಮಾಧಾನಕರವಾಗಿ ಯಾವುದೂ ನಡೆದಿಲ್ಲವಾದರೂ, ಜನಹಿತ ಕಾರ್ಯಗಳಿಗೆ 'ನಾನೊಲ್ಲೆ' ಎಂದರೆ ತಪ್ಪಾಗುವದೆಂಬಷ್ಟು ಸರಕಾರಕ್ಕೆ ತಿಳಿದಿದೆ. ಆದ್ದರಿಂದ ಶಿಕ್ಷಣ, ಆಸ್ಪತ್ರೆ, ಇತ್ಯಾದಿಗಳನ್ನು ಸರಕಾರವು ಸ್ವತಃ ನಡಿಸುತ್ತಾ ಇದೆ; ಖಾಸಗೀ ಮಹನೀಯರು ಅಥವಾ ಸಂಘ ಸಂಸ್ಥೆಗಳಿಂದ ನಡಿಸಲ್ಪಡುವ ಅನಾಥಾಲಯಗಳು, ಹರಿಜನ ಗೃಹಗಳೇ ಮುಂತಾದುವುಗಳಿಗೆ ಸಹಾಯ ಸಲ್ಲಿಸುತ್ತಲೂ ಇದೆ. ಈಗಂತೂ ನಮ್ಮನ್ನು ಕಾಂಗ್ರೆಸ್ ಆಳುತ್ತಿದೆ. ಪತಿತ ಶಿಶುಗಳ ಸಂಗ್ರಹ ಮತ್ತು ಸಂರಕ್ಷಣೆಯ ವ್ಯವಸ್ಥೆಯನ್ನು ಅಲ್ಲಲ್ಲಿ ಸ್ವತಃ ಸರಕಾರವೇ ಕೈಗೊಳ್ಳಬಾರದೇ? ಅಥವಾ ಬೇಡಿದ್ದುದನ್ನೇ ತಾವೂ ನಿರ್ಮಿಸುತ್ತಿರುವ-ಊರಿಗಗತ್ಯವಿಲ್ಲದಿದ್ದರೂ ಸತ್ಕಾರ್ಯವೆಂದು ಏನೇನನ್ನೋ ಸಾಧಿಸುತ್ತಿರುವ-ಖಾಸಗೀ ಮಹನೀಯರಾಗಲೀ ಸಂಘ ಸಂಸ್ಥೆಗಳಾಗಲೀ 'ಪತಿತ ಶಿಶು ನಿಲಯ'ಗಳನ್ನು ಜನತೆಯ ಮತ್ತು ಸರಕಾರದ ಸಹಾಯದಿಂದ ರಚಿಸಿಕೊಳ್ಳುವದಿಲ್ಲವೇಕೆ? ಇಂತಹ ಸತ್ಕಾರ್ಯದಿಂದ ದೊರೆಯುವ ಕೀರ್ತಿ ಮತ್ತು ಪುಣ್ಯ, ಇವೆರಡನ್ನು ಸ್ಮರಿಸಿಕೊಳ್ಳುತಿದ್ದರೆ ಸರಕಾರವೂ ಜನತೆಯೂ ನಾಮುಂದೆ ತಾ ಮುಂದೆ ಎಂದದರ ನಿರ್ಮಾಣಕ್ಕಾಗಿ ಸ್ಪರ್ಧಿಸುತಿದ್ದುವು. ಭಾವೀ ಜನಾಂಗವಾದರೂ ಜಾತಿ ಮತ ಭೇದಗಳನ್ನರಿಯದ ಪ್ರಗತಿಶೀಲವಾಗಬೇಕೇ? ಹಾಗಾದರೆ ತಂದೆ ತಾಯಿಗಳಾರೆಂಬುದನ್ನು ಅರಿಯದ ಇಂತಹ ಶಿಶು ದಳವು 'ಮಾನುಷತ್ವ'ವೊಂದನ್ನೇ ಕಲಿತು ಬೆಳೆಯುವಂತಾಗಬೇಕು. ಸ್ಥಾನ ಮಾನ ಮನೆ ಹುದ್ದೆಗಳ ಗೊಡವೆಯಿಲ್ಲದೆ ಪ್ರಪಂಚವೇ ತಮ್ಮ ಮನೆಯೆಂದು ಭಾವಿಸುವ-ಹುಟ್ಟಿನಿಂದಲೇ ಆ ಸ್ವಭಾವ ಬಂದಿರುವ-ಶಾಂತಿ ದಳವೋ ಸ್ವಯಂಸೇವಕ ದಳವೋ, ಯುದ್ಧ ಸೇನೆಯೋ ನಾಳೆಯಾದರೂ ನಮ್ಮಲ್ಲಿರುವಂತಾಗಬೇಕೆ? ತಂದೆ ತಾಯಿ, ಬಂಧು ಸಂಬಂಧಿಕರನ್ನರಿಯದೆ ಗುಟ್ಟಿನಲ್ಲಿ ಬೆಳೆದ ಈ ಮಕ್ಕಳೇ ಬೇಕು- ಆದ್ದರಿಂದ—

೧. ಜಾತಿಮತ ಭೇದವಾವುದೂ ಇಲ್ಲದೆ, ಕೊನೆಯ ಪಕ್ಷ ಪ್ರತಿ ತಾಲೂಕಿಗೊಂದರಂತಾದರೂ 'ಪತಿತ ಶಿಶು ನಿಲಯ'ಗಳ ಏರ್ಪಾಡಾಗಲಿ.

೨. ಒಂದು ತಾಲೂಕಿನವರಿಗೆ ಬೇರೊಂದು ತಾಲೂಕಿನ ನಿಲಯದಲ್ಲೇ ಪ್ರವೇಶವೆಂಬ ನಿಯಮವಿರಲಿ ಮತ್ತಲ್ಲಿಗೆ ಬಂದುದು ಹೋದುದಾವುದೂ ಮೂರನೆಯವರಿಗೆ ತಿಳಿಯದಷ್ಟು ಗುಟ್ಟು ಪಾಲಿಸಲ್ಪಡಲಿ.

೩. ಪ್ರವೇಶ ಧನ, ರಕ್ಷಣಾ ವೆಚ್ಚವಾವುದನ್ನೂ ತೆರುವ ನಿರ್ಬಂಧ ಅಲ್ಲಿರಕೂಡದು. ಆಕೆ ಮಗುವಿನ ಪೂರ್ಣಾಧಿಕಾರವನ್ನು ಕೊಟ್ಟು ಹೋದರಾಯಿತು. ಇದೇ ಆಕೆ ಕೊಟ್ಟ ಅತಿ ಹೆಚ್ಚಿನ ನಿಧಿಯೆಂದು ಭಾವಿಸಬೇಕು-

೪. ಒಂದು ನಿಲಯಕ್ಕೆ ಸಂಬಂಧ ಪಟ್ಟ ಕ್ಷೇತ್ರದ ಮೂಲೆ ಮೂಲೆ, ಮನೆ ಮನೆಗಳ ಹೆಂಗಸರ ಎಲ್ಲಾ ಗುಟ್ಟುಗಳನ್ನರಿತುಕೊಳ್ಳುತಿದ್ದು ಗರ್ಭವತಿಯನ್ನು ಸಮಯಕ್ಕೆ ಸರಿಯಾಗಿ ಏನೇ ಮಾಡಿಯಾದರೂ ನಿಲಯಕ್ಕೆ ತಂದೇ ತೀರುವ ಸ್ವಯಂಸೇವಕಿಯರ ದಳವಿರಬೇಕು.

೫. ನಿಲಯದಲ್ಲಿ ಮಕ್ಕಳಿಗೆ ಸಾಮೂಹಿಕ ಜೀವನ, ರಾಷ್ಟ್ರ ಪ್ರೇಮ, ಅಭಿರುಚಿಗೆ ತಕ್ಕ ವಿದ್ಯೆಗಳನ್ನು ಕೊಡುವ ಯೋಗ್ಯ ಶಿಕ್ಷಣದ ವ್ಯವಸ್ಥೆಯಿರಬೇಕು.

೬. ಮಕ್ಕಳ ಮತ್ತು ಅವುಗಳನ್ನು ಹೆತ್ತವರ ಪರಿಚಯ ಯಾರೊಬ್ಬರಿಗೂ ಎಂದೂ ಆಗದಂತಿರಬೇಕು. ಅಂತೆಯೇ ಮಗುವಿಗೆ ತಂದೆ ತಾಯಿಗಳ, ತಂದೆ ತಾಯಿಗಳಿಗೆ ಮಗುವಿನ ಸಂಬಂಧವಾಗಲೀ ಪರಿಚಯ ಕೂಡಾ ಎಂದೆಂದಿಗೂ ಆಗದಂತಹ ಕಠಿಣ ನಿಯಮಗಳಿರಬೇಕು. ಆ ಮಕ್ಕಳೆಂದರೆ ಪರಿಚಯದಲ್ಲೂ ಪ್ರತಾಪದಲ್ಲೂ ದೇವದೂತರೆಂದೇ ಆಗಬೇಕು.

ಇದೀಗ ಅಗತ್ಯ ಮತ್ತು ಅಮೂಲ್ಯ ಕಾರ್ಯ!

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಸಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S.-K.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0, ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾರಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುದಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. **2/-**

ಹೆಚ್ಚಿನ ವಿಚಾರಕ್ಕೆ ಬರೆಯಿರಿ....

ಬಾಲಚಂದ್ರ ಆಫೀಸು, ಉಡುಪಿ

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—1—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೪೫] Founder. SRI A. B. SHETTY. M. L. A [No. 45

ಉಡುಪಿ • 11-7-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಉಳುಕು, ಸಂಧಿವಾತ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ತಿದಾತ್ರ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
ಸಧ, ಹುಳುಕಡ್ಡಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಶೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

THE CANARA MUTUAL ASSURANCE COMPANY, LTD.,

Head Office.- **UDIPI, (S. India.)**

NEW APPOINTMENTS.

Applications from candidates (both Boys and Girls) of S. S. L. C Standard are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

Last date by which Applications should reach this Office shall be 30th June, 1946.

Udipi, 6-6-1946.

T. R. A. Pai,
Managing Director.

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)

Chief Agents for South India including Travancore, Co[illegible] and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್ ಎಂಡ್ ಲೋಜಿಂಗ್ ಮಧುರಾ.

ತಾ 8—8—45 ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು [illegible] ಸೇವಿಸಬೇಕು.

ಪಥ್ಯ:—ಹೆರವೀಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧-೪-೦.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಸಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ತುಂಬರವಾಡಿ ಸಪ್ಲೈಯರ್ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಶಿವಬಸಾನಿ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

★ ಮೂರೂವರೆ ತಿಂಗಳಿದ್ದ ಮೂವರು ★

“ಸ್ವಮಿಶೀ ಸಂಬಂಧದ ಕಾರ್ಯಗಳನ್ನು ಮುಗಿಸಿಕೊಂಡು ಹಿಂದುಸ್ಥಾನದಿಂದ ಹಿಂತಿರುಗಿದ ನನಗೆ, ನಾನಾ ದೇಶದಲ್ಲಿ ಈಗ ಸಂಪಾದಿಸಿಕೊಂಡ ಹಲವು ಮೈತ್ರೀ ಸಂಬಂಧಗಳ ಸುಖಸ್ಮರಣೆ ಬರುತ್ತಿದೆ”—ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರು ಜುಲಾಯಿ ತಾ. 2ರಲ್ಲಿ ಲಂಡನಿನಲ್ಲಿ ವಿಮಾನದಿಂದಿಳಿದೊಡನೆ ಆಡಿದ ಮಾತುಗಳಿವು. ನಿಜಕ್ಕೂ ಮೂರೂವರೆ ತಿಂಗಳು ಭಾರತದಲ್ಲಿದ್ದು ಈ ಬ್ರಿಟಿಷ್ ತ್ರಿಮೂರ್ತಿಗಳು ಸಂಪಾದಿಸಿದ ದೊಡ್ಡ ಲಾಭವೆಂದರೆ ಅದೇ.

ಅವರು ಸಂಪಾದಿಸಿದ ಅಗಾಧ ಜ್ಞಾನ

ಲಾರೆನ್ಸ್, ಕ್ರಿಪ್ಸ್, ಅಲೆಕ್ಸಾಂಡರರು ಭಾರತದಲ್ಲಿ ಸಂಪಾದಿಸಿಕೊಂಡ ಜ್ಞಾನವು ಅತ್ಯಮೂಲ್ಯವಾದುದು; ಸ್ವತಃ ಭಾರತೀಯರಲ್ಲೇ ಯಾರೊಬ್ಬನಿಗೂ ಇಂತಹ ಜ್ಞಾನ ಪಡೆಯುವ ಯೋಗ ದೊರೆತಿಲ್ಲವೆನ್ನಬೇಕು. ಯುದ್ಧಾಂತ್ಯದ ಬಳಿಕ ಲೋಕದ ಬೇರಾರಿಗೂ ಇಂತಹ ಜ್ಞಾನ ಸಂಪಾದನೆಯ ಸುಸಂದರ್ಭ ಸಿಕ್ಕಿಲ್ಲ. ಹಿಂದುಸ್ಥಾನದಲ್ಲಿ ಈಗ ಇರುವ ಪ್ರತಿಯೊಂದು ಪಕ್ಷದ ಪ್ರತಿಯೊಬ್ಬ ಪ್ರಮುಖನ ಪರಿಚಯವೂ ಅವರಿಗಾಗಿದೆ. ಪ್ರತಿಯೊಬ್ಬರ ಮನೋವೃತ್ತಿ ಹೇಗೆ–ಅವರ ಅಭಿಲಾಷೆಗಳ ಗುಟ್ಟೇನು–ಅವರ ಮನೋದಾರ್ಢ್ಯ ಯಾನೆ ಸಂಸ್ಕಾರಗಳ ಆಳವೆಷ್ಟು ಎಂಬುದೆಲ್ಲಾ ಈ ಬ್ರಿಟಿಷ್ ತ್ರಿಮೂರ್ತಿಗಳ ಮನೋಪಟಲದಲ್ಲೀಗ ಸ್ಪಷ್ಟವಾಗಿ ಪಡಿಮೂಡಿವೆ. ಅವರೇನು ಹಿಂದೀ ಪ್ರಮುಖರೊಡನೆ ಮಾತಾಡಿದುದು ಒಂದೆರಡು ಸಲವೆ? ಒಬ್ಬೊಬ್ಬರೊಡನೆಯೆ? ಮೂರೂವರೆ ತಿಂಗಳಲ್ಲಿ ದಿನಂಪ್ರತಿಯೆಂಬಂತೆ ಅದೇ ಕೆಲಸಮಾಡಿದ್ದಾರೆ. ಇಷ್ಟು ದಿನ ಹೀಗೆ ಚರ್ವಿತಚರ್ವಣ ಮಾಡಿ ಅಭ್ಯಾಸಿಸುತ್ತಿದ್ದಲ್ಲಿ ದ. ಕ. ಜಿಲ್ಲೆಯ ತುಳುಭಾಷೆ ಕೂಡಾ ಅವರಿಗೆ ಬರುತ್ತಿತ್ತು. ಅಂದಮೇಲೆ ಇಲ್ಲಿಯ ಧುರೀಣರ ಬುದ್ಧಿ, ಹೃದಯಗಳ ಸಂಪೂರ್ಣ ಪರಿಚಯ ಅವರಿಗಾದುದು ವಿಶೇಷವೆ? ಅಂತೆಯೇ ಹಿಂದುಸ್ಥಾನದ ನಕಾಶೆ, ಪ್ರತಿಯೊಂದು ಪ್ರಾಂತ್ಯದ ಜನಸಂಖ್ಯೆ, ಜಾತೀವಾರು ಲೆಕ್ಕ, ಉತ್ಪತ್ತಿ, ಪರಸ್ಪರ ವ್ಯಾಪಾರ, ಸಂಬಂಧ ಇವೆಲ್ಲವುಗಳ ಸರಿಯಾದ ಜ್ಞಾನವೂ ಅವರಿಗಾಗಿದೆ. ಮಿ. ಜಿನ್ನರು ಮದ್ರಾಸಿನಲ್ಲಿ ಭಾಷಣಮಾಡುವದಾದರೆ ಯಾವ ಮಾತುಗಳನ್ನಾಡಬಹುದು––ಲಾಹೋರಿನಲ್ಲಿ ಉಪನ್ಯಾಸಿಸುತ್ತಾರಾದರೆ ಏನೆಲ್ಲಾ ಹೇಳಿಯಾರು––ಎಂಬುದನ್ನು ಜಿನ್ನರ ಭಾಷಣವಾಗುವ ಮೊದಲ ದಿನವೇ ಲಂಡನಿನಲ್ಲಿರುವ ಸರ್ ಕ್ರಿಪ್ಸ್ ಹೇಳಬಲ್ಲರು. ‘ಭಾರತಾಂದೋಲನ’ ನಾಟಕವೊಂದು ಪ್ರದರ್ಶಿಸಲ್ಪಡುತ್ತದಾದರೆ ಲೋರ್ಡ್ ಪೆಥಿಕ್ ಲಾರೆನ್ಸ್ ಗಾಂಧಿಯ ಪಾತ್ರವನ್ನು ಜಯಶೀಲವಾಗಿ ಅಭಿನಯಿಸಬಲ್ಲರು. ಲಂಡನಿನ ವಿನೋದಕೂಟವೊಂದರಲ್ಲಿ ಉರ್ದು ಪರನೆ ಮಾಡಿ ತೋರಿಸಲು ಬೇರಾರೂ ದೊರೆಯದಿದ್ದರೆ ಮಿ. ಅಲೆಕ್ಸಾಂಡರ್ ಮೌಲಾನಾ ಆಜಾದರನ್ನು ಸ್ಮರಿಸಿ ಕೆಲವು ಪದಗಳನ್ನಾದರೂ ಆಡಿಯಾರು! ಅಷ್ಟು ನಿಕಟ ಪರಿಚಯವಾಗಿ ಹೋಗಿದೆ ಈ ಬ್ರಿಟಿಷ್ ತ್ರಿಮೂರ್ತಿಗಳಿಗೆ! ಈ ಸಂವಾದನೆಯೇನು ಸಣ್ಣದೆ?

ಅಂತೆಯೇ ಹಿಂದೀ ಪ್ರಮುಖರಿಗೂ ಈ ಬ್ರಿಟಿಷ್ ಮುತ್ಸದ್ದಿಗಳ ಸ್ವರೂಪವೆಲ್ಲಾ ಸರಿಯಾಗಿ ತಿಳಿದುಹೋಯಿತು. ನವದಿಲ್ಲಿ ಮಾತುಕತೆಗಳ ಕೊನೆಯ ಭಾಗದಲ್ಲಿ ‘ಕ್ರಿಪ್ಸರಿಲ್ಲದ ವೇಳೆ ಮಿಕ್ಕಿಬ್ಬರೊಡನೆ ಮಾತಾಡುವದು ವಾಸಿ” ಎಂಬ ಗುಟ್ಟು ಕಾಂಗ್ರೆಸಿನವರಿಗೆ ಹೊಳೆದಂತೆಯೇ ‘ಎಲ್ಲರನ್ನೂ ಬಿಟ್ಟು, ವಲ್ಲಭಭಾಯಿಗಳನ್ನು ಹಿಡಿಯುವದು ವಾಸಿ’ಎಂದು ಅವರೂ ಮೂಲ ಶೋಧಿಸಿದ್ದರು. ಅಂತೂ ಯಾರು ಯಾವ ಸಂದರ್ಭದಲ್ಲಿ ಹೇಗೆ –ಎಂಬ–ಸಂಪೂರ್ಣ ಜ್ಞಾನವು ದಿಲ್ಲಿಯಲ್ಲಿ ಒಟ್ಟಾದ ಪ್ರತಿಯೊಬ್ಬನಲ್ಲೂ ಉಂಟಾಗಿತ್ತು. ಧುರೀಣರ ಮಾತೇಕೆ? ಅಲ್ಲಿ ಸೇರಿ, ಬಹುತೇಕವಾಗಿ ಮುಖ ನೋಡುವಷ್ಟೇ ಸಂದರ್ಭ ದೊರೆತಿದ್ದ ಪತ್ರಿಕಾ ಪ್ರತಿನಿಧಿಗಳೂ ‘ಇಂಥವರಲ್ಲಿ ಇಷ್ಟೇ ಭಂಡವಾಳವಿದೆ’ ಎಂಬ ಗುಟ್ಟನ್ನರಿತಿದ್ದರು. ಬ್ರಿಟಿಷ್ ರಾಯಭಾರಿಗಳು ನವದಿಲ್ಲಿಯಿಂದ ಮರಳಿದ ಮೇಲೆ ‘ಹಿಂದೂ’ ಬಾತ್ಮೀದಾರನು ತಿಳಿಸಿದ ಆ ತ್ರಿಮೂರ್ತಿಗಳ ಸ್ವಭಾವ ಚಿತ್ರವು ಪ್ರತ್ಯಕ್ಷಾನುಭವವಿದ್ದು ವಾಚನೀಯವಿರುವದರಿಂದ ಇಲ್ಲಿ ಕೊಡಲಾಗಿದೆ:—

ರಾಷ್ಟ್ರಪತಿಯೊಡನೆ ಬ್ರಿಟಿಷ್ ತ್ರಿಮೂರ್ತಿಗಳು.



ದಿಲ್ಲಿ ಮಾತುಕತೆಗಳ ಸಮಯದಲ್ಲಿ ವೈಸರಾಯ ಭವನದ ಹೆಬ್ಬಾಗಿಲಲ್ಲಿ— (ಎಡದಿಂದ ಬಲಕ್ಕೆ) ಮಿ. ಎ. ವಿ. ಅಲೆಕ್ಸಾಂಡರ್; ಸರ್ ಸ್ಟಾಫೋರ್ಡ್ ಕ್ರಿಪ್ಸ್, ಮೌಲಾನಾ ಆಜಾದ್, ಲೋರ್ಡ್ ಪೆಥಿಕ್ ಲಾರೆನ್ಸ್.

ಪೆಥಿಕ್ ಲಾರೆನ್ಸ್— ಬೂದಿ ಮುಚ್ಚಿದ ಕೆಂಡ!

“ತೋರುವಿಕೆಗೆ ತೀರಾ ಜಡನಂತೆ ಕಾಣುತ್ತಿದ್ದ ಭಾರತ ಕಾರ್ಯದರ್ಶಿಯ ಒಳಗಡೆಯಲ್ಲಿ ಸುದೃಢ ಹಾಗೂ ಚಟುವಟಿಕೆಯ ವ್ಯಕ್ತಿತ್ವ ಹುದುಗಿದ್ದಿತು. ಅವರು ಗೋಲ್ಫ್ ಆಟಾಸಕ್ತರು. ಕೆಲವೊಮ್ಮೆ, ಅದರಲ್ಲೂ ನಿಯೋಜಿತ ಮಾತುಕತೆಗಳೇನೂ ಇಲ್ಲದ ಅತಿ ಮುಂಜಾನೆಗಳಲ್ಲಿ–ಲೋರ್ಡ್ ವೇವೆಲರೊಂದಿಗೆ ವೈಸರಾಯಿ ಭವನದಲ್ಲಿ ಅವರು ಆಡ್ತಾಡುವದಿತ್ತು. ಒಂದು ಬಾರಿ ಇವರು ಮಿ. ಅಲೆಕ್ಸಾಂಡರರೊಂದಿಗೆ ‘ಬಿಲ್ಲಿಯಾರ್ಡ್ಸ್’ ಆಡಿದ್ದರು. ಮತ್ತು ಕೆಲಸದಿಂದ ಬಿಡುವಿದ್ದ ಅಪರಾಹ್ನಗಳಲ್ಲಿ ಈ ಇಬ್ಬರು ಮಂತ್ರಿಗಳೂ ಕಾರುಹತ್ತಿ ದಿಲ್ಲಿಯ ರೋಶನಾರಾ ಕ್ಲಬ್ಬಿಗೆ ಹೋಗಿ ಒಂದೆರಡು ಘಂಟೆಗಳನ್ನಲ್ಲಿ ಕಳೆಯುವದಿತ್ತು. ಕೊನೆಯ ಸಂದರ್ಭದಲ್ಲಿ ‘ಗುಡ್-ಬೈ’ ಹೇಳಿ ಬರಲು ನಾನು ನವದಿಲ್ಲಿಯ ಮಂತ್ರಿಗಳ ಭವನಕ್ಕೆ ಹೋದಾಗ ಲೋರ್ಡ್ ಪೆಥಿಕ್ ಲಾರೆನ್ಸರು ಈಜಾಟಕ್ಕೆ ತಯಾರಾಗುತ್ತಿರುವದನ್ನು ಕಂಡೆ. ರಾಜಧಾನಿಯ ಸೆಖೆಯು ಅಪರ ವಯಸ್ಸಿನ ಈ ಮನುಷ್ಯನಿಗೆ ಸಾಕೋಸಾಕಾಗಿ ಹೋಗಿತ್ತು. “ಈ ವರುಷದಷ್ಟು ಕಡಿಮೆ ಸೆಖೆಯೆಂದೂ ಇರಲಿಲ್ಲ” ಎಂಬ ವಾದವೂ ಅವರನ್ನು ಸಂತೈಸುವಂತಿರಲಿಲ್ಲ. “ನನಗೀ ಬಿಸಿ ಸಾಕಾಗಿ ಹೋಯಿತು” ಎಂದವರು ಪ್ರತಿ ಹೇಳುತ್ತಿದ್ದರು.

ಕಾರ್ಯನಿರತನಾಗಿದ್ದಾಗ ಭಾರತ ಕಾರ್ಯದರ್ಶಿಯನ್ನು ಕಂಡವರು, ಸ್ಪಷ್ಟವಾಗಿ ಹಾಗೂ ತೀವ್ರವಾಗಿ ವಿಷಯ ಗ್ರಹಣಮಾಡುವ ಅವರ ಶಕ್ತಿಗೂ ಕಾಂಗ್ರೆಸ್ ಮತ್ತು ಲೀಗ್ ಎರಡಕ್ಕೂ ನ್ಯಾಯ ಸಾಧಿಸಬೇಕೆಂದು ಅವರಲ್ಲಿದ್ದ ಆತುರಗಳಿಗೂ ಮನಸೋಲುವಂತಿತ್ತು. ಕೆಲವೊಂದು ಸಂದರ್ಭ

[೧೧ನೇ ಪುಟ ನೋಡಿರಿ]

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

WANTED

Organisers on decent salary on a nominal guarantee of business.

For further particulars please apply to:

THE
UNITED KARNATAK INSURANCE Co., Ltd.
HEAD OFFICE: DHARWAR.

Or

BRANCH OFFICE:
Court Road, UDIPI, S. K.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನು, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd..
Moolky, S. K.

ಸ್ವತಂತ್ರವಾದ ಫಿಲಿಪ್ಪಾಯಿನ್ಸ್

ಇದೇ ಜುಲಾಯಿ ತಾ 4ರಲ್ಲಿ ಫಿಲಿಪ್ಪೈನ್ಸ್ ದ್ವೀಪಗಳು ಸ್ವತಂತ್ರವಾದುವು; ಅಲ್ಲಿ ರಿಪಬ್ಲಿಕ್ ಸರಕಾರೋದಯವಾಯಿತು.

“ಪ್ರಪಂಚದಲ್ಲಿ ಒಂದು ನವಮನ್ವಂತರವು ಉದಯವಾಯಿತು. ಅಮೇರಿಕದ ಸದಿಚ್ಛೆಯ ಕುರಿತು ಪ್ರಪಂಚದ ಕೆಲವೆಡೆಗಳಲ್ಲಿ ಇನ್ನೂ ಇರಬಹುದಾದ ಸಂದೇಹವಾವುದೇ ಇದ್ದರೂ ಅವೆಲ್ಲಾ ಇಲ್ಲಿ, ಇಷ್ಟೊಂದು ಪ್ರಾಮಾಣಿಕತೆ ಮತ್ತು ನಿಸ್ವಾರ್ಥತೆಯಿಂದ ಅಮೇರಿಕವು ಮಾಡಿರುವದನ್ನು ಕಂಡಾದರೂ ಮುಕ್ತಾಯಗೊಳ್ಳಬೇಕು” ಎಂಬ ಕೃತಜ್ಞತಾ ವಾಕ್ಯಗಳೊಡನೆ ಎಮ್. ಮೇನ್ಯುವೇಲ್ ರೋಕ್ಸ್‌ಸನರು ಫಿಲಿಪ್ಪೈನ್ಸ್ ರಿಪಬ್ಲಿಕಿನ ಅಧ್ಯಕ್ಷರಾಗಿ ಪ್ರಮಾಣಬದ್ಧರಾದರು.

ಮಾತುಕತೆಗಳು—ಸ್ವಾರ್ಥ ಸಂಕುಚಿತತೆಯ ಮೇಲಾಟಗಳು-ದಂಗೆ, ಕ್ರಾಂತಿ, ಸಂಚು ಹಂಚಿಕೆಗಳು-ಏನೊಂದೂ ಇಲ್ಲದೆ ದ್ವಿತೀಯ ಮಹಾ ಯುದ್ಧಾನಂತರ ಶಾಂತತೆಯಿಂದ ಸ್ವಾತಂತ್ರ್ಯಗಳಿಸಿಕೊಂಡ ಏಕಮಾತ್ರ ಭೂಭಾಗನೆಂದರೆ ಫಿಲಿಪ್ಪೈನ್ಸ್. ನೀತಿಯು ನಿರ್ವಂಚನೆಯಿಂದ ಪಾಲಿಸಲ್ಪಟ್ಟರೆ, ಮಾತು ಪ್ರಾಮಾಣಿಕತೆಯಿಂದ ಮಾನ್ಯಗೊಂಡರೆ, ಮಾನವ ಜನಾಂಗದ ಜನ್ಮಸಿದ್ಧ ಹಕ್ಕಿನ ದಾನವೆಷ್ಟೊಂದು ಸುಲಭವೆಂಬುದಕ್ಕೆ ಫಿಲಿಪ್ಪೈನ್ಸ್ ಸ್ವಾತಂತ್ರವೇ ನಿದರ್ಶನ. ಸಾಮ್ರಾಜ್ಯವಷ್ಟೇ ಇದ್ದರೂ ನಾಲಿಗೆಯೊಂದೇ ಇದ್ದರೆ ನ್ಯಾಯದಾನವಾಗಿಯೇ ತೀರುವದೆಂಬುದಕ್ಕೆ ಅಮೇರಿಕದ ಈ ಸತ್ಕಾರ್ಯವೇ ಸಾಕ್ಷಿ.

ಅಮೇರಿಕಾ—ಫಿಲಿಪ್ಪೈನ್ಸ್ ಸಂಬಂಧ

ಸುಮಾರು 50 ವರುಷಗಳಿಗೆ ಮೊದಲು 1898ರಲ್ಲಿ—ಈ ದ್ವೀಪಗಳ ಮೇಲೆ ಅಮೇರಿಕದ ಅಧಿಕಾರ ವ್ಯಾಪಿಸಿದ್ದಿತು. ಅಮೊದಲು ಫಿಲಿಪ್ಪೈನ್ಸ್ ಸ್ಪೇನಿಶ್ ವಸಾಹತಾಗಿದ್ದಿತು. 1898ರ ಅಮೇರಿಕಾ-ಸ್ಪೆಯಿನ್ ಯುದ್ಧಾನಂತರವೇ ಅಮೇರಿಕ- ದ್ವೀಪಗಳನ್ನಾಕ್ರಮಿಸಿಕೊಂಡುದು. ಸ್ಪೇನಿಸ್ ಆಳ್ಕೆಯಿದ್ದ 19ನೇ ಶತಮಾನದಲ್ಲೇ ಫಿಲಿಪ್ಪಾಯನ್ ಜನತೆಯು ಸ್ವಾತಂತ್ರ್ಯದ ಬೆಳಕಿಗಾಗಿ ಹಾತೊರೆಯುತ್ತಿದ್ದು ಸ್ಪೆಯಿನಿನ ವಿರುದ್ಧ ದಂಗೆಯೆದ್ದಿತು. ಅದೇ ಸಮಯದಲ್ಲಿ ಅಮೇರಿಕನ್ ಆಡಳಿತೆ ಬಂದರೂ ಆ ಆಶೆ ಮತ್ತೂ ಜ್ವಲಿಸಿತ್ತು. ಆಗ ಅಮೇರಿಕದಲ್ಲಿದ್ದ ‘ಡೆಮೊಕ್ರೆಟಿಕ್’ ಮತ್ತು ‘ರಿಪಬ್ಲಿಕನ್’ ಪಕ್ಷಗಳೆರಡೂ ಫಿಲಿಪ್ಪೈನಿನ ಸ್ವಾತಂತ್ರ್ಯವೇ ತಮ್ಮ ಗುರಿಯೆಂದು ಸಾರಿದ್ದುವು. ಮೇಲಿನ ನಾಲ್ಕೇ ವರುಷಗಳಲ್ಲಿ—1902ರಲ್ಲಿ—ಅಮೇರಿಕನ್ ಕಾಂಗ್ರೆಸ್ ‘ಓರ್ಗೇನಿಕ್ ಮಸೂದೆ’ಯನ್ನು ಮಂಜೂರುಮಾಡಿಕೊಂಡಿತು. ಈ ಮಸೂದೆಯನ್ವಯ ಆ ದ್ವೀಪಗಳಲ್ಲಿ ಸಾಮೂಹಿಕ ಚುನಾವಣೆ ಮತ್ತು ನ್ಯಾಯವಿಧಾಯಕ ಸಭೆಯ ರಚನೆಯಾಯಿತು. 1916ರಲ್ಲಿ ‘ಜೋನ್ಸ್ ಏಕ್ಟ್’ ಎಂಬ ಮತ್ತೊಂದು ಮಸೂದೆ ಪಾಸಾಗಿ ಫಿಲಿಪ್ಪೈನ್ಸಿಗೆ ಇನ್ನಷ್ಟು ಹೆಚ್ಚಿನ ಅಧಿಕಾರಗಳು ದೊರೆತುವು. ಒಂದು ಬಲಶಾಲಿ ಸರಕಾರ ರಚನೆಗೊಂಡೊಡನೆಯೇ ಫಿಲಿಪ್ಪೈನಿಗೆ ಸ್ವಾತಂತ್ರ್ಯವೀಯಲಾಗುವದೆಂಬ ಆಶ್ವಾಸನೆ ಈ ಮಸೂದೆಯ ಮೂಲಕ ದೊರೆಯಿತು. ಮಿ. ರೂಸವೆಲ್ಟರು 1933ರಲ್ಲಿ ಅಧ್ಯಕ್ಷ ಪಟ್ಟಕ್ಕೇರಿದೊಡನೆ ಫಿಲಿಪ್ಪಾಯಿನ್ ಜನ ಪ್ರಮುಖರೊಡನೆ ಮಾತುಕತೆ ನಡಿಸಿ ತತ್ಪರಿಣಾಮವಾಗಿ 1934ರಲ್ಲಿ ‘ಟೈಡಿಂಗ್ಸ್—ಮೆಕ್‌ಡಫೀ ಮಸೂದೆ’ ಅಮೇರಿಕನ್ ಕಾಂಗ್ರೆಸಿನಲ್ಲಿ ಪಾಸಾಯಿತು. ಈ ಮಸೂದೆಗನುಸಾರವಾಗಿ 1946ನೇ ಜುಲಾಯಿ 4ಕ್ಕೆ ಫಿಲಿಪ್ಪಾಯನ್ಸ್ ಸಂಪೂರ್ಣ ಸ್ವತಂತ್ರವಾಗತಕ್ಕದೆಂಬ ಆಶ್ವಾಸನೆಯನ್ನು ಅಮೇರಿಕವು ಕೊಟ್ಟಿತಲ್ಲದೆ, ಅದರ ಪೂರ್ವ ತಯಾರಿಗಾಗಿ, ನಡುಗಾಲ ಕಾಮನ್ ವೆಲ್ತ್ ಸರಕಾರವೊಂದನ್ನು ಅಲ್ಲಿ ಸ್ಥಾಪಿಸಿತು. ಈ ಮಧ್ಯಾವಧಿಯಲ್ಲಿ ಅನಿರೀಕ್ಷಿತ ಪ್ರಾಣಾಪಾಯವೊಂದಕ್ಕೆ ಫಿಲಿಪ್ಪಾಯನ್ಸ್ ಬಲಿಬೀಳಬೇಕಾಯಿತು. 1941ರಲ್ಲಿ ಜಾಪಾನ್ ಅದನ್ನಾಕ್ರಮಿಸಿಕೊಂಡು 1945ರ ವರೆಗೂ ಯುದ್ಧ ನಿಲ್ದಾಣವಾಗಿ ಮಾಡಿ ನಿಂತಿದ್ದಿತು. ಜನರಲ್ ಡೊಗ್ಲಾಸ್ ಮೇಕರ್ಥರರ ಸೇನಾಪತಿತ್ವದಲ್ಲಿ ಅಮೇರಿಕನ್ ಸೇನೆಯು 1945ರಲ್ಲದನ್ನು ಜಪಾನರ ಕೈಯಿಂದ ಕಿತ್ತುಕೊಂಡಿದ್ದರೂ ಈಗ ಯಾವ ನೆವನವನ್ನೂ ಹೇಳದೆ ವಾಗ್ದಾನದಂತೆ 1946ನೇ ಜುಲಾಯಿ 4ಕ್ಕೆ ಅಮೇರಿಕವು ಫಿಲಿಪ್ಪಾಯಿನ್ಸಿಗೆ ಸ್ವಾತಂತ್ರ್ಯ ದಾನಮಾಡಿದೆ. ಆ ದ್ವೀಪಗಳ ಅದೃಷ್ಟವನ್ನೂ ಅಮೇರಿಕದ ಆಚರಣೆಯನ್ನೂ ಪ್ರಪಂಚವೇ ಶ್ಲಾಘಿಸುತ್ತಿದೆ.

ಫಿಲಿಪ್ಪಾಯಿನ್ಸ್ ದ್ವೀಪ ತಂಡ

ಇವು ಪಶ್ಚಿಮ ಶಾಂತ ಸಮುದ್ರದಲ್ಲಿರುವ ದ್ವೀಪ ಸಮೂಹಗಳು. ಸುಮಾರು 4000 ಚದರ ಮೈಲಷ್ಟಿದ್ದು ಬ್ರಿಟಿಷ್ ದ್ವೀಪಗಳಿಗಿಂತ ತುಸು ಚಿಕ್ಕವಿವೆ. ಆದರೆ ಈ ಗುಂಪಿನಲ್ಲಿ ಸುಮಾರು 7000 ದ್ವೀಪಗಳಿವೆಯೆಂದರೆ ಆಶ್ಚರ್ಯವಾಗಬೇಕು. ಈ ಪೈಕಿ 2773ಕ್ಕೆ ಮಾತ್ರ ಹೆಸರುಗಳಿವೆ. ಒಂದು ಮೈಲು ಮತ್ತು ಅಧಿಕ ವಿಸ್ತೀರ್ಣವುಳ್ಳವುಗಳೆಂದರೆ ಕೇವಲ 462. ಈ ಗುಂಪಿನ ಉತ್ತರಾಗ್ರದಲ್ಲಿರುವ ದ್ವೀಪವು ಫೋರ್ಮೋಸಾಕ್ಕೆ 65 ಮೈಲು, ದಕ್ಷಿಣಾಗ್ರದಲ್ಲಿರುವ ದ್ವೀಪವು ಬೋರ್ನಿಯೋಕ್ಕೆ 30 ಮೈಲು ದೂರವಿವೆ. ಇಂತಹ ಮರ್ಮ ಸ್ಥಳವಾಗಿದ್ದುದರಿಂದಲೇ ಏಷ್ಯಾದ ಇಡೀ ಪೂರ್ವ ಕರಾವಳಿಯನ್ನು ರಕ್ಷಿಸುವ ರಕ್ಷಣಾ ಗೋಡೆಯನ್ನಿಲ್ಲಿ ಕಟ್ಟಬೇಕೆಂದು ಜಪಾನರಾಗ ಹಾರೈಸಿದ್ದರು.

ಫಿಲಿಪ್ಪೈನ್ಸ್‌ಗಳು ಗುಡ್ಡ ಪರ್ವತಗಳ ಪ್ರದೇಶಗಳು. ದೊಡ್ಡ ದ್ವೀಪಗಳಲ್ಲಿ ಹುಟ್ಟು ಜ್ವಾಲಾಮುಖಿಗಳುಳ್ಳ ಪರ್ವತ ಶ್ರೇಣಿಗಳಿದ್ದು, ಕೆಲವೆಡೆ ಅವು 10 ಸಾವಿರ ಅಡಿ ಎತ್ತರವಿವೆ. ದೊಡ್ಡ ಹೊಳೆಗಳಿರುವುದು ಕೆಲವು ಮಾತ್ರ; ಸಣ್ಣ ಪ್ರವಾಹಗಳು ಮಾತ್ರ ಬಹಳವಿವೆ.

1939ರ ಖಾನೇಶುಮಾರಿ ಪ್ರಕಾರ ಅಲ್ಲಿಯ ಒಟ್ಟು ಜನ ಸಂಖ್ಯೆ ಸುಮಾರು 16 ಮಿಲಿಯ. ಈಗಿನ ಊಹೆಯಂತೆ ಸುಮಾರು 180,00,000 ಮಂದಿ ಇರಬೇಕು. ಖಾನೇಶುಮಾರಿಯ 16 ಮಿಲಿಯ ಮಂದಿಯ ಪೈಕಿ ಫಿಲಿಪ್ಪಾಯಿನ್ ಜನರೆಂದರೆ 15,800,000. ಮಿಕ್ಕವರೆಲ್ಲಾ ವಿದೇಶೀಯರು ವಿದೇಶೀಯರ ಪೈಕಿ ಸುಮಾರು 117,000 ಮಂದಿಯಿರುವ ಚೀನೀಯರೇ ಸಂಖ್ಯೆಯಲ್ಲಿ ಮೊದಲಿಗರು. ಅಲ್ಲಿ ಸುಮಾರು 43 ಸಮಾಜವಾರು ಪಂಗಡಗಳೂ 87 ಭಾಷೆ, ಉಪಭಾಷೆಗಳೂ ಇವೆ. ಅಲ್ಲಿ ವಿದ್ಯೆ ಧರ್ಮಾರ್ಥ. ಜತೆ ಶಿಕ್ಷಣವೇ ಜ್ಯಾರಿಯಲ್ಲಿದೆ. 1941ರಲ್ಲಿ ಅಲ್ಲಿ 12000 ಸಾರ್ವಜನಿಕ ಮತ್ತು 439 ಖಾಸಗೀ ಶಾಲಾ ಕಾಲೇಜುಗಳಿದ್ದವು. ರಾಷ್ಟ್ರೀಯ ಭಾಷೆಯಾದ ಟಾಗಲೋಗ್, ಮತ್ತು ಇಂಗ್ಲಿಷ್ ಬಲ್ಲ ಅಕ್ಷರಜ್ಞರ ಸಂಖ್ಯೆ ಸೇಕಡಾ 48ರಷ್ಟಿದೆ.

ಹಿಂದುಸ್ಥಾನದಂತೆಯೇ ಅಲ್ಲಿಯ ಮುಖ್ಯ ವೃತ್ತಿ ಬೇಸಾಯ. ಸುಮಾರು ಅರೆವಾಸಿಯಷ್ಟು ಕಾಡು ಪ್ರದೇಶವೇ ಆಗಿರುವ ಅಲ್ಲಿಯ ಒಟ್ಟು ಭೂಭಾಗದ ಸೇಕಡಾ 12ಕ್ಕೂ ಮಿಕ್ಕಿದ ಭಾಗವು ಸಾಗುವಳಿ ಕ್ಷೇತ್ರವಾಗಿದೆ. ಜನರಲ್ಲಿ ಶೇ. 80ರಷ್ಟು ಮಂದಿ ಸಾಗುವಳಿಯನ್ನೇ ಜೀವನಾಧಾರವಾಗಿ ಮಾಡಿಕೊಂಡಿದ್ದಾರೆ. ಯುದ್ಧಾರಂಭದ ಮೊದಲು ಸಕ್ಕರೆ ತಯಾರಿಯಲ್ಲಿ ಈ ದ್ವೀಪಗಳಿಗೆ ಇಡೀ ಲೋಕದಲ್ಲೇ ಐದನೇ ಸ್ಥಾನ ದೊರೆತಿತ್ತು. ಮರಗಳ ಸರಬರಾಯಿಗಳಿಗೆ ಪ್ರಪಂಚದಲ್ಲಿ ಗಣ್ಯ ಸ್ಥಾನ ಈ ದ್ವೀಪಗಳಿಗಿದೆ. ಕಿತ್ತಾನಾರು ತಯಾರಿಯಲ್ಲಿ ಪ್ರಪಂಚದಲ್ಲೇ ಏಕಮಾತ್ರ ನಿಲಯವೆಂದರೆ ಫಿಲಿಪ್ಪಾಯಿನ್ಸ್.

ಯುದ್ಧ ಮತ್ತು ನಂತರದ ಸ್ಥಿತಿ

ಮೂರು ವರುಷಗಳಗೂ ಮಿಕ್ಕಿ ಜಪಾನರು ಹಿಡಿದು ನಿಂತಿದ್ದುದರಿಂದಲೂ, ಅಮೇರಿಕಾನರನ್ನೊಮ್ಮೆ ಜಪಾನರನ್ನೊಮ್ಮೆ ಓಡಿಸುವ ಎರಡು ಯುದ್ಧಗಳು ಅಲ್ಲಿ ನಡೆದುದರಿಂದಲೂ ಫಿಲಿಪ್ಪಾಯಿನ್ಸಿನ ಆರ್ಥಿಕ ಸ್ಥಿತಿ ಅಡಿಮೇಲಾಗಿತ್ತು. ಗದ್ದೆಯುಳುವ ಏಕಮಾತ್ರ ಪ್ರಾಣಿಗಳಾದ ‘ಕರಬಾವೋಸ್’ ಎಂಬ ಗಟ್ಟಿಮುಟ್ಟಿನ ನೀರುಕೋಣಗಳು ಸೇಕಡಾ 40ರಷ್ಟು ಕಡಿಮೆಯಾದುದರಿಂದ ಭತ್ತ ಸಾಗುವಳಿ ತೀರಾ ಕಡಿಮೆಯಾಯಿತು. ಅಂತೆಯೇ ಫಿಲಿಪ್ಪಾಯಿನಿನ ಮುಖ್ಯಾದಾಯಗಳನ್ನೊದಗಿಸಲು ರಫ್ತಾಗುತ್ತಿದ್ದ, ಸಕ್ಕರೆ, ಕೊಬರಿ ಹೊಗೆಸೊಪ್ಪು ಇತ್ಯಾದಿಗಳ ಉತ್ಪತ್ತಿಯೂ ಬಹಳವಾಗಿ ತಗ್ಗಿತು.

ಈ ದುಸ್ಥಿತಿಯನ್ನು ಗಮನಿಸಿ, ಜುಲಾಯಿ 4ರ ಸ್ವಾತಂತ್ರ್ಯಕ್ಕದು ಅಣಿಯಾಗುವಂತೆ ಮಾಡುವದಕ್ಕಾಗಿಯೇ ಅಮೇರಿಕವು 1946ನೇ ಎಪ್ರಿಲಿನಲ್ಲಿ ‘ರಿಹೇಬಿಲಿಟೇಶನ್ ಆಕ್ಟ್’ ಮತ್ತು ‘ಬೆಲ್‌ಟ್ರೇಡ್ ಆಕ್ಟ್’ ಎಂಬೆರಡು ಮಸೂದೆಗಳನ್ನು ಜಾರಿಗೆ ತಂದಿತು. ಈ ಮಸೂದೆಗಳಂತೆ ಫಿಲಿಪ್ಪೈನಿನ ಖಾಸಗೀ ಮತ್ತು ಸರಕಾರೀ ಕಟ್ಟಡ, ಆಸ್ತಿಪಾಸ್ತಿಗಳ ಮರುದುರಸ್ತಿಗಾಗಿ ಯುದ್ಧ ಹಾನಿಪರಿಹಾರ ರೂಪದಿಂದ 450 ಮಿಲಿಯ ಡೋಲರುಗಳದಕ್ಕೆ ದೊರೆಯುವವು. ಮತ್ತು ಅದಕ್ಕೆ ವ್ಯಾಪಾರೀ ಅನುಕೂಲತೆಗಳೂ ಒದಗಿವೆ.

ಈ ರೀತಿ ಇಂದು ಸ್ವತಂತ್ರವಾಗಿರುವ ಫಿಲಿಪ್ಪಾಯನ್ಸ್ ತನ್ನ ದುಸ್ಥಿತಿಯ ದೆಸೆಯಿಂದಾಗಿ ಆರ್ಥಿಕಾನುಕೂಲತೆಯ ಮಟ್ಟಿಗೆ ದೀರ್ಘ ಕಾಲದ ವರೆಗೆ ಅಮೇರಿಕವನ್ನು ಅವಲಂಬಿಸಿರಬೇಕಾಗಿದೆ. ಹೀಗೆ ಅನಿವಾರ್ಯವಾಗಿ ಅಮೇರಿಕದ ಆಶ್ರಿತ ರಾಜ್ಯದಂತೆ ಫಿಲಿಪ್ಪಾಯನ್ಸ್ ಇರಬೇಕಾಗಿದ್ದರೂ, ಈ ಸಂಬಂಧವು ಪರಸ್ಪರ ಒಪ್ಪಂದ ಮೂಲಕವೇ ನಿರ್ಮಾಣಗೊಳ್ಳಲಿದೆ; ಫಿಲಿಪ್ಪಾಯನ್ಸ್—ಸ್ವತಂತ್ರವಾಗಿದೆ.

ನೀವು ನಿಮ್ಮ ವ್ಯಾವಹಾರಿಕ ಪಟ್ಟಿ ಉಪಭೋಗಿಸಬೇಕಾದರೆ

ನಿಮ್ಮಲ್ಲಿ
ಹಣದ ರಾಶಿಯಲ್ಲಿರಬೇಕಾದ
ಸಿರಿವಂತರಾಗಬೇಕಾದ
ಲಕ್ಷ್ಮೀಪುತ್ರರಾಗಬೇಕಾದ
ಅನುಕೂಲಸ್ಥರಾಗಬೇಕಾದ
ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕೆಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮೀರಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿಕೊಟ್ಟಿದೆ

“ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ”ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd: 1906

CANARA BANK LIMITED

(Incorporated in British India. liability of Members Limited.)

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman.. The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA.
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಬೊಂಬಾಯಿಯಲ್ಲಿ ಅ. ಭಾ. ಕಾಂಗ್ರೆಸ್ ಕಮಿಟಿ ಸಭೆ

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಸಮಿತಿ (A. I. C. C.) ಸಭೆಯು ಜುಲಾಯಿ ತಾ. 6, ಮತ್ತು 7ರಲ್ಲಿ ಬೊಂಬಾಯಿಯ ಸರ್. ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ಜಯಶೀಲವಾಗಿ ನೆರೆಯಿತು.

ತಾ. 5ರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೂಡಿಬಂದು ಅ. ಭಾ. ರಾ. ಸ. ಸಮಿತಿಯ ಮುಂದಿಡುವ ನಿರ್ಧಾರಗಳನ್ನು ತಯಾರಿಸಿದ್ದಿತು. ಸದಸ್ಯರ ಪೈಕಿ ಗಫರ್‌ಖಾನ್, ಆಸಫ್ ಅಲಿ, ರಾಜೇಂದ್ರ ಪ್ರಸಾದರ ಹೊರತು ಮಿಕ್ಕವರು ಹಾಜರಿದ್ದರು. ರಾಜಾಜೀ ಮತ್ತು ಸಿಖ್ ಸಮರ ಸರ್ವಾಧಿಕಾರಿಯಾಗಿ ನೇಮಕಗೊಂಡಿರುವ, ಮಾಜೀ ಅಜಾದ್ ಹಿಂದ್ ನಾಯಕ ಕರ್ನಲ್ ನಿರಂಜನ ಸಿಂಗ್ ಗಿಲ್ಲರೂ ವಿಶೇಷಾಮಂತ್ರಣ ಪಡೆದು ಬಂದಿದ್ದರು.

ನೆಹರು ಬಹಿಷ್ಕಾರದಿಂದ ಪ್ರಸಿದ್ಧಿ ಹೊಂದಿದ ಕಾಶ್ಮೀರದ ಪ್ರಧಾನ ಮಂತ್ರಿ ಶ್ರೀ. ಕಾಕರವರು ಬೊಂಬಾಯಿಗೆ ಬಂದು ಸರ್ದಾರ್ ವಲ್ಲಭಾಯಿಗಳೊಡನೆಯೂ ಮೌಲಾನಾ ಅಜಾದರೊಡನೆಯೂ ಸಂಭಾಷಿಸಿದ್ದರು. ತತ್ಪರಿಣಾಮವಾಗಿ ನೆಹರುಗಳ ಮೇಲಿನ ಬಹಿಷ್ಕಾರವನ್ನು ಕಾಶ್ಮೀರ ಸರಕಾರವು ಹಿಂದೆಗೆದುಕೊಂಡಿತೆಂದೂ ನೆಹರು ಅಜಾದರಿಬ್ಬರೂ ಸದ್ಯದಲ್ಲೇ ಅಲ್ಲಿಗೆ ಹೋಗಲಿರುವರೆಂದೂ ತಿಳಿದು ಬರುತ್ತದೆ.

ಸಮಿತಿ ಸಭೆಯಲ್ಲೊಂದು ಹೊಸತನ

ಹೊಸತಾಗಿ ಚುನಾವಣೆ ಪಡೆದ ಸದಸ್ಯರಿದ್ದ ಅ. ಭಾ ಕಾಂಗ್ರೆಸ್ ಕಮಿಟಿ ಸಭೆಯು ಬೊಂಬಾಯಿಯಲ್ಲಿ ಸೇರಿದಾಗಲೇ ಅಧ್ಯಕ್ಷ ಬದಲಾವಣೆಯಾಗುವದೆಂಬ ಸ್ಪಷ್ಟ ನಿರ್ಧಾರ ಆ ಮೊದಲಾಗಿರಲಿಲ್ಲ. ಮಹಾಧಿವೇಶನದಲ್ಲೇ ನವಾಧ್ಯಕ್ಷರು ಗದ್ದುಗೆಯೇರುವ ಸಂಪ್ರದಾಯ. ಆದರೆ ಸದ್ಯಸ್ಥಿತಿಯಲ್ಲಿ ಅಂತಹ ಜಾಹೀರು ಅಧಿವೇಶನವನ್ನು ಸಕಾಲದಲ್ಲಿ ಕರೆಯುವದಸಾಧ್ಯವಾದುದರಿಂದಲೂ ಅತಿಶ್ರಮ ಹಾಗೂ ಅಸೌಖ್ಯ ಪೀಡಿತ ಮೌಲಾನರು ಹೊಣೆಯನ್ನಿಳಿಸಿಕೊಳ್ಳಲಿಚ್ಛಿಸಿದುದರಿಂದಲೂ ರಾಷ್ಟ್ರಪತಿ ಮಕುಟವು ಈ ಸಭೆಯಲ್ಲೇ ಮೌಲಾನಾ ಅಜಾದರ ತಲೆಯಿಂದ ಪಂಡಿತ ನೆಹರುಗಳ ತಲೆಗೆ ಹೋಗಿದೆ. ಸುಮಾರು 7 ವರುಷಗಳ ಅತಿ ಬಿಕ್ಕಟ್ಟಿನ ಅವಧಿಯ ನಂತರ ಹೊಸದಾಗಿ ಚುನಾವಣೆಗೊಂಡ ಅ. ಭಾ. ಕಾಂ. ಕಮಿಟಿ ಸದಸ್ಯರಲ್ಲಿ ಹೆಚ್ಚಿನವರು ಹೊಸಬರು. ಕೆಲವೆಡೆ ಕಾಂಗ್ರೆಸ್ ಮಂತ್ರಿಗಳನ್ನೂ ಸೋಲಿಸಿ ತರುಣ ಕೆಲಸಗಾರರು ಗೆದ್ದು ಬಂದಿದ್ದರು. ಕಾಂಗ್ರೆಸಿನ ಜಾಹೀರು ಅಧಿವೇಶನದ ಹೊಣೆಗಾರಿಕೆಗಳನ್ನೆಲ್ಲಾ ನಿರ್ವಹಿಸುವ ಈ ರಾಷ್ಟ್ರೀಯ ಸಮಿತಿಯು ಸಭೆ ಸೇರಿದ 'ಸರ್. ಕವಾಸ್ಜಿ ಜಹಾಂಗೀರ್ ಹೋಲ್' ಎಂಬುದು ಬೊಂಬಾಯಿಯಲ್ಲಿ ಸಮೂಹ ಕೂಟಗಳಿಗೆ ಹೆಸರಾದ ಸ್ಥಳ; ದಿವಂಗತ ಸರ್. ಕವಾಸ್ಜಿಯವರಿಂದ ದಾನವಾಗಿ ಕೊಡಲ್ಪಟ್ಟಿದ್ದ ಈ ಭವನದ ಆಡಳಿತೆ ಬೊಂಬಾಯಿ ಸರಕಾರದ್ದು. 'ರಾಷ್ಟ್ರೀಯ ಮಂದಗಾಮಿಗಳ ಸಂಯುಕ್ತ ಸಭೆ'ಯ ಜನ್ಮ ಸ್ಥಾನವೇ ಈ ಭವನ. ಇದಕ್ಕಿಂತ ಮೊದಲು ಈ ಭವನದಲ್ಲಿ ಕೊನೆಯ: ಪ್ರಾಮುಖ್ಯ ರಾಜಕೀಯ ಸಭೆ ನಡೆದಿದ್ದುದು 1928ರಲ್ಲಿ. ಸೈಮನ್ ಕಮಿಶನಿನ ಬಹಿಷ್ಕಾರ ನಿರ್ಧಾರಕ್ಕಾಗಿ ಜಿನ್ನಾ, ಚಿಮನಲಾಲ್, ಜಯಕರ್, ಸರೋಜಿನಿ ಮೊದಲಾದ ಸರ್ವ ಪಕ್ಷೀಯ ಪ್ರಮುಖರನ್ನೊಳಗೊಂಡ ಸಮ್ಮೇಲನವೊಂದು ಆಗ ಇಲ್ಲಿ ನೆರೆದಿತ್ತು. ಅಂದಿನಿಂದ ರಾಜಕೀಯ ಕಾರ್ಯಗಳಿಗದನ್ನು ಉಪಯೋಗಿಸಬಾರದೆಂದು ಬೊಂಬಾಯಿ ಸರಕಾರ ಬಹಿಷ್ಕಾರ ಹಾಕಿದ್ದಿತು. ರಾಜಕೀಯ ಸಭೆಗಳಿಗೆ ಅಂದು ಬಿದ್ದಿದ್ದ ಬಾಗಿಲನ್ನು ಈ ಬಾರಿ ಕಾಂಗ್ರೆಸ್ ಸಭೆಗಾಗಿ ತೆರೆಯಿಸಿದವರು ಬೊಂಬಾಯಿಯ ಕಾಂಗ್ರೆಸ್ ಮಂತ್ರಿಗಳು. ಪ್ರೇಕ್ಷಕರಿಗೆ ಮಾತ್ರವಲ್ಲ, ಪತ್ರಿಕಾ ಪ್ರತಿನಿಧಿಗಳಿಗೂ ಈ ಬಾರಿಯ ಸಭೆಗೆ ಬಹಿಷ್ಕಾರ ಹಾಕಬೇಕೆಂದೇ ಪ್ರಥಮ ನಿರ್ಧಾರವಿತ್ತು. ಆದರೆ ಪಂಡಿತ ನೆಹರುಗಳ ರಿಯಾಯತಿಯಿಂದಾಗಿ ಬಾತ್ಮೀದಾರರ ಪ್ರತಿಬಂಧ ತೊಲಗಿ ಸಭೆಯಲ್ಲಿ ಸುಮಾರು 100 ಮಂದಿ ಸ್ವದೇಶೀ ವಿದೇಶೀ ಪತ್ರಿಕಾಪ್ರತಿನಿಧಿಗಳು ತುಂಬಿದ್ದರು. ಪ್ರೇಕ್ಷಕರಾರಿಗೂ ಪ್ರವೇಶವಿರಲಿಲ್ಲ. ಪ್ರಾಮುಖ್ಯ ನಿರ್ಧಾರವೊಂದರ ಪರಿಶೀಲನೆ ನಡೆಯುವಾಗ ಪ್ರೇಕ್ಷಕರೆಬ್ಬಿಸುವ ಉತ್ಸಾಹ ಧ್ವನಿ, ಗೊಂದಲಗಳಿಂದ ಏಕಾಗ್ರತೆಗೆ ಭಂಗ ಬರುವದೆಂಬ ಅನುಭವವಿದ್ದುದರಿಂದಲೇ ಈ ನೂತನ ವ್ಯವಸ್ಥೆ. ಇದರಿಂದ ಸಭೆಯು ರವ್ಯತೆ ಕಡಿಮೆಯಾದಂತಿದ್ದರೂ, ಶಾಂತ, ಗಾಢವಾತಾವರಣದಿಂದ ಆ ರಂಗವು ರಾಷ್ಟ್ರದ ನಿಜವಾದ ಪ್ರಶಾಂತ ಮೆದುಳಿನಂತೆ ಕಾರ್ಯ ನಿರ್ಧರಿಸಲನುಕೂಲವಾಗಿತ್ತು. ಪ್ರತಿನಿಧಿಗಳಿಗೆ ನಾಜೂಕಿನ ಕುರ್ಚಿ ವ್ಯವಸ್ಥೆಗಳಿದ್ದುವು. ಒಳಗೂ ಹೊರಗೂ ರಾಷ್ಟ್ರಧ್ವಜ ರಾಷ್ಟ್ರೀಯ ವಾಕ್ಯ, ದೇಶಭಕ್ತರ ಭಾವಚಿತ್ರ ಇತ್ಯಾದಿಗಳಿಂದ ವಾತಾವರಣದಲ್ಲೆಲ್ಲಾ ರಾಷ್ಟ್ರೀಯ ಸ್ಫೂರ್ತಿಯ ಬುಗ್ಗೆಗಳೆದ್ದಂತಿತ್ತು. ಧ್ವನಿವಾಹಕ ಯಂತ್ರಗಳ ಸುವ್ಯವಸ್ಥೆಯಿದ್ದಿತು. ಪ್ರತಿನಿಧಿಗಳನ್ನು ಸ್ಟೇಶನಿನಲ್ಲಿಯೇ ಸ್ವಾಗತಿಸುವುದರಿಂದಾರಂಭಿಸಿ, ಸಭೆಯಲ್ಲಿ ಶಾಂತ ಶಿಸ್ತನ್ನು ರಕ್ಷಿಸುವ ವರೆಗಿನ ಎಲ್ಲಾ ಕಾರ್ಯಗಳನ್ನೂ ಶ್ಲಾಘನೀಯವಾಗಿ ನಿರ್ವಹಿಸಿದ ಸ್ವಯಂಸೇವಕ ದಳಗಳಿದ್ದುವು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಬ್ರಿಟಿಷ್ ಯೋಜನೆಗೆ ಸಂಬಂಧಿಸಿದ ಮುಖ್ಯ ಠರಾವನ್ನು ವಿರೋಧಿಸಲು ಕಾಂಗ್ರೆಸ್ ಸಮತಾವಾದಿಗಳು, ಫೊರ್ವರ್ಡ್ ಬ್ಲೋಕ್ ಮತ್ತಿತರ ಎಡಪಕ್ಷೀಯರು ಒಟ್ಟಾಗಿ ಪ್ರಬಲ ಸಿದ್ಧತೆ ನಡಿಸಿದ್ದರು; ಪ್ರತಿನಿಧಿಗಳನ್ನು ತಮ್ಮ ಕಡೆಗೊಲಿಸಿಕೊಳ್ಳಲು ಸರ್ವ ವಿಧದ ಸಾಹಸಗಳನ್ನೂ ನಡೆಸಿದ್ದರು. ಪಂಡಿತ ನೆಹರುಗಳು ಎಡ ಪಕ್ಷೀಯ ಪ್ರಮುಖ ಜೈಪ್ರಕಾಶರೇ ಮೊದಲಾದವರೊಡನೆ ಸಂಭಾಷಣೆ ನಡಿಸಿದರೂ ಪರಿಸ್ಥಿತಿ ಬದಲಾಗಿರಲಿಲ್ಲ. ಆದ್ದರಿಂದ ಹತ್ತು ಹಲವು ತಿದ್ದುಪಡಿ ಸೂಚನೆಗಳ ಗೊಂದಲಗಳಿಲ್ಲದಂತೆ ಮಾಡುವದಕ್ಕಾಗಿ, ಕಾರ್ಯಕಾರೀ ಸಮಿತಿಯು 'ಬ್ರಿಟಿಷ್ ಯೋಜನೆ ಸಂಬಂಧದ ತನ್ನ ನಿರ್ಧಾರದ ಅಂಗೀಕಾರ ಅಥವಾ ತಿರಸ್ಕಾರ ಮಾಡಲನುಕೂಲವಾಗುವಂತೆ ಈ ಕೆಳಗಿನ ಏಕ ವಾಕ್ಯದ ಠರಾವನ್ನೇ ಮುಂದಿಡುವ ನಿರ್ಧಾರಕ್ಕೆ ಬಂತು:–'ಕಾರ್ಯಕಾರೀ ಸಮಿತಿಯ ಜೂನ್ ತಾ. 26ರ ಠರಾವನ್ನು ಈ ಮೂಲಕ ಅನುಮೋದಿಸಲಾಗುತ್ತದೆಂದು ನಿರ್ಧರಿಸುತ್ತದೆ'. ಅಂತೆಯೇ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ತಯಾರಿಸಿದ ಮುಂತಾದ ಮತ್ತೊಂದು ಪ್ರಾಮುಖ್ಯ ನಿರ್ಧಾರವೆಂದರೆ ದಕ್ಷಿಣಾಫ್ರಿಕದ ಹಿಂದೀಯರ ಸತ್ಯಾಗ್ರಹದ ಸಮರ್ಥನೆ.

ಅ. ಭಾ. ಕಾಂಗ್ರೆಸ್ ಕಮಿಟಿ ಸಭೆ

ಜುಲಾಯಿ ತಾ 6ನೇ ಅಪರಾಹ್ನ 2-30ಕ್ಕೆ ಸರಿಯಾಗಿ ಅತ್ಯುತ್ಸಾಹೀ ವಾತಾವರಣದಲ್ಲಿ ಎ. ಐ. ಸಿ. ಸಿ. ಯ ಸಭಾರಂಭವಾಯಿತು. ಸುಮಾರು 300 ಚಿಲ್ಲರೆ ಸದಸ್ಯರ ಪೈಕಿ 290 ಮಂದಿ ಹಾಜರಿದ್ದರು. ನೂರು ಮಂದಿ ಪತ್ರಿಕಾ ಪ್ರತಿನಿಧಿಗಳಲ್ಲದೆ ಬೇರಾರೂ ಪ್ರೇಕ್ಷಕರಿರಲಿಲ್ಲ. ಅನುಕ್ರಮವಾಗಿ ಕಾಂಗ್ರೆಸ್ ಪ್ರಮುಖರ ಆಗಮನವಾಗುತ್ತಿದ್ದಂತೆ ಭವನದ ಹೊರಗೆ ಕಾದು ನಿಂತಿದ್ದ ದೊಡ್ಡ ಜನ ಸಂದೋಹ ಪ್ರಚಂಡ ಜಯಕಾರವೆಬ್ಬಿಸುತಿತ್ತು. ಬೇಂಡು ರಾಷ್ಟ್ರ ಗೀತೆಯನ್ನು ಧ್ವನಿಸುತಿತ್ತು. ನಿಯೋಜಿತ ರಾಷ್ಟ್ರಪತಿ ನೆಹರುಗಳಿಗೆ ಸಂದ ಗೌರವವಂತೂ ವಿಶೇಷ ರೀತಿಯದಿತ್ತು. ವಂದೇ ಮಾತರಂ ಹಾಡಿನೊಂದಿಗೆ ಸಭಾರಂಭವಾದೊಡನೆ ನಿವೃತ್ತಿ ಹೊಂಗಲಿದ್ದ ರಾಷ್ಟ್ರಪತಿ ಮೌಲಾನರು ಪಂಡಿತ ನೆಹರುಗಳನ್ನು ಅಧ್ಯಕ್ಷ ಪೀಠಕ್ಕೆ ಸೂಚಿಸುತ್ತಾ ಮೊದಲ ಭಾಷಣವಿತ್ತರು. ರಾಮದುರ್ಗ ಕಾಂಗ್ರೆಸಿನಲ್ಲಿ ಅಧ್ಯಕ್ಷತೆ ವಹಿಸಿದಂದಿನಿಂದ ಆರು ವರುಷಗಳ ವರೆಗಿನ ತನ್ನ ಅವಧಿಯ ವಿಶೇಷ ವಿದ್ಯಮಾನಗಳನ್ನು ಪ್ರಸ್ತಾಪಿಸಿ ಮೌಲಾನಾರೆಂದರು. "ಇಲ್ಲಿ ಸೇರಿರುವ ಹೊಸ ಅ. ಭಾ. ಕಾಂ. ಕಮಿಟಿಯಲ್ಲಿ ಹೊಸ ರಕ್ತ ಮತ್ತು ಹಸೀ ಮೆದುಳು ತುಂಬಿದೆ. ನವ ರುಧಿರವು ಹೊಸ ದೃಢತೆ ಮತ್ತು ಶಕ್ತಿಯನ್ನು ಕೊಡುವಂತಹದಾದ್ದರಿಂದ ನವ ಸದಸ್ಯರನ್ನು ಸ್ವಾಗತಿಸಲು ನಾನು ಆನಂದಿಸುತ್ತೇನೆ. ನಾನು ಅಧ್ಯಕ್ಷ ಪೀಠಕ್ಕೇರುವಾಗ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತಿದ್ದೆವು, ಆದರೆ ನಾನಾ ಪೀಠದಿಂದಿಳಿಯುವ ಈ ಹೊತ್ತಿನಲ್ಲಿ ನಾವೇ ಸ್ವಾತಂತ್ರ್ಯದ ದ್ವಾರಕ್ಕೆ ಬಂದಿರುವುದರಿಂದ ಅದಕ್ಕಾಗಿ ಹೋರಾಡುವ ಪ್ರಶ್ನೆ ನಮ್ಮ ಮುಂದಿಲ್ಲ ಎಂಬುದನ್ನು ತಿಳಿದು ಆನಂದಪಡುತ್ತೇನೆ. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ ಬರುತ್ತಿರುವ ಸ್ವಾತಂತ್ರ್ಯಕ್ಕಾಗಿ ದುಡಿಯುವದು ಮಾತ್ರ. ನಮ್ಮ ಗುರಿ ಮುಟ್ಟಲು ನಾವೀ

ಇನಾಂ! ಇಲ್ಲಿ ನೋಡಿ!! ಇನಾಂ!!!

ಗೋಲ್ಡನ್ ಭಂಗಾರದ ಆಭರಣಗಳು

ಈ ಭಂಗಾರದ ಆಭರಣಗಳನ್ನು ನೋಡುವವರು ಅಸಲ್ ಚಿನ್ನದ ನಗಗಳೆಂದು ಹೇಳುವರು. ಸ್ತ್ರೀಯರು ನೋಡಿದರೆ ಬಹಳ ಸಂತೋಷಪಡುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಬಹಳವಾಗಿ ಉಪಯೋಗಿಸುತ್ತಿರುವರು. ಪ್ರತಿದಿನ ಉಪಯೋಗಿಸಿದರೂ ಅಸಲ್ ಚಿನ್ನದ ನಗಗಳ ಹಾಗೆ ಪ್ರಕಾಶವಾಗಿರುವುದು. ಈ ರೇಶ್ಮೆ ಪೆಟ್ಟಿಗೆಯಲ್ಲಿರುವ ೧ ಜತೆ ಬಂಗಾರದ ನ್ಯೂ ಮೊಡಲ್ ಬಳೆಗಳು, ೧ ಜತೆ ಸಿನಿಮಾ ಸ್ಟಾರ್ ಲೋಲಾಕ್, ೧ ನೆಕ್‌ಲೇಸ್ ಎಂಬ ಚೈನ್, ೧ ಇಂಗ್ಲಿಷ್ ಮೊಡಲ್ ರೇಡಿಯೋ ಕಟ್ ಉಂಗುರ, ಈ ೪ ಆಭರಣಗಳು ಅಡಗಿರುವ ಒಂದು ಸೆಟ್ ವೇಲ್‌ವೆಟ್ ಪೆಟ್ಟಿಗೆ ಸಹಿತ ಕ್ರಯ ರೂ. ೭-೦-೦ ಮಾತ್ರ! ಒಂದು ಯು. ಯಸ್. ಎ. ಮೊಡಲ್ ಕಾಲರ್ ಪಿನ್ ಬಹುಮಾನವಾಗಿ (Free) ಕಳುಹಿಸುತ್ತೇವೆ.

ದಿ ಅಮೋಜಾನ್ ಟ್ರೇಡಿಂಗ್ ಕಂಪೆನಿ,
ಸಾಂಬಯ್ಯರ್ ಬೀದಿ, ಜಿ. ಟಿ. ಮದ್ರಾಸ್.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ಪಂಡಿತ ನೆಹರುಗಳು ರಾಷ್ಟ್ರಪತಿಯಾದರು.

ಗ ಒಂದೇ ಒಂದು ಹೆಜ್ಜೆ ಮುಂದಿಟ್ಟಿರಾಯಿತು."

ಆ ಮೇಲೆ ಕಾರ್ಯದರ್ಶಿ ಕೃಪಾಲನಿಯವರಿಂದ ವರದಿವಾಚನವಾದೊಡನೆ ಪಂಡಿತ ಜವಾಹಿರಲಾಲರು ಪ್ರಚಂಡೋತ್ಸಾಹ ಧ್ವನಿಗಳ ನಡುವೆ ಅಧ್ಯಕ್ಷ ಪೀಠಾರೂಢರಾದರು.

ಸರ್ದಾರ್ ಪಟೇಲರು ನಿವೃತ್ತ್ಯಧ್ಯಕ್ಷರನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತಾ "ಕ್ವಿಟ್ ಇಂಡಿಯಾ ಠರಾವಿನ ನಂತರ ನಾವು ಮೂರು ವರುಷ ಅಹಮ್ಮದ್ ಕೋಟೆಯಲ್ಲಿ ಒಟ್ಟಿಗಿದ್ದೆವು. ಬಿಡುಗಡೆಯಾದ ನಂತರ ಸಿಮ್ಲಾದಲ್ಲಿ ಕೆಲವು ವಾರವೂ ಈ ಸಲ ಮೂರು ತಿಂಗಳೂ ಒಟ್ಟಾಗಿಯೇ ಇದ್ದೆವು. ನಾನೀ ದೀರ್ಘಾವಧಿಯಲ್ಲಿ ರಾತ್ರಿ ಹಗಲು ದುಡಿಯುತಿದ್ದ ಮೌಲಾನರನ್ನು ನಿರೀಕ್ಷಿಸಿದ್ದೇನೆ. ಅತ್ಯಂತ ಕಷ್ಟ ಮತ್ತು ಪ್ರಯಾಸದ ಈ ಆರು ವರುಷಗಳಲ್ಲಿ ತನ್ನ ಮಹಾ ಹುದ್ದೆಯ ಗೌರವ ಮತ್ತು ಘನತೆಗೆ ಕೀಳೆನಿಸುವಂತೆ ಒಂದೇಒಂದು ಬಾರಿಯಾದರೂ ಮೌಲಾನರು ವರ್ತಿಸಿದುದನ್ನು ನಾನರಿಯೆ. ಕಾಂಗ್ರೆಸ್ ಗೌರವ ಕುಗ್ಗಲು ಅವರೆಂದೂ ಬಿಟ್ಟವರಲ್ಲ. ಬೇರಾರಿಂದಲೂ ಇಂತಹ ಧೈರ್ಯ ಮತ್ತು ದೃಢತೆ ಪ್ರದರ್ಶಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಸಮರದಲ್ಲಿ ನಮ್ಮನ್ನಿಂದಿನ ಸ್ಥಾನಕ್ಕೆ ನಡೆಯಿಸಿದ ಕೀರ್ತಿಯು ಸಂಪೂರ್ಣವಾಗಿ ಮೌಲಾನರಿಗೆ ಸಲಬೇಕು" ಎಂದರು. "ಘನತೆ, ದೃಢತೆ ಮತ್ತು ಶಕ್ತಿಪೂರ್ಣವಾಗಿ ಕಾಂಗ್ರೆಸಿನ ಸಾರಥಿತ್ವ ನಡೆಸಿದ ಮೌಲಾನರನ್ನು" ಪಂಡಿತ ಗೋವಿಂದ ವಲ್ಲಭ ಪಂತರು ಕೊಂಡಾಡಿ ಅವರಿಗೆ ದೀರ್ಘಾಯುಷ್ಯ ಕೋರಿದರು.

ರಾಷ್ಟ್ರಪತಿಯ ಭಾಷಣ

ಪಂಡಿತ ನೆಹರುಗಳು ರಾಮಘರ್ ಕಾಂಗ್ರೆಸ್ ಅಧಿವೇಶನದ ದಿನ ಅಲ್ಲಿ ... ದ್ದ ಬಿರುಗಾಳಿಯ ನೆನಪು ಮಾಡಿಕೊಟ್ಟು ಮೌಲಾನಾ ಅಝಾದರ 6 ವರುಷಗಳ ಅಧ್ಯಕ್ಷತೆಯ ಅವಧಿಯೂ ಬಿರುಗಾಳಿಯೇ ಆಗಿತ್ತೆಂದರು. "ಮೌಲಾನರಷ್ಟೇ ಶಕ್ತಿ, ಧೈರ್ಯಗಳಿಂದ ಕಾರ್ಯ ನಿರ್ವಹಿಸಬಲ್ಲವರು-ಅವರ ಹೆಜ್ಜೆಯಲ್ಲಡಿಯಬಲ್ಲವರು - ನಮ್ಮ ಪೈಕಿ ಯಾರಿದ್ದಾರೆ? ನನ್ನ ಮಟ್ಟಿಗೆ, ಈ ಹೊಣೆ ಹೊರಬೇಕೋ ಬೇಡವೋ ಎಂದು ನಿರ್ಧರಿಸಲು ದೀರ್ಘಾವಧಿಯ ವರೆಗೂ ನನ್ನಿಂದಾಗಿರಲಿಲ್ಲ. ನಿನ್ನೆಯಲ್ಲ, ಮೊನ್ನೆ ಮಾತ್ರವೇ ಮಹಾತ್ಮಾ ಗಾಂಧಿ ಮತ್ತು ಕಾಂಗ್ರೆಸ್ ಕಮಿಟಿಯ ನನ್ನ ಅನುಯಾಯಿಗಳ ಸಲಹೆಗನುಸಾರವಾಗಿ ಈ ಜವಾಬ್ದಾರಿಗೆ ಹೆಗಲೊಡ್ಡಲು ನಿಶ್ಚಯಿಸಿದೆ" ಎಂದು ವಿವರಿಸಿ "ನಾವೀಗ ಸ್ವಾತಂತ್ರ್ಯದ ಬಾಗಿಲ ಮೆಟ್ಟಲಲ್ಲಿದ್ದೇವೆ. ಈಗ ಬೇಕಾದುದು ಒಮ್ಮೆ ಬಲವಾಗಿ ದೂಡುವುದೊಂದೇ" ಎಂದರು. "ಒಂದು ರಾಜ್ಯವನ್ನು ಕಾಯಂ ನಡೆಸುವ ಯಾ ನಿರಾಕರಿಸುವ ಪ್ರಶ್ನೆ ಇದಲ್ಲ; ನಿಯೋಜಿತ ಘಟನಾ ಸಮಿತಿಯ ಗುಣದೋಷಗಳ ಪ್ರಶ್ನೆಯೂ ಅಲ್ಲ; ಭಾರತ ಸ್ವಾತಂತ್ರ್ಯವೇ ಮುಖ್ಯ ಪ್ರಶ್ನೆ" ಎಂದು ಒತ್ತಿ ಹೇಳಿ ಬ್ರಿಟಿಷ್ ಆಳ್ವಿಕೆ ಮುಗಿಯುತ್ತಾ ಬಂದಿರುವ ಕಾಲದಲ್ಲಿ ಯಾವ ದೌರ್ಬಲ್ಯವನ್ನೂ ಪ್ರದರ್ಶಿಸದೆ ನಾವೆಲ್ಲಾ ಒಗ್ಗಟ್ಟಾಗುವದು ಮುಖ್ಯವೆಂದರು.

ಶ್ರೀ. ಭುಲಾಭಾಯಿ ದೇಸಾಯಿಗಳ ಮರಣಕ್ಕಾಗಿ ದುಃಖ ಸೂಚಕ ಠರಾವನ್ನು ಆಚಾರ್ಯ ಕೃಪಲಾನಿಯವರು ಮುಂದಿಟ್ಟು ಮಂಜೂರಾದ ಮೇಲೆ ಮೌಲಾನಾ ಆಜಾದರು ಮೂಲ ಠರಾವನ್ನು ಮುಂತಂದರು.

ಕಾಂಗ್ರೆಸ್ ನಿರ್ಧಾರ

ಜೂನ್ ತಾ. 26ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿದ್ದ-ವೈಸರಾಯರ ನಡುಗಾಲ ಸರಕಾರ ರಚನಾ ವ್ಯವಸ್ಥೆಯನ್ನು ತಿರಸ್ಕರಿಸುವ ಮತ್ತು ಘಟನಾ ಸಮಿತಿಯಲ್ಲಿ ಭಾಗವಹಿಸಲೊಪ್ಪುವ-ಠರಾವಿಗೆ ಅನುಮೋದನೆಯನ್ನಪೇಕ್ಷಿಸುವ ಕೇವಲ 13 ಶಬ್ದಗಳ ಏಕ ವಾಕ್ಯದ ಸೂಚನೆಯನ್ನು ಮೌಲಾನಾ ಅಜಾದರು ಮುಂತಂದು ಬೋಧಪ್ರದ ಭಾಷಣವಿತ್ತರು. ಮೌಲಾನರ ತುಲನಾತ್ಮಕ ಜಾಣ್ಮೆ, ವಾದ ಪ್ರೌಢಿಮೆ, ವಿಷಯಾಧಿಕಾರ-ಇವೆಲ್ಲಾ ಕಾಂಗ್ರೆಸ್ ನಿರ್ಣಯದ ಸಮಂಜಸತೆಯನ್ನು ಸದಸ್ಯರಿಗೆ ಮನಗಾಣಿಸಿದುವು. "ಭಾರತದ ಬಯಕೆಯು ಸ್ವಾತಂತ್ರ್ಯವು ನಿರ್ವಿವಾದವಾಗಿ ಒಪ್ಪಲ್ಪಟ್ಟಿದೆ. ನಾವು ದೀರ್ಘಾವಧಿಯಿಂದ ಹೋರಾಡಿರುವ ಆ ಗುರಿ ಪ್ರಶ್ನಾತೀತವಾಗಿದೆ. ದೇಶವಿಭಜನೆಗೆ ಪ್ರತಿವಿರುದ್ಧ ವಾದ, ಘಟಕಗಳನ್ನೊಳಗೊಂಡು ಸಂಯುಕ್ತ ಕೇಂದ್ರಾಧಿಕಾರ ಬೇಕೆಂಬ ನಮ್ಮ ಬೇಡಿಕೆಯೂ ಅದನ್ನು ರೂಪಿಸಲು ನಿರ್ಮಾಣಗೊಳ್ಳತಕ್ಕದ್ದೆಂದು ನಾವು ದೀರ್ಘಾವಧಿಯಿಂದ ಕೇಳುತಿದ್ದ ಘಟನಾ ಸಮಿತಿಯೂ ಸಮಗ್ರ ದೊರೆತಿವೆ. ಕಾಂಗ್ರೆಸ್ ಬೇಡಿಕೆಯ ಸಾರಾಂಶವೆಲ್ಲಾ ದೊರಕಿದೆ. ಅದನ್ನೀಗ ನಿರಾಕರಿಸಿದರೆ ನಮ್ಮ ಬೇಡಿಕೆಗೇನೇ ಅರ್ಥವಿಲ್ಲವೆಂದಾಗುವದು" ಎಂದು ಮಾಜೀ ರಾಷ್ಟ್ರಪತಿ ತನ್ನ 50 ಮಿನಿಟಿನ ಭಾಷಣದಲ್ಲಿ ಯುಕ್ತಿ ಯುಕ್ತವಾಗಿ ವಾದಿಸಿದರು. ಸರ್ದಾರ್ ಪಟೇಲರದನ್ನು ಅನುಮೋದಿಸಿ ಸಿಕ್ಖರಿಗಾಗಿರುವ ಅನ್ಯಾಯವನ್ನು ವಿವರಿಸಿ, ಪ್ರಾಂತಿಕ ಪಂಗಡಗಳಲ್ಲಿರುವ ಪ್ರಮಾದ ಹಾಗೂ ಅದನ್ನು ಕಾಂಗ್ರೆಸು ತಾನು ಒಪ್ಪಿರುವ ಅರ್ಥದಿಂದಲೇ ತಿದ್ದಲಿದೆಯೆಂಬುದನ್ನೂ ವಿವರಿಸಿ "ಮುಸ್ಲಿಂ ಲೀಗಿಗೆ ಈ ಯೋಜನೆಯಲ್ಲಿ ಪಾಕಿಸ್ತಾನ್ ಕ್ರಿಮಿಗಳಿರುವಂತೆ ಕಾಣುತ್ತಿದೆ. ನಾವದರಲ್ಲಿ ಸಂಯುಕ್ತ ಭಾರತವನ್ನು ಕಾಣುತ್ತಿದ್ದೇವೆ. ಯಾರುಸರಿ ಎಂಬುದನ್ನು ಘಟನಾ ಸಮಿತಿಯೇ ನಿರ್ಧರಿಸತಕ್ಕದ್ದು" ಎಂದರು.

ಎಡಪಕ್ಷೀಯರ ಪ್ರಬಲ ವಿರೋಧ

ಅಧ್ಯಕ್ಷ ನೆಹರುಗಳ ಠರಾವಿನ ಚರ್ಚೆಗೆ ಪೀಠಿಕೆಯಾಗಿ ನಾಲ್ಕು ಮಾತುಗಳನ್ನಾಡಿ ತಿದ್ದುಪಡಿ ಸೂಚನೆಗಳೆಲ್ಲಾ ನಿಯಮಬಾಹಿರವೆಂದು ತೆಗೆದು ಹಾಕಿದರು. ಮೂಲ ಠರಾವಿನ ಅಂಗೀಕಾರ ಯಾ ಧಿಕ್ಕಾರವೊಂದೇ ಹಾದಿಯೆಂದು ಅಧ್ಯಕ್ಷರು ಆಜ್ಞಾಪಿಸಿ ವಿರೋಧೀ ಭಾಷಣ ಕರ್ತರನ್ನು ಆಮಂತ್ರಿಸಿದರು. ಕಾಂಗ್ರೆಸ್ ಸಮತಾವಾದಿ ಪಕ್ಷದ ನಾಯಕ-ಆಗೋಸ್ಟು ಗಲಭೆಯ ವೀರ-ಶ್ರೀ ಜೈ ಪ್ರಕಾಶ್ ನಾರಾಯಣರ ಮುಂದಾಳುತ್ವದಲ್ಲಿ ಎಡಪಕ್ಷೀಯ ಉಪನ್ಯಾಸಕರು ಕೆಲವರ ಕಠಿಣ ಟೀಕೆಗಳಾದುವು ಪ್ರಥಮತಃ ಮಿ. ಅನ್ಸಾರ್ ಹರ್ವಾನಿಯವರು ಕಾರ್ಯಕಾರೀ ಕಮಿಟಿಯ ನಿರ್ಣಯವನ್ನು ತೀವ್ರವಾಣಿಯಿಂದ ಖಂಡಿಸಿ 'ಪ್ರಾಯಸ್ಥ ಮತದಾನದಿಂದ ಘಟನಾ ಸಮಿತಿಯ ರಚನೆಯಾಗುವದಿಲ್ಲ; ಈ ಘಟನಾ ಸಮಿತಿಯು ಕಾಂಗ್ರೆಸ್ 25ವರುಷಗಳಿಂದ ಹೋರಾಡುತ್ತಿರುವ ಸ್ವಾತಂತ್ರ್ಯ ತರುವಂತಿಲ್ಲ; ಇದನ್ನಂಗೀಕರಿಸಿದರೆ ನಾವು ಬ್ರಿಟಿಷರ ಕೈಗೊಂಬೆಗಳಾದಂತೆಯೇ ಸರಿ" ಎಂದರು.

ಶ್ರೀ ಜೈ ಪ್ರಕಾಶ್ ನಾರಾಯಣರು ಸೌಮ್ಯ ಸ್ವಭಾವ, ಶಾಂತ ಸ್ವರದಿಂದ ಕಠಿಣ ವಿಷಯವನ್ನು ಮುಂಪೊಡ್ಡಿ ಒಮ್ಮೆ ಸಭೆಯ ಮನಸ್ಸನ್ನು ತನ್ನೆಡೆಗೆ ಸೆಳೆದರು. "ಇಪ್ಪತ್ತು ವರುಷ ಕಾಂಗ್ರೆಸ್ ತನ್ನ ಗುರಿಯಾಗಿಟ್ಟುಕೊಂಡು ಹೋರಾಡಿದ ಸ್ವರಾಜ್ಯವನ್ನು ಈ ಬ್ರಿಟಿಷ್‌ದತ್ತ ಘಟನಾ ಸಮಿತಿ ತರಲಾರದು. ಬ್ರಿಟಿಷ್ ಸಾಮ್ರಾಜ್ಯದ ಪ್ರಸಾದವಾದ ಈ ಪ್ರತಿಘಟನೆಯ ಅಂಗೀಕಾರದಿಂದು ನಮ್ಮ ಪ್ರಶ್ನೆಯು ಇಲ್ಲ-ಬ್ರಿಟಿಷರನ್ನು ಹೊರಗಟ್ಟುವದು ಹೇಗೆಂಬುದೊಂದೇ ನಮ್ಮ ಕಣ್ಣ ಮುಂದಿರತಕ್ಕದ್ದು. ಬ್ರಿ. ಮಂತ್ರಿಸಮಿತಿಯು ಸ್ವಾತಂತ್ರ್ಯವೀಯಲು ಬಂದಿರಲಿಲ್ಲ; ಅದು ಬಂದಿದ್ದುದು ಕಾಂಗ್ರೆಸ್ ಮತ್ತು ಲೀಗುಗಳ ನಡುವೆ ಮಧ್ಯಸ್ಥಿಕೆ ವಹಿಸುವದಕ್ಕಾಗಿ. ತಾವೇ ನಿರ್ಮಿಸಿರುವ ಜಾತೀಯ ಜಗಳವನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವದಕ್ಕಾಗಿ. ಮುಸ್ಲಿಂ ಲೀಗಿಗೆ ಹೆಚ್ಚಿನ ಮುಸಲ್ಮಾನರ ಬೆಂಬಲವಿದ್ದಿರಬಹುದು. ಆದರೆ ಅದಿನ್ನೂ ಬ್ರಿಟಿಷ್ ಪಾಳೆಯಗಾರ ಮತ್ತು ಮಿತ್ರನಾಗಿಯೇ ಇದೆ. ಕಾಂಗ್ರೆಸು ತನ್ನ ತತ್ವಗಳನ್ನು ತಾನೇ ನುಂಗಿಕೊಂಡು, ಯಾರ ನಾಯಕರು 1942ರಲ್ಲಿ 'ಕ್ವಿಟ್ ಇಂಡಿಯಾ' ಚಳವಳವು ಹಿಂದೂ ಅಧಿಕಾರಕ್ಕಾಗಿ ಮುಸಲ್ಮಾನರ ವಿರುದ್ಧವಾಗಿ ಹೂಡಲ್ಪಟ್ಟಿದೆ ಹೊಂತು ಬ್ರಿಟಿಷರದಿರಲ್ಲ ಎಂದು ನಿರ್ಲಜ್ಜೆಯಿಂದಾಡಿರುವರೋ ಆ ಲೀಗಿನೊಡನೆ ಸಂಧಾನಕ್ಕೆ ಹೋಗಬೇಕೆಂದು ಬ್ರಿಟಿಷರು ಕಾಂಗ್ರೆಸಿಗೆ ಹೇಳುತಿದ್ದಾರೆ, ನಾವು ನೇರಾಗಿ ಮುಸಲ್ಮಾನ್ ಜನತೆಯನ್ನು ಸಂಧಿಸಿ ನಮ್ಮ ಕಡೆಗೆಳೆದುಕೊಳ್ಳುವ ಬದಲಿಗೆ, ನಮ್ಮ ವೈರಿಗಳ ಮಿತ್ರನಾದ ಅವರ ನಾಯಕರೊಡನೆ ಸಂಧಾನಕ್ಕೆ ತೊಡಗಿದ್ದೇವೆ". ಎಂದು ಖಂಡತುಂಡ ಮಾತುಗಳನ್ನಾಡಿ ನಾವು ಸ್ವಶಕ್ತಿಯಿಂದ ಸಂಪಾದಿಸಿಕೊಂಡ ರಾಜ್ಯಾಂಗ ರಚನಾ ಸಭೆಯೊಂದಲ್ಲದೆ ಇಂದಿನ ಬ್ರಿಟಿಷ್ ಸೂತ್ರದ ಸಭೆಗಳು ಎಂದೂ ಸ್ವಾತಂತ್ರ್ಯ ತರಲಾರವೆಂದೂ, ಅದು ಜಯಶೀಲಗೊಳ್ಳಲು ಕುತಂತ್ರ ಬ್ರಿಟಿಷರಿಂದೂ ಬಿಡುವಂತಿಲ್ಲವೆಂದೂ, ಬ್ರಿಟಿಷ್ ಸೇನೆಗಳು ಕೂಡಲೇ ಇಲ್ಲಿಂದ ಹಿಂದಿರುಗತಕ್ಕದ್ದೆಂದೂ ಜೈ ಪ್ರಕಾಶರು ವಾದಿಸಿದರು.

ಸ್ವಾಮಿ ಸಹಜಾನಂದ ಸರಸ್ವತಿಯವರು ಜೈ ಪ್ರಕಾಶರ ವಾದವನ್ನು ಸಮರ್ಥಿಸಿ 'ಮುಂಬರುವ ಘಟನಾ ಸಮಿತಿ ನಿರರ್ಥಕವಾಗಲಿದೆಯೆಂದರು. ಶ್ರೀ. ಆರ್. ಕೆ. ಸಿಧ್ವರು ಕಾಂಗ್ರೆಸ್ ನಿರ್ಧಾರವನ್ನು ಸಮರ್ಥಿಸಿದರು. ಮುನ್ಷಿ ಅಹಮ್ಮದ್‌ದಿನ್ ಇ.

(೬ನೇ ಪುಟ ನೋಡಿರಿ)

S. N. High School, Perla, S. K.

Wanted immediately a Mathematics & Science Graduate to teach in Kannada. Apply to the Correspondent with terms.

The Canara Industrial & Banking Syndicate, Ltd., Car Street, Udipi

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ರಥವೀದಿ, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ ಸದರಿಯವರಿಗೆ ಕ್ರಮದಂತೆ ರಿಜಿಸ್ಟ್ರಿ ನೋಟೀಸನ್ನು ಕೊಟ್ಟಾಗ್ಯೂ ಸದ್ರಿಯವರು ಮೃತಪಟ್ಟಿರುವರೆಂದು ವಾಪಾಸು ಬಂದಿರುವುದರಿಂದ ಕೂಡಾ ಪಾವತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸಲು, ಬಡ್ಡಿ ಖರ್ಚುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ತಾ. 25 7-46ನೆ ಗುರುವಾರದೊಳಗೆ ಬೇಂಕಿಗೆ ಸಂಬಂಧಪಟ್ಟವರು ಪಾವತಿಮಾಡಿ ಈಡಿಟ್ಟ ಆಭರಣವನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದರೀ ಆಭರಣಗಳನ್ನು ಇದೇ ತಾ. 27-7-46ನೆ ಶನಿವಾರ ದಿನ ಅಪರಾಹ್ನ 3 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಗತ್ಯಪಟ್ಟಲ್ಲಿ ಏಲಮಿನ ತಾರೀಕನ್ನು ಮುಂದುವರಿಸುವ ಹಕ್ಕು ಬೇಂಕಿಗೆ ಇದೆ ತಿಳಿದಿರುವುದು.

ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
185/43	ಮಂಜಯ್ಯ ಸೆಟ್ಟಿ, ಕೋಳ್ನಾರ್ ಅಂತಯ್ಯ ಸೆಟ್ರ ಮಗ, ಪೆರ್ಡೂರು, ದ. ಕ.	ಅಸಲು ರೂಪಾಯಿ 10/ ಮತ್ತು ಅದಕ್ಕೆ ಮೊಲಿನ ತಾ 29 6 45ರಿಂದ ಸೇಕಡಾ 7ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ ಮತ್ತು ಖರ್ಚು.

ಬೇಂಕಿನ ಆಫೀಸು, ರಥವೀದಿ, ಉಡುಪಿ. ತಾ. 8-7-46.

K. Ranganna Bhat,
Agent.

ಬೊಂಬಾಯಿಯಲ್ಲಿ ಅ. ಭಾ. ಕಾಂಗ್ರೆಸ್ ಕಮಿಟಿ ಸಭೆ

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಸಮಿತಿ (A. I. C. C.) ಸಭೆಯು ಜುಲಾಯಿ ತಾ. 6 ಮತ್ತು 7ರಲ್ಲಿ ಬೊಂಬಾಯಿಯ ಸರ್. ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ಜಯಶೀಲವಾಗಿ ನೆರೆಯಿತು.

ತಾ. 5ರಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೂಡಿಬಂದು ಅ. ಭಾ. ರಾ. ಸ. ಸಮಿತಿಯ ಮುಂದಿಡುವ ನಿರ್ಧಾರಗಳನ್ನು ತಯಾರಿಸಿದ್ದಿತು. ಸದಸ್ಯರ ಪೈಕಿ ಗಫರ್‌ಖಾನ್, ಅಸಫ್ ಅಲಿ, ರಾಜೇಂದ್ರ ಪ್ರಸಾದರ ಹೊರತು ಮಿಕ್ಕವರು ಹಾಜರಿದ್ದರು. ರಾಜಾಜೀ ಮತ್ತು ಸಿಖ್ ಸಮರ ಸರ್ವಾಧಿಕಾರಿಯಾಗಿ ನೇಮಕಗೊಂಡಿರುವ, ಮಾಜೀ ಆಜಾದ್ ಹಿಂದ್ ನಾಯಕ ಕರ್ನಲ್ ನಿರಂಜನ ಸಿಂಗ್ ಗಿಲ್ಲರೂ ವಿಶೇಷಾಮಂತ್ರಣ ಪಡೆದು ಬಂದಿದ್ದರು.

ನೆಹರು ಬಹಿಷ್ಕಾರದಿಂದ ಪ್ರಸಿದ್ಧಿ ಹೊಂದಿದ ಕಾಶ್ಮೀರದ ಪ್ರಧಾನ ಮಂತ್ರಿ ಶ್ರೀ. ಕಾಕಾರವರು ಬೊಂಬಾಯಿಗೆ ಬಂದು ಸರ್ದಾರ್ ವಲ್ಲಭಾಯಿಗಳೊಡನೆಯೂ ಮೌಲಾನಾ ಅಜಾದರೊಡನೆಯೂ ಸಂಭಾಷಿಸಿದ್ದರು. ತತ್ಪರಿಣಾಮವಾಗಿ ನೆಹರುಗಳ ಮೇಲಿನ ಬಹಿಷ್ಕಾರವನ್ನು ಕಾಶ್ಮೀರ ಸರಕಾರವು ಹಿಂದೆಗೆದುಕೊಂಡಿತೆಂದೂ ನೆಹರು ಅಜಾದರಿಬ್ಬರೂ ಸದ್ಯದಲ್ಲೇ ಅಲ್ಲಿಗೆ ಹೋಗಲಿರುವರೆಂದೂ ತಿಳಿದು ಬರುತ್ತದೆ.

ಸಮಿತಿ ಸಭೆಯಲ್ಲೊಂದು ಹೊಸತನ

ಹೊಸತಾಗಿ ಚುನಾವಣೆ ಪಡೆದ ಸದಸ್ಯರಿದ್ದ ಅ. ಭಾ ಕಾಂಗ್ರೆಸ್ ಕಮಿಟಿ ಸಭೆಯು ಬೊಂಬಾಯಿಯಲ್ಲಿ ಸೇರಿದಾಗಲೇ ಅಧ್ಯಕ್ಷ ಬದಲಾವಣೆಯಾಗುವದೆಂಬ ಸ್ಪಷ್ಟ ನಿರ್ಧಾರ ಆ ಮೊದಲಾಗಿರಲಿಲ್ಲ. ಮಹಾಧಿವೇಶನದಲ್ಲೇ ನವಾಧ್ಯಕ್ಷರು ಗದ್ದುಗೆಯೇರುವ ಸಂಪ್ರದಾಯ. ಆದರೆ ಸದ್ಯಸ್ಥಿತಿಯಲ್ಲಿ ಅಂತಹ ಜಾಹೀರು ಅಧಿವೇಶನವನ್ನು ಸಕಾಲದಲ್ಲಿ ಕರೆಯುವದಸಾಧ್ಯವಾದುದರಿಂದಲೂ ಅತಿಶ್ರಮ ಹಾಗೂ ಅಸೌಖ್ಯ ಪೀಡಿತ ಮೌಲಾನರು ಹೊಣೆಯನ್ನಿಳಿಸಿಕೊಳ್ಳಲಿಚ್ಛಿಸಿದುದರಿಂದಲೂ ರಾಷ್ಟ್ರಪತಿ ಮಕುಟವು ಈ ಸಭೆಯಲ್ಲೇ ಮೌಲಾನಾ ಆಜಾದರ ತಲೆಯಿಂದ ಪಂಡಿತ ನೆಹರುಗಳ ತಲೆಗೆ ಹೋಗಿದೆ. ಸುಮಾರು 7 ವರುಷಗಳ ಅತಿ ಬಿಕ್ಕಟ್ಟಿನ ಅವಧಿಯ ನಂತರ ಹೊಸದಾಗಿ ಚುನಾವಣೆಗೊಂಡ ಅ. ಭಾ. ಕಾಂ. ಕಮಿಟಿ ಸದಸ್ಯರಲ್ಲಿ ಹೆಚ್ಚಿನವರು ಹೊಸಬರು. ಕೆಲವೆಡೆ ಕಾಂಗ್ರೆಸ್ ಮಂತ್ರಿಗಳನ್ನೂ ಸೋಲಿಸಿ ತರುಣ ಕೆಲಸಗಾರರು ಗೆದ್ದು ಬಂದಿದ್ದರು. ಕಾಂಗ್ರೆಸಿನ ಜಾಹೀರು ಅಧಿವೇಶನದ ಹೊಣೆಗಾರಿಕೆಗಳನ್ನೆಲ್ಲಾ ನಿರ್ವಹಿಸಿರುವ ಈ ರಾಷ್ಟ್ರೀಯ ಸಮಿತಿಯು ಸಭೆ ಸೇರಿದ 'ಸರ್. ಕವಾಸ್ಜಿ ಜಹಾಂಗೀರ್ ಹೋಲ್' ಎಂಬುದು ಬೊಂಬಾಯಿಯಲ್ಲಿ ಸಮೂಹ ಕೂಟಗಳಿಗೆ ಹೆಸರಾದ ಸ್ಥಳ; ದಿವಂಗತ ಸರ್. ಕವಾಸ್ಜಿಯವರಿಂದ ದಾನವಾಗಿ ಕೊಡಲ್ಪಟ್ಟಿದ್ದ ಈ ಭವನದ ಆಡಳಿತೆ ಬೊಂಬಾಯಿ ಸರಕಾರದ್ದು. 'ರಾಷ್ಟ್ರೀಯ ಮಂದಗಾಮಿಗಳ ಸಂಯುಕ್ತ ಸಭೆ'ಯ ಜನ್ಮ ಸ್ಥಾನವೇ ಈ ಭವನ. ಇದಕ್ಕಿಂತ ಮೊದಲು ಈ ಭವನದಲ್ಲಿ ಕೊನೆಯ ಪ್ರಾಮುಖ್ಯ ರಾಜಕೀಯ ಸಭೆ ನಡೆದಿದ್ದುದು 1928ರಲ್ಲಿ. ಸೈಮನ್ ಕಮಿಶನಿನ ಬಹಿಷ್ಕಾರ ನಿರ್ಧಾರಕ್ಕಾಗಿ ಜಿನ್ನಾ, ಚಿಮನಲಾಲ್, ಜಯಕರ್, ಸರೋಜಿನಿ ಮೊದಲಾದ ಸರ್ವ ಪಕ್ಷೀಯ ಪ್ರಮುಖರನ್ನೊಳಗೊಂಡ ಸಮ್ಮೇಲನವೊಂದು ಆಗ ಇಲ್ಲಿ ನೆರೆದಿತ್ತು. ಅಂದಿನಿಂದ ರಾಜಕೀಯ ಕಾರ್ಯಗಳಿಗದನ್ನು ಉಪಯೋಗಿಸಬಾರದೆಂದು ಬೊಂಬಾಯಿ ಸರಕಾರ ಬಹಿಷ್ಕಾರ ಹಾಕಿದ್ದಿತು. ರಾಜಕೀಯ ಸಭೆಗಳಿಗೆ ಅಂದು ಬಿದ್ದಿದ್ದ ಬಾಗಿಲನ್ನು ಈ ಬಾರಿ ಕಾಂಗ್ರೆಸ್ ಸಭೆಗಾಗಿ ತೆರೆಯಿಸಿದವರು ಬೊಂಬಾಯಿಯ ಕಾಂಗ್ರೆಸ್ ಮಂತ್ರಿಗಳು. ಪ್ರೇಕ್ಷಕರಿಗೆ ಮಾತ್ರವಲ್ಲ, ಪತ್ರಿಕಾ ಪ್ರತಿನಿಧಿಗಳಿಗೂ ಈ ಬಾರಿಯ ಸಭೆಗೆ ಬಹಿಷ್ಕಾರ ಹಾಕಬೇಕೆಂದೇ ಪ್ರಥಮ ನಿರ್ಧಾರವಿತ್ತು. ಆದರೆ ಪಂಡಿತ ನೆಹರುಗಳ ರಿಯಾಯತಿಯಿಂದಾಗಿ ಬಾತ್ಮೀದಾರರ ಪ್ರತಿಬಂಧ ತೊಲಗಿ ಸಭೆಯಲ್ಲಿ ಸುಮಾರು 100 ಮಂದಿ ಸ್ವದೇಶೀ ವಿದೇಶೀ ಪತ್ರಿಕಾ ಪ್ರತಿನಿಧಿಗಳು ತುಂಬಿದ್ದರು. ಪ್ರೇಕ್ಷಕರಾರಿಗೂ ಪ್ರವೇಶವಿರಲಿಲ್ಲ. ಪ್ರಾಮುಖ್ಯ ನಿರ್ಧಾರವೊಂದರ ಪರಿಶೀಲನೆ ನಡೆಯುವಾಗ ಪ್ರೇಕ್ಷಕರೆಬ್ಬಿಸುವ ಉತ್ಸಾಹ ಧ್ವನಿ, ಗೊಂದಲಗಳಿಂದ ಏಕಾಗ್ರತೆಗೆ ಭಂಗ ಬರುವದೆಂಬ ಅನುಭವವಿದ್ದುದರಿಂದಲೇ ಈ ನೂತನ ವ್ಯವಸ್ಥೆ. ಇದರಿಂದ ಸಭೆಯ ರಮ್ಯತೆ ಕಡಿಮೆಯಾದಂತಿದ್ದರೂ, ಶಾಂತ, ಗಾಢ ವಾತಾವರಣದಿಂದ ಆ ರಂಗವು ರಾಷ್ಟ್ರದ ನಿಜವಾದ ಪ್ರಶಾಂತ ಮೆದುಳಿನಂತೆ ಕಾರ್ಯ ನಿರ್ಧರಿಸಲನುಕೂಲವಾಗಿತ್ತು. ಪ್ರತಿನಿಧಿಗಳಿಗೆ ನಾಜೂಕಿನ ಕುರ್ಚಿ ವ್ಯವಸ್ಥೆಗಳಿದ್ದುವು. ಒಳಗೂ ಹೊರಗೂ ರಾಷ್ಟ್ರಧ್ವಜ ರಾಷ್ಟ್ರೀಯ ವಾಕ್ಯ, ದೇಶಭಕ್ತರ ಭಾವಚಿತ್ರ ಇತ್ಯಾದಿಗಳಿಂದ ವಾತಾವರಣದಲ್ಲೆಲ್ಲಾ ರಾಷ್ಟ್ರೀಯ ಸ್ಫೂರ್ತಿಯ ಬುಗ್ಗೆಗಳಿದ್ದಂತಿತ್ತು. ಧ್ವನಿವಾಹಕ ಯಂತ್ರಗಳ ಸುವ್ಯವಸ್ಥೆಯಿದ್ದಿತು. ಪ್ರತಿನಿಧಿಗಳನ್ನು ಸ್ಟೇಶನಿನಲ್ಲಿಯೇ ಸ್ವಾಗತಿಸುವುದರಿಂದಾರಂಭಿಸಿ, ಸಭೆಯಲ್ಲಿ ಶಾಂತ ಶಿಸ್ತನ್ನು ರಕ್ಷಿಸುವ ವರೆಗಿನ ಎಲ್ಲಾ ಕಾರ್ಯಗಳನ್ನೂ ಶ್ಲಾಘನೀಯವಾಗಿ ನಿರ್ವಹಿಸಿದ ಸ್ವಯಂಸೇವಕ ದಳಗಳಿದ್ದುವು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಬ್ರಿಟಿಷ್ ಯೋಜನೆಗೆ ಸಂಬಂಧಿಸಿದ ಮುಖ್ಯ ಠರಾವನ್ನು ವಿರೋಧಿಸಲು ಕಾಂಗ್ರೆಸ್ ಸಮತಾವಾದಿಗಳು, ಫೋರ್ವರ್ಡ್ ಬ್ಲೋಕ್ ಮತ್ತಿತರ ಎಡಪಕ್ಷೀಯರು ಒಟ್ಟಾಗಿ ಪ್ರಬಲ ಸಿದ್ಧತೆ ನಡಿಸಿದ್ದರು; ಪ್ರತಿನಿಧಿಗಳನ್ನು ತಮ್ಮ ಕಡೆಗೊಲಿಸಿಕೊಳ್ಳಲು ಸರ್ವ ವಿಧದ ಸಾಹಸಗಳನ್ನೂ ನಡೆಸಿದ್ದರು. ಪಂಡಿತ ನೆಹರುಗಳು ಎಡ ಪಕ್ಷೀಯ ಪ್ರಮುಖ ಜೈಪ್ರಕಾಶರೇ ಮೊದಲಾದವರೊಡನೆ ಸಂಭಾಷಣೆ ನಡಿಸಿದರೂ ಪರಿಸ್ಥಿತಿ ಬದಲಾಗಿರಲಿಲ್ಲ. ಆದ್ದರಿಂದ ಹತ್ತು ಹಲವು ತಿದ್ದುಪಡಿ ಸೂಚನೆಗಳ ಗೊಂದಲಗಳಿಲ್ಲದಂತೆ ಮಾಡುವದಕ್ಕಾಗಿ, ಕಾರ್ಯಕಾರೀ ಸಮಿತಿಯು 'ಬ್ರಿಟಿಷ್ ಯೋಜನೆ ಸಂಬಂಧದ ತನ್ನ ನಿರ್ಧಾರದ ಅಂಗೀಕಾರ ಅಥವಾ ತಿರಸ್ಕಾರ ಮಾಡಲನುಕೂಲವಾಗುವಂತೆ ಈ ಕೆಳಗಿನ ಏಕ ವಾಕ್ಯದ ಠರಾವನ್ನೇ ಮುಂದಿಡುವ ನಿರ್ಧಾರಕ್ಕೆ ಬಂತು:--'ಕಾರ್ಯಕಾರೀ ಸಮಿತಿಯ ಜೂನ್ ತಾ. 26ರ ಠರಾವನ್ನು ಈ ಮೂಲಕ ಅನುಮೋದಿಸಲಾಗುತ್ತದೆಂದು ನಿರ್ಧರಿಸುತ್ತದೆ'. ಅಂತೆಯೇ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ತಯಾರಿಸಿದ ಮುಂತಾದ ಮತ್ತೊಂದು ಪ್ರಾಮುಖ್ಯ ನಿರ್ಧಾರವೆಂದರೆ ದಕ್ಷಿಣಾಫ್ರಿಕದ ಹಿಂದೀಯರ ಸತ್ಯಾಗ್ರಹದ ಸಮರ್ಥನೆ.

ಅ. ಭಾ. ಕಾಂಗ್ರೆಸ್ ಕಮಿಟಿ ಸಭೆ

ಜುಲಾಯಿ ತಾ 6ನೇ ಅಪರಾಹ್ನ 2-30ಕ್ಕೆ ಸರಿಯಾಗಿ ಅತ್ಯುತ್ಸಾಹೀ ವಾತಾವರಣದಲ್ಲಿ ಎ. ಐ. ಸಿ. ಸಿ. ಯ ಸಭಾರಂಭವಾಯಿತು. ಸುಮಾರು 300 ಚಿಲ್ಲರೆ ಸದಸ್ಯರ ಪೈಕಿ 290 ಮಂದಿ ಹಾಜರಿದ್ದರು. ನೂರು ಮಂದಿ ಪತ್ರಿಕಾ ಪ್ರತಿನಿಧಿಗಳಲ್ಲದೆ ಬೇರಾರೂ ಪ್ರೇಕ್ಷಕರಿರಲಿಲ್ಲ. ಅನುಕ್ರಮವಾಗಿ ಕಾಂಗ್ರೆಸ್ ಪ್ರಮುಖರ ಆಗಮನವಾಗುತ್ತಿದ್ದಂತೆ ಭವನದ ಹೊರಗೆ ಕಾದು ನಿಂತಿದ್ದ ದೊಡ್ಡ ಜನ ಸಂದೋಹ ಪ್ರಚಂಡ ಜಯಕಾರವೆಬ್ಬಿಸುತಿತ್ತು. ಬೇಂಡು ರಾಷ್ಟ್ರ ಗೀತೆಯನ್ನು ಧ್ವನಿಸುತಿತ್ತು. ನಿಯೋಜಿತ ರಾಷ್ಟ್ರಪತಿ ನೆಹರುಗಳಿಗೆ ಸಂದ ಗೌರವವೂ ವಿಶೇಷ ರೀತಿಯದಿತ್ತು. ವಂದೇ ಮಾತರಂ ಹಾಡಿನೊಂದಿಗೆ ಸಭಾರಂಭವಾದೊಡನೆ ನಿವೃತ್ತಿ ಹೊಂದಲಿದ್ದ ರಾಷ್ಟ್ರಪತಿ ಮೌಲಾನರು ಪಂಡಿತ ನೆಹರುಗಳನ್ನು ಅಧ್ಯಕ್ಷ ಪೀಠಕ್ಕೆ ಸೂಚಿಸುತ್ತಾ ಮೊದಲ ಭಾಷಣವಿತ್ತರು. ರಾಮದುರ್ಗ ಕಾಂಗ್ರೆಸಿನಲ್ಲಿ ಅಧ್ಯಕ್ಷತೆ ವಹಿಸಿದಂದಿನಿಂದ ಆರು ವರುಷಗಳ ವರೆಗಿನ ತನ್ನ ಅವಧಿಯ ವಿಶೇಷ ವಿದ್ಯಮಾನಗಳನ್ನು ಪ್ರಸ್ತಾಪಿಸಿ ಮೌಲಾನಾರಂದರು. "ಇಲ್ಲಿ ಸೇರಿರುವ ಹೊಸ ಅ. ಭಾ. ಕಾಂ. ಕಮಿಟಿಯಲ್ಲಿ ಹೊಸ ರಕ್ತ ಮತ್ತು ಹಸೀ ಮೆದುಳು ತುಂಬಿದೆ. ನವ ರುಧಿರವು ಹೊಸ ದೃಷ್ಟಿ ಮತ್ತು ಶಕ್ತಿಯನ್ನು ಕೊಡುವಂತಹದಾದ್ದರಿಂದ ನವ ಸದಸ್ಯರನ್ನು ಸ್ವಾಗತಿಸಲು ನಾನು ಆನಂದಿಸುತ್ತೇನೆ. ನಾನು ಅಧ್ಯಕ್ಷ ಪೀಠಕ್ಕೇರುವಾಗ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೆವು, ಆದರೆ ನಾನಾ ಪೀಠದಿಂದಿಳಿಯುವ ಈ ಹೊತ್ತಿನಲ್ಲಿ ನಾವೇ ಸ್ವಾತಂತ್ರ್ಯದ ದ್ವಾರಕ್ಕೆ ಬಂದಿರುವುದರಿಂದ ಅದಕ್ಕಾಗಿ ಹೋರಾಡುವ ಪ್ರಶ್ನೆ ನಮ್ಮ ಮುಂದಿಲ್ಲ ಎಂಬುದನ್ನು ತಿಳಿದು ಆನಂದಪಡುತ್ತೇನೆ. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ ಬರುತ್ತಿರುವ ಸ್ವಾತಂತ್ರ್ಯಕ್ಕಾಗಿ ದುಡಿಯುವದು ಮಾತ್ರ. ನಮ್ಮ ಗುರಿ ಮುಟ್ಟಲು ನಾವೀ

ಇನಾಂ! ಇಲ್ಲಿ ನೋಡಿ!! ಇನಾಂ!!!

ಗೋಲ್ಡನ್ ಭಂಗಾರದ ಆಭರಣಗಳು



ಈ ಭಂಗಾರದ ಆಭರಣಗಳನ್ನು ನೋಡುವವರು ಅಸಲ್ ಚಿನ್ನದ ನಗಗಳೆಂದು ಹೇಳುವರು. ಸ್ತ್ರೀಯರು ನೋಡಿದರೆ ಬಹಳ ಸಂತೋಷಪಡುವರು. ಈಗಿನ ಕಾಲದಲ್ಲಿ ಶ್ರೀಮಂತರೂ ಬಹಳವಾಗಿ ಉಪಯೋಗಿಸುತ್ತಿರುವರು. ಪ್ರತಿದಿನ ಉಪಯೋಗಿಸಿದರೂ ಅಸಲ್ ಚಿನ್ನದ ನಗಗಳ ಹಾಗೆ ಪ್ರಕಾಶವಾಗಿರುವುದು ಈ ರೇಶ್ಮೆ ಪೆಟ್ಟಿಗೆಯಲ್ಲಿರುವ ೧ ಜತೆ ಬಂಗಾರದ ನ್ಯೂ ಮೋಡಲ್ ಬಳೆಗಳು, ೧ ಜತೆ ಸಿನಿಮಾ ಸ್ಟಾರ್ ಲೋಲಕ್, ೧ ನೆಕ್‌ಲಾಸ್ ಎಂಬ ಚೈನ್, ೧ ಇಂಗ್ಲಿಷ್ ಮೋಡಲ್ ರೇಡಿಯೋ ಕಟ್ ಉಂಗುರ, ಈ ೪ ಆಭರಣಗಳು ಅಡಗಿರುವ ಒಂದು ಸೆಟ್ ವೇಲ್‌ವೆಟ್ ಪೆಟ್ಟಿಗೆ ಸಹಿತ ಕ್ರಯ ರೂ. ೬-೦-೦ ಮಾತ್ರ! ಒಂದು ಯು. ಯಸ್. ಎ. ಮೋಡಲ್ ಕಾಲರ್ ಪಿನ್ ಬಹುಮಾನವಾಗಿ (Free) ಕಳುಹಿಸುತ್ತೇವೆ.

ದಿ ಅನೋಜಾನ್ ಟ್ರೇಡಿಂಗ್ ಕಂಪೆನಿ,
ಸಾಂಬಯ್ಯರ್ ಬೀದಿ, ಜಿ. ಟಿ. ಮದ್ರಾಸ್.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಪಂಡಿತ ನೆಹರುಗಳು ರಾಷ್ಟ್ರಪತಿಯಾದರು.

ಗ ಒಂದೇ ಒಂದು ಹೆಜ್ಜೆ ಮುಂದಿಟ್ಟರಾಯಿತು."

ಆ ಮೇಲೆ ಕಾರ್ಯದರ್ಶಿ ಕೃಪಾಲನಿಯವರಿಂದ ವರದಿವಾಚನವಾದೊಡನೆ ಪಂಡಿತ ಜವಾಹಿರಲಾಲರು ಪ್ರಚಂಡೋತ್ಸಾಹ ಧ್ವನಿಗಳ ನಡುವೆ ಅಧ್ಯಕ್ಷ ಪೀಠಾರೂಢರಾದರು.

ಸರ್ದಾರ್ ಪಟೇಲರು ನಿವೃತ್ತಾಧ್ಯಕ್ಷರನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತಾ "ಕ್ವಿಟ್ ಇಂಡಿಯಾ ಠರಾವಿನ ನಂತರ ನಾವು ಮೂರು ವರುಷ ಅಹಮ್ಮದ್ ಕೋಟೆಯಲ್ಲಿ ಒಟ್ಟಿಗಿದ್ದೆವು. ಬಿಡುಗಡೆಯಾದ ನಂತರ ಸಿಮ್ಲಾದಲ್ಲಿ ಕೆಲವು ವಾರವೂ ಈ ಸಲ ಮೂರು ತಿಂಗಳೂ ಒಟ್ಟಾಗಿಯೇ ಇದ್ದೆವು. ನಾನೀ ದೀರ್ಘಾವಧಿಯಲ್ಲಿ ರಾತ್ರಿ ಹಗಲು ದುಡಿಯುತ್ತಿದ್ದ ಮೌಲಾನರನ್ನು ನಿರೀಕ್ಷಿಸಿದ್ದೇನೆ. ಅತ್ಯಂತ ಕಷ್ಟ ಮತ್ತು ಪ್ರಯಾಸದ ಈ ಆರು ವರುಷಗಳಲ್ಲಿ ತನ್ನ ಮಹಾ ಹುದ್ದೆಯ ಗೌರವ ಮತ್ತು ಘನತೆಗೆ ಕೀಳೆನಿಸುವಂತೆ ಒಂದೇಒಂದು ಬಾರಿಯಾದರೂ ಮೌಲಾನರು ವರ್ತಿಸಿದುದನ್ನು ನಾನರಿಯೆ. ಕಾಂಗ್ರೆಸ್ ಗೌರವ ಕುಗ್ಗಲು ಅವರೆಂದೂ ಬಿಟ್ಟವರಲ್ಲ. ಬೇರಾರಿಂದಲೂ ಇಂತಹ ಧೈರ್ಯ ಮತ್ತು ದೃಢತೆ ಪ್ರದರ್ಶಿಸಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಸಮರದಲ್ಲಿ ನಮ್ಮನ್ನಿಂದಿನ ಸ್ಥಾನಕ್ಕೆ ನಡೆಯಿಸಿದ ಕೀರ್ತಿಯು ಸಂಪೂರ್ಣವಾಗಿ ಮೌಲಾನರಿಗೆ ಸಲ್ಲಬೇಕು" ಎಂದರು.

"ಘನತೆ, ದೃಢತೆ ಮತ್ತು ಶಕ್ತಿಪೂರ್ಣವಾಗಿ ಕಾಂಗ್ರೆಸಿನ ಸಾರಥಿತ್ವ ನಡೆಸಿದ ಮೌಲಾನರನ್ನು" ಪಂಡಿತ ಗೋವಿಂದ ವಲ್ಲಭ ಪಂತರು ಕೊಂಡಾಡಿ ಅವರಿಗೆ ದೀರ್ಘಾಯುಷ್ಯ ಕೋರಿದರು

ರಾಷ್ಟ್ರಪತಿಯ ಭಾಷಣ

ಪಂಡಿತ ನೆಹರುಗಳು ರಾಮಘರ್ ಕಾಂಗ್ರೆಸ್ [illegible] ಎದ್ದಿದ್ದ ಬಿರುಗಾಳಿಯ ನೆನಪು ಮಾಡಿಕೊಟ್ಟು ಮೌಲಾನಾ ಅವರಾದರ 6 ವರುಷಗಳ ಅಧ್ಯಕ್ಷತೆಯ ಅವಧಿಯೂ ಬಿರುಗಾಳಿಯೇ ಆಗಿತ್ತೆಂದರು "ಮೌಲಾನರಷ್ಟೇ ಶಕ್ತಿ, ಧೈರ್ಯಗಳಿಂದ ಕಾರ್ಯ ನಿರ್ವಹಿಸಬಲ್ಲವರು-ಅವರ ಹೆಜ್ಜೆಯಲ್ಲಡಿಯುಬಲ್ಲವರು - ನಮ್ಮ ಪೈಕಿ ಯಾರಿದ್ದಾರೆ? ನನ್ನ ಮಟ್ಟಿಗೆ, ಈ ಹೊಣೆ ಹೊರಬೇಕೋ ಬೇಡವೋ ಎಂದು ನಿರ್ಧರಿಸಲು ದೀರ್ಘಾವಧಿಯ ವರೆಗೂ ನನ್ನಿಂದಾಗಿರಲಿಲ್ಲ. ನಿನ್ನೆಯಲ್ಲ, ಮೊನ್ನೆ ಮಾತ್ರವೇ ಮಹಾತ್ಮಾ ಗಾಂಧಿ ಮತ್ತು ಕಾಂಗ್ರೆಸ್ ಕಮಿಟಿಯ ನನ್ನ ಅನುಯಾಯಿಗಳ ಸಲಹೆಗನುಸಾರವಾಗಿ ಈ ಜವಾಬ್ದಾರಿಗೆ ಹೆಗಲೊಡ್ಡಲು ನಿಶ್ಚಯಿಸಿದೆ" ಎಂದು ವಿವರಿಸಿ "ನಾವೀಗ ಸ್ವಾತಂತ್ರ್ಯದ ಬಾಗಿಲ ಮೆಟ್ಟಲಲ್ಲಿದ್ದೇವೆ. ಈಗ ಬೇಕಾದುದು ಒಮ್ಮೆ ಬಲವಾಗಿ ದೂಡುವುದೊಂದೇ" ಎಂದರು. "ಒಂದು ಠರಾವನ್ನು ಕಾಯಂ ಪಡಿಸುವ ಯಾ ನಿರಾಕರಿಸುವ ಪ್ರಶ್ನೆ ಇದಲ್ಲ; ನಿಯೋಜಿತ ಘಟನಾ ಸಮಿತಿಯ ಗುಣದೋಷಗಳ ಪ್ರಶ್ನೆಯೂ ಅಲ್ಲ; ಭಾರತ ಸ್ವಾತಂತ್ರ್ಯವೇ ಮುಖ್ಯ ಪ್ರಶ್ನೆ" ಎಂದು ಒತ್ತಿ ಹೇಳಿ ಬ್ರಿಟಿಷ್ ಆಳ್ವಿಕೆ ಮುಗಿಯುತ್ತಾ ಬಂದಿರುವ ಕಾಲದಲ್ಲಿ ಯಾವ ದೌರ್ಬಲ್ಯವನ್ನೂ ಪ್ರದರ್ಶಿಸದೆ ನಾವೆಲ್ಲಾ ಒಗ್ಗಟ್ಟಾಗುವದು ಮುಖ್ಯವೆಂದರು.

ಶ್ರೀ. ಭುಲಾಭಾಯಿ ದೇಸಾಯಿಗಳ ಮರಣಕ್ಕಾಗಿ ದುಃಖ ಸೂಚಕ ಠರಾವನ್ನು ಆಚಾರ್ಯ ಕೃಪಲಾನಿಯವರು ಮುಂದಿಟ್ಟು ಮಂಜೂರಾದ ಮೇಲೆ ಮೌಲಾನಾ ಆಜಾದರು ಮೂಲ ಠರಾವನ್ನು ಮುಂತಂದರು.

ಕಾಂಗ್ರೆಸ್ ನಿರ್ಧಾರ

ಜೂನ್ ತಾ. 26ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿದ್ದ-ವೈಸರಾಯರ ನಡುಗಾಲ ಸರಕಾರ ರಚನಾ ವ್ಯವಸ್ಥೆಯನ್ನು ತಿರಸ್ಕರಿಸುವ ಮತ್ತು ಘಟನಾ ಸಮಿತಿಯಲ್ಲಿ ಭಾಗವಹಿಸಲೊಪ್ಪುವ-ಠರಾವಿಗೆ ಅನುಮೋದನೆಯನ್ನಪೇಕ್ಷಿಸುವ ಕೇವಲ 13 ಶಬ್ದಗಳ ಏಕ ವಾಕ್ಯದ ಸೂಚನೆಯನ್ನು ಮೌಲಾನಾ ಆಜಾದರು ಮುಂತಂದು ಬೋಧಪ್ರದ ಭಾಷಣವಿತ್ತರು. ಮೌಲಾನರ ತುಲನಾತ್ಮಕ ಜಾಣ್ಮೆ, ವಾದ ಪ್ರೌಢಿಮೆ, ವಿಷಯಾಧಿಕಾರ-ಇವೆಲ್ಲಾ ಕಾಂಗ್ರೆಸ್ ನಿರ್ಣಯದ ಸಮಂಜಸತೆಯನ್ನು ಸದಸ್ಯರಿಗೆ ಮನಗಾಣಿಸಿದುವು. "ಭಾರತದ ಬಯಕೆಯ ಸ್ವಾತಂತ್ರ್ಯವು ನಿಶ್ಚಿತವಾಗಿ ಒಪ್ಪಲ್ಪಟ್ಟಿದೆ. ನಾವು ದೀರ್ಘಾವಧಿಯಿಂದ ಹೋರಾಡಿರುವ ಆ ಗುರಿ ಪ್ರಶ್ನಾತೀತವಾಗಿದೆ. ದೇಶವಿಭಜನೆಗೆ ಪ್ರತಿವಿರುದ್ಧವಾದ, ಘಟಕಗಳನ್ನೊಳಗೊಂಡು ಸಂಯುಕ್ತ ಕೇಂದ್ರಾಧಿಕಾರಬೇಕೆಂಬ ನಮ್ಮ ಬೇಡಿಕೆಯೂ ಅದನ್ನು ರೂಪಿಸಲು ನಿರ್ಮಾಣಗೊಳ್ಳತಕ್ಕದ್ದೆಂದು ನಾವು ದೀರ್ಘಾವಧಿಯಿಂದ ಕೇಳುತ್ತಿದ್ದ ಘಟನಾ ಸಮಿತಿಯೂ ನಮಗೀಗ ದೊರೆತಿವೆ. ಕಾಂಗ್ರೆಸ್ ಬೇಡಿಕೆಯ ಸಾರಾಂಶವೆಲ್ಲಾ ದೊರೆತಿವೆ. ಅದನ್ನೀಗ ನಿರಾಕರಿಸಿದರೆ ನಮ್ಮ ಬೇಡಿಕೆಗೇನೇ ಅರ್ಥವಿಲ್ಲವೆಂದಾಗುವದು" ಎಂದು ಮಾಜೀ ರಾಷ್ಟ್ರಪತಿ ತನ್ನ 50 ಮಿನಿಟಿನ ಭಾಷಣದಲ್ಲಿ ಯುಕ್ತಿ ಯುಕ್ತವಾಗಿ ವಾದಿಸಿದರು. ಸರ್ದಾರ್ ಪಟೇಲರದನ್ನು ಅನುಮೋದಿಸಿ ಸಿಖ್ಖಂಗಾಗಿರುವ ಅನ್ಯಾಯವನ್ನು ವಿವರಿಸಿ, ಪ್ರಾಂತಿಕ ಪಂಗಡಗಳಲ್ಲಿರುವ ಪ್ರಮಾದ ಹಾಗೂ ಅವನ್ನು ಕಾಂಗ್ರೆಸು ತಾನು ಕಟ್ಟಿರುವ ಅರ್ಥದಿಂದಲೇ ತಿದ್ದಲಿದೆಯೆಂಬುದನ್ನೂ ವಿವರಿಸಿ "ಮುಸ್ಲಿಂ ಲೀಗಿಗೆ ಈ ಯೋಜನೆಯಲ್ಲಿ ಪಾಕಿಸ್ತಾನ್ ಕ್ರಿಮಿಗಳಿರುವಂತೆ ಕಾಣುತ್ತಿದೆ. ನಾವದರಲ್ಲಿ ಸಂಯುಕ್ತ ಭಾರತವನ್ನು ಕಾಣುತ್ತಿದ್ದೇವೆ. ಯಾರು ಸರಿ ಎಂಬುದನ್ನು ಘಟನಾ ಸಮಿತಿಯೇ ನಿರ್ಧರಿಸತಕ್ಕದ್ದು" ಎಂದರು.

ಎಡಪಕ್ಷೀಯರ ಪ್ರಬಲ ವಿರೋಧ

ಅಧ್ಯಕ್ಷ ನೆಹರುಗಳ ಠರಾವಿನ ಚರ್ಚೆಗೆ ಪೀಠಿಕೆಯಾಗಿ ನಾಲ್ಕು ಮಾತುಗಳನ್ನಾಡಿ ತಿದ್ದುಪಡಿ ಸೂಚನೆಗಳೆಲ್ಲಾ ನಿಯಮಬಾಹಿರವೆಂದು ತೆಗೆದು ಹಾಕಿದರು. ಮೂಲ ಠರಾವಿನ ಅಂಗೀಕಾರ ಯಾ ಧಿಕ್ಕಾರ ಪ್ರೊಂಗೇ ಹಾದಿಯೆಂದು ಅಧ್ಯಕ್ಷರು ಆಜ್ಞಾಪಿಸಿ ವಿರೋಧೀ ಭಾಷಣ ಕರ್ತರನ್ನು ಆಮಂತ್ರಿಸಿದರು. ಕಾಂಗ್ರೆಸ್ ಸಮತಾವಾದಿ ಪಕ್ಷದ ನಾಯಕ-ಅಗೋಸ್ತು ಗಲಭೆಯ ವೀರ-ಶ್ರೀ ಜೈ ಪ್ರಕಾಶ್ ನಾರಾಯಣರ ಮುಂದಾಳುತ್ವದಲ್ಲಿ ಎಡಪಕ್ಷೀಯ ಉಪನ್ಯಾಸಕರು ಕೆಲವರ ಕಠಿಣ ಟೀಕೆಗಳಾದುವು ಪ್ರಥಮತಃ ಮಿ. ಅನ್ಸಾರ್ ಹರ್ವಾನಿಯವರು ಕಾರ್ಯಕಾರೀ ಕಮಿಟಿಯ ನಿರ್ಣಯವನ್ನು ತೀವ್ರವಾಣಿಯಿಂದ ಖಂಡಿಸಿ 'ಪ್ರತ್ಯಕ್ಷ ಮತದಾನದಿಂದ ಘಟನಾ ಸಮಿತಿಯ ರಚನೆಯಾಗುವದಿಲ್ಲ; ಈ ಘಟ ಸಮಿತಿಯು ಕಾಂಗ್ರೆಸ್ 25ವರುಷಗಳಿಂದ ಹೋರಾಡುತ್ತಿರುವ ಸ್ವಾತಂತ್ರ್ಯ ತರುವಂತಿಲ್ಲ; ಇದನ್ನಂಗೀಕರಿಸಿದರೆ ನಾವು ಬ್ರಿಟಿಷರ ಕೈಗೊಂಬೆಗಳಾದಂತೆಯೇ ಸರಿ" ಎಂದರು.

ಶ್ರೀ ಜೈ ಪ್ರಕಾಶ್ ನಾರಾಯಣರು ಸೌಮ್ಯ ಸ್ವಭಾವ, ಶಾಂತ ಸ್ವರದಿಂದ ಕಠಿಣ ವಿಷಯವನ್ನು ಮುಂದೊಡ್ಡಿ ಒಮ್ಮೆ ಸಭೆಯ ಮನಸ್ಸನ್ನು ತನ್ನೆಡೆಗೆ ಸೆಳೆದರು. "ಇಷ್ಟು ವರುಷ ಕಾಂಗ್ರೆಸ್ ತನ್ನ ಗುರಿಯಾಗಿಟ್ಟುಕೊಂಡು ಹೋರಾಡಿದ ಸ್ವರಾಜ್ಯವನ್ನು ಈ ಬ್ರಿಟಿಷ್‌ದತ್ತ ಘಟನಾ ಸಮಿತಿ ತರಲಾರದು. ಬ್ರಿಟಿಷ್ ಸಾಮ್ರಾಜ್ಯದ ಪ್ರಸಾದವಾದ ಈ ಪ್ರತಿಘಟನೆಯ ಅಂಗೀಕಾರವಿಂದು ನಮ್ಮ ಪ್ರಶ್ನೆಯಲ್ಲ-ಬ್ರಿಟಿಷರನ್ನು ಹೊರಗಟ್ಟುವದು ಹೇಗೆಂಬುದೊಂದೇ ನಮ್ಮ ಕಣ್ಣು ಮುಂದಿರತಕ್ಕದ್ದು. ಬ್ರಿ. ಮಂತ್ರಿಸಮಿತಿಯು ಸ್ವಾತಂತ್ರ್ಯವೀಯಲು ಬಂದಿರಲಿಲ್ಲ; ಅದು ಬಂದಿದ್ದುದು ಕಾಂಗ್ರೆಸ್ ಮತ್ತು ಲೀಗುಗಳ ನಡುವೆ ಮಧ್ಯಸ್ಥಿಕೆ ವಹಿಸುವದಕ್ಕಾಗಿ. ತಾವೇ ನಿರ್ಮಿಸಿರುವ ಜಾತೀಯ ಜಗಳವನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವದಕ್ಕಾಗಿ. ಮುಸ್ಲಿಂ ಲೀಗಿಗೆ ಹೆಚ್ಚಿನ ಮುಸಲ್ಮಾನರ ಬೆಂಬಲವಿದ್ದಿರಬಹುದು. ಆದರೆ ಅದಿನ್ನೂ ಬ್ರಿಟಿಷ್ ಪಾಳಯಗಾರ ಮತ್ತು ಮಿತ್ರನಾಗಿಯೇ ಇದೆ. ಕಾಂಗ್ರೆಸು ತನ್ನ ತತ್ವಗಳನ್ನು ತಾನೇ ನುಂಗಿಕೊಂಡು, ಯಾರ ನಾಯಕನ 1942ರಲ್ಲಿ 'ಕ್ವಿಟ್ ಇಂಡಿಯಾ' ಚಳವಳವು ಹಿಂದೂ ಅಧಿಕಾರಕ್ಕಾಗಿ ಮುಸಲ್ಮಾನರ ವಿರುದ್ಧವಾಗಿ ಹೂಡಲ್ಪಟ್ಟಿದೆ ಹೊರತು ಬ್ರಿಟಿಷರಿಗಿರಲ್ಲ ಎಂದು ನಿರ್ಲಜ್ಜೆಯಿಂದಾಡಿರುವನೋ ಆ ಲೀಗಿನೊಡನೆ ಸಂಧಾನಕ್ಕೆ ಹೋಗಬೇಕೆಂದು ಬ್ರಿಟಿಷರು ಕಾಂಗ್ರೆಸಿಗೆ ಹೇಳುತ್ತಿದ್ದಾರೆ. ನಾವು ನೇರಾಗಿ ಮುಸಲ್ಮಾನ್ ಜನತೆಯನ್ನು ಸಂಧಿಸಿ ನಮ್ಮ ಕಡೆಗೆಳೆದುಕೊಳ್ಳುವ ಬದಲಿಗೆ, ನಮ್ಮ ವೈರಿಗಳ ಮಿತ್ರರಾದ ಅವರ ನಾಯಕರೊಡನೆ ಸಂಧಾನಕ್ಕೆ ತೊಡಗಿದ್ದೇವೆ". ಎಂದು ಖಂಡತುಂಡ ಮಾತುಗಳನ್ನಾಡಿ ನಾವು ಸ್ವಶಕ್ತಿಯಿಂದ ಸಂಪಾದಿಸಿಕೊಂಡ ರಾಜ್ಯಾಂಗ ರಚನಾ ಸಭೆಯೊಂದಲ್ಲದೆ ಇಂದಿನ ಬ್ರಿಟಿಷ್ ಸೂತ್ರದ ಸಭೆಗಳು ಎಂದೂ ಸ್ವಾತಂತ್ರ್ಯ ತರಲಾರವೆಂದೂ, ಅದು ಜಯಶೀಲಗೊಳ್ಳಲು ಕುತಂತ್ರ ಬ್ರಿಟಿಷರಿಂದೂ ಬಿಡುವಂತಿಲ್ಲವೆಂದೂ, ಬ್ರಿಟಿಷ್ ಸೇನೆಗಳು ಕೂಡಲೇ ಇಲ್ಲಿಂದ ಹಿಂದಿರುಗತಕ್ಕದ್ದೆಂದೂ ಜೈ ಪ್ರಕಾಶರು ವಾದಿಸಿದರು.

ಸ್ವಾಮಿ ಸಹಜಾನಂದ ಸರಸ್ವತಿಯವರು ಜೈ ಪ್ರಕಾಶರ ವಾದವನ್ನು ಸಮರ್ಥಿಸಿ 'ಮುಂಬರುವ ಘಟನಾ ಸಮಿತಿ ನಿರರ್ಥಕವಾಗಲಿದೆಯೆಂದರು. ಶ್ರೀ. ಆರ್. ಕೆ. ಸಿಧ್ವರು ಕಾಂಗ್ರೆಸ್ ನಿರ್ಧಾರವನ್ನು ಸಮರ್ಥಿಸಿದರು. ಮುನ್ಶಿ ಅಹಮ್ಮದ್‌ದಿನ್ ಇ.

(೬ನೇ ಪುಟ ನೋಡಿರಿ)

S. N. High School, Perla, S. K.

Wanted immediately a Mathematics & Science Graduate to teach in Kannada. Apply to the Correspondent with terms.

The Canara Industrial & Banking Syndicate, Ltd., Car Street, Udipi.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್,
ರಥಬೀದಿ, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ ಸದರಿಯವರಿಗೆ ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸನ್ನು ಕೊಟ್ಟಾಗ್ಯೂ ಸದ್ರಿಯವರು ಮೃತಪಟ್ಟಿರುವರೆಂದು ವಾಪಾಸು ಬಂದಿರುವುದರಿಂದ ಕೂಡಾ ಪಾವತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸ್ಲು, ಬಡ್ಡಿ ಐವಜುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ತಾ. 25 7-46ನೆ ಗುರುವಾರದೊಳಗೆ ಬೇಂಕಿಗೆ ಸಂಬಂಧಪಟ್ಟವರು ಪಾವತಿಮಾಡಿ ಈಡಿಟ್ಟ ಆಭರಣವನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ ಸದರೀ ಆಭರಣಗಳನ್ನು ಇದೇ ತಾ. 27-7-46ನೆ ಶನಿವಾರ ದಿನ ಅಪರಾಹ್ನ 3 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಅಗತ್ಯಬಿದ್ದಲ್ಲಿ ಏಲಮಿನ ತಾರೀಕನ್ನು ಮುಂದುವರಿಸುವ ಹಕ್ಕು ಬೇಂಕಿಗೆ ಇದೆ ತಿಳಿದಿರುವುದು.

ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
185/43	ಮುಂಜಯ್ಯ ಸೆಟ್ಟಿ, ಕೋಟ್ಯಾರ್ ಅಂತಯ್ಯ ಸೆಟ್ರ ಮಗ, ಪೆರ್ಡೂರು, ದ. ಕ.	ಅಸ್ಲು ರೂಪಾಯಿ 10/- ಮತ್ತು ಅದರ ಮೇಲಣ ತಾ. 29-6-45ರಿಂದ ಸೇಕಡಾ 7ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ ಮತ್ತು ಖರ್ಚು.

ಬೇಂಕಿನ ಆಫೀಸು,
ರಥಬೀದಿ, ಉಡುಪಿ.
ತಾ. 8-7 46.

K. Ranganna Bhat,
Agent.

The Canara Banking Corporation Limited.

(Incorporated in British India with limited Liability)

Estd 1906

Head Office **UDIPI**, South Kanara

CAPITAL

Authorised	Rs	25,00,000
Issued & Subscribed	,,	16,00,000
Paid up ..	,,	15,60,120
Reserves ..	,,	4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946**

All kinds of banking business transacted



ಇವರೇ ಜು. 6ರಿಂದ ರಾಷ್ಟ್ರಪತಿ.

ನವಯುಗ

ಉಡುಪಿ, ಗುರುವಾರ, ೧೧-೭ '೪೬

ಆಹಾರ ಸಮಿತಿಗಳು

ಆಹಾರ ಮತ್ತು ಜನತೆಯ ನಿತ್ಯ ಜೀವನಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳಲ್ಲಿ ಜನಪ್ರಾತಿನಿಧ್ಯವಿರಬೇಕೆಂಬ ಸದುದ್ದೇಶದಿಂದ ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಸರಕಾರವು ಜ್ಯಾರಿಗೆ ತಂದಿರುವ ಹೊಸ ಯೋಜನೆಯ ವಿವರವನ್ನು ನಾವೀ ಮೊದಲು ಕೊಟ್ಟಿದ್ದೆವು. ಈಗ ಆ ಯೋಜನೆಯನ್ವಯ ಗ್ರಾಮ ಸಮಿತಿಗಳ ರಚನೆಯಾಗಿ ತಾಲೂಕು ಕಮಿಟಿಗಳ ಚುನಾವಣೆಗಳೂ ಮುಗಿಯುತ್ತಾ ಬಂದಂತಿದೆ. ಅನಗತ್ಯ ಮೇಲಾಟಗಳು ಮತ್ತು ಸ್ವಪರ ವಂಚನೆಗಳು ಈ ಚುನಾವಣೆಗಳಲ್ಲೂ ಆಗಿವೆ ಎಂಬ ಕುರಿತು ನಮಗೆ ಕೆಲವು ದೂರುಗಳು ಬಂದಿವೆ. ಈದ್ಯ ಸ್ಥಿತಿಯಲ್ಲಿ-ನಮ್ಮಲ್ಲಿಯ ಜೀವನ ಮತ್ತು ತಿಳುವಳಿಕೆಯ ಮಟ್ಟದ ಮೇಲಿಂದ—ಇಂತಹ ತಪ್ಪುಗಳಾಗುವದು ಸ್ವಾಭಾವಿಕ. ಆದರೆ ಸರಕಾರದ ಉದ್ದೇಶವನ್ನೂ, ಈ ಸಮಿತಿಗಳ ಮೇಲೆ ಬೀಳುವ ಜವಾಬ್ದಾರಿಯನ್ನೂ ಗಮನಿಸಿದರೆ, ಇಲ್ಲಿಯೂ ಸಂಕುಚಿತ ಸ್ವಾರ್ಥಸಾಟವಾಡುವವರು ನಿಜಕ್ಕೂ ಅಕ್ಷಮ್ಯ ಅಪರಾಧಿಗಳೆನ್ನಬೇಕು.

ಈ ಮೊದಲು ಧಾನ್ಯ ಸಂಗ್ರಹ ಮತ್ತು ವಿತರಣೆಯಲ್ಲಿ ಸಾಮಾನ್ಯ ಜನರಿಗೆ, ಅದರಲ್ಲೂ ರೈತರಿಗೆ ಆಗಿರುವ ಅನ್ಯಾಯಗಳು ಅಗಣಿತ. ಅವುಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳಲ್ಲಿ ದೂರಿಟ್ಟು, ನ್ಯಾಯ ಸಂಪಾದಿಸಿಕೊಳ್ಳುವದಂದರೆ ಬಡ ಗ್ರಾಮಸ್ಥರ ಪಾಲಿಗೆ ಪುನರ್ಜನ್ಮ ಹೊಂದುವಷ್ಟು ಪ್ರಯಾಸದ ಕಾರ್ಯವಾಗಿತ್ತು. ಹೊಡ್ಡವರಿಶ್ರಯ ಮತ್ತು ಲಂಚದ ಹಣದ ಅನುಕೂಲತೆಯಿಲ್ಲದವರಿಗೆ ಅದು ಎಟುಕುತ್ತಿರಲಿಲ್ಲ. ಇಂತಹ ಕಷ್ಟಗಳ ಪರಿಹಾರಕ್ಕಾಗಿಯೂ, ಸ್ಥಾನಿಕ ಜವಾಬ್ದಾರಿಯರಿಯುವಂತೆ ಮಾಡುವದಕ್ಕಾಗಿಯೂ ಜನತೆಯ ಕೈಗೇನೇ ಆ ಅಧಿಕಾರವೀಯುವ ವ್ಯವಸ್ಥೆ ಬಂದರೆ, ಅದರೊಳಗಡೆಯೂ ಕಲ್ಮಷ ತುಂಬಿಸುವವರು ನಿಜಕ್ಕೂ ಅಕ್ಷಮ್ಯ ಸಮಾಜದ್ರೋಹಿಗಳು. ಬಡತನ ಪರಾವಲಂಬನ ಮತ್ತು ಸಾಮೂಹಿಕ ಜೀವನಾಭ್ಯಾಸದ ಅಭಾವಗಳ ದೆಸೆಯಿಂದ ನಮ್ಮ ಜನತೆಯ ಬುದ್ಧಿ ತೀರಾ ಕೆಳಮಟ್ಟದಲ್ಲಿದೆ. ಆದ್ದರಿಂದ ಪಕ್ಷ ಸಂಗಡಾಭಿಮಾನ ಮತ್ತು ವ್ಯಕ್ತಿ ಪ್ರತಿಷ್ಠೆಗಳೇ ಪ್ರಾಮುಖ್ಯತೆ ಪಡೆಯುವದು ಸ್ವಾಭಾವಿಕವೆನ್ನೋಣವೆ? ಹಾಗಾದರೆ ಅದಕ್ಕೆ ತಕ್ಕ ಶಿಕ್ಷೆಯಾಗಿ ಅವರು ಸೂರೆ ಸುಲಿಗೆಗಳಿಗೊಳಗಾಗಬೇಕಾದುದೂ ಸಹಜವೇ! ಈ ದೃಷ್ಟಿಯಿಂದ ಕಾಂಗ್ರೆಸ್ ಮಂತ್ರಿಗಳು ತಂದಿರುವ ಈ ನವ ವ್ಯವಸ್ಥೆಯು ಅಪ್ರಯೋಜನವಾದಂತೆಯೇ ಸರಿ! ಆದರೆ ತಮಗಾಗುವ ಅನ್ಯಾಯಗಳನ್ನು ಹೊರೆಯಿಡಲು ಜನರಿಗಿಲ್ಲ ಅವಕಾಶ, ಅನ್ಯಾಯ ನಿವಾರಣೆಯ ಅಂಜಿಕೆಯೂ ಇಂದು ಮುಂದೆ ಹಿಂದಾಗ ಅದರ ಸದುಪಯೋಗ ಮಾಡಿಕೊಳ್ಳಲು ಕಲಿಯುವದು ಬೇಡವೆ? ಈ ಸಂಬಂಧವಾಗಿ ನಮ್ಮ ವಿಜ್ಞಾಪನೆಯಿಷ್ಟು. ಈ ಸಮಿತಿಗಳ ರಚನೆಯು ಜನತಾ ಸೌಕರ್ಯಕ್ಕಾಗಿ ಬಂದಿದೆ ಹೊರತು ಯಾವನೊಬ್ಬನಿಗೂ ಗೌರವ ತುಂಬಿಸಿಕೊಡಲು ಬಂದಿಲ್ಲ; ಯಾವುದೊಂದು ಪಕ್ಷಕ್ಕೂ ಪ್ರತಿಷ್ಠೆಗಳಿಸಿ ಕೊಡಲೂ ಇದಲ್ಲ. ಈ ಮೊದಲು ಸರಕಾರಿ ನೌಕರರು ಮಾಡುತ್ತಿದ್ದುದನ್ನೇ ಅನಧಿಕಾರೀ ಸದಸ್ಯರಿಂದ ಮಾಡಿಸುವದಕ್ಕಾಗಿ ಈ ಯೋಜನೆ ಹೂಡಿದುದಿಲ್ಲವೆಂಬುದನ್ನು ಎಲ್ಲರೂ ಖಂಡಿತ ತಿಳಿದಿರಬೇಕು. ಸಮಿತಿಗಳ ರಚನೆಗಳಲ್ಲಿ ತಹಶೀಲ್ದಾರರುಗಳಿಂದಾಗಿರುವ ಅವಸರ, ಪಕ್ಷಪಾತತೆಗಳ ಕುರಿತೂ ಹಲವು ಕಡೆಗಳಿಂದ ದೂರು ದೂಷಣೆಗಳು ಕೇಳಿ ಬರುತ್ತಿವೆ. ಅಭ್ಯಾಸಬಲವು ಅಜೇಯವೆಂಬುದು ಎಲ್ಲರಿಗೂ ಗೊತ್ತು. ಪರಕೀಯಾಳ್ವಿಕೆಯಿಂದ ಒದಗಿರುವ ಯಾಂತ್ರಿಕ ಮನೋವೃತ್ತಿ ಮತ್ತು ಜನರ ಮೇಲಿನ ತಾತ್ಸಾರಬುದ್ಧಿಯನ್ನು ಕೆಲ ಅಧಿಕಾರಿಗಳು ಹಳೇ ಪೋಷಾಕನ್ನು ಕಳಚಿಕೊಂಡಂತೆ ವಿಸರ್ಜಿಸಿಕೊಳ್ಳದಿದ್ದರೆ ಜನತೆಯ ಪಾಲಿನ ನ್ಯಾಯದಾನವು 'ದೇವರು ಕೊಟ್ಟರೂ ಪೂಜಾರಿ ಬಿಡ'ನೆಂಬಂತಾಗುವದೇ ಸರಿ. ಕೆಳ ನೌಕರರಲ್ಲಿರುವ ಈ ಯಾಂತ್ರಿಕ ಮನೋವೃತ್ತಿಯು ಜನಸೇವಾಸಕ್ತಿಯಾಗಿ ಮಾರ್ಪಡದಿದ್ದಲ್ಲಿ ಕಾಂಗ್ರೆಸ್ ಮಂತ್ರಿಗಳು ತರುವ ಸುಧಾರಣೆಗಳೆಲ್ಲಾ 'ತಲೆಯಲ್ಲಿದ್ದರೂ ಕೈ ಮುಂಟೆ ಬರಲೊಲ್ಲದು'-ಎಂಬಂತಾಗಲಿವೆ. ಇಂತಹ ಸಂದರ್ಭಗಳಲ್ಲಿ ತನ್ನ ನೌಕರರನ್ನು ತಿದ್ದುವದೇ ಸರಕಾರದ ಪ್ರಥಮ ಕರ್ತವ್ಯವಾಗುವದೆಂಬುದನ್ನು ಮರೆಯಬಾರದು. ಜನರು ಹಾಗೂ ಸಮಿತಿಗಳ ಸದಸ್ಯರು ತಮ್ಮ ಹೊಣೆಗಾರಿಕೆಯನ್ನರಿತಿರಬೇಕು, ಅಧಿಕಾರಿಗಳು ತಮ್ಮ ಮನೋವೃತ್ತಿಯನ್ನೇ ತಿದ್ದಿಕೊಳ್ಳಬೇಕು, ಎಂದಿಷ್ಟೇ ಈ ಸಂಬಂಧವಾಗಿ ನಮ್ಮ ವಿಜ್ಞಾಪನೆ. ಸಮಿತಿ ಚುನಾವಣೆಗಳ ಸಂಬಂಧವಾಗಿ ಅನ್ಯಾಯಗಳಾಗಿದ್ದರೆ ಸಂಬಂಧಪಟ್ಟ ಮೇಲಧಿಕಾರಿಗಳಿಗೂ, ಅಗತ್ಯಬಿದ್ದರೆ ನೇರ ಗ ಪ್ರಾಂತಿಕ ಸಂಕಾರಕ್ಕೂ ಅಪೀಲು ಮಾಡಿಕೊಳ್ಳುವ ಹಕ್ಕು ಜನತೆಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತರುತ್ತೇವೆ.

... ಪಟೇಲ
ವ ... ಸಾಹೇಬ್ ಸ್ಪರ್ಧಿಸ... ಅವನ್ನು ... ಗಿ ವಿರೋಧಿಸಿದರು ಸ ... ದ ... ದ ಪ... ಯಿತು.

ಮೌಲಾನಾ ಆಜಾದರ ... ಬೋಧನೆ

ಎರಡನೇ ದಿನ

ತ ... ನೇ ಆಗೋಸ್ತ 2ಕ್ಕೆ ಆ ಬಾ. ಕಾಂ ಸಮಿತಿ ಸಭೆಯು ಪುನಃ ಸೇರಿದಾಗ ಪ್ರಧಾನ ಶ್ರೀ ಸುರೇಂದ್ರ ಮಿತ್ರರು ಸ್ವಾತಂತ್ರ್ಯ ಭಾಷಣವಿತ್ತು ಕಾರ್ಯಕಾರೀ ಸಮಿತಿ ನಿರ್ಧಾರವನ್ನು ವಿರೋಧಿಸಿದರು. ಮೂರು ದಿನದ ಸಭೆಯಲ್ಲೂ ಹಾಜರಿದ್ದ ಗಾಂಧೀಜಿ ಈ ದಿನ 12-15 ಘಂಟೆಗೆ ಆಗಮಿಸಿದರು. ಒಂದ ಕೂಡಲೇ ಮಹಾತ್ಮರು ಸುಮಾರು ಒಂದು ಘಂಟೆ ಭಾಷಣವಿತ್ತರು. ಉದ್ರೇಕ ರಹಿತ ಮನಸ್ಸಿನಿಂದ ಮಹಾತ್ಮರ ಉಚ್ಚಾರಗಳು ಶಾಂತಚಿತ್ತನಿಗಳಂತೆ ಹಿಡಿಯುತ್ತಿದ್ದಾಗ ವಾತಾವರಣದಲ್ಲಿ ಸೂಜಿ ಬಿದ್ದರೆ ಸದ್ದಾಗುವಷ್ಟು ಮೌನ ವ್ಯಾಪಿಸಿದ್ದಿತ್ತ. ಅವರ ಮಾತಿನ ಪ್ರತಿಯೊಂದಕ್ಷರವೂ ಸಭಿಕರ ಮನೋಪಟಲದಲ್ಲಿ ಪಡಿಮೂಡುವ ದೃಶ್ಯವನ್ನು ಕಾಣಬಹುದಿತ್ತು.

ಸಮಿತಿ ಮೆಂಬರಿಕ ಮಾತ್ರವಲ್ಲ, ನಾಲ್ಕಣೆ ಸದಸ್ಯತ್ವ ಕೂಡಾ ಇಲ್ಲದ ತನಗೆ ಮಾತಾಡುವ ಹಕ್ಕಿಲ್ಲವಾದರೂ ಕಾರ್ಯಕಾರೀ ಸಮಿತಿಯ ಆಮಂತ್ರಣದಂತೆ ಮಾತಾಡುತ್ತಿದ್ದೇನೆಂದು ತಿಳಿಸಿ ಮಹಾತ್ಮರು ತಮ್ಮ ಭಾಷಣವನ್ನು ಆರಂಭಿಸಿ ಮಾತಾಡುತ್ತಾ ಹೀಗೆಂದರು.—

"ಪಿಲ್ಲಿ ಮಾತುಕತೆಗಳ ಕುರಿತು ಪತ್ರಿಕೆಗಳಲ್ಲಿ ಬಂದಿರುವ ಹಲವು ವಿಷಯಗಳನ್ನು ನಾನು ಓದಿದ್ದೇನೆ. ಈ ವರದಿಗಳೆಲ್ಲಾ ಸಂಪೂರ್ಣ ಸತ್ಯಗಳೆಂದು ನಂಬಬೇಡಿರೆಂದೇ ನಿಮಗೆ ನನ್ನ ಸಲಹೆ. ಬಹುತೇಕವಾಗಿ ವಿಶೇಷ ಬಣ್ಣ ಕೊಟ್ಟೇ ವಾರ್ತಾಪತ್ರಿಕೆಗಳಲ್ಲಿ ವರದಿಗಳು ಬರುತ್ತವೆ. ಆ ವಾರ್ತೆಗಳನ್ನು ಓದಿ ನೋಡಿ ನೀವು ಗೇ... ದರೂ ನಷ್ಟವುಂಟೆಂದು ನನಗನ್ನಿಸುವದಿಲ್ಲ. ನನ್ನ ಸುತ್ತಲೂ ಕತ್ತಲೆ ಕವಿದಿದೆ ಎಂದು ದಿಲ್ಲಿಯ ಒಂದು ಭಾಷಣದಲ್ಲೂ ನಾನಂದಿದ್ದೆ. ನನಗೇನೇ ಬೆಳಕು ಕಾಣದಿಲ್ಲವಾದ್ದರಿಂದ ನಾನು ನಿಮಗೆ ಸಲಹೆ ಕೊಡಲಾರೆನೆಂದೂ ನೀವೇ ನಿರ್ಧರಿಸಿಕೊಳ್ಳಿರೆಂದೂ ಕಾರ್ಯಕಾರೀ ಸಮಿತಿಗೆ ತಿಳಿಸಿದ್ದೆ. ಆದರೂ ನನ್ನ ಬುದ್ಧಿ ಬ್ರಿಟಿಷ್ ಯೋಜನೆಯ ಸ್ವೀಕಾರದ ಪರವಾಗಿತ್ತು. ದಿಲ್ಲಿಯಲ್ಲಿದ್ದಂತೆಯೇ ಈ ದಿನ ನನ್ನ ಬುದ್ಧಿಗೆ ಕತ್ತಲೆ ಕವಿದಿದ ಆದ್ದರಿಂದ ನಾನಿಂದು ಅಂದಿನ ಸಲಹೆಯನ್ನೇ ಜೈ ಪ್ರಕಾಶ್ ನಾರಾಯಣರಿಗೂ ಕೊಡುತ್ತೇನೆ. ನನ್ನ ಅಥವಾ ಕಾರ್ಯಕಾರೀ ಸಮಿತಿಯ ಶಿಫಾರಸಿಗಾಗಲೀ ಜೈ ಪ್ರಕಾಶರ ಧಿಕ್ಕಾರದಿಂದಾಗಲೀ ನೀವಿದರ ಅಂಗೀಕಾರ ಅಥವಾ ತಿರಸ್ಕಾರ ಮಾಡಕೂಡದು. ಈ ಕುರಿತು ಲಕ್ಷ್ಯಪೂರ್ವಕ ಪೂರ್ಣ ಮನಸ್ಸಿನಿಂದ ಯೋಚಿಸಿ ನೀವೇ ಒಂದು ನಿರ್ಧಾರ ಮಾಡಬೇಕು.

ಘಟನಾ ಸಮಿತಿ ಹೊಕ್ಕರೆ ಅಪಾಯವೇನು?

ನಿಯೋಜಿತ ಘಟನಾ ಸಮಿತಿಯು ಸ್ವ

ಕಾಂ. ಹ್ಯಾಕಮಾಂಡಿನ ನಿರ್ಣಯಕ್ಕೆ ಅ. ಭಾ. ಸಮಿತಿಯ ಬೆಂಬಲ.

ತಂತ್ರ ಸಭೆಯಲ್ಲವೆಂಬುದು ನನಗೆ ಗೊತ್ತಿದೆ. ಅಲ್ಲಿ ಹಲವು ದೋಷಗಳಿವೆ ಆದರೆ ಕಳೆದ ಹಲವು ವರುಷಗಳಿಂದ ಹೋರಾಡಿಬಲ್ಲ ನಾವು ರಾಜ್ಯಾಂಗ ರಚನಾ ಸಭೆಯ ದೋಷಗಳಿಗೆ ಹೆದರಬೇಕೇಕೆ? ಆ ದೋಷಗಳು ಚಿಕಿತ್ಸಾತೀತವೆಂದು ಮನವರಿಕೆಯಾದರೆ ನಾವಾ ಸಭೆಯೊಡನೆಯೇ ಹೋರಾಡಬಲ್ಲೆವು. ನಿಜವಾದ ಸತ್ಯಾಗ್ರಹಿಗಳು ಹಾಗೂ ಯೋಧರಾಗಿರುವ ನಮಗೆ ನಮ್ಮ ಮುಂದಿನ ಪಥದ ಕಷ್ಟ ಕಂಟಕಗಳಿಗೆ ಹೆದರಿ ನಿಲ್ಲುವ ಹಕ್ಕೇ ಇಲ್ಲ. ಆದ್ದರಿಂದ ಘಟನಾ ಸಮಿತಿ ಪ್ರವೇಶ ನಿಷ್ಪ್ರಯೋಜಕವೆಂದು ಜೈ ಪ್ರಕಾಶರು ಹೇಳಿದುದನ್ನು ಕೇಳಿ ನಾನಾಶ್ಚರ್ಯಗೊಂಡೆ ನಾವು ಘಟನಾ ಸಮಿತಿಗೆ ಹೋಗಿ ಸೋತೆವೆಂದೇ ಭಾವಿಸಿಕೊಳ್ಳೋಣ—ಅದರಿಂದ ನಮಗೇನು ಭಯ? ಓರ್ವ ನಿಜ ಸತ್ಯಾಗ್ರಹಿಯು ಸೋಲಿನ ಮನೋವೃತ್ತಿಯನ್ನೇ ಅರಿತಿರಲಾರ. ಅವನನ್ನು ಸೋಲಿಸುವವರಿಲ್ಲ; ಅವನೆಂದೂ ವಂಚನೆ ಅಥವಾ ದಗೆಗೊಳಗಾಗಲಾರ.

ಬ್ರಿಟಿಷರು ಅಪ್ರಾಮಾಣಿಕರೆ?

ಸತ್ಯಾಗ್ರಹಿಗಳಾದ ನಮಗೆ ಬ್ರಿಟಿಷರು ಅಪ್ರಾಮಾಣಿಕರೆಂದು ಹೇಳಲು ಅಧಿಕಾರವಿಲ್ಲ. ನಾವದನ್ನು ಹೇಳುವದಾದರೂ ಹೇಗೆ? ಎಲ್ಲಾ ದೇಶಗಳಲ್ಲಿಯೂ ಒಳ್ಳೆಯವರೂ ಇದ್ದಾರೆ; ಕೆಟ್ಟವರೂ ಇದ್ದಾರೆ. ಗತ ಕಾಲದಲ್ಲಿ ನಾವು ನಮ್ಮೊಳಗೆ ಹೋರಾಡಿಕೊಂಡಿದ್ದುದರಿಂದಾಗಿಯೇ ವ್ಯಾಪಾರಿಗಳಾಗಿ ಬಂದಿದ್ದ ಬ್ರಿಟಿಷರು ಆಳರಸರಾಗಿ ನಿಲ್ಲುವಂತಾಗಿತ್ತು. ಈಗ ನಮ್ಮ ಹೋರಾಟ ಆಳುವ ಬ್ರಿಟಿಷರೊಡನೆ. ಅವರಿಗೆ ನಮ್ಮನ್ನಾಳುವ ಹಕ್ಕಿಲ್ಲವೆಂಬುದಕ್ಕಲ್ಲದೆ ಬ್ರಿಟಿಷ್ ಜನತೆಯು ಅಪ್ರಾಮಾಣಿಕರು ಅಥವಾ ಕೆಟ್ಟವರೆಂದು ನಾವೀಗ ಹೋರಾಡುವದಲ್ಲ. ತಾವು ಹೊರಡಲು ತಯಾರೆಂದು ಅವರೀಗ ಹೇಳಿದ್ದಾರೆ; ಅವರ ಈ ಸ್ಥಳಾಂತರವು ಶಾಂತಸುಗಮವಾಗುವಂತೆ ನೋಡುವದು ನಮ್ಮ ಕರ್ತವ್ಯ"

ಘಟನಾ ಸಮಿತಿಯನ್ನು ಸ್ವೀಕರಿಸೋಣ

1942ರ ಚಳವಳದಲ್ಲಿ ಕಂಬಿ ತಂತಿಗಳ ನಾಶ ಮೊದಲಾದ ಹಿಂಸಾತ್ಮಕ ಕೃತ್ಯಗಳಿದ್ದುವನ್ನೂ ಅವುಗಳಿಂದ ಉಜ್ವಲ ರಾಷ್ಟ್ರೀಯ ಜಾಗ್ರತಿಯಾಗಿದ್ದರೂ ಸತ್ಯಾಗ್ರಹಿಯಾದ ತಾನಂತಹ ಹಿಂಸೆಗಳನ್ನು ನಿಷೇಧಿಸಬೇಕಾಗಿದೆಯೆಂಬುದನ್ನೂ ತಿಳಿಸಿ ಗಾಂಧಿಜೀ ಕೊನೆಗಂದರು: "ರಾಜ್ಯಾಂಗ ರಚನಾ ಸಭೆಯ ಯೋಜನೆಯಲ್ಲಿ ಹಲವು ದೋಷಗಳಿರುವದನ್ನು ನಾನು ಬಲ್ಲೆ. ಆದರೆ ಅದನ್ನು ತಿದ್ದಿಕೊಳ್ಳುವದಾಗಲೀ ಹುಗಿದು ಬಿಡುವದಾಗಲೀ ನಿಮ್ಮ ಶಕ್ತಿಯೊಳಗಿನದು. ಆ ಯೋಜನೆ ಕಬ್ಬಿಣದ ಅದುರಿನಂತೆ ಕಾಣುತ್ತಿದೆ. ನಮ್ಮ ಪ್ರಯತ್ನ ಬಲದಿಂದ ನಾವದನ್ನು ಶುದ್ಧ ಭಂಗಾರವಾಗಿ ಮಾರ್ಪಡಿಸಬಲ್ಲೆವು ಅದರಲ್ಲಿಷ್ಟೇ ಬಿರುಕುಗಳಿದ್ದರೂ ಪತ್ತೆಹಚ್ಚುವ ವಿಧಾನಗಳೂ ಇವೆ. ಸತ್ಯಾಗ್ರಹಿಗಳಾದ ನಾವು ಯಾವ ಕಾರಣಕ್ಕಾದರೂ ಹೆದರಬೇಕಾಗಿಲ್ಲ. ಆದ್ದರಿಂದ ಎಷ್ಟೇ ದೋಷಗಳಿದ್ದರೂ ಈ ಘಟನಾ ಯೋಜನೆಯನ್ನಂಗೀಕರಿಸಬೇಕೆಂದೇ ನನ್ನ ಉಪದೇಶ. 'ಮಾಡಿರಿ ಅಥವಾ ಮಡಿಯಿರಿ' ಎಂಬುದಕ್ಕೆ 'ಕೊಲ್ಲಿರಿ ಅಥವಾ ಕೊಲ್ಲಲ್ಪಡಿರಿ' ಎಂದರ್ಥವಲ್ಲ. ಘಟನಾ ಸಮಿತಿ ಪುಷ್ಪಸ ಷ್ಪತ್ತಿಗೆಯಲ್ಲ, ಅದು ಮುಳ್ಳಿನ ಹಾಸುಗೆ ಆದರೆ ನಾವಲ್ಲಿ ನಿದ್ರಿಸಲು ಹೋಗುವದಲ್ಲ; ಅಲ್ಲಿಯ ಕಷ್ಟಗಳೆದಿರು ಈ ಜಾಡಿ ದಡಸೇರಲು ಹೋಗುತಿದ್ದೇವೆ". ಮಹಾತ್ಮರ ಮಾತುಗಳು ಸಭೆಯ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟು ಮಾಡಿದುವು. ಅವರಾದಿನ ಸಭಾ ಪ್ರವೇಶ ಮಾಡುವಾಗ ಎಲ್ಲರೂ ಎದ್ದು ನಿಂತುದಲ್ಲದೆ, ಈ ವಿಶೇಷ ಸಂದರ್ಭಕ್ಕಾಗಿಯೇ ಪ್ರವೇಶ ದೊರೆತಿದ್ದ ಪ್ರೇಕ್ಷಕರಿಂದ ಭವನವು ತುಂಬಿ ತುಳುಕಾಡುತಿತ್ತು. ದ. ಆಫ್ರಿಕದ ಬಿಳಿಯರ ದಬ್ಬಾಳಿಕೆಯನ್ನು ಖಂಡಿಸಿಯೂ ಮಹಾತ್ಮರು ಕೆಲವು ಮಾತುಗಳನ್ನಾಡಿದರು.

[illegible] ...ೂರಾಯಿತು

ಗಾಂಧಿಜೀಯ ಭಾಷಣಾನಂತರ ಶ್ರೀ ಕಾಂಪತಿ ಲಾಹರಿಯವರೂ, ಸಮತಾವಾದಿ ಪ್ರಮುಖರಲ್ಲೊಬ್ಬರಾದ ಅಚ್ಯುತ ಪಟವರ್ಧನರೂ ಶ್ರೀಮತಿ ರಾಮದುಲಾರಿ ದೇವಿಯವರೂ ಸಮಿತಿ ಸೂಚನೆಯನ್ನು ವಿರೋಧಿಸಿ ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು ಶ್ರೀ ಜಗತ್ ನಾರಾಯಣಲಾಲ್, ಮಿ. ಫಕೀರ್ ಖಾನ್ ಸಹಾರ್ದಿ, ಶ್ರೀ. ಎನ್. ವಿ. ಗಡ್ಗಿಲ್ ಬಾಬು ಪುರುಷೋತ್ತಮದಾಸ ಥಂಡನರು ಮೂಲ ರಠವನ್ನು ಸಮರ್ಥಿಸಿದರು. ವಿರೋಧಿ ಪಕ್ಷದ ಅತ್ಯಂತ ಸ್ಫೂರ್ತಿಯ ಹಾಗೂ ನೌರವಾರ್ಹ ಭಾಷಣವೆಂದರೆ ಶ್ರೀಮತಿ ಅರುಣಾ ಅಸಫ್ ಅಲಿಯವರದು. ಬ್ರಿಟಿಷ್ ಯೋಜನೆಯನ್ನೂ ಹ್ಯಾಕಮಾಂಡಿನ ಮೃದು ಧೋರಣೆಯನ್ನೂ ಖಂಡತುಂಡ ಮಾತುಗಳಿಂದ ಖಂಡಿಸಿ, ಗಾಂಧಿಜೀಯನ್ನು ಸಂಬೋಧಿಸುತ್ತಾ ಶ್ರೀಮತಿ ಅರುಣಾ ಹೇಳಿದರು: "ಇಷ್ಟು ವರುಷಗಳ ವರೆಗೂ ನಾವು ನಿಮ್ಮ ಮಾತನ್ನು ಕೇಳಿ ನಿಮ್ಮ ವಿಧೇಯರಾಗಿದ್ದೆವು. ಈಗ ನೀವು ನಮ್ಮ ಮಾತನ್ನು ಕೇಳಬೇಕು. ಮತ್ತು ನಮಗೆ ವಿಧೇಯನಾಗಿರುವದು ನಿಮ್ಮ ಕರ್ತವ್ಯ".

ಮೌಲಾನಾ ಅಜಾದರು.

ಎಲ್ಲಾ ಟೀಕಗಳಿಗೂ ಸಮಂಜಸ ಉತ್ತರ ಕೊಡುತ್ತಾ ಕೊನೆಯಲ್ಲಿತ್ತ ಭಾಷಣವು ಅತ್ಯಂತ ಮನನೀಯವಿದ್ದಿತು. ಈ ನಿರ್ಧಾರದಿಂದ ಕಾಂಗ್ರೆಸ್ ದುರ್ಬಲವಾಗಲಾರದೆಂಬುದನ್ನೂ ಘಟನಾ ಸಮಿತಿಯು ಬ್ರಿಟಿಷರೊಡ್ಡಿದ ಬಲೆಯಲ್ಲವೆಂಬುದನ್ನೂ ಸಭೆಯ ಕರ ಚಪ್ಪಾಳೆಗಳ ನಡುವೆ ಮಂದಟ್ಟಾಗುವಂತೆ ತಿಳಿಸಿ, ಮೌಲಾನರು ಇದಿರುವಾದಿಗಳನ್ನು ಚುಚ್ಚಿ ನುಡಿದರು: "ಹೋರಾಟದ ಘನ ಘರ್ಜನೆ ಕೊಡುತ್ತಿರುವವರು ಅದರ ಅರ್ಥವೇನೆಂಬುದನ್ನು ಮಂದಟ್ಟುಮಾಡಿಕೊಂಡಿಲ್ಲ. ಹೋರಾಟವೊಂದು ಸಾಧನ ಮಾತ್ರವಾಗಿದ್ದು ಅದರಲ್ಲೇ ಒಂದು ಅಂತ್ಯವೆಂಬುದಿಲ್ಲ. ವಿಜಯವು ನಮ್ಮ ಮನೇ ಬಾಗಿಲಿಗೆ ಬಂದಿದೆ. ಅದನ್ನು ಅಪಜಯವಾಗಿ ಮಾರ್ಪಡಿಸಿಕೊಳ್ಳಬೇಡಿ"

201 ಅನುಕೂಲ—51 ಪ್ರತಿಕೂಲ

ಮತಗಳಿಂದ, ಮೌಲಾನರು ತಂದಿದ್ದ ಠರಾವು—ನಡುಗಾಲ ಸರಕಾರ ರಚನೆಯ ವೈಸರಾಯೀ ಸೂಚನೆಗೆ ಬಹಿಷ್ಕಾರ, ರಾಜ್ಯಾಂಗ ರಚನಾ ಸಭೆಯ ಅಂಗೀಕಾರವೆಂಬ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಡಿಲ್ಲೀ ನಿರ್ಣಯವು—ಅ. ಭಾ ಕಾಂಗ್ರೆಸ್ ಕಮಿಟಿಯಿಂದ ಅನುಮೋದನೆ ಪಡೆಯಿತು

ಬಿಳಿಯರ ಅತ್ಯಾಚಾರದ ವಿರುದ್ಧ ದಕ್ಷಿಣಾಫ್ರಿಕದ ಹಿಂದೀಯರು ಕೈಕೊಂಡ ಸತ್ಯಾಗ್ರಹಕ್ಕೆ ಬೆಂಬಲವೀವ ಎರಡನೇ ಠರಾವನ್ನು ಶ್ರೀಮತಿ ಸರೋಜಿನಿ ದೇವಿ ತಂದು ಉಜ್ವಲ ಭಾಷಣವಿತ್ತರು ಪಂಡಿತ ಗೋವಿಂದ ವಲ್ಲಭಪಂತರೂ ಸೇಟ್ ಗೋವಿಂದ ದಾಸರೂ ಅದನ್ನು ಅನುಮೋದಿಸಿ ಸರ್ವಾನುಮತದಿಂದ ಮಂಜೂರಾಯಿತು.

ಅಧ್ಯಕ್ಷರ ಮುಕ್ತಾಯ ಭಾಷಣ

ತಾ. 7ನೇ ಅಪರಾಹ್ನ 8-30ಕ್ಕೆ ಸರಿಯಾಗಿ ಚರಿತ್ರಾರ್ಹ ಅ. ಭಾ. ಕಾಂ. ಕಮಿಟಿಯ ಎರಡು ದಿನಗಳ ಸಭೆ ಮುಕ್ತಾಯಗೊಂಡಿತು. ರಾಷ್ಟ್ರಪತಿ ನೆಹರುಗಳು ತನ್ನ ಸಮಾರೋಪ ಭಾಷಣದಲ್ಲಿ 'ಭಾರತದ ರಿಪಬ್ಲಿಕ್' ಸರಕಾರವೇ ಕಾಂಗ್ರೆಸಿನ ಮುಂದಿನ ಗುರಿಯೆಂದು ಸ್ಪಷ್ಟಪಡಿಸಿದರು. "ಕಾಂಗ್ರೆಸು ಯಾವುದೇ ಯೋಜನೆಯನ್ನು ಅಂಗೀಕರಿಸಿತೆಂದು ನೆನಸಿಕೊಳ್ಳುವದು ತಪ್ಪು. ಘಟನಾ ಸಮಿತಿಯಲ್ಲಿ ಪ್ರವೇಶಿಸುವ ನಿರ್ಧಾರವನ್ನು ಅದಿಂದು ಮಾಡಿರುವದು ಸ್ವತಂತ್ರ ಭಾರತದ ರಾಜ್ಯಾಂಗ ರಚಿಸಿಕೊಳ್ಳುವ ಏಕೋದ್ದೇಶದಿಂದ. ಬೇರಾವುದಕ್ಕೂ ಕಾಂಗ್ರೆಸು ಕಟ್ಟು ಬಿದ್ದಿಲ್ಲ. ಘಟನಾ ಸಮಿತಿಯಲ್ಲಿ ಕಾರ್ಯವಾಗದೆಂದು ತಿಳಿದು ಬಂದ ಕೂಡಲೇ ಅಲ್ಲಿಂದ ಹೊರ ನಡೆಯದಂತೆ ಕಾಂಗ್ರೆಸನ್ನು ತಡೆಯುವಂತಹದಾವುದೂ ಇಲ್ಲ" ಎಂದರು. ತನ್ನ ಕಾರ್ಯಕ್ರಮಗಳನ್ನು ಜಯಶೀಲವಾಗಿ ಮುಗಿಸಿಕೊಂಡು. ಅ. ಭಾ. ಕಾಂ. ಕಮಿಟಿ ಚದರಿತು. ರಾಷ್ಟ್ರಪತಿ ನೆಹರುಗಳು ಹೊಸ ಕಾರ್ಯಕಾರೀ ಕಮಿಟಿಯನ್ನು ನೇಮಿಸಿಕೊಂಡಿದ್ದಾರೆ ಈ ವರೆಗಿನ ಹಿರಿಯ ಪ್ರಮುಖರು ಮಾತ್ರವಲ್ಲದೆ, ರಾಜಾಜಿ, ಕಮಲಾದೇವಿ ಮೊದಲಾದವರೂ ನವ ಕಮಿಟಿಯಲ್ಲಿದ್ದಾರೆಂದು ತಿಳಿದುಬಂದಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ತಾರೀಕು 11—7—46ರಿಂದ
ನವಯುಗ ಚಿತ್ರಪಟದವರ
ನಯಾ ತರಾಣಿ
ಸ್ನೇಹಪ್ರಭಾ, ಪೃಥ್ವಿರಾಜ್, ಡೇವಿಡ್ ಮೊದಲಾದವರು.
ಬರುವ ಚಿತ್ರ—
ಉಸ್ ಪಾರ್
ಚಾರ್ಲಿ, ಸ್ವರ್ಣಲತಾ, ಈಶ್ವರಲಾಲ್, ಚಂದ್ರಮೋಹನ್.

ಧನ್ಯವಾದಾರ್ಪಣೆ—ತನ್ನನ್ನು ಬ್ರಹ್ಮಾವರ ಫಿರ್ಕಾದ ಗ್ರಾಮ ಕಮಿಟಿಗಳ ಕಡೆಯಿಂದ ಉಡುಪಿ ತಾಲೂಕು ಕಮಿಟಿಗೆ ತಮ್ಮ ಮತಗಳನ್ನಿತ್ತು ಚುನಾಯಿಸಿದ ಬಗ್ಗೆ ತಾನು ಸಂಬಂಧಪಟ್ಟ ಸದಸ್ಯರಿಗೆಲ್ಲಾ ಆಭಾರಿಯಾಗಿರುವೆನೆಂದೂ ತನ್ನ ಫಿರ್ಕಾದ ಜನ ಸೇವೆಯನ್ನು ಕೈಲಾದ ಮಟ್ಟಿಗೆ ತಾನು ಮಾಡಲು ಸದಾ ಸಿದ್ಧನಿರುವೆನೆಂದೂ ಶ್ರೀ ಅಲಂಗಾರು ಕೃಷ್ಣಯ್ಯ ಹೆಗ್ಡೇರು ತಿಳಿಸುತ್ತಾರೆ.

ನೋಟೀಸು

ಪ್ರೈಮರಿ ಸಹಕಾರ ಸ್ಟೋರು ಮತ್ತು ಇನ್ನಿತರ ಸಹಾಯಕ ಸಂಸ್ಥೆಗಳಿಗೆ ಅಕ್ಕಿಯನ್ನು ಪಡೆದು ಇತರ ಕಂಟ್ರೋಲು ಸಾಮಾನುಗಳು ಕೂಡಾ ವಿಕ್ರಯಿಸುವ ಜವಾಬ್ದಾರಿಯನ್ನು ಕೊಡಬೇಕೆಂದು ಸರಕಾರವು ಧೋರಣೆಯನ್ನು ಸೂಚಿಸಿರುತ್ತಾ ಇದು ಹಿತಕರವಾದ್ದೆಂದು ರಖಿತರೆಲ್ಲರ ಅಭಿಪ್ರಾಯವಿದ್ದುವಾದರೂ ತಮ್ಮ ಸ್ವಪ್ರಯೋಜನ ಸ್ವಾಭಿಮಾನಕ್ಕಾಗಿ ಇದಕ್ಕೆ ಕೆಲವರು ಎದುರಾಡುತ್ತಿರುವರಾಗಿ ತಿಳಿದು ಬರುತ್ತದೆ. ಈ ಕುರಿತು ಆಲೋಚಿಸಿ ನಮ್ಮ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಯಗೊಳಿಸುವುದು ಅತೀ ಅಗತ್ಯವಾದುದರಿಂದ ತಾ. 20 7 46ನೇ ಶನಿವಾರ ಮಧ್ಯಾಹ್ನ 2ಘಂಟೆಗೆ ಬಂಟರ ಸಮಾಜದ ಮಂಗಳೂರು ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸ್ಟೋರು ಪ್ರತಿನಿಧಿಗಳ ಪರಿಷತ್ತು ಕೂಡಿಬರುವಂತೆ ಎಲ್ಲವರಿಗೂ ಕಾಗದ ಬರಕೊಂಡದೆ. ಕಾಗದ ಸಿಕ್ಕದವರು ಅಥವಾ ಸಿಕ್ಕದವರು ಕೂಡಾ ಅವರ ಸ್ಟೋರು ಪರವಾಗಿ ಒಂದು ಯಾ ಎರಡು ಪ್ರತಿನಿಧಿಗಳನು ಕಳುಹಿಸಿಕೊಡುವಂತೆಯೂ ಬರುವವಾದರೂ ಇಲ್ಲವಾದರೂ ಮುಂದಾಗಿ ತಿಳಿಸುವಂತೆಯೂ ಅಪೇಕ್ಷಿಸುತ್ತೇನೆ.

ಎಮ್. ಆರ್. ಪೂಂಜ, ಅಧ್ಯಕ್ಷ,
ಮುಲ್ಕಿ ಸ್ಟೋರ್ಸು ಲಿಮಿಟೆಡ್, (ಕನ್ವೀನರ್)

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಪೆಟ್ಟಿನಮಾಹಿತಿಗೆ ಬರೆಯಿರಿ

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

S. V. S. Tutorial Class,
Katapadi

ಹಾಯರ್ ಗ್ರೇಡ್ ತರಬೇತಾದ ಅಧ್ಯಾಪಕರು ಹೊಸ ನಿಯಮಗಳಂತೆ S. S L C. ಪರೀಕ್ಷೆಗೆ ಖಾಸಗಿ ಉಮೇದ್ವಾರರಾಗಿ ಕುಳಿತುಕೊಳ್ಳುವ ಅನುಕೂಲತೆ ಬಗ್ಗೆ S. S L. C. ಸ್ಕೀಮಿನನುಗುಣವಾಗಿ ನುರಿತ ಅಧ್ಯಾಪಕರಿಂದ ಶಿಕ್ಷಣಕೊಡಲಾಗುವುದು.

47ನೇ ಮಾರ್ಚತಿಂಗಳ ಪರೀಕ್ಷೆಗಾಗಿ ಉಮೇದ್ವಾರರನ್ನು ತಯಾರುಗೊಳಿಸುವ ಕ್ಲಾಸು ತಾ. 17 7-46ರಿಂದ ಪ್ರಾರಂಭವಾಗುವುದು.

ಪ್ರವೇಶ ಅರ್ಜಿ ಮ ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲು
ಕಟಪಾಡಿ, ದ ಕ.

ಉಡುಪಿ.

ಮಕ್ಕಳ ಕೂಟ—ದ ಪುಸ್ತಕ ಭಂಡಾರವೊಂದು ಕೂಟದ ಕಾರ್ಯಾಲಯದಲ್ಲಿ ಇದೇ ತಾ. 6-7 46ನೇ ಅಪರಾಹ್ನ 5 ಘಂಟೆಗೆ ತೆರೆಯಲ್ಪಟ್ಟಿತು. ಶ್ರೀ. ಕೆ. ಜಗನ್ನಾಥನಾಯ್ಕರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ರಾಮಕೃಷ್ಣಾಚಾರ್ಯರು ಭಂಡಾರದ ಉದ್ಘಾಟನೆ ಮಾಡುತ್ತಾ ಅದರ ಉಪಯೋಗದ ಬಗ್ಗೆ ಕುರಿತು ಭಾಷಣವಿತ್ತರು. ಅಧ್ಯಕ್ಷರು ಮಕ್ಕಳ ಚಟುವಟಿಕೆಗಳನ್ನು ಶ್ಲಾಘಿಸಿ ಉಪನ್ಯಸಿಸಿದ ಮೇಲೆ ಕೂಟದ ಅಧ್ಯಕ್ಷ ಶ್ರೀ. ಬಿ. ಅಂತಯ್ಯ ಸೆಟ್ಟರು ಧನ್ಯವಾದಗಳನ್ನಿತ್ತು ಕಿರಿಯರ ಚಟುವಟಿಕೆಗಳಿಗೆ ಸರ್ವರ ಬೆಂಬಲ ಕೋರಿದರು.

ಗ್ರಾಮ ಸಮಿತಿಗಳು—ತಾಲೂಕು ತಹಶಿಲ್ದಾರರು ಹಾಗೂ ಹೀಗೂ ಅತ್ಯವಸರದಲ್ಲಿ ಗ್ರಾಮ ಕಮಿಟಿಗಳನ್ನು ರಚಿಸಿದರು. ಸದಸ್ಯರ ಚುನಾವಣೆ ನಡೆಸಿದರು. ಪಂಚಾಯತ ಬೋರ್ಡುಗಳಿದ್ದಲ್ಲಿ ಹೊಸ ಕಮಿಟಿಗಳ ಸ್ಥಾಪನೆಯಾಗಲಿಲ್ಲ. ಎಸೆಂಬ್ಲಿ ಮೆಂಬರರು ಸಹ ತಹಶಿಲ್ದಾರರು ತಯಾರಿಸಿದ ಪಟ್ಟಿಯನ್ನೇ ಸಮಯಸಂಕೋಚದಿಂದಾಗಿ ಮಂಜೂರು ಮಾಡಿದರು. ಈಗ ತಾಲೂಕು ಆಹಾರ ಸಮಿತಿಗೆ ಫಿರ್ಕಾ ಕಡೆಯಿಂದ ಚುನಾವಣೆ ನಡೆಯಿತು. ಕೋಟ ಫಿರ್ಕಾದಿಂದ ಶ್ರೀಗಳಾದ ಕೊಳ್ಕೆಬೈಲು ಸಂಜೀವ ಸೆಟ್ಟಿ ಮತ್ತು ಶ್ರೀ. ಅಡಿಗರು ಬ್ರಹ್ಮಾವರ ಫಿರ್ಕಾದಿಂದ ಶ್ರೀಗಳಾದ ಜಗನ್ನಿವಾಸ ಸೆಟ್ಟಿ, ಅಲಂಗಾರು ಕೃಷ್ಣಯ್ಯ ಹೆಗ್ಡೆ, ಕಾಪು ಫಿರ್ಕಾದಿಂದ ಶ್ರೀಗಳಾದ ಲಕ್ಷ್ಮಣ ರಸು ಕುಂದಹೆಗ್ಡೆ ಮತ್ತು ಶಂಕರ್ ಐಲು ಗಣಪಯ್ಯ ಸೆಟ್ಟಿ, ಉಡುಪಿ ಫಿರ್ಕಾದಿಂದ ಶ್ರೀಗಳಾದ ಆನೆಕಾರು ರಾಜಗೋಪಾಲಕೃಷ್ಣ ರಾವ್ ಮತ್ತು ಟಿ. ರಮೇಶ ಪೈ ತಾಲೂಕು ಸಮಿತಿಯಿಂದ ಜಿಲ್ಲಾ ಸಮಿತಿಗೆ ಮುಂದಿನ ಚುನಾವಣೆಯು ತಾ. 12ಕ್ಕೆ ನಡೆಯಲಿದೆ. ಗ್ರಾಮ ಸಮಿತಿಗಳ ಸದಸ್ಯ ಚುನಾವಣೆಯೇ ಸುವ್ಯವಸ್ಥಿತ ರೀತಿಯಲ್ಲಿ ನಡೆದಿದೆ ನಡೆಯಲಿಲ್ಲವೆಂದು ಕೇಳಬರುತ್ತದೆ.

ವಾರ್ಷಿಕೋತ್ಸವ—ಕಲ್ಯಾಣಪುರದ ದ್ವಿತೀಯ ವಾರ್ಷಿಕೋತ್ಸವವು ಇದೇ ತಾ. 30ಕ್ಕೆ ಶ್ರೀ ಎಂ. ರಾಮಚಂದ್ರ ರಾವ್, ಎಂ. ಎ. ಇವರ ಅಧ್ಯಕ್ಷತೆಯಲ್ಲಿಯೂ ತಾ. 14ಕ್ಕೆ ಶ್ರೀ ಸಿಂಧುಮಾಮು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿಯೂ ಹೀಗೆ ಎರಡು ದಿನ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗುವುದು. ಬೆಳಗ್ಗೆ 9ರಿಂದ 10ರ ವರೆಗೆ ಸ್ಪರ್ಧೆಗಳು, ಸಾಯಂ. 4ರಿಂದ 7ರ ವರೆಗೆ ಭಾಷಣಾದಿಗಳು, ರಾತ್ರಿ 9-30ರಿಂದ 12ರವರೆಗೆ ವಿವಿಧ ವಿನೋದಾವಳಿಗಳು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ—ಚುನಾವಣೆಗೆ ನಾಮಪತ್ರ ಒಪ್ಪಿಸುವ ಕೊನೆಯ ದಿನ ತಾ 25 7 46. ಪರಿಶೀಲನೆಯ ದಿನ ತಾ 27 7 46. ನಾಮಪತ್ರ ಹಿಂದೆಗೆದುಕೊಳ್ಳುವ ದಿನ ತಾ 30 7 46 ಎಂದು ತಿಳಿದು ಬರುತ್ತದೆ

ಪೋಸ್ಟಲ್ ಸೌಕರ್ಯಗಳ ತಾತ್ಕಾಲಿಕ ಕಡಿತ—ಇದೇ ತಾ. 8ರಿಂದ ಉಡುಪಿ ಆಫೀಸಿನಲ್ಲೂ ಮುಂದೆ ತಿಳಿಸುವ ತನಕ ಮನಿಯಾರ್ಡರ್ ವಿ. ಪಿ. ರಿಜಿಸ್ಟರ್ಡ್ ಇನ್ಶೂರ್ಡ್ ಸಾಮಾನು ಬೇರೆ ಕಡೆ ಕಳುಹಿಸಲು ಸ್ವೀಕರಿಸಲ್ಪಡಲಾಗುವುದಿಲ್ಲ. ಆದರೆ ಒಫೀಸಿಯಲ್ ಸಾಮಾನ್ಯ ರಿಜಿಸ್ಟರ್ಡ್ ಸಾಮಾನುಗಳು, ಮುದ್ರಿತ ಪಾರ್ಸೆಲುಗಳು ಮಾತ್ರ ಸ್ವೀಕರಿಸಲ್ಪಡುವವು. ಮುದ್ರಿತ ಪಾರ್ಸೆಲಿನೊಂದಿಗೆ ಆ। ಸರ್ಜನ್‌ರ ಸರ್ಟಿಫಿಕೇಟು ಲಗ್ತೀಕರಿಸ ಬೇಕಾಗಿದೆ. ಎಂ. ಬರ್ಪುಳ್ಳ ಪ್ರಕಟನೆಯೊಂದನ್ನು ಸ್ಥಳೀಯ ಸಬ್ ಪೋಸ್ಟು ಮಾಸ್ಟರ್ ಶ್ರೀ. ಟಿ. ಕೆ. ಬಂಗರು ಹೊರಡಿಸಿರುತ್ತಾರೆ.

ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿ—ಯ ಕಾರ್ಯಕಾರೀ ಮಂಡಳಿಯ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ತಾ. 7-7 1946 ನೇ ಸಾಯಂ. ಗಂಟೆ 4ಕ್ಕೆ ಸೇರಿತು. ಸಭೆಯಲ್ಲಿ ಈ ಕೆಳಗಿನ ಮುಖ್ಯ ನಿರ್ಣಯಗಳಾದುವು. ಹಿಂದೀ ಪ್ರಚಾರಕರ ನೇಮಕದ ಬಗ್ಗೆ ಜನತೆಯಿಂದ ಅರ್ಜಿಗಳನ್ನು ಕೇಳಿಕೊಳ್ಳಬೇಕು. ವಾರಕ್ಕೆ 4 ಗಂಟೆಗಳ ಸಮಯ ಕೊಡುವ ಪ್ರಚಾರಕನಿಗೆ ತಿಂಗಳ ರೂ. 10 0 0 ಕೊಡಬೇಕು ಕಾರ್ಯಕರ್ತ ಸಿದಸ್ಯನಿಗೆ ವರ್ಷದಲ್ಲಿ ಎರಡು ಬಾರಿ ಸಭೆಗೆ ಬಂದು ಹೋಗುವ ಖರ್ಚು ಕೊಡಬೇಕು

ಓಂಮಸ್ಥಾನಿ ಅಧ್ಯಾಪಕರು ಎಸ್. ಎಸ್. ಎಲ್. ಸಿ ಆಗಬೇಕೆಂದಿರುವ ನಿರ್ಬಂಧವನ್ನು ತೆಗೆದು ಹಾಕುವಂತೆಯೂ, ಹೈಸ್ಕೂಲಿನ I, II ಮತ್ತು III ಫಾರ್ಮುಗಳಲ್ಲಿಯೂ ಹಾಯರ್ ಎಲಿಮೆಂಟರಿ ಶಾಲೆಗಳ 6, 7, 8 ನೇ ವರ್ಗಗಳಲ್ಲಿಯೂ, ಹಿಂದುಸ್ಥಾನಿಯನ್ನು ಅನಿವಾರ್ಯವಾಗಿ ಮಾಡುವಂತೆಯೂ, ಸರಕಾರವನ್ನು ಕೇಳಿಕೊಳ್ಳಬೇಕು. ಕಳೆದ ವರ್ಷದ ಪರೀಕ್ಷಾ ಗ್ರಾಂಟನ್ನು ಒಟ್ಟಾಗಿ ಪ್ರಾದೇಶಿಕ ಸಮಿತಿ ಕೊಡಬೇಕೆಂದು ಪ್ರಾಂತೀಯ ಸಭೆಯನ್ನು ಕೇಳಿಕೊಳ್ಳುವುದು. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯೊಂದಿಗೆ ಪುಸ್ತಕಾಲಯದ ಗ್ರಾಂಟನ್ನು ಕೇಳಿಕೊಳ್ಳುವುದು. ಜಿಲ್ಲಾ ಕಾಂಗ್ರೆಸ್ ಕಮಿಟಿಯೊಡನೆ ಆರ್ಥಿಕ ಸಹಾಯವನ್ನು ಕೇಳುವುದು.

ಧನ ಸಂಗ್ರಹಕ್ಕಾಗಿ ಕೆಳಗಿನ ಸಜ್ಜನರುಳ್ಳ ಒಂದು ಉಪ ಸಮಿತಿಯನ್ನು ಮಾಡಲಾಯಿತು. 1. ಶ್ರೀ. ವೆಂಕಟೇಶ ಪ್ರಭುಗಳು. 2. ಶ್ರೀ. ಯು. ಕೇಶವರಾಯರು. 3. ಶ್ರೀ. ಎಸ್. ಬಿ. ಪಿ. ರೆಬೆಲ್ಲೋ. ಶ್ರೀ. ಯು. ಶ್ರೀನಿವಾಸ ಮಲ್ಯರು

ಗ್ರಾಮ ಸಮಿತಿ ನಿರ್ಮಿಸುವ ಕುರಿತು. ಪುತ್ತೂರು ತಾಲ್ಲೂಕು ಆಫೀಸರರ ವರ್ತನೆ,

ಪುತ್ತೂರು ತಾಲ್ಲೂಕು, ಕೊಲನಾಡು ಗ್ರಾಮ ಮತ್ತು ಸಲೆತ್ತೂರು ಗ್ರಾಮಗಳಲ್ಲಿ ಇದೇ ತಾ 3-7-46ರಲ್ಲು ಮೊಕ್ಕಾಂ ಕೊಲ್ನಾಡು ಬೋರ್ಡು ಶಾಲೆಯಲ್ಲಿ ಗ್ರಾಮ ಸಮಿತಿ ನಿರ್ಮಿಸುವರೆ ಬರುತ್ತೇನೆಂದು ನೋಟಿಸು ಕೊಟ್ಟಿದ್ದರು ಆ ಪ್ರಕಾರ ನಾವು 2 ಗ್ರಾಮಸ್ಥರು ಸಾಧಾರಣ 300 400 ಜನರು 12 ಘಂಟೆಗೆ ಸರಿಯಾಗಿ ಕೊಲ್ನಾಡು ಬೋರ್ಡು ಶಾಲೆಯಲ್ಲಿ ಕೂಡಿದ್ದೆವು ಈ ತನ್ಮಧ್ಯೆ ಪುತ್ತೂರು ತಹಶಿಲ್ದಾರರು ಶಾಲೆಗೆ ಬಾರದೆ ಪಡ್ನೂರು ಗ್ರಾಮದ ಪಟೇಲರು ಎಂಬಲ್ಲಿಂದ ಉಗ್ರಾಣಿಯನ್ನು ಕಳುಹಿಸಿ ನಮ್ಮೆಲ್ಲರನ್ನು ಅವರಲ್ಲಿಗೆ ಹೇಳಿ ಕಳುಹಿಸಿದರೇ. ಆ ಪ್ರಕಾರ ಶಾಲೆಯಿಂದ 2½ ಫರ್ಲಾಂಗು ದೂರವಿದ್ದರೂ ಅಲ್ಲಿಗೂ ಹೋದೆವು. ನಾವು ಹೋದನಂತ್ರ ಶ್ರೀ. ನೂಜಿಬೈಲು ನಾರಾಯಣ ಭಟ್ರು ತಹಶಿಲ್ದಾರರು ಈ ಸಭೆಗೆ ಉಪ್ಪರಿಗೆಯಿಂದ ಇಳಿದು ಬಂದರು. ಅನಂತ್ರ ಗ್ರಾಮ ಸಮಿತಿಯ ಉದ್ದೇಶ ಭಾಷಣ ಪ್ರಾರಂಭಿಸಿದರು. ಭಾಷಣವಾದಮೇಲೆ ಕೊಲ್ನಾಡು ಗ್ರಾಮದಿಂದ, ಮತ್ತು ಸಾಲೆತ್ತೂರಿಂದ ಗ್ರಾಮಸೇವೆ ಮಾಡುವ ಯೋಗ್ಯ ಮೆಂಬರರನ್ನು ಆರಿಸಿದವು. ಕೂಡಲೇ. ಶ್ರೀ ನೂಜಿಬೈಲು ನಾರಾಯಣ ಭಟ್ರು. ಇಂಗ್ಲಿಷಿನಲ್ಲಿ ಆಫೀಸರೊಡನೆ ಮಾತಾಡಿ ಉಪ್ಪರಿಗೆಗೆ ತಿರುಗಿ ಏರಿಕೊಂಡು ಹೋಗಿ ಸಭೆಯಲ್ಲಿ ಸೂಚಿಸಿದ ಹೆಸರುಗಳನ್ನು ರದ್ದುಪಡಿಸಿ, ಅವರ ಭಾವನೆಂಟನಾದ ಪಡ್ನೂರು ಗ್ರಾಮದ ಶ್ರೀ. ಶಂಭು ಶಾಸ್ತ್ರಿ ಯೆಂಬವರನ್ನು ಕೊಲ್ನಾಡು ಗ್ರಾಮದವನೆಂದು ವಿಳಾಸಕೊಟ್ಟು ಗ್ರಾಮಸಮಿತಿಗೆ ಮೆಂಬರ್ ಮಾಡಿ ಅನಂತ್ರ ಮುಂಕುಂಡೆ ಶ್ರೀ ಪದ್ಮನಾಭಚಾರ್ಯರೆಂಬವರನ್ನು ಮತ್ತು ಅವರ ಪಾರ್ಟಿಯವರನ್ನೇ ಸೇರಿಸಿ ನಾರಾಯಣ ಭಟ್ರು ಮಗ ಈಶ್ವರ ಭಟ್ಟರೆಂಬವರನ್ನು ಸೇರಿಸಿದ್ದಾರೆಂತ ನಮಗೆ ಕೆಳಗೆ ಗೊತ್ತಾಯಿತು. ಈ ರೀತಿ. ತಾಲ್ಲೂಕು ಆಫಿಸರರೆ ಗ್ರಾಮಕ್ಕೆ ಬಂದು ಒಬ್ಬನ ಮಾತುಕೇಳಿ ಗ್ರಾಮದಲ್ಲಿ ಪಾರ್ಟಿ ಮಾಡಿ, ಗ್ರಾಮಸಮಿತಿ ಮಾಡಿದಕ್ಕೆ ನಮ್ಮೆಲ್ಲರ ಒಪ್ಪಿಗೆ ಇರುವದಿಲ್ಲ. ಇಡೀ ಗ್ರಾಮದವರನ್ನು ಪಡೆಸಬೇಕೆಂತಿರಲಿಲ್ಲ. ಆದ್ದರಿಂದ ಈ ಗ್ರಾಮ ಸಮಿತಿಗೆ ಸಮ್ಮಂಧಪಟ್ಟ ಮೇಲಾಫೀಸರರು ಇತ್ತ ಗಮನಕೊಟ್ಟು ಗ್ರಾಮ ಸಮಿತಿಯ ವಿಷಯದಲ್ಲಿ ಗ್ರಾಮಸೇವೆ ಮಾಡುವ ಯೋಗ್ಯ ಮೆಂಬರರ ।ಚುನಾವಣೆ ಮಾಡುವಂತೆ. ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕಾಗಿ ವಿನಂತಿ. ನಮ್ಮ ಕೊಲ್ನಾಡು ಸಾಲೆತ್ತೂರು ಗ್ರಾಮವೆಂದರೆ ಕೊಲ್ನಾಡು 1 ಗ್ರಾಮದಿಂದ 12|½ ಸಾವಿರ ಕಿರ್ವೆ ಹೋಗುವ ದೊಡ್ಡ ಗ್ರಾಮ ಇದರಲ್ಲಿ, ಎಷ್ಟೋ ಗ್ರಾಮಸೇವೆ ಮಾಡುವ ಮೆಂಬರರಿರುವಾಗ ಪಡ್ನೂರು ಗ್ರಾಮದ ಶಾಸ್ತ್ರಿಗಳನ್ನು ಸೇರಿಸಬೇಕೆಂದಿಲ್ಲ. ಆದ್ದರಿಂದ ಕೂಡಲೇ ಸಮ್ಮಂದಪಟ್ಟ ಆಫೀಸರರು. ಇತ್ತ ಗಮನಕೊಟ್ಟು ನ್ಯಾಯ ಕಾಪಾಡಬೇಕಾಗಿ ಸದ್ರಿ ಕೊಲ್ನಾಡು ಗ್ರಾಮಸ್ಥರ ಪರವಾಗಿ ಕೇಳಿಕೊಳ್ಳುವ—

ಕುಳೂರು ಅಣ್ಣಪ್ಪ ಭಂಡಾರಿ.

3 7-1946.

NOTICE

In the Court of the District Munsif of Mangalore.

O. S. No. 70 1946

K Somappa Shetty —Petf

Challu Shetty & others —Defts.

To,

92 deft. Mahabala Shetty, son of Themmaju Hengsu, Hindu Hotel, Shed No. 4 Alexander Dock, Bombay.

The above named plaintiff has filed the above suit for recovery of amounts on the charge of the plaint properties and therefore take notice that the above suit is posted for your appearance to 26-7-1946, you may appear and contest the same, failing which the same will be heard and decided exparte.

Mangalore, 7—7—46. K Balakrishna Rao, Advocate for Plaintiff.

The Modern "Ark".

'It Was Not Raining When Noah Built The Ark'.

Jehovah, the kindly Father had advised Noah to build in advance an Ark to protect himself form the deluge and he did it The result was Noah and family got through the deluge and became the forefathers of a new age

Advance planning against the uncertainties of the future has been the wisdom of ages. What Noah did in his days, we have to do in these days too, what the Ark did for him then, Insurance does for us to-day. In short, an Insurance Policy is the Modern Ark and an Insurance Agent is the person who induces and helps us to build our own Arks in advance.

The Canara Mutual Assurance Co ,Ltd.,

HEAD OFFICE **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad

The Commercial Corporation of India, Ltd.,

UDIPI. (S. India.)

ಜೀವನವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು, ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ. ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನನ್ನ ಯಜ್ಞ 0 2-0; (2) ಕಿಂದರ್ ಗಾರ್ಟನ್ ಬೋಧನೆ 0-2-0; (3) ಚಲಚ್ಚಿತ್ರ ಸಮ್ರಾಜ್ಞಿ 0 2-0; (4) ವೀರಭೂಮಿ 0-2 0; (5) ಶಂಭುಕ ವಧೆ 0 2-0 (6) ಆಡ್ಡ ಬೆಳೆದ ಗಿಡ್ಡಿಯ ಮದುವೆ 0 2 0 (7) ಸುದುಕನ ಹೆಂಡತಿ ಥಕ ಧ್ಯೆ ರಾಧೆ 0-3-0 (8) ಬಂಗಾರದ್ದಂಗಿದ ಕತೆ 0-1 0; (9) ಏಕಾಂತ ರಾಮಾಯಣ 0-1 0; (10) ಭಾರತ ಗೀತಾಂಜಲಿ 0-2-0; ಒಂದು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು. ವಿ.ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ, ಉಡುಪಿ.

CHAMPAE'S

Snow & Castrex

(Sole Distributers for Tnaia.)

Prop: K. G. NAYAK,

Santhekatte, UDIPI, S. K.

ದಕ್ಷಿಣ ಕನ್ನಡ

ಮಂಗಳೂರು.

ಮಂಗಳೂರು ಪ್ರಾದೇಶಿಕ ಹಿಂದೀ-ಪ್ರಚಾರ ಸಮಿತಿಯ ಅಧಿವೇಶನವು ತಾ. ೩೦ರಂದು ಶ್ರೀ. ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಸೇರಿತು. ಸಂಘಟಕರಾದ ಶ್ರೀಯುತ ಎ ರಾಮಕೃಷ್ಣ ನಾವಡರು ಸಭೆಯ ಮುಂದಿಟ್ಟ ಕಾರ್ಯ ವಿವರಣೆಯನ್ನೂ ನಿಯಮಾವಳಿಯನ್ನೂ ಮಂಜೂರು ಮಾಡಲಾಯಿತು. ಶ್ರೀ ಕೆ. ವೆಂಕಟೇಶ ಪ್ರಭುಗಳು, ಕಾರ್ಕಳ, ಇವರು ಸಮಿತಿಯ ಅಧ್ಯಕ್ಷರಾಗಿಯೂ, ಶ್ರೀ. ಕಲ್ಯಾಣಿ, ಬಿ ಸೆಟ್ಟಿ, ವಿಶಾರದ, ಇವರು ಮತ್ತು ಶ್ರೀ. ಯು. ಕೇಶವರಾವ್ ಅವರು ಉಪಾಧ್ಯಕ್ಷರಾಗಿಯೂ, ಶ್ರೀ. ಎಸ್. ಬಿ. ಪಿ. ರೆಬೆಲ್ಲೋ ಅವರು ಕೋಶಾಧ್ಯಕ್ಷರಾಗಿಯೂ, ಶ್ರೀ. ಕೆ. ಆರ್./ನಂಜುಂಡನ್ ಅವರು ಕಾರ್ಯದರ್ಶಿಗಳಾಗಿಯೂ, ಆರಿಸಲ್ಪಟ್ಟರು, ಸಂಘಟಕರಾದ ಶ್ರೀ. ಎ. ರಾ. ನಾವಡರು ಜತೆಕಾರ್ಯದರ್ಶಿಗಳಾಗಿರುವರು ಈ ಕೆಳಗಿನವರು ಕಾರ್ಯಕಾರಿ ಮಂಡಲಿಯ ಸದಸ್ಯರಾಗಿ ಆರಿಸಲ್ಪಟ್ಟರು.— ಶ್ರೀ. ಯಂ. ಡಿ. ಅಧಿಕಾರಿಗಳು, ಶ್ರೀ ಎಚ್. ನಾರಾಯಣರಾಯರು, ಶ್ರೀ. ಕೃಷ್ಣಾನಂತ ಪೈಗಳು, ಶ್ರೀ. ಬಿ. ರಾಮಕೃಷ್ಣಾಚಾರ್. ಉಡುಪಿ, ಶ್ರೀ ಕಟಪಾಡಿ ಶ್ರೀನಿವಾಸ್ ಶೆಣೈ, ಶ್ರೀ ಕೆ. ದೇವಪ್ಪ ಆಳ್ವ. ಶ್ರೀ. ಯು ಸರಸ್ವತಿ ಮಲ್ಯ. ಶ್ರೀ. ಎ. ಉಮಾನಾಥರಾಯರು ಸಮಿತಿಯ ಗೌರವ ಲೆಕ್ಕ ಪರಿಶೋಧಕರಾಗಿ ನೇಮಿಸಲ್ಪಟ್ಟರು.

ಈಗ ಚುನಾಯಿತನಾದ ಕಾರ್ಯಕಾರಿ ಮಂಡಲಿಯು ನಡುಗಾಲದಲ್ಲಿ ರಚಿತವಾದುದರಿಂದ ಇದರ ಅವಧಿಯು ತಾ. ೩೧ ೧೦-೪೬ ರ ವರೆಗೆ ಇರತಕ್ಕದ್ದೆಂದು ನಿರ್ಣಯಮಾಡಲಾಯಿತು

ನೇಕಾರರ ಹಾಗೂ ಕೈಮಗ ಗಳ ಮಾಲಿಕರ ನಡುವೆ ಇದ್ದ ವಿವಾದ ಬಗೆಹರಿಸಲು ಪಂಚರಾದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ, ಶ್ರೀ. ಯು. ಶ್ರೀನಿವಾಸ ಮಲ್ಯರು ಹೇಳಿಕೆ ಕೊಡುತ್ತ "ಬೊಂಬಯಿಯಲ್ಲಿ ಜರಗಲಿರುವ ಅ. ಭಾ. ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಅನಿವಾರ್ಯವಾಗಿ ಹೋಗಬೇಕಾದುದರಿಂದ ಇದೇ ತಾ. ೭೮ ವರೆಗೆ ಇತ್ತಂಡದವರು ತಮತಮಗೆ ಅಗತ್ಯ ತೋರುವ ಮಾಹಿತಿಗಳನ್ನು ಕೊಟ್ಟು ದಾಖಲೆಗಳನ್ನು ಹಾಜರು ಮಾಡಬಹುದು. ಆ ಬಳಿಕವೇ ಈ ಕುರಿತಾದ ನನ್ನ ತೀರ್ಮಾನವನ್ನು ಪ್ರಕಟಿಸುವೆನು." ಎಂದಿದ್ದಾರೆ.

ದಿವಂಗತ ಡಾ| ಫೆರ್ನಾಂಡಿಸ್— ಮಂಗಳೂರು ನಾಗರಿಕ ಸಭೆಯೊಂದು ತಾ. ೩೦ರಂದು ಗವರ್ನಮೆಂಟ್ ಕಾಲೇಜಿನಲ್ಲಿ ಶ್ರೀ। ಎ. ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ। ಎಂ ಎಸ್ ಶ್ರೇಷ್ಠರು ಮುಂತಂದ ಡಾ। ಫೆರ್ನಾಂಡಿಸರ ಮರಣದ ಕುರಿತಾದ ದುಃಖಸೂಚಕ ಠರಾವು ಮಾನ್ಯವಾಯಿತು. ಆಬಳಿಕ ಡಾ। ಕೆ ಆರ್ ಕಿಣಿಯವರು ದಿವಂಗತರ ಹೆಸರಲ್ಲೊಂದು ನಿಧಿಯನ್ನು ಸಂಗ್ರಹಿಸಿ, ಈ ಹಣದಿಂದ ಕಂಕನಾಡಿಯ ಕುಷ್ಠರೋಗಿಗಳ ಆಸ್ಪತ್ರೆಯನ್ನು ವಿಶಾಲಗೊಳಿಸಬೇಕೆಂದೂ, ಡಾ। ಫೆರ್ನಾಂಡಿಸರ ನಿಜಗಾತ್ರದ ಪ್ರತಿಮೆಯೊಂದನ್ನು ತಯಾರಿಸಿ ಅದನ್ನು ಕಂಕನಾಡಿ ಆಸ್ಪತ್ರೆಯ ಮುಂಭಾಗದಲ್ಲಿ-ಎರಡು ಮಾರ್ಗಗಳು ಸೇರುವಲ್ಲಿ ಸ್ಥಾಪಿಸಬೇಕೆಂದೂ ಠರಾವೊಂದನ್ನು ಮಂಡಿಸಿದ್ದರು. ಇದು ಮಾನ್ಯವಾಗಿ, ಈ ಬಗೆಗೆ ಸುಮಾರು ೩೦ ಮಂದಿಯುಳ್ಳ ಸಮಿತಿಯೊಂದು ಆರಿಸಲ್ಪಟ್ಟಿತು. ಶ್ರೀ। ಯು. ಕಣ್ಣಪ್ಪನವರು ಈ ಸಮಿತಿಯ ಕನ್ವೀನರು.

ಕಟಪಾಡಿ-ಶ್ರೀ ವೆಂಕಟ್ರಮಣ ದೇವರ ಸನ್ನಿಧಿಯಲ್ಲಿ ಇದೇ ಆಷಾಢ ಶು ೧೦ಯು ಸೋಮವಾರ ದಿನ ಅರ್ಚಕ ಉಪೇಂದ್ರ ಅಚ್ಯುತ ಭಟ್ರ ಅಧ್ಯಾಪಕದಲ್ಲಿ ಶ್ರೀ ದೇವಸ್ಥಾನದ ಆಡಳಿತೆ ಮೊಕ್ತೇಸರರಾದ ಶ್ರಿ ಪಾಂಗಾಳ ಅಣ್ಣಪ್ಪ ನಾಯಕರ ನೇತೃತ್ವದಲ್ಲಿ ಸಂಸ್ಕೃತವೇದಪಾಠಶಾಲಾ ಪ್ರಾರಂಭಿಸಿಯದೆ. ಪ್ರಕೃತ 11 ಜನ ಬ್ರಹ್ಮಚಾರಿಗಳುಅಧ್ಯಾಪನ ನೀಡುವರು.

ಹೆಜಮಾಡಿ-ಕಳೆದ ತಿಂಗಳ ತಾ 29 ಮತ್ತು 30ರಲ್ಲಿ ಮಂಗಳೂರು ರೇಂಜಿನ ಮಾನ್ಯ ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ. ಬಿ. ವಿ. ರಮಣ. M. A. L. T. ಇವರು ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರೀ ಶಾಲಾ ವರ್ಷಾವಧಿ ಪರೀಕ್ಷೆಯನ್ನು ಜರಗಿಸಿ 750ಕ್ಕೆ ಮಿಕ್ಕಿ ಮಕ್ಕಳ ಸಂಖ್ಯೆಯುಳ್ಳದಾಗಿರುವ ಶಾಲೆಯ ಕುರಿತು ಉತ್ತಮ ಅಭಿಪ್ರಾಯ ಪಟ್ಟಿದ್ದಾರೆ,

ಮಜೂರು ಕರಂದಾಡಿ ಶ್ರೀ ರಾಮ ಎಲಿಮೆಂಟರಿ ಶಾಲೆಯ—ಹೊಸ ಕಟ್ಟಡದ ಪ್ರವೇಶ ಸಮಾರಂಭವೂ ವರ್ಧಂತ್ಯುತ್ಸವವೂ, 5-7-46ರಲ್ಲು ಶ್ರೀ ಕೆ, ಸಂಜೀವ ಭಟ್ M. A L. T. ಇವರ ಸನ್ನಾನ್ಯ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು, ವಿಷಯ ಸೂಚಿಯಂತೆ ಕಾರ್ಯ ಕಲಾಪಗಳಾದವು. ಕಡೆಗೆ ಶ್ರೀ। ರಾಮದಾಸ ಸಾಮಗರಿಂದ, ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ ಹರಿಕಥೆ ನಡೆದು ಭಾರತ ಗೀತೆಯೊಂದಿಗೆ ಸಭೆ ಮುಕ್ತಾಯ ವಾಯ್ತು.

ನಿಧನ— ಫಜೀರ್ ಪೆರ್ಣ ಮುಂದ್ಯಮ ಸೆಟ್ಟಿಯವರು ತನ್ನ 60ನೇ ವಯಸ್ಸಿನಲ್ಲಿ ಇದೇ ತಾ.1 ರಲ್ಲುರಾತ್ರಿ 2ಗಂಟೆಯ ಸಮಯ ಸ್ವರ್ಗಸ್ಥರಾದರೆಂದು ತಿಳಿಸಲುತುಂಬಾ ವಿಷಾದಪಡುತ್ತದೆ. ಮೃತರು ಮಕ್ಕಳಿಲ್ಲದವರಾಗಿದ್ದು ಬಡಬಗ್ಗರ ಸಹಾಯಕರಿದ್ದರು. ಊರಿನ ಬಡವ ಬಲ್ಲಿದವರೆಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲಿ.

ಅಳಿಯಕಟ್ಟು ಸಂಪೂರ್ಣ ಬದಲಾವಣೆಯಾಗಲಿ.

ಅಳಿಯ ಕಟ್ಟಿನ ಬಂಧುಗಳೇ ಕಣ್ತೆರೆಯಿರಿ! ನಮ್ಮ ಅಳಿಯಸಂತಾನ ಕಟ್ಟಿನಲ್ಲಿ ಹಲವು ದೋಷಗಳಿವೆ. ಅದು ಒಂದು ವಿಜಾತೀಯವಾದ ಕಟ್ಟು ಲೋಕ ರೂಢಿಗೆ ವಿರೋಧವಾದುದು! ಈ ಕಟ್ಟಿನ ದೋಷದಿಂದ ಅಳಿಯಕಟ್ಟಿನ ಕುಟುಂಬಗಳಲ್ಲಿ ಸಿವಿಲ್, ಕ್ರಿಮಿನಲ್ ವ್ಯವಹರಣೆಗಳು ಮನೆ ಮಾಡಿಕೊಂಡಿವೆ. ಅಂದ ಮೇಲೆ ಅಳಿಯ ಸಂತಾನಕಟ್ಟಿನಲ್ಲಿ ಸುಧಾರಣೆಯು ಅತೀ ಅವಶ್ಯವೆಂದು ಎಲ್ಲರೂ ಒಪ್ಪುವ ಮಾತಾಗಿದೆ,

ಆದರೆ ಈಗ ನಮ್ಮ ಸಮಾಜದ ಮುಂದಾಳುಗಳಿಂದ ರಚಿತವಾಗಿ ಜನಾಭಿಪ್ರಾಯಕ್ಕಾಗಿ ಪ್ರಕಟವಾದ ಮಸೂದೆಯು ಕಾನೂನಾಗಿ ಜಾರಿಯಲ್ಲಿ ಬಂದರೆ ಅಳಿಯಸಂತಾನಿಗರಲ್ಲಿ ಈಗಿರುವ ತೊಂದರೆಗಿಂತ ಮುಂದೆ ಇಮ್ಮಡಿ, ನಾಲ್ಮಡಿಯಾಗಿ ಕೋರ್ಟು ಕಚೇರಿಗಳಲ್ಲಿ ಇನ್ನೂ ಹೆಚ್ಚಾಗಿ ಹೆಚ್ಚುವ ಘಟನೆಗಳೇ ಅದರಲ್ಲಿ ಹೆಚ್ಚಿಗೆ ಕಂಡು ಬರಬಹುದೆಂದು ಧಾರಾಳವಾಗಿ ಹೇಳಬಹುದು! ತಾವೆಲ್ಲರೂ ಮಸೂದೆಯನ್ನು ಆ ಮೂಲಾಗ್ರ ಓದಿ ದೀಲಿನ ರೂಪರೇಷೆಗಳನ್ನು ಮನನ ಮಾಡಿದರೆ ವ್ಯಕ್ತವಾಗದಿರದು.

ಈಗಲೇ ಅಳಿಯ ಸಂತಾನಿಗರು ಎಚ್ಚತ್ತು ಈಗ ಹಂಚಿರುವ ಮಸೂದೆಯಲ್ಲಿರುವ ಲೋಪ ದೋಷಗಳನ್ನು ಕಂಡು ಅದನ್ನು ಸರಿಪಡಿಸಿಕೊಳ್ಳದೆ ಇದ್ದರೆ, ನಮ್ಮ ಅಳಿಯಕಟ್ಟಿನವರೆಲ್ಲರೂ ಇನ್ನೂ ಹೆಚ್ಚಾಗಿ ನಷ್ಟ ಕಷ್ಟಗಳನ್ನು ಅನುಭವಿಸಬೇಕಾಗುವುದರಲ್ಲಿ ಅನುಮಾನವಿಲ್ಲ!

ಸುಧಾರಣೆ ಎಂದರೆ ಒಂದು ತರದ ಸಂಕಷ್ಟವನ್ನು ಕಡಿಮೆಮಾಡಿ, ಅದರ ಸ್ಥಾನದಲ್ಲಿ ಶಾಶ್ವತವಾದ ಹಾಗೂ ಕಷ್ಟ ಪರಂಪರೆಯಿಂದ ಕೂಡಿದ ಮತ್ತೊಂದು ತೊಂದರೆಯನ್ನು ತಂದೊಡ್ಡುವುದಲ್ಲ,

ಈಗ ಬರುವ ಸುಧಾರಣೆಯಿಂದ ಹಿಂದಿನ ಸಂಕಷ್ಟಗಳಿಂದ ಪಾರಾಗಿ ಮುಂದೆ ಸ್ವಾತಂತ್ರ್ಯ, ಸುಖ ಶಾಂತಿಗಳನ್ನೂ ಅನುಭವಿಸುವಂತಿರಬೇಕು ಆದುದರಿಂದ ಅಳಿಯಕಟ್ಟಿನವರೆಲ್ಲರೂ ಕಣ್ತೆರೆದು ತಮ್ಮ ಭಾವೀ ಜೀವನವು ಸುಗಮವಾಗಿ ಸಾಗುವಂತೆ ಈಗಿಂದೀಗಲೇ ಸನ್ಮಾರ್ಗವನ್ನು ರಚಿಸಿಕೊಳ್ಳುವುದು ಮತ್ತು ಅದಕ್ಕಾಗಿ ಯೋಚಿಸುವುದು ಯುಕ್ತವಲ್ಲವೆ?

S. S. Kolkebail

ಬೊಂಬಾಯಿ ಶ್ರೀ ರಜಕ ಸಂಘದ ವಿದ್ಯಾರ್ಥಿ ವೇತನವನ್ನು—ಅಪೇಕ್ಷಿಸುವ ದ. ಕ. ಜಿಲ್ಲೆಯ ರಜಕ ಯಾನೆ ಅಗಸ ಜಾತಿಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಾ 31-7-46ರೊಳಗೆ ಅರ್ಜಿಮಾಡಬೇಕಾಗಿದೆ. ವಿದ್ಯಾರ್ಥಿ ವೇತನವು ಮೆಟ್ರಿಕ್ಯುಲೇಶನ್ ತರಗತಿಯವರೆಗೆ ಕೊಡಲಾಗುವುದು. ಹೆಚ್ಚಿನ ಮಾಹಿತಿಯನ್ನು ಗೌ। ಕಾರ್ಯದರ್ಶಿ, ಶ್ರೀ ರಜಕಸಂಘ, 4ನೆ ಮಾಳಿಗೆ, 169, ಬೋರಾ ಬಜಾರ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ, ಅವರಿಂದ ಪಡೆಯಬಹುದು.

ದಿ ಆರ್ಯನ್ ಚಾಂಪಿಯನ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ:

7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್:

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂಬೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನ ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ಕೇರಳಾ ಸೋಪ್ ಇನ್ಸಿಟ್ಯೂಟ್, ಕಲ್ಲಿಕೋಟೆ.

YOUR SUGAR PROBLEM SOLVED!

Use "Sweetyne" Tablets. Each e-ui-valent to one tola of sugar. Ideal for Hotel and Restaurant Keeper. Sweet Meat manufacturers, Areated water manufacturers etc. Price Rs. 12/- per 1,000, Post free. Send 25% advance with order Selling Agents Wanted Write—

SVASTIKINDIA LABORATORIES,

BOMBAY, NO. 12.

ಕರ್ನಾಟಕದ ಬಗ್ಗೆ ಸರಕಾರದ ಉಪೇಕ್ಷೆ.

ಜಿಲ್ಲಾ ಕಾಂ. ಕಮಿಟಿ ನಿರ್ಣಯ.

೨ನೇ ಕಳೆದ ತಾ. ೨೩ನೇ ಸಂಜೆ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿನ ಸಭೆಯು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಶ್ರೀಗಳಾದ (೧) ಯು ಶ್ರೀನಿವಾಸ ಮಲ್ಯ (೨) ಸಿ. ನಾರಾಯಣ ರಾವ್ (೩) ಸಿ ಲಕ್ಷ್ಮೀನಾರಾಯಣ ನ್ಯಾಕ (೪) ಎಂ ಡಿ. ಅಧಿಕಾರಿ (೫) ಎಸ್. ಉಪೇಂದ್ರ ನಾಯಕ್ (೬) ಕೆ. ಕೆ. ಎ. ರಾಮ ಪೊತುವಾಳ (೭) ಮ. ರಾಮರಾಯ ಕಿಣಿ (೮) ಕೆ. ವೆಂಕಟೇಶಪ್ರಭು (೯) ಪಾವಾಧನ ಪಡಿಯಾರ (೧೦) ಕೆ. ತಿಮ್ಮಪ್ಪ ಸೆಟ್ಟಿ (೧೧) ಕೆ ಈಶ್ವರ (ಎಂ. ಎಲ್. ಎ.) ಮೊದಲಾದವರು ಹಾಜರಿದ್ದರು. ಪೊನ್ನಾವರದಲ್ಲಿ ಜರುಗಿದ ಕರ್ನಾಟಕ ಕಾರ್ಯಕರ್ತರ ಸಮ್ಮೇಲನದ ವಿವರ, ಮುಂಬರುವ ಚುನಾವಣೆ, ಸದ್ಯದ ದೇಶ ವ್ಯಾಪಿಯಾದ ವಾತಾವರಣ ಹಾಗೂ ಕಾಂಗ್ರೆಸಿಗರ ಮೇಲಿರುವ ಹೊಣೆಯ ಬಗ್ಗೆ ಚರ್ಚೆ ನಡೆಯಿತು. ಆ ಮೇಲೆ ಗೊತ್ತುವಳಿಗಳು ಸ್ವೀಕೃತವಾದುವು. ಮುಖ್ಯ ಗೊತ್ತುವಳಿಗಳನ್ನು ಈ ಕೆಳಗೆ ಕೊಡಲಾಗಿದೆ:—(೧) ಮದ್ರಾಸ್ ಶಾಸನ ಮಂಡಲದ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಮಂಡಲದ ಆಯ್ಕೆಯಲ್ಲಿ ಆ ಪಕ್ಷವು ಮಾಡಿದ ನಿರ್ಣಯದ ಸಂಬಂಧದಲ್ಲಿ ಆ ಪಕ್ಷದ ವರ್ತನೆಯ ಬಗ್ಗೆ ಈ ಸಮಿತಿಗೆ ಖೇದ ಉಂಟಾಗಿದೆ. ಅಲ್ಲದೆ, ಈ ಆಯ್ಕೆಯಲ್ಲಿ ಮುಂದಾಳಾಗಿ ನಿಂತ ಕರ್ನಾಟಕದವರೂ, ಸೋತ ಒಬ್ಬರೇ ಮಂತ್ರಿಗಳೂ ಆದ ಶ್ರೀ ಕೆ. ಆರ್. ಕಾರಂತರ ಪರಾಜಯದಿಂದ ಈ ಸಮಿತಿಗೆ ಅತೀವ ಮನೋವ್ಯಥೆಯುಂಟಾಗಿದೆ. ಶ್ರೀ ಕಾರಂತರು ಶಾಸನ ಸಭೆಯ ವಿಶ್ವಾಸಕ್ಕೆ ಪಾತ್ರರಾಗಿಲ್ಲವಾದರೆ ಪಕ್ಷದ ಧುರೀಣರು ತಮ್ಮ ವರ್ಚಸ್ಸನ್ನು ಉಪಯೋಗಿಸಿ ಸಮಗ್ರ ಕರ್ನಾಟಕ ಪ್ರಾಂತಕ್ಕೆ ಪ್ರಾತಿನಿಧ್ಯ ದೊರೆತಿಲ್ಲವೆಂಬ ಅಪವಾದವನ್ನು ಹೋಗಲಾಡಿಸುವ ದೃಷ್ಟಿಯಿಂದ, ಕರ್ನಾಟಕದ ಇನ್ನಾವ ಪ್ರತಿನಿಧಿಗಾದರೂ ಆ ಕಾರ್ಯಕಾರಿ ಮಂಡಲದಲ್ಲಿ ಸ್ಥಳ ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

(೨) ಅತೀವ ಪಕ್ಷಪಾತ ತೋರಿಸಿ, ಕರ್ನಾಟಕವನ್ನು ಅಲ್ಲಗಳೆದು ಸಾಗಿದ ಮದರಾಸ್ ಸರಕಾರದ ಇತ್ತೀಚಿನ ವರ್ತನೆಯಿಂದ ಈ ಸಮಿತಿಯು ಗಂಭೀರವಾದ ಆಲೋಚನೆಗೆ ಒಳಗಾಗಿ ವಿವಂಚನೆಗೆ ಗುರಿಯಾಗಿದೆ. (೧) ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಥಳವನ್ನು ಕೊಡುವಾಗ ತಮಿಳರಿಗೆ ಮತ್ತು ಆಂಧ್ರರಿಗೆ ವಿಶೇಷ ಪ್ರಮಾಣದಲ್ಲಿ ಸ್ಥಳಕೊಡಲು ಅವಕಾಶ ಮಾಡಿದ್ದು (೨) ಸರಕಾರವು ಕೈಕೊಂಡ ಖಾದಿ ಕಾರ್ಯಕ್ರಮದಲ್ಲಿ ಕರ್ನಾಟಕದ ಆ. ಭಾ. ಚರಕಾ ಸಂಘಕ್ಕೆ ಸ್ಥಾನ ಕೊಡದೆ ಅಲ್ಲಗಳೆದದ್ದು (೩) ಕರ್ನಾಟಕವನ್ನು ಬಿಟ್ಟೇ ಮೂಲ ಶಿಕ್ಷಣ ಕ್ಷೇತ್ರಗಳನ್ನು ಬೇರೆ ಬೇರೆ ಭಾಷಾನ್ಯಾಯ ಪ್ರದೇಶಗಳಲ್ಲಿ ತೆರೆಯುವ ಯೋಜನೆ ಮಾಡಿದ್ದು ಇಂಥ ಅನ್ಯಾಯಗಳು ಕರ್ನಾಟಕದ ಮೇಲೆ ಆಗಿರುವುದರಿಂದ ಕರ್ನಾಟಕದ ಮದ್ರಾಸ್ ಶಾಸನ ಸಭೆಯ ಸದಸ್ಯರು ಈ ಸಂದರ್ಭದಲ್ಲಿ ಸರಕಾರದ ಲಕ್ಷ್ಯವನ್ನು ಆ ಕಡೆಗೆ ಸೆಳೆದು ಇದರ ಪರಿಮಾರ್ಜನೆ ಮಾಡಿ ಸರಿಗೊಳಿಸುವುದಲ್ಲದೆ, ಮುಂದೆ ಈ ಸರಿ ಆಗದಂತೆ ನೋಡಿಕೊಳ್ಳಬೇಕೆಂದು ಈ ಜಿಲ್ಲೆಯ ಮದ್ರಾಸ್ ಎಸೆಂಬ್ಲಿ ಮೆಂಬರರನ್ನು ಈ ಸಮಿತಿಯು ಕೇಳಿಕೊಳ್ಳುತ್ತದೆ.

(೩) ಈಗ ಸರಕಾರವು ರಚಿಸುತ್ತಿರುವ ಗ್ರಾಮ ಮತ್ತು ತಾಲೂಕುಗಳ ಆಹಾರ ಸಂಗ್ರಹ ಮತ್ತು ಹಸುಗೆಯ ಸಮಿತಿಗಳಲ್ಲಿ ಸಮರ್ಥರು ಹಾಗೂ ಯೋಗ್ಯರ ಸೇರಿ ಸಮಿತಿಯ ರಚನೆಯಾಗುವಂತೆ ಹಾಗೂ ಯಶಸ್ವಿಯಾಗಿ ಅದರ ಕೆಲಸವಾಗುವಂತೆ ಸಹಕಾರ ಕೊಟ್ಟು ನೆರವಾಗಲು ಆಯಾ ಭಾಗಗಳ ಕಾಂಗ್ರೆಸಿಗರಿಗೆ ಈ ಸಮಿತಿಯು ಈ ಮೂಲಕ ಕೇಳಿಕೊಳ್ಳುತ್ತದೆ.

(೪) ಜಿಲ್ಲಾ ಕಾಂಗ್ರೆಸ್ ಕಮಿಟಿ ಚುನಾವಣೆ ನಡೆಸುವಂತೆ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಲಾಗಿದೆ. ನಾಮ ಪತ್ರ ಕೊಡುವುದಕ್ಕೆ ೧೦ ದಿವಸಗಳ ಅವಧಿ, ಪರಿಶೀಲನೆಗೆ ೨ ದಿವಸಗಳ ಅವಧಿ, ನಾಮ ಪತ್ರ ಹಿಂತೆಗೆದುಕೊಳ್ಳುವುದಕ್ಕೆ ೩ ದಿವಸ ಅವಧಿ ಎಂದು ನಿರ್ದಿಷ್ಟಗೊಳಿಸಲಾಗಿದೆ. ನಾಮಪತ್ರ ಕಳಿಸುವವರು, ನಾಮಪತ್ರದೊಂದಿಗೆ ೨ ರೂಪಾಯಿ ಫೀಸ್ ಮತ್ತು ೩ ರೂಪಾಯಿ "ಡಿಪಾಸಿಟ್" ಹೀಗೆ ಒಟ್ಟು ರೂಪಾಯಿ ೫ನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಗೆ ಕಳಿಸತಕ್ಕದ್ದೆಂದು ಈ ಸಭೆಯು ನಿರ್ಣಯಿಸುತ್ತದೆ. ಚುನಾವಣೆಯ ವೇಳೆ ಮುಂತಾದ ಎಲ್ಲಾ ವಿವರಗಳನ್ನು ಹಿಂದಿನಿಂದ ತಿಳಿಸಲಾಗುವುದು.

ಕುಂದಾಪುರ ತಾಲೂಕಿನಲ್ಲಿ ಗ್ರಾಮ ಸಮಿತಿಗಳ ಪ್ರಚಾರ ಕಾರ್ಯ– ದ ಸಲುವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿಗಳಾದ ಶ್ರೀ. ಬಿ. ಸುಬ್ಬಣ್ಣ ಸೆಟ್ಟರು ಕುಂದಾಪುರ ತಾಲೂಕಿನ ಉತ್ತರ ಭಾಗದ 14ಗ್ರಾಮಗಳನ್ನು ಸಂದರ್ಶಿಸಿದರು. ಇವರ ಜತೆಯಲ್ಲಿ ತಾಲೂಕು ಸಪ್ಲೈ ಆಫೀಸರ್ ಮಿ। ಸಯ್ಯದ್ ಮಹಮ್ಮದ ಸಾಹೇಬರೂ ಸರ್ಕಿಟ್ ಮಾಡಿದ್ದರು. ಗ್ರಾಮ ಸಮಿತಿಗಳ ರಚನೆ ಅವುಗಳಿಗೆ ಧಾನ್ಯ ಸಂಗ್ರಹ ಮತ್ತು ವಿತರಣೆಯಲ್ಲಿರತಕ್ಕ ಅಧಿಕಾರ ಇತ್ಯಾದಿ ವಿಷಯಗಳನ್ನು ಆಯಾಯ ಗ್ರಾಮಗಳ ಮಹಾಜನಸಭೆಯಲ್ಲಿ ಶ್ರೀ ಸೆಟ್ಟರು ವಿವರಿಸಿದರು. ಎಷ್ಟೋ ಗ್ರಾಮಗಳಲ್ಲಿಯ ಜನರಿಗೆ ರೇಶನಿಂಗ್ ಕಾರ್ಡುಗಳು ದೊರೆಯದೆ ಇದ್ದು ಅವರಿಗುಂಟಾದ ಸಂಕಷ್ಟಗಳನ್ನು ಶ್ರೀ. ಸೆಟ್ಟರು ವಿಮರ್ಶಿಸಿ ಆ ಸಂಬಂಧ ಶೀಘ್ರ ಏರ್ಪಾಡು ಮಾಡುವ ಸಲುವಾಗಿ ರೆವಿನ್ಯು ಡಿವಿಜನಲ್ ಆಫೀಸರರನ್ನು ಕಂಡು ಮಾತನಾಡಿದರು. ಕುಂದಾಪುರ ತಾಲೂಕಿನ ದಕ್ಷಿಣ ಭಾಗದ ಹಳ್ಳಿಗಳನ್ನು ಶ್ರೀಗಳಾದ ಬಿ. ಗಣೇಶ್, ತಹಶಿಲ್ದಾರ್ ಮತ್ತು ಶ್ರೀ. ಎ. ಎಸ್. ವಿಠಲ ಸೆಟ್ಟರು ಸಂದರ್ಶಿಸಿ ಗ್ರಾಮ ಸಮಿತಿಗಳನ್ನು ಸ್ಥಾಪಿಸಿದರು.

ಮಸೂದೆಯ ಚರ್ಚೆ– ಮದ್ರಾಸು ಅಳಿಯಸಂತಾನ ಮಸೂದೆಯ ವಿಷಯದಲ್ಲಿ ಜನತಾಭಿಪ್ರಾಯ ಪಡೆಯುವುದಕ್ಕಾಗಿ ತಾ 3ನೇ ಸಾಯಂಕಾಲ ಘಂಟೆ 5ಕ್ಕೆ ಕುಂದಾಪುರ ಎಸ್ ಆರ್. ಎಸ್ ಹೋಮಿನಲ್ಲಿ ಶ್ರೀ. ಕೆ. ವೆಂಕಪ್ಪ ಶೆಟ್ರು ವಕೀಲ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಮಂಗಳೂರಿನಿಂದ ಶ್ರೀ. ಎ. ಬಿ. ಶೆಟ್ರು ಎಮ್. ಎಲ್. ಎ ಶ್ರೀ. ಕೆ. ಟಿ. ಆಳ್ವರು, ಶ್ರೀ. ಎಮ್. ಆರ್. ಪೂಂಜರು ಸಭೆಯಲ್ಲಿ ಹಾಜರಿದ್ದರು. ಸಭೆಗೆ ಈ ತಾಲೂಕಿನ ಹಲವು ಮಹನೀಯರು ನೆರೆದಿದ್ದರು. ಸಭೆಯ ಉದ್ದೇಶವನ್ನು ವಿವರಿಸಿ ಶ್ರೀ. ಎ ಬಿ ಶೆಟ್ರು ಪ್ರಾರಂಭದಲ್ಲಿ ಮಾತಾಡಿದರು. ಆ ಮೇಲೆ ಅಳಿಯ ಸಂತಾನ ಕಟ್ಟಿನಲ್ಲಿ ಸುಧಾರಣೆಯು ಅವಶ್ಯವೆಂದೂ ಅದು ಆದಷ್ಟು ಬೇಗ ಆಗಬೇಕೆಂದೂ ಸರ್ವ ಸಮ್ಮತಿಯಿಂದ ಪಾಸಾಯಿತು.

ಅನಂತರ ಮಸೂದೆಯಲ್ಲಿರುವ ಕುಟುಂಬದ ಆಡಳಿತೆ, ಆಸ್ತಿಯ ವಿಭಾಗ ಸ್ವಾರ್ಜಿತ ಆಸ್ತಿಯ ಹಂಚುವಿಕೆ ಇವುಗಳ ವಿಷಯ ವಿಶೇಷ ಚರ್ಚೆ ನಡೆದು ಕೊನೆಯಲ್ಲಿ ಯಾವ ನಿರ್ಧಾರಕ್ಕೂ ಬಾರದೆ ಚರ್ಚೆಯಲ್ಲೇ ಪರ್ಯವಸಾನ ಹೊಂದಿತು ಕೊನೆಯಲ್ಲಿ ವಕೀಲ್ ಶ್ರೀ. ಎಸ್. ಎಸ್. ಕೊಳ್ಕೆಬೈಲು ಇವರು ನಮ್ಮ ಸಮಾಜವು ಇತರ ಮುಂದುವರಿದ ಸಮಾಜದೊಂದಿಗೆ ಉನ್ನತಿಯನ್ನು ಹೊಂದಬೇಕಾದರೆ ನಾವೂ ಸ್ವತಂತ್ರರಾಗಿ ಬಾಳಿ ಬದುಕಬೇಕಾದರೆ ಅಳಿಯ ಕಟ್ಟಿನ ಎಲ್ಲಾ ಮೆಂಬರರಿಗೂ ಸರಿ ಸಮಾನವಾದ ಇಚ್ಛಾನುಸಾರವಾದ ಪಾಲು ದೊರೆಯಬೇಕೆಂದು ಆಗ್ರಹಪೂರ್ವಕ ಸೂಚಿಸಿದರು. ನೆರೆದ ಸಭಿಕರಲ್ಲಿರ ಹಲವರ ಅಭಿಮತವು ಶ್ರೀ. ಎಸ್. ಎಸ್. ಕೊಳ್ಕೆಬೈಲವರ ಸೂಚನೆಗೆ ಅನುಕೂಲವಾಗಿತ್ತು. ಶ್ರೀ. ನ್ಯಾ. ಮಂಜಯ್ಯ ಶೆಟ್ರು ವಕೀಲ್ ಇವರು ಧನ್ಯವಾದವನ್ನಿತ್ತ ಬಳಿಕ ಸಭೆಯು ಚದರಿತು.



Approved firm by the Govt. of Mysore
Certified, by the Agent of the Govt. of Cylone Indian.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಸಿಯಾಗುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು. ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ರ, ಜಿ ಐ. ಪಿ. ಮಾಟುಂಗಾ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5 6ತಿಂಗಳ ಬರ್ತ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

T. D. S. (A. S.) Tollygunge, Calcutta.

ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಸದೆ ಅದನ್ನು ಬೇರುಸಹಿತ ಕಿತ್ತು ಹಾಕುವುದು ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನುನೋವು, ಗಂಟಲ ಉರಿಯು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲಿ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ. ೩-೬-೦; ೫ ೧೨ ೦ ಮತ್ತು ೧೦-೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ಸಿ. ನಟರಾಜನ್ & ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:–

ವನಮಾಲೀ ಬಿಠಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



[೨ನೇ ಪುಟದಿಂದ]

ಗಳಲ್ಲಿ ತನಗೆ ಬೆಂಬಲವಿಲ್ಲದ ದೆಸೆಯಿಂದ ತನ್ನ ಅನುಯಾಯಿಗಳ ತೀರ್ಮಾನಕ್ಕೇನೇ ಅವರು ಒಪ್ಪಬೇಕಾಗುತಿತ್ತು. ರಾಜಗೋಪಾಲಾಚಾರಿ ಮತ್ತು ಇವರೊಳಗೆ ಅತ್ಯಂತ ಮಧುರ ಸ್ನೇಹ ಬೆಳೆದಿತ್ತು. ಈ ಮದ್ರಾಸ್ ಪ್ರಮುಖನ ಚಾತುರ್ಯಪೂರ್ಣ ಸಲಹೆ ಮತ್ತು ವ್ಯವಹಾರ್ಯ ನಾಗರಿಕತೆಗೆ ತಾವು ಋಣಿಗಳು ಎಂಬುದನ್ನವರು ಬಹಿರಂಗಪಡಿಸಿದ್ದರು.

ಸ್ಟಾಫೋರ್ಡ್ ಕ್ರಿಪ್ಸ್—ಗೂಡು ಕಟ್ಟುವ ಜೇನುನೊಣ!

ಸರ್. ಸ್ಟಾಫೋರ್ಡ್ ಕ್ರಿಪ್ಸರು ಸಣ್ಣವಯಸ್ಸಿನವರು ಮತ್ತು ತೀರಾ ಪ್ರತ್ಯೇಕ ಮರ್ಜಿಯವರು. ಅವರು,ಮಾತುಕತೆಗಳಲ್ಲಿ—ವಿಶೇಷತಃ ಅದರ ಪೂರ್ವಾರ್ಧದಲ್ಲಿ—ವಿಶೇಷ ದುಡಿದು ಹದ್ದು ಮೀರಿ ಶ್ರಮಿಸಿದ್ದಕ್ಕೆ ತಕ್ಕ ಏಕ್ಷೆ ಹೊಂದಿದರು. ಸ್ವತಃ ಫಲಾಹಾರಿ ಮತ್ತು ಪ್ರಕೃತಿ ಚಿಕಿತ್ಸೆಯ ಭಕ್ತರಾಗಿರುವ ಅವರಿಗೊದಗಿದ ಕಾಯಿಲೆಯ ದೆಸೆಯಿಂದ ಡಾ॥ ಮೆಹತಾರ ಚಿಕಿತ್ಸಾ ವಿಧಾನಗಳ ರುಚಿ ನೋಡುವ ಸಂದರ್ಭವೊದಗಿತು. ತಮಗೆ ಡಾ॥ ಮೆಹತಾರು ಒದಗಿಸಿದ 'ಹಿತ ಪ್ರಪಂಚ'ದ ಕುರಿತು ಸರ್. ಮತ್ತು ಲೇಡಿ ಕ್ರಿಪ್ಸರಿಬ್ಬರೂ ಉತ್ಸಾಹಿತರಾಗಿದ್ದರು. ಬರೇ ಮಜ್ಜಿಗೆ ಮತ್ತು ಹಣ್ಣನ್ನಲ್ಲದೆ ಬೇರೇನನ್ನೂ ತೆಗೆದುಕೊಳ್ಳದೆ ಸರ್. ಕ್ರಿಪ್ಸರು ಘಂಟೆಗಟ್ಲೆ ಏಕಾಗ್ರತೆಯ ಆ ಕಾರ್ಯಗಳಲ್ಲಿ ಹೇಗೆ ಮಗ್ನರಾಗುತ್ತಿದ್ದರೆಂಬುದೇ ನನಗೊಂದು ಅರ್ಥ ತಿಳಿಯದ ಅದ್ಭುತವಾಗಿತ್ತು. ಡೆಲ್ಲಿಯಲ್ಲಿ ಅವರಿದ್ದ ಆ ಕಡೆಯ ದಿನದಲ್ಲಿಯೂ ತನ್ನ ಅಮೂಲ್ಯ ಸಮಯದ ಕೆಲವು ಮಿನಿಟುಗಳನ್ನು ಅವರು ನನಗಾಗಿ ಕೊಟ್ಟಿದ್ದರು. ಅವರೊಂದು 'ಫೈಲ'ನ್ನು ಬಿಡಿಸುತ್ತಿರುವದನ್ನು ಕಂಡು ಕ್ಷಮಾಯಾಚನೆಯೊಡನೆ ನಾನವರ ಕೋಣೆಯನ್ನು ಪ್ರವೇಶಿಸಿದಾಗ ಅವರೆಂದರು—"ನಾನು ವ್ಯಾಪಾರೀ ಬೋರ್ಡಿನ ಅಧ್ಯಕ್ಷನೂ ಆಗಿದ್ದೇನೆಂಬುದನ್ನು ಮರೆಯಬೇಡ" ಅನಂತರದನ್ನು ಒತ್ತಟ್ಟಿಗೆ ಸರಿಸಿ "ನೀವೆಲ್ಲಾ ಹಿಂದುಸ್ಥಾನದಲ್ಲಿ ಇಂತಹದನ್ನು ಮಾಡುವದು ಯಾವಾಗ?" ಎನ್ನುತ್ತಾ ಆಕರ್ಷಣೀಯ ಹೊದಿಕೆಯಿದ್ದ ಒಂದು ಪುಸ್ತಕವನ್ನು ನನ್ನೆಡೆಗೆ ಹಾರಿಸಿದರು. ಅದು ಬ್ರಿಟಿಷ್ ಸೇಯಿಗೇ ಕಾರ್ಖಾನೆಗೆ ಸಂಬಂಧಪಟ್ಟ ಒಂದು ವರದಿಯಾಗಿದ್ದು, ಅವರ ಪ್ರತಿಯೊಂದಂಶವೂ ಅಮೂಲ್ಯ ಮತ್ತು ಶ್ಲಾಘನೀಯವಿತ್ತು. ಸರ್ ಸ್ಟಾಫೋರ್ಡರು ಮಧುರ ಸಹಾನುಭೂತಿಯುಳ್ಳ ಮನುಷ್ಯ; ಮೈತ್ರಿ ಸಂಪಾದಿಸಿಕೊಳ್ಳುವದರಲ್ಲಿ ಅವರ ಆಸಕ್ತಿ ಬಹಳ. ರಾಜಕೀಯದಂತೆಯೇ ಜೀವನಕ್ಕೆ ಸಂಬಂಧಿಸಿದ ಇತರ ವಿಷಯಗಳಲ್ಲೂ ಅವರಿಗೆ ಅಭಿರುಚಿಯಿದೆ. ಅರವಿಂದರ ಸಂದೇಶಗಳ ಒಂದು ಪ್ರತಿಯು ಅವರ ಮೇಜಿನಲ್ಲಿದ್ದುದನ್ನು ನಾನು ಕಂಡೆ. ಸರ್. ಕ್ರಿಪ್ಸರ ಬಹುಮುಖೀ ಕಾರ್ಯಗಳು ವಿಶೇಷತ ಅವರ ಪತ್ನಿಯ ಸಲಹೆ, ಸಹಾನುಭೂತಿಯನ್ನಾಧರಿಸಿವೆ.

ಲೇಡಿ ಕ್ರಿಪ್ಸ್—ರಾಣಿ ಜೇನುನೊಣ!

ಕೊನೆಯ ಮೂರು ವಾರಗಳಲ್ಲಿ ಕ್ರಿಪ್ಸ್ ಸಹಧರ್ಮಿಣಿ ನವದಿಲ್ಲಿಯಲ್ಲಿದ್ದುದರಿಂದ ಸರ್. ಸ್ಟಾಫೋರ್ಡರಿಗೂ ಅವರ ಅನುಯಾಯಿಗಳಿಗೂ ನಿಜವಾದ ಸಹಾಯವೊದಗಿದಂತಾಗಿತ್ತು. ಆಕೆಯ ಪ್ರೇಮ ಜನರ ಮೇಲೆ ಹೊರತು ಸ್ಥಳ,ಯಾನ ದೃಶ್ಯಗಳಲ್ಲಲ್ಲ. ತನ್ನ ಸೌಂದರ್ಯದಿಂದ ಮಂತ್ರಿತ್ರಯರ ಮನಾಕರ್ಷಿಸಿದ್ದ ಕಾಶ್ಮೀರವಾಗಲೀ, ಆಗ್ರಾದ ತಾಜಮಹಾಲಾಗಲೀ ಆಕೆ ದಿಲ್ಲಿ ಬಿಡುವಂತೆ ಮಾಡಲಿಲ್ಲ.ಲೇಡಿ ಕ್ರಿಪ್ಸರಿಂದ ಸಂಪಾದಿಸಿಕೊಂಡ ಮಿತ್ರರ ಸಂಖ್ಯೆ ನೋಡುವಾಗ ಆಶ್ಚರ್ಯವಾಗುತ್ತದೆ. ನಮ್ಮ ರಾಜಕೀಯದ ಮುನ್ನೆಲೆಯಲ್ಲಿರುವ ಕೆಲವು ಸ್ವಭಾವ ಚಿತ್ರಗಳನ್ನೂ ಅವರು ತಿಳಿದುಕೊಂಡಿದ್ದಾರೆ. ಭಾರತಕ್ಕೆ ಇದೀಗ ಅವರ ಮೊದಲ ಭೇಟಿ—ಆದರೆ ಕೊನೆಯ ಭೇಟಿಯೂ ಇದೇ ಆಗದು. ಈ ವರ್ಷಾಂತ್ಯದಲ್ಲಿ ಚಿಯಾಂಗ್ ದಂಪತಿಗಳ ಅತಿಥಿಯಾಗಿ ಅವರು ಚೀನಕ್ಕೆ ಹೋಗುವ ಯೋಜನೆಯಲ್ಲಿದ್ದಾರೆ. ಅಲ್ಲಿಂದ ಸ್ವದೇಶಕ್ಕೆ ಮರಳುವಾಗ ಮುಂದಿನ ಛಳಿಗಾಲದಲ್ಲಿ ಮತ್ತೊಮ್ಮೆ ಭಾರತಕ್ಕೆ ಬರಲಿದ್ದಾರೆ. ಹಿಂದುಸ್ಥಾನ ಮತ್ತು ಇಂಗ್ಲಾಂಡುಗಳೊಳಗೆ ಸಾಂಸ್ಕೃತಿಕ ಸಂಬಂಧ ನಿರ್ಮಿಸಬೇಕೆಂಬ ಕುರಿತು ಅವರು ವಿಶೇಷ ಆಸಕ್ತರಿದ್ದಾರೆ. ಈ ಕಾರ್ಯದಲ್ಲಿ ತನಗೆ ಲಂಡನಿನಲ್ಲಿ ಅತ್ಯುತ್ಸಾಹಿಯಾದ ಲೇಡಿ ವೆಲ್ಲಿಂಗ್ಡನರಿಂದ ದೊರೆಯುತ್ತಿರುವ ಸಹಾಯವನ್ನು ಶ್ಲಾಘಿಸಿದ್ದಾರೆ. ಹಿಂದೀಯ ನರ್ತನ, ಗಾಯನ ಮತ್ತು ಚಿತ್ರಕಲೆಯ ಪ್ರೋತ್ಸಾಹಕ್ಕಾಗಿ ಲಂಡನಿನಲ್ಲೊಂದು ಸಾಂಸ್ಕೃತಿಕ ಕೇಂದ್ರವನ್ನು ತೆರೆಯುವದು ಲೇಡಿ ಕ್ರಿಪ್ಸರ ಹೆಬ್ಬಯಕೆಗಳಲ್ಲೊಂದು.

ಎ. ವಿ. ಅಲೆಕ್ಸಾಂಡರ್—ಲಗುವಾದ ತಿದಿ!

ಮಿ ಅಲೆಕ್ಸಾಂಡರರು ಸಂತೋಷ ಚಿತ್ತದ ಮನುಷ್ಯ; ಪಕ್ಷಪಾತ ರಹಿತ. ತಾನು ಜನ್ಮತಃ ಸಾಮಾನ್ಯನೆಂಬುದೊಂದೇ ಅವರ ಹೆಗ್ಗಳಿಕೆಯೆಂಬಂತೆ ತೋರುತ್ತದೆ. ವೈಸರಾಯಿ ಭವನದ 'ಎತ್ತುವ ತೊಟ್ಟಿಲ'ಲ್ಲಿ ಅವರೊಂದಿಗೇನೇ ನಾನೂ ಇದ್ದಾಗ ಅವರ ಟ್ರಿಂಕೋಮಾಲೀ ಪ್ರಯಾಣದ ಕುರಿತು ಪ್ರಶ್ನೆ ಹಾಕಿದೆ. ಅವರು ಮಕ್ಕಳಂತೆ ಉಬ್ಬಿ ಹೇಳಿದರು:—"ನನಗಿಂತ ಮೊದಲು ಯಾವನೊಬ್ಬ ಹಡಗ ಮಂತ್ರಿಯೂ ಸುಯೇಜನ್ನು ದಾಟಿ ಮೂಡುಗಡೆಗೆ ಬಂದುದಿಲ್ಲವೆಂಬುದು ನಿಮಗೆ ಗೊತ್ತೆ?" ಶ್ರೀ. ಸಿ. ರಾಜಗೋಪಾಲಾಚಾರಿ ಮತ್ತು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರ ಮೇಲೆ ಅವರಿಗೆ ವಿಶೇಷ ಗೌರವವಿದೆ. "ನಾನಾ ಮನುಷ್ಯನ ಮಾತುಗಳನ್ನು ಕೇಳುತ್ತಾ ಎಷ್ಟು ಘಂಟೆಯಾದರೂ ಕುಳಿತುಕೊಳ್ಳಬಲ್ಲೆ" ಎಂದು ರಾಜಾಜಿಯ ಕುರಿತು ಅವರ ಅಂಬೋಣ. ಸರ್. ಸಿ. ಪಿ. ಯೆಂದರೆ "ಯಾವ ದೇಶದ ಯಾವ ಮಂತ್ರಿಮಂಡಲದೊಳಗಾದರೂ ನೆಟ್ಟಗೆ ಪ್ರವೇಶ ಮಾಡಬಲ್ಲ". ವಿಶೇಷ ಯೋಗ್ಯತೆಯಿರುವ ಮನುಷ್ಯ-ಎಂದು ಅವರ ಅಭಿಪ್ರಾಯ. ಕಾಂಗ್ರೆಸ್ ಪ್ರಮುಖರ ಪೈಕಿ ಶ್ರೀಮತಿ ಸರೋಜಿನಿ ನಾಯಿಡುಗಳೊಂದಿಗೆ ಅವರ ಸಲುಗೆ ವಿಶೇಷ. ಶ್ರೀಮತಿ ನಾಯಿಡುಗಳ ಅಮೋಘ ವಾಕ್ಚಾತುರ್ಯಕ್ಕೆ ಇವರು ಮನಮುಗ್ಧರಾಗಿದ್ದಾರೆ. ಒಂದು ಔತಣ ಕೂಟದಲ್ಲೊಮ್ಮೆ ಮಾತಾಡುತಿದ್ದಾಗ, ಸರೋಜಿನಿಯವರ ಅಭಿಪ್ರಾಯಗಳಿಗೂ ಪಕ್ಷಾಭಿಮಾನಿಗಳ ಭಯ ಸಂದೇಹಗಳಿಗೂ ಇರುವ ಅಂತರವನ್ನು ಗ್ರಹಿಸುತ್ತಾ ಅಲೆಕ್ಸಾಂಡರರು ಸರೋಜಿನೀ ದೇವಿಯ ಕಡೆಗೆ ಬಗ್ಗಿ ಹೇಳಿದರು. "ನನ್ನ ಪ್ರಿಯ ಮಿತ್ರೆ; ಎಲ್ಲಾ ಹಿಂದೀ ರಾಜಕೀಯ ನಾಯಕರೂ ನಿಮ್ಮಂತೆಯೇ ಇರುತ್ತಿದ್ದರೆ ನಮಗೆ ತೊಂದರೆಯೇ ಇರುತ್ತಿರಲಿಲ್ಲ". ಸಂಧಾನ ಮಾತುಕತೆಗಳು ಬೆಳೆಯುತ್ತಾ ಬಂದಂತೆ ಸರ್ದಾರ್ ಪಟೇಲ ಮತ್ತು ರಾಜೇಂದ್ರ ಪ್ರಸಾದರೂ ಉದ್ದಕ್ಕೆ ಕ್ರಮಶಃ ಬೆಳೆದರೆಂದು ಅಲೆಕ್ಸಾಂಡರರ ಅಭಿಪ್ರಾಯ. ಪ್ರಥಮ ರಂಗಗಳಲ್ಲಿ ಸರ್ದಾರರ ಸ್ಪಷ್ಟ ವಕ್ತೃತ್ವವು ತಪ್ಪಭಿಪ್ರಾಯ ಹುಟ್ಟಿಸಿದ್ದಿತು. ಅಂತೆಯೇ ರಾಜನ್ ಬಾಬುಗಳ ಸಾಧುವರ್ತನೆಗಳಲ್ಲಿ ಅವರ ವಿಧಾಯಕ ಸೌಜನ್ಯವು ಸರಿಯಾಗಿ ಪಡಿ ಮೂಡುತ್ತಿರಲಿಲ್ಲ. ಆದರೂ ಇವರಿಬ್ಬರೂ ಗೌರವಾರ್ಹ ಒಪ್ಪಂದಕ್ಕಾಗಿ ದೃಢ ಧೋರಣೆ ವಹಿಸಿದ್ದರೆಂದೂ ಅತ್ಯುಚ್ಚ ರಾಷ್ಟ್ರಪ್ರೇಮವೊಂದೇ ಅವರ ಇಚ್ಛಾಶಕ್ತಿಯಾಗಿತ್ತೆಂದೂ ಮೇಲಿಂದ ಮೇಲೆ ಸ್ಪಷ್ಟವಾಗಿತ್ತು. ಇಷ್ಟರಲ್ಲಿ ಮಹಾಲಾನಾರಿದ್ದರು. ಅವರ ಘನತೆ, ವಿದ್ವತ್ತು ಮತ್ತು ಸದ್ಭಾವಗಳು, ಮಂತ್ರಿ ಸಮಿತಿಯ ಹೃದಯದಲ್ಲಿ ಅವರಿಗೆ ಅನನ್ಯ ಸ್ಥಾನದೊರಕಿಸಿ ಕೊಟ್ಟಿದ್ದುವು. ಕೆಲವೊಂದು ಅತಿ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಯಾವನೊಬ್ಬ ಕಾಂಗ್ರೆಸ್ ಅಧ್ಯಕ್ಷನೂ ಇವರಂತೆ ನನ್ನ ಅನುಯಾಯಿಗಳ ಒತ್ತಡ ಮತ್ತು ವಿರೋಧಿಗಳ ವಿರೋಧ ಪಡೆದುದಿಲ್ಲ. ಹಾಗಿದ್ದೂ ನಿರ್ಲಿಪ್ತ ಸ್ವಭಾವ ಮತ್ತು ದೇಶದ ಮುಂದಿನ ವಿಷಯಗಳ ಸ್ಪಷ್ಟ ತಿಳುವಳಿಕೆಯುಳ್ಳವರು ಬೇರಿಲ್ಲ"

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಮುಪ್ಪಿನ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಸರಾಗುವವರೂ ಬರೆಯಿರಿ—

ಪಿ. ಡಿ. ನವಯು, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0 12-0.

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮ ... ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುವನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. — ಕಿರಿಯರ ಪ್ರಪಂಚ, ಉಡುಪಿ.



ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ್ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ—ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅತಿಸಾರ, ಕೆಮ್ಮು, ಮೈನೋವು, ಹಲ್ಲುನೋವು, ಮಕ್ಕಳ ಕಾಲ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸರಿಕೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಶ್ಚಿತವಾಗಿ ಗುಣಪಡಿಸುತ್ತದೆ. ... ಎಮ್. ಪಿ. ಜವೇರಿಯನ್ ಮತ್ತು ಕಂಪೆನಿ ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨

ನವಯುಗ ವಾರಪತ್ರಿಕೆ ಜಾಹಿರಾತಿಗೆ ಫಲವತ್ತಾದ ಕ್ಷೇತ್ರ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DO NOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES,

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No. M 3618. **SILVER JUBILEE YEAR** ರಜತೋತ್ಸವದ ವರ್ಷ. **Estd. 1921** ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ನವಯುಗ

ವರ್ಷ ೨೫ ವಾರ ೪೬ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: SRI A. B. SHETTY. M. L. A. | Vol. 25 No. 46

ಉಡುಪಿ ● 18—7—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಕುತ್ತಿಗೆ ಹಿಡಿತ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಚೇಪ ಕಷ್ಟಗಳಿಗೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಪಥ, ಹುಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್** ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

The Modern "Ark".

'It Was Not Raining When Noah Built The Ark'.

Jehovah, the kindly Father had advised Noah to build in advance an Ark to protect himself form the deluge and he did it. The result was Noah and family got through the deluge and became the forefathers of a new age.

Advance planning against the uncertainities of the future has been the wisdom of ages. What Noah did in his days, we have to do in these days too; what the Ark did for him then, Insurance does for us to-day. In short, an Insurance Policy is the Modern Ark and an Insurance Agent is the person who induces and helps us to build our own Arks in advance.

The Canara Mutual Assurance Co., Ltd.,
HEAD OFFICE: **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad.

The Commercial Corporation of India, Ltd.,
UDIPI. (S. India.)

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS. LTD.

(ESTD. 1910)

Chief Agents for South India including Travancore. Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945 ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ತರಹದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀವಲ್ಲಿ ಬಿಡಬೇಕು. ... ಕೋರ್ಸ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳಿ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಗಾಂಧಿವಾಚನ, ವಿಜಾಪುರ—ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಶಮಲದಾಸ, ಕೆಮಿಸ್ಟ, ಕಾವೇರಿ ಬ್ಯಾಡ

Ayurveda Oushadalaya, GADAG CITY.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ
ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ— ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಝರಾಗುವವರೂ ಬರೆಯಿರಿ—

ಪಿ. ಡಿ. ನಾಯಕ್, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ಮೌಲಾನಾ ಅಜಾದ್-ವಿನಯಿ ಮತ್ತು ವಿದ್ವಾಂಸ

('HINDU' ವಿಸಿಂದ)

ನಿವೃತ್ತ ರಾಷ್ಟ್ರಪತಿ ಮೌಲಾನಾ ಅಜಾದರದು ವಿಶಿಷ್ಟ ಘನವ್ಯಕ್ತಿತ್ವ. ಒಬ್ಬನು ಗಾಂಧೀ ಭಕ್ತನಾಗಬೇಕಾದರೆ ತನ್ನ ನೂತನದ ಹೃದಯವನ್ನು ತೊಳೆದು ತಿಕ್ಕಿ ಅಲ್ಲಿ ವೈದಿಕ ಹೊಳಪನ್ನುಂಟುಮಾಡಿಕೊಳ್ಳಬೇಕು—ನೆಹರು ಅನುಯಾಯಿಯಾಗಬೇಕಾದರೆ ಮನುಷ್ಯ ಸಹಜ ಸಿಟ್ಟನ್ನು ಬಿಟ್ಟೇರಲೂ ತಗ್ಗಲೂ ಕಲಿಯಬೇಕು—ವಲ್ಲಭಭಾಯಿಗಳನ್ನನುಸರಿಸಬೇಕಾದರೆ ಮುಂದೀ ತೂಕದ ಕಲ್ಲನ್ನೊಡೆಯುವ ಏಟ ತಿಂದುಕೊಂಡು ಸರ್ಕಸ್ ಪಾಲನಾಗಬೇಕು! ಆದರೆ ಮನುಷ್ಯನಾಗಿದ್ದೇ ಮೌಲಾನರ ಹಿಂದಿರಬಹುದು. ಅವರ ಬುದ್ಧಿತೆ, ಘನತೆ, ವಿದ್ವತ್ತು, ನಿಯಮನಿಷ್ಠೆ, ಚಾತುರ್ಯ, ಚಟುವಟಿಕೆ—ಎಲ್ಲವೂ ವ್ಯವಹಾರ ಯೋಗ್ಯವಿವೆ. ಅಧ್ಯಕ್ಷ ಅಜಾದರೊಂದು ಅಮೂಲ್ಯರತ್ನ; ಅವರಲ್ಲೂ ಎರಡು ವ್ಯಕ್ತಿ ಯೊಂದ ಅನುಪನುದು—ಇಂಗ್ಲಿಸಿಗೆ ಪ್ರಾಧಾನ್ಯತೆಯಿರುವ ನಮ್ಮಲ್ಲಿ ಸಾಕಷ್ಟು ಇಂಗ್ಲಿಷ್ ಬಾರದಿದ್ದರೂ ಅಧ್ಯಕ್ಷ ಗದ್ದುಗೆಗಾಗುವ ಯೋಗ್ಯತೆಯಿರುವದು ಮೌಲಾನರಲ್ಲಿ ಮಾತ್ರ; ಆಧುನಿಕ ಸಾಹಿತ್ಯದಲ್ಲಿ ಈಗಿನ ಹಿಂದಿರುವ ಮುಸಲ್ಮಾನರಲ್ಲಿ ಆ ಪಟ್ಟಕ್ಕೇರ ಬಲ್ಲ ಯೋಗ್ಯ ಜನ ಮೌಲಾನರೊಬ್ಬರೇ. ಅವರ ಕುರಿತು 'ಹಿಂದೂ' ಪತ್ರಿಕೆಯ ಬಾತ್ಮೀದಾರನು ಸ್ವಾನುಭವದಿಂದ ಬರೆದಿಟ್ಟ ಲೇಖನವಿದು.

ಒಳ್ರಿದು ಹೊಸ ದಾಖಲೆಯಾಗಿ, ಯುದ್ಧ ಕಾಲದಲ್ಲೆಲ್ಲ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನಾ ಅಬುಲ್ ಕಲಮ್ ಅಜಾದರ ಅವಧಿಯು ಹಿಂದಿನವಾರ ಬೊಂಬಾಯಿಯಲ್ಲಿ ಮುಕ್ತಾಯಗೊಂಡಿತು. ಆ ಮಹಾ ಹುದ್ದೆಯಲ್ಲಿ ತಾನಿದ್ದ ಆರು ವರುಷಗಳಲ್ಲಿ, ಸರಕಾರದೊಡನೆಯೂ ಮುಸ್ಲಿಂ ಲೀಗಿನೊಡನೆಯೂ ಒಂದು ಗೌರವಾರ್ಹ ಒಪ್ಪಂದಕ್ಕೆ ಬರಬೇಕೆಂದು ಅವರು ಪ್ರಾಮುಖ್ಯ ಪಾತ್ರವಹಿಸಿ ನೋಡಿದ್ದರು. ಆದರೆ ಯಾರ ಅಧಿಕಾರಾವಧಿಯಲ್ಲೇ ಮೌಲಾನರು ಅಧ್ಯಕ್ಷರಾಗಿದ್ದರೋ ಆ ವೈಸರಾಯಿ ಲಿನಿತ್‌ಗೋ ಆಗಲಿ, ಮಿ. ಜಿನ್ನರಾಗಲೀ ಮೌಲಾನರ ಉಚ್ಚನಾಗರಿಕ ಸದ್ಗುಣಗಳ ಸದುಪಯೋಗ ಮಾಡಿಕೊಳ್ಳದೆ ಹೋದರು; ಇದು ಭಾರತದ ದುರ್ದೈವ!

ಒಂದು ಅನುಭವ

೧೯೪೦ರ ಜೂನ್ ಅಂತ್ಯಭಾಗ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗಾಗಿ ಮೌಲಾನಾ ಅಜಾದರಾಗ ದಿಲ್ಲಿಗೆ ಬಂದಿದ್ದರು. ಆಗ ಪಂಜಾಬಿನ ಪ್ರಧಾನ ಮಂತ್ರಿಯಾಗಿದ್ದ ಸರ್. ಸಿಕಂದರ್ ಹಯಾತ್ ಖಾನರು ಮೌಲಾನರಿಗೊಂದು ಸಂದೇಶವನ್ನು ಕೊಂಡೊಯ್ದು ಮುಟ್ಟಿಸಬೇಕೆಂದು ನನ್ನನ್ನು ಕೇಳಿಕೊಂಡರು. ಆ ಸಂದೇಶವು, ಆಗ ತಾನೇ ಚರ್ಚಿಲ್ ಸರಕಾರದಲ್ಲಿ ಭಾರತ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿದ್ದ ಮಿ. ಅಮೇರಿಯವರು ಪಾರ್ಲಿಮೆಂಟಿನಲ್ಲಿ ಮಾಡಲಿಕ್ಕಿದ್ದ ಒಂದು ಜಾಹೀರನಾಮೆಯ ಸಾರಾಂಶವನ್ನು ಒಳಗೊಂಡಿದ್ದಿತು. ಸಂದೇಶದ ಕೊನೆಯಲ್ಲಿ ಅದನ್ನು ನಿರಾಕರಿಸಬಾರದೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಆಗ್ರಹ ಪೂರ್ವಕ ಸರ್ ಹಯಾತ್ ಖಾನರು, ಕೇಳಿಕೊಂಡಿದ್ದರು. ಸರ್. ಸಿಕಂದರರಿಗಾಗ ಒಂದು ಸಂಧಾನವಾಗಲೇಬೇಕೆಂಬ ಆತುರವಿತ್ತು. ಅದಕ್ಕೆ ಮುಖ್ಯ ಕಾರಣವೆಂದರೆ, ಆ ವೇಳೆಗೆಯಲ್ಲಿ ಹಿಟ್ಲರನು ಅನನ್ಯ ವೀರನಾಗಿ ಬೆಲ್ಜಿಯಮ್, ಹೊಲ್ಲೆಂಡ್, ಫ್ರಾನ್ಸ್‌ಗಳನ್ನಾಕ್ರಮಿಸಿಕೊಂಡು ಇಂಗ್ಲಾಂಡು ಅನಾಹುತ ಪರಂಪರೆಗಳಿಗೀಡಾಗಿದ್ದುದೇ. ನಾನಾ ಸಂದೇಶವಾಹಕನಾಗಲು ಒಪ್ಪಿಕೊಂಡೆ. ಆದರೆ ಸಿಕಂದರರಿಗೊಂದು ಪ್ರಶ್ನೆ ಹಾಕಿದೆ: "ಕಾಂಗ್ರೆಸ್ ಇದಕ್ಕೆ ಒಪ್ಪಿತೆಂದೇ ಭಾವಿಸಿಕೊಳ್ಳಿ. ಮಿ. ಜಿನ್ನರು ಒಪ್ಪದೆ ಹೋದರೆ ನೀವೇ ಕುರಿತು ನಿಮ್ಮ ಸ್ವಂತ ಹಾದಿ ಹಿಡಿಯಲು ತಯಾರಿರುವಿರಾ?" ಸರ್. ಸಿಕಂದರರು ಕೊಟ್ಟ ಉತ್ತರವು ಅರ್ಥ ಗರ್ಭಿತವಾದುದು. ಲೋರ್ಡ್ ಲಿನ್‌ಲಿತ್‌ಗೋರ ಅನುಮತಿ ವಿನಹಾ ತಾನಾವುದನ್ನೂ ನಿರ್ಧರಿಸುವದೂ ಅಸಾಧ್ಯವೆಂದವರು ಹೇಳಿ ಬಿಟ್ಟರು.

ನಾನಾ ಸಂದೇಶವನ್ನು ತಪ್ಪದೆ ಸಿಮ್ಲದಿಂದ ದಿಲ್ಲಿಗೊಯ್ದೆ. ಮತ್ತು ಸಿಕಂದರರೊಡನೆ ನಡಿಸಿದ ಸಂಭಾಷಣೆಯನ್ನೂ ಮೌಲಾನರಿಗೆ ವಿವರಿಸಿದೆ. ನಾನು ಅವರೊಡನೆ ನಡಿಸಿದ ಮೊದಲನೇ ಮುಖಾಮುಖಿ ಸಂಭಾಷಣೆಯೆಂದರೆ ಅದೇ. ಅವರ ಘನವಾದ ಮರ್ಜಿ ಮತ್ತು ದಯಾಭರಿತ ವರ್ತನೆಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತುಬಿಟ್ಟವು. ಅವರು ನನ್ನ ಸಂಧಾನ ಸೂಚನೆಯನ್ನು ಅಂಗೀಕರಿಸಿಕೊಂಡರು. ಕಡೆಗೆ ಸ್ವತಃ ಪಂಜಾಬ್ ಪ್ರಧಾನಿಯ ಭೇಟಿಯನ್ನೂ ಮಾಡಿದರು; ಆದರದರಲ್ಲಿ ವಿಜಯಾಗಲಿಲ್ಲ. ಕಾಂಗ್ರೆಸ್ ಅಧ್ಯಕ್ಷನೆಂದರೆ ಅತಿ ಹೆಚ್ಚಿನ ಸಹನೆ, ಸೂಕ್ಷ್ಮ ಬುದ್ಧಿ, ಮತ್ತು ದೂರದೃಷ್ಟಿಯ ಮನುಷ್ಯನೆಂದು ನಾನೀ ಪ್ರಥಮಾನುಭವದಿಂದ ಕಟ್ಟಿದ್ದ ಅಂದಾಜಿಗೆ ಕಳೆದ ಆರು ವರುಷಗಳ ಹಲವು ಸನ್ನಿವೇಶಗಳು ಮತ್ತಷ್ಟು ಪುಷ್ಟಿ ಕೊಟ್ಟಿದ್ದುವು.

ವೈಸರಾಯರಿಂದ ಆಮಂತ್ರಣ

೧೯೪೨ರ ಆ ಪ್ರಸಿದ್ಧ ಅಗೋಸ್ತು ಜಾಹೀರುನಾಮೆ ಪ್ರಕಟವಾದೊಡನೆ ತನ್ನೊಡನೆ ಸಂಭಾಷಣೆಗೆ ಬರಬೇಕೆಂದು ವೈಸರಾಯರಿಂದ ಮೌಲಾನರಿಗೆ ಆಮಂತ್ರಣ ಬಂತು. ಆದರೆ ಅದರಲ್ಲೊಂದು ಶರ್ತವೂ ಇತ್ತು. ಬ್ರಿಟಿಷ್ ಮಂತ್ರಿಮಂಡಲವಿತ್ತಿದ್ದ ಹೇಳಿಕೆಯ ಅರ್ಥ ವಿವರಣೆ ಕೇಳಬಹುದೇ ಹೊರತು ಆ ಗಡಿ ಮೀರಿ ಹೋಗಕೂಡದೆಂಬ ನಿರ್ಬಂಧ ಹಾಕಲಾಗಿತ್ತು. ಆದರೆ ಮಾತುಕತೆಯಲ್ಲಿ ತನ್ನ ಅಭಿಪ್ರಾಯ ಸೂಚನೆಗಾವ ನಿರ್ಬಂಧವೂ ಇರಕೂಡದೆಂದು ಮೌಲಾನರಂದರು. ಅಂತಹ ಆಶ್ವಾಸನೆ ವೈಸರಾಯರಿಂದ ದೊರೆಯಲಿಲ್ಲ. ಆಗ ವೈಸರಾಯರಿಗೆ ಭೇಟಿ ಕೊಡುವದಸಾಧ್ಯವೆಂದು ಸದ್ವಿವೇಕದಿಂದ (ನನ್ನ ಅಭಿಪ್ರಾಯ ಹಾಗೆ) ಆದರೆ ಮೃದುಮಾತಿನಲ್ಲಿ ಮೌಲಾನರು ವಿವರಿಸಿದರು. ಇದನ್ನು ಅದ್ಭುತ ಮಾಡಿ, ಅಪಾರ್ಥಕಟ್ಟಿ ವೈಸರಾಯರಿಗೆ ಮಾಡಿದ ಅಪಮಾನವೆಂದೂ ಇದರಿಂದ ವೈಸರಾಯೀ ಭೇಟಿಗೆ ಧಿಕ್ಕಾರ ಸೂಚಿಸಿದಂತಾಯಿತೆಂದೂ ಹೇಳಲಾಯಿತು. ಇಂತಹ ಭಾವನೆಗಳಿಗಿಂತ ಈಗ ನಾವೆಷ್ಟು ದೂರ ಬಂದು ಬಿಟ್ಟಿದ್ದೇವೆಂಬುದು ಸುಮಾರುಒಂದುತಿಂಗಳ ಮೊದಲು ದಿಲ್ಲಿಯಲ್ಲಿ ನನಗೆ ಸ್ಪಷ್ಟವಾಗಿದೆ ನಡುಗಾಲ ಸರಕಾರ ಸ್ಥಾಪನೆಯ ಕುರಿತು ಚರ್ಚೆಮಾತುಕತೆ ನಡಿಸುವುದಕ್ಕಾಗಿ ವೈಸರಾಯರು ಪಂಡಿತ ನೆಹರುಗಳನ್ನೂ ಮಿ. ಜಿನ್ನರನ್ನೂ ಆಮಂತ್ರಿಸಿದ್ದರು. ಅಧ್ಯಕ್ಷರ ಬದಲಿಗೆ ತಾನು ಹೋಗಬೇಕಲ್ಲಾ ಎಂದು ಪಂಡಿತ ನೆಹರುಗಳು ಬಿಕ್ಕಟ್ಟಿನಲ್ಲಿ ಸಿಲುಕಿದರು; ಆದರೂ ಮೌಲಾನರ ಮತ್ತು ಕಾರ್ಯಕಾರೀ ಸಮಿತಿಯ ಅನುಮತಿ ಪಡೆದು ಅಲ್ಲಿಗೆ ಹೋದರು. ಆದರೆ ಜಿನ್ನರು ಹೋಗಲೇ ಇಲ್ಲ, ವೈಸರಾಯರು ಸ್ವಲ್ಪ ಹೊತ್ತು ಕಾದು ನೋಡಿದರು. ಆ ಮೇಲೆ ಪಂಡಿತರೊಬ್ಬರೊಡನೆಯೇ ಸುಮಾರು 1½ ಘಂಟೆ ಮಾತಾಡುತ್ತಾ ಕುಳಿತರು. ಈ ಮಾತುಕತೆಗಳಲ್ಲಿ ನಡುಗಾಲ ಸರಕಾರದ ವಿಷಯಗಳಷ್ಟೇ ಇದ್ದುದಲ್ಲ. ಆಧುನಿಕ ಇಂಗ್ಲಿಷ್ ಕವಿತೆಗಳ ಭಾವ ರೂಪ ವಿಮರ್ಶೆಗಳೂ ಬಂದಿದ್ದುವು. ಕಾಂಗ್ರೆಸ್ ಪ್ರತಿನಿಧಿಯಾಗಿ ಮೌಲಾನರೇ ಬಂದಿರಬೇಕೆಂದೂ ನೆಹರುಗಳು ಅವರ ಜತೆಗಾರನಾಗಿ ಬಂದಿರುವದು ಮಾತ್ರವೆಂದೂ ಮಿ. ಜಿನ್ನರು ನೆನಸಿರಬೇಕು. ಅಥವಾ, ನೆಹರುಗಳೊಬ್ಬರೇ ಬಂದಿದ್ದರೂ ಕೂಡಾ ಇಂತಹ ಮಾತುಕತೆಗಳಿಂದ ನಡುಗಾಲ ಸರಕಾರದ 'ಸಮಪ್ರಾತಿನಿಧ್ಯ'ಕ್ಕೆ ಭಂಗ ಬಂದೀತೆಂಬ ಭಯ ಮಿ. ಜಿನ್ನರಿಗಿದ್ದಿರಬೇಕು. ಕಾರಣ ಯಾವುದೇ ಇರಲಿ; ಆಶ್ಚರ್ಯವೆಂದರೆ ಮಿ. ಜಿನ್ನರು ಅಲ್ಲಿಗೆ ನಿಜಕ್ಕೂ ಹೋಗಲಿಲ್ಲ; ಸಿಮ್ಲಾ ಆಮಂತ್ರಣವನ್ನು ಅಂಗೀಕರಿಸಲಾರೆನೆಂದು ವೈಸರಾಯರಿಗೆ ಎಚ್ಚರಿಕೆ ಕೂಡಾ ಕೊಡಲಿಲ್ಲ.

ಒಂದು ದುಃಖದ ವಿಷಯ

ಮೌಲಾನರೇರಿರುವ ಅಧಿಕಾರ ಸ್ಥಾನದ ಘನತೆ ಮತ್ತು ಗೌರವಕ್ಕನುಗುಣವಾಗಿರುವ (ಅಥವಾ ಇರಬೇಕಾದ) ಮಾನ ಮರ್ಯಾದೆಗಳು ಕಳೆದ ಮೂರು ತಿಂಗಳುಗಳ ದಿಲ್ಲಿ ಮಾತುಕತೆಗಳ ಸಂದರ್ಭಗಳಲ್ಲಿ ಕೆಲವೊಮ್ಮೆ ಅವರಿಗೆ ನಿರಾಕರಿಸಲ್ಪಟ್ಟವೆ ಎಂಬುದಕ್ಕಾಗಿ ಎಂಥವನಾದರೂ ವ್ಯಸನಪಡಬೇಕು. ಇಂಗ್ಲಿಷಿನಲ್ಲಿ ರಾಜಕೀಯ ಚರ್ಚೆ ನಡಿಸುವದು ಮೌಲಾನರಿಂದ ಅಸಾಧ್ಯವಾದ್ದರಿಂದಲೇ ಅವರನ್ನು ಕಡೆಗಣಿಸಲಾಯಿತೆನ್ನುವದು ಅಪಹಾಸ್ಯಕರ. ಮೌಲಾನರ ಓದುವಿಕೆ ಅತಿ ವಿಸ್ತಾರವಾದುದು. ಇತ್ತೀಚೆಗೊಮ್ಮೆ ನಾನವರ ಸಂದರ್ಶನಕ್ಕೆ ಹೋಗಿದ್ದಾಗ, ಹಕ್ಸೆಯವರ 'ಕಾಲಕ್ಕೊಂದು ಕಡಿವಾಣ ಕಟ್ಟಲೇಬೇಕು' ಗ್ರಂಥ ಅವರ ಬಳಿಯಿದ್ದುದನ್ನು ಕಂಡಿದ್ದೆ. ಅರೇಬಿಕ್, ಪರ್ಶಿಯನ್, ಮತ್ತು ಉರ್ದು ಸಾಹಿತ್ಯಗಳಲ್ಲಿ ಸನ್ಮಾನ್ಯ

(೧೧ನೇ ಪುಟ ನೋಡಿರಿ)

ನೀವು ನಿಮ್ಮ ವ್ಯಾವಹಾರಿಕ ಪಟ್ಟಿ ಉಪಭೋಗಿಸಬೇಕಾದರೆ

ಒಮ್ಮೆಲೆ

ಹಣದ ರಾಶಿಯಲ್ಲಿರಬೇಕಾದ
ಸಿರಿವಂತರಾಗಬೇಕಾದ
ಲಕ್ಷ್ಮೀಪುತ್ರರಾಗಬೇಕಾದ
ಅನುಕೂಲಸ್ತರಾಗಬೇಕಾದ

ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ ಯಾಕೆಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿಲಾದದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd. 1906

CANARA BANK LIMITED

(Incorporated in British India, liability of Members Limited.)

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಮುಂತಾದವುಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ಸರ್ದಾರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ—

ಆಧುನಿಕ ಭಾರತದ ಪ್ರತಿಬಿಂಬ.

ರಾಷ್ಟ್ರಪತಿ ನೆಹರುಗಳು ಆರಿಸಿಕೊಂಡ ಹೊಸ ಕಾರ್ಯಕಾರೀ ಸಮಿತಿ ಸದಸ್ಯರು-

ಮೌಲಾನಾ ಅಬುಲ್ ಕಲಮ್ ಆಜಾದ್.
ಸರ್ದಾರ್ ವಲ್ಲಭಭಾಯಿ ಪಟೇಲ್.
ಡಾ! ರಾಜೇಂದ್ರ ಪ್ರಸಾದ್.
ಖಾನ್ ಅಬ್ದುಲ್ ಗಫರ್ ಖಾನ್.
ಪಂಡಿತ ಗೋವಿಂದ ವಲ್ಲಭ ಪಂತ್.
ಶ್ರೀ. ಸಿ ರಾಜಗೋಪಾಲಾಚಾರಿ
ಮಿ. ರಫಿ ಅಹಮ್ಮದ್ ಕಿಡ್ವಾಯಿ.
ಶ್ರೀ. ಶರಚ್ಚಂದ್ರ ಬೋಸ್.
ಶ್ರೀಮತಿ ಕಮಲಾ ದೇವಿ.
ರಾವ್ ಸಾಹೇಬ್ ಪಟ್ವರ್ಧನ್.
ಮಿ. ಫಕೀರುದ್ದೀನ್ ಅಹಮ್ಮದ್.
ಸರ್ದಾರ್ ಪ್ರತಾಪ ಸಿಂಗ್.
ಶ್ರೀಮತಿ ಮೃದುಲಾ ಸಾರಾಭಾಯಿ.
ಡಾ। ಬಾಲಕೃಷ್ಣ ವಿ. ಕೇಸ್ಕರ್.

ಕಾಂಗ್ರೆಸಿನ ಕೇಂದ್ರದಲ್ಲಿ ಉಪಾಧ್ಯಕ್ಷಗಿರಿಯೆಂಬುದಿಲ್ಲ. ಡಾ। ಬಿ. ವಿ ಕೇಸ್ಕರ್ ಮತ್ತು ಶ್ರೀಮತಿ ಮೃದುಲಾ ಸಾರಾಭಾಯಿ ಜತೆಕಾರ್ಯದರ್ಶಿಗಳಾಗಿ ನೇಮಕಗೊಂಡಿದ್ದಾರೆ. ಸರ್ದಾರ್ ವಲ್ಲಭಭಾಯಿಗಳು ಈ ಮೊದಲೂ ಖಜಾಂಚಿಯಾಗಿದ್ದರು; ಈ ಬಾರಿಯೂ ಆ ಸ್ಥಾನ ಅವರಿಗೆ ಸಂದಿದೆ

ಹಿಂದೆ ಬಿದ್ದ ಕೃಪಾಲನಿ

ಈ ಬಾರಿಯ ಕಮಿಟಿಯಲ್ಲಿ ಗೈರು ಹಾಜರಾದವರ ಪೈಕಿ ಆಶ್ಚರ್ಯಗೊಳಿಸುವ ಹೆಸರೆಂದರೆ ಕೃಪಾಲನಿಯವರದು. ಕಾರ್ಯನಿರ್ವಹಣದ ಮಟ್ಟಿಗೆ ಅವರಂತಹ ಸಮರ್ಥರನ್ನು ಕಾಂಗ್ರೆಸಿನೊಳಗೆ ಬೇರೆ ಗುರುತಿಸುವದು ಕಷ್ಟ. ಅವರ ಕಾರ್ಯಾವಧಿಯೋ? ಹತ್ತು ವರುಷವಿದ್ದು ಮೌಲಾನರ ಗಡಿಗಿಂತಲೂ ಹಿಂದಿದೆ. ಇಂತಹ ಕಾರ್ಯದರ್ಶಿಯು ನೆಹರುಗಳಗಟಕದೆ ಹೋಗಿದ್ದರೆ ಅದು ಈಬಾರಿಯಅಧ್ಯಕ್ಷರ ದುರ್ದೈವವೆನ್ನಬೇಕು; ನೆಹರುಗಳು ತಾನಾಗಿ ಅವರನ್ನು ಬಿಟ್ಟಿದ್ದರೆ ಅದು ರಾಷ್ಟ್ರಪತಿಯ ಎದೆಗಾರಿಕೆಯೆನ್ನಬೇಕು. ಇವೆರಡು ಸ್ಥಿತಿ ಮತ್ತುಗತಿ ಈ ಮಟ್ಟಿಗೆ ಒಂದುಗೂಡಿರಲೂಬಹುದು ಕಾಂಗ್ರೆಸಿನ ಸಮತಾವಾದಿ ನೊರ[illegible]ದ ಎಡಪಕ್ಷೀಯರಿಗೆ ಕಾರ್ಯದರ್ಶಿ ಕೃಪಾಲನಿಯಂತೆ ಅಡ್ಡಗಾಲಿಡುವವರು ಬೇರಿಲ್ಲ. ಎಡ ಪಕ್ಷೀಯರನ್ನು ದ್ವೇಷಿಸುವ ಮಟ್ಟಿಗೆ ಕೃಪಾಲನಿ ಬೊಂಬಾಯಿಯ ಶ್ರೀ. ಎಸ್. ಕೆ. ಪಾಟೀಲರ ಹಿರಿಯಣ್ಣ— 'ಗಾಂಧಿಜಿಯೇ ನನ್ನ ಕಾರ್ಲ್‌ಮಾರ್ಕ್ಸ್' ಎಂಬುದೇ ಕೃಪಾಲನಿಯವರ ರಾಜಕೀಯ ಸೊಲ್ಲು. ಕೃಪಾಲನಿಯವರನ್ನು ಇದ್ದಂತೆ ಇಟ್ಟು ಸಮತಾವಾದಿಗಳನ್ನು ಸಮಿತಿಗಾರಿಸಿಕೊಳ್ಳುತಿದ್ದರೆ ಅಲ್ಲಿ ಆ ಕಡೆಯ ಜನರಿದ್ದರೆಂದಾಗುತಿತ್ತು ಹೊರತು ಎಡಪಕ್ಷೀಯ ಭಾವನೆಯೂ ಅಲ್ಲಿದ್ದಂತಾಗುತಿರಲಿಲ್ಲ. ಆದರೆ ಸ್ವಭಾವತಃ ಕಾಂಗ್ರೆಸು ಎಡಕ್ಕೆ ವಾಲುತ್ತದಾದರೆ, ಅದನ್ನು ಬಲಕ್ಕೊತ್ತಿ ಹಿಡಿದುಕೊಳ್ಳುವ ಬಲತ್ಕಾರ ನೆಹರುಗಳಲ್ಲಿಲ್ಲವಾದ್ದರಿಂದ ಕೃಪಾಲನಿಗೆ ಸ್ಥಾನ ಕೊಡದಿದ್ದುದಷ್ಟೇ ಅಲ್ಲ-ಆ ಸ್ಥಾನವನ್ನು ಕುಮಾರಿ ಮೃದುಲಾರಂತಹ ಎಡಪಕ್ಷೀಯರಿಗಿತ್ತಿದ್ದಾರೆ. ಹೀಗೆ ವಾಲುವಲ್ಲಿ ನಿಲ್ಲಲು ಆತಿಸುವವರು ಕೃಪಾಲನಿಯೂ ಅಲ್ಲ; ಕಾಂಗ್ರೆಸ್ ಸಮತಾವಾದಿಗಳಿಗಾದ ನಿಜವಾದ ವಿಜಯವಿಲ್ಲಿಯೇ. ಇನ್ನು ಕಾಂಗ್ರೆಸಿನ ಅಧಿಕೃತ ಪ್ರಕಟಣೆಗಳು-ಕಾಂಗ್ರೆಸಿನ ನಿತ್ಯದ ಚಟುವಟಿಕೆಗಳು-ಈ ಕಾರಣದಿಂದಾಗಿ ಮುಂಚೆಗಿಂತ ಕ್ರಾಂತಿದಾಯಕವಾಗಬಹುದು.

ಈ ಬಾರಿ ಗೈರು ಹಾಜರಿರುವ ಇತರ ಹಿರಿಯರು

ಮತ್ತೊಂದು ಹೆಸರೆಂದರೆ ಸರೋಜಿನಿದೇವಿಯದು. ಪ್ರಾಯಶ: 1920ರಿಂದ ಶ್ರೀಮತಿಯವರು ಆ ಸ್ಥಾನ ಬಿಟ್ಟವರಲ್ಲ. ಇವರ ಪಿನಾಯತಿಗೆ ಪ್ರಗತಿ ಅಥವಾ ಅಪ್ರಗತಿಶೀಲತೆಯು ಕಾರಣವಿರಲಾರದು ಕಾಂಗ್ರೆಸಿನೊಳಗಿನ ಯಾವ ಪಕ್ಷವನ್ನೂ ಸಹಿಸುವ ಅಥವಾ ಪಕ್ಷಾತೀತವಾಗಿರುವ ಮನೋವೃತ್ತಿ ಸರೋಜಿನಿಯದು. ಆದರೀಗ ಪ್ರಾಯ ಕಳೆದ ಶ್ರೀಮತಿಯವರು ಸುಖಜೀವಿಯಾಗುತಿದ್ದಾರೆಂಬುದು ಒಡೆದು ಕಾಣುತಿತ್ತು. ಕಮಿಟಿಯ ಸ್ತ್ರೀ ಪ್ರಾತಿನಿಧ್ಯವು ಘನವಾಗಿದ್ದರೆ ಸಾಲದು-ಚಟುವಟಿಕೆಯದೂ ಆಗಬೇಕೆಂದು ರಾಷ್ಟ್ರಪತಿ ನೆಹರು ಒಬ್ಬ ದೇವಿಯ ಬದಲಿಗೆ ಇಬ್ಬರು ದೇವಿಯರನ್ನಾರಿಸಿಕೊಂಡಿದ್ದಾರೆ ವಿರಾಮಾವಸ್ಥೆಕತೆಯ ಸರೋಜಿನಿಯವರ ಸನ್ನೇತ್ರ ಸ್ತ್ರೀ ಸಮಾಜವೇ ಇದಕ್ಕಾಗಿ ಆನಂದಪಡಬಹುದು. ಮೇಲಾಗಿ ಕಾಂಗ್ರೆಸ್ ಚರಿತ್ರೆಯಲ್ಲೇ ಇದೀಗ ಮೊದಲಬಾರಿ ಕುಮಾರಿ ಮೃದುಲಾ ಕಾರ್ಯದರ್ಶಿ ಸ್ಥಾನಕ್ಕೇರಿದ್ದಾರೆ. ಮೌಲಾನರ ಅವಧಿಯೊಡಿಗೆ ತಮ್ಮದನ್ನೂ ಮುಗಿಸಿಕೊಂಡ ಇತರ ಹಿರಿಯ ಸದಸ್ಯರೆಂದರೆ ಡಾ। ಪಟ್ಟಾಭಿ, ಮಿ. ಆಸಫಾಲಿ, ಡಾ। ಪ್ರಫುಲ್ಲಚಂದ್ರ ಘೋಷ್, ಶ್ರೀ. ಹರೆಕೃಷ್ಣ ಮೆಹತಾಬ್ ಮತ್ತು ಶ್ರೀ. ಶಂಕರರಾವ್ ದೇವ್ರೋ.

ನೆಹರುಗಳ ಭಾವನೆಯೇನಿರಬಹುದು?

ಈ ಬಾರಿ ದಕ್ಷಿಣ ಭಾರತದಿಂದ ರಾಜಾಜೀ ಮತ್ತು ಕಮಲಾದೇವಿ-ಹೀಗೆ ಇಬ್ಬರಿದ್ದಾರೆ. ರಾಜಾಜಿ ಬಂದುದು ಬುದ್ಧಿಬಲದಿಂದಾದರೆ ಶ್ರೀಮತಿ ಕಮಲಾದೇವಿ ಬಂದುದು ಮಹಿಳೆ ಮತ್ತು ಕನ್ನಡನಾಡಿನವರೆಂಬ ಕಾರಣದಿಂದ. ಪಂಡಿತ ನೆಹರುವಿನ ನೇಮಕವು ರಾಷ್ಟ್ರದ ಸದ್ಯಸ್ಥಿತಿಯನ್ನು ಯಥಾರ್ಥವಾಗಿ ಪ್ರತಿಬಿಂಬಿಸಿದೆ ಕಾಂಗ್ರೆಸ್ ಸಮತಾವಾದಿಗಳ ಬಲವೀಗ ಬೆಳೆದಿದೆ. ಈ ಬಾರಿಯ ಅ. ಭಾ. ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಹೈಕಮಾಂಡಿನ ಮುಖ್ಯ ಠರಾವನ್ನು ವಿರೋಧಿಸಿ ಅವರಿಗುಂಟಾದ ಸೋಲು ಹಿಂದಿನದೇ-ಆದರಲ್ಲಿ ಅವರು ಪಡೆದ ಬೆಂಬಲ ಮಾತ್ರ ಹೊಸತು. ಸಭೆಯ ಐದನೇ ಒಂದಂಶ ಅವರ ಪರವಾಗಿತ್ತು; ಆ ಮೊದಲೆಂದೂ ಇಂತಹ ಬಲ ಸಮತಾ ವಾದಿಗಳಿಗಿರಲಿಲ್ಲ. ಇದಕ್ಕೆ ಕಾರಣವೆಂದರೆ ಆಗೋಸ್ತು ಗಲಭೆ. ಕಮ್ಯೂನಿಸ್ಟರನ್ನು ಕಾಂಗ್ರೆಸಿನಿಂದ ಹೊರಗಟ್ಟಿಸಿದುದೂ ಅದೇ-ಸೋಶಿಯಾಲಿಸ್ಟರನ್ನು ಕಾಂಗ್ರೆಸಿನೊಳಗಡೆ ಬೆಳೆಸಿದುದೂ ಅದೇ. ಕಮ್ಯೂನಿಸ್ಟರು ಆಗೋಸ್ತು ಗಲಭೆಗೆ ಅಡ್ಡಗಾಲಿಟ್ಟಿದ್ದರೆ ಸೋಶಿಯಾಲಿಸ್ಟರು ತೆರೆಯ ಮರೆಯಲ್ಲೇ ಅದನ್ನು ನಡೆಸಿದ್ದರು; ತಮ್ಮ ಸಾಹಸ ಕೃತ್ಯಗಳಿಂದ ದೇಶದ ಗೌರವ ಸಂಪಾದಿಸಿದ್ದರು ರಾಷ್ಟ್ರಪತಿ ನೆಹರು-ಕ್ರಾಂತಿಕಾರಿ ವ್ಯಕ್ತಿ-ಉಗ್ರಗಾಮಿಗಳ ಅಭಿವೃದ್ಧಿಗಾಗಿ ಮತ್ಸರಪಡುವವರಲ್ಲ ಕಾಂಗ್ರೆಸ್ ಕೇಂದ್ರದಲ್ಲಿ ಬಂದಿಸಿಂದಿದುವರೆಗೂ ಎಡಪಕ್ಷೀಯರಿಗಾತ್ರಯವಾಗಿ ಇದ್ದವರು ಅವರೇ ಆದ್ದರಿಂದ ಆವರೀ ಬಾರಿ ಸಮತಾವಾದಿ ಪಕ್ಷವನ್ನು ಸಮಿತಿಗಾಮಂತ್ರಿಸಿಕೊಂಡಿದ್ದರು. ಜೈ ಪ್ರಕಾಶ್, ಲೋಹಿಯಾ, ಅಚ್ಯುತ ಪಟ್ವರ್ಧನ್ ಮೊದಲಾದವರನ್ನು ಕರೆದರೂ ಕಾಂಗ್ರೆಸಿನ ಘಟನಾ ಸಮಿತಿ ನಿರ್ಧಾರಗಳಿಗೊಪ್ಪದ ಅವರಿದನ್ನೂ ನಿರಾಕರಿಸಬೇಕಾಯಿತು. ಆದರೂ ಸಮತಾವಾದಿ ಪಕ್ಷದ ಸದಸ್ಯೆ ಶ್ರೀಮತಿ ಕಮಲಾ ದೇವಿ ಆ ಪಕ್ಷದ ಸಮ್ಮತಿಯಿಂದಲೇ ಅಲ್ಲಿದ್ದಾರೆ.

ಈ ಹೊಸಬರು

ಮೃದುಲಾ ಕೆಲಸಗಾರರ ಮುಂದಾಳು; ನಿಜಕ್ಕೂ ಎಡಪಕ್ಷಕ್ಕೆ ಸೇರಿದವರು, ಇನ್ನೊಬ್ಬ ಕಾರ್ಯದರ್ಶಿ ಡಾ। ಕೇಸ್ಕರರ ಹೆಸರು ಅ. ಭಾ. ಕಾಂಗ್ರೆಸ್ ಕಾರ್ಯಾಲಯದ ಹೊರಗಾರಿಗೂ ಗೊತ್ತಿರಲಿಕ್ಕಿಲ್ಲ. ಆದರೆ ಯುದ್ಧ ಪೂರ್ವದಲ್ಲಿ ಕಾಂಗ್ರೆಸ್ ಕಚೇರಿಯ ವಿದೇಶ ಖಾತೆಯ ಕಾರ್ಯದರ್ಶಿಯಾಗಿ ದುಡಿದವರು. ಆಗೋಸ್ತು ಗಲಭೆಯಲ್ಲಿ ಕಾರಾಗ್ರಹ ಕಂಡವರು. ಸದ್ಯ ಅ. ಭಾ. ಕಾಂಗ್ರೆಸ್ ಕಮಿಟಿ ಸದಸ್ಯರಲ್ಲ; ಮುಂದಾಗಿ ಕಾರ್ಯಕಾರೀ ಕಮಿಟಿಗೆ ಸೇರಿಸಿ ಆ ಮೇಲೆ ಅಖಿಲ ಭಾರತ ಕಮಿಟಿಗೆ ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕಾದರೆ ರಾಷ್ಟ್ರಪತಿಗೆ ಮುಂದಿಟ್ಟಾಗಿರುವ ವಿಶೇಷ ಯೋಗ್ಯತೆ ಅವರಲ್ಲಿರಬೇಕು. ರಾವ್ ಸಾಹೇಬ್ ಪಟ್ವರ್ಧನರು ಸಮತಾವಾದಿ ಪ್ರಮುಖ; ಅಚ್ಯುತ ಪಟ್ವರ್ಧನರ ಸಹೋದರ; ಇವರೂ ಸಮತಾವಾದಿಯೇ. ಮಿ. ರಾಫಿ ಅಹಮ್ಮದ್ ಕಿಡ್ವಾಯಿಯವರೂ ಎಡ ಪಕ್ಷೀಯರೇ ಇದ್ದು ಸಂಯುಕ್ತ ಪ್ರಾಂತ್ಯದ ಗೃಹಸಚಿವರಾಗಿದ್ದಾರೆ. ಮಿ. ಫಕೀರುದ್ದೀನ್ ಅಹಮ್ಮದರು ಹಿಂದಿನ ಆಸ್ಸಾಮ್ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದವರು. ಬಲಪಕ್ಷೀಯರಲ್ಲ; ಮುಂದಿನ ರಾಜ್ಯಾಂಗ ರಚನೆಯಲ್ಲಿ ಮಾರ್ಮಿಕಭಾಗವಹಿಸಲಿರುವ ಆಸ್ಸಾಮಿನ ಪ್ರತಿನಿಧಿಯಾಗಿ ಇವರನ್ನು ಆರಿಸಿಕೊಳ್ಳಲಾಗಿದೆ. ಸಿಖ್ಖರ ಪ್ರತಿನಿಧಿಯಾಗಿ ಪಂಜಾಬಿನ ಸರ್ದಾರ್ ಪ್ರತಾಪಸಿಂಗರಿದ್ದಾರೆ. ಹಲವು ವರುಷಗಳ ಮೊದಲಿದ್ದ ಸರ್ದಾರ್ ಮಂಗಲ ಸಿಂಗರ ನಂತರ ಕಾಂಗ್ರೆಸ್ ಹೈಕಮಾಂಡಿನಲ್ಲಿ ಸಿಖ್ಖರಿರಲಿಲ್ಲ. ಶರತ್‌ಚಂದ್ರ ಬೋಸರೀಗ ಉಗ್ರಗಾಮಿತ್ವದಲ್ಲಿ ಸಮತಾವಾದಿಗಳನ್ನು ಮೀರಿ ಮುಂದೊತ್ತುತ್ತಿರುವಂತಿದೆ. ಅಂತೂ, ಆಜಾದ್, ವಲ್ಲಭಾಯಿ, ಪ್ರಸಾದ್, ಗಫರ್‌ಖಾನ್, ಪಂತ್, ರಾಜಾಜೀ-ಈ ಆರು ಮಂದಿಯನ್ನು ಬಿಟ್ಟರೆ, ಹದಿನಾಲ್ಕು ಮಂದಿಯುಳ್ಳ ನವಕಮಿಟಿಯ ಉಳಿದೆಂಟು ಮಂದಿಯನ್ನೂ ಎಡಪಕ್ಷೀಯರ ಲೆಕ್ಕಕ್ಕೆ ಹಿಡಿಯಬಹುದು. ಅಧ್ಯಕ್ಷರನ್ನು ಎಡ-ಬಲಗಳ ಮಧ್ಯದ ಹೃದಯವೆಂದಿಟ್ಟು ಕೊಂಡರೆ ಕೈ-ಕಾರ್ಯದರ್ಶಿಗಳೂ ಎಡಪಕ್ಷೀಯರೇ. ಮೇಲಾಗಿ ಈ ಮೊದಲು ಮೂವರು ಮುಸಲ್ಮಾನ ಸದಸ್ಯರಿದ್ದರೆ ಈ ಬಾರಿ ನಾಲ್ವರಾಗಿದ್ದಾರೆ; ಒಬ್ಬ ಮಹಿಳೆಯ ಬದಲಿಗೆ ಇಬ್ಬರು ಬಂದಿದ್ದಾರೆ; ಎಂದೂ ಪ್ರಾತಿನಿಧ್ಯ ಪಡೆಯದ ಕರ್ನಾಟಕಕ್ಕೆ ಹೊಸದಾಗಿ ಸ್ಥಾನ ಗೌರವ ದೊರಕಿದೆ; ಸಿಖ್ಖರೂ ಪ್ರಾತಿನಿಧ್ಯ ಪಡೆದರು; ಪರಿಸ್ಥಿತಿಯ ಒತ್ತಡದಿಂದ ವಿವಿಧ ದೃಷ್ಟಿಯಿಂದ ಮಹತ್ಸ್ಥಾನ ಪಡೆದ ಆಸ್ಸಾಮು, ಪಂಜಾಬು, ಬಂಗಾಳ, ಮಹಾರಾಷ್ಟ್ರ, ಕರ್ನಾಟಕ ಮೊದಲಾದ ಪ್ರಾಂತ್ಯಗಳಿಗೆ ಪ್ರಾತಿನಿಧ್ಯ ಕೊಡಲಾಗಿದೆ ರಾಜಕೀಯ ಭಾವನೆಯನ್ನು—ಜಾತೀಯರು ಮತ್ತು ಸ್ಥಳೀಯರು ಪ್ರಾತಿನಿಧ್ಯವನ್ನು-ಇಲ್ಲಿ ಪ್ರತಿಬಿಂಬಿಸಿಕೊಳ್ಳಲಾಗಿದೆ. ಹರಿಜನರ, ಹಿಂದೀ

(೯ನೇ ಪುಟ ನೋಡಿರಿ)

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: **DHARWAR.**

Or

BRANCH OFFICE:

Court Road. UDP, S. K.

ಕಾಂಗ್ರೆಸಿನ ಆಂತರಿಕ ಅಪಾಯಗಳ ಕುರಿತು ಗಾಂಧಿಜೀಯ ಎಚ್ಚರಿಕೆಯ ಮಾತು.

"ಘಟನಾ ಸಮಿತಿ ನಿರರ್ಥಕವಾಗುತ್ತಾದರೆ ಅದಕ್ಕೆ ಪ್ರತಿ ಬಾರಿಯೂ ಬ್ರಿಟಿಷರು ದುಷ್ಟರಾಗಿರುವದೇ ಕಾರಣವಾಗದು; ಬದಲಿಗೆ ನಾವು ಅವಿವೇಕಿಗಳು-ಅಥವಾ ದುಷ್ಟರೆಂದೇ ನಾನನ್ನಬಾರದೇನು-ಆಗುವದರಿಂದಲೇ ಹಾಗಾಗಬಹುದು. ನಾವು ಅವಿವೇಕಿಗಳಿರಬಹುದು, ದುಷ್ಟರಿರಬಹುದು, ಅಥವಾ ಎರಡೂ ಆಗಿರಬಹುದು. ಹೇಗಿದ್ದರೂ ನಾವು ನಮ್ಮ ಒಳಗಡೆಯ ಅಪಾಯವನ್ನು ನಿರೀಕ್ಷಿಸಬೇಕಲ್ಲದೆ ಹೊರಗಿನ ಅಪಾಯಕ್ಕೆ ಹೆದರಬೇಕಾಗಿಲ್ಲವೆಂಬುದು ನನಗೆ ಸ್ಪಷ್ಟವಾಗಿದೆ"-ಎಂದು ಜುಲೈ ತಾ. 14ರ 'ಹರಿಜನ' ಪತ್ರಿಕೆಯಲ್ಲಿ 'ನಿಜವಾದ ಅಪಾಯ' ಎಂಬ ತಲೆಬರಹದಡಿಯಲ್ಲಿ ಗಾಂಧಿಜೀ ಬರೆದಿದ್ದಾರೆ. ಆ ಲೇಖನದ ಸಾರಾಂಶ ಹೀಗಿದೆ:—

ಅ. ಭಾ. ಸಮಿತಿ ಸಭೆಯಲ್ಲಿ

"ಕಾರ್ಯಕಾರೀ ಸಮಿತಿಯ ಠರಾವಿನ ವಿರುದ್ಧವಾಗಿ ನಡೆದ ಕೆಲವು ಸ್ಫೂರ್ತಿಯ ಭಾಷಣಗಳನ್ನು ಬೊಂಬಾಯಿಯ ಕಾಂಗ್ರೆಸ್ ಸಭೆಯಲ್ಲಿ ನಾನಾಲಿಸಿದ್ದೆ. ಅವರು ಚಿತ್ರಿಸಿದ ಆ ಅಪಾಯಗಳಿಗೆ ನಾನಿಲ್ಲಿ ಅನುವು ಕೊಡಲಾರೆ. ದೃಢ ಸತ್ಯಾಗ್ರಹಿಯೊಬ್ಬನು ತನ್ನ ವಿರೋಧಿ ಕಡೆಯಿಂದ ತೋರುವ ದೃಶ್ಯ ಅಥವಾ ಅದೃಶ್ಯ ಅಪಾಯಗಳಿಂದ ಎಂದಿಗೂ ಕರ್ತವ್ಯ ಭ್ರಷ್ಟನಾಗಲಾರ. ಪ್ರತಿಯೊಂದು ಸೇನೆಯೂ ಹೆದರಬೇಕಾಗದಂತೆ ಅವನು ನಿಜಕ್ಕೂ ಭಯಪಡಬೇಕಾದುದು ಒಳಗಿನ ಅಪಾಯಗಳಿಗೆ ಮಾತ್ರ. ಇದಿರುಪಾದಗಳಲ್ಲಿ ಎಂತಹ ಉಜ್ವಲತೆ ಬೇಕಾದರೂ ಇರಲಿ, ಸಂಗತಿಯ ಜ್ಞಾನವಿಲ್ಲದಿದ್ದರೆ-ಸಾಧಾರ ಮತ್ತು ಸಮಾಲೋಚನೆಯಿಲ್ಲವಾದರೆ-ಕಾರ್ಯತಃ ಫಲಿಸುವಂತಿರದೆ ಹಾಗೂ ತಾನೂ ವಿರೋಧಿಸಿದ ವಿಷಯಕ್ಕಿಂತ ಹೆಚ್ಚಿನ ಆಕರ್ಷಣೆ ಸ್ವತಃ ತನ್ನಲ್ಲಿರದೆ ಹೋದರೆ-ಅದರ ಉದ್ದೇಶ ಪರಾಭವಗೊಳ್ಳುವದು. ಕಳೆದ ಸಭೆಯ ಇದಿರುವಾದಿಗಳು ಇದಕ್ಕುತ್ತರ ಕೊಡಲಿ.

ಆಂತರ್ಗತ ಅಪಾಯ

ಆಂತರಂಗದ ಅಪಾಯಗಳನ್ನು ಎತ್ತಿ ತೋರಿಸುವದೊಂದೇ ಇಲ್ಲಿ ನನ್ನ ಉದ್ದೇಶ. ಈ ಪೈಕಿ ಪ್ರಾಮುಖ್ಯತೆಯಲ್ಲಿ ಪ್ರಥಮ ದ್ದೆಂದರೆ ಮಾನಸಿಕ ಮತ್ತು ದೈಹಿಕ ಆಲಸ್ಯ. ಜೈಲು ಶಿಕ್ಷೆಯನುಭವಿಸಿದಂದ ಮೇಲೆ ಕಾಂಗ್ರೆಸಿಗರು ಸ್ವಾತಂತ್ರ್ಯ ಸಾಧನೆಗೆ ಮತ್ತೇನೂ ಮಾಡಬೇಕಾಗಿಲ್ಲವೆಂಬ ಜಡಾತ್ಮ ತೃಪ್ತಿಯಿಂದಲೆ ಇದು ಆವಿರ್ಭವಿಸುತ್ತದೆ; ಕೃತಜ್ಞತಾ ಭಾವನೆಯ ಸಂಸ್ಥೆಯು ಚುನಾವಣೆಗಳಲ್ಲಿಯೂ ಅಧಿಕಾರ ಸ್ಥಾನಗಳಲ್ಲಿಯೂ ಇಂಥವರಿಗೇನೇ ಪ್ರಥಮಾವಕಾಶವಿತ್ತು, ಅವರ ಸೇವೆಯನ್ನು ಬಹುಮಾನಿಸತಕ್ಕದ್ದೆಂಬ ಭಾವನೆಯಿದೆ. ಹೀಗಾಗಿ, 'ಉಡುಗೊರೆಯ ಸ್ಥಾನಗಳು' ಎಂದು ಗಣಿಸಲ್ಪಟ್ಟವುಗಳನ್ನು ಸಂಪಾದಿಸಿಕೊಳ್ಳಲು ನೋಟಕ್ಕೆ ಸಹ್ಯವಾದ ಹಾಗೂ ಬಂಡು ರೀತಿಯ ಸ್ಪರ್ಧೆಗಳು ನಡೆದಿವೆ. ಇಲ್ಲಿದೆ ಇವ್ಮಡಿ ಭ್ರಮೆ! ಕಾಂಗ್ರೆಸ್ ಶಬ್ದ ಕೋಶದಲ್ಲಿ 'ಉಡುಗೊರೆ'ಯೆಂಬುದೇ ಇಲ್ಲ; ಕಾರಾಗೃಹವಾಸವು ಸ್ವತಃ ಒಂದು ಬಹುಮಾನ. ಅದು ಸತ್ಯಾಗ್ರಹಿಯಾದವನ ಪ್ರಥಮ ಪರೀಕ್ಷೆ, ಅದರ ಗುರಿಯೆಂದರೆ-ಡ್ಯಾಡಿ ಕುರಿಮರಿಯಂತೆನ್ನಬಹುದು- ವಧಾಗೃಹವೊಂದೇ. ಬದಲಿಗೀಗ ಜೈಲು ಪ್ರವೇಶವೆಂಬುದು ಕಾಂಗ್ರೆಸಿಗೆ ದೊರೆತ ಪ್ರತಿಯೊಂದು ಅಧಿಕಾರಕ್ಕೂ ಪಾಸ್‌ಪೋರ್ಟಾಗಿ ಉಪಯೋಗಿಸಲ್ಪಡುತ್ತಿದೆ. ಹೀಗಾಗಿ 'ಸತ್ಯಾಗ್ರಹೀ ಜೈಲು ವಾಸವೂ' ಕಳ್ಳರು ಹಾಗೂ ದರೋಡೆಗಾರರಂತೆಯೇ ಹೀನ ದರ್ಜೆಯದಾಗುವ ಸಂಭವ ಕಾಣುತ್ತಿದೆ. ಅಂತರ್ಗಾಮೀ ವರ್ಗೆಯ ನನ್ನ ಮಿತ್ರರು ಕಾರಾಗೃಹ ವಾಸವೆಂಬುದು ತುಲನಾತ್ಮಕವಾಗಿ ಸುಮಾರು ಪ್ರತಿಷ್ಠೆಗೆಯೇ ಸರಿ ಎಂದು ನಿರ್ಧರಿಸಿ, ಅದರಿಂದ ತಪ್ಪಿಸಿಕೊಂಡುದರಲ್ಲಿ ಆಶ್ಚರ್ಯವಿಲ್ಲ ಇದೀಗ ಕಾಂಗ್ರೆಸ್ ಹೋಗಲಿರುವ ಹಾದಿಯನ್ನು ತೋರಿಸಿ ಕೊಡುವ ತೋರ್ಗಂಭವೆನ್ನಬೇಕು.

ಅಪಾಯಕರ ಪಥ

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ಣಯವನ್ನು ವಿರೋಧಿಸಿದ ಮಿತ್ರರು ತಮ್ಮ ಗುರಿ ಯಾವುದೆಂಬುದನ್ನು ಅರಿತಿದ್ದಂತೆ ಕಾಣುವದಿಲ್ಲ. ಫ್ರೆಂಚ್, ಸೋವಿಯೆಟ್, ಅಥವಾ ಇಂಗ್ಲಿಷರ ಮಾದರಿಯ ರಕ್ತಮಯ ಕ್ರಾಂತಿಯಿಂದ ಸ್ವಾತಂತ್ರ್ಯಗಳಿಸಬೇಕೆಂಬುದೇ ಆ ಗುರಿಯಾಗಿರಬಹುದೆ? ಹಾಗಿದ್ದಲ್ಲಿ ಯಥಾರ್ಥತೆ ಹಾಗೂ ಪ್ರಾಮಾಣಿಕತೆಯ ಕಾರ್ಯ ಇನ್ನೂ ಆರಂಭವಾಗಿಲ್ಲವೆನ್ನಬಹುದು. ಅವರು ಬಹಿರಂಗವಾಗಿಯೇ ಕಾಂಗ್ರೆಸನ್ನು ಅಂತಹ ಸಂಸ್ಥೆಯಾಗಿ ಮಾಡಿ ಅತ್ಯಪಾಯಕರ ಹಾದಿಯಲ್ಲಿ ನಡೆಯಬೇಕಾಗಿದೆ. ಆಂತರ್ಗತ ಚಟುವಟಿಕೆಗಳೇ ಲೋಕ ಸಾಧಕಗಳಾಗಿ ಲಗ್ನೀಕರಿಸಲ್ಪಟ್ಟು, ಅವೀಗ ಕಾಂಗ್ರೆಸಿನ ವಿರುದ್ಧ ಸಾಧನೆಗೈನಿಂತಲ್ಲಿ ಆಗ ನನ್ನ ವಾದ ಟೊಳ್ಳಾಗುತ್ತದೆ. ಇಂತಹ ಯೋಚನೆ ಮಾತ್ರದಿಂದಲೇ ನಾನು ಹಿಮ್ಮೆಟ್ಟುತ್ತೇನೆ. ಈ ಯೋಚನೆಯು ತೀರಾ ನಿರಾಧಾರವಿದೆಯೆಂದು ನಾನು ನನ್ನ ಸ್ವಂತ ಶುದ್ಧತೆಗಾಗಿಯೇ ಅರಿಸಬೇಕಾಗುತ್ತದೆ. ಅಂದಮೇಲೆ, ಈಗ ಕಾಂಗ್ರೆಸ್ ರಾಜ್ಯ ಅಥವಾ ಪ್ರಾತಿನಿಧಿಕ ರಾಜ್ಯ-ಅದು ಕಾಂಗ್ರೆಸ್ ಯಾನೆ ಮುಸ್ಲಿಂ ಲೀಗ್ ವರ್ಗದ ಪೈಕಿ ಯಾವುದೇ ಇರಲಿ-ಇರುವಾಗ, ಅದನ್ನವರು ನಿಮಿರವಾಗಿ ಸುಧಾರಿಸಲು ತೊಡಗಬೇಕೇ ಹೊರತು ಒಟ್ಟಾರೆ ಖಂಡಿಸಬಾರದು. ಪ್ರಜಾಪ್ರಭುತ್ವವು ಅದಾವ ಮಟ್ಟದ್ದೇ ಇರಲಿ, ಅದರಲ್ಲಿಯೂ ಸಾರ್ವತ್ರಿಕ ಅಹಿಂಸಾತ್ಮಕ ಅಸಹಕಾರಕ್ಕೆ ಸ್ಥಾನವಿಲ್ಲ.

ಎಲ್ಲಾ ಪಾಪವೂ ಬ್ರಿಟಿಷರ ತಲೆ ಮೇಲೆ?

ಮಧ್ಯರೆಯಲ್ಲಿನ ಆ ಹುಚ್ಚು ಗಲಭೆಗೆ ಹೊಣೆ ಯಾರು? ಅಷ್ಟು ದೂರವೇಕೆ, ಅಹಮ್ಮದಾಬಾದಿನ ಗಲಭೆಗೆ ಯಾರು? ಬ್ರಿಟಿಷ್ ಯಂತ್ರದ ನೇಲಿಯೇ ಪ್ರತಿಯೊಂದು ಪಾಪದ ಹೊಣೆಯನ್ನೂ ಹೇರಲು ನೋಡುವದು ಅವಿವೇಕತನ. ಈ ಬುದ್ಧಿಗೇಡೀ ತತ್ವವು ನಮ್ಮಲ್ಲಿ ಬ್ರಿಟಿಷರದ್ದೇ ಅಲ್ಲವಾದರೂ ವಿದೇಶೀ ಆಳ್ವಿಕೆಯನ್ನು ಚಿರಸ್ಥಾಯಿ ಮಾಡಬಹುದು. ಹೇಗಾದರೂ ಬ್ರಿಟಿಷರು ಹೋಗತಕ್ಕವರೇ. ಅವರ ಸ್ವೀಕೃತ ಪತ್ರದಿಂದ ನನಗೆ ಹೊಳೆದಂತೆ ಸುವ್ಯವಸ್ಥೆಯಿಂದಲೇ ಹೊರಡುವ ಆಲೋಚನೆಯಲ್ಲಿ ಅವರಿದ್ದಾರೆ. ಅಥವಾ ಸಶಸ್ತ್ರ ಶಕ್ತಿಗಳ ಸಮ್ಮಿಶ್ರ ವಿರೋಧ ಬಲದಿಂದಾಗಿ ಹಿಂದುಸ್ಥಾನವು ಅಹಿಂಸಾ ಪಥ ಬಿಡಬಹುದೆಂದೂಹಿಸಿಕೊಂಡು ಅದನ್ನು ಅದರ ಪಾಲಿಗೇನೇ ಬಿಟ್ಟು ಗಂಟುಮೂಟೆ ಕಟ್ಟಬಹುದು. ತಮಗೆ ಯಾವ ಮಾದರಿಯ ಸ್ವಾತಂತ್ರ್ಯ ಬೇಕಾಗಿದೆಯೆಂಬುದನ್ನು ಈಗ ಇದಿರುವಾದಿಗಳು ಕಾಂಗ್ರೆಸಿಗರೆಲ್ಲಾ ಹೇಳಿ ಬಿಡಲಿ. ಸಾಮೂಹಿಕವಾಗಿ ಹೇಳುವದಾದರೆ ತಮಗಾವ ಮಾದರಿಯ ಸ್ವಾತಂತ್ರ್ಯಬೇಕೆಂಬುದನ್ನು ಕಾಂಗ್ರೆಸಿಗರು ನಿಜಕ್ಕೂ ಅರಿಯರು. ಕಾಂಗ್ರೆಸ್ ಸೂತ್ರವನ್ನು ಗಿಳಿಬಾಯಿ ಪಾಠ ಹೇಳುವದೊಂದೇ ಅವರಿಗೆ ಗೊತ್ತು. ಅಥವಾ 'ನಮಗೆ ಬೇಕಾದುದು ಕಾಂಗ್ರೆಸ್ ರಾಜ್ಯ' ಎಂಬೊಂದರಿಂದಲೆ ಅವರ ಸ್ವಾತಂತ್ರ್ಯದ ಪೂರ್ಣ ವಿವರ ಮುಗಿಯುತ್ತದೆ. ಇದವರ ತಪ್ಪಾಗಿರದು; ಮುಂದಿನ ಎಲ್ಲಾ ಆಲೋಚನೆಯನ್ನೂ ಅವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಬಿಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಸ್ತ್ರೀಪುರುಷನೂ ತನ್ನಲ್ಲಿ ತಾನು ಸ್ವತಂತ್ರ ಯೋಚನೆ ಮಾಡಿಕೊಳ್ಳಲು ಕಲಿಯುತ್ತಾನೆ. 'ಮರ್ಜಿಯ ಪ್ರಾರಂಭ ಮನೆಯಲ್ಲೇ' ಎಂಬಂತೆಯೇ ಪ್ರತಿಯೊಂದು ಸುಧಾರಣೆಯೂ ಇದೆ. ಹೀಗೇನೇ ಅಲ್ಲದೆ ನಿಜವಾದ ಕ್ರಾಂತಿಯು ಬೇರಾವ ರೀತಿಯಿಂದಾಗಬಲ್ಲುದೋ ನಾನರಿಯೆ. ಆದ್ದರಿಂದ ಘಟನಾ ಸಮಿತಿ ಟೊಳ್ಳಾಗಿ ಹೋದರೆ ಅದು ಬ್ರಿಟಿಷರ ದುಷ್ಟತ್ವದಿಂದಲ್ಲ-ನಮ್ಮ ಅವಿವೇಕತನದಿಂದ; ಅಷ್ಟೇಯಾಕೆ, ದುಷ್ಟತನದಿಂದ; ಅಥವಾ ಅವೆರಡರಿಂದಲೂ. ನನ್ನ ದೃಢ ವಿಶ್ವಾಸವೆಂದರೆ ನಾವು ಆಂತರಿಕ ಅಪಾಯಕ್ಕೆ ಹೆದರಬೇಕಾದಷ್ಟು ಹೊರಗಿನದಕ್ಕೆ ಹೆದರಬೇಕಾಗಿಲ್ಲ. ಮೊದಲನೆಯದು ಆತ್ಮಕ್ಕೆ ತುಕ್ಕು ಹಿಡಿಸುತ್ತದೆ; ಎರಡನೆಯದದಕ್ಕೆ ಒಪ್ಪಕೊಡುತ್ತದೆ".

(೩ನೇ ಪುಟದಿಂದ)

ಕ್ರೈಸ್ತರ ಹಾಗೂ ಇತರ ಅಲ್ಪ ಸಂಖ್ಯಾಕ ಸಮಾಜಗಳ ಪ್ರತಿನಿಧಿಗಳನ್ನೂ ನಿವೃತ್ತ ಹಿರಿಯ ಸದಸ್ಯರೆಲ್ಲರನ್ನೂ ಪ್ರತಿಯೊಂದು ಸಭೆಗೂ ಆಮಂತ್ರಿಸಿಕೊಳ್ಳುವ ಬಯಕೆಯನ್ನೂ ರಾಷ್ಟ್ರಪತಿ ಪ್ರದರ್ಶಿಸಿದ್ದಾರೆ. ಅಂತೂ ಯಾರಿಗೂ ಗಣ್ಯನೋವನ್ನುಂಟು ಮಾಡದೆ ಎಲ್ಲರನ್ನೂ ಸಂತೈಸುವ ವ್ಯವಸ್ಥೆ ರಾಷ್ಟ್ರಪತಿ ನೆಹರುಗಳಿಂದಾಗಿದೆ. ಕೆಲವೇ ಮಂದಿಯ ಹಿರಿತನದ ಕಾಯಂ ಹಕ್ಕೊಂದು ಇಲ್ಲಿ ಬಲಿಯಾದಂತೆ ಕಂಡು ಬಂದರೂ, ಇಂತಹ ಸಾರ್ವತ್ರಿಕ ಸಂತೃಪ್ತಿಯ ಸತ್ಫಲಕ್ಕಾಗಿ ಆ ಬಲಿದಾನ ಹೆಚ್ಚಲ್ಲ. "ಹೊಸ ಕಮಿಟಿಯು ಹಿಂದಿಗಿಂತ ಭಿನ್ನ ಹಾದಿ ಹಿಡಿಯದು"! ಎಂದು ಸ್ವತಃ ಗಾಂಧಿಜೀ ವಿಶ್ವಾಸ ಪ್ರದರ್ಶಿಸಿದ್ದಾರೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಪಾರಿಗಳ್,

ರಥಬೀದಿ, ಉಡುಪಿ.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

CHAMPAE'S

Snow & Eastrex

(Sole Distributers for India.)

Prop: K. G. NAYAK,

Santhekatte, UDIPI, S. K.

ಅಖಿಲಭಾರತ ಅಂಚೇ ಮುಷ್ಕರ!

ಸರ್ವ ಕಡೆಗಳಲ್ಲೂ ಟಪ್ಪಾಲು ಬಟವಾಡೆಗಳಿಗೆ ತಡೆ, ವಿಳಂಬ.

ಅಖಿಲ ಭಾರತ ಟಪ್ಪಾಲು ಪೇದೆಗಳ ಮತ್ತು ಕೆಳ ತರಗತಿಯ ನೌಕರರ ಸಂಘವು, ಕೆಲಸಗಾರರ ಸಂಬಳ, ತುಟ್ಟಿಭತ್ತೆ, ಮತ್ತಿತರ ಸೌಕರ್ಯಗಳ ಹೆಚ್ಚಳವನ್ನು ಪೇಕ್ಷಿಸಿಯೂ ತಮ್ಮ ಕೆಲವು ಸಂಕಷ್ಟಗಳ ನಿವಾರಣೆಯನ್ನು ಬಯಸಿಯೂ 12 ಬೇಡಿಕೆಗಳನ್ನು ಮುಂದಿಟ್ಟು, ಅವು ಮನ್ನಿಸಲ್ಪಡದಿದ್ದರೆ ಜುಲಾಯಿ ತಾ. 10ನೇ ಮಧ್ಯರಾತ್ರಿಯಿಂದ ಮುಷ್ಕರ ಹೂಡಲಾಗುವದೆಂದು ಹಿಂದೀ ಸರಕಾರದ ಟಪ್ಪಾಲು ತಂತೀ ವಿಭಾಗಗಳ ಡೈರೆಕ್ಟರ್ ಜನರಲರಿಗೆ ಸಕಾಲದಲ್ಲಿ ನೋಟೀಸು ಕೊಟ್ಟಿದ್ದಿತು. ಈ12 ಬೇಡಿಕೆಗಳಪೈಕಿ ಇತ್ತೀಚೆಗೆ ಹೊಸದಾಗಿ ಮುಂದೆ ಬಂದ 5ರ ಹೊರತು ಉಳಿದುವನ್ನೆಲ್ಲಾ 'ಸಂಬಳ ಕಮಿಶನ್' ಅಥವಾ 'ತೀರ್ಮಾನಾಧಿಕಾರಿ'ಯ ಪರಿಶೀಲನೆಗೊಪ್ಪಿಸಲಾಗಿದೆಯೆಂದೂ, 5 ನವೀನ ಬೇಡಿಕೆಗಳು ಕ್ಷುಲ್ಲಕವಿದ್ದರೂ ಸಹಾನುಭೂತಿಯಿಂದ ಪರಿಶೀಲಿಸಲಾಗುವದೆಂದೂ ಈಗ ಸರಕಾರವನ್ನುತ್ತಿದೆ. ಆದರೆ 'ಟಪ್ಪಾಲು ನೌಕರ ಸಂಘದ ಬೇಡಿಕೆಯನ್ನು ಮನ್ನಿಸಿದಲ್ಲಿ, ತುಟ್ಟಿಭತ್ತೆ ಮತ್ತು ಇತರ ವಿಧಾನಗಳಿಂದ ಈಗಲೇ ಹೆಚ್ಚಿಸಿ ಕೊಡುತ್ತಿರುವ ದೊಡ್ಡ ಮೊತ್ತವನ್ನು ಬಿಟ್ಟೇ ವರುಷಕ್ಕೆ ಸುಮಾರು 10¾ ಕೋಟಿ ರೂಪಾಯಿಗಳ ಅಧಿಕ ವ್ಯಯ ಸರಕಾರಕ್ಕೆ ಬೀಳುವದು. ಇವಕ್ಕಾಗಿ ಪ್ರಥಮತ: ಈಗತಾನೇ ತಗ್ಗಿರುವ ಪೋಸ್ಟ್‌ಕಾರ್ಡಿನ ಬೆಲೆಯನ್ನು ಪುನ: ಒಂದಾಣೆಗೇರಿಸಬೇಕಾಗುವದು. ದೀರ್ಘಾವಧಿಯಿಂದ ಟಪ್ಪಾಲು ಮತ್ತು ತಂತೀ ಖಾತೆಗಳಿಂದ ನಷ್ಟ ಬೀಳುತಿತ್ತು; ಆ ನಷ್ಟವನ್ನು ತೆರಿಗೇ... ...ರಬೇಕಾಗಿತ್ತು. ಈಗತಾನೇ ಅವು ಲಾಭದಾಯಿ ಖಾತೆಗಳಾಗಹತ್ತಿವೆ. ಆದಿ ಭಾಗದಲ್ಲೇ ನೌಕರರು ಇಂತಹ ಅತಿರೇಕಾಂಕ್ಷೆಗಿಳಿದುದು ಅನ್ಯಾಯ' ಎಂದೆಲ್ಲಾ ಕಾರಣ ಕೊಟ್ಟು ಸರಕಾರವು ಕೆಲಸಗಾರರ ಬೇಡಿಕೆಯನ್ನು ನಿರಾಕರಿಸಿದ್ದಿತು.

ಮುಷ್ಕರಾರಂಭ

ಬೇಡಿಕೆ ಅಮಾನ್ಯವಾದೊಡನೆ ಪೂರ್ವ ನಿಶ್ಚಯದಂತೆ ಜುಲಾಯಿ ತಾ. 10ನೇ ಮಧ್ಯ ರಾತ್ರಿಯಿಂದ ಅಖಿಲ ರಾಷ್ಟ್ರ ವ್ಯಾಪೀ ಟಪ್ಪಾಲು ಮುಷ್ಕರವಾರಂಭವಾಯಿತು. ಅಧಿಕೃತ ಉದ್ಘಾಟನೆ ಆ ಮಧ್ಯ ರಾತ್ರಿಯಲ್ಲಾಗಿದ್ದರೂ ಪರಿಣಾಮ ಪ್ರಕಟವಾದುದು ತಾ 11ನೇ ಪೂರ್ವಾಹ್ನದಲ್ಲಿಯೇ. ಮದ್ರಾಸ್ ಪ್ರಾಂತಿಕ ಸಂಘವೂ ಇತರ ಕೆಲವು ಸ್ಥಳೀಯ ಶಾಖೆಗಳೂ ತಾ. 15ರಲ್ಲಿ ತಿಳಿಯುವದೆಂಬ ನಿರೀಕ್ಷೆಯಿದ್ದ 'ರಾಜೀ ಜಡ್ಜರ' ತೀರ್ಮಾನಬಾರದೆ ಕೆಲಸ ನಿಲ್ಲಿಸಬಾರದೆಂದು ನಿರ್ಧರಿಸಿದ್ದುವು. ಆದರೆ ಕಲ್ಕತ್ತ, ಡೆಲ್ಲಿ, ಬೊಂಬಾಯಿ ಮತ್ತಿತರ ಪ್ರಾಮುಖ್ಯ ನಗರಗಳಲ್ಲೆಲ್ಲಾ ಮುಷ್ಕರ ದಾವಾಗ್ನಿ ಭುಗ್ಗನೆದ್ದಿತು. ಮಾತ್ರವಲ್ಲ; ಮದ್ರಾಸ್ ಪ್ರಾಂತ್ಯದ ಮಧುರೆ, ಕಲ್ಲಿಕೋಟೆ, ತಲ್ಲಿಚೇರಿ, ಇತ್ಯಾದಿ ಕಡೆಗಳಲ್ಲಿಯೂ ಅದು ತೊಡಗಿ ಬಿಟ್ಟಿತು. ಮುಷ್ಕರಾರಂಭ ಮಾತ್ರದಿಂದಲೇ ಕೆಲಸದ ಮೇಲಾದ ಕ್ಷಿಪ್ರ ಹಾಗೂ ತೀವ್ರ ಪರಿಣಾಮ -ಜನತೆಯಿಂದ ದೊರೆತ ಸಹಾನುಭೂತಿ- ಮತ್ತದು ಘಂಟೆ ಘಂಟೆಗೆ ದಾವಾಗ್ನಿಯಂತೆ ಹಬ್ಬುತ್ತಾ ಬಂದ ರೀತಿ, ಇನ್ನೆಲ್ಲವೂ ಕೆಲಸ ನಿಲ್ಲಿಸಲು ಶಂಕಿಸುತ್ತಿದ್ದವರಲ್ಲೂ ಸಮರ ಸ್ಫೂರ್ತಿಯನ್ನು ಹುಟ್ಟಿಸಿದುವೆನ್ನಬೇಕು. ಮೇಲಾಗಿ ತಾ. 11ರಲ್ಲಿ ಮುಷ್ಕರವೇಳೆಲೊಪ್ಪದ ಅಂಚೇ ನೌಕರರಾದರೂ ಕೇವಲ ಕೆಲವು ದಿನ ಕಾದು ನೋಡುವ ಔದಾರ್ಯದಿಂದ ಹಾಗೆ ಮಾಡಿದ್ದರೇ ಹೊರತು ತಮ್ಮ ಬೇಡಿಕೆಗಳು ಅನಗತ್ಯವೆಂಬ ಭಾವನೆಯಿಂದಲ್ಲ. ಮುಷ್ಕರವಾರಂಭವಾಗಿ ಒಂದೆರಡು ದಿನಗಳಾಗುವದರೊಳಗೆ ರಾಷ್ಟ್ರದ ವಾತಾವರಣವನ್ನೇ ಅದು ಬದಲಾಯಿಸಿ ಬಿಟ್ಟಿದೆ. ಪ್ರಕೃತ ಇಡೀರಾಷ್ಟ್ರದ ಎ... ...ಅಂಚೇ ಕಾರ್ಯಾಲಯಗಳಿಗೂ ಆದರ ಬಿಸಿತಾಗಿದೆ. ಸರಕಾರವು ಅನಿರೀಕ್ಷಿತ ಸಂಕಷ್ಟವನ್ನೂ ಮುಷ್ಕರಗಾರರು ತಾವು ನಿರೀಕ್ಷಿಸಿರದಷ್ಟು ವಿಜಯಗಳನ್ನೂ ಪಡೆದಿದ್ದಾರೆ

ಕೆಲವು ವಿಶೇಷ ವಿದ್ಯಮಾನಗಳು.

ಡೆಲ್ಲಿ, ಪಾಟ್ನ, ಬೊಂಬಾಯಿ, ಕಲ್ಕತ್ತ, ಬೆಂಗಳೂರು, ಮಧುರ, ಜಮ್ಮು, ಕಲ್ಯಾಣ್, ಖಂಡಾಲಾ, ಪೂನಾ, ಅಹಮ್ಮದಾಬಾದ್, ಕೊಯಮುತ್ತೂರು, ಚಿತ್ತಗಾಂಗ್, ಡಾಕ್ಕಾ, ಜಬ್ಬಲಪುರ, ಕಾನ್ಪುರ, ಅಲ್ಲಹಾಬಾದ್, ಶಿಲ್ಲೋಂಗ್, ಹೌರಾ, ಮುಸ್ಸೋರಿ, ನೈನಿತಾಲ್, ಬೇರೆಲ್ಲಿ, ಝಾನ್ಸಿ, ಮೊದಲಾದ ಕೆಲವು ಮುಷ್ಕರ ಕೇಂದ್ರಗಳಲ್ಲಿ ಅಸಾಮಾನ್ಯ ಚಟುವಟಿಕೆಗಳೆದ್ದಿವೆ. ಕೇಂದ್ರ ಸ್ಥಳಗಳಲ್ಲೆಲ್ಲಾ ಬಲವಾದ ಪೋಲೀಸ್ ಪಹರೆಗಳನ್ನಿಡಲಾಗಿದೆಯಲ್ಲದೆ ಬೊಂಬಾಯಿಯಂತಹ ಪ್ರಾಮುಖ್ಯ ಕೇಂದ್ರದಲ್ಲಿ ಪಹರೆಗೂ ಬಾಕಿ ಬಿದ್ದ ಅಂಚೇ ಕೆಲಸಗಳಿಗೂ ಸೈನಿಕರನ್ನಿಡಲಾಗಿದೆ. ಅಖಿಲ ಭಾರತ 'ಬೋಯ್ಸ್ ಸ್ಕೌಟ್' ಸಂಘವು ಟಪ್ಪಾಲು ಕೆಲಸಗಳಲ್ಲಿ ನೆರವಾಗಲು ಮುಂದೆ ಬಂದಿದೆ. ಸ್ಕೌಟುಗಳೂ ಸಾರ್ವಜನಿಕರೂ ತಂತೀ ಕಾಗದ ಬಟವಾಡೆಯೇ ಮೊದಲಾದ ಕೆಲಸಗಳಿಗ ಸ್ವಯಂಸೇವಕರಾಗಿ ಸೇರಿದ್ದಾರೆ. ಪೇದೆಗಳ ಗೈರು ಹಾಜರಿಯಿಂದಾಗಿ ಕೆಲವು ನಗರಗಳಲ್ಲಿ ಅಲ್ಲಲ್ಲಿ 'ಸತ್ರ ವಿತರಣಾಕೇಂದ್ರ'ಗಳನ್ನು ತೆರೆದಿದ್ದಾರೆ. ಟಪ್ಪಾಲು ಖಾತೆಯ ಡೈರೆಕ್ಟರ್ ಜನರಲ್ ಶ್ರೀಕೃಷ್ಣಪ್ರಸಾದರ ಇಬ್ಬರು ಮಕ್ಕಳೂ ಸ್ವಯಂಸೇವಕ ಬಟವಾಡೆ ಪೇದೆ ಕೆಲಸಗಳಿಗಿಳಿದಿದ್ದಾರೆ. ಆದರೆ ಹೊಸಬರ ಅನನುಭವ ಮತ್ತು ಮುಷ್ಕರಗಾರರ ಅಹಿಂಸಾತ್ಮಕ ಅತಂಕಗಳಿಂದ ಕಾರ್ಯಸುಗಮವಾಗಿ ನಡೆಯುತ್ತಿಲ್ಲ. ತಂತೀ, ಕಾಗದ, ಪಾರ್ಸೆಲ್ ಮತ್ತೆಲ್ಲಾ ವಿಧದ ಬಟವಾಡೆಗಳಿಗೂ ಎಲ್ಲೆಲ್ಲೂ ಸಂಪೂರ್ಣ ತಡೆ, ಅರ್ಧವಿರಾಮ ಮತ್ತು ವಿಳಂಬಗಳಾಗುತ್ತಿವೆ. ಆದರೆ ಗಣ್ಯ ಘರ್ಷಣೆಯೆಲ್ಲಿಯೂ ನಡೆದಿಲ್ಲ. ಮದ್ರಾಸ್ ನಗರದಲ್ಲಿ ತಾ. 14ನೇ ಅಪರಾಹ್ನದಿಂದ ಮುಷ್ಕರವಾರಂಭವಾಗಿದೆ. ಬಟವಾಡೆಗೆ ಹೋದವನೊಬ್ಬನನ್ನು ಅಡ್ಡೈಸಿ ಹೊಡೆದು ಕೆಲವರ ದಸ್ತಗಿರಿಗಳಾಗಿವೆ. ಮದ್ರಾಸ್ ಪ್ರಾಂತಿಕ ಅಂಚೇ ನೌಕರರ ಸಂಘದ ಅಪಸರದ ಸಭೆಯು ತಾ 13ರಲ್ಲಿ ಮದ್ರಾಸಿನಲ್ಲಿ ನೆರೆದಾಗ ಮುಷ್ಕರಕ್ಕೆ ವಿರೋಧವಿರುವ ಅದರ ಅಧ್ಯಕ್ಷರನ್ನು ಸಭಿಕರು ಮಾತಾಡಲು ಬಿಡದೆ ಬಲಾತ್ಕಾರಿಸಿ, ಅವರು ಹೇಗೂ ನುಸುಳಿ ಪಾರಾಗಲು ಪ್ರಯತ್ನಿಸಿದಲ್ಲಿ ಕಾರಿಗೆ ಕಲ್ಲು ಹೊಡೆದೋಡಿಸಿದ್ದರು.

ಬೊಂಬಾಯಿಯ ಮುಷ್ಕರ

ಅಖಿಲ ಭಾರತದ ಸರ್ವೇಪೆಗಳವರೂ ತುಂಬಿರುವ-ದಕ್ಷಿಣಕನ್ನಡದ ಮನೆಗೊಬ್ಬನಂತಾದರೂ ಇದ್ದಾರೆಂದು ಹೇಳಬಹುದಾದ-ಬೊಂಬಾಯಿ ನಗರದ ಅಂಚೇ ಮುಷ್ಕರವು ಸಹಜವಾಗಿ ಎಲ್ಲಾ ಕಡೆಗಳಿಗಿಂತ ದೊಡ್ಡದು. ವಿತರಣಾ ಕೇಂದ್ರಗಳೂ ಪೋಸ್ಟಾಫೀಸುಗಳೂ ತಮ್ಮ ಟಪ್ಪಾಲು ಪಡೆಯಲು ಆತುರಗೊಂಡಿರುವ ಜನರಿಂದ ರಾತ್ರಿ ಹಗಲು ಪ್ರತ್ಯಕ್ಷ ಮುತ್ತಿಗೆಗೊಳಗಾಗಿಯೇ ಇವೆ. ಈ ಹೊಸ ಕೆಲಸಕ್ಕೆ ಕೈಯಿಕ್ಕಿರುವ ಸೈನಿಕರಿಂದ ಆ ಕೆಲಸಗಳು ನಿರ್ವಹಿಸದೆ ವಿತರಣಾ ಕಾರ್ಯವು ದಿನಗಟ್ಲೆ ಹಿಂದೆ ಬಿದ್ದಿದೆ. ಮೇಲಾಗಿ ಅಲ್ಲಿ ಮುಷ್ಕರಗಾರರು 'ಪಿಕೆಟಿಂಗ್' ನಡೆಸುತಿದ್ದಾರೆ. ಪಹರೆಗಿರುವ ಲಾಠೀ ಪೋಲೀಸರು ಇವರನ್ನಾತಂಕಿಸುತ್ತಿಲ್ಲ. ವ್ಯಾಪಾರಸ್ಥರೇ ಮೊದಲಾದವರು ತಮ್ಮ ಖಾಸಗೀ ಜನ ಮಾಡಿ ದೂರದ ಅಂಚೇ ಕಾರ್ಯಾಲಯಗಳಿಗೆ 'ಪೋಸ್ಟ್' ಮಾಡಲು ಕಳುಹಿಕೊಡುತಿದ್ದಾರೆ. ಬೊಂಬಾಯಿಯಲ್ಲಿ ಟೆಲಿಫೋನ್ ಬೇಡಿಕೆಯೂ ಅತಿ ಹೆಚ್ಚಾಗಿ ಆ ಅನುಕೂಲತೆಯೂ ದೊರೆಯದಂತಾಗಿದೆ. ಒಟ್ಟಿಗೆ 60000ಕ್ಕೂ ಮೇಲ್ಪಟ್ಟ ಅಂಚೇ ನೌಕರರ ಮುಷ್ಕರದಲ್ಲಿ ಬೊಂಬಾಯಿಯ ಪರಿಸ್ಥಿತಿಗಂಭೀರವಾಗಿದೆ. ಬೊಂಬಾಯಿ ನಗರಕ್ಕೆ ಸರಾಸರಿ 2000 ಚೀಲ ಟಪ್ಪಾಲುಗಳು ದಿನಂಪ್ರತಿ ಬರುತ್ತಿವೆಯಲ್ಲದೆ, ವಿದೇಶಗಳೊಡನೆ ಟಪ್ಪಾಲುವ್ಯವಹಾರ ನಡೆಯುವ ಕೇಂದ್ರಗಳ ಪೈಕಿ ಬೊಂಬಾಯಿ ನಗರ ಸರ್ವ ಪ್ರಥಮದ್ದಿದೆ. ತಮಗೆ ಕೆಲಸಕ್ಕೆ ಸಾಕಷ್ಟು ಜನ ಸಹಾಯ ದೊರೆಯದ ಪೇಚಾಟಕ್ಕಿಟ್ಟಿದೆ ಎಂಬುದನ್ನು ಅಧಿಕಾರಿಗಳೊಪ್ಪಿದ್ದಾರೆ. 1920ರಲ್ಲೊಮ್ಮೆ ಅಂಚೇ ಮುಷ್ಕರ ನಡೆದಿದ್ದರೂ ಕಳೆದ 25 ವರುಷಗಳಲ್ಲಿ ಇಂತಹ ಅದ್ಭುತಾನುಭವವಾದುದಿಲ್ಲ. ತಾ 14ರಿಂದ ಬೊಂಬಾಯಿಯ ತಂತೀಪೇದೆಗಳೂ ಮುಷ್ಕರಕ್ಕೆದ್ದಿದ್ದಾರೆ. ಮಿಲ್ ಕೆಲಸಗಾರರು ಸಹಾನುಭೂತಿ ಸೂಚನೆಗಾಗಿ ಒಂದು ದಿನದ ಮುಷ್ಕರ ನಿರ್ಧಾರ ಮಾಡಿದ್ದಾರೆ. ಮುಷ್ಕರಗಾರರ ಬೀದಿ ಮೆರವಣಿಗೆಗಳೂ ನಡೆದಿವೆ.

ಧುರೀಣರ ಸಹಾನುಭೂತಿ

ಅಖಿಲ ಭಾರತ ಅಂಚೇ ಪೇದೆ ಮತ್ತು ಕೆಳತರಗತಿ ನೌಕರ ಸಂಘದ ಕಾರ್ಯದರ್ಶಿಯೂ ಮುಷ್ಕರದ ನಾಯಕನೂ ಆದ ಶ್ರೀ. ವಿ. ಜಿ. ಧಲ್ವಿಯವರು ಬೊಂಬಾಯಿಗೆ ಒಂದು ಪಂಡಿತ ನೆಹರುಗಳೊಡನೆಯೂ ಪೂನೆಯಲ್ಲಿ ಮಹಾತ್ಮರೊಡನೆಯೂ ಸಂಭಾಷಿಸಿ ಇಬ್ಬರು ಪ್ರಮುಖರ ಆಶೀರ್ವಾದಗಳನ್ನೂ ಪಡೆದಿದ್ದಾರೆ. ಜಗಳದ ಎಲ್ಲಾ ವಿಷಯಗಳನ್ನೂ ನ್ಯಾಯಾಧೀಶ ಪಂಚಾಯತದಾರರ ತೀರ್ಮಾನಕ್ಕೊಪ್ಪಿಸಬೇಕೆಂದು ನೆಹರುಗಳು ಸರಕಾರವನ್ನೂ ಕೆಲಸಗಾರ ಸಘಂವನ್ನೂ ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ. 'ಅಂಚೇ ನೌಕರರ ಬೇಡಿಕೆಯಲ್ಲಿ ನ್ಯಾಯವಿದೆ. ಸಾರ್ವಜನಿಕರ ಸಹಾನುಭೂತಿಗವರು ಅರ್ಹರು. ನ್ಯಾಯ ತೀರ್ಮಾನಕ್ಕೊಪ್ಪದ ಸರಕಾರದ ವಾದ ದುರ್ಬಲವಿದೆ'' ಎಂದು ರಾಷ್ಟ್ರಪತಿಯಂದಿದ್ದಾರೆ. "ನೀವು ಶಾಂತ ರೀತಿಯಿಂದ

(೬ನೇ ಪಾಟೆ ನೋಡಿರಿ)



Approved firm by the Govt. of Mysore
Certified by the Agent of the Govt. of Cylone India.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, South Kanara.

CAPITAL

Authorised	Rs. 25,00,000
Issued & Subscribed ...	,, 16,00,000
Paid up	,, 15,60,120
Reserves	,, 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted

ಉಡುಪಿ, ಗುರುವಾರ, ೧೮-೭-'೪೬

ವಾಸ್ತವಿಕ ಅಪಾಯ

ಕಾಂಗ್ರೆಸಿನೊಳಗಡೆಯಲ್ಲಿ ಸೇರಿರುವ ಅಪಾಯವೇ ನಿಜವಾದ ಅಪಾಯವೆಂಬುದನ್ನು ಮನಗಾಣಿಸುವ ಗಾಂಧಿಜೀಯ ಲೇಖನವನ್ನು ನಾವೀ ಸಂಚಿಕೆಯ ಬೇರೊಂದೆಡೆ ಕೊಟ್ಟಿದ್ದೇವೆ. 'ಕಾಂಗ್ರೆಸಿಗ'ರಾಗಿ ಮೆರೆದಾಡುತ್ತಿರುವ ಕೆಲವರ ದುಶ್ಚೇಷ್ಟೆಗಳು ಅಸಹ್ಯವಿದ್ದರೂ, ಅನಿವಾರ್ಯವಾಗಿ ಸಹಿಸಿಕೊಂಡು ಒಳಗಿಂದೊಳಗೆ ಕುದಿಯುತ್ತಿದ್ದವರು ಮಹಾತ್ಮರ ಈ ಮಾತಿಗೆ 'ಸೈಸೈ' ಅಂದಾರ, ಒಂದು ರೀತಿಯ ಸಮಾಧಾನಗೊಂಡಾರು. ಸಾರ್ವಜನಿಕರ ನಡುವೆ ಕಾಂಗ್ರೆಸಿಗರಿಗೀಗ 'ದೊಡ್ಡವರ ಮಕ್ಕಳ' ಸ್ಥಾನ ದೊರೆತಂತಿದೆ. ಆ ಮಕ್ಕಳ ತಂಟೆ ಕೆಲವೊಮ್ಮೆ ಅಸಹ್ಯ; ಆದರೆ ಅವರನ್ನು ಶಿಕ್ಷಿಸುವ ಅಧಿಕಾರವಿಲ್ಲ; ಆಡಿತೋರಿಸುವ ದಕ್ಕೂ ಆಗುವದಿಲ್ಲವೆಂಬಂತಹ ಪರಿಸ್ಥಿತಿ. ಇಂತಹ ಸಂಕಟದಲ್ಲಿರುವಾಗ ತಂದೆಯೇ ಮಕ್ಕಳ ದುಶ್ಚೇಷ್ಟೆಗಾಗಿ ಬಿಗುವಾಗಿ ಕಿವಿ ಹಿಂಡಿದುದನ್ನು ಕಂಡಾಗ ಒಮ್ಮೆ ಎಲ್ಲರಿಗೂ 'ಹಾಯ್' ಅನ್ನಿಸುತ್ತದೆ. ಆಧುನಿಕ ಕಾಂಗ್ರೆಸಿನ ಜನಕ ಅಥವಾ ಮಾರ್ಗದರ್ಶಿ ಮಹಾತ್ಮರು ಇಂದು ಮಾಡಿರುವ ಕಟು ಟೀಕೆಯು ಅಂತಹ ಒಂದು ಚಿಕಿತ್ಸೆಯನ್ನ ಬೇಕು.

'ಸ್ಥಾನ'ಗಳ ಸಂಪಾದನೆಗಾಗಿ ನೋಟಕ್ಕೂ ಅಸಹ್ಯವಾಗಿರುವ, ಭಂಡು ರೀತಿಯ ಮೇಲಾಟಗಳು ನಡೆದಿವೆ. 'ಕಾರಾಗೃಹವಾಸವೇ ಒಂದು ಹಿಡುಗೊರೆಯೆಂದು ಭಾವಿಸುವ ಬದಲಿಗೆ, ಕಾಂಗ್ರೆಸಿಗೆ ದೊರೆಯುವ ಪ್ರತಿಯೊಂದು ಸ್ಥಾನ ಪ್ರವೇಶಕ್ಕೂ ಅದನ್ನು ಪಾಸ್‌ಪೋರ್ಟಾಗಿ ಉಪಯೋಗಿಸಲಾಗುತ್ತಿದೆ' 'ಸತ್ಯಾಗ್ರಹಿಯ ಜೈಲುವಾಸವೂ ಕಳ್ಳರು ಹಾಗೂ ದರೋಡೆಗಾರರ ಜೈಲು ವಾಸದ ದರ್ಜೆಗಿಳಿಯುವದು ಸಂಭವನೀಯ' 'ಕಾಂಗ್ರೆಸಿಗರೆಂಬವರಿಗೆ ಕೆಲವು ಸೂತ್ರಗಳು ಗೊತ್ತು ಹೊರತು ತಮಗಾವ ಮಾದರಿಯ ಸ್ವಾತಂತ್ರ್ಯಬೇಕೆಂಬುದನ್ನೇ ಅವರರಿಯರು. ಇಂತಹ ಅಜ್ಞಾನವು ಪ್ರಜಾಪ್ರಭುತ್ವಕ್ಕೆ ಬದ್ಧವಿರುದ್ಧ' 'ನಿಜವಾದ ಅಪಾಯವು ಒಳಗಿನದೇ ಹೊರತು ಹೊರಗಿನದಲ್ಲ'-ಎಂಬ ಗಾಂಧೀ ವಾಕ್ಯಗಳು ಕಾಂಗ್ರೆಸಿನ ದುರದೃಷ್ಟ, ರೇಖೆಗಳಂತೆ ತೋರುತ್ತವೆ. ಹೀಗೆ ಕಿವಿಹಿಂಡಿ ಕಲಿಸುವ ಸ್ಥಾನ ಗಾಂಧಿಜೀಗಿದೆ, ಆದರೆ ಹೆಚ್ಚಿನ ಕಾಂಗ್ರೆಸಿಗರು ಕಲಿತಿರುವದೇನು? ತಾವು ಪರಕೀಯರೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಸ್ಥಾನಮಾನಕ್ಕನುಸಾರವಾಗಿ ಇಂತಹ ಅಭಿಪ್ರಾಯಗಳನ್ನೇ ಮಾರ್ಪಡಿಸಿ ಪ್ರಕಟಿಸಿದ ಚರ್ಚಿಲ್ ಅಮೆರಿಗಳನ್ನು ಟೀಕಿಸುವದೊಂದನ್ನೇ. ವಿಮರ್ಶಕನು ಸ್ವಕೀಯನಿರಲಿ, ಪರಕೀಯನಿರಲಿ—ಅತನನ್ನು ವಿರೋಧಿಸಿದ ಮಾತ್ರಕ್ಕೆ ನಮ್ಮಲ್ಲಿರುವ ದೋಷಗಳ ನಿವಾರಣೆಯಾದಂತಾಯಿತೆ? ಇಂತಹ ಟೀಕೆಗಾಗಿ ಗಾಂಧಿಜೀಯ ಮೇಲಿನ ಗೌರವವನ್ನು ಹಿಂದೆಗೆದುಕೊಂಡೆವೆನ್ನುವವರಿರಲಾರರು, ಆದರೆ ಅವರ ಹಿತ ಬೋಧೆಗನುಸಾರವಾಗಿ ತಿದ್ದಿಕೊಳ್ಳುವವರೆಷ್ಟು ಮಂದಿ? ಕಾಂಗ್ರೆಸ್ ಕೆಲಸಗಾರರು—ಸ್ಥಳೀಯ ಕಾಂಗ್ರೆಸ್ ಪ್ರಮುಖರು—ತಮ್ಮ ದುರ್ವರ್ತನೆಗಳಿಂದಾಗಿ ಊರಜನತೆಯ ಅವಿಶ್ವಾಸಕ್ಕೆ ಪಾತ್ರರಾಗಿದ್ದರೂ ಕುಟಿಲ ನೀತಿಯ ಬಲದಿಂದ ಗಡಿಯ ವರೆಗೂ ಅಡ್ಡ ಹಾದಿಯ ಅನುಕೂಲತೆಯನ್ನು ಬೆಳೆಸಿಕೊಂಡುದರಿಂದಾಗಿಯೇ ದೊಡ್ಡದೊಡ್ಡ ಸ್ಥಾನಗಳಿಗೇರುವವರು—ಗಾಂಧೀ ಬೋಧೆಯ ದರ್ಪಣದಿಂದೊಮ್ಮೆ ತಮ್ಮನ್ನು ತಾವು ನೋಡಿಕೊಳ್ಳಬೇಕು ಅಂತೆಯೇ ಕಾಂಗ್ರೆಸಿನ ಮೂಲ ಸೂತ್ರಧಾರಿಗಳಲ್ಲೂ ಕಾಂಗ್ರೆಸಿನ ಒಳ ಭಾಗವನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಬಲ್ಲ ವಿಚಾರಾಕ್ಷಿಯಿರಬೇಕು. ಇಂದು ಕಾಂಗ್ರೆಸ್ ಸಂಸ್ಥೆಗಳೊಳಗೆ ನಡಿಯುತ್ತಿರುವ ಕುಯುಕ್ತಿ-ವಂಚನೆ-ಪಕ್ಷಪಾತ-ತತ್ವದ್ರೋಹಗಳೂ ನಿರ್ಮಾಣಗೊಂಡಿರುವ ಆಲಸ್ಯ-ಅಧಿಕಾರಪ್ರೇಮ-ಪರಾವಲಂಬನೆಗಳೂ ಕಾಂಗ್ರೆಸಿನ ಉಚ್ಚ ಧೋರಣೆಯನ್ನು ಭಂಗಿಸಿರುವ ಮಾತಂತಿರಲಿ, ಹಲವೊಮ್ಮೆ ನ್ಯಾಯಬದ್ಧ ವ್ಯವಹಾರಕ್ಕೂ ವಿರುದ್ಧ ಹೋಗಿವೆ. ಕಾಂಗ್ರೆಸಿನೊಡನಿರುವ ಎಷ್ಟೋ ಹುತಾತ್ಮರ ಬಲಿದಾನ ಮತ್ತು ಗಾಂಧೀ ನೆಹರುಗಳಂಥವರ ತ್ಯಾಗಭಂಡಾರವು ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಕುಟಿಲ ನೀತಿಗೆ ಪರಿಹಾರ ದ್ರವ್ಯವಾಗಿ ವ್ಯಯವಾಗುತ್ತಿದೆ; ಆ ಸಂಪತ್ತು ನಿಧಾನವಾಗಿ ಕ್ಷಯಿಸುವ ಲಕ್ಷಣ ಕಾಣುತ್ತಿದೆ. ಇಂತಹ ಸ್ಥಿತಿಯಲ್ಲಿ ನ್ಯಾಯವಂತ ನಾಗರಿಕರು ತ್ರಿಶಂಕು ಸ್ಥಾನದಲ್ಲಿರಬೇಕಾದುದು ಸಹಜವೇ—ಕಾಂಗ್ರೆಸಿನ ಶಿಖರದಲ್ಲಿರುವ ಸುಮಗಳ ಸುವಾಸನೆಗಾಗಿ, ಬುಡದಲ್ಲಿರುವ ಈ ಗೊಬ್ಬರದ ದುರ್ವಾಸನೆಯನ್ನವರು ಸಹಿಸಿಕೊಳ್ಳಬೇಕೇ, ಬಿಡಬೇಕೇ? ಆದ್ದರಿಂದ ಪ್ರಕೃತ ಕಾಂಗ್ರೆಸಿನ ಶುದ್ಧೀಕರಣ ಅತ್ಯಗತ್ಯ; ಸ್ವಾರ್ಥಸಾಧನೆಗಾಗಿ ಒಳಗಡೆಯಲ್ಲಿ ಸೇರಿರುವ ಕಂಟಕ ಪ್ರಾಯರನ್ನು, ಕಲ್ಮಷ ಸ್ವರೂಪರನ್ನು ಝಾಡಿಸಿ ತೆಗೆಯುವ ಕಾರ್ಯಾರಂಭವಾಗಬೇಕಾದುದು. ಎಲ್ಲಕ್ಕಿಂತ ಮುಖ್ಯ, ಗಾಂಧಿಜೀಯ ಟೀಕೆಯು ಈ ಶುದ್ಧೀಕರಣ ಕಾರ್ಯದ ಉದ್ಘಾಟನಾ ಭಾಷಣವಾಗಿ, ನವ ರಾಷ್ಟ್ರಪತಿಯಿಂದ ಅದಕ್ಕೊಂದು ಕಾರ್ಯಕ್ರಮದ ನಿರ್ಮಾಣವಾಗುವದೆಂದು ಆಶಿಸಬಹುದೆ?

ಉಡುಪಿ-ಕಲಾವೃಂದದ ವಾರ್ಷಿಕೋತ್ಸವ

ಉಡುಪಿಯ 'ಕಲಾವೃಂದ' (ಸಂಸ್ಕೃತ ಕಾಲೇಜಿನ ಸ್ನಾತ್ತಕೋತ್ತರ ವಿದ್ಯಾರ್ಥಿಗಳ ಸಂಘ) ದ ದ್ವಿತೀಯ ವಾರ್ಷಿಕೋತ್ಸವವು ಜುಲಾಯಿ ತಾ. ೧೪ ಮತ್ತು ೧೫ರಲ್ಲಿ ವೃಂದದ ಭವನವಾದ ಚಂದ್ರಮೌಳೀಶ್ವರ ದೇವಾಲಯದ ಮುಖಮಂಟಪದಲ್ಲಿ ಜಯಶೀಲವಾಗಿ ಜರಗಿತು. 'ವೃಂದ'ವು ಎರಡು ವರ್ಷಗಳಲ್ಲಿ ಮಾಡಿರುವ ಕಲಾರಾಧನಾ ಕಟ್ಟಡಕ್ಕೆ ಈ ಉತ್ಸವವು ಕಲಶಪ್ರಾಯವಾಗಿದ್ದಿತು. ಅನುಕ್ರಮವಾಗಿ ಆರಂಭ ಶೂರತ್ವ, ಅನಗತ್ಯ ಮೇಲಾಟ, ಆಲಸ್ಯ ನಿದ್ರೆಗೊಳಗಾಗಿರುವ ಈ ಮಾದರಿಯ ಹಿರಿಯರ ಸಂಘಕ್ಕೆ ಮೇಲ್ಪಂಕ್ತಿಯಾಗಬಲ್ಲ ಈ ಕಿರಿಯರ ಸಂಘಟಿತ ಸಾಹಸ, ಕಲಾಸೇವೆ ಶ್ಲಾಘನೀಯ.

ಮೊದಲ ದಿನ

ತಾ. ೧೪ನೇ ಮುಂಜಾನೆ ಲೇಖನ ಸ್ಪರ್ಧೆ (ಪರೀಕ್ಷಕರು—ಶ್ರೀ. ಎಸ್. ವೆಂಕಟರಾಜರು) ನಡೆಯಿತು. ಅಪರಾಹ್ನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಎಂ. ರಾಮಚಂದ್ರ ರಾವ್, ಎಂ. ಎ., ಇವರ ಅಧ್ಯಕ್ಷತೆಯಲ್ಲಿ ಸಭಸೇರಿ ಕಾರ್ಯದರ್ಶಿಗಳಿಂದ ವರದಿವಾಚನವಾದ ಮೇಲೆ ಮಿ. ಬಿ. ಎಂ. ಇದಿನಬ್ಬನವರು ಚಲೋ ರೀತಿಯಿಂದ ಆಧುನಿಕ ಕವಿತಾ ವಾಚನ ಮಾಡಿದರು. ಬೇರೆ ಒಬ್ಬಿಬ್ಬರ ವಾಚನವೂ ಆಯಿತು, ಪಂಡಿತ ವೆಂಕಟರಾಮಾಚಾರ್ಯರು 'ಕಲೆ ಮತ್ತು ಕಲಾವೃಂದ'ದ ಕುರಿತು ಉಪನ್ಯಾಸವಿತ್ತ ಮೇಲೆ ಶ್ರೀ. ಎಸ್. ವೆಂಕಟರಾಜರೇ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರು ಸಮಯೋಚಿತ ಹಾಗೂ ಸ್ಥಾನಾರ್ಹ ಭಾಷಣವಿತ್ತರು. ಧನ್ಯವಾದಾರ್ಪಣೆಯೂ ಉತ್ಸವಕ್ಕೆ ಬಂದಿದ್ದ ಶುಭಾಕಾಂಕ್ಷೆಗಳ ವಾಚನವೂ ಕಾರ್ಯದರ್ಶಿ ಶ್ರೀ. ಕೆ. ಅನಂತಪದ್ಮನಾಭ ಉಡುಪರಿಂದಾಯಿತು. ರಾತ್ರಿ ಶ್ರೀ. ಪಿ. ಅನಂತರಾಮ ಉಪಾಧ್ಯಾಯರ ಬಾಯಿ ಹಾಡಿಕೆಯೂ ಶ್ರೀ. ಫಿಡ್ಲ್ ಮಂಜುನಾಥಯ್ಯನವರ ಫಿಡ್ಲ್, ಶ್ರೀ ಯು. ಪ್ರಭಾಕರರಾಯರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು. ಪಂಡಿತ ವೆಂಕಟರಾಮಾಚಾರ್ಯರು ಸಂಗೀತ ನಿಪುಣರನ್ನು ಶ್ಲಾಘಿಸಿದರು.

ಎರಡನೇ ದಿನ

ತಾ. ೧೫ರಲ್ಲಿ ಮುಂಜಾನೆ ಭಾಷಣ ಸ್ಪರ್ಧೆ (ಪರೀಕ್ಷಕರು—ಶ್ರೀ. ಎಂ. ವಿ. ಹೆಗ್ಡೆ) ನಡೆಯಿತು. ಅಪರಾಹ್ನದ ಸಭೆಗೆ ವಿದ್ವಾನ್ ಶ್ರೀ. ಕೋಡಿಯಾಸು ಕೃಷ್ಣ ಭಟ್ಟರು ಅಧ್ಯಕ್ಷತೆ ವಹಿಸಿದ್ದರು ಕ್ರಮಬದ್ಧ ಕಾರ್ಯಕ್ರಮಗಳಾದ ಮೇಲೆ ಪರ್ಯಾಯ ಮಠಾಧೀಶರ ಪ್ರತಿನಿಧಿಗಳ ಆಶೀರ್ವಚನವಾಯಿತು. ಕಲಾವೃಂದದ ವತಿಯಿಂದ ನಿಂತು 'ಜಾಣ' ಮತ್ತು 'ಕಾವ' ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಂದಿದ್ದ ಪ್ರಶಸ್ತಿ ಪತ್ರಗಳನ್ನು ಶ್ರೀ. ಎಸ್. ರಾಜಗೋಪಾಲಕೃಷ್ಣರಾಯರು ಹಂಚಿ ಹರಸಿದರು. ಸ್ಪರ್ಧೆಗಳಲ್ಲಿ ಗದ್ದವರೇ ಮೊದಲಾದವರಿಗೆ ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣವಾಯಿತು. ಕೆಲವು ಆಧುನಿಕ ಕವಿತೆಗಳನ್ನು ಶ್ರೀ. ಬಿ. ಎಂ. ಇದಿನಬ್ಬನವರು ಮನೋಹರವಾಗಿ ಹಾಡಿದರು. ಬೇರೊಬ್ಬರ ವಾಚನವೂ ಆಯಿತು. ಅಂದಿನ ಉಪನ್ಯಾಸಕರಾದ ವಿದ್ವಾನ್ ಶ್ರೀ. ಬಿ ರಾಮಕೃಷ್ಣಾಚಾರ್ಯರು ಇಂಗ್ಲಿಷಿನಂತೆಯೇ ಕನ್ನಡದಲ್ಲಿಯೂ 'ಬೇಸಿಕ್ ಕನ್ನಡ'ವೆಂಬೊಂದು ನಿಯಂತ್ರಿತ ರೀತಿಯಿರಬೇಕೆಂಬ ಸೂಚನೆಯಿತ್ತರು. ಶ್ರೀ. ಯಸ್. ಯಲ್. ನಾರಾಯಣ ಭಟ್ಟರು ಕಲಾವೃಂದದ ಪ್ರಗತಿಪರ ಕಲಾಸೇವೆಯ ಕುರಿತೂ ಶ್ರೀ. ಕೆ. ಶಂಕರನಾರಾಯಣ ಉಪಾಧ್ಯಾಯರು ಅವರ ಚಟುವಟಿಕೆಗಳ ಕುರಿತೂ ಭಾಷಣವಿತ್ತರು. ಅಧ್ಯಕ್ಷರು 'ಬೇಸಿಕ್ ಕನ್ನಡ'ದ ಸೂಚನೆಯನ್ನು ವಿಮರ್ಶಿಸಿ ಕಲಾವೃಂದದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಭಾಷಣವಿತ್ತ ಮೇಲೆ ಕಾರ್ಯದರ್ಶಿ ಧನ್ಯವಾದಾರ್ಪಣೆ ಮಾಡಿದರು.

ರಾತ್ರಿ 'ರಾಯರ ಮದುವೆ' 'ಅದ್ಭುತ ಶಿಕ್ಷಣ' ಮತ್ತು 'ನಾಟಕವೆಂಬ ನಾಟಕ'ದ ಕೆಲವು ದೃಶ್ಯಗಳನ್ನು 'ವೃಂದ'ದವರು ಜಯಶೀಲವಾಗಿ ಅಭಿನಯಿಸಿ ತೋರಿಸಿದರು

ಕಡಿಮೆ ಸಕ್ಕರೆ ಸರಬರಾಯಿ— ಜುಲಾಯಿ ತಿಂಗಳ ಸಕ್ಕರೆ ವಿತರಣೆಯು ತಿಂಗಳಾರಂಭದಲ್ಲಿ ಹೋದವರಿಗೆ ರೇಶನ್ ಕಾರ್ಡಿನ ಪೂರಾ ಮಿತಿಯಷ್ಟೂ, ತಿಂಗಳ ಮಧ್ಯದಲ್ಲಿ ಹೋದವರಿಗೆ ಅರ್ಧಾಂಶವೂ ತದನಂತರ ಹೋದವರಿಗೆ ನಾಸ್ತಿ ವಚನದ ಮಿತಿಯಷ್ಟೂ ದೊರಕಿದೆ. ಸಂಬಂಧಪಟ್ಟ ಅಧಿಕಾರಿಗಳು ಸಕಾಲದಲ್ಲಿ ತಕ್ಕ ನಿಗಾಕೊಡದಿದ್ದುದರಿಂದ ಇಂತಹ ಅವ್ಯವಸ್ಥೆಯುಂಟಾಯಿತೆಂದು ತಿಳಿದುಬರುತ್ತದೆ.

ನಿಷೇಧ ಸಭೆ— ಶ್ರೀ ಕೃಷ್ಣ ಮಠದ ವಸಂತ ಮಹಲಿನಲ್ಲಿ ಶ್ರೀ ಪಿ. ಪದ್ಮನಾಭರಾಯರ ಅಧ್ಯಕ್ಷತೆಯಲ್ಲಿ ತಾ. 16ರಲ್ಲಿ ಜರಗಿದ ಹಿಂದುಗಳ ಸಭೆಯಲ್ಲಿ ಮಠ ದೇವಸ್ಥಾನಗಳ ಉಳಿತಾಯ ಹಣವನ್ನು ಸಾರ್ವಜನಿಕ ಶಿಕ್ಷಣ ಇತ್ಯಾದಿ ಸರ್ವಜನೋಪಯೋಗೀ ಕಾರ್ಯಗಳಿಗೆ ಉಪಯೋಗಿಸುವ ಮದ್ರಾಸ್ ಮಂತ್ರಿಮಂಡಲದ ಯೋಜನೆಯನ್ನು ನಿಷೇಧಿಸಲಾಯಿತು.

ಜಿಲ್ಲಾ ಆಹಾರ ಸಮಿತಿಗೆ ತಾಲೂಕು ಸಮಿತಿಯಿಂದ ಇದೇ ತಾ. 16ಕ್ಕೆ ಆಗಬೇಕೆಂದಿದ್ದ ಚುನಾವಣೆಯು ಅನಿರೀಕ್ಷಿತವಾಗಿ ತಾ. 27ಕ್ಕೆ ಮುಂದರಿಸಲಾಗಿದೆಯೆಂದು ತಿಳಿದುಬರುತ್ತದೆ. ಕೋಟೆ ಸರ್ಕಾರದಿಂದ ತಾಲೂಕು ಸಮಿತಿಗೆ ಆರಿಸಲ್ಪಟ್ಟ ಶ್ರೀ. ಕೊಳ್ಳೂರು ಸಂಜೀವ ಸೆಟ್ಟಿ, ಎಡ್ವೋಕೇಟ್ ಇವರು ಜಿಲ್ಲಾ ಸಮಿತಿಯ ಸದಸ್ಯತನಕ್ಕೆ ಉಮೇದ್ವಾರರೆಂದು ತಿಳಿದುಬರುತ್ತದೆ.

ರಸ್ತೆ ರಿಪೇರಿ— ಕೆಲಸವಾರಂಭವಾಗಿಯದೆ. ರಸ್ತೆಗಳ ಇಕ್ಕಡೆ ಚರಂಡಿಗಳ ಹಾಳು ಮಣ್ಣು, ಹೊಯಿಗೆಯನ್ನು ರಸ್ತೆಗಳಿಗೆ ಹಾಕುತಿದ್ದಾರೆ. ಇದರಿಂದ ರಸ್ತೆಯಲ್ಲೆಲ್ಲಾ ಕೆಸರಾಗಿದೆ. ಸುಧಾರಿತ ರಸ್ತೆ ರಿಪೇರಿಯ ಕ್ರಮ ಹೀಗೇನು?

(೫ನೇ ಪುಟದಿಂದ)

ನಿಮ್ಮ ಮುಷ್ಕರ ನಡಿಸುತ್ತೀರಾದರೆ ವಿಜಯವು ನಿಜಕ್ಕೂ ನಿಮ್ಮದಾಗುವದು" ಎಂದು ಮುಷ್ಕರಾರಂಭದ ಮುಂದಿನ ದಿನ ತನ್ನ ಟಪ್ಪಾಲು ಕೊಡಲು ಬಂದ ಅಂಚೇ ಜವಾನನಿಗೆ ಪೂನೆಯಲ್ಲಿದ್ದ ಗಾಂಧಿಜೀ ನುಡಿದಿದ್ದರು. ಅದನ್ನಾತ ಸಂಘಕ್ಕೆ ತಿಳಿಸಿದ್ದಾನೆ. ಶ್ರೀ. ಥೆಲ್ವಿಯವರನ್ನು ಸ್ವಾಗತಿಸಲು ಪೂನೆಯಲ್ಲಿ ನಡೆದ ಮೆರವಣಿಗೆಯೊಂದನ್ನು ಅಧಿಕಾರಿಗಳು ಆತಂಕಿಸಿದ್ದರು. ಆದರೆ ಅಪ್ಪಣೆವಿನಹಾ ಸೇರಿದ ಸಭೆಯೊಂದರಲ್ಲಿ ಅವರ ಭಾಷಣ ನಡೆದಾಗ ಆತಂಕವೇನೂ ಬರಲಿಲ್ಲ. ಮಹಾತ್ಮರು ತಮ್ಮನ್ನು ಆಶೀರ್ವದಿಸಿದ್ದಾರೆಂದೂ ಆ ದಿನದಿಂದ ಕಾಂಗ್ರೆಸಿಗೆ ಸೇರಿ ಸರ್ವತ್ಯಾಗಕ್ಕೆ ಸಿದ್ಧನೆಂದೂ ಶ್ರೀ. ಥೆಲ್ವಿಯಂದಿದ್ದಾರೆ.

ಘಟನಾಸಮಿತಿ ಚುನಾವಣೆಗಳು

ಮುಂಬರುವ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನಾರಿಸುವ ಘನ ಕಾರ್ಯದಲ್ಲಿ ಪ್ರತಿಯೊಂದು ಪ್ರಾಂತಿಕ ಎಸೆಂಬ್ಲಿಯೂ ತೊಡಗಿದೆ. ಈ ತಿಂಗಳಾಂತ್ಯದೊಳಗೆ ಬೇರೆಬೇರೆ ದಿನಗಳಲ್ಲಿ ಇದಕ್ಕಾಗಿ ಪ್ರತಿಯೊಂದು ಪ್ರಾಂತಿಕ ಎಸೆಂಬ್ಲಿಯ ವಿಶೇಷ ಸಭೆ ಸೇರಲಿದೆ. ಆ ಸಭೆಯು ಬೇರೆ ಕಾರ್ಯ ನಿರ್ವಹಿಸುವದಿಲ್ಲ.

ಮದ್ರಾಸ್ ಉಮೇದ್ವಾರಿಗಳು

ಮದ್ರಾಸ್ ಎಸೆಂಬ್ಲಿಗೆ ಸಾಮಾನ್ಯರ ಪರವಾಗಿ 45 ಸದಸ್ಯರನ್ನೂ ಮುಸಲ್ಮಾನರ ಪರವಾಗಿ 4 ಸದಸ್ಯರನ್ನೂ ಆರಿಸುವ ಹಕ್ಕಿದೆ. ಸಾಮಾನ್ಯ ಸ್ಥಾನಗಳಿಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೆಲವರ ಹೆಸರನ್ನು ಮದ್ರಾಸ್ ಪ್ರಧಾನಿಗಳಿಗೆ ಶಿಫಾರಸು ಮಾಡಿದ್ದಿತು. ಜುಲಾಯಿ ತಾ 13ರಲ್ಲಿ ಸೇರಿದ ಕಾಂಗ್ರೆಸ್ ನ್ಯಾಯವಿಧಾಯಕ ಸದಸ್ಯರ ಸಭೆಯು ಶ್ರೀ. ಟಿ. ಪ್ರಕಾಶಮರು ತಯಾರಿಸಿದ ಈ ಕೆಳಗಿನ 45 ಮಂದಿಯನ್ನು ಕಾಂಗ್ರೆಸ್ ಉಮೇದ್ವಾರಿಗಳಾಗಿ ಆರಿಸಿದೆ: ಶ್ರೀಗಳಾದ ಸಿ. ರಾಜಗೋಪಾಲಾಚಾರಿ; ಪಟ್ಟಾಭಿ ಸೀತಾರಾಮಯ್ಯ, ಕೆ. ಸಂತಾನಮ್, ಬಿ. ಶಿವರಾವ್, ಸರ್. ಗೋಪಾಲಸ್ವಾಮಿ ಅಯ್ಯಂಗಾರ್, ಶ್ರೀಮತಿ ಕಮಲಾದೇವಿ, ಶ್ರೀಮತಿ ಅಮ್ಮು ಸ್ವಾಮಿನಾಧನ್, (ಇವಿಷ್ಟು ಹೈಕಮಾಂಡಿದ ಶಿಫಾರಸು ಹೊಂದಿವೆ) ಓ. ರಾಮಸ್ವಾಮಿ ರೆಡ್ಡಿಯಾರ್, ಒ ವಿ. ಅಲಗೇಶನ್, ಕೃಷ್ಣಮಾಚಾರಿ, ರಮಾನಾಥ ಗೋಯೆಂಕಾ, ಡಾ। ಸುಬ್ಬರಾಯನ್, ರಾಮಲಿಂಗ ಚೆಟ್ಟಿಯಾರ್, ಕಾಮರಾಜನಾದರ್, ವೀರಬಾಹುಪಿಳ್ಳೆ, ಪೆರುಮಲ ಸಾಮಿ ರೆಡ್ಡಿಯಾರ್, ಡಾ। ಸುಬ್ರಹ್ಮಣ್ಯಮ್, ಕೃಷ್ಣ ಸ್ವಾಮಿ ಭಾರತಿ, ಸಿ. ಸುಬ್ರಹ್ಮಣ್ಯಮ್, ನಾಡಿ ಮುತ್ತು ಪಿಳ್ಳೆ, ಟಿ. ಪ್ರಕಾಶಮ್, ಸೀತಾರಾಮ ರೆಡ್ಡಿ, ಸಂಜೀವಿ ರೆಡ್ಡಿ, ಗೋಪಾಲ ರೆಡ್ಡಿ, ಚಂದ್ರಮೌಳಿ, ಕಾಳ ವೆಂಕಟರಾವ್, ಪಿ. ಎಲ್. [illegible]ನ್ ರಾಜು, ಪಿನ್. ಜಿ. ರಂಗ, ಅನಂತಶಯನಮ್ ಅಯ್ಯಂಗಾರ್. ಮಾಧವ ಮೆನನ್, ಎ. ವಿಲ್ಸನ್, ರೆ. ಫಾ. ಜೆರೋಮ್ ಡಿಸೋಜ, ಶ್ರೀಮತಿ ದುರ್ಗಾಬಾಯಿ, ಪ್ರಾಟೆರ್, ಮುನಿ ಸ್ವಾಮಿ ಪಿಳ್ಳೆ, ವೇಲಾಯುಧ ಪಾಣಿ, ದಾಕ್ಷಾಯಣಿ ವೇಲಾಯುಧನ್, ವಿ. ಗೋವಿಂದಾಸ್, ಎ. ಸಿ. ಕೇಶವ ರಾವ್, ಎಸ್. ನಾಗಪ್ಪ, ಕಕ್ಕನ್, ಕುಮಾರ ರಾಜಾ ಸರ್. ಮುತ್ತಯ್ಯ ಚೆಟ್ಟಿಯಾರ್, ಬೊಬ್ಬಿಲಿ ರಾಜ, ಕುನ್ಹಿರಾಮ ಮೆನನ್.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

ಶ್ರೀಮತಿ ಕಮಲಾದೇವಿಯರ ಸ್ಥಾನಕ್ಕೆ ಶ್ರೀ. ಯು. ಶ್ರೀನಿವಾಸ ಮಲ್ಯರು.

ಶ್ರೀ. ಕಮಲಾದೇವಿ ಬದಲಿಗೆ ಶ್ರೀ. ಶ್ರೀನಿವಾಸ ಮಲ್ಯ

ಮೇಲಿನ ನೇಮಕಗಳ ಪೈಕಿ ಶ್ರೀಮತಿ ಕಮಲಾದೇವಿಯವರು ತನ್ನ ಹೆಸರನ್ನು ಹಿಂದೆಗೆದುಕೊಳ್ಳುವ ಇಚ್ಛೆಯನ್ನು ಪ್ರಧಾನಿ ಶ್ರೀ. ಟಿ. ಪ್ರಕಾಶಮರಿಗೆ ತಿಳಿಸಿದಾಗ ಶ್ರೀಮತಿಯವರ ಹೆಸರು ಹೈಕಮಾಂಡಿನ ಶಿಫಾರಸಿನದಾದ್ದರಿಂದ ಅದರ ಅನುಮತಿ ಬೇಕೆಂದರು. ಅದರಂತೆ ಶ್ರೀಮತಿ ದೇವಿ ಪಂಡಿತ ನೆಹರುಗಳಿಂದ ಅನುಮತಿ ಪಡೆಕೊಂಡರು ಅವರ ಅಭಿಮತಕ್ಕನುಗುಣವಾಗಿ ಅವರ ಬದಲಿಗೆ ಶ್ರೀ. ಯು. ಶ್ರೀನಿವಾಸ ಮಲ್ಯರನ್ನು ರಾಷ್ಟ್ರಪತಿ ನೆಹರು ಸೂಚಿಸಿದಂತೆ ಶ್ರೀ. ಮಲ್ಯರ ಸಮೇತ 45 ಕಾಂಗ್ರೆಸ್ ಉಮೇದ್ವಾರಿಗಳ ನಾಮಪತ್ರ ದಾಖಲಾಗಿದೆ. ಕಾಂಗ್ರೆಸ್ ಉಮೇದ್ವಾರಿಗಳಲ್ಲದ ಶ್ರೀಗಳಾದ ಎನ್. ಶಿವರಾಜ, ಎಮ್. ರತ್ನಸ್ವಾಮಿ, ರೋಜ್ ವಿಕ್ಟೋರಿಯ, ಸಹಜಾನಂದ, ಆದಿಕೇಶವುಲು ನಾಯ್ಕರ್, ಮಸಿಲಮಣಿ ಪಿಳ್ಳೆ, ಯು. ಸಿ. ಯಸ್. ಭಟ್, ಮುತ್ತಯ್ಯ ಮುದಲಿಯಾರ್, ಸಿ. ಸುಂದರಯ್ಯ, ಪಿ. ರಾಮಮೂರ್ತಿ, ಮಾಣಿಕ್ಯವೇಲು ನಾಯ್ಕರ್, ಇ. ಕಣ್ಣನ್, ಲಿಂಗೇಶನ್ ಮತ್ತು ಆರ್. ಎಸ್. ಮಾಣಿಕ್ಯಂ, ಇವರೂ ನಾಮಪತ್ರ ಪೂರೈಸಿ 45 ಸ್ಥಾನಗಳಿಗೆ 59 ಉಮೇದ್ವಾರಿಗಳಿದ್ದಾರೆ. ಈ ಪೈಕಿ ಮಾಣಿಕ್ಯಂ ತಮ್ಮ ಉಮೇದ್ವಾರಿಕೆ ಹಿಂದೆಗೆದಿದ್ದಾರೆ.

ಲೀಗ್ ಉಮೇದ್ವಾರಿಗಳ ಅವಿರೋಧ ಆಯ್ಕೆ

ಮದ್ರಾಸಿನಲ್ಲಿ ಮುಸಲ್ಮಾನರಿಗಿರುವ ನಾಲ್ಕು ಸ್ಥಾನಗಳಿಗೂ ಲೀಗ್ ಉಮೇದ್ವಾರಿಗಳಾದ ಮೆಸರ್ಸ್ ಬಿ. ಪೋಕರ್, [illegible] ಅಹಮ್ಮದ್ ಇಬ್ರಾಹಿಮ್, ಮಹಬೂಬ್ ಅಲೀಬೇಗ್ ಮತ್ತು ಹಾಜೀ ಅಬ್ದುಲ್ ಸತ್ತಾರ್ ಹಾಜಿ ಇಸ್ಮಾಕ್ ಸೇಟ್ ಈ ನಾಲ್ವರೇ ಉಮೇದ್ವಾರಿಗಳಾಗಿದ್ದುದರಿಂದ ಮುಸ್ಲಿಂ ಸ್ಥಾನಗಳಿಗೆ ಸ್ಪರ್ಧೆಯಿಲ್ಲ. ಘಟನಾ ಸಮಿತಿ ಸದಸ್ಯರ ಚುನಾವಣೆಗಾಗಿ ಮದ್ರಾಸ್ ಎಸೆಂಬ್ಲಿಯ ವಿಶೇಷ ಸಭೆ ಜುಲಾಯಿ ತಾ. 22ಕ್ಕೆ ಸೇರಲಿದೆ.

ಗಡಿನಾಡು ಪ್ರಾಂತ್ಯದಿಂದ—ಡಾ। ಖಾನ್‌ಸಾಹೇಬ್, ಮೌಲಾನಾ ಅಬ್ದುಲ್ ಕಲಾಮ್ ಅಜಾದ್, ಖಾನ್ ಅಬ್ದುಲ್ ಗಫರ್ ಖಾನ್ (ಕಾಂಗ್ರೆಸಿಗರು) ಮತ್ತು ಮುಸ್ಲಿಂ ಲೀಗ್ ಉಮೇದ್ವಾರಿ ಖಾನ್ ಸರ್ದಾರ್ ಬಹದೂರ್ ಖಾನರು ನಾಮಪತ್ರ ಹಾಕಿದ್ದರು. ಪ್ರಧಾನಿ ಡಾ। ಖಾನ್ ಸಾಹೇಬರು ಹಿಂತೆಗೆದುಕೊಂಡುದರಿಂದ ಅಲ್ಲಿಯ 3 ಸ್ಥಾನಗಳಿಗೆ ಉಳಿದ ಮೂವರು ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಸಿಂಧ್ ಪ್ರಾಂತದ—ಎಸೆಂಬ್ಲಿಯಲ್ಲಿದ್ದ ಸಾಮಾನ್ಯ ಸ್ಥಾನವೊಂದಕ್ಕೆ ಕಾಂಗ್ರೆಸ್ ಉಮೇದ್ವಾರಿ ಶ್ರೀ ಜೈರಾಮದಾಸ್ ದೌಲತರಾಮರು ಅವಿರೋಧ ಆಯ್ಕೆ ಹೊಂದಿದರು. ಮುಸ್ಲೀಮರ ಮೂರು ಸ್ಥಾನಗಳಿಗೆ ಸ್ವತಂತ್ರ ಮುಸ್ಲಿಂ ಉಮೇದ್ವಾರಿಯನ್ನು ಸೋಲಿಸಿ ಲೀಗಿನ ಮೂವರು ಪ್ರತಿನಿಧಿಗಳೂ ಗೆದ್ದು ಬಂದಿದ್ದಾರೆ

ಇತರ ಪ್ರಾಂತ್ಯಗಳಲ್ಲಿ

ಬಿಹಾರಿನಲ್ಲಿ ಘಟನಾ ಸಮಿತಿಗೆ ಮುಸಲ್ಮಾನರ 5 ಸ್ಥಾನಗಳ ಸಮೇತ 36 ಸದಸ್ಯ ಸ್ಥಾನಗಳಿವೆ. ಓರ್ವ ಕಾಂಗ್ರೆಸ್ ಮುಸಲ್ಮಾನನ ಸಮೇತ 38 ಕಾಂಗ್ರೆಸ್ ಉಮೇದ್ವಾರರ ನಾಮಪತ್ರಗಳು ದಾಖಲಾಗಿವೆ. ಒಟ್ಟಿಗೆ 114ಕ್ಕೂ ಮಿಕ್ಕಿ ಉಮೇದ್ವಾರಿಗಳಿದ್ದಾರೆ. ಚುನಾವಣೆ ಇದೇ ತಾ. 22ರಲ್ಲಿ. ರಾಜೇಂದ್ರಪ್ರಸಾದ್, ಸರೋಜಿನಿ ನಾಯಿಡು ಮೊದಲಾದವರು ಇಲ್ಲಿಂದಾರಿಸಲ್ಪಡುವರು. ಮಧ್ಯ ಪ್ರಾಂತ ಮತ್ತು ಬರಾರಿಗೆ ಸಾಮಾನ್ಯರಿಗೆ 16 ಸ್ಥಾನಗಳಿವೆ. ಶ್ರೀಮತಿ ಅಮೃತ ಕೌರರು ಇಲ್ಲಿಯ ಓರ್ವ ಕಾಂಗ್ರೆಸ್ ಉಮೇದ್ವಾರಿ. ಒರಿಸ್ಸಾಕ್ಕಿರುವ ಜನರಲ್ ಸೀಟುಗಳು 9. ಚುನಾವಣೆ ಇದೇ ತಾ 17: ಪಂಜಾಬಿನಲ್ಲಿ ಘಟನಾ ಸಮಿತಿ ಸದಸ್ಯರ ಚುನಾವಣೆ ತಾ 19ಕ್ಕೆ ನಡೆಯಲಿದೆ 54 ಉಮೇದ್ವಾರಿಗಳಿದ್ದು, ಮಿ ಜಿನ್ನ, ಬಲದೇವ ಸಿಂಗ್, ಫಿರೋಜ್ ಖಾನ್ ನೂನ್ ಮೊದಲಾದವರು ಇಲ್ಲಿಯೇ ಸ್ಪರ್ಧಿಸಲಿರುವರು. ಬಂಗಾಳದ ಚುನಾವಣೆ ತಾ 17ಕ್ಕೆ. 27 ಸಾಮಾನ್ಯ ಸ್ಥಾನಗಳೂ 33 ಮುಸ್ಲಿಮ್ ಸ್ಥಾನಗಳೂ ಬಂಗಾಳಕ್ಕಿವೆ. ಶರಚ್ಚಂದ್ರ ಬೋಸ್, ಶ್ಯಾಮ ಪ್ರಸಾದ ಮುಖರ್ಜಿ, ಪ್ರಫುಲ್ಲ ಘೋಸ್, ಕಿರಣಶಂಕರರಾಯ ಮೊದಲಾದವರು ಕಾಂಗ್ರೆಸ್ ವತಿಯಿಂದಲೂ ನವಾಬ್ ಝಾದಾ ಲಿಯಾಖತ್ ಅಲೀಖಾನ್ ಮೊದಲಾದವರು ಲೀಗ್ ವತಿಯಿಂದಲೂ ಬಂಗಾಳದಿಂದಲೇ ನಿಂತಿದ್ದಾರೆ. ನೆಹರು, ಪಂತ್, ಸಪ್ರು, ವಿಜಯಲಕ್ಷ್ಮಿ ಮೊದಲಾದ ಪ್ರಮುಖರು ಸಂಯುಕ್ತ ಪ್ರಾಂತ್ಯದಿಂದಲೂ ಜಯಕರ್, ಖೇರ್, ದಿವಾಕರ್, ಎಸ್. ಕೆ. ಪಾಟೀಲ ಮೊದಲಾದವರು ಬೊಂಬಾಯಿಯಿಂದಲೂ ಕಾಂಗ್ರೆಸ್ ಉಮೇದ್ವಾರಿಗಳು.

ಸಿಖ್ಖರು ಹಿಂದೆಗೆದರು

ಘಟನಾ ಸಮಿತಿಗೆ ಕಂಠೋಕ್ತ ವಿರೋಧವಿರುವ ಸಿಖ್ಖರ 'ಪ್ರತಿನಿಧಿ ಪಾಂಥಿಕ್ ಬೋರ್ಡು' ಬಹಿಷ್ಕಾರ ನಿರ್ಧಾರ ಮಾಡಿದ್ದರೂ ಕೊನೆಯ ಗಳಿಗೆಯಲ್ಲಿ ನೆಹರುಗಳ ವಿನಂತಿಯನ್ನು ಮನ್ನಿಸಿ ನಾಲ್ಕು ಕಾಂಗ್ರೆಸ್ ಸಿಖ್ಖರೂ ನಾಲ್ಕು ಅಕಾಲಿಸಿಕ್ಖರೂ ನಾಮಪತ್ರ ದಾಖಲ್ಮಾಡಿದ್ದರು. ಆದರೆ ನಾಮಪತ್ರ ಹಿಂತೆಗೆಯುವ ಅವಧಿಯೊಳಗೇನೇ ಈ ಎಂಟು ಮಂದಿಯೂ ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು. ಘಟನಾ ಸಮಿತಿಯಲ್ಲಿ ಸಿಖ್ಖರ ಪ್ರಾತಿನಿಧ್ಯವಿಲ್ಲವೆಂದಾಯಿತು.

ಹರಿಜನ ಬಂಧುಗಳು— ಉಡುಪಿ ಕೆಲ ಹೋಟೆಲುಗಳನ್ನು ಪ್ರವೇಶಿಸುವ ಸ್ವಾಂಹಲು ನೋಡುತಿದ್ದಾರೆ. ತೋಟಗಳು ರಷಾದ ಮಾಲಿಗಳೊಂದಿಗೆ ಹರಿಜನರು ಒಟ್ಟಾಗಿ ಚಹಾ ಕುಡಿಯುವದಾದರೆ ಕೆಲವು ಹೊಟೆಲಿನವರು ಚಹಾ ಕೊಡಲು ಸಿದ್ಧರಿರುವರೆಂದು ತಿಳಿಯಬರುತ್ತದೆ.

ತಿದ್ದುಪಡಿ—ಕಳೆದ ವಾರದ (ಜುಲಾಯಿ ತಾ. 11ರ) ಸಂಚಿಕೆಯಲ್ಲಿ ಬಂದಿದ್ದ 'ಗ್ರಾಮಸಮಿತಿ ಏರ್ಪಡಿಸುವ ಕುರಿತು ಪುತ್ತೂರು ತಾಲ್ಲೂಕು ಆಫೀಸರರ ವರ್ತನೆ' ಎಂಬ ಶಿರೋನಾಮೆಯುಳ್ಳ ವಾರ್ತೆ ಕಳುಹಿಸಿದವರು ಆ ಸಂಚಿಕೆಯಲ್ಲಿ ತಪ್ಪಾಗಿ ಬಿದ್ದಂತೆ 'ಕುಳುರು ಅಣ್ಣಪ್ಪ ಭಂಡಾರಿ' ಅಲ್ಲ; ಕುಳಾಲು ಅಣ್ಣಪ್ಪ ಬಂಡಾರಿ ಎಂದು ತಿದ್ದಿಕೊಳ್ಳಬೇಕು. ಅಂತೆಯೇ ಅಂದಿನ ಸಭೆಯಲ್ಲಿ ಹೆಸರು ಬಾರದೇನೇ ಉಪಸ್ಥಿತಿಯಲ್ಲಿ ತಹಶಿಲ್ದಾರರು ಬರೆಕೊಂಡ ಹೆಸರುಗಳೆಂದರೆ ಶ್ರೀಗಳಾದ ಮಂಕುಡೆ ಪದ್ಮನಾಭಾಚಾರ್ಯ, ಕುಳಪಿ ಮೋನಪ್ಪರೈ, ಮುಲಾರು ಕರಿಯಪ್ಪರೈಗಳದ್ದೆಂದೂ ಶ್ರೀ ಪವಾರು ಈಶ್ವರ ಭಟ್ಟರ ಹೆಸರನ್ನು ಸಭೆಯಲ್ಲಿ ಸೂಚಿಸಿದ್ದರೂ ಆಫೀಸರರು ಬರೆಕೊಳ್ಳಲಿಲ್ಲವೆಂದೂ, ಶ್ರೀ ಸೂಜಿಬೈಲು ನಾರಾಯಣ ಭಟ್ಟರೇ ತನ್ನ ಮಗ ಶ್ರೀ- ಸೂಜಿಬೈಲು ಈಶ್ವರ ಭಟ್ಟರ ಹೆಸರನ್ನು ಸೂಚಿಸಿದ್ದರೆಂದೂ ಮೇಲಿನ ವಾರ್ತಾದಾರರು ತಿಳಿಸುತ್ತಾರೆ.

ಆಭಾರ ಮನ್ನಣೆ—ಇದೇ ತಾ. ೧೨ರಲ್ಲಿ ಕುಂದಾಪುರ ತಾಲೂಕು ಆಹಾರ ಸಮಿತಿಗೆ ವಂಡ್ಸೆ ಫಿರ್ಕಾದಿಂದ ತನ್ನನ್ನು ಪ್ರಚಂಡ ಬಹುಮತದಿಂದ ಆರಿಸುವುದಕ್ಕಾಗಿ ಅಲ್ಲಿನ ಮತದಾರರಿಗೆಲ್ಲಾ ತಾನು ತುಂಬಾ ಋಣಿಯಾಗಿದ್ದೇನೆಂದೂ ತನ್ನ ಕೈಲಾದಷ್ಟು ಅವರ ಸೇವೆ ಮಾಡಲು ಸದಾ ಸಿದ್ಧನಿರುವೆನೆಂದೂ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟಿ, ಎಡ್ವೊಕೇಟ್, ಇವರು ವಿನಂತಿಸಿಕೊಳ್ಳುತ್ತಾರೆ. ಕುಂದಾಪುರ ಫಿರ್ಕಾದಿಂದ ಆರಿಸಿ ಬಂದ ಶ್ರೀ. ಕಂದಾವರ ಸಂಜೀವ ಹೆಗ್ಡೆ ಮತ್ತು ಶ್ರೀ. ಕೆ. ಸಂಜೀವ ಶೆಟ್ಟಿ ಸಹ ಅದೇ ರೀತಿ ಮತದಾರರಿಗೆಲ್ಲಾ ಆಭಾರ ಸೂಚಿಸುತ್ತಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ತಾರೀಖು 18—7—46ರಿಂದ
ಜಯಂತ್ ಫಿಲ್ಮ್ಸ್‌ನವರ
★ ಇನ್‌ಸಾನ್ ★
ಶೋಭನಾ ಸಮರ್ಥ್, ಕಿಶೋರ್ ಸಾಹು, ಡೇವಿಡ್, ಮಾಯಾ-ಬೆನರ್ಜಿ, ಕೇ. ಸಿ. ಡೇ. ಪಹರಿ ಸನ್ಯಾಲ್.
ಬರುವ ಚಿತ್ರ—
"ಅಂಗೂರಿ"—ಕೌಶಲ್ಯ, ಉಲ್ಲಾಸ್.

ನಟನಟಿಯರು ಬೇಕು
ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಪತ್ರಿ[illegible]
ತ್ರಿವೇಣಿ ಫಿಲ್ಮ್ಸ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

ಮಂಗಳೂರು.

ನೇಕಾರರ ಸಭೆ—ಯುವಜನ ಕಾಂಗ್ರೆಸ್‌ನ ಆಶ್ರಯದಲ್ಲಿ ನೇಕಾರರ ಸಭೆಯೊಂದು ಮುಹಾನವಮಿ ಕಟ್ಟೆಯಲ್ಲಿ ಶ್ರೀ. ಬಾಲಕೃಷ್ಣ ಶೇಣವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಈ ಕಾಂಗ್ರೆಸಿನ ಉದ್ದೇಶವನ್ನು ವಿವರಿಸಿದರು.

ಶ್ರೀನಿವಾಸ ವಿ. ಎ ವಿ. ಸೋಜ, ದೇವಪ್ಪ ಶೆಟ್ಟಿ, ತಿಮ್ಮಪ್ಪ ಮೊದಲಾದವರ ಭಾಷಣಗಳಾದವು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಚುನಾವಣೆ

೧. ಉಮೇದುವಾರರು ನಾಮಪತ್ರಗಳನ್ನು ಒಪ್ಪಿಸುವ ಕೊನೆಯ ದಿನ- ತಾ. ೨೭-೭-೪೬ (ಸಂಜೆ ೬ ಗಂಟೆವರೆಗೆ); ೨. ನಾಮಪತ್ರಗಳ ಪರಿಶೀಲನೆ ಹಾಗೂ ಉಮೇದುವಾರರ ಹೆಸರು ಪ್ರಕಟಿಸುವಿಕೆ- ೨೭-೭-೪೬, ೩. ನಾಮಪತ್ರ ಹಿಂತೆಗೆದುಕೊಳ್ಳುವುದು- ೩೦-೭-೪೬ (ಮಧ್ಯಾಹ್ನ ೧೨ರ ಒಳಗೆ). ೪. ಹಿಂತೆಗೆದುಕೊಂಡವರ ಹಾಗೂ ಅವಿರೋಧ ಆರಿಸಿ ಬಂದವರ ಹೆಸರು- ಚುನಾವಣೆ; ಅಧಿಕಾರಿಗಳು ಪ್ರಕಟ ಮಾಡುವುದು-೩೦-೭-೪೬ (ಸಂಜೆ ೬ ಗಂಟೆ); ೫. ಜಿಲ್ಲಾ ಕಾಂಗ್ರೆಸ್ ಕಮಿಟಿ ಚುನಾವಣೆ—೧೨—೮—೪೬ (ಬೆಳಿಗ್ಗೆ ಗಂಟೆ ಆರರಿಂದ ೧೨ರ ವರೆಗೆ; ಮಧ್ಯಾಹ್ನ ಗಂಟೆ ೨ರಿಂದ ೬ರ ವರೆಗೆ); ೬. ಮತಗಣನೆ ಹಾಗೂ ಪರಿಣಾಮ ಪ್ರಕಟಮಾಡುವಿಕೆ—೧೩—೮—೪೬; ೭. ಜಿಲ್ಲಾ ಪಂಚಮಂಡಲದ ಕಡೆಗೆ ತಕರಾರು ಅರ್ಜಿ ಕಳಿಸುವುದು—೨೩—೮—೪೬.

(1) ಮೇಲಿನ ಕಾರ್ಯಕ್ರಮದಂತೆ ಆಯ್ಕೆಯನ್ನು ಯಶಸ್ವಿಯಾಗಿ ನಡೆಯಿಸಲು ಶ್ರೀ. ಎನ್. ಆರ್. ಕಲ್ಲೆ ಇವರನ್ನು ಜಿಲ್ಲಾ ರಿಟರ್ನಿಂಗ್ ಆಫೀಸರರನ್ನಾಗಿ ಈ ಮೂಲಕ ನೇಮಿಸಲಾಗಿದೆ.

ಚುನಾವಣೆಯ ನಿಯಮಾವಲಿಯ ಯಾದಿಯನ್ನೂ ಪ್ರಾಥಮಿಕ ಸದಸ್ಯರ ಯಾದಿಯನ್ನೂ (ಜಿಲ್ಲಾ ಮತದಾರರಯಾದಿ) ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಪ್ರಕಟಿಸಲಾಗಿದೆ. ಅವುಗಳ ಪ್ರತಿಗಳನ್ನು ಪ್ರತೀ ಸರ್ಕಲ್ ಕಾಂಗ್ರೆಸ್ ಕಮಿಟಿ ಕಚೇರಿಗೆ ಪೂರೈಸಲಾಗಿದೆ. ಆವಶ್ಯವಿದ್ದವರು ಅಲ್ಲಿಂದ ನಿಯಮಾವಳಿ ಪ್ರತಿಗಳನ್ನು ಪಡೆದುಕೊಳ್ಳಬಹುದು.

ವಿ ಸೂ. ಪ್ರತಿಯೊಂದು ಸರ್ಕಲ್ ಕಾಂಗ್ರೆಸ್ ಕಮಿಟಿಗೆ ಎರಡು ಸ್ಥಾನಗಳು ಮಾತ್ರ ಇವೆ ಎಂದು ಪ್ರಧಾನ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ಅಳಿಯಕಟ್ಟಿನ ಸುಧಾರಣಾ ಮಸೂದೆ.

ಈ ಕುರಿತಾದ ಅಭಿಪ್ರಾಯ ತಿಳಿಯಲು ಕಾರ್ಕಳ ಕುಂದಾಪುರಕ್ಕೆ ತಾ. 2 ಮತ್ತು 3ರಲ್ಲಿ ನಾವು ಕೆಲವರು ಹೋಗಿ ಸಭೆ ಕರೆದುದಾಯಿತು. ಕುಂದಾಪುರದಲ್ಲಿ ಅನೇಕ ಮಂದಿ ಕೂಡಿಬಂದಿದ್ದರು. ಪ್ರತಿಯೊಬ್ಬರೂ ಬಿಲನ್ನು ಓದಿ ತಮ್ಮ ತಮ್ಮ ಅಭಿಪ್ರಾಯ ಕೊಡುವ ಉತ್ಸಾಹಭರಿತರಿದ್ದರು. ಅಳಿಯ ಕಟ್ಟಿನ ತಬ್ಸೀಲು ಕುರಿತು ಪ್ರಸ್ತಾಪವೆತ್ತಿದ ಬಹು ವರ್ಷಗಳ ಹಿಂದೆ ಅನೇಕರು ಇದೇ ರೀತಿ ಅಭಿಪ್ರಾಯ ಕೊಟ್ಟಿದ್ದರೆನ್ನಬಹುದು., ಈಗಿನ ಸಮಯ ಬಹು ಜನರಿಗೆ ಹಿತವಾಗುವ ಪಕ್ಷವಾದ ಅಭಿಪ್ರಾಯವನ್ನು ಕೊಟ್ಟು ಕಟ್ಟಿನಲ್ಲಿ ತಿದ್ದುಪಡಿ ಆಗತಕ್ಕದ್ದೆಂದಾದರೆ ಯತ್ನಿಸಬೇಕು. ಬರೀ ಗುಲ್ಲು ನಿದ್ದೆಗೇಡು ಎಂಬಾಗುವುದು ಸರಿಯಲ್ಲ. ಕುಂದಾಪುರದವರು ಇನ್ನಾದರೂ ಒಟ್ಟುಕೂಡಿ ಚರ್ಚಿಸಿ ಬಹುಮಂದಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಆಲೋಚಿಸಲು ಪ್ರಯತ್ನಿಸಬೇಕಾಗಿದೆ.

ಕಾರ್ಕಳದಲ್ಲಿ ಸ್ವಲ್ಪ ಮಂದಿ ಮಾತ್ರ ಬಂದಿದ್ದರು. ಕಾರಣ ಕೊಟ್ಟು ಹಿತವಾಗಿರುವ ಸೂಚನೆಯನ್ನೇ ಕೊಡುವಯತ್ನವಿತ್ತು. ಜಿಲ್ಲೆಯಲ್ಲಿ ಇನ್ನೂ ಕೆಲವೆಡೆ ಅಭಿಪ್ರಾಯ ತಿಳಿಯಲು ಹೋಗಬೇಕಾಗುವುದರಿಂದ ಇವರು ಕೊಟ್ಟ ಕೆಲವು ಸೂಚನೆಯನ್ನು ಎಲ್ಲವರೂ ತಿಳಿಯುವಂತೆ ಮುಂದಿಡುವದು ನ್ಯಾಯವಿದೆ. ಅಳಿಯಕಟ್ಟಿನ ಆಚರಣೆಯಲ್ಲಿ ತಿದ್ದುಪಡಿ ಆಗತಕ್ಕ. ಒಬ್ಬಂಟಿಗನಾದ ಗಂಡುಮೆಂಬರನೂ, ಅಲ್ಪಸಂಖ್ಯೆಯ ಕವರಿನವರೂ ಒಪ್ಪದೆ ಈಗ ಪಾಲಾಗದು. ಇವರ ಒಪ್ಪಿಗೆಯಿಲ್ಲದೆ ಕಾನೂನು ಮೂಲಕ ಪಾಲಾಗಬೇಕೆಂದು ಮಾಡಿ ಇವರನ್ನು ದೊಡ್ಡ ಕುಟುಂಬಗಳಿಂದ ಹೊರದಬ್ಬುವಾಗ ಇವರಿಗೆ ಸಿಕ್ಕತಕ್ಕಪಾಲು ಹಕ್ಕು ಮಾತ್ರಕ್ಕೆ ಸೇರದೆ ತಕ್ಕ ಪ್ರತಿಫಲದ್ದಿರಬೇಕು. ಗಂಡು ಮೆಂಬರರ ಹಕ್ಕು ಬರೇ ಅವಸಾರ್ಥವೆಂದಿರದೆ ಕ್ರಮವಾಗಿ ಮಾರ್ಪಡಿಸಿ ಕ್ರಮೇಣ ಮದುವೆ ವಗೈರೆಕಾರ್ಯಗಳಲ್ಲಿ ಸಹಾಯವಾಗಲು ಎಡೆಯಿದ್ದುದಾಗಬೇಕು. ಈ ಎಲ್ಲಾ ಕಾರಣಗಳಿಂದ ಸಾಧ್ಯವಿದ್ದಷ್ಟು ಸಮಯ ಅಳಿಯ ಕಟ್ಟಿಗೆ ಸೇರಿದ ಈಗಿರುವ ಆಸ್ತಿಗಳು ಅಳಿಯಕಟ್ಟಿನ ಆಚರಣೆಯಲ್ಲಿ ಸೇರುವಂತೆಯೂ, ಸ್ವಾರ್ಜಿತ ಆಸ್ತಿ ಪ್ರತ್ಯೇಕ ವಿಲೇವಾರು ಮಾಡಿಟ್ಟ ವಿನಹ ಇಂಡಿಯನ್ ಸಂಕ್ಸೆಸನ್ ಆಕ್ಟು ಪ್ರಕಾರ ಸ್ವತಂತ್ರ ಹಕ್ಕಿಗೆ ಇನ್ನು ಮುಂದಕ್ಕೆ ಸೇರುವಂತೆಯೂ ಆಗಬೇಕು.

ಈ ಕೆಲವು ಹಿತಾಲೋಚನೆಯಿಂದ ತಂದೆಯ ಸ್ವಾರ್ಜಿತದ ಆಸ್ತಿಯು ಸ್ವತಂತ್ರ ಹಕ್ಕಿನಿಂದ ಮಸೂದೆಯ 4ನೇ ಪ್ರಕರಣ ಪ್ರಕಾರ ಕವರುವಾರು ಪಾಲಾಗಬೇಕೆಂದೂ, ಅದೇ ರೀತಿ ತಾಯಿಯ ಸ್ವಾರ್ಜಿತ ಆಸ್ತಿ ಕೂಡ ಸ್ವಾತಂತ್ರಿಕ ಹಕ್ಕಿನಿಂದ ಪಾಲಾಗತಕ್ಕದ್ದೆಂದೂ, ಇದಕ್ಕೆ ಬೇಕಾದ ತಬ್ಸೀಲು 4 ಮತ್ತು 8ನೇ ಪ್ರಕರಣಗಳಲ್ಲಿ ಆಗಬೇಕಾಗಿ ಒಂದನೇ ಅಭಿಪ್ರಾಯವಿತ್ತು.

6ನೇ ಪ್ರಕರಣದಲ್ಲಿ ತಾಯಿಗೆ 50 ವರ್ಷದಾಟಿದ ನಂತರ ಅವರ ಒಪ್ಪಿಗೆ ಶಿವಾಯ ಕವರಿನ ಬಹುಜನ ಪ್ರಾಯಸ್ಥರು ಪಾಲು ಕೇಳುವಲ್ಲಿ ಕೊಡಬಹುದು. ಇದು ತನಕ ಬಹು ಸಮಯದಿಂದ ಪಾಲಾಗದೆ ಇದ್ದ ಕವರುಗಳಲ್ಲಿ ಜನಸಂಖ್ಯೆಯ ವ್ಯತ್ಯಾಸ ಬಹಳವಿರಬಹುದಾದ್ದರಿಂದೂ, ಗಂಡು ಮೆಂಬರರು ತಲೆವಾರು ಮತ್ತು ಸ್ವತಂತ್ರ ರಹಿತ ಪಾಲು ಪಡಿಯುವುದಾದರೆ ಬಹು ನಷ್ಟ ಮತ್ತು ಹೀನಾವಸ್ಥೆಯನ್ನು ಹೊಂದುವರಾದ್ದರಿಂದ, ಆಗತ್ಯ ಕಾಣುವ ಎಲ್ಲಾ ಕುಟುಂಬಗಳು ತಾಯಿಯನ್ನು ಒಂದು ಕವರಾಗಿ ಎಣಿಸಿಕೊಂಡು, ಹತ್ತು ವರ್ಷಗಳ ತನಕ ಈಗ ಹೆಚ್ಚು ಪಕ್ಷ ಜ್ಯಾರಿಯಲ್ಲಿರುವ ಪಂಚಾಯತಿ ಕ್ರಮದಲ್ಲಿ, ಅರ್ಧ ಕವರುವಾರು, ಅರ್ಧ ಜನವಾರು ಪ್ರಕಾರ ಪಾಲು ಮಾಡಿಕೊಳ್ಳಬಹುದು, ಗಂಡಸರಿಗೆ ಇಲ್ಲಿ ಸ್ವತಂತ್ರವಾದ ಹಕ್ಕಿಲ್ಲ. ಸ್ವಾರ್ಜಿತದಲ್ಲಿ ಸ್ವತಂತ್ರದ ಹಕ್ಕು ಇರುವುದು. ಹತ್ತು ವರ್ಷದ ನಂತರ ಕವರುವಾರು ಪ್ರಕಾರವೇ ಪಾಲಾಗಬೇಕು. ಇದರಿಂದ ಒಬ್ಬಂಟಿಗನಾದ ಗಂಡು ಮೆಂಬರನೂ, ಅಲ್ಪ ಸಂಖ್ಯೆಯ ಕವರುಗಳೂ, ತಮಗಿರುವ ಪಾಲು ಕವರುವಾರು ಎಂದು ನಿಶ್ಚಯವಿರುತ್ತಾ ಪ್ರೀತಿಯಿರುವಲ್ಲಿ ಬಹು ಮಂದಿ ಸೇರಿರುವ ಕುಟುಂಬದ ಗೌರವದೊಳಗೆ ಪಾಲು ಕೇಳದೆ ಹೆಚ್ಚು ಸಮಯ ಇದ್ದಿರಲು ಅನುಕೂಲವೂ ಬಹುಸಂಖ್ಯಾಕರಿಗೆ ಇದು ಪ್ರಯೋಜನವೂ, ಅಳಿಯಕಟ್ಟು ಕೆಲವು ಕಾಲ ನಡೆದು ಬರುವಂತೆ ಅವಕಾಶ ತನ್ನಂತೆ ಹುಟ್ಟಿಸಿಕೊಟ್ಟಂತೆಯೂ ಆಗುವುದೆಂಬ ಅಭಿಪ್ರಾಯ.

ಇವೆರಡು ಸೂಚನೆಗಳಿಂದ ಸ್ವಾರ್ಜಿತದ ಆಸ್ತಿಯಲ್ಲಿ ಹೆಣ್ಣುಗಂಡು ಭೇದವಿಲ್ಲದೆ ಸ್ವತಂತ್ರಿಕ ಹಕ್ಕಿನ ಪಾಲು ಪಡಿಯುವ ಪ್ರಾರ್ಥ ತಬ್ಸೀಲಿಯಾಯಿತು. ಕುಟುಂಬದ ಆಸ್ತಿಯಲ್ಲಿ ಸ್ವತಂತ್ರಿಕ ಹಕ್ಕು ಕೊಡದೆ ಹತ್ತು ವರ್ಷಗಳ ತನಕ ಆಗತ್ಯವಿದ್ದ ಕುಟುಂಬಗಳು ಪಾಲುಮಾಡಿಕೊಂಡು ನಂತರ ಕವರುವಾರು ಎಂದು ನಿಶ್ಚಯಿಸಿ ಕೆಲವು ಕಾಲ ಪುರಾತನ ಕಟ್ಟು ಉಳಿದು ಬರಲು ಎಡೆಯಾಯಿತೆಂಬ ಅಭಿಪ್ರಾಯ.

ಕುಟುಂಬವು ಒಗ್ಗಟ್ಟಿನಿಂದ ನಡಿಯುವಾಗ ಹಿರಿಯನು ಲೆಕ್ಕವನ್ನಿಟ್ಟು ತೀರ್ವೆ ಮತ್ತು ಸಲುವ ಗೇಣಿಯನ್ನು ಕಳದು ಉಳಿಯುವ ವಸೂಲಾದ ಐನ್ ಮುನಾಫೆಯಲ್ಲಿ ಶೇಕಡ 6¼ರ ಮುನಾಫೆ ತನ್ನ ಪರಿಶ್ರಮಕ್ಕಾಗಿ ಸ್ವಂತಕ್ಕೆ ತೆಗಿಯಬಹುದಾಗಿಯೂ ಸೂಚಿಸಿಯಿತ್ತು.

ಎರಡೂ ಕಡೆಗಳ ಚರ್ಚೆಯಿಂದ ಇವೆರಡು ಸೂಚನೆಗಳು ಮುಂದೆ ಬಂದಿರುವವು. 1. ಸ್ತ್ರೀಧನ ವಿಲೇವಾರು ಮಸೂದೆಯಲ್ಲಿರುವುದಾದರೂ, ಕುಟುಂಬದ ಸಾಲ, ಚರಸೊತ್ತು ಮತ್ತು ನಗದಿ ಮೂಲಗಳ ವಿಲೇವಾರು ಸೇರಿರುವುದಿಲ್ಲ. 2. ಕುಟುಂಬಗಳು ಪಾಲಾಗದಿರುವರೆ ರಿಜಿಸ್ತ್ರಿ ಮಾಡಿಕೊಳ್ಳಬಹುದೆಂಬ 7ನೇ ಪ್ರಕರಣವಿದ್ದರೂ, ಎಲ್ಲವರ ಒಪ್ಪಿಗೆಯಿಂದ ಕುಟುಂಬಕ್ಕೆ ಹಿತವೆನ್ನುವ ನಿವೃತ್ತಿ ಮಾಡಿಕೊಂಡು ಬೇಡನೆನ್ನುವಾಗ ಪಾಲು ಮಾಡಿಕೊಳ್ಳುವ ವಿಷಯವೂ ಇಲ್ಲದಾಗಿದೆ

ಇದೆಲ್ಲವನ್ನು [illegible] ಎಲ್ಲವರೂ ಆಲೋಚಿಸಿ ಅಭಿಪ್ರಾಯಕ್ಕೆ ಬರುವಂತೆ ಪ್ರಕಟಿಸಲಾಗಿದೆ

ಎಮ್. ಆರ್. ಪೂಂಜ,
ಅಭಿಪ್ರಾಯ ತಿಳಿಯಲು ನಿರ್ಣಯಿಸಿದ
ಕಮಿಟಿ ಮೆಂಬರ.

ಮೂಲ್ಕಿ, 10 7-46.

ಕಾರ್ಕಳ—ಜಿಲ್ಲಾ ಸ್ಥಳೀಯ ತಾಲೂಕು ಆಫೀಸಿನಲ್ಲಿ ಸೇರಿದ ಪಂಚಾಯತ ಬೋರ್ಡು ಮತ್ತು ಗ್ರಾಮ ಕಮಿಟಿಗಳ ಮೆಂಬರರ ಸಭೆಯಲ್ಲಿ ಶ್ರೀ. ವೆಂಕಟೇಶ ಭಟ್ಟ ವಕೀಲರು ಮತ್ತು ಕಾರ್ಕಳ ನಾಗಣ್ಣ ಹೆಗ್ಡೆ ಇವರು ಸರ್ವಾನುಮತದಿಂದ ತಾಲೂಕು ಕಮಿಟಿಗೆ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ.

ತೆಂಗಿನಕಾಯಿ ಮತ್ತು ತೆಂಗಿನೆಣ್ಣೆ ಕ್ರಯ ವಿಪರೀತ ವಾಗಿರುವ ಪ್ರಯುಕ್ತ ಬಡಜನರಿಗೆ ತುಂಬಾ ಕಷ್ಟವಾಗಿದೆ ಕ್ರಯ ಕಡಿಮೆಮಾಡಿಸಿದಲ್ಲಿ ಸಾರ್ವಜನಿಕರಿಗೆ ತುಂಬಾ ಸಹಾಯವಾಗುತ್ತಿತ್ತು. ಸಂಬಂಧಪಟ್ಟ ಅಧಿಕಾರಿಗಳು ತಕ್ಕ ವ್ಯವಸ್ಥೆ ಮಾಡುವರಾಗಿ ನಂಬಲಾಗಿದೆ.

BANK WITH THE LARGEST
CONNECTIONS ON
THE WEST COAST

OFFERS:-
EFFICIENT,
PROMPT &
COURTEOUS
SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd
ESTD. 1925

FOR LIFE ASSURANCE
CONSULT
The New Gaurdian of India Life Insrce. Co., Ltd.,
(Chairman - The Hon'ble Mr. M. CT. M. Chidambaram Chettiar.)
A policy in this progressive Life Office is a good investment;
its Agency is a valuable business connection.

LOCAL OFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ
ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ತಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ
ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ.
ಕಿರಿಯರ ಪ್ರಪಂಚ, ಉಡುಪಿ.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.
ಶರ್ತಗಳಿಗೆ ಬರೆಯಿರಿ—
'ಅಂತರಂಗ', ಉಡುಪಿ.

ಮಂಗಳೂರು ಸಂಗೀತ ನಾಟಕ ಸಭಾ–ಇವರು ಆನಂದ ಸಂಗೀತ ವಿದ್ಯಾಲಯದ ಸಹಾಯಾರ್ಥವಾಗಿ "ವಿಷಮ ಜೀವನ" ಎಂಬ ಸಾಮಾಜಿಕ ನಾಟಕವನ್ನು ತಾ. 7-7-46ರಲ್ಲಿ ಜಯಶೀಲರಾಗಿ ಅಭಿನಯಿಸಿದರು. ಸಮಾರಂಭದ ಮುಕ್ತಾಯದ ಮೊದಲು ಶ್ರೀ ಕುಂಡೂರು ಲಕ್ಷ್ಮೀನಾರಾಯಣ ಪ್ರಚೆತ್ತಾಯರವರು ನಾಟಕದ ವಿವರವನ್ನು ಶ್ಲಾಘಿಸಿ ಮಾತಾಡಿದರು. ಡಾ. ಕೆ.ಕೆ. ಹೆಗ್ಡೆಯವರು ಅಂದಿನ ಕಲಾಕೌಶಲ್ಯಕ್ಕೆ ಮೆಚ್ಚಿ ಬೆಳ್ಳಿಯ ಕಪ್ ಒಂದನ್ನೂ ಡಾ. ನಾಗಪ್ಪ ಆಳ್ವರು ರೂ. 10/ನ್ನೂ ನಾಟಕಸಭೆಗೆ ಉಚಿತವಾಗಿ ಅರ್ಪಿಸಿದರು. ನಾಟಕದ ಮುಖ್ಯ ಪಾತ್ರಧಾರರಾದ ಶ್ರೀ ಮೋಹನ್ ದಾಸ್ ಇವರು ತಮ್ಮ ಇಂಪಾದ ಹಾಡುಗಾರಿಕೆಯಿಂದ ನೆರೆದ ಸಭಿಕರನ್ನು ಮನಾಹ್ಲಾದಗೊಳಿಸಿದರಲ್ಲದೆ, ಸಭಿಕರೋರ್ವರಿಂದ 'ವನ್ಸ್ ಮೋರ್'ಗಾಗಿ ದೊರೆತ ರೂಪಾಯಿ 10/-ನ್ನು ನಾಟಕ ಸಭೆಕ್ಕೇನೇ ದಾನವಿತ್ತರು. ಇದೇ ನಾಟಕವು ತಾ 21ಕ್ಕೆ ಇನ್ನೊಮ್ಮೆ ಅಭಿನಯಿಸಲ್ಪಡುವುದೆಂದು ತಿಳಿದುಬರುತ್ತದೆ.

ಪುತ್ತೂರು-ದಕ್ಷಿಣ ಕನ್ನಡ ಜಿಲ್ಲಾ ಸಂಸ್ಕೃತ ಮಹಾಸಭೆಯ ಕಾರ್ಯದರ್ಶಿಗಳೂ ಪುತ್ತೂರಿನ ಹಿಂದೀ ಪ್ರಚಾರಕರೂ ಆಗಿರುವ ಶ್ರೀ. ಕೆ. ಕೃಷ್ಣಮಾಚಾರ್ಯ, ವಿಶಾರದ ಇವರು ಕೊಡಗಿನ ಶ್ರೀ. ಚಂದ್ರಾದೇವಿ ವಿಶಾರದ, ಇವರನ್ನು ಕಳೆದ ತಾ. 23ರಂದು ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಶ್ರೀ. ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಲ್ಲಿ ವೈದಿಕ ವಿಧಿಪ್ರಕಾರ ಮಾಡಿಕೊಂಡ ಹಿಂದೂ ಅಂತರ್ಜಾತೀಯ ವಿವಾಹದ ಸಂತೋಷ ಸೂಚಕವಾಗಿ ಕಳೆದ ತಾ. 29ರಲ್ಲು ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ನವದಂಪತಿಗಳಿಬ್ಬರಿಗೂ ಒಂದು ಸತ್ಕಾರಕೂಟವೇರ್ಪಡಿಸಲಾಗಿತ್ತು. ಶ್ರೀ. ಕೃಷ್ಣಮಾಚಾರ್ಯರು ಈ ರೀತಿಯ ಮದುವೆಗಾರಿಕೆಯ ಸುಧಾರಣಾರೂಪದ ಪಾಣಿಗ್ರಹಣ ಮಾಡಿಕೊಂಡುದಕ್ಕಾಗಿ ಮೆಚ್ಚಿ "ದಂಪತಿಗಳಿಬ್ಬರಿಗೂ ಆಯುರಾರೋಗ್ಯವುಂಟಾಗಿ ಹಿಂದೀ ಪ್ರಚಾರದೊಡನೆ ದೇಶಸೇವೆ ಮಾಡುತ್ತಿರಲಿ" ಇತ್ಯಾದಿ ವಿಷಯಗಳಲ್ಲಿ ಮಹನೀಯರ ಭಾಷಣವಾದಮೇಲೆ ಶ್ರೀ. ಕೃಷ್ಣಮಾಚಾರ್ಯರು ಸಂದರ್ಭೋಚಿತ ಉತ್ತರ ಕೊಡುತ್ತಾ ಊರವರ ಆಶೀರ್ವಾದ, ಸಹಕಾರ, ಪ್ರೋತ್ಸಾಹಗಳಿದ್ದರೆ ಸಮಾಜಸೇವೆ ಮಾಡಲು ಸಿದ್ಧರಿರುವೆವೆಂದು ಹೇಳಿದರು. ಉಪಕಾರ ಸ್ಮರಣ [illegible] ಸತ್ಕಾರಕೂಟವು ಕೊನೆಗೊಂಡಿತು.

ಹಿರಿಯಡ್ಕ–ತಾ. 11 7 46ರಲ್ಲಿ ಮಾನ್ಯ ಉಡುಪಿ ಡಿಪ್ಯುಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಶಾಲೆಯಲ್ಲಿ ಜರಗಿದ ಹೆತ್ತವರ ಕೂಟದ ಸಮಾರಂಭದಲ್ಲಿ ಬಾಲಕಬಾಲಿಕೆಯರುಗಳು, ಡೈಲಾಗ್ಸ್, ಕುಮ್ಮಿ, ಡ್ರಿಲ್ಸ್, ಕೋಲಾಟ, ಯಕ್ಷಗಾನ ಮತ್ತು ಇನ್ನಿತರ ವಿನೋದಾವಳಿಗಳಿಂದ ಸಭಿಕರನ್ನು ಆನಂದಗೊಳಿಸಿದರು. ಅಧ್ಯಕ್ಷರು ಮಕ್ಕಳ ಚಟುವಟಿಕೆಗಳನ್ನು ನೋಡಿ ಶಾಲೆಯು ಈಗ ಎಲ್ಲಾ ವಿಷಯದಲ್ಲಿಯೂ ಮುಂದುವರಿದಿದಲ್ಲದೆ ಬಹಳ ಉತ್ತಮ ರೀತಿಯ ಕೆಲಸವು ನಡೆಯುತ್ತಾ ಇದೆ ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಫಲಿಮಾರು– ಇದೇ ತಿಂಗಳ ತಾ. 8ರಲ್ಲು ಇಲ್ಲಿಯ ಶಾಲೆಗೆ ಊರವರೇ ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟ ಮೂರನೇ ಕಟ್ಟೋಣದ ಪ್ರವೇಶೋತ್ಸವವು ಧಾರ್ಮಿಕ ರೀತಿಯಲ್ಲಿ ಸಾಂಗವಾಗಿ ಜರಗಿತು. ಅಪರಾಹ್ನ ಘಂಟೆ 3ಕ್ಕೆ ಉಡುಪಿ ರೇಂಜ್ ಡಿ. ಇನ್ಸ್‌ಪೆಕ್ಟರವರ ನೇತೃತ್ವದಲ್ಲಿ ಈ ಕೇಂದ್ರದ ವಿದ್ಯಾಯ ಶಿಕ್ಷಣ.. ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗಿತು. ಮೆರವಣಿಗೆಯು ಊರೆಲ್ಲಾ ಸುತ್ತಾಡಿ ಸಾಯಂಕಾಲ ಭವ್ಯವಾಗಿ ಅಲಂಕರಿಸಲ್ಪಟ್ಟ ನೂತನ ಕಟ್ಟಡದಲ್ಲಿ ಸಭೆ ಜರಗಿ ವಿದ್ಯಾಯ ಶಿಕ್ಷಣದ ಕುರಿತು ಭಾಷಣಗಳು ಜರಗಿ ಮಕ್ಕಳಿಗೆ ತಿಂಡಿ ಹಂಚಲ್ಪಟ್ಟು ವಂದೇ ಮಾತರಂ ಗೀತದೊಂದಿಗೆ ಸಭೆ ವಿಸರ್ಜಿಸಲ್ಪಟ್ಟಿತು.

ದ. ಕ ಜಿಲ್ಲಾ ಕಾಂಗ್ರೆಸು ಅಧ್ಯಕ್ಷರಲ್ಲಿ—ಈ ಮೊದಲಿನ ಜಿಲ್ಲಾ ಕಾಂಗ್ರೆಸು ಸಮಿತಿಯ ಘಟನೆಯಂತೆ ೫೦೦ ಪ್ರಾಥಮಿಕ ಸದಸ್ಯರಿಗೆ, ಜಿಲ್ಲಾ ಸಮಿತಿಗೆ ಒಂದೊಂದು ಸದಸ್ಯತನ ದೊರಕುವುದೆಂದು ನಿಯಮ ಇತ್ತು. ಆದರೆ ಈಗ ಸರ್ಕಲಿಗೆ ೩ರಂತೆ ಎಂದು ತೀರಿಸಲ್ಪಟ್ಟಿದೆ. ಇದು ಘಟನೆಗೆ ವಿರೋಧವೆಂದ ಪಲವರು ಅಭಿಪ್ರಾಯ ಪಡುತ್ತಾರೆ. ಕೆಲವು ಸರ್ಕಲುಗಳಲ್ಲಿ ಸದಸ್ಯತನ ಈ ವರ್ಷ ಜಾಸ್ತಿಯಾಗಿದೆ ಉದಾಹರಣೆಗಾಗಿ ಪುತ್ತೂರು ಸರ್ಕಲಿನಲ್ಲಿ ಈ ವರ್ಷ ೧೫೦೦ಕ್ಕೂ ಮಿಕ್ಕ ಸದಸ್ಯರು ಇರುವರು, ನಿಯಮ ಪ್ರಕಾರ ೬ ಮಂದಿಯನ್ನು ಜಿಲ್ಲಾ ಸಮಿತಿಗೆ ಕಳುಹಿಸಬಹುದಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಪರಿಶೀಲಿಸಿ ಯುಕ್ತ ಸಲಹೆಯನ್ನು ಕೊಡಬೇಕಾಗಿ ಪ್ರಾರ್ಥಿಸಲಾಗಿದೆ.

ಎಂ. ಬಿ. ನರ್ಸಪ್ಪ ಕಾಂ. ಸದಸ್ಯ
ಪುತ್ತೂರು 14-7-46

ಪುತ್ತೂರು–ತಾ. 25-7 46ರ ಒಳಗೆ ಜಿಲ್ಲಾ ಕಾಂಗ್ರೆಸು ಸಮಿತಿಯ ಬಗ್ಗೆ ನಮ್ಮ ಸರ್ಕಲಿನಿಂದ ಇಬ್ಬರು ಉಮೇದ್ವಾರರನ್ನೇ ಕಳುಹಿಸಿಕೊಡಬೇಕೆಂದು ನಿಶ್ಚಯಿಸಲ್ಪಟ್ಟಿರುವುದರಿಂದ ತಾ 21 7 46ನೇ ಆದಿತ್ಯವಾರ ಮಧ್ಯಾಹ್ನ 2 30ಕ್ಕೆ ಸ್ಥಳೀಯ ಸರ್ಕಲ್ ಕಾಂಗ್ರೆಸು ಸಮಿತಿ ಆಫೀಸಿನಲ್ಲಿ ಜರಗುವ ಮೀಟಿಂಗಿಗಾಗಿ ಎಲ್ಲಾ ಕಾಂಗ್ರೆಸ್ ಸದಸ್ಯರೂ ಬಂದು ಸಹಕರಿಸಬೇಕಾಗಿ ಕಾರ್ಯದರ್ಶಿ ಶ್ರೀ. ಕೆ. ರಾಮ ಕುಡ್ವರು ಅಪೇಕ್ಷಿಸುತ್ತಾರೆ.

ಬ್ರಹ್ಮಾವರ--ಜಾಕೋಬೈಟ್ ಸಿರಿಯನ್ ಇಗರ್ಜಿಯವರಿಗೂ ಆದರಿಂದ ಒಡೆದುಹೋದ ಕಥೋಲಿಕೋಸ್ ಪಂಗಡಿಗರಿಗೂ ತಿರುವಾಂಕೂರಿನಲ್ಲಿ ನಡೆಯುತ್ತಿದ್ದ ಸಿವಿಲ್ ದಾವೆಯು ತಿರುವಾಂಕೂರು ಹೈಕೋರ್ಟಿನವರಿಂದ ಕಥೋಲಿಕೋಸ್ ಪಂಗಡಿಗರಿಗೆ ವಿರೋಧವಾಗಿ ಜಾಕೋಬೈಟ್ ಸಿರಿಯನ್ ಇಗರ್ಜಿಯವರ ಗುಣಕ್ಕೆ ತೀರ್ಮಾನವಾಗಿದೆಯೆಂದೂ ಈ ಸಂಬಂಧ ಜಾಕೋಬೈಟ್ ಸಿರಿಯನ್ ಇಗರ್ಜಿಯಲ್ಲಿ ಧನ್ಯವಾದ ಸಮರ್ಪಣಾ ಸಮಾರಂಭವು ಹಿಂದಿನಂತೆ ಜರಗಲಿರುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾಸರಗೋಡು-ರೆವಿನ್ಯೂ ಸರ್ಕಲುಗಳಿಂದ ತಾಲೂಕು ಕಮಿಟಿಗೆ ಈ ಕೆಳಗಿರುವವರು ಚುನಾಯಿತರಾಗಿರುವರು. 1 ಮಂಜೇಶ್ವರ ಸರ್ಕಲ್‌ರದು ಶ್ರೀ. ಅಡೆಕಲ ರಾಮಯ ನಾಯ್ಕ 2 ಕುಂಬಳೆ ಸರ್ಕಲಿನಿಂದ ಶ್ರೀ. ಬಿ. ದೇವಪ್ಪ ಆಳ್ವ. ಶ್ರೀ. ಕುಲಂಕೋಡಿ ಕೃಷ್ಣ ಭಟ್ಟ 3 ಕಾಸರಗೋಡು ಸರ್ಕಲ್‌ರದು ಶ್ರೀ. ಕೋಡೋತ್ ನಾರಾಯಣ ರಾಯರ್ N. ಕೃಷ್ಣನಂಬಿಯಾರ್. 4 ಹೊಸದುರ್ಗ ಸರ್ಕಲ್‌ನಿಂದ ಶ್ರೀ. ಎ. ಸಿ. ಕಣ್ಣ ನಾಯರ್ ಶ್ರೀ. N. ಕುಞಂಬುನಾಯರ್ 5 ನೀಲೇಶ್ವರ ಸರ್ಕಲ್‌ನಿಂದ ಶ್ರೀ. ರಾಘವ ನಂಬಿಯಾರ್. ಶ್ರೀ. ಕಾಸರಗೋಡು A. ಅಚ್ಯುತನ್.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು
ಡಾ|| ದೊಡ್ಡೇರಿ ವೆಂಕಟಗಿರಿರಾವ್
ಸುಮಾರು ಮೂವತ್ತು ಚಿತ್ರಗಳಿವೆ.
ವಿ. ಪಿ. ಕಳಿಸುವುದಿಲ್ಲ. ರೂ. ೨-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು
ಮಾರಾಟಗಾರರು
ಮಾಡರ್ನ್ ಔಷಧಾಲಯ
ದೊಡ್ಡ ಬಳ್ಳಾಪುರ (ಬೆಂಗಳೂರು)

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟು ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ

ಶ್ರೀಕೃಷ್ಣ
ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮ್ಯೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉಪನ್ಯಾಸ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಆಗುಹೋಗುಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4-8-0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ರಾಜಗೋಪಾಲಾಚಾರ್ಯ,
ಕೆಂಬಳ್ಳಿ, ಉಡುಪಿ.

ಬಾಣಂತಿಯರ ನಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ
ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟದೆ.)



೮ ಔನ್ಸಿನ ಬಾಟ್ಲುಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು ಡಾ|| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ



ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ --ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಜೀರ್ಣ, ಕೆಮ್ಮು, ಮೈನೋವು, ಹಲ್ಲುನೋವು, ಮಕ್ಕಳ [illegible] ಇತ್ಯಾದಿ [illegible] ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಸ್ಚರ್ ನಿಸ್ಸಂಶಯವಾಗಿ ಗುಣಪಡಿಸುತ್ತದೆ. [illegible]

ಎಮ್.ಪಿ. ಜವೇರಿಯನ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ENGLISH MADE EASY
(SELF ENGLISH STUDY)

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು- ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1-12-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ,

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

ಆಹಾರಾಡಳಿತೆಯ ಕಾರ್ಯ ಸಹಾಯಕ ಗ್ರಾಮ ಸಮಿತಿಗಳು

ಗ್ರಾಮ ಸಮಿತಿಗಳಿಗಾಗಿರುವ ಸದಸ್ಯರ ನೇಮಕಗಳ ಕುರಿತು ಅಸಮಾಧಾನಗೊಂಡಿರುವ ಹಲವರು ಹೊಸ ಹೆಸರುಗಳನ್ನು ಸೂಚಿಸಿ ಪತ್ರಗಳನ್ನು ಬರೆಯುತ್ತಿದ್ದಾರೆ. ಸಂಬಂಧಪಟ್ಟ ರೆವಿನ್ಯೂ ಆಫೀಸರು ತಾವು ಆರಿಸಿಕೊಂಡ ಸದಸ್ಯರ ಹೆಸರು ಪಟ್ಟಿಯನ್ನು ಎಸೆಂಬ್ಲಿ ಸದಸ್ಯರಿಗೆ ಸಾಕಷ್ಟು ಸಮಯಕ್ಕೆ ಮುಂದಾಗಿ ತೋರಿಸಲು ಅಸಮರ್ಥರಾದುದರಿಂದ, ಈ ಕುರಿತು ಜನಮತ ಹೇಗಿದೆಯೆಂಬುದನ್ನು ಸಂಚರಿಸಿ ಸಂಗ್ರಹಿಸಿಕೊಳ್ಳಲು ನನ್ನಿಂದಾಗಲಿಲ್ಲ. ಈಗ ರೆವಿನ್ಯೂ ಡಿವಿಜನಲ್ ಆಫೀಸರರುಗಳಿಗೇನಾದರೂ ಸೂಚನೆಗಳನ್ನು ಕೊಟ್ಟು ಕಮಿಟಿ ಹೆಸರುಗಳನ್ನು ಬದಲಾಯಿಸೋಣವೆಂದರೆ ಕಾಲವಿಳಂಬವಾಗಿದೆ. ಕಮಿಟಿಗಳಿಗಾರಿಸಲ್ಪಟ್ಟ ಮಹನೀಯರ ಹೆಗಲ ಮೇಲೆ ಜವಾಬ್ದಾರಿಯುಳ್ಳ ಕಾರ್ಯಗಳು ಬಿದ್ದಿವೆ. ಉಳಿತಾಯಾಂಶಗಳ ಜಮಾಕಾರ್ಯವು ತಮ್ಮ ಗ್ರಾಮದ ಪ್ರತಿಯೊಬ್ಬನ ಮಟ್ಟಿಗೂ ನ್ಯಾಯಪೂರ್ಣವಾಗಿಯೂ ಸರಿಯಾದ ರೀತಿಯಿಂದ ನಡೆಯುವಂತೆ ಅವರು ನೋಡಬೇಕು. ತಮ್ಮ ನಿಜವಾದ ಆವಶ್ಯಕತೆಗೆ ಮಿಕ್ಕಿದ ಅಂಶಗಳನ್ನೂ ತಮ್ಮ ಗ್ರಾಮದಲ್ಲೇ ಉಳಿಸಿಟ್ಟುಕೊಳ್ಳುವ ಯೋಚನೆಯನ್ನು ಅವರು ಮಾಡಕೂಡದು. ಜಿಲ್ಲೆಯಲ್ಲಿ ಉತ್ಪನ್ನವಾದ ಎಲ್ಲಾ ಆಹಾರ ಧಾನ್ಯವು ಕಾಲಕಾಲಕ್ಕೆ ನಿರ್ಣಯಿಸಲ್ಪಡುವ ಹಸುಗೇ ಪರಿಮಾಣಕ್ಕನುಸಾರವಾಗಿ ಸರ್ವರಿಗೂ ಸಮಾನವಾಗಿ ಹಂಚಲ್ಪಡಬೇಕಾಗಿದೆ. ಮತ್ತೂ ಉಳಿಯುವ ಉಳಿತಾಯಾಂಶವೇನಾದರೂ ಇದ್ದರೆ ಅಭಾವವಿರುವ ಇತರ ಕಡೆಗಳಿಗದು ಕಳುಹಿಸಲ್ಪಡಲಿದೆ. ಅದೇ ರೀತಿ ತಮ್ಮ ಕ್ಷೇತ್ರಗಳಲ್ಲಿ ರೇಶನ್ ಕಾರ್ಡುಗಳ ಸರಿಯಾದ ವಿತರಣೆಯಾಗುವಂತೆ ನೋಡಲು ಗ್ರಾಮ ಸಮಿತಿಗಳು ಬದ್ಧವಿವೆ. ಅಂತೆಯೇ ಚಿಮಿಣಿ ಎಣ್ಣೆ, ಸಕ್ಕರೆ, ವಸ್ತ್ರ ಮತ್ತು ಬೇಸಾಯೋಪಕರಣಗಳೇ ಮೊದಲಾದ ನಿಯಂತ್ರಿತ ಸಾಮಾಗ್ರಿಗಳು ದೊರೆತ ಪರಿಮಾಣಕ್ಕನುಸಾರವಾಗಿ ಸರ್ವಸಮ್ಮತಿಯಿಂದ ಹಂಚಲ್ಪಡುವಂತೆಯೂ ಅವು ನೋಡಿಕೊಳ್ಳಬೇಕು.

ಮಂಗಳೂರು, 12-7-46 } ಎ. ಬಿ. ಶೆಟ್ಟಿ,

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ. 5. ೬ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಅಣೆ ಅಲಾಯಿದ.)

Mrs. P. DEVEE,
P. D. S. (A. P.) Tollygunge, Calcutta.
ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು

ದಕ್ಷಿಣ ಕನ್ನಡ

ಮಂಗಳೂರು.

ಹೋಟೆಲ್ ಮಾಲಿಕರ ಸಂಘದ ಉತ್ತರ

ಶ್ರೀ। ಕೆ. ಈಶ್ವರ, ಎಂ. ಎಲ್. ಎ., ಇವರು ತಾ. ೨೦ ೬ ೪೬ರ ದಾ. ಬಂಧುವಿನಲ್ಲಿ ಪ್ರಕಟಿಸಿದ ಹೇಳಿಕೆಗೆ ಉತ್ತರ ರೂಪವಾಗಿ ದ. ಕ. ಜಿಲ್ಲಾ ಹೋಟೆಲ್ ಮಾಲಿಕರ ಸಂಘವು ಈ ಲೇಖನವನ್ನು ಪ್ರಕಟಿಸಿದೆ.

ಸುಶಿಕ್ಷಿತರಾದ, ಸುಧಾರಣೆಹೊಂದಿದ, ಶುಭ್ರ ವಸ್ತ್ರ ಧಾರಿಗಳಾದ ಅನೇಕ ಮಂದಿ ಹರಿಜನರು, ಇತರರಂತೆಯೇ ಹೋಟೇಲುಗಳಲ್ಲಿ ಹೊಕ್ಕು ಊಟ, ತಿಂಡಿ ಪಾನೀಯ ಮೊದಲಾದುವುಗಳನ್ನು ಎಷ್ಟೋ ಸಮಯದ ಹಿಂದಿನಿಂದಲೂ ಪಡೆಯುತ್ತಿದ್ದರು. ಅದಕ್ಕೆ ಯಾರ ಆತಂಕವೂ ಇದ್ದಿಲ್ಲ. ಹೋಟೆಲ್ ಮಾಲಿಕರಾಗಲೀ, ಕೆಲಸಗಾರರಾಗಲೀ ಹಾಗೆ ಬಂದ ಗಿರಾಕಿಗಳು 'ಹರಿಜನರೆಂದು' ತಿಳಿದಿದ್ದರೂ, ಅವರಿಗೆ ಇತರರಂತೆಯೇ ತಿಂಡಿತಿನಸುಗಳನ್ನು ಕೊಟ್ಟಿದ್ದರು.

ಪತ್ರಿಕೆಗಳಲ್ಲಿ ತಮ್ಮ ಪ್ರಕಟಣೆಯಾದ ತಾರೀನ ಮೊದಲ್ಗೊಂಡು, ಬರೀ ಶಿಕ್ಷಿತ, ಸುಧಾರಿತ ಹರಿಜನ (ಹೊಲೆಯ) ಯುವಕರು ಮಾತ್ರವಲ್ಲ ಪಟ್ಟಣದ ಹೊಲೆಯ ಜಾತಿಗೆ ಸೇರಿದ ಸರ್ವರೂ ಹೋಟೆಲಿಗೆ ಬಂದು ಪ್ರವೇಶ ಕೇಳುತ್ತಿದ್ದಾರೆ. ತೋಟಿಗಳೂ, ತಮ್ಮ ಬಾಲ್ದಿಗಳನ್ನು ಹೋಟೆಲುಗಳ ಹೊರಗೆ ಇಟ್ಟು 'ದೊಕ್ಕಳೇ, ಎಂಕ್ಳು 'ಇಸಿದ್' ಹೋಟೆಲ್‌ದುಲ್ಯ ಬರೋಳ್ಯತ್ತಾ?' ಎಂದು ಕೇಳುತ್ತಿರುವರು. ಕುಕ್ಕೆ, ಬುಟ್ಟಿಗಳನ್ನು ನೇಯುವ ಕೊರಗರೂ, ಇತರ ಹರಿಜನ ಪಂಗಡಗಳಾದ ಮಾದಿಗರು ಮುಂತಾದ ಹಲವು ಕಸಬುಗಳನ್ನು ಅನುಸರಿಸುವ 'ಹರಿಜನ'ರೆಲ್ಲರೂ ಹೋಟೆಲುಗಳಲ್ಲಿ ಪ್ರವೇಶ ಕೇಳುತ್ತಿದ್ದಾರೆ. ಆದರೆ ಇವರೆಲ್ಲರನ್ನು ಏಕರೀತಿಯಾಗಿ ನಾವು ಒಳಗೆ ಬಿಡುವುದಾದರೆ ಉಳಿದ ನಮ್ಮ ಗಿರಾಕಿಗಳ ಹೇಳಿಕೆಗಳನ್ನು ನಾವು ಕೇಳಬೇಡವೆ? ಅವರ ಮನಸ್ಸನ್ನು ಒಮ್ಮೆಗೇ ನೋಯಿಸಲು ಸಾಧ್ಯವೆ? ಆದುದರಿಂದ ನಮ್ಮ ಗಿರಾಕಿಗಳ ಹೇಳಿಕೆಗಳನ್ನೂ ನಾವು ಇಲ್ಲಿ ತಮ್ಮ ತಿಳುವಳಿಕೆಯ ಬಗ್ಗೆ ಹೇಳಿಕೊಳ್ಳಬೇಕಾಗುವುದು.

ಇಷ್ಟರವರೆಗೆ ಸುಧಾರಣೆಹೊಂದಿದ ಅಸ್ಪೃಶ್ಯರು ಮಾತ್ರ ಹೋಟೆಲಿಗೆ ಬರುತ್ತಿದ್ದರು. ನಾವು ಅದಕ್ಕೆ ಅಡ್ಡಿಮಾಡಿರಲಿಲ್ಲ. ಈಗ ಒಂದೇ ಸಮನೆ ಹೀಗೆ ಎಲ್ಲರೂ ಒಳನುಗ್ಗುವುದಾದರೆ ಹರಿಜನ ಹೋಟೆಲ್ ಒಂದನ್ನು ಏಕೆ ತೆರೆಯಬಾರದು? ಈ ಪ್ರಕಟಣೆಯನ್ನು ಹೊರಡಿಸಿದ ಹರಿಜನ ಪ್ರತಿನಿಧಿಗಳು ಹರಿಜನರ ಇತರ ಪಂಗಡಗಳೊಡನೆ ಆಹಾರ ಫಲಾಹಾರಗಳನ್ನು ಸೇವಿಸಲು ಸಿದ್ಧರಿರುವರೇ?

ಮೇಲಿನ ಠರಾವನ್ನು ಮಾನ್ಯಮಾಡಿ ಬಲಪಡಿಸಿದ ಸ್ಥಳೀಯ ಸಂಸ್ಥೆಗಳಾದ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮಂಗಳೂರು, ಉಡುಪಿ ನಗರಸಭೆಯ ಪ್ರತಿನಿಧಿ ಮುಂದಾಳುಗಳು ತಮ್ಮ ಮನೆಯಲ್ಲಿ ಒಮ್ಮೆ ಇವರಿಗೆ ಪ್ರವೇಶಕೊಟ್ಟು ಆಹಾರವನ್ನು ಒಟ್ಟಾಗಿ ಸೇವಿಸಲು ಸಿದ್ಧರಿರುವರೇ? ಎಷ್ಟೋ ಹೋಟೆಲುಗಳಲ್ಲಿ ಅನೇಕ ವರ್ಷಗಳಿಂದ ಹರಿಜನರಿಗಾಗಿ ಅದೇ ಕಟ್ಟಡದಲ್ಲಿ ಬೇರೆ ಅನುಕೂಲತೆಗಳನ್ನು ಕೊಟ್ಟಿದ್ದರೂ ಅದನ್ನು ಗಮನಿಸದೆ ಹೋಟೆಲಿನ ಇತರ ಕಡೆಗಳಲ್ಲೂ ಆಡ್ಡಾಡುವ ಹಕ್ಕು ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವ ಬಲಾತ್ಕಾರಗಳೇಕೆ?

ಮೇಲೆ ಹೇಳಿದ ರೀತಿಯಲ್ಲಲ್ಲದೆ ಇನ್ನೂ ಹಲವು ರೀತಿಯಿಂದ ಹೋಟೆಲಿಗೆ ಬರುವ ನಮ್ಮ ಗಿರಾಕಿಗಳು ಆಡುತ್ತಿದ್ದರೂ, ಹೋಟೆಲ್ ಮಾಲಿಕರೂ ಕೆಲಸಗಾರರೂ ತಾಳ್ಮೆಯಿಂದ ತಮ್ಮ ಆಲ್ಪಿನ ಹರಿಜನ ಸೇವೆಯನ್ನು ಮಾಡುತ್ತಿದ್ದಾರೆ.

ಆದರೆ ಇಲ್ಲಿ ನಮ್ಮದೊಂದು ವಿನಂತಿ. ಆಡಿ ತೋರಿಸುವದಕ್ಕಿಂತ ಮಾಡಿ ತೋರಿಸುವುದು ಲೇಸಲ್ಲವೆ? ನಾವು ಒಂದು ಆದರ್ಶ ಸಹಪಂಕ್ತಿ, ಸಹಭೋಜನವನ್ನೇರ್ಪಡಿಸಬೇಕು. ಇದಕ್ಕೆ ಹೋಟೆಲುಗಳಿಗೆ ಸಾಮೂಹಿಕ ಪ್ರವೇಶಕ್ಕೆ ಒಪ್ಪಿಗೆಯನ್ನಿತ್ತ ನಮ್ಮ ಜಿಲ್ಲೆಯ ನ್ಯಾಯನಿಧಾಯಕ ಸಭೆಯ ಮೆಂಬರರು, ಜಿಲ್ಲಾ ಬೋರ್ಡ್ ಮತ್ತು ನಗರ ಸಭೆಯ ಸದಸ್ಯರೆಲ್ಲರೂ ಒಂದಾಗಿ, ಹರಿಜನರೆಂದೆನಿಸಿಕೊಳ್ಳುವ ಎಲ್ಲ ಸಮಾಜಗಳ ಪ್ರತಿನಿಧಿಗಳೊಂದಿಗೆ ಬೆರೆತು ಏಕಸ್ಥರಾಗಿ ಈ ಸಹಪಂಕ್ತಿ ಭೋಜನದಲ್ಲಿ ಭಾಗವಹಿಸಬೇಕು. ಈ ಭೋಜನದ ಸಕಲ ವ್ಯವಸ್ಥೆಯ ಭಾರವನ್ನೂ ಹೋಟೆಲ್ ಮಾಲಕರು ವಹಿಸುವರು. ಜಿಲ್ಲೆಯ ಧುರೀಣರನ್ನು ಸೇರಿಸುವ ಹೊಣೆ ನಿಮ್ಮದು. ಇದಕ್ಕೆ ತಾವು ಸಿದ್ಧರೆ? (ಸ್ಥಳಾಭಾವದಿಂದ ಲೇಖನವನ್ನು ಸಂಕ್ಷೇಪಿಸಲಾಗಿದೆ.-ಸಂ.)

ಜಿಲ್ಲಾ ಪಂಡಿತ ಮಂಡಲಿಯು- ಇತ್ತೀಚೆಗೆ ಸಭೆ ಸೇರಿದಾಗ, ಪ್ರಾಂತೀಯ ಭಾಷೆ ಮತ್ತು ಆ ಭಾಷೆಯನ್ನು ಕಲಿಸುವ ಪಂಡಿತರ ಮುಂದಿನ ಸಮಸ್ಯೆಗಳನ್ನೂ ಅವರ ಸಂಕಷ್ಟಗಳನ್ನೂ ಚರ್ಚಿಸಲಾಯಿತು. ಈ ಕುರಿತಾದ ಮನವಿಯೊಂದನ್ನು ಮಾನ್ಯ ವಿದ್ಯಾಮಂತ್ರಿಗಳಿಗೆ ಕಳುಹಬೇಕೆಂದೂ ನಿರ್ಣಯವಾಯಿತು

ಜಿಲ್ಲಾ ಟೀಚರ್ಸ್ ಗಿಲ್ಡಿನ- ಕೌನ್ಸಿಲ್ ಸಭೆಯು ತಾ. ೭ರಂದು ಕಾಸರಗೋಡು ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ। ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಾನ್ಯ ವಿದ್ಯಾಮಂತ್ರಿಗಳಿಗೆ ಈ ಮನವಿಯನ್ನು ಕಳುಹಿಸಲು ನಿರ್ಧರಿಸಿತು:— ಹೈಸ್ಕೂಲುಗಳು ಹೆಚ್ಚಿದುದರಿಂದಲೂ ಮಾತೃಭಾಷೆಯೇ ಶಿಕ್ಷಣ ಮಾಧ್ಯಮಿಕ ಭಾಷೆಯಾಗಿರುವುದರಿಂದಲೂ, ಕನ್ನಡದಲ್ಲೆ ಶಿಕ್ಷಣ ಕೊಡಬಲ್ಲ ಅಧ್ಯಾಪಕರ ತರಬೇತಿಗಾಗಿ ನಮ್ಮ ಜಿಲ್ಲೆಯಲ್ಲೊಂದು ಬಿ. ಟಿ ಕಾಲೇಜನ್ನು ತೆರೆಯಬೇಕು; ಮಂಗಳೂರಿನ ಗೌವರ್ನಮೆಂಟ್ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಮಾರ್ಪಡಿಸಿ ಬಿ ಎಸ್. ಸಿ. ಕಲಿಸುವ ವ್ಯವಸ್ಥೆಯಾಗಬೇಕು; ಕಾಂಞಂಗಾಡಿನಲ್ಲೊಂದು ಹೈಸ್ಕೂಲ್ ತೆರೆಯಬೇಕು ಪ್ರಾಂತೀಯ ಭಾಷೆಯನ್ನೇ ಶಿಕ್ಷಣ ಮಾಧ್ಯಮಿಕ ಭಾಷೆಯನ್ನಾಗಿ ಮಾಡಿ ಇಂಗ್ಲಿಷನ್ನು ದ್ವಿತೀಯ ಭಾಷೆಯನ್ನಾಗಿ ಮಾಡಿದ ಮದ್ರಾಸು ಸರಕಾರವನ್ನು ಈ ಕೌನ್ಸಿಲು ಅಭಿನಂದಿಸುತ್ತದೆ. ಕೊನೆಗೆ ಕೌನ್ಸಿಲು ಉಪಾಧ್ಯಾಯರ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ, ಡಿ. ಬೋರ್ಡು, ಪಂಚಾಯತ್ ಬೋರ್ಡು ಮತ್ತು ಏಡೆಡ್ ಶಾಲೆಗಳ ಉಪಾಧ್ಯಾಯರ ಸಂಬಳ, ರಜೆ ಮತ್ತು ಸರ್ವಿಸಿನ ರೀತಿಗಳು ಸರಕಾರಿ ಶಾಲೆಗಳ ಉಪಾಧ್ಯಾಯರಂತೆಯೇ ಇರಬೇಕೆಂದೂ ನಿರ್ಧರಿಸಿತು.

ಶ್ರೀ। ಪಿ ರಾಮಲಿಂಗಂ- ಅವರು ನಮ್ಮ ಹೊಸ ಜಿಲ್ಲಾ ಜಡ್ಜರಾಗಿ ಚಾರ್ಜು ವಹಿಸಿಕೊಂಡಿದ್ದಾರೆ.

ದ. ಕ. ಯುವಜನ ಕಾಂಗ್ರೆಸಿನ ಮಹಾಸಭೆಯು-- ತಾ. ೭ರಂದು ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ನಡೆಯಿತು. ಶ್ರೀ। ಕೆ. ಕೆ. ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ಪಟ್ಟಣದ ಮತ್ತು ಹೊರಗಿನಿಂದ ಸುಮಾರು ೩೦೦ ಮಂದಿ ಸದಸ್ಯರು ಬಂದಿದ್ದರು. ರಾಷ್ಟ್ರೀಯ ಗೀತೆ ಹಾಡಿದ ಮೇಲೆ ಯುವಜನ ಕಾಂಗ್ರೆಸಿನ ಈ ವರೆಗಿನ ಕಾರ್ಯದರ್ಶಿಯಾದ ಶ್ರೀ। ವ. ವಿ. ಉಪಾಧ್ಯಾಯರು ಈ ವರೆಗಿನ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿಟ್ಟು ಮಂಜೂರಾಯಿತು. ಈ ವರೆಗೆ ಯುವಜನ ಕಾಂಗ್ರೆಸಿಗೆ ರು. ೧ ಚಂದಾ ಕೊಟ್ಟು ೪೪೦ ಮಂದಿ ಸದಸ್ಯರಾಗಿರುತ್ತಾರೆ. ಆದರ ಆಶ್ರಯದಲ್ಲಿ ಸುಮಾರು ೩೦೦ ಮಂದಿ ಹೋಟೇಲು ಕೆಲಸಗಾರರ ಒಂದು ಸಂಘವು ಸ್ಥಾಪಿಸಲ್ಪಟ್ಟಿದೆ. ಅಧ್ಯಕ್ಷರು ಯುವಜನ ಕಾಂಗ್ರೆಸಿನ ಧ್ಯೇಯ, ಕಾರ್ಯಕ್ರಮ ಮತ್ತು ಇಂದಿನ ಜಗತ್ತಿನ ಮತ್ತು ದೇಶದ ಪರಿಸ್ಥಿತಿಯ ಕುರಿತು ದೀರ್ಘವಾದ ಭಾಷಣವಿತ್ತು, ಜಿಲ್ಲೆಯ ಜನರೆಲ್ಲಾ ಯುವಜನ ಕಾಂಗ್ರೆಸಿಗೆ ಹೆಚ್ಚಿನ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಆಮೇಲೆ ಕೆಲವು ಪ್ರಾಮುಖ್ಯ ಠರಾವುಗಳು ಮಂಜೂರಾದವು.

ಈ ಕೆಳಗಿನವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು:— ಅಧ್ಯಕ್ಷ: ಕೆ. ಕೆ. ಶೆಟ್ಟಿ, ಉಪಾಧ್ಯಕ್ಷ: ವಿಕ್ಟರ್ ಡಿ'ಸೋಜ; ಕಾರ್ಯದರ್ಶಿ: ಡಾ। ಸಂಜೀವ ನಾಥ್; ಉಪ ಕಾರ್ಯದರ್ಶಿ: ವ. ವಿ. ಉಪಾಧ್ಯಾಯ; ಕೋಶಾಧಿಕಾರಿ: ಕೆ. ಶಶಿಧರ ರಾವ್, ಮತ್ತು ೧೧ ಮಂದಿ ಇತರ ಸದಸ್ಯರು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿಟಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುಬ್ಬರಬಾನ್ ರೋಡ್, ಜಿ. ಐ. ಪಿ. ರೈಲ್ವೇ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

(೨ನೇ ಪುಟದಿಂದ)

ಖಂಡಿತರಾಗಿರುವ ಮೌಲಾನರು, ತನಗೆ ಷ್ಟೇ ತಿಳುವಳಿಕೆಯಿಲ್ಲದ ಇಂಗ್ಲಿಷ್ (ಅಥವಾ ಫ್ರೆಂಚ್) ಭಾಷೆಯನ್ನು ಮಾತುಕತೆಗಳಲ್ಲಿ ಅವಲಂಬಿಸದಿರುವದು ಸಹಜವೇ. ಆದರೆ ಅವರಿಗೆ ಸ್ಟಾಲಿನ್ ಅಥವಾ ಮೊಲಟೊವರಿಗಿಂತ ಹೆಚ್ಚಿಗೆ ಇಂಗ್ಲಿಷ್ ಜ್ಞಾನವಿದೆ. ರಶ್ಯದ ಈ ಅಗ್ರಗಣ್ಯ ಪ್ರಮುಖರಲ್ಲಿರುವ ಇಂಗ್ಲಿಷ್ ಜ್ಞಾನದ ಅಭಾವವು ಸಂಧಾನಮಾತುಕತೆಗಳನ್ನು ನಡಿಸದಂತೆ ಒಂದು ದೊಡ್ಡ ಪ್ರತಿಬಂಧವಾಯಿತೆಂಬುದನ್ನು ನಾನು ಇದು ವರೆಗೂ ಕೇಳಿದ್ದಿಲ್ಲ.

ವ್ಯಕ್ತಿ ಪ್ರತಿಷ್ಠೆಯಿಲ್ಲದ ಮನುಷ್ಯ

ಕಾಂಗ್ರೆಸ್ ಅಧ್ಯಕ್ಷರೊಡನೆ ಮಾತಾಡಲಾರೆನೆಂಬ ಜಿನ್ನರ ದರ್ಪ ಪೂರ್ಣ ಧಿಕ್ಕಾರದ ಕುರಿತು ಬ್ರಿಟಿಷ್ ಸಮಿತಿಯವರಾಗಲೀ ವೈಸರಾಯರಾಗಲೀ ಖಂಡಿತ ಧೋರಣೆ ವಹಿಸದೆ ಹೋಗಿದ್ದುದು ಶೋಚನೀಯ. ಕಾಂಗ್ರೆಸ್‌ಪರ ಪ್ರಾತಿನಿಧ್ಯ ವಹಿಸಿದ ಸಂದರ್ಭಗಳಲ್ಲಿ ಮೌಲಾನರೆಂದೂ ವ್ಯಕ್ತಿ ಸಂಬಂಧವನ್ನು ಗಣಿಸುವವರಲ್ಲ. ಕಾಂಗ್ರೆಸ್ ಪ್ರತಿಷ್ಠೆಗೆ ಬೀಳುವ ಧಕ್ಕೆಯ ನಿವಾರಣೆಗಗತ್ಯವೆಂದು ತೋರಿದ ಸಂದರ್ಭಗಳಲ್ಲಿ ಮಾತ್ರವೇ ತನ್ನ ಅಧಿಕಾರವನ್ನವರು ಮುಂದೊಡ್ಡಿ ತೋರಿಸುತ್ತಿದ್ದರು. ಇತರ ಎಲ್ಲಾ ಸಂದರ್ಭಗಳಲ್ಲೂ ತನ್ನ ವ್ಯಕ್ತಿತ್ವವನ್ನಡಗಿಸುವುದೇ ಅವರ ವ್ಯವಹಾರ. ಆರು ವರುಷಗಳ ಮೌಲಾನರ ಅಧ್ಯಕ್ಷಗಿರಿಯ ಅವಧಿಯಲ್ಲಿ ಕಾಂಗ್ರೆಸಿನ ಹಾಗೂ ರಾಷ್ಟ್ರದ ಸ್ಥಿತಿಸಲ್ಲಟಗಳ ಸಂದರ್ಭಗಳೆಷ್ಟೋ ಒದಗಿದ್ದುವು. ಎರಡು ಬಾರಿ ಸಂಧಾನ ಮಾತುಕತೆಗಳನ್ನವರು ನಡಿಸಿದ್ದರು–1942ರಲ್ಲಿ ಸರ್. ಸ್ಟಾಫೋರ್ಡ್ ಕ್ರಿಪ್ಸರೊಡನೊಮ್ಮೆ; ಈ ಬೇಸಿಗೆಯಲ್ಲಿ ಬ್ರಿಟಿಷ್ ಮಂತ್ರಿ ಸಮಿತಿಯೊಡನೆ ಮತ್ತೊಮ್ಮೆ. ಇವೆರಡು ಸಂದರ್ಭಗಳಲ್ಲೂ ಒಂದು ತೀರ್ಮಾನಕ್ಕೆ ಬರಬೇಕೆಂಬ ಅವರ ಆತುರವು ಅತಿಯಾಗಿತ್ತು; ಸಂಧಾನ ಮುರಿದು ಬೀಳದಂತೆ ನೋಡಲು, ಎಷ್ಟೋ ಪ್ರತಿಕೂಲ ವಿದ್ಯಮಾನಗಳಿದಿರು ಇವರು ಕಠಿಣ ಹೋರಾಟ ಕೊಟ್ಟಿದ್ದರು. ಅಂತೆಯೇ ಕಾಂಗ್ರೆಸ್ ಅಧ್ಯಕ್ಷರಾಗಿ, ಅವರಾ ಮಹಾ ಸಂಸ್ಥೆಯನ್ನು ಎರಡು ಕಾಯಿದೇ ಭಂಗ ಹೋರಾಟಗಳಲ್ಲೂ ಮುನ್ನಡೆಸಿದ್ದರು— 1940ರಲ್ಲೊಮ್ಮೆ, 1942ರಲ್ಲಿ ಮತ್ತೊಮ್ಮೆ. 1942ನೇ ಅಗೋಸ್ತು ತಾ. 9ರಲ್ಲಿ ಬೊಂಬಾಯಿಯ ಆ ಅದೃಷ್ಟದಾಯೀ ಅ. ಭಾ. ಕಾಂ. ಕಮಿಟಿ ಸಭೆಯಲ್ಲಿ ಮೌಲಾನರ ಸಮಾರೋಪ ಭಾಷಣವು, ಬಿಕ್ಕಟ್ಟು ನಿರ್ಮಿಸಬೇಡಿರೆಂದು ಬ್ರಿಟಿಷ್ ಸರಕಾರದೊಡನೆ ಮಾಡಿಕೊಂಡ ಸಶಕ್ತ–ಆದರೆ ನಿಷ್ಫಲ–ವಿನಂತಿಯಾಗಿತ್ತು.

ಮೌಲಾನರು ಮುಂದೇನು?

ಈ ರೀತಿ ಮೌಲಾನರ ಜೀವನ ಪಥದಲ್ಲಿ ಅಪಜಯಗಳಿದ್ದುವು. ಅಷ್ಟೇ ಯಾಕೆ, ವ್ಯಕ್ತಿಗತನಷ್ಟಗಳೂ ಅಗಾಧವಿವೆ. ಅಹಮ್ಮದ್ ನಗರದಲ್ಲಿ ಮೂರು ವರುಷ ಬಂಧನದಲ್ಲಿದ್ದಲ್ಲೇ ತನ್ನ ಸಹಧರ್ಮಿಣಿಯ ಮರಣ ವಾರ್ತೆಯನ್ನವರು ಕೇಳಿದ್ದರು. ಆದರೆ ಅವರ ಜೈಲುಜೀವನವು ಬಂಜೆಯಾಗಿರಲಿಲ್ಲ. ಪಂಡಿತ ಜವಾಹಿರಲಾಲರು ಅಲ್ಲಿ ಬರೆದಿದ್ದ 'ಭಾರತ ದರ್ಶನ' ಗ್ರಂಥದ ಶ್ಲಾಘನೆ ಲೋಕ ತುಂಬಾ ನಡೆದಿದೆ. ಆದರೆ ಮೌಲಾನರ ಉರ್ದು ಲೇಖನ ಸಂಗ್ರಹದ ಕುರಿತು ಹೆಚ್ಚಿನವರರಿಯರು. ಈ ಪ್ರಬಂಧವು, ಇಂಗ್ಲಿಷ್ ಸಾಹಿತ್ಯದಲ್ಲಿರುವ ಈ ವರ್ಗದ ಅತ್ಯುತ್ತಮ ಗ್ರಂಥಕ್ಕೆ ಸರಿ ಹೋಲುವಂತಹದೆಂದು ನಿಷ್ಪಕ್ಷಪಾತಿ ವಿಮರ್ಶಕರ ಅಭಿಪ್ರಾಯವಿದೆ.

ಕಾಂಗ್ರೆಸ್ ಅಧ್ಯಕ್ಷತೆಯಿಂದ ನಿವೃತ್ತಿಯೊಂದುವದೆಂದರೆ ಸಾಹಿತ್ಯ ನಿರ್ಮಾಣಕ್ಕಾಗಿ ನಾಕಷ್ಟು ವಿರಾಮ ಸಂಪಾದಿಸಿಕೊಳ್ಳುವದೆಂದೇ ಅರ್ಥ ಕಟ್ಟಬಹುದು. ಆದರೆ ಮೌಲಾನರು ಸಾಹಿತ್ಯ ಕ್ಷೇತ್ರವೊಂದಕ್ಕೇ ಹೇಳಿಸಿದ ಜನವೇನೂ ಅಲ್ಲ. ಅರಬೀಯ ವಿಹಿಳೆಯೋರ್ವಳಲ್ಲಿ ಮಕ್ಕಾದಲ್ಲಿ ಜನಿಸಿ, ಕೈರೋ ಮತ್ತು ಡಮಾಸ್ಕಸಿನಲ್ಲಿ ವಿದ್ಯಾಭ್ಯಾಸ ಪಡೆದಿದ್ದವರು ಈ ಮೌಲಾನರು. ಆದ್ದರಿಂದ ಭಾರತೀಯರ ಪೈಕಿ ಅರಬೀ ರಾಷ್ಟ್ರಗಳಿಗೆ ಇಲ್ಲಿಯ ರಾಯಭಾರಿಯಾಗಿ ಹೋಗುವ ಅತಿ ಹೆಚ್ಚಿನ ಯೋಗ್ಯತೆಯಿರುವವರು ಅವರೇ. ಅರಬ ಪ್ರಪಂಚವೀಗ ಭಾರತದ ಸಹಾನುಭೂತಿ ಮತ್ತು ಮೈತ್ರಿಗಾಗಿ ಕಾತರಿಸುತ್ತಿದೆ. ಬೇರಾವ ಭಾರತೀಯನಿಂದಲೂ ಸಾಧ್ಯವಿಲ್ಲದ ರೀತಿಯಲ್ಲಿ ಮೌಲಾನರೀ ಬಯಕೆಯನ್ನು ಈಡೇರಿಸಿ ಕೊಡಬಲ್ಲರು. ಅದಕ್ಕೆ ಪ್ರತಿಯಾಗಿ ಮಧ್ಯಪೂರ್ವ ಮತ್ತು ತೀರಾ ಪೂರ್ವ ಆಸ್ಯಾದಲ್ಲೀಗ ಆವಿರ್ಭವಿಸುತ್ತಿರುವ ಹೊಸ ಜೀವನವನ್ನು ಪ್ರಾಮಾಣಿಕತೆಯಿಂದ ಭಾರತದೊಳಗೂ ಹೊಗಿಸಬಲ್ಲರು.

ಪ್ರಾಯಶಃ ಮೌಲಾನರಿಂದ ಭಾರತಕ್ಕೂ ಆಸ್ಯಾ ಖಂಡಕ್ಕೂ ಆಗಬೇಕಾಗಿರುವ ಅತಿ ದೊಡ್ಡ ಸೇವೆ ಮುಂದಿದೆ. ತನ್ನ ಆರೋಗ್ಯವೂ ದೇಶದ ಅಂತರಿಕ ಸ್ಥಿತಿಯೂ ಸುಧಾರಿಸಿದೊಡನೆ ಅರಬ್ ರಾಷ್ಟ್ರಗಳಿಗೆ ಭೇಟಿ ಕೊಟ್ಟು ಸಖ್ಯ ಸೌಹಾರ್ದ್ರತೆ ನಿರ್ಮಿಸಬೇಕೆಂಬ ಹಂಬಿಕೆಯಲ್ಲಿ ಮೌಲಾನರಿದ್ದಾರೆ. 1947ರ ಆದಿಭಾಗದಲ್ಲಿ ಡೆಲ್ಲಿಯಲ್ಲಾಗಲೀ, ಭಾರತದ ಇತರ ಅನುಕೂಲ ಕೇಂದ್ರವೊಂದರಲ್ಲಾಗಲೀ ಅಖಿಲ ಏಸ್ಯಾನ್ ('ಏಸ್ಯಾಟಿಕ್' ಎನ್ನಬಾರದೆಂಬು ನೆಹರುಗಳ ಆಗ್ರಹವಿದೆ) ಸಮ್ಮೇಲನ ಸೇರಿಸಬೇಕೆಂಬ ಸೂಚನೆಗೆ ಮೌಲಾನರ ಅತ್ಯುತ್ಸಾಹದ ಬಂಬಲವಿದೆ. ಸ್ವಾತಂತ್ರ್ಯಾಗಮನದ ಸುಮುಹೂರ್ತದಲ್ಲೇ ಭಾರತದೊಳಗಡೆಗೆ ಆ ರಾಷ್ಟ್ರಗಳ ಶುದ್ಧ ಹವೆ ಬೀಸುವಂತಾದರೆ ಇಲ್ಲಿರುವ ತನ್ನ ಸ್ವಧರ್ಮೀಯರ ಮನೋವೃತ್ತಿಯನ್ನದು ಬಹು ಮಟ್ಟಿಗೆ ಬದಲಾಯಿಸಬಲ್ಲುದೆಂದು ಮೌಲಾನರಿಗೆ ದೃಢ ವಿಶ್ವಾಸವಿದೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಸುವದೆ ಅದನ್ನು ಬೇರುಸಹಿತ ಕಿತ್ತು ತೆಗೆಯುವುದು. ಈ ಔಷಧ ಸುರುವು ಮಾಡಿದಾ. ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂದ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೪-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್‌&ಕೊ,ಮೈಸೂರು.

ಮುಂಬಯಿ ಸೋಲ ಏಜಂಟರು:–

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT
SHWAS-HARI

ದಿ ಆರ್ಯನ್ ಚಾಂಪಿಯನ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ:
7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಅಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್
ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯು ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ, ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸಾಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಡಬ್ಬಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:–ಗದಗ ಫಾರ್ಮಸಿ, ಹುಬ್ಬಳ್ಳಿ:–ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. ಶಿವ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

YOUR SUGAR PROBLEM SOLVED!

Use "Sveetyne" Tablets. Each equivalent to one tola of sugar. Ideal for Hotel and Restaurant Keeper. Sweet Meat manufacturers, Areated water manufacturers etc. Price Rs. 12/- per 1,000. Post free. Send 25% advance with order Selling Agents Wanted. Write—

SVASTIKINDIA LABORATORIES,
BOMBAY, No. 12.

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನನ್ನ ಯಜ್ಞ 0-2 0; (2) ಕಿಂಡರ್ ಗಾರ್ಟನ್ ಬೋಧನೆ 0-2-0; (3) ಚಲಚ್ಚಿತ್ರ ಪದ್ಯಾವಳಿ 0-2 0; (4) ವೀತಭೂಮಿ 0-2 0; (5) ದಂಭಕ ವಧೆ 0 2-0 (6) ಅಪ್ಪ ಬೆಳೆದ ಗಿಡ್ಡಿಯ ಮಮನೆ 0-2 0 (7) ಮುದುಕನ ಹೆಂಡ್ತಿ ಫಕ ಫೈ ರಾಫೆ 0 3-0 (8) ಬಂಗಾರ್ದಂಗಿದ ಕತೆ 0-1 0; (9) ಏಕಾಂತ ರಾಮಾಯಣ 0-1 0; (10) ಭಾರತ ಗೀತಾಂಜಲಿ 0-2-0; ಒಂದು ರೂಪಾಯಿ ಮುಂಗಡ ಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟುಮಾಡಿ ಕಳಿಸಲಾಗುವುದು. ವಿ.ಪಿ ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ, ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೫ ವಾರ ೪೭] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 25 No. 47

Founder SRI A. B. SHETTY, M. L. A.

ಉಡುಪಿ • 25-7-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ ತಲೆವೇದನೆ, ಶೀತ, ವೇದನೆ, ಉಳುಕು ಕಾಟ್ರಿಗೆ, ಥುಡ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ಏಡ ಮುಂತಾದ ಚೇಪೆ ಶಕ್ತಿ ಬಾತ, ಮೊಡವು ನೋದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು.—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

The Modern "Ark".

'It Was Not Raining When Noah Built The Ark'.

Jehovah, the kindly Father had advised Noah to build in advance an Ark to protect himself form the deluge and he did it. The result was Noah and family got through the deluge and became the forefathers of a new age.

Advance planning against the uncertainities of the future has been the wisdom of ages. What Noah did in his days, we have to do in these days too, what the Ark did for him then, Insurance does for us to-day. In short, an Insurance Policy is the Modern Ark and an Insurance Agent is the person who induces and helps us to build our own Arks in advance.

The Canara Mutual Assurance Co., Ltd.,

HEAD OFFICE: **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad

The Commercial Corporation of India, Ltd.,

UDIPI. (S. India)

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ತರುವದರಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬೇಡ. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಕಾವೇರಿ ಬ್ಯಾಡ್ಗಿ

Ayurveda Oushadalaya, GADAG CITY.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಝರಾಗುವವರೂ ಒಡೆಯಿರಿ—

ಸಿ. ಡಿ. ನಾಯಕ್, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ಹರಿಜನ ಪ್ರವೇಶಕ್ಕಿರುವ ಆತಂಕಗಳೇನಂತೆ?

ಲೇ—'ವಿಚಾರಿ'

ದ. ಕ. ಜಿಲ್ಲಾ ಬೋರ್ಡು ಮತ್ತು ಮಂಗಳೂರು ನಗರ ಸಭೆಯು, ಹೋಟೆಲುಗಳಿಗೆ 'ಹರಿಜನ' ಪ್ರವೇಶ ಕೊಡಬೇಕೆಂಬುವನ್ನು ಲೈಸನ್ಸ್ ಶರ್ತವಾಗಿ ಮಾಡಿನಂದಿನಿಂದ ಜಿಲ್ಲೆಯ ವಾತಾವರಣವೇ ಸುಸು ಬದಲಾವಣೆಯಾದಂತಿದೆ. ಈಗ ಎಲ್ಲಿಯೂ ಹೋಟೆಲುಗಳೊಳಗಿಂದ ಹರಿಜನರ ಸ್ವರ ಕೇಳಬರುತ್ತಿಲ್ಲ; ಆದರೆ ಅಸ್ಪರ್ಶರು ಬಾಗಿಲಲ್ಲಿ ಬಂದು ನಿಂತಿದ್ದಾರೇನೋ ಎಂಬಂತೆ ಅವರಿಗೆ ಪ್ರವೇಶ ಕೊಡಲೋ ಕೊಡಬಾರದೋ ಎಂಬ ತರ್ಕ ವಿತರ್ಕಗಳು ಹೋದಲ್ಲೆಲ್ಲಾ ಕೇಳಬರುತ್ತಿವೆ. ನಮ್ಮ ಜಿಲ್ಲೆಯ ಹರಿಜನ ಎಂ. ಎಲ್. ಎ. ಶ್ರೀ. ಕೆ. ಈಶ್ವರನವರು ಹರಿಜನ ಪ್ರವೇಶವನ್ನು ಅಪೇಕ್ಷಿಸಿಕೊಟ್ಟ ಹೇಳಿಕೆಯೂ, ಅದಕ್ಕೆ ಮಂಗಳೂರು ಹೋಟೆಲ್ ಮಾಲಕರ ಸಂಘದ ಕಡೆಯಿಂದ ಪ್ರಕಟವಾಗಿರುವ ಜಾಣತನದ ಉತ್ತರವೂ ಸಾರ್ವಜನಿಕರ ಕಣ್ಣ ಮುಂದಿವೆ. ಅಂತೂ ವಾತಾವರಣವೀಗ ಕದಡಿದೆ. ನಿಜಕ್ಕೂ ವಿಚಾರಮಂಥನದಿಂದ ಹೀಗಾಗಿದ್ದರೆ (ಈ ವಿಷಯವೀಗ ಅಧಿಕೃತ ಆಜ್ಞೆಯ ರೂಪದಿಂದ ಮುಂದೆ ಬಂದಿದೆ ಹೊರತು ಅಭಿಪ್ರಾಯ ಸಂಗ್ರಹಕ್ಕೆ ಒಳಪಡದಿದ್ದರೂ ಕೂಡ) ಬೇಸರಕ್ಕೆಡೆಯಿರುತಿದ್ದಿಲ್ಲ; ಆದರಿದು 'ಮೇಲ್ಜಾತಿಯವರ' ಹೃದಯ ಕುದಿದೇಳುವ ಕಳ್ಮಷದಿಂದಲೇ ತುಂಬಿದೆ. ಆದ್ದರಿಂದ ಶೋಚನೀಯ.

ಅಸ್ಪರ್ಶತೆಯು ಆಧಾರವಾವುದು?

'ಹರಿಜನರು ಮನುಷ್ಯರು ಹೌದೆ? ಹೌದಾದರೆ ಅವರನ್ನೂ ಮಿಕ್ಕವರಂತೆಯೇ ನೋಡಿರಿ' ಎಂದು ಹೇಳಲಾಗುವ ಸ್ಥಿತಿ ಸದ್ಯದ್ದಲ್ಲ. ಇಂದು ನಮ್ಮೊಳಗಿನ ಸಂಬಂಧಗಳಾವುವೂ ಮಾನುಷತ್ವವನ್ನು ಆಧರಿಸಿಲ್ಲ. ಎಲ್ಲವೂ ಜಾತೀಯತೆಯನ್ನಾಧರಿಸಿವೆ ಆದ್ದರಿಂದ ಈ ವಿಷಯವನ್ನು ವಿಮರ್ಶಿಸಬೇಕಾದರೆ ಪ್ರಥಮತ: ಒಂದು ಮೆಟ್ಟಿಲಿಳಿದುಕೊಳ್ಳಲೇಬೇಕು—ಮಾನುಷತ್ವದ ಬದಲಿಗೆ ಜಾತೀಯತೆಗೆ ಬಂದು ನಿಲ್ಲಬೇಕು; ಕೇವಲ ಸ್ವಪ್ನ ಜೀವಿ ಅಥವಾ ಬಯಲು ಭ್ರಾಂತನನ್ನಿಸದೆ ಕಾರ್ಯಕಾರೀ ವಾದ ಹೂಡಬೇಕಾದರೆ ಈ ರೀತಿ ಒಂದಂತಸ್ತು ಕೆಳಗಿಳಿದುಕೊಳ್ಳದೆ ನಿರ್ವಾಹವಿಲ್ಲ; ಕಾಲವಂತಹದು! ಈಗ ಕೇಳೋಣ—'ಹರಿಜನರು ಹಿಂದುಗಳು ಹೌದೆ?' 'ಅಲ್ಲ' ಎನ್ನುವವರು ಹಿಂದುಗಳಲ್ಲಿರಲಾರರು. ಜಾತೀವಾರು ಸಂಖ್ಯಾಬಲವೇ ಬಲವಾಗಿರುವ ಈ ಕಾಲದಲ್ಲಿ—ಹರಿಜನರು ಹಿಂದುಗಳೆಂಬ ಕಾರಣದಿಂದಲೇ ಪ್ರತ್ಯೇಕ ಮತದಾನದ ಹಕ್ಕನ್ನವರಿಗ್ಕೊಡದಿರುವಾಗ— ಮುಸ್ಲಿಂಲೀಗಿನ ಅಂಕೆಸಂಖೆಗಳ ಮೇಲೆ ಹರಿಜನರನ್ನು ಸೇರಿಸಿಕೊಂಡ ಹಿಂದೂ ಸಂಖ್ಯೆಯನ್ನು ಹೇರಬೇಕಾಗಿ ಬಂದಿರುವಾಗ— ಹರಿಜನರು ಹಿಂದುಗಳಲ್ಲವೆಂದು ಹೇಳುವವನಾರು? ಆದರೆ ಧರ್ಮಕ್ಕೂ ಸ್ಪರ್ಶಕ್ಕೂ ಸಂಬಂಧವಿಲ್ಲವೇನೊ. ಪರಧರ್ಮೀಯರಾದ ಮುಸಲ್ಮಾನ್, ಕ್ರೈಸ್ತರೇ ಮೊದಲಾದವರಿಗೆ ಪ್ರವೇಶವಿರುವಲ್ಲಿ ಹರಿಜನರಿಗಿಲ್ಲ; ಅವರನ್ನು ಮುಟ್ಟಬಹುದು, ಇವರನ್ನು ಕೂಡದು. ನಾವು ಮುಟ್ಟಲಾಗದವರು ನಮ್ಮೊಳಗೇನೇ ಇದ್ದಾರೆ ಹೊರತು ಹೊರಗಿಲ್ಲ: ಧರ್ಮದ ಹುಟ್ಟು ಸೂತ್ರಗಳಿಗನುಸಾರವಾಗಿ ಅಥವಾ ಆ ಮೇಲೆ ಹುಟ್ಟಿದ ಸಂಪ್ರದಾಯಕ್ಕೆ ಕಟ್ಟು ಬಿದ್ದು ವಿಧರ್ಮೀಯರನ್ನೇ ಅಸ್ಪರ್ಶರೆಂದಿಟ್ಟುಕೊಳ್ಳುತಿದ್ದರೆ ಅವರೂ ನಮ್ಮನ್ನು ಅಸ್ಪರ್ಶರೆಂದಷ್ಟೇ ಅಲ್ಲ- ಅತಿ ದೂರದಲ್ಲಿರಬೇಕಾದ ಹೀನರೆಂದೇ ಅಳತೇ ನಿಶ್ಚಯಮಾಡಿಟ್ಟುಕೊಳ್ಳುತಿದ್ದರೇನೊ! ಸದ್ಯದ ಹಿಂದೂ ಮುಸ್ಲಿಂ ಘರ್ಷಣೆಗಳನ್ನು ಕಂಡರೆ ಹಾಗಾಗುತಿದ್ದಿಲ್ಲವೆಂದು ಹೇಳಲು ಸಾಧ್ಯವೇ? ಆದ್ದರಿಂದ ಈ ಅಪಾಯಕರ ಆಚರಣೆಗೆ ಹಿಂದುಗಳು ಹೋಗಲಿಲ್ಲ. ಆದರೆ ಹರಿಜನರು ನಮ್ಮೊಳಗಿನ ಅಲ್ಪಸಂಖ್ಯಾಕರು; ಸ್ವಂತ ಆಶ್ರಯ ಹೀನರು-ಅಜ್ಞಾನಿಗಳು ಆದ್ದರಿಂದಲೇ ಅವರನ್ನು ಹೇಗೆ ಇಟ್ಟುಕೊಂಡರೂ ದಕ್ಕುತ್ತದೆ. ನಮ್ಮನ್ನು ಮೇಲು ಎಂದೊಪ್ಪಿ ತಾವು ಕೀಳಾಗಿರಲು ಅವರು ಸಿದ್ಧರಿದ್ದಾರೆ. ಆದ್ದರಿಂದಲೇ ವಿಧರ್ಮೀಯರ ಸಂಬಂಧದಲ್ಲಿರದ ಅಸ್ಪರ್ಶತಾ ಧರ್ಮ ಸ್ವಧರ್ಮೀಯರ ಮಟ್ಟಿಗಿದೆ. ಅಸ್ಪರ್ಶತೆಯು ಕುರಿತು ಸ್ಮೃತಿ ಪುರಾಣಗಳಲ್ಲೇನುಂಟೋ ನಾನರಿಯೆ; ವೇದ ಪುರಾಣಗಳಲ್ಲಿದ್ದುದೆಲ್ಲ—ಯಾಕೆ, ನೂರರಲ್ಲೊಂದಶ ಕೂಡ—ಆಚರಣೆಯಲ್ಲಿಲ್ಲ, ಅಸ್ತಿತ್ವದಲ್ಲೇ ಇಲ್ಲವೆಂದಾದಮೇಲೆ ಇದೊಂದಕ್ಕಾಗಿ ಅವುಗಳನ್ನು ನೋಡಿಕೊಂಡು ವಾದಿಸಬೇಕೆಂಬ ಅಗತ್ಯಕೂಡ ಇಲ್ಲ. ಇದು ಆಚರಣೆಯಲ್ಲಿದೆ; ಯಾವ ಆಧಾರದಿಂದಿದೆ ಎಂಬುದನ್ನು ಶೋಧಿಸಿದರೆ, ಕೆಲವರಲ್ಲಿ ತಾವು ಉತ್ಕೃಷ್ಟರಾಗಬೇಕೆಂದಿದ್ದ ಮಹತ್ವಾಕಾಂಕ್ಷೆಯ ವಿಲಕ್ಷಣ ರೀತಿಯಿಂದಾಗಿ ಕೆಲವರನ್ನು ನಿಕೃಷ್ಟರನ್ನಾಗಿ ಮಾಡಿಟ್ಟಿದೆ. ಎಲ್ಲಿ ಹೇಗಿದೆ ಎಂಬುದನ್ನು ನೋಡಿದರೆ, ಎಲ್ಲೆಲ್ಲಿ ಹೇಗೆ ಹೇಗೆ ಇರಲು ಸಾಧ್ಯವಿದೆಯೋ ಅಲ್ಲಲ್ಲಿ ಹಾಗೆ ಹಾಗೆ ಇದೆ, ಹೊರತು ಧರ್ಮವನ್ನಾಧರಿಸಿ (ವಿಧರ್ಮೀಯರು ಅಸ್ಪರ್ಶರಾಗಬೇಕಿತ್ತು) ಇಲ್ಲ; ಸಂಸ್ಕಾರ, ನೀತಿ ನಡತೆಯನ್ನಾಧರಿಸಿ (ಖಾನೇಶುಮಾರಿ ತೆಗೆಯಲಿ-ಕೊಲೆ, ಕಳವು. ಹಾದರ-ಈಗೀಗ ಮದ್ಯ ಮಾಂಸ ಸೇವನೆ ಕೂಡಾ-ಮೇಲ್ಜಾತಿಯವರಲ್ಲಿರುವಷ್ಟು ಹರಿಜನರಲ್ಲಿಲ್ಲವೇ ಇಲ್ಲ) ಇಲ್ಲ; ಶುದ್ಧತೆ, ನಿರ್ಮಲತೆ (ಕೊಳಕುವಸ್ತ್ರದ ಪುರೋಹಿತನನ್ನು ಭ್ರಷ್ಟ ಮಾಡಬಾರದೆಂದೂ ಮಡಿ ಪೋಷಾಕಿನ ಹೊಲೆಯನನ್ನು ಭ್ರಷ್ಟರಾಗಕೂಡದೆಂದೂ ಮುಟ್ಟುವದಿಲ್ಲ) ಯನ್ನಾಧರಿಸಿಯೂ ಇಲ್ಲ.

ಒಂದು ಸಾಮ್ಯತೆ

ಸಾಮ್ರಾಜ್ಯ ವಾದದ-ಸವರ್ಣೀಯ ಮೇಲ್ಮೆಯ-ಪರಮಾವಧಿ ವಿಕಾರರೂಪ ಇಲ್ಲಿದೆ. ಸಾಮಾಜಿಕ ಸಮಾನತೆಯ ಸ್ವಪ್ನ ಕೂಡಾ ಬೀಳದ ಹಿಂದಿನ ಕಾಲದಲ್ಲಿ ಈ ಅಸ್ಪರ್ಶತೆಯು ಕ್ಷಮಿಸಲ್ಪಟ್ಟಿರಬಹುದು; ಯಾಕೆ, ಅದೊಂದು ಸತ್ಸಂಪ್ರದಾಯವೇ ಆಗಿತ್ತು. ಆದರೆ ಈಗ? ಈಗಲೂ ಇದು ಸರಿಯೆಂದಾದರೆ ದಕ್ಷಿಣ ಆಫ್ರಿಕದ ಬಿಳಿಯರದೇನು ತಪ್ಪು? ಭಾರತೀಯರನ್ನಾಳುವ ಬ್ರಿಟಿಷರದೇನು ತಪ್ಪು? ಅವೆರಡು ಮೇಲು-ಕೀಳುಗಳಿಗೂ ಆಧಾರಗಳಿವೆ; ಅದೇ ಮಾದರಿಯ ಆಧಾರವು ಅಸ್ಪರ್ಶತೆಗೂ ಇದೆ. ಆದ್ದರಿಂದ ಅಸ್ಪರ್ಶತೆಯು ಸರಿಯೆಂದು ಸುಕೃತ ಯಾರೂ ಹೇಳುವದಿಲ್ಲ; ಅಥವಾ ಹೇಳುವವರಿನ್ನೂ ಇದ್ದರೆ ಲೋಕದ ಕಡೆಗೆ ಕಣ್ಣು ತೆರೆಯದ ಅಂಥ ಸಂಪ್ರದಾಯವಾದಿಗಳು ಮಾತ್ರ. ಈ ಅಂಧಾನುಕರಣೆಯವರು ಅಸ್ಪರ್ಶತೆ ಅನ್ಯಾಯವೆಂದೊಪ್ಪಲಾರರಾದರೆ ತಮ್ಮ ನ್ಯಾಯವನ್ನು ಅಪ್ಪಿ ಹಿಡಿದು ತಾವೇ ಒಂದು ಮೂಲೆಯಲ್ಲಿ ಕುಳಿತಿರಲಿ—ಅಸ್ಪರ್ಶರಾಗಿ ಇದ್ದುಬಿಡಲಿ—ಅಂಥವರಿಗಡ್ಡವಾಗಿ ಒಂದು ಪರದೆಯನ್ನಿಳಿಯಬಿಟ್ಟು ಉಳಿದವರ ಕುರಿತು ಮಾತಾಡೋಣ. ಅಸ್ಪರ್ಶತಾ ನಿವಾರಣೆಯಾಗಬೇಕೆನ್ನುವ ಸವರ್ಣೀಯ ಹಿಂದುಗಳ ವಾದ ಮತ್ತು ಹಿಂದೀಯರು ಸ್ವತಂತ್ರರಾಗಬೇಕೆನ್ನುವ ಬ್ರಿಟಿಷರ ವಾದಗಳೊಳಗೆ ನಿಕಟ ಸಾಮ್ಯತೆ ಕಾಣುತ್ತಿದೆ-ಅರ್ಥಾತ್ ಇಬ್ಬರೂ ಮಾಡಲು ತಯಾರಿಲ್ಲದೆ ಆಡುತಿದ್ದಾರೆ. ವಿಚಾರಣೀಯ ಅಂಶವೆಂದರೆ ಇವರಿಬ್ಬರ ಮನೋವೃತ್ತಿಗಳು ಒಂದೇ ರೀತಿಯಲ್ಲಿರುವದಷ್ಟೇ ಅಲ್ಲ; ಈ ಕಾಲದ ಮುಖ್ಯ ತರ್ಕಗಳು ಕೂಡಾ ಒಂದೇ ಮಾದರಿಯವು. ದೃಷ್ಟಾಂತಕ್ಕಾಗಿ ಭಾರತಕ್ಕೆ ಸ್ವಾತಂತ್ರ್ಯದಾನ ಮಾಡಲು ಈಗ ಬ್ರಿಟಿಷರಾಡುತ್ತಿರುವ ಮುಖ್ಯಾಕ್ಷೇಪವಾವುದು- 'ಹಿಂದೀಯರಲ್ಲೇ ಪರಸ್ಪರ ಭೇದ ಭಾವಗಳಿವೆ' ಎಂಬುದಲ್ಲವೆ? ಹರಿಜನ ಪ್ರವೇಶಕ್ಕೆ ಸವರ್ಣ ಹಿಂದುಗಳೊಡ್ಡಿರುವ ಮುಖ್ಯಾಕ್ಷೇಪವೂ ಅದೇ-'ಹರಿಜನರೊಳಗೇನೇ ಮೇಲು-ಕೀಳು ತಾರತಮ್ಯವಿದೆ' ಎಂಬುದೇ. 'ಅದರ ನಿರ್ಮೂಲಕರೇ ತಾವು ಮಹಾತ್ಮರೇ' ಎಂದರೆ ಬ್ರಿಟಿಷರೂ ಒಪ್ಪುವದಿಲ್ಲ; ಮೇಲ್ಜಾತಿಯ ಹಿಂದುಗಳೂ ಒಪ್ಪುವದಿಲ್ಲ!

ಟೊಳ್ಳು ವಾದ ಬೇಡ!

ಈಗ ಈ ಸಂಬಂಧದ ವಾದ ಮತ್ತು ಆಚರಣೆ ಎರಡೂ ಸ್ಪಷ್ಟವಾಗಿರಲಿ. 'ಅಸ್ಪರ್ಶತಾ ಧರ್ಮಪಾಲನೆಯನ್ನು ಆತ್ಮಬಲಿಕೊಟ್ಟಾದರೂ ಪಾಲಿಸಿಯೇ ಸಿದ್ಧ' ಎಂದು ಮುಂದೆಬರುವ ಸಂಪ್ರದಾಯ ವೀರರಿದ್ದರೆ ಅದು ಸ್ಪಷ್ಟಾಚರಣೆ. ಅಸ್ಪರ್ಶತಾ ನಿವಾರಣೆಯು ಅವ್ಯವಹಾರ್ಯವೆಂಬುದಕ್ಕೆ ಸರಿಯಾದ ಕಾರಣ ಕೊಡುವಂತಿದ್ದರೆ ಅದು ಸ್ಪಷ್ಟವಾದ. ಆದರೀಗ ಮೊದಲನೇ ವರ್ಗದವರ ಸಂಖ್ಯೆ ಅತ್ಯಪರೂಪ; ಎರಡನೇ ವರ್ಗದವರು ಸೊನ್ನೆ! ಬದಲಿಗೆ ಅಸ್ಪರ್ಶತಾ ನಿವಾರಣೆಯಾಗಬೇಕೆಂದೊಪ್ಪಿ ಈಗಿದು ಅವ್ಯವಹಾರ್ಯವೆಂಬುದಕ್ಕೆ ಟೊಳ್ಳು ಕಾರಣಗಳನ್ನು ಮುಂದೊಡ್ಡುವವರೇ ಅಧಿಕವಂದಿ. ಆ ಕಾರಣಗಳನ್ನೆಲ್ಲಾ ಒಟ್ಟು ಮಾಡಿದರೆ ಇವಿಷ್ಟು:— (1) ಸುಶಿಕ್ಷಿತ, ಶುಭ್ರವಸ್ತ್ರಧಾರಿಗಳು ಮತ್ತು ಸುಧಾರಣೆ ಹೊಂದಿದವರಾದ ಹರಿಜನರು ಈ ಮೊದಲೂ ಮಿಕ್ಕವರಂತೆಯೇ ಪಾನ, ತಿಂಡಿಗಳನ್ನು ಹೋಟೆಲುಗಳಲ್ಲಿ ಪಡೆಯುತಿದ್ದರು; ಈಗ

(೧೧ನೇ ಪುಟ ನೋಡಿರಿ)

ನೀವು ನಿಮ್ಮ ವ್ಯಾವಹಾರಿಕ ಪಟ್ಟು ಉಪಭೋಗಿಸಬೇಕಾದರೆ

	ಹಣದ ರಾಶಿಯಲ್ಲಿರಬೇಕಾದ	
ಒಮ್ಮೆಲೆ	ಸಿರಿವಂತರಾಗಬೇಕಾದ	ಕಾರಣವಿಲ್ಲ.
	ಲಕ್ಷ್ಮೀಪುತ್ರರಾಗಬೇಕಾದ	
	ಅನುಕೂಲಸ್ಥರಾಗಬೇಕಾದ	

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿಲಾದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ಪಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd: 1906

CANARA BANK LIMITED

(Incorporated in British India. liability of Members Limited.)

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಹಿತ್ಯವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd..

Moolky, S. K.

ಪಠಾಣನ ಸಾಲವಹಿವಾಟು

ಲೇ— ಶ್ರೀ. ಪ್ರೇಮಸಿಂಹ.

(Eastern Economist ಪತ್ರಿಕೆಯಿಂದ)

[ಆರ್ಥಿಕ ಅವ್ಯವಸ್ಥೆಯಿರುವ ರಾಷ್ಟ್ರದಲ್ಲಿ ಸಾಲವೂ ಒಂದು ಕಾರ್ಯವೇ—'ಸಾಲ ಹುಟ್ಟುವದಿಲ್ಲ!' ಎಂಬುದರಲ್ಲಿರುವಷ್ಟು ದುಃಖ ಮತ್ತೊಂದರಲ್ಲಿರದು—ಈ ರೋದನ ಕೇಳಿಬರುವಷ್ಟು ಬೇರೊಂದು ಧ್ವನಿ ಬರುವದಿಲ್ಲ. ಹೀಗಾಗಿ ನಮ್ಮಲ್ಲೀಗ ಎಷ್ಟು ವಿಧದ ಬಡ್ಡೀಕ್ರಮಗಳಿವೆಯೋ ಲೆಕ್ಕಿಸುವದಸಾಧ್ಯ. 'ಪೈ ಬಡ್ಡಿ ಪೈಸಾವಾಲ'ರನ್ನು 'ಸಾವಾಣೆ ಬಡ್ಡಿ ಘಟಿಂಗ'ರನ್ನು ಹೋದಲ್ಲೆಲ್ಲಾ ಕಾಣಬಹುದು! ಇಂತಹ ವಹಿವಾಟುಗಳ ಪೈಕಿ ಅಗ್ರಗಣ್ಯ ಸ್ಥಾನ ಕೊಡಬಹುದಾದ ಪಠಾಣನ ಸಾಲದ ಅಲ್ಪ ಪರಿಚಯ ಇಲ್ಲಿದೆ]

ಪಠಾಣರ ಅತಿ ಹೆಚ್ಚಿನ ಬಡ್ಡಿಯು ಹಾಗೂ ತಕ್ಷೀರುಕಾರೀ ಸಾಲದ ವಹಿವಾಟುಗಳಿಗೆ ನಮ್ಮ ದೇಶ ಹೆಸರಾಗಿದೆ. ಪಟ್ಟಣಿಗರ ಸುಲಿಗೆಯೆಂಬುದು ಈ ರೀತಿ ಪಠಾಣರಿಂದ ದೀರ್ಘಾವಧಿಯಿಂದಲೂ ನಡೆಯುತ್ತಾ ಬಂದಿದೆ. ಇದಕ್ಕಾವ ಕಾನೂನು ಕಟ್ಟಳೆಗಳ ತಡೆಯೂ ಇಲ್ಲ. ಪಠಾಣರು ತಮ್ಮೀ ಪದ್ಧತಿಯನ್ನು ಒಂದು ಉತ್ತಮ ಕಲೆಯಾಗಿ ಬೆಳೆಸಿಕೊಂಡಿದ್ದಾರೆ.

ಸಲುಗೆಯ ಸಾಲ!

ಪಠಾಣನ ಸಾಲೋದ್ಯೋಗ ಈ ರಾಷ್ಟ್ರದಲ್ಲಿ ಈ ರೀತಿ ಸರ್ವ ವ್ಯಾಪಿಯಾಗಲು ಕಾರಣವೇ ಇದ್ದೀತ.? ಕಾರಣವೊಂದೇ. ಆತ ನಗರ ಶ್ರೀಮಂತನಂತೆ ಅಥವಾ ಹಳ್ಳೀ ಹಣಗಾರನಂತೆ ಯಾವ ರೀತಿಯ ಅಡವು ಅಥವಾ ಭದ್ರತೆಯನ್ನೂ ಪಡೆಯದೆ ಸಾಲ ಕೊಡಲು ತಯಾರಿದ್ದಾನೆ ಇಷ್ಟಾಗಿ ಸ್ಥಳೀಯ ಸಾಲದಾತನಿಗೆ ಪಠಾಣನಿಗಿಂತ ಹೆಚ್ಚಿನ ಸೌಕರ್ಯಗಳಿವೆ. ಆತ, ತಾನು ಸಾಲಕೊಡುವವರ ಗುಣ ನಡತೆ ಮತ್ತವರ ಆದಾಯ ವೆಚ್ಚಗಳನ್ನೆಲ್ಲಾ ತಿಳಿದಿರುತ್ತಾನೆ. ಮಾತ್ರವಲ್ಲ; ಹಲವೊಮ್ಮೆ ಸಾಲ ಪಡೆದವ ಸಂಪದ್ಭಾಗವೆಲ್ಲಾ ಈ ಸಾಲಗಾರನ ಹತೋಟಿಗೊಳಗಾಗುವದಿದೆ.ಹಳ್ಳಿಯಲ್ಲಿ ಹಣ ಬಡ್ಡಿಗೆಕೊಟ್ಟವನು ರೈತರ ಖಾಸಗೀ ವಹಿವಾಟುಗಳನ್ನೂ ತನ್ನಂಕೆಯೊಳಗಿಟ್ಟುಕೊಳ್ಳುತ್ತಾನೆ. ಆದರೆ ಪಠಾಣನ ವರ್ತನೆ ತದ್ವಿರುದ್ಧ. ತನಗೆ ಸಾಮಾಜಿಕ ಯಾನೆ ವ್ಯಕ್ತಿಗತ ಸಂಬಂಧವೇನೂ ಇಲ್ಲದ ಪಟ್ಟಣಿಗರೊಡನೆಯೇ ಇವನ ವಹಿವಾಟು. ತಮ್ಮ ಉತ್ಪತ್ತಿ ಸಂಪನ್ಮೂಗಳ ಕುರಿತಾಗಲೀ, ಗುಣ ನಡತೆ ಸಂಬಂಧಗಳ ವಿಷಯದಲ್ಲಾಗಲೀ ಯಾವದನ್ನೂ ವಿಚಾರಿಸಿಕೊಳ್ಳದೆ ಸ್ವತಂತ್ರ ಸಲುಗೆಯಿಂದ ದೊರೆಯುವ ಪಠಾಣನ ಸಾಲವು ಸಹಜವಾಗಿ ಹೆಚ್ಚಿನವರನ್ನು ಆಕರ್ಷಿಸುತ್ತದೆ. ಸ್ಥಳೀಯಬೇಂಕೊಂದಕ್ಕೆ ಸಾಲಕ್ಕಾಗಿ ಹೋದರೆ ಅವರು ಬೇಡವಾದ ಪ್ರಶ್ನೆಗಳೆನ್ನೆಷ್ಟೋ ಕೇಳುತ್ತಾರೆ; ತಾವು ಉತ್ಕೃಷ್ಟರೆಂಬಂತೆ ಸಾಲಪಡೆಯುವವರೆದಿರು ಪ್ರದರ್ಶಿಸಿಕೊಳ್ಳುತ್ತಾರೆ. ಸಾಲಾರಂಭದಲ್ಲಿ ಪಠಾಣನು ಇಂತಹದಾವುದನ್ನೂ ಮಾಡಲಾರ. ಅವನು ಉದಾರತೆಯಿಂದ ಕೈಯೆತ್ತಿಕೊಡುವ ಸಾಲಗಾರ; ಹಲವು ಪ್ರಶ್ನೆಗಳನ್ನು ಆತ ಕೇಳುವದೇ ಇಲ್ಲ. ವಸ್ತುತಃ ಸಂದಾಯದ ದಿನ ಬರುವ ವರೆಗೆ ಪಠಾಣನ ಸಾಲಕ್ಕಾಗಿ ಯಾರೂ ಸಂಬಂಧಪಟ್ಟವರ ವಹಿವಾಟುಗಳೆಷ್ಟೆಂಬುದನ್ನಾಗಲೀ ಏನೆಂಬುದನ್ನಾಗಲೀ ತಿಳಿಯಬೇಕೆಂಬ ಆಗತ್ಯವಿಲ್ಲ. ಸಂದಾಯದ ಸಮಯ ಬಂದಾಗ ಮಾತ್ರ ಆತನು ತನ್ನ ಪದ್ಧತಿಯ ಕಾಟ ಕೊಟ್ಟೇ ತೀರುತ್ತಾನೆ.

ಪಠಾಣನ ಬಡ್ಡೀ ದರ

ಪಠಾಣನು ನಿಶ್ಚಯಿಸುವ ಬಡ್ಡೀ ದರಗಳಂತೂ ಸಮಸ್ಯಾತ್ಮಕವಿವೆ. ಆ ದರಗಳು ಶೇಕಡಾ 100ರಿಂದ 125ರ ಸಲಿಯ ವರೆಗಿವೆ ಎಂದು ಪ್ರತೀತಿ. ಅಥವಾ ಅವರೇ ಹೇಳುವಂತೆ ದೋನಾಣೆ (ರೂಪಾಯಿಯೊಂದಕ್ಕೆ ತಿಂಗಳಿಗೆರಡಾಣೆ) ಬಡ್ಡಿ ನಡೆಯುತ್ತದೆ. ಮಾತ್ರವಲ್ಲ; ತಮ್ಮ ಕಮಿಶನ್ ಆಗಿ ಶೇಕಡಾ 10ನ್ನವರು ತೆಗೆಯುತ್ತಾರೆ. ಪ್ರತೀ ತಿಂಗಳ ಪ್ರಥಮದಲ್ಲೇ ಬಡ್ಡಿಯು ವಸೂಲಿ. ಕಮಿಶನನ್ನು ಕಡಿದು ತೆಗೆದೇ ಸಾಲ ಕೊಡುವ ಸಂಪ್ರದಾಯ. ಹೀಗಾಗಿ ಪಠಾಣನಿಂದ ಒಂದು ನೂರು ರೂಪಾಯಿ ಸಾಲ ಪಡೆಯುವದೆಂದರೆ, (ಬಡ್ಡಿಯ ಪ್ರಥಮ ಕಂತಾಗಿ ರೂ. 12-8-0; ಕಮಿಶನ್ ರೂ. 10-0-0 ಚೀಟು ಇತ್ಯಾದಿಗಳಿಗೆ ರೂ. 0-8-0; ವಜಾ ಹೋಗಿ ಸಾಧಾರಣ ರೂ. 77-0-0ನ್ನು ಪಡೆಯುವದೆಂದರ್ಥ.

ಪಠಾಣನ ವಹಿವಾಟು, ವರ್ತನೆಗಳ ವರ್ಣನೆ ಮಾಡ ಹೋದರೆ ಬಹಳ ಸ್ವಾರಸ್ಯವಿದೆ. ಒಬ್ಬ ಪಠಾಣನು 1000 ರೂಪಾಯಿಗಳನ್ನು ಜನವರಿ ಪ್ರಥಮ ವಾರದಲ್ಲಿ ಸಾಲ ಕೊಡಲು ಪ್ರಾರಂಭಿಸುತ್ತಾನೆಂದು ಇಟ್ಟುಕೊಳ್ಳೋಣ. ಮೇಲ್ಗಡೆ ನಮೂದಿರುವ ಕಾರಣಗಳಿಂದಾಗಿ ಆ ಹಣಕ್ಕೆ ಸಾಲದ ರೂಪದಿಂದ ಕೂಡಲೇ ಬಾಯಿಸಿ ಬರುವದು ಖಂಡಿತ. ಆದರೆ ರೂ. 1000ವನ್ನು ಸಾಲವಾಗಿ ಕೊಡುವಾಗ ಕಮಿಶನ್ ಹಣವಾಗಿ ರೂ 100 ಮತ್ತು ಪ್ರಥಮ ಕಂತಿನ ಮುಂಗಡ ಬಡ್ಡಿಯಾಗಿ ರೂ 125- ಹೀಗೆ ರೂ. 225 ಅವನಲ್ಲಿಯೇ ಉಳಿ[illegible] ರೂ. 225ನ್ನು ರೂ. 300 ಸಾಲವಾಗಿ ಆತ ಪುನಃ ಕೊಡುತ್ತಾನೆ. ಹೀಗೆ ಕೊಟ್ಟ 1300 ರೂ.ಗಳ ಒಟ್ಟು ಸಾಲದ ಬಡ್ಡಿಯಾಗಿ ಫೆಬ್ರುವರಿ ಪ್ರಥಮ ವಾರದಲ್ಲಿ ಅವನಿಗೆ ರೂ. 160 ಸಿಗುತ್ತದೆ. ಈ ಹಣದಿಂದ ಅವನು ಪುನಃ ರೂ. 150ರ ಸಾಲ ಕೊಟ್ಟು ಮುಂಗಡ ಬಡ್ಡಿ, ಕಮಿಶನ್ ಇತ್ಯಾದಿಗಳ ರೂ. 470 ನಗದಿ ಶಿಲ್ಕು ಅವನಲ್ಲಿ ಉಳಿಯುತ್ತದೆ. ಮಾರ್ಚ ತಿಂಗಳಲ್ಲಿ ಅವನು ಕೊಟ್ಟಿದ್ದ ಒಟ್ಟು ಸಾಲ ರೂ. 1450ರ ಬಡ್ಡಿಯಾಗಿ ರೂ. 181 ದೊರೆಯುತ್ತದೆ. ಆಗ ಅವನಲ್ಲುಳಿಯುವ ನಗದಿ ಶಿಲ್ಕು ರೂ. 228 ಇದನ್ನೇ ಅವನು ಪುನಃ ರೂ. 300ರ ಹೊಸ ಸಾಲ ಕೊಡುತ್ತಾನೆ. ಚಕ್ರ ಹೀಗೆಯೇ ಉರುಳುತ್ತಾ ಹೋಗಿ ದಶಂಬರ ತಿಂಗಳು ಬಂದಾಗ ಅವನ ಹೊರ ಬಾಕಿ ನಗದಿ ಸಾಲದ ಜುಮ್ಲಾ ಸಂಖ್ಯೆ ರೂ. 5700 ಆಗುತ್ತದಲ್ಲದೆ ಅವನು ಪಡೆದ ಬಡ್ಡಿ ಸುಮಾರು ರೂ. 730 ಆಗುತ್ತದೆ. ಇದಿಷ್ಟಾದುದು ಆದೇ ಜನವರಿಯಲ್ಲಿ ಆತನು ಸಾಲಕ್ಕೆ ಹಾಕಿದ ಕೇವಲ 1000 ರೂಪಾಯಿಯಿಂದ!

ಆದರೆ....

ಮೇಲೆ ತೋರಿಸಿಕೊಟ್ಟ ಮಾದರಿಯು ಕೆಲವೊಮ್ಮೆ ತಕ್ಕ ರೂಪದಲ್ಲಿ ಮಾತ್ರ ಉಳಿವಂತೆ ತೋರಬಹುದು ಯಾಕಂದರೆ ಮಿಕ್ಕವರಂತೆಯೇ ಪಠಾಣನಿಗೂ ಖರ್ಚಿದೆ. ಮೇಲಿನ ದೃಷ್ಟಾಂತವು ಆತನು ಸಂಪಾದಿಸಿದ್ದನ್ನೆಲ್ಲಾ ಸಾಲ ಕೊಟ್ಟುಬಿಡುತ್ತಾನೆ ಎಂಬಂತಿದೆ; ಇದು ಸತ್ಯವಾಗದು. ಎರಡನೆಯದಾಗಿ ನಗದಿ ಮತ್ತು ಬಡ್ಡಿ, ಇವೆರಡೂ ಶೇಕಡಾ ನೂರರಷ್ಟು ವಸೂಲಾಗುತ್ತವೆ ಎಂಬಂತೆ ಮೇಲಿನ ಲೆಕ್ಕವನ್ನು ಹಾಕಲಾಗಿದೆ ಸೀಡೆ ಕೊಟ್ಟುವಸೂಲು ಮಾಡುವ ಕ್ರಮವು ಅತ್ಯಂತ ಪರಿಣಾಮಕಾರಿ ಎಂಬುದು ನಿಸ್ಸಂದೇಹ ಆದರೆ ಮಿಕ್ಕ ಕ್ರಮಗಳಂತೆಯೇ ಸೀಡಾ ಕ್ರಮವೂ ಶೇಕಡಾ ಕೆಲವಂಶ ಮಾತ್ರ ಜಯಶಾಲಿಯಾಗಬಲ್ಲುದು. ಆ ಅಂಶ ಶೇಕಡಾ 50ಕ್ಕಿಂತ ಹೆಚ್ಚಾಗದು. ಆದರೆ ಯುದ್ಧ ದೆಸೆಯಿಂದಾಗಿ ಈ ಉದ್ಯೋಗವು ಇದಕ್ಕಿಂತ ಹೆಚ್ಚಿಗೆ ಪ್ರಗತಿ ಪಡೆದಿದೆ ಎಂದು ತಿಳಿದು ಬರುತ್ತದೆ

ಇನ್ನು ತಮ್ಮ ಗಿರಾಕಿಗಳ ಕಡೆಗಿನ ಪಠಾಣರ ವರ್ತನೆ. ಸಾಲ ವಸೂಲೀ ಕ್ರಮವೊಂದನ್ನು ಬಿಟ್ಟರೆ ಮಿಕ್ಕೆಲ್ಲಾ ವಿಷಯಗಳಲ್ಲೂ ಅವರು ಗಿರಾಕಿಗಳೊಡನೆ ಅತ್ಯಂತ ಸೌಜನ್ಯದಿಂದ ನಡೆಕೊಳ್ಳುತ್ತಾರೆ. ತಮ್ಮ ನಗದೀ ಸಾಲವನ್ನು ವಸೂಲಿ ಪಡೆಯುವ ಕುರಿತು ಅವರು ಆತುರಿಸುವಂತಿಲ್ಲ; ಒಮ್ಮೊಮ್ಮೆ ಅದನ್ನು ಕೊಟ್ಟರೂ ಸ್ವೀಕರಿಸಲೊಪ್ಪುವದಿಲ್ಲವಂತೆ. ಆದರೆ ಬಡ್ಡಿಯನ್ನು ಮಾತ್ರ ನಿಶ್ಚಿತ ಸಮಯದಲ್ಲಿ ಕೊಟ್ಟೇ ತೀರಬೇಕು. ಒಂದೇ ಒಂದು ದಿನ ತಡವಾಗಿ ಹೋದರೆ ಅವರು ಗಲಿಬಿಲಿಗೇಳುತ್ತಾರೆ. ಮತ್ತು ಆಶ್ಚರ್ಯವೆಂದರೆ ಲೆಕ್ಕಾಚಾರದ ಮಟ್ಟಿಗೆ ಒಂದೇಒಂದು ಪೈಯ್ಯಾದರೂ ಆಚೆಯೀಚೆಯಾಗದಷ್ಟು ಖಂಡಿತವಿರುತ್ತಾರೆ. ಆದರೂ ಅವರಲ್ಲೊಂದು ಗುಣವಿದೆ. ತಮ್ಮ ಗಿರಾಕಿ ಎಳ್ಳಷ್ಟು ಕ್ರಮ ತಪ್ಪದ ಕೊಡುಗೈಯವನೆಂದು ಮನವರಿಕೆಯಾದರೆ ಅವನ ,ಕುರಿತು ಅವರ ಔದಾರ್ಯ ಬಹಳ. ಒಳ್ಳೇ ರೀತಿಯಿಂದ ಅಂಥವನನ್ನು ಸಂಭಾವಿಸುವದಲ್ಲದೆ ಸಾಲ ಕೇಳಲು ಬಂದರೆ, ಅವನ ಮಟ್ಟಿಗೆ ತಮ್ಮ ಕ್ರಮಬದ್ಧ ಕಮಿಶನನ್ನು ಕೂಡಾ ಮರೆತು ಬಿಡುತ್ತಾರೆ.

ಅವರ ಗಿರಾಕಿಗಳು

ಪಠಾಣರ ಸಾಲದ ಗಿರಾಕಿಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. (1) ಸರಕಾರೀ ಮೇಲಾಫೀಸರರಲ್ಲಿ ಮಧ್ಯಮ ವರ್ಗದವರು—ಉತ್ಪತ್ತಿಗಿಂತ ಹೆಚ್ಚಿಗೆ ಖರ್ಚಿದ್ದು ಸ್ವಂತ ಆಸ್ತಿ ಅಥವಾ ಬೇರಾವುದೂ ಇಲ್ಲದವರು. ಇಂಥವರಲ್ಲಿ ಜವಾಬ್ದಾರೀ ಅಧಿಕಾರ ಸ್ಥಾನಗಳಲ್ಲಿದ್ದು ರೂ. 1000 ಮತ್ತು ಅದಕ್ಕೂ ಹೆಚ್ಚಿಗೆ ಸಂಬಳ ಪಡೆಯುವರಿದ್ದಾರೆಂದರೆ ಆಶ್ಚರ್ಯಪಡಬಹುದು (2) ಸಮಾಜದಲ್ಲೊಂದು ಸ್ಥಾನ ಅಥವಾ ಭದ್ರತೆ ಯಾವುದೂ ಇಲ್ಲದೆ ದ್ಯೂತ, ಜುಗಾರಿ ಇತ್ಯಾದಿಗಳಲ್ಲೇ ಇರುವವರು. ಇಂಥವರು ಆಕಸ್ಮಿಕ ಹಾಗೂ ತಾತ್ಕಾಲಿಕ ಆರ್ಥಿಕ ಅಡಚಣೆಗಳಿಗೆ ಸಿಲುಕುವದು ಹೆಚ್ಚಿಗೆ. ಆಗ ಅವರಿಗೆ ಆಶ್ರಯವಾಗಬಲ್ಲವನು ಪಠಾಣನೊಬ್ಬನೇ. (3) ಮೂರನೇ ವರ್ಗದವರೆಂದರೆ ಕೆಳವರ್ಗದ ನೌಕರರು. ಮದುವೇ ಮುಂಜಿಯಂಥವುಗಳಿಗೆ—ಕಾಹಿಲೆ ಕಸಾಲೆಗಳಿಗಾಗಿ—ಕೆಲವೊಮ್ಮೆ ಅಮಲು, ಜೂಗೆ ಇತ್ಯಾ

[೪ನೇ ಪುಟ ನೋಡಿರಿ]

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: DHARWAR.

Or

BRANCH OFFICE:

Court Road, UDIPI, S. K.

YOUR SUGAR PROBLEM SOLVED!

Use 'Sweetyne' Tablets. Each equivalent to one tola of sugar. Ideal for Hotel and Restaurant keeper. Sweet Meat manufacturers, Areated water manufacturers etc Price Rs. 12/ per 1,000. Post free Send 25% advance with order Selling Agents Wanted Write—

SVASTIKINDIA LABORATORIES,

BOMBAY- No. 12.

ಘಟನಾ ಸಮಿತಿ ಟೊಳ್ಳಲ್ಲವೆ?

ಪಾರ್ಲಿಮೆಂಟಿನಲ್ಲಿ ಚರ್ಚೆ.

ಬ್ರಿಟಿಷ್ ಪಾರ್ಲಿಮೆಂಟಿನ 'ಕಾಮನ್ಸ್' ಮತ್ತು 'ಲೋರ್ಡ್ಸ್' ಸಭೆಗಳೆರಡರಲ್ಲಿಯೂ ಜುಲಾಯಿ ತಾ. 18ರಲ್ಲಿ ಬ್ರಿಟಿಷ್ ಮಂತ್ರಿ ಸಮಿತಿಯ ನಿಯೋಗದ 'ಭಾರತ ಯೋಜನೆ'ಯ ಚರ್ಚೆ ನಡೆಯಿತು. 'ಶ್ರೀಮಂತ ಸಭೆ'ಯಲ್ಲಿ ಭಾರತ ಕಾರ್ಯದರ್ಶಿ ಲೋರ್ಡ್ ಪೆಥಿಕ್ ಲಾರೆನ್ಸರೂ 'ಸಾಮಾನ್ಯರ ಸಭೆ'ಯಲ್ಲಿ ಸರ್. ಸ್ಟಾಫೋರ್ಡ್ ಕ್ರಿಪ್ಸರೂ ತಮ್ಮ ಭಾರತ ಯಾತ್ರೆಯ ಸವಿವರ ವರ್ಣನೆ ಮಾಡಿದರು; ಹಿಂದೀ ರಾಜಕೀಯ ಪಕ್ಷಗಳ ಆಕಾಂಕ್ಷೆಗಳನ್ನೂ ತಾವು ನಡೆಸಿದ ಸಂಧಾನ ಪ್ರಯತ್ನಗಳನ್ನೂ ತಮ್ಮ ಯೋಜನೆಯ ರೂಪರೇಖೆ ಅದು ಹಿಂದೀಯರಿಗೆ ಬ್ರಿಟಿಷರಲ್ಲಿ ಅಪೂರ್ವ ಸದ್ಭಾವನೆಯುಂಟಾಗುವಂತೆ ಮಾಡಿದ ರೀತಿ ಮತ್ತು ಇತರ ಕುರಿತು ತಾವು ಕಟ್ಟಿಕೊಂಡಿರುವ ಅಭಿಪ್ರಾಯಗಳನ್ನೂ ನಿವೇದಿಸಿ ಕೊಂಡರು. ಲಾರೆನ್ಸ್ ಮತ್ತು ಕ್ರಿಪ್ಸರ ಭಾಷಣಗಳಲ್ಲಿ ಪದ ವ್ಯತ್ಯಾಸಗಳಲ್ಲದೆ ಅರ್ಥ ಮತ್ತು ಅಭಿಪ್ರಾಯ ಭಿನ್ನತೆಯಿರಲಿಲ್ಲ. ನಿರೀಕ್ಷೆಯಂತೆ ಮಿ. ಚರ್ಚಿಲ್ಲರು ಸರಕಾರದ ಧೋರಣೆಯನ್ನು ಕಟುವಾಣಿಯಲ್ಲಿ ಖಂಡಿಸಿದ್ದರು; ಅಲ್ಪ ಸಂಖ್ಯಾಕರಿಗೆ ಸಾಕಷ್ಟು ರಕ್ಷಣೆಯಿತ್ತಿಲ್ಲವೆಂಬ ನಿತ್ಯದ ಸೊಲ್ಲನ್ನು ಹಾಡಿದರು. ಮಂತ್ರಿ ಸಮಿತಿಯ ಮತ್ತೊರ್ವ ಸದಸ್ಯರಾಗಿದ್ದ ಮಿ. ಎ. ವಿ. ಅಲೆಕ್ಸಾಂಡರರು ಸ್ಫೂರ್ತಿಯ ಭಾಷಣದಿಂದ ಚರ್ಚಿಲ್ಲರನ್ನು ಜಯಶೀಲವಾಗಿ ಪ್ರತಿಭಟಿಸಿದರು. ಅಂತೂ ಪಾರ್ಲಿಮೆಂಟ್ ಹೇಳಿಕೆಗಳಿಂದ ಸಂಪ್ರದಾಯಪಾಲನೆಯಾಯಿತಲ್ಲದೆ ಹೊಸತೇನೂ ನಿರ್ಮಾಣವಾಗಿಲ್ಲ.

ಕಾಂಗ್ರೆಸ್ ಬೇಡಿಕೆಗೆ ನಕಾರವೆ?

ಲೋರ್ಡ್ಸ್ ಮತ್ತು ಕಾಮನ್ಸ್ ಸಭೆಗಳಲ್ಲಿ ಲಾರೆನ್ಸ್ ಮತ್ತು ಕ್ರಿಪ್ಸರ ಬಾಯಿಯಿಂದ ಏಕ ರೀತಿಯಲ್ಲಿ ಹೊರಬಿದ್ದ ಈ ಸ್ಪಷ್ಟೀಕರಣವೊಂದು ಉದ್ದೇಶ ಪೂರ್ವಕದ್ದಿದೆ. ನಿಯೋಜಿತ ಘಟನಾ ಸಮಿತಿಯಲ್ಲಿ, ಕಾಂಗ್ರೆಸಿನ, ಸಿಖ್ಖರ— ಲೀಗ್ ಮುಸಲ್ಮಾನರ ಹೊರತು ಮಿಕ್ಕೆಲ್ಲವರ-ಪ್ರಬಲಾಕ್ಷೇಪಕ್ಕೊಳಗಿರುವ ವಿಷಯವೆಂದರೆ ಪ್ರಾಂತಿಕ ಗುಂಪುಗಳಿಗೆ ಸಂಬಂಧಿಸಿದುದು. ಘಟನಾ ಸಮಿತಿ ಸೇರಿದ ಮೇಲಾದರೂ ಕಾಂಗ್ರೆಸಾಗಲೀ ಲೀಗ್ ಆಗಲೀ ಅದರಿಂದ ಹೊರ ಬೀಳುವ ಪ್ರಸಂಗ ಬರುವದಾದರೆ ಈ ಪ್ರಶ್ನೆಯ ಮೇಲಿನ ಜಗಳದಿಂದಲೇ. ಬ್ರಿಟಿಷರೀಗ ಏನೇ ಹೇಳಿದರೂ ಗುಂಪುಗಳಲ್ಲಿ ಸೇರುವ(ಯಾ ಸೇರದಿರುವ ಸ್ವಾತಂತ್ರ್ಯ ಪ್ರತಿಯೊಂದು ಪ್ರಾಂತ್ಯಕ್ಕಿದೆ ಎಂಬುದೇ ಅವರ ಮೂಲ ಹೇಳಿಕೆಯ ಅರ್ಥವೆಂದು ಕಟ್ಟಿಕೊಂಡು ತಾವು ಘಟನಾ ಸಮಿತಿಯಲ್ಲಿ ವರ್ತಿಸುವೆವೆಂದು ಕಾಂಗ್ರೆಸಿಗರ ಸ್ಪಷ್ಟ ಹೇಳಿಕೆ. 'ಇಂತಹ ವಿಪರೀತಾರ್ಥ ಕಟ್ಟಿಕೊಂಡು ಬರುವವರು ಘಟನಾ ಸಮಿತಿಯ ವಿರೋಧಿಗಳೇ ಸರಿ' ಎಂದು ಲೀಗಿನ ಹೇಳಿಕೆ. ಈ ಮಟ್ಟಿಗೆ ಕಾಂಗ್ರೆಸಿನ ವಿರುದ್ಧವಾಗಿ ಸರಕಾರ ಮತ್ತು ಮುಸ್ಲಿಂ ಲೀಗ್ ಏಕ ರಥದಲ್ಲಿವೆ. ಮಿ. ಜಿನ್ನರು ಪಾರ್ಲಿಮೆಂಟ್ ಹೇಳಿಕೆಗಳಲ್ಲಿ ತನಗೆ ಸ್ಪಷ್ಟ ಅನುಮೋದನೆ ದೊರೆಯಲೆಂದು ಸಕಾಲದಲ್ಲಿ ಆಶಿಸಿದ್ದರು. ಅಂತೆಯೇ ಬ್ರಿಟಿಷ್ ಯೋಜನೆಯಲ್ಲಿ ಕೇಂದ್ರಾಧಿಕಾರಕ್ಕೆ ಕೊಡಲ್ಪಟ್ಟಿರುವ ಆರ್ಥಿಕಾಧಿಕಾರದ ಮಿತ ಮೊದಲಾದುವುಗಳನ್ನು ತನ್ನಿಚ್ಛೆಯಂತೆ ವಿಸ್ತರಿಸಿಕೊಳ್ಳುವದೇ ಮೊದಲಾದ ಪೂರ್ಣಾಧಿಕಾರವು ಘಟನಾ ಸಮಿತಿಗಿರಬೇಕೆಂದೇ ಕಾಂಗ್ರೆಸಿನ ಅಭಿಪ್ರಾಯ. ಇವೆಲ್ಲಾ ಪ್ರಾಮುಖ್ಯ ವಿಷಯಗಳ ಕುರಿತು 'ನಾವು ನಿಮ್ಮೊಂದಿಗಿದ್ದೇವೆ' ಎಂಬ ಸ್ಪಷ್ಟ ಭರವಸೆ ಪಾರ್ಲಿಮೆಂಟ್ ಭಾಷಣಗಳಿಂದ ಮಿ. ಜಿನ್ನರಿಗೆ ದೊರೆಯಿತೆನ್ನಬಹುದು. ತಮ್ಮ ಭಾಷಣಗಳ ಮೂಲ ಪ್ರತಿಯಲ್ಲಿ ಸೇರಿಂದ ಈ ಕೆಳಗಿನ ಭಾಗವನ್ನು ಲೋರ್ಡ್ ಪೆಥಿಕ್ ಲಾರೆನ್ಸರೂ ಸರ್. ಕ್ರಿಪ್ಸರೂ ಮಿ. ಜಿನ್ನರು ಬಹಿರಂಗ ಪಡಿಸಿದ ಬಯಕೆಗನುಸಾರವಾಗಿ ಕೊನೆಯ ಗಳಿಗೆಯಲ್ಲಿ ಸೇರಿಸಿ ಕೊಂಡಿದ್ದರು. ಇದು ಪಂಡಿತ ನೆಹರುಗಳು ಅಧ್ಯಕ್ಷರಾದೊಡನೆ ಕೊಟ್ಟ ಹೇಳಿಕೆ ಮತ್ತು ಬೊಂಬಾಯಿ ಕಾಂಗ್ರೆಸ್ ಸಭೆಯ ಭಾಷಣಗಳಿಗೆ ಉತ್ತರವೆಂದು ನಂಬಲಾಗಿದೆ.

ಒಮ್ಮತ ವಿನಹ ಒಪ್ಪಿಕೊಳ್ಳಲಾರೆವು

"ಘಟನಾ ಸಮಿತಿಯ ವಿಷಯವನ್ನು ಮುಗಿಸುವ ಮೊದಲು ಅದರಲ್ಲಿ ಸೇರುವ ಪಕ್ಷಗಳ ಉದ್ದೇಶ ಸಂಬಂಧವಾದ ಇತ್ತೀಚೆಗಿನ ವರದಿಗಳ ಪ್ರಸ್ತಾಪವೆತ್ತಬೇಕಾಗಿದೆ. ನಾವು ಭಾರತವನ್ನು ಬಿಡುವ ಸ್ವಲ್ಪ ಸಮಯಕ್ಕೆ ಇಕ್ಕಡೆಯ ಪ್ರತಿನಿಧಿಗಳನ್ನೂ ಕಂಡು ಮಾತಾಡಿದ್ದೆವು. ಘಟನಾ ಸಮಿತಿಯ ಕಾರ್ಯಸಾಗಿಸುವ ಉದ್ದೇಶದಿಂದಲೇ ತಾವದನ್ನು ಪ್ರವೇಶಿಸುವೆವೆಂದು ಅವರು ನಮಗೆ ಕಂಠೋಕ್ತವಾಗಿ ಹೇಳಿದ್ದರು. ತಮ್ಮ ಮುಂದಿನ ರಾಜ್ಯಾಂಗ ವಿಧಾನದ ಕುರಿತು ಹೀಗಿರಬೇಕು, ಹಾಗಿರಬಾರದು ಎಂಬ ತಮ್ಮ ಅಭಿಪ್ರಾಯಗಳನ್ನು ಮುಂದೊತ್ತುವ ಸ್ವಾತಂತ್ರ್ಯ ನಿಜಕ್ಕೂ ಆ ಪಕ್ಷಗಳಿಗಿವೆ. ಭಿನ್ನಭಿನ್ನಾಭಿಪ್ರಾಯಗಳಿಂದೊಂದು ತೀರ್ಮಾನವನ್ನು ಕಡೆದು ತೆಗೆಯುವದೇ ಘಟನಾ ಸಮಿತಿಯ ಉದ್ದೇಶವಂತೆಯೇ ಘಟನಾ ಸಮಿತಿಯ ಕಾರ್ಯಕಲಾಪಗಳನ್ನು ಹೇಗೆ ಸಾಗಿಸಬೇಕೆಂಬ ಕುರಿತೂ ಅವರು ತಮ್ಮ ಅಭಿಪ್ರಾಯ ಮುಂದಿಡಬಲ್ಲರು. ಆದರೆ ಮೇ 16ರ ಹೇಳಿಕೆಗೊಪ್ಪಿಗೆ ಕೊಟ್ಟ ನೋಟ-ಆ ಹೇಳಿಕೆಯನ್ನಾಧರಿಸಿಯೇ ಘಟನಾ ಸಮಿತಿಯ ಚುನಾವಣೆಗಳು ನಡೆದಿರುವಾಗ ಅದರಲ್ಲೊಪ್ಪಲ್ಪಟ್ಟ ಶರ್ತಗಳಿಗೆ ವ್ಯತಿರಿಕ್ತವಾಗಿ, ಅದರೊಳ ಪ್ರವೇಶಿಸುವ ಬೇರೆ ಪಕ್ಷಕ್ಕೆ ಅನ್ಯಾಯವಾಗುವಂತೆ ವರ್ತಿಸುವದು ಅಸಾಧ್ಯವೇ ಸರಿ. ಘಟನಾ ಸಮಿತಿಯ ನಿರ್ಧಾರವನ್ನು ತಾವು ಅಂಗೀಕರಿಸಿಕೊಳ್ಳುತ್ತೇವೆಂದು ಬ್ರಿಟಿಷ್ ಸರಕಾರವು ವಚನಕೊಟ್ಟಿರುವದು, ಇಂತಹ ಸಮ್ಮತಿಯ ಕಾರ್ಯಕ್ರಮವೆಂಬುದನ್ನು ಆಧರಿಸಿಯೇ. ಆಶ್ರಿತ ರಾಜ್ಯಗಳ ಮಟ್ಟಿಗೆ ಅವರು ಆತುರಪಡಬೇಕೆಂದಿಲ್ಲ. ಒಳಗೆ ಬರುವದಾಗಲೀ ಬಾರದಿರುವದಾಗಲೀ ಅವರಿಚ್ಛೆ; ಆದ್ದರಿಂದಲೇ ಅವರೊಂದು ಸಂಧಾನ ಸಮಿತಿ ರಚಿಸಿ ಕೊಳ್ಳಲಿದ್ದಾರೆ. ಈ ಕಮಿಟಿಯು ಘಟನಾ ಸಮಿತಿಯೊಡನೊಂದು ಅಂಗೀಕಾರಾರ್ಹ ಸರಳಾರ ಸೂತ್ರ ತಯಾರಿಸಿಕೊಳ್ಳುವದೆಂದು ನನಗೆ ಭರವಸೆಯಿದೆ. ಈ ರೀತಿ ಹೊಸ ರಾಜ್ಯಾಂಗದ ವಿಜಯವು ಭಾರತದ ಹಲವಾರು ಭಿನ್ನಾಭಿಪ್ರಾಯಗಳುಳ್ಳ ಜನತೆಯು ಸ್ವಸಮ್ಮತಿಯೊಂದನ್ನೇ ಆಧರಿಸಿದೆ. ಭಾರತದಲ್ಲಿ ನಾವು ಸಂಗ್ರಹಿಸಿದ ಅಭಿಪ್ರಾಯಗಳ ಆಧಾರದಿಂದ ಈ ಮೂಲಭೂತ ವಿಷಯಕ್ಕೆ ಎಲ್ಲವರೂ ಒಪ್ಪುತ್ತಾರೆಂದು ನನ್ನ ನಂಬುಗೆ, ಒಂದು

[೩ನೇ ಪುಟದಿಂದ]

ವೆಚ್ಚಗಳ ಹೆಚ್ಚಳದಿಂದಾಗಿ, ಇಂಥವರಿಗಾಗಿ ಸಣ್ಣ ಸಾಲಗಳು ಬೇಕಾಗುತ್ತವೆ. ಮೇಲಿನ ಮೂರು ವರ್ಗಗಳ ಪೈಕಿ ಸರಾಸರ ಬಡ್ಡಿ ಉದ್ಯೋಗದ ಅರೆವಾಸಿಯಷ್ಟು ಮೊದಲ ವರ್ಗದವರಲ್ಲಿಯೇ; ಶೇಕಡಾ 30ರಷ್ಟು ಅಥವಾ ೩ನೇ ಅಂಶದಷ್ಟು ಪಾಲು ಎರಡನೇ ವರ್ಗದವರಿಂದ-ಹೆಚ್ಚು ಕಡಿಮೆ ಉಳಿದ ಭಾಗವೆಲ್ಲಾ ಮೂರನೇ ವರ್ಗದವರೊಡನೆ. ಮತ್ತೊಂದು ಗಣ್ಯ ವಿಷಯವೆಂದರೆ ಈ ಮೂಲಕ ಒಮ್ಮೆ ಸರಾಚನ ಮುಷ್ಟಿಯೊಳಗೆ ಸಿಕ್ಕಿದ ಮೇಲೆ ಮತ್ತೆ ಅದರಿಂದ ಬಿಡಿಸಿಕೊಳ್ಳಲು ಶೇ. 50ಕ್ಕೂ ಮಿಕ್ಕಿದವರಿಗೆ ಎಂದೆಂದಿಗೂ ಸಾಧ್ಯವಾಗಿಲ್ಲ.

ಪಟ್ಟಣಿಗ ಸಮಾಜಗಳಿಗೆ ಅತ್ಯಂತ ಕಂಟಕ ಪ್ರಾಯವಾಗಿರುವ ಈ ಪದ್ಧತಿಯನ್ನು ನಿರ್ಮೂಲಿಸುವ ಕಡೆಗೆ ಸಾರ್ವಜನಿಕರೆಂದೂ ಲಕ್ಷ್ಯ ಕೊಟ್ಟಿಲ್ಲವೆಂಬುದು ಆಶ್ಚರ್ಯಕರ ಸಂಗತಿ. ವಿಪರೀತ ಬಡ್ಡಿಗೆ ಸಾಲ ಕೊಡುವ ಯೆಹೂದಿಗಳ ಇಂತಹದೇ ಸಂಸ್ಥೆಯು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಈ ಮೊದಲಿತ್ತು. ಆದರೀಗ ಅಲ್ಲಿಯ ಸರಕಾರವು ಈ ಕಂಟಕ ನಿರೋಧಕ ಶಾಸನ ಕ್ರಮದಿಂದ ಅದನ್ನೊಂದು ನಿಯಂತ್ರಣಕ್ಕೆ ತಂದಿದೆ. ನಮ್ಮಲ್ಲಿದು ಸಹಸ್ರಾರು ಮಂದಿಯ ಜೀವ ಹಿಂಡುವ ಪಾಪವಾಗಿ ಉಳಿದಿದೆ. ಸರಕಾರವು ತೀಕ್ಷ್ಣ ಕಾರ್ಯ ಕೈಕೊಳ್ಳಬೇಕಾದ ಕಾಲವಿದು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಜನೇರಿಯನ್ ಜೀವನ ಮಿಕ್ಸ್ಚರ್

ಮುಂಬಾಯಿ

ENGLISH MADE EASY
(SELF ENGLISH STUDY)

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ರೂ. 1—8—0 ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ.

ಮುಂದಕ್ಕೂ ತಿಕ್ಕಾಟ ಹೊರತು ತೀರ್ಮಾನದಾಶೆಯಿಲ್ಲ!

ಸಂಯೋಗವು ಬಲಾತ್ಕಾರದಿಂದಾಗುವಂತಹದಲ್ಲ. ಅದು ಒಪ್ಪಂದ ಮೂಲಕವೇ ಆಗಬೇಕು. ಆ ಒಪ್ಪಂದ ಸಾಧಿಸುವದು ಘಟನಾ ಸಮಿತಿಯ ಕರ್ತವ್ಯ. ಬಹುಸಂಖ್ಯಾಕರೂ ಅಲ್ಪಸಂಖ್ಯಾಕರೂ ತಾಳ್ಮೆ ವಹಿಸಿ ಅಖಿಲ ಭಾರತದ ಭವಿಷ್ಯಕ್ಕಾಗಿ ಸಹಕರಿಸಲು ತಯಾರಾದರೇನೇ ಇದು ಸಾಧ್ಯ".

ಎಲ್ಲಾ ಬಣ್ಣಕ್ಕೂ ಮಸಿ!

ಗುರಿನೋಡಿ ಸಿಡಿದ ಈ ಮಾತುಗಳ ವ್ಯಂಗಾರ್ಥವಿಷ್ಟೆ, 'ಘಟನಾ ಸಮಿತಿಗೆ ಕಾಂಗ್ರೆಸಿನವರು ಕೇಳುವ ಸರ್ವಸ್ವತಂತ್ರಾಧಿಕಾರಕೊಡುವಂತಿಲ್ಲ ಅದರ ಸೂತ್ರಗಳನ್ನು ಅವರ ಅರ್ಥಕ್ಕನುಸಾರವಾಗಿ ಎಳೆಯಲಿಕ್ಕೂ ಬಿಡುವಂತಿಲ್ಲ. ಮುಸ್ಲಿಂ ಲೀಗ್ ಒಪ್ಪದೆ ಹೋದರೆ (ಕಾಂಗ್ರೆಸ್ ಅಥವಾ ಇತರ ಪಕ್ಷಗಳು ಒಪ್ಪದಿದ್ದರೂ ಹಾಗೆಯೇ) ಘಟನಾ ಸಮಿತಿ ಮಾಡಿದ ಯಾವ ತೀರ್ಮಾನವನ್ನೂ ಬ್ರಿಟಿಷರಂಗೀಕರಿಸುವಂತಿಲ್ಲ. ಹಿಂದೀಯ ಪಕ್ಷಗಳೊಂದಾಗಿ ಸರ್ವಸಮ್ಮತಿಯ ಒಂದು ತೀರ್ಮಾನವನ್ನು ತಮ್ಮ ಮುಂದಿಡದಿದ್ದರೆ ಘಟನಾ ಸಮಿತಿಯು ಮೂರನೇ ಸಿಮ್ಲಾ ಸಮ್ಮೇಲನವೇ ಸರಿ"—ಇನ್ನಾದರೂ ಹಿಂದೀಯ ಪಕ್ಷಗಳು ಈ ಆವಶ್ಯಕ ಒಪ್ಪಂದಕ್ಕೆ ಬರಬಲ್ಲವೆಂಬುದು ಹಗಲು ಸ್ವಪ್ನ. ಸಮ್ಮತಿ ಅಸಮ್ಮತಿಯೆಂಬುದು ಕ್ಷಣಿಕವೆಂದೂ ಭಾರತದಲ್ಲಿ ಸ್ವಾತಂತ್ರ್ಯ ವ್ಯವಸ್ಥೆ ಮಾಡುವದು ತರ್ಕಾತೀತ ವಿಷಯವೆಂದೂ ಬ್ರಿಟಿಷರು ತಿಳಿಯುವ ವರೆಗೆ ಸಂಧಾನ ಮೂಲಕ ಸ್ವಾತಂತ್ರ್ಯದ ಆಶೆಗಡೆಯಿಲ್ಲ. ಪಾರ್ಲಿಮೆಂಟಿನ ಕೊನೆಯ ಹೇಳಿಕೆಗಳ ಮೇಲಿಂದ ಹೆಚ್ಚೆಂದರೆ ಮುಂದಿನ ಆರು ತಿಂಗಳುಗಳಲ್ಲಿ, ಭಾರತದ ರಾಜಕೀಯವು ಆರು ತಿಂಗಳ ಹಿಂದೆ ಎಲ್ಲಿತ್ತೋ ಅಲ್ಲಿಗೇ ಬಂದು ನಿಲ್ಲಲಿರುವದು ಖಂಡಿತ! ಅರ್ಥಾತ್ ತಾತ್ಕಾಲಿಕ ರಾಷ್ಟ್ರೀಯ ಸರಕಾರವಂತಿರಲಿ, ಘಟನಾ ಸಮಿತಿಯೂ ಆಗ ಕುಸಿದು ಬಿದ್ದು ಎಲ್ಲವೂ ಬಟ್ಟಬಯಲಾಗಲಿವೆ!

ತಮ್ಮ ಅಭಿಪ್ರಾಯದ ಮೇಲೆ ಒನಪು ವೈಯ್ಯಾರಗಳ ಸುರೆ ಮಾಡಿಯೇ ಮುಂದಿಡುವದು:-ಗೆರಟೆಯಾಟವಾಡಿ ತೋರಿಸುವ ಐಂದ್ರಜಾಲಕನಂತಿರುವದು-ಬ್ರಿಟಿಷ್ ರಾಜಕಾರಣಿಗಳ ಹುಟ್ಟುಗುಣ. ಆದ್ದರಿಂದಲೇ ಸರಕಾರೀ ವಕ್ತಾರರ ಬಾಯಿಯಿಂದ ಮೇಲಿನ ಮಾತುಗಳು ಬಂದಮೇಲೂ, ಅಂದು ನ್ಯಾಯಪೂರ್ಣ ಭಾಷಣವಿತ್ತಿದ್ದ ಏಕಮಾತ್ರ ಸದಸ್ಯರಾದ ಮಿ. ಕೋವೆಯವರು ಸ್ಪಷ್ಟವಾಗಿ ವಿಚಾರಿಸಿದ್ದರು.-"ಇನ್ನೂ ಸ್ಪಷ್ಟವಾಗ ಮದ್ದಿಲ್ಲ. ಆ ರಾಷ್ಟ್ರೀಯ ಎಸೆಂಬ್ಲಿಯ ಅಧಿಕಾರಗಳಾವುವು? ಅದು ಸ್ವತಂತ್ರವಾಗಿರುವದೋ? ಅಥವಾ ಸ್ವತಂತ್ರ ಸಂಸ್ಥೆಯೊಂದರಂತೆ ವರ್ತಿಸುವ ಹಕ್ಕು ಅದಕ್ಕಿಲ್ಲವೋ? ಪ್ರಜಾಸತ್ತಾ ತತ್ವಗಳಿಗನುಸಾರವಾದ ಎಲ್ಲಾ ಹಕ್ಕುಗಳೂ ಆ ರಾಷ್ಟ್ರೀಯ ಎಸೆಂಬ್ಲಿಗಿವೆಯೋ? ಅಥವಾ ಯಾವುದಾದರೊಂದು ಜಾತೀಯತೆಯ ತಡೆ ಯಾ ನಿರ್ಬಂಧಗಳಿದಿರು ಅದು ತಡೆಗಟ್ಟಲ್ಪಡಲು ಬದ್ಧವೋ?"-ಸರಕಾರೀ ವಕ್ತಾರರಿಂದ ಸ್ಪಷ್ಟ ಉತ್ತರ ಪಡೆಯಬೇಕೆಂದೇ ಮಿ. ಕೋವೆಯುವರು ಎಸಳೆಸಳಾಗಿ ಬಿಡಿಸಿ ಪ್ರಶ್ನಿಸಿದ್ದರೂ ಸರಕಾರದ ಪರವಾಗಿ ಕೊನೆಗುತ್ತರಿಸಿದ ಮಿ. ಅಲೆಕ್ಸಾಂಡರರಿದನ್ನು ಉದ್ದೇಶ ಪೂರ್ವಕ ಅಲಕ್ಷಿಸಿದ್ದರು. ಇನ್ನು ಭಾರತದ ಪ್ರಶ್ನೆಯ ಕಡೆಗೆ ಪರಂಪರಾಗತವಾಗಿ ಇದ್ದ ಪಾರ್ಲಿಮೆಂಟಿನ ಅಸಡ್ಡೆ ಕೂಡಾ ಈ ಬಾರಿಯೂ ಇದ್ದೇ ಇತ್ತು. ಈ ಚರ್ಚೆಯ ಸಂದರ್ಭದಲ್ಲಿ 40-50 ಸದಸ್ಯರಿಗಿಂತ ಹೆಚ್ಚಿಗೆ ಹಾಜರಿರಲಿಲ್ಲ. ಭಾರತದ ಸ್ನೇಹಿತರೆಂದು ಹೇಳಿಸಿಕೊಂಡಿರುವ ಹಲವು ಕೂಲಿಗಾರ ಸದಸ್ಯರೂ ಈ ಪ್ರಾಮುಖ್ಯ ಸಂದರ್ಭದಲ್ಲಿ ಗೈರು ಹಾಜರಾಗಿದ್ದರು

ಚರ್ಚಿಲ್ಲರ ಟೀಕೆ

ಬ್ರಿಟಿಷ್ ಧೋರಣೆಯ ಖಂಡಿತವಾದ ಮತ್ತು ಕಹಿಯಾದ ಸ್ವರೂಪ ತಿಳಿಯಬೇಕಾದರೆ ಚರ್ಚಿಲ್ಲರ ಬಾಯಿಯಿಂದ ಅದು ಬರಬೇಕು. ಸಹಾನುಭೂತಿಪರರೆಂದು ತೋರಿಸಿಕೊಳ್ಳುತ್ತಿರುವ ಮಿಕ್ಕ ಬ್ರಿಟಿಷ್ ರಾಜಕಾರಣಿಗಳಿಗೂ ಚರ್ಚಿಲ್ಲರಿಗೂ ವ್ಯತ್ಯಾಸವಿರುವದು ಉಪಚಾರ ಬುದ್ಧಿಯ ಮಟ್ಟಿಗೆ ಮಾತ್ರ—ಉದ್ಯೋಗದ ಮಟ್ಟಿಗೆ—[illegible] ಸ್ಪಷ್ಟ ವಕ್ತೃತ್ವದ ಒಂದು ಉಪಕಾರ ಬುದ್ಧಿ ಚರ್ಚಿಲ್ಲರಲ್ಲಿದೆ. ಅದಕ್ಕನುಗುಣವಾಗಿ ಅವರು ಕಾಮನ್ಸ್ ಸಭೆಯಲ್ಲಿ ಮಾಡಿದ ಈ ಟೀಕೆಗೆ ಭಾರತೀಯರು ಧನ್ಯವಾದ ಕೊಡಬೇಕು.—

ಸ್ವಾತಂತ್ರ್ಯ ನಾಗಾಲ್ಡನ ತಪ್ಪು

"ಈಗಿನ ಸರಕಾರವು 1942ರ ಬ್ರಿಟಿಷ್ ಕೊಡುಗೆಯ ಎಲ್ಲೆ ಮೀರಿ ಹೋಗಿದೆ. ಸಾಮ್ರಾಜ್ಯದಿಂದ ಪ್ರತ್ಯೇಕವಾಗುವ ಸ್ವಾತಂತ್ರ್ಯ ಕೊಟ್ಟದ್ದು ತಪ್ಪು. 1942ರ ಕೊಡುಗೆಯಲ್ಲಿ ಮಸಾಹತು ರಾಜ್ಯಭಾರವೇ ಮೊದಲ ಗುರಿಯಾಗಿತ್ತು; ಆ ಮೇಲೆ ಮಸಾಹತು ಸರಕಾರವೇ ಪೂರ್ಣ ಸ್ವಾತಂತ್ರ್ಯದ ವಿಷಯ ತೀರ್ಮಾನಿಸಿಕೊಳ್ಳಬೇಕೆಂದಿತ್ತು. ಆದರೆ ಈ ಬಾರಿ ಅದನ್ನು ಕ್ಷಿಪ್ರ ಅಡ್ಡ ಹಾದಿ ಹಿಡಿಸುವ ಪ್ರಮಾದವಾಗಿದೆ. ಅಂತಹ ಮತ್ತೊಂದು ಅಪರಾಧವೆಂದರೆ ಹಿಂದೀಯ ಪಕ್ಷಗಳೊಳಗೆ ಒಪ್ಪಂದ ಮಾಡಿಸಲು ಸರಕಾರವೇ ಕಾರ್ಯ ಪ್ರವೃತ್ತವಾದುದು. ಆ ಬಾರಿ ನನ್ನ ಸರಕಾರವು ಹಿಂದೀಯರು ತಮ್ಮೊಳಗೇನೇ ಒಂದು ಒಪ್ಪಂದಕ್ಕೆ ಬಂದಲ್ಲಿ ಅಧಿಕಾರ ದಾನ ಮಾಡುವ ಶರ್ತ ಹಾಕಿದ್ದಿತು. ಈ ಬಾರಿಯ ಸರಕಾರ ತಾನಾಗಿ ಆ ಕೆಲಸಕ್ಕೆ ಮುಂದಾಗಿ ಅಧಿಕ ಪ್ರಸಂಗ ಮಾಡಿದೆ.

ಅಲ್ಪ ಸಂಖ್ಯಾಕರ ಹಿತರಕ್ಷಣೆ.

ಸುಮಾರು 40 ರಿಂದ 60 ಮಿಲಿಯದ ವರೆಗೆ ದಳಿತ ವರ್ಗದವರಿದ್ದಾರೆ. ಅವರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿಲ್ಲವೆಂಬ ಹೃದ್ರಾವಕ ದೂರುಗಳು ನಮಗೆ ಬಂದಿವೆ. 60 ಮಿಲಿಯ ಜನಸಂಖ್ಯೆಯುಳ್ಳ ಹರಿಜನರೂ ಅಲ್ಪ ಸಂಖ್ಯಾಕರಲ್ಲ. ನಾವು ಇಂಗ್ಲಾಂಡಿನಲ್ಲಿರುವುದು 45 ಮಿಲಿಯ ಮಾತ್ರ ನಮ್ಮನ್ನು ಅಲ್ಪ ಸಂಖ್ಯಾಕರೆಂದು ಮಿಕ್ಕ ಯುರೋಪಿಯಾನರು ತಮ್ಮಿಚ್ಛೆಯ ಸೂತ್ರಗಳನ್ನು ನಮ್ಮ ಮೇಲೆ ಹೇರುತ್ತಾರಾದರೆ ನಾವು ಸಹಿಸುವಂತಿದೆಯೇ? ಇನ್ನು 99000000 ಜನ ಮುಸಲ್ಮಾನರಿದ್ದಾರೆ. ಅವರು ಯೋಧಜನಾಂಗದವರು. ಅವರೆಂದೂ ಕಾಂಗ್ರೆಸಿನೊಡನೆ ಒಮ್ಮತಕ್ಕೆ ಬರುವಂತಿಲ್ಲ. ನಾನು 1942 ರಲ್ಲಿ ಸಂಧಾನಕೊಡುಗೆ ಕಳುಹಿಸಿದ್ದುದು ಜಪಾನರ ಅಜೇಯ ನಾವೆ ಬಂಗಾಳ ಕೊಲ್ಲಿಯಲ್ಲಿದ್ದ ಅಪಾಯ ನಿವಾರಣೆಗಾಗಿ. ಆಗ ಕಾಂಗ್ರೆಸು ಯಾವ ಸಹಾಯವನ್ನೂ ಮಾಡಿರಲಿಲ್ಲ. ಬದಲಿಗೆ ತನಗೆ ಸಾಧ್ಯವಿದ್ದಷ್ಟು ಉಪಟಳ ಕೊಟ್ಟದ್ದಿತು. ಮುಸ್ಲಿಮರು ಸಾಂಘಿಕವಾಗಿ ಪ್ರತ್ಯಕ್ಷ ಸಹಾಯ ಕೊಡದಿದ್ದರೂ ಪಂಜಾಬಿನಿಂದ 800000 ಮಂದಿ ಸ್ವಯಂಸೇವಕರಾಗಿ ಯುದ್ಧಕ್ಕೆ ಸೇರಿದ್ದರು. ರಾಜಕೀಯ ಪಕ್ಷಗಳನ್ನು ಗಣಿಸದೆ ಮಿಲಿಯಾವಧಿ ಜನತೆಯೇ ತಮ್ಮ ಸ್ವಯಂ ಉತ್ಸಾಹದಿಂದ ರಾಜಭಕ್ತಿಯಿಂದ ನಮಗೆ ನೆರವಾಗಿದ್ದರು. ಆ ಜನತೆಯ ಮೇಲೇನೂ ಪ್ರಭಾವವಿಲ್ಲದ ರಾಜಕೀಯ ಪಕ್ಷಗಳೊಡನೆ ಈಗಿನ ಸರಕಾರ ವ್ಯವಹರಿಸುತ್ತಿದೆ"

ಸರ್, ರೀಡ್, ಕೋವೆ, ನಿಕೋಲ್ಸನ್, ಥೋಮಸ್ ರೀಡ್, ವೇಲ್ಸನ್, ಲೋರ್ಡ್ ಹೋಪ್, ಗಾಲೇಚರ್, ಬಟ್ಲರ್ ಮೊದಲಾದವರೂ ಭಾಷಣವಿತ್ತಿದ್ದರು.

BANK WITH THE LARGEST CONNECTIONS ON THE WEST COAST

OFFERS:-
EFFICIENT, PROMPT & COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd
ESTD. 1925

ಮುಟ್ಟಾಗುಳಿಕೆ

ಬಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯುಗೊಳಿಸುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. ಗ್ರಿಂಗಳ ಬರ್ತ್ ಕಂಟ್ರೋಲಿಗೆ ರೂ. 4/. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
ಪ. ಬಿ. ೩. (A. 8) Tollygunge, Calcutta.
ಸ್ಟಾಕಿಸ್ಟ್: [illegible] ಕಂಪೆನಿ, ಮಂಗಳೂರು

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1-8-0** ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. **2/-**
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

The Canara Banking Corporation Limited.

(Incorporated in British India, with limited Liability)

Estd. 1906

Head Office: **UDIPI**, South Kanara.

CAPITAL

Authorised	... ...	Rs. 25,00,000
Issued & Subscribed	...	,, 16,00,000
Paid up	... ...	,, 15,60,120
Reserves	... ...	,, 4,60,000

ANNOUNCEMENT.

A Branch has been opened at BYADGI (Dharwar Dt.) **on 22nd May 1946.**

All kinds of banking business transacted

ಉಡುಪಿ, ಗುರುವಾರ, ೨೫-೭-'೪೬

ಜಮೀನುಗಳ ಒಡೆತನ

"ಹಳೇ ಕಾಲದ ಭಗ್ನಾವಶೇಷವಾಗಿ ನಮ್ಮಲ್ಲಿ ಜಮೀನ್ದಾರಿ ಪದ್ಧತಿಯುಳಿದಿದೆ. ಈಗ ಅದನ್ನು ಹುಗಿದು ಉತ್ತರ ಕ್ರಿಯೆ ನಡಿಸುವದು ಯೋಗ್ಯ" ಎನ್ನುತ್ತಾ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಂದಾಯ ಮಂತ್ರಿ ಮಿ. ರಫಿ ಅಹಮ್ಮದ್ ಕಿಡ್ವಾಯಿಯವರು ಅಲ್ಲಿಯ ಎಸೆಂಬ್ಲಿಯಲ್ಲಿ ಜಮೀನ್ದಾರೀ ಪದ್ಧತಿಯ ಬರ್ಖಾಸ್ತು ನಿರ್ಣಯವೊಂದನ್ನು ಮುಂದಿಟ್ಟಿದ್ದಾರೆ. ಬೇಸಾಯಗಾರ ಮತ್ತು ರಾಷ್ಟ್ರದ ನಡುವೆ ರೈತರ ರಕ್ತಮಾಂಸಗಳಿಂದಲೇ ಕಟ್ಟಲ್ಪಟ್ಟ ಅಡ್ಡಗೋಡೆಯಂತೆ ನಿಂತಿರುವ ಜಮೀನ್ದಾರೀ ಪದ್ಧತಿಯನ್ನು ನಿರ್ಮೂಲಿಸಬೇಕು; ಇನ್ನು ಮುಂದೆ ಅಂತಹ ಮಧ್ಯಸ್ಥಿಕೆಗೆ ವೇತನ ಪ್ರತಿಫಲ ಮಾತ್ರ ದೊರೆಯುವಂತಾಗಬೇಕು; ಯೋಗ್ಯ ಪರಿಹಾರ ಕೊಟ್ಟೇ ಜಮೀನ್ದಾರೀ ಹಕ್ಕನ್ನು ಕಸಗೊಳ್ಳಬೇಕು; ಈ ಕುರಿತೊಂದು ಯೋಜನೆ ತಯಾರಿಸಲು ಸಮಿತಿಯೊಂದರ ನೇಮಕವಾಗಬೇಕು—ಎಂಬುದೇ ಸಂಯುಕ್ತ ಪ್ರಾಂತಿಕ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸರಕಾರ ತಂದಿರುವ ಠರಾವಿನಸಾರ. ಮದ್ರಾಸ್ ಪ್ರಾಂತ್ಯದ ಕಂದಾಯ ಮಂತ್ರಿಗಳಾದ ಮಾನ್ಯ ಕಾರಂತರು ಇಲ್ಲಿಯೂ ಅಂತಹ ಸುಧಾರಣೆ ಶೀಘ್ರದಲ್ಲಿಯೇ ಬರಲಿವೆ ಎಂದು ಸಕಾಲದಲ್ಲಿ ಎಚ್ಚರಿಸಿದ್ದಾರೆ. ಇನ್ನು ಎರಡು ಮೂರು ತಿಂಗಳೊಳಗೆ ಅಂತಹದೊಂದು ನಿರ್ಣಯ ಮುಂದಿರುವದೆಂದು ಅವರೆಂದಿದ್ದಾರೆ. ರೈತರ ಹಿತ ಸಾಧನೆಯೇ ಮುಖ್ಯ ಅಭಿರುಚಿ ಮತ್ತು ಅಕಾಂಕ್ಷೆಯಾಗಿರುವ ಪ್ರಜಾಪ್ರಭುತ್ವ ಸರಕಾರವು ಈ ಕುರಿತು ರಂಕಿಸಬಹುದೆಂಬ ಸಂದೇಹಕ್ಕೆಡೆಯಿಲ್ಲ. ಮೇಲಾಗಿ ಭಾರತದ ಜನಜೀವನಕ್ಕೆ ಎಲ್ಲಕ್ಕಿಂತ ಮುಖ್ಯವಾಗಿ ಸಂಬಂಧಿಸಿರುವ ಈ ಪ್ರಶ್ನೆಯು ಪ್ರಾಂತಿಕ ಅವಶ್ಯಕತೆಯನ್ನಾಗಲೀ ವ್ಯಕ್ತಿಗತ ಅಭಿಪ್ರಾಯವನ್ನಾಗಲೀ ಹೊಂದಿಕೊಂಡಿಲ್ಲ; ಕಾಂಗ್ರೆಸ್ ಚುನಾವಣಾ ಘೋಷಣೆಯೇ ಅದಕ್ಕೆ ಅಖಿಲ ಭಾರತ ತಳಹದಿಯನ್ನು ಹಾಕಿದೆ. ಕಾಂಗ್ರೆಸ್ ಮಂತ್ರಿಗಳ ನೇಮಕವಾಗುವ ಮೊದಲೇ ನಿರ್ಣಯವಾಗಿದ್ದ ವಿಷಯವಿದು. ಆದ್ದರಿಂದ ಪ್ರತಿಯೊಂದು ಪ್ರಾಂತ್ಯದ ಕಾಂಗ್ರೆಸ್ ಸರಕಾರವೂ ಇಂದಲ್ಲವಾದರೆ ನಾಳೆ—ಒಂದಲ್ಲೊಂದು ವಿಧಾನದ—ಜಮೀನ್ದಾರಿ ಅಥವಾ ಅನುಭೋಗ ರಹಿತ ಭೂಮಾಲಕತ್ವ ಪದ್ಧತಿಗಳ ನಿರೋಧಕ ಶಾಸನ ತರುವದು ಖಂಡಿತ. ಸರ್ವಾಧಿಕಾರ ಯಾನೆ ನಿರಂಕುಶ ಪ್ರಭುತ್ವದ ಮಿಳಿಯಾವಧಿ ಮುಗಿಳಿಂಬಂತೆ ಜನತೆಯ ನಡುವೆ ಹಂಡಿ ಬಿದ್ದಿರುವ—ದುಡಿಯದೆಯೇ ದುಂದು ವೆಚ್ಚ ಮಾಡಲು, ಕಾರ್ಯ ಶಕ್ತಿಯಿಲ್ಲದೇನೇ ಹೆಮ್ಮೆ ಠೇಂಕಾರ ಪ್ರದರ್ಶಿಸಲು ಕಲಿತಿರುವ—ಜಮೀನ್ದಾರರು, ವರ್ಗದಾರರು ಈಗಲಾದರೂ ಕಣ್ಣು ತೆರೆಯಬೇಕು. ತಮ್ಮ ಸ್ಥಾನಮಾನಗಳು ಶಾಶ್ವತವೆಂದು ಈ ವರ್ಗದವರಲ್ಲಿರುವ ವಿಶ್ವಾಸವು ಹಿಟ್ಲರನಲ್ಲಿದ್ದ ವಿಜಯ ವಿಶ್ವಾಸಕ್ಕಿಂತ ಕಡಿಮೆಯದಲ್ಲ; ಆದರೆ ಇಂದಿನ ಕಾಲವಾವುದೆಂಬದು ಅವರಿಗೆ ಗೊತ್ತೆ? ಶತಮಾನಗಳ ದಾಖಲೆಗಳಿದ್ದ ಕಿರೀಟಗಳನ್ನು, ಸಾಮ್ರಾಜ್ಯಗಳನ್ನು—ಸಹಸ್ರಾರು ವರುಷಗಳ ಭದ್ರ ಭವಿಷ್ಯವನ್ನು ನಿರೀಕ್ಷಿಸಿದ್ದ ನಾಝಿಸಂ, ಫೇಸಿಸಮ್ ನಂತಹ ದುಶ್ಶಕ್ತಿಗಳನ್ನು—ನೆಲ ಸಮ ಮಾಡಿರುವ ಕಾಲವಿದು. ಅಂತಹ ಪರ್ವತಗಳೇ ಈ ಕಾಲದ ವಜ್ರಾಘಾತದಿಂದ ಕುಸಿದು ಬಿದ್ದ ಮೇಲೆ ಜಮೀನ್ದಾರೀ ದಿನ್ನೆಗಳು ನಿಲ್ಲುವಂತಿವೆಯೆ? ಆದ್ದರಿಂದ ಜಮೀನ್ದಾರರಿಲಿ, ದೊಡ್ಡದೊಡ್ಡ ವರ್ಗದಾರರಿಲಿ, ವಂಶ ಪಾರಂಪರ್ಯದ ಹಕ್ಕಿನಿಂದ ಅವಶ್ಯಕತೆಗೂ ಮಿಕ್ಕಿದ ಆಸ್ತಿಗಳ ಮಾಲಕರಾಗಿರುವ ಯಾರೇ ಇರಲಿ—ಅಂಥವರಲ್ಲಾ ತಮ್ಮ ಕಾಲಡಿಯ ಮಣ್ಣೇಗ ಜಾರುತ್ತಿದೆ ಎಂಬ ಜ್ಞಾನವನ್ನು ಅಗತ್ಯವಾಗಿ ತಂದುಕೊಳ್ಳಬೇಕು ಮುಂದಿನ ಅನಿವಾರ್ಯ ಮಾರ್ಪಾಟಕ್ಕಗತ್ಯವುಳ್ಳ ಆತ್ಮ ಸಂಯಮನ, ಸಹನೆ, ಸಮತಾ ಬುದ್ಧಿ ಮತ್ತು ತ್ಯಾಗದ ಅಭ್ಯಾಸಕ್ಕೆ ತೊಡಗಬೇಕು. ಕಾಲೋಚಿತವಾದ ಸಂಸ್ಕಾರ ಹೊಂದಬೇಕು.

ಇದಕ್ಕನುಗುಣವಾಗಿ 'ದ. ಕ. ಯುವಜನ ಕಾಂಗ್ರೆಸ್'ನವರು ತಯಾರಿಸಿರುವ 'ಒಕ್ಕಲುಹಿತ ಮಸೂದೆ'ಯನ್ನು ಈ ಸಂಚಿಕೆಯ ಜೇರೊಂದೆಡೆ ಕೊಟ್ಟಿದ್ದೇವೆ. ಅದು, ಪ್ರಗತಿಶೀಲ ಪಕ್ಷವೊಂದು ಜನತೆಯ ಮುಂದೆ ಮಾದರಿಗಾಗಿ ಇಟ್ಟಿರುವ ಕರಡು ಮಸೂದೆ. ಮುಂದಿನ ವ್ಯವಸ್ಥೆಯೇ ಹಾಗೆಂದಾಗಲೀ, ಅದರಲ್ಲಿ ಸಂಪೂರ್ಣತೆಯಿದೆಯೆಂದಾಗಲೀ ಭಾವಿಸಬಾರದು. ಪ್ರಚಲಿತ ಪದ್ಧತಿಯೇ ಶಾಶ್ವತ ಮತ್ತು ಸಮಂಜಸವೆಂದು ನಂಬಿರುವ ಭೂಮಾಲಕರ ದೃಷ್ಟಿಯಿಂದ ಹೇಗಿದ್ದರೂ ಸದ್ಯದ ಕ್ರಾಂತಿಕಾಲದಲ್ಲಿ ಸೌಮ್ಯ ಅಥವಾ ಸಾಮಾನ್ಯವನ್ನಿಸುವ ಸುಧಾರಣೆಯಿದು. ಹಿಂದೆ ಒಕ್ಕಲುಗಳಿಗೆ ಶರ್ತಬದ್ಧ ಮೂಲಗೇಣಿ ಅಥವಾ ಕಾಯಂಗೇಣಿಯ ಹಕ್ಕನ್ನಷ್ಟೇ ಅದು ಶಿಫಾರಸು ಮಾಡುತ್ತಿದೆ. ಅದೇ ಸಮಯದಲ್ಲಿ, ಮಾಲಕತ್ವದ ಹಕ್ಕು ಮತ್ತೂ ಉಳಿಯುವವರು ತಮ್ಮ ಗೇಣಿಯನ್ನು ಕ್ರಮಶಃ ಪಡೆಯಲಾಗುವ ಅನುಕೂಲತೆಯನ್ನೂ ಹೆಚ್ಚಿಸುತ್ತದೆ. ಸಂಬಂಧಪಟ್ಟವರು ಮತ್ತು ಸಾರ್ವಜನಿಕರು ಈ ವಿಧಾನವನ್ನು ನಿರ್ವಿಕಾರ ಬುದ್ಧಿಯಿಂದ ವಿಮರ್ಶಿಸಲೆಂದು ಆಶಿಸುತ್ತೇವೆ. ಹೇಗಿದ್ದರೂ ಇಂತಹ ಸೂಚನೆಗಳು ಮುಂದೆ ಬಾರದಾಗ ಅಸಡ್ಡೆ ವಹಿಸುವ ಕಾಲ ಇದಲ್ಲ. ಅಗತ್ಯವುಳ್ಳ ತಿದ್ದುಪಡಿಗಳನ್ನು—ಆ ಮಸೂದೆಯ ರೂಪವನ್ನೇ ಬದಲಾಯಿಸುವ ಅವಶ್ಯಕತೆಯಿದ್ದರೆ ಆ ಬದಲಾವಣೆಯನ್ನು—ಸೂಚಿಸಬಹುದು. ಅಂತೂ ಸರ್ವರೂ ಕಾಲೋಚಿತವಾಗಿ ಜಾಗ್ರತಿಗೊಂಡು ಈ ನವರಚನೆಯಲ್ಲಿ ಸಹ ಭಾಗಿಗಳಾಗಬೇಕಾದುದು ಅಗತ್ಯವೆಂದು ನುತ್ತೊಮ್ಮೆ ವಿಜ್ಞಾಪಿಸಿಕೊಳ್ಳುತ್ತೇವೆ.

ಉಡುಪಿ.

ಕಲಾವೃಂದ—ದಿನ ೨೧-೭-೪೬ರಲ್ಲು ಕಲಾವೃಂದದ ತೃತೀಯ ವಾರ್ಷಿಕ ಅಧಿಕಾರಿಗಳ ಚುನಾವಣಾ ಸಭೆಯು ಪ್ರಿನ್ಸಿಪಾಲ್ ಶ್ರೀ ಎಂ. ರಾಮಚಂದ್ರರಾವ್. ಎಂ. ಎ. ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ. ಯಸ್ ಯಲ್. ನಾರಾಯಣ ಭಟ್ಟರು ವೃಂದದ ಅಧ್ಯಕ್ಷರಾಗಿ, ಕಳೆದೆರಡು ವರ್ಷಗಳಿಂದಲೂ ದುಡಿಯುತ್ತಿರುವ ಶ್ರೀ. ಕೊಡತ್ತೂರು ಅನಂತಪದ್ಮನಾಭ ಉಡುಪರೇ ಕಾರ್ಯದರ್ಶಿಗಳಾಗಿ, ಶ್ರೀ. ಮಟ್ಟಿ ವಾಸುದೇವಾಚಾರ್ಯರು ಉಪಕಾರ್ಯದರ್ಶಿಗಳಾಗಿ, ಶ್ರೀ. ವಿ. ನಂ. ಪುತ್ರಾಯರು ವೃಂದದ "ಸವ್ಯಸಾಚಿ" ಪತ್ರಿಕೆಯ ಸಂಪಾದಕರಾಗಿ, ಬಳ್ಕೂರು ಸುಬ್ರಾಯ ಅಡಿಗರು ಮತ್ತು ಕೊ. ನಾ ಕಾರಂತರು ವಾಚನಾಲಿಯ ವಿಭಾಗದ ಕಾರ್ಯ ಕರ್ತರಾಗಿ, ಶ್ರೀ. ಕೆ. ಪದ್ಮನಾಭ ಉಪಾಧ್ಯಾಯರು ಭಜನಾವಿಭಾಗದ ಕಾರ್ಯಕರ್ತರಾಗಿ, ಮತ್ತು ಆರುಜನರು ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಚುನಾಯಿತರಾದ ಬಳಿಕ ಅಧ್ಯಕ್ಷರು ಕೆಲಹಿತ ವಚನಗಳನ್ನುಪದೇಶಿಸಿದ ತರುವಾಯ ಕಾರ್ಯದರ್ಶಿಗಳ ಧನ್ಯವಾದದೊಡನೆ ಕಾರ್ಯಕ್ರಮವು ಕೊನೆಗೊಂಡಿತು.

ಸುರಕ್ಷತಾ ಸಭೆ—ತಾ. ೧೯ರಲ್ಲಿ ಜಿಲ್ಲಾ ಪೋಲೀಸ್ ಸುಪರಿಂಟರು ಇಲ್ಲಿಗೆ ಆಗಮಿಸಿ ಪೋಲೀಸ್ ಮತು ಇತರ ಸರಕಾರಿ ಆಪೀಸರರು ಮತ್ತು ಕೆಲವೇ ಅನಧಿಕಾರಿ ಮಹನೀಯರನ್ನು ಆಮಂತ್ರಿಸಿ ಬಿ. ಬೊ. ಬಂಗ್ಲೆಯಲ್ಲಿ ಒಂದು ಸಭೆ ಜರಗಿಸಿ, ಕಾಳಸಂತೆಯನ್ನು ತಡೆಗಟ್ಟಲಿಕ್ಕೂ ಆವಶ್ಯಕ ವಸ್ತುಗಳ ಸರಿಯಾದ ವಿತರಣೆಗೂ ಒಂದು ಕಮಿಟಿಯನ್ನು ರಚಿಸುವ ಕುರಿತು ಅಭಿಪ್ರಾಯವಿನಿಮಯ ಮಾಡಿದರೆಂದು ಶ್ರೀ. ಕೆ. ಜಿ. ಬಲ್ಲಾಳರು ಹೊಸಕಮಿಟಿಗಿಂತ ಈಗಾಗಲೇ ಕಾಂಗ್ರೆಸ್ ಸರಕಾರವು ಏರ್ಪಡಿಸಿರುವ ಗ್ರಾಮ ಮತ್ತು ತಾಲೂಕು ಸಮಿತಿಗಳಿಗೇನೇ ಆ ಜವಾಬ್ದಾರಿಯನ್ನು ಕೊಡುವುದು ಉಚಿತವೆಂದು ಸೂಚಿಸಿದರೆಂದೂ ಚರ್ಚಾನಂತರ ಹಾಗೆಯೇ ನಿಶ್ಚಯಿಸಲಾಯಿತೆಂದೂ ತಿಳಿದುಬರುತ್ತದೆ

ಮುನಿಸಿಪಲ್ ಕೌನ್ಸಿಲ್ ಸಭೆಯು

ತಾ. 23ರಲ್ಲು ಸಂಜೆ ಶ್ರೀ. ಎ. ಲಕ್ಷ್ಮೀನಾರಾಯಣರಾವ್, ಚೆಯರ್‌ಮೇನ್, ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ. ಆರ್. ಆರ್. ಕುಂಜೂರರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು. ಉಡುಪಿಯ ಹರಿಜನ ವಿದ್ಯಾರ್ಥಿಭವನಕ್ಕೆ ರೂಪಾಯಿ ಇಪ್ಪತ್ತೈದು ಸಹಾಯ ಧನಕೊಡಬಹುದೆಂದಾಯಿತು. ಕಸ್ಸಾನೂರು ಮುನಿಸಿಪಾಲಿಟಿಯು ಪಾಸುಮಾಡಿದ ನಿರ್ಣಯವನ್ನು ಓದಲಾಗಿ ಮುನಿಸಿಪಾಲಿಟಿಗಳಿಗೆ ಕಮಿಶನರರು ಬೇಡವೆಂಬುದನ್ನು ಶ್ರೀ ನರಸಿಂಹವಿಠಲ ಕಾಮತರು ಸಮರ್ಥಿಸಿದರು, ಚೆಯರ್‌ಮೆನ್ ಮತ್ತು ಕೆಲವು ಕೌನ್ಸಿಲರುಗಳಿಂದ ಕೂಡಿದ ಕೆಬಿನೆಟ್ ಸಮಿತಿಗಳು ಪ್ರತಿಯೊಂದು ಮುನಿಸಿಪಾಲಿಟಿಗೂ ಸ್ಥಾಪನೆಯಾಗಬೇಕೆಂದು ಸೂಚಿಸಿದರು. ಇಂತಹ ಕಮಿಟಿಗಳು ಸ್ಥಾಪನೆಯಾದರೆ ಸ್ವಾರ್ಥ ಸಾಧಿಸುವವರಿಗೆ ತುಂಬಾ ಆಸ್ಪದದೊರೆಯುವುದು ಆದುದರಿಂದ ಮುನಿಸಿಪಾಲಿಟಿಗಳಿಗೆ ಕಮಿಶನರರು ಅಗತ್ಯಬೇಕೆಂದು ಮಿ। ಆರ್. ಎ. ನ್ಯಾಮನ್ನರು ಪ್ರತಿಭಟಿಸಿದರು. ಕಸ್ಸಾನೂರು ಮುನಿಸಿಪಾಲಿಟಿಯ ನಿರ್ಣಯವನ್ನು ಕೊನೆಗೆ ರಿಕಾರ್ಡು ಮಾಡಲಾಯಿತು. ಗತವರುಷದ ನಗರಾಡಳಿತ ವರದಿಯನ್ನು ವಿಮರ್ಶಿಸಿ ಜಿಲ್ಲಾ ಕಲೆಕ್ಟರರು ಬರೆದರಿಮಾರ್ಕುಗಳನ್ನು ಓದಿ ರಿಕಾರ್ಡು ಮಾಡಲಾಯಿತು. ನಗರಾಡಳಿತ ತೃಪ್ತಿಕರವಿದೆ. ಜನತೆಯ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿದೆ, ಇತ್ಯಾದಿ ಸೂಚಿಸಲಾಗಿತ್ತು. ಹರಿಜನರಿಗೂ ತಿಂಡಿ ತೀರ್ಥ, ಊಟ ಕಾಫಿಹೊಟಲುಗಳಲ್ಲಿ ನಿರಾತಂಕವಾಗಿ ಪ್ರವೇಶದೊರೆಯುವಂತೆ ಲ್ಯಾಸೆನ್ಸು ಕೊಡುವಾಗ ಈ ಸಂಬಂಧಕೂಡಿಸಬೇಕಾದ ಶರ್ತವನ್ನು ಸೂಚಿಸಿ ಹರಿಜನ ಕೌನ್ಸಿಲರು ಒಂದು ನಿರ್ಣಯವನ್ನು ತಂದರು. ನಿರ್ಣಯದ ವಾಕ್ಯ ರಚನೆಯಲ್ಲಿ ದೋಷಗಳಿದ್ದುದರಿಂದ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಬೇಕಾಯಿತು.

NOTICE.

Wanted one Firka Development Officer of the rank of a Deputy Tahsildar and 5 Village Development Officers for rural reconstruction work. To start with their duties will be to tour and make an economic survey of every village within their jurisdiction and report how best it can be developed in every direction possible. Applications are invited from young men with an imaginative bent of mind and initiative. The minimum educational qualification will be that of the S. S. L. C. standard, but persons with higher qualifications or having experience in social welfare work in rural areas will be preferred. Final selection will be made after interview with the Collector at his office. The application should reach the Collector by 25th July 1946.

ಪ್ರಕಟಣೆ

ಗ್ರಾಮ ಸುಧಾರಣೆಯ (Rural Reconstruction) ಕೆಲಸದ ಬಗ್ಗೆ ಡೆಪ್ಯುಟಿ ತಹಸೀಲ್ದಾರ್ ತರಗತಿಯ ಒಬ್ಬ ಫಿರ್ಕಾ ಡೆವಲಪ್‌ಮೆಂಟ್ ಆಫೀಸರ್ ಮತ್ತು ರೆವೆನ್ಯೂ ಇನ್ಸ್‌ಪೆಕ್ಟರ್ ತರಗತಿಯ ಐದು ಮಂದಿ ವಿಲ್ಲೇಜ್ ಡೆವಲಪ್‌ಮೆಂಟ್ ಆಫೀಸರರೂ ಬೇಕಾಗಿದ್ದಾರೆ-ತಮ್ಮ ಠಾಣೆಯ ಗ್ರಾಮಗಳ ಆರ್ಥಿಕ ಸ್ಥಿತಿಯ ಶೋಧನೆಯನ್ನು ಮಾಡಿ ಪ್ರತಿಯೊಂದು ವಿಷಯದಲ್ಲಿಯೂ ಗ್ರಾಮವನ್ನು ಉನ್ನತಿಗೆ ಹ್ಯಾಗೆ ತರಬಹುದೆಂದು ಸಂಚರಿಸಿ ಅರಿತು ರಿಪೋರ್ಟು ಮಾಡುವುದೇ ಅವರ ಪ್ರಥಮ ಕೆಲಸ-ಕಲ್ಪನಾಶಕ್ತಿಯೂ ಔದ್ಯೋಗಿಕ ಶಕ್ತಿಯೂ ಉಳ್ಳ ತರುಣರಿಂದ ಅರ್ಜಿಗಳನ್ನು ಆಮಂತ್ರಿಸಲಾಗಿದೆ-S. S. L. C. ತರಗತಿಯು ಅತ್ಯಲ್ಪ ವಿದ್ಯಾಯೋಗ್ಯತೆಯಾಗಿದ್ದರೂ, ಅದಕ್ಕಿಂತ ಉತ್ತಮ ಯೋಗ್ಯತೆಯುಳ್ಳವರಿಗೂ ಹಳ್ಳಿಯಲ್ಲಿ ಸಮಾಜ ಸುಧಾರಣೆಯ ಕೆಲಸವನ್ನುಮಾಡಿ ಅನುಭವವಿದ್ದವರಿಗೂ ಚುನಾವಣೆಯಲ್ಲಿ ಪ್ರಾಮುಖ್ಯ ಕೊಡಲಾಗುವುದು-ಜಿಲ್ಲಾ ಕಲೆಕ್ಟರವರ ಆಫೀಸಿನಲ್ಲಿ ಅವರ ಭೇಟಿಯಾದಮೇಲೆ ಆಖೈರು ಚುನಾವಣೆ ಮಾಡಲಾಗುವುದು. ಅರ್ಜಿಗಳು ತಾ. 25-7-1946ರೊಳಗೆ ಕಲೆಕ್ಟರವರಿಗೆ ತಲ್ಪತಕ್ಕದ್ದು.

(Sd.) **S. Bhoothalingam,**
Collector, S. Kanara,
Mangalore dated: 15-7-1946.

ಮುಖ್ಯ ಸುದ್ದಿ

ಟಪ್ಪಾಲು ನೌಕರರಿಗೆ ಅಧಿಕ ಸಂಬಳ

'ನಾನ್ ಗಝೆಟೆಡ್' ಟಪ್ಪಾಲು ತಂತೀ ನೌಕರರ ಸಂಬಳ ನಿರ್ಣಯದ ಕುರಿತು ತೀರ್ಮಾನಾಧಿಕಾರಿಯಾಗಿ ನೇಮಕಗೊಂಡಿದ್ದ ಜಸ್ಟೀಸ್ ರಾಜಾಧ್ಯಕ್ಷರ ತೀರ್ಪನ್ನು ಸರಕಾರವು ಸಂಪೂರ್ಣವಾಗಿ ಅಂಗೀಕರಿಸಿದೆ. ಇದಕ್ಕನುಗುಣವಾಗಿ ಆ ವಿಭಾಗದ ನೌಕರರ ಸಂಬಳವು ಇದೇ ಜುಲಾಯಿ ತಾ. 1ರಿಂದ ಸೇ. 5ರಿಂದ 50ರ ವರೆಗೆ ಹೆಚ್ಚಿಸಲ್ಪಡುವದು. ಅಕೌಂಟೆಂಟರು, ಸಬ್ ಇನ್ಸ್ಪೆಕ್ಟರರು; ಮತ್ತಾ ವರ್ಗದ ಇತರರ ಸಂಬಳವು ಸೇ. ೨ರಷ್ಟು ಹೆಚ್ಚುವದು. ಪೋಸ್ಟ್‌ಮೇನ್, ಲೈನ್ ಮೇನ್, ಮರಗೆಲಸದವರು, ಪೈಂಟರರು, ಮೇಸ್ತ್ರಿಗಳು ಮತ್ತಿಂಥವರ ಸಂಬಳದಲ್ಲಿ ಸೇ. 20ರಂತೆಯೂ, ರನ್ನರ್, ಎಟೆಂಡರ್, ಪೋರ್ಟರ್, ಪ್ಯಾಕರ್ ಮುಂತಾದವರ ಸಂಬಳದಲ್ಲಿ ಸೇ. 50ರಂತೆಯೂ ಹೆಚ್ಚಿಸಿ ಕೊಡಲಾಗುವದು. ಹಿಂದಿನ ಕೆಲಸದ ಅವಧಿಗೆ ಸಂಬಂಧಿಸಿದ ಬೋನಸ್ ರೂಪದಿಂದ ಕೆಳತರಗತಿಯ ನೌಕರನಿಗೊಬ್ಬನಿಗೆ ರೂ. 150ರಂತೆ ಏಕ ಗಂಟಿನಿಂದ ದೊರೆಯುವದು. ಅಂತೆಯೇ ಧಾನ್ಯರಿಯಾಯತಿ ಬತ್ತೆ ಕೊಡಬೇಕೆಂಬ ತೀರ್ಮಾನವೂ ಆಗಿದೆ. ತರಗತಿ ತಬ್ದೀಲೂ ಆಗಿದೆ. ಹೀಗೆ ಪ್ರಯೋಜನ ಪಡೆಯುವ ಟಪ್ಪಾಲು ನೌಕರರು ಅಖಿಲ ಭಾರತದಲ್ಲಿ 1,31,000 ಮಂದಿ.

ಟಪ್ಪಾಲು ಮುಷ್ಕರ ಪ್ರಬಲಿಸಿದೆ

ಸರಕಾರವು ಸಂಘಾನೇಚ್ಛೆಯಿಂದ ಮುಷ್ಕರ ಪ್ರತಿನಿಧಿಗಳನ್ನು ಸಂಧಿಸದೆ ಮುಷ್ಕರವನ್ನು ನಿಲ್ಲಿಸುವಂತಿಲ್ಲ'ವೆಂದೂ ಈ ತೀರ್ಮಾನವು ಅಪೂರ್ಣವಿದೆಯೆಂದೂ ಮುಷ್ಕರ ನಾಯಕ ಶ್ರೀ. ಘೆಲ್ವಿಯಾದಿದ್ದಾಗೆ, ಟಪ್ಪಾಲು ಮುಷ್ಕರವು ಎಂದಿನಂತೆ ಪ್ರಬಲಿಸುತ್ತಾ ನಡೆದಿದೆ. ... ಪೋಸ್ಟ್ ಮತ್ತು ಟೆಲಿಗ್ರಾಫ್ ಸಂಘ'ದ ಅಧ್ಯಕ್ಷ ಶ್ರೀ. ಜಮುನಲಾಲರೇ ಮೊದಲಾದವರು ಕೆಳತರಗತಿ ನೌಕರರ ಈ ಮುಷ್ಕರಕ್ಕೆ ವಿರೋಧವಿದ್ದಾರೆ.

ಗೋವೆಯ ಸತ್ಯಾಗ್ರಹ

ಪಶ್ಚಿಮ ಕರಾವಳಿಯಲ್ಲಿದ್ದು ಕರ್ನಾಟಕಕ್ಕೆ ತಾಗಿಕೊಂಡಿರುವ ಪೋರ್ಚುಗೀಸರ ಗೋವೆಯಲ್ಲೀಗ ಸ್ವಾತಂತ್ರ್ಯ ಸತ್ಯಾಗ್ರಹ ನಡೆಯುತ್ತಿದೆ ಕೆಲವರಿಗೆ 15 ವರುಷಗಳ ಸಜೆಯಾಗಿದೆ. ಶ್ರೀ. ಗುಪ್ತ ಎಂಬವರು ಬಂಧನದಲ್ಲಿದ್ದು ಕೋರ್ಟ್ ಮಾರ್ಶಲ್ ನಿಚಾರಣೆಗೊಳಗಾಗಲಿದ್ದಾರೆ. ಪಂಡಿತ ನೆಹರುಗಳು ಪೋರ್ಚುಗೀಸ್ ಸರಕಾರದ ಕೃತ್ಯಗಳನ್ನು ಖಂಡಿಸಿ "ಗೋವಾ ಭಾರತದ ಒಂದು ಭಾಗ; ಭಾರತ ಸ್ವಾತಂತ್ರ್ಯವು ಗೋವಾ ಜನತೆಯ ಸ್ವಾತಂತ್ರ್ಯದ ... ಯೇ ಪೂರ್ಣಗೊಳ್ಳುವದು" ಎಂದಿದ್ದಾರೆ.

ದಳಿತ ವರ್ಗದ ಸತ್ಯಾಗ್ರಹ

ಬ್ರಿಟಿಷ್ ಯೋಜನೆಯಿಂದ ತಮಗೆ ಅನ್ಯಾಯವಾಗಿರುವದರ ನಿಷೇಧಾರ್ಥವಾಗಿ ಡಾ| ಅಂಬೇಡ್ಕರ್ ಪಕ್ಷದ ಹರಿಜನರು ಜಿಲ್ಲಾ ಮೆಜಿಸ್ಟ್ರೇಟರ ಬಜ್ಜೆ ಮುಂದು ಪೂನೆಯ ಕೌನ್ಸಿಲ್ ಭವನದ ಮುಂಭಾಗದಲ್ಲಿ ಕೆಲವು ದಿನಗಳಿಂದ ಸತ್ಯಾಗ್ರಹ ನಡಿಸುತಿದ್ದಾರೆ. ಇಷ್ಟರ ವರೆಗೆ 570 ಕ್ಕೂ ಮಿಕ್ಕಿದ ಹರಿಜನ ಸತ್ಯಾಗ್ರಹಿಗಳ ಬಂಧನವಾಗಿದೆ. ಅವರಲ್ಲಿ ಸುಮಾರು 58 ಮಂದಿ ಸ್ತ್ರೀಯರು. ಡಾ| ಅಂಬೇಡ್ಕರರು ಗಾಂಧಿಜೀಗೆ ಭೇಟಿಯಾಗುವರೆಂಬ ವಾರ್ತೆಯಿದೆ.

ಘಟನಾ ಸಮಿತಿ ಚುನಾವಣೆಗಳು

ಒರಿಸ್ಸಾದ 9 ಸಾಮಾನ್ಯ ಸ್ಥಾನಕ್ಕೆ 8 ಮಂದಿ ಕಾಂಗ್ರೆಸಿಗರೂ ಓರ್ವ ನಾಮಕೃತ ಎಸೆಂಬ್ಲಿ ಸದಸ್ಯನೂ ಆರಿಸಲ್ಪಟ್ಟಿದ್ದಾರೆ. ಮಧ್ಯ ಪ್ರಾಂತ್ಯದ ಒಂದು ಮುಸ್ಲಿಮ್ ಮತ್ತು 16 ಸಾಮಾನ್ಯ ಸ್ಥಾನಗಳೂ ಸ್ಪರ್ಧೆಯಿಲ್ಲದೇನೇ ಕಾಂಗ್ರೆಸ್ ಮಂತ್ರಿಗಳ ಸೂಚನಾನುಸಾರವಾಗಿ ಭರ್ತಿಯಾಗಿವೆ.

ಪಂಜಾಬಿನಲ್ಲಿ-ಮುಸಲ್ಮಾನರಿಗಿದ್ದ 16 ಸ್ಥಾನಗಳಿಗೆ 15 ಮುಸ್ಲಿಂಲೀಗಿನವರೂ ಓರ್ವ ಯೂನಿಯನಿಸ್ಟ್ ಮುಸಲ್ಮಾನನೂ ಆರಿಸಲ್ಪಟ್ಟಿದ್ದಾರೆ ಸಿಖ್ಖರ ನಾಲ್ಕು ಸ್ಥಾನಗಳು ಖಾಲಿಬಿದ್ದರೂ ಅವುಗಳಿಗೆ ಪುನಃ ಚುನಾವಣೆ ನಡೆಯುವ ಸಂದರ್ಭ ದೊರೆಯುವಂತಿದೆ. ಪ್ರಥಮತಃ ನೆಹರುಗಳ ಅಪೇಕ್ಷೆಯಂತೆ ನಾಲ್ಕು ಕಾಂಗ್ರೆಸ್ ಸಿಖ್ಖರೂ, ನಾಲ್ಕು ಅಕಾಲಿ ಸಿಕ್ಖರೂ ನಾಮಪತ್ರ ಹಾಕಿದ್ದರು. ಕಡೆಗೆ ನೆಹರುಗಳು ಗಡಿಬಿಡಿಯಿಂದ ಕೊಟ್ಟ ಸ್ವಾತಂತ್ರ್ಯವನ್ನಾಧರಿಸಿ 8 ಮಂದಿಯೂ ಹಿಂದೆಗೆದುಕೊಂಡರು. ನೆಹರುಗಳೇ ಪ್ರಮಾದಕ್ಕಾಗಿ ಈಗ ಕ್ಷಮೆ ಯಾಚಿಸಿ ಮುಂದಿನ ಚುನಾವಣಾ ಸೂತ್ರಧಾರಿತ್ವವನ್ನು ಸರ್ದಾರ್ ಪಟೇಲ್ ಮತ್ತು ಮೌಲಾನಾ ಆಜಾದರಿಗೊಪ್ಪಿಸಿದ್ದಾರೆ ಪಂಜಾಬಿನಲ್ಲಿದ್ದ 8 ಸಾಮಾನ್ಯ ಸ್ಥಾನಗಳಿಗೆ 5 ಕಾಂಗ್ರೆಸ್ ಹಿಂದು, 1 ಯೂನಿಯನಿಸ್ಟ್ ಹಿಂದು, ಮತ್ತು 1 ಕಾಂಗ್ರೆಸ್ ಹರಿಜನ, 1 ಯೂನಿಯನಿಸ್ಟ್ ಹರಿಜನ ಆರಿಸಲ್ಪಟ್ಟಿದ್ದಾರೆ.

ಬಂಗಾಳದಲ್ಲಿ— ಸಾಮಾನ್ಯಸ್ಥಾನಗಳು 27. ಆ ಪೈಕಿ 25 ಮಂದಿ ಕಾಂಗ್ರೆಸ್ ಉಮೇದ್ವಾರರು ಆರಿಸಲ್ಪಟ್ಟಿದ್ದಾರೆ. ಉಳಿದ ಇಬ್ಬರೆಂದರೆ ಡಾ| ಅಂಬೇಡ್ಕರ್, ಮತ್ತೊಬ್ಬ ಕಮ್ಯೂನಿಸ್ಟ್.

'ಬಿ'. ಪಂಗಡ—ಪಂಜಾಬ್, ಗಡಿನಾಡು, ಸಿಂಧ್, ಬಲೂಚಿಸ್ಥಾನಗಳಿರುವ 'ಬಿ' ಪ್ರಾಂತಿಕ ಪಂಗಡದಲ್ಲಿ ಒಟ್ಟಿಗೆ 36 ಸ್ಥಾನಗಳಿವೆ ಆ ಪೈಕಿ 19 ಮುಸ್ಲಿಂ ಲೀಗಿಗೆ ಸಿಕ್ಕಿ ಅದೇ ಬಹುಮತ ಪಡೆದಿದೆ. ಉಳಿದವರು ಕಾಂಗ್ರೆಸ್ 11. ಮುಸ್ಲಿಂ ಯೂನಿಯನಿಸ್ಟ್ 1, ಸ್ವತಂತ್ರ 1 ಸಿಖ್ಖರ 4 ಸ್ಥಾನಗಳು ಇದು ವರೆಗೆ ಖಾಲಿ. ಆಜಾದ್, ಅಬ್ದುಲ್ ಗಫರ್‌ಖಾನ್ ಮತ್ತು ಜಿನ್ನರು ಈ ಗುಂಪಿನಲ್ಲಿದ್ದಾರೆ. ಮದ್ರಾಸಿನಲ್ಲಿ ತಾ. 22ರಲ್ಲಿ ಚುನಾವಣೆ ನಡೆಯಿತು.

ಹೋಟೆಲು ಮಾಲಿಕರಲ್ಲೊಂದು ವಿನಂತಿ— ಸ್ಥಳೀಯ ಡಿಸ್ಟ್ರಿಕ್ಟ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಠರಾವಿನ ಮಟ್ಟಿಗೆ ಹೊಟೆಲ್ ಮಾಲಿಕರು ಯಾವ ಆಕ್ಷೇಪವನ್ನೂ ತೆಗೆಯುವರೆ ಕಾರಣವಿಲ್ಲ. ಸದ್ರಿ ಠರಾವುಗಳ ಮೇರೆಗೆ ಲೈಸನ್ಸು ಪಡೆದ ಹೊಟೆಲುಗಳು ಒಬ್ಬ ಗಿರಾಕಿಯು ಜಾತಿ ಒಂದೇ ಕಾರಣದಿಂದ ಅವನಿಗೆ ಪ್ರವೇಶವಿಲ್ಲವೆಂಬನಾಗಿ ಹೇಳಕೂಡದು ಎಂತ ಆಗಿರುತ್ತದೆ. ಆದರೆ ನ್ಯಾಯವಾದ ಕಾರಣಗಳಿದ್ದರೆ ಯಾವ ಗಿರಾಕಿಗೂ ಪ್ರವೇಶ ಕೊಡುವರೆ ಇನ್ಕಾರು ಮಾಡಬಹುದು. ಹೊಟೆಲ್ ಮಾಲೀಕರು ಇಷ್ಟರವರೆಗೆ ಸುಧಾರಣೆ ಹೊಂದಿದ ಹರಿಜನರನ್ನು ತಮ್ಮ ಹೊಟೇಲುಗಳಿಗೆ ಪ್ರವೇಶಕೊಟ್ಟು ಬಾಕಿಯವರಂತೆ ನಡಿಸುತ್ತಾರೆ ಎಂಬವನ್ನು ಯಾರೂ ಅಲ್ಲವೆಂಬದಾಗಿ ಹೇಳುವಲ್ಲ ಮತ್ತು ಈ ರೀತಿ ಅವರು ಮಾಡಿದ್ದು ನ್ಯಾಯವಾದ ಹರಿಜನ ಸೇವೆಯೆಂಬುದಕ್ಕೆ ಸಂದೇಹವಿಲ್ಲ.

ಹೀಗಿರುತ್ತ ಹರಿಜನರನ್ನು ಬಾಕಿಯವರ ಹಾಗೆಯೇ ಏನೂ ಭೇದವಿಲ್ಲದೆ ಕಾಣಬೇಕು ಎಂಬುದರಲ್ಲಿ ಯಾವತರದ ಚರ್ಚೆಗೂ ಆಸ್ಪದವಿಲ್ಲ. ಹೆಚ್ಚಿನ ಹರಿಜನರು ನಿರ್ಮಲವಾಗಿರದೆ ಅಸಹ್ಯ ರೀತಿಯಲ್ಲಿರುತ್ತ ಅವರಿಗೆ ಪ್ರವೇಶವನ್ನು ಕೊಟ್ಟರೆ ಬಾಕಿ ಗಿರಾಕಿಗಳ ಪಾಡೇನು? ಎಂಬ ಪ್ರಶ್ನೆಯಿರುತ್ತದೆ. ಇದಕ್ಕೆ ಸುಲಭವಾದ ಉತ್ತರ ಏನೆಂದರೆ ನಿಮ್ಮ ಎಲ್ಲಾ ಗಿರಾಕಿಗಳೂ ಸಭ್ಯರೀತಿಯಲ್ಲಿ ತಕ್ಕ ಮಟ್ಟಿನ ನಿರ್ಮಲ ವಸ್ತ್ರಗಳನ್ನು ಧರಿಸಿ ಬರಬೇಕೆಂದು ನೀವು ನಿರ್ಧರಿಸುವದರಲ್ಲಿ ಯಾವ ಆತಂಕವೂ ಇರಲಿಕ್ಕಿಲ್ಲ. ಆದರೆ ಹರಿಜನರು ನಿರ್ಮಲವಾಗಿ ಬರಬೇಕು. ಬಾಕಿಯವರು ಯಾವರೀತಿಯಲ್ಲಿ ಬಂದರೂ ಅವರಿಗೆ ಪ್ರವೇಶ ಸಿಕ್ಕಿದರೆ ಅದು ನೀತಿಗೂ ನ್ಯಾಯಕ್ಕೂ ಸರಿಯಲ್ಲ.

ನಮ್ಮ ಇಡೀ ಸಮಾಜವು ಈ ಸಮಯದಲ್ಲಿ ಬಹು ವೇಗದ ಮುಂದಕ್ಕೆ ತೆರಳುತ್ತಲಿದೆ. ಮತ್ತು ಮಾರ್ಪಾಟುಗಳು ಕೂಡಾ ಆಗುತ್ತಿರುವಲ್ಲಿ ಒಬ್ಬ ಮಾನವನು ಇನ್ನೊಬ್ಬನನ್ನು ಅಸ್ಪರ್ಶನೆನ್ನುವಲ್ಲಿ ಯಾವನ್ಯಾಯವಿರುತ್ತದೆ? ಮಹಾತ್ಮಾ ಗಾಂಧಿಯವರು ಮತ್ತು ಇನ್ನಿತರ ಸಮಾಜ ಸುಧಾರಕರು ಕಾಲು ಶತಮಾನದಿಂದೀಚೆಗೆ ಹೋರಾಡುತ್ತಿದ್ದ ಕಾರ್ಯವು ಇನ್ನೂ ಕೂಡಾ ಪ್ರಥಮ ಭಾಗದಲ್ಲಿಯೇ ಇರುತ್ತದೆಂದರೆ ಬಹು ಶೋಚನೀಯ ಸಂಗ್ತಿ. ಲಂಡನ್ ನಗರದಲ್ಲಿ ಒಬ್ಬ ಭಾರತೀಯನಿಗೆ ಒಂದು ಹೊಟೆಲಿನಲ್ಲಿ ಇತ್ತೀಚೆಗೆ ಪ್ರವೇಶಕೊಡದ ವಿಷಯದಲ್ಲಿ ನಾವು ಎಷ್ಟು ಚರ್ಚಿಸಿದೆವು. ದಕ್ಷಿಣ ಆಫ್ರಿಕದಲ್ಲಿ ನಮಗೆ ಪ್ರತ್ಯೇಕ ಸ್ಥಳವನ್ನು ಬಿಳಿ ಮುಖದವರಿಗೆ ಮೀಸಲಿಡಿಸಿದ ಸ್ಥಳದಲ್ಲಿ ನಾವು ಹೋಗ ಕೂಡದು ಎಂಬ ಕಾನೂನನ್ನು ಕೇಳುವಾಗ ನಮ್ಮ ರಕ್ತವು ಹೇಗೆ ಕುದಿಯುತ್ತದೆ! ರಂಗೂನು ನಗರದಲ್ಲಿ ಈ ಘೋರ ಯುದ್ಧವೊದಗಲು ಕೆಲವು ಹೊಟೆಲುಗಳಲ್ಲಿ ಚೀನೀಯರಿಗೆ ಮತ್ತು ನಾಯಿಗಳಿಗೆ ಪ್ರವೇಶವಿಲ್ಲವೆಂಬ ಬೋರ್ಡು ಕೂಡಾ ಇರುತಿತ್ತು ಅದನ್ನು ಅನುಸರಿಸಿ ನಮ್ಮ ಕರಾಚಿಯ ಕೆಲವು ಹೊಟೆಲ್ ಮಾಲಿಕರು ದಕ್ಷಿಣ ಆಫ್ರಿಕದ ಬಿಳಿ ಜನರಿಗೆ ಮತ್ತು ನಾಯಿಗಳಿಗೆ ಪ್ರವೇಶವಿಲ್ಲ ಎಂಬ ಬೋರ್ಡು ಕೂಡ ಹಾಕಿದ್ದರು. ಹೀಗಿರುತ್ತ ನಮ್ಮಲ್ಲಿಯೇ ಈ ಭೇದವನ್ನು ಇಟ್ಟು ಕೊಳ್ಳುವದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಹೊಟೆಲ್ ಮಾಲೀಕರು ಸರಿಯಾಗಿ ಆಲೋಚಿಸಿದರೆ ಮೇಲಿನ ಠರಾವು ಅವರಿಗೆ ಎಷ್ಟು ಮಾತ್ರಕ್ಕೂ ಸರಿಯಲ್ಲವೆಂಬದಾಗಿ ಕಾಣಲಿಕ್ಕಿಲ್ಲ.

ಆಡಿ ತೋರಿಸುವದಕ್ಕಿಂತ ನಿಜವಾಗಿಯೂ ಮಾಡಿ ತೋರಿಸುವದು ಲೇಸು. ನನ್ನ ಮಟ್ಟಿಗೆ ಹೇಳುವದಾದರೆ ಸಭ್ಯರೀತಿಯಲ್ಲಿ ಬಂದ ಯಾವನಿಗಾದರೂ ನನ್ನ ಮನೆಯಲ್ಲಿ ಪ್ರವೇಶ ಕೊಡುವರೆ ನಾನು ಆತಂಕಿಸಲಿಕ್ಕಿಲ್ಲ. ಯೋಗ್ಯ ರೀತಿಯಲ್ಲಿಬಂದ ಯಾವನನ್ನಾದರೂ ಅವನು ಯಾವ ಜಾತಿಯವನೆಂದು ಕೇಳುವ ಆವಶ್ಯಕತೆ ಕೂಡಾ ನನಗಿರುವದಿಲ್ಲ. ಸಹಪಂಕ್ತಿ ಭೋಜನಗಳು ಹೆಚ್ಚಾಗಿ ಯಾವ ಪ್ರಯೋಜನವನ್ನೂ ಮಾಡಿದ್ದಿಲ್ಲ ಆದರೆ ಹೊಟೆಲು ಮಾಲೀಕರು ಈಗಿನ ಸೀಸನ್ ನಿಯಮಿತಗಳಿಗೆ ವಿರೋಧ ಸಹಪಂಕ್ತಿ ಭೋಜನವನ್ನು ತಯಾರಿಸಿದರೆ ಅದರಲ್ಲಿ ಭಾಗವಹಿಸುವರೆ ನಾನು ಯಾವಾಗಲೂ ಸಿದ್ಧನಿರುವೆನು. ಹೊಟೆಲು ಮಾಲೀಕರು ಇನ್ನಷ್ಟು ಧೈರ್ಯವನ್ನು ಕೈಕೊಂಡು ನಿಮ್ಮ ಬಾಕಿ ಗಿರಾಕಿಗಳ ರೀತಿಯಲ್ಲಿ ಬರುವ ಹರಿಜನರಿಗೆ ಏನೂ ಭೇದವಿಲ್ಲದೆ ಪ್ರವೇಶಕೊಟ್ಟು ಇನ್ನಷ್ಟು ಸಮಾಜ ಸೇವೆಯನ್ನು ಮಾಡಬೇಕಾಗಿ ನನ್ನ ಪ್ರಾರ್ಥನೆ.

ಎ. ಶಂಕರ ಆಳ್ವ
ವಕೀಲ್, ಮಂಗಳೂರು.

ಮಣಿಪಾಲ- ಪ. ಕ. ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿ ಸಂಘಟಿಸಲ್ಪಟ್ಟ ಕೆನರಾ ಸಿಟಿಜನ್ ರಿಲೀಫ್ ಫಾಂಡಿನ ಬಗ್ಗೆ ತಾ. 15-5-46ರಿಂದ 31 5-46ರ ತನಕ ರೂಪಾಯಿ 1168 3-0 ಜಮೆಯಾಗಿದ್ದು ರೂ. 1167 6-5 ಖರ್ಚು ಮಾಡಲಾಗಿದೆಯೆಂದೂ 0 12 7 ಸಿಲ್ಕು ಎಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ತಾರೀಕು 25-7-46ರಿಂದ
ನೆಶನಲ್ಸ್‌ನವರ
ಅಪ್ನಾ ಪರಾಯಾ
ಹಂಸಾ, ಸಾಹುಮೋಡಕ್,
ನಂತರ:—
ರಣಜಿತ್‌ನವರ—
ನರ್ಸ್
ಅರುಣ್, ಕುರ್ಶಿದ್

NOTICE

In the Court of the District Munsiff of Mangalore.

O S 158/1946 R. I. A. 576/46.

Between

1. Laxmi, daughter of Somakki.
2. Sumathi, 3. Janaki, 4. Radha — Minors by next friend their mother 1st Plaintiff, Laxmi.

All the Plaintiffs residing with Ramanna Shetty in Moodukere at Thenje, Kandavar Village, Mangalore Taluk

Plaintiffs-Petitioners.

and

1. Appu—niece of Kittu Shetty.
2. Kanthappa Shetty,
3. Monu Shetty,
—nephews of Kittu Shetty.
4. Somakke—niece of Kittu Shetty.

All the Defendents resides at Kemmade, Kandavara village, Mangalore Taluk.

Defendents-Respondents.

To 3rd Defendent Monu Shetty; nephew of Kittu Shetty, residing at Kemmade, Kandavara village, Mangalore Taluk.

Please take notice that the above suit and also the above R. I A. 576/46 is posted to 7 8 1946 at 11 a. m. for hearing and you are hereby required to appear either in person or througha Vakil on that date at 11 a. m. before the said Court failing which the suit and also the above R. I A. 576/46 will be heard exparte.

H. D. Alva,
Vakil for Plaintiffs-Petitioners.
Mangalore, 22 7-'46.

ಮಂಗಳೂರು.

ದ. ಕ. ಸೆಂಟ್ರಲ್ ಕೋಅಪರೇಟಿವ್ ಹೋಲ್-ಸೇಲ್ ಸ್ಟೋರಿನ ಕಡೆಯಿಂದ ಇದೇ 1946ನೇ ಮೇ ತಿಂಗಳಲ್ಲಿ ಜರಗಿಸಲ್ಪಟ್ಟ ಸಹಕಾರಿ ಶಿಕ್ಷಣದ ಬಾಬ್ತು ಪರೀಕ್ಷೆಯಲ್ಲಿ 16ಜನ ಉಮೇದ್ವಾರರು ಉತ್ತೀರ್ಣರಾಗಿರುತ್ತಾರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಗೋಧಿಹಿಟ್ಟು ಸೋಜಿಗಳ ಬೆಲೆಯಲ್ಲಿ ಇಳಿತ—ಕಳೆದ ವಾರದಿಂದ ಗೋಧಿ ಹಿಟ್ಟಿನ ಮತ್ತು ಸೋಜಿಯ ಕ್ರಯ ಅರ್ಧಕ್ಕರ್ಧ ಇಳಿಸಲ್ಪಟ್ಟಿವೆ. ಇದಕ್ಕನುಗುಣವಾಗಿ ಬ್ರೆಡ್ಡಿನ ಕ್ರಯವೂ ಅಷ್ಟೇ ಪ್ರಮಾಣದಲ್ಲಿ ಇಳಿಸಲ್ಪಟ್ಟಿವೆ. ಆದರೆ ಹೊಟೇಲುಗಳಲ್ಲಿ ಗೋಧಿ ಹಿಟ್ಟಿನಿಂದ ಮತ್ತು ಸೋಜಿನಿಂದ ತಯಾರಾಗುವ ತಿಂಡಿಗಳ ಬೆಲೆ ಮಾತ್ರ ಮೊದಲಿನಷ್ಟೇ ಇವೆ. ಈ ರೀತಿಯಾಗುವುದು ನ್ಯಾಯವಲ್ಲ. ಅಗ್ಗದರದಲ್ಲಿ ಗೋಧಿಹಿಟ್ಟು ಮತ್ತು ಸೋಜಿ ಒದಗುವಾಗ ಅದಕ್ಕನ್ವಯ ತಿಂಡಿಗಳ ಬೆಲೆಯೂ ಕಡಿಮೆಯಾಗುವುದವಶ್ಯವಿದೆ. ಹೊಟೇಲು ಮಾಲಿಕ ಸಂಘದವರು ಈ ಕಡೆ ನಿಗಾ ಕೊಟ್ಟು ತಿಂಡಿತಿನಸುಗಳ ಧಾರಣೆಯನ್ನು ಇಳಿಸುವುದಶ್ಯವಶ್ಯ.

ಧಾನ್ಯ ಮತ್ತು ಬೇಳೆಗಳ ಸಂಗ್ರಹದ ಕುರಿತು—ಒಂದು ಮುಡಿಗಿಂತ ಕಡಿಮೆ ಧಾನ್ಯಗಳ ಇಲ್ಲವೆ ಬೇಳೆಗಳ ಸಂಗ್ರಹವಿದ್ದವರು ತಮಗೆ ಯುಕ್ತ ಕಂಡ ರೀತಿಯಲ್ಲಿ ಅವುಗಳನ್ನು ಉಪಯೋಗಿಸಬಹುದಾಗಿದೆ. ಧಾನ್ಯಗಳ ಮತ್ತು ಬೇಳೆಗಳ ವ್ಯಾಪಾರ ನಡಿಸುವ ವ್ಯಾಪಾರಿಗಳು, ತಾವು ಮಾರುವ ಜಿಲ್ಲೆಗೆ ಧಾರಣೆಗಳನ್ನು ತಹಶಿಲ್ದಾರರಿಂದ ಇಲ್ಲವೆ ಡಿಪ್ಯೂಟಿ ತಹಶಿಲ್ದಾರರಿಂದ ಮಂಜೂರುಮಾಡಿಸುವುದವಶ್ಯವಿದೆ; ಅವರು ಯಾವುದೇ ತಿಂಗಳಲ್ಲಿ ಯಾವುದೇ ಒಂದು ಮನೆಗೆ ೭ಸೇರುಗಳಿಗೆ ಇಲ್ಲವೆ ೧೪ ರಾತ್ಲುಗಳಿಗೆ ಮಿಕ್ಕಿದ ಧಾನ್ಯ ಇಲ್ಲವೆ ಬೇಳೆ ಮಾರಬಾರದು. ಬೋರ್ಡಿಂಗ್‌ಗಳಲ್ಲಿ ಇಲ್ಲವೆ ಹೋಟೇಲುಗಳಲ್ಲಿ ಧಾನ್ಯಗಳ ಇಲ್ಲವೆ ಬೇಳೆಯ ಸಂಗ್ರಹವಿದ್ದರೆ ಅವರು ಅದನ್ನು ತಮ್ಮ ಸ್ವಂತ ಖರ್ಚಿಗೆ ಬೇಕಾದಂತೆ ಉಪಯೋಗಿಸಬಹುದು. ಆದರೆ ಅವರು ತಾವು ಖರ್ಚುಮಾಡುತ್ತಿರುವ ಪ್ರತೀ ಧಾನ್ಯದ ಇಲ್ಲವೇ ಬೇಳೆಯ ಕುರಿತು ಕ್ರಮಬದ್ಧವಾದ ಲೆಕ್ಕಗಳನ್ನು ಇಡುವುದು ಅವಶ್ಯವಿದೆ ಎಂದು ಮಾನ್ಯ ಕಲೆಕ್ಟರರ ಆಫೀಸಿನಿಂದ ಹೊರಟ ಒಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದುರ್ಮರಣ-ಸ್ಥಳೀಯ ದೇರೆಬೈಲು ಗೇರುಬೀಜದ ಕಾರ್ಖಾನೆಯ ಬಳಿಯಿರುವ ಒಂದು ಮನೆಯಲ್ಲಿ ಕಳೆದ ತಾ. ೧೬ರಂದು ಬೆಳಿಗ್ಗೆ ಗಂಟೆ ೭ಕ್ಕೆ ಮನೆಯ ಯಜಮಾನಿಯು ಊಟಕ್ಕೆ ಕುಳಿತ ತನ್ನ ಮಗಳಿಗೆ ಅನ್ನ ಬಡಿಸಲು, ಗೋಡೆಗೆ ನೆಟ್ಟಿದ್ದ ಕರಿ ಹಲಗೆಯಿಂದ ಉಪ್ಪಿನಕಾಯಿ ಭರಣಿಯನ್ನು ತೆಗೆದು ಕೆಳಗಿಟ್ಟಾಗ, ಅಕಸ್ಮಾತ್ ಗೋಡೆಯು ಜರಿದು ಆವಳ ಮೇಲೆ ಬಿದ್ದು ಆಕೆ ತಕ್ಷಣವೇ ಮೃತಪಟ್ಟಳು. ಸಮೀಪವೇ ಊಟಕ್ಕೆ ಕುಳಿತ ಅವಳ ಮಗಳಿಗೆ ಇಟ್ಟಿಗೆ ತುಂಡುಗಳು ತಗಲಿ ಗಾಯಗಳಾಗಿವೆ.

ಢಿಕ್ಕಿ ಬಡೆಯಿತು—ಸ್ಥಳೀಯ ಕೋರ್ಟು ರೋಡಿನಲ್ಲಿ ಕಳೆದ ತಾ. ೬ರಂದು ಸಂಜೆ ಸುಮಾರು ೫-೩೦ ಗಂಟೆಗೆ ಹಂಪನಕಟ್ಟೆಯಿಂದ ಕೆಳಗೆ ಬರುವ ಜಟ್ಕಾ ಗಾಡಿಯೊಂದು ಕೆಳಗಿನಿಂದ ಹಂಪನಕಟ್ಟೆಗೆ ಹೋಗುತ್ತಿದ್ದ ಮೋಟರ್ ಕಾರಿಗೆ ಢಿಕ್ಕಿ ಬಡೆದು ಕುದುರೆಯ ಕಾಲು ಮುರಿದು ಪ್ರಾಣೋತ್ಪಮಣ ಸ್ಥಿತಿಯಲ್ಲಿದೆಯಾಗಿಯೂ ಗಾಡಿಗೆ ಮತ್ತು ಕಾರಿನ ಎದುರು ಪಾರ್ಶ್ವಕ್ಕೆ ಜಖಂ ಆಗಿದೆಯೆಂದೂ ಕೇಳಿ ಬರುತ್ತದೆ.

ಜೋಳ ಮತ್ತು ಅದರ ಹುಡಿಯು—ತಾ. ೭-೭-೪೬ರಿಂದ ಮದ್ರಾಸು ಪ್ರಾಂತ್ಯದ ಎಲ್ಲಾ ರೇಶನ್ ಸರಹದ್ದುಗಳಲ್ಲಿಯೂ ಹಸುಗೆಯ ಪದಾರ್ಥಗಳಾಗಿ ಎಣಿಸಲ್ಪಡುವುವು—ಎಂದು ರೇಶನ್ ಅಧಿಕಾರಿಗಳು ತಿಳಿಸುತ್ತಾರೆ.

ಮಳೆ—ಮಂಗಳೂರಲ್ಲಿ ತಾ. ೧೮ರ ತನಕ ೮೦-೩ಇಂಚು ಮಳೆ ಸುರಿದಿದೆ. ಎಂದರೆ ಸರಾಸರಿಗಿಂತ ೧೮-೪ ಇಂಚು ಮಳೆ ಜಾಸ್ತಿ ಸುರಿದಂತಾಯಿತು.

ದ. ಕ. ಜಿಲ್ಲಾ ಕುಲಾಲ-- ಸಮಾಜೋದ್ಧಾರಕ ಸಮಿತಿ ಮಂಗಳೂರು, ಇದರ ಆಡಳಿತೆ ಕಮಿಟಿಯ ಸಭೆಯು, ತಾ. ೧೨ರಂದು ಸಮಿತಿಯ ಆಫೀಸಿನಲ್ಲಿ ಜರಗಿ, ಹೊಸದಾಗಿ ತಯಾರಿಸಿದ ಸಮಿತಿಯ ಕ್ರಮನಿಬಂಧನೆಗಳನ್ನು ಓದಿ ಮಂಜೂರು ಮಾಡಲಾಯಿತು. ಸಮಿತಿಯನ್ನು ಆದಿಸವೇ ಸೊಸೈಟೀಸ್ ರಿಜಿಸ್ಟ್ರೇಶನ್ ಆಕ್ಟಿಗನುಗುಣವಾಗಿ ರಿಜಿಸ್ಟ್ರ ಮಾಡಲಾಯಿತು.

ದಕ್ಷಿಣ ಆಫ್ರಿಕದ - ದಿನಾಚರಣೆಯು ಸ್ಥಳೀಯ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ ೬ರಂದು ಆಚರಿಸಲ್ಪಟ್ಟಿತು. ಶ್ರೀ ಹೊಳ್ಳರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ। ಶಾಂತಾರಾಮ ಪೈ ಅವರು, ದ ಆಫ್ರಿಕದ ಬಿಳಿಯರು ಅಲ್ಲಿಯ ಹಿಂದೀಯರ ಮೇಲೆ ಮಾಡುತ್ತಿರುವ ದಬ್ಬಾಳಿಕೆಯನ್ನು ನಿಷೇಧಿಸಿ ಮಾತನಾಡಿದರು.

ಜಿಲ್ಲಾ ಬೋರ್ಡು--ಮತ್ತು ಮುನಿಸಿಪಾಲಿಟಿಗಳಿಗೆ ಬರುವ ಅಕ್ಟೋಬರ ತಿಂಗಳ ಅಂತ್ಯದೊಳಗೆ ಹೊಸ ಚುನಾವಣೆ ನಡೆವುದೆಂದು ಗೊತ್ತಾಗಿದೆ.

ವಿಷದ ಜೀವನ ನಾಟಕ— ತಾ. 4-8-46ನೇ ಆದಿತ್ಯವಾರ ಗಾಣಿಗರ ಸುಧಾರಕ ಸಂಘದ ಸಹಾಯಾರ್ಥವಾಗಿ ಅಭಿನಯಿಸಲ್ಪಡುವುದು. ಆದ್ದರಿಂದ ತಾ 21ಕ್ಕೆ ಅಭಿನಯಿಸಲ್ಪಡಲಿಲ್ಲ

ಕಾಂಗ್ರೆಸ್ ಸೇವಾದಳ ಸಂಘ-ಸ್ಥಾಪನೆ ಕುರಿತು ಆಲೋಚಿಸುವರೆ ತಾ. 18ರಲ್ಲು ಜಪ್ಪುಮೂರ್ನವಿ ಕಟ್ಟೆಯಲ್ಲಿ ಸಭೆಯೊಂದು ಯುವಜನ ಕಾಂಗ್ರೆಸಿನ ಕಡೆಯಿಂದ ಶ್ರೀ. ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಸಂಜೀವನಾಥ ಮೊದಲಾದವರ ಭಾಷಣಗಳಾದುವು.

ಉಳಿತಾಯ ಭತ್ತ, ಅಕ್ಕಿ ಸಂಗ್ರಹ—ದ. ಕ. ಜಿಲ್ಲೆಯ ಹೊಸಬೆಳೆಯ ಉಳಿತಾಯ ಭತ್ತ ಹಾಗೂ ಅಕ್ಕಿಯನ್ನು ಸಂಗ್ರಹಿಸುವ ಸರ್ವಾಧಿಕಾರವನ್ನು ದ. ಕ. ಜಿಲ್ಲಾ ಕೊಅಪರೇಟಿವ್ ಹೋಲ್ ಸೇಲ್ ಸ್ಟೋರ್ಸಿಗೆ ಕೊಡಲಾಗಿಯದೆ. ಅಕ್ಕಿ ಭತ್ತದ ದರವೂ ।ನಿರ್ಣಯವಾಗಿಯದೆ. ಈ ಕುರಿತು ಜಿಲ್ಲಾ ಕಲೆಕ್ಟರರಿಂದ ಬಂದ ಪ್ರಕಟಣೆಗಳ ಸಾರಾಂಶ ಹಿಂದಿನಿಂದ ಕೊಡಲಾಗುವುದು.

ಮದ್ರಾಸ್ ಪ್ರಾಂತೀಯ ಹೋಟೇಲು ಕೆಲಸಗಾರರ ದ್ವಿತೀಯ ಪರಿಷತ್ತು—ಈ ಪರಿಷತ್ತು ಇದೇ ತಿಂಗಳ ತಾ. ೧೪ಕ್ಕೆ ಸೇಲಂನಲ್ಲಿ ಶ್ರೀ. ಎಫ್. ಜಿ, ನಟೇಶಅಯ್ಯರ್ ತಿರುಚಿನಾಪಳ್ಳಿ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು, ಸುಮಾರು ೧೫೦ ಮಂದಿ ಪ್ರತಿನಿಧಿಗಳು ಮತ್ತು ೫೦೦ಕ್ಕೆ ಮೇಲ್ಪಟ್ಟು ಹೊಟೇಲು ಕೆಲಸಗಾರರೂ ೨೦೦೦ಕ್ಕೆ ಮೇಲ್ಪಟ್ಟು ಪ್ರೇಕ್ಷಕರೂ ಹಾಜರಿದ್ದರು. ದ. ಕನ್ನಡ ಪ್ರತಿನಿಧಿಗಳಾಗಿ ಇಲ್ಲಿಯ ಹೊಟೇಲು ಕೆಲಸಗಾರರ ಸಂಘದಿಂದ ಶ್ರೀಗಳಾದ ಬಾಲಕೃಷ್ಣ ಶೆಣವ, ರೋಹಿದಾಸ ಶೆಟ್ಟಿ, ಕೆ. ರಾವನಾಯ್ಕ ಮತ್ತು ಡಾ। ಸಂಜೀವನಾಥರು ಹೋಗಿದ್ದರು. ಅಧಿವೇಶನದ ಉದ್ಘಾಟನೆಯನ್ನು ಮಾನ್ಯ ಮಜೂರ ಮಂತ್ರಿಗಳಾದ ಶ್ರೀ. ವಿ. ವಿ. ಗಿರಿಯವರು ಮಾಡಿದರು.

ಇನ್ನಂಜೆ—ತಾ. 14-7-46ರಲ್ಲಿ "ದಾಸ ಮಂದಿರ"ದ ಶಂಕುಸ್ಥಾಪನಾ ಸಮಾರಂಭವು ಉಡುಪಿ ಪುತ್ತಿಗೆ ಮಠಾಧೀಶರಿಂದ ಜರಗಿಲ್ಪಟ್ಟಿತು.

ಕುಂಟಾಪುರ—ಇಲ್ಲಿಯ ಬೋ। ಹೈಸ್ಕೂಲಿನಿಂದ S. S. L. C ಪರೀಕ್ಷೆಗೆ ಕುಳಿತ ಶ್ರೀ. ಕೆ. ಕರುಣಾಕರ ಶೆಟ್ಟರ ನಂಬ್ರವು ಡಿನ ಪತ್ರಿಕೆಗಳಲ್ಲಿ ಬಾರದ್ದರಿಂದ ಅವರು ಪಾಸಾಗಲಿಲ್ಲವೆಂದು ತಿಳಿಯಲಾಗಿತ್ತು. ಆದರೆ ಈಗ ಫೋ। ಸ್ಟಂ। ಗಜೆಟಿನಲ್ಲಿ ಅವರ ಹೆಸರು ಪ್ರಕಟವಾಗಿ ಅವರು ಪಾಸಾಗಿರುತ್ತಾರೆಂದು ಗೊತ್ತಾಗಿದೆ. ಗಈ ಈ ಹೈಸ್ಕೂಲಿನಿಂದ ಪಾಸಾದವರ ಸಂಖ್ಯೆ 44- ಅರ್ಥಾತ್ ಸೇಕಡಾ 72ಆಗುವುದು.

ಕಾರ್ಕಳ—ತಾ. ೨೦ರಲ್ಲಿ ಇಲ್ಲಿ ಮುಕ್ಕಾಮು ಮಾಡಿದ ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟರವರು ತಾಲೂಕಿನ ಎಲ್ಲಾ ವೃತ್ತಿ, ಉದ್ಯೋಗ ಮತ್ತು ಜಾತಿ ಮತಗಳಿಗೆ ಸೇರಿದ ಕೆಲವು ಜನ ಪ್ರಮುಖರನ್ನು ಆಮಂತ್ರಿಸಿ ಸಾರ್ವಜನಿಕ ಸಂರಕ್ಷೆಯನ್ನು ಕಾಪಾಡಲಿಕ್ಕೂ ಸಮಾಜದ ಉನ್ನತಿಗೆ ಹಾನಿಕರವಾದ ದುಷ್ಟ ಶಕ್ತಿಗಳನ್ನು ನಿಯಂತ್ರಿಸಲಿಕ್ಕೂ ಪೋಲೀಸ ಖಾತೆಗೆ ಸಲಹೆ ಸೂಚನೆಗಳನ್ನೀಯುವದಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಿದರು. ಗೆದ್ದಲೆಯಂತೆ ಸಮಾಜದ ಮೂಲವನ್ನೇ ತಿಂದುಹಾಕಿ ವಿಶೇಷವಾದ ಹಾವಳಿಯನ್ನುಂಟುಮಾಡುತ್ತಿರುವ ಸಟ್ಟಾ, ಜುಗಾರಿ ಮೊದಲಾದವನ್ನು ನಿಲ್ಲಿಸಲಿಕ್ಕೆ ಸ್ಥಳೀಯ ಪೋಲೀಸರು ಕೈಕೊಳ್ಳುವ ಕಾರ್ಯಕ್ರಮಗಳು ಪೂರ್ಣ ಅತೃಪ್ತಿಕರವಾಗಿವೆ ಎಂದು ಸಾರ್ವಜನಿಕ ಅಭಿಪ್ರಾಯ ಬಂದಿತ್ತು. ಈಗ ಹೊಸದಾಗಿ ರಚಿಸಲ್ಪಟ್ಟಿರುವ ಈ ಸಮಿತಿಯ ಕಾರ್ಯಕ್ರಮಗಳಿಂದಾದರೂ ನಿಜವಾಗಿಯೂ ಸಮಾಜವನ್ನು ಅಧೋಗತಿಗೆ ದೂಡುತ್ತಿರುವ ಈ ಜುಗಾರು. ಸಟ್ಟಾಗಳು ಇಲ್ಲಿ ಪೂರ್ಣನಿಂತು ಹೋಗುವವೆಂದು ಆಶಿಸಲಾಗಿದೆ.

ಕುಂಬಳೆ ಗ್ರಾಮಾಭಿವೃದ್ಧಿ ಯೋಜನೆ—ಇಲ್ಲಿ ಮೊಕ್ಕಾಮು ಮಾಡಿದ್ದ ಜಿಲ್ಲಾಧಿಕಾರಿಗಳಾದ ಶ್ರೀ। ಎಸ್ ಭೂತಲಿಂಗಮ್, ಓ. ಬಿ, ಇ., ಐ ಸಿ. ಎಸ್, ಅವರು ಸ್ಥಳೀಯ ಬೋ। ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಸೇರಿದ ಊರ ಪ್ರಮುಖರ ಸಭೆಯಲ್ಲಿ ಅಧ್ಯಕ್ಷಸ್ಥಾನ ವಹಿಸಿ ಕುಂಬಳೆ ಫರ್ಕಕ್ಕೆ ಸೇರಿದ ೨೫ ಗ್ರಾಮಗಳ ಅಭಿವೃದ್ಧಿ ಯೋಜನೆಯ ಸಾಧ್ಯಾಸಾಧ್ಯತೆಗಳ ಕುರಿತು ಸಭಿಕರ ಅಭಿಪ್ರಾಯ ಸಲಹೆಗಳನ್ನು ಅಪೇಕ್ಷಿಸಿದರು. ಶ್ರೀ। ಎಮ್. ಶಿವರಾವ್, ಖಾನ್ ಬಹದೂರ್ ಮಹಮ್ಮದ್ ಷಮ್ನಾಡ್ ಸಾಹೇಬ್, ಶ್ರೀ। ಐ ಸಿ ಭಂಡಾರಿ, ಶ್ರೀ. ಖಂಡಿಗೆ ಮಹಾಲಿಂಗ ಭಟ್ಟ, ಶ್ರೀ. ಬಿ. ದೇವಪ್ಪ ಆಳ್ವ, ಡಾ। ಪಿ. ಎಸ್. ಭಟ್ ಮೊದಲಾದವರು ಸಂದರ್ಭೋಚಿತ ಸಲಹೆಗಳನ್ನಿತ್ತರು. ಆಹಾರದ ಉತ್ಪನ್ನ ಮತ್ತು ಬಟ್ಟೆಗಳ ತಯಾರಿಕೆ ಇತ್ಯಾದಿಗಳಿಗೆ ಅತ್ಯಗತ್ಯವಾಗಿ ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು. ತಾ 18ರಂದು ಜಿಲ್ಲಾ ಕಲೆಕ್ಟರರು ಶೀತಾಂಗೋಳಿಯ ಹರಿಜನ ವಸತಿಯನ್ನು ಸಂದರ್ಶಿಸಿ, ಅದರ ಅಭಿವೃದ್ಧಿಗಾಗಿ ತಾಲೂಕು ಹರಿಜನ ಸೇವಕ ಸಂಘದ ಸದಸ್ಯರಾದ ಶ್ರೀ। ಬಾಬು ಶೆಟ್ಟಿ, ಡಾ. ಪಿ. ಎಸ್. ಭಟ್ ಮತ್ತು ಶ್ರೀ।. ಕೆ. ಕೃಷ್ಣ ಭಟ್ ಇವರೊಡನೆ ವಿಚಾರವಿನಿಮಯಮಾಡಿದರು. ತಾ, ೧೭ರಂದು ಜಿಲ್ಲಾ ಕಲೆಕ್ಟರರು ಎಡನಾಡು ಗ್ರಾಮದ ಕೆಲವು ಅಡಿಕೆ ತೋಟಗಳನ್ನು ಸಂದರ್ಶಿಸಿದರು.

FOR LIFE ASSURANCE
CONSULT
The New Gaurdian of India Life Iusrce Co. Ltd.,
(Chairman:- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA.
MANGALORE
&
KARKALA.

HEAD OFFICE
"United India Life Bldg"
Esplanade, Post Box No. 142,
MADRAS.

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನನ್ನ ಯಜ್ಞ 0-2-0; (2) ಕಿಂಡರ್ ಗಾರ್ಟನ್ ಬೋಧನೆ 0-2-0; (3) ಚಲಚ್ಚಿತ್ರ ಪದ್ಯಾವಳಿ 0-2-0; (4) ಮಿತಭೂಮಿ 0-2-0; (5) ರಂಭಾಕ ಪಥಿ 0-2-0 (6) ಅಜ್ಜ ಬೆಳಿದ ಗಿಡ್ಡಿಯ ಮದುವೆ 0-2-0 (7) ಮುದುಕನ ಹೆಂಡ್ತಿ ಥಕ ಫೈ ರಾಫೆ 0-3-0 (8) ಬಂಗಾರ್ದಂಗಿದ ಕತೆ 0-1-0, (9) ಏಕಾಂತ ರಾಮಾಯಣ 0-1-0; (10) ಭಾರತ ಗೀತಾಂಜಲಿ 0-2-0; ಒಂದು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್‌ಮಾಡಿ ಕಳಿಸಲಾಗುವುದು. ವಿ.ಪಿ.ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0.

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

ಒಕ್ಕಲು ಹಿತ ಮಸೂದೆ

ಕಾಸರಗೋಡಿನ ವಕೀಲರಾದ ಶ್ರೀ ಎಮ್. ಉಮೇಶರಾಯರು ಈ ಕೆಳಗಿನ ಒಕ್ಕಲು ಹಿತ ಮಸೂದೆಯನ್ನು ತಯಾರಿಸಿರುತ್ತಾರೆ. ದ. ಕ. ಯುವಜನ ಕಾಂಗ್ರೆಸಿನವರು ಜಿಲ್ಲೆಯಲ್ಲೆಲ್ಲಾ ಅದನ್ನು ಪ್ರಚಾರಪಡಿಸಿ ಅಭಿಪ್ರಾಯ ಸಂಗ್ರಹಿಸುವ ನಿರ್ಧಾರ ಮಾಡಿರುತ್ತಾರೆ. ಜನರು, ಮುಖ್ಯವಾಗಿ ಕೃಷಿಕರು, ಈ ಮಸೂದೆಯ ಕುರಿತು ಚೆನ್ನಾಗಿ ವಿಚಾರ ಮಾಡಿ ತಮ್ಮ ಅಭಿಪ್ರಾಯವನ್ನು ಸಾಂಘಿಕವಾಗಿ ಯಾಗಲಿ, ವೈಯಕ್ತಿಕವಾಗಿಯಾಗಲಿ, ಶ್ರೀ ಕೆ. ಕೆ ಶೆಟ್ಟಿ, ಅಧ್ಯಕ್ಷ, ಯುವಜನ ಕಾಂಗ್ರೆಸ್, ದ. ಕ. ಕೊಡಿಯಾಲ್ ಬೈಲ್, ಮಂಗಳೂರು, ವಿಳಾಸಕ್ಕೆ ಆದಷ್ಟು ಬೇಗನೆ ಕಳುಹಿಸಬೇಕಾಗಿ ಅಪೇಕ್ಷಿಸಲಾಗಿದೆ.

ಯುವಜನ ಕಾಂಗ್ರೆಸಿನವರು ಬೇಗನೆ ದ. ಕ. ಜಿಲ್ಲಾ ಕೃಷಿಕರ ಸಂಘವೊಂದನ್ನು ಸಂಘವೊಂದನ್ನು ಸ್ಥಾಪಿಸುವ ಏರ್ಪಾಡು ಮಾಡಲಿರುವುದರಿಂದ, ಅದಕ್ಕೆ ಕೂಡಾ ಕೃಷಿಕರೆಲ್ಲಾ ಉತ್ಸಾಹದಿಂದ ನೆರವಾಗಬೇಕಾಗಿ ಕೇಳಿ ಕೊಳ್ಳುತ್ತೇವೆ.

ದಕ್ಷಿಣ ಕನ್ನಡದಲ್ಲಿ ಒಕ್ಕಲುತನ ಮಾಡುವ ಕೃಷಿಕರಿಗೆ ಶಾಶ್ವತವಾದ ಒಕ್ಕಲುತನದ ಹಕ್ಕನ್ನು ಕೊಡುವುದು ಮತ್ತು ನ್ಯಾಯವಾದ ಗೇಣಿಯನ್ನು ನಿಶ್ಚಯಿಸುವುದು ಈಗ ಅತ್ಯಗತ್ಯವಾದುದರಿಂದ ಈ ಕೆಳಗಿನ ಮೇರೆಗಿನ ಕಾನೂನನ್ನು ಆದಷ್ಟು ಬೇಗನೆ ಮದ್ರಾಸ್ ಸರಕಾರದವರು ತರುವುದು ಅತ್ಯಗತ್ಯವಾಗಿದೆ.

ಒಕ್ಕಲು ಕೊಡತಕ್ಕ ಗೇಣಿ:-

(1) ಕ್ರಮವಾಗಿ ನಿಶ್ಚಯಿಸಲ್ಪಡುವ ನ್ಯಾಯವಾದ ಗೇಣಿಯನ್ನು ಮಾತ್ರ ಧನಿಯು ಒಕ್ಕಲಿಂದ ವಸೂಲಿ ಮಾಡಲು ಅರ್ಹನಿರತಕ್ಕದ್ದು. (2) ಗೇಣಿಯು ಈ ಕೆಳಗಿನ ವಿಷಯಗಳ ಆಧಾರದಿಂದ ನಿಶ್ಚಯಿಸಲ್ಪಡತಕ್ಕದ್ದು. (ಅ) ಒಕ್ಕಲಿಗೆ ವರ್ಷಾವಧಿ ಸಿಗುವ "ನಿವ್ವಳ ಮುನಾಫೆ." (ಬ) ಹೊಲದ ತೀರ್ವೆ. (ಕ) ಹೊಲಕ್ಕೆ ನೀರು ವ ಗೊಬ್ಬರ ಸಿಗಲಿರುವ ಸೌಕರ್ಯ. (ಡ) ಕಾಡು ಪ್ರಾಣಿಗಳಿಂದ ಯಾ ರೋಗಗಳಿಂದ ಒಕ್ಕಲುಗಳಿಗೂ, ಜಾನುವಾರುಗಳಿಗೂ ಬೆಳೆಗಳಿಗೂ ಬರುವ ಹಾನಿ. (ಇ) ಹೊಲವಿರುವ ಪ್ರದೇಶ. (ಫ) ನಗದಿ ಗೇಣಿಯಾದರೆ, ಸಾಧಾರಣ ವರ್ಷಗಳಲ್ಲಿ ಹೊಲದಲ್ಲಿ ಬೆಳೆಸುವ ಬೆಳೆಗೆ ಇರುವ ಸರಾಸರಿ ಕ್ರಯದ ಸ್ಪಷ್ಟೀಕರಣ. ಒಕ್ಕಲಿಗೆ ಸಿಗುವ "ನಿವ್ವಳ ಮುನಾಫೆ" ಎಂದರೆ ಹೊಲದ ಉತ್ಪನ್ನದಿಂದ ಹೊಲದಲ್ಲಿ ದುಡಿಯುವ ಸಾಗುವಳಿದಾರನ ಕೂಲಿ ಸಹಿತ ಸಾಗುವಳಿಯ ಖರ್ಚನ್ನು ಕಳೆದು ಹೆಚ್ಚಿನ ಉಳಿತಾಯ. (3) ಹೀಗೆ ನಿಶ್ಚಯಿಸಲ್ಪಡತಕ್ಕ ಗೇಣಿಯು ಯಾವ ಸಂದರ್ಭದಲ್ಲೂ "ನಿವ್ವಳ ಮುನಾಫೆ"ಯ ಅರೆವಾಸಿಗಿಂತ ಹೆಚ್ಚಿಗೆ ಇರಲಾಗದು. (4) ನಿಶ್ಚಯಿಸಿದ ನ್ಯಾಯವಾದ ಗೇಣಿಯನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ, ಬದಲು ಮಾಡಬಹುದು. (ಅ) ಬರಹ ಮೂಲಕ ಒಕ್ಕಲಿನ ಒಪ್ಪಿಗೆ ಇದ್ದು ಧನಿಯು ಹೊಲದಲ್ಲಿ ಕೃತ ಮಾಡಿದ್ದರೆ ಆ ಮಟ್ಟಿಗೆ ಗೇಣಿಯನ್ನು ಹೆಚ್ಚಿಸಬಹುದು. (ಬ) ಒಕ್ಕಲಿನಿಂದಾಗಿಯಲ್ಲದೆ ಬೇರೆ ಯಾವ ವಾದರೂ ಕಾರಣಗಳಿಂದ ಹೊಲವು ಕೆಟ್ಟು ಹೋದರೆ ಗೇಣಿಯನ್ನು ಕಡಿಮೆ ಮಾಡಬಹುದು. (5) ರೋಗ ರುಜಿ, ಕಾಡು ಪ್ರಾಣಿ ಹಾವಳಿ, ಅಲ್ಪವೃಷ್ಟಿ, ಬಹುವೃಷ್ಟಿ ಯಾ ಅಕಾಲವೃಷ್ಟಿ ಮೊದಲಾದ ಆಕಸ್ಮಿಕ ಕಾರಣಗಳಿಂದ ಬೆಳೆಯು ನಾಶ ಯಾ ಕಡಿಮೆಯಾಗಿದ್ದರೆ ಈ ಕುರಿತು ಒಕ್ಕಲಿಗೆ ಗೇಣಿಯಲ್ಲಿ ಸಿಗತಕ್ಕ ರಿಯಾಯಿತಿಯನ್ನು ತೀರ್ಮಾನಿಸುವ ಏರ್ಪಾಡು ಇರತಕ್ಕದ್ದು. (6) ಶಾಸನ ನಿಶ್ಚಿತವಾಗಿ ಬರತಕ್ಕ ಗೇಣಿಯ ಹೊರತು ಬೇರೆ ಯಾವತರದ ವಂತಿಗೆ ಹರಾಡ, ಅಥವಾ ಬಿಟ್ಟಿ ಇಳಿಗೆ ಮೊದಲಾದುವುಗಳನ್ನು ಧನಿಯು ಒಕ್ಕಲಿನಿಂದ ತೆಗೆದುಕೊಂಡಲ್ಲಿ ಧನಿಯು ದಂಡವನ್ನು ಕೊಡಲು ಬದ್ಧನಾಗಿರತಕ್ಕದ್ದು. (7) ಗೇಣಿ ಪಾವತಿ ಬಗ್ಗೆ ಬರಹ ಮೂಲಕ ರಶೀದಿ ಕೊಡುವುದು ಖಡ್ಡಾಯವಾಗಿರತಕ್ಕದ್ದು. ಈ ನಿಯಮಕ್ಕೆ ವ್ಯತಿರಿಕ್ತವಾಗಿ ನಡೆದಲ್ಲಿ ಧನಿಯು ದಂಡತೆರುವರೆ ಬದ್ಧನಾಗತಕ್ಕದ್ದು.

ಒಕ್ಕಲಿಗಿರುವ ಹಕ್ಕು ಹೊಣೆಗಳು-

(8) ಈ ಕೆಳಗಿನ ಕಾರಣಗಳಿಂದಲ್ಲದೆ ಒಬ್ಬ ರೈತನ ಒಕ್ಕಲುತನದ ಹಕ್ಕು ಕೊನೆಗಾಣಲಾಗದು. (ಅ) ಒಂದೇ ಸವನೆ ಎರಡು ವರ್ಷಗಳ ಗೇಣಿಯನ್ನು ಕೊಡದೆ ಬಾಕಿ ಮಾಡಿಕೊಂಡ ಹೊರತು. (ಬ) ಭೂಮಿಗೆ ಶಾಶ್ವತವಾಗಿ ಅಪಾಯಕರವಾದ ಅಥವಾ ವಿಶ್ವಾಸಘಾತಕವಾದ ಯಾವದೇ ಕೆಲಸವನ್ನು ಒಕ್ಕಲು ಮಾಡಿದ ಹೊರತು. (ಕ) ತಾನು ಮಾಡಿಕೊಂಡ ಹೊಲವನ್ನು ಬೇರೆಯವರಿಗೆ ಸಾಗುವಳಿಗೆ ಕೊಡದ ಅಥವಾ ತಾನು ಸ್ವತಃ ಸಾಗುವಳಿ ಮಾಡಲು ತಪ್ಪಿದ ಹೊರತು. (ಡ) ಒಕ್ಕಲುತನದ ವ್ಯತಿರಿಕ್ತವಾದ ಬೇರೆ ಕೆಲಸಕ್ಕೆ ಹೊಲವನ್ನು ಉಪಯೋಗಿಸಿದ ಹೊರತು. (ಇ) 9ನೇ ಕಲಮಿನಲ್ಲಿ ವಿವರಿಸಿದ ಮೇರೆಗೆ ಹೊಲದ ಧನಿಗೆ ಹೊಲವು ಸ್ವತಃ ಬೇಸಾಯಕ್ಕೆ ಆವಶ್ಯವಿದ್ದ ಹೊರತು.

ಸ್ಪಷ್ಟೀಕರಣ:- (1) ಸ್ವತಃ ಸಾಗುವಳಿ ಮಾಡುವ ಒಕ್ಕಲೆಂದರೆ, ತಾನೇ ಆಗಲಿ ತನ್ನ ಸಂರಕ್ಷಣೆಯಲ್ಲಿರುವ ತನ್ನ ಕುಟುಂಬದವರೇ ಆಗಲಿ ಬೇಸಾಯ ಮಾಡುವುದು ಎಂದು ತಿಳಿಯತಕ್ಕದ್ದು. (2) ಯಾವದಾದರೂ ಆಕಸ್ಮಿಕವಾದ ಕಾರಣಗಳಿಂದ ಬೆಳೆಯು ನಾಶ ಯಾ ಕಡಿಮೆಯಾಗಿದ್ದರೆ ಅಂತಹ ವರ್ಷಗಳಿಗೆ ಈ ಸಂದರ್ಭಗಳನ್ನೂ ಗಣಿಸಿ ಕಡಿಮೆ ಮಾಡಬಹುದಾದ ಗೇಣಿಯನ್ನು ಕೊಡದೆ ಒಕ್ಕಲು ಬಾಕಿ ಮಾಡಿಕೊಂಡರೆ ಮಾತ್ರ ಆವನು ಒಕ್ಕಲುತನದಿಂದ ಹೊರಡಿಸಲು ಬದ್ಧನಾಗತಕ್ಕದ್ದು. (9) ಧನಿಗೆ ತನ್ನ ಸ್ವಂತ ಬೇಸಾಯದ ಬಗ್ಗೆ ತನ್ನ ಹೊಲವು ಬೇಕೆಂದಾದರೆ ಆ ಕುರಿತು ಒಂದು ವರ್ಷದ ಅವಧಿಯ ನೋಟೀಸನ್ನು ಒಕ್ಕಲಿಗೆ ಕೊಟ್ಟು ಹೊಲವನ್ನು ಸ್ವಾಧೀನ ಪಡೆಯಲು ಅರ್ಹನಿರತಕ್ಕದ್ದು. ಆದರೆ ಯಾವ ಸಂದರ್ಭದಲ್ಲೂ ತನಗಿರುವ ಹೊಲಗಳಿಂದ ನಂಜ ಅಥವಾ ಬಾಗಾಯ್ತು 5 ಎಕ್ರೆ, ಪುಂಜ ಹತ್ತು ಎಕ್ರೆಯನ್ನು ಮೀರಿದ ಸ್ಥಳವನ್ನು ತನ್ನ ಸ್ವಂತ ಬೇಸಾಯಕ್ಕೆಂದು ಇಡಲು ಅರ್ಹನಲ್ಲ.

ಸ್ಪಷ್ಟೀಕರಣ:-1) ಒಂದು ಅವಿಭಕ್ತ ಕುಟುಂಬವು ಹೊಲಗಳ ಧನಿಯಾಗಿದ್ದರೆ ಆ ಕುಟುಂಬದಲ್ಲಿ ಸ್ವಂತ ಸಾಗುವಳಿ ಮಾಡಲು ಶಕ್ತರಾಗಿರುವ ಪ್ರತಿಯೊಬ್ಬರೂ ಮೇಲಿನ ದಾಮಾಶಿಯಲ್ಲಿ ಹೊಲಗಳನ್ನು ಸ್ವಾಧೀನ ಪಡೆಯಲು ಅರ್ಹರಿರತಕ್ಕದ್ದು. (10) ಎಂಟನೆ ಕಲಮಿನಲ್ಲಿ ವಿವರಿಸಿದ ಮೇರೆಗೆ ಸ್ವಂತ ಸಾಗುವಳಿಗೆ ಅವಶ್ಯವಿದೆಯೆಂದು ವಿನಾಕಾರಣವಾಗಿ ಧನಿಯು ಹೊಲವನ್ನು ಸ್ವಾಧೀನ ಪಡೆದುಕೊಂಡು ಬಿಡದೆ 5 ವರ್ಷಗಳಿಗಿಂತ ಕಡಿಮೆಯಾಗದಷ್ಟು ಕಾಲ ಸ್ವಂತ ಸಾಗುವಳಿ ಮಾಡನಿದ್ದಲ್ಲಿ ಮೊದಲಿನ ಒಕ್ಕಲು ಹೊಲವನ್ನು ಪುನಹ ತನ್ನ ಸ್ವಾಧೀನ ಪಡೆಯುವರೆ ಅರ್ಹನಿರತಕ್ಕದ್ದು. ಅಲ್ಲದೆ ಆ ಕುರಿತು ಧನಿಯಿಂದ ಪರಿಹಾರ ದ್ರವ್ಯವನ್ನು ಪಡೆಯಲು ಅರ್ಹನಿರತಕ್ಕದ್ದು. (11) ಮೇಲೆ ಹೇಳಿದ ಯಾವುದಾದರೂ ಕಾರಣಗಳಿಂದ ಧನಿಯು ಹೊಲವನ್ನು ಸ್ವಾಧೀನ ಪಡೆಯುವ ಮೊದಲು ಆತನಕ ಒಕ್ಕಲು ಮಾಡಿರಬಹುದಾದ ಕೃತದ ಮೌಲ್ಯವನ್ನು ಸಂದಾಯ ಮಾಡತಕ್ಕದ್ದು. ಇದನ್ನು ಈ ಕೆಳಗಿನ ಆಧಾರದ ಮೇಲೆ ನಿಶ್ಚಯಿಸತಕ್ಕದ್ದು. (ಅ) ಒಕ್ಕಲಿಗೆ ತಗಲಿರಬಹುದಾದ ಖರ್ಚು—(ಬ) ಹೊಲಕ್ಕೆ ಅದರಿಂದಾದ ಉಪಯೋಗ (ಕ) ಹೊಲದ ಮೌಲ್ಯದಲ್ಲಿ ಅದರಿಂದ ಆಗಿರಬಹುದಾದ ಅಭಿವೃದ್ಧಿ

ಪರಾಧೀನತೆಯ ಹಕ್ಕು

(12) ಒಕ್ಕಲು ತನ್ನ ಒಕ್ಕಲುತನದ ಹಕ್ಕನ್ನು ಸ್ವಂತ ಬೇಸಾಯ ಮಾಡಲಿರುವ ಯಾರೊಬ್ಬನಿಗೂ ಪರಾಧೀನ ಮಾಡಬಹುದು. ಆದರೆ ವಿಭಜಿಸಲಾಗದು.

ಧಾತುಪುಷ್ಟಿ ಲೇಹ

ಇಮುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿಸಂಗ್ಸ್ ಬರದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುರಾಂದಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ವಿದ್ಯಾ ಮಂತ್ರಿಗಳಲ್ಲಿ ಅಧ್ಯಾಪಕರ ಮನವಿ

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡ್ ಕೌನ್ಸಿಲಿನ ಸಭೆಯು ಗಿಲ್ಡಿನ ಅಧ್ಯಕ್ಷ ಕಾಸರಗೋಡು ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು. ಆಗ ಕೌನ್ಸಿಲು ವಿದ್ಯಾಖಾತೆಯ ಡೈರೆಕ್ಟರರ ಮುಂದೆ ಜಿಲ್ಲೆಯ ಶಿಕ್ಷಣದ ಅವಶ್ಯಕತೆಯ ಕುರಿತಾಗಿ ಮಾಡಿದ ಮನವಿಯನ್ನು ಪರಿಶೀಲಿಸಲಾಯಿತು. ಈ ಕೆಳಗಿನ ವಿಷಯಗಳ ಪರಾಂಬರಿಕೆಯ ಬಗ್ಗೆ ವಿದ್ಯಾ ಮಂತ್ರಿಗಳಿಗೊಂದು ವಿಸ್ತೃತ ಮನವಿ ಕಳುಹಿಸುವುದೆಂದು ಗೊತ್ತಾಯಿತು.

ಬಿ ಟಿ ಕಾಲೇಜು ತೆರೆಯಬೇಕು

೧. ಹೈಸ್ಕೂಲುಗಳ ಸಂಖ್ಯೆ ಏರಿರುವುದರಿಂದಲೂ, ಪ್ರಾಂತಭಾಷೆಯು ಶಿಕ್ಷಣದ ಮಾಧ್ಯಮವಾದುದರಿಂದಲೂ; ಕನ್ನಡದಲ್ಲೇ ಕಲಿಸಬಲ್ಲ ಬಿ. ಎ. ಬಿ. ಟಿ. ಗಳಿಗಾಗಿ ಒಂದು ಬಿ. ಟಿ. ಕಾಲೇಜನ್ನು ತೆರೆಯಬೇಕು.

೨. ಮಂಗಳೂರಿನ ಗವರ್ನಮೆಂಟ್ ಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾರ್ಪಡಿಸಿ ಬಿ. ಎಸ್. ಸಿ. ಕಲಿಸುವ ವ್ಯವಸ್ಥೆ ಮಾಡಿಸಬೇಕು.

೩. ಕಾಂಞಂಗಾಡಿನಲ್ಲಿ ಒಂದು ಸೆಕೆಂಡರಿ ತರಬೇತಿ ಶಾಲೆ ತೆರೆಯಬೇಕು.

ಪ್ರಾಂತ ಭಾಷೆಯನ್ನು ಶಿಕ್ಷಣಭಾಷೆಯನ್ನಾಗಿ ಮಾಡಿದುದಕ್ಕೆ ಮತ್ತು ಶಿಕ್ಷಣದಲ್ಲಿ ಇಂಗ್ಲಿಷನ್ನು ೨ನೇ ಭಾಷೆಯನ್ನಾಗಿ ಮಾಡಿದುದಕ್ಕೆ ಈ ಕೌನ್ಸಿಲು ಸರಕಾರವನ್ನು ಅಭಿನಂದಿಸಿ ತನ್ನ ಪೂರ್ಣ ಬೆಂಬಲ ನೀಡುವುದು ಮಾತ್ರವಲ್ಲ; ಈ ಕೆಳಗಿನ ಸೂಚನೆಗಳನ್ನು ಕೊಡುತ್ತದೆ.

೧. ಪ್ರಾಂತಭಾಷೆಯಲ್ಲಿದ್ದ ಒಂದು ತರಗತಿಯನ್ನು ತೆರೆದಲ್ಲಿ ಆ ತರಗತಿಗೆ ವಿದ್ಯಾರ್ಥಿಗಳನ್ನು ಆರಿಸುವ ಅಧಿಕಾರ ಜಿಲ್ಲಾ ವಿದ್ಯಾಧಿಕಾರಿಗಳಿಗೆ (D. E. O.) ಇರಬೇಕು.

೨. ಕೂಡಲೇ ಇಂಗ್ಲಿಷಿನ ಪಾಠ ಪಟ್ಟಿಯನ್ನು ಮಾರ್ಪಡಿಸಿ ಉದ್ದೇಶ ವಿವರಗಳೊಡನೆ ಪ್ರಕಟಿಸಬೇಕು. ಪಾರಿಭಾಷಿಕ ಶಬ್ದಗಳನ್ನೂ ಪ್ರಕಟಿಸಬೇಕು.

ಕಡ್ಡಾಯ ಶಿಕ್ಷಣದ ಕುರಿತು ಇಂದು ಜಿಲ್ಲೆಯಲ್ಲಿನ ಕಾರ್ಯಕ್ರಮಗಳನ್ನು ಕೌನ್ಸಿಲು ಚರ್ಚಿಸಿದಲ್ಲದೆ ಕಡ್ಡಾಯ ಶಿಕ್ಷಣವು ಎಂಟು ಹತ್ತು ವರ್ಷಗಳಲ್ಲಿ ಪರಿಪೂರ್ಣತೆ ಹೊಂದಬೇಕಾದರೆ ಮೇಲೆ ಸೂಚಿಸಿದ ಕಾರ್ಯಗಳು ಕೂಡಲೇ ಜಾರಿಗೆ ಬರಬೇಕೆಂದು ಅಭಿಪ್ರಾಯಪಟ್ಟಿತು.

ಆ ನಂತರ ಉಪಾಧ್ಯಾಯರ ಇಂದಿನ ಕಷ್ಟ ಸಂಕಷ್ಟಗಳನ್ನು ಪರಾಂಬರಿಸಿ ಜಿಲ್ಲಾ ಬೋರ್ಡ್, ಪಂಚಾಯಿತ ಬೋರ್ಡ್ ಏಯ್ಡೆಡ್ ಶಾಲೆಗಳ ಎಲ್ಲಾ ಉಪಾಧ್ಯಾಯರ ಸಂಬಳ, ರಜೆ ಮತ್ತು ಸರ್ವಿಸಿನ ರೀತಿಗಳೆಲ್ಲ ಸರಕಾರಿ ಶಾಲೆಗಳ ಇತರ ಉಪಾಧ್ಯಾಯರಂತೆಯೇ ಇರಬೇಕೆಂದೂ ನಿರ್ಧರಿಸಲಾಯಿತು. ಈ ಕುರಿತಾದ ವಿಸ್ತೃತ ಮನವಿಯನ್ನು ಮಾನ್ಯ ವಿದ್ಯಾಮಂತ್ರಿಗಳಿಗೆ ಕೂಡಲೇ ಕಳುಹಿಸುವುದೆಂತಾಯಿತು.

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಬರೆಯಿರಿ

ತ್ರಿವೇಣಿ ಫಿಲ್ಮ್ಸ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು

ಶರ್ತಗಳಿಗೆ ಬರೆಯಿರಿ—

'ಅಂತರಂಗ', ಉಡುಪಿ.

ಸ್ವೀಕಾರ–ವಿಮರ್ಶೆ

೧೭. **ಸೊಗಸಿನ ಕತೆ** (ಭಾಗ ೧) ಬರೆದವರು: ಸಾನೆಗುರುಜಿ. ಅನುವಾದಕರು. ಭಾಸ್ಕರಗೋವಿಂದ ರಾವ್ ಗೋಖಲೆ, ಗದಗ, ಪ್ರಕಾಶಕರು: ಬಸವಣ್ಣೆಪ್ಪ ಗುರುಲಿಂಗಪ್ಪ ಸಂಕೇಶ್ವರ, ಉರ್ಫ ಸುಬಚಿ, ಗದಗ, ಪುಟಗಳು: ೮೦. ಬೆಲೆ ೧೨ ಆಣೆ.

ಇಂತಹ ಕತೆಗಳು ಯಾ ಲೋಕಕತೆಗಳು ಪ್ರತಿಯೊಂದು ಸಮಾಜದಲ್ಲಿ ಇದ್ದೇ ಇವೆ. ಅವುಗಳನ್ನು ಕೇಳುವದೆಂದರೆ ಸಣ್ಣ ಮಕ್ಕಳಿಗಂತೂ ಅಪಾರವಾದ ಸಂತೋಷವಿದೆ. ಬಂಗಾಲದಲ್ಲಿ ಪ್ರಚಲಿತವಾದ ಇಂತಹ ಕೆಲವು ಕತೆಗಳನ್ನು ಮಹಾರಾಷ್ಟ್ರದ ಕತೆಗಾರ ಸಾನೆಗುರುಜಿಯವರು ತಮ್ಮ ಭಾಷೆಗೆ ಪರಿವರ್ತಿಸಿದರು. ಅವುಗಳಲ್ಲಿ ಕೆಲವು ಕತೆಗಳ ಅನುವಾದವಿದು. ಇದರಲ್ಲಿ ಒಟ್ಟಿಗೆ ೬ ಕತೆಗಳಿವೆ. ಪ್ರತಿಯೊಂದು ಕತೆಯು ಹಾಸ್ಯ, ವಿಷಾದ, ಇಲ್ಲವೇ ಅದ್ಭುತರಸಪ್ರಧಾನವಾಗಿದ್ದು ಬೋಧಪ್ರದವಾಗಿದೆ. ಒಟ್ಟಿನಲ್ಲಿ ಸಂಗ್ರಹವು ಜನತೆಯ– ಮುಖ್ಯತಃ ಹುಡುಗರ– ಮೆಚ್ಚುಗೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಮಕ್ಕಳಕೈಯಲ್ಲಿ ನಲಿದಾಡಬೇಕಾದ ಪುಸ್ತಕವಿದಾದ ಕಾರಣ, ಭಾಷಾಶುದ್ಧತೆಯ ಕಡೆಗೆ ಲೇಖಕರು ಮತ್ತಷ್ಟು ಗಮನವೀಯಬೇಕಿತ್ತೆಂದು ನಮಗನ್ನಿಸುತ್ತದೆ. ಮುಂದಿನ ಭಾಗಗಳು ಈ ದೋಷರಹಿತವಾಗಿ ಬೇಗನೆ ಕಾಣಿಸಿಕೊಳ್ಳಲೆಂದು ಹಾರೈಸುತ್ತೇವೆ.

೧೮. **ಜೇನಿನ ವ್ಯವಸಾಯ:** ಲೇಖಕರು: ಪಿ. ಲಕ್ಷ್ಮೀನಾರಾಯಣ ರಾವ್. ಬಿ. ಎ. ಪ್ರಕಾಶಕರು: ಪುತ್ತೂರು ತಾಲೂಕು ಜೇನುವ್ಯವಸಾಯದ ಸಹಕಾರ ಸಂಘ, ಬೊಕ್ಕಾಪಿ, ದ ಕ. ಪುಟಗಳು ೯೦. ಬೆಲೆ ರೂ. ೧. (ತಿದ್ದಿದ ಪುನರಾವೃತ್ತಿ)

ಜೇನುನೊಣ ಸಾಕುವಿಕೆಯು ಮನೋರಂಜಕ ಹಾಗೂ ಲಾಭದಾಯಕವಾದ ಒಂದು ಉದ್ಯಮವಾದರೂ ಅದರ ಅಭಿವೃದ್ಧಿಯನ್ನು ಕುರಿತು ಆಗಬೇಕಾದಷ್ಟು ಪ್ರಚಾರವಾಗಿಲ್ಲವೆಂದೇ ಹೇಳಬೇಕು. ಅಂದವಾದ ಪಡಿಯಚ್ಚುಗಳೊಡನೆ ಆಕರ್ಷಣೀಯವಾಗಿ ಅಚ್ಚಾಗಿರುವ ಈ ಪುಸ್ತಕದಲ್ಲಿ ಲೇಖಕರು ಜೇನುನೊಣಗಳ ಸ್ವಭಾವ, ಅವುಗಳನ್ನು ಹಿಡಿಯುವ ಒಟ್ಟುಗೂಡಿಸುವ, ವೈರಿಗಳಿಂದ ಕಾಪಾಡುವ ಹಾಗೂ ಜೇನನ್ನು ಸಂಗ್ರಹಿಸಿ ಜೋಪಾನಿಸುವ ಮಾಡುವ– ಅರ್ಥಾತ್ ಜೇನುವ್ಯವಸಾಯದ ಎಲ್ಲ ವಿವರಗಳನ್ನು ಸರಲವಾಗಿ ವಿವರಿಸಿದ್ದಾರೆ. ವಿವರಣೆಗಳು ಕೇವಲ ತಾತ್ವಿಕವಾಗಿರದೆ, ಪ್ರತ್ಯಕ್ಷ ಪ್ರಯೋಗಗಳ ರೂಪದಲ್ಲಿವೆ. ಶ್ರೀಯುತ ಪೈಲೂರು ಲಕ್ಷ್ಮೀನಾರಾಯಣ ರಾಯರ ಹಲವು ವರ್ಷಗಳ ಜೇನುವ್ಯವಸಾಯದ ಅನುಭವವೇ ಉಳಿದವರ ಪ್ರಯೋಜನಕ್ಕಾಗಿ ಇಲ್ಲಿ ಬರಹದ ರೂಪದಲ್ಲಿ ಮೂಡಿದೆಯೆಂದರೂ ತಪ್ಪಾಗದು. ಮದ್ರಾಸ್ ವಿಶ್ವವಿದ್ಯಾಲಯ ಹಾಗೂ ಕನ್ನಡಸಾಹಿತ್ಯ ಪರಿಷತ್ತಿನವರಿಂದ ಪ್ರಶಸ್ತಿಪಡೆದ ಗ್ರಂಥವೆಂದ ಬಳಿಕ ಅದರ ಮಹತ್ವವನ್ನೂ, ಜನಾದರಕ್ಕೆ ಪಾತ್ರವಾಗಿದೆಂಬುದನ್ನೂ ಬೇರೆ ಹೇಳಬೇಕೆಂದಿಲ್ಲ. ಗ್ರಾಮ ಕೈಗಾರಿಕೆಗಳನ್ನು ಕುರಿತು ಶಾಸ್ತ್ರೀಯ ಪರಿಜ್ಞಾನವನ್ನೀಯುವ ಇಂತಹ ಪುಸ್ತಕಗಳು. ಹೆಚ್ಚಿದಷ್ಟು ಕನ್ನಡ ನಾಡು ನುಡಿಗಳಿಗೆ ಶ್ರೇಯಸ್ಕರವೆಂಬುದು ನಿಶ್ಚಿತ.

೧೯. **ಎಲ್ಲರಿಗೂ ಆಹಾರ ಮತ್ತು ಎಲ್ಲರಿಗೂ ಉದ್ಯೋಗ.** ಜನತಾ ಸಾಹಿತ್ಯ, ಹುಬ್ಬಳ್ಳಿ ಅವರ ಪ್ರಕಟಣೆಗಳು. ಬೆಲೆ, ಪ್ರತಿಯೊಂದಕ್ಕೆ ೪ ಆಣೆಗಳು.

ಸುಮಾರು ೩೦ ಪುಟಗಳ ಮೊದಲನೆಯ ಪುಸ್ತಕದಲ್ಲಿ, ಪ್ರಕೃತ. ನಮ್ಮೆಲ್ಲರ ಮುಂದಿರುವ ಅತಿ ದೊಡ್ಡ ಸಮಸ್ಯೆಯಾದ ಆಹಾರ ಅಭಾವದ ನಿವಾರಣೆಯ ಕುರಿತು ಹಿಂದೀಯ ಕಮ್ಯೂನಿಸ್ಟ ಪಕ್ಷದವರ ಮುಂದಿರಿಸಿದ ಯೋಜನೆಯ ವಿವರಗಳು ಅಡಕವಾಗಿವೆ. ಅಷ್ಟೇ ಗಾತ್ರದ ಎರಡನೆಯ ಹೊತ್ತಗೆಯಲ್ಲಿ, ಯುದ್ಧಾನಂತರದ ನಿರುದ್ಯೋಗತನದ ಭೀಕರತೆ ಹಾಗೂ ಅದರ ನಿವಾರಣೋಪಾಯಗಳ ಕುರಿತು ಅದೇ ಕಮ್ಯೂನಿಸ್ಟ್ ಪಕ್ಷದವರು ಮುಂದಿಟ್ಟಿರುವ ಮತ್ತೊಂದು ಯೋಜನೆಯು ವಿವರಿಸಲ್ಪಟ್ಟಿದೆ. ಎರಡೂ ಯೋಜನೆಗಳು, ವಿಚಾರಿಗಳ ಗಮನಾರ್ಹವಾಗಿವೆ.

Poverty & Partition, The country Votes Congress, Let the Figures Speak Again· ಅಖಿಲ ಭಾರತ ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಯವರ ಈ ಮೂರು ಪ್ರಕಟಣೆಗಳು ನಮ್ಮ ಕೈಸೇರಿವೆ. ೧ನೆಯದರಲ್ಲಿ, ಆರ್ಥಿಕ ದೃಷ್ಟಿಯಿಂದ ಪಾಕಿಸ್ಥಾನವು ಹೇಗೆ ಅಪ್ರಯೋಜಕವೆಂದೂ, ೨ನೆಯ ಮತ್ತು ೩ನೆಯವುಗಳಲ್ಲಿ ಕಾಂಗ್ರೆಸ್ಸಿಗೆ ಜನಮತದ ಬೆಂಬಲ ಹೆಚ್ಚಿದೆಯೆಂಬುದು ೧೯೩೬-೩೭ರ ಹಾಗೂ ೧೯೪೫-೪೬ರ ಶಾಸನ ಸಭೆಗಳ ಚುನಾವಣೆಗಳ ಫಲಿತಾಂಶದಿಂದ ಹೇಗೆ ಸ್ಪಷ್ಟವಾಗುತ್ತದೆಂದೂ– ಅಂಕೆ ಸಂಖ್ಯೆಗಳ ಆಧಾರದೊಂದಿಗೆ ವಿವರಿಸಲಾಗಿದೆ.

—ಕೆ. ವಿ. ಎಸ್

ದಕ್ಷಿಣ ಕನ್ನಡ

ಸುಳ್ಯ ಬೋ. ಹಾ. ಎಲಿಮೆಂಟರಿ-ಶಾಲೆಯಲ್ಲಿ ೧೬ರಂದು ಸೇರಿದ ಸಭೆಯಲ್ಲಿ ನಮ್ಮ ಜಿಲ್ಲೆಯ ಆಹಾರ ಇಲಾಖೆಯ ಭಾಷಣಕರ್ತರಾದ ಶ್ರೀ. ಎಜ್. ಎಂ. ನಾರಾಯಣ ಭಟ್ಟರು ಸದ್ಯದ ಆಹಾರ ಪರಿಸ್ಥಿತಿಯನ್ನು ವಿವರಿಸಿ ಮಾತನಾಡಿದರು.

ಪುತ್ತೂರು ಫಿರ್ಕದಿಂದ-- ವಕೀಲ್ ಶ್ರೀ। ಎಂ. ಸದಾಶಿವ ರಾವ್ ಮತ್ತು ಶ್ರೀ। ಎ. ಪಿ. ಸುಬ್ಬಯ್ಯ—ಇವರನ್ನು ತಾಲೂಕು ಸಮಿತಿಗೆ ಆರಿಸಲಾಗಿದೆ.

ಇಲ್ಲಿಯ ಡಿಪ್ಯುಟಿ ಕಲೆಕ್ಟರರು-ಶ್ರೀ ಬಿ. ಅಪ್ಪುಸ್ವಾಮಿ ಚೆಟ್ಟಿ ಇವರಿಗೆ ನೆಲ್ಲೂರಿಗೆ ವರ್ಗವಾಗಿ ಅವರ ಬದಲಿಗೆ ಶ್ರೀ। ಯು. ವೆಂಕಟೇಶ್ವರಲು ಇವರು ಇಲ್ಲಿಗೆ ಬಂದು ಚಾರ್ಜ ವಹಿಸಿಕೊಂಡಿರುತ್ತಾರೆ

ಸ್ತ್ರೀಯೋರ್ವಳ ಕೊಳೆತ ಶವ-- ಕಳೆದ ತಾ ೧೧ರಂದು ಕಡಬದಲ್ಲಿ ಹೊರಗಿನಿಂದ ಬೀಗ ಹಾಕಲ್ಪಟ್ಟಿದ್ದ ಒಂದು ಕೋಣೆಯಲ್ಲಿ ಬ್ರಾಹ್ಮಣ ಜಾತಿಯ ಸ್ತ್ರೀಯೋರ್ವಳ ಶವವನ್ನು ಪೋಲಿಸರು ಪತ್ತೆಹಚ್ಚಿ, ಓರ್ವನನ್ನು ಗುಮಾನಿನಮೇಲೆ ಹಿಡಿದು ತಂದಿರುತ್ತಾರಾಗಿಯೂ ವರ್ತಮಾನವಿದೆ.

ಹೆಬ್ರಿ:– ಸ್ಥಳೀಯ ರೂರಲ್ ಡಿಸ್ಪೆನ್ಸರಿಯ ಡಾಕ್ಟರರು ಆಸ್ಪತ್ರೆಯ ಕೆಲಸದ ಸಮಯದಲ್ಲೇ ಸಿಗುವುದು ಕಷ್ಟವಾಗುತ್ತಿದೆ ಹೀಗಾಗಿ ಜನರಿಗೆ ತುಂಬಾ ತೊಂದರೆಯಾಗಿದೆ. ಇಷ್ಟರಲ್ಲೆ ಹಲವು ಜನರ ದೂರುಗಳು ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಹೋಗಿವೆ. ಎಂದು 'ಗ್ರಾಮನಿವಾಸಿಯೊಬ್ಬರು' ಬರೆಯುತ್ತಾರೆ

ಬೈಲೂರು–ತಾ. 19 7-46ರಲ್ಲು ಕರ್ನಾಟಕ ಏಕೀಕರಣ ಅಭಿಮಾನಿಗಳ ಸಭೆಯು ಡಾ ಎ. ಕೆ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಬಿ ಕೇಶವಕಿಣಿ ಡಿ. ಡಿ. ಅಶ್ವಾಲ್, ಎಮ್. ಅನಂತಪ್ಪ ಕಿಣಿ, ಎಮ್. ಅಪ್ಪು ರಾವ್, ಮತ್ತು ಕೆ. ಅಂತಯ್ಯ ಶೆಟ್ಟಿ ಇವರ ಭಾಷಣಗಳಾದುವು. ಬಳಿಕ ಶ್ರೀ. ಡಿ. ಡಿ. ಅಶ್ವಾಲ್ ರಿಂದ ತರಲ್ಪಟ್ಟ ಕೆಳಗಣ ಎರಡು ಗೊತ್ತುವಳಿಗಳನು ಮಂಜೂರಾದುವು. (1.) ಅಖಿಲ ಭಾರತ ಕೊಂಗ್ರೆಸ್ ಕಾರ್ಯಕಾರಿ ಸಭೆಗೆ ಕರ್ನಾಟಕ ಪ್ರಾಂತ್ಯದವರಾದ ಶ್ರೀಮತಿ ಕಮಲಾ ದೇವಿಯವರನ್ನು ಸದಸ್ಯರನ್ನಾಗಿ ಆರಿಸಿದ್ದಕ್ಕೆ ಈ ಸಭೆಯು ತನ್ನ ಸಂತೋಷವನ್ನು ಈ ಮೂಲಕ ವ್ಯಕ್ತಪಡಿಸುತ್ತದೆ. (2) ಘಟನಾವಳಿ ಸಮಿತಿಗೆ ಮಂಗಳೂರಿನಿಂದ ಆರಿಸಲ್ಪಟ್ಟ, ಶ್ರೀ. ಯು. ಶ್ರೀನಿವಾಸ ಮಲ್ಯರ, ಮದ್ರಾಸು ಮಂತ್ರಿಗಳಾದ ಶ್ರೀ. ಕೆ ರಾಮಕೃಷ್ಣ ಕಾರಂತರ ಕೆ. ಪಿ ಸಿ ಸಿ. ಯ. ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರ ಮುಂಬಾಯಿ ಪ್ರಾಂತ್ಯದಿಂದ ಘ. ಸ. ಗೆ ಆರಿಸಲ್ಪಟ್ಟ ಶ್ರೀ. ಆರ್. ಆರ್. ದಿವಾಕರರ, ಕರ್ನಾಟಕ ಏಕೀಕರಣ ಸಂಸ್ಥೆಯ ಅಧ್ಯಕ್ಷರಾದ, ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರ, ಮುಂಬಾಯಿ ಮಂತ್ರಿಗಳಾದ ಶ್ರೀ.ಎಂ.ಎ. ಪಾಟೀಲರ, ಕೇಂದ್ರ ಎಸೆಂಬ್ಲಿಯಲ್ಲಿರುವ ಶ್ರೀ. ಡಿ. ಪಿ. ಕರಮರಕರರ, ಹಾಗೂ ಕೊಂಗ್ರೆಸ್ ಕಾರ್ಯಕಾರಿ ಸಭೆಯ ಸದಸ್ಯರಾಗಿರುವ ಶ್ರೀಮತಿ ಕಮಲಾ ದೇವಿಯವರ, ಭಗೀರಥ ಪ್ರಯತ್ನದಿಂದ ಕರ್ನಾಟಕ ಪ್ರಾಂತ್ಯವು ಆದಷ್ಟು ಬೇಗನೆ ರಚನೆಯಾಗಲಿ.

ಪಡುಬಿದ್ರೆ ಫಿಶರಿಸ್ ಶಾಲಾ ಉದ್ಘಾಟನಾ ಸಮಾರಂಭ–ನಡಿಪಟ್ಣ ಮತ್ತು ಕಾಡಿಪಟ್ಣ ಮೊಗವೀರ ಸಭೆಯವರ ಅವಿಶ್ರಾಂತ ಪ್ರಯತ್ನದ ಫಲವಾಗಿ ಪಡುಬಿದ್ರೆ ಕೇಂದ್ರದಲ್ಲಿ ಫಿಶರಿಸ್ ಶಾಲೆಯೊಂದು ಸ್ಥಾಪಿಸಲಾಯಿತು. ಇದರ ಉದ್ಘಾಟನಾ ಸಮಾರಂಭವನ್ನು ತಾ. 10ರಲ್ಲು ಬೆಳಿಗ್ಗೆ ಶಾಲಾ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರು ಸಾಂಗಗೊಳಿಸಿದರು. ದೇವತಾ ಪ್ರಾರ್ಥನೆಯಾದ ಬಳಿಕ ಶ್ರೀಗಳಾದ ಎಮ್ ಮಂಜುನಾಥ ಪ್ರಭು, ಕರಿಯಣ್ಣ ಸೆಟ್ಟಿ, ಗೋಪಾಲ ಹೆಗ್ಡೆ, ರಂಗಪ್ಪ ಕುದ್ರ, ಎಮ್. ಕೆ. ಬಸಪ್ಪ, ದುಗ್ಗಪ್ಪ ಮೊದಲಾದವರು ಶಾಲೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿ ಮಾತನಾಡಿದರು. ಅಧ್ಯಕ್ಷರು ತುಳು ಭಾಷೆಯಲ್ಲಿ ಭಾಷಣವೀಯುತ್ತಾ ಶಾಲಾ ಅಭಿವೃದ್ಧಿಯ ಕುರಿತು ಉಪಯುಕ್ತ ಸೂಚನೆಗಳನ್ನಿತ್ತು ಸಮಾಜದ ನೆರವನ್ನು ಬಯಸಿದರು. ಶ್ರೀ. ಅಣ್ಣುಗುರಿಕಾರರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ— ತಾ. 15-7-46ರಲ್ಲಿ ಸ್ಥಳೀಯ ಸರ್ಕಲ್ ಕೊಂಗ್ರೆಸ್ ಕಚೇರಿಯಲ್ಲಿ ಕುಂದಾಪುರ ಕರ್ನಾಟಕ ಸಾಹಿತ್ಯ ಸಂಘದ ಮಹಾಸಭೆಯು ಶ್ರೀ ಕೋಟ ರಂಕ್ರನಾರಾಯಣ ಕಾರಂತರ (ವಕೀಲ್) ಅಧ್ಯಕ್ಷತೆಯಲ್ಲಿ ಜರಗಿ ಚಾಲ್ತಿ ವರ್ಷದ ಸದಸ್ಯತನದ ಆಯವ್ಯಯವನ್ನು ಪರಿಶೀಲಿಸಲಾಯಿತು. ಮತ್ತು ಚಾಲ್ತಿ ವರುಷಕ್ಕೆ ಕಾರ್ಯಕಾರಿ ಸಮಿತಿ ಆರಿಸಲಾಯಿತು.

ಹಿರಿಯಡ್ಕ–1946ನೇ ಇಸವಿಯ ಎಂಟನೇ ದರ್ಜೆಯ ಸರಕಾರಿ ಪರೀಕ್ಷೆಗೆ ಸ್ಥಳೀಯ ಹಾಯರ್ ಎಲಿಮೆಂಟ್ರಿ ಶಾಲೆಯಿಂದ ಕುಳಿತುಕೊಂಡ ಎಲ್ಲಾ ಮಕ್ಕಳೂ ಉತ್ತಮ ರೀತಿಯಲ್ಲಿ ಪಾಸಾಗಿರುವರೆಂದು ಮುಖ್ಯ ಉಪಾಧ್ಯಾಯರು ತಿಳಿಸುತ್ತಾರೆ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ॥ ದೊಡ್ಡೇರಿ ವೆಂಕಟಗಿರಿರಾವ್

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ. ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ದಿ ಆರ್ಯನ್ ಚಾಂಪಿಯನ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ:

7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶ್ಯೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್:

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿಕೊಡುವೆವು. ವಿಶೇಷ ಅನುಭವಗಳಿಗಾಗಿ–

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ– ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.



Approved firm by the Govt. of Mysore Certified by the Agent of the Govt. of Cylone India.

(೨ನೇ ಪುಟದಿಂದ)

ಎಲ್ಲಾ ಹರಿಜನರಿಗೂ ಎಲ್ಲಾ ಕಡೆಗಳಿಗೂ ಹೋಗುವ ಹಕ್ಕಿರಬೇಕೆಂಬ ಒತ್ತಾಯವೇಕೆ? (2) ಹೊಟಲುಗಳಿಗೆ ಹರಿಜನ ಪ್ರವೇಶವಾಗಬೇಕೆಂಬುದನ್ನು ಸಮ್ಮತಿಸುವವರು ತಮ್ಮ ಮನೆಗಳಲ್ಲೊಮ್ಮೆ ಹರಿಜನರಿಗೆ ಪ್ರವೇಶಕೊಟ್ಟು ಅವರೊಂದಿಗೆ ಆಹಾರ ಸೇವನೆಗೆ ಸಿದ್ಧರಿರುವರೆ? ಮಿಶ್ರಭೋಜನವೊಂದರಲ್ಲಿ ಒಟ್ಟಿಗೆ ಕುಳಿತುಣ್ಣಲುತಯಾರೆ? (3) ಹರಿಜನರೊಳಗಿನ ವರ್ಗದವರೇ ಆಗಿರುವ ಮುಂಡಾಲರೇ ಮೊದಲಾದವರು ಕೊರಗರೇ ಮೊದಲಾದ ಇತರ ವರ್ಗದವರನ್ನೂ ಸಮಾನತೆಯಿಂದ ಕಾಣಲೊಪ್ಪುವರೇ?– ಹೆಚ್ಚೇಂದರೆ ಇಂತಹ ದುರ್ಬಲ ವಾದಗಳನ್ನು ಹೂಡಬೇಕಾಗಿ ಬಂದವರ ಸಂಕಟಕ್ಕಾಗಿ ಕನಿಕರ ಪಡಬಹುದು. ಅಷ್ಟೇ ಹೊರತು ಉತ್ತರಕ್ಕರ್ಹವಾದ ಪ್ರಶ್ನೆಗಳು ಇವಲ್ಲ. ಈಗಿನ ಧಾಳಿ ಅಸ್ಪರ್ಶತಾ ಅನ್ಯಾಯದ ಮೇಲಲ್ಲ— ಪ್ರತ್ಯಕ್ಷ ತಮ್ಮ ಮೇಲೆಂದು ಭಾವಿಸಿ, ಪ್ರತಿಭಟಿಸಲು ಅಥವಾ ಪ್ರತೀಕಾರ ಮಾಡಲು ಈ ವಾದಾಗ್ರಹಿಗಳು ಹೊರಟಂತಿದೆ. ಉತ್ತಮ ವರ್ಗದ ಹರಿಜನರಿಗೆ ಸ್ವಯಂಪ್ರೇರಣೆಯಿಂದ ಸಮಾನತೆಯ ಸ್ಥಾನ ಮಾನಗಳನ್ನು ಈ ಮೊದಲೂ ಕೊಟ್ಟವರಿದ್ದರೆ ಅಂಥವರನ್ನು ಅಭಿನಂದಿಸೋಣ; ಆದರೆ ಈ ಅಭಿನಂದನೆಯು ಹೋಗಿ ಮುಟ್ಟುವ ಒಂದು ಸ್ಥಳ ದೊರೆಯಬೇಕಾದರೆ ಇನ್ನೂ ಕೆಲವು ವರ್ಷಗಳು ಹೋಗಬೇಕೇನೊ! ಪ್ರತ್ಯೇಕ ಕೊಠಡಿಯೊಂದನ್ನು ಮಾಡಿಟ್ಟು ಅಲ್ಲಿ ಹರಿಜನರನ್ನು ಕೂಡ ಹಾಕಿ ಕಾಫಿ ತಿಂಡಿಕೊಟ್ಟು ಲಾಭಸೌಕರ್ಯವನ್ನು ಹೆಚ್ಚಿಸಿಕೊಂಡ ಹೋಟೆಲುಗಳು ಕೆಲವಿವೆ ಎಂಬುದನ್ನು ಬಲ್ಲೆವು. ತಮ್ಮ ಮನೆಯ ಭಾಗವೇ ಆದ ಹಟ್ಟಿ ಕೊಟ್ಟಿಗೆಗಳಲ್ಲಿ ಹರಿಜನರಿಗೆ ಪ್ರವೇಶವಷ್ಟೇ ಯಾಕೆ, ಅಧಿಕಾರವನ್ನುಕೂಡಾ ಕೊಟ್ಟು ಖಾಸಗೀ ಮಹನೀಯರೂ ಇದೇ ರೀತಿಯ 'ಸಮಾನತೆ' ಸ್ಥಾಪಿಸಿದ್ದಾರೆ! ಈ ಕುರಿತು ವಿಶೇಷ ತರ್ಕಬೇಡ. ಜಾತಿ ಮತಗಳನ್ನು ಮರೆತೇ ಬಿಟ್ಟು, ಕೇವಲ ಆರೋಗ್ಯ ಸೂತ್ರ ಮತ್ತು ಸಭ್ಯನಿಯಮಗಳಆಧಾರದಿಂದ ಹೊಟೆಲು ಪ್ರವೇಶಕ್ಕೊಂದುನಿಯಮಾವಳಿಗಳನ್ನು ತಯಾರಿಸಲಿ. ಆ ನಿಯಮಗಳಂತೆ ಇಲ್ಲದ ಯಾರಿಗೂ ಹೊಟೆಲು ಪ್ರವೇಶವಿಲ್ಲವೆಂದಾಗಲಿ; ಆಗ ಹರಿಜನರು ಮಾತ್ರ ಬಾರದಂತಾಗುವದೋ ನೋಡೋಣ. ಇನ್ನು ಖಾಸಗೀ ಮಹನೀಯರು ತಮ್ಮ ಮನೆಗಳಲ್ಲೂ ಹರಿಜನರಿಗೆ ಪ್ರವೇಶ ಮತ್ತು ಸಮಾನತೆ ಕೊಡುವರೇ ಎಂಬ ಪ್ರಶ್ನೆ. ಕೊಡಬೇಕು. ಆದರೆ ಈಗ ಸೂಚಿಸಲ್ಪಟ್ಟ ಸುಧಾರಣೆ 'ಸಾರ್ವಜನಿಕ ಗೃಹ'ಗಳಿಗೆ ಸಂಬಂಧಿಸಿದುದು- ಖಾಸಗೀ ಮನೆಗಳಿಗಲ್ಲ ಹೊಟೆಲು ಮಾಲಕರಿಗೂ ಸ್ವಂತ ಮನೆಗಳಿವೆ. ಮುಂದಿನ ಹೆಜ್ಜೆ ಬರುವ ವರೆಗೆ ಮಿಕ್ಕ ಮಹನೀಯರ ಮನೆಗಳೂ ಹೊಟೆಲು ಮಾಲಕರ ಮನೆಗಳಂತೆಯೇ 'ಶುದ್ಧ'ವಾಗಿಯೇ ಇರಲಿ. ಸಾರ್ವಜನಿಕ ಗೃಹಗಳಾದ ಹೊಟೆಲುಗಳಲ್ಲಿ ಮಾತ್ರ ಮಿಕ್ಕವರಂತೆ ಹರಿಜನರಿಗೆ ಇಂದೇ ಪ್ರವೇಶ ದೊರೆಯಲಿ. ಕೇವಲ ಪರೀಕ್ಷೆಗಾಗಿ ಹರಿಜನರುಳ್ಳ ಮಿಶ್ರಭೋಜನ ಬೇಕೆಂದಿಲ್ಲ. ಹರಿಜನರು ಮಿಶ್ರವಾಗುವ ಹೊಟೆಲುಗಳಿಗಾರು ಬರುವದಿಲ್ಲವೆಂಬುದರಿಂದಲೇ ಆ ಪರೀಕ್ಷೆಯಾಗುತ್ತದೆ. ಅಸ್ಪರ್ಶತಾ ನಿವಾರಣೆಗೆ ಇದರಂತೆಯೇ ಅದೂ ಸಹಾಯಕಾರೀ ಎಂಬ ಭಾವನೆಯಿಂದಾಗುವದಾದರೆ ಮಿಶ್ರಭೋಜನಕ್ಕೆ ಸುಸ್ವಾಗತವಿರಲಿ; ಅದರಲ್ಲಿ ಸಹಭಾಗಿಗಳಾಗಲೊಪ್ಪದವರೇ ಅಸ್ಪರ್ಶರು! ಹರಿಜನರ ಒಳಗಿನ ಪಂಗಡಗಳಲ್ಲೇ ಮೇಲು- ಕೀಳುಭೇದವಿದೆ ಯೆಂಬ ಬಲವಾದ ಮತ್ತೊಂದು ತರ್ಕವಿದೆ ಈಗಹೊರಟಿರುವದು ಆ ಕಲ್ಮಷವೆಲ್ಲಿದ್ದರೂ ಉಜ್ಜಿತೆಗೆಯುವುದಕ್ಕೆ. ಈ ಶುದ್ಧೀಕರಣದ ಪ್ರಥಮ ಮರ್ಯಾದೆ ಹರಿಜನರಿಗೇನೇ ಸಲಬೇಕು—ಅಲ್ಲಿ ಆ ಕೆಲಸ ಪೂರ್ತಿಯಾದ ಮೇಲೆಯೇ ನಮ್ಮತ್ತ ಬರಬೇಕು, ಎಂದು ಮೇಲ್ಜಾತಿಯವರು ಹೇಳುವರೆ? ಹರಿಜನರನ್ನು ಮುಂದಿರಿಸಿ ಅವರಿಗೇನೇ ಪ್ರಥಮ ಮರ್ಯಾದೆ ಕೊಡುವ ಹೊಸ ದಾಖಲೆಯೆಂದರೆ ಇದೀಗ! ಆದರೆ ಸಮಾನತೆಯು ಸ್ಥಾಪನೆ ಅಡಿಯನ್ನೇ ಮೇಲು ಮಾಡುವದರಿಂದಾಗದು; ಎಲ್ಲಾ ಕಡೆಗಳ ಅಸ್ಪರ್ಶತೆಯೂ ಒಟ್ಟಿಗೆ ನಿವಾರಣೆಯಾಗಬೇಕು. 'ದೊಕ್ಕಳು'ಗಳ ಸಮೀಪ ಕುಳಿತ ಕೊರಗನನ್ನೂ ಮುಂಡಾಲ ಮುಟ್ಟದಿರುತ್ತಾನೇನು? ತನಗೆ ಅಸ್ಪರ್ಶತೆಯನ್ನು ಕಲಿಸಿದ ಗುರು 'ಉಳ್ಳರ್' ಮಾಡಿದಂತೆ ಆ ಶಿಷ್ಯ ಮುಂಡಾಲ ಮಾಡಿಯೇ ತೀರುತ್ತಾನೆ; ಮದ್ಯ ಮಾಂಸ ಸೇವನೆಯ ಮಟ್ಟಿಗೆ ಹರಿಜನರೇ ಮಿಕ್ಕವರಿಗೆ ಮಾರ್ಗ ದರ್ಶಕರುಹೌದೇನೋ—ಆದರೆ ಅಸ್ಪರ್ಶತೆಯ ಮಟ್ಟಿಗೆ ಅದು ತಿರುಗಾಮುರುಗಾ ಅಲ್ಲವೆ? ಆದ್ದರಿಂದ ಇಂತಹ ಟೊಳ್ಳುವಾದ ನಿಲ್ಲಲಿ.

ಈ ಸುಳ್ಳು ನೆವಗಳಿದ್ದಿರುವ ಮಾತು ಹಾಗಿರಲಿ; ಅವು ವ್ಯಾಪಿಸಿ ಪ್ರಾಮುಖ್ಯತೆ ಪಡೆದಿರುವದು ಆಶ್ಚರ್ಯ! ಇದಕ್ಕೆ ಕಾರಣ ಅಸ್ಪರ್ಶತಾ ನಿವಾರಣೆಯು ವಾದರಂಗದಲ್ಲಿ ಮಾತ್ರವಿದ್ದು ಕಾರ್ಯರಂಗಕ್ಕಿಳಿಯದುದೇ. ಈ ಸಂದರ್ಭದಲ್ಲೂ 'ಹರಿಜನ ಸಂಘ'ಗಳು ನಿದ್ರಿಸುತ್ತಿರುವದು ನ್ಯಾಯವೆ?



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೀ ದಮನಿಸದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

CHAMPAE'S

Snow & Castrex

(Sole Distributers for India.)

Prop: K. G. NAYAK,

Santhekatte, UDIPI, S. K.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುದಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ, ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು, ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟ ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕ

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉಪಾನ್ಯಾಸ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಉಗುಭೋಗಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4-8 0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ ರಾಜಗೋಪಾಲಾಚಾರ್ಯ,

ಕಂಬಳ್ಳಿ, ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ನವಯುಗ

NAVAYUGA

ವರ್ಷ ೨೫ ವಾರ ೪೮] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 25 No. 48

Founder. SRI A. B. SHETTY. M. L. A

ಉಡುಪಿ ● 1—8—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಉಳುಕು, ಕತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ನುಂಚಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧಿ. ಸರ್ವತ್ರ ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ। ಪಿ। ಜಿ। ಆಚಾರ್ಸ್ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪ್ಪೊ

The Modern "Ark".

'It Was Not Raining When Noah Built The Ark'.

Jehovah, the kindly Father had advised Noah to build in advance an Ark to protect himself form the deluge and he did it. The result was Noah and family got through the deluge and became the forefathers of a new age

Advance planning against the uncertainities of the future has been the wisdom of ages. What Noah did in his days, we have to do in these days too; what the Ark did for him then, Insurance does for us to-day. In short, an Insurance Policy is the Modern Ark and an Insurance Agent is the person who induces and helps us to build our own Arks in advance.

The Canara Mutual Assurance Co., Ltd.,
HEAD OFFICE UDIPI, (S. India.)

Chief Agents for the Bombay and Madras Presidencies including States and the States of Mysore and Hyderabad.

The Commercial Corporation of India, Ltd.,
UDIPI. (S. India.)

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area.— **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸೇವಿಸುವ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧ಆಣೆ.

ಮಾಲಕರು:— ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಶಿವಲಿಂಗಾನಿ, ಕೆಮಿಸ್ಟ್, ಹಾವೇರಿ, ಬ್ಯಾಡ್ಗಿ

Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನ
ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ— ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಝರಾಗುವವರೂ ಬರೆಯಿರಿ—

ಪಿ. ಡಿ. ನನಯ್ಯ, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER
General Insurance Company, Ltd.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 25
ವಾರ ೪೮] Founder SRI A. B. SHETTY. M. L. A [No. 48

ಉಡುಪಿ ● 1—8—1946 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ. ತಲೆವೇದನೆ, ಶೀತ, ವೇದನೆ, ಉಳುಕು ಕುತ್ತಿಗೆ, ಛಳಿ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾಹು ಕಟ್ಟುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಕುಟುಂಬದಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

The Modern "Ark".

'It Was Not Raining When Noah Built The Ark'.

Jehovah, the kindly Father had advised Noah to build in advance an Ark to protect himself form the deluge and he did it. The result was Noah and family got through the deluge and became the forefathers of a new age.

Advance planning against the uncertainities of the future has been the wisdom of ages. What Noah did in his days, we have to do in these days too; what the Ark did for him then, Insurance does for us to-day. In short, an Insurance Policy is the Modern Ark and an Insurance Agent is the person who induces and helps us to build our own Arks in advance.

The Canara Mutual Assurance Co., Ltd.,

HEAD OFFICE **UDIPI**, (S. India.)

Chief Agents for the Bombay and Madras Presidencies including States and the States of Mysore and Hydrabad.

The Commercial Corporation of India, Ltd.,

UDIPI. (S. India.)

THE

Bombay Life Assurance Company Ltd.

(ESTD. 1908)

A PREMIER INSURANCE COMPANY

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area— **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಪುಪ್ಪರ್ತಿ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ತುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ— ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ— ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಸರಾಗುವವರೂ ಬರೆಯಿರಿ—

ಪಿ. ಡಿ. ನಾಯಕ್, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ನೇತಾಜೀ ಸಿಂಗಾಪುರದಲ್ಲಿ ಹೆಜ್ಜೆಯೂರಿದಾಗ—

ಲೇಖಕ:—ವಿ. ಮಾಣಿಕಾವಸಾಗರ್.

"ನಿಮ್ಮ ಜೀವಮಾನದಲ್ಲಿ ಅತ್ಯಾತುರದಾಯಿ ಹತ್ತು ದಿನಗಳಾವುವು?"-ಪೂರ್ವ ಆಸ್ಯಾದ ಹಿಂದೀಯರಿಗೆ ಈ ಪ್ರಶ್ನೆ ಹಾಕಿ ಮತಸಂಗ್ರಹ ಮಾಡುವದಾದರೆ,ನಿಜಕ್ಕೂ ಹೆಚ್ಚಿನವರ ಉತ್ತರ ಹೀಗಿದ್ದೀತು.:— "ಸಿಂಗಾಪುರದಲ್ಲಿ ಸುಭಾಷರು ಬಂದಿಳಿದ ನಂತರದ ಹತ್ತು ದಿನಗಳು" ಪೂರ್ವ ಆಸ್ಯಾದ ಹಿಂದೀಯರ ತಲೆಯಲ್ಲಿ ಶಾಶ್ವತವಾಗಿ ನಿಲ್ಲುವ ಘಟನೆಗಳು ಈ ಹತ್ತು ದಿನಗಳಲ್ಲಾಗಿವೆ. 1943ನೇ ಜುಲಾಯಿ 2ರಲ್ಲಿ ಸುಭಾಷ್‌ಚಂದ್ರರು ಪ್ರಥಮತಃ ಸಿಂಗಾಪುರದ ನೆಲವನ್ನು ಸ್ಪರ್ಶಿಸಿದರು.— ಆ ಮೇಲೆ ಅನುಕ್ರಮವಾಗಿ ಕಥಾಯಿ ಹೊಟೆಲ್ ಹಾಲಿನಲ್ಲಿ ಸೇರಿದ್ದ ಪೂರ್ವ ಆಸ್ಯಾ ಹಿಂದೀ ಧುರೀಣರ ಸಮ್ಮೇಲನದಲ್ಲಿ ಭಾರತ ಸ್ವಾತಂತ್ರ್ಯ ಸಮರದ ನಾಯಕತ್ವವನ್ನು ರಾಸ್ ಬಿಹಾರಿ ಬೋಸರ ಕೈಯಿಂದ ಪಡೆದುದು— ಮೆಜೆಸ್ಟಿಕ್ ಮುನ್ಸಿಪಲ್ ಕಟ್ಟಡದೆದಿರ ವಿಶಾಲ ಮೈದಾನಿನಲ್ಲಿ ಅವರಿತ್ತ ಸಿಂಗಾಪುರದ ಪ್ರಥಮ ಸಾರ್ವಜನಿಕ ಭಾಷಣ— ಹಿಂದೀ ರಾಷ್ಟ್ರೀಯ ಸೇನೆಯ ರಚನೆ ಮತ್ತು ತಾನದರ ನಾಯಕನಾದುದರ ಘೋಷಣೆ ಮಾಡಿದುದು— ಜಾಪಾನಿನ ಪ್ರಧಾನಿ ಜೆಡೆಕಿ ಟೋಜೋರೊಂದಿಗೆ ಭಾ. ರಾ. ಸೇನೆಯ ಅವಲೋಕನೆ ನಡಿಸಿದ ಆ ದೃಶ್ಯ—ಸಿಂಗಾಪುರದಲ್ಲಿ ಪ್ರಥಮ ಪತ್ರಿಕಾ ಸಮ್ಮೇಲನ ಕರೆದು ಅಜಾದ್ ಹಿಂದ್ ತಾತ್ಕಾಲಿಕ ಸರಕಾರಸ್ಥಾಪನೆ ಮತ್ತು ಸ್ತ್ರೀಸೇನೆಯೊಂದನ್ನು ತಯಾರಿಸುವ ಯೋಜನೆಯನ್ನು ಘೋಷಿಸಿದುದು— ಇವೆಲ್ಲಾ ಸತ್ಯಕ್ಕೂ ಹೃದಯೋತ್ತೇಜಕ ದಿನಗಳು. ಜಪಾನಿನ ಅತ್ಯಂತ ಪ್ರಾಮುಖ್ಯ ಪತ್ರಿಕೆಯಾಗಿದ್ದ 'ಟೋಕಿಯೋ ನಿಚಿ ನಿಚಿ'ಯ ವಿಶೇಷ ಬಾತ್ಮೀದಾರನಾಗಿದ್ದ ನಾನು ಇವೆಲ್ಲಾ ಸಂದರ್ಭಗಳನ್ನೂ ಕೇಂದ್ರಬದಿಯಲ್ಲಿದ್ದೇ ಕಂಡಿದ್ದೇನೆ. ನನ್ನ ಮನೋಚಕ್ಷು ವಿನಿದಿರು ಅವೆಲ್ಲವುಗಳ ಸೂಕ್ಷ್ಮ ಭಾಗವೂ ವಿಶದವಿಶದವಾಗಿ ಈಗಲೂ ನಿಂತಂತಿದೆ. 1943ನೇ ಜುಲಾಯಿ ತಾ. 2ರಲ್ಲಿ ಜಾಪಾನಿನ ಸಾಮ್ರಾಜ್ಯ ಸೇನಾ ವಿಮಾನವೊಂದರಲ್ಲಿ ಹಾರಿಬಂದು ಸ್ಯೋನಾನ್ (ಸಿಂಗಾಪುರಕ್ಕೆ ಜಪಾನರಿಟ್ಟಿದ್ದ ಹೆಸರು). ನಾಗರಿಕ ವಿಮಾನ ನಿಲ್ದಾಣದಲ್ಲಿ ಸುಭಾಷ್ಚಂದ್ರರು ಪ್ರಥಮತ: ಹೆಜ್ಜೆಯೂರಿದ ಆ ಚಿತ್ರವನ್ನಿಲ್ಲಿ ಬಿಡಿಸುತ್ತಿದ್ದೇನೆ.

ನೇತಾಜಿ ಆಗಮನದ ಕುರಿತು ಜಾಪಾನಿ ಪತ್ರಿಕೋದ್ಯೋಗಿಗಳ ಹುಮ್ಮಸ್ಸು

ಜಾಪಾನೀ ಪತ್ರಿಕೆಗಳು ಭಾವೀ ನೇತಾಜಿಯನ್ನು ಹೇಗೆ ಸ್ವಾಗತಿಸಿದ್ದುವೆಂಬ ಕುರಿತು ಪ್ರಥಮವಾಗಿ ಎರಡು ಮಾತು. ಜುಲಾಯಿ ತಾ. 1ನೇ ಮುಂಜಾನೆ ಸ್ಯೋನಾನಿನಲ್ಲಿದ್ದ 'ನಿಚಿ ನಿಚಿ' ಬ್ಯೂರೋವಿನ ನಾಯಕ ಆರಡಿಯ ದೃಢ ಶರೀರಿ ಸಿಂಜ್ಯೋ ತಾಕಹಾಸಿಯವರು ನನ್ನನ್ನು ತನ್ನ ಖಾಸಗೀ ಕೋಣೆಗೆ ಕರೆಯಿಸಿ, ಮರುದಿನ ಮುಂಜಾನೆ ಸುಭಾಷ್ಚಂದ್ರರು ವಿಮಾನ ನಿಲ್ದಾಣದಲ್ಲಿಳಿಯುವ ನಿರೀಕ್ಷೆಯನ್ನು ಗುಟ್ಟಿನಲ್ಲಿ ಹೇಳಿದರು. ಸಂದರ್ಭವೆಷ್ಟು ಪ್ರಾಮುಖ್ಯದ್ದೆಂಬುದನ್ನು ವಿವರಿಸಿ ಎಲ್ಲಾ ಸಿದ್ಧತೆ ಮಾಡುವ ಸೂಚನೆ ಕೊಟ್ಟರು. ನನ್ನ ಅಂತರ್ಯದಲ್ಲಿ ಏನೋ ಒಂದು ಬಗೆಯಿತ್ತು. ನಿರೀಕ್ಷಿತ ಸುಭಾಸ್ ಆಗಮನದ ಕುರಿತು ಜಪಾನರ ಯಥಾರ್ಥ ಮನೋಭಾವ ಹೇಗಿದೆ ಎಂಬುದನ್ನು ನನಗೆ ತಿಳಿಯಬೇಕಾಗಿತ್ತು. ಆದ್ದರಿಂದ ಸ್ಯೋನಾನ್‌ನಲ್ಲಿದ್ದ ಎಲ್ಲಾ ಪತ್ರಿಕೆಗಳ ಮತ್ತು ವಾರ್ತಾ ಏಜನ್ಸಿಗಳ ಆಫೀಸುಗಳಿಗೂ ಹೋಗಿ ಅಭಿಪ್ರಾಯ ಶೋಧಿಸುತ್ತಾ ಬಂದೆ. ನನ್ನ ಪತ್ರಿಕೋದ್ಯಮವೇನೂ ಬಂಜೆಯಾಗಿರಲಿಲ್ಲ ವರದಿಗಾರನಾಗಿ ನಾನು ಕಳೆದ ಹನ್ನೆರಡು ವರುಷಗಳಲ್ಲಿ ಉತ್ಸಾಹೀ-ಹುರುಪುದಾತ ಯಾಂಕೀ ಬಾತ್ಮೀದಾರರ ಜತೆಯಲ್ಲಿ ನಾನು ದುಡಿದುದಿದೆ. ಅತಿ ಪಕ್ವ, ವ್ಯವಹಾರಾತೀತ, ಘನ ಮರ್ಜಿಯ ಬ್ರಿಟಿಷ್ ವರದಿಗಾರರೊಡನಿದ್ದುದಿದೆ; ಅತ್ಯದರ ಬುದ್ಧಿಯ, ಸದಾ ನಗುಮೊಗದ ಚೀನೀ ಸುದ್ದಿಗಾರರೊಡನೆ ಬೆರೆತಿದ್ದುದೂ ಇದೆ. ಇವರೆಲ್ಲರೊಡನೆ ಹೋಲಿಸಿದರೆ, ಆ ಸೂರ್ಯೋದಯ ನಾಡಿನ ಉರಿಮೊಗದ ವಾರ್ತಾ ಸಂಗ್ರಹರೆಂದರೆ ಯಾವುದರಿಂದಲೂ ಮೋಹಗೊಳ್ಳುವವರಲ್ಲವೆಂದು ನನ್ನ ಭಾವನೆಯಿತ್ತು. ಆದರೆ ಆ ಮುಂಜಾನೆ ಅಲ್ಲಿಯ ಪ್ರತಿಯೊಂದು ಆಫೀಸಿನಲ್ಲೂ ಅತ್ಯಾತುರ-ಮೋಹ ಭ್ರಮೆಯೆಂದೇ ಹೇಳಬಹುದು-ಆವರಿಸಿಕೊಂಡಿತ್ತು. ಅಲ್ಲಿ ನಡೆದಿದ್ದ ಸಿದ್ಧತೆಗಳನ್ನು ಕಂಡು, ಮರುದಿನ ಮುಂಜಾನೆ ಬಂದಿಳಿಯುವ ಆ ಘನವಂತನೆಂದರೆ ಪ್ರತ್ಯಕ್ಷ ಜಾಪಾನಿನ ಸಾಮ್ರಾಟನಿರಬೇಕೆಂಬಷ್ಟು ನಾನು ಭ್ರಮಿಸಿ ಬಿಟ್ಟೆ. ಸುಭಾಸರ 10 ದಿನಗಳ ಕಾರ್ಯಕ್ರಮಗಳನ್ನು ವರದಿ ಮಾಡಲು ಜಾಪಾನಿನ ಪ್ರಥಮ ಪಂಕ್ತಿಯ 60 ಮಂದಿ ಬಾತ್ಮೀದಾರರು ಸ್ಪೆಶ್ಯಲಾಗಿ ನೇಮಕಗೊಂಡಿದ್ದಾರೆ ಎಂಬ ಸುದ್ದಿ ಡೋಮಿಯೊ ಆಫೀಸಿನಿಂದ ದೊರೆತಾಗ ನಾನು ಹಿಗ್ಗಿ ಹಿರಿಯವನಾದೆ. ಈ ಬಾತ್ಮೀದಾರರಲ್ಲಿ ಹೆಚ್ಚಿನವರು ಅದುವರೆಗೂ ಈ ಭಾರತ ವೀರನನ್ನು ಕಂಡಿರಲಿಲ್ಲ. ಆದರೆ ಅವರ ಕುರಿತು ಬರೆದಿದ್ದ ಪ್ರತಿಯೊಂದು ಪುಸ್ತಕವನ್ನೂ ಪರಿಶ್ರಮಪೂರ್ವಕ ತರಿಸಿ ಓದಿದ್ದರು.

ವಿಮಾನ ನಿಲ್ದಾಣದ ದೃಶ್ಯ.

ಮರುದಿನ ಮುಂಜಾನೆ--ಜುಲಾಯಿ ತಾ 2ರಲ್ಲಿ—ಸೂರ್ಯೋದಯದ ಹೊತ್ತಿಗೆ ನಾನು ಸ್ಯೋನಾನ್ ನಾಗರಿಕ ವಿಮಾನ ನಿಲ್ದಾಣಕ್ಕೆ ಬಂದಿದ್ದೆ. ಆ ಹೊತ್ತಿನಲ್ಲೇ ನಿಲ್ದಾಣದಲ್ಲಿ ವಿಶೇಷ ಚಟುವಟಿಕೆ ಕಾಣಿಸುತ್ತಿತ್ತು. ಜಾಪಾನರ ಕೈಗೆ ಆ ದ್ವೀಪ ಬಂದಂದಿನಿಂದ ಅಲ್ಲಿ ಅಷ್ಟುಮಂದಿ ಹಿಂದೀಯರೆಂದೂ ನೆರೆದಿರಲಿಲ್ಲ. ನಿಲ್ದಾಣವೆಲ್ಲಾ ಬಣ್ಣಬಣ್ಣದ ಪತಾಕೆಗಳು—ಭಾರತದ ತ್ರಿವರ್ಣ ರಾಷ್ಟ್ರಧ್ವಜ ಮತ್ತು ಜಾಪಾನಿನ ಉದಿತ ಸೂರ್ಯಧ್ವಜಗಳು ಜತೆಯಾಗಿ ಆ ಮುಂಜಾನೆಯ ತಿಳಿ ವಾತಾವರಣದಲ್ಲಿ ಎತ್ತರದಲ್ಲಿ ಹೆಗ್ಗಳಿಕೆಯಿಂದ ಹಾರುತಿದ್ದ ಆ ಹೃದಯ ಸ್ಪರ್ಶಿದೃಶ್ಯ-ಮೇಲ್ದರ್ಜೆಯ ಜಪಾನೀ ಮತ್ತು ಹಿಂದೀ ಆಫೀಸರರು ಸ್ವಾಗತ ವ್ಯವಸ್ಥೆಗಾಗಿ ಕೊನೆಯ ದುರಸ್ತಿಯಾಜ್ಞೆ ಕೊಡುತ್ತಾ ತಿರುಗುತಿದ್ದ ನೋಟ--ದರ್ಶನೀಯವಿದ್ದುವು ಅಲ್ಲಿಯ ಭದ್ರತಾ ಕ್ಷೇತ್ರದ ಎಲ್ಲೆ ದಾಟಿಬಂದ ಜಾಪಾನೇತರರಿಗೆ ಮರಣ ದಂಡನೆಯೆಂದು ವಿಧಿಸಿ ಬಹಿಷ್ಕರಿಸಲಾಗಿತ್ತು. ಆದ್ದರಿಂದ ನಿಲ್ದಾಣದಲ್ಲಿದ್ದ ಅಂತಹ ನಾಗರಿಕರು ಅಲ್ಲಿಯೂ ಶಂಕಿಸುತಿದ್ದರು. ಒಂದೆಡೆ ಜಾಪಾನಿನ ಸುಪ್ರಸಿದ್ಧ 'ವಾರ್ತಾಸಿನೆಮಾ' ಕಂಪೆನಿಗಳ 50ಕ್ಕೂ ಮಿಕ್ಕಿದ ಕೆಮರಾ ಚಾಲಕರು ತಮ್ಮ ಯಂತ್ರವನ್ನು ಸಜ್ಜುಗೊಳಿಸುವದರಲ್ಲಿದ್ದರು. ಅದನ್ನು ನಿರೀಕ್ಷಿಸುತ್ತಾ ಜಾಪಾನೀ ಬಾತ್ಮೀದಾರರು ನಿಂತಿದ್ದರು. ಅವರೆಲ್ಲಾ ತಾವು ಘನಮರ್ಜಿಯಲ್ಲಿರುವಂತೆ ಪ್ರಯತ್ನ ಪೂರ್ವಕವೆಷ್ಟೇ ನಟನೆ ಮಾಡಿದರೂ ಅವರ ಅದನ್ನು ಆತುರವು ಮತ್ತೂ ಗೋಚರಿಸದೆ ಹೋಗಲಿಲ್ಲ ನಾನು ನಿಲ್ದಾಣದ ಫಲಾಹಾರ ಗೃಹ ಪ್ರವೇಶಿಸಿದೆ, ಆಶ್ಚರ್ಯವೆಂದರೆ ಅಲ್ಲಿಯ ತಿಂಡಿ ಸರಬರಾಯಿ ಹುಡುಗಿಯರ ಮನಸ್ಸೂ ಬೇರೆಲ್ಲಿಯೋ--ಅವರ ಎಲ್ಲಾ ಪಿಸುಮಾತುಗಳೂ ಸುಭಾಸರ ಸಂಬಂಧವಾಗಿಯೇ. ಅಲ್ಲಲ್ಲಿ ಬಾತ್ಮೀದಾರರ ಗುಂಪು ಕುಳಿತಿತ್ತು. ಕೆಲವರ ಮುಂಭಾಗದ ಮೇಜಿನಲ್ಲಿ ದೊಡ್ಡ ಬಾಟ್ಲಿಗಳಿದ್ದುವು; ಇನ್ನು ಕೆಲವರ ಇದಿರುಗಡೆ ಉತ್ಸಾಹವೇರಿಸುವಂತಿದ್ದರೂ ಅಮಲು ಹುಟ್ಟಿಸದ ಕಪ್‌ಗಳಿದ್ದುವು. ಏಕಾಂತ ಪ್ರೇಮಿಯಂತಿದ್ದ ಓರ್ವ ಬಾತ್ಮೀದಾರ ಹೊಟೆಲಿನೊಂದು ಮೂಲೆಯಲ್ಲಿ ಒಬ್ಬನೇ ಕುಳಿತು, ತನ್ನ ಜಾಪಾನೀ ಪತ್ರಿಕೆಯೊಳಗೆ 'ಭಾರತ ತೋರಾಟ' ಗ್ರಂಥವನ್ನು ಮುಚ್ಚಿಕೊಂಡು ಓದುತ್ತಿದ್ದುದನ್ನು ಕಂಡೆ. ಆವನೊಬ್ಬ ಗಮ್ಮತಿನ ಮನುಷ್ಯನಾಗಿ ನನಗೆ ತೋರಿದ್ದರಿಂದ ಸೀದಾ ಅವ ಕುಳಿತಲ್ಲಿಗೆ ಹೋಗಿ 'ಓಹಾಯಿ ಯೋಗೋಸಾಯಿಮಾಸ್'(ನಮ್ಮಲ್ಲಿಯ 'ನಮಸ್ಕಾರ ಸ್ವಾಮಿ' ಎಂಬಂತಹ ಒಂದು ಜಾಪಾನೀ ಸಂಭಾವನೆ)ಕೊಟ್ಟು, 'ನಾನು ತಮ್ಮ ಮೇಜಿನಮುಂದೆ ಕುಳಿತರೆ ಬೇಸರವಿಲ್ಲವಷ್ಟೆ'ಎಂದೆ. ಆ ಪುಣ್ಯಾತ್ಮನ ಮನಸ್ಸು ಆ ಪುಸ್ತಕದಲ್ಲಿಷ್ಟು ಮುಳುಗಿ ಹೋಗಿತ್ತೆಂದರೆ ಎರಡು ಮೂರುಬಾರಿ ಕೇಳುವವರೆಗೂ ತನ್ನನ್ನು ವಿಚಾರಿಸುತ್ತಿದ್ದಾರೆಂಬ ಪ್ರಜ್ಞೆಯೇ ಅವನಿಗಿರಲಿಲ್ಲ. ಕೂಡಲೇ ಆತ ಬೇಗಬೇಗನೇ ಪುಸ್ತಕವನ್ನೊಳಗಿಟ್ಟೇ ಪತ್ರಿಕೆಯನ್ನು ಮುಚ್ಚಿ ಅದನ್ನು ತನ್ನ ಬದಿಪೆಟ್ಟಿಗೆಯಲ್ಲಿ ಮಡಗಿದ. ಮತ್ತು ಸಂತೋಷದ ನಗೆ ಬೀರುತ್ತಾ ಕುಳಿತುಕೊಳ್ಳಲು ನನ್ನನ್ನಾಮಂತ್ರಿಸಿದ. ನಾನು 'ನಿಚಿ ನಿಚಿ'ಯ ಬಾತ್ಮೀದಾರನೆಂದೊಡನೆ ಆತನಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಸುಭಾಸರು ಬರ್ಲಿನಿನಲ್ಲಿದ್ದಾಗ 'ಯೋಮಿಯುರಿ— ಹೋಚಿ' ಎಂಬ ವರ್ಚಸ್ಸುಳ್ಳ ಪತ್ರಿಕೆಯ ಪ್ರತಿನಿಧಿಯಾಗಿ ಇವನೂ ಅಲ್ಲಿದ್ದನಂತೆ. ಹಿಟ್ಲರನು ಸುಭಾಸರನ್ನು ಎಷ್ಟೋ ಬಾರಿ ಅತಿಹೆಚ್ಚಿನ ಗೌರವಕೊಟ್ಟು ಸಂಭೋದಿಸಿದುದನ್ನೆಲ್ಲಾ ಆತ ವರ್ಣಿಸಿದ. ಹಿಟ್ಲರ್ ಸುಭಾಸ್‌ಚಂದ್ರರ ಹೆಸರೆತ್ತಿದಷ್ಟು ಸಲವೂ ಜರ್ಮನ್ ಪತ್ರಿಕೆಗಳದನ್ನು ವಿಶೇಷ ಪ್ರಾಮುಖ್ಯತೆ ಕೊಟ್ಟು ಪ್ರಕಟಿಸಿದ್ದುವು. ಜಾಪಾನಿನ ಜನತೆಯಲ್ಲಿ 'ಬೋಸ್ ಭಾವನೆ' ಯುಂಟಾಗಲು ಮೂಲಕಾರಣವೇ ಹಿಟ್ಲರನ ಈ ಶ್ಲಾಘನೆಗಳು. ಮೇಲಿಂದ ಮೇಲೆ ಸುಭಾಸರ ಘನಕೀರ್ತನೆಯು ಹಿಟ್ಲರನಿಂದ ನಡೆಯ ಹತ್ತಿದ ಮೇಲೆ-ಭವಿಷದ್ಭಾರತಕ್ಕೂ ಸುಭಾಸರಿಗೂ ಆತನು ಮಾಡಿಟ್ಟ ಜೋಡಣೆಯನ್ನು ಕಂಡನಂತರವೇ— ಜಾಪಾನಿನ ಮುಖ್ಯ ಮುಖ್ಯ ಪ್ರಕಟಣಾಲಯಗಳು ಇಪ್ಪತ್ತೆರಡಕ್ಕೂ ಮಿಕ್ಕಿದ ಸುಭಾಸರ ಜೀವನ ಚರಿತ್ರೆಗಳನ್ನು ಪ್ರಕಟಿಸಿದುವು. ಆದರೆ ತನ್ನನ್ನಿಲ್ಲಿ ಸುಭಾಸರು ಗುರುತಿಸಬಲ್ಲರೆಂಬ ಧೈರ್ಯ ಈ ಬಾತ್ಮೀದಾರನಿಗಿರಲಿಲ್ಲ. ನಾನು ಬೇಗನೇ ಫಲಾಹಾರ ಮುಗಿಸಿ ಭಾವೀ ನೇತಾಜಿಗೆ 'ಗಾರ್ಡ್-ಓಫ್-ಓನರ್' ಕೊಡಲು ನಿಲ್ಲಿಸಲ್ಪಟ್ಟಿದ್ದ 300 ಮಂದಿ ಹಿಂದೀ ಸೋಲ್ಜರನ್ನು ನೋಡಲು ಹೋದೆ. ಅವರಲ್ಲಿ ಹೆಚ್ಚಿನವರು ಆರಡಿಗೆ ಮಿಕ್ಕಿ ಎತ್ತರವಿದ್ದರು. ಲೋಕದ ಯಾವ ರಾಷ್ಟ್ರವಾದರೂ ಇಂಥವರನ್ನು ಮುಂಭಾಗದಲ್ಲಿಟ್ಟುಕೊಳ್ಳಲು ಹೆಮ್ಮೆ ಪಡಬಹುದಾದ ಈ ಯೋಧ ಸಂಗಡದ ನೋಟ ಆಕರ್ಷಣೀಯವಿದ್ದಿತು.

(೧೧ನೇ ಪುಟ ನೋಡಿರಿ)

ನೀವು ನಿಮ್ಮ ವ್ಯಾವಹಾರಿಕ ಪಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ

ಹಣದ ರಾಶಿಯಲ್ಲಿರಬೇಕಾದ
ಸಿರಿವಂತರಾಗಬೇಕಾದ
ಲಕ್ಷ್ಮೀಪುತ್ರರಾಗಬೇಕಾದ
ಅನುಕೂಲಸ್ಥರಾಗಬೇಕಾದ

ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ ಯಾಕಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮೀರಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Est'd- 1906

CANARA BANK LIMITED

(Incorporated in British India, liability of Members Limited.)

ಚುನಾಯಿತ ಘಟನಾ ಸಮಿತಿ

ಅದರ ಆಕಾರ ಮತ್ತು ಅಂತರ್ಭಾಗ.

ಅಖಿಲ ಭಾರತದ ಬೇರೆ ಬೇರೆ ಪ್ರಾಂತಿಕ ಎಸೆಂಬ್ಲಿಗಳು ಇದೇ ಜುಲಾಯಿ ತಾ 20ರಿಂದ 27ರ ವರೆಗಿನ ಬೇರೆ ಬೇರೆ ದಿನಗಳಲ್ಲಿ ಘಟನಾ ಸಮಿತಿಗೆ ತಂತಮ್ಮ ಪ್ರತಿನಿಧಿಗಳನ್ನಾರಿಸಿ ಮುಗಿಸಿವೆ. ಒಂದು ಪ್ರಾಂತ್ಯದ ಜನ ಸಂಖ್ಯೆಯು 10 ಲಕ್ಷ ಮಂದಿಗೊಬ್ಬನಂತೆ ಘಟನಾ ಸಮಿತಿಗೆ ಪ್ರತಿನಿಧಿಗಳನ್ನಾರಿಸಬೇಕು; ಆದರೆ ಆ ಪ್ರತಿನಿಧಿಗಳ ಆರಿಸುವಿಕೆ ಪ್ರಾಂತಿಕ ಎಸೆಂಬ್ಲಿಗಳಲ್ಲೇ ಆಗಬೇಕು; ಹೀಗೆ ಮತದಾರರು ಎಸೆಂಬ್ಲಿ ಸದಸ್ಯರೇ ಆಗಿದ್ದರೂ ಉಮೇದ್ವಾರರಾಗಿ ಹೊರಗಿನವರೂ ನಿಲ್ಲಬಹುದು ಎಂದಿತ್ತು. ಮಿಲಿಯಕ್ಕೊಬ್ಬನೆಂಬ ತತ್ವವನ್ನಾಧರಿಸಿ ಈ ಮಟ್ಟಿಗೂ ಜಾತೀವಾರು (ಮುಸ್ಲಿಂ, ಸಿಖ್ ಇವರಿಗೆ ಪ್ರತ್ಯೇಕ ಸ್ಥಾನಗಳು ಇತರ ಅಲ್ಪಸಂಖ್ಯಾಕರಿಗೆ ಎಲ್ಲಾ ಹಿಂದುಗಳೊಂದಿಗೆ ಸಮಾನ ಚುನಾವಣೆ) ಪ್ರಾತಿನಿಧ್ಯವನ್ನೇ ಅಂಗೀಕರಿಸಲಾಗಿತ್ತು.

ಎಷ್ಟು—ಯಾರಾರಿಗೆ?

ಈ ಘಟನಾ ಸಮಿತಿಯಲ್ಲಿ ಅಖಿಲ ಭಾರತದಲ್ಲಿ ಒಟ್ಟಿಗೆ 391 ಸ್ಥಾನಗಳಿವೆ. ಆ ಪೈಕಿ 93 ಸ್ಥಾನಗಳಿಗೆ ಆಶ್ರಿತ ರಾಜ್ಯಗಳ ಪ್ರತಿನಿಧಿಗಳು ಆರಿಸಲ್ಪಡಬೇಕು ಈ ಸಂಸ್ಥಾನಿಕ ಪ್ರತಿನಿಧಿಗಳು ಜನತೆಯಿಂದಾರಿಸಲ್ಪಡುವರೋ ರಾಜರಿಂದ ನೇಮಕ ಹೊಂದುವರೋ ಎಂಬುದು ನಿಶ್ಚಯವಾಗಿಲ್ಲ. ಘಟನಾ ಸಮಿತಿ ಸಭೆಗಳ ಆದಿಭಾಗವನ್ನಾಶ್ರಿತ ರಾಜ್ಯಗಳ ಪರವಾದ 'ಸಂಧಾನ ಸಮಿತಿ'ಯೇ ಅವುಗಳ ಕಾರ್ಯಭಾರ ನಿರ್ವಹಿಸುವದು. ಭಾವೀ ರಾಜ್ಯರಚನೆ ಮತ್ತು ಆಶ್ರಿತ ರಾಜ್ಯಗಳ ಸಂಬಂಧದ ಒಂದು ನಿರ್ಧಾರವು ಆ ಮೂಲಕ ಆದ ಮೇಲೆಯೇ ಸಂಸ್ಥಾನಗಳ ಪ್ರತಿನಿಧಿಗಳು ಘಟನಾ ಸಮಿತಿಯಲ್ಲಿ ಭಾಗವಹಿಸತಕ್ಕದ್ದು. ಆದ್ದರಿಂದ ಅವುಗಳ ಪಾಲಿನ 93 ಸ್ಥಾನಗಳ ಚುನಾವಣೆ ಬಾಕಿಯಿದೆ.

ಆ 93 ಸ್ಥಾನಗಳನ್ನು ಕಳೆದರೆ ಉಳಿಯುವ 298 ಸ್ಥಾನಗಳಲ್ಲಿ ಸಾಮಾನ್ಯರ ಪಾಲಿನ ಸ್ಥಾನಗಳು 216. ಮುಸ್ಲಿಂ ಸ್ಥಾನಗಳು 78, ಸಿಖ್ಖರಿಗೆ 4.

216 ಸಾಮಾನ್ಯ ಸ್ಥಾನಗಳ ಪೈಕಿ 207 ಸ್ಥಾನಗಳು ಕಾಂಗ್ರೇಸಿಗೇ ದೊರಕಿವೆ. ಕಾಂಗ್ರೆಸ್ ಕಳಕೊಂಡ 9 ಸ್ಥಾನಗಳಿಗಾರಿಸಿ ಬಂದ ಇತರರ ಪೈಕಿ ಪ್ರಮುಖರೆಂದರೆ ಡಾ. ಅಂಬೇಡ್ಕರ್, ವೈಸರಾಯೀ ಕೌನ್ಸಿಲಿನ ಮಾಜೀ ಸದಸ್ಯ ಸರ್ ಜ್ವಾಲಾಪ್ರಸಾದ ಶ್ರೀವತ್ಸವ, ಸರ್. ಪಿ. ಸಿಂಘಾನಿಯಾ, ಮತ್ತು ದರ್ಭಾಂಗದ ಮಹಾರಾಜಾಧಿರಾಜಾ.

78 ಮುಸ್ಲಿಂ ಸ್ಥಾನಗಳ ಪೈಕಿ 73 ಸ್ಥಾನಗಳು ಮುಸ್ಲಿಂ ಲೀಗಿಗೇನೇ ದೊರಕಿವೆ. ಲೀಗ್ ಕಳಕೊಂಡ 5 ಸ್ಥಾನಗಳಿಗಾರಿಸಲ್ಪಟ್ಟ ಇತರ ಮುಸಲ್ಮಾನರೆಂದರೆ ಮೌಲಾನಾ ಅಬುಲ್ ಕಲಮ್ ಆಜಾದ್, ಖಾನ್ ಅಬ್ದುಲ್ ಗಫರ್‌ಖಾನ್, ಮಿ. ರಾಫಿ ಅಹಮ್ಮದ್ ಕಿಡ್ವಾಯಿ, ಮಿ. ಫಜಲುಲ್ ಹಕ್ ಮತ್ತು ಪಂಜಾಬಿನ ಓರ್ವ ಯೂನಿಯನ್ ಮುಸ್ಲಿಂ.

ಸಿಕ್ಖರ ನಾಲ್ಕು ಸ್ಥಾನಗಳೂ ಖಾಲಿಯಿವೆ.

ಹಿಂದೂ ಸಭಾ ಪ್ರತಿನಿಧಿಗಳೇ ಇಲ್ಲ (ಡಾ. ಶ್ಯಾಮ ಪ್ರಸಾದ ಮುಖರ್ಜಿಯಂಥವರು ಕಾಂಗ್ರೆಸ್ ಪ್ರತಿನಿಧಿಗಳಾಗಿ ಬಂದವರು) ಕಮ್ಯುನಿಸ್ಟ ಪಕ್ಷದ ಪರವಾಗಿ ಬಂಗಾಳದಿಂದ ಒಬ್ಬ ಮಾತ್ರ ಆರಿಸಲ್ಪಟ್ಟಿದ್ದಾನೆ. ಕಾಂಗ್ರೆಸ್ ಸಮತಾವಾದಿ ಪಕ್ಷಕ್ಕೆ ಸೇರಿದ ಕೆಲವರು ಕಾಂಗ್ರೆಸ್ ಪ್ರತಿನಿಧಿಗಳಾಗಿ ಇದ್ದಾರೆ.

ಈಗ ಘಟನಾ ಸಮಿತಿಯ ಸ್ಥಾನ ವಿಭಾಗ ಹೀಗಿದೆ—ಕಾಂಗ್ರೆಸ್ 210, ಮುಸ್ಲಿಂ ಲೀಗ್ 73, ಸಾಮಾನ್ಯ ಸ್ವತಂತ್ರರು 6 (ಕಮ್ಯುನಿಸ್ಟ ಕೂಡಿ) ಮುಸ್ಲಿಂ ಸ್ವತಂತ್ರರು 2. (ಸಿಕ್ಖರ 4 ಮತ್ತು ಆಶ್ರಿ ರಾಜ್ಯಗಳ 93 ಇದುವರೆಗೆ ಖಾಲಿ)

ಮಹಾತ್ಮಾ ಗಾಂಧಿಯವರು ಘಟನಾ ಸಮಿತಿಯ ಮುಖ್ಯ ಸಲಹೆಗಾರನೆನ್ನಬಹುದು. ಭಾರತ ರಾಜಕೀಯದಲ್ಲಿ ಘನತೆ ಮತ್ತು ತೂಕದ ಮಟ್ಟಿಗೆ ಅತಿಮುಖ್ಯ ಸ್ಥಾನಗಳಿಸಿರುವ ಸರ್. ತೇಜ ಬಹದೂರು ಸಪ್ರುಗಳು ಅನಾರೋಗ್ಯದ ದೆಸೆಯಿಂದ ಹೊರಗಿರುವಂತಾಗಿದೆ. ಮತ್ತೊಬ್ಬ ಘನವಂತ ಡಾ। ಎಮ್. ಆರ್. ಜಯಕರರ ಹೆಸರು ಕಾಂಗ್ರೆಸಿನ ಬೊಂಬಾಯಿ ಪಟ್ಟಿಯಲ್ಲಿದ್ದರೂ ವಿದೇಶದಲ್ಲಿರುವ ಜಯಕರರ ನಾಮಪತ್ರ ಸಕಾಲದಲ್ಲಿಬಾರದ ದೆಸೆಯಿಂದ ಅವರೂ ಪ್ರಕೃತ ಹೊರಗಿದ್ದಾರೆ. ಆದರೆ ಅವರಿಗೊಂದು ಸ್ಥಾನ ದೊರಕಿಸಿಕೊಡುವ ವ್ಯವಸ್ಥೆಯಾಗಲಿದೆ. ಪ್ರಮುಖ ರಾಜಕೀಯ ಧುರೀಣರೆಲ್ಲಾ ಘಟನಾ ಸಮಿತಿಯಲ್ಲಿದ್ದಾರೆ. ಮಾತ್ರವಲ್ಲದೆ ನ್ಯಾಯಶಾಸ್ತ್ರತಜ್ಞರು, ಪ್ರಸಿದ್ಧ ವಕೀಲರು, ವ್ಯಾಪಾರೋದ್ಯಮ ಪ್ರವೀಣರು, ತತ್ವಶಾಸ್ತ್ರವೇತ್ತರು ತುಂಬಿದ್ದು ಅಧುನಿಕ ಭಾರತದ ಶಿರಸ್ಸೆಂಬಂತೆ-ಎಲ್ಲಾ ಆವೇಗ ಆಕಾಂಕ್ಷೆಗಳೂ ಇರುವ ರಾಷ್ಟ್ರೀಯ ಹೃದಯವೆಂಬಂತೆ-ಘಟನಾ ಸಮಿತಿ ರಚನೆಗೊಂಡಿದೆ. ರಾಷ್ಟ್ರದ ರಾಜ್ಯಾಂಗ ರಚನೆಯಲ್ಲಿ ಎಲ್ಲಾ ಸಮರ್ಥರೂ ಭಾಗವಹಿಸವಂತಾಗಬೇಕೆಂಬುದಕ್ಕಾಗಿ ಕಾಂಗ್ರೆಸ್‌ನಾಯಕರು ಪಕ್ಷಾಭಿಮಾನವನ್ನು ಬದಿಗಿಟ್ಟು ಸಮರ್ಥರನ್ನೆಲ್ಲಾ ಆರಿಸಿಕೊಂಡಿದ್ದರು. ಡಾ। ಮುಕರ್ಜಿಯಂತಹ ಹಿಂದೂ ಸಭಾ ನಾಯಕನನ್ನು, ಬೊಬ್ಬಿಲಿ ರಾಜರಂತಹ ಜಸ್ಟೀಸ್ ಪಕ್ಷೀಯರನ್ನು ಕೂಡಾ ಆಮಂತ್ರಿಸಿಕೊಂಡಿದ್ದರು. ಮುಸ್ಲಿಂ ಸ್ಥಾನಗಳಮಟ್ಟಿಗೆ ಮಾತ್ರ ಲೀಗ್‌ಮನೋವೃತ್ತಿಯಿಂದಾಗಿ ಈ ಗುಣ ಪಕ್ಷಪಾತಕ್ಕನುಕೂಲತೆ ದೊರೆಯಲಿಲ್ಲ.

ಸುಮಾರು 400ರಷ್ಟು ಮಂದಿ ದೀರ್ಘಾವಧಿ ಒಂದೆಡೆ ಕಲೆಯುವಂತೆ ಮಾಡಬೇಕಾದ ಸಭಾನಿಲಯ ಮತ್ತು ಸಂಗಡ ಕೋಣೆಗಳ ವ್ಯವಸ್ಥೆ, ಪ್ರತಿನಿಧಿಗಳ ವಸತಿಗೃಹಾನುಕೂಲತೆ, ಮತ್ತಿತರ ತಯಾರಿಕಾರ್ಯವು ಆಗಾಧವಿರುವದರಿಂದ ಕೂಡಲೇ ಸಭೆ ಸೇರಲನಾನುಕೂಲವಾಗಿದೆ. ಚುನಾಯಿತ ಘಟನಾ ಸಮಿತಿಯು ಸೆಪ್ಟೆಂಬರ್ ತಿಂಗಳಲ್ಲಿ ನವದಿಲ್ಲಿಯಲ್ಲಾರಂಭವಾಗುವದು.

ಘಟನಾಸಮಿತಿಯ ಸಾಮೂಹಿಕ ರೂಪ ಮೇಲಿನಂತಿದೆ. ಅದು ಎ-ಬಿ-ಸಿ ಎಂಬ ಮೂರು ಪ್ರಾಂತಿಕ ಗುಂಪುಗಳಾಗಿ ವಿಂಗಡಿಸಲ್ಪಟ್ಟಿದೆ. ಆ ಪಂಗಡಗಳ ರೂಪರೇಖೆ ಹೀಗಿದೆ—

'ಎ' ಗುಂಪು

ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯಪ್ರಾಂತ್ಯ, ಒರಿಸ್ಸಾ—ಈ ಆರು ಪ್ರಾಂತ್ಯಗಳು 'A' ಪಂಗಡಕ್ಕೆ ಸೇರುತ್ತವೆ. ಈ ಪೈಕಿ ಮದ್ರಾಸ್ ಪ್ರಾಂತ್ಯಕ್ಕೆ 45 ಸಾಮಾನ್ಯ ಮತ್ತು 4 ಮುಸ್ಲಿಂ ಸ್ಥಾನಗಳು ಘಟನಾ ಸಮಿತಿಗಿದ್ದುವು. ಎಲ್ಲಾ ಸಾಮಾನ್ಯ ಸ್ಥಾನಗಳೂ ಕಾಂಗ್ರೆಸಿಗೆ, ಎಲ್ಲಾ ಮುಸ್ಲಿಂ ಸ್ಥಾನಗಳೂ ಲೀಗಿಗೆ ದೊರೆತಿವೆ. ರಾಜಾಜಿ, ಪಟ್ಟಾಭಿ, ಪ್ರಕಾಶಮ್, ನಾದರ್ ಮೊದಲಾದ ಕಾಂಗ್ರೆಸಿಗರು ಇಲ್ಲಿಂದ ಆರಿಸಲ್ಪಟ್ಟಿದ್ದಾರೆ. ಬೊಂಬಾಯಿಪ್ರಾಂತ್ಯದಿಂದಲೂ ಹಾಗೆಯೇ—ಸಾಮಾನ್ಯರಿಗಿದ್ದ 19 ಸ್ಥಾನಗಳಿಗೂ ಕಾಂಗ್ರೆಸಿಗರು, ಮುಸಲ್ಮಾನರಿಗಿದ್ದ 2 ಸ್ಥಾನಗಳಿಗೂ ಮುಸ್ಲಿಂ ಲೀಗಿನವರು ಆರಿಸಿಬಂದಿದ್ದಾರೆ. ವಲ್ಲಭಾಯಿ, ಶಂಕರರಾವ್ ದೇವೊ, ಖೇರ್, ಮುನ್ಷಿ, ದಿವಾಕರ್, ಪಾಟೀಲ್, ಮಸಾನಿ, ಹಂಸಮೆಹತಾ ಮೊದಲಾದ ಕಾಂಗ್ರೆಸಿಗರ ಆಯ್ಕೆ ಇಲ್ಲಿಂದಲೇ. ಸಂಯುಕ್ತ ಪ್ರಾಂತ್ಯದಲ್ಲಿ ಸಾಮಾನ್ಯ ಸ್ಥಾನಗಳು 47. ಮುಸ್ಲಿಂ ಸ್ಥಾನಗಳು 8 ಸಾಮಾನ್ಯ ಸ್ಥಾನಗಳ ಪೈಕಿ ಸರ್. ಜ್ವಾಲಾ ಪ್ರಸಾದ್, ಸರ್ ಪಿ. ಸಿಂಘಾನಿಯಾ ಮತ್ತು ರಾಜಾ ಜಗನ್ನಾಥ ಭಕ್ಷ್ ಸಿಂಘ್—ಈ ಮೂವರಿಗೆ 3 ಸ್ಥಾನಗಳು ಹೋಗಿ ಉಳಿದ 44 ಸ್ಥಾನಗಳೂ ಕಾಂಗ್ರೆಸಿಗೆ ದೊರೆತಿವೆ. ಮುಸ್ಲೀಮರ 8 ಸ್ಥಾನಗಳ ಪೈಕಿ ಕಾಂಗ್ರೆಸ್ ರೆವೆನ್ಯೂ ಮಂತ್ರಿ ಮಿ. ರಾಫಿ ಮಹಮ್ಮದ್ ಕಿಡ್ವಾಯವರಿಗೊಂದು ದೊರೆತು ಉಳಿದ 7 ಸ್ಥಾನಗಳೂ ಲೀಗಿಗೆ ದೊರೆತಿವೆ. ನೆಹರು, ಪಂತ್, ಥಂಡನ್, ವಿಜಯಲಕ್ಷ್ಮಿ, ಸರ್. ರಾಧಾಕೃಷ್ಣನ್, ಕಟಜು,

---

TENDER NOTICE.

Tenders are invited by the undersigned to reach him on or before 15-9-1946 for transporting salt bags from sea going-vessels or railway waggons and setacking them in the fish curing yards and glolahs on the West Coast and for other sundry works. Details and terms of contract can be had from the office of the Asst. Director of Fisheries (Coast), Calicut.

T. M ARUMUGAM,
Asst. Director of Fisheries. (Coast), CALICUT.

WANTED

Organisers on decent salary on a nominal guarantee of business.

For further particulars please apply to :

THE

UNITED KARNATAK INSURANCE Co., Ltd.
HEAD OFFICE: **DHARWAR.**

Or

BRANCH OFFICE :
Court Road, UDIPI, S. K.

ನೋಟೀಸು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ.

O. P. 90/1946

ಭಾಗೀರಥಿ ಅಮ್ಮ, ನರಸಿಂಹಯ್ಯನವರ ವಿಧವೆ, ಕುಂದಾಪುರ ತಾಲ್ಲೂಕು ವಡೇರ ಹೋಬಳಿ ಗ್ರಾಮದಲ್ಲಿರುವವಳು —ಅರ್ಜಿದಾರಳು.

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರಳ ಗಂಡ ಮೃತ ನರಸಿಂಹಯ್ಯನವರಿಗೆ ಒರಿಯಂಟಲ್ ಗವರ್ನಮೆಂಟು ಸೆಕ್ಯೂರಿಟಿ ಲ್ಯಾಫ್ ಯಿನ್ಸ್ಯೂರೆನ್ಸ್ ಕಂಪೆನಿಯಲ್ಲಿರುವ ನಂ. 530010ನೇ ಪೋಲೀಸಿಯ ಹಣವನ್ನು ಪಡೆಯುವರೆ ತಾನು ಹಕ್ಕುದಾರಳಾದ್ದರಿಂದ ತನಗೆ ವಾರೀಸು ಸರ್ಟಿಫಿಕೇಟನ್ನು ಕೊಡಿಸಬೇಕೆಂತ ಅರ್ಜಿದಾರಳು ದಾಖಲ್ಲು ಮಾಡಿದ ಮೇಲಿನ ಅರ್ಜಿಯನ್ನು ತಾ. 5-8-1945ಕ್ಕೆ ಈ ಕೋರ್ಟಿನಲ್ಲಿ ಹಗಲು 11 ಘಂಟೆಗೆ ತನಿಖೆಗೆ ಯಿಡುವದಾಗಿಯದೆ. ಆಕ್ಷೇಪಯಿರುವವರು ಸದ್ರಿ ದಿನ ಜಾಹೀರುಮಾಡಿಕೊಳ್ಳಬಹುದು.

(Sd) **K. Ramappaiya**
Advocate for Petr.
Kundapura 20-8-46

ಕೃಪಾಲಿನಿ ಮೊದಲಾದ ಪ್ರಮುಖರಾರಿಸಿ ಬಂದುದು ಇಲ್ಲಿಂದಲೇ. ಖಲಿಕುಝ್ಝಮಾನ್, ಬೇಗಮ್ ಅಝಿಝುರ್ ಮೊದಲಾದ ಮುಸ್ಲಿಂ ಪ್ರಮುಖರೂ ಇಲ್ಲಿಂದಾರಿಸಲ್ಪಟ್ಟರು. ಬಿಹಾರಿನಲ್ಲಿ 31 ಸಾಮಾನ್ಯ, 5 ಮುಸ್ಲಿಂ ಸ್ಥಾನಗಳು. ಆ ಪೈಕಿ ಸಾಮಾನ್ಯರ 28 ಸ್ಥಾನಗಳು ಕಾಂಗ್ರೆಸಿಗೂ 3 ಸ್ಥಾನಗಳು ಸ್ವತಂತ್ರರಿಗೂ ಹೋಗಿವೆ. ಮುಸ್ಲಿಮರ 5 ಸ್ಥಾನಗಳೂ ಲೀಗಿಗೆ ದೊರೆತಿವೆ. ರಾಜೇಂದ್ರ ಪ್ರಸಾದ್, ಸರೋಜಿನಿ ನಾಯ್ಡುಗಳ ಆಯ್ಕೆ ಇಲ್ಲಿಂದಲೇ. ಸ್ವತಂತ್ರರಾಗಿ ದರ್ಭಾಂಗದ ರಾಜರು ಗೆದ್ದುದೂ ಇಲ್ಲಿಯೇ. ಮಧ್ಯಪ್ರಾಂತ್ಯಕ್ಕಿದ್ದ 16 ಸಾಮಾನ್ಯ, 1 ಮುಸ್ಲಿಂ ಸ್ಥಾನಗಳಲ್ಲಿ ಮೊದಲಿನ 10ಕ್ಕೆ ಕಾಂಗ್ರೆಸಿಗರೂ ಎರಡನೆಯದಕ್ಕೆ ಲೀಗಿನ ಉಮೇದ್ವಾರಿಯೂ ಆರಿಸಲ್ಪಟ್ಟಿದ್ದಾರೆ. ಆ ಪೈಕಿ ರವಿಶಂಕರ ಶುಕ್ಲರೂ ಒಬ್ಬರು. ಒರಿಸ್ಸಾದಲ್ಲಿ 9 ಸಾಮಾನ್ಯ ಸ್ಥಾನಗಳು ಮಾತ್ರ. ಶ್ರೀ ಹರಿಕೃಷ್ಣ ಮೆಹತಾಬರ ಸಮೇತ 8 ಕಾಂಗ್ರೆಸಿಗರೂ ಓರ್ವ ಸ್ವತಂತ್ರನೂ ಗೆದ್ದು ಬಂದಿದ್ದಾರೆ.

ಅಖಿಲ ರಾಷ್ಟ್ರದ ¾ನೇ ಭಾಗದಷ್ಟಿರುವ 'A' ತಂಡವು ಘಟನಾ ಸಮಿತಿಯ ಬಹು ಸಂಖ್ಯಾಕ ಸದಸ್ಯರುಳ್ಳ ಪ್ರಥಮ ಭಾಗ. ಇದು ಪಾಕಿಸ್ತಾನಕ್ಕೆ ಸಂಬಂಧಿಸದ ತುಂಡು. ಹಿಂದುಗಳ ಪ್ರಬಲ ಬಹುಮತವುಳ್ಳದ್ದಿದು. ಲೀಗಿನವರ ಪ್ರತ್ಯೇಕತೆಯ ಪ್ರಶ್ನೆಯು ಇಲ್ಲಿ ಸೋಂಕದಿರುವುದರಿಂದ ನೆಮ್ಮದಿಯ ಗುಂಪು ಇದೊಂದೇ.

'ಬಿ' ಗುಂಪು

ಪಂಜಾಬ್, ಸಿಂಧ್, ಗಡಿನಾಡು ಮತ್ತು ಬಲೂಚಿಸ್ಥಾನ—ಈ ನಾಲ್ಕು ಪ್ರಾಂತ್ಯಗಳು 'B' ಪಂಗಡದಲ್ಲಿವೆ. ಈ ಪೈಕಿ ಪಂಜಾಬಿನಲ್ಲಿ ಸಾಮಾನ್ಯರಿಗೆ 8, ಮುಸಲ್ಮಾನರಿಗೆ 16 ಸ್ಥಾನಗಳು. ಸಾಮಾನ್ಯ ಸ್ಥಾನಗಳಲ್ಲಿ 6 ಕಾಂಗ್ರೆಸಿಗೆ ದೊರೆತಿವೆ. ಉಳಿದೆರಡು ಯೂನಿಯನಿಸ್ಟ್ ಪಕ್ಷಕ್ಕೆ ಹೋಗಿವೆ. ಮುಸ್ಲಿಂ ಸ್ಥಾನಗಳಲ್ಲಿ 15 ಲೀಗಿಗೂ 1 ಯೂನಿಯನಿಸ್ಟ್ ಪಕ್ಷಕ್ಕೂ ಹೋಗಿವೆ. ಮಿ. ಜಿನ್ನಾ, ಸರ್. ಖಾನ್ ನೂನ್, ಮಾಮ್ಡೋಟಿನ ನವಾಬ್, ರಾಜಾ ಗಜ್ನಾಫರ್ ಆಲಿ ಮೊದಲಾದ ಮುಸ್ಲಿಂ ಮುಖಂಡರು ಇಲ್ಲಿಂದಲೇ ಆರಿಸಲ್ಪಟ್ಟರು. ಸರ್. ಟೇಕ್‌ಚಂದ್, ಮೆಹರ್‌ಚಂದರಂತಹ ಹಿಂದೂ ಪ್ರಮುಖರ ಆಯ್ಕೆ ಇಲ್ಲಿಂದಲೇ. ಸಿಕ್ಕರ ನಾಲ್ಕು ಸ್ಥಾನಗಳು ಇಲ್ಲೇ ಇದ್ದರೂ ಅವೀಗ ಖಾಲಿ ಬಿದ್ದಿವೆ. ಸಿಂಧ್ ಪ್ರಾಂತ್ಯದಲ್ಲಿ 1 ಸಾಮಾನ್ಯ ಸ್ಥಾನ, 3 ಮುಸ್ಲಿಂ ಸ್ಥಾನಗಳು. ಸಾಮಾನ್ಯ ಸ್ಥಾನಕ್ಕೆ ಕಾಂಗ್ರೆಸಿನ ಹಳೇ ಧುರೀಣ ಜೈರಾಮದಾಸ್ ದೌಲತ್ ರಾಮರು ಆರಿಸಲ್ಪಟ್ಟರು. ಮುಸ್ಲಿಮರ ಮೂರು ಸ್ಥಾನಗಳೂ ಲೀಗಿಗೆ ಹೋಗಿವೆ. ಗಡಿನಾಡಿನಲ್ಲಿ 3 ಮುಸ್ಲಿಂ ಸ್ಥಾನಗಳು ಮಾತ್ರ. ಅವುಗಳಲ್ಲೆರಡು ಕಾಂಗ್ರೆಸಿಗೂ ಒಂದು ಮುಸ್ಲಿಂ ಲೀಗಿಗೂ ದೊರೆತುವು. ಕಾಂಗ್ರೆಸಿನ ಇಬ್ಬರೆಂದರೆ ಮೌಲಾನಾ ಅಜಾದ್ ಮತ್ತು ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನ್. ಬಲೂಚಿಸ್ಥಾನಕ್ಕಿದ್ದುದು ಒಂದೇ ಒಂದು ಮುಸ್ಲಿಂ ಸ್ಥಾನ. ಅಲ್ಲಿ ಲೀಗ್ ಪಕ್ಷಪಾತಿ, ಸ್ವತಂತ್ರ ಉಮೇದ್ವಾರಿಯು ಕಾಂಗ್ರೆಸ್ ಉಮೇದ್ವಾರಿಯನ್ನು ಸೋಲಿಸಿ ಬಂದಿದ್ದಾನೆ.

ಘಟನಾ ಸಮಿತಿಯ ಒಳಹೊರ ರೂಪ.

'ಬಿ' ಗುಂಪು ಪಾಕಿಸ್ತಾನ್ ಪ್ರಶ್ನೆಗೊಳಪಟ್ಟದ್ದು. ತಿಕ್ಕಾಟ ಘರ್ಷಣೆಗಳ ರಂಗವಾಗುವಂತಹದು. ಪ್ರಾಂತಿಕ ಗುಂಪಿನಲ್ಲಿ ಸೇರುವ ಯಾ ಸೇರದಿರುವ ಹಕ್ಕು ಪ್ರತಿಯೊಂದು ಪ್ರಾಂತ್ಯಕ್ಕೆ ಪ್ರಥಮದಲ್ಲೇ ಇದೆ ಎಂಬ ಕಾಂಗ್ರೆಸಿನ ವಾದಕ್ಕೂ, ಪ್ರಥಮತಃ ಕಡ್ಡಾಯವಾಗಿ ಗುಂಪಿಗೆ ಸೇರಲೇಬೇಕೆಂಬ ಬ್ರಿಟಿಷ್ ಮತ್ತು ಲೀಗಿನ ವಾದಕ್ಕೂ ಇಲ್ಲಿ ಘರ್ಷಣೆ ಬರಲಿಕ್ಕಿದೆ. ಆದ್ದರಿಂದಲೇ ಆ ಕಡೆಯಿಂದ ಅಜಾದ್, ಗಫರ್ ಖಾನರೂ ಈ ಕಡೆಯಿಂದ ಸ್ವತಃ ಮಿ. ಜಿನ್ನರೂ ಇಲ್ಲಿಯೇ ಮುಂದೆ ಬಂದಿದ್ದಾರೆ. ಒಂದೇ ಮೇಜಿನ ಮುಂದೆ ಮೌ. ಅಜಾದರಿಗಿದಿರಾಗಿ ಕುಳಿತುಕೊಳ್ಳುವ ದುರ್ಗತಿಯನ್ನು ಮಿ. ಜಿನ್ನರಿದು ವರೆಗೆ ತಪ್ಪಿಸಿಕೊಂಡಿದ್ದರೂ ಈಗ ಅದು ಅನಿವಾರ್ಯವಾಗಿದೆ! ಕಾಂಗ್ರೆಸ್ ವಾದದಂತೆ ಗಡಿನಾಡು 'ಬಿ' ಪಂಗಡದಲ್ಲಿ ಸೇರಲು ತಯಾರಿಲ್ಲವೆಂದು ಒತ್ತಿ ಹೇಳಲು ಗಡಿನಾಡಿನ ಬಹುಸಂಖ್ಯಾಕ ಪ್ರತಿನಿಧಿ (ಮೂವರಲ್ಲಿಬ್ಬರು)ಗಳು ಅಲ್ಲಿದ್ದಾರೆ. ಆದರೆ ಇಡೀ ಗುಂಪಿನಲ್ಲಿ ಮುಸ್ಲಿಂ ಲೀಗೇ ಬಹುಮತ ಪಡೆದಿದೆ. ಒಟ್ಟಿಗೆ 35 ಸದಸ್ಯರುಳ್ಳ ಈ ಗುಂಪಿನಲ್ಲಿ 19 ಬಲೂಚಿಸ್ತಾನದ ಪ್ರತಿನಿಧಿ ಸಮೇತ-20 ಮುಸ್ಲಿಂ ಲೀಗಿನವರಾಗುತ್ತಾರೆ. ಕಾಂಗ್ರೆಸ್ 11, ಯೂನಿಯನಿಸ್ಟ್ ಮುಸ್ಲಿಂ 1. ಉಳಿದ ನಾಲ್ಕು ಸ್ಥಾನಗಳು ಸಿಕ್ಕರ ಪಾಲಿನವಿವೆ.

'ಸಿ' ಗುಂಪು

ಬಂಗಾಳ ಮತ್ತು ಅಸ್ಸಾಮ್—'ಸಿ' ಗುಂಪಿನಲ್ಲಿವೆ. ಈ ಪೈಕಿ ಬಂಗಾಳದಲ್ಲಿ ಸಾಮಾನ್ಯ ಸ್ಥಾನಗಳು 27. ಮುಸ್ಲಿಂ ಸ್ಥಾನಗಳು 33 ಸಾಮಾನ್ಯ ಸ್ಥಾನಗಳ ಪೈಕಿ ದಳಿತ ವರ್ಗದ ನಾಯಕ ಡಾ। ಅಂಬೇಡ್ಕರ್ ಮತ್ತು ಓರ್ವ ಕಮ್ಯೂನಿಸ್ಟ್ ಪ್ರತಿನಿಧಿ ಸೋಮನಾಥ ಲಾಹಿರಿಯವರಿಗೆ ರಡು ಹೋಗಿ ಉಳಿದ 25 ಸ್ಥಾನಗಳು ಕಾಂಗ್ರೆಸಿಗೆ ದೊರೆತಿವೆ. ಮಾಜೀ ಪ್ರಧಾನಿ ಎ. ಕೆ. ಫಜಲುಲ್ ಹಕ್ಕರಿಗೆ ಹೋದ ಒಂದು ಸ್ಥಾನವನ್ನು ಬಿಟ್ಟು ಉಳಿದ 32 ಮುಸ್ಲಿಂ ಸ್ಥಾನಗಳೂ ಲೀಗಿಗೆ ದೊರೆತಿವೆ. ನವಾಬಝಾಡಾ ಲಿಯಾಖತ್ ಅಲೀಖಾನ್, ಸರ್. ಅಝಿಝುಲ್ ಹಕ್, ಸುಹ್ರವರ್ದಿ, ನಾಜಿಮುದ್ದೀನ್ ಮೊದಲಾದ ಮುಸ್ಲಿಂ ಮುಖಂಡರೂ ಶರತ್‌ಚಂದ್ರ ಬೋಸ್, ಶ್ಯಾಮ ಪ್ರಸಾದ ಮುಖರ್ಜಿ, ಪ್ರಫುಲ್ಲ ಚಂದ್ರಘೋಷ್, ಶ್ರೀಮತಿ ಲೀಲಾ ರೋಯಿ, ಫ್ರೇಂಕ್ ಅಂತೋಣಿ (ಆಂಗ್ಲೋ ಇಂಡಿಯನ್) ಮೊದಲಾದ ಕಾಂಗ್ರೆಸ್ ಮುಖಂಡರೂ ಇಲ್ಲಿಂದಾರಿಸಲ್ಪಟ್ಟರು. ಅಸ್ಸಾಮಿನಲ್ಲಿ 7 ಸಾಮಾನ್ಯ, 3 ಮುಸ್ಲಿಂ ಸ್ಥಾನಗಳು. ಎಲ್ಲಾ ಸಾಮಾನ್ಯ ಸ್ಥಾನಗಳು ಕಾಂಗ್ರೆಸಿಗೂ ಎಲ್ಲಾ ಮುಸ್ಲಿಂ ಸ್ಥಾನಗಳು ಲೀಗಿಗೂ ದೊರೆತಿವೆ ಗೋಪೀನಾಥ ಬಾರ್ಡೋಲಿ ಮೊದಲಾದವರು ಕಾಂಗ್ರೆಸಿನಿಂದಲೂ ಸರ್. ಮಹಮ್ಮದ್ ಸಾದುಲ್ಲಾ ಮುಂತಾದವರು ಲೀಗ್ ಕಡೆಯಿಂದಲೂ ಬಂದಿದ್ದಾರೆ.

ಪಾಕಿಸ್ತಾನ್ ಪ್ರಶ್ನೆಗೆ ಸಂಬಂಧಿಸಿದ ಈ 'ಸಿ' ಗುಂಪಿನಲ್ಲೂ ಮುಸ್ಲಿಂ ಲೀಗಿಗೇನೇ ಬಹುಮತ ದೊರೆತಿದೆ. ಆದರದು 'ಬಿ' ಗುಂಪಿನಷ್ಟು ಪ್ರಬಲ ಬಹುಮತವಲ್ಲ ಇಲ್ಲಿ ಒಟ್ಟಿಗೆ 35 ಲೀಗ್ ಪ್ರತಿನಿಧಿಗಳಿದ್ದರೆ 32 ಕಾಂಗ್ರೆಸಿಗರು, ಅಂಬೇಡ್ಕರ್, ಫಜಲುಲ್‌ಹಕ್ ಮತ್ತು ಓರ್ವ ಕಮ್ಯೂನಿಸ್ಟ್ ಈ 3 ಮಂದಿ ಸ್ವತಂತ್ರರಿದ್ದಾರೆ. ಸ್ವತಂತ್ರ ತ್ರಿಮೂರ್ತಿಗಳತ್ತ ವಾಲುವರೆಂಬುದನ್ನಾಧರಿಸಿ 'ಸಿ' ಪಂಗಡದ ಭವಿಷ್ಯವಿದೆ. ಶರಶ್ಚಂದ್ರ ಬೋಸ್, ಶ್ಯಾಮ ಪ್ರಸಾದ ಮುಖರ್ಜಿಯವರಿಗಿದಿರಾಗಿ ಲಿಯಾಖತ್ ಅಲೀಖಾನರಂತಹ ಸಮರ್ಥ ಲೀಗ್ ಪುಡಾರಿಗಳು ಇಲ್ಲಿ ಹೋರಾಟಕ್ಕಿದ್ದಾರೆ.

ಅಂತೂ ಗುಂಪುವಾರಾಗಿ ನೋಡುವದಾದರೆ—A ಗುಂಪು: 164 ಕಾಂಗ್ರೆಸ್; 19 ಮುಸ್ಲಿಂ ಲೀಗ್; 7 ಸ್ವತಂತ್ರ. B ಗುಂಪು: 20 ಮುಸ್ಲಿಂ ಲೀಗ್; 11 ಕಾಂಗ್ರೆಸ್; 1 ಯೂನಿಯನಿಸ್ಟ್. C ಗುಂಪು: 35 ಮುಸ್ಲಿಂ ಲೀಗ್; 32 ಕಾಂಗ್ರೆಸ್; 3 ಸ್ವತಂತ್ರ.

ಕಾಂಗ್ರೆಸ್-ಲೀಗ್ ಎಳೆದಾಟವೆಲ್ಲಿ?

ಜುಮ್ಲಾ 391 ಮಂದಿ ಸದಸ್ಯರುಳ್ಳ ಮೂಲ ಘಟನಾ ಸಮಿತಿಯು ಸಂಪೂರ್ಣ ಸ್ವತಂತ್ರವಾದ ಸಭೆಯೆಂದು ಕಾಂಗ್ರೆಸ್ ಅನ್ನುತ್ತಿದೆ. ಅದರ ಕಾರ್ಯಕ್ರಮಗಳ ನಡುವೆ ಕೈಹಾಕುವ ಅಧಿಕಾರಬ್ರಿಟಿಷರಿಗಿಲ್ಲ. ಅದಾವ ನಿರ್ಧಾರ ಮಾಡಿದರೂ ಅದನ್ನಂಗೀಕರಿಸಿಕೊಳ್ಳಲು ಬ್ರಿಟಿಷ್ ಸರಕಾರ ಬದ್ಧವಿದೆ ಎಂದು ಕಾಂಗ್ರೆಸಿನ ವಾದ. ಅದಕ್ಕನುಗುಣವಾಗಿ ಕೇಂದ್ರಕ್ಕೆ ಬಿಡಲ್ಪಟ್ಟಿರುವ ಅಧಿಕಾರಗಳನ್ನು ಅದು ಬೇಕಾದಂತೆ ವಿಸ್ತರಿಸಿಕೊಳ್ಳುವುದು. ಅಂತೆಯೇ A. B.C.ಎಂದು ವಿಂಗಡಿಸಿರುವಗುಂಪುಗಳಲ್ಲಿ ಹೆಸರು ನಮೂದಿಸಿರುವ ಪ್ರತಿಯೊಂದು ಪ್ರಾಂತ್ಯಕ್ಕೂ ತನ್ನಿಚ್ಛೆಯಂತೆ ಸಂಬಂಧಪಟ್ಟ ಗುಂಪನ್ನು ಸೇರುವ ಅಥವಾ ಸೇರದಿರುವ ಸ್ವಾತಂತ್ರ್ಯವಿದೆ. ಅರ್ಥಾತ್ ಮೂಲ ಘಟನಾ ಸಮಿತಿ ಸೇರಿ ಅಧ್ಯಕ್ಷ ಚುನಾವಣೆಯೇ ಮೊದಲಾದ ಪೂರ್ವ ಕಾರ್ಯಕ್ರಮ ಮುಗಿದೊಡನೆ ಗುಂಪಿಗೆ ಹೆಸರು ಸೇರಿರುವ ಪ್ರತಿಯೊಂದು ಪ್ರಾಂತ್ಯದ ಪ್ರತಿನಿಧಿಗಳ ಅಭಿಮತ ಕೇಳಲಾಗುವದು; ಅವರು ಸಂಬಂಧಪಟ್ಟ ಗುಂಪಿಗೆ ಸೇರಲಿಚ್ಛಿಸುವದಿಲ್ಲವಾದರೆ ಸೇರಬೇಕೆಂಬ ನಿರ್ಬಂದವಿಲ್ಲ-ಎಂದು ಕಾಂಗ್ರೆಸಿನ ಸ್ಪಷ್ಟವಾ ನಿದರ್ಶನಕ್ಕಾಗಿ ಅಸ್ಸಾಮ್ ಎಸೆಂಬ್ಲಿಯು C ಗುಂಪಿಗೆ ಅಸ್ಸಾಮನ್ನು ಸೇರಿಸುವದನ್ನು ವಿರೋಧಿಸಬೇಕೆಂದು ತನ್ನ ಪ್ರತಿನಿಧಿಗಳಿಗೆ ಆಜ್ಞೆಯಿತ್ತಿದೆ. ಅಂತೆಯೇ ಗಡಿನಾಡು B ಗುಂಪಿಗೆ ಸೇರಲಿಷ್ಟಪಡುವದಿಲ್ಲ. ಅಲ್ಲಿಯ ಮೂವರ ಪ್ರತಿನಿಧಿಗಳಲ್ಲಿಬ್ಬರು B ಗುಂಪಿಗೆ ಗಡಿನಾಡು ಸೇರುವದನ್ನು ವಿರೋಧಿಸಲಿದ್ದಾರೆ. ಅಂತೆಯೇ ಅವೆರಡನ್ನೂ ಆ ಪಂಗಡಗಳಿಗೆ ಸೇರಿಸುವಂತಿಲ್ಲ. ಈ ವಾದಕ್ಕೆ ಲೀಗ್ ಬದ್ಧ ವಿರೋಧವಿದೆ. B ಮತ್ತು C ಪಂಗಡಗಳೆರಡರಲ್ಲಿಯೂ ಮುಸ್ಲಿಂ ಬಹುಮತವಾಗುತ್ತದೆ. ಅವೆರಡು ಗುಂಪುಗಳಿಗೂ ಗುಂಪುವಾರಾಗಿ ರಾಜ್ಯಭಾರ ವ್ಯವಸ್ಥೆ ರಚಿಸಿಕೊಂಡಲ್ಲಿ ಅವು ದ್ವಿದಳ ಪಾಕಿಸ್ತಾನವಾಗುವವು. ಲೀಗ್ ಘೋಷಣೆಯನ್ನೊಪ್ಪದ ಗಡಿನಾಡಿನ ವಾದವಾವುದೂ ಪಂಜಾಬ್, ಸಿಂಧಗಳ ಬಹುಮತದೆದುರಲ್ಲಿ ನಡೆಯದೆ ಅದು B ಗುಂಪಿನ ಭಾಗವಾಗಿ ಬಗಲೊಳಗಾಗುವದು. ಇತ್ತ ಹಿಂದೂ ಬಹುಮತವಿರುವ ಅಸ್ಸಾಮು ವಾದವೂ ಬಂಗಾಳದ ಬಹುಮತದೆದುರಿನಲ್ಲಿ ಸಾಗುವಂತಿಲ್ಲ ಮಾತ್ರವಲ್ಲದೆ ಗುಂಪುವಾರು ರಾಜ್ಯ ರಚನೆಮಾಡುವಾಗ ಮುಂದಕ್ಕೆ ಅಸ್ಸಾಮಿನಲ್ಲಿ ಹಿಂ

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**.

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ॥ ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ. ೩-೪-೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ದೂ ಬಹುಮತವಾಗದಂತಹ ವಿಧಾನವನ್ನು ನಿರ್ಮಿಸಿ ಆ ಮೇಲಾದರೂ ಅದು 'ಸಿ' ಗುಂಪಿನಿಂದ ಪ್ರತ್ಯೇಕವಾಗುವ ಅನುಕೂಲತೆ ದೊರೆಯದಂತೆ ಮಾಡಬಹುದು. ಹೀಗಾಗಿ 'ಬಿ' ಮತ್ತು 'ಸಿ' ಸಂಗಡಗಳೆಂದರೆ ಪಾಕಿಸ್ತಾನಕ್ಕೊಪ್ಪದವರನ್ನೂ ಗಿಂದೂ ಬಹುಮತವಿರುವ ಭಾಗವನ್ನೂ ಸೇರಿಸಿ ಪಾಕಿಸ್ತಾನ ರೂಪಿಸಿಕೊಟ್ಟಂತೆಯೇ ಸರಿ. ಆದ್ದರಿಂದ ಪೃಥಮತಃ ಕಡ್ಡಾಯವಾಗಿ ಪ್ರತಿಯೊಂದು ಪ್ರಾಂತ್ಯವೂ ಸಂಬಂಧಪಟ್ಟ ಗುಂಪಿಗೆ ಸೇರಲೇಬೇಕೆಂದು ಲೀಗಿನ ವಾದ. ಲೀಗು ಬ್ರಿಟಿಷ್ ಸೂಚನೆಗಳನ್ನಂಗೀಕರಿಸಲು ಕಾರಣವೂ ಇದೊಂದೇ. ಅಂತೆಯೇ ಭಾವೀ ಕೇಂದ್ರ ಸರಕಾರದ ಅಧಿಕಾರವನ್ನು ಕಡಿಮೆಮಾಡಬೇಕಲ್ಲದೆ ಹೆಚ್ಚಿಸಕೂಡದೆಂದೂ ಲೀಗಿನ ಒತ್ತಾಯವಿದೆ. ಬ್ರಿಟಿಷ್ ಭಾವನೆಯು ಬಹುಮಟ್ಟಿಗೆ ಲೀಗಿಗನುಕೂಲವಾಗಿದೆ. ತಮ್ಮ ಸೂಚನೆಗಳ ಗಡಿಮೀರಿ ಹೋದಲ್ಲಿ ತಾವು ಘಟನಾ ಸಮಿತಿಯ ನಿರ್ಣಯವನ್ನು ಅಂಗೀಕರಿಸಲಾರೆವೆಂದು ಬ್ರಿಟಿಷರವಾದ. ಭಾವೀ ಕೇಂದ್ರಕ್ಕೆ ಆ ಯೋಜನೆಯಲ್ಲೆಷ್ಟು ಅಧಿಕಾರನವೂದಿಸಲ್ಪಟ್ಟಿರುವದೋ ಅಷ್ಟೇ ಇರಬೇಕು. ಪ್ರಾಂತಿಕ ಗುಂಪುಗಳಲ್ಲಿ ಸಂಬಂಧಪಟ್ಟ ಪ್ರತಿಯೊಂದು ಪ್ರಾಂತ್ಯವೂ ಪೃಥಮತಃ ಕಡ್ಡಾಯವಾಗಿ ಸೇರಲೇಬೇಕು. ಒಂದು ಬಾರಿ ಸಂಗಡ ರಾಜ್ಯಾಂಗ ವ್ಯವಸ್ಥೆಯಾಗಿ ಬೆನ್ನಲ್ಲೇ ಚುನಾವಣೆ ನಡೆದ ಮೇಲೆ ಗುಂಪಿನಿಂದ ಹೊರಗಾಗುವ ನಿರ್ಧಾರಮಾಡಿ ಯಾವ ಪ್ರಾಂತ್ಯವೂ ಹೊರಗಾಗಬಹುದು. ಅಥವಾ ಆ ಮೇಲೆ ಪ್ರತಿ 10 ವರುಷಕ್ಕೊಮ್ಮೆ ಹಾಗೆ ಮಾಡುವ ಹಕ್ಕೂ ಇದೆ-ಎಂದು ಬ್ರಿಟಿಷರ ಸ್ಪಷ್ಟೀಕರಣ. ಆದರೆ ಕಾಂಗ್ರೆಸ್ ಈ ಶರ್ತವನ್ನೊಪ್ಪದೆ ಘಟನಾ ಸಮಿತಿಯೂ ಸ್ವಾತಂತ್ರ್ಯ ಹೋರಾಟ ರಂಗವೆಂದು ಭಾವಿಸಿ ತನ್ನ ಧೋರಣೆಯಂತೆಯೇ ಅಲ್ಲಿ ಕಾರ್ಯಸಾಗಿಸುವನೆಂದು ನಡುಬಿಗಿದಿದೆ. ಮುಂದೆ ಕೇಗೋ ನೋಡಲಿಕ್ಕಿದೆ.

ಘಟನಾ ಸಮಿತಿಗೆ ಲೀಗಿನ ಬಹಿಷ್ಕಾರ!

ಪ್ರತ್ಯಕ್ಷ ಚಳವಳದ ನಿರ್ಧಾರ.

ಬಿರುಸು ಭಾಷಣ! : : : : ಬಿರುದು ತ್ಯಾಗ!

ಬೊಂಬಾಯಿಯ ಕೈಸರೀ ಬಾಗ್ ಹಾಲಿನಲ್ಲಿ ತಾ. 27. 28, 29ರಲ್ಲಿ ಸೇರಿದ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯು ಕಟ್ಟಕಡೆಗೆ ಬ್ರಿಟಿಷ್ ಯೋಜನೆಯನ್ನು ಅರ್ಥಾತ್ ಘಟನಾ ಸಮಿತಿಯನ್ನು ಬಹಿಷ್ಕರಿಸಬೇಕು; ಪ್ರತ್ಯಕ್ಷ ಹೋರಾಟ ಹೂಡಬೇಕು; ಲೀಗ್ ಸದಸ್ಯರು ಬಿರುದು ತ್ಯಾಗ ಮಾಡಬೇಕು-ಎಂಬ ಪ್ರಾಮುಖ್ಯ ನಿರ್ಧಾರಮಾಡಿದೆ.

ಜಿನ್ನರ ಸಿಂಹ ಘರ್ಜನೆ

ತಾ. 27ನೇ ಅಪರಾಹ್ನ ಲೀಗ್ ಕಾನ್ಸಿಲು ಆವೇಶಮಯ ವಾತಾವರಣದಲ್ಲಾರಂಭವಾಯಿತು 450 ಪ್ರತಿನಿಧಿಗಳಲ್ಲದೆ, ಬಹುಸಂಖ್ಯಾಕ ಪ್ರೇಕ್ಷಕರೂ ದೇಶವಿದೇಶ ಬಾತ್ಮೀದಾರರೂ ನೆರೆದಿದ್ದರು. ಅಧ್ಯಕ್ಷ ಮಿ. ಜಿನ್ನಾ ಅವರು ಸುಮಾರು 150 ಮಿನಿಟು ಕೊಟ್ಟ ಪ್ರಾರಂಭ ಭಾಷಣವು ಪ್ರತ್ಯಕ್ಷ ರಣ ಘರ್ಜನೆಯೇ ಆಗಿದ್ದಿತು. ಢಿಲ್ಲಿ ಸಿಮ್ಲಾ ಮಾತುಕತೆ ಮತ್ತಾನಂತರದ ಘಟನೆಗಳನ್ನು ಕಿಡಿಮಾತುಗಳಿಂದ ವರ್ಣಿಸಿ ಸ್ವಂತ ಶಕ್ತಿಯಿಂದ ಹೋರಾಡುವದೊಂದೇ ಮುಸಲ್ಮಾನರ ಪಾಲಿಗುಳಿದಿದೆಯೆಂಬುದನ್ನು ಸಭೆಗೆ ಮುಂದಟ್ಟುಮಾಡಿ, ಕೊನೆಯ ನಿರ್ಣಯದ ಹೊಣೆಯನ್ನವರು ಕೌನ್ಸಿಲಿನ ಪಾಲಿಗೆಬಿಟ್ಟರು. ಅವರ ಭಾಷಣದ ಕೆಲವಂಶ ಇಲ್ಲಿದೆ:--

ಬ್ರಿಟಿಷ್ ಸಮಿತಿಗೆ ಕೆನ್ನೇತಾಡನ!

"ಬ್ರಿಟಿಷ್ ಸರಕಾರದ ಮಾತನ್ನು ಇನ್ನೆಂದಿಗೂ ನಂಬದಂತಾಗಿದೆ. ಬ್ರಿಟಿಷ್ ಮಂತ್ರಿಮಂಡಲದ ಪ್ರತಿನಿಧಿಗಳು ಹತ್ತೇ ದಿನಗಳೊಳಗೆ ತಾವಾಡಿದ ಮಾತನ್ನು ತಾವೇ ಹಿಂತೆಗೆದಿದ್ದಾರೆ. ಕಾಂಗ್ರೆಸ್ ದೇವತೆಯ ಮನ ಮೆಚ್ಚಿಸಲು ಬ್ರಿಟಿಷ್ ಸಚಿವ ಸಮಿತಿ ತನ್ನ ಶಕ್ತಿ ಮೀರಿ ಪ್ರಯತ್ನಿಸಿದೆ. ಮತ್ತದಕ್ಕಾಗಿಯೇ ತಾತ್ಕಾಲಿಕ ಸರಕಾರರಚನೆಯನ್ನು ಹಿಂದೆ ಹಾಕಿದೆ. ಶಿಸ್ತು, ಐಕ್ಯತೆ ಮತ್ತು ಮುಸ್ಲಿಂ ರಾಷ್ಟ್ರದ ಸ್ವಂತ ಶಕ್ತಿಯ ಮೇಲೆಯೇ ವಿಶ್ವಾಸವೆಂಬ ಧೋರಣೆಯನ್ನು ನಾವಿಟ್ಟುಕೊಳ್ಳಬೇಕಾದ ಕಾಲವೀಗ ಬಂದಿದೆ ಎಂದು ನನಗನ್ನಿಸುತ್ತದೆ. ನಮ್ಮಲ್ಲಿ ಸಾಕಷ್ಟು ಶಕ್ತಿಯಿಲ್ಲವಾದರೆ ಆ ಶಕ್ತಿಯನ್ನು ನಿರ್ಮಿಸಿಕೊಳ್ಳಿರಿ. ನಾವು ಹಾಗೆ ಮಾಡಿದಲ್ಲಿ, ಕಾಂಗ್ರೆಸ್ ಹೋರಾಟಕ್ಕೆದ್ದು ಅಸಹಕಾರ ಹೂಡುವದೆಂಬ ಭಯದಿಂದ ಕಂಗಾಲಾಗಿರುವ ಬ್ರಿಟಿಷ್ ಸರಕಾರದ ಬಜಾವು, ಬಿಡುಗಡೆ ಮತ್ತದಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಂತಾಗುವದು. ನಾವು ಸಹ ಅದನ್ನು ಮಾಡುವೆವೆಂದು ಅವರಿಗೀಗ ಹೇಳೋಣ.

ಕಾಂಗ್ರೆಸಿನ ಮೇಲೆ ಉರಿಚೆಂಡು!

ಒಂದು ನ್ಯಾಯ ಸಾಧಿಸಬೇಕೆಂದು ವಿನಯ, ಪ್ರಾರ್ಥನೆಗಳ ಸಮೇತ ಲೀಗ್ ಮಾಡಿದ ಎಲ್ಲಾ ಪ್ರಯತ್ನಗಳಿಗೂ ಕಾಂಗ್ರೆಸಿನಿಂದ ಏನೊಂದೂ ಬೆಲೆಬಾರದೆಹೋಯಿತು. ಇತ್ತೀಚಿಗಿನ ಸಂಧಾನದ ಮಾತುಕತೆಗಳಲ್ಲಿ, ಸವರ್ಣ ಹಿಂದುಗಳೇ ಪ್ರಬಲ ಬಹುಸಂಖ್ಯೆಯಲ್ಲಿರುವ ಕಾಂಗ್ರೆಸು ವಹಿಸಿದ ಕಪಟ, ವಂಚನೆಯ ಧೋರಣೆಯಿಂದ ಅದು ರಾಷ್ಟ್ರದ ಜನತೆಗೆ ಮಹದನ್ಯಾಯ ಮಾಡಿದೆ ಎಂದು ನಾನು ಸಾರಿ ಹೇಳುತ್ತೇನೆ. ಬ್ರಿಟಿಷ್ ಸಮಿತಿಯು ಕಾಂಗ್ರೆಸಿನ ಗೊಂಬೆಯಾಯಿತು. ಅದು ತನ್ನ ಹುಟ್ಟುಬುದ್ಧಿಯ ಆಟವನ್ನೇ ಆಡಿದೆ. ಮುಸಲ್ಮಾನರ ಮೇಲೆ ಕಾಂಗ್ರೆಸಿಗೆ ತುಂಬಿ ತುಳುಕುವಷ್ಟು ದ್ವೇಷವಿದೆ. ಢಿಲ್ಲಿಯಲ್ಲಿ ಶುದ್ಧ ಅಪ್ರಗತಿಕ ಹಾಗೂ ನೌಕರ ಶಾಹಿ ಸರಕಾರವನ್ನು ಸ್ಥಾಪಿಸುವಂತೆ ಮಾಡಿ ಕಾಂಗ್ರೆಸು ಈ ರಾಷ್ಟ್ರವನ್ನು 40 ವರುಷಗಳಷ್ಟು ಹಿಂದಕ್ಕೆ ದೂಡಿದೆ. ತಾತ್ಕಾಲಿಕ ಸರಕಾರದೊಳ ಹೊಕ್ಕು ಲೀಗನ್ನು ಬದಿಗೆ ಸಂಸುವೆನೆಂದು ಕಾಂಗ್ರೆಸ್ ಭಾವನೆ. ಅಲ್ಲಿಗದು ಹೋಗವದಾದರೆ ಸುಸ್ವಾಗತವೆನ್ನುತ್ತೇನೆ. ಅಂತಾಗುವದರ ಭಯವೇ ನಮಗಿಲ್ಲ. ಆಗ ಹೇಗೆಮಾಡಬೇಕೆಂಬುದು ನಮಗೆ ತಿಳಿದಿದೆ.

ಟೋಪಿಯಿಂದ ಮಾತಾಡುತಿದ್ದಾರೆ!

ಘಟನಾ ಸಮಿತಿಯನ್ನು ಸರ್ವ ಸ್ವತಂತ್ರಗೊಳಿಸುವೆವೆನ್ನುತ್ತಿರುವ ಅವರು ತಮ್ಮ ಹ್ಯಾಟಿನಿಂದಲ್ಲದೆ ತಲೆಯಿದ್ದು ಮಾತಾಡುತ್ತಿಲ್ಲ. ಆ ಘಟನಾ ಸಮಿತಿ ಕರೆಯುವವರು ಬ್ರಿಟಿಷ್ ಸರಕಾರದಿಂದ ನೇಮಕಗೊಂಡಿದ್ದ ವೈಸರಾಯರು. ಅಂತಹ ಸಮಿತಿಯು ಜಂಭದ ಜವಾಹಿರರ ಮಕ್ಕಳಾಟಿಕೆಯ ಮಾತುಗಳಿಂದ ಸ್ವತಂತ್ರ ಸಭೆಯಾಗಬಲ್ಲುದೆ? ಆ ಮಹಾ ಬ್ರಿಟಿಷ್ ರಾಜಕಾರಣಿಗಳ ಮಾತಂತಿರಲಿ, ಸಾಮಾನ್ಯ ಬುದ್ಧಿಯ ಯಾವನಿಗಾದರೂ ಘಟನಾ ಸಮಿತಿಗೆ ಕಾಂಗ್ರೆಸಿನ ಅಂಗೀಕಾರವು ಅಪಾರ್ಥದ್ದೆಂಬುದು ಮನವರಿಕೆಯಾಗದಿರದು. ಈ ನಿರ್ಧಾರವನ್ನೇ ಮಂತ್ರಿ ಸಮಿತಿ ಮತ್ತು ವೈಸರಾಯರು ಅಂಗೀಕಾರವೆಂದು ನೆನಸಿರುವದು ಆಶ್ಚರ್ಯಕರ. ಆ ಮಾತುಕತೆಗಳಲ್ಲಿ ತುದಿಯಿಂದ ಬುಡದ ವರೆಗೂ ಅವರಿಗೆ ಕಾಂಗ್ರೆಸಿನ ಹೆದರಿಕೆ ಅಂಟಿಕೊಂಡಿತ್ತು.

ಮುಳುಗುವವನಿಗೆ ಹುಲ್ಲು ಕಡ್ಡಿ!

ಮುಳುಗಿ ಸಾಯುವವನು ಹುಲ್ಲು ಕಡ್ಡಿಯನ್ನಾದರೂ ಹಿಡಿದುಕೊಳ್ಳುವಂತೆ ಕಾಂಗ್ರೆಸಿನ ಈ ಸಶರ್ತವಾದವನ್ನೇ ಅಂಗೀಕಾರವೆಂದು ಬ್ರಿಟಿಷ ರಾಧರಿಸಿಕೊಂಡರು. ನಾವು ಸ್ವೀಕರಿಸಬಹುದು ಅಥವಾ ಧಿಕ್ಕರಿಸಬಹುದು; ಹೇಗಿದ್ದರೂ ಘಟನಾ ಸಮಿತಿಯು ಸರ್ವ ಸ್ವತಂತ್ರ ಸಭೆಯಲ್ಲ. ಸ್ವಪ್ನ ಲೋಕದಲ್ಲಿದ್ದು ಕಲ್ಪನೆ ಕಟ್ಟುವದರಿಂದ ಪ್ರಯೋಜನವೇನು? ನಾವೊಮ್ಮೆ ಅದ ಕ್ಕೊಪ್ಪಿದೆವಾದರೆ, ಮತ್ತದರ ನಿಜವಾದ

(೭ನೇ ಪುಟ ನೋಡಿರಿ)

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಫೋಟೋ ದೊಡನೆ ಬರೆಯಿರಿ.

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲಿಷ್ಟವಾದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E.) Tollygunge, Calcutta

ಸ್ಟಾಕಿಸ್ಟ್: ಷಾ ಕಲ್ಯಾಣಿ, ಮಂಗಳೂರು

ENGLISH MADE EASY

(SELF ENGLISH STUDY)

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು,

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ರೂ. 1—8—0 ಮಾತ್ರ

1 12—0ನ್ನು ಮನಿಯಾರ್ಡರು ಮಾಡಿದರೆ ಪ್ರತಿ ಕಳಿಸಲ್ಪಡುತ್ತ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಭಾರತ

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

CAPITAL

Authorised	... ...	Rs. 25,00,000
Issued & Subscribed	...	,, 16,00,000
Paid up	... ...	,, 15,64,715
Reserves Over ...	...	,, 1½ Lakhs

Branches at- Bombay, Madras, Bangalore, Coimbatore, Selem, Calicut, Hubli, Mysore, Cochin, Manglore, Madras etc., etc

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೧-೮-'೪೬

ಲೀಗಿನ ಅಸಹಕಾರ

ಬ್ರಿಟಿಷ್ ಸೂಚನೆಗಳನ್ನು ತಿರಸ್ಕರಿಸಿ, ಘಟನಾ ಸಮಿತಿಯನ್ನು ಬಹಿಷ್ಕರಿಸುವ ಮುಸ್ಲಿಂಲೀಗಿನ ನಿರ್ಧಾರದಿಂದ ಹೊಸ ಪರಿಸ್ಥಿತಿಯುಂಟಾಗಿದೆ. ಈ ನವವನ್ನಾಧರಿಸಿ ಬ್ರಿಟಿಷ್ ಸರಕಾರವು ಅಂತರ್ಲಾಗ ಹೊದೆದರೆ ಹೋಯಿತು- ಇಲ್ಲವಾದರೆ ಇಷ್ಟರಲ್ಲಾಗಿ ಘಟನಾ ಸಮಿತಿ ಅಡಿಮೇಲಾಗಬೇಕೆಂದಿಲ್ಲ. ತಾತ್ಕಾಲಿಕ ಸರಕಾರದ ರಚನೆಯ ಸಂಬಂಧದಲ್ಲಿ ಲೀಗಿನ ಮುಖಕ್ಕೆ ಮಂಗ ಳಾರತಿಯೆತ್ತಿದಂತೆ ಈ ಬಾರಿ ಘಟನಾಸಮಿತಿಯ ಮಟ್ಟಿಗೆ ಕಾಂಗ್ರೆಸಿನ ಮುಖಕ್ಕೂ ಮಸಿ ಹಚ್ಚಲು ಬ್ರಿಟಿಷರಿಂದ ಅಷ್ಟೊಂದು ಸಾಧ್ಯವಾಗದು. ಬ್ರಿಟಿಷರ ಮುಂದಿನ ಧೋರಣೆಯೇನೆಂಬುದು ಸ್ಪಷ್ಟವಾಗದೆ ಕಾಂಗ್ರೆಸಿಗೀಗ ಮಾತಾಡಲಾಗುವುದಿಲ್ಲ

ಅದು ಹೇಗಿದ್ದರೂ, 'ಅಸಹಕಾರ' 'ಬಿರುದು ತ್ಯಾಗ' ಇತ್ಯಾದಿ 1920ನೇ ಇಸವಿಯ ಶಬ್ದಗಳು ಲೀಗ್ ಠರಾವಿನಲ್ಲಿ ಈಗ ತಾನೇ ಬಂದುದನ್ನು ಕಂಡು ವಿನೋದವೇನೆನ್ನಿಸಿದೆ ಮಿ ಜಿನ್ನರೇ ಹೇಳಿರುವಂತೆ ಕಾಂಗ್ರೆಸಿನಂತೆ ತಾವೂ ಹೆದರಿಸಬಲ್ಲೆವೆಂಬುದನ್ನು ಬ್ರಿಟಿಷರಿಗೆ ತೋರಿಸುವುದಕ್ಕಾಗಿಯೇ ಕಾಂಗ್ರೆಸ್ ಮಂಚಾನೆ ಮುಗಿಸಿದ್ದ ಚಳವಳಿಗಳನ್ನು ಲೀಗ್ ಈ ಮುಸ್ಲಿಂಜನರಲ್ಲಿ ಅಡಗಿಸಲು ಹೊರಟಿದೆ! ಆದರೆ ಬ್ರಿಟಿಷರು ಹೆದರುವುದು ಕಾಂಗ್ರೆಸಿನ ಮಾತಿಗಲ್ಲ, ಕೃತಿಗೆ ಜೋಡಿಸಿದೊಡನೆ ಸಶಕ್ತಿಯುಳ್ಳ ಬ್ರಿಟಿಷರು ಗಿಂಜುವರಷ್ಟೆ? ಈ ದೃಷ್ಟಿಯಿಂದ ಬೆಲೆ ಬರುವಂತಹದೇನೂ ಇಷ್ಟರವರೆಗೆ ಲೀಗಿನಿಂದಾಗಿಲ್ಲ. ಆದರ ಶಕ್ತಿ, ಸಾಹಸ, ತ್ಯಾಗಗಳು ಕಾರ್ಯಮೂಲಕ ತೋರಿಬರಲಿ— ಆಗ ಶಹಭಾಸ್ ಕೊಡೋಣ. ಆಚರಣೆಗೆ ತರುವದಕ್ಕಿಂತ ಪ್ರಸ್ತಾಪದ ಅಭಿನಂದನೆಕೊಡುವುದರಲ್ಲಿ ಲಾಭವಿದ್ದರಿಂದ ಅದನ್ನು ಪ್ರತ್ಯಕ್ಷ ಕಂಡ ಮೇಲೆಯೇ ಇದನ್ನು ಸಲ್ಲಿಸುವ! ಅಂತೂ ಒಂದು ಮಾತು ಸತ್ಯ. ಮುಸ್ಲಿಂಲೀಗ್ ಅಧಿಕ ಪ್ರಸಂಗಕ್ಕೆ ಹೋಗದೆ ಬ್ರಿಟಿಷರೊಡನೆಯೇ ಹೋರಾಡಿದಲ್ಲಿ ಅಗ ಕಾಂಗ್ರೆಸಿನಿಂದದಕ್ಕೆ ದೊರೆಯುವದು ನಿಜಕ್ಕೂ ಅಭಿನಂದನೆಯೊಂದೇ. ಕಾಂಗ್ರೆಸ್ ಬ್ರಿಟಿಷರೊಡನೆ ಹೋರಾಡಿದಾಗ ತಾನು ನಿರ್ಲಿಪ್ತನಾಗಿಯೇ ನಿಂತಿದ್ದ 'ಇದು ಮುಸಲ್ಮಾನರ ವಿರುದ್ಧ ಹೋರಾಟ ಹೊರತು ಬ್ರಿಟಿಷರೊಡನಲ್ಲ, ಎಂಬ ತನ್ನ ಮಾತನ್ನು ಮಿ. ಜಿನ್ನರು ಆ ಸಂದರ್ಭದಲ್ಲಾದರೂ ಸ್ಮರಿಸಿಕೊಳ್ಳಲಿ!

ಲೀಗಿನ ಈ ನೂತನ ಧೋರಣೆಯಿಂದ ದೇಶದ ವಾತಾವರಣವು ಪ್ರಕ್ಷುಬ್ಧವಾಗುವುದು ಖಂಡಿತ. ಆದರೂ, ಕಾಂಗ್ರೆಸ್ ಅಗ್ನಿ ಪರೀಕ್ಷೆಗೊಳಗಾದಾಗಲೆಲ್ಲಾ ಅದನ್ನು ಹಂಗಿಸುವದೊಂದನ್ನೇ ಹವ್ಯಾಸವಾಗಿ ಮಾಡಿಕೊಂಡಿದ್ದ ಮುಸ್ಲಿಂ ಲೀಗು, ಈಗ ತಾನೇ ಆ ಪರೀಕ್ಷೆ ಕೊಡಬೇಕಾಗಿ ಬಂದ ಈ ಸಂದರ್ಭವು ಕೆಟ್ಟದಲ್ಲವೆನ್ನುತ್ತೇವೆ.

ಆಯುರ್ವೇದ ಕಾಲೇಜು ಉಡುಪಿಯಲ್ಲಾಗಲಿ.

ಜನತೆಯಲ್ಲಿ ಸ್ವದೇಶೀ ಸಂಸ್ಕೃತಿಯುಂಟಾಗಬೇಕಾದರೆ ವಿದ್ಯೆಯಂತೆಯೇ ವೈದ್ಯಕೀ ವಿಭಾಗದಲ್ಲೂ ರಾಷ್ಟ್ರೀಯತೆಯಿರಬೇಕೆಂಬುದನ್ನು ಮನಗಂಡು ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಸರಕಾರವು ಆಯುರ್ವೇದಕ್ಕೆ ಪ್ರೋತ್ಸಾಹ ಕೊಡಲು ಮುಂದೆ ಬಂದಿರುವದು ಅಭಿನಂದನೀಯ. ಪ್ರಾಂತ್ಯದ ತಮಿಳು, ಆಂಧ್ರ ಕೇರಳ ಮತ್ತು ಕರ್ನಾಟಕ ಭಾಗಗಳಿಗಾಗಿ ಬೇರೆ ಬೇರೆ ಆಯುರ್ವೇದ ಕಾಲೇಜುಗಳನ್ನು ತೆರೆಯುವ ಸ್ತುತ್ಯ ಸಂಕಲ್ಪವನ್ನೀಗ ಸರಕಾರ ಮಾಡಿದೆ. ಆದರೆ ಒಂದು ಭಾಷಾವಾರು ಭಾಗಕ್ಕೆ ಸಂಬಂಧಿಸುವ ಈ ಕಾಲೇಜು ಅಲ್ಲಿಯ ಜನತೆಗೆ ಅನುಕೂಲವಾದ ಹಾಗೂ ಆಕರ್ಷಕ ಕೇಂದ್ರದಲ್ಲಿರುವದು ಅಗತ್ಯ. ಉಡುಪಿಯು ಕನ್ನಡಿಗರೆಲ್ಲರ ಲಕ್ಷ್ಯದಲ್ಲಿರುವ-ವರುಷದಲ್ಲಿ ಕೆಲವು ಬಾರಿ ಕನ್ನಡಿಗರನ್ನು ಒಟ್ಟುಗೂಡಿಸುವ–ಯಾತ್ರಾ ಸ್ಥಳ. ಮಾತ್ರವಲ್ಲದೆ ಇಂತಹ ಕೇಂದ್ರಕ್ಕಿರಬೇಕಾದ ಪ್ರಯಾಣಾನುಕೂಲತೆ, ಹವಶುದ್ಧತೆ, ಸ್ಥಳ ಸೌಂದರ್ಯ ಮತ್ತು ಸೌಕರ್ಯಗಳಿಗೂ ಹೆಸರಾಗಿದೆ. ಈ ಬಾರಿಯ ಅಖಿಲ ಭಾರತ ಆಯುರ್ವೇದ ಸಮ್ಮೇಲನವು ಉಡುಪಿಗೆ ಹತ್ತಿರದಲ್ಲಿರುವ ಮಣಿಪಾಲದಲ್ಲಿಯೇ ನೆರೆದಿತ್ತು. ಉಡುಪಿ ನಗರ ಮತ್ತು ತಾಲೂಕಿನಲ್ಲಿ ಹಳೆ ಹೊಸ ಹೈಸ್ಕೂಲುಗಳು ಹಲವಿವೆ. ಅಖಿಲ ರಾಷ್ಟ್ರದಲ್ಲಿಯೇ ಅಪೂರ್ವವಾಗಿರುವ ಸಂಸ್ಕೃತ ಕಾಲೇಜು ಇಲ್ಲಿದೆ. ಆದ್ದರಿಂದ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಹೊಣೆಯನ್ನು ಕೂಡಾ ಉಡುಪಿ ಹೊರಬಲ್ಲುದು. ತುಲನಾತ್ಮಕವಾಗಿ ನೋಡುವದಾದರೆ ಜೀವನ ವೆಚ್ಚ ಕೂಡಾ ಇಲ್ಲಿ ಕಡಿಮೆ. ಇವೆಲ್ಲಾ ಕಾರಣಗಳ ಮೇಲಿಂದ ಕರ್ನಾಟಕದ ಪಾಲಿನ ಆಯುರ್ವೇದ ಕಾಲೇಜನ್ನು ಉಡುಪಿಯಲ್ಲಿ ಅಥವಾ ಅದರ ಅಸುಪಾಸಿನಲ್ಲಿ ಸ್ಥಾಪಿಸುವದೇ ಯೋಗ್ಯವೆಂಬುದು ನಿರ್ವಿವಾದ. ಆಯುರ್ವೇದ ಕಾಲೇಜಿನ ಆವಶ್ಯಕತೆಯನ್ನು ಮನಗಂಡ ಸರಕಾರಕ್ಕೆ ಆ ಸಂಬಂಧದ ಈ ಸತ್ಯಸ್ಥಿತಿಯು ಮುಂದಟ್ಟಾಗುವದೆಂದೂ ಉಡುಪಿ ಅಥವಾ ಆಸುಪಾಸಿನಲ್ಲಿ ಅದರ ಸ್ಥಾಪನೆಯಾಗುವುದೆಂದೂ ಹಾರೈಸುತ್ತೇವೆ. ಇದಕ್ಕಾಗಿ ಅಧಿಕಾರಿಗಳಿಗೆ ಮನವಿಯೊಪ್ಪಿಸಲು ಹೋಗಲಿರುವ ಶಿಷ್ಟಮಂಡಲಿಯು ಜನತೆಯ ನಿಜ ಕಲ್ಯಾಣವೊಂದರ ರಾಯಭಾರ ವಹಿಸಿರುವದೆಂದು ಶ್ಲಾಘಿಸಿ, ಆದರ ವಿಜಯವನ್ನು ಕೋರುತ್ತೇವೆ.

ಉಡುಪಿ.

ಆಯುರ್ವೇದ ಕಾಲೇಜ್ ಉಡುಪಿಯಲ್ಲಾಗಬೇಕು--ದೇಶೀಯ ವೈದ್ಯ ಪ್ರಚಾರಕ್ಕಾಗಿ ಮದ್ರಾಸು ಸರಕಾರವು ಮದ್ರಾಸಿನಲ್ಲೊಂದು ಕೇಂದ್ರ ಕಾಲೇಜ್, ಒಂದು ಸಂಶೋಧನ ಕೇಂದ್ರ ಮತ್ತು ಆಂಧ್ರ, ತಮಿಳುನಾಡು, ಕೇರಳ, ಕರ್ನಾಟಕ ಎಂಬ ೪ ಪ್ರಾಮುಖ್ಯ ಭಾಷಾಕೇಂದ್ರಗಳಲ್ಲಿ ಒಂದೊಂದು ಪ್ರಾದೇಶಿಕ ಕಾಲೇಜ್ ತೆರೆಯ ವಿರುವುದಷ್ಟೆ. ಕರ್ನಾಟಕದಬಗ್ಗೆ ಕಾಲೇಜ್ ಮಂಗಳೂರಲ್ಲಿ ಸ್ಥಾಪಿತವಾಗುವುದೆಂದು ತಿಳಿದು ಬರುತ್ತದೆ. ಆದರೆ ಆ ಕಾಲೇಜ್ ಉಡುಪಿಯಲ್ಲಾಗಲೀ ಅಸುಪಾಸಿನಲ್ಲಾಗಲೀ ಆಗುವುದು ಅನುಕೂಲ ಹಾಗೂ ಆವಶ್ಯಕವೆಂದು ಸರಕಾರವನ್ನು ಕೇಳಿಕೊಳ್ಳುವ ಬಗ್ಗೆ ತಾ 28-7-46ರಲ್ಲಿ ಒಕಡೆಮಿ ಆಫ್ ಜನರಲ್ ಎಜ್ಯುಕೇಶನಿನ ವತಿಯಿಂದ ಸಭೆಯೊಂದು ಮುಕುಂದ ನಿವಾಸದಲ್ಲಿ ವೈದ್ಯಗುರು ಶ್ರೀ. ಎಂ. ಆರ್. ಭಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಡಾ. ಮಾಧವ ಪೈಗಳು ಆಯುರ್ವೇದಕ್ಕೆ ಸಂಸ್ಕೃತವು ಪ್ರಾಮುಖ್ಯ ಭಾಷೆಯಾದುದರಿಂದಲೂ ಇಲ್ಲಿ ಸಂಸ್ಕೃತ ಕಾಲೇಜ್ ಇರುವುದರಿಂದಲೂ, ಉಡುಪಿಯಲ್ಲಿ ಮತ್ತು ಆಸುಪಾಸಿನಲ್ಲಿ ಹಲವು ಹೈಸ್ಕೂಲುಗಳಿದ್ದು ತುಂಬ ವಿದ್ಯಾರ್ಥಿಗಳು ದೊರೆಯಬಹುವಾದುದರಿಂದಲೂ ಕಟ್ಟಡ, ವಾಸ್ತವ್ಯಾದಿಗಳಿಗೆ ಇಲ್ಲಿ ಕಡಿಮೆ ವೆಚ್ಚವಾಗುವದರಿಂದಲೂ ಕಾಲೇಜ್ ಉಡುಪಿಯಲ್ಲಾಗಲೀ ಅಸುಪಾಸಿನಲ್ಲಾಗಲಿ ಆಗುವುದು ಉಚಿತವೆಂದರು. ಶ್ರೀ ಎಂ. ಆರ್. ಭಟ್ಟರು 'ಕಳೆದ ಮಂಗಳೂರು ಆಯುರ್ವೇದ ಕಾಂಗ್ರೆಸಿನಲ್ಲಿ ಒಂದೊಂದು ಆಯುರ್ವೇದ ಕಾಲೇಜ್ ಆಗಬೇಕೆಂದು ನಿರ್ಣಯಿಸಲಾಗಿತ್ತು. ಈಗ ಸರಕಾರವೇ ಕರ್ನಾಟಕಕ್ಕೊಂದು ಕಾಲೇಜ್ ಸ್ಥಾಪಿಸುವುದರಲ್ಲಿದೆ. ಅದನ್ನೇ ಇಲ್ಲಿ ಸ್ಥಾಪಿಸುವಂತೆ ನಾವು ಚಳವಳಿಸಬೇಕು ಆ ಬಗ್ಗೆ ನಾನು ಕೈಲಾದ ಪ್ರಯತ್ನ ಮಾಡುವೆನು' ಎಂದರು. ಅನಂತರ ಡಾಕ್ಟರ್ ಕೆ. ಎಲ್ ಐತಾಳರೂ ಶ್ರೀ ಪಿ ಪದ್ಮನಾಭ ರಾಯರೂ ಸಮರ್ಥನೆಮಾಡಿ ಮಾತಾಡಿದರು ಬಳಿಕ ಈ ಕುರಿತು ಆರೋಗ್ಯ ಮಂತ್ರಿ ಮತ್ತು ಸಂಬಂಧಪಟ್ಟ ಕಮಿಟಿಯವರಿಗೆ ಒಂದು ಮನವಿಕೊಂಡು ಹೋಗಬೇಕೆಂದೂ ಆ ಬಗ್ಗಿನ ಖರ್ಚನ್ನು ಎಕಡೆಮಿ ವಹಿಸಬೇಕೆಂದೂ ನಿರ್ಣಯಿಸಲಾಯಿತು. ಮನವಿಕೊಂಡು ಹೋಗುವ ಬಗ್ಗೆ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಖಾನ್ ಸಾಹೇಬ್ ಎಚ್. ಎಸ್. ಹುಸೇನ್, ಎಂ ಎಲ್ ಎ., ಯು. ಎ. ಪೈ, ವೈದ್ಯಗುರು ಎಂ. ಆರ್. ಭಟ್, ಟಿ. ಎನ್. ಕೇಳು ನಂಬಿಯಾರ್, ಡಾ. ಕೆ. ಎಲ್. ಐತಾಳ್, ಮತ್ತು ಕಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಇವರನ್ನು ಆರಿಸಲಾಯಿತು.

ತಿದ್ದುಪಡಿ—ಕಳೆದ ವಾರದ ಸಂಚಿಕೆಯ 6ನೆಪುಟದಲ್ಲಿ ಪ್ರಕಟವಾದ ಮುನಿಸಿಪಲ್ ಮೀಟಿಂಗಿನ ಸುದ್ದಿಯಲ್ಲಿ ತುಸು ಮುದ್ರಣ ದೋಷಉಂಟಾಗಿತ್ತು ಕಮಿಶನರರು ಬೇಕೆಂದು ವಾದಿಸಿದವರು ಶ್ರೀ. ಆರ್. ಎ. ಸ್ವಾಮನ್ನರು ಎಂದು ತಿದ್ದಿ ಓದಬೇಕಾಗಿದೆ.

ಹೆಬ್ರಿ— ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ ಹೆಬ್ರಿ ರೂರಲ್ ಡಿಸ್ಪೆನ್ಸರಿಯ ಡಾಕ್ಟರರ ಕುರಿತೊಂದು ವಾರ್ತೆಯು 'ಗ್ರಾಮನಿವಾಸಿ'ಯೊಬ್ಬರಿಂದ ಬರೆಯಲ್ಪಟ್ಟದ್ದಷ್ಟೆ! ಆದರೆ 'ಗ್ರಾಮ ನಿವಾಸಿ'ಗಳ ಆರೋಪಣೆಯು ಸತ್ಯವಲ್ಲವೆಂದೂ ಡಾಕ್ಟರರು ಕಳೆದ 16 ವರ್ಷಗಳಿಂದ ಇಲ್ಲಿ ಜನಪ್ರೀತರಾಗಿದ್ದಾರೆಂದೂ ಕೆಲವು ಗ್ರಾಮಸ್ಥರ ಸಹಿಯುಳ್ಳ ದೀರ್ಘಭಾತ್ತಿಯೊಂದು ಬಂದಿರುತ್ತದೆ.

ಕಳ್ಳನು ಸಿಕ್ಕಿದ—ನಿಟ್ಟೆ ಗ್ರಾಮದ ಪರಪಾಡಿಯಲ್ಲಿರುವ ನಲಿಕೆಯವರ ಜಾತಿಯ ತಿಮ್ಮಾಜು ಹೆಂಗಸಿನ ಮಗ ಮಂಡದನೆಂಬ ಯುವಕನು ಬಂಟರ ಜಾತಿಯ ಏವಾರಾಯ ಶೆಟ್ಟಿ ಎಂಬ ಹೆಸರನ್ನು ಧರಿಸಿಕೊಂಡು ಶ್ರೀ. ಕುರ್ಕಾಲು ಗಣಪಯ್ಯ ಶೆಟ್ರ ಮನೆಯಲ್ಲಿ ಕೆಲಸಕ್ಕೆ ನಿಂತು ತಾ. 7-6-46ರಲ್ಲಿ ನಗದಿ ಮತ್ತು ಬೆಲೆಯುಳ್ಳ ಹಲವು ಸಾಮಾನುಗಳನ್ನು ಕಳವುಮಾಡಿ ಪರಾರಿಯಾದವನು ಕಳೆದ ಕೆಲವು ಸೊತ್ತುಗಳ ಸಮೇತ ಬೇಲೂರಿನ ಬ್ರಾಹ್ಮಣರ ಹೋಟೇಲೊಂದರಲ್ಲಿ ಪೋಲೀಸರ ಸ್ವಾಧೀನ ಸಿಕ್ಕಿ ಈಗ ಉಡುಪಿ ಜೈಲಿನಲ್ಲಿ ರಿಮಾಂಡಿನಲ್ಲಿರುವನೆಂದು ತಿಳಿದು ಬರುತ್ತದೆ

ಜಿಲ್ಲಾ ಆಹಾರ ಸಮಿತಿಗೆ ಆಯ್ಕೆ-ತಾ 27 7 46ರಲ್ಲಿ ತಾಲೂಕು ಆಫೀಸಿನಲ್ಲಿ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗಿದ ತಾಲೂಕು ಆಹಾರ ಸಮಿತಿ ಸಭೆಯಲ್ಲಿ ಶ್ರೀ. ಕೊಳ್ಕೆಬೈಲು ಸಂಜೀವ ಶೆಟ್ಟಿ. B. Sc. L. L. B. ಯವರು ಬಹುಮತದಿಂದ ಜಿಲ್ಲಾ ಸಮಿತಿಗೆ ಆರಿಸಲ್ಪಟ್ಟಿದ್ದಾರೆ. ಈ ಚುನಾವಣೆಯ ಸಂಬಂಧವಾಗಿ ಶ್ರೀಗಳಾದ ಡಿ. ಮಂಜಯ್ಯ ಹೆಗ್ಡೆ, ಎಂ. ಎಲ್. ಸಿ, ಎ. ಬಿ. ಶೆಟ್ಟಿ, ಎಂ. ಎಲ್. ಎ., ಕೆ. ಈಶ್ವರ, ಎಂ. ಎಲ್. ಎ. ಖಾನ್ ಸಾಹೇಬ್ H S ಹುಸೇನ್ ಸಾಹೇಬ್ ಎಂ. ಎಲ್. ಎ. ಅವರು ಆಗಮಿಸಿದ್ದರು. ಸಮಾರಂಭದಲ್ಲಿ ಶ್ರೀ. ಕೆ. ರಾಮಕೃಷ್ಣ ಅಡಿಗರು ಶ್ರೀ. ಕೊಳ್ಕೆಬೈಲು ಸಂಜೀವ ಶೆಟ್ಟರ ಹೆಸರನ್ನು ಸೂಚಿಸಲಾಗಿ ಶ್ರೀ ಬಿ. ಜಗಜೀವನ ದಾಸ ಶೆಟ್ಟರು ಅನುಮೋದಿಸಿದರು. ಶ್ರೀ. ಕಟಪಾಡಿ ರಾಜಗೋಪಾಲ ಕೃಷ್ಣ ರಾಯರು ಶ್ರೀ ಟಿ. ರಮೇಶ ಪೈಗಳ ಹೆಸರನ್ನು ಸೂಚಿಸಲಾಗಿ ಖಾನ್ ಸಾಹೇಬ್ ಹುಸೇನ್ ಸಾಹೇಬರು ಅದನ್ನು ಅನುಮೋದಿಸಿದರು. ಕಡೆಗೆ ಒಟ್ಟು ತೆಗೆಯಲಾಗಿ ಶ್ರೀ ಸಂಜೀವ ಶೆಟ್ಟರಿಗೆ ಒಂಭತ್ತು, ಶ್ರೀ ರಮೇಶ ಪೈಗಳಿಗೆ ಐದು ಓಟುಗಳು ದೊರೆತು ಶ್ರೀ. ಸಂಜೀವ ಶೆಟ್ಟರು ಜಿಲ್ಲಾ ಆಹಾರ ಸಮಿತಿಗೆ ಆರಿಸಲ್ಪಟ್ಟರು. ಚುನಾವಣೆಯ ನಂತರ ಆಹಾರಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಚರ್ಚಿಸಲ್ಪಟ್ಟವು. ಶ್ರೀಗಳಾದ ಲಕ್ಷ್ಮಪ್ಪ ಅರಸು ಕುಂದ ಹೆಗ್ಡೆ, ಎ. ಕೃಷ್ಣಯ್ಯ ಹೆಗ್ಡೆ ಕಟಪಾಡಿ ರಾಜಗೋಪಾಲ ಕೃಷ್ಣ ರಾವ್ ಮತ್ತು ರಾಮಕೃಷ್ಣ ಅಡಿಗರು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟರು.

ಪ್ರಕಟಣೆ

ನಂಬ್ರ 4037ನೇ. ಕುಂಭಾಶಿ ಸಹಕಾರಿ ಸಂಘದ ಆಫೀಸು. ತೆಕ್ಕಟ್ಟೆ

ಈ ಸಂಘದಿಂದ ನಡೆಸಲ್ಪಡುವ ತೆಕ್ಕಟ್ಟೆ ರಿಟೈಲ್ ಡಿಪೋವಿನಲ್ಲಿ ಸೇಲ್ಸಮೇನ್ ಕೆಲಸ ನೋಡಲು ತಕ್ಕ ಅನುಭವ ಉಳ್ಳ ಒಬ್ಬ ಉಮೇದ್ವಾರ ಬೇಕಾಗಿದೆ. ಉಮೇದ್ವಾರರಾದವರು ತಾ :5 8 46ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು ಸಂಬಳದ ವಿಷಯ ಮತ್ತು ಸೆಕ್ಯೂರಿಟಿ ವಿಷಯ ಮೊಕ್ತಾ ಮಾತನಾಡಿ ತೀರ್ಮಾನಿಸಿಕೊಳ್ಳತಕ್ಕದ್ದು.

ಅಧ್ಯಕ್ಷ

4037ನೇ ಕುಂಭಾಶಿ ಸಹಕಾರಿ ಸಂಘ, ತೆಕ್ಕಟ್ಟೆ

★ ಮುಸ್ಲಿಂ ಲೀಗ್ ಹೋರಾಟಕ್ಕೆದ್ದಿತು! ★

(೫ನೇ ಪುಟದಿಂದ)

ಅರ್ಥದಂತೆಯೇ ವರ್ತಿಸುವುದು ನನ್ನ ಪಕ್ಷದ ಪ್ರಾಮಾಣಿಕ ಕಾರ್ಯವಾಗುವದು. ತಮಗೆ ಶಾಶವಿಕ ಬಹುಮತ ಘಟನಾಸಮಿತಿಯಲ್ಲುಂಟೆಂದು ಅದನ್ನು ತನ್ನಿಚ್ಛೆಯಂತೆ ಮಾರ್ಪಡಿಸಿಕೊಳ್ಳುವ ಇಚ್ಛೆ ಕಾಂಗ್ರೆಸಿನದು. ಇದರಿಂದೆದ್ದ ಹೊಸ ಪರಿಸ್ಥಿತಿಗೆ ತಕ್ಕ ನಿರ್ಧಾರಮಾಡುವದಕ್ಕಾಗಿಯೇ ಲೀಗ್ ಕೌನ್ಸಿಲಿನ ಸಭೆ ಕರೆಯಲಾಗಿದೆ. 'ಯೋಜನೆಯಲ್ಲೊಪ್ಪಲ್ಪಟ್ಟುದಕ್ಕಿಂತ ಹೊರಗೆ ಹೋಗ ಕೂಡದು' ಎಂಬ ಭಯಭಕ್ತಿಯ ಸೂಚನೆಯು ಹೊರತು ಕಾಂಗ್ರೆಸಿನ ಈ ಅಸಂಬದ್ಧಗಳಿಗೆ ಬ್ರಿಟಿಷ್ ಸರಕಾರದಿಂದ ಬೇರಾವ ತಡೆ ಅಥವಾ ಚಿಕಿತ್ಸೆಯಾದುದಿಲ್ಲ. ಮಂತ್ರಿ ಸಮಿತಿಗೆ ಹೊಣೆಗಾರಿಕೆಯು ಅರಿವು ಅಥವಾ ತಿಳುವಳಿಕೆಯಿದ್ದಲ್ಲಿ ಹೀಗಾಗುತಿತ್ತೆ? 'ಘಟನಾ ಸಮಿತಿಯನ್ನು ತಿದ್ದಲಾಗದೆ ಹೋದರೆ ತೀರಿಸಿಯೇ ಬಿಡುವೆವು' ಎಂದು ನೆಹರುಗಳು ಢಿಲ್ಲಿಯ ಸಭೆಯಲ್ಲಿ ಖಂಡಿತವಾಗಿ ಹೇಳಿದ್ದಾರೆ.

ಪ್ರಾಮಾಣಿಕ ಪಕ್ಷವೆಂದರೆ ಲೀಗ್ ಮಾತ್ರ!

ಸಂಧಾನ ಮಾತುಕತೆಗಳಲ್ಲಿ ಮೂರು ಪಕ್ಷಗಳ ಪೈಕಿ ಪ್ರಾಮಾಣಿಕತೆಯಿಂದ ವರ್ತಿಸಿದ ಏಕಮಾತ್ರ ಪಕ್ಷವೆಂದರೆ ಲೀಗ್. ಲೀಗಿನ ಪತನ ಸಾಧಿಸಬೇಕೆಂಬೊಂದೇ ಉದ್ದೇಶವನ್ನು ಕಾಂಗ್ರೆಸ್ ಕಟ್ಟಿಕೊಂಡಿತ್ತು. ಪ್ರಥಮತ: ತಾತ್ಕಾಲಿಕ ಸರಕಾರದಂತೆಯೇ ಶಾಶ್ವತ ರಾಜ್ಯಾಂಗ ವ್ಯವಸ್ಥೆಯನ್ನೂ ಕಾಂಗ್ರೆಸ್ ವಿರೋಧಿಸಿದ್ದಾಗ ಸರ್. ಕ್ರಿಪ್ಸರು ರಾತ್ರಿ ಗಾಂಧಿಯನ್ನೆಬ್ಬಿಸಿ ಸಮಜಾಯಿಸಿದ್ದರು; ಪೆಥಿಕ್ ಲಾರೆನ್ಸರು ವಲ್ಲಭಾಯಿಯವರನ್ನು ಹಾದಿಗಡ್ಡಗಟ್ಟಿ ಮನೆಗೆ ಕರೆದೊಯ್ದು, ಕಾಂಗ್ರೆಸ್ ತನ್ನ ಸ್ವಂತ ಅರ್ಥಾನುಸಾರವಾಗಿಯಾದರೂ ಘಟನಾ ಸಮಿತಿಗೆ ಪ್ರವೇಶಿಸಬೇಕೆಂದು ಪುಸಲಾಯಿಸಿದ್ದ ... ರಾಯರೀಗ ಸ್ಪಷ್ಟ ಉತ್ತರ ಕೊಡಬೇಕು. ಪಾಕಿಸ್ತಾನವೊಂದೇ ಗತಿಯೆಂಬುದು ಇವೆಲ್ಲಾ ಘಟನೆಗಳಿಂದ ಸ್ಪಷ್ಟವಾಗುತ್ತದೆ. ತಾವು ಅಖಿಲ ಭಾರತದ ಪ್ರತಿನಿಧಿಗಳೆಂದು ಕಾಂಗ್ರೆಸ್ ಮತ್ತು ಗಾಂಧಿ ಹೇಳುವ ವರೆಗೆ-ಮುಸಲ್ಮಾನರ ನಡುವೆ ಗಲಿಬಿಲಿಯೆಬ್ಬಿಸುವ ಏಕೋದ್ದೇಶಕ್ಕಾಗಿ ಕಾಂಗ್ರೆಸ್ ಹಣ ದುರ್ವ್ಯಯ ಮಾಡುತ್ತಾ ಹೋಗುವ ವರೆಗೆ-ಅದಕ್ಕಾಗಿ ನೀತಿ ನಡತೆಯುಳ್ಳಿಯದವರನ್ನು ಲಂಚ ಸಂಚು ವಂಚನೆಗಳಿಂದ ದು ಪ್ರೋತ್ಸಾಹಿಸುತ್ತಿರುವ ತನಕ-ವಸ್ತುಸ್ಥಿತಿಯನ್ನು ಕಡೆಗಣಿಸಿ, ಲೀಗ್ ಒಂದೇ ಮುಸಲ್ಮಾನರ ಪ್ರತಿನಿಧಿಯೆಂಬುದನ್ನು ಒಪ್ಪದ ತನಕ-ಸಂಧಾನ, ತೀರ್ಮಾನ ಅಥವಾ ಸ್ವಾತಂತ್ರ್ಯವೆಂಬುದಿಲ್ಲವೇ ಇಲ್ಲ. ಗಾಂಧಿಯೀಗ ತನ್ನನ್ನು ತಾನೇ ಲೋಕದ ಸಲಹೆಗಾರನಾಗಿ ನೇಮಿಸಿಕೊಂಡಿದ್ದಾರೆ. ಕಾಂಗ್ರೆಸ್ ಅಖಿಲ ಭಾರತದ 'ಟ್ರಸ್ಟಿ' ಯೆಂದು ಅವರನ್ನುತ್ತಾರೆ. ಒಬ್ಬ ಟ್ರಸ್ಟಿಯ ಸಾಕಷ್ಟು ಪರಿಚಯಾನುಭವ ನಮಗೆ 150 ವರುಷಗಳಿಂದಾಗಿದೆ. ನಮಗಿನ್ನೊಬ್ಬ ಬೇಡ; ನಾವೀಗ ಬೆಳೆದಿದ್ದೇವೆ. ಮುಸಲ್ಮಾನರ ಟ್ರಸ್ಟಿಯೆಂದರೆ ಮುಸ್ಲಿಂ ರಾಷ್ಟ್ರವೊಂದೇ. ಅಂತೆಯೇ ಗಾಂಧಿಯುವರು ಹರಿಜನರ ಪಟ್ಟಿಗೂ ಸ್ವನಿರ್ಮಿತ ಟ್ರಸ್ಟಿ. ಹರಿಜನರಿಗೆ ತನ್ನ ಮೇಲೆ ನಂಬುಗೆಯಿದೆಯೆಂದು ಅವರೀಗ ಮನಸ್ಸಾಕ್ಷಿ ಪೂರ್ವಕ ಹೇಳಬಲ್ಲರೆ? ಇದು ವರೆಗೆ ಗಾಂಧಿಯವರು ಏನು ಹರಿಜನೋದ್ಧಾರಮಾಡಿದ್ದಾರೆ? ಯಾವ ನಾಗರಿಕ ಸಮಾಜಕ್ಕಾದರೂ ಕಳಂಕವನ್ನಿಡುವ ಅತ್ಯಂತ ಹೀನಸ್ಥಿತಿ ಹರಿಜನರದು. ಅವರೀಗ ಸತ್ಯಾಗ್ರಹ ಮಾಡಿ ಜೈಲು ಸೇರುತಿದ್ದಾರೆ.

ನಂಜಿನ ಮಾತು.

'ಮುಸ್ಲಿಮ್ ಪ್ರಾತಿನಿಧ್ಯದ ಸಂಪೂರ್ಣ ಹಕ್ಕು ಮಿ. ಜಿನ್ನಾರಿಗೆ ಸಾಧ್ಯವಿಲ್ಲ' ಎಂದು ಲೋರ್ಡ್ ಪೆಥಿಕ್ ಲಾರೆನ್ಸರು ಹೇಳಿದ್ದಾರೆ. ನಾನೇನೂ ವ್ಯಾಪಾರಿಯಲ್ಲ. ಎನ್ನೆರಿಯಾಯುತಿಯನ್ನು ಬೇಡಲು ನಾನು ಹೊರಟಿಲ್ಲ. ಅಥವಾ ಓರ್ವ ಬನಿಯನಂತೆ ವ್ಯಾಪಾರ ಮತ್ತು ವ್ಯವಹಾರ ಚಿಪ್ರಣತ್ವ ತೋರಿಸುವುದೂ ಇಲ್ಲ. ಮುಸ್ಲಿಂ ಸಮಾಜವೆಂದರೆ ವ್ಯಾಪಾರದೊಂದು ಸಾಮಾನೆ? ತಾನು ಲೀಗೇತರ ಮುಸಲ್ಮಾನರಿಗೆ ಸ್ಥಾನ ಕೊಡಲಿರೆನೆಂದು ಸ್ವತಃ ವೈಸರಾಯರೇ ಕಾಂಗ್ರೆಸ್ ಅಧ್ಯಕ್ಷನಿಗೆ ಬರೆದಿದ್ದರು. ಆಗ ಮಾತ್ರ ಜಿನ್ನಾರಿಗಿದ್ದ ಆ ಸಂಪೂರ್ಣ ಹಕ್ಕು ಮೇಲಿನ ಎರಡೇ ದಿವಸಗಳಲ್ಲಿ ಹೋಗಿಬಿಟ್ಟಿತೇನ? ಅಂತೂ ಬ್ರಿಟಿಷ್ ಸಮಿತಿ ನಿಸ್ಸಂಶಯವಾಗಿಯೂ ತಮ್ಮ ನಾಲಿಗೆಯನ್ನು ತಾವೇ ಹಿಂದಳೆದುಕೊಂಡಿದ್ದಾರೆ. ತಾವು ಪ್ರತಿನಿಧಿಸುವ ಸರಕಾರ, ರಾಷ್ಟ್ರ ಮತ್ತು ಜನತೆಯು ಬೆಲೆ ಕೆಡಿಸುವಂತೆ ವರ್ತಿಸಿದ್ದಾರೆ. ಇನ್ನೂ ನಮ್ಮ ವಿಶ್ವಾಸವನ್ನು ಅವರು ನಿರೀಕ್ಷಿಸಬಹುದೆ? ಈ ಜನರನ್ನು ನಾವು ನಂಬುವದೆಂದರೆ ಹೇಗೆ?"

ಸದಸ್ಯರ ಘರ್ಜನೆ—

ಜಿನ್ನಾರ ಭಾಷಣದೊಡನೆ ಮುಗಿದ ಪ್ರಥಮಾಧಿ ವೇಶನವು ರಾತ್ರಿ ಪುನಃ ಸೇರಿತು.

ಸರ್. ಫಿರೋಜ್ ಖಾನ್ ನೂನರು ಸ್ಫೂರ್ತಿಯ ಭಾಷಣವೀಯುತ್ತಾ, 'ಲೀಗು ಪಾಕಿಸ್ತಾನದ ಗುರಿಯನ್ನು ಬಿಟ್ಟು ಕೇಂದ್ರ ವ್ಯವಸ್ಥೆಗೊಪ್ಪಿ ಪ್ರಮಾದ ಮಾಡಿತು. ಬ್ರಿಟಿಷ್ ಸೂಚನೆಗಳನ್ನು ತಿರಸ್ಕರಿಸಿ ಘಟನಾ ಸಮಿತಿಯನ್ನು ಬಹಿಷ್ಕರಿಸಬೇಕು. ಕಾಂಗ್ರೆಸಿಗರು ಬ್ರಿಟಿಷರನ್ನೋಡಿಸುವ ವರೆಗೆ ಸುಮ್ಮಗಿದ್ದು ಆ ಮೇಲೆಯೇ ಹಿಂದುಗಳೊಡನೆ ಹೋರಾಡಿ ಪಾಕಿಸ್ತಾನ ಪಡೆಯಬೇಕು' ಎಂಬ ಸೂಚನೆಯಿತ್ತರು.

ಮೌಲಾನಾ ಹಜ್ರತ್ ಮೋಹಾನಿಯವರು ಲೀಗಿನ ಸಹಕಾರ ಹಿಂಪಡೆಗೆಯುವ ಠರಾವು ತಂದು "ಕ್ವಯದೀ ಅಜಾಮರೊಂದು ಬಿಟ್ಟನಾಡುವದೇ ತಡ; ಮುಸ್ಲಿಂ ಭಾರತವು ಒಂದೇ ಒಂದು ಕ್ಷಣದಲ್ಲಿ ಬಂಡಾಯವೇಳುವದು." ಎಂದರು.

ಮೌಲಾನಾ ಕರಿಮ್ ಅಲಿಯವರು, ಪ್ರತ್ಯಕ್ಷ ಹೋರಾಟಕ್ಕೇಳಬೇಕೆಂದೂ ಬ್ರಿಟಿಷ್ ಸಾಮಾನುಗಳ ಬಹಿಷ್ಕಾರದೊಡನೆ ಅದನ್ನಾರಂಭಿಸಬೇಕೆಂದೂ ಸೂಚಿಸಿದರು.

ಡಾ. ಅಬ್ದುಲ್ ಹಮೀತ್ ಕಾಜಿಮುವರು "ಮುಸಲ್ಮಾನರೀಗ ರಂಗಕ್ಕಿಳಿದು ಬ್ರಿಟಿಷರ ಕೈಯಿಂದ ಇಡೀ ಭಾರತದ ಸ್ವಾತಂತ್ರ್ಯ ಕಸಕೊಳ್ಳಬೇಕು. ಆ ಮೇಲೆ ⅓ನೇ ಅಂಶವನ್ನು ಪಾಕಿಸ್ತಾನ ಮಾಡಿಟ್ಟು ಉಳಿದ ⅔ನೇ ಭಾಗವನ್ನು ಹಿಂದುಗಳಿಗೆ ಧರ್ಮಾರ್ಥ ದಾನ ಕೊಟ್ಟುಬಿಡಬೇಕು." ಎಂದರು.

ಬಿರುದು ತ್ಯಾಗದೊಡನೆ ಹೋರಾಟಕ್ಕಾರಂಭಿಸಬೇಕೆಂದು ಖಾನ್ ಬಹದೂರು ಜಲಾಲುದ್ದೀನ್— ನೆಹರುಗಳ ಸಗರ್ವ ದೋರಣೆಯನ್ನು ಖಂಡಿಸಿ ರಾಜಾ ಗಜನ್ಫರ್ ಅಲೀಖಾನ್— ಭಾಷಣವಿತ್ತರು

ಮರುದಿನದ ಸಭೆಯಲ್ಲಿ ಸರ್. ಗುಲಾಮ್ ಹುಸ್ಸೇನ್ ಹಿದಾಯತುಲ್ಲಾ, ಸರ್. ಅಝೀಝುಲ್ ಹಕ್, ಮೌ. ಇಫ್ತಿಕಾರುದ್ದೀನ್ ಅಹಮ್ಮದ್, ಫಾತಿಮಾ ಬೇಗಮ್, ತಾಮಿಝುದ್ದೀನ್ ಖಾನ್, ಮಿರ್ಜಾನ್ ಅಬ್ದುಲ್ ಹಾಯಿ ಅಬ್ದುಲ್ ಹುಸ್ಸಾನ್, ಶೌಕತ್ ಹಯಾತ್ ಖಾನ್ ನೊದಲಾದವರ ರಣಡಂಗುರದಂತಹ ಭಾಷಣಗಳಾದುವು. ಬ್ರಿಟಿಷ್ ಸಾಮ್ರಾಜ್ಯದೊಡನೆ ಹೊಡೆದಾಡಲು ಪಂಡಿತ ನೆಹರುಗಳು ಲೀಗನ್ನು ಜತೆಗೂಡುವರೆಂಬ ಆಶೆಯಿಂದ ಲೀಗ್ ಬ್ರಿಟಿಷ್ ಸೂಚನೆಗಳ ಅಂಗೀಕಾರ ಮಾಡಿತ್ತು. ಈಗ ನೋಡು ವಾಗ ಕಾಂಗ್ರೆಸಿನ ವಿರೋಧ ಮುಸಲ್ಮಾನರ ಮೇಲೆ ಹೊರತು, ಬ್ರಿಟಿಷರ ಮೇಲಲ್ಲ. ನಾವು ಎರಡು ಬದಿಯಿಂದ ಹೋರಾಡಕೂಡದು. ಪ್ರಥಮ ಬ್ರಿಟಿಷರೊಡನೆ ಹೋರಾಟಕ್ಕೇಳಬೇಕು. ಅವರ ಸಹಾಯಕ್ಕೆ ಕಾಂಗ್ರೆಸ್ ಬಂದಾಗ ಅದನ್ನೂ ಇದಿರಿಸಬೇಕು" ಎಂದು ಶೌಕತ್ ಹಯಾತ್ ಖಾನರ ಘರ್ಜನೆ.

ಅಸಹಕಾರ ನಿರ್ಧಾರ—

ಮೂರನೇ ದಿನದ ಸಭೆಯಲ್ಲಿ ಬ್ರಿಟಿಷ್ ಸೂಚನೆಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುವ ಮತ್ತು ಪ್ರತ್ಯಕ್ಷ ಕಾರ್ಯಾಚರಣೆ ಕೈಕೊಳ್ಳುವ ಎರಡು ಪ್ರಾಮುಖ್ಯ ಠರಾವುಗಳನ್ನು ಕಾರ್ಯಕಾರೀ ಸಮಿತಿ ಮುಂದಿಟ್ಟಿತು. ಪ್ರತ್ಯಕ್ಷ ಚಳವಳದ ರೂಪರೇಷೆ ನಿರ್ಧರಿಸುವಹೊಣೆಯನ್ನು ಕಾರ್ಯಕಾರೀ ಸಮಿತಿಗೆ ಕೊಟ್ಟು ಬ್ರಿಟಿಷ್ ಧೋರಣೆಯ ನಿಷೇಧಾರ್ಥ ಮುಸ್ಲಿಮರು ಬಿರುದುತ್ಯಾಗ ಮಾಡಬೇಕೆಂದೂ ಅದರಲ್ಲಿತ್ತು. ಎರಡು ಠರಾವುಗಳೂ ಸರ್ವಾನುಮತದಿಂದ ಮಂಜೂರಾದೊಡನೆ ಬಿರುದುಧಾರಿ ಪ್ರಮುಖರು ಒಬ್ಬೊಬ್ಬರೇ ಪ್ರಚಂಡ ಜಯಘೋಷದ ನಡುವೆ ವೇದಿಕೆಯ ಮೇಲೇರಿ ತಮ್ಮ ಬಿರುದುಗಳನ್ನು ವಿಸರ್ಜಿಸಿಕೊಂಡರು. ಸರ್. ಗುಲಾಮ್ ಹುಸ್ಸೇನ್ ಹಿದಯತುಲ್ಲಾ, ಸರ್. ನಾಜಿಮುದ್ದೀನ್, ಸರ್. ಖಾನ್ ನೂನ್, ನವಾಬ್ ಸರ್. ಮೆಹರ್ ಶಾ, ಸರ್. ಸಾದುಲ್ಲಾ, ರಾಜಾ ಗಜ್ನಾಫರ್ ಅಲೀಖಾನ್, ನವಾಬಝಾದಾ ನೋಸ್ರುಲ್ಲಾ, ಖಾನ್ ಬಹದೂರ್ ಖುಹ್ರೋ, ಖಾನ್ ಬಹದೂರು ಜಲಾಲುದ್ದೀನ್, ಖಾನ್ ಬಹದೂರ್ ಹಾಜಿ ಹಸನಾಲಿ, ಖಾನ್ ಬಹದೂರು ಕರಮತ್ ಆಲಿ, ಖಾನ್ ಸಾಹೇಬ್ ಅಲೀಭಾಯಿ ಪಾಟೀಲ್, ಖಾನ್ ಬಹದೂರು ಅಮಜಾದ್ ಆಲಿ, ಖಾನ್ ಬಹದೂರ್ ಅಬ್ದುಲ್ಲಾ ಅಲ್ ಮಹಮ್ಮದ್, ಹುಸ್ಸೇನ್ ಇಸ್ಪಹಾನಿ ಎಂ. ಬಿ. ಇ — ಇವರೆಲ್ಲರ ಬಿರುದುಗಳೂ ಸಭಾವೇದಿಕೆಯಲ್ಲೇ ಉದುರಿದುವು. ನನ್ನ 'ನವಾಬಝಾದಾ' ಸರಕಾರ ಕೊಟ್ಟ ಬಿರುದಲ್ಲವಾದರೂ ಇನ್ನು ಮುಂದೆ ತನ್ನ ಹೆಸರ ಮುಂದೆ 'ಮಿಸ್ಟರ್' ಎಂದು ಮಾತ್ರ ಇರತಕ್ಕದ್ದೆಂದು ಲಿಯಾಖತ್ ಅಲೀಖಾನರಂದರು.

ಮಿ. ಜಿನ್ನಾರು ತನ್ನ ಕೊನೆಯ ಭಾಷಣದಲ್ಲಿಂದರು. "ಲೀಗ್ ತನ್ನ ಚರಿತ್ರೆಯಲ್ಲಿಂದೂ ವಿಧಾಯಕ ರೀತಿಬಿಟ್ಟು ಹೋದಿಲ್ಲ. ಆದರೀ ಬಾರಿ ಇಂತಹ ಸ್ಥಿತಿ ನಮ್ಮ ಮೇಲೆ ಹೇರಲ್ಪಟ್ಟಿತು. ಸರಕಾರವೂ ಕಾಂಗ್ರೆಸೂ ಪಿಸ್ತೂಲು ಹಸ್ತದಿಂದಲೇ ಸಂಧಾನ ಸಂಜ್ಞೆಮಾಡುತ್ತಿದ್ದುವು. ಒಂದನೆಯದರ ಕೈಯಲ್ಲಿ ಅಧಿಕಾರ ಮತ್ತು ಶಸ್ತ್ರದ ಎರಡನೆಯದರ ಹಸ್ತ ಸಾಮೂಹಿಕ ಹೋರಾಟ ಮತ್ತು ಅಸಹಕಾರದ ಪಿಸ್ತೂಲಿದ್ದುವು ಈ ದಿನ ನಾವೂ ಒಂದು ಪಿಸ್ತೂಲು ಹಿಡಿಯಬೇಕಾಯಿತು. ಮತ್ತದನ್ನು ಪ್ರಯೋಗಿಸಲು ಸಿದ್ಧರಿದ್ದೇವೆ. ಈಗ ನಾವು ಮುಂದೊತ್ತುವ! ನಮಗೆ ಯುದ್ಧ ಬೇಕಾಗಿರಲಿಲ್ಲ; ಆದರೆ ನಿಮಗದು ಬೇಕಾಗಿದ್ದಲ್ಲಿ ನಿಶ್ಶಂಕೆಯಿಂದದಕ್ಕೆ ತಯಾರಿದ್ದೇವೆ" ಎಂದರು.



Approved firm by the Govt. of Mysore
Certified by the Agent of the Govt. of Cylone Indian.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ತಾರೀಕು 31—7—46ರಿಂದ
ಗೀತಾಂಜಲಿಯವರ—
ಸವಾಲ್
ಉಲ್ಲಾಸ್, ಮುಮತಾಜ್ ಶಾಂತಿ
ಬರುವ ಚಿತ್ರ:—
ಭರತ್ ಮಿಲಾಪ್.

ಮಂಗಳೂರು

ಜಿಲ್ಲೆಯಲ್ಲಿ ಆಹಾರ ಹೆಚ್ಚು ಬೆಳೆಯಲು-ನೀರಿನ ನೌಕರ್ಯಗಳಿಗಾಗಿ ನದಿ, ಕೆರೆ, ಹಳ್ಳ ಮತ್ತು ಬಾವಿ ನೀರನ್ನು ಕೃಷಿಕರು ಉಪಯೋಗಿಸುವಂತೆ ಯೋಗ್ಯ ಅನುಭವಗಳನ್ನು ಕೊಡಲು 'ದಿ ಎಸೋಸಿಯೇಟೆಡ್ ಇಂಜಿನಿಯರ್ಸ್ ಕೊರ್ಪೊರೇಶನ್' ಮಂಗಳೂರು,ಎಂಬ ಸಂಸ್ಥೆಯವರು ತಮ್ಮ ನೀರಾವರಿ ಸಲಹೆ ಆಫೀಸನ್ನು ಮಂಗಳೂರು ತಾಲೂಕು ಕಚೇರಿಯ ಬಳಿಯಿರುವ ಮೂಲೆಗೆ ಕಟ್ಟೋಣದಲ್ಲಿ ತೆರೆದಿರುತ್ತಾರೆ. ಅಗತ್ಯವುಳ್ಳ ಕೃಷಿಕರು ಸ್ವತ: ಯಾ ಪತ್ರಮೂಲಕ ಕೊರ್ಪೊರೇಶನಿನ ನೀರಾವರಿ ಸಲಹೆಗಾರರಲ್ಲಿ ವಿಚಾರಿಸಿ ಅನುಭವ ಪಡಕೊಳ್ಳಬಹುದು.

ನಗರ ಸಭೆಯಲ್ಲಿ-ಮಿ। ಜಿನ್ನರ ತೈಲ ಚಿತ್ರ ಅನಾವರಣ ಇದೇ ತಾ. ೨೨ರಂದು ಸಂಜೆ, ಸ್ಥಳೀಯ ನಗರಸಭೆಯ ಸಭಾ ಭವನದಲ್ಲಿ ಮಿ। ಜಿನ್ನರ ತೈಲ ಚಿತ್ರವು ಅನಾವರಣಗೊಳಿಸಲ್ಪಟ್ಟಿತು. ನಗರ ಸಭಾಧ್ಯಕ್ಷರಾದ ಜನಾಬ್ ಪುತ್ತೂರು ಹುಸೇನ್ ಸಾಹೇಬರು ಮಿ. ಜಿನ್ನರ ಅಸಾಧಾರಣ ವ್ಯಕ್ತಿತ್ವ,ನಾಯಕತ್ವಗಳನ್ನು ವಿವರಿಸಿ, ಮುಸ್ಲಿಮರಿಗಾಗಿ ಇವರು ಮಾಡಿದ ಮಹತ್ಕಾರ್ಯಗಳನ್ನು ವಿವರಿಸಿ ಚಿತ್ರವನ್ನು ಅನಾವರಣಗೊಳಿಸಿದರು. ಸುಂದರವಾದ ಈ ತೈಲಚಿತ್ರವು ಮಂಗಳೂರು ಟೌನ್ ಮುಸ್ಲಿಂ ಲೀಗಿನವರಿಂದ ಕೊಡಲ್ಪಟ್ಟಿತ್ತು. ನಗರ ಸಭಾ ಸದಸ್ಯರೂ ಟೌನ್ ಮುಸ್ಲಿಂ ಲೀಗಿನ ಅಧ್ಯಕ್ಷರೂ ಆದ ಜ। ಯು ಅಹ್ಮದ್ ಹುಸೇನ್ ಸಾಹೇಬರೂ, ಶ್ರೀ। ಶಂಕರ ಆಳ್ವರೂ ಮಾತನಾಡಿದ ಬಳಿಕ ಚಹಾಪಾನದೊಂದಿಗೆ ಸಮಾರಂಭವು ಕೊನೆಗೊಂಡಿತು. ಈ ಸಮಾರಂಭಕ್ಕೆ ನಗರ ಸಭೆಯ ಮುಸ್ಲಿಂ ಸದಸ್ಯರ ಹೊರತು ಇತರ ಐವರು ಸದಸ್ಯರು ಹಾಜರಿದ್ದರು.

ಸೆಶನ್ಸ್ ಕೋರ್ಟಿನ ತೀರ್ಪು-ಶ್ರೀ। ಕುಂಜಿಕುಂಜಾರ್ ಮಂಜಿ ಭಟ್ಟರು, ರಿಕ್ವಿಸಿಶನ್ ಮಾಡಿದ ೫ಮುಡಿ ಅಕ್ಕಿಯನ್ನು ಸ್ವೀಕರಿಸಲಿಲ್ಲವೆಂಬ, (ಆದರೆ ಈ ಅಕ್ಕಿಯನ್ನು ಮತ್ತೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ) ಅಪಾದನೆಯ ಮೇಲೆ ಅವರಿಗೆ ಸ. ಡಿ. ಮೆಜಿಸ್ಟ್ರೇಟರು ರೂ. ೨೫೦ ದಂಡನೆ ವಿಧಿಸಿದ ಕುರಿತು ಸೆಶನ್ಸ್ ಕೋರ್ಟಿನಲ್ಲಿ ಅಪೀಲ್ ಹೂಡಲಾಗಿತ್ತಷ್ಟೆ. ಜಡ್ಜರು ಈ ದಂಡನೆಯನ್ನು ತಿದ್ದಿ ಹಾಕುತ್ತ ಕೆಳ ಕೋರ್ಟಿನಲ್ಲಿ ನಡೆದ ತನಿಖೆಯು ಕ್ರಮಬದ್ಧವಾಗಿ ನಡೆಯಲಿಲ್ಲ; ಆದುದರಿಂದ ಪುನರ್ವಿಚಾರಣೆ ನಡೆಯಬೇಕು ಎಂದು ತೀರ್ಪುಕೊಟ್ಟಿದ್ದಾರೆ.

ಅಡಿಕೆ ಸುಂಕದ ಮರುಪಾವತಿ-೧೯೪೧—೪೫ನೆಯ ಇಸವಿಯ ಅಡಿಕೆ ಬೆಳೆಯಲ್ಲಿ ಸುಂಕದಿಂದ ವಿನಾಯಿತಿ ಹೊಂದಬೇಕಾಗಿದ್ದ ಅಡಿಕೆಯ ಮೇಲೆ ವಸೂಲಾಗಿದ್ದ ಸುಂಕದ ಪೈಕಿ ರೂ ೧,೯೯,೫೩೦ ೮—೦ ಸರಕಾರದಿಂದ ಹಿಂದೆ ದೊರೆತಿದೆ ಎಂದು, ಕರ್ನಾಟಕ ವ್ಯವಸಾಯ ವರ್ತಕ ಸಂಘದ ಮೆನೇಜರರಾದ ಶ್ರೀ। ಕೈರಂಜೆ ನಾರಾಯಣ ಭಟ್ಟರು ತಿಳಿಸುತ್ತಾರೆ ಆ ವರ್ಷದಲ್ಲಿ ಸಂಘವು ಒಟ್ಟು ರೂ. ೨,೫೬,೧೯೮—೩—೦ನ್ನು ವಿನಾಯಿತಿ ಪಡೆಯಬೇಕಾಗಿದ್ದ ಸುಂಕವೆಂದು, ತನ್ನ ನಿವೇದನವನ್ನು ಸೂಚಿಸಿ ಸರಕಾರಕ್ಕೆ ತೆತ್ತಿತ್ತು; ಈ ಪೈಕಿ ರೂ. ೧,೯೩,೫೩೦-೮-೦ ಹಿಂದೆ ದೊರೆತಂತಾಯಿತು.

ಮಹಾಸಭೆ-ಮದ್ರಾಸು ಪ್ರಾಂತೀಯ ಅಂಚೆವಾಹಕರ ಮತ್ತು ಕಡಿಮೆ ಸಂಬಳದ ಸಿಬ್ಬಂದಿ ಯೂನಿಯನಿನ ದ. ಕ. ಜಿಲ್ಲಾ ಶಾಖೆಯ ಮಹಾ ಸಭೆಯು ತಾ. 4-8-1946 ನೇ ಆದಿತ್ಯವಾರ ಸಂಜೆ ಗಂಟೆ 2ಕ್ಕೆ ಸಂಘದ ಆಫೀಸಿನಲ್ಲಿ ಜರಗುವುದು. ಸದ್ರಿ ಸಂಘದ ಕಮಿಟಿ ಮೀಟಿಂಗಿನಲ್ಲಿ ಠರಾವ ಪ್ರಕಾರ ಪ್ರತೀ ಒಬ್ಬ ಮೆಂಬರರು ದಯಮಾಡಿ ತಪ್ಪದೆ ಹಾಜರಾಗಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

'ಅಧ್ಯಾಪಕರ ದಿನ'ದ ಆಚರಣೆಯು ತಾ 27ರಲ್ಲು ದ. ಕ. ಜಿಲ್ಲಾ ಗಿಲ್ಡಿನ ಆಶ್ರಯದಲ್ಲಿ ಜರಗಿತು. ನಗರದ ಪ್ರಮುಖ ರಸ್ತೆಗಳಲ್ಲಿ ಅಧ್ಯಾಪಕರ ಮೆರವಣಿಗೆ, ಕೇಂದ್ರ ಮೈದಾನಿನಲ್ಲಿ ಶ್ರೀ ಎಸ್. ಮುಕುಂದ ರಾಯರ ಅಧ್ಯಕ್ಷತೆಯಲ್ಲ ಸಾರ್ವಜನಿಕ ಸಭೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳಿದ್ದುವು. ಉಪಾಧ್ಯಾಯಿನಿಯರೂ ಹುರುಪಿನಿಂದ ಭಾಗವಹಿಸಿದ್ದರು.

ಪ್ರಕಾಶ ಕೂಟದ-ವಾರ್ಷಿಕ ಮಹಾಸಭೆಯು ತಾ 28ರಲ್ಲು ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ ಬ್ರಹ್ಮಾನಂದ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷದ ಕಾರ್ಯಕಾರೀ ಮಂಡಳಿಯ ಚುನಾವಣೆ, ಸಭಿಕರ ಭಾಷಣ, ಧನ್ಯವಾದಾರ್ಪಣೆಯೊಂದಿಗೆ ಸಭಾಂಕ್ಯವಾಯಿತು.

ಮಳೆ—ತಾ. ೨೫ರ ವರೆಗೆ ೯೯ಇಂಚು ಮಳೆ ಸುರಿದಿದೆ.

ರೈತ ಹಿತಕರಣ ಮಸೂದೆ—ದ. ಕ. ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ಇದೇ ಬರುವ ಆಗೋಸ್ತು ತಾ. ೧೧ರಂದು ಕಾಂಞಂಗಾಡಿನಲ್ಲಿ ರೈತರ ಹಿತಕರಣ ಸಮ್ಮೇಳನವು ಜಿಲ್ಲಾ ಸಂಘದ ಅಧ್ಯಕ್ಷರಾದ ಶ್ರೀ। ಜಿ. ಕೆ. ಗೋರೆಂದ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಲಿದೆಯೆಂದೂ ಆ ಮೇಲೆ ರೈತರ ಹಿತಕ್ಷಣೆಯ ಬಗ್ಗೆ ಸಂಘವು ತಯಾರಿಸಿದ ಕರಡು ಮಸೂದೆಯು ಮಂಜೂರಾಗಲಿದೆಯೆಂದೂ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ರಮ್ಜಾನಿಗೆ ಹೆಚ್ಚಿಗೆ ಸಕ್ಕರೆ- ಮಂಗಳೂರು ರೇಶನ್ ಕ್ಷೇತ್ರದಲ್ಲಿರುವ ಮಹಮ್ಮದೀಯರಿಗೆ 1946ನೇ ಆಗೋಸ್ತು ತಿಂಗಳಲ್ಲಿ ರಮ್ಜಾನ್ ಹಬ್ಬದ ಸಲುವಾಗಿ ಸಕ್ಕರೆಯು ಪ್ರತಿ ತಿಂಗಳಲ್ಲಿ ಸಿಗುವುದರ ಇಮ್ಮಡಿ ಕೊಡಲ್ಪಡುವುದೆಂದೂ ಆ ಕುರಿತು ಸಂಬಂಧಪಟ್ಟವರಿಗೆಲ್ಲಾ ತಿಳಿಸಲಾಗಿದೆಯೆಂದೂ ಜಿಲ್ಲಾ ಕಲೆಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

ಜಿಲ್ಲಾ ಫುಡ್ ಕಮಿಟಿ- ಸಭೆಯು ತಾ. 29-7-46ರಲ್ಲಿ ಜರಗಿತೆಂದೂ ಕಮಿಟಿಗೆ ಶ್ರೀ. ಮೊಳಹಳ್ಳಿ ಶಿವರಾವ್,ಮಿಸೆಸ್ ಎಲ್. ಬ್ರಿಟ್ಟೊ, ಮತ್ತು ಶ್ರೀ. ಜಿನರಾಜ ಹೆಗ್ಡೆ ಇವರನ್ನು ಸೇರಿಸಿಕೊಳ್ಳಲಾಗಿದೆಯೆಂದೂ ತಿಳಿದು ಬರುತ್ತದೆ.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.

ಶರ್ತಗಳಿಗೆ ಬರೆಯಿರಿ—

-ಅಂತರಂಗ', ಉಡುಪಿ.

BANK WITH THE LARGEST CONNECTIONS ON THE WEST COAST

OFFERS:-

EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd

ESTD 1925

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0.

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದು:ಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ

ಜವೇರಿಯನ್ ಜೀವನ ಮಿಕ್ಶ್ಚರ್

ಎಮ್ ಎಚ್ ಜವೇರಿಯನ ಮತ್ತು ಕಂ. ಬ್ರುಸ್ಸೆಲ್ ಸ್ಟ್ರೀಟ, ಮುಂಬಾಯಿ ೨.

ಸ್ವೀಕಾರ—ವಿಮರ್ಶೆ

ಸವ್ಯಸಾಚಿ-ಕಥಾಂಕ--ಉಡುಪಿಯ ಕಲಾವೃಂದದವರು ಹೊರಡಿಸುತ್ತಿರುವ ಕೈಬರೆಹದ ಮಾಸಪತ್ರಿಕೆ 'ಸವ್ಯಸಾಚಿ'ಯು ವಿಶೇಷ ರೂಪಕೊಟ್ಟು ಹೊರಡಿಸಿರುವ ಈ ಕಥಾಂಕವು ಅಂತರಂಗ ಬಹಿರಂಗವೆರಡರಲ್ಲೂ ಸುಂದರವಿದೆ. ಸಂಪಾದಕರು ಶ್ರೀ. ಬಿ. ಎಸ್. ಅಡಿಗರು, ಉಪ ಸಂಪಾದಕರು ಶ್ರೀ. ಕೆ. ಎಸ್. ಐತಾಳರು. ಶ್ರೀ. ಕೆ. ಎ. ಉಡುಪರು ಪ್ರಕಾಶಕರು. ಶ್ರೀಗಳಾದ ಎಂ. ರಾಮಚಂದ್ರ ರಾವ್, ಎಸ್. ವೆಂಕಟರಾಜ, ಕು. ಶಿ. ಹರಿದಾಸ ಭಟ್ಟ, ಕೊರಡ್ಕಲ್ ಶ್ರೀನಿವಾಸ ರಾವ್, ಬಿ ರಾಮಕೃಷ್ಣಾಚಾರ್, ಬನ್ನಂಜೆ ರಾಮಾಚಾರ್, ಮೊದಲಾದ ಹಿರಿಯ ಹಾಗೂ ಇತರ ಹಲವು ಕಿರಿಯ ಸಾಹಿತಿಗಳ ಕತೆ, ಕವನ; ಲೇಖನಗಳು ಒಂದಿವೆ. ಬರೆಹಗಳಿಗೆ ಸಂಬಂಧಿಸಿ ಮತ್ತು ಕಲಾ ಪೂರ್ತಿಗಾಗಿ ಬಂದಿರುವ 'ಕರ್ನಾಟಕ ಆರ್ಟ್ ಹೌಸ್' ಇವರ ಚಿತ್ರಗಳಂತೂ ಸಂಚಿಕೆಗೆ ವಿಶೇಷತೆಯನ್ನು ದೊರಕಿಸಿ ಕೊಟ್ಟಿವೆ. ಸಂಚಿಕೆಯಲ್ಲಿ ಸಂಸ್ಕೃತ ವಿಭಾಗವು ಪ್ರತ್ಯೇಕವಿದೆ. ಸಾಹಿತ್ಯ, ಚಿತ್ರ ಮತ್ತು ಪತ್ರಿಕೋದ್ಯಮ ಕಲೆಗಳನ್ನು ಕೈಕೃತಿಯಿಂದಲೇ ಇಷ್ಟೊಂದು ಸೊಗಸಾಗಿ ಪ್ರದರ್ಶಿಸಿರುವ ಕಿರಿಯರ ಸಾಹಸವು ಶ್ಲಾಘನೀಯ.

ಬಾಲ ಬಂಧು—ಶ್ರೀ. ಆರ್. ಸಿ. ನರಸಿಂಹ, ಇವರ ಸಂಪಾದಕತ್ವ, ಶ್ರೀ. ಎನ್ ಎಸ್. ಭಟ್ಟರ ಸಹಸಂಪಾದಕತ್ವ, ಶ್ರೀ. ವಿ. ಎ ಕುಂಜಾರರ ಸಂಚಾಲಕತ್ವದಲ್ಲಿ ಸಂಸ್ಕೃತ ಕಾಲೇಜಿನ ಕೆಲಮಂದಿ ವಿದ್ಯಾರ್ಥಿಗಳು ತಯಾರಿಸುತ್ತಿರುವ ಕೈ ಬರಹದ ಮಾಸಪತ್ರಿಕೆ. ವಿಶೇಷವಾಗಿ ಕಿರಿಯರ ಲೇಖನಗಳೇ ಇದ್ದು ಸಂಚಿಕೆಯು ಸಾಹಿತ್ಯ ಬಿಗುವಿನ ರಸವು ಹೊಲದಂತಿದೆ. ಶ್ರೀ ದೇವಾಡಿಗಾರ್ ಮತ್ತು ವಿ. ಮುಹಮ್ಮದ್ ಇವರ ಚಿತ್ರಗಳು ಶೋಭೆಯನ್ನು ಹೆಚ್ಚಿಸಿವೆ. ಕಿರಿಯರ ಇಂತಹ ಪ್ರಯತ್ನವು ಭವ್ಯ ಭವಿಷ್ಯವಾಗಿ ಫಲಿಸಲಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್—ಇದರ ಮೈಸೂರು ಮತ್ತು ಕೊಡಗು ಸೀಮೆಗಳಲ್ಲಿರುವ 10 ಶಾಖೆಗಳ ಏಜಂಟರುಗಳ ಪರಿಷತ್ತು ಇದೇ ತಿಂಗಳ ತಾ. 21, 22, 23ಗಳಲ್ಲಿ ಮೈಸೂರಿನಲ್ಲಿ ಸಮಾವೇಶಗೊಂಡಿತು. ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ. ವಿ. ಆರ್. ಕಾಮತ್ ಮತ್ತು ಬ್ಯಾಂಕಿನ ಇನ್‌ಸ್ಪೆಕ್ಷನ್ ವರ್ಗದ ಆಫೀಸರುಗಳು ಹಾಜರಿದ್ದರು.

ಬ್ಯಾಂಕಿಗೆ ಸಂಬಂಧಪಟ್ಟ ಹಲವಾರು ವಿಷಯಗಳ ಮೇಲೆ ಚರ್ಚೆನಡೆದು, ಬ್ಯಾಂಕನ್ನು ಇನ್ನೂ ಅಭಿವೃದ್ಧಿಗೊಳಿಸಲು ಬೇಕಾದ ಸಾಧನ ಮತ್ತು ಉಪಾಯಗಳ ಕುರಿತು ನಿರ್ಣಯಗಳಾದುವು. ಬ್ಯಾಂಕು 40 ವರ್ಷಗಳಿಂದಲೂ ಗಿರಾಕಿಗಳಿಗೆ ಸಲ್ಲಿಸುತ್ತಿರುವ ಸೇವೆಯನ್ನು ಆಧುನಿಕ ರೀತಿಯಲ್ಲಿ ಯಾವ ವಿಧಾನಗಳಿಂದ ಇನ್ನಷ್ಟು ಅಭಿವೃದ್ಧಿಗೊಳಿಸಬಹುದೆಂಬುದೇ ಪರಿಷತ್ತಿಗಳಲ್ಲಿ ಚರ್ಚಿಸಲ್ಪಟ್ಟ ಮುಖ್ಯಾಂಶವೆಂದು ತಿಳಿದುಬರುತ್ತದೆ.

ಮುಷ್ಕರಗಳ ಈ ದಿವಸಗಳಲ್ಲಿ ಈ ಬ್ಯಾಂಕಿನ ಮೇಲೆ ಆದರ ಆಫೀಸರುಗಳಿಗಿರುವ ದೃಢ ವಿಶ್ವಾಸ ಮತ್ತು ಗಿರಾಕಿಗಳಿಗೆ ಒಪ್ಪಿಸಲ್ಪಡುವ ಸೇವೆಯನ್ನು ಉತ್ತಮಗೊಳಿಸಲು ಅವರ ಸಾಧನೆಗಳು, ಇವುಗಳಿಗಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಪರಿಷತ್ತಿನ ಸಂದರ್ಭದಲ್ಲಿ ಶ್ರೀ. ಕೆ. ಆರ್. ಕೆ. ಭಟ್ಟರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರೆಂದೂ ತಿಳಿದುಬರುತ್ತದೆ.

ಕೊಕ್ಕರ್ಣೆ—ಡಿಸ್ಟ್ರಿಕ್ಟ್ ಬೋರ್ಡಿನವರು ಹೊಸತಾಗಿ ಕೊಕ್ಕರ್ಣೆಯಲ್ಲಿ ತೆರೆದ ಹಾಯರ್ ಎಲಿಮೆಂಟರಿ ಶಾಲೆಯ ಉದ್ಘಾಟನಾ ಸಮಾರಂಭವು ಇದೇ ಕಳೆದ ತಾ 20ಕ್ಕೆ ಕುಂದಾಪುರದ ವಕೀಲ್ ಶ್ರೀ. ಕೆ. ಎಲ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಸಭಿಕರಲ್ಲಿ ಡಾ। ಕೆ. ಆರ್ ಬೋಂಟ್ರ ಮತ್ತು ಶ್ರೀ ಎಚ್. ಭಾಸ್ಕರ ಕಾಮತ್ ಬಿ. ಎ. ಅವರು ಸಮಯೋಚಿತ ಭಾಷಣವಿತ್ತರು. ನಂತರ ಅಧ್ಯಕ್ಷರು ಶಾಲೆಗಾಗಿ ಸ್ಥಳೀಯರ ಮಾಡಿದ ಪ್ರಯತ್ನಕ್ಕಾಗಿ ಸಂತೋಷಪಟ್ಟು ಶಾಲೆಯ ಏಳಿಗೆಯ ವಿಷಯವಾಗಿ ಕೆಲವು ಮಾತುಗಳನ್ನಾಡಿ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದರು. ಆ ಮೇಲೆ ಶಾಲೆಯನ್ನು ಹಾಯರ್ ಎಲಿಮೆಂಟರಿಯಾಗಿ ಮಾರ್ಪಡಿಸಿದಕ್ಕೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಹಾಗೂ ಸದ್ರಿ ರೇಂಜಿನ ಶಾಲಾ ಇನ್‌ಸ್ಪೆಕ್ಟರವರನ್ನು ಕೃತಜ್ಞತಾಪೂರ್ವಕವಾಗಿ ಅಭಿನಂದಿಸಲಾಯಿತು. ಕಡೆಯದಾಗಿ ಶ್ರೀ ಎಮ್. ರಾಮರಾಯ ಶಣೈಯವರು ಧನ್ಯವಾದಗಳನ್ನರ್ಪಿಸಿದ ನಂತರ ಸಭಾ ಸತ್ಕಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಪುತ್ತೂರು

ಕೆಲವು ಸಮಯಗಳ ಹಿಂದೆ ಇಲ್ಲಿಂದ ವರ್ಗಾಯಿಸಲ್ಪಟ್ಟ ಲೇಡಿ ಡಾಕ್ಟರರ ಬದಲಿಗೆ ಬೇರೆ ಲೇಡಿ ಡಾಕ್ಟರರು ನೇಮಿಸಲ್ಪಡಲಿಲ್ಲ. ಪಂಚಾಯತ ಬೋರ್ಡಿನ ಕಡೆಯಿಂದ ನೇಮಿಸಲ್ಪಟ್ಟ ಸೂಲಗಿತ್ತಿರು ವರ್ಗಾಯಿಸಲ್ಪಟ್ಟ ನಂತರ ಬದಲಿಗೆ ಬೇರೆಯವರು ಬರಲಿಲ್ಲ. ಸರಕಾರಿ ಸೂಲಗಿತ್ತಿರು ಹೊರಗೆ ಹೋಗುವ ಕ್ರಮ ನಿಲ್ಲಿಸಲಾಗಿದೆ ಜನಸಂಖ್ಯೆ ಬೆಳೆಯುತ್ತಿರುವ ಪುತ್ತೂರು ಪೇಟೆಗೆ ಈ ರೀತಿಯ ಅಭಾವವು ಶೋಚನೀಯವಾಗಿದೆ.

ಪುತ್ತೂರು ಸಮೀಪ ಶಾಂತಿಗೋಡ ಎಂಬಲ್ಲಿ ಒಬ್ಬ ಜಮೀನ್ದಾರರ ಮನೆಯಲ್ಲಿ ಉಳಿತಾಯ ಅಕ್ಕಿ ಇರಬಹುದೆಂದು ರೆವಿನ್ಯೂ ಅಧಿಕಾರಿಯೊಬ್ಬರು ತೆರಳಿದರು. ಮುಡಿ ಒಂದೆರಡು ಜಾಸ್ತಿ ಅಕ್ಕಿಯನ್ನು ರಿಕ್ವಿಜಿಶನ್ ಮಾಡಿದರೆಂದು ತಿಳಿದುಬರುತ್ತದೆ. ಇನ್ನೊಬ್ಬ ಅಧಿಕಾರಿಗಳು ಗುಮಾನೆಯಿಂದ ಪುನಃ ಅದೇ ಮನೆಗೆ ತೆರಳಿದರೆಂದೂ, ವಿಚಾರ ವಿನಿಮಯ ನಡೆದು ತಪಾಸಣೆ ಬಗ್ಗೆ ಒಳಗೆ ಹೋದರೆಂದೂ, ಅಡಿಗೆ ಕೋಣೆಗೆ ತಾಗಿ ಒಂದು ಗೋಡೆ ಉದ್ದಕ್ಕೂ ಅದಿ ಅಗಲ ಇದ್ದದ್ದು ಕಂಡು ಇದೇನು ಇಷ್ಟು ಅಗಲ? ಎಂತ ವಿಚಾರಿಸಿದರೆಂದೂ ಸಂಶಯ ಬಂದು ಅಟ್ಟ ಹತ್ತಿ ಕೆಳಗೆ ನೋಡುವಾಗ ಸುಮಾರು ೧೧ ಅಕ್ಕಿ ಮುಡಿ ಸಾಲಾಗಿ ಇಡಲ್ಪಟ್ಟಿತ್ತೆಂದೂ, ಆ ಪಕಿ ಕೆಲವನ್ನು ರಿಕ್ವಿಜಿಶನ್ ಮಾಡಿದರೆಂದೂ ವರ್ತಮಾನ ಕೇಳುತ್ತದೆ—ಇದೊಂದು ಸಂಗ್ರಹದ ವಿಚಿತ್ರ ಸಂಗತಿ'

ಈ ಮೊದಲು ವಿಟ್ಲದಲ್ಲಿ ಬಡ್ ಆಟ ನಡಿಸಿದ ಆರೋಪದಲ್ಲಿ ಕೆಲವರ ಮೇಲೆ ವಿಟ್ಲ ಪೋಲೀಸರು ಸ್ಥಳೀಯ ಸ॥ ಮೆಜಿಸ್ಟ್ರೇಟರಲ್ಲಿ ಮೊಕದ್ದಮೆ ಹೂಡಿದ್ದರಷ್ಟೆ. ತಪ್ಪಿತಸ್ಥರು ಆ ವ್ಯಕ್ತಿ ಒಬ್ಬರಿಗೆ ರೂ ೨೦೦ ಜುಲುಮಾನೆ, ೨ ತಿಂಗಳು ಶಿಕ್ಷೆ, ಇನ್ನೊಬ್ಬರಿಗೆ ಒಂದು ತಿಂಗಳ ಶಿಕ್ಷೆ ರೂ. ೧೫೦ ಜುಲುಮಾನೆ, ಬಾಕಿ ೩ ಮಂದಿಗೆ ತಲಾ ರೂ. ೧೦೦ರಂತೆ ಜುಲುಮಾನೆ ವಿಧಿಸಲಾಗಿದೆ ಎಂದು ತಿಳಿದುಬರುತ್ತಿದೆ ಈ ಸಂಬಂಧ ಪೋಲೀಸರಿಗೆ ಇನಾಮು ಕೊಡಿಸಬೇಕೆಂದು ಶಿಫಾರಸು ಆಗಿದೆಯಾಗಿಯೂ ತಿಳಿದುಬರುತ್ತದೆ.

ಮಂಗಳೂರು.

ಜಿಲ್ಲಾ ಕಲೆಕ್ಟರರ ಪ್ರಕಟಣೆ—ವರ್ಗದಾರರ ತಿಳುವಳಿಕೆ ಬಗ್ಗೆ ಜಿಲ್ಲಾ ಕಲೆಕ್ಟರರು ಹೊರಡಿಸಿದ ಒಂದು ಪ್ರಕಟಣೆಯು ಹೀಗಿದೆ: ತಮ್ಮ ಸ್ವಂತದ ಬತ್ತ ಸಾಗುವಳಿ ಇಲ್ಲದ ಮತ್ತು ೪೬ ೪೭ನೇ ವರ್ಷದ ಬಗ್ಗೆ ಒಂದು ಪೂರ್ಣ ವರ್ಷದ ಆವಶ್ಯಕತೆ ಪೂರೈಸಲು ಸಾಕಾದಷ್ಟು ಉತ್ಪತ್ತಿ ಇಲ್ಲದ ಈ ಜಿಲ್ಲೆಯ ಯಾವತ್ತೂ ವರ್ಗದಾರರು ಆಯಾ ತಾಲೂಕು ತಹಶಿಲ್ದಾರರಲ್ಲಿ ಇದೇ ಬರುವ ಸೆಪ್ಟಂಬರ್ ತಾ. ೩೦ರೊಳಗೆ ಒಂದು ನಿಜವಾದ ಮತ್ತು ಸಮಂಜಸವಾದ ದೃಢ ಪತ್ರಿಕೆಯನ್ನು ಈ ಕೆಳಗೆ ಕಾಣಿಸಿದ ವಿವರಗಳಿಗನ್ವಯ ಭರಾಯಿಸಿ ಒಪ್ಪಿಸಬೇಕು ಮತ್ತು ತನ್ನ ಆವಶ್ಯಕತೆಗಳಿಗೆ ಅಕ್ಕಿ ಬತ್ತಗಳ ಗೇಣಿಯನ್ನು ಯಾವ ಒಕ್ಕಲುಗಳಿಂದ ತರಿಸಿಕೊಳ್ಳಬೇಕೆಂದಿದೆಯೋ ಅಂತಹ ಒಕ್ಕಲುಗಳು ಇಂಥವರೆಂದು ಕೂಡಾ ತಿಳಿಸತಕ್ಕದ್ದು. ಅಗತ್ಯವಿರುವ ವಿವರಗಳು. (೧) ಗ್ರಾಮ, (೨) ದೃಢ ಪತ್ರಿಕೆ ಕೊಡುವವನ ಹೆಸರು, ವಿಳಾಸ, (೩) ಮನೆಯಲ್ಲಿರುವ ಮಂದಿ; (೪) ಪ್ರಾಯ ಬಂದವರು, ಮಕ್ಕಳು, ಪ್ರಾಯ ಪ್ರಬುದ್ಧರಿಗೆ ದಿನಕ್ಕೆ ೧೨ ಔನ್ಸುಗಳಂತೆ ಮತ್ತು ೨ರಿಂದ ೧೨ ವರ್ಷಗಳೊಳಗಿನ ಮಕ್ಕಳಿಗೆ ದಿನಕ್ಕೆ ೬ ಔನ್ಸುಗಳಂತೆ ಉಣ್ಣಲು ಬೇಕಾದ ವರ್ಷಾವಧಿಯ ಆವಶ್ಯಕತೆ, (೫) ಬೇರೆ ಆವಶ್ಯಕತೆಗಳಿದ್ದರೆ ಅವುಗಳನ್ನು ನಮೂದಿಸಬೇಕು, (೬) ಸ್ವಂತ ಸಾಗುವಳಿ ಇದೆಯೋ, ಇದ್ದರೆ ಬೀಜದ ಮತ್ತು ಮಜೂರಿಯ ಅಂಶವನ್ನು ಕಳೆದು ಪ್ರತಿಯೊಂದು ಬೆಳೆಯಿಂದ ಉಂಟಾಗುವ ನಿವ್ವಳ ಉತ್ಪತ್ತಿಯ ಅಂದಾಜು, (೭) ನಿವ್ವಳ (೮) ತನ್ನ ಆವಶ್ಯಕತೆಗೆ ಬೇಕಾದುದನ್ನು ಗೇಣಿಯಾಗಿ ಯಾರಿಂದ ತರಿಸಿಕೊಳ್ಳಲು ಅಪೇಕ್ಷಿಸುತ್ತಾನೋ ಅಂತಹ ಒಕ್ಕಲುಗಳ ಹೆಸರು, ತಾಲೂಕು, ಗ್ರಾಮ—ಒಕ್ಕಲಿಗನ ಹೆಸರು ಮೊದಲನೆ ಬೆಳೆಯಿಂದ ಎಷ್ಟು? ಎರಡನೆ ಬೆಳೆಯಿಂದ ಎಷ್ಟು?

ಉಳಿತಾಯದ ಅಕ್ಕಿ ಒಪ್ಪಿಸುವವರ ಕುರಿತು:ಜುಲೈ ತಿಂಗಳ ಅಂತ್ಯದೊಳಗೆ ತಮ್ಮಲ್ಲಿದ್ದ ಉಳಿತಾಯ ಅಕ್ಕಿಯನ್ನು ಸರಕಾರದಿಂದ ಅಧಿಕೃತವಾದ ಸಂಸ್ಥೆಗೆ ಒಪ್ಪಿಸುವ ರೈತರಿಗೆ ಬಹುಮಾನ ರೂಪದಲ್ಲಿ ಅಧಿಕ ಬೆಲೆ ದೊರೆಯುವುದೆಂದು ಸರಕಾರ ಪ್ರಕಟಿಸಿತ್ತಷ್ಟೆ. ಕೃಷಿಯ ಕೆಲಸದಿಂದ ಇಲ್ಲವೆ ಮಳೆಯ ದೆಸೆಯಿಂದ ಸಂಚಾರಾನುಕೂಲಕ್ಕೆ ಕಷ್ಟವಾಗಿ ಅಕ್ಕಿಯನ್ನು ಆ ಮೊದಲು ಒಪ್ಪಿಸಲಾರದ ರೈತರು ಜುಲೈ ಅಂತ್ಯದೊಳಗೆ ತಮ್ಮಲ್ಲಿದ್ದ ಮಾರಾಟದ ಅಕ್ಕಿಯ ಮಿತಿಯನ್ನು ಸಪ್ಲೈ ಆಫೀಸರರಿಗೆ ರಿಜಿಸ್ಟ್ರೀ ಪತ್ರ ಮೂಲಕ ತಿಳಿಸಿ ಹಾಗೆ ತಿಳಿಸಿದಕ್ಕೆ ರಶೀದಿ ಪಡಕೊಂಡರೆ ಸಾಕು. ಆಯಾ ಪಿರ್ಕಾ ಸಪ್ಲೈ ಆಫೀಸರರು ಅಂತಹ ಸಂಗ್ರಹವನ್ನು ಆಗೋಸ್ತು ೧೫ರೊಳಗೆ ಡಿಪೋಗಳಿಗೆ ಬರ ಮಾಡಿಕೊಳ್ಳುವರು ಜುಲೈ ೩೧ರೊಳಗೆ ಒಪ್ಪಿಸದಿದ್ದರೂ ಮೇಲೆ ಹೇಳಿದ ರೀತಿಯಲ್ಲಿ ತಿಳಿಸುವ ರೈತರೂ ಬಹುಮಾನಕ್ಕೆ ಅರ್ಹರೆಂದು ಸರಕಾರದ ವರದಿಯು ಸಾರಾಂಶವಾಗಿದೆ.

ಹಿಂದುಸ್ಥಾನಿ ಮರ್ಕ್ಯುಲೀಗ್—ಇದರ ಮಹಾ ಸಭೆಯು ಕಳೆದ ತಾ. ೨೧ರಂದು ಕೆನರಾ ಹೈಸ್ಕೂಲಿನಲ್ಲಿ ಹಿಂದೀ ಪ್ರಚಾರಕರಾದ ಶ್ರೀ। ಎ ರಾಮಕೃಷ್ಣ ನಾವಡರ ಅಧ್ಯಕ್ಷತೆಯಲ್ಲಿ ಜರಗಿದಾಗ ಜಿಲ್ಲೆಯಲ್ಲಿ ಹಿಂದುಸ್ಥಾನಿಯ ಪ್ರಚಾರವು ಉನ್ನತವಾಗಿ ಸಾಗಬೇಕೆಂಬ ನಿರ್ಧಾರವನ್ನು ಸ್ವೀಕರಿಸಲಾಯಿತು.

ಕಾಶ್ಮೀರ ದಿನಾಚರಣೆಯ ಬಗ್ಗೆ—ಇದೇ ತಾ. ೨೧ರಂದು ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ। ಸೋನ್ಸ್ ಅವರು ಅಧ್ಯಕ್ಷರಾಗಿದ್ದರು. ಶ್ರೀ। ಶಾಂತರಾಮ್ ಪೈ ಮತ್ತು ಶ್ರೀ ಲಿಂಗಪ್ಪ ಸುವರ್ಣ ಅವರು ದೇಶೀಯಸಂಸ್ಥಾನಗಳಲ್ಲಿ ಪ್ರಜೆಗಳಮೇಲಾಗುತ್ತಿರುವ ದಬ್ಬಾಳಿಕೆ, ಸಾಮ್ರಾಜ್ಯಶಾಹಿಯು ದೇಶೀಯ ಸಂಸ್ಥಾನಾಧೀಶರನ್ನು ಉಪಯೋಗಿಸಿ, ಅಖಿಲಭಾರತ ಸ್ವಾತಂತ್ರ್ಯ ಆಂದೋಲನವನ್ನು ಛೇದಿಸುವುದಕ್ಕಾಗಿ ಹೂಡುವ ತಂತ್ರಗಳನ್ನು ವಿವರಿಸಿ ಭಾಷಣಮಾಡಿದರು.

ಜಿಲ್ಲಾ ಪ್ರೆಸ್ ಕೆಲಸಗಾರರ ಹೊಸ ಕೇಳಿಕೆಗಳು—ತಾ ೨೧ರಂದು ರಘನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ದ. ಕ. ಜಿಲ್ಲಾ ಪ್ರೆಸ್ ವರ್ಕರ್ಸ್ ಯೂನಿಯನಿನ ಮಹಾಸಭೆಯು ಶ್ರೀ। ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಎಪ್ರೆಂಟಿಸರಿಗೆ ತಿಂಗಳಿಗೆ ೨೫ ರೂಪಾಯಿ,೬ ತಿಂಗಳ ನಂತರ ಅವರನ್ನು ಕೆಲಸಗಾರರೆಂದು ಪರಿಗಣಿಸಿ, ರೂಪಾಯಿ ೪೦ರಿಂದ ಆರಂಭವಾಗಿ ಪ್ರತಿ ವರ್ಷ ೫ ರೂಪಾಯಿ ಭಡ್ತಿಯಾಗಿ ೧೫೦ರ ವರೆಗೆ ಏರಬೇಕು; ೩ ವರ್ಷದನಂತರ ಪ್ರೆಸ್ ಕೈಗಾರಿಕೆ ಬಿಟ್ಟು ಹೋಗುವುದಾದರೆ (ಮೊದಲ ಮೂರು ವರ್ಷ ಸಹಿತ) ಸರ್ವಿಸಿನ ವರ್ಷಗಳ ಸಂಖ್ಯೆಯಷ್ಟು ತಿಂಗಳುಗಳ ಸಂಬಳವನ್ನು ಗ್ರೇಟ್ಯುಯಿಟಿಯಾಗಿ ಕೊಡಬೇಕು; ತಿಂಗಳ ಸಂಬಳದ ಪ್ರತಿ ರೂಪಾಯಿಗೆ ಒಂದೊಂದಾಣೆಯಂತೆ ಮಜೂರ—ಮ್ಹಾಲಕ ಸಹಕಾರದಿಂದ ಪಾಲು ಸೇರಿಸಿ ಪ್ರೊವಿಡೆಂಟ್ ಫಂಡ್ ವ್ಯವಸ್ಥೆ; ವರ್ಷಕ್ಕೆ ನಾಲ್ಕು ತಿಂಗಳ ದುಡಿತದಷ್ಟು ಬೋನಸ್ ಮೊದಲಾದ ಹೊಸ ಕೇಳಿಕೆಗಳನ್ನು ಮಹಾಸಭೆಯಲ್ಲಿ ೧೯೪೬-೪೭ರ ಬಗ್ಗೆ ಮಂಜೂರು ಮಾಡಲಾಗಿದೆಯೆಂದು ತಿಳಿದುಬರುತ್ತದೆ.

ಜಿಲ್ಲಾ ಫುಡ್ ಕಮಿಟಿಗೆ ಮಂಗಳೂರು ತಾಲೂಕಿನಿಂದ ಶ್ರೀ. ಕೋಟೆಕಾರು ಕೃಷ್ಣ ಶೆಟ್ಟರು ಅವಿರೋಧವಾಗಿ ಆರಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ನೋಟೀಸು

ಉಡುಪಿ ಪ್ರಿನ್ಸಿಪಾಲ್ ಮುನ್ಸೀಫ್ ಕೋರ್ಟಿನಲ್ಲಿ.

O. P No. 35/1946

1 ಪುಷ್ಪವತಿ. 2 ಪ್ರೇಮವತಿ 3 ಕುಶಲ. 2, 3ನೆಯವರು ಮೈನರರು. ಗಾರ್ಡಿಯಾನ್ ಆಕ್ಕ 1ನೇ ಪುಷ್ಪವತಿ - ಅರ್ಜಿದಾರರು.

ಮತ್ತು

1 ರಾಮ ಶೆಟ್ಟಿ. 2 ರಾಮಣ್ಣ ಶೆಟ್ಟಿ

—ಎದುರಿರು.

ಅರ್ಜಿದಾರರ ತಾಯಿ ವ ಎದುರಿ ನ ಸಹೋದರಿ ಮೃತ ಶಿರ್ವ ಗ್ರಾಮದ ನ್ಯಾಯದ ಮನಿ ಬಾಗು ಶೆಡ್ತಿರ ಹೆಸರಲ್ಲಿ ದಿ. ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನಿನ ಶಿರ್ವ ಶಾಖೆಯಲ್ಲಿ ತಾ 22-6 45ರಲ್ಲಿ ಖಾಯಂ ಠೇವಣಾತಿಯಾಗಿಟ್ಟ ಡ್ಯಪೋಜಿಟು ವ ಬಡ್ಡಿ ಸಹಾ ವಡಿಯುವರೆ ಅರ್ಜಿದಾರರ ಶಾಖೆಯ ಯಜಮಾನ್ತಿಯಾದ 1ನೇ ಅರ್ಜಿದಾರಳು ತನ್ನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು (Succesion certificate) ಕೊಡಬೇಕಾಗಿ ದಾಖಲ್ಲು ಮಾಡಿದ ಅರ್ಜಿಯು ತಾ 19-8-46ಕ್ಕೆ ಬೆಳಿಗ್ಗೆ 11 ಗಂಟೆಗೆ ತನಿಖೆಗೆ ಇಟ್ಟಿರುತ್ತದೆ. ತಕ್ಷೀರು ಹೇಳುವವರಿದ್ರೆ ಆ ಸಮಯ ಹಾಜೀರು ಮಾಡತಕ್ಕದ್ದು ಎಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿದೆ.

ಕೋರ್ಟು ಹುಕುಂ ಪ್ರಕಾರ.

T. Ganapaya Shetty.
B. A; LL. B Vakil Udipi.
Udipi 28-7-46.

ದಿ ಆರ್ಯನ್ ಚಾಂಪಿಯನ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ

110 ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಅಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶ್ಯೂರೆನ್ಸ್ ಕಂಪೆನಿಯಿದು.

ಛೆಯರ್‌ಮೆನ್.

ಶೇಟ್ ಭೋಗಿಲಾಲ್ ಎಚ್ ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿಕೊಡುವೆವು. ವಿಶೇಷ ಅನುಭವಗಳಿಗಾಗಿ—

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ, ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೮ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ। ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ದಕ್ಷಿಣ ಕನ್ನಡ

ಸುರತ್ಕಲ್—ಇದ್ಯ ವಿದ್ಯಾದಾಯಿನೀ ಶಾಲೆಯಿಂದ 1916ರಿಂದ ಇದುವರೆಗೆ ಕಲಿತ ಹಳೆ ವಿದ್ಯಾರ್ಥಿಗಳ ಈಗಿನ ವಿಳಾಸಗಳನ್ನು ಸಂಗ್ರಹಿಸುವುದೆಂದು ಇ. ವಿ. ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ಮಹಾ ಸಭೆಯಲ್ಲಿ ನಿರ್ಣಯಿಸಿರುವುದರಿಂದ ಈ ಶಾಲಾ ಹಳೆ ವಿದ್ಯಾರ್ಥಿಗಳು ತಮ್ಮ ಮತ್ತು ತಮಗೆ ಗೊತ್ತಿರುವ ಇತರ ಹಳೆ ವಿದ್ಯಾರ್ಥಿಗಳ ವಿಳಾಸಗಳನ್ನು ದಯವಿಟ್ಟು ಸಂಘದ ಕಾರ್ಯದರ್ಶಿಗಳವರಿಗೆ ಕಳುಹಿಸಿಕೊಟ್ಟು ನೆರವಾಗಬೇಕಾಗಿ ವಿನಂತಿ.

ಪುತ್ತೂರು—ಈ ತಾಲೂಕಿನ 6ಫಿರ್ಕಾ ಸಮಿತಿಗಳಿಂದ ಜಿಲ್ಲಾ ಸಮಿತಿಗೆ ವಕೀಲ್ ಶ್ರೀ ಎಂ ಸದಾಶಿವ ರಾಯರು ಆರಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ.

ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಸಭೆ-ತಾ.26-7-46ರಲ್ಲು ಶ್ರೀ. ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿ ಕೆಳಗಿನ ನಿರ್ಣಯಗಳು ಸರ್ವಾನುಮತಿಯಿಂದ ಪಾಸಾದುವು. ಗೋವೆಯ ಪ್ರಜೆಗಳ ಮೇಲೆ ಪೋರ್ತುಗೀಸು ವಸಾಹತು ಸರಕಾರವು ನಡೆಸುತ್ತಿರುವ ದಬ್ಬಾಳಿಕೆಯನ್ನು ಈ ಸರ್ಕಲ್ ಕಾಂಗ್ರೆಸ್ ಕಮಿಟಿಯು ಖಂಡಿಸುತ್ತದೆ ಮತ್ತು ಗೋವನ್ನಾಂತರರ ನಾಗರಿಕ ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಈ ನಿರ್ಣಯದ ಪ್ರತಿಯನ್ನು ಗೋವಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಗೂ, ಗೋವಾ ಗವರ್ನರರಿಗೂ ಕಳುಹಿಸಬೇಕೆಂದು ಗೊತ್ತು ಮಾಡಲಾಯಿತು. ರಾಷ್ಟ್ರೀಯ ಸೇನಾಪರಿಹಾರನಿಧಿಗೆ ಧನ ಸಂಗ್ರಹಿಸಬೇಕೆಂದು ನಿಶ್ಚಯಿಸುತ್ತ, ಆಗೋಸ್ತು 9ನೇ ತಾರೀಕಿನ ದಿನ ಪ್ರಾರಂಭಮಾಡಿ ಎರಡು ವಾರದೊಳಗೆ ಆದಷ್ಟು ಹೆಚ್ಚು ಧನ ಸಂಗ್ರಹ ಮಾಡಬೇಕೆಂದು ನಿರ್ಣಯಿಸಲಾಯಿತು. ಮತ್ತು ಈ ಬಗ್ಗೆ ಶ್ರೀಗಳಾದ ಎಂ. ಡಿ. ಅಧಿಕಾರಿ, ಎಂ. ಎಸ್. ಅಧಿಕಾರಿ, ಕೆ ಗಣಪತಿ ಕಾಮತ್, ಕೆ ವೆಂಕಟೇಶ ಪ್ರಭು, ಆರ್ ಕೆ ರೇಣ್ಕೆ ಮತ್ತು ಬಿ. ಚಂದಪ್ಪ ಇಂದ್ರರನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಿಸಲಾಯಿತು ಕಾಂಗ್ರೆಸ್ ಅಧ್ಯಕ್ಷರ ಆದೇಶದಂತೆ ಬರುವ ಆಗೋಸ್ತು 9ನೇ ದಿನವನ್ನು ಕಾರ್ಕಳ ಸರ್ಕಲಿನ ಎಲ್ಲಾ ಭಾಗಗಳಲ್ಲಿಯೂ ಯಶಸ್ವಿಯಾಗಿ ಆಚರಿಸಬೇಕೆಂದು ನಿರ್ಣಯಿಸಲಾಯಿತು. ಈ ಬಗ್ಗೆ ಬೆಳಿಗ್ಗೆ ಪ್ರಭಾತಫೇರಿ ಮತ್ತು ಧ್ವಜವಂದನೆ, ಸಾಯಂಕಾಲ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯಂದೂ ಈ ಮಧ್ಯೆ ಸಾಧ್ಯವಾದಷ್ಟೆಲ್ಲ ರಚನಾತ್ಮಕ ಕಾರ್ಯಗಳನ್ನು ಜರಗಿಸಬೇಕೆಂದೂ ನಿರ್ಣಯಿಸಲಾಯಿತು.

ಕಡಬ–ವೇದಾಂತ ಸಂಘದವರು ಕಳೆದ ವರ್ಷದಂತೆ ಸ್ಥಳೀಯ ಚಿತ್ತರಂಜನ ಕ್ಲಬ್ಬಿನಲ್ಲಿ ಇದೇ ತಾ 17ರಿಂದ ಭಾರತ ವಾಚನವನ್ನು ಆರಂಭಿಸಿದ್ದಾರೆ. ಈ ಕರ್ನಾಟಕ ಮಹಾಕವಿದೀ ಇದು ನಡೆದು, ಪರಿ ಸಮಾಪ್ತಿಯಾಗಲಿರುವುದು. ಶ್ರೀ ಎಂ. ವೆಂಕಟ್ರಾಯರು ಭಾರತ ವಾಚನವನ್ನು, ಶ್ರೀ ವಾಸ್ತೇವ ಜೆ ಪಾಡಿತ್ತಾಯರು ಅರ್ಥ ವಿವರಣಾ ಕಾರ್ಯವನ್ನೂ ವಹಿಸಿದ್ದಾರೆ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 **ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.**

The Moolky Bank Ltd.,
Moolky, S. K.

ಕಾಸರಗೋಡು ಬೋರ್ಡ್ ಎಲಿಮೆಂಟರಿ ಶಾಲೆಗಳ ಟೀಚರ್ಸ್ ಯೂನಿಯನ್ -ಈತೆಯಿಂದ ವಿದ್ಯಾ ಮಂತ್ರಿಗಳಿಗೂ ಇನ್ನಿತರ ಸಂಬಂಧಪಟ್ಟವರಿಗೂ ಮೆಮೋರಿಯಲ್ ಒಂದನ್ನು ಕಳುಹಿಸಲಾಗಿದೆ. ಶಾಲಾ ಮಾಸ್ತರುಗಳ ಸಂಕಷ್ಟ ನಿವಾರಣೆಯಾಗಬೇಕು, ಸಂಬಳ, ತುಟ್ಟಿಭತ್ತೆ ದರವು ಜಾಸ್ತಿಯಾಗಬೇಕು. ಶಾಲಾ ದಿನಗಳನ್ನು 200ಕ್ಕೆ ಇಳಿಸಬೇಕು, ಪ್ರೊವಿಡೆಂಟ್ ಫಂಡಿನಿಂದ ಸೇಕಡಾ 80ರಷ್ಟು ಸಾಲ ಸಿಗುವಂತಾಗಬೇಕು -ಇತ್ಯಾದಿ ಕಾಲೋಚಿತ ಕೇಳಿಕೆಗಳಿದ್ದವು.

ಕಾರ್ಕಳ—ಜಿಲ್ಲಾ ಆಹಾರ ಸಮಿತಿಗೆ ಕಾರ್ಕಳ ತಾಲೂಕಿನಿಂದ ಶ್ರೀ ರಾಮ ಮೋಹನ ರೈಗಳವರು ಆರಿಸಿ ಬಂದಿರುವರೆಂದು ತಿಳಿದು ಬರುತ್ತದೆ.

ದಿವಂಗತ ಶ್ರೀಮತಿ ಉಲಿಪಾಡಿಗುತ್ತು ಮುತ್ತಕ್ಕೆ–ಇವರು ದ. ಕ. ಜಿಲ್ಲೆಯ ಸಿರಿವಂತ ಹಾಗೂ ಪ್ರಖ್ಯಾತ ಬಂಟ ಮನೆತನದ ಸಮರ್ಥ ಯಜಮಾನತಿಯಾಗಿದ್ದು ತಾ 22-7-46ರಲ್ಲಿ ಅನಿರೀಕ್ಷಿತವಾಗಿ ದಿವಂಗತರಾದುದು ವಿಷಾದವೆನಿಸುತ್ತದೆ. ಶ್ರೀಮತಿಯವರ ನಡೆ ನುಡಿಗಳು, ವ್ಯಕ್ತಿತ್ವ ಹಾಗೂ ಕರ್ತೃತ್ವ ಶಕ್ತಿಯು ಅವಿಭಕ್ತ ಕುಟುಂಬದ ಆಡಳಿತವನ್ನು ನಡೆಸಿಕೊಂಡು ಹೋಗುವ ಆದರ್ಶ ಮೇಲ್ಮಟ್ಟದಲ್ಲಿತ್ತು. ಬಂಟ ಸಮಾಜದ ವಿದ್ಯಾರ್ಥಿನಿ ಭವನದ ಸಹಾಯಾರ್ಥವಾಗಿ ಶ್ರೀಮತಿಯವರನ್ನು ಜೂನ್ ತಿಂಗಳ ಕೊನೆಯ ವಾರದಲ್ಲಿ ಕಮಿಟಿಯ ಸದಸ್ಯರು ಭೇಟಿಯಾದಾಗ ಅವರು ಸದಸ್ಯರನ್ನು ಅತ್ಯಾದರದಿಂದ ಸ್ವಾಗತಿಸಿ, ಈ ಕಾರ್ಯವನ್ನು ಪ್ರಶಂಸಿಸಿ ರೂಪಾಯಿ 1500-ನ್ನು ಸಹಾಯ ಧನವಾಗಿ ಅತ್ಯ ಸಂತೋಷದಿಂದ ಕೊಟ್ಟದ್ದು ಮಾತ್ರವಲ್ಲದೆ ಕಾರ್ಯವು ಶೀಘ್ರ ಜಯಪ್ರದವಾಗಲೆಂದು ಹರಸಿದರು. ಶ್ರೀಮತಿಯವರು ಕಾಲವಾಗದಿರುತ್ತಿದ್ದರೆ ಇನ್ನೂ ಹೆಚ್ಚಿನ ಸಹಾಯವನ್ನು ಕೊಡುತ್ತಿದ್ದರು. ಸಮಾಜದ ಇತರ ಶ್ರೀಮಂತ ಹೆಮ್ಮಕ್ಕಳು ಶ್ರೀಮತಿಯವರ ಮೇಲ್ಪಂಕ್ತಿಯನ್ನು ಅನುಸರಿಸಿ ಸ್ತ್ರೀ ವಿದ್ಯಾಭ್ಯಾಸದ ಸಲುವಾಗಿ ಉದಾರ ಸಹಾಯವನ್ನೀಯಬಹುದೆಂದು ನಿರೀಕ್ಷಿಸಲಾಗಿದೆ.

ವಿಟ್ಲ–ಇಲ್ಲಿಯ ಸಂಬಂಧಪಟ್ಟ ಮಹಾಜಂಟ್ಪೈಲ್ ರೇಶನ್ ಅಂಗಡಿಯನ್ನು ಸಂಶಯದ ಮೇಲೆ ಸ್ಥಳೀಯ ಫಿರ್ಕಾ ಸಪ್ಲೈ ಆಫೀಸರರು ತಾ. ೧೮-೭-೪೬ರಲ್ಲಿ ಆಕಸ್ಮಿಕವಾಗಿ ಸಂದರ್ಶಿಸುವಾಗ ೧೬ಮುಡಿ ಅಕ್ಕಿ ರಿಜಿಸ್ತ್ರಿಯಲ್ಲಿ ತೋರಿಸುವ ಸ್ಟೋರ್‌ಗಿಂತ ಜಾಸ್ತಿ ಕಂಡುಬಂದುದರಿಂದ ಮೇಲಧಿಕಾರಿಗಳ ಹುಕುಮತ್ ಪಡಕೊಂಡು ಸದ್ರಿಯವರು ತಾ. ೨೩ರಂದು ಪುತ್ತೂರು ಫುಡ್ ಪ್ರೈಸ್ ಸಬ್ ಇನ್ಸ್‌ಪೆಕ್ಟರ್ ಸಹಿತ ಸದ್ರಿ ರೇಶನ್ ಅಂಗಡಿಯಲ್ಲಿದ್ದ ಆಹಾರ ಧಾನ್ಯಗಳನ್ನು ಮತ್ತು ರಿಕಾರ್ಡ್‌ಗಳನ್ನು ಸ್ವಾಧೀನಪಡಿಸಿಕೊಂಡು, ರೇಶನ್ ಅಂಗಡಿಯನ್ನು ಮುಚ್ಚಿ, ಕಾರ್ಡ್‌ದಾರರಿಗೆ ಸಮೀಪವಿರುವ ಬೇರೆ ರೇಶನ್ ಅಂಗಡಿಗಳಿಂದ ರೇಶನ್ ಪಡಕೊಳ್ಳುವಂತೆ ತಿಳಿಸಿರುತ್ತಾರಾಗಿ ತಿಳಿದುಬರುತ್ತಿದೆ, ಮುಂದಿನ ತನಿಖೆಯ ನಡೆಯಲಿದೆಯಾಗಿ ಗೊತ್ತಾಗಿದೆ.

ಕುಂದಾಪುರ–ತಾ. 18 7-1946ರಲ್ಲಿ ಕುಂದಾಪುರ ರಾಷ್ಟ್ರಸೇವಾದಳದ ಶಾಖೆಯನ್ನು ದ. ಕ. ಜಿಲ್ಲಾ ರಾಷ್ಟ್ರ ಸೇವಾ ದಳದ ಪ್ರಚಾರಕರಾದ ಶ್ರೀ ಎಂ. ರಾಮರಾಜ ಕಿಣಿ ಮತ್ತು ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಚಾರ ಕಾರ್ಯದರ್ಶಿ ಶ್ರೀ ಕೆ. ಆರ್. ಭಂಡಾರ್ಕಾರ್ ಅವರು ಸಂದರ್ಶಿಸಿದರು. ಧ್ವಜವಂದನೆಯ ನಂತರ ಶ್ರೀ ಕಿಣಿಯವರೂ ಭಂಡಾರ್ಕಾರರೂ ಸೇವಾ ದಳದ ಧ್ಯೇಯ, ಧೋರಣೆ, ಸಂಘಟನೆಗಳ ವಿಚಾರದಲ್ಲಿ ಮಾತನಾಡಿದರು. ಅನಂತರ ೧೬ವರ್ಷಕ್ಕೆ ಮೇಲ್ಪಟ್ಟ ಸ್ವಯಂಸೇವಕಸೇವಕಿಯರಿಂದ ವೀರಪ್ರತಿಜ್ಞೆ ತೆಗೆದುಕೊಳ್ಳಲಾಯಿತು. ಬಳಿಕ ಶ್ರೀ ಕೆ. ಶ್ರೀನಿವಾಸ ಉಪಾಧ್ಯರನ್ನು ನಗರ ಸಂಘಟಕರನ್ನಾಗಿಯೂ ಶ್ರೀ ಶಂಕರ ಹೆಗ್ಡೆ ಕೊಳ್ಕೆಬೈಲ್, ಅವರನ್ನು ಕಾರ್ಯದರ್ಶಿಯನ್ನಾಗಿಯೂ ಶ್ರೀಮತಿ ಉಮಾ ಸುಂದರಿಬಾಯಿ ಅವರನ್ನು ಜೊತೆ ಕಾರ್ಯದರ್ಶಿನಿಯನ್ನಾಗಿಯೂ ಚುನಾವಣೆ ಮೇರೆಗೆ ಆರಿಸಲಾಯಿತು. "ವಂದೇ ಮಾತರಂ" ಜೈ ಹಿಂದ್"ದೊಡನೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಮತ್ತು ಈ ಶಾಖೆಯನ್ನು ದ. ಕ. ಜಿಲ್ಲಾ ಕರ್ನಾಟಕ ರಾಷ್ಟ್ರ ಸೇವಾ ದಳಕ್ಕೆ ಸೇರಿಸಲಾಯಿತು.

ಮದ್ರಾಸು

ನೃತ್ಯ ಭಾರತಿ ಬಿಲ್ಡಿಂಗ್ ಫಂಡಿಗೆ ಧನ ಸಹಾಯವನ್ನಪೇಕ್ಷಿಸಿ ನೃತ್ಯ ಕಲಾಕೋವಿದರಾದ ಶ್ರೀ ಕುಲಕರ್ಣಿ ಶ್ರೀನಿವಾಸರಾಯರು ಒಂದು ಮನವಿಯನ್ನು ಪ್ರಕಟಿಸಿರುತ್ತಾರೆ. ಹಿಂದೀ ತರುಣ ತರುಣಿಯರಲ್ಲಿ ದೇಶೀಯ ನೃತ್ಯದ ಅಭಿರುಚಿಯನ್ನುಂಟುಮಾಡಲು ಶಾಲೆಯೂ ಆಬಗ್ಗೆ ಕಟ್ಟಡ ಇತ್ಯಾದಿ ಸಲಕರಣಗಳೂ ಅತ್ಯಗತ್ಯ. ಉದಾರಿ ಮಹಾ ಜನರು ಉದಾರ ಹಸ್ತದಿಂದ ಧನ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾದುದು ಅವರವರ ಆದ್ಯ ಕರ್ತವ್ಯ.

CHAMPAE'S
Snow & Castrex
(Sole Distributers for (India.)
Prop: K. G. NAYAK,
Santhekatte, UDIPI, S. K.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ರಿ ಒರದಲ್ಲಿ ರೋಗಕ್ಕೆ ತಕ್ಕಂತ ಔಷದಿ ರವಾನಿಸಬಹುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುರಾರಬಾಗ್ ರೋಡ್, ಜಿ. ಐ. ಪಿ ರೈಲಿ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೀ ದುಮುಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಹಾಕುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಶ್ವಾಸನಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಗೆ ಕ್ರಮವಾಗಿ ರೂ.೩-೬-೦; ೫.೧೨.೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೋಪ್ಯುಲರ್ ಸ್ಟೋರ್ಸ್, ಮಂಗಳೂರು, ಟಿ.ಸಿ. ನಟರಾಜನ್ & ಕೋ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

(೨ನೇ ಪುಟದಿಂದ)

ವಿಮಾನ ಬಂತು!

ನಾಲ್ಕು ಎಂಡು ಗಂಟೆ ಕಾದುದಾಯಿತು. ಆದರೆ ಆಕಾಶದಲ್ಲೇನೂ ಕಾಣಿಸಲಿಲ್ಲ. ಕಟ್ಟಕಡೆಗೆ ದೂರಾಕಾಶದಲ್ಲೊಂದು ಮಸಕು ನೌಕಾಕಾರ ಕಾಣಿಸಿಕೊಂಡಿತು; ಬೆನ್ನಲ್ಲೇ ಯಂತ್ರದ ಘೂಂಕಾರದಿಂದದು ಪರಿಚಯ ಕೊಟ್ಟಿತು. ಕಟ್ಟಕಡೆಗೆ ನೋಡಗಳನ್ನು ಭೇದಿಸಿಕೊಂಡು ಒಂದು ಚುಕ್ಕೆಯಿಳಿದಾಗ ನಿಲ್ದಾಣದವರಲ್ಲಿದ್ದ ಆವೇಗ ಅವರ್ಣನೀಯ. ದೀರ್ಘಾವಧಿಯಿಂದ ಕಾಯುತ್ತಿದ್ದ ವಿಮಾನವು ಅದೇ. ಅದು ನಿಲ್ದಾಣದ ಮೇಲ್ಗಡೆ ಸುತ್ತು ತೆಗೆಯುತ್ತಿದ್ದಾಗ ಜನರೆಲ್ಲಾ ತುದಿಗಾಲಲ್ಲಿ ನಿಂತಿದ್ದರಲ್ಲದೆ ಅವರ ಹೃದಯವೂ ತಳ ಬಿಟ್ಟಿಸ್ದದೆ ಎಂಬಂತಹ ಆತುರವಾವರಿಸಿತು. ಆದರೆ ವಿಮಾನ ತಳವೂರದೆ ಮುಂದೆ ಧಾವಿಸಿತು. ಅದು ಅಲ್ಲಿಂದ ಕೆಲವು ಮೈಲು ದೂರವಿರುವ ಮಿಲಿಟರಿ ನಿಲ್ದಾಣದಲ್ಲಿಳಿಯುವದೆಂಬ ಸುದ್ದಿಯೆದ್ದು, ಎಲ್ಲರೂ ಅಲ್ಲಿಗೆ ಧಾವಿಸತಕ್ಕದ್ದೆಂದು ಜಾಪಾನರ ಆಜ್ಞೆಯಾಯಿತು. ಅಷ್ಟರಲ್ಲೇ ವಿಮಾನ ಮರಳಿ ಬಂದು ಸುರಕ್ಷಿತವಾಗಿ ನೆಲಕ್ಕೆ ಮುಟ್ಟಿತು. ಎಲ್ಲಾ ದೃಷ್ಟಿಗಳೂ ನೆಟ್ಟಿದ್ದ ವಿಮಾನದ ಬಳಿಗೆ ಜಾಪ್ ಮೇಲಧಿಕಾರಿಗಳು ಧಾವಿಸಿದ್ದರು. ಹಿಂಗಡೆಯಲ್ಲಿ ರಾಸ್ ಬಿಹಾರಿ ಬೋಸರೊಡನೆ, ದೇಶಭಕ್ತರ ರಾಜನು ತನ್ನ ಹೆಜ್ಜೆಯನ್ನು ವಿಮಾನದಿಂದ ಕೆಳಗೆ ಸಿಂಗಾಪುರದ ನೆಲದ ಮೇಲಿಡುವ ಆ ಮುಹೂರ್ತದಲ್ಲಿ ನೂರು 'ಕೆಮರಾ'ಗಳ 'ಕಿಟ್ ಕಿಟ್' ಆಯಿತು. ವಿಮಾನ ಪ್ರಯಾಣಕ್ಕಾಗಿ ಧರಿಸಿದ್ದ ತನ್ನ 'ಪೋಕ್-ಪೀ' ಹ್ಯಾಟನ್ನು ಭಾವೀ ನೇತಾಜಿ ತೆಗೆದೊಗೆದು, ತನ್ನ ಮೈಯಲ್ಲಿ ಭಂಗಾರಕ್ಕೊಪ್ಪವಂತೆ ಒಪ್ಪಿದ್ದ ಕೆನೆಹಾಲ ಬಣ್ಣದ ಚಲ್ಲಣದ ಕಿಸೆಯಿಂದೊಂದು ಅಚ್ಚಬಿಳಿ ಗಾಂಧೀ ಟೋಪಿಯನ್ನು ತೆಗೆದು ತಲೆಗಿಟ್ಟುಕೊಂಡರು. ಆ ಟೋಪಿಧಾರಿಗಳ ವೈಕಿ, ಅನಾಯಾಸದಿಂದ ಅಂತಹ ಆಕಾರಕ್ಕೆ ಮಡಚಲು ಕೇವಲ ಸುಭಾಸರೊಬ್ಬರಿಗೆ ಮಾತ್ರ ... ಪಿದ್ದ 'ದೋಣಿ ಕೋಣ'ಕ್ಕದನ್ನು ಕೂಡಲೇ ತಿರುಗಿಸಿದರು. ಮುಖ್ಯ ಜಾಪಾನಾಧಿಕಾರಿಯೊಬ್ಬನು ಮುಂಭಾಗದಲ್ಲೂ ಇತರ ಅಧಿಕಾರಿಗಳು ಹಿಂಗಡೆಯಲ್ಲೂ ಮೈಗಾವಲಿಗಾಗಿ ಬರುತಿದ್ದಂತೆ ಭವ್ಯ ನೀಳ ಸುಭಾಸ್ ನೆಟ್ಟಗೆ ತೂಕದ ಹೆಜ್ಜೆಯಿಡುತ್ತಾ ನಿಲ್ದಾಣದ ಮುಖ್ಯ ಭವನಕ್ಕೆ ನಡೆದ ಆ ದೃಶ್ಯ ನೋಡುವಂತಹದಿತ್ತು. ಕುಳ್ಳ ಜಾಪಾನರನಡುವೆ ದೀರ್ಘಕಾಯದ ಸುಭಾಸರು ಬೇತಾಳನಂತೆ ತೋರುತ್ತಿದ್ದರು.

ಭವನದೊಂದು ಘಟನೆ

ಈ ಪಂಗಡವು ಜನ ತಂಡ ನೆರೆದಿದ್ದ ಭವನಕ್ಕೆ ಮುಟ್ಟುವಾಗಲೇ ಒಂದು ಮೂಲೆ ಹಿಡಿದು ನಿಂತಿದ್ದ ಓರ್ವ ವ್ಯಕ್ತಿಯ ಮೇಲೆ ಸುಭಾಸರ ದೃಷ್ಟಿ ಬಿತ್ತು. ಕೂಡಲೇ ತನ್ನನ್ನು ಸುತ್ತುಗಟ್ಟಿದ್ದ ಜಾಪಾನ್ ಅಧಿಕಾರಿಗಳ ಗಣ್ಯವಿಲ್ಲದೆ-ಇಂತಹ ಸಂದರ್ಭಗಳಲ್ಲಿ ಜಾಪಾನರು ಪ್ರಾಣಾವಧಿ ಪ್ರಾಮುಖ್ಯತೆ ಕೊಡುತ್ತಿದ್ದ ಪದ್ಧತಿಯನ್ನೇ ಮುರಿದು-ಸುಭಾಸರು ಸಾಲು ಬಿಟ್ಟು ಆ ಏಕಾಕೀ ವ್ಯಕ್ತಿಯ ಕಡೆಗೆ ನಡೆಯಹತ್ತಿದರು. ಒಡನೆ ಇಬ್ಬರೂ ಹೃದಯಸ್ಪರ್ಶೀ ಗಾಢಾಲಿಂಗನದಲ್ಲಿ ತನ್ಮಯರಾಗಿಬಿಟ್ಟರು. ಆ ವ್ಯಕ್ತಿಯೇ ಶ್ರೀ. ಎಸ್. ಎ. ಅಯ್ಯರ್. ಯುದ್ಧಾರಂಭದಲ್ಲಿ ರ್‍ಯೂಟರ್ ಸ್ಪೆಶ್ಯಲ್ ಬಾತ್ಮೀದಾರನಾಗಿ ಬ್ಯಾಂಗೋಕಿನಲ್ಲಿದ್ದು ಕೊನೆಗೆ ಸುಭಾಸ್ ಸರಕಾರದ ಪ್ರಚಾರ ಮಂತ್ರಿ ಸ್ಥಾನದಲ್ಲಿದ್ದ ಅಯ್ಯರ್ ಇವರೇ. ಭಾರತದಲ್ಲಿ ಬಾತ್ಮೀದಾರರಾಗಿದ್ದಾಗಲೇ ಅವರು ಸುಭಾಸರ ಪರಿಚಯಸ್ಥರಿದ್ದರು ಕೊನೆಯವರೆಗೂ ಅವರೊಳಗೆ ನಿಕಟ ಸಂಬಂಧವುಳಿಯಿತು. ಭಾವೀ ನೇತಾಜಿಯ ಈ ಪದ್ಧತಿ ವಿರುದ್ಧ ವರ್ತನೆಯಿಂದ ಆಗಿದ್ದ ಗೊಂದಲವು ಕೊನೆಗೆ ಶಾಂತವಾಯಿತು. ಭವನದೊಳಗೆ ಕಾಲಿಟ್ಟೊಡನೆ, ಪ್ರತ್ಯೇಕ ಕಟ್ಟೆಯಲ್ಲಿ ನಿಲ್ಲಿಸಿದ್ದ ದೊಡ್ಡ ಚಲಚ್ಚಿತ್ರ ಕೆಮರಾದಿಂದ ಹಿಡಿದು ಸಣ್ಣ ಕಿಸೆ ಕೆಮರಾದ ವರೆಗಿನ ವಿವಿಧ ಯಂತ್ರಗಳಲ್ಲಿ ಬೋಸ್ ಸೆರೆ ಮೂಡಿದರು.

ಆ ಮೂರು ವಾಕ್ಯಗಳು.

ಭವನದಲ್ಲಿ ಪೂರ್ವ ಏಸ್ಯಾದ ಹಿಂದೀ ಧುರೀಣರ ಮತ್ತು ಆಗಿನ ಭಾರತ ರಾಷ್ಟ್ರೀಯ ಸೇನಾ ನಾಯಕರ ವ್ಯಕ್ತಿ ಪರಿಚಯ ನಡೆಯಿತು. ಬೋಸರು ಯಾರ ಮುಖ ನೋಡಿ ಒಂದು ಶಬ್ದ ಮಾಡಿದರೋ ಯಾವ ಕಡೆಗೊಂದು ನಗೆ ಚೆಲ್ಲಿದರೋ—ಅವರೆಲ್ಲರ ಹೃದಯವನ್ನು ತಕ್ಷಣ ಸೂರೆಗೊಂಡರು ಎಲ್ಲರಿಗೂ ಮಧುರಹಸ್ತ ಲಾಘವಕೊಟ್ಟು ಭಾರತ ರಾಷ್ಟ್ರೀಯ ಸೇನೆಯ 'ಗಾರ್ಡ್ ಓಫ್ ಓನರ್' ಸ್ವೀಕರಿಸಲು ಹೊರಬಂದರು. ಕೇವಲ ಹಿಂದೀ ರಾಜಕಾರಣಿಯಾಗಿದ್ದು, ಮುಂದಿನ ಭಾರತ ರಾಷ್ಟ್ರೀಯ ಸೇನೆಯ ಸೇನಾನಿ ಪಟ್ಟಕ್ಕೇರಲಿರುವ ಈ ಮನುಷ್ಯನಿಗೆ, ಅಷ್ಟೇನೂ ಸುಲಭವಲ್ಲದ ಸೈನಿಕ ಸೆಲ್ಯೂಟನ್ನು ಸ್ವೀಕರಿಸಲು ತಿಳಿದೀತೇ ಎಂಬ ಸಂದೇಹದಿಂದ ಇದೊಂದರಿಂದಲೇ ಗುಟ್ಟು ಹಿಡಿಯಬಹುದೆಂಬ ನಿರೀಕ್ಷೆಯಿಂದ ಜಾಪಾನೀ ಬಾತ್ಮೀದಾರರು ಅಲ್ಲಿ ಪತ್ತೇದಾರರ ದೃಷ್ಟಿಯಿಂದ ಕಾದಿದ್ದರು. ಆದರೆ ಸುಭಾಸರು ನುರಿತ ಸೇನಾನಿಯಂತೆ ಆ ವಿಧಿಯನ್ನು ಕ್ರಮಪ್ರಕಾರ ಮತ್ತು ಅತ್ಯಂತ ಘನತೆಯಿಂದ ನೆರವೇರಿಸಿದುದನ್ನು ಕಂಡ ಅವರೆಲ್ಲರ ಮನಸ್ಸೂ ಸ್ವಸ್ಥ ಆಯಿತು. ಅಲ್ಲಿ ರಾಸ್ ಬಿಹಾರಿಬೋಸರು ಭಾವೀ ನೇತಾಜಿಯನ್ನು ಸ್ವಾಗತಿಸಿ ಕೆಲವು ಮಾತುಗಳನ್ನಾಡಿದರು. ಹಿಂದೀ ಯೋಧರ ಸಾಲನ್ನು ಕಂಡ ಬೋಸರ ಹೃದಯವುಕ್ಕಿ ಬಂತು. ತನ್ನ ಜೀವನ ಸ್ವಪ್ನವಾಗಿದ್ದ ಚಿತ್ರವೊಂದು ರಕ್ತಮಾಂಸಗಳ ಪ್ರತ್ಯಕ್ಷ ರೂಪದಿಂದಲೇ ತನ್ನ ಕಣ್ಣ ಮುಂದಿರುವದನ್ನು ಕಂಡಾಗ ಬೋಸರ ಹೃದಯ ತುಂಬಿ ತುಳುಕಿ ಹರಿದ ಆನಂದ ಬಾಷ್ಪಗಳು ಗಲ್ಲದಿಂದಿಳಿದು ಬಂದುವು. ಅವರು ಬಾಯಿತೆರೆದರು; ಆದರೆ ಸಾವಿರಾರು ವೇದಿಕೆಗಳ ಬಿರುಗಾಳಿ ಭಾಷಣದ ಈ ರಾಜಕಾರಣಿಯ ಮಾತುಗಳು ಈ ಸಂದರ್ಭದಲ್ಲಿ ಮಾತ್ರ ಗಂಟಲಿನಿಂದ ಹೊರಡದಾದುವು. ಆನಂದವಂತಹದು. ಅವರು ಮೂರೇ ವಾಕ್ಯಗಳ ಭಾಷಣಕೊಟ್ಟು ಉಕ್ಕಿ ಬಂದ ಕಣ್ಣೀರನ್ನು ಜನರಿಂದ ಮರೆಮಾಡಲು ಥಕ್ಕನೆ ಮುಖತಿರುಗಿಸಿಬಿಟ್ಟರು. ಅವರಂದುದಿಷ್ಟೆ: "ಸ್ವಾತಂತ್ರ್ಯ ಸಮರದ ನನ್ನ ಬಂಧುಗಳೇ! ನನ್ನ ಜೀವನದ ಅತ್ಯಾನಂದದ ಮುಹೂರ್ತವೆಂದರೆ ಇದೇ. ಈಗ ಹೆಚ್ಚಿಗೆ ನಾನೇನನ್ನೂ ಹೇಳಲಾರೆ" ಈ ತ್ರಿವಾಕ್ಯಗಳ ಆಶೀರ್ವಾದವು ಪೂರ್ವ ಏಸ್ಯಾದ ಎಲ್ಲಾ ಪತ್ರಿಕೆಗಳಲ್ಲೂ ದೊಡ್ಡ ದೊಡ್ಡಕ್ಷರಗಳಲ್ಲಿ ಪ್ರಕಟವಾಯಿತು; ಅದನ್ನಾಧರಿಸಿ ಅಗ್ರಲೇಖನಗಳು ಬಂದುವು. ಸುಭಾಸರ ಅಂದಿನ ತ್ರಿವಾಕ್ಯಗಳಿಗೆ ಕೊಟ್ಟಂತಹ ಪ್ರಾಮುಖ್ಯತೆಯನ್ನು ಜಪಾನ್ ಪತ್ರಿಕಾಪ್ರಪಂಚವು ತನ್ನ ಚರಿತ್ರೆಯಲ್ಲೇ ಜಾಪಾನೇತರ ಯಾವನೊಬ್ಬನಿಗೂ ಆ ವರೆಗೂ ಕೊಟ್ಟದ್ದಿಲ್ಲ. ಸ್ಯೋನಾನಿನಲ್ಲಿ ನೇತಾಜೀಯ ಆಗಮನ ಮತ್ತು ಸ್ವಾಗತವೆಂದರೆ ಹಾಗಿತ್ತು.'

ಜೈ ಹಿಂದ್!

FOR LIFE ASSURANCE

CONSULT

The New Gaurdian of India Life Insrce. Co , Ltd ,

(Chairman - The Hon'ble Mr. M. CT. M. Chidambaram Chettiar.)

A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA
MANGALORE
&
KARKALA.

HEAD OFFICE
"United India Life Bldg"
Esplanade. Post Box No 142.
MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ-ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ
Ayurveda Oushadalaya GADAC

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟು ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉಪನ್ಯಾಸ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಆಗುಹೋಗುಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು ೪ ೮ ೦ ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ರಾಜಗೋಪಾಲಾಚಾರ್ಯ,
ಕರಂಬಳ್ಳಿ, ಉಡುಪಿ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1-8-0** ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನನ್ನ ಯಜ್ಞ 0-2-0; (2) ಕಿಂಡರ್ ಗಾರ್ಟನ್ ಬೋಧನೆ 0-2-0; (3) ಚಲಚ್ಚಿತ್ರ ಸಮ್ರಾಜ್ಞೀ 0-2-0, (4) ವೀರಭೂಮಿ 0-2-0, (5) ರಂಭಾಶುಕ ಸಂವಾದ 0-2-0 (6) ಅರ್ಧ ಬೆಳೆದ ಗಿಡ್ಡಿಯ ಮನುವೆ 0-2-0 (7) ಮಾಮಾಕನ ಪೇಚಾಟ ಫೈರಾಫ್ 0-2-0 (8) ಬಂಗಾರ್ದಂಗಿನ ಕತೆ 0-1-0; (9) ಏಕಾಂತ ರಾಮಾಯಣ 0-1-0; (10) ಭಾರತ ಗೀತಾಂಜಲಿ 0-2-0, ಒಂದು ರೂಪಾಯಿ ಮಣಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟು ಮಾಡಿ ಕಳಿಸಲಾಗುವುದು. ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ, ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೫ ವಾರ ೪೯] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: SRI A. B. SHETTY. M.L.A [Vol. 25 No. 49

ಉಡುಪಿ ● 8—8—1946 ● ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ, ತಲೆನೋವು, ಶೀತ, ನೆಗಡಿ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೆ, ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು ವಿಷ ಮುಂತಾದ ಬೇನೆ ಶಕ್ತವಾಗಿ ಮೊದಲು ನೋವು ಕೊಡುವ ರೋಗಗಳಿಗೂ ಸಿದ್ಧೌಷಧ ಶಿಶುಗಳಿಗೆ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ॥ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ॥ ಸಿ. ಜಿ. ಆಚಾರ್ಯ ಫಾರ್ಮೆಸಿ; ಡಾ॥ ೨. ಶೇಷಗಿರಿ ಶೈ, L. I. M.; ಡಾ॥ ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co., Ltd.,

HEAD OFFICE **UDIPI.** (S. India.)

Chief Agents for the Bombay and Madras Presidencies including States and the States of Mysore and Hyderabad

The Commercial Corporation of India, Ltd.,

UDIPI. (S. India.)

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area - **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ॥ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲೆ ಬಿಡಬೇಕು. ೭ ದಿವಸ ... ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ನಿರಾಳ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ಬಿಜಾಪುರ— ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡ, ಬಿಜಾಪುರ, ಚಿಕ್ಕೋಡಿಯಲ್ಲಿ:—ಕುಂಬಾರಮಠ ಸ್ಟೋರ್ ದಾವಣಗೇರಿ:—ದಾವಣಗೇರಿ ಪ್ರೆಸ್, ... ಕೆಮಿಸ್ಟ, ಹಾವೇರಿ ಬ್ಯಾಡ್ಗಿ.

Ayurveda Oushadalaya, GADAG CITY.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದ್ದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಸರಾಗುವವರೂ ಬರೆಯಿ—

ಪಿ. ಡಿ. ನನಯ್ಯ, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ದಕ್ಷಿಣ ಭಾರತದ ಮುಸ್ಲಿಮರಿಗೂ ಪಾಕಿಸ್ತಾನ ಬೇಕೆ?

ಲೇ.—'ವಿಚಾರಿ'.

ವಿಶ್ವವರಲ್ಲಿ 'ಸ್ವಾತಂತ್ರ್ಯ ಸ್ಫೂರ್ತಿ' ಹೇಗೋ ಮುಸಲ್ಮಾನರಲ್ಲೀಗ 'ಪಾಕಿಸ್ತಾನ್ ಸ್ಫೂರ್ತಿ' ಹಾಗೆ-ಇದು ಪ್ರಾಂತಿಕ ಭೇದವಿಲ್ಲದೆ ಅಖಿಲ ಭಾರತ ವ್ಯಾಪಿಯಾಗಿರುವ ಮನೋವೃತ್ತಿ. ಆದರಲ್ಲೂ ಸ್ವಾತಂತ್ರ್ಯ ಸ್ಫೂರ್ತಿಯು ಈಗ ಪಕ್ವಕ್ಕೆ ಬಂದಿದೆ; ಪುಷ್ಪವಾಗಿ ಪರಿಮಳ ಬೀರುತ್ತಿದ್ದ ಕಾಲ ಕಳೆದಿದೆ, ಮಿಡಿಯಾಗಿ ಕಾಯಾಗಿ, ಈಗ ಹಣ್ಣಾಗುವದರಲ್ಲಿದೆ. ಆದರೆ ಪಾಕಿಸ್ತಾನ್ ಸ್ಫೂರ್ತಿ ಹೊಸತು; ಅದರ ನವೀನತೆ ಮಾಸಿಲ್ಲ. ಇನ್ನೂ ಪರಿಮಳ ಬೀರುತ್ತಿದೆ. ಬೊಂಬಾಯಿಯ ಲೀಗ್ ಕೌನ್ಸಿಲಿನ [illegible] ಬಹಿಷ್ಕಾರ ಮತ್ತು [illegible] ನಿರ್ಧಾರ[illegible] ಮುಸಲ್ಮಾನರೆಲ್ಲಾ ತಾವೇ ತಮ್ಮನ್ನು [illegible] ಭಾವಿಸಿಕೊಳ್ಳುತ್ತಿದ್ದಾರೆ. ವಾತಾವರಣ ನಿಜಕ್ಕೂ ಬಿಸಿಯೇರಿದೆ, ಏಳಲಿ! ಗಾಬರಿಗವಕಾಶವಿಲ್ಲ. ನ್ಯಾಯವಿಲ್ಲದ ಗೊಂದಲ ನಿರ್ಮಾಣದಿಂದ ಯಾರೂ ಹೆಗ್ಗಳಿಕೆ ಪಡಬಾರದು. ಊರಿಗೆ [illegible] ಹುಲಿ-ಮುದಿ ಹುಲಿಗೆ ಹಾರಿದ ಮರುಳ-ಬಜಾನೆ ಮುರಿದ ಕಳ್ಳ, ಎಲ್ಲರೂ ಒಮ್ಮೆ ಊರನ್ನು ನಡುಗಿಸಬಲ್ಲರು. ಆದ್ದರಿಂದ ವಾತಾವರಣವೇ ವಾದದ ನ್ಯಾಯಾನ್ಯಾಯವನ್ನು ಅಳೆಯುವ 'ಮಾನ'ವಾಗುವಂತಿಲ್ಲ-ಅಥವಾ ಪಾಕಿಸ್ತಾನ್ ವಾದದ ಕೂಲಂಕುಷ ವಿಮರ್ಶೆ ನಡಿಸುವ ಉದ್ದೇಶವೂ ಇಲ್ಲಿಲ್ಲ. ಯಾಕೆಂದರೆ ಸದ್ಯದ ಈ 'ತಲೆರೋಗ'ಅಂಟುರೋಗ! ರಾಷ್ಟ್ರೀಯ ಮುಸಲ್ಮಾನರಿರಬಹುದು-ಇದ್ದಾರೆ; ಆದರೆ ಮುಸಲ್ಮಾನ್ ಜನತೆ ಲೀಗಿನ ಹಿಂದಿದೆ ಎಂಬುದನ್ನೊಪ್ಪಲೇ ಬೇಕು. ರಾಷ್ಟ್ರದ ಯಾವ ಭಾಗದಲ್ಲೇ ಇರಲಿ– ಮುಸಲ್ಮಾನ್ ಆದವನಿಗೆ ಪಾಕಿಸ್ತಾನ್ ಎಂಬುವೊಂದು ಗುರಿ ಮಾತ್ರವಲ್ಲ, ಆಚರಣೆ, ನಿಯಮ, ನಿಷ್ಠೆ, ವ್ರತ ಕೂಡಾ ಆಗಿದೆ, ತುಲನಾತ್ಮಕವಾಗಿ ಹೇಳುವುದಾದರೆ ಮುಸಲ್ಮಾನರು ಯೋಧ ಜನಾಂಗ ಧೈರ್ಯಸ್ಥೈರ್ಯ ಮತ್ತು ಸಾಮಾಜಿಕ ಶಿಸ್ತು ಪಾಲನೆಗೆ ಹೆಸರಾದವರು. ಉದ್ರಾಂತಿಯದ್ದಲ್ಲಿ ಉದ್ವೇಗವಿರಲೇಬೇಕು, ಶಾಂತತ್ವವಿದ್ದಲ್ಲಿ ಕ್ರೂರತ್ವವು ಇರಬೇಕು, [illegible] ಸ್ವಭಾವದ ಒಂದು [illegible] [illegible] ಅವರ [illegible] ಪ್ರತಿರೋಧ, [illegible]ಯಿಲ್ಲ. ಈ ಮಾನವಿಯ ಜನರನ್ನು ನಡೆಸುವದು ಆವೇಗ– ಆಲೋಚನೆಯಲ್ಲ. ಭಾರತ ಜನಜೀವನದ ಅಸ್ತಿವಾರದ ಅಡಿಗಲ್ಲಾಗಿ ಜಾತೀಯತೆಯೇ ಇದೆ; ಅಂದಿನಿಂದಿದುವರೆಗೂ ತಿರುಳಾಗಿರುವದು ಅದೊಂದೇ. 1920ರಲ್ಲಿ ಜಾಲಿಯಾನ್ ವಾಲಾಬಾಗ್ ಮತ್ತು ಖಿಲಾಫತ್ ಅನ್ಯಾಯಗಳು ಜತೆಯಲ್ಲಿ ನಡೆದುದರಿಂದ ಒಮ್ಮೆ ಹಿಂದೂ- ಮುಸಲ್ಮಾನರೊಂದುಗೂಡಿದಂತೆ ತೋರಿದ್ದಿತು; ಜಾತೀಯತೆಯನ್ನು ಕಾಂಗ್ರೆಸಿನ ರಾಷ್ಟ್ರೀಯತೆ ಅಡಿಗೊತ್ತಿ ನಿಂತಂತೆ ಭಾಸವಾಯಿತು ಅದರೂ ಆ ಒಕ್ಕಟ್ಟು ಹಿಂದಕ್ಕಿದ್ದುದೂ ಅಲ್ಲ– ಮುಂದಕ್ಕುಳಿಯಲೂ ಇಲ್ಲ ಆದ್ದರಿಂದಲೇ ಇಂದು'ಹಿಂದೂ ಮುಸ್ಲಿಂ ಐಕ್ಯಹೋ'ಎಂಬ ಘೋಷವನ್ನು 'ಪಿಹೋ' ಎಂದು ದಿಗಂತವು ಅಣಕಿಸುತ್ತಿದೆ ಹೊರತು ಯಾವ ಹೃದಯವೂ ಪ್ರತಿಧ್ವನಿಸುತ್ತಿಲ್ಲ ಸದ್ಯ ಸ್ಥಿತಿಯಲ್ಲಿ ನ್ಯಾಯಪ್ರಕಾರ ಯಾವ ಯಾವ ಪಾತ್ರಿಗೆಷ್ಟೆಷ್ಟು ಹಾಳಬೇಕುಎಂಬುದೊಂದನ್ನೇನೋಡಬೇಕಲ್ಲದೆ 'ಎಲ್ಲರೂ ಒಂದೇ ಬಟ್ಟಲಲ್ಲಿ ಉಣ್ಣುವಾ' ಎಂದರಾಗದು. ಕಾಂಗ್ರೆಸ್'ಒಪ್ಪಿರುವ ಘಟನಾ ಸಮಿತಿಯ ವ್ಯವಸ್ಥೆ ಇಂತಹ ಒಂದು ಪಾಲುಪಟ್ಟಿ 'ಆದಾಗದು, ತಮಗೆ ಸ್ವತಂತ್ರ ಸಾರ್ವಭೌಮಾಧಿಕಾರವುಳ್ಳ ಪಾಕಿಸ್ತಾನವೇ ಬೇಕು' ಎಂದು ಮುಸಲ್ಮಾನರನ್ನುತ್ತಾರಾದರೆ-ಅದಕ್ಕೆ ಸಾಧಾರ ಆಕ್ಷೇಪ ಮಿಕ್ಕವರದಿದೆಯಾದರೆ-ಆಗ ನಿಷ್ಪಕ್ಷಪಾತಿ ಮೂರನೆಯವರ (ಬ್ರಿಟಿಷರು ಎಷ್ಟಕ್ಕೂ ಅಲ್ಲ) ತೀರ್ಮಾನಕ್ಕೆ ವಾದವನ್ನು ಒಪ್ಪಿಸುವದೊಂದೇ ಮಾರ್ಗ ಇದಕ್ಕೂ ಒಪ್ಪದೆ ಪಕ್ಷ ಹಟವಾದಿ; ದುಶ್ಚಟವಾದಿ. ಪಂಚಾಯತಿಕೆಯಿಂದಲ್ಲ-ಪರಾಕ್ರಮದಿಂದಲೇ ತನ್ನ ಪಾಲನ್ನು ಸಾಧಿಸಿಕೊಳ್ಳುವೆನೆಂದು ಒಂದು ಪಕ್ಷವು ಹೊರಟಲ್ಲಿ ಇದಿರು ಪಕ್ಷ ಕನ್ನಡಿಯಂತೆ ಅದನ್ನೇ ಪ್ರತಿಪಾದಿಸಬೇಕಾಗುತ್ತದೆ. ಪಾಕಿಸ್ತಾನ ಜೊತೆಯಿಂದಾಗಿ ಇಂದು ಎದ್ದಿರುವ ಪರಿಸ್ಥಿತಿ ಹೀಗೆ ತಾನು ವಾದಿಯಾಗಿ ಮತ್ತೊಬ್ಬನನ್ನು ಪ್ರತಿವಾದಿ ಮಾಡಿದವನು ಇನ್ನೊಬ್ಬ ನ್ಯಾಯಾಧೀಶನಿದ್ದಾನೆಂದಾದರೂ ಒಪ್ಪಬೇಕು. ವಾದಿ ಮತ್ತು ನ್ಯಾಯಾಧೀಶ, ಎರಡೂ ತಾನೇ ಎನ್ನುವವನು ಮತ್ತೇನೂ ಅಲ್ಲ, ವಿಚಿತ್ರಪ್ರಾಣಿ! ಆದರೆ ಮಾನವ ಜಗತ್ತೇ ವಿಲಕ್ಷಣ. 'ಅತಿರೇಕ'ವಾದುದು ಅಂಟಿಕೊಳ್ಳುವಷ್ಟು ಗಟ್ಟಿಯಾಗಿ ಮನುಷ್ಯ ಸ್ವಭಾವಕ್ಕೆ ಬೇರಾವುದೂ ಹಿಡಿಯದು. ಅಂತೆಯೇ 'ಪಾಕಿಸ್ತಾನ್' ಮುಸ್ಲಿಂಸಮಾಜದಹೃದಯದಲ್ಲಿ ತುಂಬಿಹೋಗಿದೆ; ಆ ಮಟ್ಟಿಗೆಯಾವ ವಾದವನ್ನು ಹೊಗಿಸುವದಕ್ಕೂ ಎಡೆಯೇ ಇಲ್ಲದಷ್ಟು ಅದು ಭರ್ತಿ ತುಂಬಿದೆ! ಆದ್ದರಿಂದ ಅದು ಬೇಡವೆಂಬ ಪ್ರಶ್ನೆಯನ್ನೇ ಬಿಟ್ಟುಬಿಡೋಣ. ಯಾಕೆಂದರೆ 'ಪಾಕಿಸ್ತಾನ ಬೇಡ' ಎನ್ನುವವರು ಅದಕ್ಕೆ ಕಾರಣ ಕೊಟ್ಟರೂ ಕಾಫಿರರಾಗುತ್ತಾರೆ! ಅಂದಮೇಲೆ ಬೇಡವೆಂಬುದನ್ನು ವಾದಿಸಲುಹೊರಡುವದಕ್ಕಿಂತ, ಹಾಗೆಂದು ತಮ್ಮಲ್ಲೇ ತಾವು ದೃಢ ನಿರ್ಧಾರ ಮಾಡಿಕೊಳ್ಳುವದು ವಾಸಿ.

ದಕ್ಷಿಣ ಭಾರತದವರಿಗೂ ಬೇಕೆ?

ಆದರೆ ಇದೊಂದು ವಿಚಾರ ಮಾಡುವದರಿಂದೇನೂಅಪಾಯವಿಲ್ಲ 'ಪಾಕಿಸ್ತಾನ್' ಎಂದರೆ 'ಕುರಾನ್'ನಂತೆ ಒಂದು ಗ್ರಂಥವಲ್ಲ–ಅದೊಂದು ಸ್ಥಾನ, ಸ್ಥಳ ಅಥವಾ ರಾಜ್ಯವೆಂಬುದು ನಿಜವಷ್ಟೆ? ಅಂದಮೇಲೆ ಸ್ಥಳೀಯರನ್ನೇ ಪ್ರತ್ಯೇಕಿಸಿ ಸಂಭೋದಿಸಿದರೆ ಪಾಕಿಸ್ತಾನ್ ಘೋಷಣೆಗೆ ವಿರುದ್ಧವಾಗದು. ಆದ್ದರಿಂದ ದಕ್ಷಿಣ ಭಾರತದ ಮುಸಲ್ಮಾನ್ ಬಂಧುಗಳನ್ನು ಬೇರೆ ಎಂದೇ ಗಣಿಸಿ ಪ್ರಶ್ನಿಸೋಣ ನಿಮಗೂ ಪಾಕಿಸ್ತಾನ ಬೇಕೆ? ಎಲ್ಲರೂ ಬೇಕೆಂದೇ ಹೇಳುವಂತಿದೆ. ಇಲ್ಲಿ ಮತ್ತೊಮ್ಮೆ ಬಿಡಿಸಿ ಕೇಳಬೇಕಾಗಿದೆ. ಮೇಲ್ಗಡೆ ಕೊಟ್ಟ ಕಾರಣಗಳಿಂದಾಗಿ 'ಪಾಕಿಸ್ತಾನವೇ ಬೇಡ' ಎಂದು ವಾದಿಸಲು ಹೊರಡದೆ, ಮುಸಲ್ಮಾನರಿರು ಪಾಕಿಸ್ತಾನವಾಯಿತೆಂದೇ ಕಟ್ಟಿಕೊಂಡು ಆ ಘೋಷಣೆಗೆ ಭಂಗಬಾರದಂತೆ ದಕ್ಷಿಣ ಭಾರತದ ಮುಸಲ್ಮಾನರನ್ನು ಪ್ರತ್ಯೇಕವಾಗಿ ಕೇಳುವ ಪ್ರಶ್ನೆಯಿದು--'ಪಾಕಿಸ್ತಾನ ಬೇಕು. ಆದರೆ ಅದು ನಿಮಗೂ ಬೇಕೆ?. ಇದಕ್ಕೆ ಪುರವಣಿಯಾಗಿ ಮತ್ತೊಂದು ಪ್ರಶ್ನೆ--"ಮಿ. ಜಿನ್ನರಿಗೆ ಬೇಕಾಗಿರುವ ಪಾಕಿಸ್ತಾನವೇ ದಕ್ಷಿಣ ಭಾರತದ ಮುಸಲ್ಮಾನರಿಗೂ ಬೇಕು. ಆದರೆ ಅದನ್ನು ಪಡೆಯಲು ಮಿ. ಜಿನ್ನರಿಗಿರುವ ಕಾರಣವೇ ದಕ್ಷಿಣ ಭಾರತದ ಮುಸಲ್ಮಾನರಿಗೂ ಇದೆಯೆ?" ನಿಜಕ್ಕೂ ಇಲ್ಲ. ಮುಸಲ್ಮಾನರ ಬಹುಮತವಿರುವಲ್ಲಿ ಅವರಿಗಾಗಿ ಪ್ರತ್ಯೇಕ ರಾಷ್ಟ್ರವೊಂದರ ನಿರ್ಮಾಣವಾಗಬೇಕು-ಎಂದೇ ಕ್ವಯಿದೀ ಅಝಾಮರ ಆಗ್ರಹ. ಇದಕ್ಕೆ ಕಾರಣವಾಗಿ ಮುಸ್ಲಿಮರು ಸಂಪೂರ್ಣ ಭಿನ್ನ ಸಂಸ್ಕೃತಿಯವರು ಎಂಬ ವಾದವನ್ನು ಸಾಹೇಬರುಮುಂದೊಡ್ಡುತ್ತಾರಾದರೂ, ಪಾಕಿಸ್ತಾನದಲ್ಲಿ ಅಸ್ಸಾಮು ಮತ್ತು ಬಂಗಾಳದ ಭಿನ್ನ ಸಂಸ್ಕೃತಿಯ ಹಿಂದೂ ಭಾಗವನ್ನೇ ಸೇರಿಸಿಕೊಳ್ಳುತಿದ್ದಾರೆ ಹೊರತು, ಅದರ ಬದಲಿಗೆ ತಮ್ಮ ಸಂಸ್ಕೃತಿಯವರೇ ಆದ ಮದ್ರಾಸ್ ಮುಸಲ್ಮಾನರನ್ನೇನೂ ಕೇಳುವದಿಲ್ಲ. ಅರ್ಥಾತ್ ಭಾರತದ ಉತ್ತರ ಭಾಗ ಅವರಿಗೆ ಅಗತ್ಯಬೇಕಾಗಿದೆ ಹೊರತು ಮುಸಲ್ಮಾನರು ಬೇಕಾಗಿಲ್ಲ. ಅಸ್ಸಾಮು ಪ್ರಾಂತ್ಯದ ಜನ ಸಂಖ್ಯೆ ಸುಮಾರು ಒಂದು ಕೋಟಿ. ಆದರೆ ಪಾಕಿಸ್ತಾನಕ್ಕೆ ಸಂಬಂಧಿಸದ ಭಾಗದಲ್ಲಿ ಕಡಿಮೆಯೆಂದರೆ 2ಕೋಟಿಗೂ ಮಿಕ್ಕಿ ಮುಸಲ್ಮಾನರಿದ್ದಾರೆ. ಮುಸ್ಲಿಂ ಸಮಾಜ ಮಾತ್ರಾಗಿಯೇ ಪ್ರತ್ಯೇಕತೆಯೊಂದಾಕೆ ಒಂದೂ ಬಹು ಸಂಖ್ಯಾಕರುಳ್ಳ ಅಸ್ಸಾಮ್ ಪ್ರಾಂತ್ಯದ ಬದಲಿಗೆ, ಇತರ ಭಾಗಗಳ ಈ ಮುಸ್ಲಿಂ ಜನತೆಯನ್ನೇ ಕೇಳಬೇಕಾಗಿತ್ತು. ಅದಾದರು ಅಸಾಧ್ಯ. ಯಾಕೆಂದರೆ ಅದು ಮುಸ್ಲಿಂ ಬಹುಮತದ ಅಧಿಕಾರವುಳ್ಳ ರಾಷ್ಟ್ರವೊಂದನ್ನು ರಚಿಸಬೇಕೆಂಬ ಪ್ರಶ್ನೆ ಹೊರತು, ಮುಸ್ಲಿಂ ಜನಾಂಗವನ್ನು ಏಕೀಕರಿಸುವ ಪ್ರಶ್ನೆಯಲ್ಲ ಒಂದು ರಾಜ್ಯ ಸಾಧನೆ ಹೊರತು ಒಂದು ಸಂಸ್ಕೃತಿಯ ಆರಾಧನೆಯಲ್ಲ. ಆದ್ದರಿಂದ ನಾಳೆಜಿನ್ನರ ಆಜ್ಞೆ ಬಂದೊಡನೆ ದಕ್ಷಿಣ ಭಾರತದ ಮುಸಲ್ಮಾನರೂ'ನಮಗೆ ಪಾಕಿಸ್ತಾನ ಬೇಕು!' ಎಂದು ಕೂಗುತ್ತಾ ಮೆರವಣಿಗೆ ಹೊರಡಬಹುದು ಆದರೆ ನಾಡದು ಪಾಕಿಸ್ತಾನವೇ ಬಂದುಬಿಟ್ಟರೆ 'ನ

(೧೧ನೇ ಪುಟ ನೋಡಿರಿ)



Approved firm by the Govt. of Mysore
Certified by the Agent of the Govt. of Ceylone Indian.

ನೀವು ನಿಮ್ಮ ವ್ಯಾವಹಾರಿಕ ಪಟ್ಟಿ ಉಪಭೋಗಿಸಬೇಕಾದರೆ

ಒಮ್ಮೆಲೆ ಹಣದ ರಾಶಿಯಲ್ಲಿರಬೇಕಾದ / ಸಿರಿವಂತರಾಗಬೇಕಾದ / ಲಕ್ಷ್ಮೀಪುತ್ರರಾಗಬೇಕಾದ / ಅನುಕೂಲಸ್ಥರಾಗಬೇಕಾದ ಕಾರಣವಿಲ್ಲ.

ನೀವು ಅನುಸರಿಸುವ ವ್ಯಾಪಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ ಯಾಕಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮೀರಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾಪಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd 1906

CANARA BANK LIMITED

(Incorporated in British India. Liability of Members Limited.)

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು,

The Moolky Bank Ltd.,
Moolky, S. K.

> 'ಲೀಗಿನ ನಿರ್ಧಾರದಿಂದಾಗಿ ಸ್ವಾತಂತ್ರ್ಯ ಸಾಧನೆಗೆ ತಡವಾಗಬಹುದು; ಆದರದು ತಡೆಗಟ್ಟಲ್ಪಡಲಾರದು' —ನೆಹರು.
>
> 'ಈ ಬೆದರಿಕೆಗಳಿಗೆಲ್ಲಾ ಕಾಂಗ್ರೆಸ್ ಎಂದಿಗೂ ಬಗ್ಗುವಂತಿಲ್ಲ. ತನ್ನ ಅರಿವು ತನಗಿದ್ದಲ್ಲಿ ಮಿ. ಜಿನ್ನರು ಹೇಯ ನಿಂದೆ ಮತ್ತು ಬಣ ಬೆದರಿಕೆಗಳ ದುರಭ್ಯಾಸವನ್ನು ಬಿಟ್ಟು ಶಾಂತರೀತಿಯಿಂದ ಸಂಧಾನಕ್ಕೆ ಬರಬೇಕು' —ವಲ್ಲಭಾಯಿ.

ಲೀಗ್ ನಿರ್ಧಾರದ ಪ್ರತಿಧ್ವನಿ.

ಬೊಂಬಾಯಿಯ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯು ಬ್ರಿಟಿಷ್ ಸೂಚನೆಗಳನ್ನು ಸಂಪೂರ್ಣ ಬಹಿಷ್ಕರಿಸುವ ಮತ್ತು ಪ್ರತ್ಯಕ್ಷ ಕಾರ್ಯಾಚರಣೆ ಕೈಕೊಳ್ಳುವ ಎರಡು ನಿರ್ಧಾರಗಳನ್ನು ಮಾಡಿದ ಮೇಲೆ ಲೀಗ್ ಕಾರ್ಯಕಾರೀ ಸಮಿತಿಯು ಆಗೋಸ್ತು ತಾ 16ನೇ ಶುಕ್ರವಾರವನ್ನು 'ಪ್ರತ್ಯಕ್ಷ ಕಾರ್ಯಾಚರಣಾ ದಿನ'ವಾಗಿ ಆಚರಿಸಬೇಕೆಂದು ಮುಸಲ್ಮಾನರನ್ನು ವಿನಂತಿಸಿಕೊಂಡಿದೆ. ಆ ದಿನ ಹರತಾಳ, ಸಭೆ, ಮೆರವಣಿಗೆಗಳಿರುವವು. "ನಮ್ಮಿಂದ ಸಾಧ್ಯವಿದ್ದಷ್ಟನ್ನೆಲ್ಲಾ ಮಾಡಿದ ಮೇಲೆಯೇ ನಾವೀ ನಿರ್ಧಾರಕ್ಕೆ ಬಂದಿದ್ದೇವೆ. ಪ್ರತ್ಯಕ್ಷ ಚಳವಳವೆಂದರೆ ಸರಕಾರದ ಅಥವಾ ಕಾಂಗ್ರೆಸಿನ ವಿರುದ್ಧ ಯುದ್ಧಕ್ಕೇಳುವದಲ್ಲ; ನಮ್ಮ ಸ್ವಂತ ರಕ್ಷಣೆಯ ಕಾರ್ಯ ವಿಧಾನಗಳನ್ನು ಕೈಕೊಳ್ಳುವದು. ಈಗ ಸಂಧಾನಕ್ಕೆ ಸರಕಾರ ಅಥವಾ ಕಾಂಗ್ರೆಸ್ ಮುಂದಾಗಬೇಕು." ಎಂದು ಮಿ. ಜಿನ್ನರ ಹೇಳಿಕೆ. ಪ್ರತ್ಯಕ್ಷ ಚಳವಳದ ಕಾರ್ಯಕ್ರಮಗಳನ್ನು ತಯಾರಿಸಲು ಮಿ. ಜಿನ್ನರು, 5ರಿಂದ 7ರ ವರೆಗೆ ಸದಸ್ಯರಿರುವ ಒಂದು 'ಆಚರಣಾ ಸಮಿತಿ'ಯನ್ನು ನೇಮಿಸುವರು. ಈ ಸಮಿತಿಯು ಆ ವಿಧಾನಗಳನ್ನು ಕಾರ್ಯಕಾರೀ ಸಮಿತಿಯ ಮುಂದಿಡುವದು. ಅಗ್ರಗಣ್ಯ ಲೀಗ್ ಮುಖಂಡರು ಏಳೆಂಟು ಗುಂಪಾಗಿ ಇಡೀ ದೇಶದಲ್ಲಿ ಪ್ರಚಾರ ಕಾರ್ಯ ಕೈಕೊಳ್ಳುವರು. ಅಂತೂ ಹೋರಾಟದ ಪೂರ್ವ ಸಿದ್ಧತೆಗಾಗಿ ಸುಮಾರು ಎರಡು ತಿಂಗಳಾದರೂ ಹಿಡಿಯಬಹುದಂತೆ. ಇತರ ಮುಸಲ್ಮಾನರು ಪ್ರವೇಶಿಸಿದಂತೆ [illegible]ಯ ಲೀಗ್ ಸದಸ್ಯರು ರಾಜಿ ಕೊಡದೆ ಗೈರು ಹಾಜರಾಗುವರು. ಬಂಗಾಳ, ಸಿಂಧಿನ ಲೀಗ್ ಮಂತ್ರಿಮಂಡಲಗಳೂ ರಾಜಿ ಕೊಡುವಂತಿಲ್ಲ. ಪ್ರತ್ಯಕ್ಷ ಹೋರಾಟದಲ್ಲಿ ಕರ ನಿರಾಕರಣೆಯೇ ಮೊದಲಾದ ಉಗ್ರ ಕಾರ್ಯಕ್ರಮಗಳಿರುವವು-ಎಂದೆಲ್ಲಾ ಕೆಲವು ಲೀಗ್ ಪ್ರಮುಖರು ವರ್ಣಿಸುತ್ತಿರುವರಾದರೂ ಇದುವರೆಗೇನೂ ನಿಶ್ಚಯವಾಗಿಲ್ಲ. 'ಸರ್', 'ಖಾನ್ ಬಹದೂರು" ಇತ್ಯಾದಿ ಬಿರುದುಗಳೆಲ್ಲಾ ಉದುರಿ ಹಲವರ ಹೆಸರು ಗಿಡ್ಡವಾಗುವದೊಂದು ಕಾಣುತ್ತಿದೆ.

ಅಲ್ಲಲ್ಲಿ ಹೋರಾಟ ನಾಯಕರನ್ನು ಚುನಾಯಿಸುವ-ಉಗ್ರ ಕಾರ್ಯಪ್ರವರ್ತನೆಗೆ ತಯಾರಿರುವಂತೆ ಸಜ್ಜುಗೊಳಿಸುವ-ಗುಪ್ತ ಸಿದ್ಧತೆಗಳು ನಡೆಯುತ್ತಿರುವಂತಿದೆ. ಸೈನ್ಯ, ಪೋಲೀಸ್ [illegible] ಸರಕಾರಿ ಖಾತೆಗಳಲ್ಲಿರುವ ಮುಸಲ್ಮಾನರನ್ನೂ ಒಳಗೆಳೆದುಕೊಳ್ಳುವ ವ್ಯವಸ್ಥೆ ನಡೆದಂತಿದೆ. ಇದುವರೆಗೂ ರಾಜ ವೈಭವದ ಜೀವನ ನಡೆಸುತ್ತಿದ್ದ ಎಪ್ಪತ್ತರ ಮುದುಕ ಮಿ. ಜಿನ್ನರು ಜೈಲು ವಾಸಕ್ಕನುಕೂಲವಾಗುವಂತೆ ನೆಲದಲ್ಲಿ ಮಲಗುವದೇ ಮೊದಲಾದ ದೇಹ ದಂಡನೆಯ ಅಭ್ಯಾಸಕ್ಕೆ ತೊಡಗಿರುವರೆಂಬ ವಿನೋದಕರ ವಾರ್ತೆಗಳೂ ಬರುತ್ತಿವೆ

ಕಾಂಗ್ರೆಸಿನ ಈ ಬಾರಿಯ ದೃಢ ಧೋರಣೆಯಿದಿರಲ್ಲಿ ತಾವು ನಿರಾಶೆ, ಅಪಮಾನ, ಮತ್ತು ಕೆಳ ದರ್ಜೆಗಿಳಿಯಬೇಕಾಗಿ ಬಂದುದರಿಂದ ಅಸಹ್ಯ ಗೊಂದಲಕ್ಕೀಡಾದ ಮಿ. ಜಿನ್ನಾ ಮತ್ತು ಮುಸ್ಲಿಂ ಲೀಗು ತಮ್ಮೀ ಬೆದರಿಕೆಯಿಂದಲೇ ಕಾಂಗ್ರೆಸ್ ಅಥವಾ ಬ್ರಿಟಿಷರು ಹಣ್ಣಾಗಿ ತಮ್ಮ ಬೆನ್ನು ಸವರಲು ಬರಬಹುದೆಂಬ ಆಶೆ ಕಟ್ಟಿಕೊಂಡಂತಿದೆ. ಆ ನಿರೀಕ್ಷೆಯಿಂದಲೇ ಕಾಲವ್ಯಯ ಮಾಡಿ ಕೊನೆಗೆ ತನ್ನ ಅಸ್ತಿತ್ವ ಪಾಲನೆಗಾಗಿ ಏನಾದರೊಂದು ಗೊಂದಲವೆಬ್ಬಿಸಬಹುದೆಂದು ನಿರೀಕ್ಷಿಸಲಾಗಿದೆ.

ರಾಷ್ಟ್ರೀಯ ಪ್ರತಿಕ್ರಿಯೆಗಳು

'ತಟಕು ರಕ್ತ ಚೆಲ್ಲದೆಯೇ ಸ್ವಾತಂತ್ರ್ಯ ಸಂಪಾದಿಸಬಹುದೆಂಬುದು ಅತ್ಯಾಶೆಯೇ ಸರಿ. ಶಾಂತಿಯಿಂದಲೇ ಸ್ವರಾಜ್ಯ ಬರುವದಾದರೆ ನಾವದಕ್ಕಾಗಿ ಎಂತಹ ಬೆಲೆಯನ್ನಾದರೂ ಕೊಡಬಲ್ಲೆವು. ಆದರೆ ಸ್ವರಾಜ್ಯವು ಕುರೂಪೀ ಪ್ರದರ್ಶನ ಮತ್ತು ಘರ್ಷಣೆಗಳಿಂದಲೇ ಆರಂಭವಾಗಬೇಕೆಂದು ಮುಸ್ಲಿಂ ಲೀಗಿನ ಹಠವಿದ್ದರೆ ನಾವದಕ್ಕೆ ಸಿದ್ಧರಿರಬೇಕು. ಮಿ ಜಿನ್ನರ ಧುರವೀಳ್ಯವನ್ನು ಅಂಗೀಕರಿಸೋಣ'-ರಾಜಾಜಿ.

'ಮುಸ್ಲಿಂ ಲೀಗಿನ ಅಸಹಕಾರ ನಿರ್ಧಾರವೆಂದರೆ ತನ್ನಲ್ಲೇ ತನಗೆ ಅಸಡ್ಡೆಯೆಂದರ್ಥ. ಅದು ತನ್ನೀ ನಿರ್ಧಾರವನ್ನು ಕ್ಷಿಪ್ರದಲ್ಲೆಯೇ ತಿದ್ದುವದೆಂದು ನಂಬುತ್ತೇನೆ' —ಟಿ. ಪ್ರಕಾಶಂ.

'ಲೀಗ್ ನಿರ್ಧಾರವು ಅತ್ಯಂತ ಶೋಚನೀಯ ಮತ್ತು ಸಂಪೂರ್ಣವಾಗಿ ವಂಚನೆಯದು. ಘಟನಾ ಸಮಿತಿಯ ಕುರಿತು ಕಾಂಗ್ರೆಸಿನ ನಿರ್ಧಾರ ಮತ್ತು ಹೇಳಿಕೆಗಳು ಲೀಗಿನ ಆರೋಪದಂತಿರದೆ ಅತ್ಯಂತ ಸ್ಪಷ್ಟವಿವೆ'-ಮೌ. ಆಜಾದ್.

'ಕಾಂಗ್ರೆಸ್ ಮತ್ತು ಲೀಗುಗಳೊಳಗೊಂದು ಪಂಚಾಯತಿ ಮಂಡಲವೇರ್ಪಡಲಿ. ಡಾನ್ಜಿಗ್ ಪ್ರಶ್ನೆಯನ್ನು ತೀರ್ಮಾನಕ್ಕೊಪ್ಪಿಸಲು ಹಿಟ್ಲರನು ಒಪ್ಪಿರಲಿಲ್ಲ. ಪರಿಣಾಮವಾಗಿ ಜರ್ಮನರ ಧ್ವಂಸವಾಯಿತು. ಲೀಗೂ ಒಂದು ಕ್ಷಣ ಕಾಲ ತಡೆದು ಯೋಚಿಸಿಕೊಳ್ಳಲಿ'—ಪ್ರೊಫೆಸರ್ ಅಬ್ದುಲ್ ಮಜೀದ್ ಖಾನ್.

'ಯಥಾರ್ಥವಾಗಿ ಅಧಿಕಾರ ದಾನೇಚ್ಛೆಯಿದ್ದಲ್ಲಿ ಬ್ರಿಟಿಷರೀಗ ಘಟನಾ ಸಮಿತಿಯ ಕಾರ್ಯಗಳನ್ನು ಮುಂದೊತ್ತಲೇಬೇಕು. ಬ್ರಿಟಿಷ್ ಯಥಾರ್ಥತೆಯ ಪರೀಕ್ಷಾ ಕಾಲವಿದು'-ಸರ್ದಾರ್ ಪ್ರತಾಪ ಸಿಂಘ್.

'ಮಿ. ಜಿನ್ನರ ಮನೋರೋಗಕ್ಕೆ ಮದ್ದು ಮಾಡಬೇಕು'—ಡಾ। ಪಟ್ಟಾಭಿ.

'ಮುಸ್ಲಿಂ ನಿರ್ಧಾರದಿಂದಾದರೂ ಕಾಂಗ್ರೆಸ್ ನಾಯಕರು ಕಣ್ಣು ತೆರೆಯಲಿ. ಲೀಗು ಧಿಕ್ಕಾರವೊಂದನ್ನೇ ಅಂಗೀಕರಿಸಿದಲ್ಲಿ ಘಟನಾ ಸಮಿತಿಯ ಕುರಿತು ಕಾಂಗ್ರೆಸ್ ಕಟ್ಟಿಕೊಂಡಿರುವ ಎಲ್ಲಾ ಆಶೆಗಳೂ ಮಣ್ಣು ಮುಕ್ಕುವವು'—ಪಿ. ಸಿ. ಜೋಶಿ.

'ಮುಸ್ಲಿಂ ಲೀಗಿಗೆ ಜಾತೀಯ ಧುರೀಣತ್ವ ಹೊರತು ರಾಷ್ಟ್ರ ಸ್ವಾತಂತ್ರ್ಯ ಬೇಕಾಗಿಲ್ಲವೆಂಬುದು ಮತ್ತೊಮ್ಮೆ ಸಿದ್ಧವಾಯಿತು. ಘಟನಾ ಸಮಿತಿಗಿರುವ ಅಲ್ಪಸ್ವಲ್ಪ ಅಧಿಕಾರವೂ ಜಿನ್ನರ ಸಂಕುಚಿತ, ಜಾತಿಭ್ರಮೆಯ ಹಾಗೂ ಪ್ರಜಾಪ್ರಭುತ್ವ ವಿರೋಧೀಬುದ್ಧಿಗೆ ಹೆಚ್ಚಾಗಿ ತೋರಿತು'—ಜೈ ಪ್ರಕಾಶ್ ನಾರಾಯಣ್.

ವಿದೇಶೀ ಪ್ರತಿಕ್ರಿಯೆಗಳು

'ದಂಗೆಯೆದ್ದು ಪಾಕಿಸ್ತಾನ ನಿರ್ಮಿಸುವದಾಗಲೀ ಶ್ರೀಮಂತ ಬಿರುದುವಾಲ ಮುಸಲ್ಮಾನರು ಜೈಲಲ್ಲಿ ಕೊಳೆಯುವದಾಗಲೀ ಅಸಾಧ್ಯ. ಈಗ ಕಾಂಗ್ರೆಸೇ ತಾತ್ಕಾಲಿಕ ಸರಕಾರ ರಚಿಸಬೇಕು'—ಲಂಡನಿನ 'ನ್ಯೂಸ್ಟೇಟ್ಸ್‌ಮೇನ್'

'ಲೀಗಿನ ಹೊಸ ಮನೋವೃತ್ತಿಯು ಭಾರತದಲ್ಲಿ ರಕ್ತಪಾತವನ್ನುಂಟುಮಾಡುವಂತಹದು. ನಿಂದೆ ಮತ್ತು ಬೈಗಳಿಂದಲೇ ತುಂಬಿರುವ ಲೀಗ್ ಹೇಳಿಕೆಯು ಖಂಡನೆಗಲ್ಲದೆ ಬೇರಾವುದಕ್ಕೂ ಅರ್ಹವಲ್ಲ'—ಲಂಡನ್ 'ಈವ್ನಿಂಗ್ ಸ್ಟೇಂಡರ್ಡ್'.

> 'ಮುಸ್ಲಿಂ ಲೀಗಿನ ನಿರ್ಧಾರದಿಂದಾಗಿ ಇಡೀ ಹಿಂದೀ ಪ್ರಶ್ನೆಯನ್ನೇ ಹೊಸತಾಗಿ ಪುನರಾಲೋಚಿಸುವ ಸಂದರ್ಭ ಬಂದಿದೆ. ಕಾಂಗ್ರೆಸಿನಿಂದಾದ ತಾತ್ಕಾಲಿಕ ಸರಕಾರದ ಬಹಿಷ್ಕಾರಕ್ಕೆ ಮುಸ್ಲಿಂ ಲೀಗಿನ ಘಟನಾ ಸಮಿತಿಯ ಬಹಿಷ್ಕಾರವೂ ಸೇರಿ ಭಾರತ ಪ್ರಶ್ನೆಗೊಂದು ವಿರಾಮ ಬಿದ್ದಂತಿದೆ. ಕಾಂಗ್ರೆಸಿನ ನಿರ್ಧಾರ ತಿಳಿದ ನಂತರ ಮುಂದಾಲೋಚನೆ ಮಾಡುವೆವು'
> —ಬ್ರಿಟಿಷ್ ಸರಕಾರದ ಅಭಿಮತ.

'ಕಾಂಗ್ರೆಸೇ ರಾಷ್ಟ್ರವನ್ನಾಳಬೇಕೆಂಬುದನ್ನು ಮಿ ಜಿನ್ನರೀಗ ಅನಿವಾರ್ಯಗೊಳಿಸಿದ್ದಾರೆ. ಮಿ. ಜಿನ್ನರೊಬ್ಬರು ಧಿಕ್ಕರಿಸಿದ ಮಾತ್ರಕ್ಕೆ ಇಡೀ ರಾಷ್ಟ್ರಜೀವನವೇ ಧ್ವಂಸವಾಗಲು ಬಿಡಬಾರದು'—'ಡೈಲಿ ಮಿರರ್.'

'ಈ ಹೋರಾಟ ನಿರ್ಧಾರದಿಂದ ಮುಸಲ್ಮಾನರೇ ಪ್ರಮಾದಕ್ಕೊಳಗಾದರು'—'ಸ್ಕೊಟ್ಸ್‌ಮೇನ್.'

'ಕಾಂಗ್ರೆಸು ತಾತ್ಕಾಲಿಕ ಸರಕಾರಕೊಪ್ಪಿದಂತೆ ಸಾಧಿಸಿ ತಾನು ಮಾತ್ರ ಅದನ್ನೊಪ್ಪುವ ಬುದ್ಧಿವಂತಿಕೆಯ ರಾಜಕೀಯ ಆಟವನ್ನು ಜಿನ್ನರಾಡಿದ್ದರು. ಕೊನೆಗೆ ತನ್ನಾಟ ನಡೆಯಲಿಲ್ಲವೆಂಬ ನಿರಾಶೆಯ ಕ್ರೋಧವೇ ಮೊನ್ನೆಯ ನಿರ್ಧಾರಕ್ಕೆ ಕಾರಣ'—'ಮೆಂಚೆಸ್ಟರ್ ಗಾರ್ಡಿಯನ್.'

'ಜಿನ್ನರೊಬ್ಬ ಮಹಾ ವಿಧಾಯಕ ಕಾರ್ಯ ಚತುರರೆಂದೇ ನನ್ನ ಭಾವನೆಯಿದ್ದಿತು. ಈ ಪ್ರಾಯದಲ್ಲಿ ಅವರು ರಾಜಕೀಯ ಹುಚ್ಚಾಟಕ್ಕಿಳಿದು ದೇಶದಲ್ಲಿ ಅನಾಯಕತ್ವ ನಿರ್ಮಿಸಲಾರರೆಂದು ನನ್ನಾಶೆ'—ಲೋರ್ಡ್ ಸಿನ್ಹಾ

'ಲೀಗ್ ಕೊನೆಗಾದರೂ ತನ್ನ ಮನೋವೃತ್ತಿಯನ್ನು ಸುಧಾರಿಸಿಕೊಳ್ಳುವುದೆಂದೂ, ಘಟನಾ ಸಮಿತಿಯ ಕಾರ್ಯಗಳು ಮುಂದೊತ್ತುವವೆಂದೂ ಹಾರೈಸುತ್ತೇನೆ'—ಮಿ. ಸೋರೆನ್ಸನ್.

'ಹಿಂದುಸ್ಥಾನದ ಕುರಿತು ಹಲವು ನಿರಾಶೆಗಳನ್ನಿದಿರಿಸಿದ್ದೇವೆ. ಇದೊಂದು ಹೊಸತು ಬಂದುದರಲ್ಲಿ ಆಶ್ಚರ್ಯವಿಲ್ಲ'—ಮಿ. ಕ್ವಿಂಟನ್ ಹೋಗ್.

'ಮಿ. ಜಿನ್ನರ ಕಾಡು ಮಾತುಗಳು, ತನ್ನ ಬಯಕೆ ಕೂಡಲ್ಲಿಯೇ ಈಡೇರಲಿಲ್ಲವೆಂದು ನಿರಾಶೆಗೊಂಡು ಅಪಸ್ಮಾರ ತಾಗಿ, ತನ್ನ ತಲೆಯನ್ನು ತಾಡಿಸಿಕೊಂಡು ಮನೆ ಸೊತ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಬಿಸಾಡುವವನ ಕೃತಿಗಳಂತಿವೆ'—'ಸ್ಟಾರ್'

'ಮುಸ್ಲಿಂ ಲೀಗಿನ ಹೊಸ ಘೋಷಣೆಯಲ್ಲಿ ಯಾವ ದೃಷ್ಟಿಯಿಂದಲೂ ಯಾರಿಗೂ ಹಿತಕರವಾಗದ ಅಪ್ರಬುದ್ಧತೆಯಿದೆ' —'ಟೈಮ್ಸ್'

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: DHARWAR.

Or

BRANCH OFFICE:

Court Road, UDIPI, S. K.

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡ್ ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್, ಉಡುಪಿ.

ಮದ್ರಾಸ್ ಸರಕಾರದ ಆಯುವ್ಯಯ ಪಟ್ಟಿ.

ನಾಲ್ಕು (8?) ಜಿಲ್ಲೆಗಳಲ್ಲಿ ಪಾನ ನಿಷೇಧ. ಗ್ರಾಮಗಳಲ್ಲಿ ಖಾದಿ ತಯಾರಿ ಯೋಜನೆ.

ಜುಲಾಯಿ ಅಂತ್ಯದಲ್ಲಿ ಮದ್ರಾಸ್ ಎಸೆಂಬ್ಲಿಯ ಮುಂದೆ ಪ್ರಧಾನಿ ಶ್ರೀ. ಟಿ. ಪ್ರಕಾಶಮರು ಮದ್ರಾಸ್ ಪ್ರಾಂತ್ಯದ 1946–47ರ ಪರಿಶೋಧಿತ ಆಯುವ್ಯಯ ಪಟ್ಟಿಯನ್ನು ಮುಂದಿಟ್ಟರು. ಈ ಪಟ್ಟಿಯ ಮೇಲೆ ಸಾಮೂಹಿಕ ಚರ್ಚೆಗಳೀಗ ಆರಂಭವಾಗಿವೆ.

ಈ ಬಜೆಟಿನನ್ವಯ ವ್ಯಯಕ್ಕಿಂತ ಆಯವು 9 ಕೋಟಿ ಕಡಿಮೆ ಬೀಳುತ್ತದೆ. ಇದನ್ನು ತುಂಬಿಸಿಕೊಳ್ಳಲು ರೆವಿನ್ಯೂ ರಿಸರ್ವ್ ಫಂಡಿನಿಂದ ನಷ್ಟ ಕೋಟಿ ರೂಗಳನ್ನು ತೆಗೆಯಲಾಗುವದು.

ಬಜೆಟ್ ವರುಷದ ಅಂದಾಜು ರೆವೆನ್ಯೂ ಆದಾಯ 48-49 ಕೋಟಿ ರೂ.ಗಳು; ವೆಚ್ಚ 50–53 ಕೋಟಿ. ಕಳೆದ ವರುಷ ಇವು ಅನುಕ್ರಮವಾಗಿ 47-86 ಕೋಟಿ ಮತ್ತು 32.65 ಕೋಟಿ ರೂಪಾಯಿಗಳಿದ್ದುವು.

ತನ್ನ ಬಜೆಟ್ ಭಾಷಣದಲ್ಲಿ ಪ್ರಾಂತ್ಯದ ಆಹಾರ ಸ್ಥಿತಿಯ ನಿಜವಾದ ಚಿತ್ರವನ್ನು ಮಾನ್ಯ ಪ್ರಕಾಶಮರು ಬಿಡಿಸಿ ತೋರಿಸಿದ್ದಾರೆ. ಹೊರಗಿನಿಂದ ಅಕ್ಕಿ ಸರಬರಾಯಿ ಬಾರದ ದೆಸೆಯಿಂದಾಗಿ ಇದೇ ಅಗೋಸ್ತು ತಾ 1ರಿಂದ ರೇಶನ್ ಪರಿಮಾಣವನ್ನು 10 ಔನ್ಸಿನಿಂದ 8 ಔನ್ಸಿಗೆ (ಒಂದು ಔನ್ಸ್ ಎಂದರೆ ಎರಡೂವರೆ ತೊಲೆ) ಇಳಿಸಲಾಗುತ್ತದೆ. ಬದಲಿಗೆ ಗೋಧಿ ಅಥವಾ ಇತರ ಆಹಾರೋಪಕರಣಗಳನ್ನು ಕೊಡುವ ಮೂಲಕ ರೇಶನಿನ ಒಟ್ಟು ಪರಿಮಾಣವು ಹಿಂದಿನಂತೆಯೇ ದಿನಕ್ಕೊಬ್ಬನಿಗೆ 12 ಔನ್ಸಿನಂತಿರುವದು.

ಈ ವರುಷ ನಾಲ್ಕು ಜಿಲ್ಲೆಗಳಲ್ಲಿ ಪಾನ ನಿಷೇಧವನ್ನು ಜಾರಿಗೆ ತರಲಾಗುವದು. ಮತ್ತದು ಒಕ್ಟೋಬರ್ 1ರಿಂದ ಅಸ್ತಿತ್ವಕ್ಕೆ ಬರುವದು. ಮೂರು ವರುಷಗಳೊಳಗೆ ಇಡೀ ಮದ್ರಾಸ್ ಪ್ರಾಂತ್ಯದಲ್ಲೇ ಸಂಪೂರ್ಣ ಪಾನ ನಿಷೇಧವಾಗುವದು.

ಸಾಗುವಳೀ ಕ್ಷೇತ್ರಗಳನ್ನೂ ವ್ಯವಸಾಯ ಕ್ರಮಗಳನ್ನೂ ಸುಧಾರಿಸುವ ಯೋಚನೆಯು ಸರಕಾರದ ಕಣ್ಣ ಮುಂದಿದೆ. ಅಕ್ಕಿ ಉಳಿತಾಯದ ಭಾಗಗಳ ಸಾಗುವಳೀ ಕ್ಷೇತ್ರಗಳನ್ನಂತೂ ಕ್ಷಿಪ್ರದಲ್ಲೇ ಸುಧಾರಿಸಲಾಗುವದು. 'ಆಸ್ತಿ ಭೂಮಿ ಮಸೂದೆ' ಮತ್ತು 'ಮಲಬಾರು ವಕ್ಕಲು ಮಸೂದೆ'ಗಳನ್ನು ಎಸೆಂಬ್ಲಿಯಲ್ಲಿ ಮಂಜೂರು ಮಾಡಿಸುವ ಮತ್ತು ಈ ಮಸೂದೆಗಳಿಗೊಳಪಡದ ಭಾಗಗಳ ಜಮೀನು ಆಡಳಿತೆಯಲ್ಲೂ ಹೊಸ ಸುಧಾರಣೆ ತರುವ ಉದ್ದೇಶವನ್ನು ಸರಕಾರವು ಪ್ರಕಟಿಸಿದೆ.

ಪ್ರಾಂತ್ಯದ ಕೈಗಾರಿಕೆ, ಯಾಂತ್ರಿಕೋದ್ಯಮಗಳ ಅಭಿವೃದ್ಧಿ ಸಾಧನೆಗಾಗಿ 'ಇಂಡಸ್ಟ್ರಿಯಲ್ ಫೈನಾನ್ಸ್ ಕೋರ್ಪರೇಶನ್' ಎಂಬ ಸ್ವತಂತ್ರ ಸಂಸ್ಥೆಯೊಂದು ಸರಕಾರದ ಹತೋಟಿಗೆ ಮಾತ್ರ ಒಳಗಾಗಿ ಸ್ಥಾಪಿಸಲ್ಪಡುವದು.

ಗ್ರಾಮಾಭಿವೃದ್ಧಿ ಕಾರ್ಯಗಳಿಗೂ ಹರಿಜನೋದ್ಧಾರಕ್ಕೂ ನಾಲ್ಕು ಕೋಟಿ ರೂಪಾಯಿಗಳ ದೊಡ್ಡ ಮೊತ್ತವನ್ನು ಸರಕಾರ ಈ ಬಾರಿ ವಿಂಗಡಿಸಿಟ್ಟಿದೆ ವಿದ್ಯೆ, ವೈದ್ಯಕೀ ಸಹಾಯ, ಸಾರ್ವಜನಿಕ ಆರೋಗ್ಯ, ನೀರು ಸರಬರಾಯಿ, ಗೃಹ ತಯಾರಿ ಮತ್ತು ನೀರಾವರಿ ಇತ್ಯಾದಿ ಸೌಕರ್ಯಗಳನ್ನು ಹೆಚ್ಚಿಸುವ ಮತ್ತು ಸುಧಾರಿಸುವ ಯೋಚನೆಯಿದೆ.

ಗ್ರಾಮ ಸುಧಾರಣೆ ಮತ್ತು ಹರಿಜನೋದ್ಧಾರ.

ಸರಕಾರವು 4 ಕೋಟಿ ರೂ. ಗಳ ಸಹಾಯದಿಂದ ಈ ಬಾರಿ ನವೀನವಾಗಿ ಕೈಕೊಳ್ಳಲಿಚ್ಛಿಸಿರುವ ಗಣ್ಯಯೋಜನೆಯೆಂದರೆ ಗ್ರಾಮ ಸುಧಾರಣೆ ಮತ್ತು ಹರಿಜನೋದ್ಧಾರ. ಪ್ರತಿಯೊಂದು ಜಿಲ್ಲೆಯನ್ನೂ 'ಫಿರ್ಕ'ಗಳಾಗಿ ವಿಂಗಡಿಸಿ ಪ್ರತಿಯೊಂದು ಫಿರ್ಕವೂ ಆಹಾರ ಮತ್ತು ವಸ್ತ್ರದ ಮಟ್ಟಿಗೆ ಸ್ವಾವಲಂಬಿಯಾಗುವಂತೆ ಮಾಡಲಾಗುವದು. ಇದಕ್ಕಾಗಿ ಫಿರ್ಕಕ್ಕೊಬ್ಬನಂತೆ ಡಿಪ್ಯೂಟಿ ತಹಶಿಲ್ದಾರ್ ದರ್ಜೆಯ ಫಿರ್ಕಾಭಿವೃದ್ಧಿ ಅಧಿಕಾರಿಯನ್ನು ನೇಮಿಸಲಾಗುವದು. ಇವನ ಕೈಕೆಳಗೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ದರ್ಜೆಯ ಗ್ರಾಮಾಭಿವೃದ್ಧಿ ಅಧಿಕಾರಿಯನ್ನು ನೇಮಿಸಲಾಗುವದು. ಫಿರ್ಕವನ್ನು 4 ಅಥವಾ 5 ಗ್ರಾಮಗಳ ಒಂದೊಂದು ಗುಂಪಾಗಿ ವಿಂಗಡಿಸಿ ಈ ಗುಂಪಿಗೊಬ್ಬನಂತೆ ಆ ಗ್ರಾಮಾಭಿವೃದ್ಧಿ ಅಧಿಕಾರಿಗಳಿರುವರು. ಪ್ರತಿಯೊಂದು ಫಿರ್ಕದಲ್ಲೂ ಖಾದಿ ತಯಾರಿ ಮಾಡುವ ಯೋಜನೆ ತಯಾರಾಗಿದ್ದು, ಅದನ್ನು ಸದ್ಯದಲ್ಲೇ ಕಾರ್ಯರೂಪಕ್ಕೆ ತರಲಾಗುವದು. ಈ ಉದ್ದೇಶಕ್ಕಾಗಿ 3 ಕೋಟಿ ರೂ.-ಹರಿಜನರ ಉದ್ಧಾರ ಮತ್ತು ಅವರ ಅನಾನುಕೂಲತೆಗಳ ನಿವಾರಣೆಗಾಗಿ 1 ಕೋಟಿ ರೂಪಾಯಿಗಳು ಇಡಲ್ಪಟ್ಟಿವೆ.

ಶಿಕ್ಷಣ ವಿಸ್ತಾರ.

ಉಪಾಧ್ಯಾಯರಿಗೆ ತಿಂಗಳಿಗೆ 16 ರೂ. ಗಳಂತೆ ತುಟ್ಟಿ ಭತ್ಯೆ ಕೊಡುವುದಕ್ಕೂ ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಮಧ್ಯಾಹ್ನದೂಟ ಹಾಕುವಂತೆಯೂ ಎೈಡೆಡ್ ಶಾಲೆಗಳಿಗೆ ಹೆಚ್ಚಿಗೆ ಗ್ರಾಂಟನ್ನು ಬಜೆಟಿನಲ್ಲಿ ಸೇರಿಸಲಾಗಿದೆ. ಅಂತೆಯೇ ಈ ವರುಷ ಖಡ್ಡಾಯ ಶಿಕ್ಷಣವನ್ನು ಇತರ ಚುನಾಯಿತ ಕ್ಷೇತ್ರಗಳಿಗೂ ವಿಸ್ತರಿಸುವುದಕ್ಕಾಗಿ 22 ಲಕ್ಷ ರೂ.ಗಳನ್ನು ತೆಗೆದಿಡಲಾಗಿದೆ. ಅಂತೆಯೇ ಎೈಡೆಡ್ ಶಾಲೆಗಳ ಅಧ್ಯಾಪಕರಿಗೆ ಇದೇ ಅಗೋಸ್ತು 1ರಿಂದ ಸಂಬಳದಲ್ಲೆರಡು ರೂಪಾಯಿ ಭಡ್ತಿ ಕೊಡಲು ಗ್ರಾಂಟನ್ನು ಹೆಚ್ಚಿಸಲಾಗಿದೆ. ಹೆಚ್ಚಿನ 4000 ಉಪಾಧ್ಯಾಯರ ತರಬೇತಿ ವ್ಯವಸ್ಥೆ ಮತ್ತು ಸ್ಟೈಪೆಂಡ್ ನಿರ್ಣಯ ಮಾಡಲಾಗಿದೆ. ಆಂಧ್ರ ಯುನಿವರ್ಸಿಟಿ, ಅಣ್ಣಾಮಲೆ ಯುನಿವರ್ಸಿಟಿ, ಕೊಯಮುತ್ತೂರು ಕಾಲೇಜು, ಮದ್ರಾಸಿನ ಮುಹಮ್ಮದನ್ ಕಾಲೇಜುಗಳಿಗೂ ಮದ್ರಾಸಿನಲ್ಲಿ ಮುಹಮ್ಮದೀಯ ಹುಡುಗಿಯರಿಗೆ ಕಾಲೇಜು ತೆರೆಯುವದಕ್ಕಾಗಿಯೂ ಸಹಾಯ ಸಲ್ಲಿಸಿದೆ. ಹೈಸ್ಕೂಲು ವಿದ್ಯಾಭ್ಯಾಸ ಮುಗಿದೊಡನೆ ಕಾಲೇಜುಗಳಿಗೆ ನುಗ್ಗುವ ಇಂದಿನ ಸಾಮಾನ್ಯ ಹವ್ಯಾಸವನ್ನು ತಪ್ಪಿಸಿ ಉದ್ಯಮ ಶಿಕ್ಷಣಗಳ ಕಡೆಗೆ ತಿರುಗಿಸುವ ಸುಧಾರಣೆಯು ಸದ್ಯದಲ್ಲೇ ಬರಲಿದೆ. ಶಿಕ್ಷಣದ ಸುಧಾರಣೆಗಳಲ್ಲೆಲ್ಲಾ ಸ್ಥಳೀಯ ಭಾಷೆಗಳಿಗೆ ಯೋಗ್ಯವಾದ ಹಾಗೂ ಪ್ರಾಮುಖ್ಯ ಸ್ಥಾನ ಕೊಡಲಾಗುವದು.

ಇತರ ಸುಧಾರಣೆಗಳು

ಕೆಲವು ಹೊಸ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಗಳನ್ನು ತೆರೆಯುವ ಸೂಚನೆಗಳು ಬಜೆಟಿನಲ್ಲಿವೆ. ಗ್ರಾಮಗಳಲ್ಲಿರುವ ನೀರಿನ ಅನಾನುಕೂಲತೆ ಮತ್ತು ಮನೆಗಳ ಅಭಾವ ನಿವಾರಣೆಯನ್ನೂ ಕೈಕೊಳ್ಳಲಾಗುವದು. ರಸ್ತೆ ಮತ್ತು ನೀರಾವರಿ ಕಾಲುವೆಗಳನ್ನು ಸುಧಾರಿಸಲಾಗುವದು. ಲೋಕಲ್ ಬೋರ್ಡ್, ಮುನ್ಸಿಪಾಲಿಟಿಗಳ ಅಧಿಕಾರವನ್ನು ವಿಸ್ತರಿಸಿ, ಅವುಗಳ ಮೇಲಿರುವ ಕೆಲವು ನಿರ್ಬಂಧಗಳನ್ನು ತೆಗೆದು ಹಾಕಲಾಗುವದಲ್ಲದೆ, ಗ್ರಾಮ ಪಂಚಾಯತ್‌ಗಳ ಸ್ಥಾನಮಾನಗಳನ್ನು ಹೆಚ್ಚಿಸಲಾಗುವದು. ಇದಕ್ಕಾಗಿ ಸದ್ಯದಲ್ಲೇ ಪ್ರತ್ಯೇಕ ಮಸೂದೆ ಬರಲಿದೆ. ಬರಗಾಲದ ಹಾನಿಗೆ ಪರಿಹಾರ, ಯುದ್ಧೋತ್ತರ ಪುನರ್ರಚನೆ ಮುಂತಾದ ಕಾರ್ಯಗಳ ಕಡೆಗೂ ಬಜೆಟಿನಲ್ಲಿ ಲಕ್ಷ್ಯ ಕೊಡಲಾಗಿದೆ.

ಕಾಂಗ್ರೆಸ್ ಪಕ್ಷದೊಳಗೆ ಭಿನ್ನಾಭಿಪ್ರಾಯ

'ಸರಿಯಾದ ಸ್ಪಷ್ಟ ಯೋಜನೆಯೊಂದನ್ನು ಮುಂದಾಗಿ ತಯಾರಿಸಿಕೊಳ್ಳದೆ ಖಾದೀ ತಯಾರಿ, ಹರಿಜನೋದ್ಧಾರಕ್ಕೆಂದು ತೆಗೆದಿಟ್ಟ 4 ಕೋಟಿ ರೂ.ಗಳ ದೊಡ್ಡ ಮೊತ್ತವು ಅನಾವ್ಯಯವಾಗಬಹುದೆಂದೂ, ಗಾಂಧಿಜೀಯ ಅಭಿಪ್ರಾಯವನ್ನು ಪಡೆಕೊಳ್ಳಬೇಕೆಂದೂ ಶ್ರೀಗಳಾದ ಎ. ವೈದ್ಯನಾಥ ಅಯ್ಯರ್, ಕಾಳೇಶ್ವರರಾವ್ ಮೊದಲಾದ ರಾಜಾಜೀ ಭಕ್ತರು ಪ್ರಕಾಶಮರ ಬಜೆಟಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಪ್ರಥಮ ಸಭೆಯಲ್ಲಿ ಈ ಸಂಬಂಧ ಬಂದ ಸೂಚನೆಯನ್ನು ಈ ಪ್ರಕಾಶಮರು ನಿಯಮ [illegible] ತೆಗೆದು ಹಾಕಿದುದರಿಂದ ಇದಿರು ಪಕ್ಷೀಯರ ಕ್ರೋಧ ಹೆಚ್ಚಿದೆ. ಇಡೀ ಪ್ರಾಂತ್ಯದಲ್ಲಿ ಕೂಡಲೇ ಪಾನ ನಿಷೇಧವಾಗಬೇಕೆಂಬುದಕ್ಕೆ ಕಾಂಗ್ರೆಸ್ ಪಕ್ಷದ ಹೆಚ್ಚಿನವರ ಅನುಮೋದನೆಯಿದೆ. ಕಾಂಗ್ರೆಸ್ ಎಸೆಂಬ್ಲಿ ಪಕ್ಷದೊಳಗೆ ಈ ಚಳವಳ ಬಲವಾಗಿ ಹಬ್ಬಿ

(ಅನೇ ಪುಟ ನೋಡಿರಿ)

ಕುಟುಂಬದೊಳಗಿನ ಚಿಲ್ಲರ ಬೇನೆ

[illegible]

ಜನೋರಿಯೆಂಟ್ ಜೀವನ ಮಿಕ್ಸ್‌ಚರ್ [illegible]

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

TENDER NOTICE.

Tenders are invited by the undersigned to reach him on or before 15-9-1946 for transporting salt bags from sea going vessels or railway waggons and stacking them in the fish curing yards and golahs on the West Coast and for other sundry works. Details and terms of contract can be had from the office of the Asst. Director of Fisheries (Coast), Calicut.

T. M. ARUMUGAM,
Asst. Director of Fisheries,
(Coast), CALICUT.

NOTICE

The Udipi Co-operative Agricultural & Industrial Society Ltd. No. 280/281
under Deputy registrar's R. C. 1984/4B & R. C. 2774/45C dated 3-7-46 & Board resolution dated 29-3-44.

ಸದರೀ ಸಂಘದ ಪಾಲುಗಾರರಿಗೆ ಮತ್ತು ಕೆಳಗೆ ಕಾಣಿಸಿದ ಮೆಂಬರರಿಗೆ ಸಲತಕ್ಕ ಪಾಲಿನ ಹಣವನ್ನು ಯಿ ತನಕ ಕೊಂಡುಹೋಗದೆ ಯಿರುವದ್ರಿಂದಲೂ-ಮೃತರಾದ ಪಾಲುಗಾರರಿಗೆ ಸಲುವರೆ ಯಿದ್ದ ಪಾಲಿನ ಹಣ (ಅಮಾನತು ಲೆಖ್ಖದಲ್ಲಿ ಯಿದ್ದದ್ದನ್ನು) ವಾರಿಸುದಾರರು ತಕ್ಕ ರುಜುವಾತು ಕೊಟ್ಟು ಕೊಂಡುಹೋಗದೆ ಯಿರುವದ್ರಿಂದಲೂ ವಿಳಾಸಗಳು ತಬ್ದೀಲ್ ಆದ ಪಾಲುಗಾರರಿಗೆ ಸಲತಕ್ಕದ್ದಾದ ಅಮಾನತು ಲೆಖ್ಖದಲ್ಲಿ ಜಮಾಗಿದ್ದ ಹಣವನ್ನು ಯಿ ತನಕ ಕೊಂಡುಹೋಗದೆ ಯಿರುವದ್ರಿಂದಲೂ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಯಿ ನೋಟೀಸು ಪ್ರಸಿದ್ಧ ಆದ ತಾರೀಕಿನಿಂದ 30 ದಿವ್ಸಗಳ ವಳಗೆ ಕೆಳಗೆ ಕಾಣಿಸಿದ ಪಾಲುಗಾರರು ಪಾಲಿನ ಹಣವನ್ನು ವಾಪ್ಸು ಪಡಿಯುವರೆ ಅರ್ಹರಾದವರು ಅವರವರ ಪಾಲಿನ ಹಣವನ್ನು ವಾಪ್ಸು ಕೊಂಡುಹೋಗತಕ್ಕದ್ದು. ತಪ್ಪಿದರೆ ಮ್ಯಾದೆ ತಾರೀಕಿನ ನಂತ್ರ ಅವರವರ ದಾವೆಗಳಿಗೆ ನಿಗಾ ಕೊಡೋಣಾಗಲಿಕ್ಕಿಲ್ಲ. ಮತ್ತು ಪಾಲಿನ ಹಣವನ್ನು ಅಮಾನತು ಲೆಖ್ಖಕ್ಕೆ ಯಾ ರಿಜರ್ವ್ ಫಂಡಿನ ಲೆಖ್ಖಕ್ಕೆ ಜಮಾಗೊಳ್ಳಲಾದೀತು.

ಜಂ. ನಂಬ್ರ	ಮೆಂಬರ್ ನಂಬ್ರ	ಹೆಸರು ಮತ್ತು ವಿಳಾಸ	ಸಿಕ್ಕತಕ್ಕ ಪಾಲಿನ ಮೊಬಲಗು ರೂ.	ಅಣೆ
1	33	ಸೇಕ್ ಯುಸೂಬ್ ಸಾಹೇಬ್-ಸೇಕ್ ಯಿಸಾ ಸಾಹೇಬರ ಮಗ. ಕೋಳದ ಪೇಟೆ, ಉಡ್ಪಿ.	0	8
2	73	ತೆಂಕಬೆಟ್ಟು ಪೂವ ಪೂಜಾರಿ-ಸದಿಯ ಪೂಜಾರಿ ಅಳಿಯ. ತೆಂಕಬೆಟ್ಟು, ಉಪ್ಪೂರು ಗ್ರಾಮ.	1	0
3	79	ಭಂಡಾರೋಣಿ ರಾಮ ಸೇರಿಗಾರ. ಸುಬ್ಬ ಸೇರಿಗಾರರ ಅಳಿಯ. ಭಂಡಾರಪ್ರೋಣಿ, ಶಿವಳ್ಳಿ ಗ್ರಾಮ	0	8
4	80	ಬುಡ್ನಾರ ದೇಜಪ್ಪ ಶೆಟ್ಟಿ-ಚಂದಯ್ಯ ಶೆಟ್ರ ಮಗ-ಬುಡ್ನಾರು, ಶಿವಳ್ಳಿ ಗ್ರಾಮ.	0	8
5	84	ಸೀತಾರಾಮ ಪೈ-ಚರ್ದ ಪೈಗಳ ಮಗ. ಬ್ರಹ್ಮಾವರ.	0	8
6	149	ಗುರುವ, C/o ಡೇಣಿಸ್ ಲುವಿಸ್, ಉಪ್ಪೂರು-ದುಗ್ಗಿ ಮಗ, ಮೂವಿನ ಕುದ್ರು, ಉಪ್ಪೂರು ಗ್ರಾಮ.	0	8
7	150	ರಾಮ, C/o ಡೇನಿಸ್ ಲುವಿಸ್, ಉಪ್ಪೂರು-ದುಗ್ಗಿ ಮಗ, ಮೂವಿನ ಕುದ್ರು, ಉಪ್ಪೂರು ಗ್ರಾಮ.	0	8
8	153	ಅಪ್ಪಿ ಯಾನೆ ಮಿಂಗೇಲ್ ಬೊನಿಫಾಸ ಡಿ ಸೋಜ-ಡುಮಿಂಗ್ ಲುವಿಸ್ರ ಮಗ, ಮೂವಿನ ಕುದ್ರು, ಉಪ್ಪೂರುಗ್ರಾಮ	0	8
9	154	ಪಕ್ರು ಪೂಜಾರಿ-ತುಂಗು ಪೂಜಾರ್ತಿ ಮಗ, ಮೂವಿನ ಕುದ್ರು. ಉಪ್ಪೂರು ಗ್ರಾಮ.	0	8
10	163	ಸಿರಿಲ್ ಡಿ ಸೋಜ-ಪಿಯಾದಾದೆ ಡಿ ಸೋಜರ ಮಗ, ಮೂವಿನ ಕುದ್ರು, ಉಪ್ಪೂರು ಗ್ರಾಮ.	0	8
11	180	K. ನಾರಾಯಣ ಶೆಟ್ಟಿ-ಮುದ್ದಣ್ಣ ಶೆಟ್ರ ಮಗ, Post Udipi.	2	8
12	184	ದಾಸ ಪೂಜಾರಿ ಯಾನೆ ಮಂಗು. ಪಾಚ ಪೂಜಾರಿ ಮಗ ಕಲ್ಯಾಣಪುರ, ಉಪ್ಪೂರು.	0	8
13	207	ಲೊರೇನ್ಸ್ ರುದ್ರಿಗ್ಸ್-ದಾನಿಯೇಲ್ ರೊಡ್ರಿಗ್ಸರ ಮಗ, [illegible]ವಿನ ಕುದು, ಉಪ್ಪೂರು.	1	0
14	208	ಮುತ್ತ ಪೂ[illegible]ಬ್ಬ ಪೂಜಾರಿ ಮಗ, ಉಪ್ಪೂರು.	1	0
15	209	ಪುತ್ತು ಯಾನೆ ಜಾಕಿ ಡಿ ಸೋಜ, C/o ಡೇನಿಸ್ ಲುವಿಸ್ ಮೂವಿನ ಕುದ್ರು, ಉಪ್ಪೂರು.	0	8
16	249	ಪೆರಂಪಳ್ಳಿ ಕೊರಗ ಪೂಜಾರಿ ಅಪ್ಪಯ್ಯ ಪೂಜಾರಿ ಅಳಿಯ ಪಡು ಪೆರಂಪಳ್ಳಿ, Post Kallianpur.	0	8
17	251	ಸಂತೆಕಟ್ಟೆ ಕೊರಗ ಪೂಜಾರಿ-ನಕ್ರ ಪೂಜಾರಿ ಮಗ, ಸಂತೆಕಟ್ಟೆ, ಕಲ್ಯಾಣಪುರ ಪೋಸ್ಟ್.	0	8
18	252	ಮುದ್ದು ಮುಕ್ರಿ-ತಾಂಡ ಮುಕ್ರಿ ಮಗ, C/o ಜಾಕಿ ಮನುವೇಲ್ ರುದ್ರಿಗ್ಸ್, ಉಪ್ಪೂರು.	೬	8
19	259	ಪಕ್ಕಿಬೆಟ್ಟು ರಾಮ ಪೂಜಾರಿ. ಸದಿಯ ಪೂಜಾರಿ ಅಳಿಯ, ಕಲ್ಯಾಣಪುರ ಪೋಸ್ಟ್.	1	0
20	261	ಚಲ್ಲ ಪೂಜಾರಿ-ದೋಗು ಪೂಜಾರಿ ಅಳಿಯ, ನಯಂಪಳ್ಳಿ, ಪುತ್ತೂರು ಗ್ರಾಮ.	0	8
21	262	ಬಾಬ ಉಪ್ಪಾರ-ಸೋಮ ಉಪ್ಪಾರನ ಮಗ, ಜಂಗಮ ಬೆಟ್ಟು, ಕಲ್ಯಾಣಪುರ.	1	0
22	263	ಕಾಂಡ ಪೂಜಾರಿ-ಅಬ್ಬಯ ಪೂಜಾರಿ ಅಳಿಯ, ಕೆಳಾರ್ಕಳ ಬೆಟ್ಟು.	0	8
23	268	ನಾರಾಯಣಾಚಾರಿ-ಕುಷ್ಟಪ್ಪ ಆಚಾರಿ ಮಗ, ಕೆಳಾರ್ಕಳ ಬೆಟ್ಟು.	0	8
24	276	ಜೊನ್ ರುದ್ರಿಗ್ಸ್- ಡೇನಿಯಲ್ ರುದ್ರಿಗ್ಸರ ಮಗ ಉಪ್ಪೂರು.	1	0
25	278	ತೈಕೋಟಿ ಸೋಮ ಪೂಜಾರಿ-ಅಂಗು ಪೂಜಾರಿ ಅಳಿಯ, ಮೂಡುತೋನ್ಸೆ, ಕಲ್ಯಾಣಪುರ.	0	8
26	279	ಪಕ್ಕಿಬೆಟ್ಟು ಕಾದ್ರ ಪೂಜಾರಿ ಸದಿಯ ಪೂಜಾರಿ ಅಳಿಯ, ಪಕ್ಕಿಬೆಟ್ಟು, ಕಲ್ಯಾಣಪುರ.	0	8
27	280	ಲಕ್ಷ್ಮಣ ಸಂಗಡಗಾರ ಅನಂತ ಸಂಗಡಗಾರರ ಮಗ, ಜಂಗಮಬೆಟ್ಟು, ಕಲ್ಯಾಣಪುರ.	0	8
28	281	ಪಕ್ಕಿಬೆಟ್ಟು ನಾಗಪ್ಪ ಪೂಜಾರಿ-ಜಬ್ಬ ಪೂಜಾರಿ ಅಳಿಯ, ಪಕ್ಕಿಬೆಟ್ಟು, ಕಲ್ಯಾಣಪುರ.	0	8
29	287	ನರಿನ್ ಡಿ ಸೋಜ-ಮಾನೇಲ್ ಡಿ ಸೋಜರ ಮಗ, ಮೂವಿನ ಕುದ್ರು, ಉಪ್ಪೂರು.	2	8
30	288	ಜಸ್ತಿನ್ ಡಿ ಸೋಜ-ಲೊರೆನ್ಸ್ ಡಿ ಸೋಜರ ಮಗ, ಉಪ್ಪೂರು.	2	8
31	308	ಅಲ್ಬರ್ಟ್ ಅರಂಞ, ಮೂಡುತೋನ್ಸೆ.	2	6
32	311	ಗಿರಿಯ ಪೂಜಾರಿ ಕುಪ್ಪ ಪೂಜಾರಿ ಮಗ, ಮೂಡಬೆಟ್ಟು,	1	0
33	314	K. ರಾಮ ಉಪ್ಪಾರ. ಗೋವಿಂದ ಉಪ್ಪಾರ, C/o ಡೇನಿಸ್ ಲುವಿಸ್, ಉಪ್ಪೂರು.	1	0
34	319	ತುಕ್ರ ಪೂಜಾರಿ ಬಿಕ್ರಿ ಪೂಜಾರಿ ಅಳಿಯ, ಪಳ್ಳಿಗುಡ್ಡೆ.	1	0
35	338	ಕೂಕ್ರ ಸಂಗಡಗಾರ-ದುಗ್ಗನ ಮಗ, ಅರ್ಕಳಬೆಟ್ಟು, ಕಲ್ಯಾಣಪುರ P. O.	0	8

Office of the Co operative Agricultural & Industrial Sciceity Ltd, No 280 281.

Udipi,
3—8—46

U. Keshava Prabhu,
Secretary.

ಮದ್ರಾಸ್ ಎಸೆಂಬ್ಲಿಯು

ಕೆಲವು ಸ್ವಾರಸ್ಯದ ಪ್ರಶ್ನೋತ್ತರಗಳು.

ಮದ್ರಾಸ್ ಎಸೆಂಬ್ಲಿಯ ಈ ಬಾರಿಯ ಅಧಿವೇಶನದಲ್ಲಿ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ಹಲವು ಸ್ವಾರಸ್ಯಮಯ ಪ್ರಶ್ನೋತ್ತರಗಳು ನಡೆದುವು. ಆ ಪೈಕಿ ಸ್ಥಳೀಯ ಭಾಷಯನ್ನೇ ಶಿಕ್ಷಣದ ಮಾಧ್ಯಮವಾಗಿ ಮಾಡುವಾಗ ಉರ್ದು ಭಾಷೆಯ ಭಕ್ತರಾದ ಮುಸಲ್ಮಾನರನ್ನು ಅದರಿಂದ ವಿನಾಯತಿಗೊಳಿಸತಕ್ಕದ್ದೆಂಬ ಕುರಿತು ಮುಸ್ಲಿಂ ಸದಸ್ಯರಿಗೂ ಕಾಂಗ್ರೆಸ್ ಮಂತ್ರಿಗಳಿಗೂ ನಡೆದ ಪ್ರಶ್ನೋತ್ತರಗಳ ಕಿಕ್ಕಾಟಗಳು ಸ್ವಾರಸ್ಯದ್ದಿದ್ದುವು. ನಿದರ್ಶನಕ್ಕಾಗಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಶಿಕ್ಷಣದಲ್ಲಿ ಸುಧಾರಣೆ.

ಪ್ರಾಂತ್ಯದ ಶಿಕ್ಷಣದ ಪುನರ್ರಚನೆಯನ್ನು ಕ್ಷಿಪ್ರದಲ್ಲೇ ಕೈಕೊಳ್ಳುವ ಯೋಚನೆ ಸರಕಾರಕ್ಕಿದೆಯೆಂದೂ ಈ ಸಂಬಂಧದ ಒಂದು ಪ್ರಶ್ನಾಮಾಲಿಕೆಯೀಗ ತಯಾರಾಗುತ್ತಿದ್ದು ಆ ಕುರಿತು ಸಾರ್ವಜನಿಕ ಅಭಿಪ್ರಾಯ ತಿಳಿಯಲಾಗುವದೆಂದೂ ಮಿ. ಎಚ್. ಎಸ್. ಹುಸ್ಸೇನ್ ಸಾಹೇಬರ ಪ್ರಶ್ನೆಯೊಂದನ್ನುತ್ತರಿಸುತ್ತಾ ವಿದ್ಯಾಮಂತ್ರಿ ಶ್ರೀ. ಟಿ. ಎಸ್. ಅವನೀಶಲಿಂಗಮ್ ಬಹಿರಂಗಪಡಿಸಿದರು.

ಹಮೀದ್ ಖಾನ್—ಆ ಪ್ರಶ್ನಾಮಾಲಿಕೆಯು ಬೆಳಕಿಗೆ ಬಿದ್ದಿರುವದೆ?

ವಿದ್ಯಾಮಂತ್ರಿ—ಅದು ತಯಾರಾಗುತ್ತಿದೆಯೆಂದೆನಷ್ಟೆ? ಅದಿನ್ನು ಬೆಳಕನ್ನು ಕಾಣಲಿದೆಯೆಂದೂ ಆಗ ಈ ಮಾನ್ಯ ಸದಸ್ಯರ ಕಣ್ಣು ಅದರ ಮೇಲೆ ಬೀಳಲಿರುವದೆಂದೂ ನಾನಾಶಿಸುತ್ತೇನೆ

ಹೆ. ಖಾ—ಈ ಸಭೆಯಲ್ಲಿ ಚರ್ಚಿಸುವ ಅವಕಾಶ ದೊರೆಯದೆ ಆ ಕುರಿತು ಯಾವ ಹೆಜ್ಜೆಯನ್ನೂ ಇಡುವಂತಿಲ್ಲವೆಂಬ ಆಶ್ವಾಸನೆ ಕೊಡಬಹುದೆ?

ವಿ. ಮಂ—ನನ್ನಿಂದ ಸಾಧ್ಯವಿಲ್ಲ ಆಡಳಿತೆಯ ಪ್ರತಿಯೊಂದು ವಿಷಯಕ್ಕೂ ಎಸೆಂಬ್ಲಿಯ ಒಪ್ಪಿಗೆ ಕೇಳಲು ಬರುವದು ಆಗದ ಮಾತು. ಧೋರಣೆ ರೂಪಿಸುವ ವಿಶಾಲ ಪ್ರಶ್ನೆಗಳ ವಟ್ಟಿಗೆ ನಿಜಕ್ಕೂ ಹಾಗೆ ಮಾಡಲಾಗುವದು

ಹ. ಖಾ.— ಸ್ಥಳೀಯ ಭಾಷೆಯನ್ನೇ ಶಿಕ್ಷಣ ಮಾಧ್ಯಮವಾಗಿ ಇಡುವ ತನ್ನ ಯೋಜನೆಯು ಉರ್ದು ಮಾತೃಭಾಷೆಯಾಗಿರುವ ಒಂದು ಪ್ರತ್ಯೇಕ ಜಾತಿಗೆ ತೀರಾ ವಿರುದ್ಧವಿದೆ ಎಂಬುದನ್ನು ಮಂತ್ರಿಗಳು ಮನಗಂಡಿರುವರೆ?

ವಿ. ಮಂ —ಇಲ್ಲ

ಎಚ್. ಎಸ್. ಹುಸ್ಸೇನ್—ಹಿಂದೀ ಅಥವಾ ಹಿಂದುಸ್ಥಾನಿಯು ಪ್ರಾಂತ್ಯದ ಶಾಲೆಗಳಲ್ಲಿ ಖಡ್ಡಾಯವಾಗಿದೆಯೇ?

ವಿ. ಮಂ.—ಇಲ್ಲ.

ಹುಸ್ಸೇನ್—ಇಂಗ್ಲಿಷಿನ ಬದಲಿಗೆ ಹಿಂದುಸ್ಥಾನಿಯನ್ನು ಕಡ್ಡಾಯವಾಗಿ ಇಡುವ ಗುರಿ ಸರಕಾರಕ್ಕಿದೆಯೆ?

ವಿ ಮಂ.—ಇಲ್ಲ.

ಪಿ. ವೆಂಕಟೇಶ್ವರಲು—ಸ್ಥಳೀಯ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಇಡುವದಕ್ಕಿಂತ ಮಾತೃಭಾಷೆಯನ್ನೆ ಮಾಧ್ಯಮವಾಗಿ ಇಡಬಹುದೇ?

ವಿ ಮಂ—ಹೆಚ್ಚಿನ ಜನರಿಗೆ ಸ್ಥಳೀಯ ಭಾಷೆಯೇ ಮಾತೃಭಾಷೆ.

ಹ. ಖಾ.—ಇಂತಹ ಸ್ಪಷ್ಟ ರ್‍ಯಾಡ

(೭ನೇ ಪುಟ ನೋಡಿರಿ)

೪ನೇ ಪುಟದಿಂದ

ರುವದರಿಂದ, ಪೂರ್ವ ಯೋಚನೆಯಂತೆ ಬಜೆಟಿನಲ್ಲಿದ್ದ ಸೇಲಮ್, ಚಿತ್ತೂರು, ಕಡಪಾ ಮತ್ತು ಉತ್ತರ ಆರ್ಕಾಟು—ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರವಲ್ಲದೆ ಅವುಗಳಿಗೊತ್ತಿನ ಕೊಯಮುತ್ತೂರು, ಬಳ್ಳಾರಿ, ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲೂ ಈ ವರುಷವೇ ಪಾನ ನಿಷೇಧ ಜ್ಯಾರಿಗೆ ತರಲು ಪ್ರಕಾಶಮ್ ಮಂತ್ರಿಮಂಡಲದ ಒಪ್ಪಿಗೆಯಿರುವಂತಿದೆ. 'ನಾನೂ ಈ ಕುರಿತು ಎಲ್ಲರಷ್ಟೇ ಮುಂದಿದ್ದೇನೆ. ಆದರೆ ಆರ್ಥಿಕ ಸ್ಥಿತಿ ಅಡಿಮೇಲಾದೀತು' ಎಂದು ಪ್ರಕಾಶಮರು ಎಚ್ಚರಿಸಿದ್ದಾರೆ. ಈ ಸಂಬಂಧದ ನಿರ್ಧಾರವು ಇಷ್ಟರಲ್ಲೇ ಆಗಿರಬಹುದು.

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

CAPITAL

Authorised	...	...	Rs. 25,00,000
Issued & Subscribed	...	,,	16,00,000
Paid up	...	... ,,	15,64,715
Reserves Over ...	...	,,	4½ Lakhs

Branches at- Bombay, Madras, Bangalore, Coimbatore, Selem, Calicut, Hubli, Mysore, Cochin, Manglore, Madras etc, etc

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೮-೮-'೪೬

ಮುದ್ರಾಸ್ ಸರಕಾರದ ಧೋರಣೆ

ಮುದ್ರಾಸಿನಲ್ಲಿ ಪ್ರಕಾಶಮ್ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದಂದಿನಿಂದ ಪ್ರಾಂತ್ಯದ ಜನಜೀವನವನ್ನೂ, ಆಡಳಿತೆಯ ವಿಧಾನಗಳನ್ನೂ ಕಾಂಗ್ರೆಸ್ ಧೋರಣೆಗನುಸಾರವಾಗಿ ತಿದ್ದುವ ತನ್ನ ಉತ್ಕಟಾಭಿಲಾಷೆಯನ್ನು ಹಲವು ಬಾರಿ ಪ್ರದರ್ಶಿಸಿದೆ. ಇದಕ್ಕನುಸಾರವಾಗಿ ಕೆಲವೊಂದು ಸುಧಾರಣೆಗಳನ್ನು ಕಾರ್ಯರಂಗಕ್ಕಿಳಿಸಿದೆ; ಇನ್ನು ಕೆಲವು ಅದರ ಯೋಜನ ಮೇಜಿನ ಮೇಲೂ, ಮತ್ತೂ ಕೆಲವು ಅದರ ದೃಷ್ಟಿಪಥದಲ್ಲೂ ಇವೆ. ಅಂತೂ ಕಾಂಗ್ರೆಸ್ ಸರಕಾರದ ಧ್ಯೇಯದ ಕುರಿತು ಅನುಮಾನಕ್ಕವಕಾಶವೇ ಇಲ್ಲ. ಆದರೆ ಕಾರ್ಯಕ್ರಮಗಳ ಮಟ್ಟಿಗೆ 'ಹಾಗಲ್ಲ-ಹೀಗಾಗಬೇಕು' ಎಂದು ಸರಕಾರೀ ಪಕ್ಷಪಾತಿಗಳು ಕೂಡಾ ತಿದ್ದುಪಡಿ ಸೂಚಿಸಬೇಕಾಗುವಂತಹ ಸಂದರ್ಭಗಳೇಕೋ ದೊರೆಯುತ್ತಿವೆ. ಹೃದಯ ಶುದ್ಧವಿದ್ದಷ್ಟು ಬುದ್ಧಿ ಚುರುಕಿಲ್ಲ, ಎಂದೀ ತಾರತಮ್ಯಕ್ಕರ್ಥವಲ್ಲವೆ? ಪ್ರಕಾಶಮ್ ಮಂತ್ರಿಮಂಡಲದ ಮನಸ್ಸಿಗೂ ಮರ್ಜಿಗೂ ಅಂತರವಿದೆ ಎಂದು ಸ್ಪಷ್ಟ ತೀರ್ಮಾನ ಕೊಡಲಾಗುವ ಕಾಲ ಇದು ಸರಿಯೆ ... ಅದಕ್ಕೆ ಪೂರಕವಾದ ಅವಸ್ಥೆ ಕಾಣಿಸಿದೆ. ಅದರೊಂದು ಮಾತು-ಅಥವಾ ... ಇದರ ಪೂರ್ಣರೂಪವನ್ನು ತಿಳಿಯಬೇಕಾದರೆ ... ತಿಳಿಯಬೇಕಾಗಿದ್ದರೂ ಅದರ ... ಅಂದಾಜನ್ನು ಅರಿಯಬಹುದು. ಈ ಅಧಿಕಾರದ ಮದ್ರಾಸಿನ ಕಾಂಗ್ರೆಸ್ ಮಂತ್ರಿಗಳಲ್ಲಿ ಭಾವಪ್ರಾಧಾನ್ಯತೆಯಿರುವಷ್ಟು ವ್ಯವಹಾರ ಜಾಣ್ಮೆಯಿಲ್ಲವೆಂದೂಹಿಸಿದರೆ ತಪ್ಪಾದೀತೆ?

ನಿರ್ಗತಿಕರಿಗೆ, ಪಾನನಿಷೇಧ, ಖಾದೀ ಪ್ರಚಾರ, ಹರಿಜನೋದ್ಧಾರ, ಇತ್ಯಾದಿ 'ಗಾಂಧೀ ತತ್ವ'ಗಳ ಪಾಲನೆಯಲ್ಲಿ ತಾವು ಹಿಂದಿನ ರಾಜಾಜೀ ಮಂತ್ರಿಮಂಡಲಕ್ಕಿಂತಲೂ ಮುಂದಿದ್ದೇನೆಂಬುದನ್ನು ಪ್ರದರ್ಶಿಸುವ ಆತುರಪ್ರಕಾಶಮ್ ಮಂತ್ರಿಮಂಡಲಕ್ಕಿದೆ. ಗ್ರಾಮ ಗ್ರಾಮಗಳಲ್ಲಿ ಸ್ವತಃ ಖಾದಿ ತಯಾರಿಸುವ ಮೂಲಕ ವಸ್ತ್ರದ ಮಟ್ಟಿಗೆ ಅವು ಸ್ವಾವಲಂಬಿಗಳಾಗುವಂತೆ ಮಾಡಲು 3 ಕೋಟಿ ರೂ.ಗಳು ಈ ಬಾರಿಯ ಬಜೆಟಿನಲ್ಲಿಡಲ್ಪಟ್ಟಿವೆ. 'ಗಾಂಧೀ ಭಾವ'ವೇ ಹರಡಿರುವ ನಮ್ಮಲ್ಲಿ,ಇದು ದೇಶಾಭಿಮಾನದ ತಂತಿಯನ್ನು ಮೀಂಟುವ ಯೋಜನೆಯಾಗಿರಬಹುದು. ಆದರೆ ಈ ಯಾಂತ್ರಿಕ ಯುಗದಲ್ಲಿ ಸ್ವಾತಂತ್ರ್ಯ ಹೊಂದಲಿರುವ ಭಾರತದ ಆರ್ಥಿಕ ತಕ್ಕಡಿಯಲ್ಲಿದನ್ನಿಟ್ಟಾಗ ಹೇಗೆ? ಅಂತೆಯೇ ಸರ್ವರೂ ಒಪ್ಪುವ ಪಾನ ನಿಷೇಧವಾದರೂ ಇಂದಿನ 'ಗಾಂಧೀ ದೃಷ್ಟಿ'ಯಲ್ಲಿ ಪಡೆದಂತಹ ಸರ್ವ ಪ್ರಥಮ ಪ್ರಾಮುಖ್ಯತೆಯನ್ನು, ಜನ ಹಿತದೃಷ್ಟಿಯಿಂದಲೂ ಪಡೆಯಬಲ್ಲುದೆ? ಕಾಂಗ್ರೆಸ್ ಹ್ಯಾಕವೂಂಡಿಗೆ ತನ್ನಲ್ಲಿ ಅಂದು ಕಂಡು ಬಾರದಿದ್ದ ಯೋಗ್ಯತೆಗಳು ನಿಜಕ್ಕೂ ತನ್ನಲ್ಲಿವೆ-ತಾನು ಸಮಾಧಿ ರಾಜಾಜಿಯಾಗಬಲ್ಲೆ — ಎಂಬುದನ್ನು - ಮುಂದಟ್ಟುಪಡಿಸುವ ಕಡೆಗೆ ಪ್ರಕಾಶಮ್ ಮಂಡಲ ಗಮನಕೊಟ್ಟಷ್ಟು ಮಿಕ್ಕ ಆವಶ್ಯಕತೆಗಳತ್ತ ದೃಷ್ಟಿ ಹರಿಸಿಲ್ಲವೆಂದೇ ನಮಗನ್ನಿಸುತ್ತದೆ. ಕಾಲ ಸ್ಥಿತಿಯಲ್ಲಿ ಅತ್ಯಾವಶ್ಯವಿದ್ದರೂ ಗಾಂಧೀ ತತ್ವರಂಗದಲ್ಲಿ ಅಷ್ಟೊಂದು ಪ್ರಾಮುಖ್ಯತೆಯಿಲ್ಲದ ಕೆಳದರ್ಜೆಯ ನೌಕರರ ಸ್ಥಿತಿ ಸುಧಾರಿಸುವ ಕಡೆಗೆ ಸರಕಾರವೂ ಸಾಕಷ್ಟು ಲಕ್ಷ್ಯಕೊಟ್ಟಿಲ್ಲ ದೃಷ್ಟಾಂತಕ್ಕಾಗಿ ಪ್ರಾಥಮಿಕ ಅಧ್ಯಾಪಕರ ಮೊರೆ ಇದುವರೆಗೂ ಅರಣ್ಯರೋದನವಾಗಿದೆ. ಕಳೆದ ವಾರ ಮದ್ರಾಸಿನ ಸರಕಾರೀ ಭವನದ ಕಡೆಗೇನೇ ಸಾವಿರಾರು ಉಪಾಧ್ಯಾಯರಿದ್ದ ನಿಷೇಧ ಮೆರವಣಿಗೆ ಹೊರಟಿದ್ದಿತು. ಇಡೀ ಪ್ರಾಂತ್ಯದಲ್ಲಿ ಸುಮಾರು 15 ರೂಪಾಯಿ ಸಂಬಳದಿಂದಲೇ ದಿನ ದೂಡುವ ಅಧ್ಯಾಪಕರ ಸಂಖ್ಯೆ 50 ಸಾವಿರಕ್ಕೂ ಮೇಲ್ಪಟ್ಟಿದೆ. ಈ ಬಾರಿ ಸರಕಾರವು ಅಧ್ಯಾಪಕರ ಸಂಬಳದಲ್ಲಿ ಕೇವಲ ರೂ. 2ನ್ನು ಹೆಚ್ಚಿಸಿದುದು ನೆಪ ಮಾತ್ರ ಸಹಾಯವಾಗಿದ್ದು, ಎಷ್ಟಕ್ಕೂ ಆ ವರ್ಗವನ್ನು ಸಮಾಧಾನಪಡಿಸದು. ಅಂತೆಯೇ 'ನೋನ್-ಗಝೆಟೆಡ್' ಸರಕಾರೀ ನೌಕರರ ರೋದನವೂ ಕೇಳಿಬರುತ್ತಿದೆ. ಇಂತಹ ಕಡಿಮೆ ಸಂಬಳದ ನೌಕರರು ಸುಮಾರು 1 ಲಕ್ಷ ಮಂದಿಯಿದ್ದು ಅವರಲ್ಲಿ ರೂ.100ಮತ್ತು ಹೆಚ್ಚಿಗೆಸಂಬಳ ಪಡೆಯುವವರಿರುವದು ಕೇವಲ ಶೇ. 9ರಷ್ಟು. ಶೇ. 28ರಷ್ಟು ಮಂದಿ ರೂ. 35 ರಿಂದ 100ರೊಳಗಿನ ವೇತನದವರು. ಉಳಿದ ಸೇಕಡಾ 63ರಷ್ಟು ಮಂದಿ ರೂ.35ಕ್ಕೂ ಕಡಿಮೆ ಸಂಬಳದವರು. ಸರಕಾರೀ ಖಾತೆಗಳಲ್ಲಿ ಲಂಚಗಳ ಹಾವಳಿಯಿದೆಯಾದರೆ ಅದರ ಮೂಲ ಕಾರಣ ಇಲ್ಲಿದೆ! ಇಂತಹ ಬಡ ನೌಕರರ ಪರವಾಗಿ ತನ್ನನ್ನು ಚೇಟಿಯಾದ ಶಿಷ್ಟ ಮಂಡಲಕ್ಕೆ 'ಇಷ್ಟರಲ್ಲೇ ಆಯ ವ್ಯಯ ಪಟ್ಟಿಯನ್ನು ತಯಾರಿಸಿ ಎಸೆಂಬ್ಲಿಯ ಮುಂದೆ ತಂದಾಗಿದೆ. ನೀವು ತುಸು ತಡವಾಗಿ ಬಂದಿರಿ' ಎಂಬಂತಹ ಉತ್ತರ ಕೊಡಲು ಪ್ರಧಾನ ಮಂತ್ರಿಗಳು ಶಂಕಿಸಲಿಲ್ಲ. ಪ್ರಥಮ ನೋಟಕ್ಕೆ ರಮ್ಯತೆ ಕಾಣುವ-ಸರಿಯಾಗಿ ಕೆಲಸವಾದಲ್ಲಿ ನಿಜಕ್ಕೂ ಹಿತಸಾಧನೆಯಾಗಬಲ್ಲ-ಜನಪ್ರತಿನಿಧಿ ಸಮಿತಿಗಳನ್ನು ಸಾಧ್ಯವಿದ್ದ ವಿಭಾಗಗಳಿಗೆ ರಚಿಸಿಕೊಳ್ಳುವ ಸದ್ಬುದ್ಧಿಯೊಂದು ಸರಕಾರಕ್ಕಿದೆ. ಆದರೂ ಅಂಥವುಗಳ ಮೂಲ ಸೂತ್ರದಲ್ಲೇಕೋ ಲಘುತ್ವವಿದ್ದಂತೆ ಕಾಣುತ್ತಿದೆ. ಈ ಯೋಜನೆಗಳಿಗೆ ಮೂಲ ಗೆರೆಯೆಳೆದಂತೆಯೇ ಗಟ್ಟಿ ಬಣ್ಣವನ್ನೂ ಬಳೆಯಲು ಮರೆಯಬಾರದು. ಸುಧಾರಣೆಗಳನ್ನು ರಂಗಕ್ಕಿಳಿಸುವ ಸದ್ಭಾವವಿದ್ದಂತೆಯೇ ಅವುಗಳನ್ನಲ್ಲಿ ಬೇರೂರಿಸುವ ಸಾಹಸವೂ ಬೇಕು. ಕಾಂಗ್ರೆಸ್ ಸರಕಾರದ ಕಾಲದಲ್ಲಿ ಪ್ರತಿಯೊಬ್ಬನೂ ಒಂದಲ್ಲೊಂದು ಕಮಿಟಿಯ ಮೆಂಬರನಾಗುವ ಮೂಲಕವಲ್ಲದಿ-ಅಂತಹವೂ ಏರಿದಂತಾದರಾಗದು; ಜನಜೀವನದ ಮಟ್ಟ ಏರಬೇಕು. ಒಟ್ಟಿನ ಮೇಲೆ ಕಾಂಗ್ರೆಸ್ ಸರಕಾರದಲ್ಲಿ ತತ್ವಾರಾಧನೆಗಿಂತಲೂ ಕಾರ್ಯಾಸಕ್ತಿ ಹೆಚ್ಚಬೇಕು-ಆಕಾಶದಲ್ಲಿ ತೇಲಾಡುವ ಕೆಲವು ರಾಷ್ಟ್ರೀಯ ಭಾವನೆಗಳಿಗನುಗುಣವಾಗಿ ಸುಧಾರಣೆಗಳ ಸಾಲು ವ್ಯವಸ್ಥೆ ಮಾಡುವದಕ್ಕಿಂತ, ಜನತೆಯ ಆವಶ್ಯಕತೆಯನ್ನನುಸರಿಯೇ ಅವನ್ನು ಪಂಗ್ತೀಕರಿಸಬೇಕು-ಎಂದು ವಿಜ್ಞಾಪಿಸುವದು ಅಪ್ರಾಸಂಗಿಕವಾಗದು.

ಅಂಚೇ ಮುಷ್ಕರ

ಸರ್ದಾರ್ ವಲ್ಲಭಾಯಿ ಮತ್ತು ಶ್ರೀ ಮಂಗಲದಾಸ ಪಕ್ವಾಸರ ಅವಿಶ್ರಾಂತ ಪರಿಶ್ರಮದ ಫಲವಾಗಿ ಅಂಚೆ ಮತ್ತು ತಂತೀ ಖಾತೆಯ ಡೈರೆಕ್ಟರ್ ಜನರಲ್ ಶ್ರೀಕೃಷ್ಣ ಪ್ರಸಾದ ಹಾಗೂ ಅ. ಭಾ. ಟಪ್ಪಾಲು ಜವಾನರ ಮತ್ತು ಕೆಳತರಗತಿ ಅಂಚೇ ನೌಕರ ಸಂಘದ ಕಾರ್ಯದರ್ಶಿ ಶ್ರೀ. ವಿ ಜಿ. ಧೆಲ್ವಿಯವರೊಳಗೆ ಸಂಧಾನ ಮಾತುಕತೆ ಬೊಂಬಾಯಿಯಲ್ಲಿ ನಡೆದು ಕೊನೆಗದು ಸಫಲಗೊಂಡಿತು. ಆಗೋಸ್ತು ತಾ 2ರಲ್ಲಿ ಶ್ರೀ ಧೆಲ್ವಿಯವರು ಮೇಲಿನ ಕಾಂಗ್ರೆಸ್ ಪ್ರಮುಖರ ಅಪೇಕ್ಷೆಯಂತೆ ಮುಷ್ಕರ ನಿಲ್ಲಿಸುವ ಸೂಚನೆಕೊಟ್ಟರೂ ದೇಶದ ಹಲವೆಡೆಗಳವರು ಎರಡು ಮೂರುದಿನ ಕೆಲಸಕ್ಕೆ ಹೋಗಿರಲಿಲ್ಲ. 25ದಿನ ದಾವಾಗ್ನಿಯಂತೆ ಇಡೀ ರಾಷ್ಟ್ರದಲ್ಲಿ ವ್ಯಾಪಿಸಿದ್ದ ಮುಷ್ಕರವು ಇದೇ ತಾ 5ಕ್ಕೆ ಸರ್ವ ಕಡೆಗಳಲ್ಲೂ ನಿಲ್ಲಿಸಲ್ಪಟ್ಟಿದೆ.

ಮೇಲ್ದರ್ಜೆಯ ಅಂಚೇ ನೌಕರರ ಸಂಘವಾದ 'ಫೆಡರೇಶನ್' ಇದೇ ತಾ. 3ನೇ ಮಧ್ಯ ರಾತ್ರಿಗೆ ಮುಷ್ಕರ ಹೂಡುವ ತನ್ನ ನೋಟೀಸನ್ನು ಆ ಮೊದಲೇ ವಜಾ ಪಡಿಸಿಕೊಂಡಿದೆ.

ಆಗೋಸ್ತು ತಾ 9.

ಚರಿತ್ರಾರ್ಹ ಆಗೋಸ್ತು ಗಲಭೆಯ ಸ್ಮರಣಾರ್ಥವಾಗಿ ಇದೇ ತಾ. 9ನೇ ಶುಕ್ರವಾರವನ್ನು ಶಾಂತ ರೀತಿಯ ಸಭೆ, ಮೆರವಣಿಗೆ ಮತ್ತು ವಿಧಾಯಕ ಕಾರ್ಯಕ್ರಮಗಳೊಡನೆ ಆಚರಿಸಬೇಕೆಂದು ಅಧ್ಯಕ್ಷ ನೆಹರುಗಳ ವಿನಂತಿಯಿದೆ. ಆ ದಿನ ಹರತಾಳವಾಚರಿಸಬೇಕೆಂದುಆಮೊದಲೇ ಶ್ರೀ ಜೈ ಪ್ರಕಾಶರು ಮಾಡಿಕೊಂಡಿದ್ದ ವಿನಂತಿಯನ್ನು ಗಾಂಧಿಜೀ ಪ್ರತಿಭಟಿಸುವ ಮೊದಲೇ ಜೈಪ್ರಕಾಶರು ಹಿಂದೆಗೆದುಕೊಂಡಿದ್ದಾರೆ.

ಮುದ್ರಾಸ್ ಎಸೆಂಬ್ಲಿಯಲ್ಲಿ

ಬಜೆಟ್ ಚರ್ಚೆ ನಡೆಯುತ್ತಿದೆ. 24ಜಿಲ್ಲೆಗಳ ಪೈಕಿ ಈ ವರುಷವೇ 8 ಜಿಲ್ಲೆಗಳಲ್ಲಿ (ಹೆಸರು ಬೇರೊಂದೆಡೆಯಿದೆ) ಪಾನ ನಿಷೇಧ ಜ್ಯಾರಿಯಾಗುವದೆಂದು ಪ್ರಧಾನಿ ಪ್ರಕಾಶಮರಂದಿದ್ದಾರೆ.

ಪ್ಯಾರಿಸಿನ ಶಾಂತಿ ಸಮ್ಮೇಲನ

ಇಪ್ಪತ್ತೊಂದು ರಾಷ್ಟ್ರಗಳ ಶಾಂತಿ ಸಮ್ಮೇಲನವು ಪ್ಯಾರಿಸಿನಲ್ಲೀಗ ನಡೆಯುತ್ತಿದೆ. ಯುದ್ಧದಲ್ಲಿ ಆಕ್ಸಿಸ್ ರಾಷ್ಟ್ರಗಳೊಡನೆ ಸಹಕರಿಸಿದ್ದ ಇಟಲಿ ಮತ್ತು ಇತರ ರಾಷ್ಟ್ರಗಳ ವ್ಯವಸ್ಥೆ ಮತ್ತವುಗಳೊಡನೆ ಮಿತ್ರ ರಾಷ್ಟ್ರಗಳ ಸಂಬಂಧ ಹೇಗಿರಬೇಕೆಂಬುದನ್ನು ನಿರ್ಧರಿಸುವದೇ ಈ ಪರಿಷತ್ತಿನ ಧ್ಯೇಯ. ಸಭೆಯ ಕಾರ್ಯಕ್ರಮಗಳ ನಿರ್ಧಾರದಲ್ಲೇ ತೀವ್ರ ಭಿನ್ನಾಭಿಪ್ರಾಯಗಳೆದ್ದಿವೆ. ಕರಾರುಗಳ ನಿರ್ಮಾಣದಲ್ಲಂತೂ ಪ್ರಬಲ ಮತ ಭೇದವಿದೆ. ಸಮ್ಮೇಲನದ ಭಾರತದ ಪ್ರತಿನಿಧಿಯು ಎಲ್ಲಾ ವಸಾಹತುಗಳಿಗೂ ಪ್ರಜಾಪ್ರಭುತ್ವಾನುಸಾರವಾದ ಸ್ವಾತಂತ್ರ್ಯವಿರಬೇಕೆಂದು ವಾದಿಸಿದ್ದಾರೆ.

ಪೆಲೆಸ್ಟೈನಿನ

ಅರಬಿ- ಯೆಹೂದಿ ಜಗಳ ತೀರ್ಮಾನಕ್ಕಾಗಿ ಮಿತಾಧಿಕಾರಿ ಕೇಂದ್ರದ ಒಳಗಡೆ ಅದನ್ನು ನಾಲ್ಕು ತುಂಡಾಗಿ ವಿಂಗಡಿಸುವ ಯೋಜನೆಯನ್ನು ಅಂಗ್ಲೋ— ಅಮೇರಿಕಾನರು ತಯಾರಿಸಿದ್ದಾರೆ. ಚರ್ಚಿಲ್ಲರು ಪೆಲೆಸ್ಟೈನ್ ಸಂಬಂಧವಾಗಿ ಲೇಬರ್ ಸರಕಾರವನ್ನು ಪಾರ್ಲಿಮೆಂಟಿನಲ್ಲಿ ಪ್ರತಿಭಟಿಸಲಿರುವರು.

ಹಣ ಸಹಾಯಕ್ಕಾಗಿ ಬೊಂಬಾಯಿಗೆ ಬರುವವರ ತಿಳುವಳಿಕೆಬಗ್ಗೆ- ಎಂಬ ಪ್ರಕಟಣೆಯೊಂದು ನಮ್ಮ ಬಳಿಗೆ ಬಂದಿದೆ. ಸ್ಥಳಾಭಾವದಿಂದ ಈ ಬಾರಿ ಪ್ರಕಟಿಸಲಾಗಲಿಲ್ಲ.

WANTED

Applications are invited up to 31-8-46 from candidate possessing qualifications prescribed below, to work as an apprentice in the first instance, with a view to his being appointed as the Secertary if found fit in the South Kanara Central Co-operative Wholesale Stores, Ltd. Mangalore.

Qualifications.—(1) Graduate of a recognised university. (2) Below 30 pears of age (3) Preference will be given to candidates knowing Kanarese and local vernaculars and previous office experience

The selected candidate will be an apprentice on probation, for one year during which time he will be paid a stipend of Rs. 50/- plus Rs. 18/- D. A. per mensem. The applications together with atleast two testimonials should he written in the applicant's hand and addressed to the President, S. K. C. C. W Stores, Ltd, Mangalore. The applicants shall also be prepared to appear for an interview at Mangalore at their own cost.

M. Shiva Rao,
President,
S. K. C. C. W. Stores, Ltd.

[೫ನೇ ಪುಟದಿಂದ]

ನಾತ್ಮಕ ಉತ್ತರಗಳನ್ನು ಕೊಡುವ ಬದಲಿಗೆ, ಮಂತ್ರಿಗಳು ತನ್ನೆದೆಗೆ ಕೈಯಿಟ್ಟುಕೊಂಡು ನೋಡಿ, ತೆಲುಗು ಭಾಗಗಳಲ್ಲಿರುವ ಮುಸಲ್ಮಾನರಲ್ಲಿ ಬಹು ಸಂಖ್ಯಾಕರು ಮಾತಾಡುತ್ತಿರುವುದು ಉರ್ದು ಎಂಬುದನ್ನು ತಿಳಿದುಕೊಳ್ಳಲಿ ಎಂದು ನಾನು ಕೇಳಿಕೊಳ್ಳಬಹುದೆ?

ವಿ. ಮಂ.— ಇಲ್ಲ; ನನ್ನ ಅವಗಾಹನೆಗೆ ಬಂದಂತೆ, ತೆಲುಗು ಜಿಲ್ಲೆಗಳ ಬಹುಸಂಖ್ಯಾಕ ಮುಸಲ್ಮಾನರು ತೆಲುಗನ್ನೂ, ತಮಿಳು ಜಿಲ್ಲೆಗಳ ಬಹು ಸಂಖ್ಯಾಕ ಮುಸ್ಲಿಮರು ತಮಿಳನ್ನೂ, ಮಲಬಾರಿನ ಮುಸಲ್ಮಾನರು ಮಲೆಯಾಳಿಯನ್ನೂ ಆಡುತ್ತಾರೆ.

ಹ. ಖಾ.—ನಿಮಗೆ ಸಿಕ್ಕಿದ ಈ ತಿಳುವಳಿಕೆ ತಪ್ಪು.

ಇಸ್ಮಾಯಿಲ್ ಸಾಹೇಬ್— ಈ ಸುದ್ದಿಯ ಕುರಿತು ಮಂತ್ರಿಗಳು ಸತ್ಯ ಶೋಧನೆ ಮಾಡಿರುವರೆ?

ವಿ. ಮಂ.—ನನಗೆ ದೊರೆತ ಸುದ್ದಿಯ ಆಧಾರದಿಂದ ನಾನು ಹೀಗೆಂದುದು. ಅದು ಸರಿಯಲ್ಲವೆಂದು ಯಾರಾದರೂ ಸಿದ್ಧ ಮಾಡುವರಾದರೆ ಅದಕ್ಕೆ ಸ್ವಾಗತವಿದೆ.

ಎಸ್. ಸುಬ್ರಹ್ಮಣ್ಯಮ್—ನಿಜಾಮರ ರಾಜ್ಯದಲ್ಲಿ ಜನರ ಮಾತೃಭಾಷೆ ತೆಲುಗು ಅಥವಾ ಮರಾಟಿಯಾಗಿದ್ದರೂ ಅಲ್ಲಿ ಉರ್ದು ಕಡ್ಡಾಯವಾಗಿದೆ ಎಂಬುದು ಮಂತ್ರಿಗಳಿಗೆ ಗೊತ್ತೆ? (ಸದಸ್ಯರು-'ಕೇಳಿರಿ' 'ಕೇಳಿರಿ')

ಹ. ಖಾ.—ಈ ಮೆಂಬರರ ಹೇಳಿಕೆ ತಪ್ಪಲ್ಲವೆ?

ವಿ. ಮಂ.—ಆ ಸದಸ್ಯರ ಹೇಳಿಕೆ ತಪ್ಪಾಗಿದ್ದರೆ, ಈ ಕಡೆಯ (ಮುಸ್ಲಿಂ ಲೀಗ್ ಸದಸ್ಯರನ್ನು ತೋರಿಸಿ) ನನ್ನ ಮಿತ್ರರು ಹೇಳುವುದು ಕೂಡಾ ತಪ್ಪೇ ಆಗಿದೆ (ಸಭೆಯಲ್ಲಿ ನಗು)

ಇಸ್ಮಾಯಿಲ್. ಸಾ —(ಮತ್ತೊಮ್ಮೆ) ಆಂಧ್ರದೇಶದಲ್ಲಿರುವ ಎಲ್ಲಾ ಮುಸಲ್ಮಾನರ ಮಾತೃಭಾಷೆಯೂ ಉರ್ದುವಲ್ಲವೇ ಎಂಬುದನ್ನು ಮಂತ್ರಿಗಳು ಪರಿಶೀಲಿಸಿಕೊಳ್ಳುವರೆ?

ವಿ ಮಂ.—ಈ ಕುರಿತು ಜನಾಭಿಪ್ರಾಯ ತಿಳಿಯಬೇಕೆಂದು ಸದಸ್ಯರ ಅಪೇಕ್ಷೆಯಾಗಿದ್ದರೆ, ತನಿಖೆ ನಡೆಸಬೇಕಾಗುವದು.

ಹ. ಖಾ. —ಅವರು ಸ್ಪಷ್ಟ ಉತ್ತರ ಕೊಡಬೇಕು, ಅಧ್ಯಕ್ಷರೇ.

ವಿ. ಮಂ. —ನಾನಿಲ್ಲಿ ನನ್ನೀ ಮಿತ್ರರ ಆಜ್ಞೆಯಂತೆ ವರ್ತಿಸಲಿರುವವನಲ್ಲ.

ಪಿ ವೆಂಕಟೇಶ್ವರುಲುಗಳ ಪ್ರಶ್ನೆಗುತ್ತರವಾಗಿ, ಸ್ಥಳೀಯ ಭಾಷೆಗಿಂತ ಭಿನ್ನವಾದ ತಮ್ಮ ಸ್ವಂತ ಭಾಷೆಯಲ್ಲೇ ಶಿಕ್ಷಣ ಹೊಂದುವ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತರೆ ಆ ಭಾಷೆಯವರಿಗೆ ಪ್ರತ್ಯೇಕ ಶಾಲೆಯನ್ನಲ್ಲಿ ತೆರೆಯಲು ಆಕ್ಷೇಪವಿಲ್ಲ ಎಂದು ಮಂತ್ರಿಗಳಂದರು.

ಹ. ಖಾ.—ಈಗ ಮಂತ್ರಿಗಳು ತಗ್ಗಿದರು. ಆಂಧ್ರದೇಶದಲ್ಲಿರುವ ದೊಡ್ಡ ಸಂಖ್ಯೆಯ ಮುಸಲ್ಮಾನರು ತಮಗೆ ಉರ್ದುವಿನಲ್ಲೇ ಶಿಕ್ಷಣ ದೊರೆಯಬೇಕೆಂದು ಅಪೇಕ್ಷಿಸಿದಲ್ಲಿ ಅವರಿಗೆ ಇವರು ಶಾಲೆಗಳನ್ನು ಒದಗಿಸುವರೆ?

ವಿ. ಮಂ.—ನನಗೆ 'ತಗ್ಗಿದುದು' ತಿಳುವಳಿಕೆಯಾಗಿಲ್ಲ. ಮದ್ರಾಸ್ ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಲೆಯಾಳಿ ವಿದ್ಯಾರ್ಥಿಗಳಿದ್ದರೆ ಅವರಿಗೆ ಮಲೆಯಾಳಿ ಕಲಿಸಬೇಕೆಂಬ ಆಜ್ಞೆ ಈ ಮೊದಲೇ ಇದೆ.

ಹ. ಖಾ.—ನನ್ನ ಪ್ರಶ್ನೆ ಆಂಧ್ರದೇಶದಲ್ಲಿರುವ ಮುಸಲ್ಮಾನರ ಸಂಬಂಧವಾಗಿ.

ವಿ. ಮಂ.—ಉರ್ದುವಿನಲ್ಲಿ ವಿದ್ಯೆ ಬೇಕೆಂದಪೇಕ್ಷಿಸುವ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆಂದು ಶಾಲೆಗಳಿಂದಲೇ ನನಗೆ ಸೂಚನೆ ಬರಲಿ

ಹ. ಖಾ.—ಆಂಧ್ರ ದೇಶದಲ್ಲಿರುವ ಎಲ್ಲಾ ಮುಸ್ಲಿಮ್ ಶಾಲೆಗಳಲ್ಲೂ ಈಗ ಉರ್ದುವೇ ಮಾಧ್ಯಮವಾಗಿದೆ ಎಂಬುದು ಮಂತ್ರಿಗಳಿಗೆ ಗೊತ್ತಿದೆಯೆ?

ವಿ. ಮಂತ್ರಿ — ಇಲ್ಲ

ಸಟ್ಟಾ ಜುಗಾರಿ

ಎ. ಬಿ. ಶೆಟ್ಟಿ—ಅಮೇರಿಕದ ಹತ್ತಿ ಧಾರಣೆಯ ನಂಬ್ರಗಳ ಆಧಾರದ ಜುಗಾರಿಯು ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಮತ್ತು ದಕ್ಷಿಣ ಕನ್ನಡದಲ್ಲಿ ಅತಿ ವಿಸ್ತೃತವಾಗಿದೆಯೆಂಬುದು ಸರಕಾರಕ್ಕೆ ಗೊತ್ತೆ? ಅದಕ್ಕಾಗಿ ಈ ವರುಷ ದಕ್ಷಿಣ ಕನ್ನಡದಲ್ಲಿ ಶಿಕ್ಷೆಗೊಳಗಾದವರೆಷ್ಟು?

ಕಾನೂನು ಮಂತ್ರಿ ಭಾಷ್ಯಮ್—ಹೌದು. ಜುಗಾರಿ ಕಾನೂನಿನ ತಿದ್ದುಪಡಿಯಾದ ವೇಳೆ ಈ ವರುಷ ಅದಕ್ಕಾಗಿ ದಕ್ಷಿಣ ಕನ್ನಡದಲ್ಲಿ ಶಿಕ್ಷಿಸಲ್ಪಟ್ಟವರ ಸಂಖ್ಯೆ 32.

ಎ. ಬಿ ಶೆಟ್ಟಿ— ಈ ಧಾರಣೆಗಳ ನಂಬ್ರ ಸಂಬಂಧಪಟ್ಟವರಿಗೆ ತಂತಿ ಮೂಲಕ ದೊರೆಯುವದನ್ನು ಸರಕಾರವೇಕೆ ತಡೆಗಟ್ಟಬಾರದು?

ಭಾಷ್ಯಮ್— ಟೆಲಿಗ್ರಾಫ್ ಖಾತೆಯು ಸ್ಥಳೀಯ ಸರಕಾರದ ಅಧೀನದಲ್ಲಿಲ್ಲ.

ಎಚ್. ಎಸ್. ಹುಸ್ಸೇನ್— ಈ ಸರಕಾರವು ಭಾರತ ಸರಕಾರದೊಡನೆ ಆ ಸಂಬಂಧದಲ್ಲೊಂದು ವ್ಯವಸ್ಥೆ ಮಾಡಿಕೊಳ್ಳುವದೇ?

ಭಾಷ್ಯಮ್—ಈ ಸೂಚನೆಯನ್ನು ಪರ್ಯಾಲೋಚಿಸಲಾಗುವದು.

ಓ. ನಟೇಶನ್—ಅಮೇರಿಕದ ಹತ್ತಿ ಧಾರಣೆಯು 'ರ್ಯೂಟರ್ಸ್' ಮುಖಾಂತರ ಬರುತ್ತಿದೆ ಎಂಬುದು ನಿಜವಲ್ಲವೆ?

ಪ್ರಕಾಶಮ್—ಮಾನ್ಯ ಸದಸ್ಯರಿಗೆ ನನಗಿಂತಲೂ ಸ್ಪಷ್ಟವಾಗಿ ಈ ಸಂಗತಿ ಗೊತ್ತಿದೆ.

ಹೆಬ್ರಿ—ತಾ. 25 7-46ನೇ ಸಂಚಿಕೆಯಲ್ಲಿ 'ಗ್ರಾಮನಿವಾಸಿ'ಗಳು ಬರೆದ ವಾರ್ತೆಯನ್ನು ಅನುಮೋದಿಸಿ, ಕಳೆದ ಸಂಚಿಕೆಯ ತಿದ್ದುಪಡಿಯನ್ನು ಪ್ರತಿಭಟಿಸಿ ಹಲವರ ಸಹಾಯುಳ್ಳ ವಾರ್ತೆಯೊಂದು ಬಂದಿರುತ್ತದೆ. ಆದರೂ ಈ ಕುರಿತು ತಕ್ಕ ವಿಚಾರಣೆಯನ್ನು ಸಂಬಂಧಪಟ್ಟವರು ಮಾಡುವುದು ಆವಶ್ಯವೆಂದು ಸೂಚಿಸಿ ಈ ಪತ್ರ ವ್ಯವಹಾರವನ್ನು ಮುಗಿಸುತ್ತೇನೆ. (ಸಂ ಸ.)

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ ಕಳಿಸುವದಿಲ್ಲ. ರೂ. ೩ ೪ ಅನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

BANK WITH THE LARGEST CONNECTIONS ON THE ...

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd

ESTD 1906

'ಪ್ರಕಾಶಿನಿ'ಯ ನಿರೀಕ್ಷಕರಲ್ಲಿ—

ಪ್ರಕಾಶಿನಿ ಮಾಸ ಪತ್ರಿಕೆ ಜೂನ್ ೩ಂಗಳಲ್ಲಿ ಹೊರಡುವದೆಂದಿದ್ದರೂ ಕಾಲ ಸಹಜ ಅನಿವಾರ್ಯ ತೊಂದರೆಗಳಿಂದ ಅದು ಹಿಂದೆ ಬಿದ್ದುದಕ್ಕಾಗಿ ವಿಷಾದ ಸೂಚಿಸಬೇಕಾಗಿದೆ. **ಇದೇ ಸೆಪ್ಟೆಂಬರ್ ತಾ. ೧ಕ್ಕೆ 'ಪ್ರಕಾಶಿನಿ'ಯ ಪ್ರಥಮ ಸಂಚಿಕೆ ತಪ್ಪದೆ ಹೊರಬಿದ್ದು** ಮುಂದೆ ಅನುಕ್ರಮವಾಗಿ ಪ್ರಕಟಿಸಲ್ಪಡುವದು. ತಾವಾಗಿ ಸಹೃದಯದಿಂದ ನೆರವಾದ ಮಿತ್ರರು-ಮುಂದಾಗಿ ಚಂದಾದಾರರಾಗಿರುವ ಪ್ರೋತ್ಸಾಹಕರು-ಮತ್ತಿತರ ಹಿತಚಿಂತಕರು ಈ ಅಪರಿಹಾರ್ಯ ವಿಳಂಬವನ್ನು ಕ್ಷಮಿಸಲೆಂದೂ ಸರ್ವರೂ 'ಪ್ರಕಾಶಿನಿ'ಗೆ ನೆರವಾಗಬೇಕೆಂದೂ ವಿಜ್ಞಾಪನೆ. —ಎಂ. ವಿ. ಹೆಗ್ಡೆ.

NOTICE

In the Court of the District Munsiff of Mangalore.

R. I. A. No. 618/46. in O. S. No. 173 of 1944.

Between:—

Martin F. Mendonca— —Plaintiff.

and

Babu and others —Defendants

Notice to (1) Babu, son of Thimmaya, (2) Seethamma, (3) Janardhana, (4) Koosamma, (5) Sanjeeva, (6) Ananda Nos. 2 to 6 being the children of the said Babu and (7) Panambur Sadashiva Rao, son of Deva Rao Nos 1 to 6 residing at Car Street, Mangalore, and No. (7) residing at Jeppinamogrue Village, Mangalore Taluk, is hereby given that the plaintiff has filed the above application for a final decree for sale of the mortgaged property in pursuance of the preliminary decree dated 30-1 1945 passed in A. S. No 179 of 1944 of the Dt. Judge of South-Kanara, and that the said application is posted to 16 th August 1946 for hearing.

On failure of the defendants to appear in Court on that day either in person or by pleader, the said application will be decided in their absence.

John Gonsalves, B A; LL. B

Vakil for Plaintiff.

Mangalore 31-7 1946.

ರಾಮರಾಜ್ಯದ ಮೊದಲ ಪೀಠಿಕೆ

ಭರತ್ ಮಿಲಾಪ್

ಚಿತ್ರ ನೋಡಿ ಚರಿತ್ರೆ ತಿಳಿದವರು ಬಹು ಅಪರೂಪ. ಆದರೆ ಈ ಚಿತ್ರದಿಂದಾಗಿ ಚರಿತ್ರೆ ಬರೆದವರು ಬಹುಮಂದಿ.

ಭರತ್ ಮಿಲಾಪ್ (ಪ್ರಕಾಶ ಚಿತ್ರ)

ಶೋಭನಾ ಸಮರ್ಥ್, ಪ್ರೇಮ ಅದೀಬ್,

ದುರ್ಗಾ ಖೋಟೆ, ಸಾಹುಮೋಡಕ್ ಮೊದಲಾದವರು

ತಾರೀಕು **3—8—46**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ಮುಟ್ಟಿನ ಗುಳಿಗೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಅಸ್ವಾಭಾವಿಕ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ. ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲಿಷ್ಟದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ 4/- (ವಿ ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A E) Tollygurge, Calcutta

ಸ್ಟಾಕಿಸ್ಟ್: ನಾ ಕಂಪೆನಿ, ಮಂಗಳೂರು

ಉಡುಪಿ

ಕ್ರೈಸ್ತ ಶಾಲೆಗಳೂ ಬೈಬಲ್ ಪಾಠವೂ

ವಾಚಕ ಮಹಾಶಯರೇ,

ಹೆಚ್ಚಿನ ಕ್ರೈಸ್ತ ಶಾಲೆಗಳಲ್ಲಿ ನಿಯಮಿಸಲ್ಪಟ್ಟ ಶಾಲಾ ಪಾಠಗಳ ಜೊತೆಯಲ್ಲಿ ಬೈಬಲ್ ಪಾಠವನ್ನೂ ಕಾಲನಿಯಾಮಕ ಪಟ್ಟಿಯಲ್ಲಿ ಸೇರಿಸಿ ಸಮಸ್ತ ಮತಸ್ಥರಿಗೂ ಅದನ್ನು ಬೋಧಿಸುವ ಪರಿಪಾಠವಿದೆಯಷ್ಟೆ. ಬೈಬಲನ್ನು ಕಲಿಯಬಾರದೆಂದು ನನ್ನ ಮತವಲ್ಲ. ಪ್ರಾಯ ಪ್ರಬುದ್ಧರು ತಮ್ಮ ಮತ ಧರ್ಮದ ಜೊತೆಯಲ್ಲಿ ಇದನ್ನು ತಿಳಿದು ಕೊಂಡರೆ ನಿಜವಾಗಿಯೂ ಅದರಿಂದ ಪ್ರಯೋಜನವೇ ಇದೆ. ಆದರೆ ತಮ್ಮ ಮತ ವಿಷಯಗಳನ್ನು ಏನೂ ಅರಿಯದ ಕ್ರೈಸ್ತರಲ್ಲದ ವಿದ್ಯಾರ್ಥಿಗಳಿಗೆ ಈ ಬೈಬಲ್ ಶಾಸ್ತ್ರವನ್ನು ಬೋಧಿಸಿದರೆ ಅದರಿಂದ ಅವರ ಮಾನಸಿಕ ಬೆಳವಣಿಗೆಗೆ ಕುಂದು ಬರಬಹುದೆಂದು ಮನಗಂಡು ನಾನು ಉಡುಪಿಯ ಕ್ರಿಶ್ಚನ್ ಹೈಸ್ಕೂಲಿನ ಹೆಡ್ ಮಾಸ್ತರರಿಗೆ ಆ ಕುರಿತು ಬರಹ ಮೂಲಕವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ, ಅವುಗಳಿಗೆ ಉತ್ತರವನ್ನು ದಯಪಾಲಿಸಬೇಕಾಗಿ ವಿನಂತಿಮಾಡಿಕೊಂಡಿದ್ದೆನು. ಆದರೆ ಅವರು ಅದಕ್ಕೆ ಪ್ರತ್ಯುತ್ತರವನ್ನು ಕೊಡಲೇ ಇಲ್ಲ. ಆದರೂ ಸಂದರ್ಭಾನುಸಾರವಾಗಿ ನಾನು ಶಾಲೆಗೆ ಹೋದಾಗ ಆ ಕುರಿತು ಮುಖತಃ ಮಾತಾಡಿದಲ್ಲಿ ಅವರು ಆ ವಿಷಯವಾಗಿ ಈ ಕೆಳಗಿನ ತಮ್ಮ ಅಭಿಪ್ರಾಯಗಳನ್ನೂ, ಸೂಚನೆಗಳನ್ನೂ ಕೊಟ್ಟಿರುವರು. ಮಹಾಜನರ ಅವಗಾಹನೆಯ ಬಗ್ಗೆ ಈ ವಿಷಯವನ್ನು ಪ್ರಕಟಗೊಳಿಸಿರುವೆನು. ಅವರು ಅಂದದ್ದೇನೆಂದರೆ:

'ಕ್ರೈಸ್ತರಲ್ಲದ ಕೆಲವು ಮಹನೀಯರು ಸಹ ಬೈಬಲ್ ಬೋಧನೆಯು ಅಗತ್ಯವೂ, ಉಪಯುಕ್ತವೂ ಎಂದು ಅಭಿಪ್ರಾಯ ಪಡುತ್ತಾರೆ. ಈ ವರೆಗೆ ಅದನ್ನು ಆಕ್ಷೇಪಿಸಿದವರು ಯಾರೂ ಇಲ್ಲ. ಆದರೂ ಈ ಪಾಠವು ತಮ್ಮ ಮಕ್ಕಳಿಗೆ ಬೇಡವೆಂದು ತಿಳಿಯುವ ಹೆತ್ತವರು ಯಾ ರಕ್ಷಕರು ತಮ್ಮ ಮಕ್ಕಳನ್ನು ಈ ಪಾಠದಿಂದ ವಿನಾಯತಿ (ಮುಕ್ತ)ಗೊಳಿಸಬೇಕೆಂದು ಬರಹ ಮೂಲಕವಾಗಿ ತಮಗೆ ಪತ್ರವನ್ನು ಕಳುಹಿಸಿದರೆ, ಅಂತಹ ವಿನಾಯತಿ (exemption) ಕೊಡುತ್ತೇವಾಗಿಯೂ ಆದರೆ ಆ ಪಾಠದ ಸಮಯದಲ್ಲಿ ಅವರು ಹೊರಗಿರುವ ಸಂದರ್ಭದಲ್ಲಿ ಶಾಲಾ ಕೆಲಸಕ್ಕೆ ಭಂಗ ಬಾರದಂತೆ ಸಭ್ಯ ರೀತಿಯಿಂದ ವರ್ತಿಸಬೇಕಾಗಿಯೂ ಸೂಚಿಸಿರುವರು (ಮಹಾಜನರ ತಿಳುವಳಿಕೆಯ ಬಗ್ಗೆ ಈ ವಿಷಯವನ್ನು ಪ್ರಕಟಿಸಿರುವೆನು).

ಕ್ರೈಸ್ತ ಸಂಸ್ಥೆಗಳಿಂದ ನಡೆಸಲ್ಪಡುವ ಇತರ ಶಾಲೆಗಳಲ್ಲಿಯೂ ಈ ರೀತಿಯ ವ್ಯವಸ್ಥೆಯಿದೆಯೆಂದು ನಾನು ಭಾವಿಸುತ್ತೇನೆ.

K. Narasbimha Pai

(ಸ್ಥಳೀಯ 'ಕಾನ್ವೆಂಟ್'ನಲ್ಲಿ ಸಹ, ಕ್ರೈಸ್ತೇತರ ವಿದ್ಯಾರ್ಥಿನಿಯರಿಗೂ ಈ ಬೈಬಲ್ ಪಾಠಕ್ಕೂ ಘರ್ಷಣೆಬಂದ ಕೆಲವು ನಿದರ್ಶನಗಳು ನಮ್ಮ ಅವಗಾಹನೆಗೆ ಬಂದಿವೆ. ಒಂದು ಶಾಲೆಯ ಪಾಠ ಕ್ರಮಗಳು ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಸಾಧಿಸುವಂತಿರಬೇಕು ಹೊರತು ಅದರ ಆಡಳಿತೆನಡಿಸುವವರ ಅಭಿರುಚಿಯನ್ನು ಹೊಂದಿಕೊಂಡಿರಬಾರದು. ಕ್ರೈಸ್ತ ಸಂಸ್ಥೆಗಳಿಂದ ನಡಿಸಲ್ಪಡುವ ಶಾಲೆಗಳಲ್ಲೆಲ್ಲಾ ಹಿಂದೂ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯೇ ಹೆಚ್ಚಿಗೆ. ಯಾವ ಕಾರಣದಿಂದಾದರೂ ಇವರಿಗೆ ಬೈಬಲ್ ಪಾಠ ಬೇಕಾಗಿಲ್ಲವೆಂಬುದು, ರಕ್ಷಕರ ಪತ್ರವಿಲ್ಲದೇನೇ ಶಾಲಾ ವ್ಯವಸ್ಥಾಪಕರು ಅರಿತಿರಬೇಕಾದ ವಿಷಯ. ಕೊನೆಯ ಪಕ್ಷ ಕ್ರಿಶ್ಚಿಯನ್ ಹೈಸ್ಕೂಲಿನ ಮುಖ್ಯಾಧ್ಯಾಪಕರ ಮಾದರಿಯನ್ನಾದರೂ ಮಿಕ್ಕ ಕ್ರೈಸ್ತ ಸಂಸ್ಥೆಗಳೂ ಅನುಕರಿಸುವವೆಂದು, ನಂಬುತ್ತೇವೆ. ಶಾಲೆಗಳಲ್ಲಿಯೂ ಧಾರ್ಮಿಕ ಗ್ರಂಥಗಳ ಪಾಠವೇಕಿರಬೇಕು? ಅದು ಶಿಕ್ಷಣದ ಒಂದು ಅಂಗವಾಗಬಲ್ಲುದೆ? ಬೈಬಲ್, ಗೀತೆ, ಅಥವಾ ಕುರಾನ್ ಪಾಠಗಳನ್ನು ಅಗತ್ಯವುಳ್ಳವರು, ಅಪೇಕ್ಷಿಸುವವರಿಗೆ ಶಾಲೇತರ ಸಮಯಗಳಲ್ಲಿಯೇ ಕೊಡತಕ್ಕದೆಂಬ ನಿರ್ಬಂಧ ಬರುವದಗತ್ಯವೆಂದು ನಮಗನ್ನಿಸುತ್ತದೆ.

—ಸಂ. ನ.)

ಹಿಂದೂ ರಿಲೀಜಿಯಸ್ ಎಂಡೋವ್ ಮೆಂಟ್—ಅಕ್ಟಿನಲ್ಲಿ ಮಠಗಳಿಗೆ ಸಂಬಂಧಿಸಿದ ವಾಚಕಗಳನ್ನು ತಿದ್ದುಪಡಿಗೊಳಿಸುವಂತೆ ಮಂತ್ರಿ ಮಂಡಲವನ್ನು ಒತ್ತಾಯಿಸುವ ರೆ ಸ್ಥಳೀಯ ಮಠಗಳ ಕಡೆಯಿಂದ ಅಗೋಸ್ತು ತಾ. 11ರಲ್ಲಿ ಹಿಂದೂ ಕಾನ್ಫರೆನ್ಸ್ ಕರೆಯಲಾಗುವದೆಂದೂ ಸರಕಾರಕ್ಕೆ ಒಂದು ಮನವಿ ಕೂಡಾ ಕಳುಹಿಸಲಾಗಿದೆಯೆಂದೂ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ಬರೆಯುತ್ತಾರೆ.

ಕಲಾವೃಂದ— ದಿನ ೨೬-೭-೪೬ರಂದು ಕಲಾವೃಂದದಲ್ಲಿ ಪರಿಷತ್ತಿನಿಂದ ಈ ಬಾರಿ ಜರಗಲಿರುವ "ಜಾಣ" ಮತ್ತು "ಕಾವ್ಯ ಪರೀಕ್ಷೆಗಳಲ್ಲಿ ಪ್ರವೇಶಿಸಲಿಚ್ಛೆಗಳಾದ ವಿದ್ಯಾರ್ಥಿಗಳಿಗಾಗಿ ತೆರಯಬೇಕಾದ ತರಗತಿಗಳ ಉದ್ಘಾಟನೆಯನ್ನು ಪಂಡಿತ ಶ್ರೀ ವೆಂಕಟ್ರಾಮಾಚಾರ್ಯರು ನೆರವೇರಿಸಿದರು.

ತಾ. ೩-೮-೪೬ರಂದು ಕಲಾವೃಂದದ ತೃತೀಯ ವಾರ್ಷಿಕ ದ್ವಿತೀಯ ಸಭೆಯು ಶ್ರೀ. ಬನ್ನಂಜೆ ಶ್ರೀ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ "ಕನ್ನಡ ಸಾಹಿತ್ಯ" ಎಂಬ ವಿಷಯದ ಕುರಿತು ಜರಗಿ ಭಾಷಣಗಳಾದುವು.

ಸಾರ್ವಜನಿಕ ಸಭೆ—ಶ್ರೀ. ಎನ್ ಕೇಳುನಂಬಿಯಾರರ ಆಮಂತ್ರಣದಂತೆ ತಾ. 2-8-46ರಲ್ಲಿ ಮುಕುಂದ ನಿವಾಸದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಆಯುರ್ವೇದಿಕ್ ಕಾಲೇಜನ್ನು ಉಡುಪಿಯಲ್ಲಿ ಸ್ಥಾಪಿಸುವ ಕುರಿತು ಸಮಾಲೋಚಿಸಲಾಯಿತು. ಈ ಬಗ್ಗೆ ಏರ್ಪಟ್ಟ ಶಿಷ್ಟ ಮಂಡಳಿಯು ಸಧ್ಯವೇ ಮದ್ರಾಸಿಗೆ ತೆರಳುವುದೆಂದು ಕೇಳುತ್ತೇವೆ.

ಶ್ರೀ ವೆಂಕಟೇಶ ದೇವಳದಲ್ಲಿ—ಎಂದಿನಂತೆ ನಡೆಯತಕ್ಕ ಭಜನಾ ಸಪ್ತಾಹವು ಇದೇ ತಾ. 2ರಲ್ಲಿ ಆರಂಭವಾಗಿಯದೆ ವಿಜೃಂಭಣೆಯಿಂದ ಜರಗುತ್ತಿದೆ. ತಾ. 9ರಲ್ಲಿ ಮಂಗಲೋತ್ಸವ ಜರಗುವುದು.

ಎಂಡೋಮೆಂಟ್—ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಮಾಜಿ ರೈಟರಾಗಿದ್ದ ಶ್ರೀ. ಯು. ಶ್ರೀನಿವಾಸಾಚಾರ್ಯರ ಹೆಸರಲ್ಲಿ ಅವರ ಸಹೋದರ ಶ್ರೀ. ಯು. ಗುಂಡಾಚಾರ್ಯರು ರೂಪಾಯಿ 500।= ಎಂಡೋಮೆಂಟ್ ನಿಧಿಯನ್ನರ್ಪಿಸಿರುವರು. ಇದರ ಬಡ್ಡಿಯನ್ನು ಆ ಶಾಲೆಯ I ಫಾರ್ಮಿನಲ್ಲಿ ಕಲಿಯುವ ಬಡ ಹಾಗೂ ಚತುರ ಹುಡುಗನಿಗೆ ಸ್ಕಾಲರ್‌ಶಿಪ್ ಕೊಡಲು ಉಪಯೋಗಿಸಲಾಗುವುದು, ಎಂದು ತಿಳಿದುಬರುತ್ತದೆ.

ಮಂಗಳೂರು.

ದ. ಕ. ದ್ರಾವಿಡ ಬ್ರಾಹ್ಮಣ—ವಿದ್ಯಾರ್ಥಿ ಭವನದ ಸಭೆಯ ಉದ್ಘಾಟನಾ ಸಮಾರಂಭವು ತಾ. ೨೮ರಂದು ಶ್ರೀನಿವಾಸ್ ಶ್ರಾಬಾಜಿ ಶ್ರೀನಿವಾಸಾಚಾರ್ಯರವರಿಂದ ನೆರವೇರಿತು.

ವರ್ಧಾ ಶಿಕ್ಷಣ ಪಡೆಯಲು—ಮದ್ರಾಸು ಸರಕಾರದವರು ೧೧ ಮಂದಿಯನ್ನು ವಾರ್ಧಕ್ಕೆ ಕಳುಹಿಸಿರುವುದಾಗಿ ತಿಳಿದುಬರುತ್ತದೆ. ನಮ್ಮ ಜಿಲ್ಲೆಯಿಂದ ಶ್ರೀ. ಕೆ. ರಾಮಕೃಷ್ಣ ಶೆಟ್ಟಿ, ಬಿ. ಎ. ಎಲ್. ಟಿ, (Personal Assistant to D. E. O)—ಇವರು ಆರಿಸಲ್ಪಟ್ಟಿರುವರು. ಶಿಕ್ಷಣದ ಅವಧಿಯು ತಾ. 5-8-46ರಿಂದ 9 ತಿಂಗಳವರೆಗೆ ಇರುವುದೆಂದು ತಿಳಿದುಬರುತ್ತದೆ.

ಮುಸ್ಲಿಂಮರಿಗೆ ದುಬಾರಿ ಎಣ್ಣೆ—ರಮ್ಜಾನ್ ಹಬ್ಬದ ಸಲುವಾಗಿ ಮುಸ್ಲಿಮರಿಗೆ ಈ ತಿಂಗಳಲ್ಲಿ ದುಬಾರಿ ಚಿಮ್ನಿ ಎಣ್ಣೆ ಕೊಡಬೇಕೆಂದು ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆ ಹೊರಡಿಸಿದ್ದಾರೆ.

ಆರ್ಯನ್ ಚಾಂಪಿಯನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—ಇದರ ಚೀಫ್ ಏಜನ್ಸಿ ಶಾಖೆಯನ್ನು ತೆರೆಯುವ ಸಮಾರಂಭವು ತಾ. 1-8-46 ರಲ್ಲಿ ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾ ಸತ್ಕಾರವಾದ ಬಳಿಕ, ಡಾ। ಎಫ್. ಎಚ್. ಒಡೆಯರ್, ಮೈಕಲ್ ಸಾಲ್ಡಾನ್ಹ ಬಿ. ಎ. ಗೋಪಾಲ್ ಸಾಲಿಯಾನ್ ಮತ್ತು ಡಾ। ಸಂಜೀವನಾಥ್ ಇವರುಗಳು ಸಂದರ್ಭೋಚಿತ ಭಾಷಣಗಳನ್ನಿತ್ತರು, ಚೀಫ್ ಏಜಂಟರಾದ ಶ್ರೀ. ಐಕಳ ಸೀತಾರಾಮ ಶೆಟ್ರ ಕಾರ್ಯಜಾಗ್ರತೆ, ಉದ್ಯೋಗ ಶೀಲತೆ, ಕರ್ತವ್ಯಪರಾಯಣತೆ ಮತ್ತು ಅವರು ಅಲ್ಪಾವಧಿಯಲ್ಲಿ ಕಂಪೆನಿಗೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಅಧ್ಯಕ್ಷರು ಕಂಪೆನಿಗೂ ಶ್ರೀ ಸೀತಾರಾಮ ಶೆಟ್ರಿಗೂ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿದಬಳಿಕ ಸಭೆಯು ಮುಕ್ತಾಯವಾಯಿತು.

ಬಿ. ಎ. ಕನ್ನಡದಲ್ಲಿ ಪ್ರಥಮಸ್ಥಾನ—ಮಂಗಳೂರಿನ ಸೈಂಟ್ ಎಲೋಸಿಯಸ್ ಕಲಾಶಾಲೆಯ ಕನ್ನಡ ಪಂಡಿತರಾದ ಶ್ರೀ. ಮುಳಿಯ ತಿಮ್ಮಪ್ಪಯ್ಯನವರ ಶಿಷ್ಯ ಶ್ರೀ. ಯಂ. ಮಹಾಬಲ ಶೆಟ್ಟಿಯವರು ಇದೇ ವರ್ಷ ನಡೆದ ಮದ್ರಾಸು ಪ್ರಾಂತ್ಯದ ಬಿ. ಎ. ಪರೀಕ್ಷೆಯಲ್ಲಿ ಕನ್ನಡದಲ್ಲಿ ಮದ್ರಾಸು ಪ್ರಾಂತ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಉತ್ತೀರ್ಣರಾಗಿರುವದು ಅಭಿವಂದನೀಯವಿದೆ. ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನಕ್ಕೂ ಇದೊಂದು ಭೂಷಣವಾಗಿದೆ.

ಕಾಪು—ಸ್ಥಳೀಯ ಬೋರ್ಡ್ ಹಾ। ಎ। ಶಾಲೆಯಲ್ಲಿ ನಾಲ್ಕೈದು ವರ್ಷಗಳಿಂದ ಸರ್ವಿಸ್ ಮಾಡುತಿದ್ದ ಶ್ರೀ. ಎ. ಹಿರಿಯಣ್ಣ ಶೆಟ್ಟರು ಕಟ್ಪಾಡಿ ಸೆಕೆಂಡ್ರಿ ಶಾಲೆಗೆ ಸೇರುವ ಬಗ್ಗೆ ತಾ. 30-7-46ರಲ್ಲಿ ಬೋರ್ಡ್ ಸರ್ವಿಸಿಗೆ ರಾಜಿನಾಮೆ ಕೊಟ್ಟುದರಿಂದ ಶಾಲೆಯ ವಿದ್ಯಾರ್ಥಿಗಳು ತಾ. 30-7-46ರಂದು ಸ್ಕೌಟು ದಳದ ವಿದ್ಯಾರ್ಥಿಗಳು ತಾ. 1-8-46ರಂದೂ ಶ್ರೀ. ಶೆಟ್ಟರಿಗೆ ಸಂಭಾವನೆ, ಸತ್ಕಾರಗಳಿತ್ತು ತಮ್ಮ ಪ್ರೀತಿಯನ್ನು ವ್ಯಕ್ತಗೊಳಿಸಿದರು.

ಕಾಸರಗೋಡು—ಜಿಲ್ಲಾ ಫುಡ್ ಕಮಿಟಿಗೆ ತಾಲೂಕು ಫುಡ್ ಕಮಿಟಿಯಿಂದ ಶ್ರೀ. ಸಿ. ಕೆ. ರಾಮುಣ್ಣಿ ನಂಬಿಯಾರರು ಆರಿಸಲ್ಪಟ್ಟಿದ್ದಾರೆಂದು ತಿಳಿದುಬರುತ್ತದೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮು ರೇಕು ನಿಲ್ಲುವದು; ಹೊಟ್ಟೆ ಹಸಿವಾಗುವದು; ಪಚನಶಕ್ತಿ ಹೆಚ್ಚು ತಿದ್ದುವದು; ಫುಪ್ಫುಸಗಳು ಶಕ್ತಿಯುತವಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ

ದಮ್ಮು, ಕೆಮ್ಮು, ಬೆನ್ನುನೋವು, ಗಂಟಲುಬಿರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತ ಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ್) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಅಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩ ೬ ರೂ.೧೨ ಮತ್ತು ೧೦ ೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಫೊಷ್ಟ್ರೀಲ್ ಸ್ಟೋರ್ಸ್, ಮಂಗಳೂರು; ಟಿ. ಸಿ. ಪಟೇಲ್‌ಜನ್ ಆಂಡ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.



ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 37/146.

ಜೊಸೆಸ್ಸ ಡಿಸೋಜ ಬ್ಯಾ-ಮನುವೆಲ್ ಡಿಸೋಜನ ಹೆಂಡ್ತಿ-ಉಡ್ಪಿ ತಾಲೂಕು-ಕುತ್ಯಾರುಗ್ರಾಮದ ಕೆಂಜಟ್ಟೈಲು-ಅರ್ಜಿದಾರಳು ಯಿ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಅರ್ಜಿದಾರಳ ಸಹೋದರ-ನಂತ್ರ ಸ್ವರ್ಗಸ್ಥನಾದ ಜೋನ್ ಡಿಸೋಜನು-ಬೊಂಬ್ಯಾ Post ಆಫೀಸ್ ಎಕೌಂಟು ನಂಬ್ರ 493571 ನೆಗೆಯಿಟ್ಟ ರುಪಾಯಿ 405/-ನ್ನು ಪಡಿಯುವರೆ ಹಕ್ಕುದಾರಳು ಮತ್ತು ವಾರ್ಸಿದಾರಳಾದ ತನಗೆ ಸಕ್ಸಸಂಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 23-8-1946 ಕ್ಕೆ ತನಿಖೆಗೆ ಬಿಡಲಾಗಿಯದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವ್ಸ 11 ಗಂಟೆಗೆ ಮೇಲ್ಕಂಡ ಕೋರ್ಟಿ ಮುಂದೆ ಸ್ವತಹ ಯಾ ಪ್ಲೀಡರ ಮೂಲಕ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸಲಾಗಿಯದೆ.

By order of the Court.

U. B. Krishna Rao.
Advocate for Petitioner.

ಉಡ್ಪಿ 31-7-46.

ಮಂಗಳೂರು.

ಹೊಸೈರಿ ಕೆಲಸಗಾರರ ಸಭೆ— ತಾ. ೨೮ರಂದು ಬೆಳಿಗ್ಗೆ ೧೦ಕ್ಕೆ ಕಾಂಗ್ರೆಸ್ ಭವನದಲ್ಲಿ ಮಂಗಳೂರು ಹೊಸೈರಿ ಕೆಲಸಗಾರರ ಸಭೆಯೊಂದು ಯುವಜನ ಕಾಂಗ್ರೆಸಿನ ಆಶ್ರಯದಲ್ಲಿ ಜರಗಿತು. ಶ್ರೀ ಜಿ. ಕೃಷ್ಣಪ್ಪಸೆಟ್ಟರು ಅಧ್ಯಕ್ಷಸ್ಥಾನ ವಹಿಸಿದ್ದರು. ಹೊಸೈರಿ ಕೆಲಸಗಾರರ ಸಂಘಟನೆಯ ಕುರಿತು ಶ್ರೀಗಳಾದ ಎ. ಬಾಲಪ್ಪ, ಸೋಮಸುಂದರ ಕಣ್ಣನ್ ಮತ್ತು ಸಭಿಕರಲ್ಲಿ ಕೆಲವರು ಮಾತಾಡಿದರು. ತರುವಾಯ ಹನ್ನೊಂದು ಮಂದಿ ಕೆಲಸಗಾರರನ್ನೊಳಗೊಂಡ ತಾತ್ಕಾಲಿಕ ಸಮಿತಿಯನ್ನೇರ್ಪಡಿಸಲಾಯಿತು.

ಚಾಲಗೇಣಿ ಒಕ್ಕಲುಗಳ ಸಭೆ— ತಾ. ೩೦ರಂದು ಸಾಯಂಕಾಲ ಜಪ್ಪಿನ ಮೊಗರು ಗ್ರಾಮದಲ್ಲಿ ಚಾಲಗೇಣಿ ಒಕ್ಕಲುಗಳ (ಕೃಷಿಕರ) ಸಭೆಯೊಂದು ಯುವಜನ ಕಾಂಗ್ರೆಸಿನ ಆಶ್ರಯದಲ್ಲಿ ಜರಗಿತು. ಶ್ರೀ. ಕೆ.ಕೆ. ಸೆಟ್ಟಿಯವರು ನೆರೆದವರಿಗೆ ಒಕ್ಕಲು ಹಿತ ಸಮಸ್ಯೆಯೊಂದು ಅವಶ್ಯವಿದೆ ಎಂದು ವಿವರಿಸುತ್ತ ಆ ಬಗ್ಗೆ ಯುವಜನ ಕಾಂಗ್ರೆಸಿನವರು ಮಾಡಲಿರುವ ಕಾರ್ಯಕ್ರಮವನ್ನು ಕುರಿತು ಹೇಳಿದರು.

ಭಗಿನೀ ಸಮಾಜದ ವಾರ್ಷಿಕ ಮಹಾ ಸಭೆಯು— ತಾ. ೨೮ರಂದು ಶ್ರೀಮತಿ ಲೀಲಾಬಾಯಿ ಸಬಾರಾವ್‌ರವರ ಅಧ್ಯಕ್ಷತೆಯಲ್ಲಿ ಬಿಸೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಜರಗಿತು. ವರದಿ, ಆಯವ್ಯಯ ಪಟ್ಟಿಯನ್ನು ಓದಿ ಆದನಂತರ ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯಾಯಿತು. ಅಧ್ಯಕ್ಷೆ: ಶ್ರೀಮತಿ ಲೀಲಾ ಬಾಯಿ ರಾವ್, ಉಪಾಧ್ಯಕ್ಷೆಯರು— ೧. ಶ್ರೀಮತಿ ರಮಾ ಬಾಯಿ ಪಂಡಿತ್, ೨. ಲೀಲಾಬಾಯಿ ಸಬಾರಾಮರಾವ್ ಕಾರ್ಯದರ್ಶಿನಿಯರು— ೨ ಕೊಡಿಯಾಲಬೈಲು ಕೇಂದ್ರ, ೧. ವಸಂತಿ ಎ. ಜಪ್ಪು ಕೇಂದ್ರ— ೧. ಶ್ರೀಮತಿ ಲೂಸಿ ಡಿ'ಸೋಜಾ, ೨. ನಂದಿನಿ ಶೇಖರ್, ಪೆಂಟ್ಲೆಂಡ್‌ಪೇಟೆ ಕೇಂದ್ರ—೧. ಶ್ರೀಮತಿ ಮನೋರಮಾ ಡಿ ನಾಯಕ್, ಲೀಲಾಜಿ. ಕಾಮತ್. ಕೋಶಾಧ್ಯಕ್ಷರು— ಶ್ರೀಮಂ ಮಾಲತಿ ಆಚಾರ್.

ಮುಷ್ಕರಗಳ ಫಸಲು

ದೇಶದ ಎಲ್ಲೆಡೆಗಳಲ್ಲೂ ಮುಷ್ಕರಗಳು ಕೆಲಸಗಾರರ ಉದ್ಧಾರದ ಹೆಸರು ಮುಷ್ಕರಗಳ ಯುದ್ಧಭೂಮಿಯಲ್ಲಿ ಎಡಬಿಡದೆ ಸಾಗುತ್ತಿದೆ. ಇದರ ಪರಿಣಾಮವೆಲ್ಲಿ? ಇದರಿಂದ ಮಜೂರರಿಗೆಷ್ಟು ಸುಖ? ಇದರಿಂದ ಬಾಧಕ ಯಾರಿಗೆ? ಇದರ ಆರ್ಥಿಕ ಪರಿಣಾಮವೇನು? ಇದರ ಮುಂದಿನ ಗತಿ ಎಲ್ಲಿ? ಎಂಬುದರ ವಿಚಾರವು ಹೆಚ್ಚಿನವರು ಮಾಡಿಕೊಂಡಂತೆ ತೋರುವುದಿಲ್ಲ. ಜವಾಬ್ದಾರಿ ಅಧಿಕಾರದಲ್ಲಿರುವ ಕಾಂಗ್ರೆಸ್ಸು ಮಂತ್ರಿಗಳೂ, ಮುಂದಾಳುಗಳೂ ಕೂಡ ಈ ವಿಷಯದಲ್ಲಿ ಹೆಚ್ಚು ವಿಚಾರಮಾಡಿಕೊಂಡಿಲ್ಲ. ಮಾತ್ರವಲ್ಲ, ಮುಹೂರ್ತದ ಆವಶ್ಯಕತೆಗೆ ದೇಶದ ಆವಶ್ಯಕತೆ ದೇಶದ ಭವಿತವ್ಯವನ್ನೇ ಕೆಡಿಸುವರೆಂಬಂತೆ ಕಾಣುತ್ತಿದೆ.

ಯುದ್ಧದ ಪರಿಣಾಮವಾಗಿ ಜೀವನದ ಖರ್ಚು ಹೆಚ್ಚಾಗಿ ಮಜೂರರ ಜೀವನದ ವೆಚ್ಚವೂ ಹೆಚ್ಚಿಯದೆಂಬುದರಲ್ಲಿ ಸಂದೇಹವಿಲ್ಲ. ಆ ಬಗ್ಗೆ ಹೆಚ್ಚಿನ ಕಡೆಗಳಲ್ಲಿ ಮಜೂರ ಚಳವಳಗಳಿಗೆ ಆಸ್ಪದ ಕೊಡದೇನೇ ಅವರ ಸಂಬಳ ಕೂಲಿಗಳನ್ನು ಏರಿಸಿರುತ್ತದೆ. ಕೆಳಿದ ಕಡೆಗಳಲ್ಲಿ ನ್ಯಾಯವೆಂದು ತೋರಿದಂತೆ ಹೆಚ್ಚುಮಾಡಲಾಗಿಯದೆ. ಆದರೆ ಮುಷ್ಕರದ ರಣಘೋಷದ ಬಲತ್ಕಾರವು ಮಜೂರಿಗಳ ತಕ್ಕದಿಯನ್ನು ತೂಕಕ್ಕೆ ವಿರೋಧವಾಗಿ ಅಲುಗಾಡಿಸಿಬಿಡುತ್ತಿದೆ.

ಮುಷ್ಕರದ ಸಮಸ್ಯೆಯಲ್ಲಿ ಎರಡು ಮೂಲ ನಿಯಮಗಳನ್ನು ಯಾರೊಬ್ಬರೂ ಮನಸ್ಸಿಗೆ ತೆಗೆದುಕೊಂಡಂತೆ ತೋರುವುದಿಲ್ಲ. ಒಂದನೆಯದು ಮಾಲಕರು ಮಜೂರಿಯನ್ನು ತಮ್ಮ ಸ್ವಂತ ಆಸ್ತಿಯಿಂದ ಕೊಡುವುದಲ್ಲ; ಅದನ್ನು ತಮ್ಮ ಸಾಮಾನಿನ ಬೆಲೆಯೇರಿಸಿ ಮಹಾಜನರಿಂದ ತೆಗೆದು ಮಜೂರರಿಗ ಕೊಡಬೇಕು; ಆದುದರಿಂದ ಮಜೂರಿ ಏರಿಕೆಯು ಮಿತಿಮೀರಿದಂತೆ ವ್ಯಾಪಾರ ನೋಡುವುದಾದರೆ ಅದು ಮಹಾಜನರ ಬಗ್ಗೆ; ಅವರು ಕೊಡಬೇಕಾದ ಬೆಲೆ ಇದಷ್ಟು ತಗ್ಗಿಸಿ ಇದಲಿಕ್ಕೆ. ಎರಡನೆಯದು; ಸಾಮಾನಿನ ಪ್ರಾಥಮಿಕ ಬೆಲೆಯು ಆದನ್ನು ರಚಿಸಿ, ಮಾರುವವರಿಗೆ ತಗಲುವ ಮಜೂರಿಯಾಗಿದೆ. ಯಾವ ಸಾಮಾನಿನ ಬೆಲೆಯಾದರೂ ಸರಿಯಾಗಿ ಬಿಡಿಸಿದರೆ ಬರೇ ಆಗಿನ ವರೆಗಿನ ಮಜೂರಿಯೇ ಆಗಿದೆ. ಆದುದರಿಂದ ಎಲ್ಲೆಡೆಯಲ್ಲಿಯೂ ಮಜೂರಿ ಏರಿದರೆ ಸಾಮಾನಿನ ಬೆಲೆಯೇರಿ, ಜೀವನದ ಖರ್ಚು ಮತ್ತೂ ಏರುವುದು. ಆದುದರಿಂದ ಒಂದು ಸಲದ ಮಜೂರಿ ಏರುವಿಕೆಯು, ಇನ್ನೊಂದು ಸರ್ತಿಗೆ ಮಜೂರಿ ಏರುವಿಕೆ ಬಗ್ಗೆ ಮಾಡಬೇಕಾದ ಮುಷ್ಕರಕ್ಕೆ ಒಂದು ತಳಹದಿಯಾಗಿದೆಯಲ್ಲದೆ, ಮಜೂರ ಸಮಸ್ಯೆಯ ತೀರ್ಮಾನವಲ್ಲ.

ಮಜೂರರ ಸಂಕಷ್ಟಗಳ ತೀರ್ಮಾನವು ಮೂರು ವಿಷಯಗಳ ಮೇಲೆ ಹೊಂದಿರುತ್ತದೆ. (೧) ವೃತ್ತಿಯ ತಾರತಮ್ಯಾನುಸಾರ ಒಂದು ಸ್ಥಿರವಾದ ಮಜೂರಿದರ; (೨) ಸಾಮಾನುಗಳ ಬೆಲೆಯ ತಗ್ಗುವಿಕೆ ಮತ್ತು ಸ್ಥಿರತೆ; (೩) ಪರದೇಶದಿಂದ ರಫ್ತಿನ ಮೂಲಕ ಸಂಪತ್ತುಗಳಿಸುವುದು. ಮಜೂರರ ಇಂದಿನ ಮುಷ್ಕರಗಳು ಈ ಮೂರು ಪರಿಸ್ಥಿತಿಗಳಿಗೂ ವಿರೋಧವಾಗಿದೆ.

ಕಾಂಗ್ರೆಸ್ಸು ಸರಕಾರಗಳು ಈ ಪರಿಸ್ಥಿತಿಗಳ ಕಡೆಗೆ ಅತ್ಯಗತ್ಯ ಲಕ್ಷ್ಯಕೊಡಬೇಕು; ಈ ಪರಿಸ್ಥಿತಿಗಳ ಬಗ್ಗೆ ಮಜೂರರೂ ತಮ್ಮ ಆಂದೋಲವನ್ನು ನಡಿಸಬೇಕು. ಆಗ ಮಾತ್ರವೇ ದೇಶದ ನೆಮ್ಮದಿಯು ಸಾಧ್ಯವಾಗುವುದು ಮಜೂರ ಸಂಕಷ್ಟಗಳ ನಿಜವಾದ ಕಾರಣಗಳನ್ನು ಸರಕಾರವು ಶೋಧಿಸದೆ ತಮ್ಮ ವಿಶಾಲ ಧ್ಯೇಯವಾದದಿಂದ ಕೊಮ್ಯೂನಿಸ್ಟರಿಗೆ ಆಸ್ಪದಕೊಟ್ಟು ದೇಶವು ದಿನದಿಂದ ದಿನಕ್ಕೆ ಪ್ರಚಂಡ ಗೊಂದಲದ ಕಡೆಗೆ ಧಾವಿಸುತ್ತಿದೆ. ಕಾಂಗ್ರೆಸ್ ಸರಕಾರಗಳು ಇನ್ನಾದರೂ ಎಚ್ಚರವಾಗಿ ಈ ಕಡೆಗೆ ಲಕ್ಷ್ಯವಿಡ ಬೇಕು ಅವಶ್ಯವಾಗಿದೆ.

ಸಂಬಳ ಹೆಚ್ಚು ಪಡೆಯಿರಿ, ಎಂದು ಕೊಮ್ಯೂನಿಸ್ಟರು ಹೇಳುವುದು ಕೆಲಸಗಾರರ ಮನಸ್ಸನ್ನು ಆಕರ್ಷಿಸುವ ವಿಷಯ. ಆದರೆ ಸಂಬಳವೇರಿದಂತೆ ರೂಪಾಯಿಯ ಬೆಲೆ ತಗ್ಗಿದರೆ ಆ ಏರುವಿಕೆಯಿಂದ ಪ್ರಯೋಜನವೇನು? ಕೆಲಸಗಾರ ವರ್ಗವು ಇದನ್ನು ಚೆನ್ನಾಗಿ ಆಲೋಚಿಸಿ ತನ್ನ ಧುರೀಣತೆಯನ್ನು ಆರಿಸಿಕೊಳ್ಳುವಾಗ ಎಚ್ಚರವಿರುವುದು ಒಳ್ಳೆಯದು. ಅನಾವಶ್ಯಕ ಅಶಾಂತಿಯನ್ನುಂಟುಮಾಡಿಕೊಂಡರೆ ಕೆಲಸಗಾರರ ವರ್ಗಕ್ಕೇನೇ ಹೆಚ್ಚು ಬಾಧಕವಿದೆ. (ನವಭಾರತದಿಂದ)

ದ. ಕ. ಪಂಡಿತ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು— ತಾ ೨೮ರಲ್ಲಿ ನಡೆದು ಈ ವರ್ಷ ಸಂಘವು ನಡೆಯಿಸಬಯಸುವ ಕರ್ತವ್ಯಗಳನ್ನು ಈ ಕೆಳಗಿನಂತೆ ನಿರ್ಣಯಿಸಿಕೊಂಡಿರುವುದು. ೧. ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಕನಿಷ್ಠಪಕ್ಷ ತಿಂಗಳಿಗೊಂದರಂತೆಯೂ ಸದಸ್ಯರ ಮಹಾ ಸಭೆಯು ಕನಿಷ್ಠಪಕ್ಷ ವರ್ಷಕ್ಕೆ ಎರಡರಂತೆಯೂ ಜರಗತಕ್ಕದ್ದು. ೨. ವಿದ್ಯಾಸಂಸ್ಥೆಗಳಲ್ಲಿ ಭಾಷಣಗಳನ್ನು ಕೊಡುವುದು; ಕವಿಗಳ ಜಯಂತಿಗಳನ್ನು ಜರಗಿಸುವುದು. ಸಾಹಿತ್ಯ ವಿಮರ್ಶೆಗಳಿಗೆ ಅವಕಾಶಗಳನ್ನು ಕಲ್ಪಿಸುವುದು. ಇತ್ಯಾದಿ ಸಾಹಿತ್ಯ ಸಂಬಂಧವಾದ ಗೋಷ್ಠಿಗಳನ್ನು ಏರ್ಪಡಿಸುವುದು. ೩. ಸಂಘದ ಪ್ರಚಾರ ಕಾರ್ಯವನ್ನು ಮಾಡುವುದು. ೪. ಜಿಲ್ಲೆಯಲ್ಲಿ ಈ ವರೆಗೆ ಪೌರಸ್ತ್ಯ ಭಾಷಾ ವಿದ್ವತ್ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ವಾಂಸರ ಲೆಕ್ಕವನ್ನು ತೆಗೆಯುವುದು. ಮತ್ತು ಬರುವ ದಸಂಬರ ತಿಂಗಳ ಕೊನೆಯೊಳಗೆ ಒಂದು ವಿದ್ವನ್ಮಹಾ ಸಭೆಯನ್ನು ಕರೆಯಲು ಪ್ರಯತ್ನಿಸುವುದು. ೫. ಜಿಲ್ಲೆಯಲ್ಲಿ ಪ್ರಕೃತ ಉದ್ಯೋಗದಲ್ಲಿರುವ ಪೌರಸ್ತ್ಯಭಾಷಾ ವಿದ್ವಾಂಸರ ಸರ್ವೀಸು, ವೇತನಾದಿಗಳ ಲೆಕ್ಕವನ್ನು ಇನ್ನೊಮ್ಮೆ ತೆಗೆಯುವುದು. ೬ ಜನಮನೋರಂಜಕವಾದ ಕಾರ್ಯಕ್ರಮಗಳಿಂದ ಸಂಘದ ನಿಧಿಯನ್ನು ಹೆಚ್ಚಿಸಲು ಪ್ರಯತ್ನಿಸುವುದು.

ಮೇಲೆ ಹೇಳಿದ ಈ ಬಯಕೆಗಳನ್ನು ಸಾಧಿಸಲು ಬೆಂಬಲವಿತ್ತು ಸಹಕರಿಸಬೇಕಾಗಿ ಎಲ್ಲಾ ಪೌರಸ್ತ್ಯ ಭಾಷಾವಿದ್ವಾಂಸರಲ್ಲಿಯೂ ವಿದ್ಯಾಸಂಸ್ಥೆಗಳಲ್ಲಿಯೂ ಭಾಷಾಭಿಮಾನಿಗಳಾದ ಮಹಾ ಜನರಲ್ಲಿಯೂ ಸಂಘವು ವಿನಂತಿ ಮಾಡಿಕೊಳ್ಳುತ್ತದೆ.

ಹರಿಜನ ಹೋಟೆಲ್ ಪ್ರವೇಶದ— ಕುರಿತು ತಾ. ೨೮ರಂದು ಶ್ರೀ ಕೆ. ಕೆ. ಶೆಟ್ಟಿಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಹರಿಜನ ಲೇಬರ್ ಲೀಗಿನ ಆಶ್ರಯದಲ್ಲಿ ಸ್ಥಳೀಯ ವ್ಯಾಯಾಮಶಾಲೆಯಲ್ಲಿ ಜರಗಿತು. ಡಾ। ಒಡೆಯರ್ ಮೊದಲಾದವರು ಹರಿಜನರ ಹೋಟೆಲ್ ಪ್ರವೇಶದ ಕುರಿತು ಭಾಷಣವಿತ್ತರು.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. no. 142 of 1946.

ಶೇಕ್ ಹಸ್ಸಾನ್ ಸಾಹೇಬ. ಶೇಕ್ ಶ್ಯಾಬ. ಸಾಹೇಬರ ಮಗ, ಉಡುಪಿ ತಾಲೂಕು ಯೇಣಗುಡ್ಡೆ ಗ್ರಾಮ— ವಾ.

ಮತ್ತು

ಆಲಿಮ ಬೀಬಿ ಕೂಡಾ— ಪ್ರತಿವಾದಿರು. ಯಿವರೊಳಗೆ.

3ನೇ ಪ್ರತಿವಾದಿ-ಶೇಕ್ ಮಹಮ್ಮದ ಸಾಹೇಬ ಆಲೀಮ ಬೀಬಿಯರ ಮಗ. ಉಡುಪಿ ತಾಲ್ಲೂಕು ಯೇಣಗುಡ್ಡೆ ಗ್ರಾಮದ ಚೊಕ್ಕಾಡಿಯಲ್ಲಿರುವವ—

ಸದ್ರಿ 3ನೇ ಪ್ರತಿವಾದಿಗೆ ಯೀಮೂಲಕ ತಿಳಿಯಪಡಿಸುವದೇನೆಂದ್ರೆ

ವಾದಿಗೆ ಪ್ರತಿವಾದಿರು ತಾರೀಕು 18-5 1943ರಲ್ಲು ರುಪಾಯಿ 390 0 0ಕ್ಕೆ ಬರ್ಸಿ ಕೊಟ್ಟ ಡಿಮಾಂಡ ನೋಟಿನ ಬಾಬ್ತು ಬರತಕ್ಕದಾದ ಅಸಲು ಬಡ್ಡಿ ಖಯಿನೇಜು ಕೂಡಾ ರುಪಾಯಿ 461-5-9ನ್ನು ಬರಮಾಡಿ ಕೊಳ್ಳುವರೇ ವಾದಿಯು ದಾಖಲು ಮಾಡಿದ ಮೊಕ್ಕದ್ದಮೆಯು ತಾರೀಕು 22-8-1946ಕ್ಕೆ ತನ್ನಿಗೆ ಯಿಡುವದಾಗಿಯದೆ. ಆದುದರಿಂದ ನಿಂಮ ಆಕ್ಷೇಪಣೆಯಿದ್ರೆ ಮೇಲ್ಕಂಡ ತಾರೀಕು 22-8-1946ನೇದಿವ್ಸ ಬೆಳಿಗ್ಗೆ 11 ಗಂಟೆಗೆ ತಪ್ಪದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಯಿದರ ಬಗ್ಗೆ ತಪ್ಪಿದರೆ ಸದ್ರಿ ನಂಬ್ರವು ನಿಂಮ ಯೆಕ್ಸಪಾರ್ಟಿಯಿಂದ ತೀರ್ಮಾನಿಸಲಾಗುವದು ಯೆಂಬಸಂಗ್ತಿ ಯಿದಾಮೂಲ ತಿಳಿಸೋಣಾಗಿಯದೆ.

3-8-1946 Udipi } K. J. Ballal, Vakil for Plaintiff

ದಿ ಆರ್ಯನ್ ಚಾಂಪಿಯನ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.
ಪ್ರಧಾನ ಕಾರ್ಯಾಲಯ:
7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.
ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.
ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಸೂರೆನ್ಸ್ ಕಂಪೆನಿಯಿದು.
ಚೆಯರ್‌ಮೆನ್:
ಶೇಟ್ ಭೋಗಿಲಾಲ್ ಎಚ್. ಪಟೇಲ್
ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ—
ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ
ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ದಿನ್ನ ನ ಬಾಟ್ಲಿಗಳು. ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

O. S. 183/1946

ಗಂಗಮ್ಮ ಯಾನೆ ರುಕ್ಮಿಣಿಯಮ್ಮ, ಕುಂಟಲಪಾಡಿ ನಾರಾಯಣ ಭಟ್ರ ವಿಧವೆ. ಪುತ್ತೂರು ತಾಲ್ಲೂಕು ಕರಾಯ ಗ್ರಾಮದಲ್ಲಿರುವವರು— ವಾದಿ.

ಮತ್ತು

1. ಹರಿ ಭಟ್ಟ. 2 ಪದ್ಮನಾಭ ಭಟ್ಟ 3. ಕೃಷ್ಣ ಭಟ್ಟ.— ಪ್ರತಿವಾದಿರು.

ಪದವು ಗ್ರಾಮದ ಕುಂಟಲಪಾಡಿಯಲ್ಲಿರುವ ಹರಿ ಭಟ್ರ ಮಗ ಪದ್ಮನಾಭ ಭಟ್ಟರಿಗೆ— ತಿಳಿಸುವುದೇನೆಂದ್ರೆ.

ಮೇಲೆ ಹೆಸರು ಕಾಣಿಸಿದ ವಾದಿಳು ತನ್ನ ಗಂಡ ತೀರಿಹೋದ ಲಾಗಾಯ್ತು ತನ್ನ ಜೀವಾಂತ್ಯದ ವರೆಗೆ ಜೀವನಾಂಶ ಕೊಡಿಸಬೇಕಾಗಿ ಮಾಡಿರುವ ಮೇಲಿನ ದಾವೆಯು ತಾ 10 8 1946ಕ್ಕೆ ಯಿಟ್ಟದೆ. ಈ ವಿಚಾರದಲ್ಲೇನಾದರೂ ಆಕ್ಷೇಪವಿದ್ದರೆ ಸದ್ರಿ 2ನೇ ಪ್ರತಿವಾದಿಯು ಆ ದಿನ ಪೂರ್ವಾಹ್ನ 11ಗಂಟೆಗೆ ಸ್ವತಹ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜ್ರಾಗಿ ಬರಹ ಮೂಲಕ ಉತ್ತರಗೆಯನ್ನು ಹಾಜ್ರು ಮಾಡದಿದ್ದರೆ ಸದ್ರಿ ದಾವೆಯು ಅವನ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು.

ಮಂಗಳೂರು 26 7 46 | **K. R. Achar,** ವಾದಿಯ ವಕೀಲ್.

ದಕ್ಷಿಣ ಕನ್ನಡ

ಕುಂದಾಪುರ ತಾಲೂಕು—ಸಮಿತಿಯಿಂದ ಜಿಲ್ಲಾ ಸಮಿತಿಗೆ ಪ್ರತಿನಿಧಿ ಮೆಂಬರರನ್ನು ಆರಿಸುವ ಚುನಾವಣಾ ಸಭೆಯು ತಾ. 26ರಲ್ಲಿ ತಾ. ಆಫೀಸಿನಲ್ಲಿ ಜರಗಿತು. ವಕೀಲ್ ಶ್ರೀ ಕೆ. ಸೂರಪ್ಪಶೆಟ್ಟರೂ ಶ್ರೀ. ಬಿ. ಸುಬ್ಬಣ್ಣಶೆಟ್ಟರೂ ಇದಕ್ಕೆ ಉಮೇದ್ವಾರರಾಗಿದ್ದರು. ಕೊನೆಯಲ್ಲಿ ಶ್ರೀ. ಬಿ. ಸುಬ್ಬಣ್ಣಶೆಟ್ಟರು ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದುದರಿಂದ ಶ್ರೀ. ಕೆ. ಸೂರಪ್ಪಶೆಟ್ಟರು ಅವಿರೋಧವಾಗಿ ಆರಿಸಲ್ಪಟ್ಟರು. ಈ ಚುನಾವಣೆ ಸಂಬಂಧ ಎಂ. ಎಲ್. ಎ. ಗಳಾದ ಶ್ರೀ ಎ. ಬಿ. ಶೆಟ್ಟಿ, ಖಾನ್‌ಸಾಹೇಬ್ H S. ಹುಸೇನ್ ಸಾಹೇಬ್, ಶ್ರೀ. ಕೆ ಈಶ್ವರ ಅವರೂ ಎಂ. ಎಲ್. ಸಿ. ಗಳಾದ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆರೂ ಚಿತ್ತೈಸಿದ್ದರು.

ಕೋಟೇಶ್ವರ—ತಾ. ೧-೮-೪೬ರಂದು ಸಂಜೆ ಸ್ಥಳೀಯ ಬೋರ್ಡ್ ಪ್ರೈಮರಿ ಪ್ರಾಥಮಿಕ ಶಾಲಾ ಸರಾರದಲ್ಲಿ ಇಲ್ಲಿನ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆಸೇರಿ ಸಂಘದ ಸ್ಥಾಪಕರಾದ ಶ್ರೀ. ಎಸ್. ಆರ್. ಎವರ್ಾಳ್, ಬಿ. ಎ. ಎಲ್. ಟಿ. ಯವರ ಪುಣ್ಯ ದಿನಾಚರಣೆ ಮತ್ತು ತಿಲಕ ದಿನಾಚರಣೆಗಳು ಜರಗಿಸಲ್ಪಟ್ಟುವು.

ಮೂಡಬಿದ್ರೆ—ಜೊ। ಹೈ। ಎ। ಶಾಲೆಯಲ್ಲಿ ಪ್ರತಿದಿನ ರಾತ್ರಿ 9ಗಂಟೆಗೆ ಶ್ರೀ। ದಿ। ಮಹದೇವ ಹರಿದಾಸರು "ಮಹಾಭಾರತ"ವನ್ನು ಕೀರ್ತನ ರೂಪವಾಗಿ ಕೆಲವು ದಿನಗಳವರೆಗೆ ನಿರೂಪಿಸುವವರಿದ್ದಾರೆಂದು ತಿಳಿದು ಬರುತ್ತದೆ,

ಬಾರಕೂರು—ಸ್ಥಳೀಯ ಉತ್ಸಾಹಿ ಯುವಕರು ತಾ 1-8-46 ರಿಂದ ಇಲ್ಲಿ ಒಂದು "ಹಿಂದೀ ಪ್ರೇಮ ಮಂಡಲಿ" ಎಂಬ ಸಂಸ್ಥೆಯನ್ನು ಶ್ರೀ. ಕೆ. ರಾಮಚಂದ್ರ ಉಡುಪರ ನೇತೃತ್ವದಲ್ಲಿ ಸ್ಥಾಪಿಸಿ, ಶ್ರೀ. ಬಿ. ಗೋಪಾಲಕೃಷ್ಣರಾಯರನ್ನು ಅಧ್ಯಕ್ಷರಾಗಿಯೂ, ಶ್ರೀ. ಜಿ ಜನಾರ್ಧನ ಕಾಮತರನ್ನು ಕಾರ್ಯದರ್ಶಿಗಳಾಗಿಯೂ ಮತ್ತು 3ಜನ ಸದಸ್ಯರನ್ನು ಕಮಿಟಿಮೆಂಬರರಾಗಿಯೂ ಆರಿಸಿಕೊಂಡಿರುತ್ತಾರೆ. ವಾರಕ್ಕೆ ಎರಡೆರಡು ದಿನಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಹಿಂದೀ ಕ್ಲಾಸ್‌ಗಳನ್ನು ಪ್ರಕೃತ ನಡೆಸಬೇಕೆಂದು ನಿಶ್ಚಯಿಸಲಾಗಿದೆ. ಪ್ರಕೃತ 20ಮಂದಿ ವಿದ್ಯಾರ್ಥಿಗಳು ಕ್ಲಾಸಿಗೆ ಸೇರಿರುದು ಸ್ತುತ್ಯವಾಗಿದೆ.

ಸುಳ್ಯ—ಲೋಕಲ್‌ಬೋರ್ಡ್ ಎಲಿಮೆಂಟರಿ ಶಾಲೆಯ ಮಕ್ಕಳ ಹೆತ್ತವರ ಕೂಟ ಸಮಾರಂಭವು ತಾ. 31-7-46ರಲ್ಲು ಶ್ರೀ. ಕಲ್ಲೆಂಬಿ ಮಲ್ಲಪ್ಪ ಗೌಡರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಠರಾವುಗಳು ಮಂಜೂರು ಮಾಡಲ್ಪಟ್ಟವು. (1) ಊರಮಹನೀಯರುಗಳ ಸಹಾಯದಿಂದ ಸಣ್ಣ ಮಕ್ಕಳಿಗೆ ಮಳೆಗಾಲ ಸಮಯ ಸಣ್ಣ ಸಣ್ಣ ಹೊಳೆ ತೋಡುಗಳನ್ನು ದಾಟಲು ಅನುಕೂಲವಾಗುವಂತೆ ಕೇಳಿಕೊಳ್ಳುವದು- (2) ಮಕ್ಕಳ ಸಂಖ್ಯೆ ಹೆಚ್ಚಿರುವುದರಿಂದ ವಿದ್ಯಾಧಿಕಾರಿಗಳೊಡನೆ ಇನ್ನೊಬ್ಬ ಉಪಾಧ್ಯಾಯರನ್ನು ಒದಗಿಸಿಕೊಡುವಂತೆ ಕೇಳಿಕೊಳ್ಳುವದು- (3) ಅಷ್ಟರ ತನಕ ಊರಿನವರ ಧನಸಹಾಯದಿಂದಲೇ ಖಾಸಗಿಯಾಗಿ ಒಬ್ಬ ಉಪಾಧ್ಯಾಯರನ್ನು ನೇಮಿಸಿ ಮಕ್ಕಳ ಅಕ್ಷರಾಭ್ಯಾಸಕ್ಕೆ ಸಹಾಯವಾಗುವಂತೆ ಮಾಡುವದು.

ಕಲ್ಯಾಣಪುರ ಡಾ। ರಾಜಗೋಪಾಲಾಚಾರಿಯವರ ನಿಧನ

ಕಲ್ಯಾಣಪುರದಲ್ಲಿ ದೀರ್ಘಕಾಲದಿಂದ ಡಾಕ್ಟರೀ ವೃತ್ತಿಯಲ್ಲಿದ್ದು ರಾಷ್ಟ್ರೀಯ, ಸಾಮಾಜಿಕ, ಹಾಗೂ ಬಡಜನೋಪಕಾರೀ ಕಾರ್ಯಗಳಿಂದ ಸರ್ವಜನಪ್ರೀತರಾಗಿದ್ದ ಶ್ರೀ ಯು. ರಾಜಗೋಪಾಲಾಚಾರಿಯವರು ತಾ. 29ನೇ ಮುಂಜಾನೆ ದಿವಂಗತರಾದುದು ಶೋಚನೀಯವಿದೆ. ಶವಯಾತ್ರೆಗೆ ಊರವರೆಲ್ಲಾ ನೆರೆದಿದ್ದರು. ಆ ಭಾಗದ ಉಪಕಾರಿ ಹಾಗೂ ಸಮರ್ಥ ಪ್ರಮುಖರಾಗಿದ್ದ ಡಾಕ್ಟರರ ವಿಯೋಗಕ್ಕಾಗಿ ಹಲವರು ಕಣ್ಣೀರು ಸುರಿಸಿದ್ದರು. ಊರಲ್ಲಿ ಆದಿನ ಹರತಾಳವಿತ್ತು.

ಕರ್ನಾಟಕ ಸೇವಾಸಂಘ, ಮದ್ರಾಸು—ಈ ಸಂಘದ ವಾರ್ಷಿಕಾಧಿವೇಶನವು ಸಪ್ಟಂಬರ್ ತಿಂಗಳ ತಾ.೧ಕ್ಕೆ ನಡೆಸುವುದೆಂದು ನಿಶ್ಚಯವಾಗಿದೆ. ರೆವೆನ್ಯೂ ಮಂತ್ರಿಗಳಾದ ಮಾನ್ಯ ಶ್ರೀ. ಕೆ. ಆರ್. ಕಾರಂತರು ಅಧ್ಯಕ್ಷತೆ ವಹಿಸಲಿರುವರು, ಕನ್ನಡದಲ್ಲಿ ಭಾಷಣ ಸ್ಪರ್ಧೆಯೊಂದನ್ನು ಮದ್ರಾಸು ನಗರದ ಎಲ್ಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಮೂರು ತರಗತಿಯ ಬಹುಮಾನಗಳಿವೆ. ಸಂಘದ ಪುಸ್ತಕಭಂಡಾರಕ್ಕೆ ಸದ್ಯದಲ್ಲೇ ಎರಡು ಸಾವಿರಗಳಷ್ಟಾದರೂ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂದು ಕಾರ್ಯಕಾರಿ ಸಮಿತಿಯ ಹಾರೈಕೆ. ಇದರಿಂದ ಮಹಾಜನರು ಪುಸ್ತಕಗಳನ್ನು ಇಲ್ಲವೇ ನಗದಿ ಹಣ ಎಂದು ಉದಾರ ಮನಸ್ಸಿನಿಂದ ಸಹಾಯವಿತ್ತು ಸಂಘದ ಪುರೋಭಿವೃದ್ಧಿ ಮತ್ತು ಮದ್ರಾಸಿನಲ್ಲಿ ಕನ್ನಡದ ಪ್ರಚಾರಕ್ಕೆ ನೆರವಾಗಬೇಕಾಗಿ ಈ ಮೂಲಕ ಪ್ರಾರ್ಥನೆ.

ಸಹಾಯ ಕಳುಹಿಸುವವರು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು— ಕಾರ್ಯದರ್ಶಿ, ಕರ್ನಾಟಕ ಸೇವಾಸಂಘ, ಮದ್ರಾಸು, ನಂ. 7 ಗಂಗಯಮ್ಮಲ್ ಸ್ಟ್ರೀಟ್ ಮದ್ರಾಸು 14.

ನವಯುಗದ ಚಂದಾದಾರರಲ್ಲಿ ವಿನಂತಿ—ಇದೇ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 25ನೇ ಸಂಪುಟವು ಸಮಾಪ್ತಿಯಾಗಿ ಸಪ್ಟಂಬರ ತಿಂಗಳ ಆರಂಭದಿಂದ ಹೊಸ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಎಲ್ಲಾ ಚಂದಾದಾರರು ತಮ್ಮ ಚಂದಾ ಹಣವನ್ನು (ಚಾಲ್ತಿ ಮತ್ತು ಬಾಕಿಯಿದ್ದರೆ ಅದನ್ನು) ಪೋಸ್ಟಲ್ ಆರ್ಡರ್ ಮೂಲಕ ದಯಮಾಡಿ ಆದಷ್ಟು ಬೇಗನೆ ಕಳಿಸಿಕೊಡುವಂತೆ ವಿನಂತಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಶಾಖೆಗಳಿದ್ದಲ್ಲಿ ಯಾವ ಖರ್ಚು ಇಲ್ಲದೆ ನವಯುಗದ ಲೆಕ್ಕಕ್ಕೆ ಚಂದಾ ಹಣವನ್ನು ಕೊಟ್ಟು ರಶೀದಿ ಪಡೆಯಬಹುದು

ಮೆನೇಜರ್.

ವಿಜಾಪುರ ಜಿಲ್ಲಾ ಓದುಮನೆಗಳ ೧ನೇ ಸಮ್ಮೇಲನ, ನಿಂಬಾಳ—ಈ ಮೊದಲೇ ನಿಶ್ಚಯಿಸಿದಂತೆ ವಿ. ಜಿ. ವಾ. (ಓ) ೧ನೇ ಸಮ್ಮೇಲನದ ಅಂಗವಾಗಿ ಕನ್ನಡ ವೃತ್ತ ಪತ್ರಿಕಾ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಕನ್ನಡ ಪತ್ರಿಕಾಕರ್ತರು ದಯವಿಟ್ಟು ಸಹಕರಿಸಿ ತಮ್ಮ ಪತ್ರಿಕೆಗಳ (ಎರಡು) ಪ್ರತಿಗಳನ್ನು ದಿನಾಂಕ ೧-೮-೪೬ ರಿಂದಾ ೧೨-೮-೪೬ ರ ವಳಗಾಗಿ ಕೃ ರಾ. ಗಂಡಮಾಲಿ ಗೌ. ಕಾರ್ಯದರ್ಶಿ ವಿ. ಜಿ. ವಾ. ೧ನೇ ಸಮ್ಮೇಲನ, ನಿಂಬಾಳ. ಪೋಷ್ಟು:—ನಿಂಬಾಳ, ಜಿಲ್ಲಾ ವಿಜಾಪುರ. ಇವರಿಗೆ ಕಳುಹಬೇಕಾಗಿ ವಿನಂತಿ,

NOTICE

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. S. No. 184/1946.
R. I. A. 823/1946.

ಕುಪ್ಪಿ ಅಮ್ಮ-ತಿಮ್ಮಪ್ಪಯ್ಯನವರ ವಿಧವೆ. ಉಡ್ಪಿ ತಾಲ್ಲೂಕು ಮಟ್ಟಿನ ಗ್ರಾಮದಲ್ಲಿ ಯಿರುವವಳು —ವಾದಿಳು.

ಮತ್ತು

ಗೋಪಾಲಕೃಷ್ಣಯ್ಯ ಕೂಡಾ ಪ್ರತಿವಾದಿರು.

ಮುಂತಾದವರೊಳಗೆ

(2)ನೇ ಪ್ರತಿವಾದಿ [illegible] (3) [illegible] (4 [illegible] (5) [illegible] Subramanya Swami Koil Thambanoor, Puthan chamthai Trivandrum Travarcore Stateನಲ್ಲಿ [illegible]

(1)ನೇ ಪ್ರತಿವಾದಿ [illegible]

ಸದ್ರಿ 2 3 4 5 & 11ನೇ ಪ್ರತಿವಾದಿಗೆ [illegible] ವಾದಿನಿ [illegible] ದಾಖಲು ಮಾಡಿದ ಮೇಲ್ಕಂಡ [illegible] 31-8-1946ಕ್ಕೆ ತಿದ್ದ [illegible]. ಆದುದರಿಂದ ಸದ್ರಿ [illegible] ಆಕ್ಷೇಪ ಹೇಳುವಂತಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ 11 ಗಂಟೆಗೆ ತಪ್ಪದೆ ಹಾಜರಾಗಿ [illegible] ತಪ್ಪಿದಲ್ಲಿ ಸದ್ರಿ [illegible] ತೀರ್ಮಾನಿಸಲಾಗುವುದು [illegible] ಮೂಲಕ ತಿಳಿಸಲಾಗಿದೆ

2-8 1946 }
ಉಡುಪಿ } **K J Ballal,**
Vakil for Plaintiff

ನೋಟೀಸು

ಪುತ್ತೂರು ಡಿ. ಮು ಕೋರ್ಟಿನಲ್ಲಿ.

O P. 40/1946.

1. ಜಿ. ನಾರಾಯಣ ಮೂಡಂಬಡಿತ್ತಾಯ. ಕೃಷ್ಣ ಮೂಡಂಬಡಿತ್ತಾಯರ ಮಗ, 2. ಬಾಲಕೃಷ್ಣ, 3. ಶಂಕರನಾರಾಯಣ, 4. ರಾಮಕೃಷ್ಣ, 5. ಶ್ರೀನಿವಾಸ, 6. ಗೋಪಾಲಕೃಷ್ಣ. Iನೇ ಅರ್ಜಿದಾರನ ಮ್ಯಾನರ ಮಕ್ಕಳು, ರಕ್ಷಕ ತಂದೆನೇ ಅರ್ಜಿದಾರ, ಪುತ್ತೂರು ಗ್ರಾಮಸ್ಥರು —ಅರ್ಜಿದಾರರು,

I. ಶಂಕರನಾರಾಯಣ ನಲ್ಲೂರಾಯ ರಾಮ ನಲ್ಲೂರಾಯರ ಮಗ, ಕಾಸ್ರಗೋಡು ತಾಲ್ಲೂಕು ಪೈವಳಿಕೆ ಗ್ರಾಮ. 2. ರುಕ್ಮಿಣಿ, ಶಂಕರನಾರಾಯಣನಲ್ಲೂರಾಯರ ಹೆಂಡ್ತಿ, ಪುತ್ತೂರುತಾಲ್ಲೂಕು ಬಜತ್ತೂರುಗ್ರಾಮ.-ಎದ್ರಿರು.

ಸದ್ರಿ ಎದ್ರಿರೀಗೆ ಮತ್ತು ಇತರ ಸಮಸ್ತರಿಗೆ ಸಹಾ ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

Iನೇ ಅರ್ಜಿದಾರ್ನ ಹೆಂಡ್ತಿ ವ 2ರಿಂದ 6ನೇ ವರೇಗಿನ ಅರ್ಜಿದಾರ್ರತಾಯಿ ಮತ್ತು ಎದ್ರಿರ ಮಗಳಾದ ಇತ್ತಲಾಗೆ ಮೃತಪಟ್ಟ ನೇತ್ರಾವತಿಅಮ್ಮನು The New Guardian of India Life Insurance Co., Ltdನಲ್ಲಿ ಪಡದ ನಂಬ್ರ 11284ನೇ Endowment Policyಬಾಬ್ತು ಬರತಕ್ಕ ರೂ. 400ನ್ನು Iನೇ ಅರ್ಜಿದಾರ ಪಡಕೊಳ್ಳುವಂತೆ Seuccession ertificate ಕೊಡ್ಬೇಕೆಂತ ವಗೈರೆ ಅರ್ಜಿದಾರರು ಮಾಡಿದ ಮೇಲ್ಕಂಡ ಅರ್ಜಿ ತಾ. 27-8 46ಕ್ಕೆ ತನ್ಕಿಗೆ ಇಟ್ಟಿರುತ್ತದೆಂತಲೂ, ಆ ಕುರಿತು ಆಕ್ಷೇಪಣೆಗಳೇನಾದ್ರು ಇದ್ದರೆ ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದೆಂತಲೂ, ತಪ್ಪಿದ್ರೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತೆಂತ ಸಹಾ ಈ ಮೂಲಕ ತಿಳಿಯಪಡ್ಸಿಯದೆ.

M. Sadashiva Rao.
Vakil for Petitioners
Puttur 10 7-46.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ದಯಾನಿಸಬಹುದು. () ಉಡುಪಿ ಏಜಂಟರು: —ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸಪ್ಲೈರ್ಸ್, ಕೆಮಿಸ್ಟ್ 183, ಸುದಾರಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸಪ್ಲೈರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

CHAMPAE'S

Snow & Castrex

(Sole Distributers for(India.)

Prop: K. G. NAYAK,
Santhekatte, UDIPI, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ,

(೨ನೇ ಪುಟದಿಂದ ಮುಂದುವರಿದುದು)

ಮಗೆ ಪಾಕಿಸ್ಥಾನ ಸಿಕ್ಕಿತು' ಎಂದು ವಿಜಯ ಮೆರವಣಿಗೆಹೊರಡಬಲ್ಲರೆ? ಅಂತಿದ್ದರೆ 'ನಮಗೆ ಅಫ್ಘಾನಿ ಸ್ಥಾನ ಸಿಕ್ಕಿದೆ' 'ನಮಗೆ ಇರಾಕ್ ಇರಾನ್ ದೊರೆತಿದೆ' ಎಂದು ಈಗಲೂ ಜಯಘೋಷವೆಬ್ಬಿಸುವಕ್ಕೇನಡ್ಡಿ? ದಕ್ಷಿಣ ಭಾರತದ ಮುಸಲ್ಮಾನರ ಪಾಲಿಗೆ ಪಾಕಿಸ್ತಾನವೂ ಅಫ್ಘಾನಿ ಸ್ಥಾನದಂತೆಯೇ. ವ್ಯತ್ಯಾಸವಿದ್ದರೆ ಏನೊಂದು ಹತ್ತು, ಮೈಲು ಅದಕ್ಕಿಂತ ಇದು ಸಮೀಪ, ಅಷ್ಟೆ!

ಹಿಂದುಸ್ಥಾನದಲ್ಲೇ 'ಪಾಕಿಸ್ತಾನಿ'ಗಳಿರಬಲ್ಲರೆ?

ಮೇಲಿನದಕ್ಕೆ ಪ್ರತಿವಾದವೊಂದಿದೆ. ಒಂದು ಮುಸ್ಲಿಂ ರಾಷ್ಟ್ರವಾಗಿ ಪಾಕಿಸ್ತಾನ ನಿರ್ಮಾಣಗೊಂಡಲ್ಲಿ ಹಿಂದುಸ್ಥಾನದ ಮುಸಲ್ಮಾನರೂ ಪಾಕಿಸ್ತಾನದ ಪ್ರಜೆಗಳೆಂದೇ ಗಣಿಸಲ್ಪಡುವರು; ಅಂತೆಯೇ ಪಾಕಿಸ್ತಾನದಲ್ಲುಳಿಯುವ ಹಿಂದುಗಳು ಹಿಂದುಸ್ಥಾನದ ಪ್ರಜೆಗಳಾಗುವರು. ಪಾಕಿಸ್ತಾನದಲ್ಲಿರುವ ಹಿಂದುಗಳ ರಕ್ಷಣೆಯ ಹೊಣೆ ಹಿಂದುಸ್ಥಾನ ಸರಕಾರದ ಮೇಲೂ ಹಿಂದುಸ್ಥಾನದಲ್ಲಿರುವ ಮುಸಲ್ಮಾನರ ಭದ್ರತೆಯ ಜವಾಬ್ದಾರಿ ಪಾಕಿಸ್ತಾನ್ ಸರಕಾರದ ಮೇಲೂ ಬೀಳುವದು. ಆದ್ದರಿಂದ ಇಲ್ಲಿ ನಮಗೆ ಹಿಂದುಸ್ಥಾನ್ ಸರಕಾರ ಅನ್ಯಾಯಮಾಡಿದರೆ ಅಲ್ಲಿ ನಮ್ಮ ಪಾಕಿಸ್ತಾನ್ ಸರಕಾರ ಅಲ್ಲಿರುವ ಹಿಂದುಗಳಮೇಲೆ ಪ್ರತೀಕಾರ ಮಾಡುತ್ತದು; ಅಥವಾ ಸಂಗತಿ ದೊಡ್ಡದಾದರೆ ಹಿಂದುಸ್ಥಾನ್ ಸರಕಾರದ ಮೇಲೆ ಯುದ್ಧಕ್ಕೇಳುವದು--ಎಂದು ದಕ್ಷಿಣಭಾರತದ ಮುಸಲ್ಮಾನರನ್ನಬಹುದು. ಯಾಕಾಗಬಾರದು? ದಕ್ಷಿಣಾಫ್ರಿಕದಲ್ಲೀಗ ಹಿಂದೀಯರಿರುವಂತೆ ಹಿಂದುಸ್ಥಾನದಲ್ಲೂ ಆಗ ಮುಸಲ್ಮಾನರಿರಬಹುದ, ಅಂತೆಯೇ ಇಂದಿನ ದಕ್ಷಿಣಾಫ್ರಿಕದ ಅನ್ಯಾಯವನ್ನೇ ನಾಳೆಯ ಹಿಂದೂಸ್ಥಾನವೂ ಮಾಡಿದರೆ, ಈಗ ಹಿಂದೀ ಸರಕಾರ ದ.ಆಫ್ರಿಕ ಸರಕಾರದೊಡನೆ ಹೂಡಿರುವಂಥಾ ಅಸಹಕಾರವನ್ನೇ ಆಗ ಪಾಕಿಸ್ತಾನ್ ಸರಕಾರವೂ ಹೂಡುವದು. ಕರಾಚಿಯ ಹೋಟೆಲುಗಳು ದ. ಆಫ್ರಿಕದ ಬಿಳಿಯರಿಗೆ ಬಹಿಷ್ಕಾರ ಹಾಕಿದಂತೆ ಪಾಕಿಸ್ತಾನ್ ಮುಸಲ್ಮಾನರು ಅಲ್ಲಿರುವ ಹಿಂದುಗಳಿಗೆ ಬುದ್ಧಿ ಕಲಿಸುವರು. ವಾದ ಸರಿ; ಹಾದಿಯೇನೋ ಇದೆ. ಆದರೆ ಈ ವಾದವನ್ನೊಮ್ಮೆ ತಕ್ಕಡಿಯಲ್ಲಿಟ್ಟು ತೂಗಲಿಕ್ಕಿದೆ.

ಒಂದು ತೂಕ.

ಮೇಲಿನ ವಾದದಂತೆ ಭಾವೀ ಹಿಂದುಸ್ಥಾನದಲ್ಲಿ ಅಲ್ಪ ಸಂಖ್ಯಾಕರಾಗಿ ಉಳಿಯುವ ಮುಸಲ್ಮಾನರು ದೂರದ ಪಾಕಿಸ್ತಾನದ ಆಶ್ರಯದಿಂದ ಇಲ್ಲಿ ಬದುಕಿರಲು (ಈಗಿನಂತೆಯೇ ಹಿಂದುಗಳು ಪರಕೀಯರು ಮತ್ತು ಅನ್ಯಾಯಗಾರರು ಎಂಬ ಭಾವನೆ ಕಟ್ಟಿಕೊಂಡು) ಸಾಧ್ಯವೆ? (ಸಾಧ್ಯವಿದ್ದರೂ ಈಗ ಅಲ್ಪಸಂಖ್ಯಾಕರೆಂಬ ಕಾರಣದಿಂದ ಅವರಿಗೆ ಇಲ್ಲಿ ದೊರೆತಿರುವ ವಿಶೇಷ ರಿಯಾಯಿತಿಗಳಿಗಿಂತ ಅದು ಉತ್ತಮವೇ ಎಂಬ ಪ್ರಶ್ನೆ ಪ್ರತ್ಯೇಕವಿದೆ) ಆ ರೀತಿ ಪರಸ್ಪರಪ್ರತೀಕಾರ ಅಥವಾ ಪ್ರತಿಧ್ವನಿಯನ್ನಾಧರಿಸಿಯೇ ಶಾಂತಿಯಿಂದಿರಬೇಕಾದರೆ ಪಾಕಿಸ್ತಾನ್ ಮತ್ತು ಹಿಂದೂಸ್ಥಾನ್ ಸಮಬಲವಾಗಿರಬೇಕು. ಇಲ್ಲಿ ಮುಸಲ್ಮಾನರಿಗೆ ಮಾಡಿದಂತೆಯೇ ಅಲ್ಲಿ ಹಿಂದುಗಳಿಗೆ ಮಾಡುವ ಶಕ್ತಿ ಮತ್ತು ಅನುಕೂಲತೆಯಿರಬೇಕು. ಅದು ಉಂಟೋ ನೋಡೋಣ. ಮಿ. ಜಿನ್ನರ ಪಾಲು ಪಟ್ಟಿಗನುಸಾರವಾಗಿಯೇ ಅಖಿಲ ರಾಷ್ಟ್ರದ ⅘ನೇ ಭಾಗವು ಹಿಂದುಸ್ಥಾನ- ⅕ನೇ ಪಾಲು ಪಾಕಿಸ್ತಾನ. ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಬಿಹಾರ್, ಮಧ್ಯ ಪ್ರಾಂತ್ಯ, ಒರಿಸ್ಸಾ, ಇವಿಷ್ಟು ಹಿಂದುಸ್ಥಾನ. ಇದಕ್ಕೆ ಪ್ರತಿಯಾಗಿ ಇರುವ 'ಸ್ವತಂತ್ರ ಸಾರ್ವಭೌಮಾಧಿಕಾರ' ಪಾಕಿಸ್ತಾನವು ಇಡೀ ಒಂದು ರಾಷ್ಟ್ರವಾಗುವಂತಿಲ್ಲ; ಸ್ವತಃ ಅದರಲ್ಲೇ ಎರಡು ರಾಷ್ಟ್ರಗಳಾಗುತ್ತವೆ. ವಾಯವ್ಯ ಮೂಲೆಯ ಪಂಜಾಬ್, ಸಿಂಧ್, ಗಡಿನಾಡು, ಬಲೂಚಿಸ್ಥಾನವೊಂದು ತುಂಡಾಗಿದ್ದರೆ, ನಡುವೆ ವಿಶಾಲ ಹಿಂದುಸ್ಥಾನವಿದ್ದು, ಈಶಾನ್ಯ ಮೂಲೆಯ ಬಂಗಾಳ ಮತ್ತು ಆಸ್ಸಾಮು ಮತ್ತೊಂದು ಪ್ರತ್ಯೇಕ ತುಂಡು. ಹೆಸರಿನ ಅಭಾವದಿಂದ ಎರಡಕ್ಕೂ 'ಪಾಕಿಸ್ತಾನ್' ಎನ್ನಬೇಕಲ್ಲದೆ, ಇಲ್ಲವಾದರೆ ಒಂದನೆಯದನ್ನು 'ಪಾಕಿಸ್ತಾನ'ವೆಂದಂತೆಯೇ ಎರಡನೆಯದನ್ನು 'ಬಾಕಿಸ್ತಾನ'ವೆಂದೂ ಹೇಳಬಹುದು! ಅದಿರಬೇಡ-ಎರಡಕ್ಕೂ ನಡುವೆ ಒಂದು ರಸ್ತೆ ಮಾಡುವ ಮೂಲಕ, ಅಥವಾ ಯಾವುದಾದರೊಂದು ಅದ್ಭುತ ಸಾಧಿಸಿ ಅದಕ್ಕಿಂತಲೂ ಭದ್ರವಾದ ರೀತಿಯಿಂದ, ಆ ಎರಡು ಭಾಗಗಳನ್ನೂ ಒಂದೇ ಪಾಕಿಸ್ತಾನವಾಗಿ ಜಿನ್ನರು ರೂಪಿಸಿದರೆಂದೇ ಭಾವಿಸೋಣ. ಈ ಪಾಕಿಸ್ತಾನದಲ್ಲೇ ಹೆಚ್ಚೆಂದರೆ 6 ಕೋಟಿ ಮುಸಲ್ಮಾನರು, ಕಡಿಮೆಯೆಂದರೆ 4½ ಕೋಟಿ ಹಿಂದುಗಳು ಉಳಿಯುತ್ತಾರೆ. ಆದರೆ ಈ ಪಾಕಿಸ್ತಾನ್ ಕಳೆದುಳಿಯುವ ಹಿಂದುಸ್ಥಾನದಲ್ಲಿ ಕಡಿಮೆಯೆಂದರೆ 17 ಕೋಟಿ ಹಿಂದುಗಳು, ಹೆಚ್ಚೆಂದರೆ 2 ಕೋಟಿ ಮುಸಲ್ಮಾನರುಳಿಯುತ್ತಾರೆ. ಮೇಲಿನ ಲೆಕ್ಕದಲ್ಲಿ ಆಶ್ರಿತ ರಾಜ್ಯಗಳನ್ನು ಸೇರಿಸಿಲ್ಲ. ಇಲ್ಲಿ 17 ಕೋಟಿ ಜನರು 2 ಕೋಟಿ ಜನರೊಂದಿಗೆ ವರ್ತಿಸಿದಂತೆ— ಅಲ್ಲಿ 6 ಕೋಟಿ ಜನರು 4½ ಕೋಟಿ ಜನರಿದಿರು ವರ್ತಿಸಲು ಸಾಧ್ಯವೆ? ಇದೂ ಸಾಧ್ಯವೆಂದಾದರೆ 'ಅಲ್ಪ ಸಂಖ್ಯೆ' 'ಬಹು ಸಂಖ್ಯೆ' 'ರಕ್ಷಣೆ' ಇತ್ಯಾದಿ ಶಬ್ದಗಳು ಇಂದಿನ ರಾಜಕೀಯ ಶಬ್ದ ಕೋಶದಲ್ಲಿರಬೇಕೆಂದೇ ಇಲ್ಲ. ಹಿಂದುಸ್ಥಾನದಲ್ಲುಳಿಯುವ ಮುಸಲ್ಮಾನರು ನಿಜಕ್ಕೂ ಅಲ್ಪ ಸಂಖ್ಯಾಕರು; ಪಾಕಿಸ್ತಾನದಲ್ಲುಳಿಯುವ ಹಿಂದುಗಳು ಹೆಚ್ಚುಕಡಿಮೆ ಸಮಬಲರು: ಮಾತ್ರವಲ್ಲ-"40 ಕೋಟಿ ಪೈಕಿ 10 ಕೋಟಿ ಜನ ನಾವಿರುವಾಗ ನಾವು ಪ್ರತ್ಯೇಕ ರಾಷ್ಟ್ರ ಪಡೆಯದೆ ನೆಮ್ಮದಿಯಿಂದಿರಬಲ್ಲೆವೆ?" ಎಂಬ ಮಿ. ಜಿನ್ನರ ಇಂದಿನ ವಾದಕ್ಕನುಸಾರವಾಗಿ ನಾಳೆಯೇ ಆ ಪಾಕಿಸ್ತಾನದಲ್ಲಿ "10½ ಕೋಟಿಯ ಪೈಕಿ 4½ ಕೋಟಿಯೇ ನಾವಾಗಿರುವಾಗ ನಮಗೆ ಇಲ್ಲಿ ಒಂದು ಹಿಂದೂಸ್ಥಾನ ಬೇಡವೆ?" ಎಂದು ಹೋರಾಡುವದಕ್ಕೂ ಅವರು ಬದ್ಧರು! ಪಾಕಿಸ್ತಾನ್ ಸರಕಾರ ಅಲ್ಲಿ ಪ್ರಬಲ ಸಂಖ್ಯೆಯ ಹಿಂದುಗಳೊಡನೆ ಹೋರಾಡಬೇಕಾದೀತು; ಆದರೆ ಹಿಂದುಸ್ಥಾನ್ ಸರಕಾರ ಇಲ್ಲಿಯ ಅಲ್ಪ ಸಂಖ್ಯಾಕ ಮುಸಲ್ಮಾನರನ್ನು ಒತ್ತಿ ಹಿಡಿದರಾಯಿತು. ಮಿಕ್ಕ ವಿಷಯಗಳನ್ನೂ ವಿಮರ್ಶಿಸೋಣವೆಂದರೆ ಇಲ್ಲಿ ಅವಕಾಶವಿಲ್ಲ. ಆದ್ದರಿಂದ ಜಿನ್ನರು ಪಾಕಿಸ್ತಾನ ಪಡೆಯುವದೆಂದರೆ ಉತ್ತರಹಿಂದೂಸ್ಥಾನದ 6 ಕೋಟಿ ಮುಸಲ್ಮಾನರನ್ನು ಹಿಂದುಗಳ ಮೇಲ್ಗೈ ಮಾಡುವುದಕ್ಕಾಗಿ ದಕ್ಷಿಣ ಹಿಂದುಸ್ತಾನದ 2 ಕೋಟಿ ಮುಸಲ್ಮಾನರನ್ನು ಬಲಿಕೊಡುವದೆಂದೇ ಅರ್ಥ. ದಕ್ಷಿಣ ಭಾರತದ ಮುಸಲ್ಮಾನರಿಗೂ ಪಾಕಿಸ್ತಾನ ಬೇಕೆ?

NOTICE.

ಉಡುಪಿ ಡಿ. ಮು ಕೋರ್ಟಿನಲ್ಲಿ

O. P. No. 33/1946.

1. ಬಡ್ಡು ಪೂಜಾರ್ತಿ. 2 ಶೇಷಿ ಪೂಜಾರ್ತಿ, ಚೆನ್ನಪ್ಪ ಪೂಜಾರಿ ಮಕ್ಕಳು.

ಉಡ್ಪಿ ತಾಲೂಕು-ಮೂಡನಿಡಂಬೂರು ಗ್ರಾಮ—ಅರ್ಜಿದಾರರು.

ಮತ್ತು

ಕೊರಪುಳು ಪೂಜಾರ್ತಿ - ಕೈಪ್ಪ ಪೂಜಾರಿಯ ಮಗಳು--ಉಡ್ಪಿತಾಲೂಕು ಮೂಡನಿಡಂಬೂರು ಗ್ರಾಮ—ಎದ್ರಿಳು.

ಇವರೊಳಗೆ—

ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನಂದರೇ

ಮೇಲ್ಕಂಡ ಅರ್ಜಿದಾರರ ಮ-ಎದ್ರಿಳ-ಸಹೋದರ-ನಂತ್ರ ಮೃತಪಟ್ಟ ಯಾ ಕೊರಗಪ್ಪ ಪೂಜಾರಿಗೆ-ಅರ್ಜಿಯಲ್ಲಿ ವಿವರಿಸಿದ ಪ್ರಕಾರ-ಬರತಕ್ಕ ಸಾಲ ವಸೂಲು ಮಾಡಲಿಕ್ಕೂ ಮತ್ತು ಶ್ಯೇರ್ಸ್‌ಗಳು ವಗೈರೆ ಟ್ರಾನ್ಸ್‌ಫರ್-ಮಾಡಿಸಿಕೊಳ್ಳಲಿಕ್ಕೆ ವಗೈರೆ-ಎದ್ರಿಳ ಆಕ್ಷೇಪಣೆ ಉಜ್ರ ಶಿವಾ-ವಾರಿಸುದಾರರು ವ ಹಕ್ಕುದಾರರಾದ ತಮಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ-ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿ ತಾ 16-8-1946ಕ್ಕೆ ತನಿಖೆಗೆ ಇಡೋಣಾಗಿಯದೆ-ಆಕ್ಷೇಪ ಹೇಳತಕ್ಕವರು ಸದ್ರಿ ದಿವ್ಸ 10 ಗಂಟೆಗೆ-ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಪ್ರಕಟಿಸೋಣಾಗಿಯದೆ.

By order of the Court

U. B. Krishna Rao.
Advocate for Petitioners

ಉಡ್ಪಿ. 31-7-46

FOR LIFE ASSURANCE
CONSULT
The New Gaurdian of India Life Insrce Co, Ltd,
(Chairman - The Hon'ble Mr. M. CT. M Chidambaram Chettiar.)
A policy in this progressive Life Office is a good investment; its Agency is a valuable business connection.
LOCALOFFICES IN SOUTH KANARA. MANGALORE & KARKALA.
HEAD OFFICE "United India Life Bldg" Esplanade, Post Box No 142, MADRAS.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂಗ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿನಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.
ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮೇಲಕರ ವಿಳಾಸ.
ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ
Ayurveda Oushadalaya GADAG

ನಟನಟಿಯರು ಬೇಕು
ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಫೋಟೋದೊಡನೆ ಬರೆಯಿರಿ.
ತ್ರಿವೇಣಿ ಫಿಲ್ಮ್ಸ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

ಸಂಗ್ರಹಣೀಯ ಸಂಪುಟ
ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.
ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟ ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ
ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ
ಇದರ ಎರಡು ಸಂಪುಟಗಳು.
ಗೀತೆಯ ಮಹಾತ್ಮ್ಯವನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉಪನ್ಯಾಸ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಉತ್ಸವಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4 3 0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಕೆ. ರಾಜಗೋಪಾಲಾಚಾರ್ಯ,
ಕಡಿಂಬಳ್ಳಿ, ಉಡುಪಿ.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

Regd. No. M 3618. SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

NAVAYUGA
ನವಯುಗ

ವರ್ಷ ೨೫ ವಾರ ೫೦] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol 25 No. 50
Founder: SRI A. B. SHETTY. M. L. A

ಉಡುಪಿ • 15-8-1946 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

REGD.

ಅಮೃತಾಂಜನ.
ತಲೆನೋವು, ಶೀತ, ವೇದನೆ, ಉಳುಕು, ಶೀತ, ಕುತ್ತಿಗೆ, ಛುಳ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ಷಣಾಶ ಮಾಡಿಸೆ. ಮೇವಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co., Ltd.,
HEAD OFFICE **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad.

The Commercial Corporation of India, Ltd,
UDIPI. (S. India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)

Chief Agents for South India including ... Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at.—
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಲಪಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ
ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಜರ್ಸ್ ಆಗುವವರೂ ಬರೆಯಿರಿ—

ಪಿ. ಡಿ. ನಸೆಯು, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER
General Insurance Company, Ltd.

ಈ ಒಣ ಜಂಭವೇಕೆ?

ಲೇಖಕ:—'ಸ್ವಾಭಿಮಾನಿ'.

ಬೊಂಬಾಯಿಯ ಮುಸ್ಲಿಂ ಲೀಗ್ ಕೌನ್ಸಿಲಿನ ಭಾಷಣಗಳನ್ನು ಕೇಳಿದವರಿಗೆ ಶಬ್ದಗಳ 'ದುರ್ಸ ಬಾಣೋತ್ಸವ'ವನ್ನು ಕಂಡಂತಹ ವಿನೋದವೇಳಬೇಕಾದುದು ಸಹಜ. 'ಜಂಭದ ಜವಾಹಿರರ ಮುಕ್ಕಾಲಟಿಕೆಯ ಮಾತು' 'ನಾಲಿಗೆಯಿಲ್ಲದ ಮನುಷ್ಯರು' 'ಅವರು ಆದಿಯಿಂದಲೂ ಪಿಸ್ತೂಲು ಹಿಡಿದಿದ್ದರು; ಈಗ ನಾವೂ ಪಿಸ್ತೂಲುಧಾರಿಗಳಾಗುತ್ತೇವೆ' 'ಸುಳ್ಳುಗಾರರು, ವಂಚಕರು, ಧರ್ಮದ್ರೋಹೀ ಗೊಂಬೆಗಳು, ಕೃತಘ್ನರು'—ಇತ್ಯಾದಿ ಇತ್ಯಾದಿ ಸ್ವಭಾವ ಪ್ರದರ್ಶಕ ಶಬ್ದಗಳ ಪ್ರಯೋಗಗಳಿಗೆ ಅಲ್ಲೊಂದು ಅಂಕೆಯೇ ಇರಲಿಲ್ಲ. ಆದರೆ ಆ ಕಠೋರ ಶಬ್ದಗಳು ಲಂಡನಿನ ಪತ್ರಿಕೆಗಳಲ್ಲಿ ಪ್ರತಿಧ್ವನಿಸಿದಷ್ಟು ಕಾಂಗ್ರೆಸ್ ಪಾಳಯದ ಶಾಂತಿಯನ್ನು ಕೆಡಿಸಲಿಲ್ಲ; ಇದೊಂದು ಆನಂದದ ಸುದ್ದಿ. ಆದರೂ ಮಿ. ಜಿನ್ನರ ಈ ಕಠಿಣ ಶಬ್ದಗಳ ತರಗೆಲೆರಾಶಿಯೊಳಗಿಂದಲೂ, ಕೆಲವು 'ಕಾರಣ'ಗಳೆಂಬ ಕಾಯಿಗಳನ್ನು ಹೆಕ್ಕಿ ಸರ್ದಾರ್ ಪಟೇಲರು 'ತಿಲಕ ದಿನಾಚರಣೆ'ಯ ಬೊಂಬಾಯಿ ಭಾಷಣದಲ್ಲಿ ಸಮರ್ಪಕ ಉತ್ತರವಿತ್ತಿದ್ದರು. ಅದರಲ್ಲಿ 'ತನ್ನ ಕಾಲಡಿಗೇನೇ ಮಿಕ್ಕವರು ಬರತಕ್ಕದ್ದು' ಎಂಬ ಮಿ. ಜಿನ್ನರ ಜಂಭವನ್ನೂ ಬಿಚ್ಚಿತ್ತೋರಿಸಿದ್ದರು. ಇದು, ಮೂಕನಿದಿರು ಮೂಗು ತುರಿಸಿದಂತೆ ಮಿ. ಜಿನ್ನರನ್ನು ಕೆರಳಿಸಿದೆ. ಹೀಗಾಗಿ ವಾದ ವಿವಾದ, ತರ್ಕ ಕುತರ್ಕಗಳಿಂದ ಕದಡಿ ಹೋಗಿರುವ ಇಂದಿನ ವಾತಾವರಣದಲ್ಲಿ 'ಸ್ಥಾನ ರೇಂಕಾ'ದ ಒಂದು ಪ್ರಶ್ನೆಯೂ ತಲೆಯೆತ್ತಿದೆ. 'ಅವನನ್ನಾಶ್ರಯಿಸಿಕೊಂಡು ಹೋಗುವಂತಹ ಅಡಚಣೆ ನನಗೆ ಬಂದಿಲ್ಲ, ಬೇಕಾದರೆ ಅವನೇ ನಾನಿದ್ದಲ್ಲಿಗೇ ಬರಲಿ'ಎಂಬೊಂದು ಸ್ವಾಭಿಮಾನವೋ ಜಂಭವೋ ಮನೇ ಪಂಚಾಯತಿಕೆಯಿಂದ ಹಿಡಿದು ರಾಷ್ಟ್ರೀಯ ಪಂಚಾಯತಿಕೆಯವರೆಗೂ ಇದೆ! ಒಬ್ಬನು ಅದಕ್ಕೇನೇ ಕಟ್ಟು ಬಿದ್ದರೆ, ಆ ವರೆಗದರ ಗಂಧ ಗಾಳಿ ಸೋಂಕದವನೂ, ಈ ಘನಸ್ಥಿಕೆಗೂ ಬೆಲೆಯಿದೆಯೆಂದರಿಯುತ್ತಾನೆ. ವಲ್ಲಭ-ಯಿ-ಜಿನ್ನಾ ಪ್ರಸ್ತಾವದಲ್ಲಿ ಇದಕ್ಕೊಂದು ನಿದರ್ಶನ ದೊರೆತಿದೆ:—

ಸರ್ದಾರ್ ವಲ್ಲಭಭಾಯಿ

"ಮಿ. ಜಿನ್ನಾರಿಗೆ ತನ್ನ ತಿಳುವಳಿಕೆ ತನಗುಂಟೋ?-ಹಾಗಾದರವರು ಬೆದರಿಕೆ ಬೀರುವ ಮತ್ತು ಅವಹೇಳನ ಮಾಡುವ ದುರಭ್ಯಾಸವನ್ನು ಬದಿಗಿಟ್ಟು ಕಾಂಗ್ರೆಸಿನೊಡನೆ ಸ್ನೇಹಪೂರ್ವಕ ಸಂಧಾನಕ್ಕೆ ಬರಲಿ. ನನ್ನ ಕೊಡುಗೆಯನ್ನು ಮುಂದೊಡ್ಡಿದ್ದೇನೆ. ಇನ್ನು ಕಾಂಗ್ರೆಸ್ ಅಥವಾ ಬ್ರಿಟಿಷರೇ ಮುಂದಾಗಬೇಕು' ಎಂದೀಗ ಜಿನ್ನರು ಸಾರುತಿದ್ದಾರೆ. ಇದು ಅಪಮಾನದ ಮೇಲೆ ಆಘಾತವನ್ನೂ ಮಾಡಿದಂತೆ. ಅವರು ಕಾಂಗ್ರೆಸ್ ಮತ್ತು ಬ್ರಿಟಿಷ್ ಮಂತ್ರಿಸಮಿತಿಯ ಸರಾಸರಿ ನಿಂದೆಮಾಡಿದ್ದಾರೆ. ಇದನ್ನೇ ತಾನು ಮುಂದೊಡ್ಡಿದ ಕೊಡುಗೆಯೆಂದು ಅವರನ್ನುವರೆ? ತಮ್ಮನ್ನು ಬೈಯ್ಯುತ್ತಾರೆಂಬ ಭಯದಿಂದಲೇ ಕಾಂಗ್ರೆಸ್ ಅಥವಾ ಬ್ರಿಟಿಷರು ಮುಂದಿನ ಹೆಜ್ಜೆಯಿಡುತ್ತಾರೆಂದು ಜಿನ್ನರ ನಿರೀಕ್ಷೆಯೋ? ಕಾಂಗ್ರೆಸನ್ನು ಬಿಟ್ಟಂದಿನಿಂದ ತನ್ನ ಜೀವಮಾನದಲ್ಲಿದು ವರೆಗೂ ಮಿ. ಜಿನ್ನರು ಕಾಂಗ್ರೆಸಿನ ಬಳಿಗೆ ಒಂದುದೇ ಇಲ್ಲ. ಆದರೆ ಕಾಂಗ್ರೆಸು ಮಾತ್ರ ಆಗಿಂದಾಗ್ಯೆ ಮಿ. ಜಿನ್ನರ ಬಳಿಗೋಡಿದ್ದಿತು; ಮತ್ತವರ ಅವ್ಯವಹಾರ್ಯ ಬೇಡಿಕೆಗಳನ್ನು ಹಲವು ಬಾರಿ ಪೂರೈಸಿಯೂ ಕೊಟ್ಟದ್ದಿತು. ಆದರೆ ಬೆದರಿಕೆಗಳಿಗೆ ಹಿಂದೆಯೂ ಕಾಂಗ್ರೆಸ್ ಬಗ್ಗಿದ್ದಿಲ್ಲ; ಇನ್ನು ಮುಂದೆಯೂ ಅದು ಬಗ್ಗುವಂತಿಲ್ಲ".

ಮಿ. ಜಿನ್ನರ ಉತ್ತರ

"ನಾನು ಜಾತೀಯ ವಾದಿಯಾಗುವ ಬದಲಿಗೆ ರಾಷ್ಟ್ರೀಯ ವಾದಿಯಾಗಬೇಕೆಂದು ವಲ್ಲಭಾಯಿ ಉಪದೇಶ ಕೊಡುತ್ತಾರೆ. ನಾನು ಪಾಕಿಸ್ತಾನ್ ಬೇಡಿಕೆಗೆ ಸಮಾಧಿ ಕೊಟ್ಟು, ಮುಸ್ಲಿಂ ರಾಷ್ಟ್ರದ ಕೈಬಿಟ್ಟು, ವಲ್ಲಭಾಯಿಗಳೆದಿರು ಕಾವೀ ಶಾಟಿ ಮತ್ತು ಭಸ್ಮ ಧರಿಸಿಕೊಂಡು ಹಾಜರಾಗತಕ್ಕದ್ದೆಂದೇ ಇದರ ಅರ್ಥ. ಕಾಂಗ್ರೆಸು ನನ್ನ ಮನೇ ಬಾಗಿಲಿಗೆ ನೂರಾರು ಸಲ ಬಂದಿದೆ ಎಂದೂ-ಇದು ನಿಜವಲ್ಲ-ನಾನು ಮಾತ್ರ ಅವರಿದ್ದಲ್ಲಿಗೆ ಹೋಗುವಷ್ಟು ವಿನಯಿಯಾಗಿಲ್ಲವೆಂದೂ ಪಟೇಲರ ಆರೋಪ. ಸತ್ಯ ಸ್ಥಿತಿಯೆಂದರೆ, ನನ್ನನ್ನು ಕಾಂಗ್ರೆಸ್ ಬೇಡಿಕೆಗೊಪ್ಪುವಂತೆ ಪುಸಲಾಯಿಸುವದಕ್ಕಾಗಿ ಕಳೆದೆಂಟು ವರುಷಗಳಲ್ಲಿ ಮೂರು ಬಾರಿ ಗಾಂಧಿಯವರು ನಾನಿದ್ದಲ್ಲಿಗೆ ಬಂದಿದ್ದರು. ಆದರೆ ಅದಕ್ಕೆ ನಾನೊಪ್ಪದಾದೆ. ಅದೇ ರೀತಿ ಪಟೇಲರು 'ತೂತಾನ ಸ್ಟೈಕಲ್ ಟ್ಯೂಬ್' ಎಂದು ನಾಮಕರಣ ಮಾಡಿರುವ ನನ್ನ ಪಾಕಿಸ್ತಾನ್ ಬೇಡಿಕೆಯನ್ನೊಪ್ಪುವಂತೆ ಕಾಂಗ್ರೆಸನ್ನು ಪುಸಲಾಯಿಸುವದಕ್ಕಾಗಿ ನಾನು ಕಾಂಗ್ರೆಸಿನ ಮನೇ ಮೆಟ್ಟಲು ಹತ್ತಬೇಕೆಂದು ಇವರು ನಿರೀಕ್ಷಿಸುವರೆ? ಕಳೆದಬಾರಿ ಗಾಂಧಿಯವರು ನನ್ನ ಮನೆಗೆ ಬಂದುದು ವ್ಯಕ್ತಿಶಃ ತನ್ನ ಮಟ್ಟಿಗೇನೇ-ಮತ್ತು ನನ್ನ ಪಾಕಿಸ್ತಾನವೆಂದರೆ ಹೇಗೆಂಬ ಗುಟ್ಟನ್ನು ತಿಳಿದುಕೊಳ್ಳುವದಕ್ಕಾಗಿ ಮಾತ್ರ. ನಾನವರ ಅಭಿಪ್ರಾಯ ಬದಲಾಯಿಸಬೇಕೆಂದು ಮೂರು ವಾರ ಒದ್ದಾಡಿದೆ; ಆದರೂ ಪರಾಜಯಗೊಂಡೆ.

ಈ ರೀತಿ ದೂರುವದರ ಉದ್ದೇಶವೆಂದರೆ ಹಿಂದುಗಳ ಮನಸ್ಸನ್ನು ಕೆಡಿಸಬೇಕೆಂಬುದೊಂದೇ. ಪಟೇಲರನ್ನು ನಿಕೃಷ್ಟತಾಭಾವನೆ ಪೀಡಿಸುತ್ತಿದೆ. ಸಿಮ್ಲಾ ಸಮ್ಮೇಲನದ ವೇಳೆ ನಾನು ಮತ್ತು ನೆಹರುಗಳು ಮಾತಾಡತಕ್ಕದ್ದೆಂದು ನಿಶ್ಚಯವಾದಾಗ "ನಾವೆಲ್ಲಿ ಒಟ್ಟಾಗಬೇಕು" ಎಂದು ನಾನು ನೆಹರುಗಳನ್ನು ವಿಚಾರಿಸಿದ್ದೆ. "ನಾನೇ ನಿಮ್ಮಲ್ಲಿಗೆ ಬರುತ್ತೇನೆ" ಎಂದು ಹೇಳಿದ್ದು ನೆಹರುಗಳೇ. ಮೇ 11ರಲ್ಲಿ ನಾವಿಬ್ಬರೂ ಒಟ್ಟಾದಾಗ ನಾನು ಒಂದೂವರೆ ಗಂಟೆ ಅವರೆದಿರಲ್ಲಿ ವಾದಿಸಿದೆ; ಪಾಕಿಸ್ತಾನವನ್ನು ಆಧಾರವಾಗಿಟ್ಟುಕೊಂಡು ನಾವೊಂದು ಸಂಧಾನಕ್ಕೆ ಬರಬೇಕೆಂದು ವಿಜ್ಞಾಪಿಸಿಕೊಂಡೆ. ಆದರೆ ಅವರು ಅಚಲರಾಗಿದ್ದರು. ಇನ್ನು 'ನೀವೇ ನನ್ನ ಮನೆಗೆ ಬರಬೇಕಾಯಿತೆಂದೂ, ನಾನು ನಿಮ್ಮಲ್ಲಿಗೆ ಬರಲು ತಯಾರಿರಲ್ಲನೆಂದೂ ಯಾರಾದರೂ ಕಿವಿಯೂದಬಹುದು,ನೋಡಿಕೊಳ್ಳಿ' ಎಂದು ಪಂಡಿತ ನೆಹರುಗಳು ನನ್ನಲ್ಲಿಂದ ಹೊರಡುವಾಗಲೇ ನಾನವರಿಗೆ ಎಚ್ಚರಿಕೆ ಕೊಟ್ಟಿದ್ದೆ. ಇಂತಹ ಸಂದರ್ಭಗಳಲ್ಲಿ ಸ್ಥಳಕ್ಕೊಂದು ಪ್ರಾಮುಖ್ಯತೆಯೇ ಇಲ್ಲ. ಆದರೂ ಪಟೇಲರಂದ ಮಾಪರಿಯಲ್ಲಿ ಅದನ್ನು ವರ್ಣಿಸುವದೆಂದರೆ ಅದು ಕೀಳಾ ಅಲ್ಪ ಸಂಗತಿ. ನಿಮ್ಮ ಅನುಯಾಯಿಗಳೊಡನೆ ಮಾತಾಡಿ ತಿಳಿದ ನಂತರ ಪಾಕಿಸ್ತಾನ್ ಆಧಾರದಿಂದ ಏನಾದರೂ ಮಾತುಕತೆ ನಡಿಸಲು ನೀವಿಚ್ಛಿಸುವದಾದರೆ ಒಂದು ಸ್ಥಳ ನಿಶ್ಚಯ ಮಾಡಿ. ನಾನು ನಿಮ್ಮಲ್ಲಿಗೆ ಅಥವಾ ಇನ್ನಾರಾದರೊಬ್ಬರಲ್ಲಿಗೆ ಬರಲು ಸಂತೋಷದಿಂದ ತಯಾರಿದ್ದೇನೆ-ಎಂದೂ ನಾನು ಪಂಡಿತ ನೆಹರುಗಳೊಡನೆ ಹೇಳಿದ್ದೆ".

ಇದು ನಿಜವೆ?

ಮಿ. ಜಿನ್ನರಲ್ಲಿಂತಹ ಸೌಜನ್ಯವನ್ನು ಮೊಳೆಯಿಸಿದ ಕೀರ್ತಿ ಸರ್ದಾರ್ ಪಟೇಲರಿಗೆ—ಮಿ. ಜಿನ್ನರ ಬಾಯಿಯಿಂದ ಇಂತಹ ಮಧುರ ಮಾತುಗಳನ್ನು ಹೊರಡಿಸಿದ ಯಶಸ್ಸು ಪಟೇಲರ ಅಗೋಸ್ತು ತಾ 1ರ ಆ ಭಾಷಣಕ್ಕೆ-ಸಲಬೇಕು. ಮಿ. ಜಿನ್ನರ ಒಂದು 'ಘನಸ್ಥಿಕೆ'ಯು ಕುಸಿದು ಬಿದ್ದಾಗಿದೆ. ಇನ್ನು ಸಂಧಾನಕ್ಕಾಗಿ ಕಾಂಗ್ರೆಸ್ ಪ್ರತಿನಿಧಿಗಳು ಜಿನ್ನರ ಮನೇ ಬಾಗಿಲು ಕಾಯುವ ಹವ್ಯಾಸವಿಲ್ಲವೆಂಬುದು ಯಾವ ಕಾಂಗ್ರೆಸ್ ಠರಾವಿನಲ್ಲೂ ಅಕ್ಷರಶಃ ಮೂಡಿರದಿದ್ದರೂ ಎಲ್ಲರ ಹೃದಯದಲ್ಲೂ ಸ್ಪಷ್ಟವಾಗಿ ಅಚ್ಚಾಗಿರುವ ಲಿಪಿ. ಲೀಗಿನ 'ಪ್ರತ್ಯಕ್ಷ ಕಾರ್ಯಾಚರಣೆ' ಪ್ರಳಯವನ್ನೇ ನಿರ್ಮಿಸಿದರೂ ಅದು ಕಾಂಗ್ರೆಸನ್ನು ಎಳತಂದು ತನ್ನೆದಿರಲ್ಲಿ ಕೆಡಹಲಾರದೆಂಬುದನ್ನು ಸ್ವತಃ ಜಿನ್ನರು ಬಲ್ಲರು. ಹೀಗಾಗಿ 'ಹಲ್ಲು ಕಿರಿದು ಗೌಡಹರಿವಾಣ ನೈವೇದ್ಯ ಕಳಕೊಂಡ' ಎಂಬಂತೆ ಮಿ. ಜಿನ್ನರು ತನ್ನ ಮನೇಮೆಟ್ಟಲು ಅಹಲ್ಯಾ ಕಲ್ಲಾಗಿರುವುದನ್ನು ಕುಚೇಷ್ಟೆ ಮಾಡಿಯೇ ಕಳಕೊಂಡಿದ್ದಾರೆ. ಅದೊಂದು ಮಾನ ಎಂದೆಂದಿಗೂ ತಪ್ಪಿ ಹೋಯಿತು ಎಂಬ ವೇದನೆ ಮುಸ್ಲಿಂಲೀಗಿನವರಿಗಿದೆ. ಎಟಕದ ದ್ರಾಕ್ಷಿ ಹುಳಿತಾನೆ? "ಅವರಲ್ಲೇನುಂಟು? ಸ್ಥಳಕ್ಕೇನು ಪ್ರಾಮುಖ್ಯತೆಯುಂಟು? ನಾನು ಎಲ್ಲಿಬೇಕಾದರೂ ಬರುತ್ತಿದ್ದೆನಲ್ಲ" ಎಂದೀಗ ಜಿನ್ನರ ಮಾತು.

ಗಾಂಧಿಜೀಯ ಭಿಕ್ಷಾಯಾತ್ರೆ.

ದೃಷ್ಟಾಂತಕ್ಕಾಗಿ ಕ್ವಯದೀ ಅಝಾಮ್ ಜಿನ್ನರೇ ಪ್ರಸ್ತಾಪಿಸಿರುವ ಮಹಾತ್ಮಾ ಗಾಂಧಿಯವರ ಆ ಕೊನೆಯ ಭೇಟಿಯನ್ನೇ ನೋಡೋಣ. ಮಹಾತ್ಮರಾಗ ಅನಾರೋಗ್ಯದ ನಿಮಿತ್ತ ಬಿಡುಗಡೆಹೊಂದಿ ಆಗಾಖಾನ್ ಅರಮನೆಯಿಂದ ಹೊರಬಂದಿದ್ದರು ಮಾತ್ರ. ಮಹಾತ್ಮರಿಗೂ ಪತ್ನಿಯಿರಬಹುದಾದರೆ ಪತ್ನೀ ವಿಯೋಗದ ದುಃಖವೂ ಇರಲೇಬೇಕು. ಗಾಂಧಿಜೀ ಆಗತಾನೇ ಕಸ್ತೂರಿಬಾನನ್ನು ಕಳಕೊಂಡಿದ್ದರು. ಬಂಧನದಲ್ಲಿದ್ದಾಗಲೇ ಕ್ವಯದೀ ಅಝಾಮರ ಭೇಟಿ ಯಾಚಿಸಿ ಮಹಾತ್ಮರು ಪತ್ರ ಬರೆದಿದ್ದರು. 'ನಾವೆಂದೂ ನಮ್ಮ ಮಾತನ್ನು ಹಿಂತೆಗೆದುಕೊಳ್ಳುವವರಲ್ಲ'ವೆಂಬ ಮಿ. ಜಿನ್ನರ ಮಾತನ್ನು ನಂಬಬಹುದಾದರೆ ಸದ್ಯಕ್ಕೆ ಆ ಸಂ

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ. ೩ ಲನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ನೀವು ನಿಮ್ಮ ವ್ಯಾವಹಾರಿಕ ಪಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ | ಹಣದ ರಾಶಿಯಲ್ಲಿರಬೇಕಾದ / ಸಿರಿವಂತರಾಗಬೇಕಾದ / ಲಕ್ಷ್ಮೀಪುತ್ರರಾಗಬೇಕಾದ / ಅನುಕೂಲಸ್ಥರಾಗಬೇಕಾದ | ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ ಯಾಕಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಾರಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd. 1906

CANARA BANK LIMITED

(Incorporated in British India. liability of Members Limited.)

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಹಕರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ದರ್ಭ ಸ್ವತಃ ಕ್ವಯುದೀ ಆರ್ಘಾವುರಿಗೆ ಒದಗಲೇಬೇಕಾದರೂ ಆ ಕಾಲದಲ್ಲಿ ಅಂತಹ ಅಪರಾಧವನ್ನೇನೂ ಮಿ ಜಿನ್ನರು ಮಾಡಿಲ್ಲವಾದ್ದರಿಂದ ಜೈಲಿನ ಹತ್ತಿರ ಹೋಗಲಿಲ್ಲವೆನ್ನೋಣ; ಗಾಂಧಿಜೀಯಿಂದ ಆಮಂತ್ರಣ ಬಂದರೂ ಅಲ್ಲಿಗೆ ಹೋಗಲಾಗಲಿಲ್ಲ! ಆದ್ದರಿಂದ ತನ್ನ ಕಾಹಿಲೆಯನ್ನಾಗಲೀ ಕಂಬನಿಯನ್ನಾಗಲೀ ಗಣಿಸದೆ ಗಾಂಧಿಜೀಯೇ ಮಿ ಜಿನ್ನರ ಬೊಂಬಾಯಿ ಬಂಗಲೆಗೆ ಬರಬೇಕಾಯಿತು. 'ನಾನಾ ಸಂದರ್ಭದಲ್ಲಿ ಅವರೊಡನೆ ಮೂರು ವಾರ ಒದ್ದಾಡಿದ್ದೆ' ಎಂದು ಮಿ ಜಿನ್ನರನ್ನು ವಾಗ, ಆ 21 ದಿನವೂ ಮಹಾತ್ಮರನ್ನು ಸುಪ್ಪತ್ತಿಗೆಯಲ್ಲಿ ಮಲಗಿಸಿ, ಜಿನ್ನರು ಗಾಳಿ ಹಾಕುತ್ತಾ ಕುಳಿತಿದ್ದರೆಂದು ಯಾರಾದರೂ ಊಹಿಸಬೇಕು! ಆದರೆ ಹಾಗಲ್ಲ; ಪ್ರತಿದಿನ ಸಂಜೆ ಮುಂಜಾನೆ ಕಂಕುಳಲ್ಲಿ 'ದಫ್ತರ್' ಇಟ್ಟುಕೊಂಡು ಜಿನ್ನರ ಬಂಗಲೆಗೆ ಹೋಗಿ ತನ್ನ ಶಕ್ತಿಮೀರಿ ಪಾರ ಕೊಟ್ಟು ಗಾಂಧಿಜೀ ಬರಬೇಕಾಗಿತ್ತು; ಆದರೆ ಕೊನೆಗೂ ಪಾಸಾಗವೇನೇ ಪಾರಬಿಟ್ಟರು. ಆದರೆ 'ಹೋಗುವ ಬರುವ ಅಲ್ಪ ವಿಷಯಕ್ಕೂ ಪ್ರಾಮುಖ್ಯತೆ ಕೊಡುವ ನಿಕೃಷ್ಟತಾ ಬಾವವೇಕೆ?' ಎಂದೀಗ ಮಿ ಜಿನ್ನರು ಕೇಳುತ್ತಾರೆ. ಇದನ್ನು ಉತ್ತರಿಸಬೇಕಾದವರು 1944ನೇ ಇಸವಿಯ ಆ ಜಿನ್ನರೇ. ಇಂದಿನ ಜಿನ್ನರು ಕಳದ ಒಂದು ವರುಷವೆಂಬ ಕಿಟಿಕಿಯೊಳಗಿನಿಂದ ತಲೆ ಹಾಕಿ "ಬೇಕಾದರೆ ನೀವು....ನೇ ತಾರೀಕು ಘಂಟೆ...ಕ್ಕೆ ಬೊಂಬಾಯಿಯ ನನ್ನ...ಭವನಕ್ಕೆ ಬರಬಹುದು" ಎಂದು ಗಾಂಧಿಜೀಯನ್ನಾಜ್ಞಾಪಿಸುತ್ತಾ ಸೀರಾರೂಢರಾಗಿರುವ 1944ರ ಆ ಜಿನ್ನರ ಕಿವಿಯಲ್ಲೇ ಈ ಪ್ರಶ್ನೆಯನ್ನು ಪಿಸುಗುಟ್ಟಬೇಕು!

ಆ ಮೇಲೊಂದು ಪಾರ

ವಲ್ಲಭಾಯಿಗಳಿಗೆ ಉತ್ತರಕೊಡುವಾಗ ಹೊರತು ಬೇರಾರ ಆಮಂತ್ರಣ ಪತ್ರಕ್ಕೆ ಉತ್ತರಕೊಡುವಾಗಲೂ ಮಿ. ಜಿನ್ನರಿಷ್ಟು ಸುಲಭದಲ್ಲಿ ಕೈಗೆಟಕುವವರೆಂಬ ನಿದರ್ಶನವೇ ಇದುವರೆಗೆ ದೊರೆತುದಿಲ್ಲ. ಈ ಬಾರಿಯ ಸಿಮ್ಲಾ ಮಾತುಕತೆಯ ವೇಳೆ 'ಮೌಲಾನಾ ಅಜಾದರೊಡನೆ ಕುಳಿತುಕೊಳ್ಳಲೊಪ್ಪಲಾರೆ ಗಾಂಧಿಯವರು ಬರುವದಾದರೆ ಬರಲಿ' ಎಂಬ ಸೂಚನೆ ಮಿ. ಜಿನ್ನರಿಂದ ಹೋಗಿತ್ತೆಂಬುದೂ ಆಗಲೂ ಬೈರಾಸು ಹೊದೆದುಕೊಂಡು ಜಿನ್ನರ ಮನೆ ಮೆಟ್ಟಲನ್ನು ಧ್ಯಾನಿಸುತ್ತಾ ಗಾಂಧಿಜೀ ಯೆದ್ದಿದ್ದರೆಂಬುದೂ ಸರ್ವಶ್ರುತ ವಿಷಯ. ಈ ಸಂದರ್ಭದಲ್ಲಿ ಗಾಂಧೀ ಭೇಟಿ ನಡೆದಿರಲಿಲ್ಲವಾದ್ದರಿಂದ ಮಿ. ಜಿನ್ನರಿದನ್ನು ಮರೆತಿರಬಹುದು- ಆದರೆ ಮಹಾತ್ಮರನ್ನಾಗ ಹಿಡಿದು ಕೂಡ್ರಿಸಿದ್ದ ಸರ್ದಾರ್ ಪಟೇಲರು ಮರೆಯುವಂತಿಲ್ಲ ಅಥವಾ ಮಿ. ಜಿನ್ನರು ಈ ಘಟನೆಯನ್ನು ಮರೆತರೂ ಸಿಖ್ ನಾಯಕ ತಾರಾಸಿಂಗರನ್ನೂ ಮರೆಯುವಂತಿದೆಯೆ? "ಸಿಖ್-ಮುಸ್ಲಿಮ್ ಸಂಧಾನ ಮಾತುಕತೆ ನಡಿಸೋಣ; ....ಈ ದಿನ......ಹೊತ್ತಿಗೆ ನನ್ನಲ್ಲಿಗೆ ಬರಬಹುದೆ?" ಎಂದು ಮಿ. ಜಿನ್ನರ ಫೋನಿನ ಆಜ್ಞೆ, ಅಥವಾ ಆಹ್ವಾನ ಹೋದಾಗ "ನನಗೆ ನಿಮ್ಮಲ್ಲಿಂತಹ ಕೆಲಸವಿಲ್ಲ, ನಿಮಗೇನಾದರೂ ಇದೆಯಾದರೆ ನೀವೇ ನನ್ನಲ್ಲಿಗೆ ಬನ್ನಿ"ಎಂದು ಆ ಸಿಖ್ ಪ್ರಮುಖ ಕೊಟ್ಟ ಉತ್ತರವಾದರೂ ಅವರ ಸ್ಮರಣೆಯಲ್ಲಿರುವದು ಬೇಡವೆ? ಲೀಗ್ ಸರ್ವಾಧಿಕಾರಿಯೀಗ ಏನನ್ನೇ ಹೇಳಲಿ-ಇದುವರೆಗವರು ಮಿಕ್ಕವರ ಪಾಲಿಗೆ ರಾಜಕೀಯ ಕಾಳೀಮೂರ್ತಿಯಂತಿದ್ದರು; ನಿಂತಲ್ಲೇ ಪೂಜೆ ಪಡೆಯುವ-ಅಥವಾ ಸ್ವಪ್ನದಲ್ಲಿ ಮಾತ್ರ ಕಾಣಿಸಿಕೊಂಡು ಹೆದರಿಸಿ ಪರಕೀಯ ಸಮಾಜದ ಹಿತಸಂಬಂಧಗಳ ಪ್ರಾಣಬಲಿ ಪಡೆಯುವ-ಅಭ್ಯಾಸವಿಟ್ಟುಕೊಂಡಿದ್ದರು. ಈಗ ಆ ಭಕ್ತರೆಲ್ಲಾ ಪೂಜೆ ಕೊಟ್ಟು ಸೋತು ನಾಸ್ತಿಕರಾಗುತಿದ್ದಾರಾದ್ದರಿಂದ, ತಾನು ಪಾಳುಬಿದ್ದ ಗುಡಿಯ ಗೊಂಬೆಯಾಗಬಾರದೆಂದು, ಚಲಿಸುವ ವಿಧ್ಯೆಯನ್ನೂ ಕಲಿಯುವ ಮನಸ್ಸು ಮಾಡಿರಬಹುದು ಹೆಜ್ಜೆಯಿಡಲಿಕ್ಕೂ ಪ್ರಾರಂಭಿಸಲಿ, ತಾನೇ ಮುಂದೊತ್ತಿ ಹೋಗಿ ಮುಂಗಡೆ ನಿಲ್ಲಲಿ, ಬೇರಾವುದಕ್ಕಲ್ಲವಾದರೂ ಮಿಕ್ಕವರು ತನ್ನಲ್ಲಿಗೆ ಬಂದಿದ್ದ ಆ ಋಣ ಸಂದಾಯ ಮಾಡುವದಕ್ಕಾದರೂ ಇನ್ನು ಅವರೇ ಕಾಂಗ್ರೆಸ್ ಪ್ರಮುಖರಲ್ಲಿಗೆ ಹೋಗಲಿ! ಇದು ಅಲ್ಪ ವಿಷಯವೆ?

ಮಿಕ್ಕವರು ಬರಲಾರೆವೆಂದಾಗ ಮಾತ್ರ ಇದು ಅಲ್ಪ ವಿಷಯ—ಮಿ. ಜಿನ್ನರು ಹೊರಡದಿದ್ದಾಗ ಹಾಗಲ್ಲ. ಹಿಟ್ಲರನ ಭೇಟಿಗೆ ಚೇಂಬರ್ಲಿನ್ ಓಡಿದಾಗ ಬ್ರಿಟಷರಿಗಾದ ಅಪಮಾನ ಅಷ್ಟಿಷ್ಟಲ್ಲ. 'ದಮ್ಮಯ್ಯ' ಹಾಕುವದಕ್ಕಾಗಿಯೇ ಚೇಂಬರ್ಲಿನ್ ಹೋದುದಾದ್ದರಿಂದ ಅದು ಸಮಂಜಸವನ್ನಿಸಿತು. ಇಡೀ ಲೋಕವನ್ನೇ 'ಕರೆಸಿ ಮಾತಾಡುವವರು' ಮತ್ತು 'ಹೋಗಿ ಪ್ರಾರ್ಥಿಸಿಕೊಳ್ಳುವವರು' ಎಂಬ ಎರಡು ವರ್ಗ ಮಾಡಬಹುದು. ಪರಸ್ಪರ ಸೌಹಾರ್ದವಿದ್ದಲ್ಲಿ ಮಾತ್ರ ಈ ವರ್ಗಭೇದ ಲಗಾವಾಗುವದಿಲ್ಲ ಮಿ. ಜಿನ್ನರು ತನ್ನ ಮನಸ್ಸಾಕ್ಷಿಯನ್ನೇ ಪ್ರಶ್ನಿಸಿಕೊಳ್ಳಲಿ ಇನ್ನು ಮುಂದಿನ 'ಪ್ರತ್ಯಕ್ಷ ಹೋರಾಟ'ದಿಂದ ತನ್ನಲ್ಲೂ ತಿರುಳು ಭಂಡಾರವಿದೆ, ಎಂಬುದನ್ನು ಮುಸ್ಲಿಂ ಲೀಗು ತೋರಿಸಬೇಕಲ್ಲದೆ ಇದುವರೆಗೆ ಅದರ ರಿಕಾರ್ಡಿನಲ್ಲಿ ಏನಿದೆ? ಚರ್ವಿತ ಚರ್ವಣದಂತೆ ಪ್ರತಿಯೊಬ್ಬನೂ ಪ್ರತಿ ಬಾರಿಯೂ ಪಠಿಸುತ್ತಿರುವ ಕಠೋರ ಶಬ್ದಗಳ ಕೆಲವು ವಾಕ್ಯಗಳು—'ಭಿಕ್ಷಾಂದೇಹಿ' ಎನ್ನುತ್ತಾ ಕಾಂಗ್ರೆಸೇ ಹಲವು ಬಾರಿ ಕಾಲ ಬಳಿ ಬಂದು ಹೆಚ್ಚಿಸಿದ ಆ ಜಂಭ—ಗಾಳಿಯೂದಿದೊಡನೆ ಹಿಗ್ಗುವ ಆ ಏಳೆಂಟು ಕೋಟಿ ರಬ್ಬರ್ ಚೆಂಡುಗಳು, ಇವಿಷ್ಟು ಹೊರತು, ರಾಷ್ಟ್ರ ಅಥವಾ ಸಮಾಜದ ಸೇವೆಯ ದಾಖಿಲೆಯಾಗಿ ಮುಸ್ಲಿಂ ಲೀಗ್ ಮಾಡಿದುದು ಬೇರೇನಿದೆ? ಅಂದಮೇಲೆ ಇಂತಹ ಅಪಾಯಕಾರೀ ಕೃತಕ ಜಂಭವನ್ನು ಹೆಚ್ಚಿಸಿಕೊಳ್ಳಲು ಲೀಗಿಗೆ ಇನ್ನೂ ಕಾಂಗ್ರೆಸ್ ನೆರವಾಗಬೇಕೆ? ಬೇಡ. ಮಿ. ಜಿನ್ನರು ದೊಡ್ಡ ಆರೋಪವೆಂದು ಹೇಳಿರುವ ಈ ಮಾತಿಗೇನೇ ಕಾಂಗ್ರೆಸ್ ಈಗ ಹೌದೆನ್ನಬೇಕು-'ಮುಸ್ಲಿಂಲೀಗನ್ನು ನೆಲಕ್ಕೊತ್ತಿ ಹಿಡಿಯುವದೇ ಕಾಂಗ್ರೆಸಿನ ಉದ್ದೇಶ'.

NOTICE

ಉಡ್ಪಿ ಡಿ ಮು ಕೋರ್ಟಿನಲ್ಲಿ

O P. No 9/1946.

ಯಮುನಾಬಾಯಿ ಕೂಡಾ ಅರ್ಜಿದಾರರು

ಮತ್ತು

ಗೌರಿ ಅಮ್ಮ ಕೂಡಾ— ಎದುರಿರು

ಇವರೊಳಗೆ

3ನೇ ಎದುರಿ ವೈಕುಂಟ ಭಕ್ತರೀಗೆ- ಮೃತ ಮಂಜುನಾಥ ಭಕ್ತರ ತಮ್ಮನ ಮಾಮನ ಭಕ್ತರ ಮಗ. ಪುತ್ತೂರು ತಾಲ್ಕು ಆಫೀಸು ಕ್ಲಾರ್ಕ್ ಮುಕುಂದ ಭಕ್ತರ ಮನೆಯಲ್ಲಿರುವವ. ಪುತ್ತೂರು ತಾಲ್ಕು ಪುತ್ತೂರು ಕಸಬಾ

1ನೇ ಅರ್ಜಿದಾರಳ ಗಂಡ ಮತ್ತು 2ರಿಂದ 5ನೇವರೆಗಿನ ಅರ್ಜಿದಾರರ ತಂದೆ ಮೃತ ಕುಂಬಳೆ ಮಂಜುನಾಥ ಭಕ್ತರ debts and Securities ವಸೂಲಿಯಕ್ಕಿನ ಕುರಿತು ಅರ್ಜಿದಾರರಿಗೋಸ್ಕರ 1ನೇ ಅರ್ಜಿದಾರಳಿಗೆ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ 31 8 '946ಕ್ಕೆ ಇಡೋಣಾಗಿದೆ. ಆ ಬಗ್ಗೆ ಆಕ್ಷೇಪಯಿರುವ ಸಂಗ್ತಿಯಲ್ಲಿ ಸದ್ರಿ ತಾರೀಖು ದಿವಸ ಬೆಳಿಗ್ಗೆ 10 ಗಂಟೆಗೆ ಕೋರ್ಟ ಮುಂದೆ ಆಕ್ಷೇಪ ಬ್ಯಾಹೀರು ಮಾಡತಕ್ಕದ್ದು.

K. Varadaraya Pai,
Advocate for Petitioners
ತಾರೀಕು 9 8-46, ಉಡ್ಪಿ

FOR LIFE ASSURANCE
CONSULT
The New Gaurdian of India Life Insrce Co, Ltd,
Chairman The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.
LOCAL OFFICES IN SOUTH KANARA
MANGALORE & KARKALA.
HEAD OFFICE
"United India Life Bldg"
Esplanade Post Box No 142
MADRAS.

WANTED
Organisers on decent salary on a nominal guarantee of business.
For further particulars please apply to
THE
UNITED KARNATAK INSURANCE Co., Ltd.
HEAD OFFICE. DHARWAR.
Or
BRANCH OFFICE:
Court Road, UDIPI, S. K

ಶಾಲೋಪಯೋಗಿ
ಸಾಹಿತ್ಯಗಳು
ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ತ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!
ನವಯುಗ ಪ್ರೆಸ್,
ಉಡುಪಿ.

ನರೆತ ಕೂದಲು
ರಂಗನ್ನು ಉಪಯೋಗಿಸಬೇಡಿರಿ!
ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ ಆಗ ತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕಪ್ಪಗೆ ನಿಲ್ಲುವುದು. ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವುದು ಕೆಲವೇ ನರೆತ ಕೂದಲು ಇದ್ದರೆ ರೂಪಾಯಿ 2/ ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿಗಾದರೆ ರೂ 3 8 0ರ ಸೀಸೆ, ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/ ರ ಒಂದು ಸೀಸೆಯನ್ನು ಒದಗಿಸಿಕೊಳ್ಳಬೇಕಾಗುವುದು ಗುಣಕಾರಿಯಲ್ಲವೆಂದು ಪ್ರತಿಪಾದಿಸುವವರಿಗೆ ಇಮ್ಮಡಿ ಕ್ರಯ ವಾಪಾಸು
ಬಿಳಿ ತೊನ್ನು ಮತ್ತು ಲುಕೋಡ್ರಮ
ಬಿಳಿ ತೊನ್ನು ಮತ್ತು ಲುಕೋಡ್ರಮ (Leucoderma) ಮಹಾ ವ್ಯಾಧಿಗಳನ್ನು ಹೋಗಲಾಡಿಸುವರೆ ಈ ಔಷಧಿಯನ್ನು ಲೇಪಿಸಿರಿ ನೂರಾರು ಹಕೀಮರೂ, ಡಾಕ್ಟರರೂ, ಕವಿರಾಜರೂ ಅಸಾಧ್ಯವೆಂದು ದೂರೀಕರಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪಾಯಿ 2-8 0
ಕಿವುಡುತನ
ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ-ಬೆಲೆ ರೂಪಾಯಿ 2
ಸ್ತಂಭನ ಮಾತ್ರೆ
ಸಂಜೆ ಒಂದು ಮಾತ್ರೆಯನ್ನು ಸೇವಿಸಿದರೆ ಅಪರಿಮಿತ ಆನಂದವನ್ನು ಅನುಭವಿಸಿಯೇ ತೀರಬೇಕು ಕಳೆದುಹೋದ ಮನುಷ್ಯತ್ವವು ವಿದ್ಯುಚ್ಛಕ್ತಿಯೋಪಾದಿಯಲ್ಲಿ ಮರಳಿ ಬರುವುದು ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ. 16 ಮಾತ್ರೆಗಳಿಗೆ ರೂಪಾಯಿ 1/-
ಪತ್ರವ್ಯವಹಾರ ಇಂಗ್ಲೀಷ್ ಮ ಹಿಂದಿಯಲ್ಲಿ,
Krishna Chandra,
No. 5, P.O Katri Sarai (Gaya)

ಜಾತೀಯ ದಂಗೆಯಲ್ಲಿ ಗಾಂಧೀಜೀ ಪ್ರಾಣಕೊಡುವರೆ?

ಜಾತೀಯ ಗೊಂದಲದ ಕುಂಡದಲ್ಲಿ ಸ್ವತಃ ಧುಮುಕಿ ತನ್ನ ಅಹಿಂಸೆಯ ಪ್ರತ್ಯಕ್ಷ ಪ್ರದರ್ಶನ ನಡಿಸುವ ಸಂದರ್ಭವನ್ನು ತಾನು ನಿರೀಕ್ಷಿಸುತಿದ್ದೇನೆಂದು 'ಹರಿಜನ' ಪತ್ರಿಕೆಯಲ್ಲಿ ಗಾಂಧಿಜೀ ಹೃದಯಸ್ಪರ್ಶಿ ಲೇಖನವೊಂದನ್ನು ಬರೆದಿದ್ದಾರೆ. ಜಾತೀಯ ವೈಷಮ್ಯದಿಂದ ಕದಡಿರುವ ಸದ್ಯದ ವಾತಾವರಣದಲ್ಲಿಯೂ ಅಹಿಂಸೆಯನ್ನೇ ಬೋಧಿಸುತ್ತಿರುವ ಗಾಂಧಿಜೀಗೆ ಅಹಮ್ಮದಾಬಾದಿನ ಬಾತ್ಮೀದಾರನು ಹಾಕಿರುವ ಪ್ರಶ್ನೆಯು ಸರ್ವಸಾಮಾನ್ಯ ಜನಾಭಿಪ್ರಾಯವೇ ಆಗಿದೆ. ಅದಕ್ಕೆ ಮಹಾತ್ಮರಿತ್ತಿರುವ ಉತ್ತರವು ಅವ್ಯವಹಾರ್ಯವಿದ್ದರೂ ಆದರ್ಶಪ್ರಾಯವಿದೆ. ಮಾತ್ರವಲ್ಲ; ಅದರ ಪ್ರತಿಯೊಂದಕ್ಷರವೂ ಗಾಂಧಿಜೀಯ ಯಥಾರ್ಥ ಜೀವನದ ಪ್ರತಿಬಿಂಬವೆಂಬುದನ್ನೂ, ಒಂದು ದಿನ-ಆದಿನ ಸದ್ಯದಲ್ಲೇ ಬಂದರೂ ಬರಬಹುದು-ಮಹಾತ್ಮರ ನಿರೀಕ್ಷೆಯ ಸಂದರ್ಭ ಬಂದೀತೆಂಬುದನ್ನೂ ಗಮನಿಸಿದರೆ ಮಹಾತ್ಮರ ಈ ಬಯಕೆಯು ತೀವ್ರ ಮತ್ತು ಲೋಕ ಪ್ರಾಮುಖ್ಯವಿದೆ. ಆದ್ದರಿಂದ ಆ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಅಹಮ್ಮದಾಬಾದಿನ ಬಾತ್ಮಿದಾರ—

ಅಹಿಂಸಾತ್ಮಕವಾಗಿ ಜಾತೀಯ ಗೊಂದಲಗಳನ್ನು ಹೇಗೆ ನಿವಾರಿಸಬಹುದೆಂಬುದನ್ನು ಮಹಾತ್ಮರು ತಾನೇ ಒಂದು ಮಾದರಿಯಾಗಿ ತೋರಿಸಬೇಕೆಂಬುದನ್ನು ಸೂಚಿಸುತ್ತಾ ಹೀಗೆಂದಿದ್ದಾನೆ:-"ಇತ್ತೀಚಿಗೆ ನಡೆದ ಅಹಮ್ಮದಾಬಾದಿನ ಗೊಂದಲಗಳಲ್ಲಿ ಗೊಂದಲಗಾರರನ್ನು ಅಹಿಂಸಾತ್ಮಕವಾಗಿ ಸಮಾಧಾನ ಪಡಿಸಲು ಹೋದ ಇಬ್ಬರು ಕಾಂಗ್ರೆಸ್ ಸ್ವಯಂಸೇವಕರು ಗಲಭೆಗಾರರ ಕೈಯಲ್ಲಿ ಪ್ರಾಣಕೊಟ್ಟರು. ಅವರೆಂದರೆ ಶ್ರೀ ವಸಂತ ರಾವ್ ಮತ್ತು ಶ್ರೀ. ರಾಜಬಲಿ. ಅನಂತರ ಅವರನ್ನನುಸರಿಸಿ ಹೋಗುವ ಧೈರ್ಯ ಯಾರಿಗೂ ಬರಲಿಲ್ಲ. ನೀವು ಸ್ವತಃ ಅಹಮ್ಮದಾಬಾದಿಗೆ ಬಂದಲ್ಲಿ ನಿಮ್ಮನ್ನು ಅಹಿಂಸಾರೂಪದಿಂದ ಅನುಸರಿಸಲು ಹಲವರು ತಯಾರಿದ್ದಾರೆ. ನಿಮ್ಮ ಮಾದರಿ ಮತ್ತು ಮಾರ್ಗದರ್ಶನವು ನನ್ನಂತಹ ಹಲವರಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ತುಂಬಿಸಬಲ್ಲುದು. ಒಂದು ಬಾರಿ ನೀವು ಸ್ವತಃ ಹಾದಿ ಹಾಕಿಕೊಟ್ಟರೆ ಆ ಮೇಲೆ ಸಂದರ್ಭ ಬಂದಾಗಲೆಲ್ಲಾ ಸ್ಥಳೀಯ ಕೆಲಸಗಾರರು ಆ ಪಥದಲ್ಲಿ ನಡೆಯಲು ಸಮರ್ಥರಾಗುವರು. ನನ್ನ ಅಭಿಪ್ರಾಯವೆಂದರೆ ನೀವು ಸ್ವತಃ ಮಾಡಿ ತೋರಿಸಿ ಮಾದರಿ ಹಾಕದಿದ್ದರೆ ಸಾಮಾಜಿಕ ಅಹಿಂಸಾತ್ಮಕ ಶಕ್ತಿಯನ್ನು ಸಂಘಟಿಸಿಕೊಳ್ಳಬಹುದೆಂಬ ನಿಮ್ಮ ಲೇಖನಗಳು ಮತ್ತು ಭಾಷಣಗಳು ಸಾಮಾನ್ಯ ಜನರ ಹಾಗೂ ಕಾಂಗ್ರೆಸಿನವರ ದೃಷ್ಟಿಯಲ್ಲಿ ಕೂಡಾ ಏನೊಂದೂ ಬೆಲೆಬಾಳುವಂತಿಲ್ಲ".

ಗಾಂಧಿಜೀಯ ಉತ್ತರ

'ಮೇಲ್ಗಡೆಯ ಸೂಚನೆಯು ನನಗೆ ಸಮ್ಮತವಿದೆ. ಜನರು ನನ್ನ ಉಪದೇಶವನ್ನು ಆನುಸರಿಸಿ, ಬ್ರಿಟಿಷ್ ಸರಕಾರದ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆ ಹೂಡಿದ್ದುದು ಯಾವುದಾದರೊಂದು ಮಾದರಿಯ ವಿರೋಧ ಕೊಡಬೇಕೆಂಬ ಬಯಕೆಯಿಂದ ಮಾತ್ರ. ಅವರ ಈ ಅಹಿಂಸೆಯು ಅವರ ನಿಸ್ಸಹಾಯಕ ಸ್ಥಿತಿಯಿಂದ ಉದ್ಭವಿಸಿದುದೆಂಬುದನ್ನು ನಾನು ಒಪ್ಪಬೇಕಾಗಿದೆ. ಆದ್ದರಿಂದ ಅದು ದುರ್ಬಲರ ಆಯುಧವಾಗಿದ್ದಿತು. ಆದ್ದರಿಂದಲೇ ನಾವಿಂದು ನೇತಾಜೀ ಸುಭಾಸ್ ಚಂದ್ರಬೋಸರನ್ನೂ ಅವರ ಆಜಾದ್ ಹಿಂದ್ ಫೌಜನ್ನೂ ಪೂಜಿಸುತಿದ್ದೇವೆ. ಭಾರತಕ್ಕೆ ಹೋದಾಗ ನೀವು ಅಹಿಂಸಾ ಪಥ ಹಿಡಿಯತಕ್ಕದ್ದೆಂದು ತನ್ನ ಸೈನಿಕರಿಗೆ ನೇತಾಜಿಯೇ ಹೇಳಿದ್ದರೆಂಬುದನ್ನು ನಾವು ಮರೆತಿದ್ದೇವೆ. ಇದನ್ನು ನಾನು ಆಜಾದ್ ಹಿಂದ್ ಫೌಜ್ ನಾಯಕರಿಂದಲೇ ತಿಳಿದುಕೊಂಡೆ. ಆದರೆ ನಾವೀಗ ಎಲ್ಲಾ ತಾರತಮ್ಯವನ್ನೂ ಕಡೆಗಣಿಸಿದ್ದೇವೆ. ಅದನ್ನು ಮರು ಸಂಪಾದಿಸಿಕೊಳ್ಳುವದಕ್ಕಾಗಿ ಆಜಾದ್ ಹಿಂದ್ ಸೇನೆಯವರೆಲ್ಲಾ ನೇತಾಜೀ ತಮ್ಮ ಮುಂದಿರಿಸಿದ್ದ ಆ ಮಾದರಿಯ ಮಟ್ಟಕ್ಕೇರಬೇಕು. ಹಿಂಸೆಯಿಂದಲೇ ತುಂಬಿ ಹೋಗಿರುವ ಇಂದಿನ ವಾತಾವರಣದಲ್ಲಿ ಅಹಿಂಸೆಯ ಆರಾಧಕರ ಕೆಲಸಗಳು ಅತ್ಯಂತ ಕಷ್ಟಕರವಿವೆ. ನಿಜವಾದ ಅಹಿಂಸಾಪಥದ ಗಮನದಲ್ಲಿ ಹಿಂಸಾಪಥಕ್ಕಿಂತ ಹೆಚ್ಚಿನ ಧೈರ್ಯವಿರಬೇಕಾದುದು ಅಗತ್ಯ. ಅಂತಹ ಒಂದು ಅಹಿಂಸೆಯು ದಾಖಲೆಯನ್ನು ನಿರ್ಮಿಸಲು ನಾವಿದುವರೆಗೆ ಸಮರ್ಥರಾಗಿಲ್ಲ. ಧೈರ್ಯಶಾಲಿಯ ಅಹಿಂಸೆಯ ಮಾದರಿ ಬೇಕಾಗಿದ್ದರೆ ನಾವು ಶ್ರೀ. ಗಣೇಶ ಶಂಕರ ವಿದ್ಯಾರ್ಥಿ, ಶ್ರೀ. ವಸಂತ ರಾವ್ ಮತ್ತು ಶ್ರೀ. ರಾಜಬಲಿಯವರ ಕೃತ್ಯಗಳ ಕಡೆಗೆ ನೋಡಬಹುದು. ಆದರೆ ಜಾತೀಯ ಭಾವನೆಯು ಪರಮಾವಧಿಗೇರಿದಾಗ, ಮೇಲ್ಗಡೆ ನಮೂದಿಸಿದ ಆತ್ಮತ್ಯಾಗದ ಪರಿಣಾಮವನ್ನು ಪ್ರದರ್ಶಿಸಲು ನಾವು ಅಸಮರ್ಥರಾಗುತ್ತೇವೆ. ಹಾಗಾಗಬೇಕಾದರೆ ಗಣೇಶ ಶಂಕರ ವಿದ್ಯಾರ್ಥಿಗಳಂತಹ ಹಲವರು ತಮ್ಮ ಪ್ರಾಣಗಳನ್ನರ್ಪಿಸಬೇಕಾಗಿದೆ. ಅಹಮ್ಮದಾಬಾದಿನಲ್ಲಿ ಶ್ರೀ. ವಸಂತರಾವ್ ಮತ್ತು ಶ್ರೀ. ರಾಜಬಲಿಯವರು ಹಾಕಿದ ಮಾದರಿಯನ್ನನುಸರಿಸಲು ಬೇರಾರೂ ಮುಂದೆ ಬರಲಿಲ್ಲವೆಂಬ ಸಂಗತಿಯು ಅಹಿಂಸಾತ್ಮಕ ವಿಧಾನದಿಂದ ಪ್ರಾಣಾರ್ಪಣೆ ಮಾಡುವ ತ್ಯಾಗಸ್ಫೂರ್ತಿಯು ನಮ್ಮಲ್ಲಿನ್ನೂ ಮೈಗೂಡಿಲ್ಲವೆಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ನಾನೇ ಸ್ವತಃ ಆಚರಿಸಿ ತೋರಿಸಬೇಕೆಂಬ ಬಾತ್ಮೀದಾರರ ಅಭಿಪ್ರಾಯವು-ಮಿಕ್ಕವರು ನನ್ನನ್ನನುಕರಿಸಿದರೂ ಅನುಸರಿಸದಿದ್ದರೂ-ಸರಿಯಿದೆ. ನಾನು ಮನೆಯಲ್ಲೇ ಕುಳಿತಿದ್ದು, ಮುಂದೆ ಹೋಗಿ ಪ್ರಾಣಕೊಡಿ ಎಂದು ಮಿಕ್ಕವರಿಗೆ ಬೋಧಿಸುವದು ನನ್ನ ಪಾಲಿಗೊಂದು ಕಳಂಕವೇ ಸರಿ. ಇಂತಹದೆಂದಿಗೂ ಅಹಿಂಸೆಯ ನಿದರ್ಶಕತ್ವವಾಗದು. ಜಾತೀಯ ಗಲಭೆಗಳದಿರಲ್ಲಿ ನನ್ನ ಅಹಿಂಸೆಯ ಪರೀಕ್ಷೆ ಮಾಡುವ ಸಂದರ್ಭವೇ ಇದುವರೆಗೆ ನನಗೊದಗಿರಲಿಲ್ಲ. ಇಂತಹ ಸಂದರ್ಭವನ್ನು ದೊರಕಿಸಿಕೊಳ್ಳದಂತೆ ಮಾಡಿದುದು ನನ್ನ ಹೇಡಿತನವೇ ಎಂದು ಯಾರಾದರೂ ವಾದಿಸಬಹುದು. ಅದು ಹೇಗಿದೆಯೋ ಹಾಗಿರಲಿ. ದೇವರ ದಯೆಯಿದ್ದರೆ, ಆ ಸಂದರ್ಭ ನನಗಿನ್ನಾದರೂ ಬಂದೀತು. ನನ್ನನ್ನಾಹುತಿಗೆಸೆಯುವ ಮೂಲಕ ಆತನು ನನ್ನನ್ನು ಪವಿತ್ರೀಕರಿಸಿ, ಅಹಿಂಸೆಯ ಹಾದಿಯನ್ನು ನಿರ್ಮಲಗೊಳಿಸಿಯಾನು. ನನ್ನೊಂದು ಪ್ರಾಣಾರ್ಪಣೆಯು ಎಲ್ಲಾ ಹಿಂಸೆಗಳನ್ನೂ ತಡೆಗಟ್ಟಬಹುದೆಂದು ಇದರಿಂದ ಯಾರೂ ಭಾವಿಸಬಾರದು. ಸರ್ವವ್ಯಾಪಿಯಾಗಿರುವ ಭಯಂಕರ ಹಿಂಸೆಯು ನಿಂತು ಅದರ ಸ್ಥಾನದಲ್ಲಿ ಅಹಿಂಸೆಯು ವಿಜಯ ವಿರಾಜಮಾನ ಹೊಂದಬೇಕಾದರೆ ನನ್ನಂತೆಯೇ ಹಲವು ಪ್ರಾಣಗಳ ಬಲಿದಾನವಾಗಿ ಕೊಳ್ಳಬೇಕು. ಕವಿ ಹಾಡಿದ್ದಾನೆ-'ಸತ್ಯದ ಹಾದಿ ಧೈರ್ಯಶಾಲಿಯದು ಹೊರತು ಹೇಡಿಯದಲ್ಲ'. ಸತ್ಯದ ಹಾದಿಯೇ ಅಹಿಂಸೆಯ ಹಾದಿ".

NOTICE.

In the Court of the District Munsif of Mangalore

K E P. No 227 46 in O S 4?5 42.

Between

Gangamma alias Devamma and another —Petitioners

and

Vamana Naika and others … – Respondents.

To

2nd Respondent—Rangappa Naika son of Ramappa Naika, residing in Ira village of Mangalore Taluk.

Please take notice that the Petitioners abovenamed have filed the above execution for recognition of transfer in favour of 1st Petitioner and for sale of the properties belonging to the Respondents and the execution petition is posted to 27 8 46 for your appearance. If you fail to appear on that date the said matter will be decided in your absence.

(By order of the Court).

Mangalore, 8-8-1946. } **K Babu Rao.** Advocate for Petitioners.

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ದಿ ಆರ್ಯನ್ ಚಾಂಪಿಯನ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ:

7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್:

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ ಸೀತಾರಾಮ ಶೆಟ್ಟಿ, ಎಸ್ಕ್ವಾಯರ್, ಅತ್ತಾವರ, ಮಂಗಳೂರು ಇವರಿಗೆ ಬರೆಯಿರಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ವಾರ್ಧಾದ ಕಡೆಗೊಂದು ನೋಟ

★

ಇದೇ ತಾ. 8ರಿಂದ ವಾರ್ಧಾದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆ ಸೇರಿದೆ. ಚರ್ಚಿಸಲಿರುವ ವಿಷಯಗಳು ಪ್ರಾಮುಖ್ಯದ್ದಿರುವುದರಿಂದ ಸಭೆಯು ಒಂದು ವಾರ ನಡೆಯಬಹುದೆಂದು ರಾಷ್ಟ್ರಪತಿ ಪಂಡಿತ ನೆಹರುಗಳಂದಿದ್ದಾರೆ. ನೆಹರು ಅಧ್ಯಕ್ಷತೆಯಲ್ಲಿ ಸೇರುವ ಪ್ರಥಮ ಸಮಿತಿ ಸಭೆಯಿದು; ಕಾರ್ಯಕಾರೀ ಸಮಿತಿಯಲ್ಲೂ ಎಡಬಲ ಪಕ್ಷೀಯರ ಸಮತೂಕವಿದ್ದ ಪ್ರಥಮ ಸಂದರ್ಭವಿದು. ಮೇಲಾಗಿ ಈ ಬಾರಿಯಷ್ಟು ದೊಡ್ಡದಾದ ಹಾಗೂ ವಿಲಕ್ಷಣವಾದ ಹೊಣೆಯು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮೇಲೆ ಹಿಂದೆಂದೂ ಬಿದ್ದಿಲ್ಲವೆಂದು ಹೇಳಬಹುದು. ಹೊಸಬರ ಮೇಲೆ ಹೊರಲಾರದ ಹೊಣೆ ಬಿದ್ದಿದೆ ಎಂದರೆ ಅತ್ಯುಕ್ತಿಯಾಗದು.

oo oo oo

ಮುಖ್ಯವಾಗಿ ಲೀಗು ಘಟನಾ ಸಮಿತಿಗೆ ಹಾಕಿರುವ ಬಹಿಷ್ಕಾರ—ಮತ್ತದಕ್ಕೆ ವಿಶೇಷತಃ ಕಾಂಗ್ರೆಸ್ ಪ್ರಮುಖರೇ ಕಾರಣರಾಗಿರುವ ವಿಷಯದ ಕುರಿತು ಕಾಂಗ್ರೆಸ್ ಸಮಿತಿಯು ಅತಿ ನಿಗ್ಗಾದ ಒಂದು ಜಿಡುಪನ್ನು ಬಿಡಿಸಿಕೊಳ್ಳಬೇಕಾಗಿ ಬಂದಿದೆ. ಬ್ರಿಟಿಷ್ ನಿರೂಪಣೆಯಲ್ಲಿರುವದಕ್ಕಿಂತ ಭಿನ್ನವಾದ ಅರ್ಥವನ್ನು 'ಕಾಂಗ್ರೆಸ್ ಘಟನಾ ಸಮಿತಿಗೆ ಕಟ್ಟಿಕೊಂಡಿದೆ ನಿಜಕ್ಕೂ ಕಾಂಗ್ರೆಸಿನ ಸ್ವೀಕಾರವು ಶರ್ತಬದ್ಧವಾದದು. ಸ್ಪಷ್ಟವಾಗಿ ಹೇಳುವದಾದರೆ ಬ್ರಿಟಿಷರು ಹಾಕಿಕೊಟ್ಟ ಘಟನಾ ಸಮಿತಿಯ ಯೋಜನೆಯನ್ನು ಕಾಂಗ್ರೆಸ್ ನಿರಾಕರಿಸಿದೆ'—ಎಂದೇ ಲೀಗಿನ ವಾದ ಈ ಕಾರಣದಿಂದಲೇ ಅದು ಘಟನಾ ಸಮಿತಿಗೆ ಬಹಿಷ್ಕಾರ ಹಾಕಿ 'ಪ್ರತ್ಯಕ್ಷ ಹೋರಾಟ' ಹೂಡುವ ನಿರ್ಧಾರ ಮಾಡಿದೆ. ಸರಿಯಾಗಿ ವಿವೇಚಿಸಿದರೆ ತಾನು ಹಿಂದೆ ಬಿದ್ದೆನೆಂಬ ನಿಕೃಷ್ಟತಾಭಾವವೂ, ಮುಂದೆ ತನ್ನಾಟ ನಡೆಯುವ ಸಂದರ್ಭವಿಲ್ಲವೆಂಬ ನಿರಾಶೆಯೂ ಮುಸ್ಲಿಂ ಲೀಗಿನ ಈ ಗಡಿಬಿಡಿಯ ನಿರ್ಧಾರಕ್ಕೆ ಕಾರಣವಾದರೂ ಅದಕ್ಕೆ ಕೆಲವು ಕಾಂಗ್ರೆಸ್ ಪ್ರಮುಖರ, ಮುಖ್ಯವಾಗಿ ಪಂಡಿತ ನೆಹರುಗಳ ಭಾಷಣಗಳು ನೆವನವಾಗಿ ದೊರೆತಿವೆ. ತಾನು ಅಧ್ಯಕ್ಷನಾದೊಡನೆ ಘಟನಾ ಸಮಿತಿಯ ಸ್ವೀಕಾರದ ಕಾಂಗ್ರೆಸ್ ನಿರ್ಧಾರದ ಸ್ಪಷ್ಟೀಕರಣ ಮಾಡುತ್ತಾ ರಾಷ್ಟ್ರಪತಿ ನೆಹರುಗಳು ಪತ್ರಿಕಾ ಪ್ರತಿನಿಧಿಗಳ ಮುಂದೆ ಕೊಟ್ಟ ಹೇಳಿಕೆಯಲ್ಲಿ ಸ್ವಾತಂತ್ರ್ಯಾಭಿಲಾಷೆ, ಸ್ವಾಭಿಮಾನಗಳು ತುಂಬಿ ತುಳುಕುತ್ತಿದ್ದರೂ ಬುದ್ಧಿವಂತಿಕೆಯಿರಲಿಲ್ಲ. ಘಟನಾ ಸಮಿತಿಯಲ್ಲಿ ಮುಂದೊಡ್ಡಿ ಈಗತಾನೇ ಲೀಗನ್ನು ಅಲ್ಲಿಂದ ಹೊರಡಿಸಲಿಕ್ಕಿದ್ದ ಕಾಂಗ್ರೆಸ್ ವಾದವನ್ನು ಈಗಲೇ ಅಡಿತೋರಿಸಿ ಲೀಗ್ ಪ್ರಮುಖರಿಗೆ ಅಸಹ್ಯತಲೆ ಸಿಡಿತವುಂಟಾಗಿ ಅವರು ಎಲ್ಲಕ್ಕೂ ಬಹಿಷ್ಕಾರ ಹಾಕುವಂತೆ ಮಾಡಿ ಬಿಟ್ಟಿದ್ದಾರೆ ನೆಹರುಗಳು.

oo oo oo

ಆದ್ದರಿಂದಲೇ ಈಗ ತಾನೇ ಲಂಡನಿನಿಂದ ಬಂದಿರುವ ಡಾ। ಜಯಕರ್, ಸರ್. ಸೆಟಲ್ವಾಡ್ ಮೊದಲಾದ ಮುಂದಗಾಮಿ ಪ್ರಮುಖರೂ ಲಂಡನಿನ 'ಟ್ಯಾಮ್ಸ್' ಮೊದಲಾದ ಪ್ರಮುಖ ಪತ್ರಿಕೆಗಳೂ ವಾರ್ಧಾ ಕಾಂಗ್ರೆಸ್ ಕಮಿಟಿಯಲ್ಲಿ ಕಾಂಗ್ರೆಸ್ ಸ್ಪಷ್ಟ ಹೇಳಿಕೆಯೊಂದನ್ನು ಹೊರಡಿಸಬೇಕೆಂದು ಒತ್ತಾಯಿಸಿದ್ದಾರೆ 'ಬ್ರಿಟಿಷ್ ಯೋಜನೆಗೆ ಬ್ರಿಟಿಷ್ ಸ೧ ಕಿ ಕಟ್ಟಿರುವ ಅರ್ಥವೇ ಅಕ್ಷರಶಃ ನಮಗೂ ಮಾನ್ಯ' ಎಂಬುದನ್ನು ಕಾಂಗ್ರೆಸ್ ಸ್ಪಷ್ಟವಾಗಿ ಹೇಳಿ ಬಿಡಬೇಕು ಅರ್ಥಾತ್ 'ಆ ಯೋಜನೆಯನ್ವಯ ಕೇಂದ್ರಕ್ಕೆಷ್ಟು ಅಧಿಕಾರವಿರುವದೋ ಅಷ್ಟನ್ನೇ ನಾವೂ ಒಪ್ಪುತ್ತೇವೆ-'ಬಿ' ಮತ್ತು 'ಸಿ' ಪ್ರಾಂತಿಕ ಪಂಗಡಗಳಿಗೆ ಸಂಬಂಧಪಟ್ಟ ಪ್ರಾಂತ್ಯಗಳು ಪ್ರಥಮತಃ ಕಡ್ಡಾಯವಾಗಿ ಸೇರಲೇ ಬೇಕೆಂಬ ಅರ್ಥವೂ ನಮಗೆ ಸಮ್ಮತ' ಎಂದು ಕಾಂಗ್ರೆಸ್ ಜಾಹೀರುಪಡಿಸಬೇಕೆಂದೇ ಬ್ರಿಟಿಷ್ ಪತ್ರಿಕೆಗಳ ಮತ್ತು ಭಾರತದ ರಾಂತಿ ಪ್ರೇಮಿ ಮುಂದ ಪಕ್ಷೀಯ ಪ್ರಮುಖರ ಅಭಿಪ್ರಾಯ. ಹಾಗೆಮಾಡಿದಲ್ಲಿ ಬಿ ಮತ್ತು ಸಿ ಪ್ರಾಂತಿಕ ಪಂಗಡಗಳೆಂದರೆ ತಮ್ಮನ್ನು ಪಾಕಿಸ್ತಾನ್ ಗುರಿಯತ್ತ ಬಯ್ಯುವಎರಡು ಗಾಲಿಗಳು ಎಂಬ ಏಕ ಮಾತ್ರ ಆಶೆಯಿಂದ ಘಟನಾ ಸಮಿತಿಗೆ ಮುಸ್ಲಿಂ ಲೀಗನ್ನು ಅಂದು ಒಪ್ಪುವಂತೆ ಮಾಡಿದ್ದ ಪರಿಸ್ಥಿತಿಯೇ ಪುನಃ ನಿರ್ಮಾಣಗೊಳ್ಳುವದು; ಎಂದು ಇಂಥವರ ನಿರೀಕ್ಷೆ. ನೆಹರು ಮೊದಲಾದವರು ಅಜಾಗ್ರತೆಯ ಹೇಳಿಕೆಗಳನ್ನು ಹೊರಡಿಸಿ ಕೆಲಸಕೆಡಿಸಿ ಬಿಟ್ಟರೆಂಬ ಪಶ್ಚಾತ್ತಾಪ ಇವರಲ್ಲಿದೆ.

oo oo oo

ಬ್ರಿಟಿಷ್ ಸರಕಾರದ ಭಾವನೆಯೂ ಅದೇ ಎಂಬುದನ್ನು ಮರೆಯಬಾರದು; ಲೀಗ್ ಪ್ರಮುಖರು 'ನಾಲಿಗೆಯಿಲ್ಲದವರು' 'ವಂಚಕರು' ಇತ್ಯಾದಿ ವಾಗ್ಬಾಣಗಳಿಂದ ತಮ್ಮನ್ನು ನೋಯಿಸಿದುದಕ್ಕಾಗಿ ಬ್ರಿಟಿಷ್ ಪತ್ರಿಕೆಗಳೆಲ್ಲಾ ಮಿ. ಜಿನ್ನರ ಮೇಲೂ ಲೀಗಿನ ಮೇಲೂ ಪ್ರತೀಕಾರಕ್ಕೆದ್ದಿವೆ. ಅದರದು ನಿಂದೆಗೆ ಪ್ರತಿನಿಂದೆ—ತಾಡನೆಗೆ ಮರುತಾಡನ—ಮಾತ್ರ। ಘಟನಾ ಸಮಿತಿಯ ಯೋಜನೆಗೆ ಬ್ರಿಟಿಷ್ ಸಮಿತಿ ಕಟ್ಟಿರುವ ಅರ್ಥವೂ, ಮಿ ಜಿನ್ನರು ಕಟ್ಟಿರುವ ಅರ್ಥವೂ ಒಂದೇ– ಅದಕ್ಕೆ ವಿರುದ್ಧವಾಗಿ ಕಾಂಗ್ರೆಸ್ ವರ್ತಿಸುವದು ಲೀಗಿಗೆ ಹೇಗೆ ಬೇಕಾಗಿಲ್ಲವೋ ಬ್ರಿಟಿಷರಿಗೂ ಹಾಗೆಯೇ ಬೇಕಾಗಿಲ್ಲ. ಆದ್ದರಿಂದಲೇ ವಾರ್ಧಾದ ಕಾಂಗ್ರೆಸ್ ಕಮಿಟಿ ಸಭೆಯು ಈ ಕುರಿತು ಬ್ರಿಟಿಷ್ ಅರ್ಥವನ್ನೇ ಅಂಗೀಕರಿಸಿಕೊಂಡೆವೆಂದು ಸ್ಪಷ್ಟ ಹೇಳಿಕೆ ಕೊಡಲಿ ಎಂದು ಬ್ರಿಟಿ

ನಿಮ್ಮ ಸಂಬಳ ಏರಬೇಕೆ? - - - ನಿಮ್ಮ ಆದಾಯ ಹೆಚ್ಚಬೇಕೆ?

ಇಂಗ್ಲಿಷ್
ಕಲಿಯಿರಿ

ಹಾಗಿದ್ದರೆ
ಕೂಡಲೇ

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡು ಓದತೊಡಗಿದ್ದಾರೆ; ಬರೆಯಲೂ ತೊಡಗಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1–8–0 ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
2. ನವಭಾರತ ಬುಕ್ ಡಿಪ್ಪೊ, ಉಡುಪಿ.
3. ಸ್ವತಂತ್ರಭಾರತ ಬುಕ್ ಡಿಪ್ಪೊ, ಬೊಂಬಾಯಿ.
4. ನ್ಯೂ ಸಪ್ಲಾಯ ಏಜನ್ಸಿ, ಕುಮಟಾ,

ಷ್ ಮಂತ್ರಿಮಂಡಲವೂ ನಿರೀಕ್ಷಿಸುತ್ತಿದೆ. ಸರಕಾರವು ಮುಂದೇನು ಮಾಡುವದೆಂಬ ಕುರಿತು ಒಂದೇ ಒಂದಕ್ಷರವೂ ಇದುವರೆಗೆ ಹೊರ ಬೀಳದಿರಲು ಕಾಂಗ್ರೆಸಿನ ಹೇಳಿಕೆ ಕೇಳಿಕೊಳ್ಳಬೇಕೆಂಬುದೇ ಕಾರಣ. ಹೀಗೆ ಕಾಂಗ್ರೆಸ್ ತನ್ನ ಪಾಲಿನ ಕರ್ತವ್ಯವನ್ನು ಪಾಲಿಸಿದರೆ-ಘಟನಾಯೋಜನೆಯ ಮಟ್ಟಿಗೆ ಬ್ರಿಟಿಷ್ ಸಮಿತಿಯ ಅಭಿಪ್ರಾಯ ಮತ್ತು ವಾಕ್ಯಾರ್ಥಕ್ಕೇನೇ ತಾವೂ ಅಕ್ಷರಶಃ ಕಟ್ಟು ಬೀಳುತ್ತೇನೆ ಎಂಬದನ್ನು ಜಾಹೀರು ಮಾಡಿದರೆ-ಆ ಮೇಲೂ ಲೀಗು ತನ್ನ ಅಸಹಕಾರ ಧೋರಣೆಯನ್ನು ಬದಲಾಯಿಸುವಿದ್ದಲ್ಲಿ ತಾತ್ಕಾಲಿಕ ಸರಕಾರ ರಚಿಸಲು ಕಾಂಗ್ರೆಸನ್ನೇ ಕೇಳಿಕೊಳ್ಳುವ ಆಲೋಚನೆ ವೈಸರಾಯರಿಗಿರಬಹುದು. ಲೀಗ್ ನಿರ್ಧಾರದ ಬೆನ್ನಲ್ಲೇ ಲೋರ್ಡ್ ವೇವೆಲರು ಈ ಕುರಿತು ಪಂಡಿತ ನೆಹರುಗಳೊಡನೆ ಮುಖತಃ ಸಂಭಾಷಿಸಿದ್ದರು; ಮತ್ತು ಇತ್ತೀಚೆಗೆ ರಾಷ್ಟ್ರಪತಿ ಮತ್ತು ವೈಸರಾಯರೊಳಗೆ ಎಡೆಬಿಡದೆ ಪತ್ರ ವ್ಯವಹಾರಗಳೂ ನಡೆದಿದ್ದುವು. ಇವೆಲ್ಲವನ್ನೂ ನೆಹರುಗಳು ವರ್ಕಿಂಗ್ ಕಮಿಟಿಗೆ ಶ್ರುತಪಡಿಸಿದ್ದಾರೆ. ಅಂತೂ ಮುಂದೇನು ಎಂಬ ನಿರ್ಧಾರವಾದ ವೈದಕ್ಕಾಗಿ ವೈಸರಾಯರು ವಾರ್ಧಾದ ಕಡೆಗೆ ನೋಡುತ್ತಾ ಕುಳಿತಿದ್ದಾರೆ; ಅದಕ್ಕಾಗಿಯೇ ಬ್ರಿಟಿಷ್ ಮಂತ್ರಿ ಮಂಡಲವು ದಿಲ್ಲಿಯ ಕಡೆಗೆ ನೋಡುತ್ತಾ ಕುಳಿತಿದೆ. ವಾರ್ಧಾದಿಂದ ಹೊರಟ ಸ್ವರ ದಿಲ್ಲಿಯಲ್ಲಿ, ದಿಲ್ಲಿಯಿಂದ ಹೊರಟ ಧ್ವನಿ ಲಂಡನಿನಲ್ಲಿ ಏಕ ಕಾಲದಲ್ಲಿ ಪ್ರತಿಧ್ವನಿಸಲಿವೆ. ಆದ್ದರಿಂದ ಭಾರತದ ಭವಿಷ್ಯವೇ ವಾರ್ಧಾ ನಿರ್ಧಾರದಲ್ಲಡಕವಾಗಿದೆ. ಕಾಂಗ್ರೆಸ್ ಈಗ ನಿಜಕ್ಕೂ ಬಿಕ್ಕಟ್ಟಿನಲ್ಲಿ ಸಿಲುಕಿದೆ. ನವದಿಲ್ಲಿಯ ಕಾರ್ಯಕಾರೀ ಸಮಿತಿ ಸಭೆಗಳಲ್ಲಿ ನಿರ್ಧರಿಸಲ್ಪಟ್ಟು ಬೊಂಬಾಯಿಯ ಅ. ಭಾ. ಸಮಿತಿ ಸಭೆಯಲ್ಲಿ ಅಕ್ಷರ ಬದಲಾವಣೆಯೂ ಇಲ್ಲದೆ ಮಂಜೂರಾಗಿರುವ, ತಾತ್ಕಾಲಿಕ ಸರಕಾರ ರಚನೆಯ ವೈಸರಾಯೀ ವಿಧಾನಗಳನ್ನು ತಿರಸ್ಕರಿಸುವ ಮತ್ತು ಘಟನಾ ಸಮಿತಿಯನ್ನು ಅಂಗೀಕರಿಸುವ ಕಾಂಗ್ರೆಸ್ ಠರಾವುಗಳು ಸುಸ್ಪಷ್ಟವಿವೆ. ಕೆಲವು ಪ್ರಮುಖ ಬಾಯಿಯಿಂದ ಒಂದ ವಿಶೇಷ ಮಾತುಗಳು: ಘಟನಾ ಸಮಿತಿಯು ಒಳ ಪ್ರವೇಶ ಮಾಡೆ ತಾವು ಕೈಕೊಳ್ಳಲಿರುವ ಬಹಿಷ್ಕಾರ ವಿಧಾನಗಳಿಗೆ ಸಂಬಂಧಪಟ್ಟವು. ಆ ವಿಧಾನಗಳನ್ನು ತ್ಯಜಿಸಿಕೊಂಡಲ್ಲದೆ ಕಾಂಗ್ರೆಸಿನಿಂದ ಸಾಧ್ಯವೇ ಇಲ್ಲ. ಅದರ ಈಗಲೇ ಆ ವರ್ಣನೆಗೆ ಹೋಗುವ ಅಪ್ರಾಸಂಗಿಕ ಮತ್ತು ಅಚಾತುರ್ಯದ ಕೆಲಸವೆಂಬುದು ನಿರ್ವಿವಾದ. ಆದರೂ ಈ ಅಭಾವ ಇಂದಲ್ಲವಾದರೆ ನಾಳೆ

ಘಟನಾ ಸಮಿತಿ ಸೇರುವ ಮೊದಲಲ್ಲವಾದರೆ ಸೇರಿದ ನಂತರ-ಒದಗುವಂತಹದೇ; ಆದ್ದರಿಂದ ಅವಸರವಾಗಿದ್ದರೂ ಅನ್ಯಾಯವೇನೂ ಆಗಿಲ್ಲ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಯಾವ ನಿರ್ಧಾರ ಮಾಡಬೇಕು? ಗಾಂಧಿಜೀ, ಮೌಲಾನಾ, ವಲ್ಲಭಭಾಯಿ, ರಾಜಾಜಿ ಮುಂತಾದ ಹಿರಿಯರ ನುರಿತ ಮೆದುಳಿನಿಂದ ಒಂದು ಕಾಲೋಚಿತ ನಿರ್ಧಾರ ರೂಪುಗೊಳ್ಳಲಿದೆ ಎಂಬುದು ಖಂಡಿತ.

೦೦ ೦೦ ೦೦

ಈ ಸಂಬಂಧದಲ್ಲಿ ನೆಹರುಗಳ ಅಭಿಪ್ರಾಯಕ್ಕಲ್ಲಿ ವಿಶೇಷ ಬೆಲೆ ಬಾರದೆಂಬುದನ್ನು ಒಪ್ಪಬೇಕು. ಅಧ್ಯಕ್ಷರಾದ ಅಲ್ಪಾವಧಿಯೊಳಗೆ ಪಂಡಿತ ನೆಹರು ನಿರ್ವಲ ಮನಸ್ಸಿನಿಂದಲೇ ಹಲವು ತಪ್ಪುಗಳನ್ನು ಮಾಡಿಬಿಟ್ಟಿದ್ದಾರೆ. ಮೊದಲನೆಯದಾಗಿ ವರ್ಕಿಂಗ್ ಸಮಿತಿ ಸದಸ್ಯರನ್ನಾರಿಸಿಕೊಳ್ಳುವುದರಲ್ಲಿ ರಾಷ್ಟ್ರಪತಿ ಗಾಂಧಿಜೀ ಮೊದಲಾದ ಹಿರಿಯ ಪ್ರಮುಖರ ಪೂರ್ಣ ಮೆಚ್ಚುಗೆಯನ್ನು ಪಡೆದಿಲ್ಲ. ಇದಿರು ವಾದಿಯಾಗಿ ಮಿ. ಜಿನ್ನರಾಡಿದ್ದ 'ಜಂಭದ ಜವಾಹಿರ ಮಕ್ಕಳಾಟಿಕೆ' ಎಂಬ ಅಭಿಪ್ರಾಯವನ್ನೇ ಗುರುವಾಗಿ ಮಹಾತ್ಮ ಗಾಂಧಿಯವರು ನಯಮಾತುಗಳಿಂದ ಆಗಲೇ ಆಡಿತೋರಿಸಿದ್ದರು- "ಕಳೆದ ಬಾರಿ ಮೌಲಾನಾ ಸಾಹೇಬರು ಸೇವೆಯನ್ನು ಅಧರಿಸಿಯೇ ಕಾರ್ಯಕಾರೀ ಸಮಿತಿಗೆ ನೇಮಕಗಳನ್ನು ಮಾಡಿಕೊಂಡಿದ್ದರು. ಹೊರತು ಕೀರ್ತಿಶಾಲಿಗಳಾಗಿ ಮಾರ್ಪಡಿಸಬೇಕೆಂಬ ಉದ್ದೇಶದಿಂದ ಯಾರನ್ನೂ ನೇಮಿಸಿಕೊಂಡಿರಲಿಲ್ಲ. ಆದರೂ ಹಿರಿಯ ಪ್ರಮುಖರ ಉಪದೇಶದಂತೆ ವರ್ತಿಸಿದರೆ ಪಂಡಿತ ನೆಹರುಗಳು ಎಲ್ಲಾ ಇನ್ನೂ ಸರಿದೂಗಿಸಿಕೊಂಡು ಹೋಗಬಲ್ಲರು." ಎಂದು ಹೊಸಬರ ನೇಮಕಗಳಿಗಾಗಿ ಆಗಲೇ ಗಾಂಧಿಜೀ ಚುಚ್ಚಿದ್ದರು. ಆ ಮೇಲೆ ಘಟನಾ ಸಮಿತಿಯಿಂದ ಸಿಖ್ಖ ಪ್ರತಿನಿಧಿಗಳಿಗೆ ಹಿಂದೆಗೆಯುವ ಅವಕಾಶ ಕೊಟ್ಟು ಕಾಂಗ್ರೆಸ್ ಧೋರಣೆಯನ್ನೇ ಒಮ್ಮೆ ನೆಹರು ಮುರಿದ ಬಿಟ್ಟರು; ಕೂಡಲೇ ತನ್ನ ಪ್ರಮಾದವನ್ನು ಅರಿತುಕೊಂಡು ಕ್ಷಮಾಯಾಚನೆಯೊಡನೆ ಘಟನಾ ಸಮಿತಿ ಮತ್ತಿತರ ಶಾಸನಸಭಾ ಸಂಬಂಧದ ಕಾರ್ಯಗಳ ಸರ್ವ ಹೊಣೆಯನ್ನೂ ಮೌಲಾನಾ ಮತ್ತು ಸರ್ದಾರರಿಗೊಪ್ಪಿಸಿಬಿಟ್ಟರು. ಈಗ ವರ್ಧಾ ಸಭೆಯು ಅಜಾದ್, ಪಟೇಲ್, ಮತ್ತು ರಾಜೇಂದ್ರ ಪ್ರಸಾದರಿಗೆ ಆ ವಿಭಾಗದ ಸರ್ವಾಧಿಕಾರಗಳನ್ನೂ ಸಮರ್ಪಣೆ ಮಾಡಿದೆ. ಆ ಮೇಲೆ ಘಟನಾ ಸಮಿತಿಯ ಕುರಿತಾದ ನೆಹರುಗಳ ಹೇಳಿಕೆಗಳೂ ಮೇಲಿನ ಕಾರಣದಿಂದ ಹಿರಿಯ ಪ್ರಮುಖರಿಗಪ್ರಿಯವಾಗಿವೆ ಎಂಬುದು ನಿರ್ವಿವಾದ. ನವಮಾಸ ತುಂಬದೇನೇ ಅಕಾಲ ಪ್ರಸವವಾಗಿದೆ--ಕಾಂಗ್ರೆಸ್ ಧೋರಣೆ ನೆಹರುಗಳ ಬಾಯಿಯಿಂದ! ಆದ್ದರಿಂದ ವಾರ್ಧಾ ಸಭೆಯಲ್ಲಿ ನೆಹರುಗಳಿಗೆ ಗಾಂಧಿಜೀಯ ಗುಪ್ತೋಪದೇಶ ದೊರೆತಿರಬಹುದು. ಮುಂದೆ ಅವರ ಸ್ಫೂರ್ತಿಗೊಂದು ಅಂಕೆಯಿರಬಹುದು.

೦೦ ೦೦ ೦೦

ವಾರ್ಧಾ ಕಾಂಗ್ರೆಸ್ ಸಮಿತಿ ಸಭೆಯ ರಾಜಕೀಯ ಹಿನ್ನೆಲೆ ಹೀಗಿದ್ದರೆ ಅದರ ಬಾಹ್ಯರೂಪ ಕೂಡಾ ಕಂಟಕರಹಿತವಾಗಿಲ್ಲ. ಡಾ। ಅಂಬೇಡ್ಕರರ ಶೆಡ್ಯೂಲ್ಡ್ ಕ್ಲಾಸಸ್ ಫೆಡರೇಶನಿನವರ ನಿಷೇಧ ಪ್ರದರ್ಶನ ಮತ್ತು ಬೊಬ್ಬೆಗಳು ವಾತಾವರಣವನ್ನು ಕದಡಿದ್ದುವು. ಕಾಂಗ್ರೆಸ್ ಸಮಿತಿ ಸಭೆ ಸೇರಿದ್ದ ಬಜಾಜ್ ವಾಡಿಯ ಮುಂಗಡೆ ಧ್ವನಿವಾಹಕ ಯಂತ್ರವನ್ನು ಉಪಯೋಗಿಸಿ ಕಾಂಗ್ರೆಸ್ ವಿರುದ್ಧ ಘೋಷಗಳನ್ನವರು ಎಬ್ಬಿಸುತಿದ್ದುದರಿಂದ ಕೆಲಸ ನಡೆಯುವದು ಕಷ್ಟವಾಗಿತ್ತು. ಕಾಂಗ್ರೆಸ್ ಭಕ್ತ ಹರಿಜನರು ಅಧಿಕ ಸಂಖ್ಯೆಯಲ್ಲಿ ನೆರೆದು ಈ ನಿಷೇಧ ವೀರರಿಗಿದಿರಾಗಿ ಕಾಂಗ್ರೆಸ್ ಘೋಷಗಳನ್ನೆಬ್ಬಿಸ ಹತ್ತಿದರು. ಇದರಿಂದ ಗಲಭೆ ಮತ್ತಷ್ಟು ಹೆಚ್ಚಿತು ಹೊರತು ಅಪೇಕ್ಷಿತ ಶಾಂತಿಯೊದಗಲಿಲ್ಲ. ಕೊನೆಗೆ ಶ್ರೀ. ಕಮಲನಯನ ಬಜಾಜರು ಬಂದು ಕಾಂಗ್ರೆಸ್ ಹರಿಜನರನ್ನು ಸಂತೈಸಿ ಕಳುಹಿಸಬೇಕಾಯಿತು. ಅಂಬೇಡ್ಕರ್ ಹರಿಜನರು ಅಲ್ಲಿಯೇ ಕರಿ ಪತಾಕೆಗಳೊಂದಿಗೆ ಹಠ ಹಿಡಿದು ಕುಳಿತಿದ್ದರು. ಗಾಂಧಿಜೀ ಸಮೇತ ಎಲ್ಲಾ ಪ್ರಮುಖರೂ ಮಾತಾಡದೆ ಹೋಗಿದ್ದರೂ, ಪಂಡಿತ ನೆಹರುಗಳು ತನ್ನ ಕಾರಿನ ಪಕ್ಕದ ತಗಡಿನಲ್ಲಿ ನಿಂತು ಕೈಯೆತ್ತಿ ಈ ಪ್ರದರ್ಶಕರನ್ನು ಅಣಕಿಸದೆ ಹೋಗಲಿಲ್ಲ. ಇದು ನೆಹರು ಸ್ಫೂರ್ತಿಯ ಮತ್ತೊಂದು ಮಾದರಿ!

೦೦ ೦೦ ೦೦

ವಾರ್ಧಾ ಸಮಿತಿಯ ಮತ್ತೊಂದು ದುರದೃಷ್ಟವೆಂದರೆ ಇಂತಹ ಪ್ರಾಮುಖ್ಯ ನಿರ್ಧಾರದ ಸಭೆಗೇನೇ ಹಲವು ಸದಸ್ಯರಿಗೆ ಬರಲು ಅನಾನುಕೂಲವಾಗಿರುವದು. ಆಮಂತ್ರಿತರಾಗಿರುವ ಹಿರಿಯ ಮಾಜೀ ಸದಸ್ಯರ ಪೈಕಿ ವಿಶೇಷ ಕಾಹಿಲೆಗೊಳಗಾಗಿದ್ದರೂ ಸರೋಜಿನಿ ದೇವಿ ಬಂದುದು ವಿಶೇಷ. ಕಾಶ್ಮೀರದ ಪ್ರಜಾ ನಾಯಕ ಶೇಖ್ ಅಬ್ದುಲ್ಲಾರ ಡಿಫೆನ್ಸ್ ವ್ಯವಸ್ಥೆಯಲ್ಲಿರುವ ಮಿ. ಆಸಫ್ ಆಲಿಗಳಿಗೆ ಬರಲಾಗಲಿಲ್ಲ. ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ರಾಫಿ ಅಹಮ್ಮದ್ ಕಿಡ್ವಾಯಿಯವರೂ ಬಂದಿಲ್ಲ. ವಿಮಾನ ಹತ್ತಿ ಹೊರಟಿದ್ದ ಪಂಡಿತ ಗೋವಿಂದ ವಲ್ಲಭ ಪಂತರು ಹವೆಯ ಪ್ರತಿಕೂಲದಿಂದಾಗಿ ಭೋಪಾಲದ ನಿಲ್ದಾಣದಲ್ಲೇ ನಿಲ್ಲಬೇಕಾಯಿತು. ಕೊನೆಗೆ ನಿರ್ವಾಹವಿಲ್ಲದೆ ರೈಲು ಮೂಲಕ ದೊಡ್ಡ ಪ್ರದಕ್ಷಿಣೆ ತೆಗೆದು ಅವರು ವಾರ್ಧಾ ಮುಟ್ಟಿದ್ದಾರೆ. ಬಾಬು ರಾಜೇಂದ್ರ ಪ್ರಸಾದರೂ ಗೈರು ಹಾಜರಾಗಿದ್ದಾರೆ. ಎಡಪಕ್ಷೀಯ ಹೊಸ ಸದಸ್ಯರೆಲ್ಲಾ ಉತ್ಸಾಹದಿಂದ ನೆರೆದಿದ್ದಾರೆ. ಸದಸ್ಯರು ಮತ್ತು ಆಮಂತ್ರಿತರ ಪೈಕಿ ಮೌಲಾನಾ ಅಜಾದ್ ಮತ್ತು ಮಿ. ಫಕ್ರುದ್ದೀನರಬ್ಬರೇ ಮುಸ್ಲಿಂ ಪ್ರಮುಖರು ಈ ಬಾರಿ ಹಾಜರಿರುವದು ಲೀಗಿನಂತಹ ಹೊಂಚುಗಾರರಿಗೆ ವಿಶೇಷಾರ್ಥ ಕಟ್ಟಲು ಅವಕಾಶ ಕೊಡಬಹುದು. ಸಿಖ್ ನಾಯಕರಾದ ಕರ್ನಲ್ ನಿರಂಜನಸಿಂಗ್ ಮೊದಲಾದವರ ಒಂದು ಶಿಷ್ಟಮಂಡಲಿ ವಾರ್ಧಾಕ್ಕಾಗಮಿಸಿ ಪ್ರಮುಖರೊಡನೆ ಗಾಢ ಸಂಭಾಷಣೆ ನಡೆಸಿವೆ. ಅಂತೂ ಈ ಬಾರಿಯ ಚರಿತ್ರಾರ್ಹ ವಾರ್ಧಾ ಕಾಂಗ್ರೆಸ್ ಸಮಿತಿ ಸಭೆಯು ನಾಲ್ಕೂ ದಿಕ್ಕಿನ ಒತ್ತಡ, ಕದಡಿದ ವಾತಾವರಣದಲ್ಲಿ ಸೇರಿದ್ದರೂ, ಅದರ ವಿಚಾರ ವಿಮರ್ಶೆಗಳು ಅತ್ಯಂತ ಚಿಕಿತ್ಸಕ ಮನೋಸ್ಥಿತಿಯಲ್ಲಿ ನಡೆಯಬೇಕಾಗಿದ್ದರೂ, ಕಾಂಗ್ರೆಸ್ ನಿರ್ಧಾರವು ಯಂತ್ರಕ್ಕೆ ಸಿಕ್ಕಿ ಹೊರಡುವ ತೀಕರಸದಂತೆ ಹೊರಬಿದ್ದು ಭವಿಷ್ಯವನ್ನು ನಿರ್ಮಲಗೊಳಿಸುವದು ಖಂಡಿತ.

ಕೆರಳಿಸುವ ಮತ್ತು ಅಲ್ಪಬುದ್ಧಿಯ ಕೃತ್ಯಗಳು ಮಿತ್ರರಿಂದ ಎಷ್ಟೇ ನಡೆದರೂ ಕಾಂಗ್ರೆಸ್ ತನ್ನ ಘಟನೆಗನುಗುಣವಾಗಿ ಮೇಲ್ಪಟ್ಟದಲ್ಲೇ ನಿಲ್ಲುವದೆಂಬುದನ್ನು ಪ್ರದರ್ಶಿಸುವ ವಾರ್ಧಾ ನಿರ್ಣಯಗಳು ಈ ಸಂಚಿಕೆಯ ಬೇರೆ ಕಡೆಯಲ್ಲಿವೆ.



Approved firm by the Gov. of Mysore
Certified by the Agent of the Govt. of Cylone Indian.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ-
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

BANK WITH THE LARGEST CONNECTIONS ON THE WEST COAST

OFFERS:-
EFFICIENT,
PROMPT &
COURTEOUS
SERVICE OF EVERY TYPE

OPEN AN ACCOUNT
with
The Canara Industrial & Banking Syndicate Ltd
ESTD: 1925

ಗೊಂದಲಮಯ ವಾತಾವರಣ

ದ. ಭಾ. ರೈಲ್ವೇ ಮುಷ್ಕರ?

ಕೆಲಸದಿಂದ ವಿನಾಯತಿಗೊಳಿಸಿದ ಏಳು ಮಂದಿ ಕೆಲಸಗಾರರನ್ನು ಮರಳಿ ಸೇರಿಸಿಕೊಳ್ಳಬೇಕು; ಕಳೆದ ಫೆಬ್ರವರಿಯಿಂದಿದು ವರೆಗಿನ ಕೆಲವು ಮುಷ್ಕರಗಳ ಅವಧಿಯ ಸಂಬಳ ತುಟ್ಟಿಭತ್ತೆ ಇತ್ಯಾದಿಗಳನ್ನು ಕೊಡಬೇಕು; ಇತ್ಯಾದಿ ಕೆಲವು ಬೇಡಿಕೆಗಳನ್ನು ಮುಂದಿಟ್ಟು ಪೂರೈಸಿಕೊಡದಿದ್ದಲ್ಲಿ ಇದೇ ಆಗೋಸ್ತು ತಾ. 14 ಕಳೆದು 15 ಹಿಡಿಯುವ ಮಧ್ಯ ರಾತ್ರಿಯಿಂದ ಮುಷ್ಕರಾರಂಭಿಸುವದಾಗಿ ದಕ್ಷಿಣ ಭಾರತ ರೈಲ್ವೇ ಕೆಲಸಗಾರರ ಸಂಘದವರು ದಕ್ಷಿಣ ಭಾರತ ರೈಲ್ವೆಯ ಜನರಲ್ ಮೆನೇಜರರಿಗೆ ನೋಟೀಸು ಕೊಟ್ಟಿದ್ದರು. ಜನರಲ್ ಮೆನೇಜರ್ ಮತ್ತು ಕೆಲಸಗಾರ ಪ್ರಮುಖರೊಳಗೆ ಇದೇ ತಾ. 10ರಲ್ಲಿ ನಡೆದ ಸಂಧಾನ ಮಾತುಕತೆ ಮುರಿದು ಹೋಗಿದೆ. ಆದ್ದರಿಂದ ದಕ್ಷಿಣ ಭಾರತದಲ್ಲೆಲ್ಲಾ ರೈಲ್ವೇ ಮುಷ್ಕರಾರಂಭವಾಗುವ ಅಪಾಯವುಂಟಾಗಿದೆ. 'ಇದೇ ತಾ. 14ನೇ ಮಧ್ಯ ರಾತ್ರಿಯ ನಂತರ ಆಗೋಸ್ತು 31ನೇ ತಾರೀಕಿನ ಒಳಗಿನ ಯಾವ ಕಾಲದಲ್ಲಾದರೂ ಕೆಲವು ರೈಲ್ವೇ ಸರ್ವಿಸುಗಳನ್ನು ನಿಲ್ಲಿಸಬೇಕಾಗಿ ಬರಬಹುದು' ಎಂದು ರೈಲ್ವೆಯ ಜನರಲ್ ಮೆನೇಜರರು ಸಾರ್ವಜನಿಕರ ಅವಗಾಹನೆ ಬಗ್ಗೆ ಪ್ರಕಟಿಸಿದ್ದಾರೆ.

ಸರಕಾರೀ ನೌಕರರ ಚಳವಳ

ಮದ್ರಾಸ್ ಪ್ರಾಂತ್ಯದಲ್ಲಿ ಸುಮಾರು ಒಂದು ಲಕ್ಷದಷ್ಟಿರುವ 'ನೋನ್ ಗಝೇಟೆಡ್' ಸರಕಾರೀ ನೌಕರರು ತಮಗಿರುವ ಅಲ್ಪ ಸಂಬಳ ಮತ್ತು ಅನಾನುಕೂಲತೆಗಳನ್ನು ನಿವಾರಿಸಿಕೊಳ್ಳಲು ಈಗ ಪ್ರತ್ಯಕ್ಷ ಚಳವಳ ಹೂಡುವ ಧೋರಣೆ ವಹಿಸಿದ್ದಾರೆ. ಈ ನಗರದ ಪರವಾಗಿ ಬಿನ್ನವಿಸಲು ಬಂದ ಶಿಷ್ಟ ಮಂಡಲಕ್ಕೆ ಪ್ರಧಾನಿ ಪ್ರಕಾಶಮರಿಂದ ಸಮಾಧಾನಕರ ಉತ್ತರ ದೊರೆಯಲಿಲ್ಲ. ಮದ್ರಾಸ್ ನಗರದಲ್ಲಿಯೂ ಪ್ರಾಂತ್ಯದ ಜಿಲ್ಲೆಗಳಲ್ಲಿಯೂ ಕೆಳ ನೌಕರರ ಪ್ರಚಂಡ ಸಭೆ, ಮೆರವಣಿಗೆಗಳು ನಡೆಯಹತ್ತಿವೆ. ಮದ್ರಾಸಿನಲ್ಲಿ ಆಗೋಸ್ತು ತಾ 25ಕ್ಕೆ ಅಖಿಲ ಪ್ರಾಂತಿಕ ಕೆಳ ನೌಕರರ ಸಮ್ಮೇಲನವು ಕರೆಯಲ್ಪಟ್ಟಿದೆ ತಮ್ಮ ಬೇಡಿಕೆಗಳನ್ನು ಮನ್ನಿಸದಿದ್ದರೆ ಪ್ರತ್ಯಕ್ಷ ಚಳವಳ ಹೂಡುವ ನಿರ್ಧಾರವು ಆ ದಿನ ಆಗಲಿದೆ. ಸೇಲಮ್, ಮಧುರಾ, ಊಟಿ, ಕರೂರು, ಕೊಳ್ಳೆಗಾಲ, ಕಡಲೂರು, ನಾಗಪಟ್ಟಮ್, ಮನ್ನಾರ ಗುಡಿ, ತಿನ್ನವೆಲ್ಲಿ, ತಿರುಚಿನಾಪಳ್ಳಿ, ಮದನಪಳ್ಳಿ, ತಿರುಪತಿ, ಬಳ್ಳಾರಿ, ತಲಿಚೇರಿ, ಪೊಲ್ಲಾಚಿ, ಧಾರಾಪುರಮ್, ಉದಾಮಲ್ ಪೇಟೆ, ತಂಜಾವೂರು, ಕಲ್ಲಿಕೋಟೆ, ಇರೋಡು, ಕುಲಿತಲಾಲ್, ಪೊನ್ನೇರಿ, ಕಂಜೀವರಮ್, ಅನಂತಪುರ, ಪಾಲ್ಘಾಟ್, ಮುಸಲಿಪಟ್ಟಮ್, ಕೋಕನಾಡ, ಎಲ್ಲೂರು, ಚಿಂಗಲ್ಪೇಟೆ, ಬಿಲ್ಲುಪುರಮ್, ವೆಲ್ಲೂರು ಮೊದಲಾದ ಕಡೆಗಳಲ್ಲಿ ನೌಕರರ ಸಭೆ, ಮೆರವಣಿಗೆ ಮತ್ತು ಸ್ಫೂರ್ತಿದಾಯಕ ಭಾಷಣಗಳು ನಡೆದಿವೆ. ಮದ್ರಾಸಿನ ಸರಕಾರಿ ಮುಖ್ಯ ಕಚೇರಿಯಲ್ಲೂ ಇತರ ಆಫೀಸುಗಳಲ್ಲೂ ಕೆಲಸ ಮಾಡುವ ನೌಕರರೆಲ್ಲಾ 'ವಿಪರೀತ ಕೆಲಸ, 'ಅಲ್ಪವೇತನಜಿಸಡ್ಡೆ ಮತ್ತು ಉಪವಾಸಕ್ಕೊಳಗಾದವರು' ಎಂಬಭಿಪ್ರಾಯವನ್ನು ಕೆಂಪಕ್ಷರಗಳಿಂದ ಕೆತ್ತಿಸಿರುವ 'ಸಂಕಟ ಬಿಲ್ಲೆ'ಯನ್ನು ತೊಟ್ಟುಕೊಂಡೇ ಕೆಲಸಮಾಡುತಿದ್ದಾರೆ. ತಾ. 25ರ ವರೆಗೂ ಅವುಗಳನ್ನು ತೊಟ್ಟುಕೊಂಡು ಪ್ರದರ್ಶಿಸುತ್ತಿರಬೇಕೆಂದು ಮದ್ರಾಸಿನ 'ನಾನ್ ಗಝೇಟೆಡ್ ನೌಕರರ ಸಂಘ'ದ ಸೂಚನೆಯಿದೆ.

ಆಗೋಸ್ತು ದಿನಾಚರಣೆ

ದೇಶದ ಸರ್ವ ನಗರ ಮತ್ತು ಹಳ್ಳಿಗಳಲ್ಲಿ ಕೂಡಾ ಆಗೋಸ್ತು ತಾ. 9 ಶಾಂತ ಹಾಗೂ ಪರಿಣಾಮಕಾರೀ ವಿಧಾನಗಳಿಂದಾಚರಿಸಲ್ಪಟ್ಟಿದೆ. ಆದರೂ ಅಲ್ಲಲ್ಲಿ ದಸ್ತಗಿರಿ, ಲಾಠೀ ಚಾರ್ಜು ಮತ್ತು ಕಣ್ಣೀರಹನಿ ಪ್ರಯೋಗಗಳಾಗದೆ ಹೋಗಿಲ್ಲ. ನವದಿಲ್ಲಿಯಲ್ಲಿ ಮೆರವಣಿಗೆ ಹೊರಟ ವಿದ್ಯಾರ್ಥಿಗಳ ಮೇಲೂ ಇತರರ ಮೇಲೂ ಬಾಂಬ ಕಣ್ಣೀರ ಹೊಗೆಯನ್ನು ಪ್ರಯೋಗಿಸಲಾಯಿತು. ೮ ಮಂದಿ ವಿದ್ಯಾರ್ಥಿನಿಯರ ಸಮೇತ 40 ಮಂದಿಯ ದಸ್ತಗಿರಿಯಾಗಿದೆ. ಮಿಲಿಟರಿ ಲೋರಿಗಳಿಗೆ ಕಲ್ಲೆಸೆಯಲ್ಪಟ್ಟು ಇಬ್ಬರು ಬ್ರಿಟಿಷ್ ಸೋಲ್ಜರರಿಗೆ ಜಖಮಾಗಿದೆ. ಲಾಹೋರಿನಲ್ಲಿ ಜನರಲ್ ಸ್ಮಟ್ಸರ ಗೊಂಬೆಮಾಡಿ ಬೆಂಕಿಕೊಟ್ಟರು. ಅಕಾಲ್ಕೋಟ್ ಸಂಸ್ಥಾನದಲ್ಲಿ ಮೆರವಣಿಗೆ ಹೋದ ರೈತರ ಮೇಲೆ ಕಠಿಣ ಲಾಠಿ ಪ್ರಹರವಾಯಿತು. ಮಧುರೆಯ ತಿರುಪರಾಂ ಕುದ್ರಮ್ ಪರ್ವತದಲ್ಲೊಂದು ಮಸೀದಿಯಿರುವದರಿಂದ ಅಲ್ಲಿ ಬಹಿಷ್ಕಾರಾಜ್ಞೆ ಜ್ಯಾರಿಯಲ್ಲಿದೆ. ಆದರೂ ಅದರ ಶಿಖರದಲ್ಲಿ ರಾಷ್ಟ್ರ ಧ್ವಜವೇರಿಸಬೇಕೆಂದು ಪ್ರಯತ್ನಿಸಿದ 125 ಮಂದಿ ದಸ್ತಗಿರಿಯಾಗಿದ್ದಾರೆ.

ಅಶಾಂತಿ-ಗೊಂದಲ

ಮದ್ರಾಸ್ ಪ್ರಾಂತ್ಯದ ಮುನಿಸಿಪಲ್ ನೌಕರರ ಸುಮಾರು ..0 ಸಂಘಗಳು ಸಂಬಳ ಭಡ್ತಿ, ತುಟ್ಟಿಭತ್ತೆಯ ಹೆಚ್ಚಳ, ಮತ್ತು ಗೃಹ ನೌಕರ್ಯದ ಅನುಕೂಲತೆಗಳನ್ನು ಯಾಚಿಸಿ, 14 ದಿನಗಳ ಅವಧಿ ಹಾಕಿ ಕಳೆದ ವಾರದಲ್ಲೇ ಮುಷ್ಕರದ ನೋಟೀಸು ಕೊಟ್ಟಿವೆ. ಆಂಧ್ರ ಭಾಗದ ಸುಮಾರು 30 ಮುನಿಸಿಪಾಲಿಟಿಗಳು ಮತ್ತು ದೊಡ್ಡ ಪಂಚಾಯತುಗಳ 10000 ಕೆಲಸಗಾರರು ಮುಷ್ಕರ ಸಿದ್ಧರಾಗಿದ್ದಾರೆ. ಇಡೀ ಪ್ರಾಂತ್ಯಕ್ಕೊಂದು ಕೇಂದ್ರ ಮುಷ್ಕರ ಸಮಿತಿ ರಚನೆಯಾಗುವದರಲ್ಲಿದೆ. ಪ್ರಾಥಮಿಕ ಅಧ್ಯಾಪಕರು ಸಭೆ, ಪ್ರದರ್ಶನಗಳ ಮೂಲಕ ಪ್ರಾಂತ್ಯದ ಸರ್ವೆಡೆಗಳಲ್ಲೂ ಅತೃಪ್ತಿ ಸೂಚಕ ಕಾರ್ಯಗಳನ್ನು ನಡೆಸಹತ್ತಿದ್ದಾರೆ. ಗೋವಾದ ಸ್ವಾತಂತ್ರ್ಯ ಸಮರವು ಎಂದಿನಂತೆಯೇ ತೀವ್ರ ಗತಿಯಿಂದ ನಡೆಯುತ್ತಿದೆ. 'ಗೋವೆಯಲ್ಲಿ ಅತ್ಯಾಚಾರೀ ಸರಕಾರವೊಂದೇ ಇದ್ದು ಜನರ ಕೈ ಬಾಯಿ ಕಟ್ಟಿದೆ' ಎಂದು ಗಾಂಧಿಜೀ ಖಂಡಿಸಿದ್ದಾರೆ ಗಡಿನಾಡಿನ ಕೋಹಾಟ್ ಬಳಿಯ ಕಾಡು ರಸ್ತೆಯೊಂದರಲ್ಲಿ ಕಾಡುವಾಸಿ ಧಟಾಯಿತರು, ಮದುವೆಗಾಗಿ ಹೊರಟಿದ್ದ ಹಿಂದೂ ಪಂಗಡವೊಂದರ ಮೇಲೆಬಿದ್ದು ಒಬ್ಬನನ್ನು ಕೊಂದು 5 ಮಂದಿಯನ್ನೂ ಚಿನ್ನಾಭರಣಗಳನ್ನೂ ಎತ್ತಿಕೊಂಡು ಹೋಗಿದ್ದಾರೆ. ಅಲ್ಲಿಯೇ ಅಧಿಕಾರೀ ದಳವೊಂದರ ಮೇಲೆ ಕಾಡುವಾಸಿಗಳಿಂದ ಗುಂಡೆಸೆಯಲ್ಪಟ್ಟು ಒಬ್ಬ ಬ್ರಿಟಿಷ್ ಆಫೀಸರನು ಮಡಿದು ಮತ್ತೊಬ್ಬ ಜಖಂಗೊಂಡಿದ್ದಾನೆ.

ಪ್ಯಾರಿಸಿನ ಶಾಂತಿ ಸಮ್ಮೇಲನ

ಯುದ್ಧ ಕಾಲದಲ್ಲಿ ಆಕ್ಸಿಸ್ ರಾಷ್ಟ್ರಗಳೊಡನೆ ಸಹಕರಿಸಿದ್ದ ಇಟೆಲಿ ಮತ್ತಿತರ ರಾಷ್ಟ್ರಗಳ ಸಂಬಂಧದ ತೀರ್ಮಾನಗಳಿಗಾಗಿ ಪ್ಯಾರಿಸಿನಲ್ಲಿ ನೆರೆದಿದ್ದ 21 ಮಿತ್ರರಾಷ್ಟ್ರಗಳ ಶಾಂತಿ ಸಮ್ಮೇಲನದಲ್ಲಿ ತೀವ್ರಭಿನ್ನಾಭಿಪ್ರಾಯಗಳೆದ್ದಿವೆ. ಸಮ್ಮೇಲನದ ನಿರ್ಧಾರಗಳು ತ್ರಿನೇ ಬಹುಮತವನ್ನಾಧರಿಸಿರಬೇಕೆಂಬ ಸೋವಿಯೆಟ್ ಸೂಚನೆಯ ಪರ್ಯಾಲೋಚನೆಗಾಗಿ ರಚನೆಗೊಂಡಿದ್ದ 'ನಿಯಮ ನಿರ್ಧಾರಕ' ಸಮಿತಿಯಲ್ಲಿ ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಬಯರ್ನೆಸರಿಗೂ ರಶ್ಯದ ವಿದೇಶ ಮಂತ್ರಿ ಮೊಲಟವರಿಗೂ ತೀಕ್ಷ್ಣ ವಾಕ್ಕಲಹ ನಡೆಯಿತು. ಸಮ್ಮೇಲನದಲ್ಲಿ ರಶ್ಯದ ಸೂಚನೆಯು ಬಿದ್ದು ಹೋಗಿ ಎ ರಿ ಬಹುಮತದಿಂದಲೇ ನಿರ್ಧಾರವಾಗಬೇಕೆಂದಾಯಿತು. ಚೀನಾ ಮತ್ತು ಭಾರತದ ಪ್ರತಿನಿಧಿಗಳು ರಶ್ಯದ ವಿರುದ್ಧ ಮತ ಕೊಟ್ಟಿದ್ದರು. ಈಗಲೂ ಶಾಂತಿ ಸಮ್ಮೇಲನವೊಂದು ಒಮ್ಮತಕ್ಕೆ ಬಂದಿಲ್ಲ. ತಮಗೆ ಹಾಕಿದ ಕಠಿಣ ಶರ್ತಗಳ ಕಠೋರತೆಯು ವರ್ಣನಾತೀತವಿದೆ ಎಂದು ಇಟೆಲಿ ಪ್ರತಿನಿಧಿ ಮೊರೆಯಿಟ್ಟಿದ್ದಾನೆ.

ಪೆಲಸ್ಟೈನ್ ಸಮಸ್ಯೆ

ಪೆಲಸ್ಟೈನಿನ ಅರಬಿ-ಯಹೂದಿ ಜಗಳ ತೀರ್ಮಾನಕ್ಕಾಗಿ ಆಂಗ್ಲೋ-ಅಮೇರಿಕನ್ ತಜ್ಞರ ಸಮಿತಿಯೊಂದು ಪೆಲಸ್ಟೈನನ್ನೊಂದು ಕೇಂದ್ರಾಧಿಕಾರದ ಕೈಕೆಳಗೆ ನಾಲ್ಕು ವಿಭಾಗವಾಗಿ ಮಾಡುವ ಯೋಜನೆ ತಯಾರಿಸಿದ್ದಿತು. ಈ ಕುರಿತು ಆಂಗ್ಲೋ-ಅಮೆರಿಕಾನ್ ಸರಕಾರಗಳೊಳಗ ಭಿನ್ನಾಭಿಪ್ರಾಯವೆದ್ದಿದೆ. ಯುರೋಪಿನ ಯೆಹೂದಿಗಳಾರೂ ಪೆಲಸ್ಟೈನಿನೊಳಗೆ ಪ್ರವೇಶಿಸದಂತೆ ಸಮುದ್ರ ಪಹರೆಯಿಡಲು ಬ್ರಿಟನು ನಿರ್ಧರಿಸಿದೆ. ಆದರೆ ಒಂದು ಲಕ್ಷ ಯೆಹೂದಿಗಳಿಗಾದರೂ ಕ್ರಮಬದ್ಧ ಪ್ರವೇಶಕೊಡಬೇಕೆಂದು ಅಮೇರಿಕವು ಅಪೇಕ್ಷಿಸುತ್ತಿದೆ. ಈ ಕುರಿತಾಗ ಒಂದು ಸುಧಾರಿತ ಯೋಜನೆ ತಯಾರಾಗಿದ್ದು ಪ್ಯಾರಿಸಿನಲ್ಲಿ ಇಕ್ಕಡೆಯ ವಿದೇಶ ಮಂತ್ರಿಗಳಾದ ಬೈರ್ನೆಸ್, ಮೊಲಟವರು ಅದನ್ನು ತಮ್ಮೊಳಗೆ ಚರ್ಚಿಸುತಿದ್ದಾರೆಂದೂ ತಿಳಿದುಬಂದಿದೆ. ಆಂಗ್ಲೋ ಅಮೆರಿಕನರ ಯೋಜನೆಗಳಿಗೆ ಯೆಹೂದೀ ಮತ್ತು ಅರಬರಿಬ್ಬರೂ ವಿರೋಧವಿದ್ದು ಪೆಲಸ್ಟೈನಿನ ಅಶಾಂತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಇತರ ಗೊಂದಲಗಳು

ಚೀನದ ಸರಕಾರ ಮತ್ತು ಕಮ್ಯೂನಿಸ್ಟ್ ಪಕ್ಷಗಳೊಳಗೆ ರಾಜಿ ಮಾಡಿಸಲು ಕಳುಹಲ್ಪಟ್ಟಿದ್ದ ಅಮೇರಿಕದ ಜನರಲ್ ಮಾರ್ಶಲರು ಆ ಕೆಲಸದಲ್ಲಿ ಜಯಶೀಲರಾಗಿಲ್ಲ ತಮ್ಮ ಪರಾಭವವನ್ನೊಪ್ಪಿ ಅಮೇರಿಕನ್ ಪ್ರಕಟಣೆಯೊಂದು ಹೊರಟಿದೆ ಜಾವಾದ ರಿಪಬ್ಲಿಕನ್ ಸರಕಾರವನ್ನು ಮುರಿಯಲು ಡಚ್ಚರು ಆಕಾಶಧಾಳಿ ನಡೆಸುತ್ತಲೇ ಇದ್ದಾರೆ. ಅದಕ್ಕಾಗಿ ಆಗೋಸ್ತು ತಾ 17ಕ್ಕೆ 'ಇಂಡೋನೇಶಿಯಾ ಸ್ವಾತಂತ್ರ್ಯದಿನಾಚರಣೆ' ನಡೆಸಬೇಕೆಂದು ನೆಹರುಗಳ ವಿನಂತಿಯಿದೆ. ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಸತ್ಯಾಗ್ರಹವು ಯಥಾಪ್ರಕಾರ ನಡೆಯುತ್ತಿದೆ. ಕಾರಾಗೃಹದಲ್ಲಿ ಸತ್ಯಾಗ್ರಹಿಗಳ ಮೇಲೆ ಅಮಾನುಷ ಅತ್ಯಾಚಾರಗಳನ್ನು ನಡೆಸುತಿದ್ದಾರೆ.

ನವಯುಗದ ಚಂದಾದಾರರಲ್ಲಿ ವಿನಂತಿ—ಇದೇ ಆಗೋಸ್ತು ತಿಂಗಳಂತ್ಯಕ್ಕೆ ನವಯುಗದ 25ನೇ ಸಂಪುಟವು ಸಮಾಪ್ತಿಯಾಗಿ ಸಪ್ಟಂಬರ ತಿಂಗಳ ಆರಂಭದಿಂದ ಹೊಸ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಎಲ್ಲಾ ಚಂದಾದಾರರು ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಬಾಕಿಯಿದ್ದರೆ ಅದನ್ನು ಪೋಸ್ಟಲ್ ಆರ್ಡರ್ ಮೂಲಕ ದಯಮಾಡಿ ಆದಷ್ಟು ಬೇಗನೆ ಕಳಿಸಿಕೊಡುವಂತೆ ವಿನಂತಿ. ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಕಿಂಗ್ ಸಿಂಡಿಕೇಟಿನ ಶಾಖೆಗಳಿದ್ದಲ್ಲಿ ಯಾವಖರ್ಚು ಇಲ್ಲದೆ ನವಯುಗದ ಲೆಕ್ಕಕ್ಕೆ ಚಂದಾ ಹಣವನ್ನು ಕೊಟ್ಟು ರಶೀದಿ ಪಡೆಯಬಹುದು.

ಮೆನೇಜರ್.

ಸಂಗ್ರಹಣೀಯ ಸಂಪುಟ

ಕೆಲವೆ ಪ್ರತಿಗಳು. ಧರ್ಮಾಭಿಮಾನಿಗಳು ತ್ವರೆಮಾಡಿರಿ.

ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀಗಳ ಪರ್ಯಾಯದ ಅವಧಿಯಲ್ಲಿ ಪ್ರಕಾಶಿಸಲ್ಪಟ್ಟು ಜನಪ್ರಿಯವಾದ ಧಾರ್ಮಿಕ ಮಾಸ ಪತ್ರಿಕೆ

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ

ಇದರ ಎರಡು ಸಂಪುಟಗಳು.

ಗೀತೆಯ ಮಹಾತ್ಮೆಯನ್ನು ಬೋಧಿಸುವ ಕತೆಗಳೂ ನೀತಿಬೋಧಕ ಬೇರೆ ಕತೆಗಳೂ ಪಂಡಿತರ ವಿವಿಧ ಉಪಾದ್ಯಮ ಲೇಖನಗಳೂ ಉಡುಪಿ ಶ್ರೀಕೃಷ್ಣ ಮಠದ ಸಕಲ ಆಗುಹೋಗುಗಳ ವಿವರಗಳೂ ಈ ಸಂಚಿಕೆಗಳಲ್ಲಿದ್ದು ಸರ್ವರಿಂದಲೂ ಸಂಗ್ರಾಹ್ಯವಾದ ಸಂಪುಟ. ಬೇಕಾದವರು 4-8-0 ಕಳುಹಿಸಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ರಾಜಗೋಪಾಲಾಚಾರ್ಯ,
ಕರಂಬಳ್ಳಿ, ಉಡುಪಿ.

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನನ್ನ ಮುದ್ದು 0-4-0; (2) ಕಿಂಡರ್ ಗಾರ್ಟನ್ ಬೋಧನೆ 0-2-0; (3) ಚಲಚ್ಚಿತ್ರ ಪದ್ಯಾವಳಿ 0-2-0; (4) ವೀರಭೂಮಿ 0-2-0; (5) ಸಂಭುಕ ವಧೆ 0-2-0 (6) ಅದ್ದ ಬೆಳೆದ ಗಿಡ್ಡಿಯ ಮದುವೆ 0-2-0 (7) ಮುದುಕನ ಮೆಂಡ್ತಿ, ಥಕ ಥ್ಯಾ ರಾಥೆ 0-2-0 (8) ಬಂಗಾರ್ದಾಗಿನ ಕತೆ 0-1-0; (9) ಏಕಾಂತ ರಾಮಾಯಣ 0-1-0; (10) ಭಾರತ ಗೀತಾಂಜಲಿ 0-2-0; ಒಂದು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿ ಪೋಸ್ಟಲ್ ಆರ್ಡರು ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು. ವಿ. ಪಿ ಮಾಡುವುದಿಲ್ಲ

ನವಭಾರತ ಪುಸ್ತಕ ಭಂಡಾರ, ಉಡುಪಿ.

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

CAPITAL

Authorised	... ...	Rs 25,00,000
Issued & Subscribed	...	,, 16,00,000
Paid up	... ...	,, 15,64,715
Reserves Over ...	...	,, 4½ Lakhs

Branches at– Bombay, Madras, Bangalore, Coimbatore, Selem, Calicut, Hubli Mysore, Cochin, Manglore, Madras etc., etc.

Banking Business of Every Description Transacted.

MANAGER'S NOTICE

There will be no issue of the NAVAYUGA on the 22nd inst on account of Sri Krishna Jayanthi.

ಶ್ರೀ ಕೃಷ್ಣ ಜಯಂತಿಯ ಸಂಬಂಧ ಬರುವ ವಾರದ ಅಂದರೆ ತಾ 22-8-46ರ ನವಯುಗ ಸಂಚಿಕೆಯು ಹೊರಡುವುದಿಲ್ಲ

—ಮೆನೇಜರ್.

ಉಡುಪಿ, ಗುರುವಾರ, ೧೫-೮-'೪೬.

ಬಂಧುಭಾವ ಮೊಳೆಯಲಿ!

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ವಾರ್ಧಾ ನಿರ್ಣಯಗಳು ಬಿಸಿಯೇರಿದ ವಾತಾವರಣವನ್ನೊಮ್ಮೆ ತಣಿಸಿವೆ ಘಟನಾ ಸಮಿತಿ ಸಂಬಂಧದ ಆದರ ಮೊದಲ ನಿರ್ಣಯದ ಪುಷ್ಟೀಕರಣ ಮತ್ತು ಸ್ಪಷ್ಟೀಕರಣವು ಸಂದೇಹಕ್ಕವಕಾಶವೇ ಇಲ್ಲದಂತೆ ಶಹಭಾಸ್ ಪಡೆಯುವ ರೀತಿಯಿಂದ ಆಗಿದೆ. ಕಾಂಗ್ರೆಸ್ ಶರ್ತ ಹಾಕಿ ಅಥವಾ ತನ್ನದೇ ಆದ ಅರ್ಥವನ್ನು ಕಟ್ಟಿಕೊಂಡು ಘಟನಾ ಸಮಿತಿಯೊಳಗೆ ಪ್ರವೇಶಿಸಲಿದೆ ಎಂಬ ಭೀತಿಯೇ ಮಿ. ಜಿನ್ನರ ಇಂದಿನ ಕ್ರೋಧಾವೇಶಗಳಿಗೆ ಹೇತುವಾಗಿದ್ದರೆ ಆ ವರೀಗ ನಿ ಜಕ್ಕೂ ಶಾಂತಿಯುಸಿರನ್ನು ಬಿಡಬಹುದು; ಘಟನಾ ಸಮಿತಿಗೆ ಹಾಕಿದ ಬಹಿಷ್ಕಾರ ಮತ್ತು ಪ್ರತ್ಯಕ್ಷ ಹೋರಾಟದ ಬೆದರಿಕೆಗಳನ್ನು ಲೀಗ್ ಇನ್ನಾದರೂ ಹಿಂದೆಗೆದುಕೊಳ್ಳಬಹುದು. ತಾತ್ಕಾಲಿಕ ಸರಕಾರ ರಚನೆಯ ವಿದಾನಗಳ ಮಟ್ಟಿಗೆ ಕಾಂಗ್ರೆಸ್ ಮತ್ತು ಲೀಗುಗಳೊಳಗಿದ್ದ ಭಿನ್ನಾಭಿಪ್ರಾಯಗಳನ್ನೊಂದು ಗೂಡಿಸುವ ತೀರ್ಮಾನ ಇಷ್ಟರ ವರೆಗಾಗಿಲ್ಲ. ಆದರೆ ಘಟನಾ ಸಮಿತಿಯ ಮಟ್ಟಿಗೆ ಹಿಂದಿನಂತ ಲೀಗನ್ನು ಕಾಕೊಂಡೆಯ್ಯಲು. ಕಾಂಗ್ರೆಸ್ ಪ್ರ ಬಂದಿಂದು (ಈ ಮೊದಲಾ ವರು ಇದು ಹಾದಿ ಬಿಟ್ಟು ಹೋಗದೆ ಸಾಕಷ್ಟು ಹೆಜ್ಜೆ ಮುಂದೆ ಮಾತ್ರ ಹೋಗಿತ್ತು ಬಂದುಭಾವದಿಂದ ಕರೆಯುತ್ತಿದೆ ಇದನ್ನು ಮರೆತು ತಾತ್ಕಾಲಿಕ ಸರಕಾರ ರಚಿಸುವ ಹೊಣೆಯನ್ನು ವೈಸರಾಯರು ಕಾಂಗ್ರೆಸ್ ಅಧ್ಯಕ್ಷರಿಗಿತ್ತರೆಂಬ ವಾರ್ತೆ ಬಂದಿದೆ ಮುಸ್ಲಿಂ ಲೀಗನ್ನು ಕೂಡಿಕೊಂಡೇ-ಎಷ್ಟಕ್ಕೂ ಅಸಾಧ್ಯವಾದರೆ ಅದನ್ನು ಬಿಟ್ಟಾದರೂ–ನಡುಗಾಲ ರಾಷ್ಟ್ರೀಯ ಸರಕಾರ ಸ್ಥಾಪಿಸುವ ಹೊಣೆಯನ್ನು ಲೋರ್ಡ್ ವೇವೆಲರು ಕಾಂಗ್ರೆಸಿಗೆ ಒಪ್ಪಿಸಿಕೊಟ್ಟರೆಂದು ಭಾವಿಸಬಹುದು. ಮುಂದೇನು? ಮುಸ್ಲಿಂ ಲೀಗ್ ಇನ್ನಾವ ಧೋರಣೆಯನ್ನು ಅನುಸರಿಸುವದು? ಬೊಂಬಾಯಿಯ ಲೀ ಕೌನ್ಸಿಲ್ ಸಭೆಯಲ್ಲಿ ಮಾಡಿದಂತೆ ಅದು ಅವೇಶವೊಂದನ್ನೇ ಅವಲಂಬಿಸತಕ್ಕದಾದರೆ ಬ್ರಿಟಿಷ್-ಕಾಂಗ್ರೆಸ್ ಒಳಸಂಚಿನ ಕಟ್ಟಡಕ್ಕೆ ಕಳಶವೇರಿತು; ಇನ್ನದನ್ನು ನೆಲಸಮಮಾಡಲು ಪ್ರತ್ಯಕ್ಷ ಹೋರಾಟಕ್ಕೇಳುವದೊಂದೇ ಹಾದಿ' ಎಂದದು ಅರ್ಭಟಿಸಬಹುದು. ಬದಲಿಗೆ ಬುದ್ಧಿಯುಳ್ಳ ರಾಜಕೀಯ ಪಕ್ಷವೊಂದು ಇಂತಹ ಸಂದರ್ಭಗಳಲ್ಲಿ ಮಾಡುವಂತೆ ನ್ಯಾಯಾನ್ಯಾಯ ಮತ್ತು ಸಾಧ್ಯಾಸಾಧ್ಯತೆಯನ್ನು ತೂಗಿ ನೋಡುತ್ತದಾದರೆ, ತನ್ನ ಮತ್ತು ರಾಷ್ಟ್ರದ ಅಭಿವೃದ್ಧಿ ಸಾಧಿಸಿಕೊಳ್ಳುವ ಸಂದರ್ಭವೊದಗಿತೆಂದೇ ನಿರ್ಧರಿಸಿ ಕಾಂಗ್ರೆಸಿನೊಡನೆ ಗೌರವಾರ್ಹ ಸಂಧಾನಕ್ಕದು ಮುಂದಾಗಲೇಬೇಕು.

ಮಿ. ಜಿನ್ನರು ಹೆಗ್ಗಳಿಕೆಯಿಂದಾಡಿರುವಂತೆ ಮುಸ್ಲಿಂ ಲೀಗು ಖಂಡಿತವಾದಿ ಮತ್ತು ಬಹಿರಂಗವಾದಿ. ಈ ಹೆಗ್ಗುಣಕ್ಕನುಸಾರವಾಗಿ ಈಗ ತಾನಾವ ಸರಹದ್ದಿಗೆ ಬಂದು ಮುಟ್ಟಿದ್ದೇನೆ ಎಂಬುದನ್ನು ಲೀಗ್ ತಿಳಿದುಕೊಳ್ಳುವದು ಬೇಡವೆ? ಇನ್ನೊಂದು ಹೆಜ್ಜೆ ಮುಂದಿಟ್ಟಲ್ಲಿ ಅಗಾಧ ಕಣಿವೆಯಿದೆ ಎಂಬುದನ್ನರಿತು ಸುರಕ್ಷಿತ ಎಡೆಗೆ ಮುಖ ತಿರುಗಿಸುವದೇ ಜಾಣತನವಲ್ಲವೆ? ನಿಜಕ್ಕೂ ಕಾಂಗ್ರೆಸೇ ಲೀಗಿನ ಪಾಲಿಗೆ ಅಪಾಯ ರಹಿತ ಆಶ್ರಯ. ನಿದರ್ಶನಕ್ಕಾಗಿ ಲೀಗ್ ನಾಯಕರು ತಮ್ಮ ಬೊಂಬಾಯಿ ಕೌನ್ಸಿಲ್ ನಿರ್ಧಾರವನ್ನೂ ಕಾಂಗ್ರೆಸಿನ ವಾರ್ಧಾ ನಿರ್ಣಯವನ್ನೂ ಒಟ್ಟಿಗಿಟ್ಟು ಓದಿ ತಾರತಮ್ಯವರಿಯಬೇಕು. ಲೀಗಿನ ನಿರ್ಣಯವು ಕಾಂಗ್ರೆಸಿನ ಕೆನ್ನೆಗೆ ತಾಡಿಸುವ ಕೈಯ್ಯಂತಿದ್ದರೆ, ಕಾಂಗ್ರೆಸಿನ ರಾವು ಆ ಕೈಯನ್ನು ಚುಂಬಿಸುವ ತುಟಿಯಂತಿದೆ! ಲೀಗ್ ಮಾಡಿರುವ ಹೇಯ ನಿಂದೆ, ಹಾಕಿರುವ ಬಣ ಬೆದರಿಕೆ, ಆಡಿ ತೋರಿಸಿರುವ ಅಸಂಬದ್ಧಗಳನ್ನೆಲ್ಲಾ 'ಬುದ್ಧಿಯಿಲ್ಲದ ತಮ್ಮನ ಹುಡುಗಾಟಿಕೆ' ಎಂಬಂತೆ ಕಾಂಗ್ರೆಸ್ ಕ್ಷಮಿಸಿದೆ. 'ಏನಿದ್ದರೂ ನಾವು ಸಹೋದರರು' ಎಂಬ ಭಾವವನ್ನೇ ಇವೆಲ್ಲವುಗಳಿಗುತ್ತರವಾಗಿ ಮುಂದೊಡ್ಡಿದೆ ಆದರೆ ಪರಕೀಯರಾದ ಬ್ರಿಟಿಷರಿಗೆ ಮುಸ್ಲಿಮರೊಡನೆ ಅಂತಹ ಆತ್ಮೀಯತೆಯೂ ಇಲ್ಲ; ಈ ಮೊದಲಿದ್ದಂತೆ, ಕಾಂಗ್ರೆಸಿನೆದಿರು ಎತ್ತಿಕಟ್ಟಲು ಹುರಿದುಂಬಿಸುವದಕ್ಕಾಗಿ ಸಮಜಾಯಿಸುವ ಆ ಹಂಗಿನಿಂದಲೂ ಈಗ ಬ್ರಿಟಿಷರು ದೂರವಾಗಿದ್ದಾರೆ. ಈ ರೀತಿ ಸ್ಪಷ್ಟವಾಗಿರುವ ಕಾಂಗ್ರೆಸ್ ಮತ್ತು ಬ್ರಿಟಿಷರೊಳಗಿನ, ಬ್ರಿಟಿಷರ ಹಿಂದಿನ ಮತ್ತು ಇಂದಿನ ಧೋರಣೆಗಳೊಳಗಿನ ಈ ತಾರತಮ್ಯವು ಮುಸ್ಲಿಂ ಲೀಗಿನ ಕಣ್ಣಿಗೊಂದು ಒಳ್ಳೇ ಅಂಜನ! ಈ ಅಂಜನ ಪಿನ್ನ ಮೇಲೂ ಪಂಡಿತ ನೆಹರುಗಳಿಗಿಂತ ಲೋರ್ಡ್ ವೇವೆಲರೇ ವಾಸಿಯೆಂದು ಮಿ. ಜಿನ್ನರ ಕಣ್ಣಿಗೆ ತೋರಬಹುದೆ?

ಭಾರತದ ರಾಜಕೀಯ ಮಾರ್ಪಾಟು ಶಾಂತರೀತಿಯಿಂದ ನಡೆಯಬೇಕೆಂಬುದಕ್ಕಾಗಿ –ಕೆಲವಂಶ ಲೀಗ್ ಪಕ್ಷಪಾತ ಬುದ್ಧಿಯಿದ್ದೇ—ಬ್ರಿಟಿಷರು ಪ್ರಜಾಸತ್ತಾನೀತಿಗೆ ವಿರುದ್ಧವಾಗಿ ಲೀಗಿಗೆ ರಿಯಾಯತಿ ತೋರಿಸಿದ್ದರು. ಆದರೆ ಮುಸ್ಲಿಂ ಲೀಗಿನ ದರ್ಪ ಮನೋವೃತ್ತಿಗೆ ಬ್ರಿಟಿಷರಾಗಲೀ ಕಾಂಗ್ರೆಸಿಗರಾಗಲೀ ವಿನಯಿಗಳಾಗಿದ್ದುದು ಸಾಕಾಗಲಿಲ್ಲ–ತನಗವರು ವಿಧೇಯರಾಗಿಯೇ ಇರಬೇಕೆಂದು ತೋರಿತು;ತನ್ನ ಅಜ್ಞಾಪಾಲಕರಾಗಲಿಲ್ಲವೆಂಬ ಒಂದೇ ಕಾರಣದಿಂದ ಇಬ್ಬರ ಮೇಲೂ ರೇಗಿಬಿದ್ದು ಲೀಗು ರಾಜಕೀಯ ಹುಚ್ಚಾಟ ನಡೆಸಿತು. ಈ ಹುಚ್ಚಾಟಕ್ಕೆ ಬೆಲೆ ಕೊಡುವ ಅಗತ್ಯವಾಗಲೀ ಆತ್ಮೀಯತೆಯಾಗಲೀ ಇಲ್ಲದ ವೈಸರಾಯರು ಪ್ರಜಾ ಪ್ರಭುತ್ವ ತತ್ವಗಳಿಗನುಸಾರವಾಗಿ ದೇಶದ ಸರ್ವ ಪ್ರಥಮ ಪಕ್ಷವಾದ ಕಾಂಗ್ರೆಸನ್ನೇ ಸಂಕಾರ ರಚಿಸಲಾಮಂತ್ರಿಸಿದುದು ನ್ಯಾಯಸಮ್ಮತವಿದೆ. ಈ ಬಾರಿ ಬ್ರಿಟಿಷರು ಯಥಾರ್ಥತೆಯಿಂದಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನ. ಇನ್ನೂ ಮುಸ್ಲಿಂ ಲೀಗು 'ಪ್ರತ್ಯಕ್ಷ ಹೋರಾಟ'ದಂತಹ ಹುಡುಗಾಟಿಕೆ ಮಾಡುತ್ತದಾದರೆ ಅದು ಅನ್ಯಾಯ ಮಾತ್ರವಲ್ಲ;ಅಪಾಯಕರವೂ ಇದೆ. ಆದ್ದರಿಂದ ಮುಸ್ಲಿಂ ಲೀಗು ದುರಭಿಮಾನಕ್ಕೆ ಬಲಿಬೀಳದೆ ಹೃದಯ ಮತ್ತು ಮೆದುಳು, ಎರಡನ್ನೂ ಶುದ್ಧೀಕರಿಸಿಕೊಂಡು, ತಾತ್ಕಾಲಿಕ ಸರಕಾರ ರಚನೆಯಲ್ಲಿ ಕಾಂಗ್ರೆಸಿನೊಡನೆ ಸಹಕರಿಸಿ, ರಾಷ್ಟ್ರದ ಮತ್ತು ಮುಸ್ಲಿಂ ಸಮಾಜದ ಅಭಿವೃದ್ಧಿ ಸಾಧನೆಗೆ ನೆರವಾಗಲೆಂಬುದೇ ಸರ್ವರ ಹಾರೈಕೆ.

'ಅಂತರಂಗ' ವಾರಪತ್ರಿಕೆಯನ್ನು ವಿಕ್ರಯಿಸಲು ಅಲ್ಲಲ್ಲಿ ನ್ಯೂಸ್ ಏಜಂಟರು ಬೇಕು.

ಶರ್ತಗಳಿಗೆ ಬರೆಯಿರಿ—

'ಅಂತರಂಗ', ಉಡುಪಿ.

೧. ಬ್ರಿಟಿಷ್ ಯೋಜನೆ ಸಂಬಂಧದ ನಿರ್ಧಾರ—ಸ್ಪಷ್ಟೀಕರಣ

'ಅಖಿಲ ಭಾರತ ಮುಸ್ಲಿಮ್ ಲೀಗ್ ಕೌನ್ಸಿಲು ತಮ್ಮ ಹಿಂದಿನ ನಿರ್ಣಯವನ್ನು ರದ್ದುಗೊಳಿಸಿ ಘಟನಾ ಸಮಿತಿಯಲ್ಲಿ ಭಾಗ ವಹಿಸಬಾರದೆಂದು ನಿರ್ಧರಿಸಿದುದಕ್ಕಾಗಿ ಕಾರ್ಯಕಾರೀ ಸಮಿತಿಯು ವ್ಯಸನ ಪಡುತ್ತದೆ. ವಿದೇಶೀ ರಾಷ್ಟ್ರವೊಂದನ್ನು ಹೊಂದಿಕೊಂಡಿರುವದರಿಂದ ತಪ್ಪಿಪೂರ್ಣ ಸ್ವಾತಂತ್ರ್ಯಕ್ಕೆ ಕ್ಷಿಪ್ರವಾಗಿ ವರ್ಗಹೊಂದುವ ಈ ಅಂತರಾವಧಿಯಲ್ಲಿ, ಅತಿ ದೊಡ್ಡ ಹಾಗೂ ಬಿಕ್ಕಟ್ಟಿನ ರಾಜಕೀಯ, ಆರ್ಥಿಕ ಸಮಸ್ಯೆಗಳನ್ನು ಇದಿರಿಸಿ ತೀರ್ಮಾನಿಸಬೇಕಾಗಿರುವದರಿಂದ, ಈ ಬದಲಾವಣೆಯು ಶಾಂತ ಹಾಗೂ ಸಂಬಂಧಪಟ್ಟ ಎಲ್ಲರಿಗೂ ಸುಖಕರವಾಗಿ ಸಾಗುವಂತೆ, ಭಾರತೀಯ ಜನತೆಯಲ್ಲಿ ಅತಿ ಹೆಚ್ಚಿನವರ ಹಾಗೂ ಅವರ ಪ್ರತಿನಿಧಿಗಳ ಸಹಕಾರವಿರಬೇಕಾದುದು ಅಗತ್ಯ.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳ ಮನೋವೃತ್ತಿ ಮತ್ತು ಗುರಿಗಳೊಳಗೆ ಭಿನ್ನತೆಗಳಿವೆ ಎಂಬುದು ಈ ಸಮಿತಿಗೆ ಮಂದಟ್ಟಾಗಿದೆ. ಆದರೂ ಸಮಾನ ಸಮ್ಮತಿ ತತ್ವಗಳಲ್ಲಿ ಸಹಕಾರದಿಂದ ವರ್ತಿಸುವಾಗ ಭಾರತದ ಹಲವು ಸಮಸ್ಯೆಗಳ ತೀರ್ಮಾನವನ್ನದು ಸಾಧಿಸಬಲ್ಲುದೆಂಬ ಆಶೆಯಿಂದಲೂ, ವಿಶಾಲ ರಾಷ್ಟ್ರೀಯ ಹಿತ ದೃಷ್ಟಿ ಮತ್ತು ಭಾರತೀಯ ಜನತೆಯ ಸ್ವಾತಂತ್ರ್ಯ ದೃಷ್ಟಿಯಿಂದಲೂ, ರಾಷ್ಟ್ರ ಸ್ವಾತಂತ್ರ್ಯ ಮತ್ತು ರಾಷ್ಟ್ರ ಹಿತಾಕಾಂಕ್ಷಿಗಳೆಲ್ಲರ ಸಹಕಾರವನ್ನೂ ಈ ಸಮಿತಿ ಅಪೇಕ್ಷಿಸುತ್ತದೆ.

ಪ್ರಾಂತಿಕ ಪಂಗಡಗಳು

"ಮೇ ತಾ. 16ರ ಬ್ರಿಟಿಷ್ ಸೂಚನೆಗಳನ್ನು ಕಾಂಗ್ರೆಸ್ ಅಂಗೀಕರಿಸಿರುವದು ತನ್ನ ಶರ್ತ ಹಾಕಿಯೇ ಎಂಬ ವರೆಗೂ ಮುಸ್ಲಿಂ ಲೀಗಿನ ಕಡೆಯಿಂದ ವಿಮರ್ಶೆಗಳು ಮುಂಬಂದಿರುವದನ್ನೂ ಈ ಸಮಿತಿಯು ಗಮನಕ್ಕೆ ತಂದುಕೊಂಡಿದೆ. ನಾವು ಆ ಬ್ರಿಟಿಷ್ ಹೇಳಿಕೆಯ ಎಲ್ಲಾ ಸೂಚನೆಗಳನ್ನು ಸಮ್ಮತಿಸುವಂತಿಲ್ಲವಾದರೂ ಆ ಯೋಜನೆಯ ಇಡೀ ಆಕಾರವನ್ನು ಅಂಗೀಕರಿಸಿದ್ದೇವೆ ಎಂದು ಈ ಕಮಿಟಿಯು ಸ್ಪಷ್ಟಗೊಳಿಸಬಿಚ್ಛಿಸುತ್ತದೆ. ಆ ಹೇಳಿಕೆಯಲ್ಲಿ ನಮೂದಿಸಲ್ಪಟ್ಟಿರುವ ತತ್ವಗಳಿಗನುಗುಣವಾಗಿಯೇ ಅದರಲ್ಲಿರುವ ಅಸಂಬದ್ಧತೆಗಳನ್ನು ನಿವಾರಿಸುವ ಹಾಗೂ ಅಭಾವಗಳನ್ನು ತುಂಬಿಸಿಕೊಳ್ಳುವ ಅರ್ಥವನ್ನಷ್ಟೇ ನಾವದಕ್ಕೆ ಕಟ್ಟಿದ್ದೆವು. ಪ್ರಾಂತಿಕ

Vijaya Construction & Commercial Corporation Ltd.,

UDIPI, S. Kanara.

Applications are invited for the post of an accountant Typist, stating experience, qualifications with testimonials and minimum salary required. Selected Candidates are required to appear before the undersigned at their own expense.

Applications should reach before 7-9-1946 at the Registered Office of the Company at Shiribeedu, Udipi.

Karnad Sadashiva Rao Road, Mangalore:— 10—8—'46.

K S Hegde,
Advocate,
Chairman

ವಾರ್ಧಾ ಕಾಂಗ್ರೆಸ್ ಕಮಿಟಿಯ ಪ್ರಾಮುಖ್ಯ ನಿರ್ಧಾರಗಳು.

ತಾತ್ಕಾಲಿಕ ಸರಕಾರ ರಚನೆಗೆ ವೈಸರಾಯರು ರಾಷ್ಟ್ರಪತಿಯನ್ನು ಕರೆದರು.

ಸ್ವಾತಂತ್ರ್ಯವೆಂಬುದು ಮೂಲಭೂತಹಕ್ಕೆಂದೂ, ಒಂದು ಸಂಗಡವನ್ನು ನಿರ್ಮಿಸಿಕೊಳ್ಳುವ ಇಲ್ಲವೇ ಸೇರುವ ಅಥವಾ ಅದಕ್ಕೊಪ್ಪದಿರುವ ಹಕ್ಕು ಪ್ರತಿಯೊಂದು ಪ್ರಾಂತ್ಯಕ್ಕೂ ಇದೆ ಎಂದೂ ಕಮಿಟಿಯ ಅಭಿಮತ. ಈ ಅರ್ಥ ವಿವರಣೆಗಳ ಪ್ರಶ್ನೆಯು, ಆ ಹೇಳಿಕೆಯಲ್ಲಿ ನಮೂದನೆಗೊಂಡಿರುವ ವಿಧಾನಗಳನ್ನಾಧರಿಸಿಯೇ ತೀರ್ಮಾನಗೊಳ್ಳಲಿದೆ. ಇದಕ್ಕನುಸಾರವಾಗಿ ವರ್ತಿಸತಕ್ಕದ್ದೆಂದು ಘಟನಾ ಸಮಿತಿಯ ತನ್ನ ಪ್ರತಿನಿಧಿಗಳಿಗೆ ಕಾಂಗ್ರೆಸ್ ಸಲಹೆ ಯೀಯುವದು.

ಘಟನಾ ಸಮಿತಿಯ ಪೂರ್ಣಾಧಿಕಾರತ್ವ

"ಯಾವುದೇ ಪರ ರಾಷ್ಟ್ರದ ಅಧಿಕಾರದ ಆತಂಕವಾವುದೂ ಇಲ್ಲದೆ ಸ್ವತಂತ್ರವಾಗಿ ವರ್ತಿಸುವ ಮತ್ತು ಭಾರತದ ರಾಜ್ಯ ಶಾಸನ ತಯಾರಿಸುವ ಹಕ್ಕಿದೆ ಎಂಬರ್ಥದಲ್ಲಿ ಘಟನಾ ಸಮಿತಿಯ ಸ್ವತಂತ್ರ ಸಾರ್ವಭೌಮಾಧಿಕಾರವನ್ನು ಈ ಸಮಿತಿ ಒತ್ತಿಹೇಳುತ್ತದೆ. ಆದರದು ಸ್ವಾಭಾವಿಕವಾಗಿ ಬಂದಿರುವ ಅಂತರಿಕ ಮಿತಿ ನಿಯಮಗಳಿಗೊಳಪಟ್ಟೇ ವರ್ತಿಸಲಿರುವದಲ್ಲದೆ, ಸ್ವತಂತ್ರ ಭಾರತದ ರಾಜ್ಯಾಂಗ ರಚನೆ ಮಾಡುವಾಗ, ನ್ಯಾಯಬದ್ಧವಾದ ಎಲ್ಲಾ ಬೇಡಿಕೆಗಳಿಗೂ ಹಿತ ಸಂಬಂಧಗಳಿಗೂ ಅತಿ ಹೆಚ್ಚಿನ ಸ್ವಾತಂತ್ರ್ಯ ಕೊಡುವ ಮೂಲಕ ಅತ್ಯಂತ ದೊಡ್ಡ ಪರಿಮಾಣದ ಸಹಕಾರವನ್ನು ಕೂಡಾ ಬಯಸುತ್ತದೆ

"ಈ ಉದ್ದೇಶ ಮತ್ತು ಘಟನಾ ಸಮಿತಿಯು ಜಲುಜಲವಾಗಿ ಸಾಗಬೇಕೆಂಬ ಬಯಕೆ ಯಿಟ್ಟುಕೊಂಡೇ 1946ನೇ ಜೂನ್ ತಾ 26ರಲ್ಲಿ ಈ ಕಮಿಟಿಯು ಠರಾವು ಮಾಡಿದ್ದಿತಲ್ಲದೆ, ಅದು ಜುಲಾಯಿ ತಾ 7ರ ಅ. ಭಾ. ಕಾಂ. ಕಮಿಟಿಯಲ್ಲೂ ಮಂಜೂರಾಗಿದ್ದಿತು. ಅ. ಭಾ. ಸಮಿತಿಯ ಆ ನಿರ್ಣಯಕ್ಕೇನೇ ನಾವು ಕಟ್ಟು ... ವೆ ಮತ್ತು ಅದಕ್ಕನುಗುಣವಾಗಿಯೇ ಘಟನಾ ಸಮಿತಿಯ ಕಾರ್ಯಗಳನ್ನು ಸಾಗಿಸಲಿಚ್ಛಿಸುತ್ತೇವೆ.

"ವಿಶಾಲ ರಾಷ್ಟ್ರೀಯ ಹಿತದೃಷ್ಟಿಯಿಂದ, ಅಂತೆಯೇ ತಮ್ಮ ಸ್ವಂತ ಹಿತದೃಷ್ಟಿಯಿಂದ ಮುಸ್ಲಿಂ ಲೀಗ್ ಮತ್ತು ಸಂಬಂಧಪಟ್ಟ ಎಲ್ಲರೂ ಈ ಮಹಾಕಾರ್ಯದಲ್ಲಿ ಸಹಭಾಗಿಗಳಾಗುವರೆಂದು ಸಮಿತಿಯು ಆಶಿಸುತ್ತದೆ"

ಕಾವ್ಯ ಸಾಮ್ರಾಜ್ಯ

(ಕಿರಿಯರ ಪ್ರಪಂಚದವರು ಪ್ರಕಟಿಸಿದ ಆಧುನಿಕ ಕವಿತಾ ಸಂಗ್ರಹ.)

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ 1946 ರಾವ ಪರೀಕ್ಷೆಗೆ ಮೊದಲ ಪತ್ರಿಕೆಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಬೆಲೆ ರೂ. 1—0—0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗಾಗಲೀ ಬರೆಯಿರಿ.

೨ ಸಿಖ್ ಧೋರಣೆ ಬದಲಾಯಿಸಲು ಒತ್ತಾಯ

"ಘಟನಾ ಸಮಿತಿಯ ಚುನಾವಣೆಗಳಲ್ಲಿ ಭಾಗವಹಿಸಬಾರದೆಂಬ ಸಿಖ್ಖರ ನಿರ್ಧಾರಕ್ಕಾಗಿ ಕಾರ್ಯಕಾರೀ ಸಮಿತಿ ಪಶ್ಚಾತ್ತಾಪ ಪಡುತ್ತದೆ. ಸಿಖ್ಖರಿಗೆ ಅನ್ಯಾಯವಾಗಿದೆ ಎಂಬುದನ್ನು ಸಮಿತಿ ತಿಳಿದಿದೆ, ಮತ್ತು ಬ್ರಿಟಿಷ್ ಸಮಿತಿ ಪ್ರತಿನಿಧಿಗಳ ಗಮನವನ್ನದು ಆ ಕಡೆಗೆಳೆದಿದೆ. ಆದರೂ ಘಟನಾ ಸಮಿತಿಯ ಹೊರಗಿರುವುದಕ್ಕಿಂತ, ಅದರೊಳಗಿದ್ದು ಸಹಭಾಗಿಗಳಾಗುವ ಮೂಲಕವೇ ಸಿಖ್ಖರು ಸ್ವತಃ ತಮ್ಮ ಮತ್ತು ರಾಷ್ಟ್ರ ಸ್ವಾತಂತ್ರ್ಯದ ಹಿತ ಕಾರ್ಯಗಳನ್ನು ವಿಶೇಷವಾಗಿ ಮಾಡಬಲ್ಲರೆಂದು ಈ ಕಮಿಟಿಯ ಸುದೃಢಾಭಿಪ್ರಾಯವಿದೆ. ಆದ್ದರಿಂದ ತಮ್ಮ ನಿರ್ಧಾರವನ್ನು ಪುನರಾಲೋಚಿಸಬೇಕೆಂದೂ, ಘಟನಾ ಸಮಿತಿಯಲ್ಲಿ ಭಾಗವಹಿಸುವರೆ ಸಮ್ಮತಿ ಸೂಚಿಸಬೇಕೆಂದೂ ಈ ಕಮಿಟಿಯು ಸಿಖ್ಖರನ್ನು ವಿಜ್ಞಾಪಿಸಿಕೊಳ್ಳುತ್ತದೆ. ಸಿಖ್ಖರ ನಿಜವಾದ ಸಂಕಷ್ಟಗಳ ನಿವಾರಣೆಗಾಗಿಯೂ, ಪಂಜಾಬಿನಲ್ಲಿ ಅವರ ನ್ಯಾಯಬದ್ಧ ಹಿತ ಸಂಬಂಧಗಳ ರಕ್ಷಣೆಗಾಗಿ ಸಾಕಷ್ಟು ಭದ್ರತೆಯೊದಗಿಸುವದರಲ್ಲಿಯೂ ಕಾಂಗ್ರೆಸ್ ಸಾಧ್ಯವಿದ್ದ ಸರ್ವ ಸಹಾಯವನ್ನೂ ಕೊಡುವುದೆಂದು ಕಾರ್ಯಕಾರೀ ಸಮಿತಿಯು ಸಿಖ್ಖರಿಗೀ ಮೂಲಕ ಆಶ್ವಾಸನೆಕೊಡುತ್ತದೆ.

೩. ಪಾರ್ಲಿಮೆಂಟರೀ ಸಮಿತಿ

"ಎಲ್ಲಾ ನ್ಯಾಯ ವಿಧಾಯಕ ಸಭೆಗಳ ಕಾಂಗ್ರೆಸ್ ಪಕ್ಷಗಳೊಡನೆ ನಿಕಟ ಮತ್ತು ನಿರಂತರ ಸಂಬಂಧವಿಟ್ಟುಕೊಂಡು, ಎಲ್ಲಾ ಕಾರ್ಯಗಳಲ್ಲೂ ಅವರಿಗೆ ಸಲಹೆ ಕೊಡುವದಕ್ಕಾಗಿಯೂ, ಅವಸರದ ಸಂದರ್ಭಗಳಲ್ಲಿ ಆಗತ್ಯವುಳ್ಳ ಕಾರ್ಯಕ್ರಮ ಕೈಕೊಳ್ಳುವದಕ್ಕಾಗಿಯೂ, ಮೌಲಾನಾ ಅಬುಲ್ ಕಲಾಮ್ ಆಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದರುಳ್ಳ ಪಾರ್ಲಿಮೆಂಟರೀ ಸಬ್ ಕಮಿಟಿಯೊಂದನ್ನು ಈ ಮೂಲಕ ನೇಮಿಸಲಾಗುತ್ತದೆ"

ನೆಹರುಗಳಿಗೆ ಜವಾಬ್ದಾರಿ ದಾನ

ಘಟನಾ ಸಮಿತಿಯ ಚುನಾವಣೆಗಳು ಮುಗಿದೊಡನೆಯೇ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆಯ ಕುರಿತು ತಾವು ಮಾತಿತ್ತಂತೆ ವೈಸರಾಯರು ಆಲೋಚಿಸ ಹತ್ತಿದ್ದರು. ಬೊಂಬಾಯಿಯ ಲೀಗ್ ಕೌನ್ಸಿಲು ಸೇರುವ ಮೊದಲೇ ಈ ಸಂಬಂಧದ ಆಮಂತ್ರಣಗಳು ಪಕ್ಷಪ್ರಮುಖರಿಗೆ ಬಂದಿದ್ದುವು. ಪಂಡಿತ ನೆಹರುಗಳು ಲೋರ್ಡ್ ವೇವೆಲರೊಡನೆ ಎರಡು ವಾರಗಳಿಗೆ ಮೊದಲೇ ಸಂಭಾಷಿಸಿದ್ದರು. ಅಂದಿನಿಂದಿದುವರೆಗೂ ಅವರಿಬ್ಬರೊಳಗೆ ಪತ್ರ ವ್ಯವಹಾರಗಳೂ ಟೆಲಿಫೋನ್ ಸಂಭಾಷಣೆಗಳೂ ಅವಿಶ್ರಾಂತವಾಗಿ ನಡೆದಿದ್ದುವು ಈ ನಡುವೆ ಪದ್ಧತಿಯಂತೆ ಮಿ. ಜಿನ್ನರಿಗೂ ವೈಸರಾಯರಿಂದ ಆಮಂತ್ರಣ ಹೋಗಿದ್ದಿತು ತಾತ್ಕಾಲಿಕ ಸರಕಾರ ರಚನೆಯ ಕುರಿತು ವಾರ್ಧಾದಲ್ಲಿ ಕಾಂಗ್ರೆಸ್ ಠರಾವಾದ ವರ್ತಿಯಿಲ್ಲ. ಆದರೆ ಆ ಹೊಣೆಯನ್ನಂಗೀಕರಿಸಿ, ಮುಸ್ಲಿಂ ಲೀಗನ್ನು ಸರ್ವ ಪ್ರಯತ್ನದಿಂದ ಆಮಂತ್ರಿಸಿಕೊಂಡು ಅದು ಅಸಾಧ್ಯವಾದರೆ ಅದನ್ನು ಬಿಟ್ಟಾದರೂ ತಾತ್ಕಾಲಿಕ ಸರಕಾರ ರಚನೆಗೆ ಒಪ್ಪಬೇಕೆಂದು ವಾರ್ಧಾ ಪ್ರಮುಖರ ಅಭಿಪ್ರಾಯವಿದ್ದುದು ಕಂಡುಬಂದಿದೆ. ಘಟನಾಸಮಿತಿ ಸಂಬಂಧದಲ್ಲಿ ಕಾಂಗ್ರೆಸ್ ಸ್ಪಷ್ಟ ಮಾಡಿದ ಹಾಗೂ ಸೌಹಾರ್ದ ಪೂರ್ಣ ನಿರ್ಧಾರದಿಂದ ಧಿಲ್ಲಿಯ ಅಧಿಕಾರಿಗಳು ಸಂತೋಷ ಪ್ರದರ್ಶಿಸಿದ್ದರು. ಇಷ್ಟರಲ್ಲೇ ಪೂರ್ವ ನಿರ್ಧಾರದಂತೆ ತಾತ್ಕಾಲಿಕ ಸರಕಾರ ರಚನೆಗೆ ಮಿ. ಜಿನ್ನರ ಧಿಕ್ಕಾರವು ವೈಸರಾಯರಿಗೆದೊರೆತಿರಬೇಕು. ಆದ್ದರಿಂದ ಅನ್ಯೋಪಾಯವಿಲ್ಲದೆ, ತಮ್ಮ ವಾಗ್ದಾನ ಮತ್ತು ಪ್ರಜಾ ಪ್ರಭುತ್ವನೀತಿಗನುಸಾರವಾಗಿ, ಸಮ್ಮತಿ ಹಾಗೂ ಪ್ರಬಲ ಬಹುಮತವುಳ್ಳ ಕೊಂಗ್ರೆಸನ್ನೇ ತಾತ್ಕಾಲಿಕ ಸರಕಾರ ರಚಿಸಲು ಲೋರ್ಡ್ ವೇವೆಲರು ಕೇಳಿಕೊಂಡಿರುವರೆಂದು ತಿಳಿದುಬಂದಿದೆ. ಮುಸ್ಲಿಂ ಲೀಗನ್ನು ಕೂಡಿಕೊಂಡೇ ಸರಕಾರ ರಚಿಸಬೇಕೆಂದೂ, ತಾನು ಆ ಮಟ್ಟಿಗೆ ಮಧ್ಯಸ್ಥಗಾರನಾಗಿರುವೆನೆಂದೂ ವೈಸರಾಯರಂದಿದ್ದಾರೆಂದು ತಿಳಿದು ಬರುತ್ತದೆ. ಕೊನೆಗೂ ಲೀಗ್ ಧಿಕ್ಕರಿಸಿದರೆ ಮೊದಲಿನ ನಿಶ್ಚಯಕ್ಕನುಸಾರವಾಗಿ ಲೀಗೇತರ ಮುಸಲ್ಮಾನರನ್ನೂ ಇತರ ಅಲ್ಪ ಸಂಖ್ಯಾಕರನ್ನೂ ಕೂಡಿಕೊಂಡು ಕಾಂಗ್ರೆಸ್ ಸರಕಾರ ರಚನೆ ಮಾಡಬಹುದು. ಲೀಗ್ ಸದಸ್ಯರ ಹೆಸರುಗಳುಳ್ಳ ಒಂದು ಸಮ್ಮಿಶ್ರ ಪಟ್ಟಿಯನ್ನೂ, ಲೀಗೇತರ ಸರ್ವ ಪಕ್ಷೀಯ ಸದಸ್ಯರುಳ್ಳ ಮತ್ತೊಂದು ಹೆಸರು ಪಟ್ಟಿಯನ್ನೂ ನೆಹರು ವೈಸರಾಯರಿಗೊಪ್ಪಿಸಿದ್ದಾರೆ. ಮುಂದೇನು?

ಅಕ್ಕಿ ಧಾರಣೆ ನಿರ್ಣಯ

ತಾ. ೧೫-೬-೧೯೪೬ರ ನಂಬ್ರ ೪೬೭ನೇ ಸರಕಾರದ ಹುಕುಂ ಮೇರೆಗೆ, ಈ ಕೆಳಗಿನ ಅಧಿಕಾರಿಗಳಿಗೆ ಅವರವರ ಚಕ್ಬಂದಿಯೊಳಗೆ ಇರುವ ಜನರಲ್ಲಿರತಕ್ಕ 'ಸರಪ್ಲಸ್' ಯಾನೆ ಜಾಸ್ತಿ ಭತ್ತ ವ ಅಕ್ಕಿ ನಿಶ್ಚಯಿಸಲು ಜಿಲ್ಲಾ ಕಲೆಕ್ಟರರು ಈ ಮೂಲಕ ಅಧಿಕಾರ ಕೊಟ್ಟಿದ್ದಾರೆ, ಯಾವತ್ತು ಡಿವಿಜನಲ್ ಆಫೀಸರರು, ಡಿ. ಸರಬರಾಯಿ ಆಫೀಸರರು, ತಹಶಿಲ್ದಾರರು ತಾಲೂಕು ಸರಬರಾಯಿ ಆಫೀಸರರು, ಡೆ. ತಹಸಿಲ್ದಾರರು, ಅಸಿಸ್ಟಾಂಟ್ ತಾಲೂಕು ಸರಬರಾಯಿ ಆಫೀಸರರು ಮತ್ತು ತಾಲೂಕು ಹೆ. ಕ್ವಾ. ಡೆ. ತಹಶಿಲ್ದಾರರು.

೨. ಸದರಿ ಜಾಸ್ತಿ ಅಕ್ಕಿ ಯಾ ಬತ್ತವನ್ನು ವ ಧಾನ್ಯವನ್ನು ಕೊಂಡು ಕೊಳ್ಳಲು ಮಂಗಳೂರಿನ ಎಸ್. ಕೆ. ಸಿ ಸಿ. ರಖಂ ಸ್ಟೋರನ್ನು ವ ಅದರ ಶಾಖೆಗಳನ್ನು ಈ ಮೂಲಕ ನೇಮಿಸಿದ್ದಾರೆ.

೩ ಸದರಿ ಸರಕಿನ ದರಗಳು ಈ ಕೆಳಗಿನಂತೆ ಇರತಕ್ಕದ್ದು

ದರಗಳು: ಅಕ್ಕಿ (೪ ತಗೀಸಿದ ಸೇರಿನ ಮುಡಿಗೆ), ಬತ್ತ (ಉಚ್ಚತರದ ಬೆಳ್ತಿಗೆ ಬತ್ತ ಹೊರತು ನಿಕ್ಕ ಯಾವತ್ತು ಜಾತಿಯ ೭ ಕಳಸಿಗೆ; ಉಚ್ಚತರದ ಬೆಳ್ತಿಗೆ ಬತ್ತವಾದರೆ ೮ ಕಳಸಿಗೆ—ಇದರ ಧಾರಣೆ ಕೆಳಗಿನ ಐಟಮು ೬ರಲ್ಲಿ ಪ್ಪಂತೆ ಇರುವುದು):-

೧. ಸುಗ್ಗಿ ವ ರಾಶಿ ರೂ ೧೦।; ೨. ಗುಡ್ಡ ವ ಕೊಳಕೆ. ರೂ. ೧೦।೮; ೩. ಮುಸ್ಕ ತ. ರೂ. ೧೧।; ೪. ಕಂಬ್ಳಿಗೆ ಅಥವಾ ಕಟ. ರೂ ೯।೮; ೫ ಬೆಳ್ತಿಗ (ಸಾಮಾನ್ಯ) ರೂ. ೧೨।-; ೬. ಬೆಳ್ತಿಗೆ (ಉಚ್ಚಜೀರ್ಸಾಲೆ, ಗಂಧಸಾಲೆ ಸಣ್ಣಕ್ಕಿ ಮತ್ತು ಜಿ. ಇ. ಬಿ. ಜಾತಿಯ ಸಹಾರ ತರದ್ದು) ರೂ. ೧೩।; ೭. ರಾಗಿ (ಗೀಸಿದ ೪ ಸೇರಿನ ಒಂದು ಮುಡಿಗೆ)- ರೂ. ೬।೫.

ಈ ದರಗಳು, ಜಿಲ್ಲೆಯಲ್ಲಿಯ ಸ್ಟೋರಿನ ಯಾವತ್ತು ಡಿಪೋಗಳಲ್ಲಿ ಆಯಾಯ ಮಾಯಿದೆಯೊಳಗೆ ಒಪ್ಪಿಸತಕ್ಕ ಅಕ್ಕಿ ಇತ್ಯಾದಿಗಳಿಗೆ ತೆರಲ್ಪಡತಕ್ಕದ್ದಾಗಿವೆ. ಸದರಿ ತಾರೀಕನ್ನು ಕ್ರಮೇಣ ಪ್ರಕಟಿಸಲಾದೀತು ಆ ಮಾಯಿದೆ ಮೀರಿ ಒಪ್ಪಿಸಿದಲ್ಲಿ, ಅಕ್ಕಿಗೆ ಮುಡಿ ೧ಕ್ಕೆ ರೂ. ೧। ಮತ್ತು ಬತ್ತಮುಡಿಗೆ ರೂ ೦-೩-೦ ಕಡಿಮೆ ದರ ಕೊಡಲಾಗುವುದು. ಈ ಹುಕುಮಿನ ನೋಟೀಸನ್ನು ದಕ್ಷಿಣಕನ್ನಡದ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಲಾಗುವದೆಂದು ಕಲೆಕ್ಟರರು ಜಾಹೀರು ಪಡಿಸಿರುವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ತಾರೀಕು 16-8-46ರಿಂದ

ಪ್ರೇಮವನ್ನು ಪುಟಹಾಕಿ, ಪರಮಶ್ರೇಷ್ಠವಾಗಿ ಚಿತ್ರಿಸಿದ ಪ್ರೇಮೋಪಾಸಕರಿಬ್ಬರ ಪೂಜ್ಯಕಥೆ

ಲೈಲಾ ಮಜ್ನು

ಸ್ವರ್ಣಲತಾ, ನಾಟೀರ್, ಇಸ್ಮಾಯಿಲ್, ಕೆ. ಎನ್. ಸಿಂಗ್ ಮತ್ತು ಗೋಪ್.

ಬರುವ ಚಿತ್ರ:-- ಕಿಸ್ಮತ್‌ವಾಲಾ

ಉಡುಪಿ

ಹರಿಕಥೆ.--ಮಂಗಳೂರಿನ ಶ್ರೀ ಲಕ್ಷ್ಮಣ ದೇವ ವಿದ್ಯಾರ್ಥಿಗಳು ಸಾರಸ್ವತ ದೇವಸ್ಥಾನ, ಶ್ರೀ ವೆಂಕಟರಮಣ ದೇವಸ್ಥಾನ ಮೊದಲಾದ ಧರ್ಮ ಸಂಸ್ಥೆಗಳಲ್ಲೂ ಕಟಪಾಡಿಯಲ್ಲೂ ಕೆಲವು ಹರಿಕಥೆಗಳನ್ನು ನಡೆಸಿದರು.

ಇದೇ ತಾ 12ರಲ್ಲು ಶ್ರೀ ವಿದ್ಯಾರ್ಥಿಗಳು ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ ಉಪಾಕರ್ಮ ವಿಧಿಯನ್ನಾಚರಿಸಿದರು.

ವೆಟರ್ನರಿ ಆಸ್ಪತ್ರೆಯ ಆವಶ್ಯಕತೆ.--ಕೃಷಿಯ ಅಭಿವೃದ್ಧಿಗೆ ಪಶು ಪಾಲನೆಯು ಅತ್ಯಗತ್ಯವಷ್ಟೆ. ಇದಕ್ಕೆ ತಕ್ಕ ಪ್ರೋತ್ಸಾಹವಾಗಲಿ ತಕ್ಕ ವೈದ್ಯಕೀಯ ಸಹಾಯವಾಗಲಿ ಈ ತಾಲೂಕಿನಲ್ಲಿರುವಂತೆ ತೋರುವುದಿಲ್ಲ. ಹಿಂದೊಮ್ಮೆಯಿದ್ದ ವೆಟರ್ನರಿ ಆಸ್ಪತ್ರೆಯು ಸಹಾ ಮುಚ್ಚಲ್ಪಟ್ಟಿರುತ್ತದೆ. ಆಗಾಗ ಪಶುಗಳಿಗೆ ಕಾಯಿಲೆಬಂದು ಹಟ್ಟಿ ಹಟ್ಟಿಗಳೇ ಖಾಲಿಯಾದ ದೃಷ್ಟಾಂತಗಳು ಸಹ ಇವೆ. ಪ್ರಕೃತ ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಗೊಬ್ಬ 'ಟೂರಿಂಗ್ ವೆಟರ್ನರಿ ಡಾಕ್ಟರರು' ಇರುತ್ತಾರೆಂದು ತಿಳಿದು ಬರುತ್ತದೆ. ಇವರೊಬ್ಬರಿಂದಲೇ ಯಾವ ತಾಲೂಕಿಗೂ ಪ್ರಯೋಜನವಾಗುವಂತಿಲ್ಲ ಯಾಕೆಂದರೆ ಕಾಯಿಲೆಯ ವರದಿಯಾದ ಮೇಲೆಯೇ ಈ ಆಫೀಸರರು ಹೊರಡಬೇಕೆಂದು ನಿಯಮವಿರುವುದರಿಂದ, ಇವರು ಬರುವಷ್ಟರಲ್ಲಿ ಕಾಯಿಲೆಯು ಪಶು ನೋಡಸಿಗುವುದು ಬಹಳೇ ಅಪರೂಪ. ಆದುದರಿಂದ ಕಾಂಗ್ರೆಸ್ ಸರಕಾರದವರು ಕೂಡಲೇ ಉಡುಪಿಯಲ್ಲೊಂದು 'ವೆಟರ್ನರಿ' ಆಸ್ಪತ್ರೆಯನ್ನು ತೆರೆಯುವುದು ಅತ್ಯಾವಶ್ಯಕವಾಗಿದೆ. ಎಷ್ಟು ಪಶು ನಷ್ಟವಾದರೂ ಸುಮ್ಮಗೆ ಕುಳಿತುಕೊಳ್ಳುವ ಹಳ್ಳಿಗರು ಇನ್ನಾದರೂ ಜಾಗ್ರತರಾಗಬೇಕಾಗಿದೆ.

ಬಸ್ ಏಜಂಟರ ಗೋಳು- ಬೆಳಿಗ್ಗಿನಿಂದ ಸಂಜೆಯವರೆಗೆ ದುಡಿಯುತ್ತಿರುವ, ಕೆಲವುವೇಳೆ ಪ್ರಯಾಣಿಕರ ಶಾಪ ಮತ್ತು ಬೈಗಳ ಸುರಿಮಳೆಗೆ ಒಳಗಾಗುತ್ತಿರುವ ಬಸ್ ಏಜಂಟರುಗಳಿಗೆ ಈಗಲೂ ಬಹಳೇ ಅಲ್ಪ ವೇತನವು ಕೊಡಲ್ಪಡುತ್ತಿರುವುದೆಂದೂ ಬಸ್ ಕಂಪೆನಿಗಳು ವಿಶೇಷ ಲಾಭಹೊಂದುತ್ತಿರುವಾಗಲೂ ಈ ಬಡ ನೌಕರರನ್ನು ಕೇಳುವವರಿಲ್ಲವೆಂದೂ ಬಸ್ ಮಾಲಕರು ಇನ್ನಾದರೂ ಈ ಕಡೆ ನಿಗಾ ಕೊಡಬೇಕೆಂದೂ ಒಂದು ಬಾತ್ಮಿ.

ಆಗೋಸ್ತು ದಿನಾಚರಣೆ-ಯ ಸಂಬಂಧವಾಗಿ ಇದೇ ತಾ 9ನೇ ಮುಂಜಾನೆ ವಿದ್ಯಾರ್ಥಿಗಳ ಪ್ರಭಾತ ಪೇರಿ, ಧ್ವಜವಂದನೆ ಇತ್ಯಾದಿ ಕಾರ್ಯ ಕ್ರಮಗಳು ನಡೆದುವು.

ನೆರೆಹಾವಳಿ- ಕಳೆದ ವಾರದಲ್ಲಿಯ ವಿಪರೀತ ಮಳೆಯದೆಸೆಯಿಂದಾಗಿ ಉದ್ಯಾವರ, ಕಲ್ಯಾಣಪುರ, ಛಪ್ರಗಿರಿ, ಪುತ್ತಿಗೆ ಮೊದಲಾದ ಹೊಳೆಗಳಲ್ಲಿ ನೆರೆಬಂದು ಎಷ್ಟೋ ಮನೆಗಳು ಬಿದ್ದು ಹೋಗಿವೆ ಚರಸೊತ್ತುಗಳೂ ನಷ್ಟ ಹೊಂದಿವೆ.

ಹಾ। ಎ। ಟ್ರೈನಿಂಗ್ ಶಾಲೆ--ಕುಂದಾಪುರ, ಉಡುಪಿ ಕಾರ್ಕಳ ತಾಲೂಕುಗಳ ಸೌಕರ್ಯಕ್ಕಾಗಿ ಛಡಿಯಾಳಿಯಲ್ಲಿ ಕಳೆದ ತಿಂಗಳಿಂದ ಇಲಾಖೆಯವರಿಂದ ಹಾ। ಎ। ಟ್ರೈನಿಂಗ್ ಶಾಲೆ ತೆರೆಯಲಾಗಿದೆ. ಶಾಲೆಗೊಂದು ಆಧುನಿಕ ಕಟ್ಟಡ, ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಹಾಸ್ಟೆಲು ಜರೂರು ಆಗಬೇಕಾಗಿದೆ.

ಕೊಪರೇಟಿವ್ ಶಿಬಂಧಿ--ಬಿಸ್ ಸರಕಾರೀ ಕೋಪರೇಟಿವ್ ಸಂಸ್ಥೆಗಳಲ್ಲಿಯ ಶಿಬಂಧಿಗೆ ಜೀವನಕ್ಕೆ ಬೇಕಾಗುವಷ್ಟು ವೇತನ ಮತ್ತು ತುಟ್ಟಿಭತ್ತೆ ದೊರೆಯುದಿಲ್ಲವೆಂದೂ ಇಲಾಖಾ ಅಧಿಕಾರಿಗಳು ತುಟ್ಟಿ ಭತ್ತೆಯ ಸವಲತ್ತನ್ನು ಪಡೆಯುತ್ತಿರುವಾಗಲೂ ಬಡ ನೌಕರರನ್ನು ಕೇಳುವವಂಲ್ಲೆಂದೂ ಶ್ರೀ ಯು. ಎಸ್. ಭಟ್ಟರು ತಿಳಿಸುತ್ತಾರೆ.

ಹಿಂದೂ ಮಹಾ ಸಭೆ-- ಹಿಂದೂ ರಿಲೀಜಿಯಸ್ ಎಂಡೋವ್‌ಮೆಂಟ್ ಆಕ್ಟಿನಲ್ಲಿಯ ಮೂರ ದೇವಾಲಯಗಳಿಗೆ ಸಂಬಂಧ ಪಟ್ಟ ಇತ್ತೀಚೆಗಿನ ತಿದ್ದುಪಡಿಗಳ ಕುರಿತು ನಿಷೇಧ ಸೂಚಿಸುವರೆ ತಾ 11ರಲ್ಲು ಬೋರ್ಡು ಹೈಸ್ಕೂಲ್ ಹೀಸಲ್ ಹಾಲಿನಲ್ಲಿ ಹಿಂದುಗಳ ಮಹಾಸಭೆಯೊಂದು ಶ್ರೀ ಸಿ. ಆರ್. ಕೃಷ್ಣರಾವ್ ರಿಟಾಯರ್ಡ್ ಡಿಸ್ಟ್ರಿಕ್ಟ್ ಜಡ್ಜ್, ಕೋಟೇಶ್ವರ ಅವರ ಅಧ್ಯಕ್ಷತೆಯಲ್ಲಿ ಜರಗಿ ನಿಷೇಧ ಸೂಚಕ ನಿರ್ಣಯಗಳನ್ನು ಮಂಡಿಸಿದೆ ಎಂದು ತಿಳಿದು ಬರುತ್ತದೆ. ಡಾ। ಮಾಧವ ಪೈ, ಡಾ। ಸುಂದರ ರಾಮಪೈ, ಡಾ। ಕೆ ಎಲ್. ಐತಾಳ್, ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್, ವಕೀಲ್ ಪಿ. ವಿ. ಆಚಾರ್, ಪಂಡಿತ್ ಟಿ ಎಸ್. ಕೇಳುನಂದಿಯೂರ್ ಮೊದಲಾದವರು ಈ ಚಳವಳಿಯಲ್ಲಿ ಭಾಗವಹಿಸಿರುವರೆಂದು ಗೊತ್ತಾಗಿದೆ.

ಕಾಸರಗೋಡು.

ರೈತರ ಹಿತರಕ್ಷಣಾ ಮಸೂದೆ-ತಾ 10-8-46ರಂದು ಜಿಲ್ಲಾ ರೈತ ಸಂಘದ ಆಶಯದಲ್ಲಿ ಹೊಸದುರ್ಗದಲ್ಲಿ ಮಲಬಾರಿನ ಮುಂದಾಳು ಶ್ರೀ. ಎ. ಕೆ. ಗೋಪಾಲನ್ ಅವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಜಿಲ್ಲೆಯ ರೈತರಿಗೆ ಭೂಮಿಯಲ್ಲಿ ಸ್ಥಿರಾಧಿಕಾರ, ಗೇಣಿಯಲ್ಲಿ ಇಳಿತ ಇವುಗಳ ಬಗ್ಗೆ ರೈತಸಂಘದ ಸಲಹೆಗಳು ಮಂಜೂರು ಮಾಡಲಾದುವು. ತೀರ್ವೆಯ ಎರಡರಷ್ಟುಗೇಣಿ, ಕುಟುಂಬದಲ್ಲಿ ಒಬ್ಬನಿಗೆ 10 ಎಕ್ರೆಯಂತೆ ಹೆಚ್ಚೆಂದರೆ 50 ಎಕ್ರೆಯಷ್ಟು ಆಸ್ತಿಮುಟ್ಟಿಗೆ ಮಾತ್ರ ಬೇರೆ ಉತ್ಪತ್ತಿಯಿಲ್ಲವಾದರೆ ವಕ್ಕಲಿಗೆ ಎಕ್ರೆಗೆ 100 ರೂಪಾಯಿ ಹಾಗೂ ಕೃತದ ಪರಿಹಾರ ದ್ರವ್ಯ ತೆತ್ತು ಒಕ್ಕಲೆಬ್ಬಿಸಬಹುದೇ ಹೊರತು ಅನ್ಯಥಾ ಕೂಡದು ಎಂಬ ಮುಖ್ಯ ಸೂತ್ರಗಳ ಆಧಾರದಲ್ಲಿ ಮಸೂದೆಯಿದೆಯೆಂದು ತಿಳಿದು ಬರುತ್ತದೆ.

ಕಾಡು ಕಾನೂನು ಪರಿಹಾರ ಸಮ್ಮೇಳನ--ಸರಕಾರಿ ಕಾಡಿನ ಸರಹದ್ದಿನಲ್ಲಿರುವ ರೈತರಿಗೆ ಕುಂಕಿ ಅನುಭೋಗವಿಲ್ಲ. ನೀರಿನ ಹಕ್ಕಿನಲ್ಲಿ ಕಾಡಿನಿಂದ ಸೊಪ್ಪು ಸದೆ ಉಪಯೋಗಿಸುವಲ್ಲಿ ಈಗಿರುವ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂಬ ಮನವಿಯನ್ನು ಮಾನ್ಯ ರೆವಿನ್ಯು ಮಂತ್ರಿಗೆ ಅರ್ಪಿಸುವ ಕಾರ್ಯಕ್ರಮವನ್ನು ನಿರ್ಧರಿಸುವ ಬಗ್ಗೆ ಕಾಸರಗೋಡಿನಲ್ಲಿ ಇದೇ ತಾ 7ರಂದು ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ರೈತ ಸಮ್ಮೇಳನ ಜರಗಿತೆಂದು ತಿಳಿದು ಬರುತ್ತದೆ.

ಮಹಾ ಜನರಲ್ಲಿ ವಿನಂತಿ

ಕೋಂಗ್ರೆಸ್ ಎಂಬುದು ಅಖಿಲಭಾರತದ ಮಹಾ ದೊಡ್ಡ ಪೂಜ್ಯ ಸಂಸ್ಥೆ. ಕೋಂಗ್ರೆಸಿನಲ್ಲಿ ಜಾತೀಯತೆಯಾಗಲೀ ಸ್ವಾರ್ಥಪರತೆಯಾಗಲೀ ಇರಕೂಡದು ಎಂಬುದು ಪ್ರತಿಯೋರ್ವ ಭಾರತೀಯನು ಅರಿತ ವಿಷಯ. ಇಂತಿದ್ದು ಆ ಮಹಾ ಪೂಜ್ಯಸಂಸ್ಥೆಯಲ್ಲಿ ಸ್ವಾರ್ಥಪರರು ತುಂಬತುಳುಕಾಡುವುದು ತುಂಬಾ ಶೋಚನೀಯ ವಿಚಾರವಲ್ಲವೆ? ಆ ರಾಷ್ಟ್ರಸಭೆಯ ಇತಿಹಾಸದಲ್ಲಿ ಇಂತಹ ಕಳಂಕವು ಇತ್ತೀಚೆಗಿನದು ಅಲ್ಲವೆ? ಈ ನಿಷ್ಕಳಂಕ ಸಂಸ್ಥೆಯನ್ನು ಸ್ವಾರ್ಥಪರರು ಆವರಿಸಿ ಕೆಡಿಸಿಕೊಳ್ಳಡಹಾಗೆ ನೋಡುವುದು ಅತೀ ಆವಶ್ಯವಲ್ಲವೆ? ಈ ಮೇಲಿನ ಮತ್ತು ಕೆಳಗಿನ ಮಾತುಗಳು ದಕ್ಷಿಣಕನ್ನಡಕ್ಕೆ ಅನ್ವಯಿಸುತ್ತದೆಯೆಂದರೆ ತಪ್ಪಲ್ಲ. ಅದರಲ್ಲೂ ನಮ್ಮ ಕುಂದಾಪುರಕ್ಕೆ ಈ ಮಾತು ಸರಿಹೋಗುವುದು. ಇಲ್ಲಿಯ ಕೆಲವು ಮಹನೀಯರು ದಕ್ಷಿಣಕನ್ನಡ ಕೋಂಗ್ರೆಸ್ ಕಮಿಟಿಯ ಸ್ಥಾನಮಾನಕ್ಕಾಗಿ ವಿಶೇಷ ಉತ್ಸಾಹದಿಂದಮಂಗಳೂರುವರೆಗೆ ಓಡಾಡಿ ಬೇರೆ ಉಮೇದುವಾರರ ಅರ್ಜಿಗಳನ್ನುತಳ್ಳಿಹಾಕುವಂತೆ ಮಾಡಿಸಿ ತಮ್ಮ ಬೇಳೆ ಬೇಯಿಸಲು ಯುಕ್ತಿಸಿದರು. ಮತ್ತು ಬೇರೆಲ್ಲಾ ವಿಷಯವನ್ನೂ ಒತ್ತಟ್ಟಿಗಿರಿಸಿ ಹೇಳುವುದೇನೆಂದರೆ ಕುಂದಾಪುರದಿಂದ ಮತ್ತು ಬಾರಕೂರಿನಿಂದ ಕಳುಹಿಸಿದ ನಾಲ್ಕಾರು ಅರ್ಜಿಗಳನ್ನು ಕಡೆಗಣಿಸುವಂತೆ ಮಾಡಿ ತಮ್ಮ ಸ್ಥಾನವನ್ನು ಸಂಪಾದಿಸಿ ಸಪ್ಪ ಕಾಪಾಡಿಕೊಂಡಿರುತ್ತಾರೆ. ಇದರಲ್ಲಿ ನಿಜವಾಗಿಯೂ ಮಂಗಳೂರು ಕೋಂಗ್ರೆಸ್ ಕಮಿಟಿಯ ಪರಿಶೀಲನಾಧಿಕಾರಿಗಳು ತಪ್ಪಿ ಬಿದ್ದಿದ್ದಾರೆ. ಆ ರಿಕ್ರೂಟಿಂಗ್ ಅಧಿಕಾರಿಗಳು ನಿಜವಾಗಿಯೂ ಜನತೆ ಅಭಿಪ್ರಾಯ ಪಡೆದಂತಾಗಲಿಲ್ಲ. ಬದಲಿಗೆ ಒತ್ತಾಯಪಡುವರಿಗೇನೇ ಸ್ಥಾನ ಒದಗಿಸಿದಂತಾಯಿತು. ಇಲ್ಲವಾದಲ್ಲಿ ಕುಂದಾಪುರದಿಂದಹೋದ ನಾಲ್ಕಾರು ಅರ್ಜಿಗಳಲ್ಲಿ ಬರೇ ಇಬ್ಬರು ಅವಿರೋಧವಾಗಿ ಆರಿಸಿಬರುವದೆಂದರೇನು? ಅರ್ಜಿಪರಿಶೀಲನಾ ಅಧಿಕಾರಿಗಳು ಕ್ರಮವಂತೆ ಇದನ್ನುಚುನಾವಣೆಗಿಟ್ಟು ಜನತೆಯ ಬಹುಮತ ಪಡೆದು ಆರಿಸಿಬರುವವರನ್ನೇ ಕಮಿಟಿಯ ಸ್ಥಾನಕ್ಕೆ ಆರಿಸಿಕೊಳ್ಳಬೇಕಾಗಿತ್ತು. ಇನ್ನು ಅಖಿಲಭಾರತದಲ್ಲಿ ಸುವರ್ಣಾಕ್ಷರಗಳಿಂದ ಕೊರೆದಿಡುವಂಥ ದಿನವಾದ ಆಗೋಸ್ತು ತಾ. 9ರ ದಿನಾಚರಣೆಯಲ್ಲಿ ಕುಂದಾಪುರದ ಸರ್ಕಲಿನಲ್ಲಿ ಅವಿರೋಧವಾಗಿ ಆರಿಸಲ್ಪಟ್ಟವರಾಗಲೀ ಸ್ಥಳೀಯ ಕಾಂಗ್ರೆಸ್ ಕಮಿಟಿಯವರಾಗಲೀ ಪ್ರತ್ಯಕ್ಷ ಯಾ ಅಪ್ರತ್ಯಕ್ಷ ರೀತಿಯಲ್ಲಿ ಭಾಗವಹಿಸಿದ್ದರೆ ತುಂಬಾ ಸಂತೋಷವಿದ್ದಿತ್ತು. ಆದರೆ ಮೇಲಿನ ಯಾವ ಮಹನೀಯರೂ ಆ ದಿನ ಕುಂದಾಪುರದಲ್ಲೇ ಇರಲಿಲ್ಲ. ಬದಲಿಗೆ ವಿದ್ಯಾರ್ಥಿಗಳ ಮೇಲೂ ಇನ್ನಿತರರ ಮೇಲೂ ಭಾರ ಹೊರಿಸಿ ಇವರು ತಮ್ಮ ತಮ್ಮ ಊರಿನಲ್ಲಿ ಸ್ವಂತ ಕೆಲಸದಲ್ಲಿ ನಿರತರಾಗಿದ್ದಂತೆ ಕಂಡುಬಂತು. ಹಾಗಂತ ಅಲ್ಲಿ ಇಲ್ಲಿ ಸ್ಥಾನ ಎಲ್ಲರಿಗೂ ಬೇಕು! ಇಂಥವರಿಗೂ ಆ ಮಹಾ ಸಂಸ್ಥೆಯಲ್ಲಿ ಜವಾಬ್ದಾರಿ ಸ್ಥಾನಮಾನಗಳು ದೊರೆಯುವದು ತುಂಬಾ ಶೋಚನೀಯ. ಮೊನ್ನೆಆಗೋಸ್ತು 9ರದಿನಾಚರಣೆಯಲ್ಲಿಸಹಾಯಕರಾಗಿ ನಿಂತು ಶಕ್ತಿ ಮೀರಿ ಕೆಲಸನಡೆಸಿದ ರಾಷ್ಟ್ರಸೇವಾದಳದವರಿಗೆ ಜನತೆಯಪರವಾಗಿ ನಾವುಧನ್ಯವಾದವನ್ನು ಅರ್ಪಿಸುತ್ತೇವೆ. ಇನ್ನಾದರೂ ಅಧಿಕಾರಿಗಳು ಈ ಕುರಿತು ಪುನರ್ವಿಚಾರಮಾಡಿ, ಮರು ಚುನಾವಣೆ ನಡೆಸಿ ಯೋಗ್ಯರನ್ನೇ ಆರಿಸಲಿ, ಎಂದು ಆಗ್ರಹದಿಂದ್ವಿಜ್ಞಾಪಿಸುವ.

---ಓರ್ವ ಸದಸ್ಯ

ಹಣ ಸಹಾಯಕ್ಕಾಗಿ ಬೊಂಬಾಯಿಗೆ ಬರುವವರ ತಿಳುವಳಿಕೆ ಬಗ್ಗೆ.

ಬೊಂಬಾಯಿ ನಗರ ವಾಸಿ ಬಂಟರ ಯಾನೆ ನಾಡವರ ಸಮಾಜದವರ ಕಡೆಯಿಂದ ಕನ್ನಡ ಜಿಲ್ಲೆಯಲ್ಲಿಯ ವಿದ್ಯಾ ಸಂಘಗಳಿಗೂ ಜೈನ ದೇವಸ್ಥಾನ ಮೊದಲಾದ ಸಂಸ್ಥೆಗಳಿಗೂ ಇನ್ನಿತರ ಅನೇಕ ಸತ್ಕಾರ್ಯಗಳಿಗೂ ಸಹಾಯ ಮಾಡುವಬಗ್ಗೆ ಹಣಸಂಗ್ರಹಿಸಿ, ಒಂದು ಸಂಸ್ಥೆ (ಟ್ರಸ್ಟ್ ಫಂಡ್)ಯನ್ನು ಏರ್ಪಡಿಸುವುದರಲ್ಲಿದ್ದಾರೆ. ಸದ್ಯದಲ್ಲೇ ಎಲ್ಲಾ ವ್ಯವಸ್ಥೆಗಳು ಆಗಲಿಕ್ಕಿವೆ. ಆದುದರಿಂದ, ಸಹಾಯ ಕೇಳುವ ಬಗ್ಗೆ ಬೊಂಬಾಯಿಗೆ ಬರತಕ್ಕ ಮಹನೀಯರು ದಯವಿಟ್ಟು ಸದ್ಯದಲ್ಲೇ ಈ ಪತ್ರಿಕೆಯಲ್ಲಿ ಕೊಡುವ ಜ್ಯಾಹಿರಾತನ್ನು ನೋಡಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಬೊಂಬಾಯಿಗೆಬಂದು ಸಮಾಜದ ಗೃಹಸ್ತರನ್ನು ಹುಡುಕುವ ಕಷ್ಟ ನಷ್ಟಗಳನ್ನು ಅನುಭವಿಸುವುದಕ್ಕಿಂತ, ಬೊಂಬಾಯಿಯಲ್ಲಿ ಏರ್ಪಡತಕ್ಕ ಈ ಸಂಸ್ಥೆಯೊಡನೆ ಮೊದಲಾಗಿ ಪತ್ರವ್ಯವಹಾರಮಾಡಿ ಅನಂತರ ಬರುವ ಅವಶ್ಯವಿದ್ದಲ್ಲಿ. ಬರುವದು ಉತ್ತಮವೆಂದು ಈ ಮೂಲಕ ತಿಳಿಸೋಣಾಗುತ್ತದೆ.

1 ಮುಂಡ್ಕೂರು ರೆಂಜಗುತ್ತು ಮುತ್ತಪ್ಪ ಸೆಟ್ಟಿ,ತಾರ್ದೇವ್ ಬೊಂಬಾಯಿ. 2 ಸೂಡ ವೀರಪ್ಪ ಸೆಟ್ಟಿ--ಬೈಕಲ, ಬೊಂಬಾಯಿ. 3 ಕಟಪಾಡಿ ಅಣ್ಣಯ್ಯ ಸೆಟ್ಟಿ—ಬೈಕಲ ಬೊಂಬಾಯಿ 4 ಉಪ್ಪೂರು ಸೇಷ ಶೆಟ್ಟಿ—ಬೈಕಲ, ಬೊಂಬಾಯಿ 5 ಇನ್ನ ಬಗ್ಗದಗುತ್ತು ನರ್ಸ ಸೆಟ್ಟಿ, ಪಡಾಲ, ಬೊಂಬಾಯಿ.

ಟ್ರಸ್ಟ್ ಫಂಡಿನ ಉದ್ದೇಶಗಳು

ಹೀಗೆ ರಚಿಸಲ್ಪಡಲಿರುವ ಟ್ರಸ್ಟ್ ಫಂಡು ಸಹಾಯ ಸಲ್ಲಿಸಲಿಕ್ಕಿರುವ ಕಾರ್ಯಗಳು- (1) ಸ್ವಸಮಾಜದ ಉದ್ಧಾರ ಕಾರ್ಯಗಳು (2) ವ್ಯಾಪಾರೋದ್ಯಮಗಳಲ್ಲಿ ಅನಿವಾರ್ಯವಾಗಿ ನಷ್ಟ ಹೊಂದಿದವರಿಗೆ ಸಹಾಯ. (3) ಅವಶ್ಯಕ ನೂತನೋದ್ಯಮ ಕೈಕೊಳ್ಳುವವರಿಗೆ ಆರ್ಥಿಕ ಸಹಾಯ. (4) ವಿದ್ಯಾ ಸಂಸ್ಥೆ, ದೇವಸ್ಥಾನ ಇತ್ಯಾದಿ ಸಾಮಾಜಿಕ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯ. (5) ಧರ್ಮಾರ್ಥ ಚಿಕಿತ್ಸೆ, ವಿದ್ಯಾರ್ಥಿ ವೇತನ, ಮತ್ತಿಂತಹ ಇತರ ಸಹಾಯಗಳು.

ಪ್ರಕಟಣೆ

ಉದಿಯಾವರ ಗ್ರಾಮದ ಸ. ನಂಬ್ರ. 54/13 Bನೇ ಸ್ಥಳದಲ್ಲಿ ಉದಿಯಾವರ ಪಂಚಾಯ್ತುಬೋರ್ಡಿನಿಂದ ತೆರೆಯಲ್ಪಡಲಿರುವ ದಿನರಹಿ ಮಾರ್ಕೆಟಿನಲ್ಲಿ ತಾ. 1-10-1946ರಿಂದ ತಾ. 31-3-1948ರ ವರೆಗಿನ 18 ತಿಂಗಳ ಕಾಲಪರಿಮಿತಿಯಲ್ಲಿ ಫೀಸು ವಸೂಲುಮಾಡುವ ಸ್ವಾತಂತ್ರ್ಯದ ಗುತ್ತೆಯು ಇದೇ ತಾ.2-9-46ನೇ ಸೋಮವಾರ ಸಾಯಾಂಕಾಲ 4ಗಂಟೆಗೆ ಸದರಿ ಬೋರ್ಡು ಆಫೀಸಿನಲ್ಲಿ ಬೋರ್ಡಿನ ಪ್ರೆಸಿಡೆಂಟರಿಂದ ಬಹಿರಂಗವಾದ ಏಲಾ ಮೂಲಕ ಮಾರಾಟಮಾಡಲ್ಪಡುವುದು. ಅಪೇಕ್ಷೆಯುಳ್ಳವರೆಲ್ಲರೂ ಬಂದು ಬಿಡ್ ಮಾಡಬಹುದು. ಬಿಡ್ ಮಾಡುವ ಪ್ರತಿಯೊಬ್ಬರೂ ರೂ 10-ರಂತೆ ಪ್ರಥಮಾಠೇವಣಾತಿಯನ್ನು ಕಟ್ಟತಕ್ಕದ್ದು. ಪ್ರಥಮ ವಾರು ಕರೆಯುವ ಮೊಬಲಗು ರೂ. 60/- ಎಂದು ನಿಶ್ಚಯಿಸಿದೆ

ಯು. ನರಸಿಂಹ ಕಮ್ತಿ,
ಪ್ರೆಸಿಡೆಂಟ್, ಉದಿಯಾವರ
ಪಂಚಾಯತ ಬೋರ್ಡು.

ಉದಿಯಾವರ ಪಂಚಾಯತ ಬೋರ್ಡು
ತಾ. 11-9-1946

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. **2/-**

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮುಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನವಲ್ಲಿ ನರೇಂದ್ರರು ಮಾಡುತ್ತಿರುವ ನಿರಂಕುಶತೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4--0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ದಕ್ಷಿಣ ಕನ್ನಡ

ಮಂಗಳೂರು.

ಗೌ. ಕಾಲೇಜಿನ ಅಧ್ಯಾಪಕ– ವಿದ್ಯಾರ್ಥಿಗಳ ಸಭೆಯಲ್ಲಿ ತಾ. ೧೦ರಂದು ಶ್ರೀ। ಸೇಡಿಯಾಪು ಕೃಷ್ಣ ಭಟ್ಟರು ಕನ್ನಡ ಭಾಷಾ ವ್ಯವಸಾಯದ ಕುರಿತು ಭಾಷಣವಿತ್ತರು.

ಸಾಹಿತ್ಯ ಪರಿಷತ್ತಿನ– ಮಂಗಳೂರು ಶಾಖೆಯ ಸಭೆಯು ತಾ. ೪ರಂದು ಸೇರಿ, ಮದ್ರಾಸ್ ಸರಕಾರವು ಪ್ರಾದೇಶಿಕ ಭಾಷೆಯನ್ನೇ ಶಿಕ್ಷಣ ಮಾಧ್ಯಮಿಕ ಮಾಡಿದುದನ್ನು ಅಭಿನಂದಿಸುವ, ಮಂಗಳೂರಲ್ಲೊಂದು ಬಿ. ಟಿ. ಕಾಲೇಜು ಸ್ಥಾಪಿಸಬೇಕೆನ್ನುವ ಠರಾವುಗಳು ಮಾನ್ಯವಾದುವು.

ಶ್ರೀ। ಕೆ ಪಿ. ಆರ್. ಗೋಪಾಲನ್– ಕೇರಳದ ಕಮ್ಯೂನಿಸ್ಟ್ ಮುಖಂಡರಾದ ಶ್ರೀಯುತರು ತಾ. ೮ರಂದು ಮಂಗಳೂರಿಗೆ ಆಗಮಿಸಿದರು. ನಗರದ ಮಜೂರ ಸಂಘಗಳು ಸ್ವಾಗತವಿತ್ತವು ಸಂಜೆ ಕೆನರಾ ಹೈಸ್ಕೂಲಿನ ಕೃಷ್ಣ ಮಂದಿರದಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ। ಗೋಪಾಲನರು ಮಲೆಯಾಳದಲ್ಲಿ ಮಾತನಾಡುತ್ತ ಕಾಂಗ್ರೆಸ್–ಲೀಗ್–ಕಮ್ಯೂನಿಸ್ಟ್–ಪಕ್ಷಗಳು ಒಂದಾಗಬೇಕಾದ ಅವಶ್ಯಕತೆಯನ್ನು ಕುರಿತು ಭಾಷಣವಿತ್ತರು.

ಮಂಗಳೂರು ವಿದ್ಯಾರ್ಥಿ ಸಂಘದ– ಈ ವರ್ಷದ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲು ತಾ. ೩ರಂದು ಕೆನರಾ ಹೈಸ್ಕೂಲಿನಲ್ಲಿ ಪ್ರೊ. ವಿ. ಜೆ ಜೋಸೆಫ್, ಇವರ ಅಧ್ಯಕ್ಷತೆಯಲ್ಲಿ ಪ್ರಥಮ ಮಹಾಸಭೆಯು ಕೂಡಿತು. ಕಾರ್ಯಕ್ರಮದಲ್ಲಿ ಮೊದಲಾಗಿ, ಶ್ರೀ। ಭೂಲಾಭಾಯಿ ದೇಸಾಯಿ, ಮತ್ತು ಶ್ರೀ। ಶ್ರೀನಿವಾಸ ಶಾಸ್ತ್ರಿ ಇವರ ನಿಧನದ ಬಗ್ಗೆ ಸಂತಾಪಸೂಚಕ ಠರಾವುಗಳು ಮಂಜೂರಾದುವು. ಎರಡನೆಯದಾಗಿ ಗೋವಾದ ಚಳವಳದಲ್ಲಿ ಭಾಗವಹಿಸಿದ ಅ. ಭಾ. ಕಾಂಗ್ರೆಸ್ಸಿನ ಜತೆ ಕಾರ್ಯದರ್ಶಿಗಳಾಗಿದ್ದ ಶ್ರೀ। ಡಿ. ರಿಬೇರೋ, ಅವರಿಗೆ ಅಲ್ಲಿಯ ಸರಕಾರದವರು ೧೫ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದ್ದಕ್ಕಾಗಿ, ನಿಷೇಧಕ ಠರಾವು ಮಂಜೂರಾಯಿತು. ಅಲ್ಲದೆ ಅಂಚೆ ಕೆಲಸಗಾರರ ಸಂಪು, ದ. ಆಫ್ರಿಕದ ಹಿಂದಿಯರ ಸತ್ಯಾಗ್ರಹ ಇವುಗಳ ವಿಚಾರದಲ್ಲಿ ಸಹಾನುಭೂತಿಪರವಾದ ಠರಾವುಗಳು ಮಂಜೂರಾದುವು. ಅನಂತರ ೧೮ ಮಂದಿ ಕಾರ್ಯಕಾರಿ ಸಮಿತಿಗೆ ಚುನಾಯಿತರಾದರು.

ಆಗೋಸ್ಟು ತಾ. ೬ ದಿನಾಚರಣೆ– ಮುಂಜಾನೆ ಪ್ರಭಾತಫೇರಿ, ಧ್ವಜವಂದನೆಗಳಿಂದ ಆರಂಭವಾಗಿ, ಸಂಜೆ, ವಿದ್ಯಾರ್ಥಿ ಕಾಂಗ್ರೆಸ್, ಯುವಜನ ಕಾಂಗ್ರೆಸ್, ನಗರ ಕಾಂಗ್ರೆಸ್ ಸಮಿತಿ— ಇವುಗಳ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊ... ಡಾ। ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ। ಎಲ್. ಸಿ. ಪಾಯಸರು ಭಾಷಣವಿತ್ತರು.

ಮಳೆ ಇಷ್ಟರಲ್ಲಿ ೧೧೦ ಇಂಚಿಗೂ ಮಿಕ್ಕಿ ಮಳೆ ಸುರಿದಿದೆ. ಸರಾಸರಿಗಿಂತ ೨೭ ಇಂಚು ಜಾಸ್ತಿ ಮಳೆಯಾಗಿದೆ. ಕಳೆದ ತಾ. ೬, ೭ರಲ್ಲಿ ಸುರಿದ ಮಳೆಯಿಂದ, ಗುರುಪುರ, ನೇತ್ರಾವತಿ ಹೊಳೆಗಳೆರಡರಲ್ಲಿಯೂ ನೆರೆಬಂದಿದೆ. ತಾ. ೭ರಂದು, ಬಂಟ್ವಾಳ, ಕೂಳೂರು, ಗುರುಪುರ ಈ ಮೂರು ಕಡೆಗಳಿಂದಲೂ ಮಂಗಳೂರಿಗೆ ಬಸ್ ಬರಲಿಲ್ಲ ನೆರೆಯ ನೀರು ಮಾರ್ಗಗಳ ಮೇಲೇರಿದುದೇ ಕಾರಣ. ಬಂಟ್ವಾಳ, ಗುರುಪುರ, ಪಣಂಬೂರುಗಳಿಂದ ನೆರೆಯ ಹಾವಳಿ ನಡೆದ ವಾರ್ತೆ ಬರುತ್ತಿವೆ.

ಮಂಗಳೂರು ತಾಲೂಕು ಆಹಾರ– ಸಮಿತಿಯ ಸಭೆಯು ಇದೇ ತಾ. ೭ರಂದು ಜರಗಿದಾಗ ಈ ಕೆಳಗಿನ ನಿರ್ಧಾರಗಳು ಮಾನ್ಯವಾದುವು:—ಸಕ್ಕರೆ ಚಿಮಿಣೆ ಎಣ್ಣೆ ವಸ್ತ್ರ ಮತ್ತು ಜನರಿಗೆ ಅಗತ್ಯವಿರುವ ಇನ್ನಿತರ ಕಂಟ್ರೋಲು ಸಾಮಾನುಗಳನ್ನು ಜನಸಂಖ್ಯೆಯ ಪ್ರಮಾಣದಲ್ಲಿ ಪಟ್ಟಣಗಳಲ್ಲಿಯೂ, ಹಳ್ಳಿಗಳಲ್ಲಿಯೂ ಜನರಿಗೆ ಸರಿಯಾಗಿ ಸಿಗುವಂತೆ ಗ್ರಾಮಸಮಿತಿಗೆ ವಹಿಸಿಕೊಡುವಂತೆ ಕಲೆಕ್ಟರವರನ್ನು ಕೇಳಿಕೊಳ್ಳಬೇಕಾಗಿಯೂ ಈ ಕೆಲಸವನ್ನು ಈ ತಿಂಗಳಿಂದಲೇ ಗ್ರಾಮ ಸಮಿತಿಯವರಿಂದ ಮಾಡಿಸಬೇಕಾಗಿಯೂ ನಿರ್ಣಯಿಸಲಾಯಿತು. ಅಕ್ಕಿ ಮತ್ತು ಭತ್ತ ರಿಸೀಪ್ಟ್ಸ್ ಡಿಪೋವಿಗೆ ಪಾವತಿ ಮಾಡುವಲ್ಲಿ ಸಿಗುವ ಬೋನಸ್ಸಿನ ಅವಧಿ ತಾ. ೩೧ ೮ ೪೬ರ ವರೆಗೆ ಮುಂದರಿಸಬೇಕಾಗಿ ನಿರ್ಣಯಿಸಲಾಯಿತು.

ದ. ಕ ಜಿಲ್ಲಾ ಪ್ರೆಸ್ ಕೆಲಸಗಾರರ– ಸಂಘದ ಆಶ್ರಯದಲ್ಲಿ ತಾ. ೭ರಂದು ಸಂಜೆ ಕೇಂದ್ರ ಮೈದಾನಿನಲ್ಲೊಂದು ಸಾರ್ವಜನಿಕ ಸಭೆ ಜರಗಿತು. ಶ್ರೀ. ಬಿ. ವಿ. ಕಕ್ಕಿಲ್ಲಾಯರು ಅಧ್ಯಕ್ಷರಾಗಿದ್ದರು. ಸಭೆಗೆ ಮೊದಲು ಮಜೂರರ ಮೆರವಣಿಗೆಯಿತ್ತು. ಸಂಘದ ಅಧ್ಯಕ್ಷರಾದ ಶ್ರೀ। ಎಸ್. ಎನ್. ಹೊಳ್ಳರು ಪ್ರೆಸ್ ಮಜೂರರ ಕೇಳಿಕೆಗಳನ್ನು ವಿವರಿಸಿದರು. ಅನಂತರ ಶ್ರೀ। ಮೋಹನದಾಸ್ ಮತ್ತು ಶ್ರೀ। ಕೃಷ್ಣ ಶೆಟ್ಟಿ ಅವರ ಭಾಷಣಗಳಾದುವು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಜೂರರೂ, ಮಹಾಜನರೂ ಎಂದೇ ರಂಗದಲ್ಲಿ ನಿಂತು ಉದ್ಯೋಗ, ಜೀವನಕ್ಕೆ ತಕ್ಕ ಕೂ... ...ತ್ತಿತರ ಸೌಕರ್ಯಗಳು, ನ್ಯಾಯವಾದ ಬೆಲೆಗೆ ಬೇಕು ಬೇಕಾದ ಸಾಮಾಗ್ರಿಗಳ ಪೂರೈಕೆ ಇತ್ಯಾದಿಗಳಿಗಾಗಿ ಹೋರಾಡಬೇಕೆಂದರು

ಜಿಲ್ಲಾ ಆಹಾರ ಸಮಿತಿ

ಹೊಸತಾಗಿ ಚುನಾಯಿತರಾದ ಜಿಲ್ಲಾ ಆಹಾರ ಸಮಿತಿಯ ಸದಸ್ಯರ ಪ್ರಥಮ ಸಭೆಯು ಕಳೆದ ತಾ. ೨೯ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ನ್ಯಾಯವಿಧಾಯಕ ಸಭಾಸದರಾದ ಶ್ರೀ। ಎ ಕರುಣಾಕರ ಮೆನೊನರೂ, ಪ್ರಾಂತೀಯ ಎಂ. ಎಲ್. ಎ.,ಗಳಾದ ಶ್ರೀಯುತರು ಎ. ಬಿ. ಶೆಟ್ಟಿ, ಡಾ। ಮಲ್ಯ, ಕೆ. ಈಶ್ವರ ಖಾ. ಸಾ. ಮಹಮ್ಮದ್ ಅಹಮ್ಮದ್, ಡಿ. ಮಂಜಯ್ಯ ಹೆಗ್ಡೆ ಇವರೂ, ತಾಲೂಕು ಪ್ರತಿನಿಧಿಗಳಾದ ಎ ಕೃಷ್ಣ ಶೆಟ್ಟಿ (ಮಂಗಳೂರು) ರಾಘವನ್ ನಂಬಿಯಾರ್ (ಕಾಸರಗೋಡು) ಎಂ. ಸದಾಶಿವರಾವ್ (ಪುತ್ತೂರು) ರಾಮಮೋಹನ್ ರಾವ್ (ಕಾರ್ಕಳ) ಎಸ್. ಎಸ್. ಕೊಳ್ಕೆಬೈಲ್ (ಉಡುಪಿ) ಸೂರಪ್ಪ ಸೆಟ್ಟಿ (ಕುಂದಾಪುರ) ಇವರೂ, ಶ್ರೀ। ಗಳಾದ ಸಖಾರಾಮರಾವ್ (ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್) ಸರ್ವೋತ್ತಮರಾವ್ (ಕೊ. ಸೊಸೈಟಿಯ ಡೆ। ರಿಜಿಸ್ಟ್ರಾರ್) ಭೂತರಾಜರಾವ್ (ಮಂಗಳೂರು ಆರ್. ಡಿ. ಒ) ವೆಂಕಟಾಚಲ ನಾಯ್ಡು (ಕುಂದಾಪುರ ಆರ್. ಡಿ. ಒ,) ವೆಂಕಟೇಶ್ವರುಲು (ಪುತ್ತೂರು ಆರ್. ಡಿ. ಒ) ಎಂ. ಬಿ. ಶಂಕರ ರಾವ್ (ಕಾರ್ಯದರ್ಶಿ) ಮತ್ತು ಜ। ಘುಲಾಮ್ ಮಹಮ್ಮದ್ (ಪರ್ಸನಲ್ ಎಸಿಸ್ಟಾಂಟ್) ಇವರು ಹಾಜರಿದ್ದರು.

ಶ್ರೀ। ಎಂ. ಶಿವರಾಯರನ್ನು ಸಹಕಾರಿ ಸಂಘಗಳ ಪರವಾಗಿಯೂ, ಶ್ರೀಮತಿ ಮೇರಿ ಬ್ರಿಟೊ ಮತ್ತು ಶ್ರೀ। ಜಿನರಾಜ ಹೆಗ್ಡೆಯವರನ್ನು ಸಮಿತಿಯ ಇತರ ಸದಸ್ಯರನ್ನಾಗಿಯೂ ಆರಿಸಿಕೊಳ್ಳಲಾಯಿತು. (ಒಬ್ಬ ಮುಸ್ಲಿಮರನ್ನು ಆರಿಸಿಕೊಳ್ಳಬೇಕೆಂಬ ಖಾ. ಸಾ. ಅಹಮ್ಮದರ ಸೂಚನೆಯು ಬಿದ್ದು ಹೋಯಿತು.)

ಜಿಲ್ಲೆಯ ಸದ್ಯದ ಆಹಾರ ಪರಿಸ್ಥಿತಿಯ ಕುರಿತು ಅಧ್ಯಕ್ಷರು (ಕಲೆಕ್ಟರರು) ವಿವರಿಸುತ್ತ, ಜುಲೈ ತಿಂಗಳಲ್ಲಿ ಬರಬೇಕಾಗಿದ್ದ ಅಕ್ಕಿಯ ಪೈಕಿ ಜುಲೈ ತಾ ೨೦ರ ವರೆಗೆ ೮೫೭ಟನ್ ಮಾತ್ರ ಬಂದಿದೆ. ಕಾಸರಗೋಡಿನಲ್ಲಿ ಸಂಗ್ರಹವು ಬರಿದಾಗುತ್ತ ಬಂತು. ಆದುದರಿಂದ ಬೇರೆಡೆಗಳಿಂದ ಅಲ್ಲಿಗೆ ಸಾಗಿಸಬೇಕಾಯಿತು. ಆದರೆ, ಜಿಲ್ಲೆಗೆ ಬರಬೇಕಾಗಿದ್ದ ಅಕ್ಕಿಯ ಪೈಕಿ ೧೪೦೦ ಟನ್ ಇಷ್ಟರಲ್ಲೆ ಕೊಚ್ಚಿಗೆ ತಲುಪಿದೆ ಅಲ್ಲಿಂದ ಬೇಗನೆ ತರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗುವುದು. ಎಂದರು.

ಶ್ರೀ। ಎ. ಬಿ. ಶೆಟ್ಟರ ಪ್ರಶ್ನೆಯೊಂದನ್ನು ಉತ್ತರಿಸುತ್ತ, ಎಗ್ರಿಕಲ್ಚರಲ್ ಆಫೀಸರರು ಹೀಗೆಂದರು. "ಕಾಸರಗೋಡಿನಲ್ಲಿ ಧರ್ಮಾರ್ಥವಾಗಿ ಹಂಚಲಾದ ಗೊಬ್ಬರದ ಉಪಯೋಗವನ್ನು ರೈತರು ಪಡೆದಿದ್ದಾರೆ. ಅಲ್ಲಿಯ ಪೈರು ಆಶಾದಾಯಕವಾಗಿದೆ ಎರಡನೆಯ ಬೆಳೆಯ ಬಗ್ಗೆ ಜಿಲ್ಲೆಯ ಎಲ್ಲೆಡೆಗಳಲ್ಲೂ ವಿಕ್ರಯಿಸಲು ಬೇಕಾಗುವಷ್ಟು ಗೊಬ್ಬರದ ಸಂಗ್ರಹವಿದೆ."

ಬಟ್ಟೆ ನಿಯಂತ್ರಣ ಸಮಿತಿಯಲ್ಲಿ ಅನಧಿಕಾರಿಗಳನ್ನು ಸೇರಿಸಿಕೊಳ್ಳುವ ಕುರಿತಾದ ಸರಕಾರಿ ಯೋಜನೆಯನ್ನು ಅಧ್ಯಕ್ಷರು ವಿವರಿಸಿದರು.

ಕಳ್ಳ ಸಂತೆಯ ಹುಟ್ಟಡಗಿಸಲು, ಗ್ರಾಮ ತಾಲೂಕು ಹಾಗೂ ಜಿಲ್ಲಾ ಸಮಿತಿಯ ಸದಸ್ಯರೆಲ್ಲರೂ ಅಧಿಕಾರಿಗಳೊಡನೆ ಸಹಕರಿಸಬೇಕೆಂಬ ಅಧ್ಯಕ್ಷರ ಸೂಚನೆಯು ಸರ್ವಾನುಮತದಿಂದ ಮಾನ್ಯವಾಯಿತು.

ಗ್ರಾಮ, ತಾಲೂಕು ಹಾಗೂ ಜಿಲ್ಲಾ ಸಮಿತಿಗಳ ಕರ್ತವ್ಯದ ಕುರಿತು ಅಧ್ಯಕ್ಷರು ಅನುಭವವಿತ್ತರು. ಜಿಲ್ಲಾ ಸಮಿತಿಯ ಮುಂದಿನ ಸಭೆಯು ಸಪ್ಟೆಂಬರ ತಾ. ೧೨ಕ್ಕೆ ಸೇರಲಿದೆ

ಉದ್ಘಾಟನೆ– ಸೈಂಟ್ ಎಲೋಸಿಯಸ್ ಕಲಾ ಶಾಲೆಯ 'ಕರ್ನಾಟಕ ಸಂಘದ' ಉದ್ಘಾಟನಾ ಸಮಾರಂಭವು ತಾ 3ರಲ್ಲು ಸಂಜೆ ಶ್ರೀ ಮುಳಿಯ ತಿಮ್ಮಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀ ಜಿನರಾಜ ಹೆಗ್ಡೆಯವರು ಕನ್ನಡದ ಏಕೀಕರಣದ ಕುರಿತು ಭಾಷಣವಿತ್ತು ಅದಕ್ಕಾಗಿ ಪ್ರತಿಯೋರ್ವ ವಿದ್ಯಾರ್ಥಿಯೂ ದುಡಿಯತಕ್ಕದೆಂದು ಸೂಚಿಸಿದರು.

ಅಕ್ಕಿಯ ಪಡಿಯಲ್ಲಿ ಕಡಿತ– ಈ ವಿಷಯದಲ್ಲಿ ಜಿಲ್ಲಾ ಸಪ್ಲಾಯ್ ಆಫೀಸರರಾದ ಶ್ರೀ ಎಮ್. ಬಿ ಶಂಕರರಾಯರು ಮಂಗಳೂರಿನ ಪ್ರಮುಖ ಪತ್ರಿಕಾ ಕರ್ತರನ್ನು ಆಹ್ವಾನಿಸಿ ದಕ್ಷಿಣ ಕನ್ನಡದ ಆಹಾರ ಪೂರೈಕೆಯ ಪರಿಸ್ಥಿತಿಯನ್ನೂ, ಸದ್ಯ ರೇಶನ್ ಪ್ರಮಾಣದಲ್ಲಿ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಲಾದ ಸಂದರ್ಭವನ್ನೂ ವಿವರಿಸಿ ಹೇಳಿದರು.

ಉಪ್ಪಿನಂಗಡಿ– ಕಣಿಯೂರು ಕೇಂದ್ರದ ಗ್ರಾಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ತಾ 21–8–46ನೇ ಬುಧವಾರ ಮಧ್ಯಾಹ್ನ ಘಂಟೆ 2–30ಕ್ಕೆ ತಣ್ಣೀರುಪಂತ ಗ್ರಾಮದಲ್ಲಿ ನಡೆಸುವ ದಿನಾಚರಣೆಯು ಮಾನ್ಯ ಜಿಲ್ಲಾ ಕಲೆಕ್ಟರ್ ಯಸ್. ಭೂತಲಿಂಗಮ್, ಒ. ಬಿ. ಯಿ, ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ– ಈ ಎಸೋಸಿಯೇಶನಿನ ಸದಸ್ಯರು ಜುಲೈ ತಿಂಗಳ ತಾ21ರಲ್ಲಿ ಜರಗಿದ ಮಹಾ ಸಭೆಯಲ್ಲಿ ಶ್ರೀಯುತ ಯಚ್. ಕೊರಗಪ್ಪನವರು ಸ್ವರ್ಗಸ್ಥರಾದುಕ್ಕೆ ದುಃಖ ಸೂಚಕ ಠರಾವನ್ನು ಮಂಜೂರು ಮಾಡಿದರು.

ದೇವಡಿಗ ಸುಧಾರಕ ಸಂಘ. ಮುಂಬಾಯಿ— ಇದರ 21ನೇ ವಾರ್ಷಿಕೋತ್ಸವವು ತಾ. 4—8—45ರಲ್ಲಿ ಶ್ರೀ. ಲಕ್ಷ್ಮಣ ಬಿ. ಉಳ್ಳಾಲರವರ ಅಧ್ಯಕ್ಷತೆಯಲ್ಲಿ ಸಂಘದ ಮಹಾರದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘದ ಮುಂದಾಭಿವೃದ್ಧಿಯ ಕುರಿತು ಭಾಷಣವಿತ್ತರು. ಶ್ರೀ ಉಲ್ಲೂರು ಕಾಂತಪ್ಪ ದೇವಡಿಗರು ಸಂಘದ ಪ್ರಥಮ ಪೋಷಕರಾಗಿಯೂ, ಶ್ರೀಗಳಾದ ಲಕ್ಷ್ಮಣ ಬಿ. ಉಳ್ಳಾಲ್ ಅಪ್ಪಣ್ಣ ಕೆ. ಮೊಯಿಲಿ, ಕೊಂಪದವು ದೋಗು ದೇವಡಿಗ ಮತ್ತು ಪಳಿಮಾರು ಬಾಬು ಯಸ್. ದೇವಡಿಗ ಇವರೆಲ್ಲರೂ ಸಂಘದ "ಖಾಯಂ" ಅಜೀವ ಮೆಂಬರರಾಗಿಯೂ ಸೇರಿರುತ್ತಾರೆಂದು ತಿಳಿಸಲು ತುಂಬಾ ಸಂತೋಷ ಪಡುತ್ತೇವೆ.

ಉತ್ತಮವಾದ ಗಾಯನವಾದ ನಂತರ, ಲಘು ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಮ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ-ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಕಾಳಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ ಹೊಟ್ಟೆನೋವು, ವಾಂತಿ, ಅಜೀರ್ಣ, ಕೆಮ್ಮು, ಮೈನೋವು, ಹಲ್ಲುನೋವು, ಮಕ್ಕಳ ಕಾಲ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಬೇಸರಗಳನ್ನು **ಜಮೇರಿಯನ್ ಜೀವನ ಮಿಕ್ಶ್ಚರ್** [illegible] ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಶಗಳಂಥ ಭಯಂಕರವಾದ [illegible] ರೋಗಗಳ ಮೇಲೆ ಆಯುರ್ವೇದ ಇದರ ಉಪಯೋಗ [illegible] ಹಾಕ್ಟರಿಲ್ಲದಾಗ ಯಶಸ್ವಿಯಾಗಿ ಇದರ ಉಪಯೋಗವಾಗುವದರಿಂದ ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ತಪ್ಪದೇ ಇಟ್ಟುಕೊಳ್ಳುವದು (ಉತ್ಕೃಷ್ಟ ಮುದ್ರಾಗ್ರಹಿಕೆಯು ಉಂಟಾದುದಾಗಿದೆ) ದೊಡ್ಡ ಔಷಧಿಯ ಅಂಗಡಿಗಳಲ್ಲಿಯೂ (ಬೇರೆ ಔಷಧಿ ವ್ಯಾಪಾರಿಗಳಲ್ಲಿಯೂ) ಹಳ್ಳಿಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಜಮೇರಿಯನ್ ಮತ್ತು ಕಂಪನಿ ಮುಂಬಾಯಿ

ದಕ್ಷಿಣ ಕನ್ನಡ

ಕುಂದಾಪುರ ತಾಲೋಕಿನಲ್ಲಿ ಭಯಂಕರ ನೆರೆ ಹಾವಳಿ— ಕುಂದಾಪುರ ತಾಲೂಕಿನ ಹಾಲಾಡಿ ನಂದಸೆ ಇತ್ಯಾದಿ ಹೊಳೆಗಳಲ್ಲಿ ಮಹಾಪೂರವು ಎಂದು ಇದೇ ತಾರೀಖು ೧ರಿಂದ ೪ರ ವರೆಗೆ ನೆರೆ ನಿಂತುದರ ಪರಿಣಾಮವಾಗಿ ಹಾಲಾಡಿ, ಬೈಲೂರು, ಹಡಾಳಿ, ಹಳ್ನಾಡು, ಜಪ್ತಿ, ಬಳ್ಕೂರು, ಕಂಡ್ಲೂರು, ಸೌಕೂರು, ಬಡಾಕೆರೆ, ಬಸ್ರೂರು, ಹಟ್ಟಿಕುದ್ರು, ಆನಗಳ್ಳಿ, ಉಪ್ಪಿನ ಕುದ್ರು, ಪಟ್ಟಂಗಡಿ, ತಲ್ಲೂರು, ಪಡುಕೋಣೆ, ನಾಡು, ಹಡವು, ಮರವಂತೆ, ವಂಡ್ಸೆ, ಕಳಾಜೆ ಮುಂತಾದ ಹೊಳೆಯ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ಮನೆಗಳು ಬಿದ್ದು ಹೋಗಿ ಸುಮಾರು 3 ಲಕ್ಷ ರೂಪಾಯಿಗಳ ನಷ್ಟವಾಗಿರಬಹುದು ಆದರಿಂದಾಗಿ ಸಾವಿರಾರು ಕುಟುಂಬಗಳು ನಿರಾಶ್ರಿತವಾಗಿವೆ ಸಾವಿರಾರು ಎಕ್ರೆ ಜಮೀನಿನ ಪೈರು ಹಾಳಾಗಿರುತ್ತದೆ. ಗೋಡೆ ಬಿದ್ದು ಪ್ರಾಣ ಹಾನಿಯೂ ಉಂಟಾಗಿದೆ ಆದ್ದರಿಂದ ಜನತಾ ಸರಕಾರದವರು ಈ ವಿಷಯ ಹೆಚ್ಚಿನ ತೀವ್ರ ಗಮನ ಕೊಡುವರಾಗಿ ನಂಬುತ್ತೇವೆ

ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸ್ಥಳೀಯ ಸೇವಾದಳದವರು ತಾ 9ಕ್ಕೆ '1942 ಆಗೋಸ್ತು 9ರ" ಕ್ವಿಟ್ ಇಂಡಿಯಾ ದಿನಾಚರಣೆಯನ್ನು ಬಹು ವಿಜೃಂಭಣೆಯಿಂದ ಆಚರಿಸಿದರು ಭಯಂಕರ ಮಳೆ ಸುರಿಯುತ್ತಿದ್ದರೂ ಸಭೆ ಮತ್ತು ಮೆರವಣಿಗೆಯಲ್ಲಿ ಜನರು ವಿಶೇಷವಾಗಿ ಭಾಗವಹಿಸಿದ್ದರು ಗಾಂಧಿ ಮೈದಾನಿನಲ್ಲಿ ಶ್ರೀ ನೇರಂಬಳ್ಳಿ ಪರಮೇಶ್ವರಯ್ಯ, ಬಿ ಎ ಎಲ್ ಎಲ್. ಬಿ ಅವರ ಅಧ್ಯಕ್ಷತೆಯಲ್ಲಿ ಸಭೆಜರಗಿ ಭಾಷಣ, ಪ್ರತಿಜ್ಞಾ ವಾಚನವಾಗಿ ಸಭೆಯು ಮುಕ್ತಾಯವಾಯಿತು.

ಬಸ್ರೂರು— ತಾ 9ರಲ್ಲಿ ಆಗೋಸ್ತು ದಿನಾಚರಣೆ ನಡೆಯಿತು ಬೆಳಿಗ್ಗೆ ಗಂಟೆ 6ಕ್ಕೆ ಧ್ವಜವಂದನೆ, ಪ್ರಭಾತ ಫೇರಿಯಾಗಿ ಸಾಯಂಕಾಲ ಮೆರವಣಿಗೆ ನಡೆದು ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಬಿ. ರ[illegible] ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ ಜಿ ಎಸ್ ಸೂರಪ್ಪ ಸೆಟ್ಟರು ಈ ದಿನವು ಕ್ರಾಂತಿ ಚಿರಸ್ಮರಣೀಯವಾಗಿದೆ ಎಂಬುದನ್ನು ವಿವರಿಸಿ, ಸ್ವಾತಂತ್ರ್ಯದ ಪಕ್ಕಿನ [illegible] ಒಂದೊಸ್ಥಾನ [illegible] ಹೋರಾಟ ಹೋಗಬೇಕೆಂಬ ಒಲವಾದ [illegible] ಸಭಿಕರೆಲ್ಲರ ಪರವಾಗಿ ಮುಂ[illegible] ಸಭಿಕರೆಲ್ಲರೂ ಸ[illegible] ಅಂಗೀಕರಿಸಿದರು ಅ[illegible] ರಾಷ್ಟ್ರಗೀತದೊಂದಿಗೆ ಸ[illegible] ಮುಕ್ತಾಯವಾಯಿತು

ಕಾರ್ಕಳ— ಕಾರ್ಕಳ ತಾಲೂಕಿನ [illegible] ಶ್ರೀ [illegible] ನಾರಾಯಣ ರಾಯರ [illegible] ಕಮಿಟಿಗಳ ಮೆಂಬರರ ಹಾಗೂ ಪಂಚಾಯತ ಬೋರ್ಡ ಮೆಂಬರರ ಸಹಾಯದಿಂದಾಗಿ 2000 ಮುಡಿ ಅಕ್ಕಿ ಸಂಗ್ರಹವಾಗಿದೆ ಎಂದು ತಿಳಿದುಬರುತ್ತದೆ

ಸ್ಥಳೀಯ ಮುನ್ಸಿಪಾಲ ಕೋರ್ಟಿನಲ್ಲಿ ತಾಲೂಕು ಸಪ್ಲಾಯ ಆಫೀಸರರಾದ ಶ್ರೀ [illegible] ಸಿಂಗರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಆಹಾರ ಪ್ರಚಾರಕರಾದ ಶ್ರೀ ಎಮ್ ರಾಮಭಟ್ಟರವರು ಈಗಿನ ಆಹಾರದ ಕಷ್ಟ ಪರಿಸ್ಥಿತಿಯಲ್ಲಿ ಸಾರ್ವಜನಿಕ ಸಹಕಾರ, ಸಹಾಯದ ಆವಶ್ಯಕತೆ, ಗೋದಿ, ಜೋಳ ಮೊದಲಾದ ಧಾನ್ಯಗಳ ಹೆಚ್ಚಿನ ಉಪಯೋಗದ ಕುರಿತು ಭೋದಪ್ರದ ಭಾಷಣ, ತರುವಾಯ ಶ್ರೀ ಬಿ ನಾರಾಯಣರಾವ್ ರವರ ಮತ್ತು ಅಧ್ಯಕ್ಷರ ಸಂದರ್ಭೋಚಿತ ಭಾಷಣಗಳಾದ ಬಳಿಕ ಸಭೆ ಚದರಿತು.

ಕುಕ್ಕುಂದೂರು— ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ಮೇಲಿನ ತರಗತಿಗಳಲ್ಲಿ ಕಲಿಸುವರೆ ಯೋಗ್ಯ ಉಪಾಧ್ಯಾಯರುಗಳ ನೇಮಕವಾಗಿಯದೆ ಎಂತ ಸದ್ರಿ ಶಾಲಾ ಮೆನೇಜರರು ತಿಳಿಸುತ್ತಾರೆ.

ಹಿಂದೀ ಪರೀಕ್ಷೆಗಳು— ಅಂತೆ ಮುಸ್ವರದ ದೆಸೆಯಿಂದ ಟಪ್ಪಾಲಿನ ವ್ಯವಹಾರದಲ್ಲಿ ಅವ್ಯವಸ್ಥೆಯಾದುದರಿಂದ ಹಿಂದೀ ಪರೀಕ್ಷೆಗಳ ತಾರೀಕನ್ನು ಹಿಂದೀ ಪ್ರಚಾರ ಸಭೆಯವರು ಬದಲಾಯಿಸಿರುತ್ತಾರೆ. ಈ ಪ್ರಕಾರ ಪರೀಕ್ಷೆಗಳು ತಾ 31-8-46 ಮತ್ತು 1-9-46ಕ್ಕೆ ನಡೆಯುವವು. ಇದಲ್ಲದೆ ಪರೀಕ್ಷಾ ಕೇಂದ್ರ ಪತ್ರಿಕೆಯಲ್ಲಿ ಇನ್ನಾವ ಮಾರ್ಪಾಟೂ ಇಲ್ಲವೆಂದು ಮಂಗಳೂರು ಹಿಂದೀ ಪ್ರಚಾರ ಸಂಘಟಕರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಕಿಸಾನ್ ಕಾಂಗ್ರೆಸ್— ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ನಿಬಂಧನೆಯನ್ನನುಸರಿಸಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲೊಂದು ಕಿಸಾನ್ ಕಾಂಗ್ರೆಸ್ (ರೈತರ ಸಂಘ)ವನ್ನು ರಚಿಸಬೇಕೆಂದು ಯೋಚಿಸಿರುತ್ತದೆ ಅದಕ್ಕಾಗಿ ಜಿಲ್ಲೆಯ ಪ್ರತಿ ಹಳ್ಳಿಯಲ್ಲಿಯೂ ಉತ್ಸಾಹಿ ಕೆಲಸಗಾರರ ಅಗತ್ಯವಿರುವದು. ಈ ಸಂಸ್ಥೆಗೆ ಬೇಕಾದ ಸೂಚನೆ ಸಲಹೆಗಳನ್ನು ಕೊಡಲು ಮತ್ತು ಈ ಸಂಸ್ಥೆಯಲ್ಲಿ ಸೇರಿಕೊಂಡು ದುಡಿಯಲು ಉತ್ಸಾಹಿಗಳಾದವರು ಬಿ ವಿಠಲದಾಸ್ ಶೆಟ್ಟಿ, ವಿಟ್ಲ, ದ. ಕ ಇವರೊಡನೆ ಪತ್ರ ವ್ಯವಹಾರ ಮಾಡಬಹುದು ಇಂದಿನ ರೈತರ ಶೋಚನೀಯ ಸ್ಥಿತಿಯನ್ನು ಸುಧಾರಿಸುವದೇ ಈ ಸಂಸ್ಥೆಯ ಧ್ಯೇಯಗಳಲ್ಲೊಂದಾಗಿದೆ.

ಕಟಪಾಡಿ— ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ ಕ Regd ಸಮಿತಿಯ 12ನೇ ವಾರ್ಷಿಕ ಮಹಾ ಸಭೆಯು ಇದೇ ತಾ 25-8-46ನೇ ರವಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಸಮಿತಿಯ ಭವನದಲ್ಲಿ ಜರಗಲಿಕ್ಕಿರುವುದು.

ಮಟ್ಟು— ಮಟ್ಟು ಗ್ರಾಮದ ಕೊಪ್ಪಲ ಎಂಬಲ್ಲಿ ಉದ್ಯಾವರ ಹೊಳೆ ಶಾಖೆಗೆ ಕಟ್ಟ ಹಾಕಿಸಿ ನಾಲ್ಕೈದು ಗ್ರಾಮಗಳಲ್ಲಿ ಸುಗ್ಗಿ ವೈರ ಬೆಳೆಯಿಸಿ ಆಹಾರ ಪದಾರ್ಥಗಳನ್ನು ವೃದ್ಧಿಪಡಿಸುವ ವಿಷಯ ಉಡುಪಿ ತಾಲೂಕು ತಹಶಿಲ್ದಾರ್ ಶ್ರೀ. ಎ ಸದಾನಂದ ಪೈಯವರ ಅಧ್ಯಕ್ಷತೆಯಲ್ಲಿ ಇದೇ ತಾ. 11ರಲ್ಲು ಸಂಜೆ ಮಟ್ಟು ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಸಾಧಾರಣ ನಾಲ್ಕು ನೂರಕ್ಕೂ ಮಿಕ್ಕಿ ನೆರೆದಿದ್ದ ಗ್ರಾಮಸ್ಥರ ಸಾರ್ವಜನಿಕ ಸಭೆಯು ಜರಗಿ ಶ್ರೀಗಳಾದ ವಕೀಲ್ ಎಮ್. ಎಸ್. ಅಧಿಕಾರಿ, ವಾಸುಸೆಟ್ಟಿ ಮೊದಲಾದವರೂ ಅಧ್ಯಕ್ಷರೂ ಸದ್ರಿ ಕಟ್ಟ ಹಾಕುವುದರ ಪ್ರಯೋಜನದ ಕುರಿತು ಭಾಷಣಮಾಡಿದರು. ಸದ್ರಿ ಯೋಜನೆಯನ್ನು ನೆರವೇರಿಸುವರೆ ಒಂದು ಸಮಿತಿಯು ನಿರ್ವಾಹಯಿಸಿತು.

ಹಿರಿಯಡಕ— ಇದೇ ತಾ 12ರಲ್ಲು ಸ್ಥಳೀಯ ಆರ್ಯಸಮಾಜ ಮಂದಿರದಲ್ಲಿ ಉಪಾಕರ್ಮ ವಿಧಿಯನ್ನು ನೆರವೇರಿಸಿ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಗಳು ಯಜ್ಞೋಪವೀತ ಮಹತ್ವದ ಕುರಿತು ಭಾಷಣವಿತ್ತರು.

ಉದ್ಯಾವರ— ಇಲ್ಲಿಯ ನೆರೆಪ್ರವಾಹ...

ಹಾಗೂ ಆಸುಪಾಸಿನಲ್ಲಿ ಸಿಡುಬು ತಲೆದೋರಿದೆ. ವಿಶೇಷತ ಮೊಗವೀರ ಸಮಾಜದವರು ಈಸಾಂಕ್ರಾಮಿಕ ರೋಗಕ್ಕೆತುತ್ತಾಗಿ ನಾಲ್ಕೈದು ಮರಣಗಳುಂಟಾಗಿವೆಯೆಂದು ತಿಳಿದು ಬರುತ್ತದೆ ಆರೋಗ್ಯ ಖ್ಯಾತೆಯವರು ಸಿಡುಬು ಜಾಸ್ತಿಯಾಗದಂತೆ ದಾಕು ಹಾಕುತ್ತಲಿದ್ದಾರೆ

ಶಿರ್ವ— ಹಾಯರ್ ಗ್ರೇಡ್ ತರಬೇತು ಹೊಂದಿದ ಅಧ್ಯಾಪಕರಿಗೆ 1947ನೇ ಮತ್ತು 1948ನೇ ವರ್ಷಗಳಲ್ಲಿ ಯಸ್. ಯಸ್. ಎಲ್. ಸಿ. ಪರೀಕ್ಷೆಗೆ ನಿಲ್ಲಲು ಅನುಕೂಲವಾಗುವಂತೆ ಶಿರ್ವ ಹಿಂದೂ ಹೈಸ್ಕೂಲಿನಲ್ಲಿ ತಾ 8-8-1946ರಿಂದ ಒಂದು ಕ್ಲಾಸನ್ನು ತೆರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನು ಮುಖ್ಯ ಉಪಾಧ್ಯಾಯರಿಂದ ಪಡೆಯಬಹುದು.

ಮಹಾ ಸಭೆ— ಶಿರ್ವ, ಬಂಟರ ಯಾನೇ ನಾಡವರ ವಿದ್ಯಾವರ್ಧಕ ಸಂಘದ ಎರಡನೇ ಮಹಾ ಸಭೆಯು, ಹಿಂದೂ ಹೈಸ್ಕೂಲು ಕಟ್ಟಡದಲ್ಲಿ, ತಾ. 11-8-46ರಲ್ಲಿ ಕಾರ್ಕಳ ವಕೀಲ್ ಶ್ರೀ N. ಮೋಹನ್ ದಾಸ್ ಅದ್ಯಂತಾಯರ ಅಧ್ಯಕ್ಷತೆಯಿಂದ ಜರಗಿತು. ಕಾರ್ಯದರ್ಶಿ ಎನ್. ಎಸ್ ಕುತ್ಯಾರರು ಸಂಘದ ಪಕ್ಷಿಯಿಂದ ನಡೆಯುವ ಹಿಂದೂ ಹಾಯರ್ ಎಲಿಮೆಂಟರಿ ಶಾಲೆ, 2. ಶಾರದಾ ಶಾಲೆ, ಕುತ್ಯಾರು ವಿದ್ಯಾದಾಯಿನಿ ಶಾಲೆ, ಕೋಡು ದುರ್ಗಾಂಬಿಕಾ ಶಾಲೆ, ಹಿಂದೂ ಹೈಸ್ಕೂಲು, ಹಿಂದೂ ಶಾಲಾ ಹೋಸ್ಟೇಲು, ವಿದ್ಯಾವರ್ಧಕ ಭವನ ಇವುಗಳ ವರದಿಯನ್ನು ಓದಿ ವರದಿ ವರುಷದಲ್ಲಿ ಆಯುವ್ಯಯವನ್ನು ವಿವರಿಸಿದರು. ಸಂಘದ 7ಸಂಸ್ಥೆಗಳಿಗಾಗಿ ಬರುವ ವರುಷದಲ್ಲಿ ರೂ 133650/= ಬೇಕಾಗಬಹುವಾದುದರಿಂದ ಸರ್ವರೂ ಸಹಾಯಮಾಡಬೇಕೆಂದರು

ಆ ಬಳಿಕ, ಬರುವ ವರ್ಷಕ್ಕೆ ಈ ಕೆಳಗಿನ ಕಾರ್ಯಕಾರಿ ಮಂಡಳಿಯು ಚುನಾವಣೆಯಾಯಿತು ಶ್ರೀಗಳಾದ ಕೆ ಮುದ್ದು ಸೆಟ್ಟಿ, (ಅಧ್ಯಕ್ಷ) ಕುತ್ಯಾರು ಪರೇಲ್ ಎಲ್ಲಪ್ಪಸೆಟ್ಟಿ (ಕೋಶಾಧಿಕಾರಿ) ಎನ್. ಎಸ್. ಕುತ್ಯಾರು (ಕಾರ್ಯದರ್ಶಿ) ಕೆ ಮುದ್ದಣ ಸೆಟ್ಟಿ, (ಜತೆ ಕಾರ್ಯದರ್ಶಿ) ಕೆ. ತಿಮ್ಮಪ್ಪಸೆಟ್ಟಿ, M. ನಾರಾಯಣ ಹೆಗ್ಗಡೆ S. ಅಣ್ಣಯ್ಯ ಹೆಗ್ಗಡೆ, ಕೆ. ನಾಗಪ್ಪಸೆಟ್ಟಿ, ಕೆ. ಬೋಜಸೆಟ್ಟಿ, S. ಮುಗ್ಗಪ್ಪ ಹೆಗ್ಗಡೆ, ಬಿ. ಚಂದ್ರಹಾಸ ಹೆಗ್ಗಡೆ, ಕೋಡು ತಿಮ್ಮಪ್ಪಹೆಗ್ಡೆ, ಪಾಲ್ಲಾರು ವಾಸುಸೆಟ್ಟಿ ದಾ ವಿ ರಾಜುಸೆಟ್ಟಿ [illegible]ಲ್ಯಾರು ದಾಬಸೆಟ್ಟಿ, ಪ್ರಭಾದೇವಿ, ವಾಮಸೆಟ್ಟಿ, ಕಲ್ಯಾದೇವಿ, ರಾಜುಸೆಟ್ಟಿ, ಬೀರಬೆಟ್ಟು ನಾರಾಯಣ ಸೆಟ್ಟಿ, ಕೊಲ್ಲಾಪುರ ಅಂತಯ್ಯ ಸೆಟ್ಟಿ

ಕಾರ್ಯಕಾರಿ ಮಂಡಳಿಯ ಪ್ರತಿಯೊಬ್ಬ ಸದಸ್ಯರೂ, ಕೂಡಲೇ ಕನಿಷ್ಠ ಪಕ್ಷ ರೂ. 500/= ಕೊಡಬೇಕಾಗಿ ನಿರ್ಣಯವಾದ ಬಳಿಕ, ಅಧ್ಯಕ್ಷರ, ಸಮಯೋಚಿತ ಭಾಷಣದೊಂದಿಗೆ ಸಭೆಯು ಕೊನೆಗೊಂಡಿತು.

ಕೃಷ್ಣಾಷ್ಟಮಿಯ ದಿನವಾದರೂ—

ಕೃಷ್ಣ ಪರಮಾತ್ಮನ ಬೋಧನೆಯನ್ನು, ತಿಳಿಯಿರಿ!

ಹೊಸಕೆರೆ

ಚಿದಂಬರಯ್ಯ ಕೃತ

ಗೀತೆಯ ಕೈಗನ್ನಡಿ

ಗೀತೆಯ ಸರಳ ಭಾಷಾಂತರ

ಬೆಲೆ ಎಂಟಾಣೆ

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:—

೧ ವಾಮಂಜೆ ಗುರುರಾವ್, ಉಡುಪಿ. ೨ ನವಯುಗ ಪ್ರೆಸ್, ಉಡುಪಿ ೩ ಸ್ಕೂಲ್ ಬುಕ್ ಕಂಪೆನಿ, ಮಂಗಳೂರು ೪ ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು, ೫. ಸಾಹಿತ್ಯ ಭಂಡಾರ, ಹುಬ್ಬಳ್ಳಿ. ೬. ಜೀವನ ಪುಸ್ತಕಾಲಯ, ಧಾರವಾಡ ೭. ಉಷಾ ಪ್ರೆಸ್, ಮೈಸೂರು. ೮. ಎಸ್ ಎಸ್. ನ್ಯೂಸ್ ಏಜೆನ್ಸಿ, ಉಡುಪಿ.

TENDER NOTICE

Tenders are invited by the undersigned to reach him on or before 15-9-1946 for transporting salt bags from sea going vessels or railway waggons and stacking them in the fish curing yards and golahs on the West Coast and for other sundry works Details and terms of contract can be had from the office of the Asst. Director of Fisheries (Coast), Calicut.

T M ARUMUGAM,
Asst. Director of Fisheries,
(Coast), CALICUT.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಿಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ. ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಿಸುವುದು; ಬೇಕಾದಾಗ ಗರ್ಭಧಾರಣೆಯನ್ನು ತಪ್ಪಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ಥ ಕಂಟ್ರೋಲಿಗೆ ರೂ. 4/. ವಿ. ಪಿ. 12 ಆಣೆ ಅಲಾಯಿದ.

Mrs. P. DEVEE,
F. D. S. (A B) Tollygunge, Calcutta.
ಸ್ಟಾಕಿಸ್ಟ್: ತಾ ಕಂಪೆನಿ, ಮಂಗಳೂರು

ಕೊಮ್ಯುನಿಸ್ಟರು ಮಜೂರರನ್ನು ಉದ್ಧರಿಸುತ್ತಾರೆ!

ಮಹಾಜನರೇ ಪ್ರೋತ್ಸಾಹಿಸಿರಿ.

ದೇಶದಲ್ಲಿ ಪ್ರಚಂಡ ಕ್ಷೋಭೆ ಕೋಲಾಹಲಗಳ ಸುಂದರ ರಚನೆಯಲ್ಲಿದ್ದಾರೆ ಕೊಮ್ಯುನಿಸ್ಟರು; ಪ್ರಚಲಿತ ಸರಕಾರವು ನ್ಯಾಯದ ತತ್ವಗಳ ಆದರಣೆಯಲ್ಲಿ ಈ ಕೋಲಾಹಲವನ್ನು ವಿರೋಧಿಸದೆ ಬಿದ್ದು ಹೋಗುವುದು. ಆಗ ಈ ಕೊಮ್ಯುನಿಸ್ಟ ಮುಖಂಡರೇ ಅಧಿಕಾರಕ್ಕೆ ಬರಬೇಕಾಗುವುದು. ಆಗ ನ್ಯಾಯತತ್ವಗಳಿರದ ಆವರು ನಿರಂಕುಶ ಪ್ರಭುತ್ವದಿಂದ ಮಜೂರರನ್ನೂ ಮಹಾಜನರನ್ನೂ ಏಕಪ್ರಕಾರ ದಮನಿಸಿ ದಬ್ಬಾಳಿಸಿ ರಷ್ಯದ ಕೈಯಲ್ಲಿ ಕೊಡುವರು; ಆಗ ದೇಶದಲ್ಲಿ ಸುಸ್ಯವಸ್ಥೆಯಾಗುವುದು'

ಮಜೂರರೇ

ಕೊಮ್ಯುನಿಸ್ಟರು ನಿಮ್ಮ ಉತ್ಪತ್ತಿ ಹೆಚ್ಚಿಸುವರು; ನಿಮ್ಮ ಚಳವಳಗಳ ಕಾರಣದಿಂದಲೇ ಪೋಲಿಸಂತೆಯೋ ಜೀವನದ ಖರ್ಚು ನಿಮಗೂ ಹೆಚ್ಚಾಗುವುದು. ಮಹಾಜನರಲ್ಲಿ ನೀವೂ ಒಂದಂಶವಾಗಿದ್ದೀರಿ. ನಿಮಗೆ ಮೇಲಿನ ಖರ್ಚಲ್ಲದೆ ಇನ್ನೂ ಒಂದು ಹೆಚ್ಚಿನ ಖರ್ಚು ಇದೆ; ಮುಷ್ಕರ ಹೂಡಿ ಉತ್ಪತ್ತಿಯನ್ನು ಕಳಕೊಳ್ಳುವುದು ಒಂದು ಅಧಿಕ ಖರ್ಚು. ಕೊಮ್ಯುನಿಸ್ಟರಿಂದ ನಿಮ್ಮ ಕೂಲಿ ಏರಿದುದಕ್ಕಿಂತಲೂ ನಿಮ್ಮ ಖರ್ಚು ಹೆಚ್ಚುವುದು ಹೆಚ್ಚಾದರೂ ನಿಮ್ಮಲ್ಲಿ ಅವರು ನಿರಂತರ ಅಸಮಾಧಾನವನ್ನು ಬಿತ್ತಿ, ಮನಶ್ಶಾಂತಿಯನ್ನು ನಾಶಮಾಡಿ, ಮಾಲಕರಿಗಿಂತಲೂ ಮೇಲಿನ ಸ್ಥಾನದ ಕಲ್ಪನೆಯನ್ನು ನಿಮಗೆ ಕೊಟ್ಟಿದ್ದಾರೆ. ಆ ಕಲ್ಪನಾರಾಜ್ಯದ ಆಕಾಶ ಕುಸುಮದ ಸುಖವು ಇತರರಿಂದ ದೊರಕದು. ಕೊಮ್ಯುನಿಸ್ಟರೇ ನಿಮಗೆ ಈ ಸುಖವನ್ನು ಕೊಡಬಲ್ಲರು; ಯಾಕೆಂದರೆ ನಿರಂಕುಶ ಸೂತ್ರಗಳಿಂದ ನಿಮ್ಮನ್ನು ನಿಜಸ್ಥಿತಿಗೆ ಅಗತ್ಯವಿದ್ದಾಗ ತಳ್ಳಲಿಕ್ಕೆ ಅವರಷ್ಟು ಸಮರ್ಥರು ಬೇರೆ ರಾಜಕೀಯ ಪಕ್ಷವಿಲ್ಲ. ಅವರ ಆಶ್ರಯದಲ್ಲಿ ಮುನ್ನಡೆಯಿರಿ. ದುಡ್ಡು ಹೆಚ್ಚು ಗಳಿಸುತ್ತ, ಸಾಮಾನು ಕಡಿಮೆ ಪಡೆಯುತ್ತ ಅವಿರಳವಾಗಿ ಮುನ್ನಡೆಯಲಿ ನಿಮ್ಮ ಮೂಲಕ ಕ್ರಾಂತಿ. ದೇಶದಲ್ಲಿ ಕ್ರಾಂತಿಯುಂಟಾಗಲಿಕ್ಕೆ ಹಾದಿ ಇದೇ, ಬೇರೆಯಿಲ್ಲ.

ಕೊಮ್ಯುನಿಸ್ಟರೇ

ನಿಮ್ಮಷ್ಟು ಯ ಕ್ತಿವಾದಿಗಳು ಬೇರೆ ರಾಜಕೀಯ ಪಕ್ಷಗಳಿಲ್ಲ; ಇತರರು ತಾವೇ ಆಸ್ತಿಪಾರ ಕಟ್ಟಿ ಗಟ್ಟಿಮಾಡಿದ ಪ್ರಜಾಶಕ್ತಿಯ ನ್ಯಾಯಸೂತ್ರಗಳಿಂದ ಬಾಧಿತರಾಗಿರುವರು; ಮಜೂರರ ತೃಪ್ತಿಯು ಕೊಮ್ಯುನಿಸ್ಟ ಅಂಶ ವೃಕ್ಷಕ್ಕೆ ಕೊಡಲಿಯಾಗಿದೆ; ಅದನ್ನು ನಾಶಪಡಿಸುವುದು ನಿಮ್ಮ ತಂತ್ರ, ನೀವು ಬಹಳ ಯುಕ್ತಿಯಿಂದ ಸಾಧಿಸಿ ನಿಮ್ಮ ಮುಹೂರ್ತವನ್ನು ನಿರೀಕ್ಷಿಸುತ್ತೀರಿ. ನಿಮ್ಮ ಪರಿಶ್ರಮವು ಪ್ರಶಂಸನೀಯವಿದೆ. ಪ್ರಚಲಿತ ಸರಕಾರದ ರಾಜಕೀಯ ತತ್ವಗಳೇ ನಿಮ್ಮ ಕುಹಕಗಳಿಗೆ ಉತ್ತಮ ರಕ್ಷೆಯಾಗಿದೆ.

ಮಾಲಕರೇ

ನೀವು ಯಾಕೆ ಹಿಂಜರಿಯುತ್ತೀರಿ? ನೀವು ಯಾಕೆ ಕಪ್ಪ ಹೆಸರಿಗೆ ಗುರಿಯಾಗುತ್ತೀರಿ; ಮಜೂರಿಯನ್ನು ನೀವು ನಿಮ್ಮ ಸ್ವಂತ ಪಿತ್ರಾರ್ಜಿತದಿಂದ ಕೊಡುವುದಲ್ಲವಲ್ಲ! ಸಮಾಜದ ಆರ್ಥಿಕ ಸ್ಥಿಮಿತದ ಬಗ್ಗೆ ಸರಕಾರವಾಗಲಿ, ಮಹಾಜನರಾಗಲಿ, ಅಸಂಖ್ಯಾಕ ಮಜೂರರೇ ಆಗಲಿ ಯೋಚನೆ ಇಡದಿದ್ದಾಗ ಒಂದು ಹಿಡಿ ಸಂಖ್ಯಾಕರಾದ ಮಾಲಕರಿಗೇಕೆ ಆ ಯೋಚನೆ? ಮಜೂರರ ಮಜೂರಿಯನ್ನು ಮಹಾಜನರಿಂದ ತೆಗೆದುಕೊಂಡು ಮಜೂರರಿಗೆ ಸಲ್ಲಿಸುವವರು ನೀವು; ಮಜೂರರು ಕೇಳಿದಷ್ಟು ಮಜೂರಿಯನ್ನು ಕೊಡಲಿಕ್ಕೆ ನಿಮಗೇನು ನಷ್ಟ? ಬದಲಿಗೆ ಈ ಕಾರಣದಿಂದ ನಿಮ್ಮ ಉತ್ಪನ್ನ ಹೆಚ್ಚುವುದು. ಲಾಭ ಮಜೂರರ ತೃಪ್ತಿಯ ಬಗ್ಗೆ ಅಲ್ಲವಾದರೂ, ಮಹಾಜನರ ಮತ್ತು ಸರಕಾರದ ಉದಾಸೀನತೆಯ ಬಗ್ಗೆ ನೀವೂ ಮಜೂರರೊಡನೆ ಕೂಡಿ ಪರ್ವತೀಕರಿಸುವ ಬೆಲೆಗಳ ಪ್ರಯೋಜನವನ್ನೇಕೆ ಪಡಿಯಬಾರದು? ಈ ಧೋರಣೆಯಲ್ಲಿ ಇತರ ಎಲ್ಲರಿಗಿಂತಲೂ ನೀವು ಹೆಚ್ಚು ಪ್ರಯೋಜನ ಪಡೆಯಲು ಸಾಧ್ಯವಿದೆ. [ನವಭಾರತ]

(೧) ನೇಕಾರರಿಂದ ಮುಷ್ಕರವನ್ನು ಹೂಡಿಸುತ್ತಾರೆ. ನಿಮ್ಮ ವಸ್ತ್ರದ ಸರಾಸರಿ ಖರ್ಚನ್ನು ರೂಪಾಯಿ ಹತ್ತರಷ್ಟು ಏರಿಸಲಿಕ್ಕೆ ಸಿದ್ಧರಾಗಿ ಪ್ರೋತ್ಸಾಹಿಸಿರಿ.

(೨) ತೋಟಗಳ ಮುಷ್ಕರವನ್ನು, ನಿಮ್ಮ ಖರ್ಚನ್ನು ತಿಂಗಳಿಗೆ ರೂಪಾಯಿ ಎರಡರಂತೆ ಏರಿಸಲಿಕ್ಕೆ ಸಿದ್ಧರಾಗಿ ಪ್ರೋತ್ಸಾಹಿಸಿರಿ.

(೩) ಪ್ರೆಸ್ಸ ಕೆಲಸಗಾರರಿಂದ ಮುಷ್ಕರ ಹೂಡಿಸುತ್ತಾರೆ; ನಿಮ್ಮ ಮಕ್ಕಳ ವಿದ್ಯಾಭ್ಯಾಸದ ಪುಸ್ತಕಗಳಿಗಾಗಿ ತಿಂಗಳಿಗೆ ರೂಪಾಯಿ ಹತ್ತರಂತೆ ಪ್ರತ್ಯೇಕಿಸಿ ಪ್ರೋತ್ಸಾಹಿಸಿರಿ.

(೪) ಹಂಚಿನ ಕಾರ್ಖಾನೆಯ ಕೂಲಿಗಳ ಮುಷ್ಕರವನ್ನು ಏರ್ಪಡಿಸುತ್ತಾರೆ; ಮನೆಬಾಡಿಗೆಗಾಗಿ ತಿಂಗಳಿಗೆ ರೂಪಾಯಿ ಐದನ್ನು ಬಿಂಗಡಿಸಿ ಪ್ರೋತ್ಸಾಹಿಸಿರಿ.

(೫) ಬೀಡಿ ಕೆಲಸಗಾರರ ಮುಷ್ಕರವನ್ನು ವಿಧಿಸುತ್ತಾರೆ; ನಿಮ್ಮ ಸೇದುವಿಕೆಗಾಗಿ ತಿಂಗಳಿಗೆ ಒಂದು ರೂಪಾಯಿ ಹೆಚ್ಚಿಗೆ ಮಾಡಿಕೊಂಡು ಪ್ರೋತ್ಸಾಹಿಸಿರಿ

(೬) ಟಪ್ಪಾಲು ಮುಷ್ಕರ ಹೂಡಿಸುತ್ತಾರೆ; ನಿಮ್ಮ ಟಪ್ಪಾಲು ಕಾಗದಗಳ ಖರ್ಚಿಗಾಗಿ ನಾಲ್ಕಾಣೆಯನ್ನಾದರೂ ಹೆಚ್ಚಿಟ್ಟುಕೊಂಡು ಪ್ರೋತ್ಸಾಹಿಸಿರಿ.

(೭) ರೈಲ್ವೆ ಮುಷ್ಕರ ಮಾಡಿಸುತ್ತಾರೆ; ರೈಲ್ವೆ ದರಗಳು ಏರುವ ಬಗ್ಗೆ ತಿಂಗಳಿಗೆ ಮೂರು ರೂಪಾಯಿಯನ್ನಾದರು ಹೆಚ್ಚಿಗೆ ಖರ್ಚಿಗೆ ತೆಕ್ಕೆ ಹಾಕಿ ಪ್ರೋತ್ಸಾಹಿಸಿರಿ.

(೮) ಕೃಷಿಕರ ಉತ್ಪತ್ತಿಯನ್ನು ಏರಿಸುವ ಬಗ್ಗೆ ನಿಮ್ಮ ಪ್ರೋತ್ಸಾಹ ಬೇಕು; ದವಸಧಾನ್ಯಗಳ ಬೆಲೆ ಏರುವಿಕೆಗಾಗಿ ಇಪ್ಪತ್ತು ರೂಪಾಯಿಯಷ್ಟು ಹೆಚ್ಚಿಗೆ ಖರ್ಚಿಗೆ ವ್ಯವಸ್ಥೆಮಾಡಿ ಪ್ರೋತ್ಸಾಹಿಸಿರಿ

(೯) ಪ್ರತಿಯೊಬ್ಬರಿಗಾಗಿ ಕೊಮ್ಯುನಿಸ್ಟರು ಶ್ರಮಿಸಿ ದಣಿದು ಉದ್ಧರಿಸುವುದರಿಂದ, ಮನೆಕೆಲಸಗಳಿಗೆ ಕೂಲಿ ಕೂಡಾ ಹೆಚ್ಚಾಗಿ, ಅತ್ಯಾವಶ್ಯಕ ಕೆಲಸಗಳ ಬಗ್ಗೆ ಮಾತ್ರ, ಐದು ರೂಪಾಯಿ ಹೆಚ್ಚಿಗೆ ಇಟ್ಟು ಪ್ರೋತ್ಸಾಹಿಸಿರಿ

(೧೦) ಈ ಮುಷ್ಕರಗಳಿಂದ ದೇಶದಲ್ಲಿ ಉಂಟಾಗುವ ಅವ್ಯವಸ್ಥಿತ ಪರಿಸ್ಥಿತಿಯಿಂದ ವ್ಯಾಪಾರ ವ್ಯವಸಾಯಗಳಿಗೆ ಪ್ರತಿಬಂಧಕ ಉಂಟಾಗುವ ಲಾಭ ಖೋರತನದಿಂದ ಹೆಚ್ಚಾಗುವ ನಿಮ್ಮ ವೆಚ್ಚಕ್ಕಾಗಿ ರೂಪಾಯಿ ಇಪ್ಪತ್ತನ್ನು ಪ್ರತ್ಯೇಕಿಸಿ ಕೊಮ್ಯುನಿಸ್ಟರನ್ನು ಪ್ರೋತ್ಸಾಹಿಸಿರಿ.

ಮೇಲಿನ ಮುಷ್ಕರಗಳ ಬಗ್ಗೆ ಮಾತ್ರವೇ ನೀವು ರೂಪಾಯಿ ೭೬-೪-೦ (ಬಡವರಿಗೆ ಮಾತ್ರ) ಹೆಚ್ಚಿಗೆ ಇಟ್ಟು...

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನೇಕ ಘವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)



೮ ಬಾಟ್ಲಿನ ಬಾಟ್ಲಿಗಳು ಹುಚ್ಚು ಕಡಿತ, ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿ ಬೆಟ್ಟು, ಉಡುಪಿ.

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0 12 0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1 ೬-0 ಕಳಿಸಬೇಕು

ನವಭಾರತ ಪುಸ್ತಕ ಭಂಡಾರ, ಉಡುಪಿ. | ಕಿರಿಯರ ಪ್ರಪಂಚ, ಉಡುಪಿ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E P. 287/1946.
OS. 523/1929.

ಎಚ್. ರಾಮರಾವ್ ಅವರ್ಲ್ ಜಾರಿ ಅರ್ಜಿದಾರ

ಮತ್ತು

ಕೃಷ್ಣಯ್ಯ ಶ್ಯಾನುಭಾಗ ಕೂಡಾ ಪ್ರತಿವಾದಿರು.

5ನೇ ಎದ್ರಿ ಶಾಂತೇರಿಯಾನೆ ಉಮಾ. ಪದ್ಮನಾಭ ಶಾನುಭೋಗನ ವಿಧವೆ, ಕುಂದಾಪುರ ಕಸಬಾಗ್ರಾಮ.

ಮೇಲ್ಕಂಡ ಅಮ್ಲುಜಾರಿಯಲ್ಲಿ 1-5ನೇ ಎದ್ರಿರಬಾಬ್ತು ಸ್ಥಿರ ಆಸ್ತಿಯನ್ನು ಅರ್ಜಿದಾರನು ಜಪ್ತುಮಾಡಿಸಿದ್ದು ನಿಂತಲೂ ಸದ್ರಿ ಜಪ್ತಿ ಕುರಿತು ಆಕ್ಷೇಪಯಿದ್ದರೆ ತಾರೀಕು 26 8-1946ನೇ ದಿವಸ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಪರಿಮುಖ ಹಾಜರಾಗಿ ಹಾಜರುಮಾಡಿಕೊಳ್ಳತಕ್ಕದ್ದೆಂತಲೂ, ಹಾಗೆ ಹಾಜರಾಗದಿದ್ದಲ್ಲಿ ಮುಂದಿನ ತನ್ನಿಯು ಏಕ ಪಕ್ಷವಾಗಿ ನಡೆಯುವುದೆಂತಲೂ, ಸಹಾ ಈ ಮೂಲಕ ತಿಳಿಯಪಡಿಸಿಯದೆ.

G Sanjiva Rao, BA LLB
Vakil for Petitioner

ತಾ. 8-8-1946
ಮೊಕ್ಕಾಂ: ಕುಂದಾಪುರ

ನೋಟೀಸು.

ಉಡುಪಿ. ಡಿ. ಮು. ಕೋರ್ಟಿನಲ್ಲಿ.

O S.No.438 1942 R.E.P.55/1946

M ಮುಕುಂದ ಕಾಮತ್ ವಾದಿ, ಅರ್ಜಿದಾರ

ಮತ್ತು

ಸೇಕಬ್ಬ ಬ್ಯಾರಿ—ಬೆಟ್ಟಿನಂಗಡಿ ಅಬ್ದುಲ್ಲಯಾನೆ ಫಕೀರ ಬ್ಯಾರಿಗಳ ಮಗ ಬಡಾಗ್ರಾಮ —1ನೇ ಎದ್ರಿ

ಸದರಿ 1ನೇ ಎದ್ರಿಗೆ—

ಸದರಿ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರನು ಸದ್ರಿ ಅಮಲ್‌ಜಾರಿಯಲ್ಲಿ ಜಪ್ತಾದ ನಿಮ್ಮ ಪಕ್ತಿನ ಸ್ಥಿರಾಸ್ತಿ ಮಾರಾಟದ ಬಗ್ಗೆ ಹಾಜರು ಪಡ್ಸಿದ ಯೇಲಂ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ-1946ನೇ ಯಿಸ್ವಿ ಆಗೋಸ್ತು ತಿಂಗಳ 23ನೇ ತಾರೀಕು ನಿಶ್ಚಯಿಸಿರುವದರಿಂದ—ಆ ವಿಷಯದಲ್ಲಿ ನಿಮ್ಮದೇನಾದ್ರೂ ಆಕ್ಷೇಪವಿದ್ರೆ ಸದರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದೆಂತ ಯಿ ಮೂಲಕ ತಿಳಿಸಲಾಗಿದೆ.

ಕೋರ್ಟಿನ ಹುಕುಂ ಪ್ರಕಾರ.

M D. Kamath,
Advocate for Petitioner.

ಉಡುಪಿ.
ತಾರೀಕು 6 8 1946

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P 92/1946.

ಅಪ್ಪಿ ಬಾಯಿ— ಅರ್ಜಿದಾರಳು

ಮತ್ತು

ಶ್ರೀನಿವಾಸ ಶ್ಯಾನುಭಾಗ— ಎದ್ರಿ.

ಅರ್ಜಿದಾರಳ ಗಂಡ ತಿಮ್ಮಪ್ಪಯ್ಯ ಶಾನುಭಾಗನು ಯಿತ್ತಲಾಗೆ ಕಳದ ಜನ್ವರಿ ತಿಂಗಳಲ್ಲಿ ಮೃತಪಟ್ಟ ಬಾಬಿನಲ್ಲಿ ಅತನ ಸೊತ್ತುಗಳಿಗೆ ತಾನು ಹಕ್ಕುದಾರಳೆಂತಲೂ, ಅತನಿಗೆ ಹೊರಗಿನಿಂದ ಬರತಕ್ಕ ಹಣಗಳಿಗೆ ತನಗ ವಾರಿಸಿ ಸರ್ಟಿಫೀಕೇಟು ಮಾಡಿಸಬೇಕಾಗಿ ಅತನ ವಿಧವೆ ಅರ್ಜಿದಾರಳುಕೊಟ್ಟ ನೋಟೀಸಾದ ಅರ್ಜಿಯು ತಾರೀಕು 2 9 1946ಕ್ಕೆ ತನಿಗೆ ಯಿಟ್ಟದೆ ಆ ಬಾಬಿನಲ್ಲಿ ಆಕ್ಷೇಪ ಉಳ್ಳವರ್ಯಾರಿದ್ರೆ ದಿವಸ ಕೋರ್ಟಿನ ಮುಂದೆ ಬಂದು ಅವರ ಆಕ್ಷೇಪಗಳನ್ನು ಜಾಹಿರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ

G. Sanjiva Rao, BA LL.B.
Vakil for Petitioner

ಕುಂದಾಪುರ
ತಾ 8 8-1946

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

Brahma Shree Narayana Guru Swami Seva Samithi, Katapadi, (S. K.) (Regd.)

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ. ಕ (ರಿಜಿಸ್ಟರ್ಡ್.)

ತಾರೀಕು 31—3—1946ಕ್ಕೆ ಅಂತ್ಯವಾಗುವ ವರ್ಷದ ಆಯ ವ್ಯಯಗಳ ಪಟ್ಟಿ.

ಆಯ

	ರೂ.	ಆ	ಪೈ	ರೂ	ಆ	ಪೈ
ವರುಷದ ಪ್ರಾರಂಭದ ಶಿಲ್ಕು —						
ಸೇವಿಂಗ್ಸ್ ಬೇಂಕಿನಲ್ಲಿದ್ದ ಠೇವಣಾತಿ	1767	6	11			
ಕೈಯಲ್ಲಿದ್ದ ಹಣ	80	0	0	1847	6	11
ಮಾಸಿಕ ವರ್ಗಣಿ — ಊರಿನ ಸದಸ್ಯರಿಂದ	66	0	0			
ಬೊಂಬಾಯಿಯಲ್ಲಿರುವ ಸದಸ್ಯರಿಂದ	1345	0	0	1411	0	0
ಸಂಗ್ರಹಿಸಿದ ಸಹಾಯಧನ —						
ಊರಲ್ಲಿ ಸಂಗ್ರಹಿಸಿದ ಸಹಾಯಧನ	2607	9	1			
ಪ್ರತಿನಿಧಿಕಮಿಟಿ ಬೊಂಬಾಯಿಯ ಮೂಲಕ	1700	0	0	4307	9	1
ಪೂಜೆ — ಶ್ರೀಗುರುಪೂಜೆ, ಸತ್ಯನಾರಾಯಣಪೂಜೆ, ಮತ್ತು ಇತರ ಎಲ್ಲಾ ತರದ ಪೂಜೆಗಳಿಂದ				181	4	2
ಕಾಣಿಕೆ — ಪಟ್ಟಿಯ ಕಾಣಿಕೆಗಳಿಂದ	69	14	9			
ಭಂಡಾರದ ಡಬ್ಬಿಗಳಿಂದ	185	7	6			
ದೇವರ ಕಾಣಿಕೆ, ಹರಕೆ ವಗೈರೆಗಳಿಂದ	49	11	3			
ಮುಕ್ತೇಸರರ ಸಭೆಯಿಂದ ಜಮಾ ಬಂದ ಮುಕ್ತೇಸರ ಕಾಣಿಕೆ	110	0	0	415	1	6
ವೈದಿಕ ವಿವಾಹ ಮತ್ತು ಸಮಾರಾಧನೆ —						
ವೈದಿಕ ವಿವಾಹ, ಫಲಹಾರಾದಿಗಳಿಂದ	1974	2	6			
ಕಲಶಸ್ನಾನದ ಬಾಬ್ತು	2	8	0	1976	10	6
ವಿವಿಧ ಜಮೆ — ಗುರುಸ್ಮಾರಕನಿಧಿ				92	8	0
ಗುರುಫೊಟೋಗಳಿಂದ				4	0	0
ದಿ ಬಾರ್ಕೂರು ಬಿಲ್ಲವ ಚಾರಿಟಿ ಸಂಘ, ಬೊಂಬಾಯಿಯಿಂದ ಪಡೆದಿರುವ ಜಮೀನಿನ ಉತ್ಪತ್ತಿ				5	0	0
ಇತರ ಚಿಲ್ಲರೆ ಮಾರಾಟದಿಂದ				2	15	6
ಸೇವಿಂಗ್ಸ್ ಬೇಂಕಿನಲ್ಲಿರುವ ಠೇವಣಾತಿಯ ಮೇಲಿನ ಬಡ್ಡಿ				37	8	10
ಅನಾಮತು ಲೆಕ್ಕದಲ್ಲಿ				133	9	1
ಜುಮಲಾ				10414	9	7

ವ್ಯಯ

	ರೂ	ಆ	ಪೈ	ರೂ	ಆ	ಪೈ.
ಸಹಾಯಧನ — ಸಹಾಯಧನ ಸಂಗ್ರಹದ ಬಗ್ಗೆ				107	15	0
ಪೂಜೆ — ಶ್ರೀಗುರುಪೂಜೆ, ಸತ್ಯನಾರಾಯಣಪೂಜೆ, ಇತರ ಎಲ್ಲಾ ತರದ ಪೂಜೆ ಮತ್ತು ನಿತ್ಯಪೂಜೆಗಳ ಬಗ್ಗೆ				211	5	2
ವೈದಿಕ ವಿವಾಹ ಮತ್ತು ಸಮಾರಾಧನೆ —						
ವೈದಿಕವಿವಾಹ, ಫಲಾಹಾರಾದಿಗಳ ಬಗ್ಗೆ	1079	13	7			
ಕಲಶಸ್ನಾನದ ಬಾಬ್ತು	0	8	6			
ವೈದಿಕ ವಿವಾಹ ಪೂಜೆಯಲ್ಲಿ ಶಾಂತಿಯವರಿಗೆ ಸಂದ ಕಲಶಕಾಣಿಕೆ	44	7	0	1124	13	1
ಸಿಬ್ಬಂದಿ — ಶಾಂತಿಯವರಿಗೆ ಸಂದ ಸಲಬು	103	5	4			
ಶಾಂತಿಯವರಿಗೆ ಸಂದ ತುಟ್ಟಿಭತ್ತೆ	15	0	0	118	5	4
ಕೀರ್ವೆ — ದಿ ಬಾರ್ಕೂರು ಬಿಲ್ಲವ ಚಾರಿಟಿ ಸಂಘ ಬೊಂಬಾಯಿಯಿಂದ ಪಡೆದಿರುವ ಜಮೀನಿನ ಕೀರ್ವೆ				6	3	0
ಕಟ್ಟೋಣಗಳು — ಕಟ್ಟೋಣಗಳ ರಚನೆಯ ಬಗ್ಗೆ ಚಾಲ್ತಿ ವರುಷದ ಖರ್ಚು				3047	5	3
ವಿವಿದ ಖರ್ಚುಗಳು —						
ಗುರುಫೊಟೋಗಳನ್ನು ತಯಾರಿಸಿದ ಬಗ್ಗೆ				24	12	0
ಅಂಗಡಿ, ಮನೆಗಳಲ್ಲಿಡುವ ಚಿಕ್ಕ ಡಬ್ಬಿಗಳನ್ನು ತಯಾರಿಸಿದ ಬಗ್ಗೆ				9	0	0
ಮುಕ್ತೇಸರರ ಸಭೆಯ ಬಗ್ಗೆ				10	0	0
ಕ್ರಯಕ್ಕೆ ಪಡೆದ ಚರಸೊತ್ತುಗಳ ಮೌಲ್ಯ	102	15	0			
ಚರಸೊತ್ತುಗಳ ದುರಸ್ತಿ ಖರ್ಚು	16	8	0	119	7	0
ಛಾಪಾ ಮತ್ತು ಪುಸ್ತಕ ಇತ್ಯಾದಿಗಳ ಬಗ್ಗೆ				65	1	0
ಟಪ್ಪಾಲು ಖರ್ಚು				15	1	0
ಸಭಾ ಸತ್ಕಾರಗಳ ಬಗ್ಗೆ				9	15	4
ವಿದ್ಯಾರ್ಥಿಗಳಿಗೆ ಸ್ಲೇಟು, ಪುಸ್ತಕಗಳ ಸಹಾಯ				5	2	6
ಶ್ರೀ ಗೋಕರ್ಣನಾಥ ಕ್ಷೇತ್ರ-ಮಂಗಳೂರಿಗೆ ಶಿವರಾತ್ರಿ ವಂತಿಗೆ				5	0	0
ಚಪ್ಪರ ತಟ್ಟಿ ಇತ್ಯಾದಿಗಳ ಬಗ್ಗೆ				66	8	0
ಇತರ ಖರ್ಚುಗಳು				6	3	3
ಅನಾಮತು ಲೆಕ್ಕಕ್ಕೆ ಸಂದದ್ದು				133	9	1
ವರ್ಷದ ಅಖೈರಿ ಶಿಲ್ಕು —						
ಸೇವಿಂಗ್ಸ್ ಬೇಂಕ್ ಠೇವಣಾತಿ	4615	8	10			
ಕೈಯಲ್ಲಿದ್ದ ಹಣ (ರಚಿಸುತ್ತಿರುವ ಕಟ್ಟೋಣದ ಸಾಹಿತ್ಯಗಳ ಕ್ರಯಕ್ಕೆ ನಂತರ ಸಂದದೆ)	713	6	9	5328	15	7
ಜುಮಲಾ				10414	9	7

ಬೊಂಬಾಯಿಯ ತಾತ್ಕಾಲಿಕ ಪ್ರತಿನಿಧಿಕಮಿಟಿ ಮತ್ತು ಉಪಕಮಿಟಿಯ ಮೂಲಕ 31-12-1945ಕ್ಕೆ ಅಂತ್ಯವಾಗುವ ವರ್ಷದ ಆಯ ವ್ಯಯದ ವಿವರ.

	ರೂ	ಆ	ಪೈ
ತಾ 1 1 1945ರಲ್ಲಿ ಕೈಯಲ್ಲಿದ್ದ ನಗದಿ	18	8	0
ಸದಸ್ಯರಿಂದ ಚಂದಾ ಹಣ ವಸೂಲು	1268	12	0
ಇತರ ಧನಸಹಾಯ	97	1	0
ಗುರುಸ್ಮಾರಕನಿಧಿಗೆ	8	7	0
ಜುಮಲಾ	1392	12	0

	ರೂ	ಆ	ಪೈ
ಸಮಿತಿಯ ಆಡಳಿತೆ ಕಮಿಟಿಗೆ ನಗದಿ ಸಂದದ್ದು	1345	0	0
ಬೇಂಕು ಕಮಿಷನ್	3	0	0
ಛಾಪಾ ಮತ್ತು ಬರವಣಿಗೆ ಸಾಮಾನುಗಳಿಗೆ	20	4	0
ಟಪ್ಪಾಲು ಖರ್ಚು	0	8	0
ತಾ 31-12-1945ಕ್ಕೆ ಕೈಯಲ್ಲಿರುವ ಶಿಲ್ಕು	24	0	0
ಜುಮಲಾ	1392	12	0

ಬೊಂಬಾಯಿಯ ತಾತ್ಕಾಲಿಕ ಪ್ರತಿನಿಧಿ ಕಮಿಟಿಯಿಂದ ವರದಿಯ ವರ್ಷದಲ್ಲಿ ಆಡಳಿತೆ ಕಮಿಟಿಗೆ ಸಂದದ್ದು ರೂ 1700-0-0 ಈ ಕಮಿಟಿಯ ಲೆಕ್ಕದಲ್ಲಿ ವರ್ಷಾಂತ್ಯಕ್ಕೆ ಬೇಂಕಿನಲ್ಲಿರುವ ಹಣ ರೂ 494-13-1

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿ, ಕಟಪಾಡಿ, ದ ಕ (ರಿಜಿಸ್ಟರ್ಡ್) ಇವರ ಲೆಕ್ಕ ಪುಸ್ತಕಗಳು ಮತ್ತು ರಶೀದಿಗಳನ್ನೂ ಪಾಸ್ ಬೂಕನ್ನೂ ಪರಿಶೋಧಿಸಿದಲ್ಲಿ ಲೆಕ್ಕಗಳು ಸರಿಯಾಗಿರುತ್ತವೆ ಎಂದು ತಿಳಿಸುವರೇ ಬಹಳ ಸಂತೋಷಪಡುತ್ತೇನೆ

(ಸಹಿ) **Dr. K. N. Suvarna,**
Udipi, 1-8-1946

(ಸಹಿ) ಗುದ್ದ ಮೆಣ್ಣ ಪೂಜಾರಿ, ಉಪಾಧ್ಯಕ್ಷ (in charge) ಕೆ ರಂಗ, ಗೌರವ ಕಾರ್ಯದರ್ಶಿ, ಕೆ ಬೂದ, ಗೌರವ ಕೋಶಾಧಿಕಾರಿ, ಕೆ. ವೆಂ(ಕ)ಟ, ವೈ. ವೆಂಕಪ್ಪ. ತನ್ಮಯ ಟಿ ಸುವರ್ಣ, ವೈ ಕೃಷ್ಣ ಪೂಜಾರಿ, ಕೆ ನಾರಾಯಣ

ಮಹಾಶಯರೇ,

ಸಮಿತಿಯ 12ನೇ ವಾರ್ಷಿಕ ಮಹಾಸಭೆಯು ಇದೇ ತಾ 25—8—1946ನೇ ರವಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಸಮಿತಿಯ ಭವನದಲ್ಲಿ ಜರಗಲಿಕ್ಕಿರುವುದು. ಸದಸ್ಯರು ಸಕಾಲದಲ್ಲಿ ಸಭೆಗೆ ಚಿತ್ತೈಸಿ, ಸಭಾಕಾರ್ಯಗಳಲ್ಲಿ ಸಹಭಾಗಿಗಳಾಗಬೇಕಾಗಿ ವಿನಯಪೂರ್ವಕ ವಿನಂತಿ.

ಇತಿ ಕಾರ್ಯನಿರ್ವಾಹಕ ಸಮಿತಿಯ ಪರವಾಗಿ,

ಯು ಯಸ್. ಗಿರಿಯಪ್ಪ,
ಅಧ್ಯಕ್ಷ

ಕೆ. ರಂಗ.
ಗೌ. ಕಾರ್ಯದರ್ಶಿ.

ಸ್ವೀಕಾರ-ವಿಮರ್ಶೆ

೨೦ ಶ್ರೀನಾಥ:—ಬರೆದವರು: ಪಂ. ವಿಘ್ನೇಶ್ವರ ಶರ್ಮಾ ಪ್ರಕಾಶಕರು: ಪರ್ಣಕುಟಿ ಗ್ರಂಥಮಾಲಾ, ಗೋಕರ್ಣ, ಕ್ರೌನ್ ಆಕಾರ ಪುಟಗಳು ೭೨. ಬೆಲೆ- ೧೫ ಆಣೆ

ಇದರಲ್ಲಿ 'ಶ್ರೀನಾಥ' ಎಂಬ ನೀಳ್ಗತೆಯೊಂದು ಮತ್ತು 'ಕೈತುತ್ತು ಬಾಯಿಗಿಲ್ಲ' ಎಂಬ ಕಿರುಗತೆಯೊಂದು- ಹೀಗೆ ೨ ಕತೆಗಳಿವೆ. ಮೊದಲನೆಯ ಕಥಾನಾಯಕ ಶ್ರೀನಾಥನು ವಿಶ್ವನಾಥಯ್ಯನ ಮನೆಯಲ್ಲಿ ಗೃಹಶಿಕ್ಷಕನಾಗಿ ಕೆಲವು ತಿಂಗಳು ನಿಲ್ಲುತ್ತಾನೆ. ಸುಸಂಸ್ಕೃತನೂ, ಸದ್ಗುಣಿಯೂ ಆದ ಅವನಿಗೆ ವಿಶ್ವನಾಥಯ್ಯನ ಮಗಳಾದ ತರುಣ ವಿಧವೆ ಪದ್ಮಳ ಮೇಲೆ ಪ್ರೀತಿಯುಂಟಾಗುತ್ತದೆ. ಅವರಿಬ್ಬರದು ತೀರ ನಿಷ್ಕಲಂಕ ಪ್ರೇಮವಾದರೂ ಜನರೆಲ್ಲ ಬೇರೆಯೇ ಭಾವಿಸಿ, ವಿಶ್ವನಾಥಯ್ಯನಿಗೆ ಜಾತಿಬಹಿಷ್ಕಾರ ಮಾಡುವ ಯೋಜನೆಯನ್ನೂ ಹೂಡುತ್ತಾರೆ. ಕಡೆಗೊಂದು ದಿನ, ಪವಿತ್ರಪ್ರೇಮದಿಂದ ತುಂಬಿತುಳುಕುವ ಎರಡೂ ಹೃದಯಗಳು ಒಂದಾಗುತ್ತವೆ ಪದ್ಮೆಯೇ ವಿವಾಹದ ಸೂಚನೆಯನ್ನು ಮೊದಲು ಮುಂದಿಸಿದಳಾದರೂ ಸಮಾಜದ ನೀತಿಗೆ ಬಗ್ಗಿ ಶ್ರೀನಾಥನು ಅದಕ್ಕೊಪ್ಪಲಿಲ್ಲ. ಮರುದಿನವೇ ಅಕಸ್ಮಾತ್ತಾಗಿ, ಒಂದೊಮ್ಮೆ ಏನೋ ಒಂದು ಆವೇಗದಲ್ಲಿ ಪದ್ಮೆಯು ತನ್ನ ಅಣ್ಣನ ಮಿತ್ರ ವಿಧುರಡಾಕ್ಟರನಿಗೆಂದು ಬರೆದು ಅಲ್ಲೇ ಇಟ್ಟಿದ್ದ ಪ್ರೇಮಪತ್ರವು ಶ್ರೀನಾಥನ ಕೈಗೆ ದೊರೆಯಬೇಕೆ? ಶ್ರೀನಾಥನಿಗೆ ಪದ್ಮೆಯ ನಡತೆಯ ಮೇಲೆಯೇ ಶಂಕೆಯುಂಟಾಗಿ, ಅವನು ಮನೆಯನ್ನು ಬಿಟ್ಟು ಹೊರಟುಹೋಗುತ್ತಾನೆ. ೨ನೆಯ ಸಣ್ಣ ಕತೆಯಲ್ಲಿ, ಉತ್ತಮ ನಡತೆಯ ದೇವಮ್ಮನ ಮೇಲೆ ಅವಳ ಪತಿ ರಾಮಯ್ಯನಿಗೆ ವಿನಾ ಕಾರಣ ಯಾನಾಗಲೂ ಸಂದೇಹ ಅದರ ಕೊನೆಯ ಪರಿಣಾಮ ದೇವಮ್ಮನ ಆತ್ಮಹತ್ಯೆ. ಈ ದುರಂತವೊಂದು ವರ್ಣಿತವಾಗಿದೆ. ಎರಡೂ ಕತೆಗಳಲ್ಲಿ ವಸ್ತುವೈಶಿಷ್ಟ್ಯವೇನೂ ಇಲ್ಲದಿದ್ದರೂ, ನಿರೂಪಣೆಯಲ್ಲಿ ಸಹಜತೆಯಿದೆ. ಗೋಕರ್ಣದ ಕಿರಿಯರ ಪ್ರಥಮ ಪ್ರಯತ್ನವಿದು, ಮುಂದಿನ ಪ್ರಕಟಣೆಗಳು ಮತ್ತಷ್ಟು ಯಶಸ್ವಿಯಾಗಲೆಂದು ಹಾರೈಸುತ್ತೇವೆ. ಬೆಲೆ ಸ್ವಲ್ಪ ಹೇಳಬೇಕು

೨೧ ಅವತಾರ:— ಲೇಖಕರು: ಎಸ್. ಪ್ರಹ್ಲಾದರಾವ್. ಎಂ. ಎ. ಪ್ರಕಾಶಕರು: ನ್ಯೂಸ್ ಸಿಂಡಿಕೇಟ್, ಬೆಂಗಳೂರು ನಗರ, ಪುಟಗಳು, ೪೦. ಬೆಲೆ, ೬ ಆಣೆ.

ಕನ್ನಡ ಸಾಹಿತ್ಯದಲ್ಲಿ, ಲಘುಬರೆಹಗಳ ಸಂಗ್ರಹಗಳು ಬೇಕಷ್ಟಿಲ್ಲದಿದ್ದರೂ ಸಾಕಷ್ಟು ಕೂಡ ಇಲ್ಲವೆಂಬುದು ನಿಜ. ಈ ಪುಸ್ತಕದಲ್ಲಿ, ಶ್ರೀಯುತ ಪ್ರಹ್ಲಾದರಾಯರ ಪ್ರಥಮಕೃತಿಗಳಾದ ೮ ಚಿಕ್ಕ ಪುಟ್ಟ ನಗೆಬರೆಹಗಳಿವೆ. ಶ್ರೀ. ಜಿ. ಪಿ. ರಾಜರತ್ನಂರವರು ತನ್ನ ಮೊದಲ ಮಾತುಗಳಲ್ಲಿನ್ನುವಂತೆ ಬರೆಹಗಳು ಶುಚಿಯಾದ ರೀತಿಯಲ್ಲಿ ರುಚಿಯಾದ ವಿಷಯಗಳನ್ನು ವಿನಯವಾಗಿ ಪ್ರಸ್ತಾಪಿಸಿವೆ'ಯಾದರೂ, ಇದರೊಳಗಿನ ಹಾಸ್ಯ ಕೆಲವೆಡೆ ಹದಮೀರಿ ತೆಳುವಾಗಿಯೋ ಎಂಬ ಸಂದೇಹ ನಮಗಾಗುವುದು. ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವಂತಹ ಸುಲಭ ಬೆಲೆಯ, ಲಘುಬರೆಹಗಳ ಹೊತ್ತಿಗೆಗಳನ್ನು ಹೊರಡಿಸುವ ಲೇಖಕರ ಸಾಹಸವು ಸ್ತುತ್ಯ.

೨೨. ಕಾಶ್ಮೀರದ ಕ್ರಾಂತಿ:-- ಬರೆದವರು: ಶ್ರೀ. ಕುಳುಕುಂದ ಶಿವರಾಯರು. ಜನತಾ ಸಾಹಿತ್ಯ, ಮರಾಠಾಗಲ್ಲಿ, ಹುಬ್ಬಳ್ಳಿ, ಪುಟಗಳು, ೧೬, ಬೆಲೆ, ೨ ಆಣೆ.

ಜನತಾ ಸಾಹಿತ್ಯದವರ ಇತರ ಕಿರುಹೊತ್ತಿಗೆಗಳಂತೆಯೇ ಇದು ಕೂಡ ಕಾಲೋಚಿತವಾಗಿದೆ. ಹಿಂದೀ ಜನತೆಯ ದೃಷ್ಟಿ ಕಾಶ್ಮೀರ ಹಾಗೂ ಅಲ್ಲಿಯ ಜನರ ಸ್ವಾತಂತ್ರ್ಯಹೋರಾಟದ ಮೇಲೆ ಕೇಂದ್ರೀಕೃತವಾಗಿರುವ ಈ ಸಮಯದಲ್ಲೇ ಲೇಖಕರು ಆ ಆಶ್ರಿತ ಸಂಸ್ಥಾನದ ಇತಿಹಾಸ, ಅಲ್ಲಿಯ ರಾಜ್ಯಭಾರ ಕ್ರಮ, ಪ್ರಕೃತ ನಡೆಯುತ್ತಿರುವ ಆಂದೋಲನದ ವಿವರಗಳನ್ನೊಳಗೊಂಡ ಈ ಪುಸ್ತಕವನ್ನು ಹೊರಡಿಸಿದುದು ಸ್ತುತ್ಯ.

೨೩ ಸ್ವತಂತ್ರ:— ಮಾಸಪತ್ರಿಕೆ, ಸಂಪುಟ ೧. ಸಂಚಿಕೆ ೧. ಸಂಪಾದಕರು: ಶ್ರೀ ಬಸವರಾಜ ಕಟ್ಟೀಮನಿ, ಡೆಮಿ, ೧/೮ ಆಕಾರದ ಪುಟಗಳು, ೫೬. ಬೆಲೆ ೪ ಆಣೆ. ವಾ. ಚಂದಾ: ೩ ರೂಪಾಯಿ.

'ಪ್ರತಿಗಾಮಿ ಶಕ್ತಿಗಳನ್ನೆಲ್ಲ ಸದೆಬಡಿದು ಸಮತಾವಾದೀ ಸ್ವತಂತ್ರ ಕರ್ನಾಟಕವನ್ನು ಕಟ್ಟಲು ಸಾಹಿತ್ಯದಮೂಲಕ ನೆರವಾಗುವ' ಮಹದುದ್ದೇಶವನ್ನಿಟ್ಟುಕೊಂಡು ಕನ್ನಡ ವೃತ್ತಲೇಖನದಲ್ಲಿ ಈಗಾಗಲೇ ಸರ್ವರಿಗೆ ಪರಿಚಿತರಾಗಿರುವ ಶ್ರೀ ಕಟ್ಟೀಮನಿಯವರ ಸಂಪಾದಕತ್ವದಲ್ಲಿ ಹೊರಟ ಈ ಹೊಸ ಪತ್ರಿಕೆಯನ್ನು ನಾವು ಆತ್ಮಾದರದಿಂದ ಸ್ವಾಗತಿಸುತ್ತೇವೆ. ಸಂಚಿಕೆಯಲ್ಲಿ ಶ್ರೀರಂಗ, ಕುವೆಂಪು, ಕೃಷ್ಣಶರ್ಮಾ ಮೊದಲಾದ ನುರಿತ ಬರೆಹಗಾರರ ಲೇಖನ, ಕವಿತೆಗಳಿವೆ. ನಿರ್ದಾಕ್ಷಿಣ್ಯದ ಟೀಕೆ. ಟಿಪ್ಪಣಿಗಳಿವೆ. ಒಟ್ಟಿನ ಮೇಲೆ 'ಸ್ವತಂತ್ರವು' ಪ್ರೋತ್ಸಾಹಕ್ಕೆ ಯೋಗ್ಯವಾಗಿದೆ

೨೪ ಬೊಂಬಾಯಿಯ ಈ ಕೆಳಗಿನ ಸಂಘ ಸಂಸ್ಥೆಗಳ ವರದಿಗಳನ್ನು ಅತ್ಯಾದರದಿಂದ ಸ್ವೀಕರಿಸಿದ್ದೇನೆ:-

A. ಬಂಟರ ಯಾನೆ ನಾಡವರ ಸಂಘ, ಮುಂಬಯಿ, ಇದರ ೧೬ನೆ ವಾರ್ಷಿಕ ವರದಿ- ವರ್ಷದಲ್ಲಿ ಸದಸ್ಯರ ಸಂಖ್ಯೆ ೧೦೦೦ಕ್ಕೆ ಏರಿದುದು, ಸಂಘವು ವಾಚನಾಲಯ, ಪುಸ್ತಕ ಭಂಡಾರ, ಫ್ರೀನೈಟ್‌ಸ್ಕೂಲ್ ಇತ್ಯಾದಿ ರೀತಿಗಳಲ್ಲಿ ವಿದ್ಯಾಪ್ರಸಾರ ಮಾಡುತ್ತಿರುವುದು ಸಂತೋಷಕರ.

B. ಶ್ರೀ. ರಜಕ ಸಂಘ, ಮುಂಬಯಿ, ಇದರ ೯ನೆಯ ವಾರ್ಷಿಕ ವರದಿ- ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಈ ಸಂಘವು ವರ್ಷದಲ್ಲಿ ಸ್ವಜಾತೀ ವಿದ್ಯಾರ್ಥಿಗಳಿಗೆ ಸುಮಾರು, ೫೦ರೂ. ಗಳ ವಿದ್ಯಾರ್ಥಿವೇತನಗಳನ್ನಿತ್ತಿದೆ. ಮುಂಬಯಿಯ ಇತರ ಹಲವು ಸಂಘಗಳಂತೆ ಇದು ಕೂಡಾ ಬೇರೆ ಎಲ್ಲ ರೀತಿಗಳಲ್ಲಿ ಸಮಾಜ ಸೇವೆಯನ್ನು ಮಾಡಲಿಕ್ಕೆ ಬೇಕಾದ ಧನ, ಜನಸಹಾಯಗಳು ಸಿಗಲೆಂದು ಹಾರೈಸುತ್ತೇವೆ.

—ಕೆ. ವಿ. ಎಸ್.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಿರಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ. ಅದು ದಮ್ಮನ್ನು ಬರೇ ದುಮುಕಿ ಇಡದೆ ಅದನ್ನು ... ಹೊಗೆಯುವುದು. ಈ ಔಷಧ ಸುರುವು ... ಕೆಮ್ಮೂ ತೀಕೂ ನಿಲ್ಲುವವು: ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು. ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ ೬ ಔನ್ಸ ೧೨ ಔನ್ಸ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು-ಪಾಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಆಂಡ್ ಕೊ,ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ,
ಮುಂಬಯಿ ೨.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; $\frac{1}{2}$ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯಾದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, $\frac{1}{2}$ ರಾತ್ಲು 5-4-0, $\frac{1}{4}$ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ, ಕ್ಯಾಟಲಾಗ್ ಬರೆದಲ್ಲಿ ರೋಗಗಳಿಗೆ ತಕ್ಕದಾದ ಔಷಧಿ ... (1) ಮುಂಬಯಿ ಏಜಂಟರು: —ನವಭಾರತ ಬುಕ್ ಡಿಪೋ, (2, ಬೆಂಗಳೂರು ಏಜೆಂಟರು- ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 133, ಸುಲ್ತಾನ್‌ಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ 'ಫೋಟೋ' ದೊಡನೆ ಬರೆಯಿರಿ.

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

NOTICE

ಉಡ್ಪಿ. ಡಿ. ಮು. ಕೋರ್ಟನಲ್ಲಿ.

O P. No. 39 of 1946.

ಅಕ್ಕಮ್ಮ ಸಡ್ತಿ, ವೆಂಕಮ್ಮ ಸಡ್ತಿಯರ ಮಗಳು, ಉಡ್ಪಿತಾಲ್ಲೂಕು ಕೊಡವೂರು ಗ್ರಾಮದಲ್ಲಿಯಿರುವವಳು— ಅರ್ಜಿದಾರಳು.

ಮೇಲ್ಕಂಡ ಅರ್ಜಿ ವ್ಯವಹರಣೆಯ ಅರ್ಜಿದಾರಳ ಸಹೋದರ ಕೆ. ವೀರಣ್ಣಾ ಯಾನೆ ವೀರಯ್ಯ ಸೆಟ್ಟಿಯು ತಾರೀಕು 17-7-1946 ರಲ್ಲು ಮೃತಪಟ್ಟಿರುತ್ತಾನೆ. ಆತನ ಅರ್ಜಿದಾರಳ ಕುಟುಂಬವು ಮುಖ್ಯ ವಾರ್ಸುದಾರರಾಗಿದ್ದು ಅರ್ಜಿದಾರಳು ಸಡ್ತಿ ಕುಟುಂಬದ ಯಜಮಾನ್ತಿಯಾಗಿ ಮೃತನಿಗೆ ಅರ್ಜಿಯಲ್ಲಿ ವಿವರಿಸಿದ ಹೊರಗಿನಿಂದ ಬರತಕ್ಕ ಸಾಲವಸೂಲಿಗೆ ತನಗೆ Succession Certificate ಕೊಡಿಸಬೇಕಾಗಿ ವಗೈರೆ ಕಾಣಿಸಿಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 4-9 46ಕ್ಕೆ ತನಿಖೆಗೆ ಇಡೋಣಾಗಿಯದೆ ಆದುದರಿಂದ ಈ ಬಾಬಿನಲ್ಲಿ ಯಾರಾದರೂ ಆಕ್ಷೇಪ ಹೇಳುವವರು ಇದ್ರೆ ಮೇಲ್ಕಂಡ ತಾರೀಕು 4 9-46 ನೇ ಬೆಳಿಗ್ಗೆ 11ಗಂಟೆಗೆ ತಪ್ಪದೆ ಹಾಜರಾಗಿ ಜ್ಯಾಹಿರುಮಾಡಿಕೊಳ್ಳತಕ್ಕದ್ದುಯೆಂತ ಈ ಮೂಲಕ ತಿಳಿಸೋಣಾಗಿಯತ್ತದೆ.

K. J Ballal,
Vakil for Petitioner.
3-8-1946, Udipi.

NOTICE

ಉಡ್ಪಿ ಡಿ ಮು. ಕೋರ್ಟನಲ್ಲಿ.

S. C. No. 190/46.

ಜೋಗಪ್ಪ ಸೆಟ್ಟಿ —ವಾದಿ.

ಮತ್ತು

(1) ರುಕ್ಕು ಯಾನೆ ಕಾವೇರಿ ಹೆಂಗಸು. ರುಕ್ಮಯ್ಯನ ವಿಧವೆ (2) ಬಚ್ಚ 1ನೇ ಪ್ರತಿವಾದಿಯಳ ಮಗ. ಉಡ್ಪಿತಾಲೂಕು ತೆಂಕನಿಡಿಯೂರು ಗ್ರಾಮದಲ್ಲಿರುವವರು.— ಪ್ರತಿವಾದಿರು

ಇವರೊಳಗೆ

ಸಡ್ತಿ ವ್ಯಾಜ್ಯದ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ:--

ಪ್ರತಿವಾದಿರು ಅವರ ವ್ಯಾಪಾರ ಸಂಬಂಧ ವಾದಿಯಿಂದ, ತಾ. 31-1-46ರಲ್ಲಿ ಯಾ ಆ ಸಮಯದಲ್ಲಿ ಕೈಕಡವಾಗಿ ಪಡೆದು ರೂಪಾಯಿ 100ರಲ್ಲಿ ಬಾಕಿಮಾಡಿಕೊಂಡ ರೂಪಾಯಿ 73-7-0ವ ಆದ್ರ ಮೇಲಣ ಬಡ್ಡಿ ರೂ. 0-2 6 ಕೂಡಾ ರೂಪಾಯಿ 73-9-6ನ್ನು ವಸೂಲು ಕೇಳಿ ವಾದಿಯು ಪ್ರತಿವಾದಿರ ಮೇಲೆ ಮಾಡಿರುವ ಮೇಲ್ಕಂಡ ದಾವೆಯು ತಾ. 23 8 46ಕ್ಕೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪಯಿದ್ದಲ್ಲಿ ಸಡ್ತಿ ತಾ. 23 8 46ನೇ ದಿವಸ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವು ತೀರ್ಮಾನ ಮಾಡಲ್ಪಡುವುದು.

P. V Achar
Vakil for Plaintiff
ಉಡ್ಪಿ, ತಾ. 7-8-46

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, plesae make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. U. Shetty at the Navayuga Press, Udipi, S. India.

Regd. No M 3618 SILVER JUBILEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6



ವರ್ಷ ೨೬ ವಾರ ೧ ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY, M. L. A. Vol. 26 No. 1

ಉಡುಪಿ ◎ 29-8-1946 ◎ ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ.

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ, ಹಲ್ಲು ವೇದನೆಗೆ ಗೂ ಎದೆನೋವು, ಛಾಯಗಳು ಬಾತು ಕೊಳ್ಳುವುದು, ಚೇಳು ವಿಷ ದುಂಬಾದ ಜೇನ ಶಕ್ತವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಕಛ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The best preventive in Mepidemics of CHOLEA

"BHUVANENDRA"

CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಂಗ್ರಪಾಡಿ; ನವಭಾರತ ಬುಕ್ ಡಿಪೊ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co., Ltd.,

HEAD OFFICE: **UDIPI.** (S. India.)

Chief Agents for the Bombay and Madras Presidencies including States and the States of Mysore and Hyderabad:

The Commercial Corporation of India, Ltd.,

UDIPI. (S. India.)

THE

Bombay Life Assurance Company Ltd.

(ESTD. 1908)

A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.

(ESTD. 1910)

Chief Agents for South India including Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —

MADRAS * BANGALORE * MADURA * CALICUT TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಾಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಋತುಸ್ನಾನದಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ಆಣೆ.

ಮಾಲಕರು:— ಸಾಬಣ್ಣಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬರವಾಡಿ ಸ್ಟೋರ್ಸ ಡಾವಣಗೇರಿ:— ಡಾವಣಗೇರಿ ಪ್ರೆಸ್. ಆರ್. ಎಲ್. ಶಹಲವಾನ, ಕೆಮಿಸ್ಟ, ಪಾವೇರ್, ಬ್ಯಾಡ್ಗಿ

Ayurveda Oushadalaya, GADAG CITY.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ

ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ— ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ— ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಝರಾಗುವವರೂ ಬರೆಯಿರಿ—

ಪಿ. ಡಿ. ನಾಯಕ, ಉಡುಪಿ.

ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER

General Insurance Company, Ltd.

ಹಿಂದೂ ಮುಸ್ಲಿಂ ಸಂಬಂಧ-ಕಾಲೋಚಿತ ವಿಚಾರಗಳು

ಲೇ:—'ವಿಚಾರಿ',

ಪ್ರಕೃತ ಇಡೀ ರಾಷ್ಟ್ರದ ವಾತಾವರಣ ಕವಡಿದೆ. ಕಲ್ಕತ್ತೆಯ ಗಲಭೆಯಿಂದ ರೋಮಾಂಚನಗೊಳ್ಳದವರಿರಲಾರರು; ಭಾರತದ ಯಾವುದಾದರೊಂದು ಮೂಲೆಯಲ್ಲಿರುವವನಿರಾದರೂ, ಈ ದಿನಗಳಲ್ಲಿ ಆವೇಶಗೊಳಿಸುವ-ಹೃದಯ ಕದಡಿಸುವ-ಹಂಚಿಕೆ, ಯೋಜನೆಗಳನ್ನು ಚಿಂತಿಸುವ ಮುಖ್ಯ ವಿಷಯವೆಂದರೆ ಪಡಿಯಕ್ಕಿಯಲ್ಲ; ಸೆರೆಯವರ ಉಪದ್ರವವಲ್ಲ; ಹಬ್ಬದಿನಗಳ ಸಕ್ಕರೆ ಚಿಮಿಣಿ ಎಣ್ಣೆಯೂ ಅಲ್ಲ—ಕಲ್ಕತ್ತೆಯ ಗಲಭೆ! ಆರುತಿಂಗಳ ಶಿಶುವಿನಿಂದ ಹಿಡಿದು ತೊಂಭತ್ತರ ಮುದುಕರ ವರೆಗೆ ಎಲ್ಲರನ್ನೂ ಅನ್ಯ ಸಮಾಜದವರೆಂಬ ಕಾರಣದಿಂದ ಕತ್ತರಿಸಿ ಹಾಕಿದರು; ರಸ್ತೆಗಳಲ್ಲೆಲ್ಲಾ ಹೆಣಗಳುಬಿದ್ದು ನಾರುತ್ತಿವೆ; ಕೆಲವೆಡೆ ರಣಹದ್ದುಗಳು ಎಲುಬು ಗೂಡುಗಳನ್ನಷ್ಟೇ ಬಿಟ್ಟಿವೆ; ಬಾಗಿಲುಹಾಕಿ ಕುಳಿತ ಮನೆ, ಆಫೀಸು, ಕಟ್ಟಡಗಳಿಗೆ ಬೆಂಕಿ ಕೊಡಲಾಯಿತು; ಮಕ್ಕಳು ಮಹಿಳೆಯರೆಂದು ನೋಡದೆ ತರಿದು ಹಾಕಲಾಯಿತು;ಹೇಯ ಅತ್ಯಾಚಾರ ನಡೆಯಿತು! ಹೃದಯವೆಂಬುದು ನಿಜಕ್ಕೂ ಇದೆಯೋ? ಹಾಗಾದರೆ ಈ ವಾರ್ತೆಯಿಂದದು ಕದಡಲೇ ಬೇಕು; ಕರಗಲೇ ಬೇಕು; ಹಾಗೆ ಬೆಂದು ಅರಿದಾಗ ಅದು ಕಲ್ಲಾಗಲೇಬೇಕು! ಇಂತಹ ವಾತಾವರಣವಿರುವಾಗಲೇ ಆ ಸಂಬಂಧದ ಪ್ರಶ್ನೆಗಳನ್ನೆತ್ತಿಕೊಂಡು ವಿಮರ್ಶಿಸುವದು ಸುಲಭವಲ್ಲ. ಇದು ವಿರೋಧಿಸಲೇಳುವ ಕಾಲ-ವಿಚಾರಿಸಿ ನಿಲ್ಲುವ ಹೊತ್ತಲ್ಲ. ಆದರೆ ಕೆಲವರು ಜನ್ಮತಃ ಪಶುಗಳಿರಬಹುದು; ಇನ್ನು ಕೆಲವರನ್ನು ಪರಿಸ್ಥಿತಿಯು ಪ್ರಾಣಿಗಳನ್ನಾಗಿ ಮಾರ್ಪಡಿಸಬಹುದು; ಆದರೆ ಎಂತಹ ಸಂದರ್ಭದಲ್ಲಾದರೂ ಎಲ್ಲರೂ ಪ್ರಾಣಿಗಳಾಗುವಂತಿಲ್ಲ; ಆಗಬೇಕೆಂದೂ ಇಲ್ಲ. ಒಂದೊಮ್ಮೆಗೆ ಅಧಿಕ ಸಂಖ್ಯಾಕರು ಪಶುಗಳಾಗಿ ಮಾರ್ಪಟ್ಟಲ್ಲಿಯೂ ನ್ಯಾಯವಾದಿಗಳಿಗೆ ಅವರ ನಡುವೆ ಬದುಕಿ ಉಳಿಯುವ ಹಕ್ಕಿದೆ. ನಿಜಕ್ಕೂ ಆ ಹಕ್ಕು ಅಂಥವರಿಗೆ ಮಾತ್ರವಿದೆ! ಆದ್ದರಿಂದ ಎಂದಿಗೂ, ಯಾವ ಕಾರಣಕ್ಕಾಗಿಯಾದರೂ ನ್ಯಾಯವನ್ನು ಅಡಗಿಸಬಾರದು. ಇಲ್ಲಿದೆ ಹಿಂದೂ ಮುಸ್ಲಿಮ್ ಸಂಬಂಧದ ಒಂದು ಕಾಲೋಚಿತ ವಿಚಾರ.

ಕೆಲವು ಪ್ರಶ್ನೆಗಳು

ಈ ವಿಚಾರಕ್ಕೆ 'ಹಿಂದೂತ್ವವಾದಿ' (ಈ ನಾಮಕರಣ ನಮ್ಮಿಂದಾದುದು. ತಾವು 'ನ್ಯಾಯವಾದಿ', 'ರಾಷ್ಟ್ರೀಯವಾದಿ' ಎಂದು ಅಂಥವರೆನ್ನಬಹುದು. ಆದರೆ ಅವರ ಅಂತರ್ಯವು ನಮಗೆ ತೋಳೆದುದಕ್ಕನುಗುಣವಾಗಿ ನಾವು ಹೆಸರು ಜೋಡಿಸಿದೆವಾದ್ದರಿಂದ ಕ್ಷಮೆಯಿರಲಿ.) ಗಳು ಕೆಲವರು ಎಬ್ಬಿಸಿರುವ ಪ್ರಶ್ನೆಗಳೇ ಕಾರಣ. ಆ ಪ್ರಶ್ನೆಗಳೆಲ್ಲಾ ಸಾಕಷ್ಟು ಹಿಂದೂ ಅಭಿಮಾನವಿಲ್ಲದವರ ಮೇಲೆ ಕ್ರೋಧ, ಜಿಗುಪ್ಸೆ, ಮತ್ತು ತಿರಸ್ಕಾರವನ್ನು ಕಾರುತ್ತಿವೆ-ಅವರೆ ಕ್ಷಮಾರ್ಹ ರೀತಿಯಿಂದ. 'ಹಿಂದುಗಳು ಮಾತ್ರ ಹಿಂದುಸ್ಥಾನದವರು; ಮುಸಲ್ಮಾನರು ಪರದೇಶಿಯರು' 'ಹಿಂದುಸ್ಥಾನವನ್ನು ತನ್ನ ಜನ್ಮ ಭೂಮಿ, ಪಿತೃ ಭೂಮಿ, ಪುಣ್ಯ ಭೂಮಿ, ಮಾತೃ ಭೂಮಿ ಎಂದು ಎಣಿಸುವವನೇ ಇಲ್ಲಿಯ ನಿಜವಾದ ರಾಷ್ಟ್ರೀಯನಾಗಬಲ್ಲ. ಓರ್ವ ಮುಸಲ್ಮಾನ್ ಅಥವಾ ಕ್ರೈಸ್ತನು ಹಿಂದೂ ದೇಶವನ್ನು ಜನ್ಮ ಭೂಮಿ, ಪಿತೃ ಭೂಮಿ ಎಂದಷ್ಟೇ ಒಪ್ಪಿಕೊಳ್ಳಬಲ್ಲನು ಹೊರತು ಮಾತೃಭೂಮಿ, ಪುಣ್ಯ ಭೂಮಿ ಎಂದು ಒಪ್ಪಿಕೊಳ್ಳುವದಿಲ್ಲ. ಈ ಮುಖ್ಯ ಭಾವನೆಗಳೇ ಇಲ್ಲದ ಅಂಥವರಿಗೆ ಇಲ್ಲಿಯ ರಾಷ್ಟ್ರೀಯತ್ವ ಬರಲಾರದು'ಎಂಬುದೊಂದು ವಾದ. ವೀರ ಸಾವರ್ಕರರ ಈ ತತ್ವವು ಸರ್ವ ಶ್ರುತವಾದುದೇ. "ಇಂತಹ ರಾಷ್ಟ್ರೀಯತ್ವವನ್ನರಿಯದವರು ಈ ಪುಣ್ಯಭೂಮಿಯಲ್ಲಿ ಹುಟ್ಟಿದುದು ಭೂಭಾರಕ್ಕಲ್ಲವೇ?" ಎಂದು ಪ್ರಶ್ನಿಸುವವರಿದ್ದಾರೆ. ಇದು ಅಭಿಮಾನದ ತಳಹದಿಯಾಗಿದ್ದರೆ ಅದರಲ್ಲಿ ಕಟ್ಟಡವೇರಿಸುವ ವಿಧಾನವೂ ಇದ್ದೇ ಇದೆ. "ಅಸಹಕಾರ, ಸತ್ಯಾಗ್ರಹ, ಇವೆಲ್ಲಾ ಸ್ವತಃ ಪೂಜ್ಯ ಬಾಪೂಜೀಯಿಂದಲೇ ಹೂಡಲ್ಪಟ್ಟ ಅಸ್ತ್ರಗಳು. ಮುಸಲ್ಮಾನರೀಗ (ಲೀಗ್) ದುರಭಿಮಾನದಿಂದ ಕಾಂಗ್ರೆಸಿನೊಡನೆ ಸಹಕರಿಸಲೊಪ್ಪದೆ ವಿರೋಧಿಗಳಾಗಿದ್ದಾರೆ. ಇಂಥವರೊಡನೆ ಹಿಂದುಗಳು ಗಾಂಧೀ ತತ್ವಾನುಸಾರವಾಗಿಯೇ ವ್ಯಾಪಾರ, ವಹಿವಾಟು ಇತ್ಯಾದಿಗಳನ್ನು ಕಡಿದುಕೊಂಡು ಅಸಹಕಾರ ಹೂಡಬೇಕು. ಇದರಲ್ಲಿ ತಪ್ಪೇನು?'

'ರಾಷ್ಟ್ರೀಯತ್ವ'ದ ಪ್ರಶ್ನೆ.

ನಿರ್ಲೇಪಿತ ಭಾವದಿಂದ—ನಿರ್ಮಲ ಮನಸ್ಸಿನಿಂದ—ಯೋಚಿಸಬೇಕಾದ ಪ್ರಶ್ನೆಯಿದು. ಭಾರತಕ್ಕೆ ಮುಸಲ್ಮಾನರು ಹಿಂದುಗಳ ನಂತರ ಬಂದವರಿರಬಹುದು; ಆದರೆ ಇಲ್ಲಿಯ ಮೂಲನಿವಾಸಿಗಳು ಹಿಂದುಗಳಲ್ಲ.ಆ ದೃಷ್ಟಿಯಿಂದ ಮೊದಲು ಬಂದವರೂ ಬಂದವರೇ—ನಂತರ ಬಂದವರೂ ಬಂದವರೇ—ಇಲ್ಲಿಯವರಲ್ಲ. ಆದರೆ ಇದನ್ನಾಧರಿಸಿ 'ನಾವು ಇಲ್ಲಿಯವರು'ಎಂದು ಹೇಳತಕ್ಕವರು-ಅಥವಾ ಹಾಗೆಂದು ಹಠಹಿಡಿದು ಸಾಧಿಸತಕ್ಕವರು—ಈಗ ಬೇರಿಲ್ಲ. ಆದ್ದರಿಂದ ಮೊದಲು ಬಂದವರೂ ನಂತರ ಬಂದವರೂ ಆದ ಹಿಂದುಗಳೂ ಮುಸಲ್ಮಾನರೂ ಈಗ ಇಲ್ಲಿಯವರೇ. ಈ ದೇಶ ಹಿಂದುಗಳದ್ದಾದ ಮೇಲೆಯೇ ಮುಸ್ಲೀಮರಿಲ್ಲಿ ಅಕ್ರಮ ಪ್ರವೇಶ ಮಾಡಿ ನಿಂತವರಾದರೆ, ಅದನ್ನು ಕ್ರಮಬಾಹಿರಗೊಳಿಸುವ ಅವಧಿ ಕಳೆದಿದೆ. ಬ್ರಿಟಿಷರು ಭಾರತಕ್ಕೆ ಬಂದು ನಿಂತಿರುವುದಕ್ಕೂ ಮುಸ್ಲಿಮರು ಇಲ್ಲಿ ನೆಲಸಿರುವುದಕ್ಕೂ ವ್ಯತ್ಯಾಸವಿದೆ. ಮೊದಲನೆಯವರು ಆಳುವುದಕ್ಕೆ ಬಂದವರು; ಎರಡನೆಯವರು ಇಲ್ಲಿ ಜೀವಿಸುವದಕ್ಕೆ (ಅತಿ ಹಿಂದಿನ ಕಾಲದಲ್ಲಿ) ಬಂದವರು. ನಾವೀಗ ಯಾಚಿಸುವ ಸ್ವಾತಂತ್ರ್ಯದಲ್ಲಿ, ಇಲ್ಲಿಯೇ ಮನೆ, ಆಸ್ತಿ, ಉದ್ಯೋಗ ವ್ಯಾಪಾರಮಾಡಿಕೊಂಡಿರುವ ಬ್ರಿಟಿಷರನ್ನಾಗಲೀ ಆಂಗ್ಲೋ ಇಂಡಿಯನರನ್ನಾಗಲೀ ಇಲ್ಲಿಂದೋಡಿಸುವ ಪ್ರಶ್ನೆಯಿಲ್ಲ. ಲೋಕದ ಪ್ರತಿಯೊಂದು ರಾಷ್ಟ್ರದ 'ರಾಷ್ಟ್ರೀಯತ್ವ'ವೂ ಇಂತಹ ಬೆರಕೆಯ ಜನಾಂಗಗಳಿಂದಲೇ ತುಂಬಿದೆ. ಯಾವ ದೃಷ್ಟಿಯಿಂದ ನೋಡಿದರೂ ಇದು ದುಸ್ವಪ್ನವೇ ಸರಿ. ನಮ್ಮ ಉಡುಪಿಯನ್ನು ಯಾತ್ರಾಸ್ಥಳವಾಗಿ, ನಗರವಾಗಿ ಮಾರ್ಪಡಿಸಿದ ಶ್ರೀ ಕೃಷ್ಣ ಮೂರ್ತಿಯೂ ಇಲ್ಲಿಗೆ ಹಡಗೇರಿ ಬಂದವ-ಆದರಾತ ಉಡುಪಿ ಕೃಷ್ಣನೇ. ಇಂದು ಇಲ್ಲಿರುವ ಮುಸ್ಲೀಮರಲ್ಲಿ ಅಧಿಕ ಸಂಖ್ಯಾಕರ ತಾತ ಮುತ್ತಾತಂದಿರು ಹಿಂದುಗಳು; ಈಗಿನವರು ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡವರ ಸಂತಾನ. ಆ ಹಕ್ಕಿನಿಂದ ಇಂತಹ ಮುಸಲ್ಮಾನರನ್ನೂ ಹಿಂದುಗಳೆಂದು ಯಾರೂ ಗಣಿಸುವದಿಲ್ಲ. ಸಾರಾಂಶವಿಷ್ಟೆ: ಇಂದು ಯಾರು ಹೇಗಿದ್ದಾರೋ ಹಾಗೆಂದೇ ಗಣಿಸುತ್ತೇವೆ; ಗಣಿಸಬೇಕು. ಹಿಂದೊಂದು ಕಾಲದಲ್ಲಿ ಭಾರತವು ಸ್ವತಂತ್ರವಾಗಿತ್ತು; ಆದರೆ ಆ ಕಾರಣದಿಂದ 'ನಾವಿಂದು ಸ್ವತಂತ್ರರು' ಎಂದು ಹೇಳುವದಿಲ್ಲ; ಸ್ವಾತಂತ್ರ್ಯ ಸಾಧನೆಯಲ್ಲಿದ್ದೇವೆ. ಅಂತೆಯೇ ಮುಸಲ್ಮಾನರು ಒಂದಾನೊಂದು ಕಾಲದಲ್ಲಿ ಪರಕೀಯರಾಗಿದ್ದರು; ಇಂದು ರಾಷ್ಟ್ರೀಯರಾಗಿದ್ದಾರೆ.

'ಮಾತೃ ಭೂಮಿ'

'ಹಿಂದೂ ದೇಶವನ್ನು ಹಿಂದುಗಳು ತಮ್ಮ ಮಾತೃ ಭೂಮಿ, ಪುಣ್ಯ ಭೂಮಿ, ಎಂದು ಭಾವಿಸುವಂತೆ ಮುಸಲ್ಮಾನರು, ಕ್ರೈಸ್ತರು ಭಾವಿಸುವದಿಲ್ಲ' ಹೌದೆ? ಎಲ್ಲಾ ಹಿಂದುಗಳಲ್ಲಿಯೂ ಈ ಭಾವನೆಯಿದ್ದು, ಎಲ್ಲಾ ಮುಸ್ಲಿಂ, ಕ್ರೈಸ್ತರಲ್ಲಿಯೂ ಈ ಭಾವನೆಯಿಲ್ಲವೆ? ಈ ವಾದದಲ್ಲಿರುವ ಸತ್ಯಾಂಶವಿಷ್ಟೆ:-- ಮುಸ್ಲಿಂ ಮತ್ತು ಕ್ರೈಸ್ತರ ಪವಿತ್ರ ಸ್ಥಳಗಳು ಪರದೇಶಗಳಲ್ಲಿವೆ; ಹಿಂದುಗಳ ಎಲ್ಲಾ ಯಾತ್ರಾಸ್ಥಳಗಳೂ ಹಿಂದುಸ್ಥಾನದಲ್ಲೇ ಇವೆ. ಆದ್ದರಿಂದ ಮುಸಲ್ಮಾನ್ ಕ್ರೈಸ್ತರು ಹಿಂದುಸ್ಥಾನದ ಹೊರಗೆ ನೋಡುತ್ತಾರೆ;ಹಿಂದುಗಳು ಆ ಮಟ್ಟಿಗೂ ಹಿಂದುಸ್ಥಾನದೊಳಗೇನೇ ನೋಡುತ್ತಾರೆ. ಆದರೆ ಈ ವ್ಯತ್ಯಾಸವು 'ಧರ್ಮ'ಕ್ಕೆ ಸಂ

NOTICE

ಪುತ್ತೂರು ಡಿ ಮು. ಕೋರ್ಟಿನಲ್ಲಿ.

S C No 96 1946

ವಾದಿ: ಸುಬ್ರಾಯ ಪ್ರಭು,

ಪ್ರತಿವಾದಿಗಳು -1 ಪಕ್ರಪ್ಪ ಶೆಟ್ಟಿ 2 ಸುಬ್ಬಯ್ಯ ಶೆಟ್ಟಿ ನೇಲ್ಯಪ್ಪ ಶೆಟ್ಟಿ ಆಳಿಯಂದಿರು.

1ನೇ ಯು ಪುತ್ತೂರು ತಾಲ್ಲೂಕು ಮುಂಡೂರು ಗ್ರಾಮ 2ನೇ ಯು ಕಾಸರಗೋಡು ತಾಲ್ಲೂಕು ದೇಲಂಪಾಡಿ ಗ್ರಾಮದ ಬೆಳ್ಳಿಪ್ಪಾಡಿ

ಮೇಲ್ಕಂಡ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಮೇಲಿನ ದಾವೆಯು ತಾರೀಕು 10-9-1946ಕ್ಕೆ ತನಿಖೆಗೆ ಮುಟ್ಟಿರುತ್ತದೆ. ಆ ಕುರಿತು ಪ್ರತಿವಾದಿರ ಉಜ್ರಾಯರಿಶಗಳಿದ್ರೆ ಪ್ರತಿವಾದಿರು ಸದ್ರಿ ವ್ಯಾದೆಗೆ ಈ ಕೋರ್ಟಿನಮುಂದೆ ಹಾಜರಾಗಿ ಉಡಹರ್ಪಿಸಿಕೊಳ್ಳತಕ್ಕದ್ದೆಂದಲೂ ತಪ್ಪಿದರೆ ಪ್ರತಿವಾದಿರ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ಕೋರ್ಟು ಹುಕುಂಪ್ರಕಾರ ತಿಳಿಯಪಡಿಸೋಣಾಗಿದೆ.

M. Sadashiva Rao.
Pleader for Plaintiff
Puttur Date 14-8-46

ನೀವು ನಿಮ್ಮ ವ್ಯಾವಹಾರಿಕ ಪಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ | ಹಣದ ರಾಶಿಯಲ್ಲಿರಬೇಕಾದ / ಸಿರಿವಂತರಾಗಬೇಕಾದ / ಲಕ್ಷ್ಮೀಪುತ್ರರಾಗಬೇಕಾದ / ಅನುಕೂಲಸ್ಥರಾಗಬೇಕಾದ | ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕೆಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿಲಾಗಿ ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd- 1906
CANARA BANK LIMITED
(Incorporated in British India, liability of Members Limited.)

ಕಿನ್ನಿಮುಲ್ಕಿ ಮೀನು ಮಾರ್ಕೆಟಿನ ಏಲಂ ಪ್ರಕಟಣೆ

ಮೇಲ್ಕಂಡ ಮೀನು ಮಾರ್ಕೆಟಿನ ಫೀಸು ವಸೂಲಿಯ ಹಕ್ಕನ್ನು ತಾ. 1-10-1946 ರಿಂದ 31 3-48ರ ವರೆಗಿನ 18ತಿಂಗಳ ಅವಧಿಗೆ ಇದೇ ತಾ. 2-9-1946ನೇ ಸೋಮವಾರ ಸಂಜೆ 4ಗಂಟೆಗೆ ಬೋರ್ಡಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಬಿಡ್ಡಿನ ಆರಂಭವು ರೂ. 36/-. ರೂ. 10-/ ಪ್ರಥಮ ಠೇವಣಿಯನ್ನು ಪ್ರತಿ ಬಿಡ್ಡರರು ಕಟ್ಟತಕ್ಕದ್ದು.

ಎನ್. ರಾಜಗೋಪಾಲ ಕೃಷ್ಣರಾವ್,
ಪ್ರೆಸಿಡೆಂಟ್
ನಿಡಂಬೂರು ಪಂಚಾಯತ ಬೋರ್ಡು,
ಕಡೆಕಾರ್,

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S No. 73/1946

ಅಬ್ದುಲ್ ಇಬ್ರಾಹಿಂ ಬ್ಯಾರಿ —ವಾದಿ
ಕೃಷ್ಣ ಭಟ್ಟ ವಗೈರಾ —ಪ್ರತಿವಾದಿರು

ಪ್ರತಿವಾದಿರು

(3) ನಾರಾಯಣ ಭಟ್ಟ, ಸುಬ್ರಾಯ ಭಟ್ಟರ ಮಗ (4) ಪುರುಷೋತ್ತಮ ಭಟ್ಟ, ನಾರಾಯಣ ಭಟ್ಟರ ಮಗ. (5) ಅಮ್ಮುಗೌಡ. ರಾಮುಗೌಡನ ಮಗ. ಕಾಸರಗೋಡು ತಾಲೂಕು ಪಡ್ರೆಗ್ರಾಮದಲ್ಲಿರುವವರು ಇವರಿಗೆ ಕೊಡುವ ನೋಟೀಸು.

ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 2-9-46ಕ್ಕೆ ಮುಟ್ಟಿರುವ ಸಂಗ್ತಿ ತಿಳಿಸಿಯದೆ.

sd/ **P. Ahmad**
Advocate for Plaintiff
ಕಾಸರಗೋಡು 22-8-46

ಬಂಧಪಟ್ಟದ್ದು ಹೊರತು 'ರಾಷ್ಟ್ರೀಯತ್ವ'ಕ್ಕೆ ಸಂಬಂಧಿಸಿದುದೆ? ಒಂದೊಮ್ಮೆಗೆ 'ಧರ್ಮವೇ ಸರ್ವಸ್ವ'ವೆಂದಿರುವ ಧರ್ಮಾಂಧರು 'ನಿನ್ನ ಪುಣ್ಯ ಭೂಮಿ-ಮಾತೃಭೂಮಿ?' ಎಂದರೆ 'ಪೆಲೆಸ್ಟೈನ್' ಎಂಬ ಉತ್ತರ ಕೊಡಬಹುದು. ಅದು ತಪ್ಪು; ಅಜ್ಞಾನ. ಇಂತಹ ಅಜ್ಞಾನಿಗಳಿದ್ದಾರೆಂಬುದರಿಂದ ಅವರ ಮಾತನ್ನೇ ಒಪ್ಪಿಕೊಳ್ಳುವದೆ? ನಮ್ಮ ಕೆಲವು ಸ್ವಾಮಿಗಳು, ಸನ್ಯಾಸಿಗಳು 'ಸ್ವರ್ಗಲೋಕ'ಕ್ಕೆ ಸಂಬಂಧಪಟ್ಟ ಮಾತುಗಳನ್ನಾಡಿದೆ ಈ ಲೋಕದ ಕುರಿತು ತುಟಿಯೆತ್ತುವದಿಲ್ಲ ಅವರು ಹಾಗೆನ್ನುತ್ತಾರೆಂದು ಪ್ರಜ್ಞೆಯಿದ್ದವರೂ ಅಂಥವರನ್ನು "ಸ್ವರ್ಗವಾಸಿ"ಗಳೆಂದು ಒಪ್ಪಲಾಗುವದೆ? ಇಲ್ಲಿಯೇ ಇದ್ದಾರೆ; ಇಲ್ಲಿಯ ಆಗು ಹೋಗುಗಳು ಅವರಿಗೂ ಲಗಾವಾಗುತ್ತವೆ; ಆದರೆ ಬುದ್ಧಿ ಮಾತ್ರ ವಿಕಲ್ಪವಾಗಿದೆ! ಯಾರೇನು ಮಾಡಲಿ? ಸಾಧ್ಯವಿದ್ದರೆ ಆ ಮನೋರೋಗವನ್ನು ವಾಸಿಪಡಿಸಬೇಕು; ಅಸಾಧ್ಯವೆನ್ನೋಣ. ಅದನ್ನೇ ಒಪ್ಪಿಕೊಂಡು ನಾವೂ ಹುಚ್ಚರಾಗಬೇಕೆ? ಮುಸಲ್ಮಾನರಿಗೆ ಹಿಂದೂದೇಶವು 'ಮಾ. ಭೂಮಿ' 'ಪು. ಭೂಮಿ'ಯಾಗಿಲ್ಲವಾದ್ದರಿಂದ ಅವರಿಗಿಲ್ಲಿಯ ರಾಷ್ಟ್ರೀಯತ್ವವಿಲ್ಲ....' ಎಂಬ ಈ ವಾದವು ... ಆದ್ದರಿಂದ ಅವರಿಗೆ ಪ್ರತ್ಯೇಕವಾದ ಪಾಕಿಸ್ತಾನ ಕೊಡಲೇ ಬೇಕು' ಎಂಬುದನ್ನು ಸೇರಿಸಿದರೇನೇ ಪೂರ್ಣಗೊಳ್ಳಬಲ್ಲದು. ಆಗಬಹುದೆ? ಈ ಹಿಂದೂ ಅಭಿಮಾನಿಗಳೆಲ್ಲಾ ಮಿ. ಜಿನ್ನರ ಅನುಯಾಯಿಗಳು!

ಅಸಹಕಾರ ಹೂಡಲೆ?

'ಮುಸ್ಲಿಮರೀಗ ಕಾಂಗ್ರೆಸಿನ ವಿರೋಧಿಗಳು. ಆದ್ದರಿಂದ ಗಾಂಧೀಜೀ ಕಲಿಸಿರುವ ಅಸಹಕಾರಾಸ್ತ್ರವನ್ನು ಅವರ ಮೇಲೂ ಪ್ರಯೋಗಿಸಬೇಕು. ಅವರೊಡನೆ ವ್ಯಾಪಾರ ನಡೆಸಬಾರದು; ಸಹಕಾರವನ್ನೆ ಸರ್ವ ವಿಧದಿಂದಲೂ ಬಹಿಷ್ಕರಿಸಬೇಕು'. ನ್ಯಾಯವೇ? ಕಳ್ಳನ ಸೊತ್ತನ್ನು ಕದ್ದುಕೊಳ್ಳಲೇ ಬೇಕೇ? ತಿಕ್ಕೆ ಕೊಟ್ಟರೆ ಸಾಲದೆ? ಬಂಗಾಳದಲ್ಲಿದ್ದ ಲೀಗ್ ಸರಕಾರ ಕಲ್ಮತ್ವವನ್ನು ಮನನ ಮಾಡಲು ಬಿಟ್ಟಿತು; ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯ, ಮಧ್ಯ ಪ್ರಾಂತ್ಯ, ಬಿಹಾರ್, ಒರಿಸ್ಸಾ, ಆಸ್ಸಾಮು, ಗಡಿನಾಡುಗಳ ಕಾಂಗ್ರೆಸ್ ಸರಕಾರಗಳು, ತಮ್ಮ ಪ್ರಾಂತ್ಯಗಳಲ್ಲಿ ಅದಕ್ಕೆ ಪ್ರತೀಕಾರ ಮಾಡಿ [illegible] ಮುಯ್ಯಿ ತೀರಿಸಬಹುದಿತ್ತೆ? ಹಾಗೆ ಮಾಡಿದರೆ ದುಷ್ಟನ ಧೋರಣತ್ವವನ್ನು ಒಪ್ಪಿಕೊಂಡಂತೆ, ಮಂಗಳನ ಮಾದರಿಯನ್ನು ಅನುಕರಿಸಿದಂತೆ! ಬಂಗಾಳದ ಲೀಗ್ ಸರಕಾರವನ್ನು ಉರುಳಿಸುವಂತೆ-ಅಂತಹ ದುಷ್ಕೃತ್ಯಗಳಾಗದಂತೆ- ಅವಲ್ಲಿ ಅಮಾನುಷತ್ವವನ್ನು ಅಲ್ಲಿಯೇ ನೆಲಸಮ ಮಾಡುವಂತೆ ಹೋರಾಡುವದೊಂದೇ ನ್ಯಾಯವಾದ ಮಾರ್ಗ. ಬದಲಿಗೆ ಪ್ರತೀಕಾರವಾಗಿ ಅದೇ ವಿಧಾನವನ್ನೇ ಅಂಗೀಕರಿಸುವದೆಂದರೆ, ನಾವು ಬೇತವೆನ್ನುವದನ್ನು ನಾವೇ ಬೆಳೆಸಿದಂತಾಗುವದು. ಇಂತಹ ಜಾತಿ ಜಗಳ, ಮನೆ ಜಗಳಗಳ ಸಂದರ್ಭಗಳಿಗೆ ಗಾಂಧಿಜೀ ಸೂಚಿಸುವ ಸತ್ಯಾಗ್ರಹದ ವಿಧಾನಗಳು ಸರ್ವ ಶ್ರುತವಿವೆ 'ಅವರು ಅಸಹಕರಿಸಿದರೆ ನೀವು ಪೂರ್ಣ ಸಹಕಾರ ಕೊಡಿ; ಅವರು ಕೊಲ್ಲುತ್ತಾರಾದರೆ ಸಂತೋಷದಿಂದ ಪ್ರಾಣಕೊಡಿ'—ಇದು ಗಾಂಧೀ ಸಂದೇಶ! ಅಂಗೀಕಾರಾರ್ಹವೆ?

ಲೀಗ್ ಮುಸಲ್ಮಾನರಲ್ಲಿ ಈಗ ಹಬ್ಬಿರುವ ಜಾತೀಯ ಹುಚ್ಚು, ಬಂಡಾಯ ಮನೋವೃತ್ತಿ ನಿರ್ದಾಕ್ಷಿಣ್ಯವಾಗಿ ದಮನಿಸಲ್ಪಡಬೇಕಾದುದು. ಅದು ಹುಟ್ಟಿಸಿದ ಮತ್ತು ಕೊಲೆಪಾತಕಗಳ ಪ್ರಾಯಶ್ಚಿತ್ತವನ್ನೇ ಪಡೆಯಬೇಕಾಗಿದೆ. ಅದು ದರೋಡೆಗಾರ ಮನೋವೃತ್ತಿ; ಅದನ್ನು ಮೇಲ್ಗಡೆ ಕೊಟ್ಟ ಹಿಂದೂ ಅಭಿಮಾನಿಗಳ ವಾದದಂತೆ ರಾಷ್ಟ್ರೀಯರಂಗಕ್ಕಾಗಲಿ, ಸಾಮಾಜಿಕರಂಗಕ್ಕಾಗಲೀ ಎಳೆಸುವದೆಂದರೆ ಅವರ ಕುರೂಪವನ್ನು ಮಾನ್ಯ ಒಪ್ಪಿಕೊಟ್ಟಂತೆಯೇ ಸರಿ, ಅವರಿಗೊಂದು ಉಪಕಾರ ಮಾಡಿದಂತೆಯೇ ಸರಿ! ಆದರೆ [illegible] ಮನೋವೃತ್ತಿಯು [illegible] ಹಿಂದೂ [illegible] ಕಾಂಗ್ರೆಸಿಗೆ ಹೆಚ್ಚಿನ ಕ್ರೋಧವಿದೆ-[illegible]. ಇಂಥವರ [illegible] ಕಟ್ಟಿವಿದೆ ಎಂಬುದು ತಿಳಿದಿರಲಿ. ಅವರೊಂದು ವ್ಯತ್ಯಾಸವಿರುವದು ನಿಜ. [illegible] ಮುರಿದ ಮೇಲೆ ಕಾಂಗ್ರೆಸ್ ಲೀಗ್ ಮುಸ್ಲಿಮರನ್ನಾಲಿಂಗಿಸಿಕೊಳ್ಳಬಹುದು. 'ಹಿಂದೂ ಅಭಿಮಾನಿ'ಗಳು ಮಾತ್ರ ಅವರ ಮುಸಲ್ಮಾನರೆಂಬ ಕಾರಣದಿಂದ ಆಗಲೂ ದೂರವಿಟ್ಟಾರು ಆಗ ಈಗಿನ ಲೀಗ್ ಮುಸಲ್ಮಾನರ ಸ್ಥಾನಕ್ಕೆ ಇಂತಹ ಹಿಂದುಗಳು ಬಂದಂತಾಗುವದು; ಆ ಕಾಲದಲ್ಲಿ ಇದೇ ಪ್ರಾಯಶ್ಚಿತ್ತ ಅವರಿಗೂ ಕಾದಿರುವುದು!

ಹಿಂದೂ ಉಗ್ರಾಭಿಮಾನಿಗಳು—

ಪ್ರಥಮತಃ ತಮ್ಮ ಕಡೆಯನ್ನೇ ತಾವು ನೋಡಿಕೊಳ್ಳಬೇಕೆಂಬ ಒಂದು ಎಚ್ಚರಿಕೆ ಕೊಡದೆ ನಿರ್ವಾಹವಿಲ್ಲ. ನಿಮ್ಮೊಳಗಿರುವ ವಿವಿಧ ಜಾತಿಗಳನ್ನು ಒಂದೇ ಕಡೆ ನಿಲ್ಲಿಸುವದೇನಿದೆ, ಎಂಬುದನ್ನೊಮ್ಮೆ ಹೇಳಬಲ್ಲಿರಾ? 'ಹಿಂದು' ಎಂಬ ಮಾರ್ಕಿನಗಳ ಪದಪುಂಜದಲ್ಲಿದೆ ಬೇರೆ ಏನೂ ಇಲ್ಲ. 'ಸವರ್ಣ ಹಿಂದು' ಮತ್ತು 'ಅವರ್ಣ ಹಿಂದು'ಗಳೊಳಗಿರುವಷ್ಟು ದೂರ ಸವರ್ಣ ಹಿಂದು ಮತ್ತು ಮುಸ್ಲಿಮರ ನಡುವೆ ಇದೆಯೆ? ಅದು ಹಾಗಿರಲಿ-ಈ ಅಳತೆ ಕೋಲನ್ನು ಇನ್ನೊಂದು ದಿಕ್ಕಿಗೆ ತಿರುಗಿಸಿ, ಹಿಂದು ದೇವಸ್ಥಾನಗಳಲ್ಲಿ ಬಿಲ್ಲವರು ಬಂದು ನಿಲ್ಲುವ ಸ್ಥಳ ದೂರವೋ ಮುಸಲ್ಮಾನರು ನಿಲ್ಲುವ ಸ್ಥಳವೋ ಎಂಬುದನ್ನೊಮ್ಮೆ ಅಳೆಯಿರಿ? ಇಡೀ ರಾಷ್ಟ್ರದಲ್ಲಿ ಮುಸಲ್ಮಾನರು ಏಳೆಂಟು ಕೋಟಿಯಿದ್ದರೆ ಹಿಂದುಗಳು 26-27 ಕೋಟಿಯಿದ್ದಾರೆ. ಒಬ್ಬನಿಗೆ ಮೂವರಂತೆ! ಇದೇ ಪರಿಮಾಣದಲ್ಲಿ ಒಮ್ಮತ, ಒಕ್ಕಟ್ಟು ಇರುತ್ತಿದ್ದರೆ ಹಿಂದುಗಳ ಕಡೆಯ ಶಕ್ತಿ ಆ ಕಡೆಗಿಂತ ಮುಮ್ಮಡಿ ಅಧಿಕವಿರಬೇಕಿತ್ತು. ಆದರೆ ಎಲ್ಲಿದೆ? ಇದಕ್ಕೇನು ಕಾರಣವೆಂಬುದನ್ನು ನಿಸ್ಸಂಕೋಚವಾಗಿ ಹೇಳಿಬಿಡಲೆ? ಹಿಂದೂ-ಮುಸ್ಲಿಮರೊಳಗಿರುವ ಭೇದಗಳಷ್ಟೇ-ಕೆಲವೊಮ್ಮೆ ಅದಕ್ಕೂ ಹೆಚ್ಚಿನ ವ್ಯತ್ಯಾಸ-ಹಿಂದುವಿನ ವಿವಿಧ ಜಾತಿಗಳೊಳಗಿವೆ. ಆ ಕಡೆಯನ್ನು 'ಮುಸಲ್ಮಾನ್' ಎಂಬ ಒಂದೇ ಹೆಸರಿನಿಂದ ಕರೆದರೆ, ಈ ಕಡೆಯನ್ನು ಬ್ರಾಹ್ಮಣ, ಶೂದ್ರ, ಹರಿಜನ ಮುಂತಾದ ಹತ್ತು ಹಲವು ಹೆಸರುಗಳಿಂದ ಕರೆಯಲಿಕ್ಕಿದೆ. ಈ ಒಂದೊಂದು ಸಮಾಜ ಆ ಒಂದು ಮುಸಲ್ಮಾನ್ ಸಮಾಜದಷ್ಟಾಗುವದಿಲ್ಲ. ಆದರೆ ಇವರೆಲ್ಲರ ಮುಂಭಾಗಕ್ಕೂ ಒಂದೇ ಅಷ್ಟಗರೆಯಿಂದ 'ಹಿಂದು' ಎಂಬ ಬೋರ್ಡು ತೂಗಿಸಿದ್ದಾರೆ ಆ ಹೆಸರು ಬಿದ್ದ ಮೇಲೆ ನಮಗಿನ್ನು ಇದಿರು ಪಾಳಯದ ಮೇಲೆ ಧಾಳಿಯಿಡುವದೊಂದೇ ಕೆಲಸವೆಂಬ ಹುಚ್ಚಾಟ ಬೇಡ; ಪಾಳಯದೊಳಗಿನ ವ್ಯತ್ಯಾಸಗಳನ್ನು ನಿವಾರಿಸುವದು-ಒಗ್ಗಟ್ಟು ನಿರ್ಮಿಸುವದು-ಮುಖ್ಯವೆಂಬ ಜ್ಞಾನ ಮೊಳೆಯಲಿ!

ನಿಮ್ಮ ಸಂಬಳ ಏರಬೇಕೆ? ನಿಮ್ಮ ಆದಾಯ ಹೆಚ್ಚಬೇಕೆ?

ಹಾಗಿದ್ದರೆ ಕೂಡಲೇ ಇಂಗ್ಲಿಷ್ ಕಲಿಯಿರಿ

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡು ಓದತೊಡಗಿದ್ದಾರೆ; ಬರೆಯಲೂ ತೊಡಗಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳು ಸಿಗುವ ಸ್ಥಳಗಳು:—

1 ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ನವಭಾರತ ಬುಕ್ ಡಿಪ್ಪೊ, ಉಡುಪಿ.
3 ಸ್ವತಂತ್ರಭಾರತ ಬುಕ್ ಡಿಪ್ಪೊ ಬೊಂಬಾಯಿ 4. ನ್ಯೂ ಸಪ್ಲೈ ಏಜನ್ಸಿ, ಕುಮಟಾ.

ಕ. ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಕಳೆದ ತಾ ೨೬-೮-೧೯೪೬ರಲ್ಲಿ ಹುಬ್ಬಳ್ಳಿಯಲ್ಲಿ ಸೇರಿದ ಕರ್ನಾಟಕ ಪ್ರಾಂತೀಯ ಕಾಂ. ಸಭೆಯಲ್ಲಿ ಈ ಕೆಳಗಿನ ಠರಾವುಗಳು ಮಾನ್ಯವಾದುವು:-

ಪ್ರಾಂತದಲ್ಲಿಯ ವಿವಿಧ ಕಾರ್ಯಕ್ಷೇತ್ರಗಳಲ್ಲಿಯ ಕೆಲಸವನ್ನು ಭರದಿಂದ ಹಾಗೂ ಪರಿಣಾಮಕಾರಿಯಾಗಿ ಸಾಗಿಸುವ ಸಲುವಾಗಿ ಕ. ಪ್ರಾಂ. ಕಾಂ. ಸಮಿತಿಯ ಕಾರ್ಯಕಾರಿ ಮಂಡಲದ ಈ ಸಭೆಯು ಕೆಳಗೆ ಕಾಣಿಸಿರುವ ಕಾರ್ಯಕಾರಿ ಮಂಡಳದ ಸದಸ್ಯರನ್ನು ನೇಮಿಸಿ ಅವರ ಹೆಸರಿನ ಮುಂದೆ ಕಾಣಿಸಿದ ಕಾರ್ಯವನ್ನು ಅವರಿಗೆ ಒಪ್ಪಿಸಿ ಕೊಡುತ್ತದೆ; ಇವರು ತಮಗೆ ಸಂಬಂಧಿಸಿದ ಕಾರ್ಯಕ್ಷೇತ್ರಗಳಲ್ಲಿ ಅವಶ್ಯವೆನಿಸಿದರೆ ಸಂಘಟಕರನ್ನು ನೇಮಿಸಿಕೊಳ್ಳಲು ಅಧಿಕೃತರಿರುವರು:-

ಶ್ರೀ. ಆರ್. ಜಿ. ದುಬೆ, ವಿಜಾಪುರ: ಸೇವಾದಲ ವಿದ್ಯಾರ್ಥಿ ವಿಭಾಗ. ಶ್ರೀಮತಿ ಕಮಲಾದೇವಿ: ಕೂಲಿಗಾರರ ವಿಭಾಗ. ಶ್ರೀ. ವ್ಹಿ. ವಿ. ಪಾಟೀಲ, ಹುಬ್ಬಳ್ಳಿ: ರೈತ ವಿಭಾಗ. ಶ್ರೀ. ಯು. ಶ್ರೀನಿವಾಸ ಮಲ್ಯ: ರಚನಾತ್ಮಕ ಕಾರ್ಯ ವಿಭಾಗ; ಶ್ರೀ. ಎಚ್. ಕೆ. ವೀರಣ್ಣ ಗೌಡರ : ಸಂಸ್ಥಾನ ವಿಭಾಗ.

ಕೊಡಗಿನ ಶಾಸನ ಸಭೆಯ ಕಾಂಗ್ರೆಸ್ ಪಾರ್ಟಿಯವರು ಘಟನಾ ಸಮಿತಿಗೆ ಒಬ್ಬ ಸದಸ್ಯರನ್ನು ಆರಿಸಿ ಕಳುಹಿಸುವುದು ಯೋಗ್ಯವೆಂದು ಅಧ್ಯಕ್ಷರು ಕೊಟ್ಟ ಒಪ್ಪಿಗೆಯನ್ನು ಈ ಸಭೆಯು ಮನ್ನಿಸುತ್ತದೆ.

ಸಂಸ್ಥಾನಿ ಕರ್ನಾಟಕದ ಭಾಗಗಳನ್ನೊಳಗೊಂಡ ಏಕೀಕೃತ ಕರ್ನಾಟಕದ ಸಲುವಾಗಿ ಮಾರ್ಗ ನಿರ್ಧರಿಸಲು ದಾವಣಗೇರಿಯಲ್ಲಿ ಕನ್ನಡಿಗರ ಮಹಾ ಸಭೆಯನ್ನು ಕರೆಯುವ ಬಗ್ಗೆ ಪ್ರಾಂತಾಧ್ಯಕ್ಷರು ಏಕೀಕರಣ ಸಂಘದ ಅಧ್ಯಕ್ಷರೊಡನೆ ಮಾಡಿದ ಕಾರ್ಯಕ್ಕೆ ಈ ಸಭೆಯು ಈ ಮೂಲಕ ತನ್ನ ಒಪ್ಪಿಗೆಯನ್ನು ಕೊಡುತ್ತದೆ. ಮತ್ತು ಆ ಮಹಾಸಭೆಯು ಸಂಪೂರ್ಣ ಯಶಸ್ವಿಯಾಗಲು ಅವಶ್ಯವಿದ್ದ ಎಲ್ಲ ಸಹಾಯ ಸಹಕಾರವನ್ನು ನೀಡಬೇಕೆಂದು ಈ ಸಭೆಯು ನಿರ್ಧರಿಸುತ್ತದೆ.

ಗೋವೆಯಲ್ಲಿಯ ಇತ್ತೀಚಿನ ರಾಜಕೀಯ ಘಟನೆಗಳನ್ನು ಕ. ಪ್ರಾಂ. ಕಾಂ. ಕಮಿಟಿಯ ಕಾರ್ಯಕಾರಿ ಮಂಡಲದ ಈ ಸಭೆಯು ತೀವ್ರ ಕಾತುರತೆಯಿಂದ ಲಕ್ಷಿಸುತ್ತದೆ. ನಾಗರಿಕ ಹಾಗೂ ಮೂಲಭೂತ ಹಕ್ಕುಗಳ ಸಲುವಾಗಿ ಗೋವೆಯ ಜನರು ನಡೆಸಿರುವ ಶೂರ ಹೋರಾಟವನ್ನು ಈ ಸಭೆಯು ಮೆಚ್ಚುತ್ತದಲ್ಲದೆ ಪೋರ್ತುಗೀಸ್ ಸರಕಾರದವರು ಅಲ್ಲಿಯ ಈ ಹೋರಾಟವನ್ನು ಹತ್ತಿಕ್ಕಲು ನಡೆಯಿಸಿರುವ ದಬ್ಬಾಳಿಕೆಯನ್ನು ನಿಷೇಧಿಸುತ್ತದೆ.

ಕರ್ನಾಟಕ ಪ್ರಾಂತದೊಳಗಿನ ಎಲ್ಲ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ತಮ್ಮ ಹೊಸ ಅಧಿಕಾರಿ ವರ್ಗವನ್ನು ಈ ತಿಂಗಳ ಅಂತ್ಯದೊಳಗಾಗಿ ಆರಿಸಬೇಕೆಂದು ಈ ಸಭೆಯು ಸೂಚಿಸುತ್ತದೆ ಹಾಗೂ ಈ ದೃಷ್ಟಿಯಿಂದ ಈಗಿನ ಜಿಲ್ಲಾ ಕಾಂ. ಕಮಿಟಿಯ ಅಧಿಕಾರಿಗಳು ಹೊಸದಾಗಿ ಆರಿಸಿಬಂದ ಜಿಲ್ಲಾ ಕಾಂ. ಕಮಿಟಿಯ ಸದಸ್ಯರಿಗೆ ಹೊಸ ವಾರ್ಷಿಕ ಸಾಧಾರಣ ಸಭೆಯ ಬಗ್ಗೆ ಇದೇ ೨೦ನೇ ತಾರೀಖಿನೊಳಗಾಗಿ ನೋಟೀಸು ಕೊಡಬೇಕೆಂದು ಈ ಸಭೆಯು ಆಜ್ಞಾಪಿಸುತ್ತದೆ.

ವರ್ಧಾದಲ್ಲಿ ಜರಗುವ ಕಿಸಾನ ಪರಿಷತ್ತಿಗೆ ೬ ಜನರನ್ನು ಕರ್ನಾಟಕ ಪ್ರತಿನಿಧಿಗಳೆಂದು ಕಳಿಸಬೇಕೆಂದು ಬಂದ ಪತ್ರದ ಮೇರೆಗೆ ಸದ್ಯಕ್ಕೆ 3 ರೈತ ಪ್ರತಿನಿಧಿಗಳನ್ನು ಕರ್ನಾಟಕದ ಪರವಾಗಿ ಹೋಗಲು ಈ ಸಭೆಯು ಸೂಚಿಸುತ್ತದೆ.

ಅನೇಕ ಚಿಕ್ಕ ಚಿಕ್ಕ ದಕ್ಷಿಣ ಸಂಸ್ಥಾನಗಳ ಅಧಿಪತಿಗಳಿಂದ ಯತ್ನಿಸಲಾಗುತ್ತಿದ್ದ ಒಕ್ಕೂಟ ಯೋಜನೆ ಹಾಗು ಪ್ರಸ್ಥಾಪಿಸಲಾಗಿದ್ದ ಇಡಿ ಸಮಸ್ಯೆಯ ಸ್ವರೂಪಗಳು ಅಸಂತುಷ್ಟ ಮತ್ತು ಸಂಶಯಾಸ್ಪದವಾಗಿರುವವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಘಟನಾ ರಚನೆಯ ಕಾರ್ಯಕ್ಕೆ ತೊಡಕಿಸಿದ ಯತ್ನವು ಈ ಸಂಸ್ಥಾನಾಧಿಪತಿಗಳ ಪ್ರತಿಕೂಲ ಮತ್ತು ಜನಮತವಿರುದ್ಧ ನಿರಂಕುಶ ಪ್ರಭುತ್ವವನ್ನು ದೃಢೀಕರಿಸುವ ದೃಷ್ಟಿಯುಳ್ಳದ್ದಾಗುವದೆಂದು ಈ ಸಭೆಯು ನಂಬುತ್ತದೆಯಲ್ಲದೆ ಯೋಜನೆಯು ಅವ್ಯವಹಾರವೂ ಭಾಷಾನುಗುಣ ಪ್ರಾಂತರಚನೆಯ ತತ್ವಗಳಿಗೆ ಪ್ರತಿಕೂಲವೂ ಜನಹಿತ ದೃಷ್ಟಿಯಲ್ಲಿ ಅಯೋಗ್ಯ ಮತ್ತು ಅಶಾಸ್ತ್ರೀಯವೂ ಆಗಿರುತ್ತದೆಂದು ಈ ಸಭೆಯು ದೃಢವಾಗಿ ನಂಬುತ್ತದೆ.

ಇಡೀ ಕರ್ನಾಟಕದ ಬೆಳವಣಿಗೆಯ ಬಗ್ಗೆ ಸಂಪೂರ್ಣ ಪರಿಶೋಧಿಸಲಿಕ್ಕೆಂದು ತಜ್ಞರನ್ನು ಕೂಡಲೇ ನೇಮಕಮಾಡಬೇಕೆಂದು ತೋರಿಸುವ ಆವಶ್ಯಕತೆಯನ್ನು ಕೆ ಪಿ. ಸಿ. ಸಿ. ಸಭೆಯು ಮುಂಬಯಿ, ಮದ್ರಾಸ್, ಕೊಡಗು ಸರಕಾರಗಳಿಗೆ ಒತ್ತಾಯ ಪಡಿಸುತ್ತದೆ.

ಮದ್ರಾಸ್ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಮಂಡಳದ ಒಂದು ಸ್ಥಳವನ್ನಾದರೂ ಮದ್ರಾಸ್ ಕರ್ನಾಟಕಕ್ಕೆ ಕೊಡದೆ ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ತೋರಿಸಿದ ಧೋರಣವನ್ನು ಈ ಸಭೆಯು ಅಲ್ಲಗಳೆಯುವದಲ್ಲದೆ ತಿರಸ್ಕಾರ ಮಾಡುತ್ತದೆ.

ಮದ್ರಾಸ್ ಪ್ರಾಂತದಲ್ಲಿ ಕನ್ನಡಿಗರ ಜನಸಂಖ್ಯೆಯು 20 ಲಕ್ಷಕ್ಕೆ ಮಿಕ್ಕಿದ್ದರೂ ಈ ಪ್ರದೇಶದಿಂದ ಘಟನಾ ಸಮಿತಿಗೆ ಮದ್ರಾಸ್ ಶಾಸನ ಸಭೆಯು ಒಂದೇ ಒಂದು ಸ್ಥಾನವನ್ನು ಕಲ್ಪಿಸಿದುದು ತೀವ್ರ ಅಸಮಾಧಾನಕರವಾಗಿದೆ.

NOTICE.

In the Court of the District Munsif of Mangalore.

O. S. No. 185/1946.

Between

The Catholic Bank Limited, Mangalore —Plaintiff.

and

C. Abdul Rahiman, son of C Hahamud, Merchant, Bunder, Mangalore —Defendant.

To

The Defendant,

Notice is hereby given that the Plaintiff has filed the above suit against you for recovery of Rs. 2562—8—5 from you and the same is posted for hearing at 11 A. M. on 7-9-1946.

Mangalore, 20-8-1946 **P. D. Souza,** Vakil for Plaintiff.

NOTICE.

In the Court of the District Munsif of Mangalore.

O. S. No. 186/1946.

Between

The Catholic Bank Limited, Mangalore —Plaintiff.

and

C. Abdul Rahiman son of C. Hahamud, Merchant, Bunder, Mangalore —Defendant.

To

The Defendant.

Notice is hereby given that the Plaintiff has filed the above suit against you for recovery of Rs. 2725—15—7 from you and the same stands posted for hearing on 7-9-1946 at 11 A. M.

Mangalore, 20-8-1946. **P. D. Souza,** Vakil for Plaintiff.

CHAMPAE'S

Snow & Castrex

(*Sole Distributers for India.*)

Prop: K. G. NAYAK,

Santhekatte, UDIPI, S. K.

ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೀ ದುಮುಕ್ಕಿಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೀಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬೆಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦-೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪ್ರೊಪ್ರೈಟರ್ ಸ್ಟೋರ್ಸ್, ಮಂಗಳೂರು; ಟಿ. ಸಿ. ಪಟವಾಜನ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨.



ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. **ಬೆಲೆ 0-8-0 ಮಾತ್ರ.**

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವೆವು.

ಅಕ್ಕಿ ಒಪ್ಪಿಸುವ ವ್ಯವಸ್ಥೆ

ರೈತರಿಗಾಗುತ್ತಿರುವ ಆಂತರಿಕ ಕಷ್ಟ ನಷ್ಟ.

ಆಹಾರ ಧಾನ್ಯಗಳ ಸಂಗ್ರಹ ಮತ್ತು ವಿತರಣೆ, ಹಾಗೂ ಸಕ್ಕರೆ, ಚಿಮಿಣಿ ಎಣ್ಣೆ, ನಾಲು ಮತ್ತಿತರ ಗ್ರಾಮಾವಶ್ಯ ಸಮಾನುಗಳ ಹಂಚೋಣದ ವ್ಯವಸ್ಥಾಧಿಕಾರವನ್ನು ವಹಿಸಲು ಗ್ರಾಮ ಸಮಿತಿಗಳನ್ನು ಸರಕಾರವು ನೇಮಿಸಿದಾಗ ಒಮ್ಮೆ ಗ್ರಾಮಸ್ಥರೆಲ್ಲಾ ಸಂತೋಷಗೊಂಡರು; ಕಾಂಗ್ರೆಸ್ ಸರಕಾರವನ್ನು ಕೃತಜ್ಞತಾ ಭಾವನೆಯಿಂದ ಕಂಡರು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಅಕ್ಕಿ ಭತ್ತಗಳನ್ನು ಹಿಂದಿನಂತೆಯೇ ಕೋ-ಒಪರೇಟಿವ್ ಹೋಲ್‌ಸೇಲ್ ಸ್ಟೋರುಗಳಿಗೇನೇ ಒಪ್ಪಿಸತಕ್ಕದ್ದೆಂಬುದು ಮುಂದಕ್ಕೂ ಕಾಯಮ್ ಆದಂತಿದೆ ಮದ್ರಾಸ್ ಪ್ರಾಂತ್ಯದಲ್ಲಿ ಸಲಹೆಗಾರ ಸರಕಾರವಿದ್ದಾಗ ಆಹಾರ ಧಾನ್ಯಗಳ ಅತಿರೇಕ ಅಭಾವವಿದ್ದ ಕೆಲವು ವರುಷಗಳಿಂದಿದುವರೆಗೆ ಧಾನ್ಯ ವಿತರಣೆಯ ಪ್ರಾಮುಖ್ಯ ಜವಾಬ್ದಾರಿ ವಹಿಸಿ ಹೋಲ್ ಸೇಲ್ ಸ್ಟೋರ್ಸುಗಳು ಉಪಕಾರ ಮಾಡಿವೆಯೆಂಬುದನ್ನು ಮರೆಯಲಾಗುವದಿಲ್ಲ. ಧಾನ್ಯಗಳ ಅಭಾವವಿರುವಾಗ ಅವುಗಳ ವ್ಯಾಪಾರವನ್ನು ಲಾಭೋದ್ದೇಶವೊಂದೇ ಇರುವ ಖಾಸಗೀ ವ್ಯಾಪಾರಿಗಳ ಕೈಯಿಂದ ತಪ್ಪಿಸುವದು ಅತ್ಯಾವಶ್ಯಕವಾಗಿತ್ತು. ಆಗ ಆ ಹೊಣೆಗಾರಿಕೆಯನ್ನು ವಹಿಸಲು ಕೋಪರೇಟಿವ್ ಸ್ಟೋರುಗಳು ಮುಂದಾಗದಿರುತ್ತಿದ್ದರೆ ಎಂತಹ ಪರಿಸ್ಥಿತಿಯೊದಗುತ್ತಿತ್ತೆಂದು ಹೇಳಲಾಗುವದಿಲ್ಲ. ಈ ಮಾತು ನಿಜವಿದ್ದರೂ ಅವುಗಳ ಧಾನ್ಯ ಸಂಗ್ರಹ ಮತ್ತು ವಿತರಣಾ ವ್ಯವಸ್ಥೆಗಳು ನಿರ್ದೋಷವಾಗಿದ್ದುವೆಂದು ಯಾರೂ ಹೇಳಲಾರರು. ಇಂತಹ ದೋಷಗಳ ನಿವಾರಣೆಗಾಗಿಯೇ ಕಾಂಗ್ರೆಸ್ ಸರಕಾರವು ಗ್ರಾಮ ಸಮಿತಿಗಳನ್ನು ರಚಿಸಿದ್ದಿತು. ಆದರೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಧಾನ್ಯ ಸಂಗ್ರಹ ಮತ್ತು ವಿತರಣಾಧಿಕಾರವು ಹಿಂದಿನವರ ಕೈಯಲ್ಲೇ ಉಳಿದರೂ ಆ ವ್ಯವಸ್ಥೆಯಲ್ಲಿ ಇದುವರೆಗಿರುವ ದೋಷಗಳಾದರೂ ನಿವಾರಣೆಯಾಗುವವೆಂದು ಎಲ್ಲಾ ರೈತರೂ ದೃಢವಾಗಿ ಆಶಿಸುತ್ತಿದ್ದಾ[illegible] ದಲ್ಲಿ ನವಸರಕಾರದ ಸದುದ್ದೇಶವೇ ನಿಷ್ಫಲವಾದಂತಾಗುವದು. ರೈತರ ಪಾಲಿನ ಅಸಹ್ಯ ಸಂಕಷ್ಟವು ಹಾಗೆಯೇ ಉಳಿದಂತಾಗುವದು. ಆದ್ದರಿಂದ ಸಂಬಂಧಪಟ್ಟವರು ಈ ವರುಷದ ಧಾನ್ಯ ಸಂಗ್ರಹ ವ್ಯವಸ್ಥೆಯಲ್ಲಾದರೂ ಅಂತಹ ದೋಷಗಳಿಲ್ಲದಂತೆ ಮಾಡಬೇಕೆಂಬುದಕ್ಕಾಗಿ ಸಕಾಲದಲ್ಲಿ ಈ ವಿಜ್ಞಾಪನೆಯನ್ನು ಮಾಡಿಕೊಳ್ಳಲಾಗುತ್ತಿದೆ. ಇಲ್ಲಿ ನಮೂದಿಸಿರುವ ವಿಷಯಗಳು ಸತ್ಯವೇ—ಮತ್ತು, ಈ ಸೂಚನೆಯು ಇಡೀ ಜಿಲ್ಲೆಯ ರೈತರ ಆಗ್ರಹದ ಅಪೇಕ್ಷೆಯಾಗಿರುವದು ನಿಜವೇ ಎಂಬುದು ಸಂಬಂಧಪಟ್ಟ ಅಧಿಕಾರಿಗಳು ಸ್ವತಃ ಸಂಚರಿಸಿ ವಿಚಾರಿಸಿದಲ್ಲಿ ಮನಂದಟ್ಟಾಗಬಹುದು.

ಅಕ್ಕಿಯೊಪ್ಪಿಸುವುದರಲ್ಲಿರುವ ಕಷ್ಟ ಮತ್ತು ನಷ್ಟ.

ಕೋಪರೇಟಿವ್ ಹೋಲ್ ಸೇಲ್ ಸೊಸೈಟಿಯು ಅಕ್ಕಿ ಭತ್ತ ಪಡಕೊಳ್ಳುವ ಡಿಪೋಗಳು ಎಳೆಂಟು ಗ್ರಾಮಗಳಿಗೊಂದರಂತಿವೆ. ರೆಕ್ವಿಶಿಶನ್ ಅಧಿಕಾರಿಗಳು ತಮ್ಮ ಆಜ್ಞೆಯಲ್ಲಿ ನಮೂದಿಸುವ ಡಿಪೋಗೇನೇ ರೈತರು ತಮ್ಮ ಧಾನ್ಯವನ್ನು ಕೊಂಡೊಯ್ದು ಮುಟ್ಟಿಸಬೇಕು; ಆದೊಂದೇ ಸ್ಟೋರಿನಲ್ಲಲ್ಲದೆ ಬೇರಾವ ಸ್ಟೋರಿನಲ್ಲಿಯೂ ಅವನ ಅಕ್ಕಿ ಬೆಲೆ ಬಾಳುವಂತಿಲ್ಲ. ಎಲ್ಲಾ ರೈತರೂ ಅಕ್ಕಿಯೊಪ್ಪಿಸುವ ಕಾಲವು ಒಮ್ಮೆಯೇ ಬರುತ್ತದೆಂಬುದು ಎಲ್ಲರಿಗೂ ಗೊತ್ತಿದ್ದದ್ದೇ. ಹೀಗಾಗಿ, ಈ ದಿನಗಳಲ್ಲಿ ಒಂದು ಧಾನ್ಯ ಸಂಗ್ರಹ ಕೇಂದ್ರದಲ್ಲಿ ಎಳೆಂಟು ಗ್ರಾಮಗಳ ರೈತರು ಅಕ್ಕಿ ಹೊತ್ತುಕೊಂಡು ತಂದು ಕಾದಿರುವಾಗ ಸ್ಟೋರುಗಳವರು ಒಮ್ಮೊಮ್ಮೆಗೇನೇ ಸಾವಿರಕ್ಕೂ ಮಿಕ್ಕಿದ ಮುಡಿಗಳನ್ನು ಪಡಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಅಕ್ಕಿ ಮುಡಿಗಳನ್ನು ತಂದಿಟ್ಟು ರೈತರು ಘಂಟೆಗಳ ತನಕ ಮಾತ್ರವಲ್ಲ; ದಿನಗಟ್ಲೆ ಕಾಯಬೇಕಾಗುವದೂ ಇದೆ ಕಾದು ಕಾದು ಕೊನೆಗೆ 'ಹೇಗೂ ಒಮ್ಮೆ ಮಾರಿ ಹೋದೆನೆಂದರೆ ಸಾಕು' ಎಂಬಷ್ಟು ಪ್ರಯಾಸ ಮತ್ತು ವೆಚ್ಚದ ನಷ್ಟದಿಂದ ರೈತರೆಲ್ಲಾ ಸೋತು ಹೋಗುತ್ತಾರೆ ಈ ಕಾಲದಲ್ಲಿ ಇಂತಹ ಸ್ಟೋರುಗಳ ಏಜಂಟರಲ್ಲಿರುವ ಸೂಕ್ಷ್ಮ ಬುದ್ಧಿ ಮತ್ತು ಸ್ವಭಾವ ಪರೀಕ್ಷೆಯು ಜ್ಞಾನ ಮಿಕ್ಕವರಿಗಿರುವದು ಅಸಂಭವವೆಂಬ ಸರ್ಟಿಫಿಕೇಟು ಕೊಡಬಹುದು! ಹಳ್ಳೀ ರೈತನೆಂದರೆ ಅಜ್ಞಾನಿ, ಅಶಕ್ತಿವಂತನೆಂಬುದು ಅವರಿಗೆ ಮೊದಲೇ ಗೊತ್ತಿದ್ದ ವಿಷಯ. ಮೇಲಾಗಿ ಈ ಏಜಂಟರೆಲ್ಲಾ ಪ್ರತಿಷ್ಠಿತ ವ್ಯಕ್ತಿಗಳಿರುವುದರಿಂದ ಏನೇ ಆದರೂ ಅವರೊಡನೆ ಖಾಡಾಖಾಡಿಯಾಗಿ ವಾದಿಸುವ ಧೈರ್ಯ ರೈತರಿಗಿರುವುದಿಲ್ಲ. ಸಾಲದುದಕ್ಕೆ ಆ ಹೊತ್ತಿನಲ್ಲಂತೂ ಆ ರೈತನು ಕಾದು ಕಾದು ಸೋತು ಸುಣ್ಣವಾಗಿದ್ದಾನೆ. ಇಂತಹ ಸಂದರ್ಭದಲ್ಲಿ ಅವನ ಅಕ್ಕಿ ಮುಡಿಗಳ ತೂಕ ನಡಿಸಿ ಪ್ರತಿ ಮುಡಿಯಲ್ಲೂ ಎರಡು ಮೂರು ಸೇರಕ್ಕಿ ಕಡಿಮೆಯಿದೆ ಎಂದು ಏಜಂಟರು ಹೇಳಿದಾಗ, ರೈತರಿಗೆ ಅಪಮಾನದ ಮೇಲೆ ಆಘಾತವಾದಂತೆ—ಹುಣ್ಣಿನ ಮೇಲೆ ಬರೆ ಬಿದ್ದಂತೆ—ಆಗುವದು! ಆತನು ನಿಜಕ್ಕೂ ಒಂದೇ ಒಂದು ಬೊಗಸೆ ಅಕ್ಕಿ ಕಡಿಮೆ ಮಾಡದೆ ಮುಡಿ ಕಟ್ಟಿದ್ದರೂ ಸ್ಟೋರಿನ ತೂಕದಲ್ಲಿ ಎರಡು ಮೂರು ಸೇರಕ್ಕಿ ಅಂತರ್ಧಾನವಾಗಿಯೇ ತೀರುವದು! ಇದು ಅಪರೂಪ ಘಟನೆಯೂ ಅಲ್ಲ; ಅತಿಶಯೋಕ್ತಿಯೂ ಅಲ್ಲ; ಸರ್ವ ಸಾಮಾನ್ಯವಾಗಿರುವ ಸತ್ಯಸ್ಥಿತಿ. ಅಷ್ಟೇ ಅಲ್ಲ ನಿಜವಾದ ಮುಸ್ಕತಿ ಅಕ್ಕಿಯನ್ನು ತಂದಿದ್ದರೂ ಇಡೀ ಮುಡಿಯಲ್ಲಿ ಕೈ ಬೆರಳೆಣಿಕೆಯ ಕೆಲವು ಜೀರಿಕಾಳುಗಳು ಸಿಕ್ಕಿದರಾಯಿತು—ಅದನ್ನು 'ಹಳ್ಳಿಗ ಅಕ್ಕಿ'ಯೆಂದೇ ಗಣಿಸಿ ಆ ಪ್ರಕಾರವೇ ಕ್ರಯ ಕೊಡಲಾಗುವದು. ಪಾಪದ ರೈತರು ಇವೆಲ್ಲಾ ನಷ್ಟಕ್ಕೂ ತಮ್ಮ ದುರದೃಷ್ಟವೊಂದನ್ನೇ ದೂರಬೇಕಾಗುತ್ತದೆ. ಆದರೆ ರೈತನ ಇಡೀ ವರುಷದ ಏಕಮಾತ್ರ ಉತ್ಪನ್ನದ ಮೇಲೆ ಇಂತಹ ಗದೆಬೀಳುವಾಗ ಅವನೆಂತಹ ನಷ್ಟ ಕಷ್ಟ ಮತ್ತು ದುಃಖಕ್ಕೀಡಾಗುತ್ತಾನೆಂಬುದನ್ನು ಅಗತ್ಯವಾಗಿ ಯೋಚಿಸಬೇಕು:

ಇದಕ್ಕೊಂದು ಪರಿಹಾರ ಬೇಡವೆ?

ರೈತರಿಗಾಗುತ್ತಿರುವ ಈ ಅನ್ಯಾಯಗಳಿಗೆ ಇಡೀ ಕೋಪರೇಟಿವ್ ಸ್ಟೋರ್ಸ್ ಮೇಲಾಡಳಿತ ವಿಭಾಗವೇ ಜವಾಬ್ದಾರಿಯಾಗಿರಲಾರದು ಆದರೆ ಹೀಗಾಗುತ್ತಿರುವುದು ಹೌದೇ ಎಂಬುದನ್ನಾದರೂ ಅದರ ಅಧಿಕಾರಿಗಳು ಪತ್ತೆ ಹಚ್ಚುವದು ಬೇಡವೆ? ರೈತರನ್ನು ವಿಚಾರಿಸಿ ಸತ್ಯಾಂಶ ತಿಳಿದುಕೊಳ್ಳುವದು ಬೇಡವೇ? ಇನ್ನು ಮುಂದಾದರೂ ಇಂತಹ ದುಸ್ಥಿತಿಯಿರದಂತಾಗಬೇಕು ಇದಕ್ಕಾಗಿ ಕೋಪರೇಟಿವ್ ಹೋಲ್ ಸೇಲ್ ಸ್ಟೋರ್ಸ್ ಕಡೆಯಿಂದಲೇ ಗ್ರಾಮಕ್ಕೊಂದರಂತೆ ಅಕ್ಕಿ ಸಂಗ್ರಹಿಸುವ ಡಿಪೋಗಳನ್ನು ತೆರೆಯಲಿ. ಅಥವಾ ಈಗ ಚಿಮಿಣಿ ಎಣ್ಣೆ, ಸಕ್ಕರೆ ಇತ್ಯಾದಿಗಳ ಮಾರಾಟದ ಹಕ್ಕು ಲೈಸೆನ್ಸ್ ಪಡೆದ ಹಲವರಿಗಿರುವಂತೆ, ಕಮಿಶನಿನ ಆಧಾರದಿಂದ ಅಲ್ಲಲ್ಲಿ ಕೆಲವು ಸಾಹುಕಾರರಿಗೆ ಅಕ್ಕೀ ಸಂಗ್ರಹಾಧಿಕಾರವನ್ನು ಒಪ್ಪಿಸಲಿ. ವಾರಂಪ್ರತಿ ಅಥವಾ ಅವಧಿವಾರಾಗಿ ಈ ನೇಮಿತ ಸಾಹುಕಾರರಿಂದ ಲೆಕ್ಕ ಪತ್ರ ಪಡೆದರಾಯಿತು. ಇದಕ್ಕನುಗುಣವಾಗಿ ಧಾನ್ಯ ರೆಕ್ವಿಶಿಶನ್ ಅಧಿಕಾರಿಗಳೂ ರೈತರನ್ನು ಯಾವುದಾದರೊಂದೇ ಸ್ಟೋರ್ ಎಂಬ ಗೂಟಕ್ಕೆ ಬಿಗಿಯದೆ, ಅಕ್ಕಿಯನ್ನು ಕೊನೆಯಪಕ್ಷ ಮೂರು ನಾಲ್ಕು ಸ್ಟೋರುಗಳಿಗೆ ವಾ ಲೈಸನ್ಸ್ ಪಡೆದ ಸಾಹುಕಾರರಿಗೊಪ್ಪಿಸಬಹುದೆಂಬ ಸಮ್ಮತಿ ಕೊಡಬೇಕು ಈ ವ್ಯವಸ್ಥೆ ಬಂದರೆ ಒಂದು ಸ್ಟೋರಿನ ಏಜಂಟನು ತನಗೊಬ್ಬನಿಗೇನೇ ಒತ್ತೆಯಿಟ್ಟ ವಸ್ತುವೆಂಬ ಕಾರಣದಿಂದ ರೈತರನ್ನು ವಂಚಿಸುವದಾಗಲೀ ಕಷ್ಟಕ್ಕೀಡು ಮಾಡುವದಾಗಲೀ ತಪ್ಪುತ್ತದೆ. ತಾನಲ್ಲವಾದರೆ ಈ ರೈತನ ಅಕ್ಕಿ ಪಡೆಯುವಬೇರೊಬ್ಬನಿದ್ದಾನೆ ಎಂಬ ಕಾರಣದಿಂದ ರೈತನೊಡನೆ ನ್ಯಾಯಪ್ರಕಾರ ವರ್ತಿಸುವಂತಾಗುತ್ತದೆ. ಅದೇ ಸಮಯದಲ್ಲಿ 'ಕೋಪರೇಟಿವ್' ಖಾತೆಗಾವ ನಷ್ಟವೂ ಆಗುವಂತಿಲ್ಲ. ಯಾಕೆಂದರೆ ಅದರ ಪಾಲಿಗೆ ನಿಯಮಪ್ರಕಾರದ ಕಮಿಶನ್ ಹೊರತು ವಿಶೇಷಾಂಶವಾವುದೂ ಇದುವರೆಗೂ ದೊರೆತಿರಲಾರದು. ಮೋಸ ವಂಚನೆಗಳಿಂದ ವ್ಯಕ್ತಿಗತ ಲಾಭ ಮಾಡಿಕೊಳ್ಳುವವರಿದ್ದರೆ ಅಂಥವರ ಆಟ ಮಾತ್ರ ನಡೆಯದಂತಾಗಿ ರೈತರಿಗೆ ಉಪಕಾರವಾಗುವದು. ಬೇಕಾದಲ್ಲಿ ಅಗತ್ಯವುಳ್ಳ ಶೋಧ ನಡಿಸಿಯಾದರೂ (ಮುಖ್ಯವಾಗಿ ರೈತರನ್ನು ವಿಚಾರಿಸಿ ತಿಳಿಯಲಿ) ಈ ಸುವ್ಯವಸ್ಥೆ ತರಲು ಸಂಬಂಧಪಟ್ಟವರು ತಡಮಾಡಲಾರರೆಂದು ನಂಬುತ್ತೇವೆ.

—ಓರ್ವ ರೈತ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ॥ ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂವತ್ತು ಚಿತ್ರಗಳಿವೆ

ವಿ. ಪಿ. ಕಳಿಸುವುದಿಲ್ಲ. ರೂ ೩-೪ ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE: DHARWAR.

Or

BRANCH OFFICE:

Court Road, UDIPI, S. K.

ಶಾಲೋಪಯೋಗಿ

ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟುಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,

ಉಡುಪಿ.

ಜಪಾನಿನ ನೂತನ ವ್ಯವಸ್ಥೆ

ಲೇ:- ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ.

ಜಪಾನು ಯುದ್ಧಕ್ಕಿಳಿಯುವ ಮೊದಲು ಶ್ರೀಮತಿ ಕಮಲಾದೇವಿಯವರು ಅಲ್ಲಿ ಸಂಚರಿಸಿ ಬಂದಿದ್ದರು. ಆಗಿನ ಜಾಪಾನಿನ ಚಿತ್ರವಿದು. ಇಂದಿನ ಆಕ್ರಮಿತ ಜಾಪಾನಿನ ದುಸ್ಥಿತಿಯೊಡನೆ ಹೋಲಿಸಲನುಕೂಲವಾಗುವಂತೆ ಶ್ರೀಮತಿಯವರ ಪ್ರತ್ಯಕ್ಷಾನುಭವದ ಅನುವಾದವನ್ನು ಕೊಡಲಾಗಿದೆ.

ಜಪಾನಿನ ಅವರ್ಣನೀಯವಾದ ಪ್ರಾಕೃತಿಕ ಸೌಂದರ್ಯವನ್ನು ವರ್ಣಿಸುತ್ತ, ಒಬ್ಬ ಪ್ರಸಿದ್ಧ ಕಲಾಕಾರನು "ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಆದರೆ ಪೃಥ್ವಿಯ ಮೇಲೆ ಎಲ್ಲಿಯಾದರೂ ಸ್ವರ್ಗವಿದ್ದರೆ ಅದು ಜಪಾನಿನಲ್ಲಿದೆ" ಎಂದು ಬರೆದಿದ್ದಾನೆ. ಜಪಾನಿನ ಸೌಂದರ್ಯವು ಒಂದು ಚಿರಸ್ಥಾಯಿಯಾದ ಆಶ್ಚರ್ಯವೇ ಆಗಿದೆ. ಪೂರ್ವ ದೇಶದ ಜನರ ಪೈಕಿ ಜಪಾನೀಯರು ಅತ್ಯಂತ ಶಾಂತ ಸ್ವಭಾವದವರು. ಅಲ್ಲಿನ ಮಕ್ಕಳು ಸಹ ಅಳುವುದು ಅವರಿಗೆ ಸಮಾಧಾನವಿಲ್ಲ. ಜಪಾನಿನವರು ಉತ್ತಮ ನೆರೆ ಹೊರೆಯವರೆನ್ನಬಹುದು. ಯಾವಾಗಲೂ ಇತರರಿಗೆ ಸಹಾಯ ಮಾಡಲು ಹಿಂಜರಿಯರು.

ಆದರೆ ಒಂದು ವಿಷಯ. ಅಲ್ಲಿ ಕೆಲವು ಕಾಲವಿದ್ದ ನಂತರ ಅಲ್ಲಿಯ ಶಾಂತಿಯ ಆನಂದವು ದೂರವಾಗುವುದು. ಏಕೆನ್ನುವಿರಾ? ಒಂದು ದೇಶದವರು ಪ್ರಶ್ನೆ ಮಾಡುವುದನ್ನೇ ಅರಿಯರೆಂದಿಟ್ಟುಕೊಳ್ಳೋಣ. ಅದೇನೋ ಒಳ್ಳೆಯದೇ ಸರಿ. ಆದರೆ ಕೇಳಿದ ಪ್ರಶ್ನೆಗೆ ಅವರು ಉತ್ತರವನ್ನೇ ಕೊಡದಿದ್ದರೆ ಅಲ್ಲಿರುವುದಾದರೂ ಹೇಗೆ?

ಜಪಾನಿನ ಮಕ್ಕಳಿಗೆ ಬಾಲ್ಯದಿಂದಲೇ ಅವರು ಜಪಾನಿನ ಸೈನಿಕರೆಂದೂ, ದೇಶಸೇವೆಗಾಗಿ ತಮ್ಮ ಪ್ರಾಣವನ್ನೂ ಅರ್ಪಿಸುವುದೇ ಪ್ರಧಾನ ಕರ್ತವ್ಯವೆಂದೂ ಶಿಕ್ಷಣ ಕೊಡಲಾಗುತ್ತದೆ. ಭಾರತದಲ್ಲಿ ತಮ್ಮ ಮಕ್ಕಳಿಗೆ ದೇಶಭಕ್ತಿಯ ಶಿಕ್ಷಣವನ್ನು ಕೊಡುತ್ತಿರುವ, ಕೊಡಬಲ್ಲ ಎಷ್ಟು ಮಂದಿ ತಾಯಂದಿರಿರುವರು?

ಜಪಾನಿನ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಟ್ಟುನಿಟ್ಟಾದ ನಿಯಂತ್ರಣವಿದೆ. ಅಲ್ಲಿನ ಮಂತ್ರಿಮಂಡಲದ ಪತನವಾಗಲಿ, ಮಂತ್ರಿಗಳ ಕೊಲೆಯಾಗಲಿ, ಯಾವ ಪತ್ರಿಕೆಯಲ್ಲಿಯೂ ಟೀಕೆ ಟಿಪ್ಪಣಿಗಳು ಬರುವುದೇ ಇಲ್ಲ. ಶಾಲೆಗಳಲ್ಲಿ ಶಿಸ್ತಿನ ಪಾಲನೆ, ಸೈನಿಕ ಕವಾಯತ್‌ಗಳನ್ನು ಕಡ್ಡಾಯವಾಗಿ ಕಲಿಸುವರು. ವಿದ್ಯಾರ್ಥಿಗಳ ಜೀವನವು ಬಹುಸರಳ. ಮಾಡಬೇಕಾದ ಕೆಲಸವಾದರೋ ಕಠಿಣ. ಸ್ತ್ರೀಯರು ಆಕರ್ಷಕವಾದ ಬಣ್ಣಬಣ್ಣದ ವಸ್ತ್ರ ಭೂಷಣಗಳನ್ನು ಧರಿಸಲು ಅವಕಾಶವಿಲ್ಲ. ರೆಸ್ಟೋರೆಂಟುಗಳೂ ಮತ್ತು ಮನರಂಜನೆಯ ಗೃಹಗಳೂ ರಾತ್ರಿ ಹತ್ತು ಗಂಟೆಗೆ ಮುಚ್ಚಲ್ಪಡುವುವು. ನರ್ತಕಿಯರು ಮತ್ತು ವೇಶ್ಯೆಯರ ಮೇಲೆ ಸಹ ಪ್ರತಿಬಂಧಕವಿದೆ. ವಿದ್ಯಾರ್ಥಿಗಳು ರಜಾ ದಿನಗಳಲ್ಲಿ ವಿನಹ ಉಳಿದ ಕಾಲದಲ್ಲಿ ಸಿನಿಮಾ ಚಿತ್ರಗಳನ್ನು ನೋಡಲವಕಾಶವಿಲ್ಲ. ಈ ನಿಯಮವನ್ನು ಉಲ್ಲಂಘಿಸಿದವರಿಗೆ ಕ್ರೂರವಾದ ಶಿಕ್ಷೆಯಾಗುತ್ತದೆ.

ಆಧುನಿಕ ಜಪಾನಿನಲ್ಲಿ ನೈತಿಕ ಬಲ ಮತ್ತು ಪರಿಶುದ್ಧವಾದ ನಡೆ ನುಡಿಗಳಿಗೆ ಎಲ್ಲಕ್ಕಿಂತ ಹೆಚ್ಚು ಮಹತ್ವವನ್ನು ಕೊಡಲಾಗುತ್ತಿದೆ. ಯುವಕ ಯುವತಿಯರು ಒಟ್ಟಿಗೆ ಸಂಚರಿಸುವುದು ಅಪರಾಧವಲ್ಲದಿದ್ದರೂ, ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ಹೋಗುವುದಂತೂ ಅತ್ಯಂತ ನಿಷಿದ್ಧವಾಗಿದೆ. ಅನೇಕ ವೇಳೆ ವಿವಾಹಿತ ಸ್ತ್ರೀ ಪುರುಷರೂ ಸಹ ಈ ವಿಷಯದಲ್ಲಿ ಪೋಲೀಸಿನವರ ಆಗ್ರಹಕ್ಕೆ ತುತ್ತಾಗಬೇಕಾಗುವುದು. ಯಾವ ಅವಿವಾಹಿತ ಯುವಕ-ಯುವತಿಯರೇ ಆಗಲಿ, ಒಂದು ಕೋಣೆಯಲ್ಲಿ ಏಕಾಂತವಾಗಿ ಕುಳಿತುಕೊಳ್ಳಲಾಗದು, ಕುಳಿತರೂ ಸಹ, ಕಿಟಕಿ ಬಾಗಿಲುಗಳನ್ನು ತೆರೆದಿಟ್ಟರಬೇಕಾಗುವುದು. ಯಾವ ಯುವತಿಯೇ ಆಗಲಿ ಮತ್ತೊಬ್ಬ ಯುವಕನಿಗೆ ಒಂದು ಲಕೋಟೆಯಲ್ಲಿ ಚೀಟಿಯನ್ನಿಡಕೂಡದು. ಈ ವಿಧವಾದ ಅನೇಕ ನಿಯಮಗಳು "ರಾಷ್ಟ್ರೀಯ ನೈತಿಕ ಶಕ್ತಿ"ಯನ್ನು ವೃದ್ಧಿಪಡಿಸಲು ಆಚರಣೆಗೆ ತರಲ್ಪಟ್ಟಿವೆ.

ಇಂತಹ ಸೌಂದರ್ಯ ಪೂರ್ಣ ದೇಶದಲ್ಲಿನ ಅತ್ಯಂತ ಕೆಟ್ಟಿನ ಆಶ್ಚರ್ಯವೆಂದರೆ ಅಲ್ಲಿನ ಜನರ ನಿರಾಶಾಭಾವನೆ. ಎಲ್ಲರ ಮುಖದಲ್ಲಿಯೂ ಈ ಭಾವನೆಯು ಎದ್ದು ಕಾಣುತ್ತದೆ. ಆದರೂ ಜಪಾನಿನವರು ಬಹು ಪರಿಶ್ರಮ ಪಡತಕ್ಕವರು. ಕಾರ್ಯ ಕುಶಲರು ಮತ್ತು ಉತ್ತಮ ದರ್ಜೆಯ ಕೆಲಸಗಾರರು. ಇದಕ್ಕೆ ಮುಖ್ಯ ಕಾರಣ, ಅಲ್ಲಿನ ಯಾಂತ್ರಿಕಜೀವನ. ವೈಯಕ್ತಿಕ ರೂಪದಲ್ಲಿ ಅವರು ವಿಶೇಷ ಬುದ್ಧಿವಂತರೇನಲ್ಲ. ಆದರೆ ಸಾಮೂಹಿಕವಾಗಿ ಅವರು ವರ್ಣಿಸಲಾರದಷ್ಟು ಕೆಲಸಮಾಡಿ ತೋರಿಸಬಲ್ಲರು. ಜಪಾನಿನವರಿಗಿಂತ ಶಾಂತಿ ಪ್ರಿಯರಾದವರು ಬೇರೊಬ್ಬರಿಲ್ಲ; ಆದರೆ ಯುದ್ಧರಂಗದಲ್ಲಿ ಮಾತ್ರ ಇವರು ಬದಲಾವಣೆ ಹೊಂದುವರು. ಚೀಣದಲ್ಲಿ ಜಪಾನಿನವರು ನಡೆಸಿದ ಅತ್ಯಾಚಾರಗಳ ವರ್ಣನೆಯು ಎದೆಯೊಡೆಯುವಂತೆ ಮಾಡುತ್ತದೆ

ಇಷ್ಟೆಲ್ಲಾ ಇದ್ದರೂ, ಆಧುನಿಕ ಜಪಾನಿನಲ್ಲಿ ಅನೇಕ ಉಲ್ಲೇಖನೀಯವಾದ ಒಳ್ಳೆಯ ವಿಷಯಗಳಿವೆ. ಅಲ್ಲಿ ಸೇಕಡ 99 ಜನರು ಅಕ್ಷರಸ್ಥರು. ಅವರು ಅರ್ಧ ಶತಮಾನದೊಳಗೇ ಇಷ್ಟು ದೊಡ್ಡ ಸಫಲತೆಯನ್ನು ಪಡೆದಿದ್ದಾರೆ. ಅಲ್ಲಿ ಲೆಕ್ಕವಿಲ್ಲದಷ್ಟು ಶಿಶುರಕ್ಷಣಾಲಯಗಳೂ ಮತ್ತು ವಿಧವಾಶ್ರಮಗಳೂ ಇವೆ ಅಶಕ್ತರಿಗೆ ಅದರಲ್ಲೂ ವಿಧವೆಯರಿಗೆ ಸರಕಾರದಿಂದ ಸಹಾಯ ದೊರೆಯುತ್ತದೆ. ಟೋಕಿಯೋ ಮುನಿಸಿಪಾಲಿಟಿಯಲ್ಲಿ ಒಂದು ವಿವಾಹ ಕಾರ್ಯಾಲಯಸಹ ಇದ್ದು, ದೀನರೂ ದುಃಖಿಗಳೂ ಆದ ಬಾಲಕಿಯರ ವಿವಾಹ ವ್ಯವಸ್ಥೆಯು ಮಾಡಲ್ಪಡುತ್ತದೆ. ಅಲ್ಲಿ ದೈಹಿಕ ಉನ್ನತಿಯ ಕಡೆಗೆ ಬಹಳ ಗಮನ ಕೊಡುವರು. ಪ್ರತಿ ಪರಿವಾರದವರು ತಮ್ಮ ಮನೆಯ ಅಂಗಳದಲ್ಲಿ ಬೆಳಗಿನವೇಳೆ ಅಂಗಸಾಧನೆಯನ್ನು ಮಾಡುತ್ತಿರುವರು. ರಜಾ ದಿನಗಳಲ್ಲಿ ಸ್ತ್ರೀ ಪುರುಷರು ಸಾಮೂಹಿಕವಾಗಿ ಪಾರ್ಕುಗಳಲ್ಲಿ ವ್ಯಾಯಾಮ ಮಾಡುವರು.

ಜಪಾನಿನ ಇಂದಿನ ಸಮೃದ್ಧಿಗೆ ಅಲ್ಲಿನ ಯೋಜನೆಗಳೇ ಕಾರಣ.

ಕಿರುಕತೆ

ವಿಜಯ

ಶ್ರೀ. ಸುಬ್ರಹ್ಮಣ್ಯಂ, ದಾವಣಗೆರೆ

ಕವಿ ಕುಸುಮಾಕಾಂತನಿಗೆ ವಿವಾಹವಾಗಿ ಬಹಳ ದಿನಗಳಾಗಿರಲಿಲ್ಲ. ಆತನ ಪತ್ನಿಯು ಹಳ್ಳಿಯಿಂದ ಬಂದವಳು. ಅವಿದ್ಯಾವಂತೆ. ಆದರೆ ಬಹು ರೂಪವತಿ. ಕವಿಯು ಆಕೆಯಲ್ಲಿ-ಆಕೆಯ ರೂಪಿನಲ್ಲಿ-ಲೀನವಾಗಿ ಬಿಟ್ಟಿದ್ದನು. ಅವಳ ಅಜ್ಞಾನ, ಅವಿದ್ಯೆಗಳ ಕಡೆಗೆ ಗಮನವನ್ನು ಕೊಡುವಷ್ಟು ಸಹ ಅವನಿಗೆ ವಿರಾಮವಿರಲಿಲ್ಲ. ಸೌಂದರ್ಯದ ಅಲೆಗಳಲ್ಲಿ ಈಜಾಡುತ್ತ ಅವನೊಂದು ಕವಿತೆಯನ್ನು ಬರೆದಿದ್ದನು. ಅದನ್ನೇ ಅವನು ಆ ಊರಿನ ನಗರ ಸಭಾ ಮಂದಿರದಲ್ಲಿ ಓದಿದ್ದನು. ತೀರ್ಮಾನಕಾರರು ಮೆಚ್ಚಿ ಅದಕ್ಕೆ ಪ್ರಥಮ ಬಹುಮಾನವನ್ನು ಕೊಟ್ಟಿದ್ದರು.

ಕವಿಯು ಆನಂದದಿಂದ ಮನೆಗೆ ಬಂದು ತನಗೆ ಬಹುಮಾನವಾಗಿ ಬಂದಿದ್ದ ಬೆಳ್ಳಿಯ ಬಟ್ಟಲನ್ನು ಪತ್ನಿಯ ಮುಂದಿಟ್ಟನು. ಪತ್ನಿಗೆ ಬಹಳ ಆನಂದವಾಯಿತು

"ಎಲ್ಲಿಂದ ತಂದಿರಿ? ಬಹಳ ಚೆನ್ನಾಗಿದೆ" ಎಂದಳು.

ಕವಿಯ ಮುಖವು ಅಭಿಮಾನದಿಂದ ಅರಳಿತು-'ಗೆದ್ದು ತಂದಿದ್ದೇನೆ' ಎಂದು ಹೇಳಿದ.

ಪತ್ನಿಯು ಶೋಕ ಸಾಗರದಲ್ಲಿ ಮುಳುಗಿ ಹೋದಳು. ಅವಳು "ಹಾಗಾದರೆ ನೀವು ಎಂದಾದರೊಂದು ದಿನ ನನ್ನ ಆಭರಣವನ್ನು ಮುಳುಗಿಸಿ ಬಿಡುವಿರಿ" ಎಂದಳು.

'ಏಕೆ?' ಕವಿ ಕೇಳಿದ ಭಯದಿಂದ.

'ಏಕೆ? ಈ ದಿನ ಇದನ್ನು ಗೆದ್ದು ತಂದಿರುವಿರಿ, ನಾಳೆ ನನ್ನ ಆಭರಣವನ್ನು ಆಟಕ್ಕೆ ಇಟ್ಟು ಬಿಡುವಿರಿ. ಇಂದು ಗೆಲುವಾದರೆ ನಾಳೆ ಸೋಲು'.

'ಅಯ್ಯೋ ಹುಚ್ಚಿ, ಇದನ್ನು ನಾನು ಜೂಜಿನಲ್ಲಿ ಗೆದ್ದು ತರಲಿಲ್ಲ!'

'ಹಾಗಾದರೆ ಎಲ್ಲಿಂದ ತಂದಿರಿ ಗೆದ್ದು?' (ಕವಿತೆಯ ಅರ್ಥವು ಅವಳಿಗೆ ತಿಳಿಯಲಿಲ್ಲ.)

'ಕುಸ್ತಿಯಲ್ಲಿ ಗೆದ್ದು ತಂದಿದ್ದೇನೆ'.

'ಕುಸ್ತಿಯಲ್ಲಿ?' ಅವಳು ಪತಿಯ ತೆಳುವಾದ ತೋಳುಗಳನ್ನು ಮತ್ತು ಒಣಗಿ ದುರ್ಬಲವಾಗಿದ್ದ ಕಾಲುಗಳನ್ನು ನೋಡಿ, ಓಹೋ 'ನಿಮಗೆ ಕುಸ್ತಿಯಾಡುವುದೂ ಗೊತ್ತೋ?' ಎಂದಳು.

'ಹೌದು'.

ಪುನಃ ಪತ್ನಿಗೆ ಶೋಕವುಂಟಾಯಿತು.

'ಇದೇನು? ಪುನಃ ಏಕೆ ಚಿಂತಿಸುತ್ತಿರುವೆ?'

'ಆಗೋದೇನು? ನೀವು ನನ್ನನ್ನೂ ಒಂದಲ್ಲೊಂದು ದಿನ ಕಳೆದುಕೊಳ್ಳುವಿರಿ'.

'ಹೇಗೆ? ಕುಸ್ತಿಯಲ್ಲಿ ಒಡವೆ ಏನೂ ಹೋಗುವುದಿಲ್ಲವಲ್ಲ!'

'ಒಡವೆ ಇಲ್ಲದಿದ್ದರೆ ಸರಿ. ಕೈಕಾಲಂತೂ ಮುರಿದು ಹೋಗುವುವಲ್ಲವೇ!

'ಅಲ್ಲವೇ ಹುಚಿ! ನಾನು ಜೂಜು ಆಡುವನೂ ಅಲ್ಲ. ಕುಸ್ತಿಯಾಡುವವನೂ ಅಲ್ಲ. ಸುಮ್ಮನೆ ನಿನ್ನೊಡನೆ ಹಾಸ್ಯ ಮಾಡುತ್ತಿದ್ದೇನಷ್ಟೇ'.

'ಹಾಗಾದರೆ ಇದೆಲ್ಲಿ ತಂದಿರಿ?'

'ನಾನು ಬರೆದ ಹಾಡನ್ನು ಹಾಡಿ ಇದನ್ನು ಬಹುಮಾನವಾಗಿತಂದೆ'.

'ಹಾಡುವುದರಲ್ಲೇನೂ ತೊಂದರೆ ಇಲ್ಲ. ನಮ್ಮೂರಿನಲ್ಲಿ ಸಹ ಕೊಳಲನ್ನು ಊದುತ್ತಿರುತ್ತಾರೆ. ಹಬ್ಬಗಳಲ್ಲಿ ಕುಣಿಯುತ್ತಾರೆ'

ಪತಿಪತ್ನಿಯರು ಒಬ್ಬರನ್ನೊಬ್ಬರು ನೋಡುತ್ತ ಕುಳಿತರು.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ಕೃಷ್ಟ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿನ ಕಡೆಯಿಂದ ಭಾಗವಹಿಸುವದು ಪ್ರಶಸ್ತವೇ?

ಸದ್ಯದಲ್ಲಿಯೇ ಜಿಲ್ಲಾ ಬೋರ್ಡುಗಳ ಚುನಾವಣೆಯು ಆಗಲಿಕ್ಕಿದೆ. ಸದ್ರಿ ಚುನಾವಣೆಯಲ್ಲಿ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯುವರು ಕಾಂಗ್ರೆಸಿನ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಬೇಕೆಂತ ನಿರ್ಧರಿಸಲಿಕ್ಕೆ ಸಾಕೆಂತ ತಿಳಿದು ಬರುತ್ತದೆ. ಆಂಧ್ರ ಮತ್ತು ತಮಿಳು ನಾಡು ಕಾಂಗ್ರೆಸ್ ಕಮಿಟಿಯುವರು ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸಿನ ಕಡೆಯಿಂದ ಭಾಗವಹಿಸಬೇಕೆಂತ ಇತ್ತಲಾಗಿ ನಿಶ್ಚಯಮಾಡಿರುತ್ತಾರೆ. ಬೇರೆ ಕಡೆಗಳಲ್ಲಿ ಹ್ಯಾಗೂ ಯಿರಲಿ. ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸಿನ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸುವುದರ ಆಯುಕ್ತತೆಯ ವಿಷಯವನ್ನು ಜಿಲ್ಲಾ ಕಾಂಗ್ರೆಸ್ಸು ಕಮಿಟಿಯ ಸದಸ್ಯರು ಸ್ವಲ್ಪ ವಿಚಾರ ಮಾಡುವದು ಆಗತ್ಯವಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸರ್ವ ಸಾಧಾರಣವಾಗಿ ಎಲ್ಲರೂ ಕಾಂಗ್ರೆಸ್ಸಿಗೆ ಸೇರಿದವರು ಅಥವಾ ಅದರ ಸಹಾನುಭೂತಿಗಳು. ಕಾಂಗ್ರೆಸ್ಸಿನ ವಿನಹಾ ಬೇರೆ ಪ್ರಬಲ ಪಕ್ಷಗಳೇ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಯಿಲ್ಲ. ಕಳೆದ ಮದರಾಸ್ ನ್ಯಾಯವಿಧಾಯಕ ಸಭೆಗೆ ಕಾಂಗ್ರೆಸಿನ ಕಡೆಯಿಂದನಿಂತ ಎಲ್ಲ ಉಮೇದ್ವಾರರೂ ಪ್ರತಿ ಸ್ಪರ್ಧೆಯಿಲ್ಲದೆ ಆರಿಸಿ ಬಂದಿರುವುದು ಇದಕ್ಕೊಂದು ನಿದರ್ಶನವಾಗಿಯದೆ. ದ. ಕ. ಜಿಲ್ಲೆಯಲ್ಲಿ ಸರ್ವ ಸಾಮಾನ್ಯವಾಗಿ ಎಲ್ಲರೂ ಕಾಂಗ್ರೆಸ್ಸಿನವರೇ ಆಗಿರುವುದರಿಂದ ಕಾಂಗ್ರೆಸಿನ ಕಡೆಯಿಂದ ಜಿಲ್ಲಾ ಬೋರ್ಡಿಗೆ ಉಮೇದ್ವಾರರನ್ನು ನಿಲ್ಲಿಸುವುದು ಯುಕ್ತವಲ್ಲ. ಉಮೇದ್ವಾರರ ಯೋಗ್ಯತಾ ಯೋಗ್ಯತೆಯನ್ನು ನಿಶ್ಚಯಿಸಲು ಜಿಲ್ಲಾ ಕಾಂಗ್ರೆಸ್ಸು ಕಮಿಟಿಯ ಸದಸ್ಯರು ಪ್ರಾಪ್ತರಲ್ಲ. ಈ ಸಂಗ್ತಿಯನ್ನು ನಿರ್ಣಯ ಮಾಡಲಿಕ್ಕೆ ಮತದಾರರಿಗೆ ಬಿಡುವದೇ ಉತ್ತಮ. ಜಿಲ್ಲಾ ಕಾಂಗ್ರೆಸ್ಸು ಕಮಿಟಿಯ ಪತಿಯಿಂದ ಜಿಲ್ಲಾ ಬೋರ್ಡಿಗೆ ಉಮೇದ್ವಾರರನ್ನು ನಿಲ್ಲಿಸಿ ಮತದಾರರ ಕೈಗಳನ್ನು ಕಟ್ಟಿ ಹಾಕುವದು ಯುಕ್ತವಲ್ಲ.

ಹಿಂದೆ ಆಗಿದ್ದ ಜಿಲ್ಲಾ ಬೋರ್ಡಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಕಡೆಯಿಂದ ಭಾಗವಹಿಸಿ ಕಾಂಗ್ರೆಸ್ಸಿನ ಯಶಸ್ಸನ್ನು ವ ಶಿಸ್ತನ್ನು ಕಾಂಗ್ರೆಸ್ಸಿನ ಕಡೆಯಿಂದ ಆರಿಸಿ ಬಂದ ಉಮೇದ್ವಾರರು ಎಷ್ಟರಮಟ್ಟಿಗೆ ಪಾಲಿಸಿದ್ದಾರೆ ಎಂಬುದನ್ನು ಸ್ವಲ್ಪ ಆಲೋಚನೆ ಮಾಡುವದು ಆಗತ್ಯ. ಕಾಂಗ್ರೆಸ್ಸಿನ ಟಿಕೇಟಿನಿಂದ ಜಿಲ್ಲಾ ಬೋರ್ಡಿನ ಒಳಗೆ ಹೊಕ್ಕು ಮುಸ್ಲಿಮ್ ಲೀಗಿಗೆ ಸೇರಿ ಟೊಪ್ಪಿ ತಿರುಗಿಸಿದವರು ಕೆಲವರು ಯಿದ್ದಾರೆ. ಕಾಂಗ್ರೆಸ್ಸಿನ ಶಿಸ್ತು ವ ನಿಯಮ ಪ್ರಕಾರ ಎಷ್ಟುಮಂದಿ ಜಿಲ್ಲಾ ಬೋರ್ಡಿನ ಸದಸ್ಯರು ಖಾದಿ ಉಟ್ಟಿದ್ದಾರೆ ವ ಉಡುತ್ತಾರೆ? 1942ನೇ ಯಿಸವಿಯ ಚಳವಳವಲ್ಲಿ ಕಾಂಗ್ರೆಸ್ಸಿನ ಮುಖಂಡರು ಜಿಲ್ಲಾ ಬೋರ್ಡಿನ ತಂಮ್ಮತಂಮ್ಮ ಮೆಂಬರಿಕೆಗಳಿಗೆ ರಾಜಿನಾಮೆ ಕೊಡಬೇಕೆಂದು ಆಗ್ರಹ ಪೂರ್ವಕವಾಗಿ ಕೇಳಿಕೊಂಡಾಗ ಎಷ್ಟುಮಂದಿ ರಾಜಿಕೊಡದೆ ತಮ್ಮ ಸ್ಥಾನಗಳಿಗೆ ಜಿಗಣೆಗಳಂತೆ ಕಚ್ಚಿಕೊಂಡು ಈಗಲೂ ಯಿದ್ದಾರಷ್ಟೆ! 1412ನೇ ಯಿಸವಿಯ ವೈಯುಕ್ತಿಕ ಸತ್ಯಾಗ್ರಹದ ಚಳವಳದಲ್ಲಿ ಜಿಲ್ಲಾ ಬೋರ್ಡು ಸದಸ್ಯರೆಲ್ಲರೂ ಸದ್ರಿ ಚಳವಳದಲ್ಲಿ ಭಾಗವಹಿಸಬೇಕೆಂದು ಮಹಾತ್ಮಾ ಗಾಂಧಿಯವರೂ ಅಖಿಲಭಾರತ ಕಾಂಗ್ರೆಸೂ ಕೇಳಿಕೊಂಡಾಗ ಎಷ್ಟುಮಂದಿ ಸದಸ್ಯರು ಹಾಗೆ ಭಾಗವಹಿಸಿದ್ದಾರೆ? ಈ ವಿಚಾರಗಳನ್ನೆಲ್ಲಾ ಕಾಂಗ್ರೆಸ್ಸು ಕಮಿಟಿಯ ಸದಸ್ಯರು ಆಲೋಚನೆಮಾಡಿ ಸದ್ರಿ ಮಹತ್ವದ ಸಂಗತಿಯ ಕುರಿತು ನಿರ್ಣಯಿಸಬೇಕಾಗಿಯದೆ.

ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸದೆಯಿದ್ದ ಪಕ್ಷದಲ್ಲಿ ಕೆಲವರು ಆಯೋಗ್ಯರು ಮತ್ತು ಬೇಡವಾದವರು ಜಿಲ್ಲಾ ಬೋರ್ಡಿಗೆ ಪ್ರತಿನಿಧಿಗಳಾಗಿ ಆರಿಸಿಬರುವ ಸಂಭವ ಉಂಟೆಂತ ಕೆಲವರು ಆಕ್ಷೇಪಣೆ ಮಾಡಬಹುದು. ಈ ಆಕ್ಷೇಪಣೆಯನ್ನು ನಿವಾರಣೆ ಮಾಡುವಬಗ್ಗೆ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ದ. ಕ. ಜಿಲ್ಲೆಯ ಕಾಂಗ್ರೆಸ್ಸು ಸದಸ್ಯರು ಮತ್ತು ಕೆಲವು ಮುಖಂಡರು ಕೂಡಿ ಒಂದು ಸಮಿತಿಯನ್ನು ಮಾಡಿಕೊಂಡು ಆ ಸಮಿತಿಯವರು ಜಿಲ್ಲಾ ಬೋರ್ಡು ಚುನಾವಣೆಗೆ ಸ್ಥಳೀಕ ಕಾಂಗ್ರೆಸು ಸಂಸ್ಥೆಗಳಕೂಡೆ ಆಲೋಚನೆ ಮಾಡಿಕೊಂಡು ಯೋಗ್ಯ ಸದಸ್ಯರನ್ನು ಉಮೇದ್ವಾರರನ್ನಾಗಿ ನಿಲ್ಲಿಸಿ ಅವರೀಗೆ ತಮ್ಮ ನೈತಿಕ ಬೆಂಬಲವನ್ನು ಕೊಡಬಹುದು. ಅನಂತರ ಮತದಾರರೇ ಯೋಗ್ಯತಾ ಯೋಗ್ಯತೆಯನ್ನು ನಿರ್ಣಯಿಸಿ ತಮಗೆ ಬೇಕಾದ ಉಮೇದ್ವಾರನ್ನು ಆರಿಸಲಿ. ಹೀಗೆಮಾಡಿದರೆ ಕಾಂಗ್ರೆಸ್ಸಿನ ಯಶಸ್ಸಿಗೆ ವ ಹೆಸರಿಗೆ ಯೇನೂ ಕುಂದುಕೊರತೆ ಬರುವ ಸಂಭವವಿಲ್ಲ.

—ಎಂ. ಎಸ್. ಅಧಿಕಾರಿ.

ಇದು ನ್ಯಾಯವಲ್ಲವೆ?

ಈ ಬಾರಿಯ ಜಿಲ್ಲಾ ಕಾಂಗ್ರೆಸ್ ಕಮಿಟಿ ಚುನಾವಣೆಯಲ್ಲಿ ಕಾರ್ಕಳ ಸರ್ಕಲಿನಿಂದ ಉಮೇದ್ವಾರಿಯಾಗಿದ್ದ ತನ್ನ ನಾಮಪತ್ರವನ್ನು ಕುಯುಕ್ತಿಯಿಂದ ಹಿಂತೆಗೆಯಿಸಿದರೆಂಬ ಶ್ರೀ ಅಧಿಕಾರಿಗಳ ಹೇಳಿಕೆಯ ಭಾಗವನ್ನು ಭಿನ್ನ ವಿಷಯವೆಂಬುದರಿಂದ ಇಲ್ಲಿ ಬಿಡಲಾಗಿದೆ. 'ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸುವದು ಅನಗತ್ಯ'ವೆಂಬಶ್ರೀಯುತರ ಅಭಿಪ್ರಾಯವು ಜಿಲ್ಲೆಯ ಜನಮತವೆಂಬಂತೆ ಕಾಣುತ್ತದೆ. ಈ ಕುರಿತು ಬೇರೆ ಬಾತ್ಮಿಗಳೂ ಬಂದಿವೆ. ದ. ಕ. ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ಭಾಗವಹಿಸಲಾರಂಭಿಸಿದಂದಿನಿಂದ ಇದುವರೆಗೂ ಕಾಂಗ್ರೆಸ್ ಶಿಸ್ತಿಗೆ, ತತ್ವಕ್ಕೆ, ಘನತೆಗೆ ಕುಂದನ್ನೊಡ್ಡದ ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷವೊಂದನ್ನು ಕಾಣುವ ಸುಯೋಗವೇ ಜನತೆಗೊದಗಲಿಲ್ಲ! ಆದ್ದರಿಂದ ಶ್ರೀ. ಅಧಿಕಾರಿಗಳ ವಾದಸರಣಿಯು ನಿಜಕ್ಕೂ 'ಧಾಳಿ ಸೂಚಕ ಎಚ್ಚರಿಕೆ'ಯಂತೆ ಧ್ವನಿಸುತ್ತಿದೆ. ದ. ಕ. ಕಾಂಗ್ರೆಸ್ ಈ ಮೊದಲಿನ ಜಿಲ್ಲಾ ಬೋರ್ಡು ಚುನಾವಣೆಗಳಿಂದ ನಿರ್ಮಿಸಿದ್ದ ಸಾಮೂಹಿಕ ಅತೃಪ್ತಿಯನ್ನೂ, ಆ ಮೇಲಿನ ಜಿಲ್ಲಾ ಬೋರ್ಡಿನಲ್ಲಿ ಸಾಧಿಸಿರುವ ಕಾಂಗ್ರೆಸ್ ಕಾರ್ಯಕ್ರಮಗಳನ್ನೂ ತೂಗಿ ನೋಡಿದಲ್ಲಿ, ಆಯಕ್ಕಿಂತ ಮುಮ್ಮಡಿ ವ್ಯಯವಿರುವ ದುರ್ವ್ಯಾಪಾರವಿದು ಎಂಬುದುಮುಂದಟ್ಟಾಗದಿರದು. ಈಗಂತೂ ನಾವು ಕಾಂಗ್ರೆಸ್ ಆಳ್ವಿಕೆಯಲ್ಲಿದ್ದೇವೆ. ಜನಹಿತ ಕಾರ್ಯಗಳನ್ನು ಸಾಗಿಸಲು ಸರಕಾರವು ನಿರ್ಮಿಸುತ್ತಿರುವ ಯಾವುದೇ ಸಮಿತಿಗಳಲ್ಲಾದರೂ ಸಮರ್ಥರು ಮತ್ತು ಯೋಗ್ಯರಿರಬೇಕೆಂದಲ್ಲದೆ ಕಾಂಗ್ರೆಸಿಗರೇ ಇರಬೇಕೆಂಬ ಶರ್ತವಿಲ್ಲ. ಜಿಲ್ಲಾ ಬೋರ್ಡು ಅಂತಹ ಒಂದು ಅಧಿಕೃತ ಸಂಸ್ಥೆ. ಪ್ರಾಂತಿಕ ಸರಕಾರವೇ ಕಾಂಗ್ರೆಸ್ ಆಗಿರುವಾಗ, ಅದರ ಆಜ್ಞಾನುವರ್ತಿಯಾಗಿರುವ ಜಿಲ್ಲಾ ಬೋರ್ಡಿನಂತಹ ಶಾಖೆಯೊಳಗೆ ಯಾರೇ ಪ್ರವೇಶಿಸಿದರೂ ಅವರು ಕಾಂಗ್ರೆಸಿಗರೇ ಆಗುವರು; ಯಾಕೆಂದರೆ ಅಲ್ಲಿ ಕಾಂಗ್ರೆಸ್ ಸರಕಾರ ಹಾಕಿಕೊಟ್ಟ ಮೂದರಿಯ ಕಾರ್ಯಕ್ರಮಗಳನ್ನೇ ನಡೆಸಬೇಕಾಗಿದೆ. ಅಂದ ಮೇಲೆ ಅದರ ಒಳಗಡೆಯಲ್ಲೂ 'ಕಾಂಗ್ರೆಸ್' ಎಂಬ ಪ್ರತ್ಯೇಕ ಪಕ್ಷವೊಂದನ್ನು ನಿರ್ಮಿಸುವದು ಅನಗತ್ಯವಲ್ಲವೆ? ಅಧಿಕ ಪ್ರಸಂಗವನ್ನಿಸುವದಿಲ್ಲವೆ? ಆದ್ದರಿಂದ ಶ್ರೀ. ಅಧಿಕಾರಿಗಳ ವಾದದಂತೆ ಸಮರ್ಥರು, ಮತ್ತು ಯೋಗ್ಯರನ್ನೇ ಆರಿಸುವ ಪೂರ್ಣ ಸ್ವಾತಂತ್ರ್ಯವನ್ನು ಮತದಾರರಿಗೀಯುವದೇ ಲೇಸು. ಕಾಂಗ್ರೆಸ್ ಮಾಡಬೇಕಾದ ಕರ್ತವ್ಯವೆಂದರೆ ಎಲ್ಲರೂ ಮತದಾನದ ಘನತೆಯನ್ನರಿಯುವಂತೆ ಸರಿಯಾಗಿ ಪ್ರಚಾರ ನಡೆಸುವದೊಂದೇ. ಈ ಮೊದಲು ಕಾಂಗ್ರೆಸ್ ಟಿಕೇಟನಿಂದ ಕೋರಿ ಪಕ್ಷದ್ರೋಹ ಸಾಧಿಸಿದವರ 'ಕಪ್ಪು ಪಟ್ಟಿ'ಯೊಂದನ್ನು ಜನತೆಯ ಅವಗಾಹನೆಗಾಗಿ ಪ್ರಕಟಿಸಿ ಅವರು ಅಥವಾ ಅವರಂಥವರು ಗದ್ದುಬಾರದಂತೆ ನೋಡಬಹುದು; ನಿಜವಾದ ಜನಹಿತ ಸಾಧಕರಿಗೆ ಬೆಂಬಲಕೊಡಬಹುದು. ಹೀಗಾದಲ್ಲಿ ಒಂದೇ ಸಮಾಜವು ಜಿಲ್ಲಾ ಬೋರ್ಡನ್ನಾಕ್ರಮಿಸಿಕೊಳ್ಳುವಂತಾಗುವದೆಂದು ಕೆಲವರಲ್ಲಿರುವ ಭೀತಿಯನ್ನು ಅಡಗಿಸಿಟ್ಟುಕೊಳ್ಳುವ ಆಗತ್ಯವಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮದ್ರಾಸ್ ಸರಕಾರವು ಪುನಃ ಹಿಂದೆ ಹಾಕಿದಂತಿದೆ. ಆದ್ದರಿಂದ ಇನ್ನೂ ಅವಧಿಯಿದೆ. ತಮ್ಮ ಸಮಾಜಕ್ಕೆ ಸರಿಯಾದ ಪ್ರಾತಿನಿಧ್ಯ ದೊರೆಯಲಾರದೆಂಬ ಶಂಕಾಭೀತಿಯಿರುವವರು ಅದನ್ನು ಸರಕಾರದ ಅವಗಾಹನೆಗೆ ತಂದು, ಬೇಕಾದ ತಿದ್ದುಪಡಿ ಮಾಡಿಸಿ, ನ್ಯಾಯ ಪೊಂದಲು ಸಾಧ್ಯವಿದೆ. ಇಲ್ಲವೇ ಈ ಮಟ್ಟಿಗೆ ಕಾಂಗ್ರೆಸ್ ಪ್ರಮುಖರು ಪಂಚಾಯತದಾರರಂತೆ ವರ್ತಿಸಿ ನ್ಯಾಯ ಸಾಧಿಸಬಹುದು. ಜಿಲ್ಲಾ ಕಾಂಗ್ರೆಸ್ ಸಮಿತಿಯು ಜಿ. ಬೋರ್ಡು ಚುನಾವಣೆಯಲ್ಲಿ ಪ್ರತ್ಯಕ್ಷ ಭಾಗವಹಿಸಬಾರದೆಂದು ನಿರ್ಧರಿಸಿತೆಂದು ಈಗ ತಾನೇ ತಿಳಿದುಬಂದುದರಿಂದ ಅದನ್ನಭಿನಂದಿಸುತ್ತೇನೆ.

—ಸಂ. ನ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಗುಣಪಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವದಿಲ್ಲ [illegible] ಜಮೇರಿಯನ್ ಜೀವನ ಮಿಕ್ಶ್ಚರ್ [illegible]

ಎ.ಟಿ. ಜಮೇರಿಯನ ಮತ್ತು ಕಂ. [illegible] ಮುಂಬಾಯಿ

For prompt and efficient Banking Service

Bank with

THE VIJAYA BANK LIMITED.

Head Office:—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ESTD. 1926

CROWN RUBBER STAMP Co.

MFRS OF RUBBER STAMPS & ENGRAVERS

BALMATTA ROAD . MANGALORE S.K.

Approved firm by the Gov. of Mysore

Certified by the Agent of the Govt. of Cylone Ind an.

The Canara Banking Corporation Limited.
(Incorporated in British India, with limited Liability)
Estd 1906
Head Office: **UDIPI**, South Kanara
CAPITAL
Authorised ... ... Rs 25,00,000
Issued & Subscribed ... „ 16,00,000
Paid up ... ... „ 15,64,715
Reserves Over ... ... „ 13 Lakhs
Branches at- Bombay, Madras, Bangalore, Coimbatore, Selem, Calicut, Hubli, Mysore, Cochin, Manglore, Madras etc., etc
Banking Business of Every Description Transacted.

ಉಡುಪಿ, ಗುರುವಾರ, ೨೯-೮-'೪೬

ಪುಂಡಾಟವೆ?

ಅಖಿಲ ಭಾರತವೇ ಎರಡು ರೀತಿಯಿಂದ—ಸಂತೋಷ ಮತ್ತು ದುಃಖದಿಂದ—ರೋಮಾಂಚಗೊಳ್ಳುವಂತೆ ಮಾಡಿದ ಎರಡು ಪ್ರಾಮುಖ್ಯ ಘಟನೆಗಳು ಕಳೆದವಾರ ನಡೆದು ಹೋದುವು. ಒಂದನೆಯದು ತಾತ್ಕಾಲಿಕ ರಾಷ್ಟ್ರೀಯ ಸರಕಾರದ ರಚನೆ; ಎರಡನೆಯದು ಕಲ್ಕತ್ತೆಯ ನರಮೇಧ. ಮೊದಲನೆಯದಕ್ಕೆ ಅಪ್ರತ್ಯಕ್ಷವಾಗಿ, ಎರಡನೆಯದಕ್ಕೆ ಪ್ರತ್ಯಕ್ಷವಾಗಿ ಮುಸ್ಲಿಂ ಲೀಗೇ ಕಾರಣ. ಮೊದಲನೆಯ ಸಂತೋಷಪ್ರದ ಘಟನೆಯು ಲೀಗ್ ಮುಸಲ್ಮಾನರ ಅಪೇಕ್ಷೆಗೆ ವಿರುದ್ಧವಾಗಿ, ಆದರೆ ಅವರ ಅಜ್ಞಾನ ಮತ್ತು ಅಹಂಕಾರವೇ ಹೇತುವಾಗಿ ಸಂಘಟಿಸಿತು. ಎರಡನೆಯ ದುಃಖದಾಯಕ ಪ್ರಸಂಗವು ಲೀಗ್ ಮುಸಲ್ಮಾನರ ಅಪೇಕ್ಷೆ, ಅಜ್ಞಾನ ಮತ್ತು ಅಹಂಕಾರಗಳಿಂದಾಗಿಯೇ ನಡೆದುಹೋಯಿತು. ಒಂದು ಅಖಿಲ ರಾಷ್ಟ್ರದ ಊರುಗೋಲಿನಂತಿದ್ದರೆ ಮತ್ತೊಂದು ಅದರ ತಲೆಯ ಮೇಲೆ ಕುಣಿವ ಲಾಠಿಯಂತಿದೆ. ಇವೆರಡೂ ವಿಶೇಷವಾಗಿ ಬೀಸಿದವನ ನೊಸಲಿಗೇ ನಾಟಿವೆ—ಕಾರಣಭೂತ ಮುಸ್ಲಿಂಲೀಗಿಗೇ ಪಾಠಕಲಿಸಿವೆ! ಆದ್ದರಿಂದ [illegible] ಭರತ— ಇಳಿತವೇ ಇದರ ಒಪ್ಪಿತವು ಆಗಿಹೋದುದು ಭವಿಷ್ಯದೃಷ್ಟಿಯಿಂದ ಹಿತಕರವೆನ್ನುತ್ತೇವೆ.

ಮೊದಲನೆಯದಾಗಿ ನಡುಗಾಲ ರಾಷ್ಟ್ರೀಯ ಸರಕಾರದ ಸ್ಥಾಪನೆಯ ಕಡೆಗೆ ನೋಡೋಣ. ಕಾಂಗ್ರೆಸಿನ ದೀರ್ಘಾವಧಿಯ ಬಯಕೆ ಈ ಮೂಲಕ ಫಲಿಸಿದೆ; 1942ರಲ್ಲಿ ಹೋರಾಟದ್ದ ಕಾಂಗ್ರೆಸು ಪ್ರತ್ಯಕ್ಷ ಹೋರಾಟ, ವಾದರಂಗಗಳೆಂಬ ಗುಡ್ಡ ಬಯಲುಗಳನ್ನು ಹತ್ತಿ ಇಳಿದು ಈಗ ಶಿಖರ ಗುರಿ ಮುಟ್ಟಿದಂತಾಗಿದೆ. ನೆಹರು, ಪಟೇಲ್, ಪ್ರಸಾದ್, ರಾಜಾಜಿಯವರಂತಹ ಅಗ್ರಗಣ್ಯ ನಾಯಕರ ತಲೆಗೆ ರಾಷ್ಟ್ರೀಯ ಮಂತ್ರಿಗಳ ಕಿರೀಟವೇರುವ ದಿನವು ನಿಜಕ್ಕೂ ಭಾರತೀಯರ ಪಾಲಿಗೊಂದು ಹಬ್ಬ. ಮುಸಲ್ಮಾನರು ಈ ಆನಂದದಲ್ಲಿ ಭಾಗಿಗಳಲ್ಲವೆ? ಮುಸ್ಲಿಂ ಲೀಗನ್ನು ಕಡೆಗಣಿಸಿದರೆಂಬ ಕಾರಣದಿಂದ ಲೀಗ್ ಮುಸಲ್ಮಾನರು ಮಾತ್ರ ಈ ಸಂತೋಷವನ್ನೀಗ ಅನುಭವಿಸುತ್ತಿಲ್ಲ. ಆದರೆ ಇದಕ್ಕೆ ಮುಸ್ಲಿಂ ಲೀಗೇ ಹೊಣೆ—ಅದರ ಕೈಯ್ಯ ವೈಲವೇ ಕಣ್ಣಿಗೆ ತಾಗಿದೆ—ಹೊರತು ಆ ದೃಷ್ಟಿಯನ್ನು ಕಿವಿಯಲಿಕ್ಕಾರೂ ಹೋಗಿಲ್ಲ. 14 ಮಂದಿಯುಳ್ಳ ರಾಷ್ಟ್ರೀಯ ಸರಕಾರ ಸ್ಥಾಪಿಸುವದಕ್ಕೂ, ಅದರಲ್ಲಿ 5 ಸ್ಥಾನಗಳು ಲೀಗಿಗಿರಬೇಕೆಂಬುದಕ್ಕೂ ಹಿಂದಿನ ಬಾರಿ ಮುಸ್ಲಿಂಲೀಗೇ ಒಪ್ಪಿದ್ದಿತು. ಇಂದಾದರೂ ಆ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಆಗೋಸ್ತು 21ರಲ್ಲಿ ನಡುಗಾಲ ಸರಕಾರದ ಸದಸ್ಯರ ಹೆಸರು ಪ್ರಕಟವಾಗಿದ್ದರೂ, ಲೀಗ್ ಅದರಲ್ಲಿ ಸಹಭಾಗಿಯಾಗುವದಾದರೆ ಪುನರ್ರಚಿಸಿಕೊಳ್ಳಬೇಕೆಂಬುದಕ್ಕಾಗಿಯೇ ಸೆಪ್ಟೆಂಬರ್ ತಾ 2ರ ತನಕ ಕಾದು ನಿಲ್ಲಬೇಕೆಂದಾಗಿದೆ. ಲೀಗನ್ನು ಕೂಡಿಕೊಂಡೇ ಸರಕಾರೀ ರಥಕ್ಕೇರಬೇಕೆಂಬ ಕಾಂಗ್ರೆಸ್ ಬಯಕೆಯು ವೈಸರಾಯರಿಗೂ ಮಾನ್ಯವಿದೆ. ಮತ್ತು ಈ ಸರಕಾರದಲ್ಲಿ ಲೀಗ್ ಪ್ರವೇಶದ ದ್ವಾರವು ಎಂದೆಂದಿಗೂ ತೆರೆದೇ ಇರುವದೆಂಬ ನೆಹರುಗಳ ಮಾತನ್ನು ವೈಸರಾಯರೂ ಪುನರುಚ್ಚರಿಸಿದ್ದಾರೆ ಮಾತ್ರವಲ್ಲ; ತಾತ್ಕಾಲಿಕ ಸರಕಾರ ಮತ್ತು ಘಟನಾ ಸಮಿತಿಯ ವಿಧಾನಗಳಲ್ಲಿ ಮಿ. ಜಿನ್ನರಿಗಿರುವ ಸಂದೇಹಗಳೆಲ್ಲಾ ನಿವಾರಣೆಯಾಗುವ ಸ್ಪಷ್ಟ ಆಶ್ವಾಸನೆಗಳು ಕಾಂಗ್ರೆಸ್ ಮತ್ತು ವೈಸರಾಯರಿಂದ ಬಂದಿವೆ. ವೈಸರಾಯರು ಈ ಬಾರಿ ಮುಸ್ಲಿಂಲೀಗಿಗೆ ಕೊಟ್ಟಿರುವ ಒಂದು ಪ್ರಾಮುಖ್ಯ ಆಶ್ವಾಸನೆಯು ಎಲ್ಲರ ಲಕ್ಷ್ಯದಲ್ಲೂ ಇರತಕ್ಕಂತಹದು. ಹದಿನಾಲ್ಕು ಮಂದಿ ತಾತ್ಕಾಲಿಕ ಸರಕಾರದಲ್ಲಿ ಲೀಗ್ ಸದಸ್ಯರಿಗೆ ಸ್ಥಾನವಿರುವದು 5 ಮಾತ್ರ. ನ್ಯಾಯಪ್ರಕಾರ ಬಹುಮತದ ನಿರ್ಧಾರವೇ ಮಾನ್ಯವೆಂದಾದಲ್ಲಿ ಪ್ರಾಮುಖ್ಯ ವಿಷಯಗಳ ತೀರ್ಮಾನವಾಗುವಾಗ ಅಲ್ಲಿ ಲೀಗಿನ ಅಭಿಪ್ರಾಯಕ್ಕೆ ಬೆಲೆ ಬರುವಂತಿಲ್ಲವೆಂದು ಲೀಗ್ ಹೆದರಬೇಕಾಗಿಲ್ಲ. ಪ್ರತಿಯೊಂದು ಮುಖ್ಯ ವಿಷಯಗಳ ತೀರ್ಮಾನದಲ್ಲೂ ಎರಡೂ ಪಕ್ಷಗಳ (ಕಾಂಗ್ರೆಸ್ ಮತ್ತು ಲೀಗ್) ಸದಸ್ಯರ ಸಮ್ಮತಿಯಿರಬೇಕಾದುದು ಅಗತ್ಯ. ತಾತ್ಕಾಲಿಕ ಸರಕಾರದ ಕಾರ್ಯನಿರ್ವಹಣೆ ಅದರ ಅಸ್ತಿತ್ವವೂ ಇವೆರಡು ಪಕ್ಷಗಳ ಸಮಾನ ಸಂತೃಪ್ತಿಯನ್ನಾಧರಿಸಿದೆ ಹೊರತು ಬಹುಮತವನ್ನಾಧರಿಸಿಲ್ಲ.' ಇದು ನಿಜಕ್ಕೂ ಅನ್ಯಾಯ ಮತ್ತು ಅವ್ಯವಹಾರ್ಯ ರಿಯಾಯತಿ. ಕಳೆದಬಾರಿ ಕಾಂಗ್ರೆಸ್ ಈ ನಿರ್ಬಂಧವನ್ನು ವಿರೋಧಿಸಿದ್ದಿತು. ಆದರೂ ಲೀಗಿನ ಮುಖ್ಯರ ಮನೋವೃತ್ತಿಯನ್ನು ನಿವಾರಿಸಬೇಕೆಂಬುದಕ್ಕಾಗಿ ಈ ಬಾರಿ ಇಂತಹ ಲಂಚಕೊಡುವದಕ್ಕೂ ಅದು ಸಮ್ಮತಿಸಿದೆ. ಲೀಗ್ ಪುಢಾರಿಗಳ ಮೆದುಳಲ್ಲಿ ಕಣಾಂಶ ವೃದು ಭಾಗವಾದರೂ ಇದ್ದಲ್ಲಿ ಅವರೀ ರಿಯಾಯತಿಯನ್ನು ತಾವು ಸಂಪಾದಿಸಿದ ವಿಜಯವೆಂದು ಕಟ್ಟಿಕೊಳ್ಳಬಹುದು. ಮಿ. ಜಿನ್ನರ ಆಕ್ಷೇಪಗಳ ಪೈಕಿ ಇನ್ನೂ ಉಳಿದಿರುವದೆಂದರೆ ಕಾಂಗ್ರೆಸಿನ ಸ್ಥಾನಗಳಿಗಾದರೂ ರಾಷ್ಟ್ರೀಯ ಮುಸಲ್ಮಾನರನ್ನು ನೇಮಿಸಿಕೊಳ್ಳ ಕೂಡದೆಂಬುದೊಂದೇ. ಇದು ಕಾಂಗ್ರೆಸಿನ್ನ ತಲೆಗಿಡುವ ಟೋಪಿಯೂ ತಾನು ಹೇಳಿದ್ದೇ ಆಗಿರಬೇಕೆಂಬಂತಹ ಹೇಯ ಹಠ! ಅತಿರೇಕ ಸಲುಗೆಯಿಂದ ಹಾಳಾದ ತುಂಟ ಮಗುವಿನ ಮನೋವೃತ್ತಿ! ಇದೊಂದಂಶವನ್ನು ಬಿಟ್ಟರೆ ಮತ್ತೆ ಲೀಗಿಗೆ ಆಕ್ಷೇಪಕರವಾಗುವಂತಹದಾವುದೂ ಈ ತಾತ್ಕಾಲಿಕ ಸರಕಾರದಲ್ಲಿಲ್ಲ. ಅಭಿಮಾನ, ಹೆಗ್ಗಳಿಕೆಯ ಪ್ರಶ್ನೆಯೇನೋ ಇದೆ. ತನ್ನನ್ನಾಮಂತ್ರಿಸದೇನೇ ನೆಹರುಗಳನ್ನಾಮಂತ್ರಿಸಿ ಸರಕಾರ ರಚನೆಯ ಜವಾಬ್ದಾರಿಯೊಪ್ಪಿಸಿದುದು ಮಿ. ಜಿನ್ನರಿಗೆ ಕೆನ್ನೆತಾಡನೆ ಬಿದ್ದಂತಾಗಿರಬಹುದು. ಆದರೆ ಬಹಿಷ್ಕಾರ ಹಾಕಿ ಕುಳಿತ ಜಿನ್ನರನ್ನು ವೈಸರಾಯರು ಆಮಂತ್ರಿಸುತ್ತಿದ್ದರೆ, ಅದು ಅಣಕಿಸಿದಂತಾಗುತ್ತಿತ್ತು; ಆದ್ದರಿಂದ ಆ ಕೆಲಸವನ್ನವರು ಸರ್ವ ಪ್ರಥಮ ರಾಜಕೀಯ ಪಕ್ಷದ ನಾಯಕನಾದ ನೆಹರುಗಳಿಗೊಪ್ಪಿಸಿದುದು ನ್ಯಾಯವೂ ಅನಿವಾರ್ಯವೂ ಇದೆ. ತಾತ್ಕಾಲಿಕ ಸರಕಾರಕ್ಕೆ ಕಾಂಗ್ರೆಸ್ ಬಹಿಷ್ಕಾರ ಹಾಕಿದಾಗ ಇಂತಹ ಹೆಜ್ಜೆಯಿಡಲೊಪ್ಪದೆ ಜೋಪಾಸನಾ ಸರಕಾರ ಸ್ಥಾಪಿಸಿದ್ದ ಬ್ರಿಟಿಷರು, ಈಗ ಲೀಗ್ ಬಹಿಷ್ಕಾರ ಹಾಕಿರುವಾಗ ಇಂತಹ ಹೆಜ್ಜೆ ಇಟ್ಟಿರುವರು ಎಂದು ಲೀಗ್ ಕುದಿಯುತ್ತಿರಬಹುದು. ಆದರೆ ಕಾಂಗ್ರೆಸ್ ಒಪ್ಪದಿದ್ದಲ್ಲಿ ಮತ್ತೆ 'ಲೀಗ್ ಸರಕಾರ' ಹೊರತು ಯಾವುದೇ ವಿಧದ ರಾಷ್ಟ್ರೀಯ ಸರಕಾರವಾಗಲಸಾಧ್ಯ. ಆದರೆ ಲೀಗ್ ಒಪ್ಪದಿದ್ದರೂ ಕಾಂಗ್ರೆಸಿನಿಂದ 'ರಾಷ್ಟ್ರೀಯ ಸರಕಾರ'ವಾಗಬಲ್ಲುದೆಂಬುದು ಮಿ. ಜಿನ್ನರ ಕಣ್ಣೆದುರಲ್ಲೇ ಈಗ ಕಾಣುತ್ತಿದೆ. ಅಂದಮೇಲೆ ಈ ಮಟ್ಟಿಗೆ ಬ್ರಿಟಿಷರಿಂದಾದುದೆಂದರೆ ನ್ಯಾಯ ಪಕ್ಷಪಾತತೆಯೊಂದೇ. ಮೇಲಾಗಿ ಇದು ಕೇವಲ ಅಭಿಮಾನದ ಪ್ರಶ್ನೆ; ತಮ್ಮ ಮಾನಾಪಮಾನವು ಬಿಳಿಜನರ ಕೈಯಲ್ಲಿದೆ ಎಂದು ನಂಬಿರುವ ಗುಲಾಮ ಮನೋವೃತ್ತಿಯ ದ್ಯೋತಕ. ಇಲ್ಲವಾದರೆ ಪಂಡಿತ ನೆಹರುಗಳ ಕರೆಗಿಂತ ಲೋರ್ಡ್ ವೇವಲರ ಆಮಂತ್ರಣ ಪವಿತ್ರವೆ? ಮಿ. ಜಿನ್ನರನ್ನು ಕರೆಯಲು ಪಂಡಿತಜೀ ಸ್ವತಃ ಹೋಗಿರಲಿಲ್ಲವೆ? ಇನ್ನು ಘಟನಾ ಸಮಿತಿಯ ಕಾರ್ಯವಿಧಾನಗಳ ಕುರಿತು ಮುಸ್ಲಿಂ ಲೀಗಿಗಿದ್ದ ಭಯ ಸಂದೇಹಗಳನ್ನೆಲ್ಲಾ ಸ್ಪಷ್ಟವಾಗಿ ನಿವಾರಿಸಲಾಗಿದೆ. 'ಬ್ರಿಟಿಷ್ ನಿರೂಪಣೆಯಲ್ಲಿದ್ದ ಮೂಲ ಅರ್ಥಕ್ಕನುಸಾರವಾಗಿಯೇ ಅದರ ಕಾರ್ಯವಿಧಾನಗಳಿರುವವು. ಈ ಸಂಬಂಧಗಳಲ್ಲಿ ಭಿನ್ನಾಭಿಪ್ರಾಯಗಳು ಬಂದರೆ ಆ ಮಟ್ಟಿಗೆ ಫೆಡರಲ್ ಕೋರ್ಟಿನ ತೀರ್ಮಾನದಂತೆ ನಡೆಯಲಾಗುವದು' ಎಂಬ ಕಾಂಗ್ರೆಸ್ ಮತವನ್ನು ವೈಸರಾಯ ವೇವೆಲರು ತನ್ನ ತಾ 24ರ ಆಕಾಶವಾಣಿ ಭಾಷಣದಲ್ಲಿ ಅಕ್ಷರಶಃ ಆಡಿ ಅಭಯವಿತ್ತಿದ್ದಾರೆ. ಮುಸ್ಲಿಂಲೀಗಿಗೆ ಬೇಕಾದದ್ದೇನು ಎಂಬುದಿದುವರೆಗೆ ತಿಳಿದುಬಂದಷ್ಟೂ ಈಗ ಕೊಡಲ್ಪಟ್ಟಿದೆ. ಈಗ ಲೀಗ್ ಮುಂದೊಡ್ಡುತ್ತಿರುವದು ಅಹಂಭಾವವೊಂದನ್ನೇ ಹೊರತು ಆಕ್ಷೇಪವನ್ನಲ್ಲ. ಏನೇ ದೊರೆತರೂ ತನ್ನ ಪುಂಡು ಪ್ರತಾಪವನ್ನೆಲ್ಲಾ ಒಮ್ಮೆ ಪ್ರದರ್ಶಿಸಿಯೇ ಬಿಡಬೇಕೆಂದು ಲೀಗಿನ ಅಭಿಪ್ರಾಯವಿರುವಂತಿದೆ. ಮೇಲ್ಗಡೆ ನಮೂದಿಸಿರುವ ರಿಯಾಯತಿಗಳು— ವಾದಗಳು— ಲೀಗ್ ಎಂಬುದು ಒಂದು ರಾಜಕೀಯ ಪಕ್ಷವೆಂದು ಕಟ್ಟಿಕೊಂಡಾಗ ಮಾತ್ರ; ಬದಲಿಗೆ ಅದು ಪುಂಡರ ಸಂಗಡವಾಗುವದಾದರೆ, ಆಗ ಅದರೊಡನೆ ಹೇಗೆ ವರ್ತಿಸಬೇಕೆಂಬುದೂ ಕಾಂಗ್ರೆಸಿಗೆ ತಿಳಿದಿದೆ. ಮಿ. ಜಿನ್ನಾ ಮತ್ತು ಮಿ. ಲಿಯಾಖತ್ ಅಲೀಖಾನರು ನಡುಗಾಲ ಸರಕಾರ ರಚನೆಗೆ ಧಿಕ್ಕಾರವನ್ನೂ ಮುಸಲ್ಮಾನರಾರೂ ಅದರಲ್ಲಿ ಸೇರಕೂಡದೆಂಬ ವಿನಂತಿಯನ್ನೂ ಘೋಷಿಸಿದ್ದಾರೆ. ನಿಯೋಜಿತ ಸದಸ್ಯ ಸರ್. ಶಫತ್ ಅಹಮ್ಮದ್ ಖಾನರಿಗೆ ಮುಸಲ್ಮಾನರ ಚೂರಿ ಬಿದ್ದಿದೆ! ಪಾಕಿಸ್ಥಾನ ಮತ್ತು ರಕ್ತ ಸ್ನಾನವೇ ಗುರಿ—ಚೂಪಾದ ಮಾತು ಮತ್ತು ಚೂರಿಯಿಂದಲೇ ಸಾಧನೆ—ಎಂದು ಮುಸ್ಲಿಂ ಲೀಗಿನ ದೃಢಾಭಿಪ್ರಾಯವಿದ್ದರೆ ಅದನ್ನೆದುರಿಸಲು ಸರ್ವರೂ ತಯಾರಿರಬೇಕು.

ಮುಸ್ಲಿಂ ಲೀಗಿನ 'ಪ್ರತ್ಯಕ್ಷ ಹೋರಾಟ' ದಿನಾಚರಣೆಯ ನಿಮಿತ್ತ—ಲೀಗಿನ ಸುಹ್ರವರ್ದಿ ಮಂತ್ರಿ ಮಂಡಲದ ಆಶ್ರಯದಲ್ಲಿ—ಕಲ್ಕತ್ತೆಯಲ್ಲಿ ನಡೆದ ನರಮೇಧ, ಲೂಟಿ ದರೋಡೆ, [illegible]ನೆ ಮಾನಾಪಹಾರಗಳ ಮೈ ಜುಮ್ಮೆನ್ನಿಸುವ ದುರಂತದ ವಿಮರ್ಶೆ ಅನಗತ್ಯ. ಈ ರೀತಿ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ರಚನೆಯೊಂದಿಗೇನೇ ಲೀಗಿನ ಪ್ರತ್ಯಕ್ಷ ಹೋರಾಟದ ಸ್ಪಷ್ಟಾನುಭವವು ಎಲ್ಲರಿಗೂ—ಮುಖ್ಯವಾಗಿ ಮುಸ್ಲಿಮರಿಗೆ—ಆಗಿ ಹೋದುದು ಭಾವೀ ಹಿತದೃಷ್ಟಿಯಿಂದ ಒಳ್ಳೆಯದೆಂದೇ ನಮ್ಮ ಅಭಿಪ್ರಾಯ.

ನವಯುಗದ ಚಂದಾದಾರರಲ್ಲಿ—

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ **25ನೇ** ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ **26ನೇ** ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ದಯಮಾಡಿ ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುವಂತೆ ವಿನಂತಿ.

ಕೆಲವರಿಗೆ ಕಳಿಸಿದ ವಿ. ಪಿ. ಯು ಇನ್ನಾರೆಂದು ಷರಾ ಬರೆಯಲ್ಪಟ್ಟು ಹಿಂದೆ ಬಂದಿದೆ. ಪ್ರಾಯಶಃ ಪೋಸ್ಟ್‌ಮ್ಯಾನ್ ಬರುವಾಗ ವಿಳಾಸದಾರರು ಸಿಗದೆ ಈ ಪ್ರಮಾದವಾಗಿರಬಹುದಾದುದರಿಂದ ಅಂಥವರೂ ತಮ್ಮ ಚಂದಾ ಹಣವನ್ನು ತ್ವರ್ಯ ಕಳಿಸಿಕೊಡುವಂತೆ ವಿನಂತಿ.

ಪತ್ರಿಕೆ ಬೇಡವಾದವರು ನಮಗೆ ಮುಂದಾಗಿ ತಿಳಿಸಿದರೆ ಉಪಕಾರವಾಗುವುದು.

—ಮೆನೇಜರ್.

ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಸ್ಥಾಪನೆ.

ನೆಹರು, ಪಟೇಲ್, ಪ್ರಸಾದ್, ಬೋಸ್, ರಾಜಾಜೀ, ಅಸಫಾಲಿ ಮೊದಲಾದವರ ಮಂತ್ರಿಮಂಡಲ.

ವೈಸರಾಯ ವೇವೆಲರ ಆಮಂತ್ರಣದಂತೆ ನವದಿಲ್ಲಿಗೆ ತೆರಳಿದ್ದ ರಾಷ್ಟ್ರಪತಿ ನೆಹರುಗಳು, ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯ (ಆಜಾದ್, ಪಟೇಲ್, ರಾಜೇಂದ್ರ ಪ್ರಸಾದ್) ಸಲಹೆ ಪಡೆದು ವೈಸರಾಯರೊಡನೆ ದೀರ್ಘ ಪರ್ಯಾಲೋಚನೆ ನಡೆಸಿದ ನಂತರ ತಾ 24ರಲ್ಲಿ ನವದಿಲ್ಲಿಯಿಂದ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಸ್ಥಾಪನೆ ಹಾಗೂ ಸದಸ್ಯರ ಹೆಸರು ಪ್ರಕಟವಾಯಿತು.

1. ಪಂಡಿತ ನೆಹರು, 2. ಸರ್ದಾರ್ ವಲ್ಲಭಭಾಯಿ, 3. ಡಾ। ರಾಜೇಂದ್ರ ಪ್ರಸಾದ್. 4. ಮಿ ಅಸಫ್ ಅಲಿ, 5 ಶರಶ್ಚಂದ್ರ ಬೋಸ್, 6. ರಾಜಗೋಪಾಲಾಚಾರಿ, 7. ಡಾ। ಜಾನ್ ಮಥಾಯಿ, 8. ಸರ್ದಾರ್ ಬಲದೇವ ಸಿಂಘ್, 9. ಸರ್. ಶಾಫತ್ ಅಹಮ್ಮದ್ ಖಾನ್, 10 ಶ್ರೀ. ಜಗಜ್ಜೀವನರಾಮ್, 11. ಸಯ್ಯದ್ ಅಲಿಜಾಹಿರ್. 12. ಶ್ರೀ. ಕುವರ್ಜಿ ಹೊರಮಸ್ಜಿ ಬಾಬಾ—ಇಷ್ಟು ಮಂದಿ ಪ್ರಕಟಗೊಂಡಿದ್ದಾರೆ. ಇನ್ನಿಬ್ಬರು ಮುಸಲ್ಮಾನರನ್ನು ಸೇರಿಸಲಿಕ್ಕಿದೆ. ಕಮಿಟಿಯು 14 ಜನರದ್ದಾಗುವದು. ಲೀಗ್ ಸೇರಲೊಪ್ಪುತ್ತದಾದರೆ 5 ಸ್ಥಾನಗಳನ್ನು ಅದಕ್ಕೆ ಕೊಡಲಾಗುವಂತೆ ಇಡೀ ಕಮಿಟಿಯನ್ನೇ ಪುನರ್ರಚಿಸಲಾಗುವದು. ಲೀಗ್ ಸೇರಿದರೂ ಸೇರದಿದ್ದರೂ ಹೊಸ ನಡುಗಾಲ ಸರಕಾರವು ಸೆಪ್ಟೆಂಬರ್ ತಾ. 2ರಿಂದ ಕಾರ್ಯಾರಂಭಿಸುವದು. ವೈಸರಾಯರ ಜೋಷಾಸನಾ ಸರಕಾರದ ಸದಸ್ಯರೆಲ್ಲಾ ರಾಜೀನಾಮೆಯಿತ್ತಿದ್ದಾರೆ. ದೇಶವೆಲ್ಲಾ ಆನಂದಗೊಂಡಿದೆ.

ವೈಸರಾಯರ ಭಾಷಣ

ತಾ. 24ನೇ ರಾತ್ರಿ ವೈಸರಾಯರು ಆಕಾಶವಾಣೀ ಭಾಷಣ ಮೂಲಕ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಸಂಸ್ಥಾಪನೆ ಮಾಡುತ್ತಾ ಕೆಲವು ವಿಷಯಗಳನ್ನು ಸ್ಪಷ್ಟೀಕರಿಸಿದರು. 'ತಾತ್ಕಾಲಿಕ ಸರಕಾರದಲ್ಲಿ ಸಸ್ಥಾನಗಳು ಲೀಗಿಗನ್ಯ ಕಾದಿವೆ. ಅದು ಬಂದಾಗ ಪುನರ್ರಚನೆಯಾಗುವದು ಪ್ರಾಮುಖ್ಯ ತೀರ್ಮಾನಗಳು ಬಹುಮತದಿಂದ ನಡೆಯುವಾಗ ತನ್ನ ಅಭಿಪ್ರಾಯಗಳಿಗೆ ಮಾನ್ಯತೆ ಬಾರದೆಂದು ಲೀಗ್ ಹೆದರಬೇಕಾಗಿಲ್ಲ. ಎರಡು ಮುಖ್ಯ ಪಕ್ಷಗಳ ಸಮ್ಮತಿಯನ್ನಾಧರಿಸಿಯೇ ಸರಕಾರ ಅಸ್ತಿತ್ವ ಮತ್ತು ಕಾರ್ಯ ನಿರ್ವಹಣಗಳಿರುವವು ಘಟನಾ ಸಮಿತಿಯ ಕಾರ್ಯಕ್ರಮಗಳೂ ಬ್ರಿಟಿಷ್ ನಿರೂಪಣೆಯಲ್ಲಿದ್ದಂತೆಯೇ ನಡೆಯಲ್ಪಡುವವು. ಭಿನ್ನಾರ್ಥಗಳು ಬಂದಾಗ ಫೆಡರಲ್ ಕೋರ್ಟಿನ ತೀರ್ಮಾನಕ್ಕೊಪ್ಪಿಸಲಾಗುವದು ಪ್ರಾಂತಿಕ ಸರಕಾರದ ಕಾರ್ಯಕ್ಷೇತ್ರದೊಳಗೆ ಸರಕಾರ ಕೈ ಹಕ್ಕಿಲ್ಲ. ದಿನವಹಿ ಅಧಿಕಾರಗಳಲ್ಲಿ ತಾತ್ಕಾಲಿಕ ಸರಕಾರಕ್ಕೆ ಪರಮಾವಧಿ ಅಧಿಕಾರವನ್ನೀಯಲಾಗುವದು. ರಕ್ಷಣಾ ಖಾತೆಯೂ ಅದಕ್ಕೆ ಸೇರಿದೆ. ಆದರೆ ಸಶಸ್ತ್ರ ಸೈನಿಕರ ವಿಧಿನಿಬಂಧನೆಗಳೆಲ್ಲಾ ಹಿಂದಿನಂತೆಯೇ ಇವೆ. ಲೀಗ್ ಪುನರಾಲೋಚಿಸಿ ಸಹಕರಿಸಬೇಕು ಕಲ್ಕತ್ತದ ಗಲಭೆಯಲ್ಲಿ ಸೈನಿಕರನ್ನು ಉಪಯೋಗಿಸಬೇಕಾಯಿತು. ಆದರೆ ಶಾಂತಿ ಕಾಪಾಡುವ ಹೊಣೆಗಾರಿಕೆ ಪ್ರಾಂತಿಕ ಸರಕಾರದ್ದಿತ್ತು. ಹಿಂಸಾತ್ಮಕ ಕೃತಿಮಾತುಗಳಿಂದ ರಾಷ್ಟ್ರಕ್ಕಾಗಲೀ ತಮ್ಮ ಪಕ್ಷಕ್ಕಾಗಲೀ ಹಿತವಿಲ್ಲವೆಂಬದನ್ನು ಸರ್ವರೂ ತಿಳಿದಿರಬೇಕು'—ಎಂಬುದೇ ವೈಸರಾಯರ ಭಾಷಣದ ಸಾರಾಂಶ.

ಕಲ್ಕತ್ತದ ಗಲಭೆ

ಲೀಗಿನ ಹೋರಾಟ ದಿನವಾದ ತಾ. 16ರಿಂದಾರಂಭಿಸಿ 5 ದಿನಗಳ ವರೆಗೆ ನಡೆದ ಕಲ್ಕತ್ತದ ಅತಿ ಭಯಂಕರ ಗಲಭೆಗಾಹುತಿಯಾದವರ ಸರಿಯಾದ ಸಂಖ್ಯೆ ದೊರೆತಿಲ್ಲ ಆರೇಳು ಸಾವಿರ ಮಂದಿ ಮಡಿದು 22–23 ಸಾವಿರ ಮಂದಿಗೆ ಜಖಮಾಗಿರಬಹುದೆಂದು ಊಹೆ. ಎಳೆಂಟು ಕೋಟಿ ರೂಪಾಯಿಗಳಷ್ಟು ಸೊತ್ತು ಹಾನಿಯಾಗಿರಬಹುದು ನಾಲ್ಕೈದು ದಿನಗಳ ವರೆಗೆ ಇಡೀ ಕಲ್ಕತ್ತದಲ್ಲಿ ಸರಕಾರವೇ ಇರಲಿಲ್ಲವೆಂಬಂತಿತ್ತು. ಮನಸೇಚ್ಛೆ, ಕೊಲೆ, ದರೋಡೆ, ಜೀವಂತ ದಹನ, ಅತ್ಯಾಚಾರ, ಲೂಟಿ ಸುಲಿಗೆಗಳು ನಡೆದಿದ್ದುವು. ಸೈನಿಕ ಬಂದೋಬಸ್ತಿನಿಂದಲೇ ಗಲಭೆ ನಿಂತಿತು. ಇದಕ್ಕೆ ಮುಸ್ಲಿಂ ಲೀಗಿನ ಸುಹ್ರವರ್ದಿ ಸರಕಾರದ ಇಚ್ಛೆ, ಪ್ರೋತ್ಸಾಹ, ಅಥವಾ ಅದರ ದೌರ್ಬಲ್ಯವೇ ಕಾರಣವೆಂದು ದೇಶವಿದೇಶಗಳ ಪತ್ರಿಕೆಗಳ ಹಾಗೂ ನ್ಯಾಯವಾದಿಗಳೆಲ್ಲರ ಅಭಿಪ್ರಾಯವಿದೆ. ಬಂಗಾಳಾ ಗವರ್ನರರನ್ನು ಹಿಂದೆ ಕರೆಯಬೇಕೆಂದೂ ಸುಹ್ರವರ್ದಿ ಮಂತ್ರಿಮಂಡಲವನ್ನು ರದ್ದುಪಡಿಸಬೇಕೆಂದೂ ಸರ್ವತ್ರ ಬೇಡಿಕೆಗಳಿದ್ದಿವೆ. ವೈಸರಾಯರು ಕಲ್ಕತ್ತೆಗಾಗಮಿಸಿ ಸ್ಥಳ ತನಿಖೆ ನಡೆಸುತಿದ್ದಾರೆ. ಬಹಿರಂಗ ವಿಚಾರಣೆ ನಡೆಯುವ ಸಂಭವವಿದೆ.

ಸರ್. ಶಾಫತರಿಗೆ ತಿವಿತ

ಈಗ ಜವಾಹಿರ ಸರಕಾರದಲ್ಲಿ ನೇಮಕಗೊಂಡಿರುವ ಸರ್. ಶಾಫತ್ ಅಹಮ್ಮದ್ ಖಾನರು ಮೊದಲು ಲೀಗಿನವರಾಗಿದ್ದರು; ಸಂಯುಕ್ತ ಪ್ರಾಂತ್ಯದವರು. ಲೀಗಿನ ಅಸಂಬದ್ಧ ಧೋರಣೆಯ ಕುರಿತು ಜಿಗುಪ್ಸೆಗೊಂಡು ಇತ್ತೀಚೆಗೆ ರಾಜೀನಾಮೆ ಕೊಟ್ಟಿದ್ದರು ರಾಷ್ಟ್ರೀಯ ಸರಕಾರೀ ಸದಸ್ಯರ ಹೆಸರುಪಟ್ಟಿಯಲ್ಲಿ ಇವರ ಹೆಸರಿದ್ದುದು ಪ್ರಕಟವಾದ ಮರುದಿನ ರಾತ್ರಿ ಸರ್ ಶಾಫತರು ಸಿಮ್ಲಾದಲ್ಲಿ ವಾಯುಸೇವನೆ ಮುಗಿಸಿಕೊಂಡು ಒಬ್ಬರೇ ಹಿಂದಿರುಗುತಿದ್ದಾಗ ಇಬ್ಬರು ಮುಸಲ್ಮಾನ್ ಯುವಕರು ಅವರ ತಲೆ, ಕುತ್ತಿಗೆ ಮತ್ತು ಬೇರೆಕಡೆಗಳಿಗೆ ಚೂರಿಯಿಂದ ತಿವಿದರು. ಏಳು ಗಾಯಗಳಾಗಿ ಸ್ಮೃತಿತಪ್ಪಿದ್ದರೂ ಪ್ರಾಣಾಪಾಯವಿಲ್ಲವೆಂದು ಈಗ ತಿಳಿದು ಬಂದಿದೆ. ತಾತ್ಕಾಲಿಕ ಸರಕಾರವನ್ನು ಬಹಿಷ್ಕರಿಸುವ ನಿರ್ಧಾರವನ್ನೇ ಲೀಗ್ ಪುನಃ ಘೋಷಿಸಿದೆ.

ಮುಖ್ಯ ರಾಷ್ಟ್ರಗಳೊಳಗೆ ವೈಷಮ್ಯ

ಯುಗೋಸ್ಲೇವಿಯದಲ್ಲಿ ಹಾರಾಡಿದ ಎರಡು ಅಮೇರಿಕನ್ ವಿಮಾನಗಳಿಗೆ ಗುಂಡಿಟ್ಟುದರಿಂದ ಅಮೇರಿಕವು ಕ್ರೋಧಗೊಂಡು ಯುಗೋಸ್ಲೇವಿಯಾ ಸರಕಾರಕ್ಕೆ "ಅಲ್ಟಿಮೇಟಮ್" ಕೊಟ್ಟಿತು ಅದಕ್ಕೆ ಯುಗೋಸ್ಲೇವಿಯಾ ಸರಕಾರ ಧಿಕ್ಕಾರ ಸೂಚಿಸಿರುವದರಿಂದ ಪರಿಸ್ಥಿತಿ ಗಂಭೀರವಾಗಿದೆ. ಯುಗೋಸ್ಲೇವಿಯವು ರಷ್ಯದ ಹಿಂದಿರುವ ರಾಷ್ಟ್ರ. ಅಂತೆಯೇ ಡಾರ್ಡನೆಯಲ್ಸ್ ಜಲಸಂಧಿಯ ಕುರಿತು ರಷ್ಯವು ಮುಂದಿಟ್ಟ ಬೇಡಿಕೆಯನ್ನು ಟರ್ಕಿಯು ಕಠೋರಿಕ್ತವಾಗಿ ನಿರಾಕರಿಸಿದೆ. ಟರ್ಕಿಯ ಬೆಂಬಲವಾಗಿ ಇಂಗ್ಲಾಂಡು ಅಮೇರಿಕಗಳು ನಿಂತಿವೆ. ಪ್ಯಾರಿಸಿನಲ್ಲಿ ನಡೆದಿರುವ ಶಾಂತಿ ಸಮ್ಮೇಲನದ ಕಾರ್ಯಕ್ರಮಗಳ ಕುರಿತು ಇಂಗ್ಲಾಂಡು, ಅಮೇರಿಕಾ ಮತ್ತು ರಷ್ಯಗಳೊಳಗಿದ್ದ ಭಿನ್ನಾಭಿಪ್ರಾಯಗಳು ಈಗ ಇನ್ನಷ್ಟು ಬೆಳೆದಿವೆ.

ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು

ಅನೇಕ ಸಮಸ್ಯೆ, ತೊಡಕುಗಳಿಂದೊಡಗೂಡಿದ ಈ ಪ್ರಾಂತ ನಿರ್ಮಾಣದ ಪ್ರಶ್ನೆಯನ್ನು ನಿವರವಾಗಿ ಬಿಡಿಸಬೇಕೆಂಬ ಘನೋದ್ದೇಶದಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರೂ ಅಖಿಲ ಕರ್ನಾಟಕ ಏಕೀಕರಣ ಸಂಘದವರೂ ಸೇರಿಕೊಂಡು ಸಮಸ್ತ ಕನ್ನಡಿಗರ ಈ ಮಹಾ ಪರಿಷತ್ತನ್ನು ಕರೆದಿದ್ದಾರೆ. ಈ ಪರಿಷತ್ತು ೩೧ನೆಯ ಅಗಸ್ಟ ೧೯೪೬ನೆಯ ಶನಿವಾರ ಮೈಸೂರು ಸಂಸ್ಥಾನದ ದಾವಣಗೆರೆಯಲ್ಲಿ ಸೇರುತ್ತದೆ.

ಕನ್ನಡಿಗರ ಈ ಮಹಾ ಪರಿಷತ್ತಿನಲ್ಲಿ ಚರ್ಚಿಸ ಬೇಕಾದ ಗೊತ್ತುವಳಿಗಳು:-

೧ "ಬ್ರಿಟಿಷ್ ಕರ್ನಾಟಕ ವಿಭಾಗಗಳನ್ನು ಮೊದಲು ಒಂದೆಡೆ ಸೇರಿಸಿ ಕರ್ನಾಟಕ ಪ್ರಾಂತವನ್ನು ನಿರ್ಮಿಸುವುದಕ್ಕೆ ಆತಂಕ ಉಂಟಾಗದಂತೆ ಕನ್ನಡವನ್ನಾಡುವ ಎಲ್ಲ ಜನರ ಸಾಮಾನ್ಯ ಬೆಳವಣಿಗೆಗಾಗಿ ಅವರೆಲ್ಲರಿಗೂ ಒಂದೆ ಆಡಳಿತೆಯುಳ್ಳ ಸರಕಾರ-ಸಂಯುಕ್ತ ಬಗೆಯದಾಗಲಿ ಅಥವಾ ಬೇರೆ ಬಗೆಯದಾಗಲಿ ಸ್ಥಾಪಿತವಾಗುವುದರಿಂದಲೆ ಕನ್ನಡ ಜನತೆಯ ಹಿತ ಸರಿಯಾಗಿ ಸಾಧಿಸುವುದೆಂದು ಸಂಸ್ಥಾನ ಕರ್ನಾಟಕವನ್ನೊಳಗೊಂಡ ಅಖಿಲ ಕರ್ನಾಟಕದ ಪ್ರತಿನಿಧಿಗಳ ಈ ಏಕೀಕರಣದ ಮಹಾ ಪರಿಷತ್ತು ಸಾರುತ್ತದೆ"

೨ "ಭಾಷಾನುಗುಣ ಪ್ರಾಂತ ರಚನೆಯ ವಿಷಯವನ್ನು ಮಹತ್ವದ ಮಾಕೆಂದು ಘಟನಾ ಸಮಿತಿಯವರು ಈ ಪ್ರಶ್ನೆಯನ್ನು ಕೆಗೆದುಕೊಳ್ಳಬೇಕೆಂದೂ ಕರ್ನಾಟಕ ಪ್ರಾಂತ ರಚನೆಗಾಗಿ ಶೀಘ್ರವಾಗಿಯೆ ಕಾರ್ಯ ಪ್ರವೃತ್ತರಾಗಬೇಕೆಂದೂ ಈ ಮಹಾ ಪರಿಷತ್ತು ಆಗ್ರಹಪೂರ್ವಕವಾಗಿ ಸೂಚಿಸುತ್ತದೆ".

ಮುಂಬಯಿ ಸರಕಾರದ ಒಕ್ಕಲುತನ ವಿಭಾಗದ ಮಂತ್ರಿಗಳಾದ ಮಾನ್ಯ ಶ್ರೀ. ಪಾಟೀಲ ಮಲ್ಲನಗೌಡರು ಅಧ್ಯಕ್ಷರಾಗಲು ದಯೆಯಿಟ್ಟು ಒಪ್ಪಿರುತ್ತಾರೆ. ಮದ್ರಾಸು ಸರಕಾರದ ಕಂದಾಯ ಮಂತ್ರಿಗಳಾದ ಮಾನ್ಯ ಶ್ರೀ. ಕೋಟಿ ರಾಮಕೃಷ್ಣ ಕಾರಂತರವರು ಉದ್ಘಾಟಿಸ ಮಾಡಲು ದಯೆಯಿಟ್ಟು ಒಪ್ಪಿರುತ್ತಾರೆ.

ಕೇರಳಾ ಸೋಪ್ ಇನ್‌ಸ್ಟಿಟ್ಯೂಟ್
ಕಲ್ಲಿಕೋಟೆ.

ದಿ ಆರ್ಯನ್ ಚಾಂಪಿಯನ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಪ್ರಧಾನ ಕಾರ್ಯಾಲಯ:
7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.
ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ
ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶ್ಯೂರೆನ್ಸ್ ಕಂಪೆನಿಯಿದು.
ಚೆಯರ್‌ಮೆನ್.
ಶೇಟ್ ಭೋಗಿಲಾಲ್ ಎಚ್. ಪಟೇಲ್
ಕಂಪೆನಿಯ ಸಮ್ಮಿಶ್ರ ಯೋಜನೆಯಲ್ಲಿ ಸಮರ್ಪ ತಮ್ಮನೆ ಜೀವವಿಮಾ ಉಪಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸಾಧನಗಳನ್ನು ಒದಗಿಸಿಕೊಡುವೆವು ವಿಶೇಷ ಅನುಭವಗಳಿಗಾಗಿ
ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ ಸೀತಾರಾಮ ಶೆಟ್ಟಿ ಎಸ್ಕ್ವಯರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ಉಡುಪಿ

ಮುನಿಸಿಪಲ್ ಮೀಟಿಂಗು— ತಾ. 24ರಲ್ಲು ಸಂಜೆ ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಂಗಾಮಿ ಸಿವಿಲ್ ಕಲೆಕ್ಟರರ ಆಸನವನ್ನು ಖಾಯಂ ಮಾಡಲಾಯಿತು. ವಿಕ್ಟರಿಲ್ಯಾಟ್ ಎಂಬ ಹೆಸರಿನಿಂದ ತಾಲೂಕು ಕಚೇರಿ ಎದುರುಗಡೆ ಒಂದು ಲ್ಯಾಟನ್ನು ಹಾಕುವರೆ ರೂಪಾಯಿ 300/- ನ್ನು ಸ್ವೀಕರಿಸಲು ಒಪ್ಪಿಗೆಯಿದೆಯೇ ಎಂಬರ್ಥವುಳ್ಳ ತಾಲೂಕು ತಹಶಿಲ್ದಾರರ ಪತ್ರ ಪರಿಶೀಲನೆಯಾಯಿತು. ವಿಕ್ಟರಿ ದಿನಾಚರಣೆಯ ಸ್ಮಾರಕಾರ್ಥವಾಗಿ ಕೊಡುವ ಈ ಹಣವನ್ನು ಕಾಂಗ್ರೆಸ್ ನಿಷ್ಠಾವಂತ ಕೌನ್ಸಿಲು ಸ್ವೀಕರಿಸುವುದು ಸರಿಯಲ್ಲ. ವಿಕ್ಟರಿ ಎಂಬ ಶಬ್ದವನ್ನು ಲೋಪ ಮಾಡಿದರೆ ಹಣವನ್ನು ಪಡೆಯಬಹುದೆಂದು ಶ್ರೀ. ಎಲ್. ಎಸ್. ನಾಯ್ಕರು ಸೂಚಿಸಿದರು. ಕಾಂಗ್ರೆಸ್‌ಸಹಾನುಭೂತಿಯುಳ್ಳದ್ದಷ್ಟೇ ಹೊರತು ಕಾಂಗ್ರೆಸ್ ಕೌನ್ಸಿಲು ನಮ್ಮ ಸಭೆಯಲ್ಲ. ರಾಷ್ಟ್ರಧ್ವಜ, ರಾಷ್ಟ್ರಮುಖಂಡರ ಭಾವಚಿತ್ರಗಳನ್ನು ಕೌನ್ಸಿಲುಹಾಲಿನಲ್ಲಿ ತೂಗಹಾಕಿವನ್ನು ತಿರಸ್ಕರಿಸಿಗೆಯಬೇಕಾಗಿ ಎಪ್ಪ್ರಿಜರ್ ಅದಳಿತದ ಹುಕುಂ ಬಂದಾಗ ನಾವದನ್ನು ಮಾನ್ಯಮಾಡಲಿಲ್ಲವೇ? ಅಂದ ಮೇಲೆ ವಿಕ್ಟರಿ ಎಂಬ ಶಬ್ದವನ್ನು ಲೋಪಮಾಡುವುದು ಆವಶ್ಯಕವೆಂದು ತನಗೆ ತೋರುವುದಿಲ್ಲವಾದುದರಿಂದ ರೂ. 300/- ನ್ನು ಸ್ವೀಕರಿಸಬಹುದಾಗಿ, ಶ್ರೀ. ನರಸಿಂಹವಿಠಲಕಾಮತರು ಚುರುಕಾಗಿ ಮಾತನಾಡಿದರು. ಹಾಜರಿದ್ದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಬಂದುಗರಿಂದ ವೋಟು ತೆಗೆಯಲು ಬಹುಮತದಿಂದ ವಿಕ್ಟರಿಲ್ಯಾಟಗಾಗಿ ಹಣ ಸ್ವೀಕರಿಸಬಹುದೆಂದು ನಿರ್ಧಾರವಾಯಿತು. ಶ್ರೀ. ಎಲ್. ಎಸ್. ನಾಯ್ಕರು ಸಭೆಯಿಂದ ಹೊರಟುಹೋದರು ಸ್ವಲ್ಪ ಸಮಯದಲ್ಲಿ ರಾಜಿನಾಮೆಯನ್ನು ಕಳುಹಿಸಿದರು. ಮೂನುಮಾರ್ಕೆಟು ಬಳಿಯ ಶರಾಬು ಅಂಗಡಿಯನ್ನುಬೇರೊಂದು ಸ್ಥಳಕ್ಕೆ ವರ್ಗಯಿಸುವರೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಬೇಕೆನ್ನುವ ಮಿ। ಆರ್. ಎ. ಸ್ಯಾಮುಸ್ಸರ ಹಾಗೂ ದಕ್ಷಿಣ ಆಫ್ರಿಕದ ಬಳಿ ಜನರಿಗೆ ಮುನಿಸಿಪಲ್ ಬಂಗ್ಲೆಗಳಲ್ಲಿ ಪ್ರವೇಶಕೊಡಕೂಡದೆನ್ನುವ ಶ್ರೀ. ಎಸ್. ವಿ. ಕಾಮತರ ನಿರ್ಣಯಗಳು ಪಾಸಾದವು.

ಹಿಂದುಗಳ ಹಬ್ಬಕ್ಕೆ ಕಡಿಮೆ ಸಕ್ಕರೆಯೇ?— ಮಂಗಳೂರು ನಗರದಲ್ಲಿಯ ಹಿಂದುಗಳಿಗೆ ಆವರವರ ರೇಶನ್ ಕಾರ್ಡಿನ ಇಮ್ಮಡಿ ಸಕ್ಕರೆ ಈ ವ ರಗಳಲ್ಲಿ ದೊರೆಯುತ್ತಿರುವಾಗ ಜಿಲ್ಲೆಯ ಇತರ ಕಡೆಯ ಹಿಂದುಗಳಿಗೆ ಅವರ ಹಬ್ಬಗಳ ಸಲುವಾಗಿ ಸಕ್ಕರೆಯ ವಿಶೇಷ ಸವಲತ್ತು ದೊರೆಯಲಿಲ್ಲ. ಕಾರಣ ವೇನೋ ತಿಳಿಯದಾಗಿದೆ.

ಜೋಳ ಪ್ರಚಾರದ ಆವಶ್ಯಕತೆ— ಇತ್ತೀಚೆಗೆ ಜೋಳವು ಬಿಡ್ಡಾಯವಾಗಿ ಸೀದಾ ಅಂಗಡಿಗಳಲ್ಲಿ ಕೊಡಲ್ಪಡುತ್ತಿದೆ. ಹಳ್ಳಿಜನರಿಗೆ ಇದನ್ನು ಉಪಯೋಗಿಸುವ ರೀತಿ ನೀತಿಗಳು ತಿಳಿಯದೆ ಕಾಹಿಲೆಗೆ ತುತ್ತಾಗಿರುವರೆಂದು ತಿಳಿದುಬರುತ್ತದೆ. ಟೌನಿನಲ್ಲಿ, ಉಪಾಧ್ಯಾಯರ ಸಭೆಯಲ್ಲಿ ಮಾತ್ರ ಜಿಲ್ಲಾ ಆಹಾರ ಪ್ರಚಾರಕರು ಪ್ರಚಾರ ಕಾರ್ಯವನ್ನು ಕೈಕೊಂಡರೆ ಸಾಲದು. ಗೋದಿ, ಜೋಳವನ್ನು ಉಪಯೋಗಿಸುವ ನಿಜವಾದ ಪ್ರಚಾರವಾಗಬೇಕು. ಹಳ್ಳಿಹಳ್ಳಿಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಗಮನ ಕೊಡಬೇಕಾಗಿದೆ.

ಉಡುಪಿ ತಾಲೂಕು ಎಯಿಡೆಡ್ ಶಾಲಾ ಉಪಾಧ್ಯಾಯರ ಯೂನಿಯನ್ ಮಹಾ ಸಭೆಯು—ಇದೇ ತಾ. 31ರಲ್ಲು ಮಧ್ಯಾಹ್ನ 2ಗಂಟೆಗೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ಡಾ। ಎಸ್. ಆರ್ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಲಿರುವುದು,

---

ಜೋಳದ ಉಪಯೋಗ — ಜಿಲ್ಲಾ ಕಲೆಕ್ಟರರ ಪ್ರಕಟಣೆ—

ದಕ್ಷಿಣ ಕನ್ನಡದ ಮಹಾಜನರಿಗೆ

ಈ ವರ್ಷ ನಮ್ಮ ಈ ಹಿಂದೂಸ್ಥಾನಕ್ಕೆ ಒದಗಿಸುವ ಆಹಾರ ಸಾಮಗ್ರಿಗಳ ಅಭಾವವು ನಿಮಗೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಆ ಅಭಾವವನ್ನು ಕಡಿಮೆಮಾಡಲಿಕ್ಕಾಗಿ ನಮ್ಮ ಸರಕಾರದವರು ಹಲವು ರೀತಿಯಿಂದ ಪ್ರಯತ್ನಿಸುತ್ತಿದ್ದಾರೆ. ಅಕ್ಕಿಯ ಸಂಗ್ರಹವು ಸಾಕಷ್ಟು ಇಲ್ಲದ್ದರಿಂದ ಅವರು ದೇಶನನ್ನು ಈಗ ದಿನ ಒಂದಕ್ಕೆ 8ಔನ್ಸಿಗೆ ಕಡಿಮೆ ಮಾಡಿದರೂ ಆ 8ಔನ್ಸು ಅಕ್ಕಿಯೊಂದಿಗೆ 4 ಔನ್ಸು ಬೇರೆ ಪೌಷ್ಟಿಕ ಧಾನ್ಯಗಳನ್ನು ಕೊಡಬೇಕೆಂದು ಏರ್ಪಾಡು ಮಾಡಿದ್ದಾರೆ.

ನಮ್ಮ ಜಿಲ್ಲೆಗೆ ಈ ಬಗ್ಗೆ ಮುಖ್ಯವಾಗಿ ಗೋಧಿ ಮತ್ತು ಮೆಕ್ಕೆ ಜೋಳಗಳನ್ನು ಅವರು ಧಾರಾಳವಾಗಿ ಒದಗಿಸಬೇಕೆಂದಿದ್ದಾರೆ; ಗೋಧಿ ಈಗ ಕೆಲವು ಕಾಲದಿಂದ ಈ ಜಿಲ್ಲೆಯಲ್ಲಿ ರೂಢಿಗೆ ಬಂದು ಅದರ ಉಪಯೋಗವೀಗ ಸರ್ವರಿಗೂ ಸಂಪೂರ್ಣ ತಿಳಿದಿದೆ. ಆದಕ್ಕೆ ಮೆಕ್ಕೆ ಜೋಳವು ಅಮೇರಿಕದಿಂದ ತರಿಸಿದ್ದಾಗಿದ್ದು ಜನರಿಗೆ ಅದರ ಪರಿಚಯವಿಲ್ಲ. ಮೆಕ್ಕೆ ಜೋಳವು ದೇಹದ ಪುಷ್ಟಿಗೆ ಬಹಳ ಪ್ರಯೋಜನಕಾರಿಯಾದ ಧಾನ್ಯವೆಂದು ಕೆಲವರು ಮಾತ್ರ ಬಲ್ಲರು. ಆದಾಗಿ ಜನರಿಗೆ ಮೆಕ್ಕೆ ಜೋಳದ ಉಪಯೋಗ ಕ್ರಮವನ್ನು ತಿಳಿಸಲಿಕ್ಕಾಗಿ ಪ್ರತ್ಯೇಕ ಪ್ರಸಂಗಗಾರರೊಬ್ಬರು (lecturer) ಜಿಲ್ಲೆಯನ್ನೆಲ್ಲಾ ಸುತ್ತುತ್ತಿದ್ದಾರೆ.

ಮುಖ್ಯ ಮೆಕ್ಕೆ ಜೋಳವನ್ನು ಗೋಧಿಯಂತೆಯೇ ಅನೇಕ ರೀತಿ ಉಪಯೋಗಿಸಬಹುದೆಂಬುದನ್ನು ನೀವೆಲ್ಲರೂ ತಿಳಿಯಬೇಕು. ಜೋಳದ ಸಜ್ಜಿಗೆಯನ್ನು ಮಾಡಬಹುದು; ಜೋಳದ ಹುಡಿಯನ್ನು ಮಾಡಬಹುದು. ಇಡೀ ಜೋಳದ ಧಾನ್ಯವನ್ನೇ ಸೇವಿಸಬಹುದು.

12ತೊಲೆ ಜೋಳ 6ತೊಲೆ ಉದ್ದು ಬೇರೆ ಬೇರೆ ಪಾತ್ರೆಗಳಲ್ಲಿ ಆರು ಗಂಟೆಯಾದರೂ ನೆನೆಯ ಹಾಕಿ, ಅವುಗಳನ್ನು ಪ್ರತ್ಯೇಕ ಪ್ರತ್ಯೇಕ ಕಡೆದು ಒಟ್ಟು ಸೇರಿಸಿ, ಉಪ್ಪುಹಾಕಿ ಚೆನ್ನಾಗಿ ಬೆರಸಿ ದೋಸೆ ಮಾಡಿದರೆ ಬಹಳ ರುಚಿಕರವಾಗುತ್ತದೆ. ಸಜ್ಜಿಗೆಯಿಂದ ಉಪ್ಪಿಟ್ಟನ್ನು ಮಾಡುವ ಕ್ರಮ ಎಲ್ಲರಿಗೂ ತಿಳಿದಿದೆ. ಜೋಳದ ಹುಡಿಯನ್ನು ಗೋಧಿಯ ಹುಡಿಯಂತೆಯೇ ಚಪಾತಿ, ಪೂರಿ, ದೋಸೆಗಳಿಗೆ ಉಪಯೋಗಿಸಬಹುದು.

ನಮ್ಮ ಬಗ್ಗೆ ಇಲ್ಲಿಗೆ ಸರಕಾರದವರು ಪ್ರಮಾಣಪಟ್ಟು ಕಳುಹಿಸಿದ ಈ ಉತ್ಕೃಷ್ಟ ಧಾನ್ಯವನ್ನು ನಾವು ಆದಷ್ಟು ಉಪಯೋಗಿಸಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಹಿಂದುಸ್ಥಾನದ ಆಹಾರ ಸಂಕಷ್ಟ ನಿವಾರಣೆಯಲ್ಲಿ ಭಾಗಿಗಳಾಗಬಹುದು

ಬೊಂಬಾಯಿ—ಬ್ರಹ್ಮ ಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಮಿತಿ ಕಟಪಾಡಿ- ಇದರ ಬೊಂಬಾಯಿ ಶಾಖೆಯ ಸದಸ್ಯರು ಅಲ್ಲಿಗೆ ಚಿತ್ತೈಸಿದ ಜನಪ್ರೀತ ಸೇವಾ ಕಾರ್ಯನಿಷ್ಠ ಶ್ರೀ ಕಟ್ಪಾಡಿ ಸುಬ್ಬಯ್ಯ ಶ್ಯಾನುಭಾಗರನ್ನು ಸತ್ಕರಿಸುವರೆ ತಾ. 12ರಲ್ಲು ಒಂದು ಸಭೆಜರಗಿಸಿದರು ಶ್ರೀ ಶ್ಯಾನುಭಾಗರ (ಮತ್ತು ಮಾಸ್ತರರ) ಸೇವಾ ಬುದ್ಧಿಯನ್ನು ಶ್ಲಾಘಿಸಿ ಸಭಿಕರ ಭಾಷಣಗಳಾದುವು. ಕೊನೆಗೆ ಶ್ರೀ ಶ್ಯಾನುಭಾಗರು ತನ್ನ ಆಭಾರವನು ಸೂಚಿಸಿ ಸಂಘಕ್ಕೆ ಕೆಲವು ಹಿತಸೂಚನೆಗಳಿತ್ತರು.

ಬಿಲ್ಲವರ ಸಂಘ ಮುಂಬಯಿ— ಇದರ ಮಹಾ ಸಭೆಯು ಜರಗಿ 1946ನೇ ವರ್ಷದ ಕಾರ್ಯಭಾರಿಗಳನ್ನಾಗಿ ಕೆಳಗಿನವರನ್ನು ಆರಿಸಲಾಗಿರುತ್ತದೆ. ಶ್ರೀಗಳಾದ ಕೆ. ಡಿ. ಮೂಲ್ಕಿ, (ಅಧ್ಯಕ್ಷ) ಟಿ ಕೆ. ಅಮೀನ್. (ಉಪಾಧ್ಯಕ್ಷ) ವೈ. ಜಿ, ಬಂಗೇರ (ಗೌರವ ಪ್ರಧಾನ ಕಾರ್ಯದರ್ಶಿ) ಯಸ್. ಸಿ. ಎ. ಅಮೀನ್, (ಸಹಾಯಕ ಕಾರ್ಯದರ್ಶಿ) ಆನಂದ ಎಸ್ ಮೂಲ್ಕಿ, ಕೆ ಯಸ್. ನಿಡಂಬೂರು. (ಜೊತೆ ಕೋಶಾಧಿಕಾರಿಗಳು) ಡಿ. ಬಿ ಕೋಟ್ಯಾನ್, ಬಿ ರಾಮಚಂದ್ರ (ಪುಸ್ತಕಾಲಯದ ಜೊತೆಅಧಿಕಾರಿಗಳು.

NOTICE

In the Court of the District Munsif of Mangalore.

R E. P No. 276/46 in
O S. No. 44/24.

Deyyakku Hengsu-Petitioner
Vs.
Derappa Bhandary
—Respondent.

To

Respondent.-Derappa Bhandary, son of Mundayppu alias Kaveri Hengsu, residing in Buntwal Muda village of Mangalore Taluk.

Please take notice that the abovenamed petitioner has filed the above execution petition for recovery of maintenance etc. due from you and the said execution is stands posted to 7-9-1946. If you fail to appear on that date the said matter will be decided in your absence.

By order of the Court.

(Sd). **K. Babu Rao,**
Advocate for Petitioner.

Mangalore,
22-8-1946.

BANK WITH THE LARGEST CONNECTIONS ON THE WEST COAST

OFFERS:-
EFFICIENT,
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD. 1925

ಸಹಕಾರವೇ ಸಾಧನ

ಮನುಷ್ಯನ ಜೀವನ ಅತಿ ಕಷ್ಟ. ವ್ಯಾಪಾರ ಸರಿಯಾಗಿ ನಡೆಯದೆ, ಕೈಗಾರಿಕೆ ನಡಿಸುವುದೂ ಗಷ್ಟಕರವಾಗಿ, ವ್ಯವಸಾಯ ಕೂಡಾ ಹಿಂದುಳಿದ ಈ ಕಾಲದಲ್ಲಿ ಹಣದ ಲೇವಾದೇವಿಯೂ ಬಹಳ ಕಡಿಮೆಯಾಗಿದೆ. ಈ ಎಲ್ಲಾ ಉದ್ದೇಶವನ್ನೊಳಗೊಂಡ ಸಂಸ್ಥೆಯಿಂದಜನತೆಯ ಹಿತವನ್ನು ಸಾಧ್ಯವಾದಷ್ಟು ಪೂರೈಸಲು ಸ್ಥಾಪಿತವಾದ ಈ ಕಂಪೆನಿಯು ನಿಮ್ಮೆಲ್ಲರ ಸಹಕಾರ ಪಡೆದು ಅಲ್ಲಲ್ಲಿ ತನ್ನ ಶಾಖೆಯನ್ನು ತೆರೆಯಬೇಕೆಂದು ಎಣಿಸಿಯದೆ. ಇವನ್ನು ಸ್ಥಾಪಿಸಿದ ಉದ್ದೇಶ:-ಅನುಕೂಲತೆಗನುಸರಿಸಿ, 1. ವ್ಯಾಪಾರ. 2. ವ್ಯವಸಾಯ. 3 ಕೈಗಾರಿಕೆ. 4. ಲೇವಾದೇವಿ. 5 ಕಂಟ್ರಾಕ್ಟು. 6. ಏಜನ್ಸಿ. ಇತ್ಯಾದಿ. ಈ ಕಂಪೆನಿಯು ಕಾರ್ಯ ಪ್ರಾರಂಭಿಸಿದ ಅತ್ಯಲ್ಪ ಸಮಯದೊಳಗೆ ರೂ. 1 ಲಕ್ಷ್ಯಕ್ಕೆ ಮೇಲ್ಪಟ್ಟ ವ್ಯವಹಾರ ನಡಿಸಿಯದೆ. ಇದರ ಶ್ಯೇರ್ಸು ಬೇಕಾದವರು ಅರ್ಜಿ ಮುಖಾಂತರ ಪಡೆದುಕೊಳ್ಳಬಹುದು ಡಿಪೋಜಿಟ್ ಅಂಗೀಕರಿಸಲ್ಪಡುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಶ್ರೀ ಮಾತಾ ಯುನೈಟೆಡ್, ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸೀಸ್ ಲಿಮಿಟೆಡ್
ಜಯಮಂಗಳಂ ಬಿಲ್ಡಿಂಗ್ಸ್, ಕುಂದಾಪುರ.
(Incorporated in British India. liability of Members Limited)

FOR LIFE ASSURANCE
CONSULT
The New Gaurdian of India Life Insrce. Co., Ltd.,
(*Chairman*:- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCALOFFICES IN SOUTH KANARA: MANGALORE & KARKALA.
HEAD OFFICE "United India Life Bldg" Esplanade, Post Box No. 142, MADRAS.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ವಾರಪತ್ರಿಕೆ.
ವಾರ್ಷಿಕ ಚಂದಾ ರೂ 4-8-0
ಅರ್ಧ ವರ್ಷಕ್ಕೆ ರೂ-2-8-0
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್ ನವಯುಗ, ಉಡುಪಿ.

ಮಂಗಳೂರು.

ಜಿಲ್ಲಾ ಬೋರ್ಡಿನ– ಸಭೆಯೊಂದು ತಾರೀಕು ೧೪ರಂದು ಜರಗಿದಾಗ ಬೋರ್ಡಿನ ೪೫-೪೬ನೆಯ ವರ್ಷದ ಆಡಳಿತ ವರದಿಯು ಮಂಜೂರಾಯಿತು; ಅಧ್ಯಕ್ಷರಾದ ಶ್ರೀ। ಆರೂರವರೂ, ಬೋರ್ಡಿನ ಕಾರ್ಯದರ್ಶಿ ಶ್ರೀ। ಸುಂದರರಾಯರೂ ಬೋರ್ಡಿಗೆ ಸಲ್ಲಿಸಿದ ಸೇವೆಯ ಕುರಿತು ಪ್ರಶಂಸಿಸುತ್ತ, ಡಾ। ಆಚಾರ್, ಮಂ। ಶಮ್ನಾಡ್. ಶ್ರೀ। ಸರ್ವೋತ್ತಮ ಪೈ, ರಾಘವನ್ ಸಂಬಿಯಾರ್, ಯು. ರಾಮಚಂದ್ರ, ಸಿ ಎಲ್ ಲೊಬೊ ಮೊದಲಾದವರು ಮಾತನಾಡಿದರು. ಶ್ರೀ ಆರೂರವರ ತೈಲಚಿತ್ರವೊಂದನ್ನು ಬೋರ್ಡಿನಲ್ಲಿ ಮಂಡಿಸುವ ಕುರಿತಾಗಿಯೂ ನಿರ್ಣಯವಾಯಿತು; ಬೋರ್ಡಿನ ಆಡಳಿತೆಯಲ್ಲಿರುವ ಶಾಲೆಗಳ ನಾಲ್ಕನೆಯ ತರಗತಿಗಳಲ್ಲಿ ಇಂಗ್ಲಿಷ್ ಕಲಿಸಬಾರದೆಂಬ ಅರ್ಜಿಯನ್ನು ತಿರಸ್ಕಾರ ಮಾಡಲಾಯಿತು; ಹರಿಜನ ವಿದ್ಯಾರ್ಥಿಗಳ ಮಧ್ಯಾಹ್ನದ ಊಟಕ್ಕಾಗಿ ರೂ. ೬೦೦ ಮಂಜೂರು ಮಾಡಲಾಯಿತು; ನೇತ್ರಾವತಿ ಫ್ಲೋಟಿಲ್ಲಾ ಕಂಪೆನಿಯು ಜಿಲ್ಲೆಯ ಎಲ್ಲಾ ಕಡವುಗಳನ್ನು ೧೫ ವರ್ಷಗಳ ವರೆಗೆ ತನಗೇ ಗುತ್ತಿಗೆಗೆ ಕೊಡಬೇಕೆಂದು ಕೇಳಿಕೊಂಡುದರ ಕುರಿತು ಚರ್ಚೆ ನಡೆದು, ಕೊನೆಗೆ ಈ ವಿಚಾರವನ್ನು ಮುಂದರಿಸಿಡಲಾಯಿತು.

ಹಿಂದುಗಳಿಗೂ– ಅಸ್ಪೃಶ್ಯ ಜಾತಿಗಳ ಸಂಬಂಧವಾಗಿ ಈ ತಿಂಗಳಲ್ಲಿ ನಗರದೊಳಗಿನವರಿಗೆ ಕಾರ್ಡಿನಲ್ಲಿ ಕಾಣಿಸಿದುದರ ಇಮ್ಮಡಿ ಸಕ್ಕರೆ ಕೊಡಲಾಗುವುದು.

ಮಳೆ–೧೫೪ ಇಂಚಿಗೂ ಮೀರಿ ಇಷ್ಟರಲ್ಲೆ ಮಳೆ ಸುರಿದಿದೆ, ಎಂದರೆ, ಸರಾಸರಿಗಿಂತ ೪೦ ಇಂಚು ಮಳೆ ಜಾಸ್ತಿ ಬಿದ್ದಿದೆ.

ನಗರದಲ್ಲಿ ಗೋವಧೆ– ನಂದಿಗುಡ್ಡೆಯಬಳಿ ಪ್ರತಿದಿನವೂ ೨೦ ೨೫ ದನಗಳನ್ನು ಮಾಂಸಕ್ಕಾಗಿ ಕಡಿಯುತ್ತಿರುವುದನ್ನು ತಡೆಯಬೇಕು ಎನ್ನುತ್ತ ಡಾ। ಎಂ. ಎಸ್. ಪಿ. ಶರ್ಮ ಇವರು ವಿನಂತಿಯೊಂದನ್ನು ಪ್ರಧಾನಿ ಪ್ರಕಾಶಂ ರವರಿಗೂ, ಶ್ರೀ। ಕಾರಂತರಿಗೂ, ಆರೋಗ್ಯ ಮಂತ್ರಿ ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರಿಗೂ, ಪಂ. ನೆಹರು, ಗಾಂಧಿಜಿ .. ಮೊದಲಾದವರಿಗೂ ಕಳುಹಿಸಿದ್ದಾರೆ. ಪಂ. ನೆಹರುರವರು ಶ್ರೀಯುತರಿಗೆ ಉತ್ತರ ಬರೆಯುತ್ತ, 'ಪ್ರಾಂತೀಯ ಸರಕಾರಕ್ಕೆ ಈ ಕುರಿತು ತಕ್ಕ ಕಾರ್ಯಕ್ರಮ ಕೈಕೊಳ್ಳುವ ಅಧಿಕಾರವಿದೆ' – ಎಂದಿದ್ದಾರೆ

ಫ್ರೋಪ್ಸ್ ಲೈಫ್ ಇನ್ಶೂರೆನ್ಸ್ ಕಂಪೆನಿಯ–ಅಸಿಸ್ಟಾಂಟ್ ಆಫೀಸು ಸುಪರಿಂಟೆಂಡೆಂಟರಾದ ಮಿ। ಗೌಲ್ಡಿನ್ ಎಮ್. ಸಿ. ಡಿ'ಸೋಜರೊಬ್ಬರೇ ಲಂಡನಿನ ಚಾರ್ಟರ್ಡ್ ಇನ್ಶೂರೆನ್ಸ್ ಇನ್‌ಸ್ಟಿಟ್ಯೂಟಿನ (ವಿಮಾ ಶಾಖೆ) ಎರಡನೆ ವರುಷದ ಪರೀಕ್ಷೆಯಲ್ಲಿ ಅಖಂಡ ಹಿಂದೂಸ್ಥಾನದಲ್ಲಿ ಸರ್ವ ಸಮ ಪೂರ್ಣ ಪಾಸಾಗಿರುತ್ತಾರೆ.

ಕಟಪಾಡಿ— ಶ್ರೀ ವೆಂಕಟರಮಣಸ್ವಾಮಿ ಹಾಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿಗಳು ಡಾಕ್ಟರ್ ಕೆ. ಜೆ. ಕಿಣಿಯವರ ಅಧ್ಯಕ್ಷತೆಯಲ್ಲಿ ಸದ್ರಿ ಶಾಲಾ ಕಟ್ಟೋಣದಲ್ಲಿ ತಾ. 18-8-1946ರಲ್ಲು ಸಭೆ ಸೇರಿ ಶಾಲಾ ಹಳೆವಿದ್ಯಾರ್ಥಿಗಳ ಸಂಘವೊಂದನ್ನು ಏರ್ಪಡಿಸಬೇಕೆಂಬುದಾಗಿಯೂ, ಅದರ ನಿಯಮಾವಳಿಗಳನ್ನು ತಯಾರಿಸಲು ಹಳೇ ವಿದ್ಯಾರ್ಥಿಗಳಲ್ಲಿ ಐವರ ಒಂದು ಸಮಿತಿಯನ್ನು ಏರ್ಪಡಿಸಿ ಅವರು ತಯಾರಿಸಿದ ನಿಯಮಾವಳಿಗಳನ್ನು ಮಂಜೂರುಮಾಡಲು ತಾ. 1 9-46ರಲ್ಲು ಅಪರಾಹ್ನ ಗಂಟೆ 3ಕ್ಕೆ ಸದ್ರಿ ಕಟ್ಟೋಣದಲ್ಲಿ ಹಳೆ ವಿದ್ಯಾರ್ಥಿಗಳ ಸಭೆಯನ್ನು ಜರಗಿಸಬೇಕಾಗಿಯೂ ನಿರ್ಣಯಿಸಲಾಯಿತು. ಆ ದಿನ ಜರಗಲಿರುವ ಸಭೆಗೆ ಶಾಲಾ ಹಳೆ ವಿದ್ಯಾರ್ಥಿಗಳೆಲ್ಲರೂ ನೆರೆದು, ಸಹಕಾರ, ಸಲಹೆಗಳನ್ನಿತ್ತು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸಲಾಗಿದೆ

ರಾಮಕುಂಜ— ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ತಾ. 20ರಲ್ಲಿ ಶ್ರೀ ಕೃಷ್ಣಾಷ್ಟಮಿಯ ಸಲುವಾಗಿ ಒಂದು ಸಾರ್ವಜನಿಕ ಮಹಾಸಭೆಯು ಶ್ರೀ ಎನ್. ನಾರಾಯಣ ಪಡ್ಡಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಬಾಲಕಿಯರ ಮಂಗಳ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಗಿ, ಅಧ್ಯಾಪಕರ ಪೈಕಿ ಕೆಲವರು ಶ್ರೀ. ಕೆ. ನಾರಾಯಣಾಚಾರ್ಯರು, ಶ್ರೀ. ಬಲ್ನಾಡು ರಾಮಕೃಷ್ಣ ಕಲ್ಲೂರಾಯರು ಮತ್ತು ಕೆ. ಕರ್ಯಪ್ಪರೈ ಮೊದಲಾದ ಮಹನೀಯರ ಭಾಷಣ, ಕೃಷ್ಣಾಷ್ಟಮೀ ಪ್ರಬಂಧ ಸ್ಪರ್ಧೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣ; ಅಧ್ಯಕ್ಷರ ಭಾಷಣ, ಪ್ರಧಾನಾಧ್ಯಾಪಕರಾದ ಶ್ರೀ. ಎಮ್. ಕೆ. ಆಚಾರ್ಯರ ಧನ್ಯವಾದದ ಜೊತೆಗೆ ಸಮಾರಂಭವು ಕೊನೆಗೊಂಡಿತು. ಮತ್ತು ರಾತ್ರಿಗೆ "ಕೃಷ್ಣಾರ್ಜುನ ಕಾಳಗ" ಯಕ್ಷಗಾನ ಕೂಟವೂ ನಡೆದಿತ್ತು.

ಕೂಲಿಕಾರರ ಹೋರಾಟಕ್ಕೆ ಕಾಂಗ್ರೆಸ ಬೆಂಬಲ.

ಆದರೆ ಅನುಚಿತ ಸಂಪುಗಳ ನಿಷೇಧ.

ಕಾಂಗ್ರೆಸ್ ಕಾರ್ಯಸಮಿತಿಯವರು ಒಂದು ದೀರ್ಘ ಪ್ರಕಟಣೆ ಹೊರಡಿಸಿ, ಕೂಲಿಕಾರ ಸಮಸ್ಯೆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದ್ದಲ್ಲದೆ, ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಕೆಲಸಗಾರರು ನಡೆಸಿದ ಹೋರಾಟಕ್ಕೆ ಸಹಾನುಭೂತಿ ತೋರಿಸಿ ನ್ಯಾಯವಾದ ಬೇಡಿಕೆಗಳನ್ನು ಸರಕಾರದವರು ಮತ್ತು ಒಡೆಯರು ಪೂರೈಸಬೇಕೆಂದು ಸೂಚಿಸಿದ್ದಾರೆ.

ಅವರ ಪ್ರಕಟಣೆ ಇಂತಿದೆ'—

ಇತ್ತೀಚೆಗೆ ಕೂಲಿಕಾರರಲ್ಲಿ ಅಸಂತೋಷ ಹಬ್ಬಿ ಅನೇಕ ಸಂಪುಗಳಾಗಿ ಕೆಲಸಗಾರರಿಗೂ ಜನತೆಗೂ ಹಾನಿಯುಂಟಾದುದರಿಂದ ಕಾಂಗ್ರೆಸ ಕಾರ್ಯಸಮಿತಿಗೆ ವಿವಂಚನೆಯಾಗಿದೆ. ಕೂಲಿಕಾರ ವರ್ಗದಲ್ಲುಂಟಾದ ಉತ್ಸಾಹವು ಯುದ್ಧಜನ್ಯ ಆರ್ಥಿಕ ದುರ್ದೆಸೆಯ ಮೂಲಕವಾದುದೆಂದು ಸಮಿತಿಗೆ ಗೊತ್ತಿದೆ. ಏರಿದ ಜೀವನವೆಚ್ಚ ಇನ್ನೂ ಇಳಿದಿಲ್ಲ. ಅಲ್ಲದೆ ಕೂಲಿಗಾರರ ಬೇಡಿಕೆಗಳ ವಿಚಾರಣೆಗೆ ಸಾಧನವಿಲ್ಲದ್ದರಿಂದ ಮತ್ತು ತೊಡಕುಗಳನ್ನು ಮಧ್ಯಸ್ಥಿಕೆಗೆ ಒಪ್ಪಿಸುವದಕ್ಕೆ ವಿಳಂಬ ಮಾಡುವದರಿಂದ ಕೂಲಿಕಾರರ ಕಷ್ಟನಷ್ಟಗಳು ಅಪರಿಮಿತವಾಗಿರುವುವು.

ಕೂಲಿಕಾರರು ತಮ್ಮ ಆರ್ಥಿಕ ಉನ್ನತಿಗೆ ನಡೆಸಿದ ಹೋರಾಟದಲ್ಲಿ ಕಾಂಗ್ರೆಸಿಗಿದ್ದ ಸಹಾನುಭೂತಿ ಜಗತ್ಪ್ರಸಿದ್ಧವಿದ್ದು ಅದನ್ನು ಪುನರುಚ್ಚರಿಸುವ ಆವಶ್ಯಕತೆ ಇಲ್ಲ. ಕೂಲಿಕಾರರ ಬೇಡಿಕೆ ಮತ್ತು ತಕರಾರುಗಳನ್ನು ನಿಷ್ಪಕ್ಷಪಾತದಿಂದ ವಿಚಾರಿಸುವದಕ್ಕೆ ವ್ಯವಸ್ಥೆ ಮಾಡಿ ಸರಕಾರದವರೂ ಒಡೆಯರೂ ಕೂಲಿಕಾರರ ಅಸಂತೋಷವನ್ನು ನಿವಾರಿಸಬೇಕೆಂದು ಸಮಿತಿಯು ಒತ್ತಿ ಹೇಳುತ್ತದೆ.

ರಾಷ್ಟ್ರಕ್ಕೆ ಅನೇಕ ನಿತ್ಯೋಪಯೋಗಿ ವಸ್ತುಗಳ ಪೂರೈಕೆ ಅವಶ್ಯವಿರುವುದರಿಂದ, ಪರಸ್ಪರ ವಿಚಾರವಿನಿಮಯದಿಂದ ತಪ್ಪಿಸಬಹುದಾದ ಸಂಪುಗಳಿಗೆ ಜನತೆಯ ಬೆಂಬಲ ದೊರಕುವದಿಲ್ಲೆಂದು ಇಲ್ಲಿ ಒಡೆದು ಹೇಳುವದು ಅವಶ್ಯವಿದೆ. ಸಂಧಾನದ ವಿಚಾರ ಮಾಡದೆ, ಕೆಲಸಗಾರರು ಅವಸರದಿಂದ ಸಂಪು ಪ್ರಾರಂಭಿಸಿ ತಮಗೂ ಜನತೆಗೂ ಅಹಿತ ಬಗೆದಿರುವರು. ಆದುದರಿಂದ ಜನಜೀವನಕ್ಕೆ ಮತ್ತು ಸರಕಾರಿ ಆಡಳಿತಕ್ಕೆ ಅವಶ್ಯವಿರುವ ಉದ್ಯೋಗಗಳು ಮತ್ತು ಅವುಗಳ ನೌಕರರು ಸಂಪಿನ ಬಾಧೆಯಿಂದ ಅಲಿಪ್ತವಿರಬೇಕೆಂದೂ ಅವರ ತಕರಾರುಗಳು ಪರಸ್ಪರ ವಿಚಾರವಿನಿಮಯ ಮತ್ತು ಮಧ್ಯಸ್ಥಿಕೆಯಿಂದ ಬಗೆಹರಿಸಲ್ಪಡಬೇಕೆಂದೂ ಸಮಿತಿಯ ಅಭಿಪ್ರಾಯವಿರುವುದು.

ಕೆಲಸಗಾರರು ತಮ್ಮ ಮೇಲಿನ ಹೊಣೆಯನ್ನು ಮರೆತು, ಶಿಸ್ತುಗೆಟ್ಟು ವರ್ತಿಸಿದುದು ಇತ್ತೀಚೆಗಿನ ಕೆಲವು ಸಂಪುಗಳಲ್ಲಿ ಕಂಡುಬಂದುದರಿಂದ ಸಮಿತಿಗೆ ಖೇದವಾಗಿದೆ. ಶಿಸ್ತು ಮತ್ತು ಇತರರ ಬೇಡಿಕೆಗಳಿಗೆ ಮನ್ನಣೆ, ಇವು ಕೂಲಿಕಾರ ಚಳವಳಿಯ ಭದ್ರ ಅಡಿಗಲ್ಲೆಂಬುವನ್ನು ಅವರು ಅರಿಯಬೇಕು. ಕೂಲಿಕಾರ ಸಂಘಗಳಲ್ಲಿ ತಲೆದೋರಿರುವ ಕೆಲವು ಅನಪೇಕ್ಷಿತ ಪ್ರಸಂಗಗಳು ಹಲ ಕೆಲವು ವ್ಯಕ್ತಿಗಳ ಮತ್ತು ವರ್ಗಗಳ ಸ್ವಾರ್ಥಸಾಧನೆಯ ಫಲವೆಂದು ನಮಗೆ ತಿಳಿದುಬಂದಿದೆ. ಅವರು ತಮ್ಮ ರಾಜಕೀಯ ಅಥವಾ ಬೇರೆ ಉದ್ದೇಶಗಳ ಪೂರ್ತಿಕೆಗಾಗಿ ಕೂಲಿಕಾರರ ಅಜ್ಞಾನದ ಲಾಭ ಪಡೆಯುತ್ತಿರುವದರಿಂದ ಕಾಂಗ್ರೆಸ, ಕೂಲಿಕಾರರ ಸಂಪರ್ಕ ಬೆಳೆಸಿ ಅವರ ಸೇವೆಗೈಯುವ ಮತ್ತು ಅವರಿಗೆ ಯಾವಾಗ ಬೆಂಬಲಕೊಡಬೇಕು, ಇಲ್ಲವೆ ನಿಯಂತ್ರಿಸಬೇಕು ಎಂಬುದನ್ನು ನಿರ್ಣಯಿಸುವ ಕಾಲವೀಗ ಬಂದಿದೆ.

ಕೂಲಿಕಾರರ ತಂಟೆಗಳನ್ನು ಬಗೆಹರಿಸಲು ಮೇಲಿನ ಸೂಚನೆಗಳು ಅವಶ್ಯವಿದ್ದರೂ, ರಾಷ್ಟ್ರದಲ್ಲಿ ಇನ್ನೂ ರೂಢವಾಗಿರುವ ಅತಿಪ್ರಸರಣವು ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸಿ ಸುದಿನಗಳು ಬರದಂತೆ ಮಾಡಿದೆ. ಮತ್ತು ಕೂಲಿ ಹಾಗೂ ಬೆಲೆಗಳ ನಡುವೆ ಹುಚ್ಚ ಸ್ಪರ್ಧೆಯನ್ನುಂಟುಮಾಡಿ ಬಡವರ ಕಷ್ಟವನ್ನು ಹೆಚ್ಚಿಸುತ್ತಿದೆ ಹಾವೀ ಬೆಲೆ ನಟ್ಟದ ನಿರ್ಣಯವಾದ ಹೊರತು ಮತ್ತು ಆರ್ಥಿಕ ಸಂಬಂಧದಲ್ಲಿ ಸುವ್ಯವಸ್ಥೆ ಉಂಟಾದ ಹೊರತು ಈ ಪರಿಸ್ಥಿತಿ ಸುಧಾರಿಸಲಾರದು. ಈ ಸಮಸ್ಯೆಯನ್ನು ಕೇಂದ್ರ ಸರಕಾರವು ಬಿಡಿಸಬಹುದಾದರೂ ಪ್ರಾಂತಿಕ ಸರಕಾರಗಳು ತಮ್ಮ ಅಧಿಕಾರದಲ್ಲಿ ಶಕ್ಯವಾದ ಪ್ರಯತ್ನ ಮಾಡಬೇಕೆಂದು ಈ ಸಮಿತಿಯು ಸೂಚಿಸುತ್ತದೆ.

ಇನ್ನಂಜೆ— ಸ್ಥಳೀಯ ಗ್ರಾಮ ಸೇವಾ ಸಮಿತಿಯ ಆಶ್ರಯದಲ್ಲಿ ಚರಕಾ ಸಂಘ ಮತ್ತು ಹಿಂದೀಪ್ರಚಾರದ ಉದ್ಘಾಟನಾ ಸಮಾರಂಭವು ತಾ. 21-8-1946ರಲ್ಲಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರವರಿಂದ ನೆರವೇರಿಸಲ್ಪಟ್ಟಿತು. ನೆರೆದ ಸಭೆಯಲ್ಲಿ ಶ್ರೀ ಪಡುಬಿದ್ರೆ ಕರಿಯಣ್ಣ ಸೆಟ್ರು ಶ್ರೀ. ಎ. ಭೋಜರಾಯರೂ ಖಾದಿಯ ಮಹತ್ವವನ್ನೂ ನೂಲುವ ವಿಧಾನವನ್ನೂ ವಿವರಿಸಿದರು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದೊಡನೆ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

NOTICE

In the Court of the Dictrict Munsif of Mangalore.

O. S. No. 137/1946.

The Vijaya Bank Limited, Mangalore by its Secretary B. Mahabala Shetty – Plaintiff.

and

Albert D'Souza, son of Francis D'Souza, Merchant, residing near Bijai Board School, Mangalore Town – Defendant.

To, Defendant Albert D'Souza.

Please take notice that the above suit filed by Plaintiff against you for recovery of Rs 2999–0 0 is posted for hearing at 11 A. M. on 5 9-1946 in the above Court. You may appear either in person or by pleader on or before the said date and contest the suit, failing which the same will be heard and decided exparte.

(By Order)

Mangalore. 16 8-1946. **B. M Hegde,** Advocate for Plaintiff

Sri Ramakrishna Theatre, Limited, UDIPI.

NOTICE

Is hereby given that the Register of Members and Transfer Books of the Company will remain closed from Sunday the 8th September 46 to Sunday the 29th Sept. 1946. both days inclusive.

UDIPI 22-8-46 (*Sd*) **A. Janardhana Alse.** Managing Director.

ವಿಶ್ವ ಸಾಹಿತ್ಯ ಮಾಲೆ, ಕುಸುಮ ೧.

ವಿಚಿತ್ರ ಆಗ್ನೇಯ ಏಶಿಯ

ಇಂಡೋನೇಶಿಯಾ, ಇಂಡೋ ಚೀನಗಳ ರಾಜ್ಯ ಕ್ರಾಂತಿ,
ಬರ್ಮಾ, ಮಲಯಾ, ಸಯಾಂಗಳ ಸ್ವಾತಂತ್ರ್ಯ ಸಂಗ್ರಾಮ—
ಎಲ್ಲವೂ ಇವೆ. ನಕ್ಷೆಗಳು ಸಹಿತ.

ಲೇಖಕರು:—ಶ್ರೀ. ಎಂ. ಹರಿದಾಸ.

(ದ್ವಿತೀಯ ಮಹಾ ಯುದ್ಧ, ಉಕ್ಕಿನ ಮನುಷ್ಯ ಗ್ರಂಥಗಳನ್ನು ಬರೆದವರು)

ಬೆಲೆ ೧—೮—೦ (ಅಂಚೆ ವೆಚ್ಚ ಬೇರೆ). ವ್ಯಾಪಾರಿಗಳಿಗೆ ಭಾರೀ ಕಮಿಶನ್

ಬರೆಯಿರಿ:—ಶಾನ್ ಬ್ರದರ್ಸ್, ಗದಗ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಪ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಚೊಕ್ಕಾಡಿ–ಪುತ್ತೂರು ತಾಲೂಕಿನ ಇತರ ಎಲ್ಲಾ ಗ್ರಾಮಗಳಿಗೂ ಕೋಟಾ ಕಾರ್ಡುಗಳ ವಿತರಣೆಗೆ ಬೇಕಾದಷ್ಟು ಎಣ್ಣೆಯನ್ನು ಒದಗಿಸಿ ಕೊಡುತ್ತಾ ನಮ್ಮ ಅಮರ ಮುಡ್ನೂರು ವ ಅಮರ ಪಡ್ನೂರು ಗ್ರಾಮಗಳಿಗೆ ಮಾತ್ರ ಕೋಟಾ ಕಾರ್ಡುಗಳ ವಿತರಣೆಗೆ ಬೇಕಾದ ಅರ್ಧಾಂಶ ಬಿಮಿಣ ಎಣ್ಣೆಯನ್ನು ಒದಗಿಸಿ ಕೊಡುತ್ತಿರುವುದರಿಂದ ಇನ್ನು ಮುಂದಾದರೂ ಸಂಬಂಧಪಟ್ಟ ಅಧಿಕಾರಿಗಳು ನ್ಯೂನತೆಯನ್ನು ಹೋಗಲಾಡಿಸಿ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗುವರಾಗಿ ನಂಬಿರುವ —'ಓರ್ವ ಗ್ರಾಮಸ್ಥ'.

'ಮಂಗಳೂರು ಸಂಗೀತ ನಾಟಕ ಸಭಾ,'– ಇದರ ವ್ಯವಸ್ಥಾಪಕರಾದ ಶ್ರೀ. ಯಂ. ದೇವಡಿಗಾರರು ಸದ್ರಿ ನಾಟಕ ಸಭೆಯ ಮುಂದಿನ ಏಳಿಗೆಗಾಗಿ 'ಕಮಿಟಿ' ಒಂದನ್ನು ಸ್ಥಾಪಿಸುವ ಬಗ್ಗೆ ತಾ 21-8 46ರಲ್ಲಿ ಸಂಘದ ಆಫೀಸಿನಲ್ಲಿ. ಶ್ರೀ ವೈ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸಿದರು. ಶ್ರೀಗಳಾದ ಬಿ. ನರ್ಸಪ್ಪನವರು ಅಧ್ಯಕ್ಷ, ಬಿ. ಭೋಜರಾವ್ ಮತ್ತು ಡಿ ಮೋಹನ್ ದಾಸರು ಗೌರವ ಜೊತೆ ಕಾರ್ಯದರ್ಶಿಗಳು, ಎ. ಆನಂದ ಶೆಟ್ಟರು ಕೋಶಾಧಿಕಾರಿ, ಬಿ. ಆನಂದ ರಾಯರು ಸಂಗೀತ ನಿದರ್ಶಕರು, ಯಂ. ಎ. ದೇವಡಿಗಾರರು; ಒರ್ಗನೈಜರ್‌ರಾಗಿ ನಾರಾಯಣರಾವ್ ಬಾರ್ಕೂರ್, ಟಿ. ರಾಮಚಂದ್ರ ರಾವ್, ಬಿ. ಮಂಜುನಾಥ್, ಕೆ. ಕೊಗ್ಗಣ್ಣ ಭಟ್, ರಾಜ ಗೋಪಾಲ್, ನವೀನ ಚಂದ್ರ, ಮತ್ತು ವೈ. ಉಮೇಶರಾವ್, ಇವರು ಕಮಿಟಿ ಮೆಂಬರರಾಗಿ ಚುನಾಯಿಸಲ್ಪಟ್ಟರು. ಹಲವರ ಭಾಷಣಗಳಾಗಿ ಧನ್ಯವಾದ ಅರ್ಪಣೆ, ಉಪಸಂಹಾರಗಳಿಂದ ಅಂದಿನ ಸಭೆಯು ಮುಕ್ತಾಯವಾಯಿತು.

ಸಂಪಾಜೆ–ಕಾಸರಗೋಡು ಪುತ್ತೂರು ತಾಲೂಕುಗಳ ಮತ್ತು ಕೊಡಗು ಜಿಲ್ಲೆಯ ಅತ್ಯ ಜವಾನುದಾರರೂ ಸಂಪಾಜೆ ಡಿ. ಬೋರ್ಡ್ ಶಾಲಾ ಕಮಿಟಿಯ ಅಧ್ಯಕ್ಷರೂ ಆಗಿದ್ದ ಶ್ರೀಮಾನ್ ಸಂಪಾಜೆ ಮುಂಡಪ್ಪ ರೈ ದೇರ [illegible] ರವರು ತಾ 14ರಂದು [illegible] ದೇಹಕೋಡಿಗುತ್ತಿನ [illegible] [illegible] ಹೆಸರಾಂತ [illegible] ಆಗಿದ್ದ 'ಬೆಟ್ಟದರ [illegible]' 'ಮದನಕುಮಾರಿ' 'ಪ್ರೈ' [illegible] ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಅಂತರಂಗನ [illegible] ಕತೆ, ಸರ [illegible] 1938ರಲ್ಲಿ ಮುದ್ರಾ [illegible] 'ಉಷಾ' ಪತ್ರಿಕೆಯಲ್ಲಿ ಪ್ರಕಟವಾದ 'ಗದ್ದಕ್ಕೆ ಕಂಟ್ರೋಲ್ [illegible]' ಅದು ಅವರ ಕಡೆಯ ಕೃತಿ.

ಅವರ ನಿಧನಕ್ಕಾಗಿ ಕನ್ನಡಿಗರೆಲ್ಲರೂ [illegible] ದಿವಂಗತರ ಆತ್ಮಕ್ಕೆ ಚಿರಶಾಂತಿ ದೊರೆಲಿ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ಲಿಷ್ಟ ಕೇಸುಗಳಿಗೆ ರೂ. 5 ೯ತಿಂಗಳ ಬಳಿಕ ಕಂಟ್ರೋಲಿಗೆ ರೂ. 4|.. ವಿ. ಪಿ. 12 ಆಣೆ ಅಲಾಯಿದ.

Mrs. P. DEVEE,

P. D. S. (A E) Tollygunge, Calcutta.

ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಕಾಸರಗೋಡು– ಕಳೆದ ಐದೂವರೆ ವರುಷಗಳಿಂದ ಅನಂತಪುರ ಜಿಲ್ಲೆಯಲ್ಲಿ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರರಾಗಿದ್ದ ಶ್ರೀ ಕೆ. ಟಿ. ಸೆಟ್ಟಿ, ಬಿ. ಎಸ ಸಿ. ಎ ಜಿ, ಅವರು ಈಗ ತಾನೆ ಕಾಸರಗೋಡಿಗೆ ವರ್ಗಾಯಿಸಲ್ಪಟ್ಟಿದ್ದಾರೆ

ದ. ಕ. ಜಿಲ್ಲಾ ಬೋರ್ಡು ನೌಕರರ ಪರಿಷತ್ತು—ದ. ಕ. ಜಿಲ್ಲಾ ಬೋರ್ಡು ನೌಕರರ ಪರಿಷತ್ತೊಂದು ಬೋರ್ಡು ಆಫೀಸಿನಲ್ಲಿ ಸಂಘದ ಅಧ್ಯಕ್ಷ ಶ್ರೀ. ಎಮ್. ಸುಂದರರಾಯರ ಅಧ್ಯಕ್ಷತೆಯಲ್ಲಿ, ತಾ. 25-8-46ರಲ್ಲಿ ಜರಗಿತು. ಪರಿಷತ್ತಿಗೆ ಜಿಲ್ಲೆಯ ಎಲ್ಲ ಭಾಗಗಳಿಂದ, ಎಲ್ಲಾ ವರ್ಗಗಳ ಬೋರ್ಡು ನೌಕರರು ಹಾಜರಿದ್ದರು, ಜಿಲ್ಲಾ ಬೋರ್ಡಿನ ಕೈಕೆಳಗೆ ಕೆಲಸಮಾಡುವ ಪ್ರತಿ ವರ್ಗದ ನೌಕರರಿಗೆ ಸಮಾನವರ್ಗದ ಸರಕಾರಿ ನೌಕರರಿಗೆ ಸಿಗುವಷ್ಟೇ ಸಂಬಳ, ಭತ್ತೆಗಳು ಸಿಗಬೇಕೆಂದೂ, ೧೯೩೭ರ ಮದ್ರಾಸು ರಜಾ ನಿಯಮಗಳು ಹಿಂದೆಗೆಯಲ್ಪಡಬೇಕೆಂದೂ, ಯುದ್ಧದ ಮುಂಚಿನ ರಜಾದಿನಗಳು ಮತ್ತು ಕೆಲಸದ ಗಂಟೆಗಳು ಪುನಃ ಜಾರಿಗೆ ಬರಬೇಕೆಂದೂ, ಈ ವರೆಗೆ ತಮಗೆ ನ್ಯಾಯವಾಗಿ ಸಿಗಬೇಕಾಗಿದ್ದ ತುಟ್ಟಿ ಭತ್ತೆಯ ಬಾಕಿ ಕೂಡಲೇ ಸಿಗಬೇಕೆಂದೂ, ಸರಕಾರಿ ನೌಕರರ ಸಂಬಳದ ಸುಧಾರಣೆಯ ಬಗ್ಗೆ ರಚಿತವಾದ ಮಂತ್ರಿಮಂಡಲದ ಉಪಸಮಿತಿಯ ಸಲಹೆಗಳು ಬೋರ್ಡು ನೌಕರರಿಗೂ ಅನ್ವಯಿಸಬೇಕೆಂದೂ, ಸರಕಾರವನ್ನು ವತ್ತಾಯಿಸುವ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದವು.

ಮುಂಚಿನ ದಿನ, ಕಾರ್ಕಳ ಬೋರ್ಡು ಹೈಸ್ಕೂಲ್ ಮುಖ್ಯಾಧ್ಯಾಪಕ ಶ್ರೀ. ಯು. ಭವಾನಿ ಶಂಕರರಾಯರ ಅಧ್ಯಕ್ಷತೆಯಲ್ಲಿ, ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗಿದ ಬೋರ್ಡು ಸೆಕೆಂಡರಿ ಶಾಲೆಗಳ ಅಧ್ಯಾಪಕರ ಪರಿಷತ್ತಿನಲ್ಲಿಯೂ ಮೇಲೆ ಹೇಳಿದ ಮಾದರಿಯ ನಿರ್ಣಯಗಳು ಮಂಜೂರಾದವು.

ಕುಂದಾಪುರ–ಈ ತಾಲೂಕಿನಲ್ಲಿ ಈಚೆಗೆ ಬಂದು ಹೋದ ನೆರೆಯ ಹಾವಳಿಯಿಂದ ಹಲವರು ಮನೆಯನ್ನೂ, ಸೊತ್ತುಗಳನ್ನೂ ಕಳಕೊಂಡು ಬಲು ಕಷ್ಟಕ್ಕೆ ಈಡಾಗಿರುವರು. ಹಲವರಿಗೆ ಹೊಟ್ಟೆ ಬಟ್ಟೆಗೇನೇ ಇಲ್ಲದಂತಾಗಿದೆ. ಈ ದೀನಾವಸ್ಥೆಯನ್ನು ಕಂಡು ಕುಂದಾಪುರ ಸಬ್ ಕಲೆಕ್ಟರರು, ತಹಶಿಲ್ದಾರರು ಮತ್ತು ಶ್ರೀ. ವಕೀಲ್. ಬಿ, ಶಿವರಾಮ ಶೆಟ್ರು, ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ರು ವಕೀಲ್, ಶ್ರೀ ಎಸ್. ಎಸ್. ಕೊಳ್ಕೆಬೈಲು ವಕೀಲ್. ಶ್ರೀ ಕೆ. ಎಲ್. ಕಾರಂತರು ಹೈಸ್ಕೂಲು ಟೀಚರ್, ಶ್ರೀ ಫಾದರ್, ಮೊಲೊಸ್ಸೆ ಮುಂತಾದವರು ನೆರೆ ಹಾವಳಿಗೆ ತುತ್ತಾದ ಬಡಜನರ ಸಹಾಯಾರ್ಥವಾಗಿ ಧನ ಸಹಾಯ ಪಡೆಯಲು ಸಂಚರಿಸಿ ರುಪಾಯಿ 600-0-0ವರೇಗೆ ವಂತಿಗೆ ಪಡೆದು ಸಂಗ್ರಹಿಸಲಾಗಿದೆ. ನೆರೆಯ ಸಂಕಷ್ಟಕ್ಕೆ ಬಳಲುವವರಿಗೆ ಸಹಾಯ ಮಾಡುವುದಕ್ಕಾಗಿ "ಫ್ಲಡ್ ರಿಲೀಫ್ ಕಮಿಟಿ" (ನೆರೆ ಹಾವಳಿ ಸಹಾಯಕ ಕಮಿಟಿ) ರಚಿಸಲಾಗಿದೆ. ಈ ಕಮಿಟಿಗೆ ಶ್ರೀ ವಕೀಲ ಬಿ, ಶಿವರಾಮ ಶೆಟ್ರು (ಪ್ರೆಸಿಡೆಂಟು) ಶ್ರೀ ಫಾದರ್ ಮೊಲಾಸೊ (ಕೋಶಾಧಿಕಾರಿ.) ಶ್ರೀ ಕೆ. ಎಲ್. ಕಾರಂತರು. ಶ್ರೀ ವಕೀಲ್, ಕೊಳ್ಕೆಬೈಲು ಸೂರಪ್ಪ ಶೆಟ್ರು. ಈ ಕಮಿಟಿಯವರು ಆನಗಳ್ಳಿ ಬಸರೂರು ಈ ಗ್ರಾಮಗಳಲ್ಲಿ ಊಟಕ್ಕಿಲ್ಲದೆ ಬಳಲುವ ಬಡವರಿಗೆ ಒಂದು ವಾರದ ಅಕ್ಕಿ ಪಡೆಯಲು ಧನಸಹಾಯ ಮಾಡಲಾಗಿದ ಈ ತಾಲೂಕಿನ ಹಲವೆಡೆಗಳಲ್ಲಿ ನೆರೆ ಹಾವಳಿಗೆ ಸಿಕ್ಕಿ ಕಷ್ಟದಲ್ಲಿರುವವರಿಗೆ ಸಹಾಯ ನೀಡಲು ಹೆಚ್ಚು ಹಣವು ಬೇಕು. ಮಹಾಜನರು ಈ ಸದುದ್ದೇಶಕ್ಕೆ ಉದಾರ ದಾನಮಾಡಿ ಬಡವರ ಕಷ್ಟ ಪರಿಹರಿಸಬೇಕಾಗಿ ಕಮಿಟಿಯವರು ಅಪೇಕ್ಷಿಸುತ್ತಾರೆ.

ದ. ಕ. ರೈತರ ಮೇಲಣ ವ್ಯವಹರಣೆ— ದ. ಕ. ಜಿಲ್ಲೆಯ ರೈತರ ಪರವಾಗಿ ಶ್ರೀ ಬಿ. ಎಸ್. ಭಾಸ್ಕರ ರೈಯವರು ಮದ್ರಾಸಿನಲ್ಲಿ ತಾ. ೧೬ರಂದು ಆಹಾರ ಉಪಮಂತ್ರಿಗಳಾದ ಶ್ರೀ ರಾಘವ ಮೆನೋನರ ಭೇಟಿ ಪಡೆದು ಒಂದು ಮನವಿಯನ್ನು ಸಮರ್ಪಿಸಿದರು. ರೈತರು ಕೊಟ್ಟ ದೃಢ ಪತ್ರಿಕೆಗಳಲ್ಲಿ ಹೆಚ್ಚು ಕಡಿಮೆಯಿದ್ದ ಸಂಬಂಧ ಸುಮಾರು ೧೧೦ ಮಂದಿ ರೈತರಮೇಲೆ ಸುಳ್ಳು ದೃಢ ಪತ್ರಿಕೆ ಒಪ್ಪಿಸಿದರೆಂಬ ಆರೋಪದ ಮೊಕದ್ದಮೆಗಳು ನಡೆಯುತ್ತಿರುವುದಾಗಿಯೂ ಸರಕಾರವು ಈ ವಿಷಯದಲ್ಲಿ ಕೈಹಾಕಬೇಕಾಗಿಯೂ ಶ್ರೀ ರೈಗಳು ತಿಳಿಸಿದರು.

ಈ ಮನವಿಯನ್ನು ಕುರಿತು ಸರಾಮರ್ಶೆಯಾಗಿ ತೀರ್ಮಾನಿಸುವ ವರೆಗೆ ಅಂಥ ವ್ಯವಹರಣಗಳನ್ನು ಅಮಾನತ್ತಾಗಿ ಇರಿಸತಕ್ಕದ್ದೆಂದು ದ. ಕ ಜಿಲ್ಲಾ ಮೆಜಿಸ್ಟ್ರೇಟರಿಗೆ ಸರಕಾರವು ತಿಳಿಸಿದೆಯೆಂದು ತಿಳಿದುಬರುತ್ತದೆ.

ಕಡಂದಲೆ–ಕಡಂದಲೆ ಬೋರ್ಡ್ ಹಾಯರ್ ಎಲಿಮೆಂಟ್ರಿ ಶಾಲಾ ವಿಸ್ತರಣಾ ಸಮಿತಿಯ ಬಗ್ಗೆ ಕೋಲಾಪುರ-ಪೂನ-ಬೊಂಬಾಯಿ-ಮದ್ರಾಸ್ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದ್ದ ಪ್ರತಿನಿಧಿಗಳಿಗೆ ತುಂಬಾ ಪ್ರೋತ್ಸಾಹವನ್ನಿತ್ತ ಮಹನೀಯರುಗಳಿಗೆ ಸಂಬಂಧಪಟ್ಟವರು ಧನ್ಯವಾದಗಳನ್ನರ್ಪಿಸುತ್ತಾರೆ.

ಶಿರ್ವ ಹಿಂದೂ ಹೈಸ್ಕೂಲಿನ ಶಂಕುಸ್ಥಾಪನೆ–ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೇ ನಾಡವರ ವಿದ್ಯಾ ವರ್ಧಕ ಸಂಘದವತಿಯಿಂದ ನಡೆಯುವ "ಶಿರ್ವ ಹಿಂದೂ ಹೈಸ್ಕೂಲಿನ" ಹೊಸ ಕಟ್ಟಡದ ಶಂಕುಸ್ಥಾಪನೆಯು ತಾ. 22-8-46ರಲ್ಲಿ ಡಾಕ್ಟರ್. ಯು. ಕೃಷ್ಣಸ್ವಾಚಾರ್ಯರಿಂದ ಶಿರ್ವ ನಡಿಬೆಟ್ಟು ಮನೆಯವರು ಉಚಿತವಾಗಿ ಕೊಟ್ಟಿರುವ ಸ್ಥಳದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಶಂಕು ಸ್ಥಾಪನೆಯಾದ ಬಳಿಕ, ಹಿಂದೂ ಹೈಸ್ಕೂಲಿನ, ಈಗಿನ ಕಟ್ಟಡದಲ್ಲಿ ಸಾರ್ವಜನಿಕ ಸಭೆಯು ಜರಗಿ, ಹಲವರ ಭಾಷಣಗಳಾದುವು. ಸಭಿಕರಲ್ಲಿ ಹಲವರು ಶಾಲಾ ಕಟ್ಟಡಕ್ಕೆ ಧನಸಹಾಯವನ್ನಿತ್ತರು. ಸಭಾಧ್ಯಕ್ಷರು ತಮ್ಮ ಭಾಷಣವನ್ನು ಮಾಡುತ್ತಾ ಈ ಮಹತ್ತಾದ ಕೆಲಸಕ್ಕೆ ಲಕ್ಷ ಗಟ್ಟಳೆಯಲ್ಲಿ ಹಣವು ಬೇಕಾದುದರಿಂದ, ಎಲ್ಲರೂ ಉದಾರ ದಾನಗಳನ್ನು ಮಾಡಿ, ಸಂಘದವರು ಕೈಕೊಂಡಿರುವ ಈ ಕೆಲಸವನ್ನು ನೆರವೇರಿಸಬೇಕೆಂದರು.

ಪುತ್ತೂರು–ಸರಕಾರದ ಸ್ಥಳೀಯ ಸಂಸ್ಥೆಗಳ ಮಂತ್ರಿಗಳ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಎಲ್. ಸಿ. ಪ್ಯಾಸರವರು ಚೊಕ್ಕಾಡಿ ಗ್ರಾಮ ಕಮಿಟಿಯ ರಚನೆ ವಿಚಾರದ ಕುರಿತಾದ ತಕರಾರುಗಳನ್ನು ತಾ. ೧೩ರಂದು ವಿಚಾರಿಸಿ ಕಮಿಟಿಯ ಈಗಿನ ಸದಸ್ಯರ ಯೋಗ್ಯತೆಯ ಕುರಿತು ವಿಚಾರಿಸಿ ಎಲ್ಲರೂ ಯೋಗ್ಯರೇ ಎಂಬ ಅಭಿಪ್ರಾಯ ವ್ಯಕ್ತಗೊಳಿಸಿದರು ಕಮಿಟಿಗೆ ಇನ್ನೊಬ್ಬ ಸದಸ್ಯರನ್ನು ಸೇರಿಸುವುದಾಗಿಯೂ ತಿಳಿಸಿದರು. ಅಮರ ಪಡ್ನೂರು ಪಟೇಲರ ಮೇಲಿನ ಆರೋಪವು ವಿಚಾರಣೀಯವಲ್ಲವೆಂದು ತಮ್ಮ ಮೇಲಿನ ಆರೋಪಕ್ಕಾಗಿ ನೊಂದ ಪಟೇಲರನ್ನು ಸಮಾಧಾನ ಪಡಿಸಿದರು.

ಇಲ್ಲಿಯ ವಕೀಲರಾದ ಶ್ರೀ ಬಿ ಪ್ರಭಾಕರರಾವ್, ಇವರನ್ನು ಇನ್ನು ಮೂರು ತಿಂಗಳ ವರೆಗೆ ಸ್ಪೆಶಲ್ I ಕ್ಲಾಸ್ ಮೆಜಿಸ್ಟ್ರೇಟರಾಗಿ ನೇಮಿಸಲಾಗಿದೆ.

ಸ್ಥಳೀಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಓರ್ವ ಸೂಲಗಿತ್ತಿಯ ನೇಮಕವಾಗಿನೆಯಾಗಿಯೂ, ತಿಳಿದುಬಂದಿದೆ.

ಆಯುರ್ವೇದ ಕಾಲೇಜು–ಮದ್ರಾಸ್ ಸರಕಾರವು ದ. ಕನ್ನಡದಲ್ಲಿ ಸ್ಥಾಪಿಸಲು ಯೋಚಿಸುತ್ತಿರುವ ಈ ಕಾಲೇಜನ್ನು ಕಾಸರಗೋಡಿನ ಕುಂಬಳೆಯಲ್ಲಿ ಸ್ಥಾಪಿಸಲಿರುವದಾಗಿ ತಿಳಿದುಬರುತ್ತದೆ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ. ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

NOTICE

In the Court of the District Munsif of Mangalore.

O. S. No 1511/1946.

Between

The Vijaya Bank Limited, Mangalore, by its Secretary B. Mahabala Shetty — Plaintiff.

and

Albert D'Souza and another —Defendants.

To Defendants. 1. Albert D'Souza son of Francis D'Souza Merchant, residing near Bijai Board School, Mangalore Town.

2. Mrs. Pulla Rasquinha wife of Francis D'Souza residing near Bijai Board School, Mangalore Town.

Please take notice that the above suit filed by plaintiff against you for recovery of Rs. 3000—0—0 is posted for hearing at 11 A. M. on 5-9-1946 in the above Court. You may appear either in person or by pleader on or before the said date and contest the suit, failing which the same will be heard and decided exparte.

(By Order).

Mangalore, 16-8-1946. **B. M. Hegde,** Advocate for Plaintiff.

ಮದ್ರಾಸಿನಲ್ಲಿ ಕನ್ನಡಶಾಲೆ:— ತೆರೆಯುವ ವಿಚಾರವಾಗಿ ಚರ್ಚಿಸಲು ತಾ 18-8-46ರಲ್ಲಿ ವುಡ್‌ಲೇಂಡ್ಸ್‌ನಲ್ಲಿ ಒಂದು ಸಭೆ ಸೇರಿತ್ತು. ಶ್ರೀ. ಡಾ ಎಚ್. ಎಂ. ರಾವ್ ಇವರು ಅಧ್ಯಕ್ಷರಾಗಿದ್ದರು. ಮದ್ರಾಸು ಸರಕಾರದ ಭೂಕಂದಾಯದ ಮಂತ್ರಿಗಳಾದ ಮಾನ್ಯ ಶ್ರೀ। ಕೆ. ಆರ್. ಕಾರಂತರೂ, ಸರಕಾರದ ಸಾರ್ವಜನಿಕ ಕಾರ್ಯಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ವಿ. ಎನ್, ಕುಡ್ವ ಎಂ. ಎ, ಐ. ಸಿ ಎಸ್. ಸಿ, ಐ, ಇ,ಯವರೂ ದುರ್ಗಾ ಪರಮೇಶ್ವರೀ ಮೋಟರ್ ಸರ್ವಿಸಿನ ಮಾಲಿಕರಾದ ಶ್ರೀ ಎಸ್. ಶ್ಯಾಮ ಭಟ್ಟರೂ ಅತಿಥಿಗಳಾಗಿದ್ದರು. ಇಲ್ಲಿಯ "ಕರ್ನಾಟಕ ಮಿತ್ರಮಂಡಲಿ", "ಕರ್ನಾಟಕ ಸೇವಾ ಸಂಘ", ಸಾಹಿತ್ಯ ಪರಿಷತ್ತಿನ ನಗರ ಸಮಿತಿ, ಗೌಡ ಸಾರಸ್ವತ ಬ್ರಾಹ್ಮಣರ ಸಂಘ, ಮೈಸೂರು ಸಂಘ, ಮದರಾಸು ವೀರಶೈವ ಸಂಘ, ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಸಂಘ ಇವುಗಳ ಪ್ರತಿನಿಧಿಗಳೂ ಆಮಂತ್ರಿತರಾಗಿದ್ದರು. ಇಲ್ಲಿಯ ಕನ್ನಡಿಗರ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣ ಕೊಡುವ ಏರ್ಪಾಡಿನ ಕುರಿತು, ಶ್ರೀ. ಯು. ಸೀತಾರಾಮಾಚಾರ್ಯರು, ಶ್ರೀ। ಎಂ। ಮರಿಯಪ್ಪ ಭಟ್ಟರು, ಶ್ರೀ। ಬಿ। ಎನ್। ಶ್ರೀನಿವಾಸಯ್ಯನವರು, ಶ್ರೀ ಸಿ. ಕೆ. ತಿರುಮಲೇಶ್ ಮೊದಲಾದವರು ತಮ್ಮ ತಮ್ಮ ಸಲಹೆಗಳನ್ನು ಮುಂದಿಟ್ಟರು. ಮುಂದಿನ ಕಾರ್ಯ ನಿರ್ವಹದ ಬಗ್ಗೆ ಶ್ರೀ ಪಿ. ಎನ್. ವೆಂಕಟ್ರಾವ್—ಎಂ. ಎಂ ಭಟ್ ಇವರ ಚಾಲಕತ್ವದಲ್ಲಿ ಶ್ರೀ। ಬಿ। ಎನ್। ಶ್ರೀನಿವಾಸಯ್ಯ, ಶ್ರೀ ಕೆ. ಸಂಜೀವ ಕಾಮತ್, ಶ್ರೀ ಬಿ. ಜೋಗಪ್ಪ, ಶ್ರೀ ಕೆ. ವಿಠಲ ರಾವ್, ಶ್ರೀ ಡಾ. ಎಂ. ಆರ್. ಬೈಲ್, ಶ್ರೀ ಸಿ. ಕೆ. ತಿರುಮಲೇಶ್, ಶ್ರೀ ಯು. ಸೀತಾರಾಮಾಚಾರ್ಯ, ಶ್ರೀ ಮುದ್ರಾಡಿ ಜನಾರ್ದನಾಚಾರ್ಯ, ಶ್ರೀ ಡಾ ಎಚ್. ಎಂ. ರಾವ್, ಶ್ರೀ ವಿ. ಈಶ್ವರ ಭಟ್, ಶ್ರೀ ಡಾ ಸಾಂಗಳ ಶ್ರೀನಿವಾಸ ರಾವ್, ಶ್ರೀ ಕೆ. ಸುಬ್ಬರಾವ್, ಶ್ರೀ ಎಂ. ಸಂಜೀವ ರಾವ್, ಶ್ರೀ ಬಿ. ಟಿ. ಸುಂದರ ರಾಜ ಅಯ್ಯಂಗಾರ್ ಶ್ರೀ ರೆವೆರೆಂಡ್ ಜಾನ್ ಕಲ್ಯಾಣ ರಾಮಯ್ಯ ಇವರನ್ನೊಳಗೊಂಡ ಘಟನಾ ಸಮಿತಿಯೊಂದು ಏರ್ಪಟ್ಟಿತು. ಮದ್ರಾಸಿನಲ್ಲಿರುವ ಕನ್ನಡಿಗರ ಖಾನೇಸುಮಾರಿ ಇತ್ಯಾದಿ ಕಾರ್ಯಗಳನ್ನು ಸದ್ಯದಲ್ಲೇ ಸಮಿತಿಯು ಕೈಕೊಳ್ಳಲಿದೆ.

WANTED.

Applications are inv... ...om candidates for the following posts on scales of pay noted below for the National High School, Barkur, (S. K.)

Secondary Grade Trained I Rs. 30–2/2–50

Drawing Master Rs 25–2/2–45

Physical Instructor Y. M. C. A. Trained Rs. 30–2/2–50 & Y. M. C. A. allowance of Rs. 10 per month.

Dearness allowance at Government rates will be given. Experienced teachers will be given a higher initial salary according to qualification & service. The candidates should be prepared to join service immediately. Y. M. C. A. lower grade tr... ...d teacher with experience in Drill & Drawing may also apply. Application should be addressed to:—

THE PRESIDENT,
Barkur Educational Society,
BARKUR. (S. K.)

and should reach not later than 31-8-'46

ಮುಂಬಯಿ— ಇಲ್ಲಿ ಯಕ್ಷಗಾನ ಕಲಾಸೇವೆ— ತಾ 11-8-46ರಲ್ಲಿ ಕೋಟೆಯ ಹಮಾಮ್ ಸ್ಟ್ರೀಟ್, ಪೋರ್ಚುಜೆಂಟರ್ ಬಿಲ್ಡಿಂಗಿನ ಒಂದನೇ ಮಾಳಿಗೆಯಲ್ಲಿ ಕೆ. ಲಿಂಗಪ್ಪ ಅತ್ತಾವರ ಪ್ರೋತ್ಸಾಹದ ಮೇರೆಗೆ ಬೊಂಬಾಯಿಯ ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕಲಾ ಸೇವೆಯೊಂದು ನೆರೆಯಿತು. ಪ್ರಸಂಗ ಕೃಷ್ಣ ಸಂಧಾನ. ಶ್ರೀಗಳಾದ ಮುಡ್ಕೂರು ಅಪ್ಪು ರಾಯರ ಹಾಡುಗಾರಿಕೆಯೂ ಪುರುಷೋತ್ತಮನವರ ಮೃದಂಗ ವಾದನವೂ ಸಭೆಯವರನ್ನು ತಲ್ಲೀನಗೊಳಿಸಿತ್ತು. ಶ್ರೀಗಳಾದ ಮುದ್ರಾಡಿ ಭೋಜರಾಜ ಶೆಟ್ಟಿ ಕೃಷ್ಣ, ಅಡ್ವೆ ವಾಸು ಶೆಟ್ಟಿ ಕೌರವ, ಅದಪ್ಪ ಶೆಟ್ಟಿ ವಿದುರ, ಎರ್ಮಾಳು ಎಲ್ಲಪ್ಪ ಶೆಟ್ಟಿ ಧರ್ಮ, ಸೂಡ ತಿಮ್ಮಪ್ಪ ಶೆಟ್ಟಿ ಕುಂತಿ. ಕಿನ್ನಿಗೋಳಿ ಸುಂದರ ಶೆಟ್ಟಿ ಪರಶುರಾಮ, ಕೆ. ಲಿಂಗಪ್ಪ ಅತ್ತಾವರರು ನಾರದ, ಸೂಡ ಶೀನಪ್ಪ ಶೆಟ್ಟಿ ಕರ್ಣ ಪಾತ್ರವಹಿಸಿದ್ದರು.

ಬೊಂಬಯಿ—ಹೋಟೆಲು ಕಾಮಗಾರ ಯೂನಿಯನ್ ಎಂಬ ಸಂಘ ಒಂದು ತಾ. 16-8-46ರಲ್ಲು ಬಾಬುಲನಾಥ ಮುನಿಸಿಪಾಲಿಟಿಯ ಕಂಪೌಂಡಿನಲ್ಲಿ ಶ್ರೀ ಮಹಾಬಲ ಸೆಟ್ರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಚಿಸಲ್ಪಟ್ಟಿತು. ಸುಮಾರು ಐನೂರು ಜನ ನೆರೆದಿದ್ದರು. ಹೊಟೇಲು ಕೆಲಸದವರಿಗೆ ಸಂಬಂಧಿಸಿರುವ ನಿರುದ್ಯೋಗ, ಕಡಿಮೆ ಸಂಬಳ, ರಜೆ, ಕೆಲಸದ ಟೈಮು, ಮೊದಲಾದ ವಿಷಯಗಳ ಕುರಿತು ಕಾಂಗ್ರೆಸು ಪಕ್ಷದ ಶ್ರೀ. ವೆಂಕಟೇಶ ಕಾಮತ್ ಮತ್ತು ಶ್ರೀ. ಯು. ಮಾಧವನ್ ಮೊದಲಾದವರು ಭಾಷಣ ಮಾಡಿದರು.

ಪಡುಬಿದ್ರೆ—ಇದೇ ತಿಂಗಳ 2ನೇ ವಾರದಲ್ಲಿ ಪಡುಬಿದ್ರೆಯ 'ಕಡ್ಡಾಯ ಶಿಕ್ಷಣ ಪ್ರಚಾರ' ಸಮಾರಂಭವು ಸ್ಥಳೀಕ ಬೋ. ಹೈ. ಎ ಶಾಲೆಯಲ್ಲಿ, ಶ್ರೀ ಕೆ. ಸಂಜೀವ ಭಟ್, ಯಂ. ಎ ಯಲ್ ಟಿ ಇವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ ಜರಗಿತು. ವಿದ್ಯಾರ್ಥಿಗಳ ನಗರ ಮೆರವಣಿಗೆಯು ವಾದ್ಯ ಘೋಷದೊಡನೆ ನಡೆಯಿತು. ಮೆರವಣಿಗೆ ಯೊಡನೆ ಊರ ಮಹನೀಯರು ಶಾಲೆಗೆ ಬಂದು ಸಾರ್ವಜನಿಕ ಸಭೆ ನೆರೆದರು. ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ವಿನೋದ ಪ್ರದರ್ಶನಗಳಿಂದ ಸಭಿಕರನ್ನು ಸಂತೋಷ ಪಡಿಸಿದರು. ಅನೇಕರು ತಮ್ಮ ಉತ್ತೇಜಕ ಭಾಷಣಗಳಿಂದ ಊರವರ ಉತ್ಸಾಹಕ್ಕೆ ಕಳೆಗೊಟ್ಟರು. ಮಾನ್ಯ ಅಧ್ಯಕ್ಷರು ಗ್ರಾಮಸ್ಥರನ್ನು ಸರ್ವತೋಮುಖವಾಗಿ ಶ್ಲಾಘಿಸಿ ಈ ಶಾಲೆಯು ಜಿಲ್ಲೆಯ ಅತ್ಯುತ್ತಮ ಶಾಲೆಗಳಲ್ಲಿ ಒಂದಾಗಿರುವುದೆಂದೂ ಇಂತಹ ವಿದ್ಯಾವಂತ ಕೇಂದ್ರಕ್ಕೆ ಹೈಸ್ಕೂಲೊಂದು ಅಗತ್ಯವೆಂದೂ ಹೇಳಿದರು. ಬಳಿಕ ಶ್ರೀ ಯಂ. ಆರ್. ಪ್ರಭುಗಳು ತಮ್ಮ ವೆಚ್ಚದಿಂದ ಸಾವಿರಕ್ಕೆ ಮಿಕ್ಕ ಮಕ್ಕಳಿಗೂ ಸಭಿಕರಿಗೂ ಸಿಹಿತಿಂಡಿ ಹಂಚಿ ಸಂತೋಷ ಪಡಿಸಿದರು. ಮೆರವಣಿಗೆಯ ವಾದ್ಯಘೋಷ ಇತ್ಯಾದಿಗಳ ವೆಚ್ಚವನ್ನು ಶ್ರೀಗಳಾದ ಯಚ್ ದಾಸ ಗಡಿಯಾರ್, ಶ್ರೀ ವಾಮನ ಅನಂತಯ್ಯ ಮತ್ತು ಶ್ರೀ ಯನ್. ನಾರಾಯಣ ಶೆಟ್ಟಿ ಇವರು ವಹಿಸಿಕೊಂಡರು.

ಬೈಲೂರು—ಇಲ್ಲಿಯ ಮಹಾಜನರ ಸಭೆಯು ತಾ. 9-8-46ರಲ್ಲಿ ಶ್ರೀ. ಜೆ ನಾಗಣ್ಣ ಹೆಗ್ಗಡೆರ ಅಧ್ಯಕ್ಷತೆಯಲ್ಲಿ ಜರಗಿ 1942ನೇ ಆಗೋಸ್ತು 9ನೇ ತಾರೀಕಿನ ಗೊತ್ತುವಳಿಯನ್ನು ಮಂಜೂರು ಮಾಡಿದ್ದಲ್ಲದೆ ದೇಶವು ಸ್ವಾತಂತ್ರ್ಯ ಪಡೆಯುವದಕ್ಕಾಗಿ ಹೋರಾಡಿದ ಕಾಂಗ್ರೆಸ್ ಸಂಸ್ಥೆಯಮೇಲೆ ಅಚಲ ವಿಶ್ವಾಸವನ್ನು ಈ ಮೂಲಕ ವ್ಯಕ್ತ ಪಡಿಸುತ್ತದೆಂಬೀ ಠರಾವನ್ನು ಶ್ರೀ ಬಿ. ಕೇಶವ ಕಿಣಿಯವರು ಓದಿ ಹೇಳಿ, ಭಾಷಣವಿತ್ತ ಮೇಲೆ ಮಂಜೂರು ಮಾಡಲಾಯಿತು. ಶ್ರೀಗಳಾದ ಬಿ. ಅನಂತ ಕಿಣಿಯವರು, ಡಿ. ಡಿ. ಅಶ್ವಾಲ್‌ರು, ಎಂ. ಅನಂತಪ್ಪ ಕಿಣಿಯರು, ಮತ್ತು ಎಂ. ಅಪ್ಪು ರಾಯರು ಕಾಂಗ್ರೆಸ್ ಗೊತ್ತುವಳಿಯ ಮೇಲೆ, ಮತ್ತು ಪ್ರಕೃತದ ರಾಜಕೀಯ ವಾತಾವರಣದ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ ಬಳಿಕ, ಶ್ರೀ. ಎಂ. ಎ. ಕಿಣಿಯವರು "ಮದ್ಯಪಾನ ವಿರೋಧವನ್ನು ಈಗೀಗಲೇ ನಮ್ಮ ಜಿಲ್ಲೆಯಲ್ಲೂ ಜಾರಿಗೆ ತರಬೇಕು, ಇಲ್ಲವೆ ಆರ್ಥವರ್ಷದ ಮೇಲಾದರೂ ಜಾರಿಗೆ ತರಬೇಕು" ಎನ್ನುವ ಗೊತ್ತುವಳಿಯನ್ನು ಸಭೆಯಲ್ಲಿ ಮಂಡಿಸಲಾಗಿ ಸರ್ವಾನುಮತಿಯಿಂದ ಅಂಗೀಕರಿಸಲಾಯಿತು. ಅಧ್ಯಕ್ಷರ ಸಂದರ್ಭೋಚಿತ ಭಾಷಣ, ಧನ್ಯವಾದ, ವಂದೇ ಮಾತರಂ ಇವೇ ಕಾರ್ಯಕ್ರಮಗಳಿಂದ ಸಭೆಯು ಕೊನೆಗಂಡಿತು.

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಫೋಟೊ ದೊಡನೆ ಬರೆಯಿರಿ.

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

ನರೆತ ಕೂದಲು

ರಂಗನ್ನು ಉಪಯೋಗಿಸಬೇಡಿರಿ!

ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ. ಆಗ ತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕಪ್ಪಗೆ ನಿಲ್ಲುವುದು. ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವವು. ಕೆಲವೇ ನರೆತ ಕೂದಲುಗಳಿದ್ದರೆ ರೂಪಾಯಿ 2/- ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿದ್ದರೆ ರೂ. 3-8-0ರ ಸೀಸೆ; ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/-ರ ಒಂದು ಸೀಸೆಯನ್ನು ಪಡಕೊಳ್ಳಬೇಕಾಗುವುದು. ಗುಣಕಾರಿಯಲ್ಲವೆಂದು ರುಜುಪಡಿಸುವವರಿಗೆ ಇಮ್ಮಡಿ ಕ್ರಯ ವಾಪಾಸು.

ಬಿಳಿ ತೊನ್ನು ಮತ್ತು ಲ್ಯುಕೊಡ್ರ್ಮ

ಬಿಳಿ ತೊನ್ನು ಮತ್ತು ಲ್ಯುಕೊಡ್ರ್ಮ (Leucoderma) ಮಹಾ ವ್ಯಾಧಿಗಳನ್ನು ಹೋಗಲಾಡಿಸುವರೆ ಈ ಔಷಧಿಯನ್ನು ಲೇಪಿಸಿರಿ. ನೂರಾರು ಹಕೀಮರೂ, ಡಾಕ್ಟರರೂ, ಕವಿರಾಜರೂ ಅಸಾಧ್ಯವೆಂದು ಘೋಷಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪಾಯಿ 2-8-0.

ಕಿವುಡುತನ

ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ ಬೆಲೆ ರೂಪಾಯಿ 2/-

ಸ್ತಂಭನ ಮಾತ್ರೆ

ಸಂಜೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರಿಂದುಂಟಾಗುವ ಆನಂದವನ್ನು ಅನುಭವಿಸಿಯೇ ತೀರಬೇಕು. ಕಳೆದುಹೋದ ಮನುಷ್ಯತ್ವವು ವಿದ್ಯುಚ್ಛಕ್ತಿಯೋಪಾದಿಯಲ್ಲಿ ಮರಳಿ ಬರುವುದು. ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ 16 ಮಾತ್ರೆಗಳಿಗೆ ರೂಪಾಯಿ 1/ ಪತ್ರವ್ಯವಹಾರ ಇಂಗ್ಲಿಷ್ ವ ಹಿಂದಿಯಲ್ಲಿ.

Krishna Chandra,
No. 5, P.O. Katri Sarai (Gaya)

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಣೈಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು ಡಾ। ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಮಾಲಕರ ದೌರ್ಬಲ್ಯವೇ ಮಜೂರರ ಪ್ರಾಬಲ್ಯವೇ?

ಇನ್ನೇನು? ಮಜೂರರಿಗೆ, ಕಾರ್ಖಾನೆಯವರಿಗೆ, ಪ್ರೆಸ್ಸಿನ ಕೆಲಸಗಾರರಿಗೆ, "ಸ್ವರಾಜ್ಯ"ವೋ "ರಾಮ ರಾಜ್ಯ"ವೋ ದೊರಕಲು ಎರಡೇ ಇಂಚು! ಹೊಟ್ಟೆ ತುಂಬ ಅನ್ನ, ಕೈ ತುಂಬ ದುಡ್ಡು, ಮೈತುಂಬ ಬಟ್ಟೆ ಆದರೆಗೂ ಬೇಡವೆ? ಅವನ್ನೆಲ್ಲ ಕೊಡಿಸುವ ದಾನ ಪುರೋಹಿತರು (ಪ್ರೇತರು?) ಪೂರ್ವ ಪುಣ್ಯದಿಂದ ಆನಾಯಾಸವಾಗಿ ಅವರಿಗೆ ಗಂಟುಬಿದ್ದಿದ್ದಾರೆ!

ಈ ಪುರೋ ಆಹಿತರು ಅಂದರೆ "ಎಯಬಿಳವರಿಂದ ಉದ್ಧಾರಗೊಳ್ಳುವವರೆಂದು" ನಂಬಲಾದ ಜಯ ಆ "ಭಾಗ್ಯದ ಪಾಲನ್ನು" ಹೇಗಾದರೂ ಅವರ ಹೆಗಲಿಗೆ ಹೊರಿಸಿ ಒಡೆಸಿ ಹೊರದೂಡಿ ಇವರಿಗೆಲ್ಲ ಹೊರಲಾಗದಷ್ಟು ದಾನ ಮಾಡಿಸುವ ಈ ಯುಗದ ಧರ್ಮದಾಯಕರೋ ಅವರು ಇವರಿಗೆ ಆ ಲಾಭದ ಗಂಟಿನ ಮಾರ್ಗವನ್ನು ಗ್ರಹಿಸುವ "ಆಪತ್ಕಾಲಕ್ಕೆ ಜ್ಞಾನ ದಾರುಚಾರ್ಯ"ರು—ಇನಾಕಮ್ ಟ್ಯಾಕ್ಸ್ ಆಫೀಸಿನವರಿಗೂ ಪತ್ತೆಹಚ್ಚಲು ಅಸಾಧ್ಯವಾಗಲೇ ಜತೆಯಲ್ಲಿ ಬಂದಿವೆ, ಅದರಿಂದಲೇ ಕೆಲ ಮಜೂರರಿಗೆ ಬೋನಸ್ ಹಂಚಿಸಿದೆವೆಂಬ ಸ್ಪಿರಿಟ್ ಸ್ವಪ್ರತಿಷ್ಠೆಯ ಅಗ್ಗದರದ ಕೀರ್ತಿಮಾಲೆಯನ್ನು ಇವರು ಕೊಂಡು ಕೊರಳಿಗೆ ಹಾಕಿಕೊಂಡು ಕುಣಿದಾಡುತ್ತಿದ್ದಾರೆ, ಹಾರಾಡುತ್ತಿದ್ದಾರೆ!

ಬಂಚಿನ ಕೆಲಸಗಾರರ ಉದ್ಧಾರವಾಯಿತು, ಇನ್ನು ನೇಕಾರರು, ಮುನ್ಸಿಪಲ್ ಉದ್ಯೋಗಿಗಳಿಗೆ ಇವರಿಂದ ಒಳ್ಳೆಯ ದಿನಗಳು ಬರಲಿವೆಯಂತೆ! ಈ ಪುರೋ ಆಹಿತರ ಬಾಯಿ ಬಡಾಯಿಯ ನೀಗ ಮಾನಗಳ ವೈದಾನ ಭಾಷಣಗಳನ್ನಾಲೈಸಿ, ತಾತ್ಕಾಲಿಕವಾಗಿ ಗಾಳಿ ತುಂಬಿದವರು, ಮುಷ್ಕರವೆಂಬ ಮೂರು ಅಕ್ಷರದ ಮಂತ್ರೋಚ್ಚಾರಣೆಗೆ ಸಿದ್ಧರಾಗುವ ಮುಹೂರ್ತ ಬಂದೀತೆಂದಾದರೆ ಈ ಪುರೋಹಿತರ ಆಖಂಡ ಖಂಡಿಗಟ್ಟಲೆ ಪ್ರಚಂಡ ಮುರ್ಖತನೆಯನ್ನು ನೇವರೇ ಕಾಪಾಡಿದಂತಾಯಿತು!

ಈಗ ಅವರ ಕೊಂಕು, ಶಾಗೆಯ ಕಣ್ಣು ಮುದ್ರಾಲಯಗಳ ಮೇಲೆ! ಆ ಕೆಲಸಗಾರರಿಗಿನ್ನು ಯಕ್ಷಿಣೀ ಮಾಯೆಯಿಂದ ದೇವೇಂದ್ರ ಲೋಕದ ಸುಖ ಜೀವನವೇ "ಗೆರಂಟಿ" ಹಲವರ ಭಾಗಕ್ಕೆ ದು ವ್ಯಯ ಸಂವತ್ಸರವಾದರೂ, ಈ ಕೆಲಸಗಾರರ ಪುಣ್ಯದಿಂದ ಅವರ ಪಾಲಿಗಿದು ಆಯದ ಸಂಪಾದನೆಯ (ಕೋಪದ ರಾಹುವಿನ ದೆಸೆಯ) ವರ್ಷವೇ! ಅವರಿಗಿನ್ನು ಕಡಿಮೆ ಯಾವುದಕ್ಕೆ? ಪುರೋಹಿತರು ಆಗಲೇ ನಾಂದಿ ಶ್ಲೋಕ ಹಾಡಿದ್ದಾರೆ. ಏನು? ಪ್ರೆಸ್—ಕೆಲಸ ಕಲಿಯುವ ಅಲೋಚನೆ ಬಂದಾಗಲೇ ಅಂಥವರಿಗೆ ತಿಂಗಳಿಗೆ ೨೫ ಸಂಬಳ ಕೊಟ್ಟು ಧನ್ಯರಾಗಿ; ಮತ್ತೆ ಅವರ ಸಂಬಳ ತಿಂಗಳಿಗೆ—ಗಜೆಟೆಡ್ ಆಫೀಸರರ ಗ್ರೇಡಿಗೇರಿಸಿದಂತೆ—ರೂ ೧೫೦ಕ್ಕೇರಿಸಿ, ಅವರ ಕೆಲವರ ಕಾಲೂ ಬೇಕಾದರೆ ಹಿಡಿದು ಅವರಿಗೆ ಇಷ್ಟವಿರುವಷ್ಟೇ ಕೆಲಸ ಮಾಡಿಸಿಕೊಳ್ಳಿ. ಇದರ ಮೇಲೆ ಪ್ರೊವಿಡೆಂಟ್ ಫಂಡು ಮೊದಲಾದ ವೈಭವ ವೈಖರಿಗಳ ಮಾತು ಬೇರೆ! ಪುಣ್ಯಕ್ಕೆ "ಉಚಿತ ವಸತಿಗೃಹ" (ಫ್ರೀ ಕ್ವಾರ್ಟರ್ಸ್) (ಪ್ರೆಸ್ಸಿಗೆ ಬಂದು ಹೋಗಲು) "ಕಾರ್ ಎಲೊವೆನ್ಸ್" ಇತ್ಯಾದಿಗಳನ್ನು ಕೇಳಲು ಈ ಪುರೋಹಿತರಾದ್ರಿಗಳು ಎಲ್ಲಿಯೋ ಗಡಿಬಿಡಿಯಲ್ಲಿ ಮರೆತಿರಬೇಕು, ಪಾಪ! ಕೆಲಸಗಾರರ ದುರದೃಷ್ಟ.

"ಹಾವಯ್ಯ, ೧೫೦ ರೂಪಾಯಿಗಳಲ್ಲ, ರೂ. ೩೦೦ ಕೊಟ್ಟು ಬಿಡಿ ಎಂದರೆ ಪುರೋಹಿತರ ಗಂಟೇನು ಖರ್ಚಾಗುತ್ತದೆ? ೬ ತಿಂಗಳಿನದಲ್ಲ, ೬ ತಿಂಗಳಿನ ಬೋನಸನ್ನೇ ಇಟ್ಟುಬಿಡಿ ಎಂದರೆ ಪುರೋಹಿತರಿಗೇನು ನಷ್ಟವಾಗುತ್ತದೆ. ತದರೆ ತಾವೇ ದುಡ್ಡು ಹಾಕಿ ಕಾರ್ಖಾನೆಗಳನ್ನೋ ಮುದ್ರಾಲಯಗಳನ್ನೋ ನಡೆಸಿ ಆ ಲಾಭದ ಗುಟ್ಟೆಯನ್ನು ಪರೋಪಕಾರ ಬುದ್ಧಿಯಿಂದ ಆ ಕೆಲಸಗಾರರಿಗೆ ಔದಾರ್ಯಪೂರ್ವಕವಾಗಿ ಹಂಚಿಕೊಡುವ "ಘನ ಸಿದ್ಧಾಂತ"ವನ್ನು ಈ ಬುದ್ಧಿವಂತ ಪುರೋಹಿತರೇಕೆ ಇನ್ನೂ ಮಾಡಲು ಹಿಂಜರಿಯುತ್ತಿರುವರು? ಇವರ ಪೌರುಷವೆಲ್ಲ ಉತ್ತರ ಕುಮಾರನಂತೆ, ಇತರರ ತೊಡೆಗಳ ಮೇಲೆ ಹುರಿಹಗ್ಗಗಳನ್ನು ಹೊಸೆದು ವಿಜೃಂಭಿಸುವುದರಲ್ಲಿಯೋ! ಕೊನೆಗೊಳ್ಳುವುದು "ಮೊಗಲಾಯಿ ದರ್ಬಾರಿನ ನಿರಂಕುಶ ಪಾರುಪತ್ಯ"ದ ಇವರ ಕೀರ್ತಿಗೆ ಭೂಷಣವೇ? ಪ್ರೆಸ್ ಮಾಲಕರಿಗೂ ಅವರದೇ ಒಂದು ಸಂಘವಿಲ್ಲದ ಮಾತ್ರಕ್ಕೆ, ಪ್ರೆಸ್ ಕೆಲಸಗಾರರೂ ಹೇಳ ಬಯಸದ ಅಂಥ "ಅಶಾಶಕ್ತೇಣ ಇಡುವ ರೀತಿ"ಯ ಕೀಳಿಕೆಗಳನ್ನೇ ಆ ಮಾಲಕರಿಗೆ ಹೇಳಿ ಬರೆಯಿಸುವ ಒಟ್ಲರನ ನಿಮಿತ್ತ ಮಾಡಿರಿಯ ಕೆಂಪು ಗಡ್ಡದ ಸರ್ವಾಧಿಕಾರ ಇವರಿಗೆ ಎಲ್ಲಿಂದ ಬಂತು? ಅದನ್ನು ಇವರಿಗೆ ಕೊಟ್ಟವರು ಯಾರು? ಪ್ರೆಸ್ ಮಾಲಕರ ಆದಾಯ ನಷ್ಟವನ್ನು ಕ್ರಮದಂತೆ ತಿಳಿದುಕೊಳ್ಳಲು ಕಾಸುಬಡದ ಸರಕಾರವಿದೆ; ಮಾಲಕ ಮಜೂರರಿಬ್ಬರಿಗೂ ನ್ಯಾಯವಾಗಿತ್ತು ತಕ್ಕ ಮಸೂದೆ ಶಾಸನ ಮಾಡಲು ಬಡವರ ಬಂಧುಗಳಾದ ಕಾಂಗ್ರೆಸ್ ಮಂತ್ರಿಗಳಿದ್ದಾರೆ. ಹಾಗಿರುವಲ್ಲಿ ಅವರಿವರ ನಡುವೆ, ಅಧಿಕ ಪ್ರಸಂಗದ, ಲಜ್ಜೆ ಭಂಡತನದ "ಸೋಲ ಏಜನ್ಸಿ" ವ್ಯವಹಾರ ನಡೆಸಲು ಯಾವ "ಸ್ವಯಂಘೋಷಕದ ನಾಯಕ"ರೆಂಬವರಾದರೂ ಅಗತ್ಯವೆ?

ಕೊನೆಗೆ ನೋಡ ಹೋದರೆ ಈ ಪುರೋಹಿತರು ಯಾರಪ್ಪ? ಬಡವರ ಉದ್ಧಾರಕ್ಕೆ ಸೊಂಟಕಟ್ಟಿದವರೇ? ಹಲವು ಬಾರಿ ಸಿಕ್ಕವರನ್ನು ಸಿಕ್ಕಂತೆ ಬೈದು ಜತೆಯಲ್ಲಿ ಮಜೂರರ ಕಿವಿಯರಳುವಂತೆ, ಅವರ ಮನಸ್ಸೊಲಿಯುವಂತೆ ಅವರಿಗೆ ಆಸೆ ಹುಟ್ಟಿಸುವ "ನಾಟಕದ ಮಾತು"ಗಳನ್ನಾಡಿ, ಅವರನ್ನು ನಂಬಿಸಿ, ಎತ್ತಿಕಟ್ಟಿ ಅವರಿಗೆ ಪಾತಾಳಕ್ಕೆ ದಾರಿ ತೋರಿಸುವ ಉತ್ಸವ ಮೂರ್ತಿಗಳೇ ಇವರು! ಇವರು "ಆಪದ್ಬಾಂಧವರಲ್ಲ," "ಬರೆದು ಎಟ್ಟ ಬಸವಗಳಲ್ಲ," "ಮಜೂರ ಬಂಧುಗಳ ಹೆಸರಲ್ಲಿ ಹೊಟ್ಟೆ ಹೊರೆದುಕೊಳ್ಳುವವರಲ್ಲ" ಎಂದು ಕೆಲವರಾದರೂ "ಗತಿಗೆಟ್ಟವ"ರೆಂಬವರೊಡನೆ "ಮತಿಗೆಟ್ಟವ"ರೆಂಬವರೂ ಬಂದು ಅಂಟಿಕೊಂಡಿದ್ದು "ಕಪ್ಪು ಸಂತೆಯ ವ್ಯಾಪಾರ"ದ ಚಿಹ್ನೆಯೋ? ಇವರ ೧೫೦ರ ಆದರ "ಮತಿ ಇದ್ದವ"ರ ಲಕ್ಷಣವಲ್ಲ! ಏನೋ! ಈ ಪಂಚಾಂಗದಲ್ಲಿ "ಉನ್ಮಾದ ಪರೀಕ್ಷೆ"ಯ ವೈದ್ಯಶಾಸ್ತ್ರವೂ ಅಡಕವಾಗಿಲ್ಲವೆನ್ನಿ.

ಇಷ್ಟು ಮಡಿವಂತ ಸ-ನಾತನ ಪೌರೋಹಿತ್ಯ ನಡೆಸಿಯೂ, ಉತ್ಸವ ಮೂರ್ತಿಗಳು ತಮ್ಮ ಮುದ್ರಣ ಕಾರ್ಯಗಳಿಗಾಗಿ ಅವೇ ಮುದ್ರಾಲಯಗಳ ಹಂಗಿಗೊಳಗಾದವರಂತೆ ಅವರ ಕಾಲ ಬುಡಕ್ಕೇ "ಗಿರಾಕಿ"ಯಾಗಿ ಬಿತ್ತೈಸುವಂತಾದರೆ ಅದು ತೀರಾ ನಾಚಿಕೆಗೇಡು; ಇವರ ಆತ್ಮಾಭಿಮಾನಕ್ಕೂ ಸ್ಥಾನಮಾನ "ಪ್ರಿಸ್ಟೇಜ"ಗೂ ಸೇಕಡಕ್ಕೆ ಸೇಕಡಾ ಕುಂದು. ಅಷ್ಟೇ ಅಲ್ಲ; ಇವರು ಯಾವದೊ ಕಂಪೆನಿ ಫ್ಯಾಕ್ಟರಿಗಳ ಮೇಲೋ, ರುಜುವಾತಿಗೆ ಸಿಕ್ಕಲು ಕಷ್ಟವಾದ ಎಂಥೆಂಥದೋ ಆರೋಪಗಳನ್ನು ಬರೆದು, ಅಚ್ಚು ಮಾಡಲು ತರುವ ಆ ಕರ್ಕಶ ಕರಪತ್ರಗಳನ್ನೋ ಇವರ "ಜಂಬುಕ ಗರ್ಜನೆ"ಗಳ ಪುಸ್ತಕವಹಿಗಳನ್ನೋ ಪ್ರೆಸ್ಸಿನ ಮಾಲಕರೂ ಹತ್ತೆಂಟು ಕಣ್ಣು ಮಾಡಿಕೊಂಡೇ, ಒಂದು ವೇಳೆ ವಕೀಲರ ಸಲಹೆ ಪಡೆದೇ ಮುದ್ರಿಸುವುದು ಬಹಳ ಕ್ಷೇಮ. ಅಷ್ಟೇ ಅಲ್ಲ. ಈ "ಪರೋಪದೇಶದ ಪಂಡಿತರು" ಮುದ್ರಾಲಯಗಳಲ್ಲಿ ತಮ್ಮ ಕೆಲಸ ಮಾಡಿಸಿ ವರ್ಷಗಳಾದರೂ ಅವಕ್ಕೆ ಸಲ್ಲತಕ್ಕ ಹಣವಿನ್ನೂ ಬಾಕಿ ಮಾಡಿಸಿಕೊಂಡ ಈ ಸುಭಗತನದ ದಾಖಲೆಗಳೂ ಅಲ್ಲಲ್ಲಿ ಇಲ್ಲದೆ ಹೋಗಿಲ್ಲವೆಂಬುದು ಕೂಡ ಗೊತ್ತಿರಲಿ!

ಸೊಕ್ಕಿದ ಕೊಬ್ಬಿದ ತಲೆ, ಬಿಂಕದ ಕೊಂಕಿನ ನಡೆ, ಗರ್ವದರ್ಪಗಳ ನುಡಿ, ತುಂಟ ಮನೋವೃತ್ತಿ- ಇವುಗಳಿಂದ ಯಾರಿಗೂ ಯಾವ ಪ್ರಯೋಜನವೂ ಆಗದು. ಅದನ್ನಿನ್ನೂ ತಿಳಿಯಲೊಲ್ಲೆನೆನುವವರಿಗೆ ಕೈಯಿಂದಲೋ ಕಾಲಿನಿಂದಲೋ ನಮಸ್ಕಾರ!

(ಕಂಠೀರವದ ಪರಶುರಾಮನ ಪಂಚಾಂಗದಿಂದ)

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C. 431/1946. S ■. P. 384/1946

ವಾದಿ—ಮಹಾಬಲ ಶೆಟ್ಟಿ

ಪ್ರತಿವಾದಿ—ಸಂಜೀವ ಶೆಟ್ಟಿ ಲಚ್ಚಮ್ಮ ಶೆಡ್ತಿ ಮಗ ಕುಂದಾಪುರ ತಾಲೂಕು ಹೆಂಗವಳ್ಳಿ ಗ್ರಾಮದ ತೊಂಭತ್ತು ನಲ್ಲಿರುವವ.

ನಮೂದಿತ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ -

ವಾದಿಯು ನನ್ನಿ ಡಿಕ್ರಿ ಪ್ರಕಾರ ಸಿದ್ಧಿ ಆ ... ಮಾಡಿ ... ಮೇಲೆ ವಾರಂಟು ... ಅಪೇಕ್ಷಿಸಿರುವುದ ... ವಾರಂಟು ... ತೋರಿಸುವದೆ ತಾರೀಖು 29 9 1946ನೇ ದಿವ್ಸ ಹಗಲು 11ಗಂಟೆಗೆ ... ಹಾಜರಾಗಿ ... ತಪ್ಪಿದಲ್ಲಿ ನಿಮ್ಮ ... ಮುಂದಿನ ... ಕೋರ್ಟಿನ ... ಈ ಮೂಲಕ ನಿಮಗೆ ತಿಳಿಸಲಾಗುತ್ತದೆ

K Raghunath Shenai
Pleader for plaintiff.
Coondapoor 24 8 1946.

ನೋಟೀಸು

ಕಾಸರಗೋಡ. ಡಿ. ಮು. ಕೋರ್ಟಿನಲ್ಲಿ

R E. P. No. 1310/1945

M. C. ... —ಅರ್ಜಿದಾರ

ಅಬ್ದುಲ್ ಬ್ಯಾರಿ, ... ಬ್ಯಾರಿ ಮಗ ಮಂಜೇಶ್ವರ ವಿಭಾಗದ ಕಯ್ಯಾರು ಗ್ರಾಮದಲ್ಲಿರುವವ —ರೆಸ್ಪಾಂಡೆಂಟ್

ರೆಸ್ಪಾಂಡೆಂಟಿನ ಸ್ಥಿರಾಸ್ತಿ ಜಪ್ತಿಮಾಡಿ ಹಾಯಂ ಮಾಡುವದರೆ ತಾ. 7-6-1946ಕ್ಕೆ ಇಟ್ಟಿರುವ ಸಂಗ್ತಿ ತಿಳಿಸಲಾಗಿದೆ.

Sd/ **P. Ahmad**
Advocate for Petitioner
ಕಾಸರಗೋಡು 22-8-46

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ದವಾನಿಸಬಹುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಗುರುಬಿಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಪ್ರಕಟಣೆ

ಜಿಲ್ಲಾ ಬೋರ್ಡ ಚುನಾವಣೆ
ವಿನಂತಿ

ಇದೇ ಬರುವ ದ. ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಡುಪಿ ತಾಲೂಕು ಕಾಪು ಸರ್ಕಲಿನ ಕ್ರಿಶ್ಚಿಯನ್ ರಿಜರ್ವ್ ಸೀಟಿಗೆ ನಾನೊಬ್ಬ ... ಸ್ಪರ್ಧಿಸುತ್ತೇನೆ ಈ ಸರ್ಕಲಿನ ಮತದಾರರೆಲ್ಲರೂ ತಮ್ಮ ಅಮೂಲ್ಯ ಮತಗಳನ್ನು ನನಗೇ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ

ಎಂ ಜಿ ನಜರೆತ್.
ಶಿರ್ವ.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

S. C 339/1946

ವೆಂಕಟ್ರಮಣ ಭಟ್ಟ —ವಾದಿ

1. ಶೇಕ ಹುಸೇನ ಸ್ಯಾಬ-ಅಬ್ದುಲ ಖಾದೀರ ಸ್ಯಾಬರ ಮಗ. 2- ಶೇಕ ಅಬ್ದುಲ ಖಾದೀರ ಸ್ಯಾಬ. ಅಲ್ಲಿ ಸ್ಯಾಬರ ಮಗ —ಪ್ರತಿವಾದಿಯು.

ಕುಂದಾಪುರ ತಾಲೂಕು ಖಾಪರಾಡಿ ಗ್ರಾಮದಲ್ಲಿರುವವರು—

1ನೇ ಪ್ರತಿವಾದಿಯು ವಾದಿಗೆ ಬರಕೊಟ್ಟ ಡಿಸೆಂಬರ ನೋಟಿನ ಬಾಬ್ತು ರೂಪಾಯಿ 262-11-0ನ್ನು ಬರಮಾಡಿಸಿಕೊಳ್ಳುವರೇ ಪ್ರತಿವಾದಿರ ಮೇಲೆ ಮಾಡಿದ ದಾವೆಯು ತಾ. 11-9 1946ಕ್ಕೆ ಮೇಲೆ ಕಾಣಿಸಿದ ಕೋರ್ಟ ಮುಂದೆ ... ಇಟ್ಟಿದೆಯೆಂತಲೂ ಆ ದಿವ್ಸ ಪ್ರತಿವಾದಿಯು ಸ್ವತಃ ಯಾ ವಕೀಲರ ಪರಿಯಾಗಿ ಹಾಜ್ರಾಗಲಿಕ್ಕೆ ತಪ್ಪಿದ್ರೆ ಅವರ ಗೈರ ಹಾಜ್ರಿಯಲ್ಲಿ ಮುಂದಿನ ತನ್ಕಿಯು ನಡೆಯುವುದೆಂತಲೂ ಈ ಮೂಲಕ ತಿಳಿಸಲಾಗುತ್ತದೆ

G. Sanjiva Rao, B A, L L B.
Vakil for pltf.
ತಾ. 22-8-46.

ಇದು ಯೋಜನಾಪತ್ರಿಕೆಯಲ್ಲ; ಪ್ರಕಟಣೆ ಮಾತ್ರ.

(ಯೋಜನಾಪತ್ರಿಕೆಯ ಒಂದು ಪ್ರತಿಯನ್ನು ದ. ಕ ಜಿಲ್ಲಾ ಎಸಿಸ್ಟೆಂಟ್ ರಿಜಿಸ್ಟ್ರಾರ್ ಒಫ್ ಜ್ಯೋಂಟ್ ಸ್ಟಾಕ್ ಕಂಪೆನೀಸ್—ಇವರಲ್ಲಿ ದಾಖಲು ಮಾಡಲಾಗಿದೆ)

THE KARNATAKA TEXTILES, LTD.

ದಿ ಕರ್ನಾಟಕ ಟೆಕ್ಸ್‌ಟೈಲ್ಸ್, ಲಿಮಿಟೆಡ್

(ಇಂಡಿಯನ್ ಕಂಪೆನೀಸ್ ಆಕ್ಟಿಗನ್ವಯ ಬ್ರಿಟಿಷ್ ಭಾರತದಲ್ಲಿ ಸ್ಥಾಪಿತವಾದುದು ಮತ್ತು ಮೆಂಬರರ ಜವಾಬ್ದಾರಿಯು ಮಿತವಾದುದು.)

ಅಧಿಕೃತ ಮೂಲಧನ: ರೂ. 25,00,000

ರೂ 100ರ 22,500 ಸಾಮಾನ್ಯ ಶೇರುಗಳಾಗಿಯೂ; ರೂ. 100ರ 2,500 ವಿಶೇಷ ಶೇರುಗಳಾಗಿಯೂ ಹಂಚಲಾಗಿದೆ.

ಸದ್ಯ ಚಂದಾ ಬಗ್ಗೆ ಅರ್ಪಿಸಿದ ಶೇರು ರೂ. 4,95,000

ರೂ. 100ರ 4,950 ಸಾಮಾನ್ಯ ಶೇರುಗಳಾಗಿ ಹಂಚಲಾಗಿದೆ. ಇದರ ಪೂರ್ಣ ಮೌಲ್ಯವನ್ನು ಅರ್ಜಿಯೊಂದಿಗೆ ಕೊಡತಕ್ಕದ್ದು.

ಸದ್ಯ ಅರ್ಪಿಸಿದ ಶೇರುಗಳ ಪೈಕಿ ಡೈರೆಕ್ಟರುಗಳೂ ಪ್ರಮೋಟರರೂ ಅವರ ಮಿತ್ರರೂ 1,450 ಸಾಮಾನ್ಯ ಶೇರುಗಳನ್ನು ಪಡೆದಿದ್ದಾರೆ ಅಥವಾ ಪಡಕೊಳ್ಳಲು ಒಪ್ಪಿದ್ದಾರೆ. ಉಳಿದ ರೂ. 100ರ 3,500 ಸಾಮಾನ್ಯ ಶೇರುಗಳು ಸಾರ್ವಜನಿಕರ ಚಂದಾ ಬಗ್ಗೆ ಅರ್ಪಿಸಲಾಗಿದೆ.

ಡೈರೆಕ್ಟರರು:

1 ರಾವ್ ಬಹದ್ದೂರ್ ಬಂಟ್ವಾಳ ಸೀತಾರಾಮ ರಾವ್; ಬಿ. ಎ., ಬಿ. ಎಲ್. ಅಡ್ವೊಕೇಟ್, 'ಶಾಂತಿಭವನ,' ಬ್ರೋಸ್ ರೋಡ್, ಮೈಲಾಪುರ, ಮದ್ರಾಸ್.

2. ಶ್ರೀ| ಕಕ್ಕುಂಜೆ ಯಜ್ಞನಾರಾಯಣ ಅಡಿಗ; ಬಿ ಎ.,ಬಿ.ಎಲ್.,ಅಡ್ವೊಕೇಟ್, ಚಿತ್ರಾ II ಬೀದಿ, ಅಭಿರಾಮಪುರಂ, ಟೈನಂಪೇಟೆ, ಮದ್ರಾಸ್.

ಡೈರೆಕ್ಟರರು: ಕರ್ನಾಟಕ ಬೇಂಕ್, ಲಿಮಿಟೆಡ್; ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್; ಯುನೈಟೆಡ್ ಇಂಡಿಯಾ ಪ್ರೊವಿಡೆಂಡ್ ಎಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು; ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೊ., ಲಿಮಿಟೆಡ್, ಮದ್ರಾಸ್.

ಅಧ್ಯಕ್ಷ: ಮೈಲಾಪುರ ಕೋಓಪರೇಟಿವ್ ಕ್ರೆಡಿಟ್ ಸೊಸೈಟಿ, ಮದ್ರಾಸ್.

3. ಶ್ರೀ| ಆರೂರು ಲಕ್ಷ್ಮೀನಾರಾಯಣ ರಾವ್; ಬಿ. ಎ., ಬಿ. ಎಲ್., 'ಲಕ್ಷ್ಮೀನಿವಾಸ,' ಕೋಳದಪೇಟೆ, ಉಡುಪಿ.

ಅಧ್ಯಕ್ಷ:—ದ. ಕ. ಜಿಲ್ಲಾ ಬೋರ್ಡ್. ಚೆಯರ್‌ಮೇನ್, ಉಡುಪಿ ನಗರ ಸಭೆ

ಸದಸ್ಯ: ಯುದ್ಧೋತ್ತರ ಪುನರ್ಘಟನಾ ಸಮಿತಿ, ಮದ್ರಾಸ್. ಪ್ರಾದೇಶಿಕ ಟ್ರಾನ್ಸ್‌ಪೋರ್ಟ್ ಬೋರ್ಡ್ ಕೊಯಮುತ್ತೂರು. ಚೆಯರ್‌ಮೇನ್:- ಮಹಾರಾಷ್ಟ್ರ ಅಪೆಕ್ಸ್ ಬೇಂಕ್, ಲಿಮಿಟೆಡ್, ಉಡುಪಿ

ಡೈರೆಕ್ಟರ್: ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ. ಭಾರತಮಿಲ್ಸ್, ಲಿಮಿಟೆಡ್, ಉಡುಪಿ; ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಲಿಮಿಟೆಡ್, ಉಡುಪಿ. ಕೂರ್ಗ್ ಇಲೆಕ್ಟ್ರಿಸಿಟಿ ಕಂಪೆನಿ ಲಿಮಿಟೆಡ್ ಮದ್ರಾಸ್. ಜನರಲ್ ಇನ್‌ವೆಸ್ಟ್‌ಮೆಂಟ ಟ್ರಸ್ಟ್ [illegible] ಮೆನೇಜರ್.

4. ಡಾ| ಪಾಂಗಾಳ ಜನಾರ್ದನ ರಾವ್, ಎಲ್. ಎಂ ಎಂಡ್ ಎಸ್., ನಿವೃತ್ತ ಸಿವಿಲ್ ಸರ್ಜನ್, 'ಪಾಂಗಾಳ ಹಾಸ್' ಮಣ್ಣಗುಡ್ಡೆ, ಮಂಗಳೂರು.

5. ಶ್ರೀ| ಪ್ರಭಾಕರ ರಾವ್ ಗಣೇಶ ರಾವ್ ಗುರ್ಜರ್, ಕಾಫಿ ಮತ್ತು ರಬ್ಬರ್ ಪ್ಲೇಂಟರ್, ಕೊಪ್ಪಕಾಫಿ ಮತ್ತು ರಬ್ಬರ್ ಎಸ್ಟೇಟ್, ಜಾವಳಿ ಪೋಸ್ಟ್, ಕಡೂರು ಜಿಲ್ಲಾ.

6. ಖಂಡಿಗೆ ಗಣಪತಿ ಭಟ್, ವರ್ಗದಾರ, ಪೆರ್ಡಾಲ ಪೋಸ್ಟ್, ಕಾಸರಗೋಡು, ದ.ಕ.

ಡೈರೆಕ್ಟರ್: ದಿ ಕರ್ನಾಟಕ ವ್ಯವಸಾಯ ವರ್ತಕ ಸಂಘ, ಲಿಮಿಟೆಡ್, ಮಂಗಳೂರು. ದಿ ಗ್ರೀನ್‌ವೆಲ್ಲಿ ಫಾರ್ಮ್ಸ್, ಲಿಮಿಟೆಡ್, ಮಂಗಳೂರು, ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್, ಲಿಮಿಟೆಡ್, ಕಾಸರಗೋಡು.

7. ಪೇಜಾವರ ಸಂಜೀವ ರಾವ್, ಬಿ. ಎ., ಬಿ. ಎಲ್., [illegible] ಕೊಡಿಯಾಲಬೈಲು, ಮಂಗಳೂರು.

ಡೈರೆಕ್ಟರ್: ಶಂಕರ್ ವಿಠಲ್ ಮೋಟರ್ ಕಂಪೆನಿ, ಲಿಮಿಟೆಡ್. ಚೇರ್‌ಮೇನ್: ದಿ ಯುನೈಟೆಡ್ ಟ್ರೇಡಿಂಗ್ ಕಾರ್ಪೊರೇಶನ್ & ವರ್ಕ್‌ಶಾಪ್, ಲಿಮಿಟೆಡ್, ಮಂಗಳೂರು

8. ಶ್ರೀ| ಕಬ್ಬಿನಹಿತ್ಲು ವೆಂಕಪ್ಪಯ್ಯ, ವರ್ಗದಾರ ಮತ್ತು ಏಲಕ್ಕಿ ಪ್ಲಾಂಟರ್, ಇಡ್ಕಿದುಗ್ರಾಮ, ವಿಟ್ಲ ಪೋಸ್ಟ್, ದ ಕ.

ಡೈರೆಕ್ಟರ್: ಶಂಕರ್ ವಿಠಲ್ ಮೋಟರ್ ಕಂಪೆನಿ, ಲಿಮಿಟೆಡ್, ಮಂಗಳೂರು. ದಿ ಸೌತ್ ಕೆನರಾ ಸೆಂಟ್ರಲ್ ಕೋಓಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್, ಲಿಮಿಟೆಡ್, ಮಂಗಳೂರು..

9. ಜನಾಬ್ ಮೊಹಿಉದ್ದೀನ್ ಅಬ್ದುಲ್ ಕಾದರ್ ಸಾಹೇಬ್, ವಾಸಸ್ಥಾನ: ಜುಮ್ಮಾ ಮಸೀದಿ ಬೀದಿ, ಮಂಗಳೂರು.

10. ಜನಾಬ್ ಸೈದ್ ಮೊಹಿದ್ದಿನ್ ಸಯದ್ ಅಬ್ದುಸ್‌ಸಮದ್ ಸಾಹೇಬ್, ಹೇಂಡ್ ಲೂಮ್ ಓನರ್ ಮತ್ತು ಬಟ್ಟೆ ವ್ಯಾಪಾರಿ, ಜುಮ್ಮಾ ಮಸೀದಿ ಬೀದಿ, ಮಂಗಳೂರು.

11 ಎ. ಡಿ. ಸಿಲ್ವ, ನೂಲು ವ್ಯಾಪಾರಿ, ರಥಬೀದಿ, ಮಂಗಳೂರು.

12. ಶ್ರೀ| ಸರ್ಪಾಡಿ ನರ್ಸಪ್ಪಯ್ಯ, ಬಿ.ಎ.,ಬಿ.ಎಲ್., ಕದ್ರಿರಸ್ತೆ, ಮಂಗಳೂರು.

ಡೈರೆಕ್ಟರ್. ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಮಂಗಳೂರು. ದ. ಕ. ಸೆಂಟ್ರಲ್ ಕೋಓಪರೇಟಿವ್ ಬೇಂಕ್, ಲಿಮಿಟೆಡ್, ಮಂಗಳೂರು. ದ ಕ. ಸೆಂಟ್ರಲ್ ಕೋಓಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿಮಿಟೆಡ್, ಮಂಗಳೂರು. ಮಂಗಳೂರು ಕೋಓಪರೇಟಿವ್ ಸ್ಟೋರ್ಸ್, ಲಿ. ಮಂಗಳೂರು.

ಅಧ್ಯಕ್ಷ: ದ.ಕ ಜಿಲ್ಲಾ ಕೋಓಪರೇಟಿವ್ ಎಡ್ವಾನ್ಸ್‌ಮೆಂಟ್ ಸೊಸೈಟಿ, ಲಿಮಿಟೆಡ್, ಮಂಗಳೂರು,

ಮೆನೇಜಿಂಗ್ ಏಜಂಟ್ ಮತ್ತು ಕಾರ್ಯದರ್ಶಿ

ಶ್ರೀ| ಎಸ್. ನರ್ಸಪ್ಪಯ್ಯ, ಬಿ. ಎ., ಬಿ ಎಲ್., ಕದ್ರಿರಸ್ತೆ ಮಂಗಳೂರು; (ಎಕ್ಸ್ ಒಫಿಸಿಯೋ ಡೈರೆಕ್ಟರ್)

ಲೆಕ್ಕ ಪರಿಶೋಧಕರು:

ಶ್ರೀ| ಎ. ಉಪೇಂದ್ರನಾಥ ರಾವ್, ಜಿ. ಡಿ. ಎ. ಮಂಗಳೂರು

ಬೇಂಕರರು:

1 ದಿ ಕೆನರಾ ಬ್ಯಾಂಕ್, ಲಿ., ಮಂಗಳೂರು. 2 ದಿ ಕರ್ನಾಟಕ ಬೇಂಕ್, ಲಿ., ಮಂಗಳೂರು. 3 ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ., ಉಡುಪಿ.

ರಿಜಿಸ್ಟರ್ಡ್ ಆಫೀಸು:

ಕದ್ರಿ ರಸ್ತೆ, ಮಂಗಳೂರು, ದ. ಕ.

ಉದ್ದೇಶ ಮತ್ತು ಕಂಪೆನಿಯ ಯೋಜನಾ ಪತ್ರಿಕೆ

೧. ಕಂಪೆನಿಯ ಮೆಮೊರಾಂಡಮ್ ಆಫ್ ಎಸೋಸಿಯೇಶನ್‌ನಲ್ಲಿ ವಿವರಿಸಿದ ಮತ್ತು ಮುಖ್ಯವಾಗಿ ಮಂಗಳೂರಲ್ಲಿ ನೂಲು ಮಾಡುವ, ಗಿರಣಿ ವ ಬಟ್ಟೆ ನೇಯುವ ಯೋಜನೆ ಸ್ಥಾಪಿಸುವುದು ಕಂಪೆನಿಯ ಮುಖ್ಯ ಉದ್ದೇಶವಾಗಿದೆ

೨. ಭಾರತದಲ್ಲಿ ಬಟ್ಟೆ ತಯಾರಿಕೆಯ ಉದ್ಯಮವು ಅತಿ ಪ್ರಾಮುಖ್ಯವಾದ ಒಂದು ರಾಷ್ಟ್ರೀಯ ಉದ್ಯಮ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಪ್ರಪಂಚದಲ್ಲೇ ಈಗ ಬಟ್ಟೆಯ ಕೊರತೆಯು ಹೆಚ್ಚುತ್ತಲೇ ಇದೆ. ಜನಸಂಖ್ಯೆಯ ಹೆಚ್ಚಳ ಹಾಗೂ ಬಟ್ಟೆಯ ಉಪಯೋಗದ ಹೆಚ್ಚಳಗಳೇ ಇದಕ್ಕೆ ಕಾರಣ. ಭಾರತದಲ್ಲಿ ಈಗ ಇರುವ ಗಿರಣಿಗಳು ದೇಶದ ಬಟ್ಟೆಯ ಬೇಡಿಕೆಯನ್ನೇ ಪೂರೈಸಲಾರದಾಗಿವೆ—ಎಂಬುದು ಸುವ್ಯಕ್ತ. ಜಪಾನಿನ ಬಟ್ಟೆ ಕೈಗಾರಿಕೆಯು ನಾಶವಾದುದರಿಂದ ಮಧ್ಯಪೂರ್ವದಲ್ಲಿಯೂ ದೂರಪೂರ್ವದಲ್ಲಿಯೂ ಭಾರತದ ಅರಿವೆಗಳಿಗೆ ಬಲು ದೊಡ್ಡ ಬೇಡಿಕೆ ಇದೆ. ಆದುದರಿಂದ ಬಟ್ಟೆ ಗಿರಣಿಗಳ ಭವಿತವ್ಯವು ತುಂಬಾ ಆಶಾದಾಯಕವಾಗಿದೆ.

೩ ಸದ್ಯ ದ. ಕನ್ನಡದಲ್ಲಿ ಬಟ್ಟೆಯ ಮಿಲ್ಲು ಗಳಿಲ್ಲ. ಆದರೆ, ಮಂಗಳೂರಿನಲ್ಲಿಯೂ ಜಿಲ್ಲೆಯ ಇತರ ಕಡೆಗಳಲ್ಲಿಯೂ ೧೦,೦೦೦ಕ್ಕೆ ಮೇಲ್ಪಟ್ಟು ಕೈಮಗ್ಗಗಳು ಕೆಲಸ ಮಾಡುತ್ತಿವೆ. ಇವುಗಳಿಗೆ ತಿಂಗಳಿಗೆ ಸಾಮಾನ್ಯ ೫೦೦ ಬೇಲು ನೂಲು ಬೇಕಾಗುವುದು. ನೂಲಿನ ಬೇಡಿಕೆಯು ನಮ್ಮಲ್ಲಿ ಬಹಳವಿದೆ. ಆದುದರಿಂದ ಈ ಕಂಪೆನಿಯಲ್ಲಿ ಸಿದ್ಧವಾಗತಕ್ಕವುಗಳೆಲ್ಲ ಜಿಲ್ಲೆಯೊಳಗೇ ಉಪಯೋಗಿಸಲ್ಪಡುವುವು.

೪. ಮಂಗಳೂರು ಬಂದರವಾಗಿರುವುದರಿಂದ ಮಿಲ್ಲಿಗೆ ಬೇಕಾದ ಅರಳೆಯನ್ನು ಬೊಂಬಾಯಿಯಿಂದ ಕಡಿಮೆ ಖರ್ಚಿನಿಂದ ತರಿಸಿಕೊಳ್ಳಲು ಸಾಧ್ಯವಿದೆ. ಭಾರತದಲ್ಲಿರುವ ಎಲ್ಲಾ ಮಿಲ್ಲುಗಳೂ ಅತಿ ನಾಜೂಕಾದ ಬಟ್ಟೆಗಳಿಗೆ ಬೇಕಾದ ಹತ್ತಿಯನ್ನು ವಿದೇಶಗಳಿಂದಲೇ ತರಿಸುತ್ತಿವೆ. ಹಾಗೆ ಆಮದುಮಾಡಲು, ಇತರ ಕಡೆಯ ಮಿಲ್ಲುಗಳಿಗಿಂತ ಮಂಗಳೂರಿಗೆ ಹೆಚ್ಚಿನ ಅನುಕೂಲತೆ ಇದೆ.

೫ ಕಡಿಮೆ ಮಜೂರಿಯ ಚತುರ ಕೆಲಸಗಾರರಿಗೂ ನಮ್ಮಲ್ಲಿ ಕೊರತೆ ಇಲ್ಲ. ಪೈಕಾರ ಜೋಗಿನಿಂದ ವಿದ್ಯುಚ್ಛಕ್ತಿಯು ನಮ್ಮ ಜಿಲ್ಲೆಗೆ ಬರುವ ತನಕ, ಸ್ಥಳೀಯ ಇಲೆಕ್ಟ್ರಿಕ್ ಕಂಪೆನಿಯವರೇ ಯುದ್ಧಪೂರ್ವ ಕಾಲದಲ್ಲಿದ್ದ ದರದಲ್ಲಿಯೇ ವಿದ್ಯುತ್ತನ್ನೊದಗಿಸಲೊಪ್ಪಿದ್ದಾರೆ.

೬. ಮಿಲ್ಲಿನ ಸ್ಥಾಪನೆಗೆ ಯೋಗ್ಯವಾದ ಉತ್ತಮ ಸ್ಥಳದ ಶೋಧನೆ ಹಾಗೂ ಸಂಪಾದನೆ ನಡೆಯುತ್ತಿದೆ. ಅತ್ಯಾಧುನಿಕ ರೀತಿಯ ಯಂತ್ರೋಪಕರಣಗಳ ಕೊಂಡುಕೊಳ್ಳೋಣದ ಬಗ್ಗೆಯೂ ಸಂಧಾನ ನಡೆಯುತ್ತಿದೆ. ಈ ಕಾಮಗಾರಿಯು ತೀವ್ರ ಜಯಪ್ರದವಾಗುವುದು ಖಂಡಿತವೆಂದೂ, ದ್ವಿತೀಯ ವರ್ಷದಲ್ಲೇ ಯೋಗ್ಯ ಡಿವಿಡೆಂಡ್ ತೆರುವಷ್ಟು ಶಕ್ತಿಯುತವಾಗುವುದೆಂದೂ ಡೈರೆಕ್ಟರರಿಗೆ ನಂಬಿಕೆ ಇದೆ.

ಡೈರೆಕ್ಟರರಿಗಿರಬೇಕಾದ ಯೋಗ್ಯತೆ ಮತ್ತು ಸಂಭಾವನೆ

ನೂರಕ್ಕೆ ಕಮ್ಮಿಯಾಗದ ಸಾಧಾರಣ ಶೇರುಗಳನ್ನು ಪಡೆದವರು ಡೈರೆಕ್ಟರರು. ಇಂಥ ಕಮ್ಮಿಯಾಗದ ಸಾಮಾನ್ಯ ಪಾಲುಗಳನ್ನು ಪಡೆದವರು ಡೈರೆಕ್ಟರರಾಗಲು ಅರ್ಹರು. ಒಂದು ಸ್ಥಾನ ಮಾತ್ರ [illegible] ಪಾಲುಗಳಿಂದ ಕಮ್ಮಿ ಪಡೆದ ಮೆಂಬರರಿಂದ ಆರಿಸಲು ಕಾದಿದೆ. ಪ್ರತಿ ಹಾಜರಾದ ಸಭೆ ಒಂದಕ್ಕೆ ರೂ. ೫೦ಕ್ಕೆ ಮೀರದ, ಡೈರೆಕ್ಟರರಿಂದ ತೀರ್ಮಾನಿಸಲ್ಪಡುವ ವೇತನವನ್ನು ಡೈರೆಕ್ಟರರಿಗೆ ಕೊಡಲಾಗುವುದು. ಸಭೆಗೆ ಹಾಜರಾಗಲು ತಗಲುವ ನ್ಯಾಯವಾದ ಖರ್ಚು ಕೂಡ ಕೊಡಲ್ಪಡುವುದು.

ಡೈರೆಕ್ಟರರ ಹಿತ

ಕಂಪೆನಿಯ ನಿಯಮಾವಳಿಯಂತೆ, ಈ ಕಂಪೆನಿಯ ಸ್ಥಾಪನೆ, ರಚನೆಗಳ ಭಾರವನ್ನೆಲ್ಲ ನಿರ್ವಹಿಸಿದ ಶ್ರೀ| ಎಸ್. ನರ್ಸಪ್ಪಯ್ಯ, ಬಿ. ಎ. ಬಿ. ಎಲ್. ಅವರಿಗೆ, ಪ್ರಾರಂಭಿಕ ವೆಚ್ಚಗಳ ಬಗ್ಗಾಗಿ ರೂ. ೬೦೦೦|- ಕೊಡಲಾಗುವುದು. ಅಲ್ಲದೆ, ಕಂಪೆನಿಯ ನಿಯಮಾವಳಿಯಂತೆ, ಶ್ರೀ| ಎಸ್. ನರ್ಸಪ್ಪಯ್ಯನವರನ್ನು ೨೦ ವರ್ಷಗಳ ಮುಟ್ಟಿಗೆ ಕಂಪೆನಿಯ ಮೆನೇಜಿಂಗ್ ಏಜಂಟ್ ಹಾಗೂ ಕಾರ್ಯದರ್ಶಿಗಳಾಗಿ ನೇಮಿಸಿ, ಆ ಬಗ್ಗೆ ಅವರೊಡನೆ ಕಂಪೆನಿಯು ಕರಾರೊಂದನ್ನು ಮಾಡಿಕೊಂಡಿದೆ.

ಕರಾರು

ಶ್ರೀ| ನರ್ಸಪ್ಪಯ್ಯನವರೊಡನೆ ನಡೆದ ಕರಾರಿನ ಮುಖ್ಯಾಂಶಗಳಿವು —

೧. ಕಂಪೆನಿಯು ರಿಜಿಸ್ಟರ್ ಆದಂದಿನಿಂದ ಕೆಲಸವನ್ನು ಆರಂಭಿಸುವ ವರೆಗೆ, ಆಫೀಸ್ ವೆಚ್ಚದ ಬಗ್ಗಾಗಿ ತಿಂಗಳಿಗೆ ರೂ. ೨೫೦|-ಕೊಡಲಾಗುವುದು.

೨ ಆ ಬಳಿಕ, ಈ ರೂ. ೭೫೦|-ಅಲ್ಲದೆ ಇಂಡಿಯನ್ ಕಂಪೆನೀಸ್ ಆಕ್ಟಿನ ಸೆಕ್ಷನ್ ೮೭ ಸಿ (3)ರ ಪ್ರಕಾರ ನಿರ್ಧರಿಸಲಾಗುವ ಕಂಪೆನಿಯ ನಿವ್ವಳ ಲಾಭದಲ್ಲಿ ಸೇ. ೧೦ರಂತೆ, ಕಮಿಶನ್ ಆಗಿ ಮೆನೇಜಿಂಗ್ ಏಜಂಟರು ಪಡೆಯಲು ಅರ್ಹರು.

ಸಂಬಳ, ಕೂಲಿ, ಬಾಡಿಗೆ, ಸ್ಟೇಶನರಿಗಳು ಆಫೀಸ್ ಖರ್ಚಿನಲ್ಲಿ ಸೇರಲಿಲ್ಲ. ಈ ಕರಾರನ್ನು ಪರೀಕ್ಷಿಸಲಿಚ್ಛಿಸುವವರು, ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ಬಂದು ನೋಡಬಹುದು.

ಪ್ರಾರಂಭಿಕ ವೆಚ್ಚವಾಗಿ ರೂ. ೨೫ ಸಾವಿರದವರೆಗೆ ಖರ್ಚುಮಾಡಲು ಕಂಪೆನಿಯ ನಿಯಮಾವಳಿಯು ಡೈರೆಕ್ಟರರಿಗೆ ಅಧಿಕಾರ ಕೊಟ್ಟಿದೆ.

ಓಟಿನ ಅಧಿಕಾರ ಮತ್ತಿತರ ಅಧಿಕಾರ

ಶೇರ್‌ಹೋಲ್ಡರರ ಒಂದು ಸಭೆಯಲ್ಲಿ, ಒಂದು ನಿರ್ಧಾರದ ಬಗ್ಗೆ ಶೇರ್‌ಹೋಲ್ಡರರು ಕೈಯೆತ್ತಿ ತಮ್ಮ ಓಟನ್ನು ಸೂಚಿಸಬೇಕಿಲ್ಲದ ವಿಶೇಷ ಸಂದರ್ಭಗಳಲ್ಲಿ ಮಾತ್ರ (ಇಂಡಿಯನ್ ಕಂಪೆನೀಸ್ ಆಕ್ಟಿನ್ ೭೯ (1) ನೆ ಪ್ರಕರಣದ ಮೇರೆಗೆ) ಮತಪತ್ರ ಮೂಲಕ ಓಟುಕೊಡಬೇಕು. ಕೈಯೆತ್ತಿ ಓಟುಕೊಡುವಾಗ ಪ್ರತಿಶೇರ್‌ಹೋಲ್ಡರರಿಗೆ ಒಂದೊಂದೇ ಓಟು. ಆದರೆ ಮತಪತ್ರ ಮೂಲಕ ಓಟುಕೊಡುವಾಗ, ಪ್ರಥಮದ ೧೦ ಶೇರು ವರೆಗೆ ಪ್ರತಿ ಶೇರಿಗೆ ಒಂದು. ಆ ಬಳಿಕ ಪ್ರತಿ ೧೦ ಶೇರಿಗೆ ಒಂದೊಂದರಂತೆ ಮತನೀಯುವ ಅಧಿಕಾರವಿದೆ. ಪ್ರೋಕ್ಸಿ ಮೂಲಕ ಓಟುಕೊಡಲೂಬಹುದು.

ಶೇರುಗಳನ್ನು ಕಂಪೆನಿಯ ನಿಯಮಾವಳಿಯಂತೆ ಟ್ರಾನ್ಸ್‌ಫರ್ ಮಾಡಬಹುದು.

ಶೇರಿನ ಬಗ್ಗೆ

ಶೇರು ಪಡಕೊಳ್ಳಲಿಚ್ಛಿಸುವವರು ಕಂಪೆನಿ ಆಫೀಸಿನಲ್ಲಿ ಸಿಗುವ ಫೋರ್ಮಿನಲ್ಲಿ ಅರ್ಜಿ ಮಾಡಬೇಕು. ಪಾಲು ಒಂದರ ರೂ ೧೦೦ರಂತೆ ಪಾವತಿ ಮತ್ತು ಪಾಲು ಒಂದರ ರೂ. ೧ರಂತೆ ಒಟ್ಟು ರೂ. ೧೦ಕ್ಕೆ ಮೀರದ ಪ್ರವೇಶ ಹಾಸಲು ಕೂಡ ಕಂಪೆನಿಯ ಆಫೀಸಿಗೆ ಕಳುಹಿಸತಕ್ಕದ್ದು. ಅಥವಾ ಕಂಪೆನಿಯ ಬೇಂಕುಗಳ ಯಾವುದಾದರೊಂದು ಶಾಖೆಯಲ್ಲಿ ಕಂಪೆನಿಯ ಲೆಕ್ಕಕ್ಕೆ ಕಟ್ಟತಕ್ಕದ್ದು.

ಏಜಂಟರುಗಳಿಗೆ ಶೇರು ವಿಕ್ರಯದ ಬಗ್ಗೆ ಸೇ. ೩ರಂತೆ ಕಮಿಶನ್ ಕೊಡಲಾಗುವುದು.

Through War or through peace

Our Sarees have been

THE BEST

and the

CHEAPEST

in the market.

Only the stock position remains to be improved.

However, please make yourself sure that

YOU DONOT PAY MORE

than our Scheduled Rates

And

PURCHASE ONLY IF YOU MUST

to enable others

also to avail of the benefit as well.

MANIPAL TEXTILES.

SALES DEPARTMENT,

S. R. BUILDINGS, UDIPI. (S. Kanara)

Edited, Printed & Published by K. H. Shetty at the Navayuga Press, Udipi, S. India.

ನವಯುಗ

1946-'47

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—I—6.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೧ | FOUNDER SRI. A. B. SHETTY, M. L. A. | Vol. 26 No. 1

ಉಡುಪಿ ● 5-9-1946 ● ಮಂಗಳೂರು.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೂದಲಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

ಅಮೃತಾಂಜನ.
ತಲೆನೋವು, ಶೀತ, ವೇದನೆ, ಉಳುಕು ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಜೇಡು ವಿಷ ಮುಂತಾದ ಚೇನೆ ಚಿಕ್ಕಬಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
ಸರ್ವ, ಮುಖ್ಯ ಅಂಗಡಿ ಸಹ ಮಾರಲ್ಪಡುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoe Stomachache. Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಾಲಕ್ಕೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ, ಡಾ। ಪಿ। ಬಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ ವೆಂಕಟರಾವ್, ಕೊರದ್ಕಲ್; ನವಭಾರತ ಬುಕ್ ಡಿಪೋ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co., Ltd.,
HEAD OFFICE: UDIPI. (S. India.)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd.,
UDIPI. (S. India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY.
New Business in 1945 - - - 2,77,23,100.
KOCHIKAR BROTHERS, LTD.
(ESTD. 1910)
Chief Agents for South India including
Travancore, Cochin and Mysore State
New Business in 1945 in our area:- Over 5 Millions.
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY.

ಉಡುಪಿ ಬೋರ್ಡಿಂಗ್
—— ಎಂಡ್ ——
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧ ದಿ... ... ...ತ್ತ ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ರೂಪಾಯಿ.

ಮಾಲಕರು:—ಹುಲಿಯಪ್ಪ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ನಾರಾಯಣ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಬೆಳ್ಳಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಳದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ
Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.
ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ
ನಿಮ್ಮ ಅಪರ ವಯಸ್ಸಿನ ಉಪಯೋಗ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.
ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಝರಾಗುವವರೂ ಬರೆಯಿರಿ—
ಪಿ. ಡಿ. ನವಯ, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.
THE JUPITER
General Insurance Company, Ltd.

ಗೃಹಸ್ಥಾಶ್ರಮ ಮತ್ತು ವೈರಾಗ್ಯ

ರಾಮತೀರ್ಥರ ಭಾಷಣದ ಸಾರಾಂಶ

ವೈರಾಗ್ಯ ಎಂದರೆ ಪ್ರಪಂಚವನ್ನು ಬಿಟ್ಟು ಕಾವಿಯನ್ನು ಧರಿಸಿ ಕಾಡಿಗೆ ಹೋಗಬೇಕೆಂದಲ್ಲ, ಅಥವಾ ವಸ್ತುಗಳ ಪರಿತ್ಯಾಗವಲ್ಲ. ಅವುಗಳಲ್ಲಿಯ ಆಸಕ್ತಿಯನ್ನು ಬಿಡುವುದೇ ವೈರಾಗ್ಯ. ಈಶ್ವರನು ಸಂಸಾರ ಸಮೇತನಾಗಿದ್ದಾಗ್ಯೂ (ನಾವು ಚಿತ್ರದಲ್ಲಿ ನೋಡುವಂತೆ) ಆವನು ಯೋಗೀಶ್ವರನೆಂತಲೂ, ವೈರಾಗ್ಯದ ಮೂರ್ತಿ ಎಂತಲೂ ಪ್ರಸಿದ್ಧನಾಗಿಲ್ಲವೆ? ಕೃಷ್ಣನ ಉದಾಹರಣೆಯಾದರೂ ಇದೇ ರೀತಿಯಾಗಿದೆ. ಹಿಂದೆ ಆಗಿ ಹೋದ ಎಲ್ಲಾ ಶೂರರು, ಮೇಧಾವಿಗಳು, ಕವಿಗಳು, ಭಕ್ತರು, ಇತ್ಯಾದಿ ಮಹಾವಿಭೂತಿಗಳೆಲ್ಲರೂ ತ್ಯಾಗ ಮೂರ್ತಿಗಳೇ ಆಗಿದ್ದರು.

ಪ್ರಪಂಚದ ಮೋಹಕ ವಸ್ತುಗಳ ಆಕರ್ಷಣೆಗೆ ನಾವು ಒಳಗಾಗದೆ ಅವುಗಳನ್ನು ಮೀರಿರಬೇಕು. ನಮ್ಮ ಮನಸ್ಸು ಎಲ್ಲಾ ಸ್ಥಿತಿಗಳಲ್ಲಿಯೂ ಶಾಂತವಾಗಿ, ಕದಲದಂತೆ ಸ್ಥಿರವಾಗಿ, ಸಮಾಧಾನದಿಂದಿರಬೇಕು. ನಾವು ಯಾವ ವಸ್ತುವನ್ನು ನೋಡಿದಾಗ್ಯೂ ಅವೆಲ್ಲವುಗಳಲ್ಲಿಯೂ ನಮಗೆ, ನಿತ್ಯವಾದ ಒಂದೇ ವಸ್ತುವು ಅಂದರೆ ಪರಮಾತ್ಮನು ಕಾಣಬೇಕು. ಇದಕ್ಕೇ ಜ್ಞಾನ ಎಂದು ಹೆಸರು. ಭೌತಿಕ ಶಾಸ್ತ್ರಗಳ ಜ್ಞಾನವು ನಿಜವಾದ ಜ್ಞಾನವಲ್ಲ. ಪರಮಾತ್ಮ ಜ್ಞಾನವೇ ನಿಜವಾದ ಜ್ಞಾನ. ನಾನೇ ಪರಮಾತ್ಮನೆಂಬ ಅನುಭವವೇ ಜ್ಞಾನ.

ಗೃಹಸ್ಥಾಶ್ರಮಿಯು ಈ ಜ್ಞಾನವನ್ನು ಹೇಗೆ ಪಡೆಯಬಹುದು? ಗಂಡಹೆಂಡಿರಿಬ್ಬರೂ ಈ ಜ್ಞಾನಾನುಭವ ಪಡೆಯಲು ಒಬ್ಬರಿಗೆ ಇನ್ನೊಬ್ಬರು ಸಹಾಯಮಾಡಬೇಕು. ಗಂಡನು ಹೆಂಡತಿಯು ತಾನು ಹೇಳಿದಂತೆ ನಡೆಯಬೇಕೆಂತಲೂ, ಹೆಂಡತಿಯು, ಗಂಡನು ತಾನು ಹೇಳಿದಂತೆ ಕೇಳಬೇಕೆಂತಲೂ ಅಪೇಕ್ಷಿಸುತ್ತೇವೆ. ಮತ್ತು ಆದಕ್ಕನುಗುಣವಾಗಿ ವರ್ತಿಸುತ್ತೇವೆ. ನಾವು ನಿಜವಾಗಿಯೂ ಒಬ್ಬರನ್ನೊಬ್ಬರು ಪ್ರೀತಿಸುವುದಾದರೆ ಇಬ್ಬರೂ ಪರಸ್ಪರ ಆಧ್ಯಾತ್ಮಿಕ ಉನ್ನತಿಗೆ ಸಹಾಯಮಾಡಬೇಕು. ಕೇವಲ ಇಂದ್ರಿಯಲಾಲಸೆಯನ್ನು ಪರಸ್ಪರ ತೀರಿಸಿಕೊಳ್ಳುವುದರಿಂದ ಒಬ್ಬರಿಗೊಬ್ಬರು ಸಹಾಯಮಾಡಿದಂತಾಗಲಿಲ್ಲ. ಹಾಗಾಗಿದ್ದರೆ ಎಲ್ಲಾ ಸಂಸಾರಗಳಲ್ಲಿಯೂ ಸುಖವು ನಲಿದಾಡಬೇಕಾಗಿತ್ತು. ಆದರೆ ವಸ್ತುತಃ ಹಾಗಿದೆಯೋ? ಇಲ್ಲ; ಸಾವಿರ ಸಂಸಾರಗಳಲ್ಲಿ ಒಂದು ಸಂಸಾರವು ಕೂಡ ನಿಜವಾದ ಸುಖವನ್ನು ಅನುಭವಿಸುತ್ತಿಲ್ಲ. ಪರಸ್ಪರ ಪ್ರೀತಿಯೇ ನಿಜವಾದ ಸೌಖ್ಯಕ್ಕೆ ಹಾದಿ. ಆದಾಗ್ಯೂ ಆ ಪ್ರೀತಿಯನ್ನು ತಪ್ಪು ದಾರಿಯಲ್ಲಿ ಉಪಯೋಗಿಸಿದರೆ ಅದು ದುಃಖಕ್ಕೆ ಹಾದಿಯಾಗುತ್ತದೆ.

ಕೃಷ್ಣನು ಒಮ್ಮೆ ಒಬ್ಬ ರಾಕ್ಷಸನಿಂದ ನುಂಗಲ್ಪಟ್ಟಾಗ, ತನ್ನ ಭರ್ಜಿಯಿಂದ ರಾಕ್ಷಸನ ಹೊಟ್ಟೆಯನ್ನು ತಿವಿದು ಹೊರಕ್ಕೆ ಬಂದನು. ತತ್ಪರಿಣಾಮವಾಗಿ ಆ ರಾಕ್ಷಸನು ಸತ್ತು ಹೋದನು. ಪ್ರೇಮವೆಂದರೆ ಕೃಷ್ಣ ಅಥವಾ ಪರಮಾತ್ಮ ಐಹಿಕ ವಸ್ತುಗಳನ್ನು ಪ್ರೀತಿಸುವವರ ಹೃದಯವನ್ನು ಪ್ರೇಮವು ಪ್ರವೇಶಿಸಿ, ಅಲ್ಲಿ ನಿಲ್ಲಲು ಸ್ಥಾನವನ್ನು ಹೊಂದಿ, ಕೃಷ್ಣನಂತೆ ತನ್ನ ಭರ್ಜಿಯಿಂದ ಹೃದಯವನ್ನು ತಿವಿಯುತ್ತದೆ ಅವರ ಪರಿಣಾಮವೇನು, ಹೃದಯವು ಒಡೆದು ಹೋಗುತ್ತದೆ. ತತ್ಪರಿಣಾಮವೇ ದುಃಖ. ಪ್ರಾಪಂಚಿಕ ವಸ್ತುಗಳ ಮೇಲಿನ ಪ್ರೇಮವು ಕೊನೆಗೆ ದುಃಖದಲ್ಲಿ ಪರಿಣಮಿಸುತ್ತದೆ. ಪ್ರಾಪಂಚಿಕ ವಸ್ತುಗಳ ಅಥವಾ ವ್ಯಕ್ತಿಯ ಮೋಹದಲ್ಲಿ ಸಿಕ್ಕವನು ದುಃಖವನ್ನು ಅನುಭವಿಸಬೇಕೆಂಬುದು ಈಶ್ವರ ನಿಯಮ. ಆ ವಸ್ತು ಅಥವಾ ವ್ಯಕ್ತಿಯು ಅವನಿಂದ ಕಸಿದುಕೊಳ್ಳಲ್ಪಡುತ್ತದೆ, ಇಲ್ಲವೆ ನಾಶವಾಗುತ್ತದೆ, ಇಲ್ಲವೆ ಅದು ನಮ್ಮ ಹೃದಯವನ್ನು ಭೇದಿಸುತ್ತದೆ. ಪ್ರಾಪಂಚಿಕ ವಸ್ತುಗಳನ್ನು ಅಥವಾ ವ್ಯಕ್ತಿಗಳನ್ನು ಪ್ರೀತಿಸುವವರೆಲ್ಲರೂ ಈ ರೀತಿ ಮೋಸಗೊಳಿಸಲ್ಪಡುತ್ತಾರೆ. ಪ್ರಾಪಂಚಿಕ ವಸ್ತುಗಳಿಂದ ನಿಜವಾದ ಸುಖವು ಲಭಿಸಲಾರದೆಂಬುದೇ ಈಶನ ನಿಯಮ. ಪ್ರಾಪಂಚಿಕ ಮೋಹವು ಹೃದಯ ಭೇದನೆಯಲ್ಲಿ ಪರಿಣಮಿಸುತ್ತದೆ.

ಪ್ರಾಪಂಚಿಕ ವಸ್ತು ಅಥವಾ ವ್ಯಕ್ತಿಗಳೆಲ್ಲವೂ ಪರಮಾತ್ಮನ ಬೇರೆ ಬೇರೆ ರೂಪ ಅಥವಾ ಚಿತ್ರಗಳೆಂದು ತಿಳಿಯಬೇಕು. ಒಬ್ಬ ಮನುಷ್ಯನು, ತನ್ನ ಹತ್ತಿರ ತನ್ನ ಸ್ನೇಹಿತನ ಚಿತ್ರವನ್ನಿಟ್ಟುಕೊಂಡಿದ್ದಾನೆಂದು ಭಾವಿಸಿರಿ. ಆತನು ಆ ಚಿತ್ರವನ್ನು ಬಹಳವಾಗಿ ಪ್ರೀತಿಸುತ್ತಾ ತನ್ಮಯನಾಗಿರುತ್ತಾನೆ. ಈ ಕಾಲದಲ್ಲಿ ಆ ಸ್ನೇಹಿತನೇ ನಿಜವಾಗಿ ಆತನ ಮನೆಗೆ ಬಂದಾಗ್ಯೂ ಆತನು ಆವನನ್ನು ಗಮನಿಸುವುದಿಲ್ಲ. ಆತನು ಆ ಚಿತ್ರದಲ್ಲಿ ಅಷ್ಟು ತನ್ಮಯನಾಗಿರುತ್ತಾನೆ. ಇದು ಸರಿಯೇ? ಇದನ್ನು ನೋಡಿದ ಆ ಸ್ನೇಹಿತನು ಆ ಚಿತ್ರವನ್ನು ಅವನ ಹತ್ತಿರ ಬಿಡುತ್ತಾನೆಯೆ? ಎಂದಿಗೂ ಇಲ್ಲ. ಆತನು ತನ್ನ ಜ್ಞಾಪಕಾರ್ಥವಾಗಿ ಆ ಚಿತ್ರವನ್ನು ಕೊಟ್ಟನೇ ಹೊರತು ಆತನನ್ನು ಮರೆಯುವುದಕ್ಕಾಗಿ ಅಲ್ಲ. ಆ ಚಿತ್ರವನ್ನು ನೋಡಿ ಚಿತ್ರದಲ್ಲಿರುವ ಆ ವ್ಯಕ್ತಿಯನ್ನು ಅಥವಾ ಪರಮಾತ್ಮನನ್ನು ಪ್ರೀತಿಸಬೇಕು. ಇದೇ ರೀತಿಯಲ್ಲಿ ಪ್ರಪಂಚದಲ್ಲಿ ನಮಗೆ ಕಾಣುವ ಎಲ್ಲಾ ವ್ಯಕ್ತಿಗಳು ಅಥವಾ ವಸ್ತುಗಳು ಪರಮಾತ್ಮನ ಬೇರೆ ಬೇರೆ ರೂಪಗಳು ಅಥವಾ ವಿಭೂತಿಗಳು. ಈ ರೂಪಗಳನ್ನು ನೋಡಿ ನಾವು ಪರಮಾತ್ಮನನ್ನು ಪ್ರೀತಿಸಬೇಕೇ ಹೊರತು ಆ ವಸ್ತುಗಳನ್ನೇ ಪ್ರೀತಿಸುತ್ತಾ ಪರಮಾತ್ಮನನ್ನು ಮರೆಯಬಾರದು. ಚಿತ್ರವನ್ನು ಅಥವಾ ಪ್ರಾಪಂಚಿಕ ವಸ್ತುಗಳನ್ನು, ನಾವು ಸರಿಯಾಗಿ ಉಪಯೋಗಿಸಿದರೆ ಅವು ನಮ್ಮ ಹತ್ತಿರ ಉಳಿಯುತ್ತವೆ. ಅವುಗಳ ದುರುಪಯೋಗಮಾಡಿದರೆ ಅವು ನಮ್ಮಿಂದ ಕಸಿಯಲ್ಪಟ್ಟು ನಮ್ಮ ಹೃದಯವು ಒಡೆದು ನಮಗೆ ದುಃಖವುಂಟಾಗುತ್ತದೆ. ಚಿತ್ರಕ್ಕಿಂತಲೂ, ಮೂಲ ವಸ್ತುವನ್ನು ನಾವು ಹೆಚ್ಚಾಗಿ ಪ್ರೀತಿಸಿದರೆ ಆ ಚಿತ್ರವು ನಮ್ಮ ಹತ್ತಿರ ಯಾವಾಗಲೂ ಇರುತ್ತದೆ. ಇದೇ ನಿಜವಾದ ವೈರಾಗ್ಯ. ಪ್ರತಿಯೊಬ್ಬ ಗೃಹಸ್ಥಾಶ್ರಮಿಯೂ (ಗಂಡಹೆಂಡಿರಿಬ್ಬರೂ) ಈ ರೀತಿಯ ವೈರಾಗ್ಯವನ್ನು ಅಭ್ಯಾಸಮಾಡಬೇಕು.

ಇದನ್ನೇ ಸ್ವಲ್ಪ ವಿಸ್ತಾರವಾಗಿ ವರ್ಣಿಸೋಣ. ಇಲ್ಲಿ ಒಂದು ವ್ಯಕ್ತಿಯೂ, ಆತನ ಎದುರಿಗೆ ಆತನಿಗೆ ಪ್ರಿಯವಾದ ಇನ್ನೊಂದು ವ್ಯಕ್ತಿ ಅಥವಾ ವಸ್ತುವೂ ಇದೆ ಎಂದು ಭಾವಿಸಿರಿ. ಆತನಿಗೆ ಪ್ರಿಯವಾಗಿ ಆತನನ್ನು ಆಕರ್ಷಿಸುತ್ತಿರುವುದು ಯಾವುದು? ಆದು ಎದುರಿಗಿರುವ ವ್ಯಕ್ತಿಯ ದೇಹವೊ, ರೂಪವೋ, ವರ್ಣವೋ, ಕಣ್ಣುಗಳೋ, ಅಥವಾ ಮೂಗೋ? ಛೇ! ಛೇ! ಇವಾವುದೂ ಅಲ್ಲ. ಎಂದಿಗೂ ಅಲ್ಲ. ಏಕೆಂದರೆ ಆ ರೂಪಾದಿಗಳೇ ಆ ಮನುಷ್ಯನನ್ನು ಆಕರ್ಷಿಸುತ್ತಿದ್ದರೆ ಆ ವ್ಯಕ್ತಿಯ ದೇಹವು ಸತ್ತ ನಂತರ ಸಹ ನಮ್ಮ ಪ್ರೇಮವು ಕಡಿಮೆಯಾಗುತ್ತಿರಲಿಲ್ಲ. ಆಗ ಕೂಡ ಆ ರೂಪ, ಮೂಗು ಇತ್ಯಾದಿಗಳು ಮೊದಲಿನಷ್ಟೇ ಮೋಹಕವಾಗಿರುತ್ತಿದ್ದವು. ಆದರೆ ಸತ್ತ ನಂತರ ಆ ವ್ಯಕ್ತಿಯು ಅಷ್ಟು ಆಕರ್ಷಕವಾಗಿರುವುದಿಲ್ಲ. ಹಾಗಾದರೆ ನಿಜವಾಗಿ ನಮ್ಮನ್ನು ಆಕರ್ಷಿಸಿದ್ದ ಅಥವಾ ನಮ್ಮ ಪ್ರೇಮವನ್ನು ಸೂರೆಗೊಂಡ ಶಕ್ತಿಯಾವುದು? ಆತನ ದೇಹದಲ್ಲಿದ್ದ ಆತ್ಮ ಅಥವಾ ಪರಮಾತ್ಮನಲ್ಲದೆ ಬೇರೆ ಯಾವುದೂ ಅಲ್ಲ. ದೇಹದಲ್ಲಿದ್ದ ಪರಮಾತ್ಮನು, ಆ ದೇಹವನ್ನು ತನ್ನ ಬಟ್ಟೆಯಾಗಿ ಅಥವಾ ತನ್ನ ಚಿತ್ರವಾಗಿ ಆರಿಸಿಕೊಂಡಿದ್ದನು ಅಷ್ಟೆ! ಆದ್ದರಿಂದ ಬಟ್ಟೆಯನ್ನು, ರೂಪವನ್ನು ಅಥವಾ ಚಿತ್ರವನ್ನು ಒಳಗಿರುವ ಅಂತರಾತ್ಮನಿಗಿಂತಲೂ ಹೆಚ್ಚಾಗಿ ಪ್ರೀತಿಸಬಾರದು

ಗಂಡನು ಹೆಂಡತಿಯನ್ನು ಒಂದು ಕನ್ನಡಿಯಂತೆ ತಿಳಿದು, ಅವಳಲ್ಲಿ ಪರಮಾತ್ಮನು ಬಿಂಬಿತವಾಗಿರುವುದನ್ನು ಕಾಣಬೇಕು. ಹೆಂಡತಿಯು ಸಹ ಗಂಡನಲ್ಲಿ ಪರಮಾತ್ಮನನ್ನು ಕಾಣಬೇಕು. ಹೀಗೆ ಪರಸ್ಪರ ಪರಮಾತ್ಮನನ್ನು ಕಾಣಲು ಒಬ್ಬರಿಗೆ ಇನ್ನೊಬ್ಬರು ಸಹಾಯಮಾಡುವಂತೆ ಇರಬೇಕೇ ಹೊರತು, ಗೃಹಸ್ಥಾಶ್ರಮವು ಪರಮಾತ್ಮನಿಂದ ದೂರ ದೂರ ಒಯ್ಯುವಂತೆ ಇರಬಾರದು. ಅಂದರೆ ಬಾಹ್ಯರೂಪವನ್ನು ಅತಿಯಾಗಿ ಪ್ರೀತಿಸುತ್ತಾ ಪರಮಾತ್ಮನನ್ನು ಮರೆಯಬಾರದು. ಗಂಡಹೆಂಡಿರು ಆಧ್ಯಾತ್ಮಿಕ ಉನ್ನತಿಗೆ ಪರಸ್ಪರ ಸಹಾಯಮಾಡದಿದ್ದರೆ ನಿಜವಾದ ಧರ್ಮವು ನೆಲೆಗೊಳ್ಳಲಾರದು. ಪ್ರತಿಯೊಂದು ಮನೆಯಿಂದಲೇ ಧರ್ಮವು ಹೊರಬೀಳಬೇಕು. ಗಂಡನು, ಹೆಂಡತಿಯು ತನ್ನ ಆಧೀನಳೆಂದೂ, ಹೆಂಡತಿಯು, ಗಂಡನು ತನ್ನ ಆಧೀನನೆಂದೂ ತಿಳಿಯದೆ ಪರಸ್ಪರ ಸ್ವಾತಂತ್ರ್ಯವನ್ನಿಂಟು ಮಾಡಬೇಕು. ಎತ್ತನ್ನು ನಮ್ಮ ಆಧೀನದಲ್ಲಿಟ್ಟುಕೊಳ್ಳಬೇಕೆಂದು ಆದಕ್ಕೆ ಹಗ್ಗವನ್ನು ಕಟ್ಟಿ ನಮ್ಮ ಕೈಯ

ನೋಟೀಸು

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

O. S. No. 198/44 R. I. A. 623/46.

M. P. ಬಾರ್ಬೋಜ–ಲೂರೆಸ್ ಬಾರ್ಬೋಜರ ಮಗ–ಶಿರ್ವ ಗ್ರಾಮದ ಮಂಚಕಲ್, —ವಾದಿ.

ಮತ್ತು

C. F. ಕೋದ್ರು–ಪಾಸ್ಕಲ್ ಕೋದ್ರರ ಮಗ ಉಡ್ಪಿ ತಾಲ್ಲೂಕ ಶಿರ್ವ ಗ್ರಾಮ, – ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯು ರೂ. 1000/ಕ್ಕೆ ತಾ. 8-1-44ರಲ್ಲಿ ಮಾರ್ಸೆಲ ಮೆಂಡೋಸಗೆ ಬರೆಕೊಟ್ಟ ಡಿಮಾಂಡ ನೋಟಿನ ಪ್ರಕಾರ ವಸೂಲು ಮಾಡುವ ಹಕ್ಕನ್ನು ವಾದಿಯು ಟ್ರಾನ್ಸಫರ್ ಪಡೆದು ಸದ್ರಿ ಡಿಮಾಂಡ ನೋಟು ಪ್ರಕಾರ ಬಹಾ ಆದಿನಲ್ಲಿ ಪ್ರತಿವಾದಿಯು ವಸೂಲುಕೊಟ್ಟ ಆವಜು ವಜಾ ಹೋಗ್ತಾ ಬಾಕಿ ಬಹಾ ಅಸಲು ವ ಬಡ್ಡಿ ಕೂಡಾ ರೂ. 593--8--10ಕ್ಕೆ ವಾದಿಯು ಮೇಲ್ಕಂಡ ದಾವಾಮಾಡಿ ಸದ್ರಿ ದಾವೆಯಲ್ಲಿ ಪ್ರತಿವಾದಿಯ ಹಕ್ಕಿನ ಸ್ಥಿರಾಸ್ತಿಗಳನ್ನು R. I. A. 623/46ನೇ ಅರ್ಜಿ ಮೂಲಕ ಜಜ್ಜಮೆಂಟ ಮುಂಚೆ ಜಪ್ತಿಮಾಡಬೇಕಾಗಿ ಅಪೇಕ್ಷಿಸಿರುತ್ತಾನೆ. ಸದ್ರಿ ಮೇಲ್ಕಂಡ ದಾವೆಯು ಮತ್ತು ಅರ್ಜಿಯು 18-9-46 ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಡೋಣಾಗಿಯದೆ, ಸದ್ರಿ ವ್ಯಾಜ್ಯ ಮತ್ತು ಅರ್ಜಿ ವ್ಯವಹರಣೆಯಲ್ಲಿ ಮೇಲ್ಕಂಡ ಕೋರ್ಟ ಮುಂದೆ ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಖಾವರಾಗಿ ಮನವಿ ಮಾಡಿಕೊಳ್ಳುವರೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯ ವ ಅರ್ಜಿಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

sd/ **Gratian C. Rego.**

Vakil for plaintiff.

Udipi dated 20-8-46.

ನೀವು ನಿಮ್ಮ ವ್ಯಾವಹಾರಿಕ ಪಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ

ಹಣದ ರಾಶಿಯಲ್ಲಿರಬೇಕಾದ
ಸಿರಿವಂತರಾಗಬೇಕಾದ
ಲಕ್ಷ್ಮೀಪುತ್ರರಾಗಬೇಕಾದ
ಅನುಕೂಲಸ್ಥರಾಗಬೇಕಾದ

ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕೆಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿಲಾದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd: 1906

CANARA BANK LIMITED

(Incorporated in British India. liability of Members Limited.)

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ಲ್ಲಿ ಹಿಡಿದುಕೊಂಡರೆ, ನಾವೂ ಅದರ ಅಧೀನರಾಗುವುದಿಲ್ಲವೇ? ಪರಸ್ಪರ ಸ್ವಾತಂತ್ರ್ಯವನ್ನು ಕೊಡಬೇಕೆಂದರೆ ಸಾಮಾಜಿಕ ಅಥವಾ ನೈತಿಕ ಕಟ್ಟುಗಳನ್ನು ಕಳಚಿ ಸ್ವೇಚ್ಛಾ ವೃತ್ತಿಗೆ ಆಸ್ಪದಕೊಡಬೇಕೆಂದಲ್ಲ. ಇದು ದಾಸ್ಯವೇ ಆಗುತ್ತದೆ. ಹಾಗಾದರೆ ನಿಜವಾದ ಸ್ವಾತಂತ್ರ್ಯ ಎಂದರೇನು? ಹೆಂಡತಿಯು ಗಂಡನ, ಮತ್ತು ಗಂಡನು ಹೆಂಡತಿಯ ದೇಹವನ್ನು ನಂಬದೆ, ಅದನ್ನು ಅವಲಂಬಿಸದೆ, ಆ ದೇಹದಲ್ಲಿರುವ ಪರಮಾತ್ಮನನ್ನು ಪ್ರೀತಿಸುತ್ತಾ, ಆ ಪರಮಾತ್ಮನನ್ನೇ ಆಶ್ರಯಿಸಬೇಕೆಂಬ ಜ್ಞಾನವನ್ನು ಪರಸ್ಪರ ಉಂಟುಮಾಡಿಕೊಡುವುದೇ ನಿಜವಾದ ಸ್ವಾತಂತ್ರ್ಯವನ್ನು ಕೊಡುವಿಕೆಯು. ಗಂಡ ಹೆಂಡಿರು ಪರಸ್ಪರ ಪ್ರೀತಿಸಬೇಕಾದದ್ದು ಆವಶ್ಯವಾದರೂ, ಕೇವಲ ಮಾಂಸದ ಮುದ್ದೆಯನ್ನು ಪ್ರೀತಿಸದೆ, ಅಂತರಾತ್ಮನನ್ನು ಪ್ರೀತಿಸಬೇಕು. ಚರ್ಮ, ಮಾಂಸದ ಮುದ್ದೆ ಇವು ಅಂತರಾತ್ಮನನ್ನು ಮುಟ್ಟಿರುವ ಪರದೆ ಎಂದು ತಿಳಿದು, ಪರದೆಯ ಹಿಂದುಗಡೆ ಅಥವಾ ಒಳಗಡೆ ಇರುವ ಪರಮಾತ್ಮನನ್ನು ಕಾಣಬೇಕು.

ಹಕ್ಕಿಯ ಮೇಲ್ಪಂಕ್ತಿಯಂತೆ ಸಂಸಾರದಲ್ಲಿ ವರ್ತಿಸಿರಿ. ಹಕ್ಕಿಯು ಮರದ ಕೊಂಬೆಯ ಮೇಲೆ ಲೀಲಾಜಾಲವಾಗಿ ಕುಣಿಯುತ್ತಾ ಆಟವಾಡುತ್ತದೆ. ಕೊಂಬೆಯು ಎಷ್ಟೇ ಬಗ್ಗಿದಾಗ್ಯೂ ಆ ಹಕ್ಕಿಗೆ ಬೀಳುತ್ತೇನೆಂಬ ಹೆದರಿಕೆಯೇ ಇರುವುದಿಲ್ಲ. ಏಕೆಂದರೆ ಅದು ಕೊಂಬೆಯ ಮೇಲೆ ಕುಳಿತಿದ್ದಾಗ್ಯೂ, ಕೊಂಬೆಯೇ ತನಗೆ ಆಧಾರವೆಂದು ಅದನ್ನೇ ನಂಬಿರದೆ ತನ್ನ ರೆಕ್ಕೆಯನ್ನು ನಂಬಿರುತ್ತದೆ. ನಾವೂ ಅದೇ ರೀತಿಯಲ್ಲಿ ವರ್ತಿಸಬೇಕು. ಸಂಸಾರದಲ್ಲಿ ಎಷ್ಟೇ ನಿರತರಾಗಿದ್ದರೂ, ಹೆಂಡತಿ ಮಕ್ಕಳು ನೆಂಟರು, ಸ್ನೇಹಿತರು ಇತ್ಯಾದಿ ವ್ಯಕ್ತಿಗಳ ಮೇಲೆ, ಅಥವಾ ಮೋಹಕಾರಕ ವಸ್ತುಗಳ ಮೇಲೆ ಅವಲಂಬಿಸದೆ, ನಮ್ಮ ಪ್ರೇಮವನ್ನು ಆರೂಪಗಳ ಮೇಲಿಡದೆ ಒಳಗಿರುವ ಅಂತರಾತ್ಮನನ್ನೇ ಅವಲಂಬಿಸಿರಬೇಕು.

ನಾವು ಈ ರೀತಿಯಲ್ಲಿ ಆಚರಿಸುತ್ತಾ ಹೆಂಡತಿ, ಮಕ್ಕಳು ಇತ್ಯಾದಿ ಅವಲಂಬಿಗಳೆಲ್ಲರೂ ಇದೇ ರೀತಿಯಲ್ಲಿ ಒಬ್ಬರನ್ನು ಇನ್ನೊಬ್ಬರು ಅವಲಂಬಿಸದೆ, ಅವರ ಮನಸ್ಸು ಪರಮಾತ್ಮನಲ್ಲಿ ನೆಲೆಗೊಳ್ಳುವಂತೆ ಮಾಡಬೇಕು. ಹೆಂಡತಿಮಕ್ಕಳಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂಬುದರ ಅರ್ಥವು ಇದೇ ಆಗಿದೆ.

ಗೃಹಸೌಖ್ಯ

ಪತಿಯು ಪತ್ನಿಗೆ ದೇವನಾಗಿಯೂ ಪತ್ನಿಯು ಪತಿಗೆ ದೇವತೆಯಾಗಿಯೂ, ಪರಿಣಮಿಸಿ ಉಭಯರೂ, ಆತ್ಮೋನ್ನತಿಯನ್ನು ಮಾಡಿಕೊಳ್ಳಬೇಕು. ಪತಿ ಪತ್ನಿಯರು ಪರಸ್ಪರ ದೈವಭಾವನೆಯಿಂದ ನಡೆದುಕೊಳ್ಳುತ್ತಾ ತಮ್ಮ ಉನ್ನತಿಯನ್ನು ಮಾಡಿಕೊಳ್ಳದೆ, ಕ್ಷುದ್ರವಾದ ಸ್ವಾರ್ಥಕ್ಕೋಸ್ಕರ ಉಭಯರೂ ಅಧೋಗತಿಗೀಡಾಗುತ್ತಿದ್ದಾರೆ. ಯಾರು ಈ ಜಗತ್ತಿನ ಅಶಾಶ್ವತ ವಸ್ತುಗಳನ್ನು ಪ್ರೀತಿಸುತ್ತಾರೋ ಮತ್ತು ಅವುಗಳಲ್ಲಿ ವೃಥಾಸಕ್ತಿಯನ್ನುಳ್ಳವರಾಗಿರುತ್ತಾರೆಯೋ, ಅವರು ಕೊನೆಗೆ ಖಂಡಿತವಾಗಿಯೂ ದುಃಖಕ್ಕೀಡಾಗುತ್ತಾರೆ. ಪತಿ ಪತ್ನಿಯರು ತಮ್ಮ ಜಡ ದೇಹವನ್ನೇ ಪ್ರೀತಿಸುತಿದ್ದಾರೆಯೇ ವಿನಹ ಅದರಲ್ಲಿರುವ ಆತ್ಮನನ್ನು ಪ್ರೀತಿಸುವುದಿಲ್ಲ. ಪತಿ ಪತ್ನಿಯರು ಪರಸ್ಪರ ಆಧ್ಯಾತ್ಮಿಕ ಉನ್ನತಿಗೆ ಸಹಾಯಮಾಡಲು ಸಿದ್ಧರಾದ ವಿನಹ ಕುಟುಂಬದಲ್ಲಿ ಸುಖ ಶಾಂತಿಗಳು ಖಂಡಿತವಾಗಿಯೂ ನೆಲಸುವುದಿಲ್ಲ. ಸ್ತ್ರೀಯಳು ಪುರುಷನನ್ನು ಉದ್ಧಾರಮಾಡಬೇಕಾಗಿದ್ದರೆ ಆತನನ್ನು ಬಾಹ್ಯ ವಿಷಯಾಸಕ್ತಿಯಿಂದ ಪಾರುಮಾಡಬೇಕು. ವಿಹಾಹಿತ ಪುರುಷನಿಗೆ ಸ್ತ್ರೀಯಳಿಂದ ಇದೇ ಮಹತ್ವವಾದ ಸಹಾಯವು. ನಾನಾ ಮೋಹಗಳಿಗೆ ಸಿಲ್ಕಬಾರದೆಂಬುದೇ ವಿವಾಹದ ಮುಖ್ಯೋದ್ದೇಶವಾಗಿದೆ. ಆದರೆ ಅನೇಕ ಪುರುಷರಿಗೆ ಸ್ತ್ರೀಮೋಹ ಒಂದನ್ನೇ ನಿವಾರಣೆ ಮಾಡಿಕೊಳ್ಳುವುದು ಅಸಾಧ್ಯವಾಗಿದೆ. ಪತಿಪತ್ನಿಯರಿಗೆ ಪರಸ್ಪರ ಬಾಹ್ಯಾಕಾರದ ಮೇಲಿರುವ ಪ್ರೇಮವು ನಿವಾರಣೆಯಾಗಿ, ಉಭಯರಲ್ಲಿಯೂ ವಾಸವಾಗಿರುವ ಪರಮಾತ್ಮನಲ್ಲಿ ಅವರ ಪ್ರೇಮವು ನೆಲೆಗೊಳ್ಳಬೇಕು. ಮಾಂಸದ ಮುದ್ದೆಯನ್ನು ಪ್ರೀತಿಸದೆ ಅಂತ್ಯದಲ್ಲಿರುವ ದಿವ್ಯ ಪ್ರಭೆಯನ್ನು ಪ್ರೀತಿಸಬೇಕು. ಇದೇ ರೀತಿಯಲ್ಲಿ ಮಕ್ಕಳು, ಸಬಂಧುಗಳು, ಮಿತ್ರರು ಇತ್ಯಾದಿ ದೃಶ್ಯ ಪದಾರ್ಥಗಳನ್ನು ಪ್ರೀತಿಸದೆ ಆ ರೂಪದಲ್ಲಿ ನಟಿಸುತ್ತಿರುವ ಆತ್ಮದೇವನನ್ನೇ ಪ್ರೀತಿಸಿರಿ. ಸಂಸಾರ ಬಂಧನದಿಂದ ಮುಕ್ತರಾಗಲು ಇದೇ ಮುಖ್ಯೋಪಾಯವು. ದುಷ್ಟ ಸೇವಕನನ್ನಿಟ್ಟುಕೊಂಡ ಯಜಮಾನನ ನಡತೆಯನ್ನು ಮೇಲ್ಪಂಕ್ತಿಯನ್ನಾಗಿಟ್ಟುಕೊಂಡರೆ ಗೃಹಸ್ಥಾಶ್ರಮವು ಮನೋನಿಗ್ರಹವನ್ನು ಕಲಿಸುವ ಶಾಲೆಯಾಗಿ ಪರಿಣಮಿಸುವುದು. ಇದೇ ರೀತಿಯಲ್ಲಿ ಕುಟುಂಬದ ನಾನಾ ತೊಂದರೆಗಳೂ, ಅನಾನುಕೂಲತೆಗಳೂ, ಆಧ್ಯಾತ್ಮಿಕ ಉನ್ನತಿಗೆ ಸಹಾಯಮಾಡುವಂತೆ ಮಾಡಿಕೊಳ್ಳಿರಿ.

ದೇವರಲ್ಲಿ ಐಕ್ಯ ಭಾವವನ್ನು ಹೊಂದುವುದಕ್ಕಿಂತ ಮುಂಚೆ ನಿಮ್ಮ ಪತ್ನಿ ಪುತ್ರಾದಿ ಕುಟುಂಬದವರಲ್ಲಿ ಐಕ್ಯ ಭಾವನೆಯನ್ನು ಹೊಂದಲು ಪ್ರಯತ್ನಿಸಿರಿ. ಏಕೆಂದರೆ ಆತ್ಮ ವಿಶ್ವಾಸಕ್ಕೆ ಕುಟುಂಬವು ಒಂದು ಸೋಪಾನವಾಗಿದೆ. ಈ ಸೋಪಾನವನ್ನು ಹತ್ತಿಹೋದ ವಿನಹ ಆತ್ಮೋನ್ನತಿಯ ಮುಂದಣ ಮಾರ್ಗವನ್ನು ನೀವು ಸೇರುವುದಿಲ್ಲ. ಈ ನಿಮ್ಮ ಚಿಕ್ಕ ಕುಟುಂಬದಲ್ಲಿಯೇ ನೀವು ಐಕ್ಯ ಭಾವವುಳ್ಳವರಾಗದ್ದರೆ ವಿಶ್ವ ಕುಟುಂಬದಲ್ಲಿ ಐಕ್ಯ ಭಾವವನ್ನು ಹೇಗೆ ತಾನೆ ಹೊಂದುವಿರಿ? "ಮೊದಲು ನಿಮ್ಮ ಪತ್ನೀ ಪುತ್ರಾದಿಗಳ ಹಿತವೇ ನಿಮ್ಮ ಹಿತವೆಂದು ಭಾವಿಸಿರಿ. ಅವರ ದೇಹವೇ ನಿಮ್ಮ ದೇಹವೆಂದು ತಿಳಿಯಿರಿ. ಈ ಪ್ರಕಾರ ಕುಟುಂಬಕ್ಕೂ ನಿಮಗೂ ಅಬೇಧಭಾವನೆ ಉಂಟಾಗಲಿ. ಅನಂತರ ಆ ನಿಮ್ಮ ಪ್ರೇಮವನ್ನು ನಿಮ್ಮ ವಂಶಗೋತ್ರ, ಕುಲಗಳ ಕಡೆಗೆ ಹೆಚ್ಚಿಸುತ್ತಾ, ಇಡೀ ವಿಶ್ವವನ್ನೆ ವ್ಯಾಪಿಸುವಂತೆ ಮಾಡಿರಿ.

ದೇಹದ ಒಂದು ಭಾಗವಾದ ಕೈಗಳು "ತಮ್ಮ ದುಡುಮೆಯಿಂದ ದೇಹದ ಇತರ ಭಾಗಗಳು ಬೆಳೆಯುತ್ತವೆ." ಎಂದು ತಿಳಿದು ಆಹಾರವನ್ನು ಬಾಯಿಗೆ ಹಾಕದೆ ಸುಮ್ಮನೆ ಕುಳಿತರೆ ಅದರಿಂದ ಕೈಗಳು ಪುಷ್ಟಿಯಾಗುತ್ತವೆಯೇ? ಅದರೆ ಇನ್ನೊಂದು ವಿಧದಿಂದ ಅಂದರೆ ಜೇನುನೊಣ, ಕಟ್ಟಿರುವೆ ಇತ್ಯಾದಿಗಳಿಂದ ಕಚ್ಚಿಸಿಕೊಂಡು ದಪ್ಪಗಾಗಬಹುದು. ಇದು ಹಿತಕರವೇ? ದೇಹದ ಎಲ್ಲಾ ಅವಯವಗಳೂ ಸ್ವಾರ್ಥವನ್ನು ಬಿಟ್ಟು ತಮ್ಮ ಕರ್ತವ್ಯ ಎಂಬ ದೃಷ್ಟಿಯಿಂದ ತಮ್ಮ ತಮ್ಮ ಕೆಲಸಗಳನ್ನು ಮಾಡಿದರೆ ಮಾತ್ರ ದೇಹದ ಎಲ್ಲಾ ಅವಯವಗಳೂ ಪುಷ್ಟಿ ಹೊಂದಬಹುದು. ಇದರಂತೆಯೇ ನೀವಾದರೂ ಮೊದಲು ನಿಮ್ಮ ಕುಟುಂಬದಲ್ಲಿ, ನಂತರ ಇಡೀ ಪ್ರಪಂಚದಲ್ಲಿ ನಿಸ್ವಾರ್ಥ ಬುದ್ಧಿಯಿಂದ ನಿಮ್ಮ ನಿಮ್ಮ ಕೆಲಸಗಳನ್ನು ಪರಮಾತ್ಮನ ಸೇವೆ ಎಂಬ ಭಾವನೆಯಿಂದ ಮಾಡಿರಿ

ಸಕಲ ಪದಾರ್ಥಗಳನ್ನು ಭಗವದ್ಭಾವನೆಯಿಂದ ನೋಡುವುದೇ ಕುಟುಂಬಿಕ ಬಂಧನವನ್ನು ನಿವಾರಣೆ ಮಾಡುವ ಮುಖ್ಯೋಪಾಯವು. ಸ್ತ್ರೀಪುತ್ರಾದಿ ಬಂಧುಬಾಂಧವರು ಸ್ತ್ರೀ ಪುರುಷರೆಂದು ತಿಳಿಯದೆ ದೇವತಾ ಸ್ವರೂಪವೆಂದು ಭಾವಿಸುವುದೇ ಸರ್ವಸಂಗ ಪರಿತ್ಯಾಗವು. ಮೈಗೆ ಬೂದಿಯನ್ನು ಹಚ್ಚಿಕೊಂಡರೆ ವೈರಾಗ್ಯವನ್ನು ತಾಳಿದಂತಾಗಲಿಲ್ಲ. ಸಕಲ ಪದಾರ್ಥಗಳನ್ನೂ ಪರಮಾತ್ಮ ಭಾವನೆಯಿಂದ ನೋಡುವುದೇ ವೈರಾಗ್ಯವು. ಸ್ತ್ರೀಯಳ ವಿಷಯದಲ್ಲಿ ಸ್ತ್ರೀ ಭಾವನೆಯನ್ನೂ, ಮಿತ್ರರ ವಿಷಯದಲ್ಲಿ ಮಿತ್ರರ ಭಾವನೆಯನ್ನೂ, ಶತ್ರುಗಳ ವಿಷಯದಲ್ಲಿ ಶತ್ರು ಭಾವನೆಯನ್ನೂ ತೆಗೆದುಹಾಕಿ ಅವರೆಲ್ಲರಿಗೂ ಮೂಲವಾದ ಆ ನಿತ್ಯ ತತ್ವವೇ ಅವರೆಂದು ತಿಳಿಯಿರಿ.

NOTICE

ಕಾಸರಗೋಡು ಡಿ. ಮು. ಕೋರ್ಟನಲ್ಲಿ

ಕ್ರಮ ನಂಬ್ರ 609'1945- R I- A-
1233 1946

ಪಾರ್ವತಿ ಅಂಮ ಕೂಡಾ —ಅರ್ಜಿದಾರರು

ಮತ್ತು

ಪಾರ್ವತಿ ಅಂಮ ರೆಸ್ಪಾಂಡೆಂಟಳು

ಇವರೊಳಗೆ

ರೆಸ್ಪಾಂಡೆಂಟಳು. ಪಾರ್ವತಿ ಅಂಮ, ಕೂಟ್ಲೋತ ದೇವರ್ನಾಯರ ಸೊಸೆ, ಮತ್ತು ಚಿರಿಯಾ ಅಂಮನ ಮಗಳು, ಕಾಸರಗೋಡು ತಾಲೂಕು ಕುತ್ತಿಕೋಲು ಗ್ರಾಮದಲ್ಲಿರುವವಳು

ಇವರಿಗೆ-

ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರ ಗುಣಕ್ಕೆ ತಾರೀಕು 10 10 1945ರಲ್ಲು ಕೊಡಲ್ಪಟ್ಟ ಪ್ರಿಲಿಮಿನರಿ ಡಿಕ್ರಿ ಮೇರೆಗಿನ ಆಸ್ತಿಯನ್ನು ವಸೂಲು ಮಾಡುವರೆ ತಮಗೆ ಫಾನಲ್ ಡಿಕ್ರಿ ಕೊಡಿಸಬೇಕೆಂತ ಅಪೇಕ್ಷಿಸಿ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 9 9-1946ಕ್ಕೆ ಇಟ್ಟಿರುತ್ತದೆಂತಲೂ ಆ ದಿನ ರೆಸ್ಪಾಂಡೆಂಟಳು ಹಾಜರಾಗದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂತ ಕೂಡಾ ಈ ಮೂಲ್ಲ ತಿಳಿಸೋಣಾಗುತ್ತದೆ.

Sd/ **B S. Kakkilaya**
Advocate for Petitioner.
Kasaragod, 26-8-1946.

For prompt and efficient Banking Service

Bank with

THE VIJAYA BANK LIMITED.

Head Office —**MANGALORE**.

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

WANTED

Organisers on decent salary on a nominal guarantee of business.

For further particulars please apply to:

THE

UNITED KARNATAK INSURANCE Co., Ltd.

HEAD OFFICE **DHARWAR.**

Or

BRANCH OFFICE:

Court Road, UDIPI, S. K.

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಫೋಟೋ ದೊಡನೆ ಬರೆಯಿರಿ.

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

ಮದ್ರಾಸ್ ಎಸೆಂಬ್ಲಿಯ ಕೆಲವು ಪ್ರಶ್ನೋತ್ತರಗಳು.

ಮದ್ರಾಸ್ ಸರಕಾರವು ಲಂಚ ಮತ್ತು ದುರ್ವ್ಯಾಪಾರ ನಿವಾರಣೆಗಾಗಿ ಗುಪ್ತ ಶೋಧನಾ ಯಂತ್ರವೊಂದನ್ನು ನಿರ್ಮಿಸಿ ಅದಿಷ್ಟರಲ್ಲೇ ಕಾರ್ಯಾಸಕ್ತವಾಗಿದೆ. ಇದರ ಪ್ರತ್ಯಕ್ಷಾನುಭವವು ಇಡೀ ಪ್ರಾಂತ್ಯದಲ್ಲೇ ಗ ಆಗ ಹತ್ತಿದೆ! ಈ ಕುರಿತು ಈ ಬಾರಿಯ ಮದ್ರಾಸ್ ಎಸೆಂಬ್ಲಿ ಅಧಿವೇಶನದಲ್ಲಿ ನಡೆದ ಕೆಲವು ಪ್ರಶ್ನೋತ್ತರಗಳು ಇಲ್ಲಿವೆ:

ಸಾಲಾಮ್ ಸಾಹೇಬ್—ಲಂಚಗುಳಿತನದ ಸಮೂಲನಾಶಕ್ಕಾಗಿ ಸಹಾಯ ಮಾಡಲನುಕೂಲವಾಗುವಂತೆ ಲಂಚಗುಳಿತನದ ನಿರೋಧಕ್ಕಾಗಿ ನೇಮಿಸಲ್ಪಟ್ಟಿರುವ ಅಧಿಕಾರಿಗಳ ಚಲನವಲನಗಳನ್ನು ಸ್ಥಳೀಯ ಎಂ. ಎಲ್. ಎ.ಗಳಿಗೆ ತಿಳಿಸಲಾಗುವದೆ?

ಪ್ರಧಾನಿ ಪ್ರಕಾಶಂ—ಲಂಚ ನಿರೋಧ ಅಧಿಕಾರಿಗಳ ಚಲನವಲನವು ಬಹಿರಂಗವಾದಲ್ಲಿ ಅವರ ಕಾರ್ಯಭಂಗವಾಗುವ ಅಪಾಯವಿರುವದರಿಂದ ಅದು ಗುಟ್ಟಾಗಿಯೇ ಇರುತ್ತದೆ.

ಮಿ. ಫ್ರೋಕರ್—ಈ ಕೆಲಸಕ್ಕಾಗಿ ಸರಕಾರವು ನಿರ್ಮಿಸಿರುವ ಆಡಳಿತ ಯಂತ್ರದ ಆಕಾರವೇನು?

ಪ್ರಧಾನಿ—ನಾವು ಈ ಗುಟ್ಟನ್ನು ಹೇಳುವಂತಿಲ್ಲ.

ಶ್ರೀ. ನಾಗಪ್ಪ—ಇಷ್ಟರ ವರೆಗೆ ಲಂಚಗುಳಿತನದ ಎಷ್ಟು ಕೇಸುಗಳು ಹಿಡಿಯಲ್ಪಟ್ಟವೆ?

ಪ್ರಧಾನಿ—ನಿಜಕ್ಕೂ ಆ ವಾರ್ತೆಯನ್ನು ಈಗ ಕೊಡಲಾಗುವದಿಲ್ಲ.

ಶ್ರೀ. ಅನಂತಾಚಾರ್—ಈ ವಿಭಾಗದೊಡನೆ ಸಾರ್ವಜನಿಕರು ಸಂಬಂಧವಿಟ್ಟುಕೊಳ್ಳುವ ವಿಧಾನಗಳೇನಿವೆ?

ಪ್ರಧಾನಿ—ಲಂಚ ನಿರೋಧಕಾಡಳಿತದೊಡನೆ ಸಂಬಂಧವಿಟ್ಟುಕೊಳ್ಳುವದಕ್ಕಾಗಿ ಅನಧಿಕಾರಿಗಳು ಇರುವ ಜಿಲ್ಲಾ ಸಮಿತಿಗಳನ್ನು ನೇಮಿಸಲಾಗಿದೆ.

ಶ್ರೀ. ವೆಂಕಟಸುಬ್ಬಯ್ಯ—ಈ ವಿಭಾಗಕ್ಕೆ ಪೋಲಿಸ್ ಖಾತೆಯಿಂದಲೇ ಅಧಿಕಾರಿಗಳನ್ನು ಆರಿಸಿಕೊಳ್ಳಲಾಗುವದೆ?

ಪ್ರಧಾನಿ—ಈಗ ಹೇಳಿದ್ದಕ್ಕಿಂತ ಹೆಚ್ಚಿಗೇನನ್ನು ಹೇಳುವದೂ ಅಸಾಧ್ಯ.

ವಿ. ಫೆರ್ರೆಲಿ—ಅನಧಿಕಾರೀ ಸಮಿತಿಗಳಿಗೆ ಗುಟ್ಟನ್ನೊಪ್ಪಿಸುವಾಗ ಈ ಕೆಲಸದ ಗುಪ್ತತೆ ಕೆಡಲಾರದೆಂಬ ಸಮಾಧಾನ ಪ್ರಧಾನ ಮಂತ್ರಿಗಳಿಗಿದೆಯೆ?

ಪ್ರಧಾನಿ—ಈ ಪ್ರಶ್ನೆಯನ್ನು ನಾವು ಸಾವಕಾಶವಾಗಿ ಪರಿಶೀಲಿಸಿದ್ದೇವೆ. ಆ ಮೇಲೆಯೇ ಗೂಢತೆಗೆ ಭಂಗಬಾರದಂತಿದ್ದು ಈ ಕೆಲಸದಲ್ಲಿ ಸರಕಾರಕ್ಕೂ ಈ ಸಭೆಗೂ ಸಹಾಯಮಾಡಬಲ್ಲ ಸದಸ್ಯರುಳ್ಳ ಅನಧಿಕಾರೀ ಸಮಿತಿಗಳನ್ನು ರಚಿಸಬೇಕೆಂಬ ನಿರ್ಧಾರಕ್ಕೆ ಬಂದಿದ್ದೇವೆ.

ಫೆರ್ರೆಲಿ—ನ್ಯಾಯ ಪ್ರಕಾರ ಪೋಲಿಸರಿಗೇನೇ ಇರಬೇಕಾಗಿದ್ದ ಅಧಿಕಾರಗಳು ಕಾರ್ಯತಃ ಈ ಅನಧಿಕಾರಿ ಸಮಿತಿಗಳ ಕೈಗೆ ಬರಬೇಕೆಂದು ಸರಕಾರದ ಇಚ್ಛೆಯೆ?

ಪ್ರಧಾನಿ—ಅವರಿಗೆ ಸ್ವಂತ ಅಧಿಕಾರಗಳೇನೂ ಇಲ್ಲ.

ಹಮೀದ್ ಖಾನ್—ಸಾಮಾನ್ಯ ಸಾರ್ವಜನಿಕರು ಈ ಖಾತೆಯೊಡನೆ ಹೇಗೆ ಸಂಬಂಧವಿಟ್ಟುಕೊಳ್ಳಬಹುದು?

ಪ್ರಧಾನಿ—ಸಂಬಂಧಪಟ್ಟ ಅಧಿಕಾರಿಗಳ ಆಗವ. ನವನ್ನಾಗಲೀ ಸಮಯವನ್ನಾಗಲೀ ಕಾಯದೆ ಅನಧಿಕಾರೀ ಸಮಿತಿ ಸ್ಥಾಪನೆಯಾದೊಡನೆ ಸಾರ್ವಜನಿಕರು ಅವರಿಗೆ ಸಮಾಚಾರ ಕೊಡಬಹುದು.

ಬಿ. ಫ್ರೋಕರ್—ಅನಧಿಕಾರಿ ಸಮಿತಿ ನಿರ್ಮಾಣಕ್ಕಿಳಿಯುವ ಮೊದಲು ಪ್ರಧಾನ ಮಂತ್ರಿಗಳು ಈ ಸಭೆಯ ಸಮ್ಮತಿ ತೆಗೆದುಕೊಳ್ಳಲಾರರೆ?

ಪ್ರಧಾನಿ—ಇಂತಹ ಪ್ರಶ್ನೆ ಬೀಳಬಹುದೆಂಬ ನಿರೀಕ್ಷೆ ನನಗಿರಲಿಲ್ಲ. ಜಾಹೀರು ಅಧಿಕಾರ ಈ ಸಭೆಗಿರುವದು ನಿಜ. ಆದರೆ ಸರಕಾರವು ತನ್ನ ಕಾರ್ಯಮಾಡಿಕೊಳ್ಳುವ ವರೆಗೆ ಇದು ತಾಳ್ಮೆ ವಹಿಸಬೇಕು.

ಬೇಗಮ್ ಮೀರ್ ಅಮಿರುದ್ದೀನ್—ಈ ಸಮಿತಿಗಳಲ್ಲಿ ಮುಸ್ಲಿಮರಿಗೆ ಸ್ಥಾನವಿದೆಯೆ?

ಪ್ರಧಾನಿ—ಉದ್ದೇಶ ಪೂರ್ವಕವಾಗಿ ಮುಸಲ್ಮಾನರನ್ನು ಯಾವ ಸಮಿತಿಯಿಂದಾದರೂ ಹೊರಗಿಡುವಂತಿಲ್ಲವೆಂಬುದನ್ನು ಈ ಸಭೆಯ ಮಾನ್ಯ ಸದಸ್ಯರೆಲ್ಲಾ ಸದಾಕಾಲಕ್ಕೂ ತಿಳಿದಿರಬೇಕು.

ಎ ಕಾಳೇಶ್ವರ ರಾವ್—ಲಂಚ ನಿರೋಧಕಾಧಿಕಾರಿಗಳನ್ನು ನೇಮಿಸಿಕೊಳ್ಳುವಾಗ ಹಿಂದೆ ದುರ್ವರ್ತನೆಯುಳ್ಳವರಾಗಿದ್ದ ಯಾರ ನೇಮಕವೂ ಆಗಲಾರದೆಂದು ನಾವು ಕಟ್ಟಿಕೊಳ್ಳಬಹುದೆ?

ಪ್ರಧಾನಿ—ಹೌದು

ಮ್ಯೊದಿನ್ ಕುಟ್ಟಿ—ಈ ಆಡಳಿತ ಯಂತ್ರ ಎಂದಿಗೆ ಜ್ಯಾರಿಗೆ ಬರಬಹುದು?

ಪ್ರಧಾನಿ—ಒಂದು ರೀತಿಯಿಂದ ಅದು ಇಷ್ಟರಲ್ಲೇ ಅಸ್ತಿತ್ವದಲ್ಲಿದೆ.

ಶ್ರೀ. ವರದಾಚಾರಿ—ಅಜ್ಞ ಸಾರ್ವಜನಿಕರನ್ನು ವಂಚಿಸುವದಕ್ಕಾಗಿ ಬೇರೆಯವರೂ ಕೃತಕ ನಟನೆಮಾಡಲಾಗದಂತೆ ಲಂಚ ನಿರೋಧಕಾಧಿಕಾರಿಗಳಿಗೆ ಗುರುತ ಚೀಟಿಯಿರುವದೆ?

ಪ್ರಧಾನಿ—ಅವರು ತಮ್ಮ ಹಣೆ ಅಥವಾ ಎದೆಯಲ್ಲಿ 'ಬೇಜ್' ಹಚ್ಚಿಕೊಳ್ಳಲಾರರು. ಆದರೆ ಪರಿಚಯಾತ್ಮಕ ಚಿಹ್ನೆಗಳು ಅವರಲ್ಲಿ ಸಾಕಷ್ಟಿರುವವು.

ಅನ್ವಾರ್ ಸಾಹೇಬ್—ಈ ಗುಪ್ತ ವಿಭಾಗವು ಗೆಸ್ಟ್ಪೋವಿಗಿಂತ ಭಿನ್ನವಾದುದೆ? (ನಗು).

ಪ್ರಧಾನಿ—ಸದಸ್ಯರಿಗದು ಸ್ವತಃ ಗೊತ್ತಿರಬೇಕು.

ಮಜೂರ-ಮಾಲಕ ವಿವಾದಗಳು

ಶ್ರೀ. ಎ. ಬ ಶೆಟ್ಟಿ—ಸದ್ಯದ ಸರಕಾರ ಸ್ಥಾಪನೆಯಾದ ನಂತರ ಪ್ರಾಂತ್ಯದಲ್ಲಿ ತೀರ್ಮಾನಗೊಂಡ ಮಜೂರ ಮಾಲಕ ಜಗಳಗಳ ಸಂಖ್ಯೆಯೆಷ್ಟು?

ಕೂಲಿಗಾರ ಮಂತ್ರಿ ಮಾನ್ಯ ವಿ. ವಿ. ಗಿರಿ—86 ಜಗಳಗಳು ತೀರ್ಮಾನ ಹೊಂದಿದುವು. ಆ ಪೈಕಿ 13 ಪಂಚಾಯತಿಕೆ ಮತ್ತು ರಾಜಿ ತೀರ್ಮಾನಗಳಿಂದ

ಎ. ಬಿ. ಶೆಟ್ಟಿ—ಬೊಂಬಾಯಿಯಲ್ಲಿ ಮಾಡಿದಂತೆಯೇ ಕೆಲಸಗಾರ ಜಗಳಗಳ ತೀರ್ಮಾನಕ್ಕಾಗಿ ಯಾವುದಾದರೊಂದು ಶಾಸನ ತರುವ ಇಚ್ಛೆ ಸರಕಾರಕ್ಕಿದೆಯೆ?

ಗಿರಿ—ಹೌದು ಸರ್.

ಶ್ರೀ. ನಾಗಪ್ಪ—ಆ 86 ಜಗಳಗಳಲ್ಲಿ ವರ್ಗದಾರರು ಮತ್ತು ರೈತರೊಳಗಿನ ಜಗಳವೂ ಸೇರಿವೆಯೆ?

ಗಿರಿ—ಹೌದು.

ಮಿ ಅಬ್ದುಲ್ ಸಲಾಮ್—ಇಂತಹ ಎಷ್ಟು ಸಂದರ್ಭಗಳಲ್ಲಿ ಪಂಚಾಯಿತಿಕೆಯವರ ವರದಿಗಳನ್ನು ಸರಕಾರವು ಅಂಗೀಕರಿಸಿಲ್ಲ?

ಗಿರಿ—ಸಾಮಾನ್ಯತಃ ಎಲ್ಲಾ ಸಂದರ್ಭಗಳಲ್ಲೂ ನಾವು ಪಂಚಾಯಿತದಾರರ ವರದಿಯನ್ನಂಗೀಕರಿಸಿದ್ದೇವೆ.

ನಾಗಪ್ಪ—ತಂಜಾವೂರಿನ. ವರ್ಗದಾರರು ಮತ್ತು ನಾಗುವಳ್ಳೀದಾರರೊಳಗಿನ ಜಗಳದ ಕುರಿತು ತೀರ್ಮಾನಾಧಿಕಾರಿಯೊಪ್ಪಿಸಿದ್ದ ತೀರ್ಪು ಕಾರ್ಯತಃ ಜ್ಯಾರಿಗೆ ತರಲ್ಪಡದಿದೆಯಲ್ಲವೆ?

ಗಿರಿ—ಹೌದು ಸರ್. ಆ ಹಾದಿಯಲ್ಲಿ ಕಾನೂನಿನ ಕಲವು ಪ್ರತಿಬಂಧಕಗಳಿದ್ದವು.

ನಾಗಪ್ಪ—ತೀರ್ಮಾನಾಧಿಕಾರಿಯ ತೀರ್ಪನ್ನು ಸರಕಾರವು ಜಾರಿಗೆ ತಾರದಿರುವ

ಸಹಕಾರವೇ ಸಾಧನ

ಮನುಷ್ಯನ ಜೀವನ ಅತಿ ಕಷ್ಟ. ವ್ಯಾಪಾರ ಸರಿಯಾಗಿ ನಡೆಯದೆ, ಕೈಗಾರಿಕೆ ನಡಿಸುವುದೂ ಕಷ್ಟತರವಾಗಿ, ವ್ಯವಸಾಯ ಕೂಡಾ ಹಿಂದುಳಿದ ಈ ಕಾಲದಲ್ಲಿ ಹಣದ ಲೇವಾದೇವಿಯೂ ಬಹಳ ಕಡಿಮೆಯಾಗಿದೆ. ಈ ಎಲ್ಲಾ ಉದ್ದೇಶವನ್ನೊಳಗೊಂಡ ಸಂಸ್ಥೆಯಿಂದ ಜನತೆಯ ಹಿತವನ್ನು ಸಾಧ್ಯವಾದಷ್ಟು ಪೂರೈಸಲು ಸ್ಥಾಪಿತವಾದ ಈ ಕಂಪೆನಿಯು ನಿಮ್ಮೆಲ್ಲರ ಸಹಕಾರ ಪಡೆದು ಅಲ್ಲಲ್ಲಿ ತನ್ನ ಶಾಖೆಯನ್ನು ತೆರೆಯಬೇಕೆಂದು ಎಣಿಸಿಯದೆ. ಇದನ್ನು ಸ್ಥಾಪಿಸಿದ ಉದ್ದೇಶ:-ಅನುಕೂಲತೆಗನುಸರಿಸಿ, 1 ವ್ಯಾಪಾರ. 2. ವ್ಯವಸಾಯ. 3. ಕೈಗಾರಿಕೆ. 4. ಲೇವಾದೇವಿ. 5. ಕಂಟ್ರಾಕ್ಟು. 6 ಏಜನ್ಸಿ. ಇತ್ಯಾದಿ. ಈ ಕಂಪೆನಿಯು ಕಾರ್ಯ ಪ್ರಾರಂಭಿಸಿದ ಅತ್ಯಲ್ಪ ಸಮಯದೊಳಗೆ ರೂ. 1 ಲಕ್ಷ್ಯಕ್ಕೆ ಮೇಲ್ಪಟ್ಟ ವ್ಯವಹಾರ ನಡಿಸಿಯದೆ. ಇದರ ಶೇರ್ಸು ಬೇಕಾದವರು ಅರ್ಜಿ ಮುಖಾಂತರ ಪಡೆದುಕೊಳ್ಳಬಹುದು ಡಿಪೊಜಿಟ್ ಅಂಗೀಕರಿಸಲ್ಪಡುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಶ್ರೀ ಮಾತಾ ಯುನೈಟೆಡ್, ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸೀಸ್ ಲಿಮಿಟೆಡ್

ಜಯಮಂಗಳಂ ಬಿಲ್ಡಿಂಗ್ಸ್, ಕುಂದಾಪುರ.

(Incorporated in British India. liability of Members Limited.)

ನರೆತ ಕೂದಲು

ರಂಗನ್ನು ಉಪಯೋಗಿಸಬೇಡಿರಿ!

ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ. ಆಗ ತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕಪ್ಪಗೆ ನಿಲ್ಲುವುದು. ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವುದು. ಕೆಲವೇ ನರೆತ ಕೂದಲುಗಳಿಗಾದರೆ ರೂಪಾಯಿ 2/- ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿಗಾದರೆ ರೂ. 3 8-0ರ ಸೀಸೆ; ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/ ರ ಒಂದು ಸೀಸೆಯನ್ನು ಪಡಕೊಳ್ಳಬೇಕಾಗುವುದು ಗುಣಕಾರಿಯಾಗಲಿಲ್ಲವೆಂದು ಪ್ರತಿಪಾದಿಸುವವರಿಗೆ ಇಮ್ಮಡಿ ಕ್ರಯ ವಾಪಾಸು.

ಬಿಳಿ ತೊನ್ನು ಮತ್ತು ಲುಕೊಡ್ರಮ

ಬಿಳಿ ತೊನ್ನು ಮತ್ತು ಲುಕೊಡ್ರಮ (Leucoderma) ಮಹಾ ವ್ಯಾಧಿಗಳನ್ನು ಹೋಗಲಾಡಿಸುವರೆ ಈ ಔಷಧಿಯನ್ನು ಲೇಪಿಸಿರಿ. ನೂರಾರು ಹಕೀಮರೂ, ಡಾಕ್ಟರರೂ, ಕವಿರಾಜರೂ ಅಸಾಧ್ಯವೆಂದು ದೂರೀಕರಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪಾಯಿ 2 8 0.

ಕಿವುಡುತನ

ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ-ಬೆಲೆ ರೂಪಾಯಿ 2/-

ಸ್ತಂಭನ ಮಾತ್ರೆ

ಸಂಜೆ ಒಂದು ಮಾತ್ರೆಯನ್ನು ಸೇವಿಸಿದ್ದರೆ ಅಪರಿಮಿತವಾದ ಆನಂದವನ್ನು ಅನುಭವಿಸಿಯೇ ತೀರಬೇಕು ಕಳೆದುಹೋದ ಪುರುಷತ್ವವು ವಿದ್ಯುಚ್ಛಕ್ತಿಯೋಪಾದಿಯಲ್ಲಿ ಮರಳಿ ಬರುವುದು. ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ. 16 ಮಾತ್ರೆಗಳಿಗೆ ರೂಪಾಯಿ 1/-

ಪತ್ರವ್ಯವಹಾರ ಇಂಗ್ಲಿಷ್ ವ ಹಿಂದಿಯಲ್ಲಿ.

Krishna Chandra,
No. 5, P.O. Katri Sarai (Gaya)

ಸಂದರ್ಭದಲ್ಲಿ ತೀರ್ಮಾನಾಧಿಕಾರಿಯನ್ನು ನೇಮಿಸುವ ಉದ್ದೇಶವಾದರೂ ಏನೆಂದು ನಾನು ಕೇಳಬಹುದೆ?

ಗಿರಿ—ಕಾನೂನು ಪ್ರತಿಬಂಧಕವಿರುವ ಸಂದರ್ಭಗಳಲ್ಲೂ, ತೀರ್ಮಾನಗಳನ್ನು ಜ್ಯಾರಿಗೆ ತರುವದು ಅಸಾಧ್ಯವಾಗುತ್ತದೆ.

ನಾಗಪ್ಪ—ಒಬ್ಬ ತೀರ್ಮಾನಾಧಿಕಾರಿಯ ನೇಮಕವಾದ ಮೇಲೆ ಎರಡು ಪಕ್ಷದವರೂ ಆತನ ತೀರ್ಪಿಗೆ ಒಳಗಾಗಲು ಬದ್ಧರಾಗಿರುವದು ಉತ್ತಮವಲ್ಲವೆ?

ಗಿರಿ—ಸಾಮಾನ್ಯವಾಗಿ ಹಾಗೆಯೇ ಗಣಿಸಲ್ಪಟ್ಟಿದೆ ಮತ್ತು ಆಗಿವೆ.

ವೆಂಕಟ ಸುಬ್ಬಯ್ಯ—ಸದ್ಯಸ್ಥಿತಿಯಲ್ಲಿ ಮುಷ್ಕರಗಳಿಂದಾಗುತ್ತಿರುವ ಪರಿಣಾಮಗಳನ್ನು ಗಮನಿಸಿ, ಉದ್ಯಮಗಳಲ್ಲೆಲ್ಲಾ ಸಮತಾವಾದ ಜ್ಯಾರಿಗೆ ತರುವದು ಉತ್ತಮವೆಂಬ ಯೋಚನೆಯಲ್ಲಿ ಮಂತ್ರಿಗಳಿದ್ದಾರೋ ಎಂಬುದನ್ನು ಹೇಳಬಹುದು?

ಗಿರಿ—ಪ್ರಶ್ನೆಯ ಹೊತ್ತಿನಲ್ಲಿ ಉತ್ತರಿಸಲಸಾಧ್ಯವಾಗುವಷ್ಟು ದೊಡ್ಡ ಪ್ರಶ್ನೆಯಿದು.

ಕಾಳೇಶ್ವರ ರಾವ್—ಹೆಚ್ಚಿನ ಮುಷ್ಕರಗಳ ಹಿಂಗಡೆಯಲ್ಲಿ ಕಮ್ಯೂನಿಸ್ಟರಿದ್ದು ಅವರು ತಮ್ಮ ಅಸಾಧ್ಯ ಬೇಡಿಕೆಗಳಿಂದಾಗಿ ರಾಜೀ ಪ್ರಯತ್ನಗಳನ್ನು ನಿಷ್ಫಲಗೊಳಿಸುತಿದ್ದಾರೆಂಬುದು ನಿಜವಲ್ಲವೆ?

ಗಿರಿ—ಸದಸ್ಯರಿತ್ತ ಈ ವಾರ್ತೆಯನ್ನು ಗ್ರಹಿಸಿಕೊಂಡೆ.

ಮಹಬೂಬ್ ಅಲಿಬೈಗ್—ಈಗ ಕಮ್ಯೂನಿಸ್ಟರನ್ನಿಷ್ಟವರ ನಾಯಕತ್ವದಲ್ಲಿರುವ ಕೆಲಸಗಾರರು, ಕಾರ್ಖಾನೆಗಾರ ಸರಕಾರವಿದ್ದಾಗ ಸ್ವತಃ ಕಾಂಗ್ರೆಸಿಗರ ನಾಯಕತ್ವದಲ್ಲಿದ್ದರೆಂಬುದು ಮಂತ್ರಿಗಳಿಗೆ ಗೊತ್ತಿದೆಯೆ?

ಅಧ್ಯಕ್ಷರು—ಈ ಪ್ರಶ್ನೆಯೇಳುವದಿಲ್ಲ.

ಹಮೀದ್‌ಖಾನ್—ಈ ಪ್ರಾಂತ್ಯದಲ್ಲೆಲ್ಲಾ ನಡೆಯುತ್ತಿರುವ ಮುಷ್ಕರಗಳ ಅಸುಟರೋಗ ನಿವಾರಣೆಗಾಗಿ ಒಂದು ಸ್ಪಷ್ಟ ಶಾಸನ ತಯಾರಿಸುವ ಆಲೋಚನೆಯು ಮುಷ್ಕರ [illegible] ರುವ ಮಂತ್ರಿಗಳಿಗಿದೆಯೆ?

ಗಿರಿ—ಹೌದು.

ವೆಂಕಟೇಶ್ವರಲು—ಮುಷ್ಕರಗಳು ಅನಗತ್ಯವಾಗುವಂತೆ ಕೆಲಸಗಾರರಿಗೆ ಉತ್ತಮ ಜೀವನೋಪಾಯ ಕಲ್ಪಿಸುವ ಶಾಸನ ತರುವ ಆಲೋಚನೆಯಲ್ಲಿ ಮಂತ್ರಿಗಳಿದ್ದಾರೆಯೆ?

ಗಿರಿ—ಇದನ್ನೂ ನಾವು ಪರ್ಯಾಲೋಚಿಸುತಿದ್ದೇವೆ.

ಅಬ್ದುಲ್ ಸಾಲಮ್—ಈಗ ಮಂತ್ರಿಗದ್ದುಗೆಯಲ್ಲಿರುವ ಕೆಲವರು ಗತಕಾಲದಲ್ಲಿ ಮುಷ್ಕರಗಾರರ ನಾಯಕರಾಗಿಯೂ ಮುಷ್ಕರಗಳ ಪ್ರೇರೇಪಕರಾಗಿಯೂ ಇರಲಿಲ್ಲವೆ?

ಗಿರಿ—ಆ ವಿಷಯ ನನಗೆ ಗೊತ್ತಿಲ್ಲ.

ಅಬ್ದುಲ್ ಸಾಲಮ್—ಈಗಿನ ಕೂಲಿಗಾರ ಮಂತ್ರಿಗಳೇ ಈ ಮೊದಲು ಮುಷ್ಕರಗಳ ನಾಯಕರಾಗಿದ್ದಿಲ್ಲವೆ?

ಗಿರಿ—ಅದಕ್ಕಾಗಿ ನನಗೇನೂ ಪಶ್ಚಾತ್ತಾಪವಿಲ್ಲ.

ಸಾಲಮ್—ವ್ಯವಸಾಯ ಸಂಬಂಧದ ಕೆಲಸಗಾರರ ಕುರಿತಾದ ಶಾಸನವೂ ಸರಕಾರದ ದೃಷ್ಟಿಪಥದಲ್ಲಿದೆಯೆ?

ಗಿರಿ—ಹೌದು.

ನಮ್ಮ ಕನ್ನಡ ನಾಡು

ಸದ್ಯಕ್ಕೆ ನ ಡಿನ ಸುತ್ತಲೂ ಅನೇಕ ಕನ್ನಡ ಭಾಗಗಳು ಬೇರೆ ಭಾಷಾಪ್ರದೇಶಗಳಲ್ಲಿ ವಿಳೆತವಾಗಿ ಕರ್ನಾಟಕದ ಗಡಿ ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳುವದು ಕಠಿಣವಾಗಿದೆ. ಮುಂದೆ ಸೀಮಾಸಮಿತಿಯು (Boundary Commission) ಕೂಡಿ ಈ ದ್ವಿಭಾಷಾ ಪ್ರದೇಶಗಳ ಸಮಸ್ಯೆ ಬಿಡಿಸಿ ಪ್ರಾಂತಗಳ ಗಡಿ ಹಾಕಿಕೊಡಬೇಕಾಗುವದು. ಆದರೆ ಈಗಿನ ಮಟ್ಟಿಗೆ ಕನ್ನಡ ಪ್ರಾಮುಖ್ಯವಿರುವ ಅಥವಾ ಕನ್ನಡವು ಪ್ರಾದೇಶಿಕ ಭಾಷೆಯುಳ್ಳ ಪ್ರದೇಶಗಳನ್ನೇ ಗಣನೆಗೆ ತೆಗೆದುಕೊಂಡು ಅಖಂಡ ಕರ್ನಾಟಕದ ಚಿತ್ರ ರಚಿಸಲಾಗಿದೆ.

ಈ ಅಖಂಡ ಕರ್ನಾಟಕವು ಎಲ್ಲಕ್ಕೂ ಹೆಚ್ಚೆಂದರೆ ದಕ್ಷಿಣೋತ್ತರ 420 ಮೈಲು ಪೂರ್ವ ಪಶ್ಚಿಮ 325 ಮೈಲು ಅಳತೆಯದಾಗಿ ಸುಮಾರು 78,500 ಚದರ ಮೈಲು ವಿಸ್ತೀರ್ಣವೂ 1,860,0000 ಪ್ರಜಾಸಂಖ್ಯೆಯುಳ್ಳದ್ದೂ ಇರುತ್ತದೆ ಈ ನಾಡು ಉತ್ತರ ಪೂರ್ವ ದಕ್ಷಿಣಗಳಲ್ಲಿ ಅನುಕ್ರಮವಾಗಿ ಮಹಾರಾಷ್ಟ್ರ, ಆಂಧ್ರ, ತಮಿಳು, ಕೇರಳ ಪ್ರದೇಶಗಳಿಂದ ಆವರಿಸಲ್ಪಟ್ಟದ್ದು ನಾಡಿನ ಪಶ್ಚಿಮಕ್ಕೆ ಸುಮಾರು 200 ಮೈಲಿನಷ್ಟು ಸಮುದ್ರ ಕರಾವಳಿಯಿದೆ.

ಆಡಳಿತಕ್ಕೆ ಸಣ್ಣದಲ್ಲ

ಸದ್ಯಕ್ಕೆ ಈ ಪ್ರದೇಶವು 19 ವಿವಿಧ ಆಡಳಿತೆಗಳಲ್ಲಿ ಕೆಳಗಿನಂತೆ ಚೆದರಿ ಹಂಚಿಹೋಗಿರುವದು: ಮುಂಬೈ ಇಲಾಖೆಗೆ ಒಳಪಟ್ಟ ಬೆಳಗಾವಿ, ವಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಹಾಗು ಸಾತಾರಾ ಸೊಲ್ಲಾಪುರ ಜಿಲ್ಲೆಗಳ ಕನ್ನಡ ಭಾಗಗಳು; ಮದ್ರಾಸ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆ, ಅನಂತಪುರ, ಸೇಲಂ, ಕೊಯಿಮುತ್ತೂರು ಜಿಲ್ಲೆಗಳ ಕನ್ನಡ ಭಾಗಗಳು; ಕೊಡಗು ಪ್ರಾಂತ, ಮೈಸೂರು, ರಾಮದುರ್ಗ, ಜಮಖಂಡಿ, ಮುಧೋಳ, ಜತ್ತಿ, ಅಕ್ಕಲಕೋಟೆ, ಸವಣೂರ, ಸೊಂಡೂರು ಸಂಸ್ಥಾನಗಳು, ಹೈದರಾಬಾದ ಸಂಸ್ಥಾನದ ಕೊಪ್ಪಳ, ಬೀದರ, ಗುಲಬರ್ಗಾ, ರಾಯಚೂರ ಜಿಲ್ಲೆಗಳು; ಮತ್ತು ಕೊಲ್ಹಾಪುರ, ಔಂಧ, ಮಿರಜಿ (ಹಿರಿ, ಕಿರಿ) ಕುರಂದವಾಡ (ಹಿರಿ, ಕಿರಿ) ಸಾಂಗ್ಲಿ ಸಂಸ್ಥಾನಗಳ ಕನ್ನಡ ಭಾಗಗಳು ಈ ವಿಸ್ತಾರವಾದ ಕನ್ನಡನಾಡು ಈಗ ಪ್ರತ್ಯೇಕ ಪ್ರಾಂತಗಳಾಗಿರುವ ಆಸಾಮು (55014 ಚ. ಮೈ.)ದ ಒಂದೂವರೆಪಟ್ಟು ಸಿಂಧದ (46378 ಚ. ಮೈ) ಎರಡು ಪಟ್ಟು, ಓಡಿಸ್ಸ (13700 ಚ. ಮೈ) ಸರಹದ್ದ (13510 ಚ ಮೈ) ಪ್ರಾಂತಗಳ ಆರುಪಟ್ಟು ಆಗುವದು ಜನಸಂಖ್ಯೆ ಮಾನದಿಂದ ಅನುಕ್ರಮವಾಗಿ ಎರಡು, ಐದು, ಮೂರು ಮತ್ತು ಎಂಟು ಪಟ್ಟು ಇರುವದು. ಇಂದ ಮೇಲೆ ಪ್ರಾಂತವು ಚಿಕ್ಕದಾಗಿ ಆಡಳಿತ ಸಾಧ್ಯವಾಗಲಿಕ್ಕಿಲ್ಲ ಎಂಬ ಅಂಜಿಕೆಗೆ ಕಾರಣವಿಲ್ಲ.

ಐತಿಹಾಸಿಕ, ಆರ್ಥಿಕ, ಸಾಂಸ್ಕೃತಿಕ ದೃಷ್ಟಿಯಿಂದಲೂ ಕರ್ನಾಟಕವು ಪ್ರತ್ಯೇಕ ಪ್ರಾಂತಕ್ಕೆ ಯೋಗ್ಯವಿರುವದು.

ಉಜ್ವಲ ಇತಿಹಾಸ

ಮೊನ್ನೆಮೊನ್ನಿನ ವರೆಗೆ ಕರ್ನಾಟಕವು ಮೆರೆದು ಬಾಳಿದ ಪ್ರದೇಶ. ಕ್ರಿ. ಶ 391 ರ ಮೊದಲು ಮಾಡಿಕೊಂಡು ಚಲುಕ್ಯರು, ರಾಷ್ಟ್ರಕೂಟರು, ಕಲಚೂರ್ಯರು, ಯಾದವರು, ಹೊಯ್ಸಳರು, ಕದಂಬರು, ವಿಜಯನಗರದ ನರಪತಿಗಳು ಮುಂತಾದ ಪ್ರಸಿದ್ಧ ರಾಜವಂಶಗಳು ಆಳಿದ ಪ್ರದೇಶವಿದು ಚಲುಕ್ಯ ಚಕ್ರವರ್ತಿ, ಎರಡನೇ ಪುಲಿಕೇಶಿ, ರಾಷ್ಟ್ರಕೂಟರ ನೃಪತುಂಗ, ಶಕಪುರುಷ ವಿಕ್ರಮಾದಿತ್ಯ ಮೊದಲಾದ ಜಗಜ್ಜೇತರು ಈ ನಾಡಿನಲ್ಲಿ ಮೆರೆದರು. ಮುಸಲ್ಮಾನರ ಧಾಳಿಯನ್ನು ಎರಡುನೂರು ವರುಷಗಳ ವರೆಗೆ ತಡೆಹಿಡಿದು ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿ ಇಡೀ ದಕ್ಷಿಣ ಹಿಂದುಸ್ಥಾನವನ್ನೆಲ್ಲ ತಮ್ಮ ಸ್ವಾಧೀನಮಾಡಿಕೊಂಡು ಆಳಿದ ವಿಜಯ ನಗರ ಸಾಮ್ರಾಜ್ಯವಾದರೂ ಕನ್ನಡಿಗರದು.

ಆರ್ಥಿಕ ದೃಷ್ಟಿಯಿಂದ ನೋಡಿದರೆ ಕರ್ನಾಟಕ ಯಾವುದಕ್ಕೂ ಹಿಂದೆ ಬೀಳಬೇಕಾಗಿಲ್ಲ. ಅನೇಕ ಶತಮಾನಗಳಿಂದ ಈ ನಾಡು ಒಳ್ಳೆ ಸಂಪದ್ಸಮೃದ್ಧ ರಾಜ್ಯವೆಂದು ಹೆಸರಾಗಿದೆ ಭೂ. ಜಲ, ಖನಿಜ ಸಂಪತ್ತಿ ಹಾಗೂ ನಿಸರ್ಗಸೌಂದರ್ಯ ವಿಪುಲವಿರುವದು. ಚಿನ್ನ, ಕಬ್ಬಿಣ, ಮ್ಯಾಂಗನೀಸ, ಅಭ್ರಕ ಮುಂತಾದ ಲೋಹಗಳು ಸಿಗುವವು. ಎಲ್ಲ ತರಹದ ಆಹಾರ ಧಾನ್ಯಗಳು, ಹತ್ತಿ ಕಬ್ಬು ಮುಂತಾದ ಬೆಳೆಗಳು, ಗಂಧದ ಮರ ಮುಂತಾದ ವೃಕ್ಷಗಳು ಇಲ್ಲಿ ಬೆಳೆಯುತ್ತವೆ. ಕರ್ನಾಟಕವು ಅನಾದಿಕಾಲದಿಂದಲೂ ಪರದೇಶಗಳೊಂದಿಗೆ ವ್ಯಾಪಾರ ಮಾಡುತ್ತಬಂದಿದೆ ಈಗಾದರೂ ಮಂಗಳೂರು, ಮಲ್ಪೆ, ಭಟಕಳ, ಹೊನ್ನಾವರ, ಕಾರವಾರಗಳು ಉತ್ತಮ ಬಂದರುಗಳಾಗಬಲ್ಲವು. ಪ್ರಾಂತದವಿವಿಧಔದ್ಯೋಗಿಕ ಪ್ರಗತಿಗೆಬೇಕಾದಸಾಧನಸಂಪತ್ತಿರುವದು.

ಕರ್ನಾಟಕ ಸಂಸ್ಕೃತಿಯಾದರೂ ಉಜ್ವಲವಿರುವದು. ಕರ್ನಾಟಕದ ಶಿಲ್ಪಕಲೆ ಸಂಗೀತಗಳು ಸುಪ್ರಸಿದ್ಧವಿರುವವು. ಮಧ್ವಾಚಾರ್ಯ, ಬಸವಣ್ಣನವರು ಇಲ್ಲಿ ಹುಟ್ಟಿ ಬೆಳೆದು ಧರ್ಮೋಪದೇಶ ಮಾಡಿದರು. ಶಂಕರ, ರಾಮಾನುಜರೂ ಇದೇ ನಾಡಿನ ಆಶ್ರಯ ಹೊಂದಿ ಧರ್ಮಪ್ರಸಾರ ಮಾಡಿದರು. ಅದರಂತೆ ಬೌದ್ಧರೂ ಜೈನರೂ ಇಲ್ಲಿ ಮನೆಮಾಡಿರುವರು. ಹೀಗೆ ಕನ್ನಡಿಗರು ಉಜ್ವಲಧರ್ಮಾಭಿಮಾನಿಗಳೆಂದೂ ಪರಧರ್ಮಸಹಿಷ್ಣುಗಳೆಂದೂ ಪ್ರಸಿದ್ಧರಾಗಿರುವರು.

ಕನ್ನಡ ಸಾಹಿತ್ಯವಂತೂ ಬಹಳ ಪುರಾತನವಾದುದು. ಕ್ರಿಸ್ತಶಕದ ಆರಂಭದಲ್ಲಿಯೇ ನಮ್ಮಲ್ಲಿ ಮಹಾಕವಿಗಳಿದ್ದರೆಂದು ತಿಳಿದುಬರುತ್ತದೆ. ರನ್ನ, ಪೊನ್ನ, ಜನ್ನ ಪಂಪ ಮೊದಲಾದವರ ಮಹಾಕಾವ್ಯಗಳು, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಲಕ್ಷ್ಮೀಶ, ಚಾಟು ವಿಠ್ಠಲನಾಥ ಮೊದಲಾದವರ ಭಾರತ ರಾಮಾಯಣ ಭಾಗವತಗಳು, ಶಿವಶರಣರ ವಚನಗಳು, ದಾಸರ ಕೀರ್ತನೆಗಳು ಲೋಕಪ್ರಿಯವಿರುವವು.

ಹೀಗೆ ಎಲ್ಲ ದೃಷ್ಟಿಯಿಂದಲೂ ಮಹೋನ್ನತ ಪದವಿಗೆ ಮುಟ್ಟಿದ್ದ ನಮ್ಮ ನಾಡು ಕಾಲ ಪರಿಸ್ಥಿತಿಯಿಂದ ಛಿನ್ನ ವಿಚ್ಛಿನ್ನವಾಗಿ ಈ ದುರ್ಗತಿಗೆ ಇಳಿದಿದ್ದರೂ ಈಗ ಒಂದುಗೂಡಿ ಪುನಃ ತನ್ನ ಹಿಂದಿನ ಉಚ್ಚಸ್ಥಿತಿಗೆ ಮುಟ್ಟಬೇಕೆಂದು ಪ್ರಯತ್ನಿಸುವದು ಪ್ರತಿಯೊಬ್ಬ ಕರ್ನಾಟಕಸ್ಥನ ಕರ್ತವ್ಯವಿರುವದು.

ಈಗ ಇಡೀ ಕರ್ನಾಟಕದ ಏಕೀಕರಣದ ಆವಶ್ಯಕತೆ ಹೇಳುತ್ತ ಕೂಡುವ ಕಾಲವಲ್ಲ ಭಾರತಕ್ಕೆ ಸ್ವಾತಂತ್ರ್ಯವು ಆವಶ್ಯ ಎಂದು ಹೇಳುವದು ಹೇಗೆ ಅನವಶ್ಯಕವೊ ಹಾಗೆಯೆ ಕರ್ನಾಟಕಕ್ಕೆ ಏಕಪ್ರಾಂತೀಕರಣ ಇದು ಅವಶ್ಯ ಎಂದು ಹೇಳುವದು ಅನವಶ್ಯ ಆದುದರಿಂದಲೆ ಸ್ವತಂತ್ರ ಭಾರತ, ಏಕತಂತ್ರ ಕರ್ನಾಟಕ, ಎಂಬುದೇ ನಮ್ಮ ಗುರಿ. ಅದು ಕೇವಲ ಒಂದು ಘೋಷಣೆಯಾಗಿ ಉಳಿಯದೆ ಅದನ್ನು ಪ್ರತ್ಯಕ್ಷ ಸಾಧಿಸುವ ಕಾಲವು ಈಗ ಒದಗಿದೆ ಈ ಸಮಯದಲ್ಲಿ ದಿವ್ಯಚಕ್ಷುವಿನಿಂದ ಆ ಭವಿಷ್ಯಕಾಲದ ಭವ್ಯ ಕರ್ನಾಟಕದ ವಿಶ್ವರೂಪವನ್ನು ದರ್ಶಿಸಿ ಕರ್ನಾಟಕದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನುಮನದಿಂದ ಆ ಧ್ಯೇಯವನ್ನು ಸಾಧಿಸಲು ಯತ್ನಿಸುವದು ಅವಶ್ಯ. ಹಾಗೆ ಯತ್ನ ಮಾಡಿದಲ್ಲಿ ಆ ಗುರಿಯು ಶೀಘ್ರವಾಗಿ ಮತ್ತೆ ಮೊದಲಿನಂತೆ ಕರ್ನಾಟಕವು ತನ್ನ ಕಳಕೊಂಡ ಏಕತ್ವವನ್ನು ಪಡೆಯುವದು; ತನ್ನ ದಿವ್ಯ ವಿಚಾರ ಆಚಾರಗಳಿಂದ ತಾನು ಧನ್ಯವಾಗಿ ಇಡೀ ಭರತ ಖಂಡದ ಹೆಚ್ಚಿನ ಸೇವೆ ಮಾಡಿ ಪರಸ್ಪರ ಶ್ರೇಯೋಭಿವೃದ್ಧಿಗೆ ನೆರವಾಗಬಲ್ಲದು.

ಜಯ ಹಿಂದ. ಜಯ ಕರ್ನಾಟಕ.

—ಏಕತಂತ್ರ ಕರ್ನಾಟಕ' ಪುಸ್ತಕದಿಂದ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಒಂದೇ ರೂ. 1—4—0

ರೂ. 1 8 0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವದು.

ಪ್ರತಿಗಳು ಸಿಗುವ ಸ್ಥಳಗಳು.—

1 ಸಿಪ್ಲಿ ಬುಕ್ ಡಿಪೊ, ಮಂಗಳೂರು 2. ಸತ್ಯಶೋಧಕ ಪುಸ್ತಕ ಭಂಡಾರ, ಮಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ 4. ಸಾವಂತ ಗುರುಬಾಳ್, ಉಡುಪಿ. 5 ನವಯುಗ ಆಫೀಸು, ಉಡುಪಿ.

The Canara Banking Corporation Limited.

(Incorporated in British India, with limited Liability)

Estd. 1906.

Head Office: **UDIPI**, South Kanara.

CAPITAL

Authorised	Rs 25,00,000
Issued & Subscribed ...	,, 16,00,000
Paid up	,, 15,64,715
Reserves Over	,, 43 Lakhs

Branches at- Bombay, Madras, Bangalore, Coimbatore, Selem, Calicut, Hubli, Mysore, Cochin, Manglore, Madras etc., etc.

Banking Business of Every Description Transacted.

ಉಡುಪಿ, ಗುರುವಾರ, ೫-೯-'೪೬

ಅರುಣೋದಯ

ನಡುಗಾಲ ರಾಷ್ಟ್ರೀಯ ಸರಕಾರ-ನೆಹರು ಮಂತ್ರಿಮಂಡಲ-ಅಧಿಕಾರ ವಹಿಸಿಕೊಂಡ ತಾ. 2-9-46ನೇ ಸೋಮವಾರ ಪೂರ್ವಾಹ್ನ 11 ಘಂಟೆಯಿಂದ ಭಾರತದಲ್ಲಿ ನವ ಮನ್ವಂತರವಾರಂಭವಾಗಿದೆ. ಇದನ್ನು ಸ್ವಾತಂತ್ರ್ಯ ಸೂರ್ಯೋದಯವೆನ್ನಲಾಗುವದಿಲ್ಲವಾದರೂ ಅರುಣೋದಯವೆನ್ನಲಡ್ಡಿಯಿಲ್ಲ. ಲೋರ್ಡ್ ವೇವೆಲರ ಘೋಷಣೆಯು "ದೈನಂದಿನ ಆಡಳಿತೆಯಲ್ಲಿ ಅತೀ ಹೆಚ್ಚಿನ ಅಧಿಕಾರವನ್ನು ಈ ಸರಕಾರಕ್ಕೀಯಲಾಗುವದು" ಎಂಬ ವಾಕ್ಯದೊಡನೆ ಪ್ರಥಮ ರಾಷ್ಟ್ರೀಯ ಪ್ರಧಾನಿ ಪಂಡಿತ ನೆಹರುಗಳ "ಜಾತೀಯ ಭಾವವನ್ನೇ ಮರೆತು ಅಖಿಲ ಭಾರತೀಯ ದೃಷ್ಟಿಯಿಟ್ಟುಕೊಂಡು ಜನಜೀವನದ ಮಟ್ಟವನ್ನು ಸುಧಾರಿಸುವ ಮತ್ತು ಶಾಂತಿ ಸೌಖ್ಯ ಸಮಾನತೆ ಸಾಧಿಸುವ ಮೂಲಕ ಸಂಪೂರ್ಣ ಸ್ವಾತಂತ್ರ್ಯದತ್ತ ಸಾಗುವೆವು" ಎಂಬ ವಚನ ಬೆರೆತು ಭಾರತ ಸ್ವಾತಂತ್ರ್ಯದ ಉದಯರಾಗ ಹಾಡಲ್ಪಟ್ಟಿದೆ. ಭಾರತದ ಮೂಲೆಮೂಲೆಗಳಿಂದ ಅಧಿಕಾರೀ ರಾಷ್ಟ್ರಪತಿ ನೆಹರುಗಳಿಗೆ ಬಂದಿರುವ ವಿಧೇಯತಾ ಸಂದೇಶಗಳೂ ವಿದೇಶಗಳ ಲೋಕಸಾಭಿರಸ್ನಿಕಾಂಕ್ಷಿಗಳೆಲ್ಲರಿಂದ ಬಂದಿರುವ ಶುಭಾಕಾಂಕ್ಷೆಗಳೂ ಸುಪ್ರಭಾತದ ಘಂಟಾರವವಾಗಿ ಧ್ವನಿಸಿ ಸಂತೋಷ ಕೋಲಾಹಲವನ್ನು ಹೆಚ್ಚಿಸಿವೆ ಈ ನಡುವೆ ಕಿರಿಚಾಟಗಳಿಲ್ಲವೆಂದಲ್ಲ. ರಾಷ್ಟ್ರದ ಸಣ್ಣ ದೊಡ್ಡ ಎಲ್ಲಾ ಸಮಾಜಗಳೂ ಈ ನವ ಸರಕಾರದಲ್ಲಿ ಸಹಭಾಗಿಗಳಾಗಿವೆ. ಮುಸ್ಲಿಂ ಲೀಗ್ ಒಂದೇ ಇದಕ್ಕಪವಾದ; ಎಲ್ಲರೂ ರಂಗಿನೋಕುಳಿಯಾಡುತ್ತಿರುವ ಈ ಸಂತೋಷ ಸಮಾರಂಭದಲ್ಲೂ ರಕ್ತದೋಕುಳಿಯಾಡಲು ಕಟಿ ಬಿಗಿದಿರುವವೆಂದರೆ ಲೀಗ್ ಒಂದೇ! ಆದರಿದು ಅನಿವಾರ್ಯ ಆಪತ್ತು. ರಕ್ತ ಚೆಲ್ಲದೆ ಯಾವ ರಾಷ್ಟ್ರವೂ ಸ್ವಾತಂತ್ರ್ಯ ಪಡೆದಿಲ್ಲ. ಸ್ವಾತಂತ್ರ್ಯಕ್ಕಾಗಿ ಭಾರತವು ಇದುವರೆಗೆ ಸುರಿಸಿರುವ ಕೆನ್ನೀರು ಮತ್ತು ಕಣ್ಣೀರು ಕಡಿಮೆಯದಲ್ಲ. ಮೇಲ್ಗಡೆ ಛತ್ರದ ಬದಲು ಸ್ವತಂತ್ರದ ಚಿಹ್ನೆ ಕಾಣುತ್ತಿರುವ ಇಂದಿನ ಅಧಿಕಾರ ಪೀಠವೇರುವಾಗಲಾದರೂ ಭಾರತ ಸ್ವಾತಂತ್ರ್ಯಕ್ಕಾಗಿ ಪ್ರಾಣ ಕೊಟ್ಟ ಎಷ್ಟೋ ಹುತಾತ್ಮರ ಪುಣ್ಯ ಸ್ಮರಣೆಯಾಗುತ್ತಿದೆ; ಅದಕ್ಕಾಗಿ ವಿವಿಧ ರೀತಿಯಿಂದ ಕಷ್ಟನಷ್ಟವನ್ನನುಭವಿಸಿದ ಲಕ್ಷಾವಧಿ ಮಂದಿ ನೆನಪಾಗುತ್ತಿದ್ದಾರೆ. ಆದರೂ ಭಾರತದಂತಹ ಭೂಖಂಡವು ಎರಡು ಶತಮಾನಗಳ ದಾಸ್ಯ ಶೃಂಖಲೆಯನ್ನು ಕಡಿದುಕೊಳ್ಳುವದಕ್ಕಾಗಿ ಇದುವರೆಗನುಭವಿಸಿದ್ದ ಕಷ್ಟನಷ್ಟಗಳು ಕಡಿಮೆಯೆಂದೇ ಹೇಳಬಹುದು. ಅಮೂಲ್ಯ ವಸ್ತುವೊಂದು ಅಗ್ಗ ಬೆಲೆಗೆ ದೊರೆಯುವದು ಅಸಂಭವ; ಮತ್ತದು ದುರ್ವ್ಯಾಪಾರ ಕೂಡಾ. ಆದ್ದರಿಂದ ಸ್ವಾತಂತ್ರ್ಯದ ಪೂರ್ತಿ ಬೆಲೆ ಸಂದಾಯವಾಗಬೇಕೆಂದೇ ಕಲ್ಕತ್ತಾದ ದುರಂತ-ಈಗ ತಾನೇ ಬರುತ್ತಿರುವ ವಾರ್ತೆಯಂತೆ, ಬೊಂಬಾಯಿಯ ಗಲಭೆ-ಇನ್ನೂ ನಾವು ಅನುಭವಿಸಲು ತಯಾರಾಗಬೇಕಾದಂತಹ ದುರ್ಘಟನೆಗಳು-ಆಗಿರಬಹುದು; ಆಗುತ್ತಿರಬಹುದು; ಆಗಲಿಕ್ಕಿದ್ದೀತು! ಆದರಿದು ಸ್ವಾತಂತ್ರ್ಯದ ಪ್ರಸವ ವೇದನೆ; ದಾಸ್ಯರೋಗಕ್ಕೆ ಶಸ್ತ್ರ ಚಿಕಿತ್ಸೆ ನಡೆವಾಗ ಹುಟ್ಟುವ ನೋವು; ಭಾರತಾಂಬೆಯ ಮೂಗಿಗೆ ಮಂಗಲ ನತ್ತನ್ನಿಡಲು ಕೊರೆವ ತೂತಿನ ಯಾತನೆ-ಅರ್ಥಾತ್ ಕ್ಷಣಿಕ, ಅನಿವಾರ್ಯ ಹಾಗೂ ಮಂಗಲದಾಯಕ ವಿಪತ್ತು! ನಂದುವ ದೀಪ ಕೊನೆಗೊಮ್ಮೆ ಉರಿಯುವಂತೆ ಲೀಗ್ ಪುಂಡಾಟಿಕೆಯ ಅಂತಿಮಾವಸ್ಥೆ ತುಸು ಭೀಕರವಿರಬಹುದು;ಅದಿನ್ನೂ ಕೆಲವು ತಿಂಗಳು ನಡೆಯಬಹುದು. ಆ ನಡುವೆ ಜನ ಪ್ರತಿನಿಧಿ ಸರಕಾರದ-ಪರಿಶುದ್ಧ ರಾಷ್ಟ್ರಪ್ರೇಮಕ್ಕೆ ಪ್ರಪಂಚದಲ್ಲೇ ಅಗ್ರಗಣ್ಯರೆನ್ನಿಸಿರುವ ನೆಹರುಗಳ ನೇತೃತ್ವದ-ಸದ್ಭಾವ ಪೂರಿತ ಕಾರ್ಯಗಳು ಮುಸ್ಲಿಂ ಸಮಾಜದ ಭಯ ಸಂದೇಹಗಳನ್ನೆಲ್ಲಾ ನಿವಾರಿಸಲಿವೆ; ಲೀಗಿನ ಸಂಕುಚಿತ, ಸ್ವಾರ್ಥ ಮತ್ತು ಪುಂಡು ಮನೋವೃತ್ತಿಯ ಆಧಾರವೇ ತಪ್ಪಿ ಅದು ತನ್ನಂತೆ ಮಾಯವಾಗಲಿದೆ. ಈಗ ರಾಷ್ಟ್ರೀಯ ಸರಕಾರದ ಆರಂಭವು ಆತಂಕರಹಿತವಾಗಿಲ್ಲವೆಂಬುದು ನಿಜ; ಅದು ತಲೆಯೆತ್ತುವಾಗಲೇ, ಆಹಾರಾಭಾವ, ಆರ್ಥಿಕ ಬಿಕ್ಕಟ್ಟು, ಮುಷ್ಕರಗಳ ಕಾಟದಂತಹ ಭಾರವಾದ ಹೊರೆಗಳು ಆ ತಲೆಯ ಮೇಲೆ ಬಿದ್ದಿರುವುದೂ ಖಂಡಿತ. ನೆಹರು, ಪಟೇಲ್, ಪ್ರಸಾದರಂತಹ ರಾಷ್ಟ್ರಭಕ್ತರು ರಾಷ್ಟ್ರಕ್ಕಾಗಿ ಈಗ ಮತ್ತೊಮ್ಮೆ ಕಠಿಣ ಶಿಕ್ಷೆಯನುಭವಿಸಲು ಹೊರಟಿದ್ದಾರೆ ಎಂಬುದನ್ನು ಸರ್ವರೂ ಅರಿತಿರಬೇಕು. ಈ ಬಾರಿಯದು ಮುಳ್ಳಿನ ಕಿರೀಟ ಹೊತ್ತು ಚಾಕು ಚೂರಿಗಳಿಗೆದಿರಾಗಬೇಕಾದ ಶಿಕ್ಷೆ! ಆದ್ದರಿಂದ ಜನತೆಯು ಈ ರಾಷ್ಟ್ರೀಯ ಸರಕಾರಕ್ಕೆ ಸರ್ವಶಕ್ತಿಯಿಂದ ನೆರವಾಗಬೇಕಾದುದು ಅಗತ್ಯ. ರಾಷ್ಟ್ರಪ್ರೇಮೀ ಜನತೆಯು ಶಕ್ತಿ ಮತ್ತು ಹೃದಯದ ಪ್ರಾರ್ಥನೆಯೊಂದು ಕಣ ಪೂರ್ಣ ರಾಷ್ಟ್ರೀಯ ಸರಕಾರದ ಬೆಂಬಲವಾಗಿ ಉಪಯೋಗಿಸಲ್ಪಡಲೆಂದೂ ನೆಹರು ಸರಕಾರವು ಕ್ಷಿಪ್ರದಲ್ಲೇ ಭಾರತವನ್ನು ಪೂರ್ಣ ಸ್ವಾತಂತ್ರ್ಯದ ಗುರಿಗೆ ತಂದು ನಿಲ್ಲಿಸಲೆಂದೂ ಹಾರೈಸುತ್ತೇವೆ.

'ನವಯುಗ'ದ ೨೬ನೇ ವರ್ಷ

ಈ ಸಂಚಿಕೆಯೊಂದಿಗೆ 'ನವಯುಗ'ವು ತನ್ನ ೨೬ನೇ ವರುಷಕ್ಕೆ ಕಾಲಿಟ್ಟಿದೆ ೨೫ ಸಂವತ್ಸರಗಳನ್ನು ಮುಗಿಸಿ—ರಜತೋತ್ಸವ ವರುಷವನ್ನು ದಾಟಿ—ಹೊಸ ವರುಷಕ್ಕಷ್ಟೇ ಅಲ್ಲ, ತನ್ನ ಜೀವಮಾನದ ಒಂದು ಹೊಸ ಅಂಕಕ್ಕೇನೇ ಇಂದು ಪ್ರವೇಶಿಸಿದೆ. ಕರ್ಮ ಧರ್ಮ ಸಂಯೋಗವೆನ್ನಬೇಕು-ನವಯುಗದ ಇಂದಿನ ಹೆಜ್ಜೆಗೆ ಎಟಕಿರುವ ಗಡಿಮಾತ್ರ ಪ್ರಾಮುಖ್ಯದ್ದಲ್ಲ, ಅದರ ದೃಷ್ಟಿಯ ಮುಂದಿರುವ ಪರಿಸ್ಥಿತಿ ಕೂಡಾ ಹೊಸತೇ. ರಾಷ್ಟ್ರದ ಮತ್ತು ಒಂದು ರಾಷ್ಟ್ರೀಯ ಪತ್ರಿಕೆಯ ಜೀವಮಾನದ ಗಣ್ಯ ಅವಸ್ಥಾಂತರವೊಂದು ಒಟ್ಟೊಟ್ಟಿಗೆ ಸಂಭವಿಸುವದೆಂದರೆ ಅದು ದುಬಾರಿ ಸಂತೋಷದ ಸಂಗತಿ. ಪತ್ರಿಕೆಯ ಪಾಲಿಗದು ಶುಭಶಕುನ. ಪ್ರತಿಬಾರಿಯ ವರುಷಾವಧಿಯ ಸ್ಮರಣೆಯಲ್ಲೂ ನಾವು ಭಾರತ ಸ್ವಾತಂತ್ರ್ಯವನ್ನು ನೆನಸದಿಲ್ಲ. ಈಗ ನವಯುಗವು ಕೇವಲ ಒಂದು ವರುಷವನ್ನಷ್ಟೇ ಅಲ್ಲ— ಒಂದು ಅಂಕವನ್ನೇ ಮುಗಿಸಿಕೊಂಡಿದೆ; ಅಂತೆಯೇ ಇಂದು ಭಾರತವೂ ಸ್ವಾತಂತ್ರ್ಯದ ಆಲೋಚನೆಯನ್ನಷ್ಟೇ ಅಲ್ಲ—ಅದರ ಅಂಗೀಕಾರವನ್ನೇ ಮಾಡುತ್ತಿದೆ ಇದಕ್ಕಾಗಿ ಅತ್ಯಾನಂದ ಪಡುತ್ತೇವೆ.

ಕಳೆದ ೨೫ ವರುಷಗಳಲ್ಲಿ ನವಯುಗವು ಮಾಡಿರುವ ಜನತಾ ಸೇವೆಯನ್ನು ನೆನಪಿಗೆ ತರುವ ಅಧಿಕ ಪ್ರಸಂಗಕ್ಕೆ ನಾವಿಲ್ಲಿ ಹೋಗುವದಿಲ್ಲ; ಅದು ಕನ್ನಡಿಗರ ಪಾಲಿನ ಕರ್ತವ್ಯ. ನವಯುಗದಿಂದಾಗಿರುವ ಸೇವೆಯ ಅಳತೆ-ತುಲನೆ-ವಿಮರ್ಶೆ ಮಾಡಬೇಕಾದವರು ಅವರೇ. ನಾವು ನಿವೇದಿಸಿಕೊಳ್ಳುವ ಅಂಶವಿಷ್ಟೆ: ನಮ್ಮ ಗುರಿಯನ್ನು ಮುಟ್ಟಲು ನಮ್ಮಿಂದಾಗಿಲ್ಲ; ನಮ್ಮ ಬಯಕೆಯಲ್ಲಿದ್ದುದೆಲ್ಲಾ ಕಾರ್ಯತಃ ಫಲಿಸಿಲ್ಲ; ನಾವು ಮಾಡಬೇಕೆಂದು ಬಯಸಿದಷ್ಟು ಜನಸೇವೆ ನಮ್ಮಿಂದಾಗಿಲ್ಲ. ಕಳೆದು ಹೋದ ರಜತೋತ್ಸವ ವರುಷದಲ್ಲಿಯೇ ವಿಶೇಷ ರೀತಿಯ 'ರಜತೋತ್ಸವ ಸಂಚಿಕೆ' ಹೊರಡಿಸುವೆವು; ರಜತೋತ್ಸವವನ್ನಾಚರಿಸುವೆವು – ಎಂದು ಆ ಬಾರಿ ಪ್ರಕಟಿಸಿದ್ದೆವು. ಕಾಲವು ಪ್ರತಿಕೂಲವಾಯಿತು-ನಮ್ಮೀ ಇಚ್ಛೆ ಕೈಗೂಡಲಿಲ್ಲ. ಆದರಾ ಯೋಜನೆಯನ್ನು ಬಿಟ್ಟಿಲ್ಲ-ಇಟ್ಟುಕೊಂಡಿದ್ದೇವೆ. ಈ ವರುಷದಲ್ಲಾದರೂ ರಜತೋತ್ಸವ ಸಂಚಿಕೆಯನ್ನು ಹೊರಡಿಸಬೇಕೆಂದೂ ರಜತೋತ್ಸವವಾಚರಿಸಬೇಕೆಂದೂ ಸಂಕಲ್ಪಿಸಿದ್ದೇವೆ. ಅದಕ್ಕಾಗಿ ಸರ್ವರ ಸಹಕಾರ, ಸಹಾನುಭೂತಿಗಳನ್ನು ಕೋರುತ್ತೇವೆ.

ಕಳೆದ ಇಪ್ಪತ್ತೈದು ವರುಷಗಳಲ್ಲಿ ವಿವಿಧರೀತಿಯ ಸಹಾಯ, ಸಹಕಾರ, ಸಲಹೆ, ಸಹಾನುಭೂತಿಗಳಿಂದ ನೆರವಾಗಿ ನಮ್ಮವರಾಗಿದ್ದ, ನಮ್ಮವರಾಗಿರುವ ಇನ್ನು ಮುಂದೆ ನಮ್ಮವರಾಗಲಿರುವ ಎಲ್ಲಾ ಚಂದಾದಾರರು, ಜಾಹಿರಾತುದಾರರು, ಬಾತ್ಮೀದಾರರು, ಲೇಖಕರು, ಮತ್ತಿತರರನ್ನು ಈ ಸಂದರ್ಭದಲ್ಲಿ ಕೃತಜ್ಞಪೂರ್ವಕವಾಗಿ ಅಭಿನಂದಿಸುತ್ತೇವೆ.

ನವಯುಗ

ತಿದ್ದುಪಡಿ

ಕಳೆದ ಸಂಚಿಕೆಯು ವರ್ಷ 26, ಸಂಚಿಕೆ 1 ಎಂದು ತಪ್ಪಾಗಿ ಪ್ರಕಟವಾಗಿದೆ, ಅದು ವರ್ಷ 25, ಸಂಚಿಕೆ 51, ಎಂದಾಗಬೇಕು. ಈ ಸಂಚಿಕೆಯಿಂದ ಮಾತ್ರ 26ನೆ ಸಂಪುಟವು ಪ್ರಾರಂಭವಾಗುತ್ತದೆ.

ಮೆನೇಜರ್

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 275/46.

ವಾದಿ— ಮಾರಪ್ಪ ಶೆಟ್ಟಿ.

ಪ್ರತಿವಾದಿರು- 1 ಕಾದಿರ್ ಸ್ಯಾಬ, 2 ಶೇಕ್ ಮಿಸ್ತಾಯಿಲ್ ಸ್ಯಾಬ--ಬೈಂದೂರು ಕಡವಿನ ಉಮ್ಮರ ಸ್ಯಾಬನ ಮಕ್ಕಳು. ಕುಂದಾಪುರ ತಾಲ್ಲೂಕು ಹಕ್ಲಾಡಿ ಗ್ರಾಮದ ಹೊಳಮಾಗೆಯಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ನೀವು ವಾದಿಗೆ ತಾ 25 5 43ರಲ್ಲು ರುಪಾಯಿ 50-0 ಕ್ಕೆ ಬರಕೊಟ್ಟ ಪ್ರಮಾಂಸರಿ ನೋಟಿನ ಹಣ ಬಡ್ಡಿ ಬಗ್ಗೆ ವಾದಿಯು ನಿಮ್ಮ ಮೇಲೆ ನೋಟಿನ ದಾವೆಮಾಡಿರುತ್ತಾನೆ ಸದ್ರಿ ದಾವೆಯಲ್ಲಿ ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ತಾ. 11 9 1946ನೇ ದಿವಸ ಹಗಲು 11 ಗಂಟೆಗೆ ನೋಟಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಸೀದು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ಏಕಪಕ್ಷ ಮಾಡಲಾದೀತೆಂತ ಈ ಮೂಲಕ ತಿಳಿಸಿಯದೆ.

By order of the court,

Y. Tejappa Shetty

Advocate, Coondapoor

ನವಯುಗದ ಚಂದಾದಾರರಲ್ಲಿ—

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ **25**ನೇ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ **26**ನೇ ವರ್ಷಾರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ದಯಮಾಡಿ ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುವಂತೆ ವಿನಂತಿ.

ಕೆಲವರಿಗೆ ಕಳಿಸಿದ ವಿ. ಪಿ. ಯು ಇನ್ನಾರೆಂದು ಷರಾ ಬರೆಯಲ್ಪಟ್ಟು ಹಿಂದೆ ಬಂದಿದೆ ಪ್ರಾಯಶಃ ಪೋಸ್ಟುಮ್ಯಾನ್ ಬರುವಾಗ ವಿಳಾಸದಾರರು ಸಿಗದೆ ಈ ಪ್ರಮಾದವಾಗಿರಬಹುದಾದುದರಿಂದ ಅಂಥವರೂ ತಮ್ಮ ಚಂದಾ ಹಣವನ್ನು ತ್ವರ್ಯ ಕಳಿಸಿಕೊಡುವಂತೆ ವಿನಂತಿ.

ಪತ್ರಿಕೆ ಬೇಡವಾದವರು ನಮಗೆ ಮುಂದಾಗಿ ತಿಳಿಸಿದರೆ ಉಪಕಾರವಾಗುವುದು.

—ಮೆನೇಜರ್.

ನೆಹರು ಸರಕಾರದ ಕಾರ್ಯಾರಂಭ!

ಪೂರ್ವ ನಿಶ್ಚಯದಂತೆ ನಡುಗಾಲ ರಾಷ್ಟ್ರೀಯ ಸರಕಾರದ ನೆಹರೂ ಮಂತ್ರಿ ಮಂಡಲವು ಇದೇ ತಾ. 2-9-46ನೇ ಸೋಮವಾರ ಪೂರ್ವಾಹ್ನ 11 ಗಂಟೆಗೆ ಪ್ರತಿಜ್ಞಾ ವಿಧಿ ಮುಗಿಸಿ ಅಧಿಕಾರ ಸ್ವೀಕರಿಸಿತು. 12ಮಂದಿ ಮಂತ್ರಿಗಳ ಪೈಕಿ ಅನುಕ್ರಮವಾಗಿ ಅನಾರೋಗ್ಯದಿಂದ ಮತ್ತು ಚೂರಿ ಇರಿತದಿಂದ ಹಾಸಿಗೆ ಹಿಡಿದಿರುವ ರಾಜಾಜಿ ಮತ್ತು ಸರ್. ಶಫತ್ ಅಹಮ್ಮದ್‌ಖಾನರೂ ಭಾಭಾ, ಮಥಾಯಿ ಮತ್ತು ಜನಜ್ಜೀವನ ರಾಮರೂ ಅಂದು ಗೈರು ಹಾಜರಿದ್ದುದರಿಂದ ಉಳಿದೇಳು ಮಂದಿ ಪ್ರತಿಜ್ಞಾ ಧಾರಿಗಳಾದರು.

ಮಂತ್ರಿಗಳು— ಖಾತೆಗಳು

1 ಪಂಡಿತ ನೆಹರು—ಪ್ರಧಾನ ಮಂತ್ರಿ. ವಿದೇಶ ಮತ್ತು ವಸಾಹತು ಸಂಬಂಧ.

2. ಸರ್ದಾರ್ ಬಲದೇವಸಿಂಗ—ಸಂರಕ್ಷಣಾ.

3. ಸರ್ದಾರ್ ವಲ್ಲಭಭಾಯಿ—ಗೃಹ, ಸುದ್ದಿ ಮತ್ತು ಆಕಾಶವಾಣಿ.

4. ಡಾ! ಜಾನ್ ಮಥಾಯಿ—ಹಣಕಾಸು.

5. ಮಿ. ಅಸಫಾಲಿ – ಸಂಬಂಧ– ಯುದ್ಧ ಸರಬರಾಯಿ ಮತ್ತು ರೈಲ್ವೆ.

6. ಡಾ! ರಾಜೇಂದ್ರ ಪ್ರಸಾದ್—ಒಕ್ಕಲುತನ ಮತ್ತು ಆಹಾರ

7. ಶ್ರೀ ಜಗಜ್ಜೀವನ ರಾಮ್— ಕೂಲಿಕಾರ.

8. ಸರ್. ಶಫತ್ ಅಹಮ್ಮದ್‌ಖಾನ್—ಆರೋಗ್ಯ, ಶಿಕ್ಷಣ ಮತ್ತು ಕಲೆ.

9. ಸಯ್ಯದ್ ಅಲಿ ಜಹೀರ್-ಶಾಸನ ನಿರ್ಮಾಣ, ಅಂಚೆ ಮತ್ತು ವಿಮಾನ.

10. ಶ್ರೀ. ರಾಜಗೋಪಾಲಾಚಾರಿ- ಔದ್ಯೋಗಿಕ ಮತ್ತು [illegible] ರಾಯಿ.

11. ಶರಚ್ಚಂದ್ರ ಬೋಸ್— ಕಣಿಜ, ವಿದ್ಯುಚ್ಛಕ್ತಿ, ಕಾರ್ಯ

12 ಶ್ರೀ ಸಿ. ಎಚ್ ಭಾಭಾ—ವ್ಯಾಪಾರ.

ಉಳಿದಿಬ್ಬರು ಮುಸ್ಲಿಂ ಮಂತ್ರಿಗಳ ನೇಮಕ ಇಷ್ಟರ ವರೆಗಾಗಿಲ್ಲ. ಆದಾಗ ಯೋಜನೆ, ವಿಮಾನ, ಸುದ್ದಿ ಖಾತೆಗಳಲ್ಲಿ ಯಾವುವನ್ನಾದರೂ ಅವರಿಗೀಯುವ ಯೋಜನೆಯಿದೆ. ಅಲ್ಪ ಸಂಖ್ಯಾಕ ಸಮಾಜಗಳ ಪ್ರತಿನಿಧಿಗಳಿಗೆ ಪ್ರಾಮುಖ್ಯ ಖಾತೆಗಳನ್ನೀಯಲಾಗಿದೆ ವ್ಯಕ್ತಿಗತ ಅಭಿರುಚಿ ಮತ್ತು ಶಕ್ತಿಚಾತುರ್ಯಕ್ಕನುಸಾರವಾಗಿ ಖಾತೆಗಳನ್ನು ಹಂಚಿಹಾಕಿರುವದು ಸ್ಪಷ್ಟವಿದೆ. ನೆಹರು ಮಂಡಲಕ್ಕೆ ದೇಶವಿದೇಶಗಳಿಂದ ಅಸಂಖ್ಯಾತ ಅಭಿನಂದನಾ ಸಂದೇಶಗಳು ಬಂದಿವೆ.

ರಾಷ್ಟ್ರ ನಾಯಕನ ಸಂದೇಶ

ಅಧಿಕಾರ ರೂಢರಾದೊಡನೆ ಪ್ರಥಮ ರಾಷ್ಟ್ರ ಪ್ರಧಾನಿ ಪಂಡಿತ ನೆಹರುಗಳತ್ತ ಪತ್ರಿಕಾ ಹೇಳಿಕೆಯಲ್ಲಿ ಹೀಗೆಂದಿದ್ದಾರೆ. "ಪೂರ್ಣ ಸ್ವಾತಂತ್ರ್ಯವನ್ನು ಕ್ಷಿಪ್ರವಾಗಿ ದೊರಕಿಸಿಕೊಳ್ಳುವದೇ ನಮ್ಮ ಗುರಿ. ಮಂತ್ರಿ ಮಂಡಲವು ಜತೆ ಜವಾಬ್ದಾರಿಯುಳ್ಳದ್ದಿದೆ. ಸಮ್ಮಿಶ್ರ ಯೋಜನೆಯನ್ನಾಧರಿಸಿಯೇ ಪ್ರತಿಯೊಂದು ಖಾತೆಯ ಕಾರ್ಯ ಸಾಗುವುದು. ನಾವು ಜಾತಿ, ಪಕ್ಷ, ಪಂಗಡವಾರು ಪ್ರತಿನಿಧಿಗಳಾಗಿರದೆ ಅಖಿಲರಾಷ್ಟ್ರದ ಸಾರ್ವಜನಿಕ ಪ್ರತಿನಿಧಿಗಳಾಗಿ ವರ್ತಿಸುವೆವು. ಜನತೆಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲಿರುವೆವು. ಲೀಗಿಗೆ ಸದಾಕಾಲ ಬಾಗಿಲು ತೆರೆದೇ ಇದೆ. ಮಹತ್ಕಾರ್ಯದ ಈ ಕಾರ್ಯದಲ್ಲಿ ಇಡೀ ರಾಷ್ಟ್ರದ10 ಕೋಟಿ ಜನರ ಬೆಂಬಲವೂ ನಮಗಿರಬೇಕು".

ದಕ್ಷಿಣಾಫ್ರಿಕದ ಬಿಳಿ ಜನರ ವರ್ಣದ್ವೇಷಕ್ಕೆದಿರಾಗಿ, ಅಲ್ಲಿಯ ಹಿಂದೀಯರು ಹೂಡಿರುವ ಹೋರಾಟವನ್ನು ಶ್ಲಾಘಿಸಿ ಆದಕ್ಕೆ ಹಿಂದೀ ರಾಷ್ಟ್ರೀಯ ಸರಕಾರವು ಸರ್ವ ಸಹಾಯವನ್ನೀಯುವದೆಂದು ಪಂಡಿತ ನೆಹರುಗಳು ಆಶ್ವಾಸನೆಯಿತ್ತಿದ್ದಾರೆ. ದ. ಆಫ್ರಿಕದ ಪ್ರಶ್ನೆಯ ಚರ್ಚೆಗೆ ಬರಲಿರುವ ಜಾಗತಿಕ ಸಭೆಗೆ ನೆಹರು ಸರಕಾರವು ತನ್ನ ಪರವಾಗಿ ಸಮರ್ಥ ಪ್ರತಿನಿಧಿಗಳನ್ನಾರಿಸಿ ಕಳುಹಿಸಲಿದೆ.

ಬೊಂಬಾಯಿಯಲ್ಲಿ ಹಿಂದೂ ಮುಸ್ಲಿಂ ಗಲಭೆ

ಇದೇ ತಾ. 1ರಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪನೆಯ ನಿಷೇಧಾರ್ಥವಾಗಿ ಬೊಂಬಾಯಿಯ ಗೋಲಪೀಠದಲ್ಲಿ ಮುಸ್ಲೀಮರು ಕಪ್ಪು ಪತಾಕೆಯೇರಿಸಿದಾಗ ಹಿಂದುಗಳು ರಾಷ್ಟ್ರಧ್ವಜವೇರಿಸಿದರು. ಆಗ ರಾಷ್ಟ್ರಧ್ವಜಾರೋಹಕರಿಗೆ ಚೂರಿ ಇರಿತವಾಗಿ, ಅದು ಹಿಂದೂ—ಮುಸ್ಲಿಂ ಗಲಭೆಯಾಗಿ ಹಬ್ಬಿ ಬಿಟ್ಟಿದೆ ಕೂಡಲೇ ಪೋಲೀಸ್ ಮತ್ತು ಮಿಲಿಟರಿಯ ಬಲವಾದ ಪಹರೆ ಬಿದ್ದಿದೆ ಗಲಭೆಯ ಸ್ಥಳಗಳಲ್ಲಿ 24ಘಂಟೆಗಳ 'ಕರ್ಫ್ಯೂ' ಆಜ್ಞೆ ಜಾರಿಯಲ್ಲಿದೆ. ತಾ. 3ರ ವರೆಗೆ ತಿಳಿದುಬಂದಂತೆ 90ಕ್ಕೂ ಮಿಕ್ಕಿ ಮಡಿದು 300ಕ್ಕೆ ಮಿಕ್ಕಿ ಜಖಂ ಹೊಂದಿದ್ದಾರೆ 1000ಕ್ಕೂ ಮಿಕ್ಕಿದವರ ದಸ್ತಗಿರಿಯಾಗಿದೆ.

ಮುಸಲ್ಮಾನರ 'ಇದ್' ಹಬ್ಬವು ಇಡೀ ರಾಷ್ಟ್ರದಲ್ಲಿ ಯಾವುದೊಂದು ಗಲಾಟೆಯೂ ಇಲ್ಲದೆ ಮುಗಿದಿದೆ

ಭಾರತದ ಸದರ್ನ್ ಇಂಡಿಯಾ ರೈಲ್ವೆಯ ಕೆಲಸಗಾರರು ಹೂಡಿರುವ ಮುಷ್ಕರದಿಂದಾಗಿ ವಿಶೇಷ ಅಡಚಣೆ ಅನಾನುಕೂಲತೆಗಳಿದ್ದವೆ. ರೈಲ್ ಗಾಡಿಗಳ ಸಂಚಾರದ ಚಲನೆಯಿಲ್ಲದೆ ತೊಂದರೆಯಾಗಿದೆ. ಈಗ ಮುಷ್ಕರದ ಭರತಗ್ಗಿ ಪರಿಸ್ಥಿತಿಯು ನಿಧಾನವಾಗಿ ಶಾಂತವಾಗುತ್ತಿದೆ

ಉಡುಪಿ.

ಪಾಡಿಗಾರು–ಚಿತ್ರಕಲಾ ಪ್ರೋತ್ಸಾಹಕ್ಕೆ ಹೆಸರುವಾಸಿಯಾದ ಶ್ರೀ. ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ತಮ್ಮ ಪಾಡಿಗಾರು ಮಠದಲ್ಲಿ ಗಣೇಶ ಹಬ್ಬವನ್ನು ಸಾಂಗವಾಗಿ ಆಚರಿಸಿದರು. ಪುರುಷ ಪ್ರಮಾಣದ ಪಾರ್ವತಿ ಪರಮೇಶ್ವರರ ಪ್ರತಿಮೆಗಳು ಹಾಗೂ ಬಾಲ ಗಣೇಶನ ಮೂರ್ತಿಯು ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ಈ ಪ್ರತಿಮೆಗಳನ್ನು ತಯಾರಿಸಿದ ಚಿತ್ರಕಲಾ ಧುರೀಣ ಪೈಂಟರ್ ಗಣಪತಿ ರಾಯರ ಕಲಾ ಕೌಶಲ್ಯವು ಸ್ತುತ್ಯಾರ್ಹವು

ಕೇಂದ್ರ 'ಕರ್ನಾಟಕ ಸಂಘ'ದ-- ಈ ವರ್ಷದ ವರ್ಧಂತಿಯ ಸಮಾರಂಭವು ಇದೇ ಅಕ್ಟೋಬರದ ತಾ. ೧ಕ್ಕೂ, ಸಾಹಿತ್ಯೋತ್ಸವವು ಇದೇ ಅಕ್ಟೋಬರದ ತಾ. ೨ರಿಂದ ೫ರ ವರೆಗಿನ ನಾಲ್ಕು ದಿನಗಳಿಗೂ ನಡೆಯಿಸುವ ನಿಶ್ಚಯವಾಗಿದೆ. ಅಕ್ಟೋಬರದ ತಾ. ೧ರಂದು ಸಂಘದ ವರ್ಧಂತಿಯೊಂದಿಗೆ ದಕ್ಷಿಣ ಕನ್ನಡದ ಕನ್ನಡ ಲೇಖಕರ ಮತ್ತು ಪ್ರಕಾಶಕರ ಸಮ್ಮೇಳನವೂ ನೆರವೇರುವುದು ಅಕ್ಟೋಬರದ ೨ರಿಂದ ೫ರ ವರೆಗಿನ ಸಾಹಿತ್ಯೋತ್ಸವದ ಜೊತೆಗೆ, ಹಿರಿಯ (Senior) ಮತ್ತು ಕಿರಿಯ (Junior) ತರಗತಿಗಳ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯ ಪ್ರತ್ಯೇಕವಾಗಿ ಲೇಖನ, ವಾಚನ ಮತ್ತು ಆಶುಭಾಷಣ ವಿಷಯಗಳಲ್ಲಿಯೂ ಕೇವಲ ಹೆಣ್ಣು ಮಕ್ಕಳಿಗಾಗಿ ದಾಸರ ಪದಗಳ ಗಾಯನ ವಿಷಯದಲ್ಲಿಯೂ ಸ್ಪರ್ಧೆಗಳು ನಡೆಯಲಿವೆ ಈ ಸ್ಪರ್ಧೆಗಳಿಗೆ ಜಿಲ್ಲೆಯ ಅಪ್ಪರ್‌ಪ್ರೈಮರಿ, ಸೆಕಂಡರಿ ಮತ್ತು ಕಾಲೇಜು ತರಗತಿಗಳ ಎಲ್ಲ ಪಾಠ ಶಾಲೆಗಳ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೂ, ಸಂಘದ ವರ್ಧಂತಿ-ಸಾಹಿತ್ಯೋತ್ಸವ ಸಮ್ಮೇಲನಗಳಿಗೆ ಮುಖ್ಯವಾಗಿ ಈ ಜಿಲ್ಲೆಯ ಕನ್ನಡ ಪಂಡಿತರು, ಗ್ರಂಥ ಕರ್ತೃಗಳು, ಲೇಖಕರು, ಗ್ರಂಥ-ಪತ್ರಿಕಾ ಪ್ರಕಾಶಕರು ಮತ್ತು ಅನುಭವಿಗಳೂ ತಾಯ್ನುಡಿಯ ಅಭಿಮಾನಿಗಳೂ ಆದ ಎಲ್ಲ ಮಹನೀಯರು, ಮಹಾಜನರು ಮೊದಲಾದ ಸಮಸ್ತರನ್ನೂ, ಸಾಮಾನ್ಯವಾಗಿ ಕರ್ನಾಟಕದ ಸರ್ಜನರನ್ನೂ ಸಂಘದ ಕಾರ್ಯವಾಹಿಗಳು ಈ ಮೂಲಕವೂ ಮುಂದಾಗಿ ಆಹ್ವಾನಿಸುತ್ತಿದ್ದಾರೆ.

ಇದೇ ಸಮಯದಲ್ಲಿ, ಜಿಲ್ಲೆಯ ಉತ್ತರದ ಭಾಗೀಯ ಕರ್ನಾಟಕ ಏಕೀಕರಣ ಸಮಿತಿಯವರೂ ಕರ್ನಾಟಕದ ಏಕೀಕರಣ ವಿಷಯವಾದ ಜಿಲ್ಲಾ ಸಮ್ಮೇಳನವನ್ನು ಇದೇ ನಗರದಲ್ಲಿಯೇ ಅಕ್ಟೋಬರದ ತಾ. ೫ರ ಮಧ್ಯಾಹ್ನದ ಮೇಲೆ ಕೂಡಿಸುವ ನಿರ್ಣಯವಾಡಿ, ಏಕೀಕರಣದ ಅನುರಕ್ತರೂ ಅಭಿಮಾನಿಗಳೂ ಆದ ಜಿಲ್ಲೆಯ ಮತ್ತೂ ಅಖಿಲ ಕರ್ನಾಟಕದ ಎಲ್ಲರನ್ನು ಬರಬೇಕೆಂದು ಕರೆಯುತ್ತಿದ್ದಾರೆ.

ಹಡಗು ಸಂಚಾರ ಪ್ರಾರಂಭ— ಅಕ್ಟೋಬರ್ ತಿಂಗಳ ತಾ 1ರಿಂದ ಬೊಂಬಾಯಿಯಿಂದ ಕರಾವಳಿಕಡೆ ಹಡಗುಗಳ ಸಂಚಾರ ಪ್ರಾರಂಭವಾಗುವುದು. "ಎಸ್. ಎಸ್. ಸೆಂಟ್ ಅಂತೋನಿ" ತಾ 1ರಲ್ಲೂ 'ಇರಾವತಿ' ಹಡಗವು ತಾ 3ರಲ್ಲೂ ಬೊಂಬಾಯಿಯಿಂದ ಈ ಕಡೆ ಹೊರಡಲಿರುವುದು.

ಕುಂದಾಪುರ–ತಾ 3-9-46ರಂದು ಮುಂಬಾಯಿ ಡಾಕ್ಟರ್ ಬಿ. ಭುಜಂಗ ಹೆಗ್ಡೆ ಎಮ್. ಬಿ. ಬಿ. ಎಸ್. ಇವರು ಸಂತೆಕಟ್ಟೆಬಳಿ "ಬಸರೂರು ಕ್ಲಿನಿಕ್" ಎಂಬ ಹೆಸರಿನ ಒಂದು "ಚಿಕಿತ್ಸಾಲಯ"ವನ್ನು ತೆರೆದಿರುವರು. ಡಾಕ್ಟರ್ ಹೆಗ್ಡೇರವರು ಕೈಕೊಂಡ ಕೆಲಸದಲ್ಲಿ ಜಯಶೀಲರಾಗಿ ಪ್ರೋತ್ಸಾಹಕರಗಳಿಗೆ ಪಾತ್ರರಾಗಲೆಂದು ಹಾರೈಕೆ.

ಇಲ್ಲಿಯ ಕಾಂಗ್ರೆಸ್ ಸ್ವಯಂ ಸೇವಕರು ಹಾಗೂ ಶಾಲಾ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ತಾ 2-9 46ರಂದು ಸಂಜೆ ನಡುಗಾಲ ಸರಕಾರದ ಸಂತೋಷ ಪ್ರದರ್ಶನಕ್ಕಾಗಿ ಪಟ್ಟಣದಲ್ಲಿ ಪ್ರಭಾತ ಮೆರವಣಿಗೆ ಬಂದು ಗಾಂಧಿ ಮೈದಾನದಲ್ಲಿ ಸಭೆ ಸೇರಿ ಮೇಲಿನ ಸರಕಾರವು ಜಯಶೀಲವಾಗಲೆಂದು ಪ್ರಾರ್ಥಿಸಿದರು.

ANNOUNCING

The Directors of
The Canara Industrial & Banking Syndicate, Ltd,
have great pleasure in announcing that a Pay Office
of the Bank will be opened at

JAMMALAMADAGU
on 6th September, 1946

All kinds of banking business will be transacted
Prompt & Efficient correspondent service offered to
Banks and Businessmen

The Canara Industrial & Banking Syndicate, Ltd.
[illegible]
Head Office UDIPI, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ.
ರಥಬೀದಿ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

2ನೇ ವಾರ ತಾರೀಖು **5-9-46**ರಿಂದ **2ನೇ ವಾರ**

ಪ್ರಭಾಕರ ಪಿಕ್ಚರ್ಸ್‌ನವರ

ಮಹಾರಥಿ ಕರ್ಣ

ಪೃಥ್ವಿರಾಜ್, ಸಾಹುಮೋದಕ್, ಸ್ವರ್ಣಲತಾ,
ಲೀಲಾ, ಕೆ ಎನ್ ಸಿಂಗ್.

ಬರುವ ಚಿತ್ರ---

Her Primitive Man

ಸರ್ವರಿಗೂ ಸಂತೋಷದ ಸುದ್ದಿ

"ಸರ್ವಜ್ಞ"

ಈ ಸಲ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಬೋರ್ಡಿಗೆ ಉಮೇದ್ವಾರರನ್ನು ನಿಲ್ಲಿಸುವುದಿಲ್ಲವೆಂದು ನಿಶ್ಚಯಿಸಿರುವರಂತೆ ಇದೊಂದು ಸರ್ವರಿಗೂ ಸಂತೋಷದ ಸುದ್ದಿ.

○○ ○○ ○○ ○○

ನಮ್ಮಲ್ಲಿಯ ಕಾಂಗ್ರೆಸ್ ಕಮಿಟಿಯವರು ಬೋರ್ಡಿಗೆ ಯೋಗ್ಯ ಉಮೇದ್ವಾರರನ್ನು ನಿಲ್ಲಿಸ್ಯಾರು ಎಂಬ ಧೈರ್ಯ ಅನೇಕರಿಗಿರಲಿಲ್ಲ ಪ್ರಾಂತಿಕ, ಜಿಲ್ಲಾ ಮತ್ತು ತಾಲೂಕು ಕಾಂಗ್ರೆಸ್ ಕಮಿಟಿಗಳಿಗೆ ನಡೆಯುತ್ತಿರುವ ಚುನಾವಣೆಯು ಕ್ರಮ ನೋಡಿ, 'ಕಾಂಗ್ರೆಸ್ ಕಮಿಟಿಗೆ ಯಾರು ಬೇಕಾದರೂ ಸೇರಿಕೊಳ್ಳಲಿ ನಮಗೆ ಆ ಗಲಾಟೆಯೇ ಬೇಡ' ವೆಂದು ಅನೇಕರು ಹಿಂದೆ ನಿಂತಿರುತ್ತಾರೆ.

○○ ○○ ○○ ○○

ಕಾಲು ಶತಮಾನದಿಂದ ಖಾದಿ ಧರಿಸಿಕೊಂಡಿದ್ದವನಾದರೂ ಅವನು ಖಾದಿ ಧಾರಿಯಲ್ಲವೆಂದು ಒಂದು ಕಡೆಯಿಂದ ಆರ್ಜಿ. ಬೇಕಾದಾಗ ಉಮೇದ್ವಾರಿಕೆ ಹಿಂದೆ ತೆಗೆದುಕೊಳ್ಳಲಿಕ್ಕೆ ಮೊದಲೇ ಒಪ್ಪಿರುವ ಇನ್ನೊಬ್ಬನು ಅವನಿಗೆ ಎದುರಾಳಿ. 'ನಿಮಗೆ ಈ ಗಲಾಟೆ ಬೇಡ ಸ್ವಾಮಿ, ಉಮೇದಾರಿಕೆ ಹಿಂತೆಗೆದುಬಿಡಿ' ಎಂದು ಬುದ್ಧಿ ಹೇಳುವವರು ಇನ್ನೊಂದು ಕಡೆ. ಹೀಗಾಗಿ ಈ ಕಮಿಟಿಗಳಿಗೆ ನಮ್ಮ ಜಿಲ್ಲೆಯಲ್ಲಿ ಎಲ್ಲಾ ಕಡೆಗಳಿಂದಲೂ ಅವಿರೋಧದ ಚುನಾವಣೆ. ಅಧಿಕಾರಿಗಳು ಒಂದಿನವರೇ ಇಂದೂ ಇಂದಿನವರೇ ಮುಂದೂ ಇರಬೇಕೆನ್ನುವವರ ಕೈಯಲ್ಲಿ ಬೋರ್ಡಿನ ಉಮೇದ್ವಾರರನ್ನು ಆರಿಸುವ ಅಧಿಕಾರ ಸಿಕ್ಕದಿರುವುದೇ ಒಳ್ಳೆಯದಾಯಿತು ಎಂದು ಹಲವರಿಗೆ ಸಂತೋಷವಾಗಿದೆ.

○○ ○○ ○○ ○○

ಯಾವ ಕಾಲದಲ್ಲಿಯೂ ತಾವೇ ಜಿಲ್ಲಾ ಬೋರ್ಡಿನ ಮೆಂಬರರಾಗಿರಬೇಕೆಂದು ನಿರ್ಧರಿಸಿರುವವರು ನಮ್ಮಲ್ಲಿ ಅನೇಕರಿದ್ದಾರೆ. ಎಲ್ಲಿ ಹೊಸ ಮಾರ್ಗ ಬೇಕು, ಸೇತುವೆ ಬೇಕು, ಶಾಲೆ ಬೇಕು, ಆಸ್ಪತ್ರೆ ಬೇಕು ಎಂಬ ಗೊಡವೆ ಅವರಿಗಿಲ್ಲ. ತಾವು ಸದಾ ಬೋರ್ಡಿನ ಮೆಂಬರರಾಗಿರಬೇಕೆಂದೇ ಅವರ ಛಲ.

○○ ○○ ○○ ○○

ಕಾಂಗ್ರೆಸ್ ಸರಕಾರ ವಹಿಸಿಕೊಂಡಾಗ ಇವರು ಕಾಂಗ್ರೆಸ್‌ವಾಲರು. ಕಾಂಗ್ರೆಸ್ ಅಧಿಕಾರಬಿಟ್ಟು ಐದ್ವೈಸರರ ಸರಕಾರ ಬಂದಾಗ ಇವರು ಆ ಸರಕಾರದ ಪಾರ್ಟಿ. ಕಾಂಗ್ರೆಸ್ ತತ್ವ, ಶಿಸ್ತು ಇವು ಇಂಥವರನ್ನು ಬಾಧಿಸುವಂತಿಲ್ಲ ಸ್ವಾಭಿಮಾನವೆಂದರೇನೆಂದು ಇವರು ಮೊದಲೇ ಅರಿಯರು.

○○ ○○ ○○ ○○

"ಬೋರ್ಡ್ ಮೆಂಬರರಿಗೆ ರಾಜಿನಾಮೆ ಕೊಡಿರಿ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರಿ' ಎಂದು ಕಾಂಗ್ರೆಸ್ ಒಮ್ಮೆ ಆಜ್ಞಾಪಿಸಿತ್ತು. ಆಗ ಹಲವರು ರಾಜಿನಾಮೆ ಕೊಟ್ಟರು, ಕಾರಾಗೃಹಕ್ಕೆ ಸಹ ಹೋದರು. ಆದರೆ ಇವರು "ಇದೇ ಸಂದರ್ಭ"ವೆಂದು ಗಟ್ಟಿಯಾಗಿ ಕುಳಿತರು ಮತ್ತು ಅಳಿದ ಊರಿಗೆ ಉಳಿದವನೇ ಗೌಡ, ಎಂದು ಅಧಿಕಾರ ನಡೆಯಿಸಿದರು. ಕಾಂಗ್ರೆಸ್ಸಿಗೆ ಪುನಃ ಅಧಿಕಾರ ಬಂದಮೇಲೆ ಇವರು ಮೆಂಬರಿಕೆಯ ಆಶೆಯನ್ನೇ ಬಿಟ್ಟು ಕುಳಿತಿದ್ದಾರೆ ವಯಸ್ಸಾಯಿತೆಂದು ಕೆಲವರು, ಆರೋಗ್ಯ ಸರಿಯಿಲ್ಲವೆಂದು ಇನ್ನು ಕೆಲವರು ಹೇಳಿಕೊಳ್ಳುತ್ತಿದ್ದಾರೆ.

○○ ○○ ○○ ○○

ಕಾಂಗ್ರೆಸಿನ ಟಿಕೇಟು ಇಲ್ಲದೆ ಇನ್ನು ಮುಂದೆ ಬೋರ್ಡಿನಲ್ಲಿ ಸೀಟು ಸಿಕ್ಕಲಿಕ್ಕಿಲ್ಲವೆಂದು ಅವರಿಗೆ ತಿಳಿದಿದೆ. ತನ್ನ ಆಜ್ಞಾನುಸಾರವಾಗಿ ನಡೆಯದವರಿಗೆ ಕಾಂಗ್ರೆಸ್ ಟಿಕೇಟು ಕೊಡಲಿಕ್ಕಿಲ್ಲವೆಂದು ಅವರಿಗೆ ಖಂಡಿತವಾಗಿ ಗೊತ್ತಿದೆ. ಇಂಥವರಿಗೆ 'ಯಾರೂ ಕಾಂಗ್ರೆಸ್ ಟಿಕೇಟು ಪಡೆಯುವ ಅವಶ್ಯವಿಲ್ಲ' ಎಂದು ಕಾಂಗ್ರೆಸ್ ಕಮಿಟಿಯು ನಿರ್ಧರಿಸಿದೆ ಎಂದು ಕೇಳಿ ಪರಮಾನಂದವಾಗಿದೆ.

○○ ○○ ○○ ○○

ಬೋರ್ಡ್ ಮೆಂಬರಿಕೆಯು ತಮ್ಮ ಮನೆತನದ ಹಕ್ಕೆಂದು ಎಣಿಸಿಕೊಂಡವರು ನಮ್ಮಲ್ಲಿ ಅನೇಕರಿದ್ದಾರೆ ಲೋಕಲ್ ಬೋರ್ಡ್ ಆಕ್ಟ್ ಎಂದರೇನು? ಬೋರ್ಡಿಗೆ ಯಾವ ಯಾವ ಅಧಿಕಾರಗಳಿವೆ? ಮೆಂಬರರಾಗಿ ಜನತೆಗೆ ತಾವು ಯಾವ ಉಪಕಾರಗಳನ್ನು ಮಾಡಲಿದೆ? ಎಂಬುದನ್ನೇ ಈ ಪ್ರಸ್ತ್ಯಾತ್ಮರು ಅರಿಯರು ಪ್ರತಿ ಮೀಟಿಂಗಿಗೆ ಹೋಗುವುದು, ಗುರುತು ಹಾಕಿದಲ್ಲಿ ಹಸ್ತ ಹಾಕುವುದು, ಕೊಟ್ಟ ಭತ್ತೆಯನ್ನು ಜೇಬಿಗೆ ಹಾಕಿಕೊಂಡು ಹಿಂತಿರುಗುವುದು—ಇಷ್ಟೇ ಇವರಿಂದಾಗುವ ಮಹತ್ಕಾರ್ಯ. ತನ್ನ ಫರ್ಕದಲ್ಲಿ ತಾನೇ ಅತ್ಯಂತ ಹೆಚ್ಚು ತೀರ್ವೆ ಕೊಡುವ ಪಟ್ಟಾದಾರ, ತಾನು ಜೀವಂತನಾಗಿರುವಷ್ಟು ಕಾಲ ಇನ್ನೊಬ್ಬನನ್ನು ಮೆಂಬರನಾಗಿ ಹೋಗಲಿಕ್ಕೆ ಬಿಡಲಾರೆ ಎಂಬುದೇ ಅವರ ಸಾಧನೆ.

○○ ○○ ○○ ○○

ಕಾಂಗ್ರೆಸ್ ಕಮಿಟಿಯವರು ಉಮೇದ್ವಾರರನ್ನು ಆರಿಸುವುದಾದರೆ ಇನ್ನು ತಮ್ಮಂಥವರಿಗೆ ಸ್ಥಾನ ದೊರೆಯಲಾರದು. ವಿದ್ಯಾವಂತರೂ ಪರೋಪಕಾರಿಗಳೂ ಆದವರಿಗೆನೇ ಸ್ಥಾನ ಒದಗೀತು ಎಂದು ಇವರು ನಿರಾಶೆಗೊಂಡಿದ್ದರು. ಇಂಥವರಿಗೂ ಕಮಿಟಿಯ ಈ ನಿರ್ಧಾರದಿಂದ ಧೈರ್ಯ ಬಂದಿದೆ.

○○ ○○ ○○ ○○

ಬೋರ್ಡ್ ತಾನು ಹೇಳಿದಂತಿರಬೇಕಾದರೆ ಇಲ್ಲಿ ತಾನು ನಿಲ್ಲಬೇಕು, ಅಲ್ಲಿ ತನ್ನ ಅಳಿಯ ನಿಲ್ಲಬೇಕು, ಅಲ್ಲಿ ತನ್ನ ಭಾವನೆಂಟ ನಿಲ್ಲಬೇಕು, ಅಲ್ಲಿ ತನ್ನ ಮಾವನ ಮಗ ನಿಲ್ಲಬೇಕು ಎಂದು ಪ್ರೋಗ್ರಾಂ ಹಾಕಿಕೊಂಡಿರುವವರು ನಮ್ಮಲ್ಲಿ ಕೆಲವರಿದ್ದಾರೆ. ಕಾಂಗ್ರೆಸ್ ಕಮಿಟಿಯು ಉಮೇದ್ವಾರರನ್ನಾರಿಸುವುದಾದರೆ ಎಲ್ಲಾ ಕಡೆಗಳಿಂದಲೂ ತಮ್ಮವರನ್ನೇ ಆರಿಸಲಿಕ್ಕಿಲ್ಲ. ಎಲ್ಲಾ ಜಾತಿಗಳಿಂದಲೂ ಜನ ಸಂಖ್ಯೆಯ ಪ್ರಮಾಣದಲ್ಲಿ ಯೋಗ್ಯ ಉಮೇದ್ವಾರರನ್ನು ಆರಿಸಬಹುದು ಹೀಗಾದರೆ ತಮ್ಮ ಉದ್ದೇಶವು ಸಫಲವಾಗಲಿಕ್ಕಿಲ್ಲವೆಂದು ಇಂತವರಿಗೆ ಒಂದು ಸಂಶಯವಿತ್ತು ಕಮಿಟಿಯ ಈ ನಿರ್ಧಾರವನ್ನು ಕೇಳಿ ಇವರಿಗೂ ಸಂತೋಷವಾಗಬೇಕು.

○○ ○○ ○○ ○○

ಬೋರ್ಡ್ ಮೆಂಬರರಲ್ಲಿ ಅನೇಕರು ಬಸ್ ಕಂಪೆನಿಗಳ ಡೈರೆಕ್ಟರರು. ಬೋರ್ಡಿನ ಇತರ ಕಾರ್ಯ ಕಲಾಪಗಳು ಹೇಗೂ ಇರಲಿ, ಬೋರ್ಡ್ ಬಸ್ ಸರ್ವಿಸ್ ನಡೆಯಿಸುವ ಕೆಲಸಕ್ಕೆ ಕೈಹಾಕಬಾರದು, ಬಸ್ ಕಂಪೆನಿಗಳು ಅಚಂದ್ರಾರ್ಕವಾಗಿ ತಮ್ಮ ಕೈಯಲ್ಲೇ ಉಳಿಯಬೇಕು, ಎಂಬುದಕ್ಕಾಗಿಯೇ ಅವರು ಬೋರ್ಡ್ ಮೆಂಬರರಾಗಿರುವುದು ಇವರೆಲ್ಲರೂ ಶುದ್ಧ ಕಾಂಗ್ರೆಸ್ಸಿಗರು. ಬೇಕಾದಾಗ ಸನಾತನಿಗಳೂ ಆಗಬಲ್ಲರು. ಆದರೆ ಬಸ್ ಕಂಪೆನಿಗಳು ಮಾತ್ರ ಸಾರ್ವಜನಿಕ ಸಂಸ್ಥೆಗಳಾಗುವುದು ಅವರಿಗೆ ಒಪ್ಪಿಗೆಯಿಲ್ಲ.

○○ ○○ ○○ ○○

ಕಾಂಗ್ರೆಸ್‌ನವರು ಮೆಂಬರಿಕೆಗೆ ರಾಜಿ ಕೊಡಬೇಕೆನ್ನುವಾಗ ಇವರು ಯಾರೂ ಬೋರ್ಡಿನಿಂದ ಹೊರಬಂದವರಲ್ಲ ಆದುದರಿಂದ ಕಾಂಗ್ರೆಸ್ ಕಮಿಟಿಯವರು ಇವರ ಮೇಲೆ ಎಲ್ಲಿ ಶಿಸ್ತು ಜ್ಯಾರಿಮಾಡಿ ಉಮೇದ್ವಾರರಾಗಿ ನಿಲ್ಲಲು ಅತಂಕಿಸುವರೋ ಎಂದು ಇವರಿಗೆ ಬಹಳ ಭಯವಿತ್ತು. ಹಣದ ಅಭಾವದಿಂದ ಜನಹಿತದ ಯಾವ ಕಾರ್ಯಗಳನ್ನೂ ನಿರ್ವಹಿಸಲಾಗದೆ ಕುಳಿತಿರುವ ಬೋರ್ಡುಗಳು ತಮ್ಮ ಆದಾಯವನ್ನು ವೃದ್ಧಿಸಲಿಕ್ಕಾಗಿ ಬಸ್ ಸರ್ವಿಸನ್ನು ಕೈವಶ ಮಾಡಿಕೊಳ್ಳಬೇಕೆನ್ನುವ ಈ ಕಾಲದಲ್ಲಿ ತಾವು ಬೋರ್ಡಿನಿಂದ ಹೊರಗಿದ್ದರೆ ಏನು ಅನರ್ಥವಾಗುವುದೋ ಎಂದು ಯೋಚಿಸಿಕೊಂಡಿದ್ದ ನಮ್ಮಲ್ಲಿಯ ಬಸ್ ಡೈರೆಕ್ಟರರಿಗೆ ಕಾಂಗ್ರೆಸ್ಸು ಕಮಿಟಿಯ ಈ ನಿರ್ಧಾರದಿಂದ ಉಂಟಾಗಬಹುದಾದ ಆನಂದಕ್ಕೆ ಪಾರವೇ ಇಲ್ಲವೆನ್ನಬಹುದು.

○○ ○○ ○○ ○○

ಕಾಂಗ್ರೆಸ್ ಕಮಿಟಿಯವರು ಜಿಲ್ಲಾ ಬೋರ್ಡಿಗೆ ಯೋಗ್ಯ ಉಮೇದ್ವಾರರನ್ನು ಚುನಾಯಿಸುತ್ತಿದ್ದರೆ ಉಮೇದ್ವಾರರೆಲ್ಲರೂ ಪ್ರತಿಸ್ಪರ್ಧಿಗಳಲ್ಲದೆ ಆರಿಸಿ ಬರುತ್ತಿದ್ದರು ಚುನಾವಣೆಯ ಗಲಾಟೆಯೇ ಇರುತ್ತಿರಲಿಲ್ಲ. ಇಲೆಕ್ಷನ್‌ನಲ್ಲಿ ಸಹಾಯ ಮಾಡುವೆವೆಂದು ಆಶೆ ತೋರಿಸಿ ಉಮೇದ್ವಾರರಿಂದ ಹಣ ಪಡೆಯುವ ಇಲೆಕ್ಷನ್ ಏಜಂಟರು, ಮೈಲಿಗೆ ಎರಡು ರೂಪಾಯಿಯಂತೆ ಬಾಡಿಗೆ ಹೇಳಿ ಲಾಭ ಪಡೆಯುವ ಮೋಟರ್ ಕಾರ್ ಮಾಲೀಕರು, ಒಂದಕ್ಕೆ ಹತ್ತರಂತೆ ಬಿಲ್ ಕೊಟ್ಟು ಲಾಭ ಪೊಡೆಯುವ ಹೋಟೆಲ್‌ನವರು ಇವರೆಲ್ಲರಿಗೂ ಈ ನಿರ್ಧಾರದಿಂದ ಬಹಳ ಸಂತೋಷವಾಗಿರಬೇಕು.

○○ ○○ ○○ ○○

ಕಾಂಗ್ರೆಸ್ ಕಮಿಟಿಯವರು ಈ ವರೆಗೆ ಅನೇಕ ಠರಾವುಗಳನ್ನು ಮಾಡಿದ್ದಾರೆ ಆದರೆ ಎಲ್ಲರನ್ನೂ ತೃಪ್ತಿಗೊಳಿಸುವ ಠರಾವೆಂದರೆ ಇದೊಂದೇ. ಇದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಲೇಬೇಕು.

ಉಡುಪಿ

ಪಂಡಿತ ನೆಹರು ಅವರಿಗೆ ಶುಭಾಶಯಗಳು— ಉಡುಪಿ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವೃಂದದ ಸಭೆಯೊಂದು, ಸಪ್ಟಂಬರ ೭ನೆಯ ದಿನ ಪೂರ್ವಾಹ್ನ ಶಾಲೆಯ ಮುಖ್ಯೋಪಾಧ್ಯಾಯ ಮಿ. ಆರ್ ಫೆರ್ನಾಂಡಿಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಆದಿಯಲ್ಲಿ, ಅಧ್ಯಕ್ಷರು ರಾಷ್ಟ್ರೀಯ ಕೇಂದ್ರ ಸರಕಾರ ನಿರ್ಮಾಣದ ಸುದಿನದ ಮಹತ್ವವನ್ನು ವರ್ಣಿಸಿ, ನೂತನ ಸರಕಾರಕ್ಕೆ ಶುಭವನ್ನು ಕೋರಿದರು. ಶಾಲೆಯ ಸಹಾಯಕ ಉಪಾಧ್ಯಾಯರಲ್ಲೊಬ್ಬರಾದ ಶ್ರೀ ಕೆ ವಿಟ್ಠಲ ಶೆಣೈ, ಅವರು ವಿದ್ಯಾರ್ಥಿಗಳಿಗೆ, ಕಳೆದ ಕೆಲವು ತಿಂಗಳುಗಳಿಂದ ನಡೆಯುತ್ತಿದ್ದ ರಾಜಕೀಯ ಸಮಾಲೋಚನೆಗಳು ಹಾಗೂ ರಾಜ್ಯಾಂಗರಚನಾ ಸಭೆ, ಮತ್ತು ಕೇಂದ್ರ ತಾತ್ಕಾಲಿಕ ಸರಕಾರದ ಸಚಿವರ ಸ್ಥೂಲ ಪರಿಚಯವನ್ನು ಮಾಡಿ ಕೊಟ್ಟರು. ಅನಂತರ, ನೂತನ ಸರಕಾರದ ನಿರ್ಮಾಪಕರಾದ ಪಂಡಿತ ನೆಹರುಗಳಿಗೆ ಅವರ ಕೆಲಸದಲ್ಲಿ ಸಂಪೂರ್ಣ ಯಶಸ್ಸು ದೊರೆಯಲೆಂದು ಆಶಿಸಿ ತಮ್ಮ ರಾಜಭಕ್ತಿ ಮತ್ತು ಸಹಕಾರವನ್ನು ಪ್ರದರ್ಶಿಸುವ ಒಂದು ಜರೂರು ತಂತಿಯನ್ನು ಕಳುಹಿಸಿಕೊಟ್ಟು, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಎಯಿಡೆಡ್ ಶಾಲಾ ಟೀಚರ್ಸ್ ಯೂನಿಯನ್ ಮಹಾ ಸಭೆಯು— ತಾ. ೩೧ರಲ್ಲು ಮುನಿಸಿಪಲ್ ಟ್ರೈನ್ ಶಾಲೆಯಲ್ಲಿ ಡಾ। ಸುಂದರರಾಮು ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ಯೂನಿಯನಿನ ಕಾರ್ಯಕಲಾಪಗಳ ಗತವರುಷದ ವರದಿಯನ್ನು ಕಾರ್ಯದರ್ಶಿಯವರು ಓದಿದ ಬಳಿಕ ಅಧ್ಯಾಪಕ ವೃಂದದ ಶೋಚನೀಯ ಸ್ಥಿತಿಗತಿಗಳ ವಿಮರ್ಶೆ ಹಾಗೂ ನಿವಾರಣೋಪಾಯಗಳ ಕುರಿತು ಹಲವರ ಭಾಷಣಗಳಾದುವು ಸರ್ವ ಸಾಧಾರಣ ಎಲ್ಲಾ ಇಲಾಖೆಗಳಲ್ಲಿಯೂ ಸಂಬಳ, ತುಟ್ಟಿ ಭತ್ತೆ ಮೊದಲಾದ ಸೌಕರ್ಯಗಳ ಕುರಿತು ಮುಷ್ಕರ ನಡೆಯುತ್ತಿದ್ದರೂ ಅಧ್ಯಾಪಕರು ಮಾತ್ರ ಸಾವಧಾನ ಚಿತ್ತರಾಗಿ ತಂತಮ್ಮ ಕಾರ್ಯವನ್ನು ಸಾಂಗವಾಗಿ ನಡೆಸಿಕೊಂಡು ಬರುತ್ತಿರುವರು ದಯಾ ದಾಕ್ಷಿಣ್ಯಗಳಿಂದಲೇ ಸರಕಾರವು ಇನ್ನಾದರೂ ಉಪಾಧ್ಯಾಯರ ವೇತನ ತುಟ್ಟಿ ಭತ್ತೆಯ ಕುರಿತು ಜಾಗ್ರತರಾಗದಿದ್ದರೆ ಅಂತಿಮ ಘಟ್ಟದ ಪ್ರತ್ಯಕ್ಷ ಹೋರಾಟಕ್ಕೆ ಇಳಿಯಬೇಕಾಗುವ ವಿಷಮ ಪರಿಸ್ಥಿತಿಯು ಅಧ್ಯಾಪಕ ವೃಂದದಲ್ಲಿ ಉಂಟಾಗುವುದೆಂದು ಸರಕಾರದ ಅವಗಾಹನೆಗೆ ವಿಶದ ಪೂರ್ವಕ ತಿಳಿಸಬೇಕೆನ್ನುವ ನಿರ್ಣಯವಾಯಿತು ಹೊಸ ವರುಷಕ್ಕೆ ಕಾರ್ಯ ನಿರ್ವಾಹಕ ಮಂಡಳಿಗೆ ಶ್ರೀಗಳಾದ ಸಿಲ್ವೆಸ್ಟರ್ ಫೆರ್ನಾಂಡೀಸ್ (ಅಧ್ಯಕ್ಷ) ಬಿ ಕೆ ಶ್ರೀನಿವಾಸ ರಾವ್, (ಕಾರ್ಯದರ್ಶಿ ಹಾಗೂ ಖಜಾಂಚಿ) ಮೊದಲಾದ ಹದಿನಾರು ಸದಸ್ಯರ ಚುನಾವಣೆ ನಡೆಯಿತು.

ಮುಟ್ಟಾಗುಳಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಅಸ್ವಾಭಾವಿಕ ಕಾರಣವಿದ್ದರೂ— 'ಶುಭಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕ್ಯಾಪಿಂದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- ವಿ. ಪಿ. 12 ಆಣೆ ಅಲಾಯಿದ.

Mrs. P. DEVEE,
F. D. S. (A E)-Tollygunge, Calcutta.
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಫಲಹಾರಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

ದಕ್ಷಿಣ ಕನ್ನಡ

ಮಂಗಳೂರು.

ಅಪಪ್ರಚಾರದ ಕುರಿತು ಕಲೆಕ್ಟರರ ಸ್ಪಷ್ಟೀಕರಣ—ರೈಲ್ವೆ ಮುಷ್ಕರ—ಕಲ್ಕತ್ತದ ದುರಂತ ಇತ್ಯಾದಿಗಳ ದೆಸೆಯಿಂದ ಸುಳ್ಳು- ಅಬದ್ಧ ವಾರ್ತೆಗಳು ನಮ್ಮ ನಗರದಲ್ಲಿಯೂ ಅಲ್ಲಲ್ಲಿ ಹರಡುತ್ತಿವೆ. ಇಂತಹ ವಾರ್ತೆಗಳನ್ನು ಖಂಡಿಸುವ ಸಲುವಾಗಿ ನಮ್ಮ ಜಿಲ್ಲಾ ಕಲೆಕ್ಟರರು ಸ್ಥಳೀಯ ಪತ್ರಿಕೆಗಳ ಸಹಕಾರವನ್ನು ಕೋರಿ, ತಾ. ೨೩ರಂದು ಮುಂಜಾನೆ ಪತ್ರಿಕೋದ್ಯೋಗಿಗಳನ್ನು ಆಮಂತ್ರಿಸಿದ್ದರು.

ನಗರದಲ್ಲಿಯೂ ಹಿಂದೂ – ಮುಸ್ಲಿಂ ಕಲಹ ಏಳಲಿದೆ, ಎಂಬೊಂದು ಗುಲ್ಲನ್ನು ಕೆಲಮಂದಿ ಅಪಪ್ರಚಾರಕರು ಹರಡುತ್ತಿದ್ದಾರೆ. ಅದು ಕೇವಲ ನಿರಾಧಾರವಾದುದು. ರೈಲ್ವೆಯಂತಹ ಮಹಾ ಮುಷ್ಕರವು ನಡೆಯುತ್ತಿರುವಾಗ ಪೋಲೀಸರ ಚಲನವಲನಗಳು ಸಾಗುತ್ತಿರುವುದರಲ್ಲಿ ವಿಶೇಷವೇನೂ ಇಲ್ಲ. ಇಂತಹ ಚಲನವಲನಗಳಿಂದ ಯಾರೂ ಏನನ್ನೂ ನಿರೀಕ್ಷಿಸಬೇಕಾದಿಲ್ಲ ಎಂದು ಕಲೆಕ್ಟರರು ಸ್ಪಷ್ಟಪಡಿಸಿದರು.

ನೀರ್ಶ್ವರದ ಅತ್ತ ಕಡೆ ವೊನ್ನೆ ದೊಡ್ಡ ದಂಗೆ ನಡೆಯಿತೆಂದೂ ಕೆಲವರು ಮಡಿದರೆಂದೂ, ರೈಲ್ವೆ ಬಂಡಿಗಳು ಕೆಲವನ್ನು ಸುಡಲಾಯಿತೆಂದೂ ಸುಳ್ಳು ವಾರ್ತೆಯೊಂದು ಬಲು ಪಟ್ಟಾಗಿ ಹರಡಿದೆ. ಇದು ಕೇವಲ ನಿರಾಧಾರವಾದುದೆಂದೂ, ಅಲ್ಲಿ ಯಾವ ಗಲಭೆಯೂ ನಡೆದಿಲ್ಲವೆಂದೂ ಕಲೆಕ್ಟರರು ತಿಳಿಸಿದರು.

ಜೋಳದ ಕುರಿತಾಗಿ ನಮ್ಮಲ್ಲಿ ಹರಡಿರುವ ಕೆಲ ಸುಳ್ಳು ವಾರ್ತೆಗಳ ಕುರಿತು ಪತ್ರಿಕೋದ್ಯೋಗಿಗಳೊಬ್ಬರು ಪ್ರಶ್ನಿಸಲು ಕಲೆಕ್ಟರರು ಹೀಗೆಂದರು:—'ಜೋಳ ನಿಜವಾಗಿಯೂ ಅತ್ಯಂತ ಪೌಷ್ಟಿಕ ಮತ್ತು ಉತ್ತಮವಾದ ಆಹಾರ ನಮ್ಮಲ್ಲಿಗೆ ಬಂದಿರುವ ಜೋಳವೂ ಉತ್ತಮವಾಗಿದೆ, ಆದರೆ, ಇಲ್ಲಿಯ ಜನತೆಗೆ ಅದರ ಉಪಯೋಗವು ತೀರ ಹೊಸದಾಗಿದೆ. ಆದುದರಿಂದ ಜನರಲ್ಲಿ ಅದರ ಉಪಯೋಗವು ಕಳಕಳೆ ಬರುವ ತನಕ ಜೋಳವನ್ನು ಕಡ್ಡಾಯವಾಗಿ ಕೊಡಬಾರದೆಂದು ನಿರೂಪಿಸಿದ್ದೇನೆ. ಸದ್ಯದಲ್ಲೇ ಜೋಳದ ಉಪಯೋಗದ ಕುರಿತು ತರಬೇತು ಹೊಂದಿದ ಪ್ರಚಾರಕರು ಅಲ್ಲಲ್ಲಿ ಅದರ ಉಪಯೋಗದ ಕುರಿತು ಪ್ರಚಾರ ನಡೆಸಲಿರುವರು ಆ ಬಳಿಕ [illegible], ಕಡ್ಡಾಯವಾಗಿ ಮಾಡಲಾಗುವುದು. [illegible] ಪ್ರಾಂತದ ಆಹಾರ ಪರಿಸ್ಥಿತಿಯು ಅತಿ ಕಠಿಣವಾಗಿದೆ. ಕೇಂದ್ರ ಸರಕಾರದಿಂದ ನಿರೀಕ್ಷಿಸಿದಷ್ಟು ಸಹಾಯ ಇನ್ನೂ ಬರಲಿಲ್ಲ. ಆದುದರಿಂದ, ಸದ್ಯದ ಆಹಾರದ ಬಿಕ್ಕಟ್ಟಿನ ನಿವಾರಣೆಯು ಎಲ್ಲರ ಹೊಣೆಯಾಗಿದೆ' ಎಂದರು.

ಪ್ರಯಾಣಿಕರಿಗಾಗಿ ರೈಲೊಂದನ್ನು ಮಂಗಳೂರಿನಿಂದ ತಾ. ೩೦ರಿಂದ ಬಿಡಲಾಗುತ್ತಿದೆ. ಬೆಳಿಗ್ಗೆ ೧೦॥ ಗಂಟೆಗೆ ಇದು ಮಂಗಳೂರಿನಿಂದ ಕಲ್ಲಿಕೋಟೆಗೆ ಹೊರದುವುದು. ಸಂಜೆ ೩॥ ಗಂಟೆಗೆ ಹಿಂದೆ ಬರುತ್ತಿದೆ.

ಮಳೆ—೧೪೨ ಇಂಚಿನ ವರೆಗೆ ಇಷ್ಟರಲ್ಲೆ ಮಳೆ ಸುರಿದಿದೆ. ಎಂದರೆ, ಸಾಮಾನ್ಯವಾಗಿ ನಮ್ಮಲ್ಲಿ ಒಂದು ವರ್ಷದಲ್ಲಿ ಸುರಿಯುವ ಮಳೆ ಇಷ್ಟರಲ್ಲೆ ಬಿದ್ದಾಯಿತು.

ಕಾಯ ಕಷ್ಟದ ಮಜೂರರೆಲ್ಲರೂ ತಮ್ಮ ಸಂಕಷ್ಟಗಳ ಕುರಿತು ಆಯಾ ತಾಲೂಕು ಅಥವಾ ಫಿರ್ಕಾಸಪ್ಲೈ ಆಫೀಸರರಲ್ಲಿ ಪ್ರತಿ ಶನಿವಾರ ದಿನ ನಿವೇದಿಸಿಕೊಳ್ಳಬಹುದು. ಈ ಆಫೀಸರುಗಳು ಪ್ರತಿ ಶನಿವಾರ ತಮ್ಮ ತಮ್ಮ ಕೇಂದ್ರಗಳಲ್ಲೇ ಇರುವರು — ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಜಿಲ್ಲಾ ಪ್ರಾಥಮಿಕ ಅಧ್ಯಾಪಕರ ಸಭೆಯೊಂದು ತಾ ೨೫ರಂದು ರಘುನಾಥಯ್ಯ ಸ್ಮಾರಕ ಭವನದಲ್ಲಿ ಶ್ರೀ| ಎಸ್. ಕೆ ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಬರಲಿದ್ದ ಮದ್ರಾಸ್ ಪ್ರಾಂತಿಕ ಪ್ರಾಥಮಿಕ ಶಾಲಾಧ್ಯಾಪಕರ ಫೆಡರೇಶನಿನ ಕಾರ್ಯದರ್ಶಿಗಳು ಬಾರದಿದ್ದುದರಿಂದ ಇನ್ನೊಮ್ಮೆ ಅವರಲ್ಲಿಗೆ ಬರುವಂತೆ ಮಾಡಲು ಯತ್ನಿಸಲಾಗುವುದಂತೆ,

---

ಅಜೆಕಾರು—ಕೃಷಿ ಇಲಾಖೆಯವರು ಈ ಕೇಂದ್ರದಲ್ಲಿ ತಮ್ಮ ಒಂದು ಸಬ್ ಡಿಪೋವನ್ನು ತೆರೆದು, ಬೇಸಾಯಗಾರರಿಗೆ ಆವಶ್ಯವಿರುವ ಸುಧಾರಿತ ಬೀಜಗಳು, ಗೊಬ್ಬರ, ಹಿಂಡಿ ಮತ್ತು ಯಾರೆ, ಸಿಕ್ಕಾಸು, ಗಾಡಿಪಟ್ಟಿ ಇತ್ಯಾದಿ ಕಬ್ಬಿಣದ ಸಾಮಗ್ರಿಗಳನ್ನು ಮಾರುವ ಏರ್ಪಾಡು ಮಾಡಿರುವುದು ತುಂಬಾ ಪ್ರಯೋಜನಕಾರಿಯಾಗಿದ್ದು ಸ್ತುತ್ಯಕರವಾಗಿದೆ.

ಮಂಜೇಶ್ವರ—ಸ್ಥಳೀಯ ಶ್ರೀ ಮದನಂತೇಶ್ವರ ದೇವಸ್ಥಾನದ ಅಧಿಕಾರಿಗಳು ಶ್ರೀ ಗೀತಾ ಪ್ರಚಾರದ ಸದುದ್ದೇಶದಿಂದ ಗೀತೆಯ 15ನೇ ಅಧ್ಯಾಯದ ಕುರಿತು ಒಂದು ಪ್ರಬಂಧ ಸ್ಪರ್ಧೆಯನ್ನು ಹ್ಯಾಸ್ಕೂಲು ಮತ್ತು ಕೋಲೇಜು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿರುತ್ತಾರೆ. ವಿದ್ಯಾರ್ಥಿಗಳಿಂದ ಬರುವ ಅತ್ಯುತ್ತಮ ಪ್ರಬಂಧಕ್ಕೆ ರೂಪಾಯಿ 15/- ಹಾಗೂ ವಿದ್ಯಾರ್ಥಿನಿಯರಿಂದ ಬರುವ ಪ್ರಬಂಧಕ್ಕೆ ರೂಪಾಯಿ 15/- ಹೀಗೆ ಎರಡು ಬಹುಮಾನಗಳನ್ನು ಕೊಡಲು ನಿಶ್ಚಯಿಸಿದ್ದಾರೆ. ಇದೇ ಆಕ್ಟೋಬರ್ ತಿಂಗಳ ಆಖೈರಿಯೊಳಗೆ ಉಮೇದ್ವಾರರು ತಮ್ಮ ಉಪನ್ಯಾಸಗಳನ್ನು ಶ್ರೀ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರಿಗೆ ಕಳುಹಿಸತಕ್ಕದ್ದು. ಅಲ್ಲದೆ, ಸದ್ರಿ ಉಪನ್ಯಾಸವು ತಮ್ಮ ಸ್ವಪ್ರಯತ್ನದಿಂದಲೇ ಬರೆಯಲ್ಪಟ್ಟದು ಎಂಬ ಬಗ್ಗೆ ಸಂಬಂಧಪಟ್ಟ ಸಂಸ್ಥೆಯ ಮೇಲಧಿಕಾರಿಯ ದೃಢ ಪತ್ರಿಕೆಯನ್ನು ಕೂಡಾ ಪ್ರಬಂಧದ ಜತೆಯಲ್ಲಿ ಹಾಜರುಪಡಿಸಬೇಕು.

ಇನ್ನು ಗೀತೆಯ 14ನೇ ಅಧ್ಯಾಯವನ್ನು ಕಂಠೋಕ್ತವಾಗಿ ಹೇಳುವ ವಿದ್ಯಾರ್ಥಿಗಳಿಗೆ ಗೀತಾ ಪ್ರತಿ, ಯಾ, ಅದರ ಬೆಲೆ ರೂಪವಾಗಿ ಉಚಿತಾರ್ಥಗಳನ್ನು ಕೊಡೋಣಾಗುವುದು. ಉಮೇದ್ವಾರರು ತಮ್ಮ ಸಂಸ್ಥೆಯ ಅಧಿಕಾರಿಗಳಿಂದ ಈ ಬಾಪ್ತಿನಲ್ಲಿ ಯೋಗ್ಯತಾ ಪತ್ರಗಳನ್ನು ತಾ. 31-10-1946ರೊಳಗೆ ಹಾಜರುಪಡಿಸಿದ್ದಲ್ಲಿ, ಅವರಿಗೆ ಗೀತಾ ಪ್ರತಿಗಳು ಕಳುಹಿಸೋಣಾಗುವುವು. ಗೀತಾ ಜಯಂತಿಯು ತಾ. 5-12 1946ಕ್ಕೆ ಜರಗುವುದು.

ಕಟಪಾಡಿ— ಬ್ರಹ್ಮ ಶ್ರೀನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ 12ನೇ ವಾರ್ಷಿಕ ಮಹಾ ಸಭೆಯು ತಾ. 25-8-1946ರಲ್ಲಿ ಸಮಿತಿಯ ಭವನದಲ್ಲಿ ಶ್ರೀ. ಮೊಣ್ಣ ಪೂಜಾರಿ ಗುಡ್ಡೆ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿ ಆಯವ್ಯಯಗಳ ಪಟ್ಟಿ ಮಂಜೂರಾದ ಬಳಿಕ ಚಾಲ್ತಿ ವರ್ಷದ ಆಡಳಿತೆ ಕಮಿಟಿಯು, ಸದಸ್ಯರಿಂದ ಆರಿಸಲ್ಪಟ್ಟಿತು. ಶ್ರೀಗಳಾದ, ಮೊಣ್ಣ ಪೂಜಾರಿ ಗುಡ್ಡೆ ಇವರೂ ಅಧ್ಯಕ್ಷರಾಗಿಯೂ, ಏಣಗುಡ್ಡೆ ವೆಂಕಪ್ಪ ಮಾಸ್ತರರು, ಉಪಾಧ್ಯಕ್ಷರಾಗಿಯೂ ಕೆ. ರಂಗನವರು ಗೌರವ ಕಾರ್ಯದರ್ಶಿಯವರಾಗಿಯೂ, ಕೆ. ದೇಜು ಮಾಸ್ತರ್ ಕೋಶಾಧ್ಯಕ್ಷರಾಗಿಯೂ, ಸರ್ವಾನುಮತದಿಂದ ಆರಿಸಲ್ಪಟ್ಟರು. ಚಾಲ್ತಿ ವರ್ಷದ ಅಂದಾಜು ಬಜೇಟು ಮಂಜೂರಾದ ಬಳಿಕ ಶ್ರೀ. ಡಾ. ಕೆ. ಯನ್, ಸುವರ್ಣ ಉಡ್ಪಿ, ಇವರನ್ನು ಲೆಕ್ಕ ಪರಿಶೋಧಕರನ್ನಾಗಿ ಸರ್ವಾನುಮತದಿಂದ ಆರಿಸಿಕೊಂಡ ನಂತರ, ಶ್ರೀಗಳಾದ ಮಣಿಪುರ ಅಂಗರ, ಮೂಳೂರ್ ಕುಡ್ಪ ಪೂಜಾರಿ, ಕೆ. ರಂಗ, ವೈ. ವೆಂಕ ಮಾಸ್ತರ್, ಯು. ದಾಡು ಮಾಸ್ತರರು ಕೂಡಾ ಸಮಿತಿಯ ಮುಂದೇಳಿಗೆಯನ್ನು ಬಯಸುತ್ತಾ, ಹಲವು ದೃಷ್ಟಾಂತಗಳನ್ನು ಕೊಟ್ಟು ಅನುಭವ ಯುಕ್ತವಾದ ಸುರಸ ಭಾಷಣಗಳನ್ನು ಮಾಡಿದರು. ಶ್ರೀ ಕೆ. ದೇಜು ಮಾಸ್ತರ್, ಮುಜಿಕ್ರ ಮಾಸ್ತರ್, ಮತ್ತು ಮೂಳೂರ್ ಸರ್ವ ಪೂಜಾರಿಯವರು ಕೂಡಾ ಸಮಿತಿಯ ಅಭಿವೃದ್ಧಿಯನ್ನು ಹಾರೈಸಿ, ಉಪಯುಕ್ತ ಸೂಚನೆಗಳನ್ನಿತ್ತರು. ಗತವರ್ಷದಲ್ಲಿ ನಿವೃತ್ತಿ ಹೊಂದಿದ ಸದಸ್ಯರಿಗೆ ಮತ್ತು ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭಾಧ್ಯಕ್ಷರ ಭಾಷಣದ ನಂತರ ಗುರುಪೂಜೆಯ ಪ್ರಸಾದ ಸ್ವೀಕಾರದೊಂದಿಗೆ ಸಭಾಂತ್ಯವಾಯಿತು.

ಇದೇ ತಾ. 10 9 46ನೇ ಮಂಗಳವಾರ ಸಾಯಂ. ಗಂಟೆ 6ಕ್ಕೆ "ಬ್ರಹ್ಮಶ್ರೀನಾರಾಯಣ ಗುರು ಜಯಂತಿ" ಉತ್ಸವವು ಸಮಿತಿಯ ಭವನದಲ್ಲಿ ಜರಗಲಿಕ್ಕಿರುವದು. ಶ್ರೀ ಗುರು ಭಕ್ತರಿಗೆಲ್ಲಾ ಸ್ವಾಗತವಿದೆ.

ನೆರೆಹಾವಳಿಯವರಿಗೆ ಸಹಾಯ- ಇದೇ ಆಗೋಸ್ತು ತಿಂಗಳ 7ನೇ ತಾರೀಕಿನ ದಿನ ಒದಗಿದ ನೆರೆಹಾವಳಿ ಸಂಬಂಧ ಉಡುಪಿ ತಾಲೂಕಿನಲ್ಲಿ ವಾಸ್ತವ್ಯದ ಮನೆಗಳು ಬಿದ್ದುಹೋಗಿ ಅವುಗಳನ್ನು ಪುನಹ ಕಟ್ಟಿಕೊಂಡು ವಾಸ್ತವಿಸಿಕೊಳ್ಳುವರೆ ತಮ್ಮಿಂದ ಸಾಧ್ಯವಿಲ್ಲವೆಂತ ಅಭಿಪ್ರಾಯಪಡುವವರು ಉಡುಪಿ ತಾಲೂಕು ನೆರೆಹಾವಳಿ ಸಂಕಟ ನಿವಾರಣ ಕಮಿಟಿಯ ಸೆಕ್ರೆಟರಿಯವರಾದ ಉಡುಪಿ ತಾಲೂಕು ತಹಶಿಲ್ದಾರರಿಗೆ ಮನವಿ ಮಾಡಿಕೊಂಡಲ್ಲಿ ತಾತ್ಕಾಲಿಕ ವಾಸ್ತವ್ಯದ ಬಗ್ಗೆ ಕಟ್ಟಡವನ್ನು ಕಟ್ಟಿಕೊಳ್ಳುವ ಉದ್ದೇಶ್ಯ ಅವರಿಗೆ ಅನುಕೂಲವಾದಮಟ್ಟಿಗೆ ದ್ರವ್ಯ ಸಹಾಯವನ್ನು ಒದಗಿಸಿ ಕೊಡಲಾದೀತು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮುಟ್ಟ—ತಾ. 1-9-1446ರಲ್ಲಿ ಮುಟ್ಟ ಕಟ್ಟ ಸಮಿತಿಯ ಸಭೆಯು ಶ್ರೀ ವಕೀಲ್ ಎಂ ಎಸ್. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಸದ್ರಿ ಸಮಿತಿಗೆ ಶ್ರೀಗಳಾದ ಅಧಿಕಾರಿಯವರು ಅಧ್ಯಕ್ಷರಾಗಿಯೂ ಶ್ರೀ. ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಮತ್ತು ಶ್ರೀ ಕಟಪಾಡಿ ಬೀಡು ಸೀತಾರಾಮ ಭೋರಿ ಬಲ್ಲಾಳರು ಉಪಾಧ್ಯಕ್ಷರಾಗಿಯೂ ಶ್ರೀ ಪಾಂಗಾಳ ಜನಾರ್ದನ ನಾಯಕರು ಕೋಶಾಧ್ಯಕ್ಷರಾಗಿಯೂ ಶ್ರೀ ಎ. ಶಿವರಾಮ ಹೆಗ್ಡೆರು ಪ್ರಧಾನ ಕಾರ್ಯದರ್ಶಿಯರಾಗಿಯೂ ಎಂ. ಅಧಿಕಾರಿ ವಾಸುದೇವ ರಾವ್, ಎನ್. ಹರಿದಾಸ್ ರಾವ್, ಮತ್ತು ಎಂ ವಿಷ್ಣುಮೂರ್ತಿ ಇವರು ಸಹಾಯಕ ಕಾರ್ಯದರ್ಶಿಯವರಾಗಿಯೂ ಇತರ ಕೆಲವು ಮಹನೀಯರು ಕಾರ್ಯಕಾರಿ ಮಂಡಳಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು.

ಸರಕಾರದವರ ಹಾಗೂ ಪಂಚಾಯತ ಬೋರ್ಡಿನವರ ಸಹಾಯ ಪಡಕೊಂಡು ಸದ್ರಿ ಕಟ್ಟದಿಂದ ಪ್ರಯೋಜನ ಹೊಂದುವ ಪಟ್ಟು ಮತ್ತು ನೆರೆಗ್ರಾಮಗಳ ವರ್ಗವಾರರಿಂದ ವಂತಿಗೆ ಹಣ ವಸೂಲುಮಾಡಿ ಸದ್ರಿ ಕಟ್ಟದ ಕೆಲಸವನ್ನು ಶೀಘ್ರದಲ್ಲಿಯೇ ಮುಂದೊತ್ತುವಂತೆ ನಿರ್ಣಯಿಸಲಾಯಿತು.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸರಳವಾದ ಶೈಲಿಯಲ್ಲಿ ಎಲ್ಲರಿಗೂ ಮಂದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಆವನ ನ್ಯಾಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುವನ್ನು ವಿವರಿಸುವ ರಾಜಕೀಯ ಸಾಮಾಜಿಕ ನಾಟಕ.

ಬೆಲೆ ರೂ. 1—4—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ದಿ ಆರ್ಯನ್ ಚಾಂಪಿಯನ್

ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ:

7-10 ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ F. ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಸೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್:

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವವು ವಿಶೇಷ ಅನುಭವಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ, ಎಸ್ಕ್ವಯರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ವಿಶ್ವ ಸಾಹಿತ್ಯ ಮಾಲೆ, ಕುಸುಮ ೧

ವಿಚಿತ್ರ ಆಗ್ನೇಯ ಏಶಿಯ

ಇಂಡೋನೇಶಿಯಾ, ಇಂಡೋ ಚೀನಗಳ ರಾಜ್ಯ ಕ್ರಾಂತಿ,

ಬರ್ಮಾ, ಮಲಯಾ, ಸಯಾಂಗಳ ಸ್ವಾತಂತ್ರ್ಯ ಸಂಗ್ರಾಮ—

ಎಲ್ಲವೂ ಇವೆ. ನಕ್ಷೆಗಳು ಸಹಿತ.

ಲೇಖಕರು:—ಶ್ರೀ. ಎಂ. ಹರಿದಾಸ.

(ದ್ವಿತೀಯ ಮಹಾ ಯುದ್ಧ, ಉಕ್ಕಿನ ಮನುಷ್ಯ ಗ್ರಂಥಗಳನ್ನು ಬರೆದವರು)

ಬೆಲೆ ೧—೮—೦ (ಅಂಚೆ ವೆಚ್ಚ ಬೇರೆ). ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಬರೆಯಿರಿ:—ರಾವ್ ಬ್ರದರ್ಸ್, ಗದಗ



Approved firm by the Govt. of Mysore Certified by the Agent of the Govt. of Cylone Indian.

ಸ್ವೀಕಾರ—ವಿಮರ್ಶೆ

೨೫. ತುಂಬಿದ ಕೊಡ ಮತ್ತು ಇತರ ಕಥೆಗಳು:- ಬರೆದವರು—ದೊಡ್ಡೇರಿ ವೆಂಕಟಗಿರಿ ರಾವ್. ಪ್ರಕಾಶಕರು:-ಸಾಧನ ಪ್ರಕಟನಾಲಯ, ಶಿವಮೊಗ್ಗ ಕ್ರೌನ್ ಆಕಾರದ ಪುಟಗಳು ೬೯. ಬೆಲೆ ಒಂದು ರೂಪಾಯಿ.

ಲೈಂಗಿಕ ವಿಷಯದ ಶಾಸ್ತ್ರೀಯ ಗ್ರಂಥಗಳು ಹಾಗೂ ಶಿಶುಸಾಹಿತ್ಯ ಸಂಗ್ರಹಗಳನ್ನು ಬರೆದು ಈಗಾಗಲೇ ಪ್ರಸಿದ್ಧರಾಗಿರುವ ಶ್ರೀ ದೊಡ್ಡೇರಿ ವೆಂಕಟಗಿರಿರಾಯರು ಈ ಸಂಗ್ರಹದಲ್ಲಿ ತಾವು ಆಗಾಗ ಬರೆದ ೧೪ ಕತೆಗಳನ್ನು ಪ್ರಕಟಿಸಿದ್ದಾರೆ. ಜೀವನದಲ್ಲಿ ಸೂಕ್ಷ್ಮ ವಿಷಯಗಳನ್ನು ಕೂಡ ರಸವತ್ತಾಗಿ ಚಿತ್ರಿಸುವ ಜಾಣ್ಮೆ ಹಲವು ಕತೆಗಳಲ್ಲಿ ತೋರಿಬರುತ್ತದೆ. ತರುಣದಾಂಪತ್ಯ, ವಿಧವಾ ಜೀವನ, ಉಗ್ರ ಪ್ರಣಯಗಳನ್ನು ಕಲಾಪೂರ್ಣವಾಗಿ ಬಣ್ಣಿಸುವ ತುಂಬಿದ ಕೊಡ, ನಟಿ, ಅವಳ ಮನಸ್ಸು, ಶಾಂತಿ ಇತ್ಯಾದಿ ಕೃತಿಗಳು ಸುಮನೋಹರವಾಗಿವೆ. ಶೈಲಿಯು ಸರಳವಾಗಿ, ಸನ್ನಿವೇಶಗಳಿಗೆ ಸಹಜವಾಗಿದೆ. ಅಂದವಾದ ಮುಖಪತ್ರದಿಂದೊಡಗೂಡಿ, ಪುಸ್ತಕವು ಸುಂದರವಾಗಿ ಮುದ್ರಿತವಾಗಿದೆ. ಶ್ರೀ ಅ. ನ. ಕೃಷ್ಣರಾಯರು ತನ್ನ ಮುನ್ನುಡಿಯಲ್ಲಿ ಹೇಳುವಂತೆ, «ಸಂಗ್ರಹವನ್ನು ಎಲ್ಲರೂ ಒಮ್ಮೆ ಓದಿ ಸುಖಪಡಬಹುದಾಗಿದೆ"

೨೬. ಅಡ್ಡಿಕೆಯ ಕಳವು:—ಬರೆದವರು. ಶ್ರೀ ತ. ಸು. ರಾಮಸ್ವಾಮಯ್ಯ. ಪ್ರಕಾಶಕರು: ಸಾಹಿತ್ಯಾಲಯ, ಚಿತ್ರದುರ್ಗ. ಫೂಲ್‌ಸ್ಕೆಪ್ ೧/೮ ಆಕಾರದ ೭೩ ಪುಟಗಳು. ಬೆಲೆ. ೩ ಆಣೆ.

ಇದರಲ್ಲಿ ನವೋದಿತ ಲೇಖಕ ಶ್ರೀ. ರಾಮಯ್ಯನವರ ೪ ಕತೆಗಳು ಸಂಗ್ರಹವಾಗಿವೆ. "ಅಡ್ಡಿಕೆಯ ಕಳವು'' ಮೊದಲಿಂದ ಕೊನೆವರೆಗೆ ಕುತೂಹಲವನ್ನೆಬ್ಬಿಸುವ ವಸ್ತುವಿಂದ ಕೂಡಿದೆ. "ಕೃಷ್ಣಾರ್ಪಣ"ವೆಂಬುದು ಅಷ್ಟೊಂದು ಪರಿಣಾಮಕಾರಿಯಾಗಿಲ್ಲ. «ಗೀತಾರಹಸ್ಯ' ವನ್ನು ಕತೆಯೆನ್ನುವುದಕ್ಕಿಂತಲೂ ಇಸ್ಪೀಟ್ ಆಟದ ಮತ್ತು ಆಟಗಾರರ ವರ್ಣನೆಯ ನಿಸ್ಸೋದ ಚಿತ್ರವೆಂದರೆ ಒಳಿತು. «ದೈವೇಚ್ಛೆ" ಎಂಬ ಕೊನೆಯ ಕತೆ ರಾಮಾಯಣ ಪಠಣದ ಮಹಿಮೆಯನ್ನು ತಿಳಿಸುವ ಕಟ್ಟುಕತೆಯಂತಿದೆ. ಸಾಹಿತ್ಯಾಲಯದವರ ಹಾಗೂ ಲೇಖಕರ ಈ ಪ್ರಥಮ ಪ್ರಯತ್ನದ ಸಾಹಸವು ಶ್ಲಾಘ್ಯವಾದರೂ ಮುಂದಿನ ಪ್ರಯತ್ನಗಳು ಮತ್ತಷ್ಟು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

೨೭. The Southern Command Farmer:—ಸೇನೆಯ ವಿಭಾಗಗಳಲ್ಲಿ ಆಹಾರದ ಉತ್ಪತ್ತಿಯನ್ನು ಉತ್ತೇಜಿಸುವ ಉದ್ದೇಶದಿಂದ ಪ್ರಚಾರ ಮಾಡುವ ಬಗ್ಗೆ ಪ್ರಕಟವಾದ ಈ ಅಂದವಾದ, ಸಚಿತ್ರ ಸೊತ್ತಿಗೆಯಲ್ಲಿ ಗೊಬ್ಬರ ತಯಾರಿ ಮತ್ತು ಕೋಳಿ, ಹಂದಿ, ಜೇನು ಮುಂತಾದುವುಗಳ ಸಾಕುವಿಕೆಯ ಕುರಿತಾದ ಉಪಯುಕ್ತ ಮಾಹಿತಿಯು ಕೊಡಲಾಗಿದೆ. ಆಹಾರದ ಅಭಾವದಿಂದ ಕಂಗೆಟ್ಟಿರುವ ಸಾಮಾನ್ಯ ಜನತೆಗೂ ಇದರ ವಾಚನದಿಂದ ತುಂಬ ಪ್ರಯೋಜನವಾಗದಿರಲಾರದೆಂದು ನಾವು ನಂಬುತ್ತೇವೆ.

೨೮. ವರದಿಗಳು:-

೧ ಕರ್ನಾಟಕ ಸಂಘ, ಮುಂಬಯಿ— ಇದರ ೧೯ನೆಯ ವಾರ್ಷಿಕ ವರದಿ. ಸಂಘದ ವರದಿಯ ವರ್ಷದಲ್ಲಿ ಸದಸ್ಯರ ಸಂಖ್ಯೆ ಬೆಳೆದಿದೆಯಲ್ಲದೆ, ನಾಡ ಹಬ್ಬ, ಸ್ಪರ್ಧೆಗಳು, ವ್ಯಾಖ್ಯಾನಗಳು, ಅಭ್ಯಾಸಗೋಷ್ಠಿ, ವಾಚನಾಲಯ ಇತ್ಯಾದಿ ಹಲವು ಚಟುವಟಿಕೆಗಳಲ್ಲಿ ಅತ್ಯಂತ ಉತ್ಸಾಹದಿಂದ ನಡೆದಿರುವಂತೆ ಕಾಣಬರುವುದು ಸ್ತುತ್ಯ.

೨ ಗಂಗಯ ಸ್ಮಾರಕ ಫಂಡು; ಮುಂಬಯಿ- ಇದರ ತೃತೀಯ ವಾರ್ಷಿಕ ವರದಿ. ಸಂಘವು, ಸದಸ್ಯರ ಸ್ವದೇಶವಾದ ದ. ಕನ್ನಡದ ಪಿತ್ರಪಟ್ಟದಲ್ಲಿ ಮೊಗವೀರ ಧರ್ಮಾರ್ಥ ವಾಚನಾಲಯ, ಪ್ರೈವೇಟ್ ಸ್ಕೂಲ್, ಇವುಗಳನ್ನು ನಡೆಸುತ್ತದೆ. ಇನ್ನೂ ಶೈಶವಾವಸ್ಥೆಯಲ್ಲಿರುವ ಈ ಸಂಘಕ್ಕೆ ಧನ-ಜನ-ಸಹಾಯಗಳು ದೊರೆತು, ಅದು ತನ್ನ ಚಟುವಟಿಕೆಗಳನ್ನು ವರ್ಧಿಸಲೆಂದು ಹಾರೈಸುತ್ತೇವೆ.

೩. ಹರಿಜನ ಸೇವಕ ಸಂಘ ಕಾರ್ಕಳ:—ಇದರ ೩೧-೩-೪೬ಕ್ಕೆ ಅಂತ್ಯವಾಗುವ ೧ನೆಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯ ವರ್ಷದಲ್ಲಿ, ಸಂಘದ ಆಶ್ರಯದಲ್ಲಿ ನಡೆಯುವ ಶಬರಿ ಆಶ್ರಮದಲ್ಲಿ ೮ ಮಂದಿ ಕಾಯಂ ಹಾಗೂ ೧೨ ಮಂದಿ ಮಧ್ಯಾಹ್ನ ಊಟದ ವಿದ್ಯಾರ್ಥಿ ನಿವಾಸಿಕರಿದ್ದಾರೆ. ಸೇಂಘ್ಸ್ನ, ನೂಲುವಿಕೆಗಳ ಬಗ್ಗೆ ಕಟ್ಟಿಸತೊಡಗಿರುವ ಹೊಸ ಕಟ್ಟಡವು ಪೂರ್ತಿಯಾಗುವುದರಲ್ಲಿದೆಯೆಂದು ಕೇಳಿ ಸಂತೋಷ ಪಡುತ್ತೇವೆ. ವರದಿಯೊಂದಿಗಿರುವ ಆಯವ್ಯಯಪಟ್ಟಿಗನುಸಾರ, ಸಂಘವು ಬಡ ಹರಿಜನ ವಿದ್ಯಾರ್ಥಿಗಳ ಊಟ, ವಸತಿ, ಪುಸ್ತಕ ಇತ್ಯಾದಿ ಸೌಕರ್ಯಗಳ ಬಗ್ಗೆ ರೂ. ೧೮೭೦ ೨ ೧೦ ಖರ್ಚು ಮಾಡಿರುವಂತೆ ತೋರುತ್ತದೆ. ದಾನವಾಗಿ ಜಮೆಯಾದ ರೂ. ೧೪೫೫-೯-೪ ಸಂಘಕ್ಕೆ ಇನ್ನೂ ಧನಸಹಾಯವು ಅಗತ್ಯವಿದೆ. ಊರ ಪರವೂರ ಮಹನೀಯರು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಕೆ. ವಿ. ಎಸ್.

ಸದಾ ಯುವಕರಾಗಿರುವ ಉಪಾಯ

(ಗಂಗಾತನಯ)

ಜನರಲ್ ಮೆಕಾರ್ಥರ್ ಡೆಸ್ಕಿನ ಮೇಲೆ ಒಂದು ಸಂದೇಶವಿರುತ್ತದೆ. ಅದು ನಿಮಗೆ ಧೈರ್ಯ ಮತ್ತು ಆತ್ಮ ವಿಶ್ವಾಸಗಳನ್ನುಂಟುಮಾಡತಕ್ಕ ಸಂದೇಶ.

ಕರ್ನಲ್ ಫ್ರೆಡರಿಕ್ ಪಾಮರ್ ಎಂಬ ಒಬ್ಬ ಪ್ರಸಿದ್ಧ ಸುದ್ದಿಗಾರನು ಮೆಕಾರ್ಥರನ್ನು ಕಾಣಲು ಹೋಗಿದ್ದನು. ಅವರಿಗೆ ಜನರಲ್‌ರ ಮೇಜಿನ ಮೇಲೆ ಮೂರು ಚೌಕಟ್ಟುಗಳು (Frames) ನೇತಾಡುತಿದ್ದುದು ಕಂಡಿತು. ಒಂದು ವಾಷಿಂಗ್‌ಟನ್ನನ ಚಿತ್ರ ಇನ್ನೊಂದು ಲಿಂಕನ್ನನದು. ಇನ್ನೊಂದರಲ್ಲಿ ಕೆತ್ತಿದ್ದ ಸಂದೇಶವಿತ್ತು. ಈ ಸಂದೇಶವನ್ನು ಜನರಲನು ಯಾವಾಗಲೂ ತನ್ನ ಕಣ್ಣೆದುರಿನಲ್ಲಿಟ್ಟಿರುತ್ತಾನೆ ಆ ಸಂದೇಶವಿದು:—

ಯೌವನವು ಜೀವನದ ಕಾಲವಲ್ಲ. ಅದು ಮನಸ್ಸಿನ ಸ್ಥಿತಿ. ಅದು ಮನಸ್ಸಿನ ಧೃಢನಿಶ್ಚಯ. ಕಲ್ಪನೆಯ ಗುಣ, ಮನೋಭಾವಗಳ ಶಕ್ತಿ. ಇದು ಅಂಜುಬುರುಕರಲ್ಲಿ ಧೈರ್ಯವನ್ನೂ, ವಿಲಾಸಿಗಳಲ್ಲಿ ಕಾರ್ಯತತ್ಪರತೆಯನ್ನೂ ಉಂಟುಮಾಡುವ ಶಕ್ತಿ ವಿಶೇಷ.

ಕೇವಲ ಕೆಲವು ವರ್ಷಗಳವರೆಗೆ ಬದುಕಿದ್ದ ಮಾತ್ರಕ್ಕೇ ಒಬ್ಬನು ಮುದುಕನಾಗುವದಿಲ್ಲ. ಜನರು ಮುದುಕರಾಗುವದು ತಮ್ಮ ಆದರ್ಶವನ್ನು ತ್ಯಜಿಸುವುದರಿಂದ. ವಯಸ್ಸು ದೇಹದ ಮೇಲೆ (ಚರ್ಮದ ಮೇಲೆ) ಸುಕ್ಕುಗಳನ್ನುಂಟುಮಾಡಬಲ್ಲುದು. ಆದರೆ ಆಧ್ಯೈರ್ಯವನ್ನು ಪಡೆಯುವುದರಿಂದ ಆತ್ಮದಲ್ಲಿ ಸುಕ್ಕುಗಳುಂಟಾಗುತ್ತವೆ. ಚಿಂತೆ, ಸಂಶಯ, ಆತ್ಮ ವಿಶ್ವಾಸವಿಲ್ಲದಿರುವಿಕೆ, ಭಯ ಮತ್ತು ನಿರಾಶೆ, ಇವೇ ದೀರ್ಘ ವೊಟಕು ಮಾಡತಕ್ಕ ಶತ್ರುಗಳು

ಪ್ರತಿ ಮನುಷ್ಯನ ಹೃದಯದಲ್ಲಿಯೂ ಅವನ ವಯಸ್ಸು ಅರವತ್ತಿರಲಿ, ಹದಿನಾರಿರಲಿ-ವಿಚಿತ್ರವಾದ ಪ್ರೇಮವಿದೆ. ಮುಂದಾಗುವುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಮೊದಲಾದ ಗುಣಗಳಿದ್ದೇ ಇವೆ.

ನಿಮ್ಮಲ್ಲಿ ಎಷ್ಟು ಶ್ರದ್ಧೆ ಉಂಟೋ ಅಷ್ಟೇ ನೀವು ಯುವಕರು. ನಿಮ್ಮಲ್ಲಿ ಎಷ್ಟು ಆತ್ಮ ವಿಶ್ವಾಸವಿದೆಯೋ ಅಷ್ಟೇ ಯೌವನವು ನಿಮ್ಮಲ್ಲಿದೆ. ನಿಮ್ಮಲ್ಲಿರುವಷ್ಟು ಭಯದಷ್ಟೇ ನೀವುಮುದುಕರು. ನಿಮ್ಮ ಆಶೆಯೇ ನಿಮ್ಮ ಯೌವನ, ನಿಮ್ಮ ನಿರಾಶೆಯೇ ವೃದ್ಧಾಪ್ಯ.

ಆದುದರಿಂದ ಯೌವನ ಮತ್ತು ವೃದ್ಧಾಪ್ಯಗಳು ಮನಸ್ಸಿನ ಸ್ಥಿತಿಯೇ ಹೊರತು ವಯಸ್ಸಲ್ಲ.

ಕರ್ನಾಟಕ ಸೇವಾ ಸಂಘ ಮದ್ರಾಸು— ಈ ಸಂಘದ ವಾರ್ಷಿಕೋತ್ಸವವು ನವೆಂಬರು ತಿಂಗಳಲ್ಲಿ ನಡೆಯಲಿದೆ. ಅಧ್ಯಕ್ಷ ಸ್ಥಾನವನ್ನು ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲೇ ಜರಗಲಿದೆ. ಎಲ್ಲರಿಗೂ ಸ್ವಾಗತವಿದೆ.

ಮಹಾರಾಜಾ ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್

ಸುಮಾರು ನೂರೆತ್ತು ಚಿತ್ರಗಳಿವೆ.

ವಿ. ಪಿ ಕಳಿಸುವುದಿಲ್ಲ. ರೂ ೩ ೪ ೦ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)



ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಿಮಾಡಿ ಕಳಿಸುವರು.

ಕೇರಳಾ ಸೋಪ್ ಇನ್ಸ್‌ಟ್ಯೂಟ್ ಕಲ್ಲಿಕೋಟೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ಹೊಸ ವರ್ಷದ ಅಧಿಕಾರಿ ವರ್ಗದ ಆಯ್ಕೆ.

ಮಹತ್ವದ ಗೊತ್ತುವಳಿಗಳು

ತಾ. 23-8-46ನೇ ಮಧ್ಯಾಹ್ನ ಹಾಗೂ ತಾ. ೨೪ಕ್ಕೆ ಬೆಳಿಗ್ಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲದ ಸಭೆಯು ಶ್ರೀ ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ನಡೆದು ಗತವರ್ಷದ ವರದಿ ಲೆಕ್ಕಪತ್ರ ಪರಿಶೀಲನೆ ಹಾಗೂ ಮುಂದಿನ ವರ್ಷದ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆದು ಸ್ಥಳೀಕ ಸಂಸ್ಥೆಗಳ ಆಯ್ಕೆಯಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ ಹುರಿಯಾಳುಗಳನ್ನು ನಿಲ್ಲಿಸಬಾರದು ಎಂದು ಒಮ್ಮತದ ನಿರ್ಣಯಕ್ಕೆ ಬಂತು. ಎಲ್ಲ ವರದಿಗಳನ್ನು ಒಂದುಗೂಡಿಸುವುದಕ್ಕೆ ಹಾಗೂ ಗೊತ್ತುವಳಿಗಳನ್ನು ಸಿದ್ಧಮಾಡುವುದಕ್ಕೆ ನೇಮಿಸಲಾದ ಸಮಿತಿಯು ತಯಾರಿಸಿದ ವರದಿ ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಯಿತು.

ತಾ. ೨೪ಕ್ಕೆ ಮಧ್ಯಾಹ್ನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾ ಸಭೆ ಕೂಡಿತು. ೪೨ಜನರು ಸದಸ್ಯರಲ್ಲಿ ೨೯ಜನರು ಹಾಜರಿದ್ದರು. ವರದಿಗಳ ಪರಿಶೀಲನೆಯಾಗಿ ಅವು ಸ್ವೀಕೃತವಾದ ಬಳಿಕ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ನಾರಾಯಣ ರಾಯರು ಮಂಡಿಸಿದ ಲೆಕ್ಕಪತ್ರ ಸ್ವೀಕೃತವಾಯಿತು. ಬಳಿಕ ಅಧಿಕಾರಿ ವರ್ಗದ ಆಯ್ಕೆಯಾಯಿತು. ಅಧ್ಯಕ್ಷಸ್ಥಾನಕ್ಕೆ ಶ್ರೀ. ಶ್ರೀನಿವಾಸ ಮಲ್ಯರು ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀಗಳಾದ ಎಚ್. ನಾರಾಯಣ ರಾಯರು ಮತ್ತು ಎಂ. ಡಿ. ಅಧಿಕಾರಿಗಳು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಮತ್ತು ದಾಮೋದರ ಬಾಳಿಗರು ಪ್ರಧಾನ ಕಾರ್ಯದರ್ಶಿ ಮತ್ತು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀ ಮಂಜೇಶ್ವರ ಅಮೃತಕೃಷ್ಣರಾಯರು ಕೋಶಾಧ್ಯಕ್ಷರಾಗಿಯೂ, ಶ್ರೀ. ಕೆ. ಕೆ. ಶೆಟ್ಟರು ಸಂಘಟನಾ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಅಧಿಕಾರಿ ವರ್ಗದವರು ಹಾಗೂ ಶ್ರೀಮತಿ ಕಮಲಾ ದೇವಿ, ಶ್ರೀಗಳಾದ ಪಿ. ಎಸ್. ಸೂರಪ್ಪ ಶೆಟ್ಟಿ, ಪಿ. ಶ್ರೀನಿವಾಸ ರಾವ್, ಕೆ. ಕೆ. ಪಿ. ರಾಮ ಪೊತುವಾಳ್, ಡಾ. ಎಫ್. ಎಚ್. ಒಡೆಯರ್, ಕೈಜೇಲ್ ತಿಮ್ಮಪ್ಪ ಶೆಟ್ಟಿ, ಎಸ್. ಉಪೇಂದ್ರ ನಾಯ್ಕ ಮತ್ತು ಕೆ. ರಾಮ ಕುಂದ್ವ - ಹೀಗೆ ಒಟ್ಟು ೧೫ ಜನರು ಕಾರ್ಯಕಾರಿ ಮಂಡಲಕ್ಕೆ ಆರಿಸಲ್ಪಟ್ಟರು

ಮುಂದಿನ ವರ್ಷದಲ್ಲಿ ವಿಶೇಷ ಸುಘಟನೆ ನಡೆಸುವ ಬಗ್ಗೆ ಹಾಗೂ ಸರ್ವತೋಮುಖ ಅಭ್ಯುದಯದ ಕೆಲಸ ಸಾಧಿಸುವ ಇಚ್ಛೆಯಿಂದ ಸಿದ್ಧಮಾಡಲಾದ ೧೫ ಸಾವಿರ ರೂಪಾಯಿಗಳ ಅಂದಾಜು ಪತ್ರ ಸ್ವೀಕೃತವಾಯಿತು. ಪ್ರತಿಯೊಂದು ಸರ್ಕಲ್ ಕಾಂಗ್ರೆಸ್ ಕಮಿಟಿಯಿಂದ ಸಹಾಯಕ ಧನವಾಗಿ ೧೦೦೦/- ರೂಪಾಯಂತೆ ತೆಗೆದುಕೊಳ್ಳಬೇಕೆಂದು ಗೊತ್ತಾಯಿತು. ಐದು ಸರ್ಕಲ್ ಕಮಿಟಿಗಳು ಆಗಿಂದಾಗ್ಗೆ ಈ ಸಹಾಯಧನವನ್ನು ಕೊಡಲು ಒಪ್ಪಿಕೊಂಡವು. ಇನ್ನಿತರ ಸರ್ಕಲ್ ಕಮಿಟಿಗಳೂ ಇದೇ ರೀತಿ ಸಹಕರಿಸುವವೆಂಬ ನಿರೀಕ್ಷೆಯಿದೆ. ಆ ಮೇಲೆ ಬೇರೆ ಬೇರೆ ಮುಖ್ಯ ವಿಷಯಗಳ ಬಗ್ಗೆ ಚರ್ಚೆಯಾಗಿ ಈ ಕೆಳಗಿನ ಒಂಭತ್ತು ಗೊತ್ತುವಳಿಗಳು ಸ್ವೀಕೃತವಾದುವು.

ಮಹಾ ಸಭೆಯಲ್ಲಿ ಪಾಸಾದ ಗೊತ್ತುವಳಿಗಳು.

೧. ಮತದಾರರು ತಮ್ಮ ವಿವೇಕ ಮತ್ತು ಜಾಣಾಕ್ಷತೆಯನ್ನು ಉಪಯೋಗಿಸಿ ಪ್ರತಿನಿಧಿಗಳನ್ನು ಸ್ಥಳೀಕ ಸಂಸ್ಥೆಗಳಿಗೆ ಆರಿಸಲೆಂಬ ಉದ್ದೇಶದಿಂದ ಆ ಸಂಬಂಧವಾದ ಚುನಾವಣೆಗಳಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ ಉಮೇದುವಾರರನ್ನು ನಿಲ್ಲಿಸುವುದು ಉಚಿತವಲ್ಲವೆಂದು ಈ ಸಭೆಯು ನಿರ್ಧರಿಸುತ್ತದೆ

೨. ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯೆಯರಾದ ಶ್ರೀಮತಿ ಕಮಲಾ ದೇವಿಯವರು ಅಖಿಲಭಾರತ ಕಾಂಗ್ರೆಸ್ ಕಾರ್ಯಸಮಿತಿಗೆ ಹಾಗೂ ನಮ್ಮ ಅಧ್ಯಕ್ಷರಾದ ಶ್ರೀ. ಯು. ಶ್ರೀನಿವಾಸ ಮಲ್ಯರು ರಾಜ್ಯಘಟನಾ ಸಮಿತಿಗೆ ಆರಿಸಲ್ಪಟ್ಟದ್ದಕ್ಕೆ ಈ ಸಭೆಯು ಅವರಿಬ್ಬರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

೩. ಕಾಂಗ್ರೆಸ್ ಪಕ್ಷದ ಪತಿಯಿಂದ ಜಿಲ್ಲಾ ಬೋರ್ಡಿಗೆ ಆರಿಸಲ್ಪಟ್ಟರೂ ಜಿಲ್ಲಾ ಕಾಂಗ್ರೆಸ್ ಕಮಿಟಿ ನಿರ್ಣಯದ ಮೇರೆಗೆ ರಾಜಿನಾಮೆ ಕೊಡದೆ ಅದಕ್ಕೆ ಅವಹೇಳನ ತರುವ ರೀತಿಯಲ್ಲಿ ವರ್ತಿಸಿ ಜಿಲ್ಲೆಯ ಜನತೆಯ ಅವಿಶ್ವಾಸ ಮತ್ತು ಅಪ್ರೀತಿಗೊಳಗಾಗಿರುವ ಈಗಿನ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಆದೂರು ಲಕ್ಷ್ಮೀನಾರಾಯಣ ರಾಯರ ಭಾವ ಚಿತ್ರದ ಅನಾವರಣವನ್ನು ಮಾಡಬೇಕೆಂದು ಕಳೆದ ಜಿಲ್ಲಾ ಬೋರ್ಡು ಸಭೆಯಲ್ಲಿ ಅವರ ಅಧ್ಯಕ್ಷತೆಯಲ್ಲಿಯೇ ಮಂಜೂರು ಆಗಿರುವುದು ವಿಷಾದಕರವಾಗಿದೆ. ಆದುದರಿಂದ ಮದರಾಸು ಸರಕಾರದವರು ಸದ್ರಿ ಭಾವಚಿತ್ರದ ಅನಾವರಣಕ್ಕೆ ಸಮ್ಮತಿಕೊಡಕೂಡದೆಂದು ಈ ಸಮಿತಿಯು ಸರಕಾರಕ್ಕೆ ಈ ಮೂಲಕ ತಿಳಿಸುತ್ತದೆ.

೪. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲಗೇಣಿ ಪಕ್ಕಲು ಪದ್ಧತಿ [illegible]ಗಳಿಗೆ ಜಮೀನಿನಲ್ಲಿ ಕೇವಲ ಒಂದು ವರ್ಷದ ಹಕ್ಕು ಮಾತ್ರ ಇರುವುದರಿಂದ ಹೆಚ್ಚಿನ ಕೃತ ಮಾಡಿ ಭೂಮಿಯನ್ನು ಅಭಿವೃದ್ಧಿಪಡಿಸಲು ಯಾವ ಉತ್ತೇಜನವೂ ಇರುವುದಿಲ್ಲ; ಮಾತ್ರವಲ್ಲದೆ, ಒಕ್ಕಲುಗಳ ಅಸ್ತಿತ್ವವಲ್ಲಿಯೂ, ಗೇಣಿ ಪ್ರಮಾಣದಲ್ಲಿಯೂ ಸ್ಥಿರತೆಯಿಲ್ಲದೆ ಅವರ ಸಾಂಪತ್ತಿಕ ಪರಿಸ್ಥಿತಿಯು ತೀರ ಹದಗೆಡಲು ಕಾರಣವಾಗಿದೆ ಆದುದರಿಂದ ಜಮೀನಿನ ಅಭಿವೃದ್ಧಿ ಮತ್ತು ಒಕ್ಕಲುಗಾರ ಕೃಷಿಕರ ಉನ್ನತಿ ಸಾಧನೆಗಾಗಿ ತಾನು ಬೇಸಾಯಮಾಡುವ ಜಮೀನಿನಲ್ಲಿ ಅವನಿಗೆ ಶಾಶ್ವತವಾದ ಒಕ್ಕಲುತನದ ಹಕ್ಕನ್ನು ಕೊಡುವ ನ್ಯಾಯವಾದ ಗೇಣಿ [illegible] ಮತ್ತು ಅತನು ಬಿಟ್ಟಿ ಬೇಗಾರಿ ಮೊದಲಾದ ಪಂತಿಗೆಗಳ ಪೀಡೆಯಿಂದ ಮುಕ್ತನಾಗಿ ಸ್ವಾಭಿಮಾನದಿಂದ ಜೀವನ ನಡೆಸಲು ಅವಕಾಶ ಕಲ್ಪಿಸುವ ಒಕ್ಕಲು ಹಿತ ಮಸೂದೆಯನ್ನು ಮದ್ರಾಸ್ ಮಂತ್ರಿ ಮಂಡಲವು ಆದಷ್ಟು ಬೇಗನೆ ತರಬೇಕಾಗಿ ಈ ಸಭೆಯು ಒತ್ತಾಯಪಡಿಸುತ್ತದೆ.

೫. ದೇಶದಲ್ಲೆಲ್ಲಾ ದಿನೇ ದಿನೇ ಹಬ್ಬುತ್ತಿರುವ ಬರಗಾಲದ ಪರಿಸ್ಥಿತಿಯಲ್ಲಿ ಆಹಾರದ ಉತ್ಪತ್ತಿ ಮತ್ತು ವಿತರಣೆಯು ಚೆನ್ನಾಗಿ ಸಾಗಬೇಕಾದರೆ ಆಹಾರದ ಉತ್ಪನ್ನದ ಯಾವತ್ತು ಸಾಧನಗಳನ್ನು ಸರಕಾರವು ತಾನೇ ವಹಿಸಿಕೊಂಡು ಕೂಡಲೇ ಆಹಾರದ ಪರಿಸ್ಥಿತಿ ಸುಧಾರಿಸುವ ವ್ಯಾಪಕ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಈ ಕಮಿಟಿಯು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ ಈ ಧೋರಣೆಯ ಪೂರ್ವ ಸಿದ್ಧತೆಯಾಗಿ ಮದ್ರಾಸ್ ಸರಕಾರವು ಕೂಡಲೇ ಪ್ರಾಂತದ ಪ್ರತಿಯೊಂದು ಜಿಲ್ಲೆಯಲ್ಲಿ ಸಾಮೂಹಿಕ ಮತ್ತು ಸಹಕಾರಿ ಕ್ರಮದ ಬೇಸಾಯವನ್ನು ಜಾರಿಗೆ ತರುವ ಪ್ರಯೋಗವನ್ನು ಕೈಕೊಳ್ಳಬೇಕೆಂದೂ ಈ ಕಮಿಟಿಯು ಸೂಚಿಸುತ್ತದೆ.

೬. ಮಜೂರ ಮತ್ತು ಕಿಸಾನ ಮುಖಂಡರೆನಿಸಿಕೊಳ್ಳುವ ಕೆಲವರು ಅವರ ಸಂಘಟನೆಗಳನ್ನು ತಮ್ಮ ವೈಯಕ್ತಿಕ ಹಾಗೂ ಪಕ್ಷದ ಸ್ವಾರ್ಥಸಾಧನೆಗಾಗಿ ದುರುಪಯೋಗಗೊಳಿಸುವ ಹಂಬಲದಿಂದ ಪ್ರಾಂತದಲ್ಲೆಲ್ಲಾ ಹದಮೀರಿ ಪದೇಪದೇ ವಿವಿಧ ಮುಷ್ಕರಗಳು ತಲೆದೋರಿ ಜನ ಸಾಮಾನ್ಯರ ಜೀವನಕ್ಕೆ ತುಂಬಾ ಧಕ್ಕೆಯುಂಟಾಗುತ್ತದೆ ಈ ವಿಷಮ ಪರಿಸ್ಥಿತಿಯನ್ನು ಒಡನೆಯೇ ನಿಲ್ಲಿಸಲು ಮದ್ರಾಸು ಸರಕಾರವು ಯೋಗ್ಯ ಧೋರಣೆ ಕೈಕೊಳ್ಳುವುದಲ್ಲದೆ ಮಜೂರರ ಹಾಗೂ ಕಿಸಾನರ ನ್ಯಾಯವಾದ ಹಕ್ಕುಗಳನ್ನು ಒದಗಿಸಿ ಕೊಡುವ ಅವರ ಹಿತಸಾಧನೆಯ ಕಾಯಿದೆಗಳನ್ನು ಬೇಗನೇ ಮದ್ರಾಸು ಸರಕಾರವು ಕೈಕೊಳ್ಳಬೇಕೆಂದೂ ಈ ಸಮಿತಿಯು ಸರಕಾರಕ್ಕೆ ಆಗ್ರಹಪಡಿಸುತ್ತದೆ.

೭. ಮನೆಗಳ ವಿಶೇಷ ಕೊರತೆಯಿಂದ ಜನ ಸಾಮಾನ್ಯರ ವಾಸ್ತವ್ಯಕ್ಕೆ ಬಹಳ ಅಡಚಣೆಯಾಗಿರುವುದರಿಂದ ಮದರಾಸು ಮಂತ್ರಿ ಮಂಡಲವು ಮನೆಗಳನ್ನು ಕಟ್ಟಿಸುವ ಇಡೀ ಪ್ರಾಂತ್ಯ ವ್ಯಾಪಕ ಯೋಜನೆಯನ್ನು ಕೈಗೊಳ್ಳಬೇಕಾಗಿ ಈ ಸಮಿತಿಯು ಆಗ್ರಹಪಡಿಸುತ್ತದೆ; ಅಲ್ಲದೆ ಹೊಸದಾಗಿ ಜಾರಿಗೆ ಬರಲಿರುವ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ಸಮಗ್ರ ಪ್ರಾಂತಕ್ಕೆ ಅನ್ವಯಿಸುವಂತೆ ವ್ಯಾಪಕಗೊಳಿಸಬೇಕೆಂದು ಈ ಸಮಿತಿಯು ಸೂಚಿಸುತ್ತದೆ.

೮. ಹಿಂದೂ ಸಮಾಜದ ಅಭಿವೃದ್ಧಿಗೆ ಹರಿಜನ ಉದ್ಧಾರವಾಗದೇ ಇರುವದೇ ಪ್ರಮುಖ ಕಾರಣವಾಗಿರುವುದರಿಂದ ಹರಿಜನರಿಗೆ ದೇವಸ್ಥಾನದ ಪ್ರವೇಶ ಕೊಡುವ ವಿಚಾರದಲ್ಲಿ ಸರಕಾರನೇ ತಕ್ಕ ಪೂರ್ವ ಸಿದ್ಧತೆಯನ್ನು ಕೈಗೊಳ್ಳಲು ವ್ಯಕ್ತಮಾಡುವುದು ಸರ್ವಸ್ತುತವಿದೆ. ಇಂಥ ಸಂದರ್ಭದಲ್ಲಿ ಮಾನವ ಪ್ರಗತಿಯ ಕಡೆಗೆ ಲಕ್ಷ್ಯವಿಟ್ಟು ಯಾವತ್ತು ಮಾನವ ಧರ್ಮಾಧಿಮಾನಿಗಳು ನೋಡುವುದು ಅತ್ಯವಶ್ಯವಿರುವುದರಿಂದ ಜಿಲ್ಲೆಯ ಪ್ರತಿಯೊಂದು ದೇವಸ್ಥಾನಗಳು ಆಡಳಿತೆಗಾರರು ಹಾಗೂ ಧರ್ಮದರ್ಶಿಗಳು ಮಂದಿರಗಳನ್ನು ಆತ್ಮ ಸಂತೋಷದಿಂದ ಹರಿಜನರಿಗೆ ಮತ್ತು ಇನ್ನಿತರರಿಗೆ ಪ್ರವೇಶಕ್ಕೆ ತೆರವು ಮಾಡುವುದು ಕರ್ತವ್ಯ ಮತ್ತು ಔದಾರ್ಯಕ್ಕೆ ತಕ್ಕದ್ದೆಂದು ಈ ಸಮಿತಿಯು ಯಾವತ್ತು ದೇವಸ್ಥಾನಗಳ ಆಡಳಿತೆಗಾರರನ್ನು ಕೇಳಿಕೊಳ್ಳುತ್ತದೆ.

೯. ಗತವರುಷದ ಅಧಿಕಾರಿ ವರ್ಗದವರು ಯಶಸ್ವಿಯಾಗಿ ಕಾರ್ಯಕಲಾಪ ಸಾಗಿಸಿದ್ದಕ್ಕೆ ಈ ಸಭೆಯು ಅವರಿಗೆ ಧನ್ಯವಾದಗಳನ್ನರ್ಪಿಸಿ ಅವರನ್ನು ಅಭಿನಂದಿಸುವದಲ್ಲದೆ ಹೊಸ ವರ್ಷದ ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಮಂಡಲದವರು ಆದರ್ಶ ರೀತಿಯಾಗಿ ಕೆಲಸ ಸಾಗಿಸಿ ತಮ್ಮ ಯಾವತ್ತು ಕಾರ್ಯಕಲಾಪಗಳಲ್ಲಿ ಯಶಸ್ವಿಯಾಗಲೆಂದು ಈ ಸಮಿತಿಯು ಹಾರೈಸುತ್ತದೆ.

NOTICE.

The public are hereby informed that the lease of the Gangoliv ferry for a period of 3 years from 1-10-46 will be sold by public auction by the Assistant Engineer Highways (District Board) Udipi on Saturday the 7th September 1946 at 11 A. M. at the L. F. Travellers' bungalow at Coondapur. The salient condition governing the lease of the ferry is that the renter shall maintain a Motor boat steam driven or otherwise for quick and safe crossing.

Intending bidders are requested to attend and compete at the sales. They may obtain the particulars regarding the other conditions and terms of the lease from either the Assistant Engineer Highways (District Board) Udipi or the District Board Overseers in the District or in the District Board Office, South Kanara, Mangalore.

(Sd. A. Lakshminarayana Rao,
President, District Board.

S. Kanara, Dt. Board Office,
Mangalore. 28-8-1946.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ [illegible] ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, [illegible] ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, [illegible] ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು, (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು: ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸ್ಯಾಂಡಹರ್ಸ್ಟ್ ರೋಡ್, ಜಿ. ಐ. ಪಿ ರೈಲ್ವೆ, ಪೋಸ್ಟ್ ಆಫೀಸ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

FOR LIFE ASSURANCE

CONSULT

The New Gaurdian of India Life Insrce. Co., Ltd.,

(Chairman:- The Hon'ble Mr. M. CT. M. Chidambaram Chettiar.*)*

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA: MANGALORE & KARKALA.

HEAD OFFICE: "United India Life Bldg" Esplanade, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಶಸ್ತ್ರವ್ಯವಹಾರ ಮಾಡತಕ್ಕ ವಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಜೊತೆಯಾಗಿ ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

ನಿಮ್ಮ ಸಂಬಳ ಏರಬೇಕೆ? ನಿಮ್ಮ ಆದಾಯ ಹೆಚ್ಚಬೇಕೆ?

ಹಾಗಿದ್ದರೆ ಕೂಡಲೇ ಇಂಗ್ಲಿಷ್ ಕಲಿಯಿರಿ

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡು ಓದತೊಡಗಿದ್ದಾರೆ; ಬರೆಯಲೂ ತೊಡಗಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. **1—8—0** ಟಪ್ಪಾಲು ಖರ್ಚು 0—4—0 ಪ್ರತ್ಯೇಕ

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
2. ನವಭಾರತ ಬುಕ್ ಡಿಪೊ, ಉಡುಪಿ.
3. ಸ್ವತಂತ್ರಭಾರತ ಬುಕ್ ಡಿಪೊ, ಬೊಂಬಾಯಿ.
4. ನ್ಯೂ ಸಪ್ಲಾಯ್ ಏಜನ್ಸಿ, ಕುಮಟಾ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.   Estd. 1921 ಸ್ಥಾಪನೆ.   ಬೆಲೆ: 0—1—6.

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮಾದರಿ ಪ್ರತಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.



ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬] FOUNDER [Vol. 26
ವಾರ ೨] SRI. A. B. SHETTY, M.L.A. [No. 2

ಉಡುಪಿ • 12-9-1946 • ಮಂಗಳೂರು.

ಅಮೃತಾಂಜನ.
ಹಣೆನೋವು, ತಲೆನೋವು, ಶಿರೋ, ವೇದನೆ, ಉಳುಕು ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ತಿಪಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
ಕಥ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ. ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ್, ಫಾರ್ಮಸಿ, ಡಾ। ಕೆ. ಶೇಷಗಿರಿ ಶೆಟ್ಟಿ, I. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co., Ltd.,
HEAD OFFICE: **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad

The Commercial Corporation of India, Ltd.,
UDIPI. (S. India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY.

New Business in 1945 - - 2,77,23,100.

KOCHIKAR BROTHERS, LTD.
(ESTD. 1910)

Chief Agents for South India
Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನನ್ನ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತರನ್ನು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಷ್ಟ ಚಾರ್ಜು ನಿರಾಳ.

ಮಾಲಕರು:—ಕಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಬೆಳಗಾವಿಯಲ್ಲಿ—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಜಮಲದಾನಿ, ಕೆಮಿಸ್ಟ್, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ
ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ, ಏಜಂಟರು ಹಾಗೂ ಆರ್ಗನೈಝರಾಗುವವರೂ ಬರೆಯಿರಿ—

ಪಿ. ಡಿ. ನಾಯಕ, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER
General Insurance Company, Ltd.

ಸರಿ; ಐದು ನಿಮಿಷ! ಅವನು ಜೈಲಿನಲ್ಲಿ ಸಂಕೋಲೆಗಳಿಂದ ಬಂಧಿತನಾಗಿದ್ದಾನೆ; ಮತ್ತು ನಾನು-ಹಾ....ಭಾಗ್ಯ. ನಾನು ಪೋಲಿಸರ ಪಹರೆಯೊಳಗೆ ಹೊರಗೆ ನಿಂತು ಹೆದರಿಕೆಯಿಂದ ನಡುಗುತ್ತೇನೆ. ಆಯಿತು; ಐದು ನಿಮಿಷದ ಅವಕಾಶ— ನೋಡ ನೋಡುತ್ತಾ ಸಮಾಪ್ತಿಯಾಯಿತು.

೦೦ ೦೦ ೦೦

ಹಿಂದಿನ ಮಾತುಗಳ ನೆನಪನ್ನು ಏಕೆ ಮಾಡಲಿ-ಅವುಗಳು ಎದೆಗೆ ಚೇಳು ಕಚ್ಚಿದಂತಾಗುತ್ತವೆ. ಹಿಂದಿನ ಕಥೆಯನ್ನು ಯಾರಿಗೆ ಹೇಳಲಿ? ಯಾರೂ ಕಿವಿಗೊಟ್ಟು ಕೇಳುವವರಿಲ್ಲ; ಅಲ್ಲದೆ ಯಾರಾದರೂ ಕೇಳುತ್ತಾರಾದರೆ ಅರ್ಧ ಮನಸ್ಸಿನಿಂದ, ಇವಳು ಹೇಳುತ್ತಾಳಲ್ಲ, ಎಂಬ ಕಾರಣದಿಂದ ಕೇಳಬೇಕಲ್ಲದೆ ಸಹಜವಾದ ಮನಸ್ಸಿನಿಂದಲ್ಲ. ಕೇಳಿದ ನಂತರ ಹೇಳುತ್ತಾನೆ—"ತಂಗೀ, ನಿನ್ನ ಭಾಗ್ಯ! ಯಾರೇನು ಮಾಡಲಿ! ದೇವರನ್ನು ನೆನಸು." ಹಾಯ್, ದುರ್ಭಾಗ್ಯವಂತರಿಗೆ ಈಶ್ವರನು ಕೂಡಾ ಸಹಾಯವನ್ನು ಕೊಡಲಿಲ್ಲ; ಕ್ಷುಧಾ ಪೀಡಿತರಿಗೆ ಎಂದೂ ಭಗವಂತನು ರೊಟ್ಟಿಯನ್ನು ಕೊಡಲಿಲ್ಲ. ದುಃಖಿತರ ಕಣ್ಣೀರನ್ನು ಒರಸಲು ಅವನು ಎಂದೂ ಬರಲಿಲ್ಲ ಅವನು ಸ್ವರ್ಗದ ನಂದನವನದ ವಿಹಾರಿಯು. ಅವನು ತನ್ನ ಮನಮೋಹಿನಿಯ ಆಜ್ಞಾಪಾಲಕನು ಯಾರ ಮೇಲೆ ಲಕ್ಷ್ಮಿಯು ಒಲಿಯುತ್ತಾಳೊ ಅವನ ಮೇಲೆ ಭಗವಂತನು ಸದಾ ಅನುಗ್ರಹಿತನಾಗುತ್ತಾನೆ. ನನ್ನಂಥ ದರಿದ್ರರ ಸಂಗಡ ಅವನಿಗೇನು ಸಂಬಂಧ? ದರಿದ್ರರ ಈಶ್ವರನು—ಅವರ ದುರ್ಭಾಗ್ಯ. ನಾನು—ದುರ್ಭಾಗ್ಯದಿಂದ ಪಾಲಿತಳಾದ ಹೀನ ಹಣೆಬರಹದವಳಾದ—ನಾನು, ಭಗವಂತನನ್ನು ಏಕೆ ಕರೆಯಲಿ? ಅವನನ್ನೇಕೆ ಮೊರೆಯಿಡಲಿ? ನಾನು ಕರೆಯುವದಾದರೂ ನನ್ನ ದುರ್ಭಾಗ್ಯವನ್ನು; ಅವನು ಬರುತ್ತಾನೆ; ಬರುವಾಗಲಾದರೂ ಸುಮ್ಮನೆ ಬರುತ್ತಾನೆಯೇ? ಒಂದಲ್ಲ ಒಂದು ಆಪತ್ತಿನ ಹೊರೆಯನ್ನು ಹೊತ್ತುಕೊಂಡೇ ಬರುತ್ತಾನೆ.

ಒಮ್ಮೆ ದುರ್ಭಾಗ್ಯವನ್ನು ಮೊರೆಯಿಡಲಾಗಿ ಒಬ್ಬ ನಿರುದ್ಯೋಗಿ ಬಡ "ಗ್ರೆಜುವೇಟ್"ನ ಸಂಗಡ ನನ್ನ ಸಂಬಂಧ ಬೆಳೆಸಿ ತನ್ನ ದಾರಿ ಹಿಡಿದ. ಇನ್ನೊಮ್ಮೆ ಮೊರೆಯಿಡಲಾಗಿ ಕೊಟ್ಟ ಎರಡು ಮಕ್ಕಳನ್ನು! ಮಗದೊಮ್ಮೆ ಮೊರೆಯಿಡಲಾಗಿ ಜೀವನದ ಸರ್ವಸ್ವವಾದ, ನೀರಿನಲ್ಲಿ ಮುಳುಗುವವಳಿಗೆ ಹುಲ್ಲು ಕಡ್ಡಿಯ ಸಹಾಯದಂತಿದ್ದ ನನ್ನ ರಮಣನು ಖೂನಿ ಮಾಡಿದ ದೆಸೆಯಿಂದ ಜೈಲಿಗೆ ಹೋದ! ಗಲ್ಲಿನ ಶಿಕ್ಷೆಯಾಯಿತು. ಎಲ್ಲಾ ಸಮಾಪ್ತಿಯಾಯಿತು. ಈಗ ಆತನನ್ನೇಕೆ ಮೊರೆಯಿಡಲಿ?

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

★ ಐದು ನಿಮಿಷ ★

[ಹಿಂದೀ ಕಥೆಯೊಂದರ ತರ್ಜುಮೆ.]

ಅನುವಾದಕರು:-**ಶ್ರೀ. ಕೆ. ವಾಸುದೇವ ಶೆಣೈ, ಕುಂದಾಪುರ.**

ಎಲ್ಲಾ ಅಪರಾಧವು ಬಡತನದ ಭೂತದಿಂದ. ಕೊಡು ಅತನಿಗೆ ಸಜೆ; ಹೊಡಿ ಆತನೆದೆಗೆ ಗುಂಡು. ನಾಯಿಗಳಿಂದ ಕಚ್ಚಿಸು: ಹದ್ದುಗಳಿಂದ ಚುಚ್ಚಿಸು ಆದರೆ ನಾನು ಹೇಳುವೆನು-'ಆತನು ಕೊಲೆಪಾತಕಿಯಲ್ಲ; ದರಿದ್ರನು. ಅಪರಾಧಿಯಲ್ಲ; ಕ್ಷುದಾ ಪೀಡಿತನು. ತಿಳಿಯದ ತಿಳಿಗೇಡಿಯಲ್ಲ; ಆಪತ್ತಿನ ಸಂಕೋಲೆಗಳಿಂದ ಬಿಗಿಯಲ್ಪಟ್ಟವನು. ಅವನನ್ನು ಪಾಪಿ ಎನ್ನಬೇಡ; ಹಸಿವಿನ ತೃಷೆಯುಳ್ಳವನೆಂದು ಹೇಳು'.

ಅವನೇನು ಮಾಡಿದ್ದನು? ಯಾವ ಪಾಪ ಮಾಡಿದ್ದನು? ಏನೂ ಇಲ್ಲ. ಬರಿಹೊಟ್ಟೆಯುರಿಗಾಗಿ ದರಿದ್ರ ಪರಿವಾರಕ್ಕಾಗಿ, ದುರ್ಭಾಗ್ಯ ಪುತ್ರರಿಗಾಗಿ, ಸ್ವಲ್ಪ ಪ್ರಯತ್ನ ಮಾಡಿದ್ದನು. ಕಾನೂನಿನ ನ್ಯಾಯವು ಈ ಪ್ರಯತ್ನಕ್ಕೆ, ದುರ್ಭಾಗ್ಯವು ಈ ಪ್ರಯತ್ನಕ್ಕೆ "ಕೊಲೆಯ" ಅಪರಾಧವನ್ನು ತಂದೊಡ್ಡಿತು; ಗಲ್ಲಿನ ಸಜೆಯನ್ನು ಸಜ್ಜುಗೊಳಿಸಿತು ಆದರೆ ಇದರಿಂದೇನೂ ನನಗೆ ತೊಂದರೆಯಿಲ್ಲ. ನಾನು ಸಾಹಸ ಪೂರ್ವಕವಾಗಿ ಹೇಳುತ್ತೇನೆ — ನನಗಾವುದರ ಗೊಡವೆಯೂ ಇಲ್ಲ. ಅವನು ನ್ಯಾಯಲಿ-ಘಾತಿಗೆ ತನ್ನ ಕತ್ತನ್ನೊಪ್ಪಿಸಲಿ—ನನಗೆ ಒಂದಿಷ್ಟು ಚಿಂತೆಯಿಲ್ಲ! ಅವನು ಅಪರಾಧಿಯಲ್ಲ ನೂರು ಬಾರಿ, ಸಾವಿರ ಬಾರಿ, ನಾನು ಹೇಳುತ್ತೇನೆ-ಅವನು ಪಾಪಿಯಲ್ಲ; ಅವನು ದರಿದ್ರನು; ಅವನು ದುರ್ಭಾಗ್ಯನು; ಆದರೆ ಮನುಷ್ಯನು- ಇದರಲ್ಲಿ ಸಂಶಯವಿಲ್ಲ.

ಹೊಟ್ಟೆಯುರಿಯ ಜ್ವಾಲೆಯಿಂದ ದುರ್ವ್ಯವಹಾರಗಳ ಕೊರಳಿಗೆ ಅಪ್ಪಿಕೊಂಡನು ಕಳ್ಳತನ ಮಾಡಿದನು; ದರೋಡೆ ಮಾಡಿದನು; ಎಲ್ಲವನ್ನೂ ಮಾಡಿದನು ತನ್ನ ಪಾಪಿ ಹೊಟ್ಟೆಗಾಗಿ! ನೈತಿಕ ದೃಷ್ಟಿಯಿಂದ ಆತನು ಅಪರಾಧಿಯು ಹೌದು. ಆದರೆ ಸ್ವಲ್ಪ ಆಲೋಚನೆಮಾಡಿ ನೋಡಿರಿ—ಏನು, ಜಗತ್ತಿನಲ್ಲಿ, ಸಂಸಾರದಲ್ಲಿ ನೈತಿಕತೆಯು ಬಡವರ ಪಾಲಿಗೆ ಬಿದ್ದಿದೆ ಏನು? ಗಾಣಿಗ ರಾಮಣ್ಣನು ಊರಿನ ಒಕ್ಕಲಿಗರಿಗೆ ಸಾಲಕೊಟ್ಟು ಹಿಂಡುತ್ತಿದ್ದಾನೆ. ಅನೇಕ ಮಕ್ಕಳು ಸತ್ತು ಹೋದರು; ಅನೇಕರು ಮನೆಮಾರಿಲ್ಲದವರಾದರು. ಆದರೆ ಅವನ ಬಡ್ಡಿಯ ಭಡ್ತಿಯು ಕಡಿಮೆಯಾಗಲಿಲ್ಲ. ಇದು ಪಾಪವಲ್ಲ. ಮತ್ತು ಪಾಪವು ನನ್ನ ಪತಿಯು ಮಾಡಿದ ಸಣ್ಣ ಅಪರಾಧ! ಸರಿ, ಅವನನ್ನು ಸಂಸಾರದಿಂದ ತೊಲಗಿಸು; ಆದರೆ ಇದರಿಂದ ಪಾಪದ ಹೆಬ್ಬಾಗಿಲು ಬಂದಾಗುವುದೇನು? ಎಂದೂ ಇಲ್ಲ; ಎಂದೆಂದಿಗೂ ಇಲ್ಲ!

— 2 —

ನಿನ್ನೆ ನನಗೊಂದು ಪತ್ರ ಸಿಕ್ಕಿತು— ಸರಕಾರಿ ಪತ್ರ! ನನ್ನ ಪ್ರಿಯತಮನು ನನ್ನನ್ನು ನೋಡಲು ಬಯಸುತ್ತಾನೆ- ಅಂತಿಮ ಬಾರಿ. ಅವನು ನಾಡದು ಗಲ್ಲಿನ ಗದ್ದುಗೆಯನ್ನೇರುವನು. ಅವನ ಅಂತಿಮ ಇಚ್ಛೆ- ಮುದ್ದು ಮಕ್ಕಳನ್ನು ನೋಡುವದು; ಹೆಂಡತಿಯನ್ನು ನೋಡುವದು. ನಾನು ನನ್ನ ಪ್ರಿಯತಮನ ಅಂತಿಮ ದರ್ಶನಕ್ಕಾಗಿ ಹೋದೆ ಹೋದೆ ನನ್ನ ಪ್ರಾಣೇಶ್ವರನ ಜೀವಿತ ಶವವನ್ನು ನೋಡಲು. ಯಾರನ್ನು ನಾನು ನೋಡಲು ಹೋದೆನೋ, ಅವನ ಶಿರಸ್ಸಿನ ಮೇಲೆ ಕಾಲಕರಾಳನು ಮೆಲ್ಲಮೆಲ್ಲನೆ ನೃತ್ಯವನ್ನಾರಂಭಿಸಿದ್ದನು; ಅವನ ಕುತ್ತಿಗೆಗೆ ಹಗ್ಗದ ಹಿಡಿಪಟ್ಟಿಯಾಗಿತ್ತು; ಅವನಿಗೋಸ್ಕರ ಹೆಣದ ಹೊದಿಕೆಯು ಕೊಂಡುಕೊಳ್ಳಲ್ಪಟ್ಟಿತ್ತು. ಆದರೆ ಅವನು ಈ ದಿವಸ ಜೀವಿತನಾಗಿದ್ದಾನೆ; ನಮ್ಮ ಮತ್ತು ನಿಮ್ಮ ಹಾಗೆ-ಆಶ್ಚರ್ಯ!

ತಾವು ಆಲೋಚಿಸಿರಿ-ತಮ್ಮ ಪ್ರಾಣಾಧಿಕ ಪ್ರಿಯ ಕಾಲನ ಕೂಳಿಗೆ ತನ್ನ ಕತ್ತನ್ನೊಡ್ಡಿದ್ದಾನೆ; ತಾವು ನೋಡಲು ಹೋಗುತ್ತೀರಿ. ಈವತ್ತು ತಾವು ಯಾರನ್ನು ನೋಡುತ್ತೀರೋ ನಾಳೆ ಬೆಳಗ್ಗೆ ಆತನ ಶವವು ನೋಡಲು ಸಿಗುವುದು. ಅವನ ಕತ್ತು ಘಾತಿಯ ಉರುಳಿನಿಂದ ಅವುಕಲ್ಪಟ್ಟಿದೆ! ತಮಗೆ ಹೇಗಾಗಬಹುದು? ನಾನು ಕಾನೂನನ್ನು ದೂಷಿಸುವುದಿಲ್ಲ; ನ್ಯಾಯವನ್ನು ಆಕ್ರಮಣ ಮಾಡುವುದಿಲ್ಲ. ಆದ್ರೆ ನಾನು ಮಾನವತೆಯ ಹತ್ತಿರ ಕೇಳುತ್ತೇನೆ—"ತಂಗಿ ಮಾನವತೆಯೇ, ಒಮ್ಮೆ ಮಾತಾಡು! ನ್ಯಾಯವು ಕಿವುಡು; ಮೂಕ; ಕುರುಡು. ಆದರೆದುರಿಗೆ ಯಾರು ನಿಲ್ಲಿಸಲ್ಪಡುತ್ತಾರೊ, ಅವರ ಪರೀಕ್ಷೆಯನ್ನು ಪಡಕೊಳ್ಳುವುದು; ಆದ್ರೆ ನೀನು ಹೃದಯವಿಟ್ಟುಕೊಂಡಿದ್ದಿ-ನನ್ನ ಕಡೆಯಿಂದ ಸ್ವಲ್ಪವಾದರೂ ವಕಾಲತುಮಾಡು".

ನಾನು ಹೋದೆ—ನನ್ನನ್ನೇ ಮರೆತುಕೊಂಡು ಹೋದೆ, ಅವರ ಚರಣಗಳನ್ನು ಮುದ್ದಿಡುವೆನು; ಒಂದು ಸಲ ಅವರ ಎದೆಯಪ್ಪಿ ಮರುಗುವೆನು; ಗೋಳಾಡುವೆನು ಮತ್ತು ಕೇಳುವೆನು—"ಹೃದಯೇಶ್ವರಾ, ನನ್ನನ್ನು ಇದಿರು ನೋಡುವೆಯಾ? ಮರೆತು ಬಿಡಲಾರೆಯಷ್ಟೆ? ಇದೇ ದುರ್ಭಾಗ್ಯಳು ನಿನ್ನ ಭರತದ ಯೌವನದಲ್ಲಿ ಗದಗದನೆ ಉರಿಯುವ ಕೆಂಡವನ್ನು ತಂದಿಟ್ಟಳು. ನಿನ್ನ ಯೌವನದ ಅಮೃತಕಲಶದಲ್ಲಿ ವಿಷವನ್ನು ಬೆರಸಿದಳು. ಕ್ಷಮಿಸು; ಎಲ್ಲವನ್ನು ಮರೆತು ಬಿಡು. ಇವನು ನಿನ್ನ ಕುವರನು; ಇವನನ್ನು ಮುದ್ದಿಡು—ಒಂದು ಬಾರಿ ಪಿತೃ ಸ್ನೇಹದ ಶೀತಲ ಜಲವನ್ನು ಈತನ ತಲೆಯ ಮೇಲೆ ಚಿಮುಕಿಸು. ಇವನು ನಿನ್ನ ಅದವಿಟ್ಟ ಸೊತ್ತು". ನಾನು ಜೈಲಿನ ಕಡೆಗೆ ಹೊರಟೆ ಕಂಕುಳಲ್ಲಿ ಮುದ್ದು ಮಗು ಗೋಪಾಲ. ಅವನು ಹೇಳಿದನು—'ಅಮ್ಮಾ ನೀನು ಎಲ್ಲಿಗೆ ಹೋಗುತ್ತಿ?" ನಾನೇನು ಉತ್ತರ ಕೊಡಲಿ? ಏನು ಹೇಳಿ ಆ ಅಬೋಧನನ್ನು ಸಮಜಾಯಿಸಲಿ? ಹೇಳಿದೆ—"ಮುದ್ದು, ತಂದೆಯನ್ನು ನೋಡಲು ಹೋಗುವುದಿಲ್ಲವೆ? ಅವರು ನಿನ್ನನ್ನು ನೋಡಲಪೇಕ್ಷಿಸುತ್ತಾರೆ".

ಗೋಪಾಲನು ಪ್ರಸನ್ನಚಿತ್ತನಾಗಿ ಹೇಳಿದ—"ಅಮ್ಮಾ, ಬಹಳ ದಿವಸಗಳಿಂದ ತಂದೆಯವರು ಬರಲಿಲ್ಲ, ತಂದೆಯನ್ನು ನೋಡಲು ಹೋಗುವೆನು. ಆಟದ ಸಾಮಾನುಗಳನ್ನು ಕೇಳುವೆನು; ದುಡ್ಡನ್ನು ಕೇಳುವೆನು. ಚಂದ್ರಿಗ ಒಂದು ಬೊಂಬೆಯನ್ನು ಸಹಾ ತೋರಿಸುವುದಿಲ್ಲ. ನನ್ನ ತಂದೆಯವರು- ಆ ಚಂದ್ರಿಗೇನಾಗಬೇಕು?" ನನ್ನ ಹೃದಯವು ಪ್ರೇಮದಿಂದ ಉಕ್ಕೇರಿಬಂತು. ಅಯ್ಯೋ- ನನ್ನ ಭಾಗ್ಯಹೀನ ಮಗುವೆ! ನಿನ್ನ ತಂದೆಯು ಕಾಲನ ತೊಡೆಯ ಮೇಲೆ ಕೂತಿದ್ದಾರೆ; ಜೀವನದ ದಿನಗಳನ್ನು ಬೆರಳಿನಿಂದ ಎಣಿಸುತ್ತಾರೆ. ಪಂಜರದಲ್ಲಿ ಬಂಧಿತರಾಗಿದ್ದಾರೆ. ಸಾಹಸಪಟ್ಟು ಉಕ್ಕಿಬರುವ ಪ್ರವಾಹವನ್ನು ದಬ್ಬಿ ಹಿಡಿದು ಹೇಳಿದೆ- 'ಮಗನೇ; ದೇವರನ್ನು ಸ್ಮರಿಸು.'

ಗೋಪಾಲನು ನನ್ನ ಸೆರಗನ್ನು ಎಳೆದು

(೧೧ನೇ ಪುಟ ನೋಡಿರಿ)

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ,
ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾಪಂಜೆ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

> 'ಕೆಲಸಗಾರರ ಮತ್ತು ಬಡವರ ಹಿತಸಾಧನೆಯೇ ಈ ಸರಕಾರದ ಅಸ್ತಿತ್ವ'.

ಕೆಲಸಗಾರರಿಗೆ ಮಾನ್ಯ ಗಿರಿಯವರ ಆಶ್ವಾಸನೆ

> 'ಶಾಸನ ಮೂಲಕ ಸಾಧಿಸಿಕೊಡಲಿರುವ ಜನತಾ ಸರಕಾರವಿರುವಾಗ ಮುಷ್ಕರ ಬೇಡ'.

ಮದ್ರಾಸ್ ಎಸೆಂಬ್ಲಿಯ ಇದೇ ತಾ. ೪ರ ಅಧಿವೇಶನದ 'ಬಜೆಟ್' ಮಂಜೂರಾತಿಯ ವೇಳೆ 'ಉದ್ಯಮಗಳು' (Industries) ಸಂಬಂಧವಾಗಿ ಆ ಖಾತೆಯ ಮಂತ್ರಿ ಶ್ರೀ. ವಿ. ವಿ. ಗಿರಿಯವರು ರೂ. 1,16,59,400 ಗ್ರಾಂಟಿನ ಸೂಚನೆ ತಂದರು.

ಮಿ. ಹಮೀದ್ ಖಾನರು ಅದಕ್ಕೊಂದು ಕಡಿತ ಸೂಚನೆ ತಂದು, ಇಡೀ ಪ್ರಾಂತ್ಯದ ಉದ್ಯಮ ವಿಭಾಗದಲ್ಲಿ ಮುಸಲ್ಮಾನರಿಗೆ ಸರಿಯಾದ ಭಾಗ ದೊರೆಯುವಂತೆ ಸರಕಾರವು ನೋಡತಕ್ಕದ್ದೆಂದು ಸೂಚಿಸಿದರು.

ಇತ್ತೀಚೆಗೆ ಪ್ರಕಟವಾಗಿರುವ ಮಗ್ಗಗಳ ನಿಯಂತ್ರಣಾ ಶಾಸನವು 5 ಲಕ್ಷ ನೇಯಿಗೇಗಾರರ ಕುಟುಂಬಕ್ಕಾಧಾರವಾಗಿರುವ ಮಗ್ಗ ಕೈಗಾರಿಕೆಗೆ ಪ್ರತಿಬಂಧಕವಾಗಿದೆಯೆಂದು ಮಿ. ಎಮ್. ಎಸ್. ಎ. ಮಜೀದರು ಸೂಚಿಸಿದರು.

ನೂಲಿನ ಅಭಾವದಿಂದ ಮಲಬಾರಿನ ನೇಕಾರರಲ್ಲಿ ಅಸಹ್ಯ ನಿರುದ್ಯೋಗವುಂಟಾಗಿದೆಯೆಂದು ಮಿ. ಹಸನ್ ಕೋಯಾ ಇವರೂ, ಖಾದೀ ತಯಾರಿಗಾಗಿ ಇಟ್ಟಿರುವ 2ಕೋಟಿ ರೂ.ಗಳನ್ನು ಹೊಸ ಉದ್ಯಮಗಳ ತಯಾರಿಕೆಗೆ ವಿನಿಯೋಗಿಸುವದು ವಾಸಿಯೆಂದು ಶ್ರೀ. ಪಿ. ವೆಂಕಟೇಶ್ವರಲುರವರೂ ಸೂಚಿಸಿದ ಮೇಲೆ ಕೂಲಿಗಾರ ಮಂತ್ರಿ ಮಾನ್ಯ ಗಿರಿಯವರು ಮದ್ರಾಸ್ ಸರಕಾರದ ಧೋರಣೆಯನ್ನು ವಿವರಿಸಿದರು.

ಶ್ರೀ. ಗಿರಿಯವರ ಭಾಷಣ.

"ಒಂದು ಆರ್ಥಿಕ ಸಂಸ್ಥೆ (Finance Corporation)ಯನ್ನು [illegible] ಯೋಜನೆಯಲ್ಲಿ ಸರಕಾರವಿದೆ. ಅದು ಸದ್ಯದಲ್ಲೇ ಸ್ಥಾಪನೆಯಾಗಲಿದೆ. ಅಸ್ತಿತ್ವಕ್ಕೆ ಬಂದ ಮೇಲೆ ಈ ಪ್ರಾಂತ್ಯದ ಉದ್ಯಮ ಪುನರ್ರಚನೆಗದು ವಿಶೇಷ ಸಹಾಯಕವಾಗುವದೆಂದು ನಾನು ನಂಬುತ್ತೇನೆ. ನಮ್ಮದು ವಿಶೇಷ ಖನಿಜಾನುಕೂಲತೆಯಿರುವ ಪ್ರಾಂತ್ಯ. ವಿವಿಧೋದ್ಯಮಗಳ ನೂತನ ರಚನೆಯ ಮೂಲಕ ಈ ಸಂಪತ್ತುಗಳನ್ನೆಲ್ಲಾ ಸರಕಾರವು ಸದ್ವ್ಯಯಗೊಳಿಸಲಿದೆ. ಯೋಜನಾ ಖಾತೆಯು ಈ ಸಮಸ್ಯೆಯ ಅಭ್ಯಾಸದಲ್ಲಿ ಇಷ್ಟರಲ್ಲೇ ತೊಡಗಿದ್ದು, ಸದ್ಯದಲ್ಲಿಯೇ ನಮ್ಮ ಪ್ರಾಂತಿಕೋದ್ಯಮ ಯೋಜನೆಯ ಸವಿವರರೂಪರೇಖೆಯನ್ನು ನಾನು ಸದಸ್ಯರ ಮುಂದಿಡಲಿದ್ದೇನೆ. ದೊಡ್ಡ ದೊಡ್ಡ ಕೈಗಾರಿಕೆಗಳು ಅಗತ್ಯವೆಂದು ನಾನೊಪ್ಪುವಂತೆಯೇ ನಮ್ಮ ದೇಶವು ಸ್ವತಂತ್ರ ಮತ್ತು ಸ್ವಸಂಪೂರ್ಣತೆ ಪಡೆಯಬೇಕಾದರೆ, ಜನತೆಯ ಬಹುಭಾಗಕ್ಕೆ ಅನ್ವಯಿಸುವ ಗುಡಿ ಮತ್ತು ಗ್ರಾಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಯೋಜನೆ ಕೈಕೊಳ್ಳಬೇಕಾದುದಗತ್ಯವೆಂದೂ ನಂಬುತ್ತೇನೆ. ದೊಡ್ಡ ಕಾರ್ಖಾನೆಗಳು ಕೆಲವೇ ಕೋಟಿ ಜನಕ್ಕೆ ಪ್ರಯೋಜನಕಾರಿಯಿರುವಾಗ ಗುಡಿ ಕೈಗಾರಿಕೆಗಳು ಹಳ್ಳಿಯ 40 ಕೋಟಿ ಜನರಿಗೆ ಕೆಲಸವೊದಗಿಸಿಕೊಡಬಲ್ಲವು. ಆದ್ದರಿಂದ ಗುಡಿಸಲು ಕೈಗಾರಿಕೆಗಳನ್ನು ತಕ್ಕಂತೆ ಸಂಘಟನೆಗೊಳಿಸುವ ಕಾರ್ಯ ಕ್ರಮವಿರಬೇಕಾಗಿದೆ, ಈ ಪೈಕಿ ಕೆಲವಕ್ಕೆ ಲೈಸನ್ಸ್ ಕೊಡಲಾಗುವದು. ಇಲ್ಲವಾದರೆ ಅವು ನಾಯಿಕೊಡೆಗಳಂತೆ ಎಲ್ಲೆಲ್ಲಿಯೂ ಹಬ್ಬಿ ಹೋಗಬಹುದು. ಈ ಕಾರ್ಯಕ್ಕಗತ್ಯವುಳ್ಳ ತಜ್ಞರ ತರಬೇತಿಗಾಗಿ ಸರಕಾರವು 20 ಉದ್ಯಮ ಶಾಲೆಗಳನ್ನು ತೆರೆದಿದೆ.

ಕೆಲಸಗಾರರ ಮಟ್ಟಿಗೆ

ಹಿಂದಿನ ಕಾಂಗ್ರೆಸ್ ಸರಕಾರದ ಧೋರಣೆಯನ್ನೇ ನಾವೂ ಮುಂದೊತ್ತಲಿರುವೆವು. ಧನಿ— ಮಜೂರ ಕಾಳಗಗಳು ತಮ್ಮೊಳಗೇನೇ ರಾಜಿಯಾಗುವಂಥವೆಂದು ನಮ್ಮ ವಿಶ್ವಾಸ. ಮಾಲಕರು ಮತ್ತು ಕೆಲಸಗಾರರು ಒಂದೆಡೆ ಒಟ್ಟಿಗೆ ಕುಳಿತು ಒಂದು ತೀರ್ಮಾನಕ್ಕೆ ಬರಲಾಗುವ ಸಂದರ್ಭಗಳನ್ನು ನಾವು ಒದಗಿಸಿ ಕೊಡುತ್ತೇವೆ. ಅದು ನಿರರ್ಥಕವಾದಲ್ಲಿ ಜಗಳಗಳನ್ನು ತೀರ್ಮಾನಿಸಲು ತಿಂಗಳಲ್ಲಿ 29ದಿನ್ನ ರಾಜಿಯೇ [illegible] ಇರಬೇಕಾಗಿರುವ ಲೇಬರ್ ಕಮಿಶನರ್ ಇದ್ದಾರೆ. ಆತನ ರಾಜೀ ಪ್ರಯತ್ನ ಮಾಡತಕ್ಕ ಇತರ ರಾಜೀಪ್ರಯತ್ನಾಧಿಕಾರಿಗಳಿದ್ದಾರೆ. ಅದೂ ಪರಾಭವಗೊಂಡರೆ, ಜಗಳಗಳನ್ನು ತೀರ್ಮಾನಿಸಲು ನನ್ನ ವರ್ಚಸ್ಸನ್ನು ಉಪಯೋಗಿಸಬಹುದೇ ಎಂದು ನಾನೇ ಪ್ರಯತ್ನಿಸಲಿದ್ದೇನೆ. ಅದೂ ನಿರರ್ಥಕವಾಯಿತೆನ್ನೋಣ. ಆಗ ಟ್ರೇಡ್ ಡಿಸ್ಪ್ಯೂಟ್ಸ್ ಏಕ್ಟನ್ವಯ ತನಿಖೆ ನಡೆಸುವ ಕೋರ್ಟುಗಳನ್ನೂ ರಾಜೀಪಡಿಸುವ ಕೋರ್ಟುಗಳನ್ನೂ ರಚಿಸಿ ಮಾಲಕರು ಹಾಗೂ ಮಜೂರರು ಒಪ್ಪದಂತಹದೇನೆಂಬುದರ ಶೋಧ ಮಾಡಿಸುತ್ತೇವೆ. ಅದೂ ನಿರರ್ಥಕವಾದಲ್ಲಿ ರಾಜೀ ತೀರ್ಮಾನಾಧಿಕಾರಿಯನ್ನೇ ನೇಮಿಸುತ್ತೇವೆ. ಕಳೆದ ಮೂರು ತಿಂಗಳುಗಳಲ್ಲಿ 115 ಜಗಳಗಳನ್ನು ನಾವು ಈ ವಿಧಾನಗಳಿಂದ ತೀರ್ಮಾನಿಸಲು ಯತ್ನಿಸಿದ್ದೆವು. ಮೊಲ್ಗಡೆ ಕೊಟ್ಟ ಮಾದರಿಯ ಶರ್ತಗಳು ಸಾಮಾನ್ಯತಃ ಇಕ್ಕಡೆಯವರಿಂದಲೂ ಅಂಗೀಕರಿಸಲ್ಪಟ್ಟಿದ್ದುವು. ಕೂಲಿಗಾರ ಸಂಬಂಧದ ಒಂದು ಶಾಸನವನ್ನೂ ತರಲು ಸರಕಾರವಾಶಿಸುತ್ತಿದೆ. ಕೆಲಸಗಾರ ಸ್ಥಿತಿಗತಿಗಳ ಕುರಿತು ನನಗೆ ಅತ್ಯಂತ ಅಭಿರುಚಿಯಿದೆ—ಈ ಸರಕಾರಕ್ಕೆ ಅತ್ಯಂತ ಅಭಿರುಚಿಯಿದೆ. ಮತ್ತು ಕೆಲಸಗಾರರಿಗವರ ಜನ್ಮಸಿದ್ಧ ಹಕ್ಕುಗಳು ದೊರೆಯುವಂತೆ ಮಾಡಬೇಕೆಂಬುದೇ ನಮ್ಮ ಅಪೇಕ್ಷೆ. ಕೆಲಸಗಾರರಿಗೆ ಉತ್ತಮ ಜೀವನೋಪಾಯ ನಿರ್ವಹಿಸಲು ಸಾಧ್ಯವಾಗದೆ ಹೋದರೆ ಯಾವ ಉದ್ಯಮವೂ ಸಾಗಲಾರದು. ಮಾಲಕರು ಇದನ್ನು ಎಷ್ಟು ಬೇಗ ಅರಿತುಕೊಳ್ಳುವರೋ ಅಷ್ಟೂ ಹಿತಕರ.

ಕೆಲಸಗಾರರಿಗೆ ಉಪದೇಶ

ಕೆಲಸಗಾರರು ತಮ್ಮ ಸಾಂಘಿಕ ಚಟುವಟಿಕೆಗಳಲ್ಲಿ ವಿಶೇಷ ಜಾಗರೂಕತೆಯಿಂದಿರಬೇಕು. ಅವರು ಮಾಲಕರೊಡನೆ ಸಂಧಾನ ಮೂಲಕ ಪ್ರಯತ್ನಿಸಿಕೊಳ್ಳಬೇಕು. ಭಿನ್ನತೆಗಳನ್ನು ಸಂಧಾನ ಮೂಲಕ ತೀರ್ಮಾನಿಸಲು ಸದಾ ಸಿದ್ಧವಿರುವ ಜನತಾ ಸರಕಾರವಿರುವಾಗಲೂ ಅವರಿಗೆ ಮುಷ್ಕರಗಳ ಪ್ರಸ್ತಾಪವೇಕೆ. ಮತ್ತು ಮುಷ್ಕರ ಹೂಡಬೇಕೆಂದೇನು ಎಂಬುದೇ ನನಗರ್ಥವಾಗುವುದಿಲ್ಲ. ಈ ಸರಕಾರವು ಕೆಲಸಗಾರರ ಮತ್ತು ಬಡವರ ಪಕ್ಷದಲ್ಲಿದೆ. ಹಾಗಿಲ್ಲದೆ ಹೋದರೆ ಈ ಸರಕಾರಕ್ಕೊಂದು ಸ್ಥಾನವೇ ಇಲ್ಲ. ಇಲ್ಲಿಯ ಸಭಾ ಸದಸ್ಯರಿಗೂ, ಹೊರ ಮುಖಾಂತರ ರಾಷ್ಟ್ರದ ಸಾರ್ವಜನಿಕರಿಗೂ ನಾನೀ ಸ್ಪಷ್ಟ ಆಶ್ವಾಸನೆಯನ್ನೀಯುತ್ತೇನೆ. ಅಂಗಡೀ ನೌಕರರು, ಕಾಯಿದೇ ಒದ್ದ ಪೇಕ್ಟರಿಗಳಲ್ಲಿರದ ಇತರ ಕೆಲಸಗಾರರು ಮತ್ತು ಬೇಸಾಯ ಕೆಲಸಗಾರರು ಹಾಗೂ ಇತರರಿಗೂ ಅನ್ವಯವಾಗುವಂತಹ ಶಾಸನವನ್ನು ತರುವ ಆಲೋಚನೆಯಲ್ಲಿ ನಾವಿದ್ದೇವೆ. ಕನಿಷ್ಠ ಸಂಬಳದ ಒಂದು ಮಿತಿಯನ್ನು ನಿರ್ಮಿಸುವ ಯೋಚನೆಯೂ ನಮಗಿದೆ. ಇನ್ನೆಲ್ಲವೂ ಸಮಾಪೇಕ್ಷವಾಗಿರುವ ಒಂದು ಶಾಸನ ತರುವ ಆಲೋಚನೆ ನಮ್ಮದು. ಈಗ ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪನೆಗೊಂಡಿದೆ. ಇಡೀ ಹಿಂದುಸ್ಥಾನದಲ್ಲೇ ಏಕರೂಪೀ ಶಾಸನವಿರಬೇಕಾಗುವಂತೆ ಕೇಂದ್ರ ಸರಕಾರವು ಕೆಲಸಗಾರರ ಸಂಬಂಧದ ಶಾಸನ ಮಾಡುವದನ್ನು ನಾನು ಇಚ್ಛಿಸುತ್ತೇನೆ".

ಇದು ಚರ್ಚೆಯ ನಂತರ ಕಡಿತದ ಸೂಚನೆ ಹಿಂದೆಗೆಯಲ್ಪಟ್ಟು ಗ್ರಾಂಟು ಮಂಜೂರಾಯಿತು.

ಬ್ಯಾಂಕುಗಳ ನೌಕರರ ಸಂಘದವರಿಂದಲೂ ಉಪಯೋಗಿಸಲ್ಪಟ್ಟ ಬ್ಯಾಂಕು

ಒಮ್ಮೆಗೇ 32 ಬ್ಯಾಂಕುಗಳಲ್ಲಿ ಮುಷ್ಕರ ಸಾರಿದವರು, ಚತುರ ಮತ್ತು ಸುಶಿಕ್ಷಿತರಾದ ಬ್ಯಾಂಕುಗಳಲ್ಲಿ ಕೆಲಸ ಮಾಡುವ 25 ಸಾವಿರ ನೌಕರರನ್ನು ಒಂದೇ ಒಂದು [illegible] ಬ್ಯಾಂಕುಗಳ ಜೊತೆಗೆ [illegible] ಪ್ರಚೋದಕ ಶಕ್ತಿ, [illegible] ಮತ್ತು ದೂರದೃಷ್ಟಿಗಳು ಬೇಕಾಗುತ್ತವೆ.

ಇಂಥವರಿಂದ ಸಂಯೋಜಿತವಾದ ಮುಷ್ಕರ ಪ್ರಾರಂಭವಾದದ್ದು [illegible] ಮುಷ್ಕರದಲ್ಲಿ ಭಾಗವಹಿಸಿದವರಿಗೆ [illegible] ಮತ್ತು ಅದಕ್ಕೆ ಸಂಬಂಧಿಸಿದ ಇತರ ಕಾರ್ಯಗಳಿಗಾಗಿಯೂ [illegible] ದೊಡ್ಡ ನಿಧಿಯು ಆವಶ್ಯವಾಗಿ ಬೇಕಾಗುತ್ತದೆ. ಅಲ್ಲದೆ ಆ ನಿಧಿಯಲ್ಲಿದ್ದ ಹಣವು ಯಾವ ಸಮಯದಲ್ಲಾದರೂ ಬೇಕಾದ ಕೂಡಲೆ [illegible] ಅವರ ಕೈಗಳಿಗೆ ಸಿಕ್ಕುವಂತಿರಬೇಕಾಗುವುದು. [illegible] ಕೆಲವೇ [illegible] ತಡವಾದರೆ ಅವರ [illegible] ಯೋಜನೆಗಳು [illegible].

ಇಂಥವರು ತಮ್ಮ ಹಣವನ್ನು **ಕೆನರಾ ಬ್ಯಾಂಕಿನಲ್ಲಿ** [illegible] ನಮ್ಮ ಹೆಗ್ಗಳಿಕೆಯ ವಿಷಯವಾದರೂ [illegible] [illegible] **ಕೆನರಾ ಬ್ಯಾಂಕಿನಲ್ಲಿ** [illegible] ಈ ಬ್ಯಾಂಕಿನವರು [illegible] ಪ್ರಸಂಗಗಳಲ್ಲಿಯೂ [illegible] ಠೇವುದಾರರಿಗೆ [illegible] ಕೊಡಕೂಡಿಸಿ ಸರ್ವರ ಉಪಯೋಗಕ್ಕೆ ಬೇಕಾಗುವ ಎಲ್ಲಾ ತರದ ಸವಲತ್ತುಗಳನ್ನು ಮಾಡಿದ್ದಾರೆ.

ಬ್ಯಾಂಕುಗಳ ನೌಕರರ ಸಂಘಗಳ [illegible] ಉಳಿದವರು ಅದನ್ನೇ ನಿಶ್ಚಿಂತೆಯಿಂದ ಅನುಸರಿಸಬಹುದು.

ಎಲ್ಲಾ ತರದ ಪರಿಸ್ಥಿತಿಗಳಲ್ಲಿಯೂ ನಿಮ್ಮ ಸೇವೆ ಮಾಡುವ **ಕೆನರಾ ಬ್ಯಾಂಕಿನಲ್ಲಿ** ನಿಮ್ಮ ಠೇವಿನ ಖಾತೆಗಳನ್ನು ಪ್ರಾರಂಭಿಸಿ ನಿಮ್ಮ ವ್ಯವಹಾರಗಳನ್ನು ಅಭಿವೃದ್ಧಿ ಮಾಡಿರಿ.

ಪಿ. ಎಸ್. ನಾಯಕ್,
[illegible]
ಜನರಲ್ ಮ್ಯಾನೇಜರ

ಸ್ಥಾಪನೆ] **ಕೆನರಾ ಬ್ಯಾಂಕ್ ಲಿಮಿಟೆಡ್** [1906

ಮೂಲಧನ 28 ಲಕ್ಷ **ಕ್ಷೇಮನಿಧಿ 11 ಲಕ್ಷ**

ವ್ಯವಹಾರದಲ್ಲಿದ್ದ ಒಟ್ಟು ಧನ 5 ಕೋಟಿಗಿಂತಲೂ ಮೀರಿದೆ.

10 ಶಾಖೆಗಳು

ಮದ್ರಾಸು ಕಲ್ಲಿಕೋಟೆ ಸಿಕಂದರಾಬಾದ ಬೆಂಗಳೂರು
ಕೊಯಮುತ್ತೂರು ಕೊಚ್ಚಿ ಶೋಲಾಪುರ ಧಾವಣಗೆರೆ
ಮಧುರೆ ಆಲಿಪ್ಪಿ ಹುಬ್ಬಳ್ಳಿ ಶಿವಮೊಗ್ಗಾ
ಸೇಲಂ ಕ್ವಿಲೋನ್ ಬೆಳಗಾಂವ್ ಮಂಗಳೂರು (ಮುಖ್ಯಾಲಯ)

ಮುಂಬಯಿ ಮತ್ತು ಅದರ ಪರಿಸರಗಳಲ್ಲಿ 5 ಶಾಖೆಗಳು

CANARA BANK LIMITED

ಪರಸ್ಪರ ಹೃದಯ ಬಿಚ್ಚಿ ಮಾತಾಡೋಣವೆಂದು ಮಿ. ಜಿನ್ನಾರು ಇತ್ತೀಚೆಗೆ ಮಾಸ್ಟರ್ ತಾರಾಸಿಂಗರನ್ನು ಆಮಂತ್ರಿಸಿದ್ದರು. ಆ ಕರೆಯನ್ನು ಮಾಸ್ಟರ್ ತಾರಾಸಿಂಗರು ಸ್ವೀಕರಿಸಿದರೆ-ಆಗ ಅವರಿಬ್ಬರೊಳಗಿನ ಹೃದಯಪೂರ್ವಕ ಮಾತುಕತೆಗಳು ಪ್ರಾಯಶಃ ಹೀಗಿರಬಹುದು:-

ಪರದೆಯೇಳುತ್ತದೆ. ಮಿ. ಜಿನ್ನಾರ ಆಫೀಸು ಕೋಣೆ, ಅತ್ಯಾಧುನಿಕ ರೀತಿಯಿಂದ ಅತಿ ನಾಜೂಕಾಗಿ ಅಲಂಕರಿಸಲ್ಪಟ್ಟಿದೆ. ಒಂದು ಸಣ್ಣ ದುಂಡು ಮೇಜಿನ ಮೇಲೆ ಚಹಾದ 'ಟ್ರೇ' ಮತ್ತು ಸಿಗರೇಟ್ ಪೆಟ್ಟಿಗೆಯಿದೆ. ಸೆಪ್ಟೆಂಬರ್ ತಿಂಗಳ ಒಂದು ಮನಮೋಹಕ ಪೂರ್ವಾಹ್ನವದು.

ಮಿ. ಜಿನ್ನಾರು ಮುಂಜಾನೆಯ ಅತ್ಯಂತ ಠರಮ್ಯ ಪೋಷಾಕನ್ನು ತೊಟ್ಟಿದ್ದಾರೆ. ಕೈಯಲ್ಲಿ ಮಾಸ್ಟರ್ ತಾರಾಸಿಂಗರನ್ನು, ಮನಬಿಚ್ಚಿ ಮಾತುಕತೆ ಆಡಲಾಮಂತ್ರಿಸಿದ್ದ ಹೇಳಿಕೆಯ ಪ್ರತಿಯೊಂದನ್ನು ಹಿಡಿದುಕೊಂಡಿದ್ದಾರೆ. ಕಣ್ಣು ಮುಚ್ಚಿ ಒರಗಿಕೊಂಡಲ್ಲಿಯೇ ಲೀಗ್ ಮತ್ತು ಸಿಖ್ಖರು ಒಂದು ಗೂಡಿದ ಸುಖಸ್ವಪ್ನವವರಿಗೆ ಬೀಳುತ್ತದೆ.

ಮಿ. ಜಿನ್ನಾರ ಕಾರ್ಯದರ್ಶಿಯು ಪ್ರವೇಶ. ರವಷ್ಟು ಸದ್ದುಮಾಡದೆ ಬರುತ್ತಾನೆ. "ಹಿಸ್ ಮಾಸ್ಟರ್ಸ್ ವ್ಹಾಯಿಸ್" (ಯಜಮಾನನ ಧ್ವನಿ) ಹೊರಡುವ ಹೊತ್ತನ್ನೇ ಕಾಯುತ್ತಾ ನಿಲ್ಲುತ್ತಾನೆ.)

ಜಿನ್ನಾ—(ಕಣ್ಣು ಮುಚ್ಚಿಕೊಂಡೇ) ಅವನು ಬಂದನೇ?

ಕಾರ್ಯದರ್ಶಿ—ಹೌದು ಸರ್. ನಾನಿಲ್ಲೇ ಇದ್ದೇನೆ.

ಜಿನ್ನಾ—ನಾನು ಕೇಳುತ್ತೇನೆ-ಅವನು ಬಂದನೇ?

ಕಾರ್ಯದರ್ಶಿ—ಯಾರು ಸರ್? ನವಾಬ ಝಾಡಾ-

ಜಿನ್ನಾ-(ಕಣ್ತೆರೆದು) ಹುಡುಗಾಟಮಾಡಬೇಡ. ನಾನು ಕೇಳಿದುದು ಮಾಸ್ಟರ್ ತಾರಾ ಸಿಂಗರನ್ನು. ಅವರು ಈ ಪೂರ್ವಾಹ್ನ ಇಲ್ಲಿಗೆ ಬರಲಿಕ್ಕಿದ್ದಾರೆ. ಮತ್ತು ನಾವಿಬ್ಬರೂ ಪರಸ್ಪರ ಹೃದಯ ಬಿಚ್ಚಿಮಾತುಕತೆ ನಡೆಸಬೇಕಾಗಿದೆ. ಈ ಸಂಬಂಧವಾಗಿ ನಾನೇನಾದರೂ ಪ್ರತ್ಯೇಕ ಪ್ರಯತ್ನಮಾಡಲಿಕ್ಕಿದೆಯೆ?

ವಿನೋದದಲ್ಲಿ

ಮನಬಿಚ್ಚಿ ಮಾತುಕತೆ!

(ವಿಷಾದಾಂತ ನಾಟಕ?)

ಕಾರ್ಯದರ್ಶಿ— ಅದರ ಯೋಚನೆಯೇ ಬೇಡ, ಸರ್. ಪ್ರಾಯಶಃ ಹೃದಯವೊಂದು ಇರಬೇಕಾದುದು ಮಾತ್ರ ಆಗತ್ಯ.

ಜಿನ್ನಾ—(ಗಂಭೀರವಾಗಿ) ಒಳ್ಳೇದು' ನೀನೀಗ ಇಲ್ಲಿರುವದು ಆಗತ್ಯವೆಂದು ನನಗನ್ನಿಸುವದಿಲ್ಲ. (ಕಾರ್ಯದರ್ಶಿ ಕೋಣೆಯಿಂದ ಹೋಗುವನು) ಪರಸ್ಪರ ಹೃದಯ ಬಿಚ್ಚಿ ಮಾತಾಡುವದು! ನನ್ನ ಜೀವಮಾನದಲ್ಲಿ ಇದುವರೆಗೂ ಅಂತಹದನ್ನು ನಾನು ಮಾಡಿದಿಲ್ಲ ಆ ಹೊತ್ತಿನಲ್ಲೆಲ್ಲಾ ನಗುತ್ತಾ ಇರಬೇಕೆಂದು ಕಾಣುತ್ತದೆ. (ಒಂದು ಕಿರ್ಪಾನ್ (ಸಿಖ್ಖರ ನಿತ್ಯದ ಆಯುಧ) ಬಾಗಿಲಿನೊಳಗೆ ನುಗ್ಗಿ ಬರುತ್ತಿರುವುದು ಕಣ್ಣಿಗೆ ಬೀಳುವದು) ಅಪಾಯ! ಅಪಾಯ! ಅಯ್ಯೋ!

(ಅದು ತಾರಾಸಿಂಗರೆಂದು ಆಗಲೇ ಗೊತ್ತಾಗಿ) ಗುಡ್ ಮೋರ್ನಿಂಗ್ ಮಿಸ್ಟರ್ ತಾರಾಸಿಂಗ್; ದಯವಿಟ್ಟು ಕುಳಿತುಕೊಳ್ಳಿ

ತಾರಾಸಿಂಗ್— ಗುಡ್ ಮೋರ್ನಿಂಗ್, ಗುಡ್ ಮೋರ್ನಿಂಗ್ (ಜಿನ್ನಾರ ಕಾರ್ಯದರ್ಶಿಯೂ ಅವನನ್ನನುಸರಿಸಿ ಹಲವು ಲೀಗ್ ಮುಸ್ಲೀಮರೂ ಧಾವಿಸಿ ಬರುವರು.)

ಕಾರ್ಯದರ್ಶಿ—ಏನಾದರೂ ಅಪಾಯವಿದೆಯೇ ಸರ್?

ಜಿನ್ನಾ—(ಮಾಸ್ಟರ್ ತಾರಾಸಿಂಗರು ತನ್ನ ಬೊಟ್ಟೆಯನ್ನು ಕೇಳಲಿಲ್ಲವೆಂದು ಭಾವಿಸಿಕೊಂಡು) ಅಪಾಯ? ನಿನಗೇನು ಹುಚ್ಚು ಹಿಡಿದೆಯೆ? ಈ ಪ್ರಪಂಚದಲ್ಲಿರುವ ಯಾವ ಶಕ್ತಿಯೂ ನನ್ನನ್ನು ಹೆದರಿಸಲಾರದು.

ತಾರಾಸಿಂಗ್—(ನಗುತ್ತಾ) ಓ! ಹಾಗಾದರೆ ಲೋಕದಲ್ಲಿರುವ ಮಿಕ್ಕೆಲ್ಲಾ ಶಕ್ತಿಗಿಂತಲೂ (ತನ್ನ ಕಿರ್ಪಾನಿಯನ್ನು ತೋರಿಸುತ್ತಾ) ಇದರ ಶಕ್ತಿ ಹೆಚ್ಚಿದೆಂದಾಯಿತು.

ಜಿನ್ನಾ—(ಒತ್ತಾಯದ ನಗು ಸೂಸುತ್ತಾ) ಒಳ್ಳೇದು. ಮಾಸ್ಟರ್ ತಾರಾಸಿಂಗರೇ, ತಮ್ಮನ್ನು ಕಂಡು ಅತ್ಯಾನಂದವಾಯಿತು. ತಾವು ನನ್ನ ಪ್ರಾಣಾಪ್ತರೆಂದೇ ನಾನು ಸದಾಕಾಲ ಭಾವಿಸಿಕೊಂಡು ಬಂದಿದ್ದೇನೆ. ಸಿಖ್ಖರೂ ಮುಸ್ಲಿಮರೂ ಸ್ನೇಹಾಚಾರದಿಂದಲೇ ಇದ್ದವರು. ಚರಿತ್ರೆಯಲ್ಲಿ ಕಾಣುವಂತೆ—

ತಾರಾಸಿಂಗ್—ಚರಿತ್ರೆಯ ಕುರಿತು ನಿಮ್ಮ ಅನುಭವ ಕೇಳಲು ನಾನು ಅನುಮಾನಪಡುತ್ತೇನೆ.

ಜಿನ್ನಾ—ನಾನು ಹೇಳುವುದೇನೆಂದರೆ ಅವರು ಸದಾ ಸ್ನೇಹಿತರಾಗಿಯೇ ಇರಬೇಕು. ನನಗೆ ಸಿಖ್ಖರ ಮೇಲೆ ಅತ್ಯಂತ ಗೌರವವಿದೆ. ಅದನ್ನೆಲ್ಲಾ ನಂತರ ಚರ್ಚಿಸೋಣ.

ಮಾಸ್ಟರ್ ತಾರಾಸಿಂಗರೇ, ನೀವೇನು ತೆಗೆದುಕೊಳ್ಳುತ್ತೀರಿ?

ತಾರಾ—(ದೃಢ ನಿರ್ಧಾರದಿಂದ) ಏಕರೂಪೀ, ಸಂಯುಕ್ತ ಹಾಗೂ ಅವಿಚ್ಛಿನ್ನ ಭಾರತವೊಂದನ್ನೇ!

ಜಿನ್ನಾ—(ಗಲಿಬಿಲಿಗೊಂಡು) ನಾನು ಕೇಳಿದುದು ಕುಡಿಯುವದೇನನ್ನು ಎಂದು. ಚಹಾ ಆಗಬಹುದಲ್ಲವೇ

(ಇಬ್ಬರೂ ಮೌನವಾಗಿ ಚಾ ಕುಡಿದು ಮುಗಿಸುವರು.)

ಜಿನ್ನಾ—ಆ ಗಿಲ್ ಯಾರವ?

ತಾರಾ—'ಗಿಲ್ ಯಾರವ'! ಮತ್ತು ನೀವು ಸಿಖ್ಖರ ಸ್ನೇಹಿತರನ್ನುತ್ತೀರಿ.

ಜಿನ್ನಾ—ನನ್ನ ಅಭಿಪ್ರಾಯವೆಂದರೆ, ಅವರು ತಾನು ಸಿಖ್ ನಾಯಕನೆಂಬಂತೆ ಮಾತನಾಡುವುದು ಸರಿಯಲ್ಲವೆಂಬುದೊಂದೇ.

ತಾರಾ— ಯಾಕೆ? ನಿಜಕ್ಕೂ ಅವರೊಬ್ಬ ನಾಯಕ!

ಜಿನ್ನಾ—ಇಲ್ಲ, ಎಂದಿಗೂ ಇಲ್ಲ ನೀವೊಬ್ಬರೇ ಸಿಖ್ಖರ ಪ್ರತಿನಿಧಿಯಾಗಬಲ್ಲಿರಿ.

ತಾರಾ—ಅವರೂ ಸಿಕ್ಕರ ನಾಯಕರೇ. ನಿಮಗದು ಸರಿ ತೋರುವದಿಲ್ಲವೆಂದು ನನಗೆ ಗೊತ್ತಿದೆ. ತಾನೊಬ್ಬನೇ ಅದ್ವಿತೀಯ ನಾಯಕನೆಂಧು ಭಾವಿಸಿಕೊಂಡಿರುವ ಮನುಷ್ಯನಿಗೆ ಇದೆಂದಿಗೂ ಅರ್ಥವಾಗುವತಿಲ್ಲ.

ಜಿನ್ನಾ—(ಮುಖಭಂಗ ಹೊಂದಿ) ಹೋ! (ಸ್ವಗತ) ಆಹಾ; ಎಂತಹ ಹೃದಯೀ ಮಾತುಕತೆಯಿದು! (ಅತ್ಯಂತ ಆಡಂಬರದಿಂದ) ಮುಸ್ಲೀಮರು ಮತ್ತು ಸಿಖ್ಖರು ಒಂದುಗೂಡಬೇಕೆಂಬುದೇ ನನ್ನ ಆಗ್ರಹದ ಅಪೇಕ್ಷೆ. ನಾನು ನಿಮ್ಮ ಬೇಡಿಕೆಯನ್ನು ಮಂಜೂರು ಮಾಡಲು ಸಿದ್ಧನಿದ್ದೇನೆ; ಆದರೆ—

ತಾರಾ—ಮಂಜೂರು ಮಾಡುವದು! ನೀವು ಇಷ್ಟರಲ್ಲೇ ಪಾಕಿಸ್ತಾನ ಪಡೆಕೊಂಡವರಂತೆ ಮಾತಾಡುತಿದ್ದೀರಿ.

ಜಿನ್ನಾ—ಇಲ್ಲಇಲ್ಲ; ಹಾಗಲ್ಲ ನನ್ನ ಮಾತಿಗೆ ಭಿನ್ನಾರ್ಥ ಕಟ್ಟಬೇಡಿ. (ನಗುತ್ತಾ) ಸಿಖ್ಖರಿಗೆ ಬೇಕಾಗಿರುವದೇನು?

ತಾರಾ—ಅವರಿಗೆ ಬೇಕಾಗಿರುವದು ಸಂಯುಕ್ತ ಭಾರತ.

ಜಿನ್ನಾ—ಕಾಂಗ್ರೆಸ್ ಹೇಳುತ್ತಿರುವದೂ ಅದನ್ನೇ.

ತಾರಾ—ಮತ್ತು ನಾನು ಕೂಡಾ! ನಾವು ಅದಕ್ಕೋಸ್ಕರ ಹೋರಾಡುವದೇ ಸರಿ.

ಜಿನ್ನಾ—ಆದರೆ ಪಾಕಿಸ್ತಾನ-

ತಾರಾ—ಸಿಕ್ಕರು ಅದಕ್ಕೆ ಎಂದೆಂದಿಗೂ ಒಪ್ಪುವಂತಿಲ್ಲ. ಒಂದೊಮ್ಮೆಗೆ ಕಾಂಗ್ರೆಸ್ ಒಪ್ಪಿದರೂ ಸಿಖ್ಖರು ಒಪ್ಪಲಾರರು. ಒಳ್ಳೇದು. ಇನ್ನೂ ಮಾತುಕತೆಗೆ ಅವಕಾಶವಿದೆಯೆಂದು ನನಗನ್ನಿಸುವದಿಲ್ಲ, (ತಾರಾಸಿಂಗರು ಕೋಣೆಯಿಂದ ಹೊರ ನಡೆಯುವರು)

ಜಿನ್ನಾ—ಓ ದೇವರೇ! (ಸೋಫಾದ ಮೇಲೆ ಅಂಗಾತ ಬಿದ್ದುಕೊಂಡು) ಕಾರ್ಯದರ್ಶಿ! (ಕಾರ್ಯದರ್ಶಿ ಓಡಿಬರುವನು) ಅವನು ಹೋದನೆ?

ಕಾರ್ಯದರ್ಶಿ— ಹೌದು ಸರ್. ಸ್ಟೇಟ್‌ಮೆಂಟ್ ತಯಾರಾಗಿದೆ!

ಜಿನ್ನಾ—ಸ್ಟೇಟ್‌ಮೆಂಟ್ ಯಾವ ಸ್ಟೇಟ್‌ಮೆಂಟ್?

ಕಾರ್ಯ—ಮಾಸ್ಟರ್ ತಾರಾಸಿಂಗರೊಡನೆ ತಾವು ನಡಿಸಿದ 'ಮನ ಬಿಚ್ಚಿ ಮಾತುಕತೆ'ಯ ಸಂಬಂಧದ ಹೇಳಿಕೆ ಸರ್.

ಜಿನ್ನಾ—ಓ, ಆ ಮಾತು! ನನಗೇನಾದರೂ ಕೊಡು, ಕಾರ್ಯದರ್ಶಿ .. ....

ಪರದೆ ಬೀಳುವುದು.

('THE MAHRATTA'ದಿಂದ)

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನಾಡಕತೆಗಳು 0 3-0; (2) ಬಾಲವಾಙ್ಮಯ 0-3-0; (3) ಚಲಚ್ಚಿತ್ರ ಪದ್ಯಾವಳಿ 0-3-0; (4) ವೀರಭೂಮಿ 0-2-0; (5) ಶಂಭುಕ ವಧೆ 0-2-0 (6) ಅಡ್ಡ ಬೆಳೆದ ಗಿಡ್ಡಿಯ ಮದುವೆ 0-2-0 (7) ಮುದುಕನ ಪಂಡಿತ ಫೈರಾಫೆ 0 2-0 (8) ಬಂಗಾರದಂಗಿದ ಕತೆ 0-1 0; (9) ಏಕಾಂತ ರಾಮಾಯಣ 0-1-0; (10) ಭಾರತ ಗೀತಾವಳಿ 0-2-0; ಒಂದು ರೂಪಾಯಿ ಮನಿಯಾರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟಮೂಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

Why Worry?

Do not feel disheartened for not getting BONUS.
We offer you a guaranteed BONUS of Rs. 10/- per THOUSAND under our New Scheme.

Please apply immediately:—

A. S Kini,
Managing Director,

UNITED KARNATAK INSURANCE Co., Ltd.

HEAD OFFICE: **DHARWAR.**

For further particulars apply to—

Divisional Manager, Court Road, **UDIPI**, S. India.	or	Branch Manager, 10, Bismilla Blds Opp. B B C. I. Stn. Dadar, BOMBAY 14.
Or		Or
Divisional Manager, Narayan Nivas, Market Road, Bangalore City.		Branch Manager, MULLAKKAL, Alleppey. (Travancore State)

Or

To our nearest Agents.

ಮುಟ್ಟಿನಗುಳಿಗೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಅನ್ಯಾವಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಬರಿಸುಗೊಡುವುದು. ಬೇಡವಾದ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ: ಬೆಲೆ ರೂ 3|- ಕ್ಕೆ ಮೀರಿದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/.. ವಿ. ಪಿ. 12 ಆಣೆ ಅಲಾಯಿದ.

Mrs. P. DEVEE,
P. D. S. (A. E.) Tollygunge, Calcutta.
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಬಿಸಿ ವಾತಾವರಣ—ಗಾಂಧಿಜೀಯ ಅಭಿಪ್ರಾಯ.

ಇದೇ ತಾ. ೮ರಲ್ಲಿ ನವದಿಲ್ಲಿಯಲ್ಲಿ ತನ್ನ ನಿತ್ಯದ ಸಾಯಂಕಾಲ ಪ್ರಾರ್ಥನೆಯ ವೇಳೆ ಗಾಂಧಿಜೀ ಸದ್ಯದ ವಾತಾವರಣದ ಕುರಿತು ತನ್ನ ಅಭಿಪ್ರಾಯವನ್ನು ಈ ಕೆಳಗಿನಂತೆ ಬಹಿರಂಗಪಡಿಸಿದ್ದಾರೆ—

ಜನತೆಗೊಂದು ಮಾತು

"ವೈಸರಾಯರಿಗೂ ಪಂಡಿತ ನೆಹರುಗಳಿಗೂ ಜನರೀಗ ದಿನಂಪ್ರತಿ ನೂರಾರು ತಂತಿಗಳನ್ನು ಕಳುಹುತಿದ್ದಾರೆಂದು ನಾನು ಕೇಳುತ್ತೇನೆ. ಈ ಮೂಲಕ ಹಣವನ್ನು ತಿಳಿಗೇಡಿತನದಿಂದ ದುರ್ವ್ಯಯ ಮಾಡುತಿದ್ದೀರೆಂದೇ ಜನತೆಗೆ ನಾನು ಹೇಳಲಿಚ್ಛಿಸುತ್ತೇನೆ. ವೈಸರಾಯರೇ ಸರ್ವಾಧಿಕಾರಿಯಾಗಿದ್ದು ತನ್ನಿಚ್ಛೆ ಬಂದಂತೆ ಮಾಡಲಾಗುವ ಕಾಲವೊಂದಿತ್ತು. ಆದರೆ ಈಗ ಅವರು ತನ್ನ ಸ್ವತಂತ್ರೇಚ್ಛೆಯಿಂದಲೇ ಅಧಿಕಾರಗಳನ್ನೆಲ್ಲಾ ಮಂತ್ರಿಮಂಡಲಕ್ಕೆ ವರ್ಗಾಯಿಸಿದ್ದಾರೆ; ಇಂಗ್ಲಾಂಡಿನ ಚಕ್ರವರ್ತಿಗಳಂತೆಯೇ ಅವರೂ ಘಟನಾತ್ಮಕ ಶಿರಸ್ಸಾಗಿ ಮಾತ್ರ ಇದ್ದಾರೆ. ತನ್ನ ಮಂತ್ರಿಗಳ ಸಮ್ಮತಿ ವಿನಹಾ ಇಂಗ್ಲಾಂಡಿನ ರಾಜರೇನನ್ನೂ ಮಾಡಲಾರರು. ತಮ್ಮ ಭಾವನೆಗೆ ವಿರುದ್ಧವಾಗಿ ಹೋದರೆಂಬುದಕ್ಕಾಗಿ ಇಂಗ್ಲಾಂಡಿನ ಜನರು ಓರ್ವ ಚಕ್ರವರ್ತಿಯನ್ನು ಹಿಂದೆ ಹಾಕಿದುದೂ ಇದೆ. ಆದರೆ ಇಲ್ಲಿಯ ಜನತಾ ಮಂತ್ರಿಗಳು ಅಂತಹದನ್ನೆಂದಿಗೂ ಮಾಡಲಾರರೆಂದೇ ನನ್ನಾಶೆ. ಯಾಕೆಂದರೆ ಅಂತಹ ಸಂದರ್ಭ ಬಂದಾಗ ಈ ಮಂತ್ರಿಗಳ ಕೈಯಲ್ಲಿ ಅಜೇಯ ಸತ್ಯಾಗ್ರಹ ಶಸ್ತ್ರವಿದೆ. ಹೇಗಿದ್ದರೂ ಈ ತಂತಿಗಳನ್ನು ಕಳುಹುತ್ತಿರುವ ಜನರು ಅದನ್ನು ಪಡೆಯುವವರಿಗೆ ತಂತೀ ಕಚೇರಿಗಳಿಗೂ ಹೊರೆಯಾಗುತ್ತಿರುವುದಲ್ಲ, ಜನತೆಯ ಹಣವನ್ನೂ ಅಪವ್ಯಯಗೊಳಿಸುತಿದ್ದಾರೆ. ಅನುಕೂಲಸ್ಥರು ಅದು ತಮ್ಮ ಹಣವೆಂಬ ಭಾವನೆಯಲ್ಲಿರಬಹುದು ಆದರದು ನಿಜಕ್ಕೂ ಹಸಿವು ಪೀಡಿತರ ಹಣವಾಗಿದ್ದು ಅವರೇ ಮೂಲಕ ಸುಲಿಯಲ್ಪಟ್ಟದ್ದಾಗಿದೆ.

ಬೊಂಬಾಯಿಯ ದುರಂತ

ಬೊಂಬಾಯಿಯ ಜಾತೀಯ ಗಲಭೆಯನ್ನು ಪ್ರಸ್ತಾಪಿಸುವಾಗ ನನ್ನ ಎದೆ ಭಾರವಾಗುತ್ತಿದೆ. ಅಲ್ಲಿ ಯಾರು ಯಾರನ್ನು ಕೊಂದರೆಂಬುದೇನೆಂದೂ ನನಗರಿಯದು. ಆದರೆ ತಮ್ಮನ್ನು ಕೊಲ್ಲಲು ಪ್ರಯತ್ನಿಸುವವರನ್ನು ಪ್ರತಿಯಾಗಿ ಹತಮಾಡುವಷ್ಟು ಈಗ ಹಿಂದುಗಳು ಬಲಶಾಲಿಗಳಾಗಿದ್ದಾರೆ ಎಂದು ಕೆಲವರು ಸಂತೋಷಪಡುತ್ತಿರುವದು ಮಾತ್ರ ದುಃಖದಾಯಕವಿದೆ. ಇಂತಹ ಪ್ರತೀಕಾರ ಭಾವನೆಯು ಅವಿವೇಕತನದ್ದು. ಇದಕ್ಕಿಂತ ಪ್ರತೀಕಾರ ಮಾಡದೇನೇ ಹಿಂದುಗಳು ಸಾಯುವದು ವಾಸಿಯೆಂದು ನನಗನ್ನಿಸುತ್ತದೆ. ಯಾಕೆಂದರೆ ದ್ವೇಷಾಗ್ನಿಯನ್ನು ನಂದಿಸುವ ಹಾದಿಯೊಂದರೆ ಅದೊಂದೇ. ತಮ್ಮ ರಕ್ಷಣೆಗಾಗಿ ಮಿಲಿಟರಿ ಅಥವಾ ಪೋಲೀಸು ಸಹಾಯವನ್ನು ಎಲ್ಲಿಯೂ ಯಾರೂ ಕೇಳಬಾರದೆಂದೆ ನನ್ನ ಅಭಿಪ್ರಾಯ. ಅವರು ತಮ್ಮ ಸ್ವಂತ ರಕ್ಷೆಯನ್ನೇ ನಂಬಿಕೊಂಡಿರಬೇಕಲ್ಲದೆ ಬೇರೆ ಯಾರದನ್ನೂ ಅವಲಂಬಿಸಬಾರದು. ಒಂದೊಮ್ಮೆಗೆ ಅವರೇ ಸಹಾಯವನ್ನು ಅಪೇಕ್ಷಿಸಿದರೂ ಮಂತ್ರಿಗಳದನ್ನು ಕೊಡಲು ನಿರಾಕರಿಸಬೇಕು. ಮಂತ್ರಿಗಳೂ ಪ್ರಮುಖರೂ ಗೊಂದಲಗಳು ನಡೆವಲ್ಲಿಗೆ ಸ್ವತಃ ಹೋಗಲಿಕ್ಕೂ ಹಿಂದೂ ಮತ್ತು ಮುಸ್ಲಿಂ ಗೌರವಪಾಲನೆಗಾಗಿ ಆ ಕುಂಡದಲ್ಲಿ ತಮ್ಮ ಪ್ರಾಣಗಳನ್ನರ್ಪಿಸಲಿಕ್ಕೂ ಸಂತೋಷಪೂರ್ವಕ ತಯಾರಿರಬೇಕು. ಸೈನಿಕರೋ? ಅವಶ್ಯಕತೆಯುಳ್ಳ ಎಲ್ಲಾ ವಿಧದ [illegible]ಯಕ ಕಾರ್ಯಗಳಿಗೇನೇ ಅವರನ್ನು ಇಳಿಸಬೇಕು. ಅವರು ಹಸಿವು ಪೀಡಿತ ಮಿಲಿಯಾವಧಿ ಮಂದಿಗಾಗಿ ಅಧಿಕಾಹಾರ ಬೆಳೆಸಲಿ. ಅಂತೆಯೇ ಬಾಕಿ ಬಿದ್ದಿರುವ ಇತರ ಕಾರ್ಯಗಳನ್ನೂ ಕೈಕೊಳ್ಳಲಿ.

ಜಿನ್ನರ ಉದ್ಗಾರಗಳು

ಕೊನೆಯಲ್ಲಿ ಕ್ವಯದೀ—ಅಝಾಮರ ಉದ್ಗಾರಗಳಿಗಾಗಿ ದುಃಖ ಸೂಚಿಸುತ್ತೇನೆ. ಅವರು ಒಂದು ಶಕ್ತಿವಂತ ಸಂಸ್ಥೆಯ ನಾಯಕರಿದ್ದಾರೆ; ಅದ್ದರಿಂದ ತನ್ನ ಪ್ರತಿಯೊಂದು ಶಬ್ದವನ್ನೂ ಅವರು ತೂಕಮಾಡಿಯೇ ಆಡಬೇಕಾದುದು ಯೋಗ್ಯವಿದೆ. ಹಾಗೆ ಮಾಡುತಿದ್ದರೆ ಅವರ ಘನತೆಗನುಗುಣವಾಗುತಿತ್ತು, ಅಂತೆಯೇ ಇಸ್ಲಾಮಿಗೆ ಹಿತಕರವಾಗಿ-ಹಿಂದೂತ್ವಕ್ಕೂ ಲಾಭದಾಯಕವಾಗಿ—ಸಾರ್ವತ್ರಿಕವಾಗಿ ಭಾರತಕ್ಕೆ ಕಲ್ಯಾಣಕಾರಿಯಾಗಿ ಪರಿಣಮಿಸುತಿತ್ತು. ಆದರೆ ಅವನವನ ಸರಿಯಾದ ಆಚರಣೆಗೆ ಅವನವನೇ ಜವಾಬ್ದಾರನಿದ್ದಾನೆ; ಪ್ರತಿಯೊಬ್ಬನೂ ತನ್ನ ಪಾಲಿಗೆ ಸರಿಯಾಗಿ ವರ್ತಿಸಿದಲ್ಲಿ ಆಗ ಕ್ವಯದೀ ಅಝಾಮರೂ ನ್ಯಾಯವಾಗಿ ವರ್ತಿಸಲೇಬೇಕಾಗುವದು."

ಕರ್ನಾಟಕ ಏಕೀಕರಣ ಮಹಾ ಪರಿಷತ್ತು, ದಾವಣಗೆರೆ

ಈ ಪರಿಷತ್ತಿನ ಮಹಾಸಭೆಯ ಅಧಿವೇಶನವು ಆಗಸ್ಟ್ 31ರಲ್ಲಿ ದಾವಣಗೆರೆಯಲ್ಲಿ ಬಹು ಉತ್ಸಾಹ, ವೈಭವಗಳಿಂದ ಜರುಗಿತು. ತಾ. 30ನೇ ಸಂಜೆ ನಿಯೋಜಿತ ಅಧ್ಯಕ್ಷರಾದ ಬೊಂಬಾಯಿ ಸರಕಾರದ ಮಂತ್ರಿಗಳಾದ ಶ್ರೀ. ಪಾಟೀಲರ ಮೆರವಣಿಗೆಯು ಊರಿನಲ್ಲಿ ವೈಭವದಿಂದ ನಡೆಯಿತು. ಊರಿನ ಬೀದಿಗಳೆಲ್ಲವೂ ತಳಿರುತೋರಣಗಳಿಂದಲಂಕರಿಸಲ್ಪಟ್ಟಿದ್ದು ಸಾವಿರಾರು ಜನರು ಈ ಉತ್ಸವವನ್ನು ನೋಡಲು ಉತ್ಸಾಹಭರಿತರಾಗಿ ನೆರೆದಿದ್ದರು.

ಮದ್ರಾಸ್ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀ ಕಾರಂತರು ತಾ. 31ನೇ ಶನಿವಾರ ಬೆಳಿಗ್ಗೆ ಮೈಸೂರಿಂದ ದಯಮಾಡಿಸಿದರು. ರೈಲು 2 ಗಂಟೆ ತಡವಾದುದರಿಂದ ಅಧಿವೇಶನವು 11ಗಂಟೆಗೆ ಪ್ರಾರಂಭವಾಯಿತು. ರಾಜನಹಳ್ಳಿ ಧರ್ಮಪ್ರವರ್ತಕ ಹನುಮಂತಪ್ಪನವರ ಧರ್ಮಶಾಲೆಯ ಆವರಣದಲ್ಲಿ ಬಹು ವಿಶಾಲವಾದ ಚಪ್ಪರವು ನಿರ್ಮಿಸಲ್ಪಟ್ಟು, ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿತ್ತು. ಜನಸಂದಣಿಯು ಇತ್ತೀಚಿಗೆ ಇಷ್ಟೊಂದು ಎಂದೂ ಈ ಊರಿನಲ್ಲಿ ನೆರೆದಿರಲಿಲ್ಲವೆನ್ನಬಹುದು.

ಮೊದಲು ಪ್ರಾರ್ಥನೆ. ಸ್ವಾಗತ ಪದ್ಯ ಪಠನೆಗಳಾದ ನಂತರ ಸ್ವಾಗತ ಸಮಿತಿ ಅಧ್ಯಕ್ಷರು ಅತಿಥಿಗಳನ್ನು ಆದರದಿಂದ ಸ್ವಾಗತಿಸಿ ದಾವಣಗೆರೆಯ ಮಹತ್ವವನ್ನು ವರ್ಣಿಸಿ, ಏಕೀಕರಣವಾದ ನಂತರ ದಾವಣಗೆರೆಯೇ ಏಕೀಕೃತ ಕರ್ನಾಟಕದ ರಾಜಧಾನಿಯಾಗಲೆಂದು ಹಾರೈಸಿದರು.

ಮಹಾಸಭೆಯನ್ನು ಪ್ರಾರಂಭಿಸಿದ ಶ್ರೀ. ಕಾರಂತರು ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮಂತ್ರಿಗಳು ಆಳಿತ ನಡೆಸದೆ, ಮಹಾರಾಜರಿಂದ ನಿಯಮಿಸಲ್ಪಟ್ಟಿರುವವರು ಮಂತ್ರಿಗಳಾಗಿರುವುದು ಸರಿಯಲ್ಲವೆಂದರು. ಕೂಡಲೆ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡುವಂತೆ ದಿವಾನರಾದ ಸರ್. ಆರ್ಕಾಟರು ಮಹಾರಾಜರಿಗೆ ಸಲಹೆ ಕೊಡಬೇಕೆಂದು ಸೂಚಿಸಿದರು. ಏಕೀಕರಣವಾಗುವುದಕ್ಕೆ ಮೊದಲೇ ರಾಜಧಾನಿ ಇಂತಹ ಸ್ಥಳದಲ್ಲೇ ಆಗಬೇಕೆನ್ನುವುದು ಸರಿಯಲ್ಲವೆಂದರು. ದೇಶೀಯ ನರೇಶರು ರಾಜ್ಯದಲ್ಲಿ ನಡೆಯುತ್ತಿರುವ ಘಟನೆಗಳನ್ನರಿತು ಜಾಗ್ರತರಾಗಿ ಪ್ರಜೆಗಳ ಆಶೋತ್ತರಗಳನ್ನು ಈಡೇರಿಸಬೇಕೆಂದರು

ನಂತರ ಅಧ್ಯಕ್ಷರಾದ ಶ್ರೀ. ಪಾಟೀಲರ ಭಾಷಣವಾಯಿತು. ನಂತರ ಸಭೆಯು ಭೋಜನಕ್ಕೆದ್ದಿತು. ಸಂಜೆ 4 ಗಂಟೆಗೆ ಸೇರಿದ ಸಭೆಯಲ್ಲಿ ಶ್ರೀ. ಜಿನರಾಜ ಹೆಗ್ಗಡೆಯವರು ಏಕೀಕರಣದ ಅಗತ್ಯವನ್ನು ಕುರಿತ ನಿರ್ಣಯವನ್ನೂ ಮಂಡಿಸಿ ಬಹು ಸ್ವಾರಸ್ಯವೂ, ಪರಿಣಾಮಕಾರಿಯೂ ಆದ ಭಾಷಣವನ್ನು ಮಾಡಿದರು. ಗೊತ್ತುವಳಿಗೆ ಅನೇಕ ಸೂಚನೆಗಳು ತರಲ್ಪಟ್ಟು ವಿಪರೀತ ಚರ್ಚೆಯಾಯಿತು. ಅನೇಕ ಮುಖಂಡರ ಭಾಷಣವಾದಿದರು

ಅದೇ ದಿನ (31ಕ್ಕೆ ತಾ.) ಸಂಜೆ 6½ ಗಂಟೆ ಮೇಲಿನಲ್ಲಿ ಶ್ರೀ. ಕಾರಂತರು ಹಿಂದಿರುಗಿದರು. ಶ್ರೀ ಪಾಟೀಲರು 1ಕ್ಕೆ ಬಾನುವಾರ ಬೆಳಿಗ್ಗೆ ಬೊಂಬಾಯಿಗೆ ಪ್ರಯಾಣಮಾಡಿದರು.

ಒಟ್ಟಿನಲ್ಲಿ ದಾವಣಗೆರೆಯಲ್ಲಿ ಇಂತಹ ಬೃಹತ್ಸಭೆಯು ನಡೆದುದು ಇದೇ ಮೊದಲು. ಬಂದವರಿಗೆ ಊಟೋಪಚಾರಗಳ ವ್ಯವಸ್ಥೆಯು ಅತ್ಯಂತ ತೃಪ್ತಿಕರವಾಗಿದ್ದಿತು. ಮೈಸೂರು ಕಾಂಗ್ರೆಸ್ಸಿನ ಮುಖಂಡರೆಲ್ಲರೂ ಬಂದಿದ್ದರು.

ನೋಟೀಸು

ಪುತ್ತೂರು. ಡಿ. ಮು. ಕೋರ್ಟಿನಲ್ಲಿ

R. E. P. 158/46.
O. S. 375/41.

ಪಮ್ಮುಬ್ಬ —ಅರ್ಜಿದಾರಳು

ಸುಬ್ರಾಯ ಪುತ್ತೂರಾಯ ಕೂಡಾ —ಎದ್ರಿಗಳು

1ನೇ ಎದ್ರಿ ಕುಕ್ಕಾಡಿ ಪಯ್ಯಕನ್ನ ಹೆಂಗ್ಸಿನ ಮಗಳು ದೇಯಿ ಹೆಂಗ್ಸು— ಕಾಸ್ರಗೋಡು ತಾಲೂಕು, ಕಾಟುಕ್ಕೆ ಗ್ರಾಮದಲ್ಲಿ,

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ವಾದಿಯು ಸ್ಥಿರ ಆಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ 1946ನೇ ಇಸವಿ ಸಪ್ಟಂಬರ ತಿಂಗಳು 24ನೇ ತಾರೀಕು ನಿಶ್ಚಯಿಸಲಾಗಿಯದೆಂತ ನಿಮಗೆ ಇದರಿಂದ ತಿಳಿಸಲಾಗುತ್ತಿದೆ. ನೀವು ಆದಿನ ಹಾಜರಾಗದಿದ್ದಲ್ಲಿ, ನಿಮ್ಮನ್ನು ಶಿಕ್ಸ್ಯಾಮಾಡಿ ಶರತ ನಿರ್ಣಯಿಸಲಾಗುವುದು.

B/o

Putter 12-8-46 — N. S. Bhat, Advocate for petitioner.

For prompt and efficient Banking Service

Bank with

THE VIJAYA BANK LIMITED.

Head Office.—MANGALORE.

Branches Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

The Canara Banking Corporation Limited.
(Incorporated in British India, with limited Liability)
Estd. 1906.
Head Office: **UDIPI**, South Kanara.
CAPITAL

Authorised	Rs. 25,00,000
Issued & Subscribed ...	,, 16,00,000
Paid up	,, 15,64,715
Reserves Over	,, 41 Lakhs

Branches at– Bombay, Madras, Bangalore, Coimbatore, Selem. Calicut, Hubli, Mysore, Cochin, Manglore, Madras etc., etc.
Banking Business of Every Description Transacted.

ಉಡುಪಿ, ಗುರುವಾರ, ೧೨-೯-'೪೬

ಜನಜೀವನದ ಮಟ್ಟ ವೇರಲಿ.

"ಇಷ್ಟು ವರುಷಗಳಿಂದ ಯಾವ ತತ್ವಗಳಿಗಾಗಿ ಹೋರಾಡುತ್ತಿದ್ದೆವೋ ಆ ತತ್ವಗಳನ್ನಾಧರಿಸಿಯೇ ನಮ್ಮ ರಾಷ್ಟ್ರ ಧೋರಣೆಯನ್ನು ರೂಪಿಸಿಕೊಳ್ಳಲಿದ್ದೇವೆ. ಕಡೆಗಣಿಸಲ್ಪಟ್ಟಿರುವ ಸಾಮಾನ್ಯ ಭಾರತೀಯನ ಕಡೆಗೆ ದೃಷ್ಟಿ ಹಾಕಿ ಆವನಿಗೆ ರಕ್ಷಣೆಯೀಯುವೆವು; ಆವನ ಜೀವನ ಮಟ್ಟವನ್ನು ಏರಿಸುವೆವು"—ಹಿಂದೀ ರಾಷ್ಟ್ರೀಯ ಸರಕಾರದ ಪ್ರಥಮ ಉಪಾಧ್ಯಕ್ಷ ಪಂಡಿತ ನೆಹರುಗಳು ಮಾಡಿದ ಮೊದಲನೇ ಅಧಿಕೃತ ಆಕಾಶವಾಣೀ ಘೋಷಣೆಯಲ್ಲಿದ್ದ ಮೇಲಿನ ವಾಕ್ಯಗಳು ಭಾರತದ ಧಗಧಗಿಸುವ ವಾತಾವರಣದ ಮೇಲೆ ಅಮೃತ ವರ್ಷದಂತೆ ಸುರಿದಿವೆ. "ಈ ಸರಕಾರವು ಕೆಲಸಗಾರರ ಮತ್ತು ಬಡವರ ಪರವಾಗಿ ಇದೆ. ಅವಿನಹಾ ಇದಕ್ಕೊಂದು ಅಸ್ತಿತ್ವವೇ ಇಲ್ಲ" ಎಂದು ಇದೇ ಕಾಲದಲ್ಲಿ ಮದ್ರಾಸ್ ಸರಕಾರದ ಕೆಲಸಗಾರ ಮಂತ್ರಿ ಮಾನ್ಯ ಗಿರಿಗಳ ಆಶ್ವಾಸನೆಯೂ ಬಂದಿದೆ. ನಿಜಕ್ಕೂ ಭಾರತದ ಇಂದಿನ ಪರಿಸ್ಥಿತಿ ಅಸಾಮಾನ್ಯವಾದುದು. ತುಲನಾತ್ಮಕವಾಗಿ ಹೇಳುವದಾದರೆ ದೀರ್ಘಾವಧಿಯ ಸೆರೆಯಿಂದ ನೆಲಕಂಟಿ ಹೋಗಿರುವಾಗ ಆಕಾಶದಲ್ಲಿ ಮುಂಗಾರುಮೋಡಕವಿದಿರುವ-ಸಂಕಷ್ಟದ ಅನುಭವ ಮತ್ತು ಶಮನದ ಆಗಮನವಾಗುತ್ತಿರುವ ಕಾಲವಿದು. ಮುಷ್ಕರ[ಮತ್ತು]ಜಾತೀಯ ಗಲಭೆಗಳಿಂದ ವಾತಾವರಣವು ಪರಮಾವಧಿ ಬಿಸಿಯೇರಿದೆ; ಅದೇ ಕಾಲದಲ್ಲಿ 8 ಪ್ರಾಂತ್ಯಗಳಲ್ಲಿರುವಂತೆಯೇ ಕೇಂದ್ರದಲ್ಲೂ ಕಾಂಗ್ರೆಸ್ ಸರಕಾರ ಬಂದಿದೆ. ಈ ಮೋಡಗಳಿಂದ ಮಳೆಸುರಿದು ವಾತಾವರಣ ತಣಿಯುವದನ್ನು ರಾಷ್ಟ್ರವೀಗ ಆತ್ಯಾತುರದಿಂದ ನಿರೀಕ್ಷಿಸುತ್ತಿದೆ. ಕೇಂದ್ರ ಮತ್ತು ಪ್ರಾಂತಿಕ ಜನತಾ ಸರಕಾರಗಳು ಸಮಯೋಚಿತ ಸಾಹಸಕ್ಕೆಳಿಯದಿಲು ಯಾವ ಕಾರಣದಿಂದಾದರೂ ವಿಳಂಬಿಸಿದರೆ ಜನತೆಯ ಆತುರವು ಅಸಹ್ಯ ಸಂಕಟವಾಗಿ ಪರಿವರ್ತನವದು ಖಂಡಿತ. ಮುಸ್ಲಿಂಲೀಗಿನ ಬಂಡಾಯ ಮನೋವೃತ್ತಿಯು ಒಂದು ಕಡೆಯಿದ್ದುಕೊಳ್ಳಲಿ. ಯಾವ ರಾಜಕೀಯ ನೀತಿಗೂ ಸೇರದ ಪುಂಡಾಟವನ್ನು ಎಂತಹ ಸರಕಾರವೇ ಆದರೂ ವಜ್ರಹಸ್ತದಿಂದ ದಮನಿಸುವದೊಂದೇ ಉಪಾಯ. ಆದ್ದರಿಂದ ಸರಹದ್ದಿನ ಕಾಡು ಪ್ರದೇಶಗಳ ಳ ಜನರು ಬೊಂಬಾಯಿ, ಕಲ್ಕತ್ತಗಳಂತಹ ನಗರಗಳಲ್ಲೂ ಇದ್ದಾರೆಂದಷ್ಟೇ ಭಾವಿಸಿಕೊಂಡು ಅಂತಹ ಪರಿಸ್ಥಿತಿಯಲ್ಲಿ ಹೇಗೆ ವರ್ತಿಸಬೇಕೋ ಹಾಗೆ ಸರಕಾರವು ವರ್ತಿಸಿದರಾಯಿತು ಆ ವಿಧಾನ ಸ್ಪಷ್ಟವಿದೆ ಹೊರತು ಒಂದು ಸಮಸ್ಯೆಯಾಗಿ ಇಲ್ಲ. ಆದರೆ ಜನಸಾಮಾನ್ಯರ ಜೀವನ ಸಂಕಷ್ಟವು ಇಂತಹುದಲ್ಲ. ಇಂದು ಪ್ರತಿಯೊಂದು ಕೆಲಸಗಾರ ವಿಭಾಗದಲ್ಲೂ ಕಂಡು ಬರುತ್ತಿರುವ ಅತೃಪ್ತಿಯು ನಿಜಕ್ಕೂ ಜೀವನ ನಿರ್ವಹಣದಲ್ಲಿರುವ ಅಡಚಣೆಯ ಪ್ರತಿಫಲ. ಕಮ್ಯೂನಿಸ್ಟರಂತಹ ಕೆಲವರು ಇಂತಹ ಪರಿಸ್ಥಿತಿಯನ್ನು ತಮ್ಮ ಉದ್ದೇಶ ಸಾಧನೆಗಾಗಿ ಉಪಯೋಗಿಸಿಕೊಳ್ಳುತ್ತಿರಬಹುದು. ಆದರೆ ಅದಕ್ಕೆ ಮೂಲಕಾರಣವಾದ ದುಸ್ಥಿತಿಯ ನಿರ್ಮಾಪಕರು ಅವರಲ್ಲ. ಇಲ್ಲಿ ಸೂಕ್ಷ್ಮ ವಿವೇಚನೆ ಅಗತ್ಯ. ಸಾಮಾನ್ಯರ, ಶ್ರಮಜೀವಿಗಳ, ಜೀವನ ಸಂಕಷ್ಟಕ್ಕೊಂದು ಶಮನವೇ ಇಲ್ಲದಿರುವ ದುಷ್ಕಾಲದಲ್ಲಿ ಸಹಾಯಕ ಪಾತ್ರವಹಿಸಿದವನೂ ಶೀವದೂತನಾಗಿ ಕಾಣುತ್ತಾನೆ—ಮುಳುಗುವವನಿಗೆ ಕಡ್ಡಿ ಕೂಡಾ ಕೈಹಿಡಿಯಾಗಿ ಕಾಣುವಂತೆ! ಇಲ್ಲಿ ಪ್ರಜ್ಞೆಯಿದ್ದವರು ಕಡ್ಡಿಗೆ ಕೈಕೊಟ್ಟ ಆವನ ಅಜ್ಞಾನವನ್ನು ಅಪಹಾಸ್ಯ ಮಾಡುವ ಬದಲಿಗೆ ಆವನಿಗೆ ಬಂದಿರುವ ಆಪತ್ತಿಗಾಗಿ ಕರಗಬೇಕು-ಅವನನ್ನು ಮೇಲೆತ್ತಲು ಕೈ ಕೊಡಬೇಕು. ಕಾಂಗ್ರೆಸ್ ಮಂತ್ರಿಗಳು ಈ ಮಾನವ ಹೃದಯವಿದ್ದವರೇ. ನೆಹರು-ಗಿರಿಗಳಂತಹ ಕೂಲಿಗಾರ ನಾಯಕರ ತಲೆಗಿಂದು ಕಿರೀಟವೇರಿದೆ—ಆದರೆ ಅವರ ಹೃದಯಕ್ಕದರ ಕರಿಛಾಯೆಬಿದ್ದಿಲ್ಲ ಜನಸಾಮಾನ್ಯರನ್ನು ಉದ್ಧರಿಸುವದರಲ್ಲೇ ತಮ್ಮ ಅಸ್ತಿತ್ವವಿದೆ ಎಂಬುದನ್ನವರು ಅರಿತಿದ್ದಾರೆ. ಆದರೂ ಅದನ್ನು ಸಾಧಿಸುವಾಗ ಪ್ರಯಾಸವಿದೆ, ಪ್ರತಿಬಂಧಕಗಳಿವೆ. ಎಂಬುದನ್ನೊಪ್ಪಬೇಕು ಆದ್ದರಿಂದ 'ಮರೆಯಬೇಡಿರಿ' ಎಂದು ಪ್ರಾರ್ಥಿಸಿಕೊಳ್ಳುವ ಆಗತ್ಯವಿಲ್ಲದಿದ್ದರೂ 'ತ್ವರೆಮಾಡಿರಿ' ಎಂದು ಕಾಂಗ್ರೆಸ್ ಸರಕಾರವನ್ನು ಒತ್ತಾಯಿಸುವ ಅಗತ್ಯವಿದೆ. ಸಾಮಾನ್ಯರ ಉದ್ಧಾರಕ್ಕೆ ಸಾವಕಾಶವಾಗದಿರಲಿ. ಈ ಕಾರ್ಯಕ್ಕಗತ್ಯವುಳ್ಳ ಶಾಸನಗಳ ತಯಾರಿಯು ಕ್ಷಿಪ್ರದಲ್ಲಾಗಲಿ. ಗುಲಾಮತ್ವವು ತೊಲಗಿ ರಾಷ್ಟ್ರೀಯ ಸರಕಾರ ಬಂತೆಂಬುದು ಜನಸಾಮಾನ್ಯರಿಗೆ ಶಾಂತಿ, ಸಮಾನತೆಗಳ ಪ್ರತ್ಯಕ್ಷಾನುಭವದಿಂದಲೇ ಮುಂದಟ್ಟಾಗಲಿ!

ರಾಷ್ಟ್ರೀಯ ಸರಕಾರದ–

ಇಡೀ ರಾಷ್ಟ್ರದ ಸಂದು ಮೂಲೆಯ ವಾತಾವರಣವೂ ಶುಭ್ರಗೊಳ್ಳುವಂತೆ–ಅಖಿಲ ಹಿಂದೀ ಜನತೆಯಲ್ಲಿ ಆಶಾಂಕುರವಾಗುವಂತೆ–ವಿದೇಶಗಳಿಗೆ ಭಾರತದ ಕುರಿತು ಗೌರವ ಹುಟ್ಟುವಂತೆ ಹಿಂದೀ ಸರಕಾರದ ಉಪಾಧ್ಯಕ್ಷಸ್ಥಾನದಿಂದ ಪಂಡಿತ ನೆಹರುಗಳು ಇದೇ ತಾ 7ನೇ ರಾತ್ರಿ 8-30ಕ್ಕೆ ನವದಿಲ್ಲಿಯಲ್ಲಿತ್ತ ಪ್ರಥಮ ಆಕಾಶವಾಣೀ ಭಾಷಣದ ಸಾರಾಂಶ ಇಲ್ಲದೆ:–

ಸ್ವಾತಂತ್ರ್ಯದ ಮೆಟ್ಟಲಿದು

"ಮಿತ್ರರೇ ಮತ್ತು ಬಂಧುಗಳೇ–ಜೈ ಹಿಂದ್! ನಾನು ಮತ್ತು ನನ್ನ ಅನುಯಾಯಿಗಳು ಹಿಂದೀ ಸರಕಾರದ ಮುಖ್ಯ ಕುರ್ಚಿಗಳನ್ನೇರಿ ಇಂದಿಗೆ ಆರು ದಿನಗಳಾದುವು. ಈ ಪುರಾತನ ಭೂಮಿಯಲ್ಲಿ ಒಂದು ಹೊಸ ಸರಕಾರ, ನಡುಗಾಲ ಅಥವಾ ಹಂಗಾಮಿ ಸರಕಾರ ಅಸ್ತಿತ್ವಕ್ಕೆ ಬಂತು. ನಾವಿದನ್ನು ಭಾರತದ ಪೂರ್ಣ ಸ್ವಾತಂತ್ರ್ಯವನ್ನೇರುವ ಮೆಟ್ಟಲೆಂದು ಕರೆದಿದ್ದೇವೆ. ಪ್ರಪಂಚದ ಎಲ್ಲಾ ಕಡೆಗಳಿಂದಲೂ ಭಾರತದ ಸಂದು ಮೂಲೆಗಳಿಂದಲೂ ಅಭಿನಂದನೆಯ ಮತ್ತು ಶುಭಾಕಾಂಕ್ಷೆಯ ಸಾವಿರಾರು ಸಂದೇಶಗಳು ನಮಗೆ ಬಂದಿವೆ. ಆದರೂ ಈ ಚರಿತ್ರಾರ್ಹ ಘಟನೆಯ ಸಂತೋಷ ಸಮಾರಂಭ ಜರಗಿಸಲು ನಾವು ಕೇಳಿಕೊಳ್ಳದೆ ನಮ್ಮ ಜನರ ಉತ್ಸಾಹವನ್ನು ಕೂಡಾ ಕುಗ್ಗಿಸಿದೆವು. ನಾವಿನ್ನೂ ಮುಂದೊತ್ತುವುದರಲ್ಲೇ ಇದ್ದೇವೆ—ಗುರಿಸೇರುವುದು ಬಾಕಿಯಿದೆ ಎಂಬುದನ್ನು ಜನರರಿತಿರಬೇಕೆಂಬ ಉದ್ದೇಶದಿಂದಲೇ ನಾವು ಹಾಗೆ ಮಾಡಿದೆವು. ನಮ್ಮ ಹಾದಿಯಲ್ಲಿ ಕಷ್ಟಗಳೂ ಆತಂಕಗಳೂ ಬಹಳವಿವೆ. ಮತ್ತು ಗುರಿಯು ಜನರೀಗ ನೆನಸಿರುವಷ್ಟು ಸಮೀಪದಲ್ಲಿರಲಾರದು. ಈಗ ನಾವೇನಾದರೂ ದೌರ್ಬಲ್ಯವನ್ನು ಅಲ್ಪತೃಪ್ತಿಯನ್ನು ಪ್ರದರ್ಶಿಸಿದೆವಾದರೆ ನಮ್ಮ ಧ್ಯೇಯಕ್ಕೆ ದೊಡ್ಡ ಆಘಾತಬೀಳಬಹುದು.

ಹೃದಯ ಭಾರವಾಗಿದೆ

ಕಲ್ಕತ್ತದ ಭಯಂಕರ ಮರಣತನವನ್ನು ಕಂಡು--ಸಹೋದರನು ಮತ್ತೊಬ್ಬ ಸಹೋದರನ ಹತ್ಯಾಕಾಂಡಕ್ಕೆ ತೊಡಗಿದ ಆ ಹುಚ್ಚಾಟವನ್ನು ನೋಡಿ-ನಮ್ಮೆಲ್ಲರ ಹೃದಯಗಳು ಭಾರವಾಗಿವೆ. ನಮ್ಮ ಸಂಕಲ್ಪದ ಮತ್ತು ತಲೆಮಾರುಗಳಿಂದ ಕಷ್ಟನಷ್ಟಗಳನ್ನು ಸಹಿಸಿ ನಾವು ದುಡಿಯುತ್ತಾ ಬಂದ, ಸ್ವಾತಂತ್ರ್ಯವೆಂಬುದು ಆದು ಭಾರತದ ಸರ್ವ ಜನತೆಗಾಗಿ; ಹೊರತು ಯಾವುದಾದರೊಂದು ಪಂಗಡ, ದರ್ಜೆ ಅಥವಾ ಯಾವುದಾದರೊಂದು ಧರ್ಮದ ಅನುಯಾಯಿಗಳಿಗಾಗಿ ಅಲ್ಲ. ಪರಸ್ಪರ ಸಹಕಾರ ಬದ್ಧ ಮಸಾಹತಿನಲ್ಲಿ, ಜೀವನದ ಲ್ಲೊಂದು ಸಾರ ಮತ್ತು ಬೆಲೆಯಿದೆ ಎಂಬಂತೆ ಮಾಡುವ ಎಲ್ಲಾ ಸಂಗತಿ ಮತ್ತು ಸಂದರ್ಭಗಳನ್ನೂ ಸರ್ವರೂ ಸಮಾನತೆಯಿಂದ ಅನುಭೋಗಿಸಬೇಕೆಂಬುದೇ ನಮ್ಮ ಗುರಿಯಾಗಿತ್ತು. ಅಂದ ಮೇಲೆ ಈ ಅಂತಃಕಲಹಗಳೇಕೆ? ಒಬ್ಬರಿಗಿನ್ನೊಬ್ಬರ ಮೇಲೆ ಇಂತಹ ಭಯ ಮತ್ತು ಸಂದೇಹಗಳೇಕೆ?

ನಿಮ್ಮ ಸಹಕಾರವಿರಲಿ

ನಾವು ಹಾಕಿಕೊಳ್ಳುವ ಭವಿಷನ್ಮಹಾ ಧೋರಣೆಯ ಕಾರ್ಯ ಕ್ರಮಗಳ ಕುರಿತು ನಾನೀದಿನ ಬಹಳ ಮಾತಾಡಲಾರೆ-ಅದಕ್ಕೆ ಸ್ವಲ್ಪಸಮಯ ಬೇಕಾಗಿದೆ. ನೀವು ನಮ್ಮ ಮೇಲೆ ಇಷ್ಟುದೊಡ್ಡ ಪರಿಮಾಣದಲ್ಲಿ ತೋರಿಸಿದ ಪ್ರೇಮಾದರಗಳಿಗಾಗಿ ಇಲ್ಲಿ ಧನ್ಯವಾದಗಳನ್ನು ಮಾತ್ರ ಕೊಡುತಿದ್ದೇನೆ. ಇಂತಹ ಹೃದಯ ಸಂಬಂಧ ಮತ್ತು ಸಹಕಾರ ಸ್ಫೂರ್ತಿಗೆ ಸದಾ ಸ್ವಾಗತವಿದ್ದದ್ದೇ. ಅದರಲ್ಲೂ ನಮ್ಮ ಮುಂದಿರುವ ಅತ್ಯಂತ ಕಷ್ಟದ ದಿನಗಳಲ್ಲಿ ಅವುಗಳ ಆವಶ್ಯಕತೆಯು ಹಿಂದೆಂದೂ ಇರದಷ್ಟಿದೆ. ಒಬ್ಬ ಮಿತ್ರರು ನನಗೀ ಸಂದೇಶವನ್ನು ಕಳುಹಿದ್ದಾರೆ —"ರಾಷ್ಟ್ರೀಯ ನಾವೆಯ ಪ್ರಥಮ ಕಪ್ತಾನನೇ; ಪ್ರತಿಯೊಂದು ಬಿರುಗಾಳಿಯನ್ನೂ ಭೇದಿಸಿ ಮುನ್ನುಗ್ಗು. ಪ್ರಯಾಣ ಸಾಗಲಿ". ಉತ್ಸಾಹದಾಯೀ ಸಂದೇಶ. ಆದರೆ ನಮ್ಮ ಕಣ್ಣಮುಂದೆ ಹಲವು ಬಿರುಗಾಳಿಗಳಿವೆ; ನಮ್ಮ ರಾಷ್ಟ್ರ ಹಡಗವು ಹಳೆಯದು; ಹುಳುಕು ಬಿದ್ದುದು; ನಿಧಾನವಾಗಿ ಚಲಿಸುವಂತಹದು, ಮತ್ತು ಇಂದಿನ ಮಿಂಚು ವೇಗದ ಬದಲಾವಣೆಯ ಕಾಲಕ್ಕೆ ತಕ್ಕಂತಿಲ್ಲದಿರುವಂಥಾದ್ದು. ಇದು ತುಂಡರಿಸಲ್ಪಟ್ಟು ಹೊಸತೊಂದಕ್ಕೆ ಸ್ಥಾನ ಕೊಡುವಂಥಾದ್ದಿದೆ. ಆದರೆ ಈ ಹಡಗವಷ್ಟೇ ಹಳೆಯದಿರಲಿ, ಈ ಕಪ್ತಾನನಷ್ಟೇ ಹಳಬನಿರಲಿ, ಸಹೃದಯ ಮತ್ತು ಸಹಾಯದ ಕೈಗಳನ್ನು ಮುಂದೆ ಮಾಡಿಕೊಂಡು ನೆರವಾಗಲು ಮಿಲಿಯಾವಧಿ ಜನರಿದ್ದಾರೆ. ಆದ್ದರಿಂದ ಈ ಕೆರಳಿದ ಸಮುದ್ರವನ್ನು ದಾಟುವ ಧೈರ್ಯವನ್ನು ನಾವು ವಹಿಸಿದ್ದೇವೆ; ಭವಿಷ್ಯವನ್ನು ಭರವಸೆಯಿಂದ ನೋಡುತಿದ್ದೇವೆ.

ನವಯುಗದ ಚಂದಾದಾರರಲ್ಲಿ—

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ **25**ನೇ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ **26**ನೇ ವರ್ಷಾರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ದಯಮಾಡಿ ತಮ್ಮ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುವಂತೆ ವಿನಂತಿ.

ಕೆಲವರಿಗೆ ಕಳಿಸಿದ ವಿ. ಪಿ. ಯು ಇನ್ಕಾರೆಂದು ಷರಾ ಬರೆಯಲ್ಪಟ್ಟು ಹಿಂದೆ ಬಂದಿದೆ. ಪ್ರಾಯಶಃ ಪೋಸ್ಟ್ ಮ್ಯಾನ್ ಬರುವಾಗ ವಿಳಾಸದಾರರು ಸಿಗದೆ ಈ ಪ್ರಮಾದವಾಗಿರಬಹುದಾದುದರಿಂದ ಅಂಥವರೂ ತಮ್ಮ ಚಂದಾ ಹಣವನ್ನು ತ್ವರ್ಯ ಕಳಿಸಿಕೊಡುವಂತೆ ವಿನಂತಿ.

ಪತ್ರಿಕೆ ಬೇಡವಾದವರು ನಮಗೆ ಮುಂದಾಗಿ ತಿಳಿಸಿದರೆ ಉಪಕಾರವಾಗುವುದು.

—ಮೆನೇಜರ್.

ನಾಯಕ ಮಾನ್ಯ ನೆಹರುಗಳ ಅಮೋಘ ಭಾಷಣ!

ಭಾರತದ ನವಚೇತನ

ಆ ಭವಿಷ್ಯವಾದರೋ ಇಷ್ಟರಲ್ಲೇ ರೂಪುಗೊಳ್ಳುತ್ತಿದೆ. ಭಾರತ–ನಮ್ಮ ಹಿರಿಯ ಹಾಗೂ ಪ್ರೀತಿಯ ಭೂಮಿ–ಮತ್ತೊಮ್ಮೆ ಸಂಕಟ ಮತ್ತು ಸಹನೆಯನ್ನನುಭವಿಸುತ್ತಿದೆ. ಅವಳು ಸಾಹಸ ಕೃತ್ಯಗಳ ಉಜ್ವಲಾಕಾಂಕ್ಷೆಗಳಿಂದ ಪುನಃ ನವಯುವತಿಯಾಗಿದ್ದಾಳೆ; ಮತ್ತು ತನ್ನಲ್ಲೂ ತನ್ನ ಕಾರ್ಯದಲ್ಲೂ ವಿಶ್ವಾಸಭರಿತಳಾಗಿದ್ದಾಳೆ. ಎಷ್ಟೋ ವರುಷಗಳಿಂದ ಅವಳು ಸಂಕೋಚ ಸ್ಥಿತಿಯಲ್ಲಿ ಚಿಂತಾಮಗ್ನಳಾಗಿದ್ದು ತನ್ನನ್ನು ತಾನೇ ಮರೆತಿದ್ದಳು. ಆದರೆ ಈಗ ಆಕೆ ವಿಶಾಲ ಪ್ರಪಂಚವನ್ನು ನೋಡಬಲ್ಲವಳಾಗಿ–ಆ ಲೋಕವಿನ್ನೂ ಜಗಳ ಮತ್ತು ಯುದ್ಧಭಾವನೆಗಳಲ್ಲೇ ಇದ್ದರೂ ಲೋಕದ ಇತರ ಜನತೆಯ ಕಡೆಗೆ ಸ್ನೇಹ ಹಸ್ತವನ್ನು ನೀಡಬಲ್ಲವಳಾಗಿ, ಇದ್ದಾಳೆ.

ದೊಡ್ಡ ಯೋಜನೆಯ ಒಂದು ಭಾಗ

ಇಂದಿನ ಎಡೆಗಾಲ ರಾಷ್ಟ್ರೀಯ ಸರಕಾರವೆಂಬುದು ವಿಶಾಲ ಯೋಜನೆಯ ಒಂದಂಗ ಮಾತ್ರ. ಆ ಯೋಜನೆಯಲ್ಲಿ ಸ್ವತಂತ್ರ ಸಾರ್ವಭೌಮಾಧಿಕಾರೀ ಭಾರತದ ರೂಪರೇಖೆ ತಯಾರಿಸಲಿಕ್ಕಾಗಿ ಸದ್ಯದಲ್ಲೇ ಕೂಡಲಿರುವ ಘಟನಾ ಸಮಿತಿಯು ಸೇರಿದೆ. ಆ ಪೂರ್ಣ ಸ್ವಾತಂತ್ರ್ಯವನ್ನು ಆದಷ್ಟು ಬೇಗನೇ ನಿರ್ಮಿಸಬೇಕೆಂಬ ನಿರೀಕ್ಷೆಯಿಂದಲೇ ನಾವು ಈ ಸರಕಾರದೊಳಗೆ ಪ್ರವೇಶಿಸಿದೆವು ಮತ್ತಾ ಸ್ವಾತಂತ್ರ್ಯವನ್ನು, ಗೃಹಕೃತ್ಯಗಳಲ್ಲೂ ವಿದೇಶ ಸಂಬಂಧಗಳ ಮಟ್ಟಿಗೂ ಕಾರ್ಯತಃ ಸಾಧಿಸಿಕೊಳ್ಳುವಷ್ಟು ಪ್ರಗತಿ ಶೀಲವಾಗಿ ವರ್ತಿಸಲು ಆತುರಗೊಂಡಿರುವೆವು. ಒಂದು ಸ್ವತಂತ್ರ ರಾಷ್ಟ್ರವಾಗಿ, ವಿದೇಶವೊಂದರ ಬಾಲವಾಗಿರದೆ, ನಮ್ಮ ಸ್ವಂತ ಧೋರಣೆಯೊಂದಿಗೇನೇ ನಾವು ಅಂತರ್ರಾಷ್ಟ್ರೀಯ ಸಭೆ ಸಮ್ಮೇಲನಗಳಲ್ಲಿ ಪೂರ್ಣಭಾಗ ವಹಿಸಲಿರುವೆವು. ಮಿಕ್ಕ ರಾಷ್ಟ್ರಗಳೊಡನೆ ನಿಕಟ ಹಾಗೂ ಪ್ರತ್ಯಕ್ಷ ಸಂಬಂಧವಿಟ್ಟುಕೊಳ್ಳಬೇಕು; ಮತ್ತು ಲೋಕ ಶಾಂತಿ ಹಾಗೂ ಲೋಕ ಸ್ವಾತಂತ್ರ್ಯ ಸಾಧನೆಯಲ್ಲಿ ಅವುಗಳೊಡನೆ ಬಹಕರಿಸಬೇಕು ಎಂಬುದೇ ನಮ್ಮಾಶೆ".

ವಿದೇಶ ಧೋರಣೆ

ಪರದೇಶ ಸಂಬಂಧವನ್ನು ಪಂಡಿತ ನೆಹರುಗಳು ಹೀಗೆ ಚಿತ್ರಿಸಿದ್ದಾರೆ—"ಸಶಕ್ತ ರಾಷ್ಟ್ರಗಳ ರಾಜಕಾರಣದಲ್ಲಾಗಲೀ ಪಕ್ಷ ಪಂಗಡ ತಂತ್ರಗಳಲ್ಲಾಗಲೀ ನಾವು ಭಾಗ ವಹಿಸುವಂತಿಲ್ಲ. ಯಾರಿಗೂ ಸ್ವಾತಂತ್ರ್ಯವಸ್ನಲ್ಲಗಳೆಯ ಕೂಡದು. ವಸಾಹತುಗಳ ಜನತೆಯ ಸ್ವಾತಂತ್ರ್ಯದ ಕುರಿತು ನಮಗೆ ವಿಶೇಷಾಸಕ್ತಿಯಿದೆ. ಯಾವ ವರ್ಗದ್ವೇಷವಿರಲಿ, ನಾಜೀಶಾಹಿ ಅಥವಾ ಜನಾಂಗ ಮೇಲ್ಮೆಯ ಭಾವನೆಯನ್ನು ನಾವು ಕಠಿಣವಾಗಿ ಪ್ರತಿಭಟಿಸುತ್ತೇವೆ. ನಮಗೆ ಇತರ ದೇಶಾಕ್ರಮಣ ಅಥವಾ ಇತರ ಜನಾಂಗದ ಮೇಲೆ ವಿಶೇಷ ಹಕ್ಕು ಸಂಪಾದಿಸುವ ಆಶೆಯೇ ಇಲ್ಲ. ನಮ್ಮ ಜನರಿಗೆ ವಿದೇಶಗಳಲ್ಲಿ ಸಮಾನತೆಯು ಮತ್ತು ಗೌರವಾರ್ಹ ಸ್ಥಾನಮಾನ ದೊರೆತರಾಯಿತು. ಹಿಂದಿನ ಕಟು ಅನುಭವಗಳನ್ನು ಮರೆತು ಇಂಗ್ಲಾಂಡು ಮತ್ತಿತರ ವಸಾಹತುಗಳೊಡನೆ ನಾವು ಮೈತ್ರಿಯಿಂದಿರಲು ಬಯಸುತ್ತೇವೆ". ದಕ್ಷಿಣಾಫ್ರಿಕದ ಬಿಳಿ ಜನರ ವರ್ಣದ್ವೇಷವನ್ನು ಕಠೋರವಾಗಿ ಖಂಡಿಸಿ ಅದು ಮುಂದುವರಿದರೆ ಮಹಾ ಘರ್ಷಣೆ ಮತ್ತು ಲೋಕ ಹಾನಿಯೊದಗಬಹುದೆಂದು ಎಚ್ಚರಿಸಿದ್ದಾರೆ. ಅಮೇರಿಕ ಮತ್ತು ... ಪೂರ್ವಕ ಶ್ಲಾಘನೆ ಸಲ್ಲಿಸಿ ಏಸ್ಯಾದಲ್ಲಿ ಭಾರತಕ್ಕಿರುವ ಮುಖ್ಯ ಸ್ಥಾನವನ್ನೂ ಸಮೀಪ ಸಂಬಂಧವನ್ನೂ ಎತ್ತಿ ಹೇಳಿ, ಇಂಡೋನೇಸಿಯಾ ಮತ್ತು ಚೀನದ ಸ್ವಾತಂತ್ರ್ಯ ಸೌಖ್ಯವನ್ನು ಪ್ರಬಲವಾಗಿ ಸಮರ್ಥಿಸಿದ್ದಾರೆ. ಆ ಮೇಲೆ–

ಗೃಹ ವ್ಯವಸ್ಥೆ

"ನಾನು ನಮ್ಮ ಗೃಹ ಸಂಬಂಧದ ಧೋರಣೆಯ ಕುರಿತು ಏನನ್ನೂ ಹೇಳಿಲ್ಲ—ಮತ್ತೀ ಸಂದರ್ಭದಲ್ಲಿ ಹೇಳಲಿಚ್ಛಿಸುವದೂ ಇಲ್ಲ. ಆದರೆ, ನಾವಿಷ್ಟು ವರುಷಗಳಿಂದ ಯಾವ ತತ್ವಗಳಿಗಾಗಿ ಕಾದಾಡಿದ್ದೆವೋ ಆ ತತ್ವಗಳನ್ನಾಧರಿಸಿಯೇ ನಮ್ಮ ಗೃಹ ಧೋರಣೆಯಿರಬೇಕಾದುದು ಸಹಜ. ನಾವು ಭಾರತದ ಸಾಮಾನ್ಯ ಹಾಗೂ ಮೂಲೆ ಪಾಲಾದ ಜನದ ಕಡೆಗೆ ನೋಡಲಿದ್ದೇವೆ. ಅವರಿಗೆ ರಕ್ಷಣೆ ಕೊಡಲಿಚ್ಛಿಸುತ್ತೇವೆ. ಅವರ ಜೀವನದ ಅಂತಸ್ತನ್ನು ಏರಿಸಲು ಬಯಸುತ್ತೇವೆ. ಅಸ್ಪರ್ಶತೆ ಮತ್ತಿತರ ರೀತಿಯ ಸ್ವನಿರ್ಮಿತ ಅಸಮಾನತೆಗಳ ವಿರುದ್ಧ ಹೋರಾಟವನ್ನು ಮುಂದೊತ್ತಲಿದ್ದೇವೆ. ಆರ್ಥಿಕಸ್ಥಿತಿಯಲ್ಲೂ ಇತರ ರೀತಿಯಿಂದಲೂ ಹಿಂದೆ ಬಿದ್ದಿರುವವರ ಉದ್ಧಾರಕ್ಕಾಗಿ ಪ್ರಯತ್ನಿಸಲು ನಾವು ವಿಶೇಷ ಲಕ್ಷ್ಯಕೊಡುವೆವು. ಈ ದಿನ ಮಿಲಿಯಾವಧಿ ಮಂದಿಗೆ ಅನ್ನ, ವಸ್ತ್ರ ಮತ್ತು ಮನೆಯ ಅಭಾವವಿದೆ. ಮತ್ತೆಷ್ಟೋ ಮಂದಿಯೀಗ ಹಸಿವು ಪೀಡೆಯ ಒದ್ದಾಟದಲ್ಲಿದ್ದಾರೆ. ಇವುಗಳನ್ನು ಪೂರೈಸಿಕೊಡುವದು ನಮ್ಮ ಅವಸರದ ಹಾಗೂ ಅತ್ಯಂತ ಕಷ್ಟದ ಕಾರ್ಯ. ಇತರ ರಾಷ್ಟ್ರಗಳು ಆಹಾರ ಧಾನ್ಯಗಳನ್ನು ಕಳುಹಿಸಿ ನಮಗೆ ಸಹಾಯಮಾಡುವವೆಂದು ನಮ್ಮಾಶೆ. ಅಷ್ಟೇ ಅವಸರದ ಮತ್ತು ಪ್ರಾಮುಖ್ಯ ಕಾರ್ಯವೆಂದರೆ ಭಾರತ ವ್ಯಾಪಿಯಾಗಿರುವ ದುಃಸ್ಫೂರ್ತಿಯನ್ನು ದಮನಿಸಿ ಒಲಿಸಿಕೊಳ್ಳುವದು, ಪರಸ್ಪರ ಘರ್ಷಣೆಗಳಿಂದ ನಾವು ದೀರ್ಘಾವಧಿಯಿಂದ ಕನವರಿಸುತ್ತಿರುವ ಭಾರತ ಸ್ವಾತಂತ್ರ್ಯಭವನವನ್ನೆಂದಿಗೂ ಕಟ್ಟಲಾರೆವು. ಎಂತಹ ರಾಜಕೀಯ ಸ್ಥಿತಿ ಬಂದರೂ ಈ ಭೂಮಿಯಲ್ಲಿರುವ ನಾವೆಲ್ಲರೂ ಒಟ್ಟಿಗೆ ಜೀವಿಸಿ ಒಟ್ಟಿಗೆ ದುಡಿಯಲು ಬದ್ಧರಿದ್ದೇವೆ. ದ್ವೇಷ ಮತ್ತು ಹಿಂಸೆಯು ಈ ಮೂಲಭೂತ ಸ್ಥಿತಿಯನ್ನೆಂದಿಗೂ ಬದಲಾಯಿಸಲಾರವು; ಅಥವಾ ಭಾರತದಲ್ಲೀಗ ಆಗುತ್ತಿರುವ ಬದಲಾವಣೆಗಳನ್ನೂ ನಿಲ್ಲಿಸಲಾರೆವು.

ಪ್ರಾಂತಿಕ ಪಂಗಡಗಳು

ಮುಂಬರುವ ಘಟನಾ ಸಮಿತಿಯ ಪ್ರಾಂತಿಕ ವಿಭಾಗಗಳ ಕುರಿತು ವಿಶೇಷ ಬಿಸಿ ವಾದ ನಡೆದಿದೆ. ಪ್ರಾಂತಿಕ ಪಂಗಡಗಳ ಪ್ರಶ್ನೆಯನ್ನು ಚರ್ಚಿಸುವ ಪ್ರತ್ಯೇಕ ವಿಭಾಗಗಳಲ್ಲಿ ಕುಳಿತುಕೊಳ್ಳುವುದನ್ನು ನಾವು ಅಂಗೀಕರಿಸಿದ್ದೇವೆ; ಮತ್ತದಕ್ಕೆ ಸಂಪೂರ್ಣ ಸಿದ್ಧರಿದ್ದೇವೆ. ಘಟನಾ ಸಮಿತಿಯನ್ನು ತಿಕ್ಕಾಟಗಳ ರಂಗವಾಗಿ ಮಾರ್ಪಡಿಸಬೇಕೆಂದಾಗಲೀ, ಒಂದು ಅಭಿಪ್ರಾಯದ ಮೇಲೆ ಮತ್ತೊಂದು ಅಭಿಪ್ರಾಯವನ್ನು ಬಲಾತ್ಕಾರದಿಂದ ಹೇರಬೇಕೆಂದಾಗಲೀ ನಾವೆಂದೂ ಇಚ್ಛಿಸುವದಿಲ್ಲವೆಂದು ನನ್ನ ಅನುಯಾಯಿಗಳ ಹಾಗೂ ನನ್ನ ಪರವಾಗಿ ನಾನಿಲ್ಲಿ ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ತೃಪ್ತ ಹಾಗೂ ಸಂಯುಕ್ತ ಭಾರತವನ್ನು ನಿರ್ಮಿಸುವ ವಿಧಾನ ಹಾಗಲ್ಲ. ಆದ್ದರಿಂದಲೇ ಇದು ವರೆಗೆ ಆಗಿ ಹೋದ ಘಟನೆಗಳು, ಆಡಲ್ಪಟ್ಟ ಕಠೋರ ಶಬ್ದಗಳು, ಏನಿದ್ದರೂ ನಾವು ಸಹಕಾರದ ಹಾದಿಯನ್ನು ತೆರೆದೇ ಇಟ್ಟಿದ್ದೇವೆ. ಮತ್ತು ನಮ್ಮೊಡನೆ ಭಿನ್ನಾಭಿಪ್ರಾಯವಿರುವವರಾದರೂ ನಿರ್ಧಾರ ನಿರ್ಬಂಧವೇನೊಂದೂ ಇಲ್ಲದೆ ಸಮಾನರಂತೆ, ಪಾಲುಗಾರರಂತೆ ಘಟನಾ ಸಮಿತಿಯೊಳಗೆ ಬರಲೆಂದು ಆಮಂತ್ರಿಸುತ್ತೇನೆ. ನಾವು ಒಟ್ಟಾಗಿ ಮುಖಾಮುಖಿ ಸಂಭಾಷಿಸಿಕೊಳ್ಳುವಾಗ ಸದ್ಯದ ಸಂಕಷ್ಟಗಳೆಲ್ಲಾ ಆರಿ ಹೋಗಿ ಹಿಂತಕ್ಕೆಗೂಡಬಹುದು.

ವಿಜಯದತ್ತ ಧಾವಿಸುವಾ!

ಭಾರತವೀಗ ಮುಂದೆ ಚಲಿಸ ಹತ್ತಿದೆ; ಹಳೇ ಸ್ಥಿತಿ ಕಳೆಯುತ್ತಾ ಇದೆ. ದೀರ್ಘಾವಧಿಯಿಂದಲೂ ನಾವು ವಿದ್ಯಮಾನಗಳ ಕೇವಲ ಪ್ರೇಕ್ಷಕರಾಗಿದ್ದೆವು. ಈಗ ತಾನೆ ಕಾರ್ಯಾಚರಣೆಯ ಯೋಗ ನಮ್ಮ ಜನತೆಗೊದಗಿದೆ. ನಮ್ಮ ಬಯಕೆಯ ಚರಿತ್ರೆಯನ್ನು ನಾವೀಗ ನಿರ್ಮಿಸಬೇಕು. ಈ ಬೃಹತ್ಸಾಧನೆಯಲ್ಲಿ ನಾವೆಲ್ಲಾ ಒಂದಾಗೋಣ. ಈ ಭಾರತವನ್ನು—ನಮ್ಮ ಹೃದಯದ ಹೆಗ್ಗಳಿಕೆಯನ್ನು—ಶಾಂತಿ ಮತ್ತು ಪ್ರಗತಿಯಲ್ಲಿ ಅಗ್ರಪಂಗ್ತಿ ಹಿಡಿದಿರುವ ರಾಷ್ಟ್ರಗಳ ಸಾಲಿಗೆ ಸೇರಿಸೋಣ. ಬಾಗಿಲು ತೆರೆದಿದೆ— ಅದೃಷ್ಟವು ಎಲ್ಲರನ್ನೂ ಕಾದಿದೆ. ಗೆಲ್ಲುವವದಾರು, ಸೋಲುವದಾರು ಎಂಬ ಪ್ರಶ್ನೆಯಿಲ್ಲ. ಯಾಕೆಂದರೆ ನಾವೆಲ್ಲಾ ಒಟ್ಟಿಗೆ ಮುಂದೊತ್ತಲಿರುವ ಬಂಧುಗಳು. ಗೆಲ್ಲುವದಾದರೆ ಎಲ್ಲರೂ ಒಟ್ಟಿಗೆ ಗೆಲ್ಲುವೆವು, ಇಲ್ಲವೇ ಒಟ್ಟಿಗೆ ಪತನಗೊಳ್ಳುವೆವು. ಆದರೆ ಇಲ್ಲ; ಮುಂದೊತ್ತುವದೊಂದೇ ಇದೆ ಹೊರತು ಪರಾಭವವಿಲ್ಲ. ನಾವು ವಿಜಯದ ಕಡೆಗೆ–ಸ್ವಾತಂತ್ರ್ಯದ ಕಡೆಗೆ–ಭಾರತದ 400 ಮಿಲಿಯ ಮಂದಿಯ ಸ್ವಾತಂತ್ರ್ಯ ಮತ್ತು ಸೌಖ್ಯದ ಕಡೆಗೆ–ಮುಂದೊತ್ತುತ್ತೇವೆ. ಜೈ ಹಿಂದ್!"

NOTICE

ಉಡುಪಿ. ಡಿ. ಮು. ಕೋರ್ಟಿನಲ್ಲಿ

O. P. No. 42/1946.

1. ದೇಯಿ ಸೆಟ್ಟಿಗಾರ್ತಿ ಬೂದ ಸೆಟ್ಟಿಗಾರನ ಪತ್ನಿ 2. ಮಾಧವ 3. ಗೋವಿಂದ ಮ್ಯಾನೇಜರ್—ಬೂದ ಸೆಟ್ಟಿಗಾರನ ಮಕ್ಕಳು ಕ್ಷೇಮ ಚಿಂತಕರು ತಾಯಿ 1ನೇ ಅರ್ಜಿದಾರಳು

ಉಡುಪಿ ತಾಲೂಕು ಕಿದಿಯೂರು ಗ್ರಾಮದ ಕಕ್ಷಿಗಳು --ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನಂದರೆ

1ನೆ ಅರ್ಜಿದಾರಳ ಗಂಡ 2 3 ನೆ ಅರ್ಜಿದಾರರ ತಂದೆ ಸಂತ್ರ ಮೃತಪಟ್ಟ ಬೂದ ಸೆಟ್ಟಿಗಾರನು ದಿ ಕೆನರಾ ಮ್ಯೂಚ್ಯುವಲ್ ಎಸ್ಯೂರೆನ್ಸ್ Co. ಲಿಮಿಟೆಡ್ ಉಡುಪಿ ಈ ಕಂಪ್ನಿಯಲ್ಲಿ ರುಪಾಯಿ 1000 ಕ್ಕೆ (ಒಂದು ಸಾವಿರ) ಮಾಡಿದ No 10145ನೆ ಪೋಲಿಸಿಯ ಆಯಿವಜು ವಸೂಲು ಪಡೆಯುವರೆ ವಾರಿಸುದಾರರು–ವ ಹಕ್ಕುದಾರರೆಂತಲೂ ಆ ಪ್ರಕಾರ ಆಯಿವಜು ವಸೂಲು ಮಾಡುವರೆ 1ನೆ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡ್ಬೇಕಾಗಿ ಸಹಾ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿ ತಾ 26-9-46ಕ್ಕೆ ತನ್ಸು ಬಗ್ಗೆ ವಿಚಾರಣೆಗಾಗಿರುವದೆ–ಆಕ್ಷೇಪ ಹೇಳತಕ್ಕವರು ಸ್ವತಹಾ ಯಾ ಪ್ಲೀಡರ ಮುಖಾಂತ್ರ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸೋಣಾಗಿಯದೆ.

By order of the Court

Narashimha Vittal Kamath
Advocate for Petitioners.

ಉಡುಪಿ, 5-9-46.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ತಾರೀಕು **10—9—46**ರಿಂದ

ಕೀರ್ತಿ ಪಿಕ್ಚರ್ಸ್‌ನವರ—

ಮೇಘದೂತ್

ಲೀಲಾ ದೇಸಾಯಿ, ಸಾಹು ಮೋಡಕ್, ನಾಸ್ತಿ.

ಬರುವ ಚಿತ್ರ:—

ಮೇರಾ ಗಾಂವ್

ಹಂಸಾ, ಜೈರಾಜ್.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S 400/1945. R. E. P. 218/1946

ಅರ್ಜಿದಾರಳು —ವೆಂಕಮ್ಮ ಸೆಡ್ತಿ

ಯದ್ರಿರು —ಮುಕಾಂಬಿಕೆ ಸೆಡ್ತಿ ಕೂಡಾ

ಸದ್ರಿ ಅಮ್ಲಜ್ಯಾರಿಯ ಅರ್ಜಿದಾರಳು ದೇವಲ್ಕುಂದ ಗ್ರಾಮದಲ್ಲಿರುವ ದಾರಮ್ಮ ಸೆಡ್ತಿ ಮಗಳು ವೆಂಕಮ್ಮ ಸೆಡ್ತಿಯು ಸದ್ರಿ ಗ್ರಾಮದಲ್ಲಿರುವ ದಾರಮ್ಮ ಸೆಡ್ತಿ ಮಕ್ಕಳು 3ನೇ ಎದ್ರಿ ರಾಮಯ್ಯ ಸೆಟ್ಟಿ, 5ನೇ ಎದ್ರಿ ಕಾಳಪ್ಪ ಸೆಟ್ಟಿ ಕೂಡಾ 2ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ

ಅರ್ಜಿದಾರಳು ಯೆದ್ರಿರ ಮೇಲೆ ಪಡೆದ ಈ ಕೋರ್ಟು ಕ್ರಮ ನಂಬ್ರ 400/45ನೇ ಡಿಕ್ರಿ ಸಮಾಧಾನದ ಬಗ್ಗೆ ನಡ್ಸಿದ ಮೇಲಿನ ಅಮ್ಲಜ್ಯಾರಿ ವ್ಯವಹರಣೆಯಲ್ಲಿ ಯೆದ್ರಿರ ಪಕ್ಷಿನ ಸ್ಥಿರಾಸ್ತಿ ಯೇಲಮ್ಮಿನ ಕುರಿತು ನಿರ್ಣಯಿಸುವರೆ ಸದ್ರಿ ಅಮ್ಲಜ್ಯಾರಿಯನ್ನು ತಾರೀಕು 26-9-46ಕ್ಕೆ ಮೇಲಿನ ಕೋರ್ಟಿನಲ್ಲಿ ತಸ್ಕಿಗೆ ವಿಚಾರಣೆಗಾಗಿರುವದೆ ಯೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ. ತಿಳಿದಿರು ಪಡ.

S S Kolkebail
Advocate for Petitioners

ಮೊಕ್ಕಾಂ ಕುಂದಾಪುರ
ತಾ 9—9—46

ಉಡುಪಿ.

ಕಲಾವೃಂದ—ದಿನ ೪-೯-೪೬ರಂದು ಕಲಾವೃಂದದ ತೃತೀಯ ವಾರ್ಷಿಕ ನಾಲ್ಕನೇ ಸಭೆಯು ಶ್ರೀಮಾನ್ ಕೊಡವೂರು ಶಂಕರನಾರಾಯಣ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಉ ವೆಂ. ಪುತ್ತಾಯರ 'ಸುಧಾರಣೆಬೇಕು? ಬೇಡ? ಏಕೆ? ಎಲ್ಲಿ" ಎಂಬೀ ವಿಷಯದ ಕುರಿತು ಜರಗಿತು.

ಸಾಕ್ಷ್ಯಕೂಟ-ಇದರ ದ್ವಿತೀಯ ವಾರ್ಷಿಕ ಸಭೆಯು ತಾ 8-9-46ರಲ್ಲಿ ನೋರ್ಡನ್ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಶ್ರೀ ಕೆ. ಆರ್. ಅನಂತ ಪುರಾಣಿಕರ ಅಧ್ಯಕ್ಷತೆಯಲ್ಲಿ ಜರಗಿತು.

ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಳ-ಈ ವಿದ್ಯಾಸಂಸ್ಥೆಯ ವರ್ಧಂತಿ ಸಮಾರಂಭವು ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಇದೇ ತಾ 16 17 18ರಲ್ಲು ಈ ಕೆಳಗಿನ ಕಾರ್ಯಕ್ರಮಗಳಿಂದ ಆಚರಿಸಲ್ಪಡುವುದು. ಮೊದಲದಿನದ ಸಭೆಯ ಅಧ್ಯಕ್ಷರು ಶ್ರೀ ಬಿ. ವೈಕುಂಠ ಬಾಳಿಗರು-ವಿದ್ಯಾಕ್ರಮಗಳಲ್ಲಿ ತಿದ್ದುಪಡಿ ಮಾಡಲ್ಪಟ್ಟ ಹುಸ್ಸೇನ್ ಕಮಿಟಿಯ ವರದಿ ವಾಚನ ಮತ್ತು ಆ ಕುರಿತು ಚರ್ಚೆ ಎರಡನೆ ದಿನದ ಸಭೆಯು ಡಾ। ಯು. ಪಿ. ಮಲ್ಯ. ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಹಿಂದೂಸ್ಥಾನದ ವಿದ್ಯಾಭ್ಯಾಸದಲ್ಲಿ ಭಾಷೆಯ ಸಮಸ್ಯೆಯ ಕುರಿತು ಶ್ರೀ ಎಮ್. ಎಸ್. ಪಿಕಾಂಟರ ರಾಯರು ಭಾಷಣ ಮಾಡುವರು, ಕೊನೆಯ ದಿನ ಎಕೆಡೆಮಿಯ ವರದಿಯನ್ನು ರಿಜಿಸ್ಟ್ರಾರ್

ಪತ್ರವ್ಯವಹಾರ.

[ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ನ.]

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆ.

ಜಿಲ್ಲಾ ಕಾಂಗ್ರೆಸು ಕಮಿಟಿಯ ಚುನಾವಣೆಗೆ ಕಾರ್ಕಳ ಸರ್ಕಲಿನಿಂದ ೨ ಸ್ಥಳಗಳ ಬಗ್ಗೆ ಶ್ರೀಗಳಾದ ಕೆ. ವೆಂಕಟೇಶ ಪ್ರಭು, ಜಿ. ಮಾಧವ ಪೈ, ಕೆ. ಓಬಯ್ಯ ಹೆಗ್ಡೆ, ಎಂ. ಎಸ್ ಅಧಿಕಾರಿ ಕೂಡ 4 ಜನರು ಉಮೇದ್ವಾರರಿರುವುದಾಗಿಯೂ, ಚುನಾವಣೆಯು ತಾ.12-8-1946ಕ್ಕೆ ನಡೆಯುವದಾಗಿಯೂ ಚುನಾವಣಾ ಅಧಿಕಾರಿಗಳು ತಾ. 1-8 46ರ ನವಭಾರತದಲ್ಲಿ ಪ್ರಕಟಿಸಿದ್ದರು. ಉಮೇದ್ವಾರರು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಿರ್ಣಯಿಸಿದ ತಾ. 30 7 1946ಕ್ಕೆ ಆಗಿತ್ತು. ಹೀಗಿರುತ್ತಾ ಚುನಾವಣಾ ಅಧಿಕಾರಿಗಳು ತಾ. 12-8-1946ಕ್ಕೆ ಚುನಾವಣೆಯನ್ನು ನಡಿಸದೆ, ಶ್ರೀ ಎಂ. ಎಸ್. ಅಧಿಕಾರಿಗಳು ಹಾಗೂ ಶ್ರೀ ಓಬಯ್ಯ ಹೆಗ್ಡೆಯವರು ಸ್ಪರ್ಧೆ ಬೇಡವೆಂದು ತಮ್ಮ ನಾಮಪತ್ರ ಹಿಂತೆಗೆದುಕೊಂಡುದರಿಂದ ಮಿಕ್ಕ ಇಬ್ಬರು ಅವಿರೋಧವಾಗಿ ಆರಿಸಿ ಬಂದಿರುವರು ಎಂದು ತಾ. 11 8-1946ರ ನವಭಾರತದಲ್ಲಿ ಪ್ರಕಟಿಸಿರುತ್ತಾರೆ. ಸದ್ರಿ ಚುನಾವಣೆಯು ಕಾನೂನು ಪ್ರಕಾರ ಆಸಿಂಧು ಆಗಿರುತ್ತದೆ. ಉಮೇದ್ವಾರರು ನಿರ್ಣಯಿಸಿದ ತಾರೀಕಿನೊಳಗೆ ನಾಮಪತ್ರವನ್ನು ವಾಪಾಸು ತೆಗೆದುಕೊಳ್ಳದೆ ಅನಂತರ ವಾಪಾಸು ತೆಗೆದುಕೊಂಡ ನಾಮಪತ್ರಗಳಿಗೆ ಕಾನೂನು ಪ್ರಕಾರ ಬೆಲೆ ಇಲ್ಲವಾದ್ದರಿಂದ ತಾ. 12 8 1946ಕ್ಕೆ ನಾಲ್ಕು ಜನ ಉಮೇದ್ವಾರರೊಳಗೆ ಚುನಾವಣೆ ಆಗಲೇ ಬೇಕಿತ್ತು. ಆದುದರಿಂದ ಚುನಾವಣಾ ಅಧಿಕಾರಿಗಳು ಕಾರ್ಕಳದಲ್ಲಿ ಅವಿರೋಧ ಆಯ್ಕೆ ಎಂದು ಮಾಡಿದ ಚುನಾವಣೆಯು ಕಾನೂನು ಪ್ರಕಾರ ಮಂಜೂರು ಮಾಡಲ್ಪಡದೆ ರದ್ದು ಮಾಡಲ್ಪಡತಕ್ಕದ್ದಾಗಿದ್ದು ಪ್ರತ್ಯೇಕ ಚುನಾವಣೆಯನ್ನು ಮಾಡಬೇಕಾಗಿರುತ್ತದೆ ಚುನಾವಣಾಅಧಿಕಾರಿಗಳ ವರ್ತನೆಯಿಂದ ತಮಗೆ ಬೇಕಾದ ಉಮೇದ್ವಾರರನ್ನು ಆರಿಸುವ ಹಕ್ಕನ್ನು ಮತದಾರರಿಂದ ಕಿತ್ತುಕೊಂಡ ಹಾಗಾಗಿಯದೆ. ಹೀಗೆಯೇ ಜಿಲ್ಲೆಯ ಬೇರೆ ಕಡೆಗಳಲ್ಲಿಯೂ ಆಗಿಯದೆ ಎಂದು ತಿಳಿದು ಬರುತ್ತದೆ ಹೀಗೆ ಅಕ್ರಮ ಆಯ್ಕೆ ಆಗಿದ್ದ ಕಾರ್ಕಳದಲ್ಲಿಯೂ ಬೇರೆ ಕಡೆಗಳಲ್ಲಿಯೂ, ಆಯ್ಕೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ರದ್ದುಮಾಡಿ ಕೂಡಲೇ ಪ್ರತ್ಯೇಕ ಚುನಾವಣೆಯನ್ನು ಮಾಡುವುದು ನ್ಯಾಯವಿದೆ. ಇಲ್ಲವಾದರೆ ಈಗ ಆರಿಸಿ ಬಂದ ಜಿಲ್ಲಾ ಕಾಂಗ್ರೆಸು ಕಮಿಟಿಯು ಅಸಿಂಧುವ ಅನಧಿಕೃತವಾಗಿ ಕಮಿಟಿಯವರು ಮಾಡಿರಬಹುದಾದ ಎಲ್ಲ ಕಾರ್ಯಕ್ರಮಗಳೂ ಕ್ರಮಬದ್ಧವಾಗಿರಲಾರವು.

ಕೆ. ಶ್ರೀನಿವಾಸ ರಾವ್,
ಕಾರ್ಕಳದ ಓರ್ವ ಮತದಾರ.

ಡಾ। ಶ್ರೀ ಮಾಧವ ಪೈಗಳವರು ಓದುವರು ಡಿ। ಬೊ। ಎಡ್ಯುಕೇಶನಲ್ ಆಫೀಸರರಾದ ವಿದ್ವಾನ್ ಶ್ರೀ ಹೊಸಬೆಟ್ಟು ರಾಮರಾಯರು ಪದವೀದಾನ ಸಮಾರಂಭದ ಭಾಷಣ ಮಾಡುವರು.

ಬರುವ ಜಿಲ್ಲಾ ಬೋರ್ಡು ಚುನಾವಣೆ

ಸಮ್ಯಪಲ್ಲಿಯೇ ಜರಗಲಿಕ್ಕಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಪೋಲಿಂಗ್ ಸ್ಟೇಶನನ್ನು ಸರಕಾರದವರೂ ತೆರೆಯುವುದು ಅತೀ ಆಗತ್ಯವಿದೆ ಮೊದಲಿನಂತೆ ಕೆಲವು ಗ್ರಾಮಗಳಿಗೆ ಒಂದು ಪೋಲಿಂಗ್ ಸ್ಟೇಶನನ್ನು ಇಟ್ಟ ಪಕ್ಷದಲ್ಲಿ ಮತದಾರರಿಗೆ ಹೋಗಿ ಅಥವಾ ಅವರನ್ನು ಕರೆದುಕೊಂಡು ಹೋಗಿ ಅವರ ಮತವನ್ನು ಉಪಯೋಗಿಸುವಂತೆ ಮಾಡಲು ಬಹಳ ಕಷ್ಟ ಇದರಿಂದ ಕೆಲವು ಶ್ರೀಮಂತರಿಗೇನೆ ಜಿಲ್ಲಾ ಬೋರ್ಡಿಗೆ ಉಮೇದ್ವಾರರಾಗಿರಲು ಸಾಧ್ಯ ವಿನಹ ಬಡವರಾದ ಮತ್ತು ನಿಜವಾಗಿ ಜನರ ಕಷ್ಟದಿಂದ ಹೋರಾಡಿ ಕೆಲಸ ಮಾಡುವ ವಿದ್ಯಾವಂತರಿಗೆ ಉಮೇದ್ವಾರರಾಗಿ ಜಯಿಸಲು ಕಷ್ಟಸಾಧ್ಯ ಶ್ರೀಮಂತರಾದರೋ ಚುನಾವಣೆ ಬಗ್ಗೆ ಬೇಕಾದಷ್ಟು ಬಸ್ಸುಗಳು, ಕಾರುಗಳು ವಗೈರೆ ವಾಹನಗಳನ್ನು ಇಟ್ಟು ಸಾವಿರಾರು ರೂಪಾಯಿ ಖರ್ಚು ಮಾಡಲಿಕ್ಕೆ ತಯಾರು ಇರುತ್ತಾರೆ, ನಿಜವಾಗಿ ಜನತಾಸೇವೆ ಮಾಡಬೇಕೆಂದಿರುವ ಬಡ ಮತ್ತು ಉತ್ಸಾಹಿ ವಿದ್ಯಾವಂತರಿಗೆ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಶ್ರೀಮಂತರ ಎದುರಿಗೆ ಹೋರಾಡಿ ಜಯ ಸಿಕ್ಕುವ ಸಂಭವವೇನೂ ಇಲ್ಲ ಎಂತಲೇ ಹೇಳಬಹುದು ಚುನಾವಣೆಯೆಂಬುದು ಒಂದು ತಮಾಷೆ ಆಗಿ ಹೋಗಿಯದೆ.

ಎಷ್ಟರ ವರೆಗೆ ಮತದಾರರು ವಿದ್ಯಾವಂತರಾಗಿ ಎಲ್ಲಾ ಪ್ರಾಯಸ್ಥರಿಗೆ ಮತಕೊಡುವ ಹಕ್ಕು ಇರುವುದಿಲ್ಲವೋ ಅಷ್ಟರ ವರೆಗೆ ನಿಜವಾಗಿ ಜನತಾಸೇವೆ ಮಾಡಬೇಕೆಂಬ ಒಂದೇ ಧ್ಯೇಯದಿಂದ ಜಿಲ್ಲಾ ಬೋರ್ಡು ಚುನಾವಣೆಗೆ ನಿಲ್ಲುವ ಬಡ ವಿದ್ಯಾವಂತರಿಗೆ ಮುಂಚಿನ ಕ್ರಮಪ್ರಕಾರ ಜಯ ಸಿಕ್ಕುವ ಸಂಭವ ತೀರ ಕಡಿಮೆ. ಶ್ರೀಮಂತರು ಧನಬಲದ ದೆಸೆಯಿಂದ ಕೇವಲ ಅಧಿಕಾರ ಗೌರವಕ್ಕೋಸ್ಕರ ಚುನಾವಣೆಗಳಲ್ಲಿ ಸಾವಿರಾರು ರೂಪಾಯಿ ಅನಾವಶ್ಯಕವಾಗಿ ವೆಚ್ಚಮಾಡಿ ಹೋರಾಡಿ ಜಯಶೀಲರಾಗುತ್ತಾರೆ. ಹಾಗೆ ಚುನಾವಣೆಗೋಸ್ಕರ ಅನಾವಶ್ಯಕ ಮಾಡುವ ಹಣವನ್ನು ಅವರು ಯಾವುದಾದರೊಂದು ಸಾರ್ವಜನಿಕ ಕೆಲಸಕ್ಕೆ ಕೊಡಲು ತಯಾರು ಇಲ್ಲ.

ಚುನಾವಣೆಯು ನಿಜವಾದ ಪ್ರಯೋಜನವನ್ನು ಹೊಂದಬೇಕಾದರೆ ಸಾರ್ವಜನಿಕ ಕಾರ್ಯಗಳಲ್ಲಿ ನುರಿತ ವಿದ್ಯಾವಂತರಾದ ಯೋಗ್ಯ ಜನರು ಚುನಾವಣೆಯಲ್ಲಿ ಭಾಗವಹಿಸಲಿಕ್ಕೆ ಅನುಕೂಲವಾಗಬೇಕು. ಬಡತನವು ಆ ಬಗ್ಗೆ ಅಡ್ಡಿಯಾಗಕೂಡದು. ಆದುದರಿಂದ ಬಡವರಿಗೆ ಕೂಡ ಚುನಾವಣೆಯಲ್ಲಿ ಭಾಗವಹಿಸಿ ಅವರ ಯೋಗ್ಯತೆಯಿಂದ ಮತದಾರರ ವಿಶ್ವಾಸಪಡೆದು ಜಯಶೀಲರಾಗಿ ಬರುವರೆ ಅನುಕೂಲವಾಗುವಂತೆ ಬರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಪೋಲಿಂಗ್ ಸ್ಟೇಶನನ್ನು ಇಡುವಂತೆ ಸಾರ್ವಜನಿಕರು ಈಗಲೇ ಚಳವಳವನ್ನು ಮಾಡಿ ಜನರು ಸರಕಾರವು ಆ ಪ್ರಕಾರ ವರ್ತಿಸುವಂತೆ ಮಾಡುವುದು ಜಿಲ್ಲೆಯ ಹಿತದೃಷ್ಟಿಯಿಂದ ಅತೀ ಅಗತ್ಯವಿರುತ್ತದೆ. ಇಲ್ಲವಾದರೆ ಮುಂಚಿನ ಹಾಗೆಯೇ ಈ ಸಾರಿಯೂ ಬೋರ್ಡಿಗೆ ಕೆಲವರು ಅವಿದ್ಯಾವಂತ ಶ್ರೀಮಂತರು ಮತ್ತು ಬೇಡಾದವರು ತಮ್ಮ ಸ್ವಾರ್ಥವನ್ನು ಸಾಧಿಸುವುದಕ್ಕೋಸ್ಕರ ಆರಿಸಿ ಬರುವ ಸಂಭವವುಂಟು.

ಎಂ ಎಸ್. ಅಧಿಕಾರಿ.

ನರೆತ ಕೂದಲು

ರಂಗನ್ನು ಉಪಯೋಗಿಸಬೇಡಿರಿ!

ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ ಆಗ ತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕಪ್ಪಾಗಿ ನಿಲ್ಲುವುದು. ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವುದು. ಕೆಲವೇ ನರೆತ ಕೂದಲುಗಳಿಗಾದರೆ ರೂ. 2 8-0 ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿಗಾದರೆ ರೂ. 3-8-0ರ ಸೀಸೆ, ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/-ರ ಒಂದು ಸೀಸೆಯನ್ನು ಪಡಕೊಳ್ಳಬೇಕಾಗುವುದು. ಗುಣಕಾರಿಯಲ್ಲವೆಂದು ಸ್ಪಷ್ಟಪಡಿಸುವವರಿಗೆ ಇಮ್ಮಡಿ ಕ್ರಯ ವಾಪಾಸು.

ಬಿಳಿ ತೊನ್ನು ಮತ್ತು ಲುಕೊಡ್ರಮ

ಬಿಳಿ ತೊನ್ನು ಮತ್ತು ಲುಕೊಡ್ರಮ (Leucoderma) ಮಹಾ ವ್ಯಾಧಿಗಳನ್ನು ಹೋಗಲಾಡಿಸುವರೆ ಈ ಔಷಧಿಯನ್ನು ಲೇಪಿಸಿರಿ. ನೂರಾರು ಹಕೀಮರೂ, ಡಾಕ್ಟರರೂ, ಕವಿರಾಜರೂ ಅಸಾಧ್ಯವೆಂದು ದೂರೀಕರಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪಾಯಿ 2-8-0.

ಕಿವುಡುತನ

ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ-ಬೆಲೆ ರೂಪಾಯಿ 2/-

ಸ್ತಂಭನ ಮಾತ್ರೆ

ಸಂಜೆ ಒಂದು ಮಾತ್ರೆಯನ್ನು ಸೇವಿಸಿದರೆ ಆಪರಿಮಿತವಾಗುವ ಆನಂದವನ್ನು ಅನುಭವಿಸಿಯೇ ತೀರಬೇಕು ಕಳೆದುಹೋದ ಮನುಷ್ಯತ್ವವು ವಿದ್ಯುಚ್ಛಕ್ತಿಯೋಪಾದಿಯಲ್ಲಿ ಮರಳಿ ಬರುವುದು. ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ. 15 ಮಾತ್ರೆಗಳಿಗೆ ರೂಪಾಯಿ 1/-

ಪತ್ರವ್ಯವಹಾರ ಇಂಗ್ಲಿಷ್ ವ ಹಿಂದಿಯಲ್ಲಿ.

Chandra Brother,
No. 4, P.O. Katri Sarai (Gaya).

ನಟನಟಿಯರು ಬೇಕು

ಕನ್ನಡ ಚಿತ್ರಗಳಲ್ಲಿ ಅಭಿನಯಿಸಲು ಸುಶಿಕ್ಷಿತ ಹಾಗೂ ರೂಪವಂತ ನಟ, ನಟಿಯರು ಬೇಕಾಗಿದ್ದಾರೆ ಪೆಟ್ಟಿನಮಾಪಿನ 'ಫೋಟೋ' ದೊಡನೆ ಬರೆಯಿರಿ.

ತ್ರಿವೇಣಿ ಫಿಲ್ಮ್ c/o ನವಜ್ಯೋತಿ ಸ್ಟುಡಿಯೋ, ಮೈಸೂರು.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,
: ಉಡುಪಿ :

ಮಹಾತ್ಮಾ ಗಾಂಧಿಯವರು

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ, ಮತ್ತು ಆಕಾಶ ಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು **ಗೀತೆಯನ್ನು** ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." ಎಂದು ಗೀತೆಯ ಕುರಿತು ಹೇಳಿದ್ದಾರೆ.

ಗೀತೆಯ ಕೈಗನ್ನಡಿ

ದಿವಂಗತ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ

ಗೀತೆಯ ಸಮೂಲ ಭಾಷಾಂತರ.

ಪುಟಗಳು 400ಕ್ಕೂ ಮಿಕ್ಕಿವೆ. ಬೆಲೆ 0-8-0 ಮಾತ್ರ.

ಪ್ರತಿಗಳು ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ಹನ್ನೆರಡಾಣೆ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಗೆ ಕಳಿಸಿದರೆ ಒಂದು ಪ್ರತಿಯನ್ನು ರಿಜಿಸ್ಟ್ರಮಾಡಿ ಕಳಿಸುವರು.

ಮಂಗಳೂರು.

ರೇಶನಿಂಗ್ ಆಫೀಸರರ ಪ್ರಕಟಣೆ-ಮದುವೆ ಸಮಾರಂಭಗಳಲ್ಲಿ ೫೦ ಜನರಿಗಿಂತ ಹೆಚ್ಚು ಊಟ ಬಡಿಸಬಾರದೆಂದೂ ಆ ೫೦ ಜನ ಎಣಿಕೆಯಲ್ಲಿ ಅವರವರ ರೇಶನ್ ಪದಾರ್ಥಗಳನ್ನು ಹಂಗಾಮಿ ಕಾರ್ಡಿನಲ್ಲಿ ಪಡೆದವರನ್ನೂ, ತಮ್ಮ ಸ್ವಂತ ಅಕ್ಕಿ ಉಪಯೋಗಿಸಲು ಹುಕುಂ ಪಡೆದವರನ್ನೂ ಬಿಡಬೇಕೆಂಬುದಾಗಿಯೂ ಪ್ರಕಟಿಸಲ್ಪಟ್ಟಿತ್ತು. ಅಕ್ಕಿಯ ಪರಿಸ್ಥಿತಿಯು ಕಠಿಣವಾಗಿರುವ ಕಾರಣ ಮದುವೆ ಸಮಾರಂಭಗಳಲ್ಲಿ ಊಟ ಒದಗಿಸುವ ಕುರಿತು ಈ ಕೆಳಗಿನ ನಿಯಮಗಳನ್ನು ಮದ್ರಾಸು ಸರಕಾರದವರು ಪ್ರಕಟಿಸುತ್ತಾರೆ. ಮದುವೆಯು ಮುಂತಾದ ಒಂದು ದಿವಸದಲ್ಲಿ ಮುಖ್ಯ ಎರಡು ಊಟ ಮಾತ್ರ, ಪ್ರತಿ ಊಟಕ್ಕೆ ೫೦ ಜನರಿಗೆ ಮೀರದಂತೆ ಕೊಡಬಹುದು. ಈ ೫೦ ಜನ ಎಣಿಕೆಯಲ್ಲಿ ಮನೆಯವರನ್ನೂ, ಅವರ ಸಂಬಂಧಿಕರನ್ನು, ಅವರ ತ್ರಿಸಲ್ಲಿಟ್ಟವರ[illegible] ಸೇರಿಸಲ್ಪಡುವರು. ಈ ಆಜ್ಞೆಗೆ ವಿರೋಧವಾಗಿ ಊಟ ಒದಗಿಸುವವರ ಊಟದಲ್ಲಿ ಭಾಗವಹಿಸುವವರೂ ತಕ್ಕ ಶಿಕ್ಷೆಗೆ ಗುರಿಯಾಗುವರು.

ಬೇಸಾಯಗಾರರಲ್ಲದ ಭೂಮಾಲಿಕರಲ್ಲಿ-ತಮ್ಮ ಮನೆ ಖರ್ಚಿಗೆ ದಾಸ್ತಾನು ಮಾಡಿಸುವರು, ಒಬ್ಬನಿಗೆ ದಿನಕ್ಕೆ (೧೨ ವರ್ಷ ಮೇಲ್ಪಟ್ಟ) ೧೦ ಔನ್ಸು ಪ್ರಕಾರ ಅಕ್ಕಿ, ಬಾಕಿ ೨ ಔನ್ಸು ಗೋಧಿ ಅಥವಾ ಇತರ ರೇಶನ್ ಪದಾರ್ಥ (ಅಕ್ಕಿ ಬಿಟ್ಟು) ಖರ್ಚುಮಾಡಬಹುದಾಗಿ ಸರಕಾರದ ಹುಕುಂ ಬಂದಿದೆ ಈ ಸ[illegible]

ಕೇರಳಾ ಸೋಪ್ ಇನ್ಸ್ಟಿಟ್ಯೂಟ್ ಕಲ್ಲಿಕೋಟೆ.

ಹಳ್ಳಿಗಳ ರೇಶನ್-ಅಂಗಡಿಗಳಿಗೆ ಈ ತನಕ ಪ್ರತಿ ಅದಿತ್ಯವಾರ ಮತ್ತು ಗುರುವಾರ ಮಧ್ಯಾಹ್ನದ ಮೇಲೆ ರಜೆ ಇತ್ತು. ಆದರೆ, ಆದಿತ್ಯವಾರ ಹೆಚ್ಚಿನವರು ತಮ್ಮ ರೇಶನ್ ಪಡೆಯಲು ಇಚ್ಛಿಸುವುದರಿಂದ ಇನ್ನುಮುಂದೆ ಹಳ್ಳಿಯ ಎಲ್ಲಾ ರೇಶನ್ ಅಂಗಡಿಗಳೂ ಪ್ರತಿ ಸೋಮವಾರ ಮತ್ತು ಶುಕ್ರವಾರ ಮಧ್ಯಾಹ್ನದ ಮೇಲೆ ಮಾತ್ರ ರಜೆ ಪಡೆಯಬೇಕೆಂದು ಕಲೆಕ್ಟರರು ಸೂಚಿಸಿದ್ದಾರೆ.

ಕೇಂದ್ರದಲ್ಲಿ ರಾಷ್ಟ್ರೀಯ-ಸರಕಾರವು ಸ್ಥಾಪನೆಯಾದುದರ ಸಂತೋಷಾರ್ಥವಾಗಿ ತಾ. ೨ರಂದು ನಗರದಲ್ಲಿಯೂ ತ್ರಿವರ್ಣ ಧ್ವಜಗಳನ್ನು ಹಾರಿಸಲಾಗಿದೆ.

ಮುಸ್ಲಿಂ ಲೀಗಿನ-ಕಾರ್ಯದರ್ಶಿಗಳ ನಿರ್ದೇಶದಂತೆ, ನಗರದಲ್ಲಿಯೂ ರಾಷ್ಟ್ರೀಯ ಸರಕಾರದಲ್ಲಿ ಅಸಮಾಧಾನವನ್ನು ಸೂಚಿಸುವ ಕರಿಪತಾಕೆಗಳನ್ನು ಪ್ರದರ್ಶಿಸಲಾಗಿತ್ತು. ಹಲವಂದಿ ಮುಸ್ಲಿಮರು ಅಂದು ಕರಿಪತಾಕೆಗಳನ್ನು ಎದೆಯ ಮೇಲೆ ಸಿಕ್ಕಿಸಿಕೊಂಡು ಅಸಮಾಧಾನ ಪ್ರದರ್ಶಿಸಿದರು.

ಮುನಿಸಿ ಪಾಲಿಟಿಯ-ಭಂಗಿ, ತೋಟಿ ಡ್ರೈವರ್ ಮೊದಲಾದವರು ಇದೇ ತಾ. ೯ರ ಅನಂತರ ಮುಷ್ಕರ ಹೂಡುವುದಾಗಿ ನೋಟೀಸು ಕೊಟ್ಟಿದ್ದರು. ಇವರಿಗೆ ತಿಂಗಳಿಗೆ ರೂ. ೧೨ ಸಂಬಳ ಹಾಗೂ ರೂ. ೧೬ ತುಟ್ಟಿ ಭತ್ತೆ ಕೊಡಲಾಗುತ್ತಿದೆ. ಸಂಬಳವನ್ನು [illegible] ತುಟ್ಟಿ ಭತ್ತೆಯೂ ಸಿಗಬೇಕೆಂಬುದು ಇವರ ಬೇಡಿಕೆ. ಮಂಗಳೂರು ನಗರ ಸಭೆಯವರು, ಇವರ ಸಂಬಳವನ್ನು [illegible] ತುಟ್ಟಿ ಭತ್ತೆ [illegible] ತಿಂಗಳಿಗೆ ರೂ. [illegible] ಕೊಡಿಸುವಂತೆ ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ. ಆದರೆ, ಉದ್ಯೋಗಿಗಳು, ಸರಕಾರದ ಉತ್ತರ ಬರುವ ಮೊದಲೇ ಮುಷ್ಕರ ಹೂಡುವ ನೋಟಿಸು ಕೊಟ್ಟದ್ದು ತಾ. 7ರಲ್ಲಿ ಹಿಂತೆಗೆದಿರುವರು.

ಯುವಜನ ಕಾಂಗ್ರೆಸಿನ-ಆಶ್ರಯದಲ್ಲಿ ತಾ. ೧ರಂದು ಶ್ರೀ ವಿಕ್ಟರ್ ಡಿ'ಸೋಜರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಇಂದಿನ ರಾಜಕೀಯ ಪರಿಸ್ಥಿತಿ, ಆಹಾರ ಸಮಸ್ಯೆ, ಮುಷ್ಕರ ಇತ್ಯಾದಿಗಳ ಕುರಿತು ಅಧ್ಯಕ್ಷರೂ ಇತರರೂ ಭಾಷಣವಿತ್ತರು. 'ತಾವು ಮಜೂರರ ಉದ್ಧಾರಕರೆನ್ನುತ್ತ ಕಮ್ಯೂನಿಸ್ಟರು ಇಂದು ಮಜೂರರನ್ನು ಮೋಸಗೊಳಿಸಿ, ತಮ್ಮ ಪಾರ್ಟಿಯ ಸ್ವಾರ್ಥಕ್ಕಾಗಿ ಅವಶ್ಯಕಾರ ನಡೆಸುತ್ತಿದ್ದಾರೆ ಮುಷ್ಕರಗಳನ್ನು ಹೂಡಿಸಿ ದೇಶದಲ್ಲಿ ಅಶಾಂತಿಯನ್ನು ಹರಡಿಸುತ್ತಾರೆ; ಜಾತೀಯ ಗಲಭೆಯ ವಿಷ ಬೀಜವನ್ನೂ ಇವರೇ ಬಿತ್ತುತ್ತಿದ್ದಾರೆ' ಎಂದು ನುಡಿದಲಾಗಿ, ಡಾ। ಒ. ಡಿ'ಸೋಜ, ಡಾ। ಸಂಜೀವನಾಥ್, ಎ ಪಾಲಪ್ಪ ಮೊದಲಾದವರು ಭಾಷಣವಿತ್ತರು.

ದ ಕ ಜಿಲ್ಲಾ ಮೋಟರ್ ಕೆಲಸಗಾರರ ಸಂಘದ-ವಾರ್ಷಿಕ ಮಹಾಸಭೆಯು ತಾ. ೨ರಂದು ಸಂಜೆ ಪ್ರೆಸ್ ಕೆಲಸಗಾರರ ಸಂಘದ ಆಫೀಸಿನಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಗಳೂರು ನಾರಪ್ಪನವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರಾದ ಶ್ರೀ [illegible] ಕಲ್ಕೂರರ ಅಧ್ಯಕ್ಷತೆಯಲ್ಲಿ ಸಭೆ ಮುಂದಿನ ವರ್ಷದ ಕಾರ್ಯಕಾರೀ ಸಮಿತಿಯ ಚುನಾವಣೆ ನಡೆಯಿತು.

ಜಿಲ್ಲಾ ಕುಲಾಲ ಸಮಾಜೋದ್ಧಾರಕ-ಸಮಿತಿಯ ಸೆಕ್ರೆಟರಿಯವರು, ಸಮಿತಿಯ ಪರವಾಗಿ ಪಂಡಿತ ಜವಾಹಿರಲಾಲರಿಗೆ ಇವರಿಗೆ ಸಂತೋಷ ಸೂಚಕವನ್ನು ಕೊಡುವ ತಂತಿ ಕಳುಹಿಸಿರುತ್ತಾರೆ.

ಚಿಟ್ಟ್ಯಾರರ ಸಮಾಜೋದ್ಧಾರಕ-ಇದರ ವಿಶೇಷ ಮಹಾಸಭೆಯು ತಾ. 1-9-46 ರಲ್ಲಿ ಉರ್ವ ಹಾಯರ್ ಎಲಿಮೆಂಟರಿ ಶಾಲಾ ಮಠಾರದಲ್ಲಿ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ನೇತೃತ್ವದಲ್ಲಿ ಜರಗಿತು. ಶ್ರೀ ಕೆ. ಎ ದೇವದಾಸ, ಶಿರೋಮಣಿ ಇವರು ದೇವಾಂಗ ಸಮಾಜವೆಂದು ಹೆಸರಿಟ್ಟು ಈ ಸಂಘವನ್ನು ರಿಜಿಸ್ಟ್ರಿಮಾಡತಕ್ಕದ್ದೆಂದು ಯುಕ್ತಿಯುಕ್ತ ಹಾಗೂ ಪ್ರಾಚೀನ ಪ್ರಮಾಣಗಳಿಂದ ಭಾಷಣ ಮಾಡಿದರು. ಶ್ರೀ ಕೆ ಕೃಷ್ಣರಾವ್, ಬಿ. ಎ, ಮಂ। ಲಕ್ಷ್ಮಣದೇವ ವಿದ್ಯಾರ್ಥಿ, ಡಾ। ಎಚ್. ಎಫ್ ಒಡೆಯರ್ ಇವರುಗಳು ದ ಕನ್ನಡ ಜಿಲ್ಲೆಯ ದೇವಾಂಗರಿಗೆ ಅಭ್ಯುದಯವನ್ನು ಕೋರಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಶ್ರೀಗಳಾದ A. ಕೃಷ್ಣ (ಕಾರ್ಕಳ), ಕೆ. ಕುಂಞಂಬು (ಮಂಗಳೂರು), M. K. ಹರಿದಾಸ (ಮಂಗಲ್ಪಾಡಿ), P. V ಕುಂಞರಾಮ (ಕಾಸರಗೋಡು) ಇವರೆಲ್ಲರೂ ಸಮಾಜದ ಸಂಘಟನೆಯ ಅವಶ್ಯಕತೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಇಂದಿನ ರಾಜಕೀಯ ಸ್ಥಿತಿಯನ್ನೂ ಸಮಾಜಗಳ ಕೈಕೊಳ್ಳಬೇಕಾದ ಕಾರ್ಯಗಳನ್ನೂ ವಿವರಿಸಿ ಕಲಾಕುಶಲರಾದ ದೇವಾಂಗರ ಮೇಲ್ಮೆಗೆ ಕೆಲವು ಹಿತೋಕ್ತಿಗಳನ್ನಾಡಿದರು. ಶ್ರೀ M. K. ಹರಿದಾಸರು "ದೇವಾಂಗ ಚರಿತ್ರೆ"ಯನ್ನು ಹರಿಕಥೆ ಮಾಡಿದರು. ಶ್ರೀ ಕೆ. ಕುಂಞಂಬುವರ ಕೇಳಿಕೆ ಮೇರೆಗೆ ಅಧ್ಯಕ್ಷರು ಸಭೆಯ ಪರವಾಗಿ ಕಾಸರಗೋಡು ಕೆ ವಿ ಕುಂಞಕಣ್ಣನವರಿಗೆ ನೇಯಿಗೆಯಲ್ಲಿ ಚಿತ್ರ ಕಲಾ ಪ್ರದರ್ಶನ ಮಾಡಿದ್ದಕ್ಕಾಗಿ ಒಂದು ಸ್ವರ್ಣ ಪದಕವನ್ನೂ ಶ್ರೀ M. K ಹರಿದಾಸ್‌ರವರಿಗೆ ಅವರ ನಾಟ್ಯ ಸಂಗೀತ ಕುಶಲತೆಗೂ ದೇವಾಂಗ ಚರಿತ್ರೆಯನ್ನೂ ಹರಿಕಥೆ ಮಾಡಿದುದಕ್ಕಾಗಿ ಒಂದು ಸಿಲ್ವರ್ ಕಪ್ಪನ್ನು ಪಾರಿತೋಷಕವಾಗಿ ಕೊಟ್ಟರು. ಶ್ರೀ ಕೆ. ಎ ದೇವದಾಸರು ಸಂಘದ ಪರವಾಗಿ ಧನ್ಯವಾದವನ್ನರ್ಪಿಸಿದರು.

ಶ್ರೀ ಮಾರುತಿ ಸರಸ ವಿನೋದಿನಿ ನಾಟಕ—ಸಭೆಯ ಮಹಾಸಭೆಯು ತಾ. [illegible]ರಲ್ಲಿ ಶ್ರೀ ಯಲ್ಲೂರ್ ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರ್ಷದ ಸಲಹೆಗಾರರ ಮಂಡಲಿಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆಯಾಯಿತು. ಚುನಾವಣೆಯ ಅನಂತರ ಹಲವರ ಭಾಷಣಗಳು, ಗಾಯನ, ಅಧ್ಯಕ್ಷರ ಭಾಷಣ ಮತ್ತು ಕಾರ್ಯದರ್ಶಿಯವರ ವಂದನೋಕ್ತಿಯೊಡನೆ ಅಂದಿನ ಕಾರ್ಯಕ್ರಮ ಕೊನೆಗೊಂಡಿತು. ಸೋಲಿನ ಸಭೆಯವರು ಅಕ್ಟೋಬರ್ ತಿಂಗಳಲ್ಲಿ 'ಶಕುಂತಲಾ' ನಾಟಕವನ್ನು ಆಡಲಿರುವರು.

ಸಹಕಾರವೇ ಸಾಧನ

ಮನುಷ್ಯನ ಜೀವನ ಅತಿ ಕಷ್ಟ. ವ್ಯಾಪಾರ ಸರಿಯಾಗಿ ನಡೆಯದೆ, ಕೈಗಾರಿಕೆ ನಡಿಸುವುದೂ ಕಷ್ಟತರವಾಗಿ, ವ್ಯವಸಾಯ ಕೂಡ ಹಿಂದುಳಿದ ಈ ಕಾಲದಲ್ಲಿ ಹಣದ ಲೇವಾದೇವಿಯೂ ಒಹಳ ಕಡಿಮೆಯಾಗಿದೆ. ಈ ಎಲ್ಲಾ ಉದ್ದೇಶವನ್ನೊಳಗೊಂಡ ಸಂಸ್ಥೆಯಿಂದ ಜನತೆಯ ಹಿತವನ್ನು ಸಾಧ್ಯವಾದಷ್ಟು ಪೂರೈಸಲು ಸ್ಥಾಪಿತವಾದ ಈ ಕಂಪೆನಿಯು ನಿಮ್ಮೆಲ್ಲರ ಸಹಕಾರ ಪಡೆದು ಅಲ್ಲಲ್ಲಿ ತನ್ನ ಶಾಖೆಯನ್ನು ತೆರೆಯಬೇಕೆಂದು ಎಣಿಸಿಯದೆ. ಇದನ್ನು ಸ್ಥಾಪಿಸಿದ ಉದ್ದೇಶ-ಅನುಕೂಲತೆಗನುಸರಿಸಿ, 1. ವ್ಯಾಪಾರ. 2. ವ್ಯವ[illegible] ಕೈಗಾರಿಕೆ 4. ಲೇವಾದೇವಿ [illegible] ಕಂಟ್ರಾಕ್ಟು [illegible] ಏಜನ್ಸಿ. ಇತ್ಯಾದಿ. ಈ ಕಂಪೆನಿಯು ಕಾರ್ಯ ಪ್ರಾರಂಭಿಸಿದ ಅತ್ಯಲ್ಪ ಸಮಯದೊಳಗೆ ರೂ 1 ಲಕ್ಷಕ್ಕೆ ಮೇಲ್ಪಟ್ಟ ವ್ಯವಹಾರ ನಡಿಸಿಯದೆ. ಇವರ ಷೇರ್ಸ್ ಬೇಕಾದವರು ಅರ್ಜಿ ಮುಖಾಂತರ ಪಡೆದುಕೊಳ್ಳಬಹುದು. ಡಿಪೋಜಿಟ್ ಅಂಗೀಕರಿಸಲ್ಪಡುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಶ್ರೀ ಮಾತಾ ಯುನೈಟೆಡ್, ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸೀಸ್ ಲಿಮಿಟೆಡ್
ಜಯಮಂಗಳಂ ಬಿಲ್ಡಿಂಗ್ಸ್, ಕುಂದಾಪುರ.
(Incorporated in British India, liability of Members Limited.)

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು–
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ.

Indra Bhavan Coffee Hotel,
Balmatta Road, Mangalore.

CHAMPAE'S
Snow & Castrex
(Sole Distributers for Tnara.)
Prop: K. G. NAYAK,
Santhekatte, UDIPI, S. K

ಕಾವ್ಯ ಸಾಮ್ರಾಜ್ಯ

(ಕಿರಿಯರ ಪ್ರಪಂಚದವರು ಪ್ರಕಟಿಸಿದ ಆಧುನಿಕ ಕವಿತಾ ಸಂಗ್ರಹ.)

ಕನ್ನಡ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ 1946 ಕಾವ ಪರೀಕ್ಷೆಗೆ ಮೊದಲ ಪತ್ರಿಕೆಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಬೆಲೆ ರೂ. 1—0—0.

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗಾಗಲಿ ಬರೆಯಿರಿ.

ದಕ್ಷಿಣ ಕನ್ನಡ

ಮುಟ್ಟೆ— ತಾ. 8-9-1946ನೇ ಸಾಯಂಕಾಲ 3 ಘಂಟೆಗೆ ಮುಟ್ಟೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಗೋಪುರದಲ್ಲಿ ಶ್ರೀ ಪಾಂಗಾಳ ಸುಬ್ರಹ್ಮಣ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ಗ್ರಾಮಸ್ಥರ ಸಭೆಯಲ್ಲಿ ಸದ್ರಿ ದೇವಸ್ಥಾನದ ಮೊಕ್ತೇಸರ ಶ್ರೀ. ಮರಡಿತ್ತಾಯ ಗುರುರಾಜ ಭಟ್ರು ತಮ್ಮ ಸ್ಥಾನಕ್ಕೆ ರಾಜಿನಾಮೆಕೊಟ್ಟಿರುವುದರಿಂದ ಅವರ ಬದಲಿಗೆ ಶ್ರೀಗಳಾದ ಪಟೇಲ್ ಅಧಿಕಾರಿ ಎಂ. ಗೋವಿಂದರಾವ್, ತಿನಾಲ ಶ್ರೀನಿವಾಸಯ್ಯ ಮತ್ತು ವಕೀಲ್ ಮುಟ್ಟೆ ಸುಬ್ಬರಾವ್ ಅಧಿಕಾರಿ ಇವರನ್ನೂ ಎಂಡೋಮೆಂಟ್ ಬೋರ್ಡಿಗೆ ಶಿಫಾರಸು ಮಾಡಲಾಯಿತು.

ಗುರುಕಂಬಳ— ತಾ. 20 9-46ನೇ ಶುಕ್ರವಾರ ದಿನ ಗುರುಗಂಬಳ ಹಜ್ರತ್ ಅಸ್ರಾರುದ್ದಿನ್ ವಲಿಯುವರ ಉರುಸು ಎಂಬ ಪುಣ್ಯ ಕಾರ್ಯವು ನಡಿಯುವದಾಗಿ ಸದ್ರಿ ದರ್ಗೆಯ ಆಡಳ್ತೆದಾರ ಜನಾಬ್ ಅದಂ ಸಾಹೇಬರು ತಿಳಿಸುತ್ತಾರೆ.

ಕಟೀಲು— ತಾ. 2-9-46ರಲ್ಲಿ ಶ್ರೀ ದುರ್ಗಾಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲಾ ತಿಂಗಳ ಹಬ್ಬವು ಶ್ರೀ Y ಗೋಪಾಲಕೃಷ್ಣ ಭಟ್ರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶಾಲಾ ಮಕ್ಕಳ ಆಟೋಟವಟಿಕೆಯಾದ ನಂತರ ಡಿಲ್ಲಿಯಲ್ಲಿ ಸ್ಥಾಪಿತವಾಗಲಿರುವ ರಾಷ್ಟ್ರೀಯ ಸರಕಾರಕ್ಕೆ ಜಯಘೋಷವನ್ನು ಕೋರಿ ಅಧ್ಯಕ್ಷರ ಮತ್ತು ಸಭಿಕರ ಭಾಷಣಗಳಾದ ನಂತರ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ದೇವತಾ ಪ್ರಾರ್ಥನೆಯಾಗಿ ಮಕ್ಕಳಿಗೆ ದೇವಳದಿಂದ 300 ಕೋಲು ಕಬ್ಬು ಹಂಚಲ್ಪಟ್ಟಿತು. ರಾಷ್ಟ್ರೀಯ ಧ್ವಜ, ಮಹಾತ್ಮಾ ಗಾಂಧಿಯವರ ಭಾವ ಚಿತ್ರಗಳನ್ನು ಹಿಡಕೊಂಡು ಬೇಂಡುವಾಲಗದೊಡನೆ ಮಕ್ಕಳ ಮತ್ತು ಹೆತ್ತವರ ಮೆರವಣಿಗೆಯು ರಾಷ್ಟ್ರಗೀತೆ, ಉದಯವಾಗಲಿ ನಮ್ಮ ನಾಡು ಗೀತೆಗಳನ್ನು ಹಾಡುತ್ತಾ ಒಂದು ಮೈಲು ನಡೆಯಿತು. ದೇವಸ್ಥಾನದವರೂ, ಊರವರೂ ಇಂತಹ ಕೆಲಸಕ್ಕೆ ಪ್ರೋತ್ಸಾಹ ಕೊಟ್ಟದ್ದು ಅಭಿನಂದನೀಯ.

ಕಟೀಲು ಕೇಂದ್ರದ ಸಸಿದಿನಾಚರಣೆಯ ಸಮಾರಂಭವು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ತಾ. 1-9-46 ರಲ್ಲು ಕಟೀಲು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಯಶಸ್ವಿಯಾಗಿ ಜರಗಿತು. ಕೊಂಮೂರಿ, ನಡುಗೋಡು, ಬಡಗ ಎಕ್ಕಾರು, ತೆಂಕ ಎಕ್ಕಾರು, ದೇಲಂತಬೆಟ್ಟು, ಕಿಲೆಂಜೂರು ಈ ಗ್ರಾಮಗಳಿಂದ ಸುಮಾರು 500ಜನ ಕೃಷಿಕರು ಸಸಿಗಳನ್ನು ಹಿಡಕೊಂಡು ಬಂದಿದ್ದರು. ಮಾನ್ಯ ಅಧ್ಯಕ್ಷರೂ ಶ್ರೀ C. K. ನಂಬಿಯಾರರೂ ನೆರೆದ ಸಭಿಕರಿಗೆ ಗ್ರಾಮಾಭಿವೃದ್ಧಿಯ ಕಾರ್ಯದಲ್ಲಿ ಕೃಷಿಗೂ ಗುಡಿಸಲು ಕೈಗಾರಿಕೆಗಳಿಗೂ ಇರುವ ಪ್ರಾಧಾನ್ಯತೆಯನ್ನು ವಿವರಿಸಿ ಹೇಳಿದರು. ಸಭಿಕರಲ್ಲಿ ಕೆಲವರ ಭಾಷಣಗಳಾದ ನಂತರ ಅಧ್ಯಕ್ಷರು ಶಾಲಾ ವಠಾರದಲ್ಲಿ ಒಂದು ಸಸಿಯನ್ನು ನೆಟ್ಟರು ನಂತರ ವಾಲಗ ಬೇಂಡು ಘೋಷಣೆಯೊಡನೆ ಕೃಷಿಕರೂ ಶಾಲಾ ಮಕ್ಕಳೂ ತಾವು ತಾವು ತಂದ ಸಸಿಗಳನ್ನು ಹಿಡಕೊಂಡು ಒಂದು ಮೆರವಣಿಗೆಯು ಜಯ ಘೋಷದೊಡನೆ ಒಂದು ಮೈಲು ಗ್ರಾಮದಲ್ಲಿ ಸಂಚರಿಸಿ ಪ್ರಚಾರಮಾಡಿ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ಇಂತಹ ಹೊಸರೀತಿಯ ಸೂಚನೆಗಳನ್ನು ಮೂಲ್ಕಿ ಕೇಂದ್ರದ ಗ್ರಾಮಾಭಿವೃದ್ಧಿ ಸಂಘದ ಸೆಕ್ರೆಟರಿ ಶ್ರೀ. ರಾಮಕೃಷ್ಣ ಪೂಂಜರು ನಮಗೆ ಕೊಟ್ಟು ಪ್ರೋತ್ಸಾಹಿಸಿದುದಕ್ಕಾಗಿ ಈ ಗ್ರಾಮಗಳ ಕೃಷಿಕರು ಅವರನ್ನು ಅಭಿನಂದಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮ ಉದ್ಯೋಗಸ್ಥರು— ಈ ವರೆಗೆ ಪರ್ವಶೆಯಲ್ಲಿದ್ದು ಈ ದೇಶವನ್ನು ಬಾಧಿಸಿದ್ದ —ಸಮೃದ್ಧವಾದ ಈ ವಿಶಾಲ ಭಾರತವನ್ನು ಆದರ್ಶಗೊಳಿಸಿ ಆಳರಿಸಬೇಕಾದ ಸರಕಾರದ ವೆಂಟ ಸಂಕಲೆಯ ಕೊನೆಯ ಗೊಣಸು ಗ್ರಾಮದ ಪಟೇಲರು ಮತ್ತು ಶ್ಯಾನುಭಾಗರು. ಹೀಗೆಯೇ ಮುಂದರಿಸಿದೆ ನೌಕರ ಶಾಹಿ. ಇತರ ಉದ್ಯೋಗಸ್ಥರಿಗೆ ಸರಕಾರಿ ನೌಕರಿಯು ಜೀವನಾಧಾರವಾಗಿ ಪರ್ಯಟ್ಟಿಂತಿದೆ. ಗ್ರಾಮ ಉದ್ಯೋಗಗಳು ಅಂತಿಲ್ಲ ಹಾಗಾದರೆ ಈ ಪದವಿಗಳ ಮಹತ್ವವೆಲ್ಲಿ? ಅವು ಆಕರ್ಷಣೀಯವೇಂತು? ಬಡ ಹಳ್ಳಿಗರ ನಿತ್ಯದ ಕಷ್ಟನಷ್ಟಗಳ ಪ್ರತ್ಯಕ್ಷ ದರ್ಶನ ಮತ್ತು ಸರಕಾರದ (ಈಗಿನವೆಲ್ಲ) ಅನಾದರಣೆ ಇವೇ ಗ್ರಾಮ ಉದ್ಯೋಗಸ್ಥರ ಪಾಲಿಗೆ ಪ್ರಸಾದ ಮತ್ತು ಪಂಚಕಜ್ಜಾಯ.

ಈ ಜಿಲ್ಲೆಯಲ್ಲಿ ಗ್ರಾಮದ ಸಾರ್ವಪ್ರಾತಿನಿಧ್ಯವನ್ನು ಹೊಂದಿದ್ದ, ಪ್ರಸಿದ್ಧ ಶ್ರೀಮಂತ ಮನೆತನದವರು — ತ್ಯಾಗ ಮತ್ತು ಸೇವಾಬುದ್ಧಿಯಿಂದಲೇ ಮತ್ತು ಗೌರವಕ್ಕಾಗಿಯೋ ಎಂಬಂತೆ ಈ ಗ್ರಾಮ ಉದ್ಯೋಗವನ್ನು ವಹಿಸಿಕೊಂಡು ಬಂದಿದ್ದಂತೆ ನನಗೆ ಭಾಸವಾಗುತ್ತದೆ ಆದ್ದರಿಂದ ! ಈ ಪದ್ದತಿಯು ಅನುವಂಶೀಯವಾಗಿ ಮಾಡಲ್ಪಟ್ಟಿಂಬೇಕು

ಗ್ರಾಮ ಉದ್ಯೋಗಸ್ಥರ ಸ್ಥಾನಮಾನಗಳ ಕುರಿತು ಅವರನ್ನು ಎಚ್ಚರಿಸುವುದು ಮಾತ್ರ ನನ್ನ ಇಚ್ಚೆ ಅಲ್ಲ, ಅವರಲ್ಲಿ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಅರಿವೂ, ಅದರೊಡನೆ ಅವರ ಸ್ಥಾನಮಾನಗಳ ಅವಸ್ಥೆಯ ಪರಿಜ್ಞಾನವೂ ವೃದ್ಧಿಯಾಗಿ ಇವರಲ್ಲೂ ಒಗ್ಗಟ್ಟೂ ಬಿಮ್ಮತವೂ ಉಂಟಾಗಲೆಂಬುದೇ ನನ್ನ ಆಶಯ.

ಈಗ ಜನತೆಯ ಸರಕಾರವು ಅಧಿಕಾರ ವಹಿಸಿದೆ. ದೇಶಾಭಿವೃದ್ಧಿಗೆ ಗ್ರಾಮಾಭಿವೃದ್ಧಿಯೇ ಮೂಲ ಎಂಬುದೇ ಅವರ ಬಹು ದಿನದ ಅಭಿಪ್ರಾಯ. ಅದಕ್ಕನುಗುಣವಾಗಿಯೇ ಕಾಯದೆ ಕಾನೂನುಗಳು ನಿರ್ಮಾಡುತ್ತಿವೆ. ಆ ಸಂಬಂಧವಾದ ವಿಧಾಯಕ ಕಾರ್ಯಗಳು ಯಶಸ್ವಿಯಾಗಬೇಕಾದರೆ ಗ್ರಾಮ ಉದ್ಯೋಗಸ್ಥರೂ ಮುಂದಾಗಬೇಕು, ಒಂದಾಗಬೇಕು.

ಆಂಧ್ರ ತಮಿಳು, ಕೇರಳ ಪ್ರಾಂತ್ಯಗಳಲ್ಲಿ ಗ್ರಾಮೋಸ್ತರು ಸಂಘಟಿತರಾಗಿದ್ದಾರೆ. ತಾ. 19-8-46ಕ್ಕೆ ಮದ್ರಾಸದಲ್ಲಿ ಪ್ರಾಂತಿಕ ಪರಿಷತ್ತನ್ನು ಜರಗಿಸಲೆತ್ನಿಸಿ ಕರ್ನಾಟಕಕ್ಕೂ ಕರೆಕೊಟ್ಟಿರುತ್ತಾರೆ. ಈ ಜಿಲ್ಲೆಯಲ್ಲಿ “ಬಿಟು” ಕೊಡುವ ಗ್ರಾಮದ್ಯೋಗಸ್ತರಸಂಘವಿದೆಯೆ ಒಂದು ಸಂಘವು ಶೀಘ್ರವೆ ರಚಿಸಲ್ಪಡುವುದು ಆವಶ್ಯಕವಲ್ಲವೆ? ಕಾಂಗ್ರೆಸ್ ಮುಂದಾಳುಗಳು ಈ ಮುಖ್ಯ ವಿಷಯಕ್ಕೆ ತಕ್ಕ ಪ್ರೋತ್ಸಾಹ ಕೊಡಲಾರರೇ? ಗ್ರಾಮದ ಉದ್ಯೋಗಸ್ತರು ಇನ್ನಾದರೂ ಕಣ್ತೆರೆಯುವರೆಂದು ನಂಬಿಕೆ. ಯಸ್. ಪಿ. ಮುಂಡಾಯರ್.

ಪಡುಬಿದ್ರೆ— ತಾ. ೧೬-೮-೪೬ರಲ್ಲಿ ಪಡುಬಿದ್ರೆಯಲ್ಲಿ ಅಗೋಸ್ತು ೧ರಿಂದ ನಡೆದು ಬರುತಿದ್ದ ರಾಷ್ಟ್ರ ಸೇವಾದಳದ ಶಾಖೆಯನ್ನು ಜಿಲ್ಲಾ ಸೇವಾದಳದೊಂದಿಗೆ ಸಮಾವೇಶಗೊಳಿಸುವ ಕಾರ್ಯಕ್ರಮವು ಜಿಲ್ಲಾ ಸಂಘಟಕ ಶ್ರೀ ರಾಮರಾಜ ಕಿಣಿ ಮತ್ತು ಸಹಾಯಕ ಸಂಘಟಕ. ಎ ಬಾಲಪ್ಪನವರಿಂದ ಜರಗಿತು ಧ್ವಜವಂದನೆಯಾದ ನಂತರ ಜಿಲ್ಲಾ ಸಂಘಟಕರು ಪ್ರತಿಜ್ಞಾ ಪತ್ರವನ್ನು ಓದಿ ಹೇಳಿದರು. ಮತ್ತು ಎಲ್ಲಾ ಸೈನಿಕರೂ ಅದಕ್ಕೆ ಸಹಿ ಮಾಡಿದರು. ಸುಮಾರು ಮೂವತ್ತು ಮಂದಿ ಸೈನಿಕರು ಪ್ರತಿದಿನದ ಶಾಖೆಗೆ ಹಾಜರಾಗುತ್ತಾರೆ.

ತುಂಗ ಭದ್ರಾ— ತಾ. 30-8-46ರಲ್ಲಿ ಪ್ರೇಮಾಯತನ ಆಶ್ರಮದಲ್ಲಿ ಗಣೇಶ ಚತುರ್ಥಿಯು ಬಹಳ ವಿಜೃಂಭಣೆಯಿಂದ ನಡೆಯಿತು. ಈ ವಿದ್ಯಾಪೀಠದಿಂದ ಡಿಗ್ರಿ ಹೊಂದಿ ಸ್ವತಂತ್ರೋದ್ಯೋಗದಿಂದ ಮೇಲ್ಮಟ್ಟದಲ್ಲಿರುವ ಡಾ। ಲಕ್ಷ್ಮಣ ಆದೋನಿ, ಡಾ। ಕೋಚಣ್ಣ ಮಾರ್ಲ, ಬಳ್ಳಾರಿ, ಡಾ। ಗಂಗಾಧರ ಗುಂತಕಲ್, ಡಾ। ರಾಮಕೃಷ್ಣ ರಾಯಚೂರ ಮುಂತಾದ ಮಹನೀಯರು ಇದರಲ್ಲಿ ಭಾಗವಹಿಸಿದ್ದರು. ಸಾಯಂಕಾಲ ವಕೀಲ್ ಅಕ್ಕಿ B. A. B. L. ಇವರ ಅಧ್ಯಕ್ಷತೆಯಲ್ಲಿ ಸಭೆಯೊಂದು ಸೇರಿ ಇಲ್ಲಿ ಒಂದು ಆಯುರ್ವೇದ ಫಾರ್ಮಸಿಯನ್ನು ಸ್ಥಾಪಿಸಲು ನಿರ್ಣಯಿಸಲಾಯಿತು. ನಂತರ ಇಲ್ಲಿನ ವಿದ್ಯಾರ್ಥಿಗಳ ಚರ್ಚಾಕೂಟದ ಪುನರೋದ್ಘಾಟನಾ ಸಮಾರಂಭವು ಶ್ರೀ. ಡಾ। ಕೋಚಣ್ಣ ಮಾರ್ಲರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಭಜನೆ, ಸಂಗೀತ, ಆರತಿ, ಪ್ರಸಾದವಿನಿಮಯವಾದ ನಂತರ ಉತ್ಸವವು ಸಾಂಗವಾಯಿತು.

ಮುಂಬಾಯಿ— ಬಿಲ್ಲವರ ಎಸೋಸಿಯೇಶನಿನ ನೇತೃತ್ವದಲ್ಲಿ ಬ್ರಹ್ಮಶ್ರೀನಾರಾಯಣ ಗುರುದೇವರ ಜನ್ಮದಿನಾಚರಣೆಯನ್ನು ತಾ.15 9 46ನೇ ರವಿವಾರ ಅಪರಾಹ್ನ ಘಂಟೆ 2ಕ್ಕೆ 136 ಅಪೋಲ್ಲೊ ರಸ್ತೆಯಲ್ಲಿರುವ ಸರ್. ಜೀವನ್‌ಜಿ ಮೋದಿ ಮೆಮೋರಿಯಲ್ ಹೋಲಿನಲ್ಲಿ ಆಚರಿಸಲಾಗುವುದು.

ಬೊಂಬಾಯಿ— ಹೊಟೇಲು ಕೆಲಸಗಾರರ ಸಂಘದ ಆಶ್ರಯದಲ್ಲಿ ತಾ 22-8-46ರಲ್ಲಿ ರಾತ್ರಿ ಗಂಟೆ 9 30ಕ್ಕೆ ಪರೇಲ್ ಕೊಯಿಪಾಡಿಯಲ್ಲಿಯ ದಾಮೋದರಹೋಲಿನಲ್ಲಿ ಸಾರ್ವಜನಿಕ ಸಭೆ ಜರಗಿತು. ಸುಮಾರು ಒಂದು ಸಾವಿರ ಜನರಿದ್ದರು. ಶ್ರೀ ಅಬ್ದುಲ್ಲಾ ಜಾಫರ್ ಭಾಯಿ ಅಧ್ಯಕ್ಷರಾಗಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಎಂ ಮಾಧವನ್ ಹೊಟೇಲು ನೌಕರರ ಕೋರಿಕೆಗಳನ್ನು ವಿವರಿಸಿದರು. ಅನಂತರ ಶ್ರೀ ಜಿ. ಜಿ. ಮೆಹತಾ, ಶ್ರೀ ಕಾಂಡೆಳ್ಕರ್ ಇನ್ನಿತರ ಮಹನೀಯರುಗಳ ಭಾಷಣಗಳಾದುವು.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ಪ್ರತಿಗಳು ಎಲ್ಲೆಡೆಯಲ್ಲೂ ದೊರೆಯುತ್ತವೆ.

ದಿ ಆರ್ಯನ್ ಚಾಂಪಿಯನ್

ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ.

7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ

ನಿಮ್ಮ ಸರ್ವತ್ರ ಅವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಸೂರೆನ್ಸ್ ಕಂಪೆನಿಯಿದು.

ಚೆಯರ್‌ಮೆನ್:

ಶೇಟ್ ಭೋಗಿಲಾಲ್ ಎಚ್. ಪಟೇಲ್.

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ —

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ ಸೀತಾರಾಮ ಶೆಟ್ಟಿ, ಎಸ್ಕ್ವಯರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ವಿಶ್ವ ಸಾಹಿತ್ಯ ಮಾಲೆ, ಕುಸುಮ ೧.

ವಿಚಿತ್ರ ಆಗ್ನೇಯ ಏಶಿಯ

ಇಂಡೋನೇಶಿಯಾ, ಇಂದೋ ಚೀನಗಳ ರಾಜ್ಯ ಕ್ರಾಂತಿ, ಬರ್ಮಾ, ಮಲಯಾ, ಸಯಾಂಗಳ ಸ್ವಾತಂತ್ರ್ಯ ಸಂಗ್ರಾಮ— ಎಲ್ಲವೂ ಇವೆ. ನಕ್ಷೆಗಳು ಸಹಿತ.

ಲೇಖಕರು:—ಶ್ರೀ. ಎಂ. ಹರಿದಾಸ.

(ದ್ವಿತೀಯ ಮಹಾ ಯುದ್ಧ. ಉಕ್ಕಿನ ಮನುಷ್ಯ ಗ್ರಂಥಗಳನ್ನು ಬರೆದವರು)

ಬೆಲೆ ೧—೪—೦ (ಅಂಚೆ ವೆಚ್ಚ ಬೇರೆ). ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಬರೆಯಿರಿ:—ರಾವ್ ಬ್ರದರ್ಸ್, ಗದಗ

ಶಾಲೋಪಯೋಗಿ ಸಾಹಿತ್ಯಗಳು

ಡ್ರಾಯಿಂಗ್ ಮತ್ತು ಮೇಪ್ ಡ್ರಾಯಿಂಗ್ ಪುಸ್ತಕಗಳು, ಲೇಖನ ಪುಸ್ತಕಗಳು, ಹಾಜರಿ ರಿಜಿಸ್ಟ್ರಿಗಳು, ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟ್‌ಗಳು, ಮಗ್ಗಿ ಪುಸ್ತಕಗಳು ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಸುಸಂದರ್ಭ!

ನವಯುಗ ಪ್ರೆಸ್,

ಉಡುಪಿ.



Approved firm by the Govt. of Mysore Certified by the Agent of the Govt. of Cylone Indian.

(೨ನೇ ಪುಟದಿಂದ)

ಹೇಳಿದನು– "ತಂದೆಯವರು ಯಾವಾಗ ಬರುವರು? ಸಂಗಡ ಕರೆದುಕೊಂಡು ಬರುತ್ತೇನೆ. ನೀನು ತಡೆಯಬಾರದು—ಅವರು ನನಗೋಸ್ಕರ ಸಣ್ಣ ಸ್ಲೈಕಲು ತರುವರು—ಮಣಿಮಲ್ಲನ ಹಾಗಿನದ್ದು. ಅವ್ವಾ, ಅವನು ನನಗೆ ಸ್ಲೈಕಲ್ಲು ಮುಟ್ಟಬಿಡುವುದಿಲ್ಲ; ತುಂಡಾಗುತ್ತದೆಂತ ಹೇಳುತ್ತಾನೆ. ಏನು; ಮುಟ್ಟಿದಾಕ್ಷಣ ಸ್ಲೈಕಲ್ಲು ತುಂಡಾಗುತ್ತದೇನು? ಬಹಳ ಪೋಕ್ರಿ ಹುಡುಗ. ಚಂದ್ರಿಗೆ ಸಹಾ ಸ್ಲೈಕಲ್ಲು ಮುಟ್ಟಬಿಡುವುದಿಲ್ಲ. ನನ್ನ ಸ್ಲೇಟು ಒಡೆದು ಹಾಕಿದ್ದಾಳೆ. ಬೇಡ. ಎಂತ ಹೇಳಿದರೆ ಹಲ್ಲು ಕಡಿಯುತ್ತಾಳೆ. ನಾನು ತಂದೆ ಹತ್ತಿರ ಹೇಳುತ್ತೇನೆ."

ಜೇಲರು ಅಪ್ಪಣೆಕೊಟ್ಟನು— "ಕರೆದುಕೊಂಡು ಹೋಗು." ಒಬ್ಬ ಸಿಪಾಯಿಯು ಕರೆದುಕೊಂಡು ಹೋದನು. ಎರಡೂ ಕಡೆಗಳಲ್ಲಿ ಕೊರಡಿಗೆ– ದಪ್ಪ ದಪ್ಪ ಗೋಡೆಗಳು ಮತ್ತು ಆ ಗೋಡೆಗಳ ಆವರಣದಲ್ಲಿ ಭಗವಂತನ ಶ್ರೇಷ್ಠ ಕಲೆಯ ಮನುಷ್ಯರು ಬಂಧಿತರಾಗಿದ್ದಾರೆ. ಒಬ್ಬಿಬ್ಬರಲ್ಲ; ನೂರು-ಐನೂರು, ಸಂಸಾರದಲ್ಲಿ ನಾನೊಬ್ಬನೇ ಅಭಾಗಿಯಲ್ಲ— ಸಾವಿರವಿದ್ದಾರೆ; ಲಕ್ಷಗಟ್ಟಲೆ ಇದ್ದಾರೆ

ಒಂದು ಕತ್ತಲೆ ಕೋಣೆಯ ಎದುರು ನಿಲ್ಲಿಸಲ್ಪಟ್ಟೆ. ಹೆದರಿಕೆಯಿಂದ ಗೋಪಾಲನು ನನ್ನ ಕಾಲುಗಳಡೆಯಲ್ಲಿ ಅವಿತುಕೊಂಡನು. ಅವನು ನಡುಗುತ್ತಿದ್ದನು— ಮುಖ ಬಿಳುಪಾಗಿತ್ತು

ಸಿಪಾಯಿ ಕರೆದನು—"ಪ್ರಕಾಶ"!

ನಾನು ನಾಲ್ಕೂ ಕಡೆ ನೋಡಿದೆ ಇದು ಗಲ್ಲಿನ ಮನೆ. ತಮ್ಮ ಜೀವನದ ಅಂತಿಮಗಳಿಗೆಯವರು ಇಲ್ಲೇ ಇರುತ್ತಾರೆ. ಈ ಮನೆಗೆ ಮಾತಾಡುವ ಶಕ್ತಿ ಬರುತಿದ್ದರೆ ಜಗತ್ತಿನ ಒಂದು ದೊಡ್ಡ ಸಾಹಿತ್ಯವು ಓದಲು ಸಿಕ್ಕುತಿತ್ತು. ಮತ್ತು ಅದರ ತುಲನೆಯ ಬೇರೊಂದು ಸಾಹಿತ್ಯವು ಸಿಗುವುದು ದುರ್ಲಭ, ಈ ಕೊರಡಿಯ ಕೃತಿಯೊಂದು ಇಟ್ಟಿಗೆಯು ಇಂತಹ ಜನರ ನಿಟ್ಟುಸಿರಿನಿಂದ ಒಲಿದಿದೆ, ಹೊರಗಿನ ಭಟ್ಟಿಯ ಬೆಂಕಿಯಿಂದಲ್ಲ ಅದು ಹೆಸರಿಗೆ ಮಾತ್ರ. ಇದರ ನೆಲದ ಮೇಲೆ ಎಷ್ಟು ಕಣ್ಣೀರು ಇಂಗಿ ಹೋಗಿವೆ! ಅವುಗಳನ್ನು ಒಟ್ಟುಗೂಡಿಸಿದರೆ ಜಗತ್ತಿನ ಅರ್ಧ ಸಭ್ಯತಾಭಿಮಾನಿಗಳು ಅದರಲ್ಲಿ ಮುಳುಗುವರು. ಈ ಕೊಠಡಿಯಲ್ಲಿ ಯಮನು ತಾಂಡವವಾಡುತ್ತಾನೆ. —ಹರಿ! ಹರಿ! ಕೊರಡಿಯೊಳಗಿನಿಂದ ಶಬ್ದ ಕೇಳಿಸಿತು— ಝುಣ್; ಝುಣ್; ಝುಣ್! ಒಬ್ಬ ಕ್ಷೀಣಕಾಯ, ದಣಿದ, ಹತಾಶನಾದ ಅರ್ಧ ಸತ್ತ ಯುವಕನು ಬಾಗಿಲ ಬಳಿಯಲ್ಲಿ ಬಂದು ನಿಂತನು. ಇವನೇ ಅಂಧಕೂಪದಲ್ಲಿರುವ "ಪ್ರಕಾಶ"— ನನ್ನ ಅಂಧಕಾರಮಯ ಭವಿಷ್ಯದ ಅಂತಿಮ ಪ್ರಕಾಶ; ನನ್ನ ಗೋಪಾಲನ ಮತ್ತು ಮುದ್ದಿನರಗಿಣಿಚಂದ್ರಿಯ ಪ್ರಕಾಶ!

ಸಿಪಾಯಿಯು ಹೇಳಿದನು—"ಐದು ನಿಮಿಷ ಸಮಯವಿದೆ, ಮಾತನಾಡು. ಹಾಂ; ತ್ವರ್ಯದಿಂದ; ತಡವಾಗಬಾರದು."

ನನಗೆ ದೂರ ಸರಿದು ನಿಲ್ಲಲು ಅಪ್ಪಣೆಯಾಯಿತು. ನಾನು ಕೈದಿಗೇನೂ ಕೊಡಬಾರದೆಂಬ ಭಯದಿಂದ. ನಾನು ನೋಡಿದೆ. ಅವನ ಮುಖವು ಕೂದಲಿನಿಂದ ತುಂಬಿಕೊಂಡಿದೆ; ತಲೆಯಲ್ಲಿ ಕೆದರಿದ ಕೂದಲುಗಳು, ಗಡ್ಡ ಮತ್ತು ಮಿಸೆ ಕಣ್ಣುಗಳು ಹೂತು ಹೋಗಿದ್ದವು; ಶರೀರವು ಒಣಗಿ ಕಟ್ಟಿಗೆಯಾಗಿತ್ತು. ನಾನು ಹೇಳಿದೆ— "ಗೋಪಾಲ್; ತಂದೆಯವರಿಗೆ ನಮಸ್ಕಾರ ಮಾಡು." ಗೋಪಾಲ— ಸ್ತಂಭೀಭೂತನಾಗಿ ನಿತ್ತ ಬಾಲಕ ಗೋಪಾಲ—ಭೂಮಿಗೆ ತಲೆತಾಗಿಸಿ ಉದ್ದಂಡ ಪ್ರಣಾಮ ಮಾಡತೊಡಗಿದನು. ನಾನು ಸಹಾ ನಮಸ್ಕಾರಮಾಡಿದೆ ಅವನು ಅಸ್ಪಷ್ಟ ಪ್ರಕಾಶದಲ್ಲಿ ನಿಂತಿದ್ದನು– ಆ ತುದಿಯಲ್ಲಿ! ಅವನು ಗದ್ಗದ ಕಂಠದಿಂದ ಮಾತಾಡಿದನು —"ಸು... ಖ.. ದಿಂ...ದಿರು! ಇದು ....ಅಂತಿಮ.... ಭೇಟಿ; ಅಂತಿಮ ಆಶೀರ್ವಾದಗಳು; ಅಂತಿಮ ಮಾತುಕತೆಗಳು. ಸರಿ, ನಾಳೆ...ಬೆಳಿಗ್ಗೆ ಬಂದು ನನ್ನ ಶವವನ್ನು ತೆಗೆದುಕೊಂಡು ಹೋಗಿ—ನಾನು ಜೇಲರನೊಡನೆ ಹೇಳಿದ್ದೇನೆ." ನಾನು ಶಿರಸ್ಸನ್ನು ಹಿಡಿದು ಕೂತ ಕೊಂಡೆ.

ಗೋಪಾಲನು ಹೇಳಿದನು—"ಅಪ್ಪಾ; ನಡೆ ಹೋಗುವಾ". ಯಾರೋ ನನ್ನೆದೆಗೆ ಬಲವಾಗಿ ಬಡೆದಂತಾಯಿತು— ಎಂಥಾ ಮಕ್ಕಳಾಟಿಕೆಯ ಹಂಬಲು! ಅವನು ಹೇಳಿದನು—"ಮಗನೇ, ನಾನು ಇನ್ನೊಂದು ಲೋಕದ ಯಾತ್ರಿಕ. ನೀನು ಚೆನ್ನಾಗಿ ಕಲಿ ಅಮ್ಮನಿಗೆ ಕಷ್ಟಕೊಡಬೇಡ." ಅವನ ಕಣ್ಣುಗಳಿಂದ ಅಶ್ರುಧಾರೆಯು ಹರಿಯುತ್ತಿತ್ತು. ಆವನು ಕಲ್ಲಿನ ಗೊಂಬೆಯ ಹಾಗೆ ನಿಂತಿದ್ದಾನೆ. ಗೋಪಾಲನು ತಿರುಗೊಮ್ಮೆ ಹೇಳಿದನು–'ಅಪ್ಪಾ, ಚಂದ್ರಿಯು ಮರುಗುತ್ತಾಳೆ. ಅವಳು ನನ್ನ ಸ್ಲೇಟು ಒಡೆದು ಹಾಕಿದ್ದಾಳೆ ಹೊಸದು ತರಿಸಿ ಕೊಡು.'

ಅವನು ಒಂದು ನೀಳವಾದ ಉಸಿರು ಬಿಟ್ಟು ಹೇಳಿದನು— "ಕೇಳಿದೆಯ? ಗೋಪಾಲನ ಸ್ಲೇಟು ಒಡೆದು ಹೋಗಿದೆಯಂತೆ. ಒಂದು ಸ್ಲೇಟು ತರಿಸಿಕೊಡು.'

ನಾನು ಏನು ಮಾತಾಡಲಿ; ನನಗೆ ನನ್ನ ಕಿವಿಗಳೆರಡೂ ಕಿವುಡಾದಂತೆ ಭಾಸವಾಗುತಿತ್ತು. ಕಣ್ಣುಗಳ ಎದುರಿಗೆ ಕತ್ತಲೆ ಕವಿದಿತ್ತು.

ಅವನು ತಿರುಗಿ ಹೇಳಿದನು– "ಒಳ್ಳೇ ರೀತಿಯಿಂದ ಬಾಳು; ಮಕ್ಕಳನ್ನು ಅಕ್ಕರೆಯಿಂದ ಸಲಹು, ಗೋಪಾಲನಿಗೆ ಕಲಿಸುತ್ತಾ ಇರು. ನಾನು...... ಈಗ ದೊರಟೆ, ಆದರೆ ಗೋಪಾಲನನ್ನು ನನ್ನ ಗಳಿಕೆ (ಸಂಪತ್ತನ್ನು)ಯಾಗಿ ಬಿಟ್ಟು ಹೋಗುತ್ತೇನೆ. ಚಿಂತಿಸದಿರು ಏನೆಲ್ಲಾ ಆಗಬೇಕೋ ಅದೆಲ್ಲಾ ಆಗಿಯೇ ತೀರಬೇಕು".

ನಾನು ಮಾತಾಡಿದೆ—'ಮತ್ತೆ..... .. ಮತ್ತೇನು.... "

ಕಂಠವು ಬಿಕ್ಕಿಬಂತು; ಕಣ್ಣುಗಳಿಂದ ಅಶ್ರು ಧಾರೆಯು ಹೊರಟಿತು.

ಸಿಪಾಯಿ ಹೇಳಿದನು "ಆಯಿತು; ನಡಿ; ಐದು ನಿಮಿಷವಾಯಿತು." ಅವನು ಹೇಳಿದನು—"ಒಳ್ಳೇದು...ಬರುತ್ತೇನೆ! ಒಮ್ಮೆ ನನಗಾಗಿ ಗೋಪಾಲನನ್ನು ಅಪ್ಪಿ ಮುದ್ದಿಡು—ನಾನು ನೋಡುವೆನು. ಪರಮಾತ್ಮನು ನಿನಗೆ ಧೈರ್ಯವನ್ನು ಕೊಡಲಿ. ಮತ್ತೊಂದು ಜನ್ಮದಲ್ಲಿ ಸಿಗುತ್ತೇನೆ."

ಸಿಪಾಯಿಯು ಕಣ್ಣರಳಿಸಿ—"ಬೇಗ; ಸಮಯವು ಕಳೆದು ಹೋಯಿತು; ಐದು ನಿಮಿಷ ಕಳೆದು ಹೋಯಿತು; ನಡಿ"— ಎಂದ.

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹು ಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ ೨ ೪-೧ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಮಾರಾಟಗಾರರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಆದು ದಮ್ಮನ್ನು ಬರೇ ಮುಮುಕ್ಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಹಿಗೆಯುವುದು. ಈ ಔಷಧ ಸುಮಾರು ನಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯು ಮುಂತ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್, ೬ ಔನ್ಸ್, ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೨.೬.೦; ೫.೧೨.೦ ಮತ್ತು ೧೦.೦.೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು.-ಪ್ರೊಪ್ರೈಟರ್ ಸ್ಟೋರ್ಸ್, ಮಂಗಳೂರು; ಟಿ.ಸಿ.ನಟರಾಜನ್ ಕೊ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಛಿಕಾ ಮತ್ತು ಕಂಪನಿ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨.



ಧಾತುಪುಷ್ಟಿ ಲೇಹ

ದುರ್ಬಲರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ [illegible] ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 3—[illegible]—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0, ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, [illegible] ವಿಕಾರಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂ. 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು ಪ್ರೊಪ್ರೈಟರ್ ಸ್ಟೋರ್ಸ್, ಕೆಮಿಸ್ಟ್ 183. ಸುತಾರಬಾಗ್ ರೋಡ್, ಜಿ. ಐ. ಪಿ. ರೈಲ್ವೆ, ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವದಿಲ್ಲ—ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವದಿಲ್ಲ. ಹೊಟ್ಟೆನೋವು, ವಾಂತಿ, ಅತಿಸಾರ, ಕೆಮ್ಮು, ಮೈನೋವು, ಹಲ್ಲುನೋವು, ಮಕ್ಕಳ ಹಾಲ ಏರಾ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಸ್ಚರ್ ನಿಶ್ಚಯವಾಗಿ ಗುಣಪಡಿಸುತ್ತದೆ. [illegible]

ಜವೇರಿಯನ್ ಮಿಕ್ಸ್ಚರ್ ಪ್ರಸನ್ನ ಪ್ರಸ, ಮುಂಬಯಿ

FOR LIFE ASSURANCE

CONSULT

The New Gaurdian of India Life Insrce. Co , Ltd ,

(Chairman.- The Hon'ble Mr. M. CT. M. Chidambaram Chettiar.*)*

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade, Post Box No. 142, MADRAS.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿಶ್ಚೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲೀಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ

ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ

ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುವದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ—

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 **ಟಪ್ಪಾಲು ಖರ್ಚು 0-4-0 ಪ್ರತ್ಯೇಕ**

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆಲೆ: 0—1—6

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ 1—8—0
6 ತಿಂಗಳಿಗೆ ರೂ. 2—8—0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಸೂಪರಿ ಸಂಚಿಕೆಗೆ ಬರೆಯಿರಿ
ಮೆನೇಜರ್,
ನವಯುಗ, ಉಡುಪಿ, ದ ಕ

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೩ | FOUNDER SRI. A. B. SHETTY, M L A | Vol. 26 No. 3

ಉಡುಪಿ • 19—9—1946 • ಮಂಗಳೂರು.

ಅಮೃತಾಂಜನ,
ತಲೆವೇದನೆ, ಶಿರೂ,
ವೇದನೆ, ಉಳುಕು
ಕತ್ತಿಗೆ, ಭುಜ,
ಹಲ್ಲು ವೇದನೆಗಳ
ಗೂ ಎದೆನೋವು,
ಗಾಯಗಳು ಬಾತು
ಕೊಳ್ಳುವುದು, ಚೇಳು
ವಿಷ ಮುಂತಾದ ಬೇನೆ
ಸಕ್ಷ ವಾತ ಮೊದಲು
ಮೊದಲಿಂದ ಎಲ್ಲಾ
ರೋಗಗಳಿಗೂ ಸಿದ್ಧ
REGD.
ಸಕಲ, ಹುಳುಕಡ್ಡಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea Stomachache, Vomiting and Nausea
BHUVANENDRA PRODUCTS LTD., Katapadi.
'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ
ಉಡುಪಿ ಸ್ಟಾಕಿಸ್ಟರು — ಡಾ। ಪಾಯಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಡಾ। ಆರ್। ಎಸ್। ಶೆಟ್ಟಿ, ರಥಬೀದಿ, ಡಾ। ಪಿ। ಜಿ। ಆಚಾರ್ಯ ಫಾರ್ಮಸಿ, ಡಾ ಜಿ ಶೇಷಗಿರಿ ಶೆಟ್ಟಿ, L I M.; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪ್ಪೊ

MAKE SURE OF A COLLEGE EDUCATION.
WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?
The Canara Mutual Assurance Co., Ltd.,
HEAD OFFICE UDIPI, (S. India)
Chief Agents for the Bombay and Madras Presidencies including States and the States of Mysore and Hyderabad
The Commercial Corporation of India, Ltd,
UDIPI. (S. India)

THE
Bombay Life Assurance Company Ltd.
(ESTD 1908)
A PREMIER INSURANCE COMPANY
New Business in 1945 - 2,77,23,100
KOCHIKAR BROTHERS, LTD.
(ESTD 1910)
Chief Agents for South India including
Travancore, Cochin and Mysore State
New Business in 1945 in our area - Over 5 Millions
OUR Expert advice gained by 35 years Experience is at your door FREE
Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY

ಪ್ರಕಟಣೆ.
ಬೊಂಬಾಯಿ, ಮದ್ರಾಸ್, ಹೈದರಾಬಾದ್ ಡೆಕ್ಕನ್ ಪ್ರಾಂತಗಳಲ್ಲೂ ದಕ್ಷಿಣ ಹಿಂದೂಸ್ಥಾನದಲ್ಲೂ
ಬಾಲಧರ
ವಿಕ್ರಯಿಸಲು ನಮ್ಮ ಏಕಮಾತ್ರ ಪ್ರತಿನಿಧಿಯಾಗಿ
ಬೊಂಬಾಯಿಯ
ಮೆಸರ್ಸ್ ಫಜಲ್‌ಭಾಯಿ ಲಿಮಿಟೆಡ್
ಅವರನ್ನು ನೇಮಿಸಲಾಗಿದೆ ಎಂದು ಪ್ರಕಟಿಸಲು ನಮಗೆ ತುಂಬಾ ಸಂತೋಷವೆನಿಸುತ್ತದೆ.
ಮೆಸರ್ಸ್ ಬಾಲಧರ ಫಾರ್ಮಸಿ,
55, ರೈಲ್ವೆ ರೋಡ್, ಲಾಹೋರು.

— ಮಕ್ಕಳನ್ನು ಹಡೆಯುವುದು ಸಾಕು —
ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣುಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಮುಟ್ಟಿನ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು
ಪಕ್ಕೆ:—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ
ಮಾಲಕರು:—ಬಾಲಪ್ಪಾ ಫಕೀರಪ್ಪಾ, ಜಾವಳಗೇರಿ
ಆಯುರ್ವೇದ ಔಷಧಾಲಯ. ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಬಾಣಪ್ಪ ಸಿದ್ಧಲಿಂಗಪ್ಪ ಭಾರಮಾಂಡಗೆರ, ವಿಜಾಪೂರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ ಜಾವಳಗೇರಿ,—ಜಾವಳಗೇರಿ ಪ್ರೆಸ್. ಆರ್. ಎಲ್. ಶಿವಲಿಂಗ, ಕೆಮಿಸ್ಟ, ಹಾವೇರಿ, ಇತ್ಯಾದಿ
Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.
ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.
ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ
ನಿಮ್ಮ ಆಪದ ಸಮಯಗಳ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.
ವಿಮೆ ತೆಗೆಯುವವರೂ, ಏಜಂಟರು ಹಾಗೂ ಓರ್ಗನೈಜರಾಗುವವರೂ ಬರೆಯಿರಿ—
ಪಿ. ಡಿ. ನವಯು, ಉಡುಪಿ.
ದ ಕ ಜಿಲ್ಲೆಯ ಚೀಫ್ ಏಜಂಟ್.
THE JUPITER
General Insurance Company, Ltd.

ನಮ್ಮ ನೆರೆಯಲ್ಲಿ ಗಾಂಧಿಜೀ

ಶ್ರೀ. ರಾ. ಕೃ. ಶೆಟ್ಟಿ, ಕಾರಿಯಹಳ್ಳಿ.

ಗಾಂಧೀಜಿ ನಮ್ಮ ನಾಡಿನಲ್ಲೆಲ್ಲ ಒಕ್ಕಲಾಗಿದಾರೆ. ನಮ್ಮನ್ನು, ಮನೆಮನೆಯಲ್ಲಿ ಕುಳಿತು ಆಳುತ್ತಿದಾರೆ. ಚರ್ಚಿಲ್ ದೊರೆಯ ಕಣ್ಣಿಗೆ ಗಾಂಧಿಜಿ ಬರಿ 'ಬತ್ತಲೆ ಬೈರಾಗಿ'ಯಂತೆ ಕಂಡರೂ ಅವರು ನಮ್ಮ ನಾಡಿನ ಜನರಿಗೆ ಬಾಪೂ ಎನಿಸಿದಾರೆ. ಈ ಬತ್ತಲೆ ಬೈರಾಗಿ ಹೋದ ಹೋದೆಡೆಯಲ್ಲೆಲ್ಲ ಜನ ಜಾತ್ರೆಯೆಂದು ಕೂಡುತಾರೆ. ಯಾವ ರಾಜನಿಗೂ ಅವನ ಕೈಕೆಳಗಿನ ಆಳುಗಳು ಎತ್ತದಂತಹ ಎದೆಯಾರತಿಯನ್ನು ನಮ್ಮ ಜನ ಬಾಪೂಜಿಯವರ ಕಾಣಿಕೆಗೆ ಎತ್ತುತಾರೆ. ಪಂಡಿತ ನೆಹರೂ ಅವರು ಈ ಕುರಿತು ಬಹಳ ಚೆನ್ನಾಗಿ ಹೇಳಿದಾರೆ:

"This little man of poor physique had something of steel in him, something rock-like which did not yield to physical powers, however great they might be. In spite of his unimpressive features, his loin-cloth and bare body there was a royalty and a kingliness in him which compelled a willing obeisance from others. Consciously and deliberately meek and humble, yet he was full of power and authority, and he knew it, and at times he was imperious enough, issuing commands which had to be obeyed. His calm, deep eyes would hold one and gently probe into the depths; his voice, clear and limpid, would purr its way into the heart and woke an emotional response."

ಪಂಡಿತ ನೆಹರು ಅವರ ಈ ಮಾತುಗಳ ಹುರುಳನ್ನು ಕಳೆದ ಬಾರಿ ಮದರಾಸಿನ ಆಸುಪಾಸಿನ ಜನರು ಕಂಡಿದ್ದರು. ಕನ್ನಡಿಗರು, ತಮಿಳರು, ತೆಲುಗರು, ಮಲಯಾಳಿಗಳು ಮತ್ತು ತುಳುವರು ಎಲ್ಲರೂ ಬಾಪೂಜಿಯನ್ನು ಕಂಡರು, ಕೇಳಿದರು. ರವೀಂದ್ರನಾಥ ಟಾಗೋರರು ಒಮ್ಮೆ ಹೀಗೆ ಬರೆದಿದ್ದರು: 'One grows old, to discover that spontaneous simplicity of life is the true life-but where are the time and the opportunity to realise it?' ಇದರ ಬಗೆಯನ್ನು ಕಾಣುವುದಕ್ಕೆ ನಮ್ಮ ಜನ ಇಂದು ಹೆಚ್ಚು ಮುಪ್ಪುರಿಗೊಳ್ಳಬೇಕಾಗಿಲ್ಲ. ಗಾಂಧಿಜಿಯವರನ್ನು ಕಂಡರೆ ಇದನ್ನು realise ಮಾಡುವುದಕ್ಕೆ ಅಡ್ಡಿಯಿಲ್ಲ. ಮದರಾಸಿನ ಜನ ಇದನ್ನು ತಿಳಿದು ಕೊಂಡರು.

ಗಾಂಧೀಜಿ ಮದರಾಸಿಗೆ ಬಂದು ಎರಡು ಹಪ್ತೆಗಳನ್ನು ಕಳೆದರು. ದಕ್ಷಿಣದ ಜನಕ್ಕೆ ತನ್ನ ಬಾಳಿನ 'ಕಾಣ್ಕೆ'ಯನ್ನು ಹೇಳಿ ಕೊಟ್ಟರು. ತನ್ನ ಎಂದಿನ ನೇಮವನ್ನು ಬಿಡದೆ ಬಜನೆ ಮಾಡಲು ನಿಂತಾಗ ಜನ ಅಲ್ಲೂ ಹಾಜರು. ಗಾಂಧೀಜಿ ನೆರೆದ ಜನರಿಂದ ಬಜನೆ ಮಾಡಿಸಿದರು. ತನ್ನೊಂದಿಗೆ ಬಂದಿದ್ದ ಪರ್ಣಕುಟಿಯ ಹೆಣ್ಣು ಮಕ್ಕಳಿಂದ ಬಜನೆ ಹೇಗೆ ಮಾಡಬೇಕೆಂದು ಹೇಳಿ ಕೊಟ್ಟರು. ನಂದನಾರ, ವೇಮನ, ನಾರಾಯಣಗುರು, ಬಸವಣ್ಣ, ಕನಕ, ಪುರಂದರರನ್ನು ಪಡೆದ ದಕ್ಷಿಣ ಸೀಮೆಗೆ ಬಜನೆಯ ಕುರಿತು ಹೇಳಲು ಗಾಂಧಿಜಿ ಬರಬೇಕೇನು? ಪರ್ಣಕುಟಿಯ ಹೆಣ್ಣು ಮಕ್ಕಳು ಬರಬೇಕೇನು? ಬಾಪೂಜಿ ಹೇಳಿದರು. ನೀವೆಲ್ಲರೂ ಕೂಡಿ ದಿನಕ್ಕೆ ಒಂದು ಹೊತ್ತಾದರೂ ದೇವರ ನೆನಸು ಮಾಡಿರಿ. ಅದನ್ನು ನಿಮ್ಮ ಬಾಳಿನ ಒಂದು ನೈಯೆಂದು ತಿಳಿದು ಬಳಸಿಕೊಂಡು ಬನ್ನಿರಿ. ನಿಮ್ಮ ಮನೆ ಮನೆಗಳಲ್ಲಿರುವ ಮುಟ್ಟು ಮೈಲಿಗೆಯ ಕೊಳೆಯನ್ನು ತೊಳೆಯಿರಿ. ಹೊಲೆಯದನ್ನು ಬೆಳೆಸಿಕೊಂಡು ಬಂದ ನಮ್ಮ ಜನ ಹೊಲೆಯರಿಗಿಂತಲೂ ಕೀಳಾಗಿದಾರೆ. ಈ ಹೊಲೆಯನ್ನು ಹೊರಗೆ ಹಾಕಬೇಕು...ನಿಮ್ಮ ನಿಮ್ಮ ನಡವಳಿಯನ್ನು ತಿಳಿದು ತಿದ್ದಿ ಕೊಂಡರೆ, ಜೋಕೆತನಗಳಿಂದ ನಡೆದರೆ, ಈ ನಾಡು ತನ್ನಿಂತಾನೆ ಬಿಡುಗಡೆ ಹೊಂದುವುದು. ನಮಗೀಗ ಒಂದು-ಕಟ್ಟು. ಆಗಬೇಕು. ಇದನ್ನು ಆಗು ಮಾಡಬೇಕಾದರೆ ನಮ್ಮ ನಾಡಿಗೆ ನಾಡೇ ಒಂದು ಆಗುವ ಒಂದು ನಾಡುನುಡಿಯ ನೆರವು ಬೇಕು. ಹಿಂದಿಯನ್ನು ಬಿಟ್ಟರೆ ಬೇರೆ ಯಾವ ನುಡಿಯಿಂದಲೂ ಈ ಕೆಲಸ ಆಗಲಾರದು. ಆದುದರಿಂದ ನೀವು ಆ ಮಾತನ್ನು ಕಲಿಯಬೇಕು..."

ಗಾಂಧೀಜಿ ಅಂದ ಈ ಮಾತುಗಳು ನಮ್ಮ ನಾಡಿನ ಉದ್ದಗಲಕ್ಕೂ ಮುಟ್ಟುವುವು, ತಟ್ಟುವುವು. ಇದಕ್ಕೂ ಹಿಂದೆ ಗಾಂಧೀಜಿ ಈ ಮಾತುಗಳನ್ನು ಆಡಿಲ್ಲವೇ? ದಿನವೂ ಆಡುತ್ತ ಬಂದಿದಾರೆ; ಹೋದಲ್ಲೆಲ್ಲ ಇದೇ ಮಾತನ್ನು ಹೇಳುವರು: ಮುಟ್ಟು ಮೈಲಿಗೆ ಹೋಗಬೇಕು; ಕುಡುಕತನ ಅಳಿಯಬೇಕು; ಎಲ್ಲರೂ ತಿಳಿದು ಒಳ್ಳೆಯ ದಾರಿಯಲ್ಲಿ ನಡೆಯಬೇಕು; ನಮಗೆಲ್ಲರಿಗೂ ಒಂದು ಕಟ್ಟು ಮಾಡುವ ಒಂದು ನಾಡುನುಡಿ ಬೇಕು; ನಾಡಿನ ಬಿಡುಗಡೆಯಾಗಬೇಕು. ನಮ್ಮ ನಾಡು ಹೊಟ್ಟೆಗಿಲ್ಲದ ಬಡತನದಿಂದ ಬಳಲುತ್ತಿರುವುದನ್ನು ಗಾಂಧೀಜಿಯವರಂತೆ ಎಲ್ಲರೂ ಕಂಡಿದಾರೆ; ಕಂಡು ಕಡೆನುಡಿದಿದಾರೆ. ಆದರೆ ನಮ್ಮ ನಾಡಿನ ಜನರ ತಿಳಿವಿನ ಕೊರತೆಯಿಂದಾದ ಬಡತನದ ಬಳಲಿಕೆಯನ್ನು ಬಾಪೂಜಿ ಅರಿತಂತೆ ಇನ್ನಾವ ಮುಂದಾಳಾದರೂ ಚೆನ್ನಾಗಿ ಅರಿಯರು. ನಮ್ಮ ಜನಕ್ಕೆ ಹತ್ತಿದ್ದ ಸಿದ್ದ, ಪೊದ್ದ ಆಲಸಿಕೆ-ಇವು ಇಂದು ನಿನ್ನೆಯದಲ್ಲ. ಏಳು ನೂರು ವರುಷಗಳಿಂದ ಆವು ಕುಡಿದ ಹುಲಿಯಂತೆ ಬಿದ್ದ ಈ ಜನರ ಪಾಡು ಇನ್ನೂ ಹೇಳಬಾರದ ಪಾಡು. ಈಚೆಗೆ ನೂರಅರುವತ್ತು ವರುಷಗಳಿಂದ ಈ ಹುಲಿ ಗೂಡಿನೊಳಗೇ ಬಿದ್ದು ಕೊಂಡಿದೆ.

ಗಾಂಧೀಜಿ ಈ ನಾಡನ್ನು ಎಚ್ಚರಿಸಿದರು. ನಮ್ಮ ನಾಡಿನ ಜನ ತಲೆಯೆತ್ತಿ ನಡೆವಂತೆ ಮಾಡಿದರು; ಕಣ್ಣು ಮನಗಳನ್ನು ತೆರೆದು ನೋಡುವಂತೆ ಬೆಳಕು ನೀಡಿದರು. ಸರಿ ದಾರಿಯನ್ನು ತೋರಿಸಿಕೊಟ್ಟು ಮುಂದೆ ತಂದರು. ನೆಹರು ಹೇಳುತಾರೆ: 'He had installed courage and manhood in her people, and discipline and endurance and the power of joyful sacrifice for a cause, and, with all his humility and pride' ನಮ್ಮ ಜನ ಕತ್ತಲೆಯಿಂದ ಬೆಳಕಿಗೆ ಬಂತು. ಇನ್ನು ಮುಂದೆ, ಈ ಬೆಳಕಿನಲ್ಲಿ ಸರಿದಾರಿ ತೋರುವ ಕರುಣೆಯ ಕರಣ ಗಾಂಧೀಜಿ.

—೨—

ಹಿಂದುಗಳು ನಾವು ಇರುವ ಈ ನಾಡು ತಿಳಿವಿನ ತವರ್ಮನೆ, ತ್ಯಾಗದಾಗರ—ಮೊದಲಾದ ಹೆಕ್ಕಳಿಕೆಯ ಹಂದರ. ಇಲ್ಲಿ ಬಂದು ಹೋದವರು ಎಲ್ಲ ದೊಡ್ಡ ದೊಡ್ಡವರು. ಆದರೆ ಈ ನಾಡಿನ ನಡೆವಳಿ ರೂಢಿಗಳೆಲ್ಲ ಇದ್ದಕ್ಕಿದ್ದಹಾಗೆ ಹೊಲೆಹೊದ್ದ ಹೊಲ್ಲನ ಡೆವಳಿ, ಹೊಲಸು ರೂಢಿಗಳು. ಹೆಮ್ಮೆಯ ಮೈಮೆಗೆ ನಮ್ಮಲ್ಲಿ ಏನೂ ಕಡಿಮೆಯಿಲ್ಲ, ಗೈಮೆಗೇ ಕಡಿಮೆ. ಹೊತ್ತು ಹೊತ್ತಿಗೆ, ಆಗಾಗ ಒಬ್ಬೊಬ್ಬ ದೊಡ್ಡವನು ಇಲ್ಲಿ ಹುಟ್ಟ ಬರದಿದ್ದರೆ ಈ ಗನಾಡು ಯಾವಾಲೋ ಕಾಡು ಆಗಿ ಹೋಗುತಿರ್ತಿತ್ತು; ನಾಯಿಗಳ ಬೇಟೆಯಮನೆಯಾಗುತ್ತಿತ್ತು. ಆದರೆ ಈ ದೊಡ್ಡವರು ಬಂದರು ಎಂಬ ಹೆಮ್ಮೆಗೆ ನಾವು ತಕ್ಕವರಲ್ಲ; ನಾವು ಯಾರನ್ನೂ ತಿಳಿಗಣ್ಣಿಂದ ನೋಡತಕ್ಕವರಲ್ಲ. ನಮ್ಮ ಸೀಮೆಯಲ್ಲಿ ಹುಟ್ಟಿದ ಬಲ್ಲವರ ತಿಳಿವು ಕೊಂಡು ನಾವು ಮಾಡಿದ್ದಾದರೂ ಏನು? ಇಂದು ಬಾಪೂ, ಬಾಪೂಜಿ ಎಂದು ಅವರ ಮಹಾತ್ಮೆಯನ್ನು ಕೊಂಡಾಡುವ ನಾವು ಅವರ ತಿಳಿವಿನ ಬಳಕೆಯ ಮಾತನ್ನು ಕೊಂಡು ನಡವಳಿಯಲ್ಲಿ ನಮ್ಮ ಅಂದಗಾಣಿಸುವೆವೆ? ಬಾಪೂ ಬರುತಾರೆ, ಹೇಳುತಾರೆ, ಹೋಗಲುತಾರೆ: ನಾಯಿಯಬಾಲ ಮೊದಲಿನಂತೆ ಡೊಂಕಾಗಿಯೇ ಇರುತ್ತದೆ.

ದಕ್ಷಿಣದ ಸೀಮೆಯಲ್ಲಿ ಹುಟ್ಟಿದ ತಿಳಿವುಗಾರರಿಗೆ ಲೆಕ್ಕವೇ ಇಲ್ಲ. ಇವರೆಲ್ಲ ಯಾವ ಹೊಲಸನ್ನು ದೂರ ಮಾಡಿರಿ ಎಂದು ನಮ್ಮ ಜನಕ್ಕೆ ಹೇಳಿದರೋ, ಆ ಹೊಲಸನ್ನು ನಾವು ಎಲ್ಲಿ ಬಿಟ್ಟೆವೇವೆ? ಇಂದು ಗಾಂಧೀಜಿಯವರೂ ಅದೇ ಹಿಂದಿನವರ ಮಾತನ್ನು ಹೇಳುತ್ತ ಬರುತ್ತಿದಾರೆ. ನೆನ್ನೆ ಮದರಾಸಿನಲ್ಲಿಯೂ ಅದನ್ನೇ ಹೇಳಿದರು; ಜನ ಕೇಳಿಕೊಂಡು ಹೋದರು. ಗಾಂಧೀಜಿಯವರಿಗೆ ನಾವು ತೋರುವ ಒಲವು ಏತರದು? ಅವರ ಮಾತನ್ನು ಕೇಳಿ ನಾವು ಸುಮ್ಮನೆ ಕುಳಿತರೆ ನಮ್ಮಂತಹ

(೧೧ನೇ ಪುಟ ನೋಡಿರಿ)

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನೀವು ನಿಮ್ಮ ವ್ಯಾವಹಾರಿಕ ವಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ | ಹಣದ ರಾಶಿಯಲ್ಲಿರಬೇಕಾದ / ಸಿರಿವಂತರಾಗಬೇಕಾದ / ಲಕ್ಷ್ಮೀಪುತ್ರರಾಗಬೇಕಾದ / ಅನುಕೂಲಸ್ಥರಾಗಬೇಕಾದ | ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮೀರಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd: 1906

CANARA BANK LIMITED

(Incorporated in British India. liability of Members Limited.)

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪ್ಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಟವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಕಮ್ಯೂನಿಷ್ಟ್ ಸಭ್ಯತೆಯ ಮಾದರಿ—ಪ್ರಶ್ನೆ!

ಓರ್ವ ಕಮ್ಯೂನಿಸ್ಟ್ ಎಂ ಎಲ್. ಎಲ್. ಯ ನುಡಿ ಮುತ್ತುಗಳು.

ದ. ಭಾ. ರೈಲ್ವೇ ಮುಷ್ಕರದ ಸಂಬಂಧವಾಗಿ ತಿರುಚಿನಾಪಳ್ಳಿ ಜಿಲ್ಲೆಯ ರೈಲ್ವೇ ಮುಖ್ಯ ಕಾರ್ಯಾಲಯವಿರುವ 'ಗೋಲ್ಡನ್ ರೋಕ್' ಎಂಬಲ್ಲಿ ಸೆಪ್ಟೆಂಬರ್ 5ರಲ್ಲಿ ಕೆಲಸಗಾರರು ಕಮ್ಯೂನಿಸ್ಟರ ಪ್ರೇರಣೆಗೊಳಗಾಗಿ ಆಯುಧಪಾಣಿಗಳಾಗಿ ಪೋಲೀಸರ ಮೇಲೆ ಬಿದ್ದಿದ್ದರು. ಹಿಂಸಾತ್ಮಕವಾಗಿ ಭೀಕರ ರೀತಿಯಿಂದ ವರ್ತಿಸಿದ್ದರು. ಪೋಲೀಸರು ಲಾಠೀ ಚಾರ್ಜು ಮತ್ತು ಗೋಳೀಬಾರು ನಡಿಸಬೇಕಾಯಿತು. ತತ್ಪರಿಣಾಮವಾಗಿ ನಾಲ್ವರು ಮಡಿದರು; 150ಕ್ಕೂ ಮಿಕ್ಕಿ ಜಖಂಗೊಂಡಿದ್ದರು. ಹಲವರ ದಸ್ತಗಿರಿಯಾಗಿತ್ತು; ಪೋಲೀಸರಿಗೂ ಜಖಮಾದ ವಾರ್ತೆಯಿದೆ. ಮದ್ರಾಸ್ ಎಸೆಂಬ್ಲಿ ಸದಸ್ಯರಾದ ಕಮ್ಯೂನಿಸ್ಟ್ ನಾಯಕ ಶ್ರೀ. ಆನಂದನ್ ನಂಬಿಯಾರರಿಗೆ ಪೋಲೀಸರ ಬಲವಾದ ಹೊಡೆತದಿಂದ ಜಖಮಾಗಿದೆ. ಈ ಸಂಬಂಧವಾಗಿ ಇದೇ ತಾ. 7ರ ಮದ್ರಾಸ್ ಎಸೆಂಬ್ಲಿಯಲ್ಲಿ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ. ಪಿ. ವೆಂಕಟೇಶ್ವರಲು ರವರು ಪೋಲೀಸ್ ಅತ್ಯಾಚಾರಗಳನ್ನು ಮನಮುಟ್ಟುವಂತೆ ವರ್ಣಿಸಿದಾಗ, ಪ್ರಧಾನಿ ಪ್ರಕಾಶಮರು ಆ ಭಾಗದಲ್ಲಿ ಕಮ್ಯೂನಿಸ್ಟರು ಮಾಡಿದ ಹಾವಳಿಯನ್ನು ವರ್ಣಿಸಿ ಕಮ್ಯೂನಿಸ್ಟ್ ಸದಸ್ಯ ಶ್ರೀ. ಆನಂದ ನಂಬಿಯಾರರಿತ್ತಿದ್ದ ಕಲವು ಭಾಷಣಗಳ ಭಾಗವನ್ನು ಓದಿ ಹೇಳಿದರು. ಕಮ್ಯೂನಿಸ್ಟ್ ಮುಂದಾಳುಗಳ ಮನೋವೃತ್ತಿ ಹೇಗಿದೆ ಎಂಬುದನ್ನು—ಓರ್ವ ವಿದ್ಯಾವಂತ ಪ್ರತಿಷ್ಠಾವಂತ, ಹಾಗೂ ಎಸೆಂಬ್ಲಿ ಸದಸ್ಯ—ಆದರೆ ಕಮ್ಯೂನಿಷ್ಟರಾಗಿರುವ ಶ್ರೀ. ಆನಂದ ನಂಬಿಯಾರರ ಮಾತುಗಳಿಂದಲೇ ಅರಿಯಬಹುದು.

'ಬೂಟ್ಸಿನಿಂದ ಹೊಡೆಯುವೆ'!

ಗೋಲ್ಡನ್ ರೋಕ್ ದುರಂತವನ್ನು ಕಮ್ಯೂನಿಷ್ಟರು ಹೇಗೆ ನಿರ್ಮಿಸಿದರೆಂಬುದನ್ನು ವರ್ಣಿಸುತ್ತಾ ಪ್ರಧಾನಿ ಪ್ರಕಾಶಮರಂದರು: "ಇದೇ ಶ್ರೀ ಆನಂದನ್ ನಂಬಿಯಾರರು ದ. ಭಾ. ರೈಲ್ವೇ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಕಲ್ಯಾಣ ಸುಂದರಮರೊಡನೆ ನನ್ನ ಭೇಟಿಗೆ ಬಂದು ರೈಲ್ವೇ ಕೆಲಸಗಾರರ ಪರವಾಗಿ ಕೆಲವು ಬೇಡಿಕೆಗಳನ್ನು ಮುಂದಿಟ್ಟರು. ಸಕಾರಣವಾಗಿ ಅವುಗಳನ್ನು ಅಂಗೀಕರಿಸಲು ನನ್ನಿಂದಾಗದೆ ಹೋಯಿತು. ಅವರು ತಿರುಚಿನಾಪಳ್ಳಿಗೆ ಹೋಗಿ ಹಿಂಸಾತ್ಮಕ ಭಾಷಣಗಳನ್ನಿತ್ತು ಕೆಲಸಗಾರರನ್ನು ಹುಚ್ಚುಗಟ್ಟಿಸಹತ್ತಿದರು. ಆಗೋಸ್ತು 28ರಲ್ಲಿ ಗೋಲ್ಡನ್ ರೋಕ್‌ನಲ್ಲಿ ಶ್ರೀ. ಆನಂದನ್ ನಂಬಿಯಾರರಿತ್ತ ಭಾಷಣದ ಭಾಗವನ್ನು ಈಗ ಓದುತ್ತೇನೆ: "ಪ್ರಕಾಶಮರಿಗೀಗ 75ವರುಷ ಪ್ರಾಯ; ನಾನಾದರೋ—29 ವರುಷದವ. ನನ್ನನ್ನು—ಮದ್ರಾಸ್ ಎಸೆಂಬ್ಲಿಯ ಓರ್ವ ಸದಸ್ಯನನ್ನು—ದಸ್ತಗಿರಿ ಮಾಡಿಯೂ ಅವನು ಎಷ್ಟು ಸಮಯ ಈ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿರಬಲ್ಲನೆಂಬುದನ್ನು ನೋಡಬೇಕು. ಈ ಪ್ರಕಾಶಮನಿಂದ ಇಂತಹ ಕೆಲಸವಾಗುವಂತಿಲ್ಲ—ಬೇರೊಬ್ಬ ಪ್ರಕಾಶಮನೇ ಬರಬೇಕಾದೀತು. ನಾನು ದಸ್ತಗಿರಿಯಾದೊಡನೆಯೇ 1942ರ ಪುನರಾವರ್ತನೆಯಾಗುವದು. ದ. ಭಾ. ರೈಲ್ವೇ ಕೆಲಸಗಾರರ ಸಂಘ ಶಾಂತಪ್ರದವಿದೆ. ಹೀಗಿರುವಾಗಲೂ ನಮ್ಮ ದಸ್ತಗಿರಿ ಮಾಡಿಸುತ್ತಾನ ಸದರೆ ನಾನು ಎಸೆಂಬ್ಲಿ ಸಭೆಯಲ್ಲೇ ಪ್ರಕಾಶಮನನ್ನು ನನ್ನ ಬೂಟ್ಸಿನಿಂದ ಹೊಡೆಯಲಿದ್ದೇನೆ" (ಸಭೆಯಲ್ಲಿ 'ನಾಚಿಕೆ' 'ನಾಚಿಕೆ' ಬೊಬ್ಬೆ. ಮುಖ್ಯ ಸಚಿವರ ಭಾಷಣಕ್ಕೆ ಉಪದ್ರ ಕೊಡಬೇಡಿರೆಂದು ಅಧ್ಯಕ್ಷರು ಕೇಳಿಕೊಂಡಾಗ, ಬೊಬ್ಬೆ ಕೇಳಿಬಂದ ಕಾಂಗ್ರೆಸ್ ಬೆಂಚುಗಳ ಕಡೆಗೆ ತನ್ನ ನಡುಗುವ ಹಸ್ತವನ್ನೆತ್ತಿ ಸಮಾಧಾನಪಡಿಸುತ್ತಾ, ಪ್ರಕಾಶಮರು ಪುನ: ಓದತೊಡಗಿದರು.)

'ಮೆಟ್ಟಿನ ಪೂಜೆಯ ಬಹುಮಾನ'!

ಪ್ರಕಾಶಮರೋದಿದ ಶ್ರೀ ಆನಂದನ್ ನಂಬಿಯಾರರ ಆ ಮೇಲಿನ ಮಾತುಗಳು: "ನಾನು ಕೈದಾದರೆ ಊರೇ ಸ್ಮಶಾನವಾಗುವದನ್ನು ನೋಡಬೇಕಾದೀತು. ರೈ ನೋಲ್ಡರುಗಳೇ, (ದ. ಭಾ. ರೈಲ್ವೆಯ ಜನರಲ್ ಮೆನೇಜರ್) ನೀವು ಜವಾಹರಲಾಲರ ಭೇಟಿ ಮಾಡಲು ಹೋದರೆ ನಿಮಗೆ ಮೆಟ್ಟುಗಳಿಂದ ಪೂಜೆ ಮಾಡುವದೇ ಸರಿ. ನಿನ್ನ ನೋಟೀಸಿಗೆ ಯಾರು ಬೆಲೆ ಕೊಡುತ್ತಾರೆ? ನೀನು ಫಾಶೀ ಕಂಭದಲ್ಲಿ ನೇತಾಡುವನ್ನು ನಾವು ಕಾಣಲಿದ್ದೇವೆ. ಗೋಲ್ಡನ್ ರೋಕಿನ ಕೆಲಸಗಾರರು ಹೇರಿಸನ (ತಿರುಚಿನಾಪಳ್ಳಿಯ ಪೋಲೀಸ್ ಸುಪರಿಂಟೆಂಡೆಂಟ್)ರಿಗೆ ತಮ್ಮ ರಕ್ತ ಕೊಟ್ಟರು. ಈ ಅಪ್ರಾಗತಿಕ ಕಾಂಗ್ರೆಸ್ ಸರಕಾರ, ಈ ಪ್ರಕಾಶಮ್ ಸರಕಾರ ತಲೆ ಕೆಳಗಾಗಬೇಕು......"

'ತಲೆಯೊಡೆದು ಪುಡಿಪುಡಿ'!

ಶ್ರೀ. ನಂಬಿಯಾರರ ತಮಿಳು ಭಾಷಣವು ಒಂದು ಪತ್ರಿಕೆಯಲ್ಲಿ ಬಂದಿದ್ದುದರ ಅನುವಾದವನ್ನೂ ಮಾನ್ಯ ಪ್ರಕಾಶಮರೋದಿದರು: "ನೀವು ಪೋಲೀಸರಿಗೆ ಹೆದರಬೇಕಾಗಿಲ್ಲ. ಅವರು ನಮಗೆ ಹೊಡೆದರೆ ನಾವು ಖಂಡಿತವಾಗಿಯೂ ಮರಳಿ ಹೊಡೆಯುವೆವು. ಅವರಿಗೆ ಮಾತ್ರ ಹೊಡೆತದ ಸ್ವಾತಂತ್ರ್ಯವಿರುವುದಕ್ಕೆ ನಮ್ಮ ಒಪ್ಪಿಗೆಯಿಲ್ಲ. ನಾವು ಶಾಂತ ರೀತಿಯಿಂದ ವರ್ತಿಸುತ್ತಿರುವಾಗ ಅವರು ನಮಗೆ ಹೊಡೆಯುತ್ತಾರಾದರೆ, ಪ್ರಕಾಶಮನ ತಲೆಯ ಮೇಲೇನೇ ಪೆಟ್ಟುಗಳು ಬೀಳಲಿವೆ. ಒಡ, ಪಾಪದ ಕೆಲಸಗಾರರನ್ನು ಹೊಡೆದರೆ, ಪ್ರಕಾಶಮನ ತಲೆಯನ್ನು ಚೂರು ಚೂರು ಮಾಡಿ ಹಾಕುವಂತೆ ನಾವವರನ್ನು ಎಸೆಂಬ್ಲಿಗೇನೇ ಕಳುಹಿಕೊಡಲಿದ್ದೇವೆ. ಇನ್ನು ಮುಂದೆ ಕೆಲಸಗಾರರು ಹೆದರಿ ನಿಲ್ಲುವಂತಿಲ್ಲ. ನಾವು 'ಅಹಿಂಸೆ'ಯ ಘೋಷಕರಾಗುವಂತಿಲ್ಲ. ಹಿಟ್ಲರನ ವಿರುದ್ಧವಾಗಿ ಸೋವಿಯೆಟ್ ಹೂಡಿದ್ದ ಗೊರಿಲ್ಲಾ ಯುದ್ಧಕ್ರಮವನ್ನೇ ಇಲ್ಲಿ ಆಚರಣೆಯಲ್ಲಿ ತರುತ್ತೇವೆ. ಪ್ರಕಾಶಮ್! ನಿನ್ನ ಪೋಲೀಸರನ್ನೆಲ್ಲಾ ಹಿಂದೆಗೆ ಇಲ್ಲವಾದರೆ ನಮಗೆ ಹೊಡೆಯಬೇಕೆಂದು ಅವರನ್ನು ಕಳುಹಿಕೊಟ್ಟ ಪ್ರಕಾಶಮನ ತಲೆಯೇ ಒಡೆದು ಹೋಗಲಿದೆ....ಆ ಕಪ್ಪು ಕಾಲುಗಳವರ ಕಾಲುಗಳು ಕೆಂಪು ಕಾಲುಗಳಾಗಿ ಮಾರ್ಪಡಲಿವೆ".

ಇದೆಂತಹ ಮಜಾ?

ಕಮ್ಯೂನಿಸ್ಟ್ ಸಭ್ಯತೆ ಹೀಗೂ ಉಂಟೇ—ಎಂದು ಇಡೀ ಸಭೆಯೇ ಜಿಗುಪ್ಸೆಪಡುವಂತೆ ಶ್ರೀ. ನಂಬಿಯಾರರ ಭಾಷಣದ ಭಾಗಗಳನ್ನೋದಿ ಹೇಳಿ ಶ್ರೀ. ಪ್ರಕಾಶಮರಂದರು: "ಈ ಕಮ್ಯೂನಿಷ್ಟರ ಪ್ರಾಯ ಮತ್ತು ಅನನುಭವವನ್ನು ಗಮನಿಸಿ, ಅವರು ವ್ಯವಹಾರ್ಯವಾಗಿಯೂ ತಮ್ಮ ಜನತೆಯ ಕಡೆಗೆ ನ್ಯಾಯ ನೀತಿಗನುಸಾರವಾಗಿಯೂ ವರ್ತಿಸುವಂತೆ ಮಾಡಲು ನಮ್ಮಿಂದ ಸಾಧ್ಯವಿದ್ದಷ್ಟು ಪ್ರಯತ್ನಗಳನ್ನು ನಾವು ಮಾಡಿ ನೋಡಿದೆವು. ಕೆಲಸಗಾರರನ್ನು ಅವರ ಜೀವನಾವಶ್ಯಕ ಕೆಲಸಗಳಿಂದ ಬಿಡಿಸಿ ರಸ್ತೆಗಿಳಿಸಿ ತಂದು, ಮೆರವಣಿಗೆ ಮಾಡಿಸಿ, ಕೆಲಸಗಾರರ ಹೆಸರು ಹೇಳಿಯೇ ಮುಂಜಾನೆಯಿಂದ ಸಂಜೆಯ ವರೆಗೂ ಒಂದೇ ಸಮನೆ ಲೆಕ್ಚರ್ ಹೊಡೆಯುತ್ತಾ ಸರಕಾರವು ಕಠಿಣ ವರ್ತನೆ ಕೈಕೊಳ್ಳುವಂತೆ ಮಾಡುವ ಅವರ ವರ್ತನೆಯು ಯಾವ ಹಿತಕ್ಕಾಗಿ?" ಎಂದು ಮಾರ್ಮಿಕವಾಗಿ ಪ್ರಶ್ನಿಸಿ, ಗೋಲ್ಡ್‌ರೋಕಿನಲ್ಲಿ ಪೋಲೀಸರ ಮೇಲೆ ಬಿದ್ದು ಪುಂಡಾಟ ನಡಿಸಿದ ವಿದ್ಯಮಾನಗಳನ್ನೆಲ್ಲಾ ತಿಳಿಸಿ "ಇಂತಹ ಸಂದರ್ಭದಲ್ಲೂ ಪೋಲೀಸ್ ಅಧಿಕಾರಿಗಳು ಸುಮ್ಮಗೆ ಕುಳಿತು ಪ್ರಾರ್ಥನೆ ಮಾಡಬೇಕಿತ್ತೆಂದು ಯಾರಾದರೂ ಹೇಳಬಲ್ಲರೆ?" ಎಂದು ಪ್ರಶ್ನಿಸಿದರು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಜವೇರಿಯನ್ ಜೀವನ ಮಿಕ್ಶ್ಚರ್



KERALA SOAP INSTITUTE, CALICUT

ಕೇರಳಾ ಸೋಪ್ ಇನ್ಸ್‌ಟ್ಯೂಟ್
ಕಲ್ಲಿಕೋಟೆ.

Why Worry?

Do not feel disheartened for not getting BONUS.
We offer you a guaranteed BONUS of Rs 10/- per THOUSAND under our New Scheme.

Please apply immediately:—

A. S Kini,
Managing Director

UNITED KARNATAK INSURANCE Co., Ltd.

HEAD OFFICE **DHARWAR.**

For ... or ... apply to —

Divisional Manager, *or* Branch Manager,
Court Road 19 Bismilla Blds Opp. B. B.
UDIPI, S India. C. I. Stn Dadar, BOMBAY 14.
Or *Or*
Divisional Manager, Branch Manager.
Narayan Hovas MULLAKKAL,
Market Road Bangalore City. Alleppey, (Travancore State)
Or
To our nearest Agents.

ಸಿಂಧಿನಲ್ಲಿ ಮುಡಿ—ಹಿದಯತುಲ್ಲಾ ದುಸ್ಸಂಗ!

ಎಸೆಂಬ್ಲಿ ವಿಸರ್ಜಿಸಲ್ಪಟ್ಟಿತು

ಸಿಂಧಿನ ಗವರ್ನರ್ ಸರ್. ಫ್ರಾನ್ಸಿಸ್ ಮುಡಿಯವರು ಸಿಂಧ್ ಪ್ರಾಂತಿಕ ಎಸೆಂಬ್ಲಿಯನ್ನೇ ಬರ್ಖಾಸ್ತುಪಡಿಸಿ, ಸಾರ್ವತ್ರಿಕ ಮರುಚುನಾವಣೆ ನಡಿಸುವ ಪ್ರಕಟಣೆ ಹೊರಡಿಸಿದ್ದಾರೆ. ಚುನಾವಣೆಯ ದಿನ ನಿಶ್ಚಯವಾಗಿಲ್ಲ. ಆ ವರೆಗೆ ಸದ್ಯದ ಲೀಗ್ ಮಂತ್ರಿಗಳಾದ ಮಿ. ಗುಲಾಮ್ ಹುಸ್ಸೇನ್ ಹಿದಯತುಲ್ಲಾ ಮತ್ತು ಮಿ. ಎಮ್. ಎ. ಕುರ್ರೋರವರೇ ಅಧಿಕಾರ ನಿರ್ವಹಿಸಲಿದ್ದಾರೆ. ಆ ಸಂಬಂಧದ ತಾ. 12ರ ಗವರ್ನರ್ ಪ್ರಕಟಣೆ ಹೀಗಿದೆ:—

'ಅಧ್ಯಕ್ಷ ಅಥವಾ ಉಪಾಧ್ಯಕ್ಷರಿಲ್ಲದೆ, ಅಂತೆಯೇ ಅಧ್ಯಕ್ಷರಾಗಿ ವರ್ತಿಸಲು ತಯಾರಿರುವ ಯಾರೊಬ್ಬನೂ ದೊರೆಯದೆ ಸಿಂಧ್ ನ್ಯಾಯ ವಿಧಾಯಕ ಸಭೆಯಲ್ಲೆದ್ದ ಅಪೂರ್ವ ವಿದ್ಯಮಾನದ ದೆಸೆಯಿಂದಾಗಿ ಹಿಸ್ ಎಕ್ಸೆಲ್ಲೆನ್ಸಿ ಗವರ್ನರರು ಸಿಂಧ್ ಎಸೆಂಬ್ಲಿಯನ್ನೇ ಬರ್ಖಾಸ್ತು ಪಡಿಸಲು ನಿಶ್ಚಯಿಸಿದ್ದಾರೆ. ಈ ಸಂಬಂಧದ ಅಗತ್ಯವುಳ್ಳ ಪ್ರಕಟಣೆಯು ಕೂಡಲೇ ಹೊರಡಲಿದ್ದು ಸಕಾಲದಲ್ಲಿ ಸಾರ್ವತ್ರಿಕ ಚುನಾವಣೆಗಳಾಗಲಿವೆ. ಸದ್ಯ ನಿರ್ಮಾಣಗೊಂಡಿರುವ ಸಿಂಧ್ ಎಸೆಂಬ್ಲಿಯಲ್ಲಿ ಒಂದು ಸುಭದ್ರ ಮಂತ್ರಿಮಂಡಲ ರಚಿಸುವದಸಾಧ್ಯವೆಂಬುದೂ, ಅದಕ್ಕಾಗಿ ನಿನ್ನೆ ತಾನೆ ನಡೆದ ಸಮ್ಮಿಶ್ರಮಂಡಲ ರಚನೆಯ ಒಂದು ಪ್ರಯತ್ನ ಸಮೇತ ಬಾರಿಬಾರಿಗೆ ನಡೆಸಿದ ಎಲ್ಲಾ ಪ್ರಯತ್ನಗಳೂ ವಿಫಲವಾದುದೂ ಸಹ ಗವರ್ನರರ ಇಂದಿನ ನಿರ್ಧಾರಕ್ಕೆ ಹೇತುವಾಗಿವೆ".

ಸಿಂಧಿನ ಸ್ವರೂಪ

ಸಿಂಧ ಪ್ರಾಂತ್ಯವು ಮುಸ್ಲಿಂ ಲೀಗಿನ ಆಶ್ರಯಸ್ಥಳವೆನ್ನಬೇಕು. ಅಲ್ಲಿ ಅತ್ಯಧಿಕ ಸಂಖ್ಯಾಕರು ಮುಸ್ಲಿಮರಾಗಿರುವದಷ್ಟೇ ಅಲ್ಲ—ವಿಶೇಷತ: ಲೀಗ್ ಸ್ಫೂರ್ತಿಯಿದ್ದವರೇ ಎಲ್ಲರೂ. ಹಿಂದೊಮ್ಮೆ ರಾಷ್ಟ್ರೀಯ ಮುಸ್ಲಿಂ ಮಿ. ಅಲ್ಲಾಭಕ್ಷರು ಅಲ್ಲಿ ಪ್ರಧಾನಿಯಾಗಿದ್ದರು. ಆದರೆ ಅವರು ಬ್ರಿಟಿಷ್ ದಬ್ಬಾಳಿಕೆಯನ್ನು ಖಂಡಿಸಿ ಬಿರುದು ತ್ಯಾಗ ಮಾಡಿದ್ದರಿಂದ ಪದಚ್ಯುತರಾಗಿದ್ದರು. ಕೊನೆಗವರು ಕೊಲೆ ಮಾಡಲ್ಪಟ್ಟದ್ದು—ಈಗ ಲೀಗ್ ಮಂತ್ರಿಗಳಾಗಿರುವ ಮಿ. ಕುರ್ರೋರವರ ಮೇಲೆ ಆ ಕೊಲೆಯ ಆಪಾದನೆ ಬಿದ್ದು ಅವರ ದಸ್ತಗಿರಿಯಾಗಿ ವಿಚಾರಣೆಯಲ್ಲಿ ಬಿಡುಗಡೆ ಹೊಂದಿದುದು—ಇವೆಲ್ಲಾ ಸರ್ವಶ್ರುತ ವಿಷಯಗಳು. ಸಿಂಧಿನ 'ಹುರ್' ಪುಂಗಡಿಗರ ಪುಂಡಾಟ ಕೃತ್ಯಗಳು ಜಗತ್ಪ್ರಸಿದ್ಧವಿವೆ. ಲೀಗ್ ಪ್ರಧಾನಿ ಸರ್. ಹಿದಯತುಲ್ಲಾರವರ (ಈಗ ಲೀಗ್ ನಿರ್ಧಾರದಂತೆ ಬಿರುದು ಬಿಟ್ಟಿದ್ದಾರೆ) ಸರಕಾರವು ಆರ್ಯ ಸಮಾಜಿಕರ 'ಸತ್ಯಾರ್ಥ ಪ್ರಕಾಶ' ಗ್ರಂಥದ ಒಂದು ಅಧ್ಯಾಯಕ್ಕೆ ಬಹಿಷ್ಕಾರ ಹಾಕಿ ಈಗಲೂ ಅದನ್ನು ಹಿಂದೆಗೆದಿಲ್ಲ. ಲೀಗ್ ಮಂತ್ರಿ ಮಂಡಲವು ನೌಕರಿದಾನದಿಂದಾರಂಭಿಸಿ ತನ್ನ ಪ್ರತಿಯೊಂದು ಕಾರ್ಯದಲ್ಲೂ ಮುಸ್ಲಿಂ ಪಕ್ಷಪಾತತೆಯಿಂದ ವರ್ತಿಸುತ್ತಾ ಬಂದಿದೆ. ಹಿಂದುಗಳು ಅಲ್ಲಿ ಅಸಂಖ್ಯಾತ—ಅಸಹನೀಯ—ಕಷ್ಟ ನಷ್ಟಗಳಿಗೀಡಾಗುತಿದ್ದಾರೆ.

ಈ ಬಾರಿಯ ಬಲಾಬಲ

ಕಳದ ಬಾರಿಯ ಎಸೆಂಬ್ಲಿ ಚುನಾವಣೆಯಾಗುವ ವರೆಗೂ ಸಿಂಧ್ ಮುಸ್ಲಿಂ ಲೀಗಿನ ನಾಯಕರಾಗಿದ್ದ ಮಿ. ಜಿ. ಎಮ್. ಸಯ್ಯದರಿಗೂ ಮಿ. ಗುಲಾಮ್ ಹುಸ್ಸೇನ್ ಹಿದಯತುಲ್ಲರಿಗೂ ವೈಷಮ್ಯವೆದ್ದು ಜಿನ್ನರು ಹಿದಯತುಲ್ಲರ ಪಕ್ಷವಹಿಸಿದುದರಿಂದ ಸಯ್ಯದರು ಲೀಗಿಗೆ ರಾಜೀನಾಮೆ ಕೊಟ್ಟು ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ್ದರು. ಲೀಗಿನೆದಿರಲ್ಲಿ ಅವರ ಪಕ್ಷಕ್ಕೆ ಹೆಚ್ಚಿನ ಸ್ಥಾನಗಳು ದೊರೆಯದಿದ್ದರೂ ಕಾಂಗ್ರೆಸ್ ಮತ್ತು ಸಯ್ಯದ್ ಪಕ್ಷವು ಅಲ್ಲಿ ಒಪ್ಪಂದಮಾಡಿಕೊಂಡು ಸಮ್ಮಿಶ್ರ ಪಕ್ಷವೊಂದನ್ನು ರಚಿಸಿಕೊಂಡುವು. ಈ ಪಕ್ಷವೂ ಮುಸ್ಲಿಂ ಲೀಗಿನ ಪಕ್ಷದಷ್ಟೇ ಬಲಶಾಲಿಯಿದ್ದಿತು. ಆದರೆ ಅಲ್ಲಿಯ ಗವರ್ನರ್ ಸರ್. ಫ್ರಾನ್ಸಿಸ್ ಮುಡಿಯವರು ಆದಿಯಿಂದಲೂ ಮಿ. ಹಿದಯತುಲ್ಲರ ಹಿತ ಚಿಂತಕ; ಸ್ನೇಹಿತ. ಅಂತೆಯೇ ಅಲ್ಲಿರುವ ಮೂವರು ಯುರೋಪಿಯನ್ ಸದಸ್ಯರ ಬೆಂಬಲ ಲೀಗ್ ಪಕ್ಷಕ್ಕೇನೇ ಮೀಸಲಿತ್ತು. ಹೀಗಾಗಿ ಗವರ್ನರರು ಮಿ. ಹಿದಯತುಲ್ಲರಿಗೇನೇ ಪ್ರಧಾನಿ ಪಟ್ಟ ಕಟ್ಟಿದ್ದರು. ಹಿದಯತುಲ್ಲಾ ಮಂತ್ರಿ ಮಂಡಲವು ಎಂದೂ ಸುಭದ್ರವಿರಲಿಲ್ಲ. ಒಂದೆರಡು ಸಲ ಸಯ್ಯದ್ ಸಮಿಶ್ರ ಪಕ್ಷವು ಅವಿಶ್ವಾಸ ಸೂಚನೆ ತಂದಿದ್ದಿತು. ಹಿದಯತುಲ್ಲಾ ಪಕ್ಷದ ಒಬ್ಬಿಬ್ಬರು ಈ ಕಡೆಗೆ ಅಂತರ್ಲಾಗ ಹೊಡೆದು ಭವಿಷ್ಯ ಹಾಳಾಗುತ್ತದೆಂದಾದೊಡನೆ ಹಿದಯತುಲ್ಲರು ಅವರನ್ನು ಮಂತ್ರಿಗಳಾಗಿ ಆರಿಸಿ ತನ್ನ ಅಧಿಕಾರದ ಆಯುಷ್ಯ ಉಳಿಸಿಕೊಂಡಿದ್ದರು. ಅವಿಶ್ವಾಸ ಸೂಚನೆ ಬಂದಾಗಲೆಲ್ಲಾ ಗವರ್ನರ್ ಸರ್ ಮುಡಿಯವರು ಬೇಕಾದ ಕಪಟ ನಾಟಕವಾಡಿ, ಹಿದಯತುಲ್ಲರಾಟಕ್ಕೆ ಅವಕಾಶವೊದಗಿಸಿಕೊಟ್ಟು ನೆರವಾಗಿದ್ದರು.

ಕೊನೆಯ ಅವಿಶ್ವಾಸ ಠರಾವು

ಈ ಬಾರಿಯ ಸಿಂಧ್ ಎಸೆಂಬ್ಲಿ ಅಧಿವೇಶನದಲ್ಲೂ ವಿರುದ್ಧ ಪಕ್ಷೀಯರು ಮಂತ್ರಿಗಳ ಮೇಲೆ ಅವಿಶ್ವಾಸ ಸೂಚನೆಗಳನ್ನು ಮುಂತಂದಿದ್ದರು. ಅವುಗಳ ಚರ್ಚೆ ಇದೇ ತಾ 11ಕ್ಕೆ ನಡೆಯಲಿದ್ದಿತು. ಪದ್ಧತಿಯಂತೆ ಒಬ್ಬಿಬ್ಬ ಸದಸ್ಯರು ಅಂತರ್ಲಾಗ ಹೊಡೆದಿದ್ದುದರ ಪರಿಣಾಮವಾಗಿ ಈ ಸಲ ಮಂತ್ರಿಮಂಡಲದ ಪಕ್ಷದ ಸಂಖ್ಯೆಯೂ 30, ವಿರುದ್ಧ ಪಕ್ಷದ ಸಂಖ್ಯೆಯೂ 30 ಆಗಿತ್ತು. ತಕ್ಕಡಿ ಸರಿ ನಿಂತಿತ್ತು. ಇದನ್ನು ಕಂಡು ಪ್ರಧಾನಿ ಹಿದಯತುಲ್ಲರೊಂದು ಕುಯುಕ್ತಿ ಹೂಡಿದರು. ಎಸೆಂಬ್ಲಿಯ ಅಧ್ಯಕ್ಷರಾದ ಸಯ್ಯದ್ ಮಿ. ರಾನ್ ಮೊಹಮ್ಮದ್ ಶಹಾರವರು ಲೀಗ್ ಪಕ್ಷದವರು. ಅಧ್ಯಕ್ಷರಾಗಿ ಕುಳಿತವರಿಗೆ ಮತದಾನ ಮಾಡುವ ಹಕ್ಕಿಲ್ಲ. ಆದ್ದರಿಂದ ಅವರಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ತನಗೊಂದು ವೋಟನ್ನು ಹೆಚ್ಚಿಸಿಕೊಂಡರು. ಅಧ್ಯಕ್ಷರಿಲ್ಲದಿರುವಾಗ ಉಪಾಧ್ಯಕ್ಷರೇ ಅಧ್ಯಕ್ಷರಾಗಬೇಕಾದ ಸಂಪ್ರದಾಯ. ಉಪಾಧ್ಯಕ್ಷೆಯಾದ ಮಿಸ್ ಜೇಠಿಸಿಪಾಹಿಮಾಲಿನಿಯವರು ವಿರುದ್ಧ ಪಕ್ಷದವರು. ಅವರು ಅಧ್ಯಕ್ಷರಾಗಿ ಕುಳಿತರೆ ವಿರುದ್ಧ ಪಕ್ಷದ ಒಂದು ವೋಟು ಕಡಿಮೆಯಾಗುವದು. ಆದ್ದರಿಂದ ವಿರುದ್ಧ ಪಕ್ಷದವರು ಉಪಾಧ್ಯಕ್ಷೆಯನ್ನೂ ರಾಜಿ ಕೊಡಿಸಿದರು. ಮತ್ತೆ ಅಧ್ಯಕ್ಷ ಸ್ಥಾನಕ್ಕೆ ಯಾರೊಬ್ಬರೂ ಮುಂದೆ ಬರಲೊಪ್ಪಲಿಲ್ಲ. ಹೀಗಾಗಿ ಸಿಂಧ್ ಎಸೆಂಬ್ಲಿಯು ಅಧ್ಯಕ್ಷರೇ ದೊರೆಯದ ಸಭೆಯಾಯಿತು—ತಮಾಷೆ ನಡೆಯಿತು! ಇಂತಹ ಪರಿಸ್ಥಿತಿಯಲ್ಲಿ ಗವರ್ನರರು ನಿಷ್ಪಕ್ಷಪಾತಿಯಾಗಿದ್ದಗೆ ಓರ್ವ ಯುರೋಪಿಯನ್ ಸದಸ್ಯನನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಿಸಬೇಕಿತ್ತು. ಹಾಗೆ ಮಾಡಿದರೆ ಲೀಗ್ ಮಂತ್ರಿಮಂಡಲದ ಬೆಂಬಲ ಕಡಿಮೆಯಾಗುವದೆಂದೇ ಗವರ್ನರರು ಮಾಡಲಿಲ್ಲ. ಅಥವಾ ವಿರುದ್ಧ ಪಕ್ಷವನ್ನು ಸರಕಾರ ರಚನೆಗೆ ಕೇಳಿಕೊಂಡು ಬಲಾಬಲ ಪರೀಕ್ಷಿಸಬೇಕಿತ್ತು. ಅದನ್ನೂ ಮಾಡಲಿಲ್ಲ. ಎಸೆಂಬ್ಲಿಯನ್ನೇ ವಿಸರ್ಜಿಸಿ ಮರು ಚುನಾವಣೆಗಿಟ್ಟುಬಿಟ್ಟರು. ವಿರುದ್ಧ ಪಕ್ಷದ ನಾಯಕ ಮಿ. ಸಯ್ಯದರೀಗ ವೈಸರಾಯರಿಗೆ ದೂರಿಟ್ಟಿದ್ದಾರೆ. ಆದರೆ ಸರ್. ಮುಡಿಯವರು ಈ ಕಾರ್ಯಕ್ಕೆ ವೈಸರಾಯರ ಸಮ್ಮತಿಯನ್ನು ಪಡಕೊಂಡಿದ್ದರು. ವೈಸರಾಯರೀಗ ಮಿ ಸಯ್ಯದರನ್ನು ನವದಿಲ್ಲಿಗಾಮಂತ್ರಿಸಿದ್ದಾರೆಂದು ತಿಳಿದುಬರುತ್ತದೆ. ವೈಸರಾಯರು ಅಥವಾ ಭಾರತ ಕಾರ್ಯದರ್ಶಿಯವರು [illegible] ಪಕ್ಷಪಾತ ವಹಿಸಿ ಆಡಿಸಿದ ಈ ನಾಟಕದ ಕುರಿತು ಯೋಗ್ಯ ಕಾರ್ಯಕ್ರಮ ಕೈಕೊಳ್ಳುವ ಭರವಸೆ ಕಾಣುವದಿಲ್ಲ. ಸದ್ಯದ ಪ್ರಕ್ಷುಬ್ಧ ವಾತಾವರಣದಲ್ಲಿ ನಡೆಯುವ ಚುನಾವಣೆಯು ಸತ್ಪರಿಣಾಮಕಾರಿಯಾಗುವ ಆಶೆ ಕೂಡಾ ಇಲ್ಲ. ಇದೀಗ ಸಿಂಧ್ ರಾಜಕೀಯದ ದುರಂತ!

NOTICE

In the court of the District Munsif of Mangalore.

O S. No 221/1946.

Between—
P. Raghavendra Suvarna —Plaintiff.
and
Venkamma —Defendant

Notice to the defendant named above, daughter of Antu Hengsu, residing in the compound of the Union Tile Works at Kudroli in Mangalore Town

The above suit has been filed against you for recovery of the site of the house, T. S No. 1213/3 of the 6 th. ward of the Mangalore Municipality in Revenue survey No. 30 of Kasba Bazar village of Mangalore Taluk.

The suit is posted for hearing to 30-9-1946, at 11 A. M. when you may appear in the above court and oppose the same, otherwise, it will be heard and decided in your absence

Mangalore, 14-9-1946. M. Vasudeva Rao, Vakil for Plaintiff.

For prompt and efficient Banking Service

Bank with

THE VIJAYA BANK LIMITED.

Head Office.—**MANGALORE.**

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಹೇಗೆ ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ [illegible]ದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ—ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೋ,

ಉಡುಪಿ.

ಮದ್ರಾಸ್ ಪ್ರಾಂತ್ಯದ ಆಹಾರ ಪರಿಸ್ಥಿತಿ

ಧಾನ್ಯ ಸಂಗ್ರಹವಿದ್ದವರಲ್ಲಿ ಪ್ರಧಾನಿ ಪ್ರಕಾಶಮರ ವಿನಂತಿ.

ಮುಡಿಗೆ ರೂ. ೩ ಬಹುಮಾನ— ಕೊಡಲಾಗುವದು.

ತಕ್ಸೀರು, ತಕರಾರೇನೂ ಮಾಡುವಂತಿಲ್ಲ!

ಮದ್ರಾಸ್ ಪ್ರಧಾನಿ ಮಾನ್ಯ ಪ್ರಕಾಶಮರು ಪ್ರಾಂತ್ಯದ ಸಾರ್ವಜನಿಕರ ತಿಳುವಳಿಕೆಗಾಗಿ ಇದೇ ತಾ 14ರಲ್ಲಿ ಮದ್ರಾಸ್ ಕೌನ್ಸಿಲಿನಲ್ಲಿ ಈ ಕೆಳಗಿನಂತೆ ವಿಜ್ಞಾಪಿಸಿಕೊಂಡಿದ್ದಾರೆ:—

ಅನಿವಾರ್ಯ ಕಡಿತ

"ಸರಕಾರವು ಇದೇ 1946ನೇ ಆಗೋಸ್ತು 4ರಿಂದ ಸಾಗುವಳೀದಾರರಲ್ಲದವರ ಹಸುಗೇ ಪರಿಮಾಣವನ್ನು ಪ್ರಾಯಸ್ಥನಿಗೆ ದಿನಕ್ಕೆ 8 ಔನ್ಸಿಗೆ ತಗ್ಗಿಸಿರುವದು ಸಾರ್ವಜನಿಕರಿಗೆಲ್ಲಾ ತಿಳಿದೇ ಇದೆ. 10 ಔನ್ಸಿನ ಹಸುಗೇ ಕ್ರಮವನ್ನು ಉಳಿಸಲಾಗುವಂತೆ ಹೊರಗಿನಿಂದ ಅಕ್ಕಿ ಆಮದಾಗುವ ಸಂಭವವಿಲ್ಲದ್ದರಿಂದ ಸರಕಾರವು ಅತ್ಯಂತ ಅಸಮಾಧಾನದಿಂದಲೇ ಹಾಗೆ ಮಾಡಬೇಕಾಗಿ ಬಂದಿತ್ತು. ಪರಿಸ್ಥಿತಿ ಅನುಕೂಲವಾದೊಡನೆಯೇ 10 ಔನ್ಸಿನ ರೇಶನನ್ನೇ ಜಾರಿಗೆ ತರಬೇಕೆಂದು ಆ ಕಾಲದಲ್ಲಿ ನಾನು ದೃಢ ನಿರ್ಧಾರ ಮಾಡಿದ್ದೆ. ಆದರೆ, ಅಂತಹ ಅನುಕೂಲತೆಯೊದಗುವಷ್ಟು ಅಕ್ಕಿಯ ಆಮದಾಗುವ ಸ .ವವಿಲ್ಲವೆಂದೇ ನಮಗಿದು ವರೆಗೆ ದೊರೆತಿರುವ ಸುದ್ದಿಗಳಿಂದ ತಿಳಿದುಬಂದಿದೆ. ಮತ್ತು ಈ 8 ಔನ್ಸಿನ ಹಸುಗೆಯನ್ನಾದರೂ ಪೂರೈಸಲಾಗುವಷ್ಟು ಅಕ್ಕಿ ಕೂಡಾ ಹೊರಗಿನಿಂದ ಆಮದಾಗುವದು ಅಸದಳವೆಂದು ಈಗ ತಿಳಿದುಬಂದಿದೆ. ಆದ್ದರಿಂದ ನಮ್ಮಲ್ಲೀಗ ಇರುವ ದಾಸ್ತಾನನ್ನು ಮೊದಲಿಗಿಂತಲೂ ವಿಶೇಷವಾಗಿ ಸಾಧ್ಯವಿದ್ದಷ್ಟು ಜೋಪಾನ ಮಾಡುವದೂ, ಅತ್ತ ಮುಂದಿನ ಮುಖ್ಯ ಬೆಳೆಯ ಧಾನ್ಯವು ಉಪಯೋಗಕ್ಕೆ ಸಿಗುವ ಜನವರಿಯ ವರೆಗೆ ಬರುವಂತೆ ಜಾಗ್ರತೆ ನೋಡುವದೂ ಆವಶ್ಯಕವನ್ನಿಸಿದೆ.

6 ಔನ್ಸಿಗೆ ಇಳಿಸಬೇಕಾದೀತು!

ಸಾಗುವಳೀದಾರರಲ್ಲದ ಅಕ್ಕೀ ಆಹಾರ ಭುಂಜಕರ ಹಸುಗೇ ಪರಿಮಾಣದಲ್ಲಿ ಇನ್ನೂ ಕಡಿತ ಮಾಡಿ 6 ಔನ್ಸಿಗೆ ಇಳಿಸಬೇಕೆಂಬ ಸೂಚನೆಯಿ... ... ದ ಸಾಧ್ಯವಿರುವ ಇತರ ಎಲ್ಲಾ ವಿಧಾನಗಳಿಂದಲೂ ಪ್ರಯತ್ನಿಸಿ ನೋಡದೆ, ಅಂತೆಯೇ ನಮ್ಮ ಸ್ಥಳೀಯ ಸಂಗ್ರಹಾನುಕೂಲತೆಗಳನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳದೆ ಆ ಹೆಜ್ಜೆಯಿಡಲು ನನಗೆ ಮನಸ್ಸಿಲ್ಲ. ಅವಸರದ ಅಡಚಣೆಗಾಗಿ, ಅಮೇರಿಕದ 75 ಲಕ್ಷ ಊಟದ ಅಕ್ಕೀ ಪಾಕೇಟುಗಳನ್ನು 21 ಲಕ್ಷ ರೂಪಾಯಿಗಳಿಗೆ ಸರಕಾರವು ಪಡಕೊಳ್ಳುವ ಸೂಚನೆಯೊಂದಿತ್ತು. ಆದರೆ ಲೆಕ್ಕ ಹಾಕಿ ನೋಡುವಾಗ ಈ ಪಾಕೇಟುಗಳಲ್ಲಿರುವ ಅಕ್ಕಿಯು ಕೇವಲ 2 ಲಕ್ಷ ರೂಪಾಯಿ ಬೆಲೆ ಬಾಳುವಂತಹದೆಂದು ತಿಳಿದುಬಂತು. ಆದ್ದರಿಂದ ಎಷ್ಟೇ ಅಡಚಣೆಯಿದ್ದರೂ ಇಷ್ಟು ಅಲ್ಪ ಅಕ್ಕಿಗೆ ಅಷ್ಟು ಹೆಚ್ಚಿನ ಬೆಲೆ ಕೊಟ್ಟು ಸರಕಾರವು ಪಡಕೊಳ್ಳಬಾರದೆಂದು ನಿರ್ಧರಿಸಿದ್ದೇವೆ. ಹೊರಗಿನ ಅಕ್ಕಿಗೆ ಇಂತಹ ಅಧಿಕ ಬೆಲೆ ಕೊಡುವದಕ್ಕಿಂತ ಆ ಹಣವನ್ನು ನಮ್ಮಲ್ಲಿಯ ಧಾನ್ಯೋತ್ಪಾದಕರಿಗೇನೇ ಮುನಾಫೆಯಾಗಿ ಸಲ್ಲಿಸುವದು ಉತ್ತಮವೆಂದು ನನಗನ್ನಿಸುತ್ತದೆ.

ಧಾನ್ಯೋತ್ಪಾದಕರಲ್ಲಿ ವಿನಂತಿ

ಸ್ವಂತ ಸಾಗುವಳೀದಾರರು ತಮ್ಮ ಮನೇ ವೆಚ್ಚಕ್ಕಾಗಿ, ಪ್ರಾಯಸ್ಥರಿಗೆ ತಲೆಗೊಂದು ಪೌಂಡು ಅಕ್ಕಿಯಂತೆ ತಮ್ಮಲ್ಲೇ ಇಟ್ಟುಕೊಳ್ಳುವರೆ ಈಗ ಅನುಮತಿಯೀಯಲ್ಪಟ್ಟಿದೆ. ತಮ್ಮ ರೇಶನ್ ಅಕ್ಕಿಯನ್ನು ಪಡಕೊಳ್ಳುವ ಇತರರ ಹಸುಗೆಯು 6 ಔನ್ಸಿಗೆ ಇಳಿಸಲ್ಪಟ್ಟಲ್ಲಿ ಸಾಗುವಳೀದಾರರಿಗೆ ದೊರೆತಿರುವ ಮತ್ತು ಕಾರ್ಡುದಾರರಿಗೆ ದೊರೆಯುವ ಹಸುಗೇ ಅಕ್ಕಿಯ ಪರಿಮಾಣಗಳೊಳಗೆ ಅಜಗಜಾಂತರವುಂಟಾಗುವದು. ಕಾರ್ಡುದಾರರ ಅಕ್ಕಿಯು 6 ಔನ್ಸಿಗಿಳಿಸಲ್ಪಟ್ಟು, ಅದರಿಂದ ಅವರಿಗೆ ಉಂಟಾಗುವ ಸಂಕಷ್ಟ, ಸಂಕಟಗಳಿಗಾಗಿ ಸಾಗುವಳಿದಾರರೂ ಸಂತಾಪಗೊಳ್ಳುವರೆಂದು ನನ್ನ ದೃಢಾಭಿಪ್ರಾಯ. ಆದ್ದರಿಂದ, ಸಾಗುವಳೀದಾರರು ತಮ್ಮ ಆವಶ್ಯಕತೆಗಳಲ್ಲಿ ಮಿತವ್ಯಯದ ಮರುಲೆಕ್ಕ ಹಾಕಿಕೊಂಡು, ಈ ವರುಷದಲ್ಲಿ ಇನ್ನು ಉಳಿದಿರುವ ಅವಧಿಯ ಮಟ್ಟಿಗೆ, ಪ್ರಾಯಸ್ಥನೊಬ್ಬನಿಗೆ ದಿನಕ್ಕೆ 12 ಔನ್ಸ್ ಅಕ್ಕಿಯಂತೆ ವೆಚ್ಚ ಮಾಡಬೇಕೆಂದು ನಾನು ಪ್ರಾಂತ್ಯದ ಎಲ್ಲಾ ಅಕ್ಕಿ ಉತ್ಪಾದಕರನ್ನು ವಿಜ್ಞಾಪಿಸಿಕೊಳ್ಳುತ್ತೇನೆ. ಸಾಧ್ಯವಿದ್ದರೆ ಅದನ್ನು ಇನ್ನೂ ತಗ್ಗಿಸಿಕೊಂಡು, ಆ ಮೂಲಕ ತಾವು ಉಳಿಸಲಾಗುವ ಎಲ್ಲಾ ಅಕ್ಕಿ ಅಥವಾ ಭತ್ತವನ್ನು ಸರಕಾರಿ ಏಜೆಂಟರಿಗೆ ಮಾರಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ. ದಾಸ್ತಾನನ್ನು ಹೊರ ಹಾಕಿರೆಂದು ನಾನು ಈ ಮೊದಲು ಸಾಗುವಳೀದಾರರಿಗೆ ಮಾಡಿಕೊಂಡಿದ್ದ ವಿನಂತಿಗಳನ್ನೆಲ್ಲಾ ಅವರು ಅತ್ಯಮೋಘ ರೀತಿಯಿಂದ ಮನ್ನಿಸಿದ್ದರು. ಈಗ ಅವರು ಮತ್ತೊಮ್ಮೆ ತ್ಯಾಗಮಾಡಬೇಕಾಗಿ ಬಂದಿದೆ.

ಸಾಗುವಳೀದಾರರಿಗೆ ಬಹುಮಾನ ಮತ್ತು ಅಭಯದಾನ

ಇಂದಿನ ಕಾಲವೇ ಅತ್ಯಮೂಲ್ಯ ವಿಷಯವಾಗಿರುವದರಿಂದ ಸಾಗುವಳೀದಾರರು ತಮ್ಮ ದಾಸ್ತಾನುಗಳನ್ನು ಕೂಡಲೇ ಹೊರಗೆ ಹಾಕಬೇಕಾಗಿದೆ. ಈ ತ್ಯಾಗಕ್ಕೆ ತಕ್ಷಣದಲೆ ಕೊಡಲೇಬೇಕಾದ್ದರಿಂದ ಈ ಕೆಳಗಿನ (ಮೌಲ್ಯ ತೆರತಕ್ಕದ್ದೆಂದು ನಾನು ಆಜ್ಞಾಪಿಸಿದ್ದೇನೆ—ಇದೇ ತಾ. 31-10-1946ರ ವರೆಗೆ ತಂದೊಪ್ಪಿಸುವ ಸಾಗುವಳೀದಾರರಿಗೆ ಭತ್ತ ಇಂಪೀರಿಯಲ್ ಮಣ 1ಕ್ಕೆ 2 ರೂಪಾಯಿಯಂತೆಯೂ, ಅಕ್ಕಿ ಮಣ ಒಂದಕ್ಕೆ 3 ರೂಪಾಯಿಯಂತೆಯೂ ಅವುಗಳ ನಿರ್ಣಯಿತ ಕ್ರಯಕ್ಕೆ ಹೆಚ್ಚಿಗೆ ಸೇರಿಸಿ ಬೋನಸಾಗಿ ಕೊಡತಕ್ಕದ್ದು. ಈ ಬೋನಸಿನಲ್ಲಿ, ಈ ಮೊದಲೇ ಪ್ರಕಟವಾಗಿರುವ ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಧ್ಯದೊಳಗೆ ತಂದೊಪ್ಪಿಸುವ ಭತ್ತ ಮಣ 1ಕ್ಕೆ 1 ರೂಪಾಯಿ ಹೆಚ್ಚಿಗೆ ಎಂಬುದೂ ಸೇರಿ ಬರುತ್ತದೆ. ಈ ತ್ಯಾಗವನ್ನು ವಿಶೇಷ ರೀತಿಯಿಂದ ಮನ್ನಿಸಲಾಗುವದೆಂದೂ, ಅವರು ಈಗ ತಂದೊಪ್ಪಿಸುವ ದಾಸ್ತಾನಕ್ಕೆಯೆಂಬುದು ಕಾಯಿದೇಶೀರವಾಗಿ ಅವರಿಗಿರುವ ಅಧಿಕಾರಕ್ಕೆ ಮುಕ್ತಿದಪ್ಪಿದ್ದರೂ ಕೂಡಾ ಅದಕ್ಕಾಗಿ ಅವರ ಮೇಲಾವ ತಕ್ಸೀರು ಯಾ ಕಾರ್ಯಾಚರಣೆ ಕೈಕೊಳ್ಳುವಂತಿಲ್ಲವೆಂದೂ ನಾನು ಸಾಗುವಳೀದಾರರಿಗೆ ಆಶ್ವಾಸನೆ ಕೊಡುತ್ತೇನೆ. ಈ ಬಾರಿಯ ಬೆಳೆಯು ಅನುಕೂಲದಾಯಿಯಾಗಿ ಕಾಣುತ್ತಿದೆ. ಆದ್ದರಿಂದ ಭವಿಷತ್ಕಾಲದ ಕುರಿತು ಸಾಗುವಳೀದಾರರು ಭೀತಿ ಕಟ್ಟಿಕೊಳ್ಳಬೇಕೆಂದಿಲ್ಲ. ಅವರೀ ಮಹಾ ತ್ಯಾಗವನ್ನೀಗ ಮಾಡಿದರೆ ನಾವೀ ಕಷ್ಟದ ತಿಂಗಳುಗಳಿಂದ ಹೇಗೂ ಪಾರಾಗಬಹುದು; ಮತ್ತು ಮುಖ್ಯ ಬೆಳೆ ಕಟಾವಾಗಿ ಮಾರ್ಕೆಟಿಗೆ ಬಂದೊಡನೆ ಅಕ್ಕೀ ರೇಶನನ್ನು ಹೆಚ್ಚಿಸುವ ಸಾಧಾರ ಭರವಸೆಯುಳ್ಳಿರಬಹುದು."

ದೇನ ವಿಮಾ ಕಂಪೆನಿ

- - ಮೂಲಧನ - -

ಅಧಿಕೃತ ರೂ. 20,00,000

ತೆತ್ತ ಮತ್ತು ವಸೂಲಾದ್ದು ರೂ. 10,00,000

ಡೈರೆಕ್ಟರರ ಮಂಡಳಿ

ಪ್ರಾಣಲಾಲ್ ದೇವಕರಣ ನಾನಜಿ, ಎಸ್ಕ್ವಾಯರ್; ಜೆ. ಪಿ.; ಚೆಯರ್‌ಮೇನ್.
ಚೂನಿಲಾಲ್ ದೇವಕರಣ ನಾನಜಿ, ಎಸ್ಕ್ವಾಯರ್
ರಾಜರತ್ನ ನಾನಜಿ ಕಾಲಿದಾಸ ಮೆಹತಾ, ಎಮ್. ಬಿ. ಇ.
ಮಾಧವಲಾಲ್ ಮುಕಂಜಿ ಭಟ್, ಎಸ್ಕ್ವಾಯರ್, ಜೆ ಪಿ.
ನಂದಾಸ್ ಹರಿದಾಸ್ ಅರ್ಚರ್ಟ್‌ಲಾಲ್, ಎಸ್ಕ್ವಾಯರ್.
ಕೆಪ್ಟನ್ ಶಿವ ಸಿಂಹಜಿ, ಪೋರ್ ಬಂದರ್.
ಲಲಿತಚಂದ್ರ ಸಿ ಡಿ. ನಾನಜಿ, ಎಸ್ಕ್ವಾಯರ್.
ಲಕ್ಷ್ಮೀಕಾಂತ ಎಸ್. ದಾಭೋಳ್ಕರ್, ಎಸ್ಕ್ವಾಯರ್, ಜೆ. ಪಿ
ಜಯಂತಿಲಾಲ್ ಆರ್. ತ್ರಿವೇದಿ, ಎಸ್ಕ್ವಾಯರ್.
ತಾನುಭಾಯಿ ಡಿ. ದೇಸಾಯಿ, ಎಸ್ಕ್ವಾಯರ್, ಬಿ. ಎ., ಎಲ್. ಎಲ್. ಬಿ
ವಿಜಯಚಂದ್ರ ಎನ್. ಕಾಂಟೀಲ್, ಎಸ್ಕ್ವಾಯರ್.
ಹಿಮತ್‌ಲಾಲ್ ವಿ ಗಾಂಧಿ, ಎಸ್ಕ್ವಾಯರ್, ಮೆನೇಜಿಂಗ್ ಡೈರೆಕ್ಟರ್.

ಮೆನೇಜರ್-

ಸುರೇಶ್ ಕೆ. ದೇಸಾಯಿ, ಬಿ. ಎ., ಎಲ್. ಎಲ್. ಬಿ.

ಮೆಸರ್ಸ್ ಭೂಷಣಕುಮಾರ್ ಕೂಳೂರ್ಕರ್ & ಕೊ,
ಬ್ರಾಂಚ್ ಚೀಫ್ ಏಜೆಂಟ್ಸ್
ದೇವಕರಣ ನಾನಜಿ ಇನ್ಸೂರೆನ್ಸ್ ಕೊ., ಲಿ.,
ಮಣ್ಣಗುಡ್ಡೆ, ಮೈನ್‌ರೋಡ್,
ಮಂಗಳೂರು, ದಕ್ಷಿಣ ಕನ್ನಡ

ಹೆಡ್ ಆಫೀಸು
ದೇವಕರಣ ನಾನಜಿ ಬಿಲ್ಡಿಂಗ್ಸ್,
ಬೊಂಬಾಯಿ 1



Approved firm by the Govt. of Mysore Certified by the Agent of the Govt. of Cylone Indian.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, South Kanara.

CAPITAL

Authorised	Rs. 25,00,000
Issued & Subscribed ...	„ 16,00,000
Paid up	„ 15,64,715
Reserves Over	„ 4½ Lakhs

Branches at- Bombay, Madras, Bangalore, Coimbatore, Selem, Calicut, Hubli, Mysore, Cochin, Mangalore, Madras etc., etc.

Banking Business of Every Description Transacted.

ನವಯುಗ

ಉಡುಪಿ, ಗುರುವಾರ, ೧೯-೯-'೪೬

ಗಾಂಧೀ ಜಯಂತಿ

ಭಾರತೀಯ ಕ್ರಮಕ್ಕನುಸಾರವಾಗಿ ಇದೇ ಸೆಪ್ಟೆಂಬರ್ ತಾ. 22ರಿಂದ ಅಕ್ಟೋಬರ್ ತಾ. 2ರ ವರೆಗೆ ಗಾಂಧೀ ಜಯಂತಿಯು ಆಚರಿಸಲ್ಪಡಬೇಕಾಗಿದೆ. ನಮ್ಮಲ್ಲಿ ವಾಡಿಕೆಯಾಗಿರುವ ಇಂಗ್ಲಿಷ್ ಕ್ರಮವನ್ನು ಧರಿಸಿ ಒಕ್ಟೋಬರ್ ತಾ 2ರಿಂದ 9ರ ವರೆಗದನ್ನು ಜರಗಿಸುವ ಸಂಪ್ರದಾಯವಿದೆ. ಯಾವ ವಿಧಾನವೇ ಆದರೂ ಒಕ್ಟೋಬರ್ ತಾ. 2ರ ಪರಿಧಿಯಲ್ಲೇ ಬೀಳುತ್ತದೆ. ಅಂತೂ ಭಾರತೀಯರ ಪಾಲಿನ ಮಹೋತ್ಸವವೊಂದು ಸಮೀಪಿಸುತ್ತಿದೆ. ಗಾಂಧಿಜೀಯವರದು ಸಾರ್ಥಕ ಜೀವನ-ಮನುಷ್ಯ ಜನ್ಮವೊಂದು ಇದಕ್ಕಿಂತ ಹೆಚ್ಚಿನ ಸಾಫಲ್ಯ ಪಡೆದ ನಿದರ್ಶನವೇ ಬೇರಿಲ್ಲ. ಅವರ ಪ್ರತಿಯೊಂದು ಬಾರಿಯ ಹುಟ್ಟು ಹಬ್ಬದಲ್ಲೂ ಒಂದಲ್ಲೊಂದು ವಿಶೇಷತ್ವವಿದ್ದೇ ಇದ್ದಿತು. ಈ ಬಾರಿಯ ಗಾಂಧೀ ಜನ್ಮ ದಿನಾಚರಣೆಗಂತೂ ನಿಜಕ್ಕೂ ವಿಶೇಷ ಮಹತ್ವವಿದೆ. ಮಹಾತ್ಮರು ಯಾವುದರ ಸಾಧನೆಗಾಗಿ ಕಳೆದ 25 ವರುಷಗಳಿಂದ ಅವಿಶ್ರಾಂತವಾಗಿ ಶ್ರಮಿಸುತ್ತಾ ಬಂದಿದ್ದರೋ, ಆ ಭಾರತ ಸ್ವಾತಂತ್ರ್ಯವೀಗ ರೂಪುಗೊಳ್ಳುತ್ತಾ ಇದೆ-ರಾಷ್ಟ್ರೀಯ ಸರಕಾರ ಸ್ಥಾಪನೆಗೊಂಡಿದೆ. ಆದ್ದರಿಂದ ಈ ಬಾರಿಯ ರಾಷ್ಟ್ರೀಯ ಹಬ್ಬವನ್ನು 'ಗಾಂಧೀ ಜಯಂತ್ಯುತ್ಸವ' ಎಂದಂತೆಯೇ 'ಗಾಂಧೀ ವಿಜಯೋತ್ಸವ' ಎಂದೂ ಹೇಳಬಹುದು. ಕೆಲಸವಿನ್ನೂ ಪೂರ್ತಿಯಾಗಿಲ್ಲ; ಪೂರ್ಣ ಸ್ವಾತಂತ್ರ್ಯದ ಗದ್ದುಗೆಯನ್ನು ಭಾರತಾಂಬೆ ಇನ್ನೂ ಏರಿಲ್ಲ. ಆದರೆ ಆ ಸಿಂಹಾಸನಾರೋಹಣದ ಮೆರವಣಿಗೆ ಹೊರಟಿದ್ದಾಳೆ; ಸಿಂಹಾಸನಾರೋಹಣದ ಕಾರ್ಯಕ್ರಮಗಳೆಲ್ಲಾ ಈಗ ನಿಶ್ಚಯಿಸಲ್ಪಟ್ಟವೆ; ಸಾಂಗವಾಗಿ ಜರಗುತ್ತಿವೆ. ಮಹಾತ್ಮರ ಜನ್ಮ ದಿನ ಈಗ ಬಾರದಿರುತ್ತಿದ್ದರೂ, ಮಹಾತ್ಮರು ಜನಿಸಿದ್ದರಿಂದಲೇ ಹೀಗಾಯಿತೆಂದು ಸ್ಮರಿಸಲೇಬೇಕಾಗಿರುವ ಸಂದರ್ಭವಿದು. ಭಾರತ ಭೂಮಿಯಂತಹ ತುಂಡು ಖಂಡವೊಂದರ ಸ್ವಾತಂತ್ರ್ಯವು ಇಷ್ಟೊಂದು ಶಾಂತ ರೀತಿಯಿಂದ ಸಾಧಿಸಲ್ಪಡಲು ಮಹಾತ್ಮಾಜೀಯ ಕಾರ್ಯ ವಿಧಾನಗಳೇ ಕಾರಣ. ಈ ಮಹಾ ವ್ಯಕ್ತಿಗೆ ಜನ್ಮವಿತ್ತ ಭಾರತಾಂಬೆ 'ರತ್ನಗರ್ಭೆ'ಯೆಂಬ ಕೀರ್ತಿ ಪಡೆದುದಷ್ಟೇ ಅಲ್ಲ; ತನ್ನ ಜೀವನಾವಧಿಯಲ್ಲಿ ಕ್ರೈಸ್ತ ಸ್ವಾಮಿ ಕೂಡಾ ಆಕರ್ಷಿಸಿರದಷ್ಟು ಜಗತ್ತಿನ ಲಕ್ಷ್ಯವನ್ನು ತನ್ನೆಡೆಗೆಳೆದುಕೊಂಡ ಈ ಪುತ್ರನನ್ನು ಪಡೆದುದರಿಂದಾಗಿ ಭಾರತ ಮಾತೆಯ ದರ್ಜೆ ಮೇಲೇರಿದುದಷ್ಟೇ ಅಲ್ಲ--ರಾಷ್ಟ್ರಕ್ಕೆ ಅತಿ ಕಡಿಮೆ ವೆಚ್ಚದಿಂದ ಮಹತ್ತಾದ ಸ್ವಾತಂತ್ರ್ಯ ಲಾಭವಾದುದೂ ಈ ಮಹಾತ್ಮನಿಲ್ಲಿ ಜನಿಸಿದುದರಿಂದಲೇ. ಆದ್ದರಿಂದ ಈ ಬಾರಿಯ ಗಾಂಧೀ ಹುಟ್ಟು ಹಬ್ಬವು ರಾಷ್ಟ್ರದ ಪಾಲಿನ ಮಹೋತ್ಸವ; ವಿಜಯೋತ್ಸವ; ಅಂತೆಯೇ ಧನ್ಯವಾದಾರ್ಪಣಾ ದಿನ! ನಡುಗಾಲ ರಾಷ್ಟ್ರೀಯ ಸರಕಾರ ಸ್ಥಾಪನೆಯಾದ ಸಂತೋಷ ಸಮಾರಂಭವನ್ನು ರಾಷ್ಟ್ರವು ಕ್ರಮಬದ್ಧವಾಗಿ ಆಚರಿಸಿಲ್ಲ-ಕಾರಣ, ಅಂತಹ ಸೂಚನೆ ರಾಷ್ಟ್ರ ಸಭಾನಾಯಕರಿಂದ ಬಂದಿರಲಿಲ್ಲ. ಆ ಸಂತೋಷವನ್ನೂ ಗಾಂಧೀ ಜಯಂತಿಯ ಆಚರಣೆಗೇನೇ ಜೋಡಿಸಿಕೊಳ್ಳುವದು ಸಮಂಜಸವೂ ಅಗತ್ಯವೂ ಇದೆ. ಯಾಕಂದರೆ ಇಂದಿನ ಪರಿಸ್ಥಿತಿ ಗಾಂಧಿಜೀಯ ನಿರ್ಮಾಣ. ಆದ್ದರಿಂದ ರಾಷ್ಟ್ರದ ಪ್ರತಿಯೊಂದು ಕಡೆಯವರು-ಪೇಟೆ ಪಟ್ಟಣ, ಹಳ್ಳಿ ಮೂಲೆ, ಮನೆ ಮಠ, ಸಂಘ ವ್ಯಕ್ತಿ ಎಲ್ಲರೂ-ಗಾಂಧೀ ಜಯಂತಿಯನ್ನು ಅತೀ ವಿಜೃಂಭಣೆಯಿಂದ, ಅತ್ಯಂತ ಪರಿಣಾಮಕಾರಿಯಾಗಿ ಆಚರಿಸಲೇಬೇಕಾಗಿದೆ. ಈ ಸಂಬಂಧವಾಗಿ ಕಾಂಗ್ರೆಸಿನ ಜತೆ ಕಾರ್ಯದರ್ಶಿಗಳು ಕೊಟ್ಟ ಈ ಪ್ರಕಟಣೆಯು ಅಕ್ಷರಶಃ ಪಾಲಿಸಲ್ಪಡಲಿ-"ಎಂದಿನಂತೆ ಸಭೆ. ಭಾಷಣಗಳು ನಡೆಯಲಿ; ನಮ್ಮ ರಾಷ್ಟ್ರ ಜೀವನಕ್ಕೆ ಗಾಂಧಿಜೀಯಿತ್ತ ಚೇತನದ ಸ್ಮರಣೆಯಾಗಲಿ. ಅಂತೆಯೇ ಜನತೆಯು ಸಾಮೂಹಿಕವಾಗಿ ವಿಧಾಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು; ಆ ಕಾರ್ಯಕ್ರಮಗಳ ವಿವಿಧ ರೀತಿಯ ಪ್ರದರ್ಶನಗಳ ಏರ್ಪಾಡಾಗಬೇಕು. ಇಂತಹ ಉತ್ಸವಗಳು ಪೇಟೆ ಪಟ್ಟಣಗಳಲ್ಲೇ ಜರಗುವ ಸಂಪ್ರದಾಯ. ಆದರೆ ಈ ಬಾರಿ ಹಾಗಿರಕೂಡದು. ಸಾಧ್ಯವಿದ್ದಷ್ಟು ಹಳ್ಳಿ ಮೂಲೆಗಳಲ್ಲೆಲ್ಲಾ ಅದನ್ನು ಜರಗಿಸುವ ಏರ್ಪಾಡು ಅಗತ್ಯವಾಗಿ ಆಗಬೇಕು. ಈ ಸಮಾರಂಭಗಳು ಮತ್ತು ಪ್ರದರ್ಶನಗಳು ಹಳ್ಳಿಗಳಲ್ಲಿ ಜರಗಿದರೇನೇ ನಿಜವಾಗಿ ಪ್ರಯೋಜನಕಾರಿಯಾಗಬಲ್ಲುವು. ಸೆಪ್ಟೆಂಬರ್ 22ರಿಂದ ಒಕ್ಟೋಬರ್ 2ರ ವರೆಗಿನ ಪ್ರತಿಯೊಂದು ದಿನದಲ್ಲೂ ಒಂದು ಅಥವಾ ಎರಡು ವಿಧಾಯಕ ಕಾರ್ಯಾಂಗಗಳನ್ನಿಟ್ಟು ನೆರವೇರಿಸುವದು ಶ್ರೇಯಸ್ಕರ"—ಕಾಂಗ್ರೆಸಿನ ಈ ಸೂಚನೆಯನ್ನು ರಾಷ್ಟ್ರದ ಪ್ರತಿಯೊಂದು ಕಡೆಯವರು ಮತ್ತು ಪ್ರತಿಯೊಬ್ಬರೂ ಕಾರ್ಯತಃ ಮನ್ನಿಸಲಿ; ಆ ಮೂಲಕ ರಾಷ್ಟ್ರದ ಇಂದಿನ ಆನಂದ ಮತ್ತು ಆವೇಗವನ್ನು ಹಿಂದಿಕ್ಕಿ ಆ ಮೂಲೆಯಿಂದೀ ಮೂಲೆಯ ವರೆಗೂ ನವ ಚೇತನ ಪ್ರವಹಿಸುವಂತಾಗಲಿ. ಭಾರತ ರಾಷ್ಟ್ರೀಯತೆಯ ಜನಕನ ಈ 78ನೇ ಹುಟ್ಟು ಹಬ್ಬದಲ್ಲಿ—ಜೈಹಿಂದ್!

ಮುನಿಸಿಪಾಲಿಟಿ ಮತ್ತು ಜಿಲ್ಲಾ ಬೋರ್ಡುಗಳ ಸಾರ್ವತ್ರಿಕ ಚುನಾವಣೆ.

ಚುನಾವಣಾ ಕಾಲನಿಯಾಮಕ ಪಟ್ಟಿ.

ಮದ್ರಾಸ್ ಸರಕಾರವು ಪ್ರಾಂತ್ಯದ ಎಲ್ಲಾ ನಗರ ಸಭೆ ಹಾಗೂ ಜಿಲ್ಲಾ ಬೋರ್ಡುಗಳ ಸಾಮೂಹಿಕ ಚುನಾವಣೆಗಳಿಗಾಗಿ ಈ ಕೆಳಗಿನಂತೆ ದಿನಗಳನ್ನು ನಿಶ್ಚಯಿಸಿದೆ.

ಮುನಿಸ್ಪಾಲಿಟಿಗಳಿಗೆ

ಮತದಾರರ ಪಟ್ಟಿಗಳನ್ನೂ, ಚುನಾವಣಾ ನೋಟೀಸನ್ನೂ ಪ್ರಕಟಿಸುವ ಕೊನೆಯ ದಿನ—ನವಂಬರ್ 4.

ನಾಮಪತ್ರಗಳ ಅಂಗೀಕಾರ —ನವಂಬರ್ 11, 12 ಮತ್ತು 13.

ನಾಮಪತ್ರಗಳ ಪರಿಶೀಲನೆ—ನವಂಬರ್ 14.

ಸಿಂಧುವಾದ ನಾಮಪತ್ರಗಳ ಪ್ರಕಟಣೆ—ಅಪ್ಪೀಲು ಇಲ್ಲದಿದ್ದರೆ ನವಂಬರ್ 18. ಅಪ್ಪೀಲು ಇರುವ ಸಂದರ್ಭಗಳಲ್ಲಿ ನವಂಬರ್ 22.

ಮತದಾನ(ಚುನಾವಣೆ)-ದಶಂಬರ್ 9.

ಮತಗಣನೆ—ದಶಂಬರ್ 10.

ಜಿಲ್ಲಾ ಬೋರ್ಡುಗಳ-

ಸಾರ್ವತ್ರಿಕ ಚುನಾವಣೆಯ ಸೌಕರ್ಯಕ್ಕಾಗಿ ಸರಕಾರವು ಇಡೀ ಪ್ರಾಂತ್ಯದ ಜಿಲ್ಲಾ ಬೋರ್ಡುಗಳನ್ನು ನಾಲ್ಕು ಪಂಗಡಗಳಾಗಿ ವಿಂಗಡಿಸಿದೆ. ೧ನೇ ಪಂಗಡದಲ್ಲಿ ವಿಶಾಖಪಟ್ಣ, ಕಡಪಾ, ಕರ್ನೂಲು, ಉತ್ತರ ಆರ್ಕಾಟು, ಚೆಂಗಲ್ಪೇಟೆ, ತಂಜಾವೂರು, ಮಧುರಾ, ಕೊಯಮುತ್ತೂರು, ದಕ್ಷಿಣ ಕನ್ನಡಾ—ಈ 9 ಜಿಲ್ಲಾ ಬೋರ್ಡುಗಳಿವೆ. ೨ನೇ ಪಂಗಡದಲ್ಲಿ—ನೆಲ್ಲೂರು, ಬಳ್ಳಾರಿ, ಅನಂತಪುರ, ನೀಲಗಿರಿ, ದಕ್ಷಿಣ ಆರ್ಕಾಟು, ತಿರುಚಿನಾಪಳ್ಳಿ, ರಾಮ್ನಾಡು, ತಿನ್ನವೆಲ್ಲಿ, ಸೇಲಮ್, ಮಲಬಾರು—ಈ 10 ಜಿಲ್ಲಾ ಬೋರ್ಡುಗಳಿವೆ. ೩ನೇ ಪಂಗಡದಲ್ಲಿ—ಪಶ್ಚಿಮ ಗೋದಾವರಿ ಮತ್ತು ಗುಂಟೂರು, ಇವೆರಡು ಜಿಲ್ಲಾ ಬೋರ್ಡುಗಳೂ ೪ನೇ ಪಂಗಡದಲ್ಲಿ—ಪೂರ್ವ ಗೋದಾವರಿ ಮತ್ತು ಕೃಷ್ಣಾ-ಇವೆರಡು ಜಿಲ್ಲಾ ಬೋರ್ಡುಗಳೂ ಇವೆ. ಸರಕಾರವು ಈ ಕೆಳಗಿನಂತೆ ಪಂಗಡವಾರಾಗಿ ಚುನಾವಣಾ ದಿನಗಳನ್ನು ನಿರ್ಧರಿಸಿದೆ.

೧ನೇ ಪಂಗಡಕ್ಕೆ—

ಮತದಾರಪಟ್ಟಿ ಮತ್ತು ಚುನಾವಣಾ ನೋಟೀಸು ಪ್ರಕಟಿಸುವ ಕೊನೆಯ ದಿನ-ನವಂಬರ್ 1. ನಾಮಪತ್ರಗಳನ್ನೊಪ್ಪಿಸುವದು—ನವಂಬರ್ 11 ಮತ್ತು 12. ನಾಮಪತ್ರಗಳ ಪರಿಶೀಲನೆ—ನವಂಬರ್ 13. ಸಿಂಧುವಾದ ನಾಮಪತ್ರಗಳ ಪ್ರಕಟಣೆ—ಅಪ್ಪೀಲಿಲ್ಲದಿದ್ದರೆ ನವಂಬರ್ 18, ಅಪ್ಪೀಲಿದ್ದರೆ ನವಂಬರ್ 21. ಮತದಾನ—ದಶಂಬರ್ 16. ಮತಗಣನೆ—ದಶಂಬರ್ 17.

೨, ೩, ೪ನೇ ಪಂಗಡಗಳಿಗೆ

ಮತದಾರಪಟ್ಟಿ, ಚುನಾವಣಾ ನೋಟೀಸು ಪ್ರಕಟಣೆ—(೨ನೇ ಪಂಗಡ) ನವಂಬರ್ 7 (೩ ಮತ್ತು ೪ನೇ) ಒಕ್ಟೋಬರ್ 15. ನಾಮಪತ್ರಗಳ ಅಂಗೀಕಾರ (೨ನೇ) ನವಂಬರ್ 18 ಮತ್ತು 19. (೩ ಮತ್ತು ೪ನೇ) ಒಕ್ಟೋಬರ್ 21. ನಾಮಪತ್ರಗಳ ಪರಿಶೀಲನೆ (೨ನೇ) ನವಂಬರ್ 20. (೩ ಮತ್ತು ೪ನೇ) ಒಕ್ಟೋಬರ್ 22. ಸಿಂಧುವಾದ ನಾಮಪತ್ರಗಳ ಪ್ರಕಟಣೆ (೨ನೇ) ಅಪ್ಪೀಲಿಲ್ಲದಿದ್ದರೆ ನವಂಬರ್ 25, ಅಪ್ಪೀಲಿದ್ದರೆ ನವಂಬರ್ 28. (೩ ಮತ್ತು ೪ನೇ) ಅಪ್ಪೀಲಿಲ್ಲದಿದ್ದರೆ ಒಕ್ಟೋಬರ್ 25. ಅಪ್ಪೀಲಿದ್ದರೆ ನವಂಬರ್ 4. ಮತದಾನ-(೨ನೇ) ದಶಂಬರ್ 21, (೩ನೇ) ನವಂಬರ್ 19. (೪ನೇ) ನವಂಬರ್ 22. ಮತಗಣನೆ—(೨ನೇ) ದಶಂಬರ್ 22, (೩ನೇ) ನವಂಬರ್ 20. (೪ನೇ) ನವಂಬರ್ 23.

ದಕ್ಷಿಣ ಕನ್ನಡ ಜಿಲ್ಲೆಯ ನಗರ ಸಭೆಗಳಿಗೆ ನಾಮಪತ್ರವೊಪ್ಪಿಸುವವರು ಬರುವ ನವಂಬರ್ ತಾ. 11, 12 ಮತ್ತು 13 ರಲ್ಲಿ ದಾಖಲ್ಮಾಡಬೇಕಾಗುವದು. ಜಿಲ್ಲಾ ಬೋರ್ಡು ಸ್ಥಾನಗಳ ಉಮೇದ್ವಾರಿಗಳು ನವಂಬರ್ ತಾ. 11 ಅಥವಾ 12ರಲ್ಲಿ ನಾಮಪತ್ರವೊಪ್ಪಿಸಬೇಕು. ನಗರ ಸಭೆಗಳ ಚುನಾವಣೆಗಳು ದಶಂಬರ್ ತಾ 9 ರಲ್ಲೂ, ಜಿಲ್ಲಾ ಬೋರ್ಡು ಚುನಾವಣೆಗಳು ದಶಂಬರ್ ತಾ. 16ರಲ್ಲೂ ಜರಗಲಿವೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ತಾರೀಕು 19—9—46ರಿಂದ

ಚಂದ್ರಪ್ರಭಾ, ಯೂಕುಬ್,

ಮೊದಲಾದವರು ನಟಿಸಿರುವ

ಯತೀಮ್

ಬರುವ ಚಿತ್ರ—

"ನಾರದ ನಾರದಿ"

ಜಿನ್ನರು ನಡುಗಾಲ ಸರಕಾರ ಪ್ರವೇಶಿಸುವರೆ?

ಪುನಃ ಸಂಧಾನ ಪ್ರಯತ್ನ.

ವೈಸರಾಯಿ ವೇವೆಲರು ಪುನಃ ಸಂಧಾನ ಮಾತುಕತೆ ನಡಿಸಲು ಮಿ. ಜಿನ್ನರನ್ನು ಆಮಂತ್ರಿಸಿದ್ದರಂತೆ. ಇದೇ ತಾ. 15ರಲ್ಲಿ ಮಿ. ಜಿನ್ನರು ನವದಿಲ್ಲಿಗಾಗಮಿಸಿ ತಾ. 16ರಲ್ಲಿ ವೈಸರಾಯರೊಡನೆ ಸಂಭಾಷಣೆ ನಡಿಸಿದರು. ರಾಷ್ಟ್ರೀಯ ಸರಕಾರದ ನಾಯಕ ಪಂಡಿತ ನೆಹರುಗಳೂ ಹಾಜರಿದ್ದರು. ಮಾತುಕತೆಯು ತಾ. 18ಕ್ಕೆ ಮುಂದುವರಿಸಿಡಲ್ಪಟ್ಟಿತೆಂದು ತಿಳಿದುಬರುತ್ತದೆ.

ಮಿ. ಜಿನ್ನರೊಪ್ಪಬಹುದು?

ರಾಷ್ಟ್ರೀಯ ಮಂತ್ರಿ ಮಂಡಲದ ಅನುಮತಿ ಪಡೆದು ಲೋರ್ಡ್ ವೇವೆಲರು ಮಿ. ಜಿನ್ನರಿದಿರು ಹೊಸ ಸೂಚನೆಯೊಂದನ್ನಿಟ್ಟರಂತೆ. ಘಟನಾ ಸಮಿತಿಯ ಪ್ರಾಂತಿಕ ಪಂಗಡಗಳಲ್ಲಿ ಸೇರಿ ಚರ್ಚಿಸಲು ತಾವು ಸಿದ್ಧರೆಂದು ನೆಹರುಗಳು ತನ್ನ ಭಾಷಣದಲ್ಲಂದಿದ್ದುದರಿಂದ ವಾತಾವರಣ ಅನುಕೂಲವಾಗಿದೆ. ಆದರೂ ಮಿ. ಜಿನ್ನರು ಮುಂದಾಗಿ ಕೆಲವು ವಿಷಯಗಳ ಸ್ಪಷ್ಟೀಕರಣ ಕೇಳಿರುವರಂತೆ. ಹೊಸ ಘಟನೆಗನುಸಾರವಾಗಿ ಚುನಾವಣೆ ನಡೆದ ಮೇಲೆ ಮಾತ್ರವೇ ಯಾವ ಪ್ರಾಂತ್ಯಕ್ಕಾದರೂ ಪ್ರಾಂತಿಕ ಪಂಗಡದಿಂದ ಪ್ರತ್ಯೇಕವಾಗುವ ಹಕ್ಕಿರಬೇಕು. ಮಂತ್ರಿ ಮಂಡಲದಲ್ಲಿ ರಾಷ್ಟ್ರೀಯ ಮುಸ್ಲಿಮರಿರಬಾರದು. ಸಂಬಂಧಪಟ್ಟ ಜಾತಿಯ ಸಮ್ಮತಿ ವಿನಹಾ ಜಾತೀಯ ಪ್ರಶ್ನೆಯ ಯಾವ ತೀರ್ಮಾನವನ್ನೂ ಮಂತ್ರಿ ಮಂಡಲ ಮಾಡಕೂಡದು—ಎಂಬ ಕುರಿತು ಸ್ಪಷ್ಟಾ ವ್ಯಾಖ್ಯಾನೆಬೇಕೆಂದು ಜಿನ್ನರು ಕೇಳಿರುವರಂತೆ. ಆದರೆ ರಾಷ್ಟ್ರೀಯ ಮುಸಲ್ಮಾನರನ್ನು ಬಿಡಲು ಕಾಂಗ್ರೆಸ್ ಒಪ್ಪುವಂತಿಲ್ಲ.

ಹಿನ್ನೆಲೆ ಯಾವುದು?

ಕಲ್ಕತ್ತಾ ಗಲಭೆಯನ್ನು ಪ್ರತ್ಯಕ್ಷ ಕಂಡ ವೈಸರಾಯರು ಅತ್ಯಂತ ಕಾತರಗೊಡು ಮಿ. ಜಿನ್ನರೊಡನ ಸಂಧಾನ ಮಾಡಿಕೊಳ್ಳದೆ ಅಥವಾ ಸ್ಪಷ್ಟ ಎಚ್ಚರಿಕೆ ಕೊಡದೆ ನಿರ್ವಾಹವಿಲ್ಲವೆಂದು ಆಮಂತ್ರಿಸಿದ್ದರು. ಮುಸ್ಲಿಮರ ನ್ಯಾಯಬದ್ಧ ಬೇಡಿಕೆಗಳನ್ನು ಮನ್ನಿಸಲು ಕಾಂಗ್ರೆಸ್ ಸದಾ ಸಿದ್ಧವಿದೆಯಾದರೂ ಬಲಾತ್ಕಾರಕ್ಕೆಂದೂ ಬಗ್ಗುವಂತಿಲ್ಲವೆಂದೀಗ ನಿರ್ಧರಿಸಿದೆ. ನೆಹರು ಮಂಡಲದ ಸಮ್ಮತಿ ವಿನಹ ವೈಸರಾಯರಿಂದಾವ ಬದಲಾವಣೆಯೂ ಆಗುವಂತಿಲ್ಲ. ಕಲ್ಕತ್ತಾ, ಬೊಂಬಾಯಿಗಳಂತಹ ರಕ್ತಪಾತವು ಯಾರಿಗೂ ಬೇಕಾಗಿಲ್ಲ. ಕೈಯ್ಯಾರೆ ಕಣ್ಣಿಗೆ ತಾಗಿದ ಕಟು ಅನುಭವ ಮಿ. ಜಿನ್ನರಿಗೂ ಆಗಿ, ಲೀಗಿನ ಭವಿಷ್ಯವು ತೀರಾ ಮಸಕಾಗಿರುವದರಿಂದ ಅವರೀಗ ಬಗ್ಗಿದ್ದಾರೆ. ಮೇಲಾಗಿ ನೆಹರು ಮಂಡಲವೀಗ ಸ್ವತಂತ್ರ ಸರಕಾರದ ಮಂತ್ರಿ ಮಂಡಲದಂತಿದ್ದು ಮಿತ್ರ ಜವಾಬ್ದಾರಿಯಿಂದ ಒಮ್ಮನಸ್ಸಿನಿಂದ ಅತ್ಯಂತ ಹರಿಕಾಸುಕಾರಿಯಾಗಿ ವರ್ತಿಸುತ್ತಿದೆ. ಇದನ್ನು 'ಮಂತ್ರಿ ಮಂಡಲ'ವೆಂದು ವೈಸರಾಯರೇ ಅಧಿಕೃತವಾಗಿ ಒಪ್ಪಿದ್ದಾರೆ. ಮುಸ್ಲಿಂ ಲೀಗ್ ಪ್ರವೇಶಿಸುವಂತಾದರೆ ಈ ಒಕ್ಕಟ್ಟಾಗಲೀ ರಾಷ್ಟ್ರೀಯ ಪ್ರಭಾವವಾಗಲೀ ಉಳಿಯುವದು ಕಷ್ಟ. ಆದರೂ ಆ ಶಾಂತಿ ನಿವಾರಣೆಗಾಗಿ ಕಾಂಗ್ರೆಸಿನವರು ನ್ಯಾಯಬದ್ಧ ಸಂಧಾನಕ್ಕೆ ಸಿದ್ಧರಿದ್ದಾರೆ.

ಇಷ್ಟರಲ್ಲೇ ಮಹತ್ಸಾಧನೆ

ನೆಹರು ಸರಕಾರ ಬಂದ ಅಲ್ಪಾವಧಿಯೊಳಗೆ ಅತಿ ಮಹತ್ವದ ಹಲವು ಕಾರ್ಯಗಳನ್ನು ಸಾಧಿಸಿದೆ. ಆಹಾರ ಮಂತ್ರಿ ಬಾಬು ರಾಜೇಂದ್ರ ಪ್ರಸಾದರು ಅಲ್ಲಲ್ಲಿ ಸಂಚರಿಸಿ ಆಹಾರ ಸುವ್ಯವಸ್ಥೆಗಿಳಿದಿದ್ದಾರೆ. ರೈಲ್ವೇ ಮಂತ್ರಿ ಮಿ. ಅಸಫ್ ಅಲಿಗಳ ವಿಜ್ಞಾಪನೆಯಂತೆ ದ. ಭಾ. ರೈಲ್ವೇ ಮುಷ್ಕರವು ಇಷ್ಟರಲ್ಲೇ ರಾಜೀ ತೀರ್ಮಾನ ಹೊಂದುವುದರಲ್ಲಿದೆ. ಗೃಹ ಮಂತ್ರಿ ಸರ್ದಾರ್ ಪಟೇಲರು ಸುಭಾಷರ ಮತ್ತವರ ಅನುಯಾಯಿಗಳ ಮೇಲಿನ ನಿರ್ಬಂಧಾಜ್ಞೆಗಳನ್ನು ರದ್ದುಪಡಿಸಿದ್ದಾರೆ. ನೆಹರು ವಿಜ್ಞಾಪನೆಯಂತೆ ಬರ್ಮಾ ಸರಕಾರವು ಅಜಾದ್ ನಾಯಕರನ್ನೆಲ್ಲಾ ಮುಕ್ತಗೊಳಿಸಿದೆ. ನೇತಾಜಿಯ ಆಗಮನದ ಕುರಿತು ವಿಚಿತ್ರ, ವಿಶೇಷ ವಾರ್ತೆಗಳು ಕೇಳಿಬರುತ್ತಿವೆ. ಗಡಿನಾಡಿನ ವಜೀರಿ ಸ್ಥಾನದ ಮೇಲೆ ನಡೆಸುತ್ತಿದ್ದ ಬಾಂಬು ಧಾಳಿಯನ್ನು ಕೂಡಲೇ ನಿಲ್ಲಿಸಲು ರಕ್ಷಣಾ ಮಂತ್ರಿ ಸ್ಥಾನದಿಂದ ನೆಹರುಗಳಾಜ್ಞಾಪಿಸಿರುವದು ಅತಿ ಮಹತ್ವದ ವಿಷಯ. ಸರಕಾರೀ ಯಂತ್ರದ ಚಲನಾ ರೀತಿಯು ಇಷ್ಟರಲ್ಲೇ ಬದಲಾಗಿ ಅದರ ಹಿಡಿಯು ವೇವೆಲರ ಕೈ ಬಿಟ್ಟು ನೆಹರುಗಳ ಕೈಗೆ ಬಂದಿದೆ.

ಪ್ರಕ್ಷುಬ್ಧ ವಾತಾವರಣ

ಕಲ್ಕತ್ತಕ್ಕಿಂತಲೂ ಭೀಕರವಾಗಲಿದ್ದ ಬೊಂಬಾಯಿಯ ಜಾತೀಯ ಗಲಭೆಯನ್ನು ಕಾಂಗ್ರೆಸ್ ಸರಕಾರವು ಕಠಿಣ ಹಸ್ತದಿಂದ ನಿರ್ಮೂಲಿಸಿದರೂ ಕಿಡಿಯಿನ್ನೂ ಆರಿಲ್ಲ. ಎರಡು ವಾರಗಳ ಗಲಭೆಯಲ್ಲೊ [illegible] ಮಡಿದು 781 ಜನ ಜಖಂಗೊಂಡು 203 ಮಂದಿ ದಸ್ತಗಿರಿಯಾಗಿದ್ದಾರೆ. ತಾ. 14ರಲ್ಲಿ ಕಲ್ಬಾದೇವಿ ಕ್ಷೇತ್ರದಲ್ಲಿ ಟೇಕ್ಸಿಯೊಂದು ತೀವ್ರಗತಿಯಿಂದೋಡುತ್ತಿದ್ದಂತೆಯೇ ಅದರಲ್ಲಿದ್ದವರು ರಿವೋಲ್ವರುಗಳಿಂದ ಜನ ಸಂದಣಿಯ ಮೇಲೆ ಧನ್ ಧನ್ನನೇ ಗುಂಡು ಹಾರಿಸಿ ದೂರಕ್ಕೋಡಿ ಟೇಕ್ಸಿಯನ್ನು ಬಿಟ್ಟು ಪಲಾಯನ ಮಾಡಿದ್ದರು. ಈ ಕಾಡು ಹುಚ್ಚಾಟದಿಂದ 5 ಮಂದಿ ಮಡಿದು 25 ಮಂದಿ ಜಖಂಗೊಂಡು ಇಡೀ ನಗರದಲ್ಲಿ ಗಲಿಬಿಲಿಯೆದ್ದಿತು. ಆ ಸಂಬಂಧವಾಗಿ ನಾಲ್ವರು ಪಠಾಣರು ದಸ್ತಗಿರಿಯಾದ ವಾರ್ತೆಯಿದೆ. ಈಗಲೂ ಆಗಾಗ ಚೂರಿ ತಿವಿತ, ಲೂಟಿ ದರೋಡೆ, ಗೋಳಿಬಾರುಗಳು ನಡೆಯುತ್ತಿವೆ. ಕಲ್ಕತ್ತಾ ದುರಂತದ ವಿಚಾರಣೆಗಾಗಿ ಕಮಿಶನ್ ನೇಮಕಗೊಂಡು ಕಾರ್ಯಾರಂಭಿಸಿದೆ

ಶೇಕ್ ಅಬ್ದುಲ್ಲಾರಿಗೆ 3 ವರ್ಷ

ಕಾಶ್ಮೀರದ ಜನ ನಾಯಕ, ಪಂಡಿತ ನೆಹರುಗಳ ಮಿತ್ರ, ಶೇಕ್ ಅಬ್ದುಲ್ಲಾರಿಗೆ 3 ವರುಷ ಸದಾ ಸಜೆ, ಮತ್ತು 1500 ರೂ. ಜುಲ್ಮಾನೆ ವಿಧಿಸಲ್ಪಟ್ಟಿದೆ. ಈ ಕುರಿತು ಅಪೀಲು ನಡೆಯಲಿದೆ. ಕಾಶ್ಮೀರದ ಗಡಿಯಲ್ಲಿ ರಶ್ಯನ್ ಸೇನೆ ನಿಂತಿದೆಯೆಂದೂ ಒಳಗಡೆ ಪರಕೀಯರ ತಪಾಸಣೆ ನಡೆಯುತ್ತಿದೆಯಲ್ಲದೆ ಹೊರಗಡೆ ವೈಮಾನಿಕ ಪಹರೆಯಿಡಲಾಗಿದೆಯೆಂದೂ ವಾರ್ತೆ ಹಬ್ಬಿತ್ತು. ಹಿಂದೀ ಸರಕಾರನದನ್ನೀಗ ಅಲ್ಲಗಳೆದಿದೆ.

ಉಡುಪಿ.

ಮದ್ರಾಸ್ ಫಯರ್ ಸರ್ವಿಸಿನ — ಉಡುಪಿ ಶಾಖೆಗೊಂದು ಮಾಯಾ ಆಫೀಸನ್ನು ಅಜ್ಜರಕಾಡು ಮಟ್ಟದಲ್ಲಿ ಕಟ್ಟುವುದಾಗಿ ಸರಕಾರದ ಯೋಜನೆ ನಡೆದಿರುವುದಾಗಿಯೂ ಈ ಕುರಿತು ಅಜ್ಜರಕಾಡು ವಾರ್ಡಿನ ನಿವಾಸಿಕರ ಪ್ರಬಲಾಕ್ಷೇಪವಿರುವುದಾಗಿಯೂ ತಿಳಿದುಬರುತ್ತದೆ.

ಕೇಂದ್ರ ಕರ್ನಾಟಕ ಸಂಘದ ತೃತೀಯ ಸಾಹಿತ್ಯೋತ್ಸವವು ಆಕ್ಟೋಬರ್ ತಾ 2ರಿಂದ 5ರವರೆಗೆ ನಡೆಯುವುದ[illegible] ಜರುಗುವ ನಾಲ್ಕು ದಿವಸಗಳಲ್ಲಿ ಪ್ರತಿದಿನವೂ ಸ್ಪರ್ಧೆಗಳು ನಡೆಯುವವು. ಇವುಗಳಲ್ಲಿ ಕಾಲೇಜು ಹೈಸ್ಕೂಲು, ಪಾ[illegible]ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಬಹುದು. ಸ್ಪರ್ಧೆಗಳಿಗೆ ಪ್ರವೇಶಹಾಸಲು ಕೊಡಬೇಕಾಗಿಲ್ಲ. ಭಾಗವಹಿಸಬೇಕೆಂದಿರುವವರು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸಂಘದ ಸಾಹಿತ್ಯ- ಕಲಾ- ಕಾರ್ಯದರ್ಶಿಗಳಿಂದ ಪಡೆಯಬಹುದು.

ಹೊಸ ಶಸ್ತ್ರ ಚಿಕಿತ್ಸಾ ಮಂದಿರ— ನಿವೃತ್ತ ಜಿಲ್ಲಾ ಸರ್ಜನ್ ಶ್ರೀ ಉಳ್ಳಾಲ ಅನಂತಯ್ಯನವರು ತಾ. 9-9-46ರಲ್ಲಿ ಸಿಟಿಬೀಡಿನ ಶಿವಭಾಗದ ಮಾಳಿಗೆಯಲ್ಲಿ ಆನಂದಾಶ್ರಮ ಸರ್ಜಿಕಲ್ ಎಂಡ್ ಗೈನಿಕಲೋಜಿಕಲ್ ಕ್ಲಿನಿಕ್" ಎಂಬ ಶಸ್ತ್ರ ಚಿಕಿತ್ಸಾ ಮಂದಿರವನ್ನು ತೆರದಿರುತ್ತಾರೆ. ತಾ. 11ರಲ್ಲಿ ಒಪರೇಶನ್ ಕೇಸೊಂದನ್ನು ಜಯಶೀಲವಾಗಿ ನಡೆಸಿರುತ್ತಾರೆಂದೂ ತಿಳಿದುಬರುತ್ತದೆ. ಶಸ್ತ್ರ ಚಿಕಿತ್ಸಾಪೇಕ್ಷಿಗಳಾದ ಉಡುಪಿಯ ಮತ್ತು ಆಸುಪಾಸಿನ ಜನರಿಗೆ ಇದೊಂದು ಸುಸಂದರ್ಭವೇ ಸರಿ.

ಎಕೆಡಮಿ ವರ್ಧಂತಿ— ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಳ ಇದರ ವರ್ಧಂತಿ ಸಮಾರಂಭವು ಕ್ರಿಶ್ಚಿಯನ್ ಹೈಸ್ಕೂಲ್ ಹಾಲಿನಲ್ಲಿ ಇದೇ ತಾ. 16, 17, 18ರಲ್ಲು ಜರಗಿತು. ಸುರುವಿನ ದಿನದ ಸಭೆಯು ಶ್ರೀ. ಬಿ. ವೈಕುಂಠ ಬಾಳಿಗ, ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಜರಗಿತು. ಎಕೆಡಮಿ ರಿಜಿಸ್ಟ್ರಾರ್ ಡಾ। ಟಿ. ಎಮ್. ಎ. ಪೈಗಳು ವಿದ್ಯಾ ಸಂಬಂಧವಾದ ಯುನೈನ್ ಕಮಿಟಿಯ ವರದಿಯನ್ನೋದಿದರು. ಶ್ರೀಗಳಾದ ಕೆಪ್ಟನ್ ಕಾರ್ ಪದ್ಮನಾಭ ಪೈ, ಎ. ರಾಮಣ್ಣ ಶೆಟ್ಟಿ, ಟಿ. ಅನಂತ ಪೈ, ಎ. ಜಿ. ಆಳ್ವೆ ಮೊದಲಾದವರು ವರದಿಯ ಕುರಿತು ವಿಮರ್ಶಿಸಿ ಮಾತಾಡಿದರು. ಆ ಬಳಿಕ ವರದಿ ಮಂಜೂರಾಯಿತು.

ಎರಡನೆಯ ದಿನದ ಸಭೆಯು ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರ ಗಣಪತಿ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ. ಎಸ್. ಎಸ್. ನಾಗೇಂಬರರಾಯರು ಹಿಂದೂಸ್ಥಾನದ ಪೇಟೆಯ ಸಿದ್ಧಿಯಲ್ಲಿ ಭಾಷೆಗಳ ಸಮಸ್ಯೆ ಎಂಬೀ ವಿಷಯವನ್ನೆತ್ತಿ ಒಂದು ಪತ್ರವನ್ನೋದಿದರು. ಕೊನೆಯ ದಿನ ಎಕೆಡಮಿಯ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳನ್ನು ಹಂಚುವ ಸಮಾರಂಭವು ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿ ವಿದ್ವಾನ್ ಎಚ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತರು ಪದವೀದಾನ ಭಾಷಣವನ್ನು ಮಾಡಿದರು.

ಉಪ್ಪೂರು— ಇಲ್ಲಿಯ ಶ್ರೀ. ಯು. ಕೆ. ಗೋವಿಂದ ಶೆಟ್ಟರವರ ಮೆನೇಜ್‌ಮೆಂಟಿನ ಶಾಲೆಗಳ ವಾರ್ಷಿಕ ಪರೀಕ್ಷೆ ಮುಗಿಯಲಾಗಿ ತಾ 17 9.46ರಲ್ಲು ಉಪ್ಪಿನಕುದ್ರು ಶಾಲಾ ಜಾ। ಡಿ। ಇನ್ಸ್‌ಪೆಕ್ಟರರಾದ ಶ್ರೀ. ಟಿ. ಶೀನಪ್ಪ ಹೆಗ್ಗಡೆ, ಬಿ. ಎ. ಎಲ್. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಹೆತ್ತವರಕೂಟದ ಸಭೆಯು ಜರಗಿಸಲ್ಪಟ್ಟಿತು. ಮಕ್ಕಳ ಅನೇಕ ಚಟುವಟಿಕೆಗಳು ಪ್ರೇಕ್ಷಕರನ್ನು ಸಂತೋಷಪಡಿಸುವಂತಹವಾಗಿತ್ತು. ಶ್ರೀ. ಅನಂತರಾಮ ಕುಕ್ಕಿಲಾಯ ಮೊದಲಾದವರು ಶಾಲೆಯನ್ನು ಅಭಿನಂದಿಸಿ ಮಾತನಾಡಿದರು. ಅಧ್ಯಕ್ಷನಾಧಿಕಾರಿಗಳು, ತಮ್ಮ ಸುಂದರ ಮಾತುಗಳಿಂದ ಮಕ್ಕಳ ಚಟುವಟಿಕೆ, ಶಾಲಾ ಕೆಲ್ಸ ವಗೈರೆ ಶ್ಲಾಘಿಸಿ ಹೆತ್ತವರ ಕರ್ತವ್ಯವನ್ನು ಮನಗಾಣಿಸಿ ಬೋಧಪರ ಭಾಷಣವಿತ್ತರು. ಕಟ್ಟಕಡೆಗೆ ಮೆನೇಜರರವರ ವಂದನಾರ್ಪಣ ಮತ್ತು ಮಂಗಳ ಗೀತೆಯೊಂದಿಗೆ ಸಭೆಯು ಭಂಗವಾಯಿತು.

ಚುನಾವಣಾ ಪ್ರಕಟಣೆ

ಜಿಲ್ಲಾ ಬೋರ್ಡ್, ಮುನ್ಸಿಪಾಲಿಟಿಗಳ ಉಮೇದ್ವಾರಿಕೆಯ ಪ್ರಕಟಣೆಗಳನ್ನೂ 'ಮೆನಿಫೆಸ್ಟೊ'ಗಳನ್ನೂ ನವಯುಗದಲ್ಲಿ ಕಡಿಮೆ ದರದಲ್ಲಿ ಪ್ರಕಟಿಸಲಾಗುವುದು.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

[illegible]

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ.

ಬೆಲೆ ಒಂದೇ ರೂ. **1—4—0**

ರೂ. 1—8 0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು

ಪ್ರತಿಗಳು ಸಿಗುವ ಸ್ಥಳಗಳು.—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಸಾಮಂತ ಗುರುರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ಕಲ್ಯಾಣಪುರ- ಸ್ಥಳೀಯ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯನ್ನು ಊರ್ಜಿತಗೊಳಿಸಿ ಕ್ರಮೇಣ ಅದನ್ನು ಹೈಸ್ಕೂಲಾಗಿ ಮಾರ್ಪಡಿಸುವ ಸದುದ್ದೇಶದಿಂದ ರಿಜಿಸ್ಟ್ರಿ ಮಾಡಲ್ಪಟ್ಟ 'ಹಿಂದೂ ವಿದ್ಯಾವರ್ಧಕ ಸಂಘ'ದ ಉದ್ಘಾಟನೆಯು ತಾ 31-8-46ರಲ್ಲಿ ಶ್ರೀ. ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಊರ ಹಾಗೂ ಪರವೂರ ಹಲವು ಪ್ರಮುಖರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರಗಿತು. ಅನಂತರ ಕಮಿಟಿಯ ಸಭೆಯು ಜರಗಿಸಲ್ಪಟ್ಟ ಶ್ರೀ ಕೆ, ಆರ್. ಬಾಳಿಗರಿಂದ ಮಕ್ಕಳಿಗೆ ಕಬ್ಬು ಹಂಚಲ್ಪಟ್ಟಿತು. ವಿದ್ಯಾಭಿಮಾನಿಗಳೆಲ್ಲರೂ ಈ ನೂತನ ಸಂಸ್ಥೆಗೆ ಸರ್ವ ವಿಧದ ಸಹಾಯ—ಸಹಕಾರಗಳನ್ನು ನೀಡುವರೆಂದು ನಿರೀಕ್ಷಿಸಲಾಗಿದೆ.

ಮಿ| ಜೋನ್. ಎಮ್. ಟೆಲ್ಲಿಸರ ಪ್ರಶಂಸೆ—ಅಂದಿನ ಇಂದಿನ ಕಲ್ಯಾಣಪುರ ಸೆಂಟರನ್ನು ವಿಮರ್ಶಿಸುತ್ತಾ ಇಂದಿನ ಪ್ರಗತಿಪರ ಪರಿಸ್ಥಿತಿಗೆ ಕಾರಣೀಭೂತರಾದವರು ಜನಪ್ರಿಯ ಮಿ| ಜೋನ್. ಎಮ್. ಟೆಲ್ಲಿಸರು. ಇವರ ಅವಿಶ್ರಾಂತ ಪರಿಶ್ರಮದಿಂದಾಗಿ ಕಲ್ಯಾಣಪುರದಲ್ಲಿ ಹೈಸ್ಕೂಲು ಸ್ಥಾಪಿಸಲ್ಪಟ್ಟು ಇಂದೀಗ ಆಸುಪಾಸಿನ ಗ್ರಾಮಗಳ ಮಕ್ಕಳಿಗೆ ಪ್ರೌಢವಿದ್ಯಾಭ್ಯಾಸ ದೊರಕಲು ಕಾರಣವಾಯಿತು. ಮಿ| ಟೆಲ್ಲಿಸರು ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲೂ ಶಕ್ತಿಮೀರಿ ದುಡಿದು ಜನತಾ ಜನಾರ್ದನನ ಸೇವೆಯನ್ನು ಮಾಡಿ ಈ ಸತಾನೆ ಅಧ್ಯಾಪಕ ವೃತ್ತಿಯಿಂದ ನಿವೃತ್ತಿಹೊಂದಿರುವರು. ಇವರ ಆದರ್ಶ ಜೀವನವು ಪ್ರಶಂಸನೀಯವೆಂದು ಅವರ ವಿದ್ಯಾರ್ಥಿಯಾಗಿದ್ದು ಈಗ ಬೊಂಬಾಯಿ ಹೈಕೋರ್ಟಿನ ಎಡ್ವೊಕೇಟರಾಗಿರುವ ಮಿ| ಅಲ್‌ಫ್ರೆಡ್ ಜೆ.ಬಿ. ಪಿಂಟೋರವರು ಬರೆಯುತ್ತಾರೆ.

ಪ್ರಕಟಣೆ

ಪುತ್ತೂರು ತಾಲ್ಲೂಕು ಕೆದಂಬಾಡಿ ಗ್ರಾಮದ ಮುಂಡಾಲ ಗುತ್ತು ಸಂಕಪ್ಪ ರೈಗಳ ಸೊಸೆ ವ ಬಾಲಕ್ಕೆ ಹೆಂಗಸಿನ ಮಗಳು ಪಾಚು ಹೆಂಗಸು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರೆ

ನಂನ ಖಾಸಾ ಅಂಣ ಕೆದಂಬಾಡಿ ವಗೈರೆ ಗ್ರಾಮಗಳ ಪಟೇಲರಾಗಿದ್ದ ಮುಂಡಾಲ ರಾಮಣ್ಣ ರೈಗಳು ತಾ. 10 9-46ರಲ್ಲು ಆಕಸ್ಮಿತ ಮರಣ ಹೊಂದಿರುತ್ತಾರೆ. ಅಳಿಯಕಟ್ಟು ಆಚರಣೆಯ ಸದ್ರಿ ಮೃತ ರಾಮಂಣರೈಗಳಿಗೆ ನಾನೊಬ್ಬಳೇ ವಾರಿಸ್ದಾರಳಾದ್ರಿಂದ ಸದ್ರಿ ಮೃತನ ವಿಶಿಷ್ಟ ಸ್ಥಿರಚರ ಸೊತ್ತುಗಳಿಗೆ ನಾನು ಪೂರ್ಣ ಹಕ್ಕುದಾರಳಾಗಿರುತ್ತೇನೆ. ಸದ್ರಿ ರಾಮಂಣರೈಗಳು ಮೃತಪಡುವ ಸಮಯ ನನ್ನಗೈರು ಹಾಜರ್ರಿನಲ್ಲಿ ನನ್ನ ವಿರೋಧಿಗಳು ಸದ್ರಿ ರಾಮಂಣ ರೈಗಳು ಸತ್ತನಂತ್ರ ಖಾಲಿ ಕಾಗದಗಳಿಗೆ ಸದ್ರಿ ಶವದ ಕೆಲವು ಹೆಬ್ಬೆಟ್ಟುಗಳನ್ನು ತೆಗೆದಿರುತ್ತಾರಾಗಿ ತಿಳಿಯುತ್ತೇನೆ. ಅಂಥ ಹೆಬ್ಬೆಟ್ಟುಗಳನ್ನು ಉಪಯೋಗಿಸಿ ಸೃಷ್ಟಿಯ ವ ಬನಾವಣೆ ರಿಕಾರ್ಡು ವಗೈರೆ ಮಾಡಿದ್ದಾದರೆ ಅಂಥಾ ಯಾವತ್ತು ರಿಕಾರ್ಡುಗಳು ಸಿಂಧಾಗತಕ್ಕದ್ದಲ್ಲ. ಅದು ನನ್ನ ಹಕ್ಕಿಗೆ ಭಾಧಿಸತಕ್ಕದ್ದಲ್ಲ. ಮೃತನ ಪಟೇಲಿಕೆ ಉದ್ದಿಶ್ಯ ನನ್ನ ಹಕ್ಕಿನ ಕೆದಂಬಾಡಿ ಗ್ರಾಮದ ಪಟ್ಟಾನಂಬ್ರ 23ನೇ ಆಸ್ತಿಯನ್ನು ಮೃತನ ಹೆಸ್ರಿಗೆ ನಾನು ವ್ಯವಸ್ಥಾಪತ್ರ ಮಾಡಿಟ್ಟರೂ ಸದ್ರಿ ಆಸ್ತಿಯಲ್ಲಿ ಮೃತನಿಗೆ ಯಾವ ತರದ ಹಕ್ಕು ಬಾಧ್ಯತೆ ಇರಲಿಲ್ಲ. ಆದಕ್ಕೆ ಸಾಲ ವಗೈರೆ ಹೊರಿಸುವರೇ ಸದ್ರಿ ಮೃತನಿಗೆ ಏನ್ನನ್ನಾದರೂ ಹಕ್ಕಿರಲಿಲ್ಲ. ಹಾಗೆ ಸಾಲ ವಗೈರೆ ಮಾಡುವದೆ ಆಗತ್ಯ ಸಹಾ ಇದಲಿಲ್ಲ. ಸದ್ರಿ ಮೃತನು ತನ್ನ ಜೀವಿತಕಾಲದಲ್ಲಿ ಹಾಗೆ ಏನೊಂದೂ ರಿಕಾರ್ಡು ಮಾಡಿದ್ದಿಲ್ಲ. ಹಂದು ವೇಳೆ ಬನಾವಣೆಯ ವ ಸೃಷ್ಟಿಯ ರಿಕಾರ್ಡು ಮಾಡಿದ್ದಾದರೆ ಅದು ಸಿಂಧಾಗತಕ್ಕದ್ದಲ್ಲ. ಅದು ನನ್ನ ಹಕ್ಕಿಗೆ ಬಾಧಿಸತಕ್ಕದ್ದಲ್ಲ. ತಿಳಿದಿರಲಿ—

||| ಈ ಎಡದ ಹೆಬ್ಬೆಟ್ಟು ವ ಮುಂಡಾಲಗುತ್ತು ಸಂಕಪ್ಪ ರೈಗಳ ಸೊಸೆ ವ ಬಾಲಕ್ಕೆ ಹೆಂಗಸಿನ ಮಗಳು (?)

ಮುಂಡಾಲಗುತ್ತು, 11-9-46

ಪುತ್ತೂರು—ಮುಂಡಾಲ ಪಟೇಲ್ ಶ್ರೀ ರಾಮಣ್ಣ ರೈಗಳು ತಾ. 10-9-46ರಲ್ಲಿ ಹೃದ್ರೋಗದಿಂದ ಅವರ ಮನೆಯಲ್ಲಿ ದೈವಾಧೀನರಾಗಿರುವರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ಸರಳ ಮತ್ತು ಸಾಧುಸ್ವಭಾವದವರಾಗಿದ್ದರು.

ತಾ. 5-9-46ರಲ್ಲಿ ಏಳು ಮುಡಿಯ ಸವಿಾಪ ಮುಲೆಯಾಳಿ ಆಚಾರಿಯು ಮರದ ಕೆಲಸಕ್ಕೆಂದು ಓರ್ವ ಗೃಹಸ್ಥರ ಮನೆಗೆ ಹೋದವೇಳೆ ಮುಡುಕನೋರ್ವನಿಂದ ಕಾರಣಾಂತರವಾಗಿ ಉಳಿಯಿಂದ ತಿವಿಯಲ್ಪಟ್ಟು ತೀವ್ರ ಜಖಂ ಹೊಂದಿ ಸ್ಥಳೀಯ ಸರಕಾರಿ ಆಸ್ಪತ್ರೆಗೆ ಒಯ್ಯಲ್ಪಟ್ಟು ಅದೇ ದಿನ ಸಂಜೆ ಮೃತಪಟ್ಟಿರುವನಾಗಿ ತಿಳಿದುಬರುತ್ತದೆ.

ಕಾಸರಗೋಡು ಮಂಜೇಶ್ವರ ಫಿರ್ಕಾ—'ಗ್ರಾಮ ಉದ್ಯೋಗಸ್ಥರ' ಸಭೆಯು ಇದೇ ಕಳೆದ ತಾ ಆರೆಂದು ಸ್ಥಳೀಯ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ| ಯನ್. ಯಸ್. ಭಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಉದ್ದೇಶ ಮತ್ತು ರಚನೆಯ ಕುರಿತು ಶ್ರೀ| ಡಿ. ಕೃಷ್ಣರಾಯರು ವಿವರಿಸಿದ ಮೇಲೆ ಶ್ರೀಯುತರುಗಳಾದ ಎ. ಕೃಷ್ಣ ಶೆಟ್ಟಿ, ಬಿ. ವಿ ಕಕ್ಕಿಲ್ಲಾಯರು, ಬಿ. ದೇವಪ್ಪ ಆಳ್ವರು, ವಿ. ರಾಮರಾಯರು ಸಂಘಕ್ಕೆ ಹಿತಸೂಚನೆಗಳನ್ನಿತ್ತರು. ಸಂಘಕ್ಕೆಯು. ಕೋಚಣ್ಣ ರೈ ಮತ್ತು ಸಿ. ಯಚ್. ಸುಬ್ರಹ್ಮಣ್ಯಮ್ ಅಧ್ಯಕ್ಷ, ಉಪಾಧ್ಯಕ್ಷರಾಗಿಯೂ, ಡಿ. ಕೃಷ್ಣರಾಯರು ಮತ್ತು ವಿ. ಕೆ. ಅನಂತರಾಮರಾಯರು ಕಾರ್ಯದರ್ಶಿ, ಉಪಕಾರ್ಯದರ್ಶಿಯರಾಗಿಯೂ ಸರ್ವಸಮ್ಮತಿಯಿಂದ ಅವಿರೋಧವಾಗಿ ಆರಿಸಲ್ಪಟ್ಟರು.

ಕಿಸಾನ್ ಕೋಂಗ್ರೆಸ್— ಕಾಸರಗೋಡು ತಾಲೂಕು ಕಿಸಾನ್ ಕಾಂಗ್ರೆಸ್ (ಕೃಷಿಕರ ಸಂಘ) ಎಂಬ ಹೆಸರಿನ ಸಂಸ್ಥೆಯು ಶ್ರೀಯುತ ಎಮ್. ಉಮೇಶ ರಾವ್, ವಕೀಲ್ ಇವರ ಅಧ್ಯಕ್ಷತೆಯಲ್ಲಿ ದೇಶಭಕ್ತ—ಕಾರ್ನಾಡ್ ಸದಾಶಿವರಾವ್ ಧರ್ಮಾರ್ಥವಾಚನಾಲಯದಲ್ಲಿ ಸ್ಥಾಪಿಸಲ್ಪಟ್ಟಿತು

ಮದರಾಸು ಸುದ್ದಿ

ಕರ್ಣಾಟಕ ಸೇವಾ ಸಂಘದ— ಮೊದಲನೆಯ ವಾರ್ಷಿಕಾಧಿವೇಶನವು ತಾ. 8-9-46ರಲ್ಲಿ "ಲೇಡಿ, ಎಂ. ಸಿ, ಟಿ ಮುತ್ತಯ್ಯ ಚೆಟ್ಟಿಯಾರ ಗರ್ಲ್ಸ್ ಹೈಸ್ಕೂಲಿನಲ್ಲಿ ಮದ್ರಾಸಿನ ಭೂಕಂದಾಯದ ಮಂತ್ರಿಗಳಾದ ಆನರೇಬಲ್ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಜಯವಂತಿದೇವಿ - ಶ್ರೀ. ನಾಗರಾಜ್ ಇವರು ಸುಶ್ರಾವ್ಯವಾಗಿ ಪ್ರಾರ್ಥನೆಗೈಯ್ದರು. ಶ್ರೀ. ವಿ. ಎಸ್. ಕುದ್ವ, ಐ. ಸಿ. ಎಸ್, ಸಿ. ಐ. ಇ' ಯವರು ಸ್ವಾಗತ ಭಾಷಣ ಮಾಡಿದರು. ಶ್ರೀ. ಸಿ. ಕೆ. ತಿರುಮಲೇಶರು ವರದಿ ಓದಿದರು. ಮಾನ್ಯ ಅಧ್ಯಕ್ಷರು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಶ್ರೀ ಎಂ. ಎಂ. ಭಟ್ಟರು ಪರಿಚಯ ಮಾಡಿಕೊಟ್ಟ ಬಳಿಕ ಶ್ರೀ. ಸಿದ್ದವನ ಹಳ್ಳಿ ಕೃಷ್ಣಶರ್ಮರು "ಹೊಸ ಕಾಲದ ಕವಿ ಸಮಯ" ಎಂಬ ವಿಷಯದಲ್ಲಿ ಭಾಷಣಮಾಡುತ್ತಾ ಜನಸಾಮಾನ್ಯದ ಜೀವನವನ್ನು ಸಮಗ್ರವಾಗಿ ಚಿತ್ರಿಸುವ ಹಿಂದಿನ ಕಾಲದ ಮಹಾ ಕಾವ್ಯಗಳಂತೆ ಜನಸಮುದಾಯಕ್ಕೆ ಆದರ್ಶವಾಗಿ ನಿಲ್ಲಬಲ್ಲ ಧೀರೋದಾತ್ತ ನಾಯಕನನ್ನು ಸೃಷ್ಟಿಮಾಡಿ ಹಳೆಯ ಕಾವ್ಯಗಳ ಹದಿನೆಂಟು ವರ್ಣನೆಗಳಂತೆ ಈ ಹೊಸ ಕಾಲದ ಬದುಕಿನ ಮುಖ್ಯ ಲಕ್ಷಣಗಳಾದ ಒಕ್ಕಲುತನ ಉದ್ಯೋಗಗಳ ರಸ ಚಲುಮೆಗಳ ಸಂಕೇತಗಳಾದ ಗೋವು, ಭೂಮಿ, ಪಕ್ಷಿ ಪೈರು, ಕೆರೆ ಸರೋವರ— ಕಾಡು ನೋಡು ಮುಂತಾದವುಗಳ ವರ್ಣನೆಯಿಂದಲೂ ಹೆಣ್ಣನ್ನು ತಾಯಿಯಂತೆ, ಮಗಳಂತೆ ತಿಳಿದು, ಅಕೆಯ ತಾಯ್ತನ, ಲಾಲನ ಪಾಲನೆಗಳ ವರ್ಣನೆಯಿಂದಲೂ ಹೊಸ ಕಾವ್ಯ ತನ್ನ ಕವಿಸಮಯವನ್ನು ಕಟ್ಟಬೇಕು ಕವಿಗಳಿಂದ ವಾಲ್ಮೀಕಿ ಸೀತೆಯನ್ನು ಕಟ್ಟಿಸಿದಂತೆ ದೇಶವನ್ನು ಈ ಬಗೆಯ ಸಾಮಾಗ್ರಿಯಿಂದ ಕಟ್ಟಿಸಬೇಕು. ಇತ್ಯಾದಿಯಾಗಿ ಸ್ಫೂರ್ತಿದಾಯಕವಾಗಿ ಹೇಳಿದರು.

ಅಧ್ಯಕ್ಷರಾದ ಮಾನ್ಯ ಮಂತ್ರಿಗಳು, ಸಂಘದ ಧ್ಯೇಯ ಚಟುವಟಿಕೆಗಳ ಬಗ್ಗೆ ತಮ್ಮ ತೃಪ್ತಿಯನ್ನು ಸೂಚಿಸುತ್ತಾ ತಾನು ಸಂಘದ ಆಜೀವ ಸದಸ್ಯನಾದ ಕಾರಣವು ಸಂಘದ ಸದಸ್ಯರಲ್ಲಿ ಹೆಚ್ಚು ಮಂದಿ ಬಡವರೂ ಕೆಲಸಗಾರರೂ ಆಗಿರುವುದೇ ಆಗಿದೆ ಎಂದು ಹೇಳುತ್ತಾ ಕನ್ನಡನಾಡಿನ ಏಕೀಕರಣದ ಅವಶ್ಯಕತೆಯನ್ನು ವಿವರಿಸಿ ಹೇಳಿ, ಮದ್ರಾಸಿನ ಕನ್ನಡಿಗರಲ್ಲಿ ಕನ್ನಡದ ಅಭಿಮಾನ ಹೆಚ್ಚಾಗಬೇಕಾಗಿದೆ ಕನ್ನಡಿಗರು ಎಚ್ಚತ್ತು ಮುಂದರಿಯದೆ ಪರಿಣಾಮವಿಲ್ಲ— ಘಟನಾ ಸಭೆಯಲ್ಲಿ ಭಾಷಾನುಗುಣ ಪ್ರಾಂತರಚನೆಯು ಪ್ರಾಮುಖ್ಯ ಪ್ರಶ್ನೆಯಾಗಿ ಪ್ರಾಂತಗಳು ವಿಂಗಡವಾಗಲಿವೆ. ಇದರಿಂದ ತೆಲುಗು, ತಮಿಳು, ಮಳೆಯಾಳಿ ಎಂದು ನಮ್ಮೊಳಗೆ ಆಂತರಿಕ ಕಲಹಗಳನ್ನು ಬೆಳೆಯಿಸುವುದರಲ್ಲಿ ಹುರುಳಿಲ್ಲ. ಇತ್ಯಾದಿಯಾಗಿ ಮನ ಮುಟ್ಟುವಂತೆ ಮಾತಾಡಿದರು.

ಬಳಿಕ ಶ್ರೀ. ಸೀತಾರಾಮ ಕುಮಾರ್ ಇವರ ಹಾಡು— ಶ್ರೀ ಪ್ರಭಾಶಂಕರ್ ಮತ್ತು ಸ್ನೇಹಿತರ "ಮಹಾ ಕವಿಮೇಳ" ಎಂಬ 'ರತ್ನ' ಪ್ರಹಸನ, ಕುಮಾರಿ ಜಯವಂತಿ ದೇವಿಯ ದಾಸರ ಕೀರ್ತನೆಗಳು— ಕುಮಾರಿ ಯಶೋದರಾ ದೇವಿಯ ನೃತ್ಯಾಭಿನಯ ಇವು ಚಿತ್ತಾಕರ್ಷಕವಾಗಿದ್ದುವು. ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದರು. ಕೊನೆಯದಾಗಿ ಶ್ರೀ. ವಿ. ವೆಂಕಟ್ರಮಣ ಭಟ್ಟರ ಸಂಗೀತಕ್ಕೆ ಶ್ರೀ. ವಿ. ಎಸ್. ಮೂರ್ತಿಯವರ ಮೃದಂಗವಾದನವು ಇನ್ನಷ್ಟು ಕಳೆಯೇರಿಸಿ ಎಲ್ಲರನ್ನು ಆನಂದಗೊಳಿಸಿತು.

ಶ್ರೀ ಸಿದ್ದವನ ಹಳ್ಳಿ ಕೃಷ್ಣಶರ್ಮರು ತಾ. 9-9-46ನೆಯ ದಿನ "ಹೈದರಾಬಾದಿನ ಜನಜೀವನ' ಎಂಬ ವಿಷಯದಲ್ಲಿಯೂ ಇಂಜನಿಯರಿಂಗ್ ಕಾಲೇಜಿನಲ್ಲಿ "ಕನ್ನಡ ಸಮಸ್ಯೆ" ಎಂಬ ವಿಷಯದಲ್ಲೂ ಭಾಷಣಮಾಡಿದರು.

ವಿಶ್ವ ಸಾಹಿತ್ಯ ಮಾಲೆ, ಕುಸುಮ ೧.

ಏಚಿತ್ರ ಆಗ್ನೇಯ ಏಶಿಯ

ಇಂಡೋನೇಶಿಯಾ, ಇಂಡೋ ಚೀನಗಳ ರಾಜ್ಯಕ್ರಾಂತಿ, ಬರ್ಮಾ, ಮಲಯಾ, ಸಯಾಂಗಳ ಸ್ವಾತಂತ್ರ್ಯ ಸಂಗ್ರಾಮ— ಎಲ್ಲವೂ ಇವೆ. ನಕ್ಷೆಗಳ ಸಹಿತ.

ಲೇಖಕರು:— ಶ್ರೀ. ಎಂ. ಹರಿದಾಸ.

(ದ್ವಿತೀಯ ಮಹಾ ಯುದ್ಧ, ಉಕ್ಕಿನ ಮನುಷ್ಯ ಗ್ರಂಥಗಳನ್ನು ಬರೆದವರು)

ಬೆಲೆ ೧—೮—೦ (ಅಂಚೆ ವೆಚ್ಚ ಬೇರೆ). "ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಬರೆಯಿರಿ:— ರಾವ್ ಬ್ರದರ್ಸ್, ಗದಗ

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 8—8—1945ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ನರೆತ ಕೂದಲು

ರಂಗನ್ನು ಉಪಯೋಗಿಸಬೇಡಿರಿ!

ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ. ಆಗ ತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕಪ್ಪಗೆ ನಿಲ್ಲುವುದು. ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವುದು. ಕೆಲವೇ ನರೆತ ಕೂದಲುಗಳಿಗಾದರೆ ರೂ. 2 8-0 ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿಗಾದರೆ ರೂ. 3 8-0ರ ಸೀಸೆ, ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/-ರ ಒಂದು ಸೀಸೆಯನ್ನು ಪಡಕೊಳ್ಳಬೇಕಾಗುವುದು. ಗುಣಕಾರಿಯಲ್ಲವೆಂದು ಪ್ರತಿಪಾದಿಸುವವರಿಗೆ ಇಮ್ಮಡಿ ಕ್ರಯ ವಾಪಾಸು.

ಬಿಳಿ ತೊನ್ನು ಮತ್ತು ಲುಕೊಡ್ರಮು

ಬಿಳಿ ತೊನ್ನು ಮತ್ತು ಲುಕೊಡ್ರಮು (Leucoderma) ಮಹಾ ವ್ಯಾಧಿಗಳನ್ನು ಹೋಗಲಾಡಿಸುವರೆ ಈ ಔಷಧಿಯನ್ನು ಲೇಪಿಸಿರಿ. ನೂರಾರು ಹಕೀಮರೂ, ಡಾಕ್ಟರರೂ, ಕವಿರಾಜರೂ ಅಸಾಧ್ಯನೆಂದು ದೂರೀಕರಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪ್ಯಾ 2 8-0

ಕಿವುಡುತನ

ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ—ಬೆಲೆ ರೂಪಾಯಿ 2/-

ಸ್ತಂಭನ ಮಾತ್ರೆ

ಸಂಜೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರಿಂದುಂಟಾಗುವ ಆನಂದವನ್ನು ಅನುಭವಿಸಿಯೇ ತೀರಬೇಕು. ಕಳೆದುಹೋದ ಮನುಷ್ಯತ್ವವು ವಿದ್ಯುಚ್ಛಕ್ತಿಯೋಪಾದಿಯಲ್ಲಿ ಮರಳಿ ಬರುವುದು. ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ. 16 ಮಾತ್ರೆಗಳಿಗೆ ರೂಪಾಯಿ 1/-

ಪತ್ರವ್ಯವಹಾರ ಇಂಗ್ಲಿಷ್ ವ ಹಿಂದಿಯಲ್ಲಿ.

Chandra Brother,
No. 4, P.O. Katri Sarai (Gaya).

ಮಂಗಳೂರು.

ನೌಕರರುಗಳಿಗೆ ಭತ್ತ, ಅಕ್ಕಿ ಒಪ್ಪಿಸುವ ಅವಧಿ—ದಕ್ಷಿಣಕನ್ನಡ ಜಿಲ್ಲೆಯಲ್ಲಿ ಉಳಿತಾಯ ಭತ್ತ ವ ಅಕ್ಕಿಯನು ಎಸ್. ಕೆ. ಸಿ. ಸಿ. ಸ್ಟೋರ್ಸುಗಳಿಗೆ ಒಪ್ಪಿಸುವ ಅವಧಿಯನ್ನು ಜಿಲ್ಲಾ ಕಲೆಕ್ಟರರು ಈ ರೀತಿ ನಿರ್ಣಯಿಸಿರುತ್ತಾರೆ.

ಹೊಸದುರ್ಗ ಸಬ್ ತಾಲೂಕು "ತನ್ನೂರ" ಮತ್ತು 'ತಪ್ಪ' ತಾರೀಕು 30-9-46, 'ಜನ್ನಲ್' ತಾ. 31-10-46.

ಜಿಲ್ಲೆಯ ಇತರ ಸ್ಥಳಗಳಲ್ಲಿ ಭತ್ತವಾದರೆ ಅರ್ಧಾಂಶ ತಾ. 15-11-46 ಮತ್ತು ಅರ್ಧಾಂಶ ತಾ 30-11-46 ಅಕ್ಕಿಯಾದರೆ ನಾಲ್ಕು ಸಮಕಂತುಗಳಿಂದ ತಾ. 15-11-46- 15-12-46; 15-1- 1947 ಮತ್ತು 31-1-47.

ಮೆಕ್ಕೆ ಜೋಳದ ಕುರಿತು ಇನ್ನೊಂದು ಮಾತು—ಈಗ ರೇಶನ್ ಅಂಗಡಿಗಳಲ್ಲಿ ಮೆಕ್ಕೆ ಜೋಳದ ಇಡೀ ಧಾನ್ಯವನ್ನೇ ಇಡುತ್ತಾರೆ. ಹಿಟ್ಟನ್ನಾಗಲೀ ಸಜ್ಜಿಗೆಯನ್ನಾಗಲೀ ಮಾಡಿ ಇಟ್ಟರೆ ಜನರಿಗೆ ಅನುಕೂಲವಾಗುತ್ತದೆಂದು ಹಲವರು ಹೇಳುತ್ತಾರೆ. ನಮ್ಮ ಜಿಲ್ಲೆಗೆ ಒದಗಿಸಿದ ಮೆಕ್ಕೆ ಜೋಳದಿಂದ ಹಿಟ್ಟನ್ನು ತಯಾರಿಸಿ ರೇಶನ್ ಶಾಪುಗಳಲ್ಲಿ ಒದಗಿಸ ಬೇಕೆಂದು ನಮ್ಮ ಕಲೆಕ್ಟರವರು ಒಂದು ಸಲ ಎಣಿಸಿದ್ದರು ಆದರೆ ಅದಕ್ಕೆ ತಕ್ಕ ಅನುಕೂಲತೆಗಳು ಇಲ್ಲದ್ದರಿಂದಲೂ, ತಯಾರಿಕೆಯ ಖರ್ಚು ಬಹಳವಾಗಬಹುದಾದ್ದರಿಂದಲೂ ಆ ಆಲೋಚನೆಯನ್ನು ಬಿಡಬೇಕಾಯಿತು.—

ಆದರೆ ಮೆಕ್ಕೆ ಜೋಳದಿಂದ ಪ್ರತಿಯೊಬ್ಬನೂ ಮನೆಯಲ್ಲಿಯೇ ಹಿಟ್ಟು ಯಾ ಸಜ್ಜಿಗೆ ತಯಾರಿಸಲಿಕ್ಕೆ ಕಷ್ಟವಿಲ್ಲ-ಜೋಳವನ್ನು ನಾಲ್ಕು ನಿಮಿಷ ತನಕ ನೀರಿನಿಂದ ಒದ್ದೆಮಾಡಿಟ್ಟು ಬಳಿಕ ಒನಕೆಯಲ್ಲಿ ಹಾಕಿ ಕುಟ್ಟಬೇಕು-ಆ ಮೇಲೆ ಅದನ್ನು ಗೇರಬೇಕು. ಹೊರಗಿನ ತೊಗಟೆಹೋಗಿ ಶುಭ್ರವಾದ ಧಾನ್ಯ ಮಾತ್ರ ಉಳಿಯುತ್ತದೆ-ಅದನ್ನು ಒಣಗಿಸಿ ಬೀಸುಕಲ್ಲಿನಲ್ಲಿ ಹಾಕಿ ಅವರಿಗೆ ಬೇಕಾದಂತೆ ಸಣ್ಣರ ಸಜ್ಜಿಗೆಯನ್ನಾಗಲೀ ತೋರ ಸಜ್ಜಿಗೆಯನ್ನಾಗಲೀ ಹಿಟ್ಟನ್ನೂ ತಯಾರಿಸ ಬಹುದು-ತಯಾರಿಸಿದ ಸಜ್ಜಿಗೆ ಯಾ ಹಿಟ್ಟು ಗೋದಿ ಸಜ್ಜಿಗೆಯ ಹಿಟ್ಟಿಗಿಂತಲೂ ನೋಡಲಿಕ್ಕೆ ಅಂದವಾಗಿಯೂ ತಿನ್ನಲಿಕ್ಕೆ ರುಚಿಕರವಾಗಿಯೂ ಇರುತ್ತದೆ-ಶರೀರಕ್ಕೆ ಪುಷ್ಟಿಯನ್ನು ಕೊಟ್ಟು ಆರೋಗ್ಯವನ್ನು ಕಾಪಾಡುವ ಈ ಉತ್ಕೃಷ್ಟ ಧಾನ್ಯವನ್ನು ನಾವು ಸುಮ್ಮನೆ ದೂರಮಾಡಬಾರದು.

ಎಮ್. ವಿ. ಶಂಕರರಾವ್,
ಡಿಸ್ಟ್ರಿಕ್ಟ್ ಸಪ್ಲೈ ಆಫೀಸರ್.

ಮುನ್ಸೀಫರಿಗೆ ವಿದಾಯ—ಇಲ್ಲಿಂದ ಕನ್ನೂರಿಗೆ ವರ್ಗವಾಗಿ ಹೋಗುವ ಡಿಸ್ಟ್ರಿಕ್ಟ್ ಮುನ್ಸೀಫರಾದ ಜನಾಬ್ ಮಹಮ್ಮದ ಹಾಸ್ ಬಹದ್ದೂರ್ ಇವರಿಗೆ ಮಂಗಳೂರು ವಕೀಲ್ ಕ್ಲಾರ್ಕ್ ಎಸೋಸಿಯೇಶನಿನವರು ತಾ. ೧೭-೯-೪೬ನೇ ಸಾಯಂಕಾಲ ಘಂಟೆ ೪ಕ್ಕೆ ಎಸೊಸಿಯೇಶನಿನ ಆಫೀಸಿನಲ್ಲಿ ಒಂದು ವಿದಾಯ ಸತ್ಕಾರ ಏರ್ಪಡಿಸಿದ್ದರು. ಈ ಸತ್ಕಾರಕೂಟಕ್ಕೆ, ಇಲ್ಲಿಗೆ ಮುನ್ಸೀಫರಾಗಿ ಬಂದು ಚಾರ್ಜು ವಹಿಸಿಕೊಂಡಿರುವ ಶ್ರೀ. ವಿ. ರಾಮಸ್ವಾಮಿ ಅಯ್ಯರರೂ ಆಹ್ವಾನಿತರಾಗಿದ್ದರು ಸಭಾಧ್ಯಕ್ಷ ಸ್ಥಾನವನ್ನು, ವಕೀಲ ಶ್ರೀ. ಎಮ್. ಮಾಧವರಾಯರು ವಹಿಸಿದ್ದರು. ಎಸೋಸಿಯೇಶನಿನ ಕಾರ್ಯದರ್ಶಿ ಶ್ರೀ. ಎಮ್. ನಾರಾಯಣ ಭಟ್‌ರವರೂ, ಸದಸ್ಯರಲ್ಲೊಬ್ಬರಾದ ಶ್ರೀ. ಯು. ರಾಮರಾಯ ನಾಯ್ಕರವರೂ, ಆಹ್ವಾನಿತರಲ್ಲೊಬ್ಬರಾದ ಶ್ರೀ. ಕೆ ಬಾಲಕೃಷ್ಣ ರಾವ್ ಅಡ್ವೊಕೇಟ್ ಅವರೂ, ಗುಣಕಥನ ಪರವಾದ ಭಾಷಣಗಳನ್ನು ಮಾಡಿದ ನಂತರ ಅಧ್ಯಕ್ಷ ಭಾಷಣವಾಗಿ ಸಭಾಂತ್ಯವಾಯಿತು. ಆಹ್ವಾನಿತರೆಲ್ಲರಿಗೆ ಚಹಾ ಸತ್ಕಾರವಿತ್ತು.

ಅಕಾಲ ಮರಣ—ಕಳೆದ ಮಹಾ ಸತ್ಯಾಗ್ರಹ ಚಳವಳದಲ್ಲಿ ಮಂಗಳೂರಲ್ಲಿ ನಡೆದ ಪ್ರಚಂಡ ಲಾಠಿ ಪ್ರಹಾರಕ್ಕೆ ಪ್ರಥಮತಃ ತಲೆಯೊಡ್ಡಿ ಮರಣೋನ್ಮುಖರಾಗಿ ಒಂದು ತಿಂಗಳು ಆಸ್ಪತ್ರೆಯಲ್ಲಿದ್ದು ಗುಣಹೊಂದಿ ಬಂದಿದ್ದ ಮೊಗವೀರ ತರುಣ ಹ್ಯೊಗೆ ನಾರಾಯಣ ಕರುಣಾಕರ ಎಂಬವರು ಸಮುದ್ರ ಕೆಲಸಕ್ಕಾಗಿ ಹೋದವರು ಅಕಸ್ಮಾತ್ತಾಗಿ ಬಂದ ಕಡು ತೆರೆಗೆ ದೋಣಿ ಕವಚಿ ಬಿದ್ದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಬಹಳ ಹುಡುಕಿದ ಬಳಿಕ ಮಾರನೆದಿನ ಶವ ಸಿಕ್ಕಿತು. ಮೃತರ ಆತ್ಮಕ್ಕೆ ಶಾಂತಿ ಕೋರುವೆವು.

ಪೇಪರ್ ಕಂಟ್ರೋಲ್ ಇನ್ಸ್‌ಪೆಕ್ಟರ್—ಪಶ್ಚಿಮ ಕರಾವಳಿಯ ಪ್ರದೇಶದ ಪೇಪರ್ ಕಂಟ್ರೋಲ್ ಇನ್ಸ್‌ಪೆಕ್ಟರರಾಗಿ ಶ್ರೀ. ಪಿ. ಟಿ. ಆಳ್ವ, ಬಿ. ಎ. ಬಿ. ಎಲ್. ಇವರು ನೇಮಿಸಲ್ಪಟ್ಟಿರುವರಷ್ಟೆ. ಇವರ ಆಫೀಸನ್ನು ತಾ. ೧೧-೯-೪೬ರಿಂದ, ಕಲ್ಲಿಕೋಟೆಯಿಂದ ಮಂಗಳೂರಿಗೆ (ಬೋಳಾರ) ಒಯ್ಯಲಾಗಿದೆ. ಇನ್ನುಮುಂದೆ ಈ ಆಫೀಸಿಗೆ ಸಂಬಂಧ ಪಟ್ಟ ಪತ್ರವ್ಯವಹಾರವನ್ನು ಬೋಳಾರ, ಮಂಗಳೂರು ಈ ವಿಳಾಸಕ್ಕೆ ಕಳಿಸಬೇಕು.

ನಮ್ಮ ಜಿಲ್ಲಾ ಜಡ್ಜರಾಗಿ—ಮೊದಲಿದ್ದ ಶ್ರೀ. ಕೆ. ಶ್ರೀನಿವಾಸನ್‌ರವರಿಗೆ ಪುನಃ ನಮ್ಮಲ್ಲಿಗೇ ವರ್ಗವಾಗಿ ಚಾರ್ಜು ವಹಿಸಿಕೊಂಡಿದ್ದಾರೆ.

ಇನ್ನೊಂದು ರೈಲು—ಕಳೆದ ಒಂದು ವಾರದಿಂದ ಪ್ರತಿದಿನ ೧೦॥ ಗಂಟೆಗೆ ಇಲ್ಲಿಂದ ಹೊರಟು ಸಂಜೆ ೩ಗಂಟೆಗೆ ಹಿಂದೆ ಬರುವ ಒಂದೇ ಪೆಸೆಂಜರ್ ರೈಲು ಚಲಾವಣೆಯಲ್ಲಿತ್ತಷ್ಟೆ. ಮೊನ್ನೆಯಿಂದ, ವಿದ್ಯಾರ್ಥಿಗಳ ಬಗ್ಗೆಗಿ ಸಂಜೆ ಹೊರಟು ಮುಂಜಾನೆ ಇಲ್ಲಿಗೆ ತಲಪುವ ರೈಲೂ ಆರಂಭವಾಗಿದೆ

ನಗರದ ತೋಟಿ—ಮತ್ತು ಜಾಡಮಾಲಿಗಳು, ಮುಷ್ಕರ ಹೂಡುವ ನೋಟೀಸು ಕೊಟ್ಟಿದ್ದರಷ್ಟೆ. ಸದ್ಯ ಈ ನೋಟೀಸನ್ನು ಹಿಂತೆಗೆದುಕೊಳ್ಳಲಾಗಿದೆ.

ಮುಷ್ಕರ—ಸ್ಥಳೀಯ "ನವಭಾರತ" ಮುದ್ರಣಾಲಯದ ಪ್ರೆಸ್ ಕೆಲಸಗಾರರು ಕಳೆದ ತಾ. ೯ರಿಂದ ಕೆಲಸಗಾರರನ್ನು ತೆಗೆದುಹಾಕಿದುದಕ್ಕಾಗಿ ಮತ್ತು ಬೋನಸ್ ಕೊಡದುದಕ್ಕಾಗಿ ಮುಷ್ಕರ ಹೂಡಿದ್ದಾರೆ. ಪ್ರೆಸ್ಸಿನ ಗೇಟಿನ ಮುಂದೆ ಕೆಂಪು ಧ್ವಜ ಹಿಡಿದು ಪಿಕೆಟ್ ನಡೆಸಲಾಗುತ್ತಿದೆ. ಆದರೆ, 'ನವಭಾರತ' ದೈನಿಕವು (ಪುಟಗಳನ್ನೂ ಹೆಚ್ಚಿಸಿ) ಕ್ರಮದಂತೆ ಪ್ರಕಟವಾಗುತ್ತಿದೆ. ಪ್ರೆಸ್ಸಿನ ಮುಂದುಗಡೆ ಪಿಕೆಟ್ ನಡೆಸುವವರು, ಧ್ವನಿವರ್ಧಕ ಕೊಳವೆಗಳ ಮೂಲಕ ಮುಷ್ಕರ ಮಾಡುವವರಿಗೆ ಉತ್ತೇಜನ ಕೊಡುತ್ತಿದ್ದಾರೆ. ಪ್ರೆಸ್ಸಿನೊಳಗಿಂದ ಇದಕ್ಕೆ ಪ್ರತಿಯಾದ ಘೋಷಣೆಗಳನ್ನು ಧ್ವನಿವರ್ಧಕದ ಮೂಲಕ ಸಾರಲಾಗುತ್ತಿದೆ.

ಕಾಸರಗೋಡು ಫಿರ್ಕಾ ಗ್ರಾಮೋದ್ಯೋಗಸ್ಥರ—ಸಭೆಯು ದೇಶಭಕ್ತ ಕಾರ್ನಾಡ ಸದಾಶಿವರಾವ್ ಧರ್ಮಾರ್ಥ ವಾಚನಾಲಯದಲ್ಲಿ ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ಒಂದು ಸಂಘವನ್ನು ಸ್ಥಾಪಿಸಲಾಯಿತು.

ಧಾರವಾಡ

ಗ್ರಾಮೋದ್ಯೋಗ ಪ್ರದರ್ಶನ—ವು ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ವತಿಯಿಂದ ಈ ಬಾರಿ ಹುಬ್ಬಳ್ಳಿಯಲ್ಲಿ ದೀಪಾವಳಿ ಬಿಡುವಿನ ಸಮಯ ಜರಗಲಿರುವುದು. ಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು ಮುಂಬಯಿ ಮಂತ್ರಿಗಳಾದ ಶ್ರೀ ವೈಕುಂಠಭಾಯಿ ಮೆಹತಾರವರು ನೆರವೇರಿಸಲು ಒಪ್ಪಿರುವರು ನಿಶ್ಚಿತ ತಾರೀಕು ಇತ್ಯಾದಿ ಮಾಹಿತಿಯನ್ನು 'ಸಂಚಾಲಕ ಗ್ರಾಮೋದ್ಯೋಗ ಪ್ರದರ್ಶನ, ಧಾರವಾಡ' ಅವರಿಂದ ಪಡೆಯಬಹುದು.

ಶ್ರೀ ಭಗವತಿ ನೃತ್ಯ ಕಲಾ ಮಂಡಳಿ, ಮುಂಬೈ—ಇದರ ಮಹಾ ಸಭೆಯು ಕಾರ್ಯಕಾರಿ ಮಂಡಲಕ್ಕೆ ಕೊಟ್ಟ ಅನುಮತಿ ಪ್ರಕಾರ ತಾ 9-9-46ರಲ್ಲು ಸೇರಿದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 6 ಜನ ಯುವಕರಿಗೆ ಹಾರ್ಮೋನಿಯಮ್ ಅಭ್ಯಾಸವನ್ನೂ, ನಾಲ್ವರಿಗೆ ತಬ್ಲಾ ವಾದನವನ್ನೂ, ನಾಲ್ವರಿಗೆ ನರ್ತನವನ್ನೂ, ಮಂಡಳಿಯ ಖರ್ಚಿನಿಂದ ಕಲಿಸಿಕೊಡುವ ಬಗ್ಗೆ ಯೋಗ್ಯ ಶಿಕ್ಷಕರನ್ನು ನೇಮಿಸಲಾಗಿದೆ.

ಮದ್ರಾಸ್ ನಗರದಲ್ಲಿ ಕನ್ನಡ ಶಾಲೆಗಳು—ಮದ್ರಾಸಿನ ಡಾಕ್ಟರ್ ಎಚ್. ಎಮ್. ರಾಯರು ಮದ್ರಾಸ್ ನಗರದಲ್ಲಿ ಕನ್ನಡ ಶಾಲೆಗಳ ಕುರಿತು ನಮಗೆ ಬರೆದ ಪತ್ರದ ಸಾರಾಂಶ ಹೀಗಿದೆ: ಕರ್ನಾಟಕಪ್ರಾಂತ ರಚನೆಯು ಬೇಗನೆ ಆಗಲಿರುವುದರಿಂದಲೂ ಶಾಲೆಗಳಲ್ಲಿ ಕನ್ನಡ ಭಾಷೆಯೇ ಪ್ರಧಾನ ಶಿಕ್ಷಣ ಭಾಷೆಯಾಗಿರುವುದರಿಂದಲೂ ನಗರದ ಕನ್ನಡಿಗರು ಕನ್ನಡ ಶಾಲೆಗಳ ಕುರಿತು ತೀವ್ರ ನಿಗಾಕೊಡಬೇಕಾಗಿದೆ. ನಗರದಲ್ಲಿ ಎರಡು ಯಾ ಮೂರು ಕನ್ನಡ ಪ್ರಾಥಮಿಕ ಶಾಲೆಗಳು ಬೇಗನೆ ಸ್ಥಾಪಿಸಲ್ಪಡುವುದಾಗಿಯೂ ಒಂದೆರಡು ಹೈಸ್ಕೂಲುಗಳಲ್ಲಿ ಕನ್ನಡ ಶಾಖೆಯು ಸಹಾ ತೆರೆಯಲ್ಪಡಲಿರುವುದರಿಂದಲೂ ಕನ್ನಡ ವಿದ್ಯಾರ್ಥಿಗಳೂ ಅವರ ಹೆತ್ತವರೂ ಈ ಕೆಳಗಿನ ಮಾಹಿತಿಯನ್ನು ಕೂಡಲೇ ಡಾ. ರಾಯರಿಗೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿದೆ—

(1) ವಿದ್ಯಾರ್ಥಿಯ ಹೆಸರು, ಪ್ರಾಯ, ವಿಳಾಸ. (2) ಶಾಲೆಯ ಹೆಸರು ಮತ್ತು ಕಲಿಯುವ ತರಗತಿ. (3) ಮುಂದಿನ ಶಿಕ್ಷಣವನ್ನು ಹೊಂದಲಪೇಕ್ಷಿಸುವ ಕೇಂದ್ರ ಯಾ ಶಾಲೆಯ ಹೆಸರು. (4) ಸ್ಕಾಲರ್ ಶಿಪ್ ಹೊಂದಲು ಬೇಕಾದ ಅರ್ಹತೆ.



ಕ್ಷಣಿಕ ಗುಣಕೊಡುವ ಔಷಧದ ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಆದು ದಮ್ಮನ್ನು ಬರೇ ದಮುಕ್ಕಿ ಇಡದೆ ಅದನ್ನು ಬೇರುಸಹಿತ ಕಿತ್ತು ಒಗೆಯುವುದು. ಈ ಔಷಧ ಸುರುವು ಮಾಡಿದಾಗಲೇ, ಕೆಮ್ಮೂ ತೀಕೂ ನಿಲ್ಲುವವು; ಹೊಟ್ಟೆ ವಶವಾಗುವದು, ಪಚನಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವುವು. ಆ ಮೇಲೆ ದಮ್ಮರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೀಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೪ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿಗೆ ಕ್ರಮವಾಗಿ ರೂ.೩-೬-೦; ೫-೧೨-೦ ಮತ್ತು ೧೦-೦ ೦

ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಸ್ಟಾಕಿಸ್ಟರು. ಪೊಪ್ಯುಲರ್ ಸ್ಟೋರ್ಸ್, ಮಂಗಳೂರು; ಟಿ. ಸಿ. ನಟರಾಜನ್ ಕೊ., ಮೈಸೂರು.

ಮುಂಬಯಿ ಸೋಲ ಏಜಂಟರು:-

ವನಮಾಲೀ ಭಿಕಾ ಮತ್ತು ಕಂಪನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ ೨.

PUROHIT SHWAS-HARI

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ

Indra Bhavan Coffee Hotel,
Balmatta Road, Mangalore.

ದಿ ಆರ್ಯನ್ ಚಾಂಪಿಯನ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ:
7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲಿ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶೂರೆನ್ಸ್ ಕಂಪೆನಿಯಿದು.

ಚೆಯರ್‌ಮನ್.
ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯ ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿ ಕೊಡುವೆವು. ವಿಶೇಷ ಅನುಭವಗಳಿಗಾಗಿ

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ ಸೀತಾರಾಮ ಶೆಟ್ಟಿ, ಎಸ್ಕ್ವೈಯರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

ಸ್ವೀಕಾರ–ವಿಮರ್ಶೆ

೨೮. **ಸಮತಾವಾದ:**—ಮೂಲ ಲೇಖಕರು: ಎಮಿಲ್ ಬರ್ನ್ಸ್, ಅನುವಾದಕರು: ಶ್ರೀ. ಕುಳುಕುಂದ ಶಿವರಾಯರು. ಪ್ರಕಾಶಕರು: ಜನತಾ ಸಾಹಿತ್ಯ, ಬೆಂಗಳೂರು ನಗರ, ಕ್ರೌನ್ ಆಕಾರದ ಪುಟಗಳು: ೮೯, ಬೆಲೆ: ೧ ರೂಪಾಯಿ.

ಮಾರ್ಕ್ಸವಾದ ವೆಂದರೇನೆಂದು ವಿವರಿಸಿ, ಮಾರ್ಕ್ಸವಾದಿಗಳ ದೃಷ್ಟಿ ಕೋನವನ್ನು ಸಾಮಾನ್ಯ ಜನತೆಗೆ ಸ್ಪಷ್ಟ ಪಡಿಸುವ ಉದ್ದೇಶದಿಂದ ಬರೆಯಲ್ಪಟ್ಟ ಗ್ರಂಥವಿದು. ಎಮಿಲ್ ಬರ್ನ್ಸ್ ಅವರ 'what is Marxism?' ಎಂಬ ಪುಸ್ತಕದ ಭಾಷಾಂತರವಾಗಿದೆ. ಕನ್ನಡದಲ್ಲಿ, ಈ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು ತೀರ ವಿರಳವಾದುದರಿಂದ ಅನುವಾದದ ಕೆಲಸವು ತುಸು ಕಷ್ಟವೆಂಬುದನ್ನು ಒಪ್ಪಲೇಬೇಕು. ಶ್ರೀ. ಶಿವರಾಯರು ತಾನು ಹಿಡಿದ ಈ ನೂತನ ಉದ್ಯಮದಲ್ಲಿ ಸಂಪೂರ್ಣ ಯಶಸ್ವಿಯಾಗಿದ್ದಾರೆಂದು ಹೇಳಲಿಕ್ಕಾಗದಿದ್ದರೂ, ಅನುವಾದವು ತಕ್ಕಮಟ್ಟಿಗೆ ಸರಲವಾಗಿದೆ. ಮುದ್ರಣವು ಚೆನ್ನಾಗಿದೆ.

೨೯ **ಸ್ವಾತಂತ್ರ್ಯವೀರ ಸಾವರ್ಕರರು:**— ಹಿಂದೀ ಮೂಲಲೇಖಕರು: ಪಂಡಿತ ಚಂದ್ರಗುಪ್ತ ವೇದಾಲಂಕಾರ ಕನ್ನಡಿಸಿದವರು: ಶ್ರೀಮತಿ ಇಂದಿರಾಬಾಯಿ, ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ. ಪುಟಗಳು ೧೧೦, ಬೆಲೆ, ೧-೪-೦,

ಹಿಂದೂ ಮಹಾಸಭೆಯ ಸೂತ್ರ ಚಾಲಕರಾಗಿ "ಜನನಾಯಕ" ಪದವಿಗೇರಿರುವ ಅಸಾಮಾನ್ಯ ದೇಶ ಪ್ರೇಮಿ ಹಾಗೂ ಸ್ವಾತಂತ್ರ್ಯವೀರ ಸಾವರಕರರ ಸಂಕ್ಷಿಪ್ತ ಜೀವನ ಚರಿತ್ರೆಯಿದು. ಮೂಲದಲ್ಲಿ ಬರೆದವರು–"ಚಿಕ್ಕಸಾವರಕರ"ರೆಂದು ಪ್ರಖ್ಯಾತರಾದ, ಸಾವರ್ಕರರ ಅನುಯಾಯಿ ಚಂದ್ರಗುಪ್ತ ವೇದಾಲಂಕಾರರು. ಮೊದಲಿನ ಅಧ್ಯಾಯಗಳಲ್ಲಿ, ಸಾವರಕರರ ವಂಶಪರಿಚಯ, ಶೈಶವ, ವಿದ್ಯಾರ್ಥಿ ಜೀವನಗಳು ವರ್ಣಿತವಾಗಿವೆ. ಅನಂತರದವುಗಳಲ್ಲಿ, "ಅಭಿನವ ಭಾರತ"ದ ನಿರ್ಮಾಣ ಮತ್ತು ಲಂಡನಿನಲ್ಲಿದ್ದುಕೊಂಡು ದೇಶವಿದೇಶಗಳಲ್ಲಿ ನಡೆಯುಸಿದ್ದ ಕ್ರಾಂತಿ ಚಳವಳದ ಪರಿಚಯವಿದೆ. ಲಂಡನಿನಲ್ಲಿ ಬಂಧನಕ್ಕೊಳಗಾಗಿ, ಸ್ವದೇಶಕ್ಕೆ ಒಯ್ಯಲ್ಪಡುವಾಗ ಸಮುದ್ರತರಣ ಮಾಡಿದ ಸಾಹಸದ ಕಾರ್ಯವು ಅತ್ಯಂತ ರೋಮಾಂಚಕಾರಿಯಾಗಿದೆ ಆ ಮೇಲಿನ ಅಧ್ಯಾಯಗಳಲ್ಲಿ, ಶ್ರೀ. ಸಾವರಕರರು ಅಂಡಮಾನಿನಲ್ಲಿ ಅನುಭವಿಸಿದ ನರಕ ಸಂಕಷ್ಟಗಳು ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿವೆ. ಒಟ್ಟನಲ್ಲಿ, ಜೀವನಚರಿತ್ರೆಯೆಂದನ್ನು ಪ್ರತಿಯೋರ್ವ ಭಾರತೀಯನೂ ಓದಲೇ ಬೇಕು, ಅನುವಾದವು ಸರಲವಾಗಿದೆಯಾದರೂ, ಮತ್ತಷ್ಟು ಪರಿಷ್ಕೃತವಾಗಿದ್ದರೆ ಪುಸ್ತಕವು ಪಠ್ಯಪುಸ್ತಕವಾಗಲು ಯೋಗ್ಯವಾಗುತಿತ್ತು.

೩೦. **ಗ್ರಾಮಾಭಿವೃದ್ಧಿ ಸಂಘ, ಮೂಲ್ಕಿ:**—ಇದರ ವರದಿ, ಮತ್ತು ಆಯವ್ಯಯ ಪಟ್ಟಿ, (೧೯೪೫ರ ಫೆಬ್ರವರಿಯಿಂದ ೧-೯-೪೬ರ ವರೆಗೆ)

ಹಳ್ಳಿಗರ ಆರ್ಥಿಕ, ಸಾಮಾಜಿಕ ಮತ್ತು ಆರೋಗ್ಯ ಜೀವನಗಳ ಮಟ್ಟವನ್ನು ಏರಿಸುವ ಸದುದ್ದೇಶದಿಂದ, ಮೂಲ್ಕಿ ಮತ್ತು ಅದರ ಸುತ್ತುಮುತ್ತಲಿನ ೩೮ ಹಳ್ಳಿಗಳ ಸುಧಾರಣೆಯ ಬಗ್ಗೆ ರಚಿತವಾದ ಈ ಸಂಘವು, ಈ ವರೆಗೆ ಹಳ್ಳಿಗಳಲ್ಲಿ ಕೃಷಿ, ನೀರಾವರಿ ಗುಡಿಕೈಗಾರಿಕೆ, ಶಿಕ್ಷಣ, ಆರೋಗ್ಯ ಮುಂತಾದ ಜೀವನದ ವಿವಿಧ ಅಂಗಗಳ ಕುರಿತಾಗಿ ತನ್ನಿಂದ ಸಾಧ್ಯವಾದಷ್ಟು ಉದ್ಧಾರ ಕಾರ್ಯವನ್ನು ಕೈಕೊಂಡು, ಇತರ ಹಳ್ಳಿಗಳಿಗ ಮಾದರಿ ಪ್ರಾಯವಾಗಿದೆ. ಕಳೆದ ಒಂಬಾವರ ವರ್ಷದೊಳಗೆ ಒಂದು ಪ್ರದರ್ಶನ, ಎರಡು ಸಸಿ ದಿನಾಚರಣೆಗಳು, ಕಾರ್ಯಕ್ರಮವನ್ನು ಸಾಧಿಸಿದೆ. ಮುಂದಕ್ಕೆ ಸಮಾಜ ಸುಧಾರಣ, ಹಳ್ಳಿಗರ ಮನೋರಂಜನೆ ಮೊದಲಾದ ಇತರ ಕಾರ್ಯಗಳನ್ನೂ ಮಾಡುವ ಘನವಾದ ಸದುದ್ದೇಶವೂ ಸಂಘದ ಮುಂದಿದೆ. ಸಂಘಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರುತ್ತೇವೆ, ಅಲ್ಲದೆ ಸಂಘದ ಉತ್ಸಾಹೀ ಮುಂದಾಳು ಶ್ರೀ ಎಮ್. ಆರ್. ಪೂಂಜ, ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ಬೊಂಬಾಯಿ ಲೈಫ್ ಇನ್ಸೂರೆನ್ಸ ಕಂಪೆನಿ, ಲಿಮಿಟೆಡ್:—ಇದರ ೧೯೪೫ನೆಯ ಡಿಸಂಬರಕ್ಕೆ ಅಂತ್ಯವಾಗುವ ವರ್ಷದ ವರದಿ. ಕಳೆದ ೩೭ ವರ್ಷಗಳಿಂದ ಭಾರತೀಯ ವಿಮಾಕ್ಷೇತ್ರದಲ್ಲಿ ಅವಿಚ್ಛಿನ್ನವಾಗಿ ಜನತಾ ಸೇವೆಯನ್ನು ಮಾಡುತ್ತಾ ಬಂದಿರುವ ಈ ಕಂಪೆನಿಯು ವರದಿಯ ವರ್ಷದಲ್ಲಿ ತುಂಬ ಪ್ರಗತಿಯನ್ನು ಹೊಂದಿರುವುದು ಸಂತೋಷಕರ. ೧೯೪೪ನೆಯ ವರ್ಷಕ್ಕಿಂತ ಈ ವರ್ಷದಲ್ಲಿ ಸುಮಾರು ೨೫ಲಕ್ಷ ರೂ. ಯ ವಿಮೆಯೊತ್ತದ, ೧೦೭೬ ವಿಮಾಪತ್ರಗಳು ಹೆಚ್ಚಿಗೆ ಪೂರ್ಣವಾಗಿವೆ. ವಿಮಾ ಕಂತುಗಳಿಂದ ದೊರೆತ ಉತ್ಪತ್ತಿಯಲ್ಲಿಯೂ ಸುಮಾರು ೮ಲಕ್ಷ ರೂ ಯ ಅಭಿವೃದ್ಧಿಯಿದೆ. ಉದ್ಯಮವು ತುಂಬಾ ವಿಸ್ತರಣ ಹೊಂದಿದೆಯಾದರೂ ಪುನರ್ವ್ಯಯ ಪ್ರಮಾಣ (renewal expense ratio) ವು ಹೆಚ್ಚಾಗಿಲ್ಲದಿರುವುದು ಪ್ರಶಂಸಾರ್ಹ. ಅಲ್ಲದೆ, ವರದಿಯ ವರ್ಷದಲ್ಲಿ ಸರ್ವತೋಮುಖವಾದ ಯಶಸ್ಸನ್ನು ಪಡೆದಿರುವ ಕಂಪೆನಿ, ಹಾಗೂ ಅದರ ದಕ್ಷಿಣ ಭಾರತದ ಚೀಫ್ ಏಜಂಟರುಗಳಾದ ಕೊಚ್ಚಿಕಾರ್ ಬ್ರದರ್ಸ್ ಅವರನ್ನು ಅಭಿನಂದಿಸಿ, ಬಾಕಿ ವರ್ಷದಲ್ಲಿಯೂ ಇದಕ್ಕಿಂತ ಮಿಗಿಲಾದ ಪ್ರಗತಿಯನ್ನು ಹೊಂದಲೆಂದು ಹಾರೈಸುತ್ತೇವೆ.

ಕೆ. ವಿ. ಎಸ್.

ದಕ್ಷಿಣ ಕನ್ನಡ

ಶಿರ್ವ–ಇತ್ತೀಚೆಗೆ ದಯಾಳು ಸರಕಾರದವರು ಬಂಜರು ಬಿದ್ದಿರುವ ಸರಕಾರಿ ವ ಇತರ ಯಾವುದೇ ಸ್ಥಳಗಳಲ್ಲಿ ಹೆಚ್ಚು ಆಹಾರದ ಬೆಳೆಗಳನ್ನು ಬೆಳೆಯಿಸಬೇಕೆಂತಲೂ ಹಳ್ಳಿಗಳಲ್ಲಿ ಹೆಚ್ಚಿನ ಜನರಿಗೆ ಈ ಕುರಿತು ಪ್ರೋತ್ಸಾಹ ಕೊಡಬೇಕೆಂತಲೂ ಸಂಬಂಧಪಟ್ಟ ಉದ್ಯೋಗಸ್ಥರು ಅಲ್ಲಲ್ಲಿ ಸಂಚರಿಸಿ ಈ ಮುಂಚೆಯೇ ಪ್ರಚುರಪಡಿಸಿರುವರು. ಅಲ್ಲದೆ ಆ ಬಗ್ಗೆ ಸದ್ರಿ ಸ್ಥಳಗಳಮೇಲೆ ಯಾವತ್ತೂ ಕರಕಂದಾಯಗಳನ್ನು ಹೊರಿಸಲಾಗುವುದಿಲ್ಲವೆಂತಲೂ ಸಾರ್ವಜನಿಕ ಸಭೆಗಳಲ್ಲಿ ಸಾರಿರುವರು

ನಮ್ಮ ಶಿರ್ವದಿಂದ ಹಾದು ಹೋಗುವ ಡಿಸ್ಟ್ರಿಕ್ಟ್ ಬೋರ್ಡಿನ ರಾಜ ರಸ್ತೆಯ ಪಕ್ಕಗಳಲ್ಲಿ ನಾವು ಗೆಣಸು, ಮೆಣಸು, ರಾಗಿ ಮೊದಲಾದುವುಗಳನ್ನು ಅಲ್ಪ ಸ್ವಲ್ಪವಾಗಿ ಬೆಳೆಯಿಸಿರುವೆವು. ಬೆಳೆಯು ಕೊಯ್ಲಿಗೆ ಬರುವ ಈ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿಗೆ ಚಿತ್ತೈಸಿ ತಮಗೆ ಯುಕ್ತಕಂಡ ರೀತಿಯಲ್ಲಿ ಕರಕಂದಾಯಗಳನ್ನು ಹೊರಿಸಿ ಹೆಚ್ಚಿನವರಿಂದ ವಸೂಲಿಮಾಡಿರುವರು. ಈ ತರದ ವರ್ತನೆಯಿಂದ ಕೃಷಿಕರನ್ನು ಪ್ರೋತ್ಸಾಹಿಸುವ ಬದಲಾಗಿ ಕೃಷಿಗೆ ಹಾನಿಯನ್ನು ಬಯಸಿದಂತಾಗುವುದು.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇನ್ನುಮುಂದಕ್ಕಾದರೂ ಇಂತಿಷ್ಟು ಸ್ಥಳಕ್ಕೆ ಇಂತಿಷ್ಟೇ ಕರಕಂದಾಯವೆಂತ ಮುಂದಾಗಿ ನಮಗೆ ತಿಳಿಸಬೇಕಾಗಿಯೂ ಹಾಗೆ ತಿಳಿಸದಿದ್ದಲ್ಲಿ ಬರುವ ವರ್ಷಕ್ಕೆ ಈ ರೀತಿಯ ಕೃಷಿಗೆ ಕೈ ಹಚ್ಚುವುದಿಲ್ಲವೆಂತಲೂ ಬಿನ್ನವಿಸಿಕೊಳ್ಳುವ— ಮಾತಿಗೆ ಮರುಳಾದ ಕೃಷಿಕ.

ಕಟಪಾಡಿ-ಶ್ರೀ ನಾರಾಯಣಗುರು ಪರಮಹಂಸರ ಜಯಂತಿ ಮಹೋತ್ಸವವು, ತಾ 10 9 46ರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ ಕಟಪಾಡಿ. ಇದರ ಭವನದಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ. ಗುರುದೇವನ ಭಕ್ತ ಮಂಡಳಿಯವರಿಂದ ಸರ್ವ ಬಿರುದಾವಳಿ, ಜಯಘೋಷದೊಂದಿಗೆ ಗುರುಪಟ ಮೆರವಣಿಗೆ ಮಾಡಲಾಯಿತು. ಅಲ್ಲಲ್ಲಿ ಸದ್ಭಕ್ತರು ಫಲ ಪುಷ್ಪಾದಿ ಹಣ್ಣುಕಾಯಿಗಳನ್ನು ಅರ್ಪಿಸಿದರು. ಶ್ರೀ, ಗುರುದೇವನ ಚರಿತ್ರೆ ಹಾಗೂ ಗುರು ತತ್ವಗಳ ಕುರಿತು ಶ್ರೀ. ಯು, ದಾದು ಮಾಸ್ತರರು, ವೈ. ವೆಂಕಪ್ಪಮಾಸ್ತರ್, ಕೆ, ದೇಜು ಮಾಸ್ತರ್, ಇವರ ಭಾಷಣಗಳಾದ ತರುವಾಯ ನೆರೆದ ಸಭಿಕರಿಗೆ, ಸ್ವಾಮಿಯ ಆಶೀರ್ವಾದವನ್ನು ಬಯಸಿ, ಶ್ರೀ ಗುರುಪೂಜೆಯ ಪ್ರಸಾದ ಸ್ವೀಕಾರದೊಂದಿಗೆ ಸಭೆಯು ಅಂತ್ಯವಾಯಿತು.

ಇದೇ ತಾರೀಕು 4—9—1946ರಂದು ಕಟಪಾಡಿಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಮತ್ತು ಹೈಸ್ಕೂಲಿನ ಅಧ್ಯಾಪಕ ವಿದ್ಯಾರ್ಥಿಗಳು ದಿವಂಗತ ಪಾಂಗಾಳ ಶ್ರೀನಿವಾಸ ನಾಯಕರ ಸ್ಮಾರಕದಿನವನ್ನು, ಎಡ್ವೋಕೇಟ್ ಶ್ರೀ. ಎಚ್. ರಮಾನಾಥ ಪೈ, ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಿದರು. ಪ್ರಾರ್ಥನೆಯ ಬಳಿಕ ಹಾ. ಎ. ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಯು. ಆರ್. ನಾಯ್ಕರು ವರದಿಯನ್ನೋದಿದರು. ಶ್ರೀಗಳಾದ ಕೆ. ಆರ್. ಶೆಣೈ, ಕೆ. ಅನಂತರಾಮ ಭಟ್, ಮಾರ್ಸೆಲ್ ಅಲ್ವ, ಮತ್ತು ಕೆ, ಕೃಷ್ಣಾಪುರಕಾಲರು ದಿವಂಗತ ನಾಯಕರು ಶಾಲೆಗೆ ಮಾಡಿದ ಸೇವೆಯನ್ನು ಪ್ರಶಂಸಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಅನಂತರ ಆರುಭಾಷಣ ಸ್ಪರ್ಧೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಲಾಯಿತು. ಅಧ್ಯಕ್ಷರು, ದಿವಂಗತ ನಾಯಕರ ನಿಸ್ವಾರ್ಥ ಸೇವೆ, ಹಾಗೂ ಶಾಲೆಗಳ ಅತ್ಯುತ್ತಮ ಅಭಿವೃದ್ಧಿಯನ್ನು ಕೊಂಡಾಡಿ, ಸುಂದರವಾದ ಭಾಷಣಮಾಡಿದರು. ವಿವಿಧ ವಿನೋದಾವಳಿ, ಧನ್ಯವಾದಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಮೂಲ್ಕಿ–ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಇದೇ ಕಳೆದ ತಾ 10ರಲ್ಲು ಬ್ರಹ್ಮಶ್ರೀ ನಾರಾಯಣಗುರುಸ್ವಾಮಿಯವರ ಜನ್ಮದಿನಾಚರಣೆಯು ಮುಲ್ಕಿ ಸಬ್ ರಜಿಸ್ಟ್ರಾರರಾದ ಶ್ರೀ ಎ ಸೀತಾ ರಾಮರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಈ ಸಮಾರಂಭದ ಯಾವತ್ತೂ ವೆಚ್ಚವನ್ನು ವಹಿಸಿದ ಶ್ರೀ ಡಿ. ಕೊರಗ್ಗ ಮಾಸ್ತರರ ಮನೆಯ ಕೋಟಿ ಭಜನಾ ಮಂದಿರದಿಂದ ಮೆರವಣಿಗೆಯು ಜನಸ್ತೋಮದಿಂದ ತುಂಬ ಹೊಂಪಿತು. ಶ್ರೀಗಳಾದ ಎಂ. ಕೆ. ಎಲ್ಲಪ್ಪಯ್ಯ. ಬಾಬು ಶ್ರೀ ಕೆ. ವಿಟ್ಠಪ್ಪ. ಬಿ. ಎ. ಎಲ್ ಟಿ. ಯವರು ಉಚಿತ ಭಾಷಣಗಳನ್ನುಮಾಡಿದರು. ಅಧ್ಯಕ್ಷರು ಚಿಕ್ಕ ಹಾಗೂ ಚೊಕ್ಕ ಭಾಷಣಪತ್ತ ಮೇಲೆ ಶ್ರೀ ಗುರು ಪೂಜೆಯಾಗಿ ಪ್ರಸಾದ ಹಂಚಿ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಸಭೆ ಚದರಿತು.

1 ರೂಪಾಯಿಗೆ 10 ಪುಸ್ತಕಗಳು

(ಟಪ್ಪಾಲು ಖರ್ಚು ಫ್ರೀ)

(1) ನಾಟಕಕತೆಗಳು 0-3-0; (2) ಬಾಲಕಾವ್ಯ 0-3-0; (3) ಚಲಚ್ಚಿತ್ರ ಪದ್ಮಾವತಿ 0-3-0; (4) ವೀರ ಭೂಮಿ 0-2-0; (5) ಪಂಡಿತರ ಪತ್ನಿ 0-2-0 (6) ಅಡ್ಡ ಬೆಳೆದ ಗಿಡ್ಡಿಯ ಮದುವೆ 0-2-0 (7) ಮುದುಕನ ಹೆಂಡ್ತಿ ಛತ್ರಪತಿ ರಾಣಿ 0-2-0 (8) ಬಂಗಾರ್ದಂಗಿದ ಕತೆ 0-1-0; (9) ಏಕಾಂತ ರಾಮಾಯಣ 0-1-0; (10) ಭಾರತ ಗೀತಾಂಜಲಿ 0-2-0; ಒಂದು ರೂಪಾಯಿ ಮನಿ ಆರ್ಡರು ಮಾಡಿದವರಿಗೆ ಯಾ ಒಂದು ರೂಪಾಯಿಯ ಸ್ಟಾಂಪು ಯಾ ಒಂದು ರೂಪಾಯಿಯ ಪೋಸ್ಟಲ್ ಆರ್ಡರ್ ಕಳಿಸಿದವರಿಗೆ ಮೇಲಿನ 10 ಪುಸ್ತಕಗಳನ್ನು ಬುಕ್ ಪೋಸ್ಟ್ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಟೊಣ್ಣನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿಟಿ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಂತಹ ಔಷಧ ಕೊಡಲಾಗುತ್ತದೆ, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು:- ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುರತಿಬಾಗ್ ರೋಡ್, ಡ, ಎ. ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

(೩ನೇ ಪುಟದಿಂದ)

ಹಿಪಾಕ್ರಿಟ್ಸ್ ಇದಾರೆಯೇ? ನಾವು ಎಂತಹ ಹಿಪಾಕ್ರಿಟ್ಸ್ ಎಂಬುದನ್ನು ಈ ಮೊದಲು ನಮ್ಮ ನಾಡಿನಲ್ಲಿ ತಿಳಿವು ಬೆಳಕನ್ನು ಹರಡಿದ ದೊಡ್ಡವರ ಮಾತನ್ನು ಎಲ್ಲಿಯವರೆಗೆ ನಡೆಸಿಕೊಂಡು ಬಂದಿದೇವೆ ಎಂದು ನೆನೆದರೆ ಸಾಲದೆ? ಆದರೆ ನಮಗೆ ಹೆಮ್ಮೆಯುಂಟು: ವೇಮನ, ನಂದನಾರ್, ಬಸವಣ್ಣ, ಕನಕ, ನಾರಾಯಣ ಗುರುಗಳನ್ನು ಕಂಡನಾಡು ನಮ್ಮದು; ಆದುದರಿಂದ ನಾವು ತಿಳಿದವರು, ಬೆಳಕು ಕಂಡವರು!

ಈ ತಿಳಿವು ಕಂಡ ನಾಡಿನಲ್ಲಿ ಬಾಪೂಜಿ ತಿಳಿವಿನ ಅರಕೆಯೇ ಮೆರೆವುದನ್ನು ಕಂಡು ದುಕ್ಕಿಸಿದರು; ಬೆಳಕುಪಡೆದ ಈ ನಾಡಿನಲ್ಲೆಲ್ಲ ಕತ್ತಲೆ ಹರಡಿರುವುದನ್ನು ಕಂಡು ಕೊರಗಿದರು. ದಿಟವೆಂದು ಸಟೆಯಾಡುವವರ ಹೊಲೆತನವನ್ನು ಕಂಡು ಹೇಸಿದರು. ಹೊಲೆಯರೆಂದು ತನ್ನವರನ್ನು ಹೊರಗಿಡುವವರ ಹೊಲೆತನವನ್ನು ಕಂಡು ಕಂಗಾಲಾದರು. ಇದು ತಿಳಿವಿನಾಗರ, ತವರ್ಮನೆ!

'ನಾನು ಹಿಂದೂ ಜಾತಿಯಲ್ಲಿ ಹುಟ್ಟಿದೇನೆ. ನನ್ನದು ಹಿಂದೂ ಧರ್ಮ' ಎಂದು ಬಾಪೂಜಿ ಹೇಳುತ್ತಾರೆ; ತನ್ನ ಜಾತಿಯ ಕುರಿತು ಹೀಗಂದರು:' ಹಿಂದೂ ಜಾತಿಯ ಒಳ್ಳೆಯ ಹೆಸರು ಮುಟ್ಟು ಮೈಲಿಗೆ ಹಿಡಿದು ಹಾಳಾಯಿತು. ಇದರಿಂದಾದ ಕೊಳೆಯನ್ನು, ಕಳೆಯನ್ನು ತೊಳೆವೆವೆಂಬ ಮನದಿಂದ ಹಿಂದುಗಳೆಲ್ಲ ಮುಂದೆ ಬನ್ನಿರಿ. ನಿಮಗೆ ಆಗ ನಿಮ್ಮ ಒಳಿತೆ ಅರಿವುದು.' ಹೊಲೆಯನೆಂದು ತನ್ನ ಸೋದರರನ್ನು ದೂರಿಡುವುದು ಸರಿಯೇ? ಅವನು ಯಾರಿಗೂ ಕಡಿಮೆಯೇ? ಗಾಂಧಿಜೀ ಹೇಳುತಾರೆ: 'ನಾನು ಒಬ್ಬ ಹೊಲೆಯನೆಂದು ತಿಳಿದುಕೊಂಡಿದೇನೆ ನನ್ನನ್ನು.' ಕನಕ ಹೊಲೆಯನೇ? ನಂದನಾರ ಹೊಲೆಯನೇ? ನಾರಾಯಣ ಗುರುಗಳು ತೀಯರೇ? ಗಾಂಧೀಜಿ ಹೊಲೆಯರೇ? ಅವರು ತನ್ನನ್ನು ಹೊಲೆಯನೆಂದು ತಿಳಿದುಕೊಂಡಿರುವ ಗೂಡಹಿರಿಮೆ. ಇತರರನ್ನು ಹೊಲೆಯರು ಎನ್ನುವ ಜನ ನಿಜಕ್ಕೂ ಹೊಲೆಯರು; ತನ್ನನ್ನು ಹಾರುವನೆಂದು ತಿಳಿದುಕೊಂಡವರು ಹೊಲೆಯರು. ಬಸವಣ್ಣನವರು ಹೇಳಿಲ್ಲವೇ: 'ಆನು ಹಾರುವನೆಂಡಡೆ ಕೂಡಲಸಂಗಯ್ಯ ನಗುವನಯ್ಯಾ!' ಗಾಂಧೀಜಿ ಹೊಲೆಯರಿಗೆ ಅಂಜುವುದಿಲ್ಲ; ಹೊಲೆತನಕ್ಕೆ ಅಂಜುತಾರೆ. ತಪ್ಪು ಮಾಡಿದವನನ್ನು ದೂರುವುದಿಲ್ಲ ಅವರು; ತಪ್ಪುಗಳನ್ನು ದೂರಮಾಡಬೇಕೆನ್ನುತಾರೆ. ನಮ್ಮ ಜನ ಇದಕ್ಕೆ ಸರಿಯಾಗಿ ಎದುರು ನಡೆಯುತ್ತಿದೆ. ಯಾವುದು ತಪ್ಪು ಇದೆಯೋ ಅದನ್ನು ಒಪ್ಪು ಎಂದು ಸಾಧಿಸುತ್ತಿದೆ: ಹೊಲಗೇರಿಯನ್ನು ಕಟ್ಟಿ ಹೊಲೆಯರನ್ನು ನಿಲಿಸಿದುದನ್ನು ಕೊಂಡಾಡುತ್ತಿದೆ.

ಎಲ್ಲರೂ ಸೋದರರು. ಹೊಲೆಯರೂ ಹಾಗೇ. ನಾವು ನಂಬುವ ದೇವರನ್ನು ಅವರೂ ನಂಬುತಾರೆ. ನಾವು ಹಿಂದುಗಳೆಂದರೆ, ಅವರನ್ನೂ ಹಿಂದುಗಳೆಂದು ನಾವು ಒಪ್ಪಿಕೊಂಡಿದೇವೆ. ಆದರೆ ಅವರನ್ನು ಸರಿದೊರೆಯಾಗಿ ನಮ್ಮೊಂದಿಗೆ ಕೂಡುವುದಿಲ್ಲ. ಅವರನ್ನು ನಮ್ಮ 'ದೇವರು' ಇರುವ ದೇಗುಲಗಳೊಳಕ್ಕೆ ಬರಲು ಬಿಡುವುದಿಲ್ಲ. ದೇವರ ಹರಕೆ ನಮಗೆ ಮಾತ್ರ ದಕ್ಕಬೇಕು, ಅವರಿಗೆ ಕೂಡದು ಎಂಬುದನ್ನು ಜಾಹೀರಾಗಿ ಮೆರಸುತ್ತೇವೆ. ಇದನ್ನು ಗಾಂಧೀಜಿ ತೆಗಳಿದಾರೆ: 'ನಾನು ಹೊಲೆಯನೆಂದೆ. ಹೊಲೆಯರು ಹೊಗಬಾರದೆಂಬ ದೇಗುಲದೊಳಗೆ ನಾನೂ ಹೊಗಲಾರೆ. ಅವರಿಗೆ ಮುಚ್ಚಿದ ಬಾಗಿಲು ನನಗೂ ಮುಚ್ಚಿದಂತೆ.' ಮದರಾಸಿನ ಜನರಿಗೆ ಅವರು ಅಂದರು: 'ನೀವೂ ಹೀಗೇ ತಿಳಿಯಿರಿ. ನಿಮ್ಮ ಸೋದರರನ್ನು ಎತ್ತಿ ಒಳ್ಳೆಯವರಂತೆ ಬಾಳಲು ಅವರಿಗೆ ಅನುವು ಕೊಡಿ.' ಈ ಸಮಾಜದ ಮೈಯಲ್ಲಿ, ಹೊಲೆಯರು ಇರುವುದೆಂದರೆ, ಕ್ಯಾನ್ಸರ್ ರೋಗ ಇದ್ದಂತೆ ಇದು ದೂರವಾಗಬೇಕಾದರೆ ಗಾಂಧೀಜಿಯವರಂತಹ 'ರೇಡಿಯಂ' ಬೇಕು. ಅವರು ಹೇಳಿದರು: 'ನೀವು ಈ ಕೆಲಸವನ್ನು ಮಾಡಲು ಬಾರದು ಎಂದಾಗಲಿ ಅರದು ಎಂದಾಗಲಿ ತಿಳಿದುಕೊಂಡರೆ, ನಿಮ್ಮನ್ನೇ ನೀವು ಕೆಳ್ಳಲಕೆ ಇಳಿಸಿಕೊಂಡಂತೆ, ತುಳಿಸಿಕೊಂಡಂತೆ ಆದೀತು. ಹೊಲೆಯರು ಹೊಲೆಯರಾಗಿಯೇ ಇರಬೇಕು ಎಂದು ನೀವು ತಿಳಿದಿರಾದರೆ, ನೀವೂ ಹೊಲೆಯರೇ. ನಿಮ್ಮ ಬಿಡುಗಡೆಯೂ ಆಗಲಾರದು. ನೀವು ಇಳೆಯ ಜನವನ್ನೆಲ್ಲ ಮಂಕುಗೊಳಿಸಬಹುದು. ಆದರೆ ದೇವರನ್ನು ಎಂದಿಗೂ ಮಂಕುಗೊಳಿಸಲಾರಿರಿ.' ತನ್ನವರನ್ನು ಮೋಸ [illegible] ಬದುಕುವುದಕ್ಕೆ ಬೇಕಾಗಿ, ಜನತೆಯ ಮೆಚ್ಚಿಗಾಗಿ ಮಾಡಿದ ಹಾರುವ, ಹೋರುವ, ಹರದ, ಹೊರಗಿನವನೆಂಬ ಈ ಕಚ್ಚಾಟದ ಮೇಲು ಕೀಳುಗಳು ದೇವರು ಮಾಡಿದುದೆಂಬ ಸುಳ್ಳು ಇಲ್ಲಿ ಮೆರೆದಂತೆ ಅಲ್ಲೂ ಮೆರೆಯಲಾರದು. ಯಾರು ಮೇಲು ಯಾರು ಕೀಳೆಂಬ ತೊಳಲಿಗಂಬ ಆಗಸಕ್ಕಿಲ್ಲ. ಈ ಜಾತಿಗಳ ಹೋರಾಟ ಇಂದು ಹೇಗೆ ನಡೆದಿದೆ ಎಂಬುದನ್ನು ಮೊನ್ನೆ ಮಲಬಾರದಲ್ಲಿ ನಡೆದ ಒಂದು ಕತೆಯಿಂದ ತೋರಿಸಬಹುದು. ವೆಳ್ಳವರು ಜಾತಿಯ ಹೆಣ್ಣುಮಗಳೊಬ್ಬಳು, ತನ್ನ ಮದುವೆಯ ಕಾಲಕ್ಕೆ, ಸೀರೆ ಕುಪ್ಪಸಗಳನ್ನು ತೊಟ್ಟುಕೊಂಡಳು; ದಿಬ್ಬಣದಲ್ಲಿ ಕೊಡೆ ಹಿಡಿದು ನಡೆದಳು. ಇದನ್ನು ಅಲ್ಲಿನ ಹಾರುವರಿಗೆ ನೋಡಿ ಸೈರಿಸಲಾಗಲಿಲ್ಲ. ಆಗಸವೇ ಇಳಿದು ಇಳೆಯಲ್ಲಿ ಒರಗುವುದೇನೋ ಎಂದು ಈ ಹಾರುವರು ತಿಳಿದುಕೊಂಡರು. ಇಂತಹ 'ಅನ್ಯಾಯ'ವುಂಟೇ? ಹೊಲತಿಯಾದವಳು ಸೀರೆ ಉಡುವುದುಂಟೇ? 'ಧರ್ಮಗ್ಲಾನಿ'ಯಾಗುವುದೆಂದು ಅವರೆಲ್ಲ ಕೂಡಿ ಕೆಲವು ಪೋಲಿಗಳನ್ನು ಬರಮಾಡಿದರು. ಈ ಹೆಣ್ಣುಮಗಳ ಮದುವೆ ದಿಬ್ಬಣ ಹೋಗುವಾಗ ಅವಳ ಕೈಯಲ್ಲಿನ ಕೊಡೆಯನ್ನು ಕೀಳಿಸಿ, ಸೀರೆಯನ್ನು ಬಿಚ್ಚಿಸಿ, ಅವಳ 'ನಾಚಿಗೆ'ಮಾಡಿಸಿಬಿಟ್ಟರು; ಪೋಲಿಗಳಿಗೆ ಮೆಚ್ಚನ್ನಿತ್ತರು. ದೇವರ ಹೆಸರಲ್ಲಿ ಧರ್ಮದ ಹೆಸರಲ್ಲಿ ಇಂತಹ 'ನ್ಯಾಯ'ಗಳು ನಮ್ಮ ನಾಡಿನಲ್ಲೆಲ್ಲ ನಡೆಯುತ್ತಿವೆ: ದಯೆಯಿಲ್ಲದ ಧರ್ಮವಾವುದಯ್ಯ ಎಂದು ಕೇಳಿದ ಕನ್ನಡ ನಾಡು ಇದು; ಆತುಮನಿಗೆ ಕುಲಯಾವುದಯ್ಯ ಎಂದು ಕೇಳಿದ ಕನ್ನಡ ನಾಡು ಇದು; ಈ ನಾಡಿನಲ್ಲಿ ಒಬ್ಬನು ಇನ್ನೊಬ್ಬನನ್ನು ಕಂಡರೆ 'ಇಂಪಕಶೂದ್ರ' 'ಇಹ್ಡಾಂಗ್ನದಾಸನ' ಎಂದು ತನ್ನ ಸೋದರರನ್ನು ಕಡೆಗಣಿಸುವ ಹಿರಿಯರಿಂದ ಮೆರೆಯುವ ನೈಮೆಯೇನು ಕಡಿಮೆಯೇ?

ಬಿಳಿ ಜನರು ನಮ್ಮನ್ನು ಕಂಡಾಗ 'ಬ್ಲೇಕೀ' ಎಂದರೆ, 'ನಿಗ್ಗರ್' ಎಂದರೆ ನಮ್ಮನ್ನು ಅವರು ಹಂಗಿಸುತ್ತಿದಾರೆಂದು ನಾವು ಕಿಡಿಕಿಡಿಯಾಗುತೇವೆ. ನಮ್ಮ ಜನರನ್ನೇ ಕಂಡಾಗ ನಾವು ಹೇಳುವುದೇನು? 'ಇಂಪಕ ಶೂದ್ರ ಇಹ್ಡಾಂಗ್ನ ಕೀಣಾಸ್ನ...' ಎಂದು; 'ದೂರಸರೀ ಮಗನೆ ... ಮೈಲಿಗೆಯಾದೀತಲ್ಲ!' ಎಂದು. ಇದು ನಮ್ಮ ಹಿರಿಮೆಯ ನೈಮೆ! ನಮ್ಮ ನಾಡಿನ ಹೊಲಗೇರಿಗೂ. ದಕ್ಷಿಣ ಆಫ್ರಿಕೆಯ ಇಂಡಿಯನ್ ಕಾಲನಿಗೂ ಏತರ ದೂರವನ್ನು ಕಂಡಿದೆ ನಮ್ಮ ಜನ? ನಮ್ಮ ಹೊಲಗೇರಿಯನ್ನು ನಾವು, ಸರಿಯಾದುದು, ಅದರಲ್ಲಿ ತುಂಬ ಒಳಿತುಂಟು ಎಂದು ನಾವು ಹೇಳುವುದಾದರೆ, ಜನರಲ್ ಸ್ಮಟ್ಸ್ ಹಿಂದೀಯರ ಒಳಿತಿಗಾಗಿ ಈಚೆಗೆ ಹೊರಡಿಸಿದ ಕೆಲವು 'ಬಿಲ್ಲು'ಗಳಿಗೆ ನಾವು ಋಣಿಗಳಾಗಬೇಕಾದದ್ದೇ ಆಗಿದೆ. ನಾನು ಅವರನ್ನು ಮನಸಾರೆ ಕೊಂಡಾಡುತ್ತೇನೆ. ಅವರಂತೆ ಮೊನ್ನೆ ಒಂದು ಹಡಗಿನ ಕೇಪ್ಟನ್ ಮಾಡಿದ ಕೆಲಸವನ್ನೂ ನಾನು ಮೆಚ್ಚಿದೇನೆ. ಪಡುವಣ ಸೀಮೆಗೆ ಓದಲು ಹೊರಟ ನಮ್ಮ ನಾಡಿನ ಮಕ್ಕಳಿಂದ ಆವನು ಬಿಳಿ ಜನರ ಪಾಯಿಕಾನೆ ತೊಳೆಸಿದನಂತೆ. ನಾವು ಅದಕ್ಕಿಂತಲೇ ಒಂದು ಜಾತಿಯನ್ನು ಮಾಡಿಲ್ಲವೇ? ಅವರು ಬೇರೆ ಯಾವ ಕೆಲಸಕ್ಕೂ ಬಾರದವರೆಂದು, ಅವರ ಏಳಗೆಗೆ ತಪ್ಪು ತಡೆಗಳನ್ನು ಹಾಕಿಲ್ಲವೇ? ಮೊನ್ನೆ ಈ ಕತೆ ನಡೆಯುವ ತನಕ ಹಿಂದೂ ಜಾತಿಯವರೆಲ್ಲರೂ ಈ ಕೆಲಸ ಮಾಡಬಹುದು ಎಂಬ ಮಾತಿನಲ್ಲಿ ನನಗೆ ನಂಬುಗೆ ಇರಲಿಲ್ಲ; ಆ ಹಡಗಿನ ದೊರೆ 'ನೀವೆಲ್ಲರೂ ಅದಕ್ಕೆ ತಕ್ಕವರೇ' ಎಂದು ಹೇಳಿಬಿಟ್ಟನು. ಗಾಂಧೀಜಿ ತನ್ನ ಮನೆಯ ಪಾಯಿಕಾನೆಯನ್ನು ತಾನೇ ತೊಳೆದರೆಂದು ಎಲ್ಲರಿಂದಲೂ ಆದೀತೆ? ಹಿಂದುಗಳು ಇದ್ದ ಊರುಗಳಲ್ಲಿ ಇಂತಹ ಕೆಲಸಗಳಿಗಾಗಿ ಒಂದು ಹೊಲಗೇರಿ ಬೇಕು; ಬಿಳಿ ಜನರ ಪಾಯಿಕಾನೆ ತೊಳೆಯಲು ಕಪ್ಪು ಜನರ ಕಾಲನಿಗಳಾಗಬೇಕು. ಅದರಲ್ಲಿ ಯಾವ ತಪ್ಪೂ ಇಲ್ಲ.

—

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/.. ವಿ. ಪಿ. 12 ಆಣೆ ಅಲಾಯಿದ.

Mrs. P. DEVEE,
P. O. 3, (A. S.) Tollygunge, Calcutta.
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಸಹಕಾರವೇ ಸಾಧನ

ಮನುಷ್ಯನ ಜೀವನ ಅತಿ ಕಷ್ಟ. ವ್ಯಾಪಾರ ಸರಿಯಾಗಿ ನಡೆಯದೆ, ಕೈಗಾರಿಕೆ ನಡೆಸುವುದೂ ಕಷ್ಟತರವಾಗಿ, ವ್ಯವಸಾಯ ಕೂಡಾ ಹಿಂದುಳಿದ ಈ ಕಾಲದಲ್ಲಿ ಹಣದ ಲೇವಾದೇವಿಯೂ ಬಹಳ ಕಡಿಮೆಯಾಗಿದೆ. ಈ ಎಲ್ಲಾ ಉದ್ದೇಶವನ್ನೊಳಗೊಂಡ ಸಂಸ್ಥೆಯಿಂದ ಜನತೆಯ ಹಿತವನ್ನು ಸಾಧ್ಯವಾದಷ್ಟು ಪೂರೈಸಲು ಸ್ಥಾಪಿತವಾದ ಈ ಕಂಪೆನಿಯು ನಿಮ್ಮೆಲ್ಲರ ಸಹಕಾರ ಪಡೆದು ಅಲ್ಲಲ್ಲಿ ತನ್ನ ಶಾಖೆಯನ್ನು ತೆರೆಯಬೇಕೆಂದು ಎಣಿಸಿಯದೆ. ಇದನ್ನು ಸ್ಥಾಪಿಸಿದ ಉದ್ದೇಶ:—ಅನುಕೂಲತೆಗನುಸರಿಸಿ, 1. ವ್ಯಾಪಾರ. 2. ವ್ಯವಸಾಯ. 3. ಕೈಗಾರಿಕೆ 4. ಲೇವಾದೇವಿ. 5. ಕಂಟ್ರಾಕ್ಟು. 6. ಏಜನ್ಸಿ. ಇತ್ಯಾದಿ. ಈ ಕಂಪೆನಿಯು ಕಾರ್ಯ ಪ್ರಾರಂಭಿಸಿದ ಅತ್ಯಲ್ಪ ಸಮಯದೊಳಗೆ ರೂ. 1 ಲಕ್ಷಕ್ಕೆ ಮೇಲ್ಪಟ್ಟ ವ್ಯವಹಾರ ನಡಿಸಿಯದೆ. ಇದರ ಶ್ಯೇರ್ಸ್ಸು ಬೇಕಾದವರು ಅರ್ಜಿ ಮುಖಾಂತರ ಪಡೆದುಕೊಳ್ಳಬಹುದು. ಡಿಪೋಜಿಟ್ ಅಂಗೀಕರಿಸಲ್ಪಡುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಶ್ರೀ ಮಾತಾ ಯುನೈಟೆಡ್, ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸೀಸ್ ಲಿಮಿಟೆಡ್
ಜಯಮಂಗಳಂ ಬಿಲ್ಡಿಂಗ್ಸ್, ಕುಂದಾಪುರ.
(Incorporated in British India. liability of Members Limited.)

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

ಅಂತರಂಗವು ಮನಸೆಳೆವ—
ಬಹಿರಂಗವು ಕಣ್ಸೆಳೆವ—
ಅಂತರಂಗ ಪತ್ರಿಕೆಯಿಂದ ಆಯ್ದು ಪ್ರಕಟಿಸಿದ 2 ಕಥಾಸಂಗ್ರಹಗಳು.

೧
ಅಂತರಂಗದ ಕಥೆಗಳು
ಶ್ರೀಗಳಾದ ಪಿ. ವೆಂಕಟರಮಣಾಚಾರ್ಯ; ಎಸ್. ವೆಂಕಟರಾಜ, ಎಂ. ವಿ. ಹೆಗ್ಡೆ, ದೇವದಾಸ; ಕೆ. ಹೈದರ್; ಬಿ. ಎಸ್. ಆಚಾರ್ಯ ಮೊದಲಾದವರ ೧೩ ಉತ್ತಮ ಕತೆಗಳ ಸಂಗ್ರಹ.
ಬೆಲೆ 0-12-0. ಟ. ಖರ್ಚು 0-2-0.

೨
ಪ್ರೇಮ-ಪ್ರವಾಹ
ಶ್ರೀಗಳಾದ ಎಂ. ವಿ. ಹೆಗ್ಡೆ; ಎಸ್. ಎಲ್. ಸುಬ್ರಹ್ಮಣ್ಯಂ; ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಮೊದಲಾದವರು ಬರೆದ ೫ ಕತೆಗಳ—ಪ್ರಣಯ ಪ್ರಲಯದ ಕತೆಗಳ ಸಂಗ್ರಹ.
ಬೆಲೆ 0-8-0. ಟ. ಖರ್ಚು 0-2-0.

ಎರಡೂ ಪುಸ್ತಕಗಳನ್ನು ಒನ್ನೇ ತರಿಸಿಕೊಳ್ಳುವವರಿಗೆ ಟಪ್ಪಾಲು ಖರ್ಚು ಮುಫತ್ತು.

ಪ್ರತಿಗಳಿಗೆ ಬರೆಯಿರಿ—
(1) ಅಂತರಂಗ ಆಫೀಸು, ಉಡುಪಿ.
(2) ನವಭಾರತ ಬುಕ್ ಡಿಪೊ. ಉಡುಪಿ.
(3) ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.

FOR LIFE ASSURANCE
CONSULT
The New Gaurdian of India Life Insrce. Co, Ltd.,
(Chairman.- The Hon'ble Mr. M. CT. M. Chidambaram Chettiar.)
A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA: MANGALORE & KARKALA.

HEAD OFFICE "United India Life Bldg" Esplanade, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ. ಕ.
ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ
ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ
ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ. ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?
ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.
ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. 1-8-0 ಟಪ್ಪಾಲು ಖರ್ಚು 0-4-0 ಪ್ರತ್ಯೇಕ

ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. Estd. 1921 ಸ್ಥಾಪನೆ. ಬೆ: ೦—೧—೬

ನವಯುಗ

ಚಂದಾ ವಿವರ:
(ಮುಂಗಡ)

ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0

6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ, ದ. ಕ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.

ವರ್ಷ ೨೬ ವಾರ ೪ | FOUNDER: SRI. A. B. SHETTY, M.L.A. | Vol. 26 No. 4

ಉಡುಪಿ • 26—9—1946 • ಮಂಗಳೂರು.

ಅಮೃತಾಂಜನ, ತಲೆನೋವನ್ನು ಶಿರೋವೇದನೆ, ಉಳುಕು ಶಕ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಚಾಕು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ನೋಡುವ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ, ಕಥ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 400ದ 8ಬೊಟ್ಟು, ಸಣ್ಣಮಕ್ಕಳಿಗೆ 100ದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮೆಸಿ; ಡಾ। ಕೆ। ಶ್ರೀಪತಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

MAKE SURE OF A COLLEGE EDUCATION.

WE may freely say that, other things being equal, the possibility of a father providing his children with a "College Education" depends mainly on his purse. A small annual deposit for 5 years or more will, ensure the required funds for the Children's College Education. So why not begin to-day and make sure of your Children's College Education through our Children's Endowment Policy?

The Canara Mutual Assurance Co.,Ltd.,
HEAD OFFICE: **UDIPI,** (S. India.)

Chief Agents for the Bombay and Madras Presidencies including States and the States of Mysore and Hyderabad.

The Commercial Corporation of India, Ltd,
UDIPI. (S. India.)

THE
Bombay Life Assurance Company Ltd.
(ESTD. 1908)
A PREMIER INSURANCE COMPANY

New Business in 1945 - - 2,77,23,100.

KOCHIKAR BROTHERS, LTD.
(ESTD 1910)

Chief Agents for South India including Travancore, Cochin and Mysore State.

New Business in 1945 in our area:- **Over 5 Millions.**

OUR Expert advice gained by 35 years Experience is at your door FREE.

Drop a card to any of our Offices at —
MADRAS * BANGALORE * MADURA * CALICUT
TRIVENDRUM * UDIPI * AND BOMBAY

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 8—8—1945ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬಾರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್, ಆರ್. ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಬೊಂಬಾಯಿ.

ನಿಮ್ಮದೇ ಆಗಿದೆ; ನಿಮಗಾಗಿಯೇ ಇದೆ.

ಗಳಿಸಿದುದು ಸಂಪಾದನೆಯಲ್ಲ; ಉಳಿಸಿದುದೇ ಸಂಪಾದನೆ.

ನಿಮ್ಮ ಅಪರ ವಯಸ್ಸಿನ ಆಶ್ರಯವಾಗಿ—ನಿಮ್ಮನ್ನು ಹೊಂದಿಕೊಂಡವರ ಸಂರಕ್ಷಣೆಗಾಗಿ—ಇಂದೇ ವಿಮಾ ತೆಗೆಯಿರಿ.

ವಿಮೆ ತೆಗೆಯುವವರೂ. ಏಜಂಟರು ಹಾಗೂ ಓರ್ಗನೈಝರಾಗುವವರೂ ಬರೆಯಿರಿ—

ಪಿ. ಡಿ. ನಾಯಕ, ಉಡುಪಿ.
ದ. ಕ. ಜಿಲ್ಲೆಯ ಚೀಫ್ ಏಜಂಟ್.

THE JUPITER
General Insurance Company, Ltd.

★ ನಮ್ಮ ನೆರೆಯಲ್ಲಿ ಗಾಂಧೀಜಿ ★

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬರೆದವರು.— ಶ್ರೀ. ರಾ. ಕೃ ಶೆಟ್ಟಿ, ಕಾರಿಯಹಳ್ಳಿ.

ಗಾಂಧೀಜಿ ಇದನ್ನು ಕುರುಪಿಟ್ಟು ಹೇಳುತಾರೆ. ಎಂದಿನ ತನಕ ನಾವು ಹೊಲಗೇರಿಗಳನ್ನು ಕಟ್ಟಿಡುತೇವೆಯೋ ಅಂದಿನ ತನಕ ನಮ್ಮ ಆಡಿಮೆಯನ್ನು ನಾವು ಅಪ್ಪಿಕೊಂಡಂತೆ. ಅಂದಿನ ವರೆಗೆ ನಮ್ಮನ್ನು ಕಟ್ಟಿರುವ ಸಂಕಲೆಯನ್ನು ಬಿಗಿದಿಟ್ಟುಕೊಂಡಂತೆ. ನಮ್ಮ ನಾಡಿನ 'ಆಡಿಮೆಯ' ಸೋದರರು ಇರುವುದಕ್ಕೆ ಊರ ಹೊರಗಿನ ಜೋಲಸು ಕೊಂಪೆ, ಕುಡಿಯಲು ಕೊಳಕು ನೀರು, ಉಡಲು ಹರಕು ಬಟ್ಟೆಗಳೇ ಚೆನ್ನೆಂದು ನಾವು ಹೇಳುವುದು ಸರಿಯೇ? ಈ ರೂಡಿ ಸರಿಯಾದರೆ ನಮ್ಮನ್ನು ಬಿಗಿದು ನಿಂತಿರುವ ರೂಢಿಯಿಂದ ನಾವು ಬಿಡುಗಡೆಯಾಗುವುದಕ್ಕೆ ಹವಣಿಸುವುದು ಸರಿಯಲ್ಲ. ನಾವು ಎಲ್ಲರೊಡನೆ ಸರಿಯೆಂದು ತಲೆಯೆತ್ತಿ ಬಾಳಬೇಕೇ ಆದರೆ ಮೊದಲು ನಮ್ಮ ಆಡಿಮೆಯ ಜನರನ್ನು ಹೊಲೆಯರನ್ನು ನಮ್ಮ ಸರಿದೊರೆಯೆಂಬಂತೆ ನಡಿಸಿಕೊಂಡು ಬರಬೇಕು. ನಾವು ಹಾರುವದು ಎಂದು ನಮ್ಮ ಜನರು ಹಾರಿಕೊಂಡರೆ, ಪಡುವಣ ಸೀಮೆಯ ಬಿಳಿ ಜನರು ಹಾರುವರಲ್ಲವೆ? ನಮ್ಮ ಹಾರುವರು 'ನಾವು ಭೂಸುರರು' ಎಂದಂತೆ, ಅಲ್ಲಿನ ಜನರೂ ಅನ್ನುತ್ತಿದ್ದಾರೆ 'We are the chosen people!' ಎಂದು ನಮ್ಮ ನಾಡಿನ 'chosen people' ಹೇಗೆ ನಮ್ಮ ನಾಡಿನ ಜನರನ್ನು ಹಂಗಿಸಿ ಆಡಿಮೆಗೆ ತುಳಿಯುತಾರೋ, ಹೇಗೆ ಹೊಟ್ಟೆ ಬಟ್ಟೆಗೆ ಹೊಡೆಯುತಾರೋ ಹಾಗೇ, ಅಲ್ಲಿನ 'chosen people' ಕೂಡ ಕಪ್ಪು ಜನರನ್ನು ತುಳಿವುದಕ್ಕೆ ಹೊರಟದಾರೆ. ಇಬ್ಬರೂ ತಮ್ಮ ತಮ್ಮ ಹೊಣೆಯನ್ನು ಸರಿಯಾಗಿ ಹೊತ್ತುಕೊಂಡು ಬಂದಿದಾರೆ. ಗಾಂಧೀಜಿಯವರು ಅನ್ನುವರು 'ಮೊದಲು ನಮ್ಮನ್ನು ನಾವು ತಿದ್ದಿಕೊಂಡು ಇತರರಿಗೆ ತಿಳಿವು ಹೇಳಲು ಹೊರಡಬೇಕು' 'Colour bar should go!' ಎಂದು ನಾವು ಪಡುವಣ ಜನಕ್ಕೆ ಹೇಳುವ ಹಿರಿಮೆ ಬೇಡ; ಅವರಿಗೆ ಅದನ್ನು ನಾವೇ ಕಲಿಸಿದೆವೆಂಬುದನ್ನು ತಿಳಿದುಕೊಂಡರೆ ಸಾಕು! ಏಕೆಂದರೆ ನಮ್ಮದು ಸನಾತನ ಧರ್ಮ ...

ಗುಲಾಮರಿಗೂ ಒಂದು ಪವಿತ್ರವಾದ ಪಾವನವಾದ ಧರ್ಮ! ಗುಲಾಮರಿಗೂ ಮೇಲು ಕೀಳುಗಳ ತೂಕ ತೊಲೆ! ಗುಲಾಮರಿಗೂ ಹಿರಿಮೆಯ ಹಕ್ಕುಳಿಕೆ! ಗಾಂಧೀಜಿಯವರು ಕೇಳುತಾರೆ 'ಗುಲಾಮರಿಗೆ ಏತರ ಮೇಲು, ಏತರ ಕೀಳು? ಹೊಲೆಯರು, ತುಳಿಯಲು ಪಟ್ಟವರು ಎಂಬ ಉಳಿದ ಜಾತಿಯವರೆಲ್ಲ ಗುಲಾಮರ ಗುಲಾಮರು.' ತನ್ನ ಗುಲಾಮತನವನ್ನು ನೆನೆದು 'ಹಂಗಿನರಮನೆಗಿಂತ ಪಿಂಗಡದ ತಿಳಿ ಲೇಸೆ'ಂದು ಹೇಳುವ ಜನ ತನ್ನ ಸೋದರರನ್ನೇ ಹಂಗಿಸುವುದನ್ನು ನೋಡಿದರೆ ಮೋಜು ಕಾಣುವುದು. ಗಾಂಧೀಜಿ ಮೊನ್ನೆ ಈ ಜಾತಿಯ ಕೋತಿಗಳನ್ನು ಕಟುವಾಗಿ ಟೀಕಿಸಿದರು 'ನೀವು ತಪಸ್ಸು ಮಾಡಿದರೂ ನಿಮ್ಮ ಸೋದರರಿಗೆ ಹೊಲೆಗೇರಿ ತೋರಿಸಿ ಕೊಟ್ಟ ನಿಮ್ಮ ಪಾಪದ ಹೊರೆ ಇಳಿಯುವಂತಿಲ್ಲ......ಜಾತೀಯ ನಾಯಿಗಳ ಕಚ್ಚಾಟ ನಿಲ್ಲಬೇಕು; ಜಾತಿ ಜಾತಿಗಳು ಅಳಿಯಬೇಕು. ನಾವೆಲ್ಲ ಒಂದೇ ಮಾನವ ಕೋಟೆಯಲ್ಲಿ ಸೇರಿದವರು, ನಮ್ಮದು ಮಾನವ ಜಾತಿ, ನಮ್ಮದು ಮಾನವ ಧರ್ಮ ಎಂದ ದಿನವೇ ನಾಡಿನ ಬಿಡುಗಡೆಯಾದೀತು.

ಮುಟ್ಟು ಮೈಲಿಗೆಯೆಂದು ನಮ್ಮ ಜನ ಇಂದು ದೇವರಿಗೂ ಲೆಕ್ಕಿಸುವುದಿಲ್ಲ; ದೇವರಿಗೆ ಇಲ್ಲದ ಹೆಮ್ಮೆಯನ್ನು ತಾವು ಹೊತ್ತಿದಾರೆ. ಈ ಜಾತಿಯ ರೂಡಿಯನ್ನು ಏನೆಂದು ಆಳವಾಗಿ ನೋಡಿದರೆ ನಮ್ಮ ನಂಬುಗೆಗೆ ಇಂಬಿಲ್ಲವೆಂದು ಹೊಳೆದೀತು ದೇವರ ಹೆಸರಲ್ಲಿ, ದಿಂಡರ ಹೆಸರಲ್ಲಿ, ಜಾತಿಯ ಕೋತಿಗಳು ನಾಯಿಯ ಮನೆಗಳನ್ನು ಕಟ್ಟಿದಾರೆ. ಒಬ್ಬನು ಇನ್ನೊಬ್ಬನನ್ನು ಕಂಡರೆ ಗುರ್ ಅನ್ನುವಂತೆ ಹಾರುವುದು ಈ 'ಧರ್ಮ'ದ ಮೈಮೆ. 'ವೇದಗಳು ಇಂದಿನ ಈ ಜಾತಿ ಕಟ್ಟುಗಳನ್ನು ಒಪ್ಪುವುದಿಲ್ಲ. ಆದುದರಿಂದ ನಾನು ಒಪ್ಪಲಾರೆ.' ಎಂದು ಗಾಂಧೀಜಿಯವರ ಮಾತು. I believe in Varnashrama Dharma in a sense strictly vedic, but not in its present popular and crude sense'. ಎನ್ನುತಾರೆ ಅವರು. ಇಂದಿನ ಜನ ಜಾತಿಗಳೆಂದು ಹೆಕ್ಕಳಿಸಿಕೊಳ್ಳುವುದು ತಮ್ಮ ತಮ್ಮ ಬಳಗಗಳೆಂಬ ತಿಳಿವಿಲ್ಲದ ಸಂಕಟವನ್ನು. ಈ ಜಾತಿಗಳು ವರ್ಣಗಳಲ್ಲ, ಅವು ಗುಣಕರ್ಮಗಳನ್ನು ಕಂಡವಲ್ಲ ನಮ್ಮಲ್ಲಿ ಇಂದು ರೂಡಿಯಾಗಿರುವ ಜಾತಿ ಕಟ್ಟುಗಳೂ. ಪಡುವಣ ಸೀಮೆಯನ್ನು ಒಪ್ಪಿಕೊಂಡ 'ಬಣ್ಣಗಳೂ' ಒಂದೇ ನೆಲೆಯಲ್ಲಿ ನಿಂತಿವೆ. ಗಾಂಧೀಜಿ ಇವನ್ನು ಬಲ್ಲರು ಮದರಾಸಿನ ಜನರಿಗ ತನ್ನ ಬಳಕೆಯನ್ನು ಹೇಳಿದರು ಹಿಂದೆ ತಾನು ದಕ್ಷಿಣ ಆಪ್ರಿಕೆಯಲ್ಲಿ ಇದ್ದಾಗ ಕಂಡುದನ್ನೆಲ್ಲ ನೆನಪಿಗೆ ತಂದುಕೊಂಡು ಹಿಂಗಂದರು: 'ನಾನು ಅಲ್ಲಿರುವಾಗ ಯಾರನ್ನೂ ಮುಟ್ಟಬಾರದ ಹೊಲೆಯನಾಗಿದ್ದೆ. ಅಲ್ಲಿ ಇರುವ ಬಿಳಿ ಜನರು ಹಿಂದೀಯರನ್ನೆಲ್ಲ ಹೊಲೆಯರೆಂದು ಕಾಣುತ್ತಿದ್ದರು. ಹಿಂದೀಯರನ್ನು ಅವರು ಕೂಲಿಗಳೆಂದು ಕರೆವ ವಾಡಿಕೆ. ಕೂಲಿ ಎಂಬ ಮಾತಿನಲ್ಲಿ ಯಾವ ತಪ್ಪೂ ಇಲ್ಲ. ಕೂಲಿ ಎಂದರೆ ಯಾರು ಇನ್ನೊಬ್ಬನಿಗಾಗಿ ದುಡಿಯುತಾನೋ ಅವನು. ಒಬ್ಬನು ಬ್ಯಾರಿಸ್ಟರ್ ಆಗಿರಬಹುದು, ದುಡ್ಡಿರಬಹುದು ಇಲ್ಲದಿರಬಹುದು ಅವನು. ಏನೇ ಆಗಿರಲಿ, ಹಿಂದೀಯನಾದರೆ ಅವನನ್ನು ಕೂಲಿ ಎಂದು ಆ ಜನ ಹಂಗಿಸುತ್ತಿದ್ದರು.

ಇದೇ ಹಂಗಿಸುವ ತಪ್ಪನ್ನು ನಾವು ಮಾಡಿದೇವೆ, ನಮ್ಮ ಹಿರಿಯರು ಮಾಡಿದಾರೆ ಪಡುವಣ ಜನ ಇನ್ನೂ ಕಾಡುಗಳಲ್ಲಿ ತಿರುಗಾಡುತ್ತಿದ್ದಾಗಲೇ ನಮ್ಮ ನಾಡಿನ ನಾಗರಿಕ ಜನರಿಂದ ಇಂತಹ ಕತೆಗಳು ನಡೆದುವು. ಹೊಲೆಯ ಎಂಬ ಮಾತಿನಲ್ಲಿ ಯಾವ ತಪ್ಪೂ ಇಲ್ಲ. ಯಾರು ಕೊಲೆ ಹಾದರ ಮಾಡುತಾನೆ, ಸುಳ್ಳು ಕಳವು ನಡೆಸುತಾನೆ, ಮೋಸ ಸುಲಿಗೆಯ ಸಂತೆ ತೆರೆಯುತಾನೆ—ಅವನು ಹೊಲೆಯ. ನಾವು ಇಂದು ಹೊಲೆಯ ಎಂದು ನಮ್ಮವರನ್ನು ಹಂಗಿಸುವುದೂ, ಪಡುವಣ ಜನ ನಮ್ಮನ್ನು ಕೂಲಿಗಳೆಂದು ಹಂಗಿಸುವುದೂ ಒಂದೇ ಮಟ್ಟದ ತಿಳಿವಳಿಕೆಯನ್ನು ತೋರಿಸುತ್ತದೆ. ಪಡುವಣ ಸೀಮೆಯವರು ನಾಗರಿಕರಾಗಲಿಲ್ಲ ಎಂಬ ನಾವೂ ನಾಗರೀಕತೆ ಎಂದರೆ ಏನೆಂಬುದನ್ನು ಇನ್ನೂ ತಿಳಿದಿಲ್ಲ ಎನ್ನಬೇಕಾಗುತ್ತದೆ

— ೩ —

ಗಾಂಧೀಜಿ ಹೊಲೆತನವನ್ನು ದೂರ ಮಾಡಿ, ಹೊಲೆಯವರು ಇಲ್ಲದಂತೆ ಮಾಡಿರಿ ಎಂದು ದಕ್ಷಣದವರಿಗೆ ಹೇಳಿದರು. ಅದರೊಂದಿಗೆ ತೆಂಕು ಬಡಗಲ ನಾಡು ಒಂದಾಗಿ ಕೂಡಿಯಾಡಿರಿ, ಎಂದು ಹಿಂದೀ ನುಡಿಯನ್ನು ತೆಂಕಲಲ್ಲಿ ಬಳಸಲು ನೆರವಾದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕಡೆಯಿಂದ ವಕಾಲತ್ತು ತೆಗೆದುಕೊಂಡರು;

'ಒಬ್ಬಮನುಷ್ಯನು ಬದುಕಬೇಕಾದರೆ, ಅವನ ಜೀವಕ್ಕೆ ಹೇಗೆ ಪ್ರಾಣವಾಯುವೋ ಹಾಗೇ ಹಿಂದೂದೇಶದ ಜೀವಕ್ಕೆ ಹಿಂದೀಯ ಮಾತು ಹಿಂದೂಸ್ಥಾನಿ. ಇದನ್ನು ತಿಳಿದು ಈ ಮಣ್ಣಿನ ನೀರು ಕುಡಿದವರೆಲ್ಲರೂ ಈ ಮಣ್ಣಿನ ಮಾತಾದ ಹಿಂದೂಸ್ಥಾನಿಯನ್ನು ಕಲಿಯಲೇಬೇಕು ಅದು ತನ್ನ ಒಬ್ಬೊಬ್ಬನ ಧರ್ಮ ಎಂದು ಎಲ್ಲರೂ ತಿಳಿಯಬೇಕು. ಇಂಗ್ಲಿಷ್ ಕಲಿತವರಿಗೆ ಇದು ಕುಸ ತೊಂದರೆಯ ಕೆಲಸವಾದೀತು ಆದರೆ ಇಂಗ್ಲಿಷಿನಿಂದ ನಾವು ಹಾಳಾಗಿದೇವೆ. ಇಂಗ್ಲಿಷ್ ಕಲಿಯಲು ಬೇಕಾಗುವ ಒಂದು ರೂಪಾಯಿಯ ಹೊತ್ತು ಬೇಕಾಗಿಲ್ಲ; ಒಂದು ಆಣೆಯ ಹೊತ್ತು ಇದ್ದರೆ ಸಾಕು, ಹಿಂದೀ ಕಲಿಯಬಹುದು'.

ಹೀಗೆ ಹೇಳುತ್ತಾ ಗಾಂಧೀಜಿ ಹಿಂದೂಸ್ಥಾನಿಯಲ್ಲೇ ಮಾತನಾಡಿದರು: 'ನಾನು ಹಿಂದೂಸ್ಥಾನಿಯಲ್ಲಿ ಆಡುವುದನ್ನು ಕೇಳಿದರೆ ನಿಮಗೂ ಅದರ ಧವಿ ಹತ್ತುವುದು; ಕಲಿಯಬೇಕೆಂಬ ಹುಮ್ಮಸು ಹುಟ್ಟುವುದು......

'ನಿನ್ನೆ ಒಬ್ಬನು, ನಾನು ಮಾತನಾಡಿದುದನ್ನು ತೆಲುಗಿನಲ್ಲಿ ತರ್ಜುಮೆ ಮಾಡಬೇಕೆಂದು ತಂಟೆ ಮಾಡಿದನು, ಇಲ್ಲಿ ಕನ್ನಡಿಗರಿದ್ದರು, ಮಲಯಾಳಿಗಳಿದ್ದರು. ಅವರು ಯಾರೂ ಮಾತನಾಡಲಿಲ್ಲ. ನನಗೆ ಅವನ ನಡವಳಿ ಮೆಚ್ಚಿಗೆಯಾಯಿತು'. ಹೀಗೆಂದು ಮೂರನೆಯದಿನ ಅವರು ಅಪ್ಪಣೆ ಕೊಡಿಸಿದರು ಗಾಂಧೀಜಿ ಹೀಗೆಂದದ್ದು ಸರಿಯಾಗಲಿಲ್ಲ. 'ಬಾಪೂಜಿ ಹೇಳಿದ ಮಾತು ತನ್ನ ಜನಕ್ಕೆ ತಿಳಿಯಬೇಕು' ಎಂಬ ಆಸೆ ಆ ತೆಲುಗನಲ್ಲಿ ಇದ್ದದ್ದು ತಪ್ಪೇನು? ಗಾಂಧೀಜಿಯೇ ಆಗಿದ್ದರೆ ಆ ತೆಲುಗನು ತನ್ನ ತಕರಾರು ಮುಗಿಸಿದಂತೆ ಮುಗಿಸುತ್ತಿರಲಿಲ್ಲ; ತೆಲುಗಿನಲ್ಲಿಯೂ ತರ್ಜುಮೆ ಮಾಡಿಸುವಂತೆ 'ಸತ್ಯಾಗ್ರಹ' ಹೂಡುತ್ತಿದ್ದರು. ಇಲ್ಲಿ ಗಾಂಧೀಜಿ ತಪ್ಪುಮಾಡಿದಾರೆ ಎಂದು ನನ್ನ ಮನಸ್ಸಿಗೆ ತೋರುತ್ತದೆ. ಮದರಾಸಿನ ಪ್ರಚಾರಕರ ಮಾತುಕೇಳಿ ಅವರು ಹೀಗೆ ಮಾಡಿರಬೇಕು, ಮದರಾಸಿನಲ್ಲಿ ತಮಿಳೂ, ತೆಲುಗೂ, ಕನ್ನಡವೂ ಉಂಟು; ಈಗ ಮಲಯಾಳಿಗಳೂ ಬಂದು ಹೆಚ್ಚು ಹೆಚ್ಚಾಗಿ ಕೂಡಿರುವುದರಿಂದ ಮಲಯಾಳವೂ ಉಂಟು. ಗಾಂಧೀಜಿಯವರ

(೧೧ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಹಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ನೀವು ನಿಮ್ಮ ವ್ಯಾವಹಾರಿಕ ಪಟ್ಟ ಉಪಭೋಗಿಸಬೇಕಾದರೆ

ಒಮ್ಮೆಲೆ

ಹಣದ ರಾಶಿಯಲ್ಲಿರಬೇಕಾದ
ಸಿರಿವಂತರಾಗಬೇಕಾದ
ಲಕ್ಷ್ಮೀಪುತ್ರರಾಗಬೇಕಾದ
ಅನುಕೂಲಸ್ಥರಾಗಬೇಕಾದ

ಕಾರಣವಿಲ್ಲ.

ನೀವು ಅನುಸರಿಸುವ ವ್ಯಾವಹಾರಿಕ ಮಾರ್ಗ ಸುಗಮವಿದ್ದರೆ ಎಲ್ಲವೂ ನಿಮ್ಮ ಕೈಯಲ್ಲಿದೆ. ಯಾಕೆಂದರೆ ಅದು ನಿಮ್ಮ ಉತ್ಪನ್ನದ ಮಿತಿಗಿಂತಲೂ ಮಿಗಿಲಾಗಿದ್ದು ಹಾಗೂ ಮಹತ್ವದ್ದು.

ಕಳೆದ ಸುಮಾರು 40 ವರ್ಷಗಳಿಂದ ನೀವು ಕೆನರಾ ಬ್ಯಾಂಕಿನಲ್ಲಿಟ್ಟುಕೊಂಡ ಚಾಲ್ತಿ ಖಾತೆಯೇ ನಿಮಗೆ ವ್ಯಾವಹಾರಿಕ ಪ್ರಪಂಚದಲ್ಲಿ ಅಚಲವಾದ ಸ್ಥಾನ ಗಳಿಸಿ ಕೊಟ್ಟಿದೆ

"ನಾನು ಕೆನರಾ ಬ್ಯಾಂಕಿನ ಒಂದು ಚೆಕ್ ಕೊಡುತ್ತೇನೆ"ಂದು ಹೇಳುವುದರಲ್ಲಿ ನಿಮಗೆ ಬಹಳ ಹೆಮ್ಮೆಯಿದೆಂಬುದು ನಮಗೂ ಗೊತ್ತು!

ಮರೆಯಬೇಡಿರಿ! ಕೆನರಾ ಬ್ಯಾಂಕಿನಲ್ಲಿ ಯಾವ ಚೆಕ್ ವಟಾಯಿಸುವುದಕ್ಕೂ 5 ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲವೆಂಬುದನ್ನು!!

Estd 1906

CANARA BANK LIMITED

(Incorporated in British India liability of Members Limited)

CHAMPAE'S
Snow & Castrex
(Sole Distributers for India.)
Prop: K. G. NAYAK,
Santhekatte, UDIPI, S K.

ನಿನ್ನೆ ನಗರದಲ್ಲಿ ನಡೆದ ಮೆರವಣಿಗೆ ಅಸಾಮಾನ್ಯವಿದ್ದಿತು. ಅದು ಅಮಲು ರ ಸಾಸ್ವಾದಕರ ಮೆರವಣಿಗೆ; ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿ ಜ್ಯಾರಿಗೆ ಬಂದಿರುವ ಪಾನ ನಿಷೇಧಕ್ಕಾಗಿ ತಮ್ಮ ಸ್ಪಷ್ಟ ಹಾಗೂ ಬಲವತ್ತರ ನಿಷೇಧವನ್ನು ಪ್ರದರ್ಶಿಸುವ ದಕ್ಕಾಗಿ ಪ್ರಾಂತ್ಯದ ಸರ್ವೆಡೆಗಳಿಂದಲೂ ಸಾವಿರಾರು ಸಂಖ್ಯೆಯಲ್ಲಿ ಅವರು ನೆರೆದು ಬಂದಿದ್ದರು. ಈ ರಾಷ್ಟ್ರದ ವಿವಿಧ ಧಾರ್ಮಿಕ ಹಾಗೂ ರಾಜಕೀಯ ವಿಧಾನಗಳ ಭಕ್ತರಾಗಿದ್ದವರು ಇದೊಂದು ಪ್ರತ್ಯೇಕ ಪ್ರಶ್ನೆಯ ಕುರಿತು ಒಳ್ಳೇ ರೀತಿಯಿಂದ ಒಕ್ಕಟ್ಟಾಗಿದ್ದ ಉಜ್ವಲ ನಿದರ್ಶನವೊಂದು ಅಲ್ಲಿತ್ತು. ಎಲ್ಲಾ ರಾಜಕೀಯ ಪಕ್ಷಗಳ ಧ್ವಜಗಳೂ ಇದೀಗ ಮೊದಲ ಬಾರಿ ಒಟ್ಟೊಟ್ಟಾಗಿ ಆಕಾಶದಲ್ಲಿ ಲಟಪಟಿಸಿ ಹಾರಾಡುತ್ತಿದ್ದುವು. ಪ್ರಮುಖ ರಾವ್ ಬಹದೂರರೊಬ್ಬರು ತನ್ನ ಅಲುಗುವ ಕೈಗಳಲ್ಲಿ ದೊಡ್ಡ 'ಯೂನಿಯನ್ ಜೇಕ್' ಒಂದನ್ನು ಹಿಡಕೊಂಡು ನಡೆದಿದ್ದರು. ಮೆರವಣಿಗೆಯ ಹಿಂದೂ ಮುಂದೂ ಎರಡು ಲೋರಿಗಳು ಓಡಾಡುತ್ತಾ, ಸೋತ ದಿಬ್ಬಣವಾಲರಿಗೆ ಅವರವರ ಅಭಿರುಚಿಯ ಪಾನೀಯಗಳನ್ನು ಕೊಡುವುದರಲ್ಲಿ ನಿರತವಾಗಿದ್ದುವು. ಮೆರವಣಿಗೆಯಲ್ಲಿ ಮೂರು ಎಂಬ್ಯುಲೆನ್ಸ್ ಕಾರುಗಳೂ ಇದ್ದುವು. ಸ್ಫೂರ್ತಿರಸವೇರಿ ಮೆರವಣಿಗೆಯವರು ರಸ್ತೆಯಲ್ಲಿ ಬಿದ್ದಾಗಲೆಲ್ಲಾ ಅವರನ್ನೆತ್ತಿ ಕಾರುಗಳೊಳಗೆ ಹಾಕಲು ಸ್ವಯಂ ಸೇವಕರು ತಯಾರಿದ್ದರು. ಈ ಮೆರವಣಿಗೆಯವರು ಯಾವದೇ 'ಬರೆಹ ಹಲಗೆ'ಗಳನ್ನೆತ್ತಿ ಹಿಡಕೊಂಡಿರಲಿಲ್ಲ; ಯಾವ ಘೋಷವನ್ನೂ ಎಬ್ಬಿಸುತ್ತಿರಲಿಲ್ಲ. ಯಾಕೆಂದರೆ ಅಂಥವುಗಳ ಆಗತ್ಯವು ನಿಜಕ್ಕೂ ಇರಲಿಲ್ಲ. ಆ ಮೆರವಣಿಗೆವಾಲರ ಮುಖಗಳಿಂದ ಹೊರಬಿದ್ದ ವಿಪರೀತ ಸುವಾಸನೆಯು ಅವರ ಪ್ರತ್ಯಕ್ಷಾಗಮನಕ್ಕೆ ಮೊದಲೇ ದಾರಿಯುದ್ದಕ್ಕೂ ಹರಡಿ, ಈ ಮರೆಯಲಾಗದ ದೃಶ್ಯವನ್ನು ನೋಡಲು ಆಸುಪಾಸಿನವರೆಲ್ಲಾ ತಂತಮ್ಮ ಮನೆಯಿಂದ ಓಡೋಡಿ [illegible] ನಿಲ್ಲುವಂತೆ ಮಾಡಿದ್ದಿತು.

ಮೆರವಣಿಗೆಯು ನಿಧಾನವಾಗಿ ಪಟ್ಟಣದ ಮುಖ್ಯ ಬೀದಿಗಳಲ್ಲೆಲ್ಲಾ ಸಾಗಿತು.

ವಿ[illegible]ದದಲ್ಲಿ

ಹೊಸ ಅಲ್ಪ ಸಂಖ್ಯಾಕ ಸಮಾಜ

["ROMNEY' ಯಿಂದ]

ಹೆಚ್ಚಿನ ಆಫೀಸುಗಳ ಬಾಗಿಲು ಹಾಕಿದ್ದಿತು; ಅಥವಾ ಕೆಲವೇ ನೌಕರರು ಮಾತ್ರ ಕೆಲಸಮಾಡುತಿದ್ದರು. ಮೆರವಣಿಗೆಯು ಸಾರ್ವಜನಿಕ ಸಭೆಯು ಏರ್ಪಾಡಾಗಿದ್ದ ಸಮುದ್ರ ಕಿನಾರೆಯತ್ತ ತಿರುಗಿತು; ಸಭಾರಂಭವಾಯಿತು ರಾವ್ ಸಾಹೇಬ್ ರಾಮಸ್ವಾಮಿಗಳು—ಅ. ಭಾ. ಪಾನನಿರೋಧಕ ನಿರೋಧೀ ಲೀಗಿನ ಅಧ್ಯಕ್ಷರು—ಸರ್ವಾನುಮತದಿಂದ ಆಗ್ರಾಸನಾರೂಢರಾದರು.

ಪ್ರಾರ್ಥನೆಯೊಂದಿಗೆ ಸಭಾಕಾರ್ಯಕ್ರಮಾರಂಭ

ತಮ್ಮೆಲ್ಲರ ಸರ್ವಸಮಾನಹಿತವೊಂದರ ಸಾಧನೆಗಾಗಿ ಎಂತಹ ತ್ಯಾಗಕ್ಕಾದರೂ ತಾವು ಸಿದ್ಧರೆಂದು ತಮ್ಮ ಅಚಲ ವಿಧೇಯತಾ ಪ್ರತಿಜ್ಞೆಯನ್ನು ಕಳುಹಿದ್ದ ಪ್ರಾಂತ್ಯದ ವಿವಿಧ ಜಿಲ್ಲಾ ಸಂಸ್ಥೆಗಳ ಪರವಾಗಿ ಪ್ರತಿನಿಧಿಗಳಿಂದ ಅಭಿವಂದನೆಗಳರ್ಪಿಸಲ್ಪಟ್ಟುವು.

ಆ ಮೇಲೆ ಕಿವಿಕಿವುಡಾಗುವ-ದಿಕ್ಕುದೆಸೆಗಳು ಪ್ರತಿಧ್ವನಿ ಕೊಡುವ—ಪ್ರಚಂಡ ಚಪ್ಪಾಳೆ,ಜಯ ಘೋಷಗಳ ನಡುವೆ ಅಧ್ಯಕ್ಷರು ಭಾಷಣಕ್ಕೆದ್ದರು. ಪ್ರಾಂತ್ಯದ ವಿವಿಧ ಭಾಷಾವಾರು ಭಾಗಗಳಿಗೆ ಸಂಬಂಧಿಸಿದವರು ಇಲ್ಲಿ ನೆರೆದಿದ್ದಾರಾದ್ದರಿಂದ, ತಾನು ನಿಷ್ಪಕ್ಷಪಾತತೆಯ ಪಾಲನೆಗಾಗಿ ಪ್ರತಿಯೊಂದು ಭಾಷೆಯಲ್ಲೂ ಮಾತನಾಡುವೆನೆನ್ನುತ್ತಾ ರಾವ್ ಸಾಹೇಬ್ ರಾಮಸ್ವಾಮಿಗಳು ಪ್ರಥಮತಃ ಮಳೆಯಾಳದಲ್ಲಿ ತೊಡಗಿದರು "ಈ ಪ್ರಾಂತ್ಯದ ಚರಿತ್ರೆಯಲ್ಲೇ ಇದೀಗ ಪ್ರಥಮ ಬಾರಿ, ಬೇರೆಬೇರೆ ಧರ್ಮಾವಲಂಬಿಗಳು, ಭಿನ್ನ ಭಿನ್ನ ರಾಜಕೀಯ ಪಕ್ಷಾನುಯಾಯಿಗಳು, ಹಾಗೂ ಪ್ರತಿಯೊಂದು ವಿಧದ ಉದ್ದಿಮೆಗಳಲ್ಲೂ ಇರುವವರು' ಇಲ್ಲಿ ಒಂದೇ ನಿಲ್ದಾಣದಲ್ಲಿ ಒಟ್ಟಾಗಿದ್ದಾರೆ. ಇಲ್ಲಿ ನೆರೆದವರಲ್ಲಿ ವೇದಿಗಳಿದ್ದಾರೆ; ಸಂಡಿತರಿದ್ದಾರೆ ಅಧ್ಯಾಪಕರಿದ್ದಾರೆ; ಸಾಹುಕಾರರಿದ್ದಾರೆ ಬೇಂಕರರಿದ್ದಾರೆ; ಬ್ಲೇಕ್ ಮಾರ್ಕೆಟಿನವರಿದ್ದಾರೆ. ವಕೀಲರು ಮತ್ತು ಬೀದಿ ಭಿಕಾರಿಗಳು-ಅಧಿಕಾರಿಗಳು ಮತ್ತು 'ಕಡಿಮೆ ಸಂಬಳ, ಹಸಿವು ಪೀಡೆಯವರು' ಎಂಬ ಚಿಲ್ಲೆ ತೊಟ್ಟಿರುವ ನಾನ್ ಗಝೆಟೆಡ್ ನೌಕರರು-ಎಲ್ಲರೂ ಇದ್ದಾರೆ. ಲೆಜಿಸ್ಲೇಟಿವ್ ಎಸೆಂಬ್ಲಿ, ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಕಾನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ಹಲವು ಸದಸ್ಯರನ್ನಿ ಕಾಣುವಾಗ ನನಗೆ ವಿಶೇಷತಃ ಆನಂದವಾಗುತ್ತಿದೆ. ನಾವೀಗ ಇಲ್ಲಿ ಸರ್ವರಿಗೂ ಸಮಾನವಾಗಿರುವ ಒಂದು ಸಂಪ್ರದಾಯಕ್ಕೆ, ಸಂಸ್ಕೃತಿಗೆ ಅರ್ಥಾತ್ ಅಮೃತಪಾನದ ಸಮಾನಾರಾಧನೆಗೆ ಕಟ್ಟುಬಿದ್ದು ಒಟ್ಟಾಗಿದ್ದೇವೆ" ಎನ್ನುತ್ತಾ ಅಧ್ಯಕ್ಷರು ಪಾನದ ಮಹತ್ವವನ್ನು ವರ್ಣಿಸುವ ಒಂದು ಸಂಸ್ಕೃತ ಶ್ಲೋಕವನ್ನು ಘಣಘಣಕ್ಕನೇ ಪಠಿಸಿದರು. ತಪ್ಪುಹಾದಿ ಹಿಡಿದಿರುವ ಕೆಲವು ಅನನುಭವಿಗಳು (ತಮ್ಮ ಜೀವಮಾನದಲ್ಲೇ ತಟಕು ಪಾನದ ರುಚಿ ನೋಡಿರದವರು) ಅಮಲು ಸೇವನೆಯು ಮನುಷ್ಯನ ಧೀಶಕ್ತಿಯನ್ನು ಕುಂದಿಸಿ ದೈಹಿಕ ಬಲವನ್ನು ನಾಶಮಾಡುವದೆಂದು ಪ್ರಚಾರಮಾಡುತ್ತಿರುವದನ್ನು ಅಧ್ಯಕ್ಷ ರಾವ್ ಸಾಹೇಬರು ತೀವ್ರವಾಗಿ ಖಂಡಿಸುತ್ತಾ ಎದೆತಟ್ಟಿಕೊಂಡು ಘರ್ಜಿಸಿದರು: "ಇಕೊಳ್ಳಿ, ಇತ್ತ ನೋಡಿ. ನಾನು ನನ್ನ ಆಯುಷ್ಯದ ಪ್ರತಿಯೊಂದು ದಿನವೂ ಕುಡಿಯುತ್ತಾ ಬಂದಿದ್ದೇನೆ. ಇಂತಹ ನಾನು, ಆ ಪಾನ ವಿರೋಧೀ ದುರ್ಬಲ ಹಾಡಿಪೋರರಿಗೆ ಬಹಿರಂಗ ಆಹ್ವಾನ ಕೊಡುತ್ತಿದ್ದೇನೆ. ಬರಲಿ, ಅವರಲ್ಲಾರೇ ಆದರೂ ನನ್ನೊಡನೆ ಖಾಡಾಖಾಡಿಯಾಗಿ ಮುಷ್ಟಿಯುದ್ಧ, ಮಲ್ಲಯುದ್ಧ, ಕತ್ತಿಯುದ್ಧ ಅಥವಾ ವಾದಯುದ್ಧ, ಇವುಗಳಲ್ಲಾವುದರಲ್ಲಾದರೂ ನಿಂತು ನೋಡಲಿ. ಪರಿಣಾಮವೇನಾಗಬಹುದೆಂಬ ಕುರಿತು ನನಗೆ ರವಷ್ಟು ಅನುಮಾನವಿಲ್ಲ"-ರಾವ್ ಸಾಹೇಬರ ಈ ಮಾತುಗಳು ಸಭೆಯಲ್ಲಿ ಅತ್ಯುತ್ಸಾಹದ ಧ್ವನಿ ಹಾಗೂ ತಿರಸ್ಕಾರದ ನಗೆಯ ಕೋಲಾಹಲವನ್ನೆಬ್ಬಿಸಿ ಬಿಟ್ಟುವು.

ತಮ್ಮ ಬೇಡಿಕೆಗಳ ರಾಜಕೀಯಾಂಗದ ಕಡೆಗೆ ತಿರುಗುತ್ತಾ ಅಧ್ಯಕ್ಷರೆಂದರು: "ಕೆಲವು ವಿಶೇಷ ಹಕ್ಕು ಬಾಧ್ಯತೆಗಳನ್ನು ಪಡೆಯತಕ್ಕ ಒಂದು ಪ್ರತ್ಯೇಕ ಅಲ್ಪಸಂಖ್ಯಾಕರೆಂದು ನಮ್ಮನ್ನು ನಾವೀಗ ಘೋಷಿಸಿಕೊಳ್ಳಬೇಕಾದ ಕಾಲ ಬಂದಿದೆ, ನಮ್ಮ ವಿರುದ್ಧವಾಗಿ ಅನರ್ಥಕಾರೀ ಅಪಪ್ರಚಾರಕ್ಕೆಳೆದಿರುವ (ಆದರೆ ಕಾಫೀ ಸೇವನೆಯಲ್ಲಿ ಸುಪ್ರಬುದ್ಧನಿರುವ) ನಮ್ಮ ಪ್ರಮುಖ ವೈರಿಯು, ನಾವು ಒಟ್ಟು ಜನಸಂಖ್ಯೆಯ ಸೇಕಡಾ ೫ರಷ್ಟು ಮಾತ್ರ ಇದ್ದೇವೆಂದು ನಮ್ಮ ಮೊತ್ತವನ್ನು ತೀರಾ ಕಡಿಮೆ ಮಾಡಿ ತೋರಿಸಿದ್ದಾನೆ ಅವನ ಈ ಸಂಖ್ಯೆಯೇ ಸರಿಯೆಂದೊಪ್ಪಿಕೊಂಡರೂ, ನಾವು ಸಂಖ್ಯಾವಾರಿಗಾಗಿ ಸಿಖ್ಖರಷ್ಟು ಅಥವಾ ಕ್ರೈಸ್ತರಷ್ಟು ಆಗುತ್ತೇವೆ. ಮತ್ತು ನಮ್ಮ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಾ ಹೋಗುತ್ತಿದೆ. ನಮ್ಮ ಜೀವ ಮತ್ತು ಸಂಸ್ಕೃತಿಯನ್ನೇ ಧ್ವಂಸಮಾಡಿ ಬಿಡುವ ಕೆಲವು ಹೆಜ್ಜೆಗಳನ್ನಿಡಲು ಅವಾಸೀ ಬಹುಸಂಖ್ಯಾಕರೀಗ ಮುಂದಾಗಿದ್ದಾರೆ. ಈ ಕುರಿತು ನಮ್ಮೊಡನೆ ಪರ್ಯಾಲೋಚಿಸಿಕೊಳ್ಳುವಷ್ಟು ಔದಾರ್ಯವನ್ನೂ ತೋರಿಸದೆ, ಆ ಘಾತದ ಮೇಲೆ ಅಪಮಾನವನ್ನೂ ಮಾಡಿದ್ದಾರೆ. ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯ ಸಮೂಲನಾಶಕ್ಕಾಗಿ ನಮ್ಮ ಮೇಲೆ ಬಿದ್ದಿರುವ ಈ ಉದ್ರೇಕಿಗಳ ಕೈಯಲ್ಲೇ ನಮ್ಮ ಅದೃಷ್ಟವನ್ನು ಬಿಟ್ಟು ನಾವು ಸುಮ್ಮಗಿರುವದೆಂದರೆ ಹೇಗೆ? ಈ ಚಹಾಪಾನೀ ಚಂಚಲರು—ಕಾಫೀ ಜೀಪುವ ಕಾಪುರುಷರು-ಕೋಕೋ ಹೀರುವ ಕೊಂಕುವಾಲರು-ಓವಲ್ಟಿನ್ ನೆಕ್ಕುವ ಒಕ್ಕಣ್ಣನವರು—ಈ ರೀತಿ ಸಂಘಟನೆಯಿಂದ ಸಂಚು ವಂಚನೆ ಹೂಡಿ ನಮ್ಮ ಜನ್ಮಸಿದ್ಧ ಹಕ್ಕನ್ನೇ ತಿರಸ್ಕರಿಸುವದನ್ನು, ಈ ಭೂಮಿ ಹುಟ್ಟಿದಂದಿನಿಂದ ಇದ್ದ ಆ ಸ್ವಾತಂತ್ರ್ಯವನ್ನು ಅಪಹರಿಸುವದನ್ನು, ನಾನು ಪ್ರಬಲವಾಗಿ ನಿಷೇಧಿಸುತ್ತೇನೆ ಅಟ್ಲಾಂಟಿಕ್ ಘೋಷಣೆ ಪತ್ರದ ಚತುಸ್ವಾತಂತ್ರ್ಯವೀಗ ಎಲ್ಲಿಗೆ ಹೋದುವು? ಹಿಸ್ ಎಕ್ಸಲೆನ್ಸಿ ಮದ್ರಾಸ್ ಗವರ್ನರರು, ಅಲ್ಪ ಸಂಖ್ಯಾಕರ ರಕ್ಷಣೆಗಾಗಿ ತನಗಿತ್ತಲ್ಪಟ್ಟಿರುವ ವಿಶೇಷಾಧಿಕಾರವನ್ನು ಈ ಸಂದರ್ಭದಲ್ಲಿ ಉಪಯೋಗಿಸಿ ಈ ದುರ್ಯೋಜನೆಗೆ ತನ್ನ ಸಮ್ಮತಿಯನ್ನು ನಿರಾಕರಿಸಬೇಕೆಂದು ನಾನವರನ್ನು ಕೇಳಿಕೊಳ್ಳುತ್ತೇನೆ".

ಯುನಿಫೋರ್ಮ್‌ಧಾರಿ ಸ್ವಯಂಸೇವಕನೊಬ್ಬನು ನೀಡಿದ ಬಾಟ್ಲಿಯೊಂದರಿಂದ ದೀರ್ಘ ಗುಟುಕೊಂದನ್ನು ಹೀರಿಕೊಂಡು ಅಧ್ಯಕ್ಷರು ಮುಂದುವರಿಸಿದರು: "ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ' ಎಂಬ ಮೂಲಭೂತ ತತ್ವವನ್ನು ಜ್ಯಾರಿಗೆ ತರುವುದು ಎಲ್ಲಕ್ಕಿಂತ ಮುಖ್ಯವೆನ್ನುತ್ತೇನೆ. ಈ ಪ್ರಾಂತ್ಯದ ಒಟ್ಟು ಕಂದಾಯದಲ್ಲಿ ಸೇಕಡಾ ೫೦ರಷ್ಟನ್ನು ಕೊಡುವವರು ನಾವೆಂಬುದನ್ನು ನಮ್ಮ ಸಮರ್ಥ ವೈರಿಯೇ ಒಪ್ಪಿಕೊಂಡಿದ್ದಾನೆ. ಆದ್ದರಿಂದ ಸಮಾನತೆ ಮತ್ತು ನ್ಯಾಯನೀತಿಯ ಯಾವದೇ

ಕುಟುಂಬದೊಳಗಿನ ಚಿಲ್ಲರೆ ಬೇನೆ

ಪ್ರಾಸಂಗಿಕವಾಗಿ [illegible] ಮುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವುದಿಲ್ಲ —ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ [illegible]

ಜಮೇರಿಯನ್ ಜೀವನ ಮಿಕ್ಸ್ಚರ್ [illegible]

[illegible]

ಜಮೇರಿಯನ್ ಮೆಡಿಕಲ್ [illegible] ಮುಂಬಯಿ [illegible]

Why Worry?

Do not feel disheartened for not getting BONUS.

We offer you a guaranteed BONUS of Rs. 10/- per THOUSAND under our New Scheme.

Please apply immediately:—

A. S. Kini,
Managing Director

UNITED KARNATAK INSURANCE Co., Ltd.

HEAD OFFICE: **DHARWAR.**

For further particulars apply to —

Divisional Manager, Court Road **UDIPI**, S India	or	Branch Manager, 10 Bismilla Bldg Opp. B B C I Stn Dadar **BOMBAY 14.**
Or		Or
Divisional Manager, Narayan Nivas Market Road **Bangalore City.**		Branch Manager, MULLAKKAL Alleppey. (Travancore State)

Or

To our nearest Agents.

ವಿಧಾನದಿಂದನೋಡಿದರೂ ಪ್ರತಿಯೊಂದು ನ್ಯಾಯವಿಧಾಯಕ ಸಂಸ್ಥೆಗಳಲ್ಲೂ ಶೇ. ೫೦ರಷ್ಟು ಸ್ಥಾನಗಳು ನಮಗೆ ದೊರೆಯಲೇ ಬೇಕಾಗಿದೆ. ಆದರೂ ನಾವು ಉದಾರಿಗಳಾಗಬೇಕು. ಪ್ರತ್ಯೇಕ ಮತದಾನ ಪದ್ಧತಿಯ ಆಧಾರದಿಂದ ಪ್ರತಿಯೊಂದು ಸರಕಾರೀ ಹಾಗೂ ಖಾಸಗೀ ಸರ್ವಿಸುಗಳಲ್ಲಿಯೂ, ಪ್ರಾಂತಿಕ ಎಸೆಂಬ್ಲಿ ಮತ್ತು ಘಟನಾ ಸಮಿತಿಯಲ್ಲಿಯೂ ಶೇ. 25ರಷ್ಟು ಸ್ಥಾನಗಳನ್ನು ನಮಗೆ ಕೊಟ್ಟಲ್ಲಿ ನಾವು ಸಮಾಧಾನಗೊಳ್ಳುವೆವು. ಪ್ರಾಮುಖ್ಯ ಅಲ್ಪಸಂಖ್ಯಾಕರಾದ ನಮ್ಮ ಪ್ರತಿನಿಧಿಗಳಿಲ್ಲದ ನಡುಕಾಲ ಸರಕಾರವು ಎಂದೂ ಸಂಪೂರ್ಣತೆ ಪಡೆವಂತಿಲ್ಲ. ಹಿಂದೀಯರ ಮುಖ್ಯ ರಾಜಕೀಯ ಪಕ್ಷಗಳೆರಡರ ಪೈಕಿ ಯಾವುದೊಂದು ಪಕ್ಷವೂ ವೈಸರಾಯರಿಗೆ ತಾವೊಪ್ಪಿಸಿದ್ದ ಹೆಸರು ಪಟ್ಟಿಗಳಲ್ಲಿ ನನ್ನ ಹೆಸರನ್ನು ಸೇರಿಸದೆ ಬಿಟ್ಟದ್ದು ಅತ್ಯಂತ ಶೋಚನೀಯವಿದೆ. ನಮ್ಮೀ ನ್ಯಾಯಬದ್ಧ ಬೇಡಿಕೆಗಳು ಮನ್ನಿಸಲ್ಪಡದಿದ್ದರೆ ನಾವು 'ಪ್ರತ್ಯಕ್ಷ ಕಾರ್ಯಾಚರಣೆ' ಕೈಗೊಳ್ಳುವೆವೆಂಬುದನ್ನು ಅವರು ತಿಳಿದಿರಲಿ. ನಮ್ಮ ಹೋರಾಟವು ಗಿಡ್ಡ ಮತ್ತು ಕಠೋರವಾಗಲಿದೆ ಈ ಹೋರಾಟದ ಪ್ರಥಮ ಹೆಜ್ಜೆಯಾಗಿ ನಮ್ಮ ಸದಸ್ಯರಿಗೀಗ ಆಜ್ಞಾಪಿಸುತ್ತೇನೆ- ನಮ್ಮ ಪಕ್ಷಕ್ಕಿರದ ಯಾವುದೇ ಸಂಸ್ಥೆಯಿಂದಾಗಲಿ ನಿಮಗೆ ದೊರೆತಿದ್ದ ಸರ್ವ ಬಿರುದುಗಳನ್ನೂ ತ್ಯಾಗಮಾಡಿರಿ. ನನ್ನ ರಾವ್ ಸಾಹೇಬ್ ಬಿರುದನ್ನೂ, ಕಳೆದ ಐದು ವರುಷಗಳಿಂದ ನನ್ನ ಪಾಲಿಗೆ ಮೀಸಲಿಡಲ್ಪಟ್ಟಿದ್ದರೂ ಇದು ವರೆಗೆ ದೊರೆಯದಿದ್ದ ರಾವ್ ಬಹದೂರು ಹುದ್ದೆಯನ್ನೂ, ಅಗಸರಕೇರಿ ಸಂಗೀತ ಸಭೆಯು ಇತ್ತೀಚೆಗೆ ನನಗಿತ್ತಿರುವ 'ಸಂಗೀತ ಚಕ್ರವರ್ತಿ' ಬಿರುದನ್ನೂ, ಬೇರೆ ಅಸಂಖ್ಯಾಕ ಬಿರುದುಗಳನ್ನೂ ತ್ಯಜಿಸಿ ನಾನೇ ಈ ಕುರಿತು ಮೇಲ್ಪಂಕ್ತಿ ಹಾಕುತ್ತೇನೆ. ಈ ವ್ಯರ್ಥ ಮತ್ತು ಟೊಳ್ಳು ಬಿರುದುಗಳ ಬದಲಿಗೆ ನಮ್ಮಲ್ಲಿಯ ಯಥಾರ್ಥ ಹಾಗೂ ನುರಿತ ಕಾರ್ಯಕರ್ತರಿಗೆ, ಅವರವರ ತರಗತಿಗನುಸಾರವಾಗಿ ಸ್ವತಃ ನಮ್ಮ ಲೀಗು ಈ ಕೆಳಗಿನ ಬಿರುದುಗಳನ್ನು ಕೊಡಲಿದೆ—'ಮಧುದಾಸ' 'ಮಧುಮಂತ್ರ ಪ್ರವೀಣ' 'ಮಧು ಸೇವಾ ನಿರತ' ಇತ್ಯಾದಿ, ಇತ್ಯಾದಿ. ನಾನೀಗ ನನಗೇನೇ 'ಮಧು ಸೇವಾನಿರತ' ಬಿರುದನ್ನು ಕೊಟ್ಟುಕೊಳ್ಳುತ್ತೇನೆನ್ನಲು ಅತ್ಯಾನಂದಪಡುತ್ತೇನೆ ಇನ್ನು ಮುಂದೆ ನನ್ನನ್ನು ಇದೊಂದೇ ಬಿರುದಿನಿಂದ ಕರೆಯತಕ್ಕದ್ದೆಂದು ಈ ಮೂಲಕ ಜಾಹೀರು ಮಾಡುತ್ತೇನೆ" (ಗಟ್ಟಿ ಹಾಗೂ ದೀರ್ಘಕಾಲ ಸಭಿಕರ ಚಪ್ಪಾಳೆಯಾಗುವದು 'ಮಧು ಸೇವಾನಿರತ ಝಿಂದಾಬಾದ್' ಜಯ ಘೋಷವು ಧುಮುಧುಮಿಸಿ ಏಳುವದು).

ಸಭೆಯು ಈ ವಿಧೇಯತೆ ಮತ್ತು ಉತ್ಸಾಹವು ಅಧ್ಯಕ್ಷರನ್ನು ಮೋಹಿಸಿ ಮಂಕಗೊಳಿಸಿದಂತೆ ತೋರಿತು. ಈ ಭಾವನಾ ಜೋಂಪೇರಿ ಅವರ ಧ್ವನಿ ನಡುಗಲಾರಂಭಿಸಿತು; ದೇಹ ನಿಧಾನವಾಗಿ ವಾಲಹತ್ತಿತು. ತಾನೀಗ ಏರಿಕೆಯ ತುಟ್ಟತುದಿಗೆ ಬಂದೆನೆಂಬುದು ಅವರಿಗೆ ಗೊತ್ತಾಗಿ, ಅಲ್ಲಿಯೇ ತನ್ನ ಕುರ್ಚಿಯಲ್ಲಿ ಕುಳಿತುಕೊಂಡರು; ಆ ಕೂಡಲೇ ಜೀವನಾಮೃತದ ಪರಮಭಕ್ತರಿಗೆ ಮಾತ್ರ ಲಭ್ಯವಿರುವ ನಿರ್ವಾಣಸ್ಥಿತಿಗೆ ಬಂದರು. ಸಭಾ ಸಂಚಾಲಕರಂತೂ ಇಂತಹ ಸ್ಥಿತಿಯನ್ನು ನಿರೀಕ್ಷಿಸ್ಯೇ ಅದಕ್ಕೆ ತಯಾರಾಗಿಯೇ ಬಂದಿದ್ದರು. ಮಧುಸೇವಾನಿರತರನ್ನು ವಿಶೇಷ ರೀತಿಯಿಂದ ಶೃಂಗರಿಸಿದ್ದ ಪಲ್ಲಕಿಯೊಂದರಲ್ಲಿಟ್ಟು, ಹಿಂದಕ್ಕೂ ಮುಂದಕ್ಕೂ ಓಡಾಡುವ ಎರಡು ಲಾರಿಗಳು ಮತ್ತು ಮೂರು ಎಂಬ್ಯೂಲೆನ್ಸ್ ಕಾರುಗಳೊಂದಿಗೆ ಮೆರವಣಿಗೆ ಮತ್ತೊಮ್ಮೆ ವಾಪಾಸು ಹೊರಟಿತು.

—(SWATANTRA)

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳು

ಲೇಖಕರು:—
ಶ್ರೀ ಕೆ. ಯಸ್. ಹೆಗ್ಡೆ,
ಯಂ. ಎ., ಬಿ. ಎಲ್., ಎಡ್ವಕೇಟ್.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳನ್ನು ಸ್ವಲ್ಪ ಸಮಯಕ್ಕೆ ಮುಂದರಿಸಿದ್ದು ಉತ್ತಮವಾಯಿತು. ಇದರಿಂದ ಈ ಕುರಿತು ಚೆನ್ನಾಗಿ ಯೋಚಿಸಲು ಸಮಯ ಸಿಕ್ಕಿದಂತಾಗಿದೆ. ನಮ್ಮ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಒಂದು ಮಹಾ ಕ್ರಾಂತಿಯು ನೆಲ್ಲು ಆದರೂ ಖಂಡಿತವಾಗಿ ನಡೆಯುತ್ತಲಿದೆ. ಇದರ ಪರಿಣಾಮಗಳು ನಮ್ಮ ಸ್ಥಳೀಕ ರಾಜಕೀಯ ವ್ಯವಹಾರಗಳ ಮೇಲೆಯೂ ಅನಿವಾರ್ಯವಾಗಿ ಆಗಲೇ ಬೇಕು. ಭಾರತದ ಸ್ವಾತಂತ್ರ್ಯವು ತರ್ಕಗಳ ಪರಿಸ್ಥಿತಿಯನ್ನು ದಾಟಿ ಈಗ ನಾವದರ ಮೆಟ್ಟಿಲಲ್ಲಿದ್ದೇವೆ. ಪೂರ್ಣಪ್ರಜಾಸತ್ತಾತ್ಮಕ ಸ್ವತಂತ್ರ ಹಿಂದೂಸ್ಥಾನವನ್ನು ನಾವು ಸದ್ಯದಲ್ಲೇ ಕಾಣಲಿದ್ದೇವೆ. ಇದು ನಮ್ಮೆಲ್ಲರ ಮೇಲೆ ದೊಡ್ಡ ಜವಾಬ್ದಾರಿಯನ್ನು ಹೊರಿಸುವುದು. ನಿಜವಾದ ಪ್ರಜಾಸತ್ತಾ ಪದ್ಧತಿಯಿರಬೇಕಾದರೆ ನಮ್ಮ ಸ್ಥಳೀಕ ಸಂಸ್ಥೆಗಳು ಜೀವಂತವಿರಬೇಕು ನಮ್ಮ ಅನುನಿತ್ಯದ ಜೀವನವು ಉಜ್ಜೀವನಗೊಳ್ಳಬೇಕು. ನಮ್ಮ ಈಗಿನ ಸ್ಥಳೀಕ ಬೋರ್ಡುಗಳು ಅವುಗಳ ಅಧಿಕಾರಕ್ಕಿರುವ ಮಿತಿಗಳಿಂದಾಗಿ ನಮ್ಮ ಪರಕೀಯ ಯಜಮಾನರು ನಮ್ಮೆಡೆಗೆ ಬಿಸಾಡಿದ ಪ್ರಜಾಸತ್ತಿನ ಚೂರುಗಳು ಮಾತ್ರವಿದ್ದು ಅವು ಕೇವಲ ಆಟವಾಡಲಿಕ್ಕೆ ಮಾತ್ರ ಯೋಗ್ಯವಿರುತ್ತವೆ. ಈ ಪರಿಸ್ಥಿತಿಯನ್ನು ಸಂಪೂರ್ಣ ಬದಲಾಯಿಸಬೇಕಾಗಿದೆ. ಇದುತನಕ ಸ್ಥಳೀಕ ಬೋರ್ಡಿನ ಸದಸ್ಯನಾಗುವುದೆಂದರೆ ಅದು ಸಮಾಜದಲ್ಲಿ ಆತನಿಗಿರುವ ಸ್ಥಾನಕ್ಕೆ ಮನ್ನಣೆಮಾತ್ರ ಅದರೊಡನೆ ಜವಾಬ್ದಾರಿ ಏನೂ ಅಲ್ಲ. ಈ ಭಾವನೆಯನ್ನು ಪೂರ್ಣವಾಗಿ ತಿದ್ದಬೇಕಾಗಿಯದೆ. ಜನರ ಅಜ್ಞಾನವನ್ನು ಹೋಗಲಾಡಿಸಲು ಮಹತ್ವದ ಯತ್ನಗಳು ಬೇಕಾಗುವುದು ಸ್ವಾತಂತ್ರ್ಯವು ನಿಜವಾಗಿ ಬೇಕಾದರೆ ಸ್ಥಳೀಕ ಸ್ವತಂತ್ರದ ಸಂಸ್ಥೆಗಳು ಜೀವಂತವಿದ್ದು ತುಂಬಾ ಚಟುವಟಿಕೆಯಿಂದ ಕೂಡಿರಬೇಕು ಇಂಥ ಜೀವಂತ ಸಂಸ್ಥೆಗಳ ಮೂಲಕವೇ ದೇಶದ ಪ್ರಜಾಸತ್ತಾತ್ಮಕ ಜೀವನವನ್ನು ರೂಪಿಸಬೇಕು. ಸ್ಥಳೀಕ ಸಂಸ್ಥೆಗಳು ತಮ್ಮ ಪಾಲಿನ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಕೈಕೊಳ್ಳಬೇಕು.

ಈ ದೃಷ್ಟಿಯಿಂದ ಪರಿಶೀಲಿಸಿದರೆ ನಮ್ಮಲ್ಲಿಯ ರಾಜಕೀಯ ಪಕ್ಷಗಳು ತಮ್ಮ ಉಮೇದ್ವಾರರನ್ನು ನಿಲ್ಲಿಸದೆ ವ್ಯಕ್ತಿಗಳು ವ್ಯಕ್ತಿಶಃ ಹೋರಾಡಲು ಬಿಟ್ಟು ಬಿಟ್ಟದ್ದು ಹಿತಕರವೆನ್ನುವಂತಿಲ್ಲ.

ಈ ಹೋರಾಟಕ್ಕೆ ಒಂದು ಕಾರ್ಯಕ್ರಮದ ಉದ್ದೇಶವಿಲ್ಲ. ಮತದಾರರು ಯಾವ ಧ್ಯೇಯಕ್ಕಾಗಿ ಮತಕೊಡಬೇಕೆಂದಿಲ್ಲ. ಸ್ಪಷ್ಟವಾದ ಕಾರ್ಯಕ್ರಮವನ್ನು ಮತದಾರರ ಮುಂದಿರಿಸಿ ಅದಕ್ಕೆ ಅವರ ಮಂಜೂರಾತಿ ಪಡೆಯಬೇಕು.

ಎದುರಾಳಿಗಳಿದ್ದೇ ಚುನಾವಣೆಗಳು ನಡೆಯುವಂತೆ ಯತ್ನಿಸಬೇಕಾಗಿ ಕೆಲವು ಮಂದಿ ಸ್ನೇಹಿತರು ನನಗೆ ಹೇಳುತಿದ್ದಾರೆ. ತಾವು ಸ್ವತಃ ಮೆರೆಯುವುದಕ್ಕಾಗಿ ಸ್ಥಾನಗಳನ್ನು ಪಡೆಯುವಂತೆ ಚುನಾವಣೆಗಳೇ ನಡೆಯದಂತೆ ತತ್ವಗಳನ್ನು ಬದಿಗಿಟ್ಟು ವರ್ತಿಸುವುದು ಸಾಮಾಜಿಕ ಹಿತ ಸಾಧಿಸುವ ದಾರಿಯಲ್ಲ. ರಾಜಕೀಯ ರಂಗದಲ್ಲಿ ಅದೊಂದು ಮಹಾ ಪಾಪನೇ ಸರಿ. ಸರಿಯಾಗಿ ನಡೆಸಲ್ಪಡುವ ಚುನಾವಣೆಯಿಂದ ತುಂಬಾ ರಾಜಕೀಯ ಪ್ರಯೋಜನವಿದೆ. ಹಳ್ಳಿಗಳ ಮೂಲೆಗಳಲ್ಲಿರುವವರಿಗೆ ಕೂಡಾ ರಾಜಕೀಯ ಮಾಹಿತಿಯನ್ನು ಒದಗಿಸಿ ಜನರಿಗೆ ಈ ಬಗೆಯ ಶಿಕ್ಷಣ ಕೊಡಲು ಇದೊಂದು ಉತ್ತಮ ಸಂದರ್ಭ. ವ್ಯವಸ್ಥೆ ಹಾಗೂ ಶಿಸ್ತು ಇವುಗಳ ಪಾಠ ನಮಗೆ ಇದರಿಂದ ದೊರೆಯುತ್ತದೆ. ವ್ಯಕ್ತಿದ್ವೇಷಗಳು ಇದರಲ್ಲಿ ಸೇರಬಾರದು. ರಾಜಕೀಯ ನೀತಿಯು ಮಲಿನವಾಗಬಾರದು. ನಾವು ಸ್ವತಂತ್ರ ಹಿಂದೂಸ್ಥಾನದ ಮೆಟ್ಟಲಲ್ಲಿ ಇರುತ್ತೇವೆ. ಪ್ರಜಾಸತ್ತಾ ಪದ್ಧತಿ ನಮ್ಮ ಧ್ಯೇಯ. ಈ ಉದ್ದೇಶವನ್ನೂ ಮನಸಿನಲ್ಲಿಟ್ಟುಕೊಂಡು ರಾಜಕೀಯ ರೀತಿಗೆ ಭಂಗ ಬರುವಂತ ಯಾವ ಕಾರ್ಯವನ್ನು ಮಾಡಲಾಗದು. ಒಂದು ತತ್ವಕ್ಕಾಗಿ ಕಾದಾಡುವ ಉಮೇದ್ವಾರನಿಗೆ ರಾಜಕೀಯ ಅಪಜಯದ ಹೆದರಿಕೆ ಇರಲಾಗದು. ಇಂಥ ಅಪಜಯಗಳು ಮುಂದಿನ ವಿಜಯದ ಮೆಟ್ಟಲುಗಳಾಗುವವೆಂಬುದನ್ನು ಇತಿಹಾಸದಲ್ಲಿ ಎಷ್ಟೋ ಬಾರಿ ಕಾಣುತ್ತೇವೆ.

ಈಗಿನ ಸ್ಥಳೀಕ ಬೋರ್ಡುಗಳ ಘಟನೆಯಲ್ಲಿ ಅನೇಕ ಮಿತಿಗಳಿರುತ್ತವೆ. ಪ್ರಾಂತ್ಯ ಹಾಗೂ ಕೇಂದ್ರದಲ್ಲಿ ಜನರ ಸರಕಾರಗಳು ಬಂದಿರುವುದರಿಂದ ಈ ಕೊರತೆಗಳು ಬೇಗನೆ ಪರಿಹರಿಸಲ್ಪಡುವವೆಂದು ನಿರೀಕ್ಷಿಸಬಹುದು.

ನಮ್ಮ ಬೋರ್ಡಿನ ಇತ್ತೀಚಿಗಿನ ಆಡಳಿತೆಯನ್ನು ನಾವು ಪರಿಶೀಲಿಸಬೇಕು. ಆಡಳಿತೆಯ ಕುರಿತು ನಾವು ಅಭಿಮಾನಪಡುವಂತಿಲ್ಲವೆಂದು ನಾನು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮಹಾ ಜನರ ದೃಷ್ಟಿಯಲ್ಲಿ ಇದು ಬಹಳ ಕೆಳಗೆ ಬಂದಿರುತ್ತದೆ. ಈ ಆಡಳಿತೆಯ ಕುರಿತು ಜನರಾಡುವ ಪಿಸುಮಾತುಗಳನ್ನು ಕೇಳುವಾಗ ನಾವು ನಾಚಿಕೆಯಿಂದ ತಲೆ ತಗ್ಗಿಸ ಬೇಕಾಗಿ ಬಂದಿದೆ. ಇದು ಮುಗಿಯುತ್ತದೆಂಬುದು ಸಂತೋಷದ ವಿಷಯ. ಮುಂಬರುವ ಚುನಾವಣೆಯಲ್ಲಿ ಮತದಾರರ ಆಶೀರ್ವಾದ ಪಡೆಯಲಿಚ್ಛಿಸುವ ನನ್ನ ಸ್ನೇಹಿತರಿಗೆ ಈ ಕೆಳಗಿನ ಸೂಚನೆಗಳನ್ನು ಕೊಡಲು ಬಯಸುತ್ತೇನೆ. ಇದನ್ನು ಚುನಾವಣೆಯಲ್ಲಿ ತಮ್ಮ ಕಾರ್ಯಕ್ರಮವಾಗಿ ಮತದಾರರ ಮುಂದಿರಿಸಬೇಕು. ಕೆಲವೆಡೆಗಳಲ್ಲಿ ಇದರಿಂದ ನಾವು ಕೊಂದಲವೆಬ್ಬಿಸುವಂತಾದೀತೆಂಬುದು ನಿಜ. ಆದರೆ ಇದರಿಂದ ನಮ್ಮ ಜಿಲ್ಲೆಯ ಹಾಗೂ ನಮ್ಮೆಲ್ಲರ ಹಿತವು ಸಾಧಿಸಲ್ಪಡುವುದು.

ಇಡೀ ಜಿಲ್ಲೆಯಲ್ಲಿ ಮುಖ್ಯ ಗ್ರಾಮಗಳಿಗೆ ಪರಸ್ಪರ ಹೋಗಿ ಬರಲು ರಸ್ತೆಗಳು ಬೇಕು. ಹಳ್ಳಿಗಳಿಂದ ವ್ಯಾಪಾರೀ ಕೇಂದ್ರಗಳಿಗೆ ಹೋಗುವ ಮುಖ್ಯ ರಸ್ತೆಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಈ ಬಗ್ಗೆ ಒಂದು ಚೆನ್ನಾಗಿ ವಿಚಾರಿಸಿದ ಪೂರ್ಣ ಯೋಜನೆಯನ್ನು ತಯಾರಿಸಿ ಅದನ್ನು ಇಂತಿಷ್ಟು ವರ್ಷಗಳ ಒಳಗೆ ಜ್ಯಾರಿಗೆ ತರುವಂತಿರಬೇಕು. ಮುಖ್ಯ ಹೊಳೆಗಳಿಗೆ ಬರುವ ಹತ್ತು ವರ್ಷಗಳ ಒಳಗೆ ಸಂಕಗಳನ್ನು ಕಟ್ಟಬೇಕು. ಜರ್ಮನಿ ಮೊದಲಾದ ದೇಶಗಳಲ್ಲಿರುವಂತೆ ಉತ್ತಮ ರೀತಿಯ ರಸ್ತೆಗಳನ್ನು ತಯಾರಿಸುವ ಉದ್ದೇಶವಿರಬೇಕು. ಮುಖ್ಯ ರಸ್ತೆಗಳಿಗೆಲ್ಲ ಅಸ್ಫಾಲ್ಟು ಹಾಕಬೇಕು.

2. ಪ್ರಾಥಮಿಕ ಶಿಕ್ಷಣವನ್ನು ಇಡೀ ಜಿಲೆಯಲ್ಲಿ ಬರುವ ಐದು ವರ್ಷಗಳ ವಳಗೆ ಕಡ್ಡಾಯವಾಗುವಂತೆ ಮಾಡಬೇಕು. ಉಪಾಧ್ಯಾಯರ ಸ್ಥಾನಗಳನ್ನು ಭದ್ರ ಪಡಿಸಿ ಅವರಿಗೆ ಜೀವನಕ್ಕೆ ಬೇಕಾದ ಯೋಗ್ಯ ವೇತನ ಸಿಕ್ಕುವಂತಾಗಬೇಕು. ಬಡವರ ಹಾಗೂ ಮ[illegible]ದ ಜನರ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಬೋರ್ಡ್ ವಹಿಸಿಕೊಳ್ಳಬೇಕು.

3. ಸರಿಯಾದ ಶಿಬಂದಿವುಳ್ಳ ಗ್ರಾಮ ಡಿಸ್ಪೆನ್ಸರಿಗಳ ಒಂದು ಮಾಲೆಯನ್ನೇ ಸ್ಥಾಪಿಸಬೇಕು. ಪ್ರತಿಗ್ರಾಮಕ್ಕೂ ಒಂದು ಅಥವಾ ಹೆಚ್ಚು ಮಂದಿ ತರಬೇತು ಹೊಂದಿದ ಸೂಲಗಿತ್ತಿ ಇರಬೇಕು. ಬಾಣಂತಿ ಶಾಲೆಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಮಲೇರಿಯಾವನ್ನು ಪೂರ್ಣವಾಗಿ ಹೋಗಲಾಡಿಸಬೇಕು.

4 ಇಷ್ಟನ್ನು ಸಾಧಿಸುವ ಒಂದು ಯೋಜನೆ ಜ್ಯಾರಿಗೆ ತರಬೇಕಾದರೆ ಅಫೀಸರರ ಮತ್ತು ಇತರರು ಕೂಡಾ ಅತ್ಯಂತ ಮೇಧಾಗಳುಳ್ಳ ಒಂದು ಕಂದವನ್ನು ಖಾಯಂ ಆಗಿ ಪರ್ದಿಸಬೇಕಾಗುವುದು.

ಈ ಯೋಜನೆಗಳಿಗೆ ತುಂಬಾ ಖರ್ಚು ತಗಲುವುದು. ಉತ್ಪತ್ತಿಯನ್ನು ಹೆಚ್ಚಿಸುವ ವಿವರಗಳನ್ನು ಕಂಡುಹಿಡಿಯಬೇಕು. ಇದನ್ನು ಸುಲಭದಲ್ಲಿ ಮಾಡಲು ಸಾಧ್ಯವಿಲ್ಲ. ರಾಷ್ಟ್ರದ ದೃಷ್ಟಿಯಲ್ಲಿ ಮಹತ್ವವುಳ್ಳ ವ್ಯಾಪಾರಿ ವಹಿವಾಟುಗಳು ಬೋರ್ಡಿನ ಏಕಮಾತ್ರ ಸ್ವಾಧೀನತೆಗೆ ಬರಬೇಕು. ಈಗ ಖಾಸಗಿಯಿಂದ ನಡೆಸಲ್ಪಡುವ ಬಸ್ಸು ಸರ್ವೀಸು ಮತ್ತು ಇಂಥಾ ಇತರ ಸಂಸ್ಥೆಗಳನ್ನು ಬೋರ್ಡಿನವರು ಸ್ವಾಧೀನ ಮಾಡಿಕೊಂಡು ಮಾಲೀಕರಿಗೆ ನ್ಯಾಯವಾದ ಪರಿಹಾರ ದ್ರವ್ಯ ಕೊಡಬೇಕು. ವ್ಯಾಪಾರಿ ಸಂಸ್ಥೆಗಳನ್ನು ಸ್ವಾಧೀನ ಪಡಿಸುವಾಗ ಆದರ ಮೂಲ ತತ್ವಗಳಿಗೆ ಗಮನಕೊಡಬೇಕು.

ನಮ್ಮ ನಿತ್ಯ ಜೀವನವನ್ನು ವ್ಯಕ್ತಿಗಳಾಗಲೀ

For prompt and efficient Banking Service

Bank with

THE VIJAYA BANK LIMITED.

Head Office:—**MANGALORE**.

Branches: **Byndoor, Coondapoor, Brahmavar, Udipi, Kaup, Karkal, City-Mangalore, Kasaragod, Kanhangad, Puttur, Mercara & Bombay.**

ಈ ಹನ್ನೆರಡು ಮಂದಿ— ವಕೀಲರು ಮತ್ತು ಹಳಬರು!

ಇಂದಿನ ನಡುಗಾಲ ಸರಕಾರವನ್ನು ನೆಹರು ಮಂತ್ರಿಮಂಡಲವನ್ನು—'ಹಿಂದುಗಳ ಸರಕಾರ' ಎಂದು ಕರೆದು ಮುಸ್ಲಿಂ ಲೀಗಿನವರು ಬಂಡಾಯವೆದ್ದಿದ್ದಾರೆ. ಗಾಂಧಿಜೀಯ ಆಶೀರ್ವಾದ ಬಲದಿಂದ ಮಿ. ಜಿನ್ನರ ಬುದ್ಧಿಯು ಮಿಕ್ಕವರಿಗೂ ಹುಟ್ಟಿಬಿಡಹೋಗಿದೆ. ಹುಟ್ಟುತಿದ್ದರೆ ನಿಜಕ್ಕೂ ಈ ರಾಷ್ಟ್ರೀಯ ಸರಕಾರವು 'ಜನ ಪ್ರತಿನಿಧಿ ಸರಕಾರ'ವನ್ನಿಸದೆ ತೀರಾ ಅಲ್ಪಸಂಖ್ಯಾಕರ ಪ್ರತಿನಿಧಿಯನ್ನಿಸುತಿತ್ತು. ಹೇಗೆ ಗೊತ್ತೆ? ವಕೀಲ ವೃತ್ತಿಯೊಂದಲ್ಲದೆ ಬೇರೆಲ್ಲಾ ಉದ್ಯೋಗಗಳಲ್ಲಿರುವವರೂ ಇದನ್ನು 'ವಕೀಲರ ಸರಕಾರ' ಎಂದು ಕರೆದು ಬಂಡಾಯವೇಳುತಿದ್ದರು. ಯಾಕೆಂದರೆ ಆ 12 ಮಂದಿ ಮಂತ್ರಿಗಳಲ್ಲಿ ನಿಶ್ಚಯವಾಗಿ 8 ಮಂದಿ ವಕೀಲರು. ಅಂತೆಯೇ ಯುವಕರೆಲ್ಲಾ ಇದು 'ಮುದುಕರ ಸರಕಾರ' ಎಂದು ದಂಗೆಯೇಳುತಿದ್ದರು. ಯಾಕಂದರೆ ಆ 12ರಲ್ಲಿ 9 ಮಂದಿ ಪ್ರಾಯ 50ರ ಗಡಿ ದಾಟಿದವರೇ. ಮಿ. ಜಿನ್ನರ ತತ್ವ ಪ್ರಕಾರ ನಮ್ಮವರಲ್ಲದವರು ನಮ್ಮ ಪ್ರತಿನಿಧಿಗಳಲ್ಲವಷ್ಟೆ!

'ವಕೀಲರ ಸಂಸ್ಥೆ!'

ರಾಷ್ಟ್ರೀಯ ಸರಕಾರದ ಪ್ರಧಾನಮಂತ್ರಿ ಅಥವಾ ಉಪಾಧ್ಯಕ್ಷ ಹಾಗೂ ವಿದೇಶ ಮಂತ್ರಿ ಪಂಡಿತ ನೆಹರು ಎಂ. ಎ., ಬಾರ್-ಎಟ್-ಲಾ, ಅಲ್ಲಹಾಬಾದ್ ಹೈಕೋರ್ಟಿನ ಎಡ್ವೊಕೇಟ್ ಆಗಿದ್ದವರು. ಗೃಹ ಮಂತ್ರಿ ಸರ್ದಾರ್ ವಲ್ಲಭಾಯಿ ಪಟೇಲ್, ಬಾರ್-ಎಟ್-ಲಾ, ಅಹಮ್ಮದಾಬಾದಿನ ಸುಪ್ರಸಿದ್ಧ ಕ್ರಿಮಿನಲ್ ವಕೀಲ. ಒಮ್ಮೆ ಕೋರ್ಟಿನಲ್ಲಿ ವಾದಿಸುತಿದ್ದಾಗಲೇ ಅವರಿಗೊಂದು ತಂತಿ ಬಂದಿತ್ತು; ಓದಿನೋಡಿ ಕಿಸೆಗೆ ಹಾಕಿಕೊಂಡು ಯಥಾಪ್ರಕಾರ ತನ್ನ ವಾದವನ್ನು ಮುಂದುವರಿಸಿದ್ದರು. ಕೊನೆಗೆ ವಿಚಾರಿಸುವಾಗ ಅವರ ಪತ್ನಿ ಮಡಿದರೆಂಬುದನ್ನು ತಿಳಿಸುವ ತಂತಿಯಾಗಿತ್ತದು. ಕೈ ಹಿಡಿದಾಕೆ ಅಗಲಿದ ವಿಷಗಳಿಗೆಯಲ್ಲಿ ಕೂಡಾ ಕೈಹಾಕಿದ ವ್ಯಾಜ್ಯವನ್ನು ಬಿಡದಂತಹ ಅಸಾಧ್ಯ ವಕೀಲರಾಗಿದ್ದವರು. ಆಹಾರ ಮಂತ್ರಿ ಡಾ। ರಾಜೇಂದ್ರ ಪ್ರಸಾದರು ಎಂ. ಎ., ಎಂ ಎಲ್. ಕಲ್ಕತ್ತಾ ಮತ್ತು ಪಾಟ್ನಾ ಹೈಕೋರ್ಟುಗಳ ವಕೀಲರಾಗಿದ್ದು ವಿಶೇಷ ಉತ್ಕರ್ಷವಿದ್ದವರು. ರೈಲ್ವೇ ಮಂತ್ರಿ ಮಿ. ಆಸಫ್ ಅಲಿಗಳೂ ಲಂಡನಿನಲ್ಲಿ ಕಲಿತ ಬ್ಯಾರಿಸ್ಟರರೇ. ಕಾಶ್ಮೀರದ ಶೇಕ್ ಅಬ್ದುಲ್ಲಾರ

ವಕಾಲತ್ ನಡಿಸುತಿದ್ದುದನ್ನು ಬಿಟ್ಟು ಮಂತ್ರಿ ಪದವಿಗೆ ಬಂದವರು. ಕೆಂಪು ಕೋಟೆ ವಿಚಾರಣೆಯಲ್ಲಿ ಶ್ರೀ. ಭುಲಾಭಾಯಿಗಳ ಜತೆ ವಕೀಲರಾಗಿದ್ದವರು. ಔದ್ಯೋಗಿಕ ಮಂತ್ರಿ ಶ್ರೀ. ರಾಜಗೋಪಾಲಾಚಾರ್ಯರೂ—ಮದ್ರಾಸ್ ವಕೀಲ. ಸೇಲಮಿನಲ್ಲಿ ಅವರಷ್ಟು ಸಂಪಾದನೆಯಿದ್ದ ವಕೀಲರು ಆ ಕಾಲದಲ್ಲಿ ಅಪರೂಪವಂತೆ. ಶ್ರೀ. ಶರಚ್ಚಂದ್ರ ಬೋಸರು ಎಂ ಎ. ಬಿ. ಎಲ್., ಬಾರ್—ಎಟ್—ಲಾ. ಕಲ್ಕತ್ತಾ ಹೈ ಕೋರ್ಟಿನ ಸುಪ್ರಸಿದ್ಧ ವಕೀಲ ಇವರು ಜೈಲಲ್ಲಿದ್ದಾಗ, ಇವರ ಬಿಡುಗಡೆಯ ನಂತರವೇ ದಾಖಲ್ಮಾಡೋಣವೆಂದು ತಮ್ಮ ವ್ಯಾಜ್ಯಗಳನ್ನು ಕಾದಿರಿಸುತಿದ್ದ ಕಕ್ಷಿಗಾರರಿದ್ದರಂತೆ. ವ್ಯಾಪಾರ ಮಂತ್ರಿ ಡಾ। ಜೋನ್ ಮಥಾಯಿ ಟಾಟಾಕಂಪೆನಿಯ ಡೈರೆಕ್ಟರರೇನೋ ಹೌದು. ಆದರೆ ಅವರೂ ವಕಾಲತ್ ಕಲಿತು 1410ರಿಂದ 14ರ ವರೆಗೆ ಅದೇ ವೃತ್ತಿಯಲ್ಲಿ ಇದ್ದವರು. ತಂತೀ ಟಪ್ಪಾಲು ಖಾತೆಯ ಸದಸ್ಯ ಮಿ. ಸಯ್ಯದ್ ಅಲಿ ಝಾಹೀರರು ಬಿ. ಎ. ಎಲ್, ಎಲ್. ಬಿ., ಮತ್ತು ಬಾರ್—ಎಟ್—ಲಾ. ಲಕ್ನೋವಿನ ಅಗ್ರಗಣ್ಯ ವಕೀಲ;

ಹರಿಜನ ಪ್ರತಿನಿಧಿ ಶ್ರೀ ಜಗಜೀವನ ರಾಮ್ ಮತ್ತು ಪಾರ್ಸಿ ಪ್ರತಿನಿಧಿ ಶ್ರೀ. ಸಿ. ಎಚ್. ಭಾಭಾರವರು ವಕೀಲರೋ ಅಲ್ಲವೋ ಎಂಬುದು ಖಂಡಿತವಾಗಿ ತಿಳಿದಿಲ್ಲ. ಚೂರಿ ತಿವಿತ ತಿಂದು ಜೀರ್ಣಿಸಿಕೊಂಡ ಸರ್. ಶಾಫತ್ ಅಹಮ್ಮದ್ ಖಾನರು ಡಬ್ಲಿನಿನಲ್ಲಿ ಕಲಿತುಬಂದು ದೀರ್ಘಾವಧಿ ಅಲ್ಲಹಾಬಾದ್ ಯುನಿವರ್ಸಿಟಿಯ ಪ್ರೊಫೆಸರ್ ಆಗಿದ್ದವರು. ಯುದ್ಧ ಮಂತ್ರಿ ಸರ್ದಾರ್ ಬಲದೇವಸಿಂಘರು 'ಇಂಟರ್ ಮಿಡಿಯೇಟ್' ಕ್ಲಾಸಿಗೆ ಮಾತ್ರ ಹೋದವರು— ಪರೀಕ್ಷೆ ಕೊಟ್ಟವರಲ್ಲ. ತಾನು ಸರಕಾರಿ ಉದ್ಯೋಗ ಬಿಟ್ಟು ವ್ಯಾಪಾರಕ್ಕಿಳಿದಿದ್ದ ಅವರ ತಂದೆ ಸರ್. ಇಂದರ್ ಸಿಂಘರು ಮಗನನ್ನೂ ಮಧ್ಯದಲ್ಲೇ ಕಾಲೇಜು ಬಿಡಿಸಿ ವ್ಯಾಪಾರೀ ರಂಗಕ್ಕಿಳಿಸಿದ್ದರು.

'ಹಳಬರ ಕೂಟ'!

ಅಂತೂ ಯಾವುದಾದರೊಂದು ಕಸಬುಮಾಡಿ ದಿನ ತೆಗೆಯುವವರೆಲ್ಲಾ ಈ ರಾಷ್ಟ್ರೀಯ ಸರಕಾರವನ್ನು 'ವಕೀಲರ ಕೂಟ'ವೆಂದಂತೆಯೇ, ಅಂತಹದಾವುದನ್ನೂ ಮಾಡದೆ ದಿನದೂಡುತ್ತಿರುವವರು—ಪ್ರಾಯ ಸಂದಾಯ ಮಾಡುವವರು—ಇದು 'ಹಳಬರ ಕೂಟ' ಎಂದೂ ಆರೋಪಿಸಬಹುದು. (ಆದರೆ ನೆನಪಿರಲಿ—ಮಿ. ಜಿನ್ನರ ಬುದ್ಧಿ ಬಂದರೆ ಮಾತ್ರ!) ನಿದರ್ಶನಕ್ಕಾಗಿ ಕೇಂದ್ರ ಮಂಡಲಿಯ ಸದಸ್ಯರ ಪ್ರಾಯಗಳನ್ನು ಗಣಿಸೋಣ. ಪಂಡಿತ ನೆಹರುಗಳಿಗೀಗ 57 ವರುಷ. ಇದೇ ಬರುವ ನವಂಬರಕ್ಕೆ 58 ಹಿಡಿಯುತ್ತದೆ. ಗಾಂಧಿಜೀ ಒಕ್ಟೋಬರ್ 2ರಲ್ಲಿ ಹುಟ್ಟಿದ್ದರೆ ಅವರ ಬಲಗೈ ಬಂಟ ವಲ್ಲಭಾಯಿ ಪಟೇಲರು (1875ನೇ) ಒಕ್ಟೋಬರ್ 31ರಲ್ಲಿ ಹುಟ್ಟಿದ್ದರು— ಈಗ 71; ಇದೇ ಒಕ್ಟೋಬರ್ 31ಕ್ಕೆ 72ನೇ ವರುಷ ಹಿಡಿಯುತ್ತದೆ. ಬಾಬು ರಾಜೇಂದ್ರ ಪ್ರಸಾದರಿಗೀಗ 62. ಬರುವ ಡಿಸಂಬರಕ್ಕೆ 63ನೇ ವರ್ಷಾರಂಭ. ಮಿ. ಆಸಫಾಲಿಗಳ ಪ್ರಾಯ 58; ರಾಜಾಜಿಗೀಗ 67; ಶರಚ್ಚಂದ್ರ ಬೋಸರಿಗೀಗ 57; ಡಾ। ಜೋನ್ ಮಥಾಯಿ 60; ಸರ್. ಶಾಫತ್ ಅಹಮ್ಮದ್ ಖಾನ್ 53.

ಶ್ರೀ. ಜಗಜ್ಜೀವನ ರಾಮರ ಪ್ರಾಯವೆಷ್ಟೆಂದು ತಿಳಿದು ಬಂದಿಲ್ಲ. ಆದರೂ 50ರ ಗಡಿದಾಟಿರಬಹುದೆಂದು ಊಹೆ. ಮಿ. ಸಯ್ಯದ್ ಅಲಿ ಝಾಹೀರರ ಪ್ರಾಯ 19. ಒಂದೇ ಒಂದು ವರುಷದೊಳಗೆ ಗಡಿ ಮುಟ್ಟುವವರು. ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು 43 ವರುಷ ಪ್ರಾಯದವರು; ಸಿಕ್ಖ ಗಾಂಭೀರ್ಯವು ಕಪ್ಪು ಗಡ್ಡ ಮೀಸೆಗಳಿಂದ ಅವರ ಮುಖದಲ್ಲಿ ಕಂಗೊಳಿಸುತ್ತಿದೆ. ಈ ಹನ್ನೆರಡು ಮಂದಿಯ ಪೈಕಿ ಹುಡುಗ ಮತ್ತು ಹೊಸಬನೆಂದರೆ ಶ್ರೀ. ಸಿ. ಎಚ್. ಭಾಭಾ. ಅವರ ಪ್ರಾಯ ಕೇವಲ 35.

ಕೆಲವು ಅಪವಾದಗಳಿದ್ದರೂ ಸಾಮೂಹಿಕವಾಗಿ ಈ ಕೇಂದ್ರ ಸರಕಾರ ಮಂಡಲಿಯನ್ನು 'ಹಳೇ ವಕೀಲರ ಕೂಟ' ಎಂದರೆ ಸಮಂಜಸವಾಗದೆ? 'ಸಾತ್ವಿಕ ಬಹುಮತವುಳ್ಳ ಕಾಂಗ್ರೆಸ್ ಹಿಂದುಗಳ ಕೂಟ" ಎನ್ನುವ ಮಿ. ಜಿನ್ನರ ಹೇಳಿಕೆಕ್ಕಿಂತ ಇದು ನ್ಯಾಯವಲ್ಲವೆ?

ವ್ಯಕ್ತಿಗಳ ಗುಂಪುಗಳಾಲೀ ತಮ್ಮ ಹಕೋಟಿಯಲ್ಲಿಟ್ಟುಕೊಳ್ಳುವಂತಿರಬಾರದು. ಕೆಲವು ಪ್ರಮುಖ ಸಂಸ್ಥೆಗಳು ಡಿಸ್ಟ್ರಿಕ್ಟ್ 'ಬೋರ್ಡ್'ನ್ನೇ ವಶಪಡಿಸಿಕೊಳ್ಳುವ ಹಂಚಿಕೆ ಕೈಕೊಳ್ಳುವವರಲ್ಲಿದ್ದಾರೆ. ಮತದಾರರು ನಿರ್ಣಯಿಸಬೇಕಾದ ಪ್ರಶ್ನೆಯೆಂದರೆ ಬೋರ್ಡನ್ನು ಈ ಕಂಪ್ಯಾಂಡ್ ಸಂಸ್ಥೆಗಳು ವಶಪಡಿಸಬೇಕೋ ಬೋರ್ಡು ಈ ಸಂಸ್ಥೆಗಳನ್ನು ವಶದಲ್ಲಿರಿಸಬೇಕೋ ಎಂಬುದೇ ಇರುತ್ತದೆ. ಇವರಲ್ಲಿ ಮೊದಲನೆಯದನ್ನು ಒಪ್ಪಿಕೊಂಡರೆ ಸ್ಥಳೀಕ ಸ್ವಾತಂತ್ರ್ಯದ ಸಂಸ್ಥೆಯೆಂಬುದು ಒಂದು ಹಾಸ್ಯಾಸ್ಪದ ಸಂಗತಿಯಾಗುವುದು. ಎರಡನೇ ದಾರಿಯೇ ನಿಜವಾದ ಸಮಾಜವಾದಿ ಪ್ರಜಾಸತ್ತಾತ್ಮಕ ಪದ್ಧತಿಯು ಒಂದು ಅವಶ್ಯಕತೆಯಿರುತ್ತದೆ. ಇವೆರಡರಲ್ಲಿ ಯಾವುದು ಬೇಕೆಂದು ನಿರ್ಧರಿಸುವ ಜವಾಬ್ದಾರಿಯು ಮತದಾರರಿಗೆ ಸೇರಿರುತ್ತದೆ.

ಜೈ ಹಿಂದ್!

• ಮಗ್ಗದ ಮಾಲಿಕರಿಗೆ ಸುಸಂದರ್ಭ •

ನಂಬ್ರ P II ಪರ್ಮಿಟುದಾರರಾದ ಮಗ್ಗದ ಮಾಲಿಕರು ತಮ್ಮ ನೂಲಿಗೆ ಬೇಕಾಗುವ ರಂಗುಗಳಿಗೆ ಮಂಗಳೂರು ಇಲ್ಲವೆ ಕಣ್ಣಾನೂರು ಲಾಗಿನ ವ್ಯಾಪಾರಸ್ಥರನ್ನು ಅವಲಂಬಿಸಬೇಕಾಗಿತ್ತು. ಈಗ ಅವರಿಗೆ ಬೇಕಾಗುವ ಎಲ್ಲಾ ತರದ ರಂಗುಗಳನ್ನು ಒದಗಿಸಲು ನಾವು ಲೈಸನ್ಸನ್ನು ಪಡೆದಿರುತ್ತೇವೆ.

ಪಿ. ಎ ಪೈ ಬ್ರದರ್ಸ್, ಉಡುಪಿ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ, ಮೈಸೂರು, ಸಂಸ್ಥಾನ

ಬೆಲೆ ಒಂದೇ ರೂ. 1—4—0

ರೂ. 1-8-0 ಕಳುಹಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳುಹಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು —

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಶಾನಭಾಗ ರಾಮರಾವ್, ಉಡುಪಿ. 5. ನವಯುಗ ಆಫೀಸು, ಉಡುಪಿ.

ಕೇರಳಾ ಸೋಪ್ ಇನ್ಸ್ಟಿಟ್ಯೂಟ್ ಕಲ್ಲಿಕೋಟೆ.

The Canara Banking Corporation Limited.

(Incorporated in British India, with limited Liability)

Estd· 1906

Head Office: **UDIPI,** South Kanara.

CAPITAL

Authorised	Rs 25,00,000
Issued & Subscribed ...	„ 16,00,000
Paid up	„ 15,64,715
Reserves Over	„ 14 Lakhs

Branches at- Bombay, Madras, Bangalore, Coimbatore, Selem. Calicut, Hubli Mysore, Cochin, Mangalore, Madras etc., etc.

Banking Business of Every Description Transacted.

ಉಡುಪಿ, ಗುರುವಾರ, ೨೬-೯-'೪೬.

ಸ್ಪಷ್ಟ ಧೋರಣೆಯಿರಲಿ

ಕಲ್ಕತ್ತ, ಬೊಂಬಾಯಿ ಮತ್ತು ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ನಡೆದ ಹಿಂದೂ ಮುಸ್ಲಿಮ್ ಗಲಭೆಗಳು ಭಾರತೀಯರೆಲ್ಲರ ಭಾವನೆಯನ್ನೂ ಕೆರಳಿಸಿವೆ. ಗುಟ್ಟೇನು?-ಅಂತರಂಗದಲ್ಲಾದರೂ ಎರಡರಲ್ಲೊಂದು ಪಕ್ಷಕ್ಕೆ ಸೇರದೆ, ಕೇವಲ ನ್ಯಾಯ ಶೋಧಕರಾಗಿ ಉಳಿದಿರುವವರು ಇಡೀ ರಾಷ್ಟ್ರದಲ್ಲೀಗ ಬಹಳ ಮಂದಿಯಿರಲಾರರು.ರಾಷ್ಟ್ರವನ್ನಲ್ಲವಾದರೂ ರಾಷ್ಟ್ರದ ಭಾವನೆಯನ್ನು ಇಬ್ಭಾಗಿಸುವ ದುಷ್ಕಾರ್ಯದಲ್ಲಿ ಮಿ. ಜಿನ್ನರು ಯಶಸ್ವಿಯಾಗಿದ್ದಾರೆ. ಪತ್ರಿಕಾ ಹೇಳಿಕೆ ಕೊಡುವಾಗ ಅಥವಾ ಎಸೆಂಬ್ಲಿ ಸಭೆಗಳಲ್ಲಿ ಸ್ವಸಮರ್ಥನೆ ಮಾಡಿಕೊಳ್ಳುವಾಗ ಲೀಗ್ ಪ್ರಮುಖರೇನೇ ಹೇಳಲಿ-ಇಂತಹ ಕದಡು ವಾತಾವರಣವನ್ನು ಮುಸ್ಲಿಂಲೀಗ್ ಬಯಸಿದ್ದಿತೆಂಬುದು ಖಂಡಿತ. ನಿಯೋಜಿತ'ಪ್ರತ್ಯಕ್ಷಹೋರಾಟ'ವನ್ನು ಹೂಡುವ ಮೊದಲೇ ಲೀಗು ನಡೆಸಿರುವ 'ಅಪ್ರತ್ಯಕ್ಷ ಪಿಕಬಾಟ'ದ ಸ್ವರೂಪವಿದು. ಮಿ. ಜಿನ್ನರು ಮತ್ತೊಮ್ಮೆ ವೈಸರಾಯರಿಂದಾಮಂತ್ರಿಸಲ್ಪಟ್ಟು ನವದಿಲ್ಲಿಯಲ್ಲಿ ಸಂಧಾನ ಮಾತುಕತೆ ನಡೆಸುತಿದ್ದಾರೆ ಅವರದು ಅಲ್ಲಿಯೇ ಸನೆಗುದಿಗೆ ಬಿದ್ದಂತಿದೆ; ಯಾವ ಸತ್ಪರಿಣಾಮವೂ ಆಗಲಾರದೆಂಬ ಲಕ್ಷಣ ಕಾಣುತ್ತಿದೆ. ಬೆಳೆಯುವ ಮೊಪಲು ಕೊಯ್ಯಬಾರದು. ಈ ಅಕಾಲದಲ್ಲಿ ಲೀಗಿನೊಡನೆ ಸಂಧಾನವಾಗುವದೆಂದು ನಿರೀಕ್ಷಿಸುವದಾಗಲೀ ಆಗಬೇಕೆಂದು ಹಾರೈಸುವದಾಗಲೀ ತಪ್ಪೆಂದೇ ನಮಗನ್ನಿಸುತ್ತದೆ. ಕಲ್ಕತ್ತಾ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ನಡೆದ ಚಿತ್ರಹಿಂಸೆಯ ಮರಣಗಳು, ಅಮಾನುಷ ಅತ್ಯಾಚಾರಗಳು ಮನುಷ್ಯ ಮಾತ್ರರು ಮರೆಯುವಂತಹವಲ್ಲ. ಅವು ಆಗುವಷ್ಟೊ ಆದ ಮೇಲೆ ತಡೆಗಟ್ಟಿದ ಮಾತ್ರಕ್ಕೆ, ಆ ಪಾಪಕ್ಕೆ ಪ್ರಾಯಶ್ಚಿತ್ತವಾಯಿತೆಂದು ಸಮಾಧಾನ ತಾಳಿದರೆ ಆ ಮನೋವೃತ್ತಿಯನ್ನು ಬೀಡಾಯಾಭಿರುಚಿಯೆಂದೇ ಕರೆಯಬೇಕಾಗುವುದು. ಇದು ಭವಿಷ್ಯಕ್ಕೆ ಅಪಾಯಕರ. ಬರ್ಬರ ಕೃತ್ಯಗಳಿಗೆ ಹೇತುವಾದ ದುರಭಿಮಾನ,ದುಶ್ಶಕ್ತಿಗಳನ್ನು ಸಮೂಲ ನಾಶಮಾಡುವ ಬದಲಿಗೆ ಪತ್ತೆಹಾಕಿ, ತಾತ್ಕಾಲಿಕ ಶಮನವನ್ನಷ್ಟೇ ಮಾಡಿಕೊಂಡಲ್ಲಿ ಅದು ನಾಳೆ ಮತ್ತೊಮ್ಮೆ ತಲೆಯೆತ್ತುವದು ಖಂಡಿತ. ರಕ್ತಪಾತ, ಕೊಲೆ, ದರೋಡೆ, ಇವು ಎಷ್ಟೇ ಭೀಕರವಿದ್ದರೂ ಭಾರತದಂತಹ ರಾಷ್ಟ್ರವೊಂದರ ಸ್ಥಿತಿ ಬದಲಾವಣೆಯಾಗುವ ಸಂಧಿ ಕಾಲದಲ್ಲಿ ಅನುಭವಿಸಲೇ ಬೇಕಾದ ಯಾತನೆಯಿದು ಎಂಬುದು ಜನತೆಗೀಗ ಮಂದಟ್ಟಾಗಿದೆ. ಅನಿವಾರ್ಯವಾದುದನ್ನು ಪೂರ್ತಿಯಾಗಿ ಅನುಭವಿಸಿಯೇ ಮುಗಿಸಬಾರದೇಕೆ? ನ್ಯಾಯ ನೀತಿಯ ಎಲ್ಲಾ ಗಡಿ ಮೇರೆಗಳನ್ನೂ ಮೀರಿ, ದುಷ್ಕೃತ್ಯವೊಂದು ಆರಂಭವಾಯಿತೋ— ಆ ಮೇಲೆ ಅದಕ್ಕೆ ಅರ್ಧವಿರಾಮವೆಂಬುದಿರಬಾರದು ಅದು ಹುಟ್ಟಲೇ ಬಾರದಿತ್ತು— ಹುಟ್ಟಿ ಆಟ ಮೇಲೆ ಪೂರ್ಣಾಂತ್ಯಗೊಳ್ಳಬೇಕು. ಅಂತೂ ಅದರ ಕೊನೆಯೆಂಬದು ಒಂದೋ ಬುಡದಲ್ಲಿ, ಇಲ್ಲವೇ ತುದಿಯಲ್ಲಿ ಹೊರತು ಮಧ್ಯದಲ್ಲಲ್ಲ! ಮುಸ್ಲಿಂಲೀಗಿನ ಬಂಡಾಯ ಧೋರಣೆ ಆರಂಭಿಸಿಯಾಗಿದೆ— ಅಂತ್ಯದ ಗಡಿಗೆಬಂದಿಲ್ಲ. ಆದ್ದರಿಂದ ಮಧ್ಯದಲ್ಲೇ ಶಮನಿಸುವ ಪ್ರಯತ್ನ ಫಲಕಾರಿಯಾಗುವುದೂ ಅಸಾಧ್ಯ, ಪ್ರಯೋಜನಕಾರಿಯೂ ಆಗದು ಆದ್ದರಿಂದ ಸರಕಾರವೂ ಜನತೆಯೂ ಸರ್ವವಿಧದ ಗಂಡಾಂತರಗಳನ್ನೂ ಜಯಶೀಲವಾಗಿ ಎದುರಿಸಿ ಪಾರಾಗಲು ಎಲ್ಲಾ ವಿಧದಿಂದ ತಯಾರಾಗುವದೊಂದೇ ಈಗ ಉಳಿದಿರುವ ಮಾರ್ಗ. ಒಮ್ಮೆ ಇದನ್ನು ದಾಟಿದೆವೆಂದರೆ ಮತ್ತೆ ನಮ್ಮನ್ನು ಚಿರಶಾಂತಿ ಕಾದಿದೆ ಎಂಬ ದೂರದೃಷ್ಟಿಯಿದ್ದಲ್ಲಿ ಚಾಂಚಲ್ಯಕ್ಕವಕಾಶವಿರದು.

ಅಂತೂ ಸ್ಪಷ್ಟ ಧೋರಣೆ, ಧೀರೋದಾತ್ತವರ್ತನೆ,ಆನಂದೋತ್ಸಾಹ ಭಾವನೆ, ಇರಬೇಕಾದ ಕಾಲವಿದು. ಇಲ್ಲಿ ಅಲ್ಪ ತೃಪ್ತಿ, ಅರ್ಧೌದಾರ್ಯವಿರಬಾರದು. ಅದೇ ರೀತಿ ಅಜ್ಞಾನ,ಅಲ್ಪಬುದ್ಧಿ,ಕಿರುಕುಳಾಭಿರುಚಿ, ಮೊದಲಾದುವಂತೂ ಈ ಕಾಲದಲ್ಲಿ ಅನಗತ್ಯ ಗಂಡಾಂತರಗಳನ್ನು ನಿರ್ಮಿಸುತ್ತವೆ ಎಂಬುದು ಸರ್ವರ ಲಕ್ಷ್ಯದಲ್ಲಿರಬೇಕು. ಎಲ್ಲಾ ಸುಳ್ಳು -- ಎಂಟನೇ ಒಂದಂಶ ಸತ್ಯ— ಏನೇನೋ— ವಾರ್ತೆಗಳು ಅಲ್ಲಲ್ಲಿ ಹುಟ್ಟುತ್ತಿವೆ; ಅನಾಹುತಗಳನ್ನುಂಟುಮಾಡುತ್ತಿವೆ. ಇಂಥವುಗಳನ್ನು ನಿರ್ಮಿಸುವ ಸಮಾಜ ದ್ರೋಹಿಗಳನ್ನು ಜನತೆಯು ಬಹಿಷ್ಕರಿಸಬೇಕು; ಸರಕಾರವು ಕಠಿಣವಾಗಿ ದಂಡಿಸಬೇಕು. ಕ್ಷುತಕ, ಕ್ಷುಲ್ಲಕ ವಿಷಯಗಳಾವುವೂ ಸೋಂಕಿರದ ವಸ್ತು ಸ್ಥಿತಿಯನ್ನು ಇದಿರಿಸಬೇಕಾಗಿ ಬಂದರೆ ಜನತೆಯು ಯೋಧರಂತೆ ಇದಿರುನಿಂತು ಹೋರಾಡಿ ಗೆಲ್ಲಬೇಕು. ಅಂತಹ ಹೋರಾಟವು ಶೀಘ್ರದಲ್ಲೇ ರಾಷ್ಟ್ರಾಭಿಮಾನಿಗಳ ಪಾಲಿನ ವಿಜಯದಲ್ಲಿ ಪರಿಸಮಾಪ್ತಿಗೊಳ್ಳುವದೆಂದು ದೃಢವಾಗಿ ನಂಬಬಹುದು.

ಗಾಂಧಿಜಯಂತಿ—ನೆನಪಿರಲಿ.

ಇದೇ ತಾ. 22ರಿಂದ ಒಕ್ಟೋಬರ್ 2ರ ವರೆಗೆ ಪದ್ಧತಿ ಪ್ರಕಾರ ಗಾಂಧೀ ಸಪ್ತಾಹ ನಡೆಯಬೇಕಾಗಿದೆ. (ಒಕ್ಟೋಬರ್ ತಾ. 2ರಿಂದ 9ರ ವರೆಗಾಚರಿಸುವ ಸಂಪ್ರದಾಯವೂ ಇದೆ). ಈ ಸಂದರ್ಭದಲ್ಲಿ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳನ್ನು ಮುಂದೊತ್ತಬೇಕೆಂದು ಪಂಡಿತ ನೆಹರು ಮತ್ತು ಕಾಂಗ್ರೆಸ್ ಕಾರ್ಯದರ್ಶಿಗಳ ಪ್ರಕಟಣೆಯಿದೆ. ಸದ್ಯದ ವಿಷಮ ವಾತಾವರಣಕ್ಕೆ ಸಂಬಂಧಿಸುವ ಗಾಂಧೀಜೀಯ ಈ ಕೆಳಗಿನ ಅಭಿಪ್ರಾಯವನ್ನಂತೂ ವಿಶೇಷತಃ ಸರ್ವರೂ ಜ್ಞಾಪಿಸಿಕೊಳ್ಳಲಿ; ಅದಕ್ಕನುಗುಣವಾಗಿ ಪ್ರತಿಯೊಬ್ಬರೂ ಗಾಂಧೀ ಜಯಂತಿಯಲ್ಲಿ ದೃಢವಾದ ಶಪಥ ಹಾಕಿಕೊಳ್ಳಲಿ; ಆ ಶಪಥದ ಪಾಲನೆಗಾಗಿ ತಮ್ಮ ಪ್ರಾಣವನ್ನು ಕೂಡಾ ಮೀಸಲಿಟ್ಟು ಯೋಗ್ಯ ಭಾರತೀಯರು ಮತ್ತು ನಿಜ ಮನುಷ್ಯರೆನ್ನಿಸಲಿ:—

೧ ಹಿಂದು ಮತ್ತು ಮುಸಲ್ಮಾನರು ಇದೇ ಭೂಪುತ್ರರು. ಆದ್ದರಿಂದ ಎಲ್ಲರಿಗೂ ಇಲ್ಲಿ ಬಾಳುವಹಕ್ಕಿದೆ; ಹಕ್ಕು ಪ್ರಕಾರ ಅವರು ಒಟ್ಟಿಗೆ ಬಾಳಲು ಬಧ್ಧರಿದ್ದಾರೆ

೨. ಧರ್ಮವು ವ್ಯಕ್ತಿಗೆ ಸಂಬಂಧಿಸಿದುದು; ರಾಜಕೀಯಕ್ಕಲ್ಲ. ರಾಜಕೀಯಕ್ಕೂ ಧರ್ಮಕ್ಕೂ ಗಂಟು ಹಾಕುವದು ಮಹಾಪರಾಧ.

೩. ಅನ್ಯರ ಪ್ರಾಣಾಪಹರಿಸುವದಕ್ಕಿಂತ ಪರಕೀಯ ಜೀವವುಳಿಸಲು ತನ್ನ ಪ್ರಾಣಾರ್ಪಣೆ ಮಾಡುವದರಲ್ಲೇ ಜನ್ಮ ಸಾರ್ಥಕ.

೪. ಮನಸ್ಸಿನಲ್ಲಿ ದ್ವೇಷ, ಜಿಗುಪ್ಸೆ ಕಟ್ಟಿಕೊಳ್ಳದೆ ಅಹಿಂಸಾತ್ಮಕವಾಗಿ ಕೃತಕೃತ್ಯನಾದೆನೆಂಬ ಆತ್ಮತೃಪ್ತಿಯೊಡನೆ ಪ್ರಾಣಕೊಡುವದೇ ಉತ್ತಮ ವಿಧಾನ. ಅದು ಅಸಾಧ್ಯವಾದಲ್ಲಿ ಧೀರನಂತೆ ಕಾದಾಡಿ ಸಾಯುವದು ಮಧ್ಯಮ ಮಾರ್ಗ ಹೇಡಿಯಾಗಿ ಹೆದರಿ ಸಾಯುವದು ಅಧಮಾಧಮವಿಧಾನ.

೫. ಅಹಿಂಸೆಯ ಮುಸುಕಿನೊಳಗೆ ಎಂದಿಗೂ ಹೇಡಿತನ ಪ್ರದರ್ಶಿಸಬೇಡಿ. ನಿಮ್ಮಂತೆಯೇ ರಕ್ತ ಮಾಂಸ ಎಲುಬುಗಳ ಗೂಡಾಗಿರುವ ಮತ್ತೊಬ್ಬ ಮನುಷ್ಯನ ಹೊಡೆತಕ್ಕಂಜಿ ಪೋಲೀಸರ ಅಥವಾ ಸೈನಿಕರ ಸಹಾಯಯಾಚಿಸಬೇಡಿ

೬. ಹಿಂದೂ ಮುಸಲ್ಮಾನರು ಸಹೋದರರಂತೆ ಒಟ್ಟಿಗೆ ಬಾಳತಕ್ಕವರು. ಅದಾಗದೆ ಹೋದರೆ ಧೀರರಂತೆ ಹೋರಾಡಿಕೊಂಡು ಸಾಯತಕ್ಕವರು ಹೊರತು ಒಬ್ಬರನ್ನು ಕಂಡು ಇನ್ನೊಬ್ಬರೆಂದೂ ಓಡತಕ್ಕವರಲ್ಲ. ತಮ್ಮೊಳಗಿನ ಜಗಳದಲ್ಲಿ ಸಹಾಯಕ್ಕಾಗಿ ಮೂರನೆಯವರನ್ನು ಕರೆಯತಕ್ಕವರೂ ಅಲ್ಲ.

೭. ನಿಮ್ಮ ಆತ್ಮದಬಲ; ಹೃದಯದ ಉಜ್ವಲತೆ; ದೇಹದ ಶುದ್ಧತ್ರಾಣ-ಇವುಗಳನ್ನೇ ನಂಬಿರಿ; ಇವುಗಳನ್ನೇ ಆಧರಿಸಿಕೊಂಡಿರಿ; ಇವು ನಿಮ್ಮನ್ನು ಎಲ್ಲಿವರೆಗೊಯ್ಯುವವೋ ಅಲ್ಲಿ ವರೆಗೂ ಮುಂದೊತ್ತಿರಿ.

೮. ಅನ್ಯಾಯಕ್ಕೆ ಪ್ರತಿಯಾಗಿ ನ್ಯಾಯವನ್ನು ಕೊಡುವ ಯೋಗ್ಯತೆ ನಿಮ್ಮಲ್ಲಿರಬೇಕು; ಇಲ್ಲವೇ? ಅನ್ಯಾಯಕ್ಕೆ ಪ್ರತಿಯಾಗಿ ಅನ್ಯಾಯವನ್ನಾದರೂ ಸಲಾಯಿಸಬೇಕು. ಆದರೆ ಪಡೆಯುವದೊಂದನ್ನಲ್ಲದೆ ಕೊಡುವಂತಹದಾವುದೂ ಇಲ್ಲದ ನಿರ್ಜೀವಿಗಳು ನೀವಾಗಿರಬಾರದು. ಹೇಡಿಯು ಮನುಷ್ಯನೇ ಅಲ್ಲ.

೯. ಹೆದರಿ ಕಾಪುರುಷರ ಜೀವಿತವನ್ನು ತಪ್ಪಿಸಿಕೊಳ್ಳಬಲ್ಲಿರಿ-ಆದರೆ ಕಾಲಪುರುಷನ ಜೀವಿತಕ್ಕೆಂದಾದರೊಂದು ದಿನ ಬಲಿಯಾಗಲೇಬೇಕು. ಅದ್ದರಿಂದ ಮರಣಕ್ಕಂಜ ಬೇಡಿ. ನಿಮ್ಮನ್ನಂಜಿಸುವ ಯೋಗ್ಯತೆಯುಳ್ಳದ್ದು ಪ್ರಪಂಚದಲ್ಲೇ ಹುಟ್ಟಿಲ್ಲ.

ಉಡುಪಿ

ಶಿಷ್ಯಮಂಡಲಿ-ಆಯುರ್ವೇದ ಕಾಲೇಜನ್ನು ಉಡುಪಿಯಲ್ಲಿ (ಮಣಿಪಾಲ)ಸ್ಥಾಪಿಸಬೇಕೆಂಬ ಕುರಿತು ಕಳೆದ ವಾರದಲ್ಲಿ ಆರೋಗ್ಯ ಮಂತ್ರಿಗಳಲ್ಲಿ ಬಿನ್ನವತ್ತಳೆಯನ್ನರ್ಪಿಸಿದಾಗ ಅವರು ಈ ವಿಷಯದಲ್ಲಿ ಸಹಾನುಭೂತಿಯಿಂದ ಪರ್ಯಾಲೋಚಿಸುವುದಾಗಿ ಹೇಳಿರುವರೆಂದು ತಿಳಿದು ಬರುತ್ತದೆ. ಮದ್ರಾಸಿಗೆ ತೆರಳಿದ ಶಿಷ್ಯಮಂಡಲಿಯಲ್ಲಿ ಶ್ರೀಗಳಾದ ಎಂ ಆರ್. ಭಟ್, ಟಿ. ಎಸ್ ಕೇಳು ನಂಬಿಯಾರ್, ಯು. ಎ. ಶೈ ಮತ್ತು ಡಾಕ್ಟರ್ ಸುಮತಿಬಾಯಿ ಇವರು ಇದ್ದರು.

ಗೂರುಬ್ಬಸ ಅಥವಾ ಆಸ್ತಮ

ಈ ವ್ಯಾಧಿಗೆ ಜಗದ್ವಿಖ್ಯಾತವಾದ 'ಲಕ್ಷಣಭೂತಿ'ಯೇ ದಿವ್ಯೌಷಧ. ಒಂದೇ ಒಂದು ಡೋಸ್ ಔಷಧಿಯನ್ನು ಹುಣ್ಣಿಮೆ ದಿನ (ತಾ. 10-10-46) ಸೇವಿಸಿದರೆ ಎಂತಹ ಗೂರುಬ್ಬಸವೂ ನಿಂತು ಹೋಗುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Sri Janki Sewashram,
P O. Chitrakot. U. P.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ಲ್ಲಿ

ತಾರೀಕು **27—9—46**ರಿಂದ

ಪ್ರಭಾತದವರ ಅಮೋಘ ಚಿತ್ರ

" ಲಾ ಖಾ ರಾ ಣಿ "

ಮೋನಿಕಾ ದೇಸಾಯಿ, ಸಪ್ರು, ದುರ್ಗಾ ಖೋಟೆ

ಮೊದಲಾದವರು ನಟಿಸಿರುವರು.

ಬರುವ ಚಿತ್ರ-—

ಕೃ ಷ್ಣ ಪ್ರೇ ಮ

ಅ. ಭಾ. ಕಾಂಗ್ರೆಸ್ ಸಮಿತಿಯ ಸಭೆ.

ನವದಿಲ್ಲಿಯಲ್ಲಿ ಕಾಂಗ್ರೆಸ್—

ಕಾರ್ಯಕಾರೀ ಕಮಿಟಿಯೂ, ಅ. ಭಾ. ರಾಷ್ಟ್ರ ಸಭಾ ಸಮಿತಿಯೂ ಜರಗಿವೆ. ತಾ. 21 ಮತ್ತು 22ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ ನೆರೆಯಿತು. ಗಾಂಧಿ, ಜವಾಹರ್, ಆಜಾದ್, ಪಟೇಲ್, ರಾಜಾಜಿ, ಪ್ರಸಾದ್, ಪಂತ್, ಕಿಡ್ವಾಯಿ, ಕಮಲಾದೇವಿ, ಫಕ್ರುದ್ದೀನ್, ಪ್ರತಾಪಸಿಂಗ್, ಕೇಸ್ಕರ್, ಮೃದುಲಾಬೆನ್, ಶರಶ್ಚಂದ್ರ, ಗಫರ್ ಖಾನ್, ಸರೋಜಿನಿ, ಪಟ್ಟಾಭಿ, ಶಂಕರರಾವ್ ದೇವೋ, ಪ್ರಫುಲ್ಲ ಘೋಷ್, ಕೃಪಾಲನಿ, ಮೆಹತಾಬ್, ಜಗಜ್ಜೀವನರಾವ್, ಜೈಪ್ರಕಾಶ್-ಇವರೆಲ್ಲಾ ಹಾಜರಿದ್ದರು. ತಾ. 23ರಿಂದ ನವದಿಲ್ಲಿಯ ರಾಂಜಾಸ್ ಕಾಲೇಜಿನಲ್ಲಿ ನೆಹರುಗಳ ಅಧ್ಯಕ್ಷತೆಯಲ್ಲಿಯೇ ಎ. ಐ. ಸಿ. ಸಿ.ಯ ಅಧಿವೇಶನಾರಂಭವಾಗಿದೆ.

ಪ್ರಾಮುಖ್ಯ ಪರ್ಯಾಲೋಚನೆ

ತಾವು ಅಧಿಕಾರ ವಹಿಸಿದ ಮೂರು ವಾರಗಳಲ್ಲಿ ನಡೆಸಿದ ಸ್ವತಂತ್ರ ಬದಲಾವಣೆಗಳ ವರದಿಯನ್ನು ನೆಹರು ಮತ್ತು ಇತರ ನಡುಗಾಲ ಸರಕಾರೀ ಮಂತ್ರಿಗಳು ಕಾಂಗ್ರೆಸ್ ಕಾರ್ಯಕಾರಿಗೊಪ್ಪಿಸಿದ್ದರು. ಜಿನ್ನಾ— ವೇವೆಲ್ ಮಾತುಕತೆಗಳ ಕುರಿತು ಪರ್ಯಾಲೋಚನೆಯೂ ನಡೆಯಿತು. ಕಾರ್ಯ ಬಾಹುಳ್ಯದಿಂದಾಗಿ ಈಗ ಸರಕಾರೀ ಮಂತ್ರಿಗಳಾಗಿರುವ ಐವರು ಪ್ರಮುಖರೂ ಕಾರ್ಯಕಾರೀ ಸಮಿತಿಗೆ ರಾಜಿಕೊಡಬೇಕೆಂದು ನಿರ್ಣಯವಾದಂತಿದೆ. ಅ. ಭಾ. ಸಮಿತಿಯಲ್ಲಿ ನೆಹರುಗಳು ಈ ಸಂಬಂಧದ ಹೇಳಿಕೆಯೊಂದನ್ನಿತ್ತರು. ಇನ್ನು ಎರಡು ತಿಂಗಳುಗಳೊಳಗೆ ಕಾಂಗ್ರೆಸಿನ ಮಹಾಧಿವೇಶನವು ಸೇರಲಿಕ್ಕಿರುವುದರಿಂದ ಅಧ್ಯಕ್ಷರೂ ಇತರ ಹಿರಿಯ ಸದಸ್ಯರೂ ಅದುವರೆಗೆ ತಂತಮ್ಮ ಸ್ಥಾನಗಳಲ್ಲಿರಬೇಕೆಂದೂ ... ಪ್ರಕಾರ ಅಧ್ಯಕ್ಷ ಚುನಾವಣೆಯೇ ಜರಗಬೇಕೆಂ... ಅ ಭಾ. ಸಮಿತಿಯ ಅಭಿಪ್ರಾಯವೆಂದು ತಿಳಿದು ಬಂದಿದೆ.

ಜಿನ್ನಾ— ವೇವೆಲ್ ಭೇಟಿ

ಕಳೆದ ವಾರ ದಿಲ್ಲಿಗಾಗಮಿಸಿ ವೈಸರಾಯರೊಡನೆ ಸಂಭಾಷಿಸಿದ್ದ ಮಿ. ಜಿನ್ನರು ಘಟನಾ ಸಮಿತಿಯ ಸಲಹೆಗಾರರಾಗಿರುವ ಸರ್. ಬಿ. ಎನ್. ರಾಯರೊಡನೆ ಕೆಲವು ವಿಷಯಗಳ ಸ್ಪಷ್ಟೀಕರಣ ತಿಳಿಯಲು ಸಂಭಾಷಿಸಿದ್ದರು. ತಾವು ಪ್ರಾಂತಿಕ ಪಂಗಡ ವಿಭಾಗಗಳಲ್ಲಿ ಕುಳಿತು ಕೊಳ್ಳಲು ತಯಾರಿದ್ದೇವೆಂದು ನೆಹರುಗಳಿತ್ತಿರುವ ಆಶ್ವಾಸನೆಯನ್ನಾಧರಿಸಿ ಘಟನಾ ಸಮಿತಿಯ ರೂಪರೇಖೆಗಳ ಸ್ಪಷ್ಟತೆಗಾಗಿ ಈ ಸಂಭಾಷಣೆ ನಡೆಯಿತೆಂದು ತಿಳಿದುಬರುತ್ತದೆ. ಆದರೆ ಇಂದಿನ ನಡುಗಾಲ ಸರಕಾರದಲ್ಲಿ ಮುಸ್ಲಿಂ ಲೀಗು ಸೇರುವಂತಾಗುವ ಹೊಸ ಆಶೆಯಾವುದೂ ದಿಲ್ಲಿ ಘಟನೆಗಳಿಂದ ಮೊಳೆತಿಲ್ಲ. ಕಾಂಗ್ರೆಸ್ ಸಮಿತಿ ಕೂಡಾ ಇದಕ್ಕಾವ ಮಹತ್ವವನ್ನೂ ಕೊಟ್ಟಂತೆ ಕಾಣುವದಿಲ್ಲ. ಇದೇ ತಾ. 25ನೇ ಬುಧವಾರ ಪುನಃ ಜಿನ್ನಾ-ವೇವೆಲ್ ಮಾತುಕತೆ ನಡೆಯಿತು ಪರಿಣಾಮ ವೇನಾಯಿತೆಂಬುದನ್ನು ಎಲ್ಲರೂ ಈಗ ಆತುರದಿಂದ ನಿರೀಕ್ಷಿಸುತ್ತಿದ್ದಾರೆ. ಘಟನಾ ಸಮಿತಿ ಸಭೆಯು ದಶಂಬರ ತಾ. 9ಕ್ಕೆ ಆರಂಭಿಸುವದು.

ಜಾತೀಯ ಗೊಂದಲಗಳು

ಆದಿಯಷ್ಟು ಸಾಮೂಹಿಕ ರೂಪದಿಂದ ಈಗ ಎಲ್ಲಿಯೂ ನಡೆಯುತ್ತಿಲ್ಲ. ಆದರೂ ಸಂಪೂರ್ಣ ಶಾಂತಿ ಸ್ಥಾಪನೆಯಾಗಿಲ್ಲ, ಆಗಾಗ ಗಲಭೆಗಳೇಳುತ್ತಲೇ ಇವೆ. ಮುಖ್ಯವಾಗಿ ಬೊಂಬಾಯಿ, ಅಹಮ್ಮದಾಬಾದ್ ಮತ್ತು ಕಲ್ಕತ್ತಗಳಿಂದ ತಿವಿತ, ಕೊಲೆ, ದರೋಡೆಗಳ ವಾರ್ತೆಗಳು ಬರುತ್ತಿವೆ. ಬಂಗಾಳಾ ಕೌನ್ಸಿಲು ಮತ್ತು ಎಸೆಂಬ್ಲಿಗಳಲ್ಲಿ ಸುಹ್ರವರ್ದಿ ಮಂತ್ರಿಮಂಡಲದ ಮೇಲೆ ಕಾಂಗ್ರೆಸ್ ಪಕ್ಷವು ತಂದ ಅವಿಶ್ವಾಸ ಠರಾವುಗಳು ಬಿದ್ದು ಹೋದುವು. ಯುರೋಪಿಯನ್ ಸದಸ್ಯರು ತಾಟಸ್ಥ್ಯವಹಿಸಿದ್ದರು. ಕಾಂಗ್ರೆಸ್ ಟಿಕೇಟಿನಿಂದ ಬಂದಿದ್ದ ಮೂವರು ಹರಿಜನ ಸದಸ್ಯರೂ ಕಮ್ಯೂನಿಸ್ಟ್ ಸದಸ್ಯರೂ ಲೀಗ್ ಮಂತ್ರಿಮಂಡಲದ ಪಕ್ಷವಹಿಸಿದ್ದರು. ದ ಭಾ. ರೈಲ್ವೇ ಮುಷ್ಕರವು ಇದೇ ತಾ. 22ರಲ್ಲಿ ಸಂಪೂರ್ಣವಾಗಿ ಹಿಂದೆಗೆಯಲ್ಪಟ್ಟಿದೆ.

ಸುಭಾಸರಾಗಮನದ ವಿನೋದಕರ ವಾರ್ತೆ

ನೇತಾಜೀ ಬೋಸರು ಬರಲಿರುವರೆಂಬ ಉತ್ಸಾಹದಾಯೀ ವಾರ್ತೆಯು ಕೆಲಕಾಲದಿಂದ ನವಚೇತನದಾಯಿಯಾಗಿ ವಿವಿಧ ರೂಪದಿಂದ ಹಂಡಿಕೊಂಡಿತ್ತು. ತಾ. 20ರಲ್ಲಿ ಬೋಸರು ಪೇಶಾವರಕ್ಕೆ ಬಂದರೆಂಬ ತಂತಿಗಳು ಲಾಹೋರಿಗೆ ಬಂದು ಆನಂದ ಕೋಲಾಹಲವನ್ನೆಬ್ಬಿಸಿದುವು. ಆದರೆ ವಿಚಾರಿಸುವಾಗ ಯಾರೋ ಕಪಟ ನಾಟಕವಾಡಿದುದೆಂದು ತಿಳಿದುಬಂತು. ದಿಲ್ಲಿಯ ಎ. ಐ. ಸಿ. ಸಿ ಸಭೆಯ ಮುಂದ ಮುಂಬರುವ ಮೀರತ್ ಕಾಂಗ್ರೆಸಿನ ಅಧ್ಯಕ್ಷತೆಗೆ ಸುಭಾಸರನ್ನಾರಿಸಬೇಕೆಂದೂ, ಬೋಸರು ಕೂಡಲೇ ಬರುವಂತೆ ರೇಡಿಯೋ ಮೂಲಕ ಕರೆಯ-ಬೇಕೆಂದೂ ಕೇಳಿಕೊಳ್ಳುವ ಠರಾವು ಬಂದಿದೆ. ಅಂತೆಯೇ ನಡುಗಾಲ ಸರಕಾರದಿಂದ ಹಿಂದೆಗೆಯಬೇಕೆಂಬ ಸೂಚನೆಯೂ ಇದೆ.

ಹೆನ್ರಿವೆಲ್ಲಾಸರ ರಾಜಿನಾಮೆ

ಅಂತರ್‍ರಾಷ್ಟ್ರೀಯ ರಂಗದ ಪ್ರಾಮುಖ್ಯ ವಾರ್ತೆಯೆಂದರೆ ಅಮೇರಿಕದ ವ್ಯಾಪಾರ ಮಂತ್ರಿ ವೆಲ್ಲಾಸರ ರಾಜೀನಾಮೆ. ವಿದೇಶ ಮಂತ್ರಿ ಬೈರ್ನೆಸರ ಧೋರಣೆಗೆ ವಿರೋಧವಾಗಿ ವೆಲ್ಲಾಸರು 'ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ಸಹಕರಿಸದೆ ರಶ್ಯದೊಡನೆ ಮೈತ್ರಿ ಬೆಳೆಸುವದೇ ಅಮೇರಿಕದ ಧೋರಣೆ" ಎಂದು ಬಹಿರಂಗವಾಗಿ ಘೋಷಿಸಿ ಹೊಸ ಗೊಂದಲವೊಂದನ್ನೆಬ್ಬಿಸಿದ್ದರು. ಅಧ್ಯಕ್ಷ ಟ್ರುಮೇನರು ಪ್ರಥಮತಃ ವೆಲ್ಲಾಸರ ಅಭಿಪ್ರಾಯಕ್ಕೆ ಸಮ್ಮತಿ ಸೂಚಿಸಿದ್ದರೂ ಕೊನೆಗದನ್ನು ಹಿಂದಗೆದುಕೊಂಡರು. ಈಗ ಟ್ರುಮೇನರ ಅಪೇಕ್ಷೆಯಂತೆ ವೆಲ್ಲಾಸರು ರಾಜೀನಾಮೆ ಕೊಟ್ಟಿದ್ದಾರೆ. ಅಮೇರಿಕದ ಧೋರಣೆ ನೊದಲಿನಂತೆಯೇ ಇದೆ. ಆದರೆ ಅಲ್ಲಿಯ ಎಡ-ಬಲ ಪಕ್ಷಗಳೊಳಗೆ ಸ್ಪರ್ಧೆಯೇಳುವ ಸಂಭವವೆದ್ದಿದೆ.

ಚುನಾವಣಾ ಪ್ರಕಟಣೆ

ಜಿಲ್ಲಾ ಬೋರ್ಡು, ಮುನ್ಸಿಪಾಲಿಟಿಗಳ ಉಮೇದ್ವಾರಿಕೆಯ ಪ್ರಕಟಣೆಗಳನ್ನೂ 'ಮೆನಿಫೆಸ್ಟೊ'ಗಳನ್ನೂ ನವಯುಗದಲ್ಲಿ ಕಡಿಮೆ ದರದಲ್ಲಿ ಪ್ರಕಟಿಸಲಾಗುವುದು.

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ—ಇದೇ ಆಶ್ವೀಜ ಶುದ್ಧ ದಶಮಿ ಶನಿವಾರ ಆಗಾಯ್ತು ಆಶ್ವೀಜ ಬಹುಳ ಬಿದಿಗೆ ಸೋಮವಾರ (ತಾ. 5-10'46ರಿಂದ 12 10 46 ವರೆಗೆ ಏಳು ದಿನ ಅಹೋ ರಾತ್ರಿ ಭಜನಾ ಸಪ್ತಾಹವು ಶ್ರೀ ದೇವರಾನುಗ್ರಹದಿಂದಲೂ, ಉಪಸರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿ ಪೂರ್ವಕವಾಗಿ ಉದಾರ ಹಸ್ತದಿಂದ ನೀಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವ ವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ನಡೆಸಬಹುದಾದ ಸದ್ವಿನಿಯೋಗಗಳ ವಿವರ ರಾತ್ರಿ ಕಾಲದ ಹೂವಿನ ಪೂಜೆಗೆ ರೂ. 10 0-0, ಹೂವಿನ ಪೂಜೆಗೆ ರೂ. 5-0 0, ದೀಪಾರಾಧನೆ ರೂ. 2-0 0, ಪಟ್ಟೆ ಸಿಂಪಿ ರೂ. 0-8 0, ಕರ್ಪೂರಾರತಿ ರೂ. 0 2 3, ತುಲಸೀಹಾರ ರೂ 0 1-0, ಅಹೋರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ. 25-0 0.

ಕಟಪಾಡಿ } ಪಿ. ಅಣ್ಣಪ್ಪ ನಾಯ್ಕ
ತಾ. 24 9-46 } ಪ್ರಕೃತ ಪ್ರಸಿಡೆಂಟ್.

ದಿ ನ್ಯೂ ಗ್ರೇಟ್ ಇನ್ಶೂರೆನ್ಸ್
ಕೊ. ಒಫ್ ಇಂಡಿಯಾ ಲಿಮಿಟೆಡ್.

(ಇನ್‌ಕೊರ್ಪರೇಟೆಡ್ ಇನ್ ಬರೋಡಾ. ನಂಬರದ ಮಿತ ಜವಾಬ್ದಾರಿಯ ಬಾಧ್ಯತೆ)

ಅಧಿಕೃತ ಭಂಡವಳ	ರೂ 2,50,00,000
ತೆತ್ತ ಮತ್ತು ಚಂದಾ ಕೊಡುವ ಭಂಡವಳ	ರೂ. 1,25,00,000
ವಸೂಲಾದ ಭಂಡವಳ	ರೂ. 32,50,000

ಡೈರೆಕ್ಟರ ಮಂಡಳಿಯ ಸದಸ್ಯರು

1. ತುಳಸಿದಾಸ್ ಕಿಲಾಚಂದ್ ಎಸ್ಕ್ವಾಯರ್. (ಚೆಯರ್‌ಮೆನ್)
2. ವಾಲ್‌ಚಂದ್ ಹಿರಾಚಂದ್, ಎಸ್ಕ್ವಾಯರ್.
3. ಧರ್ಮಸೇನ್ ಮುಲ್‌ರಾಜ್ ಕಾಟರ್, ಎಸ್ಕ್ವಾಯರ್
4. ಜಹಾಂಗಿರ್ ಪೆಸ್ಟೋಂಜಿ ಪಟೇಲ್, ಎಸ್ಕ್ವಾಯರ್, ಬಿ.ಎ (ಕ್ಯಾಂಟಬ್)
5. ರಾಜಪ್ರಿಯ ಮಸಿಭಾಯಿ ಪಸಂಜಿ ದೇಸಾಯಿ.
6. ಅಂಬಾಲಾಲ್ ಕಿಲಾಚಂದ್, ಎಸ್ಕ್ವಾಯರ್.

ಜನರಲ್ ಮೆನೇಜರ್:—ಎಂ. ಜಿ ಮೋದಿ, ಎಸ್ಕ್ವಾಯರ್.

ರಿಜಿಸ್ಟರ್ಡ್ ಆಫೀಸು:—ಬೇಂಕ್ ಬಿಲ್ಡಿಂಗ್, ಮಾಂಡವಿ, ಬರೋಡಾ.

ಬ್ರಿಟಿಷ್ ಇಂಡಿಯದ ಕೇಂದ್ರ ಕಾರ್ಯಾಲಯ:

45/47 ಅಪೊಲೋ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಮದ್ರಾಸು ಸಂಸ್ಥಾನದ ಎಲ್ಲೆಡೆಗಳಲ್ಲೂ ಅನುಭವೀ ನುರಿತ ಏಜಂಟರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಮದ್ರಾಸ್ ಆಫೀಸು, 121-A ಆರ್ಮೇನಿಯನ್ ಸ್ಟ್ರೀಟ್.

ಜೀವವಿಮಾ, ಬೆಂಕಿ, ಹಡಗು ಗಂಡಾಂತರಗಳ ಇನ್ಶೂರ್ ಸಹ ಸ್ವೀಕರಿಸಲಾಗುವುದು

The New Great Insurance Co. of India Ltd.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ... ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ ಕಂಟ್ರೋಲಿಗೆ ರೂ. 4/-. ವಿ. ಪಿ. 12 ಅಣೆ ಅಲಾಯಿದ.

Mrs. P. DEVEE,
P. D. S. (A. B.) Tollygunge. Calcutta.
ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು



Approved firm by the Govt. of Mysore
Certified by the Agent of the Govt. of Cylone Indian.

ಉಡುಪಿ

ಲೇಖಕರ—ಪ್ರಕಾಶಕರ ಸಮ್ಮೇಳನ

ಲನ—ಕೇಂದ್ರದ ಕರ್ನಾಟಕ ಸಂಘದ ಉತ್ಸವಾಂಗವಾಗಿ ಜಿಲ್ಲೆಯ ಕನ್ನಡ ಲೇಖಕರ ಮತ್ತೂ ಪ್ರಕಾಶಕರ ಒಂದು ಸಮ್ಮೇಲನವು ತಾ. 5-10-1946ರಂದು ಸಂಜೆ ಗಂಟೆ 3ರಿಂದ 6ರ ವರೆಗೆ ಇಲ್ಲಿಯ ಬೋರ್ಡು ಹಯರ್ ಸ್ಕೂಲ ಪೀಪಲ್ಸ ಹಾಲಿನಲ್ಲಿ ಕೂಡುವುದಿದೆ. ಜಿಲ್ಲೆಯ ಎಲ್ಲ ಲೇಖಕರೂ ಪ್ರಕಾಶಕರೂ ಹೆಚ್ಚು ಸಂಖ್ಯೆಯಲ್ಲಿ ಈ ಸಮ್ಮೇಲನದಲ್ಲಿ ಸಹಯೋಗಿಸಿ ಸಹಕರಿಸಬೇಕಾಗಿ ಸಂಘದ ಕಾರ್ಯವಾಹಿಗಳ ಅತ್ಯಾದರದ ಕರೆಯಿದೆ.

ಮುನಿಸಿಪಲ್ ಕೌನ್ಸಿಲು ಮಿಾಟಿಂಗು

ಗು—ಇದೇ ತಾ 21ರಲ್ಲು ನಗರ ಸಭಾ ಭವನದಲ್ಲಿ ಚಿಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಆಫೀಸಿನಲ್ಲಿ ಕಾಂಗ್ರೆಸ್ ಧ್ವಜವನ್ನಿರಿಸುವುದರಲ್ಲಿ ಸರಕಾರದ ಆತಂಕವೇನೂ ಇಲ್ಲವಾದುದರಿಂದ ಒಮ್ಮೆ ತೆಗೆದೊಗೆದ ಧ್ವಜವನ್ನು ಪುನಹ ಹಾರಾಡಿಸುವುದು ಯುಕ್ತವೆಂದು ಅಭಿಪ್ರಾಯಪಟ್ಟು ಕೊನೆಗೆ ಕೌನ್ಸಿಲು ಮಿಾಟಿಂಗು ದಿನಗಳಲ್ಲಿಮಾತ್ರ ರಾಷ್ಟ್ರಧ್ವಜವು ಹಾರಾಡಿಸಲ್ಪಟ್ಟರೆ ಸಾಕೆನ್ನುವ ನಿರ್ಣಯವಾಯಿತು. ಮುನಿಸಿಪಲ್ ಕೆಳ ನೌಕರರ ಸೌಕರ್ಯಕ್ಕಾಗಿ ಮುನಿಸಿಪಾಲಿಟಿ ಕಡೆಯಿಂದ ಸೀದಾ ಅಂಗಡಿಗಳನ್ನು ತೆರೆಯುವುದು ಶ್ರೇಯಸ್ಕರವೆಂಬ ಸರಕಾರದ ಹಿತೋಕ್ತಿಗಳನ್ನು ಪ್ರಕೃತ ಮನ್ನಿಸುವುದು ಬೇಡವೆಂದಾಯಿತು.

ಕೌನ್ಸಿಲಿನ ಹಣಕಾಸುಗಳ ಸ್ಥಿತಿಗತಿಯ ದೃಷ್ಟಿಯಿಂದ ನಗರ ಸಭೆಗೆ II ಗ್ರೇಡಿನ ಹೆಲ್ತ್ ಆಫೀಸರರನ್ನು ನೇಮಿಸುವುದು ಬೇಡವೆಂದಾಯಿತು. ವಳಕಾಡು, ಅಜ್ಜರಕಾಡು ವಾರ್ಡುಗಳನ್ನು ಟೌನ್‌ಪ್ಲಾನಿಂಗ್ ಸ್ಕೀಮಿಗೆ ಸೇರಿಸಲಾಯಿತು. ಕಿನ್ನಿಮೂಲ್ಕಿ ಮುನಿಸಿಪಲ್ ಬಾಲಿಕಾ ಪಾಠ ಶಾಲೆಗೆ ಹಾ. ಎ. ಗ್ರೇಡ್ ಯೋಗ್ಯತೆಯ ಓರ್ವ ಟೀಚರರನ್ನು ನೇಮಿಸಬಹುದೆಂದಾಯಿತು.

ನವರಾತ್ರಿ—ಮಹೋತ್ಸವದ ನಿಮಿತ್ತ ಶಾರದಾ ಸರಸ್ವತಿ ಪೂಜಾವಿನಿಯೋಗಾದಿಗಳಿಗೆ ಕಡಲೆಯೂ ಅತ್ಯಗತ್ಯವಿದೆ. ಇದರ ಸರಬರಾಯಿ ಇನ್ನೂ ಆಗಲಿಲ್ಲ. ಸಾಲದುದಕ್ಕೆ ಸಕ್ಕರೆಯ ವಿತರಣೆಯೂ ಈ ತನಕ ಸುವ್ಯವಸ್ಥಿತ ರೀತಿಯಲ್ಲಿ ನಡೆಯಲಿಲ್ಲ. ಸ್ಥಳೀಯ ಅಧಿಕಾರಿಗಳು ಈಕಡೆ ನಿಗಾ ಕೊಡಬೇಕಾಗಿದೆ.

ಕಲಾವೃಂದ—ತಾ ೧೭-೯ ೪೬ರಂದು ಕಲಾವೃಂದದ ನಿಬಂಧನೆಗಳನ್ನು ವ್ಯಕ್ತ ಪಡಿಸುವ ಮಹಾಧಿವೇಶನವೊಂದು ಜರಗಿ ನಿಬಂಧನೆಗಳು ಮಂಜೂರಾದುವು. ತಾ ೧೮-೯-೪೬ರಂದು ಶ್ರೀ. ಕು ಶಿ ಹರಿದಾಸಭಟ್ಟರ ಅಧ್ಯಕ್ಷತೆಯಲ್ಲಿ ಸಭೆಯು "ವಾಚನಗೋಷ್ಠಿ" ರೂಪದಿಂದ ಜರಗಿತು, ತಾ ೨೦ ೯ ೪೬ರಂದು ಅಕ್ಕ ಶ್ರೀ. ಕೆ. ವಿ. ಬಾಯಿಯವರ ನೆನಹಿಗಾಗಿ ಶ್ರೀ. ತಮ್ಮ ಪಿ. ವ್ಯಾಸರಾವ್ ಅವರು ಕಲಾವೃಂದವು ಚಿರಕಾಲ ಬಾಳಿ ಬೆಳಗಲೆಂದು ವೃಂದದ ಪುಸ್ತಕ ಭಂಡಾರಕ್ಕೆ ೧೦೦ಕ್ಕೂ ಮಿಕ್ಕಿದ ಒಳ್ಳೆ ಬೆಲೆಬಾಳುವ ಪುಸ್ತಕಗಳನ್ನು ಕಾಣಿಕೆಯಾಗಿತ್ತರು.

ಸಾಹಿತ್ಯೋತ್ಸವ—ಕರ್ನಾಟಕ ಸಂಘದ ಕಡೆಯಿಂದ ಸಾಹಿತ್ಯೋತ್ಸವವು ತಾ. 1 10-46ರಿಂದ 5 10-46ರ ವರೆಗೆ ಬೋರ್ಡು ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಜರಗುವುದು ಪ್ರತಿದಿನ ಬೆಳಿಗ್ಗೆ 9ರಿಂದ 11 ಗಂಟೆಯ ತನಕವೂ ಮಧ್ಯಾಹ್ನ 3 30ರಿಂದ 6ರ ತನಕ, 6 30ರಿಂದ 8-30ರ ತನವೂ ವಿವಿಧ ಕಾರ್ಯಕ್ರಮಗಳಿವೆ. ಪ್ರೊಫೆಸರ್ ಆರ್. ವಿ. ಜಹಗೀರ್‌ದಾರ್, ಶ್ರೀ. ಜಿ ಪಿ. ರಾಜರತ್ನಂ, ಶ್ರೀ ಕಯ್ಯಾರ ಕಿಂಞಣ್ಣ ರೈ, ಶ್ರೀ. ಕೆ. ಸಂಪತ್ಗಿರಿ ರಾವ್, ಶ್ರೀ ನವೇಗಲ್ಲ ಪ್ರಹ್ಲಾದ ರಾವ್, ಶ್ರೀ. ವಿ ಎಸ್. ಕುಡ್ವ, ಶ್ರೀ ಎಮ್ ಎಸ್ ಅನಂತಪದ್ಮನಾಭ ರಾವ್, ಶ್ರೀ. ಉಗ್ರಾಣ ಕೃಷ್ಣ ರಾವ್, ಶ್ರೀ. ಎನ್. ಎಸ್. ಕಿಲ್ಲೆ, ಜನಾಬ್ ಪಿ. ಎಮ್. ಇದಿನಬ್ಬ, ಶ್ರೀ. ಕೆ. ಬಿ ಜನಾರ್ದನ ಹೆಗ್ಡೆ, ಶ್ರೀ ಕಟೀಲು ಗಣಪತಿ ಶರ್ಮ, ಶ್ರೀ. ಪ್ರೊಫೆಸರ್ ಲಕ್ಷ್ಮೀನಾರಾಯಣ ರಾವ್, ಶ್ರೀ ಕೆ. ಕೃಷ್ಣ ರಾವ್ ಮೊದಲಾದವರು ಈ ಸಮಾರಂಭದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಕ್ಕಿರುವರು.



ಶ್ರೀ ಕೃಷ್ಣಾಪುರ ಮಠದ ಶ್ರೀ ಮದ್ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಾ. 30-8-46ರಂದು ತಮ್ಮ ಪಾಡಿಗಾರು ಮಠದಲ್ಲಿ ಆಚರಿಸಿದ ಗಣೇಶ ಹಬ್ಬದ ಸಮಯ ತೆಗೆದ ದೃಶ್ಯ.

ಕಾರ್ಕಳ—ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮಹಾಸಭೆಯು ತಾ. 29-9-46ಕ್ಕೆ ಅಪರಾಹ್ನ 2ಗಂಟೆಗೆ ಬಂಟರ ಹಾಸ್ಟೆಲಿನಲ್ಲಿ ನಡೆಯುವದೆಂದು ಶ್ರೀ. ಎಂ. ಎಸ್. ಅಧಿಕಾರಿಗಳು ತಿಳಿಸುತ್ತಾರೆ.

ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಪರಿಷತ್ತನ್ನು

—ತಾ 6 10 46ಕ್ಕೆ ಅಪರಾಹ್ನ 2ಗಂಟೆಗೆ ಕಾರ್ಕಳ ಬಂಟರ ಹಾಸ್ಟೆಲಿನಲ್ಲಿ ಜರಗಿಸುವ ವ್ಯವಸ್ಥೆಯಾಗಿದೆ. ಈ ಬಗ್ಗೆ ಶ್ರೀ ಕೆ ಮಹಾಬಲ ಹೆಗ್ಡೆಯವರು ಅಧ್ಯಕ್ಷರಾಗಿ ಉಳ್ಳ, ಶ್ರೀ ಎಂ. ಎಸ್ ಅಧಿಕಾರಿಗಳು—ಕಾರ್ಯದರ್ಶಿಯಾಗಿ ಉಳ್ಳ, ಶ್ರೀಗಳಾದ ಜಾರ್ಕಳ ನಾಗಪ್ಪ ಹೆಗ್ಡೆ ವಾಸುದೇವತ್, ಎಂ. ಧರ್ಮ ಸಾಮ್ರಾಜ್ಯ, ಪಿ. ವಿ. ಉಪಾಧ್ಯಾಯ, ಬಿ. ಬಿ. ಶೆಟ್ಟಿ ಮೊದಲಾದವರು ಸದಸ್ಯರುಳ್ಳ ಸ್ವಾಗತ ಕಮಿಟಿಯ ರಚನೆಯಾಗಿ ಅಗತ್ಯವುಳ್ಳ ಪ್ರಕಟನೆಯು ಹೊರಟಿರುತ್ತದೆ.

ಜಿಲ್ಲಾ ಕೊಂಗ್ರೆಸು ಕೆಲಸಗಾರರ ಪ್ರಥಮ ಪರಿಷತ್ತು; ಕಾರ್ಕಳ

—ಬರುವ ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಕೋಂಗ್ರೆಸು ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸುವುದಿಲ್ಲವೆಂದು ಜಿಲ್ಲಾ ಕೋಂಗ್ರೆಸು ಕಮಿಟಿಯವರು ನಿರ್ಧರಿಸಿರುವುದರಿಂದ ಬರುವ ಬೋರ್ಡಿಗೆ ವಿದ್ಯಾವಂತರೂ ಯೋಗ್ಯರೂ ಆದ ಸದಸ್ಯರು ಬರುವಂತೆ ಎಲ್ಲಾ ಜಾತಿಮತಗಳಿಂದಲೂ ಸಮರ್ಥರಾದ ಉಮೇದ್ವಾರರನ್ನು ನಿಲ್ಲಿಸುವ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ನಮ್ಮ ಜಿಲ್ಲೆಯ ಕೋಂಗ್ರೆಸು ಕೆಲಸಗಾರರ ಪರಿಷತ್ತೊಂದನ್ನು ಜಿಲ್ಲೆಯ ಕೇಂದ್ರಸ್ಥಳವಾದ ಕಾರ್ಕಳದಲ್ಲಿ ಜರಗಿಸಬೇಕೆಂದು ನಿರ್ಣಯಿಸಿರುವ ವಿಷಯ ಈಗಲೇ ಎಲ್ಲರಿಗೂ ವಿದಿತವಾಗಿರಬೇಕು ಹಾಗೆ ಸೇರಲಿರುವ ಪರಿಷತ್ತಿಗೆ ಬರಬೇಕೆಂದು ನಮ್ಮ ಕೆಲಸಗಾರರಿಗೆ ಪ್ರತ್ಯೇಕವಾಗಿ ಆಮಂತ್ರಣ ಕೊಡಲು ಪ್ರಕೃತ ಸಾಕಷ್ಟು ಸಮಯವಿರುವುದಿಲ್ಲ. ಆದು ಸಾಧ್ಯವೂ ಅಲ್ಲ ಆ ಸಾರ್ವಜ [illegible] ಉತ್ಸಾಹವಿರುವ ಜಿಲ್ಲೆಯ ಎಲ್ಲಾ ಕೋಂಗ್ರೆಸು ಕೆಲಸಗಾರರು ಈ ಪರಿಷತ್ತು [illegible] ಪೂರ್ವಕ ಸಹಾಯ ಮಾಡಬೇಕು. ಜಿಲ್ಲೆಯ ಎಲ್ಲಾ ಸ್ಥಾನಗಳಿಗೂ ಕೋಂಗ್ರೆಸು ತತ್ವಕ್ಕನುಸರಿಸಿ ಜನಹಿತ ದೃಷ್ಟಿಯಿಂದ ಕೆಲಸ ಮಾಡುವ ಸಾಮರ್ಥ್ಯವಿರುವ ಉಮೇದ್ವಾರರನ್ನು ಆರಿಸಬೇಕು ಆ ಕಾರ್ಯವನ್ನು ಯೋಗ್ಯರೀತಿಯಿಂದ ನಿರ್ವಹಿಸುವುದಕ್ಕಾಗಿ ಒಂದು ಕಮಿಟಿಯನ್ನು ಈ ಪರಿಷತ್ತು ಏರ್ಪಡಿಸಬೇಕಾಗಿದೆ ಮತ್ತು ಕೋಂಗ್ರೆಸು ಕೆಲಸಗಾರರ ಸಂಘದ ಕಡೆಯಿಂದ ಬೋರ್ಡಿಗೆ ಹೋಗುವ ಸದಸ್ಯರು ಕೈಗೊಳ್ಳಲಿರುವ ಕಾರ್ಯಕ್ರಮವನ್ನು ನಾವು ಈ ಪರಿಷತ್ತಿನಲ್ಲೇ ತಯಾರಿಸಿ ಜಿಲ್ಲೆಯ ಮತದಾರರ ಮುಂದೆ ಬೇಗನೆ ಇಡಬೇಕಾಗಿದೆ. ಅದಕ್ಕೆ ಬೇಕಾದ ಸಲಹೆಗಳನ್ನು ಪರಿಷತ್ತು ಸೇರುವ ಮುಂಚಿತವಾಗಿ ನಮ್ಮ ಬಳಿಗೆ ಕಳುಹಿಸಿಕೊಡಬೇಕು ಮತ್ತು ಪರಿಷತ್ತಿನಲ್ಲಿ ಇಡಬೇಕಾದ ಠರಾವುಗಳ ವಿಷಯಗಳನ್ನು ಸಹಾ ಮುಂದಾಗಿ ಕಳುಹಿಸಬೇಕು. ಹೀಗೆ ಎಲ್ಲಾ ಕೊಂಗ್ರೆಸು ಕೆಲಸಗಾರರು ಈ ಕಾರ್ಯದಲ್ಲಿ ನೆರವಾಗಬೇಕಾಗಿ ಅಪೇಕ್ಷಿಸುತ್ತೇವೆ.

ಪಾದೂರು ವಾಸುದೇವ ಉಪಾಧ್ಯಾಯ

ಪರಿಷತ್ತಿನ ಪ್ರಕಟನಾ ಕಾರ್ಯದರ್ಶಿ.

ಅಜೆಕಾರು—ಒಂದು "ಪ್ರಾಥಮಿಕ ಕೋಪರೇಟಿವ್ ಸ್ಟೋರು" ಇಲ್ಲಿ ಹೊಸತಾಗಿ, ತನ್ನ ಕಾರ್ಯ ಕಲಾಪಗಳನ್ನು ಶೀಘ್ರದಲ್ಲೇ ಪ್ರಾರಂಭಿಸಲಿರುವುದೆಂದು ತಿಳಿದುಬರುತ್ತದೆ.

TENDER NOTICE

"Sealed tenders in the prescribed form which may be obtained from the Municipal Office on payment of Rs. 0— 1—0 each will be received by the Commissioner, Udipi Municipality up to 3 P. M. on 7-10-1946 for the construction of a Jutka stand. A sum of Rs. 155/- has to be deposited as earnest money deposit. All particulars may be had from the Municipal Office during Office hours on working days. The estimated cost of the work is Rs 3010/-.

Municipal Office,
UDIPI.
Dated 23-9-1946.

T. Harischandra Rao,
COMMISSIONER,
Udipi Municipality, Udipi

ಮದರಾಸು ಸ್ಕೂಲ್ ಬುಕ್ ಮತ್ತು ಲಿಟರೇಚರ್ ಸೊಸೈಟಿಯವರಿಂದ ಬಹುಮಾನಿತವಾದ ಉಪಯುಕ್ತ ಗ್ರಂಥ

ಪ್ರಸವ ವಿಜ್ಞಾನ

ಬರೆದವರು

ಡಾ|| ದೊಡ್ಡೇರಿ ವೆಂಕಟಗಿರಿರಾವ್.

ಸುಮಾರು ಮೂವತ್ತು ಚಿತ್ರಗಳಿವೆ.

ವಿ. ಪಿ. ಕಳಿಸುವುದಿಲ್ಲ. ರೂ ೨-೪ ನ್ನು ಮನಿಯಾರ್ಡರ್ ಮಾಡಿದರೆ ರಿಜಿಸ್ಟರ್ ಮೂಲಕ ಕಳಿಸಲಾಗುವುದು. ಪುಸ್ತಕ ವ್ಯಾಪಾರಿಗಳಿಗೆ ರಿಯಾಯತಿಯುಂಟು

ಪ್ರಕಾಶಕರು

ಮಾಡರ್ನ್ ಔಷಧಾಲಯ

ದೊಡ್ಡ ಬಳ್ಳಾಪುರ (ಬೆಂಗಳೂರು)

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ್,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

Indra Bhavan Coffee Hotel,

Balmatta Road, Mangalore.

ಮಂಗಳೂರು.

ಬಟಾಟೆ— ನೀಲಗಿರಿಯಿಂದ ಬಟಾಟೆ ತರಿಸಲಿಕ್ಕೆ ಈ ತನಕ ಜಿಲ್ಲಾ ಕಲೆಕ್ಟರವರಿಂದ ನೇಮಕ ಹೊಂದಿದ ವ್ಯಾಪಾರಸ್ತರೇ ಬೇಕಿತ್ತು. ಇನ್ನು ಹೀಗಿಲ್ಲ ನೀಲಗಿರಿ ಲೈಸೆನ್ಸು ದಾರರಿಂದ ಯಾರೂ ಬಟಾಟೆ ತರಿಸಿಕೊಳ್ಳಬಹುದು— ಈ ಜಿಲ್ಲೆಯ ಬಟಾಟೆ ವ್ಯಾಪಾರಿಗಳೆಲ್ಲಾ ತಮ ತಮಗೆ ಬೇಕಾದಷ್ಟು ಬಟಾಟೆ ತರಿಸಿಕೊಳ್ಳಲಿಕ್ಕೆ ಕೂಡಲೇ ಏರ್ಪಾಡು ಮಾಡಬಹುದು.

ಪಿರಿಯಾಡಿಕಲ್ ಕಾನ್ಫರೆನ್ಸ್— ಮಂಗಳೂರು ಕಲೆಕ್ಟರರ ಆಫೀಸಿನಲ್ಲಿ ತಾ. 16ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಸ್ ಭೂತಲಿಂಗಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಉಡ್ಪಿ ತಾಲೂಕಿನ ಕೋಟ ಮತ್ತು ಕುಂಜಾಲು ಸೆಂಟರುಗಳಲ್ಲಿ ಜಾನುವಾರುಗಳಿಗೆ ಕುಡಿಯಲು ಯೋಗ್ಯವಾದ ನೀರಿನ ಸರಬರಾಯಿಯ ಏರ್ಪಾಡು ಕುರಿತು ಆಲೋಚಿಸಲಾಯಿತು

ಮೆಂಬರರು ಪ್ರತಿ ಸಭೆಗೂ ಹಾಜರಾಗುವುದು ಮಾತ್ರವಲ್ಲದೆ ತಂತಮಗೆ ವಿಷ್ಯ ಬಗ್ಗೆ ಕೊಡೋಣಾಗುವ ಪತ್ರಗಳ ವರದಿಗಳನ್ನು ಸಾಕಷ್ಟು ಮುಂಚಿತವಾಗಿ ಆಫೀಸಿಗೆ ಕಳುಹಿಸುವ ಆವಶ್ಯಕತೆಯ ಕುರಿತು ಸಹ ಮೆಂಬರರ ಅವಗಾಹನೆ ಬಗ್ಗೆ ತರಲು ಕೊನೆಯ ನಿರ್ಧಾರವಾಯಿತು.

ಪ್ರಾರಂಭೋತ್ಸವ— ತಾ. 19 9 46 ರಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಉಡುಪಿ ಸಹಕಾರಿ ತರಬೇತಿ ಶಾಲೆಯ ವಿದ್ಯಾರ್ಥಿ ಅಧ್ಯಾಪಕ ಸಂಘದ ಪ್ರಾರಂಭೋತ್ಸವವು ಶ್ರೀ. ಕಣೆಕಾರ್ ರಾಜಗೋಪಾಲ ಕೃಷ್ಣರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ರಾಮಯ್ಯ ನಾಯಕ್, ಬಿ. ಎ. ಎಲ್. ಟಿ. ಇವರು ಅಧ್ಯಕ್ಷರ ಮತ್ತು ಅಂದಿನ ಭಾಷಣ ಕರ್ತರ ಪರಿಚಯವನ್ನು ಮಾಡಿಕೊಟ್ಟ ಬಳಿಕ ಡಾಕ್ಟರ್. ಟಿ. ಮಾಧವ ಪೈ ಎಮ್. ಬಿ. ಬಿ. ಯಸ್. ಇವರು ವಿದ್ಯಾರ್ಥಿ ಅಧ್ಯಾಪಕರಿಗೆ ಬೋಧಪ್ರದ ಸ್ವಸ್ತಿ ವಾಚನವನ್ನು ಮಾಡುತ್ತಾ ಸಂಘದ ಅಭ್ಯುದಯವನ್ನು ಹಾರೈಸಿದರು. ಅಧ್ಯಕ್ಷರ ಸಂದರ್ಭೋಚಿತವಾದ ಮತ್ತು ಹಲವು ಸಲಹೆಗಳನ್ನೊಳಗೊಂಡ ಭಾಷಣ, ಕಾರ್ಯದರ್ಶಿಯವರ ವಂದನಾರ್ಪಣಗಳಾದ ಬಳಿಕ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಸಕ್ಕರೆಯು— ಬೆಲೆಯನ್ನು ಇದೇ ತಾ. ೧೬ರಿಂದ ಈ ಕೆಳಗಿನಂತೆ ನಿರ್ಧರಿಸಲಾಗಿದೆ— ಮಂಗಳೂರಲ್ಲಿ ರಾತಲಿಗೆ ೦ ೪-೩; ಬಂಟ್ವಾಳ ೦ ೪ ೪; ಮಂಜೇಶ್ವರ ೦ ೪-೪, ಕುಂಬ್ಳೆ ೦-೪-೫; ಹೊಸದುರ್ಗ ೦-೪-೫, ಕಾಸರಗೋಡು ೦ ೪ ೫; ಪುತ್ತೂರು ೦ ೪-೫, ಬೆಳ್ತಂಗಡಿ ೦-೪-೫; ಉಡುಪಿ ೦ ೪-೬; ಕುಂದಾಪುರ ೦-೪ ೬; ಕಾರ್ಕಳ ೦ ೪ ೫, ಮೂಡಬಿದ್ರಿ ೦ ೪-೫.

ದ. ಕ. ಜಿಲ್ಲಾ ಹರಿಜನ ಲೇಬರ್ ಲೀಗಿನ— ಒಂದು ಮಹಾ ಸಭೆಯು ಇದೇ ತಾ. ೧೫ರಂದು ಸಂಘದ ಆಫೀಸಿನಲ್ಲಿ ಶ್ರೀ ಕೆ ಈಶ್ವರ, ಎಮ್. ಎಲ್ ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿರುವ ಪ್ರತಿಯೊಂದು ಹಸುಗೆ ಅಂಗಡಿಗಳಲ್ಲಿ ಹರಿಜನರನ್ನು ಸೇಲ್ಸ್‌ಮೇನನಾಗಿ ಸೇರಿಸಿಕೊಳ್ಳಬೇಕೆಂದೂ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದುಕೊಳ್ಳಬೇಕೆಂದೂ ನಿರ್ಣಯ ಮಾಡಲಾಯಿತು. ಹರಿಜನರು ಕಾಯಕಷ್ಟ ಕೆಲಸಮಾಡುವ ಜನರಾದ್ದರಿಂದ ಅವರಿಗೆ ಕಡಿಮೆಯೆಂದರೆ ಅರ್ಧಸೇರು ಪ್ರಕಾರ ರೇಶನ್ ಸಿಗುವಂತೆ ಜಿಲ್ಲಾ ಕಲೆಕ್ಟರ್ ಮತ್ತು ಮಾನ್ಯ ಮಂತ್ರಿಯವರಿಗೆ ಮನವಿಮಾಡಿಕೊಳ್ಳಬೇಕೆಂದೂ ನಿರ್ಣಯಮಾಡಲಾಯಿತು. ಹೋಟೇಲು ಪ್ರವೇಶದ ಕುರಿತು ಸದ್ಯದಲ್ಲಿ ನಮ್ಮ ಜಿಲ್ಲೆಗೆ ಬರಲಿರುವ, ಲೋಕಲ್ ಬೋರ್ಡಿನ ಮಂತ್ರಿಯವರಿಗೆ ಒಂದು ಮಾನಪತ್ರವನ್ನು ಕೊಡಬೇಕೆಂದು ನಿರ್ಣಯಮಾಡಲಾಯಿತು ನಗರದಲ್ಲಿರುವ ಕಾಫಿ ಹೋಟೆಲುಗಳಲ್ಲಿ ಹರಿಜನರಿಗೆ ಪ್ರತ್ಯೇಕವಾಗಿ ಕಾದಿಟ್ಟ ಸ್ಥಳವನ್ನು ಮಂಗಳೂರು ಮುನಿಸಿಪಾಲಿಟಿಯು ತಪ್ಪಿಸದೆ, ಕೂಡಲೆ ತೆಗೆಯಬೇಕೆಂದೂ ನಿರ್ಣಯಿಸಲಾಯಿತು.

ಹೋಟೆಲು ಕೆಲಸಗಾರರ ಕೇಳಿಕೆಗಳ— ಕುರಿತು ಸಾರ್ವಜನಿಕ ಸಭೆಯೊಂದು ತಾ. ೧೫ರಂದು ಸಂಜೆ ಕೇಂದ್ರ ಮೈದಾನಿನಲ್ಲಿ ಯುವಜನ ಕಾಂಗ್ರೆಸಿನ ಆಶ್ರಯಲ್ಲಿ ಜರಗಿತು. ಶ್ರೀ ವಿಕ್ಟರ್ ಡಿ'ಸೋಜರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷರಾದ ಡಾ। ಸಂಜೀವನಾಥರ ಹೋಟೆಲು ಕೆಲಸಗಾರರ ಸಂಘದ ಇದುವರೆಗೆ ಆದಕಾರ್ಯಗಳನ್ನು ಓದಿ ಹೇಳಿದರು. ಶ್ರೀ। ಎ. ಬಾಲಪ್ಪ, ಶ್ರೀ। ಗೋವಿಂದನ್ ವೈದ್ಯರ್ ಮುಂತಾದವರು ಮಾತನಾಡುತ್ತ ಮಜೂರರನ್ನು ಕಮ್ಯೂನಿಸ್ಟರು ಮೋಸಗೊಳಿಸುತ್ತಿದ್ದಾರೆ; ಮಜೂರರು ಅವರ ಬಲೆಗೆ ಸಿಲುಕದೆ, ರಾಷ್ಟ್ರಧ್ವಜದಡಿಯಲ್ಲಿ ಸಂಘಟಿತರಾಗಬೇಕೆಂದರು.

ಸೆಶ್ಯನ್ಸ್ ಕೋರ್ಟಿನ ಅಪೀಲು— ತಾ. ೧೯ಕ್ಕೆ ಜಿಲ್ಲಾ ಜಡ್ಜರಾದ ಕೆ. ಶ್ರೀನಿವಾಸನ್ ಇವರು ನೀಲೇಶ್ವರದ ಅಂಬುನಾಯರ್ ಎಂಬವನ ಮನೆಗೆ ಬೆಂಕಿ ಹಾಕಿದನೆಂಬ ಆರೋಪಣೆಯ ಮೇಲೆ ಸಬ್ ಜಡ್ಜರು ಕೊಟ್ಟ ಎರಡು ವರ್ಷಗಳ ಸಜೆಯ ತೀರ್ಪನ್ನು ತೆಗೆದು ಹಾಕಿ, ಅಂಬುನಾಯರನನ್ನು ಬಿಡುಗಡೆ ಮಾಡಲು ಹುಕುಂ ದಯಪಾಲಿಸಿದರು. ಕಲ್ಯಾಣಪುರ ಸೀತಾರಾಮರಾವ್ ಎಡ್ವೊಕೇಟ್ ಇವರು ಅಂಬುನಾಯರ ಪಕ್ಷಕ್ಕೂ, ಬ್ಯಾರಿಸ್ಟರ್ ಎಂ. ಕೆ. ಸಂಜೀವರಾಯರು ಸರಕಾರ ಪಕ್ಷಕ್ಕೂ ವ್ಯವಹರಿಸಿದ್ದರು.

ಸುಬ್ರಹ್ಮಣ್ಯದ ದುರಂತ— ಇದೇ ತಾ. 12ರಲ್ಲು ಸುಬ್ರಹ್ಮಣ್ಯದ ಮಾಜಿ ಏಜಂಟರಾಗಿದ್ದ ಶ್ರೀ ಸುಬ್ರಾಯನಾಯ್ಕರ ಮನೆಯಲ್ಲಿ ಸ್ಫೋಟನವುಂಟಾಗಿ ಐದು ಮಂದಿಯು ಮರಣೋನ್ಮುಖರಾದರೆಂಬ ವಿಷಾದಕರ ವಾರ್ತೆ ಬಂದಿದೆ. ಈ ಅಪಘಾತದಲ್ಲಿ ಶ್ರೀ ನಾಯ್ಕರು ಸೇರಿದ್ದರೂ ಅವರು ಈಗ ಆರೈಕೆ ಹೊಂದುತ್ತಲಿರುವರೆಂದೂ ಶುಭವಾರ್ತೆ ಬಂದಿದೆ. ಸ್ಫೋಟನದ ಕುರಿತು ಪೋಲೀಸ್ ಅಧಿಕಾರಿಗಳು ತನಿಖೆ ನಡೆಸುತ್ತಿರುವರೆಂದು ಸಹ ತಿಳಿಯಬರುತ್ತದೆ.

ಶ್ರೀ ನಾಯ್ಕರ ಅಂಗಡಿಯಲ್ಲಿ ಕಲ್ಲುಗಳನ್ನು ಸುರಂಗ ಹಾಕಿ ಒಡೆಯುವ ತೋಟೆಗಳಿದ್ದುವೆಂದೂ, ಅವುಗಳಲ್ಲಿ ಕೆಲವು ಮನೆಗೆ ಒಯ್ಯಲ್ಪಟ್ಟಿದ್ದು ಅವನ್ನು ಕಾಯಿಸುವ ಬಗ್ಗೆ ಒಲೆಯ ಸಮೀಪ ಇಟ್ಟಿದ್ದು ಅವು ಬೆಂಕಿಗಾದುದರ ಸ್ಫೋಟನವೊಂದಿ ಹತ್ತಿರದ ಗೋಡೆಗಳುರುಳಿದುವೆಂದೂ ನಾಲ್ಕೈದು ಮಂದಿಯ ಮೇಲೆ ಬಿದ್ದುದೇ ಈ ವಿಷಾದಕರ ದುರಂತಕ್ಕೆ ಕಾರಣವಂತೆ.

ಕುಂದಾಪುರ— ತಾಲೂಕಿನ ವಂಡ್ಸೆ ಫಿರ್ಕಾದಲ್ಲಿ ಬಾಲಿಪ್ಪ ತಾಲೂಕ್ ಫುಡ್ ಕಮಿಟಿ ಮೆಂಬರಿಕೆ ಸ್ಥಾನಕ್ಕೆ ಇದೇ ತಾ. 19ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ ಕಂಚಿನೂರು ವೆಂಕಪ್ಪ ಸೆಟ್ಟರು ಪ್ರತಿ ಸ್ಪರ್ಧೆಯಿಲ್ಲದೆ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುತ್ತಾರೆ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No. 198/1946.

ಮಹಾಲಿಂಗ ಶೆಟ್ಟಿ — ವಾದಿ

ಮತ್ತು

ಐತಪ್ಪ ಭಂಡಾರಿ- ಬೆಜ್ಜ ಮನೆ ಭಂಡಾರಿಗಳ ಆಳಿಯ ಕಾಸರಗೋಡುತಾಲ್ಲೂ ಮೂಡಂಬೈಲು ಗ್ರಾಮದಲ್ಲಿರುವವ - ಪ್ರತಿವಾದಿ

ಇವರೊಳಗೆ—

ವಾದಿಗೆ ಪ್ರತಿವಾದಿಯು ತಾ. 20 1 1944ರಲ್ಲು ರೂಪ್ಯಾ 62-0-0ಕ್ಕೆ ಬರೆಕೊಟ್ಟಿದ್ದ ಡಿಮೆಂಡು ಪ್ರೋಮಿಸರಿ ನೋಟು ಪ್ರಕಾರದ ಐವೇಜನ್ನು ವಸೂಲು ಪಡೆಯುವ ಬಗ್ಗೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 2 10 1946ಕ್ಕೆ ಇಟ್ಟಿರುವದರಿಂದ ಆಕ್ಷೇಪವಿದ್ದ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಿರುವುದಾದಿ ಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

Sd. M. G Ganesh Narayan Rai

Advocate for Plaintiff

ಕಾಸರಗೋಡು 18—9—1946

ನರೆತ ಕೂದಲು

ರಂಗನ್ನು ಉಪಯೋಗಿಸಬೇಡಿರಿ!

ಸುವಾಸನೆಯುಳ್ಳ ನಮ್ಮ ಆಯುರ್ವೇದಿಕ ಎಣ್ಣೆಯನ್ನೇ ಉಪಯೋಗಿಸಿರಿ. ಅಗತಾನೆ ನಿಮ್ಮ ನರೆತ ಕೂದಲು ಅರುವತ್ತು ವರುಷಗಳ ತನಕವೂ ಕರ್ರಗೆ ನಿಲ್ಲುವುದು ತಲೆನೋವು, ದೃಷ್ಟಿಮಾಂದ್ಯ ಸಹ ಈ ತೈಲವನ್ನು ಉಪಯೋಗಿಸುವುದರಿಂದ ದೂರವಾಗುವುವು. ಕೆಲವೇ ನರೆತ ಕೂದಲುಗಳಿಗಾದರೆ ರೂ 2-8-0 ಬೆಲೆಯ ಒಂದು ಸೀಸೆ; ಸ್ವಲ್ಪ ಜಾಸ್ತಿ ನರೆತ ಕೂದಲುಗಳಿಗಾದರೆ ರೂ. 3 8 0ರ ಸೀಸೆ, ಸರ್ವಸಾಧಾರಣ ಎಲ್ಲಾ ಕೂದಲುಗಳೂ ನರೆತಿದ್ದರೆ ರೂಪಾಯಿ 5/ ರ ಒಂದು ಸೀಸೆಯನ್ನು ಪಡಕೊಳ್ಳಬೇಕಾಗುವುದು ಗುಣಕಾರಿಯಲ್ಲವೆಂದು ಪ್ರುತಪಡಿಸುವವರಿಗೆ ಇಮ್ಮಡಿ ಕ್ರಯ ವಾಪಾಸು.

ಬಿಳಿ ತೊನ್ನು ಮತ್ತು ಉಕೊಡ್ರಮ

ಬಿಳಿ ತೊನ್ನು ಮತ್ತು ಉಕೊಡ್ರಮ (Leucoderma) ಮುಂತಾ ವ್ಯಾಧಿಗಳನ್ನು ಹೋಗಲಾಡಿಸುವ ಈ ಔಷಧಿಯನ್ನು ಲೇಪಿಸಿರಿ. ನೂರಾರು ವೈದ್ಯರೂ, ಡಾಕ್ಟರರೂ, ಹಕೀಮರೂ ಅಸಾಧ್ಯವೆಂದು ದೂರೀಕರಿಸಿದ ಈ ಮಹಾವ್ಯಾಧಿಗಳು ಈ ಔಷಧ ಲೇಪನದಿಂದ ಗುಣಹೊಂದಿವೆ. 15 ದಿವಸಗಳ ಲೇಪನಕ್ಕೆ ಬೇಕಾಗುವ ಔಷಧಿ ರೂಪ್ಯಾ 2-8-0.

ಕಿವುಡುತನ

ಕಿವಿ ಕೇಳದಿರುವುದು, ಕೀವು ಸುರಿಯುವುದು, ಕಿವಿ ನೋವು ಇತ್ಯಾದಿ ಕಿವಿಗಳ ಸರ್ವ ದೋಷಗಳಿಗೂ ಅಪ್ರತಿಮ ದಿವ್ಯೌಷಧ- ಬೆಲೆ ರೂಪಾಯಿ 2/-

ಸ್ತಂಭನ ಮಾತ್ರೆ

ಸಂಜೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರಿಂದುಂಟಾಗುವ ಆನಂದವನ್ನು ಅನುಭವಿಸಿಯೇ ತೀರಬೇಕು. ಕಳೆದುಹೋದ ಮನುಷ್ಯತ್ವವು ವಿದ್ಯುಚ್ಛಕ್ತಿ ಜೋಪಾದಿಯಲ್ಲಿ ಮರಳಿ ಬರುವುದು. ಒಮ್ಮೆ ಉಪಯೋಗಿಸಿದರೆ ಅದನ್ನು ಎಂದಿಗೂ ಮರೆಯಲಾರಿರಿ. 16 ಮಾತ್ರೆಗಳಿಗೆ ರೂಪಾಯಿ 1/-

ಪತ್ರವ್ಯವಹಾರ ಇಂಗ್ಲಿಷ್ ವ ಹಿಂದಿಯಲ್ಲಿ.

Chandra Brother,

No. 4, P.O. Katri Sarai (Gaya).



ಕ್ಷಣಿಕ ಗುಣಕೊಡುವ ಔಷಧವು

ಬೆನ್ನು ಹತ್ತಿ ಮರುಳಾಗಬೇಡಪ್ಪಾ.

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಬೇರೆ ಅದು ದಮ್ಮನ್ನು ಬರೇ ದಮನಕ್ಕಿ ಇಡದೆ ... ಹಿಗೆಯುವುದು. ಈ ಔಷಧ ಸುಂದರವು ಮಾಡಿದಾಗಲೇ ಕೆಮ್ಮೂ ತೀಕೂ ನಿಲ್ಲುವವು; ಹೊಟ್ಟೆ ಹಸಿವಾಗುವದು; ಪಚನಕ್ರಿಯೆಯು ತಿದ್ದುವದು; ಶ್ವಾಸನಗಳು ಗಟ್ಟಿಯಾಗುವುವು. ಆ ನೋಟ ದಮ್ಮುರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನು ನೋವು, ಗಂಟಲ ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತು ಆಮ್ಲ ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೭ ಔನ್ಸ್ ೬ ಔನ್ಸ್ ೧೨ ಔನ್ಸ್ ಬಾಟ್ಲಿನ ಕ್ರಮವಾಗಿ ರೂ.೨-೬ ೦; ೫ ೧೨.೦ ಮತ್ತು ೧೦ ೦.೦

ಪುರೋಹಿತ ಫಾರ್ಮಸಿ, ಕೊಲ್ಲಾಪುರ

ಸ್ಟಾಕಿಸ್ಟರು-ಪೂಪ್ಯುಲರ್ ಸ್ಟೋರ್ಸ್. ಮಂಗಳೂರು; ಟಿ.ಸಿ.ನಟರಾಜನ್‌ಕೋ, ಮೈಸೂರು.

ಮುಂಬಯಿ ಸೋಲ ಏಜಂಟರು:-

ವಸಂಮಾಲೀ ಛಿಬ್ ಮತ್ತು ಕಂಪನಿ,

ಪ್ರಿನ್ಸೆಸ್ ಸ್ಟ್ರೀಟ,

ಮುಂಬಯಿ ೨.



ಸಹಕಾರವೇ ಸಾಧನ

ಮನುಷ್ಯನ ಜೀವನ ಅತಿ ಕಷ್ಟ, ವ್ಯಾಪಾರ ಸರಿಯಾಗಿ ನಡೆಯದೆ, ಕೈಗಾರಿಕೆ ನಡೆಸುವುದೂ ಕಷ್ಟತರವಾಗಿ, ವ್ಯವಸಾಯ ಕೂಡಾ ಹಿಂದುಳಿದ ಈ ಕಾಲದಲ್ಲಿ ಹಣದ ಲೇವಾದೇವಿಯೂ ಬಹಳ ಕಡಿಮೆಯಾಗಿದೆ. ಈ ಎಲ್ಲಾ ಉದ್ದೇಶವನ್ನೊಳಗೊಂಡ ಸಂಸ್ಥೆಯಿಂದಜನತೆಯ ಹಿತವನ್ನು ಸಾಧ್ಯವಾದಷ್ಟು ಪೂರೈಸಲು ಸ್ಥಾಪಿತವಾದ ಈ ಕಂಪೆನಿಯು ನಿಮ್ಮೆಲ್ಲರ ಸಹಕಾರ ಪಡೆದು ಅಲ್ಲಲ್ಲಿ ತನ್ನ ಶಾಖೆಯನ್ನು ತೆರೆಯಬೇಕೆಂದು ಎಣಿಸಿಯದೆ. ಇದನ್ನು ಸ್ಥಾಪಿಸಿದ ಉದ್ದೇಶ:-ಅನುಕೂಲತೆಗನುಸರಿಸಿ. 1. ವ್ಯಾಪಾರ. 2. ವ್ಯವಸಾಯ. 3 ಕೈಗಾರಿಕೆ 4. ಲೇವಾದೇವಿ. 5 ಕಂಟ್ರಾಕ್ಟು. 6. ಏಜನ್ಸಿ ಇತ್ಯಾದಿ. ಈ ಕಂಪೆನಿಯು ಕಾರ್ಯ ಪ್ರಾರಂಭಿಸಿದ ಅತ್ಯಲ್ಪ ಸಮಯದೊಳಗೆ ರೂ 1 ಲಕ್ಷಕ್ಕೆ ಮೇಲ್ಪಟ್ಟ ವ್ಯವಹಾರ ನಡೆಸಿಯದೆ. ಇದರ ಶ್ಯಾರ್ಸು ತೇರಾದವರು ಆರ್ಜಿ ಮುಖಾಂತರ ಪಡೆದುಕೊಳ್ಳಬಹುದು. ಡಿಪೊಸಿಟ್ ಅಂಗೀಕರಿಸಲ್ಪಡುವುದು. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಶ್ರೀ ಮಾತಾ ಯುನೈಟೆಡ್, ಕಮರ್ಶಿಯಲ್ ಎಂಡ್ ಇಂಡಸ್ಟ್ರಿಯಲ್ ಏಜನ್ಸೀಸ್ ಲಿಮಿಟೆಡ್

ಜಯಮಂಗಳಂ ಬಿಲ್ಡಿಂಗ್ಸ್, ಕುಂದಾಪುರ.

(Incorporated in British India, liability of Members Limited.)

ದಕ್ಷಿಣ ಕನ್ನಡ

ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಚುನಾವಣೆ

ಹೊಸತಾಗಿ ಆರಿಸಿಬಂದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಥಮ ಸಭೆಯು ಕಳೆದ ಅಗೋಸ್ತು ತಿಂಗಳ ತಾ. 23-24ರಲ್ಲಿ ನಡೆದರೂ ಇದುವರೆಗೆ ಜಿಲ್ಲೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಚುನಾವಣೆಯೂ ಆದಂತೆ ಕಂಡುಬರುವುದಿಲ್ಲ. ಅದೇ ಸಮಯದಲ್ಲಿಯೇ ಜರಗಿದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಚುನಾವಣೆ ಮಾಡುವದು ಅಗತ್ಯವಿಲ್ಲವಾಗಿಯೂ ಅವುಗಳಿಗೆ ಕಾರ್ಯಕಾರಿ ಮಂಡಳಿಯವರು ತಮಗೆ ಬೇಕಾದವರನ್ನು ನೇಮಕ ಮಾಡುವುದಾಗಿ (Nominate) ನಿಶ್ಚಯಿಸಿರುವುದಾಗಿಯೂ ಹಾಗೆ ಒಂದೆರಡು ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಸದಸ್ಯರನ್ನು ನೇಮಕಮಾಡಿರುವುದಾಗಿಯೂ ಅವುಗಳಿಗೆ ಕಾಲು ಶತಮಾನದಿಂದ ಖಾದಿ ಧರಿಸುತ್ತಿರುವ ಸ್ವತಹ ನೂಲು ಮಾಡುತ್ತಿರುವ ಕೆಲವರ ಹೆಸರನ್ನು ಸೂಚಿಸಿದಾಗ ಅಧಿಕಾರಿ ವರ್ಗದವರ ಪೈಕಿ ಕೆಲವರು ಅವರು ಖದ್ದರ್‌ಧಾರಿಗಳಲ್ಲವೆಂದೂ ಆಕ್ಷೇಪಿಸಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರೊಬ್ಬರ ಸೂಚನೆ ಮೇರೆಗೆ ಖದ್ದರ್ ಉಡದ ಕೆಲವು ಮಹನೀಯರ (ಬಾಕಿ ವಿಷಯದಲ್ಲಿ ಈ ಮಹನೀಯರು ನಿಜವಾಗಿ ಯೋಗ್ಯರುಯೆಂಬುದಕ್ಕೆ ಯಾವ ಸಂಶಯವೂ ಇಲ್ಲ.) ಹೆಸರನ್ನು ಸೂಚಿಸಿ ಅವರು ಸದಸ್ಯರಾಗಿ ಶಿಫಾರಸು ಮಾಡಲ್ಪಟ್ಟಿರುವುದಾಗಿಯೂ ವಿಶ್ವಾಸನೀಯ ವರ್ತಮಾನವು ಬಂದಿರುತ್ತದೆ.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕೆಲವು ಅಧಿಕಾರಿಗಳ ವರ್ತನೆಯ ವಿಷಯದಲ್ಲಿ ಕುಂದಾಪುರದಿಂದ ಕೆಲವು ಮಿತ್ರರ ಘಾಸಿಸಲ್ಪಟ್ಟ ಬಹಿರಂಗ ಪತ್ರವು ಕೂಡ ನನಗೂ ಜಿಲ್ಲೆಯ ಕೆಲವು ಕಾಂಗ್ರೆಸ್ ಕೆಲಸಗಾರರಿಗೂ ಕಳುಹಿಸಲ್ಪಟ್ಟಿವೆ. ಪ್ರಜಾ ಸತ್ತೆಯ ವಿಷಯದಲ್ಲಿ ಮುಂದೆ ಹೋಗುವ ಕಾಲವಿದು. ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಚುನಾವಣೆಮಾಡದೆ ಅವುಗಳಿಗೆ ಸದಸ್ಯರನ್ನು ನೇಮಕ ಮಾಡಿದರೆ ಕಾಂಗ್ರೆಸಿನ ಧ್ಯೇಯ ವ ತತ್ವಕ್ಕೆ ವಿರೋಧವಾಗಿ ಹಿಂದೆ ಹೋದ ಹಾಗೆಯೇ ಆಗುವುದು. ಆದುದರಿಂದ ಆಯಾಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಪ್ರಾಥಮಿಕ ಸದಸ್ಯರು ತಮ್ಮ ಪರಿಶುದ್ಧವಾದ ಮತಗಳನ್ನು ಉಪಯೋಗಿಸಿ ತಮಗೆ ವಿಶ್ವಾಸವಿರುವ ಸದಸ್ಯರು ಆರಿಸಿ ಬರುವಂತೆ-ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಗೆ ಸದಸ್ಯರು ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ನೇಮಕ ಮಾಡಲ್ಪಡದೆ ಚುನಾವಣೆ ಆಗುವಂತೆ-ಪ್ರಚಂಡ ಚಳವಳವನ್ನು ಹೂಡಬೇಕು. ಕಾರ್ಕಳ ತಾಲೂಕಿನ ಬೈಲೂರನ್ನು ಉಡುಪಿತಾಲೂಕಿನ ಕಟಪಾಡಿ ಸರ್ಕಲಿಗೆ ಸೇರಿಸುವುದರಲ್ಲಿ ಅರ್ಥವಿಲ್ಲ. ತಾ. 24-8-1946ರಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ, "ಹೊಸವರ್ಷದ ಅಧಿಕಾರವರ್ಗ ಮತ್ತು ಕಾರ್ಯಕಾರಿ ಮಂಡಲದವರು ಆದರ್ಶ ರೀತಿಯಾಗಿ ಕೆಲಸ ಸಾಗಿಸಿ ತಮ್ಮ ಯಾವತ್ತು ಕಾರ್ಯಕಲಾಪಗಳಲ್ಲಿ ಯಶಸ್ವಿಯಾಗಲೆಂದು ಈ ಸಮಿತಿಯು ಹಾರೈಸುತ್ತದೆ"ಯೆಂದು ನಿರ್ಣಯಿಸಲಾಗಿದೆ. ಆದರೆ ಅವರ ಪೈಕಿ ಕೆಲವು ವ್ಯಕ್ತಿಗಳ ವರ್ತನೆಯು ವಿಶ್ವಾಸಯೋಗ್ಯವೆನ್ನಲು ಬರುವುದಿಲ್ಲ.

ಎಂ. ಎಸ್. ಅಧಿಕಾರಿ.

ಕಾರ್ಕಳ, ತಾ. 17-9 1946.

ಕಾರ್ಕಳ ತಾಲೂಕು ಕಾಂಗ್ರೆಸ್. ಕಮಿಟಿಯ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮಹಾ ಸಭೆ:— ತಾ. ೨೯ನೆಯ ಅಪರಾಹ್ನ ೨ಗಂಟೆಗೆ ಕಾರ್ಕಳ ಬಂಟರ ಹೋಸ್ಟಲಿನಲ್ಲಿ ಕಾರ್ಕಳ ತಾಲೂಕಿನಲ್ಲಿ ಕಾಂಗ್ರೆಸ್ ಕೆಲಸ ಸರಿಯಾಗಿ ನಡೆಯುವಂತೆಮಾಡಲು ಕಾರ್ಕಳ ತಾಲೂಕು ಕಾಂಗ್ರೆಸ್ ಮತ್ತು ಕಾರ್ಕಳ ಟೌನ್ ಕಾಂಗ್ರೆಸ್ ಸಮಿತಿಗೆ ಸದಸ್ಯರನ್ನು ಆರಿಸುವ ಬಗ್ಗೆ ಕಾರ್ಕಳ ತಾಲೂಕಿನ ಪ್ರಾಥಮಿಕ ಸದಸ್ಯರ ಮಹಾ ಸಭೆಯು ಜರಗಲಿರುವದು. ಮತ್ತು ಅದೇ ಸಮಯದಲ್ಲಿ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ಪ್ರತಿ ಹಳ್ಳಿಯಲ್ಲಿಯೂ ಪ್ರಚಾರ ಮಾಡಿ ಮುಂದೊತ್ತುವ ಬಗ್ಗೆ ತಾಲೂಕು ಕಾಂಗ್ರೆಸ್ ಸದಸ್ಯರ ಹಾಗೂ ಕಾಂಗ್ರೆಸ್ ಸಹಾನುಭಾವಿಗಳ ಸಭೆಯು ಜರಗಲಿರುವದು. ತಾಲೂಕಿನ ಎಲ್ಲಾ ಪ್ರಾಥಮಿಕ ಕಾಂಗ್ರೆಸ್ ಸದಸ್ಯರೂ ಕಾಂಗ್ರೆಸಿನ ಸಹಾನುಭಾವಿಗಳೂ ಈ ಸಭೆಗಳಿಗೆ ಬಂದು ಸಭೆ ಕಾರ್ಯಗಳೂ ಯಶಸ್ವಿಯಾಗುವಂತೆ ಮಾಡಬೇಕಾಗಿ ಶ್ರೀ ಎಂ. ಎಸ್. ಅಧಿಕಾರಿ ಕನ್ವೀನರ್ ಇವರು ತಿಳಿಸುತ್ತಾರೆ.

ಕುಂದಾಪುರ ಮಹಾ ಜನರು— ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿಗೆ ಬಹಿರಂಗ ಪತ್ರ ಒಂದನ್ನು ಕಳುಹುತ್ತ ಘಟನಾ ಸಮಿತಿಯ ಒಂದು ಸ್ಥಾನವನ್ನು ಭಾರತದ ಸ್ತ್ರೀವರ್ಗದವರ ಗೌರವಕ್ಕಾಗಿ ಶ್ರೀಮತಿ ಕಮಲಾದೇವಿಯವರಿಗೆ ಕೊಟ್ಟರಲು, ಶ್ರೀಮತಿಯವರು ಅದನ್ನು ನಿರಾಕರಿಸಿದ ಕಾರಣ ಅದು ಪುರುಷರೊಬ್ಬರಿಗೆ ಹೋಗಿದೆ, ಕರ್ನಾಟಕದ ಸ್ತ್ರೀಯೊಬ್ಬರಿಗೇ ಹೋಗಬೇಕಿತ್ತು; ಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ ನಿಲ್ಲಬೇಕಾಗಿಲ್ಲ— ಎಂದು ನಮ್ಮ ಜಿಲ್ಲಾ ಕಾಂಗ್ರೆಸ್ ನಿರ್ಧರಿಸಿದುದರಿಂದ ನಮ್ಮ ಜಿಲ್ಲೆಯಲ್ಲಿ ಈ ತನಕ ಇಲ್ಲದ ಜಾತಿ ಕಲಹಕ್ಕೆ ಆಸ್ಪದ ಕೊಟ್ಟಂತಾಗುವುದು. ಸಧ್ಯದಲ್ಲೇ ನಡೆಯಲಿರುವ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಚುನಾವಣೆಯಲ್ಲಿಯೂ ಕುವಕಕಾರಸ್ಥಾನಗಳು ನಡೆಯಲಿವೆ ಎಂಬ ಸುದ್ದಿ ಹರಡುತ್ತಿದೆ. ಈ ಸಮಿತಿಗಳಿಗೆ ಚುನಾವಣೆಯ ಬದಲು ನಾಮಕರಣ ಮೂಲಕ ಸದಸ್ಯರನ್ನು ಆರಿಸುವ ಸಂಚು ನಡೆಯುತ್ತಿದೆ ಈ ಎಲ್ಲ ವಿಚಾರಗಳ ಕುರಿತು ಕರ್ನಾಟಕ ಪ್ರಾಂತದ ಆಖಿಂಡ ಜವಾಬ್ದಾರಿಯನ್ನು ಹೊತ್ತ ನಿಮ್ಮ ಶಕ್ತಿ ಪರೀಕ್ಷೆಯ ಸಂದರ್ಭ ಬರಲಿದೆ' ಎಂದು ಮುಂತಾಗಿ ನಿರೂಪಿಸಲಾಗಿದೆ. ಈ ಪತ್ರಕ್ಕೆ ೩೪ ಮಂದಿ ಸಹಿಹಾಕಿರುವರು.

ಪ್ರಕಟಣೆ

ಶಾಮ ಮತ್ಸ್ಯ ಯಾನೆ ಅನಂತ ಭಟ್ಟರ ಆಸ್ತಿಯಲ್ಲಿ ಪೈವಾಟ ಮಾಡಿದ ಸರ್ವಜನರಿಗೆ ಈ ಮೂಲಕ ತಿಳಿಸುವದೇನೆಂದರೆ: ಸದ್ರಿ ಮತ್ಸ್ಯ ಭಟ್ಟರ ವಿಧವೆ ಯಶೋದೆ ಯಾನೆ ಆನಂದಿ ಮೇಲೆ ಬೊಂಬಾಯಿ ಸಂಸ್ಥಾನದ ಠಾಣಾ ಜಿಲ್ಲಾ ಕಲ್ಯಾಣದಲ್ಲಿ ಟೀ ಶಾಪ್ ಪ್ರೊಪ್ರೈಟರಾಗಿರುವ ಗೋಪಾಲ ಕೃಷ್ಣ ಭಟ್ಟರು ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ಮಾಡಿದ O. S. 70/1945 ನೇ ವ್ಯಾಜ್ಯವು ರಾಜಿಯಾಗಿ ಸದ್ರಿ ಯಶೋದೆಯು ಮತ್ಸ್ಯ ಭಟ್ಟರ ಸಂಪೂರ್ಣ ಆಸ್ತಿಯಲ್ಲಿ ಅವರ widow's estate ಯಾನೆ ವಿಧವಾ ಹಕ್ಕನ್ನು (surrender) ಬಿಟ್ಟು ಬಿಟ್ಟು ಈಗ ಸದ್ರಿ ಗೋಪಾಲಕೃಷ್ಣ ಭಟ್ಟರು ಸದ್ರಿ ಮತ್ಸ್ಯ ಯಾನೆ ಅನಂತ ಭಟ್ಟರ ಆಸ್ತಿಯಲ್ಲಿ ಪೂರ್ಣ ಮಾಲಿಕರಾಗಿದ್ದಾರೆ. ಸದ್ರಿ ಆಸ್ತಿಯ ಪೈಕಿ ದೊಡ್ಡ ಅಂಶವನ್ನು ಕೋರ್ಟು ಹರಾಜು ಮೂಲಕ ವಸೈರೆ ತೆಗೆದುಕೊಂಡ ಪಡುಬಿದ್ರೆ ಅನಂತ ಪೈಗಳು ಅವರ ಹಕ್ಕನ್ನು ಪೂರ್ಣ ರಿಜಿಸ್ಟ್ರಿ ಬೀಡುನಿಶಿ ನನ್ನ ಕಕ್ಷಿಗಾರರಾದ ಸದ್ರಿ ಗೋಪಾಲಕೃಷ್ಣ ಭಟ್ಟರಿಗೆ ಕೊಟ್ಟಿರುತ್ತಾರೆ. ಮತ್ಸ್ಯ ಭಟ್ಟರ ಆಸ್ತಿಯಲ್ಲಿ ನಾನಾ ವಿಧವಾಗಿ ಅಂಶಗಳನ್ನು ತೆಗೆದುಕೊಂಡವರು ವ್ಯವಹರಣೆಯ ಖರ್ಚು ನಷ್ಟಗಳನ್ನು ಉಳಿಸಬೇಕಾದರೆ ಯಾವ ಶರ್ತಕ್ಕೊಳಪಟ್ಟು ತಮ್ಮ ಹಕ್ಕುಗಳನ್ನು ಬಿಡ್ಡುಬಿಡುವರೆಂಬದಕ್ಕೆ ಸದ್ರಿ ನನ್ನ ಕಕ್ಷಿಗಾರರಿಗಾಗಲೀ ನನಗಾಗಲೀ ಬರೆಯಬೇಕು. ಸದ್ರಿ ಆಸ್ತಿಯ ಎಲ್ಲಾ ಒಕ್ಕಲುಗಳು ಮತ್ತು estateಗೆ ಯಾವ ವಿಧದಿಂದಲೂ ಹಣ ಸಲ್ಲಿಸಲಿಕ್ಕಿರುವವರು ಗೇಣಿ ವ ಹಣಗಳನ್ನು ಇನ್ನು ಮುಂದೆ ನನ್ನ ಕಕ್ಷಿಗಾರನಿಗೇನೇ ಕೊಡತಕ್ಕದ್ದಾಗಿ ಇದರಿಂದ ಜಾಹೀರು ಮಾಡುತ್ತೇನೆ.

M. Madhava Rao,
Vakil.

Mangalore. 20-9-46.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತುಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 3—೯—೦

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಕಳುಹಿಸಬಹುದು, (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:- ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಸ್ವೀಕಾರ-ವಿಮರ್ಶೆ

●

ಪ್ರಸವ ವಿಜ್ಞಾನ— ಬರೆದವರು ಡಾ. ದೊಡ್ಡೇರಿ ವೆಂಕಟಗಿರಿ ರಾವ್, ಎಮ್. ಬಿ. ಎಸ್. ಸಿ.— ಇದರಲ್ಲಿ ಗರ್ಭೋತ್ಪತ್ತಿ, ಗರ್ಭದ ಬೆಳವಣಿಗೆ, ಗರ್ಭಿಣಿಯ ಆರೋಗ್ಯ ರಕ್ಷಣೆ, ಹೆರಿಗೆಮಾಡಿಸುವ ವಿಧಾನ, ಬಾಣಂತಿ ಮತ್ತು ಮಗುವಿನ ಆರೈಕೆ ಮುಂತಾದ ವಿಷಯಗಳನ್ನು ಗ್ರಹಿಸಲಿಕ್ಕೆ ಅನುಕೂಲವಾಗುವಂತೆ ಹಲವು ಚಿತ್ರ ಸಹಿತ ಸುಲಭವಾಗಿ ವಿವರಿಸಿ ಆಯಾಯ ಸಂದರ್ಭದಲ್ಲಿ ಬರಬಹುದಾದ ಕಾಹಿಲೆಯಾ ತೊಡಕು ತೊಂದರೆಗಳ ಲಕ್ಷಣ, ಆಗ ತೆಗೆದುಕೊಳ್ಳಬೇಕಾದ ಜಾಗರೂಕತೆ, ಮಾಡಬೇಕಾದ ಸುಲಭ ಚಿಕಿತ್ಸೆ, ಪಥ್ಯಾಪಥ್ಯಗಳ ವಿಚಾರ, ಇವೆಲ್ಲವನ್ನು ಹೇಳಿದೆ. ಹೆಂಗಸರು ಈ ಪುಸ್ತಕವನ್ನು ಓದುವುದರಿಂದ ಬಹಳ ಪ್ರಯೋಜನವಿದೆ. ಸುಶಿಕ್ಷಿತ ಸೂಲಗಿತ್ತಿಯು (trained midwife) ದೊರಕದಿದ್ದಲ್ಲಿಯೂ ವೈದ್ಯಕೀಯ ಸಹಾಯ ಸಿಗದಿದ್ದಲ್ಲಿಯೂ ಗರ್ಭಿಣಿಯು ತನ್ನ ಯೋಗಕ್ಷೇಮವನ್ನು ಸಾಧಿಸಿಕೊಂಡು ಹೆರಿಗೆಯನ್ನೂ ಬಾಣಂತಿತನವನ್ನೂ ಸುಖಮುಖವಾಗಿ ಪೂರೈಸಿಕೊಳ್ಳಲು ವಿಶೇಷ ಸಹಾಯಕವಾಗುವ ಪುಸ್ತಕವಿದು. ೧೧೯ ಪುಟಗಳ ಸಚಿತ್ರ ಪುಸ್ತಕ— ಬೆಲೆ ರೂ. ೨. ದೊರೆಯುವಸ್ಥಳ: ಸಾಧನ ಪ್ರಕಟನಾಲಯ, ಸಾಗರ, ಶಿವಮೊಗ್ಗಾ.

—'ಕೊರಡ್ಕಲ್'

ಮುಂಬಯಿ— 1944ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ 'ಲಲಿತಕಲಾ ಕರ್ನಾಟಕ ಸಂಗೀತ ಸಭಾ ಮುಂಬಾಯಿ' ಇದರ ಹೆಸರು ತಾ. 8 9-46ರಿಂದ 'ಲಲಿತಕಲಾ ಕರ್ನಾಟಕ ನಾಟಕ ಸಭಾ ಮುಂಬಾಯಿ' ಎಂದು ಬದಲಾಯಿಸಲ್ಪಟ್ಟಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಇಂದಿಗೆ ತಕ್ಕ ನಾಟಕ

ದೇಶಭಕ್ತ

ಶ್ರೀ. ಕೆ. ಕೆ. ಶೆಟ್ಟರು ಸುಲಭವಾದ ಶೈಲಿಯಲ್ಲಿ ಎಲ್ಲರಿಗೂ ಮನದಟ್ಟಾಗುವಂತೆ ಬರೆದ ಬೋಧಪ್ರದ ಸಾಮಾಜಿಕ ನಾಟಕ.

ದೇಶಭಕ್ತನು ಹೇಗಿರಬೇಕು? ಅವನ ಧ್ಯೇಯ ಧೋರಣೆ ಏನು ಆದರ್ಶವಾಗಿರಬೇಕು? ಜನತಾ ಜನಾರ್ದನನ ಸೇವೆ ಎಂದರೇನು? ಎಂಬಿತ್ಯಾದಿಗಳನ್ನು ಅತಿ ಕೌಶಲ್ಯದಿಂದ ಚಿತ್ರಿಸಿ. ಸಂಸ್ಥಾನದಲ್ಲಿ ನರೇಂದ್ರರು ಮಾಡುತ್ತಿರುವ ದಬ್ಬಾಳಿಕೆಯ ಭೀಕರ ಚಿತ್ರವನ್ನು ಮುಂದಿಟ್ಟು ಪ್ರಜಾಸ್ವಾತಂತ್ರ್ಯವು ಹೇಗೆ ಸಾಧ್ಯವೆಂಬುದನ್ನು ವಿವರಿಸುವ ರಾಜಕೀಯ-ಸಾಮಾಜಿಕ ನಾಟಕ.

ಬೆಲೆ ರೂ. 1—4—0

ನವಭಾರತ ಬುಕ್ ಡಿಪೋ,

ಉಡುಪಿ.

[೧೧ನೇ ಪುಟದಿಂದ]

adverse circumstances may be, Ramnam must not cease. The outward form will vary according to the occasion. The absense of the rosary does not interrupt Ramnam which has found an abiding place in the heart" ಗಾಂಧೀಜಿ ಈ ಬಾರಿ ಕರ್ಮ ಹೇತುವಾದರು, ಧರ್ಮ ದಾಸ್ಯಿಯಾದರು.

(೨ನೇ ಪುಟದಿಂದ)

ಮಾತನ್ನು ತಮಿಳಿಗೆ ತರ್ಜುಮೆ ಮಾಡಲು ಎಡೆಕೊಡಬಹುದಂತೆ, ತೆಲುಗಿಗೆ ಕೊಡಬಾರದೆಂಬಲ್ಲಿ ಯಾವ ನೇಮವೂ ಇಲ್ಲ. ಕನ್ನಡಿಗರು, ಮಲಯಾಳಿಗಳು ತುಂಬರಂತೆ ಕುಳಿತರೆ ಗಾಂಧೀಜಿ ಮೆಚ್ಚುಗೆ ತೋರುವರೆ! ಇವರು ಅಲ್ಲಿ ಹಿಂದೂಸ್ಥಾನಿಯಲ್ಲಿ ಹೇಳುವುದರ ಬದಲು ಇಂಗ್ಲಿಷಿನಲ್ಲಿ ಹೇಳಿದ್ದರೆ ಹೆಚ್ಚು ಜನಕ್ಕೆ ತಿಳಿಯುತ್ತಿತ್ತು... ಕೋಣನ ಮುಂದೆ ಕಿನ್ನರಿ ಬಾರಿಸಿದರೆ ಅದಕ್ಕೇನು ತಿಳಿದೀತು? ಹಿಂದೀ ಅರಿಯದವರ ಮುಂದೆ ಗಾಂಧೀಜಿ ಹಿಂದೂಸ್ಥಾನಿ ಮಾತನಾಡಿದರೆ ಏನು ಒಳಿತಾಯಿತು? ಗಾಂಧೀಜಿ ಹೀಗೇಕೆ ಮಾಡಿದರೆಂದು ನನಗೆ ತಿಳಿವುದಿಲ್ಲ.

ಇದೂ ಅಲ್ಲದೆ ಇನ್ನೊಂದು ಕಟುವಾದ ಮಾತು ಅಂದರು. ಇದು ಗಾಂಧೀಜಿಯವರ ಮಾತುಗಳೆಂದು ನನಗೆ ಇನ್ನೂ ನಂಬಲಾಗುವುದಿಲ್ಲ. ನೋಡರಿ ಅವರು ಅನ್ನುತ್ತಾರೆ: If a lady wishes to sing. I will tell her, "If you can sing Hindustain songs, sing; otherwise do not sing. (ಹೆಣ್ಣು ಮಗಳೊಬ್ಬಳು ತಾನು ಹಾಡುತ್ತೇನೆಂದು ಮುಂದೆ ಬಂದರೆ ನಾನು ಅವಳಿಗೆ ಹೇಳುತ್ತೇನೆ: 'ನಿನಗೆ ಹಿಂದೂಸ್ಥಾನಿ ಹಾಡುಗಳು ಬರುತ್ತವಾದರೆ ಹಾಡು; ಇಲ್ಲವಾದರೆ ಹಾಡುವುದೇ ಬೇಡ!) ಈ ಮಾತಿನ ಮೊನೆ ಅಂತವರಿಗೆ ಆದರ ನೋವೂ ತಾಕದಿರಲಾರದು. ಕನ್ನಡದ ಹಾಡುಗಾರಿಕೆಯನ್ನು ಇನ್ನು ಕಡಲಿಗೇ ಎಸೆದು ಬಿಡೋಣವೇ ಹೇಗೆ? ಕನ್ನಡಿಗರು ಮತ್ತು ತೆಂಕಲಿನ ಉಳಿದ ಜನರೂ ಇದನ್ನು ತುಸ ತಿಳಿದುಕೊಳ್ಳಬೇಕು; ಎಚ್ಚರದಿಂದ ಹಿಂದೀ ಪ್ರಚಾರವನ್ನು ನೋಡಬೇಕು. ಕನ್ನಡವೆಂದೇನು? ಉಳಿದ ನುಡಿಗಳಿಗೂ ಈ ಪ್ರಚಾರಕರು ಕೊಡಲಿ ಹಾಕುವುದರಲ್ಲಿದಾರೆಂದು ತೋರುತ್ತದೆ. ಗಾಂಧೀಜಿಯವರನ್ನು ತಪ್ಪುದಾರಿಗೆ ತಿರುಗಿಸಿದ ಇವರು ನಾಡನ್ನೇ ಕೆಡಿಸಿಯಾರು.

— ” —

ನಮ್ಮ ನಾಡು ಬಡವರ ನಾಡು. ಅನ್ನಬಟ್ಟೆಗೂ ನಮ್ಮ ನಾಡಿನಲ್ಲಿ ಬರಗಾಲ. ಓದಿದವರಿದ್ದಾರೆ; ಇವರಿಗೆ ಕಸಬಿಲ್ಲದೆ ಬಿಕ್ಕೆ ಬೇಡುವ ಕೆಲಸ. ಓದದವರಿದ್ದಾರೆ, ಇವರಿಗೆ ಮಸಣದ ದಾರಿನೋಡುವುದೇ ಕೆಲಸ. ಹಸಿದು ಬಳಲಿದ್ದಾರೆ, ನಮ್ಮ ಜನ, ಬತ್ತಲೆ ತಿರುಗುತ್ತಿದ್ದಾರೆ. ಇವರಿಗೆ ಅನ್ನ ಬಟ್ಟೆಯನ್ನು ಕೊಡುವ, ಕಸಬುಕೊಟ್ಟು ದುಡಿಮೆಗೆ ತಕ್ಕ ಪಡಿಕೊಡುವ, ಸಿರಿ ನಮ್ಮ ನಾಡಿನಲ್ಲೆಲ್ಲೂ ಇಲ್ಲ. ನಮ್ಮ ನಾಡಿನಲ್ಲಿ ಇಂದು ಒಳ್ಳೊಳ್ಳೆಯ ಹೊಸ ಹೆಸರು ಹಾಕಿಕೊಂಡು ತಮ್ಮ ತಮ್ಮವರ ಸುಲಿಗೆ ಮಾಡುವುದೊಂದೇ ಕಾಣುತ್ತಿರುವ ಸಿರಿ. ಇದು ನಮ್ಮವರ ಸಿರಿ. ಇದನ್ನು ಆಳುವ ಸಿರಿಯೂ ಹಾಗೇ! ನಮ್ಮ ನಾಡಿನ ಉದ್ದಗಲಕ್ಕೂ ಈ ಸುಲಿಗೆಯ ಸಿರಿ ಹರಡಿದೆ; ಬಡವರ ಹೊಟ್ಟೆಗೆ [illegible] ಹರಿದು ಮೆರೆಯುತ್ತಿದೆ. ಇದನ್ನು ಗಾಂಧೀಜಿ ಕಂಡುಕೊಂಡಂತೆ ಬೇರೆ ಯಾರೂ ಕಂಡಿರಲಿಲ್ಲ. ಈ ನಾಡಿನ ಬಡವರನ್ನು, ಬದುಕಬೇಕು ಎಂಬ ಆಸೆ ಹುಟ್ಟಿಸಿ, ಮುಂದೆ ತಂದವರಲ್ಲಿ ಇವರದು ಮೇಲುಗೈ. ಇವರಲ್ಲದಿದ್ದರೆ ನಮ್ಮ ನಾಡಿನ ನಾಡಿ ಇಂದು ಮಿಡಿಯುವಂತೆ ಎಂದೂ ಸರಿಯಾದ ಒಂದು ತಾಳಕ್ಕೆ ಮಿಡಿಯುತ್ತಿರಲಿಲ್ಲ. ಆದರೆ ಗಾಂಧೀಜಿ ಹೇಳಿದ "Spin for Swaraj" ಎಂಬ ಮಾತನ್ನು ಹೆಚ್ಚು ಜನ ಸರಿಯಾಗಿ ತಿಳಿದುಕೊಂಡಂತೆ ತೋರುವುದಿಲ್ಲ. ಮೊನ್ನೆ ಮುಗಿಯಿತೆನ್ನುವ ಯುದ್ಧದ ಕಾಲದಲ್ಲಿ ಕೆಲವು ಜನರಿಗೆ ಗಾಂಧೀಜೀಯವರ ಚರಕದ ಹಾಡು, ನಮ್ಮ ಬಿಡುಗಡೆಯ ಹಾಡೆಂದು ಮನವರಿಕೆಯಾಯಿತು.

ಗಾಂಧೀಜಿ ಹೇಳುತ್ತಾರೆ: ನೀವು ನೂಲಬೇಕು. ನಿಮ್ಮ ಅನ್ನ ಬಟ್ಟೆಯನ್ನು ನೀವೇ ಮಾಡಿಕೊಳ್ಳಬೇಕು. ಹೀಗೆ ಎಲ್ಲರೂ ಮಾಡುವಂತಾದರೆ ನಮ್ಮ ಬಿಡುಗಡೆಗೆ ದೂರವಿಲ್ಲ. ನಾವು ಇನ್ನೊಬ್ಬರ ಕೈ ಬಾಯಿ ನೋಡಬೇಕಾಗಿಲ್ಲ. ಮದರಾಸಿನಲ್ಲೂ ಗಾಂಧೀಜಿ ಇದೇ ಮಾತನ್ನು ಒತ್ತಿ ಹೇಳಿದರು. ಸಾಲೆಗೆ ಹೋಗುವ ಮಕ್ಕಳನ್ನು ಕಂಡಾಗ ಅವರು ಅಂದರು: ನಮ್ಮ ಬೇಕು ಬೇಡಗಳನ್ನು ನಾವು ಹದದಲ್ಲಿ ಇಟ್ಟುಕೊಂಡಿರಬೇಕು. ಸಿಗರೇಟು ಬೀಡಿಗಳನ್ನು ಸೇದದಿದ್ದರೆ (ಹೆಂಡ ಅಮಲುಗಳನ್ನು ಕುಡಿಯದಿದ್ದರೆ) ಬದುಕುವುದಕ್ಕೆ ಅಗುವುದಿಲ್ಲವೇನು? ಉಡಿಗೆ ತೊಡಿಗೆಗಳಲ್ಲೂ ವೇಸ ಇರಬಾರದು. ಬಣ್ಣ ಮಾದರಿಗಳು ನನ್ನ ಕಣ್ಣಿಗೆ ಒಗ್ಗುವುದಿಲ್ಲ. ಅದರ ಒಡಗು ಏನು ಎಂದು ನಾನು ಕೇಳುತ್ತೇನೆ. ಕೈನೂಲಿನ ಸಾದಾ ಬಟ್ಟೆ ಉಟ್ಟರೆ ಅಗುವುದಿಲ್ಲವೇ? ನಮ್ಮ ನಾಡಿನ ನಮ್ಮ ಸೋದರರು ಉಣಲಿಲ್ಲದೆ ಹಸಿದು ಬಳಲಿ ಬಿದ್ದಿರುವಾಗ, ಉಡಲು ಇಲ್ಲದೆ ನಾಚಿಗೆಯಿಂದ ತಲೆಮರೆಸಿಕೊಂಡಿರುವಾಗ, ನಾವು (ಹೆಂಡ) ಸಿಗಾರುಗಳಿಗೆ, ಶೋಕಿನ ಬಟ್ಟೆ ಒರೆಗಳಿಗೆ. ಹೊರನಾಡಿನಿಂದ ಬರುವ ವಾಸನೆಗಳಿಗೆಲ್ಲ ಬರಿದೆ ದುಡ್ಡು ಹಾಳು ಮಾಡುವುದು ಸರಿಯೇ? ನಮ್ಮ ನಾಡಿನ ದುಡ್ಡೆಲ್ಲ ಹೀಗೆ ದಂಡವಾಗುತ್ತಿದೆ. ನಮ್ಮ ಇಳುಗಡೆಯನ್ನು ನಾವೇ ತರುತ್ತಿದೇವೆ. ನಾವು ಇದಕಾಗಿ ನಾಚುಗೆಪಡಬೇಕು.

'ಅಮಲುಗಳನ್ನು ನಮ್ಮ ಜನ ಕಡಿಮೆ ಮಾಡಬೇಕು, ಇಲ್ಲಿನ ಸರಕಾರ ಕಾಂಗ್ರೆಸ್ ನಡೆಸಿಕೊಂಡು ಬಂದಾಗ ಪ್ರಾಹಿಬಿಷನ್ ಜಾರಿಗೆ ಬಂತು. ಅದರಿಂದ ಜನಕ್ಕೆ ಒಳಿತಿದ್ದರೂ, ಜನ ಅದನ್ನು ಒಳಿತೆಂದು ಎಣಿಸಲಿಲ್ಲ. ಅಮಲು ತೆಗೆದುಕೊಳ್ಳುವುದರಿಂದ ಯಾವ ಒಳಿತೂ ಇಲ್ಲವೆಂದು ಜನ ಬಳಕೆಯಿಂದ ಕಾಣಬೇಕು; ತಾವು ಒಳ್ಳೆಯವರಾಗಬೇಕೆಂಬ ಹುರುಪು ಬರಬೇಕು. ಆಗ ಅಮಲನ್ನು ತಾವೇ ಬಿಡುತಾರೆ. ಅದಕ್ಕೇ ರಾಮಕೃಪೆ ಬೇಕೆಂದು ಹೇಳುತೇನೆ. ಇದಿದ್ದರೆ ಲೆಜಿಸ್ಲೇಟಿವ್‌ಗಳು ಹೊರಡಿಸುವ ಆಕ್ಟುಗಳಿಗಿಂತಲೂ ಹೆಚ್ಚಿನ ನೆರವುಂಟು.

'ಇಂತಹ ಬಳಕೆ ಜನರಲ್ಲಿ ಹುಟ್ಟಬರಬೇಕಾದರೆ, ಜನದ ಮನ ತಿದ್ದಬೇಕು. ನಮ್ಮ ನಾಡಿನ ಕೆಲಸಗಾರರು ಹಳ್ಳಿ ಹಳ್ಳಿಗೆ ಹೋಗಿ ಇದರ ಪ್ರೊಪಗಾಂಡ ಮಾಡಬೇಕು. ಜನರಿಗೆ ಒಳ್ಳೆಯ ರೀತಿಯಿಂದ ಬದುಕುವ ದಾರಿ ತೋರಿಸಿ, ತಾವೂ ಒಳ್ಳೆಯ ನಡತೆಯನ್ನು ತೋರಿಸಬೇಕು. ಬಿಡುವಿನ ಹೊತ್ತನ್ನು ನಮ್ಮ ಜನ ಯಾವ ಕೆಲಸಕ್ಕೂ ಬಾರದಂತೆ ಹಾಳುಮಾಡುತಾರೆ. ಬಿಡುವನ್ನು ಅಸಲು ಹೆಚ್ಚುಪ ಕೆಲಸಗಳಲ್ಲಿ ಅರಗಿಸುವಂತೆ ಸಣ್ಣಪುಟ್ಟ ಮನೆ ಕೈಗಾರಿಕೆಗಳನ್ನು ಹಳ್ಳಿ ಹಳಿಗೂ ಹಂಚಬಿಡಬೇಕು. ನಮ್ಮ ಕೆಲಸಗಾರರು ತಾವು ಕೈಗೊಂಡ ಕೆಲಸವನ್ನು ಚೆನ್ನಾಗಿ ತಿಳಿದುಕೊಂಡು, ಹಿಂದು ಮುಂದನ್ನು ನೋಡಿ, ನಡೆದುಕೊಂಡರೆ ಅದರಿಂದ ಒಳ್ಳೆಯವರಾಗುತಾರೆ.

ಗಾಂಧೀಜಿ ಮದರಾಸಿಗೆ ಒಂದು ಜೋಲಿಯನ್ನು ದೂಡಿರಿ, ಅಮಲು ದೂರಮಾಡಿ, ಮುಂದು ವೆಚ್ಚವನ್ನು ಕಡಿದುಹಾಕಿ, ಹಳ್ಳಿಗಳನ್ನು ಚೆನ್ನಾಗಿ ಮಾಡಿ, ಎಲ್ಲರೂ ಹಿಂದೀಯು ನೆಲದ ಮಾತಾದ ಹಿಂದೂಸ್ಥಾನಿಯನ್ನು ಓದಿರಿ—ಎಂದು ಹಲವಾಗು ತಿಳಿವನ್ನು ಹೇಳಿದರು. ಕೊನೆಗೆ ಬಿಡುಗಡೆಯ ದಿನ ಕೊಂಡಾಡುವಂದು, ತನ್ನ ನಾಡಿನ ಜನಕ್ಕೆ ಅವರು ಕೊಟ್ಟ ಹೇಳಿಕೆಯನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳತಕ್ಕದಾಗಿದೆ. 'ಸ್ವರಾಜ್ಯ ನಾಳೆ ಬರಬಹುದು. ನಾಡಿದು ಬರಬಹುದು. ನೀವು ಅದಕ್ಕಾಗಿ ಬಾಯ್ಬಿಟ್ಟು ಕುಳ್ಳಿರುವುದಲ್ಲ; ಅದನ್ನು ಬರಮಾಡಿಕೊಳ್ಳಲು ತಕ್ಕವರಾಗಿ ನಿಂದಿರಬೇಕು. ನಿಮ್ಮ ನಿಮ್ಮ ಕೀಳರಿಮೆಯೇ ನಿಮ್ಮನ್ನು ಇಳುಗಡೆಗೆ ತಳ್ಳುತ್ತದೆ. ನೀವು ಈ ಲೋಕದ ಎಲ್ಲ ಜನರಂತೆ ಸರಿದೊರೆಯೆಂದು ನಾಗರಿಕರಾಗಿರಿ. ತನ್ನವರೊಂದಿಗೆ ಅಕ್ಕರೆಯಿಂದ ಬಾಳಿರಿ. ಇದು ನಾನು ಈ ಬಾರಿ ಕೊಡುವ ಬಿಡುಗಡೆಯ ದಿನದ ಹೇಳಿಕೆ'

— * —

ಗಾಂಧೀಜಿ ಮದರಾಸಿಗೆ ಬಂದವರು ಒಂದು ಗಳಿಗೆಯ ಹೊತ್ತನ್ನಾದರೂ ಹಾಗೇ ಹೋಗಗೊಡಲಿಲ್ಲ. ದಕ್ಷಿಣದ ಗೆಳೆಯರನ್ನು ಕಂಡರು, ದಕ್ಷಿಣದ ಜನರನ್ನು ಕಂಡರು, ದಕ್ಷಿಣದ ಬಡವರ ಬಾಳನ್ನು ಕಂಡರು. ಇಲ್ಲಿ ಜನ ಹಸಿವು ನೀರಡಿಕೆಗೆ ಗತಿಯಿಲ್ಲದೆ ಸಾಯಲು ಬಿದ್ದಿರುವುದನ್ನು ಕೇಳಿದರು, ನೋಡಿದರು. ಇನಿತರಲ್ಲಿ ಮಧುರೆ, ಪಳನಿಯ ದೇಗುಲಗಳಿಗೂ ಹೋಗಿ ಬಂದರು.

ಗಾಂಧೀಜಿಯವರು ಈ ಬಾರಿ ದಕ್ಕಿಣದ ನಾಡಿಗೆಂದು ಬೆಳೆಸಿದ ಪಯಣ ಚರಿತೆಯಲ್ಲಿ ಹೇಳಬಹುದಾಗಿದ್ದರೆ ಅವರು ಮಧುರೆಗೆ, ಪಳನಿಗೆ ಹೋದುದರಿಂದ. ದೇವರಿಗೆ ಎಲ್ಲರೂ ಒಂದೇ ತೊಳದವರು. ಎಂದು ತೋರಿದ ಈ ಎರಡು ದೇಗುಲಗಳ ಹೆಸರು, ಅಲ್ಲಿನ 'ಕಾರ್ಣಿಕ'ಗಳು ಬಹುದಿನ ಉಳಿಯಬಹುದು. ಮುಂದಿನ ಚರಿತೆಕಾರರು ಈ ದೇಗುಲಗಳನ್ನು ಕುರಿತು ಮಾತನಾಡುವಾಗ ಮಹಾಬಲೇಶ್ವರವುಂದ ದೇಗುಲಗಳನ್ನು ಮರೆತು ಬಿಡಬಹುದು. ಹರಿಜನರಿಗೆ ಬಾಗಿಲು ತೆರೆಯದ ಇಂತಹ ಕೋಟಿ ಗುಡಿಸಲುಗಳು ನಮ್ಮ ನಾಡಿನಲ್ಲಿ ದೇಗುಲಗಳೆಂದು ಇವೆ. ಜೀವ ಹೋದ ದೇಹ ಮಣ್ಣಿಗೆ ಬೀಳುವಂತೆ ಈ ಗುಡಿಗಳೂ ಬಿದ್ದು ಹೋಗುವ ದಿನ ದೂರವಿಲ್ಲ. ಯಾವ ದೇಗುಲವು ಹರಿಜನರಿಗೆ ತೆರೆಯಲ್ಪಡುವುದಿಲ್ಲವೋ, ಯಾವ ದೇಗುಲದೊಳಗೆ ಜಾತಿಯ ಕೋತಿ ಕುಣಿದಾಡುತ್ತಿರುವುದೋ, ಆ ದೇಗುಲದಲ್ಲಿ ದೇವರಿಲ್ಲ; ಅದು ಕೊಲೆಯ ಮನೆ—ಅದು ಹರಕೆಯ ಮನೆಯಲ್ಲ, ಪೊರಕೆಯ ಮನೆ. ಚರಿತೆ ಇದನ್ನು ಗುರುತಿಸೀತು!

ಒಂದು ದಿನ ಗಾಂಧೀಜಿ ಗುರುನಾನಕರ ಹಾಡೊಂದನ್ನು ಬಜನೆಗೆ ಎತ್ತಿಕೊಂಡರು. ಅದನ್ನು ಆಯ್ದುದರಲ್ಲಿ ತುಂಬ ಹುರುಳುಂಟು. ಅದರ ಮಾತೇನೆಂದು ತಿಳಿಯದ ಜನಕ್ಕೆ ಗಾಂಧೀಜಿ ಅದನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿಕೊಟ್ಟರು. ಈ ಹಾಡನ್ನು ನಾನಕರು ಏನೂ ತಿಳಿಯದ ಬಡ ಜನರಿಗೆ ಹೇಳಿದರು: 'ಜನ ದೇವರನ್ನು ಕಾಣುವುದಕ್ಕೆ ಕಾಡಿಗೆ ಹೋಗುತಾರೆ ದೇವರು ಈ ಮಾನವ ಕೋಟಿಯಲ್ಲಿ ಎಲ್ಲರಿಗೂ ಇದ್ದವನು. ಈ ಕಾಡಿಗೆ ಹೋಗುವ ಜನಕ್ಕೆ ಅವನು ಮಾರಿ ಹೋಗಿಲ್ಲ. ಕಾಡಿನಲ್ಲಿ ಹುಲಿ ಚಿರತೆಗಳಿವೆ ಸಾಮಾನ್ಯ ಜನರು ಅಲ್ಲಿ ಹೋಗಿ ಇರಲಾರರು; ಹೋಗಬೇಕಾದದ್ದೂ ಇಲ್ಲ. ದೇವರನ್ನು ನೋಡಬೇಕಾದರೆ ಕಾಡಿಗೆ ಹೋಗಬೇಕೇ? ಅವನು ಎಲ್ಲೆಲ್ಲಿಯೂ ಇದ್ದಾನೆ. ಪೇಟೆಯಲ್ಲಿ ಇರುವವರಿಗೂ ಅವನು ಸಿಕ್ಕುವನು. ಈ ಬಾಳಿನಲ್ಲಿ ಮೈತಿಳಿದು ಕೆಲಸಮಾಡಬೇಕು ದೇವರು ದೂರದ ಕಾಡಿನಲ್ಲಿ ಹೋಗಿ ಕುಳಿತಿಲ್ಲ. ಅವನು ಕಾಡಿನಲ್ಲಿ ಇದ್ದರೆ ನಾಡಿನಲ್ಲೂ ಇದ್ದಾನೆ. ಜೇಳಿನಲ್ಲಿಯೂ ದೇವರ ಇರವುಂಟು; ನಾಯಿಯಲ್ಲಿಯೂ ಉಂಟು. ನಾಯಿ ಕಚ್ಚಿತೆಂದರೆ, ದೇವರು ಕಚ್ಚಿದರೆಂದು ತಿಳಿಯಬೇಡಿ. ದೇವರು ಒಳ್ಳೆಯವರು ಕಚ್ಚುವುದು ನಾಯಿಯ ಹುಟ್ಟುಗುಣ ದೇವರು ಕಾಡಿಗೆ ಹೋಗಿಲ್ಲ; ಗೂಡಿಗೆ ಹೋಗಲಿಲ್ಲ. ನಿಮ್ಮ ಮನೆಯಲ್ಲಿ ದೇವರಿದ್ದಾನೆ, ನಿಮ್ಮ ಒಬ್ಬೊಬ್ಬನ ಎದೆಯ ಒಳಗೂ ಇದ್ದಾನೆ' ಇದು ನಾನಕರು ಬರೆದ ಹಾಡಿನ ತಿರುಳು; ನಮ್ಮ ನಾಡಿನ ತಿಳಿವಿನ ತಿರುಳು. ಕನ್ನಡಿಗರಿಗೆ ಈ ಮಾತಿನಲ್ಲಿ ಹೊಸತೇನೂ ಇಲ್ಲವೆಂದು ತೋರಬಹುದು. ಇದಕ್ಕಿಂತಲೂ ಹಿಂದೆ ಬಸವಣ್ಣ, ಸರ್ವಜ್ಞ ಮೂರ್ತಿಯಂತಹ ಜ್ಯೋತಿಗಳು ಬಂದು ಇಂತಹ ಹಿರಿದಾದ ತಿಳಿವಿನ ಬೆಳಕನ್ನು ಈ ನಾಡಿನಲ್ಲೆಲ್ಲ ಹರಡಿಸಿದ್ದಾರೆ. ಆದರೆ ನಾವು ಅದನ್ನು ಮರೆತಿದ್ದೇವೆಂದು, ತಿರುಗಿ, ಗಾಂಧೀಜಿಯವರಂತಹ ಜ್ಯೋತಿಗಳು ಈ ತಿಳಿವಿನ ಬೆಳಕನ್ನು ಎತ್ತಬೇಕಾಗಿದೆ. ಗಾಂಧೀಜಿ ಇಂದು ಯುಗಪುರುಷನಂತೆ ನಿಂತು ಹೇಳುತಾರೆ: ಇದನ್ನು ಮರೆತರೆ ನಮಗೆ ಉಳಿಗಾಲವಿಲ್ಲ; ನಮ್ಮ ಬಿಡುಗಾಲವೂ ಇಲ್ಲ. "Whatever the exigencies of service or

[೧೨ನೇ ಪುಟ ನೋಡಿರಿ]

ದಿ ಆರ್ಯನ್ ಚಾಂಪಿಯನ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ:

7-10, ಎಲ್ಫಿನ್‌ಸ್ಟನ್ ಸರ್ಕಲ್, ಫೋರ್ಟ್, ಬೊಂಬಾಯಿ.

ಈ ಸಂಸ್ಥೆಯಲ್ಲೆ ನಿಮ್ಮ ವಿಮಾ ಇಳಿಸಲು ಆಗ್ರಹಪಡಿರಿ.

ನಿಮ್ಮ ಸರ್ವತ್ರ ಆವಶ್ಯಕತೆಗಳನ್ನು ಪೂರೈಸಲು ಆಕರ್ಷಕ ವಿಮಾ ಯೋಜನೆಗಳಿರುವ ಅಭಿವೃದ್ಧಿಕರ ಇನ್ಶ್ಯೂರೆನ್ಸ್ ಕಂಪೆನಿಯಿದು.

ಚೆಯರ್‌ಮನ್.

ಶೇಟ್ ಭೋಗಿಲಾಲ್ ಎಚ್. ಪಟೇಲ್

ಕಂಪೆನಿಯು ಸುವ್ಯವಸ್ಥಿತ ಯೋಜನೆಯಲ್ಲಿ ಸಮರ್ಥ ತರುಣರಿಗೆ ಜೀವವಿಮಾ ಉದ್ಯೋಗದಲ್ಲಿ ಸ್ವತಂತ್ರ ಜೀವನವನ್ನು ಸಾಧಿಸಲು ಬೇಕಾಗುವ ಸುಸಂದರ್ಭಗಳನ್ನು ಒದಗಿಸಿಕೊಡುವೆವು [illegible] ಅನುಭವಗಳಿಂ[illegible].

ಕಂಪೆನಿಯ ಪ್ರಧಾನ ಆಫೀಸಿಗೆ ಯಾ ಎ. ಸೀತಾರಾಮ ಶೆಟ್ಟಿ, ಎಸ್ಕ್ವಾಯರ್, ಚೀಫ್ ಏಜಂಟ್, ಮೈದಾನ್ ರೋಡು, ಮಂಗಳೂರು, ಇವರಿಗೆ ಬರೆಯಿರಿ.

FOR LIFE ASSURANCE

CONSULT

The New Gaurdian of India Life Insrce Co , Ltd.,

(Chairman - The Hon'ble Mr. M. CT. M. Chidambaram Chettiar.*)*

A policy in this progressive Life Office is a good investment; its Agency is a valuable business connection.

LOCAL OFFICES IN SOUTH KANARA. MANGALORE & KARKALA.

HEAD OFFICE "United India Life Bldg" Esplanade, Post Box No. 142, MADRAS.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ.**

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Ousbadalaya GADAG

ಸ್ವರ್ಗಸ್ಥ ಡಾಕ್ಟರ್ ಎಂ. ಮಾಧವಾಚಾರ್ಯರಿಂದ ರಚಿಸಲ್ಪಟ್ಟ ಎರಡು ಅತ್ಯುತ್ತಮ ನಾಟಕಗಳು.

ಸರಸ್ವತಿ ಬೆಲೆ 0-12-0

ಅಲ್ಪ ಶಿಕ್ಷಣದಿಂದುಂಟಾಗುವ ಅನರ್ಥ ಪರಂಪರೆಗಳನ್ನು ಪ್ರತ್ಯಕ್ಷವಾಗಿ ಹೃದಯದ್ರಾವಕವಾದ ರೀತಿಯಲ್ಲಿ ಕಾಣಿಸುವ ಸಾಮಾಜಿಕ ನಾಟಕ.

ಮೀರಾಬಾಯಿ ಬೆಲೆ 0-10-0

ಶ್ರೀಕೃಷ್ಣ ಪರಮಾತ್ಮನ ಆರಾಧನೆಗೆ ಸಂಸಾರಿಗಳಾಗಿರುವವರಿಗೂ ಅವ ಕಾಶವಿದೆ. ಕಪಟ, ವಿಶ್ವಾಸಘಾತಕತನ, ಅವಿಚಾರ, ಪ್ರಮಾದ ಇವುಗಳಿಂದುಂಟಾದ ದುಃಖವನ್ನು ದೂರೀಕರಿಸಲು ಭಗವದ್ಭಕ್ತಿಯೊಂದೇ ಉತ್ತಮ ಸಾಧನವೆಂಬುದನ್ನು ಸಾರುವ ಭಕ್ತಿಪ್ರಾಧಾನ್ಯ ನಾಟಕ.

ಎರಡೂ ಪ್ರತಿ ಬೇಕಾದವರು ರೂ. 1-8-0 ಕಳಿಸಬೇಕು.

ನವಭಾರತ ಪುಸ್ತಕ ಭಂಡಾರ, ಉಡುಪಿ | ಕಿರಿಯರ ಪ್ರಪಂಚ, ಉಡುಪಿ.

'ಇಂಗ್ಲಿಷ್ ಬರುವುದಿಲ್ಲವಲ್ಲಾ' ಎಂದು ಚಿಂತಿಸುವಿರೇಕೆ?

ಸುಲಭದಲ್ಲಿ ಇಂಗ್ಲಿಷ್ ಕಲಿಯಲು ಅನುಕೂಲವಾದ ಪುಸ್ತಕ ಇಲ್ಲಿದೆ-

ಸುಲಭದಲ್ಲಿ ಇಂಗ್ಲಿಷ್

ಶ್ರೀ. ಕೊರಡ್ಕಲರ ಇಂಗ್ಲಿಷ್ ಸ್ವಯಂಬೋಧಿನಿ

ENGLISH MADE EASY

ಈ ಪುಸ್ತಕದಿಂದ ನೂರಾರು ಜನರು ತಾವಾಗಿ ಸುಲಭದಲ್ಲಿ ಇಂಗ್ಲಿಷ್ ಕಲಿತುಕೊಂಡಿದ್ದಾರೆ.

ನೀವೇಕೆ ಕಾಲಹರಣ ಮಾಡಬೇಕು? ಇಂದೇ ಒಂದು ಪ್ರತಿಯನ್ನು ಕೊಂಡುಕೊಳ್ಳಿರಿ.

ಬೆಲೆ ಬರೇ ರೂ. **1-8-0** **ಟಪ್ಪಾಲು ಖರ್ಚು 0-4-0 ಪ್ರತ್ಯೇಕ**

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.